
ಶಂಬಾ ಕೃತಿ ಸಂಪುಟ

ಮಾನವ - ಸಂಸ್ಕೃತಿ ೫



ಕನ್ನಡ ಪುಸ್ತಕ ಪ್ರಾ
ಚಾಮರಾಜಪೇಟೆ
ಬೆಂಗಳೂರು ೫೬೦ ೦

ಜನಪ್ರಿಯ ಪುಸ್ತಕ ಮಾಲೆ

ಶಂಬಾ ಕೃತಿಸಂಪುಟ

೫

ಮಾನವ ಸಂಸ್ಕೃತಿ

ಮಲ್ಲೇಪುರಂ ಜಿ. ವೆಂಕಟೇಶ

ಸಂಪಾದಕ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಪಂಪಮಹಾಕವಿ ರಸ್ತೆ

ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮

SHAMBA KRUTI SAMPUTA : VOL. 5

MAANAVA SAMSKRUTI

Complete Works of Dr. Shamba Joshi
Edited by : Prof. Mallepuram G. Venkatesha
Kannada University, Hampi

Published by The Administrative Officer
Kannada Pustaka Pradhikara
(Kannada Book Authourity)
Pampa Mahakavi Road, Chamarajpet
Bangalore - 560 018

First Edition : 1999

Page : xxx + viii + 530

ISBN 81-7713-010-2


ಮುಖಪುಟ ವಿನ್ಯಾಸ : **ಟಿ. ಎಫ್. ಹಾದಿಮನಿ**


ಬೆಲೆ : **125/-**


ಅಕ್ಷರ ಜೋಡಣೆ
ಲಕ್ಷ್ಮಿ ಮುದ್ರಣಾಲಯ


ಮುದ್ರಣ:
ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್
ಬೆಂಗಳೂರು
ಫೋನ್ : 6682802

ಸಂಪಾದಕ ಸಲಹಾ ಸಮಿತಿ


ಪ್ರವಾಹ ಪತಿತರ ಕರ್ಮ
ಹಿಂದೂ ಎಂಬ ಧರ್ಮ


ಜೀವನದ
ಅರ್ಥಗ್ರಹಣ ಪದ್ಧತಿ


ಬುಧನ ಜಾತಕ
ಕಾಲಗತಿ ಪ್ರಕಾಶನ, ರಾಯಬಾಗ


ಶ್ರೀಮದ್ ಭಗವದ್ ಗೀತೆಯ
ರಾಜಯೋಗದ ಗುಹ್ಯಜ್ಞಾನ
ಬುಕ್ ಸೆಂಟರ ಮುಂಬೈ
1907

ವೈವಸ್ವತಮನು ಪ್ರಣೀತ

ಮಾನವಧರ್ಮದ ಆಕೃತಿ

Actuality of thought is life
—Aristotle

Life can only be understood backward;
but it must be lived forward
—Kirkeguard

ಡಾ|| ಶಂ.ಬಾ.ಜೋಶಿ

ಕಾಲಗತಿ ಪ್ರಕಾಶನ; ರಾಮಭಾಗ
ಬೆಳಗಾಂವಿ ಜಿಲ್ಲೆ



ಡಾ. ಶಂ. ಬಾ. ಜೋಶಿ




ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಮತ್ತು ಶಂಬಾ ಜೋಶಿ



ಶಂಬಾ ಜೋಶಿಯವರ ಮನೆ ಎದುರು
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ೧೯೭೬ ರಂದು



ಪ್ರೊ. ಜ್ಯೋತಿಹೊಸೂರ ಮತ್ತು ಶ್ರೀಮತಿ ಪುಷ್ಪಾಜ್ಯೋತಿಹೊಸೂರ, ಶ್ರೀಮತಿ ಶಂಬಾ
ಶ್ರೀಮತಿ ವಿಮಲ ಡಿಸ್ಕಳ್ಕರ್ ಹಾಗೂ ಶಂಬಾಜೋಶಿ, ಹಿಂಬದಿ ಪ್ರೊ. ಜ್ಯೋತಿಹೊಸೂರರ ಮಕ್ಕಳು




ಡಾ. ಶಂಬಾ ಜೋಶಿ ಅವರ ಇಳಿವಯಸ್ಸಿನಲ್ಲಿ




ಬಿತ್ತಿದ್ದನ್ನು ಬೆಳಕೊ ಬಿಡುಗಡೆ ಸಮಾರಂಭ ಧಾರವಾಡ



ಶಂಬಾ ಅವರು ಗೋಖಲೆ ಸಾರ್ವಜನಿಕ ಸಂಸ್ಥೆಗೆ ಭೇಟಿ ಕೊಟ್ಟಾಗ
ಶಂಬಾ ಅವರ ಹಿಂದೆ ಡಾ. ಎಂ. ಚಿದಾನಂದಮೂರ್ತಿ, ಜಿ. ನಾರಾಯಣ



ಶಂಬಾ, ಶ್ರೀಮತಿ ಪಾರ್ವತಿಬಾಯಿ ಜೋಶಿ ಮತ್ತು ಮಗ ಬಾಳ



ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶಂಬಾ ಜೋಶಿಯವರೊಡನೆ ಸಮಾಲೋಚನೆಯಲ್ಲಿ



ಶಂಬಾ ಅವರ ಮನೆ ಎದುರು ಮಲ್ಲೇಪುರಂ ಜಿ. ವೆಂಕಟೇಶ,
ಡಾ. ಶಂಬಾ, ಪ್ರೊ. ಜ್ಯೋತಿಹೊಸೂರ ಮತ್ತು ಪ್ರೊ. ಭಾಸ್ಕರಪತ್ತಾರ.



ಶಂಬಾ ಜೋಶಿ ಸನ್ಮಾನ ಸಮಾರಂಭ
ಮಾತನಾಡುತ್ತಿರುವವರು ಪ್ರೊ. ಶ್ಯಾಮಸುಂದರ ಬಿದರಕುಂದಿ, ಕುಳಿತಿರುವವರು ಜಿ. ಎಸ್.ಕಾಪಸೆ
ಶ್ರೀಮತಿ ಪಾರ್ವತಿಬಾಯಿ, ಶಂಬಾ ಜೋಶಿ, ಡಾ. ಹಂಪನಾ, ಬಸವರಾಜ ಕಟ್ಟೀಮನಿ, ಡಾ. ವರದರಾಜ ಹುದಿಲಗೋಳ

ಮುನ್ನುಡಿ

ಜ್ಞಾನ ಸಂಪಾದನೆ ಮತ್ತು ಜ್ಞಾನ ಪ್ರಸಾರಗಳ ಅತ್ಯಂತ ಪ್ರಬಲ ಮತ್ತು ಪರಿಣಾಮಕಾರಿ ಮಾಧ್ಯಮ ಅಕ್ಷರ ಮಾಧ್ಯಮ. ಈ ಮಾಧ್ಯಮದಲ್ಲಿ ಆಹ್ಲಾದಕಾರಿಯೂ, ಅತ್ಯಾಕರ್ಷಕವೂ, ಜೀವನ ಸೌಂದರ್ಯದಾಯಕವೂ, ಸಂಸ್ಕೃತಿ ಸಂಪನ್ನವೂ, ಬುದ್ಧಿ ಮನಸ್ಸುಗಳ ವರ್ಧಕವೂ ಆದ ಅಪೂರ್ವ ಮಾಧ್ಯಮವೇ ಸಾಹಿತ್ಯ. ನಿತ್ಯ ಪರಿವರ್ತನಶೀಲವಾದ ಜಗತ್ತಿನ ಜ್ಞಾನ ವಿಜ್ಞಾನ ಸಂಸ್ಕೃತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಪ್ರವಹಣ ಮಾಡುತ್ತ ಮನುಷ್ಯನ ಜೀವನವನ್ನು ಪುಷ್ಟಿಗೊಳಿಸುತ್ತ, ತುಷ್ಟಿಗೊಳಿಸುತ್ತ, ವಿಕಾಸಗೊಳಿಸುತ್ತ, ಪೂರ್ಣತೆಯ ಕಡೆಗೆ ಅವನನ್ನು ಕರೆದೊಯ್ಯುವುದೇ ಇದರ ಪರಮ ಗುರಿ. ಇಂಥ ಜೀವನೋತ್ಥಾನಕಾರಿಯಾದ ಉತ್ತಮ ಜ್ಞಾನಸಂಪತ್ತನ್ನು ವಿಶಿಷ್ಟ ಹಾಗೂ ಅರ್ಥಪೂರ್ಣ ಗ್ರಂಥಗಳ ಮೂಲಕ ಕನ್ನಡ ಓದುಗರಿಗೆ ಒದಗಿಸುವ ಗುರುತರ ಜವಾಬ್ದಾರಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರ ಹೊತ್ತುಕೊಂಡು ನಿರ್ವಹಿಸುತ್ತಿದೆ.

ಜ್ಞಾನ, ಸಂಸ್ಕೃತಿ ಮತ್ತು ಸಾಹಿತ್ಯ ಪ್ರಸಾರ ಕಾರ್ಯಕ್ಕೆ ಕರ್ನಾಟಕ ಸರ್ಕಾರ ಬಹು ಹಿಂದಿನಿಂದ ಒತ್ತಾಸೆ ನೀಡುತ್ತ ಬಂದಿದೆ. ಈ ಮೌಲಿಕ ಪರಂಪರೆಯನ್ನು ಆರಂಭಿಸಿದ ಕೀರ್ತಿ ಕರ್ನಾಟಕ ಕಂಡ ಅತ್ಯಂತ ದಕ್ಷ ಹಾಗೂ ದೂರದೃಷ್ಟಿಯ ಮುಖ್ಯಮಂತ್ರಿಗಳಲ್ಲಿ ಒಬ್ಬರಾದ ಶ್ರೀ ಕೆಂಗಲ್ ಹನುಮಂತಯ್ಯ ಅವರಿಗೆ ಸಲ್ಲಬೇಕು. ಕನ್ನಡದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಶ್ರೇಷ್ಠ ಗ್ರಂಥಗಳನ್ನು ಸುಲಭ ಬೆಲೆಯಲ್ಲಿ ಓದುಗರಿಗೆ ತಲುಪಿಸುವ ಸ್ತುತ್ಯ ಕಾರ್ಯವನ್ನು ಅಂದಿನಿಂದ ನಿರ್ವಹಿಸುತ್ತ ಬಹುಬೇಡಿಕೆಯ ನೂರಾರು ಕೃತಿಗಳನ್ನು ಸರ್ಕಾರ ಪ್ರಕಟಿಸಿ ಜನಮನ್ನಣೆಯನ್ನು ಗಳಿಸಿದೆ.

ಇದುವರೆಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಕಟಿಸುತ್ತಿದ್ದ ಇಂಥ ಪ್ರಾಚೀನ ಹಾಗೂ ಆಧುನಿಕ ಜನಪ್ರಿಯ ಪುಸ್ತಕಗಳನ್ನು ಈಗ ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಅಲಭ್ಯವಾಗಿರುವ ಹಾಗೂ ಬಹು ಬೇಡಿಕೆಯ, ಸಾಹಿತ್ಯ ಮೌಲ್ಯ ಮತ್ತು ವೈಚಾರಿಕ ಮೌಲ್ಯಗಳನ್ನು ಒಳಗೊಂಡಿರುವ ಕೃತಿಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಕನ್ನಡ ಸಹೃದಯರಿಗೆ ನೀಡುವುದೇ ಈ 'ಜನಪ್ರಿಯ ಪುಸ್ತಕಮಾಲೆ'ಯ ಮುಖ್ಯೋದ್ದೇಶ.

ಈ ಮಾಲೆಯಲ್ಲಿ ಕನ್ನಡದ ಅತ್ಯಂತ ಪ್ರಸಿದ್ಧ ಹಾಗೂ ಸ್ವೋಪಜ್ಞಶೀಲ ವಿದ್ವಾಂಸರಾದ, ಡಾ. ಶಂಬಾ ಜೋಶಿ ಅವರ ಸಮಗ್ರ ಕೃತಿಗಳನ್ನು ಒಟ್ಟು ಆರು ಸಂಪುಟಗಳಲ್ಲಿ ಪುಸ್ತಕ ಪ್ರಾಧಿಕಾರವು ಇದೀಗ ಪ್ರಕಟಿಸುತ್ತಿದೆ. ಲೇಖಕರೊಬ್ಬರ ಸಮಗ್ರ ಕೃತಿಗಳ ಸಂಪುಟಗಳನ್ನು ಹೊರತರುವಲ್ಲಿ ಇದು ಪ್ರಾಧಿಕಾರದ ಯೋಜನೆಯ ಮೊದಲ ಪ್ರಯತ್ನ. ಡಾ : ಶಂಕರರಾವ್ ಬಾಳದೀಕ್ಷಿತ ಜೋಶಿ ಅವರು ಕರ್ನಾಟಕ ಕಂಡ ಅತ್ಯಂತ ಶ್ರೇಷ್ಠ ಸಾಂಸ್ಕೃತಿಕ ಸಂಶೋಧಕರು. ನಮ್ಮ ಈ ನಾಡಿನ ಪ್ರತಿಭಾಪೂರ್ಣ ವಿದ್ವತ್ ಪರಂಪರೆಯಲ್ಲಿ

ಡಾ: ಜೋಶಿ ಅವರದ್ದು ಅಪೂರ್ವವೂ ಮತ್ತು ವಿಶಿಷ್ಟವೂ ಆದ ಮಾರ್ಗ. ಜೋಶಿ ಅವರು ಹಿಡಿದಿರುವ ಮತ್ತು ನಡೆದು ಬಂದಿರುವ ಈ ಮಾರ್ಗ ಅನ್ಯಸುಗಮವಾದುದಲ್ಲ. ಅವರು ಪರಂಪರಾಗತ ಸಂಶೋಧನೆಗೆ ಮತ್ತು ಕರ್ನಾಟಕದ ಸಾಂಸ್ಕೃತಿಕ ಹಾಗೂ ವಿದ್ವತ್ ಕ್ಷೇತ್ರಕ್ಕೆ ವಿನೂತನ ಆಯಾಮವನ್ನು ನೀಡಿದ ಅಪರೂಪದ ಸಂಶೋಧಕರು. ಅವರು ತೆರೆದ ಆಯಾಮಗಳು ವೈವಿಧ್ಯಮಯವಾದವುಗಳು. ಕನ್ನಡ ವಿದ್ವತ್ ಪರಂಪರೆಯಲ್ಲಿ ಹೊಸ ಸಂಶೋಧನ ಪದ್ಧತಿಯೊಂದನ್ನೆ ಅವರು ರೂಪಿಸಿದರು. ಸಂಶೋಧನೆಗೆ ವಿಶಾಲವ್ಯಾಪ್ತಿಯನ್ನು ಮತ್ತು ಗಟ್ಟಿತಳಹದಿಯನ್ನು ನೀಡುವ ಸಲುವಾಗಿ ಹಲವು ಬಗೆಯ ಜ್ಞಾನಮಾರ್ಗಗಳನ್ನು ತಮ್ಮ ಶೋಧನೆ ಹಾಗೂ ಸತ್ಯಪ್ರತಿಪಾದನೆಯ ಆಕರಗಳನ್ನಾಗಿ ದುಡಿಸಿಕೊಂಡರು. ಅವರು ನಡೆಸಿದ ಸಾಂಸ್ಕೃತಿಕ ಅನ್ವೇಷಣೆ ಬೌದ್ಧಿಕ ವ್ಯಾಪಾರವಲ್ಲ; ವರ್ತಮಾನದ ವಿಸಂಗತಿಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವುಗಳನ್ನು ದಾಟಿ ಸರ್ವಮಾನ್ಯವೆನಿಸಬಹುದಾದ ವೈಜ್ಞಾನಿಕ ಚಿಂತನೆಯ ಒಂದು ವಿಶಿಷ್ಟ ಉಪಕ್ರಮವಾಗಿ ಅದನ್ನು ಸ್ವೀಕರಿಸಿದರು. ತಾವು ಸತ್ಯವೆಂದು ನಂಬಿದ ಮತ್ತು ಕಂಡ ಅಂಶಗಳನ್ನು ಅನ್ಯಮೂಲಗಳಿಂದ ಪರೀಕ್ಷಿಸುವುದಕ್ಕಾಗಿ ಮತ್ತು ಪರಿಷ್ಕರಿಸುವುದಕ್ಕಾಗಿ ಅವರು ಪ್ರಾಚೀನ ಗಡಿಪ್ರದೇಶಗಳನ್ನು ಕಾಣುವ ವಿಶೇಷ ಪ್ರಯತ್ನ ಮಾಡಿದರು. ಕನ್ನಡ ನಾಡಿನಲ್ಲಿ ಮಾತ್ರವಲ್ಲದೇ ಮಹಾರಾಷ್ಟ್ರ, ಮಧ್ಯಪ್ರದೇಶ, ಬಂಗಾಳ, ಬಿಹಾರ ಮತ್ತು ಇನ್ನು ಹಲವು ಹತ್ತುಕಡೆಗಳಿಂದ ತಮ್ಮ ಸಂಶೋಧನೆಗೆ ಪೂರಕವಾದ ನೂರಾರು ಸಾಕ್ಷಿ ಮತ್ತು ಸಾಮಗ್ರಿಗಳನ್ನು ಹೆಕ್ಕಿಹೆಕ್ಕಿ ತೆಗೆದು; ಆ ಮೂಲಕ ವಿವಿಧ ವಾದ ಮತ್ತು ಅಭಿಪ್ರಾಯಗಳ ನಡುವೆ ಗೊಂದಲಮಯವಾಗಿದ್ದ ಕನ್ನಡನಾಡಿನ ಭೌಗೋಳಿಕ ಜಾನಾಂಗಿಕ ಮತ್ತು ಸಾಂಸ್ಕೃತಿಕ ಎಲ್ಲೆಗಳನ್ನು ಪುನರ್‌ರಚನೆ ಮಾಡಿದರು. ತಾವು ಸಮೃದ್ಧವಾಗಿ ಕಂಡು ಹಿಡಿದು, ಅಧ್ಯಯನಮಾಡಿದ ಆಕರಗಳ ಬೆಳಕಿನಲ್ಲಿ ನೂತನ ನೆಲೆಗಳನ್ನು ಕಂಡು ಕಾಣಿಸಿದರು. ಹಾಗೆಯೇ, ತಮ್ಮ ಸತತ ಪರಿಶ್ರಮ ಮತ್ತು ಶ್ರದ್ಧಾತಪಸ್ಸು ಗಳಿಂದ ದರ್ಶಿಸಿದ ಆ ನೆಲೆಗಳ ಮತ್ತು ಸೆಲೆಗಳ ಫಲಿತಗಳನ್ನು ಕಾಲಕಾಲಕ್ಕೆ ಕನ್ನಡದ ಅಗ್ರಮಾನ್ಯ ವಿದ್ವಾಂಸರ, ಸಂಶೋಧಕರ ಎದುರು ಇಟ್ಟು ಆರೋಗ್ಯಕರ ಚರ್ಚೆ ಮತ್ತು ವಿದಗ್ಧವಾದಗಳ ವೇದಿಕೆಯನ್ನು ಸೃಷ್ಟಿಸುವ ಮೂಲಕ ಕನ್ನಡನಾಡಿನಲ್ಲಿ ಹೊಸ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಚಿಂತನೆಗಳ ಮಿಂಚಿನ ಅಲೆಗಳನ್ನು ಎಬ್ಬಿಸಿದರು.

ಡಾ : ಶಂಬಾ ಅವರ ಆಸಕ್ತಿ, ಅಧ್ಯಯನ, ಸಂಶೋಧನೆ ಮತ್ತು ಚಿಂತನೆಗಳ ಬೀಸು ತುಂಬಾ ವ್ಯಾಪಕವಾದುದು. ಈ ಕಾರಣ ಅವರು ಇತಿಹಾಸದ ಭಾಷಾ ವಿಶ್ಲೇಷಣಾ ಪದ್ಧತಿಯನ್ನು ಕರುನಾಡಿನ ಎಡೆಗಳ ಹೆಸರುಗಳ, ದೇವತಾ ಪ್ರತಿರೂಪಗಳ, ಸಾಂಕೇತಿಕ ನೆಲೆಗಳ, ಮನೋವೈಜ್ಞಾನಿಕ ಶೋಧನೆಗಳ, ಧಾರ್ಮಿಕ, ಚಿಂತನೆಗಳ ಸಂಕೀರ್ಣ ಪಥವನ್ನು ಹಿಡಿದು ನಡೆದರು. ತಿರುವು ಮುರುವು ಆಗಿರುವ ಸಮಕಾಲೀನ ಮೌಲ್ಯಗಳ ಜೊತೆಗೆ ಪ್ರಾಚೀನ ಸಂಸ್ಕೃತಿಯ ಸಾಧಾರವಿವರಗಳನ್ನು ಇಟ್ಟು ತೌಲನಿಕವಾಗಿ ನೋಡಿದ್ದು ಮತ್ತು ವಿಶ್ಲೇಷಿಸಿದ್ದು ಜಾಗತಿಕ ಸಾಂಸ್ಕೃತಿಕ ಅಧ್ಯಯನದ ಅಖಂಡ ಇತಿಹಾಸದಲ್ಲೇ ಹೊಸಬಗೆಯದು. ಹೀಗಾಗಿ ಆಧುನಿಕ ಸಮಾಜದ ಬಹುಮುಖ ನೆಲೆಗಳನ್ನು ಅರಿಯಲು ಮತ್ತು ಅರ್ಥೈಸಲು ಪ್ರಾಚೀನ ಆಕರಗಳನ್ನು ಯಥೇಚ್ಛವಾಗಿ ಬಳಸಿಕೊಂಡು ಮುನ್ನಡೆದ ಶಂಬಾ ಅವರು ಹೊಸ ಅರ್ಥಗ್ರಹಣ ಪದ್ಧತಿಯನ್ನೇ ತಮ್ಮ ಬರಹಗಳ ಮೂಲಕ ನಮಗೆ ನೀಡಿದ್ದಾರೆ. ಇಂದಿನ ಸಂಕೀರ್ಣಯುಗದ ಮಾನವನ ಅಧೋಗತಿಗೆ ಸಮಾಜ ಸಮ್ಮುಖ ಆಚರಣೆಗಳು ಹಿಂದೆ ಸರಿದು ವ್ಯಕ್ತಿ ವಿಶಿಷ್ಟ ಆಚರಣೆಗಳು ದೈತ್ಯಾಕಾರವನ್ನು ತಳೆದು ನಿಂತದ್ದೆ ಕಾರಣವೆಂದು ತಮ್ಮ ಸತತ ಮತ್ತು ಸುವಿಸ್ತಾರವಾದ ಸಂಶೋಧನೆಯ ನೆಲೆಯಲ್ಲಿ ಅವರು ಕಂಡುಕೊಂಡಿದ್ದಾರೆ. ಈ ಎಲ್ಲಾ ಕಾರಣಗಳಿಂದಾಗಿ ಡಾ : ಶಂಭಾ ಅವರದು ಬಹುಮುಖವಾದ ಮತ್ತು ಬಹುಶ್ರುತವಾದ ಅಪರೂಪದ ವ್ಯಕ್ತಿತ್ವ. ಅವರು ನಮ್ಮ ಸಾಂಸ್ಕೃತಿಕ ಚಿಂತಕರಲ್ಲಿ ಪ್ರಥಮರಲ್ಲಿ ಪ್ರಥಮರು. ಕಲ್ಪನಾಪ್ರಧಾನ ಸಾಂಪ್ರದಾಯಕ ಸಾಂಸ್ಕೃತಿಕ ಇತಿಹಾಸದ ಪರಂಪರೆಯ ಮೃದುಶಯ್ಯೆಯ ಮೇಲೆ ನಿರಾಳವಾಗಿ ಮಲಗಿದ್ದ ವೈದಿಕಶಾಹಿ ಚಿಂತನಕ್ರಮವನ್ನು, ತನ್ನ ಜಾತ್ಯತೀತ ನಿಲುವಿನ ಸತ್ಯಶೋಧನೆಯ ಅಚ್ಚರಿಗೊಳಿಸುವ ಫಲಿತಗಳ ಮೂಲಕ ತಲ್ಲಣಗೊಳಿಸಿ ಹೂತು ಹೋಗಿದ್ದ ತಥ್ಯಗಳಿಗೆ

ಜೀವದಾನ ಮಾಡಿ ಹೊಸ ಬೆಳಕಿನ ಪಥವನ್ನು ನಿರ್ಮಿಸಿದ ಅಸಾಧಾರಣ ವ್ಯಕ್ತಿ. ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾಳಜಿಗಳು, ವಿಶಾಲನೆಲೆಗಟ್ಟಿನ ಸೂಕ್ಷ್ಮತಮ ಚಿಂತನೆಗಳು, ಅಪ್ರಿಯವಾದರೂ ಕಷ್ಟದ ಕಲ್ಲುಮುಳ್ಳುಗಳನ್ನು ತುಳಿದು ಸತ್ಯಸೂರ್ಯನನ್ನು ದರ್ಶನ ಮಾಡಿಸುವ ವಿದ್ವತ್ ತಪಸ್ಸು-ಇವುಗಳೆಲ್ಲ ಅನ್ಯಾದೃಶ್ಯವಾಗಿ ಮೈತಳೆದು ನಿಂತ ಅವರ ಬರಹಗಳ ಸುಮಾರು ೪೦೦೦ ಪುಟಗಳ ಬೃಹತ್ ರಾಶಿಯೇ ನಮ್ಮ ಮುಂದಿದೆ. ಭೂತ ಮತ್ತು ವರ್ತಮಾನಗಳನ್ನು ನಿಷ್ಕೃಷ್ಟವಾಗಿ ಅರಿತು ಅವುಗಳ ತಳಹದಿಯ ಮೇಲೆ ಬಹುಶ್ರುತ ಚಿಂತನೆ ಮತ್ತು ಕ್ರಿಯೆಗಳನ್ನು ರೂಪಿಸುವ ಅದ್ಭುತ ಸ್ಫೂರ್ತಿಯ ಜೀವಕೇಂದ್ರಗಳಿವು. ಈ ಕಾರಣಗಳಿಂದಾಗಿ ಜೋಶಿ ಅವರ ಸಮಗ್ರ ಕೃತಿಗಳನ್ನು ಪ್ರಾಧಿಕಾರ ಹೊರತರುವ ಮೂಲಕ ಕನ್ನಡನಾಡಿನ ಜನರಿಗೆ ತಮ್ಮ ಸಂಸ್ಕೃತಿ ಮತ್ತು ಇತಿಹಾಸ ಪರಿಜ್ಞಾನವನ್ನು ಬೆಳಸಿಕೊಳ್ಳಲು ಇವು ಸಾಧಕವಾಗುತ್ತವೆ ಎಂದು ಭಾವಿಸಿದ್ದೇನೆ. ೨೦ನೆಯ ಶತಮಾನದ ಅಂಚಿನಲ್ಲಿ ನಿಂತಿರುವ ನಮಗೆ ಇವು ಹೊಸ ಆಕರಗಳಾಗಿ, ಮೌಲ್ಯಗಳ ಅನ್ವೇಷಣೆಯ ದಾರಿದೀಪಗಳಾಗಿ, ಮುಂದೆ ನಡೆಯಬಹುದಾದ ಮತ್ತು ನಡೆಯಬೇಕಾದ ಅರ್ಥಪೂರ್ಣ ಪಥಗಳನ್ನು ತಿಳಿಸುವ ಮೈಲುಗಲ್ಲುಗಳಾಗಿ ನೆಲೆನಿಲ್ಲುತ್ತವೆಂಬ ನಂಬುಗೆ ನಮ್ಮದು. ಈ ದೃಷ್ಟಿಯಿಂದ ಇವು ಈ ಶತಮಾನದ ಅಮೂಲ್ಯ ಸಂಪುಟಗಳು.

ಕನ್ನಡನಾಡಿನ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಶ್ರೀಮಂತ ಆಕರಗಳನ್ನು ಕನ್ನಡ ಓದುಗರಿಗೆ ಒದಗಿಸಬೇಕೆಂಬ ಹೆಬ್ಬಯಕೆಯಿಂದ ಕರ್ನಾಟಕ ಸರ್ಕಾರದ ಉಪ-ಮುಖ್ಯಮಂತ್ರಿಗಳೂ ಹಾಗು ಹಣಕಾಸು ಸಚಿವರಾದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯ ಅವರು ಈ ಸಂಪುಟಗಳ ಪ್ರಕಟಣೆಗಳಿಗಾಗಿ ವಿಶೇಷ ಅನುವಾದವನ್ನು ತುಂಬಾ ಪ್ರೀತಿ ಮತ್ತು ಸಂತೋಷಗಳಿಂದ ಒದಗಿಸಿಕೊಟ್ಟಿದ್ದಾರೆ. ಲೋಕಸೇವಾ ಆಯೋಗದ ಸದಸ್ಯರಾದ ಶ್ರೀ ಮುಕಡಪ್ಪ ಅವರು ಈ ಯೋಜನೆಯಲ್ಲಿ ವಿಶೇಷ ಆಸಕ್ತಿತೋರಿ ಸಹಕರಿಸಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಸಹೃದಯ ಸದಸ್ಯರು ಈ ಯೋಜನೆ ನನಸಾಗಲು ಒತ್ತಾಸೆ ನೀಡಿದ್ದಾರೆ. ಈ ಸಂಪುಟಗಳ ಸಲಹಾ ಸಮಿತಿಯ ಮಾನ್ಯ ಸದಸ್ಯರುಗಳಾದ ಪ್ರೊ : ದೇ. ಜವರೇಗೌಡ, ಪ್ರೊ. ದೇವೇಂದ್ರಕುಮಾರ ಹಕಾರಿ ಮತ್ತು ಶ್ರೀಮತಿ ವಿಮಲ ಡಿಸ್ಕಳ್ಕರ್ ಅವರು ಸೂಕ್ತ ಸಲಹೆ ಮತ್ತು ಮಾರ್ಗದರ್ಶನಗಳನ್ನು ನೀಡಿ ಈ ಸಂಪುಟಗಳು ಉಪಯುಕ್ತವಾಗಿ ಪ್ರಕಟವಾಗುವಲ್ಲಿ ನೆರವಾಗಿದ್ದಾರೆ. ಪ್ರಸಿದ್ಧ ವಿದ್ವಾಂಸರೂ ಮತ್ತು ಸಂಶೋಧಕರೂ ಹಾಗು ಡಾ : ಶಂಬಾ ಅವರ ಅಭಿಮಾನಿಗಳೂ ಆದ ಪ್ರೊ : ಮಲ್ಲೇಪುರಂ ಜಿ. ವೆಂಕಟೇಶ ಅವರು ಈ ಆರು ಸಂಪುಟಗಳ ಬಹು ಜವಾಬ್ದಾರಿಯುತವಾದ ಸಂಪಾದಕತ್ವವನ್ನು ವಹಿಸಿಕೊಂಡು ವಿಶೇಷ ಪರಿಶ್ರಮ, ಶ್ರದ್ಧೆ ಮತ್ತು ಅರ್ಪಣಾ ಮನೋಭಾವಗಳಿಂದ ದುಡಿದಿದ್ದಾರೆ. ಖ್ಯಾತ ಯುವಕಲಾವಿದ ಶ್ರೀ ಹಾದಿಮನಿ ಅವರು ಈ ಸಂಪುಟಗಳಿಗೆ ಅರ್ಥಪೂರ್ಣ ಮುಖಪುಟಗಳನ್ನು ವಿನ್ಯಾಸಗೊಳಿಸಿ ಇವುಗಳ ಸೌಂದರ್ಯವನ್ನು ವರ್ಧಿಸಿದ್ದಾರೆ. ಕಲಾತ್ಮಕ ಮುದ್ರಣಕ್ಕೆ ಹೆಸರಾದ ಲಕ್ಷ್ಮಿ ಮುದ್ರಣಾಲಯದ ಶ್ರೀ ಅಶೋಕ ಕುಮಾರ್ ಮತ್ತು ಸಿಬ್ಬಂದಿ ವರ್ಗ ಅತ್ಯಂತ ಆಸಕ್ತಿ ಮತ್ತು ಸಂತೋಷದಿಂದ ಅತ್ಯಲ್ಪಕಾಲದಲ್ಲಿ ಈ ಸಂಪುಟಗಳನ್ನು ಮುದ್ರಿಸಿ ದಾಖಲೆ ನಿರ್ಮಿಸಿದ್ದಾರೆ. ಪ್ರಾಧಿಕಾರದ ಸಿಬ್ಬಂದಿ ವರ್ಗ ಇವುಗಳ ತ್ವರಿತ ಪ್ರಕಟಣೆಗಾಗಿ ಹಗಲಿರುಳು ಶ್ರಮಿಸಿದೆ. ಇವರೆಲ್ಲರಿಗೂ ವೈಯಕ್ತಿಕವಾಗಿ ಮತ್ತು ಪ್ರಾಧಿಕಾರದ ಪರವಾಗಿ ಗೌರವದ ಪ್ರೀತಿಯ ಕೃತಜ್ಞತೆಗಳು.

ದಿನಾಂಕ : ೮.೦೭.೧೯೯೯ **ಡಾ॥ ಎಚ್. ಜೆ. ಲಕ್ಕಪ್ಪಗೌಡ**

ಬೆಂಗಳೂರು - ೫೬೦ ೦೧೮ ಅಧ್ಯಕ್ಷರು

ಸಂಪಾದಕನ ಅರಿಕೆ

ಶಂಬಾ ಎಂಬ ಎರಡಕ್ಷರಗಳಿಂದಲೇ ಸುಪ್ರಸಿದ್ಧರಾದ ಡಾ. ಶಂಕರ ಬಾಳದೀಕ್ಷಿತ ಜೋಶಿ (೧೮೯೬-೧೯೯೧) ಕನ್ನಡದ ಮಹಾವಿದ್ವಾಂಸರು. ಅವರು ಕನ್ನಡ ಸಂಶೋಧನ ಕ್ಷೇತ್ರದ ಅಶ್ವತ್ಥವೃಕ್ಷ. ಬಹುಶ್ರುತರೂ, ಚಿಂತಕರೂ ಆದ ಶಂಬಾ, ಎಪ್ಪತ್ತು ವರ್ಷಗಳಿಗೂ ಹೆಚ್ಚುಕಾಲ 'ಜೀವನದ ಅರ್ಥಗ್ರಹಣ ಪದ್ಧತಿ'ಯ ಜಾಡು ಹಿಡಿದು ನಡೆಸಿದ ಕೆಲಸಗಳು ಅನನ್ಯವಾದವು. ಅವರು ಪಿದ್ವತ್ತು ಮತ್ತು ವೈಚಾರಿಕ ಚಿಂತನೆಗಳ ಅಪೂರ್ವ ಸಂಗಮವಾಗಿದ್ದರು. ಅವರು ಸೃಜಿಸಿದ ಸಾಂಸ್ಕೃತಿಕ ಸಂಶೋಧನೆ, ಭೂತ ಹಾಗೂ ವರ್ತಮಾನ ಕಾಲಗಳ ನಡುವಣ ನೆಲೆಗಳನ್ನು ತಿಳಿಯಲು ಅನುವು ಮಾಡಿಕೊಡುತ್ತವೆ. 'ಕೃತಿಗಳೇ ಆಕೃತಿ ನಿರ್ಮಾಣಕ್ಕೆ ಮುಖ್ಯ ನೆಲೆಗಳು' ಎಂಬುದು ಅವರ ನಿಷ್ಠೆ ಹಾಗೂ ಶ್ರದ್ಧೆ. ವ್ಯಕ್ತಿವಿಶಿಷ್ಟ ಸಂಗತಿಗಳು ಬದುಕಿನಲ್ಲಿ ಗೌಣವಾಗಿದ್ದು, ಜೀವನ ಸಮಷ್ಟಿ ಸಂಗತಿಗಳು ಮುಖ್ಯವಾಗಬೇಕೆಂಬ ಹಂಬಲ ಅವರದಾಗಿತ್ತು. ಅವರು ಈ ಜಾಡಿನಲ್ಲಿ ಕೊನೆಯ ವರೆಗೂ ನಡೆದರು.

ಡಾ. ಶಂ. ಬಾ. ಅವರು ತೀರಿಕೊಂಡು ಇಂದಿಗೆ ಎಂಟು ವರ್ಷಗಳು ಆದುವು. ೧೯೯೬ ಅವರ ಜನ್ಮ ಶತಮಾನೋತ್ಸವದ ವರ್ಷ. ಆ ಹೊತ್ತಿಗೆ ಅವರ ಎಲ್ಲ ಪುಸ್ತಕಗಳು ಪ್ರಕಟಗೊಳ್ಳಬೇಕೆಂಬ ಅಪೇಕ್ಷೆ ಇತ್ತು. ಆ ಬಗೆಗೆ ಪ್ರಯತ್ನ ನಡೆದರೂ ಆಗ ಕೈಗೂಡಲಿಲ್ಲ. ಒಮ್ಮೆ ಖ್ಯಾತಕಲಾವಿದ, ಗೆಳೆಯ ಸಿ. ಚಂದ್ರಶೇಖರ್ ಅವರ ಮನೆಯಲ್ಲಿ ಲೋಕಸೇವಾ ಆಯೋಗದ ಸದಸ್ಯರೂ ಶಂಬಾ ಜೋಶಿ ಅವರ ಪ್ರಿಯ ಅಭಿಮಾನಿಗಳೂ ಕನ್ನಡ ಸಂಸ್ಕೃತಿ ಅಭ್ಯಾಸಿಗಳೂ ಆದ ಶ್ರೀ ಮುಕಡಪ್ಪ ಅವರ ಸ್ನೇಹವಾಯಿತು. ಅವರು ಶಂಬಾ ಅವರ ಕೃತಿಗಳು ಹಲವು ಸಂಪುಟಗಳಾಗಿ ಸಮಗ್ರರೂಪದಲ್ಲಿ ಬರಬೇಕೆಂದು ಹೇಳಿ ಒತ್ತಾಯಿಸಿದರು. ಅನಂತರ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಡಾ. ಎಚ್. ಜೆ. ಲಕ್ಕಪ್ಪಗೌಡ ಅವರು ಬಂದ ಮೇಲೆ ನನ್ನ ಅಭಿಲಾಷೆಯನ್ನೂ ಶ್ರೀ ಮುಕಡಪ್ಪ ಅವರ ಇಚ್ಛೆಯನ್ನೂ ಅವರ ಬಳಿ ಹೇಳಿಕೊಂಡೆ. ಅನಂತರ ಈ ಯೋಜನೆಗೆ ಚಾಲನೆ ಸಿಕ್ಕಿತು. ಕರ್ನಾಟಕ ಸರ್ಕಾರದ ಉದಾರವಾದ ನೆರವು ಈ ಯೋಜನೆಗೆ ದೊರಕಿ, ಈ ಹಿನ್ನೆಲೆಯಲ್ಲಿ ಶಂಬಾ ಕೃತಿಸಂಪುಟಗಳು ಹೊರಬರುತ್ತಿವೆ.

ನಮ್ಮ ಕಾಲದ ಅಪರೂಪ ವಿದ್ವಾಂಸರೂ ಸಾಂಸ್ಕೃತಿಕ ಆಚಾರ್ಯರೂ ಆದವರೊಬ್ಬರ ಸಮಗ್ರ ಸಾಹಿತ್ಯ ವನ್ನು ಸಂಪಾದಿಸುವ ದೊಡ್ಡಹೊಣೆಯನ್ನು ಗೌರವವನ್ನು ಪಡೆದಿರುವುದು ನನಗೆ ತುಂಬಾ ಸಂತೋಷ ಉಂಟು ಮಾಡಿದೆ. ಇದು ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಎಚ್. ಜೆ. ಲಕ್ಕಪ್ಪಗೌಡ ಹಾಗೂ ಲೋಕಸೇವಾ ಆಯೋಗದ ಸದಸ್ಯರಾದ ಶ್ರೀ ಮುಕಡಪ್ಪ ಅವರ ವಿಶ್ವಾಸದಿಂದ ಸಾಧ್ಯವಾಗಿದೆ. ಅದಕ್ಕಾಗಿ ಅವರಿಬ್ಬರಿಗೂ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳು ಮೊದಲಿಗೆ ಸಲ್ಲುತ್ತವೆ.

ಶಂಬಾ ಜೋಶಿ ಅವರು ಪುಸ್ತಕರೂಪದಲ್ಲಿ ಪ್ರಕಟಿಸಿರುವ ಸಾಹಿತ್ಯ ಸುಮಾರು ಡೆಮ್ಮೈ ಆಕಾರದಲ್ಲಿ ನಾಲ್ಕು ಸಾವಿರ ಪುಟಗಳಾಗುತ್ತವೆ. ೧೯೨೧ ರಿಂದ ಹಿಡಿದು ೧೯೮೬ರ ವರೆಗಿನ ಕಾಲಾವಧಿಯಲ್ಲಿ ಈ ಎಲ್ಲ ಕೃತಿಗಳು ರಚನೆಗಳಾಗಿವೆ. ಇವಲ್ಲದೆ ನೂರಾರು ಬಿಡಿಲೇಖನಗಳಿವೆ. ಅವು ವಿವಿಧ ವಿಷಯಗಳಿಗೆ ಸೇರಿವೆ. ಅವುಗಳಲ್ಲಿ ಅಪೂರ್ವವಾದ ಕೆಲವು ಲೇಖನಗಳನ್ನು ಆಯ್ದು ಪುಸ್ತಕರೂಪದಲ್ಲಿ 'ಕನ್ನಡ ಪುಸ್ತಕ ಪ್ರಾಧಿಕಾರ'ವು ೧೯೯೬ರಲ್ಲಿ ಪ್ರಕಟಿಸಿದೆ. ಅವರು ಬರೆದಿರುವ ಒಟ್ಟು ಪುಸ್ತಕಗಳು ಮೂವತ್ತೆರಡು. ಇವುಗಳಲ್ಲಿ ಮರಾಠಿ ಅನುವಾದ 'ಭಗವದ್ಗೀತೆ'ಯ ಮೊದಲಭಾಗ ಮತ್ತು ರಾನಡೆ ಅವರ 'ಉಪನಿಷತ್ ರಹಸ್ಯ'ದ 'ಮನಃಶಾಸ್ತ್ರ'ದ ಭಾಗ ಇವುಗಳನ್ನು ಸಂಪುಟಗಳಲ್ಲಿ ಸೇರಿಸಿಲ್ಲ. ಉಳಿದ ಎಲ್ಲ ಪುಸ್ತಕಗಳು ಸೇರ್ಪಡೆಗೊಂಡಿವೆ. ಅವುಗಳನ್ನು ವಿಷಯ ಹಾಗೂ ಚಾರಿತ್ರಿಕಾನುಗುಣವಾಗಿ ಜೋಡಿಸಿ ಈ ಸಂಪುಟಗಳನ್ನೂ ಸಿದ್ಧಪಡಿಸಿ ಹೀಗೆ ವಿನ್ಯಾಸಗೊಳಿಸಲಾಗಿದೆ.

ಸಂಪುಟ - ೧ ಕಂನಾಡು-ಕರ್ನಾಟ

ಈ ಸಂಪುಟದಲ್ಲಿ ಕಣ್ಮರೆಯಾದ ಕನ್ನಡ ೧೯೩೩, ಮಹಾರಾಷ್ಟ್ರದ ಮೂಲ ೧೯೩೪, ಮರ್ಹಾಟಿ ಸಂಸ್ಕೃತಿ : ಕೆಲವು ಸಮಸ್ಯೆಗಳು - ೧೯೮೯, (ಮರ್ಹಾಟಿ ಸಂಸ್ಕೃತಿ : ಕಾಂಹಿ ಸಮಸ್ಯಾ - ೧೯೫೭ರ ಮರಾಠಿ ಕೃತಿಯ ಕನ್ನಡಾನುವಾದ) ಕರ್ನಾಟದ ವೀರಕ್ಷತ್ರಿಯರು - ೧೯೩೭ ಇವು ಮುಖ್ಯವಾಗಿ ಕನ್ನಡದ ನೆಲೆಯನ್ನೂ ಮೂಲಿಗರ ಸಾಂಸ್ಕೃತಿಕ ನೆಲೆಗಳನ್ನು ಕುರಿತಿವೆ.

ಸಂಪುಟ - ೨ ಕಂನಡ-ಕಂನುಡಿ

ಈ ಸಂಪುಟವು 'ಕನ್ನಡದ ನೆಲೆ ೧೯೩೯, ಎಡೆಗಳು ಹೇಳುವ ಕಂನಾಡ ಕತೆ ೧೯೪೭, ಕಂನುಡಿಯ ಹುಟ್ಟು ೧೯೩೭, ಕನ್ನಡ ನುಡಿಯ ಜೀವಾಳ ೧೯೪೦ ಇವುಗಳನ್ನು ಒಳಗೊಂಡಿದೆ. ಮೊದಲೆರಡು ಪುಸ್ತಕಗಳು ಕನ್ನಡ ಸಂಸ್ಕೃತಿ ವಿಚಾರಧಾರೆಯ ಮೂಲಗಾಮಿ ಚರ್ಚೆಗಳನ್ನು ಮತ್ತು ಭಾಷೆಯ ಹಲವು ಬಗೆಯ ನಂಟುಗಳ ವಿಶಿಷ್ಟ ನೆಲೆಗಳನ್ನು ಚರ್ಚಿಸುತ್ತವೆ.

ಸಂಪುಟ - ೩ ಕರ್ನಾಟ ಸಂಸ್ಕೃತಿ

ಈ ಸಂಪುಟವು ಹಾಲುಮತದರ್ಶನ ೧೯೬೦, ಕರ್ನಾಟ : ಸಂಸ್ಕೃತಿಯ ಪೂರ್ವಪೀಠಿಕೆ ಭಾಗ - ೨, ೧೯೬೭ ಇವೆರಡನ್ನು ಒಳಗೊಂಡಿದೆ ಈ ಹಿಂದಿನ ಕಂನಾಡ ಮೂಲಿಗರ ಸಂಸ್ಕೃತಿ-ಭಾಷೆ, ಪಾರಸ್ಪರಿಕ ಸಂಬಂಧ ಅವುಗಳ ಇಳಿಗಾಲಕ್ಕೆ ಈಡಾದ ಕಾರಣಮೀಮಾಂಸೆ ಯನ್ನು ಕುರಿತು ಈ ಸಂಪುಟಗಳು ಚರ್ಚಿಸುತ್ತವೆ.

ಸಂಪುಟ - ೪ ಭಾರತೀಯ ಸಂಸ್ಕೃತಿ

ಋಗ್ವೇದಸಾರ : ನಾಗಪ್ರತಿಮಾ ವಿಚಾರ - ೧೯೭೨, ಸತ್ತ್ಯ-ಸತ್ಯ ೧೯೭೫, ಭಾಷೆ ಮತ್ತು ಸಂಸ್ಕೃತಿ ೧೯೭೫ ಇವುಗಳನ್ನು ಒಳಗೊಂಡಿದೆ. ಕಂನಾಡ ನೆಲೆಯಿಂದ ಅಖಿಲ ಭಾರತೀಯ ಸಂಸ್ಕೃತಿಯ ಜೀವನ ಕ್ರಮವನ್ನು, ಜೀವನದ ಅರ್ಥಗ್ರಹಣದ ನೆಲೆಗಳನ್ನು ಇವು ವ್ಯಾಖ್ಯಾನಿಸಿ ತಿಳಿಸುತ್ತವೆ.

ಸಂಪುಟ - ೫ ಮಾನವ ಸಂಸ್ಕೃತಿ

ಈ ಸಂಪುಟವು ಪ್ರವಾಹ ಪತಿತರ ಕರ್ಮ ಹಿಂದೂ ಎಂಬ ಧರ್ಮ ೧೯೭೬, ಶ್ರೀಮತ್ ಭಗವದ್ಗೀತೆಯಲ್ಲಿ ಹುದುಗಿರುವ ರಾಜಯೋಗದ ಸ್ವರೂಪ ೧೯೭೭, ಮಾನವಧರ್ಮದ ಆಕೃತಿ ೧೯೭೮, ಬುಧನ ಜಾತಕ ೧೯೮೦, ಬಿತ್ತಿದ್ದನ್ನು ಬೆಳಕೊ ೧೯೮೪, ಜೀವನದ ಅರ್ಥಗ್ರಹಣ ಪದ್ಧತಿ ೧೯೮೬ ಇವುಗಳನ್ನು ಒಳಗೊಂಡಿದೆ. ಇವುಗಳಲ್ಲಿ ಕಂನಾಡು, ಭಾರತೀಯ ನೆಲೆಗಳಿಂದ ಜಾಗತಿಕ ಸಂಸ್ಕೃತಿ ನೆಲೆಗಳ ಪುರಾಣ ಹಾಗೂ ಹಲವು ಜ್ಞಾನಶಾಖೆಗಳ ಜಾಡು ಹಿಡಿದು ಮನುಷ್ಯನ ಅಧಃಪತನಕ್ಕೆ ಕಾರಣವಾದ ನೆಲೆಗಳನ್ನು ತಿಳಿಯುವ ಕಡೆಗೆ ಸಾಗುತ್ತವೆ.

ಸಂಪುಟ - ೬ ಸಂಸ್ಕೃತಿ-ಸಾಹಿತ್ಯ

ಈ ಸಂಪುಟವು, ಮಹರ್ಷಿ ಅರವಿಂದ ಘೋಷ ಇವರ ಸಂಕ್ಷಿಪ್ತ ಚರಿತ್ರವು ೧೯೨೧, ಟಿಳಕ ಕಥಾಮೃತಸಾರ ೧೯೩೨, ರೂಢಿ ಹಾಗೂ ಭಾವಿಕ ಕಲ್ಪನೆಗಳು ೧೯೪೦, ಅಗ್ನಿವಿದ್ಯೆ - ಎದ್ದೇಳು ಕನ್ನಡಿಗಾ ಅಥವಾ ಅಸಂತೋಷವೆ ಏಳ್ಗೆಯ ಮೂಲ - ೧೯೪೩, ಯಕ್ಷ ಪ್ರಶ್ನೆ ಅಥವಾ ಬರಲಿರುವ ಸಮಾಜ ೧೯೪೮, ಸಮಾಜದರ್ಶನ ೧೯೪೯, ಮಕ್ಕಳ ಒಡಪುಗಳು ೧೯೪೦, ಸೌಂದರ್ಯವಿಚಾರ ೧೯೪೯, ದಾರಿಯ ಬುತ್ತಿ ೧೯೫೦, ಕರ್ಣನ ಮೂರು ಚಿತ್ರಗಳು ೧೯೪೭, ಇವುಗಳನ್ನು ಒಳಗೊಂಡಿದೆ. ಇವುಗಳಲ್ಲಿ ಎರಡು ಜೀವನ ಚರಿತ್ರೆಗಳು, ನಾಲ್ಕು ಸಮಾಜ ಚಿಂತನೆಗಳೂ, ನಾಲ್ಕು ಸಾಹಿತ್ಯ ಸಂಸ್ಕೃತಿಯನ್ನು ಒಳಗೊಂಡ ಪುಸ್ತಕಗಳಿವೆ.

ಶಂಬಾ ಜೋಶಿಯವರ ಎಲ್ಲ ಪುಸ್ತಕಗಳನ್ನು ಈ ಆರುಸಂಪುಟಗಳಲ್ಲಿ ಅಡಕಗೊಳಿಸಲಾಗಿದೆ. ಆರನೆಯ ಸಂಪುಟಕ್ಕೆ ಸೇರಬೇಕಾದ ೧೯೭೬ರಲ್ಲಿ ಪ್ರಕಟವಾದ 'ಕನ್ನಡ ಸಾಹಿತ್ಯ ಅಭಿವೃದ್ಧಿ' ಪುಸ್ತಿಕೆ ಕೊನೆಯ ವೇಳೆಯ ವರೆಗೂ ಲಭ್ಯವಾಗಲಿಲ್ಲ. ಅದನ್ನು ಇಲ್ಲಿ ಸೇರಿಸಲಾಗಿಲ್ಲ.

ಶಂಬಾ ಅವರು ಸಾಂಸ್ಕೃತಿಕ ಸಂಶೋಧನೆಯ ಹಾದಿಯಲ್ಲಿ ನಡೆದದ್ದು ಸುದೀರ್ಘ ನೆಲೆಯಲ್ಲೇ. ಅವರು ಅತ್ತ ಮಹಾರಾಷ್ಟ್ರ, ಇತ್ತ ಕರ್ನಾಟಕ ಈ ಎರಡೂ ಸಾಂಸ್ಕೃತಿಕ ಸಾಗರದಲ್ಲಿ ಮಿಂದೆದ್ದವರು. ಅವರು ಉಸಿರಾಡಿದ್ದು ಕಂನಾಡಿನ ಪುಣ್ಯ. ಅವರ ಕೃತಿಗಳನ್ನು ಬೇರೆ ಬೇರೆ ಕ್ಷೇತ್ರದ ಹಾಗೂ ಬೇರೆ ಬೇರೆ ಕಾಲಘಟ್ಟದ ಓದುಗರಿಗೆ ಪುನರ್ ಓದಿಕೆಗೆ ಸಜ್ಜುಗೊಳಿಸಿಕೊಡುವ ಆವಶ್ಯಕತೆ ಇತ್ತು. ಆ ಬಗೆಯ ಸಜ್ಜುಗೊಳಿಸುವ ಸಂಪಾದಕತ್ವದ ಕೆಲಸವನ್ನು ಈ ಆರು ಸಂಪುಟಗಳಲ್ಲಿ ಕೈಗೊಳ್ಳಲಾಗಿದೆ. ಈ ಸಂಪುಟಗಳನ್ನು ಸಿದ್ಧಪಡಿಸುವಾಗ ಕೆಲವೊಂದು ನಿಯಮಗಳನ್ನು ಹಾಕಿಕೊಳ್ಳಲಾಯಿತು. ಆ ನಿಯಮಗಳು ಹೀಗಿವೆ:

i) ಶಂಬಾ ಅವರ ಕಾಲದಲ್ಲಿ ಪ್ರಕಟವಾದ ಮೊದಲ ಮುದ್ರಣ ಹಾಗೂ ಆನಂತರದ ಪುನರ್ಮುದ್ರಣಗಳನ್ನು ಗಮನಿಸುವುದು

ii) ಶಂಬಾ ಅವರ ಕೃತಿಗಳಲ್ಲಿ ಕಾಣಬರುವ ಅಚ್ಚಿನ ದೋಷಗಳು, ಉದ್ಧೃತ ಭಾಗಗಳ ಪರಿಷ್ಕರಣ, ಹಾಗೂ ಟಿಪ್ಪಣಿಗಳ ಆಮೂಲಾಗ್ರ ಪರಿಷ್ಕರಣ ಹಾಗೂ ಸೂಕ್ತವಾದ ಎಡೆಗಳಲ್ಲಿ ಅಧ್ಯಾಯಗಳ ಮರುವಿಂಗಡಣ.

iii) ಪ್ರತಿಸಂಪುಟಗಳ ಅನುಬಂಧಗಳಲ್ಲಿ ಶಂಬಾ ಕೃತಿಗಳ ವಿವರಣಾತ್ಮಕ ಸೂಚಿ, ಆಕರ ಗ್ರಂಥಗಳ ಸೂಚಿ, ಶಬ್ದಸೂಚಿ ನೀಡುವುದು.

iv) ಪ್ರತಿ ಸಂಪುಟಗಳಿಗೂ ಪ್ರತ್ಯೇಕವಾದ ಪ್ರಸ್ತಾವನೆ ಬರೆಯುವುದು. ಈ ಪ್ರಸ್ತಾವನೆಯು ಸಮಕಾಲೀನ

ಸಂಸ್ಕೃತಿ, ಭಾಷೆಯ ವಾಗ್ವಾದಗಳನ್ನು ಶಂಬಾ ಜೋಶಿಯವರ ಸಾಂಸ್ಕೃತಿಕ ನಡೆಯ ನೆಲೆಗಳನ್ನು ಅವರ ಕೊಡುಗೆಗಳ ವೈಶಿಷ್ಟ್ಯಗಳು ಅದರಲ್ಲಿ ಬರುವಂತೆ ನೋಡಿಕೊಳ್ಳುವುದು.

v) ಪ್ರತಿಸಂಪುಟಗಳಿಗೂ ಆಯಾ ಸಂಪುಟಗಳಲ್ಲಿ ಇರುವ ಅಪರೂಪದ ಪುಸ್ತಕಗಳ ಮುಖಚಿತ್ರ, ಶಂಬಾ ಅವರ ಹಳೆಯ ಭಾವಚಿತ್ರ ಮೊದಲಾದುವುಗಳನ್ನು ನೀಡುವುದು.

ಈ ಅಂಶಗಳಿಗೆ ಸಂಪಾದಕ ಸಲಹಾ ಸಮಿತಿಯ ಸದಸ್ಯರೆಲ್ಲರೂ ಒಪ್ಪಿಗೆ ಸೂಚಿಸಿದರು. ಶಂಬಾ ಜೋಶಿಯವರ ಮಗಳು ಶ್ರೀಮತಿ ವಿಮಲ ಡಿಸ್ಕಳ್ಕರ್ ಅವರು ನೀಡಿದ ಸಲಹೆ ಮತ್ತು ಸಹಕಾರಗಳು ಈ ಸಂಪುಟಗಳು ಉತ್ತಮಗೊಳ್ಳಲು ಪರೋಕ್ಷವಾಗಿ ಕಾರಣವಾಗಿವೆ.

ಇನ್ನು, ಕೊನೆಯದಾಗಿ ನೆನೆಯಬೇಕಾದದ್ದು ಈ ಸಂಪುಟಗಳಿಗೆ ಚಾಲನೆ ಕೊಟ್ಟು, ವಿಶೇಷಾನುದಾನ ನೀಡಿದ ಕರ್ನಾಟಕ ಸರಕಾರಕ್ಕೆ, ಲೋಕಸೇವಾ ಆಯೋಗದ ಸದಸ್ಯರೂ ನನ್ನ ಹಿರಿಯ ಮಿತ್ರರೂ ಆದ ಶ್ರೀ ಮುಕಡಪ್ಪ ಅವರಿಗೆ, ಈ ಹೊಣೆಗಾರಿಕೆಯನ್ನು ನನ್ನ ಹೆಗಲಿಗೆ ಹೊರಿಸಿ ಅಡಿಗಡಿಗೂ ಪ್ರೋತ್ಸಾಹ ನೀಡಿ ಈ ಸಂಪುಟಗಳು ಉತ್ತಮವಾಗಿ ಬರಲು ಕಾರಣರಾದ ಹಿರಿಯ ವಿದ್ವಾಂಸರೂ ಸಮರ್ಥ ಆಡಳಿತಗಾರರೂ ಆದ ಡಾ. ಎಚ್. ಜೆ. ಲಕ್ಕಪ್ಪಗೌಡ ಅವರಿಗೆ, ಸಂಪಾದಕ ಸಲಹಾ ಸಮಿತಿಯ ಸದಸ್ಯರಾದ ಡಾ. ದೇ ಜವರೇ ಗೌಡ, ಶ್ರೀಮತಿ ವಿಮಲ ಡಿಸ್ಕಳ್ಕರ್ ಹಾಗೂ ಡಾ. ದೇವೇಂದ್ರಕುಮಾರ ಹಕಾರಿ ಅವರಿಗೆ, ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ವಿ. ಎನ್. ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕರಾದ ಶ್ರೀ ಜೆ. ಎನ್. ಶಾಮರಾವ್ ಅವರಿಗೆ, ಸಿಬ್ಬಂದಿವರ್ಗದವರಿಗೆ, ಹಲವು ಬಗೆಗಳಲ್ಲಿ ನೆರವಾದ ವಿದ್ವಾನ್ ಎಂ. ಆರ್. ರಕ್ಷಿತ್, ಶಂಬಾ ವಿಚಾರ ವೇದಿಕೆಯ ಎಸ್. ಶಿವಲಿಂಗಯ್ಯ ಇವರಿಗೆ, ಶ್ರೀ ಕೃಷ್ಣಾನಂದ ಕಾಮತ್, ಶ್ರೀ. ಕೆ. ಜಿ. ಸೋಮಶೇಖರ್, ಎಂ. ಮಲ್ಲಿಕಾರ್ಜುನಯ್ಯ ಇನ್ನು ಮುಂತಾದ ಗೆಳೆಯರು ತೆಗೆದ ಛಾಯಾಚಿತ್ರ ಗಳನ್ನು ವಿಶ್ವಾಸ ಹಾಗೂ ಕೃತಜ್ಞತಾಪೂರ್ವಕವಾಗಿ ಉಪಯೋಗಿಸಿಕೊಳ್ಳಲಾಗಿದೆ. ಈ ಮಹನೀಯರಿಗೆ, ಆರು ಸಂಪುಟಗಳ ಮುಖಪುಟ ವಿನ್ಯಾಸ ಮಾಡಿಕೊಟ್ಟ ತರುಣ ಕಲಾವಿದ ಶ್ರೀ ಹಾದಿಮನಿ ಅವರಿಗೆ, ಅಂದವಾಗಿ ಮುದ್ರಿಸಿಕೊಟ್ಟ ಲಕ್ಷ್ಮಿ ಮುದ್ರಣಾಲಯದ ಗೆಳೆಯರಾದ ಶ್ರೀ ಅಶೋಕ್ ಕುಮಾರ್ ಮತ್ತು ಅವರ ಎಲ್ಲ ಸಿಬ್ಬಂದಿ ವರ್ಗದವರಿಗೆ, ಪರೋಕ್ಷವಾಗಿ ಅಪರೋಕ್ಷವಾಗಿ ಹಲವು ವಿಧಗಳಲ್ಲಿ ನೆರವಾದ ಹಾಗೂ ಈ ಮೇಲೆ ಹೆಸರಿಸದ ಎಲ್ಲರಿಗೂ ತುಂಬು ವಂದನೆಗಳು.

ಇವು ಡಾ. ಶಂ. ಬಾ. ಜೋಶಿ ಅವರ ಕೃತಿಸಂಪುಟಗಳು. ಇದರ ಗುಣಾತ್ಮಕ ಶ್ರೇಯಸ್ಸೆಲ್ಲವೂ ಅವರಿಗೆ ಸಲ್ಲಬೇಕು. ಉಪನಿಷತ್ತು ಶ್ರೇಯಸ್ಸು- ಪ್ರೇಯಸ್ಸು ಎಂದು ಎರಡು ತತ್ತ್ವಗಳನ್ನು ಹೇಳುತ್ತದೆ. ಶ್ರೇಯಸ್ಸು ಮುಖ್ಯವೆಂದು, ಅದೇ ಜೀವನ ಶ್ರದ್ಧೆಯೆಂದು, ಉಪನಿಷತ್ತು ಹೇಳುತ್ತದೆ. ಶಂಬಾ ಕಂನಾಡಿನ ಶ್ರೇಯಸ್ಸಿಗಾಗಿ ದುಡಿದವರು. ಇದರ ಸಮಗ್ರದರ್ಶನವನ್ನು ಅವರ ಕೃತಿಗಳು ರುಜುವಾತುಗೊಳಿಸುತ್ತವೆ. ಅವರ ಸಮಗ್ರ ಸಂಪುಟಗಳನ್ನು ನಿಮ್ಮ ಉಡಿಯಲ್ಲಿ ಹಾಕುತ್ತಿದ್ದೇವೆ. ಸಂಪುಟಗಳು ಹಲವು ರೀತಿಯ ಓದಿಕೆಗೆ ಹಾಗೂ ನಿಮ್ಮ ಪ್ರೀತಿಗೆ ಒಳಗಾಗಲಿ. ಈ ಸಂಪುಟಗಳಲ್ಲಿ ಏನಾದರೂ ಕೊರತೆಗಳಿದ್ದರೆ ಅದು ಸಂಪಾದಕನ ಸೀಮಿತ ಫಲ. ಇದಕ್ಕಾಗಿ ಕಂನಾಡ ಓದುಗರು ಮನ್ನಿಸಬೇಕು. ಇಷ್ಟು ಹೇಳಿದರೆ ತೀರೀತೆ?

ಕಂನಾಡಿನ ಜನರು ಈ ಸಂಪುಟಗಳನ್ನು ಸಹೃದಯತೆಯಿಂದ ಸ್ವೀಕರಿಸಬೇಕೆಂದೂ ಕುಗ್ಗಿರುವ ಕಂನಾಡನ್ನು ಹಿಗ್ಗುವ ತೆರದಲ್ಲಿ ಹೊರಳಬೇಕೆಂದೂ ಬೇಡುತ್ತೇನೆ. ನಮ್ಮ ತರುಣ ಜನಾಂಗವು ಶಂಬಾ ಅವರನ್ನು ಹೊಸ ಓದಿನ ನೆಲೆಯಲ್ಲಿ ಸ್ವೀಕರಿಸಬೇಕೆಂದೂ ಕೋರುತ್ತೇನೆ.

ಜುಲೈ ೨೫, ೧೯೯೯ **ಮಲ್ಲೇಪುರಂ ಜಿ. ವೆಂಕಟೇಶ**
ಕನ್ನಡ ವಿಶ್ವವಿದ್ಯಾಲಯ-ಹಂಪಿ *ಸಂಪಾದಕ*

ಪ್ರಸ್ತಾವನೆ

ಕೂಡಿ ಓಡಿ ಕೂಡಾಡಿ ಕೂಡಿ ಅರಿಯೋಣ ಕೂಡಿ ಕೂಡಿ
ಕೂಡಿ ತಿಂದು ಕೂಡುಂಡು ಕುಡಿದು ದುಡಿಯೋಣ ಕೂಡಿಕೂಡಿ
ಕೂಡಿ ನಡೆದು ಒಡಗೂಡಿ ಪಡೆದು ನುಡಿಹೇಳಿ ಕೇಳಿ ಕೂಡಿ
ಕೂಡಿ ಬೆಳೆದು ಬೆಳಗೋಣ ದೇವರೊಲು ಕೂಡಿ ಕೂಡಿ ಕೂಡಿ

ಪ್ರಾರ್ಥನೆ- ದ.ರಾ. ಬೇಂದ್ರೆ

ಬೇಂದ್ರೆ ಮತ್ತು ಶಂಬಾ ಇವರಿಬ್ಬರೂ ಧಾರವಾಡ ಮಣ್ಣಿಗೆ ಸೇರಿದವರು. ತಮ್ಮ ಜೀವನವನ್ನು ಕೆಲವೇ ಅಂಚುಗಳ ದೂರದಲ್ಲಿದ್ದೂ ಹಾಗೇ ಕಳೆದವರು. ಕವಿತೆ ಬೇಂದ್ರೆ ಅವರನ್ನು ಹಿಡಿದರೆ; ಶೋಧನೆ ಶಂಬಾ ಅವರನ್ನು ಹಿಡಿಯಿತು. ಇವೆರಡರ ಮಾರ್ಗಗಳಲ್ಲಿ ಮೊದಲನೆಯದು ಕಲ್ಪನೆ ಹಾಗೂ ಪ್ರತಿಭೆಯ ಸಂಗಮದಲ್ಲಿ ಬೆಳೆಯಿತು. ಎರಡನೆಯದು ಕಲ್ಪನೆ ಹಾಗೂ ವೈಚಾರಿಕ ಸಂಗಮದಲ್ಲಿ ಬೆಳೆಯಿತ್ತು ಇವೆರಡೂ ವ್ಯಕ್ತಗೊಳಿಸುವ ಸಂಕೇತಗಳು ಹಲವೊಮ್ಮೆ ಭಿನ್ನ. ಆದರೆ, ತಾತ್ವಿಕವಾಗಿ ಒಂದೇ ನೆಲೆಗೆ ಸೇರಿದವು. 'ಗಂಗಾವತರಣ' ಕವನ ಸಂಕಲನದ ಕೊನೆಗೆ ಒಂದು ಕವಿತೆ ಬರುತ್ತದೆ. ಈ ಕವಿತೆಯ ಕಟ್ಟು, ಕಂನಡ ಶಬ್ದಗಳಿಂದಲೇ ಆಗಿದೆ, ಅಥವಾ ಕಂನಡ ನುಡಿಗಳಿಂದಲೇ ಪೋಣಿಸಿದೆ. ಇದು ನಮ್ಮ ಸಂಸ್ಕೃತಿಯ ಸಾರ. 'ಕೂಡು' ಎಂಬ ಶಬ್ದಶಿಲ್ಪವು ವ್ಯಂಜಿಸುವ ಅರ್ಥವನ್ನೆ ಸಾಂಸ್ಕೃತಿಕವಾಗಿ 'ಜೀವನಸಮಷ್ಟಿ' ಎಂದು ಶಂಬಾ ಕರೆದರು. ಬೇಂದ್ರೆ ಮತ್ತು ಶಂಬಾ ಅವರಿಬ್ಬರದು ಸಮಾನವಾದ ಪ್ರಾತಿಭಾಚಕ್ಷು. ಸಹಸ್ರಾರು ವರ್ಷಗಳ ಕಾಲ ನಡೆದ 'ಚರಿತ್ರೆ'ಯ ಪುನಾರಚನೆಗೆ ಸಮಸ್ತ ವಸ್ತು ಸಾಮಗ್ರಿಗಳನ್ನೂ ಅರ್ಥಗ್ರಹಣ ಪದ್ಧತಿಗಳನ್ನೂ ಶಂಬಾ ಬಳಸಿಕೊಂಡರು. ಬೇಂದ್ರೆ ಒಂದು ಸಾವಿರಕ್ಕೂ ಮೀರಿದ ಕನ್ನಡ ವಾಙ್ಮಯ ಪ್ರಪಂಚದ ಸಮಸ್ತವನ್ನು ತನ್ನ ಎದೆಗೆ ಚಾಚಿಕೊಂಡು ಬಳಸಿ ಬೆಳೆಸಿದರು, ಸೃಜಿಸಿದರು. ಶಂಬಾ, ಕೆಡವಿ ಹೊಸಮನೆ ಕಟ್ಟುವ ಹವಣಿಕೆಯಲ್ಲಿ ತೊಡಗಿದ್ದರೆ; ಬೇಂದ್ರೆ ಶಬ್ದಶಿಲ್ಪಗಳನ್ನು ಮುರಿದು ಹೊಸಹೊಸ ಅರ್ಥದ ನೆಲೆಗಳನ್ನು ನಿರ್ಮಿಸಿದರು. ಇವರಿಬ್ಬರ ನಿರ್ಮಾಣಕ್ರಿಯೆಯ ಸಾಂಸ್ಕೃತಿಕ ನೆಲೆಗಳು ವಿವರವಾದ ಅಧ್ಯಯನಕ್ಕೆ ನಮ್ಮನ್ನು ಕರೆದೊಯ್ಯುತ್ತವೆ.

ಕಂನಡ ಸಂಸ್ಕೃತಿಯ ಹಲವು ನಿತಾಂತ ನೆಲೆಗಳನ್ನು ಶಂಬಾ ಮತ್ತು ಬೇಂದ್ರೆ ಇವರಿಬ್ಬರೂ ಬೇರೆಬೇರೆ ನೆಲೆಗಳಲ್ಲಿ ತೋರಿಸಿಕೊಟ್ಟರಷ್ಟೆ. ಇವರಿಬ್ಬರೂ ನಡೆದ ಹಾದಿ ಬೇರೆಬೇರೆಯಾದರೂ ಅವರಿಬ್ಬರ ಫಲಿತ ಒಂದೇ. ಇಬ್ಬರು ನಾಡು ಮತ್ತು ನುಡಿಯ ಏಳ್ಗೆಗಾಗಿ ದುಡಿದವರೇ. ನಾಡಿನ ಪಾಡನ್ನು ಸುಸಂಗತಗೊಂಡ ನೆಲೆಗಳಲ್ಲಿ ನೋಡಿದರು. ಶಂಬಾ ಪ್ರಶ್ನೆಗಳಿಂದ ಮುಂದುವರೆದರೆ, ಬೇಂದ್ರೆ ಪ್ರಶ್ನೆಗಳಿಗಿಂತ ಇದ್ದ ಸ್ಥಿತಿ-ಗತಿಯ

ಸುಧಾರಣವಾದೀ ನೆಲೆಗಳಿಂದ ಮುಂದುವರಿದರು. ಕಂನಡ ಮತ್ತು ಭಾರತೀಯ ಸಂಸ್ಕೃತಿಯ ಉಚ್ಚ ಆದರ್ಶಗಳನ್ನು ಯಾವ ಬಗೆಯ ಸಂದೇಹಕ್ಕೂ ಅವಕಾಶ ಇಲ್ಲದೆ ಬೇಂದ್ರೆ ನೋಡಿದರು. ಶಂಬಾ ಈ ಉಚ್ಚ ಆದರ್ಶಗಳ ಆಕೃತಿ-ಆಶಯಗಳ ಭಿನ್ನಭಿನ್ನ ನೆಲೆಗಳನ್ನು ಕುರಿತು ಸ್ಪರ್ಶಿಸಿದರು, ಚಿಂತಿಸಿದರು, ಶೋಧಿಸಿದರು ಈ ಸಂಗತಿಗಳನ್ನು ಜನತೆಗೆ ತಿಳಿಸಿದರು.

ಹಿನ್ನೆಲೆ

ಭಾರತೀಯ ಸಂಸ್ಕೃತಿ ತಿಳಿಯಲು ಹದಿನೆಂಟು ಮತ್ತು ಹತ್ತೊಬತ್ತನೆಯ ಶತಮಾನದಲ್ಲಿ ಹಲವು ಬಗೆಯ ಅಧ್ಯಯನಗಳು ನಡೆದುವು. ಇವುಗಳಲ್ಲಿ ಐರೋಪ್ಯದ ಸಾಂಸ್ಕೃತಿಕ ಇತಿಹಾಸದ ಗ್ರಹಿಕೆಯ ಬಗೆಗೆ ಕೆಲವು ಅಂಶಗಳನ್ನೂ ಹೇಳಬೇಕು. ಐರೋಪ್ಯರ ಆಗಮನ ಸಂಸ್ಕೃತಿ ಅಧ್ಯಯನಕ್ಕೆ ಹಲವು ನಿಲುವುಗಳನ್ನು ತಂದುಕೊಟ್ಟಿತು. ಅದರಲ್ಲಿ ವಿಲಿಯಂ ಜೇನ್ಸ್ ಮತ್ತು ಚಾರ್ಲ್ಸ್ ವಿಲ್ಕಿನ್ಸ್ ಮುಂತಾದ ಈಸ್ಟ್ ಇಂಡಿಯಾ ಕಂಪೆನಿಗಳಲ್ಲಿ ಕೆಲಸಕ್ಕಿದ್ದವರು ಪ್ರಮುಖರು. ಇವರು ಭಾರತೀಯ ಸಂಸ್ಕೃತಿಯ ಗತಕಾಲದ ಶೋಧನೆ ಮತ್ತು ಹದಿನೆಂಟನೆಯ ಶತಮಾನದ ಯೂರೋಪಿಗೆ ಅದರಿಂದಾದ ತಿಳುವಳಿಕೆಗೆ ಕಾರಣರಾದವರು. ಇವರ ಆಸಕ್ತಿಯ ಫಲ ಭಾರತದ ಪುರಾತನ ಭಾಷೆಗಳ ಮತ್ತು ಸಾಹಿತ್ಯಗಳ ಅಭ್ಯಾಸದಲ್ಲಿ ಆಸಕ್ತಿ ಹೊಂದಿದವರ ಸಂಖ್ಯೆ ಬೆಳೆಯಿತು. ಇದೇ ಹೊತ್ತಿಗೆ ಭಾಷಾಶಾಸ್ತ್ರ, ಮಾನವ ಕುಲಶಾಸ್ತ್ರ, ಇತರ ಪ್ರಾಚೀನ ಶಾಸ್ತ್ರಗಳ ಕ್ಷೇತ್ರಗಳಲ್ಲಿ ಗಮನಾರ್ಹವಾದ ಶೋಧನೆಗಳು ನಡೆದಿದ್ದವು. ಈ ಎಲ್ಲ ಶಾಸ್ತ್ರೀಯ ಅಧ್ಯಯನದ ನೆಲೆಗಳಲ್ಲಿ ಐರೋಪ್ಯರು ಹೊರಟರು. ಪ್ರಾಚೀನ ಗ್ರೀಕ್, ಸುಮೇರಿಯನ್, ಪ್ರೆಂಚ್, ಪರ್ಶಿಯನ್ ದೇಶಗಳ ಭಾಷೆ ಮತ್ತು ಸಂಸ್ಕೃತಿಯ ಅಧ್ಯಯನದ ಕಡೆ ದಾರಿ ಇಟ್ಟರು. ಹೀಗೆ ಇಟ್ಟ ಮೊತ್ತಮೊದಲ ವಿದ್ವಾಂಸ. ಪ್ರೊ. ಮ್ಯಾಕ್ಸ್‌ಮುಲ್ಲರ್. ಜರ್ಮನಿಯ ರೋಮಾಂಟಿಕ್ ಸಂಘಕ್ಕೆ ಸೇರಿದ ಒಂದು ಸ್ಪಷ್ಟಗುಂಪು ಭಾರತೀಯ ಪ್ರಾಚೀನ ಸಂಪ್ರದಾಯ, ಧರ್ಮ, ಆಧ್ಯಾತ್ಮಿಕ ನಿಲುವಿನ ಬಗೆಗೆ ಉತ್ಕರ್ಷವಾಗಿ ಹೇಳಿತು. ಇದಕ್ಕೂ ಮೊದಲು ವಿನ್ಸೆಂಟ್‌ಸ್ಮಿಥ್ ಮಹಾಶಯ ಸಂಸ್ಕೃತಿ ಕುರಿತ ವ್ಯಾಖ್ಯಾನದಲ್ಲಿ ಗ್ರೀಕ್‌ಸಂಸ್ಕೃತಿಯ ಅಳತೆಗೋಲಿನಿಂದಲೇ ಉಳಿದ ಸಂಸ್ಕೃತಿಗಳನ್ನು ನೋಡುತ್ತಿದ್ದ. ಭಾರತದ ಬಗೆಗೂ ಭಾರತದ ಪ್ರಾಚೀನ ಸಂಗತಿಗಳ ಬಗೆಗೂ ಒಂದು ರೀತಿಯ ಕೊರತೆಯನ್ನೂ ತೋರಿಸುತ್ತಲೇ ಇರುತ್ತಿದ್ದ. ಇದು ಅವನು ಬರೆದ Early History of India (1924) ಪುಸ್ತಕದಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಇವೆರಡೂ ಅಧ್ಯಯನಗಳು ಸಂಸ್ಕೃತಿಯ ಮೂಲಗಾಮಿ ಚರ್ಚೆಗೆ ಇಕ್ಕಟ್ಟನ್ನೇ ತರುತ್ತಿದ್ದುವು. ಜರ್ಮನಿಯ ಅಭಿಜಾತ ವಿದ್ವಾಂಸರು ಪ್ರಾಚೀನ ಸಂಸ್ಕೃತಿಯ ತೌಲನಿಕ ಅಧ್ಯಯನಕ್ಕೆ ತೊಡಗಿದ ವೇಳೆ ಹಾಗೂ ಭಾರತದ ಬಗೆಗೆ ಇಟ್ಟುಕೊಂಡ ನಂಬುಗೆಗಳ ಬಗೆಗೆ ಶಂಬಾ ಅವರು ಹೆಚ್ಚಾಗಿ ಪ್ರತಿಕ್ರಿಯಿಸಿಲ್ಲ ನಿಜ. ಆದರೆ, ಜರ್ಮನ್ ವೇದವಿದ್ವಾಂಸರ ಸಂಸ್ಕೃತಿ ಚಿಂತನೆಗಳನ್ನು ಸ್ವೀಕರಿಸಿದರೂ ತಮ್ಮ ಭಿನ್ನಾಭಿಪ್ರಾಯಗಳನ್ನು ಅವರು ಹೇಳದೆ ಇಲ್ಲ.

ಸಂಸ್ಕೃತಿ ವ್ಯಾಖ್ಯಾನವೆಂಬುದು ಚರಿತ್ರೆಯ ವಿಸಂಗತಿಗಳ ಮೂಲದಿಂದ ಹುಟ್ಟಬಹುದು. ಆದರೆ, ಇದರ ಫಲಿತ ನೆಲೆಗಳ ಬಗೆಗೆ ಎಚ್ಚರ ವಹಿಸಬೇಕು ಮಾತ್ರ. ಒಂದು ಸಂಸ್ಕೃತಿ ದಿವ್ಯಭವ್ಯವೆಂದು ತಿಳಿದು ಎದೆಗಪ್ಪಿಕೊಳ್ಳುವುದೂ ಇದು ಅಧಮವೆಂದು ತುಚ್ಛೀಕರಿಸುವುದೂ ಸಂಸ್ಕೃತಿ ಅಧ್ಯಯನಗಳ ಕ್ರಮವಲ್ಲ. ಅವೆರಡರ ನೆಲೆಗಳ ಆಚೆಗೆ 'ಮನುಷ್ಯ ಸಂಸ್ಕೃತಿ'ಯ ನೆಲೆ-ಬೆಲೆಗಳನ್ನು ಹುಡುಕುವುದು ಸೂಕ್ತ. ಇದು ಶಂಬಾ ಅವರಿಗೆ ತಿಳಿದಿತ್ತು. 'ಪರಿಮಿತಂ ಭೂತಂ ಅಪರಿಮಿತಂ ಭವ್ಯಂ' ಎಂಬ ಮಾತು ಸಂಸ್ಕೃತಿಯ ಸಾರವನ್ನು ತಿಳಿಸುತ್ತದೆಯಷ್ಟೆ. ಶಂಬಾ ಈ ಹಾದಿಯಲ್ಲಿ ಹೊರಟರು. ವಿನ್ಸೆಂಟ್‌ಸ್ಮಿಥ್ ಮಹಾಶಯನ ಹಾಗೆ ಒಂದು ಸಂಸ್ಕೃತಿಯ ಅಳತೆ ಗೋಲಿನಿಂದಲೇ ಇನ್ನೊಂದು ಸಂಸ್ಕೃತಿಯ ನೆಲೆ-ಬೆಲೆ ತಿಳಿಯಲು ಶಂಬಾ ಹೊರಡಲಿಲ್ಲ. ಆದರೆ ಸಮಷ್ಟಿ ಚಿಂತನ ಕ್ರಮದಲ್ಲಿ ಸಂಸ್ಕೃತಿಯ ನೇಯ್ಗೆಯನ್ನು ತಿಳಿಯಲು ಹೊರಟರು. ಇದು ನಾವು ಈ ಹೊತ್ತಿಗೂ ಪ್ರಧಾನವಾಗಿ ಗ್ರಹಿಸಬೇಕಾದ ಸಂಗತಿಯಾಗಿದೆ. ಅವರು ವಿವಸ್ವಾನ್ ಮನುಪ್ರೇರಿತ 'ಮಾನವ ಸಂಸ್ಕೃತಿ' ಕುರಿತು ತಮ್ಮ

ಗ್ರಂಥಗಳಲ್ಲಿ ಚರ್ಚಿಸಿದರಷ್ಟೆ. ಈ ಮಾನವ ಸಂಸ್ಕೃತಿ ಕೇವಲ ಭಾರತದಲ್ಲಿ ಮಾತ್ರವಲ್ಲ ಪ್ರಪಂಚದ ಎಲ್ಲಕಡೆ ಈ ತತ್ವಗಳು ಹಲವು ರೂಪಗಳಲ್ಲಿ ಇವೆಯೆಂದು ಹೇಳಿದರು. ಈ ತತ್ವಗಳು ಕತೆಗಳಲ್ಲಿ, ದೈವತ ಕಥೆಗಳಲ್ಲಿ, ಆಚರಣೆಗಳಲ್ಲಿ, ಐಕನೋಗ್ರಫಿಗಳಲ್ಲಿ, ಮೂರ್ತಿಶಿಲ್ಪಗಳಲ್ಲಿ, ಪ್ರತಿಮೆಗಳಲ್ಲಿ, ರೂಪಗಳಲ್ಲಿ ಹಲವು ಬಗೆಗಳಾಗಿ ಸಾಂಕೇತಿಕ ರೂಪ ಹಾಗೂ ಆಶಯದಲ್ಲಿ ಇರುವುದನ್ನು ಶಂಬಾ ತೋರಿಸಿಕೊಟ್ಟರು. ಇದು ಭಾಷಿಕ ರೂಪಗಳಲ್ಲಿ ಇರುವ ಹಾಗೆ ಅಭಾಷಿಕ ರೂಪಗಳಲ್ಲೂ ಇರುವುಗಳನ್ನು ಸಂಕೇತಗಳ ಮೂಲಕ ಎತ್ತಿತೋರಿಸಿದರು. 'ಮಾನವ ಸಂಸ್ಕೃತಿ' ಎಂಬುದು ಒಂದು ಕಾಲ್ಪನಿಕ ಪರಿಭಾಷೆ ಅಲ್ಲ. ಅದು ನೈಜವಾದದ್ದು. ಅದು ಜನ-ಜೀವನದಲ್ಲಿ ಆಳುತ್ತಿತ್ತು ಎಂದು ಹೇಳಿದರು. ಈ ಹಿನ್ನೆಲೆಯಲ್ಲಿ ಅವರು ಈಚೆಗೆ ನಡೆಸಿದ ಅಭ್ಯಾಸವನ್ನು ನೋಡಬೇಕು.

ಮನ್ವಂತರ

ಶಂಬಾ ಜೋಶಿಯವರು ನಡೆದ ಸಾಂಸ್ಕೃತಿಕ ಹಾದಿಯಲ್ಲಿ ೧೯೭೬ ಒಂದು ನೂತನ ಘಟ್ಟ. ಈ ಘಟ್ಟವು ಕಂನಡದ ಮಟ್ಟಿಗೆ ಒಂದು ಮಹಾ ಅಧ್ಯಾಯ. ಶಂಬಾ ಅವರ ಜೀವನದಲ್ಲೂ ಇದು ಮನ್ವಂತರ. ಶಂಬಾ ಅವರ 'ಪ್ರವಾಹಪತಿತರ ಕರ್ಮ 'ಹಿಂದೂ' ಎಂಬ ಧರ್ಮ' ಕೃತಿ ಪ್ರಕಟಗೊಂಡದ್ದು ೧೯೭೬ರಲ್ಲಿ. ಮೈಸೂರು ವಿಶ್ವವಿದ್ಯಾಲಯದಿಂದ 'ಋಗ್ವೇದಸಾರ: ನಾಗಪ್ರತಿಮಾ ವಿಚಾರ' ಪ್ರಕಟವಾದ ನಾಲ್ಕು ವರ್ಷಗಳ ಅನಂತರ ಈ ಕೃತಿಯು ಪ್ರಕಟವಾಯಿತು. ಋಗ್ವೇದಸಾರ ಗ್ರಂಥದ ನಡಿಗೆ ಹಾವು ಸುತ್ತಿನದು. ಅದರ ವಿಚಾರಗಳು ಎಲ್ಲೆಲ್ಲೋ ಹೇಗೆ ಹೇಗೋ ಹರಿದಾಡುತ್ತಿದ್ದುವು. ವಿಚಾರಸೂತ್ರದಲ್ಲಿ ಸುಸಾಂಗತ್ಯ ಇಲ್ಲದಿದ್ದರೂ ಆ ಕೃತಿಯ ಆಂತರಿಕ ಸತ್ವ ಕಡಮೆಯದ್ದಲ್ಲ. ಸಂಸ್ಕೃತಿ ಅರ್ಥಗ್ರಹಣಕ್ಕೆ ಹಲವು ಶಾಸ್ತ್ರಗಳನ್ನು ಒಂದೇ ಕಟ್ಟಿನಲ್ಲಿ ಅಡಗಿಸಿಕೊಂಡ ಬಗೆ ಯಾರಿಗಾದರೂ ಬೆರಗನ್ನು ಉಂಟು ಮಾಡುವಂಥದ್ದು. ಪೌರ್ವಾತ್ಯ-ಪಾಶ್ಚಾತ್ಯರ ಎಷ್ಟೆಷ್ಟೋ ವಿಚಾರಗಳು ಈ ಬೃಹದ್ ಕೃತಿಯಲ್ಲಿ ಮೈ ಪಡೆದಿತ್ತು. ಇದು ಕನ್ನಡದ ಮಟ್ಟಿಗೆ ಮಾತ್ರವಲ್ಲ ಭಾರತದ ಮಟ್ಟಿಗೂ ಹೊಸದೇ. ಇಲ್ಲಿಯ ಸಂಶೋಧನ ಕ್ರಮ, ಅರ್ಥಗ್ರಹಣದ ಮಾದರಿ ತೀರತೀರ ಹೊಸದೆ. ಈ ಬಗೆಯ ಅರ್ಥಗ್ರಹಣವನ್ನು ಶಂಬಾ ತಮ್ಮ ಕಲ್ಪನೆಯಿಂದ ಮೂಡಿಸಿರಲಿಲ್ಲ. ಹಲವಾರು ಆಶಯಗಳು ತೋರಿಸಿದ ಹಿನ್ನೆಲೆಯಲ್ಲಿ ಇಲ್ಲಿಯ ವಿಚಾರಗಳು, ಶೋಧನೆಯ ಕ್ರಮಗಳು ರೂಪಣಗೊಂಡಿದ್ದವು. ಈ ಸಂಗತಿಯನ್ನು ಒಂದು ಉದಾಹರಣೆಯಿಂದ ಹೀಗೆ ವಿವರಿಸಬಹುದು. ಒಂದು ಸಮುದಾಯದ ಬದುಕಿನಲ್ಲಿ ಒಬ್ಬ ವ್ಯಕ್ತಿಯ ಅಥವಾ ಒಂದು ವರ್ಗದ ಹಿತಕ್ಕೆ ಮಹತ್ವ ನೀಡುವುದು ಸರಿಯೊ? ಅಥವಾ ಇದನ್ನು ಕಡೆಗಣಿಸಬೇಕೊ ಅಥವಾ ಸಮಷ್ಟಿ ಹಿತರಕ್ಷಣೆಯೇ ಹೆಚ್ಚು ಮುಖ್ಯವಾದುದೋ? ಈ ಪ್ರಶ್ನೆ ಶಂಬಾ ಅವರನ್ನು ಅವರ ಕೃತಿಗಳ ಉದ್ದಕ್ಕೂ ತುಂಬಾ ಕಾಡಿತ್ತು. ವ್ಯಕ್ತಿ ಮತ್ತು ಸಮಷ್ಟಿ ಇವೆರಡಕ್ಕೂ ಬಾಳಿನಲ್ಲಿ ಸ್ಥಾನವುಂಟು ಹಾಗೆಯೆ ಅಂತರವುಂಟು. ವ್ಯಕ್ತಿಗೆ ಪ್ರಾಧಾನ್ಯ ಯಾವಾಗಲೂ ಇರಕೂಡದು. ಜೀವನ ವಿಶ್ವದಲ್ಲಿ ಸಮಷ್ಟಿಗೆ ಮೊದಲ ಸ್ಥಾನ ಮತ್ತು ಮಾನ. ಅನಂತರ 'ವ್ಯಕ್ತಿ' ತತ್ವವು ಸಮಷ್ಟಿಯ ಹಿನ್ನೆಲೆಯಲ್ಲಿ ಬರಬೇಕು. ವ್ಯಕ್ತಿಗಿಂತ, ವ್ಯಕ್ತಿತತ್ವಕ್ಕಿಂತ ಸಮಷ್ಟಿತತ್ವ ಮುಖ್ಯ. ಈ ಸಮಷ್ಟಿಯು ಹಿಂದೊಂದು ಕಾಲದಲ್ಲಿ ಜೀವನವಿಶ್ವವನ್ನು ಆಳುತ್ತಿತ್ತು. ಅನಂತರ ಅದು ಹಿಂದಕ್ಕೆ ಸರಿದು ವ್ಯಕ್ತಿವಿಶ್ವವು ಮುನ್ನೆಲೆಗೆ ಬಂದಿತು. ಇದು ಹೇಗೆ? ಮತ್ತು ಏಕೆ? ಎಂಬ ಪ್ರಶ್ನೆಯಲ್ಲಿ ಅವರ ೧೯೭೬ರ ನಂತರ ಬಂದ ಎಲ್ಲ ಕೃತಿಗಳ ಒಟ್ಟು 'ಸಂಸ್ಕೃತಿ ಚಿಂತನೆ'ಗಳು ಅಡಗಿವೆ. ಜೀವನ ಮತ್ತು ವ್ಯಕ್ತಿ/ವರ್ಗ ಕೇಂದ್ರಿತ ನಡುವೆ ನಡೆದ ಸಂಘರ್ಷದ ಸ್ವರೂಪವನ್ನು ಶಂಬಾ ಸಾಧಾರವಾಗಿ ಸನಿದರ್ಶನವಾಗಿ ಮಾಡಿಕೊಟ್ಟಿದ್ದಾರೆ. ಅವರ 'ಪ್ರವಾಹಪತಿತರ ಕರ್ಮ ಹಿಂದೂ ಎಂಬ ಧರ್ಮ' ಎಂಬ ಕೃತಿಯಲ್ಲಿ ಈ ಅಂಶವು ಹಲವು ನೆಲೆಗಳಲ್ಲಿ ವಿಸ್ತರಿತಗೊಂಡಿವೆ.

ಶಂಬಾ ಜೋಶಿ ಅವರು ಈ ಕೃತಿ ರಚನೆಯ ಹೊತ್ತಿಗೆ ಮುಖ್ಯವಾಗಿ ಮೂರು ನೆಲೆಗಳನ್ನು ಹಿಡಿದಿದ್ದರು. ಇವು ಅವರ ವಿಚಾರ ಕ್ರಮಗಳನ್ನು ಸ್ಪಷ್ಟವಾಗಿ ತೋರಿಸುತ್ತವೆ.

ಅ. ಮೂಲಭೂತವಾದ ವಿಚಾರಗಳು

ಆ. ಜೀವಶಾಸ್ತ್ರೀಯ, ಮಾನವಶಾಸ್ತ್ರೀಯ, ತತ್ತ್ವಶಾಸ್ತ್ರೀಯ ವಿಚಾರಗಳು

ಇ. ಪ್ರಾಚೀನ ವೈಚಾರಿಕ ಆಕೃತಿಗಳು

ಈ ಮೂರು ನೆಲೆಗಳು ಅವರ ಮುಂದಿನ ಎಲ್ಲ ಕೃತಿಗಳಲ್ಲೂ ಹಲವು ಬಗೆಗಳಲ್ಲಿ ಹರಡಿಕೊಂಡಿವೆ. ಆದುದರಿಂದ ಈ ಪ್ರಸ್ತಾವನೆಯು ಅವರ ಮುಂದಿನ ಎಲ್ಲಾ ಕೃತಿಗಳ ಸಾರಾಂಶವೂ ಆಗಿದೆ, ಸಂಗ್ರಹವೂ ಆಗಿದೆ. ಅವರ ಒಟ್ಟು ವೈಚಾರಿಕ ನೆಲೆಗಳನ್ನು ಕುರಿತು ಯೋಚಿಸಬಹುದಾಗಿದೆ. ಅವರು ಬರೆದ ಕೊನೆಯ ಕೃತಿ 'ಬಿತ್ತಿದ್ದನ್ನು ಬೆಳಕೊ' ೧೯೭೭ರ ಈಚೆಗೆ ಅವರು ಕೈಗೊಂಡ ಸಾಂಸ್ಕೃತಿಕ ಯಾತ್ರೆಯ ಪೂರ್ಣಫಲಿತವಾಗಿದೆ.

ಬಿತ್ತಿದ್ದನ್ನೂ ಬೆಳಕೊ ಕೃತಿಯ 'ಅರಿಕೆ'ಯಲ್ಲಿ ಹೇಳುವ ಮಾತು ಹೀಗಿದೆ:

> "ಹಾಲುಮತ ದರ್ಶನ (೧೯೬೦)ದಿಂದ ತೊಡಗಿ ತಲೆಯೆತ್ತಿದ್ದ ಜಿಜ್ಞಾಸೆ ನನ್ನನ್ನು 'ಬಿತ್ತಿದ್ದನ್ನು ಬೆಳಕೊ' (೧೯೮೪) ಈ ಪ್ರಕಟಣೆಯ ವರೆಗೆ ತಳ್ಳಿಕೊಂಡು ಬಂದಿದೆ. ಭಾರತೀಯ ಸಂಸ್ಕೃತಿಯಲ್ಲಿ ಆಗಿರುವ ಪಲ್ಲಟವನ್ನು ಗ್ರಹಿಸಿಕೊಳ್ಳಲು ಪ್ರಾರಂಭವಾದ ಅನ್ವೇಷಣೆಯು ಇದು. ಮನುಸ್ಮೃತಿಗೆ 'ಮಾನವ ಧರ್ಮಶಾಸ್ತ್ರ' ಎಂಬುದು ಇನ್ನೊಂದು ಹೆಸರು. ಮನುಮಾನವ ಮತ್ತು ಧರ್ಮಶಾಸ್ತ್ರ ಈ ಸಂಕೇತಗಳು ಆಕರ್ಷಕವಾಗಿದ್ದರೂ ಈ ನಿಟ್ಟಿನಲ್ಲಿ ವಿಚಾರ-ವಿಮರ್ಶೆಗೆ ತುಂಬ ಆತಂಕವು ಕಾಣಿಸಿಕೊಂಡಿತು"

ಶಂ.ಬಾ. ಅವರು ಹೇಳುವ ಈ ಮಾತಿನಲ್ಲಿ, ಅವರು ಕೇವಲ ಭೂತದ ಅಥವಾ ನಿನ್ನೆಯ ಶೋಧಕರಲ್ಲ; ವರ್ತಮಾನವೂ ಅವರಿಗೆ ನಿಗದಿತವೇ. ವರ್ತಮಾನದ ಆಭಾಸಗಳನ್ನು ಹುಡುಕಿಕೊಂಡು; ನಿನ್ನೆಯ ಕಾಲ-ಗತಿಗಳನ್ನು ಹುಡುಕುವ ಮುಖ್ಯ ವಿಶಿಷ್ಟವಾದ ಸಂಗತಿ ಅವರದ್ದಾಗಿದೆ. ಆದುದರಿಂದ, ಅವರ ಚಿಂತನೆ ಕೇವಲ ತೋರತೋರಿಕೆಯದ್ದು ಅಲ್ಲ; ಅದು ನಮ್ಮ ಸುತ್ತಮುತ್ತಣ ಬಾಳ್ವೆಯನ್ನೆ ಪ್ರಧಾನವಾಗಿ ಆಧಾರವಾಗಿ ಇಟ್ಟುಕೊಂಡಿದೆ. ಇದು ವಿವಸ್ವಾನ್ ಮನು ಮಾನವನಷ್ಟೇ ಸ್ಪಷ್ಟ. ಶಂ.ಬಾ ಅವರ ಚಿಂತನೆಯು, ಕರ್ನಾಟ ಸಂಸ್ಕೃತಿಯ ಅನ್ವೇಷಣದಿಂದ ಆರಂಭವಾಗಿ ಭಾರತೀಯ ಸಂಸ್ಕೃತಿಯ ಅನ್ವೇಷಣದ ವರೆಗೆ ಹರಡಿಕೊಂಡು ಬಂದಿತೆಂಬುದು ಶಂ.ಬಾ ಅವರ ಚಿಂತನೆಯ ಪ್ರಧಾನವಾದ ಎಳೆಗಳನ್ನು ನೋಡುತ್ತ ಬಂದವರಿಗೆ ಗೊತ್ತಾಗುವ ಸಂಗತಿಯಷ್ಟೆ. ಕರ್ನಾಟ ಸಂಸ್ಕೃತಿಯಲ್ಲಿ ತಾತ್ತ್ವಿಕವಾಗಿ ಕಾಣಿಸಿಕೊಳ್ಳುವ ಬಿರುಕು ಮತ್ತು ವಿಸಂಗತಿಗಳು; ಭಾರತೀಯ ಸಂಸ್ಕೃತಿಯಲ್ಲೂ ಅದೇ ಪಲ್ಲಟ ಮತ್ತು ವಿಸಂಗತಿಗಳು ಬೇರೆ ಬೇರೆ ಸ್ತರಗಳಲ್ಲೂ ತಾತ್ತ್ವಿಕವಾಗಿ ಕಾಣಿಸಿಕೊಳ್ಳುತ್ತವೆ. ಶಂ.ಬಾ ಅವರ ಸಾಂಸ್ಕೃತಿಕ ಚಿಂತನೆಯ ಒಟ್ಟು ನೆಲೆಗಳಿರುವುದೇ ವ್ಯಷ್ಟಿ ಮತ್ತು ಸಮಷ್ಟಿತತ್ವದ ವೈಚಾರಿಕ ಆಕೃತಿಗಳ ಮಾದರಿಗಳಲ್ಲಿ.

ಭಾರತೀಯ ಸಂಸ್ಕೃತಿಯಲ್ಲಿ ಇರುವ ಎರಡು ವೈಚಾರಿಕ ಆಕೃತಿಗಳಲ್ಲಿ ಒಂದು: ವಿವಸ್ವಾನ್ ಮನುಪ್ರೇರಿತ ಮಾನವಧರ್ಮದ ಆಕೃತಿ: ಇನ್ನೊಂದು ಸ್ವಾಯಂಭುವ ನರ: ಪ್ರೇರಿತ ನರಧರ್ಮದ ಆಕೃತಿ. ಇವೆರಡಕ್ಕೂ ಜೀವನ ಮತ್ತು ಜೀವಿತದಷ್ಟು ಅಂತರವಿದೆ. ಶಂ.ಬಾ ಇವೆರಡೂ ವೈಚಾರಿಕ ಆಕೃತಿಗಳನ್ನು ಕುರಿತು ಅಧ್ಯಯನ ಮಾಡಿದರು. ಅವರು ಅದರ ತಾತ್ವಿಕ ನೆಲೆಗಳನ್ನು ಕುರಿತು ಲಭ್ಯ ಸಾಮಗ್ರಿಗಳ ಮುಖಾಂತರ ಚರ್ಚಿಸಿದರು. ಇಷ್ಟು ಮಾತ್ರವಲ್ಲ; ವೈಚಾರಿಕ ವಿಶ್ಲೇಷಣೆಗೆ ತೊಡಗಿಕೊಂಡರು. ಇಂಥ ಅನ್ವೇಷಣೆಯ ಬಹುಮುಖೀ ನೆಲೆಗಳು ಈ ಹೊತ್ತಿಗೂ ನಮಗೆ ಮುಖ್ಯವೆನಿಸಿದೆ. ಈ ಅಂಶವನ್ನು ಮೇಲೆ ಹೇಳಿದಂತೆ ಮೂರು ಮುಖ್ಯ ನೆಲೆಗಳ ಆಶಯಗಳ ಗ್ರಹಿಕೆಯಲ್ಲಿ ಚರ್ಚಿಸಬಹುದಾಗಿದೆ.

ಶಂ.ಬಾರವರು ಮಂಡಿಸುವ ಮೂಲಭೂತ ವೈಚಾರಿಕ ಆಕೃತಿಗಳ ಪ್ರಸ್ತುತತೆಯನ್ನು ಕುರಿತದ್ದಾಗಿದೆ. ಈ ವೈಚಾರಿಕ ಆಕೃತಿಗಳ ಸಂಕೇತ ಸ್ವರೂಪಗಳನ್ನು ಗ್ರಹಿಸುವುದು ಮುಖ್ಯವಾಗಿದೆ. ವೈಚಾರಿಕ ಆಕೃತಿಗಳ ಸಂಕೇತ ಸ್ವರೂಪಗಳು ಯಾವ ಯಾವ ಬಗೆಗಳಿಂದ ನೆಲೆ ನಿಲ್ಲುತ್ತವೆಂಬ ಅಂಶಗಳ ಕಡೆಗೆ ಮೊದಲು ಗಮನ ಹರಿಸಿದರು. ಅನಂತರ ಅವರು ಬಹುಮುಖ್ಯವಾದ ಉಪಕರಣಗಳಾಗಿ ಅವುಗಳನ್ನು ನೆಮ್ಮಿಕೊಂಡರು. ಅದರ ಮುಖಾಂತರ ವರ್ತಮಾನ ಮತ್ತು ಭೂತವನ್ನು ಕುರಿತು ಅನ್ವೇಷಣೆಗೆ ಹೊರಟರು.

ವೈಚಾರಿಕ ಆಕೃತಿಗಳ ಪರಿಭಾಷೆಗೆ ಶಂ.ಬಾ ಅವರು ಬಳಸುವ ವಿಧಾನಗಳನ್ನು ಕುರಿತು ತುಸು ಯೋಚಿಸಬಹುದು. ನಾವು ಇಂದು ಬಳಸುತ್ತಿರುವ ಜೀವನ ಜೀವಿತ ಎಂಬ ಪದಗಳಾಗಲಿ, ನರ-ಮಾನವ ಎಂಬ ಶಬ್ದಶಿಲ್ಪಗಳಾಗಲಿ ಒಂದೇ ಅರ್ಥದ ಪಾತಳಿಗಳದ್ದಲ್ಲ. ಅವುಗಳನ್ನು ಕೇವಲ ಪರಿಭಾಷೆಗಳಾಗಿ ಮಾತ್ರ ಅವು ಬಳಕೆಗೊಳ್ಳುವುದಿಲ್ಲ. ಅವುಗಳನ್ನು ಸಾಂಸ್ಕೃತಿಕ ಸ್ತರಗಳ ನೆಲೆಗಳಲ್ಲಿ ತಾತ್ವಿಕ ವಿಶ್ಲೇಷಣೆಗೆ ಬಳಸುತ್ತಾರೆ. ಹೀಗೆ, ವಿಶ್ಲೇಷಣೆಗೆ ಶಂ.ಬಾ ಅವರು ಬಳಸುವುದರಿಂದ ಮತ್ತೊಂದು ನೆಲೆಯಲ್ಲಿ ಅವು ಸಾಂಸ್ಕೃತಿಕ ಸತ್ಯಾನ್ವೇಷಣೆಯ ಮುಖಾಂತರ ಆಗಿರುವ ಪಲ್ಲಟಗಳನ್ನೂ, ವಿಸಂಗತಿಗಳನ್ನೂ ಅರ್ಥೈಸಿಕೊಳ್ಳಲು ಸಹಾಯಕವಾಗುತ್ತದೆ. ಇದಕ್ಕಾಗಿಯೇ, ಅವರು Pivotal concepts ಬಗ್ಗೆ ತುಂಬ ಕಾಳಜಿಯನ್ನು ವಹಿಸಿದ್ದರು. ಅವರು ಇದಕ್ಕಾಗಿ ಈ ಬಗೆಯ ಮಹತ್ವದ ಗ್ರಂಥವೊಂದರ ವ್ಯಾಸಂಗದಲ್ಲಿ ತೊಡಗಿದ್ದರು; ತೊಡಗಿರುತ್ತಿದ್ದರು. ಕನ್ನಡದ ಮಟ್ಟಿಗೆ ಹೇಳುವುದಾದರೆ: ಪರಿಭಾಷೆಗಳ ಖಚಿತ್ಯ ಮತ್ತು ನಿರ್ದುಷ್ಟತೆ ಶಂ.ಬಾ ಅವರ ವ್ಯಾಸಂಗ ಮತ್ತು ಅಧ್ಯಯನಗಳ ನೆಲೆಯ ಮುಖ್ಯ ಸಾಧನಗಳಲ್ಲಿ ಒಂದು.

ದೈವತ ಸಂಕೇತ

ದೈವತಗಳ ಆಕೃತಿ ವಿಚಾರ, ಪುರಾಣ ಮತ್ತು ಪ್ರಾಚೀನ ಕೃತಿಗಳಲ್ಲಿ ಕಾಣುವ ದೈವತಗಳ ಅಧ್ಯಯನ; ಶಂ.ಬಾ ಸಮಕಾಲೀನ ಬದುಕನ್ನು ಅರ್ಥೈಸಿಕೊಳ್ಳಲು ಬಹು ಮುಖ್ಯವಾದ ಉಪಕರಣವನ್ನಾಗಿ ಸ್ವೀಕರಿಸಿದರು. ಇತಿಹಾಸದ ಮುಖಾಂತರ ತತ್ವಶಾಸ್ತ್ರದ ನೆಲೆಗಳನ್ನೂ ತತ್ವಶಾಸ್ತ್ರದ ಮುಖಾಂತರ ಇತಿಹಾಸದ ನೆಲೆಗಳನ್ನೂ ಇವೆರಡರ ತಾಳಮೇಳದಲ್ಲಿ ಸಾಂಸ್ಕೃತಿಕ ಬದುಕನ್ನೂ ತಿಳಿಯಬಹುದೆಂಬ ದೃಢ ನಂಬುಗೆಯೇ ಶಂ.ಬಾ ಅವರ ದೈವತಗಳ ಅಧ್ಯಯನದ ಹಿಂದಿನ ಪ್ರಮುಖ ಉದ್ದೇಶವಾಗಿದೆ. ದೈವತಗಳು ಆಯಾ ಕಾಲದ ಸಾಮಾಜಿಕ ಬಿಕ್ಕಟ್ಟು ಮತ್ತು ನಂಬುಗೆಗಳನ್ನು ತನ್ನ ಆಕೃತಿಯಲ್ಲಿ ಧರಿಸಿಕೊಂಡಿರುತ್ತದೆಂಬ ನಿಲುವೇ ಪ್ರಧಾನವಾಗಿತ್ತು. ಆದುದರಿಂದ, ಈ ಬಗೆಯ ಅಧ್ಯಯನದ ಮುಖ್ಯ ಸವಾಲುಗಳನ್ನು ವೈಜ್ಞಾನಿಕವಾಗಿಯೂ ಮತ್ತು ಸ್ವರೂಪಾಧ್ಯಯನದ ನಿಲುವಾಗಿಯೂ ಶಂ.ಬಾ ಸ್ವೀಕರಿಸಿದರು. ಭಾರತದ ಸಾಂಸ್ಕೃತಿಕ ಚರಿತ್ರೆಯ ಅಧ್ಯಯನದ ಸಂದರ್ಭದಲ್ಲಿ ಇದು ಕಣ್ಣಿಗೆ ಹೊಡೆದು ಕಾಣುವ ಸಂಗತಿ. ಶಂ.ಬಾ ಚಿಂತಿಸಿದ ಈ ಮಾದರಿಯ ಅಧ್ಯಯನವು ಕೇವಲ ಶಂ.ಬಾ ಅವರಿಗೆ ಮಾತ್ರ ವಿಶಿಷ್ಟವಾಗಿ ನೆಲೆ ನಿಂತುಕೊಂಡದ್ದನ್ನು ಕರ್ನಾಟಕ ಮತ್ತು ಮಹಾರಾಷ್ಟ್ರಗಳ ದೇವತಾ ಪ್ರತಿಮೆಗಳ ಆಕೃತಿ ವಿಚಾರಗಳನ್ನು ನಡೆಸಿದ ಅಧ್ಯಯನವೇ-ಮುಂದೆ ಶಂ.ಬಾ ಅವರಿಗೆ ವೇದವ್ಯಾಸಂಗದ ಆಳದ ಸಂಗತಿಗಳಿಗೆ ಕರೆದುಕೊಂಡು ಹೋಯಿತು. ಇದು ಶಂ.ಬಾ ಅವರು ನಡೆಸಿದ ಯುಕ್ತ ಜಿಗಿತದಲ್ಲಿ ಒಂದೆಂದು ತಿಳಿಯಬಹುದಾಗಿದೆ.

ಪವಾಡ ಕಥೆಗಳ ಸಂಕೇತಾತ್ಮಕ ಅಧ್ಯಯನ (Myths Symbol's studey) ಶಂ.ಬಾ ಅವರ ಅಧ್ಯಯನಗಳ ನೆಲೆಗಳಲ್ಲಿ ಮುಖ್ಯವಾದ ಸಾಂಸ್ಕೃತಿಕ ಉಪಕರಣ. ಇದು ಈಚಿನ ವರ್ಷಗಳಲ್ಲಿ ಹೆಚ್ಚು ಬಳಕೆಗೆ ಬಂದಿದೆ. ಲೆವಿಸ್ಟ್ರಾಸ್, ಎಲ್ಲಿಸ್ ಡೆವಿಡ್‌ಸನ್, ಅರ್ನೆಸ್ಟ್ ಕ್ಯಾಸಿರರ್ ಮುಂತಾದವರು ಈ ಬಗೆಯ ಅಧ್ಯಯನದಲ್ಲಿ ಹೊಸಹೊಸ ಚಿಂತನೆಗಳನ್ನು ಮಾದರಿಗಳಾಗಿ ರೂಪಿಸಿದರು. ಸಾಂಸ್ಕೃತಿಕಾಧ್ಯಯನದ ಸಂದರ್ಭದಲ್ಲಿ ಇಂಥ ಪವಾಡಕಥೆ ಗಳನ್ನು ವಿಶ್ವಾಸಕ್ಕೆ ಅರ್ಹವಾದ ಪ್ರಮಾಣಗಳೆಂದು ಕರೆಯಬಹುದೇ? ಎಂಬ ಸಂದೇಹ ಈ ಶತಮಾನದ ನಾಲ್ಕೈದರ ದಶಕಗಳ ವರೆಗೂ ಇತ್ತು. ಚರಿತ್ರೆಗೂ ಪುರಾಣಗಳಿಗೂ ಇರುವ ಅಂತರ್ ಸಂಬಂಧವನ್ನು ಲೆವಿಸ್ಟ್ರಾಸ್ ಗಟ್ಟಿಯಾಗಿ ಹೇಳತೊಡಗಿದ ನಂತರ ಅದನ್ನು ಅರ್ನೆಸ್ಟ್ ಕ್ಯಾಸಿರರ್ ಖಚಿತಗೊಳಿಸಿದ್ದು ಈಗ ಎಲ್ಲರಿಗೂ ತಿಳಿದಿರುವ ಸಂಗತಿಯೇ ಆಗಿದೆ. ಲೆವಿಸ್ಟ್ರಾಸ್ "History is continuation of mythology" ಎಂದು ಹೇಳಿದನಷ್ಟೆ. ಇದು ಚರಿತ್ರೆಯ ಮುಂದುವರಿಕೆ ನೆಲೆಯನ್ನು ಕುರಿತದ್ದಾಗಿದೆ. ಆದರೆ, ಈ ಬಗೆಯ ಅಧ್ಯಯನವನ್ನು ನಡೆಸುವಾಗ ಹೆಚ್ಚು ಎಚ್ಚರ ವಹಿಸಬೇಕೆಂಬ ನಿಲುವನ್ನು ಈ ಬಗೆಯ ಅಧ್ಯಯನ ನಡೆಸಿದ ಶ್ರೀಮತಿ ಎಲ್ಲಿಸ್ ಡೆವಿಡ್‌ಸನ್ ಹೇಳುವ ಮಾತು ಹೀಗಿದೆ:

"We must not assume that all myths have equal value, as some writers of Jung's school trend to do"

ಎನ್ನುವುದನ್ನು ಗಮನಿಸಬೇಕಾದದ್ದೇ. ಇವೆಲ್ಲವನ್ನು ಮೂಲದಲ್ಲೆ ವ್ಯಾಸಂಗ ಮಾಡಿದ ಶಂ.ಬಾ ಅವರಿಗೆ ಇತಿಹಾಸ ಮತ್ತು ತತ್ತ್ವಜ್ಞಾನಗಳ ಮಾಧ್ಯಮ ಭಾಷೆಯೇ ಆಗಿರುವುದರಿಂದ ಈ ಭಾಷೆ ಕಾಣಿಸಿಕೊಂಡು ಬೆಳೆಯತೊಡಗಿದ್ದು ಪವಾಡಕಥೆಗಳ ಅನುಸಂಧಾನದಲ್ಲಿ ಎಂಬ ತಿಳಿವಳಿಕೆ ಶಂ.ಬಾ ಅವರಿಗೆ ಖಚಿತವಾಗಿ ಅರಿಕೆಗೆ ಬಂದಿತು. ಭಾರತೀಯ ಸಂಸ್ಕೃತಿ ಅಧ್ಯಯನದ ಸಂದರ್ಭದಲ್ಲಿ myths ಗಳ ಅಧ್ಯಯನ ಶಂ.ಬಾ ಅವರು ನಡೆಸಿದ್ದು 'ಸಂಕೇತ'ಗಳ ಆಕೃತಿಯ ಮಾದರಿಯಲ್ಲೇ. ಇದಕ್ಕೆ ನೆರವಾಗಿದ್ದು ಅರ್ನೆಸ್ಟ್ ಕ್ಯಾಸಿರರ್ ಅಂಥವರು ನಡೆಸಿದ ಅಂಧ್ಯಯನಗಳು. ಕನ್ನಡದಲ್ಲಿ 'ಪವಾಡ ಕಥೆಗಳ ಸಂಕೇತಾತ್ಮಕ ಅಧ್ಯಯನ'ವನ್ನು ಶಂ.ಬಾ ಅವರು ಭಾರತೀಯ ಸಂಸ್ಕೃತಿಯ ಅಧ್ಯಯನದಲ್ಲಿ ಇಟ್ಟು ನೋಡುತ್ತಿರುವಂತೆಯೇ, ತಮ್ಮ ಒಟ್ಟು ಚಿಂತನೆಗೆ ಗಟ್ಟಿಯಾದ ನೆಲೆಗಳನ್ನು ಒದಗಿಸಿಕೊಂಡರು. ಶಂ.ಬಾ ೧೯೬೦ರ ನಂತರ 'ಸಂಕೇತಶಾಸ್ತ್ರ'ದ ಅಧ್ಯಯನವನ್ನು ತಮ್ಮ ಸಾಂಸ್ಕೃತಿಕಾಧ್ಯಯನದ ಮುಖ್ಯ ನೆಲೆಯಾಗಿ ಸ್ವೀಕರಿಸಿದರು. ಇದು ಅವರ ಚಿಂತನಾತ್ಮಕ ಗ್ರಹಿಕೆಗೆ ದಿಗ್‌ಭ್ರಮೆ ತರುವುದು ನಿಜವೇನೊ ಹೌದು! ಭಾರತದಲ್ಲಿ'ಸಂಕೇತಶಾಸ್ತ್ರ'ವನ್ನು ಉಪಯೋಗಿಸಿಕೊಂಡು ನಡೆಸಿದ ಅಧ್ಯಯನಿಗರಲ್ಲಿ ಶಂ.ಬಾ ಮೊದಲಿಗರು. ಮೊದಲು, ಅದನ್ನು ನಮ್ಮ ಪುರಾಣಗಳಿಗೆ ಅನ್ವಯಿಸಿ ನಡೆಸಿದ ಅವರ ಚಿಂತನೆ ಹೊಸಹೊಸ ವಿಚಾರಾಕೃತಿಗಳನ್ನು ತಂದು ನಿಲ್ಲಿಸಿತೆಂಬುದು ಅರ್ಥಮಾಡಿಕೊಳ್ಳಬೇಕಾದ ಚಾರಿತ್ರಿಕ ಸಂದರ್ಭವಾಗಿದೆ.

ಶಂ.ಬಾ ಅವರು ಅರ್ಥ ಮತ್ತು ವಿಚಾರಗಳನ್ನು ಕುರಿತು ನಡೆಸಿದ ಚಿಂತನಗಳು, ಅರ್ಥ ಮತ್ತು ವಿಚಾರ ಬೇರೆ ಬೇರೆ ಎಂದು ಕಂಡರೂ ಅವು ಖಚಿತವಾಗಿ ಮೈದೋರುವುದು ಬಾಳಿನಲ್ಲಿ ತಾನೆ? ಈ ಬಾಳಿನಲ್ಲಿ ಅರ್ಥ ಮತ್ತು ವಿಚಾರಕ್ಕೆ ಹಾಸುಹೊಕ್ಕಿನಂತಹ ಸಂಬಂಧಗಳು ಇವೆ. ಈ ಮಾದರಿಯ ತಿಳಿವಳಿಕೆ ಶಂ.ಬಾ ಅವರ ಸಂಸ್ಕೃತಿ ವ್ಯಾಸಂಗದ ಪ್ರಬಲವಾದ ಹೆಣಿಗೆಯಾಗಿದೆ. ಮಾತ್ರವಲ್ಲ; ಅದು ಜೀವನದ ಇಷ್ಟು ಅಂತಸ್ಥ ನೆಲೆಗಳನ್ನು ತಮ್ಮ ಕಣ್ಣೆದುರಿಗೆ ತಂದುಕೊಡಲು ಶಕ್ತವಾಗಿದೆ. 'ಅವರವರ ಅರ್ಥ ಅವರವರ ಪಾಲಿನ ಸತ್ಯ' ಎಂಬ ನಿಲುವು ಅರ್ಥ-ಸತ್ಯಕ್ಕೆ ತಂದುಕೊಂಡಿರುವ ಅಧಃಪತನ ಎಂಬುದು ಶಂ.ಬಾ ಅವರ ಖಚಿತ ಅಭಿಪ್ರಾಯ. ಅರ್ಥವು ಸಮಾಜ ಸಮಷ್ಟಿಯಲ್ಲಿ ಮಾತ್ರ ಅಭಿಪ್ರೇತಗೊಳ್ಳುತ್ತದೆಯೆ ಹೊರತು, ವ್ಯಕ್ತಿಯಲ್ಲಿ ಅಲ್ಲ ಎಂಬುದೇ ಇದರ ಹಿಂದಿರುವ ತಾತ್ತ್ವಿಕಾಂಶ. ಹೀಗಾಗಿ ಅರ್ಥ 'ಹಾಸು'ವಾಗಿದೆ. ವಿಚಾರವು ಇದರೊಡನೆ 'ಹೊಕ್ಕು' ಆಗಿದೆ. ವಿಚಾರವು ವಿಶ್ವನಿಯಮಕ್ಕೆ ಬದ್ಧವಾಗಿದೆ. ಚರ್ ಗತ್ಯರ್ಥಕ ಧಾತುವಿನ 'ವಿಚಾರ'ವು ಮೂಲ್ಯಗಳ ಬಗೆಗೆ ಎಚ್ಚರವನ್ನು ತಂದುಕೊಡುತ್ತದೆ. ಉದಾ: "ವಿಶ್ವಾಮಿತ್ರಸ್ಯ ಬ್ರಹ್ಮೇದಂ ರಕ್ಷತಿಂ ಭಾರತಂ ಜನಂ" ಎಂಬ ವೇದಸೂಕ್ತಿಯಲ್ಲಿ ಅಭಿಪ್ರೇತಗೊಂಡಿರುವ ಅರ್ಥ ಕೇವಲ ವ್ಯಕ್ತಿ ಸ್ವರೂಪದ್ದಲ್ಲ; ಸಮಾಜ ಸಮಷ್ಟಿರೂಪದ್ದು. ವ್ಯಕ್ತಿಗೆ ಸಮಾಜದ ನೆಲೆಯಲ್ಲಿ ಸ್ಥಾನವುಂಟೇ ಹೊರತು ಪ್ರತ್ಯೇಕವಾಗಿಲ್ಲ. ಮಾನವನ ಒಟ್ಟು ನಿಲುಮೆ ವ್ಯಕ್ತಗೊಳ್ಳಬೇಕಾದ್ದು ಸಮಾಜ:ಸಮಷ್ಟಿ:ಪ್ರಜ್ಞಾಯುಕ್ತ ಕೇಂದ್ರದಲ್ಲಿ ಎಂಬ ತಾತ್ತ್ವಿಕಾಶಯವು ಶಂ.ಬಾ ಅವರ ಚಿಂತನೆಯ ಹಿಂದೆ ಯುಕ್ತವಾಗಿ ಅಡಕಗೊಂಡಿದೆ. ಆದುದರಿಂದ ಅರ್ಥ ಮತ್ತು ವಿಚಾರಗಳನ್ನು ಹಾಸು ಮತ್ತು ಹೊಕ್ಕುಗಳ ರೂಪದಲ್ಲಿ ಅವರು ಹೇಳಬಲ್ಲವರಾಗಿದ್ದಾರೆ. ಶಂ.ಬಾ ಅವರ ಚಿಂತನೆಯ ಹಿಂದೆ ತತ್ತ್ವಜ್ಞಾನ ಮತ್ತು ಚರಿತ್ರೆ ಗಾಢವಾಗಿ ಮಿಳಿತಗೊಡಿರುವುದೇ ಈ ಮಾದರಿಯ ಚಿಂತನೆಗೆ ಮುಖ್ಯವಾಗಿ ಕಾರಣವಾಗಿದೆ, ನಾವು ಇದನ್ನು ಮರೆಯುವಂತಿಲ್ಲ.

ಅರ್ಥಗ್ರಹಣ ಪದ್ಧತಿ

ಜೋಶಿಯವರ ಕೃತಿಗಳ ಹಿಂದೆ ಇರುವ ಕೆಲವು ಅರ್ಥಗ್ರಹಣ ಪದ್ಧತಿಯ ಸಾಂಸ್ಕೃತಿಕ ಆಯಾಮಗಳನ್ನು ಕುರಿತು ಸ್ಥೂಲವಾಗಿ ವಿವೇಚಿಸಿಕೊಂಡದ್ದು ಸರಿಯಷ್ಟೆ. ಶಂ.ಬಾ ಅವರೇ ಹೇಳಿರುವ ಎರಡು ಮುಖ್ಯ ಅಂಶಗಳು

ಹೀಗಿವೆ. ಇದು ಒಂದು ದಿಕ್ಕಿನಿಂದ ಶಂ.ಬಾ ಅವರ ಸಾಂಸ್ಕೃತಿಕ ಚಿಂತನದ ಅಗತ್ಯತೆ ಕುರಿತು ಪ್ರಸ್ತಾಪಿಸಿದರೆ; ಇನ್ನೊಂದು ದಿಕ್ಕಿನಿಂದ ಇಂದಿನ ಬಾಳ್ವೆಯನ್ನೆ ಮುಂದೊಡ್ಡಿಕೊಂಡದ್ದರ ಚಿತ್ರಣವಿದೆ. ಶಂ.ಬಾ ಅವರು ಹೇಳುವ ಮಾತುಗಳು ಇವು:

> ಯಾವುದೊಂದು ಸಂಸ್ಕೃತಿಯ ಐತಿಹಾಸಿಕ ಸ್ವರೂಪದ ಅನ್ವೇಷಣೆಯು, ಆ ಜನದ ಆ ನಿನ್ನೆಗಳ ಫಲಿತವಾದ ಇಂದಿನ ಸಮಸ್ಯಾ ಪರಿಹಾರಕ್ಕೆ ಉಪಕಾರಕವಾಗುತ್ತಿರಬೇಕು. ಹೀಗೆ, ಇಂದಿನ ಸಮಸ್ಯಾ ಪರಿಹಾರಕ್ಕೆ ಉಪಕಾರವಾಗುವುದರಲ್ಲೇ ಆ ಸತ್ಯಾನ್ವೇಷಣೆಯ ಸಾಫಲ್ಯವು ಅಡಗಿದೆ. ಏಕೆಂದರೆ ಆ 'ನಿನ್ನೆ'ಗಳೇ 'ಇಂದು'ಗಳಲ್ಲಿ ರೂಪುಗೊಳ್ಳುತ್ತ ಇಂದಿನ ವರೆಗೆ ಬಂದಿವೆಯಲ್ಲವೆ? ಇಂದಿನ ಭಾರತೀಯ ಹಾಗೂ ಜಾಗತಿಕ 'ತುರ್ತು' ಪರಿಸ್ಥಿತಿಯ ಹಿಂದಿರುವ ಕಾರಣ ಕಾರ್ಯ ಸಂಬಂಧದ ಮೇಲೆ ಈ ಅನ್ವೇಷಣೆಯಾಗಿ 'ಇದು ಸತ್ಯಾನ್ವೇಷಣೆಯೇ ಆಗಿದ್ದರೆ' ಇಂದಿನ ಸಮಸ್ಯಾ ಪರಿಹಾರಕ್ಕೆ ಉಪಕಾರವಾಗಬೇಕೆಂಬುದೇ ನನ್ನ ಅನಿಸಿಕೆ.
>
> ನಮ್ಮ ಒಂದು ಹಳೆಯ ಹಾಡಿನಲ್ಲಿ ಬಂದಿರುವ "ನೀನಾರಿಗಾದೆಯೊ ಎಲೆ ಮಾನವಾ" ಎಂಬ ಪಲ್ಲವಿಯು ಅತ್ಯಂತ ಅರ್ಥಗರ್ಭಿತವಾಗಿದ್ದು ಇದರಲ್ಲಿ ನಮ್ಮನ್ನು ಅಂತರ್ಮುಖಿಯಾಗಿಸುವ ಸಾಮರ್ಥ್ಯವಿದೆ. ಮಾನವನು ಮರಳಿ ನರನಾಗಿದ್ದಾನೆ ಎಂಬ ನಿಷ್ಕರ್ಷವನ್ನು ಗೋಮುಖದಿಂದ ಬಂದ ಈ ಉಕ್ತಿ ಬೆಂಬಲಿಸುತ್ತಿದೆ. ಇಂದು ಬೆಳ್ಳಿ, ಬಂಗಾರ, ವಜ್ರ ಮೊದಲಾದ ಉತ್ಸವಗಳನ್ನು ಏರ್ಪಡಿಸುವ ಈ ಪ್ರಸಂಗಗಳಲ್ಲಿ ನಮ್ಮ ಸಾಧನೆಗಳ ಸಿಂಹಾವಲೋಕನವು ಅನಿವಾರ್ಯ. ಆಗ ನಮ್ಮ ಪ್ರಗತಿಯಾಗಿದೆ-ಎಂಬ ಭ್ರಮೆ ಹುಟ್ಟಿಸುವ ಮಾತುಗಳೂ ಕೇಳಬರುತ್ತವೆ. ಆದರೆ, ವಸ್ತುಸ್ಥಿತಿಗೂ ಇಂಥ ಮಾತಿಗೂ ಹೊಂದಾಣಿಕೆ ಕಾಣದು. ಇದಕ್ಕೆ ನಿದರ್ಶನ: ನಮ್ಮ ಇಂದಿನ ಸ್ಥಿತಿ. ಭಾರತಕ್ಕೆ ಸ್ವಾತಂತ್ರ್ಯವು ಬಂದು ೩೪ ವರ್ಷ ಕಳೆದವು. ಈ ಅವಧಿಯಲ್ಲಿ, ಅಭಿವೃದ್ಧಿ ಆಗಿಯೇ ಇಲ್ಲವೆನ್ನುವುದು ಸರ್ವಥಾ ತಪ್ಪು. ಆದರೆ, ಭ್ರಷ್ಟಾಚಾರ, ಅನಾಚಾರಗಳ ಅಭಿವೃದ್ಧಿಯೇ ಎದ್ದು ಕಾಣುವಷ್ಟಾಗಿರುವುದರಿಂದ-ಕಾರ್ಖಾನೆ, ಕೃಷಿ ಮೊದಲಾದ ಭೌತ ಅಭಿವೃದ್ಧಿಯು ತನ್ನ ಬೆಲೆಗೆ ಎರವಾಗಿದೆ. ಇದರ ಕಾರಣ ಮೀಮಾಂಸೆಯು ನನ್ನ ಇಂದಿನ ಈ ಉಪನ್ಯಾಸದಲ್ಲಿ ಒಳಗೊಂಡಿದೆ ಎಂಬುದು ನನ್ನ ಗ್ರಹಿಕೆ

ಮೇಲಿನ ಎರಡು ಮುಖ್ಯ ತಾತ್ವಿಕ ಅರ್ಥಸಂಗತಿಗಳು ಶಂ.ಬಾ ಅವರ ಒಟ್ಟು ಚಿಂತನೆಯ ಬೇರುಗಳನ್ನು ಹೇಳುತ್ತವೆ. ಶಂ.ಬಾ ಕೇವಲ ಭೂತದ ಶೋಧಕರಲ್ಲ ಎನ್ನುವುದನ್ನು ಹೇಳಿದೆನಷ್ಟೆ. ಕೇವಲ ಐತಿಹಾಸಿಕ ಸಂಗತಿಗಳನ್ನು ಹುಡುಕಿ-ಅವುಗಳನ್ನು ಬರೆಯುವ ಗುಂಪಿಗೆ ಶಂಬಾ ಸೇರುವವರಲ್ಲ. ನಮ್ಮಲ್ಲಿಯ ಬಹುತೇಕ ವಿದ್ವಾಂಸರು ಚರಿತ್ರೆಯನ್ನು 'ಚರಿತೆ'ಯನ್ನಾಗಿ ನೋಡಿದವರೇ ಹೆಚ್ಚು. ಆದರೆ, ಚರಿತ್ರೆಯನ್ನು ವರ್ತಮಾನದಲ್ಲಿ ದೊರಕುವ ಪರಿಭಾಷೆಗಳಿಂದ ನೋಡಲು ತೊಡಗುವುದೇ ಅವರ ಹೆಚ್ಚುಗಾರಿಕೆಗಳಲ್ಲಿ ಒಂದು. ಹೀಗಾಗಿ, ಶಂ.ಬಾ ಪುಸ್ತಕಕ್ಕೆ ಕೊಡುವ ಹೆಸರುಗಳಲ್ಲಿಯೂ ಈ ಸ್ವಾರಸ್ಯವೇ ಅಡಕವಾಗಿದೆ. ಪ್ರವಾಹ ಪತಿತರ ಕರ್ಮ 'ಹಿಂದೂ' ಎಂಬ ಧರ್ಮ, ಬುಧನ ಜಾತಕ, ಮಾನವಧರ್ಮದ ಆಕೃತಿ, ಬಿತ್ತಿದ್ದನ್ನು ಬೆಳಕೊ-ಈ ಹೆಸರುಗಳಲ್ಲಿ ವರ್ತಮಾನದ ಸೂಕ್ಷ್ಮ ಒಳನೋಟಗಳು, ಮನುಷ್ಯನ 'ಚರಿತ್ರೆ'ಯೇ ಹಾಸು-ಬೀಸಾಗಿ ಹೆಣೆದುಕೊಂಡಿದೆ.

---

೧. 'ಬಿತ್ತಿದ್ದನ್ನು ಬೆಳಕೊ' ಆದಮೇಲೆ 'ಜೀವನದ ಅರ್ಥಗ್ರಹಣ ಪದ್ಧತಿ (ಒಂದು ಹೊಳಹು)' ಎಂಬ ಕಿರುಪುಸ್ತಿಕೆ ೧೯೮೬ರಲ್ಲಿ ಪ್ರಕಟವಾಗಿದೆ. ಆದರೆ, ಅದು ಹಿಂದಿನ ಪ್ರಕಟಣೆಗಳಲ್ಲಿ ಇದ್ದ ಚಿಂತನೆಯನ್ನೇ ಬಳಸಿಕೊಂಡು 'ಸೂತ್ರರೂಪ'ವಾಗಿ ಹೇಳುತ್ತದೆ. ಐದಾರು ಪುಸ್ತಕಗಳ ಒಟ್ಟು ಸಾರ ಇದರಲ್ಲಿದೆ. 'ಬಿತ್ತಿದ್ದನ್ನು ಬೆಳಕೊ' ಕೊನೆಯ ಮಹತ್ವದ ಕೃತಿ ಎಂದು ಹೇಳಿದ್ದು ಈ ಕಾರಣದಿಂದಲೇ.

ಆದ್ದರಿಂದಲೆ, ನಾನು ಹೇಳಿದ್ದು: 'ಚರಿತ್ರೆ'ಯೇ ಅವರ ಗುರಿಯಲ್ಲ, 'ಚರಿತಜ್ಞ'ರಿಗಿಂತ ಭಿನ್ನನೆಲೆಯಲ್ಲಿ ಶಂ.ಬಾ ನಮಗೆ ಕಾಣಿಸುತ್ತಾರೆ. 'ಬಿತ್ತಿದ್ದನ್ನು ಬೆಳಕೊ' ಅವರ ಮಹತ್ವದ ಕೊನೆಯ ಕೃತಿಯಷ್ಟೆ. ಆ ಕೃತಿಯ ಹಿನ್ನೆಲೆಯಲ್ಲಿ ಇನ್ನೂ ಕೆಲವು ಸಂಗತಿಗಳನ್ನು ಚರ್ಚಿಸಬಹುದು.[೧]

೧. ಮಾನವ ಜೀವನವನ್ನು ಆಳುತ್ತಿರುವ ಶಕ್ತಿಗಳು ಯಾವುವು? ಇಂದಿನ 'ಮಾನವ ಜೀವನ'ದ ಆಕೃತಿ ಮತ್ತು ಆಶಯ ಎಂಥದ್ದು?

೨. ಜೀವನ: ಸಂಸ್ಕೃತಿಗಳಲ್ಲಿ ಅನ್ಯೋನ್ಯತೆ ಇದೆಯೆ? ಇದ್ದರೆ ಅದರ ಆಶಯದ ನೆಲೆ ಯಾವುದು?

೩. ನಮ್ಮ ಸಂಸ್ಕೃತಿ ದೊಡ್ಡದು ಭವ್ಯ ಎಂದು ಹೇಳುತ್ತೇವೆ. ಇಂದಿನ ಭ್ರಷ್ಟಾಚಾರಿ, ಅನಾಚಾರಗಳ ಮೂಲ ಇಲ್ಲಿದೆ?

೪. 'ಜೀವನ'ವನ್ನು ಅಳವಡಿಸಿಕೊಂಡಿರುವ ಸಾಹಿತ್ಯ ಕೃತಿಗಳ ನಿರ್ಮಾಣ ಆಗುತ್ತಿವೆಯೋ 'ಜೀವಿತ': ವೈಯಕ್ತಿಕ ನೆಲೆಯಲ್ಲಿ ಸಾಹಿತ್ಯ ಕೃತಿಗಳ 'ಆಶಯ'ವೇ ನಿರ್ಮಾಣವಾಗುತ್ತಿವೆಯೊ?

೫. ಕಂನಾಡ ಸಂಸ್ಕೃತಿಯ ಸಮಸ್ಯೆ-ಇದರೊಡನೆ ಭಾರತೀಯ ಸಂಸ್ಕೃತಿಯ ಸಮಸ್ಯೆ ತಗುಲಿಕೊಂಡಿರುವಂತೆ; 'ಜಾಗತಿಕ ಸಮಸ್ಯೆ'ಯೂ ಉಂಟೆ? ಇಂದಿನ ಮಾನವನ ಅಧಃಪತನಕ್ಕೆ ಕಾರಣವಾದ ಮೀಮಾಂಸೆಗಳು ಯಾವುವು?

೬. ಇತಿಹಾಸ ಮತ್ತು ತತ್ತ್ವಜ್ಞಾನಗಳಲ್ಲಿ ಪರಸ್ಪರ ತಾಳಮೇಳವುಂಟು. ಇವೆರಡರ ಮುಖಾಂತರ 'ಮಾನವನ ಸಮಸ್ಯೆ' ಮತ್ತು 'ಮಾನವಧರ್ಮದ ಆಕೃತಿ'ಯನ್ನು ಹೊರತರಲು ಸಾಧ್ಯವಿದೆಯೆ?

೭. ಮಾನವನು 'ಅ-ಮಾನವ'ನಾಗಿದ್ದಾನೆ. ಇವನು 'ವ್ಯಕ್ತಿ' ಅಥವಾ 'ನರ'ನ ಹಂತಕ್ಕೆ ಬಂದು ನಿಂತಿದ್ದಾನೆ. ಇದಕ್ಕೆ ಕಾರಣಗಳು ಏನು?

೮. ಜೀವನ ಮತ್ತು ಸಾಹಿತ್ಯ ಇವುಗಳಿಗೆ ಸನಾತನ ಆಕೃತಿಗಳು ಉಂಟೊ? ಇರುವುದಾದರೆ ಅದಕ್ಕೆ ಇಂದು ಎರವಾಗಲು ಕಾರಣಗಳೇನು?

೯. ನಮ್ಮ ಬದುಕನ್ನು ರೂಢಿಸುವ ಕಾಲಗತಿಗಳು ಯಾವುವು? ಈ ಕಾಲಗತಿಗಳು ಯಾವ ಪರಿಭಾಷೆಗಳ ಮುಖಾಂತರ ಹೇಳಬಹುದಾಗಿದೆ. ಹಾಗೆ ಹೇಳಲು ಸಾಧ್ಯವಿದೆಯೆ?

೧೦. ಕಂನಡದ ನಿಜವಾದ ಏಳ್ಗೆಯಾಗಬೇಕಾದರೆ ಮಾನವ ಹಂತಕ್ಕೆ ತಲುಪಿರುವ ನಾವು ಮರಳಿ ಮಾನವರಾಗುವುದು ಆದ್ಯ ಕರ್ತವ್ಯಗಳಲ್ಲಿ ಒಂದು. ಅದನ್ನು ಸಾಂಸ್ಕೃತಿಕವಾಗಿ ಪುನರುತ್ಥಾನದ ನಿಟ್ಟಿನಲ್ಲಿ ನಾವು ಹೇಗೆ ತೊಡಗಿಸಿಕೊಳ್ಳಬೇಕು?

'ಬಿತ್ತಿದ್ದನ್ನು ಬೆಳಕೊ' ಕೃತಿಯು ಸೂಕ್ಷ್ಮವಾಗಿ ಈ ಪ್ರಶ್ನೆಗಳನ್ನು ಎತ್ತುತ್ತದೆ. ಇಲ್ಲಿಯ ಪ್ರಶ್ನೆಗಳಲ್ಲಿ ಒಂದಕ್ಕೊಂದು ಅವಿಭಾಜ್ಯ ಹಾಗೂ ಅವಿಗಲಿತವಾದ ಸಂಬಂಧ ಇದೆ. ಈ ಅಂಶಗಳು ಇರುವುದನ್ನು ನಾವು ಮರೆಯುವಂತಿಲ್ಲ. ಕಾಲಗತಿ, ಜೀವನ-ಜೀವಿತ, ನರ-ಮಾನವ, ವಿಶ್ವನಿಯಮ ಉಂಟೆ?, ಈ ಸಾಂಸ್ಕೃತಿಕ ಶಬ್ದ ಶಿಲ್ಪಗಳೆಲ್ಲವೂ ಒಂದಕ್ಕೊಂದು ಸರಪಳಿಯಂತೆ ನೆಯ್ದುಕೊಂಡಿವೆ. ಒಂದು ವಿಚಾರವನ್ನು ಕಳಚಿಟ್ಟು ಇನ್ನೊಂದು ವಿಚಾರವನ್ನು ನಾವು ನೋಡುವಂತಿಲ್ಲ. ಶಂ.ಬಾ ವಿಶ್ಲೇಷಿಸಲು ಹೊರಡುವ ಚಿಂತನೆಗಳ ಹಿಂದೆ ಒಂದು ಏಕಸೂತ್ರತೆ, ಖಚಿತವಾದ ವೈಚಾರಿಕ ಆಕೃತಿ-ತನಗೆ ತಾನೆ ಮೈಗೂಡಿ ಬಂದು ನಮ್ಮೆದುರು ತಾನೇ ತಾನಾಗಿ ಎದ್ದು ನಿಲ್ಲುತ್ತದೆ.

---

೧. ಇಲ್ಲಿಯ ಹಲವಾರು 'ಅಂಶ'ಗಳನ್ನು ತಮ್ಮ ಹಿಂದಿನ ಕೃತಿಗಳಲ್ಲಿ ಚರ್ಚಿಸಿಲ್ಲವೆಂದು ನನ್ನ ಅಭಿಪ್ರಾಯವಲ್ಲ. ಸಿಕ್ಕ ಹೊಸ ಹೊಸ ಆಕರಗಳ ಮುಖಾಂತರ ತಮ್ಮ 'ಪ್ರಮೇಯ'ವನ್ನು ಮುಂದಿನ ಕೃತಿಗಳಲ್ಲಿ ಮಂಡಿಸುತ್ತ ಹೋಗುವುದು ಅವರ ರೀತಿ. ಹೀಗಾಗಿ ಇಲ್ಲಿ ಶಂ.ಬಾ ಆ ವರೆಗೆ ದೊರಕಿದ ಸಾಮಗ್ರಿಗಳ ಮೂಲಕ ಈ ನಿಲುಮೆಗೆ ಬಂದು ತಲುಪಿದ್ದಾರೆಂದು ನನಗೆ ಖಚಿತವಾಗಿ ತೋರುತ್ತದೆ.

'ಬಿತ್ತಿದ್ದನ್ನು ಬೆಳಕೊ' ಗ್ರಂಥವು ಮುಖ್ಯವಾಗಿ ನಾಲ್ಕು ಭಾಗಗಳಾಗಿದೆ. ಭಾಗ ಒಂದು ಶುರುವಾಗುವ ಮುನ್ನ 'ಅನ್ವೇಷಕರ ಅರಿಕೆ' ಎಂಬ ಪ್ರಸ್ತಾವನೆಯಲ್ಲಿ ಶಂ.ಬಾ ಅವರು ಹಾಲುಮತ ದರ್ಶನ (೧೯೬೦) ದಿಂದ ತೊಡಗಿ ತಲೆಯೆತ್ತಿದ್ದ ಜಿಜ್ಞಾಸೆ 'ಬಿತ್ತಿದ್ದನ್ನು ಬೆಳಕೊ' (೧೯೮೪)ವರೆಗೆ ನನ್ನನ್ನು ತಳ್ಳಿಕೊಂಡು ಬಂದಿದೆ. ಶಂ.ಬಾ ಸುಮಾರು ಇಪ್ಪತ್ತನಾಲ್ಕು ವರ್ಷಗಳ ಕಾಲ ನಡೆಸಿದ ಅವರ ಸಾಂಸ್ಕೃತಿಕ ಚಿಂತನೆಯ ಮೈಮೇಲೆ ಕಾಣಿಸಿದ ಸೂತ್ರರೂಪದಲ್ಲಿದೆ. ಭಾರತೀಯ ಸಂಸ್ಕೃತಿಯಲ್ಲಿ ಪಲ್ಲಟವಾಗಿದೆ ಎಂಬ ಇತ್ಯರ್ಥ ಶಂ.ಬಾ ಅವರ ಸಾಂಸ್ಕೃತಿಕ ಚಿಂತನೆಯಲ್ಲಿ ಕಾಣಿಸಿದೆ. "ಒಂದು ಸಂಸ್ಕೃತಿಯಲ್ಲಿ ಇಬ್ಬರು ಮನುಗಳು" ಎಂಬ ಮಾತೇ ಅವರಿಗೆ ದಿಗ್ಭ್ರಾಂತಿ ತರುತ್ತಿರುವ ಸಂಗತಿ ಆಗಿದೆ. ವೈವಸ್ವತ ಮನು ನರ: ಸ್ವಾಯಂಭುವ ಇವರಿಬ್ಬರಲ್ಲಿ ಒಬ್ಬನು ಮಾತ್ರ 'ಮನು'ವಾಗಿದ್ದು ಇನ್ನೊಬ್ಬ ಮೋಸದ ಕೃತ್ಯ ಆಗಿರಬೇಕೆಂಬ ನಿಲುವನ್ನೇ ಎತ್ತಿ ಹಿಡಿದಿದ್ದರು. ಸಂಸ್ಕೃತಿಯ ನಿರ್ಮಾಣ ಮನು>ಮಾನವನಿಂದಲೇ ಹೊರತು, ಸ್ವಯಂಭೂ>ಸ್ವಾಯಂಭುವನಿಂದ 'ಸಂಸ್ಕೃತಿ' ರೂಪ ಪಡೆಯಲಾರದೆಂಬ ನಿಷ್ಕರ್ಷೆ ಶಂ.ಬಾ ಅವರಿಗೆ ಇದರಿಂದ ಖಚಿತವಾಯಿತು. 'ಸಮಷ್ಟಿತತ್ತ್ವ' ಮನು>ಮಾನವನಾದ ವೈವಸ್ವತನಿಂದಲೇ ಹೊರತು ಬೇರೆ ಸಾಧ್ಯವಿಲ್ಲ ಎಂಬ ನಿಲುವು ಅವರ ಅರಿಕೆಗೆ ಬಂದಿತು. ಹೀಗಾಗಿ ಭಾರತೀಯ ಸಂಸ್ಕೃತಿಯ ಮೂಲಕ ಮಾನವ ಸಂಸ್ಕೃತಿಯಲ್ಲಿ ದೊರಕುವ ಪರಿಭಾಷೆಗಳನ್ನು ಮುಂದೆ ಇಟ್ಟುಕೊಂಡು ಚರ್ಚಿಸಲು ತೊಡಗಿದರು. ಚಾಂದ್ರ ಪರಿಭಾಷೆಯು, ಸೌರಪರಿಭಾಷೆಯ ಸಾಂಸ್ಕೃತಿಕ ನಿಲುವನ್ನು ಪಲ್ಲಟ ಮಾಡಿರುವುದನ್ನು "ಸಾರ್ಪರಾಜ್ಞೀ ಸೂರ್ಯೋ ವಾ" ಎಂಬಲ್ಲಿ ಸಮಾನವಾದ ಪಾತಳಿ ಇರುವುದನ್ನು ಕಂಡು ಅವರ ಎದೆ ಧಸಕ್ಕೆಂದಿತು. ಸರ್ಪ ಮತ್ತು ಸೂರ್ಯ ಇವೆರಡೂ ಪ್ರತಿಮೆಗಳು ಬೇರೆ ಬೇರೆ. ಆದರೆ, ಅವು ಏಕಪಾತಳಿಗೆ ಬರಲು ಸಾಧ್ಯವಿಲ್ಲ. ಅವೆರಡನ್ನು ಏಕಪಾತಳಿಗೆ ತಂದರೆ ಹಗಲು-ರಾತ್ರಿಗಳ ಭೇದವೇ ಇಲ್ಲದಂತಾಗುತ್ತದೆ. ಈ ಅಂಶಗಳನ್ನು ಅವರು ಇಂದ್ರ ಮತ್ತು ಯೂರೋಪೀಯ ಜಾನಪದ ಸಾಹಿತ್ಯದಲ್ಲಿ ಕಾಣಿಸುವ ಥೋರ ತೊಡಗಿದ್ದರು

Thor was the God supreme not only over the stormy sky, but also over the life of community in all its aspects.

ಈ ಬಗೆಯ ಪ್ರತಿಮೆಗಳನ್ನು ಕುರಿತು ತುಲನಾತ್ಮಕ ಚಿಂತನೆಗೆ ತೊಡಗುತ್ತಾರೆ. ಶಂ.ಬಾ ಅವರು 'ಇಂದ್ರ' ಪ್ರತಿಮೆಯೊಡನೆ ಥೋರೋ ಪ್ರತಿಮೆಯನ್ನು ಇಟ್ಟು ನಡೆಸಿದ ಅಧ್ಯಯನ ಜಾಗತಿಕ ಸಂಸ್ಕೃತಿಯ ಅಧ್ಯಯನವೂ ಆಯಿತು. ಎಚ್.ಆರ್. ಎಲ್ಲಿಸ್, ಡೆವಿಡ್‌ಸನ್ ಈಕೆಯ 'Gods znd Myths of Northern Europe' ಪುಸ್ತಕದೊಂದಿಗೆ ಆಳವಾದ ಅಧ್ಯಯನಕ್ಕೆ ಅವರು ತೊಡಗಿಕೊಂಡರು. ಇಲ್ಲಿ ಮೂಲ್ಯಗಳ ಪ್ರಶ್ನೆ ಹೇಗೊ ಸದ್ಯದ ಬದುಕಿನ ಒಡಕಿನ ಮೂಲ ಎಲ್ಲಿದೆ ಎಂಬ ಹುಡುಕಾಟವೂ ಅವರ ಚಿಂತನೆಯ ಮುಖ್ಯ ಕೇಂದ್ರವೂ ಆಗಿರುವುದನ್ನು ಸ್ಮರಿಸಬಹುದಾಗಿದೆ.

ಭಾರತದಲ್ಲಿ ಮಾತ್ರವಲ್ಲ; ಜಾಗತಿಕ ಪಾತಳಿಯಲ್ಲೇ ಪ್ರಜ್ಞಾತತ್ತ್ವದ ಪ್ರಾದುರ್ಭಾವಕ್ಕೆ ಕಾರಣವಿರುವ ಸೌರತತ್ತ್ವದ ದೇವರುಗಳ ಪವಾಡ ಕಥೆಗಳು ಮೊದಲು ಇರುವುದಾಗಿ ಕಂಡುಬರುತ್ತದೆ. ಆನಂತರ ಎರಡನೆಯ ಸ್ತರದಲ್ಲಿ ಪ್ರಾಣತತ್ತ್ವದ ನಾಗ ಅಥವಾ ಲಿಂಗ ದೇವರುಗಳ ಪವಾಡಕಥೆಗಳು ಕಂಡುಬರುತ್ತವೆ. ಶಂ.ಬಾ ಅವರು ಈ ತತ್ತ್ವವನ್ನು 'ಅನ್ವೇಷಕರ ಅರಿಕೆ'ಯಲ್ಲಿ ಹೇಳುತ್ತಾರೆ. ಮನುಷ್ಯನ ಪ್ರಾದುರ್ಭಾವ ಇಂದ್ರಿಯಗಳ ಪಾತಳಿಯ ಮೇಲೆ ಆಗಿಲ್ಲ. ಒಂದು ಪಕ್ಷ ಆಗಿದ್ದರೆ, 'ಮಾನವಭಾಷೆ' ಮತ್ತು 'ಮಾನವಸಂಸ್ಕೃತಿ' ಮೈದೋರುವುದಕ್ಕೆ ಸಾಧ್ಯವಿಲ್ಲ ಎಂಬ ನಿಲುವೇ 'ಅನ್ವೇಷಕರ ಮುನ್ನುಡಿ'ಯಲ್ಲಿ ಶಂ.ಬಾ ಮೂಲಗಾಮಿ ಚರ್ಚೆಯ ನೆಲೆಗೆ ತೆಗೆದುಕೊಳ್ಳುತ್ತಾರೆ. ತತ್ವಜ್ಞ ಅರ್ನೆಸ್ಟ್ ಕ್ಯಾಸಿರರ್ ಹೇಳುವ:

"Man can participate in a higher order of life only through
the realisation of the perennial forms of human thought"

ಈ ಮಾತು ಅವರು ತತ್ತ್ವಜ್ಞಾನದ ನೆಲೆಯಿಂದ ಮಾನವ ಪ್ರಾದುರ್ಭಾವದ ಹಿನ್ನೆಲೆಯಲ್ಲಿ ಕುರಿತು

ಚರ್ಚಿಸುವ ರೀತಿಗೆ ಕಾರಣವಾಯಿತು. ಹಲವು ಆಕರಗಳಿಂದ ಮಾತ್ರವಲ್ಲ; ಸಂಸ್ಕೃತಿಯನ್ನು ಒಳಗಣ್ಣಿನಿಂದ, ಒಳನೋಟದಿಂದ ಕಾಣಿಸುವ ಪರಿಯೂ ಆಗಿರುವುದನ್ನು ಗಮನಿಸಬೇಕಾದ ಸಂಗತಿಗಳಲ್ಲಿ ಒಂದು. ಶಂ.ಬಾ ಈ ನಿಲುವನ್ನು ಗಟ್ಟಿಯಾಗಿಯೇ ಹಿಡಿದರು. ಜ್ಯೂಲಿಯನ್ ಹಕ್ಸ್ಲೀ, ಪಿರ್ರೆ ಟೈಲಾರ್ಡ್ ಡಿ ಚಾರ್ಡಿನ್-ಮೊದಲಾದ ಜೀವವಿಜ್ಞಾನಿಗಳು ಕೂಡ ಭಾಷೆ ಮತ್ತು ಸಂಸ್ಕೃತಿ 'Noosphere'ನೆಲೆಯಲ್ಲಿ ಮಾತ್ರ ಭಾಷೆ ಮತ್ತು ಸಂಸ್ಕೃತಿಗೆ ಪ್ರೇರಣಾಕೇಂದ್ರ ಇರುತ್ತದೆಂದು ತಾತ್ತ್ವಿಕ ನೆಲೆಯಿಂದ ಗಟ್ಟಿಯಾಗಿ ಹೇಳಿದರು. ಅವರು ಹೇಳಿರುವ ಸಂಗತಿಯನ್ನು ಶಂ.ಬಾ ನಮ್ಮ ಗಮನಕ್ಕೆ ತಂದುಕೊಡುತ್ತಾರೆ. ಇದಕ್ಕೆ ಪುರಾವೆ ಒದಗಿಸಿಕೊಡುವಂತೆ ಭಾರತೀಯ ಸಂಸ್ಕೃತಿಯಲ್ಲಿ ಹೇಗೋ ಇಂದಿಗೂ ಉಳಿದಿರುವ 'ಸ್ವರ್' ಪಾತಳಿಯ ನೆಲೆಯನ್ನು Nosphere ಪರಿಭಾಷೆಗೆ ನೇರವಾಗಿ ಒಡ್ಡುತ್ತಾರೆ. ಸ್ವರ್ ಎಂದು ಹೇಳಿ, ಭಾಷೆ ಮತ್ತು ಸಂಸ್ಕೃತಿ ಆಕಾರ ಪಡೆದು-ಸಮಷ್ಟಿಜೀವನ ತತ್ತ್ವವಾಗಿ ರೂಪಿಸಿಕೊಂಡದ್ದು ಈ ಸ್ವರ್‌ಪಾತಳಿಯಲ್ಲೇ ಎಂಬ ಅಂಶವನ್ನು ಮುಂದೊಡ್ಡುತ್ತಾರೆ. ಶಂ.ಬಾ ನಡೆಸುವ ಈ ಚಿಂತನೆಯು ಸಂಸ್ಕೃತಿ ಅಧ್ಯಯನದ ತೋರಿಕೆಯ 'ಹೊರನೆಲೆ'ಯದ್ದಲ್ಲ; ಅದು 'ಒಳನೆಲೆ'ಯದ್ದು ಕೂಡಾ. ಈ ಅಂಶವು ಅರ್ಥವಾಗದೆ ಹೋದಾಗ ಅವರು ಒಬ್ಬ ಸಂಪ್ರದಾಯ ವಿರೋಧಿ ಎಂಬ ತೆಳು ಮಾತಾಗಿಯೋ, ಸಾಂಪ್ರದಾಯಿಕ ಚಿಂತನೆಗೆ ಜೋತುಬಿದ್ದವರಿಗೆ ಭಯ-ಕೋಪ ಹುಟ್ಟಿಸುವರೆಂಬ ಹುಸಿ ನುಡಿಯಾಗಿಯೋ ಮಾತ್ರ ಉಳಿಯುತ್ತದೆ! ಶಂ.ಬಾ 'ಸತ್ಯ'ದ ಸಂಶೋಧನೆಯ ನೆಲೆಯನ್ನು ಗಟ್ಟಿಯಾಗಿ ಇಪ್ಪತ್ತನೆಯ ಶತಮಾನದ ಉದ್ದಕ್ಕೂ ಹೆಚ್ಚು ನೆಮ್ಮಿಕೊಂಡಿದ್ದರು. ಅದಲ್ಲದೆ, ಭಾಷೆ ಮತ್ತು ಸಂಸ್ಕೃತಿಯು ಹಲವು ಬಗೆಯ ಪಲ್ಲಟಗಳಲ್ಲಿ ಮೈದೋರಿದೆ. ಹೀಗೆ ಪಲ್ಲಟವಾಗಿರುವುದರಿಂದಲೇ ಇಂದು ಭ್ರಷ್ಟಾಚಾರ ಮತ್ತು ಅನಾಚಾರಗಳಿಗೆ ದಾರಿ ತೆರೆದುಕೊಂಡಂತಾಗಿದೆ. ಹೀಗೆಂದು ವಿಷಾದದಿಂದ ಹೇಳುತ್ತಾರೆ. ಅವರ ವಿಷಾದದ ಸ್ವರದ ಹಿಂದೆ 'ವಿಧಾಯಕವಾದ ಸಾಂಸ್ಕೃತಿಕ ಚಿಂತನ'ವೊಂದು ವರ್ತಮಾನದ ಬಾಳ್ವೆಯಲ್ಲಿ ಲೀನವಾಗಿರುವುದನ್ನು ನಾವು ಕಾಣಬಹುದು.[೩] ಶಂ.ಬಾ ಈ ಭಾಗದಲ್ಲಿ ತಮ್ಮ ಸಾಂಸ್ಕೃತಿಕ ಚಿಂತನೆಗೆ ವಿಧಾಯಕವಾದ 'ತಾತ್ತ್ವಿಕ ಹಿನ್ನೆಲೆ'ಯನ್ನು ಮಂಡಿಸುವುದೇ ಅವರ ಗರಿಯಾಗಿದೆ. ಈ ತಾತ್ತ್ವಿಕ ಹಿನ್ನೆಲೆಗೆ ಅವರು ಕೊಡುವ ಉದಾಹರಣೆಗಳು ಎಂದಿನಂತೆ ಲಿಂಗ, ಪುರುಷ, ವಿವಸ್ವನ್, ಸೂರ್ಯ, ಇಂದ್ರ, ಸವಿತೃ ಮೊದಲಾದ ಸಾಂಸ್ಕೃತಿಕ ಪಾರಿಭಾಷಿಕ ಪದಗಳೇ ಆಗಿವೆ. ಈ ಶಬ್ದ ಶಿಲ್ಪಗಳು ಸೂಚಿಸುವ ಅರ್ಥದ ಪರಿಪ್ರೇಕ್ಷ್ಯದಲ್ಲಿ ಶಂ.ಬಾ ಗಟ್ಟಿಯಾಗಿ ನಿಲ್ಲುತ್ತಾರೆ. ಸತ್ಯವನ್ನು ಹಟದಿಂದ ನೆಮ್ಮಿ ನಿಲ್ಲುವ ಗುಣವನ್ನು 'ಅನ್ವೇಷಕನ' ಅರಿಕೆ'ಯಲ್ಲಿ ಹಾಸು-ಹೊಕ್ಕಾಗಿ ನಿಲ್ಲಿಸುತ್ತಾರಷ್ಟೆ. ಅವರು ತಮ್ಮ ಚಿಂತನೆಯ ದಾರಿಯನ್ನು ಸುಗಮಗೊಳಿಸುವ ನಿಲುಮೆಯೂ ಈ ಸಂದರ್ಭದಲ್ಲಿ ನಮಗೆ ಎದ್ದು ಕಾಣುವ ಸಂಗತಿಗಳಲ್ಲಿ ಒಂದು.

೧೯೮೧ರಲ್ಲಿ ಮಡಿಕೆರೆ ಅಖಿಲಭಾರತ ಕನ್ನಡಸಾಹಿತ್ಯ ಸಮ್ಮೇಳನದಲ್ಲಿ ಮಾಡಿದ 'ಅಧ್ಯಕ್ಷೀಯ ಭಾಷಣ'ದ ಮುಖ್ಯಾಂಶಗಳು ಈಗಾಗಲೇ ಗ್ರಹಿಸಿಕೊಂಡ ತಾತ್ತ್ವಿಕ ಹಿನ್ನೆಲೆಗೆ ನೆಲೆಯಾಗಿರುವಂತೆ ಅವರು 'ಪ್ರಸ್ತಾಪ ಮಾಡುತ್ತಾರೆ. ಆರಂಭದಲ್ಲಿ ಶಂ.ಬಾ ಅವರು ಹೇಳಿರುವ ಮಾತುಗಳು ಹೀಗಿವೆ:

> ಈ ಅನ್ವೇಷಣೆಯೊಳಗಿನ ನಿಷ್ಕರ್ಷಗಳು ನನ್ನ ವೈಯಕ್ತಿಕ ಅಭಿಪ್ರಾಯಗಳಲ್ಲ. ನನಗೆ ತಿಳಿದ ಶಾಸ್ತ್ರೀಯ ಪದ್ಧತಿಯಿಂದ ಈ ಅನ್ವೇಷಣೆಯನ್ನು ಮುಂದುವರಿಸುತ್ತ ಬಂದಿದ್ದೇನೆ.

---

೩. ಹಲವರಿಗೆ, ಶಂಬಾ ಕೇವಲ ಪಾಶ್ಚಾತ್ಯ ವಿದ್ವಾಂಸರ ಚಿಂತನೆಯ ಮಾರ್ಗವನ್ನು ಅನುಸರಿಸುತ್ತಾರೆ- ಎಂಬ ಅಪಪ್ರಥೆ ಉಂಟು. ಆದರೆ, ಅವರ ಮಾತು ಕೇಳಿ: "ಭಾಷ್ಯ-ಭಾಷಾಂತರಗಳ ಮೂಲಕ ವೇದದಲ್ಲಿ ಪ್ರವೇಶಿಸುವುದು ಸುರಕ್ಷಿತವಲ್ಲ, ಎಂದು ಸಾರಿ ಹೇಳುವುದು ಅವಶ್ಯವಾಗುತ್ತಿದೆ. ತೌಲನಿಕ ಪ್ರಯತ್ನ ಅವಶ್ಯ. ಸಾಯಣರಲೇ ಇರಲಿ, ಪಾಶ್ಚಾತ್ಯ ಪೌರ್ವಾತ್ಯ ಯಾವ ವಿದ್ವಾಂಸರೇ ಇರಲಿ, ಇವರೆಲ್ಲರ ಅರ್ಥ ವಿವರಣೆ ಅವರವರ ವೈಯಕ್ತಿಕ ಅರ್ಥವಾಗುವುದು ನಿಶ್ಚಿತ." (ಬಿತ್ತಿದ್ದನ್ನು ಬೆಳಕೊ ಪು. ೧೨೯) ಹೀಗಾಗಿ, ತುಲನಾತ್ಮಕ ವಿವರಣೆಯಲ್ಲಿ ಅಭಿಪ್ರೇತಗೊಳ್ಳುವ 'ಅರ್ಥ'-'ವಿಚಾರ'ಕ್ಕೆ ಶಂ.ಬಾ ಅವರ ಚಿಂತನೆಯಲ್ಲಿ ಸ್ಥಾನವಿರುವುದನ್ನು ಈ ಬಗೆಯ ಅಧ್ಯಯನಕ್ಕೆ ತೊಡಗುವವರು ಗಮನಿಸಬೇಕಾದ ಅಂಶಗಳಲ್ಲಿ ಒಂದು.

> ಈ ಫಲಿತಾಂಶಗಳಲ್ಲಿ ತಾಳ-ಮೇಳವು ಅಥವಾ ಅಂತಃಸಂಗತಿಯು ಇಲ್ಲದ್ದುದನ್ನು ನಾನು ಸ್ವೀಕರಿಸಿಲ್ಲ. ಇದರಲ್ಲಿ ನನಗೆ ಸೋಜಿಗವೆನಿಸುತ್ತಿರುವ ಸಂಗತಿಯೆಂದರೆ 'ಕಣ್ಮರೆಯಾದ ಕನ್ನಡ'ದ ಸಮಸ್ಯೆಯೊಳಗಿಂದಲೇ ಈ ವರೆಗಿನ ನನ್ನ ಪ್ರಶ್ನೆಗಳು ಮುಂದುವರಿಯುತ್ತ ಬಂದಿವೆ. 'ಕಣ್ಮರೆಯಾದ ಕನ್ನಡ'ದ ಸಮಸ್ಯೆಗಳೊಳಗಿಂದ ಮಹಾರಾಷ್ಟ್ರವು ಮೈವೆತ್ತಿದ ಪ್ರಶ್ನೆಯು ಎದುರು ನಿಂತಿತು. ಮರ್‍ಹಾಟಮಹಾರಾಷ್ಟ್ರದ ಪ್ರಶ್ನೆಯಲ್ಲಿ ದೇಸೀ ಮತ್ತು ಸಂಸ್ಕೃತ ಭಾಷಿಕರ ಸಂಘರ್ಷಣ ಹಾಗೂ ಸಮ್ಮಿಶ್ರಣದ ತೊಡಕು ಕಾಣಿಸಿಕೊಂಡಿತು. ದೇಸೀ ಅಂಶಗಳು ವೇದದಲ್ಲಿಯೂ ಸ್ಥಾನ ಪಡೆದುದು ಖಚಿತಪಟ್ಟಿತು. ಈ ಸಾಂಸ್ಕೃತಿಕ ಹಿನ್ನೆಲೆಯಲ್ಲಿ 'ಹಾಲುಮತ ದರ್ಶನ' ಬರೆಯುವುದು ಶಕ್ಯವಾಯಿತು. ಆ ಬಳಿಕ ಇಂದಿನ ವೇದದ ಸಂಸ್ಕೃತಿಯ ಜಟಿಲಪ್ರಶ್ನೆ ನನ್ನನ್ನು ಆಕರ್ಷಿಸಿತು. ವೇದದಲ್ಲಿ ನಾಗ (ಲಿಂಗ) ಸಂಪ್ರದಾಯವು ಉಂಟು ಎಂಬ ಸಂದೇಹವು ಸೋಂಕಿತು. ಆದರೆ, ಈ 'ನಾಗಸಮಸ್ಯೆ' ಜಾಗತಿಕ ಸಂಸ್ಕೃತಿಯ ಪ್ರಶ್ನೆಯಾಗಿರುವುದನ್ನು ಅನ್ವೇಷಣೆ ಮುಂದುವರಿಸಿದಾಗ ಮನಗಂಡೆ.

ಶಂ.ಬಾ ಅವರು ವಿನಯಪೂರ್ವಕಾಗಿ ತೋಡಿಕೊಳ್ಳುವ "ಇಂದಿನ ಸಮಸ್ಯಾ ಪರಿಹಾರಕ್ಕೆ ಉಪಕಾರಕವಾಗುವುದರಲ್ಲೇ ಆ ಸತ್ಯಾನ್ವೇಷಣೆಯ ಸಾಫಲ್ಯ ಅಡಗಿದೆ" ಎಂಬುದು ಶಂ.ಬಾ ಅವರ ಒಟ್ಟು ನಿಲುಮೆ ಆಗಿದೆ. ಈ ಸಮಸ್ಯೆ ಭಾರತಕ್ಕೆ ಮಾತ್ರ ಮೀಸಲಾಗಿಲ್ಲ ಎಂಬ ನಿಷ್ಕರ್ಷೆಯಲ್ಲಿ ಶಂ.ಬಾ. ಹೊರಡುವುದೇ ಮುಖ್ಯವಾಗಿ ಜಾಗತಿಕ ನೆಲೆಯಲ್ಲಿ ತಮ್ಮ ಚಿಂತನೆಗಳನ್ನು ಮಂಡಿಸಲು ತೊಡಗುವ ಸಂಗತಿಯಾಗಿದೆ. ಜೀವನ ಮತ್ತು ಸಂಸ್ಕೃತಿಯ ವಿಚಾರಗಳ ಬಗ್ಗೆ ಮತ್ತೆ ಮತ್ತೆ ಅವರು ಆಲೋಚನೆಯ ಪರಿಪ್ರೇಕ್ಷ್ಯದಲ್ಲಿ ನಿಲ್ಲಿಸಿಕೊಳ್ಳುವುದೇ ಅದು 'ಜಾಗತಿಕ ಸಮಸ್ಯೆ' ಎನ್ನುವ ಕಾರಣದಿಂದಾಗಿ. ಹೀಗಾಗಿ, ಜೀವನ ಸಂಸ್ಕೃತಿ ಮತ್ತು ಸಾಹಿತ್ಯಗಳು ಪರಸ್ಪರ ಸಾಪೇಕ್ಷಗಳಾಗಿವೆ-ಎಂಬ 'ನಿಲುಮೆ' ಯನ್ನು ಸ್ಪಷ್ಟವಾಗಿ ಹೇಳಿದ್ದರು. ಜೀವನ ಸಂಸ್ಕೃತಿ ಸಾಹಿತ್ಯದ ಆಕೃತಿಗೆ ಕಾರಣವಾಗಿರುವಂತೆ ಸಂಸ್ಕೃತಿ ಮತ್ತು ಸಾಹಿತ್ಯವು ಒಟ್ಟಿನ ಜೀವನಕ್ಕೆ ವಿಶಿಷ್ಟ ಆಕಾರವನ್ನು ಕೊಡುತ್ತದೆ. ಈ ಕಾರಣ-ಕಾರ್ಯ ಸಂಬಂಧದಲ್ಲಿ 'ಜೀವನ' ಎಂಬುದು ಆದಿಕಾರಣವಾಗಿದೆ. ಈ ಅಂಶವನ್ನು ನಾವು ಕ್ಷಣಮಾತ್ರವೂ ಮರೆಯಲಾಗದು. ಇಂದಿನ ಜೀವನವು ಅನಾಚಾರಗೊಂಡಿರುವಾಗ, ಭ್ರಷ್ಟಗೊಂಡಿರುವಾಗ ಸಮಷ್ಟಿಹಿತದಿಂದ ವ್ಯಷ್ಟಿಹಿತದಲ್ಲಿ ತನ್ಮಯಗೊಂಡಿರುವಾಗ ಇಂಥ ಜೀವಿತದ ನೆಲೆಯಲ್ಲಿ ಹುಟ್ಟುವ ಸಾಹಿತ್ಯವು ಸಮಷ್ಟಿ ಆಕೃತಿಯ ಬದಲಾಗಿ ವ್ಯಷ್ಟಿ ಆಕೃತಿಯಲ್ಲಿ ಮೈದೋರುತ್ತದೆ. 'ಜೀವನ'ಕ್ಕೆ ಇಂಬುಗೊಡುವ ಸಾಹಿತ್ಯದ ಸೃಷ್ಟಿ ಆಗಿಲ್ಲವೆಂಬ ತಕರಾರನ್ನು 'ಸಾಹಿತ್ಯಕೃತಿ'ಗಳ ಆಶಯದ ಮೂಲಕವೇ ಶಂ.ಬಾ ಮಂಡಿಸುತ್ತಾರೆ. Life ಮತ್ತು Existance ಇವೆರಡರ ಅಂತರ ಉಳಿಸಿಕೊಳ್ಳದೆ ಹೋದರೆ ಜೀವನವು-ಜೀವಿತದ ಹಂತಕ್ಕೆ ಬಂದು ನಿಲ್ಲುತ್ತದೆಂಬ ಅಂಶವನ್ನು ತಮ್ಮ ಹಿಂದಿನ ಕೃತಿಗಳಲ್ಲಿ ತೋರಿಸಿದ ಆಕರಗಳಿಗಿಂತ ಇನ್ನಷ್ಟು ಹೊಸ ಅಕರಗಳ ಮುಖಾಂತರ ಮಂಡಿಸುತ್ತಾರೆ. ಸಾಹಿತ್ಯಕೃತಿಯೊಂದು ವ್ಯಕ್ತಿ ವಿಶಿಷ್ಟವಾಗುವುದು ಜೀವಿತದ ನೆಲೆಯಲ್ಲೇ ಹೊರತು ಜೀವನದ ನೆಲೆಯಲ್ಲಿ ಅಲ್ಲವೆಂಬ ಅಂಶವನ್ನು ಶಂ.ಬಾ. ಅವರು ಬಗೆಬಗೆಯ ಸಂಗತಿಗಳೊಡನೆ ನಮ್ಮ ಗಮನಕ್ಕೆ ತರಲು ಪ್ರಯತ್ನಿಸಿದ್ದರು. ಜೀವನ, ಸಂಸ್ಕೃತಿ ಮತ್ತು ಸಾಹಿತ್ಯ ಸಾಪೇಕ್ಷಗಳಾಗಿವೆ ಎಂಬ ನಿಲುಮೆಯಿಂದ ಹೊರಟ ಅವರು ಮಾನವ> ನರನಾಗುವ ದಿಕ್ಕಿನಲ್ಲಿ ಹೊರಟ ಸಂಗತಿಯನ್ನು ಭಾರತೀಯ ಸಂಸ್ಕೃತಿಯ ಸಂದರ್ಭದಲ್ಲೂ ಪಾಶ್ಚಾತ್ಯ ಸಂಸ್ಕೃತಿಯ ಸಂದರ್ಭದಲ್ಲೂ ಶಿಷ್ಟಮಾನ್ಯ ಆದುದನ್ನು ಹಲವು ಆಕೃತಿಗಳಲ್ಲಿ ವ್ಯಾಖ್ಯಾನಿಸುತ್ತಾರೆ. ಇದು ಒಂದು ಕಡೆ ಭಗವದ್ಗೀತೆಯ ಮುಖಾಂತರ ಮತ್ತೊಂದು ಕಡೆ ಪೈಥಾಗೊರಾಸ್ ಮುಖಾಂತರ ಶಂ.ಬಾ. ತಮ್ಮ ಚಿಂತನೆಯನ್ನು ಹರಡುತ್ತಾರೆ.

"ನಿಜವಾಗಿ ಪ್ರಜ್ಞೆ (Wisdom: Nous) ಇದೇ ಮೊದಲಲ್ಲಿ ಮನುಷ್ಯನನ್ನು ಆಳುತ್ತಿತ್ತು.

ಈಗಲೂ ಆಳಬೇಕು. ಆದರೆ, ಇಂದು ಶಿಕ್ಷಣಕ್ಷೇತ್ರದಲ್ಲಿ ಬುದ್ಧಿಗೆ ಪ್ರಾಧಾನ್ಯವು ದೊರೆಯುತ್ತಿದೆ; ಮತ್ತು ಹಿಂದೊಮ್ಮೆ ಪ್ರಜ್ಞೆ ಎಂಬುದು 'ಮಾನವ'ನನ್ನು ಆಳುತ್ತಿತ್ತು ಎಂಬ ಎಚ್ಚರ ಎಳ್ಳಷ್ಟೂ ಉಳಿದಿಲ್ಲ"

ಈ ಮಾತಿನ ವ್ಯಥೆಯಲ್ಲಿ ಮನಸ್ಸಿನ ಪ್ರಕಾರಗಳ ಚಿಂತನೆಯನ್ನು ಕುರಿತು ಆಲೋಚಿಸಲು ತೊಡಗುತ್ತಾರೆ. ಸ್ಮೃತಿ, ಮತಿ, ಬುದ್ಧಿ ಮತ್ತು ಪ್ರಜ್ಞೆ-ಇವುಗಳಲ್ಲಿ ಅಂತರವುಂಟು ಎನ್ನುವ ನಿಲುಮೆಯನ್ನು ಶಂ.ಬಾ. ಅವರು ಪ್ರಾಚೀನ ಶ್ಲೋಕವೊಂದರ ಆಯಾಮದ ಮೇಲೆ ಚರ್ಚಿಸಲು ತೊಡಗುತ್ತಾರೆ. ಮನಸ್ಸಿನ ವಿವಿಧ ನಿಲುಮೆಗಳನ್ನು ಸೂಚಿಸುವ ಆ ಶ್ಲೋಕವು ಹೀಗಿದೆ:

ಸ್ಮೃತಿಃ ವ್ಯತೀತ ವಿಷಯಾ,ಮತಿಃ ಆಗಾಮೀ ಗೋಚರಾ।
ಬುದ್ಧಿಃ ತು ತಾತ್ಕಾಲಿಕೀ ಜ್ಞೇಯಾ ಪ್ರಜ್ಞಾ ತ್ರೈಕಾಲಿಕೀ ಮತಾ॥[೪]

ಸ್ಮೃತಿ ಎಂಬುದು ನಿನ್ನೆಯ ವಿಷಯಕ್ಕೆ ಸಂಬಂಧಿಸಿದ್ದು, 'ಮತಿ'ಯು, 'ನಾಳೆ'ಯ ಸತ್ಯಗಳನ್ನು ತಂದು ಕೊಡುವಂಥದು. ಈಗ ನಡೆಯುವುದನ್ನು ಪರಿಶೀಲಿಸುವುದು ಬುದ್ಧಿ. ನಿನ್ನೆ ಇಂದು ಈ ಮೂರು ಕಾಲಗಳನ್ನು ಒಳಗೊಳ್ಳುವುದು ಪ್ರಜ್ಞೆ. ಇದಿಷ್ಟು ಈ ಶ್ಲೋಕದ ಆಶಯ. ಮಾನವೇತಿಹಾಸವನ್ನು ಅರ್ಥವಿಸಿಕೊಳ್ಳುವುದಕ್ಕೆ ಶಂ.ಬಾ ಇದನ್ನು ಬಳಸಿಕೊಳ್ಳುತ್ತಾರೆ. ಸ್ಮೃತಿ, ಮತಿ, ಬುದ್ಧಿಗಳ ತಾತ್ತ್ವಿಕ ಅಂತರಗಳನ್ನು ಶಂ.ಬಾ ಆಧುನಿಕ ಚಿಂತನೆಗಳ ಆದರಲ್ಲೂ ಬರ್ಗಸನ್‌ನಂಥ ತತ್ತ್ವಜ್ಞಾನಿಯ ಹಿನ್ನೆಲೆಯಲ್ಲಿ ಪರಿಶೀಲಿಸುವುದು ತುಂಬಾ ಕುತೂಹಲ ಕಾರಿಯಾದ ಅಂಶವಾಗಿದೆ. ಬಹು ವಿವರವಾಗಿ ಈ ಚರ್ಚೆಯನ್ನು 'ಬುಧನ ಜಾತಕ' ಮತ್ತು 'ಮಾನವ ಧರ್ಮದ ಆಕೃತಿ' ಗ್ರಂಥಗಳಲ್ಲಿ ಮಂಡಿಸಿದ್ದರು.

ತಮ್ಮ ಅನ್ವೇಷಕನ ಮುನ್ನುಡಿ ಮತ್ತು ಮಡಿಕೇರಿಯ ಭಾಷಣದಲ್ಲಿ ಪ್ರಸ್ತಾಪ ಮಾಡಿದ ಸಂಗತಿಗಳನ್ನೇ ೧೯೭೭ರಲ್ಲಿ ಧರ್ಮಸ್ಥಳದ ವಾರ್ಷಿಕ ಸಾಹಿತ್ಯಸಮ್ಮೇಳನದಲ್ಲಿ ಮಾಡಿದ ಅಧ್ಯಕ್ಷೀಯ ಭಾಷಣದಲ್ಲಿ ಕೆಲವು ಹೊಸ ಅಂಶಗಳೊಡನೆ ಪುನರಾವರ್ತಿತವಾಗಿವೆ. ತಮ್ಮ ಹಿಂದಿನ ಮಾತುಗಳಲ್ಲಿ ಜೀವನ: ಸಂಸ್ಕೃತಿ ಮತ್ತು ಸಾಹಿತ್ಯಗಳು ಸಾಪೇಕ್ಷವಾಗಿವೆ-ಎಂಬ ಅಂಶಗಳನ್ನು ಶಂ.ಬಾ ಬಗೆಬಗೆಯಾಗಿ ಎತ್ತಿ ಹಿಡಿದು ಹೇಳಿದ್ದರಷ್ಟೆ. ಅವೇ ಅಂಶಗಳನ್ನು ಇನ್ನಷ್ಟು ಹೊಸ ಆಶಯಗಳೊಂದಿಗೆ ಶಂ.ಬಾ ಹೇಳುವುದಿಷ್ಟು:

ಸಾಹಿತ್ಯ ಮತ್ತು ಸಂಸ್ಕೃತಿಗೆ ಆಯಾ ಜನ ಸಮಾಜದ ಭಾಷೆಯೇ ಆಧಾರ. ಭಾಷೆಯ ಮಾಧ್ಯಮವಿಲ್ಲದ ಸಾಹಿತ್ಯವಾಗಲಿ ಸಂಸ್ಕೃತಿಯಾಗಲಿ ದೊರೆಯಲಾರದು. ಭಾಷೆಯ ಆಕೃತಿ ಹಾಗೆ ಸಾಹಿತ್ಯದ ಆಕೃತಿ ಇವೆರಡರಲ್ಲಿ ಅನ್ಯೋನ್ಯವು ಅಭಿಪ್ರೇತವಿದೆ. ಇದೇ ಮೇರೆಗೆ ಸಂಸ್ಕೃತಿಯ ಆಕೃತಿಯು ಅದಕ್ಕೆ ಆಧಾರಭೂತ ಭಾಷೆಯ ಆಕೃತಿಯಿಂದ ಭಿನ್ನವಿರಲಾರದು.

ಈ ಮಾತುಗಳನ್ನು ಇನ್ನಷ್ಟು ಬಗೆಗಳಿಂದ ವಿಸ್ತಾರವಾಗಿ ಚರ್ಚಿಸಲು ಅವಕಾಶವಿದೆ ಎಂದು ಮಾತ್ರ ಇಲ್ಲಿ ಹೇಳಬಹುದು. ಇದರೊಡನೆ ವಿವಸ್ವನ್ ಮತ್ತು ಆದಿತ್ಯ ಆಕೃತಿ ಮತ್ತು ಆಶಯಗಳನ್ನು ಇದೇ ಭಾಷಣದಲ್ಲಿ ಇನ್ನಷ್ಟು 'ಪುರಾವೆ'ಗಳಿಂದ ಹೇಳಿರುವ ಅಂಶಗಳನ್ನು ಗಮನಿಸಬೇಕು. ಸಾಹಿತ್ಯ, ಜೀವನ ಮತ್ತು ಸಂಸ್ಕೃತಿ ಮೂರರಲ್ಲಿ ಇರಬೇಕಾದ ಅನ್ಯೋನ್ಯವು ವಿಕೃತಗೊಂಡಿರುವ ಅಂಶ ಶಂ.ಬಾ ಅವರ ಪ್ರಮುಖ ಕಾಳಜಿ ಯಾಗಿರುವುದು ಎದ್ದುಕಾಣುವ ಸಂಗತಿಗಳಲ್ಲಿ ಒಂದು.

'ಬಿತ್ತಿದ್ದನ್ನು ಬೆಳಕೊ' ಗ್ರಂಥದ ಭಾಗ ಎರಡರಲ್ಲಿ ಈ ಹಿಂದೆ ಪ್ರಕಟಗೊಂಡಿದ್ದ ಲೇಖನಗಳನ್ನು ಆಲೋಚನೆಯ ನೆಲೆಗೆ ತಕ್ಕಂತೆ ಅನುಕ್ರಮವಾಗಿ ಜೋಡಿಸಿದ್ದಾರೆ. ಇಲ್ಲಿಯ ಲೇಖನಗಳು 'ಇಂಚರ'

---

೪. ಶಂ.ಬಾ. ಪದೇ ಪದೇ ತಮ್ಮ ಗ್ರಂಥಗಳಲ್ಲಿ ನೀಡುವ ಈ ಶ್ಲೋಕ 'ಭಟ್ಟತೌತ'ನದು. 'ಕಾವ್ಯಪ್ರಕಾಶ'ದ ಸಂಪ್ರದಾಯ ಪ್ರಕಾಶಿನೀ ವ್ಯಾಖ್ಯಾನ ಪುಟ ೧೩ರಲ್ಲಿ ಇದು ಉದಾಹೃತವಾಗಿದೆ. ತ್ರಿವೇಂದ್ರಂ ಸಂಸ್ಕೃತ ಮಾಲೆಯಲ್ಲಿ ಈ ಪುಸ್ತಕವು ಪ್ರಕಟವಾಗಿದೆ.

ಮಾಸಪತ್ರಿಕೆಯಲ್ಲಿ ಪ್ರಕಟಗೊಂಡಿದ್ದವು. ಮೊದಲ ಭಾಗದಲ್ಲಿ ಸ್ಥೂಲವಾಗಿ ಕಾಣಿಸಿಕೊಂಡಿರುವ ಕಾಲಗತಿಯ ಪ್ರಕಾರಗಳು, ಮನುಷ್ಯನು ವಿಶ್ವನಿಯಮಕ್ಕೆ ಅಧೀನ. ಭಗವತ್‌ಗೀತೆ ಗ್ರಂಥದ ಹೆಸರಿನಿಂದ ಹೊಳೆಯುವ ಗ್ರಂಥಸ್ಥ ಆಶಯ, ಭಾರತೀಯ ಸಂಸ್ಕೃತಿಯೊಳಗಿನ ಭಾನಾಮತಿಯ ಮೂಲ ಮಾದರಿಗಳು, ಜೀವನ-ಸಾಹಿತ್ಯ-ಕಲೆ ವಿಮರ್ಶಾತತ್ವದ ಮೂಲ ಸೂತ್ರಗಳು. ಜೀವನ-ಸಾಹಿತ್ಯ ವಿಚಾರಗಳಿಗೆ ಸನಾತನ ಆಕೃತಿಗಳುಂಟು. ಮಾನವ-ಅಮಾನವನಾಗುತ್ತಿರುವ ವೈಚಾರಿಕ ಆಕೃತಿ, ಗೀತೆ ಮೆಚ್ಚಿರುವ ಕಾಲಶಕ್ತಿಯ ಆಕೃತಿ, ಅಂತರಿಕ್ಷಸ್ಥ ದೇವರ ಮೂಲಮಾದರಿ ಹಾಗೂ ಮನುಜರನ್ನು ನರರನ್ನಾಗಿಸುತ್ತಿರುವ ಮುಕ್ತಿಕಲ್ಪದ ಮೂಲ ಮಾದರಿ-ಈ ವಿಚಾರಗಳು ವಿಸ್ತೃತ ನೆಲೆಯಲ್ಲೇ ಈ ಎರಡನೆಯ ಭಾಗದಲ್ಲಿ ಚರ್ಚಿಸಲು ತೊಡಗುತ್ತಾರೆ. ಹೀಗಾಗಿ, ಶಂ.ಬಾ ಯಾವುದನ್ನು ಹಿಂದೆ ಆಲೋಚನೆಯ 'ಪರಿಪ್ರೇಕ್ಷ್ಯ'ದಲ್ಲಿ ಇಟ್ಟು ನೋಡಿದ್ದರೋ ಅದೇ ಅಂಶಗಳನ್ನು ಮತ್ತೆ ಮತ್ತೆ ಹೊಸಸಂಗತಿಗಳೊಡನೆ, ಹೊಸ ಸೂತ್ರಗಳೊಂದಿಗೆ ಆಲೋಚಿಸಲು ತೊಡಗಿರುವ ಅಂಶಗಳು ಗಮನಾರ್ಹವಾಗಿವೆ.

ಇದೇ ಗ್ರಂಥದ ಉಪಸಂಹಾರದ ಮೂರನೆಯ ಭಾಗದಲ್ಲಿ ಇರುವ 'ಹಿನ್ನುಡಿ' ಶಂ.ಬಾ ಅವರ ಸಾಂಸ್ಕೃತಿಕ ಸತ್ಯಾನ್ವೇಷಣೆಯ ಸತ್ಯಕಥನವಾಗಿದೆ. ಭಾಗಶಃ ಇದು ಕನ್ನಡ ಸಂಶೋಧಕರಲ್ಲಿ ಈ ಬಗೆಯ ಬರೆಹಗಳನ್ನು ಹಿಂದೆ ಯಾರೂ ಬರೆದಿರಲಿಲ್ಲ. ಇದು ಒಂದು ವಿಶಿಷ್ಟ ಸಂಶೋಧನ ಕಥನ. ಈ ಕಥನಕ್ಕೆ ಹಲವು ದಾರಿಗಳಿವೆ, ಹಲವು ಕನ್ನಡಿಗಳಿವೆ. ಈ ಕಥನವು ಸ್ವಾತ್ಮ ಪ್ರತ್ಯಯದಿಂದ ವಿಶ್ವಾತ್ಮಪ್ರತ್ಯಯದ ವರೆಗೂ ಸಾಗುತ್ತದೆ. ವೇದದ ಆಶಯಗ್ರಹಣದ ಪ್ರಾಥಮಿಕ ಪ್ರಯತ್ನದಿಂದ ಹಿಡಿದು ಅವರು ಸಾಗಿದ ಹಾದಿಯನ್ನು ಹದಿನಾರು ಸಣ್ಣಸಣ್ಣ ಟಿಪ್ಪಣಿಗಳಲ್ಲಿ ಮಂಡಿಸಿದ್ದಾರೆ. ಅವರು ನಡೆಸಿದ ಸಂಶೋಧನಾ ಯಾತ್ರೆಯ ಸುಂದರವಾದ ಭಾಗ ಇದಾಗಿದೆ. ಸಂಶೋಧನ ಉಪಕರಣಗಳು ಹಾಗೂ ಸಂಸ್ಕೃತಿಯ ಸಮಸ್ಯೆಗಳು ಒಬ್ಬ ಸಂಶೋಧಕನನ್ನು ಹೇಗೆ ರೂಪಿಸುತ್ತವೆಂಬುದಕ್ಕೆ ಇಲ್ಲಿಯ ಭಾಗಗಳನ್ನು ಓದಿಯೇ ಸವಿಯಬೇಕು. ಸಂಶೋಧನೆ ಹೊರಗಿನದ್ದಲ್ಲ, ಸಂಶೋಧನೆಯು ಒಂದರ್ಥದಲ್ಲಿ ಅವನ ಜೀವನದ ಭಾಗವೇ ಆಗಿರುತ್ತದೆ. ಅವನನ್ನು ಕಾಡುವ ಆತಂಕ ಮತ್ತು ಸವಾಲುಗಳೇ ಸಂಶೋಧನೆಯ 'ನಿಲುಮೆ'ಗಳಾಗಬಲ್ಲುವು. ಅವು ಸಂರಕ್ಷಕನನ್ನು ತಕ್ಕಷ್ಟು ರೀತಿಯಲ್ಲಿ ಬೆಳೆಸಬಲ್ಲವು. ಅವರ ಬದುಕಿನ ಸ್ವಚ್ಛ ಅಂತಸ್ಸತ್ವವನ್ನು ಈ ಭಾಗ ತಿಳಿಸುತ್ತದೆ. ಒಟ್ಟು ಇಲ್ಲಿ ಶಂ.ಬಾ ಅವರು ಕೇಳುವ ಪ್ರಶ್ನೆ ಅರ್ಥಪೂರ್ಣ. ಜೀವನದ ಆರಾಧನೆ ಬೇಕೋ-ಜೀವಿತದ ಆರಾಧನೆ ಬೇಕೋ; ವಿಶ್ವನಿಯಮದ ಋತಸತ್ಯದ ಭೂಮಿಕೆ ಬೇಕೊ-ನಿಯತಿಕೃತ ನಿಯಮರಹಿತದ ಭೂಮಿಕೆ ಬೇಕೋ ಪ್ರಾಣ-ದೇಹತತ್ವದ ಉಪಾಸನೆ ಬೇಕೋ-ಪ್ರಾಣಲಿಂಗೋಪಾಸನೆಯ ಆಚೆಗಿನ ಆದರ್ಶಬೇಕೋ; ಹಗಲಿನ ಸೌರತತ್ವದ ಉಪಾಸನೆ ಬೇಕೋ-ಕತ್ತಲಿನ ಚಾಂದ್ರ ತತ್ವಜ್ಞಾನ ಬೇಕೋ; ಜಾತಿ, ಮತ, ಪಂಥಗಳಿಂದ ದೂರವಾದ ಸಮಾಜ ಸಮಷ್ಟಿ ತತ್ವದ ನೆಲೆ ಬೇಕೋ-ವೈಯಕ್ತಿಕ ನೆಲೆಯ ಜಾತಿ-ಮತ-ಪಂಥಗಳ ವ್ಯಷ್ಟಿತತ್ವ ಬೇಕೋ- ಈ ಅಂಶಗಳನ್ನು ಪ್ರಧಾನವಾಗಿ ಶಂ.ಬಾ ನಮ್ಮ ಎದುರಿಟ್ಟು ಕೇಳುತ್ತಾರೆ. ಸಾರವಾಗಿ ಹೇಳುವುದು "ಅವಿಮರ್ಶಿತವಾದ ಜೀವಿತಕ್ಕಿಂತ, ವಿಮರ್ಶಿತವಾದ ಜೀವನ ಮುಖ್ಯ" ಎಂಬ ಈ ಮಹೋನ್ನತವಾದ ಆದರ್ಶದ ಅಂಶವನ್ನು ಬಗೆಬಗೆಯಾಗಿ ಈ ಗ್ರಂಥದಲ್ಲಿ ನಿರೂಪಿಸಿದ್ದಾರೆ. ಹಿನ್ನುಡಿಯ ಮುಖ್ಯ ಭಾಗವೇ ಇದಾಗಿದೆ!

ಬಿತ್ತಿದ್ದನ್ನು ಬೆಳಕೊ-ಪುರಾತನರು ಕಂಡ ಮಾನವನ ಬಾಳುವೆಯ ಇತಿ-ಮಿತಿಗಳನ್ನು ತುಂಬಾ ವಿಸ್ತಾರವಾಗಿಯೇ ನಿರೂಪಿಸುತ್ತದೆ. ಕಂನಾಡದ ಮಟ್ಟಿಗೆ ಮಾತ್ರವಲ್ಲ; ಜಾಗತಿಕ ಮಟ್ಟದ ನೆಲೆಗೂ ತಾತ್ವಿಕ ನೆಲೆಯನ್ನಾಗಿ ಇದು ವಿಸ್ತರಿಸುತ್ತದೆ. ಹೀಗಾಗಿ ಶಂ.ಬಾ. ಅವರು ಇಲ್ಲಿ ಮಾನವನ ಜನಾಂಗದ ಸ್ಮೃತಿಯನ್ನೂ, ಅವರ ನೆಲೆ-ಬೆಲೆಗಳನ್ನೂ ಹಿಡಿದಿಟ್ಟ ಚಿಂತನಶೀಲ ಸಂಸ್ಕೃತಿ ಶೋಧಕರಾಗಿ ಕಾಣಿಸುತ್ತಾರೆ. ಅವರು ಈ ಯುಗದ ದೊಡ್ಡ ದನಿ. ಸಾಂಸ್ಕೃತಿಕ ಪರಂಪರೆಯ ಸಮುದ್ರದಲ್ಲಿ ಮುಳುಗಿ ಅಲ್ಲಿಂದ ಚರಿತ್ರೆಯ ನೈಜ ಸಂಗತಿಗಳನ್ನೂ ಕಾಲ-ದೇಶ-ಸ್ಥಳಗಳ ಪರಿಧಿಯಲ್ಲಿರುವ ಅನನ್ಯತೆಗಳನ್ನೂ ತಮ್ಮ ಕೃತಿಗಳಿಂದ ಬಿಂಬಿಸುತ್ತ,

ಅದನ್ನು ಬಯಲಿಗೆ ತರುತ್ತ ಬಂದ ದೊಡ್ಡ ಸಾಹಸಿ. ಅಂಥ ಸಾಂಸ್ಕೃತಿಕ ಸಾಹಸ ಶಂ.ಬಾ ಅವರಿಗಿತ್ತು. ಸಾಂಸ್ಕೃತಿಕ ಸಾತತ್ಯತೆಯ ಒಳಸುಳಿಗಳನ್ನು ಬರಮಾಡಿಕೊಳ್ಳುವ ಸಾಮರ್ಥ್ಯದ ಜತೆಗೆ; ಕಾಲಕಾಲದ ವಿಶಿಷ್ಟ ವಕ್ರತೆಗಳನ್ನು ಬಗೆದು ನೋಡುವ, ಶೋಧಿಸುವ, ವೈಚಾರಿಕವಾಗಿ ಹುಡುಕುವ ಸಾಮರ್ಥ್ಯದಿಂದಾಗಿ ಜಾಗತಿಕ ಸಂಸ್ಕೃತಿಯನ್ನು ತುಲನಾತ್ಮಕ ನೆಲೆಯಲ್ಲಿ ಅವರು ಏಕಗ್ರಾಹಿಯಾಗಿ ಹಿಡಿದು ಇಡಲು ಸಾಧ್ಯವಾಯಿತು. ಸಾಂಸ್ಕೃತಿಕ ಪ್ರಜ್ಞೆಯನ್ನು ಒಳಗೊಳ್ಳುವ ದಿಟ್ಟಕೃತಿಗಳನ್ನೂ ಬರೆಯಲು ಸಾಧ್ಯವಾದದ್ದೇ ಅವರಿಗಿದ್ದ ಆತ್ಮಸಂಸ್ಕೃತಿಯ ಗಾಢವಾದ ತಿಳಿವಳಿಕೆಯ ಕಾರಣದಿಂದ-ಎಂದು ಅನಿವಾರ್ಯವಾಗಿ ನಾವೀಗ ಹೇಳಬೇಕಾಗಿದೆ. ಶಂ.ಬಾ ಸಂಸ್ಕೃತಿಯನ್ನು 'ಗತಿ'ಯ ನೆಲೆಯಲ್ಲಿ ಗ್ರಹಿಸುತ್ತಾರೆ; ಉಳಿದವರು 'ಸ್ಥಿತಿ'ಯ ನೆಲೆಯಲ್ಲಿ ಮಾತ್ರ ತಿಳಿಯುತ್ತಾರೆ. ಶಂ.ಬಾ ಅಂಥವರಲ್ಲಿ ಸಂಸ್ಕೃತಿ ಕುರಿತಾದ ಚಿಂತನ ಹಾಸು-ಹೊಕ್ಕುಗಳಾಗಿದ್ದರೆ; ಉಳಿದ ಚಿಂತಕರಲ್ಲಿ ಕೇವಲ ಹಾಸೋ ಅಥವಾ ಹೊಕ್ಕೋ ಆಗಿರುತ್ತದೆ. ಸ್ಥಿತಿಗೊಂಡ ಚರಿತ್ರೆಯ ಕಡೆ ಉಳಿದವರು ಕಾಲು ಹಾಕಿದರೆ; ಶಂ.ಬಾ ಚಲನಗೊಂಡ ಚರಿತ್ರೆಯ ನೆಲೆ ಮತ್ತು ಹಿನ್ನೆಲೆಗಳನ್ನು ಕುರಿತು ಚಿಂತಿಸಲು ತೊಡಗುತ್ತಾರೆ. ಈ ಸಂಪುಟದಲ್ಲಿ ಸಂಕಲನಗೊಂಡಿರುವ ಅವರ ಎಲ್ಲ ಕೃತಿಗಳಲ್ಲು ಮುಖ್ಯವಾಗಿ ಪ್ರವಾಹ ಪತಿತರ ಕರ್ಮ ಹಿಂದೂ ಎಂಬ ಧರ್ಮ, ಬುಧನ ಜಾತಕ, ಮಾನವ ಧರ್ಮದ ಆಕೃತಿ ಹಾಗೂ ಬಿತ್ತಿದ್ದನ್ನು ಬೆಳಕೊ ಗ್ರಂಥಗಳ ಉದ್ದಕ್ಕೂ ಇದು ಮುಖ್ಯವಾಗಿ ನಮಗೆ ಎದ್ದು ಕಾಣುವ ಸಂಗತಿಯಾಗಿದೆ. ಬಿತ್ತಿದ್ದನ್ನು ಬೆಳಕೊ ಓದುವ ಪ್ರತಿಯೊಬ್ಬರೂ ಈ ದಿಕ್ಕಿನಲ್ಲಿ ಹೆಜ್ಜೆಯಿರಿಸಿದ ಮುಖ್ಯ ಗ್ರಂಥವಾದ ಋಗ್ವೇದಸಾರ: ನಾಗಪ್ರತಿಮಾ ವಿಚಾರ, ಪ್ರವಾಹ ಪತಿತರ ಕರ್ಮ 'ಹಿಂದೂ' ಎಂಬ ಧರ್ಮ, ಮಾನವಧರ್ಮದ ಆಕೃತಿ, ಬುಧನ ಜಾತಕಗಳನ್ನು ಅವಶ್ಯವಾಗಿ ಓದಬೇಕು. ಶಂ.ಬಾ ಅವರು ನಡೆಸಿದ, ನಿರಂತರ ಚಿಂತನೆಯನ್ನು ಏಕಮುಖೀ ಗ್ರಾಹ್ಯವಾಗಿ ತಿಳಿದುಕೊಳ್ಳಲು ಇಡಿಯಾಗಿ ಓದಿದಾಗಲೇ ವಿಚಾರಕ್ರಮಗಳು ಸೋಪಾನ ಸೋಪಾನವಾಗಿ ನಮ್ಮ ಎದುರು ಬಂದು ನಿಲ್ಲುತ್ತವೆ. ಓದುಗರ 'ಪರಿಪ್ರೇಕ್ಷ್ಯ'ದಲ್ಲಿ ಶಂ.ಬಾ ಅವರ ತತ್ತ್ವಚಿಂತನೆ ಗಾಢವಾಗಿ ಬೇರುಬಿಡಲು ಸಾಧ್ಯವಾಗುತ್ತದೆ.

ಶಂ.ಬಾ ಅವರು ಅರ್ಥಪೂರ್ಣವಾಗಿ ನಮಗೆ ಸ್ವೀಕಾರವಾಗುವುದು ಇಂಥ ನೆಲೆಗಳಲ್ಲಿಯೇ. ನಿನ್ನೆಯ ಬದುಕಿನೊಡನೆ ಇಂದಿನ ವಿದ್ಯಮಾನಗಳನ್ನು ಪರಿಶೀಲಿಸುವುದು, ಇಂದಿನ ವಿದ್ಯಮಾನಗಳಿಂದ ಮುಂದಿನ ಭವಿಷ್ಯದ ಬೆಳಕನ್ನು ತುಂಬಿಕೊಳ್ಳುವ ಬಗೆಗಳ ಕಡೆ ಶಂ.ಬಾ ನಮ್ಮ ಕೈಹಿಡಿದು ನಡೆಸುವುದು ಅವರ ಚಿಂತನೆಯ ರೀತಿಯಾಗಿದೆ. ಒಂದು ಕಡೆ ಸಾಂಸ್ಕೃತಿಕ ಅಧ್ಯಯನವನ್ನು ಮತ್ತೊಂದು ಕಡೆ ಮಾನವಚರಿತ್ರೆಯ ತಾತ್ತ್ವಿಕ ನೆಲೆ-ಬೆಲೆಗಳ ಸ್ವರೂಪಾಧ್ಯಯನವನ್ನು ಒಂದೇ ತಾತಳಿಯಲ್ಲಿ ಹಿಡಿದಿಡುವ ಸಾಹಸವನ್ನು ಶಂ.ಬಾ ಯಶಸ್ವಿಯಾಗಿ ನೆರವೇರಿಸಿದ್ದಾರೆ. ಅವರೆ ಆಗಾಗ್ಗೆ ಹೇಳುತ್ತಿದ್ದ ಮಾತು ಹೀಗಿದೆ: ಇದು ಪ್ರತಿಯೊಬ್ಬ ಮನುಷ್ಯನಿಗೂ ಅಗತ್ಯವಾದ ಮಾತಾಗಿದೆ.

"ಯತ್ ರೋಚತೇ ತತ್ ಗ್ರಾಹ್ಯಮ್".

ಮಲ್ಲೇಪುರಂ ಜಿ. ವೆಂಕಟೇಶ

ಪರಿವಿಡಿ

ಪ್ರವಾಹ ಪತಿತರ ಕರ್ಮ
'ಹಿಂದೂ' ಎಂಬ ಧರ್ಮ

ಅರಿಕೆ

ಮಾನವ ಜೀವನ : ಸಂಸ್ಕೃತಿಯನ್ನು ಶಾಸ್ತ್ರೀಯ ಭೂಮಿಕೆಯಿಂದ ಗ್ರಹಿಸಿಕೊಳ್ಳಲು ಮಾಡಿರುವ ಒಂದು ಪ್ರಯತ್ನವು ಇಲ್ಲಿದೆ. ಪ್ರಾಜ್ಞರ ಪರಾಮರ್ಶೆಗಾಗಿ, ಇದನ್ನು ನಿವೇದಿಸಲು, ಅವಕಾಶವನ್ನು ಒದಗಿಸಿರುವ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಜಾಗತಿಕ ಪುರಾತನ ಸಂಸ್ಕೃತಿಗಳಲ್ಲಿ ನಾಗ : ಸರ್ಪ ಇದು ಭೌತಸೃಷ್ಟಿಗೆ ಕಾರಣರೂಪ ಕಾಲಶಕ್ತಿ : ಸೃಜನಕ್ರಿಯಾ ಪ್ರೇರಣ ಶಕ್ತಿ ಎಂಬ ಭೂಮಿಕೆಯ ಮೇಲೆ ಸುಮಾರಾಗಿ ಎಲ್ಲ ಕಡೆಗೆ ಕಾಣಿಸಿಕೊಳ್ಳುತ್ತದೆ. ಈ ನಾಗ : ಸರ್ಪವು, ಜೀವನ : ಸಂಸ್ಕೃತಿಯೊಳಗಿನ ಪ್ರಕಾಶರೂಪ ಮೌಲ್ಯಗಳ ಪ್ರತೀಕವಾದ ಅನರ್ಘ್ಯ ವೈಚಾರಿಕ ರತ್ನಗಳನ್ನು ನುಂಗಿಬಿಡುತ್ತದೆ. ಆಗ ನಾಗಹಂತಕ ದೈವತ ಪ್ರತಿಮಾಪೂಜೆ ಅನಿವಾರ್ಯವಾಗುತ್ತದೆ. ಋಗ್ವೇದದ ಅಹಿ: ವೃತ್ರಹಂತಕನೆಂಬ ಇಂದ್ರನ (ಪರ್ಯಾಯೀ ಸೂರ್ಯನ) ಪ್ರತಿಮೆಯನ್ನು ಹೋಲುವ ದೈವತ ಪ್ರತಿಮೆಗಳು ಸುಮೇರ, ಗ್ರೀಕ್ ಮುಂತಾದ ಸಂಸ್ಕೃತಿಗಳಲ್ಲೂ ಉಂಟು. ಇಂಥ ಸಾರ್ವಕಾಲಿಕ ಸಾಂಕೇತಿಕ ಅರ್ಥದ ದೈವತ, ಯಾವುದೇ ಭಾಷಿಕರ ಸೊತ್ತು, ಹಕ್ಕು ಎಂಬಲ್ಲಿ ಆ ಭಾಷಿಕರ ಪ್ರಗತಿಯ ಆಶೆಯಿಲ್ಲ.

ಭಾಷೆಯು ದಿಕ್ಕಾಲ ಪರಿಸರಕ್ಕೆ ಸೀಮಿತ. ನೆಲಕ್ಕೆ ಹತ್ತಿ ಇದ್ದು ನೆಲದೊಳಗಿನ ರಸದಿಂದ ಪೋಷಣೆ ಪಡೆಯುತ್ತದೆ. ಆದರೆ, ಇದು ಗಿಡದಂತೆ ಪ್ರಕಾಶಕ್ಕಾಗಿ ಆ-ಕಾಶದ ಕಡೆಗೇ ಮೋರೆ ಮಾಡಿ ಬೆಳೆಯಬೇಕಾಗುತ್ತದೆ. ಬೇರುಗಳು ಕತ್ತಲಲ್ಲೇ ಇರಬೇಕಾದ ಅನಿವಾರ್ಯತೆಯನ್ನು ಅಮಾನ್ಯ ಮಾಡುವ ಮೋಕ್ಷಕಾಮಿಗಳು ಆಚರಿಸುತ್ತಿರುವ (ಜೀವನ) ಧರ್ಮವು ತಿರುವು-ಮುರುವಾಗಿದೆ! ಇವರು 'ಊರ್ಧ್ವಮೂಲ' ವೃಕ್ಷ-ಪೂಜಕರು. ಇವರಿಗೆ ಮಾಧ್ಯಮವೇ ದೇವರು. ಆದಕಾರಣ, ಇವರಿಗೆ ಪ್ರ-ಕಾಶತತ್ತ್ವ ಬೇಡ: ಈ ಕಾರಣದಿಂದಾಗಿ, 'ಶಬ್ದನಿತ್ಯ' ಎಂಬ ಶ್ರದ್ಧೆ ವಹಿಸಲಾಗಿದೆ. 'ಮಾಧ್ಯಮ' 'ಸಾಧನ' ಪೂಜಕರ, 'ಆಶಯ' ಮೌಲ್ಯಗಳು, ಆ ಮಾಧ್ಯಮ ಸಾಧನಕ್ಕೇ ಪರಿಮಿತವಾಗಲೇಬೇಕು.

ಭಾಷೆಯ-ಶಬ್ದ ಪ್ರತಿಮೆಗಳ ಬಾಹ್ಯ ಆಕೃತಿಯು (form) ಆಚಾರಾಂಗ ಸೂಚಕವಿರಬಲ್ಲದು. 'ಕೃತಿ' ಇಲ್ಲದೆ 'ಆ-ಕೃತಿ' ಅಶಕ್ಯ. 'ಕೃತಿ' : ಆಚಾರ ; ಇದು ನೆಲಕ್ಕೆ ತಾಗಿ ನಡೆಯುವ ಸ್ವಭಾವದ್ದು. ಭಾಷೆಯನ್ನು ರೂಪಿಸಿದವರ ಆ-ಕೃತಿಯ ಪ್ರತಿಬಿಂಬವು ಆ ಭಾಷೆಯಲ್ಲಿಯೇ ಕಾಣುವ ಶಕ್ಯತೆಯನ್ನು ಅಮಾನ್ಯ ಮಾಡಲಿಕ್ಕೆ ಆಗುವುದಿಲ್ಲ. ಕಾಲಿದಾಸನ ಕೃತಿ, ಶೇಕ್ಸಪಿಯರನ ಕೃತಿ ಇಂಥ ಪದಪ್ರಯೋಗಗಳು ತೀರ ನಿಷ್ಕಾರಣ ಅರ್ಥವಿಹೀನ ಎನ್ನಲು ಬಾರದು. ನೆಳಲು ಬೆನ್ನಟ್ಟಿರುವ ಈ ಮಾನವರ (ಸಾಹಿತ್ಯ) ಕೃತಿಯಲ್ಲಿ ಅವರ (ಛಾಯೆಯ) ಅಂಶವೂ ಇರಲಾರದು ಎಂದು ಬಗೆವಲ್ಲಿ ಅವಾಸ್ತವತೆಗೆ ಇಂಬು ದೊರೆತಿದೆ. ಕವಿ, ಸಾಹಿತಿ, ಕಲಾವಂತರನ್ನು ಭಗವಂತನಂತೆ ಚಾಂದ್ರ ಭೂಮಿಕೆಯಿಂದ ಅಮೂರ್ತ ತಾತ್ತ್ವಿಕ ಸ್ವರ್-ಪಾತಳಿಗೆ ಏರಿಸುವ ಗತ್ತುಗಾರಿಕೆಯು ಇಲ್ಲಿ ಬೆಳಕಿನಲ್ಲಿ ಬರುತ್ತಿದೆ!

ಪ್ರಜ್ಞೆ ಬಹುಮುಖ-ವಿಶಾಲವಿದ್ದರೂ ಇದು ಅಭಿವ್ಯಕ್ತವಾಗುವ ಭಾಷಿಕ ಮಾಧ್ಯಮದ ಇತಿಮಿತಿಗಳನ್ನು ಸ್ವೀಕರಿಸಬೇಕಾದುದು ಅನಿವಾರ್ಯ. ಆದರೆ, ಅಭಿವ್ಯಕ್ತಿಯ - ಭಾಷಿಕ ಮಾಧ್ಯಮದ ಬಾಹ್ಯ ಆಕೃತಿಯು ಇತಿಮಿತಿಯುಳ್ಳದ್ದು; ಪರಿಮಿತ ಎಂಬ ಕಾರಣದಿಂದ ಈ ಬಾಹ್ಯ ಆಕೃತಿಯ ಒಳಗಿನ ಅರ್ಥ=ಆಶಯರೂಪ ಪ್ರಜ್ಞೆಯೂ ಬಾಹ್ಯ ಆಕೃತಿಯಷ್ಟೇ ಪರಿಮಿತಿಯದು ಎಂದು ಬಗೆಯುವಲ್ಲಿ ಪ್ರಜ್ಞಾ: ಪ್ರಾತಿಭದ : ಪ್ರಕಾಶತತ್ವದ ಮೂಲ ವೈಶಾಲ್ಯವನ್ನೇ ಅಲ್ಲಗಳೆದಂತೆ ಆಗುತ್ತದೆ. ಅಭಿವ್ಯಕ್ತಿಯು ಒಳಗೊಳ್ಳುವ ಪ್ರಜ್ಞೆ (awareness) ಇದು, ವಿಶ್ವಸ್ಥ ಇದೇ ಪ್ರಜ್ಞೆಯ ಅಂಶ, ಅಂಗವನ್ನು ಇಡೀ ಮೈಯಿಂದ ಬೇರ್ಪಡಿಸುವ ಅನ್ಯಾಯವಾಗುತ್ತದೆ ಇಲ್ಲಿ. ಭೌತ (ಭೂ-ಭುವಃರೂಪ) ಮೂರ್ತ (Phenomena) ಹಾಗೂ ಅಮೂರ್ತ (Nature) ಇವೆರಡರ ಏಕಾತ್ಮಕ ಸಮವಾಯದ ಪಾತಳಿಯ ಮೇಲಿನ (ಘಟನೆ, ವಸ್ತು, ವಿಷಯ, ಪ್ರಸಂಗ ಇಂಥ) ಆಗುಹೋಗುಗಳ ಭಾಷಿಕ-ಅಭಿವ್ಯಕ್ತಿಯ ಹೊರವಲಯದ ಆಕೃತಿ ಮತ್ತು ಇದರೊಳಗಿನ ಆಶಯ : ಅರ್ಥ ಎರಡೂ ಸಮಾನ ಪರಿಮಿತಿಯವು ಇರಬಲ್ಲವು. ಇದು ಸಸ್ಯ-ವೃಕ್ಷದ ವರೆಗೆ-ಪ್ರಾಣಚೇತಸ ಪಾತಳಿಯವರೆಗೆ ಮಾತ್ರ ಸರಿ.

ವೃಕ್ಷದವರೆಗಿನ ಹಂತದಲ್ಲಿ ಬಾಹ್ಯ ಆಕೃತಿಯು, ಒಳಗಿನ ಆಶಯಕ್ಕೂ, ಒಳಗಿನ ಆಶಯವು ಬಾಹ್ಯ ಆಕೃತಿಗೂ ಜನ್ಮ ಕೊಡಬಲ್ಲದು. ಉದಾಹರಣೆ ; 'ನೀರು' ಇದರ ಬಾಹ್ಯವಲಯ ಮೂರ್ತ : ಆದರೆ ಈ ಭೌತ ನೀರಿನ ಆಶಯ H_2O ಅಮೂರ್ತ; ಇವೆರಡೂ ಸಮಾನ ಪರಿಮಿತಿಯವೇ ಇವೆ. ಯಾವುದೇ ವೃಕ್ಷದ ಬೀಜ, ಬಾಹ್ಯ ಆಕೃತಿ ಇದರೊಳಗಿನ ಪ್ರಾಣ ಚೇತಸಯುಕ್ತ ಅಮೂರ್ತ ವೃಕ್ಷ. ಇಲ್ಲಿ ಬೀಜವು ವೃಕ್ಷಕ್ಕೂ ವೃಕ್ಷವು ಬೀಜಕ್ಕೂ ಜನ್ಮ ಕೊಡುತ್ತದೆ. ಆದರೆ ಮಾನವ ಪಾತಳಿಯ ಮೇಲಣ ಘಟನೆಗಳಲ್ಲಿ ಆತನ ಪ್ರಜ್ಞೆಯ 'ಸ್ವ' ಉಪಜ್ಞೆಯ ಕ್ರೈವಾಡವಿರುತ್ತದೆ. ಡಾ।। ಜೂಲಿಯನ್ ಹಕ್ಸ್‌ಲ್ಲೆ, ಜೀವಶಾಸ್ತ್ರಜ್ಞ, ಇದನ್ನು ಗುರುತಿಸಿದ್ದಾನೆ :

> One of man's major properties is that he is always evaluating
> and creating values.

ಈ ಸ್ವೋಪಜ್ಞ ನಿರ್ಮಾಣ ಮಾಡುವ ಮೌಲ್ಯಗಳ ದೃಷ್ಟಿಕೋನವು ಇವನ ಕೃತಿಗಳಲ್ಲಿ ಪ್ರತಿಬಿಂಬಿತವಿರುತ್ತದೆ. ಇದು ವ್ಯಂಗ್ಯಧ್ವನಿಯಿಂದ ಕಿವಿದೆರೆಗೆ ಬರುತ್ತಿರುತ್ತದೆ. ಆ ಮೌಲ್ಯಗಳ ನಾತ ಅಥವಾ ನರುಗಂಪು ಸೋಂಕುತ್ತಿರುತ್ತದೆ. ಇಂಥ ಆಶಯ ಘನ ಸಾಹಿತ್ಯ ಕಲಾಕೃತಿಗಳಲ್ಲಿ, ಹೀಗೆ ಆ ಸಾಹಿತ್ಯ ಕಲಾಕೃತಿಯ ಬಾಹ್ಯ ಆಕೃತಿಯನ್ನು ಮೀರಿ, ಇದರ ಹೊರಗೂ ಆಶಯವು ಹೊರಸೂಸುತ್ತಿರುವಾಗ, ಇಂಥ ಆಶಯವು ಘನಕೃತಿಯನ್ನು ಸೃಷ್ಟಿಸಿದ್ದು ಆತನ 'ಸ್ವ' ಉಪಜ್ಞೆಯೇ ಇರುವಾಗ, ಸಾಹಿತ್ಯಕೃತಿಗಳ ವಿಮರ್ಶೆಯಲ್ಲಿ ಆ ಲೇಖಕನ ಆಶಯದ ನಾತ ಅಥವಾ ನರುಗಂಪಿನ ಮೌಲ್ಯಮಾಪನ ಆಗಲೇಬೇಕು. ಆದರೆ, ಆಶಯದ ಬೆಲೆ ಕಟ್ಟುವ ವಿಮರ್ಶಕನ ಹಕ್ಕನ್ನು ಕಸಿದುಕೊಂಡಿದ್ದಾಗಿದೆ. ಇದರಿಂದ ಸಾಹಿತ್ಯ ಕಲಾಕ್ಷೇತ್ರದಲ್ಲೂ ದಿವ್ಯಾಧ್ಯಾತ್ಮವಾದೀ ಸಂಪ್ರದಾಯಗಳ 'ಕೃತಿ'ಗಳಲ್ಲಿ - ಮಠಗಳಲ್ಲಿ ಆಗಿರುವಂತೆ ಸಾಹಿತ್ಯ ಕಲಾಕ್ಷೇತ್ರದಲ್ಲಿಯೂ ದಿನದಿನಕ್ಕೂ ಕೊಳೆ ಹೆಚ್ಚುತ್ತ ಬರಲು ಅನುಕೂಲವನ್ನು ಕಲ್ಪಿಸಿಕೊಟ್ಟಂತೆ ಆಗಿದೆ.

ಧರ್ಮ ಹಾಗೂ ಸಂಸ್ಕೃತಿಯ ಅರ್ಥಗ್ರಹಣದಲ್ಲಿ 'ಸ್ವರ್' ಪಾತಳಿಯ ಅಥವಾ ವೈಶ್ವಕ ಸ್ವರೂಪದ ಅಮೂರ್ತ ವಿಚಾರಗಳಲ್ಲಿ (Universals), ಸಾಧು (legitimate) ಯಾವುವು, ಅಸಾಧು (illegitimate) ಯಾವುವು ಎಂಬುದನ್ನು ನಿರ್ದಿಷ್ಟಪಡಿಸುವ ಒರೆಗಲ್ಲು ಒಂದು ಅವಶ್ಯವಿದೆ. ಸಾಧುವಿಚಾರಗಳು : ಅವು ಸಾಮಾನ್ಯೀಕರಣದ ಪಾತಳಿಯ ಮೇಲಿಂದ, ವಿವಿಧ ವಿಶಿಷ್ಟ : ಮೂರ್ತಘಟನೆ ಪ್ರಸಂಗಾದಿಗಳನ್ನು ಅರ್ಥದ ಕಕ್ಷೆಯಲ್ಲಿ ತರುತ್ತವೆ. ಮೊದಲು ಗಮನಕ್ಕೆ ಬರದೆ ಕತ್ತಲೆಯಲ್ಲೇ ಉಳಿಯುತ್ತಿದ್ದ ಅರ್ಥ : ವಿಚಾರವನ್ನು ಬೆಳಕಿನಲ್ಲಿ ತರುತ್ತವೆ. ಉದಾ: ಮಹಾತ್ಮಾಜೀ ಆಗಾಗ ಬೋಧಿಸುತ್ತಿದ್ದ ವಾಕ್ಯ ನೋಡಿ : 'Secrecy is sin'. ಇದು ಒಂದು ವೈಶ್ವಕ ಪಾತಳಿಯ ಸಾರ್ವಕಾಲೀನ ಸನಾತನ ನಿಯಮ. ಈ ನಿಯಮವು ಅನೇಕ ವಿವಿಧ ಕ್ಷೇತ್ರದೊಳಗಿನ ವಿಶಿಷ್ಟ ಘಟನೆಗಳ ಸ್ವರೂಪವನ್ನು ನಿರ್ದಾಕ್ಷಿಣ್ಯವಾಗಿ ಬೆಳಕಿನಲ್ಲಿ ತರುತ್ತದೆ. ಇಂಥ 'ಋತಸ್ವರೂಪೀ' ನಿಯಮದ ಆಧಾರದ ಮೇಲಣ ಸತ್ಯವು ಬಾಳಿನಲ್ಲಿ ಕೊಳೆ ಕಡಿಮೆ ಮಾಡಲು ಉಪಕಾರಕವಿದೆ. ರಾಜಕೀಯ ಕ್ಷೇತ್ರದೊಳಗಿನ ಗುಪ್ತ

ಒಪ್ಪಂದಗಳು ಮಾನವ ಸಂಸ್ಕೃತಿಯ ವಿನಾಶದ ಯುದ್ಧಗಳಿಗೆ ಆಮಂತ್ರಣ ಸ್ವರೂಪದುವು ಆಗಿವೆ. 'ರಾಜವಿದ್ಯಾ ರಾಜಗುಹ್ಯ'ವನ್ನು ಧರ್ಮದ ಹೆಸರಿನಲ್ಲಿ ಉಳಿಸಿಕೊಂಡು ಬಂದಿರುವವನು 'ಭಗವಾನ್ ಕೃಷ್ಣಮೂರ್ತಿ' 'ಶ್ರೀಸಾಮಾನ್ಯ ಭಗವತ್ ಗೀತೆಯ ಭಗವಂತನ ಕೃತಿಯನ್ನು 'ಕೃಷ್ಣಕಾರಸ್ಥಾನ' ಎಂದು ತೀರ್ಪು ಸಾರಿದ್ದಾರೆ;. Sin : ಪಾಪ : ಸರ್ಪ : ಕತ್ತಲೆ : ಗುಹ್ಯ ಈ ಸಮೀಕರಣಸ್ಥ ಆಶಯದ ಅಂತಃಸಂಗತಿ, ಒಂದು ವಾಸ್ತವ ಸತ್ಯವನ್ನು ಬೆಳಕಿನಲ್ಲಿ ತರುತ್ತಿದೆ. ಪಾಪತೊಳೆದುಕೊಳ್ಳಲು ಬೋಧಿಸುವ ಸಂಪ್ರದಾಯವು ತನ್ನ ಪೂಜಾಸ್ಥಾನಗಳಲ್ಲಿ ಪಾಪಕರ್ಮಕ್ಕೆ ಪ್ರೇರಿಸುವ 'ನಾಗ'ನನ್ನು ಪೋಷಿಸುವ ಪರ್ಯಾಯೀತಂತ್ರವೂ ಒಳಗೊಂಡಿದೆ! ಓಲ್ಡೆನ್‌ಬರ್ಗ್ ಹೇಳಿರುವಂತೆ arch-magician ಚಂದ್ರ=ಕೃಷ್ಣ (ಕ್ರೈಸ್ತಪಂಥವೂ ಬಂತು) ನಾಗ: ಚಂದ್ರನ ಪೂಜಾ ಸಂಪ್ರದಾಯಗಳಲ್ಲಿ ಕೇವಲ ನೈತಿಕ ಮೌಲ್ಯಗಳ ಬೋಧನೆಯ ಅತಿವಾದವು. ಇದು ತೋರಿಕೆಯ ನೈತಿಕ ಮಾತು. ಬಂಧಮುಕ್ತರಾಗಿ, ಮುಕ್ತಸಂಗರಾಗಿ ವರ್ತಿಸುವುದು (ನಾಗನ ಸ್ವಭಾವ); ಈ ಬೋಧೆಯ ತಳಹದಿಯ ಮೋಕ್ಷಕಾಮೀ ಸಂಪ್ರದಾಯಗಳಲ್ಲಿ ಪ್ರಾಮಾಣಿಕವಾಗಿ ನೀತಿಗೆ ಸ್ಥಾನವೇ ಇಲ್ಲ.

ಈ ಸಂಗತಿ 'Secrecy is sin' ಎಂಬ ಧರ್ಮಪಂಥಗಳಲ್ಲಿ 'ಗುಟ್ಟಿನ' ಮಂತ್ರೋಪದೇಶವು 'ಗುಹ್ಯ' ಮಾರ್ಗ ಬೋಧನೆಯ ಪರ್ಯಾಯವಾಗಿದೆ. "Devil quotes the Bible" ಎಂಬಲ್ಲಿ Dramatic irony ಉಂಟು. ಫಕ್ಕನೆ ಹೊಳೆದು ಹೋಗುನ ಪ್ರಜ್ಞಾ ಪ್ರಕಾಶವಿದು! 'Secrecy is sin' ಎಂಬ ಮಹಾತ್ಮಾ ಗಾಂಧೀಜಿ ರಾಜವಿದ್ಯಾ ರಾಜಗುಹ್ಯದ, ಭಗವಂತನ ಭಕ್ತರು ! ಇಲ್ಲಿ ಗುರುಶರಣ ಮಾರ್ಗದ ಅಂತಃಸ್ವರೂಪವೇ ಬೆಳಕಿನಲ್ಲಿ ಬರುತ್ತದೆ. ಪಾಪ ತೊಳೆದುಕೊಳ್ಳಲು ಪಠಿಸಲಾಗುವ ಬೈಬಲ್ಲಿನಲ್ಲಿಯೇ ಡೆವ್ವಿಲ್ ಸೈತಾನಕ್ಕೂ ಆಧಾರ ಸಿಕ್ಕಬೇಕೆ? "ಅಪಿಚೇತ್ ಸುದುರಾಚಾರಃ ಭಜತೇ ಯೋ ಮಾಮ್ ಅನನ್ಯಭಾಕ್, ಸಾಧುಃ ಏವ ಸಃ ಮಂತವ್ಯಃ" ಎಂದು ಭಗವಂತ ಅಪ್ಪಣೆ ಕೊಡಿಸಿದ್ದಾನೆ! ಅಮೂರ್ತ ವೈಶ್ವಕ-ಪಾತಳಿಯವು (universals) ಎಂಬ ಸಂಭ್ರಮ ನಿರ್ಮಿಸುವ ಅಸಾಧು ವಿಚಾರಗಳ (illegitimate abstractions) ಮಾದರಿ ನೋಡಿ :

ಇವು ನಿಜವಾದ (ಸ್ವರ್=) ಪ್ರಕಾಶ ತತ್ತ್ವದ ಪಾತಳಿಯವು ಇರುವುದಿಲ್ಲ. ಭೌತ ಪಾತಳಿಯ ಒಂದು ವಿಶಿಷ್ಟದ - ವೈಶಿಷ್ಟ್ಯದ ಮೇಲೆಯೇ ಇವು ನಿಂತಿರುತ್ತವೆ. : 'ಪ್ರಜಾ-ಪತಿ', ಸೃಜನಶಕ್ತಿಯ ಪ್ರತಿಯೊಬ್ಬ ನರ(ಳ)ನೂ, ಹಿರಣ್ಯಗರ್ಭ, 'ಪ್ರಜಾಪತಿ' ಎನ್ನಲು ಅವಕಾಶ ಕಲ್ಪಿಸಲಾಗಿದೆ. 'ವಿದೇಹ ಜನ-ಕ' ಪ್ರಜಾಪತಿಯ ಪರ್ಯಾಯ! ಈ 'ಜನ-ಕ'ನನ್ನು ಒಂದು ವ್ಯಕ್ತಿಯೆಂಬ ಭ್ರಾಂತಿ ನಿರ್ಮಾಣಕ್ಕಾಗಿ, ನೆಲದೊಡನೆ ಸಂಬಂಧ ಸೂಚಿಸಲು 'ವಿದೇಹ' ದೇಶವನ್ನು ಭೂಮಿಯ ಮೇಲೆ ಕಲ್ಪಿಸುವ ಆಪತ್ತಿಯನ್ನು ಸ್ವೀಕರಿಸಬೇಕಾಗುವ ಸಾಹಿತ್ಯಿಕ ಮಾಯಾಶಕ್ತಿಯಿದು. ಈ ಜನಕನ ಕುಮಾರಿ ಸೀತೆ ಅಯೋನಿ ಸಂಭವೆ! ತಂದೆಮಗಳ ನಾಮರೂಪ ನಿರ್ಮಿತಿಯಲ್ಲಿ ಅರಿಕೆಗೆ ಬರುವ ಅಂತಃಸಂಗತಿ ಹೃದ್ಯವಿದೆ. 'ಅಂಗ' ದೇಶದ ರಾಜ ರೋಮಪಾದ. 'ಅಂಗ' ದೇಶದ ರಾಜನನ್ನಾಗಿ ಮಾಡಿದ ವ್ಯಕ್ತಿಯ ಹೆಸರು 'ಕರ್ಣ' ಕಣ್ಣ (ಗಣ್ಣ) ಇವರಲ್ಲಿ ಔಚಿತ್ಯ ಅ - ವಾಚ್ಯವಿದೆ! 'ಸೂರ್ಯ'ನ ಪುತ್ರನೆಂಬ ಈ ಕರ್ಣನು 'ಕುಮಾರೀ ಪುತ್ರ'ನು ಈತ ಆದಿತ್ಯ ಪುರುಷನ ಪುತ್ರನೇ ಆಗುತ್ತಾನೆ. ಆದಿತ್ಯ 'ಸೂರ್ಯ'ನೆಂಬ ಗ್ರಹಿಕೆಯ ಪ್ರಯೋಜನ ಪಡೆದು ಮಾಡಲಾದ ಪ್ರಕಾಶತತ್ತ್ವದ ಈ ಗುಹ್ಯಜ್ಞಾನವು ವೈಶ್ವಾನರಾಗ್ನಿಯ ಅವ-ಮೂಲ್ಯನದ ಈ ತಂತ್ರ-ಯಾತು (Black magic) ದಕ್ಷಿಣ ಕಪರ್ದ ವಸಿಷ್ಠ ವ್ಯಾಸರಿಂದ ಆಗಬೇಕೇ?

ನಮ್ಮ ಪುರಾತನ ಸಂಸ್ಕೃತಿಯ ಸಮೀಕ್ಷೆಯಲ್ಲಿ ಪ್ರತೀತಿಗೆ ಬರುವ, ಜೀವನ ವಿಶ್ವವನ್ನು ಆಳುತ್ತಿರುವ ಕಾಲ ತತ್ತ್ವಗಳು ಎರಡು ವಿಭಿನ್ನ ಪಾತಳಿಯ ಮೇಲೆ ಇವೆ. ಮಾನವ ಜೀವಿಯನ್ನು 'ಗತಿ'ಗೆ-ಚಲನವಲನಕ್ಕೆ-ಪ್ರೇರಿಸುವ ಶಕ್ತಿಯ ಮೂಲ ಕೇಂದ್ರವು 'ಅಂಗಾನಾಂರಸದ' ಪ್ರಾಣಚೇತನದ ಪಾತಳಿಯಲ್ಲಿದೆ ಮತ್ತು ಪ್ರಜ್ಞಾಪ್ರಕಾಶದ ಪಾತಳಿಯಲ್ಲಿದೆ. ಜೀವನವಿಶ್ವಸ್ಥ ಸ್ವತಂತ್ರ ಪಾತಳಿಗಳ ಮೇಲಣ ಈ ಪ್ರತಿಯೊಂದು ಕೇಂದ್ರದೊಡನೆ ಮಾನವನು ಸಂಬದ್ಧವಿರುವ ಹಾಗಿನ ಯೋಜನೆ ಈ ಮಾನವದೇಹರಚನೆಯಲ್ಲಿ ಇದೆ. ಮಹಾತ್ಮಾಜೀ ಹೇಳುತ್ತಿದ್ದರು : 'I am an instrument in the hands of Almighty God' ಎಂಬ ಆಶಯದ ಅವರ ಈ ಶ್ರದ್ಧೆಯು

'ಏಕಮೇವ ಸತ್-ತ್ಯ'ದ ಭಗ-ವಂತನ ಉಪಾಸನಾ ಮಾರ್ಗವಾಗಿ ಪರಿಣಮಿಸಿತು. ಏಕಸತ್ ಪಂಥವು ಸಾಮಾಜಿಕ ಶೈಥಿಲ್ಯಕ್ಕೆ 'ಅಂತರ್‌ವಾಣೀ' ಭಗವಾನ್ 'ಸಾಯಿ'ಗಳ ಮೃತ್ಯುದೈವತದ ಉಪಾಸನೆಗೆ ಒತ್ತಾಯ ಪಡಿಸುತ್ತದೆ. 'ಕಾಲೋಽಸ್ಮಿ ಲೋಕಕ್ಷಯಕೃತ್ ಪ್ರವೃದ್ಧಃ' ಎಂದು ಭಗವತ್ ಗೀತೆಯ ಭಗ-ವಂತನೇ ಹೇಳಿದ್ದು ಸುಳ್ಳೇ? 'ಯತ್ ಭಜತಿ ತತ್ ಭವತಿ' 'ಏಕಂ ಸತ್' ರೂಪ ಕಾಲನಿಗೆ ಅರ್ಪಿಸಿಕೊಂಡವರಿಗೆ 'ಪ್ರವಾಹ ಪತಿತರಾಗಿ' 'ಪಾಲಿಗೆ ಬಂದದ್ದೇ ಪಂಚಾಮೃತ' ಎಂಬ ಮನೋಭಾವವು ಅನಿವಾರ್ಯವಾಗುತ್ತದೆ. 'ಪ್ರವಾಹಪತಿತಂ ಕರ್ಮ ಕುರ್ವನ್ ಅಪಿ ನ ಲಿಪ್ಯತೇ' ಎಂದು ಬೋಧಿಸಿದ್ದು ರಾಮಾಯಣ! ಭವಬಂಧನದಿಂದ ಮುಕ್ತರಾಗುವ ದಾರಿ 'ನಿಷ್-ಕಾಮ-ಕರ್ಮ, ಎಂಬುದೂ ಪ್ರವಾಹಪತಿತ ಕರ್ಮಕ್ಕೆ ಪ್ರೇರಿಸುವ ವೈಚಾರಿಕ ಆಕೃತಿಯೇ ಆಗಿದೆ.

ಭಾರತೀಯ ಪುರಾತನರು 'ವೈಶ್ವಾನರ ಅಗ್ನಿ' (: ಸಮಾಜ ಸಮಷ್ಟಿ=ಜನಪದಪ್ರಜ್ಞೆ) ರೂಪಿಸುವ 'ಸಮಯ' ರೂಪ ಕಾಲತತ್ತ್ವಕ್ಕೆ ತಲೆಬಾಗಿ ನಡೆದುಕೊಳ್ಳಲು ಬೋಧಿಸಿದ್ದಾರೆ! ಈ ಸಮಯ - ಆಚಾರ, ಇದು ಹಿಂದೊಮ್ಮೆ 'ಮನು' ಪ್ರಣೀತ ಮಾನವಧರ್ಮವನ್ನು ರೂಪಿಸಿತ್ತು ಎಂಬುದನ್ನು ಈ ಉಪನ್ಯಾಸದ ಕೊನೆಯ ಭಾಗದಲ್ಲಿ ವಿವರಿಸಿದ್ದಾಗಿದೆ. ಸುಮಾರು ೩-೪ ವರುಷಗಳ ಹಿಂದೆಯೆ, ಈ ಉಪನ್ಯಾಸದ ಕರೆ ಬಂದಿತ್ತು. ಆದರೆ ಆಗ ಈ ಸಾಂಸ್ಕೃತಿಕ ಸತ್ಯಾನ್ವೇಷಣೆಯು, ಇನ್ನೂ ಒಂದು ನಿಶ್ಚಿತಹಂತಕ್ಕೆ ಬಂದಿರಲಿಲ್ಲ. ಈ ಉಪನ್ಯಾಸದ ಯೋಗವು ಮರಳಿ ಲಭಿಸಿದುದರ ಶ್ರೇಯವು ಮಾನ್ಯ ಶ್ರೀ ಕೆ. ಸಿ. ಶಿವಪ್ಪನವರಿಗೆ ಸಲ್ಲುತ್ತದೆ.

ಈ ಮೊದಲು 'ಋಗ್ವೇದಸಾರ: ನಾಗಪ್ರತಿಮಾ ವಿಚಾರ'ವನ್ನು ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿ ಉಪಕಾರ ಮಾಡಿದೆ. ಇದರಿಂದಾಗಿ 'ಹಿಂದೂ' ಎಂಬ ಧರ್ಮದಲ್ಲಿ ಆಗಿರುವ ಇಂದಿನ ತಿರುವು ಮುರುವು ಬೆಳಕಿನಲ್ಲಿ ಬರಲು ನೆರವು ದೊರಕಿತು. ಗುಣೈಕದೃಷ್ಟಿಯ ಕಂನಡದ ಏಳ್ಗೆಗಾಗಿ ಕಂಕಣಬದ್ಧರಾಗಿರುವ ಡಾ॥ ದೇ. ಜ. ಗೌ. ಇವರು ಸಕಾಲದಲ್ಲಿ ಮುಂದೆ ಆಗದೆ ಇದ್ದರೆ, ಆ ಗ್ರಂಥ ಪ್ರಕಟನೆಯ ಸಾಲದ ಭಾರದಲ್ಲಿ ಬೆನ್ನೆಲುವು ಮುರಿಯುವ ವೇಳೆ ಸಮೀಪಿಸಿತ್ತು. 'ಜ್ಞಾನಭಾರತಿ'ಯ ಶ್ರೀ ಕೆ. ಸಿ. ಶಿವಪ್ಪನವರ ತಾಳ್ಮೆ ಸೌಜನ್ಯ, ಸ್ನೇಹಭಾವದಿಂದಾಗಿ ಈ ಅತ್ಯಂತ ತೊಡಕಿನ ವಿಷಯವನ್ನು ಇಷ್ಟರಮಟ್ಟಿಗಾದರೂ ಸುಲಭೀಕರಿಸಿ ಹೇಳಲು ಶಕ್ಯವಾಗಿದೆ. ಹಳೆಯ ಸ್ನೇಹಿತರಾದ ಶ್ರೀ ಬೀchi ಅವರ ಪ್ರೀತಿ ವಿಶ್ವಾಸದ ಆತಿಥ್ಯದಿಂದಾಗಿ ನನ್ನ 'ಪಥ್ಯ'ದ ಸಮಸ್ಯೆ ದೂರವಾಯ್ತು. ಬೆಂಗಳೂರು ನಿವಾಸವು ಸುಕರವಾಯ್ತಲ್ಲದೆ, ಈ ಸಂಧಿಯು ಅನೇಕ ವಿಚಾರವಂತ ಜ್ಞಾನಜಿಜ್ಞಾಸುಗಳಾದ ತರುಣರ ಪರಿಚಯ, ಸ್ನೇಹಕ್ಕೆ ಅವಕಾಶವನ್ನು ಒದಗಿಸಿತು.

ಜೀವನ : ಸಂಸ್ಕೃತಿಯ ಅರ್ಥ ಹಾಗೂ ಇದರ ಆಳವನ್ನು ಅರಿಯುವ ಹುಚ್ಚಿನಲ್ಲಿ, ಲೌಕಿಕದ 'ಅರ್ಥ' ಸಂಪಾದನೆಯ ಅರ್ಹತೆ ಹೆಚ್ಚಿಸಿಕೊಳ್ಳುವ ದಾರಿ ದೂರ ಉಳಿಯಿತು. ಅಸಹಕಾರದ ಆಂದೋಲನದ ಆ ಯುಗದಲ್ಲಿ 'ಜೀವನವು ಸತ್ಯವನ್ನು ಅರಿಯುವ ಒಂದು ಪ್ರಯೋಗ' ಎಂಬ ಹಾಗಿನ ಒಂದು ಸ್ಫೂರ್ತಿದಾಯಕ ಭಾವನೆ, ಮಹಾತ್ಮಾಜಿಯವರ ಚಾರಿತ್ರ್ಯದಿಂದ ಎಲ್ಲೆಲ್ಲೂ ಕಾಣಲು ದೊರೆಯುತ್ತಿತ್ತು. 'Experiments with Truth' ಎಂಬ ವಾಕ್ಯವು ನನಗೆ ವಿಚಾರ-ವಿಮರ್ಶೆಗೆ ಒತ್ತಾಯಪಡಿಸಿತು. ಎಷ್ಟೋ ದಿನಗಳು ಸಂದ ಬಳಿಕ ಒಂದು ವೈಚಿತ್ರ್ಯ ಗಮನಕ್ಕೆ ಬಂತು. ಮಹಾತ್ಮಾಜೀಯವರ ಪಾಲಿಗೆ 'ಸತ್ಯ' ಎಂದರೇನು ಎಂಬ ಪ್ರಶ್ನೆಯೇ ಇದ್ದಿಲ್ಲ. ಆದರೆ ನಾನು 'ಗುರುಶರಣ' ಮಾರ್ಗದವನಲ್ಲದ್ದರಿಂದ ಅಥವಾ 'ಸತ್ಯ' ಎಂಬುದು ಶುದ್ಧ ತಾತ್ತ್ವಿಕ ಪಾತಳಿಯ ಸಂಗತಿ ಎಂಬ ಶ್ರದ್ಧೆಯಿಂದಾಗಿ ನನ್ನ 'ಜೀವನ' ಪ್ರಯೋಗದ ದಾರಿಯೇ ಬೇರೆಯಾಯಿತು. 'ಸತ್ಯ' ಎಂಬುದು ಉಂಟೆ? ಇದ್ದರೆ ಇದನ್ನು ಗ್ರಹಿಸಿಕೊಳ್ಳುವ ತಂತ್ರವೇನು? ಎಂಬ ದಾರಿ ನನ್ನದಾಯಿತು. 'ಸತ್ಯಮೇವ ಜಯತೇ, ನಾನೃತಂ' ಎಂಬ ಉಪನಿಷದ್ವಾಕ್ಯವು ಹಿಡಿಸಿತ್ತು; ಅರ್ಥ ಮಾತ್ರ ಹೊಳೆದಿರಲಿಲ್ಲ. ಋತ : ಸತ್ಯದ ಸ್ಪಷ್ಟೀಕರಣವು ಶಕ್ಯವಾಗತೊಡಗಿದ ಬಳಿಕ, ಋತ : ಸತ್ಯದ ದಾರಿಯನ್ನು ಬಿಟ್ಟು, ಭಾರತೀಯ ಆದಿತ್ಯ ಸಂಪ್ರದಾಯವು 'ರೀತ ಸತ್ಯ'ದ ಉಪಾಸನೆಯಲ್ಲಿ ಆಸಕ್ತಿವಹಿಸಿದ್ದು ಕಾಣತೊಡಗಿತು! 'ಸತ್ಯೇನ ಪಂಥಾಃ ವಿತತಃ ದೇವಯಾನಃ'

(ಮುಂ ೩,೧,೬). ನನ್ನ ಈ ಜಿಜ್ಞಾಸೆಯ ಹುಚ್ಚಿನಲ್ಲಿ ನನ್ನ ಮಡದಿಗೆ ಅನುಭವಿಸಬೇಕಾದ ತಾಪತ್ರಯಗಳನ್ನು ಹೇಳಿ ತಿಳಿಯದು. ನಮ್ಮ ಆ ಜೀವನ ಪ್ರಯೋಗದಲ್ಲಿ ಬಡತನದ ತೀವ್ರತೆಯನ್ನು ಸಹಿಸುವ ಸಾಮರ್ಥ್ಯವು ಬಂದದ್ದು ಮಹಾತ್ಮಾಜೀಯವರ ಪುಣ್ಯದಿಂದ! ನನ್ನ ಆ ಆರ್ಥಿಕ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ನನ್ನೊಡನೆ ಬಾಳ ನೆಮ್ಮದಿಗಾಗಿ ಸಹಕರಿಸಿದ ಜೀವನ ಸಂಗಾತಿಯನ್ನು ಈ ಕೊನೆಯ ಘಟ್ಟದಲ್ಲಿಯೂ ಸ್ಮರಿಸಿಕೊಳ್ಳದಿದ್ದರೆ ಮಹಾಪರಾಧವಾಗಲಿದೆ.

– ಶಂ. ಬಾ. ಜೋಶಿ

ಮುನ್ನುಡಿ

ತುಂಬ ತೊಡಕಿನ 'ಹಿಂದೂ' ಎಂಬ ಧರ್ಮದಲ್ಲಿ ಆಗಿರುವ ಪಲ್ಲಟವನ್ನು ಗ್ರಹಿಸಿಕೊಳ್ಳಲು ಸುಲಭವಾಗಬೇಕೆಂದು ಈ ಮುನ್ ನುಡಿ ಆವಶ್ಯಕವೆನಿಸಿತು. ವಿಶ್ವಾಸಾರ್ಹ 'ಇತಿ ಹ ಆಸ' (ಇಂತು ನಿಜವಾಗಿ ಆಯ್ತು, ಇತ್ತು) ಈ ಬಗೆಯ ವಿಶಿಷ್ಟ ಸಂ-ಗಂತಿಗಳನ್ನುಳ್ಳ 'ಇತಿಹಾಸ' ಎಂಬುದು ಶಕ್ಯವಿದ್ದರೆ, ಇದು ಒಂದೇ ಇರಬಲ್ಲದು; ಅದು ಮಾನವನ ಇತಿಹಾಸ: ಮಾನವೇತಿಹಾಸ. ಇದೇ ಮೇರೆಗೆ 'ಧರ್ಮ' ಮತ್ತು 'ಸಂಸ್ಕೃತಿ' ಎಂಬುದೂ ಇದ್ದರೆ ಅಲ್ಲ-ಉಂಟು ಇದೂ ಒಂದೇ ಆಗಬಲ್ಲದು; ಅದು 'ಮಾನವ ಧರ್ಮ' ಮತ್ತು 'ಮಾನವ ಸಂಸ್ಕೃತಿ'. ಈ ಭೂಮಿಕೆಯ ಮೇಲಣ 'ಧರ್ಮ' ಮತ್ತು 'ಸಂಸ್ಕೃತಿ'. ಇವೆರಡೂ ಈ ಜೀವನದಲ್ಲಿ ಸಮಾನ ವ್ಯಾಪ್ತಿಯವು (co-extensive) ಇರಬಲ್ಲವು. ಸಂಸ್ಕೃತಿ ವೈಶಿಷ್ಟ್ಯಕ್ಕೇ ವಿಶಿಷ್ಟ ಕೇಂದ್ರದಲ್ಲಿ ಸ್ಥಾನ ಕಲ್ಪಿಸುವಾಗ ಅದು 'ಕತ್ತಲೆಯ' ಪೂಜೆ, ಇಂದ್ರಿಯ ಪೂಜೆ ಆಗಲೇಬೇಕು.*

ಈ ಪ್ರಪಂಚದಲ್ಲಿ ಅರ್ಥ (: ವಿಚಾರ: ಜ್ಞಾನ) ಕಾಣಿಸಿಕೊಂಡುದರಲ್ಲಿ ಕಾಣಿಸಿಕೊಳ್ಳುವಲ್ಲಿ ಒಂದು ಕ್ರಮವಿದೆ, ವ್ಯವಸ್ಥೆಯಿದೆ. ಇದು ಕಾಣಿಸಿಕೊಂಡ ಕ್ರಮದಲ್ಲಿ ಎರಡು ಹಂತಗಳು ಇವೆ. ಮೊದಲ ಹಂತದಲ್ಲಿ ಆದ ಜ್ಞಾನವು (=ಅರ್ಥವು) ಹೊಳೆದಂತೆ ಎನಿಸಿದ್ದು ಯಾವ ಬಗೆಯದು ಇತ್ತು? ಜಾಗತಿಕ ಆದಿದೈವತ ಕಥೆಗಳಲ್ಲಿ, ಈ ಮೊದಲ ಹಂತವನ್ನು ಗುರುತಿಸಿಕೊಳ್ಳಲು ಶಕ್ಯವಿದೆ. 'ದ್ಯಾವಾ-ಭೂಮಿೊ', 'ದ್ಯಾವಾ-ಪೃಥಿವೀ' ಈ ಮಿಥುನವು, ಯಾವಾಗಲೂ 'ಯೋಗಾ' ರೂಢವೇ ಉಳಿದಲ್ಲಿ, ಈ ಪ್ರಪಂಚದಲ್ಲಿ ಸಂಸ್ಕೃತಿ ಅವಶ್ಯ ಎಂಬ ಕಾರಣದಿಂದ ಸ್ತ್ರೀ - ಪುಂಯೋಗವು ಥಟ್ಟನೆ ಭಂಗವಾಗುತ್ತದೆ! ಹಲವು ದೇಶಗಳ ಈ ಕಥೆಯ ಆಶಯವು ಸಮಾನವೇ ಇದ್ದರೂ, ಇದು ಆವಿಷ್ಕಾರ ಪಡೆದ 'ಪವಾಡ'ದ ರೀತಿಯ ವಿವರಗಳಲ್ಲಿ ವ್ಯತ್ಯಾಸವಿರಬಲ್ಲುದು.

ಪ್ರಸ್ತುತ, ಚಿತ್ತ ಸೆಳೆಯಬೇಕಾದ ಅಂಶ: ಮಾನವನಿಗೆ ಆದ ಜ್ಞಾನೋಪಲಬ್ಧಿಯ ಕ್ರಮ. ಈ ಕ್ರಮ ಸರ್ವತ್ರ ಮಾನ್ಯವಿದೆ. ಈ ಹಂತದ ಜೀವನಾನುಭವದಲ್ಲಿ ಅಂದು ಒಂದು 'ಸತ್ಯ' ಪ್ರತೀತಿಗೆ ಬಂತು. ಇದನ್ನು 'ಸತ್'-ತ್ಯ' ಎಂದು ಕ್ವಚಿತ್ತಾಗಿ ನಿರ್ದಿಷ್ಟ ಪಡಿಸಿರುವ ಉಪನಿಷದ್ವಾಕ್ಯ ಕಂಡಿದ್ದೇನೆ. ಆದರೆ, 'ಸತ್ಯಂ' ಎಂದು ಬರೆವ

---

* 'ಸಂಸ್ಕೃತಿ' ಎಂಬ ಮಾತನ್ನು ಪಾಶ್ಚಾತ್ಯರ Culture ಎಂಬ ಪರಿಭಾಷೆಗೆ ಸಮಾನಾಂತರ ವ್ಯಾಖ್ಯೆ ಶಂಬಾ ಅವರದ್ದಲ್ಲ. 'ಸಂಸ್ಕೃತಿಃ ವೈ ಶಿಲ್ಪಾನಿ' ಎಂಬ ಮಾತು ಬರುತ್ತದೆ. ಮೊರಡಾದ ಕಲ್ಲು ಶಿಲ್ಪಿಯೊಬ್ಬನ ಕೈಯಲ್ಲಿ 'ಕಲಾಕೃತಿ' ಆಗುತ್ತದೆ. ಜೀವನ ಇತಿಹಾಸದಲ್ಲಿ ವ್ಯಕ್ತಿಯ ವ್ಯಕ್ತಿತ್ವವು ಅರಳಿ ಕೃತಿ>ಆಕೃತಿಯಾಗಿ ಸಂಸ್ಕೃತಿಯಾಗುವ ಒಂದು ಬಗೆಯೂ ಉಂಟು. ಇದು ಜೀವನ ಸಂದರ್ಭದಿಂದ ಪ್ರೇರಿತ. ಇಲ್ಲಿ 'ವಿಶಿಷ್ಟ' ಎಂಬ ವಿಶೇಷಣಕ್ಕೆ ಸ್ಥಾನ ಇಲ್ಲ. ಶಂಬಾ ಈ ಹಿನ್ನೆಲೆಯಲ್ಲಿ ಸಂಸ್ಕೃತಿ ಕುರಿತು ವ್ಯಾಖ್ಯಾನಿಸುತ್ತಾರೆ (ಸಂ)

ವಾಡಿಕೆಯು ಶಿಷ್ಟಮಾನ್ಯವಾಗಿ ಉಳಿದು ಬಂದಿದ್ದರೆ, ಭಾರತೀಯ ಸಂಸ್ಕೃತಿಯಲ್ಲಿ ಈಗ ಕಾಣದೊರೆವ ತಿರುವು ಮುರುವು ಆಗುವುದೇ ಅಶಕ್ಯವಿತ್ತು! ಅಥವಾ ಮೊದಲಲ್ಲಿ 'ಸತ್ತ್ವ' ಎಂದೇ ಬರೆವ ರೂಢಿಯ ಪ್ರಚಲಿತವಿರಲಿಕ್ಕೆಬೇಕು. ಆದರೆ ಈಗ ನಿಜವಾಗಿಯೂ ಶುದ್ಧಲೇಖನದ ದೃಷ್ಟಿಯಿಂದ ಬರೆಯಬೇಕಾದ ತತ್ - ತ್ವ = 'ತತ್ತ್ವ' ಇದನ್ನು ಬರಿಯ 'ತತ್ವ' ಎಂದು ಬರೆಯುತ್ತಾರೆ. ಇದೇ ರೀತಿಯಲ್ಲಿ 'ಸತ್‌ತ್ಯಂ' 'ಸತ್ಯಂ' ಆಗಿರಬಲ್ಲದು.

ಪುರಾತನ ಭಾರತೀಯ ಪರಂಪರೆಯಲ್ಲಿ, ಅಸ್<ಸತ್ ಇದರಲ್ಲಿ ಎರಡು ವಿಭಿನ್ನ ಸ್ವರೂಪದ ಅಸ್ತಿತ್ವ ಸೂಚಕ ಅರ್ಥವು ಅಭಿಪ್ರೇತವಿದೆ. ಇವೆರಡರಲ್ಲಿ ಒಂದು 'ಸತ್' ಇದು ಸತ್-ತ್ವ: ಸಾರ, ಅರ್ಕ, ರಸ, ದ್ರವ, ಸೃಜನಕ್ಕೆ ಕಾರಣ 'ದ್ರವ', 'ದ್ರವ್ಯ' ಎಂಬ ಅರ್ಥದ್ಯೋತಕವಿದೆ. 'ಆಪೋ ವಾ ಇದಂ ಅಗ್ರೇ ಆಸುಃ' 'ಪ್ರಥಮಂ ಗರ್ಭಂ ದಧ್ರೇ ಆಪಃ' ಎಂಬಲ್ಲಿ 'ಗರ್ಭ'ಧಾರಣ ಮಾಡುವ 'ಆಪ'ವು 'ಸ್ತ್ರೀ' ಸೂಚಕ ಪ್ರತಿಮೆ ; 'ಆಪೋ ವಾ ಅಸ್ಮಾನ್ ಮಾತರಃ' ಎಂಬ ವೇದವಚನವು ಇದನ್ನು ಸ್ಪಷ್ಟೀಕರಿಸಿದೆ. ಈ ಹಂತದ (ಅಸ್<) ಸತ್ ಇದು 'ದ್ಯಾವಾ - ಭೂಮೀ' ಸಂಗಮದಲ್ಲಿ ಪ್ರತೀತಿಗೆ ಬಂದ - ಬರಬಲ್ಲ ಸ - ರಸ ಅನುಭಾವದ ಹಿನ್ನೆಲೆಯ, ಅಸ್ತಿತ್ವದ, ಭೌತಪಾತಳಿಯ 'ಸತ್-ತ್ಯಂ' ಇದು. ಪಿಂಡಾಂಡ-ಬ್ರಹ್ಮಾಂಡ ಎಂಬ ಪರಿಭಾಷೆಯೊಳಗಿನ ಸ್ತ್ರೀ-ಪುಂಯೋಗದ 'ಭೂಃ' ಮತ್ತು 'ಭುವಃ' ಎಂಬ, ಕಾಣಲು ಎರಡು ಆದರೆ, ಏಕಾತ್ಮಕ ಸಮವಾಯದ 'ವ್ಯಾಹೃತಿ'ಗಳ (levels) ನಡುವಣ 'ಅಂತರಿಕ್ಷಸ್ಥ ಅವ-ಕಾಶದಲ್ಲಿ (Vault) ಕಾಣದೊರೆವ ಈ 'ಸತ್-ತ್ವ'ವನ್ನು 'ಆಪೋಜ್ಯೋತಿಃ' ಎಂದು ಹೆಸರಿಸಲಾಗಿದೆ. ಈ 'ಜ್ಯೋತಿ'ಯ ಭಾವನೆಯನ್ನು ಗಮನಕ್ಕೆ ತಂದು ಕೊಡುವ 'ಶುಕ್ರ' (ಶುಕ್ಲ : ಶುಭ) ಈ ಸಾಂಕೇತಿಕ ಪ್ರತಿಮೆಯ ನೆಪದಿಂದ ನಿರ್ಮಿತವಾಗಿರುವ ಸಂ-ಜೀವನೀ ವಿದ್ಯೆಯ ಸಿದ್ಧಿ*ವಿದೆ. ಈ ಶುಕ್ರಪ್ರಣೀತ 'ದೇವಯಾನಿ'ಯಾಗುವ ದಿವ್ಯಾಧ್ಯಾತ್ಮಸಂಪ್ರದಾಯವು ನಿಂದ್ಯವೆನಿಸುತ್ತದೆ. ಆಗ ತೋರಿಕೆಗೆ 'ಶುಕ್ರ'ನು ಅಸುರರ 'ಗುರು' ಎಂಬ ಕಥೆ ಹುಟ್ಟುತ್ತದೆ! ಆದಿಕವಿ ಈ ಉಶನಾಸ ಶುಕ್ರನೇ ಸರಿ. 'ಶುಕ್ರ'ನ ಸಾಂಕೇತಿಕತೆಯು ಸಂದೇಹಾತೀತವಾಗಲು, ಇನ್ನೂ ಒಂದು ದಿವ್ಯಪವಾಡ ಕಥೆ (aetiological myth) ತಲೆಯೆತ್ತಿದೆ. (ಶಿಪಿವಿಷ್ಟ) ವಿಷ್ಣುವು 'ಬಲಿ'ಯನ್ನು ಭೂಮಿಯಲ್ಲಿ ಮೆಟ್ಟುವಾಗ ಈ 'ಶುಕ್ರ'ನು ಒಕ್ಕಣ್ಣಿನವನಾದನಂತೆ. ಈ 'ಕಣ್ಣ'ನ್ನು 'ಏಕಾಕ್ಷ' ಎಂದು ಹೇಳಲಾಗುವಲ್ಲಿ ಏಕ - 'ಅಕ್ಷ' ಈ ಶುಕ್ರನು ಎಂಬ ಗುಹ್ಯಾರ್ಥವುಂಟು! 'ಸಹಸ್ರ' ವಿಶೇಷಣದಿಂದ ಮಾಡಲಾಗುವ 'ಪುರುಷ'ನನ್ನು 'ಅಕ್ಷ' (: ದಶಾಂಗುಲ) ಎಂದೇ ವರ್ಣಿಸಿದ್ದಾಗಿದೆ. ವೇದಕಾಲೀನ (ಆದಿ) 'ಕವಿ' ಕವಿ ಎಂದರೆ 'ಶುಕ್ರ': 'ಕಾವ್ಯ' ಎಂದಿರೂ 'ಶುಕ್ರ'! ಆದರೆ, ಈ 'ದೇವಯಾನಿ' ಸಂಪ್ರದಾಯದ 'ಶುಕ್ರ'ನ ಹೆಸರು ನಿಂದ್ಯವಾದ ಬಳಿಕ 'ಆದಿಕವಿ' ಪಟ್ಟಕ್ಕೆ ನೂತನ ನಾಮಕರಣವಾಯಿತು. 'ವಾಲ್ಮೀಕಿ' ಹುತ್ತಪ್ಪ=ನಾಗ : ಲಿಂಗನೆಂಬುದು ತಿಳಿಯದೇ ಹೋಗುತ್ತದೆ ಎಂಬ ಗ್ರಹಿಕೆ ಸುಳ್ಳಾಗತೊಡಗಿದೆ, ನಾಗ=ಚಂದ್ರ=ಲಿಂಗ.

ಈ ವಿವರಣೆಯ ಮೂಲಕವಾಗಿ ನಿರ್ದಿಷ್ಟಪಡುವ ಸಂಗತಿ ಇಷ್ಟು: ಮಾನವೇತಿಹಾಸದಲ್ಲಿ ಮೊತ್ತಮೊದಲಲ್ಲಿ ಆದ, ಸ್ಥೂಲ ಪ್ರಜ್ಞೋದಯದ ಹಿನ್ನೆಲೆಯಲ್ಲಿ ಆದ ಅನುಭವಕ್ಕೆ ಬಂದ 'ಸತ್ಯ'ಜ್ಞಾನ ಇದು. ದ್ರವ: ತತ್-ತ್ವ=ಸಾರಸ್ವರೂಪದ್ದು ಇದೆ. ಈ ಪಿಂಡ-ಬ್ರಹ್ಮಾಂಡೈಕ್ಯದ ಜ್ಞಾನದ ಹಿನ್ನೆಲೆಯಲ್ಲಿ ತಾನೇ ತಾನಾಗಿ ಮಾನವನನ್ನು ಆವರಿಸಿದ ಉತ್ಕಟ ಭಾವನೆಯು ರೂಪಿಸಿರುವ ಆ-ಚಾರ ಸಂಪ್ರದಾಯವನ್ನು Religion ಎಂದು ಹೆಸರಿಸಿರುವಲ್ಲಿ ಪಾಶ್ಚಾತ್ಯ ಪರಂಪರೆಯು, ತುಂಬ ಔಚಿತ್ಯವನ್ನು ವ್ಯಕ್ತಪಡಿಸಿದೆ. ಈ 'ಸತ್-ತ್ಯ' (: ಸತ್ಯ) ಮತ್ತು, ಸರ್ವಶ್ರುತ ಇನ್ನೊಂದು ಬಗೆಯ 'ಸತ್ಯ' ಇವೆರಡರಲ್ಲಿ ಭೂಮ್ಯಾಕಾಶಗಳಷ್ಟು, ಅಕ್ಷರಶಃ ಅಂತರವಿದೆ. ಈ ಅಂತರವನ್ನು ಗ್ರಹಿಸಿಕೊಳ್ಳುವ ಮಟ್ಟಿಗೆ, ಮೇಲಣ, 'ಸತ್ತ್ವ' ರೂಪ ಸ-ರಸ 'ಸತ್ಯ'ದ ಇಷ್ಟೇ ಪರಿಚಯವು ಇಲ್ಲಿ ಸಾಕು.

ಸತ್‌ತ್ವರೂಪ 'ಸತ್ತ್ಯ'ವನ್ನು 'ಆಪೋಜ್ಯೋತಿಃ' ಎಂದಿರುವಂತೆ 'ಜ್ಯೋತಿರಗ್ರೇ': 'ತುದಿಯಲ್ಲಿ ಕಾಣುವ ಜ್ಯೋತಿ' ಎಂಬ ಈ ವೇದಕಾಲೀನ ನಿರ್ದೇಶವು ಪಾಶ್ಚಾತ್ಯ Religion 'ಪರಂಪರೆಯಲ್ಲಿ ಹಿಬ್ರೂ ಮತ್ತು ಕ್ರೈಸ್ತ

---

* ಇರುವವನೆಂಬ ಸಾರ್ಥ ಹೆಸರಿನ 'ದಿವ್ಯ ಜ್ಞಾನಿ' 'ಆಚಾರ್ಯ' ಪುರುಷನ ಕಥೆ ಸುಪ್ರಸಿದ್ಧ

ಪರಂಪರೆಯಲ್ಲಿ ಕ್ರಿಸ್ತಮಾಸದ 'ವೃಕ್ಷ' ಪೂಜೆಯ ಸಾಂಕೇತಿಕತೆಯು, 'ಆಪೋಜ್ಯೋತಿಯ' ಹಾಗೂ 'ಜ್ಯೋತಿರಗ್ರೇ' ಎಂಬ ಪ್ರತಿಮೆಯ ವಾಸ್ತವತೆಯನ್ನು ಮನಗಾಣಿಸಿ ಕೊಡಬಲ್ಲುದು ಈ ವೃಕ್ಷ (Candle light) ಯುಕ್ತವಿರುತ್ತದೆ. ಭಾರತೀಯ ದೇವಸ್ಥಾನದ ರಚನೆಯಲ್ಲಿ ಆ ದೇವರ ಕಂಭ (ಸ್ತಂಭ : ಕೋಲು) ಸಂಕೇತವು ದೀಪಸ್ತಂಭ ರೂಪದಲ್ಲಿ, ಧ್ವಜಸ್ತಂಭ ರೂಪದಲ್ಲಿ ನಿಲ್ಲಿಸುವ ವಾಡಿಕೆಯಿದೆ. ಈ ದೇವಸ್ಥಾನದ ತೀರ್ಥ=ಹೊಂಡ: ಪುಷ್ಕರಿಣಿ-ಹೀಗೆ ಏನೊಂದು ಜಲಾಶಯವು ಇರುವ ವಾಡಿಕೆಯಿತ್ತು. ವೃಕ್ಷದಂತೆ, ಮೈಮೇಲೆ ಕೂದಲು ಇರುವ ಹಾವಿನ ಪವಾಡ ಕಥೆ ಕೇಳಲು ದೊರೆಯುತ್ತವೆ. ಪಾಶ್ಚಾತ್ಯ ಪರಂಪರೆಯ Candle light ಭಾರತೀಯ ಸಂಪ್ರದಾಯದೊಳಗಿನ ಜ್ಯೋತಿರ್ಲಿಂಗ ಅಥವಾ ಲಿಂಗಜ್ಯೋತಿಯ ಸ್ಪಷ್ಟೀಕರಣದಂತಿದೆ. ಈ 'ಜ್ಯೋತಿ' ಎಂಬ ಸಂಕೇತವು ಚಂದ್ರ ಅಥವಾ ದೀಪದೊಡನೆ ಸಾಹಚರ್ಯವುಳ್ಳದ್ದಾಗಿದೆ. ಈ ಹಿನ್ನೆಲೆಯಲ್ಲಿ 'ಜ್ಯೋತಿ' ಉಪಾಸನಾ ಪರಂಪರೆ, ರಾತ್ರಿಯ ಉಪಸ್ಥಾನದಲ್ಲಿಯೇ ಮೈವೆತ್ತಿದೆ ಎಂಬ ಮಾತು, ನಿಃಸಂದಿಗ್ಧ ರೂಪದಲ್ಲಿ ಬೆಳಕಿನಲ್ಲಿ ಬರುತ್ತದೆ! ಹಾಗಾದರೆ ಈ 'ಬೆಳಕು' ಯಾವುದು? ಇದು Candle light ಜ್ಯೋತಿರ್ಲಿಂಗಕ್ಕಿಂತಲೂ ಬೇರೆ ಇರಬೇಕಾಗುತ್ತದೆ!

'ಅಂತರಿಕ್ಷಸ್ಥ ಅವಕಾಶದಲ್ಲಿ' ಪ್ರತೀತಿಗೆ ಬಂದ 'ಆಪೋಜ್ಯೋತಿ' ಹಾಗೂ 'ಜ್ಯೋತಿರ್ಲಿಂಗ' ಇದನ್ನು ಬೆಳಕಿನಲ್ಲಿ ತಂದದ್ದು 'ಪ್ರಜ್ಞಾ' ರೂಪ ಪ್ರಕಾಶತತ್ತ್ವ. 'ಪ್ರಕಾಶ' ಮತ್ತು 'ಜ್ಯೋತಿ' ಇವೆರಡರಲ್ಲಿ, ಭೌತಪಾತಳಿಯಲ್ಲಿ ಸಹ ಅಂತರವಿದೆ. ಪಿಂಡ - ಬ್ರಹ್ಮಾಂಡೈಕ್ಯ ಸ್ವರೂಪದ ಅಮೂರ್ತ ಸ- ರಸ : ಆಪದಲ್ಲಿ ಕಾಣುವ 'ಜ್ಯೋತಿ' ಸಂಕಲ್ಪನಾಸ್ವರೂಪದ್ದಾಗಿದೆ. ಇದು 'ಅವರವರ ಪಾಲಿನ ಸತ್ಯ' 'ವೈಯಕ್ತಿಕ' ಅರ್ಥ: ಸಂಕಲ್ಪನಾತ್ಮಕ ಈ ಸಂಕಲ್ಪನೆ ಶೋಧ (discovery) ಆಗಿರುವ ಬದಲು, ಸ್ವಕಲ್ಪನೆಯಿರುವ ಶಕ್ಯತೆಯೇ ಹೆಚ್ಚು.

ಪ್ರಜ್ಞಾ- ಪ್ರಕಾಶ, ಇದರ ಆಕೃತಿರೂಪವು ಅಮೂರ್ತ ತಾತ್ತ್ವಿಕವಿದೆ. ಆದರೆ, ಏನೊಂದು ಲೌಕಿಕ ಭೌತ (ಘಟನೆ, ಪ್ರಸಂಗ ಅಥವಾ ವಸ್ತು) ವಿಷಯದ ನೆಪದಿಂದ ಥಕ್ಕನೆ ಮಿಂಚಿದಂತೆ, ಮಿನುಗಿದಂತೆ ಎನಿಸುವ ಅರ್ಥ (: ವಿಚಾರ) ಇದು ಪ್ರಧಾನ್ಯದಿಂದ ನೇತ್ರದ ವಿಷಯ. ಉಪನಿಷತ್ತಿನಲ್ಲಿ ಹೇಳಲಾದ 'ಪ್ರಜ್ಞಾ (ರೂಪ) ನೇತ್ರ' ಎಂದರೆ ಇದೇ. 'ಅಪ್ಸು ಜ್ಯೋತಿ' ಅಥವಾ 'ಜ್ಯೋತಿಷ್ಯಾಪಃ' ಎಂದು ತೈತ್ತಿರೀಯ ಉಪನಿಷತ್ತು ಹೇಳುವ ಈ ಅನುಭವದ 'ಸಲಿಲ' (ಆಪವು) ಸ್ಪರ್ಶೇಂದ್ರಿಯದ ವಿಷಯವಾಗಿದೆ.

ಋಗ್ವೇದದ ನಾಸದೀಯಸೂಕ್ತದಲ್ಲಿ ವರ್ಣಿತ ಈ ಅನುಭಾವ ನೋಡಿ 'ಅಗ್ರೇ ತಮಃ ಆಸೀತ್ ತಮಸಾಗೂಳ್ಹಂ' ಆದಿಯಲ್ಲಿ ಕತ್ತಲೆಯು (: ದೇಹ) ಇನ್ನೊಂದು ಕತ್ತಲೆಯಿಂದ (ದೇಹದಿಂದ) ಆ - ಲಿಂಗಿತವಾಗಿತ್ತು. 'ಅ-ಪ್ರಕೇತಂ' ಒಂದು ಕಿರಣವು ಸಹ ಎಲ್ಲೆಲ್ಲೂ ಇರಲಿಲ್ಲ: ಕಗ್ಗತ್ತಲೆ ತುಂಬಿತ್ತು 'ಇದಂ ಸರ್ವಂ ಆಃ ಸಲಿಲಂ! ಇದೆಲ್ಲವೂ ಅಹಾ! ಸಲಿಲ (ಸರಿಲ = ಶರೀರ): ಜಲ![೧]

ಡಾ।। ಜೂಲಿಯನ್ ಹಕ್‌ಸ್ಲೆಯವರ ಪರಿಭಾಷೆಯ 'Biosphere' ಇದು; ಭಾರತೀಯ ಪರಂಪರೆಯಲ್ಲಿ ಅಂಗಾನಾಂ ರಸಃ = ಪ್ರಾಣ-ಚೇತಸದ ಪಾತಳಿಯ, 'ನಿಃಶ್ವಸಿತ' ರೂಪ=ತತ್ ಜಲಾನಿತಿ (ಆ ಅನಿತಿ Animus : ಉಸಿರಾಟದ) ಜಲದ) ಅನುಭವ[೨] ಬರ್ಗಸನ್ನನ ಪರಿಭಾಷೆಯ Infrarational intuition ಪಾತಳಿಯು ಇದು. ಇದು ಚಿಕಿತ್ಸೆಗೆ ಒಳಗಾಗುವ ವಿಷಯವಲ್ಲ : 'ನವಿಚಿಕಿತ್ಸಾ ಅಸ್ತಿ'[೩] ಅಂತರ್‌ಹೃದಯೇ (=ಅಂತರಿಕ್ಷೇ) ಸಂಭವಿಸುವ ಈ ರಸಾತ್ಮಕ-ಅನುಭವ=ಜ್ಯೋತಿ ಅವರವರ ಪಾಡಿನ 'ಸತ್‌ತ್ಯ' : ಇದು ವ್ಯಕ್ತಿ ನಿಷ್ಠ. Sui generis ಸ್ವರೂಪದ ವೈಶಿಷ್ಟ್ಯಪೂರ್ಣ ಅನುಭವ : 'ಜ್ಯೋತಿ' ಇದು ಕತ್ತಲೆಯ ಗುಹೆಯೊಳಗಿನ ಅನುಭವ.

ಆದಕಾರಣ, ಭಾರತೀಯ ಪುರಾತನರು (ಹಗಲಿನಲ್ಲಿ ಸಂಭವಿಸಿದ್ದರೂ ಸಹ) ಇದನ್ನು ನಿತ್ಯ - ಸಾರ್ವಕಾಲಿಕ, ರಾತ್ರ ಸಮಯಾಚಾರದ 'ಸತ್ತ್ಯ' (ಸತ್‌ತ್ಯ) ಎಂದು ಹೆಸರಿಸಿದ್ದಾರೆ. 'ಜ್ಯೋತಿ' ಚಾಂದ್ರಸತ್ಯ ಎಂದೂ ಬಗೆಯಲಾಗಿದೆ. ಪಾಶ್ಚಾತ್ಯ ಪರಂಪರೆಯಲ್ಲಿ, ಈ ಸ - ರಸ ಸತ್ - ತ್ವ : ಸಾರ - ತತ್‌ತ್ವವನ್ನು Essence=Being in becoming ಎಂದು ಹೆಸರಿಸಲಾಗಿದೆ. ಈ 'Being in becoming' ಸ್ವರೂಪವನ್ನು, 'ತುಚ್ಛ್ಯೇನ (ಜಲೇನ) ಅಪಿಹಿತಂ ಆಭು ಆಸೀತ್' ಎಂದಿರುವಲ್ಲಿ[೪] 'ಏಕಂ' 'ತತ್' ಎಂದೂ ಸೂಚಿತವಾದದ್ದು 'ಆಭು' (Being in becoming : ಇನ್ನೂ ಆಗಲಿರುವ ಮೂರ್ತಾಮೂರ್ತ) ರೂಪವೇ ಇರಬಲ್ಲದು. ಈ ಅನುಭಾವವು 'ಹೃದಿ

ಪ್ರತೀಷ್ಯ' (ಹೃದಯದಲ್ಲಿ ಇಚ್ಛಿಸಿ ನೋಡಿ) ಅರಿಯಬೇಕಾದ, ಬಂಧುರ (: ಸಂ- ಬಂಧದ) ಸತ್ಯ. ಇಲ್ಲಿ 'ಬಂಧು'ರ, 'ಬಂಧ' ಏನು? 'ಸತ್ಯ: ಬಂಧು:' = (ಭೂಃ ಪಾತಳಿಯ ಮೇಲಣ) ವಿಸೃಷ್ಟಿಯಲ್ಲಿ ಹೊರಬಂದ 'ಸತ್' (ಸತ್ತ್ವ) ರೂಪದೊಡನೆ, ಇನ್ನೊಂದು (ಭುವಃ) ಪಾತಳಿಯ ಮೇಲಣ ಅ-ಮೂರ್ತದಲ್ಲಿ (: ಅ- ಸತಿ) ಈ ಆಭು, ಬದ್ಧವಾಗಿದೆ.

ಹೀಗೆ ಭೂಃ ಮತ್ತು ಭುವಃ ಇವೆರಡೂ ಪಾತಳಿಗಳ ಸಂ - ಬಂಧವಿರುವ 'ಬಂಧುರ' (Correspondence) Truth ಇದು. ಇಲ್ಲಿ ಸತ್-ತ್ಯ ಪಾತಳಿಯ ವಾಸ್ತವಚಿತ್ರವಿದೆ. ಸ್ತ್ರೀ - ಪುಂಯೋಗ 'ಸಮಾಧಿ'ಯ ಮೇಲೆ ಬರೆದ ಶಾಸನ ಈ Truth ಫಕ್ಕನೆ ಮಿಂಚಿದಂತಾಗಿ ಆದ ಪ್ರಜ್ಞೋದಯ ಈ ಸಂಯೋಗ ಭಂಗಕ್ಕೆ ಕಾರಣವಾಯಿತು ! ಈ 'ಪ್ರಜ್ಞಾ' ಪ್ರಾದುರ್ಭಾವ : (Emergent or contingency) ಖೋಡಿ ! 'ಶನಿ' ! 'ವಾನರ' ಪಾತಳಿಯವರೆಗಿನ ಪ್ರಾಣಚೇತಸದಲ್ಲಿ-ಅಂಗಾನಾಂರಸದ ಓಕುಳಿ ಆಟದಲ್ಲಿ-ಕಾಣದೊರೆಯದ್ದು, (ಡಾರ್ವಿನ್ ಹೇಳುವ) ವಾನರ ಪಾತಳಿಯ ತರುವಾಯದ 'ನರ' ವರ್ಗದ ಪಾತಳಿಯ ಜೀವಿತದಲ್ಲಿಯೇ ತಲೆಯೆತ್ತಿ ಮೇಲೆ ಬರಬೇಕೆ?

ಈ ಸ- ರಸ : ಬಂಧುರ Truth ಇದು one without second ಸ್ವರೂಪ, ಅನನ್ಯ ಸಾಧಾರಣ, 'ಏಕಂ ಏವ ಸತ್-ತ್ಯ' ಎಂದು ಉಭಯ ಪಕ್ಷಕ್ಕೂ ಎನಿಸುತ್ತಿರುವಾಗ, ಆದ ಯೋಗ-ಸಮಾಧಿ ಭಂಗವು ಉಭಯತರಿಗೂ ತಂದ ವಿರಸದ ಪ್ರಕ್ಷುಬ್ಧ ಮನೋಭಾವದಿಂದಾಗಿ, ಪ್ರಜ್ಞಾ-ಪ್ರಾದುರ್ಭಾವವು 'ಅನಿಷ್ಟ ಘಟನೆ' ಎಂದು ಎನಿಸತೊಡಗಿದ್ದುದಕ್ಕೆ ವಿರಕ್ತಪಂಥಿಗಳ 'ಜ್ಞಾನ'ದ ಬಗೆಗಿನ ಗ್ರಹಿಕೆಯೇ ಸಾಕ್ಷಿ. 'ಜ್ಞಾನ-ವೃಕ್ಷ'ದ ಫಲ (: ಪಿಪ್ಪಲದ ಮಧುರ ರಸ) ಸವಿಯಲು ಪ್ರೇರಿಸಿತೆಂಬ 'ನಾಗ' : ಸರ್ಪವನ್ನು ಶಪಿಸಿದ ನಾಟಕವು ಇನ್ನೊಂದು ಪ್ರಮಾಣ. ಉಭಯಪಕ್ಷದ ತಮ್ಮ ಅನುಭವವೇ ಏಕಂ-ಸತ್ ಎಂಬ ಆ ಮೂಲ ಆದೇಶವನ್ನು ಕಲ್ಕೀ -ತುರಾಯಿ ಅಥವಾ ಹರಿದಾಸಿ, ನಾಗೇಶಿ ಮಾದರಿಯ ಗೀತಗಳು, ಆ ಪ್ರಮಾಥೀ (primary and Primeval) ಇಂದ್ರಿಯಾನುಭವದ, ದುರಂತದ ಕಥೆಯ ನೆನಹನ್ನು ಅಮರವಾಗಿ ಉಳಿಸಿಕೊಂಡು ಬಂದಿವೆ. ಈ ಹಾಡುಗಳು ಹೋಳಿ (: ಕಾಮ -ರತಿಯ) ಹಬ್ಬದ ಸಾಹಚರ್ಯದಲ್ಲಿ ಉಳಿದುಬಂಧಿರುವ ಈ ಸಂ-ಗತಿ (self-consistency) ಮಾನವೇತಿಹಾಸದೊಳಗಿನ 'ಇತಿ ಹ ಆಸ' ಎಂಬ ಸ್ವರೂಪದ ಒಂದು ಪ್ರಸಂಗದ ವಾಸ್ತವ ಸ್ವರೂಪವನ್ನು ಮನಗಾಣಿಸಿ ಕೊಡುತ್ತದೆ. 'ಹೋಳೀ ಹಬ್ಬಕ್ಕಾಗಿ, ಈ ಯಾರು ಹೆಚ್ಚು - ಗಂಡೋ ಹೆಣ್ಣೋ ಎಂಬ ಈರ್ಷ್ಯೆಯ ಕಾದಲರ ಕಾದಾಟದ ಹಾಡು ರಚಿಸಲಾಯಿತು' ಎಂದು ಬಗೆಯುವುದು ನೈಸರ್ಗಿಕವೇ - ಸಮಂಜಸವೇ ? ಅಥವಾ ಜೀವನಾನುಭವದ ಬಳಿಕ ಈ ಹಾಡು, ಈ ಹಬ್ಬ ಹುಟ್ಟಿದುವು ಎನ್ನುವುದು ವಾಸ್ತವವೆ? ಪ್ರಾಜ್ಞರು ನಿರ್ಧರಿಸಲಿ.

'ಹರಿದಾಸೀ- ನಾಗೇಶೀ' ಗಂಡು ಹೆಚ್ಚು, ಹೆಣ್ಣು ಹೆಚ್ಚು ಎಂಬ ಈ ಪಲ್ಲವಿಯ (motif) ದೃಷ್ಟಿಕೋನದಲ್ಲಿ, 'ಕಾದಾಟ' ಇದೇ ಈ ಜೀವಿತದ ಸ್ಥಾಯೀಭಾವ ಎಂಬ ಭೂಮಿಕೆಯಿದೆ. ಪುರಾತನ ಗ್ರೀಕಿನ ಹಿರಾಕ್ಲಿಟಸ್ ಎಂಬ ದ್ರಷ್ಟಾರನು War is father of all and king of all ಎಂಬ ಸೂತ್ರ ಹೇಳಿದ್ದಾನೆ. ಭಾರತೀಯ ಆದಿಮಾತಾ, ಅಥವಾ ಆದಿಪುರುಷ ಎಂಬ ಶ್ರದ್ಧೆಯ ತಳಹದಿಯಲ್ಲಿ ಹಿರಾಕ್ಲಿಟಸ್‌ನ ತಾತ್ವಿಕ ತಳಹದಿಯೇ ಇದು.* ಅದರೊಳಗಿನ ತೀವ್ರತೆಯನ್ನು ತಿದ್ದಿ ಸಪ್ಪೆಮಾಡಲಾಗಿದೆ. ಮಹಿಷ (= ಚಂದ್ರ), ಮಹಿಷಾಸುರ ಮರ್ದಿನಿ (: ಚಂದ್ರಾಂಬಾ) ಈ ಶಬ್ದ ಪ್ರತಿಮೆಗಳ ಆದಿಮಾತಾ, ಆದಿಪುರುಷ ಸಂಪ್ರದಾಯದ 'ಅದಿತಿ'ಗೂ ಮುಂಚಿನ ಹಂತದುವು. 'ಮಹಿಷ' (ಪತಿಯನ್ನು) 'ಮಹಿಷಿ' ಸಂಹರಿಸಿದ ಕಥೆಯ ಆಶಯವೇ ಇನ್ನೂ ಬೇರೆ

---

* 'ಋಗ್ವೇದ ಸಾರ ನಾಗಪ್ರತಿಮಾ ವಿಚಾರ' ಗ್ರಂಥದಲ್ಲಿ ದಿತಿ-ಅದಿತಿಯರು ಹೇಗೆ ಆದಿಮಾತೆಯರೆಂಬುದನ್ನು ವಿವರವಾಗಿ ವ್ಯಾಖ್ಯಾನಿಸಿದ್ದಾರೆ. ಋಗ್ವೇದಕಾಲೀನ ಶಬ್ದಪ್ರತಿಮೆಗಳಲ್ಲಿ ಈ ಅಂಶವಿರುವ ಹಲವು ಬಗೆಗಳನ್ನು ಪುರಾತನ ಸಾಂಸ್ಕೃತಿಕ ಪ್ರತಿಮೆಗಳ ತುಲನಾತ್ಮಕ ಸರಣಿಯಲ್ಲಿ ಶಂಬಾ ತೋರಿಸಿದ್ದಾರೆ (ಸಂ)

ಶಬ್ದಪ್ರತಿಮೆಗಳ ರೂಪದಲ್ಲಿಯೂ ದೊರೆಯುತ್ತವೆ. ತ್ರಿಪುರ-ಸುಂದರಿ (ತ್ರಿ-ಪುರ, ತ್ರಿ-ಚಕ್ರ, ತ್ರಿ-ಅಂಬಕ (ಕಣ್ಣ : ರಸಸ್ರವಿಸುವ ಎಡೆ) ತ್ರಿ-ಪುರ ಸಂಹಾರಕದೇವನ ಕಥೆ, ಮಹಿಷಾಸುರ ಮರ್ದನದಲ್ಲಿ 'ಸ್ತ್ರೀ' ಏರಿಹೋಗುವ ಚಿತ್ರವಿದೆ. ತ್ರಿಪುರ-ಸಂಹಾರದಲ್ಲಿ 'ಪುರುಷ'ನ - 'ಕಡಗೋಲ' - ಕೃಷ್ಣನ ಏರಾಟವಿದೆ! ಪುರಂದರ (ಪುರ-ಒಡೆದು ಹಾಕಿದವನು) 'ವಿಠ್ಠಲ' ಏಕಾಕಿ ನಿಂತಿದ್ದಾನೆ, ಚಂದ್ರಭಾಗೆಯ ತಡಿಯಲ್ಲಿ ಕಡಗೋಲ 'ಕೃಷ್ಣ' ಉಡುಪ (: ಉಡುರಾಜ) ಕ್ಷೇತ್ರದಲ್ಲಿ 'ಸಮುದ್ರ' ತಟದಲ್ಲಿ ಗೋಪಿಕೆಯರನ್ನುಳಿದು ಒಬ್ಬನೇ ನಿಂತಿದ್ದಾನೆ ಈ 'ಅಷ್ಟ' (ಮೃತ್ಯು ಸೂಚಕ ಸಂಖ್ಯೆ) ಮಠಗಳ ಪೀಠಸ್ಥರು 'ಕು-ಮಾರ' ವ್ರತಿಗಳೇ ಇರುವ ವಾಡಿಕೆ ನಿಷ್ಕಾರಣವಲ್ಲ!

ಈ Truth ನಿಜಕ್ಕೂ<Truce : 'ತುರ್ತು' ಕಾದಾಟ ಸಾಕು ಎಂಬ ಪರಿಸ್ಥಿತಿ ಸೂಚಕವಿದೆ! ಭಾರತೀಯ ಪರಂಪರೆಯ ಬಂಧುರ ಸತ್ಯಕ್ಕೆ : ಭವ- ಬಂಧನ ಸೂಚಕ - 'ಬಾಳು ಹಾಳು' ಎಂಬ ಮನೋಭಾವ ಪ್ರೇರಕ ಪುರೂ - ರವನ ಅನಾಥತೆಯ ವಾಸ್ತವ ಚಿತ್ರವು ಪಾಶ್ಚಾತ್ಯ ಪರಂಪರೆಯ Truth<Truce. ಇದೇ True ನಿಜ = ತತ್ಕಾಲೀನ ಅನುಭವ Phenomena) ಆಗಿದೆ. ಇದು ಸತ್‌ತ್ಯ; 'ಸತ್ಯ'ವಲ್ಲ. ಸತ್ -ತ್ಯದಿಂದ ಭಿನ್ನವಾದ ಭಾರತೀಯ ಪರಂಪರೆಯ ಇನ್ನೊಂದು 'ಸತ್ಯ'ವು ಆಪ: ರಸ: ರೇತದ (Biosphere) ಆಚೆಗಿನ ಪಾತಳಿಯದು ಆಗಿದೆ. ಡಾ।। ಹಕ್‌ಸ್ಲೇ ಹೇಳುವ 'Noosphere' ಎಂದರೆ ಇದು : ಪ್ರಜ್ಞಾಪ್ರಾದುರ್ಭಾವದ ಪ್ರೇರಣಾ ಕೇಂದ್ರ; ಡಾ।। ಕ್ರೋಬರ್, ಡಾ।। ಹಕ್‌ಸ್ಲೆ ಪ್ರಭೃತಿಗಳು Culture-Superorganic ಎಂದು ಬಗೆಯುವ ಆವಶ್ಯಕತೆಯನ್ನು ಒಪ್ಪಬೇಕಾದ ಕಾರಣವೇ ಇದು : ಈ ಪ್ರಜ್ಞಾ : ಪ್ರಾತಿಭದೃಷ್ಟಿ, ದಿಕ್ಕಾಲ ಪರಿಸರದ - ಭೌತಕಾಲ ಗತಿಯ (Time flux) ಗಸಣೆ (ಘರ್ಷಣ) ಇಲ್ಲದೆ, ಅದರ ಆಚೆಗಿನ ಪಾತಳಿ ಮೇಲೆ ಇರುತ್ತದೆ. ಈ ಪ್ರಜ್ಞೆ ಪ್ರೇರಿಸುವ ವೈಚಾರಿಕ 'ಆಕೃತಿ'ಗಳು ಶಾಶ್ವತವಿರುವುದಾಗಿ, ಸನಾತನವಿರುವುದಾಗಿ, ಒಪ್ಪದೆ 'History repeats itself' ಎಂಬ ಲೋಕಾನುಭವದ ಆಶಯವನ್ನು ಗ್ರಹಿಸುವುದಕ್ಕೆ ಆಗುವುದಿಲ್ಲ. ಮಾನವರಿಗೆ ಅವರ ಇತಿಹಾಸದಲ್ಲಿ, ವಾಸ್ತವ : ಸತ್ಯದ ಜ್ಞಾನವು ಶಕ್ಯವಾಗತೊಡಗಿದ್ದು, ಈ ಪ್ರಜ್ಞಾ : ಪ್ರಾತಿಭ ದೃಷ್ಟಿಯ (: ವೇದನ - wisdom) ಉದಯದ ಹಂತದಿಂದ. ಇದು ಹುಟ್ಟಿನಿಂದ ಬರುವ ತಿಳಿ (ವಿನ) ಬೆಳಕು. ಬರ್ಗಸನ್ನನು ಹೇಳುವ 'Supra-mental intuition'ದ ಪಾತಳಿ ಇದು.

ಸತ್ತ್ವ ಸಮವಾಯರೂಪ ಎರಡು, ಅಥವಾ ಏಕಾತ್ಮಕ ಒಂದೇ ಪಾತಳಿಯ ಮೇಲಣದು ಇರುತ್ತದೆ. ಈ ಸತ್ಯಾನ್ವೇಷಣೆಯ ಒಂದು ಒರೆಗಲ್ಲು, ದ್ಯಾವಾಭೂಮಿ ಅಥವಾ ಪಿಂಡಾಂಡ - ಬ್ರಹ್ಮಾಂಡ, ಇಲ್ಲವೆ ಭೂಃ - ಭುವಃ ಅಥವಾ ಮೂರ್ತ (ಭೂಃ) ಅಮೂರ್ತ (ಭುವಃ) ಇವೆರಡೂ ಏಕಾತ್ಮಕ - ಸಮವಾಯ ರೂಪದ, ಎಂದರೆ ಇದನ್ನೇ ಹೀಗೂ ಹೇಳಬಹುದು. ದೃಶ್ಯ - ಮೂರ್ತ Phenomena, ಅಮೂರ್ತ ಅದೃಶ್ಯ Nature ಈ ಒಂದೆ ಪಾತಳಿಯ ಮೇಲಣ ಸ - ರಸ : ಬಂಧುರ ಸತ್ತ್ವದ ಉಪಾಸನೆಯ ಗುರಿಯಾಗಿರುವ ಜೀವನಾನುಭವವು, ಇದನ್ನೇ ದಿವ್ಯಾಧ್ಯಾತ್ಮದ ಭಾಷೆಯಲ್ಲಿ 'ಭಗ-ವಂತ'ನು ಹೇಳಿದ್ದರೂ ಇದು ಭೌತಜೀವನ ಪಾತಳಿಯದೇ ಇರಬಲ್ಲದು. ಈ ದಿವ್ಯಾಧ್ಯಾತ್ಮವು 'ಪಶು -ಪತಿ' (Brute nature) ಉಪಾಸನೆಯಾಗಿ ಇಂಥ ಜೀವನರೀತಿಯು ಪ್ರಳಯ ತಾಂಡವದಲ್ಲಿ ಎಂದರೆ ಭ್ರಷ್ಟಾಚಾರ-ಅನಾಚಾರದಲ್ಲಿ ಪರಿಣಮಿಸದಿದ್ದರೇ ಸೋಜಿಗ.

ಸತ್-ತ್ವನ್ ಪಾತಳಿಯು ಅಂಗಾನಾಂ ರಸದ ಪಾತಳಿಯ = ಪ್ರಾಣಚೇತಸದ ಪಾತಳಿಯ ಜೀವನ ರೀತಿಯು ಹೋರಟೆಯಾಗಿ ಪರಿಣಮಿಸಲೇಬೇಕು, ಎಂಬುದನ್ನು ಹೇಳುವ ದೈವತ - ಕಥೆಗಳಿಂದ ಮಹಿಷಿ, ಮಹಿಷಾಸುರಮರ್ದಿನಿ 'ಸತಿ' ಮಹಿಷನನ್ನು ಕೊಲ್ಲುವುದು. ಅಥವಾ ತ್ರಿಪುರಸುಂದರಿಯನ್ನು ಪುರುಷನು ಸಂಹರಿಸುವುದು ಒಂದೇ ಬಗೆ. ವ್ಯಾಸನ 'ಚಂದ್ರ' ವಂಶದ ಅಂತ್ಯ 'ಕುರು' - (ಇಂದ್ರಿಯ) ಕರ್ಮಭೂಮಿಯಲ್ಲಿ ! ಅಶ್ವತ್ಥ ವೃಕ್ಷರೂಪನೆಂಬ ಕೃಷ್ಣನು (ತನ್ನ) ಗಿಡದ ಅಡಿಯಲ್ಲಿ ಅಸು ನೀಗಿದನೆಂಬ, ಈ ಕೊನೆ ಉದ್ಬೋಧಕವಿದೆ. ಯಾದವರು ತಮ್ಮ 'ಒನಕೆ'ಗಳಿಂದ ಒಬ್ಬರೊಬ್ಬರನ್ನು ಕೊಂದರಂತೆ. ಪಾಶ್ಚಾತ್ಯ ಪಂರಪರೆಯಲ್ಲಿ 'War of Trees' ಎಂಬ ಕಥೆಯೊಂದು ಉಂಟು.

ಈ ಕಟು ಅನುಭವಗಳನ್ನು ಲೆಕ್ಕಿಸಿ, ಭಾರತದಲ್ಲಿ ಮೈವೆತ್ತಿದ್ದ ವಿವಸ್ವನ್ ದೈವತದ ಪ್ರೇರಣೆಯ ಮನುಪ್ರಣೀತ ಮಾನವಧರ್ಮವು, ಪ್ರಪಂಚಕ್ಕೆ ಆದರ್ಶ ಕಂನಡಿ ಸ್ವರೂಪ ಜೀವನದ ಧರ್ಮರೂಪಿಸಿದೆ. ಭೂಃ - ಭುವಃ ಇವೆರಡರ ನಡುವಣ ಈ ಸತ್ತ್ಯವನ್ನು, 'ದಾಂಪತ್ಯ ಧರ್ಮ'ದ ಪ್ರಯೋಜನಕ್ಕಾಗಿ ಉಪಯೋಗಿಸಿ ಕೊಂಡದ್ದಾಯಿತು. ಈ ಚಾಂದ್ರಸತ್ಯವನ್ನು ಕುಟುಂಬ ಸಂಸ್ಥೆ ತಳಹದಿಯಾಗುವಂತೆ ರೂಪಿಸಿಕೊಂಡಿತು. 'ವಿವಾಹಕ್ಕಾಗಿ ವಿವಾಹ' ಇದು ವಿನಾಶದ ದಾರಿ. ವಿವಾಹ, ಕುಟುಂಬ, ಸಂಸ್ಥೆ, ಸಮಾಜ : ಸಮಷ್ಟಿಯ ಸಾತತ್ಯಕ್ಕಾಗಿ ; ಅದರ ನೆಮ್ಮದಿಗಾಗಿ ಇರುವ ಸಾಧನ, ಎಂಬುದು ಮಾನವಧರ್ಮದ ಶ್ರದ್ಧೆ. ಆದರೆ, ಸಾಧನವೇ ಸಾಧ್ಯ (ಸಿದ್ಧಿ) ಆಗುವಲ್ಲಿ ಜೀವನ ಮೌಲ್ಯಗಳು ನಷ್ಟವಾದ 'ಬದುಕು' ಆಗದಿರದು. ಸಾಧನ ಮತ್ತು ಸಾಧಿಸಬೇಕಾದದ್ದು ಈ ಅಂತರವು ಉಳಿಯದಂದು 'ದೇಹಧಾರಣೆಗಾಗಿ ದೇಹಧಾರಣೆ', 'ಬದುಕಿಗಾಗಿ ಬದುಕು' ಆಗುವಲ್ಲಿ ಈ ಗತಿಶೂನ್ಯ ಜೀವನವು ಆ ಜನದ ಆಗಾಮಿ ಅವನತಿಯ - ವಿನಾಶದ ಪೂರ್ವ ಸೂಚನೆಯಾಗುತ್ತದೆ. 'ಗಚ್ಛತಿ ಇತಿ ಜಗತ್'. ಆದಕಾರಣ, 'ಗತಿಕೆಡುವ' ಗತಿಗೇಡಿಯಾಗುವ ದುರ್‌ದೈವ ತಪ್ಪಿಕೊಳ್ಳಲು ಒಂದಿಲ್ಲೊಂದು ಸತ್-ಕಾರ್ಯದಲ್ಲಿ ಇರುವುದು ಕಷ್ಟದ್ದು, ತೊಂದರೆಗೆ ಕಾರಣವಾಗಬಹುದಾದದ್ದು ಆಗಬಹುದಾದರೂ, ಇಂಥಕಾರ್ಯಕ್ಕೆ ತನ್ನನ್ನು ಹೂಡಿಕೊಳ್ಳವಲ್ಲಿಯೆ ಜಾಣ್ಮೆಯಿದೆ.

ವಿವಸ್ವನ್‌ಪ್ರೇರಿತ 'ಮನು' ಎಂದರೆ ಯಾರು?

ಭಾರತದಿಂದ, ಜಾಗತಿಕ ಧರ್ಮಕ್ಕೆ, ಮಾನವ ಸಂಸ್ಕೃತಿಗೆ, ಪ್ರಗತಿಪರ, ಉದಾತ್ತ ಭವ್ಯಸ್ವರೂಪದ ಆದರ್ಶವು ಏನಾದರೂ ದೊರೆತಿದ್ದರೆ, ಅದು 'ವೈಶ್ವಾನರ ಅಗ್ನಿ'ಯ ಅನನ್ಯ ಸಾಧಾರಣ ಮೂಲಗಾಮೀ ದೃಷ್ಟಿಯನ್ನೀವ ಶಬ್ದ-ಪ್ರತಿಮೆ. ವಿಶ್ವ>ವೈಶ್ವ, 'ನರ - ಮಾನವ'ನನ್ನು, ವೈಶ್ವಕ -ಪಾತಳಿಯ ಮೇಲೆ 'ಪ್ರಜ್ಞಾ' ಪ್ರಾದುರ್ಭಾವ ಪಡೆದ ಮಟ್ಟದಲ್ಲಿ, ಆ-ದರ್ಶ (: ಕಂನಡಿಯ) ರೂಪದಲ್ಲಿ, ಸಾಕ್ಷಾತ್‌ಕರಿಸಿಕೊಂಡ, ಈ 'ಜಾತಪ್ರಜ್ಞ' (: ಜಾತವೇದಿ) ಪ್ರಾತಿಭದೃಷ್ಟಿಯ ಈ ವಿಶಾಲ, ಭವ್ಯಉದಾತತ್ತೆಯು - ಈ ಸಾಂಕೇತಿಕ - ಪ್ರತಿಮೆಯೊಳಗಿನ ಪವಿತ್ರಭಾವವು ಇದರ ಧ್ಯಾನ - ಮನನ ಮಾಡುವರಲ್ಲಿಯೂ, ಇದರ ಸಂಪರ್ಕದಿಂದ ಈ ಸಂಸರ್ಗದಿಂದ ಕೆಲಮಟ್ಟಿಗಾದರೂ ಅಂಟಿಕೊಳ್ಳದೆ ಇರದು! ಭಾರತೀಯ ಪುರಾತನರು, 'ಸೃಷ್ಟಿ' ನಿರ್ಮಾಣ ಶಕ್ತಿಯ ಪರಮಾತ್ಮ ತತ್ತ್ವವನ್ನು (= ಬ್ರಹ್ಮನ್ ಶಕ್ತಿಯನ್ನು) ಸಾಕ್ಷಾತ್ಕರಿಸಿಕೊಂಡಿದ್ದಾರೆ. ಮೊದಲ ಹಂತದ ಅನುಭಾವದಲ್ಲಿ ಕಂಡ ಇದರ ಆಕೃತಿ ಸ್ವರೂಪವು (Gestalt : ದರ್ಶನದ ಇಡೀಆಕೃತಿ), ನರ(ಳ) : ನಾರ - ಅಯನನ 'ದ್ರಪ್ಸಃ ಕೃಷ್ಣಃ' ಈ ಬಗೆಯ ಆಶಯದ ಶಬ್ದ - ಪ್ರತಿಮೆಯಾಗಿ ನಾನಾ ನಾಮಾಂತರಗಳಿಂದ ವೇದೋಪನಿಷದಾದಿ ಗ್ರಂಥಗಳಲ್ಲಿ ಪ್ರತಿಬಿಂಬಿತವಾಗಿದೆ. ಇದು ಪ್ರಜ್ಞಾ- ಪ್ರಕಾಶಕ್ಕೂ ಪೂರ್ವದ ಅನುಭಾವ (Gestalt). 'ಅವ-ಕಾಶಸ್ಥ' (ಆ-ಕಾಶದ ಪಾತಳಿಯ ಕೆಳಗಣ) 'ಅಂತರಿಕ್ಷಸ್ಥ' (Vault) (ಸಂ-ಉತ್-ದ್ರವತಿ) 'ಸಮುದ್ರ' - ಸಲಿಲಾಂಗದ 'ಆಪೋಜ್ಯೋತಿಃ' ಮೂಲಕವಾಗಿ ಆದ ಸಾಕ್ಷಾತ್ಕಾರವಿದು. ಈ 'ಆಪೋಜ್ಯೋತಿ'ಯನ್ನು : Gnostic : ಅರಿವು (Know), ಇದನ್ನೇ 'ಜ್ಞಾನ' ಎಂದು, 'ಭಗ-ವತ್ ಗೀತೆ ಚಿತ್ರಿಸಿದೆ : 'ನ ಹಿ ಜ್ಞಾನೇನ ಸದೃಶಂ: ಪವಿತ್ರಂ ಇಹ ವರ್ತತೇ,' ಈ ದರ್ಶನ (Gestalt) ಇಡಿ ಇದೆ. ಈ ಜ್ಞಾನಜ್ಯೋತಿ-ರಸ - ಅ- ಮೃತರಸ ಇರುವ ಎಡೆಯಲ್ಲಿಯೆ 'ಪವಿತ್ರ' ಉಂಟು. ಇದು 'ಕಪರ್ದ' ರೂಪ 'ಪವಿತ್ರ'! ಕ್ರೈಸ್ತಪಂಥೀಯ ಅನುಭಾವ ಆಕೃತಿರೂಪದಿಂದಲೂ Candle light ಸಾಕ್ಷಾತ್ಕಾರದ Sacral-Sacramental= Sacredness ದ ಮೂಲ ಆ-ಕೃತಿ 'ಜ್ಯೋತಿ'ಯ ಸಾಹಚರ್ಯದಲ್ಲಿ-ಸಂಪರ್ಕದಲ್ಲಿಯೇ ಇದೆ. ಇವರಿಗೆ ತಮ್ಮಲ್ಲಿ ಆದ ಸಿದ್ಧಿಯ ಸಾಧನವೇ ಇವರ 'ದೇವರು' ಆಯಿತು! ಇವರು ಸಾಧನ: ಮಾಧ್ಯಮ ಪೂಜಕರು.

ಪ್ರಜ್ಞೋದಯದೊಡನೆಯೆ ಭಾಷೆ : ಸಂಸ್ಕೃತಿ ಆಕಾರ ಪಡೆಯತೊಡಗಿದೆ, ಎಂಬ ಕಾರಣದಿಂದಲೆ, ಭಾಷಾ : ಪ್ರತಿಮೆಗಳಲ್ಲಿ 'ಭಾ' : ಪ್ರಕಾಶದ ಅಂಶವು (awareness) ಉಳಿದು ಬರಲು ಶಕ್ಯವಾಗಿದೆ. ಪ್ರಜ್ಞೆ ಇದು Consciousness of consciousness=Conscience ಸ್ವರೂಪ wisdom ಆಗಿದೆ. ಸ್ವರ್ -

ಪಾತಳಿಯ ಅರ್ಥ ರೂಪ ವಿಚಾರ ಅಥವಾ ವಿಚಾರರೂಪ ಅರ್ಥದ ಪ್ರಕಾಶಕಿರಣಗಳಿಂದಾಗಿ, ಮರ್ತ್ಯಲೋಕದ ಅಂತರಿಕ್ಷಸ್ಥ ಅವಕಾಶದಲ್ಲಿ ನಡೆವ ಏನೆಲ್ಲ ಘಟನೆ, ಪ್ರಸಂಗಗಳು ಶಬ್ದ - ಪ್ರತಿಮಾರೂಪ ಮಾಧ್ಯಮದಲ್ಲಿ ಭಾಷೆಯಲ್ಲಿ ಪ್ರತಿಬಿಂಬಿತವಾಗಿರುವುದನ್ನು ಗ್ರಹಿಸಿಕೊಳ್ಳುವುದು ಮಾನವರಿಗೆ ಶಕ್ಯವಾಗಿದೆ. ಆದರೆ 'ನಿಃ ಶಬ್ದಂ ಬ್ರಹ್ಮ' ಉಪಾಸಕರಿಗೆ ಭಾಷೆ ಸೂತ-ಕ- ವೆನಿಸತೊಡಗಿತು. ಈ ಪ್ರಜ್ಞೆ ಸರ್ವತೋಮುಖಿ ಪ್ರಕಾಶ ತತ್ -ತ್ವ. ಆದಕಾರಣ, ನಾರಾಯಣ : ಕೃಷ್ಣಭಕ್ತಿಗೆ ಜಾಗ್ರವಾಂಸರು ತತ್‌ಮಯತೆಯಲ್ಲಿ ಪ್ರಪಂಚವನ್ನು ಮರೆತು ಮುಕ್ತಸಂಗಿಗಳಾಗಲು, ತತ್ ಸ್ವರೂಪರಾಗುವ ಸಾಧನಾನುಷ್ಠಾನಕ್ಕೆ ಆಂತಕಕಾರಿಯಾಗುವ ಈ ಅನಿವಾರ್ಯ ಸಂಕಟದೊಳಗಿಂದ ಪಾರಾಗಲು ಈ ವಿಶ್ವತೋಮುಖಿ ಪ್ರಜ್ಞೆಯನ್ನು ಏಕ-ಮುಖಿ: ಏಕ-ಪಾತ್, ಏಕ ಅಯನ ಮಾರ್ಗಿಯಾಗಿಸಿ ಇದನ್ನು ನಾರ-ಅಯನ ಮಾರ್ಗಕ್ಕೆ ತಿರುಗಿಸಿದ್ದಾಯ್ತು!

ಈ ಸಂಪ್ರದಾಯವು ತನಗೆ ಆತಂಕಕಾರಿಯಾದ ಜಾತವೇದ ಅಗ್ನಿಯನ್ನು (ಪ್ರಜ್ಞೆಯನ್ನು), ನಚಿಕೇತಾಗ್ನಿಯ ಪಾತಳಿಗೆ ತಂದು ನಿಲ್ಲಿಸಿತು.ನಚಿಕೇತಾಗ್ನಿ ಎಂದರೆ ಸೃಜನ ಜಲದೊಳಗಿನ ಕಾಮನಾಪ್ರೇರಕ ಕಾವು=ನೀರೊಳಗಿನ ಅಗ್ನಿ=ಅಗ್ನಿ=ನಾರಾಯಣ! ವೈಶ್ವಾನರರೂಪ ಅಗ್ನಿ ಎಂದರೆ ಅಂದಿನ ಮಹಾಜನ ಸಮಿತಿಗಳು, ಜನಪದ ಸಮಿತಿಗಳು (folk wisdom). ವೇದಗಳಲ್ಲಿ ಬರುವ ಸಮಿತಿ; ಸಭೆಗಳ ನಿರ್ದೇಶಗಳನ್ನು ಸಂಶೋಧಕರು ಬೆಳಕಿಗೆ ತಂದಿದ್ದಾರೆ. ಇಂದಿನ ಹಾರುವರ ಪರಂಪರೆಯಲ್ಲಿಯೂ ಉಳಿದು ಬಂದಿರುವ ಮಂತ್ರಗಳಲ್ಲಿ ಮಹಾಜನ ಈ ಶಬ್ದ ಪ್ರತಿಮೆ ಇದೆ. ಪುಣ್ಯಾಹ-ವಾಚನಾದಿ ಪ್ರಸಂಗಗಳಲ್ಲಿ 'ಮಹಾಜನಾಯ' ಎಂದು ಸ್ಮರಿಸಿಕೊಂಡು ಅವರನ್ನು ಗೌರವಿಸಿ, ವಂದಿಸುವ ವಾಡಿಕೆಯಿದೆ. ಈ ಶಬ್ದಪ್ರತಿಮೆಯು ಈ ನಡೆವಳಿ, 'ಸ್ವಯಂ-ಭೂ' ನಾರಾಯಣನ ಉಪಾಸಕರ Gestalt ದರ್ಶನದ ಅಂಗವಾಗಿರಲು ಶಕ್ಯವಿಲ್ಲ. ಮಹಾಜನರನ್ನು ಜನಪದವನ್ನು ವಂದಿಸುವಲ್ಲಿ ಇದು ವೈಶ್ವಾನರ ಅಗ್ನಿಯ ಪೂಜೆಯೇ ಆಗುತ್ತದೆ. ವೈಶ್ವಾನರಾಗ್ನಿ ದರ್ಶನ (Gestalt) ಇದು ಮಾನವ ಧರ್ಮದ ಜಾತವೇದಿಗಳ ಪ್ರಾತಿಭ ದೃಷ್ಟಿಗೆ ಆದ ಸಾಕ್ಷಾತ್ಕಾರವೇ ಹೊರತು 'ದ್ರಪ್ಸಃ ಕೃಷ್ಣಃ' ಪ್ರತಿಮಾ ಉಪಾಸಕರ Gestalt ಇದಲ್ಲ. ವೈಶ್ವಾನರಾಗ್ನಿ-ಸಮಾಜಸಮಷ್ಟಿ- ಜನಪದವು (folk wisdom) ಇದು ಆ ಭಾಷಿಕರ ಜೀವನ : ಸಂಸ್ಕೃತಿ ರೂಪಿಸುವ, ಭೂಲೋಕದೊಳಗಿನ ಜ್ಞಾನ ಪ್ರಕಾಶರೂಪ, ವಿವಸ್ವನ್ ದೈವತದ ಪ್ರತಿನಿಧಿ, (ಸಂಸ್ಕೃತಿ ಸ್ವರೂಪ) ಮಹಾವಸ್ತ್ರವನ್ನು ನೇಯುವ ನೇಕಾರನ ರೂಪಕವು, ಇಂದಿನ ಋಗ್ವೇದದಲ್ಲಿಯೂ ಉಳಿದಿದೆ![೫] ಆದರೆ ನಾಮ-ಮಾತ್ರಕ್ಕೆ ಸೂರ್ಯನು (ಹಗಲು) ಹಾಸು, ಚಂದ್ರನು (ರಾತ್ರಿ) ಹೊಕ್ಕು. ಈ ನೈಸರ್ಗಿಕ ಕ್ರಮವು ಉಳಿದು ಬಂದಿದ್ದರೆ, ಭಾರತದಲ್ಲಿ ವಿವಸ್ವನ್ ಪ್ರಣೀತ ಮಾನವಧರ್ಮವೇ (ಜನಪದ ಪ್ರಜ್ಞೆ ರೂಪಿಸುವ ಸಮಯಾಚಾರ) ಇಂದಿಗೂ ಉಳಿದು ಬರಬಹುದಿತ್ತು! ಆದರೆ, ಸರ್ವೇಷಾಂ ಆನಂದಾನಾಂ ಏಕ ಅಯನವು (passage) ಹತ್ತಿರವೇ (: ಉಪ-ಸ್ಥವು) ಇರುವಾಗ[೬] ಕರ್ಮಸಿದ್ಧಿಯ ಫಲ ಪಕ್ಕದಲ್ಲಿ ಉಪ-ಸ್ಥಿತವಿರುವಾಗ ಬಾಹ್ಯ-ಲೌಕಿಕ ದೃಷ್ಟಿಯವರಾಗಿ ಜೀವನಾನಂದಕ್ಕಾಗಿ, ಜನ-ಪದಕ್ಕೆ, ಮಹಾಜನಕ್ಕೆ, ವೈಶ್ವಾನರಾಗ್ನಿಗೆ ಏಕೆ ಶರಣು ಹೋಗಬೇಕು? ಭಾಷೆ--ಸಂಸ್ಕೃತಿರೂಪ ಮಹಾವಸ್ತ್ರವು ದಿಗಂಬರ ಸತ್ತ್ವ=ರಸಸತ್ತ್ವದ ಸಾಕ್ಷಾತ್ಕಾರಿಗಳಿಗೆ ಯಾತಕ್ಕೆ ಬೇಕು? 'ರಸವೇ ಜೀವನ' 'ರಸವೇ ಜೀವನ' ಜಲ ಅಲ್ಲವೆ? ಆದುದರಿಂದ ಈ ಸ-ರಸಸತ್ತ್ವ-ಸಾಕ್ಷಾತ್ಕಾರವೇ ಶ್ರೇಷ್ಠ, ಎಂಬುದು ಇದರ ಶ್ರದ್ಧೆ.

ಈ ಕಾರಣದಿಂದಾಗಿ, ದಿವ್ಯಾಧ್ಯಾತ್ಮವಾದೀ ಸಿದ್ಧಪುರುಷನ-ಅಂತರ್‌ವಾಣಿಯ ದಿವ್ಯದೃಷ್ಟಿಯ ಒಬ್ಬ ಮಹಾತ್ಮನ-ಯೋಗ್ಯತೆ ಸಮಾಜದ ಸಮಷ್ಟಿಗೆ-ಜನಪದಕ್ಕೆ ಇರಲು ಶಕ್ಯವೇ? ಸ-ರಸ ಸತ್‌ತ್ವ ಸಾಕ್ಷಾತ್ಕಾರಕ್ಕೆ, ಆತಂಕಕಾರೀ ಜಾತವೇದ ಅಗ್ನಿಯನ್ನು ನಾಚಿಕೇತಾಗ್ನಿಯು ನುಂಗಿದಂತೆ, ಈ ವೈಶ್ವಾನರಾಗ್ನಿಯನ್ನು ನಿರುಪಯುಕ್ತ ಗೊಳಿಸಲು ಆಗಿರುವ ಬಗೆಬಗೆಯ ತಂತ್ರ : ಮಂತ್ರಗಳಲ್ಲಿ ಅತ್ಯಂತ ಭಯಂಕರ ಸ್ವರೂಪದ ಯಾತು (Black magic) ಎಂದರೆ ಚಂದ್ರ (ರಾತ್ರಿ) ದೈವತವನ್ನು, ಸೂರ್ಯ (ಹಗಲು) ಅನುಸರಿಸುತ್ತದೆ, ಎಂಬ ಆಶಯದ ಈ ಸಾಂಕೇತಿಕ ಪ್ರತಿಮೆ ನೋಡಿಕೊಳ್ಳಿ. ಭಗ-ವಾನ್ ಕೃಷ್ಣ ಪ್ರತಿಮೆಯ ಅನುಯಾಯಿ, ಅರ್ಜುನ! ಇದು ಸೌರತೇಜದ ವಿವಸ್ವನ್ ಇಂದ್ರನ ಅಂಶ ಎಂದು ಸಂಪ್ರದಾಯವೇ ಹೇಳುತ್ತದೆ.

ಮೂಲ ವಿವಸ್ವನ್ ಪ್ರೇರಣೆ ಮನು (ಜನಪದ ಸಮಷ್ಟಿ) ಪ್ರಣೀತ ಮಾನವಧರ್ಮ ಪರಂಪರೆಯನ್ನು ಅರ್ಥವಿಹೀನವಾಗಿಸಿರುವ ಆದಿತ್ಯ ಸಂಪ್ರದಾಯದ ಸ್ವರೂಪವನ್ನು ಗ್ರಹಿಸಿಕೊಳ್ಳಲು ಸುಲಭವಾಗಲಿ ಎಂದು ಈ ಮುನ್-ನುಡಿ ಅವಶ್ಯವೆನಿಸಿತು. ಮಾನವೇತಿಹಾಸದ ಗತಿಯ ದಿಕ್ಕನ್ನು ಕಂಡುಕೊಳ್ಳುವ ದಾರಿಯಲ್ಲಿ, ನನ್ನ ವ್ಯಾಸಂಗವು-ಜ್ಞಾನ ಜಿಜ್ಞಾಸೆ ನನ್ನನ್ನು ಇಲ್ಲಿಯ ವರೆಗೆ ನಡೆಸಿಕೊಂಡು ಬಂದಿದೆ. ಕೇವಲ ನಿನ್ನೆಗಳನ್ನೇ ಅರಿಯುವ ದಾರಿ ನನಗೆ ಎಂದೂ ಹಿಡಿಸಿಲ್ಲ. ನಮ್ಮ ವರ್ತಮಾನಕಾಲೀನ ಸಮಸ್ಯೆಗಳ ಬೇರುಗಳು ನಿನ್ನೆಯಲ್ಲಿ ದೂರದ ಆಳದ ವರೆಗೆ ಹೋಗಿರುತ್ತವೆ. ಆ ನಿನ್ನೆಗಳ ನೆಲೆ ಗೊತ್ತಾಗದೆ ಇಂದಿನ ಸಮಸ್ಯೆಗಳಿಗೆ ಸಮರ್ಪಕ ಪರಿಹಾರವು ದೊರೆಯಲಾರದು. ನಮ್ಮ ಸಂಸ್ಕೃತಿಯೊಳಗಿನ ಇಂದಿನ ಬ್ರಾಹ್ಮಣ-ಶೂದ್ರ, ಆರ್ಯ-ದ್ರಾವಿಡ ಸಮಸ್ಯೆಯ ಸ್ವರೂಪ ಗ್ರಹಣಕ್ಕೆ ಈ ಪ್ರಯೋಜನಕಾರಿಯಾದ ಕೆಲಮಾತು ನನ್ನ ಅರಿಕೆಗೆ ಬಂದವನ್ನು ಇಲ್ಲಿ ನಿವೇದಿಸಿದ್ದೇನೆ.

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** X-೧೨೯-೩
೨. ***ಬೃಹದಾರಣ್ಯಕೋಪನಿಷತ್ತು*** ೧.೩.೧೯, ೫.೮.೧೦.೧೧ ***ಛಾಂದೋಗ್ಯೋಪನಿಷತ್ತು*** ೩.೧೪.೧
೩. ***ಛಾಂದೋಗ್ಯೋಪನಿಷತ್ತು*** ೩.೧೪.೪
೪. ***ಋಗ್ವೇದ ಸಂಹಿತೆ*** X-೧೨೯೩
೫. ***ಅದೇ*** vi-೯
೬. ***ಬೃಹದಾರಣ್ಯಕೋಪನಿಷತ್ತು*** ೨.೪.೧೧

ವಿಚಾರಸೂತ್ರ

ಹಿಂದೂ ಎಂಬ ದೇಶನಾಮ ಆಗಂತುಕ. ಇದು ಭರತ (ರ) ಖಂಡ, ಭಾರತದಂತೆ ವೇದಕಾಲದ ವರೆಗೂ ಒಯ್ಯುವುದಿಲ್ಲ. ದೇಶನಾಮವೇ ಆಗುಂತುಕವಿರುವಾಗ, ಹಿಂದೂ ಎಂಬ ಧರ್ಮಸೂಚಕ ಹೆಸರು ಅಸಮರ್ಪಕ, ಪರಂಪರಾ ವಿಹೀನ! ಭಾರತೀಯರ ಅನಾಥತೆ, ಪರಂಪರಾಭ್ರಷ್ಟ ದೈನ್ಯಾವಸ್ಥೆಯ ಸಮ್ಮಿಸ್ವ-ಸ್ವರೂಪದ ದರ್ಶನ ಮಾಡಿಸುತ್ತಿರುವ ಹೆಸರು 'ಹಿಂದೂ'. ಹಿಂದುಳಿದವರ ದೇಶನಾಮ ಎಂಬ ಅರ್ಥವನ್ನು ಅಸಮರ್ಪಕ ಎನ್ನಲು ಅವಕಾಶವಿಲ್ಲ* ದೇಶದ-ಸಮಾಜದ ದುರವಸ್ಥೆಯ ಕಾರಣಪರಂಪರೆಗೆ ನೇತಾರವರ್ಗವೇ ಕಾರಣ. ಗುರುವರ್ಗ ಪೀಠಗಳು, ಬ್ರಾಹ್ಮಣರೆಂಬ ವರ್ಗವು ಈ ಅವಸ್ಥೆಗೆ ಕಾರಣವೆನ್ನಬೇಕಾಗುತ್ತದೆ. ಹಿಂದೂ ಹಿಂದೆ ಸರಿಸಿದ ರಾಷ್ಟ್ರನಾಮವು ಭಾರತ. ಹಾಗಾದರೆ, ಹಿಂದೂ ಎಂಬುದಕ್ಕಿಂತಲೂ ಮುಂಚಿನ ಧರ್ಮನಾಮವು ಯಾವುದು? 'ಹಿಂದೂ ಲಾ' ಇದು ಪ್ರಾಮುಖ್ಯದಿಂದ ಮನುಪ್ರಣೀತ ಮಾನವ ಧರ್ಮದ-ಸ್ಮೃತಿ (Code) ಆಧಾರದಿಂದ ರಚಿತವಾಗಿದೆ. ಇದು ನಿಜವಿದ್ದರೆ ಭಾರತೀಯ ಪೂರ್ವಪರಂಪರೆಯ ಧರ್ಮನಾಮವು, ಮಾನವ ಧರ್ಮ ಎಂದು ಒಪ್ಪಲೇಬೇಕಾಗುತ್ತದೆ. ಆದರೆ, ಹಿಂದೂ (ಲಾ)=Laws of Manu ಇದರ ಪೂರ್ವ ಪರಂಪರೆಯಲ್ಲಿ ಪಲ್ಲಟವಾಗಿದೆ! ವಿವಸ್ವನ್ ಮನುಪ್ರಣೀತ ಮಾನವಧರ್ಮವನ್ನು ಹಿಮ್ಮೆಟ್ಟಿಸಿ ಆದಿತ್ಯ ಸಂಪ್ರದಾಯದ ಸ್ವಾಯಂಭುವ ಮನುವಿನ ಸ್ಮೃತಿಯು ಇಂದು ಪ್ರಚಲಿತವಿದೆ. ಹಾಗಾದರೆ ಇವೆರಡೂ ಮಾನವಧರ್ಮಗಳಲ್ಲಿ ತಾರತಮ್ಯವೇನು? ಈ ಸ್ಥಿತ್ಯಂತರದ- ಕ್ರಾಂತಿಯ ಹಿನ್ನೆಲೆಯನ್ನು ಗ್ರಹಿಸಿಕೊಳ್ಳುವ ಉಪಾಯವೇನು?

ಮಾನವ ಜೀವನ - ಧರ್ಮವನ್ನು ಗ್ರಹಿಸಿಕೊಳ್ಳಲು ಆಧುನಿಕ-ತಜ್ಞರು, ಶಾಸ್ತ್ರಜ್ಞರುಗಳ ಪ್ರಯತ್ನಗಳಿಂದ ಬೆಳಕು ದೊರೆಯುವುದೆ? ಎಂಬುದನ್ನು ಅರಿಯುವ ಪ್ರಯತ್ನ ಅವಶ್ಯವಾಗುತ್ತದೆ-ಪುರಾತನರ ಪರಿಭಾಷೆಯನ್ನು ನೇರವಾಗಿ ಗ್ರಹಿಸಿಕೊಳ್ಳುವಲ್ಲಿ ತಲೆಯೆತ್ತಬಹುದಾದ ತೊಂದರೆಗಳನ್ನು ತಪ್ಪಿಸಲು ಇದೊಂದೇ ಮಾರ್ಗ.

---

* ಕಾಶ್ಮೀರದ 'ಮೇರುತಂತ್ರ'ವು 'ಹಿಂದೂ' ಎಂಬ ಪದವನ್ನು ಹೀಗೆ ನಿರೂಪಿಸುತ್ತದೆ: 'ಹೀನಂ ಚ ದೂಷ್ಯಂತ್ಯೇವ ಹಿಂದೂಃ ಇತಿ ಉಚ್ಯತೇ' ಎಂದು. ಹೀನರೂ ದೂಷಣೆಗೆ ಒಳಗಾದವರು ಯಾರೋ ಅವರು ಹಿಂದೂಗಳು. ಈ ಮಾತು ಹಿಂದೂ ಶಬ್ದಪ್ರತಿಮೆಯ ಮೇಲೆ ಅಗಾಧವಾದ ಬೆಳಕನ್ನು ಚೀರುತ್ತದೆ. 'ವಿಶ್ವಾಮಿತ್ರಸ್ಯ ಬ್ರಹ್ಮೇದಂ ರಕ್ಷತಿಂ ಭಾರತಂ ಜನಂ' ಎಂಬ ವೇದದ ಮಂತ್ರಭಾಗದಲ್ಲಿ 'ಭಾರತ' ಎಂಬ ಶಬ್ದಪ್ರತಿಮೆಯು 'ವಿಶ್ವಮಿತ್ರ' ಶಬ್ದಪ್ರತಿಮೆಯ ಜತೆ, ಬಂದಿದೆ. ಹಿಂದೂ-ಭಾರತ ಎಂಬ ಈ ಎರಡೂ ದೇಶನಾಮಗಳವ್ಯುತ್ಪತ್ತಿ, ಶಬ್ದಪ್ರತಿಮೆಗಳ ಅರ್ಥಧಾರಣೆಗಳು, ಹೋಲುವ ಆಶಯಗಳು ವ್ಯಾಖ್ಯಾನಕ್ಕೆ ಹೊಸನೆಲೆಗಳನ್ನು ತಂದುಕೊಡುತ್ತವೆ (ಸಂ)

೧. ಸನಾತನ ವೈಚಾರಿಕ ಆಕೃತಿಗಳ ಒರೆಗಲ್ಲು
೨. ಜೀವಶಾಸ್ತ್ರಜ್ಞರಿಂದ (Biologists) ದೊರೆವ ಬೆಳಕು
೩. ಮಾನವ ಜೀವನಸ್ಥ ಪಾತಳಿಗಳ ವಿಚಾರ, ಈ ಒರೆಗಲ್ಲುಗಳ ಸತ್ಯದ ಉಭಯ ಪ್ರಕಾರಗಳು
೪. ಸತ್-ತ್ವ (Essence) ಅಸ್ತಿತ್ವವಾದೀ ಸತ್ಯ (Truth) ಆದರೆ ಸಾರ್ವಕಾಲಿಕ-ನಿಯಮಾಧಿಷ್ಠಿತಸತ್ಯ ಇದು Truth ದಿಂದ ಭಿನ್ನ. ಬರ್ಗಸನ್ನನ ಪರಿಭಾಷೆ i) (Infrarational ii) Suprarational intutions ಪ್ರಕಾರಗಳು.

ಆದಿತ್ಯ ಪರಂಪರಯ ಮಾನವ ಧರ್ಮ - ಮೋಕ್ಷಕಾಮೀ ವಿರಕ್ತ ಪಂಥೀಯ ಪ್ರೇರಣೆಯ ಆಧಾರದ ನಡೆವಳಿ ನುಡಿವಳಿಗಳ ಆಕೃತಿ ಸ್ವರೂಪ ವಿಚಾರ; ಪಾಶ್ಚಾತ್ಯ ಸಂಶೋಧಕರಿಂದ ಆಗಿರುವ ಭಾರತೀಯ ಸಂಸ್ಕೃತಿಯ ಸಂಶೋಧನದ ಪರಿಚಯ. ಆಕ್ಸಫೋರ್ಡ್ ವಿಶ್ವವಿದ್ಯಾಲಯದ ಪ್ರೊ. ಮ್ಯಾಕ್ಸಮುಲ್ಲರರಿಂದ ಪ್ರಾರಂಭವಾದ ಪರಂಪರೆಯ ಸ್ವರೂಪ; ಸಾರ್ಪರಾಜ್ಞೀ ಸೂರ್ಯೋವಾ ದೈವತವಿರುವ, ಅಶ್ವತ್ಥ - ಪುರುಷ ಪೂಜೆಗೆ ಪ್ರಾಧಾನ್ಯವಿರುವ ಇಂದಿನ ವೇದ ಆರ್ಯರವೇ ಎಂಬ ನಂಬುಗೆ ಹುಟ್ಟಿಸುವ ಪ್ರಯತ್ನದಿಂದಾಗಿ ವಾಸ್ತವ ಸತ್ಯವು ಅಡಗಿ ಉಳಿದು ಆರ್ಯತ್ವದ ಆತ್ಮವಂಚನೆಗೆ ಅವಕಾಶ ದೊರೆತಿದೆ. ಆದರೆ, ಓಲ್ಡೆನ್‌ಬರ್ಗನಿಂದ ಬೆಳಕಿಗೆ ಬಂದಿರುವ ಸತ್ಯಾಂಶ, ಭಾರತೀಯರ ಭ್ರಮೆಯನ್ನು ತೊಲಗಿಸಬಲ್ಲದು. ಆ ಭಗ-ವತ್ ಗೀತೆ, ಆದಿತ್ಯ ಸಂಪ್ರದಾಯದ ಅರ್ಕ-ಜಾನಪದರು 'Religion' ಪ್ರಭಾವದಲ್ಲಿ ಸಿಕ್ಕಿದ್ದಾರೆ. ಆದರೆ, 'Folk wisdom' ಸೂಚಕ ಸಾಹಿತ್ಯದಿಂದಾಗಿ, ಅವರು ಪ್ರಜ್ಞಾವಂತಿಕೆಯ ಪಾತಳಿಗೆ ಬಂದಿರುವುದು ಸಿದ್ಧವಾಗುತ್ತಿದೆ.

ಡಾ।। ಬುಹ್ಲರ್ ಬೆಳಕಿನಲ್ಲಿ ತಂದಿರುವ 'forgery' ಸ್ಮೃತಿಗಳ ಕ್ಷೇತ್ರದಲ್ಲಿ! ಈ ಸಂಗತಿಯನ್ನು ಪುಷ್ಟೀಕರಿಸುವ ಬೇರೆ ಸಂಗತಿಗಳು, ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ಜಾತಿಭೇದ ಬೆಳೆಸಿದ ಮಾದರಿ : ಪರಶುರಾಮ, ದ್ರೋಣ, ಕರ್ಣರ ಜಾತಿ ಯಾವುದು? ಆದಿತ್ಯಸಂಪ್ರದಾಯ ರಾತ್ರಸಮಯಾಚಾರಗಳಿಂದಾಗಿ ನಾನಾ ಜಾತಿಗಳು ತಲೆಯೆತ್ತಿರುವ ಶಕ್ಯತೆ. 'ಮನು'ವಿನ ಬಗೆಗೆ ಬುಹ್ಲರನ ಅನಾದರ, ಕೊಂಕು ಮಾತು, ಮಾಯ್ನೆ ಎಂಬುವನ ಮೂಲ ಮನುವಿನ ಬಗೆಗೆ ಉಂಟಾದ ಉತ್ಕಟ ತೀವ್ರಜಿಜ್ಞಾಸೆ!

ಮಾನವೀಯ ಜೀವನದ ಇಡಿಯಾದ ಸಾರ್ವಕಾಲಿಕ-ಅರ್ಥ ಗ್ರಹಿಸಿಕೊಂಡಿರುವ ವಿವಸ್ವನ್ ಪ್ರೇರಣೆಯ ಮನುಪ್ರಣೀತ ಮಾನವಧರ್ಮದ ಹೊಳಹು (outlines) ಇದರ ಜೀವಂತ ಅಸ್ತಿತ್ವ ಸೂಚಕ ಪ್ರಮಾಣಗಳು. ಮೂಲ ಮಾನವ ಧರ್ಮದಲ್ಲಿ ಏನೆಲ್ಲ ದೇವರು ಋತಕ್ಕೆ (ವಿಶ್ವನಿಯಮಕ್ಕೆ) ಅಧೀನರು. ಸರ್ವತಂತ್ರ ಸ್ವತಂತ್ರ ಸ್ವೈರದೈವತಕ್ಕೆ ಸ್ಥಾನವಿಲ್ಲ. ಋತ=ಸತ್ಯ ಎಂದರೇನು? ಋತ=ಸತ್ಯ ರೇತಸತ್ಯವಾಗಿ ಮಾರ್ಪಟ್ಟಿದೆ. ದೇವರುಗಳು ಋತ ಪ್ರಜಾತರು ಎಂದರೇನು? ವಿಶ್ಲೇಷಣಾತ್ಮಕ ಸಾಮರ್ಥ್ಯಕ್ಕೂ ಮುಂಚಿನ ಹಂತದಲ್ಲಿ ಧರ್ಮದ ಉದ್ಗಮ. ಮಾನವಧರ್ಮದ ಲಕ್ಷಣಗಳು : ಭಾಷೆ-ಸಂಸ್ಕೃತಿಯ ಉದ್ಗಮದ ಬಗೆಗಿನ ತಪ್ಪುಗ್ರಹಿಕೆಗಳು. ಅರ್ಥ (=ವಿಚಾರ-ಜ್ಞಾನ) ಮಾನವ ನಿರಪೇಕ್ಷ, ಸ್ವತಂತ್ರ ನಿರಾಲಂಬ ಪಾತಳಿಯ ಮೇಲಣ ಅಸ್ತಿತ್ವ, ಸ್ವಂಯ ಪ್ರಕಾಶರೂಪ. 'ಯತ್ ಭಜತಿ, ತತ್‌ಭವತಿ' ಪ್ರಜ್ಞೆಯ ಬಗೆಗಿನ ಸ್ಪಷ್ಟೀಕರಣ, ಜಾತವೇದ ಅಗ್ನಿ ನಚಿಕೇತಾಗ್ನಿ ಭೇದ; ಜಾತವೇದ ಅಗ್ನಿಯ ಕೊಲೆ. 'ಪ್ರಜ್ಞಾನೇತ್ರೋಲೋಕಃ' ಹೇಳಿ ಪ್ರತ್ಯಕ್ಷದಲ್ಲಿ ಮೋಸ! ಭಗವದ್ಗೀತೆಯಲ್ಲಿ ಆಗಿರುವ ಪ್ರಜ್ಞೆಯ ಅವಮೂಲ್ಯನ. ಯಾತು ಎಂದರೇನು? ಯಾತು ಪ್ರಭಾವದೊಳಗಿಂದ ಮುಕ್ತವಾಗುವ ಉಪಾಯ ಶ್ರದ್ಧಾಸ್ಥಾನದಲ್ಲಿ ಆಗಿರುವ ತಿರುವು ಮುರುವನ್ನು ತಿದ್ದಿಕೊಳ್ಳದೆ ಭಾರತಕ್ಕೆ ಸುದಿನಗಳ ಆಶೆಯಿಲ್ಲ.

ಒಂದು ಯಕ್ಷಪ್ರಶ್ನೆ

ಇಲ್ಲಿ ವಿವೇಚಿಸಬೇಕೆಂದಿರುವ ಸಮಸ್ಯೆ ತುಂಬ ತೊಡಕಿನದು. ಕ್ರಿಸ್ತಪೂರ್ವ ೩-೪ ಸಾವಿರ ವರುಷಗಳ ವರೆಗಿನ ಧಾರ್ಮಿಕ ಹಾಗೂ ಸಾಂಸ್ಕೃತಿಕ ಆಗುಹೋಗುಗಳ ಸ್ಥೂಲ ಉಲ್ಲೇಖವಾದರೂ ಅನಿವಾರ್ಯವಾಗಿರುವ ವಿಷಯ. ಆದರೆ, ಇದು ನಮ್ಮೆಲ್ಲರ ಜೀವಾಳಕ್ಕೆ ಸಂಬದ್ಧ ವಿಚಾರ ; ತಾನು ಯಾರು? ಎಂಬ ಪ್ರಶ್ನೆಯ ತಾತ್ವಿಕ ಉತ್ತರವನ್ನು ಅರಿಯದೆ ಬಾಳುವವನು ಪಶ್ಚಾತ್ತಾಪಕ್ಕೆ ಕಾರಣವಾಗುವುದುಂಟು, ಅವನಲ್ಲಿ ಪ್ರಜ್ಞೆ (Consciousness of Consciousness, Conscience) ತಲೆದೋರಿದ್ದಲ್ಲಿ; ಅರ್ಥಾತ್ ಮನುಜನೆಂಬ ಅರಿವು ಮೂಡಿದ್ದಲ್ಲಿ ಮಾತ್ರ. ಆದರೆ, ಈ ತಾತ್ವಿಕ ಪಾತಳಿಯ ಅರ್ಥವನ್ನು ಗ್ರಹಿಸಿಕೊಳ್ಳುವುದು ತುಂಬ ತೊಂದರೆಯ ಮಾತು. ಇದನ್ನು ಬಿಟ್ಟರೂ ನಾನು ಯಾರು? ನನ್ನ ಹೆಸರೇನು? ನಾನು ಯಾವ ಸಂಪ್ರದಾಯದವನು? ಈ ಸಂಪ್ರದಾಯವು ಯಾವ ಧರ್ಮಕ್ಕೆ ಸಂಬಂಧಪಟ್ಟದ್ದು? ನನ್ನ ತಂದೆ-ತಾಯಿ ಯಾರು? -ಇಂಥ ಸಂಗತಿಗಳನ್ನು ದುರ್ಲಕ್ಷಿಸುವವನು ಸುಸಂಸ್ಕೃತನೆ? ಮನುಷ್ಯನೆಂಬ ಹೆಸರಿಗೆ ಇವನು ಅರ್ಹನೆ? ಎಂಬ ಈ ಬಗೆಯ ಪ್ರಶ್ನೆಗಳನ್ನು, ನನಗೆ ನಾನೇ ಕೇಳುವಂತಹ ಇರುಕಿನಲ್ಲಿ ಸಿಕ್ಕ ಅನುಭವವು ಕಳೆದ ಕೆಲವು ವರುಷಗಳಿಂದ ತೀವ್ರವಾಗತೊಡಗಿತು. ಕರ್ಣಾಟ ಸಂಸ್ಕೃತಿಯ ಪೂರ್ವಪೀಠಿಕೆ ಬರೆಯುವ ಸಂದರ್ಭದಲ್ಲಿ, ಅಸ್ಪಷ್ಟವಾಗಿ ಮಿನುಗಿದ ಪ್ರಶ್ನೆಗಳಿವು! ನಮ್ಮ ಸಂಸ್ಕೃತಿಯ ಇಡಿಯಾದ ಸಿಂಹಾವಲೋಕನದ ಆವಶ್ಯಕತೆ ಉಂಟಾದಾಗಲೆಲ್ಲ, ಹಿಂದೂ ಎಂದರೆ ಯಾರು? ಹಿಂದೂ ಎಂಬ ಧರ್ಮಪರಂಪರೆ ಯಾವುದು? ಎಂಬ ಪ್ರಶ್ನೆ ಎದುರು ನಿಲ್ಲುತ್ತಿತ್ತು. ಇದನ್ನು ನಿರ್ದಿಷ್ಟಪಡಿಸುವುದಕ್ಕೆ ಪ್ರಮಾಣಗಳು ಸಾಲದೆ, ತೆಪ್ಪಗೆ ಇರಬೇಕಾಗುತ್ತಿದ್ದ ವ್ಯಥೆ ಅಷ್ಟಿಷ್ಟಲ್ಲ. ಇದರ ಜೊತೆಗೆ ಮನುಪ್ರಣೀತ ಮಾನವ ಧರ್ಮ ಎಂಬ ಈ ಹೆಸರಿನ ಭವ್ಯ, ಉದಾತ್ತ ಅರ್ಥವೈಶಾಲ್ಯವು ಚಿತ್ತವನ್ನು ಸೆಳೆಯುತ್ತಿತ್ತು. ಹೆಸರು : ಮಾನವಧರ್ಮ! ಆದರೆ ಜಾತಿ-ಮತಗಳ ಕೆಸರಿನಲ್ಲಿ ಹೊರಳಾಡುತ್ತಿರುವವರು ನಾವು. ಈ ವೈಷಮ್ಯವು ಅರ್ಥವಾಗದೆ ಗೋಳಾಡಿದ್ದೇನೆ.

ಹಿಂದೂ ಎಂದರೆ ಯಾರು? ಈ ಧರ್ಮ ಯಾವುದು? ಎಂಬ ಬ್ರಿಟಿಶ್ ಆಡಳಿತಗಾರರ ಪ್ರಶ್ನೆ ಭಾರತೀಯರ ಜೀವ ಹಿಂಡುವ ಯಕ್ಷಪ್ರಶ್ನೆಯಾಗಿತ್ತು! ಪಂಡಿತ ಮದನಮೋಹನ ಮಾಲವೀಯ, ಲೋಕಮಾನ್ಯ ಟಿಳಕರ ಸಮಕಾಲೀನ ಹಿಂದೂ ಎಂಬ ಪಂಗಡದ ನೇತಾರರು, ಬ್ರಿಟಿಶ್ ಆಡಳಿತಗಾರರ ಧೂರ್ತ ರಾಜಕೀಯ ಗತ್ತುಗಾರಿಕೆಯ ಪ್ರಶ್ನೆಗೆ ಕೊಟ್ಟ ಉತ್ತರವು, ಭಾರತದಲ್ಲಿ ಜಾತಿಭೇದವನ್ನು ಹೆಚ್ಚಿಸುವುದಕ್ಕೇ ಕಾರಣವಾಯ್ತು! ವೇದಗಳು ಮಾನ್ಯವಿದ್ದವರು 'ಹಿಂದೂ ಧರ್ಮದವರು' ಎಂಬ ಉತ್ತರದಿಂದಾಗಿ, ಸ್ವಾತಂತ್ರ್ಯ ಸಂಪಾದನೆಗೆ ರಾಷ್ಟ್ರೀಯ ಐಕ್ಯ ಬೇಕು ಎಂದು ಪ್ರತಿಪಾದಿಸುತ್ತಿದ್ದ ಸನಾತನವಾದೀ ಹಿಂದೂಗಳೆಂಬುವರೇ, ವೇದ ಅಮಾನ್ಯವಿರುವವೆಂದು ಸಾರುತ್ತ ಬಂದ ಜೈನ, ಬೌದ್ಧರನ್ನು ಹಿಂದೂ ಎಂಬ ಪಂಗಡದಿಂದ ಹೊರಗೆ ತಳ್ಳಿದಂತಾಯ್ತು.

'ಹಿಂದೂ ಧರ್ಮ' ಎಂಬ ಹೆಸರಿನ ಬರುವಳಿ

ಹಿಂದೂ ಧರ್ಮ ಎಂಬ ಈ ನಾಮಕರಣಕ್ಕೆ ಅಪ್ರತ್ಯಕ್ಷವಾಗಿ ಕಾರಣರಾದವರು, ಈ ಬ್ರಿಟಿಶ್ ಆಡಳಿತಗಾರರೇ! ಆದರೆ, ಈ ನಾಮಕರಣ ಅಂದು ಉದ್ದೇಶ ಪೂರ್ವಕ ಆದದ್ದಲ್ಲ. ಅದು ಪ್ರವಾಹ ಪತಿತರ ಕರ್ಮ. ಕ್ರಿ. ಶ. ೧೮೬೮ರಲ್ಲಿ ಪ್ರಕಟವಾದ ಕಾನೂನಿನ ಒಂದು ಗ್ರಂಥದಲ್ಲಿ, ಆ ಬ್ರಿಟಿಶ್ ಲೇಖಕನು, ಕಂಪನೀ ಸರಕಾರದ ಕೈಯ್ಯಲ್ಲಿ ಭಾರತವು ಬಂದಾಗಿನ ಅವಸ್ಥೆಯನ್ನು ಸಂಕ್ಷಿಪ್ತವಾಗಿ ವರ್ಣಿಸಿದ್ದಾನೆ:

> Ignorant as the British were, at the commencement of their career, of manner in which the administration of the country had been conducted... the wisest course that presented itself was to leave matters as far as possible in status quo."[೧]

ಬ್ರಿಟಿಶರ ಕೈಗೆ ದೊರೆತ ಅನಾಥ ಶಿಶು : ಹಿಂದೂ ಎಂಬ ಪ್ರಜೆ! ಈಸ್ಟ್ ಇಂಡಿಯಾ ಕಂಪನಿ ಭಾರತಕ್ಕೆ ಬಂದ ಉದ್ದೇಶ: ವ್ಯಾಪಾರದ ಮೂಲಕ ಧನಸಂಪಾದನೆ. ಆದರೆ, ಅಭಾವಿತವಾಗಿ ಭಾರತದ ಒಂದೊಂದು ಭಾಗವು ಬ್ರಿಟಿಶ್ ಕಂಪನಿಯ ವಶವಾಗುವಲ್ಲಿ ಭಾರತವು ಪಾರತಂತ್ರ್ಯಕ್ಕೆ ಮೂಕ ಸಂಮತಿಯನ್ನೇ ವ್ಯಕ್ತಪಡಿಸುತ್ತಿತ್ತು ಎಂದರೆ ಅತಿಶಯೋಕ್ತಿಯಾಗಲಾರದು. ಬ್ರಿಟಿಶರು ಭಾರತಕ್ಕೆ ಬಂದದ್ದರ ಹಿಂದೆ ಪರಮಾತ್ಮನ ಕೈವಾಡವಿದೆ ಎಂದು ಬರೆದ ವಿದ್ವಾಂಸರು ಉಂಟು. ಯಾವ ಜನಕ್ಕೆ ತನ್ನ ಧರ್ಮ-ಸಂಪ್ರದಾಯದ ಪರಂಪರಾಗತ ಹೆಸರೂ ನೆನಪಿಲ್ಲವೋ ಇವರ ಪಾಡು ಈ ಬಗೆಯಾಗಿ ಆದದ್ದರಲ್ಲಿ ಸೋಜಿಗವೇನು? ಇದು ಐತಿಹಾಸಿಕ ಸ್ವರೂಪದ ನಿಯತಿ (Historical fate). ಲೆವಿಸ್ಟ್ರಾಸ್ ಫ್ರೆಂಚ್ ಸಮಾಜಶಾಸ್ತ್ರಜ್ಞನು ಇದನ್ನೆ ಇನ್ನೊಂದು ಬಗೆಯಾಗಿ ಹೇಳಿದ್ದಾನೆ:

> Those who ignore history condemn themselves not knowing the present; because historical development alone permits us to weigh and to evaluate in their respective relations of the elements present.

ಬ್ರಿಟಿಶ್ ಅಧಿಕಾರಿಗಳಿಗೆ ಅಂದು, ಈ ಹಿಂದೂಗಳೆಂಬುವರ ಪೂರ್ವೋತ್ತರಗಳನ್ನು ಆಡಳಿತಕ್ಕಾಗಿ ಅರಿಯುವುದು ಕರ್ತವ್ಯವೇ ಆಗಿತ್ತು. ಬ್ರಿಟಿಶರ ಆಡಳಿತಕ್ಕೆ ಒಳಗಾದ ಭಾರತದ ಭಾಗಗಳಲ್ಲಿ ಅಲ್ಲಿಯ ಪ್ರದೇಶದ ಪ್ರಜೆಗಳಿಗಾಗಿ, ಅವರ ವ್ಯಾಜ್ಯಗಳನ್ನು ಬಗೆಹರಿಸಲು, ಕೋರ್ಟುಗಳನ್ನು ಸ್ಥಾಪಿಸಲೇಬೇಕಾಯಿತು. ಮುಸಲ್ಮಾನ ಎಂಬ ಪಂಗಡದ ಪೂರ್ವ ಪರಂಪರೆಗಳನ್ನು ಗ್ರಹಿಸಿಕೊಳ್ಳುವ ತೊಡಕು ಇದ್ದಿಲ್ಲ. ಹಿಂದೂ ಎಂಬ ಹೆಸರಿನಲ್ಲಿ ಒಳಗೊಳ್ಳುವ ಈ ಜನದ ಧರ್ಮ ಸಂಪ್ರದಾಯಗಳ ಏನೊಂದೂ ಅರ್ಥವಾಗುತ್ತಿದ್ದಿಲ್ಲ! ಬ್ರಿಟಿಶ್ ಅಧಿಕಾರಿಗಳಿಗೆ ಒಂದೊಂದು ಭಾಗದ ವಿದ್ವಾಸಂರು, ಪಂಡಿತರು ತಮ್ಮ ಪರಂಪರೆಯನ್ನು ಬಲ್ಲವರು ದೊರೆಯುತ್ತಾರೆ. ಆದರೆ ಇತಿಹಾಸ ಭೂಗೋಲ ಇದರ ಗಂಧಗಾಳಿಯಿಲ್ಲದ ಸನಾತನ ಸಂಪ್ರದಾಯಜ್ಞರು ಸಿಕ್ಕುತ್ತಿದ್ದರು. ಅಂದು ಪರಂಪರೆಯನ್ನು ಅರಿತ ವರ್ಗ 'ಬ್ರಾಹ್ಮಣ'ರೆಂಬುವರದೇ ಪ್ರಾಮುಖ್ಯದಿಂದ. ತಮ್ಮನ್ನು ವಿದ್ವಾಂಸರು ಸಮಾಜನೇತಾರರು ಎಂದು ಭಾವಿಸಿದ್ದ ಈ ಬ್ರಾಹ್ಮಣ ವರ್ಗವು, ಪ್ರಕಾಶತತ್ತ್ವವನ್ನು ತೊರೆದು, ಕತ್ತಲೆ, ಮೃತ್ಯು ತತ್ತ್ವವನ್ನು ಆರಾಧಿಸುವಲ್ಲಿ ಮಗ್ನವಾಗಿತ್ತು! ಇದು ಅಕ್ಷರಶಃ ಸತ್ಯ. ಇದರ ವಿಸ್ತಾರ ಮುಂದೆ ಬರಲಿದೆ. ಆದರು, ಸ್ವಲ್ಪದರಲ್ಲಿ ಸೂಚಿಸುವುದು ಕ್ರಮಪ್ರಾಪ್ತವಿದೆ. ಆದಿತ್ಯ (ವಾರ) ಈ ದೈವತವು ನಮ್ಮ ಈ ದುರ್ದೈವದ ಕಥೆಯನ್ನು ಸಮಗ್ರವಾಗಿ ಹೇಳಲು ಸಮರ್ಥವಿದೆ. ಸೂರ್ಯ (ವಿವಸ್ವನ್-ಸವಿತೃ-ಇಂದ್ರ ಇವು) ಪ್ರಕಾಶತತ್ತ್ವದ ದೈವತ ಪ್ರತಿಮೆ. ವಿವಸ್ವನ್ ಪ್ರೇರಣೆಯ ಮನುಪ್ರಣೀತ ಮಾನವ ಧರ್ಮ ಪರಂಪರೆಯನ್ನು ನಷ್ಟವಾಗಿಸಿದ್ದು ಆದಿತ್ಯ ಸಂಪ್ರದಾಯ. ಹೀಗೆ, ಪ್ರಕಾಶತತ್ತ್ವದ ಪ್ರತಿಮೆಯನ್ನು ಆದಿತ್ಯ ಹೆಸರಿನಲ್ಲಿ ಆರಾಧಿಸುವುದರ ಅರ್ಥವೇನು? ಇದು ನಿಶ್ಚಿತವಾಗಿಯೂ ಕತ್ತಲೆಯ ಉಪಾಸನೆ-ಇದರ ಬಗೆಗೆ ಸಂದೇಹವಿದ್ದರೆ, ಭಗವಾನ್ ಶ್ರೀಕೃಷ್ಣನನ್ನು ಕೇಳಬಹುದು : ಆದಿತ್ಯಾನಾಂ ಅಹಂ

ವಿಷ್ಣುಃ ಎಂದು ನಿಃಸಂದಿಗ್ಧವಾಗಿ ಹೇಳಿರುವ ವಿಷ್ಣುರೂಪೀ ಕೃಷ್ಣನ, ಭಗವಂತನ ಮಾತನ್ನು ಸುಳ್ಳೆನ್ನಲಾದೀತೆ? ಕಪಟನಾಟಕ ಸೂತ್ರಧಾರಿ ಕೃಷ್ಣ! ಈತನ ಯಾವ ಮಾತನ್ನು ನಂಬುವುದು? ಯಾವ ಮಾತನ್ನು ಬಿಡುವುದು? ಇದನ್ನು ನಿರ್ಣಯಿಸುವುದೂ ಕಷ್ಟ. ಭಾರತೀಯರ ಅಧಃಪಾತದ ಮೂಲಕಾರಣವು ಇಲ್ಲಿದೆ. ಜೀವನದ ಅರ್ಥವನ್ನು ಸಂದಿಗ್ಧಗೊಳಿಸುವ ಕಪಟನಾಟಕ ಸೂತ್ರಧಾರಿ ಕೃಷ್ಣ-ಕಾರಸ್ಥಾನಿ ಎಂಬ ಕೀರ್ತಿಯ ದೇವರನ್ನು ಸೃಷ್ಟಿಸಿದ ಈ ಪ್ರತಿಭೆ-ಇಂಥ ಹಾರುವರ ಪಂಗಡವು ಯಾವ ಸಮಾಜದ ನೇತೃತ್ವ ಮಾಡುತ್ತದೊ, ಆ ಸಮಾಜದ-ದೇಶದ-ಪಾಡು, ಅದಕ್ಕೆ ತಿಳಿಯಲಾರದ ಅವಸ್ಥೆ ಬರಲೇಬೇಕಷ್ಟೆ? ಐತಿಹಾಸಿಕ ಸ್ವರೂಪದ ನಿಯತಿ ಎಂದರೇ ಇದು. ಇತಿ ಹ ಆಸ (ಇಂತು ನಿಜವಾಗಿ ಇತ್ತು, ಆಯ್ತು) ಎಂಬುದನ್ನು ಗಮನಕ್ಕೆ ತಂದು ಕೊಡಬಲ್ಲದ್ದೆ ಇತಿಹಾಸ, ಇತಿಹಾಸವು 'ಉಂಟು'. ಇದನ್ನು ಕಲ್ಪನಾ ಸೃಷ್ಟಿಯಿಂದ ರಚಿಸಿ ಬರೆಯಲಾಗುತ್ತಿರುವಲ್ಲಿ ಆತ್ಮವಂಚನೆ, ಪರವಂಚನೆ ಆಗುತ್ತ ಬಂದಿದೆ. ಇತಿ ಹ ಆಸ ಇದು ಶೋಧಕ (discovery) ಸ್ವರೂಪದ ಸಂಗತಿ. ಇದು ಸಂಕಲ್ಪನಾತ್ಮಕ (invention) ಸ್ವರೂಪದ್ದು ಸರ್ವಥಾ ಅಲ್ಲ.

ಹಿಂದೂಗಳು ಬ್ರಿಟಿಶರ ಕೈಗೆ ದೊರೆತ ಅನಾಥ ಶಿಶುಗಳಂತೆ ಆಗಿದ್ದುದರ ಸಂಪೂರ್ಣ ಹೊಣೆ, ಶತಕಾನುಶತಕಗಳಿಂದ ನೇತೃತ್ವವಹಿಸುತ್ತ ಬಂದ, ತಲೆಯಾಳುಗಳನ್ನು ಸಮಾಜಕ್ಕೆ ಪೂರಯಿಸುತ್ತ ಬಂದ ಅಖಿಲ ಭಾರತೀಯ ಮಟ್ಟದ ಹಾರುವರೆಂಬ ವರ್ಗದ ಮೇಲೆ ಇದೆ. ಇದು ಐತಿಹಾಸಿಕ ಘಟನೆಗಳ ಮೂಲಕ ದೊರೆಯುತ್ತಿರುವ ತೀರ್ಪು. ತಮ್ಮ ಐತಿಹಾಸಿಕ ಪೂರ್ವಪರಂಪರೆಯನ್ನೇ ಅರಿಯದ ಬ್ರಾಹ್ಮಣರು ಇವರು. ಹಿಂದೂಗಳೆಂಬವರು, ವೇದೋಪನಿಷತ್ತುಗಳ ಪೂರ್ವ ಪರಂಪರೆಯುಳ್ಳವರು ಎಂದು ಅಂದಿನ ಬ್ರಿಟಿಶ್ ಅಧಿಕಾರಿಗಳಿಗೆ ನಿವೇದಿಸಿದರು. ಪ್ರಾರಂಭದಲ್ಲಿ, ಹಿಂದೂಧರ್ಮವು ಬ್ರಾಹ್ಮಣವರ್ಗದ್ದು, ಎಂಬ ಗ್ರಹಿಕೆಯೇ ಬ್ರಿಟಿಶರಲ್ಲಿಯೂ ಇತ್ತು. ಈ ಕಾರಣದಿಂದಾಗಿ, ಕೋರ್ಟಿನ ಪ್ರಯೋಜನಕ್ಕಾಗಿ ರಚಿಸಿದ ಹಿಂದೂ ಲಾ ಗ್ರಂಥಗಳಲ್ಲಿ ಈ ಕಾನೂನುಗಳು ವೇದ (ಶ್ರುತಿ) - ಸ್ಮೃತಿ ಪರಂಪರೆಗೆ ಸುಸಂಗತವಾಗಿವೆ ಎಂಬ ಮಾತನ್ನು ಸೇರಿಸಲಾಗಿದೆ. ಲೌಕಿಕ ವ್ಯವಹಾರ ನಿಯಂತ್ರಣಕ್ಕಾಗಿ ರಚಿಸಿದ (secular) ಕಾನೂನು. ಆದರೆ ಈ ಕಾನೂನಿನ ಗ್ರಂಥಗಳಲ್ಲಿ 'ವೇದಶ್ರುತಿ - ಸ್ಮೃತಿ ಸಮ್ಮತ ಕಾಯಿದೆಗಳು ಇವು' ಎಂಬ ಈ ಶ್ರದ್ಧಾಸ್ವರೂಪದ ವಾಕ್ಯಕ್ಕೆ ಇಂಬು ದೊರೆತದ್ದು ಯುಕ್ತವೆ?

ಹಿಂದೂ ಎಂದರೆ ಯಾರು? ಎಂಬ ತಮಗೆ ಬಗೆಹರಿಯದ ಪ್ರಶ್ನೆಗೆ, ಹಿಂದೂಗಳೆಂಬವರಿಂದಲೇ ಉತ್ತರ ಪಡೆಯುವುದು ಲೇಸೆಂದು ಬ್ರಿಟಿಶ ಆಡಳಿತಗಾರರ ತಂತ್ರ. ಒಂದು ಇಕ್ಕಟ್ಟಿನ ಪ್ರಸಂಗದಲ್ಲಿ, ಈ ಪ್ರಶ್ನೆಯನ್ನು ಮರಳಿ ಎತ್ತಿದ್ದಾಯಿತು. ರಾಜಕೀಯ ಹಕ್ಕುಗಳನ್ನು ಪಡೆಯುವುದಕ್ಕಾಗಿ, ಅಖಿಲ ಭಾರತೀಯ ರಾಷ್ಟ್ರೀಯ ಮಹಾಸಭೆ ಬ್ರಿಟಿಶ್ ಅಧಿಕಾರಿಗಳನ್ನು ಎದುರಿಸುತ್ತಿತ್ತು. ಧೂರ್ತ ಬ್ರಿಟಿಶರು ಮುಸಲ್ಮಾನ ಪಂಗಡವು ಕಾಂಗ್ರೆಸ್ಸಿನಿಂದ ಹೊರಗೆ ಬರುವ ಆಟ ಹೂಡಿದರು. ಈ ಸುಮಾರಿಗೆ, ಹಿಂದೂ ಎಂಬ ಜನದ ಪೂರ್ವೋತ್ತರಗಳನ್ನು ಗ್ರಹಿಸಿಕೊಳ್ಳುವ ಸಂಶೋಧನದಲ್ಲಿ ಸಾಕಷ್ಟು ಪ್ರಗತಿಯಾಗಿತ್ತು. ಹಿಂದೂ ಎಂಬ ವರ್ಗ Brahmanism ದಿಂದ ಭಿನ್ನ, ಎಂದು ಸ್ಪಷ್ಟವಾಗತೊಡಗಿತ್ತು. ಹಿಂದೂ ಎಂಬ ವರ್ಗದಲ್ಲಿಯೇ ಭೇದ ಹುಟ್ಟಿಸಲು ಹಿಂದೂ ಎಂದರೆ ಯಾರು? ಯಾವ ಧರ್ಮ? ಎಂಬ ಪ್ರಶ್ನೆ ತುಂಬ ಪ್ರಯೋಜನಕಾರಿಯಾಗಿ ಕಂಡಿತು. ಮುಸಲ್ಮಾನ ಪಂಗಡವು, ರಾಷ್ಟ್ರೀಯ ಸಭೆಯಿಂದ ಹೊರಬಿದ್ದ ಕಾರಣದಿಂದ ಕಾಂಗ್ರೆಸ್ ಇದು ಬಹುಸಂಖ್ಯ ಹಿಂದೂಗಳ ಸಭೆ ಎಂಬ ಆರೋಪಕ್ಕೆ ಅವಕಾಶ ದೊರೆತಿತು.

ಪಂಡಿತ ಮದನಮೋಹನ ಮಾಲವೀಯರಂಥ ರಾಷ್ಟ್ರಾಭಿಮಾನಿ ಸನಾತನ ಶ್ರದ್ಧಾವಂತರು, ಸ್ವತಂತ್ರ ಹಿಂದೂ ಮಹಾಸಭೆ ಸ್ಥಾಪಿಸಿ, ಕಾಂಗ್ರೆಸ್ಸಿನ ಮೇಲಣ ಆಕ್ಷೇಪವನ್ನು ದೂರ ಮಾಡುವ ಪ್ರಯತ್ನ ಪಟ್ಟರು. ಆದರೆ, ಭಾರತೀಯ ಧರ್ಮ-ಪಂಥಗಳು ಬೆಳೆದ ಹಿನ್ನೆಲೆಯ ವಿಚಿತ್ರವಿದು, ಹಿಂದೂ ಎಂಬ ಸನಾತನಿಗಳೂ ಪರಲೋಕವಾದಿಗಳು, ಮೋಕ್ಷಕಾಮಿಗಳೇ. ಜೈನ, ಬೌದ್ಧರೂ ಪರಲೋಕ ವಾದಿಗಳೇ. 'ಕೇವಲಿ', 'ನಿರ್ವಾಣ ಪಡೆದವನು' ಎಂಬ ಸಂಕೇತ ಭೇದವು, ಇವರೊಳಗಿನ ಭೇದ ಬೆಳೆಯಲು ಕಾರಣವಾಗುತ್ತ ಬಂತು. ಹಿಂದೂ

ಸನಾತನ ಪಂಥೀಯ ಆಚಾರ್ಯರು ತಮ್ಮ ತಮ್ಮೊಳಗೆ ಒಬ್ಬರನ್ನೊಬ್ಬರು ಖಂಡಿಸುತ್ತಾ ಬಂದಿದ್ದಾರೆ. ಶಂಕರನು 'ಅಸುರ' 'ಸಂಕರ' ಎಂದು ತೆಗಳಿದ್ದೂ ಉಂಟು. ಇದರಂತೆ ಜೈನ, ಬೌದ್ಧರ ಮೇಲಣ ವಿಶೇಷ ಆರೋಪ. ಇವರು ದೇವರ ಅಸ್ತಿತ್ವವನ್ನು ಮಾನ್ಯ ಮಾಡಿಲ್ಲ ಎಂಬುದು. ಆದರೆ ದೇವರ ಅಸ್ತಿತ್ವವನ್ನು ಒಪ್ಪುವ ಈ ಎಲ್ಲ ಸಂಪ್ರದಾಯಗಳ ಚಾಕಚಕ್ಯವು ಆತ್ಮವಂಚನೆಯ ಸ್ವರೂಪದ್ದಾಗಿದೆ : ನ ಗುರೋಃ ಅಧಿಕಂ, ಗುರುವಿನಿಂದ ಹಿರಿಯನಿಲ್ಲ; ನನ್ನಿಂದ ಕಿರುಕುಳನಿಲ್ಲ ಎಂಬ ಶ್ರದ್ಧೆಯ, ಗುರುಬ್ರಹ್ಮ ವಿಷ್ಣು, ಮಹೇಶ್ವರನೆಂಬ ಶ್ರದ್ಧೆಯ ಈ ಪಂಥಗಳಲ್ಲಿ ದೇವರು ಎಂಬುವನ ಬೆಲೆ ಏನು? ಈ ಗುರುವರ್ಗವು ಮಾಡಿರುವ ಕಣ್ಕಟ್ಟು : ಮಾಟ ಈ ದೇವ. ಗುರು ವರ್ಗವು (ಬ್ರಾಹ್ಮಣನೂ ಸೇರಿ) ತಾನು ಹೇಳಿದ್ದು ಫಲಿಸದಿದ್ದರೆ, ಪಾರಾಗಲು ಈ ದೇವರು ಎಂಬ ನೆಪ : ಅಜಾ-ಪುತ್ರನ (ಹುಟ್ಟದೆ ಇರುವ ತಾಯಿಯ ಕೂಸು) ಬಲಿ. (Cats's paw or scape goat). ಅಥವಾ ಬೆದರು (Scare-crow) ಜೈನ, ಬೌದ್ಧ ಸಂಪ್ರದಾಯಗಳು ಈ ದೃಷ್ಟಿಯಿಂದ ಹೆಚ್ಚು ಪ್ರಾಮಾಣಿಕವೆನ್ನಬೇಕು.

ಬ್ರಿಟಿಶ್ ಆಡಳಿತಗಾರರು, ತಮ್ಮ ಕೈಗೆ ಬಂದ ಅನಾಥಶಿಶುವಿನ ನಾಮಕರಣ ಮಾಡುವ ಕ್ರಮಪ್ರಾಪ್ತ ಕರ್ತವ್ಯವನ್ನು ಎಂದರೆ ಈ ಪ್ರಸಂಗವನ್ನು ತಮ್ಮ ಆಡಳಿತದ ಜೀವನಾವಧಿಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಉಪಯೋಗಿಸಿಕೊಂಡರು. ಹಿಂದೂಗಳೆಂಬವರು ಬ್ರಾಹ್ಮಣರೆಂಬುವರ ಪರಂಪರೆಯಿಂದ ಭಿನ್ನರು ಎಂಬುದನ್ನು ಅರಿತ ಬ್ರಿಟಿಶ ಅಧಿಕಾರಿಗಳು, ಹಿಂದೂ ಎಂದರೆ ಯಾರು, ಎಂಬ ಪ್ರಶ್ನೆಯಿಂದ ಬ್ರಾಹ್ಮಣ ಮುಂದಾಳುಗಳನ್ನು ಧರ್ಮ-ಸಂಕಟದಲ್ಲಿ ತಳ್ಳಿದರು. ವೇದಮಾನ್ಯವಿದ್ದವರು ಹಿಂದೂಗಳು ಎಂಬ ಉತ್ತರದಿಂದಾಗಿ, 'ಶೀಖ'ರನ್ನು ಹಿಂದೂ ವರ್ಗದ ಹೊರಗೆ ನೂಕಿದಂತಾಯಿತು. ಭಾರತದಲ್ಲಿ ಒಂದೊಂದು ಜಾತಿಜನಾಂಗದ ಪೂರ್ವೇತಿಹಾಸವು ಬ್ರಿಟಿಶ್ ಅಧಿಕಾರಿಗಳಿಗೆ ಈ ಸುಮಾರಿಗೆ ಸಾಕಷ್ಟು ಲಭ್ಯವಾಗಿತ್ತು. ಬ್ರಿಟಿಶ್ ಕೋರ್ಟುಗಳಲ್ಲಿ Digest of Hindoo law ಎಂಬ ಕಟ್ಟಳೆಯ ಗ್ರಂಥ, ಮೊದಲ ಬಾರಿ ರೂಢಿಗೆ ತಂದವನು, ಅಂದಿನ ಆಡಳಿತದ ವರಿಷ್ಠ ಅಧಿಕಾರಿಯಾಗಿದ್ದ ವಾರ್ನ್ ಹೇಸ್ಟಿಂಗ್ಸನು (೧೭೭೨). ಕೆಲವೊಂದು ಯೋಗಾಯೋಗಗಳು ಆಶ್ಚರ್ಯಕಾರಕವಾಗಿರುತ್ತವೆ. ಇಂಥ ಅಚ್ಚರಿಗಳಲ್ಲಿ ಹಿಂದೂ ಕಾಯಿದೆ ಆಚರಣೆಯಲ್ಲಿ ತಂದ ವಾರ್ನ ಹೆಸ್ಟಿಂಗ್ಸ್ ಭಗವದ್ಗೀತೆಯನ್ನು ಮೆಚ್ಚಿ ವ್ಯಾಸಂಗ ಮಾಡಿದ್ದನು ಎಂದು ಆಖ್ಯಾಯಿಕೆಯು ಒಂದು! ಆದಿತ್ಯಾನಾಂ ಅಹಂ ಎಂಬ ಭಗವಂತನ ಗೀತೆಯನ್ನು ಮೆಚ್ಚಿದ್ದ ವಾರ್ನಹೇಸ್ಟಿಂಗ್ಸನು ಇಲ್ಲಿಯ ಕಟ್ಟಳೆಗಳ ಗ್ರಂಥಕ್ಕೆ ಹಿಂದೂ ಹೆಸರನ್ನು ರೂಢಿಸುತ್ತಾನೆ.

ವಾರ್ನಹೇಸ್ಟಿಂಗ್ಸನ ಕಾಲದಿಂದಲೇ ನಡೆದ, ಬ್ರಿಟಿಶರ ಹಿಂದೂ ಧರ್ಮಸಂಪ್ರದಾಯಗಳನ್ನು ಗ್ರಹಿಸಿಕೊಳ್ಳುವ ಕಾರ್ಯವು, ದೊಡ್ಡ ಪ್ರಮಾಣದಿಂದ ಸಾಗುತ್ತದೆ. ಭಾರತೀಯ ಧಾರ್ಮಿಕ-ಪರಂಪರೆಗಳನ್ನು ನಿಯಂತ್ರಿಸುವ ಸ್ಮೃತಿಗ್ರಂಥಗಳಲ್ಲಿ ಮನುಪ್ರಣೀತ ಮಾನವ ಧರ್ಮಶಾಸ್ತ್ರಕ್ಕೆ ಇರುವ ಸ್ಥಾನ-ಮಾನ, ಗೌರವ ಇನ್ನಾವ ಗ್ರಂಥಕ್ಕೂ ಇಲ್ಲ, ಎಂಬುದು ಅಖಿಲ ಭಾರತೀಯ ಮಟ್ಟದಲ್ಲಿಯೇ ಸರ್ವ-ಮಾನ್ಯವಿದ್ದುದಾಗಿ ಕಂಡುಬಂತು. ಮನುಸ್ಮೃತಿಯ ಮೊತ್ತಮೊದಲನೆಯ ಭಾಷಾಂತರವು (೧೭೯೪)ರಲ್ಲಿ ಸರ್ ವಿಲಿಯಂ ಜೋನ್ಸನಿಂದ ಆಯ್ತು. ಮನು ಸ್ಮೃತಿಯ ಬಗೆಗಿನ ಈ ನಿರ್ಣಯದಿಂದಾಗಿ Hindu Law ಗ್ರಂಥವು, ಪ್ರಾಧಾನ್ಯದಿಂದ, ಮನು ಪ್ರಣೀತ ಮಾನವ ಧರ್ಮಶಾಸ್ತ್ರದ ಆಧಾರದಿಂದಲೇ ಸಿದ್ಧವಾಯ್ತು. ಹಿಂದೂ ಎಂಬ ಹೆಸರು (ಮನು ಪ್ರಣೀತ) ಮಾನವ ಧರ್ಮದ ಪರ್ಯಾಯವೇ ಇರುವ ಈ ಸಂಗತಿಯಿಂದ ಭಾರತೀಯ ಸಂಸ್ಕೃತಿಯ ಸ್ಥಿತ್ಯಂತರದ ಇತಿಹಾಸದೊಳಗಿನ ಒಂದು ದೊಡ್ಡ ಹೊಂಡ (lacuna) ಇಲ್ಲವಾಗುತ್ತಿದೆ.

ಆದರೆ, ಹಿಂದೂ ಎಂದರೆ ಯಾರು? ಯಾವ ಧರ್ಮ? ಎಂಬ ಪ್ರಶ್ನೆಗೆ ಪಂಡಿತ ಮಾಲವೀಯ, ಟಿಳಕರ ಸಮಕಾಲೀನ ಮುಂದಾಳುಗಳು, ವೇದಮಾನ್ಯವಿರುವವರು ಹಿಂದೂಗಳು ಎಂದು ಹೇಳಿರುವಲ್ಲಿ ನಾವೀನ್ಯವೇನೂ ಇರಲಿಲ್ಲ. ನೂರಾರು ವರ್ಷಗಳಿಂದ ಕೋರ್ಟಿನಲ್ಲಿ 'ದೇವರಾಣೆ ಮಾಡಿ ಹೇಳುತ್ತೇನೆ: ನನ್ನ ಧರ್ಮ ಹಿಂದೂ' ಎಂದು ಹೇಳುವ ವಾಡಿಕೆಯ, ಮಾಲವೀಯ, ಟಿಳಕರಿಗಿಂತಲೂ ಮುಂಚೆನಿಂದಲೇ ನಡೆದು ಬಂದಿತ್ತು. ಟಿಳಕರ ತಲಮಾ[illegible] ವರೆಗೂ ವಕೀಲೀವೃತ್ತಿಗಾಗಿ ವ್ಯಾಸಂಗ ಮಾಡಿದ್ದು ಹಿಂದೂ ಲಾ. ಇದು ಲೌಕಿಕ ವ್ಯವಹಾರ ನಿಯಂತ್ರಣದ ಕಾಯಿದ ಗ್ರಂಥ, ಆದರೂ ಇವು ಶ್ರುತಿ ಸ್ಮೃತಿ ಸದಾಚಾರ ಪರಂಪರೆಯ ಆಧಾರವಿರುವ

ಕಾನೂನುಗಳು ಎಂಬುದನ್ನು ಅರಿತ ಹಿಂದೂ ಮುಂದಾಳುಗಳು, ಹಿಂದೂಧರ್ಮದ ವಾಖ್ಯೆಯನ್ನು ಮಾಡುವಲ್ಲಿ ಉಚ್ಛಿಷ್ಟ ಪರಂಪರೆಯೇ ಮುಂದುವರೆದಿದೆ. ಬ್ರಿಟಿಶರ ವಾಖ್ಯೆಯನ್ನು ಒಪ್ಪಿದಂತಾಗಿದೆ. ಅಥರ್ವವೇದದಲ್ಲಿ ಬಂದಿರುವ ಉಚ್ಛಿಷ್ಟ ಮಹಾತ್ಮ್ಯದ ಸೂಕ್ತ ಇಲ್ಲಿ ನೆನಪಿಗೆ ಬರುತ್ತಿದೆ. ವ್ಯಾಸೋಚ್ಛಿಷ್ಟಂ ಜಗತ್ ಸರ್ವಂ ಎಂಬ ಪಡೆಮಾತು ರೂಢಿಸಿರುವ ಈ ವರ್ಗದ ಉಚ್ಛಿಷ್ಟ ಪ್ರೇಮವು ಮರಳಿ ಸಿದ್ಧವಾಗುತ್ತದೆ. ಗುರು-ಪಾದೋದಕ ಪ್ರಸಾದಿಯಾಗಿ ಜೀವಿಸುವಲ್ಲಿ ಜೀವನ ಸಾರ್ಥಕ್ಯವಿದೆ ಎಂಬ ರೂಢಿ ಇಂದಿನ ವೇದಕಾಲದಿಂದಲೇ ಪ್ರಾರಂಭವಾಗಿದೆ. ಐತಿಹಾಸಿಕ ನಿಯತಿಯ ಸೂತ್ರವು ಎಷ್ಟು ಅಮೋಘವಿದೆ ಎಂಬುದನ್ನು ಇಲ್ಲಿ ಅರಿಯಬಹುದು.

ಹಿಂದೂ ಎಂದರೆ ಯಾರು ಎಂಬ ಯಕ್ಷ-ಪ್ರಶ್ನೆಗೆ ಟಿಳಕ ಮಾಲವೀಯರ ತಲೆಮಾರಿನವರು ಕೊಟ್ಟ ಉತ್ತರವು, ತಪ್ಪು ಅಥವಾ ಅಸಮರ್ಪಕವಿತ್ತು ಎಂಬುದು, ಟಿಳಕ, ಮಾಲವೀಯರಿಗೆ ಅವರ ಜೀವಮಾನದಲ್ಲಿಯೆ ಮಹಾತ್ಮ ಗಾಂಧೀಜಿಯವರ ಮೂಲಕ ಕಾಣತೊಡಗಿರಬೇಕು. ತಾನು 'ಸನಾತನೀ ಹಿಂದೂ' ಎಂಬ ತಮ್ಮ ಶ್ರದ್ಧೆಯನ್ನು ಸಾರಿ ಹೇಳುತ್ತಿದ್ದ ಗಾಂಧಿಜೀಯವರ ಸ್ಫೂರ್ತಿ ಹಾಗೂ ಶ್ರದ್ಧಾಸ್ಥಾನ ಭಗವದ್ಗೀತೆ! ಟಿಳಕರ ಪಾರಾಯಣ ಗ್ರಂಥವೂ ಭಗವದ್ಗೀತೆ ಮಾಲವೀಯರೂ ಗೀತಾಭಕ್ತರೆಂದು ಬೇರೆ ಹೇಳುವ ಅವಶ್ಯಕತೆಯಿಲ್ಲ. ವೇದಮಾನ್ಯವಿದ್ದವರು ಹಿಂದೂಗಳು ಎಂಬ ಕಾರಣದಿಂದ ಜೈನ, ಬೌದ್ಧರು ಹಿಂದುತ್ವಕ್ಕೆ ವಂಚಿತರಾಗಿದ್ದರು. ಆದರೆ, ಮಹಾತ್ಮ ಗಾಂಧೀಜಿ ಹಿಂದೂ-ಬೌದ್ಧ-ಶೀಖ-ಕ್ರಿಸ್ತ-ಮುಸಲ್ಮಾನ ಏನೆಲ್ಲ ಧರ್ಮಗಳೂ ಒಂದೇ ಅಥವಾ ಸಮಾನ, ಎಂಬ ನಿಷ್ಠೆಯವರು. ಎಂದರೆ ಪರ್ಯಾಯದಿಂದ, ಗಾಂಧಿಜೀ ಮಾನವ ಧರ್ಮ ಪ್ರತಿಪಾದಕರೇ ಆಯ್ತು. ಗಾಂಧಿಜೀಯವರ ಅನುಷ್ಠಾನದೊಳಗಿನ ಈ ಹಿಂದೂ ಎಂಬ ಮಾನವ ಧರ್ಮವು ಶ್ರೀಮದ್‌ಭಗವದ್ಗೀತೆಯ ತಳಹದಿಯದು! ಆದರೆ, ಸೋಜಿಗದ ಸಂಗತಿಯೆಂದರೆ ಆದಿತ್ಯ ಸಂಪ್ರದಾಯವು ಪ್ರಾರಂಭವಾಗುವುದಕ್ಕೂ ಮುಂಚೆ ಇದ್ದ ವಿವಸ್ವನ್ ಪ್ರೇರಣೆಯ ಮನುಪ್ರಣೀತ ಮಾನವ ಧರ್ಮ ಪರಂಪರೆಯು ವೇದ ಕಾಲದಲ್ಲಿ ಆದಿತ್ಯ ಸಂಪ್ರದಾಯಕ್ಕೂ ಮುಂಚೆ ಪ್ರಭಾವಶಾಲಿಯಾಗಿತ್ತು. ಆದಿತ್ಯ ಸಂಪ್ರದಾಯವು, ಪ್ರಬಲವಾಗಿ ಪ್ರಕಾಶತತ್ತ್ವದ ಆರಾಧನೆಗೆ ಪ್ರಾಶಸ್ತ್ಯವಿರುವ ಮಾನವ ಧರ್ಮ ಪರಂಪರೆ ನಷ್ಟವಾಗುತ್ತದೆ. ಆ ಸ್ಥಳದಲ್ಲಿ, ಆದಿತ್ಯ ಸಂಪ್ರದಾಯದ ಭಗವಂತನ ಪ್ರೇರಣೆಯ ಮನು ಪ್ರಣೀತ ಮಾನವ ಧರ್ಮವು ಉತ್ತರಾಧಿಕಾರಿಯಾಗುತ್ತದೆ. ಹಿಂದೂ ಎಂಬ ಧರ್ಮದಲ್ಲಿ ಆಗಿರುವ ಈ ತಿರುವು ಮುರುವಿನ ಯುಕ್ತಾಯುಕ್ತತೆಯ ಪ್ರಶ್ನೆಯು ಮಾನವ ಜೀವನ-ಸಂಸ್ಕೃತಿಯ ದೃಷ್ಟಿಯಿಂದ ಅತ್ಯಂತ ಮೌಲಿಕವಾಗಿದೆ.

ಮೂಲ ವಿವಸ್ವನ್ ಪ್ರೇರಣೆಯ ಮನುಪ್ರಣೀತ ಮಾನವ ಧರ್ಮ ಪಂರಪರೆ, ಮತ್ತು ಆದಿತ್ಯ ದೈವತ ಪ್ರೇರಣೆಯ ಮನುಪ್ರಣೀತ ಮಾನವಧರ್ಮ ಪರಂಪರೆ ಇವೆರಡರ ಸ್ಥೂಲ ಪರಿಚಯ ಇನ್ನು ಅವಶ್ಯ. ಕಾಲಾನುಕ್ರಮದಂತೆ, ಮೊದಲು ಮೂಲ ವಿವಸ್ವನ್ ಪರಂಪರೆಯ ಮಾನವ ಧರ್ಮ ಸಂಪ್ರದಾಯದ ಪರಿಚಯವು ಅವಶ್ಯಕವಾಗುತ್ತದೆ. ಆದರೆ, ಇಲ್ಲಿ ಒಂದು ತೊಂದರೆಯಿದೆ : ವೇದಕಾಲೀನ ಸ್ಥಿತ್ಯಂತರಗಳು ಸಂಭವಿಸಿ ಸಾವಿರಾರು ವರ್ಷಗಳಾದುವು. ಆದರೆ, ಆ ಮಾನದಿಂದ ಆದಿತ್ಯ ಪರಂಪರೆಯ ಮಾನವ-ಧರ್ಮವು ಭಗವದ್ಗೀತೆಯಿಂದಾಗಿ ಹೆಚ್ಚು ಹತ್ತಿರದ್ದು ಆಗಿದೆ. ಆದಕಾರಣ, ಜ್ಞಾತ, - ಸಮೀಪದ ಆಚಾರ ವಿಚಾರಗಳ ಹಾಗೂ ಪರಿಭಾಷೆಯ ಜಾಡುಹಿಡಿದು, ವೇದಕಾಲದಲ್ಲಿ ಪ್ರವೇಶಿಸುವುದು ಲೇಸು. ಬಳಿಕ ಮೂಲ ವಿವಸ್ವನ್ ಪ್ರೇರಣೆಯ ಮಾನವ ಧರ್ಮ ಪರಿಚಯವು ಸುಲಭವಾಗಬಹುದು.

ಮಾನ್ಯರೇ ಕ್ಷಮಿಸಿ, ತಾವು ಆಕ್ಷೇಪಿಸದಿದ್ದರೆ, ಇನ್ನು ಮುಂದೆ ವಿವರಿಸಲಿರುವ ಮಾನವಧರ್ಮದ ಉಭಯ ಪ್ರಕಾರಗಳನ್ನು ಗ್ರಹಿಸಿಕೊಳ್ಳಲು ಉಪಕಾರಕವಿರುವ ಆಧುನಿಕ ಶಾಸ್ತ್ರೀಯ ಶೋಧ ಹಾಗೂ ತಾತ್ತ್ವಿಕ ಭೂಮಿಕೆಯನ್ನೇ ಮೊದಲು ಅರುಹಲಿಚ್ಛಿಸುತ್ತೇನೆ.

ಟಿಪ್ಪಣಿ

೧. S.G. Gready, ***A Treatise on the Hindoo Law of Inheritance.*** p. 47, 1868, Madras,

ಮಾನವ (ಜೀವನ) ಧರ್ಮದ ಪರಿಚಯ

ಆಧುನಿಕ ಪರಿಭಾಷೆಯ ಮೂಲಕ, ವೇದೋಪನಿಷತ್ಕಾಲದ ವಿಚಾರಗಳನ್ನು ಗ್ರಹಿಸಿಕೊಳ್ಳಲು ಶಕ್ಯ, ಎಂಬ ಈ ಮಾತು ಹಲವರಿಗೆ ಸಂದೇಹಾಸ್ಪದವೆನಿಸಬಹುದು. ಆದರೆ History repeats itself ಎಂದರೇನು? ಇತಿಹಾಸವು ಮರಳುತ್ತದೆ ಎಂಬ ಈ ವಿಚಾರವು ಪ್ರಾಚೀನ ಚಾಂದ್ರಸಂಪ್ರದಾಯದಂತೆ ಅವತಾರದ ಕಲ್ಪನೆ. ಯುಗಚಕ್ರದ ಕಲ್ಪನೆ. ಇತಿಹಾಸ ಸಂಭವಿಸುವುದರ ಬಗೆಗಿನ ಎರಡು ದೃಷ್ಟಿಕೋನಗಳಿವೆ : ಕೃತ-ತ್ರೇತ-ದ್ವಾಪರ-ಕಲಿ-ಹೀಗೆ, ಚಕ್ರಾಕಾರಗತಿಯ ಇತಿಹಾಸದಲ್ಲಿ ನಂಬುಗೆಯು ಕೆಲವರದು. ಇದು ಚಾಂದ್ರ ಭೂಮಿಕೆಯ ದೃಷ್ಟಿಕೋನ. ಈ ವೈಚಾರಿಕ-ಪ್ರೇರಣೆಯ ಮೂಲಮಾದರಿ (archetype) ಚಂದ್ರ. ಶುದ್ಧಪ್ರತಿಪದೆ-ಅಮಾವಾಸ್ಯೆ : ಹುಟ್ಟು - ಸಾವು: ಈ ಭವಚಕ್ರದ ವಿಚಾರವು ಚಾಂದ್ರತತ್ತ್ವದ ಉಪಾಸಕರದು. ಇದು ತನ್ನ ಅಕ್ಷದ ಸುತ್ತಲೂ ತಿರುಗುತ್ತಿರುವ ಚಕ್ರಾಕೃತಿ-ವೃತ್ತಾಕೃತಿಯ ಕಾಲ (Circular time). ಈ ಕಾಲಗತಿಯ ಶ್ರದ್ಧೆ ನಾಳೆ ಎಂಬುದನ್ನು ಅರಿಯದು. ಏನೆಲ್ಲವೂ ನಿನ್ನೆಯಲ್ಲಿ, ಪೂರ್ಣತ್ವ : ಅಥವಾ ನಿತ್ಯವರ್ತಮಾನ ಕಾಲ, ಜಗತ್ ಶೂನ್ಯ.

ಇತಿಹಾಸ ಮರಳುತ್ತದೆ ಎಂಬ ಈ ವಾಕ್ಯದ ಆಶಯವು ತಪ್ಪಲ್ಲ : ಆದರೆ, ಅಭಿವ್ಯಕ್ತಿ ಸದೋಷವಿದೆ. ಇತಿಹಾಸ ಎಂಬುದು ಭೌತ ದಿಕ್ಕಾಲಪರಿಸರಕ್ಕೆ ಸಂಬದ್ಧ ಘಟನೆ. ಘಟನೆ ಇದೇ ಇತಿಹಾಸವಲ್ಲ. ಇದು ಒಳಗೊಂಡ ವಿಚಾರವು ಇತಿಹಾಸದ ಅಂಗ. ಇತಿಹಾಸವು ಒಳಗೊಳ್ಳುವ ವಿಚಾರವು ಮರಳುತ್ತದೆಯೇ ಹೊರತು, ಐತಿಹಾಸಿಕ ಸ್ವರೂಪದ ವಿಶಿಷ್ಟ ಘಟನೆಯು ಮರಳಿ ಸಂಭವಿಸಲಾರದು. ಈ ಕಾರಣದಿಂದ, ಅವತಾರ ಎಂಬುದರ ಆಶಯ ಸರಿ ಎನಿಸಿದರೂ ಮರಳಿ ರಾಮ, ಕೃಷ್ಣ, ಏಸುವೇ ಅವತರಿಸುತ್ತಾನೆ ಎಂಬ ನಂಬುಗೆ, ಅವಿಚಾರಿತ ರಮಣೀಯ ಶ್ರದ್ಧೆ. ಮಹಾತ್ಮ ಗಾಂಧೀಜಿಯವರ ಜೀವನಶ್ರದ್ಧೆಯ ಸ್ವರೂಪವು ಏಸುವಿನ ಉಪದೇಶದ ಸ್ಪಷ್ಟೀಕರಣದಂತೆ ಇತ್ತು. ದೇವರೇ ಸತ್ಯ ಸತ್ಯವೇ ದೇವರು, One without second' ಎಂಬೀ ಬಗೆಯ ಆತ್ಯಂತಿಕ ನಿಷ್ಠೆ. ಉಪವಾಸಾದಿ ಉಗ್ರಸಾಧನ ಅನುಷ್ಠಾನದಿಂದಾಗಿ, ಭೂಲೋಕದಲ್ಲಿ ಇಳಿದು ಬಂದ ಏಸುವು ಎಂಬ ನಂಬಿಗೆ ಹುಟ್ಟಿ, ಭಾವೋತ್ಕಟರಾಗಿ ಗಾಂಧೀಜಿ ದರ್ಶನಕ್ಕೆ ಧಾವಿಸಿ ಬಂದ ಕ್ರೈಸ್ತಭಕ್ತರೂ ಉಂಟು. ಈ ವಿವರಣೆಯು ಯಾತಕ್ಕೆ ಎಂದರೆ ವೈಚಾರಿಕ - ಆಕೃತಿ ಅದು ಒಳಗೊಳ್ಳುವ ಆಶಯ : ಅದರೊಳಗಿನ ಪ್ರೇರಣಾ ಸ್ವರೂಪ : ಸಾರ್ವಕಾಲಿಕವಿದೆ ಎಂಬುದಕ್ಕೆ ಮಹಾತ್ಮಜೀಯವರಂತಹ ಚೊಕ್ಕಟ ಮಾದರಿ ಬೇರೊಂದು ದೊರೆಯಲಾರದು.

ಗಾಂಧೀಜಿಯವರ ಶ್ರದ್ಧೆಯು ಒಳಗೊಳ್ಳುವ ವೈಚಾರಿಕ ಆಕೃತಿಯು ಯಾವುದು? ಭಾರತೀಯ ಪುರಾತನ ಪರಂಪರೆಯ ಪರಿಭಾಷೆಯಲ್ಲಿ ಏಕಂ ಸತ್ (ವಿಪ್ರಾಃ ಬಹುಧಾ ವದಂತಿ). ವೈಚಾರಿಕ ಆಕೃತಿ ಎಂದರೆ (logical

form) ಅದರ ಆಶಯದ ಇಡಿಯಾದ ಚಿತ್ರ. ಇದನ್ನು 'Gestalt' (ಆಕೃತಿ : ದರ್ಶನ) ಮಾನಸ ಶಾಸ್ತ್ರವು ಚೆನ್ನಾಗಿ ವಿವರಿಸುತ್ತದೆ. ಭಗವದ್ಗೀತೆಯ ವೈಚಾರಿಕ ಆಕೃತಿ : ಒಬ್ಬ ಕೃಷ್ಣನೇ ಏನೆಲ್ಲ : ಏಕಂ ಸತ್. ಗೀತೆಯೊಳಗಿನ, ಬೈಬಲ್ಲಿನೊಳಗಿನ ಉಪಯುಕ್ತವೆನಿಸಿದ ಭಾಗವನ್ನು ಮಾತ್ರ ಸ್ವೀಕರಿಸಿ ಇನ್ನುಳಿದುದನ್ನು ಬಿಡಬಹುದು, ಎಂಬ ಒಂದು ವಾದವಿದೆ. 'Gestalt' ಇಡೀ ಶರೀರದಂತೆ. ಕೈಪಿಡಿದರೆ ಮೈತಾನೆ ಬರುತ್ತದೆ. ಯೋಗಾಸನ ಈ ಧ್ಯಾನ-ಧಾರಣೆ ಸಮಾಧಿಯತ್ತ ತಳ್ಳಿಕೊಂಡು ಹೋಗುವ ಪ್ರೇರಣೆ ಅದರ ಮೂಲದಲ್ಲಿಯೆ ಇದೆ. ಇದರ ಇತಿಮಿತಿಗಳನ್ನು ನಿರ್ಧರಿಸಲು ಇದಕ್ಕೂ ಮೇಲಣ (ಸೌರ) ತತ್ತ್ವವನ್ನು ಆಮಂತ್ರಿಸಬೇಕಾಗುತ್ತದೆ. ಸೌರತತ್ತ್ವ ಆಮಂತ್ರಿಸುವಲ್ಲಿ 'ಏಕಂ ಏವ ಅದ್ವಿತೀಯಂ' ಈ ವೈಚಾರಿಕ ಆಕೃತಿಗೆ ಬಾಧೆ ಬಂತು! ಏಕಂ-ಸತ್ ಇದು ಮೈಯಲ್ಲಿ ಆವೇಶ ತರುವ, ಆವೇಶ ನಿರ್ಮಿಸುವ ಹುಟ್ಟು ಗುಣವುಳ್ಳದ್ದು. ಇದು ಇನ್ನಾರ ಮಾತಿಗೂ ಕಿವಿಗೊಡಲಾರದು. ಏಕಂ ಇದೇ ಸತ್-ಸತ್ಯವಾಗುವ ಅಂತರ್ವಿಸಂಗತಿಯು ಇದರ ಜಾತಕದಲ್ಲಿ ಬರೆದಿದೆ. 'ಅಮೃತಂ ಚೈವ ಮೃತ್ಯುಃ ಚ' ಜೀವನ ಮತ್ತು ಮರಣ ಇವೆರಡನ್ನೂ ಏಕಕಾಲಕ್ಕೇ ನಂಬುವಲ್ಲಿ, ಜೀವನ ಮೌಲ್ಯಗಳಿಗೆ ಭೂಮಿಕೆಯಲ್ಲಿ ಸ್ಥಾನವು ಉಳಿಯಲಾರದು. ಈ ಕೊರತೆ ತುಂಬಿಕೊಳ್ಳಲು, ಆತ್ಯಂತಿಕ ಮಟ್ಟದ ದಿವ್ಯ ಉದಾತ್ತ ವಿಃಚಾರಗಳನ್ನು ಉಚ್ಚರಿಸುವ ಅನಿವಾರ್ಯತೆ ಬೆಂಬತ್ತಿದೆ. ಆತ್ಯಂತಿಕ ಅಹಿಂಸೆ, ಅತ್ಯಂತಿಕ ಪ್ರೇಮ ಸರ್ವಸ್ವದ ತ್ಯಾಗ... ಇನ್ನೂ ಒಮ್ಮೆ ಇದರ ವಿವರಣೆ ಬರಲಿದೆ. ಸದ್ಯಕ್ಕೆ ಈ ಆಕೃತಿ ವಿಚಾರವು ಇಷ್ಟೇ ಸಾಕು. ಆದರೆ ಇದರ ಪರಿಣಾಮ ಅಥವಾ ಈ ಪ್ರೇರಣೆಯ ಪರಿಣತಿಯನ್ನು ಹೇಳದೆ ಮುಗಿಸಲಿಕ್ಕಾಗುವುದಿಲ್ಲ.

ಭಗವದ್ಗೀತೆಯ ಭಗವಂತನೇ ತನ್ನ ಅಮೋಘ ವಾಣಿಯಲ್ಲಿ, ಕೃಷ್ಣೋಪಾಸನೆಯ ಪರಿಣಾಮ ಹೇಳಿದ್ದಾನೆ : 'ಕಾಲೋಽಸ್ಮಿ ಲೋಕ-ಕ್ಷಯಕೃತ್-ಪ್ರವೃದ್ಧಃ', ನಾನು ಮೃತ್ಯುಸ್ವರೂಪನಿದ್ದೇನೆ. ಕ್ರೈಸ್ತಪಂಥೀಯ ಶಿಲುಬೆ ಭಗವಂತನ ಮಾತಿನ ವಾಸ್ತವತೆಯನ್ನು ದೃಢಪಡಿಸುತ್ತದೆ. ತಲೆತಿರುಕ ನೀಚನೊಬ್ಬನು ಕೊಲೆಗಡುಕನ ಪಾತ್ರವಹಿಸಿ, ಗಾಂಧಿಜೀಯವರ ಕೊಲೆಗೆ ಕಾರಣನಾಗುತ್ತಾನೆ. ಈ ನಿಂದ್ಯಕೃತ್ಯ ಸಂಭವಿಸದಿದ್ದರೂ, ಗಾಂಧಿಜೀಯವರು ದಿಲ್ಲಿಯೊಳಗಿನ ಭಂಗೀ ವಸತಿಯ ತಮ್ಮ ನಿವಾಸದಲ್ಲಿ ತಮಗೆ ಸಾವು ಬರಲೆಂದು ಪ್ರಾರ್ಥಿಸುತ್ತಿದ್ದುದು ಸರ್ವಶ್ರುತವಿದೆ. ಏಕಂ ಸತ್ ಅಥವಾ ಕ ಹಿರಣ್ಯಗರ್ಭ ಪ್ರಜಾಪತಿ (ಚಂದ್ರ) ದೈವತದ ಉಪಾಸನೆ ಆತ್ಮಹನನಕ್ಕೆ, ಆತ್ಮದಹನಕ್ಕೆ ಪ್ರೇರಿಸುತ್ತದೆ ಎಂಬ ಈ ನಿಷ್ಕರ್ಷವು ಪುರಾತನ ಈಜಿಪ್ಟ್ ಸಂಸ್ಕೃತಿಯ ಘಟನೆಗಳ ಮೂಲಕವೂ ಬೆಳಕಿಗೆ ಬಂದಿದೆ. ಅಲ್ಲಿಯೂ ಕ (Ka) ದೈವತವಿತ್ತು : 'ರಾ' ಬೀಜಾಕಾರದ ದೈವತವಿತ್ತು. ಡಾ|| ಫ್ರಾಂಕ್‌ಫೋರ್ಟ ಬರೆದಿರುವ Before Philosophy ನೋಡಿ : Ra is my Ka, Ptah is my Ka ಎಂಬೀ ಬಗೆಯ ಉನ್ಮಾದದಲ್ಲಿ ಆತ್ಮದಹನ ಮಾಡಿಕೊಳ್ಳುವಷ್ಟು ನಿರಾಶಾಮಯ ಪರಿಸ್ಥಿತಿಯೇ ಎಲ್ಲೆಲ್ಲೂ ಕಾಣತೊಡಗಿತಂತೆ. ಅರ್ವಾಚೀನ ಕಾಲದಲ್ಲಿ ಹಿಮಾಲಯದಲ್ಲಿ ಜಲಸಮಾಧಿ ಸ್ವೀಕರಿಸಿದ ಶ್ರೀ ರಾಮತೀರ್ಥರ ಉದಾಹರಣ ಉಂಟು. ಮಹಾರಾಷ್ಟ್ರದ ಜ್ಞಾನೇಶ್ವರನು ತಾನಾಗಿಯೇ ಗುಹಾಪ್ರವೇಶ ಮಾಡುತ್ತಾನೆ. ಶ್ರೀ ಬಸವಾದಿ ಪ್ರಮಥರು ಆತ್ಮಸಮರ್ಪಣದ ದಿಕ್ಕಿನಲ್ಲಿ ಹೊರಡುತ್ತಾರೆ. ಈ ಐತಿಹಾಸಿಕ ಮಾದರಿಗಳು, ಏಕಂ : ಸತ್ ಪ್ರೇರಣೆಯ ಚಾಂದ್ರಭೂಮಿಕೆಯ ಮಾನವಧರ್ಮದ ಪ್ರೇರಣೆಯ ಸ್ವರೂಪವನ್ನು ಗಮನಕ್ಕೆ ತಂದುಕೊಡಬಲ್ಲವು. ಇದು ಇತಿಹಾಸ-ತತ್ವಜ್ಞಾನದಿಂದ ದೊರೆವ ನಿಷ್ಕರ್ಷವಾಯಿತು.

ಜೀವಶಾಸ್ತ್ರದ ಪರಿಭಾಷೆ ಮತ್ತು ಅರ್ಥಾಕೃತಿಯ ವಿಚಾರ

ಭೌತಶಾಸ್ತ್ರದಲ್ಲಿ ಆದ ಪ್ರಗತಿಯ ಉನ್ಮಾದದಲ್ಲಿ ಸೈನ್ಸ್ ಇದುವೆ ಏಕಂ ಸತ್; ಇನ್ನುಳಿದ ಶಾಸ್ತ್ರಾದಿಗಳೆಲ್ಲ ಟೊಳ್ಳು ಎನ್ನುವ ಧಾಟಿಯಲ್ಲಿ ಮಾತು ಕೇಳಬರತೊಡಗಿದ್ದುವು. ಪ್ರಯೋಗಶಾಲೆಯಲ್ಲಿ ಹಾಗೂ ವಿಶ್ಲೇಷಣಾತ್ಮಕ ಪದ್ಧತಿಯಿಂದ ದೃಢಪಟ್ಟದ್ದೇ ಸತ್ಯ, ಎಂಬ ಒರೆಗಲ್ಲಿನಿಂದ ಮಾನವ ಜೀವನ-ಸಂಸ್ಕೃತಿ ಕಲ್ಪನಾತ್ಮಕ, ಅನೈಸರ್ಗಿಕ ಎಂಬ ವಾದಕ್ಕೂ ಅವಕಾಶ ದೊರೆತಿತ್ತು. ಹಾಗಾದರೆ ಭೌತಭೂಮಿಕೆಯಿಂದ ಜೀವನದ ಅರ್ಥವೇನು? ಎಂಬ ಪ್ರಶ್ನೆಗೆ ಫ್ರೈಡನು ನೇರವಾಗಿ ಉತ್ತರಿಸಿದ್ದಾಯಿತು. ಈ ಮಾನಸ ಶಾಸ್ತ್ರವು ಜೀವದ-ಜೀವಿತದ ಅರ್ಥವಿವರಿಸುವುದೇ

ಹೊರತು, ಜೀವನದ, ಸಮಾಜ ಸಮಷ್ಟಿ ಪಾತಳಿಯ ಅಸ್ತಿತ್ವವು ಅರ್ಥವು, ಈ ಮಾನಸಶಾಸ್ತ್ರದ ಕಕ್ಷೆಯ ಹೊರಗಿನದು. ಇದು ತತ್ವಜ್ಞಾನದ ಕ್ಷೇತ್ರ. ಇತಿಹಾಸದ ತತ್ವಜ್ಞಾನ ಮತ್ತು ತತ್ವಜ್ಞಾನದ ಇತಿಹಾಸದ ಇವೆರಡರ ತಾಳ-ಮೇಳದಲ್ಲಿ ಈ ಜೀವನ ಸಂಸ್ಕೃತಿಯ ಅರ್ಥ-ಸತ್ವವು, ಅರಿಕೆಯ ಅಳವಿನಲ್ಲಿ ಬರಬಲ್ಲದೆಂದು ಪ್ರತಿಪಾದಿಸುವ ತಜ್ಞರು ಈ ಹೊಸಹಾದಿಯನ್ನು ಹುಡುಕಹೊರಟರು.

ಎರಡು ಘೋರ ನರಮೇಧಗಳನ್ನು ಎದುರಿಸಬೇಕಾಗಿ ಬಂದು ಅಣುಬಾಂಬಿನ ಸ್ಫೋಟದಿಂದಾಗಿ ಭೌತಶಾಸ್ತ್ರಜ್ಞರಲ್ಲಿಯೇ ಸಾಂಸ್ಕೃತಿಕಮೌಲ್ಯ, ಜೀವನಮೌಲ್ಯಗಳ ವಿಚಾರವು ಅನಿವಾರ್ಯವೆನಿಸತೊಡಗಿತು. ಡಾ|. ಜ್ಯೂಲಿಯಸ್ ಹಕ್‌ಸ್ಲೇ ಪ್ರಭೃತಿ ಜೀವವಿಜ್ಞಾನಿಗಳು, ಮಾನವಜೀವನದ ದೃಷ್ಟಿಯಿಂದ ವಿಚಾರಿಸತೊಡಗಿದರು. ಈವರೆಗೆ ಜೀವನದ ಅರ್ಥವನ್ನು ಒಂದೇ ಪಾತಳಿಯದೆಂದು ಬಗೆದದ್ದು ಸದೋಷವಿದೆ, ಎಂದು ಅವರಿಗೆ ಕಂಡುಬಂತು. ಜೀವನದ ಒಂದೇ ಪಾತಳಿ ಎಂದರೆ ಇದು ಜೀವಕ್ಕೆ-ಜೀವಿತಕ್ಕೆ ಮಾತ್ರ ಸಂಬದ್ಧ ಆಪ : ರಸ: ರೇತದ ಪಾತಳಿಯು ಆಗುತ್ತದೆ ಎಂಬುದು ಡಾ|| ಹಕ್‌ಸ್ಲೆ ಅವರ ಗಮನಕ್ಕೆ ಬಂತು. ಇದೇ ದಿಕ್ಕಿನಲ್ಲಿ ಫ್ರೆಂಚ್ ವಿಜ್ಞಾನಿಗಳೂ ಮುನ್ನಡೆದಿದ್ದರು. ಭೌತಪಾತಳಿಯ ಆಚೆಗಿನ Noosphere ಎಂಬ ಇನ್ನೊಂದು ಪಾತಳಿಯ ಅಸ್ತಿತ್ವವನ್ನು ಲೆಕ್ಕಿಸದೆ ಮಾನವ ಜೀವನದ ಸಮಾಜ-ಸಮಷ್ಟಿಯ ಪಾತಳಿಯ ಮೇಲಣ ಆಗುಹೋಗುಗಳ ಅರ್ಥವು ಅಶಕ್ಯವಿದೆ ಎಂಬ ನಿಷ್ಕರ್ಷದ ಫ್ರೆಂಚ್ ವಿಜ್ಞಾನಿಗಳ ಪಾರಿಭಾಷಿಕ ಸಂಕೇತವನ್ನೇ ಡಾ|| ಹಕ್‌ಸ್ಲೆ ಸ್ವೀಕರಿಸಿದ್ದಾಯಿತು.

ಮಾನವಶಾಸ್ತ್ರಜ್ಞರಲ್ಲಿ ಡಾ|| ಎ. ಎಲ್. ಕ್ರೋಬರ್ ಪ್ರಭೃತಿಗಳ ನಿಷ್ಕರ್ಷವು ಇದಕ್ಕಿಂತ ಸುಸ್ಪಷ್ಟವಿತ್ತು. ಮಾನವ ಜೀವನದ ಆಕೃತಿ (Configuraton) ನಕ್ಷೆ ಗ್ರಹಿಸಿಕೊಳ್ಳುವ ಆವಶ್ಯಕತೆಯು ಇವರಿಗೆ ಕಂಡಿತು. ಜೀವನದಲ್ಲಿ ಒಂದೇ ಸ್ತರವಿರುವುದು ವಾನರ ಹಂತದ ವರೆಗಿನ ಪ್ರಾಣಿ ಮಾತ್ರಗಳಲ್ಲಿ ಮಾತ್ರ. ಆದರೆ, ಪ್ರಜ್ಞಾಪ್ರಾದುರ್ಭಾವ ದಿಂದಾಗಿ, 'ಸ್ವ'ದ ಉಪಜ್ಞೆ ತಲೆದೋರಿದ, ಒಳಗಿನ ತಿಳಿ (ವಿನ) ಬೆಳಕಿನಲ್ಲಿ ಅರ್ಥಮೌಲ್ಯಗಳನ್ನು ಗ್ರಹಿಸಿಕೊಳ್ಳುವ ಪ್ರಯತ್ನದಲ್ಲಿ ಒಂದಕ್ಕಿಂತ ಹೆಚ್ಚು ಪಾತಳಿಗಳ ಮೇಲಣ ಆಗು-ಹೋಗುಗಳು ಸಂಭವಿಸುತ್ತವೆ. ಜರ್ಮನಿಯ ಸಂಶೋಧಕರಲ್ಲಿ ಮೂರು ಪಾತಳಿಗಳನ್ನು ಲೆಕ್ಕಿಸುವವರೇ ಹೆಚ್ಚು. ಆದರೆ, ಅಮೇರಿಕೆಯ ಮಾನವಶಾಸ್ತ್ರಜ್ಞರಲ್ಲಿ ಮತೈಕ್ಯವಿಲ್ಲ. ೪,೬, ಹೀಗೆ ವಿವಿಧ ಮತಗಳಿವೆ. ಆದರೂ ಡಾ|| ಎ. ಎಲ್. ಕ್ರೋಬರ್ ಮೂರು ಪಾತಳಿಯ ವಿಚಾರದ ಕಡೆಗೆ ಒಲಿದಂತೆ ಎನಿಸುತ್ತದೆ.

ಸೋಜಿಗದ ಸಂಗತಿಯೆಂದರೆ, ಭಾರತೀಯ ಪುರಾತನ ಪರಂಪರೆಯಲ್ಲಿ ಕಾಣದೊರೆಯುವ ವ್ಯಾಹೃತಿಗಳ ವಿಚಾರವು, ಆಧುನಿಕ ಮಾನವಶಾಸ್ತ್ರಜ್ಞರ ವಿಚಾರವನ್ನು ಹೋಲುತ್ತಿದೆ. ವ್ಯಾಹೃತಿತ್ರಯದ ವಿಚಾರವು ಪ್ರಕಾಶತತ್ವದ ಸೌರದೈವತದ ಆರಾಧಕರ ವೈಶಿಷ್ಟ್ಯ. ಚಾಂದ್ರ ಸಂಪ್ರದಾಯದಲ್ಲಿ ವ್ಯಾಹೃತಿಗಳ ಸಂಖ್ಯೆಯ ಸ್ಪಷ್ಟತೆಯಿಲ್ಲ. ಇದಕ್ಕೆ ಕಾರಣಗಳೂ ಉಂಟು. ಆದರು, ನಾಲ್ಕು ವ್ಯಾಹೃತಿಗಳ ವಿಚಾರವು ಉಪನಿಷತ್ತಿನಲ್ಲಿದೆ.[೧] 'ತುರೀಯೇಣ ಬ್ರಹ್ಮಣಾ ಗೂಳ್ಹಂ ಸೂರ್ಯಂ ಅವಿಂದನ್ ಅತ್ರಿಃ'[೨] ಎಂಬ ನಿರ್ದೇಶವು ಗೂಢಭಾಷೆಯಲ್ಲಿ ಋಗ್ವೇದದಲ್ಲಿಯೇ ಇದೆ. ತುರೀಯಾ ಎಂಬುದು ನಾಲ್ಕನೆಯ ವ್ಯಾಹೃತಿಸೂಚಕ ಸಂಕೇತ 'ಸಮಾಧಿ ಸಿದ್ಧಿ' ಸೂಚಕ. 'ಅತ್ರಿ' ಮಂಡಲದಲ್ಲಿ ಬರುವ ಈ ಸೂಚಕ ಸಂಕೇತದ ನಿರ್ದೇಶನವಿದ್ದು ಅರ್ವಾಚೀನವೆಂಬ ಆತ್ರೇಯ ಅವಧೂತ ಗುರು-ದತ್ತ ಮಾರ್ಗದ ಬೇರುಗಳು ಋಗ್ವೇದದಲ್ಲಿಯೇ ಘೋಷಣೆ ಪಡೆಯುತ್ತಿವೆ, ಎಂಬುದಕ್ಕೆ ಸಾಕ್ಷಿ. ಅಲ್ಲದೆ, ಇಡೀ ಒಂದು ಸೂಕ್ತವೆ ಇಂಥ 'ಕೇಶಿ ಮೌನೇಯ' ಮುನಿಸಂಪ್ರದಾಯದ ಲೀಲೆಗಳ ನಿವೇದನಕ್ಕಾಗಿ ಮೀಸಲಾಗಿದೆ.[೩]

ಈ ಆಧುನಿಕ ಪರಿಭಾಷೆಯು ಮಾನವ (ಜೀವನ) ಧರ್ಮದ ಸ್ವರೂಪ ಗ್ರಹಣಕ್ಕೆ ಪ್ರಯೋಜನಕಾರಿಯಾಗಿದೆ. ಜೀವ, ಜೀವಿತ ಇದು ಭಾರತೀಯ ಪುರಾತನ ಪರಿಭಾಷೆಯಂತೆ 'ಕ(೦)' 'ಖಂ' ಬ್ರಹ್ಮ ಅಥವಾ ಕ-ಪ್ರಜಾಪತಿ ದೈವತದ ಅಧಿಕಾರ ಕಕ್ಷೆಯಲ್ಲಿ ಬರುತ್ತದೆ. 'ಹಿರಣ್ಯಗರ್ಭಃ ಸಮವರ್ತತ ಅಗ್ರೇ ಭೂತಸ್ಯ ಜಾತಃ ಪತಿಃ ಏಕಃ ಆಸೀತ್'. ಸ್ವಯಂಭೂ ದೇವನೆಂದರೆ ಈತನೇ. ಮೂಲ ಸ್ಥಾನ ಕಲ್ಲೇಶ್ವರ, ಕಲ್ಲಿನಾಥ, ಕಾಲ, ಕಾಲೇಶ್ವರನೆಂದರೂ ಈತನೇ.

ತತ್ತ್ವಜ್ಞ ಕ್ಯಾಸಿರರ್ ಸನಾತನ ವೈಚಾರಿಕ ಆಕೃತಿಗಳನ್ನು ಗ್ರಹಿಸಿಕೊಳ್ಳುವ ಆವಶ್ಯಕತೆಯನ್ನು ಕುರಿತು ಹೇಳಿರುವ ವಿಚಾರಗಳು ಮಾನವಸಂಸ್ಕೃತಿಯನ್ನು ಗ್ರಹಿಸಿಕೊಳ್ಳುವ ದೃಷ್ಟಿಯಿಂದ ಅತ್ಯಂತ ಮಹತ್ತ್ವದುವು ಆಗಿವೆ. ಇವನು ಹೇಳುವುದೇನೆಂದರೆ:

> Man can participate in higher orders of life only through the realization of the perennial forms of human thought,.
> History as well as poetry is an organ of our self knowledge, an indispensable instrument for building up of our human thought.

ವ್ಯಾಹೃತಿಗಳ ಭೂಮಿಕೆಯಿಂದ Perennial thought form ದ ಶಕ್ಯತೆಯನ್ನು ತಾತ್ತ್ವಿಕ ಭೂಮಿಕೆಯಿಂದ ಗ್ರಹಿಸಿಕೊಳ್ಳಲು ಬರುತ್ತದೆ. ಭೂಃ ಮತ್ತು ಭುವಃ ಇವೆರಡರ ಸಮವಾಯವನ್ನು ಮರೆತು ನಡೆಯದು. ಕಾಣಲು ಎರಡು; ಆದರೆ ತತ್ತ್ವತಃ ಒಂದೇ. ಇದನ್ನು ಉಪನಿಷತ್ತಿನ ವಿವರಣೆಯಿಂದ ಸ್ಪಷ್ಟೀಕರಿಸುವುದು ಲೇಸು.

i ದ್ವೇ ವಾವ ಬ್ರಹ್ಮಣೋ ರೂಪೇ ಅಮೂರ್ತಂ ಚ ಮೂರ್ತಂ ಚ
ಮರ್ತ್ಯಂ ಚ ಅಮೃತಂ ಚ[೪]

ii ದ್ವೇ ವಾವ ಬ್ರಹ್ಮಣೋ ರೂಪೇ ಮೂರ್ತಂ ಚ ಅಮೂರ್ತಂ ಚ.
ಅಥ ಯತ್ ಮೂರ್ತಂ ತತ್ ಅಸತ್ಯಂ ; ಯತ್ ಅಮೂರ್ತಂ ತತ್
ಸತ್ಯಂ। ತತ್ ಬ್ರಹ್ಮ ತತ್ ಜ್ಯೋತಿಃ। ಯತ್ ಜ್ಯೋತಿಃ ಸಃ ಆದಿತ್ಯಃ[೫]

ಬೃಹದಾರಣ್ಯಕ್ಕಿಂತ ಮೈತ್ರಾಯಣೀ ಉಪನಿಷತ್ತು ಹೆಚ್ಚಿನ ಸ್ಪಷ್ಟೀಕರಣವನ್ನು ಕೊಡುತ್ತಿದೆ. ಅಲ್ಲದೆ, ಇಲ್ಲಿ ಆದಿತ್ಯದೈವತದ ಸ್ಪಷ್ಟೀಕರಣವೂ ಉಂಟು. ಆದಿತ್ಯ ಇದು ಬ್ರಹ್ಮನ್ ತತ್ತ್ವ. ಬ್ರಹ್ಮನ್ ಇದು ಸೃಷ್ಟಿಯ ಆಧಾರ ಶಕ್ತಿತತ್ತ್ವ. ಇದು ಜ್ಯೋತಿ ಸ್ವರೂಪವೆಂದು ಇಲ್ಲಿ ಹೇಳಲಾಗಿದೆ. ಆದರೆ, ಈ ಜ್ಯೋತಿಯ ರೂಪ ಆಕೃತಿಯ ವಿವರಣೆ ಅವಶ್ಯವಿದೆ. ಅದನ್ನು ತಿಳಿದರೆ ಜ್ಯೋತಿ ಸಂಕೇತದಿಂದ ದೃಢಪಡುವ ಸಂಗತಿಗಳು ಮೌಲಿಕ ಮಹತ್ತ್ವದುವು ಆಗಿವೆ. ಜ್ಯೋತಿ ಇದು ದೀಪ ಅಥವಾ ಚಂದ್ರ ಇವರ ಸಾಹಚರ್ಯವನ್ನು ನೆನಪಿಗೆ ತಂದುಕೊಡುತ್ತದೆ. ಜ್ಯೋತಿ ಇದು ಅಂತರಿಕ್ಷದ (Vault) ಅವಕಾಶದಲ್ಲಿ (ಉದಾ : ಮನೆ, ಗವಿ, ಗರ್ಭಗುಡಿ) ಇರುವುದುಂಟು. ಆದರೆ, ಈ ವಿವರಣೆ ಇಲ್ಲಿ ಪ್ರಸ್ತುತವಿಲ್ಲ. (ದ್ವೇ ವಾವ ಬ್ರಹ್ಮಣೋ ರೂಪೇ) ವಿಶ್ವಸ್ಥ ಬ್ರಹ್ಮನ್ ತತ್ತ್ವವು ಎರಡು ತೆರನಾಗಿ ಉಂಟು. ಮೂರ್ತ ಮತ್ತು ಅಮೂರ್ತ. ಮೂರ್ತವು ಮರ್ತ್ಯ, ಕ್ಷಣಿಕ, ಮಾರ್ಪಡುತ್ತಿರುವ ದೃಶ್ಯಸೃಷ್ಟಿ (phenomena) ಆಯ್ತು. ಇನ್ನು ಅಮೂರ್ತವು ಅಮೃತಸ್ವರೂಪ, ಎಂದರೆ ದೃಶ್ಯಸೃಷ್ಟಿಗೆ ಆಧಾರಭೂತ. ಇದರ ಹಿಂದೆಯೆ ಸಮವಾಯ ರೂಪದಲ್ಲಿ ಬೆರೆತು ಇರುವ ನಿಸರ್ಗ (Nature)! ವೇದಾಂತವು ಹೇಳುವ ಪ್ರಕೃತಿ, ಪುರುಷ ಎಂಬ ಪರಿಭಾಷೆಯೂ ಭೌತಸೃಷ್ಟಿಯನ್ನು ದಿವ್ಯದೈವತದ ಪರಿಭಾಷೆಯಲ್ಲಿ ಹೇಳಿದಂತಿದೆ. ಭೂಃ ಮತ್ತು ಭುವಃ ಈ ವ್ಯಾಹೃತಿಗಳಲ್ಲಿ ಭೂಃ ಇದು ದೃಶ್ಯ ಪ್ರಕೃತಿ-ಸೃಷ್ಟಿ ಮತ್ತು ಭುವಃ ಎಂಬುದು ಈ ಪ್ರಕೃತಿ-ಸೃಷ್ಟಿಯ ಒಳಗೆ ಅಡಗಿರುವ ಶಕ್ತಿತತ್ತ್ವ ಪುರುಷ ಎಂಬುದನ್ನು ಪುರಿ-ಶಯ(ನ) ಸೃಷ್ಟಿ ಅಥವಾ ಪ್ರಕೃತಿ ಎಂಬ ಪುರದಲ್ಲಿ ಶಯ(ನ)ನು-ಪುರುಷನು.

ಭಾಷೆ ಮತ್ತು ಸಂಸ್ಕೃತಿ ಇವೆರಡರೊಳಗಿನ ಅನ್ಯೋನ್ಯದಿಂದಾಗಿ, ಈ ಪರಿಭಾಷೆ ಮೈದಾಳಿದ ಹಿನ್ನೆಲೆಯೂ ಬೆಳಕಿನಲ್ಲಿ ಬರಲೇಬೇಕಾಗುತ್ತದೆ. ಪ್ರಕೃತಿ, ಪುರುಷ ಈ ವಿಶ್ವಾತ್ಮಕ ಪಾತಳಿಯ ವಿಚಾರವು, ಈ ಮಾನವನಿಗೆ ಗೊತ್ತಾದದ್ದು, ಅರಿಕೆಗೆ ಬಂದದ್ದು ಹೇಗೆ? ವಿಚಾರ ವಿಕಾಸದಲ್ಲೂ ಒಂದು ಕ್ರಮವಿದೆ. ಸ್ಥೂಲದಿಂದ ಸೂಕ್ಷ್ಮ: ಭೌತದಿಂದ ಅಭೌತ ತಾತ್ತ್ವಿಕ ಹೀಗೆ ಸ್ಥೂಲ ಕ್ರಮವಿದೆ. ಮಾನವನು ತನ್ನ ಜೀವನಾನುಭವದ ಹಿನ್ನೆಲೆಯಲ್ಲಿ, ಜ್ಞಾತ (ಗೊತ್ತಿರುವ) ಸಂಗತಿಯ ಸಾಹಚರ್ಯದಲ್ಲಿ ಅಜ್ಞಾತ - ಹೊಸ ಮಾತುಗಳನ್ನು ಗ್ರಹಿಸಿಕೊಳ್ಳುತ್ತಾನೆ. ಪ್ರಕೃತಿ ಸ್ತ್ರೀಲಿಂಗಿಯಾಗಿರುವುದೂ, ಪುರಿ-ಶಯ(ನ) ಪುರುಷ ಪುಲ್ಲಿಂಗೀ ಇರುವುದು ನಿಷ್ಕಾರಣವಲ್ಲ. ಮಾನವನ ಮೂಲಭೂತ ಪ್ರಮಾಥೀ ಅನುಭಾವವೇ ಇಲ್ಲಿ ಪ್ರಕೃತಿ ಪುರುಷ ವಿಚಾರದಲ್ಲಿ ಪ್ರತಿಬಿಂಬಿತವಾಗಿದೆ.

ಅರಿಸ್ಟಾಟಲ್ ಹೇಳುವ Nous (Noosphere) ಈ ಪಾತಳಿಯ ಮೇಲಿಂದ ದೊರವ ಪ್ರೇರಣೆಯು 'Scientific' ಪ್ರತಿಯ

ಬುದ್ಧಿಗೆ (flash) ಹೊಳೆದ ವಿಷಯ
ಇಂದ್ರಿಯಾತೀತ ಜ್ಞಾನ :
ಹೃದಯದ ಅರಿವು ಸತ್ಯ

ಪ್ರಕಾಶ ತತ್ತ್ವದ (ವಿವಸ್ವನ್) ಪ್ರೇರಣೆಯ

ವೈಶ್ವಾನರಾಗ್ನಿ (ಸಮಾಜ : ಸಮಷ್ಟಿ) : ಮನುಪ್ರಣೀತ

ಮಾನವ ಧರ್ಮದ (ಇಡಿಯಾಗಿ ಅರ್ಥಗ್ರಹಿಸುವ)

ಜೀವನ ವ್ಯೂಹ (Configuration)

~ ~ ~ ~ ~ ~ ~ ~ ~ Super Organic ~ ~

ಸ್ಟಾರ್ : ಪ್ರಕಾಶ

ಜೀವನ ವಿಶ್ವನಿಯಮ : ವ್ಯವಸ್ಥೆಯ ಋತ-ಪ್ರಜಾತ ದೈವತಗಳ ಉದ್ಗಮ ಕೇಂದ್ರ

ಸಮಷ್ಟಿ : ವೈಶ್ವಾನರಾಗ್ನಿ ಪ್ರೇರಕ, (3) ಸಮಾಜ-ಶತ್ರು = ಅಹಿ-ವೃತ್ರ ಹಂತಕ : 'ಶಿಶ್ನೋದೇವಾ'

ಸ್ಮೃತಿ' = ಕಾಲಪ್ರವಾಹ
ಶ್ರುತಿ' (ಕೇಳಿಯ) ವಿಷಯ
logical continuous
ಇಂದ್ರಿಯ ಗಮ್ಯ

ಊರ್ಧ್ವಮೂಲ ವೃಕ್ಷ { ಮಯಾ ಅಧಿ ಅಕ್ಷೇಣ / ಪ್ರಕೃತಿಃ ಸೂಯತೇ / ಸಚರಾಚರಂ

ಭುವಃ (: ಪುರಿಶಯನ)

ಸೃಷ್ಟಿ-(ಜನನ)

ಭೂಃ (ಪ್ರಕೃತಿ)

ಮೃತ್ಯು ಲಿಂಗ

ದೃಶ್ಯ : Phenomena

Organic ಶರೀರದ ಪಾತಳಿ

NATURE

ನಿಷ್ಕರ್ಷದಂತೆ ಸಾರ್ವಕಾಲಿಕ ಸತ್ಯಾಂಶವನ್ನು ಅರಿಕೆಗೆ ತಂದುಕೊಡಬಲ್ಲುದು (Guthrie : *A History of Greek Philosophy*)

ಬೆಳಕಿನ ಲೋಕ
ಜೀವನ ವಿಶ್ವಸ್ಥ ಅ-ಭೌತ
ತಾತ್ತ್ವಿಕ-ಪಾತಳಿ
(ಡಾ|| ಹಕ್ಸ್ಲೆಯ)
(Noosphere)
Suprarational
intuition
ಪ್ರಜ್ಞಾಲೋಕ-
(Consciousness of
consciousness :
conscience)

~ ~ ~ ~ ~ ~ ~ ~ ~ ~ ~ ~ ~ ~

ಆ-ಕಾಶತತ್-ತ್ವ ~ ~ ~ ~ ~ ~ ~ ~ ~ ~ ~ ~ ~

~ ~ ~ ~ ~ ~ ~ ~ ~ ~ ~ ~ ~

~ ~ ~ ~ ~ ~ ~ ~ ~ ~ ~ ~ ~

ಪಾತಳಿ (ಭೌತ : ಕಾಲಗತಿಯ ಗಸಣಿಯ (time flux) ಆಚೆಗಿನ ಪಾತಳಿ) ~ ~ ~ ~

~ ~ ~ ~ ~ ~ ~ ~ ~ ~ ~ ~ ~ ~

(1) ಸವಿತೃ : ವೈಯಕ್ತಿಕ ಧೀ ಪ್ರೇರಕ : ಜಾತವೇದ ಅಗ್ನಿರೂಪ (2) ವಿವಸ್ವನ್ : 'ಮನು' (ಕುಲ) =
ಪಂಥ, ಯತಿಪಂಥದ ಶತ್ರು ಇಂದ್ರ ಮುಂತಾದ ದೇವತೆಗಳು 'ಭಾ'-ಷಾ-ಪ್ರಕಾಶದಿಂದ ಅರಿಕೆಗೆ ಬರುವ ಲೋಕ

ಭೌತ-ಸೂರ್ಯ-ನಕ್ಷತ್ರಾದಿಗಳ ಪಾತಳಿ

ಅವ
ಅಂತ_ ರಿಕ್ಷಸ್ಥ
ಕಾಶ

ಪ್ಲೇಟೋನ 'Idea'
ಆಪೋಜ್ಯೋತಿ

Archetype

'ಕರ್ಮಾರ್ಣವ ಬ್ರಹ್ಮಣಸ್ಪತಿ:
=ಕರ್ತಾರನ (ವಿಶ್ವಕರನ್ನ) ಕಮ್ಮಟಲೋಕ

ಕತ್ತಲೆಯ ಲೋಕ
ಭೌತ ನಿಸರ್ಗ
(ಮೃತ್ಯುಲೋಕ)
ಭಗವಂತನ ಸೃಷ್ಟಿ:
ನರ-ನಾರ-ಆಯನ ಸೃಷ್ಟಿ
ಪ್ರಾಣ-ಚೇತಸ ಲೋಕ
ನಚಿಕೇತಾಗ್ನಿ : ಪ್ರೇರಕ ಶಕ್ತಿ
Infrarational intuition
Gnostic : ಅರಿವು

Correspondence
truth

ಭೂಃ+ಭುವಃ
ಪ್ರಕೃತಿ + ಪುರಶಯ } ಐಕ್ಯ 'ರಸೋ ವೈ ಸಃ 'ಇದು ಗೊತ್ತಾದುದೂ 'ಭೂ
ನಿಃ ಶಬ್ದಂ ಬ್ರಹ್ಮಲೋಕ ಪ್ರಕಾಶದಿಂದ

ಭೂಃ ಭುವಃ ಎಂಬ ವ್ಯಾಹೃತಿಗಳು (levels) ಕಾಣಲು ಎರಡು. ಆದರೂ ವಾಸ್ತವದಲ್ಲಿ ಒಂದೇ. ಪಿಂಡ ಮತ್ತು ಬ್ರಹ್ಮಾಂಡ ಎಂದರೂ ಇದು ನಿತ್ಯ ಮಿಥುನಯೋಗದ, ದೃಶ್ಯಸೃಷ್ಟಿಯ ಪ್ರತೀಕ. ಇದು ಭೌತ ಪಾತಳಿ. ಇಲ್ಲಿ ಗೊತ್ತಾಗುವ ಒಂದು ಸಾರ್ವಕಾಲಿಕ ಸನಾತನ ಸತ್ಯ : ಮೂರ್ತಾಮೂರ್ತದ ಎರಡು ಪಾತಳಿಗಳ ನಡುವಣ ಘಟನೆ, ಆಗುಹೋಗು. ಇದನ್ನು ದಿವ್ಯಾಧ್ಯಾತ್ಮವೆಂದರೂ ನಿಜವಾಗಿ ಇದು ಭೌತಪಾತಳಿಯ ಅನುಭವವೆ ಇರಬಲ್ಲುದು.

ಅ. ಈ ಮೂರ್ತಾಮೂರ್ತ ಪಾತಳಿಯ ನಡುವಣ ವಾಸ್ತವಸತ್ಯದ ಸ್ವರೂಪ ಭೌತಕಾಲಗತಿಯ (time flux)ಕಕ್ಷೆಗೆ ಒಳಗಾದದ್ದು.

ಆ. ಈ ಸತ್ಯವು ಸತ್ವ-ಸಾರ-ರಸ, ರೇತ : (Essence) ಸ್ವರೂಪದ್ದೇ ಇದ್ದೀತು.

ಇ. ಇದು ಆಭು (Being in becoming) ಸ್ವರೂಪದ್ದೇ ಇರಬಲ್ಲದು. ಇದು ಸಮವಾಯ ರೂಪ; ಎರಡು ಪಾತಳಿಗಳ ನಡುವಣ ವೈಚಾರಿಕ ಆಕೃತಿ.

ಆದರೆ, ಮೂರನೆಯ ಸ್ವರ್ ಅಥವಾ ಸುವ: ಪಾತಳಿಯ ಮೇಲಣ ವೈಚಾರಿಕ ಆಕೃತಿಯ ಸ್ವರೂಪವು, ಇದಕ್ಕೂ ಮುಂಚಿನ (ಎರಡರ) ಸಮವಾಯದ ಪಾತಳಿಗಿಂತ ತೀರ ಭಿನ್ನ.

ಅ. ಇದು ದಿಕ್ಕಾಲ ಪರಿಸರದ ಭೂತಕಾಲದ ಗತಿಯ (Time flux) ಆಚೆಗೆ ಇರುತ್ತದೆ. ಈ ಕಾರಣದಿಂದಾಗಿ ಈ ವೈಚಾರಿಕ ಆಕೃತಿಯು ಶಾಶ್ವತ ಸ್ವರೂಪದ್ದು ಇರಬಲ್ಲದು. ಭೂಃ-ಭುವಃ ಸಮವಾಯದ ಪಾತಳಿಯ ಆಕೃತಿಯ ತುಲನೆಯಲ್ಲಿ, ಸ್ವರ್ ಪಾತಳಿಯ ವೈಶಿಷ್ಟವು ಗೊತ್ತಾಗಬಲ್ಲದು.

ಆ. ಸಮವಾಯದ ಭೂಃ, ಭುವಃ (ಪಿಂಡ-ಬ್ರಹ್ಮ-ಅಂಡ ಐಕ್ಯದ) ಅಥವಾ ಪುರಿ-ಶಯ(ಸ) ರೂಪದ ಏಕಾತ್ಮಕ ಆಕೃತಿಯಂತೆ ನಿಜ (true) ಎನಿಸುವ ದೃಶ್ಯ ಪ್ರಪಂಚ (Phenomenalism) ಸ್ವರೂಪದ ವೈಚಾರಿಕ ಆ-ಕೃತಿ ಸ್ವರೂಪವು ಸ್ವರ್ ಇದಲ್ಲ. ಉದಾ : ನೀರು ಈ ದೃಶ್ಯ ನಿಜ ; ಆದರೆ ಇದರ ಸತ್-ತ್ವ-ಸಾರ = Essence H_2O ಈ ರೂಪದ್ದು; ಇಲ್ಲಿ ಇರುವುದೇ ಒಂದು ಕಾಣುವುದೇ ಇನ್ನೊಂದು ; ಇದು ಅಚೇತನ ಭೌತಪಾತಳಿ.

ಸಚೇತನ ಭೌತಪಾತಳಿಯ ಒಂದು ಉದಾ : ಪುರಿ-ಶಯ(ನ) ರೂಪ ಆಕೃತಿ ಸ್ವರೂಪ ವೇದದ ಪ್ರಚಲಿತ ಸಂಹಿತೆಯ ಪುರುಷಸೂಕ್ತದಲ್ಲಿ ಶಯನ ಮಾಡಿದೆ. 'ಸಹಸ್ರಶೀರ್ಷಃ ಸಹಸ್ರಾಕ್ಷಃ ಸಹಸ್ರಪಾತ್' ಸ್ವರೂಪದ ತಲೆ, ಕಣ್ಣು=ಛಿದ್ರ, ಇವು ಸಮನಾಗಿ ಒಂದೊಂದೇ ಇರುವ ಪಾತ್ (ಪತನದ : ರಸಸ್ರವದ) ಸ್ಥಾನ-ಪದ; ಈ ಸೂಕ್ತವು, ಭೂಃ → ಭುವಃ ಅಥವಾ ಪಿಂಡ-ಬ್ರಹ್ಮ ಅಂಡ ಇವೆರಡರ ಏಕಾತ್ಮಕ ಪಾತಳಿಯ ದರ್ಶನ ಮಾಡಿಸುತ್ತಿದೆ. ಏನೆಲ್ಲ ದೃಶ್ಯ (Phenomena) ವರ್ಣನೆ ನಿಜ-ಹುಸಿ. ಈ ದೃಶ್ಯಪ್ರಕೃತಿ ಸ್ವರೂಪವರ್ಣನೆಯಲ್ಲಿ (ಮಯಾ ಅಧಿ-ಅಕ್ಷೇಣ ಪ್ರಕೃತಿಃ ಸೂಯತೇ), ಪ್ರಕೃತಿ ವಿರಾಜಳ ಹೆರಿಗೆಗೆ, ನಿಮಿತ್ತ ಕಾರಣವಿರುವ ಅಧಿ-ಅಕ್ಷ (=ಪಾತ್)ಇದು ಪ್ರಧಾನ ಅಂಗ. ಈ ಸೂಕ್ತದಲ್ಲಿ ಈ ಅಧಿ-ಅಕ್ಷವನ್ನು ಅತ್ಯತಿಷ್ಠತ್ ದಶಾಂಗುಲಂ ಎಂದು ಮಾಪು- ಅಳತೆ ಸಹಿತ ಸೂಚಿಸಿದ್ದಾಗಿದೆ.

ಇದು Phenomenology ಆದಕಾರಣ (ಭಾಷಿಕ) ಬಾಹ್ಯ ಆವರಣ ಎಲ್ಲೆಡೆಗೂ ಸಮಾನವೇ ಇರುವುದಿಲ್ಲ-ಇರಲಾರದು. ಈ ಪುರಿ- ಶಯ(ನ), ವಲ್ಮೀಕ-ಸ್ಥ: ವಾಲ್ಮೀಕಿ-ನಾಮರೂಪದಿಂದ ಗೋಚರಿಸುತ್ತಾನೆ. ಸಾಹಿತ್ಯ ಸೃಷ್ಟಿಯಲ್ಲಿ, ಭಗವಂತನೆಂದರೂ, ವಾಲ್ಮೀಕಿಯೆ! ಚಂದ್ರಾ-ಆದಿತ್ಯ ಚಂದ್ರಾ (೦) ಮಂಡಲಸ್ಥ ಕೃಷ್ಣ ನೀಲರೂಪೀ ಪುರಿ-ಶಯ(ನ) ಆದಿತ್ಯನೆಂದು ವರ್ಣಿತನಾಗಿದ್ದಾನೆ.[೬] ಆದರೆ, ಇದು ಭೂಃ ಪಾತಳಿಗೆ ಸಂಬದ್ಧ ಆದಿತ್ಯನ ರೂಪವಾಗಲು ವೃಕ್ಷ ಅಶ್ವ=ಹಯವದನ (ಗ್ರೀವ, ಶಿರ) ಎಂಬ ಬಗೆಯಲ್ಲಿ ವೈವಿಧ್ಯ ಪೂರ್ಣರೀತಿಯಿಂದ

ವರ್ಣಿತವಾಗಿದೆ. ಆದರೆ, ಛಾಂದೋಗ್ಯೋಪನಿಷತ್ತಿನ ಕವಿ, ಇನ್ನೂ ವಾಸ್ತವ ಮಟ್ಟದಲ್ಲಿ ಬ್ರಹ್ಮ-ಪುಚ್ಛದ ದರ್ಶನ ಮಾಡಿಸಿದ್ದಾನೆ: 'ಏಷ ಅಂತರ್ ಆದಿತ್ಯೇ ಹಿರಣ್ಮಯೇ ಪುರುಷಃ ಇವನು. ಹಿರಣ್ಯ ಶ್ಮಶ್ರುಃ ಹಿರಣ್ಯಕೇಶಃ ಅಪ್ರನಖಾತ್ ಸರ್ವಃ ಏವ ಸುವರ್ಣಃ!' ಸುಷ್ಠುವರ್ಣ ಕಾಂತಿಯ ಕಾಂತನು, ಈ ಮೋಹನ ಆಂಗನು ಮೀಸೆ, ಕೂದಲುಳ್ಳವನು. ಈ ವರ್ಣನೆಯು ದಿವ್ಯಾಧ್ಯಾತ್ಮಿಗಳ ಪಿಂಡ-ಬ್ರಹ್ಮಅಂಡ ಐಕ್ಯದ ಸಾರವೆಂದು ಹೇಳಬಹುದು.

ಆದರೆ, ಇನ್ನೂ ಸ್ವಲ್ಪ ಕೊರತೆಯಿದೆ: ಈ ತತ್‌ಮಯತೆಯ ಸ-ರಸ ಕ್ಷಣ ಚಿತ್ರವು ಇಲ್ಲಿದೆ. ಈ ದರ್ಶನದ ತೃಪ್ತಿ ಜ್ಯೋತಿ, ಈ ಜ್ಯೋತಿ-ಆಪೋಜ್ಯೋತಿ: ಸ-ರಸ ಜ್ಯೋತಿ. ಆದುದರಿಂದ, ಜ್ಯೋತಿ-ರಸಃ ಅ-ಮೃತಂ ಸ್ವರೂಪಿ ಇದೆ. ಮೃತರಸವಿದ್ದರೆ ಜ್ಯೋತಿಯಿಂದ ಜೀವ ಹುಟ್ಟಲಾರದು-ಆನಂದ ಭೂಲೋಕಕ್ಕೆ ದೊರೆಯಲಾರದು. ಮಾನವೀಯ ಜೀವನ ವಿಶ್ವದಲ್ಲಿ, 'ನಿಜ' (true=Phenomenon) ಸ್ವರೂಪದ ಲೌಕಿಕದ ಅನುಭವಗಳು ಅಡಿಗಡಿಗೂ ಬರುತ್ತವೆ. ಆದರೆ, ನಿಜವೇ 'ಸತ್ಯ' (Reality) ಅಲ್ಲ. ಈ ಬಾಳಿನಲ್ಲಿ ಇರುವ ವಾಸ್ತವ : ಸತ್ಯವು ಸ್ವರ್‌ಪಾತಳಿಯ ಮೇಲೆಯೇ ಅರಿಕೆಗೆ ಬರಬಲ್ಲುದು. ಇದು ನಿತ್ಯ ಅಮೂರ್ತ. ಸಾಂಕೇತಿಕ ಸ್ವರೂಪದ ಪ್ರಕಾಶರೂಪದ್ದು. ಏನೊಂದು ನೆಪದ-ನಿಮಿತ್ತದ-ಮೂಲಕ ಫಕ್ಕನೆ ಹೊಳೆದಂತಾಗಿ ಅರಿಕೆಗೆ ಬಂದಂತೆ ಎನಿಸುವುದು. ಈ ಅನಿಸಿಕೆ ಹಲವು ಮೂರ್ತ, ಭೌತ ವಿಶಿಷ್ಟಗಳ ಮೂಲಕ ತನ್ನ ವಾಸ್ತವತೆಯನ್ನು ಗಮನಕ್ಕೆ ತಂದುಕೊಟ್ಟರೆ ಮಾತ್ರ ಈ ಅನಿಸಿಕೆಗೆ ಬೆಲೆ; ಇಲ್ಲವಾದರೆ ಹುಸಿ, ಭ್ರಮೆ. ಇದು ವೈಶ್ವಕಪಾತಳಿಯ ಸಾರ್ವಕಾಲಿಕ ನಿಯಮದ ಸ್ವರೂಪ ಸತ್ಯ. ಉದಾ : ಏಕಕಾಲಕ್ಕೆ ಮೂರ್ತಾಮೂರ್ತವಿರುವ ಉಭಯ ಪಾತಳಿಗಳ ನಡುವಣ ಆಂತರಿಕ್ಷಸ್ಥ ದೃಶ್ಯವು Phenomena = ಜಾದೂ, ಯಾತು magic ಸ್ವರೂಪದ್ದೆ ಇರಬಲ್ಲದು. ಇದು ಭೌತಕಾಲದ ಸಾರ್ವ-ಭೌಮತ್ವದ ಪಾತಳಿ; ಚಾಂದ್ರಸತ್ಯ-ರಾತ್ರಸತ್ಯ 'ರಜನೀ' ನಾಥ ರಾಜನ್ ಶಕ್ತಿಯ ಲೀಲೆಯ ಪಾತಳಿ.

ಆಧುನಿಕ ತತ್ತ್ವಜ್ಞರ ಹಾಗೂ ಶಾಸ್ತ್ರಜ್ಞರ ಪರಿಭಾಷೆಯ ಮೂಲಕ ಆಗಿರುವ ಮಾನವ (ಜೀವನ) ಧರ್ಮದ ವಿಚಾರ ವಿಮರ್ಶೆಯು, ಭಾರತೀಯ ಪುರಾತನರು ಕಂಡು ಹೇಳಿರುವ ವಿವಸ್ವನ್ (ಪ್ರಕಾಶತತ್ತ್ವದ) ದೈವತ ಪ್ರೇರಣೆಯ ಮನುಪ್ರಣೀತ ಮಾನವ ಧರ್ಮದ ಸ್ಪಷ್ಟೀಕರಣಕ್ಕೆ ಪ್ರಯೋಜನಕಾರಿ ಇದೆ ಎಂಬುದನ್ನು ಮೇಲಣ ವಿವರಣೆಯ ಮೂಲಕ ಮನಗಾಣಿಸಿಕೊಡಲು ಸ್ವಲ್ಪ ಪ್ರಯತ್ನಿಸಿದ್ದಾಯಿತು. ಅರ್ಥವಿಚಾರಕ್ಕೆ ಆಕಾರವಿರುತ್ತದೆ. ಆ-ಕಾರ ಆ-ಕೃತಿ ರಹಿತವಾದದ್ದು, ಅರಿಕೆಗೆ ಬರಲಾರದು. ಕೃತಿಯ (ನಡೆವಳಿ-ನುಡಿವಳಿ) ಮೂಲಕ ಆಕೃತಿ ಶಕ್ಯವಾಗುತ್ತದೆ. ಆಮೂರ್ತ ವಿಚಾರಗಳಿಗೆ ಆಕೃತಿ ಇರುತ್ತದೆ (Thoughts have forms) ಎಂಬ ವಿಚಾರವು ಪಾಶ್ಚಾತ್ಯರಿಗೆ ಮಾತ್ರ ಕಾಣಬೇಕು. ಭಾರತೀಯ ಪ್ರತಿಭೆಗೂ ಕಂಡಿರಲಾರದೆ? ಎಂಬ ಕೊರಗು-ಕುತೂಹಲ ಹಲವು ದಿನಗಳಿಂದ. ವ್ಯಾಸನ ಪ್ರ-ತಿಭೆ ಯಾತು ಕೃತ್ಯಕ್ಕೆ ಮೀಸಲಾಗಿ ಅನ್ಯಾಯವಾಗಿದೆ. ಈತನ ಪ್ರಾತಿಭ ದೃಷ್ಟಿಯು ಯಾರಿಗೇ ಆಗಲಿ ಮುಗ್ಧತೆಯನ್ನು ತರುವ, ಹುಚ್ಚು ಹಿಡಿಸುವ ಜಾತಿಯದು. ಈ ವ್ಯಾಸನು ವಿಚಾರದ ಆಕಾರವನ್ನು ಕಂಡ ಉಕ್ತಿಗಮನಕ್ಕೆ ಬಂತು; ಈತನು ಯಮನಂದನ, ಧರ್ಮ- ರಾಜ ಎಂಬ ಪಾತ್ರ ಸೃಷ್ಟಿಸಿರುವಲ್ಲಿ, ಮೃತ್ಯುಧರ್ಮ ಬೋಧಕ ಸಂಪ್ರದಾಯದ ಪ್ರಸ್ಥಾಪಕನೆಂಬುದರ ಒಪ್ಪಿಗೆಯೇ ಉಂಟು. ಈ ಮೃತ್ಯುಶಕ್ತಿಯ ಪುತ್ರ ಧರ್ಮನ ಬಾಯಿಯಲ್ಲಿ ಹಾಕಿರುವ ಮಾತು ನೋಡಿ : ಜಯೋಽಯಂ ಅಜಯಾಕಾರಃ ಪ್ರತಿಭಾತಿ ಮೇ ಪ್ರಭೋ! ಜಯ=ಅಜಯ, ಜೀವನ=ಮೃತ್ಯು. ಜಯ=ಅಜಯ ಕಾಣುವ ವ್ಯಾಸ ಶೂನ್ಯೋಪಾಸಕನೆ ಇರಬಲ್ಲ.

ವಿಚಾರಗಳಿಗೆ ಆಕಾರವಿರುತ್ತದೆ, ಎಂಬ ಈ ಸೂಕ್ಷ್ಮದೃಷ್ಟಿಯ ಭಾರತೀಯರು ಮರಳಿ ತಲೆಯೆತ್ತುವ ಶಕ್ಯತೆಯಿದೆ. ಆದರೆ, ವ್ಯಾಸೋಚ್ಛಿಷ್ಟಕ್ಕೆ ಆ ಪ್ರತಿಭೆಗೆ ಕಣ್ಣುಕುಕ್ಕಿ ಮೆಚ್ಚಿ (?) ಕಣ್ಣು ಮುಚ್ಚಿದರೆ, ವ್ಯಾಸನ ಕೃತಿಯ ಆಕೃತಿಯ ಈ ಕೃತ್ಯ ಗಮನಕ್ಕೆ ಬರಲು ಶಕ್ಯವಿಲ್ಲ.

ಆಧುನಿಕ ತತ್ತ್ವಜ್ಞ, ಜೀವಶಾಸ್ತ್ರಜ್ಞ ಎಂದು ಹೆಸರಾದ ಬರ್ಗಸನ್ನನ ಪರಿಭಾಷೆಯ ಮೂಲಕವಾಗಿ ಮಾನವ ಜೀವನದ ಧರ್ಮದ ಇನ್ನೂ ಒಂದು ವಿಶೇಷ ಪ್ರಕಾರದಿಂದ ಅರಿಕೆಗೆ ಬರುತ್ತಿದೆ. 'Creative Evolution' ಬರೆದು ನೋಬೆಲ್ ಬಹುಮಾನ ಪಡೆದ ಈತನು Two Sources of Religion & Morality' ಕುರಿತು ಬರೆಯುವಲ್ಲಿ

ಮಾಡಿರುವ ಜೀವನದ ಅರ್ಥವು ಭಾರತೀಯ ಪುರಾತನ ವಿವಸ್ವನ್ ಮನುಪ್ರಣೀತ ಮಾನವಧರ್ಮದ ವಿವರಣೆಯೇ ಆಗಿದೆ. ಈ ನರ- ಮನುಜನಲ್ಲಿ ಎರಡು ಬಗೆಯ ಸಹಜ ಪ್ರವೃತ್ತಿಗಳು (instinct or intuition) ಇವೆ. ಇದು ಫ್ರೈಡ್‌ಪ್ರಭೃತಿ ಮನೋವಿಶ್ಲೇಷಣ ಸಂಪ್ರದಾಯದವರು ಹೇಳುವ ಅಂತರ್ ವಿರೋಧೀ ದ್ವಿಮುಖ ಪ್ರೇರಣೆ (ambivalence) ಮಾತ್ರ ಅಲ್ಲ. ಇವೆರಡರ ಪಾತಳಿಗಳೇ ಭಿನ್ನ. ಬರ್ಗಸನ್ನನ ಪರಿಭಾಷೆಯ Infrarational intuition ಇದಕ್ಕೆ animal instinct ಹೋಲುತ್ತದೆ. ಇದು ಮಾನವನಲ್ಲಿ ambivalent ಆಗಿದೆ. ಉಪನಿಷತ್ತಿನ ಪರಿಭಾಷೆಯ ಅಂಗಾನಾಂ ರಸಃ ಪ್ರಾಣ (ಪ +ಅನ, animus); ಇದೇ 'ಮಹತಃ ಭೂತಸ್ಯ ನಿಃ ಶ್ವಸಿತಂ.'[೭] ವಿವಸ್ವನ್ (ಪ್ರಕಾಶ ತತ್ತ್ವದ) ಪ್ರೇರಣೆಯ ಮನುಪ್ರಣೀತ ಮಾನವ ಸಂಪ್ರದಾಯವು, ಇದನ್ನು ಚಾಂದ್ರ ಅಗ್ನಿ, ಗೌತಮಾಗ್ನಿ ಅಥವಾ ಆಪ-ರಸ ರೇತಸ್ಥ ಅಗ್ನಿ*

ಬರ್ಗಸನ್ ಜೀವಶಾಸ್ತ್ರಜ್ಞ(Biologist). ಈತನೇ ಹೇಳುವ Infrarational intuition' ಇದು ಭಾರತೀಯ ಪುರಾತನರ, ಪ್ರಾಣ- ಚೇತಸ, ಚೇತನ, ಚೈತನ್ಯ ಮಾತ್ರ. ಆದರೆ, ಭಾಷೆಯನ್ನು ಪಡೆದ ಈ ನರಪ್ರಾಣಿ ಚೇತಸ ಮತ್ತು ಪ್ರಜ್ಞೆ(ವೇದನ : wisdom) ಇವೆರಡರೊಳಗಿನ ಅಂತರವನ್ನು ನಷ್ಟಮಾಡುವ ಮಂಗಾಟ ಮಾಡಿದ್ದಾನೆ. ಮಹಾವೀರ ಪ್ರಾಣದೇವರ-ಬೃಹಲ್ಲಾಂಗೂಲ ಕಪಿಯ ಪ್ರತಿಮಾ ಉಪಾಸನೆಯೇ ಈ ಜೀವನದ ಅರ್ಥವೆಂಬ ಗ್ರಹಿಕೆ ನಿರ್ಮಿಸಿದ್ದಾನೆ. ಋಗ್ವೇದದ ನಚಿಕೇತಾಗ್ನಿ (ಬಾಡಬ : ದಾವಾನಲ ಮುಂ) ಹೆಸರಿನ ಅಗ್ನಿ ಎಂದರೂ ಇದೇ. ಇದು ಭೂಃ-ಭುವಃ ಪಾತಳಿಗಳ ನಡುವಣ ಅಂತರಿಕ್ಷಸ್ಥ ಅಗ್ನಿ-ರಸಾಗ್ನಿ, ಅಗ್ನಿರಸ-ರೇತಆರ್ತವ. ಬರ್ಗಸನ್ ಹೇಳುವ Suprarational intuition ಎಂಬುದು ಈ ಮೊದಲು ಹೇಳಿರುವ ಭೂಃ ಭುವಃ ಇದರ ಆಚೆಯ ಸ್ವರ್ (ಸ್ವಃ ಅಥವಾ ಸುವಃ) ಪಾತಳಿಯ ಮೇಲಣ ಪ್ರೇರಕಶಕ್ತಿ. ವೇದದಲ್ಲಿ ಈ ಸೌರಪಾತಳಿಯ ಮೇಲಣ ಪ್ರೇರಣೆಯನ್ನು 'ಜಾತವೇದ ಅಗ್ನಿ' ಈ ಸಂಕೇತದಿಂದ ಸೂಚಿಸಲಾಗಿದೆ.

ಸಾಪೇಕ್ಷ ಸಿದ್ಧಾಂತದ (Theory of Relativity) ಶೋಧಮಾಡಿ ಸಂಶೋಧಕ ಪ್ರಪಂಚವನ್ನೇ ಬೆರಗುಗೊಳಿಸಿದ ಐನ್‌ಸ್ಟನ್‌ರಿಗೆ ಅವರ ಈ ಶೋಧದ ಸುಳಿವು ಹತ್ತಿದ್ದು ಹೇಗೆ? ಎಂದು ಮೂಲಭೂತ ಶೋಧಕರ ಸಂಶೋಧಕನು ಒಬ್ಬನು, ಅವರಿಗೆ ಈ ಪ್ರಶ್ನೆ ಕೇಳಿದ್ದಾನೆ. ಇದು ಜ್ಞಾನೋಪಲಬ್ಧಿಯು ಆಗುವ ರೀತಿಯ ವಿಚಾರದ ಕ್ಷೇತ್ರ. ಜ್ಞಾನಮೀಮಾಂಸಾಶಾಸ್ತ್ರ (Epistemology) ಇದು, ಉಪಯುಕ್ತವಿದ್ದರೂ ತರ್ಕ, ಪ್ರತಿಷ್ಠಿತ ಇತಿಹಾಸದ ಆಧಾರವಿಲ್ಲದ್ದು ವಿಶ್ವಾಸಾರ್ಹವೆನಿಸದು. 'Sociology of Knowledge' ದಿಕ್ಕಿನಿಂದ ಜ್ಞಾನೋಪಲಬ್ಧಿಯ ಸ್ವರೂಪವನ್ನು ಗ್ರಹಿಸಿಕೊಳ್ಳುವ ಪ್ರಯತ್ನ ಹೆಚ್ಚು ವಿಶ್ವಾಸಾರ್ಹ ದಿಕ್ಕಿನದು. ಐನ್‌ಸ್ಟನ್ನರ ಅನುಭವ ಕೇಳಿದಾಗ ಅವರು ಕೊಟ್ಟ ಉತ್ತರವು ತೀರ ಸಂಕ್ಷಿಪ್ತವಿದೆ. ಮಾನವನಿಗೆ ಜ್ಞಾನ ಲಭಿಸತಕ್ಕ ಸಾಧನಗಳು ಎರಡು : ಕಣ್ಣು ಮತ್ತು ಕಿವಿ. ತನಗೆ ಕಣ್ಣಿನ ಅಂತಃಶಕ್ತಿಯಲ್ಲಿ ಹೆಚ್ಚು ವಿಶ್ವಾಸ. ಏನೊಂದು ಹೊಳೆದಂತೆ ಆಗಿ ಗಮನಕ್ಕೆ ಬರುವ ತನ್ನ ಜಿಜ್ಞಾಸೆಯ ಉತ್ತರವು ತನ್ನ ಕಲ್ಪಿತವೂ ಇರಬಲ್ಲುದು. ಇದು ಮೋಸವಾಗಬಾರದು, ಹೊಳೆದು-ಎನಿಸಿದ್ದು ಬಗೆಬಗೆಯ ಒರೆಗೆ ನಿಂತರೆ ಮಾತ್ರ ಅದು ವಿಶ್ವಾಸಾರ್ಹ.

ಇದರ ಅರ್ಥ, ನನ್ನ ಗ್ರಹಿಕೆಯಂತೆ, ಮೊದಲನೆಯದು ಕಣ್ಣಿನ ಮೂಲಕ (ದರ್ಶನ) ಆಗುವ ಜ್ಞಾನ ಹಾಗೂ ಕಿವಿಯ (ಶಬ್ದ) ಮೂಲಕ ಆಗುವ (ಸ್ಪರ್ಶಜನ್ಯ) ಜ್ಞಾನ. ಇವೆರಡರ ಕಟ್ಟಿದ ರಚನೆ-ಹೆಣಿಕೆಯ ಸ್ವರೂಪದಲ್ಲಿಯೇ ಮೂಲಭೂತ ಅಂತರವಿದೆ. ಹೊಳೆದು (Flash) ಆಗುವ ಈ(ಸ್ವರ್) ಪಾತಾಳಿಯ ಜ್ಞಾನವು ಮೊದಲಲ್ಲಿ ತರ್ಕಾನುಗಾಮಿಯಾಗಿ (Logical Continuum) ಗಮನಕ್ಕೆ ಬರುವುದಿಲ್ಲ. ಆದರೆ, ಸ್ಪರ್ಶಜನ್ಯ ಜ್ಞಾನವು (flow) ಪ್ರವಹಿಸುವ ಓಘದ ಸ್ವರೂಪದ್ದು. ಇದು ಶ್ರುತಿ. ದರ್ಶನವು ನಮ್ಮಲ್ಲಿ ತತ್ತ್ವಜ್ಞಾನದ ವಿವರಣಾತ್ಮಕ

---

* ಭೂಃ- ಭುವಃ ಇದರ ಸಮವಾಯಸ್ಥ ಅಂತರಿಕ್ಷದೊಳಗಿನ ಅವಕಾಶದಲ್ಲಿ ಇರುವ ಜ್ಯೋತಿರೂಪ ರಸ ಅಥವಾ ರಸಸ್ವರೂಪೀ ಜ್ಯೋತಿಯನ್ನು ಸ್ಮರಿಸಿಕೊಳ್ಳಿ.

ಆಕೃತಿಯದಾಗಿರುವಲ್ಲಿ, ಈ ದರ್ಶನ ಬೌದ್ಧಿಕ ಕಟ್ಟಡಗಳಾಗಿವೆ. ಯತಿ-ಮುನಿ ಪಂಥವು-ನಚಿಕೇತಾಗ್ನಿ ಉಪಾಸಕರು ಸ್ಪರ್ಶೇಂದ್ರಿಯ ಪ್ರೇರಣೆಯ ರಸೋ ವೈ ಸಃ ಪಂಥವು, ದರ್ಶನ ಸಾಕ್ಷಾತ್ಕಾರ, ತನ್ನ ಖಾಸಾಕ್ಷೇತ್ರ ಎಂದು ಸುಳ್ಳು ಹಕ್ಕು ಪ್ರಸ್ಥಾಪಿಸಿ ಲೋಕವನ್ನು ಮೋಸಕ್ಕೆ ಒಳಗಾಗಿಸಿದ್ದಾರೆ.

ಆಧುನಿಕ (ರ) ಪರಿಭಾಷೆಯ ಮೂಲಕ ಮಾನವ (ಜೀವನ) ಧರ್ಮವನ್ನು ಗ್ರಹಿಸಿಕೊಳ್ಳುವ ಪ್ರಯತ್ನದಲ್ಲಿ, ಜೀವಶಾಸ್ತ್ರಜ್ಞರಾದ ಡಾ|| ಹಕ್‌ಸ್ಲೆ, ಡಾ|| ಬರ್ಗಸನ್ನ ಹಾಗೂ ಮಾನವಶಾಸ್ತ್ರಜ್ಞರಾದ ಕ್ರೋಬರ್ ಪ್ರಭೃತಿಗಳ ನೆರವು ಕೋರಿದ್ದಾಯಿತು. ತತ್ವಜ್ಞ ಅರ್ನಸ್ಟ್ ಕ್ಯಾಸಿರರ್ ಮಾರ್ಗದರ್ಶನವು ದೊರೆತು ಇವರ ಪರಿಭಾಷೆಯ ಮೂಲಕ ಭಾರತೀಯ ಪುರಾತನ ಪರಂಪರೆಯ ವೇದೋಪನಿಷತ್ಕಾಲೀನ : ಸಮಾಂತರ ಪರಿಭಾಷೆಯ ತೌಲನಿಕ ಸಮೀಕ್ಷೆಯಲ್ಲಿ ಈ ಮಾನವನ್ನು ಕಾರ್ಯಕ್ಕೆ - ಕೃತಿಗೆ ಪ್ರೇರಿಸುವ ಅಂತಃಪ್ರವೃತ್ತಿಗಳು ಎರಡು ಬಗೆಯವು ಎಂದು ಸ್ಥಿರಪಟ್ಟಿದೆ. ಇವೆರಡರಲ್ಲಿ ಪುರಾತನ ಭಾರತೀಯ ಪರಿಭಾಷೆಯ ಆದಿತ್ಯ ಪರಂಪರೆಯ ದೈವತ ಪ್ರೇರಣೆಯ ಮನುಪ್ರಣೀತ ಮಾನವಧರ್ಮ ಪರಂಪರೆಯು ಒಂದು. ಇದು ಆಧುನಿಕ ಶಾಸ್ತ್ರಜ್ಞರ ಪರಿಭಾಷೆಯಲ್ಲಿ

೧. ಒಂದು ಅಕ್ಷದ ಸುತ್ತಲೂ ಚಕ್ರಾಕಾರವಾಗಿ-ವೃತ್ತಾಕೃತಿಯಲ್ಲಿ ತಿರುಗುವ (circular) ಕಾಲ ಗತಿ. ಇದರ ಮೂಲಮಾದರಿ (archetype) ಚಾಂದ್ರ ಭೂಮಿಕೆಯೇ ಇರಬಲ್ಲದು. ವಿಚಾರಗಳಿಗೆ ಅವರದೇ ಆದ ಸನಾತನ ಆಕೃತಿಯಿರುತ್ತದೆ, ವೃತ್ತಾಕೃತಿ ಕಾಲತತ್ವದ ಮೂಲಮಾದರಿಯು ಚಾಂದ್ರಭೂಮಿಕೆಯೇ ಇರುತ್ತದೆಂದು ಹೇಳಿದವನು ಮಾನವಶಾಸ್ತ್ರಜ್ಞ ಡಾ|| ಮರ್ಸಿಯಾ ಇಲಿಯದೆ ಮುಂತಾದ (Myth of Eternal Return ಮುಂತಾದ ಗ್ರಂಥ ನೋಡಿ). ಸನಾತನ ವೈಚಾರಿಕ ಆಕೃತಿ ಸೂತ್ರ ಹೇಳಿದವನು ಕ್ಯಾಸಿರರ್ ತತ್ವಜ್ಞ

೨. ಇತಿಹಾಸ ಶಾಸ್ತ್ರದಿಂದ ದೊರೆತ ಪುಷ್ಟಿ ಡಾ|| ಫ್ರಾಂಕಫೋರ್ಟನು, ಈಜಿಪ್ಟಿನ 'ಕ' ದೈವತ ವಿಚಾರವಾಗಿ ಹೇಳಿರುವ ಮಾತು, ಭಾರತೀಯ ಕ-ಪ್ರಜಾಪತಿ, ಸುಖಂ ಜಲಂ ಸ್ವರೂಪದ ದೈವತದ ಸಂಪೂರ್ಣ ಹೋಲಿಕೆಯುಂಟು.

೩ ಜೀವಶಾಸ್ತ್ರದ Biosphere=protoplasm= semi-transparent liquid= ಆಪೋ ಜ್ಯೋತಿ= ಶುಕ್ರರೇತದ ಪಾತಳಿ.

ಪ್ರಜ್ಞೋದಯ (consciousness of consciousness, conscience) ಆದ, 'ಸ್ವ'ದ ಉಪಜ್ಞನ ಮಾನವೀಯ ಜೀವನದಲ್ಲಿ ಈ ಜೀವಿಯ ಕೃತಿಗಳಲ್ಲಿ ವಿವಿಧ ಪಾತಳಿಗಳು ಒಳಗೊಂಡಿರುವುದು ಅನಿವಾರ್ಯ. ಆದಕಾರಣ, ಪ್ರಜ್ಞಾಪೂರ್ವ, ಬರಿಪ್ರಾಣ-ಚೇತನ-ಚೈತನ್ಯಯುಕ್ತ ಪ್ರಾಣಿಗಳ ವಾ-ನರ ಹಂತದ ವರೆಗಿನ ಜೀವಿಗಳಂತೆಯೇ ಈ ಸ್ವಉಪಜ್ಞ ಮಾನವಪ್ರಾಣಿಯ ಜೀವನದ ಅರ್ಥವು ಸಹ, ಕೇವಲ ಆಕೃತಿ (form) ಮತ್ತು ಆಶಯ (Content) ಇವೆರಡರ ಏಕಾತ್ಮಕ (co-terminus) ಆಗಿರುವ ಅರ್ಥದ ಪಾತಾಳಿಯಂತೆಯೇ ಆಗುತ್ತದೆ ಎಂದು ಫ್ರೈಡ್ ಪ್ರಭೃತಿಗಳು ಬಗೆಯುತ್ತಿರುವುದು ಅತ್ಯಂತ ಅಸಮರ್ಪಕವಾಗಿದೆ. ಸಾಹಿತ್ಯ ವಿಮರ್ಶೆಯಲ್ಲಿ ಆಕೃತಿ (form) ಮತ್ತು ಆಶಯ (content) ಎರಡನ್ನೂ ಸಮಾನ ಪರಿಮಿತಿಯವು (co-terminus) ಎಂದು ಬಗೆಯಲಾಗುತ್ತಿರುವಲ್ಲಿ, ಇದು ಮಾನವನ 'ಸ್ವ' ಉಪಜ್ಞತೆಯ ಸ್ವತಂತ್ರ ಅಸ್ತಿತ್ವವನ್ನೇ ಅಮಾನ್ಯ ಮಾಡುತ್ತಿದೆ. ಈ ಪ್ರಜ್ಞೆ - ಉಪ್ರಜ್ಞೆಯಿಂದಾಗಿ ಮಾನವನು ತನ್ನನ್ನೂ ಹೊರ ಒಳಗನ್ನೂ (form and content) ಸಹಿತ ಸಮೀಕ್ಷಿಸಿಕೊಳ್ಳಲು ಸಮರ್ಥನಾಗಿದ್ದಾನೆ.

ಆದಕಾರಣ, ಮಾನವ ಜೀವನದಲ್ಲಿ ಮೂರ್ತಾಮೂರ್ತಾ ಭೂಃ→ಭುವಃ ಇವೆರಡರ ಸಮವಾಯದ (ಜೀವಿಗಳ ಜೀವಿತದ) ಪಾತಳಿಯನ್ನಲ್ಲದೆ ಮೂರನೆಯ ಸ್ವರ್ (ಪ್ರಕಾಶ ತತ್ವದ) ಇನ್ನೂ ಒಂದು ಪಾತಳಿಯ

ಅಸ್ತಿತ್ವನ್ನು ಲೆಕ್ಕಿಸುವುದು ಅನಿವಾರ್ಯವಿದೆ. ಪಾತಳಿಗಳ ಈ ತತ್ತ್ವ ಕ್ರೋಬರ್ ಪ್ರಭೃತಿ ಮಾನವಶಾಸ್ತ್ರಜ್ಞರು ತಾವು ಇದೀಗ ಶೋಧಿಸುತ್ತಿದ್ದೇವೆ ಎಂದು ಬಗೆದ ಹಾಗಿದೆ. ಡಾ॥ ಜೂಲಿಯನ್ ಹಕ್ಸ್ಲೆ Noospere' ಪಾತಳಿ, Biosphere ದ ಹೊರತು ಅತ್ಯವಶ್ಯ ಎಂದು ಪ್ರತಿಪಾದಿಸಿದ್ದಾರೆ. ಈ ಗ್ರಂಥದ ಹೆಸರು New Bottles for New wine ಎಂದು. ಈ ಪರಿಭಾಷೆಯ ಶಬ್ದರೂಪ ಬಾಹ್ಯ ಆಕೃತಿ. (Bottle) ಹೊಸತು ಇರಬಲ್ಲದು, ಆದರೆ ಈ ಬಾಹ್ಯ ಆ-ಕೃತಿ (Bottle) ಒಳಗೊಳ್ಳುವ ಆಶಯ (Wine) ಹಳೆಯದೇ ಉಂಟಲ್ಲ. ಪಾಶ್ಚಾತ್ಯ ಪರಂಪರೆಯಲ್ಲಿಯೇ Old wine in a new bottle ಎಂಬ ಗಾದೆ-ವೇದ (wisdom) ಉಂಟಲ್ಲ!

ಆಧುನಿಕ ಪರಿಭಾಷೆಯ ಬೆಳಕಿನಲ್ಲಿ Biosphere Protoplasm ಇದು ಪುರಾತನ ಆಪ-ರಸ-ರೇತ-ಆರ್ತವ : ಶುಕ್ರ ಪಾತಳಿ : ಅಥವಾ ಚಾಂದ್ರ ಭೂಮಿಕೆ : ಹುಟ್ಟು-ಸಾವುಗಳ ಚಕ್ರಾಕಾರಗತಿ ರೂಪಕಾಲದ ಪಾತಳಿ. ಬರ್ಗಸನ್ನ ಹೇಳುವ Infrarational intuition ಎಂಬುದು ಪುರಾತನರ ಅಂಗಾನಾಂ ರಸದ-ಪ್ರಾಣ-ಚೈತನ್ಯದ-ಮಹತಃ ಭೂತಸ್ಯ ನಿಃ ಶ್ವಸಿತ ಎಂದರೂ ಇದೇ. ಹೆಗೆಲ್ ಕಂಡುಹಿಡಿದ ತತ್ತ್ವವನ್ನು (Geist) ಚೇತನತತ್ತ್ವ ಎಂದು ಭಾಷಾಂತರಿಸಲಾಗುತ್ತದೆ.*


ಏಕಕಾಲಕ್ಕೆ ಮೂರ್ತಾ-ಮೂರ್ತ ಪಾತಳಿಯ ಮೇಲಣ ಈ ಜೀವನಾನುಭವವು ಇಂದ್ರಿಯಗಳ ಪಾತಳಿಯದೇ ಇರಲಿಕ್ಕೇಬೇಕು, ಎಂಬ ಸಾರ್ವಕಾಲಿಕ ಸನಾತನ (perennial) ನಿಯಮರೂಪೀ ಸತ್ಯದ ಒರೆಗಲ್ಲಿಗೆ ಹಚ್ಚಿ ನೋಡಿದ್ದಾಯಿತು. ವೇದದ ಪುರುಷಸೂಕ್ತಸ್ಥ ಪುರಿ-ಶಯ (ನ) ಪುರುಷನ ಸಹಸ್ರ ಸಹಸ್ರ ಎಂದರೆ ಸಮಾನ-ಒಂದೊಂದೇ ಇರುವ ಶೀರ್ಷ, ಅಕ್ಷ, ಪಾತ್ ಇದು ದಶಾಂಗುಲಂ ಅತ್ಯತಿಷ್ಠತಿ ಮೇಲೆ ಕಾಣುವ ಈ ಅಕ್ಷ (axle) ಮತ್ತು ಭಗ-ವತ್ ಗೀತೆಯಲ್ಲಿ ಹೇಳಿರುವ ಪ್ರಕೃತಿ ದೇವಿಯ ಹೆರಿಗೆಗೆ (ಸೂಯತೇ) ಕಾರಣವಾಗುವ ಅಧ್ಯಕ್ಷ ಭಗ-ವಂತನ ಅಧಿ-ಅಕ್ಷ [ಋಗ್ವೇದ ಹಾಗೂ ಗೀತೆ ಇವೆರಡಲ್ಲಿ ಬರುವ ಪುರಿ-ಶಯ (ನ) ನ ಆಕೃತಿ] ಸಮಾನವೇ ಇದ್ದುದು ಈ ಪುರಾತನ ಪ್ರಮಾಣಗಳಿಂದಲೇ ಸಿದ್ಧವಾಗುತ್ತಿದೆ. ಆದಕಾರಣ, ಸ್ವಾಯಂಭುವ ಎಂದರೆ ಸ್ವಯಂಭೂ ಮೂಲ-ಸ್ಥಾನ ದೇವರಿಂದ ಪ್ರೇರಿತ ಮನು-ಮಾನವ, ಈ-ತನೂ, ಆ-ತ್ಮ=ತನು ಪೂಜಿತನೇ ಇರಬಲ್ಲ. ಈ ದೃಷ್ಟಿಯಿಂದ ವ್ಯಾಸನಿಂದ ಆಗಿರುವ ಉಪಕಾರವನ್ನು ಸ್ಮರಿಸಿಕೊಳ್ಳಬೇಕು. ವೇದಕಾಲದ ಪರಿಭಾಷೆಯಲ್ಲಿ ಮೂಲ ವಿವಸ್ವನ್ (ಸೌರ ಪ್ರಕಾಶತತ್ತ್ವದ) ದೈವತವನ್ನು, ಆದಿತ್ಯ-ವಿವಸ್ವನ್ ಎಂಬ ರೂಪಕ್ಕೆ ಮಾರ್ಪಡಿಸಲಾಗಿದೆ. ಬಳಿಕ, ಮೂಲ ವಿವಸ್ವನ್‌ಮನು-ಮಾನವ ಪರಂಪರೆಯು ಆದಿತ್ಯ ವಿವಸ್ವಂತನ ಸಂತಾನ ಪರಂಪರೆ ಎಂಬ ಸಂಭ್ರಾಮಕ ಮಾತಿನ ಮಾಟ-ಕೃತ್ಯ (Black magic) ಮಾಡಲಾಗಿದೆ. ವ್ಯಾಸನು ಇದರ ಮುಂದಿನ ಹಂತದ ನಾಮ-ರೂಪಗಳ ವ್ಯತ್ಯಾಸಗಳನ್ನು ನಿವೇದಿಸದಿದ್ದರೆ ಈ ಆದಿತ್ಯ : ಮನು-ಮಾನವ ಎಂಬವನು ನರ-ನಾರ ಅಯನ ರೂಪನು ಆಗಿದ್ದಾನೆ, ಎಂಬುದು ತಿಳಿಯಲು ಅಶಕ್ಯವಿತ್ತು.

ಟಿಪ್ಪಣಿಗಳು

೧. *ಮುಂಡಕೋಪನಿಷತ್ತು* ೧-೬
೨. *ಋಗ್ವೇದ ಸಂಹಿತೆ* V-೪೦
೩. *ಅದೇ* X-೧೩೬
೪. *ಬೃಹದಾರಣ್ಯಕೋಪನಿಷತ್ತು* ೨.೩.೧
೫. *ಮೈತ್ರಾಯಿಣೀ ಉಪನಿಷತ್ತು* ೬.೩
೬. *ಛಾಂದೋಗ್ಯೋಪನಿಷತ್ತು* ೧-೬-೬
೭. *ಬೃಹದಾರಣ್ಯಕೋಪನಿಷತ್ತು* ೧. ೩-೧೯, ೨.೪.೧೦

* ಪುಣೆ ವಿದ್ಯಾಪೀಠದ ಪ್ರಕಟನೆ ಹೆಗೆಲ್ಲನ ತತ್ತ್ವಜ್ಞಾನ ಪ್ರೊ. ದಿವಂಗತ ಕೆ. ಬೇಡೇಕರ, ಕಮ್ಯುನಿಸ್ಟ್ ಪಕ್ಷದ ಮೇಧಾವಿಗಳೆಂದು ಇವರು ಗಣ್ಯರಿದ್ದರು.

ಸ್ವಯಂ-ಭೂ
ಮೂಲಸ್ಥಾನ ದೈವತ : 'ತನೂ ನಪಾತ್'



ಗ್ರೀಕ್-ರೋಮನ್ ಪುರಾತನ ಸಂಸ್ಕೃತಿಯೊಳಗಿನ ಒರ್‌ಫಿಕ್ ಪಂಥೀಯ ಲಿಂಗ-ಯೋನಿ
ಪ್ರತೀಕ ಪೂಜೆಯ ಅವಶೇಷಗಳು
(ತಾಯ್ತ, ಪದಕದಂತೆ ಇದನ್ನು ಕೊರಳಲ್ಲಿ ಧರಿಸಲಾಗುತ್ತಿತ್ತು)
'Limit'= ಪುರುಷ = ದಶಾಂಗುಲ

ಆದಿತ್ಯ ಪರಂಪರೆಯ ಸ್ವರೂಪದ ಪರಿಚಯ

ಹಿಂದೂ ಎಂಬ ಧರ್ಮದ ತೊಡಕು, ಆಡಳಿತಗಾರ ಬ್ರಿಟಿಷರ ಪಾಲಿಗೆ, ಮೊದಲಲ್ಲಿ ಪ್ರಾಮಾಣಿಕ ಸ್ವರೂಪದ್ದೇ ಇತ್ತು, ಇತಿಹಾಸವೇ ತಿಳಿಯದ್ದರಿಂದ. ಆದರೆ ಹಿಂದೂ ಎಂಬ ಧರ್ಮದ ಅಂತರಂಗ ತಿಳಿದ ಬಳಿಕ-ಈ ಸಮಸ್ಯೆಯನ್ನು ಬ್ರಿಟಿಶರು ತಮ್ಮ ಆಡಳಿತವನ್ನು ಸ್ಥಿರವಾಗಿಸಲು ಹಿಂದೂಗಳೆಂಬವರೊಳಗಿನ ಭೇದಗಳನ್ನು ಹೆಚ್ಚಿಸಲು ಉಪಯೋಗಿಸಿಕೊಂಡಿದ್ದಾಗಿದೆ. ಈಸ್ಟ್ ಇಂಡಿಯಾ ಕಂಪನಿಯ ಕಡೆಗೆ ಆಡಳಿತದ ಹೊಣೆ ಬಂದ ಬಳಿಕ - ಈ ಆಡಳಿತಗಾರರು ಭಾರತೀಯ ಜನ, ಧರ್ಮ, ಸಂಸ್ಕೃತಿಯ ಬಗೆಗೆ ರಾಜಕೀಯ ಐತಿಹಾಸಿಕ ಪರಂಪರೆಗಳ ಬಗೆಗೆ, ಸಂಶೋಧನಕ್ಕಾಗಿ ಅನೇಕ ವಿದ್ವಾಂಸರಿಗೆ ಪ್ರೇರಣೆ, ಪೋಷಣೆ ಕೊಟ್ಟುದಾಯಿತು. ಸಂಸ್ಕೃತ ಭಾಷೆಯ ಧರ್ಮಶಾಸ್ತ್ರಗಳು' ಧರ್ಮಗ್ರಂಥಗಳ ಪರಿಶೀಲನೆಯಲ್ಲಿ ಕೋಲ್‌ಬ್ರೂಕನ ಹೆಸರು ಅಮರವಾಗಿದೆ. ಇವನಿಗಿಂತಲೂ ಮುಂಚೆ, ಸರ್ ಜೋನ್ಸಗೆ ಸಂಸ್ಕೃತವನ್ನು ಕಲಿಯುವಾಗ, ಗ್ರೀಕ್, ಲ್ಯಾಟಿನ್ ಮುಂತಾದ ಯುರೋಪೀಯ ಭಾಷಿಕ ಸಾಮ್ಯವು ಸೋಜಿಗವೆನಿಸಿತು. ಯುರೋಪೀಯ ವಿದ್ವಾಂಸರ ಗಮನವನ್ನು ಸೆಳೆದ ಈ ಸಂಸ್ಕೃತ ಭಾಷಾ ಸಾಮ್ಯವು, ಮಾನವ ಕೋಟಿಯ ಜ್ಞಾನಭಂಡಾರಕ್ಕೆ ಒಂದು ನೂತನ ಶಾಸ್ತ್ರದ ಕೊಡುಗೆಗೆ ಕಾರಣವಾಯಿತು. ಜರ್ಮನಿಯ ಪ್ರಾಂಜ್ ಬಾಪ್* ಈ ಶಾಸ್ತ್ರದ ಹೊಳಹು ಹಾಕುತ್ತಾನೆ. ಜಗತ್ತಿನಲ್ಲಿ ಪುರಾತನವೆಂದು ಬಗೆದಿದ್ದ ಋಗ್ವೇದದ ಭಾಷಾಂತರದಿಂದಾಗಿ ಜಾಗತಿಕ ವಿದ್ವಾಂಸರನ್ನು ಬೆರಗುಗೊಳಿಸಿದ ಮ್ಯಾಕ್ಸಮುಲ್ಲರನಿಗೆ ಸಂಸ್ಕೃತ ಭಾಷಾ-ರಹಸ್ಯದ ಬೋಧೆಗೆ ಬಾಪ್ಪನೇ ಗುರು! ಬಾಪ್ : ತಂದೆ.

ಭಾರತದಲ್ಲಿ ಆಡಳಿತ ನಡೆಸಿದ್ದ ಕಂಪನೀ ಸರಕಾರದ ಉದಾರ ಧನಸಹಾಯದಿಂದ ಮ್ಯಾಕ್ಸಮುಲ್ಲರ ಋಗ್ವೇದದ ಭಾಷಾಂತರವನ್ನು ಕಯ್ಕೊಂಡು ಮುಗಿಸಿದ್ದಾಯ್ತು (೧೮೪೯-೧೮೭೩). ಮೇಧಾವಿ, ಪ್ರತಿಭಾಶಾಲಿ, ಅವಿಶ್ರಾಂತ ಪರಿಶ್ರಮ ಮಾಡುವ ಜರ್ಮನ್ ಸ್ವಭಾವ ವೈಶಿಷ್ಟ್ಯ ಬೇರೆ. ಋಗ್ವೇದದ ಭಾಷಾಂತರಕಾರನು ಎಂಬ ಕಾರಣದಿಂದ ಈತನು ಯೂರೋಪ್ ಖಂಡದ ನಾನಾ ದೇಶಗಳಿಂದ ಸನ್ಮಾನಿತನಾದನು. ಸಂಸ್ಕೃತ ಭಾಷೆಯೊಳಗಿನ ಆಳವಾದ ಅಭಿಜಾತ ಅರ್ಥಶಕ್ತಿಗೆ ಮೋಹಿತನಾದ ಈತನಿಂದ ಭಾಷೆ, ಸಂಸ್ಕೃತಿಯ ಕ್ಷೇತ್ರಕ್ಕೆ ಮೌಲಿಕ ಕಾಣಿಕೆ ಸಂದಿರುವುದು ನಿಜ. ಆದರೆ, ಈತನಿಂದಾದ ಅತ್ಯುಕ್ತಿಗಳೂ, ಪ್ರಮಾಣವಚನಗಳಾಗುವುದನ್ನು

---

* ಜರ್ಮನಿಯ ಇಂಡಾಲಜಿಸ್ಟರಲ್ಲಿ ಈತನದು ಅಗ್ರಗಣ್ಯ ಹೆಸರು. ಈತನು ವೈದಿಕ ಸಾಹಿತ್ಯ ಕುರಿತಂತೆ ಅಧ್ಯಯನ ನಡೆಸಿದವನು. ಮ್ಯಾಕ್ಸ್‌ಮುಲ್ಲರ್, ವಿಲ್‌ಹೆಲ್ಮ್ ಹಂಬೋಲ್ಟ್ ಮೊದಲಾದವರಿಗೆ ಗುರು. ತೌಲನಿಕ ವ್ಯಾಕರಣ, ಕೌಲನಿಕ ಸಂಸ್ಕೃತಿಶಾಸ್ತ್ರ ಹಾಗೂ ತೌಲನ್ನಿಕ ಭಾಷಾಶಾಸ್ತ್ರ ಕುರಿತಂತೆ ಮೂಲಭೂತ ಕೆಲಸಗಳನ್ನು ಈತ ಮಾಡಿದ್ದಾನೆ. (ಸಂ)

ಅಂದಿನ ತರುಣ ಪೀಳಿಗೆಯ ಮೇಧಾವಿ ಆಂಡ್ರ್ಯೂಲ್ಯಾಂಗನು, ಈ ತಪೋವೃದ್ಧ ಸಂಶೋಧನ ಕೊರತೆಗಳನ್ನು ಎತ್ತಿ ತೋರಿಸುವುದಕ್ಕೆ ಪ್ರಾರಂಭಿಸಿದನು. ಮ್ಯಾಕ್ಸಮುಲ್ಲರನಿಗೆ ತುಂಬ ತಾಪವಾಯಿತು. ಆದರೂ ತನ್ನ ಬಗೆಗಿರುವ ಲೋಕಪ್ರಿಯತೆಯಿಂದಾಗಿ ಈ ಪ್ರಸಂಗವನ್ನು ಎಂತೂ ಸಹಿಸಿದ್ದಾಯಿತು.

ಮಾಕ್ಸಮುಲ್ಲರನಿಂದಾದ ಅತ್ಯುಕ್ತಿಗಳಲ್ಲಿ ಸೌರದೈವತ ಕಥೆಗಳನ್ನು ಏಕಮೇವಾದ್ವಿತೀಯತ್ವದ ಮಟ್ಟಕ್ಕೆ ಏರಿಸಿದ್ದೂ ಒಂದು. ಆದರೆ, ಆ್ಯಂಡ್ರ್ಯೂಲ್ಯಾಂಗನಿಂದ ಸೌರದೈವತ ಕಥೆಗಳ ಗ್ರಹಣಕಾಲ (eclipse) ಪ್ರಾರಂಭವಾಯಿತೆಂದು ವಿಮರ್ಶಕರು ಹೇಳಿದ್ದಾರೆ. ಮ್ಯಾಕ್ಸಮುಲ್ಲರನು, ದಿವ್ಯಪವಾಡಕಥೆಗಳು (myths) ರೂಪಕಗಳು, ಇದು ಭಾಷೆಗೆ ಅಂಟಿದ್ದ ರೋಗ (disease) ಎಂಬ ಅಭಿಪ್ರಾಯ ವ್ಯಕ್ತಪಡಿಸಿದನು. ಭಾಷೆಯು Logical- ತರ್ಕಶುದ್ಧ ಇರಬೇಕು ಇದೆ ಎಂಬ ಈತನ ಗ್ರಹಿಕೆ ಅಶಾಸ್ತ್ರೀಯ, ಅವಾಸ್ತವ! ದೈವಕಥೆಗಳ ತುಲನಾತ್ಮಕ ವ್ಯಾಸಂಗವು, ಇಂದು ಧರ್ಮ, ಸಂಸ್ಕೃತಿ, ಮಾನವೇತಿಹಾಸ, ತತ್ವಜ್ಞಾನದ ಇತಿಹಾಸದ ದೃಷ್ಟಿಯಿಂದ, ಸಂಶೋಧನ ಮೌಲಿ-ಕ ಸಾಧನ ಎನಿಸಿದೆ. ಮಾಕ್ಸಮುಲ್ಲರನಂಥ ಅಧಿಕಾರಿ ವ್ಯಕ್ತಿಯಿಂದ ಆದ ನಿರುದ್ದೇಶ ಪೂರ್ವಕವಾದ ತಪ್ಪಿನಿಂದಲೂ ಆದ ಹಾನಿ ಅಷ್ಟಿಷ್ಟಲ್ಲ. ಮಾಕ್ಸಮುಲ್ಲರನಿಂದ ಭಾರತೀಯ ಭಾಷೆ ಹಾಗೂ ಸಾಂಸ್ಕೃತಿಕ ಕ್ಷೇತ್ರಕ್ಕೆ ಆಗಿರುವ ತುಂಬಿ ಬಾರದ ಸ್ವರೂಪದ ಹಾನಿಯನ್ನು ಎತ್ತಿ ತೋರಿಸುವ ಆಂಡ್ರ್ಯೂಲ್ಯಾಂಗ್ ನಮ್ಮಲ್ಲಿ ಹುಟ್ಟಲಿಲ್ಲ! ಮಾಕ್ಸಮುಲ್ಲರನ ಗ್ರಹಿಕೆಯಂತೆ ಸಂಸ್ಕೃತ ಭಾಷೆ ಆರ್ಯರದು. ಭಾಷೆ ಮತ್ತು ಜನಾಂಗ (race) ಇವುಗಳಲ್ಲಿ ಅಭೇದವನ್ನು ಕಾಣುತ್ತಿದ್ದುದು ಅಶಾಸ್ತ್ರೀಯ ಎಂಬ ವಿಚಾರವು ಭಾರತಕ್ಕೆ ಆಮದು (import) ಆಗಿ ಬರಲೇ ಇಲ್ಲ. ಪುಣೆ ಡೆಕ್ಕನ್ ಕಾಲೇಜಿನ ಡಾ।। ಭಂಡಾರಕರ್, ಮ್ಯಾಕ್ಸಮುಲ್ಲರ್, ಮ್ಯಾಕ್‌ಡೊನೆಲ್ಲರ ಆಕ್ಸ್‌ಫೋರ್ಡ್ ಪರಂಪರೆಗೆ ಶರಣು ಹೋದರು. ದ್ರವಿಡ-ದ್ರಾವಿಡ ಇದು ಭಾಷೆಯಿಂದ ಜನಾಂಗವನ್ನು ಊಹಿಸಿಕೊಳ್ಳಲಾಗುವ ಅಶಾಸ್ತ್ರೀಯ ದೃಷ್ಟಿಕೋನ, ಎಂಬುದನ್ನು ನೆನಪಿಗೆ ತಂದುಕೊಳ್ಳುವ ಆವಶ್ಯಕತೆ ಎನಿಸಿದ ಸಂಶೋಧಕರು ಅಪವಾದಾತ್ಮಕವಾಗಿದ್ದಾರೆ! ಸಂಸ್ಕೃತ ಆರ್ಯರ ಭಾಷೆ ಎಂಬ ನಂಬುಗೆಯನ್ನು ಬ್ರಿಟಿಶರು ಹಾರುವರೆಂಬವರ ಆತ್ಮವಂಚನೆ ಹೆಚ್ಚಿಸುವ ಒಂದು ಸಾಧನದಂತೆ ಉಪಯೋಗಿಸಿಕೊಂಡದ್ದು ಕಾಣುತ್ತಿದೆ! ಈ ಸೂತ್ರದಂತೆ ಆಂಗ್ಲಭಾಷೆ ಮನೆಮಾತಾಗಿರುವ ಅಮೇರಿಕೆಯ ನಿಗ್ರೋಗಳು ಆಂಗ್ಲರು ಆಗುತ್ತಾರೆ. ಕ್ರೈಸ್ತಪಂಥೀಯರಾದ ಕೃಷ್ಣಗೌರವರ್ಣೀಯ ಭಾರತೀಯರೂ ಆಂಗ್ಲರೇ ಎಂಬಂತೆ, ಸಂಸ್ಕೃತ ಭಾಷಿಕರೆಲ್ಲ ಆರ್ಯರೇ ಎಂಬ ನಂಬುಗೆಯು ಅವಿಚಾರಿತ ರಮಣೀಯವಿರುವ ಒಂದು ಶ್ರದ್ಧೆಯೇ ಸರಿ!

ಆಕ್ಸ್‌ಫರ್ಡಿನ ಪ್ರೊ. ಮ್ಯಾಕ್ಸಮುಲ್ಲರರ ಪರಂಪರೆಯನ್ನು ಮುಂದುವರಿಸುವುದಕ್ಕೂ ಅಥವಾ ಬ್ರಿಟಿಶ್ ಆಡಳಿತಗಾರರಿಗೆ ಭಾರತದಲ್ಲಿ ಭೇದನೀತಿಯನ್ನು ಅನುಸರಿಸಲು ಸುಖಕರವಾಗಲೆಂದೂ ಮ್ಯಾಕ್ಸಮುಲ್ಲರರಿಂದ ಪ್ರಾರಂಭವಾದ ಸದೋಷ ಸಂಶೋಧನದ ಪರಂಪರೆ ಪ್ರೊ. ಮ್ಯಾಕ್‌ಡೊನೆಲ್ಲ, ಪ್ರೊ. ಕೀಥ್ ಪ್ರಭೃತಿಗಳಿಂದಲೂ ಮುಂದುವರೆಯುತ್ತದೆ. ಇಲ್ಲಿ ಈ ಮಾತಿನ ನೆನಪು ಆಗಲು ಕಾರಣವಿದೆ. ಇಡಿ ಸೌರದೈವತಗಳೆಲ್ಲ ಒಂದೊಂದಾಗಿ, ಆದಿತ್ಯ ಹೆಸರಿನ ತೆರೆಯ ಹಿಂದೆ ಅಡಗಿಸಲ್ಪಡುತ್ತವೆ! ಪ್ರಕಾಶತತ್ವದ ವಿವಸ್ವನ್, ಸವಿತೃ, ಸೂರ್ಯ, ಇಂದ್ರಾದಿಗಳು ಆದಿತ್ಯ ಹೆಸರಿನ ಮುಸುಕಿನಲ್ಲಿ ಅಡಗಿದ ಬಳಿಕ ಈ ಸಂಹಿತೆಯು[೧] 'ತಮಃ ಆಸೀತ್ ತಮಸಾ ಗೂಳ್ಹ ಅಗ್ರೇ ಅ-ಪ್ರಕೇತಂ ಸಲಿಲಂ ಆಃ ಇದಂ ಸರ್ವಂ' ಎಂಬ ರಾತ್ರ-ರಜನೀನಾಥನ ಸಲಿಲ-ಜಲಮಯ ವೇದವಾಗಿರಲಿಕ್ಕೆ ಬೇಕು ಎಂಬುದು ಈ ವೇದದ ದೈವತ ಕಥಾಲೇಖಕ, ವೇದವ್ಯಾಸಂಗಿ ಪ್ರೊ. ಮ್ಯಾಕ್‌ಡೊನೆಲ್ಲರ ಅರಿಕೆಗೆ ಬರಲೇ ಇಲ್ಲವೊ?

ಜರ್ಮನಿಯ ಸಂಶೋಧಕ ಓಲ್ಡೆನ್‌ಬರ್ಗನ ವಿಚಾರವನ್ನು ಒಪ್ಪಿದಂತೆ ತೋರಿಸಿ (it cannot be passed over) ಇದನ್ನು ಮಾತಿನ ಚಾಕಚಕ್ಯದಿಂದ ಸಡಿಲು ಗೊಳಿಸ ಮ್ಯಾಕ್‌ಡೊನೆಲ್, ಓಲ್ಡೆನ್‌ಬರ್ಗನು ಹೇಳಿರುವಂತೆ ಆದಿತ್ಯನಾದ ವರುಣನು ಪ್ರಚ್ಛನ್ನ ಚಂದ್ರನೇ ಆಗಿದ್ದಾನೆ ಎಂಬ ನಿಷ್ಕರ್ಷವನ್ನು ಸಾಧುವೆಂದು ಒಪ್ಪಿದ್ದರೆ, ಈ ವೇದದ ಹೂರಣ ಎಂದೋ ಹೊರಗೆ ಬರುತ್ತಿತ್ತು! 'ಆದಿತ್ಯ' ನನ್ನಾಗಿ ಮಾರ್ಪಡಿಸಲಾದ ವರುಣನು ಚಂದ್ರನೇ ಇದ್ದಾನೆ, ಎಂಬ ಓಲ್ಡೆನ್‌ಬರ್ಗನ ನಿಃಸಂದಿಗ್ಧ ನಿರ್ಣಯವು ಹೀಗಿದೆ:

No reader of the Veda can consider the Aveotic passage without feeling the equivalence of this pair with the Vedic Mitra and Varuna, both masters of with direct evidence. And indeed, both the Veda & Avesta are full of evidence which show the image of Varuna similar to that of Ahuramazada in all their features.
We do not miss the convincing facts about the understanding of the changes in which the original Moon god is elevated to the heights of Varuna and Ahuramazada.
Sumerians saw in Nanmu the Moon god of Ura the Lord and Prince of gods.
The dreadful fellow moves in the night and rests during the day. Do we not have in this the key to that emergence of the Moon worship? The heavenly wanderer of the night who carries out his activity thoroughly in dark, who with such an arthere the favourie word 'Maya' used in connection with Varuna fits in exactly- knows to change his appearance continuously and make himself completely invisible, is obviously a much more dangerous magician that the sun who rules in the same form in the bright day."[೨]

ಓಲ್ಡೆನ್‌ಬರ್ಗನ ಈ ನಿಷ್ಕರ್ಷವು, ಭಾರತೀಯ ಸಂಸ್ಕೃತಿಯಲ್ಲಿ ತಿರುವು ಮುರುವು ಮಾತಿನ ಮಾಟ-ಯಾತು ಕೃತ್ಯವನ್ನು (Black magic-spell) ಗ್ರಹಿಸಿಕೊಳ್ಳಲು ಇದೊಂದು ಅಮೌಲಿಕ key (ಬೀಗದ ಕೈ) ಆಗಿದೆ. ಭಗವದ್ಗೀತೆಯ ಭಗ-ವಂತನು-'ವರುಣಃ ಅಹಂ' ಎಂದಿರುವನಲ್ಲದೆ, 'ಅದಿತ್ಯಾನಾಂ ಅಹಂ ವಿಷ್ಣುಃ' ಎಂದೂ ಒಪ್ಪಿಕೊಂಡಿರುವುದರಿಂದ ವೇದದ ವಿಷ್ಣು ಮತ್ತು ಭಗವತ್ ಗೀತೆಯ ಭಗ-ವಂತ=ಕೃಷ್ಣ, ಇವರಿಬ್ಬರೂ ಚಂದ್ರ ಸ್ವರೂಪರೇ ಇದ್ದು ವಿಷ್ಣು-ಕೃಷ್ಣ ಎಂಬ ಭಿನ್ನವೆನಿಸುವ ನಾಮರೂಪದ ವೇಷ ಧರಿಸಿದ್ದಾರೆ! ಎಂಬ ವಾಸ್ತವ ಸತ್ಯವು ಹೊರಗೆ ಬಂದು ಹತ್ತುದಶಕಗಳು ಸಮೀಪಿಸುತ್ತಿದ್ದುವು.

ಪ್ರೊ. ಮ್ಯಾಕ್‌ಡೊನೆಲ್ಲನ ಇನ್ನೂ ಒಂದು ಕೃತ್ಯ ನೋಡಿರಿ. ತನ್ನ ಗ್ರಂಥ Vedic Mythology ಪ್ರಕಟವಾಗುವುದಕ್ಕಿಂತ ಸು. ೨೦-೨೫ ವರುಷ ಮುಂಚೆಯೆ ಪ್ರಕಟವಾದ ಸಂಶೋಧನ ಪ್ರಬಂಧವನ್ನು ಲೆಕ್ಕಕ್ಕೆ ಹಿಡಿಯದಿರುವ ಅನ್ಯಾಯವನ್ನು ಎಸೆಗಿದ್ದಾನೆ. 'ಋಗ್ವೇದದಲ್ಲಿ ನಾಗ ಸಂಪ್ರದಾಯವಿದೆ' ಎಂದು, ಶ್ರೀ ವಿಶ್ವನಾಥ ನಾರಾಯಣ ಮಂಡಲೀಕರು ತಮ್ಮ ಒಂದು ಪ್ರಬಂಧದಲ್ಲಿ ಸಪ್ರಮಾಣವಾಗಿ ವಿಶದಪಡಿಸಿದ್ದಾರೆ. ಈ ಸಂಶೋಧನವು ಮುಂಬೈ ಶಾಖೆಯ Royal Asiatic Society ಪತ್ರಿಕೆಯಲ್ಲಿ ಪ್ರಕಟವಾಗಿದೆ.[೩] ಈ ಪ್ರಬಂಧ ವಾಚನದಂದು ಚರ್ಚಾಮಂಡದ ಸಭೆಗೆ ಆಗಿನ ಸಂಶೋಧಕರೆಂಬ ಖ್ಯಾತಿಯ ಜೇಮ್ಸ್ ಫರ್ಗ್ಯೂಸನ್ ಹಾಜರಿದ್ದನು. ತನ್ನ ಸಿದ್ಧಾಂತದ (Theory) ಆಧಾರದಿಂದ ಮಂಡಲೀಕರ ನಿಷ್ಕರ್ಷವನ್ನು ಆಕ್ಷೇಪಿಸುತ್ತಾನೆ. ಸಾರ್ಪರಾಜ್ಞೀ ಸೂರ್ಯೋ ವಾ ಈ ಸೂಕ್ತವು ಸರ್ಪ ದೈವತವನ್ನು ಎತ್ತಿ ಹೇಳಿದ್ದಾಗಿದೆ. ಅಲ್ಲದೆ, ಈ ಸೂಕ್ತಮಂತ್ರಗಳನ್ನು ಸಂತಾನಪ್ರಾಪ್ತಿಯ ನಾರಾಯಣ-ನಾಗಬಲಿಗಾಗಿ ವಿನಿಯೋಗಿಸುವ ವಾಡಿಕೆ ತಲೆತಲಾಂತರಗಳಿಂದ ಉಂಟು, ಎಂದು ಹೇಳಿ, ಬ್ರಾಹ್ಮಣಾದಿ ಗ್ರಂಥಗಳಿಂದಲೂ ಆಧಾರಕೊಟ್ಟಿದ್ದಾರೆ. ಜಾರಣಮಾರಣಾದಿಕೃತ್ಯಗಳ ತಂತ್ರ, ಮಂತ್ರ ನಾಗಸಂಪ್ರದಾಯದ ವೈಶಿಷ್ಟ್ಯ. ಹೀಗೆ ಸಪ್ರಮಾಣವಾಗಿ ಹೇಳಿದ ಆಧಾರಗಳನ್ನು ಖಂಡಿಸದೆ 'ಇವು ನಿರಾಧಾರ'


ಎಂದು ಸಿದ್ಧಪಡಿಸದೆ. ತನ್ನ ಸಿದ್ಧಾಂತದ ಆಧಾರ ಪಡೆದು ವಿರೋಧಿಸುತ್ತಾನೆ. ಸಂಶೋಧಕರ್ಧದಲ್ಲಿ ಹೆಸರಾದ ಫರ್ಗ್ಯುಸನ್ನರ ಈ Theoryಯನ್ನು ಮಂಡಲೀಕರು ಒಪ್ಪಲಿಲ್ಲ ಎಂಬ ಆಂಗ್ಲ ಸಂಪಾದಕನ ಟಿಪ್ಪಣಿ ಸಹ ಈ ಸಂಪುಟದಲ್ಲಿ ಓದಲು ದೊರೆಯುತ್ತದೆ.

ನಾಗಪೂಜೆ, ವೃಕ್ಷಪೂಜೆ ಆರ್ಯರಲ್ಲಿ ಇದ್ದಿಲ್ಲ ಎಂಬ ಸಿದ್ಧಾಂತವು ಸರಿಯಿರುವ ಶಕ್ಯತೆಯಿದೆ. ಇಲ್ಲಿ ಆರ್ಯ ಎಂಬುದು ವಂಶವರ್ಣಸೂಚಕ (ethnic) ಸಂಕೇತವಿರಲಾರದು. ಪ್ರಕಾಶತತ್ವದ ದೈವತಾರಾಧನೆಯ ಸಮಯಾಚಾರಗಳಲ್ಲಿ ರಾತ್ರಿ ಸಮಯಾಚಾರದ ನಾಗ-ವೃಕ್ಷ ಉಪಾಸನೆಗೆ ಸ್ಥಾನ-ಪ್ರತಿಷ್ಠೆಯಿರಲು ಶಕ್ಯವಿಲ್ಲ, ಎಂಬುದು ಅಕ್ಷರಶಃ ನಿಜ. ಆದರೆ, ಮ್ಯಾಕ್‌ಡೊನೆಲ್ ಋಗ್ವೇದದಲ್ಲಿ ಅಹಿ (ನಾಗ) ಪೂಜೆ ಇದ್ದೂ, ಇದು ಇಲ್ಲ ಎಂದು ಹೇಳಬೇಕಾಗುವ ಆಪತ್ತಿಯನ್ನು ಸ್ವೀಕರಿಸಿರುವ ಕಾರಣವೇನಿರಬಹುದು? ಕ್ರೈಸ್ತ ಪರಂಪರೆಯಲ್ಲಿ ಬೆಳೆದ ಈ ಸಂಶೋಧಕನ Sabbath Sunday ಇರುವ ಕುಮಾರೀ ಪುತ್ರ ಕ್ರಿಸ್ತನೂ ಆದಿತ್ಯನೇ ಇದ್ದಾನೆ. ಈ ಸಂಪ್ರದಾಯವೂ ನಾಗ ಪೂಜಕರದೇ ಇರುವುದೂ ಮ್ಯಾಕ್‌ಡೊನೆಲ್ಲ ಜಾರಿದ್ದಕ್ಕೆ ಕಾರಣವಿರಬಹುದೊ? ಇದು ಏನೇ ಇರಲಿ, ವೈದಿಕ-ದೈವತ ಕಥೆಗಳಲ್ಲಿ ಅಹಿಃ ಬುಧ್ನ್ಯ (ಬುಡದಲ್ಲಿ ಇರುವ ನಾಗ) ಮತ್ತು ದೈವತವನ್ನು ಕುರಿತು ಬರೆಯುವಾಗ, ಅಹಿ-ವೃತ್ತ (ಸರ್ವಾಲಿಂಗನದ ಆತುರವುಳ್ಳ ನಾಗ) ಮತ್ತು ಅಹಿಃ ಬುಧ್ನ್ಯ ಇವೆರಡೂ ಮೂಲದಲ್ಲಿ (originally) ಒಂದೇ ಇರಬೇಕು, ಎಂದು ಒಪ್ಪಿದ್ದಾನೆ (ಪು. ೭೩). ಆದರೆ ಈ ಗ್ರಂಥದ ಉಪಸಂಹಾರದಲ್ಲಿ, ತಿರುವು ಮುರುವಾಗಿ ಹೇಳುತ್ತಾನೆ. There is no trace of it in R.V.[೪]

ಈ ವಿವರಣೆಯಿಂದ ಸೂಚಿಸಬೇಕಾಗಿರುವ ಸಂ-ಗತಿಯು ಇಷ್ಟು. ಬ್ರಿಟಿಶ್ ಆಡಳಿತಗಾರರಿಂದ ಪೋಷಣೆ ಪಡೆದ ಸಂಶೋಧಕರಿಂದ ಜ್ಞಾತಾ ಜ್ಞಾತವಾಗಿ, ನಮ್ಮ ಪುರಾತನ ಸಂಸ್ಕೃತಿಯ ಸಂಶೋಧನವು ಸಮರ್ಪಕವಾಗಿ ಆಗಿಲ್ಲ. ಆದರು, ಅವರಿಂದ ಮಸಮಸಕು ಬೆಳಕು ದೊರೆತಿತು. ತೀರ ಕಗ್ಗತ್ತಲೆಯೇ ಕವಿದಿದ್ದ ನಮ್ಮ ದೇಶದ ಗತಕಾಲದ ಸ್ಥೂಲ ಅಸ್ಪಷ್ಟ ಚಿತ್ರವಾದರೂ ಒಂದು ಎಂತೂ ಚಿತ್ರ ದೊರೆತಿದೆಯಲ್ಲ! ಎರಡೂ ಕಣ್ಣು ಇಲ್ಲವಾದಾಗ ಮಿಳಮಿಳನೆ ನೋಡುವ ಮಟ್ಟಿಗಾದರೂ ಕಣ್ಣು ದೊರೆತುವಲ್ಲ, ಇದೂ ಲಾಭವೇ ಸರಿ. ಬ್ರಿಟಿಶ್ ಸಂಶೋಧನ ಪರಂಪರೆಯ ಮೇಲೆ ಇಂದು ಅವಲಂಬಿಸಿ ಕುಳ್ಳಿರಬೇಕಾದ ಪ್ರಮೇಯವಿಲ್ಲ. ಸಾಂಸ್ಕೃತಿಕ ಸಂಶೋಧನದ ತಂತ್ರವು ಪಾಶ್ಚಾತ್ಯರಲ್ಲಿಯೂ ಇನ್ನೂ ಪ್ರಯೋಗಾತ್ಮಕವೇ ಇದೆ. ಜೀವನ ವಿಶ್ವಸ್ಥ ವಾಸ್ತವಸತ್ಯವನ್ನು (Reality) ಗ್ರಹಿಸಿಕೊಳ್ಳುವ ವ್ಯಾಹೃತಿಚಿತ್ರಗಳ ಅಮೋಘ ಕಾಣಿಕೆಯನ್ನು ಭಾರತೀಯ ಪುರಾತನರು ಮಾನವಕೋಟಿಗೆ ನೀಡಿದ್ದಾರೆ. ಇದು ವಿಶ್ವಮಿತ್ರನ ಸಂಪ್ರದಾಯ!

ಸತ್ಯ, ಧರ್ಮ ಸಂಸ್ಕೃತಿ ಇದು ಇಂಡಿಯಾದ ಜೀವನಕ್ಕೆ ಸಂ-ಬದ್ಧವಿದೆ. ಇದನ್ನು ಅರಿಯಲು, ಧರ್ಮ ಮತ್ತು Religion ಇವೆರಡರ ಅರ್ಥ ಆಕೃತಿಯಲ್ಲಿ ಪ್ರತೀತಿಗೆ ಬರಬಲ್ಲ ಅಂತರವನ್ನು ಗ್ರಹಿಸಿಕೊಳ್ಳುವ ಆವಶ್ಯಕತೆಯಿದೆ. ಮೋಕ್ಷಕಾಮೀ ಸಂಪ್ರದಾಯಗಳಲ್ಲಿ ಅಭಿಪ್ರೇತವಿರುವ ಮಾನವಧರ್ಮವು Religion ಎಂಬ ಆಕೃತಿ ಸ್ವರೂಪದ್ದಾಗಿದೆ. ಇದುವೆ ಸ್ವಯಂ-ಭೂ ಮನುಪ್ರಣೀತ ಮಾನವಧರ್ಮ. ಗುಡಿಗಳ ರಚನೆಯಲ್ಲಿ ಈ ಧರ್ಮದ ಆಕೃತಿ ಸ್ವರೂಪವು ಮೂರ್ತ ರೂಪ ತಾಳಿನಿಂತಿದೆ. ಅಥರ್ವವೇದದ 'ಅಶ್ವ-ತ್ಥೋ' ದೇವ-ಸದನಃ-ಈ ವೃಕ್ಷವು ಕೃಷ್ಣ - ಪುರುಷನ ವೃಕ್ಷ! ಇದೇ ದೇವಸ್ಥಾನ! ಇಷ್ಟೆ ಅರ್ಥವಾಗಲು ಕಷ್ಟ. ದೇಹ (ಶರೀರ)ವೇ ದೇಗುಲ; ಶಿರವೇ ಶಿಖರ -ಶೃಂಗ! ಗುಡಿಯ ಗರ್ಭಾಗಾರದ ಮೇಲೆ ಶಿಖರವಿರುತ್ತದೆ. ಬೌದ್ಧರ ಸ್ತೂಪ ಇದಕ್ಕೂ ಸ್ತಂಭ, ವೃಕ್ಷ ಎಂದೇ ಅರ್ಥ. ಇಷ್ಟೇ ಸಾಲದು, ಗೋ-ಪುರ (ರಿ) ದೇವಾಲಯಕ್ಕೆ ಎದುರು ಬೇಕೆ ಬೇಕು. ದೇವಾನಾಂ ಪೂಃ (ಪುರಿ) ಅ-ಯೋಧ್ಯಾ! ಅಥರ್ವ ವೇದದೊಳಗಿನ ಈ ಅಯೋಧ್ಯಾ-ಪುರಿ ಶ್ರೀರಾಮಚಂದ್ರನ, ರಾಮ-ಅಯನಕ್ಕೂ ಮುಂಚಿನದು! ಸಾರ್ವಕಾಲಿಕ ಸನಾತನ ಆಕೃತಿ; ದೇವರು (ಆತ್ಮನ್=ತನು) ಆರಾಮ ಮಾಡುವ ಕ್ರೀಡಿಸುವ ಎಡೆ=ಪುರಿ-ಶಯ(ನ) ವಾಸಸ್ಥಾನ! ಯುದ್ಧಮಾಡಿ ಗೆಲ್ಲುವ ಭೌತ ಪುರ(ಪುರಿ) ಇದಲ್ಲ! ಕ್ರೈಸ್ತಪಂಥೀಯ ಶ್ರದ್ಧೆಯಲ್ಲಿಯೂ City of God ಉಂಟು. ಆದರೆ, ಭಗವತ್ ಗೀತೆಯಂತೆ, ಕ್ರೈಸ್ತ ಪರಂಪರೆಯ ಆ God=ಭಗವಂತನ ಆವಾಸದಪುರ

‘ಸರ್ಪರಾಜ್ಞೀ ಸೂರ್ಯೋವಾ’ (ಋ. X. ೧೮೯)



ಸರ್ಪಾಲಿಂಗಿತ ಸೂರ್ಯ ! :
ಭಾರತೀಯ ಸೂರ್ಯನಾರಾಯಣ ಪ್ರತಿಮೆಯನ್ನು ಸ್ಮರಿಸಿಕೊಳ್ಳಬಹುದು
(ಅಹಿಃವೃತ್ರನ ಮೂಲಮಾದರಿ)
ಇಜಿಪ್ತಿನ ರಾಜ ಚಿಹ್ನೆಗಳಲ್ಲಿ ನಾಗನಿಗೆ, ನಾಗಾಲಿಂಗಿತ ಸೂರ್ಯನಿಗೆ ತುಂಬ ಪ್ರತಿಷ್ಠೆಯಿತ್ತು (ಕಿ.ಪೂ. ೩೦೦೦)

ಸಹ ತುಂಬ ಸಂಮೋಹಕ-ಆಕೃತಿ ಸ್ವರೂಪದ್ದಾಗಿದೆ. ಇದು, ಬರ್ಟರೆಂಡ್ ರಸೆಲ್ಲನ ಪಾಶ್ಚಾತ್ಯ ತತ್ತ್ವಜ್ಞಾನದ ಇತಿಹಾಸದೊಳಗೆ ಬರುವ ಒಬ್ಬ ಸಂತನ ಚರಿತೆಯ ಓಘದಲ್ಲಿ ಬಂದಿರುವ ಒಂದು ಉಲ್ಲೇಖದಿಂದ ಕಂಡುಬರುತ್ತದೆ. ಆದರೆ ದೇವತಾ ವಿಚಾರದಲ್ಲಿ ಮೂಲಗಾಮೀ ದೃಷ್ಟಿಕೋನವುಳ್ಳವನೆಂಬ ಖ್ಯಾತಿಯ ಜರ್ಮನಿಯ ಸಂಶೋಧಕ ಉನ್ನರನು ಹಿಬ್ರೂ ಹಾಗೂ ಕ್ರೈಸ್ತಪಂಥೀಯ Candle Light ಇದು ಜ್ಯೋತಿರ್ಲಿಂಗ ಅಥವಾ ಲಿಂಗಜ್ಯೋತಿಯ ಪ್ರತೀಕ ಎಂದು ಹೇಳಿರುವಲ್ಲಿ, ಈ ಮೋಕ್ಷಕಾಮಿ ಧರ್ಮ (?) ಸಂಪ್ರದಾಯಗಳ ಮಾನವಧರ್ಮ (?) ನರ (ಳ) ನಾರ(ಳ) ಆಯನರ ಧರ್ಮ ಎಂಬುದು ದೃಢಪಡುತ್ತದೆ. ನರ-ನಾರಾಯಣ ರೂಪ ರಾಜವಿದ್ಯಾ ರಾಜ ಗುಹ್ಯದ ರಹಸ್ಯಬೋಧಕ ಪರಿಭಾಷೆ ಸೃಷ್ಟಿಸಿ, ಮಾನವಧರ್ಮ ಸಂಸ್ಕೃತಿಯ ಇತಿಹಾಸದಲ್ಲಿ ಒಂದು ಹಂತದ ಪ್ರಾಣಚೇತನದ ಪಾತಳಿಯ ಇತಿಹಾಸಗ್ರಹಣಕ್ಕೆ ಅಮೋಘ ಪ್ರಮಾಣವನ್ನು ಒದಗಿಸಿರುವ ವ್ಯಾಸನನ್ನು ಎಷ್ಟು ಕೊಂಡಾಡಿದರೂ ಕಡಮೆಯೇ ಸರಿ! ಈ ನರ(ಳ) ನು ಬೃಹಲ್ಲಾಂಗೂಲ ಕಪಿಧ್ವಜನೆಂಬ ಸಾಂಕೇತಿಕತೆ ಉಳಿಸಿರುವ ವ್ಯಾಸನು ಅಭಿನಂದನಾರ್ಹನಾಗಿದ್ದಾನೆ. ಮೋಕ್ಷಕಾಮೀ ಧರ್ಮಗಳ ಮೂಲಭೂತ ಗ್ರಹಿಕೆ, ಶ್ರದ್ಧೆಯೇ Illegitimate abstractions ಅಯೋನಿಸಂಭವ ಶಿಶು ಸ್ವರೂಪದ್ದಾಗಿದೆ! ಇದನ್ನು 'ಅ-ಜಾ-ಪುತ್ರ' ಅ-ಜ ಎಂಬ ಸಾಂಕೇತಿಕ ಪರಿಭಾಷೆಯ ಮೂಲಕ ಹೇಳುವ ವಾಡಿಕೆಯಿತ್ತು! ಶ್ವೇತಾಶ್ವತರದ ಶ್ಲೋಕವು ಇದಕ್ಕೆ ನಿದರ್ಶನ : ಈ ಅಂತರ-ವಿಸಂಗತಿಯ ಮುಂದಿಗೆ ಅದ್ಭುತವಿದೆ! ಹುಟ್ಟಿದೆ ಇರುವವಳು! ರಕ್ತ-ಶುಕ್ರ (ರೇತ) ರೂಪ ರೆಮ್ಮನು, ಬಹುಪ್ರಸವಿ-ಪ್ರಪಂಚಕ್ಕೆ ಜನ್ಮ ಕೊಡುತ್ತಾಳೆ; ಮಕ್ಕಳೂ (ರೇತ-ರಸರೂಪರೇ) ಸಮಾನರೂಪರು! ಆದುದರಿಂದ, ತಾಯಿ ಅ-ಜಾ; ಮಗನೂ ಅ-ಜ! ಎಂದರೆ, ಈ ಪ್ರಪಂಚವೇ ಸುಳ್ಳು-ಮಾಯೆ! ಆದಕಾರಣ ಸ್ತ್ರೀ-ಪುಂ ಯೋಗದಲ್ಲಿ ನೀತಿ ಅನೀತಿಯೆ ವಿಚಾರವು ಮಾನವ (ವಿವಸ್ವನ್) ಸಂಪ್ರದಾಯದ ಕಲ್ಪನೆ. ಲೌಕಿಕ ಸತ್ಯವಂತೆ ಇದು. ಕೃಷ್ಣದ್ವೀಪ ಅಯನರ ಶ್ವೇತದ್ವೀಪ ಅಯನ 'ನಾರ-ದ'ರ ಪರಿಭಾಷೆ ಇದು!

ಆದಿತ್ಯ ಸಂಪ್ರದಾಯದ ಮೂಲಕ ಭಾರತೀಯ ಸಂಸ್ಕೃತಿಯಲ್ಲಿ ನೈತಿಕ ಮಟ್ಟವು ಉಳಿಯಲಿಲ್ಲ, ಎಂಬ ಓಲ್ಡೆನ್‌ಬರ್ಗನ ವಿಚಾರವು ಮೌಲಿಕವಿದೆ ಎಂದು ಎ. ಬಿ. ಕೀಥ್ ಒಪ್ಪುತ್ತಾನೆ.

> The arguments of importance and weight ಉಳ್ಳವು ಇರುವುದು. perfectly true that moral quality of Varuna and of Adityas is of a different species from that of Indra and other members of Vedic Pantheon to whom morality is rather an outward assertion than an internal principle.[೫]

ಆದರೆ, ಕೀಥ್ ಸಾಹೇಬರ ಸಂಶೋಧಕೀಯ ಸತ್ಯಭಕ್ತಿಯ ಜಾತಿ ಬೇರೆ ಬಗೆಯದಾಗಿದೆ. ಇನ್ನೊಬ್ಬರ ನೀತಿ, ಅನೀತಿಯನ್ನು ಕುರಿತು ಮಾತಾಡುವದಾಗಿದೆ! 'ಅಧಿಕಾರ ಹೇಗೆ ಉಂಟಾಗುತ್ತದೆ'. ಎಂಬ ಈ ಬ್ರಿಟಿಶ್ ಸಂಶೋಧನ ಪದ್ಧತಿಯಲ್ಲಿ ಸತ್ಯಾತ್ ನಾಸ್ತಿ ಪರೋಧರ್ಮಃ ಎಂಬ ವಿವಸ್ವನ್ ಮನುಪ್ರಣೀತ ಮಾನವ ಧರ್ಮದ ಬಗೆಗೆ ಸ್ವಾಭಾವಿಕವಾಗಿಯೇ ಆದರವಿದ್ದದ್ದು ಕಾಣಲಿಲ್ಲ! ಕೀಥ್, ಮ್ಯಾಕ್‌ಡೊನೆಲ್ಲರ Religion - ವೈಯಕ್ತಿಕ ಧರ್ಮ(?) ಮಾತ್ರ ಬಲ್ಲದು. ಸಮಾಜ Social Contract ಎಂಬ ಗ್ರಹಿಕೆಗೆ ಕಾರಣವಾದ, 'ಸ್ವಧರ್ಮೇ ನಿಧನಂ ಶ್ರೇಯಃ' ಎಂಬ ಭಗ-ವಂತ ಸಂಪ್ರದಾಯದ ಧರ್ಮ(?)ದಲ್ಲಿ ಸಮಾಜ-ಸಮಷ್ಟಿಗೆ ವೈಶ್ವಾನರ ಈ ಸಂಕೇತಕ್ಕೆ ಸ್ಥಾನವಿರಲಾರದು. ಈ ಭಗವತ್-ಗೀತೆಯ ಭಗವಂತನು 'ಅಹಂ ವೈಶ್ವಾನರಃ' ಎಂದು ಹೇಳಿಲ್ಲವೆ? ಕಾಲೋಽಸ್ಮಿ ಲೋಕ ಕ್ಷಯಕೃತ್ ಪ್ರವೃದ್ಧಃ' ಎಂದು ತಾನೇ ಹೇಳಿರುವ ಈ ಭಗ-ವಂತನು ವೈಶ್ವಾನರನು (ಸಮಾಜ ಸಮಷ್ಟಿ) ನಾನೇ, ಎಂದರೆ ಸಮಾಜವು ಮೃತ್ಯುಸ್ವರೂಪವಾಯಿತು. ವೈಯಕ್ತಿಕ ಆಕಾಂಕ್ಷೆ-ಕಾಮನೆಗಳಿಗೆ ಆತಂಕಕಾರೀ

---

* ಅಜಾಂ ಏಕಾಂ ಲೋಹಿತ ಶುಕ್ಲಕೃಷ್ಣಾಂ ಬಹ್ವೀಃ ಪ್ರಜಾಃ ಸೃಜಮಾನಾಂ ಸರೂಪಾಃ; ಅಜಃ ಹಿ ಏಕಃ ಜುಷಮಾಣಃ ಅನುಶೇತೇ... ಎಂಬ ಮಾತು ಗಮನಾರ್ಹ.

ಸಮಾಜವು ವ್ಯಕ್ತಿಗೆ ಶತ್ರು ಸ್ವರೂಪವಾಗಿದೆ, ಎಂದು ಫ್ರೈಡ್ ಪಂಥೀಯ ಮಾನಸಶಾಸ್ತ್ರಜ್ಞ ಬರೆದಿಲ್ಲವೆ? ಈ ಭಗವಂತನು ಇದಕ್ಕೂ ಒಂದಡಿ ಮಿಗಿಲು, ಮಾನವರ ಆರೋಗ್ಯಕ್ಕೆ ಅತ್ಯವಶ್ಯವಿರುವ ಹಸಿವು (ಜಠರಾಗ್ನಿ) ಇದನ್ನೇ ಮೃತ್ಯುರೂಪದ್ದಾಗಿ ಬಗೆದಿರುವಲ್ಲಿ, ಬದುಕುವುದೇ ಪಾಪಕೃತ್ಯ ಆಗುತ್ತಲಿದೆ! ಕ್ಷುಧಮಿತ್ ವಧಂ ಹಸಿವು ಕೊಲೆಗಡಕನ ಕೆಲಸ (ದಿನಾಲು) ಮಾಡುತ್ತಿದೆ, ಪ್ರತಿಕ್ಷಣಕ್ಕೂ, ಎಂದು ವೇದದಲ್ಲಿಯೆ ಇದೆ!

ಪ್ರಕೃತಿ (phenomena) ಇದನ್ನು 'ಅಜಾ' ಎಂದೂ ಪುರುಷನನ್ನು 'ಅಜ' ಎಂಬ illegitimate abstraction ದ ಈ ಪ್ರಕಾರವು ಒಂದು. ಇನ್ನೊಂದು ಬಗೆಯ ಅಯೋನಿ ಸಂಭವತ್ವವೂ ಗಮನಾರ್ಹವಿದೆ: ಕುಮಾರೀ (Virgin) ಮಾತೆ. Immaculate birth - ಪುರುಷ ಸಂಪರ್ಕವಿಲ್ಲದ ಶಿಶು (ಇದು ಗಂಡೇ!) 'ಇದು ಶಕ್ಯ' ಎಂದು ಲೋಕವು ಒಪ್ಪಿಕೊಂಡಿರುವಲ್ಲಿ ಈ ಜನವು ತಮ್ಮ ಪ್ರಪಂಚದ ಪ್ರಳಯಕ್ಕೇ ಆಮಂತ್ರಿಸಿದಂತಾಗಿದೆ. ಆದಿಪುರುಷ ಕುಮಾರ, ಈತನು, ತನ್ನ ಹೆಂಡತಿಯನ್ನು ತಾನೇ ಸೃಜಿಸಿದನಂತೆ! 'ಆತ್ಮಾವಾ' ಇದಂ ಅಗ್ರೇ ಆಸೀತ್ ಎಂದು ಹೇಳಿ ಈ ಆತ್ಮನು ತನ್ನ ಸ್ತ್ರೀ ತಾನೇ ಹಡೆದನು ಎಂಬ ಶ್ರದ್ಧೆ! (Brain washing ಆದ ಒಪ್ಪಿಗೆ!) ಇಜಿಪ್ಟಿನ ಪುರಾತನ ಸಂಸ್ಕೃತಿಯ ಸಂಶೋಧಕರು ಸ್ವ-ರತಿ (masturbation) ಮೂಲಕ ಅಲ್ಲಿ ದೇವನಿಂದ ಸೃಷ್ಟಿನಿರ್ಮಾಣವಾದುದನ್ನು ಹೇಳುತ್ತಾರೆ!

> In one sense he is the Atum, figure of Heliopolis performing creation by masturbation'

ಇದು Logos ತತ್ತ್ವದ ಸಾಂಕೇತಿಕತೆ ಎಂದು ಹೇಳಲಾಗುತ್ತದೆ.[೬] ಈ ಗ್ರಹಿಕೆ, ಈ ಮೋಕ್ಷಕಾಮೀ ಸಂಪ್ರದಾಯಗಳಲ್ಲಿದೆ. ಮಾನವನಲ್ಲಿ ಪ್ರಜ್ಞೋದಯವಾಗುವುದಕ್ಕೂ ಮುಂಚಿನ ಪ್ರಾಣಚೇತಸದ ಪಾತಾಳಿಯ ಪ್ರಮಾಥೀ ಇಂದ್ರಿಯ ಪ್ರವೃತ್ತಿಯೇ ಪ್ರಧಾನವಾಗಿದ್ದ ಯುಗದಲ್ಲಿ, ಈ ಶ್ರದ್ಧೆಯು ಆಕಾರ ಪಡೆದಿರುವುದನ್ನು ಇವುಗಳ ಆಕೃತಿ ಸ್ವರೂಪವೇ ಸಾರಿ ಹೇಳುತ್ತಿದೆ.

ಆದಿತ್ಯ ಸಂಪ್ರದಾಯವು 'ಸಾರ್ಪರಾಜ್ಞೀ ಸೂರ್ಯೋ ವಾ' ಎಂಬೀ ಬಗೆಯ ಮಾಟಕೃತ್ಯಗಳಿಂದ ಜನದ ಕಣ್ಣು ಕಳೆಯುತ್ತಿದೆ. ಸರ್ಪ-ಸೂರ್ಯ ಇವೆರಡರೊಳಗಿನ ಅಂತರವನ್ನು ಇಲ್ಲವಾಗಿಸುವ, ನೀತಿ-ಅನೀತಿ, ಜಯ-ಪರಾಜಯ ಇವೆರಡನ್ನು ಸಮವೆಂದು ಹೇಳಿ ಜೀವನಮೌಲ್ಯಗಳನ್ನೂ ಶೂನ್ಯವಾಗಿಸುವ, ಈ ನಿಂದ್ಯಕರ್ಮವು ಲೋಕಕ್ಕೆ ಗೊತ್ತಾಗದೆಯೇ ಉಳಿದು ಬರಲು ಶಕ್ಯವೆ? ಎಂಬ ಪ್ರಶ್ನೆ ಇಲ್ಲಿ ಅನಿವಾರ್ಯವಾಗುತ್ತಿದೆ. ಈ ಅನೈಸರ್ಗಿಕ ವೈಚಾರಿಕ ಶ್ರದ್ಧೆ ಜನರಲ್ಲಿ ರಕ್ತಗತವಾಗಲು ಕಾರಣಗಳಿವೆ, ಪಾಪದ ಸುಳ್ಳುಭೀತಿ! ದೇವರ ಬಗೆಗಿನ ನಿರಾಧಾರ ಭೀತಿ. ಈ ಪ್ರಪಂಚದಲ್ಲಿ ಅಭಾವವನ್ನು ಸ್ಥಾಯಿಭಾವವೆಂದು ನಂಬಲು ಕಲಿಸಿ ಮೋಕ್ಷಕಾಮೀ ಸಂಪ್ರದಾಯದ ಗುರುವರ್ಗವು, ದೇವರು ಎಂಬ ಅ-ಜಾ ಪುತ್ರ (ಅಜ)ನನ್ನು ಸೃಷ್ಟಿಸಿದೆ! ಭಾವುಕರಲ್ಲಿ ಆವಶ್ಯಕವಾದ ನೈತಿಕಧೈರ್ಯ (Courage of Conviction) ಧೀರವೃತ್ತಿಯನ್ನು ಇಲ್ಲವಾಗಿಸಿದೆ. ಜನ ಪುಕ್ಕರಾಗುವಂತೆ ಈ ದೇವತಾನಾಮದ ದುರ್ಲಾಭ ಪಡೆಯಲಾಗುತ್ತಿದೆ. ದೇವ ಒಂದು ನೆಪ (Scapegoat) ಅಥವಾ ಬೆದರು (Scare-Crow) ಎಂಬ ಸಂಗತಿಯನ್ನು ಹಿಂದೊಮ್ಮೆ ಹೇಳಲಾಗಿದೆ. ಹೀಗಿದ್ದರು, ಸಾಮಾಜಿಕ-ಪ್ರಜ್ಞೆ ಪಾಶ್ಚಾತ್ಯ ಪರಿಭಾಷೆಯಲ್ಲಿ Public conscience ಎಂಬುದು, ಇನ್ನೂ ಪೂರ್ಣ ನಷ್ಟವಾಗಿಲ್ಲ. ಕೃಷ್ಣ ಕಾರಸ್ಥಾನ ಎಂಬ ಪಡೆನುಡಿ, ಭಗ-ವಂತನ-ಕೃಷ್ಣನ ಭಕ್ತಿ ಉಕ್ಕೇರುವಂತೆ ಸಾಹಿತ್ಯರಚನೆಯಾಗುತ್ತಿದ್ದರೂ, ಇದು ತಲೆಯೆತ್ತದೆ ಇಲ್ಲ! ಆಧುನಿಕ ಭೌತಶಾಸ್ತ್ರ ಭೌತಮಾನಸಶಾಸ್ತ್ರಜ್ಞರು ಹಲವರು Consciousness of Consciousness, Conscience ಪ್ರಜ್ಞೆ (Wisdom) ಇದರ ಅಸ್ತಿತ್ವವನ್ನು ಅಲ್ಲಗಳೆಯುತ್ತಿದ್ದಾರೆ; ಮೋಕ್ಷಕಾಮಿಗಳೂ ಇದನ್ನೇ ಮಾಡಿದ್ದಾರೆ. ಸಾಹಿತ್ಯಕರಿಂದಲೂ ಇದಕ್ಕೆ ನೆರವು ದೊರೆಯುತ್ತ ಬಂದಿದೆ! ಬಿದ್ದಗೂಳಿಗೆ ಆಳಿಗೊಂದು ಕಲ್ಲು! ವಿವಸ್ವನ್ ಮಾನವಧರ್ಮ ನೆಲಕ್ಕುರುಳಿದೆ.

ದೇವರ ಬಗೆಗಿನ ನನ್ನ ಇಡೀ ವ್ಯಾಸಂಗದಲ್ಲಿ ಆತ್ಮಪರೀಕ್ಷಣದಲ್ಲಿ ಜೀವನ ಸಂಸ್ಕೃತಿಸಮೀಕ್ಷೆಯಲ್ಲಿ ಒಳ-ಬೆಳಕು, ಅಂತಸ್ಥ ಪ್ರಜ್ಞೆ ಇದುವೆ 'ದಿವ್ಯಶಕ್ತಿ' ಹೊರತು ಬೇರೆ ದೇವನಿಲ್ಲ. ಸೃಷ್ಟಿಕರ್ತನೆಂಬವನನ್ನು ನಂಬುವಲ್ಲಿ, ಇದು

ಮೂಲಸ್ಥಾನದ 'ಅಹಿಃ ಬುಧ್ನ್ಯ' (ಬುಡದಲ್ಲಿ ಅಡಗಿರುವ) ದೇವವೃಕ್ಷ-ಸ್ತಂಭ ಶಕ್ತಿ; ಇದು ಶಂ-ತನು ಪೂಜೆಯೇ ಆಗಬಲ್ಲದು. ಇದೆಲ್ಲ ಹಾಗಿರಲಿ, ಇಂಥ ಕೃಷ್ಣ ಕಾರಸ್ಥಾನ ಬೆಳಕಿಗೆ ಬರದೆ ಹೇಗೆ ಉಳಿದಿದೆ, ಎಂಬ ಪ್ರಶ್ನೆ, ಇಲ್ಲಿ ಪ್ರಸ್ತುತವಿದೆ. ಸೂರ್ಯ-ಚಂದ್ರ : ೧-೦ ಚಮತ್ಕೃತಿಯಲ್ಲಿ ಸುಳ್ಳುತನ, ಖೊಟ್ಟಿತನ ಇರಲೇಬೇಕಷ್ಟೆ? ಇದು ಬೆಳಕಿಗೆ ಏಕೆ ಬಂದಿಲ್ಲ?

ಭಾರತೀಯ ಪುರಾತನ ಸಂಸ್ಕೃತಿಯಲ್ಲಿ ವಿವಸ್ವನ್* ಮನು-ಮಾನವಧರ್ಮ ಸಂಪ್ರದಾಯವು ಆರಾಧಿಸುತ್ತಿದ್ದ ಸಾಮಾಜಿಕ-ಸಮಷ್ಟಿ ಪ್ರಜ್ಞಾರೂಪ ವೈಶ್ವಾನರ ಅಗ್ನಿ (consciousness of consciousness, conscience)= Public conscience ಇದನ್ನೆ, ಭಗ-ವಂತ ಆದಿತ್ಯ ಸಂಪ್ರದಾಯವು ನುಂಗಿ ನೀರು ಕುಡಿದೆ! ಹಲವು ಬಗೆಗಳಿಂದ; ಸ್ವಲ್ಪ ಮಾದರಿ ನೋಡಿ. 'ಅಹಂ ವೈಶ್ವಾನರಃ' ಎಂಬ ಈ ಭಗವತ್ ಗೀತೆಯ ಭಗ-ವಂತನು ಲೋಕಕ್ಷಯಕ್ಕಾಗಿ ಪ್ರವೃದ್ಧ ಬೆಳೆದುನಿಂತ ಕಾಲ-ಮೃತ್ಯು-ಸ್ವರೂಪನು ತಾನು ಎಂದು ತಾನೇ ಹೇಳಿದ್ದಾನೆ! ಋಗ್ವೇದದಲ್ಲಿ ವೈಶ್ವಾನರಾಗ್ನಿಯನ್ನು ದಾವಾನಲ (ಸಮಾಜರೂಪೀ ಅರಣ್ಯ ಸುಡುವ) ಅಗ್ನಿರೂಪದಲ್ಲಿ ಚಿತ್ರಿಸಿದ್ದಾಗಿದೆ![೭] ಸಾಯಣರು ಈ ಸೂಕ್ತಗಳ ಭಾಷ್ಯದಲ್ಲಿ ಖಾಂಡವ 'ವನ ದಹನದ ಅಗ್ನಿ' ಸರ್ವಭಕ್ಷಕ ಅಗ್ನಿ ಎಂದು ಹೇಳಿದ್ದಾರೆ. ಪಂಚಮ ವೇದವೆಂಬ ಮಹಾಭಾರತವು ಈ ಯಾತು ವೇದಕ್ಕೆ ಭಾಷ್ಯ! ಅರ್ಜುನ (: ಸೌರ)ನಿಂದಲೇ ಖಾಂಡವವನ ಸುಡಿಸಿದ ಅಪೂರ್ವ ಸಾಂಕೇತಿಕತೆ, ಕೃಷ್ಣ ಕೃತ್ಯವಲ್ಲವೆ? ಸಮಾಜ-ಸಮಷ್ಟಿಯು (=ವೈಶ್ವಾನರ ಅಗ್ನಿ) ಈ ದಿವ್ಯಶಕ್ತಿಯು ಆ ಭಾಷಿಕರ ಜೀವನ-ಸಂಸ್ಕೃತಿಯನ್ನು ರೂಪಿಸುತ್ತದೆ ಎಂಬ ಈ ಆಧುನಿಕ ವೈಚಾರಿಕ ಆಕೃತಿಯು, ಪುರಾತನ ವಿವಸ್ವನ್ ಮನು-ಮಾನವ ಸಂಪ್ರದಾಯದ ಪರಿಭಾಷೆಯಲ್ಲಿದೆ! ಒಂದು ರೂಪಕದ ಸ್ವರೂಪದಲ್ಲಿ ಆವಿಷ್ಕಾರ ಪಡೆದಿದೆ: ಜೀವನ-ಸಂಸ್ಕೃತಿ ಇದು ಒಂದ ಮಹಾವಸ್ತ್ರ-ಪಟ್ಟವಸ್ತ್ರ. ಆ ಭಾಷಿಕರಿಗೆ ಮರ್ಯಾದೆ ತರುವ ವಸ್ತ್ರವಿದು. ಅವಧೂತ ದಿಗಂಬರ-ವೃಷಭ, ಅಶ್ವ, ನಾಗ-ಪೂಜಕರಿಗೆ, ಈ ಸಂಸ್ಕೃತಿ ರೂಪವಸ್ತ್ರವು ಭವಬಂಧನವೆನಿಸಿದೆ; ಈ ವಸ್ತ್ರದ ನೇಕಾರನು, ಸಮಾಜ : ಸಮಷ್ಟಿ-ವೈಶ್ವಾನರಾಗ್ನಿ (Public Conscience). ಈ ನೇಗಿಯಲ್ಲಿ ಪ್ರಕಾಶ ತತ್ತ್ವದ ಸೂರ್ಯನು ಹಾಸು (ಉದ್ದ ಎಳೆ) ರಾತ್ರಿ ತತ್ತ್ವದ ಚಂದ್ರನು ಹೊಕ್ಕು (ಅಡ್ಡ ಎಳೆ). ಈ ವಸ್ತ್ರದ ನೇಗೆಹುಸಿಯಾಗಿಸಿರುವ ಮಂತ್ರ ತಂತ್ರವೇ ಈ ವೇದ! ಈ ವೇದದ ಯಾತುತಂತ್ರದ (Black magic) ಸಂಹಿತೆಯಲ್ಲಿ 'ಅಹಃ ಚ ಕೃಷ್ಣಂ, ಅಹಃ ಅರ್ಜುನ ಚ'[೮] ಎಂಬಲ್ಲಿ ತಿರುವು ಘುರುವು ಆಗಿದೆ ಈ ನೇಗಿ! ಭಾಷ್ಯಕಾರ ಸಾಯಣರಿಗೆ ಅಹಸ್ (ಹಗಲು, ಪ್ರಕಾಶ ರೂಪ) ಇದರ ನಿಜವಾದ ಅರ್ಥವು ಗೊತ್ತಿದೆ. ಆದಕಾರಣ, ಈ ಹಗಲನ್ನು ಕೃಷ್ಣ ಕ-ಪ್ಪು ಎಂದಿರುವಲ್ಲಿ ಇರುವ ಅನೌಚಿತ್ಯವು ಅವರ ಗಮನಕ್ಕೆ ಬರದೆ ಹೋಗಿಲ್ಲ. ಆದರೆ ಇಲ್ಲಿ ಕವಿಗೆ ಅಭಿಪ್ರೇತವಿರುವ ಅರ್ಥವನ್ನೇ ಹೇಳುವುದು ಭಾಷ್ಯಕಾರನ ಕರ್ತವ್ಯ ತಾನೆ. ಆದಕಾರಣ 'ಸಮಾನಾಧಿಕರಣತ್ವಾತ್' ಅಹಸ್ಸು (ಹಗಲನ್ನು) 'ಕೃಷ್ಣ' ಈ ಪದ ವಿಶೇಷದಿಂದಾಗಿ, ಇದನ್ನು ರಾತ್ರಿ ಎಂದು ಹೇಳಬೇಕಾಗಿದೆ, ಎಂದಿದ್ದಾರೆ.

ಇಲ್ಲಿ ಮಹತ್ವದ ಪ್ರಶ್ನೆಯೆಂದರೆ ವೇದದ ಈ ಕವಿಗೆ ಪದೌಚಿತ್ಯವೇ ತಿಳಿದಿರಲಿಲ್ಲವೊ? ಆದರೆ, ತಾನು ಅಜ್ಞನು ಎಂದು ಈ ಕವಿಯು ಹೇಳಿದರೆ ಇದು ಸೋಗು ಎಂದೇ ಬಗೆಯಬೇಕಲ್ಲವೆ? ತಾನು ಅಜ್ಞ ಎನ್ನುವ ಈ

---

* ವಿವಸ್ವನ್-ಎಂಬುದು ಒಂದು ಸಾಂಸ್ಕೃತಿಕ ಪ್ರತಿಮಾ ಸಂಕೇತ. ಈ ಸಂಕೇತವು ಪ್ರಾಚೀನ ಸಂಸ್ಕೃತಿಯ ಜೀವನವಿಧಾನವನ್ನು ತಿಳಿಸುತ್ತದೆ. ಇದು 'ಒಳತಿಳಿವಿನ ಬೆಳಕು', ವ್ಯಾಹೃತಿತ್ರಯಗಳಲ್ಲಿ ಒಂದಾದ 'ಸ್ವರ್' ಎಂಬ ಶಬ್ದಪ್ರತಿಮೆಯ ಜತೆ ಸಮಾನವಾಗಿರುತ್ತದೆ. ವೇದದಲ್ಲಿ ಬಂದಿರುವ ಈ ಪದವು 'ಸೂರ್ಯವಾಚಕ' ಅರ್ಥದಲ್ಲಿ ಬಳಕೆಯಾಗಿದೆ. ಶಂಬಾ ಅವರು 'ಸವಿತೃ' ವಾಚಕವಾಗಿ ಈ ಪರಿಭಾಷೆಯು ಬಳಕೆಗೊಂಡಿರುವುದನ್ನು ಗುರುತಿಸುತ್ತಾರೆ. ಪರ್ಷಿಯನ್ನಿನ 'ಝೆಂಡ್‌ಅವೆಸ್ತ'ದಲ್ಲಿ 'ವಿವಹ್ವನ್' ಎಂಬ ಶಬ್ದಪ್ರತಿಮೆ ಇರುವುದನ್ನು ವಿದ್ವಾಂಸರು ಈಗಾಗಲೆ ಗುರುತಿಸಿದ್ದಾರೆ. 'ಸೂರ್ಯಸಂಪ್ರದಾಯ'ದ ಜೀವನ ನೆಲೆಯನ್ನು ಅದು ಕುರಿಯುತ್ತದೆ (ಸಂ)

ಪ್ರಶ್ನೆಯು ಅಪರಾಧೀ ಮನೋಭಾವದ ಒಪ್ಪಿಗೆಯೇ ಆಗುತ್ತದೆ. ರಾತ್ರಿ (ಕೃಷ್ಣ) ತತ್ತ್ವವನ್ನು, ಹಗಲಿನ (ಅರ್ಜುನ) ತತ್ತ್ವವು ಅನುಸರಿಸುತ್ತದೆ ಎಂಬ ತಿರುವುಮುರುವಿನಿಂದ ಸಾಧಿಸಿದ್ದೇನು? ಜೀವನ-ಸಂಸ್ಕೃತಿಯ ವಸ್ತ್ರಪಟವು ಸಿದ್ಧವಾದರೆ ವೇದದ ಅಂತವಾಗಿ ನಿರ್ಮಾಣವಾಗಿರುವ 'ವೇದಾಂತ' ವೆಂಬ ತತ್ತ್ವಜ್ಞಾನ ಹುಟ್ಟಿದೆ. ಈ ವಿರಕ್ತ ನಿರ್‌ವೇದೀ ಶ್ರದ್ಧೆಯ ತಳಪಾಯದಂತೆ ಇರುವ ದಗ್ಧಪಟ ತತ್ತ್ವದಂತೆ ಈ ಸಂಸಾರ ಆಭಾಸಾತ್ಮಕವಾಗಿದೆ. ಈ ಬಾಳು ಹಾಳು ಎಂಬ ಸಿದ್ಧಾಂತದ ಮಂಡನವು, ಅಶಕ್ಯವಾಗುವುದಿಲ್ಲವೆ, ಸಂಸ್ಕೃತಿ ಬರುಡು ಆಗದೆ ಉಳಿದಲ್ಲಿ: 'ನಿಃ ಶಬ್ದಂ ಬ್ರಹ್ಮ' ಇದಕ್ಕೆ ಭಾಷೆ ಸಂಸ್ಕೃತಿ ಎರಡೂ ಬೇಡ.

ಮೂಲ ಋಗ್ವೇದ ತಿದ್ದಿ (tamper) 'ಅಹಃ ಕೃಷ್ಣಂ ಅಹಃ ಅರ್ಜುನಂ' ಮಾಡಿ ತೃಪ್ತಿಯಾಗಲಿಲ್ಲ. ಅಭಾವವೇ ಸ್ಥಾಯಿ ಇರುವ ಸಂಭ್ರಾಮಕ ಪಂಚಮವೇದ ವೆಂಬ ಕೀರ್ತಿಯ ಮಹಾಭಾರತವು ರಚಿಸುವುದೂ ಅವಶ್ಯವೆನಿಸಿತು! ಚಂದ್ರನನ್ನು (ಕೃಷ್ಣ ತತ್ತ್ವವನ್ನು) ಸೂರ್ಯನು (ಪ್ರಕಾಶ ತತ್ತ್ವವು) ಅನುಸರಿಸುತ್ತಿದ್ದಾನೆ ಎಂಬ ನಂಬುಗೆ ಹುಟ್ಟಿಸಿರುವ ಭಗವತ್ (ಸುದರ್ಶನ ಚಕ್ರರೂಪ) ಗೀತೆ ಸೃಷ್ಟಿಸಿ ಇದರ ಮೂಲಕ 'ಭಗ-ವಂತ'ರ ಸಂಪ್ರದಾಯವನ್ನು ಅಮರವಾಗಿಸುವ ಯಾತು ನಿರ್ಮಿಸಲಾಗಿದೆ. ಆಧುನಿಕ Brain washing ಎಂದು ಹೇಳಲಾಗುವ ತಂತ್ರದಲ್ಲಿ ಭಾರತೀಯ ಚಾಂದ್ರ ಸಂಪ್ರದಾಯವು ಎಂದಿನಿಂದಲೇ ಪಳಗಿದೆ! ಜರ್ಮನಿಯ ಸಂಶೋಧಕ ಓಲ್ಡೆನ್‌ಬರ್ಗನು, ಈ arch = dreadful magician Moon god ಈ ವೇದದಲ್ಲಿ ವರುಣನ ರೂಪದಲ್ಲಿ ಅಡಗಿರುವುದನ್ನು ಹೇಳಿ ಶತಮಾನ ಸಮೀಪಿಸಿದೆ! ಋಗ್ವೇದದ ವರುಣನೂ ನಾನೇ (ವರುಣೋ ಯಾಸಾಂ ಅಹಂ) ಆದಿತ್ಯನೂ ನಾನೇ (ಆದಿತ್ಯಾನಾಂ ಅಹಂ) ಎಂಬ ಈ ವಿಷ್ಣು-ಕೃಷ್ಣ ಸಂಪ್ರದಾಯವು magician ಯಾತುಧಾನರ ಸಂಪ್ರದಾಯವೆಂದು ಬೇರೆಯಾಗಿ ಸಿದ್ಧಪಡಿಸುವ ಆವಶ್ಯಕತೆಯುಂಟೆ? ಋಗ್ವೇದದಲ್ಲಿ ಪರ್ಯಾಯದಿಂದ ಈ ಕೃತ್ಯದ ಒಪ್ಪಿಗೆಯೂ ಉಂಟು:

ಇದನ್ನು ಮನಗಾಣಲು, ಕಂಡುದನ್ನು ಆಡಿದರೆ ಕೆಂಡದಂಥ ಸಿಟ್ಟು. ಈ ಜಾನಪದ-ವೇದ, ಗಾದೆಯ ವಾಸ್ತವತೆಯ ಖಾತ್ರಿಯಾಗಲು, ಇಂದಿನ ಋಗ್ವೇದದಲ್ಲಿ ವಸಿಷ್ಠ (ವರುಣ) ಮಂಡಲದ ಕೊನೆಯ ಸೂಕ್ತ ಅವಶ್ಯ ಸಮೀಕ್ಷಿಸಬೇಕು. ವಸಿಷ್ಠನ ಶಾಪವಾಣಿ ಕೆಂಡವನ್ನು ಕಾರುತ್ತಿದೆ. ತನ್ನನ್ನು ಯಾತುಧಾನ (Black magician) ಎನ್ನುತ್ತಾರೆ. ನನ್ನ ಮೇಲೆ ಹೀಗೆ ಅಪರಾಧ ಹೊರಿಸುವವರು ಹಾಳಾಗಲಿ, ಸುಟ್ಟು ಸತ್ತುಹೋಗಲಿ ಎಂದು ಶಪಿಸುತ್ತಿದ್ದಾನೆ ಈ ವಸಿಷ್ಠ! ಈ ವಸಿಷ್ಠನಿಗೆ ಅಥರ್ವನಿಧಿ ಎಂದು ಇರುವ ಬಿರುದು ಸಹ ಸಾಕು. ಇವನು ಮಾಟ, ಮಂತ್ರಗಳಲ್ಲಿ ಪ್ರವೀಣನೆಂಬುದಕ್ಕೆ! ವಸಿಷ್ಠನ ಆ-ಕ್ರೋಶ ನೋಡಿ, ಒಬ್ಬ ಸಂಶೋಧಕನು Lady, you protest too much ಎಂದು ಆಡಿದ್ದಾನೆ.

ಹಿಂದಿನವರ ಗಮನಕ್ಕೆ ಬಂದ ಯಾತು ಕೃತ್ಯ, ಭಾರತೀಯ Public Conscience ರೂಢಿಸಿರುವ ಕೃಷ್ಣ ಕಾರಸ್ಥಾನ ಎಂಬ ಪಡೆನುಡಿ, ನಿಜವಿದ್ದರೆ, ವಿಷ್ಣು-ಕೃಷ್ಣ ಸಂಪ್ರದಾಯದಲ್ಲಿ ನಡೆದುಬಂದ ಆದಿತ್ಯಪರಂಪರೆಯ ಪ್ರೇರಣೆ ಈ ಸಂಪ್ರದಾಯದಲ್ಲಿ ಅರ್ವಾಚೀನ ಕಾಲದಲ್ಲಿಯೂ ಕೆಲವರಲ್ಲಿಯಾದರೂ ಕಾಣಿಸಿಕೊಳ್ಳದೆ ಒಮ್ಮೆಲೇ ಲುಪ್ತವಾಯಿತೆನ್ನಬಹುದೆ? ದ್ವೈತಿ=ಒಳಗೊಂದು ಹೊರಗೊಂದು, 'ನಾರದ' ಈ ಪಡೆನುಡಿಗಳು ಸುಪ್ರಸಿದ್ಧ ಇವೆ. ಶ್ರದ್ಧೆಯು ಒಳಗೊಳ್ಳುವ ವೈಚಾರಿಕ ಆಕೃತಿ ಸನಾತನವಿರುತ್ತದೆ ಎಂಬ ವೈಶ್ವಿಕ ನಿಯಮಾಧಿಷ್ಠಿತ ಸತ್ಯವು ಸುಳ್ಳಾಗಲು ಶಕ್ಯವೆ? ಆದಿತ್ಯವಾರ =Sunday Sabbath ಸಂಪ್ರದಾಯದ ಆಕ್ಸ್‌ಫೋರ್ಡ ಪರಂಪರೆಯ ಸಂಶೋಧಕರು ಈ ಸತ್ಯವನ್ನು ಕಡೆಗಣಿಸಿರುವ ಕಾರಣವೇನು ಮತ್ತೆ? ನಾಗಸಂಪ್ರದಾಯದ ವೇದ, ಆರ್ಯರ ವೇದವೆಂದಿದ್ದಾರೆ! ಆದರೂ ಡಾ. ಜಾರ್ಜ್ ಬುಹ್ಲರನಂಥವನು ತಪ್ಪಿ ಒಮ್ಮೆ ನಿಜವನ್ನು ಆಡಿ, ತಪ್ಪಿದ್ದಾನೆ! ಅಂದಿನ ಮುಂಬೈ ಸರಕಾರದ ಸಲುವಾಗಿ ಆಗಿರುವ ಸ್ಮೃತಿಗ್ರಂಥಗಳ ಸಂಶೋಧನೆಯಲ್ಲಿ ಹೊರಬಂದಿರುವ ಒಂದು ಸತ್ಯಾಂಶ ಇಲ್ಲಿ ನಮೂದಿಸಲರ್ಹವಿದೆ. ಸಂಪಾದಕರು, ತಮ್ಮ ಸಮೀಕ್ಷೆಗೆ ಒಳಗಾದ ಗ್ರಂಥಗಳ ವರ್ಗೀಕರಣದಲ್ಲೆ, ಐದನೆಯ ವಿಭಾಗದ ಗ್ರಂಥಗಳ ಸ್ವರೂಪದ ಬಗೆಗೆ ತಮಗೆ ಕಂಡುಬಂದುದನ್ನು ಮರೆಮಾಜದೆ ಬರೆದಿದ್ದಾರೆ:

> The fifth class of Smrities or that containing the forgeries, is unfortunately of not small extent. The Vaishnavas seem to have been most unscrupulous in using old names for giving weight to their doctrines. They have produced the ಬೃಹದ್ಧಾರೀತ two ವಸಿಷ್ಠ and ಸ್ಮೃತಿs a ಶಾಂಡಿಲ್ಯಸ್ಮೃತಿ and ಲಘು ವಿಷ್ಣು....[೯]

ಚಂದ್ರನ ಬೆಲೆ ಹೆಚ್ಚಿಸಲು ವರುಣ, ಸೋಮ ಸೌರಸಂಕೇತಗಳ ಪ್ರಯೋಜನ ಪಡೆಯಲಾಗಿದೆ! ಲೈಂಗಿಕ ಶಿಪಿವಿಷ್ಟ ರೂಪ ವಿಷ್ಣುವನ್ನು (ಸೂರ್ಯನ ಪರ್ಯಾಯ) ಇಂದ್ರಸ್ಯ ಯುಜ್ಯಃ ಸಖಾ ಎಂದು ಚಿತ್ರಿಸಿದ್ದಾಗಿದೆ! ಈ ತಿರುವು ಮುರುವು tampering ಸ್ವರೂಪದ ಕೃತ್ಯವಾಗುವುದಿಲ್ಲವೊ?

ಜಾನಪದರು ಮತ್ತು Religion ಎಂದರೆ ಮೋಕ್ಷಕಾಮೀ ಸಂಪ್ರದಾಯಗಳ ಕಪಿಮುಷ್ಟಿಯಲ್ಲಿ ಸಿಕ್ಕಿಬಿದ್ದ ಜನತೆ. ಬರ್ಗಸನ್ ಹೇಳಿರುವ ಮಾನವರೊಳಗಿನ ಎರಡು ಪ್ರೇರಣೆಗಳಲ್ಲಿ ಒಂದು Infrarational intuition ಅಂಗಾನಾಂ ರಸದ (ಪ್ರಾಣಚೇತಸದ) ಪಾತಳಿಯ ಇಂದ್ರಿಯ ಪ್ರವೃತ್ತಿಗಳ ಪ್ರೇರಣೆಗೇ ಪ್ರಾಶಸ್ತ್ಯವಿತ್ತಿರುವ Religion. ಇದು ರಾತ್ರ -ಸಮಯಾಚಾರಗಳ ಪ್ರೇರಕ ಚಾಂದ್ರಭೂಮಿಕೆ. ಆದರೆ ಚಾಂದ್ರಭೂಮಿಕೆಯ ಮೋಕ್ಷಕಾಮೀ ಸಂಪ್ರದಾಯಗಳ ಪ್ರಭಾವದಲ್ಲೇ ಉಳಿಯಬರುತ್ತಿರುವ ಜಾನಪದರ -ಶ್ರಿಸಾಮಾನ್ಯರ-ಬಗೆಗೆ ನಮ್ಮ ದೇಶದಲ್ಲಿ ಇಂದಿಗೂ ಗಮನವೀಯಲಾಗಿಲ್ಲ.

ಪಾಶ್ಚಾತ್ಯ ವಿದ್ವಾಂಸರಲ್ಲಿ ಕ್ರೈಸ್ತಪಂಥೀಯ ದುಷ್ಪರಿಣಾಮಗಳನ್ನು ಬಯಲಿಗೆ ತರುವ ಪರಂಪರೆ ನೂರಾರು ವರುಷಗಳಿಂದ ನಡೆದು ಬಂದಿದೆ. ಆದರೆ, ಸಂಪ್ರದಾಯವು ಕೊಳೆತಿದ್ದರೂ ಇದನ್ನು ಉಳಿಸಿಕೊಳ್ಳಬೇಕೆಂಬ ಬುದ್ಧಿವಂತರ ವರ್ಗ ಅಲ್ಲಿಯೂ ಇದೆ. ಇಂಥ ಒಂದು ಉದಾಹರಣೆ ನೋಡಿ. Riddle of the Universe ಬರೆದ ಒಬ್ಬ ದೊಡ್ಡ ವಿಜ್ಞಾನಿ, ತನ್ನ ಗ್ರಂಥವನ್ನು ಗುರುವಿಗೆ ತೋರಿಸಿ ಮೆಚ್ಚಿಕೆ ಆಶೀರ್ವಾದ ಪಡೆಯಲು ಆತನಲ್ಲಿಗೆ ಹೋಗುತ್ತಾನೆ. ಆ ಗುರುಮೂರ್ತಿ ಕೋಪಾವೇಶದಿಂದ, ಶಿಷ್ಯನನ್ನು ಬೈದು ಕಳಿಸಿತು. ಸಂಪ್ರದಾಯದಲ್ಲಿ ಹೀಗಿರುವುದು ನಿಜವಿದ್ದರೂ ಅದನ್ನು ಬಯಲಿಗೆ ಎಳೆಯಬಹುದೆ? ಎಂಬುದು ಗುರುವಿನ ಮತ. ಆದರೆ riddle of the Universe ಪ್ರಕಟವಾಯ್ತು; ಜರ್ಮನ್ ಭಾಷೆಯಿಂದ ಇಂಗ್ಲೀಷಿಗೂ ಬಂದಿದೆ. ನಮ್ಮಲ್ಲಿ ಏನು? Thinkers' Library ಗ್ರಂಥಮಾಲೆಯಲ್ಲಿ ಪ್ರಕಟವೂ ಆಗಿದೆ! ಇಂಗ್ಲೀಷ್ ಆವೃತ್ತಿಗೆ, ಮೂಲ ಗ್ರಂಥಕಾರನಂತೆಯೆ, ವಿಜ್ಞಾನ ಶಾಸ್ತ್ರಜ್ಞನೆಂದು ಹೆಸರಾದ ವಿದ್ವಾಂಸನ ಮುನ್ನುಡಿಯಿದೆ. ಈ ಮುನ್ನುಡಿಕಾರನು, ಲೇಖಕನ ನೈತಿಕಧೈರ್ಯ ಧೀರವೃತ್ತಿಯ ಪರಿಚಯಮಾಡಿಕೊಡಲು ಆತನ ಜೀವದೊಳಗಿನ ಒಂದು ಪ್ರಸಂಗವನ್ನು ಎತ್ತಿ ಹೇಳಿದ್ದಾಗಿದೆ. ಏನೆಲ್ಲ ಜಾನ-ಪದರೂ ಚಾಂದ್ರಭಕ್ತರೇ, ನರ(ಳ)ರೇ ಉಂಟೆಂಬ ಗ್ರಹಿಕೆಯು ಶುದ್ಧ ತಪ್ಪು, ಆರ್. ಆರ್. ಮ್ಯಾರೆಟ್ ಮಾನವಶಾಸ್ತ್ರಜ್ಞನು ಸಂಸ್ಕೃತಿಯ ಪುನರ್ ಮೂಲ್ಯೀಕರಣದ (The Transvaluation of Culture) ಬಗೆಗೆ ಮಾತಾಡುವಾಗ ಒಂದು ಸೂಕ್ಷ್ಮಭೇದ ಮಾಡಿದ್ದಾನೆ. Multitude: (ಸಂತೆಯ ಮಂದಿವಾಳರ) ಮನೋಭಾವ ಮತ್ತು ಜಾನಪದಪ್ರಜ್ಞೆ (Folk wisdom), ಇವೆರಡರಲ್ಲಿ ಅಂತರವನ್ನು ಸೂಚಿಸಿದ್ದಾನೆ.[೧೦] ಜಾನಪದ ಸಂಸ್ಕೃತಿಯ ಮೌಲ್ಯಮಾಪನದಲ್ಲಿ, ಮೋಕ್ಷಕಾಮೀ ಸಂಪ್ರದಾಯದ (Religion) ಪ್ರಭಾವದ ಅಂಶವನ್ನು ಬೇರ್ಪಡಿಸಿ, ಅರಿಯುವ ವಿಮರ್ಶಾ ಪದ್ಧತಿಯು ಅತ್ಯವಶ್ಯವಿದೆ. ಇಲ್ಲವಾದರೆ ಶ್ರೀಸಾಮಾನ್ಯರ ಸಾಂಸ್ಕೃತಿಕ ಮಟ್ಟವು 'ಆಪ : ರಸ: ರೇತ' ಪಾತಳಿಯ ಸತ್ಯಕ್ಕಿಂತ ಒಂದು ಅಂಶವು ಬೇರೆಯಾಗಲಾರದು. ಸ್ಪಷ್ಟವಾದೀ ಸರ್ವಜ್ಞ ಕವಿಯು ನೇರ ವಾಸ್ತವಸತ್ಯ ನುಡಿಯುತ್ತಾನೆ. 'ಬೆಚ್ಚನ್ನ ಮನೆಯಾಗೆ, ಇಚ್ಚೆಯನರಿವ ಸತಿಯಾಗೆ, ವೆಚ್ಚಕ್ಕೆ ಹೊನ್ನಾಗೆ ಸ್ವರ್ಗಕ್ಕೆ ಕಿಚ್ಚು ಇಕ್ಕು' ಎಂಬ ಈ ವಾಕ್‌ಶಕ್ತಿಯ ಈ ಕವಿ ದಾಂಪತ್ಯ ಧರ್ಮ, ಸಮಾಜಧರ್ಮವನ್ನು ಕುರಿತೇ ವಿಚಾರ ವ್ಯಕ್ತಪಡಿಸದೆ, ಲಿಂಗಾಂಗ ಸಾಮರಸ್ಯದ ದಿಕ್ಕಿನಲ್ಲಿಯೂ, ಸಂಪ್ರದಾಯ ಶರಣನಾಗಿ ತನ್ನ ಮತ ವ್ಯಕ್ತಪಡಿಸಿದ್ದಾನೆ! ಇದು ದುಂಡುಸುತ್ತಿ ಮಾತಾಡುವ ಶೂನ್ಯ ಸಂಪಾದನಾ ಸಿದ್ಧಿಯಾಯಿತು.

ಮ್ಯಾರೆಟ್ ಹೇಳಿರುವ ಜಾನಪದರಲ್ಲಿ ಪ್ರಜ್ಞೆ ಜಾಗ್ರತವಾಗಿರುವುದಕ್ಕೆ ಜಾನಪದ ವೇದ ಎಂದು ಬಗೆಯಲಾಗುವ ಗಾದೆಗಳೇ ಪ್ರಮಾಣ. ಆದರೆ, ಜಾನಪದ ಸಾಹಿತ್ಯದಲ್ಲಿ ಕಲ್ಕೀತುರಾಯಿಯಂಥ ಹಾಡು, ಹೋಳಿ ಹುಣ್ಣಿಮೆಯೇ ಬಾಳ ಗುರಿಯಾಗಿ ಅ-ಮರಣ ಕುಮಾರ, ಕುಮಾರೀವ್ರತಿಯಾಗಬೇಕಾಗಿ ಬಂದ ಜೀವನ ರೀತಿಯ ಮೂಲಭೂತ ತತ್ತ್ವಪ್ರಣಾಲಿಯ ಆಧಾರದ ಮೇಲೆ ನಿಂತಿವೆ! ಇದು ಫಾಲ್ಗುಣ (೦) ಮಾಸದ ಹಬ್ಬ; ಪ್ರ-ಲಯ (ಅಮಾವಾಸ್ಯೆಯ) ಮರುದಿನ 'ಯುಗ ಪ್ರತಿಪದೆ, ಈ ಸಾಂಕೇತಿಕತೆ, ಬಾಳು ಹಾಳು ಎಂಬ ಸೂತ್ರಕ್ಕೆ 'ಪುನರಪಿ ಜನನಂ ಪುರನಪಿ ಮರಣಂ' ಎಂಬ ಭೂಮಿಕೆಗೆ ಸುಸಂಗತವಿದೆ. ಕ್ರೈಸ್ತ ಪಂಥದಲ್ಲಿಯೂ ಹೋಳಿ ಹಬ್ಬ ದಂತೆಯೇ ಇದ್ದ Saturnalia (ಶನೀ-ಮಾರೂತೀ ಪರ್ವ) ಈಗ ಕ್ರಿಸ್ತಮಾಸ ವಾಗಿದೆ. ಇದೂ ಕೊನೆಯ ತಿಂಗಳೇ ! ಈ ಕ್ರಿಸ್ತಮಾಸದಲ್ಲಿ ಕ್ರಿಸ್ತಮಾಸದ ವೃಕ್ಷCandle light ಯುಕ್ತ; ಇದಕ್ಕೆ ಇರುವ ಅನನ್ಯ ಸದೃಶಸ್ಥಾನವು ಚಿಂತ್ಯವಿದೆ. ಈ ಫಾಲ್ಗುಣ ಮಾಸಕ್ಕೆ ಕಾರಣ ವೃಕ್ಷ ವಿದು. ಮೂಲ ನಾಗನ ರೂಪದ ಈ ಸಂಕೇತವು ತಿರಸ್ಕೃತವಾಗುತ್ತದೆ; (ಅಶ್ವ-ತ್ಥ) ವೃಕ್ಷ ರೂಪದಲ್ಲಿ ಪೂಜ್ಯವಾಗುತ್ತದೆ! ಈ ಮೋಸವೇತಕ್ಕೆ? ದಾಂಪತ್ಯ ಧರ್ಮವು ಸಮಾಜದ ಅಡಿಗಲ್ಲಾಗಿರುವ ಮನು ಪ್ರಣೀತ ಮಾನವಧರ್ಮವು ಕುಸಿದು ಬೀಳುವ ಗತ್ತುಗಾರಿಕೆಯನ್ನು ಮಾಡಿರುವ ಈ ಮೋಕ್ಷಕಾಮೀ Religion ಪಂಥಗಳ ಪ್ರಭಾವದಿಂದ ಜಾನಪದರನ್ನು ಉದ್ಧರಿಸುವ ಕಾರ್ಯವು ಶ್ರೀಸಾಮಾನ್ಯರ ಬಗೆಗೆ ಇರುವ ಆದ್ಯ ಕರ್ತವ್ಯಗಳಲ್ಲಿ ಒಂದು ಆಗದೆ. 'ನ ಬುದ್ಧಿ ಭೇದಂ ಜನಯೇತ್ ಅಜ್ಞಾನಾಂ ಕರ್ಮ-ಸಂಗಿನಾಂ'; ಶೂದ್ರರು, ಹೆಣ್ಣು ಮಕ್ಕಳು, ಅಜ್ಞಾನಿಗಳು, ಇಂಥವರಿಗೆ ಅವರ ಅಜ್ಞಾನದಿಂದ ಅವರನ್ನು ಹೊರಗೆ ತರಲಾಗದು! ಎಂಬುದು ಈ ಮೋಕ್ಷಕಾಮೀ ಸಂಪ್ರದಾಯದ ಗ್ರಂಥಗಳ ಮೇರುಮಣಿ ಎನಿಸಿರುವ ಭಗವತ್ ಗೀತೆಯ ಬೋಧೆ; ಕಾವ್ಯಸತ್ಯವನ್ನು ವಾಸ್ತವ ಸತ್ಯವೆಂಬ ಹಾಗೆ ಸಂಭ್ರಮ ನಿರ್ಮಿಸುವ ಈ ಪಂಥಗಳ ತಂತ್ರವು ಭಯಾವಹವಾಗಿದೆ; 'ಸಂಶಯಾತ್ಮಾ ವಿನಶ್ಯತಿ' ಎಂಬ ಶಾಪವಾಣಿ ಮತ್ತೆ! ಜಿಜ್ಞಾಸೆ, ಪ್ರಶ್ನೆ, ಸಂಶಯ ತಲೆದೋರದೆ ಹೊಸಶೋಧ ಜ್ಞಾನವೇ-ಅಶಕ್ಯ; ಸುಳ್ಳೊ? ನಂಬಿಕೆಟ್ಟವರಿಲ್ಲ ಎಂದು ನಂಬಿಸಿ ತಿಂಬವರ ಈ ಮಾದರಿಯು ಸಿಂಧು ವೇಷದ ವೃದ್ಧ ಹುಲಿಯ ಪಂಚತಂತ್ರದ ಕತೆಯನ್ನು ನೆನಪಿಗೆ ತಂದು ಕೊಡುತ್ತಿದೆ.

Religion ಮತ್ತು ಧರ್ಮ ಇವೆರಡರಲ್ಲಿ ಇರುವ ಮೂಲಭೂತ ವ್ಯತ್ಯಾಸವನ್ನು, ಎರಡು ಸಮವಾಯದ ಪಾತಳಿಯ ಸತ್ಯ (phenomena) ಮತ್ತು ಮೂರನೆಯ ಸ್ವರ್‌ಪಾತಳಿಯ ಸತ್ಯ-ವಿಶ್ವನಿಯಮಾಧಿಷ್ಠಿತ, ಸಾರ್ವಕಾಲಿಕ ಸತ್ಯ (Reality) ಈ ವಿವರಣೆಯ ಮೂಲಕವಾಗಿ ಈ ಮೊದಲು ಸ್ವಲ್ಪ ವಿವರಿಸಿ ಆಗಿದೆ. ಪ್ರಚಲಿತ ಭಾಷೆಯಲ್ಲಿ ನಿಜ (Phenomena), ಮತ್ತು ಸತ್ಯ (ವಾಸ್ತವ, ನಿಯಮರೂಪ ಅನುಭವ) ಈ ಮಾತುಗಳಿಂದ ರಿಲಿಜಿಯನ್ ಮತ್ತು ಧರ್ಮ ಇವೆರಡರೊಳಗಿನ ಅಂತರವನ್ನು ಗ್ರಹಿಸಿಕೊಳ್ಳಲು ಶಕ್ಯವಿದೆ.

ಸತ್ಯವು ಬಚ್ಚಿ ಉಳಿಯಲಾರದು. ಭಾಷಿಕ ಮಾಧ್ಯಮರೂಪೀ ಶಬ್ದ - ಪ್ರತಿಮಾ ಸಂಕೇತಗಳು, ಸಮವಾಯ ಸ್ವರೂಪಿ ಪಿಂಡ-ಬ್ರಹ್ಮಾಂಡದ ಎಂದರೆ ಭೂಃ→ಭುವಃ ಏಕಾತ್ಮಕ ಭೌತಪಾತಳಿಯಂತೆ, ಈ ಭೌತ-ಕಾಲ-ಪರಿಸರದ ಗಸಣಿ ಇಲ್ಲದಿರುವ (Time Flux) ಆಚೆಯ ಸ್ವರ್‌ಪಾತಳಿಯ ಮೇಲಣ ಅರ್ಥ ವಿಚಾರರೂಪೀ ಪ್ರಕಾಶ ತತ್-ತ್ವದ ಶಲಾಕೆ (beam of meaning or thought) ಇದು ಮಿನುಗು, ಮಿಂಚಿನ 'ಸ್ವ' ಭಾವದ್ದು; ಇದು ಫಕ್ಕನೆ (flash) ಹೊಮ್ಮಿಬರುವ ಕಾರಣದಿಂದಾಗಿ ತರ್ಕಾನುಗಾಮಿ (logical continum) ಅಲ್ಲ!

ವಿವಸ್ವನ್ ಮನು, ಆದಿತ್ಯ=ಸ್ವಯಂ-ಭೂ ಮನು ಇವೆರಡೂ ಭಿನ್ನಭಿನ್ನ ಆಕಾರದ ಸಾಂಸ್ಕೃತಿಕ ಸಮಯದ (Cultural time duration) ಹಿನ್ನೆಲೆಯವು. ಇದನ್ನು ಶಬ್ದಮಾಧ್ಯಮದ ಮೂಲಕ ಸುಮಾರಾಗಿ ಸಮಾನ ಆಕಾರದ್ದಾಗಿಸಿ ಸಮಾನಾರ್ಥದ ಸಂಭ್ರಮ ನಿರ್ಮಿಸಲು ಶಕ್ಯವಾಗಬಲ್ಲದು. ಆದರೆ, ದಿಕ್ಕಾಲ ಪರಿಸರದ ಭೌತ ಆಕೃತಿ ಸಮಾನ - ಸಾಮಾನ್ಯವೇ ಎನಿಸಿದರೂ, ಈ ಶಬ್ದ - ಪ್ರತಿಮಾ ಸಂಕೇತಗಳು, ನಿಜವಾಗಿಯೂ

---

* Candle light ಅಥವಾ ಗರ್ಭಗುಡಿಯ ಜ್ಯೋತಿಯ ಕುಡಿಯಂತೆ ಮಿನುಗಿನ ಸ್ವರೂಪದ್ದಲ್ಲದ ಎಂದು ಅರ್ಥ.

ಭಿನ್ನ-ಸಮಯಾಚಾರದ ಹಿನ್ನೆಲೆಯವು ಇದ್ದಲ್ಲಿ, ದಿಕ್ಕಾಲದ ಗಸಣಿಗೆ ಒಳಗಾಗದ ಸ್ವರ್‌ಪಾತಳಿಯ ಮೇಲಣ ಶುದ್ಧ ಪ್ರಕಾಶರೂಪ ವಿಚಾರ ಶಲಾಕೆಯಿಂದಾಗಿ ಆ ಸಮಾನ ಸ್ವರೂಪವು ನಿಜವೊ ಅಲ್ಲವೊ ಇದು ಒರೆಗೆ ಹತ್ತದೆ ಉಳಿಯಲಾರದು.

ಉದಾಹರಣೆಗಾಗಿ ಮನು>ಮಾನವ ಇಷ್ಟೇ ಮಟ್ಟಿಗೆ ಈ ಸಂಕೇತದ ಹಿನ್ನೆಲೆ ತಿಳಿಯದೆ ಸಂಭ್ರಾಮಕವಾಗುತ್ತದೆ. ಆದರೆ, ಇದು ವಿವಸ್ವನ್ ಪರಂಪರೆಯದೇ ಮೊದಲಲ್ಲಿ, ಮೂಲದಲ್ಲಿ ಎಂಬ ಸಂಗತಿ, ಈ ವಿವಸ್ವಂತನು ಆದಿತ್ಯನಾಗುವಲ್ಲಿ ಈ ತಿದ್ದುಪಾಟ ಹಿಂದುಗಡೆಯದು, ಎಂಬ ಸಂಗತಿ ಇಲ್ಲಿ ತನ್ನತಾನೇ ವ್ಯಕ್ತವಾಗುತ್ತದೆ. ಇವೆರಡರ ಅಭಿವ್ಯಕ್ತಿಯ ಸಮಯ ಬೇಧದಿಂದಲೂ ಅರಿಕೆಗೆ ಬರುತ್ತದೆ. ಆದರೆ, ಮುಂದೆ ಈ ಆದಿತ್ಯ ಸಂಕೇತವೂ ಬಿದ್ದು ಹೋಗಿ ಸ್ವಯಂ-ಭೂ>ಸ್ವಾಯಂಭುವ ಮನುಸ್ಮೃತಿ ಪ್ರಚಾರಕ್ಕೆ ಬರುತ್ತದೆ, ಆದರೆ ಸಂಭ್ರಮ ನಿರ್ಮಿಸುವ ಪದ್ಧತಿ ತಂತ್ರ ಬಚ್ಚಿ ಉಳಿಯಲಾರದು. ಸ್ವಭಾವೋ ದುರತಿಕ್ರಮಃ! ಆದಿತ್ಯ ಮನು, ಸ್ವಯಂಭೂ ಮನು. ಅಪ್ಪು ನಾಮ್ನ: ಪುತ್ರಃ ಮನುಃ ಸಂವರಣಾಖ್ಯ ಮನುಃ[೧೧] ಪ್ರಾಚೇತಸ ಮನುಃ - ಹೀಗೆ ಈ ಮನುಗಳ ಸಂಖ್ಯೆ ಗ್ರೀಕ್ ಟಿಟಾನ್ಸ್ ಅಥವಾ ಭಾರತೀಯ ಭೌಮಾಸುರನಂತೆ ನಾನಾ ರೂಪದಲ್ಲಿ ಮೆರೆಯತೊಡಗುವಾಗ ಇಲ್ಲಿ ಕತ್ತಲೆ ಅರ್ಥ-ವಿಚಾರದ ಸಂದಿಗ್ಧತೆ ನಿರ್ಮಿಸುವಾಗ ಸಂಪ್ರದಾಯದ ಶೈಲಿಯ ವೈಶಿಷ್ಟ್ಯ ಪ್ರಕಾಶಕಿರಣವು ಸೂಚನೆ ಫಕ್ಕನೆ ಬಂದು ಪ್ರಜ್ಞೆಯನ್ನು ಎಚ್ಚರಿಸುತ್ತದೆ. ಜಗತ್ತು ಒಂದೇ ಒಂದು. ಆದರೆ, ಜಗದ್ಗುರು ಪೀಠಗಳ ನಾನಾತ್ವ! ಈ ಪೀಠಗಳ ಸಾಧುತ್ವದ ತಳಪಾಯದಲ್ಲಿ ನಾಗ ಸಂಪ್ರದಾಯವಿದೆ. ನಾಗನ ಸಜ್ಜನಿಕೆಯ ಮೂಲ ಪ್ರೇರಣೆ ಆ ಪೀಠಸ್ಥರನ್ನು ತನ್ನ ಪ್ರಭಾವಕ್ಕೆ ಒಳಗಾಗಿಸಿಕೊಳ್ಳುತ್ತದೆ. ಈ ಪೀಠಗಳ ಪೀಳಿಗೆಯ ಆದಿಪುರುಷ ಕುಮಾರ : (ನಾಗ-ಶಯನ) ಅಥವಾ ನಾಗಭೂಷಣನೇ ಇರುವುದಾಗಿ ಈ ಸಂಪ್ರದಾಯದವರೇ ನಿರ್ಮಿಸಿರುವ ಇತಿಹಾಸದ ಆಕೃತಿಯ ಪುರಾಣಗಳಿಂದ ಹೊರಪಡುತ್ತದೆ!

ಈ ಮನುಪರಂಪರೆಯ ಬಗೆಗೆ, ಕಳೆದ ಶತಕದ ಆಂಗ್ಲ ಪರಂಪರೆಯ ಇಬ್ಬರು ಮೇಧಾವಿಗಳ ವೈಚಾರಿಕ-ಅಭಿವ್ಯಕ್ತಿಯಲ್ಲಿ ಇರುವ ಅಂತರವು ಸತ್ಯಾನ್ವೇಷಣೆಯ ದೃಷ್ಟಿಯಿಂದ ಮೌಲಿಕವಿದೆ. ಇವರಿಬ್ಬರಲ್ಲಿ ಒಬ್ಬನು ಪ್ರೊ. ಬುಹ್ಲರ-ಮನುಸ್ಮೃತಿಯ ಪರಂಪರೆಯ ವ್ಯಾಸಂಗೀ ವಿದ್ವಾಂಸನು; ಬ್ರಿಟಿಶ್ ಆಡಳಿತಗಾರರಿಗಾಗಿ ಸಂಶೋಧನ ಕೈಕೊಂಡವನು. ಇನ್ನೊಬ್ಬನು ಪ್ರೊ. ಬಹ್ಲರನಂತೆ, ಸಂಸ್ಕೃತ ಭಾಷೆಯಲ್ಲಿ ಕೋವಿದ ಅಥವಾ ಈ ಭಾಷಾ ಪರಿಚಯವೂ ಸಾಕಷ್ಟು ಇಲ್ಲದೆ ಇದ್ದರೂ, ಮನು ಮನುಗಳಲ್ಲಿ ಭೂಮ್ಯಾಕಾಶಗಳಷ್ಟು ಅಂತರವು ಇರಲೇಬೇಕೆಂದು ಆತನ ಪ್ರಜ್ಞೆ (conscience) ಆತನಿಗೆ ಹೇಳುತ್ತಿದೆ! ಮೇಧಾವೀ ಪ್ರಾಜ್ಞ, ಜಗತ್ತಿನ ಕಾಯಿದೇ ಶಾಸ್ತ್ರದ ವ್ಯಾಸಂಗೀ ವಿದ್ವಾಂಸನ ಹೆಸರು ಜೋನ್ ಮಾಯ್ನೆ (Mayne)

ಪ್ರೊ. ಬುಹ್ಲರ್* ಹಿಂದೂ ಲಾ ಗ್ರಂಥದ ಸಂಪಾದಕನಿರುವಾಗ (೧೮೬೭) ವಿಷ್ಣು ಸಂಪ್ರದಾಯದವರು -ವೈಷ್ಣವರ್ರು ಖೊಟ್ಟಿ ಸ್ಮೃತಿಗಳನ್ನು ರಚಿಸುವುದರಲ್ಲಿ ಎತ್ತಿದ ಕೈ ಎಂಬ ಕಟುಸತ್ಯವನ್ನು ಎತ್ತಿ ಹೇಳಿದ. ಈತನು ಮನು ಪರಂಪರೆಯ ಆಳವನ್ನು ಅರಿತವನು. ಸುದೈವದಿಂದಲೋ, ದುರ್ದೈವದಿಂದಲೋ, ಆ ಬಳಿಕ, ಈತನು, ಸ್ವಾಯಂಭುವ ಮನುಸ್ಮೃತಿ ಭಾಷಾಂತರದ ಹೊಣೆ ಸ್ವೀಕರಿಸುತ್ತಾನೆ. (೧೮೮೬). ಸುಮಾರು ೧೯ ವರುಷಗಳ ತರುವಾಯ ಕೈಕೊಂಡ ಸಂಶೋಧನವಿದು. ಈ ಅವಧಿಯಲ್ಲಿ ಪ್ರೊ. ಬುಹ್ಲರರ ಸಂಶೋಧಕನ ದೃಷ್ಟಿ ಹೆಚ್ಚು ಹೆಚ್ಚು ಸೂಕ್ಷ್ಮವಾಗುತ್ತ ಬಂದಿರಬೇಕು. ಆದರೆ[೧೨] ಈ ಗ್ರಂಥದ ಮುನ್ನುಡಿಯನ್ನು ಓದುವಾಗ, ಇತ್ತೀಚಿಗಿನ ಕೂಲೀ ಕೆಲಸದ ಸಂಶೋಧನಗಳ ಮಾದರಿ, ಒಂಬತ್ತು ದಶಕಗಳ ಹಿಂದೆಯೇ ಪ್ರಾರಂಭವಾದುದನ್ನು

---

* ಜಾರ್ಜ್ ಬುಹ್ಲರ್ ಮಹಾಶಯನು ಎಲ್‌ಫಿನ್‌ಸ್ಟನ್ ಕಾಲೇಜು, ಬಾಂಬೆ ಇಲ್ಲಿ ಕೆಲವು ಕಾಲ ಪ್ರಾಧ್ಯಾಪಕನಾಗಿದ್ದ. ಈತ ಜರ್ಮನಿಯ ಇಂಡಾಲಿಜಿಸ್ಟರಲ್ಲಿ ಒಬ್ಬ. ೧೮೩೭ ರಿಂದ ೧೮೯೮ರ ವರೆಗೆ ಈತ ಬದುಕಿದ್ದ, ತೌಲನಿಕ ಭಾಷಾಶಾಸ್ತ್ರ, ಸ್ಮೃತಿಶಾಸ್ತ್ರ ಹಾಗೂ ಪುರಾಣಶಾಸ್ತ್ರಗಳ ಬಗೆಗೆ ವಿಶೇಷ ಅಧ್ಯಯನ ಕ್ಷೇತ್ರ ಆಯ್ದುಕೊಂಡು ಕೆಲಸ ಮಾಡಿದ್ದಾನೆ. ಹೆಚ್ಚಾಗಿ ವೈದಿಕಪುರಾಣಗಳ ಬಗೆಗೆ ವಿಶೇಷ ವ್ಯಾಸಂಗ ಮಾಡಿದ ಕೀರ್ತಿ ಈತನಿಗೆ ಸಲ್ಲುತ್ತದೆ. (ಸಂ)

ಪ್ರೊ. ಮ್ಯಾಕ್‌ಡೊನೆಲ್ಲನಲ್ಲಿ ಕಂಡದ್ದನ್ನೆ ಇಲ್ಲಿಯೂ ನೋಡಲು ದೊರೆತೀತು! ಪ್ರೊ. ಬುಹ್ಲರ್ ತನ್ನ ಮುನ್ನುಡಿಯಲ್ಲಿ, ನಾನಾ ಮನುನಾಮಗಳ ಹೆಸರು ಎತ್ತಿ ಹೇಳುತ್ತಾನೆ. ಆದರೆ ಮನು ಹೆಸರು ಅದರ ಹಿಂದಿನ ವಿಶೇಷಣಾತ್ಮಕ ಸಂಕೇತದಿಂದಾಗಿ ಇದು ಬೇರೆಬೇರೆ ಸಂಪ್ರದಾಯ ಸೂಚಕವಾಗುತ್ತದೆ. ವಿವಸ್ವನ್ ಮನು, ಪ್ರಾಚೇತಸ ಮನು, ವೃದ್ಧಮನು, ಸಂವರಣ ಮನು ಮುಂತಾದ ಈ ಮನುಗಳೆಲ್ಲರೂ ಒಂದೇ ಪರಂಪರೆಯವರೇ ಬೇರೆ ಬೇರೆಯೆ? 'ವಿವಸ್ವಾನ್ ಮನು' ಈ ಹೆಸರೇ ಮೊತ್ತ ಮೊದಲಿನದು ಎಂಬ ಬಗೆಗೆ ಬುಹ್ಲರನಿಗೆ ಸಂದೇಹವೇ ಇಲ್ಲ. ಆದರೆ ಆ ಬಳಿಕಿನ ಹೆಸರುಗಳ ಅನುಕ್ರಮವನ್ನು ಸ್ಥೂಲವಾಗಿಯಾದರೂ ಕಂಡುಹಿಡಿಯುವ ಪ್ರಯತ್ನವು ಈತನಿಗೆ ಅವಶ್ಯಕವೆನಿಸಿಲ್ಲ! 'ಮನು'ಗಳ ಸಂಖ್ಯೆ, ಮಹಾಭಾರತದ ನಾರಾಯಣೋಪಾಖ್ಯಾನದಲ್ಲಿ ಮತ್ತು ಭಗವದ್ಗೀತೆಯಲ್ಲಿ ಭಿನ್ನವಿದೆ. ಏಕೆ? ಈ ಪ್ರಶ್ನೆ ಮಹತ್ವದ್ದು ಎಂದು ಈತನಿಗೆ ಎನಿಸಿಲ್ಲ. ಸೃಷ್ಟಿಕರ್ತ ವಿಶ್ವಕರ್ಮನಸೂಕ್ತದಲ್ಲಿ ಸಪ್ತರ್ಷಿಗಳ ಹೆಸರು ಬರುತ್ತದೆ. ಮಹಾಭಾರತದಲ್ಲಿ ಈ ಸೃಷ್ಟಿನಿರ್ಮಾಣ ಕಾರ್ಯರತ ನಾರಾಯಣನು[೧೩] ಸಪ್ತರ್ಷಿಗಳಲ್ಲದೆ ನಾರಾಯಣನು, ಒಬ್ಬ ಮನುವನ್ನು ತನ್ನ ಪ್ರಕೃತಿ ಎಂದಿದ್ದಾನೆ. ಆದರೆ, ಭಗವತ್ ಗೀತೆಯ ಭಗವಂತನು ಋಷಯಃ ಸಪ್ತ ಪೂರ್ತಿ ಅಲ್ಲದೆ, ಚತ್ವಾರೋ ಮಾನವಃ ತನ್ನ ಮಾನಸ-ಪುತ್ರರು (ಮದ್ಭಾವಾಃ ಮಾನಸಾ ಜಾತಾಃ) ಎಂದಿದ್ದಾನೆ. ಸ್ವಯಂಭೂ ಮನುಸ್ಮೃತಿಯಲ್ಲಿ ಈ ಸಂಖ್ಯೆ ಏಳಕ್ಕೆ ಏರುತ್ತದೆ! ಇಂತಹ ಈ ಇನ್ನಾಲಗೆ 'ಪಲವುಂ ನಾಲಗೆಯುಳ್ಳವಂ' ಎಂಬ ಕೀರ್ತಿಯ ಆದಿಶೇಷನ ಪರಂಪರೆಯ ಈ ಕೈವಾಡವು ಸಂಭ್ರಮ=ಕತ್ತಲೆ, ನಿರ್ಮಿಸುವ ಕೃಷ್ಣ-ವಿಷ್ಣು ಪರಂಪರೆಯದೇ ಇರಬೇಕು ಎಂಬ ನಿಷ್ಕರ್ಷವು ಬುಹ್ಲರನಿಂದ ಇಲ್ಲಿ ಅಪೇಕ್ಷಿತವಿತ್ತು. ಆದರೆ ಇಲ್ಲಿ ಮನು-ಮನುಗಳಲ್ಲಿ ವಿಶ್ವಾಸಾರ್ಹ ಮನುಪರಂಪರೆ ಒಂದೂ ಉಳಿದಿಲ್ಲ ಎಂದೂ ಆತನು ಹೇಳಬಹುದಿತ್ತು. ಸುಮಾರಾಗಿ ಈ ಭಾವನೆ ಬರುವಂತೆಯೆ ಬುಹ್ಲರನ ಈ ಮುನ್ನಡಿ ಇದೆ. ಆದರೆ, ತೇಲಿಸಿ ಹೇಳುವ ಗತ್ತುಗಾರಿಕೆ ಈ ಮುನ್ನುಡಿಯುದ್ದಕ್ಕೂ ಕಾಣುತ್ತದೆ. ನೇರವಾಗಿ ಈ ನಿರ್ಣಯ ಹೇಳಿಲ್ಲ. ಇದು ವೈವಸ್ವತ ಮನ್ವಂತರವಿದ್ದೂ, ವಿವಸ್ವಂತನಿಂದ ಪ್ರೇರಿತ, ಮನು ಪ್ರಣೀತ ಮಾನವ ಧರ್ಮದ ಗ್ರಂಥದ ಸ್ಥಳದಲ್ಲಿ ಸ್ವಾಯಂಭುವ ಮನುವಿನ-ವಿಷ್ಣುಕೃಷ್ಣ -ಆದಿತ್ಯ ಪರಂಪರೆಯ ಮಾನವ (?) ಧರ್ಮವನ್ನು laws of Manu ತಾನು ಭಾಷಾಂತರಿಸಬೇಕಾಗಿದೆ! ಎಂಬುದನ್ನು ವಿಶದಪಡಿಸಿಲ್ಲ.

ಬುಹ್ಲರನು ಹೇಳಿರುವ ಭೃಗುವಿನ ಪರಂಪರೆಯ ಕೈವಾಡದ ನಿರ್ದೇಶವು ಮಹತ್ವದ್ದು. ಭಾರತೀಯ ಸಾಂಸ್ಕೃತಿಕ ಸ್ಥಿತ್ಯಂತರದ ಇತಿಹಾಸವನ್ನು ಗ್ರಹಿಸಿಕೊಳ್ಳಲು ಇದು ಪ್ರಯೋಜನಕಾರಿಯಾಗಿದೆ. ಡಾ. ಸುಕಟಣಕರರು ಮಹಾಭಾರತದ ಶ್ಲೋಕಸಂಖ್ಯೆ ವಿಪರೀತ ಬೆಳೆದುದರಲ್ಲಿ ಭೃಗು ಸಂಪ್ರದಾಯದ ಅಂಗವಿದೆ ಎಂಬ ನಿಷ್ಕರ್ಷವನ್ನು ಸಪ್ರಮಾಣವಾಗಿ ಸಿದ್ಧಪಡಿಸಿದ್ದಾರೆ (ಭಂಡಾರಕರ ಸಂಸ್ಥೆಯ ಪತ್ರಿಕೆಯಲ್ಲಿ ಈ ಪ್ರಬಂಧವು ಪ್ರಕಟವಾಗಿದೆ). ತಂದೆ-ತಾಯಿ ಇಬ್ಬರೂ ಅಜ್ಞಾತವಿರುವ ದ್ರೋಣ (ಪಾತ್ರದಲ್ಲಿ ಹುಟ್ಟಿದವನು) ಈತನನ್ನು ಬ್ರಾಹ್ಮಣನೆಂದು ಬಗೆಯಲಾಗಿದೆ! ಭೃಗು, ಭಾರ್ಗವ ಪರಶುರಾಮ, ಈತನಿಗೆ ಬ್ರಾಹ್ಮಣನೆಂದು ಧನುರ್ವಿದ್ಯೆ ಕಲಿಸುತ್ತಾನೆ. ಕರ್ಣ (ಸೂರ್ಯಪುತ್ರ?) ಈತನು, ಆಗಿನ ಸಮಾಯಾಚಾರಗಳ (ಆದಿತ್ಯ ಸಂಪ್ರದಾಯದ) ಶಿಷ್ಟಮಾನ್ಯ ನಡವಳಿಯಲ್ಲಿ ಸಂಭವಿಸಿದ ಕುಮಾರೀ (ಕುಂತೀ) ಮಾತಾಪುತ್ರನು! ಎಂದರೆ ರಾತ್ರಿ ಸೂರ್ಯನ, ಚಂದ್ರನ ಕೃಪೆಯಿಂದ ಆದವನು. ಈ ಕರ್ಣನಿಗೆ ಬ್ರಾಹ್ಮಣನಲ್ಲ ಎಂದು ಈತನು ಭಾರ್ಗವನಿಂದ ಅಭಿಶಪ್ತನಾಗಿ ಮರಳಬೇಕಾಗುತ್ತದೆ!

ಸ್ವಂತ, ಪರಶುರಾಮನೇ ಕುಮಾರಿ (ಆದಿ) ಮಾತೆ ರೇಣುಕೆಯ ಮಗನು! ತಾಯಿಯ ಪಾತಿವ್ರತ್ಯ ಎಂತಹುದು, ಎಂಬುದಕ್ಕೆ ಅವಳಿಗೆ ತಲೆದಂಡ ತೆತ್ತ ಬೇಕಾದುದರ ಮೂಲಕ ಗೊತ್ತಾಗುತ್ತದೆ. ಆದರೆ, ರೇಣುಕೆಯ ಗಂಡ ಜಮದಗ್ನಿ ಇದು ಕಾಲ್ಪನಿಕ ವ್ಯಕ್ತಿ. ಹಾರುವರ ಪರಂಪರೆಯ ಪುರಾಣ ಕಥೆಗಳಲ್ಲಿದೆ! ಆದರೆ ಕಂನಾಡ ಜಾನಪದ ಹಾಡುಗಳಲ್ಲಿ ಇವನು, ಅಜ್ಞಾತ ತಂದೆಯ ಮಗ; ಜಮದಗ್ನಿ ಸಂಕೇತವು ಆರ್ತವ-ಮುಟ್ಟು ಎಂಬರ್ಥದ್ದು. ಇದು ಗೌತಮಾಗ್ನಿ ಉಪನಿಷತ್ತುಗಳಲ್ಲಿ, ನಚಿಕೇತಾಗ್ನಿ ಋಗ್ವೇದದಲ್ಲಿ, ಎಂದರೆ ಪರಶುರಾಮನೂ ಆದಿತ್ಯ ಸಂಪ್ರದಾಯದವನೇ! ಹೀಗಿದ್ದರೂ ಇಲ್ಲಿ ಜಾತಿಯ ಮಾತಿಗೆ ಅವಕಾಶವೆಲ್ಲಿದೆ? ರಾತ್ರಿ ಸಮಯಾಚಾರಗಳಲ್ಲಿ

ಬ್ರಹ್ಮಾನಂದಕ್ಕೆ ತಲುಪಲು, ಸೇತುವಿನ-ಸತಿಯ, ಸತ್ಯವತಿಯ ಪ್ರಯೋಜನ ಪಡೆದ ಸಾಧಕನ ಜಾತಿ; ಆ ಸಂತಾನದ ಜಾತಿಯಾಗುವ ರೂಢಿಯು ತಲೆಯೆತ್ತಿದ್ದ ಸಂದೇಹವುಂಟಾಗುತ್ತದೆ. ಆದರೆ ಐತರೇಯಬ್ರಾಹ್ಮಣ ರಚಿಸಿದ ಐತರೇಯನು ಇತರಾ ಪುತ್ರನೆಂಬಲ್ಲಿ 'ಬ್ರಾಹ್ಮಣ' ಇತರ ಈ ಸಂಕೇತದ ಪ್ರಾಚೀನತೆ ಬೆಳಕಿನಲ್ಲಿ ಬರುತ್ತದೆ ಊರ್ವಶಿ ನಾರ ಅಯನ (ತೊಡೆಯಿಂದ ಹುಟ್ಟಿದ) ಪುತ್ರಿ. ಅಪ್-ಸ್ರವೆ. ಈಕೆಗೆ ವರುಣನಿಂದ (?) ಹುಟ್ಟಿದ ವಸಿಷ್ಠ ದಕ್ಷಿಣ ಕ-ಪರ್ದನು ಯಾವ ಜಾತಿ? ವರುಣ ರಾಜನ್ ಸಮ್ರಾಟ; ಕ್ಷತ್ರಿಯ! ಆದರೆ, ತಾನೇ ಹಾರುವ ವಿಶ್ವಮಿತ್ರನು ಕ್ಷತ್ರಿಯ ಬ್ರಾಹ್ಮಣ, ಶುದ್ಧ ಬ್ರಾಹ್ಮಣನಲ್ಲ ಎಂಬ ವಸಿಷ್ಠನು ಆದಿತ್ಯ ಸಂಪ್ರದಾಯದ ಆದಿಪುರುಷನು! ವಿಶ್ವಮಿತ್ರನೊ ಸವಿತೃ (ಸೂರ್ಯ ವಿವಸ್ವನ್) ಪ್ರಾರ್ಥನಾ ಮಂತ್ರ ದ್ರಷ್ಟಾರನೆಂಬ ಖ್ಯಾತಿ! ವಸಿಷ್ಠ ಮಾಂತ್ರಿಕ, ಚಾಂದ್ರಪಂಥೀಯನು ಜಾತಿದ್ವೇಷ ಹೆಚ್ಚಿಸಿ ಗೆಲ್ಲುತ್ತಾನೆ;* ವಿಶ್ವಮಿತ್ರನು ವಿಶ್ವಾಮಿತ್ರನೆನಿಸಿ ಖಲನಾಯಕನಾಗುತ್ತಾನೆ! ಹರಿಃಚಂದ್ರನ ಸತ್ಯವಂತಿಕೆಯ ಕೀರ್ತಿ ದುಂದುಭಿ ಈಗಲೂ ಕಿವಿಗಡಚಿಕ್ಕಿಸುತ್ತಿದೆ!

ಮಹಾಭಾರತದ ವಿಸ್ತಾರಕ್ಕೆ ಕಾರಣವಾದ ಭೃಗು ಪರಂಪರೆಯ ಕೈ (ವಿವಸ್ವಾನ್) ಮನುಪರಂಪರೆಯ ಮಾನವಸ್ಮೃತಿ ಗ್ರಂಥದಲ್ಲಿಯೂ ಉಂಟು! ಡಾ|| ಸುಕಟಣಕರರ ಸಂಶೋಧನವು ಇತ್ತೀಚಿನದು. ಬುಹ್ಲರನಿಗೆ ಇದರ ಲಾಭ ದೊರೆಯಲಿಲ್ಲವಾದರೂ ಸ್ಮೃತಿಗ್ರಂಥಗಳ forgery ಬೆಳಕಿಗೆ ತಂದ ಶ್ರೇಯ ಬುಹ್ಲರನಿಗಿದೆ. ಆದರೆ ಸ್ವಾಯಂಭುವ ಮನುಸ್ಮೃತಿಯ ಭಾಷಾಂತರಕ್ಕೆ ಬರೆದಿರುವ ಈತನ ಮುನ್ನುಡಿ ತುಂಬ ಸಡಿಲು! ಅಸಮರ್ಪಕ ಅಸಮಾಧಾನಕಾರಕವಿದೆ. ತಾನು ಸ್ವಾಯಂಭುವ ಮನುವನ್ನು ಭಾಷಾಂತರಿಸುತ್ತಿದ್ದಾನೆ. ಇದರೊಳಗಿನ ಜಾತಿಭೇದ ವರ್ಧನದ ಬೀಜಗಳನ್ನು ಕಂಡು ಇವನಿಗೆ ಜುಗುಪ್ಸೆ ಉಂಟಾಗಿರಲು ಸಾಕು. ಆದರೆ, ಮೂಲ ವಿವಸ್ವಾನ್ ಪರಂಪರೆಯ ಮೂಲ ಮನುಸಂಪ್ರದಾಯವೂ ಹೀಗೆಯೇ ಇರಬಹುದು? ಎಂಬ ಸಂದೇಹವು ಸತ್ಯ ಸಂಶೋಧಕನ ದೃಷ್ಟಿಯಿಂದ ಅವಶ್ಯವಿತ್ತು.

ಮೂಲ ಮನುವಿನ ಬಗೆಗಿನ ಆತ್ಯಂತಿಕ ಆದರ, ವಿಶ್ವಾಸ, ಶ್ರದ್ಧೆಯು, ಪ್ರಾಚೀನ ಗ್ರಂಥಗಳಲ್ಲಿಯೇ ವ್ಯಕ್ತವಾದುದನ್ನು ಬುಹ್ಲರನು ಎತ್ತಿ ಹೇಳುತ್ತಾನೆ:

> Versions of the famous Vedic passage which declares that "All Manu said is medicine" [೧೪]

ಸ್ಮೃತಿ ಸ್ಮೃತಿಗಳಲ್ಲಿ ಭಿನ್ನಾಭಿಪ್ರಾಯ ಕಾಣುವಾಗ, ಮನುಮಾನವ ಪರಂಪರೆಯೇ ಹೆಚ್ಚು ವಿಶ್ವಾಸಾರ್ಹ ಎಂದು ಎಲ್ಲ ಪ್ರಾಚೀನರೂ ತಲೆಬಾಗುವುದನ್ನು ಕಾಣುತ್ತಿರುವ ಬುಹ್ಲರ್ ಮನು ಈ ನಾಮ (form) ರೂಪದ (Content) ಮೂಲ ಶಬ್ದಪ್ರತಿಮೆಯ ಬಗೆಗೆ ಅವಜ್ಞೆ, ತಿರಸ್ಕಾರದಿಂದ ಬರೆಯುತ್ತಾನೆ! ಇನ್ನು ಇನ್ನೊಬ್ಬ ಆಂಗ್ಲ ವಿದ್ವಾಂಸನ ವಿಚಾರ

> A Manu, who composed a treatise on the sacred law which gained some notoriety was, therefore, sure of divine honours. As soon as the identification of author of the Sutra with the father of mankind was made, it was a matter of course that the

---

* ವಸಿಷ್ಠನು ಋಗ್ವೇದದ ಪ್ರಮುಖ ಮಂತ್ರದ್ರಷ್ಟಾರ, ಈತ ಋಷಿಯೆಂದು ಸಾಂಪ್ರದಾಯಿಕ ನಿಲುಮೆ. ಆದರೆ, ಶಂಬಾ ಈತನನ್ನು 'ಮುನಿ' ಎಂದು ಕರೆಯುತ್ತಾರೆ. ಋಷಿಗೆ 'ಋತ'ದ ನಿಲುಮೆ ಇರುತ್ತದೆ. ಮುನಿಗೆ 'ಋತು' ನಿಲುಮೆ ಇರುತ್ತದೆ. ಈತ ಮೌನೇಯ ಸಂಪ್ರದಾಯಕ್ಕೆ ಸೇರಿದವನು. ಕನ್ನಡದ 'ಮುನಿಸು' ಸಂಸ್ಕೃತದ 'ಮುನಿ' ಹತ್ತಿರಹತ್ತಿರ ಭಾವಸಾಹಚರ್ಯ ಹೊಂದಿದೆ. ಶಂಬಾ ಈತ ಋಷಿಯಲ್ಲ ಎಂದು ಹೇಳುತ್ತಾರೆ. ಇಲ್ಲಿರುವ ವಸಿಷ್ಠ-ವಿಶಿಷ್ಟ ಸಂಕೇತವೆಂದು ಸಾಂಸ್ಕೃತಿಕ ಗ್ರಹಿಕೆಯ ಹಿನ್ನೆಲೆಯಲ್ಲಿ ತಿಳಿಸುತ್ತಾರೆ. (ಸಂ)

> Manusmriti obtained a particularly high position, and was accepted as the paramount authority on the sacred law"

ಶ್ರೀ ಮಾಯ್ನೇ (೧೮೭೮) ಯ ವಿಚಾರಗಳನ್ನು ಬುಹ್ಲರನ ಸಂಶೋಧನದ ನಿಷ್ಕರ್ಷಗಳೊಡನೆಯೆ ತೌಲನಿಕ ದೃಷ್ಟಿಯಿಂದ ಸಮಾಲೋಚಿಸಲು ಅನುಕೂಲವಾಗಲೆಂದು ಅವನ್ನು ಇಲ್ಲಿ ಎತ್ತಿ ಹೇಳುವುದು ಲೇಸೆಂದು ಕಾಣುತ್ತದೆ. ಈಸ್ಟ್ ಇಂಡಿಯಾ ಕಂಪನಿಯ ಸರಕಾರದ ಆಡಳಿತಗಾರರಿಗೆ ಹಿಂದೂ ರಚಿಸುವುದು, ಉಪಲಬ್ಧ ಮನುಮಾನವ ಧರ್ಮಶಾಸ್ತ್ರದೊಳಗೆ ಬರುವ ಧರ್ಮ ಈ ಸಂಕೇತದ ವೈಶಾಲ್ಯವು, ಕ್ರೈಸ್ತಪಂಥೀಯ ಧರ್ಮದ ಮೂಲಕ ರಕ್ತಗತವಾದ ಪಾಶ್ಚಾತ್ಯರ ವಿಶಿಷ್ಟ, ದೃಷ್ಟಿಕೋನಕ್ಕೆ ಹಿಡಿಸದ್ದಾಯ್ತು. ಲೌಕಿಕ ವ್ಯವಹಾರದ (secular) ದೃಷ್ಟಿಕೋನವೇ ಇಲ್ಲದ ಭಾರತೀಯರ ಈ Religion (ಧರ್ಮ) ದ ಅರ್ಥವಾಗದೆ. ಈ ಸಂಕೇತವು ಟೀಕೆಗೆ ಒಳಗಾಯ್ತು! ಚರ್ಚಿಗೆ ಮಠಕ್ಕೆ ಗುತ್ತಿಗೆ ಕೊಟ್ಟ Religion=ಮೋಕ್ಷ ಸಂಪ್ರದಾಯಕ್ಕೆ, ಲೌಕಿಕ ವ್ಯವಹಾರದಲ್ಲಿ ರಾಜಕೀಯ ಆಡಳಿತದಲ್ಲಿಯೂ Religion (ಧರ್ಮ?) ಎಂದರೇನು ? ಪೇಟೆಯಲ್ಲಿ ನಿಯಮಬಂಧನ - ಧರ್ಮವು ಸಲ್ಲದು! ಇದು ಪಾಶ್ಚಾತ್ಯ ಸಂಸ್ಕೃತಿಯ ಕೊಡುಗೆ. ಸೂಕ್ಷ್ಮವಿಚಾರ ಶಕ್ತಿಯೇ ಇಲ್ಲದ ಸನಾತನಿಗಳು, ಎಲ್ಲೆಲ್ಲೂ ಧರ್ಮತಂದು ಅವ್ಯವಹಾರಿಗಳಾಗಿದ್ದರೆ ಇಂಥ ಟೀಕೆ ಮಾಯ್ನೆಗೆ ಹಿಡಿಸಲಿಲ್ಲ!

ಮಾಯ್ನೆಗೆ ಕಂಡ ಮನುಸ್ಮೃತಿಯ ಹಿರಿಮೆ

> The code of Manu has always been treated by Hindu sages and commentators, from the earliest times, as of paramount authority. The personality of Manu, the ancestor of mankind, is of course, mythical. In the Veda itself the pre-eminence of Manu is declared 'whatever Manu says is medicine.' The paramount authority of the Manusmriti is proclaimed by sages...
>
> 'Not only has Manu been revered by Hindu lawyers from very early times but he is referred to as of supreme weight by even Buddhist writers of Java, Sumatra and Burma'.[೧೫]

ಫಿಲಿಪೈನ್ಸದ ಕಡೆಗೂ ಮನುಸ್ಮೃತಿಯ ಪ್ರಭಾವವಿದ್ದಿತಾಗಿಯೂ ಹೇಳಲಾಗುತ್ತದೆ. ಕುಟುಂಬ ಸಂಸ್ಥೆ, ದಾಂಪತ್ಯ-ಧರ್ಮ ಸಮಾಜ ಧರ್ಮದ ಬಗೆಗಿನ ಮಾನವ ಸ್ಮೃತಿಯ ಸಾಂಪ್ರದಾಯಗಳು ಇಂಡೋ-ಯುರೋಪಿಯರ ಸಮಾನ ಆಚಾರ ಸಾಂಪ್ರದಾಯಕ ಸೂಚಕವಾಗಿವೆ. ಗ್ರೀಕ್-ರೋಮನ್ ಸಂಸ್ಕೃತಿಯಲ್ಲಿ ಇದಕ್ಕೆ ಪ್ರಮಾಣಗಳಿವೆ 'ಹಿಂದೂ' ಎಂಬ ಈ ಪದವು ಒಳಗೊಂಡಿರುವ ಸ್ಥಿತಿ ಸ್ಥಾಪಕತ್ವದ ಸ್ವ-ಭಾವವು, ಮಾಯ್ನೆ ಮಹಾಶಯನಿಗೆ ಸೋಜಿಗವನ್ನುಂಟುಮಾಡಿದೆ.

> The assumption that Hindu law was applicable only to those who believed in Hindu Religion in the strictest sense has no basis in fact. Apart from the fact that Hindu religion has, in practice, shown much more accommodation and elasticity than it does in theory. Communities so widely separated in religion as Hindus, Jains and Buddhists have followed substantially the broad features of Hindu law as laid in Smrities.[೧೬]

ಈತನು ದ್ರಾವಿಡ, ಮಲೆಯಾಳಗಳ, ಭಿನ್ನಜಾತಿ, ಜನಗಳ ಪ್ರದೇಶಗಳಲ್ಲಿಯೂ ಇದ್ದು ಈ ಕಾಯಿದೆಯ ಪರಿಣಾಮದ ಬಗೆಗೆ ನಿರೀಕ್ಷಣೆ ಮಾಡಿದ್ದನು.

ಭಾರತೀಯ ಪುರಾತನರು ಯೋಜಿಸಿರುವ ಈ ಧರ್ಮ ಎಂಬುದು ಪಾಶ್ಚಾತ್ಯ ಕ್ರೈಸ್ತ ಅಥವಾ ಹಿಬ್ರೂ ಪಂಥೀಯ, ಮತಕ್ಕೇ ಸೀಮಿತ ಧರ್ಮವು ಇದಲ್ಲ. ಪಾಶ್ಚಾತ್ಯ ಅಥವಾ ಪೌರ್ವಾತ್ಯ ಮೋಕ್ಷಕಾಮೀ ಪಂಥಗಳೆಲ್ಲವೂ ಸಂಸಾರವನ್ನು ಭವ ಬಂಧನ, ಪಾಪದಿಂದಲೇ ತಮಗೆ ಈ ಜನ್ಮ ಬಂದದ್ದು ಎಂದು ಬಗೆವ ಸಂಕುಚಿತ ದೃಷ್ಟಿಯವು.

> monastic condition, being monk or nun! human recognition of superhuman controlling power of a personal god, entitled to obedience effect of such recognition on conduct and mental attitude.

ಮೋಕ್ಷಕಾಮೀ ಧರ್ಮದ ಲಕ್ಷಣವಿದು. ವಿವಸ್ವನ್ ಮನುಪ್ರಣೀತ ಮಾನವ ಧರ್ಮವನ್ನು ಭಾರತೀಯ ಆದಿತ್ಯ ಸಂಪ್ರದಾಯವು ರಿಲಿಜಿಯನ್ ಹಂತಕ್ಕೇ ತಂದು ನಿಲ್ಲಿಸಿದೆ.

ಆದರೆ, ವಿವಸ್ವಾನ್ ಪರಂಪರೆಯ ಮೂಲ ಮನುಪ್ರಣೀತ ಮಾನವಧರ್ಮವು ಇಡೀ ಮಾನವ ಜೀವನದಷ್ಟು ವಿಶಾಲವಿದೆ. ಇದು Supernaturalism ಅಲ್ಲ; Superhuman ಸ್ವರೂಪದ God ಅಥವಾ ಆ Godನ ಪ್ರತಿನಿಧಿ ಗುರು ಇಂಥ ಗ್ರಹಿಕೆಗೆ ಈ ಮೂಲ ಮಾನವ ಧರ್ಮದಲ್ಲಿ ತಿಲ ಮಾತ್ರವೂ ಅವಕಾಶವಿಲ್ಲ. ಈ ಧರ್ಮ ಎಂಬುದು ಋತಸ್ವರೂಪೀ ಸಾರ್ವಕಾಲಿಕ ವೈಶ್ವಿಕ ನಿಯಮಗಳ ಆಧಾರದ ವಾಸ್ತವಸತ್ಯ (Reality) ಮೇಲೆ ನಿಂತಿದೆ! ಧರ್ಮಸಂಕೇತದ ಈ ಸಮ್ಯಕ್ ಸ್ವರೂಪವನ್ನು ಗ್ರಹಿಸಿಕೊಂಡ ಮಾಯ್ನೆಯ 'wisdom' ಅವನಿಂದ ಮಾತಾಡಿಸಿದೆ.

> Hindu Law, as administered today, is only a part of the Vyavahar Law of Smrities, and the latter, in its turn, is only a fraction of rules contained in the Smrities, dealing with a wide variety of subjects which have little or no connection with Hindu Law as we understand it. According to Hindu conception, Law in modern sense was only a branch of Dharma which has the widest signification. Dharma includes religious, moral, social and legal duties and can only be defined by its content. Mitakshar mentions six divisions of Dharma of which smrities treated as the duties of orders or ಆಶ್ರಮ, as the duties of orders of particular castes the special duties of kings and others, the secondary duties which are enjoined for transgression of prescribed duties and common duties of all men"[೧೭]

ಹಿಂದೂ ಲಾ ಸದೋಷ ಹಾಗೂ ಅಸಮರ್ಪಕವಿದ್ದುದನ್ನು ಸೂಚಿಸಿಯೂ, ಇಂಥ ಅವಸ್ಥೆಯಲ್ಲಿ ಇದರಲ್ಲಿ ಇರುವ (ಮಾನವೀಯ ಭೂಮಿಕೆಯ) ಸ್ಥಿತಿಸ್ಥಾಪಕ (elastic) ಗುಣವು ಈ ಮೇಧಾವಿಯ ಚಿತ್ತವನ್ನು ಸೆಳೆದಿದೆ. ಈ ಕಾರಣದಿಂದಾಗಿ ಈ ಹಿಂದೂ ಲಾಕ್ಕೆ ಆಧಾರಭೂತ ಆ ಮೂಲ ವಿವಸ್ವನ್ ಮನು : ಮಾನವ ಸಂಪ್ರದಾಯವನ್ನು ಯಾರಾದರೂ ಸಂಶೋಧನ ಮಾಡಿ ಬೆಳಕಿಗೆ ತರುವ ತೀವ್ರ ಆವಶ್ಯಕತೆ ಮಾಯ್ನೆಗೆ ಎನಿಸಿ ಸುಮಾರು ೧೦೦

ವರುಷಗಳು ಹತ್ತಿರ ಬಂದಿವೆ: ಮೂರು ವರುಷ ಮಾತ್ರ ಕಡಿಮೆ. ಮಾಯ್ನೆಯು ಬರೆದಿರುವ Hindu Law and Usage' ಈ ಗ್ರಂಥದಲ್ಲಿ The nature and origin of Hindu law ಈ ಬಗೆಯ ಮೂಲಗಾಮೀ ವಿಚಾರಕ್ಕೆ ಕೈ ಹಾಕಿ ಅತ್ಯಂತ ಸಹ-ಅನುಭೂತಿಯಿಂದ (empathy) ವಿಸ್ತೃತ ವಿವೇಚನ ಮಾಡಿದ್ದಾನೆ. ಇದು ಅನೇಕ ಆಂಗ್ಲರಿಗೆ ಹಿಡಿಸಿಲ್ಲ! ಕೋರ್ಟಿನಲ್ಲಿ ವಕೀಲೀ ಧಂದೆಗೆ ಪ್ರಯೋಜನಕಾರಿ ಆಗುವಂತೆ ದುಡ್ಡುಗಳಿಸುವ ಗ್ರಂಥ ಬರೆಯದೆ, ಭಾರತೀಯ ಸಂಸ್ಕೃತಿಯ ಇತಿಹಾಸದ ಪ್ರಶ್ನೆಯಲ್ಲಿ ಸೇರಿದ್ದು ಪ್ರಶಸ್ತವೆ? ಎಂಬ ಟೀಕೆ ಆದದ್ದು ಮಾಯ್ನೆಯ ಪ್ರಸ್ತಾವನೆಯಿಂದ ಗೊತ್ತಾಗುತ್ತದೆ. ತಾನು

> To show, not only what the Hindu law is, but how it came to be what it is

ಎಂಬುದನ್ನು ಗಮನಕ್ಕೆ ತಂದುಕೊಡುವ ಪ್ರಯತ್ನ ಪಟ್ಟಿರುವುದಾಗಿ ಹೇಳಿದ್ದಾನೆ. ಆದರೆ ಇದು Waste of time and trouble. ವೇಳೆ ಶ್ರಮದ ಅಪವ್ಯಯವಲ್ಲದ, ವ್ಯಾವಹಾರಿಕ ಉಪಯುಕ್ತತೆಯನ್ನು ಹೆಚ್ಚಿಸದೆ ಗ್ರಂಥದ ಗಾತ್ರ ಮಾತ್ರ ದೊಡ್ಡದಾಯ್ತು, ಎಂಬ ಮಾತು ಬಂದಿದೆ!

ಪ್ರಪಂಚದಲ್ಲಿಯೇ ಅತಿಪುರಾತನ ಪರಂಪರೆಯ (oldest pedigree of any known system of Jurisprudence) ಕಾಯಿದೆ ಗ್ರಂಥವಿದು. ಆದರೂ, ಈ ಗ್ರಂಥವು ಸ್ವಯಂಭೂ-ಅಮೃತಂ ಚೈವ ಮೃತ್ಯುಃ ಈ ಉಭಯ ಶಕ್ತಿಯ ಮಾನವ ಧರ್ಮ ಶಾಸ್ತ್ರವಿದು. ಆದಕಾರಣ ಇಂದಿಗೂ ಹಳತಾಗಿ ಹಳಸಿ ಹೋಗುವ (decrepitude) ಲಕ್ಷಣ ಕಾಣುವುದಿಲ್ಲ ಎಂದು ಮಾಯ್ನೆ ಅಂದು ಬರೆದ ಮಾತು, ಇಂದು ಸುಳ್ಳಾಗುವ ಹಂತದಲ್ಲಿ ಕಾಣುತ್ತಿದೆ! ಬ್ರಿಟಿಶರ ಆಡಳಿತದ (ಮಧ್ಯಂತರದ) ಅವಧಿಯಲ್ಲಿ ಮಾಯ್ನೆಗೆ ಉಂಟಾದ ಸಂಭ್ರಮವಿದು. ಬ್ರಿಟಿಶ್ ಅಥವಾ ಫ್ರೆಂಚರ ಜಾಲದಲ್ಲಿ ಸಿಕ್ಕಿಬೀಳುವ ಆತುರವು ನಮ್ಮ ರಾಜರು, ನವಾಬರಲ್ಲಿ ಉಂಟಾಗಿದ್ದುದರ ಲಕ್ಷಣವೇನು? ಏಕಂ-ಸತ್ ಮಾರ್ಗದ ಪರಿಣತಿ ಆತ್ಮ ಹನನ ಅಥವಾ ಹೋಳಿ ಹಬ್ಬವೇ ಆಗಬಲ್ಲುದು, ಎಂಬ ಕಲಿಯುಗ ಬರುವ ಈ ಭವಿಷ್ಯ ಹದಿನೆಂಟನೆಯ ಶತಕದಲ್ಲಿ ಕಾಣಿಸಿಕೊಂಡದ್ದು ಎರಡು ಶತಮಾನಗಳ ತರುವಾಯ ಮರಳಿ ಈಗ, ಆ ಉಲ್ಬಣ ತಲೆ ಎತ್ತಿದೆ. ಇದೇನೇ ಆದರೂ ಮಾಯ್ನೆಯಲ್ಲಿ; ಆ ಮೂಲ ಮನು-ಮಾನವ ಧರ್ಮ ಪರಂಪರೆಯ ಸ್ಥೂಲ ಹೊಳಹಾದರೂ ಬೆಳಕಿನಲ್ಲಿ ಬರಲೇಬೇಕೆಂದು ಉಂಟಾದ ಅತ್ಯಂತ ತೀವ್ರ ಜಿಜ್ಞಾಸೆಯು, ಮಾನವ : ಜೀವನ ಸಂಸ್ಕೃತಿಯ ಪುನರುತ್ಥಾನದ ದೃಷ್ಟಿಯಿಂದ ಪ್ರಶಂಸನೀಯವಿದೆ. ಕೌತುಕಾಸ್ಪದವೂ ಇದೆ! ತನಗೆ ಕೋಲ್‌ಬ್ರೂಕ್‌ನಂತೆ ಸಂಸ್ಕೃತ ಪಾಂಡಿತ್ಯವಿದ್ದರೆ! ಎಂದು ಇವನ ಹೃದಯ ಮಿಡುಕಿದೆ. ಈ ಮನು: ಮಾನವನ ಹೆಸರಿಗೆ ಕಾಶ್ಮೀರದಿಂದ ರಾಮೇಶ್ವರದವರೆಗೆ ಇರುವ-ಇದ್ದ-ಗೌರವ ಆದರವನ್ನು ಕಂಡು ಈತನಿಗೆ ಸೋಜಿಗವಾಗಿದೆ. ಈ ಪ್ರಭಾವದ (influence) ಕಾರಣವು ಏನಿರಬಲ್ಲದು? ಎಂಬ ತೀವ್ರ ಕುತೂಹಲ ಮಾಯ್ನಗೆ:

> At this day it governs races of men extending from Cashmir to Cape Comorine who agree in nothing else except their submission to it. No time or trouble can be wasted which is spent in investigating the origin and development of such a system and causes of its influence, I cannot but indulge a hope that the very parts of this work which seem of least value to a practising lawyer, may be read with interest by some who never intend to enter a court"[೧೮]

ಕೊನೆಯ ವಾಕ್ಯದಲ್ಲಿ ವ್ಯಕ್ತವಾಗಿರುವ ಮಾಯ್ನೆಯ ಭವಿಷ್ಯದ ಭಾಗವು ಅಕ್ಷರಶಃ ಖರೆ ಆಗಿದೆ. ಕುತೂಹಲ ಕೆರಳಿ ಈ ಗ್ರಂಥದ ಬಹುಭಾಗ ಪರಿಶೀಲಿಸಿದ ನಾನು, ಕೋರ್ಟಿನ ದಂಧೆಯಿಂದ ದೂರವಿದ್ದೇನೆ. ಈ ಗ್ರಂಥವು

ವಕೀಲೀ ವೃತ್ತಿಗೆ ಪೋಷಕ ಪ್ರೇರಕವಲ್ಲವಾದರೂ ಭಾರತೀಯ ಸಂಸ್ಕೃತಿಯ ಕೆಲವೊಂದು ಸಮಸ್ಯಾ ಪರಿಹಾರದ ಬಗೆಗೆ ನಿರ್ಣಯಕ್ಕೆ ಬರಲು ಈ ಗ್ರಂಥವು ಪ್ರಯೋಜನಕಾರಿಯಾದೀತು ಎಂಬ ಮಾಯ್ನೆಯ ನಿರೀಕ್ಷೆಯು ಸಮರ್ಪಕವಿದೆ.

ವಿವಸ್ವನ್ ಮಾನವ ಧರ್ಮದ ಮೇಲ್ಮೆ ಎಲ್ಲಿದೆ? ಮಾನವ ಸಂಸ್ಕೃತಿಗೆ ಸಮಗ್ರಸತ್ಯವನ್ನು ಗ್ರಹಿಸಿಕೊಳ್ಳುವ ಅನನ್ಯಸಾಧಾರಣ ವ್ಯಾಹೃತಿ ತ್ರಯದ ತಂತ್ರದ ಕೊಡುಗೆಯ ಶ್ರೇಯವು ವಿವಸ್ವನ್ ಪ್ರೇರಿತ ಮನುಪ್ರಣೀತ ಮಾನವಧರ್ಮ ಸಂಪ್ರದಾಯಕ್ಕೆ ಸಲ್ಲಬೇಕು. ಸಮವಾಯ ರೂಪ ಭೂಃ→ ಭುವಃ ಇದರ ಅವಕಾಶದಲ್ಲಿ ಪ್ರತೀತಿಗೆ ಬರುವ ಬಂಧುರ (Correspondence of Truth) ಸ್ವರೂಪದ ಸತ್ಯ=ಏಕಂ ಸತ್ ಇದು ಆಪ-ರಸ ಸತ್ವ Essence ದ್ರವಸ್ವರೂಪದ್ದೇ ಇದ್ದೀತು. ಇದರ ಆಚೆಯ ಸ್ವರ್ ಪಾತಳಿಯ ಮೇಲಣ ತಾತ್ವಿಕ ಪ್ರಕಾಶ ಶಲಾಕಾರೂಪ ಸತ್ಯವು, ವೈಶ್ವಿಕ ಸನಾತನ ನಿಯಮ-ವ್ಯವಸ್ಥೆಯ ನಿಯಮನ ಮಾಡುತ್ತದೆ : ಋಗ್ವೇದದ ಮೂಲ ಪರಿಭಾಷೆಯ ಋತಃ ಸತ್ಯ ಎಂದರೇ ಇದು. ಇದು ಅವೆಸ್ತದ ಅಷ ವಹಿಷ್ಠ ಎಂಬ ಸಾಂಕೇತಿಕ ಪ್ರತಿಮೆಯನ್ನು ಚೆನ್ನಾಗಿ ಹೋಲುತ್ತದೆ. ತುಲನಾತ್ಮಕ ಸಂಕೇತಶಾಸ್ತ್ರದಿಂದ ಇದನ್ನು ಅರಿಯಬಹುದು.

ಸಮೀಕ್ಷೆಯಲ್ಲಿ ದೃಢಪಟ್ಟ ಅಂಶಗಳು

೧) ಹಿಂದೂ ಎಂಬ ಈ ಸಂಕೇತವು ಕ್ರಿ. ಪೂ. ೪೧೭ಕ್ಕೆ ಮುಂಚೆ ಇನ್ನೂ ತಲೆಯೆತ್ತಿರಲಿಲ್ಲ.

೨) ಕ್ರಿ. ಪೂ. ಐದನೆಯ ಶತಕವು ಉಪನಿಷತ್ಕಾಲದ ಕೊನೆಯ ಭಾಗ. ಉಪನಿಷತ್ಕಾಲದಲ್ಲಿ ಆದಿತ್ಯ ವ್ರತಿಗಳ ಅ-ಕಾಲ : ಕಾಲ - ಸ್ತಂಭಕಾಲ ತತ್ವದ ಅನುಸಂಧಾನದಲ್ಲಿ ಆಸಕ್ತ ಭಾರತದ ಸೋಲಿಗೆ, ಇರಾಣಿನ ರಾಜನಿಂದ ಪ್ರಾರಂಭವಾಗುತ್ತದೆ.

೩) ಹಿಂದೂ ಎಂಬ ಪ್ರದೇಶ ಹಾಗೂ ಜನವಾಚಕವಾದ ಈ ಹೆಸರು ಮೊದಲಿನ ದೇಶನಾಮದ ಪೂರ್ವಪರಂಪರಾ ವಿಚ್ಛೇದನಕ್ಕೆ ಕಾರಣವಾಯಿತು. ಬಳಿಕ, ಹಿಂದೂ ಎಂಬ ಈ ಸಂಕೇತವೇ ಭಾರತೀಯ ವಿವಸ್ವಾನ್ ಮನುಪ್ರಣೀತ ಮಾನವಧರ್ಮ-ಪರಂಪರೆಯ ಸ್ಥಿತ್ಯಂತರಗಳನ್ನು ಮರೆಯಿಸಿತು. ಈ ದೇಶದ ಪರಂಪರಾಗತ ಧಾರ್ಮಿಕ- ಸಂಪ್ರದಾಯದ ಸ್ಥಳಕ್ಕೂ ಉತ್ತರಾಧಿಕಾರಿಯಾಗುತ್ತದೆ!

೪) ವೇದೋಪನಿಷತ್ತು ಪುರಾಣಾದಿಗಳಲ್ಲಿ ಧರ್ಮಸೂಚಕ ಹಿಂದೂ ಎಂಬ ಹೆಸರು ಒಂದೆಡೆಯಲ್ಲಿಯೂ ಕಾಣುವುದಿಲ್ಲ!

೫) ಸೋಲುಗಳ ಸಾಹಚರ್ಯದಲ್ಲಿ ಉಳಿಯುತ್ತ ಲೋಕಪ್ರಿಯವಾಗುತ್ತ (?) ಬಂದ ಹಿಂದೂದೇಶನಾಮವು, ಬ್ರಿಟಿಶರು ಭಾರತದಿಂದ ತೊಲಗುವುದರೊಡನೆ, ಪಾಕಿಸ್ತಾನವಾದ ಬಳಿಕ ಸ್ಥಾನಭ್ರಷ್ಟವಾಗತೊಡಗುತ್ತದೆ! ಬೆಲೆಗೆಡುತ್ತದೆ!

೬) ಹಿಂದೂ ಎಂಬ ಧರ್ಮನಾಮದ ಅನ್ವೇಷಣೆಯಲ್ಲಿ ಹಿಂದೂ ಕೋಡ್ (ಕಾನೂನಿನ) ಗ್ರಂಥಗಳ ಮೂಲಕ ದೊರೆವ ಬೆಳಕಿನಲ್ಲಿ, ಈ ದೇಶದಲ್ಲಿ ಮನು: ಮಾನವ ಸಂಪ್ರದಾಯ ಈ ಹೆಸರಿನ ಎರಡು ಪರಂಪರೆಗಳು ಇದ್ದುವಾಗಿ ಕಾಣತೊಡಗುತ್ತದೆ.

೭) ಇವೆರಡರಲ್ಲಿ, ವರುಣ, ವಿವಸ್ವಾನ್, ಸೂರ್ಯಾದಿಗಳು ಆದಿತ್ಯರಾಗುವ ಈ ಸ್ಥಿತ್ಯಂತರವು ಹೊಸತು. ಅದಿತಿ : ಆದಿಶಕ್ತಿಯ ಶಾಕ್ತ ಸಂಪ್ರದಾಯ ಪ್ರಚಾರಕ್ಕೆ ಬಂದು ಆದಿತ್ಯ ರೂಪೀ ರಾತ್ರಿ ಸೂರ್ಯನ, ಮೃತಾತ್ ಅಂಡಾತ್ ಜಾತ (ಮರ್ತ್ಯ) ಮಾರ್ತಾಂಡರೇ ಸೂರ್ಯಸ್ಥಾನವನ್ನು (ಸೂರ್ಯನನ್ನು) ಪ್ರತಿನಿಧೀಕರಿಸುತ್ತಾರೆ. ರಾತ್ರೀ ಸಂಪ್ರದಾಯವು, ವಿವಸ್ವಾನ್ ಮಾನವಧರ್ಮವನ್ನು ಹಿಂದಿಕ್ಕುತ್ತದೆ.

೮) ಅದಿತಿ ಎಂಬ ತಾಯಿಯು ಮಕ್ಕಳೆಂಬ ವರುಣ, ವಿವಸ್ವಂತರಿಗಿಂತ ಚಿಕ್ಕವಳು. ಇವಳು ದತ್ತಕ ಮಕ್ಕಳತಾಯಿ ಅರ್ವಾಚೀನಳು ಎಂದು ಓಲ್ಡೆನ್‌ಬರ್ಗ, ಮ್ಯಾಕಡೊನೆಲ್ ಇಬ್ಬರೂ ಹೇಳುತ್ತಾರೆ. ಅಭಾವವನ್ನೇ ಸ್ಥಾಯೀ ಎಂದು ನಂಬುವ ಈ ಚಟ, ಭಾರತೀಯರಲ್ಲಿ ವೇದಕಾಲದಲ್ಲಿಯೇ ಶಾಕ್ತ ಉಪಾಸನೆಯಲ್ಲಿ,

ಅಂಟಿಕೊಂಡಿದೆ : ಅ) ತಾಯಿಗಿಂತ ಹಿರಿಯ ಮಕ್ಕಳು ವರುಣಾದಿಗಳು! ಇಂಥ ತಾಯಿಯ ಅಸ್ತಿತ್ವದಲ್ಲಿ ಶ್ರದ್ಧೆ! ಬ) ಇವಳನ್ನು ಅ-ಜಾ ಇವಳ ಮಗ ಆದಿತ್ಯ (ಅ-ಜ) ಎಂದು ಹೆಸರಿಸಿಯೂ ನಮ್ಮ ಎಚ್ಚರಗೇಡಿತನ ಇಂದಿಗೂ ಉಳಿದುಬಂದಿದೆ! ಲೈಂಗಿಕ ಆಸಕ್ತಿ (Sex obsession) ಇದಕ್ಕೆ ಕಾರಣವಿರುತ್ತದೆ. ಮೋಕ್ಷಕಾಮಿ ಸಂಪ್ರದಾಯಗಳ ಪರಿಭಾಷೆಯೇ ಇದಕ್ಕೆ ಪ್ರಮಾಣ.[೧೯]

ಅದಿತಿಯಂತೆ ಆದಿತ್ಯನೂ ಅ-ಜ ಅಲ್ಲದೆ, ಕತ್ತಲೆ (ಪ್ರಕಾಶದ ಅಭಾವ) ಈ ಆದಿತ್ಯ-ಕೃಷ್ಣ-ರಾತ್ರಿ! (ಈ) ಹಿಂದೂ ಎಂಬ ಧರ್ಮದ ಈ ಹೆಸರಿಗೆ ವೇದಾದಿ ಪರಂಪರೆ, ಸಂಪ್ರದಾಯದಲ್ಲಿ ಒಂದೂ ಆಧಾರವಿಲ್ಲದೆಯೂ, ಅಖಿಲ ಭಾರತೀಯರ ತಲೆಯ ಮೇಲೆ ಹಿಂದುತ್ವ ಕುಳಿತಿದೆ! ಭಾರತೀಯತ್ವದ ಮರೆವು ಆಗಿದೆ! ಪುರುಷ ಸಂಪರ್ಕವಿಲ್ಲದೇ ಆದಿಮಾತೆಗೆ ಪುತ್ರ! ತನ್ನ ಸ್ತ್ರೀಯನ್ನು ತಾನೇ ಹುಟ್ಟಿಸುವ ಪುರುಷನ ಕಥೆ! ಇತ್ಯಾದಿ. ಇಂಥ ಈ ನಂಬುಗೆಗಳು ವಿಚಾರಶಕ್ತಿಯನ್ನು ಬರಡುಗೊಳಿಸಲು ಕಾರಣವಾಗಿವೆ ಚಂದ್ರನನ್ನು (ಕೃಷ್ಣನನ್ನು) ಸೂರ್ಯನು (ಅರ್ಜುನ) ಅನುಸರಿಸುತ್ತಿದ್ದಾನೆ! ಹಗಲು=ರಾತ್ರಿ ಎಂಬ ಬುದ್ಧಿಗೆ, ಭಗ-ವತ್ ಗೀತೆ, ಭಗವಂತ ಇಂಥ ಸಾಂಕೇತಿಕತೆಯ ಮೂಲಾರ್ಥ ತಿಳಿದಿಲ್ಲ! ಗೀತೆಯಲ್ಲಿ ಹುದುಗಿಸಿರುವ ಅಧಿ-ಅಕ್ಷ ಅಶ್ವ-ತ್ಥ ಇವುಗಳ ವಿಶಿಷ್ಟ ಸಮಯಾರ್ಥವು ತಿಳಿಯಲು ಅಶಕ್ಯವಾಗಿದೆ.

೯) ಪುರಾತನ ಕಾಲದ ಪರಿಭಾಷೆಯನ್ನು ಗ್ರಹಿಸಿಕೊಳ್ಳಲು ಹಿಂದೆ ಇಲ್ಲದಿದ್ದ ಅನುಕೂಲವು ಇಂದು ಉಂಟು. ಮಾನವಶಾಸ್ತ್ರದ ಜೀವಶಾಸ್ತ್ರದ ವಿಜ್ಞಾನಿಗಳು Culture Super organic ಎನ್ನುವ ಕಾರಣಗಳ ವಿವರಣೆಯಿಂದ.

೧೦) ಭಾರತೀಯ ವ್ಯಾಹೃತಿತ್ರಯಗಳ ಮೌಲಿಕ ತಂತ್ರದ ಸ್ಪಷ್ಟೀಕರಣವು ದೊರೆಯುತ್ತಿದೆ.

೧೧) ವಿಚಾರಗಳಿಗೆ ಸಾರ್ವಕಾಲಿಕ ಸನಾತನ ಆಕೃತಿ ಇರುತ್ತದೆ; Gestalt ಮಾನಸಶಾಸ್ತ್ರದ ನೆರವು.

೧೨) ಧರ್ಮ ಮತ್ತು Religion ಈ ಸಂಕೇತಗಳು ಒಳಗೊಳ್ಳುವ ಆಕೃತಿಯ ಮೂಲಕ ಧರ್ಮದ ಮೂಲ ರೂಪ ಆಕೃತಿ ಸಂಕುಚಿತವಾದದ್ದು ಸಿದ್ಧವಾಗಿದೆ! ಆದಿತ್ಯ ಸಂಪ್ರದಾಯದಿಂದಾಗಿ ಭಾರತೀಯರ ಧರ್ಮ ಇದರ ಮೂಲರೂಪವು ಬದಲು ಆಗಿ, ಅದು Religion = ಮೋಕ್ಷಕಾಮೀ ಪಂಥವಾಗಿದೆ! ಧರ್ಮ ಎಂಬುದರಲ್ಲಿ Religion = ಚಾಂದ್ರ ಪಂಥವೂ ಒಳಗೊಳ್ಳುತ್ತದೆ. ಇದು Religion ದಂತೆ, ಏಕದೇಶೀಯ ಏಕಂ, ಏವ ಸತ್ (ದ್ರವ, ರಸ) ರೂಪ ಸತ್ಯ (?) ವಲ್ಲ.

೧೩) ಆಕ್ಸಫೋರ್ಡಿನ ಮ್ಯಾಕ್ಸ್‌ಮುಲ್ಲರ್ ಪ್ರತಿಪಾದಿತ ಆರ್ಯತ್ವದ ಭ್ರಮೆಯನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿ, ಭಾರತೀಯ ಸಂಸ್ಕೃತಿಯ ಸ್ಥಿತ್ಯಂತರಗಳ ನಿಜಸ್ವರೂಪವು ಬೆಳಕಿಗೆ ಬರಲು ಆತಂಕಗಳು ತಲೆಯೆತ್ತಿ ನಿಂತಿವೆ. ಋಗ್ವೇದದಲ್ಲಿ ಆಗಿರುವ ತಿದ್ದು ಪಾಟ (tampering) ನಾಗಸಂಪ್ರದಾಯದ ಮೋಡಿಮಾಟದಿಂದಾಗಿ ಕಾಣದೆ, ಸಂಭ್ರಮ ಉಂಟಾಗಿದೆ. ಬುಹ್ಲರನು ಸ್ಮೃತಿ ನಿರ್ಮಾಣದಲ್ಲಿ ಆಗಿರುವ forgery ಬೆಳಕಿನಲ್ಲಿ ತಂದಿದ್ದಾನೆ. ಭೃಗುಗಳ ಕೈವಾಡ (tampering) ಡಾ॥ ಸುಕಟಣಕರರು ಮಹಾಭಾರತದ ಸಂದರ್ಭದಲ್ಲಿ ಸಿದ್ಧಪಡಿಸಿದ್ದಾರೆ.

೧೪) ಇಷ್ಟು ಸ್ಥಿತ್ಯಂತರಗಳು ಆಗಿಯೂ ಮಾಯ್ನೆಯಂಥವನ ಸೂಕ್ಷ್ಮದೃಷ್ಟಿಗೆ ಕಂಡ ಇಂದಿನ ಮನು ಮಾನವಧರ್ಮದ ಹಿಂದೂ ಕೋಡಿನ ತಳದಲ್ಲಿ ವಿವಸ್ವನ್ ಮಾನವಧರ್ಮದ ಮೂಲ ಭವ್ಯತೆಯ ಅಸ್ಪಷ್ಟ ಚಿತ್ರವೂ ಆತನ ಚಿತ್ತವನ್ನು ಸೆರೆಹಿಡಿದಿದೆ!

ಟಿಪ್ಪಣಿಗಳು

೧. *ಋಗ್ವೇದ ಸಂಹಿತೆ* X. ೧೨೯

೨. ಓಲ್ಡೆನ್‌ಬರ್ಗ ಪ್ರಭೃತಿಗಳ ಜರ್ಮನ್, ಫ್ರೆಂಚ್ ಭಾಷೆಯೊಳಗಿನ ಆಕ್ಸಫರ್ಡ್ ಸಂಪ್ರದಾಯದ ಬೆಲೆ ಕಡಿಮೆಯಾಗಿರುವ ವೈದಿಕಸಾಹಿತ್ಯದ ಮೇಲಣ ಸಂಶೋಧನ ಮತ್ತು ವಿಮರ್ಶೆಗಳು ಭಾಷಾಂತರಿತವಾಗಿ ಇಂಗ್ಲಿಷಿಗೆ ಬರಲು ಧನಸಹಾಯವು

ಯಾರಿಂದ ದೊರೆಯಬೇಕು? ಇತ್ತೀಚೆಗೆ ಓಲ್ಡೆನ್‌ಬರ್ಗನ ಕೃತಿಯನ್ನು, ಕರ್ನಾಟಕ ವಿಶ್ವವಿದ್ಯಾಲಯದ ಜರ್ಮನ್ ಭಾಷೆಯ ಪ್ರೊ. ಶ್ರೋತ್ರಿ ಅವರು ಭಾಷಾಂತರಿಸುತ್ತಿದ್ದಾರೆ. ವರುಣ, ಆದಿತ್ಯರ ಕುರಿತು ಇರುವ ಭಾಷಾಂತರದ ಭಾಗವು ಅವರಿಂದ ದೊರೆತುದರಿಂದ ನನಗೆ ಈ ತುಲನೆ ಶಕ್ಯವಾಗಿದೆ!

೩. Viswanatha Narayana Mandalika ***Serpent Worship in Western India***. 1869-70 Royal Asiatic Society pp. 169-200

೪. Macdonell A.A.; ***Vedic Mythology***, p. 153

೫. A. B. Keith; ***Religion and philosophy of Veda and Upanishads*** : 1925. P. 101

೬. R. T. Rundle Clerk; ***'Myth & Man' Myth and Symbol in Ancient Egypt***, :Gover Press N. Y. 1910 p. 57

೭. ***ಋಗ್ವೇದ ಸಂಹಿತೆ*** X. ೭೯, ೮೦

೮. ***ಅದೇ*** VI. ೯-೧

೯. R. West and Prof. Dr. Buhler, Edited ***A Digest of Hindu Law***, 1867 ; p. xxxiv.

೧೦. Myrat R.R.; ***Psychology and Folklore***, 1920

೧೧. ***ಋಗ್ವೇದ ಸಂಹಿತೆ*** ix-16 ಮತ್ತು ix-101

೧೨. ***The Laws of Manu*** Sacred Books of the East Series No. 25

೧೩. ಡಾ. ಭಂಡಾರಕರ ಇವರಿಗೆ, ವೇದದಲ್ಲೆ, ವಿಶ್ವಕರ್ಮನ ಸೂಕ್ತದಲ್ಲಿ ಮುಂದಿನ ಪುರಾಣ ಕಾಲದ ನಾರಾಯಣನ ಹೋಲಿಕೆ ಕಾಣಿಸಿದೆ. ಅಜಸ್ಯ ನಾಭೌ ಅಂಡಂ ನಿಷಿದನ್ ಎಂಬಲ್ಲಿ ಕಂಡಿದೆ

೧೪. Buhler ***The Laws of Manu*** p. Xlv

೧೫. ***Ibid*** p. ೨೫-೬

೧೬. Mayne, ***Hindu Law and Usage*** p. 5

೧೭. ವರ್ಣಧರ್ಮ, ಆಶ್ರಮಧರ್ಮ, ನಿಮಿತ್ತಧರ್ಮ, ಗುಣಧರ್ಮ, ಸಾಧಾರಣಧರ್ಮ Common to all ; p. 7

೧೮. ***Ibid***, p. V

೧೯. ಕ್ರೈಸ್ತ ಪಂಥೀಯ ಸಾಂಕೇತಿಕ ರಹಸ್ಯಕ್ಕಾಗಿ ಮರ್ಸಿಯಾ ಇಲಿಯದೆಯ ***Symbol & Images***, Chicago University ಗ್ರಂಥವನ್ನು ನೋಡಿರಿ

ಮನು ಪ್ರಣೀತ ಮಾನವ ಧರ್ಮದ ಹೊಳಹು

ಜಾದು ಚಮತ್ಕಾರದಲ್ಲಿ ಆಸಕ್ತ ಎಂಬ ಆ ಯುಗದಲ್ಲಿ, ಋತ-ಸತ್ಯದ ಆಧಾರದಮೇಲೆ ನಿಂತಿರುವ ಮಾನವಧರ್ಮವನ್ನು, ಆ ಪುರಾತನರು ಗ್ರಹಿಸಿಕೊಂಡಿರಲು ಶಕ್ಯವೆ? ಆ ಮೂಲ ಮನುಪ್ರಣೀತ ಮಾನವಧರ್ಮದ ವಿಕೃತರೂಪವಾದ ತಿರುವು-ಮುರುವಿನ, ಇಂದಿನ ಹಿಂದೂ ಎಂಬ ಧರ್ಮದ 'ಹಿಂದೂ ಲಾ' ಇದರ ಬುಡದಲ್ಲಿರುವ ಈ ಧರ್ಮದ ಮೂಲ ಆಕೃತಿಯ ಹೊಳಹು. ಇಂಗ್ಲೆಂಡಿನ ಅಂತಾರಾಷ್ಟ್ರೀಯ ಕಾಯಿದೆಶಾಸ್ತ್ರದ ವ್ಯಾಸಂಗಿ ಮಾಯ್ನೆ ಈತನ ಚಿತ್ತವನ್ನು ಸೆಳೆದು ಸುಮಾರು ನೂರು ವರ್ಷಗಳು ಆಗುತ್ತವೆ. ಕ್ರಿ. ಶ. ೧೮೭೮; ಮೂರೇ ವರ್ಷ ಕಡಿಮೆ! ಆತನ ಸುತ್ತಲೂ ಕೇಳಬರುತ್ತಿದ್ದ ಅಭಿಪ್ರಾಯವು ಹಿಂದೂ ಲಾ* ಇದು ಅಂದು ಟೀಕೆಯ ತಿರಸ್ಕಾರದ ಸ್ವರೂಪದ್ದಾಗಿತ್ತು. ಇತ್ತೀಚಿನ ಡಾ|| ಅಂಬೇಡಕರ್‌ರಂಥ ಪ್ರತಿಭಾವಂತ ಕಾಯ್ದೆ ಪಂಡಿತರು ಸಹ ತಾನು ಹಿಂದೂ ಎಂಬ ಧರ್ಮ - ಜಾತಿಗೆ ಸಂಬಂಧಪಟ್ಟವನು ಎಂದು ಬಗೆಯಲು ಹೇಸಿಕೊಂಡರು ಬೌದ್ಧ-ಧರ್ಮ (?) ಸ್ವೀಕರಿಸಿದರು! ಸುತ್ತಲಿನ ಪ್ರಪಂಚದಲ್ಲಿ ಮೋಕ್ಷಕಾಮೀ ಪರಲೋಕವಾದೀ ಧರ್ಮಪಂಥಗಳೇ ಪ್ರಭಾವಶಾಲಿಯಾಗಿದ್ದಾಗ, ಕ್ರೈಸ್ತಪಂಥೀಯರಾಗದೆ ಕ್ರೈಸ್ತನಿಗೂ ಪೂರ್ವದ ಬೌದ್ಧಧರ್ಮದಲ್ಲಿ ಹೋಗಿ ಬೀಳುತ್ತಾರೆ. ಇದೂ ಒಂದು ಭಾಗ್ಯ! ಜೈನಧರ್ಮವು ಇವರನ್ನು ಆಕರ್ಷಿಸಲಿಲ್ಲ! ಡಾ|| ಅಂಬೇಡಕರರಲ್ಲಿ ಐಹಿಕ ಜೀವನದ ಬಗೆಗೆ ಆಸ್ಥೆಯು ಇದ್ದುದೇ ಕಾರಣವಿರಬಹುದು ಅಥವಾ ರ್ಹೈಸ್ ಡೆವಿಡ್ ಪ್ರಭೃತಿಗಳಿಂದ-ಪಾಶ್ಚಾತ್ಯರಿಂದ-ಬೌದ್ಧ ಮತದ ಬಗೆಗೆ ಆಗಿರುವಷ್ಟು ಮತಪ್ರಚಾರವು ಜೈನ ಅಥವಾ ಬೇರೆ ವಿರಕ್ತ ಪಂಥಗಳ ಬಗೆಗೆ ಆಗಿಲ್ಲ; ಇದೂ ಒಂದು ಕಾರಣವಿರಬಹುದು!

ವಿವಸ್ವನ್ ಮನುಪ್ರಣೀತ ಮಾನವಧರ್ಮದ ಸ್ಥೂಲಛಾಯೆಯೂ ಆಕರ್ಷಕವೆನಿಸಿದ ಮಾಯ್ನೆಯ ಸಮಕಾಲೀನ ಡಾ|| ಬುಹ್ಲರನು ಭಾರತೀಯ ಸ್ಮೃತಿ-ಆಚಾರ ಸಂಹಿತಾ ಗ್ರಂಥಗಳ ಸಂಶೋಧಕ ವ್ಯಾಸಂಗಿ! ಇಂಥವನಿಗೆ ಮನು ಮಾನವಧರ್ಮ ಈ ಎರಡೂ ಮಾತುಗಳು ಬಹಳ ಹಗುರ ಆಗಿವೆ. ಇದು ಅತಿಶಯೋಕ್ತಿ ಎನಿಸಿ ಈತನು ಟೀಕಿಸಿದ್ದೂ ಉಂಟು! ಇಂಥ ಕಗ್ಗತ್ತಲೆಯಲ್ಲಿ, ಮಾಯ್ನೆಗೆ ಮೂಲ ವಿವಸ್ವನ್ ಮಾನವಧರ್ಮದ-ಅಸ್ತಿತ್ವದ-ನೆಳಲು, ಎಲ್ಲಿಯೊ ಕಂಡಂತೆ ಎನಿಸುತ್ತದೆ! ಈ (ವಿವಸ್ವನ್) ಮಾನವಧರ್ಮಕ್ಕೆ ಅಖಿಲ ಭಾರತೀಯ ಮಧ್ಯಸ್ಥಾನವು ದೊರೆತದ್ದು ಹೇಗೆ? ಈ ಪ್ರಭಾವದ (influence) ಮೂಲ ಕಾರಣವನ್ನು ಹುಡುಕಿ ತೆಗೆಯಲು ಮಾಡಲಾಗುವ ಕಾಲ-ಪರಿಶ್ರಮವು ಸಾರ್ಥ ಸತ್ಕಾರಕ್ಕೆ ವಿನಿಯೋಗವಾಯಿತೆಂದು ತಾನು ನಂಬಿರುವುದಾಗಿ ಆತನು ಸಾರಿ

---

* ಎಂದರೆ ಇದಕ್ಕೆ ಆಧಾರಭೂತ (ಸ್ವಾಯಂಭುವ) ಮನುಪ್ರಣೀತ ಮಾನವಧರ್ಮದ ಆಚಾರ ಸಂಹಿತೆ.

ಹೇಳಿ, ೧೦೦ ವರುಷ ಆಗುತ್ತದೆ! ಹಾರುವರೆಂಬವರು "ಭರತಖಂಡೇ ವೈವಸ್ವತ ಮನ್ವಂತರೇ" ಇಂದು ತಾವು ಇದ್ದೇವೆ, ಎಂಬ ಸಂಭ್ರಾಮಕ ಮಂತ್ರ, ಯಾಂತ್ರಿಕವಾಗಿ ಇಂದಿಗೂ ಉಸುರುತ್ತಾರೆ! ಗಾಳಿಗೆ ಗಾಳಿ! ಈ ವಿವಸ್ವನ್ ಮಾನವಧರ್ಮವು ಇತ್ತು ಎಂದರೆ ಇದರ ರೂಪ-ಆಕೃತಿ ಲಕ್ಷಣ ಗ್ರಹಿಸಿಕೊಳ್ಳುವ ಆವಶ್ಯಕತೆ ಎನಿಸಿದ ಭಾರತೀಯ ಪ್ರಜ್ಞೆ(consciousness of consciousess, conscience) ಇನ್ನೂ ಎಚ್ಚತ್ತಂತೆ ಕಾಣುವುದಿಲ್ಲ!

ವಿವಸ್ವನ್ ಮಾನವಧರ್ಮ ಪರಂಪರೆಯ ಅಸ್ತಿತ್ವ ಸೂಚಕ ಕೆಲವು ಪ್ರಮಾಣಗಳು

ಮಾಯ್ನೆ ಕಂಡ ಛಾಯೆ ಕಾಲ್ಪನಿಕವಲ್ಲ : ಮನುಪ್ರಣೀತ ಧರ್ಮ ಎಂಬ ಈ ಕೀರ್ತಿದುಂದುಭಿ ಆಸೇತು ಹಿಮಾಚಲದಲ್ಲಿ ವ್ಯಾಪಿಸಿ, ಭಾರತದ ಹೊರಗೂ ಕೇಳಿಸಿತ್ತು ಎಂಬ ಪ್ರಮಾಣಗಳನ್ನು ಸಂಶಯದಿಂದ ಕಾಣುವ ಕಾರಣವಿಲ್ಲ. ಇಂದಿನ ಋಗ್ವೇದ ಸಂಹಿತೆಯಲ್ಲಿಯೂ, ಎಂತೋ ಅಂತೂ ಋತ: ಸತ್ಯವೇ ಈ ಪ್ರಪಂಚದ ತಳಪಾಯದಲ್ಲಿ ಉಂಟು ಎಂಬ ಸೂಕ್ತಕ್ಕೂ ಅಲ್ಪ ಸ್ವಲ್ಪ ಸ್ಥಳ ದೊರೆತಿದೆ.[೧] ಋತ ಸ್ವರೂಪೀ ಸತ್ಯ ಎಂದರೇನು? ಮ್ಯಾಕಡೊನಲ್, ಇವನಿಗೂ ಮುಂಚೆ ಮ್ಯಾಕ್ಸಮುಲ್ಲರ್ ಸಹ ಹೇಳಿರುವ ಅರ್ಥ=ಆಶಯ ನೋಡಿ :

> The cosmic order or law prevailing in nature is recognised under the name of ಋತ,` (Properly the course of things) which is considered to be under the guardianship of the highest good the same word(ಋತ) also designates 'Order' in the moral world as truth and right and in religious world as sacrifice or rite.
> A Short hymn of three stanzas (X-190) forms a sequel to the more general evolution of that just described.."

ಇಂದಿನ ಯಾತುಪ್ರಧಾನ (black magic) ಸಂಹಿತೆಯಲ್ಲಿ ಋತ : ಸತ್ಯದ ಭೂಮಿಕೆಯ ನಿರ್ದೇಶವು, ಎಂತೊ ಅಂತೂ ಉಳಿದಿದೆ, ಎನ್ನಲು ಕಾರಣವಿದೆ. ಈ ಸೂಕ್ತಕ್ಕೆ ಪದಪಾಠವು ಇಲ್ಲ! ಪದ-ಪಾಠವಿಲ್ಲದ ಸೂಕ್ತ, ಸೂಕ್ತದ ಭಾಗ ಋಚೆ ಇವು. ಈ ಸಂಹಿತಾ ಸಂಕಲನಕಾರನ ಕೈವಾಡಸೂಚಕ ಪಾಠಗಳು ಇರುವ ಶಕ್ಯತೆಯಿದೆ. ಈ ವೇದದೊಳಗಿನ ತಿರುವು ಮುರುವೂ ಸಹ ತತ್ಪೂರ್ವದ ವಿವಸ್ವನ್ ಮಾನವ ಪರಂಪರೆಯ ಅಸ್ತಿತ್ವಕ್ಕೆ ಸಾಕ್ಷಿ! ಬುಹ್ಲರನಿಗೆ ಸ್ಮೃತಿಗ್ರಂಥಗಳಲ್ಲಿ ಕೃತಕಗ್ರಂಥ (forgery) ಇದ್ದುದು ಕಂಡಿದೆ. ಇಂದಿನ ಋಕ್‌ಸಂಹಿತೆ-ವೇದವು ೨೮ ಸಾರೆ (ತಿದ್ದಲ್ಪಟ್ಟಿದೆ); ವೈವಸ್ವತ ಮನ್ವಂತರದಲ್ಲಿಯೇ ವೇದಗಳ ವಿಭಾಗೀಕರಣವು ಆಗಿದೆ ಎಂಬ ಸಂಗತಿ ವಿಷ್ಣುಪುರಾಣದಲ್ಲಿಯೇ ದೊರೆಯುತ್ತದೆ![೨] ಇದು ಬುಹ್ಲರನ ನಿಷ್ಕರ್ಷಕ್ಕೆ ಪುಷ್ಟಿದಾಯಕ ಆಧಾರ. ವಸಿಷ್ಠ (ದಕ್ಷಿಣಕಪರ್ದನು) ಈತನು ಸ್ವಾಯಂಭುವನ ಹತ್ತು ಪುತ್ರರತ್ನಗಳಲ್ಲಿ ಒಬ್ಬನು, ಎಂಬುದು ತುಂಬಾ ವಾಚಾಳಿ ಉಲ್ಲೇಖ!

ಋತಸ್ವರೂಪೀ ಸತ್ಯದ ಬಗೆಗಿನ ಮೇಲಣ ಸೂಕ್ತದಲ್ಲಿ ನುಸುಳಿರುವ ಒಂದು ಅಂತರ್-ವಿಸಂಗತಿಯು, ವೇದದ ಬಗೆಗೆ ವಿಚಾರ-ವಿಮರ್ಶೆ ಮಾಡಿರುವ ಪ್ರಾಜ್ಞರಿಂದಲೇ ಬಳಕಿಗೆ ಬಂದಿದೆ! ಸಮ್ರಾಟ್, ರಾಜ ಎಂಬ ಬಿರುದಿನ ವರುಣನ, ಬಗೆಗೆ ಬರೆಯುವಾಗ, ಈ ವರುಣ (ಮಿತ್ರ) ದೈವತವು ಋತಸ್ಯ ಗೋಪ್ತಾರ ಸಂರಕ್ಷಕ ಎಂಬ ವರ್ಣನೆಯಿದೆ. ಇದರ ನೇರವಾದ ಅರ್ಥದ ಮೇರೆಗೆ, ಭಾರತೀಯ ಪುರಾತನರಲ್ಲಿ ಋತಸ್ವರೂಪೀ ಸತ್ಯ ಇದುವೆ ವಿಶ್ವನಿಯಾಮಕ ಅಂತಃಶಕ್ತಿಯುಳ್ಳ ತತ್ತ್ವ ಎಂಬ ಶ್ರದ್ಧೆಯಿತ್ತು, ಎಂದು ಬಗೆಯಬೇಕಾಗುತ್ತದೆ! ಋತ: ಸತ್ಯದ ಸಂರಕ್ಷಕರು ಎಂಬ ಭೂಮಿಕೆಯ ಮಿತ್ರವರುಣಾದಿಗಳೆಲ್ಲ, ವಿಶ್ವನಿಯಮ-ವ್ಯವಸ್ಥೆ (law and order) ಈ ಅರ್ಥದ ಋತಸತ್ಯ ಇದಕ್ಕೆ ಅಧೀನರು! ಎಂದರೆ ಇದರ ಅರ್ಥ. ವೇದದೊಳಗೇ ಬರುವ ಋತ ಪ್ರಜಾತ (ಋತದ ಪಾಲನೆಯ ಮೂಲಕ) ದೇವರುಗಳು ಎಂಬ ಈ ಸೂಚಕ ಉಲ್ಲೇಖವು ಅತ್ಯಂತ ಮೌಲಿಕವಾಗಿದೆ. ಈ ಮಾನವಧರ್ಮದಲ್ಲಿ ಸರ್ವತಂತ್ರ ಸ್ವತಂತ್ರ ಸ್ವೈರ ದೈವತಗಳಿಗೆ ಸ್ಥಾನವೇ ಇಲ್ಲ! ಇದು ಋತ-ಪ್ರಜಾತ ಈ

ಶಬ್ದಪ್ರತಿಮೆಯು ಒಳಗೊಳ್ಳುವ ಅರ್ಥದಲ್ಲಿ ಸಹಜವಾಗಿ ಒಳಗೊಳ್ಳುತ್ತದೆ. ವಿಶ್ವಸ್ಥ ನಿಯಮ-ವ್ಯವಸ್ಥೆ ಎಂಬ ಅರ್ಥದ ಋತದ (ವಿಶ್ವನಿಯಮದ ಹಿನ್ನೆಲೆಯ) ಅಧಿಷ್ಠಾನವಿರುವ ಸತ್ಯ (reality) ಇದು.* ಸ್ವರ್‌ಪಾತಳಿಯ ಪ್ರಕಾಶತತ್ವ. ಆದರೆ, ಜೀವನ ವಿಶ್ವಸ್ಥ ನಿಯಮಗಳು ಅಮೂರ್ತ. ಆದರು, ಜೀವನ ಪಾತಳಿಯ ಮೇಲಣ ಮೂರ್ತ ವಿಶಿಷ್ಟ ಸಂಭವದ ನೆಪದಿಂದ ಅರಿಕೆಗೆ ಬರುವ ಸತ್ಯ: ಇದು. ಈ ಹಿನ್ನೆಲೆಯಲ್ಲಿ ಅಮೂರ್ತವಲ್ಲ; ವಾಸ್ತವವೇ (reality) ಆಗಿದೆ.

ಉದಾಹರಣಾರ್ಥವಾಗಿ ಏಕಕಾಲಕ್ಕೇ ಮೂರ್ತಾಽಮೂರ್ತ (ಸಮವಾಯ ಸ್ವರೂಪ) ಎರಡು ಪಾತಳಿಗಳ ಮೇಲಣ ದೃಶ್ಯ, ಘಟನೆ ಸಂಭವ ಇದು, ಭೌತ ಪಾತಳಿಯ ಮೇಲಣ ನೋಟದ (Phenomena nature) ಸ್ವರೂಪದ್ದೇ ಇರಬಲ್ಲದು. ಇದು ಸಾರ್ವಕಾಲಿಕ ಶಾಶ್ವತ, ಸನಾತನ (Perennial) ಸ್ವರೂಪೀ ನಿಯಮ. ಸನಾತನ ಎಂದರೆ ಆಯಾ ಯುಗದ ಅನುಭವ, ಅಭಿರುಚಿಗೆ ಸರಿಯಾಗಿ ಆ ಸಮಯದ ಆಧಾರದಿಂದ ಹೊಸ ಹೊಸ ರೂಪದ ಪರಿಭಾಷೆಯ ಮೂಲಕ ಆಕಾರ ಪಡೆವ ಆಶಯ. ಈ ಅಮೂರ್ತ ಋತ (ವಿಶ್ವನಿಯಮ ವ್ಯವಸ್ಥೆ) ಆಧಾರಕ್ಕಿರುವ ಸತ್ಯವು, ಈ ಜೀವನ ವಿಶ್ವದೊಳಗಿನ ಏನೊಂದು ಮೂರ್ತ ಸಂಭವಗಳ ನೆಪದಿಂದ ಥಕ್ಕನೆ ಅರಿಕೆಗೆ ಬರುತ್ತದೆ! ಹೀಗೆ ಅರಿಕೆಗೆ ಬರುವ ಸತ್ಯ, ಕಾಲ್ಪನಿಕವಲ್ಲ; ಇದು ವಾಸ್ತವ=ವಸ್ತು-ವಿಷಯದ ನೆಪದಿಂದ ಅರಿಕೆಗೆ ಬರುವ Reality ಆಗಿದೆ. ಈ ಋತ : ಸತ್ಯವು, ಭೌತಪಾತಳಿಯಲ್ಲಿ ಇಂದು ಪ್ರತೀತಿಗೆ ಬಂದಿದೆ, ಎಂಬ ಮಾತಿಗೆ, ಏನೆಲ್ಲ ಭೌತಶಾಸ್ತ್ರಗಳೇ ಪ್ರಮಾಣ; ನೀರು ಮೂರ್ತ ಪಾತಳಿ, H_2O ಅಮೂರ್ತ ತಾತ್ವಿಕಪಾತಳಿ. ಇದರಲ್ಲಿ ನಿಯಮ ಋತ : ಅಮೂರ್ತ; ಸತ್ಯ =ನಿಜ ವಿಶಿಷ್ಟ ಘಟನೆ.

ಆದರೆ, ಇನ್ನೂ ಒಂದು ಚಮತ್ಕಾರ ; ವಿಶಿಷ್ಟ (ಭೌತ) ಇದು ಕತ್ತಲೆಯಿಂದ ನಿತ್ಯ ಆವೃತ! ತನ್ನ ಪಾಡಿಗೆ ತಾನು ಏಕಂ=ಸತ್, ಪದಾರ್ಥ ವಿಜ್ಞಾನಶಾಸ್ತ್ರವು ರಸಾಯನ ವಿಭಾಗವನ್ನು (Chemistry) ಶಾಸ್ತ್ರ (Science) ಎನ್ನಬೇಕೆ? ಎಂದು ಆಕ್ಷೇಪಿಸಿತ್ತು! ಇದು ಏಕಂ-ಸತ್ ಭೂಮಿಕೆಯ ಶಾಸ್ತ್ರ! ಆದರೆ, ಈ ಕತ್ತಲೆ ಸರಿದು (Physical Chemistry) ಎಂಬೀ ಬಗೆಯಲ್ಲಿ, ಇವೆರಡೂ ವಿಶಿಷ್ಟ (ಕತ್ತಲೆ)ಗಳಲ್ಲಿ ಇರುವ ಸೂಕ್ಷ್ಮ ಅಂತಃಸಂಗತಿಸೂಚಕ (ಬೆಳಕಿನ ಕಿರಣ) ಅರ್ಥ : ನಿಯಮವು ಋತ, ಇದರ ಸತ್ಯತೆಗೆ-ವಾಸ್ತವತೆಗೆ, Bio-Chemistry ಮುಂತಾದ ಈ ಸಂಯುಕ್ತಶಾಸ್ತ್ರಗಳು ಬೆಳಕಿಗೆ ಬಂದಿರುವುದೇ ಪ್ರಮಾಣ.

ಭೌತಪಾತಳಿಯಲ್ಲಿ ವಿವಸ್ವನ್ ಪ್ರೇರಿತ ಮನುಗಳಿಗೆ ಕಂಡ ಇಂದಿನ-ಅಂದಿನ ಋತಸ್ವರೂಪೀ ಸತ್ಯವು, ಮಾನವ ಜೀವನ ವಿಶ್ವದ ಅಭೌತ, ಸಾಂಸ್ಕೃತಿಕ ಪಾತಳಿಯ ಮೇಲೆ ಸಹ ಪ್ರತೀತಿಗೆ ಬಂದಿದೆ! ಇದನ್ನು ಮನಗಾಣಿಸಿಕೊಡಲು ಭಾರತೀಯ ಪುರಾತನ ಪಂರಪರೆಯ ಧರ್ಮ ಎಂಬ ಈ ಒಂದು (ಉದಾತ್ತ ಭವ್ಯ ವಿಶಾಲಾರ್ಥದ) ಪಾರಿಭಾಷಿಕ ಪದವೂ ಸಾಕು. ಆದರೆ, ಋತಸ್ವರೂಪೀ ಸತ್ಯದ ಮೂಲ ವಿವಸ್ವಾನ್ ಪ್ರೇರಣೆಯ ಮನುಗಳಿಗೆ ಹೊಳೆದು (flash) ಅರಿಕೆಗೆ ಬಂದ ಮೂಲ ಅರ್ಥದ ವಿವರಣೆಯ ಸೆಳವಿನಲ್ಲಿ, ಈ ಋತ-ಸತ್ಯದ ಅರ್ಥದಲ್ಲಿ ಮಾಡಲಾಗಿರುವ ತಿರುವು-ಮುರುವಿನತ್ತ, (ಕೇಳುಗರ, ಓದುಗರ) ಗಮನ ಸೆಳೆಯುವುದನ್ನು ಕಡೆಗಣಿಸಿ ನಡೆಯಲಾರದು!

ವಿವಸ್ವಾನ್ ಪ್ರೇರಣೆಯ ಮೂಲ ಮನು ಮಾನವಧರ್ಮದ ಅಸ್ತಿತ್ವಕ್ಕೆ ಋತ=ಸತ್ಯದ ಅರ್ಥದ ವಿಕೃತಿಯಿಂದಲೂ ಪರ್ಯಾಯದಿಂದ ಪುಷ್ಟಿಯೇ ದೊರೆಯುತ್ತಿದೆ! ಹಾಗಾದರೆ, ವಿಪರೀತ-ರೀತಿಯಲ್ಲಿ ತಿರುವು-ಮುರುವಾಗಿ ಮಾರ್ಪಾಡಿಸಲಾದ ಋತ: ಸತ್ಯದ ಅರ್ಥ-ಸ್ವರೂಪ ಯಾವುದು? ಋತ: ಸತ್ಯದ ಈ ಬದಲಾದ ಅರ್ಥದಿಂದಾಗಿ,

---

* ಋತ-ಈ ಶಬ್ದ ಪ್ರತಿಮೆಗೆ 'ಚಲನೆ' ಎಂದೂ ಎಲ್ಲವನ್ನು ಒಳಗೊಳ್ಳುವುದೆಂದೂ ಅರ್ಥಧಾರಣೆ ಉಂಟು. ಋತವೆಂದರೆ ನಿಯಮ, ವ್ಯವಸ್ಥೆ ಎಂದೂ ಛಾಯಾರ್ಥವುಂಟು. ಆದರೆ, 'ಋತು' ಎಂಬುದಕ್ಕೆ ಕಾಲಗಳ ಕಲ್ಪನೆಯೆಂದೂ ಸ್ತ್ರೀಯಮುಟ್ಟು ಎಂದೂ ಅರ್ಥ. ಸ್ತ್ರೀಜನ್ಯ ಅಂಗಭಾಗದ ವಿವರಣೆಯಾಗಿ 'ರೇತ' ಎಂಬ ಅರ್ಥವೂ ಉಂಟು (ಸಂ)

ಋತು ಪ್ರಜಾತರು ದೇವರುಗಳು ಎಂಬ ಈ ಶಬ್ದ ಪ್ರತಿಮೆಯಲ್ಲಿ ಪದರು ಉಂಟಾಗಲು ಅವಕಾಶ ದೊರೆತಿದೆ. ವಿಶ್ವದ ತಳಹದಿಯಲ್ಲಿ (ನಿಯಮ : ವ್ಯವಸ್ಥೆ ಇದೆ ಎಂದು ಸೂಚಿಸುವ) ಋತ ಈ ಶಬ್ದ ಪ್ರತಿಮೆಗೆ, ರೇತ, ಆರ್ತವ (menses) ಎಂಬ ಅರ್ಥವನ್ನೂ ರೂಢಿಸಲಾಗಿದೆ! ಹೀಗೆ ಮಾರ್ಪಟ್ಟ ಅರ್ಥವು ಸೂಚಿಸುತ್ತಿರುವುದು, ಭೌತವಿಶ್ವದ ಆಧಾರಕ್ಕಿರುವ ದ್ರವ-ರಸ, Essence, ರೇತ, ಆರ್ತವವನ್ನು; ಇದನ್ನು ಸಂಸ್ಕೃತ ಭಾಷಾ ಪರಂಪರೆಯಲ್ಲಿ ಏಕಂ=ಸತ್ ಎಂದು ಹೇಳುವ ವಾಡಿಕೆಯಿದೆ. ಈ ಸತ್-ತ್ವವು ವಿಶ್ವ ನಿಯಮಾಧಿಷ್ಠಿತ ಋತಸ್ವರೂಪೀ ಸತ್ಯದಿಂದ ತೀರ ಭಿನ್ನ! ಆದರೆ ಅಸ್>ಸತ್ ಎಂಬ ಈ ಅಸ್ತಿತ್ವವು ಭೌತಪಾತಳಿಯ ಈ ಸತ್-ತ್ವ=ಸಾರ-ಅರ್ಕ, ಇದು ಜೀವಿಯ ರಸ=ರೇತ, ಶುಕ್ರ ಸೂಚಕವಿರುವಂತೆ=ಅಭೌತ ಪಾತಳಿಯ ಮಾನವ ಜೀವನ : ಸಂಸ್ಕೃತಿಯ ತಳಪಾಯದ ನಿಯಮ : ವ್ಯವಸ್ಥೆ ಸೂಚಕ ಸಾಂಸ್ಕೃತಿಕ ಸತ್ಯಕ್ಕೂ ಅಸ್ ಅಖ್ಯಾತವೇ ತಳಹದಿಯಲ್ಲಿ ಉಂಟು. ಹೀಗೆ ಈ ಮನುಸಂಪ್ರದಾಯವು ಇಲ್ಲಿ ಜೀವನದ ಇಡೀ ಅರ್ಥಗ್ರಹಿಸಿದ್ದನ್ನು ಮನಗಾಣಬಹುದು. ಇನ್ನು, ಈ ಹಿನ್ನೆಲೆಯಲ್ಲಿ ಋತ-ಪ್ರಜಾತ ಎಂಬ ಶಬ್ದಪ್ರತಿಮೆಯ ಮೂಲಕ ಏಕಕಾಲಕ್ಕೇ ಪರಸ್ಪರ ವಿಸಂಗತವಿರುವ ಎರಡು ಅರ್ಥಗಳು ಧ್ವನಿತವಾಗುವ ಈ ಭಗ-ವಂತ ಸಂಪ್ರದಾಯದ ಯಾತುಕೃತ್ಯವನ್ನು ಗ್ರಹಿಸಿಕೊಳ್ಳಲು ಶಕ್ಯವಾಗಲಿದೆ.

ಋತ-ಪ್ರಜಾತ (ದೇವರು) ಎಂಬ ಪದದೊಳಗಿನ ಋತ ಇದಕ್ಕೆ ವಿಶ್ವನಿಯಮ ರೂಪೀ ಸತ್ಯ, ಎಂಬ ಅರ್ಥವಿದೆ. ಋತದ ವಿಶ್ವ-ನಿಯಮದ ನೆಪದಿಂದ-ಆಧಾರದಿಂದ (ತೃತೀಯಾ ಋತೇನ ಪ್ರಜಾತ) ಕಾಣಿಸಿಕೊಳ್ಳುವ ದೇವರುಗಳು. ಉದಾ : ಧೀ ಪ್ರೇರಕ ವಿಶ್ವನಿಯಮದ ಪ್ರತೀಕ ಪ್ರಕಾಶ ತತ್ತ್ವದ ಸವಿತೃ, ಮಾನವರಿಗೆ ಸಮಾಜ ಸಮ್ಮುಖ ಜೀವನ ಪ್ರೇರಕ ವಿವಸ್ವನ್ ದೈವತ ಹಗಲಿನಲ್ಲಿ, ಲೈಂಗಿಕ ಪ್ರೇರಣೆಯು ತನ್ನ ಪ್ರಭಾವ ತೋರಿಸದಂತೆ ಅದನ್ನು ನಿಯಂತ್ರಿಸುವ ಶಿಶ್ನೇದೇವಾಃ ಸಂಪ್ರದಾಯದ ಶತ್ರು, ಇಂದ್ರನು; ಸಾಮಾಜಿಕ ಕರ್ತವ್ಯ ಪರಾಙ್ಮುಖರಾಗಿ, ಕುಂಡಲನೀ-ಸರ್ಪದ ಯೋಗರತ ಮುನಿವರ್ಗದ ದ್ವೇಷಕ್ಕೆ ಪಾತ್ರನಾಗುತ್ತಾನೆ. ಪುರಾಣಗಳಲ್ಲಿ ಖಲ ನಾಯಕನಾಗಿರುವ ಇಂದ್ರ... ಹೀಗಿರುವುದು, ತಮ್ಮ ಪಾಲಿನ ಸಾಂಸ್ಕೃತಿಕ ಜೀವನ ವಿಶ್ವದ ಸಂರಕ್ಷಣೆ, ಪೋಷಣೆಯ ಕಾರ್ಯದಿಂದಾಗಿ ದಿವ್ಯದೈವತಗಳಾಗಿ ಪೂಜೆಗೊಂಡ ಪ್ರಕಾಶ ತತ್ತ್ವದ ಪ್ರತಿಮೆಗಳ ಮಾದರಿಯಾಯ್ತು. ಋತ ಪ್ರಜಾತ (ದೇವರು) ಎಂಬ ಈ ಶಬ್ದಪ್ರತಿಮೆಯ ಮೂಲಾರ್ಥವೇ ತಿರುವು ಮುರುವು ಆಗುವಾಗ, ಋತ ರೇತ, ಆರ್ತವ-ಇದೇ ಸತ್-ತ್ಯ=ಸತ್ಯ ಆಗುವಾಗ-ಋತ (ರೇತ) ದೊಳಗಿಂದ ಹೊರಗೆ ಬಂದ (ಪಂಚಮೀ ಋತಾತ್ ಪ್ರಜಾತ) ದೈವತಗಳು ಎಂಬ ಅರ್ಥವು ಅನಿವಾರ್ಯವಾಗುತ್ತದೆ! ಋತ=ರೇತ ಆಗುವಾಗ ಇದನ್ನು ಚಂದ್ರಾಃ ಆಪಃ ಬೃಹತೀಃ ಜಜಾನ ಎಂಬಲ್ಲಿ ಇದು ಸ್ತ್ರೀ-ಪುಂ ಮಿಥುನಯೋಗದಲ್ಲಿ ಲಭಿಸುವ ರೇತಸತ್ಯದ ಸಾಕ್ಷಾತ್ಕಾರ ವರ್ಣನೆ ಎಂಬುದು ತನ್ನ ತಾನೇ ಗೊತ್ತಾಗುವಂತಿದೆ! ಚಂದ್ರಾಃ ಆಪಃ ಚಂದ್ರಾ =the moon, ಪಾಶ್ಚಾತ್ಯ ಪರಂಪರೆಯಲ್ಲಿ. ಈ ಚಾಂದ್ರಭೂಮಿಕೆಯ ಸ-ರಸ ಸತ್ಯವನ್ನು Truth ಎಂದಿರುವಲ್ಲಿ ಈ ಸಂಪ್ರದಾಯದ ಇಡೀ ಇತಿಹಾಸವು ಬೆಳಕಿನಲ್ಲಿ ಬರುತ್ತದೆ!

ಪ್ರಸ್ತುತ ಸಮೀಕ್ಷೆಯು, ಮೂಲ ವಿವಸ್ವಾನ್ ಮನುಪರಂಪರೆಯ ಮಾನವ ಧರ್ಮವು ಸ್ವಯಂಭೂ ಪರಂಪರೆಯ ಮನು ಪ್ರಣೀತ ನರ(ಳ) ನಾರ-ಅಯನ ಧರ್ಮವಾಗಿ ಮಾರ್ಪಟ್ಟದ್ದು ಹೇಗೆ, ಎಂಬುವಕ್ಕೆ ಸೀಮಿತವಿದೆ. ಈ ಸಂದರ್ಭದ ಈ ಸಾಂಸ್ಕೃತಿಕ ಸತ್ಯಾನ್ವೇಷಣೆಯಲ್ಲಿ, ಅನ್ಯಾಯ ಪಕ್ಷಪಾತಕ್ಕೆ ಅವಕಾಶವು ದೊರೆಯಬಾರದಾಗಿದ್ದರೆ, ಋತ=ಸತ್ಯ ಈ ಸಂಕೇತಕ್ಕೆ ಇರುವ ಉಭಯಾರ್ಥಗಳಲ್ಲಿ ವೈಶ್ವಕ ನಿಯಮರೂಪೀ ಸಾರ್ವಕಾಲಿಕ-ಸತ್ಯ ಮತ್ತು ಭೌತಪಾತಳಿಯ ಪ್ರಕೃತಿ (Phenomena) ಪುರಿಶಯ(ನ) [ಪ್ರಕೃತಿ (ಸ್ತ್ರೀ)] ರೂಪ ಪುರಿಯಲ್ಲಿ ಶಯನ ಮಾಡಿರುವ (ಅದೃಶ್ಯ) ಈ ಭಗ-ವಂತ ಗುಹೇಶ್ವರನ ಪುರುಷನ ನಿದರ್ಶಕ ಆಪ-ರಸ-ರೇತ ಸೂಚಕ ಇನ್ನೊಂದು ಸತ್-ತ್ಯ=ಸತ್ಯ ಇವೆರಡೂ ಅರ್ಥಗಳಲ್ಲಿ, ಮೊದಲಿನದು ಯಾವುದು ಇದನ್ನು ನಿರ್ದಿಷ್ಟಪಡಿಸಿ

ಹೇಳುವ ಆವಶ್ಯಕತೆ ಇದೆ. ಋಗ್ವೇದದ ಭಾಷಾಂತರಕಾರನಾದ ಮ್ಯಾಕ್ಸಮುಲ್ಲರನು ಹೇಳುವಂತೆ, ಋತ ಇದಕ್ಕೆ, ವೈಶ್ವಕನಿಯಮ ವ್ಯವಸ್ಥೆ ಎಂಬುದೇ ಪ್ರಾಥಮಿಕ ಅರ್ಥವಾಗುತ್ತದೆ.

ಮ್ಯಾಕ್ಸಮುಲ್ಲರನ ಅಭಿಪ್ರಾಯದಂತೆ ಋತ ಎಂಬ ಸಂಕೇತವು ಮೂಲದಲ್ಲಿ ಸೌರ ಸಂಪ್ರದಾಯದ್ದು. ಸೂರ್ಯನ ಗತಿಸೂಚಕವಾಗಿ (ಋ=to go) ಈ ಸಂಕೇತವು ಮೊದಲಲ್ಲಿ ಸ್ಥೂಲವಾದ ಅರ್ಥವುಳ್ಳದ್ದು; ಬಳಿಕ ವಿಶ್ವನಿಯಮ ಸ್ವರೂಪೀ ಅಮೂರ್ತ, ತಾತ್ತ್ವಿಕ ಅರ್ಥವೂ ರೂಢಿಗೆ ಬಂದಿದೆ, ಎಂದು ವಿವರಿಸಿದ್ದಾನೆ:

> In the physical world there are rules and regular order; ಋತ, which is clearly an inheritance from physical; it is an easy step to the conception of ಋತ in the moral world... the term cosmic order ಋತ, and its opposite ಅನೃತ express also moral order as in the dialogue of ಯಮ and ಯಮೀ. ಋತ forbids and doubtless also commends positive actions, ಋತ is more than truth..."

ಆದರೆ, ಮಾರ್ಕ್ಸ್‌ಮುಲ್ಲರ ಪ್ರಭೃತಿಗಳು ಬಗೆದಿದ್ದಂತೆ ಧರ್ಮ ಹಾಗೂ ದೈವತಗಳ ವಿಚಾರವು, ಬೌದ್ಧಿಕ ಪಾತಳಿಯ ವಿಶ್ಲೇಷಣಾತ್ಮಕ ದೃಷ್ಟಿಕೋನದ ಫಲಿತವಲ್ಲ. ವಿಶ್ಲೇಷಾತ್ಮಕ ಸಾಮರ್ಥ್ಯವು ಶಕ್ಯವಾಗುವುದಕ್ಕೂ ಸಾವಿರಾರು ವರುಷ ಪೂರ್ವದಲ್ಲಿ, ಈ Religion ಹಾಗೂ ಧರ್ಮ ಎಂಬುವು ಮೈದಾಳಿವೆ! ಮ್ಯಾಕ್ಸ್‌ಮುಲ್ಲರನ ಅ-ಪ್ರತಿಹತ ತೀವ್ರಬುದ್ಧಿಯ (intellect) ಮೂಲಕ ಆತನಿಂದ ಆಗಿರುವ ಮೌಲಿಕ ಕಾರ್‍ಯದೊಡನೆ, ಅಭಾವಿತವಾಗಿ ಈತನಿಂದ ತಪ್ಪುಗಳು ಸಂಭವಿಸಿದ್ದನ್ನು ಈ ಮೊದಲು ಒಮ್ಮೆ ಸೂಚಿಸಿದ್ದಾಗಿದೆ. ಆದಕಾರಣ, ಈ ಹಿನ್ನೆಲೆಯಲ್ಲಿ ತಲೆಯೆತ್ತುವ ಮೂಲಭೂತ ಪ್ರಶ್ನೆ: ಜೀವನ: ಸಂಸ್ಕೃತಿಯ ಅರ್ಥಗ್ರಹಣ ಪದ್ಧತಿಯು ಶಕ್ಯವೆ? ಈ ಪ್ರಶ್ನೆಯ ಉತ್ತರವು ಇನ್ನೂ ಒಂದು ಇದಕ್ಕೂ ಆಳಕ್ಕೆ ಒಯ್ಯುವ ಪ್ರಶ್ನೆಯೊಡನೆ ತೊಡಕಿಕೊಂಡಿದೆ!

ಈ ಜೀವನ ವಿಶ್ವಸ್ಥ ಅರ್ಥ (ವಿಚಾರ : ಜ್ಞಾನ) ಇದು ಮಾನವ ಕಲ್ಪಿತವೆ? ಅಥವಾ ಜೀವನ ವಿಶ್ವದಲ್ಲಿಯೇ ಇದು ಉಂಟೊ? ಉಂಟು ಎಂದೇ ಇದನ್ನು ಗ್ರಹಿಸಿಕೊಳ್ಳುವ ಶಕ್ಯತೆ; ಇದು ನಿಜವಷ್ಟೆ? ಭಾರತೀಯ ಪುರಾತನರು ಇದು, ವಿವಸ್ವಾನ್ ಪ್ರೇರಣೆಯ ಮನು-ಮಾನವ ಪರಂಪರೆ ಎಂದು ಬಗೆಯುತ್ತಿದ್ದರು. ಅಥವಾ ಇನ್ನೊಂದು ಪರಂಪರೆಯಂತೆ ಹರಿವಾಯುಗಳ ಅನುಗ್ರಹದಿಂದ ತಾವು ಪ್ರೇರಿತರು, ಎಂಬ ಶ್ರದ್ಧೆಯುಳ್ಳವರು ಅಂದು ಇದ್ದರು. ಈ ಶ್ರದ್ಧೆಗಳ ಮೇರೆಗೆ ಇವೆರಡೂ ಉಂಟುಗಳು ಮಾನವ ನಿರಪೇಕ್ಷವಾದ ಪಾತಳಿಯ ಮೇಲೆ ಉಂಟು, ಎಂದು ಬಗೆಯ ಬೇಕಾಗುತ್ತದೆ! ಉಂಟು ಎಂಬ ಶಬ್ದ-ಪ್ರತಿಮೆ ಅ-ವ್ಯಯವಿದೆ! ನಿನ್ನೆ ಉಂಟು, ಇಂದು ಉಂಟು ಇದು ನಿಜವಿದ್ದರೆ ನಾಳೆಯೂ ಉಂಟು ಎಂದು ಬಗೆಯಲು ಆತಂಕವಿರಲಾರದು; ಇರಬಾರದು. ಹಾಗೆ ಸಿದ್ಧವಾಗುವ ವರೆಗೆ ಉಂಟು. ಲಿಂಗವಚನಗಳ ಬಂಧನವಿರಹಿತವಿರುವುದು ನಿಜ. ಆದರೆ, ಈ ಎರಡೂ ಉಂಟುಗಳ ಪಾತಳಿಗಳಲ್ಲಿ ಅಂತರವು ಉಂಟೊ? ಅಥವಾ ಇವೆರಡನ್ನು ಸಮಾನ ಪಾತಳಿಯವು ಎಂದೇ ಬಗೆಯ ಬೇಕೆ? ಈ ಪ್ರಶ್ನೆಗೆ ಆಧುನಿಕ ತತ್ತ್ವಜ್ಞ ಹಾಗೂ ಶಾಸ್ತ್ರಜ್ಞರಿಂದ ದೊರೆಯುತ್ತಿರುವ ಉತ್ತರದ ಸ್ವಲ್ಪ ವಿವರಣೆ, ಈ ಮೊದಲು ಒಮ್ಮೆ ಬಂದಿದೆ. ಆದರೆ, ಈ ಮೊದಲು ಅನುಸರಿಸಿದ್ದುದಕ್ಕಿಂತಲೂ ಸ್ವಲ್ಪ ಬೇರೆ ದಿಕ್ಕಿನಿಂದ ಹೊರಟು ಈ ಮಾರ್ಗದಿಂದ ಗಮನಕ್ಕೆ ಬರುವ ಅಂಶಗಳಿಂದ ನಮ್ಮ ಸಮಸ್ಯಾಪರಿಹಾರಕ್ಕೆ ದೊರೆವ ಬೆಳಕು, ಮಾನವ ಜೀವನ-ಸಂಸ್ಕೃತಿಯ ಇನ್ನೂ ಆಳವಾದ, ಹಾಗೂ ಅಗಲ-ಎತ್ತರದ ಅಂತರಂಗದ ದರ್ಶನ ಲಭಿಸುವ ನಿರೀಕ್ಷೆಯಿದೆ.

ವಿವಸ್ವಾನ್ ಪ್ರೇರಣೆಯ ಮಾನವಧರ್ಮದ ಅಸ್ತಿತ್ವ

ಭರತಖಂಡೇ-ವೈವಸ್ವತ ಮನ್ವಂತರೇ ಎಂದು ದೇಶ ಮತ್ತು ಪ್ರಚಲಿತ ಯುಗ (:ಮನ್ವಂತರ) ಧರ್ಮಸೂಚಕ, ಈಗಲೂ ಏನೊಂದು ಕಾರ್‍ಯಾರಂಭದಲ್ಲಿ ಪಠಿಸಲಾಗುವ ದೇಶಕಾಲ ಸಂಕೀರ್ತನದ ಮಂತ್ರದಲ್ಲಿ ಬರುವ

ದೇಶನಾಮ ಭರತಖಂಡ ಎಂಬುದು, ಆ ಬಳಿಕ ರೂಢಿಗೆ ಬಂದ ಹಿಂದೂ ಎಂಬ ದೇಶನಾಮವು ಆಗಂತುಕ, ಪೂರ್ವಪರಂಪರಾ ವಿಚ್ಛೇದಕ ಸ್ವರೂಪದ್ದು ಆಗಿರುವುದನ್ನು ಸಿದ್ಧಪಡಿಸುತ್ತದೆ ಮತ್ತು ಹಿಂದೂ ಎಂಬ ಈ ಪೂರ್ವಪರಂಪರಾ ವಿಚ್ಛೇದಕ ದೇಶನಾಮವು, ಇರಾಣಿನ ಪ್ರಕಾಶತತ್ತ್ವದ ದೈವತದ ಅಹುರ ಮುಝ್ದನ ಭಕ್ತ ಡರಾಯಿಸನ್ನಿಂದ ಪ್ರಾಪ್ತ ಸೋಲಿನ ಸ್ಮಾರಕ ಶಿಲೆಯಂತೆ ಇದೆ! (ಕ್ರಿ. ಪೂ. ೫ನೆಯ ಶತಕ).

ಹಿಂದೂ ಎಂಬ ದೇಶನಾಮವೇ ಆಗಂತುಕ, ಅರ್ವಾಚೀನವಿರುವಾಗ, ಇದಕ್ಕೂ ಪುರಾತನ ಕಾಲದಿಂದದ್ದ ಸೈಂಧವ ಸಂಸ್ಕೃತಿಗೆ ವೇದೋಪನಿಷತ್ಕಾಲದಿಂದ ನಡೆದುಬಂದ ಧರ್ಮ-ಸಂಪ್ರದಾಯಕ್ಕೆ ಹಿಂದೂ ಎಂಬ ಹೆಸರೇ ಇದೆ ಎಂದು ಬಗೆಯುವುದಕ್ಕಿಂತ ಹೆಚ್ಚಿನ ಬುದ್ಧಿಗೇಡಿತನ Brain washing ಲಕ್ಷಣವು ಬೇರೆ ದೊರೆಯಲಾರದು! ಸೋಜಿಗವೆಂದರೆ, ಹಿಂದು (ಲಾ) ಇದರ ಅಡಿಯಲ್ಲಿಯೆ, ಭಾರತೀಯ ಪೂರ್ವಪರಂಪರೆಯ ಮೂಲ ವಿವಸ್ವನ್ ಪ್ರೇರಣೆಯ ಮಾನವಧರ್ಮವು ಸ್ವಯಂ ಭೂ ಪ್ರೇರಿತ ಮಾನವ-ನರ-ನಾರಾಯಣ : ನಾಗನ ಆಸನದ ಕೆಳಗೆ ಅಡಗಿದ್ದಾಗಿ ಹೊರವಡುತ್ತಿದೆ! ಭರತ ಖಂಡೇ ಇರುವ ವಿವಸ್ವನ್ ಪ್ರೇರಣೆಯ ಮಾನವಧರ್ಮದ ಅಸ್ತಿತ್ವವನ್ನು, ಇದರ ಆಕೃತಿ ಸ್ವರೂಪವನ್ನು ಗಮನಕ್ಕೆ ತಂದುಕೊಡುವ, ಮಾನವ ಜೀವನದ ಅರ್ಥವನ್ನು ಇಡಿಯಾಗಿ ಚಿತ್ರಿಸುವ (configuration) ಸ್ವರೂಪೀ ಋತಃ ಸತ್ಯದ ವಿಚಾರಕ್ಕೆ ಎಂತೇ ಆಗಲಿ, ಇಂದಿನ ವಿಕೃತ, ತಿರುವು-ಮುರುವಿನ ವೇದದಲ್ಲಿಯೂ ಅಲ್ಪ-ಸ್ವಲ್ಪ ಎಡೆ ದೊರೆತಿದೆ!

ಈ ಋತಸ್ವರೂಪೀ ಸತ್ಯ ಇದುವೆ ವಿಶ್ವದ ತಳಪಾಯದ ನಿಯಮ ವ್ಯವಸ್ಥೆ ಸೂಚಕ ತತ್ತ್ವ ಋತ ಸ್ವರೂಪ ತತ್ತ್ವದ ಸತ್ಯದ ಆಧಾರದ ಮೇಲೆ ಈ ಜೀವನ : ಸಂಸ್ಕೃತಿ ನಿಂತಿದೆ. ಆದರೆ, ವಿಶ್ವನಿಯಮದ ಶಕ್ತಿಯೇ ಇರುವ ಈ ತತ್ತ್ವಕ್ಕೆ ದೇವಾಧಿದೇವರೆಲ್ಲರೂ ಅಧೀನರು. ಈ ಮಾನವಧರ್ಮಕ್ಕೆ ಸರ್ವತಂತ್ರ ಸ್ವತಂತ್ರ ಸ್ವೈರ, ಸರ್ವಾಧಿಕಾರೀ ದೈವತಶಕ್ತಿ ತತ್ತ್ವವು ಸರ್ವಥಾ ಮಾನ್ಯವಿಲ್ಲ. ಋತ=ನಿಯಮ ಅನುಸರಿಸುವುದು ಎಂದರೆ ಧರ್ಮದಂತೆ ನಡೆಯುವುದು. ನಾಸ್ತಿ ಸತ್ಯಾತ್ ಪರೋಧರ್ಮಃ ಎಂಬ ಧರ್ಮದ ಈ ವ್ಯಾಖ್ಯೆಯು ಯಾವ ಜಾತಿ, ಮತ, ಪಂಥದ್ದು? ಹಾರುವರ ಧರ್ಮ ಎಂದು ವಿವಸ್ವನ್ ಪ್ರೇರಣೆಯು ಈ ಮಾನವಧರ್ಮದ ದ್ವೇಷ, ಆ ದ್ವೇಷಿಯ ನಾಶಕ್ಕೇ ಕಾರಣವಾದೀತು! ಧರ್ಮೋ ರಕ್ಷತಿ ರಕ್ಷಿತಃ, ಯೋಗಕ್ಷೇಮಂ ವಹಾಮಿ ಅಹಂ ಎಂಬ ಅಶ್ವಾಸನವು, ಭಾರತೀಯರಿಗೆ ಮೋಸಕ್ಕೆ ಕಾರಣವಾಗುತ್ತ ಬಂದಿದೆ, ಬಹುಕಾಲದಿಂದ. ನೀನು ಧರ್ಮ (ನಿಯಮ) ಪಾಲಿಸಿದರೆ-ರಕ್ಷಿಸಿದರೆ, ಈ ಧರ್ಮವು ನನ್ನನ್ನು ರಕ್ಷಿಸಲೇಬೇಕು. ಇದು ಟೊಳ್ಳು ಅಶ್ವಾಸನವಲ್ಲ, ಕೆಲಕಾಲವಾದರೂ ಆಚರಿಸಿ (ಋತ =ಸತ್ಯಪಾಲಿಸಿ) ನೋಡಿ, ಖಾತ್ರೀ ಮಾಡಿಕೊಳ್ಳಬಹುದು. ಆಚಾರಃ ಪ್ರಭವಃ ಧರ್ಮಃ! ಧರ್ಮವು ಗುಡಿಗೆ, ಮಠಕ್ಕೆ ಮಶೀದಿಗೆ ಸೀಮಿತವಲ್ಲ. ಧರ್ಮದ ಪ್ರ-ಭವ ವೈಭವ ಆ ಧರ್ಮದವರ ಆಚಾರ (ವಿಚಾರ)ಗಳನ್ನು ಅವಲಂಬಿಸಿದೆ. ಈ ಆಚಾರ ಎಂದರೆ ಸಮಾಜ: ಸಮಷ್ಟಿ ರೂಪಿಸುವ ಸಮಯದ ಅಧಿಷ್ಠಾನವಿರುವ ಆಚಾರ, ಸಂಪ್ರದಾಯಗಳೇ ಸರಿ.

ಆದುದರಿಂದ, ಆಚಾರಧರ್ಮ ಮತ್ತು ಸಮಯ ಈ ಮೂರರ ಸಮುಚ್ಚಯವನ್ನು, ಎಂದರೆ ಈ ಧರ್ಮವನ್ನು ಈ ಭಾಷಿಕರ ಅಮೂರ್ತ ಸಮಾಜ : ಸಮಷ್ಟಿಯು ರೂಪಿಸಬಲ್ಲ ಧರ್ಮವಿದು. ವಿವಸ್ವನ್ ಪ್ರೇರಣೆಯ ಮನು ಎಂದರೆ ಈ ಸಮಷ್ಟಿ ಸ್ವರೂಪ ವೈಶಾನ್ಯರ ಅಗ್ನಿಯೇ Folk Wisdom... Supramental intuition or instinct ಆಗುತ್ತಾನೆ. ಇದರಷ್ಟು-ಸುಂದರ ಹಾಗೂ ಸರ್ವವನ್ನೂ ಒಳಗೊಳ್ಳುವ ಧರ್ಮದ ವ್ಯಾಖ್ಯೆ, ಪ್ರಪಂಚದಲ್ಲಿಯೇ ಬೇರೆ ಯಾವ ರಾಷ್ಟ್ರದಲ್ಲಿ ಅಭಿವ್ಯಕ್ತಿಯನ್ನು ಪಡೆದಿದೆಯೇ, ಕೆಲವೊಂದು ಸಮಯದಲ್ಲಿ ಆದರೂ ಪ್ರಚಲಿತವಿತ್ತೆ? ಎಂಬುದಕ್ಕೆ ಅಹುರಮಝುದ ಹಾಗೂ ಮಿಥಿಕ ಸಂಪ್ರದಾಯಗಳ ಪ್ರಭಾವದ ಕಾಲವನ್ನು ಬಿಟ್ಟರೆ ಭಾರತೀಯ ಪರಂಪರೆಯೊಳಗಿರುವಷ್ಟು ವೈವಿಧ್ಯದ ಪ್ರತಿಮೆಗಳು ಬೇರೆಲ್ಲೂ ಕಾಣುವುದಿಲ್ಲ.

ಜಾತವೇದ ಅಗ್ನಿ ವ್ಯಕ್ತಿ; ವೈಶ್ವಾನರಾಗ್ನಿ ಸಮಷ್ಟಿ; ಇವೆರಡರ ಅನ್ಯೋನ್ಯ ಗಮನಿಸಿದರೆ, ಈ ವಿವಸ್ವನ್ ಪ್ರೇರಣೆಯ ಮನು (ಸಮಾಜ ಸಮಷ್ಟಿ) ರೂಪಿಸಿದ್ಧ ಮಾನವ ಧರ್ಮವು, ಆದಿತ್ಯ ಸಂಪ್ರದಾಯದ ಕೃಷ್ಣ-ಕಾರಸ್ಥಾನದಿಂದ ಕುಸಿದು ಬೀಳದೆ ಇದ್ದರೆ, ಜಾತಿ-ಮತ-ಪಂಥಾತೀತ ಏನೆಲ್ಲ ಸಮಾಜ : ಸಮಷ್ಟಿ (ಮಾನವರನ್ನು) ಒಳಗೊಳ್ಳುವ

ಮಾನವಧರ್ಮ ಎಂಬ ಹೆಸರಿನ ಸಾರ್ಥ ಸಂಪ್ರದಾಯವು ಒಂದು, ಇಂದಿಗೂ ಉಳಿದು ಬರಬಹುದಿತ್ತು. ಈ ಅಹುದು ಬಹುದಿನ ತರ್ಕಕ್ಕೆ ಏನು ಬೆಲೆ-ಈ ಬಹುದು ಎಂಬ ಮಾತಿಗೆ ಪ್ರಮಾಣವೇನು?

ಮಹಾಭಾರತ, ಗೀತೆ ಪಠಿಸುವಾಗ ಅಲ್ಲಿ ಲೋಕಮಾನ್ಯರಿಗೆ ಮೋಸ ತಂದ ಉದಾತ್ತ ಭವ್ಯಅರ್ಥದ ಹಲವು ಶ್ಲೋಕಗಳಿವೆ. ಸೂರ್ಯನಾಗಬಯಸಿ ನಾಗನಾರಾಯಣನು ವಿವಸ್ವಾನ್ ಪರಂಪರೆಯ ಮೌಲಿಕ ಭಾಗವನ್ನು ನುಂಗಿ ಕುಳಿತಿದ್ದಾನೆ. ಆದರೆ ಏಕಂಸತ್ ಪಂಥೀಯ ವಿಶಿಷ್ಟವಾದೀ ಏಕಾಂತಿಕ ಭೂಮಿಕೆಯ ವೈಚಾರಿಕ ಆಕೃತಿಯ ವೈಶಿಷ್ಟ್ಯವೇ ಬೇರೆ; ವಿವಸ್ವನ್ ಪ್ರೇರಣೆಯ ಮನುಪ್ರಣೀತ ಮಾನವ ಧರ್ಮದ ವೈಶ್ವಕ ಪಾತಳಿಯ ವೈಚಾರಿಕ ಆಕೃತಿ ವೈಶಿಷ್ಟವೇ ಬೇರೆ! ಲೋಕಮಾನ್ಯರ ಕಾಲದಲ್ಲಿ, ಪ್ರತಿಮಾ ಸಂಕೇತ ಶಾಸ್ತ್ರ, ಸಾರ್ವಕಾಲಿಕ ವೈಚಾರಿಕ-ಆಕೃತಿಗಳ ಬಗೆಗಿನ ಶೋಧ ಇನ್ನೂ ಆಗಿರಲಿಲ್ಲ; ವಾಸ್ತು ಶಿಲ್ಪಶಾಸ್ತ್ರಜ್ಞರು, ಯಾವುದೊಂದು ಕಟ್ಟಡದ ಆಕೃತಿ ವೈಶಿಷ್ಟ್ಯದಿಂದ ಅದರಲ್ಲಿ ಕಾಲಕಾಲಕ್ಕೆ ಆಗುತ್ತ ಬಂದಿರುವ ಬದಲಾವಣೆಗಳ (ಕಾಲ) ಸಮಯವನ್ನೂ ಗುರುತಿಸಬಲ್ಲರು. ಮಶೀದಿಯಲ್ಲಿ ಪ್ರಯೋಜನ ಪಡೆದ ಭಾಗಗಳು ಯಾವ ಗುಡಿಯವು ಇರಬಹುದು, ಎಂಬುದನ್ನು ಗುರುತಿಸುವುದು ಶಕ್ಯವಾಗಿದೆ.

ಮುನಿಃ ಮೋಕ್ಷ ಪರಾಯಣಃ ಎಂಬ ಸಂಪ್ರದಾಯದ ಮೋಕ್ಷಕಾಮೀ ಮನೋಭಾವ ಪ್ರೇರಕ ಮಹಾಭಾರತ, ಗೀತೆಯಲ್ಲಿ ವಿವಸ್ವನ್ ಪರಂಪರೆಯ ಮಾನವ ಧರ್ಮದ ಶಬ್ದ-ಶಿಲ್ಪ ಯಾವುದು ಎಂಬುದನ್ನು ನಿರ್ದಿಷ್ಟ ಪಡಿಸಲು ಇಂದು ಶಕ್ಯವಾಗಿದೆ - ಗೀತಾರಹಸ್ಯ ವಿವರಣೆಯಲ್ಲಿ, ಟಿಳಕರು, ಮಾನವಧರ್ಮದ ಒಂದು ವ್ಯಾಖ್ಯೆಯನ್ನು ಮಹಾಭಾರತದಿಂದ ಎತ್ತಿ ಹೇಳಿದ್ದಾರೆ. ಇದು ಸ್ವಯಂಭೂ ಸ್ತಂಭಕಾಲ ಪೂಜಕ ಮನುಪರಂಪರೆಯ ನರ(ಳ)ರ ಸಂಪ್ರದಾಯಕ್ಕೆ ತೀರ ವಿರೋಧೀ ಧರ್ಮದ ಲಕ್ಷಣವಾಗಿದೆ:

> ಧಾರಣಾತ್‌ಧರ್ಮಂ ಇತಿ ಆಹುಃ ಧರ್ಮೋ ಧಾರಯತೇ ಪ್ರಜಾಃ!
> ಯತ್ ಸ್ಯಾತ್ ಧಾರಣಸಂಯುಕ್ತಂ ಸಃ ಧರ್ಮಃ ಇತಿ ನಿಶ್ಚಯಃ॥

ಈ ಶ್ಲೋಕವು ಎರಡು ಬಾರಿ ಮಹಾಭಾರತದಲ್ಲಿ ಬಂದಿದೆ;[೨] ಸರ್ವರನ್ನು ಧಾರಣ ಮಾಡುವ ಈ ಧರ್ಮವು ವಿಶ್ವವನ್ನೇ ಒಳಗೊಳ್ಳುವ (all inclusive) ಧರ್ಮವಾಗಿದೆ. ಈ ಧರ್ಮ : ನಿಯಮ ರೂಪದ್ದು : ಜೀವನದ ಎಲ್ಲ ಅಂಗಗಳಲ್ಲೂ ಆಯಾ ಕ್ಷೇತ್ರಕ್ಕೆ ಅನುಗುಣವಾದ ನಿಯಮ ರೂಪಿ ಧರ್ಮ ಪಾಲಿಸುವುದು ಕರ್ತವ್ಯದ ಭಾಗವಾಗುತ್ತದೆ. ಈ ಮಾನವಧರ್ಮ ಪ್ರಕಾಶ ರೂಪವಿರುವುದರಿಂದ ಕತ್ತಲೆಯ ಕರ್ಮ ಪಾಪ ಎಂಬ ಮಾತಿಗೆ ಇಂಬಿಲ್ಲ. ದಾಂಪತ್ಯ ಧರ್ಮ ಹಗಲಿನ ಕ್ಷೇತ್ರದಲ್ಲಿ ಸಮಾಜದ ಘಟಕ: ರಾತ್ರಿ ದಾಂಪತ್ಯಧರ್ಮದ ಯುಕ್ತ ಆಚರಣ ಇಲ್ಲಿ ಪಾಪದ ಲವಲೇಶವೂ ಇಲ್ಲ. ಗೀತೆ ಬರಿ ಕರ್ಮಮೀಮಾಂಸೆಗೆ ಮೀಸಲಾಗಿದೆ. ನಮೇ ಅಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ; ಎಂಬ ಈ ಭಗವಂತ ರಾತ್ರಿ ಕರ್ಮಪ್ರೇರಕ ದೇವನು.

ಈ ಸಮಾಜ : ಸಮಷ್ಟಿ (ಎಂದರೆ ಮಾರೆಟ್ ಯೋಜಿಸಿದ ಮಾತು) Folk wisdom ಈ ವಿಶ್ವನರ ವೈಶ್ವಾನರ ಅಗ್ನಿ (Wisdom)ಯ ಸಮಷ್ಟಿ ಪುರುಷನ ಪರಿಚಯ ಮಾಡಿಸಿಕೊಡುವ ಶ್ಲೋಕ ಒಂದಿದೆ. ಆದರೆ ಇದನ್ನು ಈ ಮೋಕ್ಷಕಾಮಿಗಳ ಸಂಪ್ರದಾಯ ಕಿಂಚಿತ್ತಾದರೂ ವಿಕೃತಗೊಳಿಸದೆ ಇಲ್ಲ. ಈ ವಂದನೆಯಲ್ಲಿ ಸಾಂಕೇತಿಕವಾಗಿ, ನಿನ್ನೆ (ಹಿರಿಯರು) ಇದು (ಪ್ರೌಢ-ಯುವಾಶಕ್ತಿ) ಮತ್ತು ಬರಲಿರುವ ನಾಳೆ (ಅರ್ಭಕ) ರೂಪ ಸಮಾಜ ಸಮಷ್ಟಿಯ ಸ್ಮರಣವೇ ಇದೆ. ನಮೋ ಮಹದ್ಭ್ಯೋ ನಮೋ ಯುವಭ್ಯೋ। ನಮಃ ಅರ್ಭಕೇಭ್ಯಃ ಈ ಮಂತ್ರದಲ್ಲಿ ನಮಃ ಅಶಿನೇಭ್ಯಃ ಎಂಬಲ್ಲಿ ಅಶನಾರ್ಥೀ ಭಿಕ್ಷು ಮಠಪತಿ ಬ್ರಹ್ಮ ತಾನೇ ಎಂಬ ಹಾರುವ, ಮಾಟ-ಮಂತ್ರಗಳ ಪವಾಡ ಚಮತ್ಕಾರಗಳ ಆಮಿಷದಿಂದ ಬದುಕುವ ಬಾಬಾ ಬುವಾ ವರ್ಗಕ್ಕೂ ಸ್ಥಾನ ಕೊಡಲಾಗಿದೆ. ಇವರಿಗೆ ಜೀವದಾನ ಮಾಡುವ ಅನ್ನದಾನದ ಮಹಿಮೆಯನ್ನು ಬೋಧಿಸಲಾಗಿದೆ. ಬ್ರಾಹ್ಮಣರ ಲಕ್ಷ ಭೋಜನ ಗುರುಗಳ ಗಣಾರಾಧನೆಯಿಂದ ಅಸಾಮಾಜಿಕರ ಘೋಷಣೆಯೆಂದರೆ ಅಶನಾರ್ಥೀ ಅಸುತೃಪರ

ವರ್ಗ ಪೋಷಿಸಿ, ಇದರಿಂದ ಈ ಸಮಾಜ-ಸಮಷ್ಟಿಯು ತನ್ನ ವಿನಾಶದ ಬೆಂಕಿಯನ್ನು ಉಡಿಯಲ್ಲಿ ನಿತ್ಯವಾಗಿ ಕಟ್ಟಿಕೊಂಡಂತೆಯೇ ಸರಿ. ಇನ್ನೊಂದು ಶ್ಲೋಕ :

ನಮೋ ಸ್ತು ಅನಂತಾಯ, ಸಹಸ್ರಮೂರ್ತಯೇ
ಸಹಸ್ರನಾಮ್ನೇ ಪುರುಷಾಯ ಶಾಶ್ವತೇ

ಎಂದರೆ ಇವನು ಶಾಶ್ವತ ವೈಶ್ವಾನರಾಗ್ನಿಯೇ ಹೊರತು ಸಹಸ್ರಶೀರ್ಷಃ ಪುರುಷಃ ಸರ್ವಥಾ ಅಲ್ಲ. ಲೈಂಗಿಕ ಪ್ರೇರಣೆಯ ಪ್ರತಿಮಾ ನಿರ್ಮಾಣದ ಮೂಲ ಕವಿ ಪುಂ-ಗವರಿಂದ ಮಾಡಲಾಗುವ ಮೋಸ, ದೇಶಕ್ಕೆ ವಿನಾಶತರದೆ ಇದ್ದೀತೆ? ಸಹಸ್ರಕಿರಣ ಸೂರ್ಯನ ಸಾಹಚರ್ಯದಿಂದಾಗಿ ಸಹಸ್ರ, ಇದು ಪ್ರಕಾಶಪೂಜಕ ಸಂಪ್ರದಾಯವು (ವಿವಸ್ವನ್ ಪ್ರೇರಣೆಯ ಮನುಸಂಪ್ರದಾಯದ ಕವಿ) ರೂಪಿಸಿರುವ ಪ್ರತಿಮೆ; ಇದು ನಿಃಸಂದಿಗ್ಧವಿದೆ. ಆದರೆ, ಈ ಸಹಸ್ರ ಸಂಕೇತವನ್ನು ಲೈಂಗಿಕ-ಪ್ರತಿಮೆ: ಯೋನಿ, ಲಿಂಗದ ವರ್ಣನೆಯಲ್ಲಿ ಯೋಜಿಸುವ ವಾಡಿಕೆಯನ್ನು ಆದಿಕವಿ ಉಶನಾಶ ಶುಕ್ರ ಏಕಾಕ್ಷ (ಏಕ ಅಕ್ಷ ಕಣ್ಣು ಗಣ್ಣು ಇದ್ದವನು), ದೇವಯಾನಿ ಪಂಥೀಯ ಕವಿ (ಶುಕ್ರ) ಪ್ರಾರಂಭಿಸಿದ್ದಾನೆ! ಆದರೆ, ಮಗಳಗಂಡತನದ ಈ ಸಂಪ್ರದಾಯದ ವಿರೋಧೀ ಗುರುಸಂಪ್ರದಾಯ ಬೃಹಸ್ಪತಿ ಸಂಪ್ರದಾಯವೂ ಒಂದು ಇದ್ದುದನ್ನು ಭಾರತೀಯ ಪರಂಪರೆ ಇನ್ನೂ ಪೂರಾ ಮರೆತಿಲ್ಲ. ಆದರೆ, ಭೃಗು (ಶುಕ್ರ) ಸಂಪ್ರದಾಯವು ಬೃಹಸ್ಪತಿಯನ್ನು ಚಾರ್ವಾಕ (ಚಾರುವಾಕ್) ಎಂದೂ, ನಾಸ್ತಿಕ-ಎಂದೂ ಆ ಸಂಪ್ರದಾಯದ ತಲೆಯಮೇಲೆ ಕಾಗೆಯನ್ನು ಕುಳ್ಳಿರಿಸಿರುವ ಮಾತಿನ ಮಾಟ ಮಾಡಿದೆ! ಪ್ರಜ್ಞಾವಾದಾಂಶ್ಚ ಭಾಷಸೇ ಎಂಬ ಗೀತೆ, ಪ್ರಜ್ಞಾಪೂಜಕ ಸಂಪ್ರದಾಯವನ್ನು ನಿಂದಿಸಿದೆ.

ಭಾರತೀಯ ಭಾಷೆ(ಗಳು) ಒಟ್ಟಿನಲ್ಲಿ ಉಳಿಸಿಕೊಂಡು ಬಂದಿರುವ ಶಬ್ದ- ಪ್ರತಿಮೆಗಳು ಒಳಗೊಳ್ಳುವ ಅಂತರಂಗದ ಧ್ವನ್ಯರ್ಥಗಳ ಮೌಲಿಕತೆ ಸಾಂಸ್ಕೃತಿಕ ಇತಿಹಾಸದ ದೃಷ್ಟಿಯಿಂದ ಮಹತ್ತದ್ದಾಗಿದೆ*. ಬೃಹಸ್ಪತಿಪುತ್ರನೆಂಬ ಕಚನು ದೇವಯಾನಿಯ ಮಾರ್ಗ ತಿರಸ್ಕರಿಸಿದ್ದಾನೆ. ಶುಕ್ರ ಏಕಾಕ್ಷನ (ಕಣ್ಣು>ಗಣ್ಣು) ಉಪಾಸಕನ ಸಂಪ್ರದಾಯದ ಬಗೆಗಿನ ತನ್ನ ತಿರಸ್ಕಾರವನ್ನು ವ್ಯಕ್ತಪಡಿಸಿದ್ದಾನೆ. ಇದನ್ನು ಸೂಚಿಸುವ ಪರಂಪರಾಗತ ಕಥೆಯೊಂದಿದೆ. ಇದರಲ್ಲಿ ಎರಡು ಸಾಂಸ್ಕೃತಿಕ ಪರಂಪರೆಗಳ ಇತಿಹಾಸ ಅಡಗಿದೆ. ಈ ಕಥೆಯನ್ನು ಬ್ರಾಹ್ಮಣ, ಬ್ರಾಹ್ಮಣೇತರ, ಆರ್ಯ ದ್ರಾವಿಡ ಎಂಬ ಭೂಮಿಕೆಯಿಂದ ಅರ್ಥಯಿಸಬಹುದೊ? ಇಲ್ಲಿ ಚಾಂದ್ರ ಹಾಗೂ ಸೌರಭೂಮಿಕೆಯ ಜೀವನ ರೀತಿಯ ಬಗೆಗಿನ ಸಂಘರ್ಷವಿದೆ ಎನ್ನಬಹುದು. ಸಾರ್ವಕಾಲಿಕ ಪಾತಳಿಯ ಈ ಅರ್ಥವು ಲೈಂಗಿಕಚಿತ್ರ, ಸಾಹಿತ್ಯಸೃಷ್ಟಿಸಿ ಜನತೆಯನ್ನು ಮೋಹವಶ ಮಾಡುವ ಸಂತೆಯ ಮಂದಿವಾಳ ಜನತಾ ಭಕ್ತರು, ಮತ್ತು ಇದನ್ನು ವಿರೋಧಿಸುವ ಪ್ರಜ್ಞಾವಂತರು ಎಂಬ ರೂಪದಲ್ಲಿ ಇಂದು ಕಾಣುತ್ತಿದೆ. ಶುಕ್ರನು ಸಂತೆ : ಮಂದಿವಾಳರನ್ನು ಹುಚ್ಚು ಹಿಡಿಸುವ ಲಿಂಗಾಂಗ ಸಾಮರಸ್ಯಯೋಗದ ಬೋಧಕನಿದ್ದಾನೆ. ಗುರು: ಬೃಹಸ್ಪತಿಯ ವಾಕ್‌ಸಂಪ್ರದಾಯದ ಮಂತ್ರವೊಂದು, ಎಂತೋ ಅಂತೂ ಉಳಿದಿದೆ, ಈ ವೇದದಲ್ಲೆ! ಯತ್ ಪ್ರೈರತ ನಾಮಧೇಯಂ ದಧಾನಾಃ ಪ್ರೇರಿತರಾಗಿ ನಾಮರೂಪ (: ಭಾಷೆ) ನಿರ್ಮಿಸಲಾಗುತ್ತದೆ. ಆದರೆ, ಧಾನ್ಯವನ್ನು ಕುಟ್ಟಿಕೇರಿ, ಹಸನುಮಾಡಿ, ಪವಿತ್ರವಾಗಿಸಿ ಉಪಯೋಗಿಸುವ ರೂಪಕದಿಂದ ವಿಮರ್ಶಿತ ವಾಕ್ ಇದೇ ಶ್ರೇಷ್ಠ ಎಂಬ ಮಾತು ಇಲ್ಲಿದೆ. ತಿತ ಉನಾ ಪುನಂತಃ ಸಕ್ತುಂ ಇವ ಯತ್ರ ಧೀರಾಃ ಮನಸಾ ವಾಚಂ ಆಕ್ರತ The Unexamined life is not worth living ಸಾಕ್ರೇಟೀಸನ ಈ ವಾಕ್ಯ ಯುರೋಪಿನ ಪ್ರಗತಿಗೆ ಪ್ರೇರಕವಾಗಿದೆಯೆಂದು ಬಗೆಯಲಾಗುತ್ತದೆ. ಆದರೆ, ನಮ್ಮಲ್ಲಿಯ ವೇದಕಾಲದಲ್ಲಿದ್ದ ವಿಮರ್ಶಾ ಸಂಪ್ರದಾಯು ಸಾಯುತ್ತದೆ.

---

* ಶಬ್ದಪ್ರತಿಮೆಗಳ ಸಾಂಸ್ಕೃತಿಕ ಚರಿತ್ರೆಯನ್ನು ಶಂಬಾ ಅವರು ಪ್ರಾರಂಭಸಿದ್ದು ತಮ್ಮ ಮೊದಲಗ್ರಂಥವಾದ 'ಕಣ್ಮರೆಯಾದ ಕಂನಡ'ದಲ್ಲೇ. ಅನಂತರ ಭಾರತೀಯ ಸಂಸ್ಕೃತಿಯ ಶೋಧನೆಯ ಹಂತದಲ್ಲಿ 'ಋಗ್ವೇದಸಾರ: ನಾಗಪ್ರತಿಮಾ ವಿಚಾರ' ಗ್ರಂಥದಲ್ಲಿ ಅದು ಶಿಖರವನ್ನು ಮುಟ್ಟಿತು. ಈವರೆಗೂ ಸಾಂಕೇತಿಕ ಶಬ್ದವಿಚಾರದ ಬಗೆಗೆ ಶಂಬಾ ನಡೆದ ಹಾದಿಯಲ್ಲಿ ಮುಂದೆ ಹೋದವರು ಇಲ್ಲ. ಭಾರತೀಯ ವಿದ್ವಾಂಸರಲ್ಲಿ ಈ ಶ್ರೇಣಿಯವರು ವಿರಳ. (ಸಂ)

ಈ ಮಾತು ಬಂದದ್ದು ವಿವಸ್ವಾನ್ ಪ್ರೇರಣೆಯ ಮಾನವಧರ್ಮದ ಅಸ್ತಿತ್ವದ ಖಾತ್ರಿ ಮಾಡಿಕೊಂಡು. ಇದು ಇದ್ದದ್ದು ನಿಜವಿದ್ದರೆ ಈ ಮನು-ಸಮಾಜ: ಸಮಷ್ಟಿ-ವೈಶ್ವಾನರ ಅಗ್ನಿಯ ಸ್ವರೂಪವನ್ನು ಗ್ರಹಿಸಿಕೊಳ್ಳುವ ಸಂದರ್ಭದಿಂದ. ವಿಶ್ವನರ ಎಂದರೆ ಬ್ರಾಹ್ಮಣರೆಂಬ ಹಾರುವವರು ಮಾತ್ರ ಅಲ್ಲ. ವಿಶ್ವನರ>ವೈಶ್ವಾನರ universal man, ನಮೋಽಸ್ತು ಅನಂತಾಯ ಈ ನಮನದ ಸಹಸ್ರ ಮೂರ್ತಿ, ಸಹಸ್ರನಾಮದ ಮೂರ್ತಿ ಎಲ್ಲರೂ ಎಂದೇ ಅರ್ಥ. ಆದರೆ, ಮಂದಿವಾಳರನ್ನು (mass) ಮೆಚ್ಚಿಸುವ ಯಾತು, ಚಮತ್ಕಾರಮಗ್ನ, ಯೋನಿ-ಲಿಂಗ ಪೂಜಕ ಸಂಪ್ರದಾಯಗಳು, ಮನು-ವೈಶ್ವಾನರಾಗ್ನಿ ಸಮಾಜ ಸಮಷ್ಟಿಯನ್ನು ನಷ್ಟಪಡಿಸಿವೆ. ಜನಜಂಗುಳಿ (mass) ತಮ್ಮ ಪ್ರಭಾವದಲ್ಲಿ ಉಳಿಸಿಕೊಳ್ಳಲು ಕಾಲಕಾಲಕ್ಕೆ ನಾನಾ ತಂತ್ರ-ಮಂತ್ರ-ಮಾಟ ಮಾಡುತ್ತ ಬಂದಿವೆ. ಮೋಕ್ಷಕಾಮೀ ಸಂಪ್ರದಾಯಗಳ ಪರಿಭಾಷೆಯಲ್ಲಿ ಲೈಂಗಿಕ ಸಂಕೇತಗಳಿಗೆ ಇರುವ ಕೇಂದ್ರಸ್ಥಾನವೇ ಇದಕ್ಕೆ ಪ್ರಮಾಣ. ಇದು ನಮ್ಮಲ್ಲಿ ಮಾತ್ರವಲ್ಲ. ಕ್ರೈಸ್ತ ಪಂಥಕ್ಕೂ ಮುಂಚೆ ಅಲ್ಲಿ ಇದ್ದು Priapos ಪ್ರಜಾಪತಿ ಪೂಜೆ,* ರಾತ್ರಸಂಪ್ರದಾಯವೇ ಇತ್ತು! Priapos ಸಂಪ್ರದಾಯದ ಬಗೆಗೆ ಸಚಿತ್ರಗ್ರಂಥ. ಅಂದಿನ ಪ್ರತಿಮೆ ಸಂಗ್ರಹಿಸಿ ಬರೆದಿದ್ದು ಮರಳಿ ಅಮೇರಿಕೆಯಲ್ಲಿ ಪ್ರಕಟವಾಗಿದೆ. Worship of Sexual Symbols ಎಂದು ಇದರ ಹೆಸರು. Candle Light ವೃಕ್ಷಪೂಜೆಯ ಪ್ರತಿಮೆ ಹೀಬ್ರೂ ಮತ್ತು ಕ್ರೈಸ್ತಪಂಥಗಳಲ್ಲಿ ಇನ್ನೂ ಉಳಿದಿದೆ.

ರಾತ್ರಿಪೂಜಕ ಮೋಕ್ಷಕಾಮೀ ಸಂಪ್ರದಾಯಗಳಿಗೆ ಗವಿ ಗರ್ಭಗುಡಿ ಕತ್ತಲೆಕೋಣೆ ಬೇಕು. ಪ್ರಕಾಶ ತತ್ತ್ವವು, ಇವರಿಗೆ ಶತ್ರುರೂಪದಲ್ಲಿ ಕಾಣುವುದರೊಳಗಿನ ಅಂತಃಸಂಗತಿ (Logic) ಸಮೀಕ್ಷಾರ್ಹವಿದೆ. ಭಾರತದ ದಸ್ಯು-ಕಪ್ಪು-ಕೃಷ್ಣತ್ವದ ಶತ್ರು ಪ್ರಕಾಶತತ್ತ್ವ. ಈ ಪ್ರಕಾಶತತ್ತ್ವವು ಪಾಶ್ಚಾತ್ಯರಲ್ಲಿ ಝೀಉಸ್ (ದ್ಯೌಃ) ಜ್ಯೂಪಿಟರ್ (ದ್ಯೌಃಪಿತಾ) ರೂಪದಿಂದ ಒಮ್ಮೆ ಕಾಣಿಸಿಕೊಂಡಿತು. ಝೀಉಸನು ರಾತ್ರಿಸೂರ್ಯನಾದ. ಆಮೇಲೆ ಇರಾಣಿನತ್ತಣಿನ ಮಿಥ್ರ (ಸೌರ) ಪ್ರಕಾಶತತ್ತ್ವದ ಪೂಜೆ ಬಂತು; ಇದನ್ನು ಕ್ರೈಸ್ತಪಂಥವು ಮೆಟ್ಟಿನಿಂತಿದೆ. ಕುಮಾರೀ ಮಾತಾಪುತ್ರ ಏಸುವಿನ ವಾರದವ್ರತ : Sabbath (ಸಪ್ತಮ ದಿನ) Sunday ರವಿ! ಆದಿತ್ಯವಾರ : ಅದಿತಿಕುಮಾರೀ ಮಾತೆಯ ಪುತ್ರನ ಈ ಉಪಾಸನೆ ಮಾರ್ತಾಂಡ ನಾಮಾನಂ ಸೂರ್ಯಂ ಈ ಹೆಸರಿನಲ್ಲಿಯೂ ಭಾರತದಲ್ಲಿ ಇದೆ. ಮೃತಾತ್ ಅಂಡಾತ್ ಜಾತನೆಂಬ ಈ ಸೂರ್ಯ (?) ರಾತ್ರಿಸೂರ್ಯನೇ ಆಗಿದ್ದಾನೆ. ಅಯ್ಯಾರದ ನಡೆವಳಿ ಉಳಿದು ಬಂದದ್ದು ವೇದಕಾಲದಿಂದ. ಭೂಮಿಯೊಡನೆ ವೇದದ ಸಂಬಂಧ ಬಂದಿಲ್ಲ. ಅದು ಹಾರುವರೆಂಬ ಆರ್ಯರ (?) ವೇದ ಎಂದು ಪಾಶ್ಚಾತ್ಯರು ನಿರ್ಮಿಸಿರುವ ಸಂಭ್ರಮವಿದು ಈ ಸಂಗತಿ ಸಷ್ಟವಾಗಬೇಕಾಗಿದೆ ಇನ್ನೂ!

ಪಾಶ್ಚಾತ್ಯ ದೇಶಗಳ ಇಂದಿನ ಪ್ರಗತಿಯ ಶ್ರೇಯವು, ಪರ್ಯಾಯದಿಂದ, ಪ್ರಕಾಶತತ್ತ್ವದ (ಮರೆತುಹೋದ) ಸಂಪ್ರದಾಯಕ್ಕೇ ಸಲ್ಲುತ್ತದೆ, ಎಂದು ಅಲ್ಲಿಯ ತಜ್ಞ ಸಂಶೋಧಕರೇ ಬರೆಯುತ್ತಿದ್ದಾರೆ. Worship of divinities of the sky, Zeus-and Jupiter ಈ ದೈವತಗಳು ಇಂಡಿಯಾ ಅಥವಾ ಇರಾನಿನತ್ತಣಿಂದ ಬಂದಿದೆ.[೪]

> Helios himself was a straight forward Indo-European Sun God.
> Mental life of Greco-Roman World : The Religion of the Official Pantheon"

ಈ ದೈವತವು ಯೂರೋ ಭಾರತೀಯ ಜನದ್ದು. (God of Indo-European pastorialists). The Church of England as an institution of the State. ಇದು ಮಿಥ್ರ ಸಂಪ್ರದಾಯದ ಪ್ರಭಾವದಲ್ಲಿ

---

* 'ಪ್ರಜಾಪತಿ' ಎಂದರೆ ಸಾಂಪ್ರದಾಯಕ ಪರಿಭಾಷೆಯಲ್ಲಿ ಬ್ರಹ್ಮ ಎಂದು ಅರ್ಥ. ಜಾನಪದರ ನುಡಿಯಲ್ಲಿ 'ಪ್ರಜಾಪತಿಗೆ ಟೊಪ್ಪಿಗೆಯಿಲ್ಲ ವಾದಿಗೆ ಉತ್ತರವಿಲ್ಲ' ಎಂದು ಪಡೆನುಡಿ ಉಂಟು. ಇಲ್ಲಿ 'ಪ್ರಜಾಪತಿ' ಶಬ್ದಪ್ರತಿಮೆಯು ಲೈಂಗಿಕ ಅಭಿಪ್ರೇತವಿರುವುದು ಸ್ಪಷ್ಟ. ಅಮೂರ್ತ ಭಾವ ಹಾಗೂ ಮೂರ್ತಭಾವ ಎರಡೂ ನೆಲೆಗಳಲ್ಲಿ ಪ್ರಜಾಪತಿ ಶಬ್ದಪ್ರತಿಮೆ ಬಳಕೆಯಲ್ಲಿದೆ. (ಸಂ)

ಆಕಾರ ಪಡೆದಿದೆ ಎಂದು ಬರೆಯುವ ಈ ಸಂಶೋಧಿಕೆ, ಇಂಗ್ಲೆಂಡಿನವಳು ಜೆ.ಬಿ. ಪ್ರೀಸ್ಟ್‌ಲೆ ವಿಖ್ಯಾತ ಸಾಹಿತ್ಯಕನ ಪತ್ನಿ The God was Suns, Sun ಸೂರ್ಯನಿಗೆ ಸೂರ್ಯತ್ವವನ್ನಿತ್ತವನು! who caused the visible rays to shine upon him who sees...! ಭೌತಸೂರ್ಯನು ಭೌತಕತ್ತಲೆ ದೂರ ಮಾಡುತ್ತಾನೆ. ಆದರೆ, ಈ God intelligible Sun rises and shines on the soul, The darkness of passion and evil is dissipated... ಸವಿತೃ, ವಿವಸ್ವಾನ್ ಮನು ಸಮಾಜ ಸಮಷ್ಟಿ-ವೈಶ್ವಾನರಾಗ್ನಿ ಜಾತವೇದ ಅಗ್ನಿ, ವೃತ್ರಹನ್, ಇಂದ್ರ - ಈ ಸಂಕೇತಗಳ ಅರ್ಥವನ್ನು ಇಂಗ್ಲೆಂಡಿನ ವಿದುಷಿ ಗ್ರಹಿಸಿಕೊಳ್ಳುತ್ತಾಳೆ. ಭಾರತದ ಹಾರುವರು ಸೂರ್ಯನನ್ನು ನಾರ ಅಯನ ಅಥವಾ ವಿಶ್ವಸೃಷ್ಟಿಸುವ ಯೋನಿರೂಪದಲ್ಲಿ ಕಾಣುತ್ತಿದ್ದಾರೆ! ಈ ತಿರುವುಮುರುವು ಆದದ್ದು ವಸಿಷ್ಠ, ವ್ಯಾಸ, ವಾಲ್ಮೀಕಿ ಸಂಪ್ರದಾಯದ ಹಾರುವರಿಂದ ಬ್ರಾಹ್ಮಣ - ಬ್ರಾಹ್ಮಣೇತರ ಸಂಘರ್ಷ ಅರ್ಥ ಹಚ್ಚುವುದಾದರೆ ಇಲ್ಲಿ ಈ ಅನ್ವಯಾರ್ಥವು ಏನು ಆಗುತ್ತದೆ

ವಸಿಷ್ಠ (ದಕ್ಷಿಣ ಕಪರ್ದ) ; ವಿಶ್ವಮಿತ್ರ (ಸವಿತೃ ಮಂತ್ರದ ದ್ರಷ್ಟಾರ) ನಾಮರೂಪಗಳು ವಿಶಿಷ್ಟ ವ್ಯಕ್ತಿ ಸೂಚಕವಲ್ಲ ಇವರು ಪ್ರತಿನಿಧೀಕರಿಸುವ ಸಂಪ್ರದಾಯ ರಹಸ್ಯಸೂಚಕ ಶಬ್ದ-ಪ್ರತಿಮೆಗಳು! ವಸಿಷ್ಠ ಇದು ಶ್ರೇಷ್ಠ ಎಂಬರ್ಥದ ವಿಶೇಷಣ। ಅಷ ವಹಿಷ್ಠ (ಅಷ=ಋತ, ಇದೇ ಶ್ರೇಷ್ಠ ಎಂಬರ್ಥದಲ್ಲಿ ವಸಿಷ್ಠ) ಅವೆಸ್ತದ ಭಾಷೆ ಸಂಸ್ಕೃತದ ಭಾಷೆಯನ್ನು ಹೋಲುತ್ತದೆ, ಉಚ್ಚಾರಗಳಲ್ಲಿ ಸ್ವಲ್ಪ ಅಂತರವಿದೆ. ಸ>ಹ, ಸೋಮ>ಹೋಮ, ವಸಿಷ್ಠ>ವಹಿಷ್ಠ. ಅವೆಸ್ತದ ಋತಸತ್ಯದೊಡನೆ ಸಾಹಚರ್ಯವಿರುವ ಈ ಶ್ರೇಷ್ಠತಾಸೂಚಕ ಹೆಸರು ಭಾರತೀಯ ಇಂದಿನ ಸಂಹಿತೆಯಲ್ಲಿ ಚಾಂದ್ರಪಂಥೀಯ ನೇತಾರ ವ್ಯಕ್ತಿಯಾಗುತ್ತದೆ. ಬರಿದೆ, ವಸಿಷ್ಠ (ಶ್ರೇಷ್ಠ) ಎಂದರೆ ಅರ್ಥವಾಗದು. ಇದು ಅ-ಭಾವದಲ್ಲಿ ಸ್ಥಾಯೀಭಾವ ಸೂಚಿಸುವ ಯಾತುಶಕ್ತಿಯ ಸಂಕೇತವಾಗುತ್ತದೆ. ಆದರೆ ವಸಿಷ್ಠ ಪಂಥವು ವಿಶಿಷ್ಟ ವೈಶಿಷ್ಟ್ಯ ಪೂಜಕರ ಸಂಪ್ರದಾಯ! ವಸಿಷ್ಠನಾಮದಲ್ಲಿ ಅಭಿಪ್ರೇತವಿರುವ ವಿಶಿಷ್ಟ ವೈಶಿಷ್ಟ್ಯ (Sui generis) ಏನು? ಇದನ್ನು ಸೂಚಿಸಲು ದಕ್ಷಿಣ ಕಪರ್ದ ಎಂಬ ಮಾತು ಅನಿವಾರ್ಯವಾಗುತ್ತದೆ. ದಕ್ಷಿಣ ಕಪರ್ದ ಇದನ್ನು ಇಂದು ವಿವರಿಸುವಲ್ಲಿ ನಾಚಿಕೆಪಟ್ಟುಕೊಳ್ಳುವ ಪರಿಸ್ಥಿತಿ (ಈ ಪ್ರಕಾಶ ತತ್ತ್ವದ ironic ಪಾತಳಿಯ ಬೆಳಕಿನಿಂದಾಗಿ) ಪ್ರಾಪ್ತವಾಗಿದೆ! ದಕ್ಷಿಣ: ಕಪರ್ದ ಬಲಗಡೆಯ ಚಂಡಿಕೆ-ಜುಟ್ಟು ಎಂದು ಅರ್ಥ ಹೇಳಲಾಗುತ್ತದೆ! ದಕ್ಷಿಣ, ವಾಮ (ಮಾರ್ಗ) ಅಪ್ರಶಸ್ತ ಎಂಬ ಮೂಲಾರ್ಥವುಳ್ಳ ಸಂಕೇತ! ವಾಮ-ನ (ಗಿಡ್ಡ) ಮೂರ್ತಿ, ಶಿಪಿವಿಷ್ಟ, ವಿಷ್ಣು ವಾಮನ (ಅವತಾರ) ಬೇರೆಯಲ್ಲ. ದಕ್ಷಿಣ ಇದರ ಮೂಲಾರ್ಥವು, ಉತ್-ತರ, ಉತ್-ತಮ ಎಂಬ ಈ ತೌಲನಿಕ ಜೀವನ ಮೌಲ್ಯಸೂಚಕ ಮೇಲೆ =ಉನ್ನತ=ಉತ್‌ತರ-ತಮ ಇದರ ವಿರುದ್ಧ ದಕ್ಷಿಣ ಕೆಳಗೆ, ಉನ್ನತಿ ವಿರುದ್ಧ ಅವನತಿ. ಆ-ಕಾಶ ಕೆಳಗಿನದು ಅವ-ಕಾಶ.

ಭಾರತೀಯ ಪುರಾತನ ಪರಂಪರೆಯಲ್ಲಿ ಹುದುಗಿರುವ ಮೂಲ ಸಮಯದ (Cultural duration of time) ಆಕೃತಿಗೆ ವಿಸಂಗತ ಅರ್ಥವು ಯಾವುದು, ಎಂಬುದನ್ನು ಆ ಪದಗಳಲ್ಲಿ ಇರುವ ಅರ್ಥದ ಪದರುಗಳಿಂದ ನಿರ್ಧರಿಸಲು ಬರುತ್ತದೆ. ಉತ್-ತರ, ತಮ ಈ ಮೂಲಾರ್ಥವು ದಿಗ್ವಾಚಿಯಲ್ಲ, ಶ್ರೇಷ್ಠ, ಕನಿಷ್ಠ ಈ ಮೌಲ್ಯ ಸೂಚಕ-ಒಂದು ಪ್ರತಿಮೆ. ಮೌಲ್ಯಗಳ ತಳಹದಿಯ ಮೇಲೆ ಪ್ರಕಾಶತತ್ತ್ವದ ಮನು ಮಾನವಧರ್ಮವು ನಿಂತಿದೆ. ಚಂದ್ರಾ-ಆದಿತ್ಯ (ಪುರುಷ) ಈ ಮಿಥುನವು ಉಪಾಸನಾ ಪ್ರತಿಮೆಯಾಗುವಾಗ, ಪ್ರಕಾಶ ತತ್ತ್ವವು ಜೀವಂತವಾಗಿ ಉಳಿಯಲು ಶಕ್ಯವೇ? ಅಥವಾ ಇದನ್ನು ಉಳಿಸಿಕೊಳ್ಳಲು ಪ್ರಯತ್ನ ಪಡುವವನು ಹೇಳ ಹೆಸರಿಲ್ಲದಂತೆ ಆಗಿದ್ದರೆ ಈ ಘಟನೆಯ ಅರ್ಥವೇನು? ಡಾ।। ಬುಹ್ಲರ, ಸ್ಮೃತಿ ಗ್ರಂಥ ಸಂಶೋಧನೆಯಲ್ಲಿ ವಿವಸ್ವನ್ ಮನುಸಂಪ್ರದಾಯದ ಸ್ಮೃತಿ ಗ್ರಂಥವು ಸಿಕ್ಕುವುದಿಲ್ಲ, ಎಂದು ತಕರಾರು ಮಾಡಿದ್ದಾನೆ. ಈ ಸಂಪ್ರದಾಯದ ಬ್ರಾಹ್ಮಣ ಪರಂಪರೆಯೂ ಉಳಿದಿಲ್ಲ ಎಂದು ಕಂಡುಬಂದಿದೆ ಆತನಿಗೆ The Laws of Manu ಈ ಗ್ರಂಥದ ಮುನ್ನುಡಿ ನೋಡಿ. ಈ ಅವಸ್ಥೆ ಯಾರಿಂದ ಬಂದಿರಬೇಕು! ಸ್ಮೃತಿ>ಸ್ಮಾರ್ತ ಪರಂಪರೆಯ ದ್ವೇಷಿಗಳಿಂದಲೇ ಇದೆಲ್ಲ ಸಂಭವಿಸಿರುವ ಶಕ್ಯತೆ ಇಲ್ಲವೆ?

ದಕ್ಷಿಣ ಕಪರ್ದ ಇದರೊಳಗಿನ ದಕ್ಷಿಣ ಎಂಬುದು ದಿಗ್ವಾಚಿಯಲ್ಲ; ಕೆಳಭಾಗದ ಕಪರ್ದ ಎಂಬ ಅರ್ಥವು ಇಲ್ಲಿದೆ. ಈ ಅರ್ಥಕ್ಕೆ ಇನ್ನೊಂದು ದಿಕ್ಕಿನಿಂದ ದೊರೆವ ಪುಷ್ಟಿ ನೋಡಿ : ಕಪರ್ದ ಕೂದಲು, ಜಡೆ ತೊಡಕಿದ ಕೂದಲು, ಸಂಸ್ಕಾರ ವಿರಹಿತ ಕೂದಲು. ಆದರೆ, ಕಪರ್ದದ ಮೂಲಾರ್ಥವು ತೀರ ಬೇರೆಯಿದೆ. ಈ ಕಪರ್ದದ ಸಮಯದಲ್ಲಿ ಎರಡು ಬಗೆಗಳು ಆದುವು; ಕಪರ್ದ>ಕವಡೆ! ಡಾ॥ ಮರ್ಸಿಯಾ ಇಲಿಯದೆ,* ಪ್ರತಿಮಾ ಸಂಕೇತಗಳ ಅರ್ಥಗ್ರಹಣದ ತಂತ್ರಶೋಧಿಸಿದ ಕೀರ್ತಿ ಈತನದು. ಇವನು ತನ್ನ ಗ್ರಂಥದಲ್ಲಿ

> IV Observations on the symbols of shells' ಕುರಿತು ಒಂದು ಪ್ರಕರಣ ಹಾಕಿದ್ದಾನೆ. demonstrating the assimilation of courie, Vulva, Eye... an emblem of generational power... symbol of the God moon as a great sea...[೫]

ವೇದದಲ್ಲಿ ಕಪರ್ದ ಅದಿತಿ=ದೇವಿ ಮೊದಲಲ್ಲಿ! ಈ ಸಮಯದ ಅರ್ಥ-ಆಕೃತಿ, ಆದಿ ಮಾತಾ. ಕುಮಾರೀ ದೇವಿಯ ಉಪಸ್ಥಾನದಲ್ಲಿ ಸರಿಯಿತ್ತು. ಆದರೆ ಕ್ಷುಠರೀ ಉಪಸ್ಥಾನವು ನಿಂದ್ಯವಾಗುವುದರೊಡನೆ, ಕುಮಾರನ ಉಪಾಸನೆ ಆ ಸ್ಥಳದಲ್ಲಿ ಬಂದಿದೆ. ಕಪರ್ದಿ ಎಂಬ ಸಂಕೇತ ಸಮಯ ಮಾರ್ಪಡುವುದರೊಡನೆ ಪುರುಷನ ಪುರಿಶಯ (ನ) ಕೂದಲು ಎಂದು ಅರ್ಥವು ರೂಢವಾಗುತ್ತದೆ. ಆದರೆ ಕಪರ್ದ ದಕ್ಷಿಣಭಾಗದ್ದು ಎಂಬಲ್ಲಿ ಈ ಪವಿತ್ರ ಕೂದಲು ಎಲ್ಲಿಯದು? ಎಂಬ ಬಗೆಗೆ ಸಂದೇಹವೆ ಇಲ್ಲ! ಈ ಕಪರ್ದ ಸಂಕೇತವು ನಮ್ಮ ಹಣೆಯ ಬರೆಹ ಆದದ್ದು ಇಂದಿಗೂ ಕಾಣಬಹುದಾಗಿದೆ-ವಸಿಷ್ಠ, ವ್ಯಾಸರ ಅಸ್ಸೆಲ್ಲ ಪರಂಪರೆಗಳಲ್ಲಿ

ಭಾರತೀಯ ಪುರಾತನ ಸಂಸ್ಕೃತಿಯೊಳಗಿನ ಸ್ಪರ್ಧೆಯ ಉಭಯ ಸಂಪ್ರದಾಯಗಳ ಆದಿ ನೇತಾರರೆಂಬ ಹಾಗಿನ ಉಪಲಬ್ಧ ಪುರಾವೆ ಋಗ್ವೇದದಲ್ಲಿ ವಸಿಷ್ಠ ದಕ್ಷಿಣ ಕಪರ್ದ ಮತ್ತು ವಿಶ್ವಮಿತ್ರ ಈ ಎರಡು ಹೆಸರು ದೊರೆಯುತ್ತವೆ. (ವಿಶ್ವಮಿತ್ರರ ಹೆಸರನ್ನು ವಿಶ್ವ(ದ) ಅಮಿತ್ರ ಎಂಬಂತೆ ರೂಢಿಸಿದವರು ಯಾರು? (ಈ ಪ್ರಶ್ನೆ ಹಾಗಿರಲಿ). ಈತನು ಧೀ ಪ್ರಕಾಶತತ್ತ್ವದ ಪ್ರಪಂಚದ ಪ್ರಜ್ಞಾನೇತ್ರ ಎಂಬ ಹಾಗಿನ ಸವಿತೃ ದೈವತದ ಪ್ರಾರ್ಥನಾಮಂತ್ರದ್ರಷ್ಟಾರನೆಂದು ಸಂಪ್ರದಾಯ ಹೇಳುತ್ತದೆ. ಅಲ್ಲದೆ, ಶುನಃಶೇಪನೆಂಬ ಕುಮಾರ ವರುಣನಿಗೆ (ದೇವರಿಗೆ) ಅರ್ಪಿಸಲ್ಪಟ್ಟವನು. ಈ ಹುಡುಗನನ್ನು ಹೀಗೆ ಅನಾಥವಾಗಿಸುವ ವಾಡಿಕೆ. ದೇವರಿಗೆ ಕುಮಾರ, ಕುಮಾರಿಯರನ್ನು ಅರ್ಪಿಸುವ ಪುರಾತನ ವಾಡಿಕೆಯನ್ನು ನೆನಪಿಗೆ ತಂದು ಕೊಳ್ಳಬೇಕು. ಕುಮಾರಿ, ಕುಮಾರರ ಅರ್ಪಣೆ ನಿಷಿದ್ಧವಾಗುವಾಗ, ಹಸುವಿನ ಕರುಗಳನ್ನು ವೃಷಭ, ವೃಷಭಿ ದೇವರ ಹೆಸರಿನಿಂದ ಬಿಡಲಾಗುತ್ತಿತ್ತು. ದೇವಿಯ ಕೋಣ ಒಬ್ಬ ಪುರುಷ ವೃಷಭ ಪ್ರತೀಕವೇ ಇರಬೇಕು. ವೃಷಭರ್ಕಳ್ ಎಂಬ ಗೌರವಾರ್ಥದ ಪಡೆನುಡಿ ಅಭ್ಯಸನೀಯವಿದೆ. ವೃಷಭಿ ಸಂಪ್ರದಾಯವು ಬಸವಿ ಈ ಪಡೆನುಡಿಯಾಗಿ ಇಂದಿಗೂ ಉಳಿದಿದೆ. ವಸಿಷ್ಠನು ಸಾಕಿದ್ದ ವೃಷಭಿ ಗೋವನ್ನು ವಿಶ್ವಮಿತ್ರನೂ ಬಯಸಿದನಂತೆ! ವಿಶ್ವಮಿತ್ರನೆಂಬ ಹೆಸರಿನ ಸಾರ್ಥಕ್ಯ ಸೂಚಕ ಕೆಲವು ದಂತಕಥೆಗಳು ಉಳಿದು ಬಂದಿದೆ! ಇದೆಲ್ಲ ಹಾಗೆ ಇರಲಿ. ಈ ಉಭಯ ನೇತಾರರ ನಾಮರಹಸ್ಯ ನೋಡಿರಿ: ವಸಿಷ್ಠನು ದಕ್ಷಿಣ ಕಪರ್ದನು, ವಿಶಿಷ್ಟದ ಕತ್ತಲೆಯ ಗವಿಯ ಪೂಜಕನೇ ಆಗಬೇಕು ಎಂಬ ಅಂತಃಸಂಗತಿ (Inherent logic) ವಿಶ್ವಮಿತ್ರ ಈ ನಾಮರೂಪದಲ್ಲಿಯೂ ಇದೆ. ವಿಶ್ವ ವೈಶ್ವಕ ಇದು Universals ಸಾಮಾನ್ಯ, ಸಾಧಾರಣ, ಸಮಾನ (Common and general) ಸೂಚಕವೇ ಇರಬಲ್ಲದು! ಸಮಾನ ಸಾಮಾನ್ಯೀಕರಣವು ತತ್ತ್ವತಃ ಅರ್ಥ ಪ್ರಕಾಶ ಪಾತಳಿಯದೇ ಆಗುತ್ತದೆ!

---

* ಮರ್ಸಿಯಾ ಇಲಿಯದೆ ಈತ ಬಹುದೊಡ್ಡ ಪುರಾಣಶಾಸ್ತ್ರಜ್ಞ. Dictionary of Mythology ಎಂಬ ಬೃಹತ್ ಸಂಪುಟಗಳನ್ನು ಸಂಪಾದಿಸಿದ್ದಾನೆ. ಪ್ರಪಂಚದ ಪುರಾಣಕತೆಗಳ ವ್ಯಾಸಂಗಿ ಎಂಬ ಕೀರ್ತಿ ಈತನದು. ಈತನು ಸಂಕೇತಶಾಸ್ತ್ರ, ಪ್ರತಿಮಾಶಾಸ್ತ್ರ ಮತ್ತು ಪ್ರಾಚೀನ ಪುರಾಣಶಾಸ್ತ್ರಗಳ ಬಹುಮುಖೀ ಅಧ್ಯಯನ ಮಾಡಿದವನು. ಶಂಬಾ ೧೯೭೦ರಿಂದ ಇಲಿಯದೆ ಅವರ ವಿಚಾರಗಳನ್ನು ಸ್ವೀಕರಿಸಿ ಅಧ್ಯಯನ ಮಾಡಿದ್ದಾರೆ. ತಮಗೆ ಕಂಡ ವಿಚಾರಗಳನ್ನು ಸಂಗ್ರಹಿಸಿ ಅನ್ವಯಿಸಿಕೊಂಡಿದ್ದಾರೆ (ಸಂ)

ವರುಣನಿಗೆ (ವಸಿಷ್ಠನ ತಂದೆ ಎಂಬ ದೈವತಕ್ಕೆ) ಅರ್ಪಿತ ಶುನಃಶೇಪನನ್ನು ದೇವರಾಟ್ ಎಂದು ಬೇರೆ ನಾಮಕರಣ ಮಾಡಿ ಆತನನ್ನು ತನ್ನ ಮಗನೆಂದು ಸ್ವೀಕರಿಸಿದ ವಿಶ್ವಮಿತ್ರನ ಈ ಕೃತಿ ವಸಿಷ್ಠನಿಗೆ ಒಪ್ಪಿಗೆಯಾಗಲಿಲ್ಲವಂತೆ! ಬ್ರಾಹ್ಮಣಗ್ರಂಥಗಳಲ್ಲಿ ಬರುವ ಇನ್ನೊಂದು ದಂತಕಥೆ ಹೀಗಿದೆ : ಪರಿಶಿಷ್ಟ ಜನಾಂಗವೆಂಬ ಅಂದಿನ ಆಂಧ್ರಾದಿ ಜನ ತನ್ನ ಮಕ್ಕಳೆಂದು ಸ್ವೀಕರಿಸಿದ್ದ ಕಾರಣ ವಿಶ್ವಮಿತ್ರನು ತನ್ನ ಖಾಸಾ ಮಕ್ಕಳ ಕೋಪ ಸ್ವಾಗತಿಸಿದನಂತೆ. ಈ ಕಥೆ ಹಾಗಿರಲಿ. ಇನ್ನೂ ಒಂದು ಮೌಲಿಕ ಸಾಂಕೇತಿಕ ಅರ್ಥವು ವಿಚಾರಾರ್ಹವಿದೆ. ವಸಿಷ್ಠ=ದಕ್ಷಿಣ ಕಪರ್ದ, ದಕ್ಷಣಾಮೂರ್ತಿ ದೇವನ-ಶಿಪಿವಿಷ್ಟ-ವಿಷ್ಣುಭಕ್ತ! ಇದು ವಿಶಿಷ್ಟದ (Sui generis) ಉಪಾಸನಾಪರಂಪರೆ ವಿಶಿಷ್ಟದ ಸಾಹಚರ್ಯವು ಕತ್ತಲೆಯೊಡನೆ, ಗುಹ್ಯ ಗೂಢ ಗುಹೆಯೊಡನೆ ಇರುವ ಈ ಅಂತಃಸಂಗತಿಯು, ಒಂದು ವೈಶ್ವಕ ಪಾತಳಿಯ ಸನಾತನಸತ್ಯವನ್ನು ಈ ನಿಯಮವು (rule) ಬೆಳಕಿಗೆ ತರುತ್ತಿದೆ! ವಿಷ್ಣು ನೀಲಾಂಗ, ಕೃಷ್ಣ-ಕರಿಯ, ರಾತ್ರೀಪ್ರತಿಮೆ ಎಂದು ವೇದ ಹೇಳುತ್ತದೆ. ಇದು ಬಣ್ಣದತ್ತಣದ ವಿಚಾರ. ಪ್ರಕಾಶಪೂಜಕರು ತಿರಸ್ಕಾರದಿಂದ ಕಾಣುತ್ತಿದ್ದ ಕಪ್ಪುಬಣ್ಣ ಇದು, ಮೈಬಣ್ಣವಲ್ಲ ಎಂದು ಕೃಷ್ಣ ವಿಷ್ಣು ನಾಮರೂಪದಿಂದ ಹೊರಪಡುತ್ತದೆ. ಕೃಷ್ಣದ್ವೀಪ ಆಯನನು ವ್ಯಾಸನು ಎಂಬಲ್ಲಿಯ ಈ ಕಪ್ಪು, ಕಪರ್ದ ಸೂಚಕ ಕಪ್ಪೇ ಇರಬಲ್ಲದು, ದಾಸ್ಯ ಭಾವದ ದಾಸ ದಸ್ಯು ಸಂಪ್ರದಾಯದ ವರ್ಣನೆಯ ಕಪ್ಪುತನ ಇದು ರಾತ್ರಿ ಸಂಪ್ರದಾಯದ ಪರಂಪರಾ ಸೂಚಕವಿರಬಲ್ಲದು. ಭರತರು=ಜಾತವೇದ ಅಗ್ನಿ ಪೂಜಕರು; ಭರತರ್ಷಭ ಎಂಬ ಸಂಬೋಧನೆಯ ಗೀತೆಯ ಅರ್ಜುನನು, ಸೌರತೇಜದ ಪ್ರತಿಮೆ, ಆದರೆ ವಿಶ್ವಮಿತ್ರನ ಪೌರೋಹಿತ್ಯಕ್ಕೆ ಬದಲಾಗಿ, ವಸಿಷ್ಠ-ದಕ್ಷಿಣ ಕಪರ್ದನು ಭರತರ ಕುಲಪುರೋಹಿತನಾಗುತ್ತಾನೆ. ಈ ಸಮಯದ ದಿವೋದಾಸ ಸು-ದಾಸಾದಿ ಈ ದಾಸಪದವಿ ಸೂಚಕ ಹೆಸರು, ಭರತ ಕುಲದಲ್ಲಿ ಪ್ರತಿಷ್ಠೆ ಪಡೆಯುತ್ತವೆ! ಇದರ ನಿಶ್ಚಿತ ಅರ್ಥವು : ಜಾತವೇದ ಅಗ್ನಿ, ವಿವಸ್ವಾನ್, ಸವಿತೃ, ಇಂದ್ರ ಈ ದೈವತ ಪರಂಪರೆಯವರು, ಕುಮಾರೀ ಮಾತಾ ಆದಿತಿ- ಆದಿತ್ಯ ಸಂಪ್ರದಾಯ ಮೆಚ್ಚಿಕೊಂಡಿರಲಿಕ್ಕೆಬೇಕು. ವಿವಸ್ವಾನ್ ಮನುಪ್ರಣೀತ ಮಾನವಧರ್ಮ ಪರಂಪರೆ ಹಿಂದೊಮ್ಮೆ ಇತ್ತು. ಆದಿತ್ಯ ಸಂಪ್ರದಾಯವು ಪ್ರಬಲವಾಗ ತೊಡಗಿದಂತೆ ವಿವಸ್ವಾನ್ ಮನು : ಮಾನವ ಪರಂಪರೆ ಕುಸಿಯುತ್ತದೆ. ಹಿರಣ್ಯಗರ್ಭ -ಪ್ರಜಾಪತಿ-ಸ್ವಯಂಭೂ ಮೂಲಸ್ಥಾನ ದೈವತದ ಮನು-ಮಾನವ ಪರಂಪರೆ ನರ(ಳ) ನಾರ-ಆಯನ ಹೆಸರಿನಲ್ಲಿ ಪ್ರಭಾವಶಾಲಿಯಾಗುತ್ತದೆ.

ವಿವಸ್ವಾನ್ ಮನುಪ್ರಣೀತ ಮಾನವಧರ್ಮದ ಜೀವನ ಸಂಸ್ಕೃತಿಯ ಕಟ್ಟಡದ ಸ್ವಲ್ಪ ರೂಪರೇಖೆ ಸೂಚಿಸಿದ್ದಾಯಿತು. ಇದು ಕುಸಿದು ಬಿದ್ದ ಕಾರಣಗಳು ಹಲವು ಇವೆ. ಭಾರತೀಯ ಪುರಾತನ ಸಂಸ್ಕೃತಿಯನ್ನು ಹೋಲುವ ಅಂಶಗಳುಳ್ಳ ಗ್ರೀಕ್‌ಸಂಸ್ಕೃತಿಯ ಏರಿಳಿತಗಳು, ಭಾರತೀಯ ಸಂಸ್ಕೃತಿಯ ಅರ್ಥಗ್ರಹಣಕ್ಕೆ ಬೆಳಕನ್ನು ನೀಡಬಲ್ಲವು. ಆ ಸಂಸ್ಕೃತಿಯ ಸಂಶೋಧಕರಲ್ಲಿ ಅಗ್ರಗಣ್ಯವೆನಿಸಿದ ಪ್ರೊ. ಗಿಲ್ಬರ್ಟ ಮರ್ರೆಯಂತಹರು, ಗ್ರೀಕ್ ಸಂಸ್ಕೃತಿಯ ಮಹೋನ್ನತ ಸ್ವರೂಪದ ಕಡೆಗೆ ಲೋಕದ ಗಮನ ಸೆಳೆದಿದ್ದಾರೆ. ಪಾಶ್ಚಾತ್ಯ ಸಂಸ್ಕೃತಿಯು, ಮೃತ್ಯುಪೂಜಕ-ಪಾರಲೌಕಿಕ ಜೀವನಾದರ್ಶಗಳ ಕ್ರೈಸ್ತಪಂಥೀಯ ಉಸಿರುಗಟ್ಟುವ ವಾತಾವರಣದಲ್ಲಿ ಸಿಲುಕಿದೆ ಎಂದು ಟೀಕಿಸಲಾಗುತ್ತದೆ. ಆದರು, ಇಂದು ಐಹಿಕ ಜೀವನರಂಗದಲ್ಲಿ ಇಷ್ಟು ಪ್ರಗತಿಯನ್ನು ಸಾಧಿಸಲು, ಗ್ರೀಕ್ ಸಂಸ್ಕೃತಿಯ ಆ ಪ್ರಭಾವವೇ ಪರ್ಯಾಯದಿಂದ ಪ್ರೇರಕವಾಗಿದೆ ಎಂದು ಡಾ. ವೈಟ್‌ಹೆಡ್ ಪ್ರಭೃತಿ ವಿದ್ವಾಂಸರೂ ಅಭಿಪ್ರಾಯ ಪಡುತ್ತಾರೆ. ಇಷ್ಟು ಉನ್ನತಿಗೆ ಏರಿದ ಗ್ರೀಕ್‌ಸಂಸ್ಕೃತಿಯ ಅವನತಿಗೆ ಆ ಜನದಲ್ಲಿ ಕಾಣಿಸಿಕೊಂಡ failure of nerves ಇದೇ ಕಾರಣ, ಎಂದು ಗಿಲ್ಬರ್ಟ್ ಮರ್ರೆಯ ನಿಷ್ಕರ್ಷ. ವಿವಸ್ವಾನ್ ಪ್ರೇರಣೆಯ ಮಾನವಧರ್ಮವು ಮಾರ್ಪಟ್ಟು ಹಗಲಿನ ಸೂರ್ಯ ನನ್ನ ಆದಿತ್ಯನಾಮದಿಂದ ರಾತ್ರಸೂರ್ಯನಾಗಿಸಿ ಆದಿತ್ಯ ಮಾರ್ತಾಂಡಾದಿ ನಾನಾ ನಾಮರೂಪಗಳಿಂದ ಪೂಜಿಸುವ ವಾಡಿಕೆ ಪ್ರಬಲವಾಗುತ್ತದೆ. ಭಾರತೀಯರು ಹಿಂದೊಮ್ಮೆ ತೇಜ : ಪ್ರಕಾಶ ತತ್ವದ ಪ್ರತೀಕಗಳ ಉಪಾಸಕರಾಗಿದ್ದವರು ಆದಿಶಕ್ತಿಯ ಭಕ್ತರಾಗುತ್ತಾರೆ. ಕತ್ತಲೆಯ ರಾತ್ರ ಸಮಯಾಚಾರಗಳಲ್ಲಿ ಮೈಮರೆವಲ್ಲಿ ಕೃತಾರ್ಥತೆಯನ್ನು ಕಾಣತೊಡಗುತ್ತಾರೆ.

ಮಾನವ ಜೀವನ (ಧರ್ಮ)ದ ಅರ್ಥ ತಿಳಿಯದು ಎಂಬ ಗ್ರಹಿಕೆ! ಭಾಷೆ ಸಂಸ್ಕೃತಿ ಇದು ಆಕಾರ ಪಡೆದ ಹಿನ್ನೆಲೆಯ ಬಗೆಗಿನ ತಪ್ಪುಗ್ರಹಿಕೆಯೇ ಇದಕ್ಕೆ ಕಾರಣ. ಇಂತಹ ಕಾರಣಗಳೇ ತತ್ತ್ವತಃ ಮಾನವಧರ್ಮ ಸಂಸ್ಕೃತಿಯ ಅವನತಿಯ ಮುಖ್ಯಕಾರಣ ಉದಾ: ಪ್ರಜ್ಞಾ ಪ್ರಾದುರ್ಭಾವದ ಬಗೆಗಿನ ವಿಚಾರವು ಇಂದಿಗೂ ದುರ್ಲಕ್ಷಿತವಾಗಿದೆ. ಪ್ರಜ್ಞಾ ಪ್ರಾದುರ್ಭಾವದ ವಿಚಾರ : ಆಧುನಿಕ ಮಾನವಶಾಸ್ತ್ರಜ್ಞರು, ಭಾಷೆ ಹಾಗೂ ಸಂಸ್ಕೃತಿಯ ಅನ್ಯೋನ್ಯ ಸಂಬಂಧದ ಕಡೆಗೆ ವಿಚಾರವಂತರ ಗಮನ ಸೆಳೆದಿದ್ದಾರೆ. ಭಾಷೆಯೆ ಇಲ್ಲದ ಸಂಸ್ಕೃತಿ ದೊರೆಯದು; ಸಾಂಸ್ಕೃತಿಕ ಹಿನ್ನೆಲೆಯಿಲ್ಲದೆ ಭಾಷೆ ಮೈದೋರಲಾರದು. ಸಂಸ್ಕೃತಿಯು ಸಂಸ್ಕಾರ ಶಿಕ್ಷಣಾದಿಗಳ ಫಲಿತ ಇರುವಂತೆ, ಸಂಸ್ಕೃತಿಯು ಇರುವಂತೆ, ಸಂಸ್ಕೃತಿಯು ಮಾನವನನ್ನು ರೂಪಿಸುವ ಪ್ರಕ್ರಿಯೆಯೂ (process) ಅಹುದು. ಈ ಪ್ರಕ್ರಿಯಾ ಪ್ರೇರಕ ಸಂಸ್ಕೃತಿ ಎಂಬುದರ ಅಸ್ತಿತ್ವವನ್ನು ಆಭು (constant variant) ಸ್ವರೂಪದಲ್ಲಿ ಕಲ್ಪಿಸಿಕೊಳ್ಳಲಾಗುತ್ತದೆ.

ಆದರೆ, ಫಲಿತ ಸ್ವರೂಪದ ಸಂಸ್ಕೃತಿ ಪ್ರಕ್ರಿಯಾ ರೂಪ ಸಂಸ್ಕೃತಿ (Constant Variant) ಆಭುರೂಪ ಸಂಸ್ಕೃತಿ ಎಂಬ ಈ ಸಂಸ್ಕೃತಿಯ ನಾಮರೂಪಗಳಲ್ಲಿನ ವ್ಯತ್ಯಾಸವು ಅದರ ಹಿಂದಿನ ವಿಶ್ಲೇಷಣಾತ್ಮಕ ಶಬ್ದದಿಂದಲೇ ತಿಳಿಯಬೇಕು. ಆದರೆ ಸಂಸ್ಕೃತಿಯು ಪ್ರಕ್ರಿಯಾರೂಪದ್ದಾಗಿ ಪರಿಣಮಿಸಲು ಕಾರಣರೂಪ ಪ್ರೇರಣೆಯು ಒಂದು ಇರಬೇಡವೆ? ಗೋರಿಲ್ಲಾ, ಚಿಂಪಾಂಝೀ ಈ ಬಗೆಯ ನರಸದೃಶ ಪ್ರಾಣಿಗಳಲ್ಲಿ ಮಾನವ ಶಾಸ್ತ್ರಜ್ಞರು ಹೇಳುವ ವಿಶ್ವಸ್ಥ ಆಭು (Constant Variant) ರೂಪಸಂಸ್ಕೃತಿ ಪ್ರಕ್ರಿಯಾರೂಪದ್ದಾಗಿ ಕೆಲಸ ಮಾಡದಿರಲು ಕಾರಣವೇನು? ನರರ ಪಾತಳಿಯಿಂದಲೇ ಈ ಭಾಷೆ ಸಂಸ್ಕೃತಿ ಅನ್ಯೋನ್ಯದಿಂದ ಕಾಣಿಸಕೊಳ್ಳತೊಡಗಿದ್ದು ಏಕೆ? ವಿಶ್ಲೇಷಣಾತ್ಮಕ ದೃಷ್ಟಿಕೋನವು ಶಕ್ಯವಾದ ಬಳಿಕ, ಬುದ್ಧಿಯು ಪ್ರಗಲ್ಭವಾದ ಮೇಲೆಯೇ ಮಾನವರಿಗ ಅರ್ಥ (ವಿಚಾರ ಜ್ಞಾನ) ಶಕ್ಯವಾಯಿತು ಎಂಬ ಗ್ರಹಿಕೆಯು ನಿರಾಧಾರ ; ತಪ್ಪು, ಎಂದು ಒಪ್ಪಿಕೊಳ್ಳುವ ಆವಶ್ಯಕತೆ ಭೌತಶಾಸ್ತ್ರಜ್ಞರೆಂಬುವರಿಗೂ, ಇಂದು ಕಾಣತೊಡಗಿದೆ. ದಿವ್ಯದೈವತ ಪವಾಡಕಥೆ (Myth) ಭಾಷೆಗೆ ಅಂಟಿದ ರೋಗ ಎಂದ ಮಾಕ್ಸಮುಲ್ಲರರು ಉಂಟು. ದಿವ್ಯ ಪವಾಡ ಕಥೆಗಳೆಲ್ಲವೂ ಅಷ್ಟೇ ತೂಕದವು, ಎಂದು ಬಗೆಯಲಿಕ್ಕೆ ಆಗುವುದಿಲ್ಲ. ಆದರೂ ಕೆಲವೊಂದು ಪವಾಡ ಕಥೆಗಳಲ್ಲಿ ಅಲ್ಲಿಯ ಸಂಕೇತಗಳ ಪ್ರಾಥಮಿಕ ಅರ್ಥವು ಮಾಸಿಹೋದ ಬಳಿಕ, ಅದರಲ್ಲಿ ಒಟ್ಟಿನಲ್ಲಿ ಮಿನುಗುವ ಭಾವಾರ್ಥವು ಸಾರ್ವಕಾಲಿಕ ಸತ್ಯಾಂಶವನ್ನು ಗಮನಕ್ಕೆ ತಂದುಕೊಡುತ್ತದೆ. ಇದರೊಳಗಿನ ಅಭಿಜಾತ ಅರ್ಥದಾಯಕ ಸಹಜ ಶಕ್ತಿಯು (intuition) ಆಶ್ಚರ್ಯಕರವೆನಿಸುವಷ್ಟು ಆಳ (profound) ಇರುತ್ತದೆ ಎಂದು ಒಪ್ಪಿಕೊಳ್ಳುವ ಆಧುನಿಕ ಭೌತಶಾಸ್ತ್ರಜ್ಞರಲ್ಲಿ ಡಾ।। ಹಕ್‌ಸ್ಲೆ ಯಂಥವರೂ ಇದ್ದಾರೆ.[೬]

ವಿಶ್ಲೇಷಣಾತ್ಮಕ ಅರ್ಥಗ್ರಹಣದ ರೀತಿ ತಿಳಿದು, ಈ ಚಟವು ರಕ್ತಗತವಾಗುವ ಮುಂಚಿನ ಹಂತದಲ್ಲಿಯೇ ಕಾಣಿಸಿಕೊಂಡ (ವ್ಯಕ್ತಿಗಳೊಳಗಿನ) ಸ್ವ ಉಪಜ್ಞತೆಯನ್ನು ದುರ್ಲಕ್ಷಿಸಲಾಗುತ್ತದೆ. ನರ(ಳ) ರನ್ನು ಮನುಜರಾಗಲು ಒತ್ತಾಯ ಪಡಿಸುವ ಅಂತಃಪ್ರೇರಣೆಯೇ ಈ ಪ್ರಜ್ಞೆ. ನರರಲ್ಲಿ ಕಾಣಿಸಿಕೊಳ್ಳುವ ತಿಳಿ (ವಿನ) ಬೆಳಕು, ಇದು ಪ್ರಜ್ಞೆ. ಇದನ್ನು ಪ್ರಕಾಶರೂಪ ವಿವಸ್ವಂತನ ಪ್ರೇರಣೆ ಎಂದು ಬಗೆಯಲಾಗುವಲ್ಲಿ ಔಚಿತ್ಯವಿದೆ. Without mysticism religion is empty ಎಂಬ ಮಾತು ಒಂದು ಬಗೆಯಲ್ಲಿ ಸರಿ. ಯದ್ ಭಜತಿ, ತತ್ ಭವತಿ ಆರಾಧ್ಯ ದೈವತ ಇದುವೆ ಆದರ ಆರಾಧಕನ ದೈವ (Fate). ಮನು, ಅರ್ಜುನ ಇವು ವಿವಸ್ವಂತನ ಪರ್ಯಾಯನಾಮಗಳೆಂದು ಆಪ್ಟೆ ಕೋಶ ಹೇಳುತ್ತದೆ. ಭಜಕನು ತನ್ನ ಭಕ್ತಿಯ ದೈವತಶಕ್ತಿಯ ಭಾಜಕನು ಪಾಲುಗಾರನು ಆಗುತ್ತಾನೆ. ಪ್ರಜ್ಞೆ: ಸ್ವ ಉಪಜ್ಞೆಯ ಸ್ಥಳದಲ್ಲಿ ಆ-ತ್ಮನ್ - ತನೂ ನಪಾತ್ (Son of himself) ಸೃಜನಶಕ್ತಿ ತತ್ತ್ವವು, ಆರಾಧ್ಯ ಪ್ರತಿಮೆಯಾಗುತ್ತದೆ. ಪ್ರಕಾಶತತ್ತ್ವದ ಸ್ಥಳದಲ್ಲಿ, ಜ್ಯೋತಿ-ಆಪೋಜ್ಯೋತಿ- ಅಮೃತ (: ಜೀವಂತ)! ರಸ-ಶುಕ್ರ : ದೇವಯಾನ ಮಾರ್ಗವು ಉಪ-ಆಸನಾಸ್ಥಾನವಾಗುತ್ತದೆ. ಕತ್ತಲೆಯ ಗರ್ಭಗುಡಿಯ ಕುಡಿ ದೀಪದ ಆರಾಧನೆಯು ಇದು! ಆ-ನಂದ ದೀಪ!

ಭಾರತೀಯ ಪುರಾತನ ಪರಂಪರೆಯಲ್ಲಿ ಪ್ರಜ್ಞಾ ತತ್ವಕ್ಕೆ ಇದ್ದ ಅನನ್ಯ ಸಾಧಾರಣ ಸ್ಥಾನವು ಸಮೀಕ್ಷಾರ್ಹವಿದೆ. : ಭಾಷೆ-ಸಂಸ್ಕೃತಿ ಉದ್ಗಮ ಕ್ಷೇತ್ರವೇ ಜಾತವೇದ ಅಗ್ನಿತತ್ವ (intuition) ಜಾತವೇದ ಪದವನ್ನು ಸಾಯಣರು ಜಾತಪ್ರಜ್ಞ ಎಂದು ಸ್ಪಷ್ಟೀಕರಿಸುತ್ತಾರೆ. ವೇದ ಪ್ರಜ್ಞೆ: ಇದೇ ಸಾಲಿನಲ್ಲಿ ಪಾಶ್ಚಾತ್ಯ ಪರಂಪರೆಯ Wisdom ಈ ಸಂಕೇತವೂ ಬರುತ್ತದೆ. ವಿರಕ್ತ ಪಂಥಗಳು ನಿರ್ -ವೇದಿಗಳಾಗುವ, ತಮ್ಮೊಳಗಿನ ಸೂಕ್ಷ್ಮ ಸಂವೇದನ ಶಕ್ತಿ ಬಹಿಷ್ಕರಿಸುವ ಸಾಧನಾರತರಾಗುತ್ತಾರೆ! ಇವರಿಗೆ ಪ್ರಜ್ಞಾ ಪ್ರೇರಕ ಅಗ್ನಿ - ಜಾತವೇದ ಅಗ್ನಿ ತ್ಯಾಜ್ಯ! ನ-ಚಿಕೇತಾಗ್ನಿ (ಉಲ್ವ Vulva) ಆಪ-ರಸ : ರೇತದ ಪ್ರಾಣ ಚೇತಸದ ಪಾತಳಿಯ, ಚಾಂದ್ರ ಅಗ್ನಿ- ಗೌತಮಾಗ್ನಿ ಪೂಜ್ಯ!

ವೇದ, ವಿದ್ಯೆ ಈ ಸಂಕೇತಗಳನ್ನು ಭಗ-ವಂತ ಸಂಪ್ರದಾಯವು ಬೆಲೆಗೇಡಾಗಿದೆ. ವೇದದ ಅಂತವಾಗಿ ವೇದಾಂತ ಪ್ರಭಾವಶಾಲಿಯಾಗಿದೆ. ವಿದ್ಯೆಯನ್ನು ಅವಿದ್ಯೆ ಎಂದು ಬೆಲೆಗೇಡಾಗಿಸಿ, ಜ್ಞಾನ gnostic ಅರಿವು ಇದು ಪ್ರತಿಷ್ಠೆ ಪಡೆಯುತ್ತದೆ. ಈ ಕಾರಣದಿಂದಾಗಿ, ವೇದವಿದ್ಯೆ ವಿದ್ ಈ ಸಂಕೇತಗಳ ಮೂಲ ಉನ್ನತ ವಿಶಾಲಾರ್ಥದ ಕಡೆಗೆ ಗಮನ ಸೆಳೆಯಲು ಯುರೋ. ಭಾರತೀಯ ಮೂಲದ Wit, Wisdom, wise ಈ ಪದಗಳ ಪ್ರಯೋಜನ ಪಡೆಯುವ ಆವಶ್ಯಕತೆ ತಲೆದೋರಿದೆ! ಇವೆಲ್ಲವೂ ಮೂಲ ವಿದ್ ೮ಖ್ಯಾತಕ್ಕೆ ಸರಿದೊರೆಯಾದ ಶಬ್ದ ಮೂಲದಿಂದ ಸಾಧಿತ ಪದಗಳು. Wisdom ಇದರ ಅರ್ಥವು ಗಮನಾರ್ಹವಿದೆ.

ವಾನರ ಪಾತಳಿಯ ಜೀವಿಗಳವರೆಗೂ ಕಾಣದೊರೆಯದ ಪ್ರಜ್ಞೆ ಸ್ವದ ಉಪಜ್ಞೆ Wisdom ನರರ ಹಂತದಲ್ಲಿ ಫಕ್ಕನೆ ಕಾಣಿಸಿಕೊಳ್ಳುತ್ತದೆ. ಸಂಸ್ಕೃತಿಯು ಪ್ರಕ್ರಿಯಾ ರೂಪದ್ದಾಗಿರುವಂತೆ ಫಲಿತವೂ ಸರಿ. ಆದರೆ ಪ್ರಜ್ಞೆ ಯಾವ ಬಾಹ್ಯ ಸಂಸ್ಕಾರಗಳ ಫಲಿತವಲ್ಲ; ಇದು ಕೇವಲ ಪ್ರಕ್ರಿಯಾ ಪ್ರೇರಕಶಕ್ತಿ. ಪ್ರಜ್ಞೆ awareness; ಅಲ್ಲದೆ consciousness of consiousness, conscience ಸ್ವರೂಪದ್ದೂ ಆಗಿದೆ. ಭಾಷಿಕ-ಶಬ್ದ ಪ್ರತಿಮೆಗಳಲ್ಲಿ ಪ್ರತೀತಿಗೆ ಬರುವ awareness. ಇದು ಮಿದುಳಿನೊಡನೆ ಸಂಬದ್ಧ ವಿರಬೇಕು; ಎಂಬ ಕಾರಣದಿಂದ ಈ ಅರ್ಥ : ವಿಚಾರರೂಪ awareness ಇದನ್ನು ಭೌತಶಾಸ್ತ್ರೀಯ ಭೂಮಿಕೆಯಿಂದ ಗ್ರಹಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿರುವ, ನೊಬೆಲ್ ಬಹುಮಾನ ಪಡೆದ ಒಬ್ಬ ವಿಜ್ಞಾನಿಯ ಪ್ರಬಂಧವು ನೋಡಲು ದೊರೆತಿತು ಈ awareness ದ ಸ್ವರೂಪವನ್ನು ಒಬ್ಬ ವಿದುಷಿ ಭಾಷಿಕ ಶಬ್ದಪ್ರತಿಮೆಗಳ ವರ್ಗೀಕರಣದ ಮೂಲಕವಾಗಿ ಗ್ರಹಿಸಿಕೊಳ್ಳುವ ಪ್ರಯತ್ನ ಮಾಡಿದ್ದಾಳೆ. ಯುರೋಪ್ ದೇಶ ಸುಮಾರು ಹದಿಮೂರು ಭಾಷೆಗಳೊಳಗಿನ ಶಬ್ದಗಳಲ್ಲಿ, ಕಣ್ಣು, ಕಿವಿ, ಸ್ಪರ್ಶ, ಮೂಗು, ರುಚಿ ಎಂಬ ಈ ಇಂದ್ರಿಯ ಶಕ್ತಿಗಳ ಕಾಣಿಕೆಯ ಪ್ರಮಾಣವನ್ನು ಕಂಡುಹಿಡಿಯುವ ಪ್ರಯತ್ನವಿದು. ಮಿದುಳಿನ ರಚನಾರೀತಿಯನ್ನು ಬಲ್ಲ, ಸರ್ಜನ್ ಒಬ್ಬನು ಮಿದುಳಿನಲ್ಲಿ ಇರುವ ಕಣ್ಣು, ಕಿವಿ, ಮೂಗು ಸ್ಪರ್ಶೇಂದ್ರಿಯಾದಿಗಳ ಜ್ಞಾನತಂತುಗಳ ಪಾಲಿಗೆ ದೊರೆತಿರುವ ಅವಕಾಶ-ಸ್ಥಳದ ಪ್ರಮಾಣವನ್ನು ಗ್ರಹಿಸಿಕೊಂಡವನು ಭಾಷೆಯ ಮೂಲಕವಾಗಿ ಬಂದ ನಿಷ್ಕರ್ಷವು ಸಮರ್ಪಕವಿರುವುದಾಗಿ ಅಭಿಪ್ರಾಯ ಪ್ರಕಟಿಸಿದ್ದಾನೆ.

ಪ್ರಸ್ತುತ ಅವಶ್ಯವಿರುವ ಸಂಗತಿಯೆಂದರೆ ಭಾಷೆ-ಸಂಸ್ಕೃತಿ ಇದು ಪ್ರಜ್ಞೆಯೊಡನೆ ಸಂಬಂಧವಿದೆ. ಭಾಷೆ-ಸಂಸ್ಕೃತಿಯ ವಿಕಾಸ ಅಥವಾ ಸಂಕೋಚದ ಮೂಲಕವಾಗಿ, ಆ ಭಾಷಿಕರ ಪ್ರಜ್ಞೆಯ ವಿಕಾಸ-ಸಂಕೋಚವನ್ನು ಗ್ರಹಿಸಿಕೊಳ್ಳುವುದು ಶಕ್ಯವಿದೆ. ಯಾವುದೊಂದು ಭಾಷೆ ಶಬ್ದಪ್ರತಿಮೆಗಳೊಗಿನ ಸೂಕ್ಷ್ಮಾರ್ಥಗಳು ಇಲ್ಲವಾಗುವಿಕೆ, ಅರ್ಥೌಚಿತ್ಯವು ನಷ್ಟವಾಗುವಿಕೆ, ಇದು ಆ ಭಾಷಿಕರ ಜೀವನ ಹಾಗೂ ಸಂಸ್ಕೃತಿ ಕೀಳಟ್ಟಕ್ಕೆ ಜರಿಯ ತೊಡಗಿದ ನಿಶ್ಚಿತ ಲಕ್ಷಣವೆಂಬ ಆಶಯದ ತನ್ನ ವಿಚಾರವನ್ನು ಮಹಾಕವಿ ವ್ಯಕ್ತಪಡಿಸಿದ್ದಾನೆ. ಇಂದಿನ ಋಗ್ವೇದ ಕಾಲದಿಂದ ಭಾರತೀಯ ಜೀವನ : ಸಂಸ್ಕೃತಿಯ ಮಟ್ಟವು ಉನ್ನತಿ ಆಗಿದೆಯೋ ಅವನತಿಯಾಗಿದೆಯೊ, ನಿಷ್ಕರ್ಷಿಸಿಕೊಳ್ಳಿ.

೧. ವಿವಸ್ವನ್ ಮಾನವಧರ್ಮದ ಭವಿಷ್ಯ ಸೂಚಕ ಒಂದು ಪವಾಡ ಕಥೆ (ಸ್ಪಷ್ಟೀಕರಣಾತ್ಮಕ aetio-logical myth). ಇಂದಿನ ಸಂಹಿತೆಯಲ್ಲಿದೆ: ಜಾತವೇದ ಅಗ್ನಿ, ನ-ಚಿಕೇತ ಅಗ್ನಿಯಲ್ಲಿ ಹೋಗಿ ಅಡಗುತ್ತಾನಂತೆ ಇದಕ್ಕೆ ಎರಡು ಕಾರಣಗಳನ್ನು ಸೂಚಿಸಲಾಗಿದೆ

೧. ಹವ್ಯವಾಹನನ ಕೆಲಸಕ್ಕೆ ಬೇಸತ್ತು, ಆತನು ಇಲ್ಲಿಗೆ ಓಡಿಬರುತ್ತಾನಂತೆ.

೨. ಪ್ರಾಣ ಉಳಿಸಿಕೊಳ್ಳಲು, ಹೆದರಿ ಓಡಿಬಂದು ನಚಿಕೇತಾಗ್ನಿಯಲ್ಲಿ (ಉಲ್ವ (Vulva) ಆಪ : ರಸ: ರೇತದಲ್ಲಿ) ಅಡಗಿದನಂತೆ!

ಮಮ ಪೂರ್ವೇ ಭ್ರಾತರಃ ಹತಃ ತನ್ನ ಅಣ್ಣಂದಿರಿಬ್ಬರ ಕೊಲೆಯಾದುದನ್ನು ಅರಿತ ತಾನು, ಓಡಿ ಬಂದೆನೆಂಬ ಈ ಕಾರಣವು, ನಿದರ್ಶನಕ್ಕೆ ತರುವ ಪರಿಸ್ಥಿತಿಯು ಇಂದು ನಮ್ಮ ಸುತ್ತಲೂ ಕಾಣುತ್ತಿದೆ! ಪ್ರಜ್ಞೆ ಜಾಗೃತವಿಟ್ಟುಕೊಂಡು, ವಿದ್ಯೆ Wisdom : ವಿವೇಕದಿಂದ ಬಾಳುವ ಅಶಕ್ಯವಾಗುವಾಗ ಇಂದ್ರಿಯಗಳ ಪಾತಳಿಯ ನೆಲದ ಮೇಲಣ ನಾತದಲ್ಲಿಯೇ ನರುಗಂಪು ಉಂಟೆಂಬ ಭೂಮಿಕೆಯನ್ನು ಸ್ವೀಕರಿಸಿ ಎಂತೂ ಬದುಕುವ ಹೊತ್ತು, ಭಾರತಕ್ಕೇ ಏಕೆ, ಪ್ರಪಂಚಕ್ಕೆಲ್ಲ ಬರಲಿದೆ; ಈ ಭಗವಂತ ಸಂಪ್ರದಾಯ ತತ್ತ್ವಪ್ರಣಾಲಿಯ ಅನುಸರಣದಿಂದ, ಎಂಬ ಆಗಾಮೀ ಭವಿಷ್ಯಸೂಚಕ ಕಾಲಜ್ಞಾನದ ಕಥೆ ಇಂದಿನ ಈ ವೇದದಲ್ಲಿ ಇದೆ! ಇಂದು ಇದು dramatic irony ಮೂಲಕ ಹೊರಬರುತ್ತಿರುವ ಸತ್ಯಾಂಶ. ಜಾತವೇದ ಅಗ್ನಿ, ಇಲ್ಲಿ ಅಡಗಿದ್ದಾನೆ ಎಂದು ಮೀನ ಜಾತೀ ಹೇಳುತ್ತದಂತೆ-ಈ ಮೀನವು, ಆಹಾರವಾಗಲಿ ಎಂಬ ಶಾಪವಾಯಿತಂತೆ; ಶಾಕ್ತಸಂಪ್ರದಾಯ (ಚಿದಗ್ನಿಕುಂಡ) ಉಪಾಸಕರಿಗೆ ಪಂಚಮಕಾರಗಳಲ್ಲಿ ಮತ್ಸ್ಯವೂ ನೈವೇದ್ಯಕ್ಕೆ ಬೇಕು. ಮತ್ಸ್ಯಪಡೆದ ಶಾಪದಿಂದಾಗಿ ಅದು ಆಹಾರ ಪದಾರ್ಥವಾಯಿತು, ಎಂಬ ಸಮಾಧಾನವೂ ಈ ಕಥೆಯಿಂದ ದೊರೆಯುತ್ತದೆ!

೨. ಅಗ್ನಿಯ ಉಪಾಸನೆ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯ ಎಂಬ ಸ್ಥೂಲ ನಂಬುಗೆ, ಪಾಶ್ಚಾತ್ಯ ಸಂಶೋಧಕರೂ ಉಳಿಸಿಕೊಂಡು ಬಂದಿದ್ದಾರೆ! ಆದರೆ, ಅಗ್ನಿ- ಅಗ್ನಿಗಳಲ್ಲಿ, ಭೂಮಿ-ಆಕಾಶಗಳಷ್ಟು ಅಕ್ಷರಶಃ ಅಂತರವಿದೆ. ನ-ಚಿಕೇತಾಗ್ನಿ : ಯೋಷಾ ವಾವಾ ಗೌತಮಾಗ್ನಿಃ, ಪುರುಷೋ ವಾವ ಗೌತಮಾಗ್ನಿಃ ೭ ತಸ್ಯಾಃ ಉಪಸ್ಥಃ ಏವ ಸಮಿತ್-ಇದು ಯಜ್ಞ, ಇದು ಭೂಮಿಯೊಳಗಿನ-ಸ್ತ್ರೀ ಪುರುಷ ದೇಹದೊಳಗಿನ ಅಗ್ನಿ. ವೃಕ್ಷ ಜಲಚರಗಳಾದಿಯೊಳಗಿನ ಅಗ್ನಿ-ಈ ಅಗ್ನಿಯನ್ನು ಸಹಸ್ರ ಮುಷ (ಸೃಜನೇಂದ್ರಿಯ) ನು ಎಂದು ಈ ವೇದದಲ್ಲಿದೆ.[೮] ದ್ರಪ್ಸಃ (dropper) ಎಂಬ ಪದದಿಂದ ಇವನು ಸ-ರಸ (liquid) ಅಗ್ನಿ ಆಗುತ್ತಾನೆ!

೩. ಇನ್ನು ಜಾತವೇದ ಅಗ್ನಿ-ವಿಚಾರ; ಜಾತ-ವೇದ-ಜಾತಪ್ರಜ್ಞ ರೂಪ ಈ ಅಗ್ನಿ ಪ್ರಜ್ಞಾಪ್ರಾತಿಭ ದೃಷ್ಟಿಸ್ವರೂಪ ಅಂತಃಪ್ರೇರಕ ಶಕ್ತಿ intuition ಅಥವಾ instinct. ಇದು ಅಮೂರ್ತ ತಾತ್ತ್ವಿಕ ರೂಪ. ಅರ್ಥ (ವಿಚಾರ-ಜ್ಞಾನ) ಪ್ರೇರಕ ಶಕ್ತಿಸೂಚಕ ಸವಿತೃ, ವಿವಸ್ವನ್ ದೈವತಗಳಂತೆ ಇದು ಸ್ವರ್‌ಪಾತಳಿಯ ಮೇಲಿನಿಂದ ಮಾನವರಿಗೆ ಲಭಿಸುವ ಪ್ರೇರಣೆ. ಆದರೆ, ಇಡೀ ವೇದೋಪನಿಷತ್ತುಗಳಲ್ಲಿ ಎಲ್ಲೆಲ್ಲೂ ಭೌತಅಗ್ನಿ-ಆಪ-ರಸರೇತ ಸ್ವರೂಪ ಅಗ್ನಿ ಹಾಗೂ ಸ್ವರ್ ವಿವಸ್ವನ್ ಸವಿತೃದೈವತ ಪಾತಳಿಯ ಅಗ್ನಿ ಇವೆರಡರೊಳಗಿನ ಅಂತರವನ್ನು ಯೋಜನಾಪೂರ್ವಕವಾಗಿ ಇಲ್ಲವಾಗಿಸುವುದನ್ನು ಗಮನಕ್ಕೆ ತಂದುಕೊಡುವ ಪ್ರಮಾಣಗಳು ದೊರೆಯುತ್ತವೆ. ಇವೆಲ್ಲವುಗಳ ನಿರ್ದೇಶಕ್ಕೆ ಅವಕಾಶವಿಲ್ಲ. ಆದರು, ಜಿಜ್ಞಾಸುಗಳು ಪರೀಕ್ಷಿಸಿಕೊಳ್ಳಲು ಅನುಕೂಲವಾಗಲೆಂದು ಒಂದೆರಡು ಮಾದರಿ ಸೂಚಿಸುವುದು ಅವಶ್ಯವಾಗುತ್ತದೆ. ಉದಾ : ೧) ಕೇನೋಪನಿಷತ್ತಿನಲ್ಲಿ ಜಾತವೇದ ಈ ಹೆಸರೆತ್ತಿ ಮೂದಲಿಸಲಾಗಿದೆ: “ನೀನು ಜಾತವೇದನೆಂಬ ಬಿರುದಿನ ಅಗ್ನಿ! ಹಾಗಾದರೆ, ನಿನ್ನ ಎದುರು ಇರುವ ಈ ಯಕ್ಷ (ಗುಮ್ಮ) ಏನು?” (ಹೇ ಜಾತವೇದ! ಕಿಂ ಇದಂ ಯಕ್ಷಂ ಇತಿ) ಈ ಜಾತವೇದನಂತೆ ಇಂದ್ರನ ತೇಜೋವಧೆಯೂ ಇಲ್ಲಿದೆ. ಉಮಾಹೈಮವತಿ ಎಂಬ ಆದಿಮಾತೆ, ಇಂದ್ರನಿಗೆ ಜ್ಞಾನದಾನ ಮಾಡಿ ಆತನ ಅಜ್ಞಾನ ದೂರ ಮಾಡುತ್ತಾಳೆ. ತತ್ (ಬ್ರಹ್ಮತತ್ತ್ವವನ್ನು) ವನಂ (ಪುಷ್ಕರಿಣ-ತೀರ್ಥ ಈ ರೂಪದಲ್ಲಿ) ಇತಿ ಉಪಾಸಿತವ್ಯಂ, ತಾರಾ ಭಗವತಿ, (ಸಂಸಾರ ಸಾಗರದಿಂದ ನೌಕೆಯಂತೆ ಆಚೆಯ ತೀರಕ್ಕೆ ತಲುಪಿಸುವ ಸಾಮರ್ಥ್ಯವುಳ್ಳ) ತೀರ್‌ಥಿಕೆಯ ಈ ಪಾತ್ರವು ಒಂದು ಕಾಲಕ್ಕೆ ಕೇಂದ್ರ ಗುರುಸ್ಥಾನದಲ್ಲಿತ್ತು. ಕಾಲ-ಪರಿಸ್ಥಿತಿ ಬದಲಾಗಿ ತಾರಾ: ಭಗವತಿ ಸ್ಥಳದಲ್ಲಿ ಭಗ-ವಂತ: ಕುಮಾರ ದೇವನು, ತಾರಕ ಮಂತ್ರೋಪದೇಶದ ಅಧಿಕಾರಿಯಾಗುತ್ತಾನೆ! ಆದರೆ, ಆದಿತಿ-ಶಕ್ತಿಯ ಪ್ರತಿನಿಧಿ ಕುಮಾರಿ : ತಾರಾ-ಭಗವತಿಯ ವರ ಪ್ರಸಾದ ಮತ್ತು

ಆದಿಪುರುಷನ ಪ್ರತಿನಿಧಿ ಕುಮಾರ ಗುರುಮೂರ್ತಿ ಕರುಣಿಸುವ ಪಾದೋದಕ ಪ್ರಸಾದ ಎರಡರಲ್ಲಿಯೂ (qualitative) ಅಂತರವು ಉಂಟಲ್ಲ? ವಿಡಂಬಿತ ಜಾತವೇದ ಅಗ್ನಿಯು ನಚಿಕೇತ ಪಾತ್ರವಿರುವ ಕಠೋಪನಿಷತ್ತಿನಲ್ಲಿ ಅರಣಿ (ಕಾಷ್ಠ)ಗಳಲ್ಲಿ ಹುದುಗಿರುವ ಜಾತವೇದನು, ಗರ್ಭಿಣಿಯರ ಗರ್ಭದ ರೂಪದಿಂದ ಸೂಚಿತನಾಗಿದ್ದಾನೆ![೯]

೪. ಭಾಷೆ: ಪ್ರಜ್ಞಾಪ್ರೇರಕ ಶಕ್ತಿ : ಇದನ್ನು ಅಗ್ನಿರೂಪಕದಿಂದ ಒಂದೆಡೆಗ ವರ್ಣಿಸಲಾಗಿದೆ. ಮಾನವರಲ್ಲಿ ಪ್ರಜ್ಞೆಯನ್ನು ಪ್ರೇರಿಸಿದ್ದು ಅಗ್ನಿ ಎಂಬ ಶ್ರದ್ಧೆಯು ಇದರ ಹಿಂದೆ ಉಂಟು : ಅಗ್ನಿಃ ವಾಕ್‌ಭೂತ್ವಾ ಮುಖಂ ಪ್ರಾವಿಶತ್ ?[೧೦] ಸುಂದರ ವಾಕ್ಯ. ಆದರೆ, ಈ ಅಗ್ನಿಯು ನಚಿಕೇತನು ಆಪ- ರಸ ರೇತರೂಪ ಅಗ್ನಿಯೋ? ಅಥವಾ ಸವಿತೃ-ವಿವಸ್ವನ್ ಈ ದೈವತಗಳ ಸ್ವರ್ ಪಾತಳಿಯ ತಾತ್ವಿಕ-ಪ್ರಕಾಶರೂಪ ಅಗ್ನಿ ಜಾತವೇದನೊ? ಇದರ ಸ್ಪಷ್ಟತೆಯು ಇಲ್ಲ! ಆದಿತ್ಯನ ಉಲ್ಲೇಖವಿರುವ (೧.೧.೪) ಈ ಉಪನಿಷತ್ತಿನ ಅಗ್ನಿ ಪಾತ್ರ ಸಮಯಾಚಾರ ಪ್ರೇರಕ ನಚಿಕೇತಾಗ್ನಿಯೇ ಆಗಿರಲಿಕ್ಕೆ ಬೇಕು ಎಂಬುದು ನಿಶ್ಚಿತವಿದೆ! ಈ ಐತರೇಯ ಉಪನಿಷತ್ತಿನಲ್ಲಿ ಬರುವ ಮನಸ್ಸಿನ ವಿವಿಧ ಸೂಕ್ಷ್ಮ ವಿಭೇದಗಳ ಸುಂದರ ಪರಿಭಾಷೆಯುಂಟು:

> ಯತ್ ಏತತ್ ಹೃದಯಂ ಮನಃ ಚ ಏತತ್! ಸಂಜ್ಞಾನಂ, ಅಜ್ಞಾನಂ, ವಿಜ್ಞಾನಂ, ಪ್ರಜ್ಞಾನಂ, ಮೇಧಾ, ದೃಷ್ಟಿಃ, ಧೃತಿಃ, ಮತಿಃ, ಮನೀಷಾ, ಜೂತಿಃ, ಸ್ಮೃತಿಃ, ಸಂಕಲ್ಪಃ, ಕ್ರತುಃ, ಅಸುಃ, ಕಾಮಃ, ವಶಃ, ಇತಿ ! ಸರ್ವಾಣಿ ಏವ ಏತಾನಿ ಪ್ರಜ್ಞಾನಸ್ಯ ನಾಮಧೇಯಾನಿ ಭವಂತಿ॥ (೩-೨)
>
> ಪ್ರಜ್ಞಾ(ನ) ನೇತ್ರಂ! ಪ್ರಜ್ಞಾ ನೇತ್ರೋ ಲೋಕಃ (೩-೩)

ಹೃದಯ ಮತ್ತು ಮನಸ್ಸು ಇವೆರಡರೊಳಗಿನ ಅಂತರವನ್ನು ಶೂನ್ಯಗೊಳಿಸಲಾಗಿದೆ. ಆದರೆ, ಪುರಾತನ ಪ್ರಯೋಗಗಳಲ್ಲಿ ಹೃದಾಮನಸಾ ಎಂಬ ಪ್ರತ್ಯೇಕ ಉಲ್ಲೇಖಗಳಿದ್ದು, ಪ್ರಾಜ್ಞರು ಇಂಥ ಪ್ರಯೋಗಗಳ ಹಿನ್ನೆಲೆಯಲ್ಲಿ ಹೃದಾ - ಹೃದಯ ಇದು ಭಾವನಾತ್ಮಕ ಮತ್ತು ಮನಸ್ಸು ಇದು ವಿಶ್ಲೇಷಣದ ಕಡೆಗಿನ ಒಲವಿನದು, ಎಂದು ಹೇಳಿದ್ದಾರೆ. ಈ ಉಪನಿಷತ್ತಿನೊಳಗೆ ಬಂದಿರುವ ಭಾವ-ಬುದ್ಧಿಯ ಪಾತಳಿಯ ಮೇಲೆ ಇರುವ ಮನಸ್ಸಿನ ವಿವಿಧ ನಿಲುಮೆಗಳ ಸೂಕ್ಷ್ಮ ನಾಮರೂಪಾತ್ಮಕ ತಾರತಮ್ಯವು, ನಿಜವಾಗಿ ದಿವ್ಯಾಧ್ಯಾತ್ಮಕ್ಕೆ ಅನವಶ್ಯಕವಿದೆ. ಏಕಂ : ಸತ್ ರಸೋ ವೈ ಸಃ ಈ ಜೀವನಾನುಭೂತಿಯ ಆದರ್ಶವು, ನಿಃಶಬ್ದಂ ಬ್ರಹ್ಮದ ಉಪಾಸನೆಯಲ್ಲಿ ಪರಿಣಮಿಸಲೇಬೇಕು. ಭಾಷೆ ಎಂಬುದು ಸೂತಕ ಎಂಬ ನಂಬುಗೆ ತಲೆದೋರಲೇಬೇಕು. ಗುರೋಽಸ್ತು ಮೌನಂ ವ್ಯಾಖ್ಯಾನಂ - ಶಬ್ದದ ಆಚೆಯ ಶಬ್ದ... ಎಂಬ ಈ ವಾಚಾತೀತ ಅವಸ್ಥೆಯ ಅನುಸಂಧಾನವು ಅವಶ್ಯವಿರುವ ಈ ನಚಿಕೇತಾಗ್ನಿಯ ಉಪಾಸಕರ ಉಪನಿಷತ್ತಿನಲ್ಲಿ ಬಂದಿರುವ ಪ್ರಜ್ಞೆ- ಪ್ರಜ್ಞಾನದ ಸೂಕ್ಷ್ಮ ಪ್ರಕಾರಗಳನ್ನು ಮೂಲದಲ್ಲಿ ರೂಪಿಸಿದವರು ವಿವಸ್ವನ್ ಪ್ರೇರಿತ ಮನುಪ್ರಣೀತ ಮಾನವ ಧರ್ಮದ ಜಾತವೇದ ಅಗ್ನಿಯ ಉಪಾಸಕರೇ ಇರಲಿಕ್ಕೆಬೇಕು.

ಭಗವತ್ ಗೀತೆಯಲ್ಲಿ ವ್ಯಕ್ತವಾಗಿರುವ ಪ್ರಜ್ಞಾತತ್ತ್ವದ ಬಗೆಗಿನ ಮನೋಭಾವಸೂಚಕ ಉಲ್ಲೇಖಗಳ ಮೂಲಕವೂ ಪ್ರಜ್ಞಾ ಈ ಪರಿಭಾಷೆ, ದಿವ್ಯಾಧ್ಯಾತ್ಮದ ಪರಂಪರೆಯ ಹಿನ್ನೆಲೆಯಲ್ಲಿ ಬೆಳೆದುದಲ್ಲ, ಎಂಬ ಸಂಗತಿಯೇ ದೃಢಪಡುತ್ತದೆ.

೫. ಭಗವತ್ ಗೀತೆಯಲ್ಲಿ ಆಗಿರುವ ಪ್ರಜ್ಞಾತತ್ತ್ವದ ಅವಮೂಲ್ಯನದ ಕೆಲವು ಮಾದರಿ ಅರ್ಜುನನು ತನ್ನ ಮನಸ್ಸಿನೊಳಗಿನ ವಿಚಾರ-ಭಾವನೆ ವ್ಯಕ್ತ ಪಡಿಸುತ್ತಾನೆ. ಇದನ್ನೆಲ್ಲ ಕೇಳಿದ ಭಗವಂತನು, ಪಿಸುಮಾತಿನಿಂದ (ಪ್ರಜ್ಞಾವಾದಾಂಶ್ಚ ಭಾಷಸೇ) ಪ್ರಜ್ಞಾವಾದಿಯಂತೆ ಧೀಮಂತನಂತೆ ನೀನು ಮಾತಾಡುತ್ತೀ? ಎಂದಿರುವಲ್ಲಿ ಪ್ರಜ್ಞೆಯ ತಾತ್ವಿಕ ಭೂಮಿಕೆಯ ಅವಹೇಳನವು ಇಲ್ಲಿ ಕಾಣುತ್ತಿದೆ. ಪ್ರಜ್ಞಾರೂಪ ಕಣ್ಣಿನ ಮೂಲಕ ಈ ನರ(ಳ) ಮನು: ಮಾನವನಾಗಿದ್ದಾನೆಂಬ ಐತರೇಯ ಉಪನಿಷದ್ವಾಕ್ಯವು, ಜಾತವೇದ ಅಗ್ನಿ (ದೃಷ್ಟಿಕೋನ), ಜಾತಪ್ರಜ್ಞ

‘ಮಧ್ಯಮಾ ವಾಕ್’ ಶಕ್ತಿ : ಆದಿ ಗುರುದೇವಿ



ಪಾಶ್ಚಾತ್ಯ ಓರ್ಫಿಕ್ ಸಂಪ್ರದಾಯದ ಆದಿಶಕ್ತಿಯ ಪೂಜಾ ಪ್ರತೀಕ
“ತತ್ ವನಂ ಉಪಾಸಿತವ್ಯಂ”
ಕೇನೋಪನಿಷತ್ತಿನ ಉಮಾಹೈಮವತಿ ‘ಯಕ್ಷಿ’ ಯನ್ನು ಸ್ಮರಿಸಿಕೊಳ್ಳಬಹುದು.

ಈ ಮಾನವ ಎಂಬ ವಿವಸ್ವನ್ ಪ್ರೇರಣೆಯ ಮನುಪ್ರಣೀತ ಮಾನವ ಧರ್ಮ ಪರಂಪರೆಯು ಮೂಲ ಶ್ರದ್ಧೆಯನ್ನು ಪುಷ್ಟೀಕರಿಸುತ್ತದೆ! ಆದರೆ, ತೋರಿಕೆ ಮಾತ್ರ! ಇಡೀ ಐತರೇಯ ಉಪನಿಷತ್ತು ರೇತಸತ್ಯದ ಜೀವನ ದೃಷ್ಟಿ ಪ್ರೇರಕ ನಚಿಕೇತಾಗ್ನಿ ಉಪಾಸಕರ ಆದಿತ್ಯ ಸಂಪ್ರದಾಯದ ಆಶಯವನ್ನೇ ಪ್ರತಿಪಾದಿಸಿದೆ!

ಈ ತಿರುವು ಮುರುವು ಮಾತಿನ ಗುಟ್ಟು, ಶರೀಫ ಸಾಹೇಬನು ಬಲ್ಲ! ಈತನು ಪ್ರಾಮಾಣಿಕವಾಗಿ ಈ ಶೈಲಿ ಸ್ವೀಕರಿಸಿದ್ದಾಯ್ತು! ಗಾಂಜೀಸೇದಿರೋ! ಅಣ್ಣಗಳಿರಾ ಗಾಂಜೀ ಸೇದಿರೊ! ಇದರ ಹಿಂದೆ ಶರೀಫನ ಸದ್ಭಾವವಿದೆ. ಇಂಥ ಸಂತರಲ್ಲಿ ಕೃಷ್ಣ (ಮೃತ್ಯುಶೂಪನು ತಾನು) ಎಂಬುವನನ್ನೂ, ತಿರುವುಮುರುವಾಗಿಸಿ (ಈತನು ಆದಿತ್ಯ) ಚಂದ್ರಾ ಪುರಿಶಯ(ನ)-ಚಂದ್ರ ಆದಿತ್ಯ ಮಿಥುನಯೋಗಿ ಭಗವಂತ ಸ್ವರೂಪಿಯಾಗಿದ್ದರೂ ಇಲ್ಲಿ ಸೂರ್ಯ ಪ್ರಕಾಶತತ್ತ್ವ ಕಾಣುವ ಪ್ರಾಮಾಣಿಕ ಶ್ರದ್ಧೆಯು ನಿರ್ಮಾಣವಾಗಿರುವುದನ್ನೂ ಕಾಣಬಹುದಾಗಿದೆ. ಜ್ಞಾನೇಶ್ವರಾದಿಗಳು ಈ ಬಗೆಯವರಾದರು. ಜ್ಞಾನೇಶ್ವರನ ಪರಂಪರೆಯ ಇನ್ನೊಬ್ಬ ಪ್ರಜ್ಞಾವಂತ ಏಕನಾಥನು; ಶರೀಫನ ಗುರುಮಂತ್ರ - ತಿರುವುಮುರುವಾಗಿ ಪ್ರಪಂಚ ನೋಡುವ ಗುಟ್ಟನ್ನು ರಟ್ಟು ಮಾಡಿದ್ದಾನೆ. ಏಕನಾಥನ ಮನೆಯ ತಿರುವು ಮುರುವು ಇದು ವೈಶಿಷ್ಟ್ಯ-ಕುರುಹು (ಉಲಟೀ ಖೂಣ) ಎಂದು ಆತನೇ ಹೇಳಿದ್ದಾನೆ!

ಈ ಶರೀಫ, ಏಕನಾಥರು ನಮ್ಮ ರಾತ್ರಿ-ಸೂರ್ಯ ಉಪಾಸನಾಸಂಪ್ರದಾಯವನ್ನೇ ಮರಳಿ ತಿರುವು-ಮುರುವಾಗಿಸಿ ಗ್ರಹಿಸಿಕೊಳ್ಳಲು ಬೋಧಿಸುತ್ತಿದ್ದಾರೆ. ಇಲ್ಲಿ ನಮ್ಮ ಹಿಂದೂ ಎಂಬ ಧರ್ಮವು ತಿರುವು-ಮುರುವು ಆಗಿರುವ ಒಪ್ಪಿಗೆಯೇ ನೇರವಾಗಿ ದೊರೆಯುತ್ತಿದೆ. ಆದರೆ, ಉಪನಿಷತ್ತುಗಳಲ್ಲಿ ಬರುವ ಪ್ರಾಜಾಪತ್ಯ ಸೂರ್ಯ ಪ್ರಜಾ-ಪತಿ. ಪ್ರಜಾನಿರ್ಮಾಣಶಕ್ತಿಯ ಈ ಸೂರ್ಯ ಭಗ-ವಂತನೇ ಇರಬೇಕಷ್ಟೆ?

ಐತರೇಯೋಪನಿಷತ್ತು ಪ್ರಜ್ಞೆಯೇ ಮಾನವರ ಕಣ್ಣು ಎಂದಿದೆ. ಆದಕಾರಣ ಪ್ರಜ್ಞಾ (ಪ್ರಕಾಶ) ತತ್ತ್ವದ ಉಪಾಸನೆ ಮಾಡಿರಿ, ಎಂದು ಬೋಧಿಸಲಾಗುವಲ್ಲಿ ಈ ಪ್ರಜ್ಞಾ-ಪ್ರಕಾಶವನ್ನು ಮೆಲ್ಲನೆ ಜ್ಯೋತಿರೂಪಕ್ಕೆ ತಿರುಗಿಸಲಾಗುವ, ಈ ಯಾತುಕೃತ್ಯ (Black magic) ಇದರ ಪ್ರಜ್ಞೆ ಮರಳಿ ಉಂಟಾದಲ್ಲಿ ಭಾರತೀಯ ಮಹೋನ್ನತಿಯ ಸಮಯ ದೂರವಿಲ್ಲ. ಈ ಯಾತು ಮಾಟವು, ಇದರ ಅಸ್ತಿತ್ವದ ಪ್ರಜ್ಞೆ ಜಾಗ್ರತವಾದರೂ ಸಾಕು. ಇದನ್ನು ಮಾಡಿದವರ ಮೇಲೆಯೇ ಇದು ಮರಳುತ್ತದೆ ಎಂಬ ಜಾನಪದರ ಪ್ರಜ್ಞೆ (Folk Wisdom ಎಂದು ಮ್ಯಾರೆಟ್ Psychology and Folklore ದಲ್ಲಿ ಹೇಳಿದ್ದಾನೆ). ಅಕ್ಷರಶಃ ಖರೇ ಇದೆ. ಎಚ್ಚರ ಬರಬೇಕು. ಆದರೆ ಜಾನಪದರೇ ಏಕೆ, ಇಡೀ ಸುಶಿಕ್ಷಿತ ಬುದ್ಧಿಜೀವಿಗಳೆಂಬವರೆಲ್ಲ ಬುದ್ಧಿಯ ವ್ಯಾಪಾರ ಮಾಡಿ ಬದುಕುತ್ತಿದ್ದೇವೆ. ನಾವೆಲ್ಲ ಪ್ರಜ್ಞಾನೇತ್ರಕ್ಕೆ ಎರವಾಗಿದ್ದೇವೆ. ನಾವೆಲ್ಲರೂ ಬರ್ಗಸನ್ ಹೇಳಿರುವ Infrarational intuition ಪ್ರಾಣ (ಪಶು) ಚೇತಸದ ಪಾತಳಿಯ ನಚಿಕೇತಾಗ್ನಿ ದೃಷ್ಟಿಕೋನದ-ದಿವ್ಯಾಧ್ಯಾತ್ಮ ಸಂಪ್ರದಾಯಕ್ಕೆ ಶರಣು ಹೋದದ್ದಾಗಿದೆ! ಈ ಪ್ರಜ್ಞೆ ಮೂಡಿ, ಮರಳಿ ಭಾರತೀಯರು ಪ್ರಜ್ಞಾನೇತ್ರ ಸಂಪಾದಿಸಿದಲ್ಲಿ ಮೂಲ ವಿವಸ್ವನ್ ಪ್ರೇರಣೆಯ ಮನುಪ್ರಣೀತ ಮಾನವ ಧರ್ಮ ಆಚರಣೆಯಲ್ಲಿ ಬರತೊಡಗಿದ್ದು ಕಾಣಲು ತಡವಾಗಲಾರದು-ಇದಕ್ಕಾಗಿ ಎಚ್ಚರಬರಬೇಕು. ನಮ್ಮ ವೇದೋಪನಿಷತ್ತುಗಳು, ವ್ಯಾಸ-ವಾಲ್ಮೀಕಿ (ಹುತ್ತಪ್ಪ ನಾಗ) ಮಾಡಿರುವ ಇನ್ನಾಲಗೆಯ ನರರಾಗಿ ಮಾರ್ಪಡುವ ಮಾಟ! ಇದರ ಪ್ರಜ್ಞೆ ಜಾಗ್ರತವಾದರೆ, ಈ ಮಾಟದ (spell) ಪ್ರಭಾವದಿಂದಾಗಿ ಬಂದಿರುವ ಸಂಮೋಹಕ (hypnosis) ಮನೋಭಾವದ ಈ ಗ್ರಹಣ ಕಾಲ - ರಾಹು (ಚಂದ್ರ!) ಪ್ರಭಾವ ನಷ್ಟವಾಗದೆ ಇರದು.

ಪ್ರಜ್ಞಾನೇತ್ರ ಕಳೆದು ಬಿಡುವ ಕೃಷ್ಣಕಾರಸ್ಥಾನದ ಇನ್ನೊಂದು ಮಾದರಿಯನ್ನು ನೋಡಿ! ಪ್ರಜ್ಞಾವಾದಾಂಶ್ಚ ಭಾಷಸೇ ಎಂಬ ಮೂದಲಿಕೆಯ ಕೃಷ್ಣ ಭಗವಂತನ ಮಾತು ಪ್ರಜ್ಞಾ ಸೂರ್ಯನ ತೇಜೋಭಂಗ ಮಾಡಿ ರಾತ್ರ ಸಮಯಾಚಾರದ ದಾರಿ ಸುಗಮವಾಗಿಸುತ್ತಿದ್ದಾನೆ. ಇಂಥ ಇನ್ನೊಂದು ಎಡೆ ಸ್ಥಿತಪ್ರಜ್ಞೆಯ ಈ ಮಾಟದಲ್ಲಿದೆ! ಭಗವದ್ಗೀತೆಯ ಸ್ಥಿತಪ್ರಜ್ಞ ಲಕ್ಷಣಗಳನ್ನು ಮನಸ್ಸಿನ ಮೇಲೆ ಬಿಂಬಿಸುವ ಅಧ್ಯಾಯವನ್ನು ಎರಡನೆಯ ಶವದ ಪಕ್ಕದಲ್ಲಿ ಕುಳಿತು ಪಠನ ಮಾಡುವ ಸಂಪ್ರದಾಯವು ಭಾವುಕರ ಪರಂಪರೆಯಲ್ಲಿ ನಡೆದು ಬಂದಿದೆ! ನಮ್ಮ ಆಕಾಶವಾಣೀ ಕೇಂದ್ರಗಳಲ್ಲಿ, ಶುಕ್ರವಾರ, ಮಹಾತ್ಮಜೀ ನಿರ್ಯಾಣದಿಂದ ಪಾಲನೆಯ ವ್ರತದಂದು, ಗೀತೆಯ

ಸ್ಥಿತಪ್ರಜ್ಞನ ಶ್ಲೋಕಗಳ ಪುನರಾವರ್ತನೆ ನಡೆಯುತ್ತದೆ. ವಸ್ತುತಃ ಪ್ರಜ್ಞೆ ಬಹುಮುಖ; ವಿಶ್ವತೋಮುಖ. ವಿವಸ್ವನ್, ಸವಿತೃ ಈ ಸೌರಪ್ರತಿಮಾ ಪೂಜೆ ಪ್ರಜ್ಞಾ: ಧೀ ಶಕ್ತಿಯ ಪ್ರಚೋದನೆಗಾಗಿ ಇರುತ್ತದೆ. ಪ್ರಜ್ಞೆ Wisdom ವೇದನ ಶಕ್ತಿ ಇದೇ ಮಾನವತ್ವ ಲಭಿಸಿದ್ದರ ಮೂಲಕಾರಣ. ಸಾಕ್ರೆಟೀಸನು Wisdom (not intellect) ಇದ್ದವನು ನಾಗರಿಕ, ಮನುಷ್ಯ ಎಂದಿದ್ದಾನೆ. ಇದರ ಕಾರಣವೂ ಪ್ಲೇಟೋನ ಮೂಲಕ ಗೊತ್ತಾಗುತ್ತದೆ. ತನ್ನ ಇತಿಮಿತಿಗಳನ್ನು ಕೊರತೆಗಳನ್ನೂ ಕಾಣುವ ಸಾಮರ್ಥ್ಯವು Wisdom ದ ಲಕ್ಷಣ, ಎಂದು ಸಾಕ್ರೇಟಿಸ್ ಸೂಚಿಸಿದ್ದಾನೆ. ಒಳಗಿನ ತಿಳಿ (ವಿನ) ಬೆಳಕು, ಹೊರಗಿನ ಪ್ರಪಂಚದ ಮೌಲ್ಯ ಮಾಪನ-ಅರ್ಥಗ್ರಹಣದ ಕಾರ್ಯ ಮಾಡುವಂತೆ, ತನ್ನ ಇತಿಮಿತಿಗಳನ್ನೂ ಗ್ರಹಿಸಿಕೊಂಡು ಈ ಕೊರತೆಗಳನ್ನು ಕಡಿಮೆ ಮಾಡಿಕೊಳ್ಳಲು ಒತ್ತಾಯಪಡಿಸುತ್ತದೆ. ಪ್ರಜ್ಞೆ ಸಂಸ್ಕೃತಿ ಸೃಷ್ಟಿಸುವ ಪ್ರಕ್ರಿಯೆಯಾಗಿ ಪರಿಣಮಿಸುತ್ತಿರುವ ಕಾರಣವು ಈ ಅಂತಃಪ್ರೇರಣೆಯಲ್ಲಿದೆ.

ಬರ್ಗಸನ್ ಹೇಳಿರುವ Suprarational intuition ಎಂಬುದೇ ಈ ಪ್ರಜ್ಞಾನೇತ್ರ : ಜಾತವೇದ ಅಗ್ನಿ. ಇದು ನಚಿಕೇತಾಗ್ನಿಯಲ್ಲ. ಮೂಲವೇದಕಾಲಕ್ಕೆ ಉದಾತ್ತ ಭೂಮಿಕೆಯ ಋತಃ ಸತ್ಯದ ಆಧಾರದ ಮೇಲಣ ಮಾನವಧರ್ಮವನ್ನು ಅಂದಿನವರು ಗ್ರಹಿಸಿಕೊಂಡದ್ದು ಹೇಗೆ? ಎಂಬ ಪ್ರಶ್ನೆಗೆ, ಅಂದಿನವರು ಆರಾಧಿಸುತ್ತಿದ್ದ ಪ್ರಜ್ಞಾ(ಧೀ) ಪ್ರಕಾಶ ಪ್ರೇರಕ ಆದರ್ಶ ಪ್ರತಿಮೆಯ ಮೂಲಕ ಉತ್ತರವು ದೊರೆಯುತ್ತಿದೆ. ಬರ್ಗಸನ್ ಹೇಳಿರುವ Suprarational intuition ಈ ಪರಿಭಾಷೆಯ ಅರ್ಥವು ಜಾತವೇದ ಅಗ್ನಿ, ಜಾತಪ್ರಜ್ಞ ಎಂಬ ಸಾಯಣರ ಸ್ಪಷ್ಟೀಕರಣದ ಮೂಲಕವಾಗಿ ಈಗಲೂ ಗೊತ್ತಾಗಲಿದೆ.

ಪ್ರಜ್ಞಾನೇತ್ರವನ್ನು ಸವಿತೃರೂಪ ತೇಜೋವಲಯದ ರೂಪದಲ್ಲಿ ಆರಾಧಿಸಲಾಗುತ್ತಿತ್ತು. ಇದು ವಿವಸ್ವನ್ ಪ್ರೇರಣೆಯ ಮನು ಪ್ರಣೀತ ಮಾನವ ಧರ್ಮ ಪರಂಪರೆಯ ಸಂಪ್ರದಾಯ ಆದರೆ ದಿವ್ಯಚಕ್ಷು ಎಂಬ ಪ್ರತಿಮೆ, ಪ್ರಜ್ಞಾನೇತ್ರ ಉಪಾಸನೆಯನ್ನು ತಿರುವು ಮುರುವಾಗಿಸಿದೆ. ಚಕ್ಷುಃ ವೈ ಸತ್ಯಂ[೧೧] ಈ ದಿವ್ಯಸತ್ಯ ಚಕ್ಷುವು ರಾತ್ರಿಯ ಜಾಗರದ ಸಂಪ್ರದಾಯದ ಉಪಾಸ್ಯ ದೈವತವಾಗಿದೆ. ದಿವೀವ ಚಕ್ಷುಃ ಆತತಂ (ದಿವ್ಯಲೋಕವೆ ಹಿಗ್ಗಿ (ಆತತಂ) ಈ ಚಕ್ಷು ರೂಪದ್ದು ಆಗಿದೆ; ಇದನ್ನು ತದ್ವಿಪ್ರಾಸಃ ಜಾಗೃವಾಂಸಃ ಆರಾಧಿಸುತ್ತಿದ್ದುದರ ನಿರ್ದೇಶವು ಈ ವೇದದಲ್ಲಿದೆ.[೧೨] (ತತ್ ವಿಷ್ಣೋ ಯತ್ ಪದಂ) ಆ ವಿಷ್ಣುವಿನ (ಪ್ರತಿ) ಪದವೇ ಆಗಿದೆ, ಎಂಬ ಈ ಸೂಚಕ ಉಲ್ಲೇಖದಿಂದ ಇದು ಆದಿತ್ಯನ ಸಂಪ್ರದಾಯ; ಇಲ್ಲಿ ಚಂದ್ರಾದಿತ್ಯ ಮಿಥುನ ಯೋಗವು ಅಭಿಪ್ರೇತವಿದೆ, ಎಂಬ ಈ ವಿವರಣೆ, (ಈ ಮೊದಲಿನ ಭಾಗದಲ್ಲಿ ಬಂದಿದೆ) ಹೇಳದೆಯೂ ಗೊತ್ತಾಗುವಂತಿದೆ : ವಿಪ್ರ ಮತ್ತು ಜಾಗೃವಾಂಸ ವಿಷ್ಣೋಃ ಪದ ಈ ಸಂಕೇತಗಳು ಒಳಗೊಂಡಿರುವ awareness ಸ್ಮರಿಸಿಕೊಂಡರೆ ಸಾಕು.

ವಿಪ್ರ ಇದು ಆಪರಸ ಸಂಪ್ರದಾಯದ ಮೌಲಿಕ ಪಾರಿಭಾಷಿಕ ಪದ. ಏಕಂ ಸಂತಂ ಸಾಕ್ಷಾತ್ಕಾರಿ, ಏಕಂ ಸತ್ ದರ್ಶನ ಪಡೆದ ಭಕ್ತ ಶಿರೋಮಣಿ ಮೇಲಣ ವೇದವಾಕ್ಯದಲ್ಲಿ ವಿಪ್ರನ ಹೆಸರೇ ಇದೆ. ಸೋಮ ಸೂಕ್ತದಲ್ಲಿ ವಿಪ್ರಾಣಾಂ ಋಷಿ: ಎಂಬಲ್ಲಿಯೂ ಋಷಿ ಈ ಪಾರಿಭಾಷಿಕ ಪದವನ್ನು ವಿಪ್ರನ ಹಂತಕ್ಕೆ ತರಲಾಗಿದೆ. ವಿಪ್ರದ ಮೂಲಾರ್ಥವನ್ನು ರೇನು ಸ್ಪಷ್ಟಪಡಿಸಿದ್ದಾರೆ : ವಿಪ್>ವೇಪ=ಮೈಯಲ್ಲಿ ಆವೇಶವಾಗಿ ತತ್ ಮಯಭಾವದಲ್ಲಿ ಲಟಕಟಿಸುತ್ತಿರುವ, ನಡುಕ ಹುಟ್ಟಿರುವ ಭಕ್ತಭಂಡಾರಿ ಈ ವಿಪ್ರ! ಸಾಕ್ಷಾತ್ಕಾರದ ಕಾಲದ ನರನ ಅವಸ್ಥೆಯ ಭಗವತ್ ಗೀತೆಯ ವರ್ಣನೆ ವಿಪ್ರನದಾಗಿದೆ. ವೇಪಥುಶ್ಚ ಶರೀರೇ ಮೇ ರೋಮಹರ್ಷಃ ಚ ಜಾಯತೇ, ಇದು ಪ್ರಜ್ಞಾನೇತ್ರದ ಜಾತವೇದನ ಜಾತಪ್ರಜ್ಞನ ಲಕ್ಷಣವಲ್ಲ. ಪ್ರಜ್ಞಾ-ಪ್ರಕಾಶದಲ್ಲಿ ಜಾಗರದ ರಾತ್ರಿಯ ದಿವ್ಯಚಕ್ಷು ಸಿದ್ಧಿಯು ಅಶಕ್ಯವಿದೆ! Suprarational ಪ್ರಜ್ಞಾನೇತ್ರ ನಷ್ಟಪಡಿಸುವ ಈ ಧ್ಯಾನಮಂತ್ರ ನೋಡಿ. 'ಧ್ಯಾಯೇತ್ ಸದಾ ಸವಿತೃ ಮಂಡಲ(೦) ಮಧ್ಯವರ್ತೀ ನಾರ ಅಯನ: (ನಾಗಃ) ಪ್ರಜ್ಞಾನೇತ್ರದ ದಿವ್ಯ ಆದರ್ಶದ ಪ್ರತಿಮೆ ಸವಿತೃದೈವತ ಈ ಸವಿತೃವು ಸರ್ವಸ್ಯ (ವಿಶ್ವಸ್ಯ) ಪ್ರಸವಿತಾ ವಿಶ್ವಪ್ರಸವದ ಯೋನಿಮಂಡಲವಾಗಿ ಮಾರ್ಪಟ್ಟಿದೆ!

---

* ಆದಿತ್ಯ ಸಂಪ್ರದಾಯಕ್ಕೆ ಮಾರ್ಪಟ್ಟು ಜೀವನ : ರೂಪ ಪ್ರಕಾಶಕ್ಕೆ ಬದಲಾಗಿ ರಾತ್ರಿ -ಮೃತ್ಯುಶಕ್ತಿಯ ಉಪಾಸನಾ ಮಂತ್ರಗಳ ಸಂಗ್ರಹಿಸಿರುವ ಇಂದಿನ ಸಂಹಿತೆಗೂ ಮುಂಚಿನ ವೇದದಲ್ಲಿ

ಸೂರ್ಯನು ಶಶ್ವತ್ ಸೂಯಮಾನತ್ವಾತ್ ಈ ನಿರುಕ್ತವು ಆದಿತ್ಯವ್ರತ ಬೋಧಕ ಮೈತ್ರಾಯಣೀ ಉಪನಿಷತ್ತಿನಲ್ಲಿದೆ.[೧೩] ಈ ಉಪನಿಷತ್ಕಾರನು ಇಲ್ಲಿಯೆ ಒಂದು ಮಾತನ್ನು ಬಾಯ್ಬಿಟ್ಟು ಆಡಿಬಿಟ್ಟಿದ್ದಾನೆ. ಈ ಭಗ-ವಂತನ ಮೂಲ ದರ್ಶನ ಮಾಡಿಸಲು ಏನೆಂದು, ಎಷ್ಟೆಂದು ಹೇಳಲಿ? ಇದು ನಿರ್‌ವಚನಂ (ಶಬ್ದ-ವಚನಕ್ಕೆ ಅತೀತ) ಅನೌಪಮ್ಯಂ (ಉಪಮಾತೀತ : ನಿರ್ ಉಪಾಖ್ಯಾನಂ (ಅಖ್ಯಾನ, ಉಪ ಆಖ್ಯಾನ ಎಷ್ಟು ಹೇಳಿದರೂ ಸಾಲದು) ಕಿಂತತ್ ? (ಝಳ ಝಳ ಹೇಳಿಯೇಬಿಡುತ್ತೇನೆ ಇದರಲ್ಲಿ ಏನು? ಈ ಭಗವಂತ ಸ್ವರೂಪವು ಭಗ-ವತ್ ಗೀತೆ-ಏನೆಲ್ಲ ತತ್ತ್ವತಃ) ಅ-ವಾಚ್ಯಂ.[೧೪]

ಭಗ-ವತ್ ಗೀತೆಯ ಭಗ-ವಂತನ ಉಪಾಸನೆ ಅ-ವಾಚ್ಯವಿರುವಾಗ, ಈ ದಿವ್ಯಾಧ್ಯಾತ್ಮದಲ್ಲಿ ಪ್ರಜ್ಞೆಗೆ ಸ್ಥಾನವು ಏನಿರಬಲ್ಲದು? ಆದರೆ, ಈ ಪ್ರಜ್ಞೆಯ ಪ್ರತಿಮಾಭಂಜನ ಮಾಡದೆ ಹಾಗೆಯೇ ಉಳಿಯಗೊಟ್ಟರೆ, ಈ ಆ -ಮರಣ ಕುಮಾರ, ಕುಮಾರೀ ವ್ರತಿಯಾಗುವ ಜೀವನಾದರ್ಶವು, ಅನಿವಾರ್ಯವಿರುವ ಈ ಮೋಕ್ಷಮಾರ್ಗಕ್ಕೆ ಒಂದು ಪಿಳ್ಳೆಯೂ ಬರಲಾರದು. ಆದಕಾರಣ, ಜಾನಪದರು ಜಾನಪದರಾಗಿಯೇ ಉಳಿಯಬೇಕು : ನಬುದ್ಧಿಭೇದಂ ಜನಯೇತ್ ಅಜ್ಞಾನಂ ಕರ್ಮಸಂಗಿನಾಂ - ಹೋಳೀಹಬ್ಬ ಬರಮಾಡಿಕೊಳ್ಳುವ: ಕಲ್ಕೀತುರಾಯಿ ಹಾಡಿನ ಪಾರ್ಶ್ವಭೂಮಿಯೂ ಅನಿವಾರ್ಯವಾಗುವ-ಪ್ರಾಣಚೇತಸದ ಪಾತಳಿಯ ಮೇಲೆಯೆ ಜನಪದವನ್ನು ಉಳಿಸುವ-ಸಂತೆಯ ಮಂದಿವಾಳರ (Psychology of multitude) ಮನೋಭಾವ ಪ್ರೇರಿಸುವ (ಎಂದು ಮ್ಯಾರೆಟ್ ಹೇಳಿರುವಂತೆ) ಮೋಕ್ಷಕಾಮೀ ಸಂಪ್ರದಾಯಗಳ ಕಪಿಮುಷ್ಟಿಯೊಳಗಿಂದ ಜಾನಪದರನ್ನು ಹೊರಗೆ ತರುವ ಕರ್ತವ್ಯವು ಮಾನವಧರ್ಮದ ಶ್ರದ್ಧೆಯ - ಪ್ರಜ್ಞೆಯ ಆದ್ಯ ಕರ್ತವ್ಯವಾಗಿದೆ.

ಮಾನವಶಾಸ್ತ್ರಜ್ಞ ಮ್ಯಾರೆಟ್ ಈತನು ಜಾನಪದ ಸಂಸ್ಕೃತಿಯ ಪುನರ್ಮೂಲ್ಯ ಮಾಪನದ ಪ್ರಶ್ನೆಯನ್ನು ಎದುರಿಸುವಾಗ Psychology of multitude ಸಂತೆಯ ಮಂದಿವಾಳರ (crowd, mass) ಮನೋಭಾವದಿಂದ folk wisdom ಬೇರ್ಪಡಿಸಿ ವಿಚಾರಮಾಡುವ ಅವಶ್ಯಕತೆಯನ್ನು ಕಂಡಿದ್ದಾನೆ. ಆದರೆ ಇವನೂ ಆಕ್ಸ್‌ಫೋರ್ಡ ಮನೋಭಾವದ ಕ್ರೈಸ್ತಪರಂಪರೆಯ ವಿದ್ವಾಂಸನೇ ಆಗಿರುವುದರಿಂದ ಇದರ ಬಗೆಗೆ ಕಟ್ಟುನಿಟ್ಟಾಗಿ ಹೇಳಲು ಅಸಮರ್ಥನಾಗಿದ್ದಾನೆ. Religion and magic ಇವೆರಡೂ ಅನ್ಯೋನ್ಯ ಕಾಣುತ್ತಿರುವಾಗ Magic ರಹಿತ ಮೋಕ್ಷಕಾಮೀ ಸಂಪ್ರದಾಯವು ಅಶಕ್ಯ; ಪ್ರಜ್ಞಾ ಪ್ರಕಾಶದ ಬೆಳಕಿನ ಮಾನವಧರ್ಮವನ್ನು ಕ್ರೈಸ್ತಪಂಥವೂ ಮೆಟ್ಟಿನಿಂತಿದೆ! ಪಾಶ್ಚಾತ್ಯ ಸಂಶೋಧಕರು ಇದನ್ನು ಬಹಿರಂಗ ಪಡಿಸತೊಡಗಿದ್ದಾರೆ. ಪ್ರಸ್ತುತ ಭಗವತ್ ಗೀತೆಯ ಭಗವಂತನ ಉಪಾಸನಾ ಮಾರ್ಗವು ಬಹುಮುಖ- ವಿಶ್ವತೋಮುಖ ಪ್ರಜ್ಞೆಯನ್ನು, ರಾತ್ರ ಸಂಪ್ರದಾಯಕ್ಕೆ ಪೋಷಕವಾಗುವಂತೆ ಮಾರ್ಪಡಿಸಿಕೊಂಡಿರುವ ಸ್ಥಿತಪ್ರಜ್ಞ ಈ ಪ್ರತಿಮೆಯ ಯಾತು ಸ್ವರೂಪವು ಸಮೀಕ್ಷಾರ್ಹವಿದೆ.

ಅಥರ್ವವೇದದಲ್ಲಿ ಹೇಳಲಾಗಿರುವ ಅಭಿಚಾರ ಮಂತ್ರದ ತಂತ್ರವು ಪ್ರಪಂಚದಲ್ಲಿ ಎಲ್ಲ ಭಾಗದಲ್ಲಿಯೂ ಇದೆ. ಈ ಸಂಪ್ರದಾಯವು ಎಲ್ಲರಿಗೂ ಚಂದ್ರೋಪಸ್ಥಾನದ ಉಪ-ವಾಸ ವ್ರತಾದಿಗಳಿಂದ ಶಕ್ಯವಾಗಿತ್ತದೆ, ಎಂಬ ನಂಬುಗೆಯಿದ್ದು ಹುಣ್ಣಿಮೆ ಅಮಾವಾಸ್ಯೆಗಳಂದು ಈ ಸಾಧನೆ ಅನು-ಸ್ಥಾನ ನಡೆಯುತ್ತದೆ. ಯಾರಮೇಲೆ ಮಾಟ ಮಾಡಬೇಕಾಗಿದೆಯೋ ಅವರ ಬಟ್ಟೆ, ಚಿತ್ರ, ಕೂದಲು ಏನೊಂದನ್ನು ಪ್ರತೀಕವಾಗಿ ಕಲ್ಪಿಸಿ ಅಭಿಚಾರ ಮಂತ್ರ ನಡೆಯುತ್ತದೆ. ಹೆಸರು ಸಿಕ್ಕರೂ ಸರಿ! ಸಾಹಿತ್ಯಕರಲ್ಲಿ ಈ ಮಾಟದ ಪರಂಪರೆ ಉಳಿದು ಬಂದಿದೆ. ತಮ್ಮ ಕವನ ಮಂತ್ರವಾಗಬೇಕೆಂಬ ಮಹತ್ವಾಕಾಂಕ್ಷೆಯ ಸಾಹಿತ್ಯಕರೊಬ್ಬರು ತಮಗೆ ಆಗದವರ ಬಗೆಗೆ ಕವನ (ಚಿತ್ರ) ಬರೆದು, ತನ್ನಿಷ್ಟವಿದ್ದವರ ಇದುರು ಓದುವ ವಾಡಿಕೆಯನ್ನು ಬಲ್ಲೆ. ಬಳಿಕ ಇದನ್ನು ಹರಿದು ತುಂಡರಿಸಿ ಗಾಳಿಗೆ ಬಿಡಲಾಗುತ್ತದೆ. ಹಳ್ಳಿಯ ಹೆಣ್ಣುಮಕ್ಕಳು ಆವೇಶದಲ್ಲಿ ಕೆಲವೊಮ್ಮೆ ಶಾಪದಂತೆ (ಅವನ) ಹೆಜ್ಜೆಯಲ್ಲಿ ಗೂಟ ಹೊಡೆಯಲಿ ಎಂದು ಆಡಿಬಿಡುತ್ತಾರೆ. ತಮಗೆ ಬೇಡವಾದ ವಿರೋಧಿಯ ಪ್ರತಿಮಾ ದಹನ ಸುಸಂಸ್ಕೃತ ರೆಂಬುವರಿಂದಲೂ ಆಗುವ ವಾಡಿಕೆ ಸುಳ್ಳೋ? ಯಾತು ಸಾಮರ್ಥ್ಯವು ಅದನ್ನು ನಂಬುವಂತೆ ಮಾಡುವವರ ಸಾಮರ್ಥ್ಯದ ಪ್ರಮಾಣವನ್ನು ಅವಲಂಬಿಸಿದೆ! ಈ ಸಾಪೇಕ್ಷಸಿದ್ಧಾಂತವು ಸಾರ್ವಕಾಲಿಕ ಸನಾತನ ಸತ್ಯವಾಗಿದೆ.

ಸನಾತನ (perennial) ಕಾಲಕ್ಕೆ ತಕ್ಕ ಆಕೃತಿ ರೂಪದಲ್ಲಿ ಆವಿಷ್ಕಾರ ಪಡೆವ-ಅಭಿವ್ಯಕ್ತವಾಗುವ ಸಾಮರ್ಥ್ಯ. ಎರಡನೆಯ ಮಹಾಯುದ್ಧದ ಕಾಲದಲ್ಲಿ ಇಂಗ್ಲೆಂಡಿನ ಮಹಾಮಂತ್ರಿ ಚರ್ಚಿಲ್ V (ವ್ಹಿ) For Victory ಈ ಯಾತುಮಂತ್ರವನ್ನು ರೂಢಿಸುತ್ತಾನೆ! ಹಿಟ್ಲರನ ಪ್ರತಿಮಾ ದಹನ ನಡೆಯುತ್ತವೆ.

ವೇದಕಾಲದ ವಿವಸ್ವನ್ ಪ್ರೇರಿತ ಮನುಪ್ರಣೀತ ಮಾನವಧರ್ಮ ವನ್ನು ನಿಷ್ಪ್ರಯೋಜಕವಾಗಿಸಲು ಮಾಡಲಾಗಿರುವ ಯಾತು ತಂತ್ರವು, ಮೇಲೆ ಸೂಚಿಸಿರುವ ಆಧುನಿಕ ಯಾತುಪ್ರಕಾರಗಳ ಇನ್ನೊಂದು ಬಗೆ ; ವೇದ, ಉಪನಿಷತ್ತು, ವ್ಯಾಸ-ವಾಲ್ಮೀಕಿಗಳ ಕೃತ್ಯದೊಳಗಿನ ಯಾತುಗಳಲ್ಲಿ ಇದು ಕಾಣ ದೊರೆಯುತ್ತದೆ! ಈ ಯಾತು ನಿಷ್ಪ್ರಯೋಜಕವಾಗಬೇಕಾದರೆ ಈ ಯಾತು ಒಳಗೊಂಡಿರುವ ಹಾಸ್ಯಾಸ್ಪದ ಹಾಗೂ ಹೀನ, ನಿಂದ್ಯ ಭಾಗವನ್ನು ಬೆಳಕಿನಲ್ಲಿ ತರುವುದು ಇದೊಂದೇ ಇದಕ್ಕೆ ಉಪಾಯ. ಸ್ವರ್, ಪ್ರಕಾಶಪಾತಳಿಯ ಪ್ರಜ್ಞೆ; ಇದು ಜ್ಯೋತಿಯಲ್ಲ! ಏನೆಲ್ಲ ದಿಕ್ಕುಗಳಲ್ಲಿ ಪಸರಿಸುವ ಪ್ರಕಾಶ- ಕಿರಣ ಶಲಾಕೆಯಿಂದಾಗಿ ಕತ್ತಲೆ ಓಡಿಹೋಗಲೇಬೇಕು. ಅಂತರಿಕ್ಷಸ್ಥ ಅವಕಾಶದೊಳಗಿನ ಗುಹೆಯಲ್ಲಿ ಕಾಣುವ ಅಪೋಜ್ಯೋತಿಗೆ ಕಂಡಿಯೊಳಗಿನ ಬೆಳಕೇ ಸಾಕು! ನೇರ ಪ್ರಕಾಶ ಬೇಡ. ಆದಕಾರಣ, ಗುಹಾಜ್ಯೋತಿಯನ್ನು ಸಮೀಕ್ಷಿಸಲು ಎಲ್ಲೆಲ್ಲೂ ಸಂಚರಿಸಬಲ್ಲ ಪ್ರಜ್ಞೆಯ ಹೆಜ್ಜೆಯಲ್ಲಿ ಗೂಟ ಹೊಡೆದು ಇದನ್ನು ಸ್ಥಿತಪ್ರಜ್ಞೆಯನ್ನಾಗಿಸಲೇ ಬೇಕಾಯ್ತು! ಸೂರ್ಯಜ್ಯೋತಿ ಎಂಬ ವೇದವು ಸೂರ್ಯನನ್ನೂ ಚಂದ್ರನ ಅಥವಾ ಚಂದ್ರಿಯ ಹಂತಕ್ಕೆ ತಂದು ನಿಲ್ಲಿಸಿದೆ![೧೩] ಶಶ್ವತ್ ಸೂಯಮಾನತ್ವಾತ್, ಸೂರ್ಯಮಂಡಲದಿಂದ ಹೊರಬೀಳುವ ಅನೀಕಂ ಇಲ್ಲಿ ಪ್ರಸವದ ಸೂಚನೆಯಿದೆ. ಸೂರ್ಯ ಆ-ತ್ಮನ್ (: ತನು) ಎಂಬಲ್ಲಿ ಸೃಷ್ಟಿಸುವ ಸಾಧನ : ಮಾಧ್ಯಮ ಈ ಸೂರ್ಯ ಎಂಬುದು ಸ್ಪಷ್ಟವಿದೆ. ಇದರ ಮುಂದಿನ ಋಚೆಯಲ್ಲಿ ಈ ಸೂರ್ಯನ ಪುಲ್ಲಿಂಗಿ ಯಾತು ಇದೆ. ಮರ್ತ್ಯಃ ಯೋಷಾಂ (ಮರ್ತ್ಯನು ಯುವತಿಯ) ಬೆಂಬತ್ತುವ ರೂಪಕವು ಇಲ್ಲಿದೆ!

ಯಾತು ಪ್ರಭಾವದಲ್ಲಿಯೇ ಉಳಿಯುವ ಪ್ರಜ್ಞೆ ತನ್ನ ವಿಶ್ವತೋಮುಖ ಸಂಚರಿಸಬಲ್ಲ ಹುಟ್ಟು ಸಾಮರ್ಥ್ಯಕ್ಕೆ ಎರವಾಗುತ್ತದೆ! ತಿರುವು ಮುರುವು ಅಸಂಗತ ವಿಸಂಗತ ಇದು ಸಹಜ ಸುಸಂಗತವೇ ಎಂದು ಪ್ರತಿಪಾದಿಸುವ ಪ್ರಜ್ಞೆಯು ಪ್ರಜ್ಞಾ ವೈಶಿಷ್ಟ್ಯದಿಂದಾಗಿ ಕೃಷ್ಣ (ಮೃತ್ಯುರಾತ್ರಿ ತತ್ತ್ವದ) ದೈವತದ ಅನುಯಾಯಿ, ಅರ್ಜುನನ (ಸೌರ ತೇಜದ) ಪ್ರತಿಮೆ ಈವರೆಗೆ ಪೂಜ್ಯವಾಗಿ ಉಳಿದುಬಂದಿದೆ! ಈ ತಿರುವು ಮುರುವಿನ ರಾತ್ರಿ ಸಮಯಾಚಾರ ಪ್ರೇರಕ ಭಗ-ವತ್ ಗೀತೆ, ಭಗ-ವಂತ ಈ ಶಬ್ದಪ್ರತಿಮೆಗಳು ಗೌರವ ಪ್ರತಿಷ್ಠೆಯನ್ನು ಪಡೆದಿರುವ ಹಿಂದೂ ಎಂಬ ಧರ್ಮವು ಉಳಿಸಿಕೊಳ್ಳಬೇಕೆಂದಿರುವ ಸಂಸ್ಕೃತಿಯಲ್ಲಿ ಸಾಮಾಜಿಕ ಜೀವನ ಮೌಲ್ಯಗಳು ಬೆಲೆಯಿಲ್ಲದಾಗಿ, ಎಲ್ಲೆಲ್ಲೂ ಭ್ರಷ್ಟಾಚಾರವೇ ಶತಕಾನುಶತಕಗಳಿಂದ ಹೆಚ್ಚಾಗುತ್ತ ಬಂದಿದ್ದರೆ, ಈ ವಿಧಿಲಿಖಿತಕ್ಕೆ ಕಾರಣರು ನಾವೇ ಅಲ್ಲವೊ?

ಕೃತ→ತ್ರೇತ→ದ್ವಾಪರ→ಕಲಿಯುಗ ಎಂಬ ಈ ಅನೈಸರ್ಗಿಕ ಕ್ರಮದ ಶ್ರದ್ಧೆಯೇ ತಿರುವು ಮುರುವಾಗಿದೆ. ಈ ಶ್ರದ್ಧೆಯಂತೆ ಮನು=ಮಾನವ ಮಂಗನಾಗುತ್ತಾನೆ! ವಿವಸ್ವನ್ ಪ್ರೇರಣೆಯ ಮನುಪ್ರಣೀತ ಮಾನವ ಧರ್ಮ ಇದು ವಾನರ ಹಂತದ ತರುವಾಯ ಸಂಭವಿಸಿದ ಪ್ರಜ್ಞಾ ಪ್ರಾದುರ್ಭಾವದಿಂದಾಗಿ ಶಕ್ಯವಾಯ್ತು. ಪ್ರಕಾಶ ತತ್ತ್ವೋಪಾಸನೆಯ ಆ ಮಾನವಧರ್ಮ ಕೃತಯುಗ ನಿಜ. ಆದರೆ ಇದು ಆದಿಯುಗವಲ್ಲ. ಮಂಗ =ವಾನರ ನರ(ಳ)ನಾದ; ಬಳಿಕ-ತಲೆಯೆತ್ತಿದ ಪ್ರಜ್ಞಾ ಪ್ರಭಾವದಿಂದಾಗಿ ಮಾನವನಾದ. ಆದರೆ ಈ ಪ್ರಜ್ಞೆಯನ್ನೇ ಮರಳಿ ಬೃಹಲ್ಲಾಂಗೂಲ ಪ್ರಾಣ(ಲಿಂಗ) ದೇವರ ಉಪಾಸನೆಯಲ್ಲಿ ದ್ರಪ್ಸಃ ಕೃಷ್ಣನ ಸೇವೆಯಲ್ಲಿ ತೊಡಗಿಸುವ ಸಂಸ್ಕೃತಿಯು ಅಸುತೃಪ್ತ ವರ್ಗದ ಸಂಸ್ಕೃತಿಯಾಗಿ ಪರಿಣಮಿಸದೆ ಇದ್ದರೇ ಆಶ್ಚರ್ಯ!

ಒಟ್ಟಿನ ಸಾರಾಂಶವು ಇಷ್ಟು : ಸೂರ್ಯನು ಆದಿತ್ಯನಾಗಿದ್ದುದು, ಸೂರ್ಯ=ನಾರಾಯಣನಾಗಿದ್ದುದು.. ಇವೆಲ್ಲ ದೈವತನಾಮಗಳು ಜೀವನರೀತಿಯೇ ತಿರುವುಮುರುವಾಗಿರುವುದು ಸೂಚಕವಾಗಿವೆ. ಈ ತಿರುವುಮುರುವನ್ನು ತಿದ್ದಿಕೊಂಡಲ್ಲಿ ಭಾರತಕ್ಕೆ ಸುದಿನಗಳ ಆಶೆಯಿದೆ. ಸೂರ್ಯನ ಪ್ರತೀಕ ಅರ್ಜುನನನ್ನು ರಾತ್ರಿ=ಚಂದ್ರನ ಪ್ರತೀಕ ಕೃಷ್ಣನ ಅನುಯಾಯಿ ಎಂಬ ಶ್ರದ್ಧೆಯು (ಸೂರ್ಯನು ಚಂದ್ರನ ಅನುಯಾಯಿಯಾಗುವಲ್ಲಿ) ಪ್ರಳಯಕ್ಕೆ


ಆಮಂತ್ರಣವೀಯುತ್ತಿದೆ! ಆದಕಾರಣ, ಭಾರತೀಯರು ಕತ್ತಲೆ, ಮೃತ್ಯುಸ್ವರೂಪ ಆದಿತ್ಯಪೂಜೆ ತ್ಯಜಿಸಿ ಜೀವನ=ಪ್ರಕಾಶ ರೂಪ ಸೌರತೇಜದ ಪ್ರತಿಮಾರಾಧಕರಾಗದೆ ಎಂದರೆ ತಮ್ಮ ಶ್ರದ್ಧಾಸ್ಥಾನದಲ್ಲಿ ಆಗಿರುವ ತಿರುವು-ಮುರುವನ್ನು ಸರಿಪಡಿಸಿಕೊಳ್ಳದೆ, ಭಾರತೀಯರ ಸುದಿನಗಳ ನಿರೀಕ್ಷೆ ವ್ಯರ್ಥ.

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** X - ೧೯೦
೨. ***ವಿಷ್ಣುಪುರಾಣಂ*** ೩-೩-೯-೧೧
೩. ***ಶ್ರೀಮನ್ಮಹಾಭಾರತ*** ಶಾಂತಿಪರ್ವ ೧೦೯-೧೨ ಮತ್ತು ಕರ್ಣಪರ್ವ ೬೯-೫೯
೪. Jacquetta Hawkes, ***Man and the Sun*** Random House N.Y. 1962: p. 185
೫. Mercia Eliade ; Yoga : ***Immortality and Freedom*** pp. 125 to 150
೬. Julien Huxley; ***New Bottles for New Wine***. Harper Brothers, N. Y. P. 16
೭. ***ಛಾಂದೋಗ್ಯೋಪನಿಷತ್ತು*** ೫-೬-೩
೮. ***ಋಗ್ವೇದ ಸಂಹಿತೆ*** VIII.೧೯,೩೧,೩೨
೯. ***ಕಠೋಪನಿಷತ್ತು*** ೪.೮ "ಅರಣ್ಯಯೋ ನಿಹಿತೋ ಜಾತವೇದಾಃ ಗರ್ಭ ಇವ ಸುಭೃತಃ ಗರ್ಭಿಣೀಭಿಃ" ಎಂಬ ಮಾತು ಮನನೀಯ.
೧೦. ***ಐತರೇಯೋಪನಿಷತ್ತು*** ೧-೨-೪
೧೧. ***ಬೃಹದಾರಣ್ಯಕೋಪನಿಷತ್ತು*** ೫.೧೪.೪
೧೨. ***ಋಗ್ವೇದ ಸಂಹಿತೆ*** I-೨೨, ೨೭, ೨೧,
೧೩. ***ಮೈತ್ರಾಯಣೀ ಉಪನಿಷತ್ತು*** ೬-೭
೧೪. ***ಅದೇ*** ೬-೭
೧೫. ***ಬೃಹದಾರಣ್ಯಕೋಪನಿಷತ್ತು*** ೧-೧೧೫:೧:೨

ಸತ್-ತ್ಯಂ ಆಕೃತಿ ಸ್ವರೂಪ

ಏಕಂ ಏವ ಅದ್ವಿತೀಯ ಸತ್-ತ್ಯಂ ಇದರ ಸಾಕ್ಷಾತ್ ಆಕೃತಿ (Gestalt) ಸ್ವರೂಪ ವಿಶ್ವಕರ್ಮ: ಸೃಷ್ಟಿಕರ್ತ : ಬ್ರಹ್ಮಣಸ್ಪತಿ: ದಕ್ಷ ; ಹಿರಣ್ಯಗರ್ಭ... ದೇವತ 'ವ್ಯಾಸೋಚ್ಛಿಷ್ಟಂ ಜಗತ್ ಸರ್ವಂ' ಎಂಬ ಉಚ್ಛಿಷ್ಟ ಸಂಪ್ರದಾಯದ ಮೂಲಸ್ಥಾನ ದೇವರು. ವ್ಯಾಸ ಎಂದೊಡನೆ ವೃತ್ತ (ವೃತ್ರ) ಆಕೃತಿಯೂ ಅಲ್ಲಿ ಅಭಿಪ್ರೇತವಿದೆ! ಪುರಾತನ ಈಜಿಪ್ಟ್ ಸಂಸ್ಕೃತಿಯ ಸಾಂಕೇತಿಕಪ್ರತಿಮೆ (A Short History of Sex Worship ಎಂಬ ಗ್ರಂಥಕ್ಕೆ ಋಣಿ.



ವಿದೇಹೀ ಜನಕ; ಮತ್ತು
ಅಯೋನಿ ಸಂಭವೆ : ವಿಶ್ವಜನನಿ :
ದೇವಾನಾಂ ಪೂಃ = (ಪುರಿ)-ಅಥರ್ವವೇದ

ಚಂದ್ರಮಂಡಲದ ಹೊರಗೆ ಇರುವ ಆದಿತ್ಯ : ಪುರುಷ:ವೃಕ್ಷ: ಸರ್ಪರೂಪೀ ಭಗವಂತನ ದರ್ಶನ.

ಸ್ವಾಯಂಭುವ (<ಸ್ವಯಂ ಭೂ) ಪ್ರೇರಣೆಯ ಮನುವಿನ [ನರ(ಳ)ನ] ಜೀವನ ದರ್ಶನದ (Gestalt) ಆಕೃತಿ ಸ್ವರೂಪ.

ತಾತ್ವಿಕ ಹಿನ್ನೆಲೆ

ಚಾಂದ್ರ ಹಾಗೂ ಸೌರ ಭೂಮಿಕೆಯ ಜೀವನದರ್ಶನದ (Gestalt) : ಆಕೃತಿ ಸ್ವರೂಪಗಳಲ್ಲಿ ಇರುವ ತಾತ್ವಿಕ ವ್ಯತ್ಯಾಸವು ಇದು:

ಆಧುನಿಕ ತತ್ತ್ವಜ್ಞನೊಬ್ಬನು, ಭಾರತೀಯ ಪುರಾತನರ ಚಾಂದ್ರಭೂಮಿಕೆಯ ಅಭಿವ್ಯಕ್ತಿಯನ್ನು Magical or nocturnal language ಎಂದಿದ್ದಾನೆ. ಈ ಸಮಯವನ್ನು ಪ್ರ-ದೋಷಕಾಲ, ಎಂದು ಭಾವಿಸಲಾಗಿತ್ತು! ಇದರ ಆರಾಧನೆ, ಉಪಾಸನೆಯ ಪ್ರಕಾರಗಳು, ಮಂತ್ರ ತಂತ್ರ, ದೈವೀಶಕ್ತಿ (magic) ಸಿದ್ಧಿಗಾಗಿ ಇರುತ್ತವೆ; ನಿಶಾ=nocturne (= Dreamy night scene).

ಮಾನವೀಯ ಜೀವನಾನುಭವಗಳಲ್ಲಿ, ಈ ಚಾಂದ್ರಭೂಮಿಕೆಗೂ ಸ್ಥಾನವು ಉಂಟೇ ಉಂಟು. ಈ ಭೂಮಿಕೆಯ ಭಾಷಾ ವೈಶಿಷ್ಟ್ಯದಲ್ಲಿ, ಒಂದು ಅಂಶದಿಂದ ಇಡಿಯನ್ನು ಸೂಚಿಸುವ ಪ್ರಯತ್ನವಿರುತ್ತದೆ. ಕೇಶ>ಕೇಶಿ ಇಡೀ ವ್ಯಕ್ತಿಯನ್ನು ಸೂಚಿಸುವ ಪ್ರಯತ್ನವಿರುತ್ತದೆ. ಮೌನೇಯ, ಮುನಿಯನ್ನು ಕೇಶಿ (ಕೇಶಿನ್) ಎಂದು ವೇದ ಹೇಳಿದೆ. ಈ ಕೇಶ (ತಲೆಯ) ಮೇಲಣ (ಉತ್ತರ) ಜಡೆಯೊ? ಅಥವಾ ದಕ್ಷಿಣ ಕಪರ್ದವೊ? ಈ

ಸಂದಿಗ್ಧತೆಗೆ (ಕತ್ತಲೆಗೆ) ಅವಕಾಶ ದೊರೆಯುತ್ತದೆ. ಈ ಕತ್ತಲೆಯನ್ನು ಕವಿಯು, ಒಳತಿಗೂ ಉಪಯೋಗಿಸಿಕೊಳ್ಳಬಹುದು; ಕೆಡುಕಿಗೂ ಯೋಚಿಸಬಹುದು.

Gestalt ಇದು ನಿಜವಾಗಿ ಇಡೀ ಆಕೃತಿಯ ಸೂಚಕ ಸಂಕೇತ. ಆದರೆ ಪ್ರ-ದೋಷ : ನಿಶಾ ಸಮಯದ Gestalt ಇದು ಒಂದು ಅಂಗ, ಅಂಶವೂ ಇರಬಲ್ಲದು, ಇದುವೆ ಇಡಿ (ವಿಶ್ವರೂಪ) ಆಕೃತಿ ಎಂದು ಕಾಣತೊಡಗುವುದುಂಟು. ಇಂತಹ ಭಾವೋತ್ಕಟ ಮನೋಭಾವದ ವ್ಯಕ್ತಿಯನ್ನು ಸೂಚಿಸಲು ವಿಪ್ರ ಎಂಬ ಪರಿಭಾಷೆಯನ್ನು ಪುರಾತನರು ಯೋಜಿಸಿದ್ದರು.

ಸಾಹಿತ್ಯ ಕಲಾಕ್ಷೇತ್ರದ ಮಾಯಿಕ (ಜಾದು) ಮೋಡೀ ಮಾಟಕ್ಕೆ ಈ ಬಗೆಯ ಭಾಷೆ ಅನಿವಾರ್ಯವಿದೆ. ಆದರೆ, ಈ ಮಾಯಿಕ ಶಕ್ತಿ, ಸಮಾಜಿಕ ಸಾಂಸ್ಕೃತಿಕ ಮೌಲ್ಯಗಳನ್ನೇ ಬರಡುಗೊಳಿಸುವ ಭಗವತ್ ಗೀತೆಯ ಶೈಲಿಯಾಗುವ ಗಂಡಾಂತರವುಂಟು. ಕಲಾಕ್ಷೇತ್ರದಲ್ಲಿ ವಕ್ರತೆಗೆ (distortion) ಇಂಬು ಇರಲೇಬೇಕು. ಆದರೆ ವಕ್ರೋಕ್ತಿರೇವ ಆತ್ಮ ಕಾವ್ಯಸ್ಯ ಆಗಬೇಕೆ? ಸೂರ್ಯ-ಚಂದ್ರ ಸರ್ಪ-ಕತ್ತಲೆ ಎಂಬ ಸಮೀಕರಣ ಸಾಧುವೆ?

ಅಂಶ ಅಥವಾ ಅಂಗವೇ ಇಡಿಯಾಗಿ ಕಾಣುವ ಈ ಸಾಂಕೇತಿಕ ಅಂತಃಶಕ್ತಿಯು, ನಿಜವಾದ ಇಡಿ ತಾನೆ ಎಂಬುದಾಗಿ ಪರಿಣಮಿಸುವಾಗ, ಇದು ಭೌಮಾಸುರ (Titanic) ಸಂಸ್ಕೃತಿ ವಿನಾಶಕಶಕ್ತಿಯಾಗಿ ಪರಿಣಮಿಸಬೇಕು. ಸಾಹಿತ್ಯ ಕಲೆಯು ಇದು ಇತಿಹಾಸ, ತತ್ತ್ವಜ್ಞಾನದ ಸ್ಥಾನವನ್ನು ಆಕ್ರಮಿಸುವಾಗ ಹಗಲು-ರಾತ್ರಿ ಅಂತರವು ಇಲ್ಲವಾಗುತ್ತವೆ. ಮೂರ್ತಾಮೂರ್ತ ಸಮವಾಯರೂಪ: ಏಕಂ ಸತ್ ಸ್ವರೂಪದ ಸಾಂಕೇತಿಕ ದೈವತಸೃಷ್ಟಿಯ ಸೋಜಿಗದ ಸೊಬಗು. ಮೂಲ-ಭೂತ ಸ್ಥಾಯೀ ಪ್ರತಿಮೆ: ಏಕಂ ಸನ್ ತಂ (ಸುಪರ್ಣಂ) ವಿಪ್ರಾಃ ಕವಯಃ ಬಹುಧಾ ಕಲ್ಪಯಂತಿ!

ಈ ಪ್ರಪಂಚದಲ್ಲಿ ದಿವ್ಯ ಪವಾಡಿಗಳೆನಿಸಿ ಪೂಜ್ಯಪಾದರಾದ (ಅ) ಶ್ರೀ-ಪಾದರ ಪ್ರೇರಕ ಸನ್‌ತನ ಸಾರ್ವಕಾಲಿಕ-ಅರ್ಥದ ಶಾಶ್ವತ ಸ್ವರೂಪದ ಕೆಲವು ಆ-ಕೃತಿಗಳ ಪರಿಚಯ ಮಾಡಿಕೊಳ್ಳಬಹುದು.

ವ್ಯಾಸೋಚ್ಛಿಷ್ಟಂ ಜಗತ್ ಸರ್ವಂ ಎಂಬ ಈ ವಾಕ್ಯದಲ್ಲಿ ಅಭಿಪ್ರೇತವಿರುವ ಸಾಕ್ಷಾತ್ ಆಕಾರದ ಪ್ರತಿಮೆ, ಇದು ವಿಶ್ವ-ನಿರ್ಮಾಣ ಶಕ್ತಿಯ ದಿವ್ಯನಾರಾಯಣ (ನಾ-ಅಯನ) ದೈವತದ ಪರ್ಯಾಯೀ ಪ್ರತೀಕವೇ ಇರಬಲ್ಲದು. ವ್ಯಾಸ ಎಂದೊಡನೆ, ಇಲ್ಲಿ ವೃತ್ತ (ವೃತ್ರ) ಆಕೃತಿಯೂ ಅಭಿಪ್ರೇತವಿಲ್ಲ, ಎನ್ನಲು ಆಸ್ಪದವಿಲ್ಲ! ವ್ಯಾಸ ಎಂಬ ಆಶಯದ್ದೇ ಆದರೂ ಇದಕ್ಕೂ ಪ್ರಾಂಜಲ ಸ್ವರೂಪದ ಪ್ರತಿಮೆ: ಗುಹೇಶ್ವರ! ಗುಹಾ ನಿಹಿತಂ ಅಥವಾ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ ಎಂದು ಮುಂತಾದ ಸ್ತೋತ್ರದ ವಿಷಯವಾದ, ಭಕ್ತರ ಧ್ಯಾನ ಧಾರಣೆಯ ಮೂಲಕ ಸಮಾಧಿಗೆ ಪ್ರೇರಕವಾಗುವ ದಿವ್ಯದೈವತ ಶಕ್ತಿಯೇ ಇದು.

ವ್ಯಾಸನಾಮ-ರೂಪವು ವಾಲ್ಮೀಕಿಯ ಗುಹ್ಯಾರ್ಥದ ಮೇಲೆಯೂ ಬೆಳಕನ್ನು ನೀಡುತ್ತದೆ. ವ್ಯಾಸ-ವಾಲ್ಮೀಕಿಗಳು ರೂಪಿಸಿರುವ ಸಂಸ್ಕೃತಿ ಎಂದು ಹೇಳಲಾಗುವಲ್ಲಿ ಇವೆರಡೂ ನಾಮಗಳು (form) ಬೇರೆ ಎನಿಸಿದರೂ ಒಳಗಿರುವ ಏಕಂ-ಸನ್‌ತನ ರೂಪ ಆಕೃತಿ ಸಮಾನವೇ ಇರಲಿಕ್ಕೆ ಬೇಕು. ವ್ಯಾಸನಾಮದಲ್ಲಿ ವರ್ತುಲವು ಅಭಿಪ್ರೇತವಿದ್ದರೆ, ವಾಲ್ಮೀಕಿನಾಮದಲ್ಲಿ ನಾಗ (=ಲ್ವಾಸ) ಅಭಿಪ್ರೇತವಿದೆ. ಈ ಪ್ರತಿಮಾ ಶಿಲ್ಪದಲ್ಲಿ ಗೋಚರಕ್ಕೆ ಬರುವ ಪ್ರಾತಿಭದೃಷ್ಟಿಯು ಕೌತುಕಾಸ್ಪದವಿದೆ. ಪಿಂಡ-ಬ್ರಹ್ಮಾಂಡೈಕ್ಯ ಸ್ವರೂಪ ದಿವ್ಯಶಕ್ತಿಗಳೆರಡರಲ್ಲಿ ಒಂದನ್ನು ಹೆಸರಿಸಿ, ಅದರೊಡನೆ ಇನ್ನೊಂದರ ಚಿತ್ರವೂ ಕಣ್ಣೆದುರು ನಿಲ್ಲುವಂತೆ ಮಾಡುವ ಈ ಅಭಿವ್ಯಕ್ತಿ ಸಾಮರ್ಥ್ಯದ ಅಪೂರ್ವತೆಯನ್ನು ಎಷ್ಟೆಂದು ಹೇಳಬೇಕು! ಒಂದರಲ್ಲಿ ಅದೃಶ್ಯ ಪುರಿಶಯ(ನ)ನ ಹೆಸರೆತ್ತಿ ಹೇಳಿದ್ದರೆ, ಇನ್ನೊಂದರಲ್ಲಿ ಪುರಿಯ ನಿರ್ದೇಶದಿಂದ, ಈ (ವಿಶ್ವರೂಪೀ) ಪುರಿಯೊಳಗಿನ : ಹಿರಣ್ಯ-ಗರ್ಭನನ್ನು ಸೂಚಿಸಲಾಗಿದೆ! ಈ ಅರ್ಥವೇ ಭಗ-ವಂತ-ಕೃಷ್ಣನಿಂದ ವಿಶದವಾಗಿದ್ದುದು ಹೀಗೆ: ಈ ಪ್ರಕೃತಿಯ ಹೆರಿಗೆಗೆ ಕಾರಣನು ನಾನು=ಅಧಿ-ಅಕ್ಷನು (ಮಯಾ ಅಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಂ).

ಮಲ್ಲಿಕ್ಕಾರ್ಜುನ ಹಾಗೂ ಗುಹೇಶ್ವರ ಈ ಪ್ರತಿಮಾ ಶಿಲ್ಪದ ಶೈಲಿಯ ಸಾಮ್ಯವು ನಿಷ್ಕಾರಣವಲ್ಲ : ಈ ಶೈಲಿಯ ಶಿಲ್ಪವು ಸಮಾನ ಸಂಪ್ರದಾಯ ಸೂಚಕವಿದೆ. (ಕೂಡಲ) ಸಂಗಮ ದೇವ ಎಂಬಲ್ಲಿಯ ಪ್ರಾಂಜಲ

ಕುಂಡಲಿನೀ ಸರ್ಪ (: ಅಹಿ : ಬುಧ್ನ್ಯ)



ಇಜಿಪ್ತಿನ ಪುರಾತನ ಸಂಸ್ಕೃತಿಯೊಳಗಿನ ಪ್ರಧಾನ ಸಂಕೇತಗಳು
(i) ಆದಿಶೇಷನನ್ನು ಹೋಲುವ ನಾಗ (: ಪುರುಷ)
(ii) 'ಅಮೃತಸ್ಯ ನಾಭಿಃ' ಸ್ವರೂಪ ಸೃಜನಕೇಂದ್ರ (ಅದಿತಿ) ಸೂಚಕ ವೃತ್ತಾಕೃತಿಯ ಸಂಕೇತ
ಸಮಾಧಿ = ಪಿರಾಮಿಡ್ ಪೂಜಕ ಪೈಥ್ಯಾಗೊರಾಸನ ಪರಿಭಾಷೆಯ ಪಾರ್ಶ್ವಭೂಮಿ ಇಜಿಪ್ತಿನಲ್ಲಿದೆ.
ಆದಿ ಪುರುಷ (: Limit) 1 ; ಮತ್ತು ಪ್ರಕೃತಿಮಾತೆ (:Unlimited) O

ಭಾವವೇ ಜಗತಃ ಪಿತರೌ - ವಾಗರ್ಥಾವಿವ ಸಂಪೃಕ್ತೌ ಎಂಬಲ್ಲೂ ವ್ಯಕ್ತವಾಗುತ್ತಿದೆ. ಇಲ್ಲಿಯೂ ಸಂಗಮನಾಥನೇ ಅಭಿಪ್ರೇತನಿದ್ದಾನೆ. ಕಾಲಿದಾಸ; ಉಜ್ಜಯಿನಿಯ ಕಾಲ-ಕಾಲೇಶ್ವರ (ಮೂಲಸ್ಥಾನ ಕಲ್ಲೇಶ್ವರ) ದೈವತದ ಕ್ಷೇತ್ರದೊಡನೆ ಸಂಬಂಧ ವಿದ್ದಿತೆಂಬ ಆಖ್ಯಾಯಿಕೆಯ ಕವಿಯ ಶಬ್ದಶಿಲ್ಪದ ಈ ಸಂಪ್ರದಾಯವು, ಶೈವ ಪರಂಪರೆಯದು ಎಂಬುದು ಗಮನಾರ್ಹವಿದೆ. ಮಲ್ಲಿಕಾ (ಚಂದ್ರ-ಮಂಡಲ=ಶುಭ್ರ=ಶುಕ್ಲ=ಶುಕ್ರರೂಪ ಆಕೃತಿ) ; ಈ ಮಲ್ಲಿಕಾ (ಮಂಡಲಸ್ಥ) ಭ್ರಮರ=ಪುರುಷ ತತ್ತ್ವವು ಅರ್ಜುನ ಸಂಕೇತದಿಂದ ಅಭಿಪ್ರೇತವಿದೆ. ಈ ಕ್ಷೇತ್ರದ ಭ್ರಮರಾಂಬಾ ದೇವಿ ಎಂಬಲ್ಲಿ, ಪುರುಷ ತತ್ತ್ವದ ಬದಲು ಪುರಿ-ದೇವಿಯ ನಾಮಕ್ಕೆ ಪ್ರಾಧಾನ್ಯವನ್ನೀಯಲಾಗಿದೆ. ಪುರಿಶಯ(ನ) - ಭ್ರಮರ ಅರ್ಜುನ ಎಂದರೂ ಕರಿಯ=ಕೃಷ್ಣ-ನೀಲಾಂಗವೇ ಇಲ್ಲಿ ಅಭಿಪ್ರೇತವಿದೆ! ಅರ್ಜುನ - ಶುಭ್ರ ಸೌರತೇಜ ಎಂಬ ಮೂಲಾರ್ಥವು ಇಲ್ಲಿ ತಿರುವು ಮುರುವಾಗಿದೆ! ಭಗ-ವಂತ ಕೃಷ್ಣನ ಅನುಯಾಯಿಯಾಗುವಲ್ಲಿ ಅರ್ಜುನನು ತನ್ನ ಅರ್ಜುನತ್ವಕ್ಕೆ (ಸೌರತೇಜಕ್ಕೆ) ಎರವಾಗುತ್ತಾನೆ, ಎಂಬುದು ಇಲ್ಲಿ ಬಯಲಿಗೆ ಬರುತ್ತಿದೆ ಯತ್ ಭಜತಿ, ತತ್ ಭವತಿ ಭಗವಂತ ಕೃಷ್ಣನ ಭಕ್ತ ಅರ್ಜುನನು ನರ(ಳ) ನಾಗುವುದನ್ನು ಗೀತೆಯೇ ಸೂಚಿಸಿದೆ.

ಪುರುಷ (ವ್ಯಾಸ - ನಾರಾಯಣ : ವಿಷ್ಣು : ಗುಹೇಶ್ವರ.... ಉಮಯಾ ಸಹಿತಃ ಸೋಮ-ಸೋಮೇಶ್ವರ, ಚಂದ್ರಾ-ನಾಥ, ನಾಭಿ-ರಾಜ! (ಅಮೃತಸ್ಯನಾಭಿಃ - ಚಂದ್ರಾ ಮಲ್ಲಿಕಾ) ಪುರಿ-ಶಯ (ನ) - ಅತ್ಯತಿಷ್ಠತ್ ದಶಾಂಗುಲಂ. ಸಹಸ್ರಾದಿ ವಿಶೇಷಣಗಳಿಂದ ವರ್ಣಿತ ಅಧಿ ಅಕ್ಷ ವಿದು : ಪ್ರಕೃತಿ ಮಾತೆಯ ಪ್ರಸವಕ್ಕೆ ನಿಮಿತ್ತಕಾರಣ ದಿವ್ಯಶಕ್ತಿ. ಇದರ ಪ್ರೇರಣೆಯಿಂದ ಈ ವಿಶ್ವಸ್ಥ ಸೃಜನಕರ್ಮವು ಅವ್ಯಾಹತವಾಗಿ ನಡೆದಿದ. ಸೃಜನ ಎಂದೊಡನೆ ಮರಣ ಇದರ ಬೆನ್ನಿಗೆ ಬಂತೇ ಬಂತು! ಈ ದೈವತರಾತ್ರಿ ಸಮಯಾಚಾರಪ್ರೇರಕ ಶಕ್ತಿಯುಳ್ಳದ್ದು, ಇದು ನಿಶ್ಚಿತ. ಆದಕಾರಣ, ಇದಕ್ಕೆ ತನ್ನನ್ನು ಸರ್ವಾರ್ಪಣ ಭಾವದಿಂದ ಸಮರ್ಪಿಸಿಕೊಳ್ಳುವಲ್ಲಿ ಭಗ-ವತ್ ಗೀತೆಯೇ ಹೇಳಿರುವಂತೆ ರಾತ್ರ್ಯಾಗಮೇ ಪ್ರವೀಯಂತೇ ಈ ರಾತ್ರ್ಯಾಗಮದ ಉಪಾಸನೆಯು, ಪ್ರಳಯಕ್ಕೆ, ಕೋಲಾಹಲಕ್ಕೆ ಕಲಿಯುಗಕ್ಕೆ ಆಮಂತ್ರಣವಾಗಿ ಪರಿಣಮಿಸಬೇಕು. ಪುರಾತನರು ಸಾರ್ವ- ಭೌಮಶಕ್ತಿ-ವೃತ್ರ ಅಹಿಶಕ್ತಿಯ ಈ ತತ್ತ್ವವನ್ನು ಭೌಮಾಸುರ ದೈವತ ನಿರ್ಮಾಣ ಪ್ರೇರಕ-ವೈಚಾರಿಕ-ಸನಾನತ ಆಕೃತಿ ಎಂದು ಪರಿಗಣಿಸಿದ್ದಾರೆ. ಭಾರತೀಯ ಪುರಾತನರು ಮಾತ್ರವಲ್ಲ: ಗ್ರೀಕ್ - ಸಂಸ್ಕೃತಿಯೊಳಗಣ ದೈವತಗಳ ಸ್ಥಿತ್ಯಂತರದಲ್ಲಿಯೂ, ಇದೇ ದೃಶ್ಯವು ಪ್ರತಿಬಿಂಬಿತವಾಗಿರುವುದನ್ನು ಕಾಣಬಹುದು.

> The Greek parallel just alluded to is the stroy of Typhon (:Python). This monster arises as a new adversary to Zeus at the point of Hosiad's Theogony when Zeus has gained power by his victory kronos and the other Titans...೧

ಭಾರತೀಯ ಪುರಾತನ ಸಂಸ್ಕೃತಿಯೊಳಗಿನ ಭೌಮಾಸುರ ದೈವತಶಕ್ತಿಯ ಬಗೆಗಿನ ಜೀವನಾನುಭವಕ್ಕೆ ಗ್ರೀಕ್ ಪುರಾತನ ಸಂಸ್ಕೃತಿಯೊಳಗಿನ ಟಿಟಾನ್ ದೈವತಪ್ರತಿಮೆಗಳ ಮೂಲಕ ಪುಷ್ಟಿದೊರೆಯುತ್ತಿದೆ! ಈ ದೈವತ ಪ್ರತಿಮೆಗಳ ಆಶಯದಲ್ಲಿ ಕಾಣುವ, ಉಭಯ ಸಂಸ್ಕೃತಿಯೊಳಗಿನ ಅಂತಃಸಂಗತಿಯು ಚಿಂತ್ಯವಿದೆ. ಮಾನವೇತಿಹಾಸ ದಲ್ಲಿ ಸಂಭವಿಸಿರುವ ಈ ಘಟನೆಯು (ಭೌಮಾಸುರ : ಟಿಟಾನ್ ಸಂಪ್ರದಾಯವು) ನೂತನ ವೇಷತಾಳಿ, ಮೋಕ್ಷಕಾಮೀ ಸಂತ ಮಹಂತರ ಪಂಥವೆನಿಸಿ ಮರಳಿ ಲೋಕಪೂಜ್ಯವಾಗಿದೆ! ಇವು, ಭೌಮ (Titan) ದೈವತವೆಂಬ ವಸ್ತು ಸ್ಥಿತಿಯನ್ನು ಮರೆಮಾಚಲು ಇವು ಭೂಃ→ಭುವಃ ಇದರ ಆಚೆಗಿನ ಸ್ವರ್ (ಪ್ರಕಾಶತತ್ತ್ವದ) ಪಾತಳಿಯ ದೈವತ ವೇಷ ಧರಿಸುವ ಪ್ರಯತ್ನ ಪಟ್ಟಿದ್ದು ಬೆಳಕಿನಲ್ಲಿ ಬರುತ್ತಿದೆ! ಉದಾ : ಆದಿತ್ಯ=ಚಂದ್ರಾ-ಆದಿತ್ಯ! ಸೋಮ ಪುಲ್ಲಂಗಿಯಾಗಿ ಕಾಣುವ ಈ ಪ್ರತಿಮೆ (ಸೋಮ) ನಾಥ, ಈಶ್ವರ ಈ ಸಂಕೇತಗಳ ಸಂದರ್ಭದಲ್ಲಿ ಚಂದ್ರಾದೇವಿಯೇ ಸೋಮ ವೇಷದಲ್ಲಿ ಅಡಗಿರುವುದು ಹೊರಬೀಳುತ್ತದೆ!

ಪಾಶ್ಚಾತ್ಯ ಪರಂಪರೆಯೊಳಗಿನ ಟಿಟಾ-ಸೈತಾನ-ಸರ್ಪವು (Leviathan) Brazen Serpent = ಇದನ್ನು ಹೀಬ್ರೂ ಹಾಗೂ ಕ್ರೈಸ್ತ ಪಂಥಗಳಲ್ಲಿ Tree of Life (Gen. 2.9) ಎಂಬ ರೂಪದಲ್ಲಿ ಕಾಣಲಾಗುತ್ತದೆ. ಈ ಸೃಜನ (ಜ್ಞಾನ) ವೃಕ್ಷವನ್ನೆ Tree of Light ಎಂದೂ ಬಗೆಯಲಾಗಿದೆ. Candle Light ಸಾಂಕೇತಿಕ ಪ್ರತಿಮೆ ಇದಕ್ಕೆ ಪ್ರಮಾಣ. ಆದಿತಿ : ಆದಿಶಕ್ತಿ : ಕುಮಾರೀ ಮಾತಾ, ಇವಳ ಮಗ ಆದಿತ್ಯ (ಸೂರ್ಯ?) ಈ ತಂತ್ರವೇ ಕುಮಾರೀ ಮಾತೆ (virgin) ಮೇರೀ ಪುತ್ರ-ಏಸುವಿನ ವ್ರತದ ವಾರ (ಸಪ್ತಮ ದಿನ) Sabbath Sunday ಎಂಬಲ್ಲಿಯೂ ಉಂಟು!

> in Prague in the Cathedral, I remember seeing fine baroque figure of Christ standing upon the Sun and Virgin Mary upon the Moon! ....[೨]

ಮಾನವರ ಜೀವನ: ಸಂಸ್ಕೃತಿಯೊಳಗಿನ (ಧರ್ಮ ಎಂದು ಬಗೆಯಲಾಗಿರುವ ಸಂಪ್ರದಾಯಗಳೊಳಗಿನ) ಆತ್ಮ-ವಂಚನೆಗೆ ಅಥವಾ ಮೋಸಕ್ಕೆ ಕಾರಣವಾಗುತ್ತಿರುವ ಎಡೆ ಇಲ್ಲಿದೆ : ಏಕಕಾಲಕ್ಕೆ ಮೂರ್ತಾ್ಯಮೂರ್ತ ಏಕಂ-ಸತ್ ರೂಪೀ ಸತ್-ತ್ಯಂ ಪಾತಳಿಯ ಜೀವನಾನುಭವದಾಯಕ ದಿವ್ಯಪ್ರತಿಮೆಗಳ ಜಾದು-ಚಮತ್ಕಾರಕ್ಕೆ (Magic ಗೆ) ಮಾರುಹೋಗುತ್ತಿದ್ದೇವೆ. ಇಲ್ಲಿ ದೊರೆವ ಅಂಗಾನಾಂರಸದ: ಪ್ರಾಣ ಚೇತಸದ ಅನುಭವವನ್ನು ಬರ್ಗಸನ್ನನ ಪರಿಭಾಷೆಯ infra-rational ಪಾತಳಿಯನ್ನು Supra-rational ಪಾತಳಿಯ ಇಂದ್ರಿಯಾತೀತ ಅನುಭವವೆಂದು ಬಗೆಯಲಾಗುತ್ತಿದೆ! ಭಾರತದಲ್ಲಿ ಪ್ರಚಲಿತವಿದೆ ಎಂಬ ಈ ವೈವಸ್ವತ ಮನ್ವಂತರ ಇರಲೇ ಬೇಕಾಗಿದ್ದ ವಿವಸ್ವನ್ ಪ್ರೇರಿತ ಮಾನವಧರ್ಮದ ಸ್ಥಳದಲ್ಲಿ, ಸ್ವಯಂಭೂ ಹಿರಣ್ಯಗರ್ಭ ದೈವತ ಪ್ರೇರಣೆಯ ನರ-ನಾರಾಯಣ ಸಂಪ್ರದಾಯವು ಪ್ರಭಾವಶಾಲಿಯಾಗಲು ಕಾರಣವೇನು, ಎಂಬುದನ್ನು ಪ್ರಾಜ್ಞರು ನಿಷ್ಕರ್ಷಿಸಿ ಕಂಡುಹಿಡಿಯುವುದು ಅವಶ್ಯವಿಲ್ಲವೆ?

ಪ್ರಪಂಚದೊಳಗಿನ ಪರಲೋಕವಾದೀ ಮೋಕ್ಷಕಾಮೀ ಸಂಪ್ರದಾಯಗಳ ತಳಪಾಯದ ವೈಚಾರಿಕ ಆ-ಕೃತಿ ಭವ-ಬಂಧನ, ಪಾಪಿ ಜನ್ಮ ಇದರೊಳಗಿನಿಂದ ಮುಕ್ತಿ ಇದು ಸಮಾನವೇ ಇರುವುದರ ಅರ್ಥವೇನು? ಇವೆಲ್ಲವೂ ಸಮಾನವೇ ಆಗುತ್ತಿದೆ.

> Slaying of Phython (Serpent), Victory of Consciousness over Unconscious[೩]

ಮೋಕ್ಷಕಾಮೀ ಜಾತಿ-ಮತದ (ಸಂಪ್ರದಾಯದ) ವೃತ್ತಾಕೃತಿಯ ಪುರುಷರೂಪೀ, ಸತ್-ತ್ಯಂ ಸರ್ಪಭೇದಿಸಿ, ಸಮಷ್ಟಿ : ಸಮಾಜದ ಅಧಿಷ್ಠಾನವಿರುವ ಋತಸ್ವರೂಪೀ ಸತ್ಯದ ಏನೊಂದು ಕ್ಷೇತ್ರದಲ್ಲಿ, ಅದರ ಪ್ರ-ಗತಿಗಾಗಿ ಮುದುಪಿಕೊಳ್ಳುವ ರೀತಿಯಲ್ಲಿ, ತನ್ನನ್ನು ರೂಪಿಸಿಕೊಳ್ಳುವ ಸಂಪ್ರದಾಯವು ಶಿಷ್ಟಮಾನ್ಯ ಲೋಕಮಾನ್ಯವಾಗ ತೊಡಗುವುದರೊಡನೆ, ಪುರಾತನ ಪರಂಪರೆಯ ವೈಶ್ವಾನರಾಗ್ನಿ ಸೇವೆಯಲ್ಲಿಯೇ ಜೀವನದ ಕೃತಾರ್ಥತೆಯುಂಟು ಎಂಬ ಶ್ರದ್ಧೆಯ ಆ ಮೂಲ ವಿವಸ್ವನ್ ಮನುಪ್ರಣೀತ ಮಾನವಧರ್ಮವು ಭಾರತದಲ್ಲಿ ಮರಳಿ ಮೈದೋರಬಲ್ಲುದು, ಇದರಲ್ಲಿ ಸಂದೇಹವಿಲ್ಲ. ಏಕೆಂದರೆ, ಕೊನೆಯಲ್ಲಿ ಅರ್ಜುನಾಯನರ ಪ್ರಕಾಶತತ್ತ್ವಕ್ಕೇ ಗೆಲುವು; ನಾರ ಅಯನ ನರರ ಕೃಷ್ಣ ತತ್ತ್ವಕ್ಕಲ್ಲ.

> ಸತ್-ತ್ಯೇನ ಪಂಥಾಃ ವಿತತೋ ದೇವಯಾನಃ।[೪]

ಇಂದಿನ ಶ್ರದ್ಧೆಯ ಸತ್‌ತ್ಯ Biosphere Truth ಇದು. ಸ್ವರ್ ಪಾತಳಿಯ ಸತ್ಯದಿಂದ ಭಿನ್ನ. ನ-ಚಿಕೇತಾಗ್ನಿಯ (=ಬೃಹದುಲ್ಬದ) ದೇವಯಾನ (ಪ್ರವೇಶದ) ಮಾರ್ಗವು ಹಿಗ್ಗುವ ಸ-ರಸ ಸತ್-ತ್ಯಂ ಇದಕ್ಕೇ ಗೆಲವು, ಇಂದು ಪ್ರಪಂಚದಲ್ಲಿ ಮೋಕ್ಷಮಾರ್ಗ-ಪ್ರೇರಕ ಈ ಸತ್-ತ್ಯಂ ಉಪಾಸಕರ Religion ಪ್ರಭಾವಶಾಲಿಯಾಗಿದೆ.

ಸತ್ಯಮೇವ ಜಯತಿ, ನಾನೃತಂ ಎಂಬುದು ತೋರಿಕೆಗೆ ಆಡುವ ಮಾತು. ಮುಂಡ-ಕ ಸಂಪ್ರದಾಯ ಪ್ರೇರಕ ಉಪನಿಷತ್ತು ಈ ರಾಜವಿದ್ಯಾ ರಾಜಗುಹ್ಯ ಭಗವತ್ ಗೀತೆಯಂತೆ ಒಳಗೇ ಬಚ್ಚಿಟ್ಟುಕೊಳ್ಳದೆ, ಪ್ರಾಂಜಲವಾಗಿ ಇದನ್ನು ಸೂಚಿಸಿದೆ.

ಟಿಪ್ಪಣಿಗಳು

೧. Kramer S. N. (Ed.); ***Mythologies of the Ancient World;*** Anchor Books; P. 172, 261, 263-64

೨. J. Hawkes, ***Man and the Sun***, Random House, N. Y. p., 204

೩. ***Ibid***, P. 186

೪. ***ಮುಂಡಕೋಪನಿಷತ್ತು*** ೩. ೧. ೫-೬

ಮನು : ಜೀವನದರ್ಶನದ ಆಕೃತಿ ಸ್ವರೂಪ

ವಿವಸ್ವನ್ (ಸೌರ ಪ್ರಕಾಶ ತತ್ತ್ವದಿಂದ) ಪ್ರೇರಿತ ಮನುವಿನ (ಮಾನವನ) ಜೀವನ -ದರ್ಶನದ (Gestalt) ಆಕೃತಿ-ಸ್ವರೂಪ ವೈಶಿಷ್ಟ್ಯ.

ಜ್ಞಾನೋಪಲಬ್ಧಿಯ ಮೂಲಸ್ವರೂಪವನ್ನು ಗಮನಿಸಿದಲ್ಲಿ ಮಾನವನಿಗೆ ಮೊತ್ತ ಮೊದಲಲ್ಲಿ, ಅರ್ಥರೂಪೀ ವಿಚಾರ ಅಥವಾ ವಿಚಾರರೂಪೀ ಅರ್ಥವು ಕಂಡದ್ದು; ಕಲ್ಪಿಸಿದ ಸಂ-ಕಲ್ಪನೆ ಅಲ್ಲ. ಹೀಗೆ ಕಂಡಂತೆ ಅಥವಾ ಹೊಳೆದಂತೆ ಎನಿಸಿದ್ದು=ಆ-ಚಾರದ ಸಂದರ್ಭದಲ್ಲಿಯೇ ಎಂಬ ಈ ವಿಷಯದ ಬಗೆಗೆ ಪ್ರಾಜ್ಞ-ತಜ್ಞರಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಭಾಷೆ : ಮಾತು ಇದು, ಕೃತಿಯ ಪರ್ಯಾಯವೇ ಆಗಿದೆ-ಇಂದಿಗೂ! ಮೂಲ ಜೀವನಾನುಭವವು ದರ್ಶನ (Gestalt) ವಿಶಿಷ್ಟ ಆ-ಕೃತಿಯುಕ್ತ ಇರಬಲ್ಲದು. ಕೃತಿಯ ಆಧಾರವಿಲ್ಲದ ಆಕೃತಿ, ಕೇವಲ ಸಂಕಲ್ಪನೆ (invention). ಈ ಮಾನವ ಜೀವನ : ಸಂಸ್ಕೃತಿ ಇದು ಬರಿ ಸಂಕಲ್ಪನಾವಿಲಾಸ ಎಂದು ಬಗೆಯಲಾಗುವಲ್ಲಿ ಕತ್ತಲೆಯ ಅಥವಾ ಶೂನ್ಯದ ನಾಭಿರಾಜನ ಎಂದರೆ ಆದಿತ್ಯ ಪುರಿ-ಶಯ(ನ)ನ ಸಾಕ್ಷಾತ್ಕಾರವೇ ಇದರ ಪ್ರೇರಣಾಕೇಂದ್ರವಿರಲಿಕ್ಕೆಬೇಕು.

ಮಾನವ ಜೀವನ : ಸಂಸ್ಕೃತಿಯ ಎಂದರೆ ಈ ಹಂತದ ಜೀವನಾನುಭವದ ಕೊನೆಯ ಘಟ್ಟದ ಸೂಕ್ಷ್ಮ ಸಮೀಕ್ಷೆಯಲ್ಲಿ ಇದರ ಏನೆಲ್ಲ ಅರ್ಥವು ಬೆಳಕು ಮತ್ತು ಕತ್ತಲೆ ಇವೆರಡೇ ಸಾಂಕೇತಿಕ ಪ್ರತಿಮೆಗಳಲ್ಲಿ ಒಳಗೊಂಡಿರುವುದನ್ನು ಕಾಣಬಹುದು! ದಿವ್ಯಾಧ್ಯಾತ್ಮ-ಮೋಕ್ಷಕಾಮೀ ಸಂಪ್ರದಾಯ, ಕತ್ತಲೆಯಲ್ಲಿ ಬೆಳಕನ್ನು ಹುಡುಕುವ ಸಂಪ್ರದಾಯವಾಗಿದೆ! ಜೀವನ ಅರ್ಥವಿಹೀನ ಇದು ಕಗ್ಗತ್ತಲೆ. ಬೆಳಕು ಜೀವನದಾಚೆಗಿದೆ-ಜೀವನಸ್ಥ ಸತ್ವಸಾರ-ಅರ್ಕರೂಪ ಜ್ಯೋತಿ ಈ ಬಾಳಿನ ಆಚೆಗೇ ಉಂಟು, ಎಂಬ ಶ್ರದ್ಧೆ ಇಲ್ಲಿ ಅನಿವಾರ್ಯವಿದೆ. ಸಾಹಿತ್ಯ ಕಲೆಯು ದಿವ್ಯಾಧ್ಯಾತ್ಮಸಂಪ್ರದಾಯದ ಶಾಖೆಯಾಗುವಾಗ, ಇದೂ ನಾಗ=ಚಂದ್ರ-ಸಂಪ್ರದಾಯದ ನಾಭಿರಾಜನ ಸ್ತೋತ್ರಗಳ ಪರ್ಯಾಯದ ಅಭಿವ್ಯಕ್ತಿಯೇ ಆಗಬಲ್ಲದು.

ಕತ್ತಲೆಯಲ್ಲಿ ಕಾಣುವ ಬೆಳಕು ಇದು ಸಂಕಲ್ಪನಾತ್ಮಕ (invented) ಸ್ವರೂಪದ್ದೇ ಇರಬಲ್ಲದು. ಇದಕ್ಕೆ ಪ್ರತಿಯಾಗಿ ಬೆಳಕಿನಲ್ಲಿ ಕಾಣುವ ಕತ್ತಲೆಯ ಅನುಭವವೂ ವಿಚಾರಾರ್ಹವಿದೆ. ಮಾನವೀಯ ಜೀವನಾನುಭವದ ಮೂಲ ಆ-ಕೃತಿ ಸ್ವರೂಪದ ಈ ವೈಶಿಷ್ಟ್ಯದಿಂದಾಗಿ ಮಾನವೀಯ ಜ್ಞಾನವನ್ನು ಸಂಕಲ್ಪನಾತ್ಮಕ ಜ್ಞಾನಶಾಖೆ ಮತ್ತು ಸಂಶೋಧನಾತ್ಮಕ ಜ್ಞಾನಶಾಖೆ ಎಂದು ಎರಡು ವಿಭಾಗಗಳಲ್ಲಿ ವಿಂಗಡಿಸಲು ಶಕ್ಯವಾಗುತ್ತಿದೆ. ಜೀವನಾನುಭವದ : ದರ್ಶನದ (Gestalt) ಆಕೃತಿಗೆ ಆಧಾರಭೂತ ಮೂಲ (ಜ್ಞಾನ) ಕಣಗಳ (monads) ರಚನಾ ವೈಶಿಷ್ಟ್ಯದೊಳಗಿನ ಭೇದವು ಇಲ್ಲಿ ಚಿಂತ್ಯವಿದೆ. ಕತ್ತಲೆಯ ಮೂಲ ಕಣಗಳ ನಡುವೆ ಹೊಳೆದಂತೆ

ಎನಿಸುವ ಬೆಳ್ಳಿಯ ಚಿಕ್ಕೆಯ ಅನುಭವದ ಹಿನ್ನೆಲೆಯೇ ಬೇರೆ; ಇದೇ ಮೇರೆಗೆ ಪ್ರಕಾಶದ: ಆಕಾಶದ ಪಾತಳಿಯಲ್ಲಿ ಕಂಡಂತೆ ಆಗುವ ಕರ್‍ರನೆಯ ಚುಕ್ಕೆಗಳ ಅನುಭವದ ಪಾರ್ಶ್ವಭೂಮಿಯೇ ಬೇರೆ!

Genuine Language and genuine culture - these two are gifts ಎಂದು ಡಾ।। ಕ್ರೋಬರ್ ಆಡಿರುವ ಮಾತಿನ ವಾಸ್ತವತೆಯು ಇಲ್ಲಿ ಪ್ರತೀತಿಗೆ ಬರುತ್ತಿದೆ. ಡಾ।। ಬರ್ಗಸನ್ ಹೇಳುವ supra-rational intuition ದ ಮಾದರಿಯ ಒಂದಂಶವನ್ನು ಇಲ್ಲಿ ಒರೆಗೆ ಹಚ್ಚಿ ನೋಡಬಹುದು. ಭಾರತೀಯ ಪುರಾತನರ ಜೀವನಾನುಭವವನ್ನು (ದರ್ಶನವನ್ನು) ಚಿತ್ರಿಸುವ ಜ್ಯೋತಿ ಮತ್ತು ಪ್ರಕಾಶ ಇವೆರಡೂ ಸಾಂಕೇತಿಕ ಪ್ರತಿಮಾ ಶಿಲ್ಪದ ಅಪೂರ್ವನಿತಾಂತ ರಮ್ಯತೆಯನ್ನು, ಬಗೆದು ಭಾವಿಸುವುದೇ ಲೇಸು, ವಿವರಣೆಯಿಂದ ಅರಿಯುವುದಕ್ಕಿಂತ.

ಜ್ಯೋತಿ ಇದು ಕತ್ತಲೆಯ ಆವರಣದೊಳಗಿನ ಬೆಳಕು! ಬೌದ್ಧಿಕ ಲೆಕ್ಕಾಚಾರವು ತರ್ಕ ಭಾಷೆಯನ್ನು ಸೃಷ್ಟಿಸಲಾರದು. ಅಂತರ್ ಹೃದಯಸ್ಥ ಜ್ಯೋತಿಯ ಸಾಕ್ಷಾತ್ಕಾರವೇ ಬಾಳಗುರಿ ಎಂಬುದು ಏನೆಲ್ಲ ದಿವ್ಯಾಧ್ಯಾತ್ಮ ಪಂಥಗಳ ಆದರ್ಶ! ಈ ಜೀವನಾನುಭವದ ಪಾರ್ಶ್ವಭೂಮಿ ಕತ್ತಲೆಯ ಗವಿ-ಕೋಣೆಯೇ ಇರಬಲ್ಲುದು!.. ಹೀಗೆ ಜ್ಯೋತಿ ಎಂಬ ಈ Gestalt ಶಬ್ದಪ್ರತಿಮೆ ಇಡೀ ಅಖಂಡಿತ ಆಕೃತಿಯನ್ನು - ಆ ಮೂಲ ಜೀವನಾನುಭವದ ಹೊಳಹನ್ನೇ ಮರಳಿ ಕಣ್ಣೆದುರು ನಿಲ್ಲಿಸುವ ಸಾಮರ್ಥ್ಯ ಪಡೆದಿದೆ! ಜ್ಯೋತಿಃಸ್ವರೂಪ ಸರಸ ಸಾಕ್ಷಾತ್ಕಾರವು ಭಗವತ್ ಉಪಾಸನಾ ಸಂಪ್ರದಾಯದ ಮೂಲಚಿತ್ರವನ್ನು ಉಳಿಸಿಕೊಂಡು ಬರುತ್ತಿರುವುದರಿಂದ ಭಗವತ್ ಗೀತೆಯ ಭಗವಂತನಿಗೆ ಪ್ರಕಾಶತತ್ತ್ವ ಪ್ರೇರಕ ವಿವಸ್ವನ್ ದೈವತಕ್ಕೂ ತನ್ನ ಯೋಗದೀಕ್ಷೆಯನ್ನು ಕೊಡುವ ಆವಶ್ಯಕತೆ ಎನಿಸಿತು! ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನ್ ಅಹಂ!

ಜ್ಯೋತಿಯ ಪಾರ್ಶ್ವಭೂಮಿ, ಕತ್ತಲೆಯ ಏಕಾಂತಿಕ ಹಿನ್ನೆಲೆಯಾಗಿರಬಲ್ಲದು, ಎಂಬ ವಾಸ್ತವ ಸತ್ಯದಂತೆ, ಪ್ರಕಾಶದ ನಡುವೆ ಕಾಣುವ ಕರ್‍ರನೆಯ ಚುಕ್ಕೆ ಎಂಬಲ್ಲಿ ಇದು ಸಮಷ್ಟಿ ಸಮಾಜದ ಜೀವನಾನುಭವದ ಹಿನ್ನೆಲೆಯುಳ್ಳದ್ದು ಇರಬಲ್ಲದು ಎಂಬುದೂ ಇಲ್ಲಿ ಅಭಿಪ್ರೇತವಿದೆ. ಜ್ಯೋತಿ, ಕತ್ತಲೆ, ಗವಿ, ಕೋಣೆ, ಏಕಾಂತಿಕತೆ... ಇಲ್ಲಿ ಈ ಬಗೆಯ ಸಾಂಕೇತಿಕ ಅರ್ಥವು ಅಭಿಪ್ರೇತವಿದೆ. ಇದೇ ಮೇರೆಗೆ ಪ್ರಕಾಶ, ಹಗಲು, ಸಾಮಾಜಿಕ-ಪರಿಸರ-ಹಗಲಿನ ವ್ಯವಹಾರ ಎಂಬಲ್ಲಿ ಸಾಂಕೇತಿಕ ಅರ್ಥವು ಅಭಿಪ್ರೇತವಿದೆ. ಕತ್ತಲೆಯ ಪಾರ್ಶ್ವಭೂಮಿಯ ಮೇಲೆ ಸಂಗತಿ-ವಿಸಂಗತಿ ಇವೆರಡರೊಳಗಿನ ಅಂತರವು ನಿಚ್ಚಳವಾಗಿ ಕಾಣದೊರೆಯದು. ಆದರೆ ಹಗಲಿನ ವ್ಯವಹಾರದಲ್ಲಿ ಸಾಮಾಜಿಕ ಪರಿಸರದಲ್ಲಿ, ವಿ-ಸಂಗತಿಯನ್ನು ಬಚ್ಚಿಡಬೇಕೆಂದರೂ ಇದು (ವಿಸಂಗತ, ಅಸಂಗತ, ವಿಪರೀತ=ಕತ್ತಲೆ, ಕರ್‍ರನ್ನ ಎಡೆ) ಫಕ್ಕನೆ ಹೊಳದು ಹೋಗಬಲ್ಲದು. ಉದಾ : ಭಗ-ವತ್ ಗೀತೆ, ಭಗ-ವಂತ ಅಶ್ವತ್ಥ : ವೃಕ್ಷ..... ಮುಂತಾದ ನೇರ ಅರ್ಥಕ್ಕೆ (ಪ್ರಕಾಶಕ್ಕೆ) ನಿಲುಕದ ಕರ್‍ರನೆಯ ಕಣಗಳ ಆಧಾರದ ಮೇಲೆ ನಿಂತಿರುವ ಈ ಗೀತೆ ಆದಿತ್ಯ ಸಂಪ್ರದಾಯ ಪ್ರತಿಪಾದಕ ಗ್ರಂಥವೇ ಇರಬೇಕು, ಎಂಬ ನಿಷ್ಕರ್ಷವು ಅನಿವಾರ್ಯವಾಗುತ್ತದೆ! ಸೂರ್ಯ, ವಿವಸ್ವನ್ ಇವು ಪ್ರಕಾಶತತ್ತ್ವದ ಸಾಂಕೇತಿಕ ಪ್ರತಿಮೆಗಳು; ಇವನ್ನು ಆದಿತ್ಯರೂಪಕ್ಕೆ ಮಾರ್ಪಡಿಸಲಾಗಿದೆ. ಆದಕಾರಣ, ಆದಿತ್ಯ ಉಪಾಸಕರ ಮೂಲ ಸಂಪ್ರದಾಯವು ಕತ್ತಲೆಯ ಆರಾಧಕರ ರಾತ್ರ ಸಮಯಾಚಾರಗಳ ಜೀವನ ರೀತಿಯ ಹಿನ್ನೆಲೆಯಲ್ಲಿಯೇ ಆಕಾರ ಪಡೆದಿರಲಿಕ್ಕೆ ಬೇಕು, ಎಂಬ ಈ ತೀರ್ಪು, ವಾಸ್ತವವೊ ಎಂಬುದನ್ನು, ಇನ್ನೂ ಬೇರೆ ಬಗೆಗಳಿಂದಲೂ ವಿಮರ್ಶಿಸಿ, ತಾಳ-ಮೇಳ ದೊರೆತರೆ, ಮೇಲಣ ನಿಷ್ಕರ್ಷವು ವಾಸ್ತವ ಸತ್ಯಾಂಶ ಎಂದು ಬಗೆಯಬಹುದಾಗಿದೆ.

ಜೀವಿತದ (ವೈಯಕ್ತಿಕ) ಕತ್ತಲಿನ ಗವಿಯಲ್ಲಿ ಕಂಡಂತೆ ಎನಿಸುವ ಶುಕ್ಲಜ್ಯೋತಿ : ಶುಕ್ರಾಂಶದ ಅನ್ವೇಷಣೆಯಲ್ಲಿ ದಿವ್ಯಾಧ್ಯಾತ್ಮವು ಆಕಾರ ಪಡೆದಿದೆ. ಇದು ಕಲ್ಪಿಸಿರುವ ಈರೇಳು ಲೋಕ ಇಲ್ಲಿ ಕಾಣದೊರೆಯುತ್ತವೆ. ಸಾಹಿತ್ಯ ಕಲಾಸೃಷ್ಟಿಯ ಪ್ರೇರಣಾ ಕೇಂದ್ರವೂ ಇಲ್ಲಿಯೆ ಇರುವುದು. ಆದರೂ ಏಕಾತ್ಮಕ ಎರಡು ಪಾತಳಿಗಳ ನಡುವಣ ಸ-ರಸ; ಬಂಧುರ ಸತ್‌ತ್ಯದ ನೆಪದಿಂದ, ನಿಜವಾದ ವೈಶ್ವಕಪಾತಳಿಯ ಸಾಧು (legitimate) ಸತ್ಯವನ್ನು ಲೋಕಕ್ಕೆ ಅರುಹುವ ಕಾರ್ಯವನ್ನು ಈ ಪ್ರಜ್ಞಾ, ಪ್ರಾತಿಭದೃಷ್ಟಿ ಮಾಡಬಹುದಾಗಿದೆ. ಇದೇ ಮೇರೆಗೆ, ಪ್ರಕಾಶ

ಮಧ್ಯದ ಕರ್ರನೆಯ ಚುಕ್ಕೆಗಳ ವಾಸ್ತವ ಸ್ವರೂಪದ ಸತ್ಯಾನ್ವೇಷಣೆಯಲ್ಲಿ, ಇತಿಹಾಸ ತತ್ತ್ವಜ್ಞಾನ ಮತ್ತು ವಿವಿಧ ಶಾಸ್ತ್ರಶಾಖೆಗಳು ಮಾನವನಿಗೆ ಲಭ್ಯವಾಗಿವೆ. ಸ್ವದ ಉಪಜ್ಞೆ ಜಾಗೃತವಾಗಿರುವ ಈ ಮಾನವೀಯ ಜೀವನಾನುಭವವು, ಫ್ರೈಡ್ ಪ್ರಭೃತಿಗಳು ಹೇಳುವ ಏಕಮೇವ ಪಾತಳಿಯ ಮೇಲಿಂದ ಅರ್ಥಯಿಸುವುದು ಅಸಮರ್ಪಕ ಇದು ಸದೋಷ ಪದ್ಧತಿ ಎಂಬ ಅನುಭವದಿಂದಾಗಿ ಮಾನವಶಾಸ್ತ್ರಜ್ಞರಿಗೆ ಮಾನವ ಜೀವನದಲ್ಲಿ ಪಾತಳಿಗಳು ಇರುವುದಾಗಿ ಕಂಡಿದೆ. ಆದರೆ ೨-೩ ಸಾವಿರ ವರ್ಷಕ್ಕೂ ಮುಂಚೆ ಭಾರತೀಯ ಪುರಾತನರು ಮಾನವ ಜೀವನಸ್ಥ ಈ ಪಾತಳಿಗಳನ್ನು ನಿರ್ದಿಷ್ಟ ಪಡಿಸಿ, ಗ್ರಹಿಸಿಕೊಂಡಿದ್ದಾರೆ. ವ್ಯಾಹೃತಿ ಎಂದು ಹೆಸರಿಸಲಾದ ಭೂಃ ಭುವಃ ಇವೆರಡೂ ಏಕಾತ್ಮಕ ಸಮವಾಯ ರೂಪ ವ್ಯಾಹೃತಿಗಳ ಆಚೆಗೆ ಸ್ವಃ (ಸ್ವರ್ ಅಥವಾ ಸುವಃ) ವ್ಯಾಹೃತಿಯುಂಟು. ಈ ಶ್ರದ್ಧೆಯಲ್ಲಿ, ಸೌರ ಹಾಗೂ ಚಾಂದ್ರ ಈ ಉಭಯ ಭೂಮಿಕೆಯ ಜೀವನಾನುಭವವೂ ಒಳಗೊಂಡಿದೆ. ಇದರಲ್ಲಿ ಮಾನವನ ಜೀವನಾನುಭವವು ಇಡಿಯಾಗಿ ಪ್ರತಿಬಿಂಬಿತವಾಗುತ್ತಿದೆ. ಹಗಲಿನಂತೆ ಇರುಳಿನ ಜೀವನಾನುಭವಕ್ಕೂ ಇಲ್ಲಿ ಸ್ಥಾನವುಂಟು. ಆದರೆ, ಇರುಳಿಗೆ (ರಾತ್ರಿ-ಕೃಷ್ಣ) ಹಗಲು (ಅರ್ಜುನ, ಸೌರ ಪ್ರಕಾಶತತ್ತ್ವ) ತನ್ನ ಅನುಯಾಯಿಯಾಗಬೇಕೆಂಬ ಅಸುರೀ ಮಹತ್ವಾಕಾಂಕ್ಷೆ ಇದರಿಂದಾಗಿ ಇಂದು ಪ್ರಪಂಚದಲ್ಲಿ ರಾತ್ರಸಮಯಾಚಾರ ಪ್ರೇರಕ ಮೋಕ್ಷಕಾಮೀ ಸಂಪ್ರದಾಯಗಳೇ (Religious) ಧರ್ಮ ಎಂಬ ವಿಶಾಲ ಉದಾತ್ತ ಅರ್ಥದ ಹೆಸರಿನಲ್ಲಿ ದೊರೆಯುತ್ತಿವೆ. ಮನುಪ್ರಣೀತ ಮಾನವಧರ್ಮ ಇದು ವಿವಸ್ವನ್ (ಸೌರ : ಪ್ರಕಾಶ ತತ್ತ್ವದಿಂದ) ಪ್ರೇರಿತ ಎಂಬ ಸಾಂಕೇತಿಕತೆಯ ಸಾರ್ಥಕತೆ, ಆಧುನಿಕ ಮಾನವ ಶಾಸ್ತ್ರಜ್ಞರ ಮಾನವಧರ್ಮವನ್ನು ಕಂಡುಹಿಡಿಯಲು ನಡೆದಿರುವ ಪ್ರಯತ್ನಗಳೊಳಗಿನ ಪ್ರಾಮಾಣಿಕ ಅಂಶಗಳಿಂದ ದೃಢಪಡುತ್ತದೆ. Religion ಎಂಬ ಹೆಸರಿನಲ್ಲಿ ಒಳಗೊಳ್ಳುವ magico-religious ಸಂಪ್ರದಾಯಗಳನ್ನು ಮಾನ್ಯ ಮಾಡಿದವರು, ಮಾನವಶಾಸ್ತ್ರಜ್ಞರಲ್ಲಿ ಅಗ್ರಗಣ್ಯ ಡಾ।। ಎ. ಎಲ್. ಕ್ರೋಬರ್ ಪ್ರಭೃತಿಗಳ ಮಟ್ಟದವರು-ಯಾರೂ ದೊರೆಯಲಾರರು!

ಈ ಶಾಸ್ತ್ರಜ್ಞರಿಗೆ ಮಾನವಧರ್ಮ ಎಂಬ ಹೆಸರು, ಒಟ್ಟಿನಲ್ಲಿಯೇ ಧರ್ಮ ಎಂಬುದರ ಬಗೆಗಿನ ಜುಗುಪ್ಸೆಯಿಂದಾಗಿ ಹಿಡಿಸುವುದು ಕಷ್ಟ! ಆದರೆ ಭಾರತೀಯ ಪುರಾತನ ಪರಂಪರೆಯಲ್ಲಿ ಧರ್ಮ ಎಂಬ ಪದಕ್ಕೆ ನಿಯಮ ಎಂಬ ಮೂಲಾರ್ಥವೇ ಇದ್ದುದನ್ನು ಮ್ಯಾಕ್ಸ್‌ಮುಲ್ಲರ್ ಪ್ರಭೃತಿಗಳೆಲ್ಲರೂ ಒಪ್ಪಿದ್ದಾರೆ. ಮಾನವರ ಸುಸಂಸ್ಕೃತತರ ಜೀವನವು, ಜೀವನ ಕ್ಷೇತ್ರದೊಳಗಿನ ಆಯಾಯ ರಂಗದ ನಿಯಮಕ್ಕೆ ಒಳಗಾಗದ್ದು ಇರಬೇಕಾಗುತ್ತದೆ; ಇದನ್ನು ಯಾರೂ ಅಲ್ಲಗಳೆಯಲಾರರು. ಮಾನವ ಶಾಸ್ತ್ರದ ಪಾಶ್ಚಾತ್ಯ ಸಂಶೋಧಕರಿಗೆ, ತಮ್ಮ ಶಾಸ್ತ್ರದ ತಳಹದಿಯ ಪ್ರಾಥಮಿಕ (Primary) ಹಂತವು ಯಾವುದು? ಎಂಬ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ತನ್ನ ವಿಶಿಷ್ಟ ಮಾನದಂಡದಿಂದ ಸಮೀಕ್ಷೆಗೆ ಪ್ರಾರಂಭವಾಗುವುದು ಅನಿವಾರ್ಯವಿದೆ. ಆದರೆ, ವಿವಿಧ ವಿಶಿಷ್ಟಗಳು ಕಣ್ಣೆದುರು ಬರತೊಡಗಿದಂತೆ, ಈ ನೂತನ ವಿಶಾಲ ಅರ್ಥ ; ಜ್ಞಾನದ ಬೆಳಕಿನಲ್ಲಿ ಮೊದಲಿನ ಗೃಹೀತವು ಅಸಮರ್ಪಕವೆನಿಸತೊಡಗುತ್ತದೆ. ತ್ಯಾಜವೂ ಆಗುತ್ತದೆ. ಆಧುನಿಕ ಮಾನವಶಾಸ್ತ್ರದ ಉದ್ಗಮ, ವಿಕಾಸದ ಇತಿಹಾಸದಲ್ಲಿ ಈ ಸಂಗತಿ ಸ್ಪಷ್ಟವಾಗುತ್ತಿದೆ.

ಪಾಶ್ಚಾತ್ಯ civilization (ನಾಗರಿಕತೆ) ಇದನ್ನು ಮಾನದಂಡವಾಗಿ ಸ್ವೀಕರಿಸಲಾಗಿತ್ತು. Culture ಮತ್ತು Civilization ಇವೆರಡರಲ್ಲಿ ಯಾವ ಸಂಕೇತವು ಲೇಸು, ಈ ಬಗೆಗೆ ಇಂದಿಗೂ ಒಮ್ಮತವು ಕಾಣುವುದಿಲ್ಲ. ಆದರೂ ನಾಗರಿಕತೆ (Civilization) ಇದು ಮಹಾನಗರಗಳ ಸಂಸ್ಕೃತಿ (Culture) ಎಂಬ ಮಾತು ಒಪ್ಪಿಗೆಯನ್ನು ಪಡೆದಿದೆ; culture degenerates into civilization ಎಂಬ ಪ್ಲೆಂಗ್ಲರನ ವಾಕ್ಯವು ಇಂದು ಸರ್ವಮಾನ್ಯವಾಗಿದೆ. ಸಂಸ್ಕೃತಿಯ (ಮಾನವಧರ್ಮದ) ಪ್ರಾರಂಭದ ಹಂತವನ್ನು ಪ್ರಾಥಮಿಕ(=Primitive) ಸಂಸ್ಕೃತಿ ಎಂದು ಹೇಳುವ ಅನಿವಾರ್ಯತೆಯನ್ನು ಇಂದಿಗೂ ತಪ್ಪಿಸಲು ಆಗುತ್ತಿಲ್ಲ! ಈ ಪ್ರಾಥಮಿಕರು (Primitive) ಎಂಬ ಮಾತಿಗೆ, ತಿರಸ್ಕಾರ ಸೂಚಕ ಅರ್ಥವೂ ಅಂಟಿಕೊಳ್ಳುವ ಶಕ್ಯತೆಯಿಂದಾಗಿ, ಇದನ್ನು ಯೋಜಿಸುವುದು ಆಕ್ಷೇಪಾರ್ಹವೆಂದು ಕಂಡುಬಂತು! ಇದರ ಸ್ಥಳದಲ್ಲಿ ಬೇರೆ ಸಂಕೇತಗಳನ್ನು ಯೋಜಿಸುವ ಆವಶ್ಯಕತೆ ತಲೆದೋರಿತು. ಆದರೆ

ಆದಿಮ, ಮೊದಲಿನ ಪ್ರ-ಪ್ರಥಮ ಎಂಬ ಅರ್ಥದಲ್ಲಿ ಬೇರೊಂದು ಸಮರ್ಪಕ ಪ್ರತಿಶಬ್ದವೂ ದೊರೆಯದೆ ನಡೆದಿರುವ ಒದ್ದಾಟವು ಅಭ್ಯಸನೀಯವಿದೆ.[೧] ಈ ಪ್ರಬಂಧವನ್ನು ಓದುವಾಗ, ಪ್ರಚಲಿತ ಜನಪದ>ಜಾನಪದರು (=Folk) ಮತ್ತು ಬ್ರಾಹ್ಮಣರು ಎಂಬ ಭಾರತೀಯ ಸಂಸ್ಕೃತಿಯೊಳಗಿನ ಸಾಂಸ್ಕೃತಿಕ ಸಂಘರ್ಷದ ಹಿನ್ನೆಲೆಯೂ ಬಹುಮಟ್ಟಿಗೆ ಸ್ಪಷ್ಟೀಕರಣ ಪಡೆಯುತ್ತಿರುವುದಾಗಿ ನನಗೆ ಎನಿಸಿದೆ.

ಪ್ರಾಥಮಿಕರು (ಜಾನಪದರು)ಯಾರು? ಎಂಬ ಪ್ರಶ್ನೆಯು ಪ್ರಾಥಮಿಕತೆಯ ಅಂಶವೂ ಇಲ್ಲದವರು ಯಾರು? ಎಂಬ ಇನ್ನೊಂದು ಪ್ರಶ್ನೆಯಲ್ಲಿ ಕೊನೆಗೊಳ್ಳುತ್ತದೆ. ಹಾಗಾದರೆ ಪ್ರಾಥಮಿಕ ಹಂತ, ಮತ್ತು ಶ್ರೇಷ್ಠ ಸಾಂಸ್ಕೃತಿಕ ಹಂತ ಎಂಬ ಈ ವರ್ಗೀಕರಣವೆ ತಪ್ಪೊ? ಎಂಬ ಮೂರನೆಯ ಸಮಸ್ಯೆಯೊಂದು ಇಲ್ಲಿ ತಲೆಯೆತ್ತುತ್ತದೆ. ಭಾರತೀಯ ಸಂದರ್ಭದಲ್ಲಿಯೂ ಇದೇ ಪ್ರಶ್ನೆ ತಲೆಯೆತ್ತುತ್ತದೆ. ಮನು : ಮಾನವಧರ್ಮ ಪರಂಪರೆಯ ಋತ : ಸತ್ಯದ ಭೂಮಿಕೆಯ, ವೈಶ್ವಾನರಾಗ್ನಿ (folk wisdom) ಸೇವೆಯಲ್ಲಿ ಜೀವನದ ಕೃತಾರ್ಥತೆಯನ್ನು ಕಾಣುವ ಸಾಂಸ್ಕೃತಿಕ ಹಂತವನ್ನು ಏಕಂ ಏವ ಅದ್ವಿತೀಯಂ ಎಂಬ ರಸ-ರೇತ ಸ್ವರೂಪೀ ಸತ್ಯವನ್ನು ಮಾತ್ರ ಬಾಳ ಗುರಿಯಾಗಿಸಿಕೊಳ್ಳುವ (Religion) ಭೂಮಿಕೆಯ ಇನ್ನೊಂದು ಸಾಂಸ್ಕೃತಿಕ ಪರಂಪರೆಯಿಂದ ವಿಂಗಡಿಸಿ ಹೇಳುವ ಆವಶ್ಯಕತೆಯೆ ಇಲ್ಲವೆ? ಹೀಗೆ ನಿಃಸಂದಿಗ್ಧ ರೀತಿಯಲ್ಲಿ ವಿಂಗಡಿಸಿ ಈವರೆಗೆ ಬಚ್ಚಿ ಉಳಿಸಿಕೊಂಡು ಬರಲಾಗಿರುವ 'ರಸೋ ವೈ ಸಃ' ಈ ಭೂಮಿಕೆಯ ನಿಜ ಸ್ವರೂಪವನ್ನು ಸ್ಪಷ್ಟಪಡಿಸುವುದೂ ತಪ್ಪೊ? ಎಂಬ ಪ್ರಶ್ನೆಯು ಇಲ್ಲಿ ತಲೆಯೆತ್ತುತ್ತಿದೆ. ಎಲ್ಲರೂ ನರ(ಳ) ರೇ ಎಂಬುದು ನಿಜ. ಆದರೆ ಮನು - ಜ : ಮಾನವರು ಎಂಬುದನ್ನು ಕಾಲ್ಪನಿಕ ಎನ್ನಲಾದೀತೆ? ಜನದಲ್ಲಿ ಜಾನಪದರಲ್ಲಿ ಪ್ರಜ್ಞಾವಿವೇಕವು ಉದಯವಾಗಿದೆ. ತಿಳಿ (ವಿನ) ಬೆಳಕಿನಲ್ಲಿ ಬಾಳುವ ಜಾಣ್ಮೆಯನ್ನು (folk wisdom) ಇವರಿಗೆ ಕಲಿಸಬೇಕಾಗಿಲ್ಲ. ಆದರೆ, ಸಂತೆಯ ಮಂದಿವಾಳ ಮನೋಭಾವಕ್ಕೆ (Multitude crowd) ವರ್ಗವು ಏಕಂ ಸತ್ ಪಂಥೀಯ - ಅತಿವಾದದ ಆಕರ್ಷಣವು ವಿಶೇಷವಿರುತ್ತದೆ. ಇಂಥ ಅತಿವಾದೀ ವರ್ಗದ ಪ್ರಾಥಮಿಕತೆಯನ್ನು ತೊಡೆದು ಹಾಕುವ ನೂತನ ತಂತ್ರವು ಅವಶ್ಯವಿದೆ. ಸಂಸ್ಕೃತಿ ಎಂಬುದು ಒಂದು ಪ್ರಕ್ರಿಯೆ (process) ಆಗಿದೆ. ಆದಕಾರಣ ಸಾಂಸ್ಕೃತಿಕ ಮಟ್ಟದ ಈ ಜೀವನ ರೀತಿಯಲ್ಲಿ ಕೆಲವೊಂದು ಸ್ತರಗಳ ಮಟ್ಟದ ಭೇದವು ಉಳಿದು ಬರುವುದನ್ನು ತಪ್ಪಿಸಲು ಆದೀತೆ? ಎಂಬುದು ಈಗಲಂತೂ ಸಂದೇಹಾಸ್ಪದವಿದೆ.

ಈ. ಪಿ. ಸ್ಟಾಟ್ಟ ಬರೆದಿರುವ Hindu Culture and Personality[೨] ಈ ಗ್ರಂಥ ಓದಿದ್ದೀರಾ? ಇದರಲ್ಲಿ ಹಿಂದೂ ಎಂಬ ಧರ್ಮದ ಬಗೆಗೆ ನಿಮ್ಮ ವಿಚಾರಗಳಿಗೆ ಪೋಷಕ ಪ್ರತಿಪಾದನೆಯೆ ಉಂಟು ಎಂದು ಸೂಚಿಸಿ ಒಬ್ಬರು ಓದಲು ಈ ಗ್ರಂಥವನ್ನು ಕೊಟ್ಟರು. ತಥಾಕಥಿತ ಬ್ರಾಹ್ಮಣ, ಶೈವ, ವೀರಶೈವ, ವೀರ ವೈಷ್ಣವಾದಿ ಪಂಥಗಳು, ಜೈನ ಬೌದ್ಧ ಸಂಪ್ರದಾಯಗಳು ಸಹ ಇವೆಲ್ಲ- ಆನಂದಕುಮಾರಸ್ವಾಮಿ ಹೇಳುವಂತೆ ಬೆಟ್ಟ, ವೃಕ್ಷ, ನಾಗಜಲಾಶಯ ರೂಪ ಪ್ರತಿಮಾಪೂಜಕರ ಮಾರ್ಗಗಳೇ ಆಗಿವೆ, ಎಂಬ ವರೆಗಿನ, ಸ್ಟಾಟರ ಪ್ರತಿಪಾದನೆ ಮಾತ್ರ, ನನ್ನ ಅಭಿಪ್ರಾಯವನ್ನೇ ಪುಷ್ಟೀಕರಿಸುತ್ತಿರುವುದು ನಿಜ. ಆದರೆ, ಆನಂದ ಕುಮಾರಸ್ವಾಮಿ ಆಗಲಿ, ಸ್ಟಾಟರಾಗಲಿ, ಆದಿತ್ಯಪೂರ್ವ ಋಗ್ವೇದದ ಅಸ್ತಿತ್ವವನ್ನು ಲೆಕ್ಕಿಸಿಲ್ಲ! ವರುಣ, ಸೂರ್ಯ, ವಿವಸ್ವನ್... ಈ ಸೌರದೈವತಗಳು ಆದಿತ್ಯ (ಚಂದ್ರ)ರೂಪಕ್ಕೆ ಮಾರ್ಪಟ್ಟ ಹಂತದ ಇಂದಿನ ಸಂಹಿತೆಯಲ್ಲಿ ಮೂಲ ವಿವಸ್ವನ್ ಮನುಪ್ರಣೀತ ಮಾನವಧರ್ಮದ ವಿಕೃತರೂಪವೇ ಉಂಟು!

ಭಗವತ್ ಗೀತೆಯ ಭಗವಂತನೇ ಹೇಳುತ್ತಾನೆ ತನ್ನ ಈ (ಆದಿತ್ಯ) ಯೋಗವು ಮಹತಾ ಕಾಲೇನ ನಷ್ಟಃ (ಬಹುಕಾಲದಿಂದ ನಷ್ಟವಾಗಿತ್ತು) ಎಂಬ ಈ ಗೀತೆಯ ವಚನದಂತೆಯೇ, ಆದಿತ್ಯ ಸಂಪ್ರದಾಯವು ಪ್ರಭಾವಶಾಲಿಯಾಗಿ ವಿವಸ್ವನ್ ಮಾನವಧರ್ಮ ಕುಸಿಯಿತು. ಧರ್ಮಶಾಸ್ತ್ರ (ಸ್ಮೃತಿಗಳ) ಇತಿಹಾಸದಲ್ಲಿ ವಿವಸ್ವನ್ ಮನುಪ್ರಣೀತ ಮಾನವಧರ್ಮ ಪರಂಪರೆಯ ಗ್ರಂಥವು ಕಣ್ಮರೆಯಾದದ್ದನ್ನು ಒಪ್ಪಲಾಗಿದೆ. ಇಂದಿಗೂ ವೈವಸ್ವತಮನ್ವಂತರವೆ ಇರುವುದಾಗಿ ದೇಶ ಕಾಲಾ ಸಂಕೀರ್ತನದ ...ಭರತಖಂಡೇ ವೈವಸ್ವತ ಮನ್ವಂತರೇ

ಎಂದು ಹೇಳಲಾಗುವ ಜೀವಂತ ಪರಂಪರೆಯಿದೆ. ಫ್ರಾಯ್ಡ್ ದೃಷ್ಟಿಕೋನದ ಅರ್ಥಗ್ರಹಣ ಪದ್ಧತಿಯು ಲೈಂಗಿಕ ಪಾತಳಿಯ ದೈವತಗಳ ಸ್ವರೂಪ ಗ್ರಹಣಕ್ಕೆ ಮಾತ್ರ ಪ್ರಯೋಜನಕಾರಿಯಾಗಿರುವುದಾಗಿದೆ ಎಂಬುದು ಸ್ಪ್ಯಾಟರ ಈ ಗ್ರಂಥದಿಂದಲೂ ಮರಳಿ ದೃಢಪಡುತ್ತದೆ.

ಆದರೆ ಡಾ|| ಆನಂದಕುಮಾರಸ್ವಾಮಿ, ಶ್ರೀ ಸ್ಪ್ಯಾಟ್, ಮಹಾತ್ಮಗಾಂಧಿ ಇವರ ಭೂಮಿಕೆಯನ್ನು ಸ್ವೀಕರಿಸಿದಲ್ಲಿ ಸತ್-ತ್ಯಂ (essence) ಆಪ-ರಸ-ರೇತ ಸ್ವರೂಪೀ Truth ಮತ್ತು ಋತದ (ವಿಶ್ವನಿಯಮದ) ಆಧಾರದ ಮೇಲಣ ಸತ್ಯ (reality) ಇವೆರಡರಲ್ಲಿ ಅಂತರವೇ ಉಳಿಯುವುದಿಲ್ಲ! ಸರ್ಪ, ವೃಕ್ಷ ಚಂದ್ರ ಇವು, ಏಕಾತ್ಮಕ ಉಭಯ ಪಾತಳಿಗಳ ನಡುವಣ Correspondence ಸ್ವರೂಪದ ಚಾಂದ್ರ ಸತ್ಯಸೂಚಕ Symbols ಆಗಿವೆ! ಆದರೆ, ಜಾತವೇದ ಅಗ್ನಿ, ವಿವಸ್ವನ್, ಸವಿತೃ ಇಂದ್ರ... ಇವು ಸ್ವರ್‌ಪಾತಳಿಯ ಮೇಲಣ ದೈವತಗಳು. ಇದು ಮೂರನೆಯ ಪಾತಳಿಯಾಗಿದೆ. ಆಧುನಿಕ ಡಾ|| ಕ್ರೋಬರ, ಡಾ|| ಹಕ್ಸ್ಲೆ, ಪ್ರಭೃತಿ ಭೌತಶಾಸ್ತ್ರಜ್ಞರಿಂದಲೂ ಈ ಮಾತಿಗೆ ಪುಷ್ಟಿ ದೊರೆಯುತ್ತಿರುವುದನ್ನು ವಿವರಿಸಿ ಆಗಿದೆ. ಜಾಗತಿಕ ಪುರಾತನಕಾಲದ ಏನೆಲ್ಲ ಸಂಸ್ಕೃತಿಗಳೊಳಗಿನ ಸಾಂಕೇತಿಕತೆಯ ಸಾರವು ಇಷ್ಟು : ಅರ್ಥ (ವಿಚಾರ-ಜ್ಞಾನ) ರೂಪೀ ಪ್ರಕಾಶತತ್ತ್ವದ ಆರಾಧನೆ, ಮಾನವಜೀವನ ಮೌಲ್ಯಗಳನ್ನು ಸಂರಕ್ಷಿಸಬಲ್ಲದು. ಜೀವನದಲ್ಲಿ ಅರ್ಥ (ವಿಚಾರ; ಜ್ಞಾನ), ಇಲ್ಲ, ಎಂಬ ಶ್ರದ್ಧೆಯ ಮೋಕ್ಷಕಾಮೀಧರ್ಮವು ಲೈಂಗಿಕ ಅಥವಾ ಇಂದ್ರಿಯ ಪೂಜೆಗೆ ಒತ್ತಾಯಪಡಿಸಿತು.

ಪ್ರಜ್ಞಾ-ನೇತ್ರ ಎಂದರೇನು? ಯಾವುದು?

ಖ್ಯಾತ ಫ್ರೆಂಚ್ ವಿಜ್ಞಾನಿ-ಅಗ್ರಗಣ್ಯರಾದ ಡಾ|| ಟೆಲ್ಹಾರ್ಡ ಡಿ. ಚಾರ್ಡಿನ, Paleontologist, (Teilhard de Chardin) ತತ್ತ್ವಜ್ಞರೆಂದು ವಿದ್ವನ್ಮಾನ್ಯರಾಗಿದ್ದರು. ಆಧುನಿಕ ಜೀವವಿಜ್ಞಾನಿಗಳಿಗೆ (Biologists), Consciousness of Consciousness, Conscience ಇದರ ಅಸ್ತಿತ್ವವನ್ನು ಭೌತಶಾಸ್ತ್ರದ ಭೂಮಿಕೆಯಿಂದಲೂ ಒಪ್ಪಲೇಬೇಕಾಗುವಂತೆ ಗ್ರಂಥ ಬರೆದ ಕೀರ್ತಿ ಇವರದು. ಭಾರತೀಯ ಪುರಾತನರು, ಕಾಮ-ನಾ ಪ್ರೇರಕ ಅಗ್ನಿ (ನಚಿಕೇತಾಗ್ನಿ) ಮತ್ತು ಜಾತವೇದ ಅಗ್ನಿ (ಪ್ರಜ್ಞಾನೇತ್ರ) ಇವೆರಡೂ ಪ್ರೇರಣೆಗಳು, ಎರಡು ವಿಭಿನ್ನ ಪಾತಾಳಿಯ ಮೇಲಣ ಪ್ರೇರಣಾಕೇಂದ್ರಗಳು ಎಂದು ಕ್ರಿ. ಪೂ. ೨೫೦೦ ವರುಷಗಳ ಸುಮಾರಿಗೆ ನಿರ್ದಿಷ್ಟಪಡಿಸಿ ಹೇಳಿದ್ದಾರೆ. ಆದರೆ, ಪ್ರಕಾಶ ತತ್ತ್ವದ ದೈವತಗಳನ್ನೆಲ್ಲ ಆದಿತ್ಯ (ಕುಮಾರೀ ಮಾತಾಪುತ್ರ) ರೂಪಕ್ಕೆ ಮಾರ್ಪಡಿಸಿರುವ ಪ್ರಚಲಿತ ವೇದ ಪಂಚಮವೇದ (ಮಹಾಭಾರತ) ಮುಂತಾದ ಗ್ರಂಥಗಳ ಪ್ರಭಾವದಲ್ಲಿ ಕಾಮ (ನಾ) ಪ್ರೇರಕ ಅಗ್ನಿಯೇ ಜಾತವೇದ ಅಗ್ನಿ ಎಂಬ ಹಾಗಿನ ಸಂಭ್ರಮವನ್ನು ನಿರ್ಮಿಸಲಾಗಿದೆ.[೩] ಭಾರತೀಯ ಅಂದು ವಿವಸ್ವನ್ ಪ್ರೇರಣೆಯ ಮನುಪ್ರಣೀತ ಮಾನವಧರ್ಮ ಪರಂಪರೆಗೆ ಎರವಾಗಿ, ಇಂದಿನ ಅಧಃಪಾತಕ್ಕೆ ಮಾನವ ಕೋಟಿಯನ್ನೇ ಆಮಂತ್ರಿಸಿದಂತಾಗಿದೆ.

ಪ್ರಜ್ಞಾನ-ನೇತ್ರ ಸ್ವತಂತ್ರ ಅಸ್ತಿತ್ವವನ್ನು ಆಧುನಿಕ ವಿಜ್ಞಾನಿಗಳೂ ಹಲವಾರು ಗ್ರಂಥ ಬರೆದ ಡಾ|| ಪಿರ್ರೆ ಅವರ ಒಂದು ವಿಚಾರಾಂಶವನ್ನು ಇಲ್ಲಿ ಎತ್ತಿಕೊಡಲಾಗಿದೆ:

> 'The Threshold of Reflection'
>
> From our experimental point of view, reflection is, as the word indicates, the power acquired by a consciousness to return it upon itself, to take possession of itself as of an object endowed with its own particular consistence and value : no longer merely to know, but to know oneself, no longer merely to know but to know that one knows. By this individualisation of himself in the depth of himself the living element, which heretofore had been

spread out and divided over a diffuse circle of perceptions and activities, was constituted for the first time as a centre in the form of a point at which all impressions and experiences knit themselves together and fuse into a unity that is conscious of its own organisation.'

Now the consequences of such a transformation are immense, visible as clearly in nature as any of the facts recorded by physics or astronomy. The being who is the object of his own reflection, in consequence of that very doubling back upon himself, become in a flash able to rise himself, into a new sphere. In reality another world is born. Abstraction, logic, reasoned choice and inventions, mathematics, art, calculations of space and time, anxieties and dreams of love - all these activities of inner life are nothing else than the effervescence of the newly-formed centre as it explodes onto itself.

Admittedly the animal knows. But it cannot know that it knows: that is quite certain. If it could, it would long ago have multiplied its inventions and developed a system of internal constructions that could not have escaped our observation. In consequence of it is denied access to a whole domain of reality in a chasm-or a threshold-which it cannot cross. Because we are reflective we are not only different but quite other. It is not a matter of change of degree, but a change of nature resulting from a change of state.[೪]

Evolution of MAN ಈ ಗ್ರಂಥದಲ್ಲಿ ಡಾರ್ವಿನ್ನನ ವಿಕಾಸವಾದವನ್ನು ಕುರಿತು ಬೇರೆ ಬೇರೆ ಶಾಸ್ತ್ರಶಾಖೆಯ ತಜ್ಞರ ವಿಚಾರಗಳನ್ನು ಹತ್ತು ವಿಭಾಗಗಳಲ್ಲಿ ಸಂಗ್ರಹಿಸಿಕೊಡಲಾಗಿದೆ; ಭೌತಶಾಸ್ತ್ರದ ಏನೆಲ್ಲ ದೃಷ್ಟಿಕೋನಗಳ ಸಂಶೋಧನಗಳಲ್ಲಿ ಆಧುನಿಕ ದೃಷ್ಟಿಯಿಂದ ಒರೆಗೆ ಹತ್ತಿದ ವಿಚಾರಗಳಿಗೆ ಮಾತ್ರ ಸ್ಥಾನವಿರುವ ಮಾನವಜೀವನ ವಿಕಾಸದ ಬಗೆಗಿನ ಸಾರಭೂತಸಂಗ್ರಹದಲ್ಲಿ, ಭಾರತೀಯ ಪುರಾತನ ಪರಿಭಾಷೆಯ ಪ್ರಜ್ಞೆ (Consciousness of Consciousness, Conscience) ಇದರ ಆಶಯವನ್ನು ವಿಶದೀಕರಿಸುವ ಆಧುನಿಕ ಭೌತಶಾಸ್ತ್ರ ವರೇಣ್ಯನೊಬ್ಬನ ವಿಚಾರಗಳಿಗೂ ಸ್ಥಾನವು ದೊರೆತಿದೆ.

ಜಾತವೇದ ಅಗ್ನಿ (ಪ್ರಜ್ಞೆ Wisdom) ಮತ್ತು ವೈಶ್ವಾನರಾಗ್ನಿ (Folk-wisdom) ಎಂಬ ಇವೆರಡೂ ಪಾರಿಭಾಷಿಕ ಶಬ್ದಪ್ರತಿಮೆಗಳಲ್ಲಿ, ವಿವಸ್ವನ್ ಪ್ರೇರಣೆಯ ಮನು (father of humanity = ವೈಶ್ವಾನರಾಗ್ನಿ) ಪ್ರಣೀತ ಮಾನವಧರ್ಮ ಪರಂಪರೆಯ ಸಾರವು ಒಳಗೊಂಡಿದೆ. ಮಾನವ ಸಂಸ್ಕೃತಿಗೆ ಭಾರತೀಯ ಪುರಾತನರ ಪ್ರಜ್ಞಾ: ಪ್ರಾತಿಭ ದೃಷ್ಟಿಯು ಸಲ್ಲಿಸಿರುವ ಅಮೌಲಿಕ ಕಾಣಿಕೆಯೆಂದರೆ ಇದು.

ಎರಡು ಮಾತು

ಹಿಂದೂ ಎಂಬುದು ಭಾರತೀಯರ ಇತಿಹಾಸ, ಸಂಸ್ಕೃತಿಗಳ ಪರಂಪರಾಸೂಚಕ, ನಾಮರೂಪವಲ್ಲ. ಇದು ಪರಕೀಯರಿಟ್ಟ, ಆಗಂತುಕ ಹೆಸರು. ಈ ಹೆಸರು ಅಡ್ಡ ಬರುತ್ತಿರುವುದರಿಂದ ನಮ್ಮ ಇತಿಹಾಸ ಸಂಸ್ಕೃತಿಯ ಅವಿಚ್ಛಿನ್ನ ಪರಂಪರೆ, ಎಲ್ಲಿ ವಿಭಿನ್ನವಾಯ್ತು, ಎಂಬ ಸಾಂಸ್ಕೃತಿಕ ಕ್ರಾಂತಿಯ ಲವಲೇಶವೂ, ಈವರೆಗೆ ಬೆಳಕಿಗೆ ಬರದೆ ಉಳಿಯುತ್ತ ಬಂದಿದೆ.

ಹಿಂದೂ ಎಂಬ ಹೆಸರೇ ಆಗಂತುಕ. ಇದು ಕ್ರಿ. ಪೂ. ೫ ನೆಯ ಶತಕಕ್ಕೂ ಹಿಂದೆ ಇರಲಿಲ್ಲ, ಎಂಬುದು ನಿಜವಿದ್ದರೆ, ಈ ಭಾರತೀಯರ ಧರ್ಮ -ಸಂಸ್ಕೃತಿಯ ಪರಂಪರೆಯ ಹೆಸರು ಏನಿದ್ದಿತು? ಎಂಬ ಪ್ರಶ್ನೆ ಏಳುತ್ತದೆ. ಈ ಪ್ರಶ್ನೆಗೆ ಈ ಅನ್ವೇಷಣೆಯಲ್ಲಿ ದೊರೆತಿರುವ ಉತ್ತರವು ಇದು. ಋಗ್ವೇದ ಸಂಹಿತೆ, ಮಾಕ್ಸಮುಲ್ಲರ್ ಹೇಳಿರುವಂತೆ : ಭಾರತೀಯ ಏನೆಲ್ಲ ಧರ್ಮ ಸಂಪ್ರದಾಯಗಳ ಹುಟ್ಟು ಬೆಳವಣಿಗೆಯನ್ನು ಗ್ರಹಿಸಿಕೊಳ್ಳಲು ಉಪಕಾರಕವಾಗಿದೆ. ಈ ವೇದದಲ್ಲಿ ಆದಿತ್ಯ (ಆದಿಶಕ್ತಿ ಅದಿತಿ) ಸಂಪ್ರದಾಯದ ಪ್ರಾಶಸ್ತ್ಯವೇ ಎಲ್ಲ ಮಂಡಳಗಳಲ್ಲೂ ಉಂಟು. ಆದಿತ್ಯರೂಪಕ್ಕೆ ತಿರುಗುವ ಮೊದಲು, ವರುಣ, ಸೂರ್ಯ, ವಿವಸ್ವನ್ ಇಂಥ ಪ್ರಕಾಶತತ್ತ್ವದ ಸೌರದೈವತಗಳಿಗೇ ಈ ವೇದದಲ್ಲಿ ಪ್ರಾಶಸ್ತ್ಯವಿರಬೇಕೆಂಬುದು ಕ್ರಮಪ್ರಾಪ್ತವೇ ಇದೆ. ಆದರೆ ಆದಿತ್ಯಸಂಪ್ರದಾಯದ ಪ್ರಭಾವ ಹೆಚ್ಚತೊಡಗುತ್ತದೆ, ಇದರ ಅರ್ಥ ಚಾಂದ್ರಸಂಪ್ರದಾಯವು ಪ್ರಬಲವಾಗುತ್ತದೆ. ಸೌರದೈವತಗಳು ಆದಿತ್ಯ ರೂಪದಲ್ಲಿ ಆರಾಧಿಸಲ್ಪಡುತ್ತವೆ. ಈ ಸಾಂಸ್ಕೃತಿಕ ಕ್ರಾಂತಿಯ ಆದಿತ್ಯ ಸಂಪ್ರದಾಯದ ಉತ್ತರಾಧಿಕಾರೀ ಪರಂಪರೆಯೇ ಇಂದಿನ ಭಗವದ್ಗೀತೆಯ ಸಂಪ್ರದಾಯ: ಆದಿತ್ಯಾನಾಂ ಅಹಂ ಎಂದು ಗೀತೆಯ ಭಗವಂತನೇ ಒಪ್ಪಿದ್ದಾನೆ.

ಈ ಕಾರಣದಿಂದಾಗಿ ಆಗಿರುವ ಸ್ಥಿತ್ಯಂತರ ಎಂದರೇ ಪ್ರಚಲಿತ ಹಿಂದೂ ಎಂಬ ಧರ್ಮ-ಬ್ರಾಹ್ಮನಿಜಂ ಮಾತ್ರವಲ್ಲ; ಏನೆಲ್ಲ ಮೋಕ್ಷಕಾಮೀ ಸಂಪ್ರದಾಯಗಳೂ ಇದರಲ್ಲಿ ಒಳಗೊಳ್ಳುತ್ತವೆ. ಇದು ಹಿಂದೆ ಆದ ಜಾಗತಿಕ ಸ್ವರೂಪದ ಸಾಂಸ್ಕೃತಿಕ ಕ್ರಾಂತಿ (ಆದಿತ್ಯವಾರ) ಕುಮಾರೀ ಮಾತಾಪುತ್ರ ಏಸು. ಮೋಕ್ಷಕಾಮೀ ಸಂಪ್ರದಾಯ. ಈ ಸ್ಥಿತ್ಯಂತರದಲ್ಲಿ ಭಾರತೀಯ ವಿವಸ್ವನ್ (ಸೌರ) ಪರಂಪರೆಯ ಮನುಪ್ರಣೀತ ಮಾನವ ಧರ್ಮ ಸಂಪ್ರದಾಯದ ಪರಂಪರೆಯು ಒಂದು ಪ್ರಚಲಿತವಿದ್ದದ್ದು ಕುಸಿದು ಬೀಳುತ್ತದೆ. ಇದರ ಸ್ಥಳದಲ್ಲಿ ಆದಿತ್ಯ-ವಿವಸ್ವನ್ ಅಥವಾ ಸ್ವಯಂಭೂ ಸ್ವಾಯಂಭುವ ಪರಂಪರೆಯ ಮನುಪ್ರಣೀತ ಮಾನವಧರ್ಮ ಸ್ಮೃತಿ ಪ್ರಭಾವಶಾಲಿಯಾಗಿದೆ. ಇದು ಬ್ರಾಹ್ಮಣರೆಂಬುವರ ಪರಂಪರೆಯ ಮೋಕ್ಷಕಾಮಿಗಳ ಮಾರ್ಗ. ಇನ್ನುಳಿದ ಮೋಕ್ಷಕಾಮೀ ಸಂಪ್ರದಾಯಗಳ ತಳಪಾಯದಲ್ಲಿಯೂ ವೃಕ್ಷಪೂಜೆ, ನಾಗಪೂಜೆ ಗವಿಪೂಜೆ- ಚಾಂದ್ರದೈವತ ಇದ್ದೇ ಇದೆ. ಆದಿತ್ಯವಾರ ಸೋಮವಾರ (ಚಂದ್ರ) ಈ ಹೆಸರು ಜಾನಪದರಲ್ಲೂ ಇರುವಾಗ ವೇದದ ಸಾಂಸ್ಕೃತಿಕ ಸ್ಥಿತ್ಯಂತರವು ಇಡೀ ಭಾರತೀಯ ಜೀವನ ಪರಂಪರೆಯ ಮೇಲೂ ಆಗಿದೆ ಇದು ನಿಶ್ಚಿತ.

ಟಿಪ್ಪಣಿಗಳು

೧. Ashley Montague, ***The Concept of the Primitive***
೨. Stratta E.P.; ***Hindu Culture and personality A Psycho-Analytical Study*** 1966
೩. ***ಋಗ್ವೇದ ಸಂಹಿತೆ*** X. ೫೧ ಮುಂ
೪. Telhard de chardin ***The Phenomenon of Man*** Torch book, 1965, Translator =Bernard Wall, Harper & Row, N.Y.

ಶ್ರೀಮತ್ ಭಗವದ್‌ಗೀತೆಯಲ್ಲಿ ಹುದುಗಿರುವ ರಾಜಯೋಗದ ಸ್ವರೂಪ

Mankind is under the rite of the Logical Fate

Whether we realize or not it remains a fact we in India still stand under the spell of (The Mahabharata)

(On the Meaning of (The Mahabharata) Dr. S. V. Sukthankar, 32)

ಪ್ರಕಾಶಕರ ಬಿನ್ನಹ

ಈ ಚಿಕ್ಕ ಹೊತ್ತಿಗೆಯನ್ನು ಪ್ರಕಟಿಸುವಲ್ಲಿ ಒಂದು ಉದ್ದೇಶವಿದೆ. 'ನಮ್ಮ ಧರ್ಮ' 'ನಮ್ಮ ಸಂಸ್ಕೃತಿ' ಸನಾತನವಿದೆ; ಅತ್ಯಂತ ಶ್ರೇಷ್ಠವಿದೆ. ಇದರಂಥ ಧರ್ಮ ಮತ್ತು ಸಂಸ್ಕೃತಿ ಬೇರಾವುದೂ ಇಲ್ಲವೆಂಬ ಅಭಿಮಾನ ತಪ್ಪಲ್ಲ, ಅದು ಸಾಧಾರವಿದ್ದರೆ ಮಾತ್ರ. ಆದರೆ, ಶ್ರೀ ಶಂ. ಬಾ. ಜೋಶಿ ಅವರು ಕೆಲವೊಂದು ಮೂಲಭೂತ ಪ್ರಶ್ನೆ ಎತ್ತಿದ್ದಾರೆ. ರವಿ-ಸೂರ್ಯನನ್ನು 'ಆದಿತ್ಯ' ಎಂದು ಹೆಸರಿಸಿದ್ದೇಕೆ? "ಸೂರ್ಯನನ್ನು ನಾರಾಯಣ" ಎಂದು ಹೇಳಲಾಗುವುದರ ಅರ್ಥವೇನು? ಗೀತೆಯ ಪಾರಾಯಣ ನಡೆಯುತ್ತದೆ. ಅದರಲ್ಲಿ ಬರುವ ಅಶ್ವತ್ಥ=ವೃಕ್ಷ ಪುರುಷ ಇಂಥ ಮಹತ್ವದ ಪದಗಳ ಅರ್ಥವನ್ನು ಸಮರ್ಪಕವಾಗಿ ಸಾಧಾರವಾಗಿ ಗ್ರಹಿಸಿಕೊಳ್ಳುವ ಆವಶ್ಯಕತೆಯು ಇಲ್ಲವೆ? ಶ್ರೀ ಶಂಬಾ ಜೋಶಿಯವರು ಈ ಅರ್ಥ ವಿವರಣೆಯನ್ನು ಸಂಶೋಧನ ಪದ್ಧತಿಯಿಂದ, ನಮ್ಮ ಸಂಪ್ರದಾಯದೊಳಗಿನ ಪ್ರಮಾಣಗಳಿಂದಲೇ ಹೇಳಿದ್ದಾರೆ. ಗ್ರೀಕ್‌ಸಂಸ್ಕೃತಿಯೊಳಗಿನ ಸಾಮ್ಯ ಸ್ಥಳಗಳನ್ನು ಎತ್ತಿ ಹೇಳಿದ್ದಾರೆ.

ವಾಸ್ತವಸತ್ಯವು ಒರೆಗೆ ಹತ್ತುವ ದೃಷ್ಟಿಯಿಂದ ಕೂಲಂಕಷ ವಿಮರ್ಶೆಯಾಗಬೇಕೆಂದು ಪ್ರಾಜ್ಞರ ಚಿತ್ತವನ್ನು ಸೆಳೆಯವುದೇ ನಮ್ಮ ಈ ಪ್ರಕಟನೆಯ ಉದ್ದೇಶವಾಗಿದೆ.

ಪ್ರಕಾಶಕರು

ಅರಿಕೆ

Those who ignore history condemn themselves not knowing the past; because historical development alone permits us to weigh and to evaluate in their respective relations elements of the present.

-ಲೆವಿಸ್ಟ್ರಾಸ್

ಬಾಳದಾರಿಯ ಬೆಳಕು ದೊರೆವ ಶಕ್ಯತೆ ಉಂಟೆ? ನಿನ್ನೆಗಳಲ್ಲಿ ಇಂದಿನ ಅರ್ಥ ಹುದುಗಿದೆ. ಅರ್ಥವೇ ಬೆಳಕು. ಈ ಜಿಜ್ಞಾಸಾ ತೃಪ್ತಿಯ ಸಲುವಾಗಿ ನಡೆಸಿದ ಸಾಂಸ್ಕೃತಿಕ ಸತ್ಯಾನ್ವೇಷಣೆಯ ಪ್ರಯತ್ನಗಳ ಫಲಿತಾಂಶಗಳನ್ನು ಕೆಲಮಟ್ಟಿಗಾದರೂ ತಿಳಿಸಿ ಹೇಳುವ ಒಂದು ಅಲ್ಪ ಯತ್ನ 'ಹಾಲುಮತ ದರ್ಶನ'; 'ಋಗ್ವೇದ ಸಾರ'. ಆಮೇಲೆ ಪ್ರಸ್ತುತ ಪ್ರಬಂಧವೇ ಮಹತ್ವದ ಘಟ್ಟ. ಈ ಜಿಜ್ಞಾಸೆಯ ಅಂಗವಾಗಿಯೆ, ಪವಾಡ : ಚಮತ್ಕಾರಗಳ ಬಗೆಗಿನ ಕುತೂಹಲವು ಇತ್ತು. ನಮ್ಮ ದೇವರ 'ಸತ್ಯ'ವು ಪವಾಡಗಳೊಡನೆ ಬೆಸೆದುಕೊಂಡಿದೆ. ಈ 'ದೇವರು'=ಸ್ವಂಯಭೂ! ಇಲ್ಲಿಯೇ 'ಪವಾಡಗಳ' ಉದ್ಗಮ ಕೇಂದ್ರವಿದೆ. ಈ 'ಸ್ವಯಂ-ಭೂವಿನ' ಸಿದ್ಧಿಯ ಮೂಲಕ ದಿವ್ಯ ಪವಾಡ ಶಕ್ತಿ, ಅಣಿಮಾದಿ ಸಿದ್ಧಿ ಲಭಿಸುತ್ತವೆಂಬ ಶ್ರದ್ಧೆಯಿದೆ. ನನ್ನ ಈ ಅನ್ವೇಷಣೆಯಲ್ಲಿ ಪವಾಡಿಗಳ-ಪವಾಡಗಳ ಮೇಲೆ ಬೆರಳಿಟ್ಟು ತೋರಿಸಲು ಶಕ್ಯವಾಗಿದೆ. ಇದು ನಿಜವೇ, ವಿಮರ್ಶಿಸಿ ತಪ್ಪು ಇದ್ದರೆ ತಿದ್ದಿಕೊಳ್ಳಲು ನೆರವಾಗುವ ಉಪಕಾರ ಮಾಡಬೇಕಾಗಿ ಪ್ರಾಜ್ಞರಲ್ಲಿ ಪ್ರಾರ್ಥನೆ.

ಭಾರತೀಯ ಪುರಾತನರು, ಮಾನವ ಜೀವನದ ಅರ್ಥದ ಆಶಯವನ್ನು ಗ್ರಹಿಸಿಕೊಂಡಿದ್ದ ವ್ಯಾಹೃತಿ-ತ್ರಯಗಳ ಮೂಲಕ, ಈ ಸಾರ್ವಕಾಲಿಕ ಆಶಯವನ್ನು ಸನಾತನ (Perennial) ಶಬ್ದಪ್ರತಿಮೆಗಳ ಮೂಲಕ ಅರುಹಿದ್ದಾರೆ ಈ ಅಮರ ಶಬ್ದಪ್ರತಿಮೆಗಳು, ಇಂದಿಗೂ, ಎಂತೂ ಉಳಿದು ಬಂದಿವೆ. ಪ್ರಪಂಚದಲ್ಲಿ, ಧರ್ಮ ಇದ್ದರೆ, ಇದು ಎರಡೇ ಬಗೆಯದು ಇರಬಲ್ಲುದು, ಎಂಬುದು ನಮ್ಮ ಪುರಾತನರ ನಿಷ್ಕರ್ಷ, ನಿಜವೊ ಎಂಬುದನ್ನು ಆಧುನಿಕ ಶಾಸ್ತ್ರೀಯ, ದೃಷ್ಟಿಯಿಂದಲೂ ವಿಮರ್ಶಿಸಿಕೊಳ್ಳಲು ಶಕ್ಯವಿದೆ. ಇವೆರಡರಲ್ಲಿ 'ನರ ಧರ್ಮ, ಇನ್ನೊಂದು ಮಾನವ ಧರ್ಮ 'ಸ್ವ'- ಅರ್ಥದ ಆತ್ಮಸಿದ್ಧಿಗಾಗಿ ನಡೆವ ಪಿಂಡ ಬ್ರಹ್ಮಾಂಡೈಕ್ಯದ ಆದರ್ಶ ನರನದು. ಇದು ಕರ್ಮ ಪ್ರಪಂಚವೇ ಇರಬಲ್ಲದು. ಲೋಕ-ಹಿತದ ಸೋಗಿನ 'ನರ' ಧರ್ಮದ ವಿವಿಧ ಪ್ರಕಾರಗಳು ಶಿಷ್ಟ-ಮಾನ್ಯವಾಗಿವೆ ಇಂಥ ಇಂದಿನ ಸಮಾಜಗಳು ದುರ್ಗತಿಯ ದಾರಿಯಲ್ಲೆ ಸಾಗಿದ್ದರೆ ಸೋಜಿಗವೇನು?

ಪುರಾತನ ಭಾರತೀಯರು ಆಚರಿಸಿದ ವಿವಸ್ವನ್ ಮನುಪ್ರಣೀತ ಮಾನವಧರ್ಮದಲ್ಲಿ ಪ್ರತಿಯೊಂದು ವ್ಯಕ್ತಿಗೂ, ಒಂದಿಲ್ಲೊಂದು ಬಗೆಯಲ್ಲಿ ತನ್ನ ಶಕ್ಯತೆಯ, ಏನೊಂದು ಕೃತಿಯ ಮೂಲಕ, ಸಮಾಜ ಸಮಷ್ಟಿರೂಪ ವೈಶ್ವಾನರಾಗ್ನಿ

ಸೇವೆಯೇ ಮುಖ್ಯ, ಇಲ್ಲಿ ದೊರೆವ ಕೃತಾರ್ಥತೆಯೆ ನರ-ಮನುಜ-ಜನ್ಮದ ಸಾರ್ಥಕ್ಯವೆನಿಸಿತ್ತು. ಈ 'ಸೇವೆ' 'ಸ್ವ' ಅರ್ಥದ್ದಲ್ಲ. ಮತ್ತೆ, ಈ ಅರ್ಥವು, ಪ್ರಜ್ಞಾನೇತ್ರದ (ಲೋಕದ) ಅರ್ಥಕ್ಕೆ ಸು-ಸಂಗತವಿರಲಿಕ್ಕೆಬೇಕು.

ಈ ಪ್ರಯತ್ನವನ್ನು ಬೆಳಕಿಗೆ ತರಲು ನೆರವಾದ ಶ್ರೀ ಹೊಂಬಾಳಿ ಬಲರಾಮರಾಯರಿಗೆ ಇನ್ನೊಮ್ಮೆ ಧನ್ಯವಾದಗಳು. ನನ್ನ ಅಲ್ಪಪ್ರಯತ್ನ ಸ್ವಾಗತಿಸಿ ಪ್ರೋತ್ಸಾಹಿಸುತ್ತ ಬಂದಿರುವ ಒಳ ತಿಳಿ ಬೆಳಕಿನ ಬಾಂಧವರಿಗೆಲ್ಲ ನಾನು ಕೃತಜ್ಞ. ಈ ಜ್ಞಾನೋಪಾಸನೆಯ ದಾರಿಯೊಳಗಿನ ಒಂದು ಇಕ್ಕಟ್ಟಿನಲ್ಲಿ, ಸ್ವಪ್ರೇರಣೆಯಿಂದ, ಅನಿರೀಕ್ಷಿತವಾಗಿ ನೆರವಾದ ಮೈಸೂರಿನ ಡಾ. ದೇ. ಜ. ಗೌ, ಇದರಂತೆ ಬೆಂಗಳೂರು ವಿಶ್ವವಿದ್ಯಾನಿಲಯದ 'ಜ್ಞಾನಭಾರತಿ'ಯ ಶ್ರೀ ಕೆ. ಸಿ. ಶಿವಪ್ಪ ಅವರು, ಅಲ್ಲಿ ಉಪನ್ಯಾಸದ ಸಂಧಿಯನ್ನು ಒದಗಿಸಿಕೊಟ್ಟು, ಪರ್ಯಾಯದಿಂದ ಇನ್ನೂ ಆಳವಾಗಿ ವಿಚಾರ-ವಿಮರ್ಶೆಗೆ ಒತ್ತಾಯಪಡಿಸಿ ಉಪಕಾರ ಮಾಡಿದ್ದಾರೆ. "ಪ್ರವಾಹ ಪತಿತರ ಕರ್ಮ ಹಿಂದೂ ಎಂಬ ಧರ್ಮ" ಈ ಗ್ರಂಥ ಬೇಗನೆ ಬೆಳಕು ಕಾಣಲಿದೆ.*

ಸಾಧನಕೆರೆ, ಧಾರವಾಡ | ಶಂ. ಬಾ. ಜೋಶಿ

ಜನವರಿ ೧೯೭೭

---

* ಈ ಪುಸ್ತಕವು ಮುದ್ರಿತಗೊಂಡದ್ದು ೧೯೭೬ರಲ್ಲಿಯೇ. ಆದರೆ, ಪ್ರಕಾಶಿತವಾಗಿ, ಬೆಳಕು ಕಂಡದ್ದು ೧೯೭೭ರಲ್ಲಿ (ಸಂ)

ಮುನ್ನುಡಿ

ಆದಿತ್ಯ ಸಂಪ್ರದಾಯದ ಶ್ರೀಮತ್ 'ಭಗವತ್ ಗೀತೆ'ಯ ಗುರಿ : ವಿಶ್ವಸ್ಥ ದಿವ್ಯ 'ಅಧಿ-ಆತ್ಮನ್' ತತ್ವದ ಸಾಕ್ಷಾತ್ ಆಕೃತಿ-ದರ್ಶನ ಪವಾಡ ಸಿದ್ಧಿಗಳು ಪ್ರಾಪ್ತವಾಗುವವೆಂಬ ಶ್ರದ್ಧೆ ಇಲ್ಲಿ ಹುದುಗಿದೆ. ನರ(ಳ)ನಿಗೇ ಈ ಸಾಕ್ಷಾತ್ಕಾರದ ಅರ್ಹತೆ ಉಂಟೆ, ಹೊರತು ಮನು : ಮಾನವನಿಗಲ್ಲ. ಮನು : Man ಈ ಶಬ್ದಪ್ರತಿಮೆಯು ಒಳಗೊಳ್ಳುವ ವಿಶೇಷಾರ್ಥದಿಂದಾಗಿ, ಈ ಮನು : ಮಾನವ ಪಾತಳಿಯ ವ್ಯಕ್ತಿಯು, 'ಸಮಾಧಿ' ಸಿದ್ಧಿಯೇ ಬಾಳ-ಗುರಿಯಾಗಿರುವ ದಿವ್ಯ ಅಧಿ ಆತ್ಮನ್ ಸಾಕ್ಷಾತ್ಕಾರ-ದರ್ಶನದ ಅರ್ಹತೆಗೆ ಎರವಾಗಿದೆ. ಮನು : ಮಾನವನು ಸಾಮಾಜಿಕ ಪ್ರಾಣಿ. 'ಮನ' 'ಮತಿ'ಯೊಡನೆ ಎಂದರೆ ಪ್ರಜ್ಞಾ-ಪ್ರಕಾಶ-ರೂಪ ಒಳ ತಿಳಿ(ವಿನ)ಬೆಳಕಿನೊಡನೆ ಹುಟ್ಟಿ ಬೆಳೆದವನು ಈತ.

ಆದರೆ, 'ನರ'ನ ವೈಶಿಷ್ಟ್ಯವೇ ಬೇರೆ, 'ನರ'ಗಳ ಬಲದಿಂದ ಬದುಕುವಲ್ಲಿ ಹಿಗ್ಗುಗೊಳ್ಳುವ ವ್ಯಕ್ತಿ 'ನರ' ಮನನಶೀಲ ಸ್ವಭಾವ-ವೈಶಿಷ್ಟ್ಯದ ವ್ಯಕ್ತಿಯು ಮನು : ಮಾನವ. 'ಮನು'ವನ್ನು 'ವಿವಸ್ವನ್' ಮನು ಎಂದು ಹೇಳುವ, ವೇದಕಾಲೀನ ವಾಡಿಕೆ, ಅರ್ಥಪೂರ್ಣವಿದೆ. 'ಪ್ರಜ್ಞಾನೇತ್ರೋ ಲೋಕ':. ಈ ಪಾತಳಿಯ ಲೋಕದ ಪ್ರಾಣಿ ಈ ಮನು : ಮಾನವ. 'ಲೋಕ' ಯಾರು? ಆ-ಲೋಕನ, ಅವಲೋಕನದ, ಆ-ಲೋಚನದ ಅಂತರ್-ದೃಷ್ಟಿಯು, ಪ್ರಜ್ಞಾ-ವಿವೇಕವು ಹುಟ್ಟುಗುಣವಾಗಿರುವುದು 'ಲೋಕ'ದ ಸ್ವಭಾವ. ಕುರಿತೋದದೆಯುಂ ಪರಿಣತ ಮತಿಗಳ್' ಆಗಿರುವ ಕಂನಾಡ ಜನಪದದ ವರ್ಣನೆಯು ಅತಿಶಯೋಕ್ತಿ ಇರುವದೇ? ಎಂದು ಹಿಂದೊಮ್ಮೆ ಎನಿಸಿತ್ತು. ಆದರೆ, ಲೋಕ-ಎಂದರೆ ಜನಪದ (People, Public). ಇದರ 'ಅಂತರ್ ದೃಷ್ಟಿ' (Conscience) ನೇತ್ರದ ಬಗೆಗಿನ ಪುರಾತನರ ಶ್ರದ್ಧೆಯ ಸೂತ್ರವು ಗಮನಕ್ಕೆ ಬಂದ ಬಳಿಕ, ಈ ಪುರಾತನರ ಸಾಮಾಜಿಕ ಪ್ರಜ್ಞೆಗೆ ತಲೆಬಾಗಿದೆ. ಸಮಾಜ : ಸಮಷ್ಟಿ ಎಂಬರ್ಥದ 'ವೈಶ್ವಾನರಾಗ್ನಿ' ಎಂಬ ಪದವು, Public-Conscience' ದ ಬಗೆಗಿನ ಮನು : ಮಾನವ ಸಂಪ್ರದಾಯದ ಶ್ರದ್ಧೆಯನ್ನು ಪುಷ್ಟೀಕರಿಸುತ್ತದೆ. ಪುರಾತನ ಸಾಂಸ್ಕೃತಿಕ ಪರಂಪರೆಯಲ್ಲಿ 'ಚಕ್ಷು' ಮತ್ತು 'ನೇತ್ರ' ಇವೆರಡೂ ಪದಗಳು ವಿಶೇಷಾರ್ಥವನ್ನು ಪಡೆದುಕೊಂಡೇ ಹುಟ್ಟಿವೆ. ಭಗವತ್-ಗೀತೆ ಮೊದಲಾದ ಕಡೆಗೆ ಬರುವ ನರನ ದಿವ್ಯಚಕ್ಷುವು, ನೇತ್ರದಿಂದ ಭಿನ್ನ; ಸ್ವಪ್ನಸದೃಶ ದೃಶ್ಯಗಳನ್ನು ಕಾಣುವ ಗುಣ ಚಕ್ಷುವಿನದು. ನೇತ್ರವು, ಬಾಳದಾರಿಯ ನೇತಾರನ ಸಾಮರ್ಥ್ಯವುಳ್ಳದ್ದು. ಚಕ್ಷುವು ನರನಿಗೆ ಪ್ರಿಯವಿರುವಂತೆ ನೇತ್ರವು ಮನು: ಮಾನವನಿಗೆ ಅಚ್ಚುಮೆಚ್ಚಿನದು, ಆಧುನಿಕ ಮಾನಸಶಾಸ್ತ್ರದ- ದೃಷ್ಟಿಯಿಂದ!

ಪ್ರತಿಯೊಂದು ವ್ಯಕ್ತಿಯೂ 'ನರ'ನಲ್ಲದೆ, ಮನುಜನೂ ಆಗಿರಬಲ್ಲುದು. ಆದುದರಿಂದ, ನರರವರ್ಗ ಮತ್ತು ಮನುಜರ ವರ್ಗ ಎಂದು ಸ್ಪಷ್ಟವಾಗಿ ವಿಂಗಡಿಸಿ ಹೇಳುವುದು ಶಕ್ಯವಿಲ್ಲ. ಆದರೆ, ಜನ (ಜಂಗುಳಿ

Crowd, mass) ಮತ್ತು ಲೋಕ: ಜನಪದ (Public, People) ಎಂದು ಎರಡು ಪಂಗಡಗಳನ್ನು ಗುರುತಿಸಿಕೊಳ್ಳುವುದು ಸುಲಭವಿದೆ. ಪ್ರತಿಯೊಂದು ವ್ಯಕ್ತಿಯಲ್ಲಿಯೂ ಕನಸು ಕಾಣುವ ಒಲವು ಇದ್ದೇ ಇರುತ್ತದೆ. ಇದೇ ಮೇರೆಗೆ, ಹುಟ್ಟು ಒಳ ತಿಳಿ (ವಿನ) ಬೆಳಕು ಪ್ರಜ್ಞಾವಿವೇಕವೂ ಇರುವುದುಂಟು. 'ಪ್ರಜ್ಞಾ' ಶಬ್ದಪ್ರತಿಮೆ ತುಂಬ ವಿಶಾಲಾರ್ಥದ್ದು. Consciousness of Consciousness, Conscience ಎಂಬ ಅರ್ಥವೂ ಪ್ರಜ್ಞೆಯಲ್ಲಿ ಇದೆ. ಬುದ್ಧಿಯಿಂದ ಪ್ರಜ್ಞಾ ಭಿನ್ನ. ಜೀವನದಲ್ಲಿ ಪ್ರಜ್ಞೆ 'ಹಗಲು' ಇದ್ದಂತೆ. ಇದು ಅನಿರ್ಬಂಧ ಕನಸಿನ-ಕನವರಿಕೆಗಳಿಗೆ, ಆಂತಕಕಾರಿ, ವ್ಯಕ್ತಿಯ ಕನಸು ಕಾಣುವ ಒಲವು, 'ಚಟ' ಆಗುವಾಗ, ಇದಕ್ಕೆ ರಾತ್ರಿ-ಕತ್ತಲೆಯ ಆಕರ್ಷಣವು ಅನಿವಾರ್ಯವಾಗುತ್ತದೆ. ಚಕ್ಷುವನ್ನು ಇರುಳುಗಣ್ಣು ಎಂದು ಹೇಳಬಹುದು. ಜೀವನ ಮೂಲ್ಯಗಳನ್ನು ಕಡೆಗಣಿಸಿ ಲೈಂಗಿಕ ಪಾತಳಿಯ ಆಕರ್ಷಣ ಹೆಚ್ಚಿಸುವ ಸಾಹಿತ್ಯಕಲೆಗಳ ಉದ್ಗಮ ಕೇಂದ್ರವಿದು.

ವ್ಯಕ್ತಿಯು 'ನರ' ನಿರುವಂತೆ ಮನುಜನೂ ಆಗಿದ್ದಾನೆ. ಆದರೆ ವ್ಯಕ್ತಿಯಲ್ಲಿ ಕೇವಲ 'ಹಗಲಿ'ನ ಆಸಕ್ತಿ ಅಥವಾ 'ರಾತ್ರಿ'ಯ ಹುಚ್ಚು, ಪ್ರಮಾಣಕ್ಕೆ ಮೀರಿ ಆಗುವಾಗ, ಈ ಆಸಾಮಿಯ ತೂಕ ತಪ್ಪಿ, ನರ-ಮನು-ಜತ್ವಗಳಲ್ಲಿ ಯಾವುದೊಂದೇ ಬಗೆಯ ವ್ಯಕ್ತಿಯಾಗಿ ಪರಿಣಮಿಸುವುದು ಅನಿವಾರ್ಯ. ಯಾವುದೊಂದು ಜನ-ಗಣದ ವಿಧಿ ಲಿಖಿತವು, ಆ ದೇಶದ 'ನರ'ರ ಸಂಖ್ಯೆ, 'ಮನು-ಜರ' ಸಂಖ್ಯೆಯ ಪ್ರಮಾಣವನ್ನು ಅವಲಂಬಿಸಿರುತ್ತದೆ. ಸಮಾಜದಲ್ಲಿ ಕೆಲವೊಮ್ಮೆ 'ನರಧರ್ಮ'ಕ್ಕೆ ಪ್ರಾಧಾನ್ಯ ಪ್ರಾಶಸ್ತ್ಯವು ಪ್ರಾಪ್ತವಾಗಿ, ಮನು : ಮಾನವ-ಧರ್ಮವು ಬೆಲೆಗೇಡಾಗುತ್ತದೆ. ಇದರ ಅರ್ಥ: ಇಂದ್ರಿಯಗಳ ಪಾತಳಿಯ ಜೀವನ ರೀತಿಯೇ ಪ್ರತಿಷ್ಠಿತವಾಗುತ್ತದೆ. ಸಾಮಾಜಿಕ ಸಮಯಾಚರಣೆಗಳಲ್ಲಿ ಶೈಥಿಲ್ಯ ತಲೆಯೆತ್ತಿ ಜೀವನಮೂಲ್ಯಗಳು 'ಮಾನವ ಕಲ್ಪಿತ' ಎಂಬ ನಂಬುಗೆ ಪ್ರಭಾವಶಾಲಿಯಾಗುವುದುಂಟು. ಪ್ರತಿಯೊಂದು ವ್ಯಕ್ತಿಯೂ 'ಸ್ವಯಂ ಭೂ' ಎಂಬಂತೆ ಆಚರಿಸುತ್ತದೆ.

ಈ ಕುತ್ತಿನೊಳಗಿಂದ ಹೊರಬರಲು ಮನು : ಮಾನವಧರ್ಮದ ಪುನಃ ಪ್ರತಿಷ್ಠೆಯು ಅಗತ್ಯ. ಭಾರತೀಯ ಪುರಾತನ ಪರಂಪರೆಯಲ್ಲಿ ಹಿಂದೊಮ್ಮೆ ವಿವಸ್ವನ್ ಮನುಪ್ರಣೀತ 'ಮಾನವ ಧರ್ಮ' ಜೀವಂತವಿತ್ತು, ಎಂಬುದರ ಖಾತ್ರೀ ಮಾಡಿಕೊಡುವ ಪ್ರಮಾಣಗಳು ಬೆಳಕಿಗೆ ಬರತೊಡಗಿವೆ. ಆದರೆ, ಅಂದಿನ ಆ ಮಾನವ ಧರ್ಮವು, ಅದಿತಿ : ಆದಿಶಕ್ತಿ, ಕುಮಾರೀ: ಮಾತಾಸಂಪ್ರದಾಯದ ಪ್ರಭಾವದಲ್ಲಿ ನೆಲಕ್ಕೆ ಕುಪ್ಪಳಿಸಿದೆ. ಇದಕ್ಕೆ ಇಂದಿನ ವೇದದಿಂದ ತೊಡಗಿ ಭಗವತ್ ಗೀತೆಯ ವರೆಗಿನ ಏನೆಲ್ಲ ಗ್ರಂಥಗಳಿಂದಲೂ ಪುರಾವೆ ದೊರೆಯುತ್ತಿವೆ. ಅಂದಿನ ಆ 'ಮಾನವ ಧರ್ಮ' ದ ನಡೆವಳಿಗಳಲ್ಲಿ 'ಧನ್ಯೋ ಗೃಹಸ್ಥಾಶ್ರಮಃ' ಎಂಬ ದೃಷ್ಟಿಕೋನವಿತ್ತು. ಆದರು, 'ರಾತ್ರಸಮಯಾಚಾರಗಳ' ಕುಮಾರ-ಕುಮಾರೀ ಪಂಥೀಯ ಜೀವನಾದರ್ಶದ ನರ(ಳ) ಧರ್ಮವು ಲೋಕಪ್ರಿಯವಾದದ್ದು ಕಾಣುತ್ತಿದೆ! ಈ ನರ(ಳ) ಧರ್ಮವು ವಿರಕ್ತಪಂಥೀಯ ಸಂನ್ಯಾಸಮಾರ್ಗಕ್ಕೆ ತಿರುಗಲೇ ಬೇಕು. ಪಾರಲೌಕಿಕ ಸಿದ್ಧಿಯ ಆಮಿಷದ ಸಂನ್ಯಾಸಿಗಳ ಪ್ರಭಾವಲ್ಲಿ ಕುಟುಂಬ ಸಂಸ್ಥೆಯು ಬೆಲೆಗೆಟ್ಟಿತು. ಸುಮಾರಾಗಿ ಈ ಬಗೆಯ ಸ್ಥಿತ್ಯಂತರವೇ ಪುರಾತನ ಗ್ರೀಕ್‌ಸಂಸ್ಕೃತಿಯಲ್ಲಿಯೂ ಸಂಭವಿಸಿದೆ. ಈ ವರೆಗೆ ಪ್ರಕಟವಾಗಿರುವ ಗ್ರೀಕ್ ಸಾಂಸ್ಕೃತಿಕ ಬಗೆಗಿನ ಗ್ರಂಥಗಳಿಂದ ಈ ಸಂಗತಿಯು ಬೆಳಕಿಗೆ ಬರುತ್ತದೆ.* ಮೋಕ್ಷದ ಅರ್ಹತೆ ನರನಿಗಲ್ಲದೆ ವಿವಸ್ವನ್ ಮನು ಸಂತಾನಕ್ಕಿಲ್ಲ, ಎಂಬುದು ನರ-ನಾರ-ಅಯನ ಪಂಥೀಯ ಶ್ರದ್ಧೆ. ಆದಕಾರಣ, ವಿವಸ್ವನ್ ಮನು ಪರಂಪರೆಯನ್ನು ವಿರೋಧಿಸಿ ಸ್ವಯಂ-ಭೂ ಮನು-ಸಂಪ್ರದಾಯವು ಪ್ರಬಲವಾದುದಾಗಿ ವೇದೋಪನಿಷತ್ತಿನೊಳಗಿನ ಪ್ರಮಾಣಗಳಿಂದ ಗೊತ್ತಾಗುತ್ತದೆ. ಆತ್ಮೋದ್ಧಾರಕ್ಕಾಗಿ ದಿವ್ಯ ಸಾಕ್ಷಾತ್ಕಾರ ಅನಿವಾರ್ಯ. ಈ ಸಾಕ್ಷಾತ್ಕಾರದ ಅರ್ಹತೆ ಬರಲು ತಾನು ಪಾಪಿ, ಕ್ಷುದ್ರ ಎಂಬ ದೈನ್ಯಭಾವವು ತಾನೇತಾನಾಗಿ ಆ ವ್ಯಕ್ತಿಯನ್ನು ಆಳುತ್ತಿರುವ ಆವಶ್ಯಕತೆಯಿದೆ.

---

* ಶಂಬಾ ಅವರು ಗ್ರೀಕ್ ಪುರಾಣ ಮತ್ತು ಸಂಸ್ಕೃತಿಯ ಅಧ್ಯಯನದ ಫಲಿತಗಳನ್ನು ಋಗ್ವೇದಸಾರ ನಾಗಪ್ರತಿಮಾ ವಿಚಾರದಲ್ಲಿ ವಿಪುಲವಾಗಿ ಬಳಸಿಕೊಂಡಿದ್ದರು. ಆದರೆ, ಮನು>ಮಾನವ, ಸ್ವಯಂಭೂ, ಸ್ವಾಯಂಭುವನರ, ವೈವಸ್ವತ:ಮನು, ಈ ಪರಿಭಾಷೆಗಳ ಸ್ಪಷ್ಟ ಅಂತರ, ಇನ್ನೂ ಅರಿಕೆಗೆ ಬಂದಿರಲಿಲ್ಲ. ಆಧುನಿಕ ತತ್ತ್ವಜ್ಞರ ಜೀವನ ಪರಿಭಾಷೆಗಳು ಗಮನಕ್ಕೆ ಬಂದಿರಲಿಲ್ಲ. ೧೯೭೬ರ ಸುಮಾರಿಗೆ ಈ ಎಲ್ಲ ಪರಿಭಾಷೆಗಳಲ್ಲಿ ಒಂದು ಸಮಗ್ರ ಧಾರಣೆಯು ಕಾಣಿಸಿಕೊಂಡಿತು. (ಸಂ)

'ನರ'ನಲ್ಲಿ ಈ ಬಗೆಯ ಶರಣಾಗತನಾಗುವ ಮನೋಭಾವವು ಬೇಗನೆ ತಲೆದೋರುತ್ತದೆ. Idea of Holy ಎಂಬ ಸುಂದರ ಗ್ರಂಥದ ಲೇಖಕರು, ಈ 'Creature Feeling'ದ ಆವಶ್ಯಕತೆಯನ್ನು ಪರಿಣಾಮಕಾರಿಯಾಗಿ ವಿವರಿಸಿದ್ದಾರೆ. Otto Rudolf (ಒಟ್ಟೊ ರುಡೊಲ್ಫ್) ಬರೆದ ಈ ಗ್ರಂಥವು, ಜಗತ್ತಿನ ಪ್ರಮುಖ ಭಾಷೆಗಳಲ್ಲೆಲ್ಲ ಪ್ರಕಟವಾಗಿದೆ. ಕ್ರಿಸ್ತನ ಪರಮಭಕ್ತ ರುಡೊಲ್ಫನಿಗೆ, ಭಗವದ್ಗೀತೆ ತುಂಬ ಹಿಡಿಸಿದೆ. ಈ ಮಾತು ಯಾತಕ್ಕೆ ಎಂದರೆ, 'ಆತ್ಮೋದ್ಧಾರ'ವು ನರ: ವರ್ಗಕ್ಕೇ ಶಕ್ಯ. ಮನು ಮಾನವರಿಗಲ್ಲ ಎಂಬ ಗ್ರಹಿಕೆ ರುಡಾಲ್ಫನಿಗೂ ಇತ್ತು ಎಂಬುದನ್ನು ಗಮನಕ್ಕೆ ತರುವುದಕ್ಕಾಗಿ ಈ ವಿವರಣೆ ಜರೂರು ಆಯ್ತು.

ಸಾಮಾಜಿಕ ಜೀವನದಲ್ಲಿ ಮನು : ಮಾನವ ಮತ್ತು ನರ ಈ ಮನೋಭೂಮಿಕೆಯ ಸೂಕ್ಷ್ಮ ತೊಡಕು ಗ್ರೀಕ್ ಸಂಸ್ಕೃತಿಯಲ್ಲಿಯೂ, ಬಹು ಪುರಾತನಕಾಲದಿಂದಲೇ ಕಾಣದೊರೆಯುತ್ತದೆ. ಹೋಮರನ ಕಾಲದಿಂದ ಮಾತ್ರ ಗ್ರೀಕ್‌ಸಂಸ್ಕೃತಿಯ ಸಮೀಕ್ಷೆಯನ್ನು ಪ್ರಾರಂಭಿಸಲಾಗುತ್ತದೆ. ಹೋಮರನ ತರುವಾಯದ ಹೆಸಿಯೋಡನ ಕಾವ್ಯದ ಪ್ರಭಾವದಿಂದ ಗ್ರೀಕ್‌ಸಂಸ್ಕೃತಿಯಲ್ಲಿ ವ್ಯಕ್ತಿಯ (ನರನ) ಉದ್ಧಾರಧ ತತ್ತ್ವಪ್ರಣಾಲಿಕೆಯು ತಲೆಯೆತ್ತಿದ್ದು ತುಂಬ ಮಹತ್ವದ ಸಂಗತಿ.[೧]

ಭಾರತೀಯ 'ನರ' ಶಬ್ದಪ್ರತಿಮೆಯನ್ನು ಹೋಲುವ ಪಾರಿಭಾಷಿಕ ಪದವು ಪಾಶ್ಚಾತ್ಯ ಸಂಸ್ಕೃತಿಯಲ್ಲಿ, ಇದ್ದಂತೆ ಎನಿಸುವುದಿಲ್ಲ. ಒಟ್ಟೊ ರುಡಾಲ್ಫನು creature ಪದವನ್ನು ಯೋಜಿಸಿದ್ದಾನೆ. 'Individual' ಎಂದರೆ 'ವ್ಯಕ್ತಿ'. ವ್ಯಕ್ತಿಯ ಉದ್ಧಾರದ ವಿಚಾರವು ಆವಶ್ಯಕವಾಗುವಲ್ಲಿ, ಮನು : ಮಾನವ (Man) ಎಂಬಲ್ಲಿ ಅಭಿಪ್ರೇತಹುರುವ ಆಶಯವು, ವೈಯಕ್ತಿಕ ವ್ಯಕ್ತಿವಾದಕ್ಕೆ ಆತಂಕಕಾರಿಯಾಗಿದೆ ಎಂದೇ ಅರ್ಥವಾಗುತ್ತದೆ. ಆದರೆ ಈ ಸೂಕ್ಷ್ಮ ತಾರತಮ್ಯವು, ಗ್ರೀಕ್ ತತ್ತ್ವಜ್ಞಾನದ ಇತಿಹಾಸಕಾರರ ಗಮನ ಸೆಳೆದಂತೆ ಕಾಣುವುದಿಲ್ಲ.

ನರ (ಳ) 'ಸೃಜನಶೀಲ'-'ಪತಿತ', 'ಪಾಮರ' ಎಂಬ ಈ ಅಂಶಕ್ಕೆ ಪ್ರಾಧಾನ್ಯವು ಪ್ರಾಪ್ತವಾಗಿ ಪತಿತೋದ್ಧಾರಕ್ಕಾಗಿ' ಏನೆಲ್ಲ ಮೋಕ್ಷಕಾಮಿ ಸಂಪ್ರದಾಯಗಳು, ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ತಲೆಯೆತ್ತಿವೆ. ನರ(ಳ)ನ ಸೃಜನಶೀಲತ್ವವು ಗಮನ ಸೆಳೆದ ಸಂಪ್ರದಾಯಗಳೆಲ್ಲವೂ 'ರಾತ್ರ ಸಮಯಾಚಾರ'ದ ಪಂಥಗಳೇ ಇರುವ ಈ ಅಂಶವು ಅಭ್ಯಸನೀಯವಿದೆ. ಈ ವಸ್ತುಸ್ಥಿತಿಯ ಅರ್ಥವೇನು? 'ರಾತ್ರ ಸಮಯಾಚಾರಗಳ' ವಿಪರೀತ ಪರಿಣಾಮಗಳ ಫಲಿತವೇ ಮೋಕ್ಷಕಾಮೀ ಸಂನ್ಯಾಸೀ ಪಂಥಗಳು. ಇವು ತಮ್ಮದು 'ಅನಾಥರ, ಪತಿತೆಯರ ಉದ್ಧಾರದ ಧರ್ಮ' ಎಂದು ಪರೋಪಕಾರದ ವೇಷ ಧರಿಸಿರುವುದಾಗಿ, ಇತಿಹಾಸವು ಹೇಳುತ್ತದೆ. ಗ್ರೀಕಿನಲ್ಲಿ ಈ ಬಗೆಯ ನರರ ಉದ್ಧಾರ [Individual emancipation] ಕಾರ್ಯದ ಪ್ರೇಷಿತರಲ್ಲಿ ಮೊದಲಿಗನು ಒರಫ್ಯೂಅಸ್. ಇವನು ಅಪ್ಸರಾ ಪುತ್ರನೆಂದು ಸಂಪ್ರದಾಯ ಹೇಳುತ್ತದೆ. ಈ ಸಂಪ್ರದಾಯವು ಹೆಸಿಯೋಡ್, ಅದೇಕೆ ಮೂಲ ಹೋಮರನಿಗೂ ಮುಂಚಿನಿಂದಲೆ ಒರಫ್ಯೂಅಸ್ ಇರುವ ಶಕ್ಯತೆಯನ್ನು ಹೇಳಲಾಗುತ್ತದೆ. ಒರಫ್ಯೂಅಸನಂತೆ, ವಸಿಷ್ಠವ್ಯಾಸರೂ ಅಪ್ಸರಾ ಪುತ್ರರೇ ಇರುವ ಘಟನೆ ವಿಚಾರಾರ್ಹವಿದೆ. 'ಸ್ವೈರ ಲೈಂಗಿಕ' ಜೀವನ ರೀತಿಯ ಪ್ರತಿಕ್ರಿಯಾ ರೂಪದಲ್ಲಿ, ಈ ಏನೆಲ್ಲ ಕುಮಾರ ಕುಮಾರೀ ಸಂಪ್ರದಾಯ ಆಕಾರ ಪಡೆದಿರುವುದನ್ನು ಅಮಾನ್ಯ ಮಾಡಲು ಆಸ್ಪದವಿಲ್ಲ. ಹೋಮರನ ಕಾವ್ಯದೊಳಗಿನ ದೈವತ ಪ್ರತಿಮೆಗಳನ್ನು ಸಮೀಕ್ಷಿಸುವಾಗ, ಒರಫ್ಯೂಅಸನ ಸಂಪ್ರದಾಯವು ಅಂದಿನಿಂದಲೇ ಇರುವ ಶಕ್ಯತೆಯು ಉಂಟು. ಹೆಸಿಯೊಡನ ತತ್ತ್ವಜ್ಞಾನವು ವಿರಕ್ತಪಂಥೀಯ ನಿರಾಶಾವಾದದ ಹಿನ್ನೆಲೆಯುಳ್ಳದ್ದು (Hesiod's philosophy of life is distinctly pessimistic,[೨] ಒರ್‌ಫ್ಯೂಅಸನ ಸಂಪ್ರದಾಯವು ಈ ಭವಬಂಧನದೊಳಗಿಂದ ಮುಕ್ತವಾಗುವ ಮಾರ್ಗದರ್ಶಕ ಗುರುವರ್ಗವನ್ನು ಪೂರಯಿಸುತ್ತಿತ್ತು. ಹೆಸಿಯೋಡನ ಕಾವ್ಯದೊಳಗಿನ ನಿರಾಶಾವಾದವು, ಇವನಿಗೂ ಮುಂಚಿನಿಂದಲೇ ಇರಬೇಕಷ್ಟೇ?

ಆದರೆ, ಇಲ್ಲಿ ಒಂದು, ಸಮಸ್ಯೆ ಎದುರು ನಿಲ್ಲುತ್ತದೆ : ನರ : ನಾರಾಯಣ ಸಂಪ್ರದಾಯ ಅಥವಾ ಮೋಕ್ಷಕಾಮೀ ಪಂಥಗಳು ಮೊದಲೋ? ಇಲ್ಲವೆ ವಿವಸ್ವನ್ ಮನುಪ್ರಣೀತ ಮಾನವಧರ್ಮ-ಸಂಪ್ರದಾಯವು ಮೊದಲೋ?

ಈ ಪ್ರಶ್ನೆ ಗ್ರೀಕ್ ಸಂಸ್ಕೃತಿಗೂ ಅನ್ವಯಿಸುತ್ತದೆ. ಆದರೆ, ಇದರ ಇತ್ಯರ್ಥಕ್ಕೆ, ಅವೆಸ್ತದ ನೆರವಿನಿಂದ ಭಾರತೀಯ ಪರಂಪರೆಯಲ್ಲಿ ದೊರೆಯುತ್ತಿರುವಷ್ಟು ನಿಃಸಂದಿಗ್ಧ ಪ್ರಮಾಣಗಳು, ಗ್ರೀಕ್ ರೋಮನ್ ಸಂಸ್ಕೃತಿಯಲ್ಲಿಯೂ ದೊರೆಯುತ್ತವೆಯೆ, ಎಂಬುದನ್ನು ನಾನು ಅರಿಯೆ. ಈ ಸಮಸ್ಯಾ ಪರಿಹಾರಕ್ಕೆ ಎರಡು ದಿಕ್ಕಿನಿಂದ ಪ್ರಮಾಣಗಳು ದೊರೆಯುತ್ತವೆ. ತಾತ್ವಿಕ ಭೂಮಿಕೆಯಿಂದ ವಿಚಾರಿಸಿದಲ್ಲಿ ಭಾಷೆ : ಸಂಸ್ಕೃತಿ ಇದು ಸಾಮಾಜಿಕ, ಎಂಬುದನ್ನು ಒಪ್ಪದವರು ದೊರೆಯಲಾರರು. ಆದರೆ, ದಿವ್ಯಾಧ್ಯಾತ್ಮದಲ್ಲಿ ಮೌನಕ್ಕೆ ಪ್ರಾಧಾನ್ಯ-ಮುನಿ ಸಂಪ್ರದಾಯವು, ಮೌನೇಯರದು ಎಂಬುದನ್ನು ಮನಗಾಣಿಸಿ ಕೊಡುವ ಸೂಕ್ತವು ವೇದದಲ್ಲಿದೆ.[೬] 'ನಿಃಶಬ್ದಂ ಬ್ರಹ್ಮ' ಎಂಬ ಈ ಸೂತ್ರ. ಭಾಷೆಯನ್ನು ಸೂತಕವೆಂದು ಬಗೆವ ಮನೋಭಾವ ಆಗಿದೆ. ಇದು ಭಾಷಾವಿಕಾಸಕ್ಕೆ ಪೋಷಕವಿರದೆ ಮಾರಕವೇ ಸರಿ. ಓರ್ಫಿಕ್ ಪಂಥದಲ್ಲಿಯೂ ಮೌನಕ್ಕೆ (Silence) ತುಂಬ ಮಹತ್ವದ ಸ್ಥಾನವಿತ್ತು. ('Secret Society') ಗುಹ್ಯಮಾರ್ಗಿಗಳ ಕೂಟ ಇದು. ಈ ಸಂಪ್ರದಾಯಗಳ ಅಸಾಮಾಜಿಕ ಮನೋಭಾವಕ್ಕೆ ನಿದರ್ಶನ. ಗೀತೆ ಹೇಳುತ್ತದೆ : ಅನಿಕೇತನಾಗಿ 'ಸಂಗಂ ತ್ಯಕ್ತ್ವಾ' ಮುಕ್ತಸಂಗಃ ಸಮಾಚರೇತ್, ಎಂಬೀ ಬಗೆಯ ಪ್ರೇರಣೆಯ ಈ ವಿರಕ್ತ ಪಂಥಗಳಲ್ಲಿ ಐಹಿಕ ಜೀವನ ಮೂಲ್ಯಗಳಿಗೆ, ಸಂಸ್ಕೃತಿಗೆ ಏನು ಬೆಲೆಯಿದ್ದೀತು?

ಆದುದರಿಂದ, ಸಮಾಜ : ಸಂಸ್ಕೃತಿಯು ಭಾಷೆ-ಸಂಸ್ಕೃತಿಯು-ಪ್ರವರ್ಧಮಾನವಾಗತೊಡಗುವ ಹಂತದಲ್ಲಿ, ಅಂದಿನ ಮಾನವ ಪಾತಳಿಯ ಕೌಟುಂಬಿಕ, ಸಾಮಾಜಿಕ ಜೀವನ ರೀತಿಯು ಹಿಡಿಸದೆ ಇಂದ್ರಿಯ ವೃತ್ತಿಗಳ ಪ್ರೇರಣೆಯಿಂದ 'ಸ್ವಯಂಭೂ' ಮಾರ್ಗದಿಂದ ನಡೆವ ವ್ಯಕ್ತಿ ವಿಶಿಷ್ಟವಾದೀ ನರ ಸಂಪ್ರದಾಯಗಳು ಬಳಿಕ ತಲೆಯೆತ್ತಿರಬೇಕೆಂಬುದು ನಿಶ್ಚಿತವಿದೆ. ಭಾರತೀಯ ಸಂಸ್ಕೃತಿಯೊಳಗಿನ ಸ್ಥಿತ್ಯಂತರಗಳನ್ನು ಸಮೀಕ್ಷಿಸಿದರೂ ಈ ಸಂಗತಿಯೇ ದೃಢಪಡುತ್ತದೆ. ಮಾದರಿಗಾಗಿ ಕೆಲವು ಉದಾಹರಣಗಳನ್ನು ನೋಡಬಹುದು.

ಇಂದಿನ ವೇದದಲ್ಲಿ ತಲೆಯೆತ್ತಿರುವ 'ಆದಿತ್ಯ'* ಸಂಪ್ರದಾಯವು ಅರ್ವಾಚೀನ. ಸೂರ್ಯ, ಸವಿತೃ, ವರುಣ ವಿವಸ್ವನ್ ಇವು ಮೂಲತಃ ಪ್ರಕಾಶ ತತ್ವದ ದೈವತಗಳು. ಆ ಬಳಿಕ ಆದಿತ್ಯರೂಪಕ್ಕೆ ತಿರುಗುತ್ತವೆ. ಋಗ್ವೇದದ ಭಾಷೆಗೆ ಹೋಲುವ ಅವೆಸ್ತದಲ್ಲಿ ಅದಿತಿ-ಆದಿತ್ಯರಿಲ್ಲ. ಅದಿತಿಯ ಪುತ್ರ ಆದಿತ್ಯ, ಎಂದು ಸಾಯಣಾದಿಗಳೆಲ್ಲ ಹೇಳಿದ್ದಾರೆ ಆದರೆ, ಈ 'ಅದಿತಿ' (ಆದಿಮಾತೆ ಎಂದರೂ) ಈ ದೇವಿಯು ತನ್ನ ಕೆಲವು ಮಕ್ಕಳಿಗಿಂತಲೂ ಚಿಕ್ಕವಳು (Aditi is younger than some of her sons) ಎಂದು ಮ್ಯಾಕ್‌ಡೊನೆಲ್, ಓಲ್ಡೆನ್‌ಬರ್ಗ್ ಒಕ್ಕೊರಲಿನಿಂದ ಹೇಳಿದ್ದಾರೆ. ಅವೆಸ್ತದ ವಿವಸ್ವನ್ ಆದಿತ್ಯನಾಗಿಲ್ಲ! ಅದಿತಿಗಿಂತ ಪ್ರಾಚೀನ ದೇವರು! 'ಆದಿತ್ಯ' ಎಂಬುದು ಒಂದು ಕಣ್ಕಟ್ಟು. ಅಭಾವದಲ್ಲಿ ಸ್ಥಾಯಿಭಾವ. ಇದು ಪರ್ಯಾಯದಿಂದ ಮೋಸ. ಪೈಥಾಗೋರಾಸನ ಸಂಪ್ರದಾಯದ ಮೂಲಕವೂ ಇದು ದೃಢಪಡುತ್ತದೆ. ಸದ್ಯಕ್ಕೆ ಇಷ್ಟೇ ಪ್ರಮಾಣಗಳು ಸಾಕು. ಸಾಮಾಜಿಕ ಜೀವನದಲ್ಲಿ ಮೊದಲು ಇಲ್ಲದೆ ಫಕ್ಕನೆ, ತಲೆ ಎತ್ತುವ 'ಸ್ವಯಂಭೂ' ಎಂದರೆ upstart ದೈವತಗಳಿವು.

ವಿಶ್ವಸ್ಥ ದಿವ್ಯ 'ಅಧಿ ಆತ್ಮನ್' ಸಾಕ್ಷಾತ್ಕಾರ ದರ್ಶನವೇ ಗುರಿ ಇರುವ ಈ ಸಂಪ್ರದಾಯದ ಈ ಆದಿತ್ಯನು ಯಾರು? ಆದಿತ್ಯ ಸಂಪ್ರದಾಯದ 'ಭಗವತ್ ಗೀತೆಯ' ನರನಿಗೆ, ಭಗವಂತನು 'ನರ' ನಾರ-ಅಯನ ರೂಪ ಕೃಷ್ಣವರ್ಣದ 'ಬ್ರಹ್ಮ'ನ ಸಾಕ್ಷಾತ್ ಆಕೃತಿಯನ್ನು ಪಿಂಡ-ಬ್ರಹ್ಮಾಂಡೈಕ್ಯದ ಮೂಲಕ ದರ್ಶನ ಮಾಡಿಸಿರುವ ತಂತ್ರವನ್ನು ವಿವರಿಸುವುದೇ ಈ ಪ್ರಬಂಧದ ಮೂಲ ಉದ್ದೇಶ. ಗೀತೆಯೊಳಗಿನ ಈ ಸಾಕ್ಷಾತ್ಕಾರದ ಸ್ವರೂಪವು, ಉಪನಿಷತ್ತುಗಳಲ್ಲಿ ದೊರೆವ ಸಾಂಕೇತಿಕ ವರ್ಣನೆಗಳಿಗಿಂತ ಬಹಳ ಬೇರೆಯಾಗಿದೆ. ಬೇಕಾದರೆ, ಇದನ್ನು

---

* ಪ್ರಕಾಶತತ್ವ ಎಂದರೆ ಜೀವನ ಮೌಲ್ಯಗಳನ್ನು ಕಾಪಿಡುವ ಸಂಕೇತಗಳು. ಹಗಲು ಹಗಲಾಗಿರುವುದು. ಹಗಲು ಇರುಳಾಗದಂತೆ ನೋಡಿಕೊಳ್ಳುವುದು. ಯಾವುದಕ್ಕೂ 'ವಿಶಿಷ್ಟ' ಎಂಬುದಿಲ್ಲ. ಸಮಷ್ಟಿಗುಣದಲ್ಲಿ ನಡೆ. ಒಳತಿಳಿವಿನ ಬೆಳಕು ದಾರಿ. ಇದು ಪ್ರಕಾಶತತ್ವ. ಇದು ಸಾಂಸ್ಕೃತಿಕ ಸಮಷ್ಟಿಗುಣ ಪ್ರೇರಿತವಾಗಿರುತ್ತದೆ. ಈ ಸೂತ್ರವು ಶಂಬಾ ಅವರ ವಿಚಾರಗಳ ಮುಖ್ಯ ಸರಣಿಯಾಗಿದೆ ಈ ಹಿನ್ನಲೆಯಲ್ಲಿ ಇಲ್ಲಿಯ ವಿಚಾರಗಳನ್ನು ತಿಳಿಯುವುದು ಮುಕ್ತ. (ಸಂ)

ಉಪನಿಷತ್ಕಾಲದ ನಡೆವಳಿಯ ಸುಧಾರಿಸಿದ (?) ಆವೃತ್ತಿ' ಎನ್ನಬಹುದು. 'ನಿಷ್ಕಾಮನಾಗಿ' ಅಸಂಗಶಸ್ತ್ರದಿಂದ (ಸಂಗದಲ್ಲಿಯೇ ಇದ್ದು) ಅಹಿಂಸಾತ್ಮಕವಾಗಿ ಹೋರಾಟ ನಡೆಸಬೇಕೆಂಬ ಈ ವಿಚಾರವು, ದಿವ್ಯಾಧ್ಯಾತ್ಮ ಸಂಪ್ರದಾಯದಲ್ಲಿ ಉಪನಿಷತ್ಕಾಲದ ತರುವಾಯದ ಗೀತಕಾರನ ಅಪೂರ್ವ ಕಾಣಿಕೆ. ಉಪನಿಷತ್ತುಗಳಲ್ಲಿ ಬರುವ 'ಪಿಂಡ ಬ್ರಹ್ಮಾಂಡೈಕ್ಯ' ಸಿದ್ಧಿಯ ಹೋಲಿಕೆಯಲ್ಲಿ ಈ ಸಂಗತಿಯು ಸ್ಪಷ್ಟವಾಗಲಿದೆ.

'ಆದಿತ್ಯ'ನು ಯಾರು? ಎಲ್ಲಿದ್ದಾನೆ? ಇವನ ಆಕೃತಿ ಸ್ವರೂಪವೇನು? ಎಂಬುದರ ಸ್ಪಷ್ಟೀಕರಣವಿಲ್ಲದೆ,ಈ ಸಂಪ್ರದಾಯದ 'ದಿವ್ಯಾಧ್ಯಾತ್ಮ'ದ ಸಾಕ್ಷಾತ್ಕಾರದ ಅರ್ಥದ ಹಿನ್ನೆಲೆ ಗೊತ್ತಾಗಲಾರದು. ಕಣ್ಕಟ್ಟಿನ-ಮೋಡಿಕಾರ ಮಾಟದ ಮಾತುಗಳು ಈ ಸಂಪ್ರದಾಯದ ವೈಶಿಷ್ಟ್ಯ. 'ಆದಿತ್ಯಾದಿ ನವಗ್ರಹ' ಎಂದು ಹೇಳಲಾಗುತ್ತದೆ. ಆದರೆ 'ಆದಿತ್ಯ' ಎಂಬ ಗ್ರಹವು ಯಾವುದು? ಎಲ್ಲಿದೆ? ಇದರ ಬಗೆಗೆ ಮೌನ! ನವಗ್ರಹಗಳು ೧. ಸೂರ್ಯ, ೨. ಚಂದ್ರ, ೩. ಮಂಗಳ, ೪. ಬುಧ, ೫. ಗುರು, ೬. ಶುಕ್ರ, ೭. ಶನಿ, ೮. ರಾಹು, ೯. ಕೇತು. ಭಾರತೀಯ ಪರಂಪರೆಯಲ್ಲಿ ಆದಿತ್ಯಾದಿ ನವಗ್ರಹಗಳಲ್ಲಿ ಆದಿತ್ಯನನ್ನು ಸೇರಿಸಿ ಸೂಚಿಸಲಾಗಿದೆ. ಆದರೆ, ಇಲ್ಲಿ 'ನವ' ಎಂದರೆ ಒಂಬತ್ತೇ ಅಲ್ಲ. ಈ 'ನವ ಗ್ರಹ ಎಂದರೆ ಇನ್ನೂ ಕುಮಾರಿ ಗರ್ಭದಲ್ಲೇ ಇರುವ-ಹುಟ್ಟಲಿರುವನವಶಿಶು'ವೇ ಈ ಆದಿತ್ಯ ಎಂದು, ಅರ್ಥವಾಗುತ್ತದೆ. ಆದರೆ, ಗ್ರೀಕ್ ದೇಶದ ಶಾಕ್ತಪರಂಪರೆಯಲ್ಲಿ, ಒರ್ಫಿಕ್ ಪಂಥೀಯ ದೀಕ್ಷೆ ಪಡೆದ ಪೈಥಾಗೋರಸನು, 'ಹತ್ತನೆಯ ಒಂದು ಕಲ್ಪಿತಗ್ರಹ'ವನ್ನು ನಂಬ ಹಚ್ಚಿ, ಅರಿಸ್ಟಾಟಲ್ ಪ್ರಭೃತಿಗಳಿಗೆಲ್ಲ ದಿಗ್‌ಭ್ರಾಂತಿಯನ್ನು ಉಂಟು ಮಾಡಿದ್ದಾನೆ. ಅರಿಸ್ಟಾಟಲನ ತಕರಾರು ನೋಡಿ.

> "They (Pythagoreans) invented a non-existent" planet to make up the total to the sacred number ten". ಆದರೆ ಈ ಪವಿತ್ರ ಗ್ರಹ ಎಲ್ಲಿದೆ? "they invented the counter-earth not seeking accounts and reasons to explain the phenomena but forcing the phenomena trying to fit them into arguments and opinions of their own.[೪]

ಗುಹ್ಯಸ್ಥಾನದ ಸಂಕೇತದ ಕುರಿತು ಮೌನ ಪಾಲಿಸಿದ್ದಾಗಿದೆ. ಈ ಅವತರಣದಲ್ಲಿ ಬರುವ ಹತ್ತನೆಯ ಗ್ರಹದಂತೆ counter earth (ಪ್ರತಿ ಭೂಃ ಪಾತಳಿ) ಎಂದರೇನು, ಇದು ಎಲ್ಲಿದೆ? ಎಂಬ ಪ್ರಶ್ನೆ ತಲೆಯೆತ್ತುತ್ತಿದೆ. ಆದರೆ, ಗ್ರೀಕ್ ಪುರಾತನ ಉಲ್ಲೇಖಗಳ ಆಧಾರದಿಂದಲೇ "Counter-earth was the name given by the pythagoreans to the moon" ಪೈಥ್ಯಾಗೊರಾಸನ ಹತ್ತನೆಯ ಗ್ರಹವು She Moon ಚಂದ್ರಾನಲ್ಲೆ ಉಂಟು ಎಂಬುದು ಗುಹ್ಯ ಗ್ರೀಕ್‌ಪಂಥಕ್ಕೂ ಗೊತ್ತಿತ್ತು!

ಇದು ಹಾಗಿರಲಿ, ಭಾರತೀಯ ಹಾಗೂ ಗ್ರೀಕ್‌ಪುರಾತನ ಪರಂಪರೆಯೊಳಗಿನ ಉಲ್ಲೇಖಗಳ ಬೆಳಕಿನಲ್ಲಿ ದೃಢಪಡುವ ಸಂಗತಿಗಳು ಆದಿತ್ಯ ಇದು ಹತ್ತನೆಯ ಗ್ರಹ-She Moon ಚಂದ್ರಳಲ್ಲಿ ಇದೆ. ಗ್ರೀಕ್ ಪುರಾತನರ ಮೇರೆಗೆ ಇದನ್ನು ಹತ್ತು ಎನ್ನಬಹುದಾದರೂ ಇದು ಸ್ಪಷ್ಟವಾಗಿ She Moon (ಕುಮಾರೀ ಚಂದ್ರಾದೇವಿಯ ಗರ್ಭದ) ಹೊರಗೆ ಇರುವುದು ಸಿದ್ಧವಾಗಿಲ್ಲ. ಆದ್ದರಿಂದ, ಈ 'ಆದಿತ್ಯ' ನವ (ಹೊಸದಾಗಿ ಹುಟ್ಟಲಿರುವ) ಗ್ರಹವೇ ಸರಿ, ಭಾರತೀಯ ಪುರಾತನರ ಅಭಿಪ್ರಾಯದಂತೆ. ಆದರೆ, ಭಾರತೀಯ ಪುರಾತನ ಪರಂಪರೆಯು, ಪೈಥಾಗೊರಸನ 'ಹತ್ತು' ಈ ಸಂಖ್ಯೆಯ ಔಚಿತ್ಯವನ್ನು ಪುಷ್ಟೀಕರಿಸುತ್ತದೆ. 'ಜಾ-ಮಾ-ತೃ' ಸ್ವರೂಪ ಈ ಆದಿತ್ಯ : ಪುರುಷ, 'ಹತ್ತನೆಯ ಗ್ರಹವೂ ನಿಜ' (ದಶಮೋಗ್ರಹಃ). ದಿವ್ಯಾಧ್ಯಾತ್ಮದ 'ಸತ್ಯತ್' ಏಕಕಾಲಕ್ಕೇ ಸುಳ್ಳು-ಖರೇ! ಕುಮಾರಿಯರಿಗೆ 'ತಾಯ್ತನ'ವನ್ನು ದಯಪಾಲಿಸುವ ಈ ಅಳಿಯನು-ಪುರಿ-ಶಯ-ಪುರುಷನು, ಅತಿತಿಷ್ಠತ್ 'ದಶಾಂಗುಲಃ' (ಹತ್ತು ಬೆರಳಿನ ಅಳತೆಯವನು) ಮೇಲೆ ಇದ್ದಾನೆ!

ಪುರಿ-ಶಯನ ಅಳತೆಯ 'ಹತ್ತು' (ದಶ) ಈ ಸಂಖ್ಯೆಯ ಸಾಹಚರ್ಯವು ಉಭಯ ಸಂಸ್ಕೃತಿಗಳಲ್ಲಿಯೂ ಉಂಟು! 'ದಶ' ಈ ಸಂಕೇತದಲ್ಲಿ ಪರಸ್ಪರ ವಿರುದ್ಧ, ವಿಸ್ತಾರ-ಅವನತಿ (decadence : of a period of art or literature after combination) ಅರ್ಥಗಳೂ ಉಂಟು! 'ಆದಿತ್ಯ' ಎಂಬಲ್ಲಿಯೂ ಆದಿಯೊಡನೆ

ಅಂತ್ಯದ ಸೂಚನೆಯೂ ಒಳಗೊಂಡಿದೆ. ಸಂಸಾರಕ್ಕೆ ಸೃಜನಕ್ಕೆ ಕಾರಣ ಪುರುಷನ (ಏಕ) ಶಿರ್ಷ, ಅಕ್ಷ ಮತ್ತು 'ಪಾತ್' (ಪತ್) ಇವನ (ಸರ್ಪ) ದಂಶದಿಂದ ನಿರ್ಮಿತವೆಲ್ಲವೂ ಕ್ಷಣಿಕ, ನಾಶವಂತ ಎಂಬ ಧ್ವನಿ ಇಲ್ಲಿದೆ. ಪೈಥಾಗೊರಾಸನು ಈ 'ದಶ' ದಂಶದ ಪುರುಷನನ್ನು 'Limit' ಎಂದಿರುವಲ್ಲಿ ಸಂಪೂರ್ಣ ಔಚಿತ್ಯವಿದೆ!

ಪಿಂಡ ಬ್ರಹ್ಮಾಂಡೈಕ್ಯದ ದರ್ಶನದ ಔಪನಿಷದಿಕ ಒಂದು ಮಾದರಿ : ಪಿಂಡ (ಭೂಃ microcosm) ಮತ್ತು ಬ್ರಹ್ಮ ಅಂಡ (ಭುವಃmacrocosm) ಈ ಉಭಯ ಪಾತಳಿಯ ಮೇಲೆ ಏಕಕಾಲಕ್ಕೆ ಲಭಿಸುವ ಸಾಕ್ಷಾತ್ಕಾರ ವಿವರಣೆಯು ಇಲ್ಲಿದೆ. 'ಭುವಃ ಅಂತರಿಕ್ಷಂ' ಅಂತರಿಕ್ಷಸ್ಥ ಚಂದ್ರಮಂಡಲ (೦) ಮತ್ತು ಈ (She Moon) ಮಂಡಲಸ್ಥ ಆದಿತ್ಯನು. ಭೂಃ ಅಯಂ ಲೋಕಃ ಇದು ಮರ್ತ್ಯಲೋಕ, ಇಲ್ಲಿ ಮರ್ತ್ಯ ಚಂದ್ರಾssದಿತ್ಯರ ಮಿಥುನ ಯೋಗ, 'ಇಲ್ಲಿ ಸಲ್ಲುವುದು ಅಲ್ಲಿ ಸಲ್ಲುತ್ತದೆ' ಅಥವಾ ಪ್ಲೇಟೊನ ಗ್ರಹಿಕೆಯಂತೆ ಮೂಲ ಮಾದರಿ : 'ಭುವಃ' ಪಾತಳಿಯಲ್ಲಿ ಇದೆ. ಭೂಲೋಕದಲ್ಲಿ ಕೇವಲ ಅದರ ಛಾಯೆ! ಆದುದರಿಂದ, ಮರ್ತ್ಯಲೋಕದ ಲೀಲೆಗಳೆಲ್ಲವೂ ಆಭಾಸ! ಏನೆಲ್ಲವೂ ದಿವ್ಯಲೋಕದ ಆ ಆದಿತ್ಯಶಕ್ತಿಯ ಪ್ರೇರಣೆ! ಆದಕಾರಣ ನರರಿಗೆ ಪಾಪ ತಟ್ಟದು. ಇನ್ನು ಈ ವಿವರಣೆ ನೋಡಿ.[೫] ಭುವಃ ಪಾತಳಿಯ ಮೇಲೆ

ಏತತ್ ಆದಿತ್ಯಸ್ಯ ಶುಕ್ಲಂ ಭಾಃ ಸಾ ಏವ ಸಾ।

ಅಥ ಯತ್ ನೀಲಂ ಪರಃ ಕೃಷ್ಣಂ ತತ್ ಅಮಃ।...

ಇದು ಅಂತರಿಕ್ಷಸ್ಥ, ವಿಶ್ವಾಧ್ಯಕ್ಷನ (ಅಧಿ ಅಕ್ಷ : ದಶಾಂಗುಲ) ಸಂಕೇತ. ಈ ಪುರಿಶಯನು ನೀಲ, ಕೃಷ್ಣವರ್ಣದವನು. ಇದು ಅಧಿ ಆತ್ಮ ತತ್ತ್ವವಾಯಿತು. ಇದು 'ಅಧಿ ಅಕ್ಷ' ತಾನೆ? ಭೂಃ ಪಾತಳಿಯ ಮೇಲಿನ, ಪಿಂಡ-ಬ್ರಹ್ಮಾಂಡೈಕ್ಯದ ಈ ಸಾಂಕೇತಿಕ ವರ್ಣನೆ ನೋಡಿ.

ಏಷಃ ಅಂತರ್ ಆದಿತ್ಯೇ ಹಿರಣ್ಮಯಃ ಪುರುಷಃ ದೃಶ್ಯತೇ

ಇದು ಅಂತರ್ (ಗುಹೇಶ್ವರನ=ಪುರಿಶಯನ) ದರ್ಶನ. 'ಹಿರಣ್ಮಯಃ, ತುಂಬ ಮೌಲಿಕ ಬಂಗಾರದಂಥವನು, ಈ ಪುರಿಶಯನು; ಇವನಿಗೆ ಮೀಸೆ, ಕೇಶ, ಉಗುರು ಇರುವುದನ್ನು ಹೇಳಲಾಗಿದೆ.

"ಹಿರಣ್ಯ ಶ್ಮಶ್ರುಃ, ಹಿರಣ್ಯ ಕೇಶಃ ಆಪ್ರ-ನಖಾತ್ ಸರ್ವಂ ಸು-ವರ್ಣಃ".

ಜಾನಪದರಲ್ಲಿ ದೇವರ ಹಾವಿನ ಕಥೆಗಳನ್ನು ಕೇಳಲು ದೊರೆಯುತ್ತದೆ. ಕರೆವ್ವನ ಹಾವಿನ ದಂತಕಥೆ ಚಿಕ್ಕಂದಿನಲ್ಲಿ ನಾನೇ ಕೇಳಿದ್ದೇನೆ. 'ಘಟಸರ್ಪ, ಎಂಬ ಗುಹ್ಯ ಸಾಂಕೇತಿಕ ರಹಸ್ಯಸೂಚಕ ಭಾಷೆಯಿದೆ. ಇದರ ಶಿರದ=(ಹೆಡೆಯ) ಮೇಲೆ ಕೆಂಪುರತ್ನವಿರುತ್ತದೆ. ಅಲ್ಲದೆ ಕೂದಲು ಸಹ, ತನ್ನ ಶಿರೋರತ್ನ ಕಳೆದುಕೊಂಡು ಅಶ್ವ-ತ್ (ಅಶ್ವತ್ಥಾಮ) ವಿಹ್ವಲನಾಗಿ ಒರಲುತ್ತ ಅಲೆಯುತ್ತಿದ್ದಾನಂತೆ! ಕುಮಾರವ್ಯಾಸನಿಗೆ ಕಂಡನಂತೆ!

ಆದಿತ್ಯ ಸಂಪ್ರದಾಯದ ಅವಸ್ಥಾಂತರಗಳು

ಇಂದಿನ ಋಗ್ವೇದದಲ್ಲಿ ದೊರವ ಸುಫಲೀಕರಣ ಕ್ರಿಯೆಯ ಪ್ರತ್ಯಕ್ಷ ಸ್ವರೂಪದ ಚಿತ್ರವು[೬] ಉಪನಿಷತ್ತುಗಳಲ್ಲಿ ಕಾಣುವುದಿಲ್ಲ. ಉಪನಿಷತ್ತಿನೊಳಗಿರುವ ಪಿಂಡ ಬ್ರಹ್ಮಾಂಡೈಕ್ಯದ ವಾಸ್ತವ ಹತ್ತಿರದ ಸಾಂಕೇತಿಕ ಚಿತ್ರವು ಭಗವದ್ಗೀತೆಯಲ್ಲಿ ಇಲ್ಲ! ಆದರೆ, ನರ-ನಾರಾಯಣರ ಜೋಡಿ, ಪಿಂಡ ಬ್ರಹ್ಮಾಂಡೈಕ್ಯದ ಪ್ರತೀಕವಾಗಲು ಶಕ್ಯವೊ? ಆದರೆ, ಇದರ ಪೂರ್ವಸೂಚನೆ ಗರ್ಭದ ಆದಾನ ಕ್ರಿಯೆಯ ವರ್ಣನೆ ವಿಶ್ವಕರ್ಮನ ಸೂಕ್ತದಲ್ಲಿದೆ.[೭] ಮತ್ತು ಇದರ ಮುಂದಿನ ಹಂತವು 'ಕಸ್ಮೈ ದೇವಾಯ' ಸೂಕ್ತದಲ್ಲಿ[೮] ಉಂಟು. 'ಆಪ : ಸಲಿಲ' ಇದು ಮೂಲದಲ್ಲಿ ಸ್ತ್ರೀತತ್ತ್ವದ ಪ್ರತೀಕ. 'ಗರ್ಭಂ ದಧೇ ಆಪಃ' ಎಂಬುದು ನೈಸರ್ಗಿಕ. ಆದರೆ, ಆಪೋದೇವಿ (ನೀರೆ) ಬಸಿರಾದಳು, ಎಂಬ ಈ ಸ್ಪಷ್ಟತೆ ಇರಬೇಕಾದ ಈ ಮಂತ್ರದಲ್ಲಿ ಕಿಂ ಸ್ವಿತ್, ಎಂಬ ಪ್ರಶ್ನೆಯನ್ನು ಸೇರಿಸಲಾಗಿದೆ.

'ಅಜನ ನಾಭಿ' (ಮಂಡಲ)ದಲ್ಲಿ ಒಂದನ್ನು (ಅಂಡವನ್ನು) ಸೇರಿಸಲಾಯಿತು. 'ಅಜಸ್ಯ ನಾಭೌ ಏಕಂ (ಅಂಡಂ) 'ಅರ್ಪಿತಮ್. ಇದು ಅನೈಸರ್ಗಿಕ ಕೃತ್ಯ. ಅಜ (ಪುಲ್ಲಿಂಗ). ಈತನ 'ನಾಭೌ' ಸೃಷ್ಟಿಗೆ ಕಾರಣ (ಅಂಡಂ) ಒಂದನ್ನು ಸೇರಿಸಲಾಯ್ತು. ವಿಶ್ವಕರ್ಮನ ಈ ಕ್ರಿಯೆಯ ಫಲಿತಾಂಶವೇ 'ಕಸ್ಮೈದೇವಾಯ ಸೂಕ್ತದಲ್ಲಿದೆ.

ಹಿರಣ್ಯಗರ್ಭಃ ಸಮವರ್ತತ ಅಗ್ರೇ' (ಗಂಡು : 'ಅಜ') ಬಸಿರಾದುದರ ಪ್ರದರ್ಶನವಿಲ್ಲದೆ! ವೇದವಾಕ್ಯ ಸುಳ್ಳಾಗಲು ಶಕ್ಯವೋ? ಅಯ್ಯಪ್ಪನ್ ಅಥವಾ ಅಪ್ಪಯ್ಯ ಹೆಸರಿನ ದೇವರು ಅವತರಿಸಿದ ಕಥೆ ದೊರೆಯುತ್ತದೆ. ದೇವಾಲಯ ಭಿತ್ತಿ-ಚಿತ್ರಗಳಲ್ಲಿ ಕಾಮಕೇಳಿಗೆ ಪ್ರಾಶಸ್ತ್ಯವೇ? ಎಂಬ ಚಿಂತೆಯ ಸಂಭಾವಿತ ಸುಸಂಸ್ಕೃತರಿದ್ದಾರೆ. ಈ ಜನಕ್ಕೆ ವೇದೋಪನಿಷತ್ ಪರಂಪರೆಯ ಬೆಂಬಲವೂ ಇದಕ್ಕೆ ಉಂಟೆಂದು ಗೊತ್ತಿಲ್ಲ. ಋಗ್ವೇದದಿಂದ ತೊಡಗಿ ನೈಸರ್ಗಿಕ ಹಾಗೂ ಅನೈಸರ್ಗಿಕ ಎರಡೂ ಬಗೆಯ ರತಿಕ್ರೀಡೆಯ ವರ್ಣನೆಗಳು ಸಮಾಂತರವಾಗಿಯೇ ಉಪನಿಷತ್ತಿನ ವರೆಗೆ ಉಂಟು. ನರ-ನಾರಾಯಣ ಈ ಜೋಡಿಯ ಪೂರ್ವಪೀಠಿಕೆ, ವೇದದಲ್ಲಿ, ವಿಶ್ವಕರ್ಮ ಹಾಗೂ ಹಿರಣ್ಯಗರ್ಭನ ಸೂಕ್ತದಲ್ಲಿ ಸ್ಪಷ್ಟವೇ ಇದೆ. ಅಲ್ಲದೆ, ಮುನಿಸೂಕ್ತದಲ್ಲಿ 'ದಕ್ಷಿಣಾ ಮೂರ್ತಿ' ಕೇಶೀ ಪುರುಷ=ನಿತ್ಯಮೌನೀಯ ಈ ದೇವನ ಲೀಲೆಯ ವರ್ಣನೆಯಿದೆ.[೯] 'ವಿಷಸ್ಯಪಾನ ಪಾತ್ರೇ' ಮಂಥನಕ್ರಿಯೆ ನಡೆದ ಸಾಂಕೇತಿಕ ವರ್ಣನೆ ಅಭ್ಯಸನೀಯವಿದೆ, ಇದಕ್ಕೂ ಮುಂಚಿನ ಸೂಕ್ತದಲ್ಲಿ 'ಕುಮಾರ' (ದಕ್ಷಿಣಾಮೂರ್ತಿ) ಯಮನಲ್ಲಿ ಬಂದಿದ್ದಾನೆ! ಉಪನಿಷತ್ತಿನಲ್ಲಿ ಬರುವ ಕಠದ ಕುಮಾರ ಯಮನಲ್ಲಿ ಹೋದ ವರ್ಣನೆ. ಗೀತೆಯ ಪೂರ್ವಭಾವಿಯಾದ ಚಿತ್ರ; ಅಲ್ಲದೆ ನಾರ-ದ ಮತ್ತು ಸನತ್‌ಕುಮಾರ ಈ ಚಿತ್ರವೂ ವಿಮರ್ಶಾರ್ಹವಿದೆ![೧೦] 'ಸನತ್' (perennial) ಕುಮಾರನೀತ! 'ಸ್ಕಂದಃ ಇತ್ಯಾಚಕ್ಷತೇ' ! ಹನಿಯವವ (dropper) ವೇದದ 'ದ್ರಪ್ಸಃ ಕೃಷ್ಣಃ' ಹೋಲಿಸಿರಿ.

ಸೋಜಿಗ ಪಡಬೇಕಾದ ಕಾರಣವಿಲ್ಲ, ಗ್ರೀಕ್ ಸಂಸ್ಕೃತಿಯಲ್ಲಿಯೂ ಈ 'ಪುರುಷ-ಯೋಗ' ಬೆಳೆದಿತ್ತೆಂದು ಹೇಳಲಾಗುತ್ತದೆ. 'ಪ್ಲೆಟಾನಿಕ್ ಲವ್' ಪ್ಲೇಟೋನ ಸಂಪ್ರದಾಯವೂ ಈ ಆರೋಪಕ್ಕೆ ಒಳಗಾಗಿದೆ.

ನಾದಯೋಗಿ ಸಾಂಖ್ಯ ಪೈಥಾಗೊರಾಸನ ಪ್ರಭಾವ ವೈಶಿಷ್ಟ್ಯ. ಶಿಪಿವಿಷ್ಟರೂಪ ವಿಷ್ಣುಭಕ್ತನೂ ಊರ್ಧ್ವ ಬುಧ್ನ್ಯ-ಸ್ತೂಪ (ವೃಕ್ಷ) ವರುಣನ ಪುತ್ರನೂ ಋಕ್ಷ=ಕರಡಿಯ ಸ್ವರೂಪನೂ ಆದ (ವಸಿಷ್ಠ) ದಕ್ಷಿಣ ಕಪರ್ದನಂತೆ, ನಾದಯೋಗಿ ಸಂಖ್ಯಾಶಾಸ್ತ್ರ ಪ್ರವೀಣ ಪೈಥಾಗೊರಾಸನೂ ಪುರಿ-ಶಯೋ: ದಶಾಂಗುಲದೇವನ ಪರಮ ಭಕ್ತ. ಇವರಿಬ್ಬರೂ ಪವಾಡ ಪುರುಷರೇ, ಯಾತು-ವಿದ್ಯಾಪ್ರವೀಣರು. ಆದರೆ, ಭಾರತದಲ್ಲಿ ದಕ್ಷಿಣ ಕಪರ್ದನಿಂದ ಪ್ರಚಲಿತ ದಿವ್ಯಾಧ್ಯಾತ್ಮವು, 'ನಿಸ್ತ್ರೈಗುಣ್ಯೋ ಪಥಿ ವಿಚರತಾಂ ಕೋ ವಿಧಿಃ ಕೋ ನಿಷೇಧಃ' ಸ್ವರೂಪದ ಅಸಾಮಾಜಿಕ ಜೀವನ ರೀತಿಯಲ್ಲಿ ಪರಿಣಮಿಸಿತು. 'ನಮೇ ಅಸ್ತಿ ಕರ್ತವ್ಯಂ' ಎಂದು ಭಗವಂತನೇ ಸಾರಿದ್ದು ಉಂಟು. ಹಿಪ್ಪಿಗಳನ್ನು ಸೃಷ್ಟಿಸಿದ ಭಾರತೀಯ ದಿವ್ಯಾಧ್ಯಾತ್ಮವನ್ನು 'ಹುಚ್ಚುಮದ್ದು' (ಮಾಟ) ಎನ್ನಬಹುದಾದಂತೆ, ಪೈಥಾಗೊರಾಸ ಪ್ರಣೀತ ಗ್ರೀಕ್‌ಸಂಸ್ಕೃತಿಯೊಳಗಿನ ದಿವ್ಯಾಧ್ಯಾತ್ಮವು ಮೆಚ್ಚುಮದ್ದು (ಮಾಟ) ಆಗಿದೆ ಎಂದು ಹೇಳಬಹುದು.

ಇವನು ಧಾರ್ಮಿಕ ಸಮಯಾಚಾರಗಳನ್ನು (acusmatic) ರೂಪಿಸಿ ಜನಸಾಮಾನ್ಯರ ಮನಗಳನ್ನು ಪವಾಡ ಚಮತ್ಕಾರಗಳ ಆಮಿಷದಿಂದ ಸೂರೆಗೊಂಡಂತೆ, ಗಣಿತಶಾಸ್ತ್ರದ (mathematic) ಮೂಲಕ ಪ್ರಾಜ್ಞರು ಮೇಧಾವಿಗಳು ಎಂಬವರಿಗೆ ಹುಚ್ಚು ಹಿಡಿಸಿದ್ದಾನೆ. ಇದರಿಂದಾಗಿ, ಒರ್ಫಿಕ್ ಸಂಪ್ರದಾಯ, ಡೈಯೊನಿಸನ್ ಪಂಥಗಳ ಉತ್ತರಾಧಿಕಾರಿಯಾದ ಕ್ರೈಸ್ತಪಂಥೀಯ ಗುರುವರ್ಗದಲ್ಲಿ ಸಾಮಾಜಿಕ ಸಂಪರ್ಕದ ಬಗೆಗಿನ ಉತ್ಕಟ ಭಾವನೆಯು ಉಳಿದು ಬಂದಿದೆ. ಕ್ರೈಸ್ತಗುರು ವರ್ಗದಲ್ಲಿ ಹೆಸರಾದ ಗಣಿತಶಾಸ್ತ್ರ ಸಂಶೋಧಕರು ಕಾಣಸಿಕೊಂಡ ಈ ಅಪೂರ್ವ ದೃಶ್ಯವು ಭಾರತೀಯ ಪರಂಪರೆಯಲ್ಲಿ ಎದ್ದು ಕಾಣುವುದಿಲ್ಲ. ಪೈಥಾಗೊರಾಸನಿಂದ ಪ್ರಾರಂಭವಾಗಿ ಅವನ ಪಂಥದ ಮೂಲಕ ಹೆಚ್ಚಿನ ಶೋಧಗಳಿಂದಾಗಿ ಪ್ರವರ್ಧಮಾನ ಸ್ಥಿತಿಗೆ ಬಂದ ಗಣಿತ : ಸಂಖ್ಯಾಶಾಸ್ತ್ರದಿಂದಾಗಿ, ಅವರು ಎಣಿಸಿದ್ದಕ್ಕಿಂತಲೂ ಅಪಾರವಾಗಿ ಭೌತಶಾಸ್ತ್ರದ ನಾನಾ ಶಾಖೆಗಳ ಜ್ಞಾನಕ್ಷಿತಿಜವು ವಿಸ್ತಾರವಾಗಿದೆ ಇದು ಹೀಗೆ ಉಪಕಾರವಾಗಿ ಪರಿಣಮಿಸಿದ್ದು, ಆ ನಾದಯೋಗಿಯ ಅಪೂರ್ವ ಪವಾಡಸಿದ್ಧಿಯೇ ಸರಿ.

ಪೈಥ್ಯಾಗೊರಾಸನಿಂದ ಪ್ರಾರಂಭವಾದ mathematic ಇದು ಶುದ್ಧ ಶಾಸ್ತ್ರೀಯ ಭೂಮಿಕೆಯ ಆಧಾರದ ಮೇಲೆ ನಿಂತಿದೆ, ಎಂಬ ಗ್ರಹಿಕೆ ಪಾಶ್ಚಾತ್ಯವಿದ್ವಾಂಸರಲ್ಲಿ ಬೇರೂರಿದೆ! ಪೈಥಾಗೋರಾಸ ಸಂಪ್ರದಾಯದ acusmatic ಧಾರ್ಮಿಕ ಶ್ರದ್ಧೆಯ ಸಾಕ್ಷಾತ್ಕಾರ, ಅಂತರ್‌ವಾಣಿ (Revelation) ದೇವತಾ ಆವೇಶ (Enthusiasm) ಇಂತಹ ನಂಬುಗೆಗಳನ್ನು, Mathematic ಗಣಿತಶಾಸ್ತ್ರದಿಂದ ಆಕರ್ಷಿತ ಅರಿಸ್ಟಾಟಲ್ ಪ್ರಭೃತಿಗಳು

ಸಂಪೂರ್ಣವಾಗಿ ತಿರಸ್ಕರಿಸುತ್ತಿರುವುದು ಕಾಣುತ್ತದೆ! ಆದರೆ, ಪೈಥಾಗೊರಾಸನ ಸಂಖ್ಯಾಗಣಿತದ ಮೂಲ ಶ್ರದ್ಧೆಯೇ ಧಾರ್ಮಿಕ ಸ್ವರೂಪದ್ದಾಗಿದೆ! ಸಂಖ್ಯಾಗಣಿತದಲ್ಲಿ ಪವಾಡ ಚಮತ್ಕಾರಕ್ಕೆ ಪೋಷಕವಾಗುವ ಅಂತಃಶಕ್ತಿಯು ಹುಟ್ಟಿನಿಂದಲೇ ಉಂಟೆಂಬುದನ್ನು ಪಾಶ್ಚಾತ್ಯ ಭೌತಶಾಸ್ತ್ರಜ್ಞರು ಸಂಪೂರ್ಣ ದುರ್ಲಕ್ಷಿಸುತ್ತಿದ್ದಾರೆ! ಈತನ ಅಂಕ ಶಾಸ್ತ್ರದಿಂದ ಭೌತಶಾಸ್ತ್ರ-ಶೋಧಗಳಲ್ಲಿ ಅಂತರ್-ದೃಷ್ಟಿ insight ದೂರೆಯುತ್ತಿದೆ. ಇದೇ ಮೇರೆಗೆ, ಮಾನವರ ಭೌತದೇಹಗಳ ಚಲನವಲನ ಹಾಗೂ ಜೀವನ ರೀತಿಯನ್ನು ಗ್ರಹಿಸಿಕೊಳ್ಳುವುದಕ್ಕೂ ಪ್ರಯೋಜನಕಾರಿಯಾದ ಫಲಜ್ಯೋತಿಷ್ಯ ಶಾಸ್ತ್ರವನ್ನು ರೂಪಿಸಿರುವ ಶ್ರೇಯಸ್ಸೂ ಸಾಂಖ್ಯ ನಾದಯೋಗಿ ಈ ಪವಾಡಿಗೇಸಲ್ಲಬೇಕು.

ಸಾಂಖ್ಯ ಪೈಥಾಗೊರಾಸ 'ದಶ'ರೂಪ ಆದಿದೇವನ ಭಕ್ತ. ಈ ಮೂಲಸ್ಥಾನ ದೇವರೇ ಸಂಖ್ಯಾರೂಪನು. ಆದಕಾರಣ ಪೈಥಾಗೊರಾಸನ ಶ್ರದ್ಧೆಯಂತೆ

> 'Things are numbers; things 'imitate'; or 'represent' numbers;
> the elements of numbers are the elements of things'

ಸಂಖ್ಯಾರೂಪ ಪುರುಷನಿಂದಾದ ಭೌತವಸ್ತುಮಾತ್ರಗಳು ಅಂಕೆಯೊಡನೆ ಬದ್ಧವಾಗಿವೆ. ವಸ್ತು ಮಾತ್ರಗಳು, ಜನರನ್ನು=ಅಂಕೆ-ಸಂಖ್ಯೆಯನ್ನು ಅನುಕರಿಸುತ್ತವೆ, ಇಲ್ಲವೆ ಪ್ರತಿನಿಧಿಸುತ್ತವೆ - ಎಂಬ ಈ ಶ್ರದ್ಧೆಯನ್ನು, ಅರಿಸ್ಟಾಟಲ್ ತುಂಬ ಆಕ್ಷೇಪಿಸುತ್ತಾನೆ. ಅಂಕೆ ಸಂಖ್ಯೆ ಅಮೂರ್ತ, ತಾತ್ವಿಕಪಾತಳಿ ವಸ್ತುಮಾತ್ರಗಳು ಮೂರ್ತ ಭೌತ ಪಾತಳಿ. ಆದುದರಿಂದ, ಅಂಕೆಗಳಿಗೂ ವಸ್ತುಮಾತ್ರಗಳಿಗೂ ಸಂಬಂಧವನ್ನು ಕಲ್ಪಿಸಲಾಗದು, ಎಂಬ ಈ ಆಕ್ಷೇಪಕ್ಕೆ ಪೈಥಾಗೊರಾಸನ ಶ್ರದ್ಧೆಯ ಸ್ವರೂಪವನ್ನು ಲೆಕ್ಕಿಸಿದಲ್ಲಿ ಅವಕಾಶವೆ ಉಳಿಯಲಾರದು.

ಪಿಂಡ (microcosm) ಮತ್ತು ಬ್ರಹ್ಮ-ಅಂಡ (macrocosm) ಇವೆರಡರ ಐಕ್ಯಸಿದ್ಧಿಯಲ್ಲಿ ಮೂರ್ತ (ಪಿಂಡ), ಮತ್ತು ಅಮೂರ್ತ (ಬ್ರಹ್ಮಅಂಡ) ಇವೆರಡರಲ್ಲಿ ಅಂತರವೇ ಉಳಿಯುವುದಿಲ್ಲ. ಪಿಂಡ-ಬ್ರಹ್ಮಾಂಡೈಕ್ಯವನ್ನು ಶಕ್ಯವಾಗಿಸುವ ಮಾಧ್ಯಮವನ್ನು, ಉಭಯ ಲೋಕಗಳನ್ನು ಸಂಧಿಸುವುದನ್ನು 'symbol' ಎಂದು ಹೆಸರಿಸಲಾಗಿದೆ. ಪೈಥಾಗೊರಾಸನ 'acusmata' ಇದಕ್ಕೆ 'symbol' ಎಂಬ ಇನ್ನೊಂದು ಹೆಸರು-ಮೂಲದಲ್ಲಿ ಮಂತ್ರ. ಮಾಟ ಶಕ್ತಿಯ ಅರಿವು ಮೂಡಿದ್ದು Symbol ದಿಂದಲೇ. 'symbol' ಇದನ್ನು 'ಸಂಕೇತ' ಎಂದು ಭಾಷಾಂತರಿಸ ಲಾಗುತ್ತಿರುವಲ್ಲಿ ಜ್ಞಾನದ ಕ್ಷಿತಿಜದಲ್ಲಿ ಆಗಿರುವ ಸಂಕೋಚದ ಅರಿವು ಭಾರತೀಯರಲ್ಲಿ ಇನ್ನೂ ಮೂಡುತ್ತಿಲ್ಲ ದುರ್ದೈವದ ಸಂಗತಿ!

ಪಿಂಡ-ಬ್ರಹ್ಮಾಂಡೈಕ್ಯವು ವೈಯಕ್ತಿಕ ಅನುಭವದ ಪಾತಳಿ. ಇದು ಶುದ್ಧ ಭೌತಪಾತಳಿ : ಏಕೆಂದರೆ ಪುಲ್ಲಿಂಗ=(ಲಿಂಗದೇಹ, ಭೂಮಿ)=ಇಂದ್ರಿಯದ ಪಾತಳಿ. ಈ ಪಿಂಡದ 'ತತ್' ಮಯತೆಯಲ್ಲಿ ಅರಿಕೆಗೆ ಬರುವ ಜ್ಞಾನಕ್ಕೆ ಇಂದ್ರಿಯ ಸಂವೇದನೆಗಳೇ ಕಾರಣವಿರಬಲ್ಲವು. ಆದುದರಿಂದ, ಪಿಂಡ ಬ್ರಹ್ಮ ಅಂಡರೂಪ (ಭೂಃ-ಭುವ)ಃ ಈ ಎರಡೂ ಪಾತಳಿಗಳ ನಡುವಣ ಸಂಬಂಧ ಸೂಚಕ 'ಮಾಧ್ಯಮ' (symbol). ಇದು ಭೌತಪಾತಳಿಯದೇ ಇರಬಲ್ಲುದು. ಇದರ ಮೂಲಕ ಲಭಿಸುವ ಜ್ಞಾನವು ಸ್ಪರ್ಶೇಂದ್ರಿಯ ಪಾತಳಿಯದು. ಸೂಕ್ಷ್ಮ ಸಂವೇದನಾತ್ಮಕ ಪಾತಳಿಯು ಸ್ಪರ್ಶೇಂದ್ರಿಯ ಜನ್ಯಜ್ಞಾನವೂ ಇದರಲ್ಲಿ ಒಳಗೊಳ್ಳುತ್ತದೆ. ಇದನ್ನು ಇಂದ್ರಿಯಗಳ ಪಾತಳಿಯ ಅಭಿಜಾತ [immanent] ಅನುಭವ ಎನ್ನಬಹುದು.

ಇದು ಹಿರಾಕ್ಲಿಟಸನ್ 'Logos'. ಗ್ರೀಕ್ ಸಂಸ್ಕೃತಿಗೆ ಆತನಿಂದ ಸಂದ ಅಪೂರ್ವ ಕಾಣಿಕೆ. ಭಾರತೀಯ ಪರಂಪರೆಯ 'ಪ್ರಜ್ಞಾನೇತ್ರ,' ಇದನ್ನು ತೀರ ಸ್ಥೂಲವಾಗಿ 'Logos' ಎನ್ನಬಹುದು, ಆದರೆ ಇಲ್ಲಿ ಒಂದು ಮೂಲಭೂತ ಕೊರತೆಯಿದೆ. ಹಿರಾಕ್ಲಿಟಸನು ಇದರ ಬಗೆಗೆ ಹೇಳಿರುವ ಮಾತು ಅಭ್ಯಸನೀಯವಿದೆ.

> 'Listening not to me but to the Logos; it is wise to agree that all things are one",...."One must follow what is common, but although the Logos is common, must not men live as if they had a private understanding of their own"[೧೧]

'ಲೋಕದ ಅಂತರ್‌ವಾಣಿ'ಗೆ ಕಿವಿಗೊಡಲು ಹೇಳಲಾಗಿದೆ. ಇದು ಸ್ಪರ್ಶಜನ್ಯ ಜ್ಞಾನದ ಪಾತಳಿ. ಈ ಅಂತರ್‌ವಾಣಿ (Logos) ವೈಯಕ್ತಿಕ. ಇದು ತನ್ನದೇ Logos, ಎಂಬಲ್ಲಿ ಬುವಾಬಾಜಿ, ಭೂಳಿತನಕ್ಕೆ, ಇಂಬು ದೊರೆಯುತ್ತದೆ. ಈ Logos ಕ್ಕಿಂತ ಪ್ರಜ್ಞಾನೇತ್ರವು ಬೇರೆ. 'ಪ್ರಜ್ಞಾನೇತ್ರೋ ಲೋಕಃ, ಎಂಬಲ್ಲಿ ಈ ಪ್ರಜ್ಞೆ ಪ್ರಕಾಶತತ್ವದ ಪಾತಳಿಯದಾಗಿದೆ. ಇದು 'ವ್ಯಕ್ತಿ'ಯ ಸೊತ್ತಲ್ಲ! ಲೋಕದ ಪ್ರಜ್ಞೆಗೆ ವ್ಯಕ್ತಿಯ ಪ್ರಜ್ಞೆ ಸುಸಂಗತವಿರಬೇಕು. ಭಾರತೀಯ ಪರಂಪರೆಯಲ್ಲಿ ಪೈಥ್ಯಾಗೊರಾಸ ಪಂಥೀಯ 'Symbol' (ಮಾಧ್ಯಮ) ಇದಕ್ಕೆ ಸರಿದೊರೆಯಾದ ಶಬ್ದಪ್ರತಿಮೆ ರೂಢಿಯಲ್ಲಿ ಉಳಿದು ಬರಲಿಲ್ಲ. ಮೈಯಲ್ಲಿ ಆವೇಶವಾಗಿ, ಪಿಂಡ ಬ್ರಹ್ಮಾಂಡೈಕ್ಯದ ಪಾತಳಿಯ ಜ್ಞಾನವನ್ನು ಜನಕ್ಕೆ ಅರುಹುವ 'ದೇಹಾರ'ಗಳು ದೇವಾಲಯಗಳಲ್ಲಿ ನಡೆಯುತ್ತಿದ್ದವು. ಋಗ್ವೇದದಲ್ಲಿ ಈ ಮಾದರಿಗಳು ಇವೆ. ಸಾಯಣರು ಇಲ್ಲಿ 'ಮಧ್ಯಮಾ-ವಾಕ್' ಎಂಬ ಪದಪ್ರಯೋಗ ಮಾಡುತ್ತಾರೆ. ಪುರಾತನ ಗ್ರೀಕ್‌ಪರಂಪರೆಯಲ್ಲಿ ಡೆಲ್ಫಿ ಮುಂತಾದ ಕಡೆಗೆ ನಡೆಯುತ್ತಿದ್ದ 'ದೇಹಾರ'ದ ನಡವಳಿಯಲ್ಲಿ, ಮೈಯಲ್ಲಿ ಆವೇಶವಾಗುವ ಕುಮಾರಿಯರು ಇರುತ್ತಿದ್ದರು. ಋಗ್ವೇದದ ವಾಗಾಂಭೃಣೀ ಸೂಕ್ತವು ಆಗಿನ 'ದೇಹಾರ'ದ ನಡೆವಳಿಯ ಒಂದು ಮಾದರಿಯಾಗಿದೆ. ಮೈಯಲ್ಲಿ ಆವೇಶವಾಗುವ 'ಕುಮಾರಿ' ಸಂಪ್ರದಾಯವು ಭಾರತದಲ್ಲಿ ಇಂದಿನ ವರೆಗೂ ಉಳಿದದ್ದನ್ನು ಕೆಲವಡೆಗಳಲ್ಲಿ ಕಾಣಬಹುದು.

ಆದರೆ, ಭಾರತೀಯ ಪುರಾತನ ಪರಂಪರೆಯಲ್ಲಿ, ಈ ಪಿಂಡ, ಬ್ರಹ್ಮಾಂಡೈಕ್ಯದ ಪಾತಳಿಯ ಮಾಧ್ಯಮಾವಾಕ್-ಮೂಲಕವಾಗಿ ಲಭಿಸುವ ಜ್ಞಾನವು ಕೆಳಗಣಮಟ್ಟದ್ದು, ಎಂಬ ನಂಬುಗೆ ಇಂದಿಗೂ ಉಳಿದಿದೆ.! ಅಂತರ್‌ವಾಣಿಯು (ಕಿವಿದೆರೆಗೆ ಬಂದು ತಾಗಿದಂತೆ ಎನಿಸುವ) 'ಶಬ್ದ' ರೂಪದ್ದು, ಇದನ್ನು 'ಕರ್ಣಪಿಶಾಚಸಿದ್ಧಿ' ಎಂದು ಹೆಸರಿಸಲಾಗಿದೆ. 'ಅಂತರ್-ವಾಣಿ'ಗಿಂತ 'ನೇತ್ರ'ದ ಮೂಲಕ, ಹೊಳೆದಂತೆ ಎನಿಸಿ ಆಗುವ ಜ್ಞಾನವನ್ನು 'ಸಂಕೇತ' ಪಾತಳಿಯದು, ಎಂಬ ಬಗೆಯಲಾಗುತ್ತದೆ. Symbol ಭೂಃ (ಪಿಂಡ) ಭುವಃ (ಬ್ರಹ್ಮ ಅಂಡ) ಇವೆರಡರ ಸಂಬಂಧ ಜೋಡಿಸುವ ಮಾಧ್ಯಮ. ಇದು ಸ್ತ್ರೀ!=ಸೇತು, ನೌಕೆ ಎನಿಸಿತ್ತು, ಹಿಂದಕ್ಕೆ, ಈಗ Symbol ಇಂಥ 'ಮಾಧ್ಯಮ' ಪ್ರತಿಷ್ಠೆಗೆ ಎರವಾಗಿದೆ. ಭೂಃ-ಭುವಃ ಇವೆರಡರ ಆಚೆಗಿನ 'ಸ್ವರ್' ಪಾತಳಿಯ ಮೇಲಣ, ಪ್ರಕಾಶ ಕಿರಣದ ಹೊಳವು 'ಸಂಕೇತ' ಎನಿಸುತ್ತದೆ.

ಈ ಹಿನ್ನೆಲೆಯಲ್ಲಿ, ಒರ್ಫಿಕ್‌ಪಂಥೀಯ ಪೈಥಾಗೋರಾಸನಿಂದ ಆದ ಸಾಂಸ್ಕೃತಿಕ ಸ್ಥಿತ್ಯಂತರವನ್ನು ಸುಲಭವಾಗಿ ಗ್ರಹಿಸಿಕೊಳ್ಳಬಹುದಾಗಿದೆ. ಈ ಮೊದಲು ಹೇಳಿರುವಂತೆ, ಮಾನವ ಜೀವನವಿಶ್ವದಲ್ಲಿ, ಭಾರತೀಯ ಪರಂಪರೆಯನ್ನು ಹೋಲುವ ಭೂಃ, ಭುವಃ ಮತ್ತ ಸ್ವಃ ಎಂಬ ಈ ಮೂರು ಪಾತಳಿಗಳ ಹೋಲಿಕೆಯ ವಿಭಾಗತ್ರಯವು (triad) ಗ್ರೀಕ್‌ಸಂಸ್ಕೃತಿಯಲ್ಲಿ ಹೋಮರನ ಕಾಲದಿಂದಲೇ ಇತ್ತು.

> The sacredness of the number three meets us as early as Homer where a trinity of gods, Zous, Athene and Apollo are addressed in a single suplication."[೧೨]

ಆದರೆ, ಹೋಮರನ ಝೂಉಸ್, ಅಥೆನೆ ಸಂಬಂಧವು ಶಾಕ್ತಪಂಥೀಯ ದೇವತಾ ಪ್ರಕಾರವನ್ನು ಹೋಲುತ್ತದೆ. ಝೂಉಸನ ತಲೆಯಿಂದ ಹುಟ್ಟುವ ಅಥೆನೆ, ಇಂದಿನ ಋಗ್ವೇದದ ವಾಗಾಂಭೃಣಿಯನ್ನು ಸಂಪೂರ್ಣ ಹೋಲುತ್ತಾಳೆ. ಝೂಉಸ್ (ದ್ಯೌಃ) ಇದು ಮೂಲ ಪ್ರಕಾಶತತ್ವದ ದೈವತವು! ಸ್ವರ್‌ಪಾತಳಿಯಿಂದ, ಕೆಳಗೆ ಲೈಂಗಿಕ ಪಾತಳಿಯ ಮೇಲೆ ಬಂದಿದೆ! ಇಲ್ಲಿ ಮೂರು ಪಾತಳಿ ಉಳಿದಿಲ್ಲ!

ಆದುದರಿಂದ, ಹೋಮರನ ಕಾಲದಲ್ಲಿ ಭೂಃ-ಭುವಃ ಮತ್ತು ಸ್ವಃ ಈ ಮೂರು ಪಾತಳಿಗಳ ಅಸ್ಪಷ್ಟ ಸ್ಮೃತಿಯು ಎಂತೊ ಉಳಿದಿದ್ದರೂ ಗ್ರೀಕರು ಆಗಲೇ ಒರ್ಫಿಕ್ ಪಂಥದ ಪ್ರಭಾವಕ್ಕೆ ಒಳಗಾಗಿದ್ದರೆಂಬಲ್ಲಿ ಸಂದೇಹವಿಲ್ಲ. ಪೈಥಾಗೊರಾಸನ ಅಂಕೆಸಂಖ್ಯೆಗಳು ಒಳಗೊಳ್ಳುವ ದಿವ್ಯಪವಾಡ ಶಕ್ತಿಯ ಬಗೆಗಿನ ಶ್ರದ್ಧೆ ತತ್ಪೂರ್ವದಲ್ಲಿ ಹೋಮರ್ ಹೆಸಿಯೊಡ್‌ರ ಕಾಲದಿಂದಲೆ ಇದ್ದುದನ್ನು ಪಾಶ್ಚಾತ್ಯ ಸಂಶೋಧಕರೇ ಬೆಳಕಿಗೆ ತಂದಿದ್ದಾರೆ. ವಿಭಾಗತ್ರಯದ

[triad]ಶ್ರದ್ದೆಯಂತೆ ಸಪ್ತ [Seven]ಸಂಖ್ಯೆಯ ಶ್ರದ್ಧೆಯೂ ಪುರಾತನ ಗ್ರೀಕರಲ್ಲಿತ್ತು. ಇದು ಗ್ರೀಕ್‌ಸಂಸ್ಕೃತಿಗೂ ಮುಂಚಿನ ಹಂತದ ಕ್ಯಾನಾನ್ ಹಿಟೈಟ್ ಭಾಗದ ಯುರೋ-ಭಾರತೀಯ ಭಾಷಿಕರಲ್ಲಿ ಇತ್ತು. The seven motif as we shall see permeats the text....[೧೩]

ಈ ಭಾಗದಿಂದಲೇ ಈ ವಲಸೆಗಾರರ ಒಂದು ಶಾಖೆ ಗ್ರೀಕಿನ ಕಡೆಗೂ ಇನ್ನೆರಡು ಶಾಖೆಗಳು ಭಾರತ ಮತ್ತು ಇರಾಣಿನ ಕಡೆಗೂ ಹೋಗಿರಬೇಕೆಂದು ತಜ್ಞರ ಅಭಿಪ್ರಾಯವಿದೆ. ಋಗ್ವೇದದಲ್ಲಿ 'ಸಪ್ತ' ಮಾತೆಯರು ಸ್ವಸಾರರು ಸಿಂಧುಗಳು ಮುಂತಾದವರು ಉಂಟು. ಋಗ್ವೇದಂತೆ ಗ್ರೀಕಿನಲ್ಲಿಯೂ 'ಸಪ್ತರ್ಷಿ'ಗಳು 'Seven Sages' ಇದ್ದಾರೆ! ಹೆಸರು ನಿಶ್ಚಿತವಿಲ್ಲ! 'ಪ್ರಾಣಾಃ ವೈ ಋಷಯಃ ಪ್ರಾಣೋವಾ ಅಂಗಾನಾಂ ರಸಃ' ಈ ವೇದಕಾಲೀನ ಶ್ರದ್ಧೆಯು ಗ್ರೀಕ್ (ಪೈಥಾಗೋರಾಸ ಮುಂತಾದ) ಪುರಾತನಲ್ಲಿಯೂ ಇತ್ತು. ಇದನ್ನು (ಭೌತ) 'ವಿಶ್ವಸ್ಯ ನಿಃಶ್ವಸಿತಂ' (Breath) ಅಪೌರುಷೇಯ ಪ್ರೇರಣೆ ಎಂದು ಬಗೆಯಲಾಗಿರುವಲ್ಲಿ ಗ್ರೀಕರೂ ಭಾರತೀಯರೂ ಪ್ರಕಾಶ ಪಾತಳಿಗೆ ವಂಚಿತರಾಗಿದ್ದಾರೆ. ಇದು ಭೂತ : Daemon ಶಕ್ತಿ!

ಈ ವಿವರಣೆಯ ಮೂಲಕ ಹೊರಪಡುವ ಅಂಶವು ಇಷ್ಟು: ಭಾರತದಂತೆ ಗ್ರೀಕ್ ಪುರಾತನ ಸಂಸ್ಕೃತಿಯಲ್ಲಿಯೂ ವಿಭಾಗತ್ರಯ ಸೂಚಕ ಪಾತಳಿಗಳು ಇದ್ದುವು. ಆದರೆ 'ಸಪ್ತ' ಸಂಖ್ಯೆಯ ಬಗೆಗಿನ ಶ್ರದ್ಧೆಯು ಇನ್ನೊಂದು ಸಂಪ್ರದಾಯದ್ದು! ಇಂದಿನ ಹಾರುವರೆಂಬವರ ಆಹ್ನಿಕಗಳಲ್ಲಿ ಸ್ಮರಿಸಿಕೊಳ್ಳಲಾಗುವ ವ್ಯಾಹೃತಿಗಳ ಸಂಖ್ಯೆ ಏಳು! ಮೂರನ್ನು ಹಿಮ್ಮೆಟ್ಟಿಸಿ ತುರೀಯಾ (ಚತುರ್ಥೀ) ಪಾತಳಿಯನ್ನು ಲೋಕ-ಪ್ರಿಯವಾಗಿಸಿದುದರ ಸೂಚನೆ ಋಗ್ವೇದದಲ್ಲೆ ಇದೆ. 'ತುರೀಯೇಣ ಬ್ರಹ್ಮಣಾಗೂಳ್ಹಂ ಸೂರ್ಯಂ ಅವಿಂದನ್ ಅತ್ರಿಃ" ಅತ್ರಿಯ-ಆತ್ರೇಯ ಗುರು ದತ್ತ ಪಂಥದ ಮೂಲಬೇರು ಇಂದಿನ ವೇದದಲ್ಲಿದೆ! ನಾಥಸಿದ್ಧರ ಮೂಲ ಗುರುಪರಂಪರೆಯಿದು. ಸಂಸಾರ ಸ್ಮಶಾನಸದೃಶವೆಂದು ಮೈಗೆ ಭಸ್ಮಬಳಿದುಕೊಂಡು ತನ್ಮಯಾನಂದಿಗಳಂತೆ, ಬಾಹ್ಯಪ್ರಜ್ಞೆಗೆ ಎರವಾಗಿ ತಿರಿಯುವ ವೈಶಿಷ್ಟ್ಯವು ಇವರದು.

ಗ್ರೀಕ್‌ಸಂಸ್ಕೃತಿಯಲ್ಲಿ ಪೈಥಾಗೊರಸನ ಕಾಲಕ್ಕೆ (ಕ್ರಿ. ಪೂ. ೫೭೦) ಜೀವನಸ್ಥ ಪಿಂಡ (limit) ಮತ್ತು ಬ್ರಹ್ಮ-ಅಂಡ (unlimited) ಎಂಬ ಎರಡೇ ಪಾತಳಿಗಳ ಬಗೆಗಿನ ಶ್ರದ್ಧೆಯು ಪ್ರಭಾವಶಾಲಿಯಾದದ್ದು ಸರ್ವಮಾನ್ಯವಿದೆ! ಇವನು ತತ್ಪೂರ್ವದ 'triad unit' ಮಾನದಂಡ ಬಿಟ್ಟು dyad [tetrad] ಮಾನದಂಡ ಲೋಕಪ್ರಿಯವಾಗಿಸಿದನು! ಭಾರತೀಯ ಸಂಪ್ರದಾಯದಲ್ಲಿ ಚಾಂದ್ರಪಂಥೀಯ ದಕ್ಷಿಣಾ ಸಹಮೂರ್ತಿ ಪೂಜಕ ದಕ್ಷಿಣಕಪರ್ದ ವಸಿಷ್ಠನ ಪರಂಪರೆಯಲ್ಲಿ, ಹೊತ್ತು ಬಂದಂತೆ ಪರಿಭಾಷೆ ಬದಲಿಸುವ ತಂತ್ರದಿಂದಾಗಿ, ಇನ್ನೂ ಹೆಚ್ಚಿನ ಕಣ್ಕಟ್ಟಿನ ಸಂದಿಗ್ಧತೆ ತಲೆದೋರಿದೆ. ದ್ವಾ ವೇವ ಬ್ರಹ್ಮಣೋ ರೂಪೇ ಮೂರ್ತಂ ಅಮೂರ್ತಂ ಚ ಎಂಬ ಸ್ಪಷ್ಟ ನಿರ್ದೇಶಗಳಿವೆ. ಆದರೆ, ಭೂಃ (ಮೂರ್ತ) (ಭುವಃ ಅಮೂರ್ತ) ಈ ಹೆಸರು ಯೋಜಿಸದೆ 'ತುರೀಯಾ' 'ಮಹಾಚಮಸ್ವ' ....ಮಹಃ, ಜನಃ, ತಪಃ, ಸತ್ತ್ಯ ಎಂಬೀ ಬಗೆಯಲ್ಲಿ ಭುವಃ ಪಾತಳಿಯನ್ನು ನಾನಾ ನಾಮಾಂತರಗಳಿಂದ ಸೂಚಿಸಲಾಗಿದೆ! ಆದರೆ ಪೈಥ್ಯಾಗೊರಾಸನಲ್ಲಿ ಈ ಮಟ್ಟದ ಕಪಟನಾಟಕವು ಇಲ್ಲ. ಇಲ್ಲಿ Limit [ಪಿಂಡ] ಮತ್ತು Unlimited [ಬ್ರಹ್ಮ-ಅಂಡ] ಎಂಬ ಪರಿಭಾಷೆಗೆ ಅಂಟಿಕೊಂಡಿದ್ದು ಕಾಣುತ್ತದೆ.

ಆದರೆ ಇಲ್ಲಿಯ ಕಪಟನಾಟಕ ತಂತ್ರದ ಬಗೆಯೂ 'ಶಾಸ್ತ್ರೀಯ' ವೇಷಧರಿಸಿದ್ದು! ಗ್ರೀಕ್ ಸಂಸ್ಕೃತಿಯಲ್ಲಿಯೂ ಭಾರತೀಯ ಶಾಕ್ತಪಂಥೀಯ ಶ್ರದ್ಧಾಸ್ಥಾನಗಳೇ ನಾಮಾಂತರದಿಂದ ಉಂಟು. "ಆಪೋ ವಾ ಇದಂ ಅಗ್ರೇ ಆಸುಃ." ಥ್ಯಾಲೆಸ್ ಮುಂತಾದವರು ಈ ದಿವ್ಯ ಆಪ, 'ಅಗ್ನಿ', 'ವಾಯು' ಮುಂತಾದುವುಗಳ ಬಗೆಗಿನ ಶ್ರದ್ಧಾವಂತರಿದ್ದರೂ ಇವರೆಲ್ಲರಲ್ಲಿ ಅಪೂರ್ವವಾದ ಒಂದು ಸಮಾನ ಅಂತಃಪ್ರವೃತ್ತಿಯು ಕೆಲಸ ಮಾಡುತ್ತಿದೆ. 'ಆಪ' 'ಅಗ್ನಿ' ಮುಂತಾದ 'ದಿವ್ಯದೈವತ'ಗಳು ಎಂದರೂ ಇವು ವಿಶ್ವನಿಯಮಕ್ಕೆ ಒಳಗಾಗಿವೆ. ಆದರೆ, ನಮ್ಮಲ್ಲಿ ನೇತಿ ನೇತಿವಾದ, ಅಗಮ್ಯವಾದ ಬೆಳೆದಿದೆ! ಝೀಉಸನಿಗೂ ವಿಶ್ವನಿಯಮಕ್ಕೆ ತಲೆಬಾಗ ಬೇಕಾಗಿದೆ ಎಂಬ

ಗ್ರೀಕ್ ಪುರಾತನರ ಶ್ರದ್ಧೆಯು ಆಧುನಿಕ ವಿವಿಧ ಭೌತಶಾಸ್ತ್ರಗಳ ಶೋಧಗಳ ಹಿಂದಿನ ಪ್ರೇರಣೆಯಾಗಿದೆ. ಭಾರತೀಯ ಪುರಾತನ ವಿವಸ್ವನ್ ಮನುಸಂಪ್ರದಾಯದಲ್ಲಿ, ಗ್ರೀಕರಿಗೂ ಮುಂಚಿನಿಂದಲೇ, ಸ್ಪಷ್ಟವಾದ ನಿರ್ದೇಶವಿದೆ. ಈ ಪ್ರಪಂಚವು, (ಭೌತ, ಅಭೌತ) ಎಲ್ಲವೂ ಋತ ಸ್ವರೂಪೀ ವಿಶ್ವನಿಯಮಗಳ ಆಧಾರದಿಂದ ಅರಿಕೆಗೆ ಬರುವ ಸತ್ಯದ ಮೇಲೆ ನಿಂತಿದೆ. 'ಋತಂ ಚ ಸತ್ಯಂ ಚ ಅಭೀದ್ಧಾತ್' ಈ ಅಭಿಜಾತ (immanence) ಶಕ್ತಿಯಿಂದ ವಿಶ್ವವು ತುಂಬಿದೆ. ಮಾನವರಿಗೆ ವಿಶ್ವನಿಯಮ ಅರಿಕೆಗೆ ಬರುತ್ತದೆ. ಪುರಾತನ ಋತಸ್ವರೂಪೀ ಸತ್ಯವು ಸಾಮಾಜಿಕ ಜೀವನ ಪೇರಕ. ಅಹಃ ಸತ್ಯ. ಋಗ್ವೇದದೊಳಗಿನ ಈ ನಿಯಮವನ್ನು ನಿರುಪಯುಕ್ತವಾಗಿಸಿರುವ ತಂತ್ರಮಂತ್ರವನ್ನು ಒಬ್ಬ ಸಂಶೋಧಕನು ಬೆಳಕಿಗೆ ತಂದಿದ್ದಾನೆ. 'ನಿಯಮ' ಹಲವರ ಸಮಾಜದಲ್ಲಿ ಅಭಿಪ್ರೇತವಿದೆ. ಆದರೆ, ಇಂದಿನ ಋಗ್ವೇದದಲ್ಲಿ 'ಋತ'ದ ಅವಮೂಲ್ಯನವಾಗಿದೆ 'ವ್ರತ'ದ ಪ್ರತಿಷ್ಠೆ ಬೆಳೆಯುತ್ತದೆ! 'ವ್ರತ' ಇದು ಕೇವಲ ವೈಯಕ್ತಿಕ ಬಂಧನ, ತಾನಾಗಿ ಸ್ವೀಕರಿಸಿದ್ದು; ಪಾಪದ ಕಲ್ಪನೆ ಬೆಳೆದಂತೆ ವ್ರತದ ಹೆಚ್ಚಳವಾಯಿತು. ಇದರಿಂದ ವೈಶ್ವಾನರ ಪಾತಳಿಯ ಸಾಮಾಜಿಕ ಜೀವನರೀತಿ ಸಡಿಲಾಯಿತು. ಋತ: ಸತ್ಯದ ಶ್ರದ್ಧೆ ಉಳಿದು ಬಂದಿದ್ದರೆ, ಜೀವನ ವಿಶ್ವಸ್ಥ ಸರ್ವಕಾಲಿಕ ನಿಯಮಗಳನ್ನು ಗ್ರಹಿಸಿಕೊಳ್ಳುವ ಪ್ರಜ್ಞೆ [Nous] ನಮ್ಮಲ್ಲಿ ಜೀವಂತ ಉಳಿಯಬಹುದಿತ್ತು.

ಪುರಾತನ ಭಾರತ ಹಾಗೂ ಗ್ರೀಕ್‌ಸಂಸ್ಕೃತಿಗಳ ದುರಂತದ ಪ್ರಾರಂಭವು ಇಲ್ಲಿದೆ. ಜೀವನಸ್ಥ ಮೂರು ಪಾತಳಿಗಳ ಮೇಲಣ ಆಶಯದ ಪ್ರಜ್ಞೆ ನಷ್ಟವಾಗಿ, ಪಿಂಡ ಬ್ರಹ್ಮಾಂಡೈಕ್ಯದ ಲೈಂಗಿಕ ಪಾತಳಿಯಲ್ಲಿಯೇ ಕೃತಾರ್ಥತೆಯುಂಟೆಂಬ ಶ್ರದ್ಧೆ ಬೆಳೆದಿದೆ. ಈ ಉಭಯ ಸಂಸ್ಕೃತಿಗಳೇ ಏಕೆ? ಇದು ಇಡೀ ಮಾನವಸಂಸ್ಕೃತಿಯ ಅಧಃಪಾತಕ್ಕೆ ಆಮಂತ್ರಣವಾಯ್ತು. ಗ್ರಿಕಿನಲ್ಲಿ Individual emancipation ದಿಂದ ವ್ಯಕ್ತಿವಾದ=ನರ(ಳ) ಧರ್ಮ ಬೆಳೆಯಿತು ಪೈಥಾಗೋರಾಸನಿಗೆ Sophist ಎಂದರೂ ಸಾಕ್ರೆಟಿಸನಂತೆ 'ಮಾನವನ ಸಮಸ್ಯೆ' ಅವನ ಚಿಂತನದ ವಿಷಯವಾಗಿತ್ತು.

> "man" is to be understood as species or final in a collective sense and the term refers to men as a group (nation or tribe).

ಪೈಥಾಗೋರಾಸನ ಮಹಾವಾಕ್ಯದ ಮಾರ್ದನಿ ಲೋಕದಲ್ಲಿ ಇಂದಿಗೂ ಕೇಳ ಬರುತ್ತಿದೆ. "Man is the measure of all things....." ಈ ವಾಕ್ಯದ ಉತ್ತರಭಾಗವು ಸಂದಿಗ್ಧತೆಗಾಗಿ ಹೆಸರಾಗಿದೆ. ಹೆಸಿಯಾಡ್ಡನ ಕಾಲದಿಂದ ಒರ್‌ಫಿಕ್, ಬಳಿಕ ಪೈಥಾಗೋರಾಸ ಪಂಥೀಯ 'ನರ'ರ ಉದ್ಧಾರದ ರಾತ್ರೀ ಸಂಪ್ರದಾಯಗಳ ವಿಪರೀತ ಪರಿಣಾಮಗಳಿಂದಾಗಿ ನೈತಿಕಮಟ್ಟವು ಕೆಳಕ್ಕೆ ಬಂತು. Virtue is knowledge ಎಂಬ ಬೋಧೆಗಾಗಿ ಸೊಕ್ರೆಟೀಸನು ಮರಣದ ಶಿಕ್ಷೆಗೆ ಗುರಿಯಾದನು. ಪೈಥಾಗೋರಾಸನ ವಾಕ್ಯವು ನನಗೆ ಮೌಲಿಕವೆನಿಸುತ್ತಿರುವ ಕಾರಣವು ಬೇರೆಯೆ ಇದೆ. 'ಮಾನವನು ವಿಶ್ವದ ಮಾನದಂಡ' ಎಂಬ ಪೈಥಾಗೋರಾಸನಿಗೆ ಇಲ್ಲಿನರ [ಳ] ನು Individual ಅಭಿಪ್ರೇತವಿಲ್ಲ; ಇದು ನಿಜವಿದ್ದರೆ ಇಲ್ಲಿ ಪೈಥಾಗೋರಾಸನ ಪ್ರತಿಭೆ, ನರ [ಳ] ನ ಪಾತಳಿಯ-ಪಿಂಡ-ಬ್ರಹ್ಮಾಂಡಕ್ಕಿಂತಲೂ ಆಚೆಗಿನ ಇನ್ನೂ ಒಂದು ಪಾತಳಿಯನ್ನು ಗಮನಕ್ಕೆ ತಂದು ಕೊಡುತ್ತದೆ. ಈ ಹಿನ್ನೆಲೆಯಲ್ಲಿ ಪಿಂಡ-ಬ್ರಹ್ಮಾಂಡೈಕ್ಯ 'ನರ' ಪ್ರವೃತ್ತಿ ಪ್ರೇರಕ ಮತ್ತು ಸ್ವರ್ 'ಪಾತಳಿ ಮಾನವಧರ್ಮ' ಪ್ರೇರಕ, ಎಂದು ಹೊರಪಡುತ್ತದೆ ಇಲ್ಲಿ ವಿಶ್ವನಿಯಮವೊಂದನ್ನು ನೆನೆಯುವ ಆವಶ್ಯಕತೆಯಿದೆ.

ಮಾನವ ಜೀವನ-ವಿಶ್ವದ ನಿಸರ್ಗದಲ್ಲಿಯೇ ಮೂರು ಪಾತಳಿಗಳು ಇದ್ದುದು ನಿಜವಿದ್ದರೆ ಈ ಮೂರನ್ನು ತ್ಯಜಿಸಿ ಪಿಂಡ-ಬ್ರಹ್ಮಾಂಡೈಕ್ಯದ ಸಮವಾಯರೂಪ ಏಕಾತ್ಮಕ ಪಾತಳಿಯ 'ತತ್' ಮಯಾನಂದೀ ಬ್ರಹ್ಮನ್ ತತ್ವದಲ್ಲಿ ವಿಲೀನವಾಗುವಲ್ಲಿಯೇ ಜನ ಧನ್ಯತೆಯನ್ನು ತಾಳಿದರೂ ನರರುಗಳ ಗುರುವರ್ಗವು-ಪೈಥ್ಯಾಗೋರಾಸ ಪ್ರಭೃತಿಗಳು-ಕಡೆಗಣಿಸಿರುವರೆಂಬ ಮೂರನೆಯ ಪಾತಳಿಯು, ತನ್ನ ಅಸ್ತಿತ್ವದತ್ತ, ಒಂದಿಲ್ಲೊಂದು ಬಗೆಯಿಂದ, ಈ ನರ-ಮನುಜ ವರ್ಗದ ಗಮನವನ್ನು ತನ್ನತ್ತ ಸೆಳೆಯುತ್ತಿರಲೇ ಬೇಕಷ್ಟೆ? ನಿಜ. ಆದರೆ, ಪಿಂಡ-ಬ್ರಹ್ಮಾಂಡೈಕ್ಯದ

ಅನುಭಾವನ್ನೀವ ಭಗವಂತನೇ, ಈ ಲೋಕ-ತ್ರಯವನ್ನೆಲ್ಲ ವ್ಯಾಪಿಸಿದ್ದಾನೆ ಎಂದು ನಂಬಿರುವಲ್ಲಿ ಮೋಸವಾಗುತ್ತ ಬಂದಿದೆ. ಈ ಆ-ತ್ಮನ್-ಬ್ರಹ್ಮನ್ ಶಕ್ತಿ "ದ್ವೇವಾವ ರೂಪೇ ಮೂರ್ತಂ (ಭೂಃ) ಅಮೂರ್ತಂ" ಎಂದು ಉಪನಿಷತ್ತೇ ಹೇಳುತ್ತಿದೆ. ಗ್ರೀಕ್‌ಸಂಸ್ಕೃತಿಯಲ್ಲಿ ಪೈಥಾಗೊರಾಸ್ ಪಂಥದ ಪ್ರಭಾವಕ್ಕೆ ಪ್ಲೆಟೋನಂತಹವನೂ ಒಳಗಾದನು! ಸೊಕ್ರೆಟೀಸನನ್ನು ಗುರವೆಂದು ಸ್ವೀಕರಿಸಿದ ಪ್ಲೇಟೋ, ಮೃತ್ಯುಪೂಜಕ ಪೈಥಾಗೋರಾಸ ಪಂಥಕ್ಕೆ ಒಲಿದು ಗುರುದ್ರೋಹ ಬಗೆದಿದ್ದಾನೆಂದು, ಡಾಡ್ಸ್, ಕಾರ್ಲಪೊಪ್ಪರ್ ಪ್ರಭೃತಿಗಳು, ಪ್ಲೇಟೋನಿಂದಾದ ಅಕೃತ್ಯವನ್ನು ಬೆಳಕಿಗೆ ತಂದಿದ್ದಾರೆ. ಈ ಪ್ರಭಾವ ಇಷ್ಟು ಗಾಢವಿದ್ದರೂ, ಪಿಂಡ-ಬ್ರಹ್ಮಾಂಡದ ಆಚೆಗಿನ Nous ಪಾತಳಿಯ ಬಗೆಗಿನ ಅರಿವು, ಅನಾಗ್‌ಝೆಗೊರಾಸ, ಪೈಥಾಗೊರಾಸ್ ಇವರನ್ನು ಸೋಂಕದೆ ಇಲ್ಲ. ಭಾರತೀಯ ಪರಂಪರೆಯಲ್ಲಿ ಟಿಳಕರು ಗಣಿತಶಾಸ್ತ್ರ, ಮೆಚ್ಚಿದವರು, ಪರ್ಯಾಯದಿಂದ ಪೈಥ್ಯಾಗೋರಾಸನ ಪ್ರಭಾವಕ್ಕೆ ಬಿದ್ದವರು. ಗೀತೆಯೊಳಗಿನ ದಿವ್ಯಾಧ್ಯಾತ್ಮದ ಗತ್ತುಗಾರಿಕೆ ಅರಿಕೆಗೆ ಬರಲಿಲ್ಲ. ಆದರೂ ಹೈಕೋರ್ಟಿನಲ್ಲಿ, ಕೆರೆನೀರಿನ ಶಿಕ್ಷೆಯಾದಾಗ, ಅರುವತ್ತು ಸಮೀಪಿಸಿದ ಈ ವೃದ್ಧರು, ವಿಶ್ವಸ್ಥ ಶ್ರೇಷ್ಠ ನಿಯಮನ ಶಕ್ತಿಯನ್ನು ಸ್ಮರಿಸಿಕೊಂಡು, ನ್ಯಾಯಾಧೀಶನ ನಿರ್ಣಯಕ್ಕೆ ಬೆಲೆಯಿಲ್ಲ, ಎಂದು ಸಾರಿಹೇಳಿರುವಲ್ಲಿ ಋತ: ಸತ್ಯದ ಶ್ರದ್ಧೆಯ ತೇಜ ಹೊರ ಹೊಮ್ಮಿದೆ.

ಸ್ವರ್‌ಪಾತಳಿಯ ಸ್ವರೂಪ

ಭಾರತೀಯ ಪುರಾತನ ಪರಂಪರೆಯ 'ಸ್ವರ್' ಪಾತಳಿಯ ಪರ್ಯಾಯವೇ ಗ್ರೀಕ Nous ಅಥವಾ Noosphere ಆಗಿದೆ. ಶುದ್ಧ ತಾತ್ವಿಕ ಭೂಮಿಕೆಯಿಂದ ವಿಶ್ಲೇಷಿಸಿದಲ್ಲಿ, ಮಾನವ ಸಂಸ್ಕೃತಿಗೆ ಆಧಾರ-ಭೂತ ಪಾತಳಿಗಳ ಬಗೆಗೆ, ಇನ್ನೊಂದು ದಿಕ್ಕಿನಿಂದಲೂ ಖಾತ್ರಿಯಾಗಲಿದೆ. ಮಾನವ ಸಂಸ್ಕೃತಿಗೆ ಆಧಾರ ಭೂತ-

ಸ್ಥಲ : ಮಾನವ ಸಮಾಜದ ಸಮಷ್ಠಿ-ರೂಪ ಭೂಮಿ, ಈ ಭೌತಸ್ಥಲಕ್ಕೆ, ಗತಿಯನ್ನೀವ ಕಾಲ ತತ್ತ್ವ (ಸಮಷ್ಟಿಯ ಪ್ರಾಣಚೇತಸ) ಮತ್ತು ಪ್ರಜ್ಞಾಶಕ್ತಿಯೇ. ಸಂಸ್ಕೃತಿಯನ್ನು ರೂಪಿಸುವ ಮೂರನೆಯ ಪಾತಳಿ. ಜೀವನ ವಿಶ್ವದಲ್ಲಿ, ಭೌತಸ್ಥಲ (ಪಿಂಡ), ಭೌತಕಾಲ (ಅಂತರಂಗದ ಪ್ರಾಣಚೇತನ ಶಕ್ತಿ). ಇವೆರಡಲ್ಲದೆ, ಪ್ರಜ್ಞೆ, ಎಂಬ ಮೂರನೆಯ ಪಾತಳಿಯನ್ನು ಲೆಕ್ಕಿಸದಿದ್ದರೆ, ಈ ಮಾನವ ಪಾತಳಿಯ ಮೇಲಣ ಭಾಷೆ, ಸಂಸ್ಕೃತಿ, ದೇವರು, ಧರ್ಮ, ಶಾಸ್ತ್ರ, ಸಾಹಿತ್ಯ, ಕಲೆ, ಮುಂತಾದ ವಿವಿಧ ಜ್ಞಾನಕ್ಷೇತ್ರದ, ಇಂದ್ರಿಯಾತೀತ (Super Organic) ಆಗಿರುವ ಅಮೂರ್ತ ಪಾತಳಿಯ ವಾಸ್ತವಸತ್ಯದ (Reality) ಈ ಪ್ರತೀತಿಯ ಅನ್ವಯಾರ್ಥವಾಗಲು ಶಕ್ಯವಿಲ್ಲ. ನಾನಾ ದೇವತೆಗಳನ್ನು ಸಹ ರೂಪಿಸ್ಸಿದ್ದೂ ಪ್ರಜ್ಞೆಯೇ. ಆದಕಾರಣ ಪ್ರಜ್ಞಾರೂಪ ಪ್ರಕಾಶ ಅಥವಾ ಪ್ರಕಾಶರೂಪ ಪ್ರಜ್ಞೆ, ಇದೇ ದೇವರು; ದೇವತಾತತ್ತ್ವ ಆಗುತ್ತದೆ.

ಪೈಥಾಗೋಸನು Limit (ಪರಿಮಿತಿ) ಎಂಬ ಸಂದಿಗ್ಧ ಆಶಯದ ಪಾರಿಭಾಷಿಕ ಪದವನ್ನು ಬಳಸಿ ಮೋಸಕ್ಕೆ ಇಂಬುಗೊಟ್ಟಿದ್ದಾಗಿದೆ. ಪೈಥಾಗೊರಾಸನ ಈ ಪಾರಿಭಾಷಿಕ ಪದವು ಗ್ರೀಕರ ಗುಣವೈಶಿಷ್ಟ್ಯ, ಸೂಚಕವಿದೆ ಎಂದು ಹೇಳಲಾಗುತ್ತಿದೆ :

> 'Nothing too much', observe limit; the intelligible, determinate, measurable; the proportions of things both in themselves and as related to a whole:

ಈ ವಿವರಣೆಯು ಪೈಥಾಗೋರಾಸನ ಪ್ರತಿಭೆಯ ದ್ಯೋತಕವಿರುವುದು ನಿಜ. ಆದರೆ, ಈ ಮಹಾಸಿದ್ಧ ಪುರುಷನಿಂದ ತಿಳಿದೋ ತಿಳಿಯದೆಯೊ ಮೋಸವಾಗುತ್ತಿದೆ. ಜೋರ್ತಿಲಿಂಗದ ಬೆಳಕಿನಲ್ಲಿ (Candle Light) 'ಈ ವಿಶ್ವವು (kosmos) ನಿಯಮ ಬದ್ಧವಾಗಿದೆ' ಎಂದು ಪೈಥಾಗೋರಸ ಪ್ರಭೃತಿ ಗ್ರೀಕ್‌ದ್ರಷ್ಟಾರರು ಕಂಡದ್ದು ಅರ್ಧಸತ್ಯ. ಇವರೆಲ್ಲ ಪಿಂಡ-ಬ್ರಹ್ಮಾಂಡೈಕ್ಯದ ವೈಯಕ್ತಿಕ ಜೀವನ ರೀತಿಯಲ್ಲಿ ಒಳಗೊಂಡ ಭೌತಪಾತಳಿಯ ವಿಶ್ವನಿಯಮಗಳನ್ನು ಮಾತ್ರ ಗಮನಿಸಿದ್ದಾರೆ. ಇದರಾಚೆಯ ಮೂರನೆಯ (triad) ಪಾತಳಿಯ ಮೇಲಿಂದ ಗಮನಕ್ಕೆ

ಬರುವ ವಿಶ್ವನಿಯಮಗಳನ್ನು, ಈ ಪಾತಳಿಯ ಅಸ್ತಿತ್ವಗೊತ್ತಿದ್ದೂ ಇದನ್ನು ಕಡೆಗಣಿಸಿದ್ದು ಅಕ್ಷಮ್ಯ ಅಪರಾಧ, ಎಂದರೆ ತಪ್ಪಾದೀತೆ?

ಅಲ್ಲದೆ, ಪೈಥಾಗೋರಸನು Limit ಈ ಹೆಸರಿನ ಮುಸಕಿನಲ್ಲಿ ಗ್ರೀಕ್‌ಸಂಸ್ಕೃತಿಯನ್ನು ದಶಾಂಗುಲ (ಲಿಂಗ) ಪೂಜೆಯ ದಾರಿಯಲ್ಲಿ ತಳ್ಳಿದ್ದಾಯಿತು. ಈ Limit ಪಿಂಡ ಲಿಂಗ, ಸೃಷ್ಟಿನಿರ್ಮಾಣಕ್ಕೆ ಕಾರಣ ಈ Limit (ದಶಮಗ್ರಹ) ಎಂದಲ್ಲಿ, Unlimited (ಬ್ರಹ್ಮಅಂಡ) ಸ್ತ್ರೀಪ್ರತೀಕ ಆಗಲೇಬೇಕು! ಪೈಥಾಗೋರಾಸ್ ಸಂಪ್ರದಾಯದಲ್ಲಿ One (1) as God or divine ಎಂಬ ಶ್ರದ್ಧೆಯಿದ್ದುದರ ಬಗೆಗ ಸಂದೇಹವಿಲ್ಲ ಇನ್ನು ಪ್ರಶ್ನೆ: ಈ 'One' ಸ್ವರೂಪಿ ದೇವರ ಆಕೃತಿ ಎಂತದು? Things are numbers ಎಂಬೀ ಸೂತ್ರದಂತೆ ಪೈಥಾಗೋರಸನ Limited' ಇದು 1 (One) ಆಕೃತಿ, ಆದರೆ ಇದನ್ನು One (I) ಎಂದರೂ ಇದು ten (ಹತ್ತು) ಈ ಪವಿತ್ರ ಸಂಖ್ಯೆಯ ಪರಿಮಿತಿಯದು : 'Limit'!! ಈ ವಿಸಂಗತಿಯುಳ್ಳ ಈ one (ಏಕಂ) ಇದು ಜಾದೂಶಕ್ತಿಯ ಸಂಖ್ಯೆ ಆದರೆ ಬ್ರಹ್ಮಅಂಡ ಧಾರಣಮಾಡುವ ಸ್ತ್ರೀ ಅನುರ್ಮ್ಯಾದಳು. ನೆಲೆಗ ನಿಲುಕದವಳು. ಈ ನರ(ಳ) ಸಂಸ್ಕೃತಿಯಲ್ಲಿ ಸ್ತ್ರೀಯನ್ನು ಕೀಳ್ಗಗೆವ ಅನಿವಾರ್ಯತೆಯು ಕುಮಾರ ಸಂಪ್ರದಾಯದ ವಿಧಿಲಿಖಿತವಾಗಿದೆ! Things imitate or represent numbers ಈ ಸೂತ್ರದಂತೆ ಚಂದ್ರಾಃ (She moon) ಪರ್ಯಾಯ ರೂಪ ಸ್ತ್ರೀ ಆಕೃತಿಸೂಚಕ ಸಂಖ್ಯೆ (o) ಇದು. ಇದರಲ್ಲಿ ಏನೆಲ್ಲವೂ ಬಂತು : ಅಗಣಿತ: ಈ ದೇವಿ ಶೂನ್ಯಸ್ವರೂಪಳೂ ಆಗುತ್ತಾಳೆ! ಆಂತರ್-ವಿಸಂಗತಿ ಈ ಪಂಥಗಳ ವಿಧಿಲಿಖಿತ.

Limit (I) ಮತ್ತು unlimited (o) ಈ ಪರಿಭಾಷಾ ನಿರ್ಮಾಣದಲ್ಲಿಯೂ ಮೋಸವಾಗುತ್ತದೆ. ಪೈಥಾಗೋರಾಸನು 'ಕುಮಾರ' ಪುರಿಶಯನ ಉಪಾಸಕರ ಪಂಥದ ಪ್ರವಾದಿ. ಆದರೆ, ಮಾನವೇತಿಹಾಸವು ಪೈಥಾಗೋರಾಸನಿಂದಲೇ ಪ್ರಾರಂಭವಾಗಿಲ್ಲ! ಈ ಸಿದ್ಧಸಂತನು Limit ಇದನ್ನು ಆದಿಯಲ್ಲಿ ಕಲ್ಪಿಸಿದರೂ ಮೊತ್ತಮೊದಲಲ್ಲಿ ಆದಿಮಾತಾ ಸಂಪ್ರದಾಯವು ಪ್ರಚಲಿತವಿದ್ದುದು ಸುಳ್ಳಾಗಲಾರದು. 'ವಿಶ್ವನಿಯಮ'ಗಳ ಅಸ್ತಿತ್ವದಲ್ಲಿ ಶ್ರದ್ದೆಯಿರುವ ಈ ಮಹಂತನು ಆದಿಮಾತೆಯೇ ಮೊದಲು ಎಂಬ ವಾಸ್ತವಸತ್ಯದ ಅವಜ್ಞೆಮಾಡಿದ್ದಾನೆ. 'ವಸ್ತು-ಮಾತ್ರಗಳು ಅಂಕೆಸಂಖ್ಯೆಯನ್ನು ಅನುಕರಿಸುತ್ತವೆ ಅಥವಾ ಪ್ರತಿನಿಧಿಸುತ್ತವೆ' ಎಂಬ ಸೂತ್ರದಂತೆಯೇ, ಮೊದಲಲ್ಲಿ (o) ಮತ್ತು ಬಳಿಕ ಈ (1) ಆಕೃತಿಯು ಇರಲಿಕ್ಕೆಬೇಕು. ಆದರೆ, ಮಾನವಸಂಸ್ಕೃತಿಯನ್ನು ತಿರುವು ಮುರುವಾಗಿಸಿರುವ ಯಾತು (Black magic) ಇಲ್ಲಿದೆ : OI ಇದಕ್ಕೆ ಬದಲು ೧೦ ಆಗಿರುವಲ್ಲಿ ಕಣ್ಣಿಟ್ಟು ಇರುವುದರ ಖಾತ್ರೀಮಾಡಿಕೊಳ್ಳಬಹುದು. ಆದರೂ, 'ಏಕಂ ಪರಿಪೂರ್ಣವಂತೆ'!

> The Pythagorean belief that the number ten was something perfect and contained in itself the whole nature of number!

ಹತ್ತರ ಕಕ್ಷೆಯಲ್ಲಿ ನಿಸರ್ಗಸ್ಥ ಎಲ್ಲ ಸಂಖ್ಯೆಗಳ ಸ್ವಭಾವವೂ ಒಳಗೂಂಡಿದೆ. ಇದರ ಅರ್ಥವು, ಭಗವಂತ ಪಂಥೀಯ ಪರಿಭಾಷೆಯಲ್ಲಿ 'ಅಮೃತಂ ಚೈವ ಮೃತ್ಯುಃ ಸತ್ ಅಸತ ಚ'; ಎಂದರೆ ಇದು Nature=Phenomenal; ಜೀವನ=ಮರಣ; ಸೂರ್ಯ=ಚಂದ್ರ. ಎಂದರೆ ಶುದ್ಧ ಮೃತ್ಯುತತ್ವದ ಉಪಾಸನೆ! ಪೈಥಾಗೋರಾಸನು ಇದನ್ನು ಸಾಂಕೇತಿಕವಾಗಿ ಒಪ್ಪಿಕೂಂಡಿದ್ದಾನೆ. ೧, ೨, ೩ ಮತ್ತು ೪=೧೦! ಇಲ್ಲಿ ಸಂಖ್ಯೆಯ ಜಾದು ಇದೆ! ಈ ಹತ್ತನ್ನು Pyramid ಆಕೃತಿಯಾಗಿ ಕಲ್ಪಿಸಲಾಗಿದೆ. ಇದು tetracyst =ಚತುರ್-ವ್ಯೂಹ (?). ಇದು ಅತ್ಯಂತ ಪವಿತ್ರ ಆಕೃತಿ ಎನಿಸಿತ್ತು. ಆದರೆ, ಭಾರತೀಯ ಪರಂಪರೆಯಲ್ಲಿ ನಾಲ್ಕು ಅಶುಭ : ಸಂಕಷ್ಟಿ ! ವಿಘ್ನಕರ್ತನ ತಿಥಿ! ಪಿರಾಮಿಡ್, ಚತುರ್ವ್ಯೂಹದ-ಸಾಕ್ಷಿಯಾಗಿ ಪ್ರತಿಜ್ಞೆ ಮಾಡುವ ವಾಡಿಕೆಯಿತ್ತು. ಈಚತ್ರರ್-ವ್ಯೂಹ (tetracyt) ಎಂದರೂ ಇದು ದಶಾಂಗುಲದ (ಸಿದ್ಧ ಪುರುಷನಿರುವ) ಗೋರಿ=ಸಮಾಧಿಯಿದು! 'ಸತ್ತವರ ನೆರಳಲ್ಲಿ' ಜೀವನ ನಡೆಸುವ ಪ್ರೇರಣಾ ಕೇಂದ್ರಗಳು, ಸತ್-'ಪುರುಷ'ರೆಂಬವರ ಗೋರಿಗಳು : ಸಮಾಧಿಗಳು.

ಪೈಥಾಗೊರಾಸನು ರೂಪಿಸಿರುವ ಧಾರ್ಮಿಕ ಸಮಯಾಚಾರ ಹಾಗೂ ಗಣಿತಶಾಸ್ತ್ರ ಇವು ಆಕರ್ಷಕ ಸಂಪ್ರದಾಯಗಳು. ಪ್ರಪಂಚಕ್ಕೆ ಮೆಚ್ಚುಮದ್ದು ಮಾಡಿವೆ. ಮೃತ್ಯುಪೂಜೆಯ ದಾರಿಯಲ್ಲಿಯೇ ಮುನ್ನಡೆವ ಭಯಾವಹ ಯಾತು ಕೃತ್ಯವಿದು! ಆಧುನಿಕ ಭೌತಶಾಸ್ತ್ರಗಳ ಕೆಲವು ಶೋಧಗಳ ಮಾನವಕಲ್ಯಾಣಕ್ಕೆ ಪ್ರಯೋಜನಕಾರಿ ಯಾಗಿರುವುದು ನಿಜವಿದ್ದರೂ ಓಟ್ಟಿನಲ್ಲಿ ಶಸ್ತ್ರಾಸ್ತ್ರ ಸ್ಪರ್ಧೆಯ ದಿಕ್ಕಿನಲ್ಲಿ ಹೊರಟ ಈ ಶಾಸ್ತ್ರಗಳು, ಎರಡು ಘೋರ ಮಹಾಯುದ್ಧಗಳಿಗೆ ಅಪ್ರತ್ಯಕ್ಷವಾಗಿ ಕಾರಣವಾಗಿವೆ. ಈ ಭೌತ-ಶಾಸ್ತ್ರಗಳ ಪ್ರೇರಣಾ ಕೇಂದ್ರವು ಲೈಂಗಿಕ ಪಾತಳಿಯದೇ ಸರಿ. ಇದು ಮೃತ್ಯುಪೂಜೆಯ ದಾರಿಯಲ್ಲೇ ಹೋಗಬಲ್ಲದು. ಒರ್‌ಫಿಕ್ ಸಂಪ್ರದಾಯದ ಉತ್ತರಾಧಿಕಾರಿಯಾಗಿರುವ ಕ್ರೈಸ್ತಪಂಥದ ಮೃತ್ಯುಪೂಜೆಯ ಶಿಲುಬೆಯ (ಗೋರಿಯ) ಪೂಜೆಯ ಅರ್ಥವೇನು? ಈ ಸಂನ್ಯಾಸಪಂಥಗಳು ಮಾನವಜೀವನ : ಸಂಸ್ಕೃತಿಗೆ ತೀರ ವಿರೋಧಿಯಾಗಿವೆ, ಎಂದು ಪಾಶ್ಚಾತ್ಯ ಸಂಶೋಧಕರೂ ಹೇಳುತ್ತಿದ್ದಾರೆ. ಡಾ. ಜ್ಯೂಲಿಯನ್ ಹಕ್ಸ್‌ಲೆಯು ಕ್ರೈಸ್ತಧರ್ಮದ ಭಂಡತನಕ್ಕೆ ಹೇಸಿದವನು. ಆದರೆ, ಧರ್ಮದ ಆವಶ್ಯಕತೆಯನ್ನು ಅರಿತವನು. ಆದಕಾರಣ Religion without Revelution ಎಂಬ ಗ್ರಂಥ ಬರೆದು ಧರ್ಮದ ಬಗೆಗಿನ ತನ್ನ ವಿಚಾರಗಳನ್ನು ಪ್ರಕಟಿಸಿದ್ದಾನೆ.

ಸೋಜಿಗದ ಹಾಗೂ ಸಂತೋಷದ ಸಂಗತಿಯೆಂದರೆ ಈ ಹಕ್ಸ್‌ಲೆ ಅವರಿಗೆ 'Noosphere ಅವಶ್ಯ ಎನಿಸಿದೆ! ಕೇವಲ ಭೌತಶಾಸ್ತ್ರದ ಭೂಮಿಕೆಯಿಂದ ಎಂದರೆ ದೃಶ್ಯಸೃಷ್ಟಿ (Phenomena) ಮತ್ತು ನಿಸರ್ಗ (nature) ಇವೆರಡೇ ಪಾತಳಿಯ ಜೀವನ ರೀತಿ ಎಂದರೆ ಇದು ಕೇವಲ Biosphere (ಅಂಗಾನಾಂ ರಸದ) ಪಾತಳಿಯಾಗುತ್ತದೆ. ಮಾನವಪ್ರಜ್ಞೆಯ ಪ್ರೇರಣಾ-ಕೇಂದ್ರವೆಂದು, ಇವರಿಗೆ Noosphere ದ ಆವಶ್ಯಕತೆಯ ಖಾತ್ರಿ ಆಗಿದೆ. ಫ್ರೆಂಚ್ ಸಂಶೋಧಕ ಪಿರ್ರೇ ಟೈಲಾರ್ಡ ಡಿ-ಚಾರ್ಡಿನರಿಗೆ, ತಾವು ಈ ಪರಿಭಾಷೆಗಾಗಿ ಅತ್ಯಂತ, ಋಣಿಯಾಗಿರುವುದಾಗಿ ಹಕ್ಸ್‌ಲೆ ಬಹಿರಂಗಪಡಿಸಿದ್ದಾರೆ. ಈ Nous ಅಥವಾ Noosphere ಕುರಿತು ಅರಿಸ್ಟಾಟಲನು ಹೇಳಿರುವ ಈ ಅನುಭವದ ಮಾತುಗಳು ಚಿರಸ್ಮರಣೀಯವಾಗಿವೆ.

ವಿಚಾರ ಮನನದ ಹಂತದಲ್ಲಿ of thinking states ಸತ್ಯವನ್ನು ಗ್ರಹಿಸಿಕೊಳ್ಳುವುದು ಕೆಲವು ಬಾರಿ ತಪ್ಪದೇ ಸರಿ (Unfailingly true) ಇದ್ದರೂ, ಕೆಲಬಾರಿ ಎಡಹುವುದೂ ಉಂಟು. ಆದರೆ, Scientific knowing and nous are always true! ಶಾಸ್ತ್ರೀಯ ಪದ್ಧತಿಯಿಂದ ಗ್ರಹಿಸಿಕೊಳ್ಳುವುದೂ ಸ್ವರ್ ಪಾತಳಿಯಿಂದ ಅರಿಕೆಗೆ ಬರುವುದೂ ಯಾವಾಗಲೂ ಸರಿ! ಆದರೆ ಈ ಸ್ವರ್‌ಪಾತಳಿಯ ಮೇಲಣ ಪ್ರಕಾಶ ಕಿರಣ ನಮ್ಮ ಅಪೇಕ್ಷೆಯನ್ನು ಅನುಸರಿಸುವ ಭರವಸೆಯಿಲ್ಲ.... ...Which alone comes into us from out-side and divine ಥಕ್ಕನೇ ತಾನೇ ಹೊರಗಣಿಂದ ಕಾಣಿಸಿಕೊಳ್ಳುತ್ತದೆ; ಇದು ದಿವ್ಯತತ್ತ್ವ. 'ಸ್ವರ್' ಪಾತಳಿಯ ಬಗೆಗೆ, ಭಾರತೀಯ ಪುರಾತನ ಪರಂಪರೆಯಲ್ಲಿ ಇರುವ ಆತ್ಯಂತಿಕ ಆದರ, ಭಕ್ತಿ, ಪ್ರೇಮ ನಿಷ್ಕಾರಣವಲ್ಲ ಎಂಬುದನು ಅರಿಸ್ಟಾಟಲ್ಲನ ಮುಂದಿನ ವಾಕ್ಯಗಳೂ ಮನಗಾಣಿಸಿಕೊಡಬಲ್ಲುವು.

> Its (of nous) proper function is to grasp universal truth immediately and intuitively as in the inductive leap and so to assure the primary premises or principles on which deductive argument is based.[೧೪]

ಈ ವ್ಯಾಸ, ವಸಿಷ್ಠ, ಪೈಥಾಗೋರಾಸ, ಕ್ರಿಸ್ತ ಪ್ರಭೃತಿಗಳಿಂದ ಪ್ರಸ್ಥಾಪಿತ ಸಂಪ್ರದಾಯಗಳು, ಕಣ್ಕಟ್ಟು, ಸುಳ್ಳು, ಶಬ್ದಜಾಲ, ಮೋಸ, ಹಾಗೂ ಪವಾಡ ಸಿದ್ಧಿಗಳ ಆಮಿಷದ ಪ್ರಯೋಜನ ಪಡೆಯದೆ ಈ ಮೋಕ್ಷ ಕಾಮೀ ಸಂಪ್ರದಾಯಗಳು ಬೇರುಬಿಟ್ಟು ಬೆಳೆದು ನಿಲ್ಲಲು ಶಕ್ಯವೆ ಇದ್ದಿಲ್ಲ, ಎಂದು ಕಾಣುತ್ತದೆ. ಆಧುನಿಕ ಶಾಸ್ತ್ರಗಳ ಪ್ರೇರಕನೆಂಬ ಪೈಥಾಗೋರಾಸನಿಗೂ ಈ ಕಲಂಕ ತಟ್ಟಬೇಕೆ? ಒರ್ಫಿಕ್ ಸಂಪ್ರದಾಯದಲ್ಲಿ ಅಪೊಲ್ಲೊ ಎಂಬ ಉಪಾಸ್ಯ ದೈವತವನ್ನು 'ಸೂರ್ಯ' ಎಂದು ನಂಬಿಸಲಾಗಿದೆ!

> The Sungod and god of fine arts medicine, music, poetry and eloquence. had many amorous

ಆಕ್ಸಫರ್ಡ್‌ಕೋಶದಲ್ಲಿಯೂ 'ಸೂರ್ಯ' ವಾಚಕ ಅರ್ಥವೇ ಇದೆ! ಈ ಅಪೊಲ್ಲೊ, ವಿಭಿನ್ನ ದೈವತಗಳ (ಡೈಯೋಸಿಸನ್ ಸಹ) ಸಂಕೀರ್ಣ ಪ್ರತಿಮೆ ಎಂದು ಗ್ರೀಕ್ ದೈವತಗಳ ವ್ಯಾಸಂಗಿಗಳಿಗೆ ಕಂಡು ಬಂದಿದೆ.

ಚಂದ್ರನ ಹೆಸರನ್ನು ಮಾರ್ಪಡಿಸಿ ಮಾರ್ತಾಂಡಾದಿರೂಪಕ್ಕೆ ತಿರುಗಿಸಿ ಅಥವಾ ಹೆಸರು ಮಾರ್ಪಡಿಸದೆಯೂ ಅಪೊಲ್ಲೊ ಪೂಜಕರು ಪಿಂಡಬ್ರಹ್ಮಾಂಡೈಕ್ಯದ ಪಾತಳಿಯ ಜೀವನ ರೀತಿಯನ್ನೇ ಉಳಿಸಿಕೊಂಡಲ್ಲಿ, ಇದು ದಿವ್ಯಾಧ್ಯಾತ್ಮ ಪಂಥೀಯರ ಆತ್ಮ-ವಂಚನೆಗೆ, ಪರ-ವಂಚನೆಗೆ ಕಾರಣವಾಗುವ ಲೋಕವಿನಾಶಕ್ಕೆ ಆಮಂತ್ರಣ ಸ್ವರೂಪ ಧರ್ಮವೇ ಆಗಬಲ್ಲುದು. ಇಂದಿನ ವೇದದಲ್ಲಿ ಈ ಮೋಸವೇ ಹುದುಗಿದೆ. ಇಡೀ ಋಗ್ವೇದದಲ್ಲಿ ಆದಿತ್ಯ ನಾಮಾಂತರದಿಂದ ಮಿಥುನಯೋಗವೇ ಅಭಿಪ್ರೇತವಿದ್ದರೂ, ಚಂದ್ರನ ಉಲ್ಲೇಖವು ನಿಃಸಂದಿಗ್ಧರೂಪದಲ್ಲಿ ಒಂದಡೆಯಲ್ಲಿಯೂ ದೊರೆಯದು! ಸೋಮನಾಮಾಂತರದಲ್ಲಿ ಚಂದ್ರಾದೇವಿಯ ಪುಲ್ಲಿಂಗೀ ('ಚಂದ್ರಮಸ್') ಶಬ್ದಪ್ರತಿಮೆ ಅಭಿಪ್ರೇತವಿರುತ್ತದೆ! ಈ 'ಚಂದ್ರಾ (She moon)' ಸೋಮನಾಮಾಂತರದಿಂದ, 'ಸೂರ್ಯಾ' ದೇವಿಯನ್ನು ಮದುವೆಯಾಗುತ್ತಾಳೆ, ಎಂಬಲ್ಲಿ ತತ್ಪೂರ್ವದ ಇಡಿ ಸಂಪ್ರದಾಯಕ್ಕೆ ವಿಪರೀತವಾದ ವರ್ಣನೆಯಿದೆ. ಆದರೆ, ಕವಿಯು ತನ್ನ ಸಂಕಲ್ಪನಾ ಸಾಮರ್ಥ್ಯದಿಂದ (ನಿಸರ್ಗದಲ್ಲಿ ಇಲ್ಲದೇ ಇದ್ದರೂ) ನೂತನ ಶಬ್ದಸೃಷ್ಟಿ ನಿರ್ಮಿಸುವುದನ್ನು ಆಕ್ಷೇಪಿಸಲಿಕ್ಕಾದೀತೆ, ಎಂಬ ಪ್ರಶ್ನೆ ಇಲ್ಲಿ ತಲೆಯೆತ್ತುತ್ತದೆ. ವಿಶಿಷ್ಟ ಧಾರ್ಮಿಕಶ್ರದ್ಧೆಯನ್ನು ದೃಢಪಡಿಸಲು ಈ ಬಗೆಯ ತಂತ್ರವನ್ನು ಯೋಜಿಸುವಲ್ಲಿ ಇದು ಮೋಸದ ಕೃತ್ಯವಾಗುತ್ತಿಲ್ಲವೊ ಎಂಬ ಮರುಪ್ರಶ್ನೆಗೂ ಇಲ್ಲಿ ಅವಕಾಶವಿದೆ.

ಇಡಿ ಗ್ರೀಕ್‌ಸಂಸ್ಕೃತಿಯಲ್ಲಿ ನಿನ್ನೆ-ಇಂದು-ನಾಳೆ ಈ ಬಗೆಯ ಕಾಲತತ್ತ್ವದ ವಿಚಾರ ಚರ್ಚೆಯೇ ತಲೆಯೆತ್ತದೆ ಇರುವ ಸೋಜಿಗವು, ಪೈಥಾಗೋರಾಸನ ಮನ್ವಂತರದ ಗಾಢಪ್ರಭಾವದ ದ್ಯೋತಕವಾಗಿದೆ! ಒರ್ಫಿಕ್ ಪಂಥೀಯ ಪೈಥಾಗೊರಾಸನು ರಾತ್ರ ಸಮಯಾಚಾರಗಳನ್ನು ರೂಪಿಸಿದವನು. ಆದುದರಿಂದ, ಈ ಸಂಪ್ರದಾಯದವರು 'ಸೂರ್ಯ'ನೆಂಬ ಅಪೊಲ್ಲೊ ಪೂಜಕರಾಗಿದ್ದರೂ, ಇದು ರಾತ್ರೀಸೂರ್ಯ ಅಥವಾ ಚಂದಾಽಽದಿತ್ಯ ದೈವತವೇ ಆಗುತ್ತದೆ. ಇದಕ್ಕೇನು ಆಧಾರ, ಎಂದು ಶಂಕಿಸಬೇಕಾಗಿಲ್ಲ. ಪೈಥಾಗೋರಾಸ ಪಂಥಿಯರ ನಂಬುಗೆಯ 'History repeats itself' ಎಂಬ ಈ ವಿಚಾರವು, ವೃತ್ತಾಕೃತಿ ಆಗಿದೆ (circular) ಇದು ಚಾಂದ್ರಪಂಥೀಯರ ಕಾಲ, ಎಂಬುದು ಬಯಲಿಗೆ ಬರುತ್ತಿದೆ!

ಮಾನವಜೀವನ ವಿಶ್ವ ಎರಡು ಬಗೆಯ ಕಾಲತತ್ತ್ವದ ಪ್ರಭಾವ

ಮಾನವೇತರ ಪ್ರಾಣಿಗಳ ಪಾಲಿನದು ವೃತ್ತಮಧ್ಯಸ್ತಂಭಾಕೃತಿಯ ಕಾಲ ಮಾತ್ರ. ಇದನ್ನು ಆಧುನಿಕ ಸಂಶೋಧಕರು ನಿತ್ಯ ವರ್ತಮಾನಕಾಲ (Eternal present) ಎಂದು ಹೆಸರಿಸಿದ್ದಾರೆ. ಪ್ರಜ್ಞೋದಯಕ್ಕೂ ಮುಂಚೆ, ಚಿಕ್ಕಂದು 'ನಿನ್ನೆ-ನಾಳೆ"ಗಳ ಅಂತರವು ಗೊತ್ತಾಗದೆ ನಿನ್ನೆ, ನಾಳೆ ಪದವನ್ನು ಬಳಸುವಾಗ ತಿರುವು ಮುರುವು ಆಗುವುದುಂಟು. ಸಾಂಕೇತಿಕ ಭಾಷೆ, ಪ್ರಚಾರಕ್ಕೆ ಬರುವ ಮೊದಲು ಕಾಲಗತಿಯೊಳಗಿನ ಸೂಕ್ಷ್ಮವು ಗೊತ್ತಿರದೆ, ನಿನ್ನೆಯೇ ಇಂದು ಆಗುತ್ತದೆ, ಎಂಬ ಗ್ರಹಿಕೆಯಿತ್ತು. ಈ ಗ್ರಹಿಕೆ ಚಂದ್ರ-ಪೂಜೆಯ ಪ್ರಭಾವದ ಜೀವನ ರೀತಿಯ ಸೂಚಕವಾಗಿದೆ. ಆಧುನಿಕ ಸಂಶೋಧಕನೊಬ್ಬನು ಬರೆಯುತ್ತಾನೆ.

> Symbolic Communication had began. Man had escaped out of the eternal present of the animal world into a knowledge of past and future"[೧೬]

ನಿತ್ಯ ಇಂದು (ವರ್ತಮಾನಕಾಲ) ಇದೂ ಚಂದ್ರಭೂಮಿಕೆಯ ಕಾಲತತ್ವವೇ. ಋಗ್ವೇದದಲ್ಲಿ ಬರುವ "ಪುತ್ರಃ ಸನ್ ಪಿತಾ ಭುವಃ" ಈ ವಾಕ್ಯವು, ವರ್ಡ್ಸ್‌ವರ್ತ್ Child is the father of man ಎಂಬ ವಾಕ್ಯವನ್ನು ಹೋಲುತ್ತದೆ! ಇದು ಆದಿತ್ಯ ಸಂಪ್ರದಾಯದ ಶ್ರದ್ಧೆ! ಕುಮಾರೀ ಗರ್ಭಸ್ಥಶಿಶು 'ಕುಮಾರ; ಇವನೇ ಆಗಾಮೀ ಮಾನವರ ತಂದೆ. ಚಂದ್ರಳ ಉಡಿಯಲ್ಲಿ ಒರಗಿರುವ 'ನೀಲಕೃಷ್ಣ'ರೂಪ ಶಿಶು. ಇದು ನಿತ್ಯ ಸನಾತನ ಶಿಶು ಎಂದು ಕಾಣಲಾಗುತ್ತದೆ. ಕ್ರೈಸ್ತ ಪಂಥದಲ್ಲೂ, ಆಲದ ಎಲೆಯ ಮೇಲೆ ಮಲಗಿದೆ ಎಂಬಲ್ಲಿ 'ಆಲದ ಎಲೆ' ಆಲದ ಮರವನ್ನು, ಹೆಣ್ಣಿನ ರೂಪದಲ್ಲಿ (ವಟಸಾವಿತ್ರಿ) ಪೂಜಿಸುವ ವಾಡಿಕೆಯಿದೆ! ಇಲ್ಲಿ ಸಾವಿತ್ರೀ ಸೂರ್ಯದೇವಿ! ನಿಜವಾಗಿ ಚಾಂದ್ರಶಕ್ತಿಯೆ ಇದ್ದು ಸೌರದೈವತದ ಮೇಲೆ 'ಯೋನಿ'ಯ ಆರೋಪ ಮಾಡಿದ್ದಾಗಿದೆ. ಆದರೆ, ಪಾಶ್ಚಾತ್ಯ ಪರಂಪರೆಯ Virgin (She moon) ಗರ್ಭದಲ್ಲಿ ಆದಿತ್ಯ! ಪೈಥಾಗೋರಾಸನ ದಶಾಂಗುಲ ಪುರುಷ! (invented planet) ಎಂಬಲ್ಲಿ ಇರುವ ಪ್ರಾಮಾಣಿಕತೆ, ಗೀತೆ ರಾಮಾಯಣದ ದರ್ಶನದಲ್ಲಿ ಇಲ್ಲ.

ಆಧುನಿಕ ಸಂಶೋಧಕರು ಕಾಲತತ್ವವನ್ನು 'ಸೂರ್ಯ', 'ಚಂದ್ರ' ಶಬ್ದಪ್ರತಿಮೆಗಳ ಮೂಲಕ ಗ್ರಹಿಸಿಕೊಳ್ಳದೆ ಶುದ್ಧಶಾಸ್ತ್ರೀಯ ಮಟ್ಟದಿಂದಲೂ (Eternal present) 'ನಿತ್ಯ ವರ್ತಮಾನ ಸ್ವರೂಪ ಸ್ತಂಭಕಾಲವನ್ನು ಕಂಡಿದ್ದಾರೆ. ಈ ಸ್ತಂಭಕಾಲ ಅಥವಾ ವೃತ್ತಾಕೃತಿ (೦) ಕಾಲ ಇದು ಚಾಂದ್ರಶಕ್ತಿಯ ಪ್ರಭಾವದಲ್ಲಿ ನಿರ್ಮಾಣವಾಗುವ ಆಕೃತಿ. ಈ ಚಂದ್ರಶಕ್ತಿ ಸೃಜನಕ್ಕೆ ಪ್ರೇರಕ ಶಕ್ತಿ. ಈ ಶಕ್ತಿಯು ನಿರ್ಮಿಸುವ (೦) ಮತ್ತು (I) ಆಕೃತಿ ಪೈಥ್ಯಾಗೋರಸನ ಶ್ರದ್ಧಾಸ್ಥಾನದ ಅಂಕೆಗಳು! ಪೈಥಾಗೋರಾಸನ ಪಂಥದಪ್ರಭಾವಕ್ಕೆ ಒಳಗಾದ ಪ್ಲೇಟೀನು [creative superior intelligence] ವೃತ್ತಾಕೃತಿ ಕಾಲವು, ಪ್ರತಿಭೆಗೆ ಪ್ರೇರಕ ಎನ್ನುತ್ತಾನೆ! ಆದರೆ ಭೌತಶಾಸ್ತ್ರಜ್ಞರ ಮತದಂತೆ ಮಾನವಜೀವನ, ವಿಶ್ವದಲ್ಲಿ ಪ್ರಗತಿ ಪ್ರೇರಕ ಕಾಲವು ಬೇರೆಯಿದೆ. ವೃತ್ತಾಕೃತಿಯದಲ್ಲ ಎಂಬ ನಿರ್ಣಯ ಇವರದು. ಮಾನವ ಜೀವನಕ್ಕೆ ಸಂಬಂಧಿಸಿದ ವಿಜ್ಞಾನ ಶಾಖೆಯಲ್ಲಿ ತಜ್ಞನೆಂಬ ಖ್ಯಾತಿಯ ರೇನೆ ಡುಬೋಸ್ ಬರೆಯುವುದೇನೆಂದರೆ!

> 'There are obviously recurrent cycles and eternal returns but there is also forward motion of life-called progress when applied to man-is perhaps the most distinctive feature of modern philosophy and science. It is what differentiates most profoundly the temper of modern times from that of all past ages even the most enlightened.'

ಡಾ. ರೆನೆ ಇವರೂ ಸಹ ಮಾನವಜೀವನ ವಿಶ್ವಸ್ಥ ಪ್ರಗತಿ ಪ್ರೇರಕ ಕಾಲತತ್ವವನ್ನು ಶಾಸ್ತ್ರೀಯ ಅಮೂರ್ತ ಪಾತಳಿಯ ವಿಶ್ಲೇಷಣಾತ್ಮಕ ಪದ್ಧತಿಯಿಂದ ಹೇಳಿದ್ದಾರೆಯೆ ಹೊರತು ಚಂದ್ರ ಅಥವಾ ಸೂರ್ಯ ಈ ದೈವತ ಮಾಧ್ಯಮವನ್ನು ಸ್ವೀಕರಿಸಿಲ್ಲ. ಜೀವನದಲ್ಲಿ "ಚಕ್ರಾಕೃತಿಯು ಮರಳಿ ಬರುವ ಕಾಲತತ್ವವಿದೆ. ಯುಗ ಚಕ್ರರೂಪ ಸಾರ್ವಕಾಲಿಕ (eternal) ಕಾಲಗತಿಯೂ ಇದೇ ಎಂಬ ಈ ನಿರ್ದೇಶವು, ವೃತ್ತಾಕೃತಿಯ' ಸ್ತಂಭಕಾಲ (eternal) ತತ್ವ ಪ್ರೇರಕ ಚಂದ್ರಮನದೇ ಆಗಿದೆ.

ಈ ಮಾತಿನ ನೆಪದಿಂದ ಒಂದು ಸಾರ್ವಕಾಲಿಕ ನಿಯಮದ ಕಡೆಗೆ ಪ್ರಾಜ್ಞರ ಚಿತ್ರವನ್ನು ಸೆಳೆಯ ಬಯಸುತ್ತೇನೆ : 'ಚಂದ್ರ' 'ಸೂರ್ಯ' ಎಂದರೂ ಈ ಬಗೆಯ ಶಬ್ದಪ್ರತಿಮೆಗಳು ಪ್ರತಿನಿಧೀಕರಿಸುವ ಅರ್ಥವು, 'ಸನಾತನ, ಸ್ವರೂಪದ್ದೇ ಇರುವುದುಂಟು. 'ಸನಾತನ' ಎಂದರೆ ಮರಳಿ ಕಾಲಮಾನಕ್ಕನುಸರಿಸಿ ಇನ್ನೂ ಬೇರೆ ಆಕೃತಿ ರೂಪದಿಂದಲೂ ಈ ಆಶಯವು ಅವತರಿಸಬಲ್ಲುದು. 'ಚಾಂದ್ರಕಾಲ', ಎಂಬಲ್ಲಿ ಭೌತ, ಹೊರವಲಯದ ಭಾಷಿಕ (linguistic) ಆಕೃತಿಯು ಬದಲಾಗಬಹುದು. ಆದರೆ ಇದು ಒಳಗೊಳ್ಳುವ ಆಶಯದ, ಸಾಂಸ್ಕೃತಿಕ ಅಥವಾ ವೈಚಾರಿಕ (mythical or Cultural) ಆಕೃತಿಯು ಸಾರ್ವಕಾಲಿಕ ಶಾಶ್ವತ ಸ್ವರೂಪದ ಸತ್ಯಾಂಶವನ್ನು ಒಳಗೊಂಡಿರುತ್ತದೆ.

ಈ ಕಾರಣದಿಂದಾಗಿ, ಶಬ್ದಪ್ರತಿಮೆಗಳ ಭಾಷಿಕ ಆಕೃತಿ ಹಾಗೂ ವೈಚಾರಿಕ (ಸಾಂಸ್ಕೃತಿಕ) ಆಕೃತಿ ಇವೆರಡರ ಐತಿಹಾಸಿಕ ಸ್ವರೂಪದ ಸಮೀಕ್ಷೆಯಲ್ಲಿ, ಈ ಶಬ್ದಪ್ರತಿಮೆಗಳ ಬಾಹ್ಯ ಅಥವಾ ಅಂತರ್‌ವಲಯದಲ್ಲಿ ಆಗಬಲ್ಲ ಸ್ಥಿತ್ಯಂತರವು ಬಯಲಿಗೆ ಬರದೆ ಉಳಿಯಲು ಶಕ್ಯವಿಲ್ಲ, ಉದಾ : ಅಪೊಲ್ಲೊ 'ಸೂರ್ಯ' ಎಂದರೆ, ಈ ದೈವತಕ್ಕೆ ಸಂಬದ್ಧ ಸಮಯ-ಆಚಾರಗಳು, ವೃತ್ತ ಮಧ್ಯ ಸ್ತಂಭದ ಎಂದರೆ ಅಂಗ-ಲಿಂಗ ಸಂಗದ ನಡೆವಳಿಗಳು, ಇರಲು ಶಕ್ಯವಿಲ್ಲ. ಇತಿಹಾಸವು ಮರುಳುತ್ತದೆಂಬ ಪೈಥಾಗೋರಾಸನ ಸೂತ್ರವು ಅರ್ಧಸತ್ಯವಿದೆ, ಮರಳುವುದು ಇತಿ (ಇಂತು)ಹ (ನಿಜವಾಗಿ) ಆಸ (ಇತ್ತು, ಸಂಭವಿಸಿತು) ಎಂಬೀ ಬಗೆಯ ಇತಿಹಾಸಕ್ಕೆ (ನಿನ್ನೆ, ಇಂದು, ನಾಳೆಗೆ) ಸಂಬಂಧಿಸಿದ ಘಟನೆಯಿಲ್ಲ; ಭೌತ ಪಾತಳಿಯ ಮೂರ್ತ ಘಟನೆ, ಪ್ರಸಂಗ, ವಿಷಯ ಮತ್ತೆ ಮರಳಲಾರದು. ಆದರೆ, ಇದರ ಒಳಗಿನ ಸಾರ್ವಕಾಲಿಕ ಆಶಯವು ಮಾತ್ರ ಮತ್ತೆ ಮರಳಬಹುದು.

ಜನಗಣದ ಭಾಷಿಕ ಆಕೃತಿಯು ಆ 'ಇತಿ ಹ ಆಸ' ಸ್ವರೂಪೀ ಐತಿಹಾಸಿಕ ವಿಶಿಷ್ಟಘಟನೆ, ಪ್ರಸಂಗಾದಿಗಳ ಇತಿಹಾಸ ವಿಷಯವಾಗುತ್ತವೆ. ಸಾಂಸ್ಕೃತಿಕ ಅಥವಾ ವೈಚಾರಿಕ ಆಕೃತಿಯು, ಸಂಸ್ಕೃತಿ ತತ್ತ್ವಜ್ಞಾನ ಇದರ ಇತಿಹಾಸಿಕ ಅಂಶವನ್ನು ಬೆಳಕಿನಲ್ಲಿ ತರುತ್ತಿರುತ್ತದೆ. ಹೀಗೆ, ಭಾಷಿಕ ಆಕೃತಿಯ ಇತಿಹಾಸ ಮತ್ತು ಇದರೊಳಗಿನ ಸಾಂಸ್ಕೃತಿಕ ವೈಚಾರಿಕ ಆಕೃತಿಯ ಇತಿಹಾಸ ಇವೆರಡರ ತಾಳಮೇಳದಲ್ಲಿ, ಕಂಡುಬರುವ ಘಟನೆ, ಪ್ರಸಂಗ, ವಿಷಯ, ಇದು ಆ ಸಾಂಸ್ಕೃತಿಕ ಜೀವನದ, ಆ ಯುಗದ ಸತ್ಯಾಂಶವನ್ನು ಮನಗಾಣಿಸಿ ಕೊಡಬಲ್ಲುದೆಂದು ಬಗೆಯಲು ಯಾವ ಆತಂಕವೂ ತೋರದು. ಆಧುನಿಕ ಭೌತಶಾಸ್ತ್ರಜ್ಞನೇ ಹೇಳುವಂತೆ 'ನಿತ್ಯವರ್ತಮಾನ' [eternal] ಪ್ರೇರಕ ಕಾಲತತ್ತ್ವವು ಪಶುಲೋಕದ (animal) ಜೀವನ ರೀತಿಯನ್ನು ರೂಪಿಸುತ್ತದೆ. ಈ ಪಶು ಪಾತಳಿ ಜೀವನ ರೀತಿಯೊಳಗಿಂದ ಈ ನರ-ಮನುಜನು ಹೊರಬರಲು, ಸಾಂಕೇತಿಕ ಪಾತಳಿಯ ಆಶಯಸೂಚಕ ಸಂಕೇತ ಪ್ರತೀಕಾತ್ಮಕ ಭಾಷೆಯ ಜೀವನ ವ್ಯವಹಾರವು (Communication) ಕಾರಣವಾಗಿದೆ. ನಿನ್ನೆ-ನಾಳೆಗಳ ಪ್ರಜ್ಞೆಮೂಡಿ ನಾನಾ ಶಾಸ್ತ್ರಾದಿಗಳ ಶೋಧಗಳು ಶಕ್ಯವಾಗಿವೆ.

ಗ್ರೀಕ್‌ಸಂಸ್ಕೃತಿಯಲ್ಲಿ ಹಾಗೂ ಪ್ರಪಂಚದಲ್ಲೇ ಪರ್ಯಾಯದಿಂದ ಪೈಥಾಗೋರಾಸನ ಮನ್ವಂತರವೇ ಪ್ರಭಾವಶಾಲಿಯಾಗಿದೆ. ಪ್ರಗತಿ-ಪರ ಕಾಲತತ್ತ್ವದ ಪ್ರಜ್ಞೆ, ರೇನೆಯಂಥ ಶಾಸ್ತ್ರಜ್ಞರಲ್ಲಿ ಇದೀಗ ಒಡಮೂಡಿದೆ. ಡಾ. ಹಕ್ಸ್ಲೆ, ಡಾ. ಚಾರ್ಡಿನ್ ಡಾ. ಕ್ರೋಬರ್ ಪ್ರಭೃತಿಶಾಸ್ತ್ರಜ್ಞರು ಸಂಸ್ಕೃತಿ ಪ್ರೇರಣಾ ಕೇಂದ್ರವು, ಪಿಂಡ-ಬ್ರಹ್ಮಾಂಡೈಕ್ಯದ [ವ್ಯಕ್ತಿಯ-ಜೀವಚೇತಸದ] ಪಾತಾಳಿಯ ಆಚೆಗೆ, Super organic ಪಾತಳಿಯ ಮೇಲೆ ಇದೆಯೆಂದು ಏಕಾಭಿಪ್ರಾಯದಿಂದ ಹೇಳುತ್ತಿದ್ದಾರೆ. ಈ ಪ್ರಗತಿಪರ ಕಾಲತತ್ತ್ವದ ಪಾತಳಿಯ ಪ್ರಜ್ಞೆ, ಗ್ರೀಕ್ ಸಂಸ್ಕೃತಿಯ ಮಹೋನ್ನತಕಾಲದಲ್ಲಿಯೂ ಇದ್ದಿಲ್ಲ. ಹಿಂದೆ ಸುವರ್ಣಯುಗ, ಮಾನವಧರ್ಮ ಇದ್ದಿತು, ಎಂದು ಒಪ್ಪಿದರೂ ಇನ್ನು ಮುಂದೆ ಬರಲಿರುವ ಆಗಾಮಿ ಮಾನವಧರ್ಮದ ಭವ್ಯಭವಿಷ್ಯತ್ತನ್ನು ಆಧುನಿಕ ಶಾಸ್ತ್ರಜ್ಞ ರೇನೆ ಪ್ರಭೃತಿಗಳೂ ಕಾಣುತ್ತಿದ್ದಾರೆ. ಇದುವೇ ಇಂದಿನ ಈ ಪ್ರಳಯ ಸ್ವರೂಪ ಜೀವನ ರೀತಿಯ ಕಗ್ಗತ್ತಲೆಯಲ್ಲಿಯೂ ಕಾಣತೊಡಗಿರುವ ಒಂದು ಸೂಕ್ಷ್ಮ ಆಶಾಕಿರಣವಾಗಿದೆ.

ಟಿಪ್ಪಣಿಗಳು

೧. 'However, a process was completed which was of great importance for the rise of philosophy the emancipation of the individual'; E. Zeller; ***'Outlines of the History of Greek Philosophy;'*** P. 11

೨. ***Ibid*** p. 10

೩. ***ಋಗ್ವೇದ ಸಂಹಿತೆ*** X. ೧೩೬
೪. Guthrie; ***A History of Greek Philosophy*** Vol. I, ೨೧೩
೫. ***ಛಾಂದೋಗ್ಯೋಪನಿಷತ್ತು***, ೧, ೬, ೬,
೬. ***ಋಗ್ವೇದ ಸಂಹಿತೆ*** I, ೧೬೦
೭. ***ಅದೇ*** X-೮೨-೬
೮. ***ಅದೇ*** X-೧೨೧-೧
೯. ***ಅದೇ*** X. ೧೩೫
೧೦. ***ಛಾಂದೋಗ್ಯೋಪನಿಷತ್ತು*** ೬-೧-೨೬
೧೧. Guthrie; ***A History of Greek Philosophy*** Vol. I. p-425
೧೨. Gomperze T.; ***Greak Thinker*** p. 106
೧೩. ***Mythology of the Ancient world;*** P. 185
೧೪. Guthrie, ***A History of Greek Philosophy*** Vol II. p. 19
೧೫. Zimmer J. E., ***Dictionary of Classical Mythology*** P. 402
೧೬. Louie Young, ***Evolution of Man*** 1970, P. 273
೧೭. ***Ibid*** P. 273

ಪ್ರಜ್ಞಾಪ್ರಕಾಶ ತತ್ತ್ವದ ಪಾತಳಿ

ನರ-ಮನುಜರು ಇರುವುದು, ದೃಶ್ಯಸೃಷ್ಟಿಯ [Phenomenon] ಪಾತಳಿಯ ಮೇಲೆ. ದೇಹವು ದೃಶ್ಯ ಸೃಷ್ಟಿಯ ಅಂಗ; ಇದನ್ನು ಅಂಗಾನಾಂ ರಸದ ಪಾತಳಿ 'ಪ್ರಾಣೋ ವಾ ಅಂಗಾನಾಂ ರಸಃ' ಪಾತಳಿ ಎಂದು ಉಪ-ನಿಷತ್ತು ಹೇಳುತ್ತದೆ. ದೇಹವು=ಭೂಃ ಪಾತಳಿ; ಅಂತರ್‌ಅಂಗ, ಅಂತಃಕರಣ ಇದು ವೈಯಕ್ತಿಕ ಅಂತರಿಕ್ಷದ ಅವಕಾಶದ ಪಾತಳಿ. ದೇಹದಲ್ಲಿ 'ಅಂತರಿಕ್ಷಂ ಭುವಃ' ಪಾತಳಿ ಎಂದರೇ ಇದು. ವ್ಯಕ್ತಿ ನಿರಪೇಕ್ಷಭೂಃ, ಪ್ರಪಂಚವೆಲ್ಲ ಮತ್ತು 'ಭುವಃ ಅಂತರಿಕ್ಷ', ಇದು ಆಕಾಶತತ್ತ್ವದ ಕೆಳಗಣ ಅವಕಾಶಸ್ಥ ಟೊಳ್ಳು, ಇದೆಲ್ಲವೂ ಅಂತರಿಕ್ಷವೇ ಸರಿ.

ಪುರಾತನ ಪರಿಭಾಷೆಯ (ಭೂಃ) ಭುವಃ ಇದು ಚಂದ್ರನ ಪಾತಳಿ. 'ಚಂದ್ರಮಾ ಮನಸೋ ಜಾತಃ' ಇದು ಆಲಂಕಾರಿಕ. ಮಾನವ ಪ್ರಾಣಿಯ ಮನಸ್ಸು ಚಂದ್ರಾ ಅಥವಾ ಚಂದ್ರಮಸ್ ಸ್ವರೂಪದ ಲೈಂಗಿಕ ಪಾತಳಿಯೊಡನೆ ಬದ್ಧವಾಗಿರುವುದನ್ನು ಯೂಂಗ್ (Jung) ಮಾನಸಶಾಸ್ತ್ರಜ್ಞ‌ನ ಹೇಳಿರುವುದಕ್ಕೆ ಭಾರತೀಯ ಪುರಾತನ ಶಬ್ದಪ್ರತಿಮೆ, ಅಂತರ್ ಅಂಗ: ಅಂಗನಾ ಸ್ತ್ರೀ ಸಂಕೇತ; ಅಂತಃಕರಣ ಪುಲ್ಲಿಂಗ ಇಂದ್ರಿಯಸೂಚಕ ಬೆಂಬಲಿಸುತ್ತಿದೆ. 'ಹೃದಯೇ ಪುರುಷಃ' ಎಂಬ ಉಪನಿಷದ್ವಾಕ್ಯವು ಹೃದಯ ಅಂಗ (ನಾ) ಸೂಚಕ; ಇದು ಗಂಡಿಗಿಂತ ಹೆಣ್ಣಿಗೆ ದೊರೆವ ಅನುಭಾವ ಸೂಚಕವೇ ಆಗುತ್ತದೆ. ಇಲ್ಲಿ ಒಂದು ಮೋಸದ ಕಣ್ಕಟ್ಟಿನ ಎಡೆಯಿದೆ. ಮನಸ್ಸು : ಚಂದ್ರ ಎಂಬ ಈ ಸಾಂಕೇತಿಕತೆಯ ಅರ್ಧಸತ್ಯ! ಮನ್>ಮತಿ, ಮನೀಷಿ ಈ ಶಬ್ದಪ್ರತಿಮೆ, ಮನು, ಮಾನವ Man ಈ ಶಬ್ದಪ್ರತಿಮೆಯ ಮೂಲದೊಳಗಿನ 'ಮನ್' ಇದು ಪ್ರಕಾಶತತ್ತ್ವದ ಪಾತಳಿ ಸೂಚಕವಿರುವುದು ನಿಶ್ಚಿತ.

ಆಧುನಿಕ ಮಾನಸಶಾಸ್ತ್ರವೂ ಹೇಳುತ್ತದೆ : ಚಾಂದ್ರಭೂಮಿಕೆಯ ಮನೋಭಾವ ರಾತ್ರೀಕಾಲದಲ್ಲಿ ತಲೆಯೆತ್ತಿ ಪ್ರಭಾವಶಾಲಿಯಾಗುವ Unconscious or Subconscious ಸುಪ್ತಚೇತನ. ಪ್ಲೇಟೋ ಸಹ ಇದನ್ನು ವರ್ಣಿಸಿರುವ ರೂಪಕ ಸಂಸ್ಮರಣೀಯವಿದೆ : Lawless beast of nature; ಇದು ರಾತ್ರೀಕಾಲದಲ್ಲಿ ಮಾನವರ, ವಿಶೇಷವಾಗಿ ನರರುಗಳ ನಿದ್ದೆಯನ್ನು ಹಾಳುಮಾಡುತ್ತದೆ. ಇದನ್ನು, ಪುನರ್‌ವಿಚಾರ, ವಿಮರ್ಶೆ ಧ್ಯಾನ ಮತ್ತು ಮನನದಿಂದ ನಿಯಂತ್ರಿಸಿಕೊಳ್ಳಲು ಶಕ್ಯವಿದೆ ಎಂಬ ಸಲಹೆ ಮನೋವಿಶ್ಲೇಷಣ ಶಾಸ್ತ್ರದ 'ಧಂದೆ', ಬೆಳೆಯಲು ಆತಂಕಕಾರಿಯಾಗಿದೆ. ಎರಿಕ್‌ಫ್ರಾಮ್‌ನಂತಹ ವಿಚಾರವಂತನಿಗೂ ಪ್ಲೇಟೋನ ಈ ಸಲಹೆ ಹಿಡಿಸಿಲ್ಲ.

ಚಂದ್ರನೊಡನೆ ಸಂಬಂಧ 'ಮನಸ್ಸು' ಇರುಳುಗಣ್ಣನ್ನು ಆಳುತ್ತದೆ. ಸಾಹಿತ್ಯಸೃಷ್ಟಿಗಾಗಿ ಸ್ವಪ್ನ - ಸುಷುಪ್ತಿಯಲ್ಲಿ ಸೇರಲು ಚಾಂದ್ರಮನೋಭಾವದ ಪ್ರಭಾವಕ್ಕೆ ಒಳಗಾಗುವ ಅನಿವಾರ್ಯತೆಯಿದೆ. ಮಾನವ ಜೀವನ: ಸಂಸ್ಕೃತಿಗೆ ಮಾರಕವಾಗದೇ ಪೋಷಕವಾಗುವ ರೀತಿಯಲ್ಲಿ ಈ ಮನೊಭಾವದ ಪ್ರಯೋಜನ ಪಡೆವ ಸಿದ್ಧಹಸ್ತರ ಪ್ರತಿಭೆಯ

ಸಾಹಿತ್ಯಕಲಾಸೃಷ್ಟಿ ಆ ಸಂಸ್ಕೃತಿಗೆ ವರದಾನದಂತೆ. ಇದಕ್ಕೆ ಪ್ರತಿಯಾದದ್ದು ಘೋರಶಾಪವೇ ಸರಿ. ಇದು ಹಾಗಿರಲಿ, ಮುಖ್ಯ ಸಂಗತಿಯೆಂದರೆ ಚಂದ್ರಮಾ ಮನಸೋ ಜಾತಃ ಎಂಬ ಋಗ್ವಚನದ ಮೋಸವು ಇಲ್ಲಿ ಬಯಲಿಗೆ ಬರುತ್ತದೆ. ನಿಜವೇ ನೋಡಿಕೊಳ್ಳಿ.

ಮಾನವನು ಸೂಕ್ಷ್ಮಪ್ರಮಾಣದ ಪ್ರತಿವಿಶ್ವವಾಗಿದ್ದಾನೆ. ಈ ದೇಹದಲ್ಲಿ- ಭೂಃ (ಭೂಮಿಗೆ ತಾಗುವ ಅಡಿ ತೊಡೆಯ ವರೆಗೆ) ಭುವಃ=ಅಂತರಿಕ್ಷಂ ಭೂಮಿಯ ಮೇಲ್ಗಡೆಯ ಅಂತರಿಕ್ಷ-ಸ್ಥ ಅವಕಾಶದ ಟೊಳ್ಳು ಎಂದರೆ ದೇಹದ ನಡವಣ ಭಾಗ; 'ಮಧ್ಯಲೋಕ'. ಇದು 'ಮಧ್ಯಗೇಹ ಭಟ್ಟರ ಅಮೃತಲೋಕ'; ಈ 'ಭಟ್ಟರ' ಕೃಪೆಯಿಂದ ಪೈಥಾಗೊರಾಸ, ದಕ್ಷಿಣಕಪರ್ದ ವಸಿಷ್ಠ ಮುಂತಾದವರು ಅವತರಿಸಿದ್ದಾರೆ. ಈ ಲೋಕೊದ್ಧಾರಕ್ಕಾಗಿ. ಆದಿತ್ಯ : ಪುರಿಶಯನ ಸ್ಥಾನವಿದು, ಚಂದ್ರಮಂಡಲವು ಇಲ್ಲಿಯೇ ಇರಬೇಕಾಗುತ್ತದೆ. ಪೈಥಾಗೊರಾಸನು ಸೃಷ್ಟಿಸಿರುವ Counter earth = ಕುಮಾರೀ ಭೂದೇವಿ ಈ ಶಬ್ದಪ್ರತಿಮೆ ಹೃದ್ಯವಿದೆ. ಇದು ಚಂದ್ರನ ಪರ್ಯಾಯ ಎಂದು ಆ ಸಂಪ್ರದಾಯವೇ ಸ್ಪಷ್ಟೀಕರಿಸಿದೆ. ಚಾಂದ್ರಭೂಮಿಕೆಯ ಪ್ರೇರಣಾ ಕೇಂದ್ರ ಇಲ್ಲಿದೆ. ಆದುದರಿಂದ, ದೇಹರೂಪ ಭೂಲೋಕದ ಈ Geography ಯಲ್ಲಿ ಆಕಾಶದ=ಪ್ರಕಾಶತತ್ತ್ವದ=ಸ್ವರ್ ಪಾತಳಿಯ ಉತ್-ತಮ ಎಡೆ ತಲೆಯೇ ಆಗಲಿಕ್ಕೆ ಬೇಕು. 'ಜಾತ' [ಹೊಸದಾಗಿ ತಲೆಯೆತ್ತಿದ] ವೇದ [ರೂಪ] ಅಗ್ನಿ ಇರುವುದು ಸ್ವರ್ ಪಾತಳಿಯ ಮೇಲೆ. Superorganic ದಿವ್ಯ ಆಕಾಶತತ್ತ್ವದ ಸಾಂಕೇತಿಕ ಕಿರಣ ಶಲಾಕೆ ಫಕ್ಕನೆ ತಾಗಿ ಪ್ರಜ್ಞಾ: ಪ್ರಕಾಶ [Nous] ಕಾಣಿಸಿಕೊಳ್ಳುವ ಎಡೆಯು=ನೇತ್ರ ಇರುವ ಎಡೆಯು (Conscience) ಇಲ್ಲಿದೆ.

ಆದರೆ, 'ಸಹಸ್ರದಲ ಕಮಲ' ಎಂಬ ಸಾಂಕೇತಿಕ ಶಬ್ದ ಪ್ರತಿಮೆಯು ಯೋನಿಸೂಚಕವಿದೆ. ಇದು (ಸಂ) ಯೋಗ ಸಿದ್ಧಿಯ ಆಮಿಷವನ್ನು ಸಿದ್ಧ ಸಂಪ್ರದಾಯವು ಕಲ್ಪಿಸಿದೆ. ಈ ಮೋಸ ನೋಡಿಕೊಳ್ಳಿ: ಬುಧ್ನ್ಯದ [ಬುಡದ] ಅಹಿ [ಪಾಪಿ] ನಾಗನು ಬೆನ್ನಲುವುಗಳ ಮಾರ್ಗವಾಗಿ ಇಲ್ಲಿ ಬಂದು ತತ್-ಮಯಾನಂದಭೋಗಿಸುತ್ತಾನಂತೆ. ಋಗ್ವೇದದಲ್ಲಿ ಬರುವ 'ನಚಿಕೇತಾಗ್ನಿ'ಯ ಸೂಕ್ತದಲ್ಲಿ 'ಜಾತವೇದ ಅಗ್ನಿ'ಯನ್ನು ಬೃಹದುಲ್ಬದಲ್ಲಿ [Vulva] 'ದೇವಯಾನ'ದಲ್ಲಿ ಹೊಗಿಸಿದ್ದಾಗಿದೆ? ಇಂಥ 'ಪವಿತ್ರ' ವೇದೋಪನಿಷತ್ತು, ಪಂಚಮವೇದ ಭಾರತೀಯರ ಸ್ಫೂರ್ತಿಸ್ಥಾನ, ಮಾರ್ಗದರ್ಶಕ ಉಪದೇಶದ ಗ್ರಂಥ ಆಗಿರುವಾಗ ಭಾರತದ ಪ್ರತಿದಿನದ ಇತಿ-ಹ-ಆಸ ಮತ್ತು ಒಟ್ಟಿನ ಇತಿಹಾಸ, ಈಗ ಅನುಭವಕ್ಕೆ ಬರುತ್ತಿರುವುದಕ್ಕಿಂತ ಬೇರೆ ಯಾವ ಬಗೆಯದು ಇದ್ದೀತು?

ಇಂಥ ಗ್ರಂಥಗಳು ರೂಪಿಸಿರುವ (ಅ) ಪ್ರಜ್ಞಾ(ನೇತ್ರದ) ಲೋಕದಲ್ಲಿ 'ರಾಮ ಬರಲಿ, ರಾವಣ ಬರಲಿ, ರಾಗಿ ಬೀಸೋದು ತಪ್ಪಿಲ್ಲ' ಎಂಬ ಗಾದೆ (ವೇದ) ರೂಢಿಯಲ್ಲಿ ಇದೆ. ಈ ಗಾದೆಯು ಮೇಲಣ ವಿವರಣದಲ್ಲಿ ತಥ್ಯ ಸತ್ಯವಿದೆ ಎಂದು ಸಾರುತ್ತದೆ. 'ಸತ್ಯಂ ಏವ ಜಯತಿ ನಾನೃತಂ! ಎಂಬ ಉತ್‌ತಮ ಸಂದೇಶಕ್ಕೆ 'ಸತ್‌ತ್ಯೇನ ಪಂಥಾಃ ವಿತತಃ ದೇವಯಾನಃ 'ದಕ್ಷಿಣಾ ಮೂರ್ತಿ' ದಕ್ಷಿಣಕಪರ್ದನ ದೇವಯಾನ ಸಂಜೀವಿನಿ ಮಂತ್ರಕ್ಕೇ ಗೆಲುವು ಎಂಬ ಸ-ರಸ ವಾಕ್ಯವನ್ನು ಸೇರಿಸಲಾಗಿದೆ! ಭಾರತೀಯರ ಬ್ರೆನ್‌ವಾಶದಿಂದಾಗಿ ಇದು ಅವರಿಗೆ ಕಂಡಿಲ್ಲ. 'ಪಶ್ಯನ್ ಅಪಿ ನ ದದರ್ಶ ವಾಚಂ ಶೃಣ್ವನ್ ಅಪಿ ನ ಶೃಣೋತಿ' ಇದು ಯಾತುಪ್ರಭಾವಕ್ಕೆ ಒಳಗಾದವರ ಲಕ್ಷಣವಾಗಿದೆ.

ರಾಜವಿದ್ಯಾ ರಾಜಗುಹ್ಯದ ಸ್ವರೂಪ

ಪವಾಡ ಚಮತ್ಕಾರಗಳ ತಳಪಾಯ ಶೋಧಿಸುವ ಸ್ತುತ್ಯ ಸಂಕಲ್ಪವನ್ನು ಬೆಂಗಳೂರು ವಿಶ್ವ-ವಿದ್ಯಾಲಯವು ಕೈಕೊಂಡಿದೆ. ಈ ಪವಾಡ ಚಮತ್ಕಾರಗಳನ್ನು ಪುರಾತನರು 'ಯಾತುಕೃತ್ಯ' ಎಂದು ಹೆಸರಿಸಿದ್ದಾರೆ. ಇದು ಯಕ್ಷಿಣೀವಿದ್ಯೆ ಅಥವಾ 'ಸರ್ಪ ದೇವಜನವಿದ್ಯೆ' ಎಂಬ ಹೆಸರಿನಲ್ಲಿ ವೇದೋಪನಿಷತ್ತುಗಳಲ್ಲಿ ಅಡಗಿಕೊಂಡಿದೆ. ಇದರ ಸ್ಥೂಲ ಸಂಶೋಧನವು ಆಗಿ ನೂರು ವರ್ಷ ಉರುಳಿದವು. ಮುಂಬೈ ಶಾಖೆಯ Royal Asiatic society ಪತ್ರಿಕೆಯಲ್ಲಿ ಈ ಶೋಧ ಪ್ರಕಟವಾಗಿದೆ.[1]

ಈ ಲೇಖದ ಹೆಸರು "Serpent Worship in Western India"; ಆದರೆ, ಮಹಾನ್ ವಿದ್ವಾಂಸರಾದ ಶ್ರೀ ವಿಶ್ವನಾಥ ನಾರಾಯಣ ಮಂಡಲಿಕರು, ಈ ನಾಗಪೂಜೆಯ ಪ್ರಾಚೀನತೆಯನ್ನು ಹುಡುಕಿ, ವೇದದಲ್ಲಿಯೆ ಇರುವ 'ಯಾತು' (Black-magic) ಮಂತ್ರಗಳ ಮೇಲೆ ಬೆರಳಿಟ್ಟು ತೋರಿಸಿದ್ದಾರೆ. 'ಸಾರ್ಪರಾಜ್ಞೀ ಸೂರ್ಯೋ ವಾ' ಈ ಸೂಕ್ತದ ಮಂತ್ರಗಳನ್ನು ಜಾರಣ, ಮಾರಣಾದಿ ಅಭಿಚಾರ ಕೃತ್ಯಗಳಲ್ಲಿ ಇಂದಿಗೂ! ವಿನಿಯೋಗಿಸಲಾಗುತ್ತದೆ. ಇಂದಿಗೂ! ಸರ್ಪ-ಸೂರ್ಯ ಈ ಪ್ರತಿಮೆ ಲಿಂಗ=ಯೋನಿ ಸೂಚಕವಾಗಿದೆ. ಇದರಲ್ಲಿ 'ಸೂರ್ಯ'ನ ಬದಲು 'ಚಂದ್ರ' ಇದ್ದುದಾಗಿ ಸುಮೇರಿಯನ್ ಮುಂತಾದ ಕಡೆಯ ಯಾತುಮಂತ್ರಗಳ ಮೂಲಕ ದೃಢಪಟ್ಟಿದೆ. ಇಂದಿಗೂ ಗಾರುಡೀ ವಿದ್ಯಾಸಾಧಕರು ಹುಣ್ಣಿಮೆ, ಅಮಾವಾಸ್ಯೆ, ಗ್ರಹಣಕಾಲದಲ್ಲಿ ಜಲಾಶಯ ತೀರ್ಥಕ್ಕೆ ಹೋಗಿ ಸಾಧನೆ ನಡೆಸುತ್ತಾರೆ. ಈ ಸಾಧನೆಯಲ್ಲಿ 'ಸ್ತಂಭ ಕಾಲ;' ವೃತ್ತ-ಮಧ್ಯ-ಸ್ತಂಭರೂಪೀ ಕಾಲದ ಉಪಾಸನೆ ಮುಖ್ಯ ಜಲಸ್ತಂಭನ ಸಾಧನೆಯಿಂದಾಗಿ, ಕೆಲವೊಂದು ಚಮತ್ಕಾರ ಸಿದ್ಧಿಯ ಶಕ್ಯತೆಯನ್ನು, ನಮ್ಮ ಸಂಪ್ರದಾಯ ಮಾತ್ರವಲ್ಲ, ಪಾಶ್ಚಾತ್ಯ ಒರ್ಫಿಕ್‌ಪಂಥ, ಡೈಯೋಸಿಸ್ ಪಂಥಗಳೂ ಒಪ್ಪಿವೆ. ಇಂದಿನ ಏನೆಲ್ಲ ಕುಮಾರ-ಕುಮಾರೀ ಸಂಪ್ರದಾಯಗಳ ಉಗಮವು 'ವತ್ಸ-ಅಯನ' 'ನಾರ ಆಯನ' ಉಪಾಸನೆಯಲ್ಲಿದೆ. ಮೊಟ್ಟಮೊದಲಲ್ಲಿ. 'ಯೋಗ' ಸಿದ್ಧಿಗಳ ಪ್ರಯೋಗ ನಡೆದದ್ದು ವತ್ಸ-ಅಯನ, ನಾರ-ಅಯನ ಉಪಾಸಕರಿಂದಲೇ. 'ವಜ್ರೋಲಿ' ಸಿದ್ಧಿಯ ಹುಟ್ಟು ಇದಕ್ಕೆ ನಿದರ್ಶನ.

ಗೀತೆಯಲ್ಲಿ, 'ವಿಶ್ವಾಽಧ್ಯಕ್ಷ'ನ ಮೋಹನ ಅಂಗದ 'ಅಧಿ-ಅಕ್ಷ'ದ ಉಪಾಸನೆ ಹೇಳಿದೆ. ಆದಕಾರಣ ಪವಾಡ ಚಮತ್ಕಾರಗಳ ಸಾಧನೆಯ ಒಂದು ಪ್ರಕಾರವನ್ನು ಬೆಳಕಿನಲ್ಲಿ ತಂದು ತೋರಿಸುವುದು ಅವಶ್ಯವೆನಿಸಿ ಇದನ್ನು ಸಂಕ್ಷಿಪ್ತವಾಗಿ ಬರೆದದ್ದಾಗಿದೆ. ಮಿತ್ರವರ್ಯ ಶ್ರೀ ಹೊಂಬಾಳಿ ಬಲರಾಮರ ಬೆಂಬಲವಿಲ್ಲದೆ, ಋಗ್ವೇದಸಾರ : ನಾಗ ಪ್ರತಿಮಾ ವಿಚಾರ ಪ್ರಾರಂಭವಾಗಲು ಶಕ್ಯವಿದ್ದಿಲ್ಲ. ಈಗಲೂ ಅವರ ಪ್ರೋತ್ಸಾಹದ ಬಲದಿಂದ ಇದನ್ನು ಬರೆದು ಆಗಿದೆ. ಇದನ್ನು ಕುರಿತು ಇನ್ನೂ ಬಗೆಬಗೆಯಲ್ಲಿ ಬರೆಯಬೇಕಾಗಿದೆ. ನಮ್ಮ ಸಂಸ್ಕೃತಿಯ ನಿಜ ಸ್ವರೂಪವು

ಗೊತ್ತಾಗಲು 'ವಿವಸ್ವನ್ ಮನುಪ್ರಣೀತ ಮಾನವ -ಧರ್ಮವು' ಯಾವ ಯಾತುಕೃತ್ಯಗಳಿಂದ ಬೆಲೆಗೇಡಾಗಿದೆಯೊ, ಆ ಯಾತುಕೃತ್ಯಗಳ ಸ್ವರೂಪವನ್ನು ಬೆಳಕಿನಲ್ಲಿ ತಂದು ತೋರಿಸುವುದು 'ಪ್ರಕಾತತ್ತ್ವ' ಉಪಾಸಕರ ವಿಶ್ವವಿದ್ಯಾಲಯಗಳ ಕರ್ತವ್ಯವಾಗುತ್ತದೆ. ಆದರೆ ನಮ್ಮ ವಿಶ್ವವಿದ್ಯಾಲಯಗಳಲ್ಲಿ 'ಪವಾಡ ಚಮತ್ಕಾರ'ಗಳ ಉಪಾಸನೆಗೇ ಪ್ರೋತ್ಸಾಹ ದೊರೆಯುತ್ತಿರುವುದು ದುರ್ದೈವದ ಸಂಗತಿ. ಭಾರತದ ಇಂದಿನ ಈ ಪ್ರವಾಹಪತಿತ ಸ್ವರೂಪದ ಜೀವನ ರೀತಿಗೆ 'ಸ್ತಂಭಕಾಲ'ದ= ಮೂಲಸ್ತಂಭದ ಉಪಾಸಕರೇ ಕಾರಣರು. 'ಭಗವತ್' ಗೀತೆಯ 'ಭಗವಂತ' ವಿಶ್ವದ ಅಕ್ಷ caxle = ಅಧ್ಯಕ್ಷನೆಂದು ಆರಾಧಿಸಲ್ಪಡುತ್ತಿರುವುದೇ ಇದಕ್ಕೆ ಪ್ರಮಾಣ. ಪವಾಡಗಳ ಮೂಲ ಕೇಂದ್ರವೇ ಇಲ್ಲಿದೆ.

'ಋಗ್ವೇದಸಾರ : ನಾಗಪ್ರತಿಮಾ ವಿಚಾರ' ಈ ಗ್ರಂಥವನ್ನು ಬರೆಯುವಾಗ ಒಂದು ಮಾತು, ಮನಸ್ಸನ್ನು ಸೆಳೆಯಿತು. ಭಾರತದಲ್ಲಿ ಹಿಂದೊಮ್ಮೆ ವಿವಸ್ವನ್ 'ಮನುಪ್ರಣೀತ ಮಾನವ ಧರ್ಮ' ಎಂಬ ಒಂದು ಸಂಪ್ರದಾಯವು ಪ್ರಚಲಿತವಿತ್ತು, ಆದರೆ, ಅದನ್ನು ಸ್ವಾಯಂಭುವ ಮನುಪ್ರಣೀತ 'ಮಾನವ ಧರ್ಮ' ನೆಲಕ್ಕೆ ಉರುಳಿಸಿತು. ಆದರೆ, ನಾನಿದನ್ನು ಏನೂ ಪುರಾವೆ ಇಲ್ಲದೆ ನಂಬುವದು ಹೇಗೆ? ಆಗ ಥಕ್ಕನೆ, ವೈವಸ್ವತ 'ಮನ್ವಂತರದ ನೆನಪು' ಬಂತು.

೧. "ಭರತಖಂಡೇ, ಜಂಬೂ ದ್ವೀಪೇ ಗೋದಾವರ್ಯಾಃ ದಕ್ಷಿಣೇ ತೀರೇ ವೈವಸ್ವತ-ಮನ್ವಂತರೇ" ಈ ಮಂತ್ರಪಾಠದಂತೆ, ಭರತಖಂಡದಲ್ಲಿ, ಇಂದಿಗೂ ವೈವಸ್ವತ ಮನ್ವಂತರವೇ ಇದೆ, ಎಂದು ಅರ್ಥವಾಗುತ್ತದೆ. ಹಾಗಾದರೆ, ವೈವಸ್ವತ ಮನ್ವಂತರವು ಇದ್ದೂ ವಿವಸ್ವತ್ ಮನುಪ್ರಣೀತ 'ಮಾನವ ಧರ್ಮವು' ಇಲ್ಲ, ಎನ್ನಲು ಕಾರಣಗಳೇನು? ಇದು, ವೈವಸ್ವತ ಮನ್ವಂತರವು ಇದ್ದರೂ, ಈಗ ರೂಢಿಯಲ್ಲಿ ಇರುವ ಮನುಸ್ಮೃತಿ (ಧರ್ಮಶಾಸ್ತ್ರ) ಸ್ವಾಯಂಭುವ ಮನುವಿನದ್ದು! ಈ ಗತ್ತುಗಾರಿಕೆ ಯಾರದ್ದು?

೨. ವಿವಸ್ವಂತನನ್ನು ಹಿಂದೆ ತಳ್ಳಿರುವ ಈ ಸ್ವಯಂಭೂ ಸ್ವಾಯಂಭು ಯಾರು? ಪ್ರಚಲಿತ ಋಗ್ವೇದದಲ್ಲಿ, ಬಗೆಬಗೆಯ ಹೆಸರಿನಲ್ಲಿ, ಈ 'ಸ್ವಯಂಭೂ' ದೈವವು ಅಡಗಿದೆ! ಉದಾ : 'ತನೂ-ನಪಾತ್'; ಸಂಶೋಧಕರು, 'Son of himself' ಎಂದು 'ತನೂ-ನಪಾತ್" ಈ ಹೆಸರಿನ ಅಕ್ಷರಶಃ ಅರ್ಥ ಹೇಳಿದ್ದಾರೆ. 'ತನ್ನ ಶರೀರದಿಂದ (ಲಿಂಗದಿಂದ) ತಾನೇ ಹುಟ್ಟಿದವನು', ಎಂದರೂ ಒಂದೆ; 'ಸ್ವಯಂಭೂ' ಎಂದರೂ ಒಂದೇ ತಾನೆ?

೩. ತನೂ-ನಪಾತ್ 'ಹಿರಣ್ಯ ಗರ್ಭ'=ಪ್ರಜಾಪತಿ ಎಂಬ ಇನ್ನೊಂದು ಹೆಸರು! 'ಹಿರಣ್ಯಗರ್ಭಃ ಸಮವರ್ತತ ಅಗ್ರೇ, ಭೂತಸ್ಯ ಜಾತಃ ಪತಿಃ ಏಕಃ ಆಸೀತ್' ಏನೆಲ್ಲ ಪ್ರಾಣಿಮಾತ್ರ (ಭೂತ ಜಾತ) ಹುಟ್ಟುವ ಮುಂಚೆಯೇ 'ಅಗ್ರೇ' ಇರುವ ದೇವರ, 'ಸ್ವಯಂಭುವೇ' ಇರಲಿಕ್ಕೆ ಬೇಕಷ್ಟೆ? ಹಾಗಾದರೆ, ಈ 'ಸ್ವಯಂ-ಭು'ತನ್ನ ಶರೀರದಿಂದ ತಾನೇ ಹುಟ್ಟುವ ಈ ದೇವರು ಯಾರು?

ಹಿರಣ್ಯಗರ್ಭನ ಸೂಕ್ತದಲ್ಲಿಯೇ ಹೇಳಿದೆ : 'ಜಜಾನ ಚಂದ್ರಾಃ ಆಪಃ' ಎಂದು. ಚಾಂದ್ರಾಃ (ಶುಭ್ರ) ಆಪ : ರಸದ ಈ ದೈವತವನ್ನು ಅಂತರಿಕ್ಷಸ್ಥ ಬಾಲಚಂದ್ರ ಎಂದೂ ಹೇಳಲಾಗುತ್ತದೆ! ಅಮಾವಾಸ್ಯೆಗೆ ಪ್ರ-ಲಯ (ನಾಶ)ವಾಗಿ, ಬಳಿಕ ಪ್ರತಿಪದ್ಯೆಯಂದು, ಮರಳಿ (ಪ್ರತಿ) ಪದ (ಅಡಿ) ಇಡುವ ಈ 'ಬಾಲಚಂದ್ರ'ನೆ ಸ್ವಯಂಭೂದೇವರು! ಇವನು ತನ್ನ ಮೃತ ಅಂಡ: ದೇಹದಿಂದ ತಾನೇ ಹುಟ್ಟುತ್ತಿಲ್ಲವೇ? ವೇದದಲ್ಲಿ ಬರುವ ಮೃತಾತ್ ಅಂಡಾತ್ ಜಾತನು ಎಂಬ 'ಮಾರ್ತಾಂಡ'ನು ಎಂದರೂ ಅವನು ಈ ಚಂದ್ರನೇ ಆಗಿದ್ದಾನೆ.

ಆದರೆ, 'ಮಾರ್ತಾಂಡ' ಎಂದರೆ 'ಸೂರ್ಯ'ನು ಎಂದು ನಂಬಿಸಿರುವಲ್ಲಿ ಶುದ್ಧ ಮೋಸವಿದೆ ಇಂದಿನ ವೇದದಲ್ಲಿ ಮೋಸವಾಗುವ ಯಾತು, 'ಮೃತಾತ್ ಅಂಡಾತ್' ಹುಟ್ಟುವ ದೃಶ್ಯವು, ಪ್ರತಿತಿಂಗಳೂ ಅಂತರಿಕ್ಷದಲ್ಲಿ ಬಾಲಚಂದ್ರನ ರೂಪದಲ್ಲಿ ಕಾಣುತ್ತಿಲ್ಲವೇ? ಆದರು, ಇದನ್ನು 'ಸೂರ್ಯ' ಎಂದು ನಂಬ ಹೇಳುವ ಗ್ರಂಥ, ವ್ಯಕ್ತಿ ಯಾರೇ ಇದ್ದರೂ ಇದನ್ನು ಒಪ್ಪುವಲ್ಲಿ ಆತ್ಮಹಾನಿಯೇ ಉಂಟು! ಭಾರತೀಯರ ಬುದ್ಧಿವಂತಿಕೆಗೆ ಹಾನಿ! ಮಾರ್ತಾಂಡನನ್ನು 'ಸೂರ್ಯ' ಎಂದು ನಂಬಿದ್ದು ಭಾರತೀಯರ ಬ್ರೇನ್‌ವಾಶ್ ಆಗಿರುವುದರ ಲಕ್ಷಣ?

ರಾಮಚಂದ್ರನನ್ನು 'ಸೂರ್ಯವಂಶಲಲಾಮ' ಎಂದು ಕಾಳಿದಾಸನೇ ವರ್ಣಿಸಿರಲಿ, ವಾಲ್ಮೀಕಿಯೇ ಹೇಳಿರಲಿ, ಕವಿಗಳಿಗೆ 'ಸುಳ್ಳನ್ನು ಖರೇ' ಎನಿಸುವಂತೆ ಸಂಭ್ರಮ ನಿರ್ಮಿಸುವ ಶಕ್ತಿಯುಂಟು. ಈ ಸುಳ್ಳು ಕೆಲವೊಮ್ಮೆ 'ಕಾವ್ಯ-ಸತ್ಯ' ಇರಬಹುದು. ಇಲ್ಲವಾದರೆ, ಮಾಯಾಜಾಲದ ಮಾತಿನ ಚಮತ್ಕಾರವೂ ಇರಬಹುದು. 'ಭಗವತ್' ಗೀತೆಯಲ್ಲಿಯೂ ಇಂಥ ಮಾತಿನ ಮಾಟವೇ ಇದೆ! ವಿವಸ್ವನ್ (ಪ್ರಕಾಶ ತತ್ವದ) ಮನುಪ್ರಣೀತ ಮಾನವಧರ್ಮವನ್ನು ಉರುಳಿಸಿರುವ ಸ್ವಯಂಭೂ >ಸ್ವಾಯಂಭುವ ಸಂಪ್ರದಾಯವು, ಚಂದ್ರೋಪಾಸಕ ಮಾಟಗಾರರದು. ಇದನ್ನು ಮನಗಾಣಲು

ತನೂ-ನಪಾತ್= ಹಿರಣ್ಯಗರ್ಭ ಇದರದೇ ಇನ್ನೊಂದು ಹೆಸರು, ಎಂಬ ಹಾಗಿನ ಈ ವೇದದಲ್ಲಿಯೇ ಇರುವ (ವಿರಾಟ್) 'ಪುರುಷ'ನ ನಿಜಸ್ವರೂಪವನ್ನು ಅರಿಯುವದು ಅವಶ್ಯ. ಈ (ವಿರಾಟ್) 'ಪುರುಷ ದೈವತದ ದರ್ಶನ' ತಕ್ಕೊಳ್ಳಿ: 'ಭಗವಂತ' ಎಂದರೂ ಈತನೆ! 'ಸಹಸ್ರಶೀರ್ಷಃ' ಎಂಬ ವಿಶೇಷಣಗಳ ವೈಶಿಷ್ಟ್ಯಪೂರ್ಣ ವರ್ಣನೆಯ ಈ 'ಪುರುಷ' ಯಾರು? ನಮ್ಮ ಸಂಸ್ಕೃತಿಯೊಳಗಿನ ಪರಂಪರಾಗತ ನಂಬುಗೆಗಳ ಬೆಳಕಿನಲ್ಲಿಯೇ ಈ 'ಪುರುಷ'ನ ಸಾಕ್ಷಾತ್ಕಾರ : ದರ್ಶನ ಲಭಿಸಬಲ್ಲುದು. ಈ ಸೃಷ್ಟಿಕ್ರಮವನ್ನು ಹೇಳುವಾಗ, ವೇದಾಂತದಲ್ಲಿ 'ಪುರುಷ' ಮತ್ತು 'ಪ್ರಕೃತಿ' ಎಂಬ ಎರಡು ತತ್ವಗಳು ಇದ್ದುದಾಗಿ ಹೇಳಲಾಗುತ್ತದೆ. ಪುರುಷ-ಪ್ರಕೃತಿ ಇವು 'ದಿಗಂಬರ ಮೂರ್ತಿ'ಗಳು! ಪ್ರಕೃತಿ (ಮಾತೆ=ಸ್ತ್ರೀ!) ಇದು ಸರ್ವಮಾನ್ಯ ಪ್ರತಿಮೆ. ಪ್ರಕೃತಿಯ ಹೊರಗೆ 'ಪುರುಷ' ಕಾಣಲು ದೊರೆಯನು! ಈ 'ಪುರುಷ' ಎಂಬ ಪದದಲ್ಲಿಯೇ ಈ ಅರ್ಥವೂ ಉಂಟು : ಪುರಿ-ಶಯ(ನ) ಪುರುಷ; ಪ್ರಕೃತಿ ಎಂಬುದು ಪುರಿ (ಸ್ತ್ರೀ) ಈ 'ಪುರಿ' ಒಳಗೇ 'ಶಯ(ನ)' ಮಾಡಿರುವವನು 'ಪುರುಷ' ! ಗುಹೇಶ್ವರ 'ಹುತ್ತಿನೊಳಗಿನವನು' 'ವಾಲ್ಮೀಕಿ' ಈತ: 'ಭಗವಂತ' ಎಂದರೂ ಪುರುಷ ಎಂದೇ ಅರ್ಥ! 'ಭಗ' ಸ್ವರೂಪ ಈ ಪುರಿ' ಶಯನನು, ಭಗವಂತನು. 'ಭಗವಂತ'ನ ವರ್ಣನೆಯು ಇರುವ ಈ ಗೀತೆಗೆ, 'ಭಗವತ್' ಗೀತೆ ಎಂದಿರುವಲ್ಲಿ ಔಚಿತ್ಯವು ಇಲ್ಲದಿಲ್ಲ.

(ಪುರಿ) ಶಯ=ಪುರುಷ ಎಂಬುದು ಪ್ರಧಾನ ಅಂಗದಿಂದ ರೂಢಿಗೆ ಬಂದಿರುವ ಹೆಸರು, 'ಪುರುಷ' ಎಂದರೆ ಇಡೀ ವ್ಯಕ್ತಿಯಲ್ಲ; ಮೋಸ ಹೋಗಬೇಡಿ! ಇದು ಅಕ್ಷ=ವೃಕ್ಷ=ನಾಗರೂಪದ್ದು! ಫಟದ ಸರ್ಪ! ದೇವತಾ ಸ್ವರೂಪದ ಸಾಕ್ಷಾತ್ಕಾರವು, ಯಥಾರ್ಥ ಸ್ವರೂಪದಲ್ಲಿ ಆಗುವುದು ಅವಶ್ಯವಲ್ಲವೋ? 'ಅಂಗ' ಭಾಗದಿಂದ (Part for the whole) ಇಡಿಯನ್ನು ಗ್ರಹಿಸಿಕೊಳ್ಳುವ ವಾಡಿಕೆಯು ಉಂಟಷ್ಟೆ? ಪುರಿ-ಶಯ, ಪುರುಷ ಇದು, ಅಂಗ (ಪುರಿ), ಮತ್ತು ಲಿಂಗ (ಶಯನ ಮಾಡಿದ್ದು) ಇವೆರಡರ ಅವಿಗಲಿತ, ಏಕಾತ್ಮಕ ಸ್ವರೂಪದ ಸಾಕ್ಷಾತ್ಕಾರ ಮಾಡಿಸಬಲ್ಲ, ಸಂಯುಕ್ತ ದೈವತನಾಮ.

ಭಗ-ವಂತ (ಪುರುಷ) ಕೇಂದ್ರದಲ್ಲಿ ಇರುವ 'ಭಗವತ್' ಗೀತಯ ಆಶಯವು ಏನು? ಇದರ ಸ್ಪಷ್ಟೀಕರಣವು ಇನ್ನೂ ಸ್ವಲ್ಪ ಬೇಕೆ? ಆದರೆ, ಒಂದು ಎಚ್ಚರ! ವಿವಸ್ವನ್ (ಪ್ರಕಾಶತತ್ವದ) ದೈವತ, ಸವಿತೃ (ಜ್ಞಾನ-ಧೀ-ಪ್ರೇರಕ) ದೈವತಸೂರ್ಯ, ಇದನ್ನು 'ಆದಿತ್ಯ' (ಚಂದ್ರ=ರಾತ್ರೀ-ಸೂರ್ಯ) ಎಂದು, ಅರ್ಥ ಹೇಳದೇ ನಂಬಿಸಲಾಗಿದೆ! 'ರವಿ'ವಾರವನ್ನು 'ಆದಿತ್ಯ'ವಾರ ಎಂದು ಹೇಳುವ ವಾಡಿಕೆಯು ವೇದದಷ್ಟು ಪ್ರಾಚೀನವಿದೆ! ಪ್ರಕಾಶತತ್ವದ ದೈವತಗಳನ್ನು 'ಆದಿತ್ಯ' ಎಂದು ಕರೆಯುವ ಚಟದಿಂದಾಗಿ ಭಾರತೀಯರು ಮಾತಿನ ಮಾಟಕ್ಕೆ, ಭಾನಾಮತಿ ತಂತ್ರದ (Black Magic) ಪ್ರಚಾರಕ್ಕೆ ಒಳಗಾಗಿದ್ದಾರೆ. ಪುರಿಶಯ : ಗುಹೇಶ್ವರನ ಆರಾಧನೆಯು ಹಗಲು-ಬೆಳಕಿನಲ್ಲಿ

ನಡೆವರೆ ಹೇಗೆ? ಆದಕಾರಣ ಪ್ರಕಾಶತತ್ವದ ದೈವತ ಆದಿತ್ಯವಾಗಲೇಬೇಕಾಯಿತು. ಸೂರ್ಯನೂ ನಾರ ಅಯನ ನಾಗುತ್ತಾನೆ!. ಭಾರತವು ಇಂದು ಸಂಪೂರ್ಣ ಕಗ್ಗತ್ತಲಲ್ಲಿ: ಬಧಿರ ಪ್ರಜ್ಞೆಯಿಂದಾಗಿ.

ಮಾಟ : ಚಮತ್ಕಾರ : ಯಾತು: ಜಾದು ಎಂದರೇನು? ಇರುವುದೇ ಒಂದು; ಆದರೆ ಕಾಣುತ್ತಿರುವುದೇ ಇನ್ನೊಂದು! 'ಸೂರ್ಯ'ನು ಎದುರು ಇದ್ದೂ ಅವನನ್ನು 'ಆದಿತ್ಯ' ಎಂಬಲ್ಲಿ ಮಾಟಕ್ಕೆ ಒಳಗಾದ ಲಕ್ಷಣವಿದು! ನಾವು ಮಾಟಕ್ಕೆ, ಕಣ್ಕಟ್ಟಿಗೆ ಒಳಗಾಗದ್ದೇವೆ, ಎಂಬ ಎಚ್ಚರ, ನಮ್ಮಲ್ಲಿ ಭಲೆ-ಭಲೆ ಮೇಧಾವಿಗಳು, ಮಹಾಪುರುಷರು ಎಂಬುವರಿಗೂ ಇಲ್ಲ, ಎಂಬ ವಾಸ್ತವ ಸತ್ಯ ಹೇಳುವ ಈ ಪರಿಸ್ಥಿತಿ ಬಂದುದಕ್ಕೆ ಅತೀವ ವ್ಯಥೆ ನನಗೆ. ಆದರೆ ಸೂರ್ಯ-ನಾರಾಯಣ ಎಂದರೇನು? ನಾರಾಯಣ (ನಾರ ಅಯನ) ನಾಗ ಸರ್ಪ ಅಥವಾ 'ಅಶ್ವತ್ಥ' ನಾರಾಯಣ (ನರಸಿಂಹನೂ ಸಹ). ಹೀಗಿರುವಾಗ ಪ್ರಕಾಶರೂಪ ಸೂರ್ಯನನ್ನು 'ನಾರಾಯಣ' ಎಂಬ ಈ ವ್ಯಕ್ತಿಯ ಬಗೆಗೆ, ಎಷ್ಟೇ ಆದರವು ಇದ್ದರೂ ಈ ಮನುಷ್ಯನು ತನ್ನ ಕಮ್ಣಿನಿಂದ ನೋಡಿ ಅರಿಯುವ ಪ್ರಜ್ಞೆಗೆ ಎರವಾಗಿದ್ದಾನೆ. ಪ್ರಜ್ಞೆ (awareness) ಬಧಿರವಾಗಿದೆ, ಎಂದೇ ಅರ್ಥವಷ್ಟೆ? ನಾವು ಮಾಟಕ್ಕೆ ಒಳಗಾಗಿಲ್ಲ ವಷ್ಟೇ ಎಂಬ ಎಚ್ಚರ ಇಟ್ಟುಕೊಂಡು ಭಗವತ್ ಗೀತೆಯ 'ಆಶಯ' ಗ್ರಹಣದ ಪ್ರಯತ್ನವು ಆಗುವ ಆವಶ್ಯಕತೆ ಇದೆ.

ಟಿಪ್ಪಣಿ

೧. Viswanatha Narayana Mandalika, ***Serpent Worship in Western India,*** Pp. 161-200

'ಭಗ'ವತ್‌ಗೀತೆಯ 'ರಹಸ್ಯ' ಯಾವುದು

ಲೋಕಮಾನ್ಯ ಟಿಳಕರಿಗೆ ಕಂಡ ಗೀತಾ 'ರಹಸ್ಯ'ದ ಸ್ವರೂಪ ಸ್ವಲ್ಪದರಲ್ಲಿ ತಿಳಿಸಬಹುದಾಗಿದೆ. ಟಿಳಕರಿಗೆ ಗೀತೆಯಲ್ಲಿ ಕಂಡದ್ದು ಪ್ರವೃತ್ತಿಪರ ಜೀವನ ರೀತಿಯನ್ನು ಪ್ರೇರಿಸುವ ಸಂದೇಶ. ತಮ್ಮ ಈ ಅರ್ಥವನ್ನು, 'ಶಾಸ್ತ್ರೀಯ' ಪದ್ಧತಿಯನ್ನು ಸ್ವೀಕರಿಸಿ ವಿವರಿಸಿದ್ದಾರೆ. ಯಾವುದೇ ಉಪದೇಶದಲ್ಲಿ, ತತ್ತ್ವಪ್ರತಿಪಾದನೆಯಲ್ಲಿ ಒಂದು ಕ್ರಮ : ಪದ್ಧತಿ ಇರುತ್ತದೆ. 'ಉಪಕ್ರಮ' (ಪ್ರಾರಂಭ) ಮತ್ತು 'ಉಪಸಂಹಾರ' (ಕೊನೆ) ಇವರೆಡರಲ್ಲಿ ಅಂತಃಸಂಗತಿಯು ಇರುತ್ತದೆ, ಇರಲೇಬೇಕಾಗುತ್ತದೆ. ಗೀತೆಯ ಪ್ರಾರಂಭ ಮತ್ತು ಗೀತೆಯ ಕೊನೆ, ಇವೆರಡರಲ್ಲಿ ಸುಸಂಬದ್ಧತೆ ಇದ್ದುದಾಗಿ ಟಿಳಕರಿಗೆ ಎನಿಸಿತು. 'ಕುರುಕ್ಷೇತ್ರ'ದಲ್ಲಿ ಕಾದಲು ಬಂದ ನರವೀರನಿಗೆ ಉಪರತಿಯಾಗಿ, ನಾನು ಹಿಂಸೆ ಮಾಡಲಾರೆ, ಸ್ವಜನ ಸಂಹಾರ ನನ್ನಿಂದ ಆಗಲಾರದೆಂದು ಹೇಳಿ ಶಸ್ತ್ರವನ್ನು ಕೆಳಗೆ ಇಡುತ್ತಾನೆ. ಬಳಿಕ ಭಗವಂತನ ಉಪದೇಶದ ಪರಿಣಾಮವಾಗಿ ಕೊನೆಗೆ 'ನಷ್ಟೋ ಮೋಹಃ' 'ನನ್ನ ಭ್ರಾಂತಿ ದೂರವಾಯಿತು. ನೀನು ಹೇಳಿದಂತೆ ನಡೆಯುತ್ತೇನೆ' ಎಂದು ನರನು ಭಗವಂತನಿಗೆ ವಚನ ಕೊಡುತ್ತಾನೆ.

ಈ ಬಗೆಯ ಅಂತಃಸಂಗತಿಯ ಆಧಾರದಿಂದ, ಈ ಗೀತೆಯಲ್ಲಿ, ನರರಿಗೆ, ಪ್ರವೃತ್ತಿಪರ ಐಹಿಕ-ಜೀವನದ ಉಪದೇಶವಿದೆ, ಎಂದು ಟಿಳಕರು ಗ್ರಹಿಸಿದರು. ಈ ಪ್ರಪಂಚವೇ ಒಂದು 'ಕುರುಕ್ಷೇತ್ರ'. ಈ ನರ-ಪಾಮರರಿಗೆ, ಕಾಲಕಾಲಕ್ಕೆ 'ಕಿಂ ಕರ್ಮ, ಕಿಂ ಅಕರ್ಮ' ಎಂಬ ಪ್ರಶ್ನೆ ಕಾಡುತ್ತದೆ. ಇಂಥ ತೊಡಕಿನ ಸಂದರ್ಭದಲ್ಲಿ, ಜನ ಹೇಗೆ ನಡೆದುಕೊಳ್ಳಬೇಕೆಂಬ ಬಾಳಿನ ಹದವನ್ನು- ಗುಟ್ಟನ್ನು-ಭಗವಂತನು ಬೋಧಿಸಿದ್ದಾನೆ, ಎಂದು ಟಿಳಕರು ಬಗೆದರು. ಗೀತೆಯೊಳಗಿನ ಉಪದೇಶದ ಸಾರ 'ನಿಷ್ಕಾಮ ಕರ್ಮಯೋಗ' ಸ್ವಾರ್ಥದ ಕಾಮನೆಗಳನ್ನು ತೊರೆದು, ಲೋಕ ಹಿತಾರ್ಥವಾಗಿ ಬಾಳುವಲ್ಲಿ ಈ ಜೀವನದ ಕೃತಾರ್ಥತೆಯು ಉಂಟು, ಎಂಬುದು ಟಿಳಕರಿಗೆ ಕಂಡ ಗೀತಾರಹಸ್ಯ. ಬಾಳಿನಲ್ಲಿ ಕೆಲಬಾರಿ, ಆಪತ್ತು ಬರುತ್ತದೆ. ಧರ್ಮ, ಸಮಾಜ, ದೇಶ, ಇವು ಗಂಡಾಂತರದಲ್ಲಿ ಇದ್ದಾಗ, ಅನಿವಾರ್ಯವೆಂದು ಶಸ್ತ್ರಧಾರಿಯಾಗಿ ವಿರೋಧಿಸುವುದಕ್ಕೂ, ಗೀತೆಯ ಭಗವಂತನು ಸೂಚಿಸಿದ್ದಾನೆ.'ಯದಾ ಯದಾ ಹಿ ಧರ್ಮಸ್ಯ ಗ್ಲಾನಿಃ' ಆಗ ತಾನು 'ಪರಿತ್ರಾಣಾಯ ಸಾಧುನಾಂ, ವಿನಾಶಾಯ ಚ ದುಷ್ಕೃತಾಂ'- ದುಷ್ಟರ ವಿನಾಶಕ್ಕಾಗಿ ಶಸ್ತ್ರಧರಿಸುವ ಭಗವಂತನ ಈ ಆದರ್ಶವು ಟಿಳಕರ ಗಮನ ಸೆಳೆದಿತ್ತು. ಆದರೆ, ಮಹಾತ್ಮಾ ಗಾಂಧಿಯವರ ಶ್ರದ್ದೆಯಂತೆ, ಗೀತೆ ಅತ್ಯಂತ ಅಹಿಂಸೆ ಮತ್ತು ಈ ಅಹಿಂಸೆಯ ಆಧಾರದ ಸತ್ಯ, ಇದನ್ನು ಆಚರಿಸಲು ಬೋಧಿಸುತ್ತದೆ! ಹಾಗಾದರೆ ಯಾರ 'ಅರ್ಥ' ನಿಜ? ಟಿಳಕರದೇ ಗಾಂಧೀಜಿಯವರದೇ?

ಗಾಂಧೀಜಿಯವರು ಟಿಳಕರಂತೆ ಗೀತೆಯ ಅರ್ಥ ಹೇಳಿಲ್ಲ. ಆದರೆ, ಅನುದಿನವೂ ಅವರ ಗೀತಾಪಠನ, ನಡೆಯುತ್ತಿದ್ದುದನ್ನು ಲೋಕವೇ ಬಲ್ಲುದು. ಸೋಜಿಗವೆಂದರೆ ಗೀತೆ, ಟಿಳಕ, ಗಾಂಧೀ ಈ ಉಭಯ ದಿವ್ಯ

ವ್ಯಕ್ತಿಗಳಿಗೂ ಶ್ರದ್ಧಾಸ್ಥಾನ; ಸ್ಫೂರ್ತಿಯ ಕೇಂದ್ರ. ಆದರೆ, ಇಬ್ಬರಿಗೂ ಕಾಣುತ್ತಿರುವ ಅರ್ಥದ ಸ್ವರೂಪವೇ ಬೇರೆ ಬೇರೆ! ಗಾಂಧೀಜಿಯವರ ಅರ್ಥದಂತೆ, ಈ ಗೀತೆಯಲ್ಲಿ, ಕೌರವ ಪಾಂಡವರ ಯುದ್ಧವು, ಕೇವಲ ತೋರಿಕೆಯ ಮಾತು! ಈ ಯುದ್ಧವು ಶುದ್ಧ ಸಾಂಕೇತಿಕವಾಗುತ್ತದೆ! ಗೀತೆಯಲ್ಲಿ ಯಾರಿಗೆ ಯಾವ ಅರ್ಥ ಬೇಕೊ ಆ ಅರ್ಥವು ಅವರಿಗೆ ಸಿಕ್ಕಬಲ್ಲದೆಂದು ಹೇಳಲಾಗುತ್ತದೆ! ಶಂಕರ, ರಾಮಾನುಜ, ಮಧ್ವಾದಿಗಳು ಒಬ್ಬರನ್ನು ಇನ್ನೊಬ್ಬರು ಖಂಡಿಸಿ, ತಮ್ಮ ನಿಷ್ಕರ್ಷವೇ ಸಾಧು; ಇದುವೆ 'ಏಕಮೇವ ಅರ್ಥ' ಎಂಬ ಅಭಿನಿವೇಶ ವ್ಯಕ್ತಪಡಿಸುತ್ತಾರೆ. ಪಾಶ್ಚಾತ್ಯ ವಿದ್ಯಾವಿಭೂಷಿತ ಶ್ರೀ ಅರವಿಂದರು 'ತಮ್ಮ ಅರ್ಥವೇ ಅರ್ಥ' ಎಂದು ಬರೆಯುತ್ತಾರೆ. ಇವರೆಲ್ಲರೂ ಸಂಪ್ರದಾಯಬದ್ಧ 'ದಿವ್ಯ' ದೃಷ್ಟಿಯ ಅಭಿಮಾನಿಗಳು. ಇವೆಲ್ಲವೂ ಒಂದು ಬಗೆಯಲ್ಲಿ ವೈಯಕ್ತಿಕ ಅರ್ಥಗಳೇ.

ಅರ್ಥ : ಆಶಯ ಎಲ್ಲಿ ಇರಬಲ್ಲುದು? ಅರ್ಥ=ವಿಚಾರ ಇದು ಯಾವ ವ್ಯಕ್ತಿ, ಮತ, ಪಂಥದ ಗುತ್ತಿಗೆಯಲ್ಲ. ಇದು ತತ್ವತಃ ಸಾಮಾಜಿಕ. ಆದಕಾರಣ 'ಸತ್ಯ': ಅರ್ಥ ಎಂಬುದು ಇದ್ದಲ್ಲಿ, ಇದು ವೈಯಕ್ತಿಕ ಸ್ವರೂಪದ್ದು ಇರಲಾರದು. 'ಅರ್ಥ'ವು ವ್ಯಕ್ತಿಕಲ್ಪಿತವಿದ್ದರೆ, ಅದು ಸಂಕಲ್ಪನೆ (invention) ಸ್ವರೂಪದ್ದೇ ಇರಬಲ್ಲುದು. ಧಾರಣೆ (Concept) ಇದು ಸಾಮಾಜಿಕ ಜೀವನ ಸಂದರ್ಭದಲ್ಲಿ ಶಕ್ಯವಾಗುತ್ತದೆ. ಕ್ಲ್ಪ್-ಕಲ್ಪ, ಕಲ್ಪನೆ-ಸಂಕಲ್ಪನೆ: ಇದು ವೈಯಕ್ತಿಕ. Conceive conception, concept ಇಲ್ಲಿ ಕೊಡು ತಕ್ಕೊಳ್ಳುವ ಸ್ವರೂಪದ ಸಂಬಂಧವು ಅಭಿಪ್ರೇತವಿದೆ. ಸಮಾಜ-ವ್ಯಕ್ತಿಯ ನಡುವಣ ಸಂಬಂಧದಲ್ಲೇ ಧಾರಣ ಶಕ್ಯ. ಅರ್ಥ : ವಿಚಾರ ಇದು ಸಂ-ಗತಿಯಲ್ಲಿ ಇರಬಲ್ಲುದು. ಸಂ-ಗತಿ ಏಕಾಕಿ ಇರಲಾರದು. ಸಂವಾದಿ ವಿಸಂವಾದೀ ಘಟನೆಗಳೂ ಇರಬಲ್ಲವು. ಸಂಗೀತ ಕೇವಲ ಸಂವಾದೀ ಸ್ವರಗಳಿಂದ ಅಶಕ್ಯ. ಸಂವಾದಿ ಹಾಗೂ ವಿಸಂವಾದಿ ಇವು ಅನುಕ್ರಮವಾಗಿ ಹಾಸು-ಹೊಕ್ಕಿನಂತೆ ಇರಬಲ್ಲುವು. ವಿಸಂವಾದಿಯೇ ಪ್ರಾಧಾನ್ಯವಿರುವಲ್ಲಿ ಜೀವನ-ಸಂಗೀತವು ಅಶಕ್ಯ. ಅಸಂಗತ (ವಿಸಂಗತ) ನಾಟಕಗಳನ್ನು ಬರೆದು ಅಡಿ ತೋರಿಸಲಾಗುತ್ತದೆ. ಆದರೆ, ಇವು ಕೇವಲ ಅಸಂಗತವೇ ಇದ್ದರೆ, ಇದು ನಿಷ್ಪ್ರಯೋಜಕ ಮಾತಿನ ಜಾಲ. ಆದರೆ, ತೋರಿಕೆಯ ಅಸಂಗತಿಯ ಹಿಂದೆ ಆ ನಾಟಕಕಾರನು ತನಗೆ ಹೇಳಬೇಕೆಂದಿರುವ ಅರ್ಥವನ್ನು ಅಡಗಿಸಿ ಹೇಳುವುದುಂಟು. ತೋರಿಕೆಯ ಅಸಂಗತವು, ವಿಸಂಗತ ಕಲಾಕೃತಿಯ ಲಕ್ಷಣ.

ಗೀತೆಯ ಆಶಯ ಗ್ರಹಣದ ಸಂದರ್ಭದಲ್ಲಿ, ಈ ಸಂಗತಿ, ವಿಸಂಗತಿಯ ಮಾತು ಯಾತಕ್ಕೆ? ಎಂದು ಸಂದೇಹಿಸಬಹುದು. ಗೀತೆ ಒಂದು ಅದ್ಭುತ ಕಲಾಕೃತಿ (art-full, or full of art) ಇಂಥ ಕೃತಿಗಳ ಶಾಸ್ತ್ರೀಯ ಪದ್ಧತಿಯ ಅರ್ಥಗ್ರಹಣದ ಸ್ಪಷ್ಟೀಕರಣಕ್ಕಾಗಿ ಈ ಒಂದು ಮಾತನ್ನು ಸೂಚಿಸುವುದು ಅವಶ್ಯವಾಯಿತು. ಇಡಿಯಾಗಿ ಗೀತೆ ವ್ಯಾಮಿಶ್ರಶೈಲಿಯಲ್ಲಿ ಇದೆ. 'ವ್ಯಾಮಿಶ್ರೇಣ ಇಮಂ ವಾಕ್ಯಂ ಮೋಹಯಸೀವ ಮೇ' ಎಂಬ ವ್ಯಾಸನ ವಾಕ್ಯದಲ್ಲಿ ಪರ್ಯಾಯದಿಂದ, ಇದನ್ನು ವ್ಯಾಮಿಶ್ರಶೈಲಿಯಲ್ಲಿ ರಚಿಸಿದ್ದರ ಒಪ್ಪಿಗೆಯೇ ಇದೆ. ಏನೊಂದು ಸಂದೇಹವನ್ನು ಎತ್ತಿ ತಾನೇ ಅದನ್ನು ನಿವಾರಿಸುವ ಸೋಗಿನ ಈ ತಂತ್ರವು ಲೇಖನಕಲೆಯ ಅಂಗವಾಗಿದೆ. ಅಸಂಗತ (absurd) ಕಲಾ-'ಕೃತಿಯ' ಪ್ರಪಂಚದ ಸಾಹಿತ್ಯದಲ್ಲಿಯೇ, ಅನನ್ಯ-ಸಾಧಾರಣ ಮಾದರಿ ಈ ಭಗವದ್ಗೀತೆ! ಕೌರವ-ಪಾಂಡವರೊಳಗೆ ರಾಜ್ಯಕ್ಕಾಗಿ ಸಂಭವಿಸಿದ ಘೋರಸಂಗ್ರಾಮ, ಈ ಕುರುಕ್ಷೇತ್ರದ ಕಾಳಗ ಎಂದು ಲೋಕವನ್ನೇ ನಂಬಿಸಲಾಗಿದೆ! ಮಹಾಭಾರತವನ್ನು ಐತಿಹಾಸಿಕ ಕಾವ್ಯ ಎಂದು ನಂಬಿಸಲಾಗಿದೆ! ಆದರೆ, ಏಕಾಂತದಲ್ಲಿ ಉಪ-ನಿಷತ್, ಹತ್ತಿರ ಕುಳ್ಳರಿಸಿಕೊಂಡೇ-ಆಚರಿಸತಕ್ಕ ಗೀತೆಯ ಗುಹ್ಯಾರ್ಥವನ್ನು ಗ್ರಹಿಸಿಕೊಂಡ ಗಾಂಧೀಜಿ ಈ ಅಸಂಗತ ಮಾತಿನೊಳಗಿನ ತಳಪಾಯದ ಅಂತಃಸಂಗತಿಯನ್ನು ಅರಿತಿದ್ದರು. 'ಆತ್ಯಂತಿಕ ಅಹಿಂಸೆ', ಮತ್ತು ಈ 'ಅಹಿಂಸಾಧಿಷ್ಠಿತ ಸತ್ಯ' ಇದನ್ನು ಅಳವಡಿಸಿಕೊಳ್ಳುವ ಭಗವಂತನು ಬೋಧಿಸುತ್ತಾನೆ ಎಂಬ ಶ್ರದ್ಧೆಯನ್ನು ಗಾಂಧೀಜಿ ತಾಳಿದ್ದರು.

ಲೋಕಮಾನ್ಯ ಟಿಳಕ ಹಾಗೂ ಮಹಾತ್ಮಾ ಗಾಂಧೀಜಿ ಇವರೊಳಗಿನ ಭಿನ್ನಾಭಿಪ್ರಾಯವು, ಪಾಮರನಾದ ನನ್ನ ಕಣ್ಣು ತೆರೆಯಿಸಿತು. ಟಿಳಕರ ಅತುಲಧೈರ್ಯ, ತ್ಯಾಗ, ರಾಷ್ಟ್ರಭಕ್ತಿ, ನಿಸ್ಪೃಹವೃತ್ತಿ, ತೇಜಸ್ವೀ ವಿಚಾರ ನನ್ನನ್ನು

ಬೆರಗುಗೊಳಿಸಿದ್ದವು, 'ಗೀತಾರಹಸ್ಯ'ವನ್ನು ಓದಿದ ಬಳಿಕ ಗೀತೆಯ ಅರ್ಥದ ಬಗೆಗೆ ನಿಃಶಂಕನಾಗಿದ್ದೆ. ಇದೇ ಮೇರೆಗೆ ಮಹಾತ್ಮಗಾಂಧೀಜಿಯವರ ಅಪೂರ್ವ ತಪಸ್ಸು, ಅತ್ಯಂತ ಪ್ರಾಮಾಣಿಕ ಜೀವನ ನನ್ನನ್ನು ಮುಗ್ಧಗೊಳಿಸಿತ್ತು. ಆದಕಾರಣ, ಗೀತೆಯ ಆಶಯದ ಬಗೆಗಿನ ಇವರಿಬ್ಬರೊಳಗಿನ ಮತಬೇಧ, ಇಡಿಯಾಗಿಯೇ ನನ್ನ ವಿಚಾರಗಳ-ಶ್ರದ್ಧಾಸ್ಥಾನಗಳ - ಪುನರ್‌ವಿಮರ್ಶೆಗಾಗಿ ಒತ್ತಾಯ ಪಡಿಸಿತು. ಗೀತೆಯೊಳಗಿನ ತಮ್ಮ ಆಶಯ : ಅರ್ಥದ ಬೆಂಬಲಕ್ಕಾಗಿ ಗಾಂಧೀಜಿ ಒಂದೂ ಶ್ಲೋಕ ಎತ್ತಿ ಹೇಳಲಿಲ್ಲ. 'ಯದಾ ಯದಾ ಹಿ ಧರ್ಮಸ್ಯ ಗ್ಲಾನಿಃ' ಇಂತಹ ಶ್ಲೋಕಗಳಿಂದ ಟಿಳಕರ ಅಭಿಪ್ರಾಯಕ್ಕೆ ಪುಷ್ಟಿ ದೊರೆಯುತ್ತಿತ್ತು. 'ಈ ಶ್ಲೋಕವೇ ಸುಳ್ಳು' ಅಥವಾ 'ಇದು ಪ್ರಕ್ಷಿಪ್ತ, ಪಾಠಾಂತರ' ಎಂದು ಹೇಳುವ ಆವಶ್ಯಕತೆ ಗಾಂಧೀಜಿಗೆ ತೋರಲಿಲ್ಲ! ಟಿಳಕರ ಗೀತಾರಹಸ್ಯದ ಮಂಡನೆಯು ಒಟ್ಟಿನಲ್ಲಿ ಅತ್ಯಂತ ಸಮಂಜಸವೆನಿಸಿತ್ತು.

ಆದರೆ, ಗೀತೆಯ ಬಗೆಗಿನ ಗಾಂಧೀಜಿಯ ಭಕ್ತಿ, ವಿಶ್ವಾಸ ಶಂಕಾತೀತವಿತ್ತು. ಗಾಂಧೀಜಿ ತಾವು ನಂಬಿದ್ದ ಅರ್ಥದ ಬಗೆಗೆ ಅವರು ನಿಸಂದಿಗ್ಧರಿದ್ದರು. ಈ ಕಾರಣದಿಂದಾಗಿ ಟಿಳಕರ ಅರ್ಥದ ಬಗೆಗೆ ನನಗೆ ಸಂದೇಹ ಕಾಣಿಸಿಕೊಂಡಿತು. ಟಿಳಕರು ತಮ್ಮ ಈ ಅರ್ಥಗ್ರಹಣದಲ್ಲಿ, ಶಾಸ್ತ್ರೀಯ ಪದ್ಧತಿಯನ್ನು ಸ್ವೀಕರಿಸಿಯೂ ಮೋಸ-ಹೋದರೋ ಎಂಬ ಪ್ರಶ್ನೆ ತಲೆ ಎತ್ತಿತು. ಮರಳಿ ಗೀತೆಯನ್ನು ತಿರುವಿ ಹಾಕಿದೆ. 'ಗುಹ್ಯಾತ್-ಗುಹ್ಯ ತಮಂ ಶಾಸ್ತ್ರಂ' ಎಂಬ ಈ ಮಾತು ಒಂದೆಡೆಗಲ್ಲ, ಹಲವೆಡೆಗೆ ಉಂಟು! ಈ ವಾಕ್ಯಗಳು ನನ್ನ ಗಮನ ಸೆಳೆದಾಗ ಎಷ್ಟೇ ಪೂಜ್ಯಭಾವವಿದ್ದರೂ, ಟಿಳಕರು ಮೋಸ ಹೋದರೆಂದು ಬಗೆಯದೆ ಬೇರೆ ಉಪಾಯವೇ ಇರಲಿಲ್ಲ. ವ್ಯಕ್ತಿಗಿಂತ ಸತ್ಯ ಶ್ರೇಷ್ಠ.

ಇಷ್ಟೇ ಅಲ್ಲ, ಈ 'ಭಗವಂತ'ನು ಈ ಗೀತೆಯ ಆಸೆಯ ಏನು, ಎಂಬುದನ್ನು ತನ್ನ ಪರಿಭಾಷೆಯಲ್ಲಿ ಹೇಳದೆ ಇಲ್ಲ! ರಾಜವಿದ್ಯಾ, ರಾಜಗುಹ್ಯಂ, ಪವಿತ್ರಂ ಇದಂ ಉತ್ತಮಂ ಈ ಮಾತಿನಂತೆ, ಗೀತೆಯ ಆಶಯವು, ರಾಜವಿದ್ಯೆ. ಆದರೆ, ಇದು ಗುಹ್ಯ (ಸ್ಥಾನದ) ವಿದ್ಯೆ 'ರಾಜಗುಹ್ಯ' ಎಂಬುದನ್ನು 'ಭಗವಂತ'ನೆಂಬವನು ಬಚ್ಚಿ ಇಟ್ಟಿಲ್ಲ! ಆದರೂ ಇದರ ಮೇಲೆ ಬೆರಳಿಟ್ಟು, ಇಕೊಳ್ಳಿ ಇಲ್ಲಿ ಇದೆ, ಗೀತೆಯ ಗುಟ್ಟು ಎಂದು ನಿಃಸಂದಿಗ್ಧ ಭಾಷೆಯಲ್ಲಿ ವಿವರಿಸಿರುವ ಒಂದೂ ಭಾಷ್ಯ, ಟೀಕೆ, ಪ್ರಬಂಧ ಇನ್ನೂ ಬೆಳಕಿಗೆ ಬಂದಿಲ್ಲ! ಅಸಹಕಾರದ ಆಂದೋಲನದ ಆರಂಭದಲ್ಲಿ, ಬೆಳಗಾವಿಯ ದೇ. ಭ, ಶ್ರೀ ದೇಶಪಾಂಡೇ ಗಂಗಾಧರರಾಯರು ತಮಗೆ ಗುರುಸ್ಥಾನದಲ್ಲಿ ಇದ್ದ ಈ ಇಬ್ಬರೂ ಮಹಾಪುರುಷರಿಗೆ ಬಿನ್ನವಿಸಿ, ಅವರನ್ನು ತಮ್ಮಲ್ಲಿ ಆಮಂತ್ರಿಸಿದ್ದರು. ಭಿನ್ನಾಭಿಪ್ರಾಯಗಳನ್ನು ಕಡಿಮೆ ಮಾಡಿಕೊಳ್ಳಲು ಶಕ್ಯವೊ? ಎಂಬುದನ್ನು ನೋಡಲು ಪ್ರಾರ್ಥಿಸಿದರು. ಟಿಳಕ-ಗಾಂಧೀಜಿಯವರ ಭಿನ್ನಾಭಿಪ್ರಾಯದ ಆ ಪ್ರಸಂಗದಿಂದಾಗಿ ನನಗೆ ಗೀತಾದಿಗ್ರಂಥಗಳ ಅರ್ಥಗ್ರಹಣದ ಶಾಸ್ತ್ರೀಯ ಸ್ವರೂಪದ ಶಿಷ್ಟಮಾನ್ಯ ಪದ್ಧತಿಯು ಇಲ್ಲದಿರುವ ಕೊರತೆ ತೀವ್ರವೆನಿಸತೊಡಗಿತು. ಟಿಳಕರು ಸ್ವೀಕರಿಸಿದ್ದ 'ಉಪಕ್ರಮೊಪಸಂಹಾರ' ದೊಳಗಿನ ಅಂತಃಸಂಗತಿಯ ಸೂತ್ರವು ಗೀತೆಯಂಥ ವ್ಯಾಮಿಶ್ರ ಶೈಲಿಯ ಗ್ರಂಥದ ಅರ್ಥಗ್ರಹಣದಲ್ಲಿ ನಿಷ್ಪ್ರಯೋಜಕವಾದದ್ದನ್ನು ಟಿಳಕರ ಉದಾಹರಣದಿಂದ ಕಾಣುತ್ತಿದೆ.

ಸಾಂಸ್ಕೃತಿಕ ಕ್ಷೇತ್ರದ ಸತ್ಯಾನ್ವೇಷಣೆಯಲ್ಲಿ ನನಗೆ ತಿಳಿದ ಮಟ್ಟಿಗೆ ಶಾಸ್ತ್ರೀಯ ಸ್ವರೂಪದ ಅರ್ಥಗ್ರಹಣಪದ್ಧತಿಯ ಪ್ರಯೋಗಗಳನ್ನು ಪ್ರಾರಂಭಿಸುವುದರ ಹೊರತು, ಬೇರೆ ಉಪಾಯವು ಕಾಣಲಿಲ್ಲ. 'ಕಣ್ಮರೆಯಾದ ಕನ್ನಡ'ದಿಂದ (೧೯೩೩) ತೊಡಗಿ, ಋಗ್ವೇದ-ಸಾರ ನಾಗಪ್ರತಿಮಾ ವಿಚಾರ ಗ್ರಹಣದ ವರೆಗಿನ (೧೯೭೦), ಪ್ರಯೋಗಗಳ ಹಾಗೂ ಶಾಸ್ತ್ರಜ್ಞರ ಗ್ರಂಥಗಳ ಓದಿನ ಸಾರಾಂಶವನ್ನು ಒಂದು ಪ್ರಬಂಧ ರೂಪದಲ್ಲಿ ಬರೆದದ್ದಾಗಿದೆ. ಇದು ಪ್ರಾಥಮಿಕ ಪ್ರಯತ್ನ; ಇದನ್ನು ಋಗ್ವೇದ-ಸಾರದಲ್ಲಿಯೇ ಸೇರಿಸಲಾಗಿದೆ. ವ್ಯಾಂಡ್ರಿಯಾಸ್ ಸಪೀರ್, ಅರ್ನಸ್ಟ್ ಕ್ಯಾಸಿರರ್‌ರಂತಹ ತಜ್ಞರಿಗೆ ನಾನು ಋಣಿ. ಈ ವಿಷಯದಲ್ಲಿ ಸಂಕೇತ: ಪ್ರತಿಮಾಶಾಸ್ತ್ರದ ತಾತ್ವಿಕ ಭೂಮಿಕೆಯನ್ನು ಸ್ಥೂಲವಾಗಿಯಾದರೂ ಗ್ರಹಿಸಿಕೊಂಡಲ್ಲಿ ಸಾಂಸ್ಕೃತಿಕ ಸತ್ಯಾನ್ವೇಷಣೆಯು ಸುಲಭವಾಗಲಿದೆ.

ಭಾಷೆ ಮೂಲತಃ ಸಾಂಕೇತಿಕವಿದೆ. ಈ ಸಂಕೇತಪ್ರತಿಮೆಗಳು ಇತಿಹಾಸದ ಕಕ್ಷೆಗೆ ಒಳಗಾಗಿವೆ. ಸಮಸಾಮಯಿಕ ಶಬ್ದಪ್ರತಿಮೆಗಳ ತುಲನೆಯಲ್ಲಿ ಗೀತೆಯಂತಹ ತೊಡಕಿನ ಶೈಲಿಯ ಅರ್ಥಗ್ರಹಣವೂ ಅಶಕ್ಯವಲ್ಲ. ಅಂಥ ಒಂದು ಪ್ರಯೋಗವಿದು. ಪ್ರಾಜ್ಞರು ವಿಮರ್ಶಿಸಿ ಸತ್ಯಾನ್ವೇಷಣೆಗೆ ನೆರವಾಗಬೇಕಾಗಿ ಬಿನ್ನಹ. ಈ ವಿಷಯದಲ್ಲಿ ಕ್ಯಾಸಿರರ್ ಹೇಳಿರುವ ಒಂದು ಸೂತ್ರವನ್ನು ಜಿಜ್ಞಾಸುಗಳ ಪರಾಮರ್ಶೆಗಾಗಿ, ಇಲ್ಲಿ ಎತ್ತಿ ಹೇಳುತ್ತಿದ್ದೇನೆ.

> We have to pursue the ways of myth and language, not in their progress but in regress - back to the point from which those two divergent lines emanate...[೧]

ಈ ಸೂತ್ರವನ್ನು ಅನುಸರಿಸಿದ್ದಲ್ಲಿ ಗೀತೆಯೊಳಗಿನ 'ಪುರುಷ'=(ಪುರಿಶಯ) ಪ್ರತಿಮೆಯ ಅರ್ಥಕ್ಕಾಗಿ ಉಪನಿಷತ್ತು ವೇದದ ವರೆಗೆ ಹೋದರೆ ಇವೆಲ್ಲ ಕಡೆಯ ಪ್ರಯೋಗಗಳ ತುಲನೆಯಲ್ಲಿ, ಈ 'ಪುರುಷ' ಸಂಕೇತದ ಮೂಲ ಅರ್ಥದ ವಿಸ್ತಾರ, ಸಂಕೋಚಾದಿ ಏನೆಲ್ಲ ಅಂಶಗಳೂ ವಸ್ತುನಿಷ್ಠ ಭೂಮಿಕೆಯಿಂದ ಸಮೀಕ್ಷಿಸಲು, ಪರೀಕ್ಷಿಸಲು ದೊರೆಯುತ್ತವೆ. ಗೀತೆಯು 'ನರ'ನ ಮೂಲಚಿತ್ರವು ಋಗ್ವೇದದ ಮರುತರ ವರ್ಣನೆಯಲ್ಲಿ ದೊರೆಯುತ್ತದೆ. ಮರುತರಿಗೆ ವೇದದಲ್ಲಿ ಬಾಲವಿಲ್ಲ. ಆದರೆ ಇವರನ್ನು 'ಕಬಂಧ' (ಕೊಳವಿ, ನಳ) ರೂಪದಲ್ಲಿ ಕಂಡಿದ್ದಾಗಿದೆ. ಮರುತ (ಮಾರುತಿ) ಬೃಹಲ್ಲಾಂಗೂಲ ಲಾಂಗಲನಾಗುವಲ್ಲಿ ಅವನಿಗಿದ್ದ ಮುಂದಿನ ಕಬಂಧ ಹಿಂದಿನ ಬಾಲವಾಗಿ ಸ್ಥಾನಾಂತರವಾದದ್ದು, ನಿಶ್ಚಿತ ರೀತಿಯಲ್ಲಿ ಗೊತ್ತಾಗುತ್ತದೆ. ಗೀತೆಯ 'ರಥ'ದ ನಿಜ ಸ್ವರೂಪಕ್ಕಾಗಿ, ಕಠೋಪನಿಷತ್ತು ಹಾಗೂ ಋಗ್ವೇದ ಇಲ್ಲಿ ಬರುವ 'ರಥ'ದೊಡನೆ ಅರ್ಥಗ್ರಹಿಸುವ ಆವಶ್ಯಕತೆಯಿದೆ. ಸದ್ಯಕ್ಕೆ ಶಾಸ್ತ್ರೀಯ ಪದ್ಧತಿಯ ಈ ವಿವರಣ ಇಷ್ಟೇ ಸಾಕು. ಗೀತೆಯ ಆಶಯದ ಸಂದರ್ಭದಿಂದ ಅವಶ್ಯವಿರುವಲ್ಲಿ ಈ ಪದ್ಧತಿಯ ವಿವರಣೆ ಬರಲಿದೆ.

ಭಗವದ್ಗೀತೆಯ 'ಕುರುಕ್ಷೇತ್ರ', 'ಯುದ್ಧ', ಇವು ಸಾಂಕೇತಿಕ

ಗಾಂಧೀಜಿಯ ಶ್ರದ್ದೆಯಂತೆ, ಗೀತೆಯಲ್ಲಿ ಆತ್ಯಂತಿಕ ಅಹಿಂಸೆಯ ಭೋಧನೆಯೇ ಇದ್ದಲ್ಲಿ, 'ಧರಕ್ಷೇತ್ರೇ' 'ಕುರುಕ್ಷೇತ್ರ' ಯುದ್ಧಕ್ಕಾಗಿ ಸೈನಿಕರು ಅಣಿಯಾಗಿ ನಿಂತಿದ್ದಾರೆ... ಎಂಬೀ ಬಗೆಯ ಮಾತುಗಳೆಲ್ಲವೂ ಹುಸಿ! ಆಲಂಕಾರಿಕ, ಎಂದು ಬಗೆಯದೆ ಗತ್ಯಂತರವಿಲ್ಲ! "ಗಾಂಧೀಜಿಯವರ ಶ್ರದ್ಧೆಯ ಮೂಲಕ ಈ ಬಗೆಯ ಅರ್ಥ ಕಲ್ಪಿಸಬೇಕಾಗುತ್ತಿದೆ." ಎಂಬ ಗ್ರಹಿಕೆಯೂ ತಪ್ಪು. ಗೀತೆ ಒಳಗೊಂಡಿರುವ ಭಕ್ತಿಯೋಗಾದಿ ನಾನಾ ಯೋಗ ಸಾಧನ, ಅನುಷ್ಠಾನಗಳ ವಿಚಾರಗಳು ಸುಸಂಗತ (relevant) ಎನಿಸಬೇಕಾಗಿದ್ದರೆ, ಗೀತೆಯೊಳಗಿನ 'ಕುರುಕ್ಷೇತ್ರ' ಮತ್ತು 'ಯುದ್ಧ' ಈ ಪದಗಳ ಗುಹ್ಯಾರ್ಥವು ಬೇರೆಯೇ ಇರಲಿಕ್ಕೆ ಬೇಕು. ಗೀತೆಯೊಳಗಿನ 'ಯುದ್ಧ'ದ ರೂಪಕದ ರಹಸ್ಯವು ಗ್ರೀಕ್ ತತ್ತ್ವಜ್ಞ ದ್ರಷ್ಟಾರ ಎಂಬ ಖ್ಯಾತಿಯ ಹಿರಾಕ್ಲಿಟಸ್‌ನ ಪ್ರತಿಪಾದನೆಯ ಮೂಲಕವಾಗಿ ಬೆಳಕಿಗೆ ಬರುತ್ತದೆ. ಹಿರಾಕ್ಲಿಟಸ್‌ನ ಶ್ರದ್ಧೆಯಂತೆ ಪುರುಷ=ಅಗ್ನಿ (ಕುಮಾರ) ; ಸ್ತ್ರೀ=ಸಲಿಲ=ಜಲ ಸ್ವರೂಪೀ! ಅಗ್ನಿ ಹಾಗೂ ಆಪ-ಸಲಿಲ ಇವೆರಡೂ ಒಂದು ಇನ್ನೊಂದರ ಶತ್ರು! ಇವೆರಡು ತತ್ತ್ವಗಳಲ್ಲಿ, ನಿತ್ಯ ಸನಾತನ ಕಾಳಗವು ಉಂಟೇ ಉಂಟು. ಈ ಯುದ್ಧವೇ ಪ್ರಪಂಚದ ತಂದೆ ಮತ್ತು ರಾಜ (War is father of all and king of all) ಈ ವಿಚಾರವನ್ನೇ ಹೀಗೆ ಹೇಳಿದರು ಸರಿ=ಯುದ್ಧವೇ ಪ್ರಪಂಚದ ತಾಯಿ ಹಾಗೂ ಸಮ್ರಾಜ್ಞೀ.

ಹಿರಾಕ್ಲಿಟಸನ ಈ ದೃಷ್ಟಿಕೋನವು ಭಾರತೀಯ ಧರ್ಮ-ಸಂಸ್ಕೃತಿಗೆ ಪರಕೀಯ ಎಂಬ ಮೋಹ, ಮೂರ್ಖತನದ ಪ್ರದರ್ಶನಕ್ಕೆ ಕಾರಣವಾಗಲಿದೆ. ಭಾರತೀಯ ಪುರಾತನ ಪರಂಪರೆಯ ಕುಮಾರ ಮತ್ತು ಕುಮಾರಿ ಈ ಪರಿಭಾಷಯ ಹಿರಾಕ್ಲಿಟಸ್‌ನ ತಾತ್ತ್ವಿಕ ಭೂಮಿಯಿಂದಲೇ ಅರ್ಥವಾಗಬಲ್ಲುದು. ಗಂಡಿಗೆ ಹೆಣ್ಣು ಕುಮಾರಿ (ಮೃತ್ಯು) ಸ್ವರೂಪಳು; ಹೆಣ್ಣಿಗೆ ಗಂಡು ಕುಮಾರ (ಕಾಮ ಪ್ರಚೋದಕನಾಗಿ ಹೆರಿಗೆಯ ಕುತ್ತಿನಲ್ಲಿ ತಳ್ಳುವ) ಸ್ವರೂಪದವನು. ಯುದ್ಧವನ್ನು 'ಲೋಕ-ಜನನಿ' ಎಂದಲ್ಲಿ 'ಕುರುಕ್ಷೇತ್ರ' ಇದು ಸ್ತ್ರೀಪ್ರತೀಕವಾಗುತ್ತದೆ. ಭೂದೇವಿಗಾಗಿ ಕಾದಾಟ, 'ಭೂ-ಪತಿ'ಗಳಲ್ಲಿ. ವ್ಯಾಸನ ಗುಹ್ಯಪರಿಭಾಷೆಯಲ್ಲಿ ಇದು 'ಮೌಸಲಪರ್ವ'=ಒನಕೆಗಳ ಕಾಳಗ! ಪಾಶ್ಚಾತ್ಯ ಪರಂಪರೆಯಲ್ಲಿ 'War

of trees' ಉಂಟಂತೆ. ಈ ಗೀತೆಯಲ್ಲಿ ಬರುವ 'ವಿಶ್ವರೂಪ' ದರ್ಶನವು ಸ್ಮಶಾನ ಭೂಮಿಯ ಪ್ರತೀಕವಿದೆ! ಇದೂ 'ಕುರುಕ್ಷೇತ್ರ'ದ ಚಿತ್ರ! ಇದು ದಿವ್ಯಚಕ್ಷುವಿನ ಚಿತ್ರ! 'ಚಕ್ಷುಃ ವೈ ಸತ್ಯಂ ಸತ್ಯ ರೂಪ ಈ ಚಕ್ಷು ಏಕ ವಚನಾಂತವಿದೆ! 'ದಿವೀವ ಚಕ್ಷುಃ ಆತತಂ' (ದಿವ್ಯಲೋಕದಂತೆ ಹಿಗ್ಗಿ ಅಗಲವಾಗಿರುವ ಈ ಚಕ್ಷು), ಜಾಗೃವಾಂಸರ (ಜಾಗರದವರ) ಅನುಸ್ಥಾನ (ಅನುಷ್ಠಾನ) ವ್ರತದ ವಿಷಯವಾಗಿದೆ. ಈ ಕುರುಕ್ಷೇತ್ರದ (ಲೋಕ ಜನನಿಯ ಕ್ಷೇತ್ರದ) ಎದುರು ನಿಂತು ಕಾದಲು ಸಮೀಕ್ಷಿಸುತ್ತಿರುವವನು ಒಬ್ಬ ನರ(ಳ)ನು!

'ಭಗ-ವತ್' ಗೀತೆಯ 'ಕುರುಕ್ಷೇತ್ರ' ಮತ್ತು 'ಯುದ್ಧ' ಇವೆರಡರ ಗುಹ್ಯಾರ್ಥವನ್ನು ಇದಕ್ಕೂ ಹೆಚ್ಚು ಬಿಚ್ಚು ಮಾತಿನಲ್ಲಿ ಹೇಳಿದರೆ ಹದ್ದುಮೀರಿ ಅ-ವಾಚ್ಯ ಅಶ್ಲೀಲವಾಗಲಿದೆ! ಯುದ್ಧದ ಈ ಸನ್ನಿವೇಶಕ್ಕೆ ಸುಸಂಗತವಾಗುವಂತೆ. ಈ ಯುದ್ಧಕ್ಕೆ ಅಣಿಯಾಗಿರುವ ನರನು=ನಳನ ಸ್ವರೂಪ-ಇರುವಲ್ಲಿಯೇ ಔಚಿತ್ಯವಿದೆ. ನರನ ರಥದ ಮೇಲೆ 'ಕಪಿ' ಬೃಹಲ್ಲಾಂಗಲ, ಮಾರುತಿ ಇರುವುದಾಗಿ ಸಂಪ್ರದಾಯವು ಹೇಳುತ್ತದೆ!

ಭಗವದ್ಗೀತೆಯ 'ನರ' ರಥದ ಪ್ರತಿಮಾ ಸ್ವರೂಪ

ಗೀತೆಯ ಈ ನರನ 'ರಥ' ಸಾಂಕೇತಿಕವಿರುವದರ ಸೂಚನೆಯನ್ನು ಸ್ಮರಿಸಕೊಳ್ಳುವ ಆವಶ್ಯಕತೆಯಿದೆ. ಭಗವಂತನು, 'ತಾನು ರಥದ ಕೆಳಗೆ ಇಳಿಯ ತಕ್ಕವನಲ್ಲ', ಎಂಬ ಕರಾರಿನಿಂದಲೇ ಈ ಯುದ್ಧಲ್ಲಿ ಭಾಗವಹಿಸಿದುದನ್ನು ಮಹಾಭಾರತದಲ್ಲಿ ಸೊಗಸಾಗಿ ವರ್ಣಿಸಿದ್ದಾಗಿದೆ! ಭಗವಂತನು 'ಸಾರಥಿ' ಎಂಬ ಈ ಸಾಂಕೇತಿಕತೆ ತುಂಬ ಆಳವಾಗಿದೆ. 'ರಥದಿಂದ ಸಹಿತನು=ಸಾರಥಿ'! ನರನ ರಥದ ಅವಿಭಾಜ್ಯ ಅಂಗವಾಗುತ್ತಿದ್ದಾನೆ. ಈ ಸಾರಥಿ! ಈ 'ಕುರುಕ್ಷೇತ್ರದ' ಕಾಳಗದಲ್ಲಿ ನರ(ಳ) ನೇ ರಥಸ್ವರೂಪದಲ್ಲಿ! ಕಠೋಪನಿಷತ್ತಿನಲ್ಲಿ 'ಶರೀರಂ ರಥಂ ಏವ' ಎಂಬ ಮಾತು ಇದೆ! 'ಶರೀರ' ಈ ಪದಕ್ಕ 'ಲಿಂಗ' ಎಂಬ ಅರ್ಥವೂ ಇದೆ. ವಿವಾಹ ಪತ್ರಿಕೆಗಳಲ್ಲಿ ಹೆಣ್ಣು ಗಂಡಿನ ಸಂಬಂಧ; ಬೀಗತನ ಸೂಚಿಸುವಾಗ "ಇವರೊಡನೆ ಶರೀರ ಸಂಬಂಧವನ್ನು ಗೊತ್ತುಪಡಿಸಲಾಗಿದೆ." ಎಂದು ಒಕ್ಕಣಿಸುವ ವಾಡಿಕೆ ಇತ್ತು .

ಆದರೆ, ಕಠದೊಳಗಿನ 'ರಥ'ವನ್ನು 'ಶರೀರ' ರೂಪಿ ಎಂದರೂ ಸಭ್ಯತೆ, ಶಿಷ್ಟಾಚಾರಕ್ಕೆ ಭಂಗಬರ ಬಾರದೆಂದು ಇದನ್ನು 'ಇಂದ್ರಿಯಾಣಿ ಹಯಾನಿ ಆಹುಃ, ಶರೀರಂ ರಥ ಮೇವ ತು' ಎಂದೂ, 'ಮನಸ್ಸು', 'ಕಡಿವಾಣ' ಎಂದೂ ಅತ್ಯಂತ್ಯ ಹೃದ್ಯರೂಪಕವಾಗಿ ಮಾರ್ಪಡಿಸಿಕೊಳ್ಳಲಾಗಿದೆ. ಮುದ್ರಿತ ಆವೃತ್ತಿಗಳಲ್ಲಿ ನರನ (ಭಗವಂತ ಸಾರಥಿ ಇರುವ) ರಥವನ್ನು ಪ್ರತಿಮಾ ಚಿತ್ರ ರೂಪದಲ್ಲಿ ಕೊಡುವ ಹುಚ್ಚು ಸಾಹಸದಲ್ಲಿ ಈ ಗೀತೆಯ ಆಶಯದ ಬಗೆಗಿನ ಪ್ರಜ್ಞೆಯ ಅಭಾವದ ಪ್ರದರ್ಶನವಾಗುತ್ತಿರುತ್ತದೆ! ಗೀತೆಯ ಪಾಠದಲ್ಲಿ ನರನ ರಥದ ವರ್ಣನೆಯು ಅಭಾವದಿಂದ ಎದ್ದು ಕಾಣುತ್ತಿದೆ! ಕಠೋಪನಿಷತ್ತು ಗೀತೆಗಿಂತ ಮುಂಚಿನದು. ಸರ್ವೋಪನಿಷತ್ತುಗಳ ಸಾರ ಎಂಬ ಗೀತೆಯಲ್ಲಿ ಕಠದ ಹೋಲಿಕೆಯು ವಿಶೇಷವಿದೆ ಎಂದು ತಜ್ಞರು ಸೋದಾಹರಣ ವಿವರಿಸಿದ್ದಾರೆ. ಕಠದ ನಚಿಕೇತನು ಯಮನಲ್ಲಿ, ಜ್ಞಾನಪಡೆಯಲು ಹೋಗುತ್ತಾನೆ. ಗೀತೆಯ 'ನರ'ನು ಕಾಲಃ ಅಸ್ಮಿ (ಲೋಕ ಕ್ಷಯಕೃತ್ ಪ್ರವೃದ್ಧಃ) ಎಂದು ತಾನೇ ಸಾರಿ ಹೇಳುವ ಭಗವಂತ ಕೃಷ್ಣನಿಂದ ಸಾಕ್ಷಾತ್ಕಾರ ದರ್ಶನವನ್ನು ಅಪೇಕ್ಷಿಸುತ್ತಿದ್ದಾನೆ. ಕಠದಂತೆ ಗೀತೆಯಲ್ಲಿ 'ಅಶ್ವತ್ಥ'ವೂ ಉಂಟು! ಆದಕಾರಣ, ಮೃತ್ಯುದೈವತದ ಕಡೆಗೆ ಹೋಗುವ ನಚಿಕೇತನ ಶರೀರವೇ ಕಠದಲ್ಲಿ ರಥವು ಆಗಿರುವಂತೆ, ಮೃತ್ಯುದೈವತ ಸ್ವರೂಪೀ ಕೃಷ್ಣನ ಹತ್ತಿರದ ನರನ ಶರೀರವೇ ಆತನ ರಥವಾಗಿರಲಿಕ್ಕೆ ಬೇಕು. ಇಲ್ಲಿ ಇನ್ನೂ ಒಂದು ಸೂಕ್ಷ್ಮ ಮೌಲಿಕ ಸ್ಪಷ್ಟೀಕರಣವು ತನ್ನತಾನೇ ಲಭಿಸುತ್ತದೆ; ಭಗವಂತ : ಕೃಷ್ಣನನ್ನು ನಾರಾಯಣ (ನಾರಅಯನ) ಎಂದು ಸಂಪ್ರದಾಯವೇ ಹೇಳುತ್ತದೆ. ನರನ ಪಕ್ಕದ ಕೃಷ್ಣನು ನಾರಾಯಣನು ಎಂಬಲ್ಲಿ, ಇಕೊ, ಇಲ್ಲಿ ನರ-ನಾರಾಯಣರ ಜೋಡಿ (?) ಕಣ್ಣೆದರು ನಿಲ್ಲುತ್ತದೆ! ಆದರೆ ಸಾರಥಿ: ನರನ ರಥದ ಅಂಗರೂಪಿ ಕೃಷ್ಣನು ನರನಿಂದ ಬೇರೆಯಲ್ಲ! ಆದಕಾರಣ, ನರ ನಾರಾಯಣ ಎಂಬ ಈ ಪರಿಭಾಷೆಯಲ್ಲಿ, ಇವು ಕಾಣಲು ಎರಡು ಪ್ರತಿಮೆಗಳು. ಆದರೆ, ನಿಜದಲ್ಲಿ ಒಂದೇ! ನರನ ದೇಹ (ರಥ)ದಲ್ಲಿಯೇ ಕೃಷ್ಣನಿದ್ದಾನೆ! ಪಿಂಡ-ಬಹಾಂಡೈಕ್ಯ ಸಿದ್ಧಿಯ ಸಾಕ್ಷಾತ್ಕಾರ ಮಾಡಿಸುತ್ತಿದೆ ಈ ಗೀತೆ ಇಲ್ಲಿ!

ಈ ಅರ್ಥಕ್ಕೆ, ಮಹಾಭಾರತದ ಪ್ರಾರಂಭದ ವಂದನಾಶ್ಲೋಕದ ಮೂಲಕವೂ ಬೆಂಬಲ ದೊರೆಯುತ್ತದೆ. ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಂ ಇಲ್ಲಿ ನರೋತ್ತಮ 'ನರ'(ಳ) ಮತ್ತು ನಾರಾಯಣ ನಾರ-ಅಯನ ಇವೆರಡೂ ಪ್ರತಿಮೆಗಳು ಬೇರೆಯಿರಲು ಶಕ್ಯವಿಲ್ಲ. ಮಹಾಭಾರತದ ನಾರಾಯಣೋಪಾಖ್ಯಾನದ ಮೂಲಕವೂ ಈ ಅ-ಭೇದವೂ ಬಯಲಿಗೆ ಬರುತ್ತದೆ. ಅಲ್ಲಿ ನಾರಾಯಣನೇ ಸ್ವನಾಮ ನಿರ್ವಚನ ಹೇಳುತ್ತಾನೆ. 'ಆಪೋ ನಾರಾಃ ಇತಿಪ್ರೋಕ್ತಾಃ ಆಪೋ ವೈ ನರಸೂನವಃ'. ನಾರಾ=ಆಪ; ಇದು ಸೃಜನ ಸಾಮರ್ಥ್ಯದ ದಿವ್ಯ ಜಲ=ನೀರು ಈ ನೀರಿದ್ದವರೆಂದೇ ಇವರು ನೀರನೀರೆಯರು.! ನಾರ =ನೀರು ಎಂದಲ್ಲಿ ನಾರಾಯಣರ ಇದರೊಳಗಿನ ನಾರ (=ನರ=ನೀರು) ಇದು (ನಾರ) ಅಯನ ಎಂದರೆ, ಸೃಜನಜಲ ಸ್ರವಿಸುವ 'ನಳ', ಇದುವೆ ನಾರ-ಅಯನ =ನಾರಾಯಣ ಆಯಿತು. ಇದರ ಬಣ್ಣದಿಂದಾಗಿ ನಾರಾಯಣ=ಕೃಷ್ಣ ಆಯಿತು. ತನ್ನ ಸಾಧನ ಬಲದಿಂದ ನರ(ಳ) ನೆ ನಾರಾಯಣನಾಗುತ್ತಾನೆ. ಆದಕಾರಣ, ಭಗವದ್ಗೀತೆಯ 'ಕುರುಕ್ಷೇತ್ರ'ದಲ್ಲಿ ನಡೆಯಲಿರುವ 'ಯುದ್ಧ'ಕ್ಕೆ ಸಿದ್ಧನಾಗಿ ನಿಂತಿರುವ ನರ(ಳ)ನ ರಥದ ಈ ಚಿತ್ರವು ಪೂರ್ಣಗೊಳ್ಳಲು, ಈ ರಥದ ಸಾರಥಿ (ರಥಸಹಿತನು) ಕೃಷ್ಣನು=ನಾರ-ಅಯನನು ಎಂಬ ವಿವರಣೆಯೂ ಅವಶ್ಯವಾಗುತ್ತಿದೆ.

ಶ್ರೀಮತ್ ಭಗವತ್ ಗೀತೆಯ ಕುರುಕ್ಷೇತ್ರದ ಕಾಳಗಕ್ಕೆ ಆಣೆಯಾಗಿರುವ ನರ-ರಥದ ರೂಪಕ್ಕೆ ವೇದದ ಕುಮಾರನ ರಥದ ಮೂಲಕವೂ ದೊರೆವ ಬೆಂಬಲ ನೋಡಿಕೊಳ್ಳಿ! ಪ್ರೊ. ವೇಲಣಕರ ಪ್ರಭೃತಿ ವೇದವ್ಯಾಸಂಗಿಗಳಿಗೆ, ಕಠೋಪನಿಷತ್ತಿನ ನಚಿಕೇತನ ಮೂಲಮಾದರಿ ಋಗ್ವೇದದಲ್ಲಿ ಕಂಡಿದೆ.[೨] ಒಬ್ಬ ಕುಮಾರನು, ಯಮನಲ್ಲಿ ಜ್ಞಾನಪಡೆಯಲು ರಥಸಹಿತ ಹೋಗುತ್ತಾನೆ. ಈ ರಥವನ್ನು ಅ-ಚಕ್ರಂ ರಥಂ ಎಂದು ಅಲ್ಲಿ ಸ್ಪಷ್ಟಪಡಿಸಿದ್ದಾಗಿದೆ. ಈ ವೇದದಲ್ಲಿ ಏಕ ಚಕ್ರರಥ ಇದೆ. ತ್ರಿಚಕ್ರ ರಥಗಳು ಇವೆ! ಇದು ಕುಮಾರನ ರಥ; ಇದಕ್ಕೆ ಚಕ್ರ ಇಲ್ಲ! ಈ ಚಕ್ರದ ಕಲ್ಪನೆಯೇ ಮುಂದಿನ ಕಾಲದಲ್ಲಿ ದೇಹಸ್ಥ (ಷಟ್) ಚಕ್ರಸ್ಥಲ ಎಂಬ ರೂಪದಲ್ಲಿ ಮಾರ್ಪಟ್ಟುದ್ದುಂಟು. ವೀರಶೈವರ ಷಟ್‌ಸ್ಥಲದ ಹಿನ್ನೆಲೆ ಇಲ್ಲಿದೆ.

ವೇದದಲ್ಲಿ ರಥ ಈ ಸಂಕೇತಕ್ಕೆ (ಸ್ವಂತ) ಗಮನಶಕ್ತಿಯುಳ್ಳದ್ದು ಎಂಬ ಧ್ವನ್ಯರ್ಥವೂ ಉಂಟು! ಗತ್ಯರ್ಥಕ ಋ ಆಖ್ಯಾತ ಸಾಧಿತ ರಥ ಎಂಬೀ ಕಾರಣದಿಂದ, ಇಲ್ಲಿ ಗತಿಯುಕ್ತ ತೇರು, ಎಂಬ ಭಾವಾರ್ಥವೂ ಉಂಟು. ಕುಮಾರನ ರಥವು ಅ-ಚಕ್ರಂ ಇದ್ದರೂ ಚಕ್ರವಿಲ್ಲದ್ದು ಆದರೂ; ಇದನ್ನು ಏಕೇಷಂ ರಥಂ ಎಂದು ವರ್ಣಿಸಲಾಗಿದೆ. ಇಷ್>ಇಷ್ಟ ಇಷ್ಟವೆನಿಸಿದತ್ತ ತಿರುಗಬಲ್ಲ, ಅಲೆಯಬಲ್ಲ ರಥ, ಎಂಬ ಒಂದು ಅರ್ಥವು ಆಯ್ತು. ಇಲ್ಲಿ 'ಇಷ್' ಇದಕ್ಕೆ ಶ್ಲೇಷಾರ್ಥವೂ ಇದೆ. ಈ ಪದರು ಮಾತಿನ ಅರ್ಥವೇನು? ಬೇಕಾದತ್ತ ಹೋಗಬಲ್ಲ ಈ ರಥಕ್ಕೆ ಏಕೇಷ ಉಂಟು, ಎಂದರೆ ಒಂದು ಈಸು (Pole) ಇದೆ! ಭಗವತ್ ಗೀತೆಯ ನರ (ಳ) ನ ರಥದ ಆಕೃತಿ ಇದಕ್ಕಿಂತ ಬೇರೆಯಿಲ್ಲ.

ಆದಕಾರಣ, ಶ್ರೀಮತ್ ಭಗವತ್‌ಗೀತೆಯ ಕುರುಕ್ಷೇತ್ರದ ಕಾಳಗಕ್ಕೆ ಸಿದ್ಧವಾದ ನರ(ಳ) ರಥಕ್ಕೆ, ಕಠದಂತೆ ಇಂದ್ರಿಯಾಣಿ=ಪ್ರಂಚೇಂದ್ರಿಯರೂಪೀ ಹಯಗಳಿಲ್ಲ. ಆದರೆ, ಇಲ್ಲಿ ವೇದದ ಕುಮಾರನ ರಥದಂತೆ ನರ-ರಥಕ್ಕೂ ಈ ನ ರೂಪೀ ಒಂದೇ, ಹಯ ಉಂಟು! ಕೃಷ್ಣ=ವಿಷ್ಣುವಿಗೆ ಹಯವದನ, ಹಯಗ್ರೀವ ಎಂಬಲ್ಲಿಯ ಔಚಿತ್ಯ ಅಥವಾ ಸಾರ್ಥಕತೆ ಇಲ್ಲಿ ಪ್ರತೀತಿಗೆ ಬರಬಲ್ಲುದು. ಇನ್ನು ಇಲ್ಲಿ ಗೀತೆಯ ಅಶ್ವ-(ತ್ಥ)=ಕೃಷ್ಣ; ಅಶ್ವ-ತ್ಥ=ಭಗ-ವಂತ ಎಂಬಲ್ಲಿ ಅಭಿಪ್ರೇತವಿರುವ ಅರ್ಥವನ್ನು ಬಿಡಿಸಿ ಹೇಳುವ ಆವಶ್ಯಕತೆಯುಂಟೆ?

ಭಗವತ್ ಗೀತೆಯ ಕುರುಕ್ಷೇತ್ರದಲ್ಲಿ ನರ(ಳ)ನು ಮಾಡಬೇಕಾದ ಅಹಿಂಸಾತ್ಮಕ ನಿಃಶಸ್ತ್ರ-ಯುದ್ಧದ ಸ್ವರೂಪ ಈ ಅಹಿಂಸಾತ್ಮಕ ಅ-ಸಹಕಾರರೂಪೀ ಯುದ್ಧದ ಸೂಚನೆ ಗೀತೆಯಲ್ಲಿ ಉಂಟೆ? ಈ ದೃಷ್ಟಿಯಿಂದ ಮೌಲಿಕ ವಾಕ್ಯವು; 'ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಮ್'! ಈ ಗೀತೆ, ಮಹಾಭಾರತ, ಐತಿಹಾಸಿಕ ಘಟನೆಯ ಮೇಲೆ ನಿಂತಿದೆ ಎಂಬ ಆಗ್ರಹ, ದುರಾಗ್ರಹವಿರುವುದಾಗಿ ಸಿದ್ಧಪಡಿಸಲು ಮೇಲಣ ವಾಕ್ಯ ಒಂದೇ ಸಾಕು! ಈ ಗೀತೆಯ ಮಹಾಬಾಹು ಎಂದರೆ, ಅರ್ಜುನನಲ್ಲ! ಅರ್ಜುನನ (ಪ್ರಕಾಶತತ್ತ್ವದ)

ಪಾತ್ರವನ್ನು ಗೀತೆಯಲ್ಲಿ ತಂದಿರುವ ಉದ್ದೇಶವು ಬೇರೆಯೇ ಇದೆ. ಶಿಶ್ನೇ ದೇವಾಃ ಸಂಪ್ರದಾಯದ ಶತ್ರು ಇಂದ್ರನು! ಅಲ್ಲದೇ ಅಹಿ: ವೃತ್ರ (ಚಂದ್ರ)=ಹನ್ ಎಂಬ ಬಿರುದು ಇಂದ್ರನಿಗೆ! ಈ ಇಂದ್ರನು ಪ್ರಕಾಶತತ್ವದ ಪ್ರತೀಕ! ಸವಿತೃ ಸ್ವರೂಪಿ ಎಂದೂ ವೇದ ಹೇಳಿದೆ. ಪ್ರಕಾಶಕ್ಕೆ ಲಿಂಗ ಇರಲಾರದು! ಲೈಂಗಿಕ ಆಸಕ್ತಿಯನ್ನು ನಿಯಂತ್ರಿಸುವ ಪ್ರಕಾಶರೂಪ-ಪ್ರಜ್ಞೆಯನ್ನು ಇಲ್ಲವಾಗಿಸಲು ಮಾಡಿರುವ ಮಾತಿನ ಮಾಟವಿದು. ಇಂದ್ರನನ್ನೇ ಇಂದ್ರಿಯ ಸ್ವರೂಪನೆಂದು ಚಿತ್ರಿಸಲಾಗಿದೆ! ಇಂದ್ರಾಂಶನೆಂಬ ಅರ್ಜುನನನ್ನು ನರ(ಳ) ನನ್ನಾಗಿಸಲು ಗೀತೆಯಲ್ಲಿ ಮಾಡಿಸಲಾಗಿರುವ ಮಾಟವು ಇಲ್ಲಿ ಬಯಲಿಗೆ ಬರುತ್ತಿದೆ!

ಜಹಿ ಶತ್ರುಂ: ಶತ್ರುವನ್ನು ಗೆಲ್ಲು-ಕೊಲ್ಲು ಎಂದು ಪ್ರೇರಿಸಿರುವ ನರ(ಳ)ನನ್ನು ಮಹಾಬಾಹೋ ಎಂದು ಸಂಬೋಧಿಸಿರುವಲ್ಲಿ ಈ ಬಾಹುವು ವಿಶೇಷಾರ್ಥವುಳ್ಳದ್ದಿದೆ! ಪ್ರಧಾನಾಂಗದಿಂದಾಗಿ ಕರೆಯಲಾಗುವ ಈ ನೀರ ನರ(ಳ)ನು ಇಲ್ಲಿದ್ದಾನೆ! ಇದಕ್ಕೂ ಬೇರೆಯಾದ ಬಾಹುವು ಯಾವುದು? ಬಾಹು-ಬಲಿ=ಭದ್ರಬಾಹು, ಈ ಸಾಂಕೇತಿಕತೆ ವೇದದಲ್ಲಿದೆ. ಸೃಷ್ಟಿನಿರ್ಮಾಣ ಕಾರಣನನ್ನು 'ದ್ಯಾವಾಭೂಮೀ ಜನಯನ್ ದೇವ ಏಕಃ' ಎಂಬುವನನ್ನು, ವಿಶ್ವತಃ ಬಾಹು ವಿಶಾಲ-ಬಾಹು ಎಂದುದಾಗಿದೆ!

ಭಗವದ್ಗೀತೆಯ ನರ(ಳ), ಮಹಾಬಾಹು ನಡೆಸುವ ಅಹಿಂಸಾತ್ಮಕ ಯುದ್ಧದ ಸ್ವರೂಪದ ಸೂಕ್ಷ್ಮ ಸಾಂಕೇತಿಕ ಸೂಚನೆ, ಪುರುಷ (ಉತ್ತಮನ) ಯೋಗದ ವಿವರಣೆಯ ಅಧ್ಯಾಯದಲ್ಲಿ! ಪುರಿಶಯ(ನ) ಮೇಲ್ಪಂಕ್ತಿಯನ್ನು ಅನುಸರಿಸಲು ಪರ್ಯಾಯದಿಂದ ಸೂಚಿಸಿದಂತಿದೆ! ಈ ಹದಿನೈದನೆಯ ಅಧ್ಯಾಯವು, ತಿರುವು ಮುರುವಾಗಿ ನಿಂತಿರುವ (ಊರ್ಧ್ವ ಮೂಲ) ಅಶ್ವ(ತ್ಥ) ವೃಕ್ಷದ ಮಾಹಾತ್ಮ್ಯದೊಡನೆ ಪ್ರಾರಂಭವಾಗುತ್ತದೆ! ಈ ಭಗ-ವಂತನು (ಅಶ್ವ ಮತ್ತು ಅಶ್ವತ್ಥ ಯೋಗದ) ರಹಸ್ಯವನ್ನು ಬೋಧಿಸುತ್ತಿದ್ದಾನೆ. ಈ ಅಶ್ವತ್ಥದ ಬೇರುಗಳು ತೀರ ಆಳದ ವರೆಗೆ ಹೋಗಿವೆ (ಅಶ್ವತ್ಥಂ ಏನಂ ಸು-ವಿರೂಢ ಮೂಲಂ) ಈ ಬೇರುಗಳನ್ನು, ಹೇ ನರನೇ ಅ-ಸಂಗ (ರೂಪೀ) ಶಸ್ತ್ರದಿಂದ ಚೆನ್ನಾಗಿ (ದೃಢ ಪ್ರಹಾರದಿಂದ-ದೃಢೇನ) ಛಿನ್ನ ವಿಚ್ಛಿನ್ನವಾಗಿಸು.[೩] ಕುರುಕ್ಷೇತ್ರ (ಕರ್ಮಭೂಮಿ) ಇಲ್ಲದೆ ಮಹಾಬಾಹು ನರ(ಳ)ನ ಹೋರಟೆ ಅರ್ಥವಿಹೀನ, ಎಂಬುದು ಇಲ್ಲಿ ಅಭಿಪ್ರೇತವಿದೆ. ಅ-ಸಂಗ ಇದು ಶಸ್ತ್ರವಾಗಬೇಕಿದ್ದರೆ, ಸಂಗ (ಭೂಮಿ) ಅನಿವಾರ್ಯವಿದೆ. ಯುದ್ಧ ಭೂಮಿಗೆ ಬೆನ್ನು ತೋರಿಸುವವನು ಶೌರ್ಯ-ವೀರ್ಯದ ಬಾಯ್ಬಡಾಯಿಯ ಪೌರುಷಕ್ಕೆ ಏನು ಬೆಲೆ? ಎಂಬ ದೃಷ್ಟಿಕೋನದ ವೈಶಿಷ್ಟ್ಯವು, ಏನೆಲ್ಲ ದಿವ್ಯಾಧ್ಯಾತ್ಮ ಪಂಥಗಳ ಕುಮಾರಕುಮಾರೀ ವ್ರತಗಳ ಮೂಲ ಪರಂಪರೆಯಲ್ಲಿ ಉಂಟೇ ಉಂಟು.

ಇಂಥ ಅಂಹಿಸಾತ್ಮಕ ಯುದ್ಧದಲ್ಲಿ ಜಾರಿ 'ಜಾಬಾಲನಿಗೆ' ಜನ್ಮವಿತ್ತ ಕುಮಾರಿಯ ಕತೆ ಉಪನಿಷತ್ತಿನಲ್ಲಿದೆ.[೪] ಈ ಯುದ್ಧದಲ್ಲಿ ಸಂಭವಿಸುವ ಇಂಥ ಅಪಘಾತಗಳಿಂದಾಗಿ, 'ಭಗ-ವತ್' ಗೀತೆಯ ನಿಷ್-ಕಾಮ ಕರ್ಮಯೋಗವು ಸಾಮಾನ್ಯರ ಸಾಧನ-ವ್ರತವಾಗಿ ಉಳಿಯಲಿಲ್ಲ! ಅಹಿಂಸಾ ವ್ರತಾಧಿಷ್ಠಿತ ಬ್ರಹ್ಮ-ಚರ್ಯ=(ಬ್ರಹ್ಮದತ್ತ ಚರಿಸುವುದು) ಇದುವೆ ಒಂದು ಘೋರಯುದ್ಧ! ಜೈನ, ಬೌದ್ಧ, ಶೈವ, ವೈಷ್ಣವ, ಕ್ರೈಸ್ತ ಮುಂತಾದ ಪಂಥಗಳಲ್ಲಿ ಅಭಿಪ್ರೇತವಿರುವ ಆತ್ಯಂತಿಕ-ಅಹಿಂಸೆಯ ವ್ರತದ ನಿಜವಾದ ಅರ್ಥವು ಮರೆತಂತಾಗಿದೆ! ಈ ಅ-ಹಿಂಸೆಯ ಸಾಧನವು ಅನಿವಾರ್ಯವೆನಿಸಿದ ಜೀವನ ಪ್ರಸಂಗದ ಹಿನ್ನೆಲೆಯನ್ನು ಗ್ರಹಿಸಿಕೊಳ್ಳುವುದು ಅಶಕ್ಯವಿಲ್ಲ. ಈ ಸಮಯಾಚಾರದ ಅನುಸರಣದಲ್ಲಿ ಸಂದೇಹವು ತಲೆಯೆತ್ತಿದ ಒಂದು ಪ್ರಸಂಗದ ಉಲ್ಲೇಖವು ಮುಕ್ತಿಕಂಠಾಭರಣ ಎಂಬ ವಚನ ಸಂಗ್ರಹದಲ್ಲಿ ಅಡಕವಾಗಿದೆ.[೫] ಈ ಚರ್ಚೆಯಲ್ಲಿ ಪ್ರಭುದೇವರು ತಮ್ಮ 'ಶಂಕೆ' ಎತ್ತಿದ್ದಾರೆ. ಸಾಂಕೇತಿಕತೆಯ ದೃಷ್ಟಿಯಿಂದ ಮೌಲಿಕವಾದ ಪ್ರತಿಮೆ ಇಲ್ಲಿಯೂ ಬಂದಿದೆ: ಕೋಡಗ ಈ ಕೋಡಗವೇ ಋಗ್ವೇದದಲ್ಲಿ 'ವೃಷಾಕಪಿ' ರೂಪದಲ್ಲಿ ಇಂದ್ರಾಣಿ ಸಂ-ಭೋಗದ ಸಂಬಂಧದಲ್ಲಿ ಋಗ್ವೇದದಲ್ಲಿ ಬಂದಿದೆ![೬]

ಅ-ಹಿಂಸಾ ವ್ರತ=(ಬ್ರಹ್ಮಚರ್ಯಯುಕ್ತ), ಪಕ್ಕದಲ್ಲಿ ಬ್ರಹ್ಮ ಇದ್ದು ಆಚರಿಸಿದಲ್ಲಿ, ಅ-ಮೃತತ್ವವು-ಅಮರತ್ವವು ಸಿದ್ಧಿಸುತ್ತದೆ ಎಂಬ ಗ್ರಹಿಕೆಯೂ ಉಂಟು. ಆದರೆ, ಮೃತ ಎಂಬ ಈ ಮಾತು ಕಣ್ಕಟ್ಟಿನ ಒಂದು ತಂತ್ರವಾಗಿದೆ! ಅ-ಮೃತ=(ಜೀವಂತ), ಇದು ವಿಶೇಷಣ! ವಿಶೇಷ್ಯ ಎಂದರೆ ವರ್ಣಿಸಿಕೊಳ್ಳುವ ಹೆಸರು ಎದುರು ಇಲ್ಲದೆ,

ಬರಿಯ ಗುಣವಾಚಕ ವಿಶೇಷಣವನ್ನು ಬಳಸುವಲ್ಲಿ ಮೋಸವಾಗುತ್ತದೆ. ಅ-ಮೃತ (ಜೀವಂತ) ಎಂದರೆ ಯಾವುದು? ಅ-ಮೃತ (ವಿಶೇಷಣ) ಎಂಬುದು ಎಲ್ಲಿಯೋ ಉಂಟು ಎಂಬ ಹಾಗೆ ನಂಬಿಸಲಾಗಿದೆ. ಅಮೃತದ ನಿಜವಾದ (ಮೂಲಾರ್ಥದ) ಹಿನ್ನೆಲೆ, ನನಗೆ ಕಂಡದ್ದು, ವೇದದ ಆದಿತಿ=ಲೋಕಜನನಿಯ ವರ್ಣನೆಯಲ್ಲಿ, ಲೋಕಮಾತೆಯನ್ನು ಅಮೃತಸ್ಯ ನಾಭಿಃ (ಜೀವಂತ=ಅಮೃತ ರಸದ ಹೊಂಡ=ಕೇಂದ್ರ) ಎಂದಿರುವಲ್ಲಿ ಔಚಿತ್ಯವಿದೆ. ತಾಯಿ 'ಅಮೃತರಸ' ಯುಕ್ತಳು ಇಲ್ಲದೆ ಇದ್ದರೆ, ಅಮೃತ=ಜೀವಂತ ಮಕ್ಕಳು ಹುಟ್ಟಲು ಶಕ್ಯವೆ? ಕುಮಾರಾ, ಕುಮಾರೀ ವ್ರತದಲ್ಲಿ ಅಹಿಂಸೆ, ಎಂದರೆ ಇವರು ತಮ್ಮೊಳಗಿನ ಅಮೃತ (ಜೀವಂತ) ರಸದ ಒಂದು ಹನಿಯೂ ಹೊರಗೆ ಬರದಂತೆ ಎಚ್ಚರಪಡುವುದು.

ಕುರುಕ್ಷೇತ್ರದಲ್ಲಿ ಹೋರುವ ನರ(ಳ)ನು ನಿಷ್-ಕಾಮನಾಗಿ ಕರ್ಮವನ್ನು ಆಚರಿಸುವ ಸಾಧನರತನಾಗುವುದು ಕರ್ತವ್ಯವಾಗುತ್ತದೆ. ಅಸಂಗ ಶಸ್ತ್ರದಿಂದ, (ಸಂಗದಲ್ಲಿ ಇದ್ದು) ಹೋರಾಡುವಾಗ ಅಭಿಪ್ರೇತವಿರುವ ನಿಷ್ಕಾಮಕರ್ಮದ ಆಚರಣೆ, ಮತ್ತು ಟಿಳಕರು ಗೀತಾರಹಸ್ಯದಲ್ಲಿ ವಿವರಿಸಿರುವ ನಿಷ್ಕಾಮಕರ್ಮದ ಆಚರಣೆ, ಇವೆರಡರಲ್ಲಿ ರಾತ್ರಿ-ಹಗಲಿನಷ್ಟೇ ಅಂತರವಿದೆ! ಸರಿ. 'ಕುರುಕ್ಷೇತ್ರ'ದ ಈ ಘನ-ಘೋರ ಸಂಗ್ರಾಮವು ನಿಷ್‌ಕಾಮ ಸಿದ್ಧಿಯು ಕರ್ಮಯೋಗದ ಮೂಲಕ ಯಶಸ್ವಿಯಾಗಿ ಸಿದ್ಧಿಸಿತು, ಎಂಬುದಕ್ಕೆ ಒರೆಗಲ್ಲು ಯಾವುದು? ಅ-ಕ್ಷರ ಪುರುಷ-ಸಿದ್ಧಿಯು ಲಭಿಸಿದರೆ ಈ ಲೋಕದಲ್ಲಿ ಪ್ರಾಪ್ತವಾಗುವ, ಶ್ರೀಃ, ವಿಜಯಃ ಮತ್ತು ವಿಭೂತಿಮತ್ತ್ವ ಇದುವೆ, ನಿಷ್-ಕಾಮನಾಗಿ ಕರ್ಮರತನಾಗುವ ಜೀವನ ರೀತಿಯ ಸಾಫಲ್ಯ, ಕ್ಷರ ಪುರಿ-ಶಯ (ಪುರುಷ) ಅ-ಕ್ಷರ ಪುರಿ-ಶಯ (ಪುರುಷ) ಈ ಶಬ್ದಪ್ರತಿಮೆಗಳು ಭಗ-ವತ್ ಗೀತೆಯ ಪುರುಷ ಉತ್‌ತಮ ಯೋಗದ ವಿವರಣೆಯಲ್ಲಿಯೇ ಉಂಟು![೭] ಎಚ್ಚರ, ಒಂದು ಮೋಸದ ಎಡೆ ಇಲ್ಲಿದೆ.

ಆದರೆ, ಇಲ್ಲಿಯೇ ಮೂರನೆಯ ಪುರುಷನ ಬಗೆಗೆ ಮೋಸ ತರುವಂತಹ ಉಲ್ಲೇಖವಿದೆ. ದ್ಯಾವಾ-ಭೂಮೀ ಜನಕನೆಂಬ ಋಗ್ವೇದದ ದೇವ ಏಕಃ, ಮತ್ತು ಭಗವತ್ ಗೀತೆಯ ಯೋಗ-ಈಶ್ವರ. ನರ-ನಾರ ಅಯನ ರೂಪೀ ಕೃಷ್ಣ (ವಿಷ್ಣು) ಬೇರೆಯಿರಲಾರರು. ಏಕಂ ಸತ್ (ವಿಪ್ರಾಃ ಬಹುಧಾ ವದಂತಿ), ಎಂದು ವೇದವೇ ಹೇಳಿದೆ! ಮಯಾ ಅಧಿ ಅಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಂ ಎಂದು ವಿಶದ ಪಡಿಸಿದವನೂ, ಈ ಭಗವತ್ ಗೀತೆಯ ಭಗ-ವಂತನೇ! ಗೀತೆಯ ಭಗವಂತನ ಈ ಉಕ್ತಿಯಂತೆ, ಪ್ರಕೃತಿ ಮತ್ತು ಪುರುಷ ರೂಪೀ (ಭೂಮಿ-ದ್ಯೌಃ) ಉಭಯಲೋಕ ಸೃಷ್ಟಿಸಿರುವ ಏಕೋ ದೇವಃ ಎಂದರೆ, ಗೀತೆಯ ಈ ಅಧ್ಯಕ್ಷ=ಆಧಿ ಅಕ್ಷನೇ (axle=ಏಕೇಷನೇ) ಈ ಗೀತೆಯಲ್ಲಿಯೇ, ಯತಃ ಪ್ರವೃತ್ತಿ ಪ್ರಸೃತಾ ಪುರಾಣೀ ಆಗಿದ್ದಾನೆ. (ಎಲ್ಲಿಂದ ಈ ಮೂಲ ಪುರಾತನ ಪ್ರವೃತ್ತಿ ಉಗಮ ಹೊಂದುತ್ತದೊ) ಆ ಆದ್ಯಂ ಪುರುಷಂ (ಆ ಆದಿ ಪುರುಷನನ್ನು) ಹೊಂದಿ ಇವನು ಮುಕ್ತನಾಗುತ್ತಾನೆ (ಮರಳಿ ಹುಟ್ಟುವದಿಲ್ಲ,) ಎಂಬ ಆಶ್ವಾಸನವಿತ್ತವನೂ, ಈ ಭಗವಂತನೇ ಅಲ್ಲವೆ?[೮]

ಈ ಗೀತೆ, ಉಪನಿಷತ್ತುಗಳ ಸಾರ ಎಂಬ ಸಂಗತಿ ಸರ್ವಮಾನ್ಯವಿದೆ. ಉಪನಿಷತ್ತಿನ ಬ್ರಹ್ಮನ್ ತತ್ತ್ವ, ಮತ್ತು ಗೀತೆಯ ಬ್ರಹ್ಮನ್<ಬ್ರಾಹ್ಮೀ ಸಿದ್ಧಿಯ ಬ್ರಹ್ಮತತ್ತ್ವ, ಇವು ಭಿನ್ನ ಎನ್ನಲು ಬರಲಾರದು. ಉಪನಿಷತ್ತಿನಲ್ಲಿ, "ಈ ಬ್ರಹ್ಮನ್ ತತ್ತ್ವವು" ದ್ವೇ ವಾ ಬ್ರಹ್ಮಣೇಃ ರೂಪೇ ಮೂರ್ತಂ ಚ, ಅಮೂರ್ತಂ ಚ ಎಂದು ನಿಃಸಂದಿಗ್ಧವಾಗಿ ಹೇಳಲಾಗಿದೆ.[೯]

ಆದರೆ, ದ್ಯಾವಾಭೂಮೀ ಎರಡರ ಶ್ರದ್ಧೆಯೇ ಮೂಲದಲ್ಲಿ ಇರುವಾಗ, ಫಕ್ಕನೆ ಲೋಕತ್ರಯ, ಪುರುಷತ್ರಯ ಈ ತ್ರಯೋ ವಿಭಾಗದ ಮಾತು ಯಾಕೆ ಬಂತು? ಇದು ಯಾತಕ್ಕೆ ಬೇಕಿತ್ತು? ಈ ಕಣ್ಕಟ್ಟಿನ ವಿವರಣೆಗೆ ಇಲ್ಲಿ ಅವಕಾಶವಿಲ್ಲ. ಯೋಗ ಸಾಧನಾದಿಗಳ ಬಲದಿಂದ ನರನೇ ನಾರಾಯಣನು ಆಗಬಲ್ಲನು ಎಂಬ ಶ್ರದ್ಧೆಯಂತೆ, ಕ್ಷರಪುರುಷ=ನರ ಮತ್ತು ಅ-ಕ್ಷರಪುರುಷ ನಾರಾಯಣ (=ನಾರ. ಅಯನ) ಈ ಪ್ರಪಂಚದಲ್ಲಿ ಇಬ್ಬರೇ ಪುರುಷರು ಆಗುತ್ತಾರೆ. ನಾರದನು, ಶ್ರೀಮನ್ ನಾರಾಯಣನ ಸಾಕ್ಷಾತ್ ದರ್ಶನಕ್ಕಾಗಿ ಬದರಿಗೆ ಹೋದನು, ಎಂಬ ಕಥೆ ಮಹಾಭಾರತದಲ್ಲಿದೆ. ಈ ನಾರದನಿಗೆ ಬದರಿಯ ಆಶ್ರಮದಲ್ಲಿ ಕಂಡದ್ದೇನು? ಶ್ರೀಲಕ್ಷ್ಮಿಸಹಿತ ನಾರಾಯಣನಲ್ಲ! ಆಶ್ರಮದ ಗುಹೆಯಲ್ಲಿ ನರ-ನಾರಾಯಣೌ ತಪಃ ತೇಪೇ ನರ-ನಾರಾಯಣರು ಇಬ್ಬರೂ ತಪೋನಿರತರಿದ್ದರಂತೆ!

ಈ ದೃಶ್ಯವನ್ನು ಕಂಡ ನಾರದನಿಗೆ ಸೋಜಿಗವಂತೆ! ನೀವೇ ಸಿದ್ಧ-ಪುರುಷರಿರುವಾಗ ತಪಸ್ಸು ಯಾತಕ್ಕೆ? ಎಂದು ಕುತೂಹಲದಿಂದ ಪ್ರಶ್ನೆ ಕೇಳಿದ ಹಾಗಿನ ವರ್ಣನೆಯಿದೆ. ಈ ಸಂದರ್ಭದಿಂದಲೇ, ಶ್ರೀಮನ್ ನಾರಾಯಣನಿಂದ ಸ್ವ-ನಾಮ-ನಿರ್ವಚನವನ್ನು ಆಡಿಸಿದ್ದಾಗಿದೆ. 'ಆಪೋ ನಾರಾಃ ಇತಿ ಪ್ರೋಕ್ತಾಃ, ಆಪೋ ವೈ ನರ ಸೂನವಃ' ಈ ವಿವರಣೆಯಂತೆ, ಈ ಪ್ರಪಂಚವೆಲ್ಲವೂ ನೀರನ=ನಾರಾಯಣನ ಸಂತಾನ! ಅಥವಾ, (ಅಪೋವೈ ನರಸೂನವಃ), ನರ ಸೂನುಗಳೆಲ್ಲ ನೀರಿ=ನಾರನ ಸಂತಾನ! ಎಂದರೆ, ವ್ಯಾಸನು, ಈ ಸಂದರ್ಭದಿಂದ ನರ-ನಾರಾಯಣರು ನಾರ (ಆಪ) ಸ್ವರೂಪರು, ಎಂದು ಸೂಚಿಸಿದ್ದಲ್ಲದೆ, ನಾರ-ದ ಪ್ರಪಂಚಕ್ಕೆ ನಾರದೇವನ ಭಕ್ತಿ, ಸಂದೇಶದ ದಾನ (ನಾರ-ದ) ಮಾಡುವ ಈತನೂ ನಾರ ಸ್ವರೂಪನೇ ಆಗುವುದನ್ನು ಧ್ವನಿತಪಡಿಸುತ್ತಿದ್ದಾನೆ, ಈ ಕವಿ ಪುಂ-ಗವನು! ಇದು ಅ-ದ್ವೈತದ ಸಾಕ್ಷಾತ್ಕಾರ! ಪ್ರಸ್ತುತ, ಈ ಭಗವತ್ ಗೀತೆಯಲ್ಲಿ ನರನಿಗೆ ಅ-ಕ್ಷರ ಪುರುಷನಾಗಿ, ನಾರಾಯಣ ಸ್ವರೂಪನಾಗಲು ಬೋಧಿಸಲಾಗಿರುವುದು ಸ್ಪಷ್ಟವಿದೆ.[೧೦] ಪ್ರಸ್ಥಾನ-ತ್ರಯಿಗಳಲ್ಲಿ ಎಣಿಸಲ್ಪಡುವ ಈ ಭಗವತ್ ಗೀತೆ ಮೋಕ್ಷ-ಮಾರ್ಗ-ಪ್ರತಿಪಾದಕ ಗ್ರಂಥ ಎಂದು ದ್ವೈತ್ಯಾದ್ವೈತ ಮತಗಳ ಏನೆಲ್ಲ ಆಚಾರ್ಯರು ಏಕಾಭಿಪ್ರಾಯವುಳ್ಳವರಾಗಿದ್ದಾರೆ.

ಮೋಕ್ಷದಾಯಕವೂ ಹಾಗೂ ಬಾಳಿನಲ್ಲಿ ಶ್ರೀಃ, ವಿಜಯಃ ಮತ್ತು ವಿಭೂತಿಮತ್ತ್ವ ಸಿದ್ಧಿಗೆ ಕಾರಣ ಎಂಬ ಈ ಅಕ್ಷರಪುರುಷ ಸಿದ್ಧಿಯ ಸಾಧನದ ಸ್ವರೂಪವೇನು? ಅಹಿಂಸೆಯ ಆಧಾರದ ಬ್ರಹ್ಮ-ಚರ್ಯ (ಬ್ರಹ್ಮದತ್ತ ಚರಿಸುವುದು), ಸತ್ ತ್ರ-ಪಾಲನದ ಸಾಧನ, ಅನು-ಸ್ಥಾನ ವ್ರತವು, ಈ ನಿಷ್-ಕಾಮ ರೂಪ ಕಾಯಕದಲ್ಲಿ ಅತ್ಯವಶ್ಯವಿದೆ, ಎಂದು ಗೀತೆಯು ಬೋಧಿಸಿದೆ. ಇದನ್ನೇ ಯಜ್ಞ ಎಂದೂ ಉಪನಿಷತ್ತು ಹೇಳುತ್ತದೆ.[೧೧] ಇಲ್ಲಿ ಯಜ್ಞ ಶಬ್ದದ ನಿರುಕ್ತವು ಬದಲಾಗಿದೆ! ಸಃ ಯತ್ ಜಾಯತೇ, ತಸ್ಮಾತ್ ಯಜ್ಞಃ (ಬ್ರಹ್ಮವನ್ನು ಕುರಿತು, ಬ್ರಹ್ಮದತ್ತ ಚರಿಸುವುದು. ಇದುವೇ ಯಜ್ಞ)! ಇದನ್ನು ಸತ್ ತ್ರಾಯಣ' ಎಂದೂ ಹೇಳಲಾಗಿದೆ. ಸತ್=ಸತ್‌ತ್ವದ (ಅಮೃತ ರಸದ) ಸಂರಕ್ಷಣೆಯ ಸಾಧನ, ಎಂಬ ಕಾರಣದಿಂದ ಈ ಹೆಸರು. ಆತ್ಮನಃ ಪ್ರಾಣಂ ವಿಂದತೇ ಈ ಸಾಧನಯೋಗದಲ್ಲಿ ಆಚರಿಸಬೇಕಾಗುವ ಮೌನವು ಬ್ರಹ್ಮಚರ್ಯದ ಅಂಗವಾಗಿದೆ. ಯತ್ ಮೌನಂ ಇತಿ ಆಚಕ್ಷತೇ, ತತ್ ಬ್ರಹ್ಮಚರ್ಯಂ ಏವ. ಈ ವಿವರಣೆಯಲ್ಲಿ ಅರಣ್ಯಾಯನದ ನಿರ್ದೇಶವೂ ಇದೆ! ಐರಂಮದೀಯ ಹೆಸರಿನ ಹೊಂಡ (ಸರ), ಇದರಲ್ಲಿ (ಸೋಮ) ರಸ ಸ್ರವಿಸುವ ಅಶ್ವ-ತ್ಥ, ಈ ಸಾಂಕೇತಿಕ ಪ್ರತಿಮೆಯೂ ಉಂಟು.

ಕ್ಷರ ಪುರುಷ, ಹಾಗೂ ಅಕ್ಷರಪುರುಷ ಈ ಸಂಕೇತದ ಉಲ್ಲೇಖವು ಈ ಮೊದಲು ಒಮ್ಮೆ ಬಂದಿದೆ. ಅಲ್ಲಿ ಇದರ ಅರ್ಥ ಹೇಳುವುದು ಉಳಿದಿದೆ. ಕ್ಷರ ಪುರುಷ ಅಮೃತರಸ ಸ್ರವಿಸುವ ಅಧೋರೇತದ ವ್ಯಕ್ತಿ. ಆದರೆ ಅಹಿಂಸಾತ್ಮಕವಾಗಿ ಬ್ರಹ್ಮದತ್ತ ಚರಿಸುವ, ನಿಷ್ಕಾಮ-ಕರ್ಮದ ಸಾಧನದ ಮೂಲಕ ರೇತದ ಒಂದು ಹನಿಯೂ ಕೆಳಗೆ-ಹೊರಗೆ, ಬರದಂತಹ ಸಂಯಮವು ನಿಗ್ರಹವು ಶಕ್ಯವಾಗತೊಡಗುವಾಗ, ಈ 'ಕ್ಷರ' ಪುರುಷನು, ಊರ್ಧ್ವರೇತ, ಉತ್‌ತಮ ಪುರುಷ=ಅ-ಕ್ಷರ ಪುರುಷನಾಗುವ ದಾರಿಯಲ್ಲಿ ಅಡಿ ಇಟ್ಟಂತೆ ಆಯಿತು. ಇದು ಅತ್ಯಂತ ಕಠೋರಮಾರ್ಗ-ಖಡ್ಗದ ಧಾರೆಯ ಮೇಲೆ ಬರಿಗಾಲಿನಿಂದ ನಡೆದ ರೂಪಕ-ಉಪನಿಷತ್ತಿನಲ್ಲಿದೆ, ಕ್ಷುರಸ್ಯ ಧಾರಾ ನಿಶಿತಾ ದುರತ್ಯಯಾ ದುರ್ಗಂ ಪತಃ ಎಂದು ಕಠದಲ್ಲಿ ಹೇಳಲಾಗಿದೆ![೧೨]

ಗೀತೆಯಲ್ಲಿ ಅಕ್ಷರ-ಪುರುಷನನ್ನು ಉತ್-ತಮ ನೆಂದು ಹೇಳಿರುವಲ್ಲಿ ಗುಹ್ಯಾರ್ಥವಿದೆ. ಉತ್ ಸಂಕೇತದ ಮೂಲಾರ್ಥವು ಸ್ಥಳ ಈ ವಾಚಕವಿದೆ. ಮೇಲೆ=ಉತ್. ಉತ್ (ದ್) ಗ್ರಂಥ; ಶ್ರೇಷ್ಠತಾ ಸೂಚಕ ಅರ್ಥವು ಸಾಂಕೇತಿಕ, ಮೇಲಣದು=ಉತ್ ತರ, ಉತ್-ತಮ ಕೆಳಗಣದು=ಕೀಳು=ದಕ್ಷಿಣ. ಉತ್ತರ, ದಕ್ಷಿಣ ಇವು ದಿಶಾಸೂಚಕವಾದದ್ದು. ಮೊತ್ತಮೊದಲಲ್ಲಿ, ಎತ್ತರ, ಮೇಲೆ, ಉತ್-ತರ, ಉತ್-ತಮ, ಕೆಳಗೆ, ಕೀಳು=ಅಧಸ್=ದಕ್ಷಿಣ. ಪುರಿಯನು ಉತ್-ತಮನಾಗುವಾಗ, ಇವನನ್ನು ದಕ್ಷ ಎಂದು ವೇದ. ಹೆಸರಿಸಿದೆ, ವೇದ. ಉತ್‌ತಮ-ಲಿಂಗ=ಉತ್‌ಥಿತಲಿಂಗ (Ithy-Phallic) ಉತ್-ತಮ ಪುರಿ-ಶಯ (ನು)=ವಿಷ್ಣುರೂಪನೇ (ವಿ+ಸ್ನು) ಇರಬಲ್ಲನು. ಆದರೆ, ಗೀತೆಯಲ್ಲಿ ಯೋಚಿಸಿರುವ ಉತ್ತಮ-ಪುರುಷ=ಪುರುಷೋತ್ತಮ ಎಂಬಲ್ಲಿ

ಕಣ್ಕಟ್ಟನ್ನು ಸಂಭ್ರಮಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ! ಭಗವತ್ ಗೀತೆಗೆ, ಈ ಎದ್ದು ನಿಂತ ಭಗ-ವಂತ : ಅ-ಕ್ಷರ ಪುರಿ-ಶಯನು ಶ್ರೇಷ್ಠನು, ಮಿಗಿಲಾದವನು ಎಂದು ಗೌರವ ಪ್ರತಿಷ್ಠೆಯ ಅರ್ಥದಿಂದ ವರ್ಣಿಸುವ ಉದ್ದೇಶವಿದೆ, ಇಲ್ಲಿ ಕೀಳರಿಮೆ (Inferiority Complex) ಇದ್ದುದು ನಿಷ್ಕಾರಣವಲ್ಲ. ಈ (ಅ) ಕ್ಷರ-ಪುರಿಶಯ (ಲಿಂಗ), ಇದು ನಿತ್ಯ ಕತ್ತಲೆಯಲ್ಲಿ (ಕೋಣೆಯಲ್ಲಿ) ಇರುವ ಶಾಪ ಪಡೆದು ಹುಟ್ಟಿದಂತಿದೆ! ಇದು ಇರುವ ಎಡೆಯನ್ನು ಮಧ್ಯ (ಲೋಕ) ಅಂತರಿಕ್ಷ ಎಂದು ಹೇಳುವುದುಂಟು. ಆದರೆ, ಇದನ್ನು ದಕ್ಷಿಣಾಮೂರ್ತಿ ಎಂದೂ ವೇದಕಾಲದಿಂದಲೇ ಬಗೆಯಲಾಗಿದೆ. ದಕ್ಷಿಣ ಯಮನ ದಿಕ್ಕು ಎಂಬಲ್ಲಿ, ಯಮ=ಲಿಂಗ ಚಂದ್ರ ಎಂಬ ಸಾಂಕೇತಿಕತೆಯಿದೆ. ರೇತಸ್ರಾವದಿಂದ ಮೃತ್ಯು, ಅಲ್ಲವೆ?

ಈ ಸಂದರ್ಭದಿಂದಲೇ, ವೇದಕಾಲೀನ ಇನ್ನೊಂದು ಮೂಲಭೂತ ಸಾಂಕೇತಿಕ ಪ್ರತಿಮೆಯ ಸ್ಪಷ್ಟೀಕರಣವಾಗಲಿದೆ. ಚಂದ್ರಾऽऽದಿತ್ಯ, ಸಂಪ್ರದಾಯದ ಪ್ರಸ್ಥಾಪಕ ವಶಿಷ್ಠನು ದಕ್ಷಿಣ- ಕ-ಪರ್ದನು ಎಂದು, ವಸಿಷ್ಠಸೂಕ್ತದಲ್ಲಿಯೇ ವೇದದಲ್ಲಿದೆ. ವಸಿಷ್ಠ ಎಂದರೆ ಶ್ರೇಷ್ಠ-ವರಿಷ್ಠ! ಇದು ಶುದ್ಧ ವಿಶೇಷಣ! ಕೇವಲ ವಿಶೇಷಣ ಮೋಸಕ್ಕೆ ಕಾರಣ! ಅ-ಮೃತ ದಂತೆ ವಸಿಷ್ಠ (ಶ್ರೇಷ್ಠ-ವರಿಷ್ಠ) ಎಂದರೆ ಯಾರು? ಯಾವುದು? ಪುರಾತನ ಭಾರತೀಯ ಧರ್ಮಸಂಸ್ಕೃತಿಯು ಇಡಿಯಾಗಿ ಸಾಂಕೇತಿಕ ಪ್ರತಿಮೆಗಳ ಆಧಾರದ ಮೇಲೆ ನಿಂತಿದೆ! ಇದರ ಖಾತ್ರಿ ಮಾಡಿಕೊಳ್ಳಲು ಸದ್ಯಕ್ಕೆ ವಿಶ್ವ(ಶ್ವಾ)ಮಿತ್ರ ಮತ್ತು ವಸಿಷ್ಠ-ದಕ್ಷಿಣ ಕಪರ್ದ ಇವೆರಡು ಪ್ರತಿಮೆಗಳು ಸಾಕು. ಸವಿತೃ ದೈವತದ ಪ್ರಾರ್ಥನಾ ಮಂತ್ರದ್ರಷ್ಟಾರನು, ಎಂಬ ಖ್ಯಾತಿ ವಿಶ್ವ (ಶ್ವಾ) ಮಿತ್ರನದು. ಈ ಹೆಸರು ಅನ್ವರ್ಥಕನಾಮ; ಅಂಕಿತನಾಮವಲ್ಲ. ಇದು ಒಂದು ವ್ಯಕ್ತಿಯ ಹೆಸರೂ ಅಲ್ಲ. ಪ್ರಕಾಶತತ್ತ್ವವು ವ್ಯಕ್ತಿಗಳೊಳಗಿನ (ಸು) ಗುಣಗಳ ಮೂಲಕ ಅರಿಕೆಗೆ ಬರುತ್ತದೆ. 'ಗುಣಾಃ ಪೂಜಾಸ್ಥಾನಂ, ಗುಣಿಷು ನ ಚ ಲಿಂಗಂ, ನ ಚ ವಯಃ' ಇದು ಪ್ರಕಾಶತತ್ತ್ವ ಪೂಜಕ ಮನುಪ್ರಣೀತಮಾನವಧರ್ಮದ ಮುಖ್ಯ ಲಕ್ಷಣ. ಗುಣಪೂಜಕನು ವಿಶ್ವ(ದ) ಮಿತ್ರನಿರಲೇ ಬೇಕು, ಹಿಂದೆಯಾಗಲಿ; ಇಂದಾಗಲಿ; ಇದು ಶಾಶ್ವತ ಸನಾತನ (Perennial) ವಿಶ್ವನಿಯಮ ಗ್ರೀಸಿನ ಸಾಕ್ರೆಟಿಸ್ ಪ್ರಕಾಶ ಪೂಜಕನು, Virtue is knowledge ಎಂಬುದು ಆತನ ದೃಷ್ಟಿಕೋನ! Virtue = ಗುಣ=quality' ಬೇರೆ ಅಲ್ಲ.

ಪ್ರಕಾಶತತ್ತ್ವದ ವಿಶ್ವ(ಶ್ವಾ) ಮಿತ್ರನ ವಿರೋಧಿ, ಎಂದು ಬಗೆಯಲಾಗಿರುವ ವಸಿಷ್ಠ: ದಕ್ಷಿಣ ಕಪರ್ದ ಇದೂ ಅಂಕಿತನಾಮವಲ್ಲ! ದಕ್ಷಿಣಾಮೂರ್ತಿಯ ಕಪರ್ದದ ಉಪಾಸನಾ ಸಂಪ್ರದಾಯದ ಪ್ರವರ್ತಕನು ಈತನು! ವಸಿಷ್ಠ ದಕ್ಷಿಣ ಕಪರ್ದನ ಭಕ್ತರು ವಿಶಿಷ್ಟದ ವೈಶಿಷ್ಟ್ಯದ (ವ್ಯಕ್ತಿ=ಪುರುಷ) ಭಕ್ತರೇ ಆಗುತ್ತಾರೆ ಅಥವಾ ಇರುತ್ತಾರೆ! ಇದೆಲ್ಲ ಹಾಗಿರಲಿ, ವಿಶಿಷ್ಟದ ಭಕ್ತಿ=ಆತ್ಮಭಕ್ತಿ=ದೇಹಭಕ್ತಿ ಆಗಲೇಬೇಕು. ಭಗವತ್ ಗೀತೆಯ ಆಶಯಗ್ರಹಣದ ಸಂದರ್ಭದಿಂದ ಅವಶ್ಯವಾದ ಅವಾಂತರ ಸಂಗತಿಗಳು ಹಾಗಿರಲಿ, ಮುಖ್ಯವಾಗಿ, ಇಲ್ಲಿ ಅರಿಯಬೇಕಾಗಿರುವ ಸಂಗತಿ ಅಕ್ಷರಪುರುಷ ಸಿದ್ಧಿಯ ಸಾಧನದ ಸ್ವರೂಪವು ಯಾವುದು? ಕ್ಷರಪುರುಷನು ಅಧೋರೇತನಾಗಿರುತ್ತಾನೆ, ಇವನು ಉರ್ಧ್ವರೇತನಾಗಲು, ಮಾಡಬೇಕಾದ ಅನು-ಸ್ಥಾನವ್ರತದ ಬಗೆಗೆ ಗೀತೆ ಯಲ್ಲಿ ಸೂಚನೆ ಇದೆ. ಅ-ಸಂಗ ಶಸ್ತ್ರಧಾರಿಯಾಗಿ, ಕಾಮನೆಯ ಬೇರುಗಳನ್ನು ಚೆನ್ನಾಗಿ (ದೃಢೇನ) ದೃಢ ನಿರ್ಧಾರದಿಂದ ಕತ್ತರಿಸುವ ಸಾಧನೆ ಉಪಾಯವನ್ನು ಗೀತೆ ಹೇಳಿದೆ. ಈ ವಿಪರೀತ ಕಷ್ಟದ, ವಿಪರೀತ ಮಾರ್ಗವನ್ನು ಆಚರಿಸಿ ಫಲವೇನು? ಎಂಬ ಪ್ರಶ್ನೆಗೆ ಗೀತೆ ಬಗೆಬಗೆಯಲ್ಲಿ ಉತ್ತರವಿತ್ತಿದೆ. ಎಲ್ಲಕ್ಕಿಂತ ಹೆಚ್ಚಿನ ಆಮಿಷ ಬ್ರಹ್ಮವಿತ್ ಆಪ್ನೋತಿ ಪರಂ[೧೩] ಈ ಪ್ರಪಂಚದಲ್ಲಿ ಅತ್ಯಂತ ಶ್ರೇಷ್ಠ ಪರಮ ಎಂಬುದು, ಈ ಅಕ್ಷರಪುರುಷ ಸಿದ್ಧಿಯಾದವನಿಗೆ ದೊರೆಯುತ್ತದೆ. ಈ ಭಗವಂತನು ಹೇಳುವ ಸಿದ್ಧಿಗಳ ಬೆಲೆ ಏನು, ಎಂಬ ವಿಚಾರವು, ಗೀತೆಯ ಆಶಯ ಗ್ರಹಣದ ಸಂದರ್ಭದಿಂದ ಅಸ್ಥಾನೀಯವಲ್ಲ. ಈ ವಿಚಾರವು, ಗೀತೆಯಲ್ಲಿ ಬಂದಿರುವ ಲೋಕತ್ರಯಗಳ ಅನುಷಂಗದಿಂದ ಸ್ಪಷ್ಟವಾಗಲಿದೆ.

ಭಗವದ್ಗೀತೆಯಲ್ಲಿ ಬಂದಿರುವ ಲೋಕತ್ರಯ

ಈ ಮಾನವ ಜೀವನದಲ್ಲಿ ಮೂರು ಈ ಸಂಖ್ಯೆಯು ಒಳಗೊಳ್ಳುವ ಆಶಯವು, ವಿಶ್ವದಷ್ಟು ವಿಶಾಲವಿದೆ!

ನಾನು, ನೀನು, ಅವನು (ಅದು, ಅವಳು) ಈ ಮೂರರಲ್ಲಿ ವಿಶ್ವವೆಲ್ಲ ಬಂತು! ನಿನ್ನೆ ಇಂದು ನಾಳೆ, ಇಡೀ ಕಾಲವು ಒಳಗೊಳ್ಳುತ್ತದೆ. ಇದರಂತೆ ಲಿಂಗಗಳು ಮೂರು. ಈ ವಿಸ್ತಾರ ಸಾಕು ಸದ್ಯಕ್ಕೆ. ಭಾರತೀಯ ಪುರಾತನರು, ಈ ಜೀವನ ವಿಶ್ವದಲ್ಲಿ ಮೂರುಸ್ತರಗಳು ಇರುವುದನ್ನು ಗ್ರಹಿಸಿಕೊಂಡಿದ್ದರು. ಸೋಜಿಗದ ಸಂಗತಿಯೆಂದರೆ ಗ್ರೀಕ್ ಪುರಾತನ ಸಂಸ್ಕೃತಿಯಲ್ಲಿಯೂ ಈ ಮೂರರ ಪ್ರಜ್ಞೆ ಇತ್ತು!

> ....Some curious notions about the primacy of the number three which clearly antedate the beginnings of philosophical thought"[೧೪]

ಗ್ರೀಕಿನಲ್ಲಿ ತತ್ತ್ವಜ್ಞಾನವು ಪ್ರಾರಂಭವಾಗುವ ಮುಂಚಿನಿಂದಲೇ ಎಂದರೆ ಕ್ರಿಸ್ತಪೂರ್ವ ೭-೮ನೇಯ ಶತಕಕ್ಕೂ ಮುಂಚಿನಿಂದ ಈ ನಂಬುಗೆ ಇತ್ತು. ಪೈಥಾಗೊರಾಸನ ಸಂಪ್ರದಾಯವೂ (ಕ್ರಿ. ಪೂ. ೫೭೦) ಮೂರರ ಬಗೆಗಿನ ಶ್ರದ್ಧೆಯನ್ನು ಒಪ್ಪಿಕೊಂಡಿದೆ.

> As the Pythagoreans say, the whole world and all things in it are summed up in the number three, for end, middle and beginning give the number of the whole, and their number is triad. Hence we have taken this number from nature, as it were one of her laws, and make use of it even for the worship of Gods."[೧೫]

ಪೈಥಾಗೊರಾಸನ ಸಂಪ್ರದಾಯವು ಹೇಳಿರುವ ಮಾತು, ಭಾರತದಲ್ಲಿಯೂ, ಹಿಂದೊಮ್ಮೆ ವಾಸ್ತವದಲ್ಲಿ, ಆಚರಣದಲ್ಲಿ ಇತ್ತು! ಸವಿತೃ (ಧೀಃ ಪ್ರೇರಕ ಪ್ರಕಾಶ ತತ್ತ್ವದ) ದೈವತದ ಉಪಾಸನೆಯ ಪ್ರಾರಂಭದಲ್ಲಿ ಸ್ಮರಿಸಿ ಕೊಳ್ಳಲೇಬೇಕು, ಎಂಬ ನಿಯಮವಿದ್ದ ವ್ಯಾಹೃತಿ (ಪಾತಳಿ) ಮೂರು! ಭೂಃ-ಭುವಃ, ಮತ್ತು ಸ್ವಃ (ಸ್ವರ್ ಅಥವಾ ಸುವಃ) ಈ ಮೂರುಪಾತ್ರಗಳು, ಸಂಕಲ್ಪನೆ (invention) ಅಲ್ಲ ಮತ್ತೆ. ಇದು ವಾಸ್ತವಸತ್ಯದ ಧಾರಣ (Concept) ಭೂಃ ಇದು ಪ್ರಕೃತಿ, ದೃಶ್ಯಸೃಷ್ಟಿ Phenomena; ಭುವಃ ಇದು ದೃಶ್ಯಪ್ರಕೃತಿಗೆ ಆಧಾರಭೂತ ನಿಸರ್ಗ=Nature ಇವು ವ್ಯಕ್ತಿನಿರಪೇಕ್ಷ ಎರಡು ಪಾತಳಿಗಳು, ಆದರೆ, ವ್ಯಕ್ತಿ ಪ್ರಾಣಿಮಾತ್ರಾದಿ ವಿಶಿಷ್ಟ ವಸ್ತು ಮೊದಲಾದುವುಗಳ ಸಂದರ್ಭದಲ್ಲಿ, ವ್ಯಕ್ತಿಯ ದೇಹ ಭೂಃ; ಮತ್ತು ವ್ಯಕ್ತಿಯ ಅಂತರಂಗ ಭುವಃ ವ್ಯಕ್ತಿ ನಿರಪೇಕ್ಷ ಅಂತರಂಗದ ಟೊಳ್ಳು ಅಂತರಿಕ್ಷ (Vault) ಎನಿಸುತ್ತದೆ. ಈ ಅಂತರಿಕ್ಷವು ಆಕಾಶದ ಕೆಳಗಣ ಅವ-ಕಾಶ! ಆಕಾಶ ಮತ್ತು ಅವಕಾಶ (ಅಂತರಿಕ್ಷ) ಇವೆರಡರೊಳಗಿನ ಅಂತರವನ್ನು, ತಾರತಮ್ಯವನ್ನು ಮರೆತುದು ಭಾರತೀಯರ ಅಧಃಪಾತಕ್ಕೆ ಕಾರಣವಾಗಿದೆ. ಈ ಮಾತು ಸ್ವರ್ ಎಂಬ ಮೂರನೆ ಪಾತಳಿಯ ಸಂದರ್ಭದಿಂದ ಚೆನ್ನಾಗಿ ಗಮನಕ್ಕೆ ಬರಬಲ್ಲುದು.

ಭಗವದ್ಗೀತೆಯ ಭಗವಂತನು ಪ್ರಕೃತಿ (ಮಾತೆಯ) ಪ್ರಸವಕ್ಕೆ ತಾನೇ ಕಾರಣನು ಎಂದು ಒಪ್ಪಿಕೊಂಡಿದ್ದಾನೆ. ಆದಕಾರಣ, ಗೀತೆಯ ಭಗವಂತನೆಂದರೆ, ಪ್ರಕೃತಿಯ ಒಳಗಡೆಯ ಭೌತನಿಸರ್ಗ (Nature) ಸ್ವರೂಪವನು ಆಗುತ್ತಾನೆ. ಹೀಗಿರುವಾಗ, ಈ ಭಗವಂತ ಅಧಿ ಅಕ್ಷ (axle)=ವೃಕ್ಷರೂಪನು, ತಾನು ಮೂರನೆಯ ಪಾತಳಿಯವನು ಆಗಿರುವೆ, ಲೋಕತ್ರಯದ ಸ್ವಾಮಿ ಎಂದು ನಂಬಿಸುವ ಹೊಂಚು ಹಾಕಿದ್ದನ್ನು ಈ ಮೊದಲು ಸೂಚಿಸಿದ್ದಾಗಿದೆ. ಭೂಃ ಭುವಃ ಇವೆರಡೂ ಸಮವಾಯರೂಪ (Concomitant, inseparable) ಪಾತಾಳಗಳು. ತೋರಲು ಒಂದೇ. ಭೂಃ (Phenomena), ದೇಹ (ವ್ಯಕ್ತಿ), ಆದರೆ ಇದ್ದುದು ಎರಡು! ಪಿಂಡಾಂಡ, ಬ್ರಹ್ಮಾಂಡ ಎಂದೂ ಹೆಸರಿಸಲಾಗುತ್ತದೆ. ಇದು ಅಂತರಿಕ್ಷಸ್ಥ (ಅಂತರಂಗಸ್ಥ) ಅವಕಾಶ; ನಿತ್ಯಕತ್ತಲೆ ಕವಿದಿರುವ ಎಡೆ. ಲಿಂಗ ಜ್ಯೋತಿಯ ಎಡೆ.

ಈ ಜೀವನ ವಿಶ್ವವು, ಶಾಶ್ವತ ಸನಾತನ ನಿಯಮರೂಪೀ ಋತದ ಆಧಾರದ ಮೂಲಕವಾಗಿ ಅರಿಕೆಗೆ ಬರುವ ಸತ್ಯದ ಆಧಾರದ ಮೇಲೆ ನಿಂತಿದೆ, ಎಂಬ ಶ್ರದ್ಧೆಯ ಪುರಾತನರು, ಈ ಜಗತ್ತಿನ ಗತಿಗೆ ಪ್ರೇರಕವಿರುವ ಎರಡು ಬಗೆಯ ಶಕ್ತಿತತ್ವಗಳನ್ನು ಚಂದ್ರ ಹಾಗೂ ಸೂರ್ಯ ಈ ಪರಿಭಾಷೆಯಿಂದ ಗ್ರಹಿಸಿಕೊಂಡಿದ್ದರು. ಗಚ್ಛತಿ ಇತಿ ಜಗತ್ ಚಂದ್ರನ ಪ್ರೇರಣೆಯ ಮೂಲಕವಾದ ಗತಿಯು ಜನನ-ಮರಣ ಸ್ವರೂಪ ಚಕ್ರಾಕೃತಿಯದಾಗಿದೆ. ಅಮಾವಾಸ್ಯೆ (ಮರಣ), ಶುಕ್ಲಪ್ರತಿಪದೆ (ಜನನ) ಈ ರೂಪಕವು ಚಂದ್ರನ ಮೂಲಕ ಅರಿಕೆಗೆ ಬಂದದ್ದು, ಚಕ್ರಾಕಾರದಲ್ಲಿ ಪರಿಘವು ಯಾವಾಗಲೂ ಗತಿಯುತವಿರುತ್ತದೆ. ಆದರೆ, ವರ್ತುಲದ ಕೇಂದ್ರಬಿಂದುವು ಅಕ್ಷದ ಸುತ್ತಲು ತಿರುಗುತ್ತಿದ್ದರೂ ಸ್ಥಿತ, ಸ್ಥಿರ ಎಂಬ ಹಾಗಿನ ಅನುಭವಕೊಡುತ್ತದೆ. ಹುಟ್ಟು ದೃಶ್ಯಸೃಷ್ಟಿ (Phenomena); ಭೂ-ಪಾತಳಿ. ಇದು ಮತ್ತು ಭುವಃ (nature) ಇದು ಮೃತ್ಯು ಪಾತಳಿ. ಹೀಗಿದು ಚಾಂದ್ರಉಪಾಸಕರಿಗೆ ಅನುಭವಕ್ಕೆ ಬಂದ ಜೀವನವಿಶ್ವವು ಎರಡು ಪಾತಳಿಗಳ ನಡುವಣದು. ಈ ವೃತ್ತಮಧ್ಯ ಸ್ತಂಭದ ಆಕೃತಿಯ ಗತಿಯು, ಭೌತಸೃಷ್ಟಿಯು ಭೌತನಿಸರ್ಗದ ವಿಶ್ವವಾಯಿತು. ಈ ಪಾತಳಿಯ ಮೇಲೆ ವಾನರ ಹಂತದ ವರೆಗಿನ ಜೀವನ ರೀತಿಯಲ್ಲಿ ಜ್ಞಾ (ಅರಿವು) ಇದ್ದರೂ, ಅರಿವಿನ ಅರಿವು=ಪ್ರಜ್ಞೆ, ಸ್ವದ ಉಪಜ್ಞೆ ಎಂಬುದು ಇಲ್ಲ! ಎರಡು ಪಾತಳಿಗಳ ನಡುವಣ ವಿಶ್ವದಲ್ಲಿ ಆಕೃತಿ (form) ಮತ್ತು ಆಶಯ (Content) ಈ ಎರಡೂ ಸಮಾನ ವ್ಯಾಪ್ತಿಯವು ಆಗಿವೆ.

ಆದರೆ, ನರ ಮನುಜರ ಪಾತಳಿಯಲ್ಲಿ ಪ್ರಜ್ಞೆಯ ಪ್ರಾದುರ್ಭಾವದಿಂದಾಗಿ ಈ ಮನುಜ ಸ್ವ ಉಪಜ್ಞಾ ಬಲದಿಂದ ತನ್ನನ್ನೂ, ಸುತ್ತಲಿನ ವಿಶ್ವವನ್ನು ತಟಸ್ಥ ಭಾವದಿಂದ ಸಮೀಕ್ಷಿಸಬಲ್ಲ; ವಿಮರ್ಶಿಸಬಲ್ಲ. ಆದಕಾರಣ, ಈ ಮಾನವ ಜೀವನ ವಿಶ್ವದಲ್ಲಿ ಆಶಯವು (Content) ಆಕೃತಿಗಿಂತಲೂ ವಿಶಾಲವಿದೆ; ಮಿಗಿಲಾಗಿದೆ! ಆದಕಾರಣ, ಈ ಜೀವನ ವಿಶ್ವದಲ್ಲಿ ಭೂಃ-ಭುವಃ ಎಂಬ ಸಮವಾಯುರೂಪ, ಏಕಾತ್ಮಕ ಎರಡು ಪಾತಳಿಗಳ ಆಚೆಗೆ, ಇನ್ನೂ ಒಂದು ಪಾತಳಿ ಇದೆ, ಎಂಬ ಶ್ರದ್ಧೆ ಅನಿವಾರ್ಯವಾಗುತ್ತಿದೆ. ಮಾನವನೊಳಗಿನ ತಿಳಿ (ವಿನ) ಬೆಳಕು! ಪ್ರಜ್ಞಾ ಪ್ರಕಾಶವು ಆ-ಕಾಶದ ಪಾತಳಿಯ ಸ್ವರ್‌ವ್ಯಾಹೃತಿಯ ಪರಿಣಾಮ, ಎಂಬುದನ್ನು ಆಧುನಿಕ ಭೌತಶಾಸ್ತ್ರಜ್ಞರೂ ಇಂದು ಒಪ್ಪಿಕೊಳ್ಳತೊಡಗಿದ್ದಾರೆ. ಡಾ-ಜ್ಯೂಲಿಯನ್ ಹಕ್‌ಸ್ಲ ಪ್ರಭೃತಿಗಳು ಡಾರ್ವಿನ್ನನ ವಿಕಾಸದ ಸಿದ್ಧಾಂತದಲ್ಲಿ ಹೆಚ್ಚಿನ ಸಂಶೋಧನ ನಡೆಸಿ ಈ ನಿಷ್ಕರ್ಷಕ್ಕೆ ಬಂದಿದ್ದಾರೆ ಆಧುನಿಕ ಭೌತಶಾಸ್ತ್ರಜ್ಞರು Noosphere ಎಂಬ ಹೆಸರಿನಲ್ಲಿ ಒಂದು ಪಾತಳಿಯನ್ನು ಕಂಡಿದ್ದಾರೆ; ಇದು ಸ್ವರ್ ಪಾತಳಿಯನ್ನೇ ಹೋಲುತ್ತಿದೆ.

ಆದರೆ, ಮಾನವೇತಿಹಾಸದೊಳಗಿನ ಒಂದು ದುರ್ದೈವೀ ಘಟನೆಯೆಂದರೆ, ಅಧುನಿಕ ಭೌತಶಾಸ್ತ್ರಜ್ಞರು ಮೂರು ಪಾತಳಿಗಳನ್ನು ಒಪ್ಪುವ ಆವಶ್ಯಕತೆಯನ್ನು ಈಗ ಕಾಣುತ್ತಿದ್ದಾರೆ. ಆದರೆ ಕ್ರಿಸ್ತ ಪೂರ್ವ ೨೦೦೦ ವರ್ಷಗಳ ಹಿಂದೆಯೇ ಭಾರತೀಯರು, ಅವೆಸ್ತದ ಇರಾಣಿಯರು, ಗ್ರೀಕರು ಮೂರು ಪಾತಳಿಗಳ ಬಗೆಗಿನ ಶ್ರದ್ಧೆಯನ್ನು ತಾಳಿದ್ದರು. ಈ ಮೂರು ಪಾತಳಿಗಳ ಕಟ್ಟಡವನ್ನು ಚಾಂದ್ರ ಸಂಪ್ರದಾಯದ ಶಾಕ್ತ ಪಂಥೀಯರು ನೆಲಕ್ಕೆ ಉರುಳಿಸಿದ್ದಾಯ್ತು! ಭಾರತದಲ್ಲಿ ವಸಿಷ್ಠ ದಕ್ಷಿಣಕಪರ್ದ ಪೂಜಕರ ಸಂಪ್ರದಾಯ ವ್ಯಾಸ ವಾಲ್ಮೀಕಿ ಇದಕ್ಕೆ ಕಾರಣವಿರುವಂತೆ, ಗ್ರೀಸಿನಲ್ಲಿ ಒರ್ಫಿಕ್ ಪೈಥಾಗೊರಾಸನ ಸಂಪ್ರದಾಯವು ಈ ಕೃತ್ಯಕ್ಕೆ ಬೆಂಬಲವನ್ನಿತ್ತಿದೆ!

ಪೈಥಾಗೋರಾಸ್ ಸಂಪ್ರದಾಯಕ್ಕೆ ಮೂರು ಪಾತಳಿಗಳ ಆವಶ್ಯಕತೆ ಹಾಗೂ ಹಿರಿಮೆ ಗೊತ್ತಿತ್ತು, ಎಂಬುದು ಅವರ ಗ್ರಂಥಗಳಿಂದಲೇ ಬೆಳಕಿಗೆ ಬಂದಿದೆ. ಈ ಹಿರಿಮೆಯನ್ನು ಅರಿತ ಪೈಥಾಗೋರಾಸನು, ಸಾಂಖ್ಯಪರಂಪರೆಯ ಪ್ರಕೃತಿ-ಪುರುಷ ಈ ಎರಡೇ ಪಾತಳಿಯ ಮಾನದಂಡ (Unit) ಸ್ವೀಕರಿಸಿ, ಮಾನವ ಸಂಸ್ಕೃತಿಯನ್ನು ಬೆಳಕಿನತ್ತಣಿಂದ ಕತ್ತಲೆಯ ಕಡೆಗೆ, ಯೋನಿಲಿಂಗ ಉಪಾಸನೆಯ ದಿಕ್ಕಿಗೆ ತಳ್ಳಿದ್ದಾಗಿದೆ! ಪೈಥಾಗೋರಾಸನ ಪ್ರತಿಭೆ ಅಸಾಧಾರಣವಿತ್ತು. ಗಣಿತಶಾಸ್ತ್ರದ ದ್ರಷ್ಟಾರ. ಆದರೆ ಇಂತಹನೂ ಪವಾಡ ಚಮತ್ಕಾರಗಳ ಪಾತಳಿಗೆ ಇಳಿಯಬೇಕೆ? ಮೇಧಾವಿಯಾದ್ದರಿಂದ, ಪ್ರಕೃತಿ, ಪುರುಷ ಎಂಬ ಹಾಗಿನ ಸ್ಪಷ್ಟ ಲೈಂಗಿಕ ಪರಿಭಾಷೆಯನ್ನು, ಈತನು ಸ್ವೀಕರಿಸಿಲ್ಲ! Limit ಮತ್ತು Unlimited ಎಂಬ ಗೂಢ ಪರಿಭಾಷೆಯನ್ನು ರೂಢಿಸಿದ್ದಾನೆ. ಆದರು ಪೈಥಾಗೋರಾಸ್ ಸ್ವತಃ ತುಂಬ ಸಂಯಮಿ; ಸಾಧು ಜೀವಿಯಾದರೂ, ಇವನ ಎರಡರ ಮಾನದಂಡ (Unit) ಇದು ಲೈಂಗಿಕ ಪಾತಳಿಯ ತತ್ತ್ವಜ್ಞಾನಕ್ಕೇ ಪೋಷಕವಾಯಿತು. ಒರ್ಫಿಕ್‌ಪಂಥೀಯ ಪೈಥಾಗೋರಾಸನು ಶಾಕ್ತ-ಶ್ರದ್ಧೆಯ ಪ್ರಭಾವಕ್ಕೆ

ಒಳಗಾಗಿರಬೇಕು. ಇಂದಿನ ಸಂನ್ಯಾಸ ಪಂಥೀಯ ಕ್ರೈಸ್ತಧರ್ಮಕ್ಕೆ ಪೈಥಾಗೋರಾಸನೇ ಕಾರಣನೆನ್ನಬಹುದು. ಪೈಥಾಗೋರಾಸನಿಗೂ ಮುಂಚಿನಿಂದಲೂ ಇದ್ದ ಮೂರು ಪಾತಳಿಯ ವಿಶ್ವರಚನೆಯ ವಿಚಾರವು, ಪ್ಲೇಟೊ, ಅರಿಸ್ಟಾಟೆಲ್ಲರ ಗಮನಕ್ಕೂ ಬರದೇ ಹೋದದ್ದು, ಮಾನವೇತಿಹಾಸದೊಳಗಿನ ದುರ್ದೈವ.

ಮೂರನೆಯ ಸ್ವರ್‌ಪಾತಳಿಯ ಅಸ್ತಿತ್ವವನ್ನು ಲೆಕ್ಕಿಸದೆ ಇರುವುದರಿಂದಾಗಿ ಭೂಃ-ಭುವಃ ಇವೆರಡರ ನಡುವಣ ಜೀವನರೀತಿಯು ಪ್ರತಿಷ್ಠೆ ಪಡೆದಿದೆ! ಭೂಃ-ಭುವಃ ಇದು ಪಿಂಡ-ಬ್ರಹ್ಮಾಂಡೈಕ್ಯದ ರೇತ ಪಾತಳಿಯ ಜೀವನಾನುಭವವಾಗಿದೆ. ಈ ಎರಡು ಪಾತಳಿಗಳ ನಡುವಣ ಶ್ವಾಸೋಚ್ಛ್ವಾಸದ, ನಿಯಮನ, ಜಲಸ್ತಂಭನ (ಊರ್ಧ್ವರೇತಸಾಧನ) ಇಂಥ ಕೃತಿಗಳ ಮೂಲಕ ಆ ಸಾಧಕನಲ್ಲಿ ಜನ ಸಾಮಾನ್ಯರ ಮೇಲೆ ಪ್ರಭಾವ ಬೀರುವ ಸಾಮರ್ಥ್ಯವು, ಕೆಲಮಟ್ಟಿಗೆ ಬರುವುದು ತೀರ ಸುಳ್ಳಲ್ಲ.*

ಆದರೆ, ಇದು ಕೇವಲ Phenomena ದೃಶ್ಯಪಾತಳಿಯ ನಿಜ. ಇದು ವಾಸ್ತವ ಸತ್ಯವಲ್ಲ. ಇದನ್ನು ಗಾರುಡಿಗರ ವಿದ್ಯೆ ಎಂದು ಹಿಂದಿನವರು ಹೇಳಿದ್ದು ಸುಳ್ಳಲ್ಲ. ಈ ಜಾದು-ಯಾತು ಚಮತ್ಕಾರಗಳ ಬೆಲೆ ಕಡಿಮೆಯಾಗಲು ಮರಳಿ ಧೀ ಪ್ರೇರಕ ಪ್ರಕಾಶತತ್ತ್ವದ ಸವಿತೃ: ವಿವಸ್ವನ್ ದೈವತದ ಉಪಾಸನೆಯು ಪ್ರಾರಂಭವಾಗುವುದು ಇದೊಂದೇ ಶ್ರೇಷ್ಠ ಅನೃತಂ ಅಮೋಘ ಉಪಾಯವಾಗಿದೆ.

ಸತ್ಯಂ ಏವ ಜಯತಿ (ಪ್ರಕಾಶ ತತ್ತ್ವಕ್ಕೆ ಗೆಲುವು)

ನ ಅನೃತಂ (ಕತ್ತಲೆಗೆ, ಕೃಷ್ಣಕಾರಸ್ಥಾನಕ್ಕೆ ಗೆಲುವು) ಇಲ್ಲ.

ಆದರೆ, ಈ ಕೃಷ್ಣಕಾರಸ್ಥಾನಿಗಳು ರೇತತತ್ತ್ವಕ್ಕೇ ಗೆಲುವು ಎಂಬ ಹಾಗೆ, ವೇದ ಉಪನಿಷತ್ತುಗಳಲ್ಲಿ ಮಂತ್ರ ಸೇರಿದ್ದಾರೆ. ಈ ಕೃಷ್ಣಕೃತ್ಯವು ಇಲ್ಲಿದೆ. ನಿಜವೋ ವಿಮರ್ಶಿಸಿ ನೋಡಿ : 'ಸತ್ಯಮೇವ ಜಯತಿ, ನಾನೃತಂ' ಇದರ ಮುಂದೆಯೇ 'ಸತ್ಯೇನ ಪಂಥಾಃ ವಿತತಃ ದೇವಯಾನಃ' ಎಂಬ ವಾಕ್ಯ ಸೇರಿಸಿದ್ದಾರೆ. ಯೋನಿಮಾರ್ಗ ಹಿಗ್ಗಿ ಅಗಲವಾಗುವುದಕ್ಕೆ ಕಾರಣವೆಂಬಲ್ಲಿ ಈ ಸತ್ಯೇನ ಎಂಬಲ್ಲಿ, ಲಿಂಗದಿಂದ ದ್ವಾರವು ಅಗಲವಾಗುವಿಕೆಯೇ ಅಭಿಪ್ರೇತವಿದೆ.[೧೬] ಇದು ನಿಜವಿದ್ದರೆ, ಈ ಗೆಲುವು ಯಾರದ್ದಾಯಿತು. ಪ್ರಕಾಶತತ್ತ್ವದ ಉಪಾಸಕ ವಿಶ್ವಮಿತ್ರನದೋ? ಅಥವಾ ಚಂದಾSSದಿತ್ಯ ಮಿಥುನಯೋಗದ ಉಪಾಸಕ ದಕ್ಷಿಣ ಕಪರ್ದನದೋ?

ಟಿಪ್ಪಣಿಗಳು

೧. E. Cassirer; ***Language and Myth***; Dover Publication 1946; pp. 33

೨. ***ಋಗ್ವೇದ ಸಂಹಿತೆ*** X.೧೩೫

೩. ***ಭಗವದ್ಗೀತೆ*** ೧೫.೩

೪. ***ಛಾಂದೋಗ್ಯೋಪನಿಷತ್ತು*** ೪-೧-೪

೫. ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟನೆ, ಪು. ೬೪

---

* ಲಿಂಗಾಂಗಯೋಗದ ದೈವತ ಪ್ರತಿಮಾರ್ಚನೆ, ಕೆಲವು ಪವಾಡ ಚಮತ್ಕಾರಗಳ ಸಿದ್ಧಿಗೆ ಕಾರಣವಾಗುತ್ತದೆ. ಈ ನಂಬುಗೆಗೆ ಸಾಂಪ್ರದಾಯಿಕ ಪುರಾವೆ ಬೇಕಿದ್ದರೆ, ಮಾದರಿಗಾಗಿ ಉಚ್ಛಿಷ್ಟ ಗಣಪತಿ ಪ್ರತಿಮೆಯ ಬಗೆಗಿನ (ಟಿ. ಗೋಪಿನಾಥರಾವ್ ಇವರ Elements of Hindu Iconography Vol I ಇದರಲ್ಲಿ ಸಚಿತ್ರ ವಿವರಣೆಯಿದೆ) ಮದ್ರಾಸಿನ ಜ್ಯೋತಿರ್ಮಾರ್ತಾಂಡ ಕೃಷ್ಣಮೂರ್ತಿ ಇವರು ಫಲಜ್ಯೋತಿಷ್ಯ ಹೇಳುವುದರಲ್ಲಿ ಪ್ರಖ್ಯಾತರಿದ್ದರು. ಇವರು ಉಚ್ಛಿಷ್ಟಗಣಪತಿ ಪೂಜಿಸುತ್ತಿದ್ದ ಫೋಟೋ ಅವರ ಗ್ರಂಥದಲ್ಲಿ ಇದೆ. ಮುಂಬೈಯಲ್ಲಿ ಜ್ಯೋತಿಷಿ ಮ್ಹಾಪಳಕರ ಬೃಹಲ್ಲಾಂಗೂಲ ಮಾರುತಿ ಉಪಾಸಕರಿದ್ದರು.
ಈ ಬಗೆಯ ಸಿದ್ಧಿಗಳ ಲಾಭ ಪಡೆಯುವವರೂ ಈ ಪವಾಡ ಮಾಡುವವರೂ ಇಬ್ಬರೂ ಆತ್ಮಹಾನಿ, ಸಾಮಾಜಿಕ ಹಾನಿಗೆ ಕಾರಣರಾಗುತ್ತಾರೆ. ಇದು ಅನೈತಿಕ ಸ್ವರೂಪ ಅಡ್ಡದಾರಿ, ಎಂದು ಎಲ್ಲ ಸಾಧುಸಂತರು ಹೇಳಿದ್ದುಂಟು.

೬. ***ಋಗ್ವೇದ ಸಂಹಿತೆ*** X-೮೬.೫
೭. ***ಭಗವದ್ಗೀತೆ*** ೧೫-೧೬
೮. ***ಅದೇ,*** ೫.೪
೯. ***ಬೃಹದಾರಣ್ಯಕೋಪನಿಷತ್ತು*** ೨೦.೩.೧: ***ಮೈತ್ರಾಯಣೀ ಉಪನಿಷತ್ತು*** ೬.೩.
೧೦. ಈ ಸಿದ್ಧಿ ಸಾಮೀಪ್ಯದ್ದೋ, ಸಾಲೋಕ್ಯ-ಸ್ವರೂಪದ್ದೊ ಅಥವಾ ಸಾಯುಜ್ಯ-ನಿರ್ -ವಿಕಲ್ಪ ಸಮಾಧಿ ಸ್ವರೂಪದ್ದೋ ಎಂಬ ಈ ತಾರತಮ್ಯದಲ್ಲಿ ಸೇರಲು ಪ್ರಮಾಣಗಳು ಸಾಲವು
೧೧. ***ಛಾಂದೋಗ್ಯೋಪನಿಷತ್ತು*** ೮-೫-೧-೪
೧೨. ***ಕಠೋಪನಿಷತ್ತು*** ೧.೩.೧೪
೧೩. ಮೈತ್ರಾಯಣ್ಯುಪನಿಷತ್ತು ೨,೩,೧
೧೪. Guthrie; ***A History of Greek Philosophy,*** Cambridge University Press, 1962, p. 2
೧೫. ***ಋಗ್ವೇದ ಸಂಹಿತೆ*** X. ೧೯೩
೧೬. ***ಮುಂಡಕೋಪನಿಷತ್ತು*** ೩.೧.೬

ವೈವಸ್ವತಮನು ಪ್ರಣೀತ

ಮಾನವಧರ್ಮದ ಆಕೃತಿ

ಋತಂ ಬೃಹತ್ : ಮಹತ್ = ಅಪ ವಹಿಷ್ಠ
ವಿಶ್ವಾಮಿತ್ರಸ್ಯ ಬ್ರಹ್ಮೇದಂ ರಕ್ಷತಿ ಭಾರತಂ ಜನಂ
(ಋಗ್ವೇದ ಸಂಹಿತೆ III.53.12)

ಅರಿಕೆ

ಈ ಅನ್ವೇಷಣೆಯಲ್ಲಿ, ಮಾನವ-ಪ್ರಾದುರ್ಭಾವದ ಸಮಸ್ಯೆಯು, ನುಸುಳಿಕೊಂಡು ಬಂದಿದೆ. ಇದು ಜಾಗತಿಕ ಮಾನವ ಧರ್ಮ:ಸಂಸ್ಕೃತಿಯ ಸಮಸ್ಯೆಯಾಗುತ್ತಿದೆ. ಯುರೋಪಿನಲ್ಲಿ, ಪ್ರಜ್ಞಾನೇತ್ರದ ಕಾಂಟನು, ಡಾರ್ವಿನ್ನನ ಶೋಧಕ್ಕೂ ಮುಂಚೆ, ಸುಮಾರು ಒಂದು ಶತಕ, ಈ ಮಾನವಧರ್ಮವನ್ನು ಗ್ರಹಿಸಿಕೊಂಡು ನಿವೇದಿಸುವಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿದ್ದಾನೆ. ಪೈಥಾಗೋರಾಸ-ಪಂಥೀಯ ಸ್ವಯಂಭೂ ವ್ಯಕ್ತಿವಾದೀ ವೈಶಿಷ್ಟ್ಯದ ಮನ್ವಂತರದ ಪ್ರಭಾವದ ಹೊರಗೆ ಹೋಗಿ, ಕಾಂಟನು ಅರಿಸ್ಟೊಟ್ಲನ ಎತ್ತರಕ್ಕೆ ಬಂದಿದ್ದಾನೆ. ಆ ಯುಗದ ಬುದ್ಧಿವಾದೀ (Reason) ದೃಷ್ಟಿಕೋನದಿಂದಾಗಿ, 'a priori' ಗೃಹೀತದ ಭೂಮಿಕೆಯು ಆತನಿಗೆ ಅನಿವಾರ್ಯವಾಗಿದ್ದುಂಟು. ಆದರೂ ಈ ಮಾನವನು, ವಿಶ್ವನಿಯಮಕ್ಕೆ ಅಧೀನನು ಇದ್ದಾನೆಂಬ ಆತನ ಭೂಮಿಕೆಯು, ವೈವಸ್ವತ ಮನು ಸಂಪ್ರದಾಯದ ಋತ ಸ್ವರೂಪೀ ವಿಶ್ವನಿಯಮದ ಹಿನ್ನೆಲೆಯಲ್ಲಿ ಅರಿಕೆಗೆ ಬರುವ ಸತ್ಯದ ವೈಚಾರಿಕ ಆಕೃತಿಯನ್ನು ನೆನೆಪಿಗೆ ತಂದು ಕೊಡುತ್ತದೆ.

ಈ ಹಿನ್ನೆಲೆಯಲ್ಲಿ ಭಾರತೀಯ ಸಾಂಸ್ಕೃತಿಕ ಸ್ಥಿತ್ಯಂತರದ ಪ್ರಸ್ತುತ ಅನ್ವೇಷಣೆಯು, ಜಾಗತಿಕ (ಮಾನವ) ಸಂಸ್ಕೃತಿಯ ಸಂದರ್ಭದ್ದು ಆಗುತ್ತಿದೆ. ಈ ಕಾರಣದಿಂದಾಗಿ, ಈ ಅನ್ವೇಷಣೆಯ ನಿಷ್ಕರ್ಷಗಳಲ್ಲಿ ಸತ್ಯಾಂಶವು ಉಂಟು ಎಂದು ದೃಢಪಟ್ಟರೆ, ಇದು, ಜಾಗತಿಕ ಸಂಸ್ಕೃತಿಗೆ, ಕಂನಡದ ಅಲ್ಪಕಾಣಿಕೆಯಾಗುವ ನಿರೀಕ್ಷೆಯು ಉಂಟು. ಈ ನಿರೀಕ್ಷೆ ಅ-ಸ್ಥಾನೀಯವಾದೀತೆ? ವೈವಸ್ವತ ಮನುಪ್ರಣೀತ ಮಾನವಧರ್ಮ ಇದು ಭಾರತೀಯರ ಧಾರ್ಮಿಕ ಪರಂಪರೆಯ ಮೂಲ ಹೆಸರು. ತಮ್ಮ ಪರಂಪರಾಗತ- ಸಾಂಪ್ರದಾಯಿಕ-ದೇಶನಾಮಕ್ಕೆ ಎರವಾಗಿದ್ದೇವೆ ಎಂಬ ಎಚ್ಚರವೂ ತಪ್ಪಿದ್ದ ಹಿಂದೂ ಎಂಬುದೇ ತಮ್ಮ ದೇಶದ ಮೂಲ ಹೆಸರು ಎಂಬ ಹಾಗಿನ ಗ್ರಹಿಕೆಯ ಈ ಭಾರತೀಯರಿಗೆ, ತಾವು ಮಾನವಧರ್ಮದ ಉಜ್ಜ್ವಲ ಪೂರ್ವಪರಂಪರೆಯ ಉತ್ತರಾಧಿಕಾರಿಗಳು, ಎಂಬ ಪ್ರಜ್ಞೆ ಕಿಂಚಿತ್ತಾಗಿ ಉಳಿದಿದ್ದರೂ ಕೂಡ, ನಮ್ಮ ರಾಷ್ಟ್ರವು ಇಂದಿನಂತಹ ಕ್ಷುದ್ರ, ಸಂಕುಚಿತ ಜಾತಿ, ಮತ, ಪಂಥಗಳ ವೈಶಿಷ್ಟ್ಯದ ಕೊಳಚೆಯ ಹೊಂಡಗಳಲ್ಲಿ ಹೊರಳಾಡುತ್ತಿರುವ ಶಕ್ಯತೆಯು, ನಿಶ್ಚಿತವಾಗಿಯೂ ತಪ್ಪಬಹುದಿತ್ತು.

ವೈವಸ್ವತ ಸಂಪ್ರದಾಯದ ಸಮಾಜ : ಸಮಷ್ಟಿ ಪಾತಳಿಯ ಮಾನವಧರ್ಮವು ಹಿಮ್ಮೆಟ್ಟಿ, ಸ್ವಯಂಭೂ ಮನು ಸಂಪ್ರದಾಯದ ನರ(ಳ) ಧರ್ಮಗಳ ಪಂಥ ವಿಶಿಷ್ಟ ಮಾನವ ಪರಂಪರೆಗಳು ಎಲ್ಲೆಲ್ಲೂ ಕಾಣಿಸಿಕೊಂಡಿವೆ! ಈ ಸ್ಥಿತ್ಯಂತರದಲ್ಲಿ ವಿವಸ್ವನ್>ವೈವಸ್ವತ ಸಂಪ್ರದಾಯವನ್ನು ನಾನಾ ತಂತ್ರ ಮಂತ್ರ ಮಾಟಗಳ ಬಲದಿಂದ ಶಿಥಿಲವಾಗಿಸಿರುವ ಶ್ರೀಮನಸ್ಸಿನ ಸಿಂಹದ ಪಾಲು ನರ-ನಾರಾಯಣ ಸಂಪ್ರದಾಯದ ಪುನರುತ್ಥಾಪಕರಿಗೇ ಸಲ್ಲುತ್ತದೆ! ಉಪಲಬ್ಧ ಪ್ರಮಾಣಗಳ ಬೆಳಕಿನಲ್ಲಿ, ಇದು ಅನ್ವೇಷಣೆಯಲ್ಲಿ ದೃಢಪಡುತ್ತಿದೆ. ಜನ-ಅರ್ದನ=ಜನಾರ್ದನ

ಈ ಸಾರ್ಥನಾಮದ ಭಗ-ವಂತನು ಕೇಂದ್ರಸ್ಥಾನದಲ್ಲಿರುವ ಭಗವತ್ ಗೀತೆಯಲ್ಲಿಯೇ ಈ ಸ್ಥಿತ್ಯಂತರವನ್ನು ನಿದರ್ಶನಕ್ಕೆ ತಂದು ಕೊಡುವ ಪುರಾವೆ ಸಾಕಷ್ಟು ಇದೆ. ಭರತಖಂಡದಲ್ಲಿ, ಹಿಂದೊಮ್ಮೆ ವೈವಸ್ವತ ಮನುಪ್ರಣೀತ ಮಾನವಧರ್ಮವು ಜೀವಂತ ಅಸ್ತಿತ್ವದಲ್ಲಿ ಇತ್ತು, ಎಂಬ ಈ ಮೌಲಿಕ ವಾಸ್ತವ ಸಂಗತಿ, ಇಂದಿಗೂ ಕತ್ತಲೆಯಲ್ಲಿಯೇ ಅಡಗಿದೆ! ಭಾರತೀಯ ಭಾಷೆಗಳಲ್ಲಿ, ಈ ಅಖಿಲಭಾರತೀಯ ಸಾಂಸ್ಕೃತಿಕ ಮಹತ್ವದ ಈ ಸಂಗತಿಯು, ಮೊತ್ತಮೊದಲ ಬಾರಿ ಕಂನಡರ ಭಾಷೆಯಲ್ಲಿ, ಕರ್ಣಾಟದಲ್ಲಿ, ಬೆಂಗಳೂರ ವಿಶ್ವವಿದ್ಯಾಲಯದ ಜ್ಞಾನ-ಭಾರತಿಯ ಪ್ರಸಾರಾಂಗದ ಪ್ರಕಟನೆಯ ಮೂಲಕ ಬೆಳಕಿಗೆ ಬಂದಿದೆ. ೧೯೭೭ರಲ್ಲಿ ಪ್ರವಾಹ ಪತಿತರ ಕರ್ಮ : ಹಿಂದೂ ಎಂಬ ಧರ್ಮ!

ವೈವಸ್ವತ ಮನುವನ್ನು ಪ್ರತಿಭಟಿಸಿ, ಸ್ವಾಯಂಭುವ<ಸ್ವಯಂಭೂ ಮನು ಸಂಪ್ರದಾಯವು, ಎಲ್ಲೆಲ್ಲೂ ಪ್ರಭಾವಶಾಲಿಯಾಗಿ, ಇಂದು, ಮೆರೆಯುತ್ತಿದೆ. ಭಾರತೀಯ ಸಂಸ್ಕೃತಿಯಲ್ಲಿ ಎರಡು ಮನು-ಪರಂಪರೆಗಳ ಸಂಘರ್ಷವಿದೆ, ಎಂಬ ಈ ಅಂಶವು, ಮೊದಲಬಾರಿ ಬಯಲಿಗೆ ಬಂದದ್ದು, ಬೆಂಗಳೂರ ವಿಶ್ವವಿದ್ಯಾಲಯದ ಈ ಪ್ರಕಟನೆಯ ಮೂಲಕವಾಗಿಯೇ! ಎಂದಲ್ಲಿ ಅತಿಶಯೋಕ್ತಿಯಾದೀತೆ? ಇಬ್ಬರು ಮನುಗಳು- ಎರಡು ಮನ್ವಂತರಗಳು, ಏಕಕಾಲಕ್ಕೇ ಇಂದೂ ಉಂಟು ಎಂಬ ಅಂಶವು, ಭಾರತೀಯ ಬೇರೆ ಭಾಷೆಗಳಲ್ಲೂ ಪ್ರಕಟವಾಗಿದ್ದಲ್ಲಿ, ನಾನು ಅರಿಯಬೇಕೆಂದಿದ್ದೇನೆ ನನ್ನ ಅಜ್ಞಾನ ತೊಲಗಿಸಬೇಕಾಗಿ ಪ್ರಾರ್ಥನೆ. ಈ ಮಾನವನ ಅಸ್ತಿತ್ವದಲ್ಲಿ, ಎರಡು ಪಾತಳಿಗಳು ಇವೆ: ೧) ಜೀವನದ ಪಾತಳಿ: ೨) ಜೀವಿತದ ಪಾತಳಿ. ಆತ್ಯಂತಿಕ ಹಿಂಸೆ ಈ ಭೂಮಿಕೆಯ ಧರ್ಮಪಂಥಗಳೆಲ್ಲವೂ ಜೀವಿತಕ್ಕೇ ಪ್ರಾಧಾನ್ಯವನ್ನಿತ್ತಿವೆ! ಜೀವಿತವು, ನಿತ್ಯವಾಗಿ ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಈ ವಿಭಾಗದ್ವಯದ ಪಾತಳಿಯ ಮೇಲೆ ಕಾಣುವ ದೃಶ್ಯಚಿತ್-ರ(Phenomenon).

ಜೀವಿತದ ಪಾತಳಿಯ ಅಸ್ತಿತ್ವವು, ಮನು-ಜ:ಮಾನವ ಭಾಷೆ, ಸಂಸ್ಕೃತಿಯಿಂದಾಗಿ ಅರಿಕೆಗೆ ಬರಲು ಶಕ್ಯವಾಗಿದೆ. ಕೇವಲ ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಈ ವಿಭಾಗದ್ವಯದ: ಜೀವಿತದಲ್ಲಿ, ಮಾನವ ಭಾಷೆಯು ಮೈದಾಳಿಲ್ಲ. ಜೀವಿತದ ಪಾತಳಿಯ ನರ(ಳ) ಸಂಪ್ರದಾಯಗಳೆಲ್ಲವೂ ಮೊದಲಲ್ಲಿ ಭಾಷೆಯ ಅಭಾವದಿಂದಾಗಿ ಕತ್ತಲಿನ ಆವರಣದಲ್ಲಿ ಇದ್ದವು. ಇವು ಎಲ್ಲವೂ ಪ್ರಜ್ಞೆ : ಉಪಜ್ಞೆಯ ಅಂಗವಾಗಿ ಮನಸ್ಸಿನ ಪಾತಳಿಯ ಪ್ರಾದುರ್ಭಾವದಿಂದಾಗಿ, ಆ ಬಳಿಕ ಅರಿಕೆಗೆ ಬಂದ ಪಂಥಗಳು. ಇವು ಮಾನವಧರ್ಮದ ಪ್ರಾದುರ್ಭಾವದ ತರುವಾಯ, ಅನುಕೂಲ ಸಮಯ ಸಾಧಿಸಿ, ಆ ಮಾನವ ಭಾಷೆಯನ್ನೇ ತಮ್ಮ ಸಂಪ್ರದಾಯಕ್ಕೆ ಸರಿಹೋಗುವಂತೆ, ಅಭಾವವು, ಅತ್ಯಂತಾಭಾವವು ಇದೇ ಸ್ಥಾಯೀ ಎಂದು ಪ್ರತಿಪಾದಿಸಲು ಅನುಕೂಲವಾಗುವಂತೆ ಮಾರ್ಪಡಿಸಿ ಕೊಳ್ಳುತ್ತ ಕ್ರಮವಾಗಿ, ಪ್ರಬಲವಾಗಿ ಬೆಳೆದು ನಿಂತಿದೆ, ಈ ನರ(ಳ) ಸಂಪ್ರದಾಯಗಳು. ಇತಿಹಾಸದ ಇತಿಹಾಸ, ಇದಕ್ಕೆ ಸಾಕ್ಷಿ ಆಗಿದೆ.

ಜೀವಿತ (ನರ) ಮತ್ತು ಜೀವನ (ಮನು-ಜ) ಇವೆರಡರಲ್ಲಿ ದೃಶ್ಯ ಪ್ರವಾಹ ಮತ್ತು ಮನಸ್ಸಿನ ಪಾತಳಿ ಇವೆರಡರಲ್ಲಿ ಇರುವಷ್ಟು ಅಂತರವು ಉಂಟು. ಭೌತ ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಈ ವಿಭಾಗದ್ವಯದ ಆಕರ್ಷಣ ವಿಕರ್ಷಣದ ಗತಿಯು, ನಿತ್ಯ [0] ವೃತ್ತಾಕೃತಿಯದೇ ಇದ್ದೀತು. ಈ ಸ್ಥಳ-ಕಾಲವು ಪ್ರಕಾಶಯುಕ್ತವಲ್ಲ; ಸ್ಥಳ (ದೇಹ)ದೊಡನೆ ಬದ್ಧ ಸ್ಥಳದ (ದೇಹದ) ಅಂಗವೇ ಆಗಿರುವ, ಈ ಕಾಲವೂ ಕರಿಯದೇ ಆಗಿದೆ! ಕಾಲಃ ಅಸ್ಮಿ ಎಂದು ಕರಿಗಾಲ ಕೃಷ್ಣ ಹೇಳುತ್ತಾನೆ. ಆದುದರಿಂದ, ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಈ ವಿಭಾಗದ್ವಯದ ಮೂಲಕ ಉಂಟಾಗುವ ಕಾಲ-ಗತಿಯು ಕತ್ತಲೆಯ ಸಾಹಚರ್ಯದ [0] ವೃತ್ತಾಕೃತಿಯೇ ಇದ್ದೀತು. ವ್ಯಕ್ತಿ ನಿರಪೇಕ್ಷ ಸ್ಥಳ-ಸಂದರ್ಭದ ಈ ಕೃಷ್ಣ-ವಿವರಕ್ಕೆ, ಪುರಾತನರು, (ಸಂ) ಭವಚಕ್ರ ಅಥವಾ ಕಾಲ (ಮೃತ್ಯು) ಚಕ್ರ ಎಂಬ ಸಾರ್ಥ ಹೆಸರನ್ನಿಟ್ಟಿದ್ದಾರೆ. ಸ್ಥಳ-ಕಾಲಸಂದರ್ಭದ ಈ ಅವಕಾಶವು ಪ್ರಾಣಿಗಳ-ನರ (ಳ)ರ - ಜೀವಿತದ ಪಾತಳಿ, ಆದರೆ ಮನು-ಜ ಲೋಕ-ದ ಪಾತಳಿ, ಈ ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಈ ವಿಭಾಗ ದ್ವಯದ ಅಂತರಿಕ್ಷ-ಸ್ಥ ಅವಕಾಶದ ಆಚೆಗೆ ಇದೆ. ಇದನ್ನು ಪ್ರಜ್ಞಾಪ್ರಕಾಶ ತತ್ವದ ಸ್ವರ್

ಪಾತಳಿ ಎಂದು ಬಗೆಯಲಾಗಿದೆ. ಪ್ರಜ್ಞೆ - ಉಪಜ್ಞೆಯ ಒಳ ತಿಳಿ(ವಿನ) ಬೆಳಕಿನ ಅಂಗವಾದ ಮನಸ್ಸಿನ ಪಾತಳಿಯು ಇದು.

ಭಾವಾತ್ಮಕ, ಅಭಿಜಾತ ಅನುಭವಾತ್ಮಕ ಅಂತಃಸಂಗತಿಯುಕ್ತ ಅರ್ಥ:ವಿಚಾರದ ಹಾಸುಹೊಕ್ಕಿನ ಆಧಾರದ ಮೇಲೆ ಜೀವನ (ಲೋಕ) ಉಂಟು. ಅರ್ಥ:ವಿಚಾರ: ಮೂಲ್ಯರೂಪ: ಈ ಸ್ವಯಂ ಪ್ರಕಾಶ ತತ್ವದ: ಆಕಾಶ ತತ್ತ್ವದ ಕೆಳಗಣ, ಅಂತರಿಕ್ಷಸ್ಥ ಅವಕಾಶದ ಕತ್ತಲಲ್ಲಿ ಜ್ಯೋತಿರ್ಲಿಂಗದ ಬೆಳಕಿನಲ್ಲಿ ಈ ಜೀವಿತದ ಪಾತಳಿಯು ಅರಿಕೆಗೆ ಬುರುತ್ತದೆ. ಸ್ಥಳ-ಕಾಲದ ಕತ್ತಲಿನ ಆವರಣದ ಈ ಅವಕಾಶದಲ್ಲಿ ಅಂತರ್-ವಿಸಂಗತ, ಪ್ರೇರಣಾ ದ್ವಂದ್ವಾತ್ಮಕ ಅಸ್ತಿತ್ವವೇ ಇರಬಲ್ಲುದು. ಪ್ರಜ್ಞಾ:ಪ್ರಕಾಶದ ಅಭಾವದಿಂದಾಗಿ, ಈ ಸೂಕ್ಷ್ಮ ಅಂತರವು 'ನರ' ಮತ್ತು 'ಮನು'ಜರಲ್ಲಿ ನಿಸರ್ಗಸಿದ್ಧವಿದೆ. ಈಗ ಇರುವ, 'ಮಾನವನ' ಬಗೆಗಿನ ಗ್ರಹಿಕೆಗಳ ಪುನರ್ ವಿಚಾರವು ಜರೂರು ಇದೆ. 'ಯಾವ ಮನುಷ್ಯನೂ ನೀಚನಲ್ಲ,' ಎಂಬ ಗ್ರಹಿಕೆಯು ಸದೋಷವಿದೆ. ಪ್ರಜ್ಞಾ : ಪ್ರಕಾಶ ತತ್ತ್ವದ, ಉಪಜ್ಞೆಯ ಅಂಗವಾದ ಮನಸ್ಸಿನ=ಜೀವನದ ಪಾತಳಿಯ ಮೇಲಣ ಪ್ರೇರಣೆಯಿಂದ ಬಾಳದಾರಿಯನ್ನು ಕ್ರಮಿಸುವ, 'Actuality of thought is life ಈ ಭೂಮಿಕೆಯ ಯಾವ ಮನು-ಜನೂ ನೀಚನಾಗಲು ಶಕ್ಯವೇ ಇಲ್ಲ. ಆದರೆ, 'ಜೀವಿತಕ್ಕೆ' ಪ್ರಾಧಾನ್ಯವಿರುವ, ತಾನು 'ತ್ರಿತ ಆಪ್ತ್ಯ'='ಮನು'ಜ ಎಂಬುದನ್ನು ಕಡೆಗಣಿಸುತ್ತಿರುವ ಹಾಗೂ 'ತುರ್ತು', 'ಚಾಲ್ತಿ' ಇದಕ್ಕೆ ಏಕಮೇವ ಮಹತ್ತ್ವ ಎಂದು ಬಗೆಯುತ್ತಿರುವ ಮನುಷ್ಯನು ತನ್ನ ವಿಶ್ವಾಸಾರ್ಹತೆಗೆ ಎರವಾಗುತ್ತಿದ್ದಾನೆ. ಈ ತಾರತಮ್ಯವು, ಮಾನವರೊಳಗಿನ ನರ-ಮನುಜ ಭೇದವನ್ನು ಎಂದರೆ ಜೀವಿತ ಹಾಗೂ ಜೀವನ ಈ ಪಾತಳಿಗಳನ್ನು ಗುರುತಿಸುವುದನ್ನು ಪ್ರಯೋಜನಕಾರಿಯಾದೀತೆಂದು ಬಗೆಯುತ್ತೇನೆ. ವಿಕಾಸತತ್ತ್ವದ ಪ್ರಕ್ರಿಯೆಯ ಫಲವಾಗಿ, ವಿಶ್ವನಿಯಮದ ಪ್ರಭಾವದಲ್ಲಿ, ಈ ನರ(ಳ)ನಿಗೆ 'ಮನು'-ಜತ್ವವು ಲಭಿಸಿದೆ. ಇದು ನಿಜವಿದ್ದಲ್ಲಿ, ಈ ವಿಶ್ವನಿಯಮದ ಉಲ್ಲಂಘನದಿಂದಾಗಿ, ಈ ಮನು-ಜ: ಮಾನವನು, ಮರಳಿ ನರ(ಳ)ನ ಪಾತಳಿಯ ಮೇಲೆ ತಳ್ಳಲ್ಪಡಲೇಬೇಕಷ್ಟೆ?

ಸಾಂಸ್ಕೃತಿಕ ಸತ್ಯಾನ್ವೇಷಣೆಯಲ್ಲಿ, ಶಿಷ್ಟಮಾನ್ಯ ಶಾಸ್ತ್ರೀಯ ಪದ್ಧತಿಯ ಕೊರತೆಯು ಇದೆ. ಗ್ರೀಕ್‌ಸಂಸ್ಕೃತಿ ಶೋಧಕ ಪ್ರೊ. ಡೋಡ್ಸ್ ಹೇಳುವಂತೆ, ಹಲವಾರು ಪ್ರಾಜ್ಞ, ತಜ್ಞ ವಿಚಾರವಂತರ ಸಹಕಾರ, ಸಲಹೆಯಿಂದಾಗಿ ದೋಷಗಳು ಕಡಿಮೆಯಾಗುತ್ತ ಹೋದಂತೆ, Progressive elimination of errors ಆದಂತೆ, ಸತ್ಯಾನ್ವೇಷಣೆಯ ಶಾಸ್ತ್ರೀಯ ಪದ್ಧತಿಯು ಮೈದೋರಬಹುದಾಗಿದೆ. ಈ ನಿಟ್ಟಿನ ನನ್ನ ಈ ಅಲ್ಪಪ್ರಯತ್ನವು ಪ್ರಾಜ್ಞ-ವಿಚಾರವಂತರ ನೆರವಿನಿಂದ ಇಂದಿಲ್ಲ, ನಾಳೆ ಸಫಲವಾದೀತೆಂದು ಹಾರಯಿಸುತ್ತೇನೆ. ನನ್ನ ಅನ್ವೇಷಣೆಯ ಈ ಫಲಿತಾಂಶಗಳ ಯುಕ್ತಾಯುಕ್ತತೆಯ ವಿಮರ್ಶೆಯೊಡನೆ ಮತ್ತು ಈ ನಿಷ್ಕರ್ಷಗಳ ಮೂಲಕ ತಲೆಯೆತ್ತುವ ಹೊಸ ಸಮಸ್ಯೆಗಳನ್ನು ಎತ್ತಿಕೊಂಡು, ಜಿಜ್ಞಾಸುಗಳೂ, ಜ್ಞಾನೋಪಾಸನೆಯಲ್ಲಿ ಆಸಕ್ತಿಯುಳ್ಳವರೂ, ಈ ಸಾಂಸ್ಕೃತಿಕ ಸತ್ಯಾನ್ವೇಷಣೆಯನ್ನು ಮುಂದುವರಿಸುವರು, ಎಂದು ಬಗೆಯುತ್ತೇನೆ. ಈ ನಿಷ್ಕರ್ಷದೊಳಗಿಂದ ತಲೆಯೆತ್ತುವ ಹೊಸ ಸಮಸ್ಯೆಗಳ ಮಾದರಿ ಅಯೋನಿ ಸಂಭವ ಕ್ರಿಸ್ತ, ವೈದೇಹಿ ಜನಕ, ಸೀತೆ, ಜಗದಂಬೆ=ಎಲ್ಲಮ್ಮ ಎಂಬ ರೇಣುಕಾಪುತ್ರ 'ಪರಶುಧರ' ಇವರು ಐತಿಹಾಸಿಕ ವ್ಯಕ್ತಿಗಳೆಂಬ ಹಾಗೆ ಚಿತ್ರಿಸಿರುವಲ್ಲಿ ಒಳಗೊಂಡಿರುವ ಅಂತರ್-ವಿಸಂಗತಿಯನ್ನು ದೃಢಪಡಿಸಿಕೊಳ್ಳುವುದು. ಕ್ರಿಸ್ತನು ಐತಿಹಾಸಿಕ ವ್ಯಕ್ತಿಯಲ್ಲ, ಎಂಬ ಮತವು ಈ ದೃಷ್ಟಿಯಿಂದ ವಿಚಾರಾರ್ಹವಿದೆ.

ಇನ್ನೊಂದು ಬಗೆಯ ಸಮಸ್ಯೆ='ವೈವಸ್ವತ ಮನು' ಈ mythical thinking' ಈ ಡಾರ್ವಿನ್-ವ್ಯಾಲ್ಲಾಸರ 'ಮಾನವನು ಪಾದುರ್ಭವಿಸಿದನು' ಎಂಬ ಹಾಗಿನ ನಿಷ್ಕರ್ಷವೇ ಇರುವ ಶಕ್ಯತೆ ಮತ್ತು ವೈವಸ್ವತ, ಸ್ವಯಂಭೂ ಈ ಬಗೆಯ ಪರಿಭಾಷೆಯನ್ನು ರೂಪಿಸಿರುವ ಸಂಪ್ರದಾಯದ ಈ ವೈಚಾರಿಕ ಪಾತಳಿಯು, ಬೌದ್ಧಿಕ ದೃಷ್ಟಿಕೋನಕ್ಕೂ ಪ್ರಾಚೀನವಾಗಿಲ್ಲವೆ?

ಈ ಮಾನವ ಧರ್ಮದ ಧಾರಣೆ (Concept), ಕೊಮ್‌ಟಿ ಕಾಂಟರ ಆಧುನಿಕ ಗ್ರಹೀತಗಳಿಗಿಂತಲೂ ಬೇರೆ ಬಗೆಯದು ಆಗಿದೆ. ಮೊದಲನೆಯದು ಜೀವನಾನುಭವದ ಸಂದರ್ಭದಿಂದ ಆಕಾರ ಪಡೆದಿದೆ. ಎರಡನೆಯದು,

ಹೊರಗೆ ನಿಂತು, ಒಳರಚನೆಯನ್ನು ಗ್ರಹಿಸಿಕೊಳ್ಳುವ ಪ್ರಯತ್ನವಾಗಿದೆ. ಈ ಭೇದದ ಕಾರಣವು ಸ್ಪಷ್ಟೀಕರಣವನ್ನು ಅಪೇಕ್ಷಿಸುತ್ತಿದೆ.

ಇದು ಹಾಗಿರಲಿ, 'ಮಾನವ'ನ (ಜೀವನದ) ಈ ಸಮಸ್ಯೆಗಿಂತ ಪವಿತ್ರ ಹಾಗೂ ಮಹತ್ತ್ವದ ಸಮಸ್ಯೆಯು ಸಂಶೋಧನಕ್ಕೆ ಬೇರೊಂದು ಇಲ್ಲ. ಮಾನವ ಧರ್ಮ=ಸಂಸ್ಕೃತಿಯು ಈಗ ಪ್ರಾಣೋಪಾಸಕರ ಧರ್ಮವಾಗಿ ಪರಿಣಮಿಸಿರುವುದರಿಂದ ಇದು 'ಜೀವಿತದ'=ಅಸ್ತಿತ್ವದ-ಇಂದ್ರಿಯ ಪೂಜೆಯ, 'ಮಾಧ್ಯಮ'ದ ಆರಾಧನೆ ಆಗಿ ಪರಿಣಮಿಸಿದೆ. ಈ ಇಡೀ ಬಾಳು! ಸಾಧನವೇ 'ಸಾಧ್ಯ'ವೂಸಿದ್ಧಿಯೂ ಆಗಿ ಪರಿಣಮಿಸುವಾಗ ಇದು ಮೃತ್ಯುಪೂಜೆ=ಕತ್ತಲಿನ ಪೂಜೆಯಾಗಿ ಪರಿಣಮಿಸದೇ ಇರದು. ಸಂಸ್ಕೃತಿಯ ವಿಕಾಸ-ಸಂಕೋಚದ ಇತಿಹಾಸವು, ಆ ಭಾಷಿಕರ ಉನ್ನತಿ ಅವನತಿಯನ್ನು ಗಮನಕ್ಕೆ ತಂದು ಕೊಡುವ ನಿಶ್ಚಿತ ಸಾಧನವಾಗಿದೆ. ಇದು ಪ್ರತಿಪಾದನಾತ್ಮಕ ಸ್ವರೂಪದ 'ಇತಿಹಾಸ'ವಾಗಕೂಡದು. ಸಾಂಸ್ಕೃತಿಕ ಪ್ರಸಂಗ, ಘಟನೆ ಮುಂತಾದವುಗಳ ಅರ್ಥವು ಆಯಾ ಪ್ರಸಂಗ, ವಿಷಯ, ಘಟನೆಗಳಲ್ಲೇ ಒಳಗೊಂಡಿರುತ್ತದೆ. ಹೀಗೆ ಒಳಗೆ ಹುದುಗಿರಬಲ್ಲ ಅರ್ಥ=ಇತಿಹಾಸವನ್ನು ಬೆಳಕಿಗೆ ತರುವ ತೌಲನಿಕ, ಸ್ಪಷ್ಟೀಕರಣಾತ್ಮಕ ಶೈಲಿಯು ಇತಿಹಾಸದ್ದು ಇರಬೇಕು. ಈ ಪ್ರಬಂಧದ ಕೇಂದ್ರಸ್ಥ ವಿಚಾರವನ್ನು ತಾಳ-ಮೇಳದೊಡನೆ ಖಾತ್ರೀ ಮಾಡಿಕೊಳ್ಳಲು ಬೇರೆ ಬೇರೆ ಬಗೆಯಿಂದ ಸಮೀಕ್ಷಿಸುವ ಈ ಪ್ರಯತ್ನದಲ್ಲಿ ಅನಿವಾರ್ಯವಾಗುವ ದ್ವಿರುಕ್ತಿಯನ್ನು ಮನ್ನಿಸಬೇಕಾಗಿ ಬಿನ್ನಹ.

ಪ್ರಕಾಶಕರ ಪರವಾಗಿ

ಸಾಹಿತ್ಯ, ಸಂಸ್ಕೃತಿ, ಧರ್ಮ ಮುಂತಾದ ಕ್ಷೇತ್ರಗಳಲ್ಲಿಯ ಕಾಲಗತಿಯ ಪರಿಯನ್ನು ಗ್ರಹಿಸಿ, ಅದನ್ನು ಪ್ರಕಟಿಸಲು ಹೆಣಗಬೇಕೆಂಬ ಹಂಬಲದಿಂದ 'ಕಾಲಗತಿ ಪ್ರಕಾಶನ' ರಾಯಬಾಗದಲ್ಲಿ ಕಾರ್ಯಾರಂಭ ಮಾಡಿದೆ. ನಿಯಮಿತವಾಗಿ ಒಂದು ಪತ್ರಿಕೆ ಮತ್ತು ಆಗಾಗ, ವೈಚಾರಿಕ ತಳಹದಿಯ ರಚನಾತ್ಮಕ, ಸಂಶೋಧನಾತ್ಮಕ, ವಿಮರ್ಶಕ ಗ್ರಂಥಗಳನ್ನು ಹೊರತರುವುದು ಕಾಲಗತಿ ಪ್ರಕಾಶನದ ಮುಖ್ಯ ಗುರಿ. ಈಗ, 'ಕಾಲಗತಿ' ಹೆಸರಿನ ತ್ರೈಮಾಸಿಕ ಪತ್ರಿಕೆಯೊಂದು ಪ್ರಕಟವಾಗುತ್ತಲಿದ್ದು ಅದು ಎರಡನೆಯ ವರ್ಷದ ಕೊನೆಯ ಹಂತದಲ್ಲಿದೆ. ಮೂರನೆಯ ವರ್ಷದಲ್ಲಿ ಅದನ್ನು, ಎರಡು ತಿಂಗಳುಗಳ ಸಂಯುಕ್ತ ಸಂಚಿಕೆಗಳ ರೂಪದಲ್ಲಿ ಮಾಸಿಕವನ್ನಾಗಿ ಪರಿವರ್ತಿಸಬೇಕೆಂಬ ವಿಚಾರವೂ ಇದೆ.

ಭೂತ, ಪಿಶಾಚಿಗಳಿಗೆ ಸಂಬಂಧಿಸಿದ ಮೂಢನಂಬಿಕೆಗಳನ್ನು ವಿಶ್ಲೇಷಿಸುವ ವಸ್ತುವನ್ನೊಳಗೊಂಡ 'ಭೂತ ವರ್ತಮಾನ' ಎಂದು ಹೆಸರಿನ ನಾಟಕ ಮತ್ತು ಹತ್ತುಜನ ತರುಣ ಬರಹಗಾರರ ಲೇಖನಿಗಳಿಂದ ರೂಪುಗೊಂಡ 'ಹೀಚು ಹಣ್ಣು' ಹೆಸರಿನ ಕಥಾಸಂಕಲನ ಇವು ನಮ್ಮ ಪ್ರಕಾಶನದಿಂದ ಬೆಳಕು ಕಂಡಿರುವ ಎರಡು ಗ್ರಂಥಗಳು. 'ಮಾನವಧರ್ಮದ ಆಕೃತಿ' ನಮ್ಮ ಪ್ರಕಾಶನದ ಮೂರನೆಯ ಪ್ರಕಟನೆ. ಐದಾರು ದಶಕಗಳಿಂದ ಕಂನಾಡು ಮತ್ತು ಕಂನುಡಿಗಳನ್ನು ಕುರಿತು ಸಂಶೋಧನೆಯಲ್ಲಿ ತೊಡಗಿ, ಭಾರತೀಯ ಧರ್ಮಸಂಸ್ಕೃತಿಗಳಲ್ಲಿಯ ಪದರು ಪದರುಗಳನ್ನು ವಿಶ್ಲೇಷಿಸಿ, ನಾಡಿನ ಅಗ್ರಗಣ್ಯ ಸಂಶೋಧಕರು ಮತ್ತು ಮುಕ್ತಧೋರಣೆಯ ಚಿಂತಕರೆಂದು ಪ್ರಖ್ಯಾತರಾಗಿರುವ ಡಾ. ಶಂ.ಬಾ. ಜೋಶಿ, ಡಿ.ಲಿಟ್. ಅವರು ನಮ್ಮ ಪ್ರಸ್ತುತ ಗ್ರಂಥದ ಲೇಖಕರೆಂದ ಮೇಲೆ ಕೃತಿಯ ಬಗೆಗೆ ಹೆಚ್ಚು ಹೇಳಬೇಕಿಲ್ಲ.ಮತ-ಧರ್ಮಗಳ ಬಗ್ಗೆ, ಪರಂಪರೆ ಸಂಪ್ರದಾಯಗಳ ಬಗ್ಗೆ ಅಂಧಾಭಿಮಾನವು ನೆಲೆಯೂರಿರುವ ಪರಿಸರದಲ್ಲಿದ್ದು, ಅವುಗಳಿಂದ ಕೊಸರಿಕೊಂಡು ಪುಟಿದೆದ್ದು, ತಮಗೆ ಹೊಳೆದ ಸತ್ಯವನ್ನು ಪ್ರಾಮಾಣಿಕವಾಗಿ ಅಭಿವ್ಯಕ್ತಗೊಳಿಸುವ, ಪರಂಪರಾಗತ ಧಾರ್ಮಿಕ ಪ್ರಮಾಣ ಗ್ರಂಥಗಳ ಅಂತರಾಳದಲ್ಲಿಯ ಅಂತರ್ ವಿಸಂಗತಿಗಳನ್ನು ಧೈರ್ಯವಾಗಿ ತೋರಿಸಿ ಕೊಡುವ, ಡಾ.ಶಂ.ಬಾ. ಜೋಶಿ ಅವರ ಎದೆಗಾರಿಕೆ ಅದ್ವಿತೀಯವಾಗಿದೆ. ಅಂತೆಯೇ, ಅಭಿನಂದನಾರ್ಹವಾಗಿದೆ. ಇಂಥ ಖಂಡಿತವಾದಿಗಳು ಕರ್ನಾಟಕದಲ್ಲಿ ಎಷ್ಟು ಜನರಿದ್ದಾರ?

ಪ್ರಸ್ತುತ ಗ್ರಂಥ, ಭಾರತೀಯ ಧರ್ಮ ಮತ್ತು ಸಂಸ್ಕೃತಿಯ ಮೂಲ ಹಾಗೂ 'ಮಾನವಧರ್ಮ'ಗಳಿಗೆ ಸಂಬಂಧಿಸಿದ ವಿಷಯಗಳ ಮೇಲೆ ಹೊಸ ಬೆಳಕು ಚೆಲ್ಲುವ ವಿನೂತನ ಕೃತಿಯಾಗಿದೆ. ಭೌತವಿಜ್ಞಾನಿ ಡಾರ್ವಿನ್ನನ ಉತ್ಕ್ರಾಂತಿವಾದದಲ್ಲಿ ಮಗನಿಂದ ಮಾನವ ಹಂತದ ನಡುವೆ ಕಳೆದುಕೊಂಡಿರುವ ಕೊಂಡಿ (Missing link) ಒಂದು ಇರಲೇಬೇಕೆಂದು ಹೊಸ ವಾದ ಮಂಡಿಸಿದ (ಡಾರ್ವಿನ್ನನ ಸಮಕಾಲೀನ) ಇನ್ನೊಬ್ಬ ವಿಜ್ಞಾನಿ ವ್ಯಾಲ್ಲಾಸನ

ವಿಚಾರಗಳಿಗೆ ಭಾರತೀಯ ಸಾಂಸ್ಕೃತಿಕ-ಪರಿಭಾಷೆಯಲ್ಲಿರುವ ಆಧಾರಗಳನ್ನು ಹೆಕ್ಕಿ ಶೋಧಿಸಿರುವುದು ಡಾ. ಶಂ.ಬಾ. ಜೋಶಿ ಅವರ ಮಹಾನ್ ಕೊಡುಗೆಯಾಗಿದೆ! ಪಾಶ್ಚಿಮಾತ್ಯ ಚಿಂತಕರೂ ಬೆರಗುಗಣ್ಣುಗಳಿಂದ ಭಾರತದತ್ತ - ಕಂನಾಡಿನತ್ತ ನೋಡಬಹುದಾದ ಹೊಚ್ಚ ಹೊಸ ವಿಚಾರಗಳು 'ಮಾನವ ಧರ್ಮದ ಆಕೃತಿ'ಯಲ್ಲಿ ಪ್ರತಿಪಾದನೆಗೊಂಡಿವೆ. ಆದ್ದರಿಂದ, 'ಕಾಲಗತಿ ಪ್ರಕಾಶನ'ದ ಹೆಮ್ಮೆಯ ಪ್ರಕಟನೆಯಿದು.

ಜಾಗತಿಕ ಮಹತ್ತ್ವ ಪಡೆಯಬಲ್ಲ 'ಮಾನವ ಧರ್ಮದ ಆಕೃತಿ' ಗ್ರಂಥವನ್ನು ಪ್ರಕಟಿಸುವ ಹೊಣೆಯನ್ನು ಕಾಲಗತಿ ಪ್ರಕಾಶನಕ್ಕೆ ಒಪ್ಪಿಸಿ ಮುದ್ರಣ ಕಾರ್ಯದುದ್ದಕ್ಕೂ ಸಕಲ ನೆರವನ್ನು ನೀಡಿ, ಸಹಕರಿಸಿದ ಆದರಣೀಯರಾದ ಡಾ. ಶಂ.ಬಾ. ಜೋಶಿ ಅವರಿಗೆ ಕೇವಲ ಕೃತಜ್ಞತೆ ಎಂದು ಹೇಳುವುದು ಅತಿ ಸಣ್ಣ ಮಾತಾಗುತ್ತದೆ. ಮುದ್ರಣ ಕಾರ್ಯಮಾಡಿಕೊಟ್ಟ ಧಾರವಾಡದ ಪ್ರಕಾಶ ಮುದ್ರಣಾಲಯದ ಪೈ ಬಂಧುಗಳಿಗೆ ಮತ್ತು ಉಮಾ ಮುದ್ರಣಾಲಯದ ಆಕಳವಾಡಿ ಬಂಧುಗಳಿಗೆ ವಂದನೆಗಳು. ವಿವಿಧ ರೀತಿಯಿಂದ ಸಹಕರಿಸಿದ ಆತ್ಮೀಯರಾದ ಶ್ರೀ ನಿಂಗಣ್ಣ ಸಣ್ಣಕ್ಕಿ ಮತ್ತು ಹಿರಿಯರಾದ ಡಾ. ವರದರಾಜ ಹುಯಿಲಗೋಳ ಮುಂತಾದವರ ಉಪಕಾರ ಸ್ಮರಿಸುವುದು ಕರ್ತವ್ಯವಾಗಿದೆ.

ರಾಯಬಾಗ
೨-೧೧-೧೯೭೯

ಜ್ಯೋತಿ ಹೊಸೂರ

ಧನ್ಯವಾದಗಳು

ಪ್ರಾಚಾರ್ಯ ಜ್ಯೋತಿ ಹೊಸೂರರು ಈ ಪ್ರಕಟನೆಗೆ ಮುಂದೆ ಬರದೆ ಇದ್ದರೆ, ಇದು ಬರೆದು ಮುಗಿಯದೇ ಉಳಿಯಬಹುದಿತ್ತು! ಲೇಖನಸೂಚಿಯನ್ನು ಸಿದ್ಧಪಡಿಸಿ, ಗ್ರಂಥಗಳ ನೆರವನ್ನಿತ್ತಿರುವ ಶ್ರೀ ಕೆ. ಎಸ್. ದೇಶಪಾಂಡೆ ಹಾಗೂ ಮುಂಬೈಯ ಶ್ರೀ ಎಲ್. ಎಂ. ಪಾಟೀಲ ಇವರ ಸಹಕಾರ ಪ್ರಶಂಸನೀಯವಿದೆ. ಮುದ್ರಣದ ಪ್ರತಿ ಸಿದ್ಧಪಡಿಸಲು ನೆರವಾದ ಶ್ರೀ ಹೊಳೇಚಿ ಸಂಗಮೇಶ್ವರ ಎಂ.ಎ., ಶ್ರೀ ಸಂಣಕ್ಕಿ ನಿಂಗಣ್ಣ ಇವರನ್ನು ನೆನೆಯಲೇ ಬೇಕು. ಡಾ. ಹುಯಿಲಗೋಳ ವರದರಾಜ ಹಾಗೂ ಡಾ. ಗಾಯಿ ಪ್ರಮೋದ ಇವರು ಬೇಸರ ಪಡದೆ ಆಗಾಗ ಆವಶ್ಯಕವಾದ ಸಹಾಯ ಮಾಡಿದ್ದಾರೆ. ಕಾಗದ ಹಾಗೂ ಮುದ್ರಣಾಲಯ ಇವೆರಡರ ದುರ್ಭಿಕ್ಷವು ಉಂಟುಮಾಡಿದ್ದ ಕಳವಳವನ್ನು, ಆಪದ್ಬಾಂಧವರಾಗಿ ಉಮಾ ಪ್ರಿಂಟರ್ಸದ ಒಡೆಯರಾದ ಶ್ರೀ ಎಂ. ಆರ್. ಸತ್ಯನಾರಾಯಣ ಆಕಳವಾಡಿ ಮತ್ತು ಶ್ರೀ ಎಂ. ಆರ್. ಮಂಜುನಾಥ ಆಕಳವಾಡಿ ಬಂಧುಗಳು ದೂರಮಾಡಿದ್ದನ್ನು ಸ್ಮರಿಸಿಕೊಳ್ಳಲೇಬೇಕು.

ಪಡಿಯಚ್ಚು ಎರುವಲು ಕೊಟ್ಟ ಶ್ರೀ ಹೊಂಬಾಳಿ ಬಲರಾಮರಿಗೆ ಗ್ರೀಕ್ ಒರ್ಫಿಕ್ ಅವಶೇಷಗಳ ಮೂರು ಚಿತ್ರಗಳಿಗಾಗಿ, ಶ್ರೀ ಆಲೂರ ಕೃಷ್ಣರಾಯರಿಗೆ ಯಂತ್ರೋದ್ಧಾರದ ಹನುಮನ ಚಿತ್ರಕ್ಕಾಗಿ ಧನ್ಯವಾದಗಳು.

ನರಕ ಚತುರ್ದಶಿ
೧೯-೧೦-೧೯೭೯

ಶಂ. ಬಾ. ಜೋಶಿ

ಕ್ರಮಿಸಿ ಬಂದಿರುವ 'ಜೀವನ'ದ ದಾರಿಯ ಹೊಳಹು

To understand an age or a nation,
We must understand its Philosophy
B. Russell

'ಪಾಶ್ಚಾತ್ಯ ತತ್ವಜ್ಞಾನದ ಇತಿಹಾಸ' ಎಂಬ ಗ್ರಂಥದ ಪ್ರಸ್ತಾಪದಲ್ಲಿ ಈ ವೈಚಾರಿಕ ಸೂತ್ರವು ಅಭಿವ್ಯಕ್ತವಾಗಿದೆ. ಈ ಸೂತ್ರವು ಒಳಗೊಂಡಿರುವ ಆಶಯವು, ಸಾಂಸ್ಕೃತಿಕ ಸತ್ಯಾಂಶವನ್ನು ಒರೆಗೆ ಹಚ್ಚಿ ನೋಡಲು ತುಂಬ ಉಪಕಾರಕ ಸಾಧನವಾಗಿದೆ. ಮಾನವನ ಇತಿಹಾಸ (ಆಚಾರ) ಮತ್ತು ತತ್ವಜ್ಞಾನ (ವಿಚಾರ) ಇವೆರಡರಲ್ಲಿ ಅಂತಃಸಂಬಂಧವು ಉಂಟು, ಎಂಬ ಒಪ್ಪಿಗೆಯು ಇಲ್ಲಿದೆ. ಮಾನವನು ಆಚಾರ ಹಾಗೂ ವಿಚಾರ ಇವೆರಡರಲ್ಲಿ ಇರಬಲ್ಲ ಕೆಲವೊಂದು ಸಾಹಚರ್ಯವನ್ನು ಅಮಾನ್ಯಮಾಡಲು ಬರಲಾರದು. ಆಚಾರ ಮತ್ತು ವಿಚಾರ ಇವೆರಡಕ್ಕೂ ಮಾನವನ ಕೃತಿಯೇ ಮೂಲಕಾರಣ. ಕೃತಿಯೇ ಜೀವನದ ಆಕೃತಿಗೂ ಕಾರಣವೆಂದಾಗುತ್ತದೆ. ಆದಕಾರಣ, ಮಾನವರ ಆಚರಣದ ಸಂದರ್ಭದಿಂದ ಮೈದೋರುವ ಇತಿಹಾಸದ ಆಕೃತಿ ಹಾಗೂ ಇವರ ವೈಚಾರಿಕ ಭೂಮಿಕೆಯ ಮೇಲಣ ತತ್ವಜ್ಞಾನದ ಆಕೃತಿ, ಇವೆರಡರಲ್ಲಿ ಅನ್ಯೋನ್ಯಸಂಬಂಧವು ಇರಬೇಕಾಗುತ್ತದೆ. ಇದು ನಿಜವಿದ್ದರೆ, ಯಾವುದೊಂದು ಜನಗಣದ ಇತಿಹಾಸದಿಂದ ಅವರ ತತ್ವಜ್ಞಾನದ ಆಕೃತಿಯನ್ನು, ಮತ್ತು ತತ್ವಜ್ಞಾನದ ಭೂಮಿಕೆಯಿಂದ ಅವರ ಇತಿ-ಹಾಸದ ಆಕೃತಿ ಸ್ವರೂಪವನ್ನು ಗ್ರಹಿಸಿಕೊಳ್ಳುವದು ಶಕ್ಯವಾಗಬೇಕು. ಈ ನಿಷ್ಕರ್ಷಗಳಿಗೆ ಬೇರೆ, ಬೇರೆ ನಿಟ್ಟಿನಿಂದ ತಾಳ-ಮೇಳವು ಲಭಿಸುತ್ತದೆ, ಎಂಬುದೂ ಸಿದ್ಧವಾಗಬೇಕು.

ಜಿಜ್ಞಾಸೆ

ತಿಳುವಳಿಕೆ ಮೂಡಿದ ಎರಡು ದಶಕಗಳ ತರುವಾಯ, ಭಾರತದ ಆಧುನಿಕ-ಯುಗದ ಪ್ರವಾದಿ ವಿವೇಕಾನಂದರ ಹಾಗೂ ಲೋಕಮಾನ್ಯ ತಿಲಕರ ಚಾರಿತ್ರ್ಯ ಮತ್ತು ಉಜ್ವಲ ವಿಚಾರಗಳು, ನನ್ನ ಕಣ್ಣುತೆರೆಯ ಹಚ್ಚಿದುವು; ಬಳಿಕ ಈ ವಿಚಾರಗಳೇ, ನಮ್ಮ ಸಂಸ್ಕೃತಿ ಹಾಗೂ ಸ್ವಾತಂತ್ರ್ಯದ ಇಂದಿನ ಅವಸ್ಥೆಯ ಬಗೆಗೆ ತೀವ್ರ ಕಳವಳಕ್ಕೂ ಕಾರಣವಾಗತೊಡಗಿದವು. ಹಿಂದೆಯೇ ಭಾರತೀಯರು, ಜಾಗತಿಕ ಇತಿಹಾಸದಲ್ಲಿ ಮಹೋನ್ನತ ಸ್ಥಾನದಲ್ಲಿ ಇದ್ದರು. ಭಾರತದಲ್ಲಿ ಸುವರ್ಣದ ಹೊಗೆ ಹೊರಡುತ್ತಿತ್ತು. ಈ ಬಗೆಯ ಸ್ಥೂಲ ಹೇಳಿಕೆಗಳು ಮೊದಮೊದಲಲ್ಲಿ ಆಕರ್ಷಕವಾದುವು. ಆದರೆ, ಈ ಭಾರತೀಯರು 'ಹಿಂದೊಮ್ಮೆ ಸ್ವತಂತ್ರರಾಗಿದ್ದರು' ಎಂದರೆ ಎಂದು? ಯಾವಾಗ? ನಮ್ಮ ಧರ್ಮ ಸಂಸ್ಕೃತಿಯಲ್ಲಿ ಮೌಲಿಕ ಗುಣಗಳಿದ್ದರೆ ಇವು ಯಾವುವು? ಎಂಬ ಪ್ರಶ್ನೆಗಳು ಮನಸ್ಸಿನ ಅಸ್ವಾಸ್ಥ್ಯಕ್ಕೆ ಕಾರಣವಾದುವು.

ಶ್ರೀ ವಿವೇಕಾನಂದರು, ಪರಮಹಂಸ : ರಾಮಕೃಷ್ಣರ ಶಿಷ್ಯರು. ಆದರು, ಶ್ರೀ ವಿವೇಕಾನಂದರು ಪ್ರವೃತ್ತಿಮಾರ್ಗ ಪ್ರಚೋದಕ ಜೀವನದೃಷ್ಟಿಯನ್ನು ತಾಳಿದ್ದರು. ಶ್ರೀ ರಾಮಕೃಷ್ಣರು ಸುಮಾರಾಗಿ ಬಾಲ್ಯದಿಂದಲೇ ಭಾವಾವಿಷ್ಟ ಪ್ರವೃತ್ತಿಯವರು. ಸಾಧನಾ! ಅನುಷ್ಠಾನದಲ್ಲಿ ಭಾವೋನ್ಮತ್ತ-ಉನ್ಮನಸ್ಕರಾಗಿ, ಭಾವಸಮಾಧಿಯಲ್ಲಿ ಸೇರುವ ಸ್ವಭಾವವನ್ನು ಪಡೆದಿದ್ದರು. ಆ ಸ್ವಭಾವವನ್ನು ಮೈಗೂಡಿಸಿಕೊಂಡಿದ್ದರು. ಗುರುಗಳ ನಿರ್ಯಾಣದ ತರುವಾಯ, ಆ ಸಂಪ್ರದಾಯದ ನೇತೃತ್ವವು ಶ್ರೀವಿವೇಕಾನಂದರ ಕಡೆಗೆ ಬಂತು. ದಿವ್ಯಾಧ್ಯಾತ್ಮ-ಸಿದ್ಧಿಯ ಮೂರ್ತಿಮಂತ ಮಾದರಿಯಾದ ಶ್ರೀಪರಮಹಂಸರ ಶಿಷ್ಯರಲ್ಲಿ, ಗುರುಗಳನ್ನು ಅನುಕರಿಸುವ ಪ್ರವೃತ್ತಿಯು ಕಾಣಿಸಿಕೊಳ್ಳುವುದು ಸಹಜವಿದೆ. ಶ್ರೀವಿವೇಕಾನಂದರ ಸ-ತೀರ್ಥ ಸಾಧಕ ಗುರು-ಬಂಧುಗಳಲ್ಲಿ, ಶ್ರೀರಾಮಕೃಷ್ಣರಂತೆ, ತಾವೂ ಭಾವಸಮಾಧಿಯಲ್ಲಿ ಸೇರಿ, ಪರವಶರಾಗಿ, 'ಬ್ರಹ್ಮಾನುಸಂಧಾನ'ದಲ್ಲಿ ಉಳಿಯಬಯಸುವ ಒಲವು, ಬೆಳೆಯತೊಡಗುತ್ತವೆ. ಆದರೆ, ಶ್ರೀ ವಿವೇಕಾನಂದ ಇವರ ಹೆಸರಿನೊಳಗಣ 'ವಿವೇಕ' (ಪ್ರಜ್ಞೆ) ಇದು 'ತತ್' ಮಯಾನಂದಿಯಾಗಿಯೇ ಉಳಿಯಬೇಕು, ಎಂಬ ಈ ಪ್ರವೃತ್ತಿಯನ್ನು ವಿರೋಧಿಸಲು ಪ್ರಚೋದಿಸುತ್ತದೆ! 'ಭಾವಸಮಾಧಿ'ಯಲ್ಲಿ ಸೇರಬೇಕೆಂಬ ಗುರುಬಂಧುಗಳ ನಡೆವಳಿಯನ್ನು ನಿಷೇಧಿಸಿ, ಶ್ರೀ ವಿವೇಕಾನಂದರು, ಇದನ್ನು ನಿಲ್ಲಿಸಿದರು, ಎಂಬ ಈ ಮಾತು, ಅವರ ಚರಿತ್ರದಲ್ಲಿ ನಮೂದು ಇದೆ.

ಈ ಕೃತಿ ಹಲವರಿಗೆ ಸೇರಲಿಲ್ಲ. ಈ ಪರಂಪರೆಯಲ್ಲಿ, ಶ್ರೀ ಪರಮಹಂಸರು ಶ್ರೇಷ್ಠರೋ? ಶ್ರೀ ವಿವೇಕಾನಂದರು ಶ್ರೇಷ್ಠರೋ? ಎಂಬ ಒಂದು ವಾದವು ಇಂದಿಗೂ ಉಳಿದು ಬಂದಿದೆ! ಕನ್ಯಾಕುಮಾರಿಯಲ್ಲಿ ಶ್ರೀ ವಿವೇಕಾನಂದರ ಭವ್ಯಸ್ಮಾರಕವಿದೆ; 'ಶ್ರೀ ರಾಮಕೃಷ್ಣರ ಶಿಷ್ಯ' ವಿವೇಕಾನಂದರು, ಪ್ರವೃತ್ತಿಪರ ಜೀವನದೃಷ್ಟಿಯವರು ಇದ್ದುದನ್ನೇ ಮೆಚ್ಚಿಕೊಳ್ಳಲಾಗುತ್ತಿರುವುದು ಮೇಲೆಯೇ ಕಾಣುತ್ತಿದೆ. ಆದರೆ, 'ಭಾವಸಮಾಧಿ'ಯೇ ಬಾಳಗುರಿ ಇರುವ ಈ ದಿವ್ಯಾಧ್ಯಾತ್ಮವು ಅನುಕರಣೀಯವಲ್ಲ! ಎಂದು ಸ್ಪಷ್ಟವಾಗಿ ಹೇಳುವ ವಿವೇಕಾನಂದಭಕ್ತರು ದೊರೆಯುವುದಿಲ್ಲ! ದೇ. ಭ. ಗಳಲ್ಲಿ ಸಹ ಅಪರೂಪ. ಶ್ರೀ ವಿವೇಕಾನಂದರ ಚರಿತ್ರೆಯಲ್ಲಿ ಬರುವ ಒಂದು ಪ್ರಸಂಗವು ವಿಚಾರ ಪ್ರಚೋದಕವಿದೆ. ಹಿಮಾಲಯದ ಪ್ರವಾಸದಲ್ಲಿದ್ದಾಗ, ಇವರಿಗೆ ಪವ್ಹರಿಬಾಬಾ ಎಂಬ ಸಿದ್ಧನ ದರ್ಶನವು ಆಯಿತು. ಇವರಲ್ಲಿ, ಶ್ರೀ ರಾಮಕೃಷ್ಣರಿಗಿಂತಲೂ ವಿಶೇಷ ಪ್ರಕಾರದ ಒಂದು ಸಿದ್ಧಿಯು ಇದ್ದುದನ್ನು ಕಂಡರು. ಆಗ, ತಾನು 'ಈ ಗುರುವಿನ ಶಿಷ್ಯನಾಗಿದ್ದರೆ-' ಎಂಬ ಭಾವನೆ ಮಿಂಚಿಹೋಯ್ತು! ಸಂವೇದನಶೀಲ ಶ್ರೀವಿವೇಕಾನಂದರಿಗೆ, ತಾನು 'ಗುರುದ್ರೋಹ ಬಗೆದೆನು' ಎಂಬ ಪಶ್ಚಾತ್ತಾಪವು ತೀವ್ರವಾಯ್ತು! ಕೂಡಲೆ, ತಮ್ಮನ್ನು ಉಗ್ರಶಿಕ್ಷೆಗೆ ಒಳಪಡಿಸಿಕೊಳ್ಳುತ್ತಾರೆ!

ಇಂದು, ನನಗೆ ಎನಿಸುತ್ತಿರುವ ಮಾತು ಇದು: ಭಾರತೀಯ ಪುರಾತನ ಪರಂಪರೆಯಲ್ಲಿ ಇದ್ದ 'ಶಿಷ್ಯಾತ್ ಇಚ್ಛೇತ್ ಪರಾಜಯಂ' ಈ ಗುರುಪರಂಪರೆಯು ನಷ್ಟವಾಗಿ, ಆಗಿರುವ ಅನಾಹುತವನ್ನು ನಾವು ಇಂದು ಕಾಣುತ್ತಿದ್ದೇವೆ! ದಕ್ಷಿಣ ಕಪರ್ದ ವಸಿಷ್ಠ ವ್ಯಾಸರಿಂದ ಪ್ರಾರಂಭವಾದ ಈ ಉಚ್ಛಿಷ್ಟ ಸಂಪ್ರದಾಯವು, 'ಗುರುಬ್ರಹ್ಮ'- 'ಗುರುವೇ ದೇವರು' ಎಂಬ ಶ್ರದ್ಧೆಯಲ್ಲಿ ಪರಿಣಮಿಸಿದೆ! ಅಥರ್ವವೇದದಲ್ಲಿ 'ಉಚ್ಛಿಷ್ಟ ಸೂಕ್ತ'ವಿದೆ! ಶ್ವೇತಾಶ್ವತರ ಉಪನಿಷತ್ತಿನಲ್ಲಿ ದೇವರು=ಗುರು ಈ ಸಮೀಕರಣವು ಉಂಟು. ಬಳಿಕ 'ವ್ಯಾಸೋಚ್ಛಿಷ್ಟಂ ಜಗತ್ ಸರ್ವಂ' ಈ ಪಡೆಮಾತು ಪ್ರಚಾರಕ್ಕೆ ಬರುತ್ತದೆ! ಈ ದಾಸ್ಯಭಾವದ ಶರಣಾಗತರಾಗುವ ಬಾಳಿನ ರೀತಿಯು ಈಗ ಭಾರತೀಯರಲ್ಲಿ ರಕ್ತಗತವಾಗಿದೆ! ಶ್ರೀವಿವೇಕಾನಂದರು, ಪರಮಹಂಸರ ಶಿಷ್ಯರಾದರೂ, ವ್ಯಕ್ತಪಡಿಸಿರುವ ಸ್ವತಂತ್ರ ಪ್ರಜ್ಞೆಯಿಂದಾಗಿ 'ಆಧುನಿಕ ಭಾರತದ ಪ್ರವಾದಿ' ಎಂದು ಇವರು ಪೂಜ್ಯರಾಗಿದ್ದಾರೆ. 'ಉತ್ತಿಷ್ಠ, ಜಾಗ್ರತ, ವರಾನ್ನಿಬೋಧತ' ಹೀಗೆ, 'ಎಚ್ಚರಾಗಿರಿ, ಏಳಿರಿ-' ಎಂಬ ಪ್ರವೃತ್ತಿಪರ ಸಂದೇಶವನ್ನಿತ್ತ ಶ್ರೀ ವಿವೇಕಾನಂದರಿಗೆ, 'ಶಿಷ್ಯಾತ್ ಇಚ್ಛೇತ್ ಪರಾಜಯಂ' ಈ ಪೂರ್ವ ಪರಂಪರೆಯು ಗೊತ್ತಿರಲಿಲ್ಲವೇನೋ? 'ಭಾವ ಸಮಾಧಿಯಲ್ಲಿ' ಸೇರುವ ಪ್ರವೃತ್ತಿಯನ್ನು ಪಡೆದ ಶ್ರೀ ವಿವೇಕಾನಂದರು, ಆಮರಣ ಸಂನ್ಯಾಸ ಸ್ವೀಕರಿಸುವ ಈ ಪರಂಪರೆಯನ್ನು ನಿಲ್ಲಿಸುವ ನಿಟ್ಟಿನಲ್ಲಿ ನೂತನ ಮಾರ್ಗ-ಪ್ರಸ್ಥಾಪಕರಾಗಬಹುದಿತ್ತು. ಪ್ಲೇಟೋನ ವೈಚಾರಿಕದಾಸ್ಯವನ್ನು ಸ್ವೀಕರಿಸದೆ, 'ಶಿಷ್ಯಾತ್

ಇಚ್ಛೇತ್ ಪರಾಜಯಂ' ಪರಂಪರೆಯನ್ನು ಪ್ರಾರಂಭಿಸಿದ ಅರಿಸ್ಟಾಟ್ಲನು ಭಾರತೀಯ ಪರಂಪರೆಯಲ್ಲಿ ಎಂದು ಕಾಣಿಸಿಕೊಳ್ಳುವನೋ ನೋಡಬೇಕು.

'ಗುರುಃ ಬ್ರಹ್ಮಾ ಗುರುಃ ವಿಷ್ಣುಃ ಗುರುಃ ದೇವೋ ಮಹೇಶ್ವರಃ' ಇದು ಭಾರತೀಯರಲ್ಲಿ ಉಚ್ಛಿಷ್ಟ ಸಂಪ್ರದಾಯವನ್ನು ಉಳಿಸಿಕೊಂಡು ಹೊರಟಿರುವ ಭಯಂಕರ ಶ್ಲೋಕವಾಗಿದೆ. ಶ್ರೀಮತ್ 'ಭಗ'ವತ್ ಗೀತೆಯು ಇದಕ್ಕಿಂತಲೂ ಭಯಾವಹ ಸ್ವರೂಪದ್ದು ಆಗಿದೆ! ಖುದಿರಾಮ ಬೋಸ್ ಕ್ರಾಂತಿಕಾರನು ಗೀತೆಯನ್ನು ಓದುತ್ತ, ಗಲ್ಲಿಗೆ ನಡೆದನು! 'ವಾಸಾಂಸಿ ಜೀರ್ಣಾನಿ ಯಥಾ ವಿಹಾಯ' ಈ ಶ್ಲೋಕವು ದೇಹವನ್ನು ಬಟ್ಟೆಯ ರೂಪಕದಿಂದ ವರ್ಣಿಸಿದೆ. ಮಹಾನ್ ಆದರ್ಶಕಕ್ಕಾಗಿ ಈ ದೇಹತ್ಯಾಗಕ್ಕೆ ಸಿದ್ಧವಾಗುವ ಸ್ಫೂರ್ತಿಯ ಅಂಶವು ಈ ಶ್ಲೋಕದಲ್ಲಿ ಇದೆ. ಸುಭಾಸಚಂದ್ರ ಬೋಸರು ಚಿಕ್ಕಂದು ಗೀತೆಯನ್ನು ಓದಿದ್ದರು. ಗುರುವಿನಿಂದ ಸಾಕ್ಷಾತ್ಕಾರ ಪಡೆದು ದೇಶಸೇವೆಗೆ ಪ್ರಾರಂಭಿಸಬೇಕು, ಎಂದು ಮನೆಯಲ್ಲಿ ಹೇಳದೆ ಓಡಿಹೋಗಿದ್ದರು; ಗುರುವು ದೊರೆಯದ್ದಕ್ಕೆ ಮರಳಿ ಬಂದರು.

ಗೀತೆಯ ಬಗೆಗಿನ ಲೋಕಮಾನ್ಯ ತಿಲಕರ ಭಕ್ತಿಯೂ ಅಸಾಧಾರಣವಿತ್ತು, 'ರಾಜ ದ್ರೋಹಿ' ಎಂಬ ಆರೋಪಕ್ಕಾಗಿ, ಆದ 'ಕರೆನೀರಿನ' ಕ್ರೂರಶಿಕ್ಷೆಗೆ ಅಳುಕದೆ, ಸೆರೆಮನೆಯಲ್ಲಿ ಜ್ಞಾನೋಪಾಸನೆಯಲ್ಲಿ ತೊಡಗಿದರು. ಗೀತೆಯಲ್ಲಿ ಪ್ರವೃತ್ತಿಪರ ಜೀವನದ ಬೋಧೆಯಿದೆ ಎಂಬುದನ್ನು ಸಿದ್ಧಪಡಿಸುವ ಮಹಾನ್ ಗ್ರಂಥ ಬರೆದರು. ಶಿಕ್ಷೆಮುಗಿಸಿ ಹೊರಗೆ ಬರುತ್ತಲೆ ಅದನ್ನು ಪ್ರಕಟಿಸಿದ್ದಾಯ್ತು. ಈ ಸಂದರ್ಭದಲ್ಲಿ, ಸ್ವಂತದ ಕೆಲಸಕ್ಕಾಗಿ ತಿಲಕರು ಗದುಗಿಗೆ ಬಂದಿದ್ದರು. ನಂತರ ಪುಣೆಗೆ ಹೋಗುವಾಗ ಟಿಳಕರನ್ನು ಧಾರವಾಡದಲ್ಲಿ ನಿಂತು ಹೋಗಲು, ಇಲ್ಲಿಯ ಮುಂದಾಳುಗಳು ಬಿನ್ನವಿಸಿದ್ದರು. ಯೋಗಾಯೋಗದಿಂದಾಗಿ, ಲೋಕಮಾನ್ಯರ ಭಾಷಣವನ್ನು ಕೇಳುವ ಸಂದರ್ಭ ದೊರೆತಿತು. ಬಿಡುವು ಇಲ್ಲದ್ದರಿಂದ ಬೇಗನೇ ಹೊರಡಲಿದ್ದರು. ಆದರೂ ಕೆಲವು ತಾಸುಗಳ ಆ ಅವಧಿಯಲ್ಲಿ ಒಂದು ಸಾರ್ವಜನಿಕ ಉಪನ್ಯಾಸದ ಏರ್ಪಾಡು ಮಾಡಲಾಗಿತ್ತು. ಆದರೆ, ಆಗಿನ ಬ್ರಿಟೀಶ ಕಲೆಕ್ಟರನು ಸಾರ್ವಜನಿಕ ವ್ಯಾಖ್ಯಾನವನ್ನು ಮಾಡಕೂಡದು, ಎಂದು ನಿಷೇಧಾತ್ಮಕ ಹುಕುಮು ಹೊರಡಿಸಿದನು. ಪ್ರಸಿದ್ಧ ವಕೀಲರಾದ ಶ್ರೀ ಬಳ್ಳಾರಿ ರಾಮರಾಯರು ತಮ್ಮ ಬಂಗ್ಲೆಯ ವಿಶಾಲ ಆವರಣದಲ್ಲಿ ಈ ಉಪನ್ಯಾಸಕ್ಕೆ ಇಂಬು ಮಾಡಿಕೊಟ್ಟರು. ಉಪನ್ಯಾಸದ ಅರ್ಧತಾಸಿನಲ್ಲಿ ಗೀತೆಯ ಒಂದು ಶ್ಲೋಕವನ್ನು ಕುರಿತೇ ಮುಖ್ಯವಾಗಿ ಮಾತಾಡಿದರು. ಗೀತೆಯಲ್ಲಿ 'ದೈವವಾದವಿದೆ', ಎಂಬ ಗ್ರಹಿಕೆಯು ನಿರಾಧಾರವಿದೆಂದು ಸಿದ್ಧಪಡಿಸಲು, ಅವರು ಎತ್ತಿಕೊಂಡ ಶ್ಲೋಕವಿದು.[೧] :

'ಅಧಿಷ್ಠಾನಂ, ತಥಾ ಕರ್ತಾ, ಕರಣಂ ಚ ಪೃಥಕ್‌ವಿಧಃ
ವಿವಿಧಾ ಚ ಪೃಥಕ್‌ಚೇಷ್ಟಾ ದೈವಂ ಚೈವಾತ್ರ ಪಂಚಮಂ,

ಈ ಶ್ಲೋಕದಲ್ಲಿ 'ದೈವ'ಕ್ಕೆ 'ಪಂಚಮ' ಸ್ಥಾನವನ್ನೀಯಲಾಗಿದೆ; ಮಾನವಪ್ರಯತ್ನಕ್ಕೆ ಪ್ರಾಧಾನ್ಯವಿದೆ ಎಂಬುದು ಆ ವ್ಯಾಖ್ಯಾನದ ಸಾರವಾಗಿತ್ತು. ಟಿಳಕರ 'ಗೀತಾರಹಸ್ಯ'ವು ಪ್ರಕಟವಾದ ಬಳಿಕ ಅದು ಬೀರಿದ ಪ್ರಭಾವವನ್ನು ಎದುರಿಸಲು ಮಹಾರಾಷ್ಟ್ರದೊಳಗಿನ ಶಾಂಕರಪಂಥೀಯರು ಉಗ್ರವಾಗಿ ಪ್ರತಿಭಟಿಸಿದರು. ಟಿಳಕರ ಗ್ರಂಥ ಓದಿ, ಅದರ ವಿಚಾರಪದ್ಧತಿಗೆ ಮಾರುಹೋದ ಅಂದಿನ ವೇದಪಾರಂಗತ ವಾಯಿಯ ಲೇಲೇ ಶಾಸ್ತ್ರಿಗಳು; ಆ ಬಳಿಕ ತಮ್ಮ ಅಭಿಪ್ರಾಯವನ್ನು ಬದಲಿಸಿದರು. ಈ ಕ್ರಿಯೆ-ಪ್ರತಿಕ್ರಿಯೆಗಳನ್ನು ನೋಡುತ್ತಿದ್ದ ನನಗೆ ಗೀತೆಯಲ್ಲಿ ವಿವಿಧ ಮತ ಆಚಾರ್ಯರಿಗೂ 'ಅವರವರ ಅರ್ಥವೇ ಇರುತ್ತದೆ' ಎಂಬ ಅಭಿನಿವೇಶದ ಅರ್ಥವು ಮಾತ್ರ ಆಗದೆ ಹೋಯಿತು. ಟಿಳಕಯುಗದ ಕೊನೆ ಮತ್ತು ಗಾಂಧೀಜಿ ಯುಗದ ಪ್ರಾರಂಭ. ಇವೆರಡೂ ಏಕಕಾಲಕ್ಕೆ ಸಂಭವಿಸಿದ್ದು, ಆಧುನಿಕ ಭಾರತೀಯ ಇತಿಹಾಸದೊಳಗಿನ ಒಂದು ಅಪೂರ್ವವೂ, ಅವಿಸ್ಮರಣೀಯವೂ ಆದ, ಘಟನೆಯಾಗಿದೆ.

ಈ ಭಾರತೀಯ ಪರಂಪರೆಯೊಳಗಿನ ಸೋಜಿಗವೆಂದರೆ ಟಿಳಕರಂತೆ ಗಾಂಧೀಜಿಯವರೂ ಗೀತಾಭಕ್ತರೇ ಆಗಿದ್ದರು! ಆದರೆ, ಇವರಿಬ್ಬರೂ ಕಂಡ ಅರ್ಥವೇ ಬೇರೆ ಬೇರೆ! ಗೀತೆಯಲ್ಲಿ 'ಮಾನವನು ಹೇಗೆ ಬಾಳಬೇಕು'

ಎಂಬುದನ್ನು ಹೇಳಲಾಗಿದೆ, ಎಂದು ಇಬ್ಬರೂ ಹೇಳುತ್ತಿದ್ದರು. ಆದರೆ, ಬಾಳುವ ಈ ರೀತಿಯ ಬಗೆಗೆ, ಟಿಳಕ ಹಾಗೂ ಗಾಂಧೀಜಿಯವರಲ್ಲಿ ಸಮಾನ ದೃಷ್ಟಿಕೋನವಿರಲಿಲ್ಲ! ಗಣಿತಶಾಸ್ತ್ರದಲ್ಲಿ ಅತ್ಯಂತ ಆಸಕ್ತಿಯ ಟಿಳಕರು, ಪೈಥ್ಯಾಗೋರಾಸನ ಪ್ರಭಾವಕ್ಕೆ ಒಳಗಾಗಿದ್ದರೆಂದು ನನಗೆ ಕಾಣುತ್ತದೆ. ಗೀತೆಯ 'ಭಗ'-ವಂತನ ಶ್ರದ್ಧೆಯು ಪೈಥಾಗೋರಾಸ ಪಡೆ ಮೆಚ್ಚಿನದಾಗಿದೆ. ಭಗವಂತನ ಬಗೆಗಿನ ಗಾಂಧೀಜಿ ಭಕ್ತಿಯ ತುಲನೆಯಲ್ಲಿ ಇದು ಸ್ಪಷ್ಟವಾಗುತ್ತದೆ. ಹೈಕೋರ್ಟಿನಲ್ಲಿ ನ್ಯಾಯಾಧೀಶನು ಶಿಕ್ಷೆ ವಿಧಿಸಿದ್ದರೂ, ಅದಿರದ ಎದೆಯ ಟಿಳಕರು, ನ್ಯಾಯಪೀಠವನ್ನು ಉದ್ದೇಶಿಸಿ ಅವರ ಮುಖದಿಂದ ಹೊರಟ ಆ 'ಮಾತಿನ ಮಿಂಚು' ಟಿಳಕರ ಅಂತಃ ಸತ್ತ್ವ'ದ ದ್ಯೋತಕವಾಗಿದೆ. "There are "higher Powers' That rule the destiny of man" ಈ ಮಾತಿನಲ್ಲಿ ಬ್ರಿಟಿಶ್ ರಾಜ್ಯಶಕ್ತಿಗೇ ಆಹ್ವಾನವಿತ್ತು. ನನ್ನನ್ನು ಶಿಕ್ಷೆಗೆ ಗುರಿಪಡಿಸಿದರೂ, ಭಾರತೀಯರು ಪ್ರಾರಂಭಿಸಿರುವ ಸ್ವಾತಂತ್ರ್ಯದ ಬಗೆಗಿನ ಈ ಆಂದೋಲನವು ನಿಲ್ಲಲು ಶಕ್ಯವಿಲ್ಲ. ಈ ಪ್ರಪಂಚದ ನಿಯಂತ್ರಣವು ವಿಶ್ವನಿಯಮದ ಕೈಯಲ್ಲಿ ಇದೆ.

ಗಾಂಧಿಜೀಯವರಂತೆ, ಟಿಳಕರು ಗೀತೆಯ ಭಗವಂತನನ್ನು ಸ್ಮರಿಸಿಕೊಳ್ಳಲಿಲ್ಲ! ಟಿಳಕರ ನಿಷ್ಠೆ 'ವಿಶ್ವ ನಿಯಮದಲ್ಲಿ' (Higher powers). ಗಾಂಧೀಜಿ ಭಕ್ತಿಯ ಸ್ವರೂಪವೇ ಬೇರೆ; ಗೀತಾಪಾರಾಯಣ, ನಾಮಸ್ಮರಣದಲ್ಲಿ, ಪವಾಡ ಚಮತ್ಕಾರಗಳ ಈ ಶ್ರದ್ಧೆಯ ಸ್ವರೂಪವೇ ಬೇರೆ. ಗೀತೆಯಲ್ಲಿ ಗಾಂಧೀಜಿಯವರಿಗೆ ಕಂಡದ್ದು 'ಬ್ರಹ್ಮ-ಚರ್ಯ'ದ ಆದೇಶ! ಆತ್ಯಂತಿಕ ಅಹಿಂಸೆಯ ಆಧಾರದ ಸತ್‌ತ್ಯ "ಸತ್‌ತ್ಯ- ಜೀವಿತ; ಸತ್ಯ-ಜೀವನ" 'ಆದರ್ಶ : ರಾಮ ರಾಜ್ಯ! ಈ ರಾಮನು ಯಾರು? ರಾಮಾಯಣದ ರಾಮನೆ? ಎಂಬ ವಿವಾದ ಎದ್ದಿತು. ಗಾಂಧೀಜಿ ಅವರಿಗೆ, ತಮ್ಮ ಕನಸಿನ ರಾಮನು ಬೇರೆಯಿದ್ದಾನೆ ಎಂದು ಹೇಳಬೇಕಾಯ್ತು!

ಈ ಸುಮಾರಿಗೇ ನನ್ನಲ್ಲಿ ಶ್ರೀ ಅರವಿಂದರ ಬಗೆಗೆ ಕುತೂಲಹವು ತೀವ್ರವಾಯ್ತು. 'ಸಾಕ್ಷಾತ್ಕಾರ' 'ಸಿದ್ಧಿ' ಆಗದೆ ಬಾಳಿನ ಅಥವಾ ನಮ್ಮ ನಾಡಿನ ಸಮಸ್ಯೆ ಬಗೆ-ಹರಿಯಲು ಶಕ್ಯವಿಲ್ಲವೆಂದು ಅವರು ನಾಡಿಗೆ ಕೊಟ್ಟ ಸಂದೇಶವು ಆಕರ್ಷಕವೆನಿಸಿತು. ಇವರ ಚರಿತ್ರೆ ಬರೆದು ಪ್ರಕಟಿಸಿದ್ದಾಯ್ತು (೧೯೨೧). ಶ್ರೀ ಅರವಿಂದರ ಗ್ರಂಥಗಳ ಪರಿಚಯಕ್ಕೆ ಶ್ರೀ ಆಲೂರ ವೆಂಕಟರ್‍ರಾಯರಲ್ಲಿ ಇದ್ದ 'ಆರ್ಯ'ದ ಸಂಪುಟಗಳ ನೆರವು ದೊರೆತಿತು. ಆದರೆ, ಒಂದು ಕಾರಣದಿಂದಾಗಿ ಅವರ ವಿಚಾರ-ಸಾಗರವನ್ನು ಸಂಪೂರ್ಣ ಈಸುವ ಸಾಹಸದ ಕಾರಣವೇ ಉಳಿಯಲಿಲ್ಲ.ಶ್ರೀ ಅರವಿಂದರು ಬರೆದಿರುವ ಗೀತೆಯ ಬಗೆಗಿನ 'ಮಹಾಪ್ರಬಂಧ'ವು ಆರ್ಯದಲ್ಲಿ ಕ್ರಮಶಃ ಪ್ರಕಟವಾಗುತ್ತಿತ್ತು. ಈ ಪ್ರಬಂಧದ ಪ್ರಾರಂಭದಲ್ಲಿಯೇ ಶ್ರೀ ಅರವಿಂದರು ಗೀತೆಯ ಅರ್ಥಗ್ರಹಣಪದ್ಧತಿಯ ಬಗೆಗೆ ಇರುವ ತಮ್ಮ ವಿಚಾರಗಳನ್ನು ಸ್ವಲ್ಪದರಲ್ಲಿ ವಿವರಿಸಿದ್ದಾರೆ. ಈ ವಿಚಾರಗಳನ್ನು ಓದಿ ವಿಷಣ್ಣತೆ ಹೆಚ್ಚಿತು. ಇತಿಹಾಸ, ಸಮಾಜಶಾಸ್ತ್ರ, ಭಾಷಾಶಾಸ್ತ್ರಾದಿ ಆಧುನಿಕ ಯಾವ ತಂತ್ರವೂ ತನಗೆ ಮಾನ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ! ಅಂತರ್ ದೃಷ್ಟಿ-ದಿವ್ಯಚಕ್ಷು ಸಿದ್ಧಿ ಒಂದೇದಾರಿ ಗೀತೆಯ ಅರ್ಥಗ್ರಹಣಕ್ಕೆ, ಎಂಬುದು ಅವರ ಮತ.

ಆದರೆ, ಈ ಬಗಯ 'ಅಂತರ್ ದೃಷ್ಟಿ'ಯು ಶಂಕರ, ಮಧ್ವಾದಿಗಳಿಗೂ ಇತ್ತಷ್ಟೆ? ಆದರೂ ಪ್ರಾಚೀನ ಆಚಾರ್ಯ-ಪುರುಷರಲ್ಲಿ ಒಬ್ಬರ ಮತ, ಇನ್ನೊಬ್ಬರಿಗೆ ಮಾನ್ಯವಿರಲಿಲ್ಲ! "ಋಷಿರ್ವಿಭಿನ್ನಾ ಸ್ಮೃತಿರ್ ವಿಭಿನ್ನಾ ನೈಕೋ ಋಷಿಃ ಯಸ್ಯ ವಚಃ ಪ್ರಮಾಣಂ" ಈ ಅವಸ್ಥೆ ಎಂದಿನಿಂದಲೇ ಉಂಟಲ್ಲ? ಶ್ರೀ ಅರವಿಂದರು ಪರದೇಶದಲ್ಲೂ ಇದ್ದು ಶಿಕ್ಷಣ ಪಡೆದವರು; ಅಲ್ಲದೆ, ಸಾಕ್ಷಾತ್ಕಾರಿಗಳೆಂಬ ಖ್ಯಾತಿ. ಇವರಿಂದ ಮಾರ್ಗದರ್ಶನ ಲಭಿಸೀತು ಎಂಬ ನನ್ನ ಗ್ರಹಿಕೆಯು ತಪ್ಪು ಇದ್ದದ್ದು ಬೇಗನೇ ಗೊತ್ತಾಯ್ತು. ೧೯೩೦ರಿಂದ ಈ ಗ್ರಹಿಕೆ ದಿನ ದಿನಕ್ಕೂ ಹೆಚ್ಚು ಹೆಚ್ಚಾಗಿ ದೃಢಪಟ್ಟಿತು! ಶ್ರೀ ಅರವಿಂದರು, ತತ್ವಜ್ಞಾನದ ಭೂಮಿಕೆಯಿಂದ 'ಮಾನವರ ಐಕ್ಯದ ಆದರ್ಶ'ವನ್ನು ಕುರಿತು (Ideal of Human unity) ಗ್ರಂಥ ಬರೆದಿದ್ದಾರೆ. ಅಮೂರ್ತ ತಾತ್ತ್ವಿಕ ಭೂಮಿಕೆಯಿಂದ ಮೂರ್ತ ಐತಿಹಾಸಿಕ ಸ್ವರೂಪದ ಘಟನೆಗಳನ್ನು ಅರ್ಥಯಿಸುವುದು ಅಷ್ಟು ಪ್ರಶಸ್ತವೆಂದು ನನಗೆ ಎನಿಸಲಿಲ್ಲ. ಮೂರ್ತ ವಾಸ್ತವ ಸ್ವರೂಪದ ಐತಿಹಾಸಿಕ ಘಟನೆಗಳ ಮೂಲಕ, ಈ ಬಗೆಯ ಐತಿಹಾಸಿಕ ಕೃತಿಗಳಿಗೆ ಪ್ರೇರಕ

ತಾತ್ತ್ವಿಕ ಭೂಮಿಕೆಯು ಯಾವ ಬಗೆಯದು ಇರಬಲ್ಲದು, ಎಂಬುದನ್ನು ಗ್ರಹಿಸಿಕೊಳ್ಳುವಲ್ಲಿ ತರ್ಕ, ಅಂದಾಜುಗಳ ಆವಶ್ಯಕತೆಯು ಇಲ್ಲ. ಏಕೆಂದರೆ ಅಮೂರ್ತ ತಾತ್ತ್ವಿಕ ಸೂತ್ರವು ಅಯುಕ್ತವೊ ಎಂಬುದನ್ನು ಅದಕ್ಕೆ ಆಧಾರಭೂತ ಮೂರ್ತ ಐತಿಹಾಸಿಕ ಘಟನೆಗಳ ಮೂಲಕ ಒರೆಗೆ ಹಚ್ಚಿ ನೋಡಲು ಶಕ್ಯವಾಗುತ್ತದೆ.

ಈ ಕಾರಣದಿಂದಾಗಿ ಮೂರ್ತ ಸಂಸ್ಕೃತಿ ಹಾಗೂ ಇದರ ಇತಿಹಾಸದ ಸಂದರ್ಭದಿಂದ ಈ ಬಗೆಯ ಐತಿಹಾಸಿಕ ಕೃತಿಗೆ-ಆಕೃತಿಗೆ-ಕಾರಣವಾದ ತಾತ್ತ್ವಿಕ ಪ್ರೇರಣೆ ಸ್ವರೂಪವು ಎಂತಹುದು ಎಂಬುದನ್ನು ಗ್ರಹಿಸಿಕೊಳ್ಳುವುದೇ ಹೆಚ್ಚು ಸುರಕ್ಷಿತ, ಎಂದು ನನಗೆ ಎನಿಸತೊಡಗಿತು (೧೯೩೦-೩೩). ಅಮೂರ್ತ ತಾತ್ತ್ವಿಕ ವಿಚಾರವನ್ನು 'ಕಲ್ಪಿಸಿ'ಕೊಂಡು ಬಳಿಕ ನೂತನ ಸಾಂಸ್ಕೃತಿಕ-ಐತಿಹಾಸಿಕ-ಆಗುಹೋಗುಗಳನ್ನು ಅರ್ಥಯಿಸುವಲ್ಲಿ, 'ಕಲ್ಪನೆ'ಗೆ ಇಂಬು ದೊರೆಯುತ್ತದೆ. ಹೆಗೆಲ್ಲನು ಜಾರಿದ್ದು ಇಲ್ಲಿಯೇ. ಆದಕಾರಣ ಸಾಂಸ್ಕೃತಿಕ, ಐತಿಹಾಸಿಕ ಮೂರ್ತ-ಘಟನೆಗಳತ್ತಣಿಂದ, ಈ ಘಟನೆಗಳ ಹಿಂದಿನ ಪ್ರೇರಣೆ-ಪ್ರಚೋದನೆಯ ಸ್ವರೂಪವು ಯಾವುದು ಎಂಬುದನ್ನು ಗ್ರಹಿಸಿಕೊಳ್ಳುವುದೇ ಹೆಚ್ಚು ಲೇಸು, ಎಂದು ನನಗೆ, ಹೆಗೆಲ್ ಅವನಿಂದಾಗಿ, ಇತ್ತೀಚೆಗೆ ಇನ್ನೂ ಹೆಚ್ಚು ಖಾತ್ರಿ ಆಯಿತು.

ಸಾಂಸ್ಕೃತಿಕ ಸತ್ಯಾನ್ವೇಷಣೆಯ ದಿಕ್ಕಿನಲ್ಲಿ

ಕೆಲಕಾಲ ಪತ್ರಿಕೆಗಳಲ್ಲಿ ಲೇಖಕನಾಗಿ, ಬಳಿಕ ಶಿಕ್ಷಕನಾಗಿದ್ದ ನನಗೆ, ಜೀವನದಲ್ಲಿ ಅರ್ಥ, ಮೂಲ್ಯ 'ಉಂಟು', 'ಇಲ್ಲ' ಎಂಬ ಉಭಯ ಮನೋಭಾವದ ಸ್ನೇಹಿತರೂ ಇದ್ದರು. ಆದರೆ, ಇದರ ಬಗೆಗೆ ಸ್ಪಷ್ಟತೆ ಇದ್ದವರು ವಿರಳ. 'ದೇವರು' ಎಂಬ ಮಾತಿನಲ್ಲಿ ಆದರ, ವಿಶ್ವಾಸ ಇರೋದು 'ಫ್ಯಾಶನ್ ಇಲ್ಲವೆ? 'ಅರ್ಥ' ಮತ್ತು 'ಸತ್ಯ' ಇವೆರಡರಲ್ಲಿ ಸಂಬಂಧವು ಉಂಟೆ? 'ಸತ್ಯ' ಮತ್ತು 'ಸತ್-ತ್ಯ' ಇವೆರಡರ ಅಸ್ತಿತ್ವವು ಸ್ಪಷ್ಟತೆಯನ್ನು ಪಡೆಯುವ ವರೆಗೂ ಈ ಸಮಸ್ಯೆ ನೆಲೆಗೆ ನಿಲುಕಲೇ ಇಲ್ಲ! ಇಂಗ್ಲಿಷಿನ Correspondence ವಿಷಯ ಮತ್ತು ಇಂದ್ರಿಯ ಈ ಎರಡರ ಸಂಪರ್ಕದಲ್ಲಿ ಅರಿಕೆಗೆ ಬರುವ ಸಂಗತಿ, ಸತ್+ತ್ಯ=ಸತ್ಯ ಮತ್ತು ಸಾರ್ವಕಾಲಿಕ ವಿಶ್ವನಿಯಮ ಸ್ವರೂಪೀ ತತ್‌ಸ್ವರೂಪ ಸತ್ಯ ಈ ಭೇದವು ಭಾರತೀಯ ಪುರಾತನ ಪರಂಪರೆಯಲ್ಲಿ ಇತ್ತು. ಎಂಬುದನ್ನು ಕಂಡಾಗ ಸಮಾಧಾನವಾಯ್ತು (೧೯೭೪).

ಈ ದಿಕ್ಕಿನಲ್ಲಿ ಪ್ರಾರಂಭವಾದ ಯಾತ್ರೆಯು, ಕರ್ಣಾಟ ಸಂಸ್ಕೃತಿಯ ಸಂದರ್ಭದ ಒಂದು ಮೌಲಿಕ ಸಮಸ್ಯಾ-ಪರಿಹಾರದ ಪ್ರಯತ್ನದ ನೆಪದಿಂದ: 'ಗೋದಾವರಿವರಂ ಇರ್ದ್ದ ಕಂನಡ ಜನಪದ ವಿಷಯ'. ಇದರ ನೆನಹು, 'ಗತವೈಭವ'ದ ಸ್ಫೂರ್ತಿಗೆ ಕಾರಣವಾಗುತ್ತಿದ್ದ ಪ್ರಸಂಗಗಳು, ನನ್ನಲ್ಲಿ ವಿಷಾದದ ವ್ಯಥೆಗೆ ಕಾರಣವಾಗುತ್ತಿದ್ದುವು. 'ಹಿರಿಯರ ಹೆಗ್ಗಳಿಕೆಯನ್ನು ಹೇಳಿ ಸಮಾಧಾನವನ್ನು ತಂದುಕೊಳ್ಳುವವನು ಒಬ್ಬ ಮೂರ್ಖ' ಎಂದು ಸಂತ ರಾಮದಾಸನ ಉಕ್ತಿಯು ಉಂಟು! ತಮ್ಮ ಹೀನ, ದೀನಸ್ಥಿತಿಯನ್ನು ಹೇಡಿತನವನ್ನು ಮುಚ್ಚಿಕೊಳ್ಳಲು, ಗತೇತಿಹಾಸವನ್ನು ಸಾಧನದಂತೆ ಉಪಯೋಗಿಸಿಕೊಳ್ಳುವವರು, ಮರಳಿ ಏಳ್ಗೆಯ ದಿಕ್ಕಿನಲ್ಲಿ ಅಡಿಯಿಡುವ ಆಶೆಯೇ ಬೇಡ! ಇಂದು ಕೃಷ್ಣಾ-ಭೀಮಾ ತೀರದ ವರೆಗೂ ಮೇರೆ; ಮರ್ಯಾದೆ ಉಳಿಯುವುದು ಸಂಶಯಾಸ್ಪದವಿರುವಾಗ, ನಮ್ಮ ಜನಪದವು ಗೋದಾವರಿ ವರೆಗೂ ಇತ್ತು', ಎಂದರೆ ಇದು, ನೆರೆಹೊರೆಯವರಿಂದ ನಗಿಸಿಕೊಳ್ಳುವ ವಿಷಯವು ಆಗಲಾರದೊ? ನಿಜವಾಗಿಯೂ ಇದು ವಸ್ತು-ಸ್ಥಿತಿ ಇತ್ತು, ಇದು ಐತಿಹಾಸಿಕ ಸತ್ಯ, ಎಂಬುದನ್ನು ಸಪ್ರಮಾಣವಾಗಿ ಖಾತ್ರಿ ಮಾಡಿಕೊಳ್ಳುವ ದಿಕ್ಕಿನಲ್ಲಿ ಪ್ರಯತ್ನ ಅವಶ್ಯ. ನನಗೆ ಹಿರಿಯ ಸನ್ಮಾನ್ಯ ಮಿತ್ರರಾದ ಶ್ರೀ ನಾರಾಯಣ ಶ್ರೀನಿವಾಸ ರಾಜಪುರೋಹಿತರು ಮಾತ್ರ ಸತತವಾಗಿ ಈ ಪ್ರಯತ್ನ ನಡೆಸಿದ್ದರು. ಆದರೆ, ಆ ಭಾಗದಲ್ಲಿ ಇದ್ದದ್ದು 'ಕಂನಡರ ಪ್ರಭಾವ' ಎಂಬ ಭೂಮಿಕೆಯು ನನಗೆ ಸದೋಷವಾಗಿರುವುದಾಗಿ ಕಂಡಿತು. 'ಜನಪದ' ಈ ಪಾರಿಭಾಷಿಕ ಪದದೊಡನೆ ಇರುವ ಉಲ್ಲೇಖವು ಅಲ್ಲಿಯ ಮೂಲಿಗರ ಸೂಚಕವೇ ಇರಬಲ್ಲುದು. ಈ ನಿಷ್ಕರ್ಷವನ್ನು ಒತ್ತಾಯ ಪಡಿಸುವ ಬೇರೆ ಪ್ರಮಾಣಗಳೂ ಉಂಟು: ಊರ ಹೆಸರುಗಳು ಅಲ್ಲಿಯ ಮೂಲ ವಸತಿಯವರ ಭಾಷಾಸೂಚಕವಿರಬಲ್ಲವು ;

ಪಟ್ಟಿ, ಪಾಡಿ, ಪಾಟ<ಹಾಟ, ಅಲ್ಲಿ, ಎಲ್ಲಮ್ಮನ ಸಂಪ್ರದಾಯವು ವರ್ಡ್ಹಾಟದಲ್ಲಿ! ಮೈಲಾರ<ಮೈರಾಳ, ಮಲ್ಲಾರಿ, ಮಾಳವ್ವೆ<ಮ್ಹಾಳಸಾ ಇತ್ಯಾದಿ ದೇವರು ಸ್ಥಾನಿಕ ಶಕ್ತಿಗಳು, ಇತ್ಯಾದಿ ಕಾರಣಗಳಿಂದಾಗಿ ಮರ್ಹಾಟ=ವರ್ಹಾಟ ಕಂನಡ ಭಾಷಿಕರ ನಾಡೇ ಇದ್ದಿತೆಂಬಲ್ಲಿ ಸಂದೇಹವಿಲ್ಲ.

ಮಹಾರಾಷ್ಟ್ರದ ಚಿಂತಾಮಣರಾವ ವೈದ್ಯಪ್ರಭೃತಿಗಳು 'ಕನ್ನಡದ ಪ್ರಭಾವ' ಒಪ್ಪುತ್ತಾರೆ. ಮರಾಠಿಯಲ್ಲಿ ತೂಪ (ತುಪ್ಪ) ಇದೆ. ಕಂನಡ ಗೌಳಿಗಳು ಆ ಭಾಗದಲ್ಲಿ ಇದ್ದರು, ಎಂಬುದಕ್ಕೆ ಇದು ನಿದರ್ಶನ. ಆದರೆ, 'ಕಂನಡದ ಪ್ರಭಾವ' ಎಂದಲ್ಲಿ, ನರ್ಮದಾ ಗೋದಾತೀರದ ಪಟ್ಟಿ, ಪಾಡಿ, ಹಟ್ಟಿ, ಊರು.... ಇಂತಹ ಸ್ಥಲ ನಾಮಗಳ ಅನ್ವಯಾರ್ಥವಾಗುವುದಿಲ್ಲ! 'ಕಣ್ಮರೆಯಾದ ಕಂನಡ'ವು ಪ್ರಕಟವಾಯ್ತು (೧೯೩೩). ಈ ಸಮಸ್ಯೆಯೊಳಗಿಂದಲೇ ಮರ ಹಟ್ಟದ ಪ್ರಶ್ನೆ ತಲೆಯೆತ್ತಿತು. 'ಮಹಾರಾಷ್ಟ್ರದ ಮೂಲ' ಅಥವಾ 'ಮೂಲ ಮಹಾರಾಷ್ಟ್ರ' ಈ ಪ್ರಬಂಧವು ಮಹಾರಾಷ್ಟ್ರದ ಅಭಿಮಾನಿಗಳನ್ನು ಕೆರಳಿಸಿತು. (೧೯೩೪). ಆ ಬಳಿಕ, ಆಚಾರ್ಯ ಸ. ಜ. ಭಾಗವತರ ಆಹ್ವಾನವನ್ನು ಸ್ವೀಕರಿಸಿ, 'ಮರ್ಹಾಟ ಸಂಸ್ಕೃತಿ : ಕಾಹಿ ಸಮಸ್ಯಾ' ಎಂಬ ಪ್ರಬಂಧ ಬರೆದದ್ದಾಯ್ತು. ಪುಣೆ-ಮುಂಬೈಯ ಅಂತರ ಭಾರತೀ ಸಂಸ್ಥೆಯಿಂದ ಇದು ಪ್ರಕಟವಾಯ್ತು (೧೯೫೭). ನಾಗಪೂರ ವಿಶ್ವವಿದ್ಯಾಲಯದ ಡಾ.ಅ.ನಾ. ದೇಶಪಾಂಡೆ ಅವರು "ಮರಾಠೀ ವಾಙ್ಮಯದ ಇತಿಹಾಸ"ವನ್ನು ಕುರಿತು ಬರೆದಿರುವ ಗ್ರಂಥದಲ್ಲಿ, 'ಕಣ್ಮರೆಯಾದ ಕಂನಡ'ದ ಭೂಮಿಕೆಗೆ ಒಪ್ಪಿಗೆ ದೊರೆತಿದೆ. ಅಮೇರಿಕೆಯಲ್ಲಿ ಇರುವ ತರುಣ ಮರಾಠಿ ಅಭಿಮಾನಿ ಡಾ. ಮಾಧವ ದೇಶಪಾಂಡೆ ಬರೆದಿರುವ ಈ ಗ್ರಂಥದಲ್ಲಿ

> "Maharashtra was a Kannada speaking region in older times, and gradually Marathi' developed.. split between Marathi and Kannada became more significant with the two seats of yadava power in twelth century.[೨] .

ಮರಾಠಿಯೊಳಗಿನ 'ಗಂಗೇತ ಘೋಡೇ ನ್ಹಾಲೇ' ಈ ಪಡೆಮಾತು ಪಂಪನ, 'ಗಂಗಾವಾರ್ಧಿಯೊಳ್ ಆತ್ಮತುರಗವಂ ಮೀಯಿಸಿದ' ಕಂನಡರ ಶೌರ್ಯದ ವರ್ಣನೆಯ ಮಾರ್ದನಿಯಂತೆ ಇದೆ. 'ಕಣ್ಮರೆಯಾದ ಕಂನಡ'ದ ಭೂಮಿಕೆಯು ಮರ್ಹಾಟೀ ಸಂಶೋಧಕರಿಗೆ, ತಮ್ಮ ಸಂಸ್ಕೃತಿಯ ಆಳವಾದ ವ್ಯಾಸಂಗಕ್ಕೆ ಪ್ರಯೋಜನಕಾರಿಯಾಗದೆ ಇರಲಾರದೆಂದು ಪ್ರೊ. ದಿವಂಗತ ಕೆ. ಬೇಡೇಕರರು ತಮ್ಮ ಪ್ರಾಂಜಲ ಮತವನ್ನು ಪತ್ರದ ಮೂಲಕ ತಿಳಿಸಿದರು. 'ಗೋದಾವರಿವರಂ' ಅಷ್ಟೇ ಏಕೆ; ನರ್ಮದೆಯ ವರೆಗೂ ಕಂನಡರು ಇದ್ದರು. ಇದು ರಾಜಕೀಯ ಪ್ರಭಾವದ ಪರಿಣಾಮ ಎನ್ನಲು ಇಂಬಿಲ್ಲ. ಕವಿರಾಜ ಮಾರ್ಗದೊಳಗಿನ 'ಕಂನಡನಾಡವರ' ಬಗೆಗಿನ ಉಲ್ಲೇಖವು, ಕರ್ಣಾಟದ ಅವಸ್ಥಾಂತರವನ್ನು ಗ್ರಹಿಸಿಕೊಳ್ಳಲು ಉಪಕಾರಕವಿದೆ. 'ಕುರಿತೋದದೆಯುಂ ಪರಿಣತಮತಿಗಳ್' ಆಗಿದ್ದ ಈ ನಾಡವರು, ಕಂನಡ ಸಮಾಜ ಸಮಷ್ಟಿಯ ನೇತಾರರಾಗಿದ್ದ ಯುಗವನ್ನು ನೆನೆಯುವುದು ಅವಶ್ಯವಿದೆ. ಊರ 'ದೈವದವರು'=ಹತ್ತು ಸಮಸ್ತರು! ಮಹಾಜನ ಸಭೆ, ಬಣಂಜುಗಳ ಸಂಘ ಇಂತಹ ಸಾಮಾಜಿಕರ ನೇತೃತ್ವವು ಪ್ರತಿಷ್ಠೆಗೆ ಎರವಾಗಿ, ಸಿದ್ಧರು, ಯತಿ, ಮುನಿಗಳು ಕಾಳಾಮುಖರ ಆಚಾರ್ಯರುಗಳು. ಈ ಬಗೆಯ ವಿರಕ್ತ ಸಂನ್ಯಾಸ ಪಂಥೀಯರ ಕಡೆಗೆ ಸಮಾಜದ ನೇತೃತ್ವವು ಬರುವುದರೊಡನೆ ಈ ಸ್ಥಿತ್ಯಂತರವು ಕಾಣಿಸಿಕೊಂಡಿರಲಿಕ್ಕೆ ಬೇಕು. ಟ್ರಾಂಡ್ ರಸೆಲ್ಲರ ಸೂತ್ರವು ಈ ದೃಷ್ಟಿಯಿಂದ ಅರ್ಥಪೂರ್ಣವಿದೆ. ಒಂದು ಯುಗವನ್ನು ಅಥವಾ ದೇಶವನ್ನು ಅದರ ಐತಿಹಾಸಿಕ ಸ್ವರೂಪವನ್ನು ಗ್ರಹಿಸಿಕೊಳ್ಳಲು ಆ ಜನದ ತತ್ತ್ವ-ಜ್ಞಾನ (ಧರ್ಮ), ಇದು ಉಪಕಾರಕವಾಗಬಲ್ಲುದು, ಎಂಬ ಸೂತ್ರದ ಬೆಳಕಿನಲ್ಲಿ 'ಕಣ್-ಮರೆಯಾದ' ಕಂನಡದ ಕ್ಷೀಣತೆಯ ಅನ್ವಯಾರ್ಥವು ಆಗುತ್ತಿದೆ. 'ಶೂನ್ಯಸಂಪಾದನೆ'ಯು ಬಾಳಿನ ಗುರಿ ಆಗುವ ಹಂತವಿದು.

ಕರ್ಣಾಟ ಸಂಸ್ಕೃತಿಯು, ಭಾರತೀಯ ಸಂಸ್ಕೃತಿಯ ಅಂಗವಾಗಿದೆ. ಆದಕಾರಣ, 'ಕಣ್ಮರೆಯಾದ ಕಂನಡದ' ಹಿನ್ನೆಲೆಯನ್ನು ಸ್ಪಷ್ಟಪಡಿಸುವ ಸೂತ್ರವು, ಇಡೀ ಭಾರತೀಯರ ಸ್ಥಿತ್ಯಂತರಕ್ಕೂ ಸರಿ ಹೋಗುತ್ತಿರುವುದನ್ನು ಮನಗಾಣಬಹುದಾಗಿದೆ. 'ಬುದ್ಧಿಜೀವಿಗಳು' ಬೌದ್ಧಿಕ ದೃಷ್ಟಿಕೋನದ ಬುಧರು-ಪ್ರ-ಬುದ್ಧರು ಪ್ರಭಾವಶಾಲಿಗಳಾಗುವ ಮುನ್ನ 'ಕುರಿತೋದದೆಯುಂ ಪರಿಣತಮತಿಗಳ ಪ್ರಜ್ಞಾ=ವಿವೇಕಿಗಳು ಸಮಾಜದ ನೇತಾರರಾಗಿದ್ದ ಕಾಲವು ಗತಿಸಿ, ಬುಧರು, ಪವಾಡ ಚಮತ್ಕಾರಿ ಯತಿಮುನಿವರ್ಗದವರ ಕಡೆಗೆ ಸಮಾಜದ ನೇತೃತ್ವವು ಬರುತ್ತದೆ. ಈ ಸ್ಥಿತ್ಯಂತರದ ಸೂಚನೆ ಇಂದಿನ ವೇದದಲ್ಲಿಯೇ ಉಂಟು. 'ಭರತ'ವಂಶದ ರಾಜರು, 'ಸುದಾಸ, ದಿವೋದಾಸರು. ಧೀರೂಪೀ ಪ್ರಜ್ಞಾಪ್ರಕಾಶದ ಉಪಾಸಕ ವಿಶ್ವಾಮಿತ್ರನನ್ನು 'ಪುರೋಹಿತ' ಪದದಿಂದ ತಳ್ಳಿ, ಈ ಸ್ಥಾನವನ್ನು, 'ಅಥರ್ವನಿಧಿ': ಪವಾಡ ಸಿದ್ಧಿಗಳ ದಕ್ಷಿಣಕಪರ್ದ ವಸಿಷ್ಠನಿಗೆ ಕೊಟ್ಟರಂತೆ! ಈ ದಿವ್ಯಕಥೆ (myth) ಭಾರತದ ಆಗಾಮಿ ಇತಿಹಾಸದ ದಿಕ್‌ಸೂಚಕವಾಗಿದೆ.

ಜ್ಞಾತ ಇತಿಹಾಸಕಾಲದಲ್ಲಿ, 'ರಾಜ-ಗುರು' ಪೀಠಕ್ಕಾಗಿ, ಜೈನ ಹಾಗೂ ಬೌದ್ಧ ಸಂಪ್ರದಾಯದಲ್ಲಿ ಸ್ಪರ್ಧೆಯಿತ್ತೆಂಬುದನ್ನು ನಿದರ್ಶನಕ್ಕೆ ತಂದುಕೊಡುವ ಪ್ರಮಾಣಗಳು ಬೆಳಕಿಗೆ ಬಂದಿವೆ. 'ಆತ್ಯಂತಿಕ ಅಹಿಂಸೆ' ಉಗ್ರವೈರಾಗ್ಯ ವೃತ್ತಿ, ಮತ್ತೆ ಈ ಸಂಪ್ರದಾಯಗಳಲ್ಲಿ 'ರಾಜಗುರು' ಪೀಠದ ಬಗೆಗಿನ ತೀವ್ರ ಅಕಾಂಕ್ಷೆಯಿಂದ ಸ್ಪರ್ಧೆ! 'ಕರ್ಣಾಟ ಸಂಸ್ಕೃತಿಯ ಪೂರ್ವ ಪೀಠಿಕೆ' ಭಾಗ ೧. ಇದರಲ್ಲಿ ಈ ಮತಗಳ ಅನೈತಿಕ ಹಾಗೂ ಸ್ವಾರ್ಥೀ ಸ್ಪರ್ಧೆಯು ಅಲ್ಪಮಟ್ಟಿಗೆ ನಮೂದು ಇದೆ. ಶಾತವಾಹನರ ಕಾಲದಲ್ಲಿ ಬೌದ್ಧರ ಕೈನಡೆಯುತ್ತಿತ್ತು. ಬಳಿಕ ಕದಂಬ, ಗಂಗರ ಕಾಲದಲ್ಲಿ ಜೈನರು ಪ್ರಭಾವಶಾಲಿಗಳಾಗುತ್ತಾರೆ. ಚಾಲುಕ್ಯ ರಾಷ್ಟ್ರಕೂಟರ ಕಾಲದಲ್ಲಿ ಇದ್ದ ಸ್ಪರ್ಧೆ ಬಿಜ್ಜಳ, ಹೊಯ್ಸಳರ ಕಾಲದಲ್ಲಿಯೂ ಇತ್ತು. ವಿಜಯನಗರದ ಇತಿಹಾಸದಲ್ಲಿ, ಬ್ರಾಹ್ಮಣರಲ್ಲಿ ಶೈವ, ಬಳಿಕ ವೀರಶೈವ, ಮಾಧ್ವ, ವೀರವೈಷ್ಣವಮಠಗಳು ರಾಜಗುರುತ್ವಕ್ಕಾಗಿ ಹಾತೊರೆಯುತ್ತಿದ್ದವು. ಈ ಸ್ಪರ್ಧೆಯಲ್ಲಿ ಬಂದ ವೈಫಲ್ಯದಿಂದಾಗಿ 'ಮುಸಲ್ಮಾನರನ್ನು ಧಾಳಿಗಾಗಿ ಆಮಂತ್ರಿಸಿದ್ದಾಯ್ತು' ಎಂಬ ಆರೋಪವೂ ಕೇಳಬರುತ್ತದೆ!

ಈ 'ವಿರಕ್ತಪೀಠ'ದ ಪೀಠಗಳು 'ರಾಜಗುರುತ್ವ'ದ ಸ್ಪರ್ಧೆಯಲ್ಲಿ ಕೀಳಟ್ಟಕ್ಕೆ ಇಳಿದುದನ್ನು ವಿವರಿಸುವುದು, ಇಲ್ಲಿ, ಪ್ರಸ್ತುತವಿಲ್ಲ. ಹಿಂದೊಮ್ಮೆ ರಾಜಪೀಠ ಹಾಗೂ ಗುರುಪೀಠ ಇವೆರಡೂ ಅಭಿನ್ನವಿದ್ದವು. ಆದರೆ, 'ಶಕ್ತಿ' ಸಂಪಾದನೆಯ ದಾರಿಯಲ್ಲಿ, ಈ ಗುರುಸಿದ್ಧನು ತತ್‌ಮಯಾನಂದದ ದಿಕ್ಕಿನಲ್ಲಿ ಸಾಗುತ್ತಾನೆ. ಲೌಕಿಕಕ್ಷೇತ್ರದ 'ಗುರು'ತ್ವ-ನೇತೃತ್ವ ಇದು ರಾಜಕಾರಣೆಯ ಪಾಲಿಗೆ ಉಳಿಯುತ್ತದೆ. ಈ ಅಂಶವು 'ಹಾಲುಮತದರ್ಶನ'ದಲ್ಲಿ ನಮೂದು ಇದೆ. ಈ ವಿರಕ್ತ, ಆತ್ಯಂತಿಕ ಅಹಿಂಸೆಯ, ಸತ್‌ತ್ಯದ ಉಪಸ್ಥಾನವು ಸಾಧ್ಯವಾಗಿರುವ ಗುರುಪೀಠಗಳು ನಿಜವಾದ 'ಸತ್ಯ' ಪ್ರಕಾಶದಿಂದ ತುಂಬ ಕೆಳಮಟ್ಟದ 'ಸತ್‌ತ್ಯ' ಜ್ಯೋತಿಯ ಲೋಕದ=ಹಲ್ಲಿಲ್ಲದ ಕಪ್ಪೆಯ=ಓಂಕಾರ ನಾದಾನುಸಂಧಾನದ ಉಪಾಸನೆಯಿಂದ ಕರ್ಣಪಿಶಾಚಾದಿ ಕೆಲವು ಕ್ಷುದ್ರಸಿದ್ಧಿಗಳ ಕಣ್ಕಟ್ಟು, ಮಾಟ ಇಂತಹ ಭಾನಾಮತಿ ಪ್ರಯೋಗಗಳ ಬಲದಿಂದ ರಾಜಗುರುತ್ವಕ್ಕೆ ತಮ್ಮ ಅರ್ಹತೆಯನ್ನು ತೋರಿಸಿಕೊಳ್ಳುತ್ತಿದ್ದವು.

ಇಂತಹ ಈ ಶಾಕ್ತಪೀಠಗಳು ತಮ್ಮ ಶಕ್ತಿ-ಪೀಠ ಸ್ಥಾಪಿಸಿ ಈ ಅಖಂಡ ಭಾರತವನ್ನೇ ತಮ್ಮ ಸಾರ್ವ 'ಭೌಮ' ಪೀಠವಾಗಬೇಕು, ಎಂದು ಹೊಂಚು ಹಾಕಿದ್ದವು. ಕಾಶ್ಮೀರದ ಶಾರದಾಪೀಠ; 'ಕನ್ಯಾಕುಮಾರೀ' ದಕ್ಷಿಣದ ಪೀಠ, ಪಶ್ಚಿಮಕ್ಕೆ ಸಿಂಧೂತೀರದಲ್ಲಿ ಹಿಂಗುಲಜಾ : 'ಕೊಟ್ಟರಿ', ಪೂರ್ವಕ್ಕೆ ಕಾಮ-ರೂಪದೇಶದಲ್ಲಿ ಕಾಮಾಕ್ಷೀದೇವಿ!.... ಇಂಥ ಮಾಟ ಕಣ್ಕಟ್ಟುಗಳ ಬಲದಲ್ಲಿ ನೆರೆನಂಬಿದ್ದ ರಾಜರು, ಸೌರಾಷ್ಟ್ರದ ಸೋಮನಾಥನ ದೇಗುಲವನ್ನು ಮುಸಲ್ಮಾನರು ಸುಲಿದುಕೊಂಡು ಹೋಗಲಾರರು ಎಂದು ಬಗೆದಿದ್ದರು! ವಿಜಯನಗರದ ಕೃಷ್ಣರಾಜನ ಪೀಠವು ಭದ್ರವಾಗಲು 'ಕುಹು' ಯೋಗ ತಪ್ಪಿಸಲು ಮಂತ್ರ ಮಾಟ ಆದುವು. 'ಯಂತ್ರೋದ್ಧಾರದ ಹನುಮ'! ಆದಿಶಕ್ತಿ ಶ್ರೀ [O] ಚಕ್ರದ ಬೆಸೆಯಂತೆ ಇರುವ ಈ ನರ(ಳ)ನ ಚಿತ್ರವು ವಿಜಯನಗರದ ಇಂದಿನ ಅವಸ್ಥೆಯನ್ನು ಕಾಣುವಾಗ, ಅಂದಿನ ಸಂಭ್ರಾಮಕ ಗ್ರಹಿಕೆಗಳನ್ನು ಬಯಲಿಗೆ ತರುವ ಒಂದು ಅಮೋಘ ಪ್ರಮಾಣವು

ಆಗುತ್ತಿದೆ. ಈ ವಿವರದ ಉದ್ದೇಶವು ಇಷ್ಟೆ : 'ವಿಶ್ವ ನಿಯಮವನ್ನು'=ಋತ ಸ್ವರೂಪೀ ಸತ್ಯದ ಈ ನಿಯಮವನ್ನೂ ಮೋಸಗೊಳಿಸುವ='ಭಗ'ವಂತ ಪಂಥೀಯರ ಪ್ರಯತ್ನಗಳು ಹಾಸ್ಯಾಸ್ಪದವಾಗುತ್ತಿವೆ ಎಂಬುದರ ಹಿನ್ನೆಲೆ ವಿವೇಕಿಗಳ ಗಮನಕ್ಕೆ ಬಂದರೂ ಸಾಕು. ಸಮಾಜ : ಸಮಷ್ಟಿಯನ್ನು ಆಳುವ ಹಕ್ಕು ವಿರಕ್ತಪೀಠದ 'ಜಗದ್ಗುರು' ವರ್ಗವು ತನ್ನದು, ಎಂದು ಬಗೆಯಲು ಕಾರಣವಾಗುತ್ತ ಬಂದಿರುವ ಐತಿಹಾಸಿಕ ಸ್ವರೂಪವನ್ನು ಸೂಚಿಸುವುದು ಅವಶ್ಯವಾಗುತ್ತಿದೆ.

ವೇದಗಳಲ್ಲಿ ಇರುವ ಆಶಯಕ್ಕೂ, ಭಾರತೀಯ ಬಹುಜನ ಸಮಾಜದ ನಡೆವಳಿಗೂ ನುಡಿವಳಿಗೂ ಸಂಬಂಧವೇ ಇಲ್ಲ. 'ವೇದಿಝಂ' 'ಬ್ರಾಹ್ಮಾನಿಝಂ' ಇವು ಬೇರೆ ಬೇರೆ ಇವೆ. ಸಾಹೇಬರ ಹೇಳಿಕೆಗಳು ನಿರಾಧಾರವಾಗಿವೆ ಎಂದು ನನ್ನ ಈ ಅನ್ವೇಷಣೆಯಲ್ಲಿ ಕಾಣುತ್ತಲಿದೆ. ಈ ಅಂಶವು ನಿಜವೇ ಪರೀಕ್ಷಿಸಿ ನೋಡಬೇಕಾಗಿ ಬಿನ್ನಹ. ವೇದಕಾಲದ 'ಆದಿತ್ಯ' (ಮಾತರಿಶ್ವನ್=ಲಿಂಗ=ಯೋನಿ) ಉಪಾಸನಾ ಸಂಪ್ರದಾಯದ ಗುರುಪೀಠ ದಕ್ಷಿಣ ಕಪರ್ದ ವಸಿಷ್ಠ-ವ್ಯಾಸ-ವಾಲ್ಮೀಕಿ ಪರಂಪರೆಯ, ಈ ಗರ್ಭಸ್ಥ ವಾಮದೇವನ ಈ ಗುರುಪರಂಪರೆಯೆ, ಭಾರತದಲ್ಲಿ, ಅರಸುಮನೆತನಗಳ ಗುರುತ್ವಕ್ಕಾಗಿ ಸ್ಪರ್ಧೆ ನಡೆಸುತ್ತದೆ. ಅರಸು ಮನೆತನಗಳಲ್ಲಿ ಕಾಣಲು ದೊರೆವ ವಿಕ್ರಮಾದಿತ್ಯ, ಕನಕಾದಿತ್ಯ, ವಿನಯಾದಿತ್ಯ, ಚಂದ್ರಾದಿತ್ಯ.... ಇತ್ಯಾದಿ ನಾಮಾಂತರಗಳು ವೇದಕಾಲೀನ 'ಆದಿತ್ಯ' ಸಂಪ್ರದಾಯದ ಸೂಚಕವೇ ಆಗಿಲ್ಲವೆ? ಈ ವಿರಕ್ತಪಂಥಗಳ ಬೇರುಗಳು ಸೈಂಧವ ಸಂಸ್ಕೃತಿಯಲ್ಲಿಯೆ ಇವೆ! ಭೋಗವಾದದ ಅಸ್ತಿತ್ವಕ್ಕೆ ಆತ್ಯಂತಿಕ ತ್ಯಾಗದ ಪವಾಡ ಚಮತ್ಕಾರೀ ಗುರುವರ್ಗವು ಅನಿವಾರ್ಯವಾಗುತ್ತದೆ. ದಿವ್ಯಾಧ್ಯಾತ್ಮದ ಪರಂಪರೆಯ ಪವಾಡಗಳ ಸ್ಥಾನವು, ಇಂದು ಸತ್ತ್ಯದ ಭೌತಶಾಸ್ತ್ರೀಯ ಸಂಹಾರಕ ಅಸ್ತ್ರಗಳನ್ನು ಕಲ್ಪಿಸಬಲ್ಲ ಸೈಂಟಿಸ್ಟರ ಶೋಧಗಳಿಗೆ ಬರುತ್ತಿರುವುದನ್ನು ಕಾಣುತ್ತಿದ್ದೇವೆ. ಪೈಥಾಗೊರಾಸನು ಈ ಉಭಯಸ್ವರೂಪದ ಮೃತ್ಯು' ಉಪಾಸನೆಯ ಸಂಪ್ರದಾಯಗಳ ಪ್ರವರ್ತಕನಾಗಿದ್ದಾನೆ.

ಭಾರತೀಯ ಪುರಾತನ ಪರಂಪರೆಯಲ್ಲಿಯೂ ಇದರ ಹೊಳಹು ಇಲ್ಲದಿಲ್ಲ : 'ಸಾಂಖ್ಯಯೋಗೌ' ಇದನ್ನು 'ಪೃಥಕ್' ಎಂದು ಬಗೆಯುವುದು 'ಬಾಲಿಶತನ' ಎಂದು ಗೀತೆ ಹೇಳಿದೆ. ಆದರೆ, ಸಾಂಖ್ಯರ=ಸಂಖ್ಯಾಶಾಸ್ತ್ರ, ಗಣಿತದ ಶಾಖೆ, ಭೌತಶಾಸ್ತ್ರಶೋಧಗಳ ಈ ಪರಂಪರೆ ಭಾರತದಲ್ಲಿ ಇಂದಿನ ತನಕವೂ ಫಲವತ್ತಾಗಿ ಬೆಳೆದಿಲ್ಲ. ಆರ್ಯಭಟ, ಭಾಸ್ಕರಾಚಾರ್ಯರ ಪೀಳಿಗೆ ಕುಂಟುತ್ತ ಸಾಗಿದೆ. 'ಸಸ್ಯ ವೃಕ್ಷಗಳಿಗೂ ಭಾವನೆಗಳು ಇವೆ, ಎಂಬುದನ್ನು ಸಿದ್ಧಪಡಿಸುವ ದಿಕ್ಕಿನಲ್ಲಿ ಶ್ರೀ ಜಗದೀಶ ಚಂದ್ರಬೋಸ ಯಶಸ್ವಿಯಾಗುತ್ತಾರೆ, ಎನ್ನುವಷ್ಟರಲ್ಲಿ, ಇವರ ಆಯುರ್ಮಾನವು ಮುಗಿಯುತ್ತದೆ. ಪ್ರಫುಲ್ಲಚಂದ್ರ ರೇ, ರಾಮನ್ ಪರಂಪರೆಯು ಜೀವಂತವಾಗಿ ಬೆಳೆವ ಆಶೆಯು ಇಲ್ಲದಿಲ್ಲ. ಶಿಲುಬೆಗೆ ನೇತಾಡುವ ಮಹಾತ್ಮರ=ಕುಮಾರೀ ಕುಮಾರ ಸಂಪ್ರದಾಯಗಳ ಕಡೆಗೆ ನೇತೃತ್ವವಿರುವ, ಮಾರಕಾಸ್ತ್ರಗಳ ಸೈನ್ಯ, ಸರ್ವಾಧಿಕಾರೀ ಇಝಂಗಳು ಲೌಕಿಕದ ನೇತಾರರಾಗಿರುವ, ಎಂದರೆ ಒಂದು ಬಗೆಯಲ್ಲಿ 'ಮೃತ್ಯು' ಪೂಜೆಯೇ ಎಲ್ಲೆಲ್ಲೂ ನಡೆದಿರುವ ಈ ಮಾನವರ ಇತಿಹಾಸದ ಆಕೃತಿ, ಮತ್ತು ತತ್ತ್ವಜ್ಞಾನದ ಆಕೃತಿ ಇವು [O] ಸಮಾನ ಸ್ವರೂಪದುವೇ ಇದ್ದರೆ ಸೋಜಗವೇನು?

ಅರ್ಥಗ್ರಹಣ-ಪದ್ಧತಿಯ ನಿಟ್ಟನಲ್ಲಿ

ಕರ್ಣಾಟ-ಸಂಸ್ಕೃತಿಯು ಭಾರತೀಯ ಸಂಸ್ಕೃತಿಯ ಅಂಗ. ಮರ-ಹಟ್ಟ>ಮರ್‍ಹಾಟ>ಮಹಾರಾಷ್ಟ್ರದ ಈ ಸಮಸ್ಯೆಯಲ್ಲಿ ಆರಿಯ<ಆರ್ಯರ ಪ್ರಶ್ನೆ ಎದುರು ನಿಂತಿತು! ಈ ಅನ್ವೇಷಣೆಯಲ್ಲಿ ಹಟ್ಟಿಕಾರ: ದನಗಾರರು ವೀರಕ್ಷತ್ರಿಯರಾಗುವ ಈ ಹಂತದ ಸಾಂಸ್ಕೃತಿಕ ಸ್ಥಿತಿಗತಿಯ ವಿಚಾರವು ಒಳಗೊಂಡಿತು. 'A New Approach to the Dravidian Problem,'ಎಂಬ ವಾಕ್ಯವನ್ನು ಕೆಲವು ಪ್ರಕಟನೆಗಳ ಮೊದಲ ಪುಟದಲ್ಲಿ ಹಾಕಿದ್ದುಂಟು. ಅರಿಯ<ಆರ್ಯರ ಸಮಸ್ಯೆಯ ಜೊತೆಗೆ, ಈ ತಥಾಕಥಿತ ದ್ರವಿಡ ಸಮಸ್ಯೆಯು ಸೇರಿಕೊಳ್ಳುತ್ತದೆ! ಆದರೆ ದ್ರವಿಡ-ದ್ರಾವಿಡ ಈ ಪದವಾಗಲಿ, ತಮಿಳು, ಈ ಹೆಸರಾಗಿರಲಿ, ಅಖಿಲ ಭಾರತೀಯ ಮಟ್ಟದಲ್ಲಿ ಎಲ್ಲಿಯೂ ದೊರೆಯುವುದಿಲ್ಲ!

ಕಾಲ್ಡವೆಲ್ ಪ್ರಭೃತಿಗಳು ಕೊಟ್ಟ ದೃಷ್ಟಿಕೋನದಿಂದ ಭಾರತೀಯ ಸಂಸ್ಕೃತಿಯನ್ನು ಅರ್ಥಯಿಸುವ ವಾಡಿಕೆಯು ಶಿಷ್ಟಮಾನ್ಯವಾಗಿ, ನಮ್ಮ ಸಂಸ್ಕೃತಿಯ ಸತ್ಯಾನ್ವೇಷಣೆಯಲ್ಲಿ ಜಾತಿ, ಮತದ ಭಾವನೆಗೆ ಪ್ರವೇಶ ದೊರೆತಂತಾಗಿದೆ!

ಆಧುನಿಕ ಡಾ॥ ಟಿ. ಬರೊ ಪ್ರಭೃತಿಗಳೆಲ್ಲರೂ, ದ್ರವಿಡರೆಂಬುವರೂ ಉತ್ತರದಿಂದಲೇ ಭಾರತದಲ್ಲಿ ಪ್ರವೇಶಿಸಿದ್ದಾರೆಂದು ಹೇಳುತ್ತಿದ್ದಾರೆ. ಆದರು, ದ್ರಾವಿಡರ ಬಗೆಗಿನ, ಮೊದಲಿನ ಗ್ರಹಿಕೆಗಳನ್ನು ತಿದ್ದಿಕೊಳ್ಳಲಾಗುತ್ತಿಲ್ಲ! 'ಕಂನಡದ ನೆಲೆ'ಯ ಪ್ರಬಂದಧಲ್ಲಿ 'ದ್ರವಿಡ' ಪದದ ಅನುಚಿತತೆಯನ್ನು ಅರಿತದ್ದರಿಂದ, ಅದರ ಬದಲು 'ಕಂದಮಿಳು' ವರ್ಗದ ಭಾಷೆ ಎಂಬ ಪರಿಭಾಷೆಯನ್ನು ಯೋಜಿಸಿದ್ದಾಯ್ತು (೧೯೩೯). ಪ್ರೊ. ಎ. ಆರ್. ಕೃ ಅವರು ಈ ಪ್ರಯತ್ನ ಮೆಚ್ಚಿಕೊಂಡು ಕಾಗದ ಬರೆದರು. ಕಂನಡದ ಪೂರ್ವರೂಪಗಳೂ ತಮಿಳಿನಷ್ಟೇ ಪುರಾತನ ಆಕಾರದುವೂ ಉಂಟು, ಎಂಬುದನ್ನು ಮಾನ್ಯ ಶ್ರೀ ಆರ್.ನರಸಿಂಹಾಚಾರ್ಯ, ಪ್ರೊ.ಬಿ.ಎಂ. ಶ್ರೀ ಇಂಥವರು ಹೇಳುತ್ತಿರುವಾಗ, ಕಂನಡರಿಗೆ ತಮ್ಮ ಭಾಷೆಯ ಸ್ಥಾನಮಾನದ ಬಗೆಗಿನ, ಗೌರವವನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ, 'ದ್ರಾವಿಡ' ಎಂಬ ಸ್ಥೂಲ ಸಂಕೇತವನ್ನು ಉಪಯೋಗಿಸುವುದನ್ನು ನಿಲ್ಲಿಸುವುದು ಜರೂರ ಆಗುತ್ತದೆ. ದ್ರಾವಿಡರೆಂಬ ಈ ಜನ, ಉತ್ತರದಿಂದ ಬಂದುದರಿಂದ ಕಂನಡದ ಸ್ಥಾನವು, ತಮಿಳರಿಗಿಂತ ವೈಶಿಷ್ಟ್ಯ ಪೂರ್ಣವಾದದ್ದೂ, ಮಹತ್ವದ್ದೂ ಆಗುತ್ತಿದೆ. ಭಾರತೀಯ ಸಂಸ್ಕೃತಿಗೆ ಸಂಸ್ಕೃತಭಾಷೆಗೆ ಸಂದ ಕಾಣಿಕೆ ತಮಿಳರಿಗಿಂತ, ಕಂನಡರ ಸ್ಥಾನಬಲದಿಂದ ವಿಶೇಷ ಪ್ರಕಾರದ್ದು ಆಗುತ್ತಿದೆ! ಆದಕಾರಣ, ಭಾರತೀಯ ಸಂಸ್ಕೃತಿಯ ಸಮೀಕ್ಷೆಯಲ್ಲಿ, 'ದ್ರವಿಡರ ಕಾಣಿಕೆ' ಎಂಬ ಭೂಮಿಕೆಯು ಅನಿಷ್ಟವಾಗಿದೆ.

ಕಾಲ್ಡವೆಲ್ಲ ಪ್ರಭೃತಿಗಳು, ಅಖಿಲ ಭಾರತೀಯ ಮಟ್ಟದಲ್ಲಿ 'ದ್ರಾವಿಡ' ಎಂಬ ಪದವನ್ನು ಬಳಸುವ ರೂಢಿಯನ್ನು ಪ್ರಾರಂಭಿಸುವ ಮುಂಚೆ, ಪ್ರತಿಯೊಂದು ಪ್ರಾಂತೀಯ ಭಾಷೆಗಳ ಪೂರ್ವಪರಂಪರೆಗಳನ್ನು ಸ್ವಲ್ಪ ಸಮೀಕ್ಷಿಸಬೇಕಿತ್ತು. ಕಂನಡದಲ್ಲಿಯೇ ದೇಸಿ ಮತ್ತು ಮಾರ್ಗ ಎಂಬ ಈ ಪರಿಭಾಷೆಯಲ್ಲಿ ತಥಾಕಥಿತ ದ್ರಾವಿಡವು 'ದೇಸಿ' ಪದದಿಂದ ಸೂಚಿತವಿದೆ.

ಮರಾಠೀ ಭಾಷೆಯನ್ನು ರೂಪಿಸಿರುವ ಶಿಲ್ಪಿ ಎಂಬ ಕೀರ್ತಿಯ ಜ್ಞಾನೇಶ್ವರನು. 'ದೇಸೀ ಆಣೀ ಸಂಸ್ಕೃತ' ಈ ಉಭಯ ಭಾಷೆಗಳನ್ನು ಏಕಕಾಲಕ್ಕೇ ಉಲ್ಲೇಖಿಸಿದ್ದಾನೆ. ಮರ್ಹಾಟಿ ಭಾಷೆಗೆ 'ದೇಸಿಕಾರಲೇಣೆ (ಅಲಂಕಾರ)'. ತಾನು ಕಾಣಿಕೆಯಾಗಿ ಅರ್ಪಿಸಿರುವುದಾಗಿ ಹೆಮ್ಮೆಯಿಂದ ಹೇಳಿದ್ದಾನೆ. ಗುಜರಾತಿನ ಪ್ರಾಚೀನದ ವ್ಯಾಕರಣಕಾರ ಹೇಮಚಂದ್ರನು 'ದೇಶೀಯ ನಾಮಮಾಲಾ' ಬರೆದಿದ್ದು ಡಾ. ಆ. ನೇ. ಉಪಾಧ್ಯೇ ಇದನ್ನು ಮುನ್ನುಡಿಯೊಡನ ಪ್ರಕಟಿಸಿದ್ದಾರೆ. ಈ ಬಗೆಯಲ್ಲಿ ತಥಾಕಥಿತ 'ದ್ರವಿಡ' ಎಂಬುದು ಆಯಾ ಪ್ರಾಂತೀಯ 'ದೇಸಿ'=ಮೂಲಿಗರ ಮಾತು ಆಗುತ್ತಿದೆ. ಹೀಗಿರುವಾಗ, ಅಖಿಲ ಭಾರತೀಯ ಮಟ್ಟದಲ್ಲಿ ಹಿಂದೊಮ್ಮೆ 'ತಮಿಳರು'-ದ್ರಾವಿಡರೇ ಹಬ್ಬಿದ್ದರು ಎಂಬ ಸಂಭ್ರಮ ನಿರ್ಮಾಣದ ತಪ್ಪು ಪರಿಭಾಷೆಯನ್ನು ರೂಢಿಸಿದ್ದಾಗಿದೆ.

'ಮರ್ಹಾಟಿ ಸಂಸ್ಕೃತಿ-ಕಾಂಹಿ ಸಮಸ್ಯಾ' ಈ ಪುಸ್ತಕದಲ್ಲಿ ಆ ಪ್ರಾಂತವು ಮೊದಲಲ್ಲಿ ಕಂನಡ ಭಾಷಿಕರದೇ ಇತ್ತು, ಎಂಬ ಮಾತನ್ನು ಸಪ್ರಮಾಣವಾಗಿ ತೋರಿಸಿದ್ದಾಗಿದೆ. It is Greek and Latin to me, ಎಂಬ ಈ ಪಡೆಮಾತಿನಂತೆ, ಮರ್ಹಾಟಿಯಲ್ಲಿ 'ಹೇ ಅಮ್ಹಾಸಿ ಕಾನಡೆ' ಇದು ನಮಗೆ ಕನ್ನಡ' ಎಂಬ ವಾಕ್ ಪ್ರಚಾರವು ಉಂಟು! ಆದರೆ, 'ಮಹಾರಾಷ್ಟ್ರದಲ್ಲಿ ಕಂನಡವು ಮೊದಲು ಇತ್ತು' ಎಂಬುದು ಸಹನವಾಗದವರೂ ಅಲ್ಲಿ, ಅಂತರ ಭಾರತೀಯರಲ್ಲಿಯೂ ಇದ್ದಾರೆ! ತಮಿಳ=ದ್ರಾವಿಡರು ಮೊದಲು ಇದ್ದರು ಎಂಬುದನ್ನು ಸಿದ್ಧಮಾಡುವ ಲೇಖಮಾಲೆ ಅಂತರಭಾರತೀ 'ಸಾಧನಾ' ಪತ್ರಿಕೆಯಲ್ಲಿ ಬಂತು. ಇದನ್ನೆ ಪುಸ್ತಕರೂಪದಲ್ಲಿ 'ಮಹಾರಾಷ್ಟ್ರ ಆಣಿ ದ್ರಾವಿಡ' ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ. ಡಾ. ವಿಶ್ವನಾಥ ಖೈರೇ ಎಂಬ ಮೇಧಾವೀ ಮಹಾರಾಷ್ಟ್ರೀಯರು ಮದರಾಸಿನಲ್ಲಿ ಇಂಜಿನಿಯರ ಖಾತೆಯ ಶ್ರೇಷ್ಠ ಅಧಿಕಾರದಲ್ಲಿ ಇದ್ದಾರೆ. ಇವರ ತಮ್ಮ ತಮಿಳುವ್ಯಾಸಂಗದ ಬಲದಿಂದ ಜ್ಞಾನೇಶ್ವರಿಯೆ ಮೊದಲಾದ ಗ್ರಂಥಗಳಲ್ಲಿ ಬರುವ 'ಕಂನಡದ ಪೂರ್ವರೂಪ'ಗಳನ್ನು (ಉದಾ=ಮುದಲ್ ಮುಂ.) ಅವು ದ್ರಾವಿಡ ಪದಗಳು ಎಂದು ಮನಗಾಣಿಸಿಕೊಡುವ ಪ್ರಯತ್ನ ಪಟ್ಟಿದ್ದಾರೆ. ಕಂನಡದ ಸಂಶೋಧಕರು

ತಮ್ಮ ಭಾಷೆಯ ಸ್ಥಾನವೈಶಿಷ್ಟ್ಯವನ್ನು ಗಮನಿಸಿ, ಭಾರತೀಯ ಸಂಸ್ಕೃತಿಗೆ ಕಂನಡದ 'ದೇಸಿ'ಯ ಕಾಣಿಕೆ ಎಷ್ಟಿದೆ ಎಂಬುದನ್ನು ಬೆಳಕಿನಲ್ಲಿ ತಂದು ತೋರಿಸುವುದು ಅವಶ್ಯವಿದೆ, 'ದ್ರಾವಿಡ' ಪದದ=ಅಸಮರ್ಪಕತೆಯನ್ನು ಅರಿತ ಬಳಿಕ, ವೇದದಲ್ಲಿ ಶಿವರುದ್ರನ ವರ್ಣನೆಯಲ್ಲಿ ಬರುವ 'ಪತ್ತೀನಾಂ ಪತಯೇ' ಈ ಪದದಲ್ಲಿ ನಿರ್ದಿಷ್ಟವಿರುವ ಜನವಾಚಕ 'ಪತ್ತಿ' ಈ ಪದವು ಪಟ್ಟಿ>ಹಟ್ಟಿಗಳ=ದನಗಾರರ ಸೂಚಕವಿರಬೇಕು, ಎಂದು ನನಗೆ ಕಂಡಿತು.

ಕರ್ಣಾಟ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯ ಅಂಗವಾಗಿದೆ, ಎಂಬ ದೃಷ್ಟಿಯಿಂದ ಅರ್ಥ ಗ್ರಹಣದಲ್ಲಿ, ಗೆಸ್ಟಾಲ್ಟ ಮಾನಸಶಾಸ್ತ್ರದ ದೃಷ್ಟಿಕೋನವು ಜರೂರು ಎನಿಸಿತು. ಈ ಕಾರಣದಿಂದಾಗಿ ಕರ್ಣಾಟಸಂಸ್ಕೃತಿಯ ಆಳವಾದ ವ್ಯಾಸಂಗಕ್ಕೆ ನಮ್ಮ ದೇವತೆಗಳ ಬಗೆಗೆ ಅಧ್ಯಯನವು ಅವಶ್ಯವೆನಿಸಿತು. ದೇವರು ಭಕ್ತರನ್ನು ರೂಪಿಸಿದನು ಎಂಬ ಮಾತಿಗಿಂತ, ಭಕ್ತರು ತಮ್ಮ ದೇವರನ್ನು ರೂಪಿಸಿದ್ದಾರೆ ಎಂದರೂ ತಪ್ಪಲ್ಲ. ದೇವರು ಮತ್ತು ಭಕ್ತ ಇವರೊಳಗೆ ತತ್‌ಮಯತೆ ಅಭಿಪ್ರೇತವಿರುತ್ತದೆ. ಆದಕಾರಣ, ಶಿವ-ರುದ್ರನ ವ್ಯಾಸಂಗವು ನಮ್ಮ ಶೈವ-ವೀರಶೈವ ಭಕ್ತಗಣದ ಶೀಲ-ಸ್ವಭಾವ ಗ್ರಹಣಕ್ಕೆ ಉಪಕಾರಕವಾದೀತು, ಎಂದು ಎನಿಸಿತು. 'ಶಿವರಹಸ್ಯ'ವನ್ನು ಬರೆದದ್ದಾಯಿತು. (೧೯೩೯). ಈ ದೇವತಾ ವಿಚಾರದಲ್ಲಿ ಆಂತರಿಕ 'ಚೋದನೆ'ಯ ಕೈವಾಡವು ಇರುತ್ತದೆ ಎಂಬ ವಿಚಾರವು ಆಗ ಗಮನಕ್ಕೆ ಬಂದಿರಲಿಲ್ಲ. ೧) ಪ್ರಜ್ಞಾಪಾತಳಿಯ ಪ್ರಚೋದನೆ, ೨) ಪ್ರಾಣಲಿಂಗ ಪಾತಳಿಯ ಪ್ರಚೋದನೆಯ ಕೈವಾಡದ ವಿಚಾರವು ಈ ಪ್ರಕಟನೆಯ ಅನ್ವೇಷಣೆಯ ಸಂದರ್ಭದಲ್ಲೇ ಅರಿಕೆಗೆ ಬಂದದ್ದು.

ಆದುದರಿಂದ, ತಿಳುವಳಿಕೆ ಸಾಲದ್ದಕ್ಕೆ ರುದ್ರ-ಶಿವನ ನಾನಾ ನಿಲುಮೆಗಳೆಲ್ಲ ನನ್ನ ಅರ್ಥಗ್ರಹಣದ ವ್ಯಾಪ್ತಿಗೆ ಅಳವಡಲಿಲ್ಲ! ಶಿವನು ಚಂದ್ರಶೇಖರ; ಸೋಮಶೇಖರನೂ ಸರಿ! ಆದರೆ, ಚಂದ್ರ=ಸೋಮ ಈ ಅಂಶವು ವೇದದಲ್ಲಿ ಸೇರುವ ವರೆಗೆ ಸ್ಪಷ್ಟವಾಗಲಿಲ್ಲ! 'ಗಂಗಾ'ಧರನ ನಿಲುಮೆಯ ಶಿವನ ವಿಚಾರವು 'ರಸೇಶ್ವರ' ಶಿವನ ಹತ್ತಿರಕ್ಕೆ ಒಯ್ದಿತು. 'ಸರ್ವದರ್ಶನ ಸಂಗ್ರಹ'ದಲ್ಲಿ, ಈ ನಿಲುಮೆಯು ಇದೆ. ನನ್ನ ವೀರಶೈವ ಮಿತ್ರ, ಪರಮಧಾರ್ಮಿಕ ಶ್ರೀ ಕೊಪ್ಪಳ ಮಾಸ್ತರರನ್ನು, 'ರಸೇಶ್ವರ'ನ ವಿಚಾರವಾಗಿ ಹೆಚ್ಚಿನ ತಿಳುವಳಿಕೆಗಾಗಿ ಪ್ರಶ್ನಿಸಿದೆ. ಅವರು, ಈ 'ರಸೇಶ್ವರ' ನಾಮವನ್ನು ಕೇಳುತ್ತಲೇ, ತುಂಬ ಮುರುಟಿಕೊಂಡಂತೆ ಎನಿಸಿತು. ಆ ಬಳಿಕ ಈ ವಿಚಾರ ಮುಂದುವರಿಸಲಿಲ್ಲ. 'ರಸೇಶ್ವರ'='ಗಂಗಾಧರ ಈ ದೇವನು ಸಾಗರ ಸ್ವರೂಪನೂ ಸರಿ. ಆದರೆ 'ಜಲಶಾಯಿ'-ಸಾಗರ ಶಯನತ್ವ ವಿಷ್ಣುವಿಗೇ ಗುತ್ತಿಗೆ, ಏಕೆ? ವಿಷ್ಣು-ಪಾದಾಬ್ಜ ಸಂಭೂತಾ ಗಂಗಾ, ಈ ನಿಲುಮೆ ಶಿರದಿಂದ ಗಂಗೆ ಶಿವನಿಗೆ ಎಂಬ ನಿಲುಮೆ, ಇವೆರಡರಲ್ಲಿ ಈ ಸಾಮ್ಯವು ಏಕೆ?

'ಕಣ್ಮರೆಯಾದ ಕಂನಡ'ದ ಸಂದರ್ಭದಲ್ಲಿ, 'ಎಲ್ಲಮ್ಮ' ಮಹಾರಾಷ್ಟ್ರದ 'ವರ್ಹಾಟ'ದಲ್ಲೂ ಎಲ್ಲ(ರ)ಮ್ಮ ಇದ್ದದ್ದು ಕಂಡಾಗ, ನನ್ನನ್ನು ಆಕ್ಷೇಪಿಸುವವರ ಟೀಕೆ ನಿರಾಧಾರವಿರುವ ಖಾತ್ರಿಯಾಯ್ತು! ಬ್ರಾಹ್ಮಣ 'ಎಲ್ಲೂ ಆಯಿ', ಎಲ್ಲಂಭಟ್ಟ, ಎಲ್ಲಣೇಶ್ವರ ಶಿವಾಲಯ ಕಟ್ಟಿಸಿದ ಆ ಭಾಗದ ಶ್ರೀಮಂತ. ಈ 'ಜಗದಂಬೆ' : ಎಲ್ಲ(ರ)ಮ್ಮ ಇವಳಿಗೆ ಮಗ ಮಾತ್ರ ಒಬ್ಬನೇ! 'ಪರಶು'ಧರ! ಇವನ ಹೆಸರು 'ರಾಮ' (ಚಂದ್ರ)! ಈ ಗುಹ್ಯಾರ್ಥಗಳು ಅಂದಿನಿಂದಲೇ ಮನಸ್ಸನ್ನು ಸೂರೆಗೊಂಡವು! ಶ್ರೀರಾಮ-ಚಂದ್ರ ಕೋದಂಡಧಾರಿ! ಈ 'ಕ' ದಂಡ= ಪರಶು='ಅಹನಸ್ಯ: ಲೈಂಗಿಕ ಅರ್ಥ ಸೂಚಕವಿದೆ! ಇದು ಇತ್ತೀಚೆಗೆ ದೃಢಪಟ್ಟಿತು. ಹಟ್ಟಿಕಾರ=ದನಗಾರ =ವೀರಕ್ಷತ್ರಿಯರು, ಇವರೊಳಗಿಂದಲೇ 'ಹಾಲು-ಮತ ದರ್ಶನ'ವು ಶಕ್ಯವಾಯ್ತು. ವೇದದ 'ಕ'='ಕಂ' ಬ್ರಹ್ಮ=ಪ್ರಜಾಪತಿ. ಈ 'ಕಸ್ಮೈದೇವತಾ ಸೂಕ್ತ'ವನ್ನು ಇಡಿಯಾಗಿ ಭಾಷಾಂತರಿಸಿ ಅರಿಯುವ ಪ್ರಯತ್ನ ಮಾಡಿದ್ದಾಯ್ತು. ಇದನ್ನು ಬರೆದು ಮುಗಿಸುವ ಸುಮಾರಿಗೆ, ಆಮಬಾಧೆ' ತೀವ್ರವಾಗಿ, ಬದುಕುವ ಆಶೆಯು ಸಂದೇಹಾಸ್ಪದವಾಯ್ತು! (೧೯೬೦) ಇದು ಎರಡನೆಯಬಾರಿಯ ತೀವ್ರಬಾಧೆ. ಮೊದಲೊಮ್ಮೆ ಕಾಡಿತ್ತು (೧೯೪೯-೫೦).

ವೈದಿಕ ದೇವತಾವಿಚಾರದಲ್ಲಿ ನನ್ನ ತಿಳುವಳಿಕೆ ಸಾಲದ್ದಕ್ಕೆ, ಇದರ ಕೂಲಂಕಷ ವಿಮರ್ಶೆಗಾಗಿ, ನನ್ನ ಮಿತ್ರ, ಮಹಾವಿದ್ವಾಂಸರಾದ ಶ್ರೀ ದೇವುಡು ನರಸಿಂಹ ಶಾಸ್ತ್ರಿಗಳಿಗೆ ಪ್ರಾರ್ಥಿಸಿದೆ, ಅವರು ದೈಹಿಕ ದೌರ್ಬಲ್ಯದಿಂದ ಬಳಲುತ್ತಿದ್ದರೂ, ನನ್ನ ಬಿನ್ನಹ ಮನ್ನಿಸಿ ತಮ್ಮ ವಿಚಾರಗಳನ್ನು ತಿಳಿಸಿದರು. ನನ್ನ ದೃಷ್ಟಿಕೋನ ಒಪ್ಪದೆ ಇದ್ದರೂ,

'ಕ' ದೇವತಾ ಸ್ವರೂಪ ಗ್ರಹಣದ ಬಗೆಗೆ ತುಂಬ ಮೆಚ್ಚಿಕೆಯನ್ನು ಸೂಚಿಸಿದರು. ಈ ಭಾಗವು ಇಂಗ್ಲೀಷಿನಲ್ಲಿ ಬರಬೇಕೆಂದು ಸೂಚಿಸಿದರು. 'ಹಾಲುಮತ ದರ್ಶನ' ಓದಿದ ಬಳಿಕ, 'ಇನ್ನು ನಿನ್ನ ಪುಸ್ತಕದ ಕಾಣಿಕೆ ಬೇಡ' ಎಂದು ತಮ್ಮ ಅಸಮ್ಮತಿಯನ್ನು ಸೂಚಿಸಿದ ಹಿರಿಯರಿಂದ ದೊರೆತ ಎಚ್ಚರಿಕೆಯನ್ನು ನೆನೆಯಬೇಕು. ಮಿತ್ರ ಶ್ರೀ ದೇವಡು ಶಾಸ್ತ್ರಿಗಳ ರೀತಿ ಬೇರೆ. ಭಿನ್ನಾಭಿಪ್ರಾಯ ಸೂಚಿಸಿಯೂ, ನನ್ನ ಅಧ್ಯಯನಕ್ಕೆ ನೆರವಾದ ಪುಣ್ಯವಂತರು ಅವರು. ಕಾಶ್ಮೀರ 'ನೀಲಮತ ಪುರಾಣ' ಓದಲು ಹೇಳಿದರು. 'ತಿರುನೀಲಕಂಠ'ನ ಪರಂಪರೆಯೊಂದು ಕರ್ನಾಟದಲ್ಲಿ ಉಂಟು. ಇದರ ಅನ್ವೇಷಣೆ ಜರೂರು ಇದೆಯೆಂದು ಒತ್ತಾಯ ಪಡಿಸಿದರು, 'ತಿರುನೀಲಕಂಠ'ನ ಪರಂಪರೆಯವರನ್ನು ಹುಡುಕಲು ತುಂಬ ತೊಂದರೆ; ಒಬ್ಬ ಮಹನೀಯರು, ಸರಕಾರೀ ಕಚೇರಿಯಲ್ಲಿ ಇದ್ದವರು, ಇವರನ್ನು ಸಂದರ್ಶಿಸಿದೆ, ಆದರೆ ಸಹಕರಿಸುವ ಮನಸ್ಸಿನವರಾಗಿ ಕಾಣಲಿಲ್ಲ!

ಧರ್ಮ : ಸಂಸ್ಕೃತಿಯೊಳಗಿನ ಕಣ್ಣು ಮುಚ್ಚಾಲೆಯ ಆಟ!

ದಿವ್ಯ ದೈವತ ಕತೆಗಳನ್ನು ಶಾಸ್ತ್ರೀಯ ದೃಷ್ಟಿಯಿಂದ ಗ್ರಹಿಸಿಕೊಳ್ಳುವ ದಾರಿ, ಪ್ರಾಧಾನ್ಯದಿಂದ ಕ್ಯಾಸಿರರ್, ಸಪೀರ್ ಇವರ ಗ್ರಂಥಗಳ ಮೂಲಕ, ಅಂತೂ ಕಾಣತೊಡಗಿತು. ಅದ್ಭುತ ರಮ್ಯ ದೇವಾಲಯಗಳು, ಶಿಲ್ಪ ಸೌಂದರ್ಯ ದೇವತಾ ಪ್ರತಿಮಾ ಸೃಷ್ಟಿ, ಹಲವೆಡೆಗೆ ಇರುವ ಈ ದೇವಸ್ಥಾನಗಳ ನಿತಾಂತ ರಮಣೀಯ ನಿಸರ್ಗ ಸೌಂದರ್ಯದ ಹಿನ್ನೆಲೆ.... ಈ ರಚನಾ ಕೌಶಲದಿಂದಾಗಿ ಉಂಟಾಗುವ ಅಗಾಧ, ಅಗಮ್ಯ, ನೇತಿ, ದೇವ ಸ್ವರೂಪದ ಭಾವನೆಯ ತೀವ್ರತೆಯಲ್ಲಿ ಆವರಿಸುವ ಬೆಪ್ಪು! ಈ ದೇವಾತಾಶಕ್ತಿಗಳು ಜರುಗಿಸಿದ ಪವಾಡ-ಚಮತ್ಕಾರಗಳ ಕಥೆಗಳು, ಪ್ರವಾದಗಳು. ಈ ಬಗೆಯ ದಿಙ್ಮೂಢತೆಯು ಆವರಿಸುವ ಮನೋಭಾವದಲ್ಲಿ ನಮ್ಮ ದೇವತಾ ಶಕ್ತಿಗಳ ನೆಲೆ-ಬೆಲೆಯನ್ನು ಗ್ರಹಿಸಿಕೊಳ್ಳುವ ಜಿಜ್ಞಾಸೆಯು ಕಮರಿಹೋಗುವ ಭೀತಿಯು ನನ್ನನ್ನು ಸೋಂಕದೆ ಇಲ್ಲ! ದೇವ ಎಂಬವನು, ಸೇಡು ತೀರಿಸಿಕೊಳ್ಳುವ ದುಷ್ಟಶಕ್ತಿಯೆ? ಎಂಬ ಪ್ರಶ್ನೆಯು ನನ್ನನ್ನು ಉಳಿಸಿಕೊಂಡು ಬಂದಿದೆ. ದೇವತಾ ವಿಚಾರದಲ್ಲಿ ಕಣ್ಕಟ್ಟಿನ ಪ್ರಕಾರವೂ ಇರುವುದರ ಖಾತ್ರಿ ಆದ ಹಾಗೆ, ಈ ಸಂಮೋಹನದ ಸ್ವರೂಪವನ್ನು ಗ್ರಹಿಸಿಕೊಳ್ಳುವ ದಾರಿಯನ್ನು ಕಂಡುಕೊಳ್ಳುವ ಆವಶ್ಯಕತೆಯು ಉಂಟಾಯಿತು.

ನರ(ನಾರ)ಕ-ಅಸುರನನ್ನು ಸಂಹರಿಸಿದ ಶ್ರೀಕೃಷ್ಣನ ಕಥೆ, ನರಕ-ಚತುರ್ದಶಿಯಂದು ಚಿಕ್ಕಂದಿನಿಂದಲೂ ಕೇಳುತ್ತಿದ್ದೆ. ನಾರಾಯಣ ಸ್ವರೂಪೀ ಕೃಷ್ಣನೂ ನಾಗನೇ ಆಗುತ್ತಾನೆ. ನಾರಾಯಣ ನಾರ-ಕ ಈ ನಾಮರೂಪದೊಳಗಿನ ಸಾಮ್ಯವು ಚಿತ್ತವೇಧಕವಾಗಿದೆ. ಶ್ರೀ ಕೃಷ್ಣ (ನಾಗಶಯನ ವಿಷ್ಣುವಿನ ಪರ್ಯಾಯ), ನಾರ-ಕನನ್ನು ಕೊಲ್ಲುತ್ತಾನೆ, ಎಂದರೇನು? ನಾಗವು ನಾಗನನ್ನು ಕೊಂದಿತು, ಎಂದು ಅರ್ಥವೆ?

ಹಾಲುಮತ ದರ್ಶನದ ತರುವಾಯ, ವೇದದೊಳಗೆ ನಾಗನು ಅಡಗಿರುವ ಸಂದೇಹ ಬಲಪಟ್ಟಿತು! ಆದರೆ, ನಾಗನ ನಾಗಮೋಡಿಯ ಅಂಕುಡೊಂಕಾದ ದಾರಿಯ ಜಾಡುಹಿಡಿದು, ವೇದಾರಣ್ಯದಲ್ಲಿ ಸೇರುವ ಸಾಹಸವೂ ನನ್ನನ್ನು ಸುಮ್ಮನಿರಗೊಡಲಿಲ್ಲ! ಬುದ್ಧಿವಂತರು ಅಳುಕುವಲ್ಲಿ ಅಜ್ಞರು ದುಡುಕಿಬಿಡುತ್ತಾರೆ ಎಂಬ ಇಂಗ್ಲಿಷ್ ಲೋಕೋಕ್ತಿ ನೆನಪಿಗೆ ಬರುತ್ತಿತ್ತು! ಸತ್ಯವನ್ನು ಹುಡುಕಿಕೊಂಡು ಹೋಗುವ ಈ ಮೂರ್ಖತನವನ್ನು ಬಿಟ್ಟುಬಿಡ್ವುದಕ್ಕೆ ಮನಸ್ಸು ಒಪ್ಪಲಿಲ್ಲ. ಅಂತೂ, ಋಗ್‌ವೇದಸಾರ: ನಾಗ ಪ್ರತಿಮಾವಿಚಾರ ಮುಗಿಯಿತು. ಸಾಕ್ಷಾತ್ ಪರಿಚಯ ಇಲ್ಲದೆ ಇದ್ದರೂ ಡಾ. ದೇ. ಜ. ಗೌ. ಇವರ ಗುಣಗ್ರಾಹಕ ಸ್ವಭಾವದಿಂದಾಗಿ ಈ ಗ್ರಂಥವು, ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟವಾಯ್ತು (೧೯೭೧). ಈ ಅನ್ವೇಷಣೆಯಲ್ಲಿ ನನ್ನ ಅರ್ಥಗ್ರಹಣ ಪದ್ಧತಿಯನ್ನು ಪರೀಕ್ಷಿಸಿಕೊಳ್ಳಲು ಪುಣೆಯ ವೈದಿಕ ಸಂಶೋಧನ ಮಂಡಲದ ವ್ಯಾಸಂಗಿ ವಿದ್ವಾಂಸರಾದ ಆಚಾರ್ಯ ವಿ. ಪ್ರ. ಲಿಮಯೆ ಮತ್ತು ಡೆಕ್ಕನ್ ಕಾಲೇಜಿನ ಡಾ. ಪರಾಂಜಪೆ ಇವರ ನೆರವನ್ನು ಪಡೆಯಲು ಶಕ್ಯವಾಯಿತು. ಈ ವಿದ್ವಾಂಸರಿಗೆ ನನ್ನ ವಿಚಾರಗಳು ಹಿಡಿಸಿದವು ಎಂದರ್ಥವಲ್ಲ. ಆದರೆ ನಾನು ಗ್ರಹಿಸಿಕೊಂಡಿರುವ ಅರ್ಥವನ್ನು ನಿರಾಧಾರವೆಂದು ಹೇಳಲಾದೀತೇ? ಎಂಬ ಪ್ರಶ್ನೆಯು ನನ್ನದಾಗಿತ್ತು.

ಋಗ್ವೇದಸಾರಃ ನಾಗಪ್ರತಿಮಾ ವಿಚಾರ ಪ್ರಕಟವಾದ ಬಳಿಕ, ಅರ್ಥಗ್ರಹಣ ಪದ್ಧತಿಯ ಬಗೆಗೆ ಇನ್ನೂ ಆಳವಾಗಿ ವಿಚಾರಿಸುವ ಆವಶ್ಯಕತೆಯೆನಿಸಿತು. ಆಧುನಿಕ ಸಂಶೋಧಕರ ಪರಿಭಾಷೆಯನ್ನು ಸ್ವೀಕರಿಸಿ ಪುನರ್ವಿಮರ್ಶಿಸಿ ನೋಡುವ ಕುತೂಹಲವು ತಲೆಯೆತ್ತಿತು. Structural ಅಥವಾ Textural ಮತ್ತು Functional ಈ ದೃಷ್ಟಿಕೋನ, ಆಚಾರಾರ್ಥಕದಿಂದ ಭಾರತೀಯ ಸಂಸ್ಕೃತಿಯನ್ನು ಗ್ರಹಿಸಿಕೊಳ್ಳುವ ಪ್ರಯತ್ನದಲ್ಲಿ ದಗ್ಧಪಟ ಅಥವಾ ರಜ್ಜು-ಸರ್ಪ ಈ ಪರಂಪರಾಗತ ರೂಪಕಗಳು, ಜೀವನದಲ್ಲಿ ಅರ್ಥ=ಮೂಲ್ಯಗಳು ಇಲ್ಲ, ಎಂಬ ಅಭಾವ=ಅತ್ಯಂತಾಭಾವ ಇದನ್ನೇ ಸ್ಥಾಯೀಯಾಗಿ ಗ್ರಹಿಸಿರುವುದನ್ನು ಗಮನಕ್ಕೆ ತಂದುಕೊಡುತ್ತಿವೆ. ಶೂನ್ಯಸಂಪಾದನೆಯಿಂದ ಬೆಂಬಲ ದೊರೆಯುತ್ತಿದೆ! ಆದರೆ, ಈ ಸಂದರ್ಭದಲ್ಲಿ, ನನ್ನ ಎದುರು ನಿಂತ ಪ್ರಶ್ನೆ=ದಗ್ಧಪಟದ=ಸುಟ್ಟ ಬಟ್ಟೆಯ ಅನುಭವಕ್ಕೂ ಮುಂಚೆ, ಸುಡದೆ ಇರುವ ಬಟ್ಟೆಯ ಅನುಭವವು ಜರೂರು ಉಂಟಷ್ಟೆ? ಅ-ಮೃತ ಇದು ಜೀವಂತ=ಜೀವನದ ಅನುಭವದ ತರುವಾಯದ ಅ-ಭಾವಾತ್ಮಕ ಅರ್ಥದ ಭೂಮಿಕೆಯಾಗಿದೆ.

ಈ ವೈಚಾರಿಕ ಹಿನ್ನೆಲೆಯಲ್ಲಿ, ಇಂದಿನ ವೇದದಲ್ಲಿಯೇ ಇರುವ ವಸ್ತ್ರದ ನೇಗಿಯ ರೂಪಕದ ನಿಜಸ್ವರೂಪವು ಸ್ಪಷ್ಟವಾಯ್ತು! ವೈಶ್ವಾನರಾಗ್ನಿಸ್ವರೂಪ, ಸಮಾಜ ಸಮಷ್ಟಿಯ ಅಧ್ಯಕ್ಷತೆಯಲ್ಲಿ ಸಾಂಸ್ಕೃತಿಕ ಜೀವನರೂಪ ಮಹಾವಸ್ತ್ರದ ಹೆಣಿಕೆ ಅಥವಾ ನೇಗೆ ನೈಸರ್ಗಿಕ ರೀತಿಯಲ್ಲಿ, ತನ್ನ ತಾನೇ ಸಾಗುವ ಯೋಜನೆಯು ವಿಕಾಸತತ್ವದ ಪ್ರಕ್ರಿಯೆಯ ಅಂಗವಾಗಿ ಉಂಟೇ ಉಂಟು. ಹಗಲಿನ (ಪ್ರಜ್ಞಾ=ಪ್ರಕಾಶದ) ಭಾವಾತ್ಮಕ ನಡೆವಳಿ ನುಡಿವಳಿ-ಸಾಮಾಜಿಕ ಪಾತಳಿಯ ಮೇಲಣ ಉದ್ದ ಎಳೆಗಳಂತೆ ಇರುವ ಹಾಸು ಇದು. ಇರುಳಿನ (ಪ್ರಾಣಲಿಂಗ ಚೇತಸದ, ಅ-ಭಾವಾತ್ಮಕ ಸ್ಥಳ (ದೇಹ) ಹಾಗೂ ಕಾಲ (ಪ್ರಾಣಲಿಂಗ) ಈ ವಿಭಾಗದ್ವಯದ ವೃತ್ತಾಕೃತಿಯ ಅಡ್ಡಎಳೆಗಳು ಹೊಕ್ಕು, ಇವೆರಡರ ಮೂಲಕ ಸಂಸ್ಕೃತಿ ಸ್ವರೂಪ ಜೀವನಪಟವು ಸಿದ್ಧವಾಗಬಲ್ಲದು.

ಆದರೆ, ಇಂದಿನ ವೇದವು ನರ(ಳ) ಸಂಪ್ರದಾಯದ್ದು. 'ಕೌಪೀನವಂತಃ ಖಲ ಭಾಗ್ಯವಂತಃ' ಬಾಳಗುರಿ ದಗ್ಧ-ಪಟರೂಪ ಜೀವನರೀತಿಯ ಈ ನೇಗಿಯಲ್ಲಿ ಇರುಳು ಇದನ್ನು ಹಾಸು ಎಂದೂ, ಹಗಲನ್ನು ಹೊಕ್ಕು ಎಂದೂ ತಿರುವುಮುರುವು ಆಗಿ ಯೋಜಿಸಲಾಗಿದೆ, ಈ ವೇದದಲ್ಲಿ! ವೇದದಲ್ಲಿ 'ಅಹಃ ಚಕೃಷ್ಣಂ, ಅಹಃ ಅರ್ಜುನಂ ಚ' ಎಂಬೀ ರೂಪದಲ್ಲಿ ಈ ವಸ್ತ್ರಹೆಣೆಯುವ ಕೆಲಸವು ನಡೆದಿದೆ! ಸಾಯಣರು ಇದರ ಅರ್ಥ ಹೇಳುವಾಗ ಬರೆಯುತ್ತಾರೆ: ಅಹಃ ಇದು ಹಗಲು ಎಂಬರ್ಥದ ಪದವು. ಆದರೆ, ಈ ವೇದದ ಕವಿಗೆ ಇದನ್ನು ರಾತ್ರಿ ಎಂಬರ್ಥದ್ದಾಗಿಸುವ ಇಚ್ಛೆಯಿದೆ. ಈ ಉದ್ದೇಶದಿಂದಲೇ ಹಗಲು ಇದಕ್ಕೆ ಕಪ್ಪು-ಕತ್ತಲೆ ಎಂಬರ್ಥದ ಕೃಷ್ಣ ಎಂಬ ವಿಶೇಷಣವನ್ನು ಸೇರಿಸಲಾಗಿದೆ! ಕಪ್ಪು-ಕತ್ತಲಿನ ಹಗಲು. ಈ ವೇದದ ಕವಿಗೆ ಅಹಸ್ ಪದದ ಅರ್ಥವು ಗೊತ್ತಿದ್ದೂ ಉದ್ದೇಶಪೂರ್ವಕವಾಗಿ ಬದಲಿಸುತ್ತಿದ್ದಾನೆ! ಪ್ರಕಾಶದ (ಅರ್ಜುನನ) ಹಿಂದೆ ಕತ್ತಲೆ (ಕೃಷ್ಣ) ಇರಲಿಕ್ಕೆಬೇಕು. ಆದರೆ, ಮೃತ್ಯುತತ್ವದ ಕೃಷ್ಣನ (ಲಿಂಗಶಕ್ತಿಯ) ಭಕ್ತನಾಗುತ್ತಾನೆ, ಈ ಅರ್ಜುನ! ಆದುದರಿಂದಲೇ ಈ ಗೀತೆಯ ಅರ್ಜುನನು ನರ(ಳ) ಸ್ವರೂಪನೇ ಹೊರತು; ಪ್ರಕಾಶ ತತ್ವದ ಮನುಜನಲ್ಲ. ಇವನು ಬೃಹಲ್ಲಾಂಗಲ ಕಪಿಧ್ವಜನಂತೆ! ಈ ಹಿನ್ನೆಲೆಯಲ್ಲಿ ಸ್ಪಷ್ಟತೆಯನ್ನು ಪಡೆಯುತ್ತಿರುವ ಸಂಗತಿಯು ಇಷ್ಟು : ಈ ಜೀವನ=ಸಂಸ್ಕೃತಿಯು ಮಾನವ ಧರ್ಮ ಸಂಸ್ಕೃತಿ ಇದ್ದರೆ, ಇದಕ್ಕೆ ಕಟ್ಟಡ ಇರಬಲ್ಲದು ಅದು ನೇಗಿಯ ಮಹಾವಸ್ತ್ರಪಟವಿರಬಲ್ಲುದು.

ಆದರೆ, ಭಾರತೀಯರ ಇಂದಿನ ಧರ್ಮ-ಸಂಸ್ಕೃತಿಯು ನರ(ಳ) ಸಂಪ್ರದಾಯದ್ದು Functional ಸ್ವರೂಪದ್ದೇ ಇರುವದು ಸುಳ್ಳಲ್ಲ. Functional ಇದಕ್ಕೆ ಸರಿಯಾದ ಪ್ರತಿಶಬ್ದವು ರೂಢಿಗೆ ಬಂದಿಲ್ಲ. ಗಾಂಧೀಜಿಯವರ ಆತ್ಯಂತಿಕ ಅಹಿಂಸೆಯ ತತ್ವವನ್ನು ಸ್ವೀಕರಿಸಿ, ದೇಶಕ್ಕೆ ಸ್ವಾತಂತ್ರ್ಯವು ದೊರೆಯಲು ಶಕ್ಯವೆ? ಮತ್ತು ಅಹಿಂಸಾ ತತ್ವ ಸ್ವೀಕರಿಸುತ್ತ ಸ್ವಾತಂತ್ರ್ಯ ಉಳಿಸಿಕೊಳ್ಳಲು ಸಾಧ್ಯವೆ? ಎಂಬುದು ಅಸಹಕಾರದ ಯುಗದಲ್ಲಿ ತೀವ್ರ ಚರ್ಚೆಯ ವಿಷಯವಾಗಿತ್ತು. ಸರದಾರ ಪಟೇಲರು, ತಮ್ಮ ಉಪನ್ಯಾಸದಲ್ಲಿ ಅಂದು Functional approach ಎಂದು ಹೇಳಿದ್ದನ್ನು ನಾನೇ ಕೇಳಿದ್ದೇನೆ. Functional ಇದಕ್ಕೆ ತುರ್ತು, ಆಪತ್ಕಾಲೀನ, ಅನಿವಾರ್ಯ ಸ್ವರೂಪದ ಛಾಯಾರ್ಥಗಳು ಉಂಟು. ಬಾಳಿನಲ್ಲಿ ಜೀವನಕ್ಕಿಂತ, ಜೀವಿತ-ಎಂತೂ ಬದುಕಿ ಉಳಿದರೆ ಸಾಕು ಎಂಬ ಪರಿಸ್ಥಿತಿ ಇರುವಾಗ, ಆಚರಣೆಗೆ ಬರುವ ನಡೆವಳಿ, ನುಡಿವಳಿಯು Functional ರೂಪದ್ದೇ ಆಗುತ್ತದೆ.

ಮಾನವಶಾಸ್ತ್ರಜ್ಞ ಮಲಿನೊವಿಸ್ಕಿಯು ಪ್ರಾಥಮಿಕ ಹಂತದ ಜನದ ರೂಢಿ ನಡೆವಳಿ ನುಡಿವಳಿಯ 'Functional Religion'ದ ಬಗ್ಗೆ ಬರೆದಿದ್ದಾನೆ. ಡುರ್‌ಖಾಯಿಂ, Negative Religion ಕುರಿತು ಬರೆದಿದ್ದಾನೆ. ಇದು ಕಾಡಾಡಿಗಳ ಧರ್ಮದ ಸ್ವರೂಪ; ಆಗಾಮೀ ನಾಳೆಗಳನ್ನು ಲೆಕ್ಕಿಸದೆ ನಿನ್ನೆಗಳೇ ಇಂದು ಆಗುವ ಸ್ಥಳ (ದೇಹ)ದೂಡನ ಬದ್ಧ ಕಾಲಪರಿಸ್ಥಿತಿಯ ಒತ್ತಾಯದ ಪ್ರಭಾವಕ್ಕೆ ಒಳಗಾಗುವವರು, ಪ್ರವಾಹಪತಿತ ನರಧರ್ಮಿಗಳೇ ಆಗುವ ಅನಿವಾರ್ಯತೆಯು ಉಂಟು. ಮನುಜನು, ನರ(ಳ)ನಾದದ್ದು ಈ ಕಾರಣದಿಂದಾಗಿ! ಅರ್ಥಗ್ರಹಣ ತತ್ತ್ವದ ಭೂಮಿಕೆಯಿಂದ ಇಂದಿನ ಋಗ್ವೇದದ ಕಟ್ಟಡದ ವೈಶಿಷ್ಟ್ಯವನ್ನು ವಿಷದ ಪಡಿಸುವ ಒಂದು ಗ್ರಂಥವು ಯೋಗಾಯೋಗದಿಂದ ಕೈಗೆ ಬಂತು. ಇಂದಿನ ವೇದವನ್ನು ಆರ್ಯ-ದ್ರಾವಿಡ ಅಥವಾ ಆರ್ಯ-ಆರ್ಯೇತರ ಇವರೊಳಗಿನ ಸಂಘರ್ಷದ ದೃಷ್ಟಿಯಿಂದ ಅರ್ಥಯಿಸುವ ಪ್ರೊ. ಮ್ಯಾಕಡೊನೆಲ್, ಪ್ರೊ. ಕೀಥರ ಗ್ರಂಥಗಳು, ನಮ್ಮ ವಿಶ್ವವಿದ್ಯಾಲಯಗಳಲ್ಲಿ ಪಾಠ್ಯಪುಸ್ತಕಗಳಾದುವು. ಆದರೆ, ಇದಕ್ಕೂ ಬೇರೆ ಭೂಮಿಕೆಯಿಂದ ಸಂಶೋಧನ ಮಾಡಿರುವ ಮ್ಯಾಕ್‌ಡೊನೆಲ್ಲರ ಸಮಕಾಲೀನ ಬೇರೆ ಇಂಗ್ಲಿಷ್ ವಿದ್ವಾಂಸರ ಗ್ರಂಥ ನಮ್ಮ ಗ್ರಂಥಾಲಯಗಳಲ್ಲಿ ದೊರೆಯುವದೂ ಕಷ್ಟ. ಬ್ರೂಕಲಿನ್ (ನ್ಯೂಯಾರ್ಕ) ಗ್ರಂಥಾಲಯದಲ್ಲಿ ಓದಲು ದೊರೆತ ಒಂದು ಗ್ರಂಥವನ್ನು ಹೆಸರಿಸದೆ ಇದ್ದರೆ ಅನ್ಯಾಯವು ಆಗಲಿದೆ.[೩]

ಈ ಗ್ರಂಥವನ್ನು ಪ್ರತಿಮಾಡಿಸಿ ತರುವ ಪ್ರಯತ್ನವು ವಿಫಲವಾಯ್ತು. ಇದರಲ್ಲಿನ ಮಹತ್ವದ ಅಂಶಗಳನ್ನು ಇಲ್ಲಿ ಎತ್ತಿಹೇಳಲಿದ್ದೇನೆ. ಇಂದಿನ ಈ ಸಂಹಿತೆಯ ಸ್ವರೂಪ ಪರಿಚಯ ಮಾಡಿಕೊಡುವ ವಿಮರ್ಶಾತ್ಮಕ ವಾಕ್ಯವು ಹೀಗಿದೆ:

> We meet continually in our hymns with forms of expression appearing at first sight to be the vehicle of grand thought, placed side by side with futile and foolish conceits

ತನ್ನ ಈ ನಿಷ್ಕರ್ಷವನ್ನು ಬಗೆಬಗೆಯಿಂದ ವಿವರಿಸಿದ್ದಾನೆ; ಈ ಸಂದರ್ಭದಲ್ಲಿ ಈ ಸಂಶೋಧಕನು ಬೆರಳಿಟ್ಟು ಹೇಳಿರುವ ಸಂಗತಿಯು ಅತ್ಯಂತ ಮೌಲಿಕವಿದೆ. ಈ ವೇದದಲ್ಲಿ ಇರುವ ವಿಶ್ವನಿಯಮ ಹಾಗೂ ವ್ಯವಸ್ಥೆಯ ಬಗೆಗಿನ ನಿಷ್ಠೆಯನ್ನು ವ್ಯಕ್ತಪಡಿಸುವ ಋತ (ಸತ್ಯ) ಇದನ್ನೇ ಅರ್ಥವಿಹೀನ ಅಥವಾ ವಿಪರೀತ ಅರ್ಥದ್ದು ಆಗಿಸುವ ಉಲ್ಲೇಖನಗಳು ಅಲ್ಲಲ್ಲಿ ಇವೆ. grand (supreme) thought ಇದರ ಪಕ್ಕದಲ್ಲಿಯೆ ವೇದದಲ್ಲಿ. ಸೂರ್ಯಾ - ಚಂದ್ರಮಸೌ ಈ ಉಭಯ ಪರಸ್ಪರ ವಿರೋಧೀ ಪ್ರೇರಣಾ ಪ್ರಚೋದಕ ಶಕ್ತಿಗಳನ್ನು ಒಂದೇ ಕಾಲಕ್ಕೆ, ಒಂದೇ ಪಾತಳಿಯ ಮೇಲೆ ತಂದು ನಿಲ್ಲಿಸಿದ್ದಾಗಿದೆ! ಇವನ ಋತದ ಸ್ಪಷ್ಟೀಕರಣವು ಮನನೀಯವಿದೆ. ಋತ, principle : natural or moral law, fate or will of supreme God[೪] ಋತಂ ಮಹತ್: ಬೃಹತ್; ಋತ ಇದುವೆ ಅತ್ಯಂತ ಶ್ರೇಷ್ಠ ಎಂಬ ನಿಷ್ಠೆಯ mighty ಋತದ ಎದುರು ಏನೆಲ್ಲ ದೇವರುಗಳು. Sink into the position of angels, or heavenly spirits". ಅಲ್ಲದೆ, ಈ ದೇವರುಗಳಿಗೆ ಋತದ=ವಿಶ್ವನಿಯಮದ ಹಿನ್ನೆಲೆಯಲ್ಲಿ ಸ್ಥಾನವೇ ಹೊರತು, ಈ ವಿಶ್ವನಿಯಮದ ಸಂರಕ್ಷ ಸ್ವರೂಪ ಈ ದೇವರುಗಳಲ್ಲಿ, ಏಕಮೇವಾ ದ್ವಿತೀಯತ್ವವು ಯಾವ ದೇವರ ಪಾಲಿಗೂ ಇಲ್ಲ; ಇರಬಾರದು.

ಸಮ್ರಾಟನೆಂಬ ವರುಣನು ಋತಸ್ಯ ಗೋಪ್ತಾ ಆಗಿದ್ದನು! ಈ ವೇದದಲ್ಲಿದ ಋತದ ಅನನ್ಯ ಸಾಧಾರಣವಾದ ಅಗ್ರಸ್ಥಾನವನ್ನು ತಪ್ಪಿಸಲಾಗಿದೆ. ಈ ಋತದ! ಬದಲು ವ್ರತ ಎಂಬ ಬೇರೊಂದು ಪಾರಿಭಾಷಿಕ ಪದವನ್ನು ಯೋಜಿಸಲಾಗುತ್ತದೆ. ವರುಣನು ಆದಿತ್ಯನಾಗುವುದರ ಸಂಗಡ, ಧೃತವ್ರತಃ ಎಂದು ವರ್ಣಿಸಲ್ಪಡುತ್ತಾನೆ! ಆದಿತ್ಯರೂಪ ವರುಣನು=ವೃಕ್ಷ, ನಾಗ; ಲಿಂಗ ಸ್ವರೂಪನಾಗುತ್ತಾನೆ; ಈ ಕಾರಣದಿಂದ. ಈ ವರುಣನು ರಾತ್ರ್ಯಾಭೀಮಾನಿ ದೇವರು ಆಗಿದ್ದಾನೆ! ನಾನೇ ವರುಣ ಎಂಬ ವಿಷ್ಣು-ಕೃಷ್ಣರ ನಿಜಸ್ವರೂಪವು ಬಯಲಿಗೆ ಬರುತ್ತಿದೆ. ವರುಣನು ಜಲದ (ರೇತ-ರಸದ) ಸ್ವಾಮಿ ಎಂದು ಬಗೆಯಲಾಗುತ್ತದೆ. ಧೃತವ್ರತ ಆದಿತ್ಯರೂಪೀ

ವರುಣನು ರಾತ್ರ್ಯಾಭಿಮಾನಿ (ಲಿಂಗ) ದೇವನು ಎಂದರೆ ಪ್ರಚ್ಛನ್ನ ಚಂದ್ರಮನು ಆಗಿದ್ದಾನೆ. ಈ ಚಂದ್ರನು ಉಭಯಲಿಂಗೀ ಪ್ರಾಣಶಕ್ತಿ! ಈ ಪ್ರಾಣ=(ಉಸಿರು) ಶಕ್ತಿ ಇದು ಉಂಟು, ಇಲ್ಲ ಎಂಬ ಹಾಗಿನ ಸಂಭ್ರಮ ನಿರ್ಮಿಸುವುದುಂಟು. ಪ್ರಾಣೋಪಾಸಕ-ಪ್ರಣವೋಪಾಸಕರ ಈ ಸಂಪ್ರದಾಯವು, ಪೂಜಾಸ್ಥಾನವಾಗಿ ಕಲ್ಪಿಸಿದ ನಾನಾ ಪ್ರಾಣಿ-ಪಶುಗಳು ಪ್ರಾಣಲಿಂಗ ಶಕ್ತಿಯ ಪ್ರತೀಕಗಳು ಆಗಿವೆ. ಈ ಕಥೆಗಳ ವೈಚಿತ್ರ್ಯವು ದಿಗ್‌ಭ್ರಾಂತಿಗೆ, ಕಾರಣವಾಗುತ್ತಿದೆ. ನಾಗಶಯನ=ವಿಷ್ಣು=ಗರುಡವಾಹನನೂ ಸರಿ! ಗಿಲ್ಬರ್ಟ್ ಮರ್‍ರೆ, ಗ್ರೀಕ್‌ಸಂಸ್ಕೃತಿಯ ಶೋಧದಲ್ಲಿ ಖಾತ್ರಿಯಾದ ಒಂದು ಸೂತ್ರ ಹೇಳುತ್ತಾನೆ=ದೇವರು ಮತ್ತು ಅವನ ವಾಹನ ಇವು ಬೇರೆಯಲ್ಲ; ಪೂರ್ವದಲ್ಲಿ ವಾಹನವೇ ದೇವರಾಗಿತ್ತು! ಆದಕಾರಣ ನಾಗ=ಗರುಡ=ವೃಷಭ!

ಆದರೂ ಇವುಗಳಲ್ಲಿ ಇನ್ನೂ ಒಂದು ಅಂತಃಸಂಗತಿಯು ಇದೆ. ಉದಾ: ಮಹಿಷಾಸುರಮರ್ದಿನೀದೇವಿ, ತನ್ನ ಪತಿ ಎಂಬ ಅಸುರ ಮಹಿಷನನ್ನು ಕೊಲ್ಲುತ್ತಾಳೆ! ವೇದದಲ್ಲಿಯೇ ಸೋಮ ವೇಷಧಾರಿ ಚಂದ್ರನನ್ನು, ಬ್ರಹ್ಮ ದೇವಾನಾಂ, ಪದವೀ: ಕವೀನಾಂ ಋಷಿಃ ವಿಪ್ರಾಣಾಂ, ಮಹಿಷಃ ಮೃಗಾಣಾಂ ಎಂದು ಇರುವ ಈ ವರ್ಣನೆಯು ನಿಜವಷ್ಟೆ? ಈ ದಿವ್ಯಕಥೆಯ, ಅಸುರ ಮಹಿಷ=ಚಂದ್ರನನ್ನು ಸಂಹರಿಸುವ, ಈ ಮಹಿಷಿಯೂ ಅಸುರೆ ಚಂದ್ರಾ ದೇವಿಯೇ ಆಗುತ್ತಿದ್ದಾಳೆ! ಅಸುರ=ದೈತ್ಯ ಹಯಗ್ರೀವನನ್ನು ಸಂಹರಿಸಿ, ವೇದಗಳನ್ನು ನೀರೊಳಗಿಂದ ಹೊರಗೆ ತಂದನೆಂಬ ಈ ಭಗವಾನ್ ವಿಷ್ಣುವೂ ಹಯಗ್ರೀವ ಸ್ವರೂಪನೇ ಇದ್ದಾನಲ್ಲ! ಇನ್ನು, ಈ ಕಣ್ಕಟ್ಟು ನೋಡಿಕೊಳ್ಳಿ : ಕಾಕ ಎಂಬ ಅಸುರನನ್ನು ಕೊಂದವನು ರಾಮ-ಚಂದ್ರನು! ಹಯಗ್ರೀವ, ಹಯಗ್ರೀವನನ್ನು ಕೊಲ್ಲುತ್ತಾನೆ ನಾಗ(ಶಯನ) ಕೃಷ್ಣ, ನಾರಕ=ನಾಗನನ್ನು ಸಂಹರಿಸಿದ್ದಾನೆ. ಅಸುರೆ ಮಹಿಷಿ-ಚಂದ್ರಾದೇವಿ, ಅಸುರ ಮಹಿಷ= ಚಂದ್ರನನ್ನು ಕೊಲ್ಲುತ್ತಾಳೆ. ಆದಕಾರಣ, ಕಾಕ ಅಸುರನನ್ನು ಕೊಂದವನೆಂಬ ರಾಮ(ಚಂದ್ರ)ನೂ ಅಸುರನೇ ಆಗುತ್ತಿಲ್ಲವೆ? ಈ ರಾಮಾಯಣ, ಮಹಾಭಾರತಗಳನ್ನು ಐತಿಹಾಸಿಕ ಹಿನ್ನೆಲೆಯನ್ನುಳ್ಳ ಕಾವ್ಯಗಳು, ಎಂದು ನಂಬಿಸಲಾಗಿದೆ!

ಈ ರಾತ್ರಸಮಯಾಚಾರಿ ಚಂದ್ರೋಪಾಸಕರು, ಅತ್ಯಂತ ಅಭಾವವನ್ನೇ ಸ್ಥಾಯೀ ಎಂದು ನಂಬಿಸಿದ್ದಾಗಿ! ಚಂದ್ರನನ್ನು ಚಂದ್ರಾ ಅಥವಾ ಚಂದ್ರಾಳನ್ನು ಚಂದ್ರ ತೀರಿಸಿ ನೆಡುತ್ತಾನೆ! 'War is Father of all, and King of all; Strife is justice!' ಜೀವೋ ಜೀವಸ್ಯ ಜೀವನಂ ಇದು ಈ ಜೀವಿತದ ಪಾತಳಿಯ ಅಸ್ತಿತ್ವದ ಸ್ವರೂಪ! ಡಾರ್ವಿನ್ನನಿಗೆ ಕಂಡದ್ದು ಜೀವಿತದ ಈ ಪಾತಳಿ! ಆದರೆ, ವ್ಯಾಲ್ಲಾಸನ ಪ್ರಾತಿಭ ದೃಷ್ಟಿಗೆ ಕಂಡದ್ದು ಮಾನವ ಜೀವನ: ಸಂಸ್ಕೃತಿ, ಬರಿ ಜೀವಿತವಲ್ಲ. ನರ(ಳ) ಸಂಪ್ರದಾಯಗಳ ಈ ಎಲ್ಲ ಕೈಚಳಕ, ಬಾಯ್ಚಳಕ, ಮಂತ್ರ, ಮಾಟ, ಮೋಸ ಯಾತಕ್ಕಾಗಿ? ಮನು ವೈವಸ್ವತನ ಮಾನವ ಧರ್ಮಸಂಸ್ಕೃತಿಯನ್ನು ಮೆಟ್ಟಿ ನಿಲ್ಲುವುದಕ್ಕಾಗಿ! ತಮ್ಮ ಪಂಥೀಯ ಲೈಂಗಿಕ ಅನಾಚಾರ ಬಯಲಿಗೆ ಬಾರದೆಂದು ಅಲ್ಲವೆ?

ಸೂರ್ಯ ಮತ್ತು ಚಂದ್ರರೂಪ ಸಾಂಕೇತಿಕ ದಿವ್ಯಶಕ್ತಿ

ವೈವಸ್ವತಮನು ಪ್ರಣೀತ ಮಾನವಧರ್ಮದ ತಾತ್ವಿಕಭೂಮಿಕೆಯು ಇದು. ಉಂಟು, ಎಂದು ನರ(ಳ) ಸಂಪ್ರದಾಯದ ಅಸ್ತಿತ್ವವು ಅರಿಕೆಗೆ ಬರುತ್ತಿದೆ! ಈ ವಿವರಣೆಯು ಬೇರೆಡೆಗೆ ಬಂದಿದೆ. ಈ ವೈವಸ್ವತಮನುವನ್ನು ಕಣ್ಮರೆಯಾಗಿಸಲು ನಿರ್ಮಿತವಾಗಿರುವ ಪುಣ್ಯಶ್ಲೋಕರ ಪರಿಚಯದೊಡನೆ ಈ ವಿವರಣೆಯು ಮುಕ್ತಾಯವಾಗಲಿದೆ.

ಪುಣ್ಯಶ್ಲೋಕೋ ನಳೋ ರಾಜಾ। ಪುಣ್ಯಶ್ಲೋಕೋ ಯುಧಿಷ್ಠಿರಃ ॥
ಪುಣ್ಯಶ್ಲೋಕಾ ಚ ವೈದೇಹೀ । ಪುಣ್ಯಶ್ಲೋಕೋ ಜನಾರ್ದನಃ ॥

ಈ ಶ್ಲೋಕದಲ್ಲಿ ಇರುವ ಸ್ತೋತ್ರಾರ್ಹನಾದ ಈ ನಳನು ಯಾರು? ಈತನು ಸೃಷ್ಟಿಕರ್ತ ನರ(ಳ)ನೇ ಇರುವ ಶಕ್ಯತೆಯನ್ನು ಅಲ್ಲಗಳೆಯಲು ಆಗುವುದಿಲ್ಲ. ಈ ಶ್ಲೋಕದ ಯುಧಿಷ್ಠಿರನು, = ಯುಧಿ-ಸ್ಥಿರ ಕುರುಕ್ಷೇತ್ರದ ಯುದ್ಧದಿಂದ ಕಾಲ್ ಕಿತ್ತಿಕೊಂಡು ಓಡಿಹೋಗುವ ನರ(ಳ), ಈತನಿರಲಾರನು! ಈ ಯುಧಿಷ್ಠಿರ ವೀರನ ಸಾಲಿನಲ್ಲಿ ಬರುವ ಈ ವೈದೇಹಿ ಆ ಸೀತೆಯೇ? ಛೇ! ಇವಳು ದ್ರೌಪದಿಯೇ ಇರಬೇಕು. ಮಹಾಭಾರತ

ತಾತ್ಪರ್ಯ ನಿರ್ಣಯದಲ್ಲಿ, ಸಂಪ್ರದಾಯದ ಗುಹ್ಯಾರ್ಥವನ್ನು ಬಲ್ಲ ಶ್ರೀ ಮಧ್ವಾಚಾರ್ಯರು, ದ್ರೌಪದಿಯು 'ಕಾಲೀ ಚಂದ್ರಾ ಚ ಉಚ್ಯತೇ' ಎಂದಿದ್ದಾರೆ! ಅಂತರ್ ವಿಸಂಗತಿಯೇ ಸ್ಥಾಯಿೀರುವ ಈ ಶ್ಲೋಕವು ಚಾಂದ್ರಪಂಥೀಯ ವೈಶಿಷ್ಟ್ಯ ಸೂಚಕವಾಗಿದೆ. ಅತ್ಯಂತ ಪತಿವ್ರತಾ ಶಿರೋಮಣಿ ಎಂಬ ಈ ವೈದೇಹಿ ರಾಮ-ಚಂದ್ರ=ಅಸುರನ ಹೆಂಡತಿ, ಹೆಂಡತಿ ಅಲ್ಲವೆ?

ಈ ಪುಣ್ಯಶ್ಲೋಕದಲ್ಲಿ ಬರುವ ಅಂತ್ಯನಾಮ, ಜನ-ಅರ್ದನ ನಾನಾ ಕಾಮನೆಗಳನ್ನು, ಲೈಂಗಿಕ ಪ್ರಚೋದನೆಯಿಂದ ಪ್ರೇರಿಸಿ ಜನವನ್ನು ಗಾಸಿಗೊಳಿಸುವ ಈ ದೇವನನ್ನು ಜನಾರ್ದನ ಎಂದು ಹೆಸರಿಸಿರುವಲ್ಲಿ ಔಚಿತ್ಯವಿದೆ. ಈ ನರ (ಳ)ರು ತಮ್ಮ ಪಾಪನಾಶಕ್ಕಾಗಿ ನಿತ್ಯವೂ ನೆನೆಯಬೇಕಾದ ಪಂಚಕನ್ಯಾರತ್ನಗಳ ಹೆಸರುಗಳೂ ಅಭ್ಯಸನೀಯವಾಗಿವೆ. ಇದಕ್ಕೆ ಹಲವು ಪಾಠಾಂತರಗಳೂ ಉಂಟು.

ಅಹಲ್ಯಾ, ದ್ರೌಪದೀ, ಸೀತಾ, ತಾರಾ, ಮಂಡೋದರೀ ತಥಾ ।
ಪಂಚಕನ್ಯಾ ಸ್ಮರೇತ್ ನಿತ್ಯಂ ಮಹಾಪಾತಕ ನಾಶನಂ ॥

ಅತ್ಯಂತ ಪತಿವ್ರತಾ ಶಿರೋಮಣಿ ಎಂದು ನಂಬಿಸಿರುವ ಈ ಸೀತೆಯನ್ನು ಐದು ಗಂಡಂದಿರ ಮಡದಿ ದ್ರೌಪದಿ, ಜಾರೆ ಎಂಬ ಖ್ಯಾತಿಯ ಅಹಲ್ಯೆ, ತಾರೆಯರ ಸಂಗಡ ಹೇಳಿರುವಲ್ಲಿ ಔಚಿತ್ಯವೇನು? ಚಂದ್ರೋಪಾಸಕ ಈ ನರ(ಳ) ಸಂಪ್ರದಾಯಗಳಲ್ಲಿ ನಿಜವಾಗಿಯೂ ನೀತಿ-ಅನೀತಿ, ಖರೆ, ಸುಳ್ಳು ಇಂಥ ಮೂಲ್ಯಗಳಿಗೆ ಅವಕಾಶವೇ ಇಲ್ಲ ಆದುದರಿಂದಲೆ ಆತ್ಯಂತಿಕ ಅಹಿಂಸೆ, ಸತ್ಯ, ಅಸ್ತೇಯ ಇತ್ಯಾದಿಗಳಲ್ಲಿ ತೀವ್ರತಮ ನಿಷ್ಠೆಯಿದೆ ಎಂಬ ನೀತಿಯ ಸೋಗು ಅವಶ್ಯವಾಗಿದೆ.

ಈ ಪುಣ್ಯಶ್ಲೋಕೆಯರಲ್ಲಿ ಕೊನೆಯ ಮಂಡೋದರಿ, ರಾವಣನ ಹೆಂಡತಿ ಎಂದು ಬಗೆಯಲಾಗಿದೆ. ಈ ಹಿನ್ನೆಲೆಯಲ್ಲಿ ಮಂಡೋದರಿ=ಚಂದ್ರಾಪತಿ ರಾವಣ, ಸೀತಾ=ಚಂದ್ರಾಪತಿ ರಾಮ ಇವರಿಬ್ಬರೂ ಷಡ್ಡಕರು! ರಾಮನ ಶತ್ರು ರಾವಣನು ಅಲ್ಲವೇ ಅಲ್ಲ. ರಾವಣಪುತ್ರ ಇಂದ್ರಜಿತುವಿನ ಹೆಂಡತಿ, ಲಕ್ಷ್ಮಣನ ಮಗಳಂತೆ! ರಾಮಚಂದ್ರನ ನಿಜವಾದ ಶತ್ರು, ಅಹಿ=ವೃತ್ರ (ಚಂದ್ರ)ನ ವೈರಿ ಎಂಬ ಇಂದ್ರನೇ ಆಗುತ್ತಾನೆ. ಅಹಲ್ಯಾ (ಚಂದ್ರಾ) ಜಾರನೆಂಬ ಅಪಕೀರ್ತಿಹೊರಿಸಿ, ಇಂದ್ರನನ್ನು ಖಲನಾಯಕನನ್ನಾಗಿಸಿರುವ ಕುತಂತ್ರವು ನಿಷ್ಕಾರಣವಲ್ಲ.

ಪ್ರಾತಃಸ್ಮರಣೀಯ ಸಪ್ತ ಚಿರ(೦) ಜೀವಿಗಳ ಸಾಕ್ಷಾತ್ ದರ್ಶನದಿಂದ ಈ ನರ(ಳ) ಜನ್ಮದ ಸಾರ್ಥಕವಾಗಲಿದೆ. "ಅಶ್ವತ್ಥಾಮಃ, ಬಲಿಃ, ವ್ಯಾಸಃ, ಹನುಮಾನ್, ವಿಭೀಷಣಃ, ಕೃಪಃ ಪರಶುರಾಮಃ ಚ, ಸಪ್ತೈತೇ ಚಿರಜೀವಿನಃ". ಈ ನಾಮಾವಳಿಯಲ್ಲಿ ಬಂದಿರುವ ಹನುಮಾನ್ = ವೃಷಾಕಪಿ ಮರುತನು ನಳನೇ ಇರುವುದನ್ನು ಈ ಪ್ರಬಂಧದಲ್ಲಿ ತೋರಿಸಿಕೊಡಲಾಗಿದೆ. ಪರಶುಧರ ರಾಮ-(ಚಂದ್ರ)=ಎಲ್ಲಮ್ಮನ ಲೋಕಮಾತೆಯ ಏಕಮಾತ್ರಪುತ್ರ=(ಅದಿತಿಯ) ಆದಿತ್ಯ=ನಳ ಎಂಬ ವಿಚಾರವೂ ಮುಂದೆ ಬರುತ್ತದೆ. ವ್ಯಾಸನ ವಿವರಣೆಯ ಮೂಲಕ ಇದನ್ನು ಇನ್ನೂ ಒಂದು ನಿಟ್ಟಿನಿಂದ ಈ ಚಿರಂಜೀವಿಗಳ ಆಕೃತಿ ಸ್ವರೂಪವನ್ನು ದೃಢಪಡಿಸಿಕೊಳ್ಳಬಹುದು. ಮಹಾಭಾರತದ ಕೆಲವು ಪಾಠಗಳಲ್ಲಿ ದೊರೆಯುವ ಶ್ಲೋಕ ಇದು.

ವ್ಯಾಸಾಯ ವಿಷ್ಣು-ರೂಪಾಯ, ವ್ಯಾಸರೂಪಾಯ ವಿಷ್ಣವೇ।
ನಮೋ ವೈ ಬ್ರಹ್ಮನಿಧಯೇ ವಸಿಷ್ಠಾಯ ನಮೋ ನಮಃ॥

ಈ ಶ್ಲೋಕದೊಳಗಿನ ಈ ಬ್ರಹ್ಮನಿಧಿ ಬ್ರಹ್ಮ-ಪುಚ್ಛಾರೂಪನು ವಶಿಷ್ಠನು. ದಕ್ಷಿಣ-ಕಪರ್ದ ನಾಮದಿಂದಲೂ ಪ್ರಸಿದ್ಧನಿದ್ದಾನೆ. ಕಪರ್ದ ಕವಡಿ ಕೇಶ! ಈ ಕೂದಲೆಳೆಯ ನೆನಹು ಕೆಲಸಂಪ್ರದಾಯಗಳ ಹಣೆಯ ಬರಹದಂತೆ ಉಳಿದು ಬಂದಿದೆ. ಈ ದಕ್ಷಿಣ ಕಪರ್ದ ವಸಿಷ್ಠನಿಗೆ ಶಿಪಿವಿಷ್ಟರೂಪ ವಿಷ್ಣುವು ದರ್ಶನವನ್ನಿತ್ತಿದ್ದನಂತೆ![೫೫]

ಶಿಪಿವಿಷ್ಟ ಶಿವಲಿಂಗ ರುದ್ರನ ಪರ್ಯಾಯ ನಾಮವೂ
ಆಗಿದೆ=ಹ್ರಸ್ವಾಯಚ ವಾಮನಾಯ ನ ಶಿಪಿವಿಷ್ಟಾಯ ಚ ನಮೋವರ್ಷಿತ್ರೇ ಚ[೫೬]

ಈ ಶಿಪಿವಿಷ್ಟ ವಿಷ್ಣುವು ನರ(ಳ)ನೇ ಇದ್ದಾನೆ, ಆದಕಾರಣ, ವ್ಯಾಸಾಯ ವಿಷ್ಣು ರೂಪಾಯ ವ್ಯಾಸರೂಪಾಯ ವಿಷ್ಣವೇ ಎಂಬ ಈ ಸಮೀಕರಣವೂ ನಳನ ದರ್ಶನ ಮಾಡಿಸುತ್ತಿದೆ! ಹೆಡೆಯ ಮೇಲಣ ಕೆಂಪುರತ್ನದ ನಾಗ:ಲಿಂಗರೂಪನು, ಇವನು, ಕಂ=ಬ್ರಹ್ಮ=ಪ್ರಜಾಪತಿ ಎಂದರೂ ಈತನು ಈ ನರ(ಳ), ಸ್ಥಳ (ದೇಹ)ದೊಡನೆ ಬದ್ಧಕಾಲ (ಪ್ರಾಣಲಿಂಗಚೇತ) ಶಕ್ತೀ! ಈ ದೃಷ್ಟಿಯಿಂದ ವ್ಯಾಸ [O] ಇದು ಸ್ಥಲಸಹಿತ ಇರುವ ನಾಮರೂಪ; ಈ ಶಬ್ದಶಿಲ್ಪದಲ್ಲಿ ಪ್ರಾಮಾಣಿಕತೆಯ ಅಂಶವಿದೆ. ಆದರೆ ಸ್ಥಲದಲ್ಲಿ ಐಕ್ಯವಿರುವ ಕಾಲಶಕ್ತಿ. ಕಾಲತತ್ವದ ಈ ಗಣ್ಣಿಗೆ ಕಣ್ಣಿನ=ಸ್ಥೂಲದ ಹೊರಗೆ ಸ್ವತಂತ್ರ ಅಸ್ತಿತ್ವವೇ ಇಲ್ಲವಲ್ಲ! ಆದುದರಿಂದಲೆ, ಭಗ-ವಂತ ಎಂಬಲ್ಲಿ ಖರೇ ಎನಿಸುವ ಸುಳ್ಳನ್ನು ನಂಬಿಸಲಾಗಿಲ್ಲವೇ?

ಟಿಪ್ಪಣಿಗಳು

೧. *ಭಗವದ್ಗೀತೆ* ಅ: ೧೮ ಶ್ಲೋಕ ೧೪

೨. Madhava Despande; ***"Socio-Linguistic Attitudes in India: An Historical Reconstruction",*** (Foreword Emeneau; Karoma Publishers; U.S.A : 1979, p-102; 128.

೩. H. W. Wallice, M. A. , ***"The Cosmology of the Rigveda" : An Essay,*** Cambridge (published Hibbert Trustees, Williams & Norgate, London; 1887)

೪. ***Ibid*** p. 91-92

೫. ***ಋಗ್ವೇದ ಸಂಹಿತೆ*** VII. ೯೯. ೧೦೦.

೬. ***ವಾಜಸನೇಯ ಸಂಹಿತೆ*** VII. ೯೯. ೧೦೦.

ಪ್ರಸ್ತಾಪ

ಈ 'ಧರ್ಮ' ಎಂಬುದು ಮಾನವ ಕಲ್ಪಿತವಲ್ಲ. ಧರ್ಮ ಎಂದರೆ, ನಿಯಮ. ಉದಾ: 'ದೇಹಧರ್ಮ' 'ಮನೋಧರ್ಮ' 'ಸಮಾಜಧರ್ಮ' ಮುಂತಾದವುಗಳು. ದೇಹ-'ಧರ್ಮದ' ಈ ಸ್ವಭಾವವು ವ್ಯಕ್ತಿಕಲ್ಪಿತವಲ್ಲ. 'ಪಶುಧರ್ಮ ಎಂಬಲ್ಲಿ ಪಶುಗಳಿಗೆ ತಮ್ಮ ಸ್ವಭಾವ-ಧರ್ಮ ಪಾಲಿಸಲು, ಯಾವುದೇ ಹೊರಗಿನ ಒತ್ತಾಯವೂ ಇರುವುದಿಲ್ಲ. ಪ್ರಾಣಿಗಳು ತಮ್ಮ ಪ್ರಾಣಧರ್ಮವನ್ನು ಹೊರಗಿನ ಒತ್ತಾಯವಿಲ್ಲದೆಯೇ ಅನುಸರಿಸುತ್ತವೆ. ಈ ಪ್ರಾಣ (ಪ್ರಾಣಿ) ಧರ್ಮದ ಸ್ವರೂಪವನ್ನು, ವರ್ಣಿಸುವ ಸುಭಾಷಿತವು ಅಭ್ಯಸನೀಯವಿದೆ; "ಆಹಾರ, ನಿದ್ರಾ, ಭಯ, ಮೈಥುನಂ ಚ ಸಮಾನಂ ಏತತ್ ಪಶುಭಿಃ ನರಾಣಾಂ" ದೇಹಕ್ಕೆ ಅನ್ನ, ಆಹಾರ ಬೇಕು, ನಿದ್ದೆ ಬೇಕು. ಹೆಣ್ಣಿಗೆ ಗಂಡಿನ ಆವಶ್ಯಕತೆಯಿದೆ, ಇದೇ ಮೇರೆಗೆ ಗಂಡಿಗೆ ಹೆಣ್ಣಿನ ಜರೂರಿ ಇದೆ, ಶತ್ರುಗಳ ಭೀತಿ ಪ್ರಾಣಿಗಳಿಗೆ ಉಂಟೇ ಉಂಟಾಗಿ ಇದೆಲ್ಲವೂ ದೇಹಧರ್ಮವಾಯಿತು. ಈ ಸುಭಾಷಿತಕಾರನು, 'ನರ' ಮತ್ತು 'ಪಶು' ಈ ಉಭಯ ವರ್ಗಗಳಲ್ಲಿಯೂ ಸಮಾನಧರ್ಮವೇ ಇದೆ ಎನ್ನುತ್ತಾನೆ. ಇದೇ ಆಶಯವನ್ನೇ "ಸಾಕ್ಷಾತ್ ಪಶುಃ ಪುಚ್ಛ, ವಿಷಾಣ ಹೀನಃ" ಎಂದೂ ಹೇಳಿದ್ದಾರೆ. 'ನರ' ಮತ್ತು 'ಪಶು' ಇವೆರಡೂ ವರ್ಗಗಳಲ್ಲಿ 'ಧರ್ಮ'ದ ಆಂತರಿಕ ಪ್ರೇರಣೆ ಸಮಾನವೇ ಇದೆ, ಎಂದು ಈ ಬಗೆಯಲ್ಲಿ ಸೂಚಿಸಿದ್ದಾಗಿದೆ.

'ನರರಲ್ಲಿ' ಪಶುಧರ್ಮದ (ದೇಹಧರ್ಮದ) ಪ್ರಚೋದನೆಯೇ ಉಳಿದು ಬರಲು ಕಾರಣವೇನು? 'ಮನುಜ' ಮತ್ತು 'ನರ' ಇವೆರಡೂ ಪ್ರಾಣಿಗಳಲ್ಲಿ ತಮ್ಮ ತಮ್ಮ ಧರ್ಮವನ್ನು (ನಿಯಮ) ಅನುಸರಿಸುವ ಬಗೆಗೆ ಇರುವ ಆಂತರಿಕ ಪ್ರಚೋದನೆಯಲ್ಲಿ ಭೇದವೇನು? ಎಂಬ ಪ್ರಶ್ನೆಯು ಇಲ್ಲಿ ತಲೆಯೆತ್ತುತ್ತದೆ. ಈ ಪ್ರಚೋದನಾ ಭೇದವೇ ಇಲ್ಲದೆ ಇದ್ದರೆ, 'ನರ' ಮತ್ತು 'ಮನುಜ' ಎಂಬ ಈ ತಾರತಮ್ಯ ಸೂಚಕ ಪರಿಭಾಷೆಯು, ತಲೆತಲಾಂತರಗಳಿಂದ ಉಳಿದು ಬರಲು ಕಾರಣವೇ ಇದ್ದಿಲ್ಲ. 'ಪ್ರಜ್ಞಾ ವಿಹೀನಃ ಪಶುಃ' ಎಂಬ ಪಡೆಮಾತಿನಲ್ಲಿ, (ಪಶು) ವಾನರ-'ನರ ಮತ್ತು 'ಮನುಜ' ಇವರೊಳಗಿನ ಭೇದವು ಸ್ಪಷ್ಟೀಕರಿಸಲ್ಪಟ್ಟಿದೆ. ನರನಿಗೆ ಬೋಧಿಸಲಾಗಿರುವ ಗೀತೆಯಲ್ಲಿ ಪ್ರಜ್ಞೆಗೆ ಪ್ರಾಶಸ್ತ್ಯವಿಲ್ಲದ್ದು ನಿಷ್ಕಾರಣವಲ್ಲ. ಗೀತೆಯಲ್ಲಿ 'ಪ್ರಜ್ಞಾ-ವಾದಾನ್ ಚ ಭಾಷಸೇ' ಎಂಬಲ್ಲಿ ಪ್ರಜ್ಞೆಯ ಅವಜ್ಞೆಯಿದೆ. 'ಸ್ಥಿತಪ್ರಜ್ಞ'ನಾಗ ಹೇಳಿರುವಲ್ಲಿ ಪ್ರಜ್ಞಾ (Conscience) ಶಕ್ತಿಯನ್ನು ಸ್ಥಗಿತಗೊಳಿಸಲಾಗಿದೆ. ಪ್ರಜ್ಞೆಯನ್ನು ಪರಿಮಿತವಾಗಿಸಲಾಗಿದೆ. ಮೇಲಿನ ಈ ವಿವರಣೆಯ ಮೂಲಕ ಎರಡು ಸಂಗತಿಗಳು ಹೊರಬರುತ್ತವೆ.

೧. ಮಾನವರು ಕಲ್ಪಿಸಿರುವ ರೂಢಿ, ಸಂಪ್ರದಾಯಗಳನ್ನು 'ಧರ್ಮ' ಎಂದು ಬಗೆಯಲಾಗುತ್ತಿರುವುದು ತಪ್ಪು. 'ಧರ್ಮ' ಎಂಬುದಕ್ಕೆ ಜೀವನ ವಿಶ್ವಸ್ಥ ನಿಯಮ, ಎಂಬ ಮೂಲಾರ್ಥವಿದೆ.

೨. ಈ ಮೂಲಾರ್ಥದ ಮೇರೆಗೆ, 'ನರ'ನನ್ನು ಪ್ರಚೋದಿಸುವ ಆಂತರಿಕ ಪ್ರೇರಣೆ ಮಾನವನಿಗಿಂತ ಬೇರೆಯಿರಲಿಕ್ಕೇ ಬೇಕು. ಏಕೆಂದರೆ ಪಶುವಿಗೂ ನರರಿಗೂ ಕೃತಿಗೆ ಒತ್ತಾಯಪಡಿಸುವ ಅಂತರಂಗದ ಪ್ರಚೋದನೆ ಸಮಾನವಿದೆ. 'ಸಮಾನಂ ಏತತ್ ಪಶುಭಿಃ ನರಾಣಾಂ' ಎಂಬ ಉಕ್ತಿ ನಿಷ್ಕಾರಣವಿರಲಾರದು ಮತ್ತು 'ಮನುಜ' ಮಾನವನ ಅಂತರಂಗದಲ್ಲಿಯ ಧರ್ಮದ ಪ್ರಚೋದನೆಯ ಸ್ವರೂಪವು, 'ನರಧರ್ಮ'ದ ಪ್ರೇರಣೆಗಿಂತ ಬೇರೆ ಆಕೃತಿ ಸ್ವರೂಪದ್ದೇ ಆಗಿರಲಿಕ್ಕೆ ಬೇಕು.

ಈ ವಿಧಾನಕ್ಕೆ (Statement) ಪ್ರಮಾಣವೇನು? ಪುರಾತನ ಪರಂಪರೆಯ ಧರ್ಮದ ವ್ಯಾಖ್ಯೆಯೇ ಇದಕ್ಕೆ ಸಾಕ್ಷಿ. ಚೋದನಾ ಲಕ್ಷಣೋ ಧರ್ಮ ಈ ವ್ಯಾಖ್ಯೆಯಲ್ಲಿ* ಉಕ್ತಧರ್ಮದ ಆಚರಣೆಯ-ಚೋದನೆಯು, ಪ್ರಾಣಿಗಳ ಅಂತರಂಗದ ಪ್ರಚೋದನೆಯೇ ಇರಲಿಕ್ಕೆ ಬೇಕು. ಆದಕಾರಣ ಸಾಂಸಾರಿಕ ತಾಪತ್ರಯಗಳಿಂದಾಗಲೀ, ಅಥವಾ ಪರಿಸ್ಥಿತಿಜನ್ಯ ಕಾರಣಗಳಿಂದಾಗಲಿ, ಸ್ವೀಕರಿಸಿದ 'ಧರ್ಮ' ಪಂಥವು, 'ಧರ್ಮ' ಎಂಬ ಹೆಸರಿನ ಅರ್ಹತೆಯುಳ್ಳದ್ದು ಆಗಲಾರದು. ಸಂಸಾರದ ಲಾಭಕ್ಕಾಗಿ ಮಾಡಲಾಗುವ ಸತ್ಯನಾರಾಯಣವ್ರತ, ಕಾಮ್ಯಕರ್ಮಗಳ ದೇವತಾರಾಧನೆಗಳು ಧರ್ಮವಲ್ಲ ಅಥವಾ ಪರಿಸ್ಥಿತಿಜನ್ಯ ಕಾರಣಗಳಿಂದಾಗಿ, ತಮ್ಮ ಮನೆತನದವರು ಸ್ವೀಕರಿಸಿರುವ ಶೈವ, ವೈಷ್ಣವ, ಜೈನ, ಬೌದ್ಧ, ಕ್ರೈಸ್ತ, ಮುಸಲ್ಮಾನ ಮೊದಲಾದ ಸಂಪ್ರದಾಯಗಳನ್ನು ಜನ ಆಚರಿಸುತ್ತಿರುವುದು ಆಂತರಿಕ ಚೋದನೆಯಿಂದಲ್ಲ. ಇವೆಲ್ಲವುಗಳನ್ನು 'ಧರ್ಮ' ಎನ್ನುವುದಾದಲ್ಲಿ, ಇವುಗಳೆಲ್ಲವುಗಳ ತಳಪಾಯದ ವೈಚಾರಿಕ ಆಕೃತಿ ಸ್ವರೂಪವು ತತ್ವತಃ ಸಮಾನವೇ ಇರಲಿಕ್ಕೆಬೇಕು.

ಭಾರತೀಯ - ಪುರಾತನರು ಪ್ರಜ್ಞಾನೇತ್ರದಿಂದ ಕಂಡು ಆಚರಿಸಿದ 'ವಿವಸ್ವನ್ ಮನು' ಪ್ರಚೋದಿತ ಧರ್ಮವೇ ನಿಜವಾದ ಧರ್ಮ. ನರ: ನಾಡಿಗಳ ಆಂತರಿಕ ಚೋದನೆಯಿಂದ ಆಚರಿಸಲ್ಪಡುತ್ತಿರುವ ಧರ್ಮವು 'ನರಧರ್ಮ'. 'ನರಧರ್ಮ' ಪ್ರಚೋದಿಸುವ ಕಾಲತತ್ವವು ವೃತ್ತಾಕೃತಿಯದೇ ಇರಬಲ್ಲುದು. ಲೈಂಗಿಕಪಾತಳಿಯ ಪ್ರೇರಣೆಯ ಹಿಂದಿನ ಈ ಕಾಲತತ್ವವು ಜನನ-ಮರಣರೂಪ ಚಕ್ರಾಕೃತಿಯ ಜೀವನರೀತಿಯಲ್ಲಿಯೇ ನರರನ್ನು ಬಂಧಿಸಿ ಇಡುತ್ತದೆ. ಇದು ಪ್ರಾಣಲಿಂಗ=ನಾಗ ಚಂದ್ರನಿಂದ ಪ್ರೇರಿತ ಕಾಲ-ಇದು ರಾತ್ರಪ್ರೇರಕ ಕಾಲಶಕ್ತಿ. ಪ್ರಜ್ಞಾಶಕ್ತಿಯೊಡನೆ ಬದ್ಧ ಮನಸ್ಸಿನ ಪ್ರೇರಣೆಯಿಂದ ಆಚರಿಸಲ್ಪಡುವ ಧರ್ಮವೇ 'ಮನುಜ : ಮಾನವ ಧರ್ಮ'. ಪ್ರಜ್ಞಾ-ಪ್ರಚೋದಿತ ಜೀವನ ರೀತಿಯ ಸಮಾಜ ಸಮಷ್ಟಿಯ ಪಾತಳಿಯ ಮೌಲಿಕವೇ ಇರಬಲ್ಲುದು. ಸಮಾಜ ಸಮಷ್ಟಿಯ ಪ್ರಜ್ಞೆ ಹಗಲನ್ನು ಅಪೇಕ್ಷಿಸುತ್ತದೆ. ಇದು ಸೌರಕಾಲ; ನಿನ್ನೆ-ನಾಳೆಗಳತ್ತ ಸಾಗುತ್ತದೆ. ಈ ಸೌರ 'ವಿವಸ್ವನ್' ಮನು ಪ್ರಚೋದಿತ ಜೀವನ ರೀತಿಗೆ ಸುಸಂಗತವಿರಬಲ್ಲ ಮನುಪ್ರಣೀತ ಸಮಯಾಚಾರಗಳೇ ನಿಜವಾದ ಧರ್ಮ. ಇದು ಯಾವುದೇ ವಿಶಿಷ್ಟ ಜಾತಿ ಮತ್ತು ಮತಕ್ಕೇ ಸೀಮಿತವಿರಲು ಶಕ್ಯವಿಲ್ಲ. ಈ ಧರ್ಮದ ನೈಸರ್ಗಿಕತೆಯನ್ನು ಮನಗಾಣಿಸಿ ಕೊಡುವ ಪರಿಭಾಷೆ ಭಾರತೀಯರಲ್ಲಿ ಎಂದಿನಿಂದಲೆ ಇದೆ. ಭಾರತೀಯ ಪುರಾತನ ಪರಂಪರೆಯಲ್ಲಿ ಉಳಿದು ಬಂದಿರುವ ವಾನರ → 'ನರ' ಬಳಿಕ ಪ್ರಜ್ಞೆಯೊಡನೆ ಬದ್ಧ ಮನಸ್ಸಿನ ಉದಯದ ತರುವಾಯ ಮನುಜ-ಮಾನವ. ನಮ್ಮಲ್ಲಿಯ ಈ ಪಾತಳಿಯ ಪಾರಿಭಾಷಿಕ ಪದಗಳೇ (technical terms) ಇದಕ್ಕೆ ಪ್ರಮಾಣ. ಇಂತಹ ಕೆಲವು ಉದಾ: 'ಧರ್ಮ', 'ವೈಶ್ವಾನರಾಗ್ನಿ, 'ಜಾತವೇದ ಅಗ್ನಿ ಋತ: ಸತ್ಯ; ದಾಂಪತ್ಯಧರ್ಮ ಮುಂತಾದವುಗಳು.

ಭಾರತೀಯ ಪುರಾತನ ಪರಂಪರೆಯ ಪರಿಭಾಷೆಗೆ ಆಧುನಿಕ ಭೌತಶಾಸ್ತ್ರಜ್ಞ ಡಾರ್ವಿನ್ ಹಾಗೂ ವ್ಯಾಲ್ಲಾಸ ಇವರ ಶೋಧದಿಂದಲೂ ಪುಷ್ಟಿ ದೊರೆಯುತ್ತದೆ. ಈ ಜೀವನ ವಿಶ್ವದಲ್ಲಿ 'ವಿಕಾಸತತ್ವ'ವು ಉಂಟು, ಎಂಬ

---

* ಇದು 'ತರ್ಕಸಂಗ್ರಹ'ದಲ್ಲಿ ಬಂದಿರುವ ಒಂದು ಮಾತು. ತರ್ಕದಲ್ಲಿ ಎರಡು ಒಳಭೇದಗಳುಂಟು. ಪ್ರಾಚೀನತರ್ಕ ಮತ್ತು ನವೀನತರ್ಕ. ತರ್ಕಕ್ಕೆ 'ನ್ಯಾಯ' ಎಂಬ ಮತ್ತೊಂದು ಹೆಸರುಂಟು. 'ಚೋದನಾ ಲಕ್ಷಣೋ ಧರ್ಮಃ' ಎಂಬಲ್ಲಿ ಧರ್ಮವನ್ನು ವೈಯಕ್ತಿಕವಾಗಿ ಪರಿಗಣಿಸದೆ, ಸಮಷ್ಟಿತತ್ವದ ಹಿನ್ನೆಲೆಯಲ್ಲಿ ಪರಿಗಣಿಸಿರುವುದರ ಒಂದು ಸ್ಮೃತಿಯು ಇಲ್ಲಿ ಉಳಿದುಕೊಂಡು ಬಂದಿದೆ (ಸಂ)

ಶೋಧದ ಶ್ರೇಯಸ್ಸು, ಡಾರ್ವಿನ್ನನದೆಂಬ ಗ್ರಹಿಕೆ, ಅಷ್ಟು ಸಮರ್ಪಕವಲ್ಲ. ಆದರು, ವಿಕಾಸತತ್ತ್ವದ (Evolution of man) ಬಗೆಗೆ ಮೊದಲ ಬಾರಿ ಹೇಳಿದ ಶ್ರೇಯಸ್ಸು ಡಾರ್ವಿನ್ನನಿಗೇ ಸಲ್ಲಬೇಕು. ಆದರೆ ಡಾರ್ವಿನ್ನನ ಪ್ರಭಾವದಲ್ಲಿ ವ್ಯಾಲ್ಲಾಸನ ಆಕ್ಷೇಪವನ್ನು ಕಡೆಗಣಿಸಲಾಯಿತು; ಇದರಿಂದ 'ವಿಕಾಸ' ತತ್ತ್ವದ ಶೋಧವು ಆಗಿಯೂ ನರ ಮತ್ತು ಮಾನವ ಇವೆರಡೂ ಹಂತಗಳೊಳಗಿನ ಅಂತರವು ಸ್ಪಷ್ಟವಾಗಲಿಲ್ಲ. ಈ ಸಂದಿಗ್ಧತೆ, ಇಂದಿನತನಕವೂ ಉಳಿದುಬಂದಿದೆ. ಇದೀಗ ಡಾ. ಎ. ಎಲ್. ಕ್ರೋಬರ್, ಡಾ. ಹಕ್ಸ್ಲೆ ಅಂತಹರಿಗೆ ಇದರ ಅರಿವು ಮೂಡಿದೆ. 'ಪ್ರಾಣಿಗಳ ದೈಹಿಕ - ಆಕೃತಿಗಳು ಕ್ರಮವಾಗಿ ವಿಕಾಸಗೊಳ್ಳುತ್ತ ಬಂದಿವೆ' ಎಂಬ ಸಿದ್ಧಾಂತವನ್ನು ಮೊದಲಬಾರಿ ಮಂಡಿಸಿದವನು ಡಾರ್ವಿನ್ನನೇ. ಆದರೆ, ವಾನರ ಹಂತದ ತರುವಾಯ ಮಾನವರ ವಿಕಾಸವಾಗಿದೆ' ಎಂಬ ಡಾರ್ವಿನ್ನನ ನಿರ್ಣಯವು, ಆತನ ಸಮಕಾಲೀನ ವ್ಯಾಲ್ಲಾಸನಿಗೆ ಹಿಡಿಸಲಿಲ್ಲ. ವ್ಯಾಲ್ಲಾಸನೂ ಈ ಕ್ಷೇತ್ರದಲ್ಲಿಯೇ ಸಂಶೋಧನ ನಡೆಸಿದ್ದನು. ಡಾರ್ವಿನ್ನನಿಗೂ ಮುಂಚೆಯೆ, ಈತನಿಗೂ, ಮಾನವ ಮತ್ತು ವಾನರ ಇವರೊಳಗಿನ ಸಾಮ್ಯದಿಂದಾಗಿಯೂ ಈ ವಿಕಾಸತತ್ತ್ವವು ಗಮನಕ್ಕೆ ಬಂದಿತ್ತು. ಆತನ ಸಂಶೋಧನದಲ್ಲಿ ಇದು ದೃಢಪಟ್ಟಿತ್ತು.

ಆದರೆ, ವಾನರ ಮತ್ತು ಮಾನವ ಇವೆರಡೂ ಪ್ರಾಣಿವರ್ಗಗಳಲ್ಲಿ ಇರುವ ಜೀವನ ರೀತಿಯ ಅಂತರದಿಂದಾಗಿ 'ವಾನರ' ಧರ್ಮದ ತರುವಾಯ ನೇರವಾಗಿ, ಮಾನವಧರ್ಮವೇ ಪ್ರಾದುರ್ಭವಿಸಿತೆಂದು ಬಗೆಯಲು ವ್ಯಾಲ್ಲಾಸನ ವಿವೇಕವು ಅಡ್ಡಬಂತು. ನಿಸರ್ಗದಲ್ಲಿ ಒಂದು ಕ್ರಮವಿದೆ, ಪದ್ಧತಿಯಿದೆ, ನಿನ್ನೆ ಆದ ಬಳಿಕ ನಾಳೆಯೇ ಉದಯವಾಗುವುದಿಲ್ಲ. ಇವೆರಡನ್ನು ಜೋಡಿಸುವ 'ಇಂದು' ಇದು ಇರಲೇಬೇಕಾಗುತ್ತದೆ. 'ನಿನ್ನೆಯ ವಾನರ' 'ನಾಳಿನ ಮಾನವ' ಇವೆರಡರ ನಡುವೆ ಇಷ್ಟು ಅಂತರವು ಹೇಗೆ? ಮನುಜ : ಮಾನವನು ಮನಃಶಕ್ತಿಯಿಂದ ಪ್ರಚೋದಿತನು, ಅರ್ಥ=ಉದ್ದೇಶಪೂರ್ವಕ ಬಾಳುವ ಜೀವನ ರೀತಿ ಮಾನವನದು. ಇವನ ಈ ಜೀವನ ರೀತಿಗೂ, ಅರ್ಥ : ಉದ್ದೇಶದ ಅರಿವೂ ಇಲ್ಲದ ವಾನರವರ್ಗದ : ಚಾಂಚಲ್ಯದ ಜೀವನ ರೀತಿಗೂ ಹಗಲು ಮತ್ತು ಇರುಳುಗಳಲ್ಲಿ ಇರುವಷ್ಟು ಅಂತರವಿದೆ. ವ್ಯಾಲ್ಲಾಸನ ಆಶಯವನ್ನು ಸ್ಪಷ್ಟೀಕರಿಸಿ ಹೇಳಲು ಅಡ್ಡಿಯಿಲ್ಲವಾದರೆ, ಮನುಜ ವರ್ಗವು, ಉದ್ದೇಶದ (ಅರ್ಥ: ಮೂಲ್ಯಗಳ) ದಿಕ್ಕಿನಲ್ಲಿ ನಡೆದಿದೆ. ಆದರೆ, ವಾನರ ವರ್ಗದಲ್ಲಿ, ಈ ಉದ್ದೇಶದ (ಅರ್ಥ: ಮೂಲ್ಯಗಳ) ಗಂಧಗಾಳಿಯೂ ಕಾಣುವದಿಲ್ಲ. ಇದನ್ನೇ ಇನ್ನೂ ಒಂದು ಬಗೆಯಲ್ಲಿ ಹೀಗೂ ಹೇಳಬಹುದು. ಮನುಜನಿಗೆ 'ಹಗಲು' ಮತ್ತು 'ರಾತ್ರಿ' ಎಂಬ ಭೇದವು ಮಾನ್ಯವಿದೆ. ಆದರೆ, ವಾ-ನರ ವರ್ಗದಲ್ಲಿ ಹಗಲು ಮತ್ತು ರಾತ್ರಿ, ಇವೆರಡೂ ಸಮಾನವೇ ಸರಿ! ಈ ಬಗೆಯ ಕಾರಣಗಳಿಂದಾಗಿ, ವಾನರವರ್ಗದ ತರುವಾಯ ನೇರವಾಗಿ 'ಮನುಜ' ವರ್ಗದ ಪ್ರಾದುರ್ಭಾವವೇ ಆಗಿದೆ, ಎಂದು ಬಗೆಯುವುದು ಸದೋಷವಿದೆ, ಎಂದು ವ್ಯಾಲ್ಲಾಸನ ಪ್ರಾಜ್ಞದೃಷ್ಟಿಗೆ ಹೊಳೆದ ವಿಚಾರವೇ ಸಮಂಜಸವಿದೆಯೆಂದು ಈಗ ಸಿದ್ಧವಾಗಿದೆ. ವ್ಯಾಲ್ಲಾಸನ ಅಭಿಪ್ರಾಯವನ್ನು ಸ್ಪಷ್ಟೀಕರಿಸಿ ಆಧುನಿಕ ಸಂಶೋಧಕರಲ್ಲಿ ಕೆಲವರು ಈ ಹಂತವನ್ನು missing link ಎಂದು ಹೆಸರಿಸಿದ್ದು ಅತ್ಯಂತ ಉಚಿತವಿದೆ.

ವ್ಯಾಲ್ಲಾಸನ ನಿಷ್ಕರ್ಷವೇ ಸಮರ್ಪಕ

'ವಾ-ನರ' ಈ ಪಾರಿಭಾಷಿಕ ಪದವು, ನರ ಈ ಸಂಕೇತದ ಮಾನ-ದಂಡದಿಂದ ಆಕಾರ ಪಡೆದಿದೆ. 'ನರ' ಮತ್ತು ವಾ-ನರ ಇವೆರಡರ ಜೀವನ ರೀತಿಯಲ್ಲಿ ಜೀವಧರ್ಮದಲ್ಲಿ-ಸಾಮ್ಯವು ಇದೆಯೆಂಬ ಆಶಯವೇ ಇದ್ದುದು ವಾನರ ಮತ್ತು ನರ ಈ ಪಾರಿಭಾಷಿಕ ಪದಗಳ ತುಲನೆಯಲ್ಲಿ ಕಂಡುಬರುತ್ತದೆ. 'ನರ' ಎಂದರೆ ಯಾರು? ಮಾನವನೊ? ಎಂಬ ಸಂದಿಗ್ಧತೆಯ ಸೂಚಕ ಸಂಕೇತವೇ ವಾ-ನರ. ಇದೇ ಆಕೃತಿಯ ಕಿಂನರ, ಕಿಂಪುರುಷ ಈ ಮಾತುಗಳೂ ಅಭ್ಯಸನೀಯವಾಗಿವೆ. ವೇದದಲ್ಲಿ ಬರುವ ಮರುತರ ವರ್ಣನೆಗಳ ಮೂಲಕವೂ ಈ ವಿಚಾರಕ್ಕೆ ಪುಷ್ಟಿ ದೊರೆಯುತ್ತದೆ. ವೇದದಲ್ಲಿ ಮರುತ (ಮಾರುತಿ) ವರ್ಗವನ್ನು 'ನರಾಃ' ಮರ್ತಾಸಃ ಮರ್ತ್ಯಾಃ ಎಂದು ವರ್ಣಿಸಿದ್ದಾಗಿದೆ. ಅಲ್ಲದೆ, 'ಕಪಿ' (ಮರ್ಕಟ) ಎಂಬ ಪದವನ್ನು ಈ ವೇದದಲ್ಲಿ ಒಂದು ವಿಶೇಷಾರ್ಥದಲ್ಲಿ ಯೋಜಿಸಲಾಗಿದೆ. ಲಾಂಗಲ-ನರ(ಳ) ಸೃಜನೇಂದ್ರಿಯದ ಪ್ರಾಣಿ ಎಂಬ ಅರ್ಥದಲ್ಲಿ ಮರುತನನ್ನು ಕಲ್ಪಿಸಲಾಗಿದೆ.

'ಕಬಂಧ' ಎಂಬ ಪದವು ಇದಕ್ಕೆ ಪ್ರಮಾಣ. ಇಂದ್ರಿಯ ಭೋಗರತ ಪ್ರಾಣಿ 'ಭೋಗಿ' ಎಂಬ ಸಾಂಕೇತಿಕ ಚಿತ್ರವು ವೇದದಲ್ಲಿ ಇವೆ. ಈ ಮರುತನನ್ನು=ಕಪಿಯನ್ನು ವೇದದಲ್ಲಿ ವೃಷಾ (ವರ್ಷಯಿತ್ಯಃ ವೃಷಣ ರೂಪ) ಎಂಬ ವಿಶೇಷಣದಿಂದ ಸೂಚಿಸಿದ್ದುದು ನಿಷ್ಕಾರಣವಲ್ಲ. 'ಇಂದ್ರಾಣಿ' ಎಂಬಲ್ಲಿ ಇಂದ್ರಿಯ: 'ಅಂಗ'ವುಳ್ಳ 'ಅಂಗನೆ' ಎಂಬ ಅರ್ಥದ ಸಾಂಕೇತಿಕತೆ ಇದೆ. ವೃಷಾಕಪಿ ಹಾಗೂ ಇಂದ್ರಾಣೀ ಸಂಬಂಧದಲ್ಲಿ 'ಲಿಂಗ-ಅಂಗ'ದ ಚೋದನೆಯು ಅಭಿಪ್ರೇತವಿದೆ. ಈ ವೇದದಲ್ಲಿ 'ಇಂದ್ರ' ಎಂಬ ಪದದ ಮೂಲಾರ್ಥವು ಕ್ರಮವಾಗಿ ನಷ್ಟವಾಗಿದೆ. ಪ್ರಧಾನ ಇಂದ್ರಿಯದ ವ್ಯಕ್ತಿ, ಪುರುಷ- ವ್ಯಕ್ತಿ ಎಂಬ ಅರ್ಥವೇ ಇಂದ್ರ ಸಂಕೇತಕ್ಕೂ ಕಾಣಿಸಿಕೊಳ್ಳುತ್ತದೆ! ಹಾರುವರು ಹೇಳುವ 'ತ್ರಿ-ಸುವರ್ಣ'ದ (ಮೇಧಾಸೂಕ್ತದ)' ಮಂತ್ರ-ಪಾಠದಲ್ಲಿ 'ಮಯಿ ಇಂದ್ರ, ಇಂದ್ರಿಯಂ ದಧಾತು' (ನನಗೆ ಇಂದ್ರನು ಲಿಂಗಶಕ್ತಿ ಕೊಡಲಿ) ಎಂಬ ಬೇಡಿಕೆಯಿದೆ. ಇದು ವೇದದ ಶ್ರದ್ಧಾ ಮೇಧಾಸೂಕ್ತದ ಭಾಗ.

ಇಲ್ಲಿ ಗಮನ ಸೆಳೆಯಬೇಕಾಗಿರುವ ಅಂಶವು 'ಕಪಿ' 'ವೃಷಾಕಪಿ' ಇದು ಇಲ್ಲಿ ಪುರುಷ(ನ) ಇಂದ್ರಿಯದ ಪ್ರತಿನಿಧಿಯಾಗಿದೆ. ವೇದಕಾಲೀನ 'ಕಪಿ' 'ವಾನರ, ಈ ಪರಿಭಾಷೆಯೇ 'ಕೋಡಗ' ಮತ್ತು 'ವಾನರ' ಎಂಬ ರೂಪದಲ್ಲಿ, ವೀರಶೈವ ವಚನಗಳಲ್ಲಿಯೂ ಸ್ಥಾನ ಪಡೆದಿದೆ. ವೇದಕಾಲೀನ ಸಮಯಾರ್ಥವೇ ಉಳಿದಿರುವ ಈ ಅಂಶವು ಉಚಿತವಿದೆ. "ನೀಲಾಂಬೆ, ಪಾರ್ವತಿ ಎಂದಡೆ 'ವಾ-ನರ' ಶಿಶುವ ನೋಡಿ ಬಸವನ ಕಾಡಿದಳು...." ಇದು ಪ್ರಭುದೇವರ ವಚನ[೧], "ವನದ ಕೋಡಗವ ನೋಡಿ ಎನ್ನಮನದ ಕೋಡಗನ, ಭಕ್ತಿ ಕೋಡಗನಲ್ಲಿ ಬಿಟ್ಟೆನಯ್ಯಾ", ಇದು ನೀಲಾಂಬಿಕೆಯ ವಚನ[೨]

ಈ ಉದಾಹರಣೆಗಳಲ್ಲಿ, ಕೋಡಗ ಹಾಗೂ ವಾನರ ಇದು 'ಪುರುಷ' ಇಂದ್ರಿಯದ ಪ್ರತಿನಿಧಿಯಾಗಿದೆ. ನೀಲಾಂಬಿಕೆಯ ವಚನದಲ್ಲಿ ಈ ದೇವಿಯು ಹೇಳುವ 'ಎನ್ನ ಮನದ ಕೋಡಗ' ಎಂಬಲ್ಲಿ ಹೆಣ್ಣುತನವು ಸೂಚಿತವಿದೆ. ಆದರೆ, ಈ ವಚನದಲ್ಲಿ ಮನವನ್ನು ಕೋಡಗ ಮಾಡಿದ್ದು ಅನುಚಿತವಿದೆ. ಚಿತ್ತ, ಎಂಬ ಪಾರಂಪರಿಕ ಸಂಕೇತವು ಇಲ್ಲಿ ಇರಬೇಕು. ಹೀಗೆ ಒಟ್ಟಿನಲ್ಲಿ ವಾನರ-ಕಪಿ ಎಂದರೆ ಇದು 'ಸ್ತ್ರೀ ಪುಂ ಲಿಂಗ'ದ ಪ್ರತಿನಿಧಿ. ಈ 'ಕಪಿ' ಇಡೀ ಪ್ರಾಣಿಯಲ್ಲ. 'ಋಗ್ವೇದ'ದ 'ಕಪಿ' (ಮಾರುತಿ), ವಾನರ ಈ ಗುಹ್ಯ ಪರಿಭಾಷೆಯೇ ವೀರಶೈವ ಸಂಪ್ರದಾಯದಲ್ಲಿಯೂ ಇದೆ. ಇದನ್ನು ಅಮಾನ್ಯ ಮಾಡಲು ಆಸ್ಪದವಿಲ್ಲ. ಪ್ರಧಾನಾಂಗದಿಂದ ಇಡಿಯನ್ನು ಸೂಚಿಸುವ ಭಾಷಿಕ ವೈಶಿಷ್ಟ್ಯವು ಅಂದು ಇತ್ತು. ಈ ವಿವರಣೆಯ ಒಟ್ಟಿನ ಉದ್ದೇಶವು ಇಷ್ಟು: 'ವಾ-ನರ' ಧರ್ಮದ ಹತ್ತಿರವೇ ಈ 'ನರ' ಧರ್ಮವೂ ಇದೆ. ಈ ಸಂಪ್ರದಾಯವು, ಒಂದು ಕಾಲಕ್ಕೆ 'ಧರ್ಮ' ಎಂದು ಆಚರಣದಲ್ಲಿ ಇತ್ತು. 'ನರ'(ಳ) ಧರ್ಮ ಪಾಲಿಸುವವರು ನರರು, ಎಂಬ ಅರ್ಥವು ಮೇಲಣ ಹಿನ್ನೆಲೆಯಲ್ಲಿ ಅನಿವಾರ್ಯವಾಗುತ್ತದೆ. ನರ-ನಳ, (ನಾಳ, ನಾಡಿ, ನಾರಿ) ಈ ಪೂರ್ವ ಪ್ರಯೋಗ ಯೋಗಗಳೂ ದೊರೆಯುತ್ತವೆ.

ಜೀವನ ವಿಶ್ವಸ್ಥ ಅಂತಃಪ್ರಚೋದನೆಯ ಆಚರಣವೇ 'ಧರ್ಮ' ಎಂಬ ಪುರಾತನ ವ್ಯಾಖ್ಯೆಯು ಹೀಗೆ ಅಭ್ಯಸನೀಯವಿದೆ. ಈ ದೃಷ್ಟಿಯಿಂದ 'ಪಶು' ಮತ್ತು 'ಪಶುಪತಿ' ಪರಿಭಾಷೆಯ 'ಪಾಶುಪತ' ಸಂಪ್ರದಾಯವು ನರಧರ್ಮದ ಒಂದು ಪ್ರಕಾರವಾಗುತ್ತಿದೆ. 'ಸಾತ್ವತ' ಹೆಸರಿನಲ್ಲಿ, ಅಂದು ಯಾದವರು 'ನರ'-ಧರ್ಮವನ್ನೇ ಅನುಸರಿಸುತ್ತಿದ್ದರು. ಸಾತ್ವತ ಹಾಗೂ ಪಾಶುಪತ ಎಂಬುದು ನರ-ಧರ್ಮಕ್ಕೆ, ಇನ್ನೊಂದು ಹೆಸರು. ಪ್ರಾಣ-ಚೇತಸದ ಪಾತಳಿಯನ್ನು, ಪ್ರಾಣಲಿಂಗದ ಪಾತಳಿ ಎಂದಲ್ಲಿ ಈ ಅರ್ಥವು ಇನ್ನಷ್ಟು ಸ್ಪಷ್ಟವಾಗುತ್ತದೆ. ಪ್ರಾಣದ- ಪ್ರಾಣಿಗಳ ಚೇತನ-ಚೈತನ್ಯವು- ಈ ಪ್ರಾಣಿಗಳ (ಸ್ತ್ರೀ-ಪುಂ) ಲಿಂಗದ ಮಾಧ್ಯಮದಿಂದ ವ್ಯಕ್ತವಾಗುತ್ತದೆ. ಈ ಚೇತನದ ಸ್ವಭಾವ-ಧರ್ಮವು ಎಂತಹುದು? ಪ್ರಾಣತತ್ವದೊಡನೆ ಬದ್ಧವಿರುವ ಚೇತಸವು-ಚೈತನ್ಯವು ಆ ಪ್ರಾಣಿಗಳ ಲಿಂಗ ಕ್ರಿಯೆಯ ಪ್ರೇರಣೆಯ ಮೂಲಕ ಸುವ್ಯಕ್ತವಾಗುತ್ತದೆ. ಹಿಂದೊಮ್ಮೆ, ಬಂಗಾಳದಲ್ಲಿ 'ಚೈತನ್ಯ' ಹೆಸರಿನ ಧರ್ಮ ಪಂಥವು ಒಂದು ಇತ್ತು. ಸುಮಾರು ೬೦-೭೦ ವರ್ಷಗಳ ಹಿಂದೆ 'ಬ್ರಹ್ಮಚೈತನ್ಯ' ಹೆಸರಿನ ಪ್ರಸಿದ್ಧ ಸಾಧುಗಳು, ಮಹಾರಾಷ್ಟ್ರ-ಕರ್ನಾಟಕದಲ್ಲಿ ವಿಖ್ಯಾತರಿದ್ದರು. 'ನರ' ಸಂಪ್ರದಾಯದ ಅಸ್ತಿತ್ವ ಸೂಚಿಸಲು ಈ ಹೆಸರುಗಳನ್ನು ಎತ್ತಿ ಹೇಳಿದ್ದಾಯಿತು.

ಈ ಚೈತನ್ಯ ಪ್ರೇರಕ 'ಪ್ರಾಣ' ಎಂದರೇನು? ಇದರ ಆಕೃತಿ ಸ್ವರೂಪವು ಎಂತಹುದು? ಉಪನಿಷತ್ತುಗಳಲ್ಲಿ, ಈ ಪ್ರಾಣದ ವಿವರಣೆ ದೊರೆಯುತ್ತದೆ. ಪ್ರ+ಅನ=ಪ್ರಾಣ; ಉಸಿರು, ಶ್ವಸನ : ಉಸಿರು-ಗಾಳಿ; 'ಗಾಳಿ ದೇವರು' ಮರುತ-ಮಾರುತ. ಆದರೆ, ಈ ಗಾಳಿಗೆ-ಉಸಿರಿಗೆ-ಆಧಾರವೇನು? 'ಪ್ರಾಣೋ ವಾ ಅಂಗಾನಾಂ ರಸಃ'[೩] ಅಂಗಗಳ ರಸ, ಇದು ರೇತ, ಆರ್ತವ, ಶುಕ್ರರೂಪದ್ದೇ ಇರಬಲ್ಲುದು. ಆದಕಾರಣ, ಪ್ರಾಣ: ಉಸಿರು ಇದು ದೇಹಸ್ಥ ರೇತ ಶುಕ್ರ- ಶೋಣಿತದೊಡನೆ ಬದ್ಧವಿದೆ. ಈ ಆಶಯವೇ ಇನ್ನೊಂದೆಡೆಯ ಸಂದಿಗ್ಧವಾಕ್ಯದಲ್ಲಿಯೂ ಉಂಟು. ತತ್ ಜಲಾನಿತಿ[೪] ಇಲ್ಲಿ 'ಅನಿತಿ ಜಲ' (ಉಸಿರಾಟದ ನೀರು) ಅಭಿಪ್ರೇತವಿದೆ. ಆದಕಾರಣ ಅನಿತಿ ಜಲದಲ್ಲಿ (ನಾರ ಅಯನ-ನರನು), ನಾರಾಯಣ ದೇವರು ಎಂಬ ಅರ್ಥವೂ ಉಂಟು, ಎಂದು ಶ್ರೀ ಮದಾಚಾರ್ಯರಿಗೆ ಕಂಡಿದೆ. 'ಉಸಿರು' ಮತ್ತು ರೇತ-ಶುಕ್ರ ಇವೆರಡರ ಅನ್ಯೋನ್ಯ ಸಂಬಂಧದ ಅನುಭವವು ನಾರ-ಅಯನ ಮತ್ತು ವತ್ಸ ಅಯನದ (ಲಿಂಗ-ಅಂಗ) (ಸಂ)ಯೋಗದಲ್ಲಿ ಪ್ರತೀತಿಗೆ ಬರುತ್ತದೆ, 'ನರ' ಸಂಪ್ರದಾಯವು, ಚಿತ್ತ-ವೃತ್ತಿ ನಿರೋಧದಿಂದ ರೇತದ ಮೇಲಿನ ಸ್ವಾಮಿತ್ವವನ್ನು ಪಡೆಯುವ ತಂತ್ರವನ್ನು ಕಂಡು ಹಿಡಿಯುವ ಪ್ರಯತ್ನಪಟ್ಟಿದೆ. ಈ ಉಸಿರನ್ನು (ಪ್ರಾಣಶಕ್ತಿಯನ್ನು) 'ಅಸು' ಶಕ್ತಿ ಎಂದು ವೇದಕಾಲದಲ್ಲಿ ಬಗೆಯಲಾಗಿತ್ತು. 'ಪ್ರಾಣತೃಪ್ತಿ'ಯಲ್ಲೇ ಸಂತುಷ್ಟರಾಗಿರುವವರನ್ನು 'ಅಸಂತೃಪ್ತಃ' ಎಂದು ಟೀಕಿಸಿದ್ದಾಗಿದೆ. ಫಕ್ತ ಪ್ರಾಣಶಕ್ತಿ ಉಳ್ಳವರು ಪ್ರಾಣಿಗಳು; ಅಸುಶಕ್ತಿ ಉಳ್ಳವರು ಅಸುರರು.

ಜೀವನ ವಿಶ್ವಸ್ಥ 'ವಿಕಾಸ' ಕ್ರಮದಲ್ಲಿ 'ವಾನರ' ಹಂತದ ಬಳಿಕ, ನರ ಸಂಪ್ರದಾಯವು ಕಾಣಿಸಿಕೊಂಡಿತು. ವ್ಯಾಲ್ಲಾಸನ 'Missing link' ಬಗೆಗಿನ ಅಂದಾಜು ಸಮರ್ಪಕವಿದೆ. ಎರಡು ಪ್ರಾದುರ್ಭಾವಗಳ ನಡುವೆ ಅಂತರವು (gap) ಉಳಿದದ್ದು ಕಾಣುವುದಿಲ್ಲ. ಜಲಚರಗಳ ತರುವಾಯ ಭೂಚರಪ್ರಾಣಿಗಳು ಪ್ರಾದುರ್ಭವಿಸಿದ್ದುಂಟು. ಆದರೆ, ಕಪ್ಪೆ, ಆಮೆ, ಹಾವು ಇಂತಹ 'ಮಧ್ಯಸ್ಥ' ವರ್ಗವೂ ಒಂದು ಇದೆ. ಈ ಕಪ್ಪೆ, ಆಮೆ, ಹಾವು ನೀರಲ್ಲಿ ಇರಬಲ್ಲವು; ನೆಲದ ಮೇಲೂ ಬಾಳಬಲ್ಲವು. ಇದೇ ಮೇರೆಗೆ ಅಂಡಜ ಪ್ರಾಣಿ ಹಾಗೂ ಸಸ್ತನ ಪ್ರಾಣಿ; ಇವೆರಡೂ ವರ್ಗಗಳಿಗೂ ಹತ್ತಿರದ ಕಣ್ಕಪ್ಪಡಿ, ತೊಗಲ ಬಾವುಲಿಗಳ ವರ್ಗವಿದೆ. ಈ ವಿಶ್ವನಿಯಮವು ವಾನರ ಮತ್ತು ಮನುಜ ಇವೆರಡರೂ ಪ್ರಾದುರ್ಭಾವಗಳ ಸಂದರ್ಭದಲ್ಲಿ ಮಾತ್ರ ಅಪವಾದವಾಗಿರಲು ಶಕ್ಯವಿಲ್ಲ. ಭಾರತೀಯ ಪರಿಭಾಷೆಯು ಈ ದೃಷ್ಟಿಯಿಂದ ಅಮೋಘವಿದೆ. ನರವಾನರ-ಬಂಧು, 'ಪ್ರಾಣದೇವರ' ಹೆಸರಿನಲ್ಲಿ 'ವಾನರ' ಪ್ರತಿಮೆ ಪೂಜಿಸುವ ವಾಡಿಕೆ ಇದೆ. ಈ ನರನು ವಾನರವರ್ಗಕ್ಕೆ ಹತ್ತಿರದವನು ಇರುವಂತೆ, 'ಮನು-ಜರ ಆಪ್ತನೂ ಇದ್ದಾನೆ. 'ನರ'ನೇ ಪ್ರಜ್ಞೋದಯದ ಬಳಿಕ 'ಮನು'-ಜ ವರ್ಗದವನು ಆಗುತ್ತಾನೆ. ಮನುಜ=ಮಾನವ=MAN ಮುಗಿಲಿನಿಂದ ಇಳಿದು ಬಂದಿಲ್ಲ. ಮನುಜ=ಮಾನವನು ನರ(ಳ)ನೂ ಆಗಿಲ್ಲವೆ? ಆದುದರಿಂದ, ಮನಸ್ಸಿನ ಧರ್ಮವನ್ನು ಪ್ರಜ್ಞೆಯ ಪ್ರೇರಣೆಯಿಂದ ಆಚರಿಸುವ ಮನುಜವರ್ಗವು, ನರರೊಳಗಿಂದಲೇ ಹೆಚ್ಚಿನ ಸಂಸ್ಕಾರಗಳ ಮೂಲಕ ಅಸ್ತಿತ್ವದಲ್ಲಿ ಬಂದುದು ಉಂಟು. 'ನರ' ಮತ್ತು 'ಮನು'=ಮಾನವ ಇವರಲ್ಲಿ ಒಬ್ಬನು ದ್ರಾವಿಡ, ಇನ್ನೊಬ್ಬನು ಆರ್ಯ ಎಂದು ಬಗೆಯಲು ಆದೀತೆ? ಧರ್ಮ ಹಾಗೂ ಸಂಸ್ಕೃತಿಯ ಪ್ರೇರಣಾ ಕೇಂದ್ರವು ದೇಶ, ಭಾಷೆ ಪರಿಸರದ ಆಚೆಗೆ Super Organic ಪಾತಳಿಯ ಮೇಲೆ ಉಂಟು, ಎಂದು ಮಾನವಶಾಸ್ತ್ರಜ್ಞರೂ ಹೇಳುತ್ತಿದ್ದಾರೆ.

ಪ್ರಜ್ಞಾ-ನೇತ್ರೋ ಲೋಕಃ ಈ 'ಮನು' ಲೋಕವು ಪ್ರಜ್ಞಾನೇತ್ರದಿಂದಾಗಿ ಆಲೋಕನ ಅವಲೋಕನ, ಆಲೋಚನದ ಹುಟ್ಟುಗುಣವುಳ್ಳ ವರ್ಗ. ಒಳ-ತಿಳಿ(ಬೆಳ) ಬೆಳಕಿಗೆ, ವಿವೇಕಚಿಂತಾಮಣಿಗೆ (conscience and awareness) ಬದ್ಧ ಮನೋಬಲದಲ್ಲಿ ನಿಷ್ಠೆಯುಳ್ಳವರು ಈ ಮಾನವರು. 'ನರ' ಸಂಪ್ರದಾಯಗಳಲ್ಲಿ ಪ್ರಾಣ ಚೇತಸದೊಡನೆ ಬದ್ಧ ದಿವ್ಯ 'ಚಕ್ಷು' ಶಕ್ತಿ ಸಿದ್ಧಿಯಲ್ಲಿ ನಿಷ್ಠೆಯು ಇಂದಿಗೂ ಉಂಟು. ನರನಿಗೆ- ಕಪಿಧ್ವಜನಿಗೆ ಬೋಧಿಸಲಾಗಿರುವ 'ಭಗ'ವತ್ ಗೀತೆಯಲ್ಲೆ ಇದಕ್ಕೆ ಪ್ರಮಾಣವಿದೆ. ಭಕ್ತನಾದ 'ನರನ' ಬೇಡಿಕೆಯಂತೆ 'ದಿವ್ಯಂ ದದಾಮಿ ತೇ ಚಕ್ಷುಃ' ಎಂದು ಭಗವಂತನು ಹೇಳುತ್ತಾನೆ. ಇಲ್ಲಿ ನೇತ್ರ ಅಭಿಪ್ರೇತವಿಲ್ಲ! 'ಚಕ್ಷು' ಪ್ರಾಣಲಿಂಗಪಾತಳಿಯ

ಕಣ್ಣು. ಪ್ರಾಣ(ಅಸು) ಶಕ್ತಿಯೊಡನೆ ಬದ್ಧ ಚಿತ್-ಶಕ್ತಿಯ ಉಪಾಸನೆಯಲ್ಲಿ ಶ್ರದ್ಧೆಯಿದ್ದವರ ಜೀವನದ ಪ್ರೇರಣಾ ಕೇಂದ್ರವು ಪ್ರಾಣ-ಲಿಂಗ ಪ್ರಾತಳಿಯೇ ಇದ್ದೀತು. ಇರಲೇ ಬೇಕು. ಇದು ವಿಶ್ವನಿಯಮ, "ಯತ್ ಭಜತಿ, ತತ್ ಭವತಿ" ಇದೇ ಮೇರೆಗೆ, ಪ್ರಜ್ಞಾಪ್ರಕಾಶದೊಡನೆ (Conscience and awareness) ಬದ್ಧ ಮನೋಧರ್ಮದಲ್ಲಿ ನಿಷ್ಠೆಯಿದ್ದವರ ಪ್ರೇರಣಾಕೇಂದ್ರವು ಸ್ವರ್‌ಪಾತಳಿಯ ಮೇಲಿದೆ. ಇದು ಪ್ರಾಣ-ಚೇತಸದ (ಎಂದರೆ ಭುವ: ಮಧ್ಯಲೋಕದ) ಆಚೆಗಿನ ಪ್ರಕಾಶತತ್ತ್ವದ ಆಕಾಶದ (ಸ್ವರ್)ಪಾತಳಿ.

'ಧರ್ಮ' ಎಂದರೆ ವಿಶ್ವನಿಯಮ

ಈ ಪಾರಿಭಾಷಿಕ ಪದದ ಮೂಲಕವೂ ಈ ಮೇಲಣ ವಿವರಣೆಗೆ ಪುಷ್ಟಿ ದೊರೆಯುತ್ತಿದೆ. 'ಧರ್ಮ' ಎಂದರೆ 'ನಿಯಮ'; ದೇಹ ಧರ್ಮ, ಪ್ರಾಣ ಧರ್ಮ, ದಾಂಪತ್ಯ ಧರ್ಮ, ಸ್ನೇಹ ಧರ್ಮ, ಸ್ತ್ರೀ ಧರ್ಮ, ಪುರುಷ ಧರ್ಮ.... ಇತ್ಯಾದಿ, ಇದನ್ನು ಮೊದಲಲ್ಲಿ ಸೂಚಿಸಿದ್ದಾಗಿದೆ. ಈ ಧರ್ಮವು ಜೀವನದ ಎಲ್ಲ ಕ್ಷೇತ್ರಗಳನ್ನು ಒಳಗೊಳ್ಳುತ್ತದೆ. ಜೀವನದ ಸಮಾನವ್ಯಾಪ್ತಿಯ ಈ ಧರ್ಮವು, ಮಾನವ ವ್ಯಕ್ತಿಗಳಿಂದ ಕಲ್ಪಿತ, ಸಂಕಲ್ಪನಾತ್ಮಕ (invention) ಗ್ರಹಿಕೆಗಳ ಸ್ವರೂಪದ್ದು ಇರಲು ಶಕ್ಯವೇ ಇಲ್ಲ. ಜೀವನದ ಸಮಾನ ವ್ಯಾಪ್ತಿಯ 'ಧರ್ಮ'ವು ಜೀವನಸ್ಥ ನೈಸರ್ಗಿಕ ಅಂತಃಪ್ರೇರಣೆಯ (ನಿಯಮ) ಸ್ವರೂಪದ್ದೇ ಇರಬಲ್ಲುದು. ಇದನ್ನೇ ಋತ ಸ್ವರೂಪೀ 'ಸತ್ಯ' ಎಂಬ ಇನ್ನೊಂದು ಬಗೆಯ ಶಾಸ್ತ್ರೀಯ ಪರಿಭಾಷೆಯಲ್ಲಿಯೂ ಹೇಳಿದ್ದಾಗಿದೆ.

ಈ ಕಾರಣದಿಂದಾಗಿ ನಿಜವಾದ 'ಧರ್ಮ'ಪ್ರೇರಣೆ ಇದು ನರ ಮನುಜರ ಅಂತಃಪ್ರಚೋದನೆಯ ಪ್ರಜ್ಞಾ (Conscience) ಪಾತಳಿಯದೇ ಇರಬಲ್ಲುದು. ಇದು ನಿಜವಿದ್ದರೆ, ಈ ಜೀವನ ವಿಶ್ವದಲ್ಲಿ ಇರಬಲ್ಲ 'ಧರ್ಮ' ಎಂಬುದು ಎರಡೇ ಬಗೆಯದು ಇರಲಿಕ್ಕೇ ಬೇಕು. ನರಧರ್ಮ ಮತ್ತು ಮನುಜ-ಮಾನವಧರ್ಮ, ಪ್ರಾಣ (ಅಸು)-ಚೇತಸದ ಪಾತಳಿಯ ಪ್ರಚೋದನೆಯ ಮೂಲಕ ಆಕಾರ ಪಡೆಯುವ ಸಮಯಾಚಾರಗಳು ನರಧರ್ಮದ ವೈಶಿಷ್ಟ್ಯ, ಮತ್ತು ಪ್ರಜ್ಞಾಪ್ರಕಾಶ ಪಾತಳಿಯ ಪ್ರಚೋದನೆಯ ಮೂಲಕ ಆಕಾರ ಪಡೆಯುವ ಸಮಯಾಚಾರಗಳು ಮಾನವ ಧರ್ಮದ ವೈಶಿಷ್ಟ್ಯ. ಪ್ರಾಣಚೇತಸ ಪಾತಳಿಯ 'ನರಧರ್ಮ'ವು 'ನರೋತ್ತಮ' ನರರಿಂದ (ಅವತಾರಿ) ಪ್ರಮಾದಿಗಳಿಂದ ಆಕಾರ ಪಡೆದಿರುವ ಧರ್ಮವೇ ಇದ್ದೀತು. ಉದಾ: ಶೈವ, ವೈಷ್ಣವ, ಶಾಕ್ತ, ಜೈನ, ಬೌದ್ಧ, ಕ್ರೈಸ್ತ ಮುಂತಾದ ಹೆಸರಿನಲ್ಲಿ ಈ ನರಧರ್ಮವು ಇಂದಿಗೂ ಅಸ್ತಿತ್ವದಲ್ಲೇ ಇವೆ. ಜೀವನವಿಶ್ವಸ್ಥ ಅಂತಃಪ್ರಚೋದನೆಯ ಈ ಧರ್ಮವು ಭಾರತೀಯರಿಗೇ ಮೀಸಲು ಎಂಬ ಹೆಮ್ಮೆ ವ್ಯರ್ಥ. ಆದರೆ, ಭಾರತೀಯ ಪುರಾತನ ಪರಂಪರೆಯ ವಿವಸ್ವನ್ ಮನು ಪ್ರ-ಚೋದಿತ 'ಮಾನವ ಧರ್ಮ'ವು ಭಾರತದ ಹೊರಗೆ ಇನ್ನೂ ಬೇರೆ ಹೆಸರಿನಲ್ಲಿ ಹಿಂದೊಮ್ಮೆ ಅಸ್ತಿತ್ವದಲ್ಲಿ ಇತ್ತು; ಇದೆ. 'ನರ' ಸಂಪ್ರದಾಯಗಳ ಪ್ರಾಬಲ್ಯದಲ್ಲಿ 'ಮಾನವ ಧರ್ಮ' ಸ್ಥಾನ ಭ್ರಷ್ಟವಾದಂತಾಗಿದೆ. ಮನುಜಧರ್ಮವನ್ನು ಹಿಂದಕ್ಕಿರುವ 'ನರಧರ್ಮ'ವು ಹುಟ್ಟಿದ ಹಿನ್ನೆಲೆ ಅಭ್ಯಸನೀಯವಿದೆ.

ಟಿಪ್ಪಣಿಗಳು

೧. *ಮುಕ್ತ ಕಂಠಾಭರಣ* ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೭೭; ಪು. ೬೬.
೨. *ಅದೇ,* ಪು. ೬೯
೩. *ಬೃಹದಾರಣ್ಯಕೋಪನಿಷತ್ತು* ೧-೩-೧೯
೪. *ಛಾಂದೋಗ್ಯೋಪನಿಷತ್ತು* ೧೩-೧೪-೧

ದಿವ್ಯಕಥೆಗಳು ಮತ್ತು 'ನರಧರ್ಮ'ದ ಸ್ವರೂಪ

ಸುಮೇರಿಯನ್ (ಅಕ್ಕಡ) ಭಾಗದ ಸಂಸ್ಕೃತಿಯು ಅತ್ಯಂತ ಪುರಾತನ ಕಾಲದ್ದು, ಎಂಬ ಬಗೆಗೆ ತಜ್ಞರಲ್ಲಿ ಭಿನ್ನಾಭಿಪ್ರಾಯಗಳು ಈಗ ಉಳಿದಿಲ್ಲ. 'ಮಾನವ'ರ ನಾಗರಿಕತೆಯ ಪ್ರಾರಂಭವು ಸುಮೇರಿನ ಕಡೆಗೇ ಆಗಿದೆ[1]. ಎಂದು ತಜ್ಞರು ನಿಷ್ಕರ್ಷಿಸಿದ್ದಾರೆ. ಇನ್ನೊಬ್ಬ ಸಂಶೋಧಕ ಕ್ರ್ಯಾಮರ್ ಎಸ್. ಎನ್. ಇವರ ಅಭಿಪ್ರಾಯದಂತೆ ಇತಿಹಾಸದ ಪ್ರಾರಂಭವೂ ಈ ಭಾಗದಲ್ಲಿಯೇ ಆಗಿದೆ.

ಈ ತಜ್ಞರು ದಿವ್ಯಕಥೆಗಳನ್ನು (Myths) ಲೆಕ್ಕಿಸಿಲ್ಲ. ಭೌತಶಾಸ್ತ್ರಜ್ಞರಲ್ಲಿ ದಿವ್ಯಕಥೆಗಳ ಬಗೆಗೆ ಸಂಪೂರ್ಣ ತಿರಸ್ಕಾರವೇ ಇತ್ತು. ಆದರೆ, ಇತ್ತೀಚೆಗೆ ಡಾ. ಜ್ಯೂಲಿಯನ್ ಹಕ್ಸ್ಲೆಯಂತಹರು, ಕೆಲ ಕೆಲವು ದಿವ್ಯ-ಕಥೆಗಳಲ್ಲಿ 'Profound intuition' ಇರುತ್ತದೆ ಮತ್ತು ವಿಶಿಷ್ಟಕಾಲೀನ ಭೌತಪಾತಳಿಯ ಅರ್ಥವು ಬದಿಗೆ ಉಳಿದು, ಇಂತಹ ಕಥೆಗಳಿಂದ ಸಾರ್ವಕಾಲಿಕ ಸತ್ಯಾಂಶವು ಅರಿಕೆಗೆ ಬರುತ್ತದೆ ಎಂದು ಒಪ್ಪಿದ್ದಾರೆ[2]. ಜರ್ಮನಿಯ ಡಾ. ಮನ್ನ್ (Dr. Mann) ಹೇಳುವಂತೆ

> "The essence of myths is recurrence; timelessness" a peretual present"

ದಿವ್ಯಕಥೆಗಳು ನಿತ್ಯ ವರ್ತಮಾನಕಾಲೀನ ಅರ್ಥಸೂಚಕ ಸಾಮರ್ಥ್ಯಉಳ್ಳವು ಇರುತ್ತವೆ.

'ನರಧರ್ಮ'ದ ಹಿನ್ನೆಲೆ

'ನರ'ನ ಸ್ವಭಾವ ಧರ್ಮಸೂಚಕ ಆದಿನರನ ಒಂದು ದಿವ್ಯಕಥೆಯು, ಸುಮೇರಿಯನ್ ಭಾಗದಲ್ಲಿ ದೊರೆತಿದೆ. ಈ ಆದಿನರನನ್ನು "ಎಂಕಿಡು" ಎಂದು ಹೆಸರಿಸಲಾಗಿದೆ. ಈ ಆದಿ 'ನರ'ನಿಗೆ ತಾನು 'ಪಶುವರ್ಗದಿಂದ ಭಿನ್ನನು' ಎಂಬ ಅರಿವಿನ ಅರಿವು ಮೂಡಿರಲಿಲ್ಲ. ದೇವಿಗೆ ಅರ್ಪಿತ ಒಬ್ಬ ದೇವದಾಸಿಯು (ಪಶು ವರ್ಗದಲ್ಲಿ ಬೆರೆತು ಪಶುಗಳ ರೀತಿಯಲ್ಲಿ 'ಪಶುಧರ್ಮ'ವನ್ನು ಆಚರಿಸುತ್ತಿದ್ದ), 'ಎಂಕಿಡು' ಈ ಆದಿನರನನ್ನು ಕಂಡಳು. ಈ ನರನ ಚಿತ್ತವನ್ನು ತನ್ನತ್ತ ಸೆಳೆದಳು.

> When he comes she plays her charms before him and he is seized with the desire for her. After seven days of amorous delight, Enkitu awakes from his trance and finds that a change has taken place in him... and the woman says to him,-"Thou art wise Enkidu: thou art become like a God"[3]

ಆದಿನರನ ಈ ಕಥೆಯನ್ನು ಏಮಮಟ್ಟಿಗೆ ಹೋಲುವ ಒಂದು ದಿವ್ಯಕಥೆಯು ಭಾರತೀಯರಲ್ಲಿಯೂ ಉಂಟು. ಇದು 'ಶೃಂಗ' ಮುನಿಯ ಕಥೆ ಇವನನ್ನು ಋಷ್ಯಶೃಂಗ ಅಥವಾ 'ಶೃಂಗ ಋಷಿ' ಎಂದೂ ಕರೆಯಲಾಗಿದೆ.* ಆದರೆ ಈ ನರ ಸಂಪ್ರದಾಯವು 'ಋಷಿ' ವರ್ಗಕ್ಕೆ ಎಂದೂ ಮಾನ್ಯವಿದ್ದಿಲ್ಲ. 'ಋಷಿ' ಮತ್ತು 'ಮುನಿ' ಯತಿ, ಇವು ವಿಶಿಷ್ಟ ಜೀವನ ದೃಷ್ಟಿಕೋನದ ಎರಡು ವಿಭಿನ್ನ ಧರ್ಮಪರಂಪರೆಗಳ ನೇತಾರರ ಪದವಿ ಸೂಚಕ ಹೆಸರುಗಳು. ಶೃಂಗಮುನಿಯನ್ನು ಋಷಿ ಎಂದು ಹೆಸರಿಸಿರುವಲ್ಲಿ 'ನರ' ಪಂಥೀಯ ಏರಾಟಿಕೆಯ ಸ್ವರೂಪವು ಬಯಲಿಗೆ ಬರುತ್ತಿದೆ. ವೇದದಲ್ಲಿ ನಿತ್ಯಮೌನೇಯ 'ಮುನಿ' ಕೇಶೀ (ಕಪರ್ದಿ) ಸೂಕ್ತವಿದೆ. ಈ ಸೂಕ್ತಸ್ಥ 'ಮುನಿ' ಮೌನೇಯನು ಯಾರು? ಇದರ ಸ್ಪಷ್ಟತೆಯಿಲ್ಲ. ಶ್ಲೇಷ ಹಾಗೂ ನಾನಾರ್ಥಗಳಿಗೆ ಇಂಬು ಇರುವ ಈ ಸಂಹಿತಾ ರಚನೆಯ ವೈಶಿಷ್ಟ್ಯವು ಇಂಥ ವ್ಯಾಮಿಶ್ರಶೈಲಿಯಲ್ಲಿ ಇದೆ. ಈ ಮುನಿಗಳು ಬಹಳ ಜನ, ಎಂಬ ಸಂಭ್ರಮ ನಿರ್ಮಾಣಕ್ಕೆ ಅವಕಾಶವಿದೆ. ಆದರೆ, ಕೇಂದ್ರಪಾತ್ರ 'ಕೇಶಿ' ಒಬ್ಬನೇ! ಈ ಮೌನೇಯನು, ವಿಶ್ವನಿರ್ಮಾಣಕಾರಣ ಕೇಶಿಯು ಒಬ್ಬನೇ! ಈತನೇ ಆ ಶೃಂಗ ಮುನಿ, ಆದಿನರ, ಜಗದ್ಗುರು, ಪುರಿ ಶಯ(ನ).

ಆದರೆ 'ಎಂಕಿಡು' ಮತ್ತು 'ಶೃಂಗಿ' ಮುನಿ ಇವೆರಡರ ಸಾಂಕೇತಿಕತೆಯಲ್ಲಿ ಸಾಮ್ಯವೂ ಇದೆ. 'ಶೃಂಗಿ' ಪಶುವರ್ಗದಲ್ಲಿಯೇ ಇದ್ದವನು. ಇವನು ಚಿತ್‌ಶಕ್ತಿಯ ಪ್ರತಿನಿಧಿ. ಈತನಿಗೆ ಒಬ್ಬ ದೇವೀ (ಸ್ತ್ರೀ)ಯ ಮೂಲಕ ಜ್ಞಾನದೀಕ್ಷೆ ಲಭಿಸುತ್ತದೆ. ಬಳಿಕ ಈ ನರನಿಗೆ, ವಾ-ನರರಿಂದ-ಪಶು ವರ್ಗದಿಂದ, ತಾನು 'ಬೇರೆ' ಎಂಬ ಜ್ಞಾನೋದಯವಾಗುತ್ತದೆ. 'ಶೃಂಗಿ' ಕೊಂಬಿನವ ಎಂಬ ಈ ಸಾಂಕೇಕತೆಯು ಪ್ರಾರಂಭದಲ್ಲಿ ಪೂರ್ಣ ಭೌತ ಅರ್ಥದ್ದೇ ಇತ್ತು. ಶೃಂಗಾರ-ರಸಸ್ರಾವಕ ಶೃಂಗವಿದು. ಆದಕಾರಣ, ಈ 'ನರ' (ಳ) ಶೃಂಗಿ; ಸಾರ್ಥ ಹೆಸರು. ಈ ಶೃಂಗಿಯ ಮೂರ್ತಿಗಳು ಭಾರತದಲ್ಲಿ ಇಲ್ಲ. ಆದರೆ, 'ಎಂಕಿಡು' (ಸುಮೇರಿನ ಹೋಲಿಕೆಯ ಎಂಕಿಡು) ಪ್ರತಿಮೆಗಳು-ಸೈಂಧವ ಸಂಸ್ಕೃತಿಯ ಅವಶೇಷಗಳಲ್ಲಿ ದೊರೆಯುತ್ತವೆ!★ ಏಕಶೃಂಗಿ ಚತುಃಶೃಂಗಿ, ದೇವಿಯದು ಮಹಾರಾಷ್ಟ್ರದಲ್ಲಿ ಇದ್ದಾರೆ. ಉಚ್ಚ ಶೃಂಗಿ (ಉಚ್ಚಂಗಿ) ಕರ್ಣಾಟಕದಲ್ಲಿ ಇದೆ. ಉಚ್ಚಂಗಿ ವಿರಕ್ತಮಠ ಸುಪ್ರಸಿದ್ಧವಿದೆ. ಶೃಂಗ ಗಿರಿ>ಶೃಂಗೇರಿ ಜಗದ್ಗುರು ಆದಿ ಶಂಕರಾಚಾರ್ಯರ ಪ್ರಧಾನಪೀಠ!

ಪ್ರಾಚೀನ ಕಾಲದಲ್ಲಿ 'ವೀರ್ಯ ವಂತಿಕೆಯ' (ಚಿತ್‌ಶಕ್ತಿಯ) ಸೂಚಕವಾಗಿ 'ಕೊಂಬು' (ತಲೆಗೆ) ಕಟ್ಟಿಕೊಳ್ಳುವ ವಾಡಿಕೆ ಇತ್ತು. ಶೃಂಗ: 'ಬಾಸಿಂಗ' ರೂಪದಲ್ಲಿ ವಧೂವರರಿಗೆ 'ಲಗ್ನ' ಸಮಾರಂಭದ ಅಂಗವಾಗಿ ಕಟ್ಟಲಾಗುತ್ತದೆ. 'ಶೃಂಗಾರರಸ' ಈ ಪದ ಪ್ರಯೋಗವು ಸಾರ್ಥವಿದೆ. ಸಾಂಕೇತಿಕ ಪಾತಳಿಯ ಮೇಲೆ, ಸಾರ್ವಜನಿಕವಾಗಿ, ಸಾಹಿತ್ಯಕ ಕಲಾಕೃತಿಗಳ ಮೂಲಕ ಈ ರಸಾನುಭವದ ಆನಂದವನ್ನು ಪಡೆಯುವ ತಂತ್ರವನ್ನು ಈ ಮಾನವ ಪ್ರಜ್ಞೆ ಕಂಡು ಹಿಡಿದಿದೆ. ಇದು ಮರ್ಯಾದೆ ಮೀರುವಾಗ ನರ(ಳ) ಸಂಪ್ರದಾಯವು ಪ್ರಬಲವಾಗುತ್ತದೆ.

ಮೂಲ ನರಧರ್ಮದಲ್ಲಿ ಆದ ಸ್ಥಿತ್ಯಂತರ

'ಶೃಂಗಿ' ನರ(ಳ), ಪ್ರಾಣಲಿಂಗ ಪಾತಳಿಯ ಮೇಲಣ ಪ್ರಚೋದನೆಯನ್ನೇ 'ಧರ್ಮ'ವೆಂದು ಅನುಸರಿಸುವ 'ನರ' ಸಂಪ್ರದಾಯದ ಆದಿಪುರುಷ, ಸುಮೇರಿನತ್ತಣ್ಣಿನ ಶೃಂಗಿ ಎಂಕಿಡು, ಈತನ ಕಥೆ, ಈ ದಿಕ್ಕಿನಲ್ಲಿ ಹಿಗ್ಗಿದ್ದು ಕಾಣುವುದಿಲ್ಲ. ಸುಮೇರಿನ ಎಂಕಿಡು ಗಿಲ್ಗಿಮೇಶನ ನೇತೃತ್ವದಲ್ಲಿ ಮುನ್ನಡೆಯುವ ನರ ಎಂಕಿಡು'. ಸಾಮಾಜಿಕ ದುಃಖಗಳನ್ನು ದೂರ ಮಾಡುವ ಸಂಕಲ್ಪದಿಂದ ತನ್ನ ಜೀವಿತಕಾರ್ಯವನ್ನು ಪ್ರಾರಂಭಿಸುತ್ತಾನೆಂಬ ಹಾಗಿನ ರೀತಿಯಲ್ಲಿ ಆ ಕಥೆಯು ಬೆಳೆದಿದೆ. ಆದರೆ, ರಾಮ-ಚಂದ್ರನ ಹಾಗೂ ಸಹೋದರ ಜನ್ಮಕ್ಕೆ ಕಾರಣವಾದ 'ಪುತ್ರಕಾಮ' ಇಷ್ಟಿಯ ಈ ಶೃಂಗಿಯ ಲೋಕೋಪಕಾರದ ದಿಕ್ಕೇ ಬೇರೆ. ಈ ಸಾಂಕೇತಿಕ ದೃಷ್ಟಿಯಿಂದ, ಶೃಂಗಿ-ಪುರಿ ಶಯ(ನ) ಹುತ್ತಪ್ಪ-ವಲ್ಮೀಕಸ್ಥ 'ವಾಲ್ಮೀಕಿ'=ಗುಹೇಶ್ವರ, ಇವು ಅಭಿನ್ನವಾಗಿವೆ!

---

* ಋಷ್ಯಶೃಂಗನ ಬಗೆಗೆ 'ನಾಗಪ್ರತಿಮಾ ವಿಚಾರ' ಗ್ರಂಥದಲ್ಲಿ ವಿವರವಾಗಿ ವಿಶ್ಲೇಷಣೆಗೆ ಒಳಗಾಗಿದೆ. (ಸಂ)

★ ಋಗ್ವೇದಸಾರ, ನಾಗಪ್ರತಿಮಾ ವಿಚಾರ. ಮೈಸೂರು ವಿಶ್ವವಿದ್ಯಾಲಯದ ಪ್ರಕಟಣೆ, ಕೊನೆಯ ಚಿತ್ರ ಪುಟದಲ್ಲಿ ಎಂಕಿಡು ಪ್ರತಿಮೆಯನ್ನು ನೋಡಿ.

ಶೃಂಗವುಳ್ಳ ನಾಗಗಳ ಕಥೆಗಳು ವೇದದಲ್ಲಿವೆ! ಗ್ರೀಕ್ ದಿವ್ಯಕಥೆಗಳಲ್ಲೂ ಇವೆ. ಕಾಲಕ್ರಮದಲ್ಲಿ ಈ ಶೃಂಗದ ದುಷ್ಪರಿಣಾಮಗಳು ಕಾಣತೊಡಗುತ್ತವೆ. ಆಗ, ಇದರ ಮುಂದಿನ ಹಂತದಲ್ಲಿ, ಈ ಭೋಗಿ ಶೃಂಗಿ, ಆತ್ಯಂತಿಕ ತ್ಯಾಗಿ ಆಗುತ್ತಾನೆ! ಆ-ಮರಣ ಕುಮಾರೀ ಕುಮಾರ ವ್ರತಧಾರಿಯಾಗುತ್ತಾನೆ. ನರಪಂಥವು, ಯತಿ ಮುನಿ ಸಂಪ್ರದಾಯವಾಗಿ ಮಾರ್ಪಡುವ ಅನಿವಾರ್ಯತೆಯನ್ನು ಎದುರಿಸುತ್ತದೆ! ಇದು ಕೂಡ ವಿಶ್ವನಿಯಮಕ್ಕೆ ಅನುಸರಿಸಿಯೇ ಆಗಿದೆ. ಸೈಂಧವಸಂಸ್ಕೃತಿಯಲ್ಲಿ ಆದಿನರ: ಶೃಂಗಿ: ಎಂಕಿಡುವಿನ ಪ್ರತಿಮೆ ಇದೆ. ಅಲ್ಲದೆ 'ಪಶುಪತಿ'ಯ ಪ್ರತಿಮೆಯೂ ಉಂಟು. ಯೋಗಾಸನಸ್ಥ ಪಶುಪತಿ ಸಿದ್ಧನ ಈ ಚಿತ್ರದಲ್ಲಿ ಉತ್ಥಿತಲಿಂಗದ ಸೂಚನೆಯೂ ಇರುವ ಅನುಮಾನ ಕೆಲವರಿಗಿದೆ. ಈ ಯೋಗಿಯ ಅಕ್ಕಪಕ್ಕದಲ್ಲಿ ಪಶುಗಳನ್ನು ತೋರಿಸಲಾಗಿದೆ. ಪಶುಪತಿ-ಶೃಂಗಿ, ಇದು 'ನರ'ನ ಮೂಲ ಮಾದರಿಯ ಇನ್ನೊಂದು ನಿಲುಮೆ. ಆದರೆ, ಆದಿಶಕ್ತಿ ಕುಮಾರೀ ಮಾತೆಯೇ ಮೂಲ ಶೃಂಗಿ! ಕೇಶಿ-ಕಪರ್ದಿ (ದೇವಿ). ಆದರೆ, ಸ್ತ್ರೀಲಿಂಗಿ ಚಂದ್ರಾ, ಪುಂಲಿಂಗಿಯಾಗುವ ಹಂತದ ಸ್ಥಿತ್ಯಂತರವಿದು!

ಸೈಂಧವ ಸಂಸ್ಕೃತಿಯ ಅವಶೇಷಗಳಲ್ಲಿ ನಾಸಿಕಾಗ್ರ ದೃಷ್ಟಿಯ ಧ್ಯಾನ-ಮಗ್ನ ಒಬ್ಬ ಮೌನೇಯನ ಪ್ರತಿಮೆಯೂ ಉಂಟು! ಈ ಸೈಂಧವ ಸಂಸ್ಕೃತಿಯ ಅವಶೇಷಗಳಲ್ಲಿ ದೊರೆಯುವ, 'ನವ' ಪರ್ಣಗಳ ಅರಳೆಯ ಮರ (ಪಿಪ್ಪಲದ) ಪ್ರತಿಮೆಯೂ ಇದೆ. 'ನರ' ಸಂಪ್ರದಾಯದ ಐತಿಹ್ಯವನ್ನು ಗ್ರಹಿಸಿಕೊಳ್ಳಲು ತುಂಬ ಉಪಾಕಾರವಿದೆ. ಈ ಪಿಪ್ಪಲ 'ವೃಕ್ಷ'ವೇ ಇಂದಿನ ವೇದದಲ್ಲಿ ಆದಿತ್ಯ (ಪುರುಷ) ವೃಕ್ಷವಾಗಿದೆ! ಪ್ರೊ. ಟಾಯ್ನ್‌ಬಿ ದೃಷ್ಟಿಯಲ್ಲಿ ಸೈಂಧವ ಸಂಸ್ಕೃತಿಯು Mohenjo-Daro as a Colony, a daughter or a sister Culture; B. C. 2677-2517, ಇದು ಸುಮೇರಿನ ಬಳಗದ್ದು ಆಗಿದೆ[೪]. ಆದರೆ ಟಾಯ್ನ್‌ಬಿ ಕಂಡಿರುವ ಸಾಮ್ಯವು ತೀರ ಸ್ಥೂಲ ಸ್ವರೂಪದ್ದಾಗಿದೆ.

ಟಾಯ್ನ್‌ಬಿ ಅಭಿಪ್ರಾಯ

ಸುಮೇರಿಯನ್, ಅಸ್ಸಿರಿಯಾ ಭಾಗದ ಪುರಾತನ ಸಂಸ್ಕೃತಿಗಳೊಡನೆ ಭಾರತೀಯ ಪುರಾತನ ಸಾಂಸ್ಕೃತಿಯ ನಿಕಟ ಸಂಬಂಧವಿದ್ದುದು ನಿಶ್ಚಿತವಿದೆ. ಆದರೆ, ಇವೆರಡೂ ಸಂಸ್ಕೃತಿಗಳಲ್ಲಿ ತುಂಬ ವ್ಯತ್ಯಾಸವು ಕಾಣಿಸಿಕೊಳ್ಳ ತೊಡಗಿದ್ದೂ ಉಂಟು. ಇದನ್ನು ಟಾಯಿನ್‌ಬಿ ಕಡೆಗಣಿಸಿದ್ದೇಕೋ ತಿಳಿಯದು. ಭಾರತೀಯ ಸಾಂಸ್ಕೃತಿಕ ಪರಂಪರೆಯ ಆಂತರಿಕ ಪರಿಚಯದ ಅಭಾವವೂ ಇದಕ್ಕೆ ಕಾರಣವಿರಬಹುದು. ಸೈಂಧವ ಸಂಸ್ಕೃತಿಯು ಮೇಲ್ತೋರಿಕೆಗೆ ಭೌತಭೋಗದ ವೈಭವದ ದ್ಯೋತಕವಾಗಿ ಕಾಣುತ್ತದೆ. ಆದರೆ, ಕುಮಾರ-ಕುಮಾರೀ ವ್ರತವೇ ಈ ಸಂಸ್ಕೃತಿಯಲ್ಲಿ ಜೀವನದ ಆದರ್ಶವೆನಿಸಿದ್ದನ್ನು ಸೂಚಿಸುವ ಅವಶೇಷಗಳು ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಸಿಕ್ಕಿವೆ. ಇದು ಪಾರಲೌಕಿಕ ಶ್ರದ್ಧೆಯ ಧರ್ಮವಾಗಿ ಮಾರ್ಪಟ್ಟಿದ್ದು ಸ್ಪಷ್ಟವಿದೆ. ಸೈಂಧವಸಂಸ್ಕೃತಿಯಲ್ಲಿ ಆಗಿರುವ ಈ ಪರಿವರ್ತನವು ಸುಮೇರ ಅಸ್ಸೀರಿಯಾ ಭಾಗದಲ್ಲಿ ಸಂಭವಿಸಿದ್ದು ಕಾಣುವುದಿಲ್ಲ! ಅದು ಕೊನೆಯ ವರೆಗೂ ಭೋಗವಾದಿಯಾದ ಸಂಸ್ಕೃತಿಯಾಗಿಯೇ ಉಳಿದದ್ದು ಕಂಡುಬರುತ್ತದೆ. ಉಪನಿಷತ್ತುಗಳಲ್ಲಿ ದೊರೆಯುತ್ತಿರುವ ಪ್ರಮಾಣಗಳಿಂದ, ಇದು ದೃಢಪಡುತ್ತದೆ. ಆ ಸಂಸ್ಕೃತಿಯು ಮೋಕ್ಷಕಾಮೀ ಧರ್ಮದ ದಾರಿಗೆ ತಿರುಗಲಿಲ್ಲ. ಈಶೋಪನಿಷತ್ತಿನ "ಅಸುರ್ಯಾ ನಾಮ ತೇ ಲೋಕಾಃ" ಎಂಬಲ್ಲಿ, 'ಅಸುರ' ಹೆಸರಿನ ಆ ಲೋಕಗಳ (City States) ಉಲ್ಲೇಖವಿರುವ ಶಕ್ಯತೆಯಿದೆ. ಇವು (ಅಜ್ಞಾನದ) 'ಅಂಧೇನ ತಮಸಾ ವೃತಾ:' (ಕಗ್ಗತ್ತಲೆಯಿಂದ ಕವಿದ ಲೋಕಗಳು) ಎಂಬ ವರ್ಣನೆಯಿದೆ. ಆದರೆ, "ಅಸೂರ್ಯಾನಾಮ ತೇ ಲೋಕಾಃ' ಇದನ್ನು ಸೂರ್ಯನಿಲ್ಲದ ಲೋಕ ಎಂದು ಬಗೆಯಲಿಕ್ಕೂ ಅವಕಾಶವಿದೆ, ಸೂರ್ಯ ಮತ್ತು ಅಸೂರ್ಯ ಈ ಸಾಮ್ಯದಿಂದಾಗಿ.

ಆದರೆ, ಛಾಂದೋಗ್ಯದಲ್ಲಿ ಬರುವ 'ಅಸುರ' ಲೋಕದ ಉಲ್ಲೇಖವು ನಿಃಸಂದಿಗ್ಧವಾಗಿ ಭೌಗೋಲಿಕ ಹಾಗೂ ಐತಿಹಾಸಿಕ ಸ್ವರೂಪದ್ದಾಗಿದೆ. ಡಾ. ಸುರೇಂದ್ರನಾಥ ದಾಸಗುಪ್ತರು ಭಾರತೀಯ ತತ್ತ್ವ-ಜ್ಞಾನದ ಇತಿಹಾಸದ ಒಂದು ಮಹಾಸಂಪುಟದಲ್ಲಿ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಛಾಂದೋಗ್ಯ ಉಪನಿಷತ್ತಿನ ಈ ವರ್ಣನೆಯು

ಐತಿಹಾಸಿಕ ಸ್ವರೂಪದ್ದು ಆಗಿದೆ, ಎಂಬುದು ಆ ವರ್ಣನೆಯಿಂದ ವ್ಯಕ್ತವಾಗುತ್ತದೆ. ಅಸ್ಸೀರಿಯದ ಉತ್ಖನದಲ್ಲಿ ಈ ಸಂಗತಿಯು ದೃಢಪಟ್ಟಿದೆ. ಮೃತರಾಜರ ಸಮಾಧಿಯಲ್ಲಿ ಅವರ ವೈಭವದ ವಸ್ತ್ರಾಲಂಕಾರಗಳು ಬೆಳಕಿಗೆ ಬಂದಿವೆ. ಜೀವಂತವಿರುವಾಗಿನ ಭೋಗ ಮಡಿದ ಬಳಿಕವೂ ಪರಲೋಕದಲ್ಲಿ ಸಿಕ್ಕಲು ಈ ಯೋಜನೆಯೂ ಇರುತ್ತಿತ್ತು. ಛಾಂದೋಗ್ಯದ ಒಂದು ನಿರ್ದೇಶವು ಈ ದೃಷ್ಟಿಯಿಂದ ಅಭ್ಯಸನೀಯವಿದೆ.

"ಬ್ರಹ್ಮ"ಜ್ಞಾನ ಪಡೆಯಲು, ಗುರು 'ಪ್ರಜಾಪತಿಯ' ಸನ್ನಿಧಿಗೆ ಬಂದವರಲ್ಲಿ 'ವಿರೋಚನೋ ಅಸುರಾಣಾಂ' ಸಹ ಇದ್ದಾನೆ. ಆದರೆ, ಭಾರತೀಯ ನರ ಸಂಪ್ರದಾಯದ ಈ ವಿರಕ್ತಪಂಥೀಯ 'ಬ್ರಹ್ಮನ್' ತತ್ವದ ಭೂಮಿಕೆಯು ಹಿಡಿಸದೆ, ಆ ಅಸುರ ವಿರೋಚನನು ತನ್ನದೇಶಕ್ಕೆ ತಿರುಗಿ ಹೋಗುತ್ತಾನೆ. ಇಲ್ಲಿ 'ಅಸುರ' ಲೋಕದ ನಡೆವಳಿಯ ಚಿತ್ರವು ಒಂದು ವಾಕ್ಯದಲ್ಲಿ ಸೂಚಿತವಿದೆ.

> "ಪ್ರೇತಸ್ಯ ಶರೀರಂ ಭಿಕ್ಷಯಾ ವಸನೇನ ಅಲಂಕಾರೇಣೇತಿ ಸಂಸ್ಕುರ್ವಂತಿ"
> ಏತೇನ ಅಮುಂ ಲೋಕಂ ಜೇಷ್ಯಂತೋ ಮನ್ಯಂತೇ

ಅಸ್ಸೀರಿಯಾ, ಬ್ಯಾಬಿಲೋನ ಭಾಗದ ರುದ್ರಭೂಮಿಯ ಉತ್ಖನನದಲ್ಲಿ ದೊರೆತ ವಸ್ತುಗಳಿಂದ "ಅಸು-ರ ಪರಂಪರೆಯ ಶ್ರದ್ಧೆಯ ಸ್ವರೂಪವು ದೃಢಪಡುತ್ತದೆ, ಸತ್ತವರ ಸಂಗಡ ಅವರ ವೈಭವದ ವಸ್ತುಗಳನ್ನು ಹೂಳುತ್ತಿದ್ದರು.

'ನರ' ಸಂಪ್ರದಾಯಗಳ ಎರಡುಪ್ರಕಾರಗಳು

ಅಸು: (ಪ್ರಾಣ) ಪೂಜಕ ನರಸಂಪ್ರದಾಯಗಳಲ್ಲಿ ಭೋಗದ ವಿಪರೀತ ಪರಿಣಾಮಗಳು ಕಂಡರೂ ವಿಷಯಲೋಲುಪತೆಯ ಆಕರ್ಷಣವು ಏನೇ ಆದರೂ ತಗ್ಗದಿರುವ ಸಂಸ್ಕೃತಿಗಳು ಪ್ರಾಧಾನ್ಯದಿಂದ ಸುಮೇರ ಹಾಗೂ ಈಜಿಪ್ಟನಲ್ಲಿ ಆದುವು. ಅಸ್ಸೀರಿಯಾದ ರುದ್ರಭೂಮಿ ಹಾಗೂ ಈಜಿಪ್ಟಿನ ಪಿರಾಮಿಡ್ಡುಗಳ (ಗೋರಿಗಳ) ಮೂಲಕ ದೊರೆವ ಅವಶೇಷಗಳೇ ಇದಕ್ಕೆ ಸಾಕ್ಷಿ. ಜೀವಂತವಿರುವ ವರೆಗೂ ಭೋಗ-ವಿಲಾಸಗಳಲ್ಲಿ ದೊರೆವ ಆನಂದವು ಪರಲೋಕದಲ್ಲಿಯೂ ಲಭಿಸಬೇಕು ಎಂಬ ಮನೀಷೆಯ ಅಸುರ-ನರ ಸಂಪ್ರದಾಯಗಳು, ಸುಮೇರ, ಈಜಿಪ್ಟ್ ಭಾಗದಲ್ಲಿ ಕಾಣಸಿಕೊಂಡಿವೆ. ಈಜಿಪ್ಟಿನ ಪುರಾತನ ದೈವತಗಳಲ್ಲಿ ಭಾರತೀಯ ಕಂ(ಪ್ರಜಾಪತಿ= ಹಿರಣ್ಯಗರ್ಭ) ದೈವತವನ್ನು ಸಂಪೂರ್ಣ ಹೋಲುವ ಕ (KA) ದೈವತವಿದೆ! ಇದು ಜನದ ಹಣೆಬರೆಹಕ್ಕೆ ಕಾರಣವಿರುವ ದಿವ್ಯಶಕ್ತಿ ಎಂಬ ನಂಬುಗೆ ಇತ್ತು. ಈ ಪ್ರಜಾಪತಿ=ಪ್ರಾಣಲಿಂಗೋಪಾಸನೆಯ ಆ ನರ=ಅಸುರ ಸಂಸ್ಕೃತಿಗಳು ಇಂದು ನಾಮಶೇಷವಾಗಿವೆ!

ಆದರೆ, ಭಾರತೀಯ ಹಾಗೂ ಗ್ರೀಕ್‌ಸಂಸ್ಕೃತಿಯಲ್ಲಿ ಈ ನರ ಸಂಪ್ರದಾಯಗಳು ತಮ್ಮ ಅಸ್ತಿತ್ವವನ್ನು ಮುಂದುವರಿಸಿಕೊಳ್ಳುವ ಹಂಚಿಕೆ ಕಂಡುಕೊಂಡಿವೆ. ಪಾರಲೌಕಿಕ ಭೂಮಿಕೆಯನ್ನು ಸ್ವೀಕರಿಸಿ ಭೋಗವಾದ ತ್ಯಜಿಸಿ ಆತ್ಯಂತಿಕ ತ್ಯಾಗದ ದಾರಿಯಲ್ಲಿ ಹೊರಟಿವೆ. ಆದಿನರ ಎಂಕಿಡು ಹಾಗೂ ಶೃಂಗಿ ಮುನಿ ಇವರನ್ನು ಕುರಿತು ಇರುವ ದಿವ್ಯಕಥೆಯಲ್ಲಿ ಹುದುಗಿರುವ ಸಾಂಕೇತಿಕ ಅರ್ಥವು ಸಾರ್ವಕಾಲಿಕವಿದೆ. ಈ ಪಶುವರ್ಗದ ನರ(ಳ)ನ ದಮನ ಸಾಮರ್ಥ್ಯವು, ದಮಯಂತೀ ಸ್ತ್ರೀ ಶಕ್ತಿಯಲ್ಲೇ ಇದೆ ಎಂಬುದನ್ನು ಸೂಚಿಸುವ ಈ 'ನರ' ಸಂಪ್ರದಾಯದ ಜ್ಞಾನದೀಕ್ಷೆಯ 'ಆದಿಗುರು' 'ದೇವಿ'ಯೇ ಇದ್ದಾಳೆ. ಚಿತ್ ಅಗ್ನಿಕುಂಡ ಸಂಭೂತಾ 'ಸ್ವಯಂ ಭೂ', ಅಂಗನಾ - ಕುಮಾರಿ ಚಂದ್ರಾ(೦) ದೇವಿಯನ್ನು ಪುರಾತನ ಕಾಲದಲ್ಲಿ ಕುಂಡ, ಹೊಂಡ, ಗವಿ, ಶೃಂಗ, ಮಂಡಲ ರೂಪದಲ್ಲಿ ಪೂಜಿಸುವ ವಾಡಿಕೆ ಇತ್ತು ಇದೆ. ಈ ಸಂದರ್ಭದಿಂದ 'ಕಾಮಧೇನು' ಹಾಗೂ 'ಕಲ್ಪವೃಕ್ಷ'ದ ಹಿನ್ನೆಲೆಯೂ ಅರಿಕೆಗೆ ಬರಲಿದೆ. ದಿವ್ಯಲೋಕದಲ್ಲಿ ಕಾಮಧೇನು (ಚಂದ್ರಾ : ೦) ಇದ್ದಾಳೆ, (ಈಜಿಪ್ಟಿನ ಹ್ಯಾಥೋರ ಹೋಲಿಸಿರಿ.) ಈ ಸ್ತ್ರೀ ಕುಮಾರೀರೂಪ ಆದರ್ಶದ ಚಂದ್ರಾ (೦) ಬಳಿಕ ಪುಂ ಲಿಂಗಿ ಆಗುವುದರ ಸಂಗಡ, 'ಕಾಮಧೇನು' - ನಂದಿನೀ (ಆನಂದಿನೀ) ಕಣ್ಮರೆಯಾಗುತ್ತಾಳೆ. ಆಗ, ಆದಿಪುರುಷ : ಗುರುದೇವನೇ ಈಪ್ಸಿತ ಫಲದಾತ 'ಕಲ್ಪವೃಕ್ಷ, ಪ್ರತಿಮೆಗಳು, ಅರಳಿ ಅಥವಾ ಆಲದ ವೃಕ್ಷರೂಪದಲ್ಲಿ ಅಲ್ಲಿರುತ್ತವೆ. ಈಗ ನರರೊಳಗಿನ ಚಿತ್‌ಶಕ್ತಿ: Will Power ಇದುವೆ ಕಾಮಧೇನು, ಕಲ್ಪವೃಕ್ಷವಾಗಿದೆ. ಚಿತ್‌ಶಕ್ತಿ ಉಪಾಸಕರು ಚಮತ್ಕಾರ ಸಿದ್ಧಿಗಳ ಸಲುವಾಗಿ ಸಾಧನ ಅನುಷ್ಠಾನರತರಾಗುವ ವಾಡಿಕೆ ಇಂದಿಗೂ ಉಳಿದಿದೆ.

ಮಾನವ ಪಂಗಡಗಳಲ್ಲಿ ಹಿಂದೊಮ್ಮೆ ಮಂಡಲ (೦) ಉಪಾಸನೆಯು, ಪ್ರಪಂಚದ ಎಲ್ಲ ಜನಾಂಗಗಳಲ್ಲಿಯೂ ಇತ್ತು. ಇದೆ. ಹೊಲಗಳಲ್ಲಿ ಭೂ-ದೇವಿ ಕರೆವ್ವನನ್ನು, ಒಂದು ಕಲ್ಲಮೇಲೆ ಸುಣ್ಣ, ಕೇಮೆಯ ವರ್ತುಲ (ಮಂಡಲ) ಬರೆದು ಅಲ್ಲಿ (೦) 'ದೇವಿಯನ್ನು ಕಾಣುತ್ತಾರೆ. ಈ ಕರೆವ್ವನನ್ನು ಒಂದು ಗಿಡದ ಅಡಿಯಲ್ಲೇ ಇರಿಸುವ ವಾಡಿಕೆಯುಂಟು. ಬೇವು, ಬಿಲ್ವ, ಬನ್ನಿ ಇಂತಹ ಕೆಲ ವಿಶಿಷ್ಟಗಿಡಗಳ ಮಹತ್ವವು ಈಗಲೂ ವಿಶೇಷವಿದೆ. ವೃಕ್ಷ (ಮರ) ಇದು ಪುರಿಶಯ(ನ) ಪುರುಷನ ಪ್ರತಿನಿಧಿಯೆಂಬ ಶ್ರದ್ಧೆಯಿತ್ತು. ಈಗಲೂ ಇದೆ. 'ಅಶ್ವ-ತ್ಥೋ' ದೇವ ಸದನಃ [ಅಥರ್ವವೇದ] ಈ ಚಂದ್ರಾದಿತ್ಯ ದಿವ್ಯವೃಕ್ಷವು ಬಳಿಕ 'ದೇಹವೇ ದೇಗುಲ' ಎಂಬ ಶ್ರದ್ಧೆಯಾಗಿ, ಆ ನರ ಸಂಪ್ರದಾಯದ ಸ್ಮೃತಿ (Living Past) ಇಂದಿಗೂ ಉಳಿದುಬಂದಿದೆ! ನಿನ್ನೆ-ಇಂದುಗಳು ಅವ್ಯಾಹತವಾಗಿ ಬಂದುದನ್ನು ಇಲ್ಲಿ ಮನಗಾಣಬಹುದು. ಆದರೆ, 'ದೇಗುಲ'ವಾಗುವ ದೇಹಮಂದಿರಕ್ಕೆ 'ಗರ್ಭ ಗುಡಿ' ಇರಲಿಕ್ಕೆ ಬೇಕು. ಈ ಕಾರಣದಿಂದಾಗಿ 'ದೇಹವೇ ದೇಗುಲ' ಎಂಬಲ್ಲಿ ಸ್ತ್ರೀ (೦) ದೇಹವೇ ಮೂಲದಲ್ಲಿ ಅಭಿಪ್ರೇತವಿತ್ತು.

ಈ 'ನರ' ಸಂಪ್ರದಾಯದ ಬಗೆಗಿನ ವ್ಯಾಲ್ಲಾಸನ Missing Linkದ ಅಂದಾಜು, ಯಥಾರ್ಥವಿದ್ದುದನ್ನು ನಿದರ್ಶನಕ್ಕೆ ತಂದುಕೊಡುತ್ತಿದೆ. ಪ್ರಜ್ಞೋದಯ ಪೂರ್ವದ ಮೂಲ ನರ(ಳ) ಸಂಪ್ರದಾಯವು ಇಂದು ಕಾಣದಾಗಿದೆ. ದಿವ್ಯಕಥೆಗಳ ಮೂಲಕ ಅರಿಕೆ ಬರುವ 'ನರ' ಶೃಂಗಿಯ ಕಥೆಯು ಈ ದೃಷ್ಟಿಯಿಂದ ಉದ್ಬೋಧಕವಿದೆ. ಭಾರತೀಯ ಆದಿಶೃಂಗಿ ಮುನಿ, ಸೂರ್ಯವಂಶಜ(?) ಎಂಬ ಕೀರ್ತಿಯ ರಾಮಚಂದ್ರಾವತಾರಕ್ಕೆ ಕಾರಣ. 'ಪುತ್ರಕಾಮ' ದಶರಥನಿಗೆ ಪುತ್ರರತ್ನಗಳು ಲಭಿಸಿದ್ದು ಈ ಶೃಂಗಿಯು ಜರುಗಿಸಿದ 'ಯಜ್ಞಫಲ'ದಿಂದಾಗಿ! ಡಾರ್ವಿನ್ ಮತ್ತು ವ್ಯಾಲ್ಲಾಸ ಮತಭೇದದಲ್ಲಿ ಹುದುಗಿರುವ ತಾತ್ವಿಕ ಭೂಮಿಕೆಯೊಳಗಿನ ತಾರತಮ್ಯದಿಂದಲೂ ಮಾನವ ಧರ್ಮಕ್ಕೆ ಪುಷ್ಟಿ. ಈ ತಾತ್ವಿಕ ಭೂಮಿಕೆಯಲ್ಲಿ ಹಲವು ಒಳಪದರುಗಳು ಇವೆ. ಮೊದಲ ಪದರು! ಜೀವನ ವಿಶ್ವವನ್ನು, ಪ್ರಾಣಿಗಳ (ಪ್ರಾಣಿಲೋಕದ) 'ವಿಶಿಷ್ಟ' ಭೂಮಿಕೆಯಿಂದ ಡಾರ್ವಿನ್ನನು ಸಮೀಕ್ಷಿಸುತ್ತಾನೆ. ಪ್ರಾಣಿಗಳ ದೈಹಿಕ ಆಕೃತಿಗಳು ಕ್ರಮವಾಗಿ ವಿಕಾಸಗೊಳ್ಳುತ್ತ ಬಂದುದಾಗಿ ಆತನಿಗೆ ಎನಿಸಿತು. ಈ ಅನಿಸಿಕೆಯನ್ನು ಪ್ರತ್ಯಕ್ಷ ಪ್ರಮಾಣಗಳಿಂದ ಮನಗಾಣಲು ಈತನು ಅತ್ಯಂತ ಪರಿಶ್ರಮಪಟ್ಟಿದ್ದಾಯಿತು. "Origin of Species" ಇದು ಆತನ ಮಹತ್ವದ ಪ್ರಕಟನೆ. ಸಂಪ್ರದಾಯವಾದಿಗಳನ್ನು ತುಂಬ ಕೆರಳಿಸಿದ ಈ ಗ್ರಂಥವು, ಪ್ರಕಟವಾದ ದಿನವೇ ಇದರ ೧೨೫೦ ಪ್ರತಿಗಳು ತೀರಿದವು! 'Species' ಇವೆಲ್ಲವೂ ಒಂದೇ ಮೂಲದಿಂದ ಹೊರಟಿವೆ, ಎಂಬ ಈ ಗೃಹೀತ ಸಿದ್ಧಾಂತವು ಇಲ್ಲಿ ಹುದುಗಿದೆ. 'ಏಕಂ ಸತ್' ಈ ತತ್ವವೇ, ಕ್ರೈಸ್ತ ಪಂಥದ ಅಡಿಗಲ್ಲು ಇದೆಯೆಂಬುದು ಡಾರ್ವಿನ್‌ನಿಗೆ ನೇರ ಗೊತ್ತಿರಲಿಕ್ಕಿಲ್ಲ. ಮೂಲ ಒಂದು 'Specy' ಇಲ್ಲದೆ Species ಹುಟ್ಟಲು ಶಕ್ಯವಿಲ್ಲ. ಆದರೆ Species ಎಂದರೂ, ಇಲ್ಲಿ, ಇದು 'ವಿಗಮನ' (Deductive) ಪದ್ಧತಿಯಾಗುತ್ತದೆ! ಅನೇಕ ಪ್ರಮಾಣಗಳು ಸಿಕ್ಕುವ ಮೊದಲೇ ಆತನಿಗೆ ಫಕ್ಕನೆ ಹೊಳೆದಂತಾದ ಎನಿಸಿಕೆ ಇದು! ಡಾರ್ವಿನ್‌ನ ಈ ವಾದದಲ್ಲಿ ಹೀಗೆ ಅನುಗಮನ (Inductive) ಮತ್ತು ವಿಗಮನ (Deductive) ಈ ಎರಡೂ ಭೂಮಿಕೆಗಳ ವಿಚಾರವೂ ತಲೆಎತ್ತುತ್ತದೆ. ಆಧುನಿಕ ಮಾನವಶಾಸ್ತ್ರದ 'Gestalt' (ಆಕೃತಿ) ಇಡಿಯಾಗಿ ಕಾಣುವ ಭೂಮಿಕೆಯ ವಿಚಾರವೂ ಈ ವಾದದ ಸ್ವರೂಪ ಗ್ರಹಣಕ್ಕೆ ಉಪಕಾರವಾಗಲಿದೆ. ಆದರೆ ಡಾ॥ ಬರ್ಟರಾಂಡ ರಸೆಲ್ಲ ಪ್ರಭೃತಿ ಆತ್ಯಂತಿಕ ವಿಶಿಷ್ಟವಾದೀ ಭೌತಶಾಸ್ತ್ರಜ್ಞರಿಗೆ 'Gestalt' (ಇಡಿ ಆಕೃತಿ) ಕಾಣುವ ಶಕ್ಯತೆಯೇ ಮಾನ್ಯವಿಲ್ಲ. ಈ 'ಇಡೀ ಆಕೃತಿ' ಹೊಳೆದು ಹೋಗುವ ಭೂಮಿಕೆಯನ್ನು ಒಪ್ಪಿದಲ್ಲಿ, ವಿಶಿಷ್ಟವಾದೀ ಅನುಗಮನದ ವಿಚಾರ ಪದ್ಧತಿಯ "ಏಕಮೇವಾದ್ವಿತೀಯತ್ವದ ಸ್ಥಾನಕ್ಕೇ ಚ್ಯುತಿ ಬರುವುದು ನಿಶ್ಚಿತ! ತಮ್ಮ ನಂಬಿಗೆಯ-ಸಂಪ್ರದಾಯದ ಅತ್ಯಂತ ಅಭಿಮಾನವು, ವಾಸ್ತವ; ಸತ್ಯ-ಗ್ರಹಣಕ್ಕೆ ಆತಂಕಕಾರಿಯಾಗಲೇಬೇಕು! ಡಾರ್ವಿನ್ನನ ಸಂಪ್ರದಾಯದಲ್ಲಿ ಸಂಶೋಧನವು ಅನುಗಮನ ಪದ್ಧತಿಯಿಂದಲೇ ಸಾಗತಕ್ಕದು ಎಂಬ ಆಗ್ರಹವಿದೆ! ಭೌತಶಾಸ್ತ್ರೀಯ ಏಕಾಂತಿಕ ಶ್ರದ್ಧೆಗೆ ಅನಕೂಲವಿರುವ 'Gestalt' ಮಾನಸಶಾಸ್ತ್ರವು, ಇವರಿಗೆ ಅಮಾನ್ಯವಿದೆ! ಅನೇಕ ವಿಶಿಷ್ಟಗಳನ್ನು ಒಂದರ ಮುಂದೆ ಒಂದು

ಜೋಡಿಸುತ್ತ ಇವೆಲ್ಲವುಗಳೂ ಒಂದು ವಿಶಿಷ್ಟ ನಿಯಮಕ್ಕೆ ಒಳಗಾಗುತ್ತಿವೆ ಎಂದು ಸಪ್ರಮಾಣವಾಗಿ ಸಿದ್ಧಪಡಿಸುವುದು, ಇಂಥ ಸತ್ಯಾನ್ವೇಷಣೆಯಲ್ಲಿ ಮಹತ್ವದ ಕರ್ತವ್ಯವೇ ಸರಿ. ಡಾರ್ವಿನ್ನನ ವೈಶಿಷ್ಟ್ಯವು ಇಲ್ಲಿಯೇ ಇದೆ. ಆದರೆ, ಅನುಗಮನ ಪದ್ಧತಿಯ ಪ್ರಾರಂಭದ ಮೂಲ ಗ್ರಹಿತವು, ಇಡೀ ಆಕೃತಿ, ಮೊದಲಲ್ಲಿ ಏನೊಂದೂ ಹೊಳೆಯದೆ ಇದ್ದರೆ ಈ ಡಾರ್ವಿನ್ನನಿಗೆ ತಾನು ಶೋಧಿಸಿದ ವಿಶಿಷ್ಟಗಳನ್ನು ಒಂದರ ಮುಂದೊಂದು ಹೀಗೆಯೇ ಜೋಡಿಸಬೇಕು ಎಂದು ಗೊತ್ತಾಗುತ್ತ ಹೋಗುವದು ಅಶಕ್ಯವೇ ಇದೆ. ಕಿಂಡರ್‌ಗಾರ್ಟನ್ ಪದ್ಧತಿಯ ಆಟಗಳಲ್ಲಿ ಮಕ್ಕಳಿಗೆ ಪ್ರಾಣಿಗಳ ಚಿತ್ರ ಪೂರ್ಣಮಾಡಲು ಹೇಳುವುದುಂಟು. ಉದಾ: ಆನೆಯ ಕಾಲು, ಸೊಂಡಿಲು ದೇಹದ ಈ ಬಗೆಯ ಭಾಗಗಳ ಘನಾಕೃತಿ ತುಂಡುಗಳನ್ನು ಜೋಡಿಸಿ ಇಡೀ ಆನೆಯ ಚಿತ್ರ ಪೂರ್ಣಮಾಡಬೇಕಾಗುತ್ತದೆ. ಹುಡುಗರಿಗೆ ಆ ಪ್ರಾಣಿಯ ಇಡೀ ಆಕೃತಿಯ ಪ್ರಜ್ಞೆ ಇಲ್ಲದೆ ಇದ್ದರೆ, ತಮ್ಮ ಜೋಡಣೆ, ಸರಿಯಾಗಿ ಆಗುತ್ತದೆ ಎಂದು ಎನಿಸಲು ಶಕ್ಯವಿಲ್ಲ. ಇಡಿಯದ ಅರಿವಿನಲ್ಲಿ ಅಂಗಭಾಗಗಳ ಹೊಂದಾಣಿಕೆ ಶಕ್ಯವಾಗಬಲ್ಲುದು. ಬೆಳುವಲ ನಾಡಿನೊಳಗಿನ ಗಿಡಗಳ ಎಲೆ, ಮಲೆನಾಡಿನ ಗಿಡಗಳ ಎಲೆ ಭಿನ್ನ ಆಕಾರದವು ಇರುತ್ತವೆ. ಜಾಲಿಯ ಗಿಡದ ಎಲೆಗಳು, ಮಳೆ ಸಾಕಷ್ಟು ಇಲ್ಲದ ಪ್ರದೇಶಕ್ಕೆ ಸುಸಂಗತವೇ ಇರುತ್ತವೆ. ಆದರೆ, ಇಲ್ಲಿ ಒಂದು ಸೂಕ್ಷ್ಮ ಪ್ರಶ್ನೆ: ತನ್ನ ಪ್ರಯೋಗಗಳಿಗೆ ಮೊದಲೇ ಡಾರ್ವಿನ್ನನಿಗೆ ಹೊಳೆದ ಈ ಅಂದಾಜಿನ (Gestalt) ಈ ಭೂಮಿಕೆಯ ಫಲಿತವೇ ಅವನ ಇಡೀ ಶೋಧ ಅಲ್ಲವೋ. ಜೀವನ ವಿಶ್ವದಲ್ಲಿ ದೈಹಿಕ ಆಕೃತಿ ವಿಕಾಸಕ್ಕೆ ಪ್ರೇರಕ ತತ್ವವು 'ಒಂದು ಉಂಟು' ಎಂದು ಈ ವಿಕಾಸದ ಸ್ಥೂಲ ಹೊಳವು. ಒಟ್ಟಿನಲ್ಲಿ, ಮೊದಲಲ್ಲೆ ಕಂಡಿರದೆ ಡಾರ್ವಿನ್ನನು 'ಅನುಗಮನ' ಪದ್ಧತಿಯಿಂದ ಅನೇಕ ವಿಶಿಷ್ಟ ದೈಹಿಕ ಆಕೃತಿಗಳನ್ನು ಯಾವ ದೃಷ್ಟಿಯಿಂದ ಜೋಡಿಸಬಹುದಾಗಿತ್ತು?

ವಿಶಿಷ್ಟಗಳ (ಕತ್ತಲೆಯ) ನಿಟ್ಟಿನಿಂದ, ಸಾಮಾನ್ಯ ನಿಯಮಗಳ (ಪ್ರಕಾಶದ) ದಿಕ್ಕಿಗೆ ಹೊರಡುವ ಸಂಶೋಧನ ಪದ್ಧತಿಯ ಸ್ಥಾನ-ಮಾನವನ್ನು ಪ್ರಶ್ನಿಸುವ ಔದ್ಧತ್ಯವು ಸಲ್ಲದು. ವಿಶಿಷ್ಟಗಳ (ಕತ್ತಲೆ) ಬಗೆಗಿನ ಪಕ್ಷಪಾತದಿಂದ ಭೌತ ಪಂಥಾಭಿಮಾನಿಗಳು, ಸಾಮಾನ್ಯ ನಿಯಮದ (ಪ್ರಕಾಶದ) ಸ್ವತಂತ್ರ ಅಸ್ತಿತ್ವವನ್ನೇ ಅಲ್ಲಗಳೆಯುತ್ತಿರುವುದು ಮಾತ್ರ ನಿಜ! 'ಅನುಗಮನ' ಪದ್ಧತಿಯ ಪಕ್ಷಪಾತಿಯಾದ ಡಾರ್ವಿನ್ನನು Origin of Species ಎಂಬ ಗ್ರಂಥದಲ್ಲಿ ಈ ಜೀವಜಂತುಗಳೆಲ್ಲ 'ಒಂದೇ' ಮೂಲದಿಂದ ಹೊರಟಿವೆ ಎಂದು ಸಿದ್ಧಪಡಿಸಬೇಕಾದ (Hypothesis) ಸಿದ್ಧಾಂತವನ್ನು ಅಭಾವಿತವಾಗಿ, ತನಗೆ ಅರಿಯದಲೆ ಒಮ್ಮೆಲೇ ಸ್ವೀಕರಿಸಿದ್ದಾನೆ! ಮೊದಲಲ್ಲೇ ಅನುಗಮನ ಪದ್ಧತಿಯಿಂದ ಈ ನಿರ್ಣಯಕ್ಕೆ ಬಂದು ತಲುಪಿರಲು ಶಕ್ಯವಿಲ್ಲ. ಈ ಸಿದ್ಧಾಂತಕ್ಕೆ ಏನೊಂದೂ ವಿಚಾರದ ವೈಚಾರಿಕ ಆಕೃತಿ ಸ್ಪಷ್ಟವಲ್ಲದಿದ್ದರೂ, ಅಸ್ಪಷ್ಟವಾಗಿಯಾದರೂ ಮೊತ್ತಮೊದಲಲ್ಲಿ ಸೋಂಕುವ ಆವಶ್ಯಕತೆ ಇದೆ. ಇದನ್ನೇ ಅಮಾನ್ಯಮಾಡುವಲ್ಲಿ, ಜ್ಞಾನೋಪಾಸನೆಯ ದಾರಿಯೇ ಕಟ್ಟಾಗಲಿದೆ.

ವೈಚಾರಿಕ ಪದರು

ಕ್ರೈಸ್ತಧರ್ಮದಲ್ಲಿ ಶ್ರದ್ಧೆಯಿದಿಲ್ಲ, ಎಂಬ ಆರೋಪಕ್ಕೆ ಒಳಗಾದ ಡಾರ್ವಿನ್ನನು ಸ್ವೀಕರಿಸಿದ್ದು, ಪ್ರಾಣಿಗಳ ದೈಹಿಕ ಆಕೃತಿಗಳು ಹೊರಟಿದ್ದು 'ಒಂದೇ ಮೂಲ'ದಿಂದ ಎಂಬ ಹಾಗಿನ-ಕ್ರೈಸ್ತಪಂಥೀಯ ದಿವ್ಯಾಧ್ಯಾತ್ಮ-ಸಂಪ್ರದಾಯಗಳ ತಳಪಾಯದ ಮೂಲಸಿದ್ಧಾಂತವನ್ನು, 'ಒಂದೇ' ಹಲವು ರೂಪವಾಯ್ತು. ಈ ಗೃಹೀತವು, ಅನೇಕ ವಿಶಿಷ್ಟಗಳ ಆಧಾರದಿಂದ ಸಿದ್ಧವಾಗದೇ ಇರುವ 'ಸ್ವಯಂಭೂ' ಸಿದ್ಧಾಂತ ಇದು! ಈ ಸೃಜನ ಶಕ್ತಿಯ ಮೂಲ ಬೀಜವು, ಶುದ್ಧ ಕತ್ತಲೆಯಲ್ಲೇ ಅಡಗಿ ಇರಬೇಕಾದ ವಿಶ್ವನಿಯಮವಿದೆ! ಇಲ್ಲಿ ಇಡೀ ಸೃಜನದ, 'ಒಂದೇ' ಬೀಜದ ಈ (Species) ತತ್ವವನ್ನು ಆಶ್ರಯಿಸಿರುವ ಡಾರ್ವಿನ್ನನು, ತಾನು ಮೊದಲು ಇದನ್ನು ಗ್ರಹಿಸಿ ಆ ಬಳಿಕ, ತನಗೆ ಕಂಡ ಆ ವಿಕಾಸತತ್ವದ ಅರ್ಥವನ್ನು ಅತ್ಯಂತ ಸಮಂಜಸ ಹಾಗೂ ಸಮರ್ಪಕ ಎನಿಸುವಂತೆ ವಿವರಿಸಿದ್ದಾನೆ. ಆದರೆ, ಸೃಜನತತ್ವದ ಈ ಭೂಮಿಕೆಯು, ಇದು ಕೇವಲ ವೈಯಕ್ತಿಕ ಭೂಮಿಕೆ. ಇದು ವ್ಯಕ್ತಿ ವಿಶಿಷ್ಟ ಜೀವನಾನುಭವವಾಗಿದೆ. ಇದು ಅನೇಕ ವಿಶಿಷ್ಟಗಳನ್ನು ಒಳಗೊಳ್ಳುವುದಿಲ್ಲ. ಆದಕಾರಣ, ಈ ಅಮೂರ್ತ ತತ್ವವು, ತತ್ವವೇ (Universal) ಅಲ್ಲ. ಪಾಶ್ಚಾತ್ಯ ಪರಿಭಾಷೆಯಂತೆ ಇದು illegitimate abstraction

ಆಗುತ್ತದೆ. ಭಾರತೀಯ ಪರಂಪರೆಯಲ್ಲಿ ಅಯೋನಿ ಸಂಭವ (ಶಿಶು) ಎಂಬುದು illegitimate abstraction ಎಂಬ ಸ್ವರೂಪದ್ದೇ ಆಗಿದೆ. 'ಅಯೋನಿ ಸಂಭವ ಸೀತೆ' ಯಾರ ಕೂಸು? ಭೂದೇವಿ ಪುತ್ರಿ! ಈ ಅಯೋನಿ ಸಂಭವೆ 'ಸೀತೆ' (ಭೂ ಪುತ್ರಿ) ಇವಳ ಜನಕ ಎಂಬವನು ವಿದೇಹಿ>ವೈದೇಹಿ. ಇದಕ್ಕಾಗಿ ಈತನೂ ಭೂಮಿ ಪುತ್ರನೇ! ಇದರ ಅರ್ಥ ಮಗಳ (ಭೂಮಿ) ಗಂಡ ಈ ಜನಕ. ಎಂದರೆ, ಇದು ಪುರಾತನ ಪರಿಭಾಷೆಯಲ್ಲಿ ಚಂದ್ರಾSದಿತ್ಯ ಮಿಥುನ ಯೋಗದ ತತ್ವವಾಯ್ತು! ಪೈಥಾಗೊರಾಸನ unlimited 'ಸೀತೆ', Limit (ಜನಕ) ಇದೇ ಭೂಮಿಕೆಯ ತತ್ವ. ಇದು ಕ್ರೈಸ್ತಪಂಥದ ಜನನಕ್ಕೆ ಕಾರಣವಾಯ್ತು. ಸೃಜನತತ್ವವು ಪ್ರಾಣಲಿಂಗ ಪಾತಳಿಯದು, ಈ ಲೈಂಗಿಕ ಪಾತಳಿಯು ನಿತ್ಯಕತ್ತಲೆಯಲ್ಲಿಯೇ ಇರಬೇಕಾದ ಅನಿವಾರ್ಯತೆಯನ್ನು ಗ್ರಹಿಸಿಕೊಂಡವರು ವಿರಳ. ಗಿಡದ ಬೇರುಗಳು ಭೂಮಿಯ ಒಡಲೊಳಗಿನ ಕತ್ತಲೆಯಲ್ಲಿಯೇ ಉಳಿಯಬಯಸುತ್ತಲ್ಲವೇ? ಆದರೆ 'ಸೃಷ್ಟಿಗೆ ಕಾರಣನು ನಾನೇ, ಸೃಷ್ಟಿ ನನ್ನಿಂದಾಯ್ತು' ಎಂಬ ಭಗವಂತನು, ಬೆಳಕಿನಲ್ಲಿ ಪೂಜೆಗೊಳ್ಳುವ ಹಂಬಲದವ ನಾಗುತ್ತಿರುವಲ್ಲಿ, ಇವನು ಹಾಸ್ಯಾಸ್ಪದವಾಗಲೇಬೇಕು!

ವ್ಯಾಲ್ಲಾಸನು, ಜೀವನ ವಿಶ್ವವನ್ನು 'ಮನು-ಜ': ಮಾನವನ ಭೂಮಿಕೆಯಿಂದ ಸಮೀಕ್ಷಿಸುತ್ತಾನೆ.* ಡಾರ್ವಿನ್ ಕಂಡದ್ದು 'ನರ'ನ, ಪ್ರಾಣ-ಲಿಂಗ ಪಾತಳಿಯಿಂದ ಮಾತ್ರ! 'ಮನು'-ಜ: ಮಾನವನ ಜೀವನ-ಧರ್ಮವು, ಅವನಿಗೆ ಬಾಳಿನ ಅರ್ಥ, ಮೂಲ್ಯಗಳನ್ನು ಗ್ರಹಿಸಿಕೊಂಡು ಬಾಳಲು ಒತ್ತಾಯಪಡಿಸುತ್ತದೆ. ಆದರೆ, 'ನರ ಧರ್ಮ'ದ ದೃಷ್ಟಿಯಲ್ಲಿ ಜೀವಕ್ಕೆ, ಜೀವಿತಕ್ಕೆ ಮಾತ್ರ ಪ್ರಾಧಾನ್ಯವಿದೆ. ಜೀವನಕ್ಕೆ ಅಲ್ಲ. ಜೀವನ ಎಂದರೆ ಸಾಮಾಜಿಕ ಪಾತಳಿಯ ಬಾಳು. ಇದುವೇ ಜೀವನ. ಸಾಮಾಜಿಕ ಸಹಕಾರದಿಂದಾಗಿ ನಾನಾ ಶಾಸ್ತ್ರ - ಶಾಖೆಗಳು, ಬೆಳಕಿಗೆ ಬಂದಿವೆ. ಈ ಮನುಜ ಧರ್ಮವನ್ನು, ಇಂಗ್ಲೀಷಿನಲ್ಲಿ 'Positive Religion of Humanity' ಎಂದು ಹೇಳಬಹುದು. ಪ್ರೆಂಚ್ ಕೊಮ್‌ಟೆ (Comte) ಎಂಬುವನು ಯೋಜಿಸಿರುವ ಪರಿಭಾಷೆ ಇದು. ವಾನರವರ್ಗದ ಜೀವನ ರೀತಿಯಲ್ಲಿ, ಅರ್ಥಮೂಲ್ಯಗಳ ಪ್ರಜ್ಞೆಯ ಅಭಾವವೇ ಎದ್ದು ಕಾಣುತ್ತಿದೆ. ಆದಕಾರಣ, ವಾನರರ ತರುವಾಯ ನೇರವಾಗಿ ಮನು-ಜನು ಪ್ರಾದುರ್ಭವಿಸಿದನು, ಎಂಬ ಡಾರ್ವಿನ್ನನ ತೀರ್ಪಿನಲ್ಲಿ ಸಮರ್ಪಕತೆ ಕಾಣದು. ಆದರೆ, ವ್ಯಾಲ್ಲಾಸನ ವಿಚಾರವು ಡಾರ್ವಿನ್ನನಿಗಾಗಲಿ, ಆತನ ಬೆಂಬಲಿಗರಿಗೆ ಆಗಲಿ ಅಂದು ಹಿಡಿಸಲೇ ಇಲ್ಲ! ಟಿ.ಎಚ್. ಹಕ್ಸ್ಲೆ ಅಂದಿನ ಶ್ರೇಷ್ಠ ಸಂಶೋಧಕರಲ್ಲಿ ಅಗ್ರಗಣ್ಯನು. ಇವನ ಅಭಿಪ್ರಾಯದಂತೆ

"There is nothing true outside the bounds of Physical Universe"

ಭೌತದೃಶ್ಯ (Phenomena) ವಿಶ್ವದ ಆಚೆಗೆ ನಿಜ (true) ಎಂಬುದು ಏನೂ ಇಲ್ಲ, ಎಂಬೀ ದೃಷ್ಟಿಯ ಭೌತಶಾಸ್ತ್ರಜ್ಞರಿಗೆ ಬಾಳಿನಲ್ಲಿ ಅರ್ಥಮೂಲ್ಯ ಉಂಟು ಎಂಬ ವ್ಯಾಲ್ಲಾಸನ ಭೂಮಿಕೆಯ ಅರ್ಥವು ಅಂದು ಆಗಲೇ ಇಲ್ಲ. ವ್ಯಾಲ್ಲಾಸನ ಭೂಮಿಕೆಯ ಅರ್ಥವಾಗಲು ಈ ಭೌತಶಾಸ್ತ್ರಜ್ಞರಿಗೆ ಹತ್ತುದಶಕ ಗತಿಸಬೇಕಾಯಿತು. ಇತ್ತೀಚೆಗೆ ಕೆಲವರು ಒಪ್ಪತೊಡಗಿದ್ದಾರೆ. ದೃಶ್ಯಸೃಷ್ಟಿಯ ಅಂಗವೇ ಆಗಿದ್ದರೂ ಈ ಮನು-ಜನು (ನರನಲ್ಲ), ಈ ದೃಶ್ಯ-ಪ್ರವಾಹಕ್ಕೆ ಆಧಾರಭೂತವಾದ ನಿಯಮ, ವ್ಯವಸ್ಥೆಯು ಇದರ ತಳಪಾಯದಲ್ಲಿ ಇರಲೇಬೇಕು ಎಂದು ನೆರೆನಂಬಿದ್ದನು. ಈ ವೈವಸ್ವತ 'ಮಾನವ ಧರ್ಮ' ಭಾರತೀಯರಲ್ಲಿ ಇತ್ತು. ಮನು ವೈವಸ್ವತನಿಂದ ಪ್ರವರ್ತಿತ ಧರ್ಮವೇ ಇದು.

ಅರ್ಥ ಮೂಲ್ಯಗಳ ಪಾತಳಿಯು, ದೃಶ್ಯ ಪ್ರವಾಹದ ಆಚೆಗಿನ ಹಂತದಲ್ಲಿದೆ. ಈ ದೃಶ್ಯಸೃಷ್ಟಿಯಲ್ಲಿ ವಾನರ, ನರ ಮತ್ತು ಮನುಜ; ಮಾನವರೂ ಉಂಟು, ಎಂಬ ಈ ತಾರತಮ್ಯ ಮೂಲ್ಯಗಳು ಹೊಳೆದದ್ದು ಎಲ್ಲಿಂದ? ದೃಶ್ಯಪಾತಳಿಯ ಆಚೆಗಿಂದ ತಾನೆ? ಭಾರತೀಯ ಪುರಾತನರ ಪರಿಭಾಷೆಯಲ್ಲಿ ಹೇಳಬಹುದಾದರೆ 'ಚಿತ್ತ

---

* ಈತ ಸ್ಕಾಟಲೆಂಡಿನ ಜೀವವಿಜ್ಞಾನಿ. ಆದರೆ, ಆ ಕ್ಷೇತ್ರದ ಜತೆಗೆ ತತ್ವಶಾಸ್ತ್ರ ಬಲ್ಲಿದ. ಚಾರಿತ್ರಿಕ ಜೀವಶಾಸ್ತ್ರದ ನೆಲೆಯನ್ನು ಗ್ರಹಿಸಿದವನು, ಈತ ಚಾರ್ಲ್ಸ್ ಡಾರ್ವಿನ್ನನ ಸಮಕಾಲೀನ. ಡಾರ್ವಿನ್ನನ ಭೂಮಿಕೆಯನ್ನು ವಿರೋಧಿಸಿದವನಾದುದರಿಂದ ಜೀವವಿಜ್ಞಾನಗಳಲ್ಲಿ ಈತ ಹೆಚ್ಚು ಬೆಳಕಿಗೆ ಬರಲಿಲ್ಲ (ಸಂ)

(will)'ಇದು ಪ್ರಾಣ ತತ್ವದ-ದೃಶ್ಯಸೃಷ್ಟಿಯ ಅಂಗವೇ ಸರಿ. ಆದರೆ ಈ ಚಿತ್ತವನ್ನು (ಇದರ ಅಸ್ತಿತ್ವವನ್ನು ಗ್ರಹಿಸಬಲ್ಲ) ಮನಃಶಕ್ತಿಯು, ನರನ (ಚಿತ್ತದ) ಮುಂದಿನ ಹಂತದಲ್ಲಿ, 'ಮನುಜ'ನ ಸಂಗಡ ಪ್ರಜ್ಞೆಯೊಡನೆ ಪ್ರಾದುರ್ಭವಿಸಿದೆ. ನರನಿಗೆ, ಪ್ರಾಣಪಾತಳಿಯ ಆಚೆಗೆ, ತನ್ನ ಚಿತ್ತದ ವಲಯದ ಹೊರಗೆ ನೋಡುವ ತಾಕತ್ತು ಇರುವುದಿಲ್ಲ. ಮನಸ್ಸು, ಮತಿ, ಮನನ, ಮನು, ಮನೀಷೆ, ಇಂತಿವೆಲ್ಲವೂ ವೈಚಾರಿಕ ಪಾತಳಿಯ ಮನ್ ಎಂಬ ಆಖ್ಯಾತ ಸಾಧಿತಗಳು. ಚಿತ್ತ-'ಶಕ್ತಿ' ಮತ್ತು ಮನಃಶಕ್ತಿ ಇವು ಎರಡೂ ಒಂದೇ ಕಾಲಕ್ಕೆ ಪ್ರಾದುರ್ಭವಿಸಿಲ್ಲ. ಪ್ರಾಣ (ಅಸು) ಶಕ್ತಿಯ ಅಂಗವೇ ಚಿತ್‌ಶಕ್ತಿ. ಪ್ರಜ್ಞಾ ಪ್ರಕಾಶದ ಅಂಗವೇ ಮನಃಸಾಮರ್ಥ್ಯ. ಪ್ರಕಾಶತತ್ವದ ಅಂಗ, ಎಂಬ ಕಾರಣದಿಂದಲೇ ಈ 'ಮನು' ವೈವಸ್ವತ'ನು.

'ಭೌತದೃಶ್ಯ ವಿಶ್ವದ ಆಚೆಗೆ ಏನೂ ಇಲ್ಲ' ಎಂಬ ಪ್ರೊ. ಟಿ. ಎಚ್. ಹಕ್‌ಸ್ಲೆಯ ಶ್ರದ್ಧೆಯನ್ನು ಅವನ ಮೊಮ್ಮಗ, ದಿವಂಗತ ಜೂಲಿಯಸ್ ಹಕ್‌ಸ್ಲೆಯು ತಿದ್ದುತ್ತಾನೆ! ತನ್ನ ಅಜ್ಜನ ಗ್ರಹಿಕೆ, ಸದೋಷವಿದ್ದುದನ್ನೇ ಎತ್ತಿ ಹಿಡಿಯಲಿಲ್ಲ! ಈ ಜೀವನ ವಿಶ್ವವು, ಕಟ್ಟುನಿಟ್ಟಾದ ಯಂತ್ರದಂತೆ ಇಲ್ಲ. ಇದು Process (ಪ್ರಕ್ರಿಯಾತ್ಮಕ) ಆಗಿದೆ, ಎಂದು ಹೇಳುವ ಅನಿವಾರ್ಯತೆಯನ್ನು ಮೊಮ್ಮಗನು ಕಂಡನು. ಈ ಹಕ್‌ಸ್ಲೆಗೆ, ಈ ನಿಸರ್ಗವು ಪ್ರಕ್ರಿಯಾತ್ಮಕ ಶಕ್ತಿಯುಳ್ಳದ್ದು (Process) ಆಗಿದೆ ಎಂಬ ಹೊಸ ವ್ಯಾಖ್ಯೆ ಅವಶ್ಯವಾಗಿದೆ. ಅಲ್ಲದೆ, ಭಾರತೀಯ ವ್ಯಾಹೃತಿಗಳಲ್ಲಿ ಸ್ವರ್ ಪಾತಳಿಯ ಹೋಲಿಕೆಯ Noosphere ಎಂಬ ಹೊಸಪಾತಳಿಯನ್ನು ಒಪ್ಪುವ ಅನಿವಾರ್ಯತೆಯೂ ಎನಿಸಿದೆ, ಈ ಹಕ್‌ಸ್ಲಿಗೆ. ಕೇವಲ ಲೈಂಗಿಕ (Biosphere) ಪಾತಳಿಯ ಮೇಲಿಂದ ಮಾನವಭಾಷೆ ಸ್ಫುರಿಸಲಾರದು ಎಂಬುದನ್ನು ಈ ಶಾಸ್ತ್ರಜ್ಞರು ಮನಗಂಡದ್ದಾಗಿದೆ, ಇಂದು!

ಸುಮಾರು ೧೦೦ ವರ್ಷಗಳ ಹಿಂದೆ ವ್ಯಾಲ್ಲಾಸನು ಎತ್ತಿದ್ದ ಆಕ್ಷೇಪವು, ಸಮರ್ಪಕವಿದೆ ಎಂದು ಈಗ ಆಧುನಿಕ ಸಂಶೋಧಕರಿಗೆ ಖಾತ್ರಿಯಾಗತೊಡಗಿದೆ. ವ್ಯಾಲ್ಲಾಸನ ಭೂಮಿಕೆಯನ್ನು ಗ್ರಹಿಸಿಕೊಂಡ ಆಧುನಿಕ ಸಂಶೋಧಕನೊಬ್ಬನು ಬರೆಯುವದೇನೆಂದರೆ-

> Did mind evolve by natural selection? Alfred Wallace wondered how natural selection could have caused the development of mental abilities, that have nothing to do with biological fitness, such as the ability to compose great music, design artistic creations and devise new mathematical systems. Wallace believed that a spiritual force, must be at work in-developing human mind to these levels"[೬]

ಡಾರ್ವಿನ್ನನು 'ವಿಕಾಸ' ತತ್ವವನ್ನು ಕಾರ್ಯಕಾರಣ ಸಂದರ್ಭದಿಂದ ಸ್ಪಷ್ಟೀಕರಿಸುವ ಪ್ರಯತ್ನ ಮಾಡಿದ್ದಾನೆ. 'ತಗುವ'ತಾಗಿ, ತಮ್ಮ ತಕ್ಕತನವನ್ನು ಸಿದ್ಧಪಡಿಸುವ ಪ್ರಾಣಿವನಸ್ಪತಿಗಳು ಮಾತ್ರ ಉಳಿಯುತ್ತ ಬಂದಿವೆ. ನಿಸರ್ಗವು ಆಯ್ದುಕೊಳ್ಳುವಲ್ಲಿ (Natural Selection) ಬಲಿಷ್ಠವೇ ತಾಳಿ ಬಾಳಬಲ್ಲದು. Survival of the fittest ಎಂದೂ ಇದರ ಅರ್ಥವಾಗುತ್ತದೆ. ಈ ಅರ್ಥದ ಮೇರೆಗೆ ಈ ಜೀವನವು-ಅಸ್ತಿತ್ವವು ಒಂದು ನಿತ್ಯ 'ಕುರುಕ್ಷೇತ್ರ', ಸಂಗ್ರಾಮ. ಹೊರಟೆಯೇ ಜೀವನದಲ್ಲಿ ಸ್ಥಾಯಿ ಆಗುತ್ತದೆ. ಕಾದಾಟವೇ ನಿತ್ಯವಾದರೆ 'ವಿಕಾಸ'ವು ಆಗುತ್ತ ಬರಲು ಶಕ್ಯವೇ ಇಲ್ಲ. ಆದರೆ, ಡಾರ್ವಿನ್ನನಿಗೆ ಕಾಣದೆ ಹೋದ ಈ ಅಂತರ್-ವಿಸಂಗತಿಯು ವ್ಯಾಲ್ಲಾಸನಿಗೆ ಕಂಡಿದೆ. ಡಾರ್ವಿನ್ ಸಂಪ್ರದಾಯದವರಿಗೆ ಈ ಅಂತರ್-ವಿಸಂಗತಿಯ ಲೆಕ್ಕವೇ ಹತ್ತಲಿಲ್ಲ. ಇವರು 'ವಿಸಂಗತಿಯನ್ನೇ ವಿಶ್ವನಿಯಮ' ಎಂದು ಬಗೆದ ಹಾಗೂ ಕಾಣುತ್ತದೆ!

ಬಾಳಿನಲ್ಲಿ ಸಂಗ್ರಾಮವೇ ಇಲ್ಲ ಎಂಬ ಗ್ರಹಿಕೆಗೆ ಇಂಬಿಲ್ಲ. 'ಇಂದ್ರಿಯ ಗ್ರಾಮ'ದ ಪ್ರಾಣಚೇತಸದ ಸ್ವಭಾವವು ಕಾದಾಟದ್ದು, ಚೇತಸ-ಚೈತನ್ಯದ (ಲೈಂಗಿಕ) ಪ್ರಚೋದನೆ ಸುಮ್ಮನೆ ಇರಗೊಡುವುದಿಲ್ಲ. ಗ್ರೀಕ್‌ತತ್ವಜ್ಞ

ದ್ರಷ್ಟಾರ ಹಿರಾಕ್ಲಿಟಸ್ ಇದನ್ನು ಪ್ರಾಂಜಲವಾಗಿ ಒಪ್ಪಿದ್ದಾನೆ. "War is father of all and King of all" ಇಲ್ಲಿ ಕಾದಲರ (ಕಾಮಿಗಳ) ಕಾದಾಟವು ಅಭಿಪ್ರೇತವಿದೆ. ಬಾಳಿನಲ್ಲಿ ಲಿಂಗಾಂಗಯೋಗವು ಆದರ್ಶವಾಗುವಾಗ, ಕೊನೆಗೆ, ಇದು ಇಬ್ಬರಲ್ಲೂ ಒಬ್ಬರನ್ನೊಬ್ಬರು ಬೇಟೆಯಾಡುವ-ಹೀರುವ ಕ್ರಿಯೆಯಾಗಿ ಪರಿಣಮಿಸಲೇಬೇಕು. ಹಿರಾಕ್ಲಿಟನ 'ದರ್ಶನ'. ನೀರೆಯ ನೀರಿನ ನೆಲೆ ನೋಡುವ ಬೆಂಕಿಯೇ ಈ 'ವೀರ್ಯ'. ನೀರೆಯನ್ನು ಹೀರಿ ಬಿಡಬೇಕೆಂಬ ಅಗ್ನಿನಾರಾಯಣ ಏನಿದೆ! ಶಾಕ್ತಪಂಥೀಯ 'ವೀರ' ಎಂಬ ಈ ಪಾರಿಭಾಷಿಕ ಪದವು ಸಂಸ್ಮರಣೀಯವಿದೆ. ನೀರೆಯನ್ನು ಹೀರಿಬಿಡಬೇಕೆಂಬ ನೀರನ್ನು ಈ ನೀರೆ ವೀರನ (ನಳನ) ಬೆಂಕಿಯನ್ನು ಆರಿಸಿ, ನಂದಿಸಿ ಬಿಡುವ ಹಂಬಲವುಳ್ಳವಳಾಗುತ್ತಾಳೆ! 'ವೀರನಾರಾಯಣ' ಮತ್ತು 'ವೀರನಾರಾಯಣಿ' ಇವರು ಒಬ್ಬರು ಇನ್ನೊಬ್ಬರನ್ನು ಮುಗಿಸಿಬಿಡುವ ಪ್ರವೃತ್ತಿಯವರು ಆಗುವ ಅನಿವಾರ್ಯತೆಯನ್ನು ತಪ್ಪಿಸಲು, ಆಮರಣ ಕುಮಾರಿ ಕುಮಾರ ವ್ರತಿಗಳಾಗಿ ಬಾಳುವುದರ ಹೊರತು ಬೇರೆ ದಾರಿ ಉಳಿಯಲಿಲ್ಲ. ಏಕಂ ಸತ್ ಎಂಬ ಈ ಸಂಪ್ರದಾಯವು ಉಳಿಯಬೇಕಿದ್ದರೆ ಅಹಿಂಸಾತ್ಮಕ, ರೇತದ ಒಂದು ಹನಿಯೂ ಹೊರಗೆ ಬರದೆ ನೈಷ್ಠಿಕ ಬ್ರಹ್ಮಚರ್ಯ ಪಾಲಿಸಬೇಕು. ಈ ಆತ್ಯಂತಿಕ ಬ್ರಹ್ಮಚರ್ಯ ಸಂಪ್ರದಾಯದ ಪರಂಪರೆಯೂ ಮುಂದೆ ನಡೆಯಬೇಕು. ಈ ಬಗೆಯ ಅಂತರ್ ವಿಸಂಗತ ಜೀವನರೀತಿಯು ಅಪ್ರಮಾಣಿಕತನಕ್ಕೆ, ಮೋಸಕ್ಕೆ ಆಮಂತ್ರಿಸದಿದ್ದರೆ ಸೋಜಿಗ!

ಕಂನಾಡಿನ ಕಲ್ಕೀ-ತುರಾಯಿ ಅಥವಾ ಹರಿದಾಸಿ-ನಾಗೇಶಿ ಈ ಲಾವಣೀ ರೂಪ ಹಾಡು ವೀರ ನೀರ ನೀರೆಯರು-ನರರ ಬಾಳಿನ ಹಾಡೇ ಆಗಿದೆ. "ನರ" ಸಂಪ್ರದಾಯವು, ಕೊನೆಗೆ, ಗಂಡು ಹೆಚ್ಚೋ, ಹೆಣ್ಣು ಹೆಚ್ಚೋ ಎಂಬ ದುರಂತದಲ್ಲಿ ಪರಿಣಮಿಸಲಿಕ್ಕೇ ಬೇಕು. ಇನ್ನೊಂದು ರೂಪದಲ್ಲಿ ಇಂದಿನ ಈ ಅನಿವಾರ್ಯ ಪರಿಸ್ಥಿತಿಯು ತಲೆದೋರಿದ್ದೇಕೆ ಮತ್ತೆ? ಏಕಂ ಸತ್ ಇದು ತನ್ನ ವೈಶಿಷ್ಟ್ಯಕ್ಕೆ ಒತ್ತಾಯಪಡಿಸುತ್ತದೆ! ಇಂದಿನದು ವ್ಯಕ್ತಿವಿಶಿಷ್ಟವಾದದ ಫಲಿತ, ಕಲ್ಕಿ ತುರಾಯಿಗಳಲ್ಲಿ ನಿಜವಾಗಿ ಪರಿಣಾಮಕಾರಿಯಾದ ವಾಸ್ತವ ಮುಕ್ತಾಯವಿರುವ ಪದಗಳು ಈಗ ತೀರ ಅಪರೂಪ! ಪುರಾಣ ಕಥೆಗಳಲ್ಲಿಯೂ ಸಹ ನರರ ಜೀವಿತದ ಈ ದುರಂತವು ಪ್ರತಿಬಿಂಬಿತವಾಗದೆ ಇಲ್ಲ. ಗಂಡ : 'ಮಹಿಷ' (ಪತಿ), ಮಹಿಷಾಸುರ ಮರ್ದಿನಿಯ (ಮಹಿಷಿ) ಪತ್ನಿಯ ಮೂಲಕ ಪತಿಯು ಪ್ರಾಣಕ್ಕೆ ಎರವಾಗುತ್ತಾನೆ. ತ್ರಿಪುರ ಸುಂದರಿಯನ್ನು ದಹಿಸಿದವನು ತ್ರಿಪುರಾರಿ. ತನ್ನ ಪುರವನ್ನೇ ಧ್ವಂಸ ಮಾಡುವ 'ಪುರಂದರ' ಪದವಿಯ ವಿಠ್ಠಲ (ಕರಿಯ-ಲಿಂಗಾಕೃತಿ), ಏಕಾಂಗಿಯಾಗಿ ಫಂಡರಿಯಲ್ಲಿ 'ಖಡ್ಗಾಸನ'ದಲ್ಲಿ ನಿಂತಿದ್ದಾನೆ! ಆದರೆ, ಈ ದುರಂತದ ಅರಿವನ್ನು ಮರೆಮಾಜಲಾಗಿದೆ. ಇದರಿಂದ ಸಂತರು ಭ್ರಾಂತರಾಗಿದ್ದಾರೆ! ಪಕ್ಕದಲ್ಲಿ ಮಡದಿ ಇಲ್ಲದ ತಮ್ಮ ದೇವನ ಬಗೆಗೆ ಕರುಣೆ, ಚಿಂತೆ ವ್ಯಕ್ತಮಾಡುವ ಅಭಂಗಗಳನ್ನು ಮರಾಠಿ ಸಂತರು ರಚಿಸಿದ್ದಾರೆ.

ಆದರೆ, ಉಡುಪಿಯ ಕಡಗೋಲ (ಮಂಥನ ದಂಡ)ಧಾರಿ ಕುಮಾರ ಕೃಷ್ಣನಿಂದ 'ಪುರಂದರ' ವಿಠಲನ ನಿಲುಮೆಯ ಗುಹ್ಯಾರ್ಥವು ಸ್ಪಷ್ಟವಾಗುತ್ತದೆ. ಈ ಕ್ಷೇತ್ರದಲ್ಲಿ ಅಷ್ಟಮೀದುರ್ಗೆಯ ಪರ್ಯಾಯನು, ಅಷ್ಟಮಿಗೆ ಹುಟ್ಟಿದ ಮತ್ತು ಅಷ್ಟಮ ಪುತ್ರನೇ ಆದ ಕೃಷ್ಣನ ಈ ಕ್ಷೇತ್ರದಲ್ಲಿ ಅಷ್ಟಮಠಗಳಿವೆ. ಈ ಅಷ್ಟ: ಮೃತ್ಯುಸಂಖ್ಯೆ. ಈ ಸಾಂಕೇತಿಕತೆಯ ಔಚಿತ್ಯ ವ್ಯಕ್ತವಿದೆ. ಈ ಅಷ್ಟಮಠಗಳ ಪಟ್ಟಕ್ಕೆ ಕು-ಮಾರರೇ ಹಕ್ಕುದಾರರು. ಈ ಕುಮಾರರು ಸ್ವಾಮಿಗಳು ತತ್ವತಃ ಮೃತ್ಯುವನ್ನು ಆಲಿಂಗಿಸಿರುವ ಈ ದೃಶ್ಯ, ಕ್ರೈಸ್ತಪಂಥೀಯ ಗುಹ್ಯಾರ್ಥವನ್ನು ಬೆಳಕಿನಲ್ಲಿ ತರುತ್ತಿದೆ! 'ನರ ಧರ್ಮ'ದ ಕುಮಾರ, ಕುಮಾರೀ, ಸಂಪ್ರದಾಯವು ಒಟ್ಟಿನಲ್ಲಿ 'ಮಾರಾಮಾರಿ'ಯಾಗಿ ಪರಿಣಮಿಸಿ, ಈ ಬಾಳು ಹಾಳು ಎಂಬ ವಿರಕ್ತ ಪಂಥೀಯ ಜೀವನ ಶ್ರದ್ಧೆಯನ್ನು ಪ್ರೇರಿಸುವ ಅಂತರಾರ್ಥದ ಈ 'ಉಡುಪ' (ಚಂದ್ರ) ಕ್ಷೇತ್ರವು ಪ್ರಾಣಲಿಂಗ ಪಾತಳಿಯ ಮೇಲೆ ಇದೆ! ಪಂಢರಿಯು ಚಂದ್ರಭಾಗೆಯ ತಡಿಯಲ್ಲಿದೆ! ಆ ವೀರ ವಿಠ್ಠಲನು ಪುರಂ-ದರ=ಪುರಧ್ವಂಸಿ: ಹರಿ=ಹರ! 'ವಿಕಾಸ'ಕ್ಕೆ ಕಾರಣವು 'ಹೋರಟೆ' (Survival of the fittest)ಎಂಬ ದಿವ್ಯಾಧ್ಯಾತ್ಮ ಪಂಥೀಯ ಏನೆಲ್ಲ 'ನರ' ಸಂಪ್ರದಾಯಗಳ ಜೀವನ ದೃಷ್ಟಿಯನ್ನೇ ಪುಷ್ಟೀಕರಿಸುತ್ತದೆ! ಅಲ್ಲದೆ, ಡಾರ್ವಿನ್ನನು ಗ್ರಹಿಸಿರುವ 'Species' ಇದರ ಆಧಾರಭೂತ ಶ್ರದ್ಧೆ: ಜೀವಸೃಷ್ಟಿಗೆಲ್ಲ ಈ 'ಒಂದೇ

ಬೀಜ' ಎಂಬ ಗೃಹೀತವು ದಿವ್ಯಾಧ್ಯಾತ್ಮದ್ದೇ ಆಗಿದೆ. ಈ ಸ್ತ್ರೀ-ಪುಂ ಬೀಜಗಳ ಏಕಾತ್ಮಕ-ತತ್ವವು ದಿವ್ಯಾಧ್ಯಾತ್ಮಗಳ ಭೂಮಿಕೆಯ ಮೂಲಭೂತ ಶ್ರದ್ಧೆಯಾಗಿದೆ.

ಪ್ರಜ್ಞೆ ಮತ್ತು ಮನಸ್ಸು

ಡಾರ್ವಿನ್ನನು 'ಹೋರಟೆಯೇ ಸ್ಥಾಯೀ' ಎಂದು ಬಗೆದದ್ದು ಅಸಮರ್ಪಕವಿದೆ. ಏಕೆಂದರೆ, ಪ್ರಾದುರ್ಭಾವ ರೂಪದಲ್ಲಿ ಕಾಣಿಸಿಕೊಳ್ಳುತ್ತ ಬಂದಿರುವ ಈ 'ವಿಕಾಸತತ್ವ'ವು ಈ ವಿಶ್ವದಲ್ಲಿ ಸ್ಥಾಯೀಸ್ವರೂಪದ್ದು ಆಗಿದೆ. ಆದರೆ, ಹೋರಟೆ -'Natural Selection' ಸ್ಥಾಯೀ ಆದಲ್ಲಿ ವಿಕಾಸತತ್ವವು ಅರ್ಥಹೀನವಾಗುತ್ತದೆ. 'ಪ್ರಜ್ಞೆ' 'ಮನಸ್ಸು' ಎಲ್ಲಿಂದ ಬಂತು, ಈ ಹಂತದ ವಿಕಾಸವು ಆದದ್ದು ಹೇಗೆ, ಇದು ಯಾವುದೂ ತಿಳಿಯುವದಿಲ್ಲ.

೧. ಭೌತ ನಿರಿಂದ್ರಿಯ ಸೃಷ್ಟಿಯು ಮೊದಲು ಇತ್ತು.

೨. ಸಂಭವಿಸಿದ ಪ್ರಾದುರ್ಭಾವದಲ್ಲಿ ಸೇಂದ್ರಿಯ ಸೃಷ್ಟಿಕಾಣಿಸಿಕೊಂಡಿತು.

೩. ಸೇಂದ್ರಿಯ ಸೃಷ್ಟಿಯಲ್ಲಿ ಸಸ್ಯ ವೃಕ್ಷಾದಿಗಳು, ಜಲಚರಗಳು, ಇತ್ಯಾದಿ. ತರುವಾಯದ ಈ ಪ್ರಾದುರ್ಭಾವಗಳ ಮೂಲಕ ಸರೀಸೃಪ, ಹಕ್ಕಿ, ಚತುಷ್ಪಾದದ ಪ್ರಾಣಿಗಳು ಈ ಬಗೆಯಲ್ಲಿ ವಾನರ ವರ್ಗದವರೆಗೂ ಆಗುವ ಪ್ರಾದುರ್ಭಾವದಲ್ಲಿ, ದೈಹಿಕ ಆಕೃತಿಯ ವಿಕಾಸಕ್ಕೆ ವಿಶೇಷ ಪ್ರಾಧಾನ್ಯವಿದೆ. ಇದು ನಿಜ, ಆದರೂ ಚಿತ್=ಚೇತನ, ಚೈತನ್ಯ ಶಕ್ತಿಯು ಕ್ರಮವಾಗಿ ವಿಕಾಸಗೊಳ್ಳತೊಡಗಿದ್ದನ್ನು ಲೆಕ್ಕಿಸಬೇಕು. ಈ ವಾನರ=ಕಪಿ, ಅಮೂರ್ತ ಚಂಚಲ ಚಿತ್ತದ ಮೂರ್ತಿಮಂತ ಅವತಾರವೇ ಸರಿ!

ಆದರೆ, ವಾನರ ಹಂತದಿಂದ ನಮಗೆ ಈಗ 'ನರ'; 'ಮನು'ಜ ವರ್ಗದ ವರೆಗಂತೂ ಪ್ರಾಣ-ಚಿತ್ತ, ಬಳಿಕ ಪ್ರಜ್ಞೆಯ ಪ್ರಾದುರ್ಭಾವವು ಎದ್ದು ಕಾಣುವಂತಿದೆ. ಪ್ರಾಣಿ: ಜೀವಿಗಳಲ್ಲಿ, ಚೇತನ ಶಕ್ತಿ (volition) ಹೆಚ್ಚು ಕಡಿಮೆ ಪ್ರಮಾಣದಿಂದ ಮೊದಲಿನಿಂದಲೂ ಉಂಟು. ಆದರೆ, ವಾನರ ಹಂತದ ತರುವಾಯದ ನರವರ್ಗದಲ್ಲಿ, ವಾನರರಲ್ಲಿ ಸ್ಪಷ್ಟವಿಲ್ಲದ ಚಿತ್ತವು (will, ಇದು desire ಕಾಮನೆ) ಎದ್ದು ಕಾಣುತ್ತದೆ. ಪ್ರಾಣಕ್ಕೆ 'ಅಸು ಎಂಬ ಸಂಕೇತವೇ ವೇದದಲ್ಲಿ ಉದ್ದಕ್ಕೂ ಕಾಣಿಸಿಕೊಳ್ಳುತ್ತದೆ. 'ಧೀ' ಉಳ್ಳವನು 'ಧೀರ'. ಇದೇ ಬಗೆಯಲ್ಲಿ, 'ಅಸು' ಉಳ್ಳವನು 'ಅಸುರ'.* ಈ ಪದಕ್ಕೆ ಮೂಲದಲ್ಲಿ ಅನಿಷ್ಟಾರ್ಥವು ಇಲ್ಲ. ದುಷ್ಟಶಕ್ತಿ ಎಂಬುದು, ಹಿಂದುಗಡೆಗೆ ಪ್ರಾಪ್ತವಾದ ಲಕ್ಷಣಾರ್ಥವಾಗಿದೆ. 'ಅಸು' ಶಕ್ತಿಯನ್ನು ಉಳ್ಳವನು ಅಸು-ರ', ಅಸ್ಸೀರಿಯಾ, ಇದು 'ಅಸುರ' ಲೋಕ. ಇರಾಕಿನ ಭಾಗ; ಹತ್ತಿರದ ಇರಾಣಿನ ಅವೆಸ್ತದ ಪ್ರಧಾನ ದೈವತ ಅಹುರ ಅಸುರನೇ ಆಗಿದ್ದಾನೆ! ಆದರೆ, ಈ ಅಹುರ (ಮಝುದ) ಇದು ಲೋಕ ಕಲ್ಯಾಣಕಾರೀ ಶಕ್ತಿ, ಸತ್ವವೃತ್ತಿ ಪ್ರಚೋದಕ ಪ್ರಕಾಶತತ್ವದ ದೈವತ! ಹೀಗೆ ಭಾಷೆಯಲ್ಲಿ ಪದಗಳ ಅರ್ಥವು ವಿಕಾಸ, ಸಂಕೋಚಗೊಳ್ಳುವ ಕ್ರಮವನ್ನು ಲೆಕ್ಕಿಸದೆ ಸಂಸ್ಕೃತಿಯ ವಿಕಾಸವಾದ ಗೊತ್ತಾಗಲಾರದು.

ಪ್ರಜ್ಞೋದಯದ ತರುವಾಯ, ಪ್ರಾಣ (ಅಸು) ಶಕ್ತಿಯು, ಮೊದಲಲ್ಲಿ ದುಷ್ಟಶಕ್ತಿ ಎನಿಸಿರಲು ಕಾರಣವಿಲ್ಲ. ಆದರೆ, ಆ ಬಳಿಕ ಆತ್ಯಂತಿಕ 'ಸ್ವ' ಅರ್ಥೀ ದುಷ್ಟಶಕ್ತಿ; ತಾನು ಬದುಕಿ ಉಳಿಯಲು, ಬಳಿಕ, ತಾನೇ ಏಕಂ ಏವ ಎಂದು ಮೆರೆಯಲು ಇಂತಹ ಇಷ್ಟಾರ್ಥ ಸಿದ್ಧಿಗಾಗಿ ಏನನ್ನೂ ಮಾಡಲು ಹೇಸದ ಕೃಷ್ಣಶಕ್ತಿಯೇ ಈ ಅಸುರ ಶಕ್ತಿ; ಎಂಬ ಈ ಲೋಕಾನುಭವವು ಪ್ರಭಾವಶಾಲಿಯಾದ ಹಾಗೆ, 'ಅಸು-ರ' ಪದಕ್ಕೆ ದೈತ್ಯವೆಂಬ ಅಪಾರ್ಥವು

---

* ವೇದದಲ್ಲಿ ಇರುವ 'ಅಸುರ' ಶಬ್ದಪ್ರತಿಮೆಗೆ ಪರ್ಯಾಯವಾಗಿ ಪರ್ಶಿಯನ್ 'ಜೆಂಡ್‌ಅವೆಸ್ತ'ದಲ್ಲಿ 'ಅಹುರ' ಎಂಬ ಶಬ್ದಪ್ರತಿಮೆ ಇದೆ. ಈ ಅಂಶವನ್ನು ಮ್ಯಾಕ್‌ಡೊನೆಲ್ ತನ್ನ ಗ್ರಂಥದಲ್ಲಿ ನಮೂದಿಸಿದ್ದಾರೆ. ಈ ಬಗೆಯ ವಿಸ್ತೃತಪಟ್ಟಿಯನ್ನು ನೀಡಿದ್ದಾನೆ. (ಸಂ)

ಅಂಟಿಕೊಂಡಿದ್ದಾಗಿ ಬಗೆಯಲು ಅವಕಾಶವಿದೆ. 'ಡೆಮನ್' ಪದದ ಇತಿಹಾಸವೂ ಹೀಗೇ ಇದೆ. ಇದು ಮೊದಲಲ್ಲಿಯೇ ಅಪಾರ್ಥದ್ದು ಇದ್ದರೆ ಒಂದು ಜನ ತಮ್ಮ ದೇಶಕ್ಕೂ-ದೇವರಿಗೂ ಅಸುರ, ಅಹುರ ಎಂದು ಹೆಸರಿಸಲು ಶಕ್ಯವಿದ್ದಿಲ್ಲ. ಪ್ರಾಣದಲ್ಲಿ ಪ್ರೀತಿ. ವಿಶ್ವಾಸದ ಭಾಗವೂ ಉಂಟು. 'ಪ್ರಾಣಪ್ರಿಯೇ, 'ಪ್ರಾಣನಾಥ' ಈ ಪರಿಭಾಷೆ ತೀರ ಸುಳ್ಳಲ್ಲ. ಆದರೆ, ಪ್ರಾಣ-ಚೇತನ ಶಕ್ತಿಯು 'ಸ್ವ' ಅರ್ಥ ಆಗತೊಡಗಿದಂತೆ 'ಪ್ಲೇಟೋ ಹೇಳುವಂತೆ' ಈ ಚೇತಸ ರಾತ್ರೀಕಾಲದ (Lawless beast of nature) ನಿರಂಕುಶ ಪಶು ಶಕ್ತಿಯೆಂಬ ಅರ್ಥವು ವಿಶ್ವಮಾನ್ಯವಾಗಿದ್ದುಂಟು. ರಾತ್ರಿ ಕಾಲದಲ್ಲಿಯೇ ದೈತ್ಯ: ಅಸುರರ ಶಕ್ತಿಯು ವರ್ಧಿಸುತ್ತದೆ, ಎಂಬ ನಂಬುಗೆ ಇಂದಿಗೂ ಉಂಟು.

ಪ್ರಾಣ ಮತ್ತು ಚಿತ್ತವನ್ನು, ಮನುಜನ ಪ್ರಜ್ಞೆ: ಮನಸ್ಸು ಇದು ನಿಯಂತ್ರಿಸಬಲ್ಲುದು. ಪ್ರಜ್ಞೆ: ಮನಸ್ಸು ಚಿತ್ತವನ್ನು ಸಮೀಕ್ಷಿಸಬಲ್ಲುದು. ಆದರೆ, ಚಿತ್ತಕ್ಕೆ ತನ್ನ ಹೊರತು ಇನ್ನುಳಿದವರ ಲೆಕ್ಕವಿಲ್ಲ. ಪ್ರಾಣದೊಡನೆ ಬದ್ಧವಿರುವ ಚಿತ್ತವು, ಪ್ರಾಣದಂತೆಯೇ ಕೇವಲ ವೈಯಕ್ತಿಕ ಸ್ವರೂಪದ್ದೇ ಆಗಿರುವುದು ಅದರ ಸ್ವಭಾವ. ಧರ್ಮ; ಸ್ವಧರ್ಮೇ ನಿಧನಂ ಶ್ರೇಯಃ ಎಂದು ಈ ಕೃಷ್ಣಕಾರಸ್ಥಾನೀ ದೇವನು. ನರನಿಗೆ ಬೋಧಿಸಿದ್ದಾನೆ, ಡಾರ್ವಿನ್ ಪಂಥೀಯರು ಬಗೆದ ಹಾಗೆ 'ಸಂಗ್ರಾಮವೇ ಸ್ಥಾಯಿ' ಎಂದಲ್ಲಿ ವಿಕಾಸತತ್ತ್ವಕ್ಕೆ ಇಂಬು ಇಲ್ಲ. ಆದರೆ, 'ವಿಕಾಸ ತತ್ತ್ವವೇ ಸ್ಥಾಯಿ' ಎಂದಲ್ಲಿ ಜೀವನ ಸಂಗ್ರಾಮಕ್ಕೂ ಪ್ರಾಣ: ಚೇತಸದ ಲೈಂಗಿಕ ಪಾತಳಿಯ ಮೇಲೆ, ಅವಕಾಶವು ಇದೆ. ಇದು ಸ್ಥಳ (ದೇಹ) ಹಾಗೂ 'ಕಾಲ (ಪ್ರಾಣ ಚೇತಸ)' ಈ ವಿಭಾಗದ್ವಯದ ಕ್ರಿಯೆ-ಪ್ರತಿಕ್ರಿಯೆಗಳಿಂದಾಗಿ ಕಾಣಿಸಿಕೊಳ್ಳುವ ದೃಶ್ಯ (Phenomenon) ಆಗಿ ಉಳಿಯುತ್ತದೆ. ಪ್ರಾಣಚೇತಸದ ಪಾತಳಿಗೇ ಸೀಮಿತವಾಗಿ ಉಳಿಯುವ 'ನರ' ವರ್ಗವು, ದೃಶ್ಯಪ್ರವಾಹದೊಡನೆ, ತಳ್ಳಲ್ಪಡುವ ಅನಿವಾರ್ಯತೆಯನ್ನು ಕಾಣಬಹುದು. 'ನರ' ಸಂಪ್ರದಾಯಗಳು ಪ್ರವಾಹ ಪತಿತ ಕರ್ಮಿಗಳ ಪಂಥ. ಆದರೆ, ಧರ್ಮಸಂಸ್ಕೃತಿಯ ಕ್ಷೇತ್ರದಲ್ಲಿ ತಕ್ಕದ್ದು ಯಾವುದು, ತಗದ್ದು ಯಾವುದು, ಇದರ ಇತ್ಯರ್ಥವಾಗಲು, ಪ್ರಾಣಚೇತಸದ ಪಾತಳಿಯ ಆತಂಕಕಾರೀ ವಿರೋಧೀ ಸ್ವಭಾವದ ಕಾದಾಟದ ಪ್ರವೃತ್ತಿಯೂ ಕೆಲಮಟ್ಟಿಗೆ ಪ್ರಯೋಜನಕಾರಿ ಆಗುತ್ತದೆ. ಆದರೆ, ವಿರೋಧಕ್ಕಾಗಿ ವಿರೋಧ, ಇದು ಪೂರ್ವ ಎಂದೊಡನೆ ಇದು ಪಶ್ಚಿಮವೇ ಆಗಿದೆಯೆಂದು ವಿರೋಧಿಸುವ ಚಪಲ ಇದು ನಿಂದ್ಯವಿದೆ, ತ್ಯಾಜ್ಯವಿದೆ.

ಬಾಳಿನಲ್ಲಿ 'ಅನಿವಾರ್ಯ' ಮತ್ತು 'ಯುಕ್ತ' ಇವೆರಡೂ ಒಮ್ಮೆಲೆ ಎದುರು ನಿಲ್ಲುವಾಗ ಇವೆರಡರಲ್ಲಿ ಯಾವುದನ್ನು ಆಯ್ದುಕೊಳ್ಳುವುದು ಎಂಬ ಸಮಸ್ಯೆಯು ಒಂದು ಧರ್ಮಸಂಕಟದ ರೂಪದ್ದಾಗಿ ಪರಿಣಮಿಸುತ್ತದೆ. ಅನಿವಾರ್ಯವನ್ನು ಸ್ವೀಕರಿಸುವುದರ ಕಡೆಗಿನ ಒಲವು, ಇದು ವಿವೇಕ, ವಿಚಾರಕ್ಕೆ-ಪ್ರಜ್ಞೆಗೆ ಮಾನ್ಯವಿರುವುದಿಲ್ಲ. ಅನಿವಾರ್ಯವನ್ನು ಆಯ್ದುಕೊಳ್ಳುವ ಚಟವು ಮಾನವನನ್ನು 'ನರ'ನ ಪಾತಳಿಗೆ ತಂದು ನಿಲ್ಲಿಸುವುದು ನಿಶ್ಚಿತ. 'ಅನಿವಾರ್ಯ' ಮತ್ತು 'ಯುಕ್ತ'ದ ಈ ಸಮಸ್ಯೆಗಳನ್ನು ಇನ್ನೊಂದು ಬಗೆಯಿಂದ ಹೇಳಬಹುದು. ಯುಕ್ತ, ನ್ಯಾಯ ಎಂಬುದು ಯಾವಾಗಲೂ ವಿಶ್ವನಿಯಮದ ಒಂದು ಅಂಶವಿರಬಲ್ಲುದು. ಒಂದು ನಿಯಮಕ್ಕೆ ಇರಬಲ್ಲ ಅಥವಾ ಇರುವ 'ಅಪವಾದ'ದಂತೆ, ಈ ಅನಿವಾರ್ಯ ಇರುತ್ತದೆ. ಇದು 'ಸ್ವಯಂಭೂ' ಇರುತ್ತದೆ. ಬಾಳಿನಲ್ಲಿ ಆಪತ್ತು ಹಾಗೂ ಅಪವಾದವನ್ನೇ ಸ್ಥಾಯೀ ಬಗೆವ ಪ್ರವೃತ್ತಿ 'ನರ'ರ ಲಕ್ಷಣ. ಇದು ವಿವೇಕದ ಅಭಾವದ ಕುರುಹು. ಇಲ್ಲಿ ನ್ಯಾಯ, ಸತ್ಯಕ್ಕಾಗಿ ಆವಶ್ಯಕ ತ್ಯಾಗದ ಧೈರ್ಯದ ಅಭಾವವೂ ಒಂದು ಕಾರಣವಿರುತ್ತದೆ.

ಬಾಳಿನಲ್ಲಿ ಅರ್ಥ, ನಿಯಮ, ವ್ಯವಸ್ಥೆಯೇ ಇಲ್ಲ ಅಥವಾ ಇದು ಎಲ್ಲಿದೆ? ಎಂಬ ಸಂದೇಹವಾದೀ ದೃಷ್ಟಿಕೋನವು 'ನರಧರ್ಮ'ದ ಭೂಮಿಕೆಯ ನಿಶ್ಚಿತ ಲಕ್ಷಣವಾಗಿದೆ. ಬಾಳು ಅಥವಾ ಈ ಜೀವನ ಆಕಸ್ಮಿಕ ಸಂಭವಿಸಿದ ಒಂದು ಅಪಘಾತ, (Contigency or emergency). ಮೃತ್ಯುವಿನ ದವಡೆಯಲ್ಲಿ ಸಿಕ್ಕಿರುವ ನರಪ್ರಾಣಿಯ-ಜೀವನದಲ್ಲಿ, ನಿಶ್ಚಿತ ಎಂಬುದು ಏನೂ ಇಲ್ಲ ಎಂಬ ದೃಷ್ಟಿಕೋನದವರು ಸನ್ಯಾಸ ಪಂಥಿಗಳಾಗಲೇಬೇಕು ಅಥವಾ ಇದ್ದಷ್ಟು ದಿನ ಚೈನೀಮಾಡಿ ಸತ್ತರಾಯಿತು ಎಂಬ ನಿರಾಶಾವಾದಿಗಳಾಗಿ

ಬಾಳಬೇಕು. ಲೈಂಗಿಕ ಅತೃಪ್ತಿ, ನಿರಾಶೆ ಇದು ವಿರಕ್ತಪಂಥೀಯ 'ನರ' ಸಂಪ್ರದಾಯಕ್ಕೆ ಪ್ರೇರಕ ಗುಣ. ಆದರೆ ಇಂತಹರ ಈ ನಂಬುಗೆಯು ಪ್ರಾಮಾಣಿಕತನವು ಸಂಶಯಾಸ್ಪದವಿರುತ್ತದೆ. 'ಮರಣವೇ ಮಹಾನವಮಿ' ಎಂದು ಬಾಯಿಂದ ಹೇಳುತ್ತ, ಮಂತ್ರಿಗಳಾಗಿ, ಲೋಕಕಲ್ಯಾಣದ ಪ್ರವಚನ ಉಪನ್ಯಾಸಗಳನ್ನೂ ಮಾಡುತ್ತಾರೆ! ಯಾವ ಕ್ಷಣಕ್ಕೆ ಸಾವು ಬರುವುದೊ ಎಂಬ ಹಾಗಿನ ನಿತ್ಯ ಸಂದಿಗ್ಧ ಪರಿಸ್ಥಿತಿಯನ್ನು ಕಲ್ಪಿಸಿ ಸಾಹಿತ್ಯಸೃಷ್ಟಿ ಮಾಡುವ ಇನ್ನೊಂದು ವರ್ಗವೂ ನಾಳಿನ ಸಲುವಾಗಿ ಧನಸಂಗ್ರಹದಲ್ಲಿ ಆಸಕ್ತರಾಗಿರುವುದನ್ನು ಕಾಣಬಹುದು. ಇವರು 'ಕ್ಷಣಧ್ವಂಸಿ' ದೇಹಿ ತಾವು ಈ ಧನಕನಕ ಸಂಗ್ರಹಯಾತಕ್ಕೆ? ಎಂದು ತಮ್ಮನ್ನು ಎಂದೂ ಪ್ರಶ್ನಿಸಿಕೊಳ್ಳಲಾರರು. 'ಕ್ಷಣಧ್ವಂಸಿ' ಜೀವನ ದೃಷ್ಟಿಯ ಜೈನ, ಬೌದ್ಧ, ಕ್ರೈಸ್ತಪಂಥೀಯ ಮಠಗಳ ವೈಭವದ ಮಹತ್ವಾಕಾಂಕ್ಷೆ ತಗ್ಗಿದ್ದು ಕಂಡು ಬಂದಿಲ್ಲ. ಇದು ಮೂಲದಲ್ಲಿ 'ಅಸು' ಪ್ರಾಣ ಉಪಾಸಕರ 'ಭೌಮ' ಅಸುರ=Titan ಪಂಥವಿದು.

ಜೀವಂತ ಪ್ರಜ್ಞೆ (Conscience) ಪ್ರಾಮಾಣಿಕತೆ ಇದ್ದವರಿಗೆ ಈ ಬಾಳಿನಲ್ಲಿ ನಿಯಮ, ವ್ಯವಸ್ಥೆ ಇದ್ದುದು ಕಾಣಬಲ್ಲುದು. ಇವರಿಗೆ ವಿಶ್ವನಿಯಮಗಳಲ್ಲಿ ವಿಶ್ವಾಸವಿಲ್ಲದಿರಲು ಶಕ್ಯವಿಲ್ಲ. ಪ್ರತಿ ನಿಯಮಕ್ಕೂ ಅಪವಾದಗಳು ಇದ್ದರೂ, ಅಪವಾದಗಳೇ ನಿಯಮವಾಗಿರುವ 'ನಿಯಮ' ಉಂಟೆ? ಪ್ರಾಣತತ್ತ್ವದ ಬಗೆಗಿನ ಪ್ರಾರಂಭವು ನಿಯಮಕ್ಕೆ ಹೊರತಾಗಿರುವ ಅಪವಾದಾತ್ಮಕ ಸಂದರ್ಭದಿಂದ ಆಗಿದೆಯೆಂದು ಕಲ್ಪಿಸಿಕೊಳ್ಳಲಾಗಿದೆ. ಸೋಜಗವೆಂದರೆ ಈ ಅಪವಾದ ಮತ್ತು ನಿಯಮನದ ಭೂಮಿಕೆಯು ಆಧುನಿಕವಿದ್ದರೂ ತತ್ತ್ವತಃ, ವೇದಕಾಲೀನ ವಸಿಷ್ಠ=ದಕ್ಷಿಣ ಕಪರ್ದ ಮತ್ತು ವಿಶ್ವಾಮಿತ್ರ=ಸವಿತೃ ಉಪಾಸಕ (ಅಥವಾ ಮನು ವೈವಸ್ವತ) ಇವರ ಭೂಮಿಕೆಯನ್ನು ಹೋಲುತ್ತದೆ. ವಿಚಾರಗಳಿಗೆ ಸನಾತನ ಆಕೃತಿ ಉಂಟು, ಎಂಬ ಆಧುನಿಕರ ಸೂತ್ರವು ಇಲ್ಲಿ ಅನ್ವಯಿಸುತ್ತದೆ. ಡಾರ್ವಿನ್ನನ ಸಿದ್ಧಾಂತದ 'unit' 'ಏಕಂ' ಈ ಗೃಹೀತವು ಅನೈಸರ್ಗಿಕ. ಏಕೆಂದರೆ, ಪರಸ್ಪರ ವಿರುದ್ಧ ಇರುವ ಎರಡರ ಕೂಟವು ಅಭಾವದಲ್ಲಿ ಪರಿಣಮಿಸಬೇಕು! + ಮತ್ತು - ಇವೆರಡು ಒಟ್ಟು ಶೂನ್ಯ [O]ವೇ ಆದೀತು. ಸ್ಥಾಯೀಭಾವದ ಮೊದಲಲ್ಲಿ (ಶೂನ್ಯ) ಏನೂ (ಅಸ್ತಿತ್ವವೇ) ಇಲ್ಲದ ಈ ಒಂದು (ಏಕಂ) ಇದು ಶುದ್ಧ ಕೇವಲ ಕಲ್ಪನೆ, ಸಂಕಲ್ಪನೆಯೇ (Invention) ಆಗುತ್ತದೆ. ನಿಜವಾದ ಕ್ರಮವು ೦, ೧, ೨ ... ಈ ಬಗೆಯದೇ ಇರಬಲ್ಲದು. ಥಕ್ಕನೆ ಈ ಒಂದು (unit) ಎಲ್ಲಿಂದ ಬಂತು? 'ಏಕಂ' ರೂಪೀ ಈ ಭಗವಂತ ಎಲ್ಲಿಂದ ಬರುತ್ತಾನೆ?

ಆಧುನಿಕ ಭೌತವಿಜ್ಞಾನದ ನೆರವು

ಆಧುನಿಕ ಭೌತ ಖಗೋಲ ಶಾಸ್ತ್ರಜ್ಞರೂ ವಿಶ್ವಾರಂಭದ ಬಗೆಗೆ ಇದೇ ಬಗೆಯ ಗೃಹೀತ ಸ್ವೀಕರಿಸುತ್ತಿದ್ದಾರೆ. ಪ್ರಯೋಗಗಳ ಪ್ರತ್ಯಕ್ಷ ಪ್ರಮಾಣದಲ್ಲಿಯೇ ಭೌತಶಾಸ್ತ್ರದಲ್ಲಿ ಸಂಭವಿಸಿದ ಮೊದಲ ಅಪಘಾತ 'ಕ್ವಾಂಟಂ' ಸಿದ್ಧಾಂತದ ಸಂದರ್ಭದಿಂದ! ಪ್ರಯೋಗ ಶಾಲೆಯೊಳಗಿನ ಪರೀಕ್ಷಾ ನಳಿಕೆ (test tube) ಇದೇ ಒರೆಗಲ್ಲು, ಎಂಬ ನಿಷ್ಠೆಗೆ ಕ್ವಾಂಟಂ ಸಿದ್ಧಾಂತದಿಂದ ಪೆಟ್ಟು ಬೀಳುತ್ತದೆ.

ಆ ಬೆಳಕಿನ ಅಪಘಾತ ಐನ್‌ಸ್ಟಿನ್ನರ ಸಾಪೇಕ್ಷ ಸಿದ್ಧಾಂತದಿಂದಾಗಿ, ಕೆಂಬ್ರಿಡ್ಜ್ ಮೊದಲಾದ ಕಡೆಯ ಭೌತಶಾಸ್ತ್ರಜ್ಞರು ದಿಗ್‌ಭ್ರಾಂತರಾದರು. ಭೌತಶಾಸ್ತ್ರದಲ್ಲಿ ಕಲ್ಪನಾ ವಿಲಾಸಕ್ಕೆ, ಕಾವ್ಯಕ್ಕೆ ಪ್ರವೇಶ ದೊರೆಯಿತಲ್ಲ, ಎಂದು ಮಮ್ಮಲನೆ ಮಿಡುಕಿದರು. ಐನ್ಸ್ಟನ್‌ರ ಫಲಿತಾಂಶ (ಶೋಧ) ಇದೇ ಸುಳ್ಳು, ಕಾಲ್ಪನಿಕ ಎಂಬ ಟೀಕೆಗಳು, ಆದುವು. ಬರ್ಟ್ರ್ಯಾಂಡ ರಸೆಲ್ಲ ಆಗ ಗ್ರಂಥ ಬರೆದು ಐನ್ಸ್ಟನ್ನರ ಸಿದ್ಧಾಂತವನ್ನು ಸುಲಭೀಕರಿಸಿ, ಶ್ರೇಷ್ಠ ಭೌತಶಾಸ್ತ್ರಜ್ಞರೆಂಬವರಿಗೆ ತಿಳಿಯುವಂತೆ 'ABC of Relativity' ಎಂಬ ಗ್ರಂಥ ಬರೆಯಬೇಕಾಯಿತು.

ಇಲ್ಲಿ ಒಂದು ಸೋಜಿಗ ನೋಡಿ: ಈವರೆಗೆ ವಿಧಾಯಕ ತತ್ತ್ವಜ್ಞಾನಕ್ಕೆ (positive philosophy) ಮತ್ತು ಅಭಾವವೇ ಸ್ಥಾಯಿ ಇರುವ (Negative) ದಿವ್ಯಾಧ್ಯಾತ್ಮಕ್ಕೆ (Metaphysics), ಭೌತಶಾಸ್ತ್ರದ ನೆರವು ಪಡೆದು ತಮ್ಮ ಅಸ್ತಿತ್ವವನ್ನು ಮನಗಾಣಿಸಿಕೊಡಬೇಕಾಗುತ್ತಿತ್ತು. ಆದರೆ, ಈಗ ಇದಕ್ಕೆ ತಿರುವು ಮುರುವಿನ ಅವಸ್ಥೆ ಬಂದಿದೆ! ಈಗ ಡಾ।। ಜಯಂತ ನಾರಳೀಕರರೇ ಹೇಳುವಂತೆ ಭೌತಶಾಸ್ತ್ರದ ಖಗೋಲಶಾಸ್ತ್ರಕ್ಕೆ ಅಂತಿಮ ಸಿದ್ಧಾಂತದ ದಿಕ್ಕಿನಲ್ಲಿ ಮುಂದುವರೆಯಲು ತತ್ತ್ವಜ್ಞಾನದ ಹಾಗೂ ದಿವ್ಯಾಧ್ಯಾತ್ಮದ ನೆರವು ಕೋರಬೇಕಾಗುತ್ತದೆ.

ಡಾ।। ನಾರಳೀಕರು ಸಂದರ್ಶಕರ ಒಂದು ಪ್ರಶ್ನೆಗೆ ಉತ್ತರವನ್ನು ನೀಡುವಾಗ ಹೇಳಿರುವ ವಿಚಾರವು ಚಿಂತ್ಯವಿದೆ. "Where does this new matter come from?" ಈ ಅವ್ಯಾಹತ ಸೃಜನದ ನೂತನ ದ್ರವ್ಯದ ಉದ್ಗಮ ಕೇಂದ್ರವು ಎಲ್ಲಿದೆ? ಇವೆಲ್ಲ ನಿತ್ಯನವೀನ ಎಲ್ಲಿಂದ ಬರುತ್ತದೆ? ಈ ಪ್ರಶ್ನೆಗೆ ಡಾ।। ಜಯಂತ ನಾರಳೀಕರ್ ಹೇಳುತ್ತಾರೆ. "From a negative reservoir"(ಅಭಾವಾತ್ಮಕ ಹೊಂಡದೊಳಗಿಂದ)!

ಖಗೋಲದೊಳಗಿನ ಕಪ್ಪುಗವಿ (Black hole) ಕೃಷ್ಣವಿವರದ ಟೊಳ್ಳನೊಳಗಿಂದ ಈ ನೂತನ ದ್ರವ್ಯವೆಲ್ಲ ಹೊರಬರುತ್ತಿದೆ, ಎಂಬ ಭೌತಶಾಸ್ತ್ರದ ಈ ಗೃಹೀತವು, ದಿವ್ಯಾಧ್ಯಾತ್ಮದೊಳಗಿನ ಅಂತರ್‌ವಿಸಂಗತ ಪದ ಪ್ರಯೋಗವನ್ನು ಅಪೇಕ್ಷಿಸುತ್ತದೆ. 'density' ಮತ್ತು 'hole' ಇಲ್ಲಿ, ಸಾಂದ್ರಘನ ಮತ್ತು ಟೊಳ್ಳುತೂತು ಇವು ಒಂದು ಇನ್ನೊಂದರ ಅರ್ಥವನ್ನು ಸ್ಪಷ್ಟಪಡಿಸುತ್ತವೆ! ಅಂತರಿಕ್ಷದ ಈ ಅವಕಾಶವು ಪೈಥಾಗೋರಸನ void, vacuum ಈ ಗೃಹೀತವನ್ನು ಹೋಲುತ್ತಿದೆ! ಆದಿಪ್ರಕೃತಿಯ (Unlimited) ಪ್ರಸವದ ವೇದಾಂತದೊಳಗಿನ ಮೂಲ ಸಿದ್ಧಾಂತದ ಪ್ರತಿಬಿಂಬ ಅಥವಾ ಅದರ ಛಾಯೆಯು ಇಂದಿನ ಖಗೋಲಶಾಸ್ತ್ರದ ಈ ಸಿದ್ಧಾಂತದಲ್ಲಿ ಕಾಣುತ್ತಿದೆ. ಸೃಷ್ಟಿನಿರ್ಮಾಣಕ್ರಿಯೆಯ ಡಾ।। ನಾರಳೀಕರ ಸ್ಪಷ್ಟೀಕರಣದಲ್ಲಿ ಪೈಥಾಗೋರಸನ ಸಿದ್ಧಾಂತದ ಪರ್ಯಾಯವು ಕಾಣದೊರೆಯುತ್ತದೆ.

ಡಾ।। ಜಯಂತರು ಪ್ರಯೋಜನ ಪಡೆಯುತ್ತಿರುವ ಈ ಪರಿಭಾಷೆಯು ದಿವ್ಯಾಧ್ಯಾತ್ಮದ ಪರಿಭಾಷೆಯನ್ನು ಸಂಪೂರ್ಣ ಹೋಲುತ್ತದೆ. ಭಾಷೆಯ ಕನ್ನಡಕದಿಂದ ಈ ಮಾನವನು ತನ್ನ ಸುತ್ತಲಿನ ಪ್ರಪಂಚವನ್ನು ಕಂಡಿದ್ದಾನೆ, ಕಾಣುತ್ತಲೂ ಇದ್ದಾನೆ. ಈ ಭಾಷೆಯು ತಳಪಾಯದಲ್ಲಿ ಅನುಭವಾತ್ಮಕ ಅಭಿದ್ದಾತ್ (Immanent) ಪಾತಳಿಯದು ಇದೆ. ಈ ಕಾರಣದಿಂದ 'ಅಭಿಧಾ' ಶಕ್ತಿಯ ಈ ಅಭಿಜಾತ (genuine) ಅಭಿವ್ಯಕ್ತಿಯು ವಿಧಾಯಕ (Positive) ಸ್ವರೂಪದ್ದೇ ಇರಬಲ್ಲದು. ಆದರೆ ದೃಶ್ಯ (phenomena) ಪಾತಳಿಯ ಚಿತ್ತದ (ಚಿತ್‌ರೂಪ) ಅಭಿವ್ಯಕ್ತಿಯು ಅಂತರ್‌ವಿಸಂಗತ ಹಾಗೂ ಪ್ರೇರಣಾದ್ವಂದ್ವದ ವೈಶಿಷ್ಟ್ಯವುಳ್ಳದ್ದಾಗಿರಲೇಬೇಕು. ಇಲ್ಲವಾದರೆ, ಸ್ವಪ್ನಸದೃಶ ಈ ದೃಶ್ಯಗಳು ಅಭಾವದಲ್ಲಿ (Vaccum) ನಿರ್ಮಿತವಾಗುತ್ತಿದ್ದಿಲ್ಲ. ಈ ಕಾರಣದಿಂದಲೇ ಪುರಾತನರು ದೃಶ್ಯಪಾತಳಿಯ ಆಗುಹೋಗುಗಳನ್ನು ಚಿತ್‌ವಿಲಾಸದ ಫಲಿತ ಎಂದೇ ಹೇಳಿದ್ದಾರೆ. ಇದೇ ಆಶಯವನ್ನೇ ಇನ್ನೊಬ್ಬ ಭಾಷಾ ಶಾಸ್ತ್ರಜ್ಞನು 'language of light and language of night' ಎಂದು ವ್ಯಕ್ತಪಡಿಸಿದ್ದಾನೆ. 'ಅಭಿಜಾತ' ಪಾತಳಿಯ ಮೇಲೆ ಪ್ರಕಾಶತತ್ತ್ವವು ಬೆಳಗುತ್ತಿರುತ್ತದೆ. ಪ್ರಕಾಶದ ಅಭಾವ ಕತ್ತಲೆ! ಆದ ಕಾರಣ 'ರಾತ್ರಿ' ಸತ್ಯಸೂಚಕ ದಿವ್ಯಾಧ್ಯಾತ್ಮ ಪರಿಭಾಷೆಯಲ್ಲಿ ಅಭಾವವೇ ಸ್ಥಾಯಿ ಇರುತ್ತದೆ.

ಭಾಷಾಭಿವ್ಯಕ್ತಿಯ ಬಗೆಗಿನ ಸಾರ್ವಕಾಲಿಕ ನಿಯಮದ ಈ ಮಾತು ಮೌಲಿಕವಿದೆ. ಡಾ।। ನಾರಳೀಕರರು ತಾವು ಪ್ರಯೋಜನ ಪಡೆದಿರುವ ಭಾಷೆಯ ತಾತ್ವಿಕ ಸ್ವರೂಪವನ್ನು ಅದರ ತಳಹದಿಯನ್ನು ಅವರು ಕಡೆಗಣಿಸಿದ್ದಾರೆ! ಶಾಸ್ತ್ರೀಯ ರೀತಿಯಿಂದ ವಿಧಾಯಕ ಅರ್ಥಗ್ರಹಿಸಿಕೊಳ್ಳುವುದಕ್ಕಾಗಿ ಯೋಜಿಸಿರುವ ಡಾ।। ನಾರಳೀಕರರ 'Negative reservoir' ಎಂಬ ಪದಪ್ರಯೋಗದೊಳಗಿನ ಅಂತರ್‌ವಿಸಂಗತಿಯನ್ನು ಲೆಕ್ಕಿಸಿದಲ್ಲಿ ಅವರು ತಮ್ಮ ವಿಧಾನವು ಅರ್ಥಶೂನ್ಯವಾಗುತ್ತಿರುವುದನ್ನು ಈಗಲೂ ಅರಿಯಬಹುದಾಗಿದೆ. Reservoir ಇದು positive ಇರಲಿಕ್ಕೇಬೇಕು. ಆದರೆ, ಇದು negative ಇದೆ. ಎಂದರೇನು? ಡಾ।। ನಾರಳೀಕರರ 'ಅಮೃತ'ದ ಸಂಕೇತ, ಅಭಾವದ (Reservoir) ಕುಂಡ ಇದು ದಿವ್ಯಾಧ್ಯಾತ್ಮದ 'ವಿಶ್ವಜನನಿ' ಎಂಬ ಆದಿಶಕ್ತಿ. ಇದು ಅದಿತಿಯ ಯೋನಿಮಂಡಲ (ಚಂದ್ರ)ವನ್ನು ನೆನಪಿಗೆ ತಂದು ಕೊಡುತ್ತದೆ. ನರ ಸಂಪ್ರದಾಯದ ಇಂದಿನ ಈ ವೇದದಲ್ಲಿ, ಈ ವಿಶ್ವ'ಜನಿತ್ರಿ'ಯ ಆಕೃತಿಯ ಸ್ವರೂಪದ ಚಿತ್ರವಿದೆ. 'ಅ-ಮೃತಸ್ಯ ನಾಭಿಃ' ಆಗಿರುವ ಈ ಅ-ದಿತಿಯನ್ನು 'ಗೌಃ' (ಹಾಲಿನ-ಹೊಂಡ) ಎಂದಿದ್ದಾರೆ. ಈ ಗೋವು, 'ಅಘ್ನ್ಯ=ವಧಾರ್ಹವಲ್ಲ! ಗೋಹತ್ಯಾ ನಿಷೇಧದ ವೇದವಾಕ್ಯದಲ್ಲಿ ಇರುವ ಈ 'ಗೋವು' ಪ್ರಪಂಚದ (Reservoir) ಆಗಿದೆ. ಈ 'ಗೋ' (ಯೋನಿ) ಪುತ್ರರೆಲ್ಲರೂ ಕ್ರಿಮಿಕೀಟದಿಂದ ನರೋತ್ತಮರ ವರೆಗಿನ ಎಲ್ಲ ಪ್ರಾಣಿಗಳೂ, 'ಅಮೃತ ಬಂಧು'ಗಳು. ಈ ಕಾರಣದಿಂದ ಅಮೃತ (=ರೇತ) ಸಂತತಿ, ಇದನ್ನು

ಹಿಂಸಿಸತಕ್ಕದ್ದಲ್ಲ! ಆತ್ಯಂತಿಕ ಅಹಿಂಸೆ ಆಚರಿಸಬೇಕು, ಎಂದು ಪೈಥಾಗೋರಸನು ಸಹ ಜೈನರ ಈ ಆತ್ಯಂತಿಕ ಅಹಿಂಸೆ ಹೇಳಿದ್ದಾನೆ. ಆದರೆ ಈ ಬಗೆಯ ಅಹಿಂಸೆಯ ಆಚರಣ ಮತ್ತು ಮೃತ್ಯು ಪೂಜೆ ಬೇರೆ ಬೇರೆ ಅಲ್ಲ. ಆದರೆ, ಈ ಅಮೃತಕುಂಡವು ಅಭಾವಾತ್ಮಕ (Negative) ಇದೆ! ಆದಿಶಕ್ತಿ : ಕುಮಾರಿ ಮಾತೆಯ ಪ್ರಸವವು ಇದು! ಈ ಜೀವನ ವಿಶ್ವದಲ್ಲಿ ಅಭಿದ್ರಾತ್ (Immanent) ಜೀವಂತ-ಪ್ರಕಾಶ 'ಉಂಟು' ಎಂಬ ಕಾರಣದಿಂದ ವಿಧಾಯಕ ಸ್ವರೂಪದ ಜೀವನದ ಅಸ್ತಿತ್ವದಿಂದಾಗಿ, ಆಧ್ಯಾತ್ಮಿಕ ಅಮೃತದ ಹೊಂಡ ಇರಬಲ್ಲದು. ಭಾವಾತ್ಮಕ-ಅನುಭಾವಾತ್ಮಕ ವಿಧಾಯಕ ಅಸ್ತಿತ್ವದ ಹಿನ್ನೆಲೆಯಲ್ಲಿ, ಅಭಾವಾತ್ಮಕ ಅಸ್ತಿತ್ವದ ಶಕ್ಯತೆಯು ಅರಿಕೆಗೆ ಬರುತ್ತದೆ. ಭಾವಾತ್ಮಕ ಅನುಭಾವಾತ್ಮಕ ಅಸ್ತಿತ್ವವೇ ಇಲ್ಲದಿದ್ದರೆ, ಈ ಸಾಹಿತ್ಯಿಕ ಕಾವ್ಯ-ಕಲಾತ್ಮಕ ಪಾತಳಿಯ ಅಸ್ತಿತ್ವವು ಶಕ್ಯವಿತ್ತೇ? 'ದರ್ಪಣ ದೃಶ್ಯಮಾನ' ವಿಶ್ವವು ಅಭಾವಾತ್ಮಕ ದೃಶ್ಯವು, ಭಾವಾತ್ಮಕ ಅರ್ಥ=ಆಶಯದಿಂದಾಗಿಯೇ ಶಕ್ಯ ತಾನೆ? All this throws up a host of metaphysical questions ಎಂದು ಡಾ।। ಜಯಂತರವರೇ ಪ್ರಾಂಜಲ ರೀತಿಯಿಂದ ಒಪ್ಪಿಕೊಂಡಿದ್ದಾರೆ.

ಇಂದಿನ ಗಣಿತಶಾಸ್ತ್ರಕ್ಕೆ, ನಾದಯೋಗಿ ಸಾಂಖ್ಯ ಪೈಥಾಗೋರಸನೇ ತಂದೆ, ಇದನ್ನು ಭೂಲೋಕಕ್ಕೆ ತಂದವನು ಆತನೇ. ಈ ಗಣಿತಶಾಸ್ತ್ರವು ಭೌತಶೋಧನೆಗಳಿಗೆ ಉಪಕಾರವಾಗುತ್ತ ಬಂದಿದೆ. ಆದರೆ ಈ ಗಣಿತ ಶಾಸ್ತ್ರವು ದಿವ್ಯಾಧ್ಯಾತ್ಮದ (೦) ಮೂಲ ತತ್ತ್ವದಿಂದ ಚಿಗಿತುಕೊಂಡಿದೆ! ಇದನ್ನು ಪೈಥಾಗೋರಸ ತೋರಿಸಿಕೊಡುತ್ತಾನೆ! ಆದರೆ, ಅರಿಸ್ಟಾಟ್ಲನಿಗೂ ಇದು ಎಂತೂ ಎನಿಸದೆ ಇಲ್ಲ! ಆದರೂ '01;10'. ಇವೆರಡರ ಸಂಬಂಧ ಒಪ್ಪದ ಗತಿಯಿಲ್ಲ! ಪೈಥ್ಯಾಗೋರಸನು ಮಾಡಿರುವ ಕಣ್ಕಟ್ಟು=ಯಾತು ಜಾದು ಇದು ಇಲ್ಲೆ ಇದೆ. ದಿವ್ಯಾಧ್ಯಾತ್ಮಕ್ಕೆ ಪೋಷಕ, ಪೂರಕವಾದ ಗಣಿತ, ಭೂಮಿತಿ, ಸಂಖ್ಯಾಶಾಸ್ತ್ರವನ್ನು ಈತನು ರೂಪಿಸಿದ್ದಾನೆ. ಈತನು ಕಲ್ಪಿಸಿರುವ ಸೃಷ್ಟಿಕರ್ತ, ಪುರಿಶಯ(ನ) ಗುಹೇಶ್ವರ (ಪುರುಷ ಲಿಂಗ) ಇದನ್ನು Limit ವಿಶ್ವನಿಯಾಮಕ ಶಕ್ತಿ ವಿಶ್ವಮಾಪನ ಮಾಡುವ ಶಕ್ತಿ ಇದನ್ನು ಮಾನದಂಡ ಎಂದು ಹೆಸರಿಸಿದ್ದಾನೆ. ಈ ಸೃಷ್ಟಿ ಪ್ರಸವಿಸುವ ಎಡೆ=ಯೋನಿ unlimited (ನೆಲೆಗೆ ಸಿಲುಕದ್ದು) ಎಂದು ಹೆಸರಿಸಿದ್ದಾನೆ. ಪೈಥ್ಯಾಗೋರಸನು ತನ್ನ ಈ ಶ್ರದ್ಧೆಯನ್ನು ಸಿದ್ಧಪಡಿಸಲು ಮಾಡಿರುವ 'ಮಾಟ'ವನ್ನು ಅರಿಸ್ಟೋಟಲ್ಲನು ಬಯಲಿಗೆ ತಂದಿದ್ದಾನೆ. ಬರ್ಟ್ರಾಂಡ್ ರಸೆಲ್ಲ ಪೈಥ್ಯಾಗೋರಸನ ಬಗೆಗೆ ಬರೆಯುವಾಗ ಹೇಳಿರುವ ಈ ವಿಚಾರವೂ ಚಿಂತನೀಯವಾಗಿದೆ.

> "So much by way of explanation of the two aspects of Pythagoras as religious prophet and as pure mathematician. In both aspects he was immeasurably influential and the two were not so separate as they seem to a modern mind.[೭]

ಟಿಪ್ಪಣಿಗಳು

೧. Dr. H. Frankfort; ***The Birth of the Civilization in the Near East;*** 1952

೨. Julien Huksley; ***New Bottles for New Wine*** p. 16

೩. S. H. Hooke; ***Middle Eastern Mythology, a Pelican Book*** , 1968; p. 51.

೪. A. L. Kroeber ; ***The Nature of Culture***; 1952 p. 375

೫. ***ಛಾಂದೋಗ್ಯೋಪನಿಷತ್ತು;*** ೮.೮.೫.,

೬. Louie Young; ***Evolution of man***; Editor, Oxford press 1970 p. 253

೭. Bertrand Russel ; ***History of Western Philosophy*** p-53

ಜ್ಞಾನಪ್ರಾಪ್ತಿಯ ಮಾರ್ಗಭೇದ

ಅಮೂರ್ತ ತಾತ್ವಿಕ (Universal) ವಿಚಾರವನ್ನು ಗ್ರಹಿಸಿಕೊಳ್ಳುವಲ್ಲಿ ಹಾಗೂ ಸೃಷ್ಟಿಸುವಲ್ಲಿ ಮೋಸಕ್ಕೆ ಇಂಬು ಇರುವುದನ್ನು ಪಾಶ್ಚಾತ್ಯ ತತ್ತ್ವಜ್ಞರು ಕಂಡುಹಿಡಿದಿದ್ದಾರೆ. ಈ ಅಮೂರ್ತ ತತ್ತ್ವವು ಎರಡು ಬಗೆಯದು ಇರುತ್ತದೆ. ಒಂದೇ ಬಗೆಯ ಹಲವು, ಇದು ಅಮೂರ್ತ ಪಾತಳಿಯ ಮೇಲೆ ಒಂದು 'ವರ್ಗ', 'ಜಾತಿ' (category) ಮಾತ್ರ ಆಗುತ್ತದೆ. ಉದಾ- ನಾಯಿ, ಹೆಣ್ಣು, ಗಂಡು, ತಾಯಿ ಈ ಬಗೆಯ ಒಂದು ವಿಶಿಷ್ಟದ ಅ-ಮೂರ್ತ ತಾತ್ವಿಕ ಸಂಕೇತಗಳು ದೃಶ್ಯಪಾತಳಿಗೇ ಸಂಬದ್ಧವಾಗಿ ಇರುತ್ತವೆ. ಇವು ಭೌತದಿಂದ ಸಂಪೂರ್ಣ ಅಲಿಪ್ತವಲ್ಲ! ಆದಕಾರಣ, ಇದು ಬಂಧು-ರ (correspondence) ಪಾತಳಿಯ ಸತ್ಯಸೂಚಕವಾಗಿರುತ್ತದೆ. ಬಂಧು-ರವನ್ನು, ನಿಜವಾದ ಅಮೂರ್ತ ತತ್ತ್ವಸೂಚಕ ತಾತ್ತ್ವಿಕ ಪಾತಳಿಯ ಸಂಕೇತ ಎಂದು ಬಗೆಯಲಾಗುವುದಿಲ್ಲ. ಆದರೆ, ಇಂತಹ ಏನೊಂದು ವಿಶಿಷ್ಟದ ಅಮೂರ್ತವನ್ನೇ ವೈಶ್ವಕ ಪಾತಳಿಯ ಅಮೂರ್ತತತ್ತ್ವ ಎಂದು ನಂಬುವಾಗ, ನಂಬಿಸುವಾಗ ಇದನ್ನು 'Illegitimate abstraction' (ಅಯೋನಿ ಸಂಭವ ಕಲ್ಪನಾವಿಲಾಸ) ಎಂದು ಹೇಳುವುದು, ಇದು ನಿಷ್ಕಾರಣವಲ್ಲ. 'ಕುಮಾರೀ ಮಾತೆ'ಯ ಮಗ ಎಂಬ ಈ (ಅಂತರ್‌ವಿಸಂಗತಿಯು ಅರ್ಥಶೂನ್ಯ=ಶೂನ್ಯ ಅರ್ಥಸೂಚಕ ಪಾತಳಿಯ ಅಭಾವಾತ್ಮಕ ಅಸ್ತಿತ್ವಸೂಚಕವಿದೆ. ಈ ಕಾರಣದಿಂದಾಗಿ, ಕುಮಾರೀ ಮೇರಿ ಪುತ್ರ 'ಏಸು' ಇವನು ಅಯೋನಿಸಂಭವನೆಂಬ ಈ ನಂಬುಗೆ ಅಭಾವದಲ್ಲಿ ಕಲ್ಪಿಸಲಾಗಿರುವ ಸ್ಥಾಯೀಸ್ವರೂಪದ್ದು ಆಗುತ್ತದೆ.

ನಿಜವಾದ ವೈಶ್ವಕಪಾತಳಿಯ ಅಮೂರ್ತತತ್ತ್ವವು ಅನೇಕ ವಿಧದ ವಿಶಿಷ್ಟಗಳನ್ನು ಒಳಗೊಳ್ಳುತ್ತದೆ ಮತ್ತು ಸ್ಪಷ್ಟೀಕರಿಸುತ್ತದೆ. ಆದಕಾರಣ, ಪುರಾತನರು ಈ ವೈಶ್ವಕತತ್ತ್ವವನ್ನು ಪ್ರಕಾಶತತ್ತ್ವದ ಪಾತಳಿ ಎಂದರು. ಇದು ಸ್ಥಲ (ದೇಹ) ಮತ್ತು ಕಾಲ (ಪ್ರಾಣ) ಈ ಪಾತಳಿಯ ಆಚೆಗಿನದು. ಇದು ಸ್ಥಲ (ದೇಹ) ಮತ್ತು ಕಾಲ (ಪ್ರಾಣಚೇತಸ) ಇದು ಭೌತಇಂದ್ರಿಯ ಪಾತಳಿ, ಎಂದು ಸ್ಪಷ್ಟಪಡಿಸಿದ್ದಾಗಿದೆ. ಇಲ್ಲಿ ಅಂತರ್ ಅಂಗದ (ವಾಣಿಯ) ಆಚೆಗಿನ ಪಾತಳಿ ಪ್ರಜ್ಞಾನೇತ್ರದ (Conscience) ಪಾತಳಿಗೆ ಬಂದಿದ್ದಾಗಿದೆ. ಭಾರತೀಯರಲ್ಲಿ ಮಾತ್ರವಲ್ಲ ಗ್ರೀಕ್ ಪುರಾತನರಲ್ಲಿಯೂ, ಇಂದ್ರಿಯಗಳ (ಪಿಂಡ-ಬ್ರಹ್ಮ ಅಂಡ) ಇದರ ಆಚೆಗಿನ ಮೂರನೆಯ ಪಾತಳಿಯನ್ನು ಲೆಕ್ಕಿಸಲಾಗಿತ್ತು. ಇದು ಗ್ರೀಕ್ 'Nous' ಪಾತಳಿ. ಆಧುನಿಕ ಭೌತಶಾಸ್ತ್ರಜ್ಞರು, ಡಾ|| ಜೂಲಿಯನ್ ಹಕ್‌ಸ್ಲೆ ಪ್ರಭೃತ್ತಿಗಳು ಇದನ್ನು 'Neosphere' ಎಂಬ ಹೆಸರಿನಲ್ಲಿ ಸ್ವೀಕರಿಸಿದ್ದಾರೆ[೧].

ನಾದಯೋಗಿ ಪೈಥಾಗೋರಾಸನು (ಒಂದು) ವಿಶಿಷ್ಟವನ್ನು ಸಾರ್ವಕಾಲಿಕ ವೈಶ್ವಕತತ್ತ್ವವಾಗಿ ಕಲ್ಪಿಸಿದ್ದಾನೆ. ಸೃಜನಶಕ್ತಿಯ ಗುಹೇಶ್ವರನು Limit ದಶ (ಅಂಗುಲ) 'ಗಣ'ನ್ನು (೧) ವೈಶ್ವಕಪಾತಳಿಯ ಅಮೂರ್ತ ತತ್ತ್ವನ್ನಾಗಿಸಿದ್ದಾನೆ!

ಭಾರತೀಯ 'ನರ' ಸಂಪ್ರದಾಯದ 'ಆದಿತ್ಯ ವೃಕ್ಷ' ಎಂಬ (೦) ಶೂನ್ಯರ್ಥದ ಸಂಕೇತವು ಪೈಥಾಗೋರಾಸನ Limit ಅಳತೆಗೋಲನ್ನು ಹೋಲುತ್ತದೆ! ಈ 'ಆದಿತ್ಯ' (ಲಿಂಗ) ಚಂದ್ರಮಂಡಲದಲ್ಲಿ ಉಂಟು! ಎಂದು ನಂಬಿಸಲಾಗಿದೆ. ಆದರೆ, ಈ ಬಗೆಯಲ್ಲಿ ಅಭಾವಾತ್ಮಕ ಟೊಳ್ಳಿನಲ್ಲಿ (Vacuum, Void) ಇರುವ ಈ 'ಭಗ'ವಂತನಿಗೆ ನಿತ್ಯವಾಗಿ ಗರ್ಭ-ಗುಡಿಯಲ್ಲೇ ಇರುವ ಶಾಪವಿದೆ. ಇಂಥ ಈ ಪುರುಷ ಗುಹೇಶ್ವರನು, ಈ ಭಗವಂತನೆಂಬುವನು (Illigetimate abstraction) ಇದ್ದಾನೆ, Illegitimate Child ಆಗುತ್ತಾನೆ, ಎಂಬುದನ್ನು ಕಡೆಗಣಿಸಲಾಗುತ್ತದೆ.

ಈ 'ನರ' ಸಂಪ್ರದಾಯದ ವಿಶ್ವಜನನಿ ಯಾರು? ಚಂದ್ರಾ; ಕೊಲ್ಲೂರ ಮೂಕಾಂಬೆ! 'ಮೂಕಾಂಬೆ', 'ಫಕ್ತಯೋನಿ ಮಂಡಲ' (Void, vacuum); ಇದರೊಳಗಿಂದ 'ಮಾತರಿ'ಶ್ವನ್ (ತಾಯಿ ಒಡಲಲ್ಲಿ) ಶ್ವಸನಗೈಯುತ್ತಿದ್ದಾನೆ ಎಂಬ ಈ 'ಅಸು'ರ ಒಡಲ ಟೊಳ್ಳಿನೊಳಗಿಂದ ಸಂತತ ಹೊರಬರುತ್ತಾನೆ! ಹೀಗೆ ಹೊರಬರುತ್ತಿರುವ 'ಅಸುರ' ಉಸಿರನ್ನು 'ಸರ್-ಪ' ಎಂದು ಭಾರತೀಯ ಪರಿಭಾಷೆ ಹೆಸರಿಸಿದೆ! ಗ್ರೀಕ್ ಟಿಟಾನ್ ಎಂದರೂ ಇವನೆ! ಏಕಾಕ್ಷ: ಸೈಕ್ಲೋಪಸ್; ದೇವಯಾನಿ ಶುಕ್ರ (೦) ಈ ಆಕೃತಿಯೇ ಆಗಿದ್ದಾನೆ. ಈ ಆದಿಕವಿ, ಕಾವ್ಯನು, ಹುತ್ತಿನಲ್ಲಿ ಅಡಗಿದ್ದಾನೆ.

ಡಾ|| ನಾರಳೀಕರಂತಹ ಭೌತಶಾಸ್ತ್ರಜ್ಞರಿಗೆ, ದೃಶ್ಯಸತ್ಯವನ್ನು ವಿವರಿಸುವಾಗ, ಅಂತರ್‌ವಿಸಂಗತವಾದ ಎಂದರೆ 'ಅರ್ಥ-ಶೂನ್ಯ ಅಥವಾ ಶೂನ್ಯ ಅರ್ಥ' ಯುಕ್ತಪದ ಪ್ರಯೋಗ ಮಾಡುವ ಅನಿವಾರ್ಯ ಆಪತ್ತಿಯನ್ನು ಸ್ವಾಗತಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ಒಂದು ವೈಶ್ವಿಕ ನಿಯಮವು ಕಂಡು ಬರುತ್ತಿದೆ. ಭೌತದೃಶ್ಯ ಪಾತಳಿಯ ವಸ್ತು-ಸ್ಥಿತಿಯನ್ನು ವಿವರಿಸುವ ವರ್ಣಿಸುವ ಸಾಹಿತ್ಯವಿರಲಿ, ಕತೆಯಿರಲಿ, ಭೌತಶಾಸ್ತ್ರವಿರಲಿ, ದಿವ್ಯಾಧ್ಯಾತ್ಮವಿರಲಿ, ಇವೆಲ್ಲಕ್ಕೂ 'ಅಂತರ್ ವಿಸಂಗತ' ಭೂಮಿಕೆ ಅನಿವಾರ್ಯವಾಗುತ್ತದೆ! 'ಅಂತಃ ಸಂಗತಿ' ಎಂದರೆ, ಇದು ವಿಧಾಯಕ ಭಾವಾತ್ಮಕ, ಅನುಭವಾತ್ಮಕವು; ಇದು ಪ್ರಕಾಶ ಸ್ಥಿತಿ; ಆದರೆ ಅಂತರ್ ವಿಸಂಗತಿ ಎಂದರೆ ಇದು ಅಭಾವಾತ್ಮಕ-ವಿನಾಶಕ; ಶೂನ್ಯ (೦) ಕತ್ತಲೆಯ ಕೋಣೆ.

'Positive Religion of Humanity' ಬರೆದ ಕೋಮ್‌ಟಯ ದೃಷ್ಟಿಯಲ್ಲಿ, ಈ ಅಭಾವಾತ್ಮಕ ಭೂಮಿಕೆಯ ದೃಶ್ಯವಿಶ್ವದ ಭೌತಶಾಸ್ತ್ರೀಯ ಸಂಶೋಧನವು 'descriptive' ಆಗಿದೆ. ಪ್ರಾತಿಭ ದೃಷ್ಟಿಯ ಪ್ರಜ್ಞ ಕಾಂಟನು ಈ ಭೌತ ಶಾಸ್ತ್ರಗಳ ಬಗೆಗೆ ಹೇಳುವದೇನೆಂದರೆ

> "For him, scientific knowledge (New-ton) is purely phenomenal;
> It consists of the data of sense organised by the Categeories in
> unity of consciousness.[೨]

ಡಾ|| ನಾರಳೀಕರರಿಗೆ, ಖಗೋಲದಲ್ಲೆ ಅಂತರ್ ವಿಸಂಗತ (Negative) ದೃಶ್ಯವು ಗಣಿತಶಾಸ್ತ್ರದ ಸಮೀಕರಯಣಗಳ ಆಧಾರದಿಂದ ಕಾಣುತ್ತದೆ! ಗಣಿತಶಾಸ್ತ್ರದ ಪರಿಣತಿ, ಸಮಾನಾರ್ಥಕ ಜೋಡು ನುಡಿ='Tautology'ಯೇ ಸರಿ, ಎಂದು ಆ ಶಾಸ್ತ್ರಜ್ಞರೇ ಹೇಳುತ್ತಾರೆ. 'ಗಣಿತ' ಇದು ಸಾಧನ. ಸಾಧನವೇ ಸಿದ್ಧಿಯ ಸಾಧ್ಯದ ಸ್ಥಾನಕ್ಕೆ ಬರುವಾಗ ಬಾಳಿನಲ್ಲಿ ಅರ್ಥಶೂನ್ಯ, ಶೂನ್ಯವೇ ಅರ್ಥವಾಗಬಲ್ಲುದು! ಗಣಿತ, ಜೀವನಾನುಭವದಲ್ಲಿ ಅಂಕುರಿಸಿಲ್ಲ. ಫಕ್ತ-ಸ್ಪಷ್ಟೀಕರಣದ ಸಾಧನ ಈ ಗಣಿತ! ಡಾ|| ನಾರಳೀಕರರಿಗೆ, ಕತ್ತಲಲ್ಲಿ Nagative Black Hole ಕೃಷ್ಣವಿವರ ಕಾಣುತ್ತಿರುವುದು, ಅವರ ಪ್ರಜ್ಞೆಯ ಪ್ರಕಾಶದಲ್ಲಿ; ಒಳ ತಿಳಿ(ವಿನ) ಬೆಳಕಿನ ಮೂಲಕ ತಾನೇ? ಈ ಸಂದರ್ಭದಲ್ಲಿ ಅನುಭಾವಿ ಕನಕನ ನುಡಿ ನೆನಪಿಗೆ ಬರುತ್ತದೆ. 'ಬಯಲು ಆಲಯದೊಳಗೊ? ಅಥವಾ ಆಲಯವು ಬಯಲೊಳಗೊ? ಇಲ್ಲವೆ, ಆತನ ಕ್ಷಮೆಕೋರಿ 'ಇವೆರಡೂ ಮಾನವನ ಪ್ರಜ್ಞೆಯೊಳಗೊ?' ಎಂದು ಹೇಳಲು ಅವಕಾಶವಿದೆ. ಅಭಿಜಾತ ಭಾಷೆ, ಮತ್ತು ಸಂಸ್ಕೃತಿ ಇವೆರಡರೊಳಗಿನ ಅನ್ಯೋನ್ಯವು, ಒಂದು ವಿಶ್ವನಿಯಮವೇ ಆಗಿದೆ. ವಿಶ್ವಸ್ಥ 'ಅಭಿದ್ಧಾತ್ ತತ್ವ'ದ ಅಸ್ತಿತ್ವದಿಂದಾಗಿ ಅಭಾವಕ್ಕೂ ಹೀಗೆ ಇಂಬು ದೊರೆಯುತ್ತದೆ. ಸಂಗೀತದಲ್ಲಿ, ತಾಳ ಉಂಟು; ಹುಸಿತಾಳಕ್ಕೂ ಸ್ಥಾನವು ವಿಧಾಯಕ ತಾಳದಿಂದಾಗಿ ಉಂಟು, ನಿಜವೆ? ಆದರೆ ಹುಸಿತಾಳದಿಂದ ಸಂಗೀತ ಪ್ರಾರಂಭವಾಗುವುದಿಲ್ಲ.

ಜ್ಞಾನದ ನಿಜಸ್ವರೂಪ

ಈ ಸಮೀಕ್ಷೆಯಲ್ಲಿ ಮನುಜ: ಮಾನವನ ಜೀವನಾನುಭವದ ಎಂದರೆ, ಇವನಿಗೆ ಲಭಿಸುವ ಜ್ಞಾನದ, ನಿಜಸ್ವರೂಪವು ಏನು ಎಂತಹದು, ಎಂಬುದು ಮೂಲಭೂತ ಪ್ರಶ್ನೆಯಾಗಿದೆ. ಐನ್‌ಸ್ಟನ್‌ರ ಚರಿತ್ರೆಯಲ್ಲಿ ಹೇಳಿದ ಒಂದು ಮಾತು, ಈ ಸಂದರ್ಭದಲ್ಲಿ ಮೌಲಿಕ ಮಹತ್ತ್ವದ್ದು ಎಂದು ಎನಿಸದೆ ಇರಲಾರದು. ಮಾನವನಿಗೆ ಲಭಿಸುವ ಜ್ಞಾನದ 'ಬಾಗಿಲು' ಎರಡು- ಕಿವಿ (ನಾದಶಬ್ದ) ನೇತ್ರ (ಪ್ರಕಾಶ); ಐನ್‌ಸ್ಟನ್ ಅವರು, ತಮ್ಮ ಪಾಡಿಗೆ ಕಿವಿಗಿಂತ, ನೇತ್ರದ ಮೂಲಕ ಲಭಿಸುವ ಜ್ಞಾನವೇ ಶ್ರೇಷ್ಠವಾಗಿದೆ, ಎಂದು ನಿಃಸಂದಿಗ್ಧ ಶಬ್ದಗಳಲ್ಲಿ ಹೇಳಿದ್ದು ನಮೂದಾಗಿದೆ. ಭಾರತೀಯ ಪುರಾತನ ಪರಂಪರೆಯಲ್ಲಿ, ಈ ಅನುಭವವೇ ಇನ್ನೊಂದು ಬಗೆಯಿಂದ ನಮೂದು ಇದೆ. ಮನು: ವೈವಸ್ವತ ಅಥವಾ ವಿಶ್ವಾಮಿತ್ರ; ಸವಿತೃ ಉಪಾಸಕನ ಸಂಪ್ರದಾಯದ ಭಾಷೆಗೆ 'ವಾಕ್' ಎಂಬ ಹೆಸರು ಮೊದಲು ಇತ್ತು. ಆ ಮೇಲೆ ವಾಣಃ ವಾಣೀ=ಗೀಃ ವಾಣ=ವಾಣಿ ಎಂಬ ಹೆಸರು ರೂಢಿಗೆ ಬಂದಿದೆ! ಇದು ನರ(ಳ)ಸ್ವರೂಪೀ ಮರುತರ 'ಬಾಣ'ದ ನಾದವಂತೆ! ನರಮರುತರು ವಾಣಿಯ ನಲ್ಲರು.

ವ್ಯಾಕರಣದಲ್ಲಿಯೂ ಭಾಷೆಯ ಸ್ವರೂಪದ ಬಗೆಗಿನ ಭೂಮಿಕೆಯ ಮೇಲೆ, ವಿಶ್ವಾಮಿತ್ರ, ವಸಿಷ್ಠ ಸಂಪ್ರದಾಯದ ಪ್ರಭಾವವನ್ನು ಕಾಣಬಹುದಾಗಿದೆ. ವಿಶ್ವಾಮಿತ್ರ ಸಂಪ್ರದಾಯದ ಭಾಷೆ ಇದು ಸವಿತೃದೇವನಿಂದ ಪ್ರಚೋದಿತವಿದೆ. ಆದರೆ ವಸಿಷ್ಠ ದಕ್ಷಿಣ-ಕಪರ್ದನು 'ಧೇನು' ರೂಪ ವಾಕ್‌ಶಕ್ತಿಯನ್ನು ಆರಾಧಿಸುತ್ತಿದ್ದನು. ದುರ್ಗಾಕಾಲೀ ಮೂಕಾಂಬೆ ಆಗಿದ್ದಾಳೆ.[೩] ಧೇನು ವೃಷಭಿ ಬಸವಿ! (೦) ಗೀರ್ವಾಣವಾಣಿ ಎಂಬುದು ದಕ್ಷಿಣಕಪರ್ದ ವಸಿಷ್ಠನ ಅದಿತಿ : ಆದಿತ್ಯ ಸಂಪ್ರದಾಯದಿಂದಾಗಿ ವೇದಕಾಲದಲ್ಲಿಯೇ ಈ ಭಾಷೆಗೆ ಕಾಣಿಸಿಕೊಂಡ ಇನ್ನೊಂದು ಹೆಸರು. ವಾಕ್ ಇದು ಪ್ರಜ್ಞಾನೇತ್ರಕ್ಕೆ ಕಂಡ ಭಾಷೆ ಇರುವಂತೆ ವಾಣವಾಣಿಯೇ ಕಿವಿಯ ಮೂಲಕ : ಅಂತರ್ವಾಣಿಯ ಅಂತಃಪ್ರವೃತ್ತಿಯ ಜ್ಞಾನಸೂಚಕವೇ ಆಗುತ್ತದೆ.

ಮನು:ವೈವಸ್ವತ ಪ್ರಕಾಶ ತತ್ತ್ವದ ಅಥವಾ ಸವಿತೃ ಉಪಾಸಕ ವಿಶ್ವಾಮಿತ್ರನ ಧೀಶಕ್ತಿಯ ಹಿರಿಮೆಯ ಬಗೆಗೆ ಇರುವ ಉಲ್ಲೇಖವು ಮನನೀಯವಾಗಿದೆ. 'ವಿಶ್ವಾಮಿತ್ರಸ್ಯ ಬ್ರಹ್ಮೇದಂ ರಕ್ಷತಿಂ ಭಾರತಂ ಜನಂ'[೪] ಈ ಅಭೀದ್ಧಾತ್ ಪ್ರಕಾಶತತ್ತ್ವದ ಅನುಭಾವವು ನೇತ್ರದ ಮೂಲಕವಾದದ್ದು. ಓಂಕಾರರೂಪ ಪ್ರಣವೋಪಾಸನ ಪ್ರಾಣೋಪಾಸನೆಯು, ಲಿಂಗಾಂಗ ಸಾಮರಸ್ಯದ 'ತತ್' ಮಯತೆಯ 'ನಾದ'ದ ಹಿನ್ನೆಲೆಯಲ್ಲಿ ಕೇಳಬರುವ, ಹಿರಾಕ್ಲಿಟಸ್‌ನು ಹೇಳುವ Logas ರೂಪ ಜ್ಞಾನವು ಇದು. ಅಂತರಿಕ್ಷಸ್ಥ ಈ ನಾದ (ನಿಃಶ್ವಸಿತ) ಹೊರಬರುವುದು ಎಲ್ಲಿಂದ? ದೇವಿಯ ಕುಂಡ: ಮಂಡಲದೊಳಗಿಂದ. ಆದಿಪ್ರಕೃತಿ (Void, Vacuum) ಇದರೊಳಗಿಂದ ಹೊರಬರುವ ಅಸು: (ಪ್ರಾಣ) ತತ್ತ್ವವೇ ಈ ಭಾಷೆ ಎಂಬ ಶ್ರದ್ಧೆ, ದಕ್ಷಿಣ ಕಪರ್ದ ವಸಿಷ್ಠಪಂಥೀಯರದು- ಈ ಸಂಪ್ರದಾಯದ ವೇದಕಾಲೀನ ಮೂಲ ಸಮಯಾಚಾರಗಳು ಕ್ರಮವಾಗಿ ಮಾರ್ಪಡುತ್ತವೆ. ಆದರೂ 'ನಿನ್ನೆ'ಗಳೊಳಗಿನ ವೈಚಾರಿಕ ಆಕೃತಿ ತೀರ ಇಲ್ಲವಾಗುವುದಿಲ್ಲ. ಈ ಸಾಂಕೇತಿಕತೆ ಇಂದಿನ ವರೆಗೂ ಉಳಿದು ಬಂದಿದೆ. ಏನೆಲ್ಲ ದಿವ್ಯಾಧ್ಯಾತ್ಮಗಳ 'ವಾಕ್' ಉದ್ಗಮದ ಭೂಮಿಯ ಸಮಾನವೇ ಇದೆ. ಅವರೆ ಇದನ್ನು ತಿದ್ದಿಕೊಂಡು ಹೇಳುವಲ್ಲಿ ಕಣ್ಕಟ್ಟಿನ ಪ್ರಯತ್ನಗಳು ಆಗಿವೆ. ಜೈನಪರಂಪರೆಯ 'ಕೇಶಿರಾಜ'ನ ಶಬ್ದಮಣಿದರ್ಪಣದಲ್ಲಿ ಬರುವ ಒಂದು ನಿರ್ದೇಶವು ಇಂದು ಸಂದಿಗ್ಧವಿರುತ್ತದೆ. ನಾಭಿರಾಜ: 'ಕೇಶಿರಾಜ' ಈ ಹೆಸರು ಕಪರ್ದಿ ಪಂಥೀಯರ ವೈಶಿಷ್ಟ್ಯ. ಈ ವೇದದಲ್ಲಿ ಕೇಶಿಮುನಿ ನಿತ್ಯ ಮೌನೇಯ 'ಶೃಂಗಿ'ಯು ಇದ್ದಾನೆ. "ಜೀವನಿಷ್ಟದಿಂ ಅನುಕೂಲ ಪವನನಿಂ (ವೇದದ ಮರುತನಿಂ) ನಾಭಿಮೂಲದೊಳ್ ಕಹಳೆಯ ಪಾಂಗಿನವೋಲ್ ಶಬ್ದ-ದ್ರವ್ಯಂ ಜನಿಯಿಸುಗುಂ; ಇದರ ಕಾರ್ಯಂ ಶ್ವೇತಂ!"

ಈ ಪವನ=ಗಾಳಿ=ಮರುತ. ಇದು 'ಮಾತರಿಶ್ವನ್' ಟೊಳ್ಳಿನೊಳಗಿಂದ ಬರುವ ಅಸು(ರನ) ಸೂಚಕವಿದೆ. ಈ ವ್ಯಾಕರಣಕಾರನು ಹೇಳುವ ಈ 'ನಾಭಿಮೂಲ' ಎಂದರೆ ಯಾವುದು? ಇದರೊಳಗಿಂದ ಜನಿಸುವ 'ಶಬ್ದ-ದ್ರವ್ಯ' ಎಂಬುದು ಆರ್ದ್ರವೋ ನಿರಾರ್ದ್ರವೊ? ಇದನ್ನು 'ಕೇಶಿರಾಜನೇ' ಹೇಳಬಲ್ಲನು. ಇಲ್ಲಿಯ 'ನಾಭಿ' (ಅದಿತಿ ಅಮೃತರಸದ ಹೊಂಡ) ಇದರೊಡನೆ ಹೋಲಿಸಿ ಹೊಂದಿಸಿ ನೋಡಿ.

ಇನ್ನು ವೈದಿಕರೆಂಬುವರ ಪರಂಪರೆ ನೋಡಿಕೊಳ್ಳಿ. ಪಾಣಿನೀಮುನಿ ಸಂಪ್ರದಾಯದ 'ಶಿಕ್ಷಾ' ಪಾಠದಲ್ಲಿ ಬರುವ ಒಂದು ಉಲ್ಲೇಖವು ವಿಚಾರಾರ್ಹವಿದೆ. 'ಮಾರುತಃ'ತು ಉರಸಿ ಚರನ್ ಮಂದ್ರಂ ಜನಯತಿ ಸ್ವರಂ'. ಈ 'ಮಂದ್ರ'ವು ಕೇಶಿರಾಜನಲ್ಲಿ 'ಕಹಳೆ'ನಾದ ಆಗಿರುವಂತೆ ಕಾಣುತ್ತದೆ. ಪಾಣಿನಿಯ ಶಿಕ್ಷಾಪಾಠದ ಈ ಉಲ್ಲೇಖದ 'ಉರಸ್' ಮತ್ತು ಕೇಶಿರಾಜನ 'ನಾಭಿಮೂಲ' ಇವೆರಡೂ ಸಮಾನವೇ? ಅಥವಾ ಬೇರೆಯೇ? ನಾಭಿರೂಪ [೦] ವಾಣೀದೇವಿಯ ಒಳಗಿಂದ ಹೊರಬರುವ ಉಸಿರು-ಗಾಳಿ. ಈ ಗಾಳಿಯನ್ನು ಪಾಣಿನಿಯು 'ಮಾರುತ' ಎಂದಿರುವಲ್ಲಿ, ವೇದಕಾಲೀನ ಸಂಕೇತದ ಪ್ರಯೋಜನ ಪಡೆದಿದ್ದಾನೆ. ಈ ಮರುತರು ಕಬಂಧ; ವಾಣ(ಬಾಣ) 'pipe-ನಾಳಿ ಸ್ವರೂಪರು! ಈ 'ಮಾರುತ' (ಗಾಳಿದೇವ) 'ನರಳ'-ಕ-ಪಿ, ವಾ-ನರ ರೂಪನು! ಈ ವಿಚಾರವು ಈ ಮೊದಲು ಬಂದಿದೆ. ಭಾರತೀಯ ಪೂರ್ವಪರಂಪರೆಯಲ್ಲಿ ಹುದುಗಿರುವ ಪ್ರಮಾಣಗಳಿಂದ ಮಾರುತ (ಮಾರುತಿ) - 'ಲಾಂಗಲ'ನು ಎಂಬುದು ದೃಢಪಟ್ಟಿದೆ. ಈ ಮಾರುತ(ಗಾಳಿದೇವರು) ಲಾಂಗಲನು, ವೇದದಲ್ಲಿ ಸರಸ್ವತೀದೇವಿಯ ಅಚ್ಚುಮೆಚ್ಚಿನ ನಲ್ಲನು. ಇನ್ನೊಬ್ಬ ದೇವಿಯು, ಈ ರುದ್ರಿಯ ಮರುತರು ಇವರನ್ನು ತನ್ನ ನಲ್ಲರೆನ್ನುತ್ತಾಳೆ. ಈ ವಾಕ್ ಹೆಸರಿನ ಅಂಭೃಣೆ, ಆ ನೀರೆ ಇದನ್ನು ಸಾರಿ ಹೇಳುತ್ತಾಳೆ. 'ಅಹಂ ರುದ್ರೇಭಿಃ ಮರುತ್ಯೈಃ ಸಹಚರಾಮಿ, ಇಲ್ಲಿ ಆದಿತ್ಯರ ಉಲ್ಲೇಖವೂ ಇದೆ. ಆದರೆ, ಮರುತ ಮತ್ತು ಆದಿತ್ಯ, ಬೇರೆಯಲ್ಲ. ಇದು ಕಣ್ಕಟ್ಟು. ಇಬ್ಬರೂ ಆದಿಶಕ್ತಿ. ಕುಮಾರೀ ಮಾತೆ ಅದಿತಿಪುತ್ರರೆಂದೇ ಋಗ್ವೇದ ಹೇಳಿದೆ. ಆದರು, ಬಚ್ಚಿಟ್ಟಿದೆ.

ಈ ಅಂಭೃಣೆ ನೀರೆ, ರುದ್ರನ 'ಬಾಣ'ಕ್ಕಾಗಿ ತನ್ನ 'ಬಿಲ್ಲಿನ' ಹೆದೆ ಹಿಗ್ಗಿಸಿ ಸಜ್ಜಾಗಿದ್ದಾಳೆ. 'ಅಹಂ ರುದ್ರಾಯ ಧನುಃ ಆತನೋಮಿ', ಯಾರನ್ನು ಕೊಲ್ಲಲು? 'ಬ್ರಹ್ಮದ್ವಿಷೇ ಹಂತವೈ ಶರವೇ'[೨೦] ಈ ನೀರೆಯು ಸಂಹರಿಸಬೇಕೆಂದಿರುವ ಈ 'ಬ್ರಹ್ಮದ್ವಿಷ'ರು ಯಾರು ಇರಬಲ್ಲರು? ದಕ್ಷಿಣ ಕಪರ್ದ ವಸಿಷ್ಠನ 'ಬ್ರಹ್ಮ'ವನ್ನು ದ್ವೇಷ ಮಾಡುತ್ತಿರಬಹುದಾದವರು ಯಾರು? ಮನು ವೈವಸ್ವತ ಅಥವಾ ವಿಶ್ವಾಮಿತ್ರನ ಸವಿತೃ ಉಪಾಸಕರಲ್ಲದೆ ಬೇರೆ ಯಾರೂ ಇರಬಲ್ಲರು? ಈ ಸೂಕ್ತದ ನಿರ್ದೇಶವು ಐತಿಹಾಸಿಕ ದೃಷ್ಟಿಯಿಂದ ಮಹತ್ವದ್ದಾಗುತ್ತದೆ. ವಿಶ್ವಾಮಿತ್ರ ಮತ್ತು ವಸಿಷ್ಠರಲ್ಲಿ ಯಾರು, ಯಾರನ್ನು ದ್ವೇಷಿಸುತ್ತಿದ್ದರು? ಇದನ್ನು ನಿರ್ಧರಿಸಲು ಈ ಉಲ್ಲೇಖವು ಉಪಕಾರಕವಾಗಲಿದೆ. 'ಮಾತಾ ರುದ್ರಾಣಾಂ' ಎಂಬ ಸ್ತೋತ್ರದ ಅದಿತಿ, ಈ ವೇದದಲ್ಲಿ ರುದ್ರನ ಸಂಗಾತಿ. ಆದರೆ, ಈಕೆಯನ್ನು ವಿಷ್ಣುಪತ್ನಿಯನ್ನಾಗಿ ಕಲ್ಪಿಸಲಾಗುತ್ತದೆ, ಯಜುರ್ವೇದದಲ್ಲಿ, 'ಮರುತಾಂ ಪಿತಾ' ಎಂಬ ರುದ್ರನ ಸ್ತೋತ್ರದ ಭಾಷ್ಯದಲ್ಲಿ ಸಾಯಣರು ಕೊಟ್ಟಿರುವ ಸಾಂಪ್ರದಾಯಕ ಕತೆಯಲ್ಲಿ ಈ ಕಣ್ಕಟ್ಟು ಮೋಸ ಬಯಲಿಗೆ ಬರುತ್ತದೆ. ಮರುತರನ್ನು ದೈತ್ಯರೆಂದು ಸೂಚಿಸಲು ಈ ಕಥೆ ರಚಿತವಾಗಿದೆ. (ಅ)ದಿತಿಯು ಇಂದ್ರಹನನ ಸಮರ್ಥಪುತ್ರನನ್ನು ಬಯಸಿ ತಪಸ್ಸು ಮಾಡುತ್ತಾಳಂತೆ; ಈ 'ಬಯಕೆ'ಯ (ಅ)ದಿತಿಯು ಬಸುರಿ ಆಗುತ್ತಾಳೆ. (ಸೌರ) ಇಂದ್ರನಿಗೆ ತನ್ನ ವಿರುದ್ಧ ನಡೆದ ಒಳಸಂಚು ಗೊತ್ತಾಗುತ್ತದೆ. ಸೂಕ್ಷ್ಮರೂಪದಲ್ಲಿ ಬಂದು ಯೋನಿದ್ವಾರದಿಂದ (ಅ)ದಿತಿಯಲ್ಲಿ ಪ್ರವೇಶಿಸಿ, ಆ ಮರುತರ ಗರ್ಭವನ್ನು ೭x೭ ತುಂಡು ಮಾಡುತ್ತಾನೆ. ಹೀಗೆ ಈ ಮರುತರು ಎಂಬ ಗಾಳಿದೇವರು ದ್ವಿತೀಯ ಪುತ್ರರು, ದೈತ್ಯರು, ಈ ಅಸುರರು ಆಗಿ ಮಾರ್ಪಡುತ್ತಾರೆ.

ರುದ್ರನಿಂದ ಸೋಡಚೀಟೀ ಪಡೆದ ಅದಿತಿಗೆ ಆಗುವ ಪುತ್ರರು, ಆದಿತ್ಯರು! ಇದು ಇನ್ನೊಂದು ವರ್ಗದ ದೈವತ ಎಂಬ ಭ್ರಾಂತಿಯನ್ನು ಇಂದು ಕಲ್ಪಿಸಿದ್ದಾಗಿದೆ. ಈ ಆದಿತ್ಯರು 'ವೃಕ್ಷ' ರೂಪರು ಮರುತರಂತೆಯೇ! ಈ ಬೃಹಲ್ಲಾಂಗನ=ನಳ ಸ್ವರೂಪರ ನರ(ಳ) ರೂಪ ಮರುತರೂ ಮತ್ತು ಆದಿತ್ಯರೂ ಬೇರೆ ಬೇರೆಯಲ್ಲ. ತಾರತಮ್ಯದಲ್ಲಿ ಆದಿತ್ಯ, ವಿಷ್ಣು, ಕೃಷ್ಣ, ರಾಮಚಂದ್ರ ಇವರು ಮೇಲಣ ಜಾತಿಯವರು. ಮರುತ (ಮಾರುತಿ) ಸೇವಕನ ಜಾತಿ! ರಾಮಚಂದ್ರನ ವಾರಸ ದಾನರ! ಮಾರುತ! ಆದರೆ, ಗಿಲ್ಬರ್ಟಮರೆ, ಗ್ರೀಕ್‌ಸಂಸ್ಕೃತಿ ಸಂಶೋಧನದಲ್ಲಿ ಕಂಡ ರಹಸ್ಯವು ಈ ದೇವತಾಸ್ವರೂಪ ಗ್ರಹಣಕ್ಕೂ ಉಪಕಾರಕವಿದೆ. 'ವಾಹನ' ಸ್ವರೂಪ ಶಕ್ತಿಸಂಕೇತ ಹಾಗೂ ಆರೋಹಣ ಮಾಡುವ ದೈವತ ಇವೆರಡೂ ಮೂಲದಲ್ಲಿ ಒಂದೇ ಇರುತ್ತವೆ. 'ಶಿವರುದ್ರನ ವಾಹನ ನಂದಿ'

'ಗರುಡ ವಾಹನ ವಿಷ್ಣು' ಇದು Tautology ಸಮಾನಾರ್ಥದ ಜೋಡುನುಡಿ. ಇದನ್ನು ಹೇಳುವ ಕಾರಣವೇನೆಂದರೆ ಮರುತರು ಆದಿತ್ಯರು ಎಂಬ ಎರಡುವರ್ಗ ಸೃಷ್ಟಿಸಿದ್ದು ಕಣ್ಕಟ್ಟು ಮೋಸ! ಸೌರ=ಪ್ರಕಾಶತತ್ವದ ವಿವಸ್ವನ್ ಮನುಪ್ರಣೀತ ಮಾನವ ಸಂಪ್ರದಾಯವನ್ನು ನಷ್ಟಪಡಿಸುವ ತಂತ್ರ, ಮಂತ್ರ ಇಲ್ಲಿದೆ. ವಾಣಿ (ವಾಕ್-ಜ್ಞಾನ) ಹೇಗೆ ಹುಟ್ಟಿವೆ ಎಂಬುದನ್ನು ಕುರಿತು ದಿವ್ಯಾಧ್ಯಾತ್ಮಪಂಥೀಯ ತಾತ್ವಿಕ ಹಿನ್ನೆಲೆಯು ಇಲ್ಲಿ ಪ್ರಸ್ತುತವಿದೆ. ಮನುವಿನ ಮಾನವಭಾಷೆ ವಾಕ್ ಹೆಸರಿನದು. ನರ ಸಂಪ್ರದಾಯದ ಭಾಷೆ ವಾಣ-ವಾಣೀ ಹೆಸರಿನದು, ದಿವ್ಯಾಧ್ಯಾತ್ಮ ಪಂಥೀಯ ತಾತ್ವಿಕ ಹಿನ್ನೆಲೆಯು ಇಲ್ಲಿ ಪ್ರಸ್ತುತವಿದೆ. ಈ ನರ=ಕಬಂಧ್ಯ ರೂಪ (ಲಿಂಗ) ಶಕ್ತಿಯೇ 'ಉಸಿರೇ' ವಾಣ>ವಾಣಿ, ಉಸಿರು ನಾದ ಆಗುತ್ತದೆ! ದಕ್ಷಿಣ ಕಪರ್ದ ವಸಿಷ್ಠ ಹಾಗು 'ಒರ್ಫಿಕ್' ಪಂಥೀಯ ಪೈಥಾಗೋರಾಸ್ ಸಂಪ್ರದಾಯದ Daemon Breath: ಮೂಲ ಭೂಮಿಕೆಯು ಇವೆರಡೂ ಜ್ಞಾನೋಪಲಬ್ಧಿಯ ವಿಷಯದಲ್ಲಿ ಸಮಾನವೇ ಇವೆ! ಲಿಂಗಾಂಗ ಸಾಮರಸ್ಯದಲ್ಲಿ ದೊರೆವ ದಿವ್ಯಾನುಭವವು ವಾಣ>ವಾಣೀ (ಜ್ಞಾನ) ಪ್ರಚೋದಕವಾಗಿದೆ ಎಂಬೀ ಬಗೆಯ ವಿವರಣೆಯ ನೇರ ಪ್ರಮಾಣಗಳು, ಭಾರತೀಯ ಹಾಗೂ ಗ್ರೀಕ್ ಪರಂಪರೆಯಲ್ಲಿ ಬೆಳಕಿಗೆ ಬಂದಿವೆ. ಇದು ಭಾರತೀಯ ನರಸಂಪ್ರದಾಯವಿರಲಿ, ಗ್ರೀಕ್‌ಪಂಥವಿರಲಿ ಈ ಸಂಪ್ರದಾಯದ ಭಾಷೆಯು ಮಾನವ ಭಾಷೆಯಲ್ಲ. ವ್ಯಾಲ್ಲಾಸನ ಅಂದಾಜಿನ ಈ missing link; Creature ಮೂಲದಲ್ಲಿ ಪಶುಪಾತಳಿಯದೇ ಇತ್ತೆಂಬುದು ಇಲ್ಲಿ ನಿಶ್ಚಿತವಾಗಿ ಹೊರಮೂಡುತ್ತದೆ. ಮತ್ತು 'ಯತ್ ವಾಕ್ ಪಶವಃ ವದಂತಿ' ಎಂಬ ಈ ಪಶುವಾಣಿ, ನರಸಂಪ್ರದಾಯದ ಅಚ್ಚುಮೆಚ್ಚಿನ ಭಾಷೆ=ಮೈಯಲ್ಲಿ ಗಾಳಿ ಸೇರಿ ಆಗುವ ಜ್ಞಾನಮಾಧ್ಯಮವು ಇದು. ಮಧ್ಯಲೋಕದ ಭಾಷೆಯು ಮಧ್ಯಮಾ, ಪಾನ್ ಇದು.

ಗ್ರೀಕಿನಲ್ಲಿ ಮೈಯಲ್ಲಿ 'ಆವೇಶ'ವಾಗಿ ಕುಮಾರಿಯರ ಮೂಲಕ ಡೆಲ್ಫಿ ಮೊದಲಾದ ಕಡೆಗಳಲ್ಲಿ ದೇಹಾರ (oracle) ಹೇಳುವುದು ನಡೆಯುತ್ತಿತ್ತು, ಪ್ರಾಣೋಪಾಸನ ಪ್ರಣವೋಪಾಸನೆಯ ಈ 'ಅಸು' (ಪ್ರಾಣ) ವಿಶ್ವವ್ಯಾಪಿಯಾಗಿದೆ. ಈ 'ಅಸುರ' ಸಾಮರ್ಥ್ಯವು ಅಗಾಧ ಹಾಗೂ ದಿವ್ಯವಾಗಿದೆ. ಈ ಬಗೆಯ ಆವೇಶದ ಮೂಲಕ ಪ್ರಾಪ್ತವಾಗುವ ಜ್ಞಾನವು ಸೌರ-ಪ್ರಜ್ಞಾಪ್ರಕಾಶ ಪಾತಳಿಯ ಪ್ರೇರಣೆಯಿಂದ ಲಭಿಸುವ ಜ್ಞಾನಕ್ಕಿಂತಲೂ ಮಿಗಿಲಾದದ್ದು ಎಂಬ ಶ್ರದ್ಧೆಯು, ಭಾರತದಂತೆ ಗ್ರೀಕಿನಲ್ಲಿಯೂ ಬೇರೂರಿತ್ತು. ಪೈಥಾಗೋರಾಸನಂತಹ ಪ್ರಾಜ್ಞ ಮೇಧಾವೀ ಮಹಾಪುರುಷನಿಂದ ಈ ಮಹಾನ್ (?) ಕಾಯಕ ಆಗಿದೆ! ಭಾರತೀಯ ಪರಂಪರೆಯಲ್ಲಿ 'ಮಹತಃ ಭೂತಸ್ಯ ನಿಃಶ್ವತಂ ಇದು ವೇದದಲ್ಲಿ ಈ ವಾಣಿಯು 'ಪಶವಃ ವದಂತಿ' ಎಂದು ಸ್ಪಷ್ಟ ನಿರ್ದೇಶನವಿದೆ. ಗ್ರೀಕ್ ಪರಂಪರೆಯಲ್ಲಿ Daemon ದೈತ್ಯಶಕ್ತಿ ಆವೇಶ ಎಂದು ಹೇಳಲಾಗಿದೆ. ಪಾಶ್ಚಾತ್ಯ ಸಂಸ್ಕೃತಿಗೆ ಗ್ರೀಕ್ (ರೋಮನ್) ಪರಂಪರೆಯೇ ಮೂಲಾಧಾರವಿದೆ. ಕ್ರೈಸ್ತ ಪಂಥೀಯ 'Revelation' ಈ ಬಗೆಯ ವಾಣಿಯೇ ಆಗಿದೆ. ಮಲ್ಲಯ್ಯನ ಕಾರಣಿಕದ ಭಾಷಾಪ್ರಕಾರವೂ ಇದೇ ಸರಿ.

ಭಾರತೀಯ ಸಂಸ್ಕೃತಿಯ ಸಂದರ್ಭದಲ್ಲಿ 'ಧೀ' ಪ್ರಕಾಶತತ್ತ್ವದ ಸವಿತೃ ದೈವತೋಪಾಸಕ ವಿಶ್ವಾಮಿತ್ರನ ಸಂಪ್ರದಾಯವು ಹಿಂದೆ ಬೀಳುತ್ತದೆ. ವಿಶ್ವಾಮಿತ್ರನು ಖಲನಾಯಕನೆಂಬ ಕಥೆ ಪ್ರಚಾರಕ್ಕೆ ಬರುತ್ತದೆ. ಕಾಮಧೇನುವಿನ ಕುಮಾರಿ 'ನಂದಿನೀ' ಎಂಬ 'ವೃಷಭೀ'>ಬಸವಿ 'ಮೂಕಾಂಬೆ'ಯನ್ನು ವಸಿಷ್ಠನು ಮೈಯಲ್ಲಿ ಆವೇಶವಾಗುವ 'ಮಾಧ್ಯಮಾ ವಾಕ್' (ಸರಸ್ವತಿ) ಎಂದು ಯೋಜಿಸುತ್ತಿದ್ದನು. 'ಮಧ್ಯಮಾ ವಾಕ್' ಈ ಪರಿಭಾಷೆಯು ಗುಹ್ಯಾರ್ಥ-ಯುಕ್ತವಿದೆ. ಈ 'ವಾಕ್ಕಿನ' ಮಾತಾಡುವ ಬಾಯಿ ದೇಹದ ಮಧ್ಯದಲ್ಲಿ ಇದೆ! ದಕ್ಷಿಣ ಕಪರ್ದ ವಸಿಷ್ಠನ ಸಂಪ್ರದಾಯದ ಜ್ಞಾನೋಪಾಸನೆಯ ಲಿಂಗಾಂಗ ಯೋಗದ ವಾಣ>ವಾಣೀ, ಮಂಡಲ ಉಪಾಸನೆಯ ನಡೆವಳಿ ಶಿಷ್ಟಸಮ್ಮತವಾಗಿ ಪ್ರಭಾವಶಾಲಿಯಾಗಿ ಬೆಳೆಯುತ್ತದೆ. 'ಸವಿತೃ' ಪುಲ್ಲಿಂಗೀ ದೇವನನ್ನು ಹೆಣ್ಣು ಮಾಡಿ ಸಾವಿತ್ರೀ-ಗಾಯತ್ರೀ ಈ ಪಶು [O] ರೂಪದಲ್ಲಿ ಪೂಜಿಸುವ ನೂತನ ಸಂಪ್ರದಾಯವು ತಲೆಯೆತ್ತಿತು. ಯೋಗಿವರ್ಯ ಶ್ರೀ ಅರವಿಂದರು ಬರೆದ 'ಸಾವಿತ್ರೀ' ಮಹಾಕಾವ್ಯದ ಮೂಲಮಾದರಿ ವಸಿಷ್ಠ ಸಂಪ್ರದಾಯದಲ್ಲಿ ಇದೆ.

ಈ ಆವೇಶ Inspiration ಎಂಬ ನೂತನ ರೂಪ ತಾಳಿರುವ ಈ ದೈತ್ಯ=ಅಸುರ Daemon ಮೊದಲ ಹಂತದಲ್ಲಿ ಸ-ರಸ=ಆನಂದ ಬ್ರಹ್ಮ=ರಸೋ ವೈಸಃ ಎಂಬ ರೂಪದ್ದಾಗಿತ್ತು. ಬಳಿಕ ಇದು ಸಾಂಕೇತಿಕ ಉಪಾಸನೆ ಆಯ್ತು. ಈ 'ವಾಕ್' (ಅಷ್ಟಮಿ-ದುರ್ಗಾ) ಪ್ರೇರಣೆ ಈ ಬಗೆಯಲ್ಲಿ ಮಾನವಧರ್ಮ ಸಂಸ್ಕೃತಿಯನ್ನು ಸ್ವರ್ ಪಾತಳಿಯಿಂದ ಕೆಳಗೆ, ಮರಳಿ ಭೌತ (ರೇತ) ಪಾತಳಿಯ ಮೇಲೆ ತಂದು ನಿಲ್ಲಿಸಿದೆ. ಹೀಗೆ ಅಸುರ=ದೈತ್ಯ ಮಾಯಾಶಕ್ತಿಗೆ ಜಯವಾಗಿದೆ. ಇದು ದಕ್ಷಿಣಕಪರ್ದ ವಸಿಷ್ಠನ-(ಲಿಂಗ) ಶಕ್ತಿಯ ಗೆಲವು ಮತ್ತು ಪ್ರಕಾಶ ತತ್ತ್ವದ ಧೀ ಪ್ರಚೋದಕ ಸವಿತೃದೇವನ ಉಪಾಸಕ ವಿಶ್ವಮಿತ್ರ>ವಿಶ್ವಾಮಿತ್ರನ ಸೋಲು ಆಗಿದೆ. ಈವರೆಗೆ ವಿವರಿಸಿರುವ ಈ ಬಗೆಯ ಕಣ್ಕಟ್ಟಿನಿಂದಾಗಿ! ಆದರೆ, ಜೀವನ ವಿಶ್ವದಲ್ಲಿ ಆಗಿರುವ ಪ್ರಜ್ಞಾ ಪ್ರಕಾಶರೂಪ (ಸವಿತೃ=ವಿವಸ್ವನ್) ದೇವನೇ ಅಸ್ತಂಗತನಾಗದೆ 'ಮಾನವ'ಧರ್ಮ ನಷ್ಟವಾಗಲಾರದು. ಪ್ರಾದುರ್ಭಾವ ರೂಪೀ ವಿಕಾಸ ಕ್ರಮದಲ್ಲಿ ಆಗಿರುವ ಈ 'ಧೀ' ರೂಪೀ ಪ್ರಕಾಶತತ್ತ್ವವು ಅಸ್ತಂಗತವಾಗಲು ಶಕ್ಯವಿಲ್ಲ. ಆದರೆ, ಈ ಪ್ರಕಾಶ ತತ್ತ್ವವನ್ನು 'ಆದಿತ್ಯ' ಮಾರ್ತಾಂಡ ಹೆಸರಿನಲ್ಲಿ ನಷ್ಟಪಡಿಸಲು ಆಗಿರುವ ರಾತ್ರಸಮಾಯಾಚಾರಿಗಳು ಇವು ಅಂದು ಬೀರಿದ ಪ್ರಭಾವ ಗ್ರಹಿಸಿಕೊಳ್ಳಲು ಉಪಕಾರವಿರುವ ಲೋಕ 'ಜನಿತ್ರಿ' ಮಂಡಲದ ಈ ನಿರ್ದೇಶ ಸಮೀಕ್ಷಾರ್ಹವಿದೆ.

'ಅಮೃತಸ್ಯ' ನಾಭಿರೂಪ ಈ ಧೇನು-ಗೋವನ್ನು ವಧಿಸಲಾಗದು, ಎಂದು ವೇದ ಹೇಳಿದೆ. 'ವಾಚಂ ಧೇನುಂ ಉಪಾಸೀತ' ಎಂದು ಬೃಹದಾರಣ್ಯಕವು ವಿಧಿಸಿದೆ[೬] 'ಧೇನು'=ಪಶು ಎಂಬ ಈ ಪರಿಭಾಷೆ ಮೋಸ ತರುತ್ತದೆ. ಇಲ್ಲಿ ನಿಜವಾಗಿ ಅಭಿಪ್ರೇತವಿದ್ದ ಧೇನು 'ವಾಣಿ' [O]. ಮೂಕಾಂಬೆಯ ಈ ವರ್ಷಣ ಕ್ರಿಯೆಯ ಸ್ಥಾನವು, ಯೋನಿಯೇ ಆಗಿದೆ. 'ವೃಷಭ' ಎಂದರೆ ಪ್ರಧಾನಾಂಗದ ಮೂಲಕ ವರ್ಷಣ ಕ್ರಿಯೆಯ ವೃಷಣ=ಅಂಗವೇ ಇಲ್ಲಿ ಅಭಿಪ್ರೇತವಿದೆ. ವೃಷಭ>ಬಸವ ಹೊಲದ ಸುಫಲೀಕರಣಕ್ಕೆ ಉಪಕಾರಕ ಶಕ್ತಿ, ಎಂಬ ಆಶಯವು ಮೂಲದಲ್ಲಿ ಇದೆ. ವರ್ಷಣ (<ವೃಷ್) ಕಾಲದ ಆಷಾಢ ಕಾರ್ಯಕ್ಕೆ-ಶೋಭನ ಪ್ರಸ್ಥಕ್ಕೆ ಇರುವ ಪಡೆನುಡಿ ನೆನೆದಲ್ಲಿ ವೃಷ-ಭ> ಬಸವನಾಮ-ರಹಸ್ಯವು ಗೊತ್ತಾಗಬಲ್ಲುದು. ಇಂದಿನ ಋಗ್ವೇದದ 'ವಾಣಿ'ಯ ಸ್ಫೂರ್ತಿ ಸ್ಥಾನವೂ ಇಲ್ಲಿದೆ! ಈ ವಾಕ್‌ನ್ನು 'ಗೌರಿ' (ಗೋ) ಎಂಬ ಹೆಸರಿನಿಂದಲೂ ವರ್ಣಿಸಲಾಗಿದೆ. 'ಗೌರಿ:' "ಮಿಮಾಯ ಸಲಿಲಾನಿ ತಕ್ಷತಿ" ಈ ಗೋವು 'ಮಂದ್ರ'-ಕನಿಕ್ರದತ್-ಶಬ್ದ ಮಾಡುತ್ತಿರುವಾಗ ಸಲಿಲ (ಶರೀರ) ದ್ರವಿಸುತ್ತದೆ.[೭] ಇನ್ನೊಂದೆಡೆಗೆ "ಸಾ ನಃ ಮಂದ್ರೇಷು ಊರ್ಜಂ ಧುಹಾನಾ ಧೇನುಃ" ಎಂಬ ವಿವರಣವು ಇದೇ[೮]

ಇದು ಮೂಕಾಂಬೆಯ [O] ರಾತ್ರಸಮಯಾಚಾರದ ಪ್ರಾಣಲಿಂಗ, ಪಾಸಳಿಯ ಉಪಾಸನೆಯ ಸಂದರ್ಭದ ಫಲ. ಈ ಸಮಯದ ಆಚರಣದಲ್ಲಿ ಮೈಯಲ್ಲಿ ಬರುವ 'ಸರಸ' ಆವೇಶದ ವರ್ಣನೆ ಇಲ್ಲಿ ಉಂಟು. ಗ್ರೀಕ್ Spirit ಮತ್ತು Enthusiasm ಇದರ ಮೂಲಾರ್ಥದಲ್ಲಿ Possessed by god; ದೇವರು ಪ್ರವೇಶಿಸಿ ಆದ ಉತ್-ಸಾಹ ಎಂಬ ಅರ್ಥವಿದೆ. ಪಾಶ್ಚಾತ್ಯ ಹಾಗೂ ಪೌರ್ವಾತ್ಯ ಪರಂಪರೆಯಲ್ಲಿ ಸಾಹಿತ್ಯಕಲೆಯ ಸ್ಫೂರ್ತಿ-ಸ್ಥಾನವು ಇಲ್ಲಿಯೇ ಉಂಟು. ಈ ನಂಬುಗೆಯು ಈಗಲೂ ಇದೆ. ಇದು ಚಾಂದ್ರಪಂಥೀಯ ಶ್ರದ್ಧೆ. ಆದರೆ, ಮೂಲ ವೇದ ಕಾಲದ ಮೂಲ ಸೋಮರಸದ ಸ್ಫೂರ್ತಿಯ ಸ್ವರೂಪವು ಬೇರೆಯಿತ್ತು. ಈ ಸೋಮವು ಸಾಮಾಜಿಕ ಪಾತಳಿಯ ಐಹಿಕಜೀವನ ಪ್ರೇರಕ ಉತ್ಸಾಹಕಾರೀ ಪೇಯವಾಗಿತ್ತು. ಆದರೆ, ಇಂದಿನ ವೇದದಲ್ಲಿ ಈ ಸೋಮ=ಚಂದ್ರಾ ಆಗಿ, ಮಂಡಲ [O] ಉಪಾಸನೆಯು ಪ್ರಭಾವಶಾಲಿಯಾಗುತ್ತದೆ. ಲಿಂಗದೇವನು ತನ್ನ 'ಗೊ'=ಪುರಿಯನ್ನು (ಲಿಂಗ) ತಾನೇ ಹಾಳು ಮಾಡುತ್ತಾನೆ! ಪ್ರಾಣಲಿಂಗ ಪಾತಳಿಯ ಮೇಲಣ ಅಂತರ್-ವಿಸಂಗತಿಯ ಈ ವಿಧಿಲಿಖಿತವನ್ನು ದಿವ್ಯಕಥೆಗಳು ಇನ್ನೊಂದು ಬಗೆಯಿಂದ ಹೇಳಿವೆ. 'ಗೋಪಾಲ', 'ಗೋವಿಂದ'ನು, 'ಪುರಂ-ದರನೂ' ಇದ್ದಾನೆ! ಪಂಢರಿ ವಿಠ್ಠಲ ಪುರಂದರನೆಂದು ಖ್ಯಾತಿ! 'ಕಡಗೋಲು' ಕೃಷ್ಣ, ಗೋಪೀವಲ್ಲಭ! ಆದರೆ, ಅವರ 'ಘಟ'='ಪುರಿ' ಧ್ವಂಸಮಾಡಿ ಉಡುಪಿಯಲ್ಲಿ ಈ ಕಡಗೋಲ ರೂಪನು ಏಕಾಕಿಯಾಗಿ ನಿಂತಿದ್ದಾನೆ! ಸಾಗರದ ಏರಿಳಿತಗಳಿಗೆ=(ಸ್ಥಲ-ಕಾಲದ ನಡುವಣ) 'ಪ್ರಜಾಯೈ ಮರ್ತ್ಯವೇ' ಸ್ವರೂಪದ ಘಟನೆಗಳಿಗೆ ಸಾಕ್ಷೀಭೂತ 'ಸ್ತಂಭಕಾಲನಾಗಿ, ಅಗ್ನಿಸ್ತಂಭವಾಗಿ ನಿಂತಿದ್ದಾನೆ, ಈ ಕಡಲತಡಿಯ ಈ ಕುಮಾರ; ಕೃಷ್ಣ, ಉಡುಪಿಯಲ್ಲಿ.

ಡಾ।। ನಾರಳೀಕರರ ಸ್ಪಷ್ಟೀಕರಣದೊಳಗಿನ ಅಭಾವಾತ್ಮಕ ಕೃಷ್ಣ (ದ್ವೀಪಸ್ಥ) ಕುಂಡವು ಕರಿಮಾಯಿ, ಕಾಲೀವಿವರವು Black hole ಇದು ದಿವ್ಯಾಧ್ಯಾತ್ಮದೊಳಗಿನ ವಿಶ್ವಜನಿತ್ರೀ ಸ್ಥಾನ; 'ಕೃಷ್ಣ-ದ್ವೀಪ' ಇದು ನಾರ-ಅಯನ: ವ್ಯಾಸನಿಗೆ ಜನ್ಮವಿತ್ತ ಸ್ಥಾನ. ಡಾ।। ನಾರಳೀಕರ ವಿವರಣೆಯಲ್ಲಿ ವಿಶ್ವ-ಸೃಜನದ ಮೂಲಸ್ಥಾನದ ಹೋಲಿಕೆಯೂ ಇದೆ! ಇಂಥ ಅಭಾವದಲ್ಲಿ ಸ್ಥಾಯಿಭಾವದಿಂದಾಗಿ Black hole ಇದು 'ಕೇಶಿರಾಜ' ಹೇಳುವಂತೆ 'ನಾಭಿ ಮೂಲದಿಂದ ಹೊರಡುವ 'ಶಬ್ದದ್ರವ್ಯ' ಭಾಷಾಸೃಷ್ಟಿಗೆ ಕಾರಣವಾಗಿದೆ! ಈ ಸಾಮ್ಯವೂ ಚಿಂತ್ಯವಿದೆ. ಡಾ।। ನಾರಳೀಕರ ಸ್ಪಷ್ಟೀಕರಣದೊಳಗಿನ 'Big Bang Theory' ಮತ್ತು ವ್ಯಾಕರಣದೊಳಗಿನ ಸ್ಫೋಟವಾದ ಇವೆರಡರ ಬಾಹ್ಯ ಆಕೃತಿಗಳಂತೂ ಸಮಾನವಾಗಿವೆ. ಇವೆರಡರೊಳಗಿನ ಆಶಯದ ಆಕೃತಿಯೂ ಸಮಾನವಿದೆಯೇ? ಇದನ್ನು ಬಲ್ಲಿದರೇ ವಿಮರ್ಶಿಸಿ ಹೇಳಬಲ್ಲರು.

ಡಾರ್ವಿನ್ ಹಾಗೂ ವ್ಯಾಲ್ಲಾಸ್ ವಿಕಾಸತತ್ತ್ವ

ಕೊನೆಯಲ್ಲಿ ಚಿತ್ತವೇಧಕ ಒಂದು ಸಂಗತಿ : ವಿಕಾಸತತ್ತ್ವದ ಸಂಶೋಧಕ ಡಾರ್ವಿನ್ ಹಾಗೂ ವ್ಯಾಲ್ಲಾಸ ಇವರಲ್ಲಿ ಕಂಡುಬಂದ ಮಾನವ ವಿಕಾಸತತ್ತ್ವದ ಬಗೆಗಿನ ಭಿನ್ನಾಭಿಪ್ರಾಯವೇ, ಪುರಾತನ ವಸಿಷ್ಠ: ದಕ್ಷಿಣ ಕಪರ್ದ; ಮತ್ತು ವಿಶ್ವಾಮಿತ್ರ ಸವಿತೃ ಉಪಾಸಕ ಅಥವಾ ಮನು ವಿವಸ್ವನ್ ಇವೆರಡೂ ಸಾಂಕೇತಿಕ ಪಾತ್ರಗಳ ಸಂದರ್ಭದಲ್ಲಿ ಕಾಣಲು ದೊರೆಯುತ್ತದೆ! ಇದು ಶಕ್ಯವಾಗಲು ಕಾರಣವೇನು? ಈ ತಾತ್ವಿಕ, ವೈಚಾರಿಕ ಸಾಮ್ಯಕ್ಕೆ ಕಾರಣವೇನು? ಆ ಸಾಂಕೇತಿಕ ಪಾತಳಿಯ ಈ ಪಾತ್ರಗಳ ಮಾನವ ಪಾತಳಿಯ ಮೇಲೂ ಕಾಣದೊರೆವ ಈ ಪವಾಡ: ಚಮತ್ಕಾರವು ಭಾಷಿಕ ಸಂಕೇತಗಳ ಅಗಾಧ ಶಕ್ತಿಯ ದ್ಯೋತಕವಾಗಿದೆ! ವೈಚಾರಿಕ ಆಕೃತಿಗಳು, ಸಾರ್ವಕಾಲಿಕ ಹಾಗೂ ಸನಾತನ ಇರುತ್ತವೆ. ಎಂಬುದು ಈ ಸಂದರ್ಭದಿಂದ ಹೊರಪಡುತ್ತದೆ. ಡಾರ್ವಿನ್ ಮತ್ತು ವ್ಯಾಲ್ಲಾಸ ಇವರು ಪ್ರತಿನಿಧಿಸುತ್ತಿರುವುದು ಎರಡು ವಿಭಿನ್ನ ವೈಚಾರಿಕ ಭೂಮಿಕೆಗಳನ್ನು ಎಂದೂ ಸ್ಥೂಲವಾಗಿ ಹೇಳಬಹುದಾದರೆ, ಒಬ್ಬನು 'ನರಧರ್ಮ'ದ ಭೂಮಿಕೆಯಿಂದ ಪ್ರಾಣಿ ವನಸ್ಪತಿಗಳನ್ನು ಪ್ರಾಣಲೋಕವನ್ನೂ-ಸಮೀಕ್ಷಿಸುತ್ತಿದ್ದಾನೆ. ಇನ್ನೊಬ್ಬನು ಮನು-ಜ 'ಮಾನವ ಧರ್ಮ'ದ ಭೂಮಿಕೆಯಿಂದ ಇಡೀ ಜೀವನ ವಿಶ್ವವನ್ನು ಲೆಕ್ಕಿಸುತ್ತಿದ್ದಾನೆ.

ಇದೇ ಆಶಯವನ್ನು ಹೀಗೂ ಹೇಳಬಹುದು. ವಸಿಷ್ಠ (ಡಾರ್ವಿನ್) ಈತನು ವಿಶಿಷ್ಟಕ್ಕೇ ವೈಶಿಷ್ಟ್ಯಕ್ಕೇ ಬೆಲೆ ಕೊಡುತ್ತಾನೆ. ವಿಶ್ವಾಮಿತ್ರ (ವ್ಯಾಲ್ಲಾಸ) ವೈಶಕ ಪಾತಳಿಯಿಂದ ವಿಶಿಷ್ಟದ ಕಡೆಗೆ ನೋಡುತ್ತಿದ್ದಾನೆ. ವಿಚಾರ ಮಾಡುವ ಪದ್ಧತಿಯಲ್ಲಿ ಅನುಗಮನ (Inductive), ಮತ್ತು ವಿಗಮನ (Deductive) ಎಂಬ ಎರಡು ಪ್ರಕಾರಗಳಿವೆ. ಆದರೆ 'ಅನು'ಗಮನ ಎಂಬಲ್ಲಿ, ಏನನ್ನು 'ಅನು'ಸರಿಸಿ ಈ ಗಮನ? ಎಂಬ ಪ್ರಶ್ನೆ ಮಹತ್ವದ್ದಾಗಿದೆ. ಈ ಅನುಗಮನವು ಏನೊಂದು (particular) ವಿಶಿಷ್ಟದಿಂದ (ಕತ್ತಲು ಅಥವಾ ಜ್ಯೋತಿ ಕಿರಣದಿಂದ) ಸಾಗುತ್ತ ಈ ಅನ್ವೇಷಣೆ ಯಾವುದೋ ಸಾಮಾನ್ಯ, ಸಮಾನ ಅಥವಾ ಸಾಧಾರಣ (Universal) ಪ್ರಕಾಶತತ್ತ್ವದ ಕಡೆಗೆ ಹೊರಡುತ್ತದೆ. ಮೊತ್ತ ಮೊದಲಲ್ಲಿ 'ಕಂಡಂತೆ' ಎನಿಸುವ ಏನೊಂದು ಆಕೃತಿಯ ಬೆಳಕಿನ ಅಥವಾ ಇಂಥ ಬೆಳಕಿನ ಆಕೃತಿಯ ನೆರವಿಲ್ಲದೆ ಯಾವುದೇ ವಿಶಿಷ್ಟವೂ ಅರ್ಥವಿಹೀನವೇ ಸರಿ! ಗೆಸ್ಟಾಲ್ಟ್ ಮಾನಸಶಾಸ್ತ್ರದ ನಿಟ್ಟಿನಿಂದಲೂ ಈ ವಿಚಾರಕ್ಕೆ ಪುಷ್ಟಿ ದೊರೆಯುತ್ತದೆ. ಅನು-ಗಮನ ವಿಗಮನ ಈ ರೂಪ ಭೇದವನ್ನು ಇನ್ನೂ ಒಂದು ನಿಟ್ಟಿನಿಂದ ಸೂಚಿಸಬಹುದು. ಚಿತ್ತದ 'ಚಿತ್ (Phenomenon) ಕಡೆಯ ವಿಶಿಷ್ಟ ದೃಶ್ಯದ ನಿಟ್ಟಿನಿಂದ ಇದರ ತಳಪಾಯದ ವೈಶ್ವಕ ನಿಯಮದ (Universal) ದಿಕ್ಕಿಗೆ ಈ ಅನ್ವೇಷಣೆಯು ಸಾಗುವುದು ಒಂದು ರೀತಿ, ವೈಶ್ವಕ ನಿಯಮಗಳ ಬೆಳಕಿನಲ್ಲಿ ಚಿತ್'ರದ-ವಿಶ್ವರೂಪದ ಅರ್ಥ ಗ್ರಹಿಸುವುದು ಇನ್ನೊಂದು ರೀತಿ. ಈ ಪ್ರಪಂಚದಲ್ಲಿ ಚಿತ್ತದಿಂದ ನಿರ್ಮಿತ 'ಚಿತ್'ರ ಲಿಪಿಯೇ ಮೊದಲು ಇತ್ತೆಂದು ತಜ್ಞರು ಕಂಡು ಹಿಡಿದಿದ್ದಾರೆ. ಆದರೆ, ಜೀವನದ ಅನುಭವವು ಪರಿಪಕ್ವವಾದಂತೆ, ಈ ಜೀವನ ವಿಶ್ವಸ್ಥ ಅಂತರ್ಹಿತ ಅರ್ಥ: ಆಶಯವು ಈ ಚಿತ್'ರದ

(Phenomena) ಆಚೆಗೆ- ದೃಶ್ಯಪ್ರಪಂಚದ ಆಚೆಗೆ ಉಂಟು. ಪ್ರಜ್ಞೆಯ ಅಂಗವಾದ ಮನಸ್ಸಿನ ಪಾತಳಿಯ ಮೇಲೆ ಅರ್ಥ ವಿಚಾರವು ಇದೆಯೆಂದು ಖಾತ್ರಿಯಾಗತೊಡಗುತ್ತದೆ. ಒಂದು ಬಗೆಯಲ್ಲಿ ಅರ್ಥ: ವಿಚಾರ : ನಿಯಮ, ಬೇರೆಯಲ್ಲ. ಶಬ್ದದೇಹದ-ಬಾಹ್ಯ ಆಕೃತಿಯ ಒಳಗೆ ಅರ್ಥರೂಪ ಆಕೃತಿ (Concept) ವಿಶ್ವನಿಯಮ ರೂಪೀ ಅಭೀಪ್ಸಾತ್ ಆಕೃತಿಯು (ಆಶಯವು) ಹುದುಗಿದ್ದುದು ಕಾಣತೊಡಗುತ್ತದೆ. ಆಗ ಭಾಷೆಯು ಸಾಂಕೇತಿಕವಾಗುತ್ತದೆ.

ಭಾಷಿಕ ಬಾಹ್ಯ ಆಕೃತಿ (ದೇಹವು) ಇದು ಪ್ರಾಣಚೇತಸದ ಪಾತಳಿ ಮತ್ತು ಸಾಂಸ್ಕೃತಿಕ ವೈಚಾರಿಕ ಆಕೃತಿಯು (Concept) ಪ್ರಜ್ಞಾ : ಪ್ರಕಾಶದ ಸ್ವರ್‌ಪಾತಳಿ. ಆದರೆ, ಈ ಪ್ರಜ್ಞಾಪಾತಳಿಯು ಪ್ರಾಣಚೇತಸದ ಪಾತಳಿಗೇ ಸೀಮಿತವಲ್ಲ; ಅದಕ್ಕಿಂತ ವಿಶಾಲವಿದೆ. ವಿವಸ್ವನ್ ಪ್ರಚೋದಿತ 'ಮನುವು' ಕಂಡ ಮಾನವ ಧರ್ಮದ ಸಮ್ಯಕ್ ಆಕೃತಿಯು ಒಟ್ಟಿನಲ್ಲಿ ಹೀಗಿದೆ. ಮನು ವೈವಸ್ವತ ಪರಂಪರೆಯ 'ಆ ಮನೋಃ ವರ್ತ್ಮನಃ ಪರಂ' ಈ 'ಸಮಯದ' (duration) ಆಧಾರದ ಮೇಲೆ ನಿಂತಿರುವ ಈ ವಾಕ್ಕು. ಅಂತಃಸಂಗತಿಯುಕ್ತ ಅರ್ಥವಿಚಾರವ್ದು, ಭಾವಾತ್ಮಕ, ಹಾಗೂ ವಿಧಾಯಕ ಸ್ವರೂಪದ್ದೂ ಆಗಿದೆ. ವೈವಸ್ವತ ಮನುವಿನಿಂದ ಪ್ರಚೋದಿತ 'ಮಾನವಧರ್ಮಕ್ಕೆ ಆಧಾರಭೂತ ಭಾಷೆಯ ಆಕೃತಿಯು ಇದು. ಆದರೆ, ಭಾವಾತ್ಮಕಕ್ಕೆ ಪ್ರತಿಯಾಗಿ ಇರುವ ಅಭಾವಾತ್ಮಕ ಪಾತಳಿಯ ಅಸ್ತಿತ್ವವು ಇದೂ ಒಂದು. ಈ ವಿಶ್ವಸ್ಥ ನಿಯಮಕ್ಕೆ ಅನುಸರಿಸಿಯೇ ಉಂಟಷ್ಟೆ? ಈ ಅಭಾವಾತ್ಮಕ ಪಾತಳಿಯ ಅಸ್ತಿತ್ವ ಪ್ರಚೋದಕ ಶಕ್ತಿಯೇ ಈ ಪ್ರಾಣಲಿಂಗಶಕ್ತಿಯ ಚಿತ್ತ ಅಥವಾ ಬುಧರ, ವಿಬುಧರ ಬುದ್ಧಿಶಕ್ತಿ (Reason or intelligence) ಆಗಿದೆ. ಪ್ರಾಣಲಿಂಗ ಪಾತಳಿಯ ವಾಕ್ಕಿಗೆ, 'ಗೀಃ' ವಾಣ ವಾಣೀ ಎಂಬ ಹೆಸರು ಸಲ್ಲುತ್ತದೆ. 'ಗೀಃ' ನಾದವು, ವಾಣ=ಲಿಂಗ : ಪ್ರಾಣ: ಈ ಪ್ರಾಣದ ನಾದಕ್ಕೇ: ಶಬ್ದಕ್ಕೆ ವಾಣಿ ಎಂಬ ಹೆಸರು. ಇದರ ಒಂದು ಲಕ್ಷಣವು ಶಬ್ದ 'ದ್ರವ್ಯ' ನಿತ್ಯ! ಈ 'ವಾಣಿ' ವೈಯಕ್ತಿಕ ಸ್ವರೂಪದ ಕಲ್ಪನೆ-ಸಂಕಲ್ಪನೆ ಪರಿಕಲ್ಪನೆಯ ಸ್ವರೂಪದ್ದು! ಇದು ಅರ್ಥವಿಚಾರದ ಪಾತಳಿಯ (Concept) ಆಕೃತಿಯಲ್ಲ. "ಅವರವರ ಅರ್ಥ ಅವರವರ ಪಾಲಿನ ಸತ್ಯ" ಎಂಬ ಆಧುನಿಕ ನರಧರ್ಮೀ ಸಾಹಿತ್ಯಿಕ ಶಬ್ದಬ್ರಹ್ಮರ ಶ್ರದ್ಧೆಯ ಭೂಮಿಕೆಯು ಹೀಗೆ ಇಂದಿನ ಈ ವೇದದಲ್ಲಿದೆ. ಆದರೆ, 'ಯತ್ರ ಧೀರಾ ಮನಸಾ ವಾಚಂ ಅಕ್ರತ' ಎಂಬ 'ಬೃಹಸ್ಪತಿ' ಸೂಕ್ತದಂತೆ ಇದು ಸಮಾಜರೂಪ ಧೀರ ಮನುಜರ ವಾಕ್ಕು, ವೈಯಕ್ತಿಕ ಪಾತಳಿಯ ಮೇಲೆ ಅರ್ಥಪಡೆದಿಲ್ಲ. ಮೂಲತಃ ಭಾಷೆ=ವಾಕ್ಕು ಅರ್ಥ: ವಿಚಾರ ಇದು ಸಾಮಾಜಿಕ ಎಂದು ಆಧುನಿಕ ಭಾಷಾತಜ್ಞರು ಏಕಾಭಿಪ್ರಾಯದವರಾಗಿದ್ದಾರೆ! ಆದರೆ, ವ್ಯಕ್ತಿಗಳ 'ನಾಭಿಮೂಲದೊಳ್ ಜನಿಯಿಸುವ ಶಬ್ದದ್ರವ್ಯವು ಸಮಾಜ=ಸಮಷ್ಟಿಯ ಮೂಕ ಸಮ್ಮತಿಗೂ (tacit consent) ಮೊದಲೇ ಆ ವ್ಯಕ್ತಿಯ ಅರ್ಥದೊಡನೆ ಅದು ಪ್ರಚಾರಕ್ಕೆ ತೊಡಗುವಾಗ ಈ ಅಭಿವ್ಯಕ್ತಿಯು 'ಕೇವಲ' ವೈಯಕ್ತಿಕ ಸ್ವರೂಪದ್ದೇ ಆಗಬಲ್ಲುದು. ಶಬ್ದಸ್ಥ ಅರ್ಥವು ಆ ಶಬ್ದ(ದೇಹ)ಕ್ಕೆ ಸೀಮಿತವಾಗುವಾಗ ಇದು ಭೌತಪಾತಳಿಯ ಇಂದ್ರಿಯಗಳ ಸ್ಪರ್ಶಜನ್ಯ ಪಾತಳಿಯ 'ವಾಣಿ ಆಗುವುದು ನಿಶ್ಚಿತವಿದೆ.

ಆಧುನಿಕ ಪಾಶ್ಚಾತ್ಯ ಪರಂಪರೆಯಲ್ಲಿ ಶಿಷ್ಟಮಾನ್ಯವಾಗಿರುವ 'Empirical Knowledge' ಎಂದರೆ ಇದು 'ಗೀರ್ವಾಣ ವಾಣಿ'ಯ ಪರ್ಯಾಯವಾಗಿದೆ. ಆತ್ಯಂತಿಕ ಅಹಿಂಸಾವ್ರತಿಯಾಗಿ, ಅಸಂಗಶಾಸ್ತ್ರಧಾರಿಯಾಗಿ ಈ ಸ್ಪರ್ಶೇಂದ್ರಿಯದ ಪಾತಳಿಯ ಮೇಲೆ 'Experiments with truth' ರೂಪ ಬ್ರಹ್ಮಚರ್ಯದ ಪ್ರಯೋಗ. ಗೀತೆಗೆ, ಬೈಬಲ್ಲಿಗೆ, ಮಾನ್ಯವಿದೆ. ಫಕ್ತಸ್ಥಳ (ದೇಹ: ಸ್ತ್ರೀ-ಪುಂ) ಮತ್ತು ಕಾಲ (ಪ್ರಾಣ ಉಭಯಲಿಂಗೀ) ಪರಿಸರದ ಸಂದರ್ಭದಿಂದ ಮೈದಾಳುವ 'ವಾಣಂ'-'ವಾಣ' ಇದು! ಕೊಲ್ಲೂರ ಮೂಕಾಂಬೆಯ ಈ ಉಪಾಸನಾ ಮಾರ್ಗವು ಜಾಬಾಲೋಪನಿಷತ್ತಿನ ಅವಿಮುಕ್ತ 'ಕುರುಕ್ಷೇತ್ರ'ಕ್ಕೆ ತಳ್ಳಿಕೊಂಡು ಹೋಗುತ್ತದೆ. ಜಬಾಲಾ ಪುತ್ರ ಸತ್ಯ ಕಾಮನ 'ಕಮಲಾಯನ'ರ ಮಾರ್ಗವಿದು. ಅಣಿಮಾದಿ ಸಿದ್ಧಗಳ ಆಮಿಷದಿಂದಾಗಿ ಈ ಸಂಪ್ರದಾಯಗಳು ಉಳಿದು

ಬಂದಿವೆ. ಸ್ಥಲ (ದೇಹ) ಹಾಗೂ ಕಾಲ ಪ್ರಾಣ ಚೇತಸದ ಪರಿಸರ ಇವೆರಡರ ಎಂದರೆ ಇಂದ್ರಿಯಗಳ ಪಾತಳಿಯ ಆಚೆಗೆ, ಪ್ರಜ್ಞಾ: ಪ್ರಕಾಶತತ್ವದ ಸ್ವರ್- (ಆಕಾಶ) ಪಾತಳಿಯು ಉಂಟು. ಇಂದ್ರಿಯಗಳ ಆಚೆಗಿನ (Super organic) ಪಾತಳಿಯ ಅನುಸಂಧಾನವನ್ನು ಉಳಿಸಿಕೊಳ್ಳಬಲ್ಲವನು ಮನು-ಜ, ಮಾನವರ ಪಾತಳಿಯ ವಾಕ್ಕನ್ನು ಗ್ರಹಿಸಿಕೊಳ್ಳಬಹುದು; ಸೃಷ್ಟಿಸಲೂಬಹುದು. ಆದರೆ ಸ್ಥಳ (ದೇಹ) ಮತ್ತು ಕಾಲ (ಪ್ರಾಣ ಚೇತಸ)ದ ಸಂದರ್ಭದಿಂದ, ತನ್ನ ವ್ಯಕ್ತಿ ವೈಶಿಷ್ಟ್ಯಕ್ಕೆ ಪ್ರಾಧಾನ್ಯವನ್ನಿತ್ತು ಬಾಳುವ ಪ್ರವೃತ್ತಿಯು ಬೆಳೆಯುವಾಗ 'ಮನು' 'ಜನು' ಮರಳಿ ನರ(ಳ)ನ ಪಾತಳಿಯ ಮೇಲೆ ತಳ್ಳಲ್ಪಡುವ ಅನಿವಾರ್ಯತೆಯನ್ನು ತಪ್ಪಿಸಿಕೊಳ್ಳಲು ಯಾರಿಂದಲೂ ಶಕ್ಯವಿಲ್ಲ.

ಪಾಶ್ಚಾತ್ಯ ಪರಂಪರೆಯಲ್ಲಿ, ಈ ಸತ್ಯಾಂಶವನ್ನು ಪ್ರಜ್ಞಾ-ನೇತ್ರದ ಕಾಂಟ್ ಎಂಬ ತತ್ವಜ್ಞನು ಅರಿತು ಆಡಿದ್ದಾನೆ; ಬರೆದಿದ್ದಾನೆ. ಈ ಕಾಂಟನ ಪರಂಪರೆಯ ಒಬ್ಬ ಸಂಶೋಧಕನು ಒಡನುಡಿದಿರುವ ಮಾತು ಈ ಸಂದರ್ಭದಲ್ಲಿ ಉಪಕಾರವಾಗಲಿದೆ. "We can flout laws of man; (but) We cannot flout the laws of nature" (Fichte) ಅರ್ಥದ ಅಂತಃಸಂಗತಿಯ ವಿಧಾಯಕ ವಿಶ್ವನಿಯಮವನ್ನು ಉಲ್ಲಂಘಿಸಿ ಅತ್ಯಂತಾಭಾವ ಇದನ್ನೆ ಸ್ಥಾಯೀ ಎಂದು ಬಗೆದು ಬಾಳುವ ವಿಶ್ವನಿಯಮದ ಉಲ್ಲಂಘನದ ಅಪರಾಧಕ್ಕಾಗಿ, ಈ ಮನು-ಜನು ನರ(ಳ)ನಾಗಿ ಮಾರ್ಪಟ್ಟಿದ್ದಾನೆ. ಇಂದಿನ ಯುಗದ ಅಧಃಪಾತದ ಕಾರಣವೇನು ಮತ್ತೆ? ಸ್ವಯಂಭೂ ನರ(ಳ) ಸಂಪ್ರದಾಯಗಳ ಪ್ರಭಾವದ ಹೊರತು ಈ 'ನರ'(ಳ) ವರ್ಗವು, ಮಾನವವೇಷ ಧರಿಸಿ ಮನುಜರಲ್ಲಿ ಬೆರೆತಂದಿನಿಂದ ಹಿಂದೆ 'ಅಸುರ' ದೈತ್ಯ (Titan) ಎಂಬ ಹೆಸರಿನಿಂದ ಗುರುತಿಸಲ್ಪಡುತ್ತಿದ್ದ ಆ ವಾನರ-ಬಂಧು, ನರ(ಳ) ಸಂಪ್ರದಾಯವು, ಕೆಲಸಮಯದ ತರುವಾಯ ವ್ಯಾಲ್ಲಾಸನ ಈ (Missing Link,) ಆ ಬಳಿಕ ಮಾನವರಿಂದ ಬೇರೆಯಾಗಿ ಕಾಣದಾಯಿತು. ಆದರೆ, ಈ ಜೀವನ ವಿಶ್ವಸ್ಥ ವೈಚಾರಿಕ ಆಕೃತಿಗಳು ಸನಾತನ ಹಾಗೂ ಸಾರ್ವಕಾಲಿಕವಾಗಿವೆ. ಇದು ನಿಜವಿದ್ದರೆ ಇಂದಿನಲ್ಲಿಯೂ 'ನರ'ರ ಹಾಗೂ ನಿಜವಾದ 'ಮನುಜ'ರ ನಡೆವಳಿ ನುಡಿವಳಿಗಳನ್ನು ರೂಪಿಸುತ್ತಿರುವ ಕಾಲತತ್ವದ ಆಕೃತಿ ಸ್ವರೂಪವು ಬೇರೆ ಬೇರೆ ಬಗೆಯದಾಗಿಯೇ ಇರುವುದನ್ನು ವಿಮರ್ಶಿಸಿ ಅರಿಯಲು ಶಕ್ಯವಾಗಬೇಕು.

ಟಿಪ್ಪಣಿಗಳು

೧. Dr. Louie Young; ***Evolution of Man***, Editor ಇದರಲ್ಲಿ Noosphere' ನೋಡಿರಿ

೨. V. Ferm; ***A History of Philosophical Systems***, p-342; New York Philosophical Library 1950.

೩. ***ಬೃಹದಾರಣ್ಯಕೋಪನಿಷತ್ತು***. ೧. ೧. ೩

೪. ***ಋಗ್ವೇದ ಸಂಹಿತೆ*** III ೫೩-೧೨

೫. ***ಅದೇ*** X ೧೨೫. ೬

೬. ***ಬೃಹದಾರಣ್ಯಕೋಪನಿಷತ್ತು*** ೫.೮.೧.

೭. ***ಅದೇ*** I ೧೬೪. ೪೧

೮. ***ಅದೇ*** viii ೧೦೦. ೧೧

ಜೀವನ-ವಿಶ್ವ ಪ್ರಚೋದಿಸುವ ಕಾಲಶಕ್ತಿಗಳ ಆಕೃತಿಸ್ವರೂಪ

ಜೀವನ ವಿಶ್ವವನ್ನು ಪ್ರಚೋದಿಸುತ್ತಿರುವ ಕಾಲಶಕ್ತಿಗಳು ಎರಡು ವಿಧವಾಗಿವೆ. ಪುರಾತನರು ಇದನ್ನು ಸೂರ್ಯ (ವಿವಸ್ವನ್ ಅಥವಾ ಸವಿತೃ), ದೇವನಿಂದ ಪ್ರಚೋದಿತ ಕಾಲಗತಿ ಮತ್ತು ಚಂದ್ರ (ಪ್ರಾಣಲಿಂಗ-ಚೇತಸದ) ದೇವನಿಂದ ಪ್ರಚೋದಿತ ಕಾಲಗತಿ ಎಂದು ವಿಂಗಡಿಸಿ ಹೇಳಿದ್ದಾರೆ. ಆದರೆ, ಸೂರ್ಯ ಮತ್ತು ಚಂದ್ರ ಈ ದೇವತಾ ಶಕ್ತಿಗಳ ಸಾಂಕೇತಿಕ ಹೆಸರನ್ನು ಯೋಜಿಸದೆಯೇ ಇವುಗಳ ಆಕೃತಿ - ವೈಶಿಷ್ಟ್ಯದಿಂದಲೂ ಮತ್ತು, ಈ ಆಕೃತಿ ವೈಶಿಷ್ಟ್ಯದ ಶಕ್ತಿಯ ಪ್ರಭಾವದ ಪರಿಣಾಮಗಳ ಮೇಲಿಂದಲೂ ಇವೆರಡೂ ಬಗೆಯ ಕಾಲಗತಿಯ ಆಕೃತಿಗಳನ್ನು ವಿಂಗಡಿಸಿ ಅರಿಯಲು ಶಕ್ಯವಿದೆ. ಇವೆರಡರಲ್ಲಿ ಮೊದಲು ಸೌರಶಕ್ತಿಯಿಂದ ಪ್ರಚೋದಿತ ಕಾಲಗತಿಯ ಆಕೃತಿ ಸ್ವರೂಪವನ್ನು ಕುರಿತು ವಿಚಾರಿಸುವ. ಸೌರ: ವಿವಸ್ವನ್ ಅಥವಾ ಸವಿತೃ ಪ್ರಜ್ಞಾಪ್ರಚೋದಕ ಹೆಸರಿನಿಂದ ಗುರುತಿಸಲಾಗಿರುವ, ಪ್ರಜ್ಞಾಪ್ರಚೋದಕ ದಿವ್ಯಶಕ್ತಿಯಿಂದ ಪ್ರೇರಿತ ಕಾಲಗತಿಯು, ಪ್ರಕಾಶದಾಯಕವಿರುತ್ತದೆ. ಭೌತ ಪ್ರಕಾಶಕ್ಕಿಂತ ಅಭೌತ ತಾತ್ತ್ವಿಕ ಪಾತಳಿಯ ಪ್ರಕಾಶವೇ ಇಲ್ಲಿ ಅಭಿಪ್ರೇತವಿದೆ. ಇದನ್ನು ವಿಭಾಗತ್ರಯದ ಕಾಲಗತಿ ಎಂದು ಗುರುತಿಸಿದಲ್ಲಿ ಸೂರ್ಯನ ಹೆಸರಿನ ಸಂಬಂಧವನ್ನು ಸೂಚಿಸುವ ಅವಶ್ಯಕತೆಯೇ ಇಲ್ಲ. 'ವಿಭಾಗ-ತ್ರಯ' ಎಂಬ ಮಾತು ಈ ಕಾಲಗತಿಗೆ ಇನ್ನೊಂದು ಬಗೆಯಿಂದಲೂ ಸರಿ ಹೋಗುತ್ತದೆ. ಈ ಜ್ಞಾನಪ್ರಕಾಶದಲ್ಲಿ, ಅಥವಾ ಪ್ರಕಾಶರೂಪ ಜ್ಞಾನದಿಂದಾಗಿ, ಈ ಜೀವನದಲ್ಲಿ ನಿನ್ನೆ ಇಂದು ಮತ್ತು ನಾಳೆಯಂತೆ, ಭೂತ, ವರ್ತಮಾನ ಹಾಗೂ ಭವಿಷ್ಯತ್ ಎಂಬ ಮೂರು ಕಾಲವಿಭಾಗಗಳೂ ಇರುವುದಾಗಿ ಕಂಡು ಬರುತ್ತದೆ. ಮೂರು ಲಿಂಗಗಳ ಅಸ್ತಿತ್ವವೂ ಗೊತ್ತಾಗುತ್ತದೆ. ನಾನು, ನೀನು, ಅವನು (ಅವಳು, ಅದು) ಎಂಬ ಹಾಗಿನ ಮೂರುಪುರುಷಗಳು ಇರುವುದೂ ಅರಿಕೆಗೆ ಬರುತ್ತದೆ.

ಪುರಾತನರಿಗೆ ಪ್ರಾಪ್ತವಾದ ಜ್ಞಾನವು ಆಧುನಿಕ ಸ್ವರೂಪದ ವಿಶ್ಲೇಷಣಾತ್ಮಕ ವಿಚಾರ ಪದ್ಧತಿಯಿಂದ ಅಲ್ಲ; ಅತ್ಯಂತ ಪ್ರಾಮಾಣಿಕ ಸ್ವರೂಪದ ದಿವ್ಯ ದೈವೀಭಾವನೆಯಿಂದ ಆಚರಿಸುತ್ತಿದ್ದ ದೈವತ ಪ್ರತಿಮಾ-ಉಪಾಸನೆಯ ಸಂದರ್ಭದಿಂದ ಅವರಿಗೆ ಜ್ಞಾನವು ಲಭಿಸಿತು. ಆಧುನಿಕ ಸಂಶೋಧಕರೇ ಈ ಬಗೆಯ ಜ್ಞಾನಪ್ರಾಪ್ತಿಯನ್ನು 'Mythical thinking' ಪ್ರಕಾರವೆಂದು ಹೆಸರಿಸಿದ್ದಾನೆ.

ಆದಿಮನುವಿನ ಹಿರಿಮೆ

ಮಾನವ-ಧರ್ಮ : ಸಂಸ್ಕೃತಿಯ ಸಮಯ (: ಆಚಾರ)ವನ್ನು ರೂಪಿಸಿದ ಆದಿಮನುವಿನ ಬಗೆಗಿನ ಕೃತಜ್ಞತೆ, ಇಂದಿನ ನರಸಂಪ್ರದಾಯದ ವೇದದಲ್ಲಿಯೂ ಎಂತೂ ಉಳಿದಿದೆ. ಈ 'ಮನು-ಮಾರ್ಗ'ವು ಶಿಷ್ಟಮಾನ್ಯವಾಗಿತ್ತು. 'ಆ ಮನೋಃ ವರ್ತ್ಮನಃ ಪರಂ' ಎಂಬ ಕಾಲಿದಾಸನ ಉಕ್ತಿಯೂ ಇದಕ್ಕೆ ಸಾಕ್ಷಿ.

"ವೈವಸ್ವತೋ ಮನುರ್ನಾಮ ಮಾನನೀಯೋ ಮನೀಷಿಣಾಂ, ಆಸೀತ್ ಕ್ಷಿತೀನಾಂ ಆದ್ಯಃ"

ಭಾರತೀಯರಲ್ಲಿ ಈ ಆದ್ಯ ಮನುವಿನ ಬಗೆಗೆ ಹುದುಗಿರುವ ಆದರಭಾವ ಕೃತಜ್ಞತಾ ಭಾವವು ಆಸೇತು-ಹಿಮಾಚಲದ ವರೆಗೂ ಎಲ್ಲೆಲ್ಲೂ ಕೇಳಲು ದೊರೆತುದನ್ನು ಅರಿತ ಪಾಶ್ಚಾತ್ಯ ಸಂಶೋಧಕರೂ ಆಶ್ಚರ್ಯಚಕಿತರಾದರು.

ಇಲ್ಲಿ ವರ್ಣಿತ 'ಮನು'ವು ಒಂದು ಮಾನವ ವ್ಯಕ್ತಿಯಲ್ಲ. ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ, ಚೇತಸ) ಈ ವಿಭಾಗದ್ವಯದ ಕಾಲ-ಚಕ್ರದ (೦) ಸುಳಿಯಲ್ಲಿ ಸಿಲುಕಿದ್ದ ನರ(ಳ)ನಿಗೆ ಮನುಜತ್ವವು ಲಭಿಸಲು ಕಾರಣವಾದ ಪ್ರಜ್ಞೆಯ ಅಂಗವಾದ ಮನಃಶಕ್ತಿಯನ್ನು ಈ ವಿಶ್ವಶಕ್ತಿಯನ್ನು 'ಮನು' ಸಂಕೇತದಿಂದ ಗ್ರಹಿಸಿಕೊಂಡಿದ್ದಾಗಿದೆ. ವೃತ್ತಾಕೃತಿಯ [O] ಕಾಲಚಕ್ರವು, ಅಥವಾ (ಸಂ)ಭವ ಚಕ್ರವು ತನ್ನ ಸುಳಿಯಲ್ಲಿ ಸಿಕ್ಕವರನ್ನು, ಮುಗ್ಧ-ಮೂಕರನ್ನಾಗಿಸುತ್ತದೆ. ಸ್ಥಳಕಾಲ ರೂಪ ವಿಭಾಗದ್ವಯದ ಕಾಲಗತಿಯ ಪ್ರಭಾವದಲ್ಲಿ, ಇಂದಿನ ವರೆಗೂ ಯಾವ ಪ್ರಾಣಿವರ್ಗಕ್ಕೂ 'ಸ್ವ'-ಉಪಜ್ಞೆಯಾಗಲಿ, ಮನಃಶಕ್ತಿಯಾಗಲಿ ಸ್ವಲ್ಪವೂ ಲಭಿಸಿಲ್ಲ!

'ಮನು'ವಿನ ಉದಯಕ್ಕೂ ಮುಂಚೆ, ಈ ನರ(ಳ) ವರ್ಗವು ವಾನರ ಬಂಧುವಾಗಿ ಬಾಳುತ್ತಿತ್ತು. ವಾ-ನರರ ಬಗೆಗಿನ ಆ ಆತ್ಮೀಯತೆಯು, ಅವುಗಳ ಸ್ವಭಾವ ವೈಶಿಷ್ಟ್ಯವು ಆಕರ್ಷಕವೆನಿಸದೆ ಇದ್ದರೆ 'ಕಪಿ' 'ಪ್ರಾಣದೇವರು' ಹೆಸರಿನಿಂದ ಪೂಜೆಗೊಳ್ಳುತ್ತಿರಲು ಶಕ್ಯವಿದ್ದಿಲ್ಲ. ಸ್ಥಳ(ದೇಹ) ಹಾಗೂ ಕಾಲ (ಪ್ರಾಣಲಿಂಗ) ಇವೆರಡರ ಸಂದರ್ಭದಿಂದ ಕಾಣಿಸಿಕೊಳ್ಳುವ ವೃತ್ತಾಕೃತಿಯು [O], ಪ್ರಜ್ಞೆಗೆ ಅಥವಾ ಮನಃಶಕ್ತಿಗೆ, ಪ್ರಚೋದಕವಿಲ್ಲದ್ದು ನಿಶ್ಚಿತವಿರುವಾಗ, ಈ ನರ(ಳ)ನಿಗೆ 'ಮನು'ಜತ್ವವು ಲಭಿಸಿದ್ದು, ಈ ಸ್ಥಳ (ದೇಹ) ಹಾಗೂ ಕಾಲ (ಪ್ರಾಣಲಿಂಗ ಚೇತನ) ವಿಭಾಗದ್ವಯದ ಮೂಲಕ ಉಂಟಾಗುವ ವೃತ್ತಾಕೃತಿಯ ಕಾಲತತ್ವದ ಪಾತಳಿಯ ಆಚೆಗಿನ ವಿಭಾಗತ್ರಯದ ಆಗಾಮೀ ನಾಳೆಗಳ ಸಂದರ್ಭದ ಪ್ರಕಾಶರೂಪ ಕಾಲಶಕ್ತಿಯಿಂದಲೇ ಎಂದು ಬಗೆಯ ಬೇಕಾಗುತ್ತದೆ. ಸೌರ=ವೈವಸ್ವತದೇವನಿಂದ ನವಜೀವನ ಪಡೆದವನು, ಮನು-ಜಃ ಮಾನವನು, ಎಂಬ ನಿಷ್ಠೆ ಉಂಟಾಗಿರಲು ಬೇರೆ ಕಾರಣವೇನು, ಮತ್ತೆ?

ಈ ಮೊದಲೊಮ್ಮೆ ಸೂಚಿಸಿರುವಂತೆ, ಇರಾಣಿನ ಅವೆಸ್ತದಲ್ಲಿಯೂ ಈ ಬಗೆಯ ಶ್ರದ್ಧೆಯು ನಮೂದು ಇದೆ. ಡಾ. ತಾರಾಪೊರವಾಲಾ, ಇವರು ಅವೆಸ್ತದ ಪ್ರಧಾನ ದೇವರು, ಅಹುರ ಮಝ್ದ ಮತ್ತು ವೋಹು ಮನಃ ಇವೆರಡರಲ್ಲಿ ಇರುವ ಅನ್ಯೋನ್ಯ ಸಂಬಂಧವು ಇದೇ ಬಗೆಯದು ಉಂಟು, ಎಂದು ಬರೆಯುತ್ತಾರೆ: ವೋಹು ಮನವು ಅಹುರಮಝ್ದನ 'an aspect or a ray', ಎಂಬ ಈ ಹೋಲಿಕೆಯು ವಿವಸ್ವನ್ ಮತ್ತು ಮನು ಇವರಿಬ್ಬರಲ್ಲಿಯೂ ಉಂಟು, ಆಪ್ಟೆ ಸಂಸ್ಕೃತಕೋಶದಲ್ಲಿ ವಿವಸ್ವನ್ ಪದದ ಅರ್ಥ ಹೇಳುವಾಗ, 'ಸೂರ್ಯ'ವಾಚಕ ಅರ್ಥಸೂಚಿಸಿದ ಬಳಿಕ, 'ಅರ್ಜುನ' ಮತ್ತು 'ಮನು' ಎಂಬ ಈ ಹೆಸರುಗಳೂ ವಿವಸ್ವನ್ (ಪ್ರಕಾಶತತ್ವದ) ಪರ್ಯಾಯ ನಾಮಗಳು, ಎಂದೇ ಸಂಪ್ರದಾಯಬಲ್ಲವರಾದ ಕೋಶಕಾರರು ಸೂಚಿಸಿದ್ದಾರೆ.

ಇಲ್ಲಿ ಒಂದು ಸೂಕ್ಷ್ಮ ಮಾತು: ಶ್ರೀಮತ್ ಭಗವತ್ ಗೀತೆಯಲ್ಲಿ 'ಮನು'ವಿನ ಸ್ಥಳದಲ್ಲಿ ವಿವಸ್ವನ್ ಹೆಸರು ಇದೆ; ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನ್ ಅಹಂ ಎಂದು ಭಗವಂತ ಹೇಳುತ್ತಾನೆ! ನರ(ಳ)ನಿಗೆ ಉಪದೇಶಕ್ಕಾಗಿ ಬರೆದ ಗ್ರಂಥದಲ್ಲಿ ವಿವಸ್ವನ್=ಮನು ಇವನನ್ನು ಯೋಗ ಭೋದಿಸಿ, ಕಣ್ಣುಮುಚ್ಚಿಸಿ ಸಮಾಧೀ ಕೊಟ್ಟದ್ದು ಏಕೆ? ವಿವಸ್ವನ್ ಹೆಸರಿನ ಪರ್ಯಾಯವಾದ ಅರ್ಜುನ ಇನ್ನೊಂದು ಹೆಸರು. ಈ ಅರ್ಜುನ(ಪ್ರಕಾಶ ತತ್ವ), 'ಕಾಲಃ ಅಸ್ಮಿ' ಎಂಬ ಮೃತ್ಯುಸ್ವರೂಪ ಕೃಷ್ಣನಿಗೆ=ರಾತ್ರಿಗೆ ಅನುಯಾಯಿ ಆಗಿದ್ದಾನೆ, ಎಂಬ ಈ ವಿಚಿತ್ರ ಚಿತ್ರವು ಭಗವತ್ ಗೀತೆ, ಮಾನವಧರ್ಮದ ಪ್ರಕಾಶತತ್ವದ ಶತ್ರುವಾಗಿರುವುದನ್ನು ಮನಗಾಣಿಸಿ ಕೊಡುತ್ತದೆ.

ಗ್ರೀಕ್ ಸಂಸ್ಕೃತಿಯೊಳಗಿನ Nous (ಪ್ರಜ್ಞಾ ಪ್ರಕಾಶ) ಮತ್ತು mind ಇವೆರಡರಲ್ಲಿ ವಿವಸ್ವನ್ ಮತ್ತು ಮನು ಇವರೊಳಗಿನ ಸಂಬಂಧವೇ ಅಭಿಪ್ರೇತವಿದೆ. ವಿವಸ್ವನ್ ಹಾಗೂ ಮನು ಇವರೊಳಗಿನ ಅನ್ಯೋನ್ಯಕ್ಕೆ, ಈ ಸಂಪ್ರದಾಯವನ್ನು ವಿರೋಧಿಸುತ್ತಿರುವ ಭಗವದ್ಗೀತೆಯ ಪರಂಪರೆಯಿಂದಲೂ ಪರ್ಯಾಯವಾಗಿ ಬೆಂಬಲವು

ದೊರೆಯುತ್ತದೆ. ಶ್ರೀಮತ್ ಭಗವದ್ಗೀತೆಯು ವ್ಯಾಸಕೃಪೆಯಫಲ ಎಂದು ಗೀತೆಯಿಂದಲೇ ಗೊತ್ತಾಗುತ್ತದೆ. ಈ ವ್ಯಾಸನು, ಮಹಾಭಾರತವನ್ನು ನರ=ನಾರಾಯಣ ಸಂಪ್ರದಾಯದ ಪುನರುತ್ಥಾನಕ್ಕಾಗಿ ರಚಿಸಿದ್ದಾನೆಂದು ಸಂಪ್ರದಾಯ ಹೇಳುತ್ತದೆ. ವ್ಯಾಸನು, ವಿವಸ್ವನ್ ಮತ್ತು ಮನು ಇವರಲ್ಲಿ ಇರುವ ಅನ್ಯೋನ್ಯತೆಯನ್ನೇ 'ನಾರಾಯಣ' ಹಾಗೂ 'ನರ' ಇವರಿಬ್ಬರಲ್ಲಿಯೂ ಉಂಟೆಂದು ಸೂಚಿಸಿದ್ದಾನೆ. 'ಮನು(ಜ)' ಪ್ರಕಾಶತತ್ತ್ವದ ಅಂಶವಾಗಿರುವಂತೆ, ನರ(ಳ)ನು ನಾರ- ಅಯನನಿಂದ ಆಗಿದ್ದಾನೆಂದು, ಆ ಸಂಪ್ರದಾಯದ ಶ್ರದ್ಧೆ ಹೇಳುತ್ತದೆ.

ಆಪೋ ನಾರಾಃ ಇತಿಪ್ರೋಕ್ತಾಃ, ಆಪೋ ವೈ ನರಸೂನವಃ

ವಿವಸ್ವನ್ ವೈವಸ್ವತ ಮನು: ಮಾನವರು ಈ ಪ್ರಕಾಶತತ್ತ್ವದ ಉಪಾಸಕರು; ಎಂದರೆ ಈ ಬಾಳಿನಲ್ಲಿ ಅರ್ಥ: ವಿಚಾರ ಮೌಲ್ಯಗಳು ಉಂಟು, ಎಂಬ ನಿಷ್ಠೆಯಿಂದ ಸಮಾಜ; ಸಮಷ್ಟಿ ಪಾತಳಿಯ ಜೀವನ ರೀತಿಯನ್ನು ಮೆಚ್ಚಿಕೊಂಡವರು. ಆದರೆ, ನರ(ಳ) ಸಂಪ್ರದಾಯಕ್ಕೆ 'ಮಾನವ' ಜೀವನದ ರೀತಿ ಮಾನ್ಯವಿದ್ದಿಲ್ಲ. 'ವೈಚಾರಿಕ ಆಕೃತಿಗಳು ಸನಾತನವಾಗಿವೆ' ಎಂಬ ಸೂತ್ರದ ನೆನಪು ಇಲ್ಲಿ ಒತ್ತರಿಸುತ್ತದೆ. ಇಂದಿನಲ್ಲಿ ಸಹ ಈ ಬಗೆಯ ವಾದವು ಉಂಟು. ನಾಗ, ಲಿಂಗ, ರಾಮ ಎಂಬ ವ್ಯಕ್ತಿ (ನರ) ಇದ್ದಾರೆ. ಮನು-ಜ=ಮಾನವ ಎಂಬವನು ಎಲ್ಲಿಯೂ ಕಾಣಲು ದೊರೆಯುವುದೇ ಇಲ್ಲ.

ವೈವಸ್ವತ ಮನುಪ್ರಣೀತ ಮಾನವಧರ್ಮವು ಕುಸಿದು ಬೀಳಲು ತಲೆಯೆತ್ತಿದ್ದ ವಿರೋಧವು ಇಂದಿನ ವೇದದಲ್ಲಿಯೇ ಉಂಟು. ಈ ಪ್ರಾಣಿಮಾತ್ರಗಳೆಲ್ಲವೂ 'ಅಮೃತಸ್ಯನಾಭಿಃ' ಸ್ವರೂಪ ಅದಿತಿಯ ಸಂತತಿ! ಇವರೆಲ್ಲ ಕ್ರಿಮಿಕೀಟದಿಂದ ಮಾನವರ ವರೆಗೆ ಎಲ್ಲರೂ 'ಅಮೃತ-ಬಂಧವಃ'; ಅಮೃತ-ರಸದ-ರೇತದ ಮೂಲಕ ಹುಟ್ಟಿದವರೆಲ್ಲರೂ ಸಮಾನರು. 'ಅಮೃತ' ಉಪಾಸಕರು ಆತ್ಯಂತಿಕ ಅಹಿಂಸೆಯನ್ನು ಪಾಲಿಸಬೇಕೆಂಬ ಉಪದೇಶವು ಒಂದು ಕಡೆಗೆ. ಇನ್ನೊಂದು ಕಡೆಗೆ ಪ್ರಾಣಲಿಂಗ ಪಾತಳಿಯ ಮೇಲಣ ಪ್ರಚೋದನೆಗೆ ಪ್ರಾಧಾನ್ಯವಿರುವ ಈ ಸಂಪ್ರದಾಯದ ಆದಿಕವಿ ಉಶನಾಸ, 'ಶುಕ್ರ' (: ಏಕಾಕ್ಷ) ಇಂದಿನ ವೇದದಲ್ಲಿಯೇ ಇದ್ದಾರೆ. ಪುರಾಣ ಕಾಲದ 'ದೇವಯಾನೀ' ಸಂಜೀವಿನೀ ವಿದ್ಯೆಯ 'ಶುಕ್ರ'ನನ್ನು 'ಅಸುರರ ಗುರು' ಎಂಬಲ್ಲಿಯೇ ಇದು ಅಸು (ಪ್ರಾಣ) ಉಪಾಸಕರ ಸಂಪ್ರದಾಯ ಎಂಬ ಒಪ್ಪಿಗೆಯೇ ಉಂಟು. ಈ ಶುಕ್ರನಿಗೆ ಕವಿ ಕಾವ್ಯ ಎಂಬ ಪರ್ಯಾಯ ನಾಮಗಳೂ ಇವೆ.

ಆಧುನಿಕ ಕಾವ್ಯಸಾಹಿತ್ಯದಲ್ಲಿ 'ದೇವಯಾನೀ' 'ಶುಕ್ರ' ಸಂಪ್ರದಾಯದ ಉತ್ತರಾಧಿಗಳು ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ಇದ್ದಾರೆ. ಈ ಬಾಳಿನಲ್ಲಿ ಪ್ರಾಣಲಿಂಗ ಚೇತಸದ ಪಾತಳಿಯಿಂದ ಪ್ರಚೋದಿತರಾದವರು ಇರುತ್ತಾರೆ ಅಥವಾ ಪ್ರಜ್ಞಾಪ್ರಕಾಶ ಪಾತಳಿಯ ಪ್ರಚೋದನೆಯವರಾದರೂ ಇರುತ್ತಾರೆ. ಈ 'ನರ' (ಳ) ವರ್ಗದಲ್ಲಿ 'ಬುಧ'ರು-ವಿಬುಧರು ಹುಟ್ಟಿಕೊಳ್ಳತೊಡಗಿದ ಬಳಿಕ, ಮಾನವರ ಪಾತಳಿಯ ಭಾಷೆಯನ್ನು ಯೋಜಿಸಿ, ಪ್ರಾಣಲಿಂಗದ ಪ್ರಚೋದನೆಯನ್ನೇ ಚೆಂದಗಾಣಿಸಿ ಹೇಳುವ ಗತ್ತುಗಾರಿಕೆ ಕಲಿತಿದ್ದಾರೆ. ಇಂತಹ ವೃತ್ತಿಯನ್ನು 'unsocial sociability' ಎಂದಿದ್ದಾನೆ ಕಾಂಟ್ಸ್‌ಂಬ ತತ್ತ್ವಜ್ಞ. ಈ ಸಂದರ್ಭದಲ್ಲಿ ಒಂದು ಸಂಗತಿಯನ್ನು ಚೆನ್ನಾಗಿ ನೆನಪಿನಲ್ಲಿ ಇಟ್ಟುಕೊಳ್ಳುವ ಆವಶ್ಯಕತೆಯಿದೆ. ಪ್ರಾಣಲಿಂಗ ಚೇತಸದ 'ಅಮೃತ ಬಾಂಧವರ' ಈ ಪಾತಳಿಯ ಮೇಲಣ ಜೀವನ ರೀತಿಯಲ್ಲಿ ಮಾನವ ಭಾಷೆಯು ಆಕಾರ ಪಡೆದಿಲ್ಲ. ಈ ಮೂಲ ಸಂಗತಿಯನ್ನೇ ಮರೆತು ಬಿಡುವುದರಿಂದ ಮೋಸಕ್ಕೆ ಇಂಬು ದೊರೆಯುತ್ತ ಬಂದಿದೆ. ಉದಾ: 'ಆಪೋ ನಾರಾಃ' ಸ್ವರೂಪ ಸೃಜನ ಜಲದ=ನಾರ-ಅಯನ ದೇವರು. ಈ ನಾರಾಯಣನ ಪರ್ಯಾಯವಾದ ವಿಷ್ಣು, ಕೃಷ್ಣರು 'ಭಗ'-ವಂತ ಹೆಸರಿನಿಂದ ಗೀತೆಯನ್ನು ಲೋಕಕ್ಕೆ ಅರುಹಿದ್ದಾರೆ. ಆದರೆ, ಅಶ್ವತ್ಥ=ವೃಕ್ಷ (ಲಿಂಗ) ರೂಪ ಈ ದಿವ್ಯಶಕ್ತಿ ಮಾನವ ಭಾಷೆಯಿಂದ ಮಾತಾಡುತ್ತದೆ, ಎಂದು ನಂಬಿಸಲಾಗಿದೆ.

ಇದೆಲ್ಲ ಹಾಗಿರಲಿ, ಈ ಮಾನವ ಧರ್ಮ=ಸಂಸ್ಕೃತಿಯ ಆಕೃತಿಯನ್ನು ಗ್ರಹಿಸಿಕೊಳ್ಳುವುದು ಈ ಪ್ರಬಂಧದ ಗುರಿ. ವಿವಸ್ವನ್>ವೈವಸ್ವತ ಮನುವಿನಿಂದ ಪ್ರಾರಂಭವಾಗುವ 'ಯುಗಕ್ಕೆ 'ವೈವಸ್ವತಮನ್ವಂತರ' ಎಂದು ಹೆಸರು ಉಂಟು. ಈ ವೈವಸ್ವತಮನ್ವಂತರವು ಪ್ರಾರಂಭವಾದದ್ದು ಹೇಗೆ? ಮತ್ತು ಯಾವಾಗ? ಇವನ್ನು ಗ್ರಹಿಸಿಕೊಳ್ಳಲು ಶಕ್ಯವೆ? ಎಂಬ ಪ್ರಶ್ನೆ ಇಲ್ಲಿ ಪ್ರಸ್ತುತವಿದೆ.

ವೈವಸ್ವತ ಮನ್ವಂತರದ ಪೂರ್ವೋತ್ತರ

ವಿವಸ್ವನ್ ಅಥವಾ ವೈವಸ್ವತ ಎಂಬುದು, 'ಮನು'ಜರಿಗೆಲ್ಲ ಹೆಸರು. ಈ 'ಮನು'ಜನು ದ್ವಿ-ಜ. ಇದು ಎರಡನೆಯ ಜನ್ಮ. ಈ ಮನುಜನ ಮೊದಲನೆಯ ಜನ್ಮವು 'ತನು'ಜನದು.* 'ತನು' ಎಂದು ಶರೀರ, ದೇಹ-ಲಿಂಗಕ್ಕೆ ಹೆಸರು. ಆ ಪುರಾತನರ ನಿಷ್ಠೆಯ ಸ್ವರೂಪವನ್ನು ಗ್ರಹಿಸಿಕೊಳ್ಳದೆ, ಈ 'ಮನು'ಜ, ಮತ್ತು ತನು-ಜ ಈ ಪರಿಭಾಷೆಯು ಒಳಗೊಳ್ಳುತ್ತಿರುವ ಆಳವಾದ ಅರ್ಥದ ಪಾತಳಿಯು ಅರಿಕೆಗೆ ಬರಲಾರದು. ಈ ಪರಿಭಾಷೆಯ ಅರ್ಥವನ್ನು ಇಂದಿನ ದೃಷ್ಟಿಯಿಂದ ಅಥವಾ ತರ್ಕ, ಅನುಮಾನದಿಂದ ಊಹಿಸಿ ಹೇಳುವ ಅನ್ಯಾಯವು ಆಗಬಾರದೆಂಬ ಸಂಕಲ್ಪವು ಈ ಅನ್ವೇಷಣೆಯ ಉದ್ದಕ್ಕೂ ಉಂಟು. 'ಮನು' ಈ ಪಾರಿಭಾಷಿಕ ಪದವು ಇಂದಿನ ವೇದದಲ್ಲಿಯೂ ಇದೆ. 'ಮನು' ಪದದ ವಿಶೇಷಣದಂತೆ ಇರುವ ವಿವಸ್ವತ್, ವೈವಸ್ವತ ಈ ಮಾತೂ ಉಂಟು. 'ಮನು' ಎಂಬ ಪದಕ್ಕೆ ಮಾನವ, ಮಾನುಷ ಎಂಬೀ ಬಗೆಯ ಅರ್ಥವೂ ಇದೆ.

ಈ 'ಮನು' ಒಂದು ವಿಶಿಷ್ಟವ್ಯಕ್ತಿಯಲ್ಲ, 'ಮಾನವರು' ಈ 'ಮನು'ವಿನಿಂದ ಆದವರು; ಇವರು ಮನುಜರು, ಎಂಬಲ್ಲಿ ಲೈಂಗಿಕ; ಸ್ತ್ರೀ-ಪುರುಷ ಸಂಬಂಧದ ಜನ್ಮವು ಅಭಿಪ್ರೇತವಿಲ್ಲ. ಪ್ರಜ್ಞೆಯ ಅಂಗವಾದ 'ಸ್ವ-ಉಪಜ್ಞೆ' ಅಥವಾ ಮನಃಶಕ್ತಿಯ ಪ್ರೇರಣೆ, ಪ್ರಚೋದನೆಯಿಂದ ಬಾಳದಾರಿಯನ್ನು ಕ್ರಮಿಸುವ ಸ್ವಭಾವದವನು. ಇದು ಹುಟ್ಟುಗುಣ; ಯಾರ ಹೇಳಿಕೆಯಿಂದ ಉಂಟಾಗಬಲ್ಲ ಸ್ವಭಾವವಲ್ಲ. ಭಾರತೀಯ- ಎಂದರೂ ಸರಿ; ಆದರೆ, ಅನುಕೂಲಕ್ಕಾಗಿ, ಜ್ಞಾತ ಸಾಂಸ್ಕೃತಿಕ ಸಂದರ್ಭದಿಂದ ಮಾತಾಡುವುದೇ ಲೇಸೆಂದು ಭಾರತೀಯ ಸಾಂಸ್ಕೃತಿಕ ಸಂದರ್ಭದಲ್ಲಂತೂ ನನಗೆ ನಿಶ್ಚಿತವಾಗಿ ಕಾಣುತ್ತಿರುವ ಸಂಗತಿ. ಇದು: ಈ ಮನುಜ; ಮಾನವಧರ್ಮ ಸಂಸ್ಕೃತಿಯನ್ನು ಜಾಗತಿಕ ವಿಶ್ವನಿಯಮದ ಅನುಸಂಧಾನದಲ್ಲಿ ಕಂಡುಹಿಡಿದು ಬಾಳುವ ಮೂಲಪ್ರಯತ್ನವು ವೈವಸ್ವತ ಸಂಪ್ರದಾಯದ್ದು. ಭಾರತೀಯ ಪಡಿಯಚ್ಚಿನ 'ಮಾನವಧರ್ಮ: ಸಂಸ್ಕೃತಿ'ಯ ಮೂಲಧಾರಣೆಯು (concept), ಇದು ಯಾವುದೊಂದು ವ್ಯಕ್ತಿಯ ಭೂಮಿಕೆಯಿಂದ ಕಲ್ಪಿಸಿದ, ಸಂಕಲ್ಪನೆ ಅಥವಾ ಪರಿಕಲ್ಪನೆ (invention) ಅಲ್ಲ. ಈ ವೇದದಲ್ಲಿ ದೊರೆವ, 'ತನು' 'ತನೂನಪಾತ್' ಈ ಪದವು 'ಮನು-ಜ' ಈ ವೈವಸ್ವತ ಸಂಪ್ರದಾಯದ ಪಾರಿಭಾಷಿಕ ಪದಕ್ಕೆ ಪ್ರತಿಯಾಗಿ ಇರುವ ನರ(ಳ) ಸಂಪ್ರದಾಯದ ಮೌಲಿಕ ಮಹತ್ವದ ಇನ್ನೊಂದು ಪಾರಿಭಾಷಿಕ-ಪದವಾಗಿದೆ.

ಮನಃಶಕ್ತಿಯ ಪ್ರಚೋದನೆಯಿಂದ ಬಾಳುವ ಹುಟ್ಟು ಸ್ವಭಾವದ ವರ್ಗವು 'ಮನು'ಜರದು ಇರುವಂತೆ, ತನುವಿನ (ಪ್ರಾಣಲಿಂಗದ ಸ್ತ್ರೀ-ಪುಂ ಎರಡೂ) ಪ್ರಚೋದನೆಯಿಂದ ಬಾಳುವ ಹುಟ್ಟು-ಪ್ರವೃತ್ತಿಯ ವ್ಯಕ್ತಿಗಳು ತನುಜ=ತನೂನಪಾತ್ ಸಂಪ್ರದಾಯದವರು ಆಗುತ್ತಾರೆ!

ಈ ಕಟ್ಟಡವನ್ನು ಮೂಲದಲ್ಲಿ ಕಂಡದ್ದು ಗ್ರಹಿಸಿಕೊಂಡದ್ದು, ಪ್ರಜ್ಞಾನೇತ್ರದ ಮನು=ವೈವಸ್ವತನ ಸಂಪ್ರದಾಯದ ಪ್ರತಿಭಾ ದೃಷ್ಟಿಯೇ ಇರಲಿಕ್ಕೆ ಬೇಕು. 'ಮಾನುಷ' ಭಾಗವು ಸೇರಿಕೊಳ್ಳದ ಪ್ರಯತ್ನವು ಪ್ರಾರಂಭದಲ್ಲಿ ಇರಲಿಕ್ಕೆಬೇಕು. ಆದರೆ, ಆ ಬಳಿಕ ಸಂಪ್ರದಾಯದ ಕೈವಾಡವು ಸೇರಿಕೊಳ್ಳುವ ಶಕ್ಯತೆಯನ್ನು ಅಲ್ಲಗಳೆಯಲು ಆಗುವುದಿಲ್ಲ. ಇಂದಿನ ಋಗ್ವೇದ ಸಂಹಿತೆಯ ಕಟ್ಟಡವು ಈ ಸಂದೇಹಕ್ಕೆ ಇಂಬನ್ನೀಯುತ್ತಿದೆ. ಇದೇನೇ ಇರಲಿ ವೈವಸ್ವತ ಮನ್ವಂತರಕ್ಕೂ ಮುಂಚೆ-ಎಂದರೆ, ಆಧುನಿಕ ಭೌತಶಾಸ್ತ್ರದ ವಿಕಾಸತತ್ವದ ಭೂಮಿಕೆಯಿಂದ, ಮಾನವನ

---

* ಭಾಷೆಯಲ್ಲಿ ಹಲವು ಶಬ್ದಪ್ರತಿಮೆಗಳನ್ನು ಒಂದೇ ಅರ್ಥವೆಂದು ಭಾವಿಸಲಾಗುತ್ತದೆ. ದ್ವಿಜ, ಬ್ರಾಹ್ಮಣ, ಎಂಬಂತಹ ಶಬ್ದಪ್ರತಿಮೆಗಳಲ್ಲಿ ಏಕಾರ್ಥವಿಲ್ಲದೆ, ವಿಶಿಷ್ಟ ಸಾಂಸ್ಕೃತಿಕ ಅರ್ಥವೂ ಇರುತ್ತವೆ. ಶಂಬಾ ಈ ಬಗೆಯ ಸಾಂಸ್ಕೃತಿಕ ಶಬ್ದಪ್ರತಿಮೆಯ ಮೂಲಕ ಸಾಮಾಜಿಕ ಆಚಾರ ಹಾಗೂ ಸಾಂಸ್ಕೃತಿಕ ಇತಿಹಾಸದ ಹೊರಳುದಾರಿಗಳನ್ನು ತಿಳಿಯುತ್ತಾರೆ. 'ಜನ್ಮನಾ ಜಾಯತೇ ಶೂದ್ರಃ ಕರ್ಮಣಾ ದ್ವಿಜ ಉಚ್ಯತೇ' ಎಂಬ ಪಡೆನುಡಿಯೊಂದುಂಟು. ಇಲ್ಲಿ 'ದ್ವಿಜ' ಎಂಬುದು ಸಾಂಸ್ಕೃತಿಕಾರ್ಥದಲ್ಲಿ ಬಳಕೆಗೊಂಡಿದೆ ಎಂಬುದೇ ಗೃಹೀತ ಸತ್ಯ. (ಸಂ)

ಪ್ರಾದುರ್ಭಾವಕ್ಕೂ ಮುಂಚೆ ಈ ಜೀವನದಲ್ಲಿ ವಾನರ-ನರ ವರ್ಗದ ವರೆಗಿನ ಪ್ರಾಣಿವರ್ಗವು ಇತ್ತು, ಇರಲೇಬೇಕು ಎಂದು ಬಗೆದರೆ ತಪ್ಪು ಆಗಲಾರದು. ಫ್ರೆಂಚ್ ಸಂಶೋಧಕ ಲೆವ್ಹಿಸ್ಟ್ರಾಸ್ ಕಂಡಿರುವಂತೆ, ಮಾನವನ ಇತಿಹಾಸ (ಆಯಾ ಭಾಗದ ಇತಿಹಾಸಗಳು) "...Continuation of mythology" ಎಂದು ಬಗೆಯಲು ಸಂಕೋಚಪಡುವ ಕಾರಣವಿಲ್ಲ. ಭಾರತೀಯ ಸಂದರ್ಭದ 'ಶೃಂಗಿ-ಮುನಿ', ಸುಮೇರಿನತ್ತಣೆನ 'ಎಂಕಿಡು' ಆದಿನರವರ್ಗದ ಸೂಚಕ ಕಥೆಗಳು ಈ ಬಗೆಯ ಉದಾಹರಣಗಳಲ್ಲಿ ಕೆಲವು.

ಭಾರತೀಯ ಪುರಾತನ ಪರಿಭಾಷೆಯಲ್ಲಿ ಕಾಣಲು ದೊರೆವ (ವಾ-ನರ) → ನರ, ಮನುಜ ಈ ಪಾರಿಭಾಷಿಕ ಪದಗಳು ಆಧುನಿಕ ಶಾಸ್ತ್ರೀಯ ದೃಷ್ಟಿಕೋನಕ್ಕೂ ಅವಿರೋಧಿಯಾಗಿವೆ. ಪಾಶ್ಚಾತ್ಯ ಸಂಶೋಧಕರು, ಕ್ರೈಸ್ತ ಪಂಥೀಯ ದಿವ್ಯಾಧ್ಯಾತ್ಮದೊಳಗಿನ 'Creature' ಈ ಪದವನ್ನು 'ನರ(ಳ)' ಎಂಬರ್ಥದಲ್ಲಿ ಯೋಜಿಸದೆ-ಪ್ರಯೋಜನ ಪಡೆಯದೆ ಹೋದುದರಿಂದ, ವ್ಯಾಲ್ಲಾಸನ 'Missing link' ಈ ನಿಷ್ಕರ್ಷವು ಇನ್ನೂ ಸಂಪೂರ್ಣವಾಗಿ ಶಿಷ್ಟಮಾನ್ಯವಾಗದೆ ಈ ವಿಕಾಸಕ್ರಮದ ಗ್ರಹಿಕೆಯಲ್ಲಿ ಒಂದು ಹೊಂಡ (lacuna) ಉಳಿಯುತ್ತಲೆ ಇದೆ. ವೈವಸ್ವತ ಮನ್ವಂತರವು ಪ್ರಾರಂಭವಾಗುವುದಕ್ಕೂ ಮುಂಚೆ, ಇಂದ್ರಿಯ ಪೂಜಕರ 'ತನೂನಪಾತ್' ಅಥವಾ 'ಅಪಾಂ-ನಪಾತ್' (ನೀರೆಯ ಉಡಿಯೊಳಗಿನ ಮಗು) ದೇವತಾ ಉಪಾಸನಾಪರಂಪರೆಯ ನರ(ಳ) ಸಂಪ್ರದಾಯವು ಅಸ್ತಿತ್ವದಲ್ಲಿ ಇತ್ತು. ಇದು ಭಾಷಾಪೂರ್ವ ಜೀವನ ರೀತಿಯ ನಡೆವಳಿ, ಎಂಬ ಸಂಗತಿಯೂ ನಿಶ್ಚಿತವಿದೆ. ಇಷ್ಟು ನಿಶ್ಚಯಾತ್ಮಕವಾಗಿ ಹೇಳಲು ಶಕ್ಯವಾಗುತ್ತಿರುವ ಕಾರಣವು ಸ್ಪಷ್ಟವೇ ಇದೆ. 'ಅಪಾಂನಪ್ತೃ' (ನೀರೆಯ ಗರ್ಭಸ್ಥ ಶಿಶು) ಎಂದರೆ ಇವನೇ, 'ಭಗ'-ವಂತ ಹೆಸರಿನಿಂದ ಪೂಜೆಗೊಂಬ ಗರ್ಭಗುಡಿಯ ಕತ್ತಲೆಯ ಆವರಣದಲ್ಲಿ ಅಡಗಿರುವ, ಏನೆಲ್ಲ ದೇವರುಗಳ ಪ್ರತಿನಿಧಿ.

ವಿವಸ್ವನ್ (ಮನು) ಸಂಪ್ರದಾಯವನ್ನು ಮೆಟ್ಟಿ ನಿಂತಿರುವ 'ಭಗ'ವತ್ ಗೀತೆಯ ಕೇಂದ್ರಸ್ಥ ಪಾತ್ರವಾದ ಕೃಷ್ಣ (ವಿಷ್ಣು) ಉಪಾಸಕರ ದೈವತಗಳು ವೇದದಲ್ಲಿ 'ಅಪಾಂನಪ್ತೃ' 'ತನೂ-ನಪಾತ' ಎಂಬೀ ಬಗೆಯ ನಾಮಾಂತರಗಳಿಂದ ಪೂಜಿಸಲ್ಪಡುತ್ತಿವೆ. ಆದಕಾರಣ, ವೈವಸ್ವತಮನ್ವಂತರವನ್ನು ಎದುರಿಸಿ ನಿಂತಿರುವ ಇಂದಿನ ಸ್ವಯಂಭು>ಸ್ವಾಯಂಭುವ ನಾಮಾಂತರದ 'ಮನು' ಮೊಗವಾಡದ ನರ(ಳ) ಸಂಪ್ರದಾಯದ ಪುರಾತನರೇ, ವಿವಸ್ವಂತನ=ಮಾನವಧರ್ಮದ ಪ್ರಾದುರ್ಭಾವಕ್ಕೂ ಮುಂಚೆ, ಪ್ರಪಂಚದಲ್ಲಿ ಪ್ರಭಾವಶಾಲಿಯಾಗಿರಲಿಕ್ಕೆ ಬೇಕು, ಎಂಬುದು ನಿಃಸಂದಿಗ್ಧವಾಗಿ ಹೊರವಡುತ್ತಿದೆ. ಇದು ನಿಜವಿದ್ದರೆ, ತನೂ-ನಪಾತ್ (Son of himself)=ಸ್ವಯಂ-ಭೂ ತನ್ನ ದೇಹದಿಂದ ತನ್ನತಾನೇ ಜನಿಸುವನು, ಅಥವಾ ಅಪಾಂ-ನಪ್ತೃ (ನೀರೆಯ ಗರ್ಭಸ್ಥ ಶಿಶು) ಈ ದೇವತಾ ಉಪಾಸಕರು-ನರ(ಳ ಸಂಪ್ರದಾಯದವರು, 'ಪಾಶುಪತ'=ಪಶುಗಳ ಹಾಗಿನ ಜೀವನ ರೀತಿಯನ್ನು ತೊರೆದು 'ಮನು'ಜತ್ವದ ದಿಕ್ಕಿಗೆ ತಿರುಗಿದ್ದು ಯಾವಾಗ? ಈ ತಿರುವಿಗೆ ಕಾರಣ ಏನು? ಈ ನರ(ಳ)ನಲ್ಲಿ ಪ್ರಜ್ಞೆ, ಸ್ವ-ಉಪಜ್ಞೆ-ಒಳ ತಿಳಿ(ವಿನ) ಬೆಳಕು-ಕಾಣಿಸಿಕೊಳ್ಳಲು ಕಾರಣವೇನು?

ಸದೋಷ ಸಂಶೋಧನ ಪದ್ಧತಿಯಿಂದಾಗಿ, ಈ 'ಮಾನವನ' ಪ್ರಾದುರ್ಭಾವದ ಪಾರ್ಶ್ವಭೂಮಿ, ಇಂದಿಗೂ ಸುಸ್ಪಷ್ಟವಾಗಿ ಕಣ್ಣಳತೆಯಲ್ಲಿ ಬರದೆ ಉಳಿಯುತ್ತಿದೆ. ಹಿಂದಿನ ತಲೆಮಾರಿನ ಸಂಶೋಧಕರು ಜಾರಿದ ಎಡೆಯನ್ನು, ಆಧುನಿಕ ಸಂಶೋಧಕರಲ್ಲಿ ಡಾ. ಕ್ರೋಬರ್, ಡಾ. ಡುಬ್‌ಝೊನಸ್ಕಿ ಪ್ರಭೃತಿಗಳು ಬೆರಳಿಟ್ಟು ಹೇಳಿದ್ದಾರೆ. ಭೌತ-ಸ್ಥಳ-ಕಾಲದ (Space-time) ಸಂದರ್ಭದ ಭೂಮಿಕೆಯ ಮೇಲೆ ಸಂಸ್ಕೃತಿಯು ಉದಯವಾಯಿತೆಂಬ ಗ್ರಹಿಕೆಯು ನಿರಾಧಾರವಿದೆ, ಎಂದು ಈಗ ದೃಢಪಟ್ಟಿದೆ. ಉದಾ: ಈಜಿಪ್ತಿನಲ್ಲಿ 'ಸೂರ್ಯ'ನ ಉಪಾಸನೆಗೆ ಪ್ರಾಧಾನ್ಯ ಬರಲು ಅಲ್ಲಿಯ ಭೌಗೋಲಿಕ ಪರಿಸರವೇ ಕಾರಣ ಎಂಬ ಹಾಗಿನ ಡಾ. ಫ್ರಾಂಕ್‌ಫೋರ್ಟ ಪ್ರಭೃತಿಗಳ ನಿಷ್ಕರ್ಷವು ಸದೋಷವಿದೆ.[೧]

ಈಜಿಪ್ಟ್ ಭೂಪ್ರದೇಶವು ಸಪಾಟಾಗಿದೆ. ಪರ್ವತಾವಳಿಗಳ ಆತಂಕವಿಲ್ಲದೆ ಸೂರ್ಯೋದಯವನ್ನು ಅಲ್ಲಿ ಕಾಣಬಹುದಾಗಿದೆ. ಸೂರ್ಯನ ಈ ಪ್ರಭಾವವು ಅಲ್ಲಿಯ ಸೂರ್ಯಪೂಜೆಗೆ ಕಾರಣವಾಗಿದೆ ಎಂಬ ಗ್ರಹಿಕೆಯು ಸದೋಷವಿದೆ. ಈಜಿಪ್ಟಿನಲ್ಲಿ ಸೂರ್ಯಪ್ರತಿಮೆಗಳು ವಿಪುಲವಾಗಿ ದೊರೆಯುತ್ತಿರುವುದು ನಿಜ. ಆದರೆ, ಈ ಸೂರ್ಯನು ನಾಗನ ಆ-ಲಿಂಗನದಲ್ಲಿ ಇರುತ್ತಾನೆ! ನಾಗನ ಹೆಡೆಯ ಮೇಲಣ 'ಕೆಂಪುರತ್ನ'ವೂ ಎಂಬಂತೆ ಸೂರ್ಯನು ಇರುವ ಪ್ರತಿಮೆಗಳೂ ದೊರೆಯುತ್ತವೆ!

ಡಾ. ಫ್ರಾಂಕ್‌ಪೋರ್ಟ್ ಪ್ರಭೃತಿ ಸಂಶೋಧಕರಿಗೆ ಫಕ್ತ ಸೂರ್ಯ ಕಂಡನು! ನಾಗ(ಲಿಂಗ) ಕಾಣಲೇ ಇಲ್ಲ! 'ಧರ್ಮ'ದ ಪ್ರಚೋದನೆಗೆ ಬಾಹ್ಯಪರಿಸರವು ಕಾರಣವಲ್ಲ. ಇಂದು ಈ ಮಾನವ, ತನ್ನೊಳಗಿನ ಸಹಜ-ಅಂತಃಪ್ರಚೋದನೆಗೆ ಪ್ರಜ್ಞೆ : Wisdomಗೆ, ಸುತ್ತಲಿನ ಆಗುಹೋಗುಗನ್ನು ಗ್ರಹಿಸಿಕೊಳ್ಳುವ ಸೂಕ್ಷ್ಮ ಸಂವೇದನೆಗೇ ಪ್ರಾಧಾನ್ಯವು ಪ್ರಾಪ್ತವಾಗಿರುವ, ಧನಸಂಪಾದನೆಯ ಕೌಶಲದ ಯಂತ್ರವಾಗಿ ಪರಿಣಮಿಸಿರುವ, ಅಥವಾ ಹೆಚ್ಚಾದರೆ ಬಾಹ್ಯ ಸ್ಥಾನ-ಮಾನ-ಕೀರ್ತಿಯ ಬೆಂಬತ್ತಿರುವ ಈ 'ಮನು'ಜನೆಂಬ ಪ್ರಾಣಿಯು ವೈಫಲ್ಯಗಳನ್ನು ಎದುರಿಸುವಾಗ ವಿಹ್ವಲವಾಗಿ, 'ಧರ್ಮ'ದ ಆವಶ್ಯಕತೆಯನ್ನು ಕಾಣುತ್ತಿದ್ದಾನೆ! ಕಾಮ್ಯಕರ್ಮ ಪ್ರೇರಕ ಸತ್ಯನಾರಾಯಣಾದಿ ದೇವತಾನುಗ್ರಹಕ್ಕೆ ಹಂಬಲಿಸಿ ಧಾರ್ಮಿಕತೆಯ ನಾಟ್ಯವು ನಡೆಯುತ್ತದೆ. 'ಬುವಾ' 'ಬಾಬಾ'; ಅಪ್ಪಗಳು, ಸಿದ್ಧರುಗಳನ್ನು ಹುಡುಕಿಕೊಂಡು ಅವರಿಗೆ ಶರಣಾಗತರಾದಲ್ಲಿ ಇವರು ಮಾನವತ್ವಕ್ಕೆ ಎರವಾಗುತ್ತಿದ್ದಾರೆ! ಮಂತ್ರಮಾಟ ಮಾಡಿಸಿ ಕಾರ್ಯ ಗೆದೆಯಬೇಕೆಂಬ ಹಂಬಲವು ಉಚ್ಚಪದಸ್ಥರೆಂಬವರಲ್ಲೂ ಉಂಟು. ಧರ್ಮ: ಸಂಸ್ಕೃತಿಯ ಸತ್ಯಾನ್ವೇಷಣೆಯಲ್ಲಿ ಭೌತ ಬಾಹ್ಯಪರಿಸರಕ್ಕೆ ತೀರ ಗೌಣಸ್ಥಾನವಿದೆ. ಆರ್ಯ-ದ್ರಾವಿಡ, ಎಂಬೀ ಬಗೆಯ ಜನಾಂಗದ ಸಂದರ್ಭದಿಂದ ಧರ್ಮ-ಸಂಸ್ಕೃತಿಯ ಅನ್ವಯಾರ್ಥವು ಸಮರ್ಪಕವಾಗಿ ಗೊತ್ತಾಗುತ್ತಿಲ್ಲ. ಈ ಜೀವನ ವಿಶ್ವವನ್ನು ಕಾಲತತ್ತ್ವವು ರೂಪಿಸುತ್ತದೆ. ಆದಕಾರಣ, ಧರ್ಮ: ಸಂಸ್ಕೃತಿಯ ಪೂರ್ವೋತ್ತರಗಳನ್ನು, ಅದು ಆಕಾರ ಪಡೆದ, ಆಕಾರ ಪಡೆಯುತ್ತಿರುವ ಕಾಲತತ್ತ್ವದ ಆಕೃತಿ-ಸ್ವರೂಪದ ಸಂದರ್ಭದಿಂದ ಅರಿಯುವುದೇ ಸಮರ್ಪಕ ಮಾರ್ಗವೆಂದು, ಎಂದು ಇತ್ತೀಚಿನ ಶೋಧಗಳಿಂದ ದೃಢಪಟ್ಟಿದೆ.

ಈ ಕಾಲತತ್ತ್ವ ಉಭಯ ಸ್ವರೂಪದ್ದು

ಸ್ಥಲ(ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ). ಈ ವಿಭಾಗದ್ವಯದ ಪರಸ್ಪರ ಸಂಪರ್ಕ ಸಂಬಂಧದಿಂದಾಗಿ ಉಂಟಾಗುವ ವೃತ್ತಾಕೃತಿಯ [0] ಕಾಲಗತಿ. ಇದನ್ನು (ಸಂ)ಭವ=ಚಕ್ರ ಅಥವಾ ಕಾಲಚಕ್ರ ಎಂಬ ಹೆಸರಿನಿಂದ ಗುರುತಿಸಲಾಗಿದೆ. ಆದರೆ, ಸ್ಥಲ(ದೇಹ) ಮತ್ತು ಕಾಲ (ಪ್ರಾಣಲಿಂಗ) ಇವೆರಡರ ಅನ್ಯೋನ್ಯತೆಯಲ್ಲಿ ಉಂಟಾಗುವ ಈ ವೃತ್ತಾಕೃತಿಯನ್ನು [O]'ಕಾಲ' ಎಂದು ಕರೆಯಲಾಗುತ್ತಿರುವಲ್ಲಿ ಸಂಭ್ರಮಕ್ಕೆ ಇಂಬು ದೊರೆಯುತ್ತದೆ. ಏಕೆಂದರೆ ವೃತ್ತಾಕೃತಿ [O] ಇದು, ನಿಜವಾದ 'ಕಾಲ'-ಗತಿಮಂತ ಕಾಲ- ಅಲ್ಲವೇ ಅಲ್ಲ. ಇದು ಸಂಭ್ರಾಮಕ ಕಾಲಗತಿ. ದೇಹ(ಸ್ಥಳ) ಮತ್ತು ಪ್ರಾಣಲಿಂಗ ಚೇತಸ (ಕಾಲ) ಇವೆರಡನ್ನೂ ರೂಪಿಸುತ್ತಿರುವ ಆಳುತ್ತಿರುವ ಈ 'ಕಾಲ'ವು, ದೇಹ (ಸ್ಥಲ)ದೊಡನೆ ಬದ್ಧ, ಲೈಂಗಿಕ ಕ್ರಿಯಾಪ್ರಚೋದಕ ಶಕ್ತಿಯಾಗಿದೆ. ಆಗಾಮೀ ನಾಳೆಗಳತ್ತ ಅವ್ಯಾಹತವಾಗಿ ಸಾಗಿರುವ, ನಿನ್ನೆ-ಇಂದುಗಳೊಡನೆ ಅವಿಗಲಿತ ಸಂಬಂಧವಿರುವ, ವಿಭಾಗತ್ರಯದ 'ಪ್ರಕಾಶ' ರೂಪ, ಪ್ರಕಾಶತತ್ತ್ವ ಪ್ರೇರಕವಾಗಿರುವ ಈ ಕಾಲವೇ ನಿಜವಾದ ಕಾಲ. ಇವೆರಡರಲ್ಲಿ ಸಂಭ್ರಾಮಕ ಕಾಲದ ಸ್ವರೂಪಕ್ಕೂ 'ಕಾಲ' ಎಂದೇ ಹೆಸರು ಇರುವುದರಿಂದ, ಈ ಉಭಯ ಕಾಲತತ್ತ್ವದ ಪ್ರಭಾವಗಳ ಬಗೆಗೆ ಸ್ಪಷ್ಟತೆ ಇಲ್ಲದ್ದರಿಂದ, ಈ ಮಾನವಜೀವನ ವಿಶ್ವವನ್ನು ಸರಿಯಾಗಿ ಗ್ರಹಿಸಿಕೊಳ್ಳಲು ಶಕ್ಯವಾಗುತ್ತಿಲ್ಲ. ಸ್ಥಳ-ಕಾಲದ ಸಂದರ್ಭದ ಕಾಲವನ್ನು, ಲೈಂಗಿಕ ಕಾಮನಾ ಪ್ರಚೋದಕ ಕಾಲಶಕ್ತಿ ಎಂದು ಹೇಳಬಹುದಾಗಿದೆ. 'Time flux' ಎಂದು ಭೌತಶಾಸ್ತ್ರಜ್ಞರು ಕರೆವ ಕಾಲವೇ ಇದು. ಸ್ಥಲ(ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಇವೆರಡರ ಸಂದರ್ಭದ ಲೈಂಗಿಕ ಪಾತಳಿಯ ಮೇಲಣ ಈ ಗತಿಯು, ವೃತ್ತಾಕೃತಿ [O] ಇರುವ ಈ ಸಾಂಕೇತಿಕತೆ, ನಿಸರ್ಗದ ಅಂಗವಾಗಿರುವ ಈ ಸೋಜಿಗವು ಅಭ್ಯಸನೀಯವಿದೆ. ಇದರ ಅರ್ಥದ ಪದರುಗಳ ಆಳವು-ಉದ್ಬೋಧಕವಾಗಿವೆ.

ಈ ದೇಹ (ಸ್ಥಲ) ಮತ್ತು ಪ್ರಾಣಲಿಂಗಚೇತಸ (ಕಾಲ) ಇವೆರಡರ ಸಂಪರ್ಕದಲ್ಲಿ-ಇದರ ಪ್ರಭಾವದಲ್ಲಿ-ಸಿಲುಕಿದವರಿಗೆ (ನರ[ಳ]ರಿಗೆ ಸಹ) ಈ ಬಾಳು ಅರ್ಥಶೂನ್ಯ [O] ಎಂದು ಎನಿಸುತ್ತದೆ! ಜೀವನದ ವೃತ್ತಾಕೃತಿಯ 'ಗತಿಯ ಪ್ರಭಾವದಲ್ಲಿ, ಕಣ್ಣಿಗೆ ಕತ್ತಲೆಯು ಕಾಣತೊಡಗುವುದೇ ಈ 'ಅರ್ಥಶೂನ್ಯ' ಅಥವಾ 'ಶೂನ್ಯಅರ್ಥ' ದೃಷ್ಟಿಕೋನವು ಉದ್ಭವಿಸಲು ಕಾರಣವಿರಲಿಕ್ಕೆಬೇಕು. ಚಿಕ್ಕಂದು "ಕಳ್ಳೀ ಮಳ್ಳೀ ಕಪಾಟ ಮಳ್ಳೀ...." ಎಂದು ಏನೇನೋ ಗೊಣಗುತ್ತ ಮಕ್ಕಳು ತಮ್ಮ ಮೈಸುತ್ತ ತಾವೇ ಗಿರ್-ಗಿಮ್ ಎಂಬಂತೆ ತಿರ್‍ರನೆ ತಿರುಗುತ್ತವೆ. ಈ ಆಟವಲ್ಲಿ ಕಣ್ಣಿದರು ಕತ್ತಲು ಕವಿದಂತೆ ಎನಿಸಿ, ತಲೆತಿರುಗುವ ಅನುಭವದೊಡನೆ ನೆಲದ ಮೇಲೆ ಕುಸಿಯುವುದುಂಟು. ಈ ಉದಾಹರಣದ ಮೂಲಕ, ವೃತ್ತಾಕೃತಿಯ ಈ ಕಾಲಗತಿಯನ್ನು ಗ್ರಹಿಸಿಕೊಳ್ಳಲು ಸುಲಭವಾಗಲಿದೆ, ಇದು ನೆಲಮುಗಿಲನ್ನು ವ್ಯಾಪಿಸಿನಿಂತ ಕತ್ತಲೆಯ ವೃತ್ತಾಕೃತಿಯನ್ನು (ಕಂಬವನ್ನು)ನಿರ್ಮಿಸುತ್ತದೆ. ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗಚೇತಸ) ಇವೆರಡರ ಸಂದರ್ಭದ ವೃತ್ತಾಕೃತಿಯಲ್ಲಿ [O], ಅಂತರಿಕ್ಷಸ್ಥ 'ಅವಕಾಶ'ದ ಈ ಟೊಳ್ಳಿನಲ್ಲಿ ಅರ್ಥವಾಗದ, ಅರ್ಥಕ್ಕೆ ಎಟಕದ ಬರಿ ಕತ್ತಲೆಯೇ ಕಾಣಿಸಿಕೊಳ್ಳಲು, ಇದರ ಗತಿ ವಕ್ರ-ವೃತ್ತಾ ಕೃತಿಯದು ಇರುವುದೊಂದೇ ಕಾರಣವಲ್ಲ; ಸ್ಥಳ ಮತ್ತು ಕಾಲ ಇವೆರಡೂ ಒಂದರದೆ ಎರಡು ತುಂಡು, ತತ್ತ್ವತಃ ಬೇರೆಯಲ್ಲ! ಈ ಅಂಶವನ್ನು ಕಂನಡ ವ್ಯಾಕರಣಕಾರ ಗ್ರಹಿಸಿಕೊಂಡಿದ್ದನ್ನು ಹಿಂದೊಮ್ಮೆ ಸೂಚಿಸಿ ಆಗಿದೆ= ಅದು+ದು=ಅಂದು, ಇದು+ದು=ಇಂದು. ಗತಿಯಲ್ಲಿರುವ ಸ್ಥಲವೇ 'ಕಾಲ' ಎಂಬ ಭ್ರಾಂತಿ ಇರುತ್ತದೆ! ಸ್ಥಿತ 'ಕಾಲ'ವು ನೆಲವು ಗತಿಮಂತವಾಗುವಾಗ ಅದು 'ಕಾಲ' ಎನಿಸುತ್ತದೆ! ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ) ಇವು ಅನಿಶ್ಚಿತ ಸ್ವರೂಪದವು ಇರುವುದರಿಂದ ಸ್ಥಳವೇ ಕಾಲ, ಕಾಲವೇ ಸ್ಥಳ ಆಗುವಿಕೆಯಿಂದಲೂ ಬಾಳಿನಲ್ಲಿ ಅರ್ಥಮೌಲ್ಯಗಳಿಗೆ ಏನೂ ಇಂಬು ಇಲ್ಲ. ಕ್ರೈಸ್ತ ದಿವ್ಯಾಧ್ಯಾತ್ಮಕ್ಕೆ ತಾತ್ತ್ವಿಕ ಹಿನ್ನೆಲೆಯನ್ನು ಒದಗಿಸಲು ಪ್ರೊ. ಎಸ್. ಅಲೆಕ್ಸಾಂಡರ್ ಹೇಳುವುದೇನಂದರೆ-

> "Space and Time have no reality apart from each-other; but are aspects or attributes of one reality"[೨]

ಕ್ರೈಸ್ತಪಂಥೀಯ ದಿವ್ಯಾಧ್ಯಾತ್ಮದ ಶ್ರದ್ಧೆಯಂತೆ ಸ್ಥಲ(ದೇಹ) ಮತ್ತು ಕಾಲ (ಪ್ರಾಣಲಿಂಗ) ಇವೆರಡೂ ನಿತ್ಯ ಮಿಥುನಯೋಗದಲ್ಲಿ ಇವೆ. ಭಾರತೀಯ ದಿವ್ಯಾಧ್ಯಾತ್ಮದಲ್ಲಿಯೂ ವೇದದಲ್ಲಿಯೇ ಈ ಶ್ರದ್ಧೆಯಿದೆ. ಅದಿತಿ (ಸ್ಥಲ), ದಕ್ಷ (ಕಾಲ: ಲಿಂಗ) 'ಅದಿತೇಃ ದಕ್ಷಃ ಅಜಾಯತ'; ಬಳಿಕ. 'ದಕ್ಷಾತ್ ಅದಿತಿಃ'! ಕಾಲಿದಾಸನ ಶ್ಲೋಕ ನೋಡಿ : 'ಸಂಪೃಕ್ತೌ' ಜಗತಃ ಪಿತರೌ' ಏಕಾತ್ಮಕ ಅ-ವಿಗಲಿತ, ಮಿಥುನವಾಗಿರುವ ಈ ಸ್ಥಳ (ಹಂ) - ಕಾಲ(ಗಂ) ಇದುವೆ ದೇವರು ಆಗುವಾಗ, ಇದು ನೆಲಮುಗಿಲನ್ನು ವ್ಯಾಪಿಸಿರುವ ವೃತ್ತಾಕೃತಿಯ ಕತ್ತಲೆಯ ಈ ಚಿತ್ರವು, ನಮ್ಮ ವೇದದಲ್ಲಿ ಇನ್ನೂ ಒಂದು ಬಗೆಯಲ್ಲಿ ಪ್ರತಿಬಿಂಬಿತವಾಗಿದೆ. ಸೃಷ್ಟಿಗೆ ಆದಿಯಲ್ಲಿ "ತಮಃ ಅಸೀತ್ ತಮಸಾ ಗೂಳ್ಹಂ ಅಪ್ರಕೇತಂ ಸಲಿಲಂ ಆಹಾಃ! ಇದಂ ಸರ್ವಂ"[೩] ಒಂದು ಕತ್ತಲೆ (ಹಂ) ಇನ್ನೊಂದು ಕತ್ತಲೆಯನ್ನು (ಗಂ) ಆಲಿಂಗಿಸಿದೆ. ಒಂದು ಕಿರಣಕ್ಕೂ ಒಳಸೇರಲು ಇಂಬಿಲ್ಲ, (ಅ-ಪ್ರಕೇತಂ), ಆಹಾ! ಎಲ್ಲೆಲ್ಲೂ ಸಲಿಲ (ಶರೀರ) ಜಲ=ಸುಸಿಲೇಸುಸಿಲು!

'ಸಲಿಲ ಏಕಂ ದೃಷ್ಟ್ವಾ ಅದ್ವೈತೀ ಭವತಿ!'[೪]

ಸ್ಥಲ (ಕಣ್) ಮತ್ತು ಕಾಲ (ಗಣ್) ಇವು ಕಾಣಲು ಬೇರೆ ಎನಿಸಿದರೂ, ಏಕಾತ್ಮತೆಯೇ ನೈಸರ್ಗಿಕ ಸ್ಥಿತಿ ಆಗಿದೆ. ಈ ಏಕಾತ್ಮತೆಯು ನೀರೆ-ನೀರ=ಫಕ್ತ ನೀರು ಆಗುವಾಗ ಇದು ನರ(ಳ)=ನಾರ-ಅಯನ ಪಂಥೀಯ ಶ್ರದ್ಧೆ. 'ಕಾಲ'ತತ್ತ್ವದ ಉಭಯ ಸ್ವರೂಪಗಳಲ್ಲಿ ಸ್ಥಳ ಹಾಗೂ ಕಾಲಶಕ್ತಿಯ ಸಂದರ್ಭದ ವಿಭಾಗದ್ವಯದ ಕಾಲಗತಿಯನ್ನು, ವಿಭಾಗತ್ರಯದ ಆಗಾಮೀ ನಾಳೆಗಳತ್ತ ಸಾಗಿರುವ ಪ್ರಕಾಶ ರೂಪ ನಿನ್ನೆ-ಇಂದು ಸ್ವರೂಪ ನೇರ ಗತಿಯ ಕಾಲತತ್ತ್ವದ ಸಂಗಡ ತುಲನೆಗೆ ಅನುಕೂಲವಾಗಲೆಂದು ಅದನ್ನು ವಿಶ್ಲೇಷಿಸಿ ವಿವರಿಸಿದ್ದಾಯಿತು. ಸ್ಥಳ ಮತ್ತು ಕಾಲ (ಪ್ರಾಣಲಿಂಗ ಚೇತಸ) ಈ ವಿಭಾಗ ದ್ವಯದ ಸಂದರ್ಭದ ಗತಿಯ ಮೂಲಕ ಉಂಟಾಗುವ

ಕಾಲ ಗತಿಯ ಬಗೆಗಿನ ಗ್ರಹಿಕೆಯು ಸಂಭ್ರಾಮಕವಿರುತ್ತದೆ. ಈ ಅಂಶವನ್ನು ಸುಮಾರಾಗಿ ಏಳು ಬಗೆಯಿಂದ ಸ್ಪಷ್ಟೀಕರಿಸಿದ್ದಾಯಿತು.

ಇದು ತುಂಬ 'ಮಾಯಾವೀ' ಸ್ವರೂಪದ್ದು ಆಗಿದೆ, ಎಂಬುದನ್ನು ಪುರಾತನರು ಚೆನ್ನಾಗಿ ಅರಿತಿದ್ದರು. ಮಹಾಭಾರತದ ಪ್ರಾರಂಭದಲ್ಲಿ ವರ್ಣಿಸಲಾಗಿರುವ ಮಯಾಸುರನೆಂಬವನು ಸೃಷ್ಟಿದನೆಂಬ ಮಯಸಭೆಯ ವರ್ಣನೆಯು, ಸ್ಥಲ-ಕಾಲದ ಆಧಾರದ ಮೇಲೆ ನಿಂತಿರುವ ಈ ಪ್ರಪಂಚದ ಸಾಂಕೇತಿಕ ವರ್ಣನಯೇ ಆಗಿದೆ! ಈ 'ಮಯ'ನೆಂಬವನು 'ಅಸುರನಂತೆ. ಅಸು ಪ್ರಾಣಲಿಂಗ ತತ್ವದ ಪ್ರನಿಧಿ. ಈ ಅಸುರನು ಖಾಂಡವವನ ದಹನದಲ್ಲಿ ಉಳಿದ ಒಬ್ಬ ನಾಗ(ಲಿಂಗ) ಎಂಬ ಈ ಸಾಂಕೇತಿಕತೆ ಮನನೀಯವಿದೆ. ಈ ಸೃಷ್ಟಿಗೆ ಕಾರಣನು ನಾಗ : ಲಿಂಗನು. ಈ ಮಯ ಸಭೆಯಲ್ಲಿ, 'ಸ್ಥಲ' (ನೆಲ)ವಿದ್ದಲ್ಲಿ 'ಜಲ', ಜಲವಿದ್ದಲ್ಲಿ ನೆಲ ಆಗುವ ಪವಾಡ ಚಮತ್ಕಾರವು ನಡೆಯುತ್ತಿತ್ತಂತೆ! ಸ್ಥಲ ಮತ್ತು ಕಾಲ ಇವೆರಡೂ ತತ್ತ್ವತಃ ಒಂದೇ ಆಗಿವೆ, ಎಂಬ ವಿವರಣೆ ಮೇಲೆ ಬಂದಿದೆ. ವಿಭಾಗತ್ರಯದ ಪ್ರಕಾಶತತ್ವದಿಂದ ಪ್ರಚೋದಿತ ಕಾಲತ್ತತ್ವ ಮತ್ತು ವಿಭಾಗದ್ವಯದ ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ) ಇವೆರಡರ ಸಂದರ್ಭದಿಂದ ಕಾಣಿಸಿಕೊಳ್ಳುವ ಕತ್ತಲೆಯನ್ನು ನಿರ್ಮಿಸುವ ಸಂಭ್ರಮಾತ್ಮಕ ಕಾಲಗತಿ: ಇವೆರಡರಲ್ಲಿ ಒಂದು ಇನ್ನೊಂದನ್ನು ಹಿಮ್ಮೆಟ್ಟಿಸುವ ಸ್ಪರ್ಧೆಯು ಇರುವುದಾಗಿ ಕಂಡುಬರುತ್ತಿದೆ!

ಅವೆಸ್ತದ ವ್ಯಾಸಂಗಿಗಳು ಹೇಳುವ ಅಹುರಮಝುದ=ಪ್ರಕಾಶ ತತ್ತ್ವ ಮತ್ತು ಅರ್ಹಿಮನ್ ಕತ್ತಲೆ, ಮೃತ್ಯುಶಕ್ತಿ, ವಿನಾಶಕ ತತ್ತ್ವ ಇವೆರಡರಲ್ಲಿ ನಿತ್ಯಯುದ್ಧವು ನಡೆದಿದೆ. ಈಗ ಅರ್ಹಿಮನ್=ಕತ್ತಲೆಯ ಗೆಲುವಿನ ಕಾಲವು ಬಂದಿದೆ. ಆದರೆ, ನಿಜವಾದ ಗೆಲುವು ಪ್ರಕಾಶಕ್ಕೇ ಹೊರತು ಕತ್ತಲೆಗೆ ಅಲ್ಲ. 'ಸತ್ಯಮೇವ ಜಯತಿ, ನಾನೃತಂ' ಎಂಬುದು ಈ ಶ್ರದ್ಧೆ. ಮೇಲಣ ಎರಡು ಬಗೆಯ ಕಾಲ ತತ್ತ್ವಗಳಲ್ಲಿ ನರ(ಳ)ನಿಗೆ 'ಮನು'ಜತ್ವವು ಪ್ರಾಪ್ತವಾದದ್ದು: ವಿಭಾಗತ್ರಯದ ಆಗಾಮೀ ನಾಳೆಗಳತ್ತ ಸಾಗಿರುವ ಪ್ರಕಾಶತತ್ತ್ವದ ಪ್ರಭಾವದಲ್ಲಿ, ಎಂಬುದು ನಿಶ್ಚಿತವಿದೆ.

ಆಧುನಿಕ ಭೌತಶಾಸ್ತ್ರದ ಸಂಶೋಧಕರೂ ಈ ಮಾತನ್ನು ಒಪ್ಪತೊಡಗಿದ್ದಾರೆ. ನರರಿಗೆ 'ಮನು'ಜತ್ವವು ಪ್ರಾಪ್ತವಾದ ಸನ್ನಿವೇಶವನ್ನು ಕುರಿತು ಬರೆಯುವಾಗ ಈ ಸಂಶೋಧಕನು ಹೇಳುವ ಮಾತು ಮಾರ್ಮಿಕವಿದೆ.[೫]

> Symbolic communication had began. Man had escaped out of the eternal present of the animal world into a knowledge of past and future.

ತಜ್ಞನು, ಹೇಳಿರುವ (ಕಂಡಿರುವ) "Eternal present of the animal world" ಎಂಬ ಈ ಮಾತಿನಲ್ಲಿ ಬಂದಿರುವ ಪಶುಲೋಕದ 'ನಿತ್ಯವರ್ತಮಾನಕಾಲ' ಎಂಬುದು ಸ್ಥೂಲ ಅಭಿವ್ಯಕ್ತಿಯಾಗಿದೆ. 'ವರ್ತಮಾನ' ಇದು ನಮಗೆ ಗೊತ್ತಿರುವ ಪ್ರಕಾಶರೂಪ ಕಾಲಗತಿಯೊಳಗಿನ 'ವರ್ತಮಾನ' ಕಾಲದ ಹೋಲಿಕೆಯದೇ ಅಥವಾ ಇದು ಬೇರೆ ಬಗೆಯದೇ ಎಂಬ ಸ್ಪಷ್ಟತೆಯು ಇಲ್ಲ. ಪ್ರಾಣಿಗಳ ಲೋಕವನ್ನು ಅವುಗಳ ಸ್ಥಳ(ದೇಹ) ಮತ್ತು ಈ ಸ್ಥಳ ದೇಹದೊಡನೆ ಬದ್ಧ ಕಾಲ (ಲಿಂಗ) ಶಕ್ತಿ ಇವೆರಡರ ಸಂದರ್ಭದ ವೃತ್ತಾಕೃತಿಯ ಕಾಲವೇ ಆಳುತ್ತಿರುತ್ತದೆ. ಲಿಂಗರೂಪ ಕಾಲಶಕ್ತಿಯ ಪ್ರಚೋದನೆಯಿಂದ ಉಂಟಾಗುವ '(ಸಂ)ಭವ ಚಕ್ರ'ವು ಪ್ರಾಣಿಗಳನ್ನು ಆಳುತ್ತಿರುತ್ತದೆ. ಇದು ಕತ್ತಲ (ಕರಿ) ಕಾಲ. ಈ ವೃತ್ತಾಕೃತಿಯಲ್ಲಿ [O] ಪ್ರಾರಂಭದ ಬಿಂದು (ಹುಟ್ಟು) ಮತ್ತು ಅಂತ್ಯಬಿಂದು (ಕೊನೆ) ಇವೆರಡೂ ಒಂದೇ ಎಡೆಯಲ್ಲಿ ಸೇರುತ್ತವೆ. ಈ ಚಕ್ರನೇಮಿಕ್ರಮದಲ್ಲಿ ನಿಜವಾದ 'ನಾಳೆ' ಎಂಬುದೇ ಇಲ್ಲ. ಈ ಪಾತಳಿಯಲ್ಲಿ ನಿನ್ನೆಯೇ 'ನಾಳೆ' ಆಗುತ್ತದೆ. ನಿಜವಾದ 'ನಾಳೆ', ನಿಜವಾದ ಹೊಸತು ಎಂಬುದೇ ಕಾಣಿಸಿಕೊಳ್ಳಲು ಶಕ್ಯವಿಲ್ಲದ ಈ ಪಾತಳಿಯ ಮೇಲಣ ಅಸ್ತಿತ್ವದಲ್ಲಿ ಯಾವ ಪ್ರಾಣಿವರ್ಗಕ್ಕೂ ಪ್ರಜ್ಞೆ-ಸ್ವಉಪಜ್ಞೆ ಲಭಿಸಿಲ್ಲ.

ಆದರೆ, ಪ್ರಾದುರ್ಭಾವರೂಪೀ ವಿಕಾಸಕ್ರಮದಲ್ಲಿ ಪ್ರಾಣಿಗಳ-ನರರ, ವ್ಯಕ್ತಿಸಾಪೇಕ್ಷ ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ) ಇವೆರಡರ ಆಚೆಗಿನ ಪಾತಳಿಯ ಮೇಲಣ ವಿಭಾಗತ್ರಯದ ಆಗಾಮೀ ನಾಳೆಗಳತ್ತಣಿನ ಕಾಲತತ್ತ್ವವನ್ನು ಗ್ರಹಿಸಿಕೊಳ್ಳುವ ಪ್ರಜ್ಞೆಯ ಅಂಗವಾದ ಮನೋಬಲವು ಲಭಿಸುವುದರ ಸಂಗಡ, ನರ(ಳ)ನಿಗೆ 'ಮನು'ಜತ್ವವು ಪ್ರಾಪ್ತವಾಗಿರಲಿಕ್ಕೆಬೇಕು, ಎಂದು ಲೆಕ್ಕ ಹೊರಡುತ್ತದೆ. ಈ ಆಗಾಮೀ ನಾಳೆಗಳನ್ನು ಲೆಕ್ಕಿಸಿ, ನಿನ್ನೆಗಳ ಜೀವನಾನುಭವಗಳ ಬೆಳಕಿನಲ್ಲಿ 'ಇಂದು'ಗಳನ್ನು ರೂಪಿಸಿಕೊಳ್ಳುತ್ತ ಪ್ರಜ್ಞೆಯ ಅಂಗವಾದ ಮನಃ ಶಕ್ತಿಯ (ಬುದ್ಧಿಅಲ್ಲ) ಪ್ರಚೋದನೆಯಿಂದ ಬಾಳಬಟ್ಟೆಯಲ್ಲಿ, ಮುನ್ನಡೆವ ಸ್ವಭಾವ ಧರ್ಮವೇ ಈ ಮನುಜ: ಮಾನವಧರ್ಮವನ್ನು ರೂಪಿಸಲು ಕಾರಣವಾಗುತ್ತ ಬಂದಿದೆ. ವಿಭಾಗತ್ರಯ ಸೌರಕಾಲಗತಿಯ ಪ್ರಭಾವಕ್ಕೆ ಮೈಗೊಟ್ಟವನು, ಎಂದೇ ಈ 'ಮನು'ಜನನ್ನು ವೈವಸ್ವತನೆಂದು ಪುರಾತನರು ಹೆಸರಿಸಿದ್ದಾರೆ. ಈ ಸಂಗತಿಯ ಮೂಲಕವೂ, 'ಮನು'ಜರನ್ನು ರೂಪಿಸುವ, ಪ್ರಚೋದಿಸುವ ಕಾಲತತ್ತ್ವವು ಯಾವುದು, ಎಂಬುದು ದೃಢಪಡುತ್ತದೆ.

ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ) ಇವನ್ನು 'ನಾಗಮಿಥುನ' (dragon) ಎಂಬ ರೂಪಕದಿಂದಲೂ ವರ್ಣಿಸಿರುವುದನ್ನು ಪುರಾತನ ದಿವ್ಯಕಥೆಗಳಲ್ಲಿ ಕಾಣಲು ದೊರೆಯುತ್ತದೆ. ಭಾರತೀಯ ಪರಂಪರೆಯಲ್ಲಿ ಘಟ-ಸರ್ಪ ಎಂದು ಹೇಳಲಾಗುತ್ತದೆ. ಘಟ ತನು-ನಾಗ-ಸರ್ಪ: ಲಿಂಗ ವೇದದೊಳಗಿನ ತ್ವಷ್ಟಾರ='ಬಡಿ'ಗ ಮಹಾಭಾರತದ ತಕ್ಷಕ ಇವನು ನಾಗ-ಸರ್ಪದ ಪರ್ಯಾಯವಾಗಿದ್ದಾನೆ. ಅದಿತಿ ತ್ವಷ್ಟಾರರಲ್ಲಿ ಕಲ್ಪಿಸಲಾಗಿರುವ ಶರೀರ ಸಂಬಂಧವು ಸ್ಥಳ-ಕಾಲ ಸ್ವರೂಪ ನಾಗಮಿಥುನ ಸೂಚಕವಿದೆ. ಸುಮೇರಿಯನ್ ಸಂಸ್ಕೃತಿಯೊಳಗಿನ ತೈಮ್ಮಾತೆ (ಹೆಂ) ಮತ್ತು ಅಪ್‌ಸು (ಗಂ) ಇವರಿಬ್ಬರನ್ನೂ ಡ್ರಾಗನ್ ಎಂದು ವರ್ಣಿಸಲಾಗಿದೆ. ಈ ಕಥೆಯ ಸಾಂಕೇತಿಕ ಅರ್ಥವನ್ನು ಕವಿ, ಸಂಶೋಧಕ ರಾಬರ್ಟ್ ಗ್ರೇವ್ಸ್ ಎಂಟು ವಿಧವಾಗಿ ಸಮಂಜಸವಾಗಿ ವಿವರಿಸಿದ್ದಾನೆ.[೬]

ಮನು-ಜನ ಪ್ರಾದುರ್ಭಾವವು ಆಗಲು, ವ್ಯಕ್ತಿಸಾಪೇಕ್ಷ ಹಾಗೂ ವ್ಯಕ್ತಿ ನಿರಪೇಕ್ಷ, ಎರಡೂ ಬಗೆಯ ಸ್ಥಲ (ದೇಹ) ಹಾಗೂ ಕಾಲ (ಪ್ರಾಣಲಿಂಗ) ಇವೆರಡರಲ್ಲಿರುವ ಏಕಾತ್ಮತೆಯ ಭಂಗವಾಗುವ ಆವಶ್ಯಕತೆಯು ಇದೆ! ವ್ಯಕ್ತಿ ನಿರಪೇಕ್ಷ ಸ್ಥಳ-ಕಾಲ ಎಂಬಲ್ಲಿ, ಭೂಃ-ಭುವಃ (ಅಂತರಿಕ್ಷ) ಭೂಮಿ ಮತ್ತು ಇದರೊಡನೆ ಏಕಾತ್ಮಕವಿರುವ ಅಂತರಿಕ್ಷದ ಅವಕಾಶ [O] ಇವೆರಡೂ ಒಳಗೊಳ್ಳುತ್ತವೆ. ವ್ಯಕ್ತಿಸಾಪೇಕ್ಷ ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ) ಇದರಲ್ಲಿ ವ್ಯಕ್ತಿಯ ದೇಹ ಮತ್ತು ಪ್ರಾಣಲಿಂಗ ಇವೆರಡರ ಸಮಾವೇಶವೂ ಆಗುತ್ತದೆ. ಹೀಗೆ ಇಡೀ ಪ್ರಪಂಚವು ಇದು ಪ್ರಾಣಿಗಳಲ್ಲಿ-ನರರಲ್ಲಿ ತಮ್ಮ ದೇಹ(ಸ್ಥಿತಿ) ಮತ್ತು ಪ್ರಾಣಲಿಂಗ ಇವೆರಡರಲ್ಲಿ ಅಂತರವು ಉಂಟು ಎಂಬ ತಾತ್ತ್ವಿಕ ಭೇದವು ಮಾನ್ಯವೇ ಇರುವುದಿಲ್ಲ. ಗಂಡಿಗೆ ಹೆಣ್ಣು ಪ್ರಾಣ. ಹೆಣ್ಣಿಗೆ ಗಂಡು ಪ್ರಾಣ; ಈ ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ) ಇವೆರಡೂ (ಗಂ-ಹೆಂ), ಏಕಾತ್ಮಕ, ಮಿಥುನ ಯೋಗದಲ್ಲಿಯೇ ಇರುವುದು ತಮ್ಮ ಹಕ್ಕು, ಎಂಬ ಭೌತಪ್ರವೃತ್ತಿಯನ್ನೇ ಉಳಿಸಿಕೊಂಡಲ್ಲಿ ಈ ಬಗೆಯ ನರ(ಳ) ಪ್ರಾಣಿಗೆ, ವ್ಯಕ್ತಿ ಸಾಪೇಕ್ಷವಾಗಲಿ, ವ್ಯಕ್ತಿನಿರಪೇಕ್ಷವಾಗಲಿ, ಈ ಸ್ಥಲ-ಕಾಲದ ಕಾಲ-ಚಕ್ರದ-ಪಾತಳಿಯ ಆಚೆಗೆ ಇರುವ ವಿಭಾಗತ್ರಯದ ಆಗಾಮೀ ನಾಳೆಗಳತ್ತಣಿನ ಪ್ರಕಾರ ತತ್ತ್ವದ ಈ ಪ್ರಜ್ಞೆಯ ಅಂಗವಾದ ಮನಸ್ಸಿನ ಪಾತಳಿಯ ಅಸ್ತಿತ್ವದ ಅರಿವು ಮೂಡಲು ಶಕ್ಯವೇ ಇಲ್ಲ. ನರ(ಳ)ನಿಗೆ ಮನುಜತ್ವವು ಲಭಿಸಲು ಶಕ್ಯವಿಲ್ಲ!

ಈ ನರ(ಳ)ನಲ್ಲಿ 'ತಾನು' ಎಂದರೆ ಈ 'ದೇಹ' (ಸ್ಥಲ) ಅಲ್ಲ, ಇದೇ ಮೇರೆಗೆ 'ತಾನು' ಎಂದರೆ ಪ್ರಾಣಲಿಂಗ ಚೇತಸವೂ ಅಲ್ಲ; ನಿಜವಾದ 'ನಾನು' ಎಂಬ 'ಮನು'-ಜನು, ಈ ವ್ಯಕ್ತಿಸಾಪೇಕ್ಷ ಸ್ಥಲ (ದೇಹ) ಮತ್ತು ಕಾಲ ಪ್ರಾಣಲಿಂಗ ಈ ವಿಭಾಗದ್ವಯದ ಆಚೆಗಿನ ವ್ಯಕ್ತಿನಿರಪೇಕ್ಷ ಕಾಲ ಚಕ್ರದ ಆಚೆಗಿನ ವಿಭಾಗತ್ರಯದ ಆಗಾಮೀ ನಾಳೆಗಳತ್ತ ಸಾಗಿರುವ ನಿನ್ನೆ-ಇಂದುಗಳ ಸಂದರ್ಭದ ಸಮಾಜ ಸಮಷ್ಟಿಯ - ಜೀವನರೀತಿಯಲ್ಲಿ ಇರುತ್ತಾನೆ. ಏಕಾತ್ಮಕ ಸ್ಥಳ-ಕಾಲ ಎಂದರೇ ವೇದದ ಅಹಿ=ವೃತ್ರ ರೂಪಕ. ಇದನ್ನು ನಾಗ-ಮಿಥುನ(ಚಂದ್ರ) ಸೂಚಕ ಎಂದು ಬಗೆಯಲಾಗಿದೆ. ಸವಿತೃವಿನ ಪರ್ಯಾಯರೂಪ ಪ್ರಕಾಶತತ್ತ್ವದ ಇಂದ್ರನು, ಅಹಿವೃತ್ರನ ಶತ್ರು, 'ಶಿಶ್ನೋ ದೇವಾಃ' ಸಂಪ್ರದಾಯದ ವೈರಿ, ಎಂದು ಬಗೆದಿರುವುದರ ಔಚಿತ್ಯವು ಅಭ್ಯಸನೀಯವಿದೆ.

ಭಾರತೀಯ ಧರ್ಮ ಸಂಸ್ಕೃತಿಯು, ವಿಶ್ವ ನಿಯಮದ ಆಧಾರದ ಮೇಲೆ ನಿಂತಿದೆ, ಎಂಬುದನ್ನು ಮನಗಾಣಿಸಿ ಕೊಡುವ ಅಹಿ; ವೃತ್ರನು, 'ಸ್ಥಳ-ಕಾಲದ, (ಅದಿತಿ ದಕ್ಷ, ಅದಿತಿ-ರುದ್ರ, ಅಥವಾ ಅದಿತಿ ವಿಷ್ಣು) ಏಕಾತ್ಮಕ ಪ್ರಾಣಲಿಂಗ ಪಾತಳಿಯ ಪ್ರತೀಕವಾಗಿದ್ದಾನೆ. ಈ ಪ್ರಾಣಲಿಂಗ ಚೇತಸವು, ಕತ್ತಲೆಯ ಆವರಣದಲ್ಲಿಯೇ ಇರಬೇಕೆಂಬ ವಿಶ್ವನಿಯಮವಿದೆ. ಈ ಅಹಿ=ವೃತ್ರನನ್ನು ಚಂದ್ರಶಕ್ತಿ ಎಂದು ಬಗೆಯಲಾಗಿದೆ! ಈ ಅಹಿ=ವೃತ್ರನ ಶತ್ರು ಇಂದ್ರನು, ಪ್ರಕಾಶರೂಪನು ಸೌರನು! ಚಂದ್ರಶಕ್ತಿಯು ಎಂದರೆ ಅಹಿಃ ವೃತ್ರನ ನೈಸರ್ಗಿಕ ಶತ್ರು ಅಹಿ=ವೃತ್ರಹನ್ ಬಿರುದಿನ ಈ ಇಂದ್ರನು! ವ್ಯಾಸ-ವಾಲ್ಮೀಕಿಗಳು ಅಭಿಚಾರ ಕೃತ್ಯದಿಂದ ಇಂದ್ರನನ್ನು ಇಲ್ಲವಾಗಿಸಿದರೂ ಈ ಇಂದ್ರನು ಅಮರನಿದ್ದಾನೆ! ಈ ಅಹಿ=ವೃತ್ರನ ಸ್ಥಳ (ದೇಹ) ಹಾಗೂ ಕಾಲ (ಪ್ರಾಣಲಿಂಗ) ಇವೆರಡರ ಏಕಾತ್ಮಕ ಪ್ರತಿಮೆ; ಈ ಅಹಿ: ವೃತ್ರನನ್ನು ಸೀಳಿ, ಈ ಇಂದ್ರನು ಸ್ಥಲ(ದೇಹ) ಮತ್ತು ಕಾಲ (ಪ್ರಾಣಲಿಂಗ) ಇವೆರಡರಲ್ಲಿ ಅಂತರವನ್ನು ಉಂಟುಮಾಡುತ್ತಾನೆ, ಮಾಡಿದ್ದಾನೆ! ವ್ಯಕ್ತಿ ನಿರಪೇಕ್ಷವಿರಲಿ, ವ್ಯಕ್ತಿಸಾಪೇಕ್ಷವಿರಲಿ, ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಇವೆರಡರಲ್ಲಿ, ಈ ಸೌರ ಪ್ರಜ್ಞಾಪ್ರಕಾಶ ತತ್ತ್ವದ ಇಂದ್ರನು, ಅಂತರವನ್ನು ಉಂಟು ಮಾಡಿದ್ದಾನೆ. ಎಂದರೆ, ಏನು? ನರ(ಳ)ನಿಗೆ 'ಮನು'ಜತ್ವ ಲಭಿಸಿದ್ದು, ಅಹಿ=ವೃತ್ರ-ಹನ್, ಶಿಶ್ನೋ ದೇವಾಃ ಪಂಥದ ಶತ್ರು ಎಂಬ ಇಂದ್ರನಿಂದ ಇದಕ್ಕೆ ಪ್ರಮಾಣಗಳು ಏನು?

ನರ(ಳ) ಸಂಪ್ರದಾಯದ ನೇತಾರರ ಇಂದ್ರ-ದ್ವೇಷದ ಕಾರಣವೇನು? ಪ್ರಜ್ಞೆ: ಸ್ವೋಪಜ್ಞೆ: ಮನಃಶಕ್ತಿ (Nous mind) ಇದು ಜಾಗೃತ-ಜೀವಂತವಾಗಿ ಉಳಿಯುವ ವರೆಗೆ ಈ 'ಮನು'ಜನು ತಾನು ಫಕ್ತ 'ದೇಹಿ' ಎಂದು ಬಗೆಯಲಾರನು. ದೇಹ(ಸ್ಥಲ) ಮತ್ತು ಪ್ರಾಣಲಿಂಗ ಚೇತಸ (ಕಾಲ) ಇವೆರಡರ ಆಚೆಗಿನ ಪಾತಳಿಯ ಪ್ರಜ್ಞಾ: ಪ್ರಕಾಶದಿಂದ ಪ್ರಚೋದಿತ ಮನು ಜನು ನಾನು, ಎಂಬ ನಿಷ್ಠೆಯು ದೃಢವಿರುವವರು ನರ(ಳ) ಧರ್ಮಿಗಳು ದೇಹಧರ್ಮಿಗಳೇ ಆಗಿ, ಬಾಳಿನಲ್ಲಿ ಹಿಗ್ಗುಗೊಳ್ಳಲಾರರು. ಆದಕಾರಣ, ದಕ್ಷಿಣಕಪರ್ದ ವ್ಯಾಸ, ವಾಲ್ಮೀಕಿ ಪೈಥ್ಯಾಗೊರಾಸರು ಮರಳಿ ನರ(ಳ) ಧರ್ಮವನ್ನು ಎತ್ತಿಹಿಡಿದಿದ್ದಾರೆ. ಭಗವತ್ ಗೀತೆಯಲ್ಲಿ ಪ್ರಜ್ಞೆಯನ್ನು ಸ್ಥಿತ=ಸ್ಥಗಿತಗೊಳಿಸುವ ತಂತ್ರ ಹೇಳಿರುವಲ್ಲಿ ಇಂದ್ರ-ದ್ವೇಷದ ಕೈವಾಡವಿದೆ. ಭೌದ್ಧ ಧರ್ಮದಲ್ಲಿ 'ಪ್ರಜ್ಞಾ-ಪರಿಮಿತಾ' ಆಗಿರುವಲ್ಲಿ ಅಂದಿನ ಕೃತಿಯ ಪರಿಣಾವನ್ನು ತೊಡೆದು ಹಾಕುವ ಪ್ರಯತ್ನವೇ ಇದೆ. ಜೈನಧರ್ಮದಲ್ಲಿ ಇಂದ್ರನು ನಾಗನಾಗಿದ್ದಾನೆ. ಧರಣೇಂದ್ರ=ನಾಗನಂತೆ. ಇಂದಿನ ಸಂಹಿತೆಯಲ್ಲಿ ಇಂದ್ರನ ಅವಮೂಲ್ಯನದ ವಿವಿಧ ಪ್ರಕಾರಗಳು ಉಂಟು. ಇದು ಸಂಶೋಧನದ ಸ್ವತಂತ್ರ ವಿಷಯವೇ ಆಗಬಲ್ಲುದು.*

ಪ್ರಕಾಶತತ್ತ್ವದ ಇಂದ್ರನನ್ನು 'ಪ್ರಾಣಲಿಂಗ ಪಾತಳಿಯ ಮೇಲಣ ಅಂಭೃಣೀ: ಕುಮಾರೀ ದೇವಿಯು, 'ಇಂದ್ರಾಗ್ನೀ ಬಿಭರ್ಮಿ'- ತಾನು ಇಂದ್ರಜಾತವೆಂದ ಅಗ್ನಿಗಳ ಪೋಷಕಳಂತೆ. ಈ ಅಂಭೃಣಿ [O] ದೇವಿಯು 'ಬ್ರಹ್ಮದ್ವಿಷೇ ಹಂತವೇ ಶರವೈ ರುದ್ರಾಯ ಧನುಃ ಆತನೋಮಿ' ರುದ್ರನ ಬಾಣಕ್ಕಾಗಿ ಬಿಲ್ಲನ್ನು ಹಿಗ್ಗಿಸಿ ಸಜ್ಜಾಗಿದ್ದಳಂತೆ ಆತ್ಯಂತಿಕ ಅಹಿಂಸಾತ್ಮಕ ಸತ್‌ತ್ಯ ಸಿದ್ಧಿಯೇ ಜೀವನದ ಆದರ್ಶವಾಗಿರುವ ನರ(ಳ) ಸಂಪ್ರದಾಯದ ನೇತಾರರು ತಮ್ಮ ಸಾಧನ ಅನುಷ್ಠಾನದ ಸಿದ್ಧಿಗಳನ್ನು, ಮಾನವಧರ್ಮ ಸಂಸ್ಕೃತಿ-ವಿನಾಶಕ್ಕಾಗಿ ಯೋಜಿಸುತ್ತ ಬಂದಿದ್ದಾರೆ, ಎಂಬುದನ್ನು ತೋರಿಸಿ ಕೊಡಲು ಈ 'ವಾಗಾಂಭೃಣಿ' ಸೂಕ್ತವೊಂದೇ ಸಾಕು ಪ್ರತಿಭಾಶಾಲಿ ವ್ಯಾಕರಣಕಾರನೆಂಬ ಖ್ಯಾತಿಯ ಪಾಣಿನೀಮುನಿಯು, ಇಂದ್ರನ ಪ್ರತಿಮಾಭಂಜನಕ್ಕೆ ವ್ಯಾಕರಣಶಾಸ್ತ್ರದ ಭೂಮಿಕೆಯಿಂದ ನೆರವಾಗಿದ್ದಾನೆ! ದುರ್ಗಾಚಾರ್ಯನೆಂಬ ಇನ್ನೊಬ್ಬ ವೈಯ್ಯಾಕರಣಿ ಸವಿತೃಮಂತ್ರ ದ್ರಷ್ಟಾರ ವಿಶ್ವಾಮಿತ್ರನ ಹೆಸರನ್ನು ಉಚ್ಚರಿಸಲಿಕ್ಕೂ

---

* ಇಂದ್ರ ಪತಿತ್ವದ ಹಲವು ಎಳೆಗಳನ್ನೂ, ಕತೆಗಳನ್ನು, ಆಶಯಗಳನ್ನು 'ಋಗ್ವೇದ ಸಾರ: ನಾಗಪ್ರತಿಮಾ ವಿಚಾರ' ಕೃತಿಯಲ್ಲಿ ಶಂಬಾ ಅವರು ವ್ಯಾಪಕವಾಗಿ ಅಧ್ಯಯನ ಮಾಡಿದ್ದಾರೆ. ಮುಖ್ಯವಾಗಿ ಇಂದ್ರನಿಗೆ ಸಂಬಂಧಿಸಿದ ದೈವತಕಥೆಗಳನ್ನು ಪ್ರಾಧ್ಯಾನವಾಗಿ ಹಿಡಿದಿದ್ದಾರೆ. ವೈದಿಕೋತ್ತರ ಸಾಹಿತ್ಯದಲ್ಲಿ ಇಂದ್ರನ ಪತಿತ್ವದ ಸ್ಥೂಲನೆಲೆಗಳನ್ನು ಗ್ರಹಿಸಿದ್ದಾರೆ. (ಸಂ)

ಹೇಸಿಕೊಳ್ಳುತ್ತಿದ್ದನೆಂಬ ಪ್ರವಾದವಿದೆ. ವ್ಯಾಸ-ವಾಲ್ಮೀಕಿಗಳ ಅಭಿಚಾರಕೃತ್ಯದಿಂದಾಗಿ, ಮನುಜರ ಮನುಜತ್ವಕ್ಕೆ ಪ್ರಜ್ಞಾ-ಶಕ್ತಿ ಲಭಿಸಲಿಕ್ಕೆ ಕಾರಣನಾಗಿರುವ ಇಂದ್ರನು ಖಳನಾಯಕನಾಗಿ, ತಿಳಿಗೇಡಿ ಜನಗಳ ಹರಿಕಥೆಯವರ ತಿರಸ್ಕಾರದ ವಿಷಯವಾಗಿದ್ದಾನ. ಅಹಲ್ಯಾಜಾರನಂತೆ ಈ ಪ್ರಕಾಶತತ್ತ್ವದ ಇಂದ್ರ! ಋಗ್ವೇದದಲ್ಲಿ ಮರುತಾಂ ಪಿತಾ ಎಂಬ ರುದ್ರನ ಸ್ತೋತ್ರವಿದೆ. ಈ ಸೂಕ್ತದ ಭಾಷ್ಯದಲ್ಲಿ ಸಾಯಣರು ಪರಂಪರಾಗತ ಒಂದು ಕಥೆಯನ್ನು ಹೇಳಿ, ಈ ಮರುತರು '(ಅ)ದಿತಿ' ಪುತ್ರರು ಎಂದು ನಂಬಿಸಲಾಗುತ್ತದೆ.

ಆದರೆ, ಈ ವೇದದಲ್ಲಿಯೇ ಬರುವ ಮಾತಾ 'ರುದ್ರಾಣಾಂ' ಎಂಬ ಋಕ್ಕಿನಂತೆ ಈ ನರಾಃ (ನಳಾಃ) ಎಂದು ವರ್ಣಿತ ರುದ್ರೀಯ ಮರುತರು ಅದಿತಿಪುತ್ರರು ಆಗುತ್ತಾರೆ! ಈ ಋಕ್ಕು ರುದ್ರ-ಶಿವ ಸಂಪ್ರದಾಯದ್ದು. ಮರುತರು ಅದಿತಿಪುತ್ರರು ಎಂಬ ಕಾರಣದಿಂದ ಇವರೂ ಆದಿತ್ಯರೇ ಆಗುತ್ತಾರೆ, ಆಗಬೇಕು. ಆದರೆ, 'ವಿಷ್ಣು'ವನ್ನು ಆದಿತ್ಯನನ್ನಾಗಿಸಲು 'ಅದಿತಿ' ರುದ್ರನಿಗೆ ಸೋಡಚೀಟಿ ಕೊಟ್ಟಿದ್ದಾಳೆ!

ಈ ಋಗ್ವೇದ ಸಂಹಿತೆಯ ಇಂದಿನ ಸಂಕಲನವು ವಿಷ್ಣು ಪಂಥೀಯರದು! ವಿಷ್ಣುವನ್ನು ಆದಿತ್ಯನನ್ನಾಗಿ ಮಾಡುವ ಎತ್ತುಗಡೆಯಲ್ಲಿ, ಈ ರುದ್ರನ ಸಂಗಾತಿ ರುದ್ರಿಯರ ಮಾತೆ ಎಂಬ ಅದಿತಿಯನ್ನು, ವಿಷ್ಣುಪತ್ನಿಯನ್ನಾಗಿಸುವ ಪ್ರಯತ್ನವು ಯಜುರ್ವೇದದಲ್ಲಿದೆ. 'ಆದಿತ್ಯೈ ವಿಷ್ಣುಪತ್ನ್ಯೈ ಚರುಃ' ಎಂಬ ವಾಕ್ಯದಿಂದ ಇದು ಬಯಲಿಗೆ ಬರುತ್ತದೆ! ಅದಿತಿಯು 'ಆದಿತ್ಯ'ನೆಂಬ ವಿಷ್ಣುವಿನ ತಾಯಿ ಆಗಬೇಕು! ಆದರೆ ಇದು ತಾಯ್ಗಂಡರ ಸಂಪ್ರದಾಯವಾಗಿದೆ. 'ಅದಿತೇಃ ದಕ್ಷ ಅಜಾಯತ; ಈ ದಕ್ಷನೊಡನೆ ಸಂಸಾರ ಮಾಡಿ ಅದಿತಿಯು[O] 'ಅಮೃತ ಬಂಧವಃ' ಸಂತತಿ ಸೃಷ್ಟಿಸಿದ ವರ್ಣನೆಯೂ ಇಲ್ಲಿ, ಉಂಟು![2] ಇದೆಲ್ಲ ಹಾಗಿರಲಿ. ಮರುತರನ್ನು ದೈತ್ಯರೆಂದು ನಂಬಿಸುವುದಕ್ಕಾಗಿ '(ಅ)ದಿತಿ'ಯ ಪಾತ್ರ ಸೃಷ್ಟಿಸಲಾಗಿದೆ! ಈ(ಅ) ದಿತಿಗೆ, 'ಇಂದ್ರಹನನ ಸಮರ್ಥರಾದ ಪುತ್ರರ ಬಯಕೆ ಆಯ್ತಂತೆ' ಇದಕ್ಕಾಗಿ ತಪಸ್ಸು ಮಾಡುತ್ತಾಳೆ. ಇಂದ್ರಹನನ ಸಮರ್ಥಪುತ್ರನ ಬಯಕೆ ಈಡೇರುವ ಲಕ್ಷಣ ಕಾಣತೊಡಗಿದವು. (ಅ)ದಿತಿ ಬಸಿರಾಗಿರುವ ಸುದ್ದಿ ಇಂದ್ರನಿಗೂ ತಿಳಿಯಿತಂತೆ! ಕೂಡಲೆ ಇಂದ್ರನು (ಅ)ದಿತಿಯಿರುವಲ್ಲಿ ಬರುತ್ತಾನೆ. ಅವನು ಸೂಕ್ಷ್ಮಶರೀರಿಯಾಗಿ (ಅ)ದಿತಿಯ ಯೋನಿಮಾರ್ಗದಿಂದ ಪ್ರವೇಶಿಸಿ ಆ ಗರ್ಭವನ್ನು ೭X೭ ತುಂಡು ಮಾಡಿದನಂತೆ ಈ ತುಣುಕುಗಳೇ ನರ(ಳ) ಸ್ವರೂಪಮರುತರಾಗುವರಂತೆ! ಈ ವಿವರದಲ್ಲಿ, ವೇದಕಾಲೀನ ಇಂದ್ರದ್ವೇಷದ ಸ್ವರೂಪವನ್ನು ಮನಗಾಣಿಸಲು ದ್ವಿರಕ್ತಿ ಅನಿವಾರ್ಯವಾದುದು.

ವೇದಕಾಲೀನ ಇಂದ್ರ ಶತ್ರುಗಳ ದ್ವೇಷದ ನಿಜಸ್ವರೂಪವು ಗೊತ್ತಾಗಲು ಈ ಕಥೆ ಉಪಕಾರಕವಿದೆ. ಈ (ಅ)ದಿತಿ, ಸ್ಥಳ-ಕಾಲದ ಪ್ರತೀಕ. 'ಸ್ಥಳ-ಕಾಲ'ವನ್ನು ಎಂದರೆ ಮಿಥುನಯೋಗಸ್ಥ ಈ ಘಟಸರ್ಪವನ್ನು, ಅಹಿ=ವೃತ್ರನ ರೂಪದಲ್ಲಿ ಸೀಳಿ ಇಬ್ಭಾಗವಾಗಿಸಿದ್ದು, ಭೂಲೋಕದಲ್ಲಿ ವ್ಯಕ್ತಿನಿರಪೇಕ್ಷ ಪಾತಳಿಯ ಮೇಲೆ ಪ್ರಜ್ಞಾಸೂರ್ಯನ ಪ್ರಾದುರ್ಭಾವಕ್ಕೆ ಅವಕಾಶ ಕಲ್ಪಿಸಿದ್ದು, ಇಂದ್ರನಿಂದಾದ ಮಹಾ ಅಪರಾಧ! ಹೀಗೆ ಅಹಿ=ಸರ್ಪ=ನಾಗಲಿಂಗ, ಈ ಬ್ರಹ್ಮನ್ ಶಕ್ತಿಯನ್ನು ತುಂಡರಿಸಿದ್ದು, ಇಂದ್ರನ ಅಪರಾಧ! ಸ್ಥಲ(ದೇಹ) ಮತ್ತು ಕಾಲ (ಪ್ರಾಣಲಿಂಗ) ಇವೆರಡರಲ್ಲಿ ಅಂತರವು ಉಂಟಾಗದೆ ಇದ್ದರೆ ಪ್ರಜ್ಞೋದಯವಾಗಿ ವ್ಯಕ್ತಿ ಸಾಪೇಕ್ಷಸ್ಥಲ ಕಾಲ ರೂಪ ಈ ನರನು, 'ಮನು'-ಜ=ಮಾನವನಾಗುತ್ತಿದ್ದಿಲ್ಲ. ವಿಶ್ವನಿಯಮದಂತೆ ಆಗಿರುವ, ವಿಕಾಸ ತತ್ತ್ವದ ಪ್ರಾದುರ್ಭಾವದ ಕ್ರಮದಲ್ಲಿ ಮಾನವ ವರ್ಗವು ಕಾಣಿಸಿಕೊಳ್ಳುತ್ತದೆ. ಈ ಮನುಜ ಮಾನವರು ನರ(ಳ)ನ ಪಾತಳಿಯ ಮೇಲೆ ಬಂದು ಇಂದ್ರಿಯ ಪೂಜಕರೇ ಆಗುತ್ತಾರೆ; ಆಗಿದ್ದಾರೆ. ಈ ವಾಸ್ತವ ಘಟನೆಯನ್ನು ಭಾರತೀಯ ಪುರಾತನರು ಗ್ರಹಿಸಿಕೊಂಡರು. 'ವೈವಸ್ವತಮನು ಪ್ರಣೀತ ಮಾನವಧರ್ಮವು' ಆಕಾರ ಪಡೆದು ವೈವಸ್ವತಮನ್ವಂತರವು ಅಸ್ತಿತ್ವದಲ್ಲಿ ಬಂದಿದೆ. ಈ ಐತಿಹ್ಯವನ್ನು ಸಾಂಕೇತಿಕ ಪ್ರತಿಮೆ, ಪ್ರತೀಕೆಗಳ ನೆರವಿನಿಂದ ಚಿತ್ರಿಸಿದ್ದಾರೆ. ಇಂದ್ರ ಶತ್ರುಗಳು, ವೈವಸ್ವತ ಮಾನವ ಧರ್ಮವನ್ನು ನಷ್ಟಪಡಿಸಲು ಮಾಡಿರುವ ಪ್ರಯತ್ನಗಳೆಲ್ಲವೂ ಬೆಳಕಿನಲ್ಲಿ ಬರುವ ಆವಶ್ಯಕತೆಯಿದೆ.

ಸ್ವಯಂಭೂ ನರ(ಳ) ಸಂಪ್ರದಾಯದ ಪ್ರಭಾವವು ಬೆಳೆದು ವೈವಸ್ವತ ಮನ್ವಂತರವು ಕುಸಿದಿದೆ. ಇಂದು ಭಾರತದಲ್ಲಿ ವೈವಸ್ವತ ಮನ್ವಂತರವು, ಕೆಲವೊಂದು ಆಚಾರಾಂಗದಲ್ಲಿ ಮಾತ್ರ ಉಳಿದಿದೆ. ಲೌಕಿಕ ವ್ಯವಹಾರಗಳೆಲ್ಲವೂ

ಸ್ವಾಯಂಭುವ ಮನುಸ್ಮೃತಿಯ ಆಧಾರದಿಂದಲೇ ನಡೆಯುವ ವಾಡಿಕೆ. ಈ ಸ್ಥಿತ್ಯಂತರಗಳಲ್ಲಿ ವೈವಸ್ವತ ಮನ್ವಂತರವು ಕುಸಿಯುವ ವರೆಗಿನ ಅವಧಿಯನ್ನು ಗ್ರಹಿಸಿಕೊಳ್ಳಲು ಶಕ್ಯವೋ? ಎಂಬ ಪ್ರಶ್ನೆ ಏಳುತ್ತದೆ. ವೈವಸ್ವತ ಮನ್ವಂತರದ ಲಕ್ಷಣವು ಏನು? ಇದು ನಿಶ್ಚಿತವಾದರೆ, ಈ ಮನ್ವಂತರವು ಅಳಿದುದನ್ನು ಗ್ರಹಿಸಿಕೊಳ್ಳಲು ಸುಲಭವಾಗಲಿದೆ.

ಟಿಪ್ಪಣಿಗಳು

೧. Frankfort H.; ***Before Philosophy***, Penguine Book
೨. Alexandar S. ***Space and Time*** Vol. II p. 428
೩. ***ಋಗ್ವೇದ ಸಂಹಿತೆ*** X. ೧೨೯. ೩
೪. ***ಬೃಹದಾರಣ್ಯಕೋಪನಿಷತ್ತು*** ೪. ೩. ೩೨.
೫. Louie Young (Ed.) ***Evolution of Man*** p-273
೬. Robert Graves; ***Hebrew Myths*** Cassell London, 1965 pp-21-23; 50-40-42 ಮುಂ.
೭. ***ಋಗ್ವೇದ ಸಂಹಿತೆ*** X-೭೨-೫

ಪ್ರಜ್ಞಾನೇತ್ರ ಮತ್ತು ದಿವ್ಯಚಕ್ಷು

ಮಾನವಧರ್ಮವು ಕುಸಿದು, ನರ(ಳ) ಸಂಪ್ರದಾಯವು ಪ್ರಭಾವಶಾಲಿಯಾಗಿ ಬೆಳೆದುದು ನಿಶ್ಚಿತವಿದೆ. 'ದಿವ್ಯಚಕ್ಷು'ವಿನ ಉಪಸ್ಥಾನವು' 'ಜಾಗರದವರ'- ಜಾಗೃವಾಂಸರ ಸಂಪ್ರದಾಯವಾಗಿದೆ. ಇಂದಿನ ವೇದದಲ್ಲಿ ಇದರ ನಿರ್ದೇಶವಿದೆ:

'ದಿವೀವ ಚಕ್ಷುಃ ಆತತಂ'; 'ತತ್ ವಿಪ್ರಾಸೋ ವಿಪನ್ಯವೋ ಜಾಗೃವಾಂಸಃ ಸಮಿಂಧತೇ।
ವಿಷ್ಣೋಃ ಯತ್ ಪರಮಂ ಪದಂ.'

ಈ ದಿವ್ಯಚಕ್ಷುವು, ವಿಷ್ಣು-ಪದದೊಡನೆ ಸಂಬದ್ಧವಿದೆ. ಇಲ್ಲಿಯೇ 'ಶ್ರೀಮನ್ಮಹಾವಿಷ್ಣುವಿನ' ಪರಮ ಪದವು ಉಂಟು![1] ಈ ವಿಷ್ಣುವೇ, 'ಆದಿತ್ಯನಾಂ ಆಹಂ' ಎಂದು ಗೀತೆಯಲ್ಲಿ ಒಪ್ಪಿದ್ದಾನೆ. ಆದಿತ್ಯ; ತಾಯಿ ಅದಿತಿ; ನೀರೆ; ಈಕೆ ಸಲಿಲಸ್ವರೂಪೀ ರಸಾ=ಭೂದೇವಿ. ಈ ಭೂಮಿ ಪುತ್ರ=ಭೌಮ ವಿಷ್ಣು; ಇವನು ಸ್ಥಲದೊಡನೆ ಬದ್ಧ ಕಾಲ (ಲಿಂಗ) ಶಕ್ತಿ ಆಗುತ್ತಿದ್ದಾನೆ! ಇದರ ಬಗ್ಗೆ ಸಂದೇಹವಿದ್ದಲ್ಲಿ, ಋಗ್ವೇದಸ್ಥ ಈ ಉಲ್ಲೇಖಗಳನ್ನು ನೋಡಿಕೊಳ್ಳಿ: ವಿಷ್ಣುಃ ಯೋನಿಂ ಕಲ್ಪಯತು'![2] ಸ್ಥಲ (ಯೋನಿ), ಮತ್ತು ಕಾಲ (ಪ್ರಾಣಲಿಂಗ ಶಕ್ತಿ)=ವಿಷ್ಣು; 'ಭಗ'ವತ್ ಗೀತೆಯಿಂದ ಈ ಮಾತಿಗೆ ಪುಷ್ಟಿ ದೊರೆಯುತ್ತಿದೆ. ಅವನು ಅದಿತ್ಯಾನಾಂ ಅಹಂ ಎಂಬ ವಿಷ್ಣುರೂಪೀ ಕೃಷ್ಣನು ಹೇಳುತ್ತಾನೆ, 'ಕಾಲಃ ಅಸ್ಮಿ' ಎಂದು ಅಲ್ಲಿಯೇ ಇದೆ.

ಇದು ನಿಜವಿದ್ದರೆ; 'ಪ್ರಜ್ಞಾನೇತ್ರವು' ಜಾಗೃತ, ಜೀವಂತವಿದ್ದಾಗ, ಎಂದರೆ ವೈವಸ್ವತ ಮನ್ವಂತರವು ಪ್ರಭಾವಶಾಲಿಯಾಗಿದ್ದಾಗ, ಈ ಸ್ಥಲ(ಯೋನಿ), ಕಾಲ (ಲಿಂಗ)ದೊಡನೆ ಸಂಬದ್ಧ ದೇವತಾ ಸಂಪ್ರದಾಯವು ಇರಲೇ ಇಲ್ಲವೆ? ಅಥವಾ ಇದ್ದರೆ ಆಗ ಅದು ಯಾವ ಹೆಸರಿನಲ್ಲಿ ಪೂಜೆಗೊಳ್ಳುತ್ತಿತ್ತು? ಈ ಅಂಶವನ್ನು, ಒಂದಕ್ಕಿಂತ ಹೆಚ್ಚು ಬಗೆಗಳಿಂದ ಒರೆಗೆ ಹಚ್ಚಿ, ತಾಳಮೇಳ ಖಾತ್ರಿಕೊಳ್ಳಲು ಶಕ್ಯವಿದೆ. ಸ್ಥಲ (ದೇಹ)ದೊಡನೆ ಬದ್ಧ ಈ ಕಾಲ (ಪ್ರಾಣಲಿಂಗ) ಶಕ್ತಿಗೆ ಅತಿ ಪ್ರಾಚೀನ ಕಾಲದಲ್ಲಿ ಪ್ರಚಲಿತವಿದ್ದ ಹೆಸರುಗಳು ಕಾಲಕಾಲಕ್ಕೆ ಬದಲಾಗುತ್ತ ಬಂದಿವೆ. ಉದಾ : ಭೌಮಾಸುರನೆಂಬ ನಾರ-ಕ, ನರ-ಕ ಎಂಬ ನಾಗನು ಇಂದಿಗೂ ನಾಮಮಾತ್ರಕ್ಕೆ ಉಳಿದಿದ್ದಾನೆ. ನರಕಚತುರ್ದಶೀ ದಿನದಂದು. 'ಭಗ'ವಂತನೆಂಬ ಶ್ರೀ ಕೃಷ್ಣನು, ನರಕಾಸುರನನ್ನು ಸಂಹರಿಸಿದನಂತೆ! ನರಕ-ನಾರಕ ಹೆಸರು ಅಳಿದು ಈಗ 'ನಾರಾಯಣ' (ನಾರಾ=ಅಯನ) ಪೂಜೆಗೊಳ್ಳುತ್ತಿದ್ದಾನೆ. ನಾರಕಾಸುರನನ್ನು ಸಂಹರಿಸಿದನೆಂಬ ಈ ಕೃಷ್ಣನೇ 'ನಾರಾಯಣ'ನ ಪರ್ಯಾಯವಂತೆ; ಭಗ(ಸ್ಥಲ)ವಾನ್ ಎಂಬ ವಿಷ್ಣುವು ನಾಗಲಿಂಗನೇ ಇದ್ದಾನೆ. 'ನಾಗ-ಶಯನ' ಎಂಬ ಹೆಸರು ಮೋಸವನ್ನು ತರುತ್ತಿದೆ! ಇದಕ್ಕೂ ಪೂರ್ವದಲ್ಲಿ ನಾಗನ ಸ್ಥಳದಲ್ಲಿ ಕಾಕ=ಕಾಗೆ ಕರಿಯ ಪಕ್ಷಿ ಇತ್ತು! ಇಂದಿನ ವೇದದಲ್ಲಿಯೂ ಎಂತೋ (ತಪ್ಪಿ) ಈ 'ಕಾಕ'ನ ಹೆಸರು ಉಳಿದಿದೆ. ಬೃಹಂತಂ ವಾಯಸಂ, ಅಪಾಂಗರ್ಭಂ! ಅಪಾಂ-ಗರ್ಭ ನೀರೆಯ ಗರ್ಭಸ್ಥ ಲಿಂಗದೇವರು ಈ ಕಾಗೆ!

ಗ್ರೀಕ್ ರೋಮನ್ ಪೂರ್ವಪರಂಪರೆ

ಪುರಾತನ ಗ್ರೀಕ್‌ಪರಂಪರೆಯ ಟಿಟಾನ್ಸ್ ಮತ್ತು ಭಾರತೀಯ ಭೌಮಾಸುರ ನಾಮರೂಪಗಳು ಸಮಾನಾರ್ಥದುವೇ ಆಗಿವೆ. ಸ್ಥಲದೊಡನೆ ಬದ್ಧ ಲಿಂಗಶಕ್ತಿಯ ಉಲ್ಲೇಖಗಳು ಇವು. ಗ್ರೀಕ್ ಭೌಮಾಸುರರಲ್ಲಿ ಸೈಕ್ಲೋಪಸ್ ಇದ್ದಾನೆ! ಏಕ ಅಕ್ಷನು! ಗಣ್ಣಿನ ಕಣ್ಣು ಒಂದೇ. 'ಅಕ್ಷ' ಎಂಬಲ್ಲಿ ಈ ಅರ್ಥವೇ ಇದೆ. 'ಸಹಸ್ರ ಶೀರ್ಷಃ' ಎಂಬ ಶ್ರೀಮದ್ಗಾಂಭೀರ್ಯದ ಸೂಕ್ತದ ಈ ಪುರಿಶಯ ದಶ(ಅಂಗುಲ) ಇದ್ದಾನೆ. ಗ್ರೀಕ ಪೈಥಾಗೋರಾಸನ ದೇವ Ten ಇದ್ದಾನೆ. ಇವನು Limit (ಪರಿಮಿತಿ) ಮಾನದಂಡವಾಗಿದ್ದಾನೆ ಪ್ರಪಂಚಕ್ಕೆ! ಗ್ರೀಕ್ 'ಸೈಕ್ಲೋಪನ' ನಾಮ ರೂಪಕ್ಕೂ ಮುಂಚಿನದು 'Crows' (ಕಾಗೆ) ಹೆಸರು ಅಭ್ಯಸನೀಯವಿದೆ. ರೋಮನ್ 'Saturn'=ಶನಿ, ಭಾರತೀಯ ಮರುತ=ನರ(ಳ) ತುಲನಾರ್ಹರಾಗಿದ್ದಾರೆ.

ವೇದದಲ್ಲಿ ಟಿಟಾನ್, ಭೌಮಾಸುರ ಸ್ವರೂಪ ದೇವತಾ ಉಪಾಸಕರ ಸಂಪ್ರದಾಯವೆಂದು ಬಗೆಯಲಾಗುತ್ತಿದ್ದ ಅಸುರ ದೈತ್ಯ, ದಾನವರ ಪಂಥವೇ ಆ ಬಳಿಕ ಆಮರಣ ಕುಮಾರೀ ಕುಮಾರ ವ್ರತಧಾರೀ ಸಂತ ಮಹಂತರ. ಸಾಧುಗಳ, ಸಿದ್ಧರ, ಸಂಪ್ರದಾಯ ಎಂಬ ನಾಮಾಂತರದಿಂದ ತಮ್ಮ ಪವಾಡ ಚಮತ್ಕಾರ ಸಿದ್ಧಿಗಳ ಆಮಿಷದ ಬಲದಿಂದ ಜನಪ್ರಿಯ ಧರ್ಮಪಂಥಗಳು ಎನಿಸುತ್ತವೆ.

> "The cross is the shame of Christ and also glory and his power"
> Brazen Serpent on a pole.
> "Serpent once did make man whole" "Cross wellnigh contemptuos brevity, a gigantic and incredible contrast between word and meaning what the thing seen and what remains unseen an incredible paradox and mystery- a poor and shameful mystery.[೩]

ಪ್ರಜ್ಞಾನೇತ್ರದ ಲೋಕ: ಸಾಮಾಜಿಕ ಪ್ರಜ್ಞೆಯು ಜಾಗ್ರತ, ಜೀವಂತವಿರುವವರೆಗೆ ವೈವಸ್ವತ ಮನ್ವಂತರವು ಜೀವಂತವಿರಲು ಶಕ್ಯವಾಯ್ತು. ಆದರೆ, ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ) ಈ ವಿಭಾಗ ದ್ವಯದ ವೃತ್ತಾಕೃತಿಯ [O] ಕಾಲಶಕ್ತಿಯ 'ಕತ್ತಲೆ'ಯ ಪ್ರಭಾವವು ಹೆಚ್ಚಾಗತೊಡಗಿದಂತೆ 'ಅಪಾಂನಪ್ತೃ' ಅಥವಾ ತನೂ-ನಪಾತ್ (Son of himself) ಇಂಥ ಸ್ವಯಂಭೂ ವ್ಯಕ್ತಿ ವೈಶಿಷ್ಟ್ಯವಾದೀ ಜೀವನ ಪ್ರಚೋದಕ ಇಂದ್ರಿಯ ಪಾತಳಿಯ ದೇವತಾ ಶಕ್ತಿಗಳು. ಈ 'ದಿವ್ಯಾಕ್ಷ' ದಿವ್ಯಚಕ್ಷು ಸಿದ್ಧಿಯ ಸಂತ ಮಹಂತರು ಸಮಾಜದಲ್ಲಿ ಪೂಜ್ಯ ನೇತಾರರಾಗತೊಡಗುವಾಗ, ವೈವಸ್ವತ ಮಾನವಧರ್ಮವು ಕುಸಿದು ಬೀಳುತ್ತದೆ. ಸ್ವಯಂ ಭೂ ನರ(ಳ)ರ ಪಂಥಗಳು ಪ್ರಭಾವಶಾಲಿಯಾಗುತ್ತವೆ.

'ಮನು-ಜ ವರ್ಗದ ಪ್ರಾದುರ್ಭಾವ

ವೈವಸ್ವತ ಮನ್ವಂತರ ಉದಯವಾಗುತ್ತದೆ ಎಂದರೇನು? ಇದನ್ನು ಕುರಿತು ಮೊದಲು, ಸ್ಥೂಲವಾಗಿ, ಕೆಲವು ಮಾತುಗಳನ್ನು ಸೂಚಿಸಿದ್ದಾಗಿದೆ. ಪ್ರಾದುರ್ಭಾವ ರೂಪ ವಿಕಾಸದಲ್ಲಿ, ಹಿಂದಿನ ಹಂತದ ಕೆಲವೊಂದು 'ಅನುಕೂಲತೆ'ಯ ಅಥವಾ ಗುಣಗಳ ಬೆಲೆತೆತ್ತು, ಅದರ ಮುಂದಿನ ಪಾತಳಿಯ ಮೇಲಿನ ವಿಕಾಸವು ಕಾಣಿಸಿಕೊಳ್ಳುತ್ತದೆ ಎಂಬ ಈ ಅಂಶವನ್ನು ಡಾ. ಜ್ಯೂಲಿಯನ್ ಹಕ್ಸ್ಲೆ ವಿವರಿಸಿದ್ದಾರೆ. ಆದರೆ, ಈ ಸೂತ್ರವನ್ನು 'missing link' ಕಂಡು ಹಿಡಿಯುವ ದಿಕ್ಕಿನಲ್ಲಿ ಯೋಜಿಸಿದ್ದು ಕಂಡು ಬರುವುದಿಲ್ಲ. ವಾನರ ನರ, ಮನು-ಜ, ಈ ಪರಿಭಾಷೆಯು ಪಾಶ್ಚಾತ್ಯ ಪರಂಪರೆಯಲ್ಲಿಯೂ ಕಾಣಿಸಿಕೊಳ್ಳದೆ ಇಲ್ಲ. ಕ್ರಿಸ್ತಪಂಥೀಯ ಕೇಂದ್ರದ ಪಾರಿಭಾಷಿಕ ಪದವು 'Creature'. 'Idea of Holy' ಎಂಬ ವಿಖ್ಯಾತ ಗ್ರಂಥಕಾರ ಪ್ರೊ. ಒಟ್ಟೊ ರುಡಾಲ್ಫ ಈ ಪಾರಿಭಾಷಿಕ ಪದದ ಮಹತ್ತ್ವ ಹೇಳಿದ್ದಾನೆ. ಈ 'ಮಾನವ'ನು ತನ್ನ ಮರೆತು, 'ತತ್‌ಮಯ'ನಾಗಲು ಸಿದ್ಧನಿರುವುದಿಲ್ಲ.

ದಿವ್ಯಭವ್ಯಕ್ಕೆ ಸರ್ವ-ಸಮರ್ಪಣ ಭಾವದಿಂದ ಶರಣು ಹೋಗದೆ, ಸಾಕ್ಷಾತ್ಕಾರ ದರ್ಶನವು ಶಕ್ಯವಿಲ್ಲ. ಆದುದರಿಂದ, ಈ ಮಾನವನಿಗೆ, ತಾನು 'ಕ್ಷುದ್ರಪ್ರಾಣಿ' ಹೀನ, ದೀನ, ಪಾಪಿ.... ಎಂಬೀ ಬಗೆಯ 'Creature' feeling ಜನ್-ತು ಭಾವವು ಜರೂರು ಇದೆ. 'ನಾರ' ಸ್ವರೂಪ ಪರಮಾತ್ಮನ ಒಂದು 'ಹನಿ' ಈ ನರ. ಆಪೋನಾರಾಃ, ಆಪೋ ವೈ ನರ ಸೂನವಃ; ಇಲ್ಲಿಯೂ ನರ, ನೀರ-ಜನ್‌ತು ಎಂಬ ಅಲ್ಪತ್ವ ಸೂಚಕ ಆಶಯವೇ ಇದೆ. ಪಾಶ್ಚಾತ್ಯ ದಿವ್ಯಾಧ್ಯಾತ್ಮದಲ್ಲಿಯೂ, 'ನರ'=ಜನ್‌ತು ಇದಕ್ಕೆ ಹತ್ತಿರದ 'creature' ಈ ಪರಿಭಾಷೆಯು ಇದೆ. ಆದರೆ 'Colour Blindness' ದಂತೆ ಪಾಶ್ಚಾತ್ಯ ಸಂಶೋಧಕರಿಗೆ, ಕ್ರೈಸ್ತ ಧರ್ಮದ ಬಗೆಗಿನ ಸುಪ್ತ ಧಾರ್ಮಿಕ ಭಾವನೆಯಿಂದಾಗಿ, ಈ ಮಾನವತ್ವಕ್ಕೂ ಮುಂಚಿನ ಹಂತದ ಸೂಚಕವಾದ 'creature' ಸಂಕೇತವು ಯಾರ ಗಮನವನ್ನು ಸೆಳೆದಂತೆ ಕಾಣುವುದಿಲ್ಲ. "By the virtue of Language, man has become Man' ಎಂಬ ಹಂಬೋಲ್ಟನ ಸೂತ್ರದಲ್ಲಿ 'Man' ದ್ವಿ-ರುಕ್ತಿಯಾಗಿದೆ! "By the virtue of language creature has become man" ಎಂದು ಹೇಳಲು ಅವಕಾಶವಿದೆ.

ಡಾ. ಹಕ್ಸ್ಲೆ ಅವರ ಸೂತ್ರದಂತೆ ನರ(ಳ)ನಿಗೆ ಮನುಜತ್ವದ ಅರ್ಹತೆ ಪ್ರಾಪ್ತವಾಗಲು, ತೆತ್ತಬೇಕಾದ ಬೆಲೆ ಯಾವುದು, ಇದರ ವಿಚಾರವು ಆಗುವುದು ಅವಶ್ಯವಿದೆ. ಆದರೆ, ಈ ಕ್ರೈಸ್ತಪಂಥವು ನರ(ಳ) ಸಂಪ್ರದಾಯದ ಉತ್ತರಾಧಿಕಾರಿಯಾಗಿದೆ ಎಂಬುದೇ, ಪಾಶ್ಚಾತ್ಯರಿಗೆ ಇನ್ನೂ ಹೊಳೆದಂತೆ ಕಾಣುವುದಿಲ್ಲ. ವ್ಹೊಲ್ಟೆಅರ್, ನೀಟ್‌ಸೆ ಪ್ರಭೃತಿಗಳು ಕ್ರೈಸ್ತಪಂಥವನ್ನು ತುಚ್ಛವೆಂದು ಬಗೆದಿದ್ದಾರೆ. ಆದರೆ, ವಿಕಾಸತತ್ತ್ವದ ಭೂಮಿಕೆಯಿಂದ ಈ ಕ್ರೈಸ್ತ ಪಂಥದ ತಾತ್ವಿಕಭೂಮಿಕೆಯನ್ನು ವಿಮರ್ಶಿಸಿದ್ದು ಕಾಣುವುದಿಲ್ಲ. ಇದಕ್ಕೆ ಪ್ರತಿಯಾಗಿ, 'ಇತಿಹಾಸದ' ಆಧಾರದಿಂದ ಕ್ರೈಸ್ತ ಪಂಥದ ಹಿರಿಮೆಯನ್ನು ಸಿದ್ಧಪಡಿಸುವ ಪ್ರಯತ್ನ ಓದಿ ಸೋಜಿಗವಾಯ್ತು! ಇಂಗ್ಲೆಂಡಿನ ಪ್ರಾಧ್ಯಾಪಕರೊಬ್ಬರು, ಗ್ರೀಕ್‌ಸಂಸ್ಕೃತಿಯ ಸಮೀಕ್ಷೆಯ ಸಂದರ್ಭದಿಂದ ಬರೆಯುವಾಗ ಉದಾತ್ತ ಭವ್ಯವೆಂದು ಬಗೆಯಲಾಗಿರುವ 'ಗ್ರೀಕ್‌ಸಂಸ್ಕೃತಿ'ಯೇ ಕ್ರೈಸ್ತಪಂಥವಾಗಿ ಪರಿಣಮಿಸಿದೆಂದು ಈ ಪ್ರಾಧ್ಯಾಪಕರು ಹೇಳುತ್ತಾರೆ. ಇತಿಹಾಸಶಾಸ್ತ್ರವನ್ನು, ತಮ್ಮ ಪಂಥದ ಶ್ರೇಷ್ಠತೆಯನ್ನು ಸಿದ್ಧಪಡಿಸಲು ಉಪಯೋಗಿಸಿಕೊಂಡ ಈ ರೀತಿಯು ಅತ್ಯಂತ ಅಶ್ಲಾಘ್ಯವಿದೆ. ಇತಿಹಾಸದ' ಮೂಲಕ ಮಾನವನ ಪ್ರಗತಿಯೇ ಕಂಡು ಬರುತ್ತದೆಂಬ ಗ್ರಹಿಕೆಯು ಇಲ್ಲಿ ಇದೆ! ಹಿಂದಿನ ಆಚಾರ್ಯರ ಗ್ರಂಥಗಳ ಲಾಭ ದೊರೆತು ಅವರ ಮುಂದಿನ ತಲೆಮಾರಿನ ಆಚಾರ್ಯರು ಶ್ರೇಷ್ಠರೇ ಆಗುತ್ತಾರೆ, ಎಂದು ಬಗೆಯುವುದು ಸಮಂಜಸವಾದೀತೆ?

ಇತಿಹಾಸದಲ್ಲಿ ಮಾನವಸಂಸ್ಕೃತಿಯ ಏರು, ಇಳಿತ ಎರಡೂ ಪ್ರತಿಬಿಂಬಿತವಿರುತ್ತದೆ. ಗ್ರೀಕ್‌ಸಂಸ್ಕೃತಿಯಲ್ಲಿ ಪೈಥಾಗೋರಾಸನಿಂದ, ಪ್ರಾರಂಭವಾದ Limit=ದಶಾಂಗುಲ ಪುರುಷನ ಉಪಾಸನಾ ಸಂಪ್ರದಾಯವೇ ಕ್ರೈಸ್ತ ಪಂಥದಲ್ಲಿ ಪರಿಣಮಿಸಿದೆ. ಕುಮಾರೀ (ಮೇರೀ) ಪುತ್ರನ ಉಪಾಸನೆಯ ಈ ಪ್ರಕಾರವು ಇಂದ್ರಿಯ (ಪುರುಷ) ಪೂಜೆಯ ಪರ್ಯಾಯವಾಗಿದೆ. Candle Light; ಜ್ಯೋತಿರ್ಲಿಂಗ ಇದಕ್ಕೆ ಪ್ರಾಧಾನ್ಯವು ಪ್ರಾಪ್ತವಾಗುವಲ್ಲಿ ಕತ್ತಲೆಯ ವಲಯದಲ್ಲಿಯೇ ಇರಬೇಕಾದ 'ಜ್ಯೋತಿಯ ಬಗೆಗಿನ ಆಸಕ್ತಿಯು, (ಸೂರ್ಯ) ಪ್ರಕಾಶ ತತ್ತ್ವವನ್ನು ಹಿಮ್ಮೆಟ್ಟಿಸಿದೆ. ಹೀಗೆ 'ಕತ್ತಲೆ'ಯ ಆರಾಧನೆಯ ಈ ಪ್ರಕಾರವು, ಪ್ರಗತಿಯ ಲಕ್ಷಣವೋ? ಪರಾಗತಿಯ ಹೆಗ್ಗುರುತೊ? ಈ ಜೀವನ ವಿಶ್ವದಲ್ಲಿ 'ಮನು'ಜನ ಪ್ರಾದುರ್ಭಾವವು ಆದದ್ದು ವಾಸ್ತವ; ಸತ್ಯವಷ್ಟೆ? ಇದು ನಿಜವಿದ್ದರೆ, ವಾನರ ಹಂತದ ಮುಂದಿನ ಹಾಗೂ ಮನುಜತ್ವಕ್ಕೂ ಮುಂಚಿನ ಈ ನಡುವಣ ಹಂತದ ಜೀವನರೀತಿಯ ಈ ಪ್ರಾಣಿ ಯಾವುದು? ವಾನರ→ನರ, ಮನು-ಜ ಈ ಪರಿಭಾಷೆಯು, ತಲೆತಲಾಂತರಗಳಿಂದ ಭಾರತದಲ್ಲಿ ಉಳಿದು ಬಂದಿದೆ. ಭಾರತೀಯ ಪರಂಪರೆಯೊಳಗಿನ ನರ: ನಾರ ಅಯನ ಸಂಪ್ರದಾಯವು, 'ವೈವಸ್ವತ ಮನು' ಪರಂಪರೆಯನ್ನು ಹಿಮ್ಮೆಟ್ಟಿಸಿದ್ದುದು ಸಪ್ರಮಾಣವಾಗಿ ಸಿದ್ಧವಾಗಿದೆ. ಆದುದರಿಂದ, ಇಲ್ಲಿ ನೇರವಾಗಿ ಎದುರು ನಿಲ್ಲುವ ಪ್ರಶ್ನೆ: ಮನುಜತ್ವವನ್ನು ದಿಕ್ಕಿಸಿಕೊಳ್ಳಲು ಆಗದೆ, ಈ 'ಪ್ರಾಣಿ' ಮರಳಿ ದಿವ್ಯಾಧ್ಯಾತ್ಮದ ಹೆಸರಿನಲ್ಲಿ ನರ(ಳ)ನಾಗಿಯೇ ಬಾಳುವ ದಾರಿಗೆ ಬಂದದ್ದೇಕೆ?

'ನರ(ಳ)ನಿಗೆ ಮನು-ಜತ್ವವು ಲಭಿಸಿತು

ಡಾರ್ವಿನ್ ಮತ್ತು ವ್ಯಾಲ್ಲಾಸ ಇದರೊಳಗಿನ ಭಿನ್ನಾಭಿಪ್ರಾಯದ ಸಂದರ್ಭದಲ್ಲಿ ಎಚ್.ಎಸ್. ಹ್ಯಾರಿಸನ್ ಎಂಬವನು ಕೇಳಿರುವ ಪ್ರಶ್ನೆಯು ಈ ಬಗೆಯದೇ ಆಗಿದೆ. ವಾನರ ಅಥವಾ ನರನ 'ವಿಕಾಸವಾಯ್ತು' ಎಂದರೆ ಆದದ್ದೇನು? 'Why he ceased to be an ape?'[೪] ಮಾನವೇತರ ಪ್ರಾಣಿಗಳಲ್ಲಿ, ಉಪಜ್ಞೆ-ಸ್ವೋಪಜ್ಞತೆಯು ಇಲ್ಲ. 'ಸ್ವೋಪಜ್ಞ'ತೆ ಮನುಜನ ವೈಶಿಷ್ಟ್ಯವಾಗಿದೆ. 'ಸ್ವೋಪಜ್ಞತೆ'ಯನ್ನು ಆಧುನಿಕ ಪಾಶ್ಚಾತ್ಯ ಪರಿಭಾಷೆ 'Intuition'(: ಸಹ-ಜ ಜ್ಞಾನ) ಎಂದು ಹೇಳಬಹುದು. 'ಉಪ-ಜ್ಞಾ'-ಸ್ವ ಉಪಜ್ಞಾ ಎಂದರೇನು? ಉಪಜ್ಞಾ=ಉಪಜ್ಞಾತಂ, ವಿನೋಪದೇಶೇನ ಜ್ಞಾತಂ, ಇದು ಸಹಜ ಜ್ಞಾನಶಕ್ತಿ.

ಪಾಶ್ಚಾತ್ಯ ಪರಂಪರೆಯೊಳಗಿನ 'Wisdom' ಇದರ ಮೂಲದಲ್ಲಿ, ('wit', 'wise'ಗಳಂತೆ) 'ವಿದ್' ಎಂಬ ಇಂಡೋ-ಯುರೋಪೀಯ ಶಬ್ದಮೂಲವಿದೆ. ವಿದ್>ವೇದ ಎಂಬಲ್ಲಿಯೂ ತನ್ನತಾನೆ ಹೊಳೆದು ಅರಿಕೆಗೆ ಬರುವ ಜ್ಞಾನ ಎಂಬ ಆಶಯವೇ ಇದೆ. ಆಧುನಿಕ ಸಂಶೋಧಕನೊಬ್ಬನು 'Wisdom' ಕುರಿತು ಬರೆಯುವುದೇನೆಂದರೆ:

> "The wisdom of intuition is a distillation of the experience of the species in the environment which it has met regularly or at least repeatedly during the evolution."[೫]

ಅಂದಿನವರು ಗ್ರಹಿಸಿಕೊಂಡ ನರ(ಳ)ನಿಗೆ 'ಮನ'-ಜತ್ವ ಪ್ರಾಪ್ತವಾಗುವ ಹಂತದ ಈ ಸೂಕ್ಷ್ಮ ವಿಚಾರವು 'ಮನು ಮಾರ್ಗ'ದ ಹಿರಿಮೆಯನ್ನು ಮನಗಾಣಿಸಿಕೊಡಬಲ್ಲುದು. 'ವೇದ'-ಸಂ-ವೇದ-ಎಂದರೆ ಉಪಜ್ಞಾ. 'ಜಾತವೇದ' ರೂಪ, ನೂತನವಾಗಿ ತಲೆಯೆತ್ತಿದ ಈ 'ಜಾತವೇದ' ಶಕ್ತಿಯನ್ನು ಅಗ್ನಿಸಂಕೇತದ ಸಾಹಚರ್ಯದಲ್ಲಿ ಹೇಳುವ ವಾಡಿಕೆಯು ಇತ್ತು. ಮನು (ಮನಃ) ಶಕ್ತಿಯನ್ನು ವಿವಸ್ವನ್ (ಸೌರ) ಕಿರಣ, ಎಂದಿರುವಂತೆ, ಇದಕ್ಕೂ ಮೊದಲಲ್ಲಿ ಜಾತವೇದ ಶಕ್ತಿಯನ್ನು ಅಗ್ನಿ (ಸ್ಫುಲಿಂಗ) ಎಂದುದಾಗಿದೆ. ವೇದ: ಪ್ರಜ್ಞಾ-ಉಪಜ್ಞಾ ಇದು ಹುಟ್ಟಿನಿಂದಲೇ ಬರುವ ಶಕ್ತಿ. ಇದು ಕಲಿಕೆಯಿಂದ ಬರುವ ಮಾತಲ್ಲ. ಬೇರೆಯವರ ಉಪದೇಶೇನ ವಿನಾ ಅರಿಕೆಗೆ ಬರುವ ಒಳತಿಳಿ(ವಿನ) ಬೆಳಕು, ಈ ಉಪಜ್ಞೆ. ಆದರೆ, ಮಾನವನ ಪ್ರದುರ್ಭಾವವಾಗುವ ಸಂದರ್ಭದಲ್ಲಿ, ಈ ನರ(ಳ)ನಲ್ಲಿ ತಲೆದೋರಿದ ಪ್ರಜ್ಞೆ=ಉಪಜ್ಞೆ. ಇದು ಒಂದು 'ಶಾಪ; 'ವರ ಅಲ್ಲ' ಎಂಬ ಹಾಗೆ ಇದನ್ನು ವಿರೋಧಿಸುವ ಒಂದು ಸಂಪ್ರದಾಯವೂ ತಲೆಯೆತ್ತುತ್ತದೆ. ಈ ಪ್ರಜ್ಞೆ=ಉಪಜ್ಞೆಯು 'ವಾನರ ಬಂಧು' ನರ(ಳ)ರ ಸ್ವೈರಕ್ರೀಡೆ, ಲೀಲೆಗಳಿಗೆ ಆತಂಕಕಾರಿಯಾಗತೊಡಗುವ ಅನುಭವವು ಅನಿವಾರ್ಯವಿದೆ! ಇನ್ನೂ ಒಂದು ತೊಂದರೆ, ಉಪಜ್ಞೆ ತಲೆದೋರಿದ್ದರಿಂದ ದೊರೆವ ತನ್ನ ನಿರ್ಣಯ ತಾನೇ ಕೈಕೊಳ್ಳಬೇಕಾಗುವ-ಈ ದತ್ತ ಸ್ವಾತಂತ್ರ್ಯವು, ಅಡಿಗಡಿಗೂ 'ಯುಕ್ತಾಯುಕ್ತತೆ'ಯ ಧರ್ಮಸಂಕಟಕ್ಕೆ ಕಾರಣವಾಗುತ್ತದೆ! ಭೌತನಿಸರ್ಗದ ಪ್ರಚೋದನೆಯ (animal intuition) ಸ್ವರೂಪವು ಒಂದು ಬಗೆಯದು ಇದ್ದರೆ, ಪ್ರಜ್ಞೆ-ಉಪಜ್ಞೆಯ (wisdom) ಪ್ರಚೋದನೆಯ ದಿಕ್ಕೇ ಬೇರೆ!

ಅಲ್ಲದೆ, ತನ್ನ ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ) ಇವೆರಡರ ಸಂದರ್ಭದಿಂದ ಥಟ್ಟನೆ ತಲೆದೋರುವ ಚೋದನೆಯು, ಅಸ್ವಯಂವೇದ್ಯವಿರುತ್ತದೆ. ಇದು ನ-ಚಿಕೇತಾಗ್ನಿಯ ಚೋದನೆಯಾಗಿದೆ. ಇದು ನಮ್ಮನ್ನು, ನಮಗೆ ಅರಿಯದಲೆಯೇ ಆಳುತ್ತಿರುತ್ತದೆ. ಪುರಾತನರು ಇದನ್ನು "'ನ-ಚಿ ಕೇತ' ಅಗ್ನಿ" ಎಂದುದು ನಿಷ್ಕಾರಣವಲ್ಲ.

ಆದರೆ, ನರ(ಳ)ನ ಜೀವನರೀತಿಯಲ್ಲಿ, (ಪ್ರಾದುರ್ಭಾವದ ಕ್ರಮದಲ್ಲಿ) ಥಕ್ಕನೆ ಉದಯವಾದ ಪ್ರಜ್ಞೆ=ಉಪಜ್ಞೆಯು ಪ್ರಕಾಶರೂಪ 'ಸ್ವಯಂ ವೇದ್ಯ' ಶಕ್ತಿಯಾಗಿದೆ. ಆದರೆ, ಈ ನರ(ಳ)ರಿಗೆ ವಾ-ನರ ಜೀವನ ರೀತಿಯ ಆಕರ್ಷಣವೇ ವಿಶೇಷ. ಕಪಿಯ ಪ್ರಾಣದೇವರು 'ಮುಖ್ಯ ಪ್ರಾಣ'-'ಮಹಾವೀರ' ಎಂಬ ರೂಪವನ್ನು ಪೂಜಿಸುವುದರಲ್ಲಿ ಈ ಆತ್ಮೀಯತೆಯು ಪರಿಣಮಿಸಿದ್ದುಂಟು. ಉಪಜ್ಞೆಯ ನೆರವಿನಿಂದ ಆಗುವ ನಿರ್ಣಯದ

ಹೊಣೆಯು ತನ್ನ ಮೇಲೆ ಬರುತ್ತದೆ. ಆದರೆ, ಕಾಲ-ಶಕ್ತಿಯ ಚೋದನೆಯ ಹೊಣೆ ನೇರ ತನ್ನ ಮೇಲೆ ಇಲ್ಲ! ಇದು 'ಭಗ'ವಂತನ ಲಿಂಗದೇವರ ಪ್ರಚೋದನೆ ಆಗಿದೆ.

ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ), ಇವೆರಡೂ ಸಮವಾಯರೂಪ (Concomitant and Inseparable) ಏಕಾತ್ಮಕವಾಗಿರುವುದು' ಜೀವಿ: ಪ್ರಾಣಿಯ ಲಕ್ಷಣವಾಗಿದೆ. ದೇಹದಿಂದ ಭಿನ್ನವಿರುವ ಅರಿವು ಯಾವ ಜೀವಿಗೂ ಇರುವುದಿಲ್ಲ. (ವಾ-ನರ→) ನರ ವರ್ಗದ ವರೆಗೂ ಹಿಂದೊಮ್ಮೆ ಸ್ಥಲ (ದೇಹ) ಹಾಗೂ ಕಾಲ (ಪ್ರಾಣಲಿಂಗ) ಇವೆರಡರಲ್ಲಿ ಅವಿಭಾಜ್ಯ ಏಕಾತ್ಮತೆಯೇ ಇತ್ತು. ಆದರೆ, ವಿಕಾಸತತ್ತ್ವದ ಪ್ರಕ್ರಿಯೆಯಲ್ಲಿ, ಈ ನರ ಳ) ವರ್ಗದಲ್ಲಿ 'ಸ್ವ'ಉಪಜ್ಞೆಯು ಫಕ್ಕನೆ ಪ್ರಾದುರ್ಭವಿಸುತ್ತದೆ. 'ಮನು'ಜತ್ವದ ಉದಯದ ಹಂತವು ಇದು. ಮೊದಲು 'ದ್ವಿತ' ಸ್ಥಲ (ಕಾಲರೂಪ)ನಿದ್ದವನು ಪ್ರಜ್ಞೋದಯದೊಡನೆ ತ್ರಿತ ಆಗುತ್ತಾನೆ! ಪ್ರಜ್ಞೆ=ಉಪಜ್ಞೆ ಹಿಡಿಸದ ಸನಾತನೀ ನರ(ಳ) ಸಂಪ್ರದಾಯಕ್ಕೆ 'ತ್ರಿತತ್ವ' ಮಾನ್ಯವಾಗಲು ಶಕ್ಯವೇ ಇಲ್ಲ. ಇದು ತರ್ಕ, ಅನುಮಾನವಲ್ಲ. ಇಂದಿನ ಋಕ್ ಸಂಹಿತೆಯಲ್ಲಿ ಇರುವ ತ್ರಿತನ (ಮನುಜನ) ಪ್ರತಿಮಾಭಂಜನದ ಪ್ರಯತ್ನ=ಅಭಿಚಾರ ಕೃತ್ಯಗಳು ಇದಕ್ಕೆ ಸಾಕ್ಷಿ. ಪಂಚಮವೇದ ಎಂಬ ಮಹಾಭಾರತದಲ್ಲಿಯೂ ಈ ತ್ರಿತನ ಪಾತ್ರದ ವಿಕೃತಿಯ ಪ್ರಯತ್ನವು ಉಂಟು.

ಆದರೆ, ತ್ರಿತ ಈ ಭೂಮಿಕೆ, ಕಥೆ ಕಾದಂಬರಿಯೊಳಗಿನಂತಹ ಕಾಲ್ಪನಿಕ ಪಾತ್ರವಲ್ಲ, ವಾಸ್ತವಃ ಸತ್ಯಸ್ವರೂಪ ಅನುಭವವಿದು. ತ್ರಿತನೊಂದಿಗೆ, ಈ ಜೀವನ ವಿಶ್ವದ ವಿಭಾಗತ್ರಯಗಳು ಸ್ಪಷ್ಟತೆಯನ್ನು ಪಡೆಯುತ್ತವೆ. ನರ(ಳ)ನು ವಿಭಾಗದ್ವಯುವುಳ್ಳವನು. ದೇಹ(ಪಿಂಡ), ಮತ್ತು ಪ್ರಾಣಲಿಂಗಚೇತಸ (ಬ್ರಹ್ಮಅಂಡ) ಇವೆರಡರ ಐಕ್ಯದಲ್ಲಿ-ಏಕಾತ್ಮತೆಯಲ್ಲೇ ಈ ನರನ ನರಳತ್ವವು ಒಳಗೊಂಡಿದೆ, ಆದರೆ. ಪ್ರಜ್ಞೆ→ಉಪಜ್ಞೆ ತಲೆದೋರುವುದರೊಡನೆ ಭೂಃ→ಭುವಃ ಇವೆರಡರ ಆಚೆಗಿನ ಸ್ವರ್ [ಅಥವಾ ಸುವಃ] ಎಂಬ ಆಕಾಶತತ್ತ್ವದ ವಿಭಾಗತ್ರಯದ ಪ್ರಕಾಶರೂಪ ಆಗಾಮೀ ನಾಳೆಗಳತ್ತ ಸಾಗಿರುವ ಮೂರನೆಯ ಪಾತಳಿಯ ಅರಿವೂ ಒತ್ತರಿಸುತ್ತದೆ. ಇದರಿಂದ, ಈ ನರ[ಳ]ನು ತ್ರಿತನಾಗುತ್ತಾನೆ. ಇರಾಣಿನ ಅವೆಸ್ತ ಎಂಬ ಪುರಾತನ ಧರ್ಮಗ್ರಂಥದಲ್ಲಿ Trit the man ಈ ಸಾಂಕೇತಿಕ ಪ್ರತಿಮೆಯು ಉಂಟು. ಗ್ರೀಕ್ ಪುರಾತನ ಪರಂಪರೆಯಲ್ಲಿ ವಿಭಾಗತ್ರಯದ ಬಗೆಗಿನ ನಿಷ್ಠೆಯಿದ್ದುದನ್ನು ಶಾಕ್ತಪಂಥೀಯ ಒರ್‌ಫಿಕ್ ಸಂಪ್ರದಾಯವೂ ಅರಿತಿತ್ತು:[೬]

> As the Pythagoreans say, the whole world and all things in it are summed up in the number three, for end, middle and beginning give the number of the whole; and their number is triad. Hence we have taken this number from nature, as it were one of her laws, and make use of it even for the worship of Gods"

ಹೀಗೆ, ತ್ರಿತ (triad) ಆಗೋದು ನಿಸರ್ಗಸ್ಥ ನಿಯಮವೇ ಆಗಿದೆ! ಆದರೆ, ಸ್ಥಲ-(ದೇಹ)ದೊಡನೆ ಬದ್ಧ ಕಾಲ (ಪ್ರಾಣ-ಲಿಂಗ) ಶಕ್ತಿಯ ಆರಾಧಕರಿಗೆ, ವಿಭಾಗತ್ರಯದ ದೃಷ್ಟಿಕೋನವು ಮಾನ್ಯವಾಗಲು ಶಕ್ಯವೇ ಇಲ್ಲ. ಪೈಥಾಗೋರಾಸ ಪಂಥಕ್ಕೆ 'Triad' (ತ್ರಿತತ್ವ) ಗೊತ್ತಿದ್ದೂ, 'Dyad' ಅದು ಭೂಮಿಕೆಯನ್ನೇ ಸ್ವೀಕರಿಸಿದ್ದಾಗಿದೆ! ಪೈಥಾಗೋರಾಸ ಪಂಥದ ಉತ್ತರಾಧಿಕಾರಿಯೇ, ಇಂದಿನ ಕ್ರೈಸ್ತ ಪಂಥ; ಆದರೆ, 'triad' ಅಮಾನ್ಯವಿರುವ ಈ ಕ್ರೈಸ್ತ ಪಂಥವು, 'Trinity' ರೂಪಿಸಿಕೊಂಡಿರುವಲ್ಲಿ ಒಂದು ಬಗೆಯ ಮೋಸವಿದೆ. ಇದು 'ಏಕಂಸತ್' ಇದರ ತ್ರಿಭಾಗ; ಇದು ನಿಜವಾದ ವಿಭಾಗ ತ್ರಯವಲ್ಲ.

ಭಾರತೀಯ ದಿವ್ಯಾಧ್ಯಾತ್ಮ ಪಂಥೀಯರು ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ,) ಅಥವಾ ದೇಹ (ಪಿಂಡ) ಮತ್ತು ಪ್ರಾಣಲಿಂಗ (ಬ್ರಹ್ಮ ಅಂಡ) ಇದನ್ನೇ 'ಬ್ರಹ್ಮನ್' ತತ್ತ್ವ ಎಂದು ನೆಮ್ಮಿದ್ದಾರೆ. 'ದ್ವೇ ವಾವ ಬ್ರಹ್ಮಣೋ ರೂಪೇ, ಮೂರ್ತಂ ಚ ಅಮೂರ್ತಂ ಚ' ಉಪನಿಷತ್ತಿನಲ್ಲಿ ಈ ಶ್ರದ್ಧೆ ನಮೂದು ಇದೆ. ಈ ನಿಷ್ಠೆಯಂತೆ ಹೆಂ-ಗಂ ಇಬ್ಬರೂ ಪರಸ್ಪರ ದೇಹ ಪ್ರಾಣ, 'ಬ್ರಹ್ಮನ್' ಸ್ವರೂಪರೇ ಆಗುತ್ತಾರೆ. ಈ ಸಂಪ್ರದಾಯಯದ

ಬ್ರಹ್ಮ-ಚರ್ಯ ಎಂಬ ಪದಕ್ಕೆ ಇರುವ ಮೂಲಾರ್ಥವು ಈಗ ಇರುವ ರೂಢ ಅರ್ಥಕ್ಕಿಂತಲೂ ತೀರ ಬೇರೆ ಬಗೆಯದೇ ಆಗಿದೆ.

'ಬ್ರಹ್ಮ'ವನ್ನು ಕುರಿತು (ಅದರತ್ತ) ಚರಿಸುವದು, 'ಬ್ರಹ್ಮ-ಚರ್ಯ' ಎನಿಸುತ್ತದೆ. ಈ ಅರ್ಥದ ಅನಿವಾರ್ಯತೆಯು ಗಮನಕ್ಕೆ ಬರಲು, ಈ 'ದಿವ್ಯ' ಅನುಭೂತಿಯ ಮೂಲಭೂಮಿಕೆಯನ್ನು ಲೆಕ್ಕಿಸುವ ಆವಶ್ಯಕತೆಯು ಇದೆ. ಗಣ್‌ಡಿಗೆ ಹೆಣ್ಣು ಪ್ರಾಣ. ಹೆಣ್ಣಿಗೆ ಗಣ್‌ಡು ಪ್ರಾಣ. ಆದಕಾರಣ, ಇದು ತತ್ತ್ವತಃ ಪ್ರಾಣೋಪಾಸನೆ; ಪ್ರಾಣವು ನಿತ್ಯ ಉಭಯಲಿಂಗಿಯಾಗಿದೆ. ಆದಕಾರಣ, ಉಭಯಲಿಂಗವೂ ಬ್ರಹ್ಮನ್ ಆಯ್ತು. ಬ್ರಹ್ಮಪುಚ್ಛ (ತೈತ್ತಿರೀಯ ಪರಿಭಾಷೆ) ಮಾತ್ರ ಬ್ರಹ್ಮವಲ್ಲ. ಆದರೆ, ಕೇನೋಪನಿಷತ್ತು ಬಿಟ್ಟರೆ ಹೆಣ್ಣನ್ನು ಬ್ರಹ್ಮ ಎನ್ನದೆ, ಬರಿ ಪುರುಷನೇ ಬ್ರಹ್ಮನ್ ಎಂಬ ಸಂಭ್ರಮ ನಿರ್ಮಿಸಲಾಗಿದೆ! ಆದರೆ ಹೆಂ-ಗಂ=ಕಣ್>ಗಣ್=ಸ್ಥಲ-ಕಾಲ ಏಕಾತ್ಮಕವಾದಾಗಲೇ ಇದು 'ಪೂರ್ಣಬ್ರಹ್ಮ' ಸನಾತನ. ಇದನ್ನು ಇನ್ನೂ ಒಂದು ನಿಟ್ಟಿನಿಂದ; ಎಂದರೆ ಹೆಂ-ಗಂ ಪರಿಭಾಷೆಗಿಂತಲೂ ಪುರಾತನ ಪರಿಭಾಷೆಯ ಸ್ಥಲ (ದೇಹ) ಮತ್ತು ಕಾಲದ (ಪ್ರಾಣಲಿಂಗ) ಮೂಲಕವಾಗಿ ಅರಿಯಬೇಕು. ಭೌತ ಪಾತಳಿಯ ಮೇಲೆ ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ) ಇವೆರಡರಲ್ಲಿ ಅಂತರವು ಇರಲು ಶಕ್ಯವೇ ಇಲ್ಲ. ಕಾಲಿದಾಸನು ಈ ಪೂರ್ಣ-ಬ್ರಹ್ಮ: ಸನಾತನದ 'ಆನಂದ ಸಿದ್ಧಿಯ' ಸ್ಥಿತಿಯನ್ನು ಜೀವನಾದರ್ಶವೆಂದು ಬಗೆದು ಒಂದು ನಾಂದೀಶ್ಲೋಕದಲ್ಲಿ ಸ್ಮರಿಸಿಕೊಂಡಿದ್ದಾನೆ. "ವಾಕ್ ಅಥೌ ಇವ ಸಂಪೃಕ್ತೌ ಜಗತ್ ಪಿತರೌ". ನಮ್ಮಲ್ಲಿ-ಲಕ್ಷ್ಮೀ-ರಮಣ, ಉಮಾಪತಿ, ಸೀತಾ-ಕಾಂತ ಇತ್ಯಾದಿ 'ಸ್ಥಲ-ಕಾಲ' ರೂಪ, ಲಿಂಗಾಂಗಯೋಗಸ್ಥ ಹೆಸರುಗಳನ್ನೇ ಮನೆತನದಲ್ಲಿ ಪರಂಪರೆಯಿಂದ ಇಡಲಾಗುತ್ತದೆ.

ತ್ರಿತನ ಕಾರ್ಯವೇನು?

'ನಾನು ತ್ರಿತ' ಎಂಬ ಪ್ರಜ್ಞೆಯು ಜಾಗ್ರತವಾಗಿ ಉಳಿದರೆ, 'ನರ(ಳ)-ನಾರೀ(ಳಿ)' ಏಕಾತ್ಮಕ ಸನಾತನ ಪೂರ್ಣ ಬ್ರಹ್ಮಸಿದ್ಧಿಯ ಆದರ್ಶದ ಜೀವನ ರೀತಿಯ ಸಂದರ್ಭದಲ್ಲಿ ತ್ರಿತತ್ತ್ವದ ಆ ಪ್ರಕಾಶದ ತತ್ತ್ವದ-ನೆನಹು ಒತ್ತರಿಸಿದರೆ, ಸ್ಥಲ-ಕಾಲದ ಏಕಾತ್ಮಕ ಸಿದ್ಧಿಯ ಆದರ್ಶವು, ರಾತ್ರಸಮಾಚಾರದ ಲೈಂಗಿಕ ಪಾತಳಿಯ, ಇಂದ್ರಿಯ ಪೂಜೆಯ ಒಂದು ಪ್ರಕಾರವಿದು ಎಂಬ ಅರಿವು ಉಂಟಾಗಿ ಈ ದಿವ್ಯಾನಂದದ ಉಪಾಸನಾ ಪ್ರಕಾರವು ತಿರಸ್ಕಾರಕ್ಕೆ ಗುರಿಯಾಗುವುದು ನಿಶ್ಚಿತವಿದೆ. 'ಭಗ್'-ವಂತ, ಗುಹೇಶ್ವರ, ವ್ಯಾಸ, ವಾಲ್ಮೀಕಿ, ಈ ಬಗೆಯ ನಾಮರೂಪಗಳು ಸ್ಥಲ-ಕಾಲದ ಏಕಾತ್ಮಕತೆಯ ಸೂಚಕವಾಗಿದೆ. 'ತ್ರಿತ'ನ ಈ ಸಾಂಕೇತಿಕತೆಯು ನೈಸರ್ಗಿಕವಿದೆ. ವಿಕಾಸತತ್ತ್ವದ ಪ್ರಭಾವದಲ್ಲಿ ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ) ಇವೆರಡರಲ್ಲಿ ಅಂತರವು ಉಂಟಾಗಿದೆ! ಇದರಿಂದಾಗಿ, ಪ್ರಜ್ಞೆ (ಉಪಜ್ಞೆ-ಮನಸ್ಸು) ಈ ಟೊಳ್ಳಿನ ಅವಕಾಶದಲ್ಲಿ ಕಾಣಿಸಿಕೊಳ್ಳಲು ಶಕ್ಯವಾಗಿದೆ. ನರ(ಳ)ತ್ವವು-ಗೌಣವಾಗಿ ಮಾನವಧರ್ಮವು ಉಳಿದು ಬರಲು ಈ 'ಮನು'ಜನಲ್ಲಿ, ತಾನು ದೇಹವಲ್ಲ, ಅಥವಾ ಪ್ರಾಣಲಿಂಗವೂ ತಾನಲ್ಲ ತಾನು ತ್ರಿತನು ಎಂಬ ಈ ನೆನಹು ಬೇರೂರಲು, ಪ್ರಜ್ಞೆ : ಉಪಜ್ಞೆಯು ಜೀವಂತ-ಜಾಗ್ರತವಾಗಿ ಇರುವ ಆವಶ್ಯಕತೆಯು ಉಂಟು.

ಆದರೆ, ನರ(ಳ) ಸಂಪ್ರದಾಯಾಭಿಮಾನೀ ದಿವ್ಯಾಧ್ಯಾತ್ಮಸಿದ್ಧಿಯ ಬೆಂಬತ್ತಿರುವ ಪಂಥಗಳು, 'ತ್ರಿತ'ನನ್ನು ನಾಮಾನಶೇಷವಾಗಿಸಲು ಮಾಡಿರುವ ನಾನಾ ಕುತಂತ್ರಗಳು ಇಂದು, ಸಪ್ರಮಾಣವಾಗಿ ಬೆಳಕಿನಲ್ಲಿ ಬರುತ್ತಿವೆ. ಇವುಗಳ ಒಂದು ಮಾದರಿ ಇದು; ಗೀತೆಯಲ್ಲಿ, ಪ್ರಜ್ಞೆಯನ್ನು 'ಸ್ಥಿತ'=ಸ್ಥಗಿತಗೊಳಿಸಿ, ಈ ಪ್ರಜ್ಞೆಯನ್ನು ಸ್ಥಲದ-ದೇಹದ-ಪರಿಮಿತಿಯದ್ದಾಗಿಸುವ ಮಂತ್ರ, ತಂತ್ರವನ್ನು ಹೇಳಲಾಗಿದೆ. ಏಕೆಂದರೆ, ಪ್ರಜ್ಞಾಪ್ರಕಾಶವು, ಸ್ಥಲ(ದೇಹ)ದ ಆಚೆಗಿನದು. 'ತ್ರಿತ' : ಪ್ರಜ್ಞೆ, ಪ್ರಜ್ಞೆಯ ಅಂಗವಾದ ಮನಃಶಕ್ತಿ. ಮನುವೈವಸ್ವತನು ಎಂದರೆ ಬೇರೆಯಲ್ಲ. ಭೂಲೋಕದಲ್ಲಿ ಈ ತ್ರಿತನು, ಸ್ವರ್‌ಲೋಕದ ಪ್ರಕಾಶತ್ತ್ವದ ಪರ್ಯಾಯವಾಗಿರುವ, ಇಂದ್ರನಿಗೆ ಸಹಕಾರಿ; ಮಿತ್ರನೂ ಸರಿ, ಭೂಲೋಕದ ಮನುಜರಲ್ಲಿ ವಾಸವಾಗಿರುವ ಒಳತಿಳಿ(ವಿನ) ಬೆಳಕಿನ ಸ್ವರೂಪ ಇಂದ್ರನ ಪರ್ಯಾಯವೇ ಈ ತ್ರಿತ: ಆಪ್ತ್ಯ. 'ಆಪ್ತ್ಯ' ಎಂಬ ವಿಶೇಷಣದಿಂದ ಈ ತ್ರಿತನು, ನರ : ಮನುಜನೇ

ಆಗಿರುವುದನ್ನು ಒಪ್ಪಿದ್ದಾಗಿದೆ. ಆದರೆ ನರ(ಳ)ನಿಗೂ ಆಪ್ತ್ಯತ್ರಿತನಿಗೂ ವ್ಯತ್ಯಾಸವು ಇಷ್ಟೆ. ನರ(ಳ)ನಿಗೆ ತಾನು 'ತನುಜ' ಅಮೃತ=ರೇತದ ಸಂತಾನ, 'ಆಪೋ ವೈ ನರಸೂನವಃ' ಎಂದು ಬಗೆಯಲು ನರ(ಳ) ಸಂಪ್ರದಾಯವು ಬೋಧಿಸುತ್ತದೆ. ಆದರೆ, ವೈವಸ್ವತ ಮನುಸಂಪ್ರದಾಯದ ನಿಷ್ಠೆಯಂತೆ, ಈ ಆಪ್ತ್ಯತ್ರಿತನು, ಪ್ರಕಾಶರೂಪ, ಇಂದ್ರನ ಸಹಕಾರೀ ಮಿತ್ರನು ಆಗಿದ್ದಾನೆ. ಈ ದೇಹಸ್ಥ ವೈವಸ್ವತ 'ಮನು' ಎಂದರೂ 'ತ್ರಿತನೇ'

ಈ 'ತ್ರಿತನ' ಕಾರ್ಯವೇನು? ಪ್ರಕಾಶರೂಪ ಇಂದ್ರನ ಕಾರ್ಯವೇ 'ತ್ರಿತನ' ಕಾರ್ಯವಾಗಿದೆ. ಇಂದ್ರನಿಗೆ 'ಅಹಿ:ವೃತ್ರ ಹನ್ ಎಂಬ ಬಿರುದು ಇದೆ. ಅಲ್ಲದೆ 'ಶಿಶ್ನೋ ದೇವಾಃ' ಸಂಪ್ರದಾಯದ ಶತ್ರುವೂ ಈ ಇಂದ್ರನು. ಈ ಸಾಂಕೇತಿಕತೆಯ ಅರ್ಥವು, 'ವಿಶ್ವನಿಯಮಕ್ಕೆ' ಅನುಸರಿಸಿ ಇದೆ. ಪ್ರಜ್ಞೋದಯದೊಡನೆ ಏಕಾತ್ಮಕ ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ) ಇವೆರಡರಲ್ಲಿ ಬಿರುಕು ಬಿಟ್ಟಿತು. ಹೀಗೂ ಹೇಳಬಹುದು: ವಿಕಾಸತತ್ವದ ಪ್ರಕ್ರಿಯೆಯಲ್ಲಿ 'ನರ' ವರ್ಗದಲ್ಲಿ ದೇಹ ಮತ್ತು ಪ್ರಾಣಲಿಂಗ ಇವೆರಡರ ನಡುವೆ ಅಂತರವು ಉಂಟಾಯಿತು. ಈ 'ಅಂತರ' ಸೂಚಕ ಲಕ್ಷಣವೇ 'ಮನು'ಜನೊಳಗಿನ ಉಪಜ್ಞೆ. ಈ ಉಪಜ್ಞಾರೂಪ ತ್ರಿತನಿಂದಾಗಿ, ಈ 'ನರ(ಳ)' ವಾನರ ಬಂಧುವಿನ ಲೈಂಗಿಕ ಕ್ರಿಡೆಗೆ ಆತಂಕವು ಉಂಟಾಗುವ ಅನಿವಾರ್ಯತೆಯನ್ನು ಗಮನಿಸಿದಲ್ಲಿ, ತ್ರಿತ=ಇಂದ್ರನು 'ಶಿಶ್ನೋದೇವಾಃ' ಸಂಪ್ರದಾಯದ ಶತ್ರು, ಎಂದರೇನು? ಇದು ನಿಚ್ಚಳಾಗಿ ಕಾಣಬಹುದು. ಅಹಿ=ವೃತ್ರನ ಹಗೆತನ ಎಂದರೇನು ಎಂಬುದೂ ವೈಶ್ವಕ ಪಾತಳಿಯ ನಿಯಮ ಸೂಚಕವಾಗಿದೆ. 'ವೃತ್ರ'ನು 'ಅಹಿ' ಸ್ವರೂಪನಿದ್ದಾನೆ, ಎಂದರೇನು? ಇದನ್ನು ಎರಡು ಬಗೆಯಿಂದ ಅರಿಯಬಹುದು.

ಈ 'ಅಹಿ'ಯ ಮೂಲಾರ್ಥವು ಪಾಪಿ (ಅಂಹಸ್) ಎಂದು ಇದೆ. ವೃತ್ತಿವಾರ್ತಿಕ ಬರೆದ ಕುಮಾರಿಲ ಭಟ್ಟರು, ಪಾಮು (ಹಾವು) ಈ ಪದಕ್ಕೆ, ಪಾಪದಿಂದಾಗಿ ಜನಿಸಿದ್ದು: ಪಾಮು ಎಂದು ಅರ್ಥ ಹಚ್ಚಿದ್ದಾರೆ. ಈ ನಾಗಶಕ್ತಿಯ ಲೈಂಗಿಕಕ್ರಿಯೆಯೊಡನೆ ಏನೆಲ್ಲ ವಿರಕ್ತ ಪಂಥಗಳಲ್ಲಿ, ಪಾಪದ, ಅಪರಾಧೀ ಭಾವನೆಯ ಕಲ್ಪನೆಯು ಬೆಸೆದುಕೊಂಡಿದೆ. ಆದರೆ, ವೈವಸ್ವತ ಮನುಸಂಪ್ರದಾಯದಲ್ಲಿ 'ವಿಶ್ವನಿಯಮ'ವೇ ಆಧಾರವಾಗಿರುವುದರಿಂದ, ಹಿತ-ಮಿತ ಸ್ವರೂಪದ ಲೈಂಗಿಕ ಕ್ರಿಯೆಯು 'ದಾಪಂತ್ಯಧರ್ಮ'ದ ಅಂಗವಾಗುತ್ತದೆ. ಇಲ್ಲಿ ಪಾಪದ, ಅಪರಾಧೀ ಮನೋಭಾವದ ಕಲ್ಪನೆಗೆ ಇಂಬು ಇಲ್ಲ. ವಿರಕ್ತ ಪಂಥಗಳಲ್ಲಿಯೇ ಈ ಪಾಪದ ಭಾವನೆಯು ಅತ್ಯಂತ ತೀವ್ರ ಸ್ವರೂಪದ್ದು ಆಗಿರಲು ಕಾರಣ ಯಾವುದು? ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ) ಇವೆರಡರ ಐಕ್ಯದಲ್ಲಿಯೇ ಬ್ರಹ್ಮ(?)' ಆನಂದವಿದೆ, 'ಜೀವನದ ಪರಮ ಸಿದ್ಧಿಯಿದೆ' ಎಂಬ ನಂಬುಗೆಯು, ಈ ಪಾಪದ ಭಾವನೆಯ ಉಗಮ ಸ್ಥಾನದಲ್ಲಿದೆ! ಪಿಂಡ (ದೇಹ) - ಬ್ರಹ್ಮಾಂಡ (ಪ್ರಾಣ ಲಿಂಗ) ಇವೆರಡರ ಐಕ್ಯದಲ್ಲಿ ಇರುವ ಭೌತ ಸ್ಥಳ-ಕಾಲದ ಸಂದರ್ಭದ ಈ ಮೂಲ ಆದರ್ಶಗಳನ್ನು ದೈಹಿಕ ಪಾತಳಿಯಲ್ಲಿ ಆವರಿಸಲು ಅಶಕ್ಯವಿದೆ! ಇದಕ್ಕಾಗಿ ಆ-ಮರಣ 'ಕುಮಾರೀ', 'ಕುಮಾರ' ವ್ರತಿಗಳಾಗಿ ತಮ್ಮ ಅಂತರಂಗದಲ್ಲಿ, ತಮ್ಮತಮ್ಮ ಇಷ್ಟ ದೇವ ಅಥವಾ ದೇವಿಯ ಧ್ಯಾನಮಗ್ನರಾಗಿ ಬಾಳುವ ವಾಡಿಕೆಯೂ ಉಂಟು. ಆ ಅನೈಸರ್ಗಿಕ ಜೀವನರೀತಿಯಲ್ಲಿ ಮನಃ ಸಂಯಮಕ್ಕಾಗಿ 'ಪಾಪ'ದ ಭೀತಿಯನ್ನು ಉಪಯೋಗಿಸಿಕೊಳ್ಳಲಾಗುತ್ತದೆ! 'ಆತ್ಯಂತಿಕ ಅಹಿಂಸೆ'ಯ ಸೋಗು ಸಹ ಅವಶ್ಯವಾಗುತ್ತದೆ. ಈ 'ಅಹಿ' (ನಾಗ) ಎಂದರೆ ಗಂ-ಹೆಂರೂಪ ಲೈಂಗಿಕ ಪ್ರವೃತ್ತಿ! ಸ್ಥಲ-ಕಾಲದ ಪ್ರತೀಕ ಈ ಅಹಿ : 'ವ್ರತ್ರ', ಎಂಬ ಮಾತಿನ ಗುಹ್ಯಾರ್ಥವು, ಆ-ಲಿಂಗದ ಸೂಚಕವಿದೆ, 'ವೃ'=ಆವರಿಸು ಎಂಬ ಅರ್ಥದ ಆಖ್ಯಾತ ಸಾಧಿತ/ವೃತ್ರ. ಆ-ಲಿಂಗನಕ್ಕೆ ಆತುರ 'ನಾಗ', ಸ್ಥಲ-ಕಾಲರೂಪ ಘಟ-ಸರ್ಪಗಳ ಮಿಥುನವಿದು.

ಈ ಅರ್ಥಕ್ಕೆ ಇನ್ನೊಂದು ಸಾಂಕೇತಿಕ ಪ್ರತಿಮೆಯಿಂದ ಪುಷ್ಟಿದೊರೆಯುತ್ತದೆ. ಅಹಿ=ನಾಗ=ಚಂದ್ರ; ಅಹಿ=ವೃತ್ರ ಎಂಬಲ್ಲಿ ಚಂದ್ರನು ಅಭಿಪ್ರೇತನಿದ್ದಾನೆ. ಮ್ಯಾಕ್‌ಡೊನೆಲ್ಲನೂ ಇದನ್ನು ಕಂಡಿದ್ದಾನೆ. ಅಹಿ=ವೃತ್ರ (ಚಂದ್ರ : ನಾಗಲಿಂಗ) ಮತ್ತು ಇಂದ್ರ (ಸೂರ್ಯ=ಸವಿತೃ, ವಿವಸ್ವನ್) ಇವರಿಬ್ಬರೊಳಗಿನ ಹಗೆತನದಲ್ಲಿ ಅನಾರ್ಯ ಆರ್ಯರೊಳಗಿನ ದ್ವೇಷಾಸೂಯೆಯ ಅರ್ಥವನ್ನು ಕಾಣುವ ವ್ಹೀಲರ್ ಪ್ರಭೃತಿ ಸಂಶೋಧಕರ ಪರಂಪರೆಯೂ ಒಂದು ಉಂಟು. ಪ್ರಸ್ತುತ, ವೈವಸ್ವತ ಮನುಪ್ರಣೀತ 'ಮಾನವ ಧರ್ಮ' ಮತ್ತು ಚಂದ್ರೋಪಾಸಕರ ನರ(ಳ)ಧರ್ಮ ಇವೆರಡರೊಳಗಿನ

ಸಾರ್ವಕಾಲಿಕ ಸನಾತನ ವಿರೋಧ ಹೋರಟೆಯು ಇಲ್ಲಿ ಅಭಿಪ್ರೇತವಿರುವುದು ನಿಶ್ಚಿತವಿದೆ. ತ್ರಿತ: ಇಂದ್ರರನ್ನು ಇಲ್ಲವಾಗಿಸದೆ ನರ(ಳ) ಸಂಪ್ರದಾಯಗಳಿಗೆ ಉಳಿಗಾಲವಿಲ್ಲ. ಇವೆರಡೂ ದೈವತಗಳು, 'ಮನುಜ' ಸಂಪ್ರದಾಯಕ್ಕೆ ಕಾಣಿಸಿಕೊಂಡ ಬಗೆಯು ಆಧುನಿಕ ವಿಕಾಸತತ್ತ್ವದ ಬೆಳಕಿನಲ್ಲಿ ಸ್ಪಷ್ಟವಾಗುತ್ತದೆ. ಆದರೆ, ವಾನರ ಬಂದು ನರ(ಳ) ಸಂಪ್ರದಾಯಗಳಿಗೆ, 'ಮಾನವ ಧರ್ಮ'ದ ಪ್ರಕಾಶತತ್ತ್ವದ ಪಾತಳಿಯ ಜೀವನ ರೀತಿಯೇ ಹಿಡಿಸದ್ದರಿಂದ ಈ ಇಂದ್ರಿಯ ಉಪಾಸಕರ ಪಂಥಗಳು, ದಿವ್ಯಾಧ್ಯಾತ್ಮರ ಹೆಸರಿನಲ್ಲಿ ಸಂತ ಮಹಂತರ ವೇಷದಲ್ಲಿ ತ್ರಿತ ಹಾಗೂ ಇಂದ್ರರ ಪ್ರತಿಮಾಭಂಜನಕ್ಕಾಗಿ ಮಾಡಿರುವ ಪ್ರಯತ್ನಗಳು ಬೆಳಕಿನಲ್ಲಿ ಬರುವ ಆವಶ್ಯಕತೆಯಿದೆ. ತ್ರಿತನನ್ನು ಇಲ್ಲವಾಗಿಸಿರುವ ಒಂದು ಮಾದರಿ ಇಲ್ಲಿದೆ.

ತ್ರಿತ : ಜಾತವೇದ ಅಗ್ನಿ ಇಲ್ಲವಾಗುತ್ತದೆ.

ಪ್ರಜ್ಞೆಯು ಜಾಗೃತ ಜೀವಂತವಾಗಿಯೇ ಉಳಿದಿದ್ದರೆ ಈ ಪ್ರಜ್ಞೆ=ಜಾತವೇದ ಅಗ್ನಿಯು, ನ-ಚಿಕೇತಾಗ್ನಿ (ಯೋನಿ) ಕುಂಡದಲ್ಲಿ ಹೊಕ್ಕಿಕೊಂಡು, ಎಂತೂ ಬದುಕುವ ಈ ಅಧಃಪಾತಕ್ಕೆ ಇಳಿಯಲು ಶಕ್ಯವಿಲ್ಲ. ಪರಿಸ್ಥಿತಿ ಜನ್ಯ ಕಾರಣಗಳಿಂದಾಗಿ. ಈ ಪ್ರಜ್ಞಾ: ಪ್ರಕಾಶಕ್ಕೆ ಎಂತಹರ ಉಳಗಕ್ಕೂ ಒಪ್ಪುವ ಹೊತ್ತು ಬರುತ್ತದೆ ಎಂಬೀ ಬಗೆಯ ಆಗಾಮೀ ಅವಸ್ಥೆಯ ಈ ಚಿತ್ರವು ಕ್ರಿ. ಪೂ. ೨೦೦೦ ವರುಷಗಳ ಹಿಂದಿನ ಸಂಹಿತೆಯಲ್ಲಿ ಉಂಟು. 'ಎಂತೂ ಬದುಕುವುದೇ ಮುಖ್ಯ' ಆಗುವಾಗ, ಪ್ರಾಣಲಿಂಗೋಪಾಸನೆಗೇ ಪ್ರಾಧಾನ್ಯವು ಪ್ರಾಪ್ತವಾಗುವಾಗ, 'ತ್ರಿತ'ನ ಕೊಲೆ ಆಗಲೇಬೇಕು, ಆಗುತ್ತದೆ; ಆಗಿದೆಂಬ ಈ ವಿಶ್ವನಿಯಮದ ಕ್ರಿಯೆ ಪ್ರತಿಕ್ರಿಯೆಯು ಇದು. ಬ್ರಹ್ಮನ್ ಉಲ್ವ (Vulva) ರೂಪ ನಚಿಕೇತಾಗ್ನೀಸೂಕ್ತದಲ್ಲಿ ಇದು ನಮೂದು ಇದೆ[೭] ತ್ರಿತನು ಹೇಳುತ್ತಾನೆ; 'ಮಮ ಪೂರ್ವೇ ಭ್ರಾತರಃ ಹತಃ' ಆದಕಾರಣ, ಹೀಗೆಯೇ ನನ್ನ ಕೊಲೆಯೂ ಆದೀತು ಎಂಬ ಭಯದಿಂದ, ಈ 'ಅಗ್ನಿಕುಂಡದಲ್ಲಿ ಹೊಕ್ಕು ಜಾತವೇದ ಅಗ್ನಿ, ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ.[೮]

ಈ ತ್ರಿತನು, ಸ್ವರ್‌ಪಾತಳಿಯ ಪ್ರಜ್ಞಾಪ್ರಕಾಶ ತತ್ತ್ವದ ಅನುಸಂಧಾನವನ್ನು ಸದಾ ಇಟ್ಟುಕೊಳ್ಳುವವನು; ಇದು ನಿಜವಿದ್ದರೂ ಈ ತ್ರಿತನು ನೆಲದ ಮೇಲೆ ನಿಂತವನಾಗಿದ್ದಾನೆಂಬ ಈ ಅಂಶ ಸೂಚಕವಾದ 'ಆಪ್ತ್ಯ' ಎಂಬ ವಿಶೇಷಣದೊಡನೆ 'ತ್ರಿತ'ನನ್ನು ಸ್ಮರಿಸಿಕೊಳ್ಳುವ ವಾಡಿಕೆಯಿತ್ತು, 'ಆಪ್ತ್ಯ'ನು ಆಪ್‌ತತ್ತ್ವದವನೇ ನಿಜ. ಆದರೆ ಆಪೋ ವೈ ನರಸೂನವಃ ಎಂಬ ಈ ಜನ್‌ತುಕೋಟಿಯ ನರ(ಳ)ನು ಈತನಲ್ಲ. ಈ ಆಪ್ತ್ಯ ತ್ರಿತನು, (ಸಂಸಾರ) ಕೂಪದಲ್ಲಿ ಬಿದ್ದು ನರಳುತ್ತಿರುವ ಸಾಂಕೇತಿಕ ಚಿತ್ರವೂ, ಈ ವೇದದಲ್ಲೇ ಇದೆ![೯] ಏಕತ ಮತ್ತು ದ್ವಿತ ಇವರಿಬ್ಬರೂ ತ್ರಿತನ ಸಹೋದರರಂತೆ. ಇವರು ಒಳಸಂಚುಮಾಡಿ, ತ್ರಿತನ ಸಂಪತ್ತು ಅಪಹರಿಸಲು ಅವನನ್ನು ಕೂಪದಲ್ಲಿ ನೂಕಿದರಂತೆ! ದಿವ್ಯಕಥೆಗಳ ಪ್ರಕಾರಗಳಲ್ಲಿ ಯಾವುದೊಂದು ಘಟನೆಯ ಸ್ಪಷ್ಟೀಕರಣಕ್ಕಾಗಿ ಮೈದಾಳುವ ಪವಾಡ ಕಥೆಗಳ ಪ್ರಕಾರವು ಒಂದು ಉಂಟು.

ಮಾನವ ಪ್ರಜ್ಞೆಯ ವಿಕಾಸ-ಸಂಕೋಚದ ಆಲೇಖವು, (graph) ಈ ಬಗೆಯ ದಿವ್ಯಕಥೆಗಳಲ್ಲಿ ಹುದುಗಿರುತ್ತದೆ. ಅಹಿ-ಹಂತಕ ಇಂದ್ರನ ಸಹಕಾರಿ ತ್ರಿತನು ಮಾನವನೊಳಗಿನ ಉಪಪ್ರಜ್ಞಾ ಸ್ವರೂಪನಿದ್ದಾನೆ. ಈ ಉಪಪ್ರಜ್ಞೆ, ಪ್ರಾಣಲಿಂಗ ಪಾತಳಿಯ ಸೇವೆಗೆ ಸಿದ್ಧವಾಗುತ್ತದೆ. ಇದನ್ನು ಕಂಡು ಹಿಡಿಯುವುದರೊಡನೆ ಪ್ರಜ್ಞೆಯ ವಿಕಾಸಸಂಕೋಚವು ತನ್ನ ತಾನೆ ಬೆಳಕಿಗೆ ಬರಲಿದೆ. ಕೂಪದಲ್ಲಿ [O] ಸಿಕ್ಕು ಬಿದ್ದಿರುವ ಈ ತ್ರಿತನು ನರ(ಳ)ನ ಹಂತಕ್ಕೆ ಇಳಿದಿದ್ದಾನೆ. ಆದರೆ, ಈ 'ಕೂಪ'ದೊಳಗಿಂದ ಹೊರಗೆ ಬರುವ ತೀವ್ರಆಕಾಂಕ್ಷೆಯು ಇನ್ನೂ ನಷ್ಟವಾಗಿಲ್ಲ! 'ಮಾನವಧರ್ಮಕ್ಕೆ ಸುದಿನಗಳು ಬರುವ ಆಶಾಕಿರಣವು ಇಲ್ಲಿಯೆ ಇದೆ. ಈ ತ್ರಿತನು, ಬೃಹಸ್ಪತಿಯನ್ನು ಪ್ರಾರ್ಥಿಸುತ್ತಿದ್ದಾನೆ: ಬ್ರಹ್ಮಣಸ್ಪತಿ (ದೇವಯಾನೀ ಶುಕ್ರ) ಗುರುವನ್ನಲ್ಲ.

ಮಾನವಶಾಸ್ತ್ರವು, ಈ ಅಂಶವನ್ನು ಮೊದಲು ಗುರುತಿಸಬೇಕಾಗಿತ್ತು. ಕೆಲವು ಪಂಗಡಗಳಲ್ಲಿ, ಮೈಯಲ್ಲಿ ಆವೇಶ ಆಗುವ ಶಾಮನ್ (ಶ್ರಮಣರು) 'ಮೆಡಿರ್ಸಿ ಮ್ಯಾನ' (ವೈದ್ಯ) ಇದ್ದಾರೆ. ಈ ದೃಶ್ಯದ ಅರ್ಥವೇನು?

ನರ(ಳ)ರ ಹಂತದ ಜೀವನರೀತಿಯ ನೇತಾರರರು ಇವರು. ಆದರೆ, ಮೈಯಲ್ಲಿ ಆವೇಶವಾಗುವ ಯಕ್ಷಿಣಿಗಳ ಸಂಪ್ರದಾಯವು ಹೆಚ್ಚು ಪ್ರಾಚೀನ. ಆವೇಶ ಆಗೋದು ಹೆಣ್ಣುಮಕ್ಕಳಲ್ಲೇ ವಿಶೇಷ, ಉಪನಿಷತ್ತಿನಲ್ಲಿ 'ಗಂಧರ್ವ ಗೃಹೀತಾ' ಸ್ತ್ರೀ ಇದ್ದಾಳೆ. ಮೈಯಲ್ಲಿ ಆವೇಶ ಆಗಿ, ಆದಿಶಕ್ತಿ ಮಾತಾಡಿದ ಹಾಗಿನ ಸೂಕ್ತವು, ಇಂದಿನ ವೇದದಲ್ಲಿದೆ: 'ವಾಕ್' ದೇವಿ ಮೊಗವಾಡ ಧರಿಸಿರುವ ಗೀಃ ವಾಣ-ವಾಣೀ ಅಂತರ್ 'ಅಂಗ'ದ ಸ್ಫೂರ್ತಿಯಿಂದ ಹೊಮ್ಮಿ 'ಉಕ್ಕಿ' ಬರುವ ಈ ವಾಣಿಯ ಸಾಕ್ಷಾತ್‌ಆಕಾರವು ಈ ವೇದದಲ್ಲಿ ಅಂಭೃಣೀ (=ನೀರೆಯ) ರೂಪದಲ್ಲಿ ಚಿತ್ರಿತವಿದೆ[೧೦] 'ರುದ್ರಾಯ ಧನುಃ ಆತನೋಮಿ' ರುದ್ರನ ಬಾಣ<ವಾಣಕ್ಕಾಗಿ ಬಿಲ್ಲನ್ನು ಹಿಗ್ಗಿಸಿ ಸಜ್ಜಾಗಿ(ಸಿ)ದ್ದೇನೆ ಈ ಗೀಃ (ನಾದ) ರೂಪ 'ವಾಣಿ', ತನ್ನ ಬಿಲ್ಲಿಗೆ ಬಾಣಹೂಡಲು ರುದ್ರನ ಅನು-ನಯ ಯಾರ ಬೇಟೆಗಾಗಿ? ಯಾವ ಯುದ್ಧಕ್ಕಾಗಿ? ಇದರ ನೇರ ಉತ್ತರವನ್ನು ಈ ಭಗವತಿ ತಾನೇ ಹೇಳಿಬಿಟ್ಟಿದ್ದಾಳೆ. 'ಬ್ರಹ್ಮದ್ವಿಷೇ ಶರವೇ ಹಂತ ವೈ' ಬ್ರಹ್ಮ ದ್ವೇಷಿಗಳ ಹನನಕ್ಕಾಗಿ ಈ ವಾಣ-ವಾಣಿ' ತನ್ನಲ್ಲಿ ಆವೇಶ ಆಗಿದೆ ಎಂಬ ಅರಿವು, ಅಥವಾ ಈ ಬಗೆಯ ಆವೇಶವು ಆ ವ್ಯಕ್ತಿಯು ವಿಭಜಿತವಾಗಿರುವುದರ ಲಕ್ಷಣವಾಗಿದೆ.

ಈ ಬಗೆಯ 'ವಿಭಜಿತ' ವ್ಯಕ್ತಿಯಾಗುವ 'ಪ್ರಾಣಿ', ನರ(ಳ), ನಾರಿ(ಳ)ಯೇ ಹೊರತು ವಾನರಾದಿ ಬೇರಾವ 'ಪ್ರಾಣಿ'ಯೂ ಅಲ್ಲ. ದಿವ್ಯ ಸಾಕ್ಷಾತ್‌ಆಕಾರ : ದರ್ಶನವು ಶಕ್ಯವಾಗುವ ಈ ವಿಭಜಿತ ಸ್ಥಿತಿಗೆ ಕಾರಣವು ಏನು? ಇದರ ಶೋಧವು ಮಾನವಶಾಸ್ತ್ರದ ಪರಿಮಿತಿಯ ಹೊರಗಿನದೆಂದು ಈ ಅಂಶವು ಆ ಶಾಸ್ತ್ರಜ್ಞರಿಂದ ದುರ್ಲಕ್ಷಿತವಾಗಿರುವ ಶಕ್ಯತೆಯೂ ಇದೆ. ಆದರೆ, ಈ ಮಾನವ ಜೀವನವು ವಿಶಾಲವಿದೆ. ಇದರಿಂದಾಗಿ ವಿವಿಧ ಕ್ಷೇತ್ರದ ಪರಿಘಗಳು ಒಂದರ ಮೇಲೊಂದು ಹಾಯ್ದು ಹೋಗುವ ಅನಿವಾರ್ಯತೆಯೂ ಇದೆ. ಮಾನವಶಾಸ್ತ್ರ, ಸಮಾಜಶಾಸ್ತ್ರ, ಮಾನಸಶಾಸ್ತ್ರ, ಇಂತಹ ವಿಭಾಗಗಳ ಕ್ಷೇತ್ರಗಳ ಸೀಮಾಪ್ರದೇಶಗಳು ಒಂದರಲ್ಲಿ ಒಂದು ತೊಡಕಿಕೊಂಡಿರುತ್ತವೆ. 'ವಿಭಜಿತ ವ್ಯಕ್ತಿ' ಆಗೋದು ಒಂದು ರೋಗದ ಲಕ್ಷಣವೆಂದು ಮಾನವಶಾಸ್ತ್ರವು ಹೇಳುತ್ತದೆ! ಈ ದೃಶ್ಯವು ಕಾಣಿಸಿಕೊಳ್ಳುವ ಕಾರಣಗಳು ಇನ್ನೂ ನೆಲೆಗೆ ನಿಲುಕಿಲ್ಲವಂತೆ, 'ನರ'(ಳ)ನ ವಿಭಜಿತ ವ್ಯಕ್ತಿತ್ವವು, ಅವನಲ್ಲಿ ತಲೆ ದೋರುವ ವಿವಿಧ ಮನೋವಿಕೃತಿಗಳನ್ನು ಆಮಂತ್ರಿಸುತ್ತದೆ! ಈ ಮನೋವಿಕೃತಿಯ ನಿಜವಾದ ಅನ್ವಯಾರ್ಥವು ಇನ್ನೂ ಸಂಶೋಧನೆಗೆ ನಿಲುಕಿಲ್ಲ.

> "these impairments which so far have eluded all attempts at explanation in terms of physical or biological pathology. The two most common forms are mantic-depressive psychosis,.... and The schizophrenias"

ಈ ಅವಸ್ಥೆಯಲ್ಲಿ ಈ ವಿಭಜಿತ ನರ(ಳ)ನಲ್ಲಿ ಅಸಾಮಾಜಿಕ ಪ್ರವೃತ್ತಿಯು ಪ್ರಬಲವಾಗುತ್ತದೆ! he loses contact with his fellows and with his surroundings.[೧೧]

ವ್ಯಾಲ್ಯಾಸನು ಕಂಡ missing link ಎಂಬ ಈ ವರ್ಗವು ವಾನರ ವರ್ಗಕ್ಕೂ ಮುಂದಿನ ಹಂತ ಮತ್ತು 'ಮನು'ಜತ್ವ ಪ್ರಾಪ್ತಿಗಿಂತಲೂ ಮುಂಚಿನ ಹಂತವೇ ಇರುವ ಬಗೆಗೆ ಸಂದೇಹಕ್ಕೆ ಅವಕಾಶವಿಲ್ಲ. ಡಾರ್ವಿನ್ ಹಾಗೂ ವ್ಯಾಲ್ಲಾಸ ಇವರಿಬ್ಬರಲ್ಲಿ ಭಿನ್ನಾಭಿಪ್ರಾಯವು ತಲೆದೋರಿದ ಎಡೆಯೇ ಇದು. ವಾನರನಿಂದ ನೇರ ಮಾನವನ ಪ್ರಾದುರ್ಭಾವವು ಆಗಿಲ್ಲ. ವಾನರ ಮಾನವ ಇವೆರಡೂ ಹಂತಗಳ ನಡುವೆ 'ಹೊಂಡವಿದೆ! ಜಲಚರ, ಭೂಚರ ಇವೆರಡೂ ಹಂತಗಳ ನಡುವೆ ಕಪ್ಪೆ, ಆಮೆ, ಹಾವು.............ಉಂಟು. ಎರಡೂ ಹಂತಗಳಿಗೂ ಮಧ್ಯಸ್ಥವರ್ಗವಿದೆ. ಇದೇ ಬಗೆಯಲ್ಲಿ ವಾನರ ಮತ್ತು ಮನುಜ ಇವೆರಡೂ ಹಂತಗಳಿಗೂ 'ಸಂಬಂಧ'ವಿರುವ ವರ್ಗವೇ 'ನರ(ಳ) ವರ್ಗ: ವಿಕಾಸಕ್ರಮದಲ್ಲಿ ಈ ನರ(ಳ)ನ ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ) ಇವೆರಡರ ಏಕಾತ್ಮತೆಯು ವಿಭಾಗಿಸಲ್ಪಡುತ್ತದೆ. ಗಂ. ಹೆಂ. ಎರಡೂ ಒಂದೇ ಹೂವಿನಲ್ಲಿ ಇರುವ ಹಂತವು ಹಿಂದೆ ಬಿದ್ದು, ಪಪ್ಪಾಯಿ, ಕುಂಬಳ ಮುಂತಾದ ಹೂವುಗಳಲ್ಲಿ ಸ್ತ್ರೀಕೇಸರ, ಪುಂಕೇಸರದ

ಹೂವು ಬೇರೆಯಾಗುತ್ತವೆ! ನರ(ಳ) ನಾಳ(ರಿ) ಪ್ರಜ್ಞೋದಯದ ಬಳಿಕ ಈ 'ಸ್ಥಲ' (ದೇಹ) ಮತ್ತು ಆದಿತಿ (ಏಕಾತ್ಮಕ) ಸ್ವರೂಪದಲ್ಲಿ ಉಳಿದುಬರಲು ಶಕ್ಯವಾಗಲಿಲ್ಲ! ವಿಭಜಿತ 'ಅ-ದಿತಿ' ದಿತಿ ಆಗುತ್ತಾಳೆ. ತಮ್ಮ ಮಿಥುನ ಕ್ರೀಡೆಗೆ ವಿಘ್ನಕಾರಿ 'ಅಹಿಹಂತಕ ಇಂದ್ರನು; ಈ ಕಾರಣದಿಂದಾಗಿ ಈ ದಿತಿಯು ಇಂದ್ರಹನನ ಸಮರ್ಥ ಪುತ್ರನನ್ನು ಪಡೆಯಲು ತಪಸ್ಸು ಮಾಡಿದಳಂತೆ. ಈ ವಿಭಾಜಿತ 'ದಿತಿ'ಯ ರುದ್ರಿಯು-ಮರುತ-ನರ(ಳ)ರನ್ನು ಹಡೆದಳೆಂಬ ಕಥೆಯನ್ನು ಸಾಯಣರು ಭಾಷ್ಯದಲ್ಲಿ ಕೊಟ್ಟಿದ್ದಾರೆ,[೧೨] ಇಂದ್ರನು ಈಕೆಯ ಗರ್ಭಸೇರಿ ಕತ್ತರಿಸಿದ ಗರ್ಭದ ೭X೭ ತುಂಡು ಎಂದರೇ ಈ ಮರುತರಂತೆ.

ಈ ಕಥೆಯ ಮೂಲಕವೂ, ಮಾನವ ಪ್ರಾದುರ್ಭಾವ ಆಗಲು ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ) ಇವೆರಡರ ವಿಭಕ್ತೀಕರಣದ ನೈಸರ್ಗಿಕ ಘಟನೆಯು ದೃಢಪಡುತ್ತದೆ. ವಿಭಜಿತ ವ್ಯಕ್ತಿತ್ವಕ್ಕೆ ಮನೋವಿಶ್ಲೇಷಣ ಶಾಸ್ತ್ರಜ್ಞರು ಹೇಳುವ ಉಪಾಯಗಳಿಂದ, ವಿಕಾಸದ ಪ್ರಕ್ರಿಯಲ್ಲಿ ಈ ಘಟನೆ ಸಂಭವಿಸಿದೆ, ಎಂಬ ಒಪ್ಪಿಗೆಯು ಇಲ್ಲ. ಲೈಂಗಿಕ ಅತೃಪ್ತಿಯೇ ಕಾರಣ ಎನ್ನುತ್ತಾರೆ. ಆದರೆ, 'ಸ್ಥಳ'ಕಾಲ ರೂಪ ಘಟಸರ್ಪಗಳು 'ಲಿಂಗಾಂಗ' ಯೋಗದಲ್ಲಿಯೇ 'ಅ-ದಿತಿ' ಸ್ವರೂಪದಲ್ಲಿಯೇ ಉಳಿದು ಬರಲು ಶಕ್ಯವಿಲ್ಲ. ವಿಭಜಿತ ಅದಿತಿ 'ದಿತಿ' ಆಗುತ್ತಾಳೆ. ಈ ದಿತಿಯು ಇಂದ್ರಹನನ ಸಮಾರ್ಥ ಪುತ್ರನನ್ನು ಬಯಸಿ ರುದ್ರಿಯ ಮರುತನನ್ನು ಹಡೆದಳೆಂಬ ಕಥೆಯು ಹುಟ್ಟಿದೆ. ಪ್ರಜ್ಞೆ: ಜಾತವೇದ ಉದಯವಾಗಿದೆ. ವಿಕಾಸತತ್ತ್ವದ ಒತ್ತಾಯದಲ್ಲಿ, ಈ ನರ(ಳ)ನ ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ) ಇವೆರಡೂ ವಿಭಜಿತವಾಗುವ ಅನಿವಾರ್ಯತೆಯಿದೆ. ಇದನ್ನು ಲೆಕ್ಕಿಸಿ ಈ 'ವಿಭಾಜಿತ ವ್ಯಕ್ತಿ'ತ್ವದ ಅರ್ಥವನ್ನು ಮಾಡಲಾಗಿಲ್ಲ. ಮನೋವಿಶ್ಲೇಷಣಶಾಸ್ತ್ರವು ಹೇಳುವ ಉಪಾಯಗಳಿಂದ, ಈ ಪ್ರಾಣಿ, ಮರಳಿ ನರ(ಳ) ನಾರೀ (ಳ) ಆಗಿಯೇ ಉಳಿಯಲಿದ್ದಾನೆ. ಸ್ಥಳ-ಕಾಲ ಇವೆರಡರಲ್ಲಿ ಅಂತರವು ಉಂಟಾಗುವ ಮೂಲಕಾರಣವನ್ನು ಈ ಫ್ರೈಡ್‌ಪಂಥೀಯರು ಗ್ರಹಿಸಿಲ್ಲ. ಮಾನವನಲ್ಲಿ ಉದಯಿಸಿರುವ ಪ್ರಜ್ಞೆ: ಉಪಜ್ಞೆಯನ್ನು ಲೆಕ್ಕಿಸಿಲ್ಲ. ಈ ಫ್ರೈಡ್‌ಪಂಥಕ್ಕೂ ದೇಹ ಹಾಗೂ ಪ್ರಾಣಲಿಂಗ ಇವೆರಡರನ್ನೂ ನಿಯಂತ್ರಿಸುವ ಮೂರನೆಯ ತತ್ತ್ವದ ಅನಿವಾರ್ಯತೆಯು ಎನಿಸದೆ ಇಲ್ಲ. ಈ ಫ್ರೈಡನು ('Super ego') ಎಂಬ ಪರಿಕಲ್ಪನೆಯನ್ನು ಸೃಷ್ಟಿಸಿದ್ದಾನೆ. ಆದರೆ ಭಾರತೀಯ ಪುರಾತನರು ಕಂಡು ಹಿಡಿದಿರುವ ತ್ರಿತನ ಈ ವಾಸ್ತವ ಅಸ್ತಿತ್ವಕ್ಕೆ ಇರಾಣ ಹಾಗೂ ಗ್ರೀಕ್ (triad) ಸಂಸ್ಕೃತಿಗಳಿಂದಲೂ ಬೆಂಬಲ ಉಂಟು.

ಪುರಾತನರು ಕಂಡ ಸ್ಥಲ (ದೇಹ) ಹಾಗೂ ಕಾಲ (ಪ್ರಾಣಲಿಂಗ) ಇವೆರಡರೊಳಗಿನ ಈ 'ಬಿರುಕಿಗೆ' ಪ್ರಜ್ಞಾ: ಪ್ರಕಾಶದ ಪ್ರಾದುರ್ಭಾವವೇ ಕಾರಣ ಎಂಬ ಸಂಗತಿಯು ಇನ್ನೊಂದು ನಿಟ್ಟನಿಂದ ದೃಢಪಡುತ್ತಿದೆ. 'ಪ್ರಕಾಶ : ಪ್ರಜ್ಞಾ' ತತ್ತ್ವವನ್ನು 'ಬ್ರಹ್ಮನ್' ಎಂಬ ಬಗೆವ ಮಾನವಧರ್ಮವನ್ನು ನೆಲಕ್ಕೆ ಕೆಡಹಲು, ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ)ದ ಏಕಾತ್ಮಸ್ಥಿತಿಯನ್ನೇ ಬ್ರಹ್ಮಸಿದ್ಧಿ ಎಂದು ಬಗೆಯುತ್ತಿದ್ದ ನರ(ಳ) ಸಂಪ್ರದಾಯವು ವೇದಕಾಲದಲ್ಲಿ ಪ್ರಬಲವಾಯಿತು. 'ಮನುಜನ ಪ್ರಾದುರ್ಭಾವವು ಆಗ ಆಯ್ತು ಎಂಬ ಶೋಧವು, ಮಾನವನ ಇತಿಹಾಸದ ದೃಷ್ಟಿಯಿಂದ ಅತ್ಯಂತ ಮೌಲಿಕವಾಗಿದೆ. ಆದರೆ, ಈ ಶೋಧವೇನೊ ಆಯ್ತು; 'ಮಾನವನ ಪ್ರಾದುರ್ಭಾವವು ಆಯ್ತು' ಎಂದರೆ ಆ ಸಮಯದಲ್ಲಿ ಆದ ಸ್ಥಿತ್ಯಂತರಗಳು ಯಾವುವು? ವಾನರನಿಂದಲೇ ಆಗಿರಲಿ ಅಥವಾ ನರನಿಂದಲೇ ಆಗಿರಲಿ, ಈ 'ಪ್ರಾಣಿ' ವಿಶೇಷದ ಅಂತರಂಗದ ರಚನೆಯಲ್ಲಿ ಕೆಲವೊಂದು ಮಾರ್ಪಾಟವಾಗದೆ ಈ ಪ್ರಾಣಿಗೆ ಮನುಜತ್ವವು ಲಭಿಸಲು ಶಕ್ಯವಿಲ್ಲ. ಇದು ನಿಜವಿದ್ದರೆ, ಮಾನವ ಅಥವಾ ನರಪ್ರಾಣಿಯಲ್ಲಿ ಆದ ಬದಲಾವಣೆಯನ್ನು ಗ್ರಹಿಸಿಕೊಳ್ಳುವ ದೃಷ್ಟಿಯಿಂದ ಆಧುನಿಕ ಸಂಶೋಧಕರಿಂದ ಸಾಕಷ್ಟು ಪ್ರಯತ್ನಗಳು ಆದ ಹಾಗೆ ಇಲ್ಲ.

ಮಾನವೇತರ ಪ್ರಾಣಿಗಳಲ್ಲಿ, ತಾಯ್ಗಂಡತನ (incest) ಕಂಡು ಬರುತ್ತದೆ. ಆದರೆ, ಮಾನವ ಪಂಗಡಗಳಲ್ಲಿ ತೀರ ಕಾಡಾಡಿಗಳಲ್ಲಿ ಸಹ, ತಾಯ್ಗಂಡತನವು ನಿಷೇಧಿಸಲ್ಪಟ್ಟಿದೆ! ಈ ದಿಕ್ಕಿನಿಂದ ನಡೆದ ಸಂಶೋಧನಗಳು

ಮಾನವತತ್ತ್ವದ ಅರ್ಹತೆಗೆ ಕಾರಣವಾದ ಆಂತರಿಕ ಕಾರಣಗಳನ್ನು ಬೆಳಕಿಗೆ ತರಲು ಶಕ್ಯವೇ ಇಲ್ಲ. "ತಾಯ್‌ಗಂಡ ಅಥವಾ ಮಗಳ ಗಂಡ ಆಗ ಹಚ್ಚುವ ಈ ಲೈಂಗಿಕ ಪ್ರಚೋದನೆಯು ಪ್ರಶಸ್ತವಲ್ಲ" ಎಂಬ ಈ ಪ್ರಕಾಶಕಿರಣವು, ದೇಹ ಹಾಗೂ ಪ್ರಾಣಲಿಂಗ-ಹೆಂ-ಗಂ ಒಕ್ಕೂಟ. ಇದರ ಇತಿಮಿತಿ ಸೂಚಕ ಆಂತರಿಕ ಒತ್ತಾಯವು ಈ ಪಿಂಡ(ದೇಹ) ಮತ್ತು ಬ್ರಹ್ಮಾಂಡ (ಪ್ರಾಣಲಿಂಗ) ಇವೆರಡೂ ಪಾತಳಿಗಳ ಆಚೆಯ-ಪ್ರಾಣಲೋಕದ ಆಚೆಗಿನ, ಪ್ರಕಾಶತತ್ತ್ವದ ಪಾತಳಿಯಿಂದಲೇ ಬಂದಿರಲಿಕ್ಕೆ ಸಾಕು.

ಇದಕ್ಕೆ ಪ್ರಮಾಣವೇನು? ಈ ಪ್ರಾಥಮಿಕ ಪಂಗಡಗಳಲ್ಲಿಯೂ ವಿಭಜಿತ ವ್ಯಕ್ತಿತ್ವವು ಉಂಟಾಗಿ, ಮೈಯಲ್ಲಿ 'ಆವೇಶ' ಬರುವ ತನ್ನಲ್ಲಿ ಸೇರಿದಂತೆ ಎನಿಸುವ ಮೂರನೆಯ ಶಕ್ತಿಯ-ಅನುಭವ, ಇದುವೆ 'ಸ್ವ' ಉಪಜ್ಞೆಯಾಗಿ ಪರಿಣಮಿಸಿದೆ. ಆದರೆ, ಲಿಂಗಾಂಗಯೋಗದ ಉಪಾಸನೆಯ ಸಂಪ್ರದಾಯಕ್ಕೆ ತಮ್ಮ ಪರಂಪರೆಯನ್ನು ಬಿಟ್ಟುಕೊಡುವುದು ಅಶಕ್ಯವಿತ್ತು. ವೇದದಲ್ಲಿ ದೊರೆಯುವ 'ದಿವೀವ ಚಕ್ಷುಃ' ಉಪಾಸನಾ ಸಂಪ್ರದಾಯದ ಪೂರ್ವಪರಂಪರೆಯ ನಿರ್ದೇಶವು, ಸಾಂಸ್ಕೃತಿಕ ಇತಿಹಾಸದ ದೃಷ್ಟಿಯಿಂದ ತುಂಬ ಮಹತ್ತ್ವದಾಗಿದೆ.

> ದಿವೀವ ಚಕ್ಷು : ಆತತಂ ತತ್ ವಿಪ್ರಾಸೋ ವಿಪನ್ಯವೋ ಜಾಗೃವಾಂಸ
> ಸನ್ನಿಂಧತ್ತೇ।....ಯತ್ ವಿಷ್ಣೋಃ ಪರಮಂ ಪದಂ।[೧೩]

ಈ ವರ್ಣನೆಯೊಳಗಿನ 'ಜಾಗೃವಾಂಸಃ' ಸಿದ್ಧಿಯ ಉಪಸ್ಥಾನ ವ್ರತಿಗಳಾದ ವಿಪ್ರರ ಸಂಪ್ರದಾಯವು ಬೆಳಕಿಗೆ ಬರುತ್ತದೆ. ದಿವ್ಯಲೋಕದಲ್ಲಿಯೋ (ದಿವೀ ಇವ) ಎಂಬಂತೆ ಹಿಗ್ಗಿ (ಅಗಲ) ಇರುವ ಈ ಚಕ್ಷುವು ವಿಷ್ಣುಪದ (ವಿಷ್ಣುವಿನ ಮೂರನೆಯ ಅಡಿ) ಇವೆರಡೂ ಒಂದೆಡೆಗೇ ಇವೆ. ಇದು ಚಂದ್ರ-ಮಂಡಲದ [O] ಉಪಾಸನೆಯನ್ನು ಗಮನಕ್ಕೆ ತಂದು ಕೊಡುತ್ತಿದೆ. ಸ್ಥಳ (ಕಣ್) ಮತ್ತು ಕಾಲ (ಗಣ್) ರೂಪ ಏಕಾತ್ಮಕದೇವತಾ ಉಪಾಸನೆಯು ಇದು. ಈ ದಿವ್ಯಚಕ್ಷುವಿನ ಉಪಾಸನೆಯ ಮೂಲಕ ಪವಾಡ ಚಮತ್ಕಾರ ಸಿದ್ಧಿಗಳು ಲಭಿಸುತ್ತವೆ, ಎಂಬ ನಂಬುಗೆಯ, ಈ ಸಂಪ್ರದಾಯವು, 'ಗುಹ್ಯಮಾರ್ಗ'ವಾಗಿ ಈವರೆಗೂ ಉಳಿದು ಬಂದಿದೆ.

ಮನು-ಜನ ಪ್ರಾದುರ್ಭಾವದ ಸಂದರ್ಭದಲ್ಲಿ, ಸ್ಥಳ(ದೇಹ) ಮತ್ತು ಕಾಲ (ಪ್ರಾಮಲಿಂಗಚೇತಸ) ಇದರಲ್ಲಿ ಬಿರುಕು ಬಿಟ್ಟು ಅಂತರವು ಉಂಟಾದುದರಿಂದ ಈ ಸ್ಥಲ-ಕಾಲದ ಆಚೆಗಿನ-ಕಾಲಚಕ್ರದ ಮೇಲಣ ಪಾತಳಿಯ ಆಕಾಶತತ್ತ್ವದ ಪ್ರಜ್ಞಾ ಪ್ರಕಾಶವು=ಉಪಾಜ್ಞೆಯು ಈ ಮಾನವನಲ್ಲಿ ತಲೆಯೆತ್ತುತ್ತದೆ. ಆ ಪುರಾತನರು ಈ ಸೌರತೇಜವನ್ನು 'ಪ್ರಜ್ಞಾನೇತ್ರ'ವೆಂದು ಆರಾಧಿಸುವ ವಾಡಿಕೆಯು ಪ್ರಾರಂಭವಾಗಿರಬೇಕೆಂದು ಬಗೆಯಲು ಅವಕಾಶವಿದೆ. ಮನುವೈವಸ್ವತನ ಈ ಪ್ರತಿಮೆ ಇದಕ್ಕೆ ಪ್ರಮಾಣ. ಮನುಜನ ಪ್ರಾದು-ರ್ಭಾವದ ಸಮಯದಲ್ಲಿ ಹೀಗೆ. 'ಪ್ರಜ್ಞಾನೇತ್ರ'ದ ಮನು ವೈವಸ್ವತನ ಸಂಪ್ರದಾಯವು ಒಂದು ಮೈದಾಳುವುದರ ಜೊತೆಗೆ 'ದಿವ್ಯಚಕ್ಷು' ಉಪಾಸನೆಯ ಜಾಗರದವರ ನರ(ಳ) ಸಂಪ್ರದಾಯವೂ, ಮೊದಲಿನಿಂದ ಇದ್ದದ್ದು, ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬರುತ್ತದೆ. ಈ ವೈವಸ್ವತನ ವಿರೋಧಿ ಮನು ಸ್ವಯಂಭೂ>ಸ್ವಾಯಂಭುವ ಹೆಸರಿನಿಂದ, ಪ್ರಭಾವ ಶಾಲಿಯಾಗುವುದರೊಡನೆ ವೈವಸ್ವತ ಮನ್ವಂತರವು ಕೊನೆಗೊಳ್ಳುತ್ತದೆ,

ದೇಹ (ಸ್ಥಲ) ಮತ್ತು ಪ್ರಾಣಲಿಂಗ (ಕಾಲ) ಇವೆರಡರ ಏಕಾತ್ಮಕತೆಯಲ್ಲಿ ಬಿರುಕು ಕಾಣಿಸಿಕೊಳ್ಳುತ್ತದೆ. ವಿಕಾಸತತ್ತ್ವದ ಪ್ರಕ್ರಿಯೆಯಲ್ಲಿ ಸಂಭವಿಸಿರುವ ಈ ಬಿರುಕಿನಿಂದಾಗಿ, ಈ ನರ ವರ್ಗದಲ್ಲಿ ಉಪಜ್ಞೆ-ಪ್ರಜ್ಞೆಗೆ ಇಂಬು ದೊರೆತಿತು; ಇದರ ಮೂಲಕವೇ ನರರಲ್ಲಿ ಪ್ರಜ್ಞೆ-ಉಪಜ್ಞೆಯನ್ನು ಸ್ವಾಗತಿಸಿದವರಿಂದ 'ಪ್ರಜ್ಞಾನೇತ್ರೋ ಲೋಕಃ' ಅಸ್ತಿತ್ವದಲ್ಲಿ ಬರಲು ಶಕ್ಯವಾಯಿತು. ಆದರೆ, ದಿವ್ಯಚಕ್ಷು ಉಪಾಸನೆಯ ಪೂರ್ವಪರಂಪರೆಗೆ ಆತಂಕಕಾರಿಯಾಗುವ, ಈ ಪ್ರಜ್ಞೆ-ಉಪಜ್ಞೆ, ಇದರ ಇನ್ನೊಂದು ರೂಪವಾದ ಮನಃಶಕ್ತಿ, ಇದನ್ನು ತೊಡೆದು ಹಾಕದೆ, ತಮ್ಮ ಸಂಪ್ರದಾಯಕ್ಕೆ ಉಳಿಗಾಲವಿಲ್ಲ, ಎಂಬ ಖಾತ್ರಿಯಾದ ನರ(ಳ) ಪರಂಪರೆಯ ನೇತಾರರಿಗೆ, ಅದೇ ತಾನೆ ಕಾಣಿಸಿಕೊಂಡ ಬಿರುಕಿನ ದುರಸ್ತಿ ಮಾಡುವುದು ಆದ್ಯಕರ್ತವ್ಯವೆನಿಸಿರಲಿಕ್ಕೆಬೇಕು. 'ವೈವಸ್ವತ ಮನು' ಸಂಪ್ರದಾಯದ ಆಧಾರ ಭೂಮಿ, ಪ್ರಜ್ಞಾ : ಪ್ರಕಾಶತತ್ತ್ವದ ಪಾತಳಿ ಸ್ಥಳ(ದೇಹ) ಮತ್ತು ಕಾಲ (ಪ್ರಾಣಲಿಂಗ)

ಇವೆರಡರ ನಡುವಣ ಅಂತರದಿಂದಾಗಿ, ಸ್ಥಳ-ಕಾಲದ ಆಚೆಗಿನ ಪಾತಳಿಯು ಕಾಣತೊಡಗಿದೆ. ಈ ಬಿರುಕನ್ನೇ ಕಾಣದಂತೆ ಮಾಡಿದರೆ, ಮಾನವ ಧರ್ಮವು, ಮರಳಿ ನರ(ಳ) ಧರ್ಮವಾಗಲೇಬೇಕಷ್ಟೆ? ಈ ಬಿರುಕನ್ನು ಇಲ್ಲವಾಗಿಸಲು ಇಬ್ಬಗೆಯ ಪ್ರಯತ್ನಗಳು ಆದದ್ದು ಕಾಣುತ್ತದೆ. ನರ ಪ್ರಾಣಿಯಲ್ಲಿ ಮೊದಲಲ್ಲಿ ಇಲ್ಲದೆ, ಹೊಸದಾಗಿ ಕಾಣಿಸಿಕೊಂಡ ಪ್ರಜ್ಞೆಯನ್ನು ದುರ್ಬಲಗೊಳಿಸುವ ಹಂಚಿಕೆ. ಪ್ರಜ್ಞೆಯನ್ನು 'ಸ್ಥಿತ'-ಸ್ಥಗಿತಗೊಳಿಸುವ ಪ್ರಯತ್ನವು, ನರ(ಳ)ನಿಗೆ ಬೋಧಿಸಿರುವ ಭಗವದ್ಗೀತೆಯಲ್ಲಿಯೇ ಉಂಟು. ಈ ಪ್ರಜ್ಞೆಯ ಮೂಲಕ ತಲೆಯೆತ್ತಿದ್ದ 'ತ್ರಿತ ಆಪ್ತ್ಯ'ನನ್ನು ಕೋಪದಲ್ಲಿ ತಳ್ಳಿರುವ ಸಾಂಕೇತಿಕ ಕಥೆಯು ಇಂದಿನ ವೇದದಲ್ಲಿಯೇ ಇದೆ.[೧೪]

ಈ ಮಾನವನು ಜೀವನ ವಿಶ್ವದ ಅಲ್ಪ ಪ್ರಮಾಣದ ಪ್ರತಿಕೃತಿ (miniature model) ಆಗಿದ್ದಾನೆ. 'ತ್ರಿತ'ನಿಂದಾಗಿ ಸ್ವರ್‌ಪಾತಳಿಯ ಅಹಿಹನ್ ಇಂದ್ರನ ಸಂಪರ್ಕವು ಶಕ್ಯವಾಗುತ್ತಿತ್ತು. ಪ್ರಜ್ಞಾ=ಪ್ರಕಾಶ ಪಾತಳಿಯೊಡನೆ ಜೀವಂತ ಸಂಬಂಧವು ಉಳಿದು ಬರುತ್ತಿತ್ತು. ಆದರೆ, ಈ ತ್ರಿತನೇ ಇಲ್ಲವಾಗುವಾಗ, ಈ ಜೀವನ ವಿಶ್ವದ ಆಕೃತಿಯು ಪ್ರಾಣಲೋಕಕ್ಕೆ-ಪ್ರಣವಲೋಕಕ್ಕೇ ಸೀಮಿತವಾಗಿ ಉಳಿಯುತ್ತದೆ,

ಸ್ವರ್‌ಪಾತಳಿಯ ಮೇಲಣ, ಸೂರ್ಯ ವಿವಸ್ವನ್ ಸವಿತೃ, ಇಂದ್ರಾದಿಗಳು, ಕೆಳಗೆ ಪ್ರಾಣಲಿಂಗ ಲೋಕಕ್ಕೆ ಬರುವಾಗ ಇವರೆಲ್ಲ ಮಧ್ಯಸ್ಥನೀಯೋ ದೇವಾಃ ಆಗುತ್ತಾರೆ. ಆದಿತ್ಯ ಎಂಬ ಹೊಸ ಹೆಸರು ರೂಢಿಗೆ ಬರುತ್ತದೆ! ಮನು ವೈವಸ್ವತ ಸಂಪ್ರದಾಯವು ಸ್ಥಲ (ದೇಹ)ಕ್ಕೆ ಬದ್ಧ ಕಾಲತತ್ತ್ವವನ್ನು ಕೀಳ್ಗೆದು 'ಕಾಕ'=ವಾಯಸ-Cronus, ಅಹಿ ಎಂದು ಹೆಸರಿಸಿತ್ತು. ಆದರೆ, ಈ ಭೌಮಾಸುರತ್ವ ಸೂಚಕ 'ನರ'-ಕ-ನಾರ-ಕ ಎಂಬ ಹಾಗಿದ್ದ ವಿಷ್ಣು, ಕೃಷ್ಣ, ನಾರಾಯಣಾದಿ ನಾಮಾಂತರಗಳು ಶಿಷ್ಟಮಾನ್ಯವಾಗುವಂತೆ ಮಂತ್ರ, ತಂತ್ರಗಳ ಬಲದಿಂದ ಪ್ರಯತ್ನ ಮಾಡಲಾಯಿತು.

ದೇಹ ಹಾಗೂ ಪ್ರಾಣಚೇತಸದ ನಡುವಣ ಅಂತರವನ್ನು ತುಂಬಿಕೊಳ್ಳಲು 'ಆ-ತ್ಮನ್' ಎಂಬ ಲಿಂಗ ಶರೀರ ಸೂಚಕ ಸಂಕೇತವನ್ನು ಪ್ರಜ್ಞೆ-ಉಪಜ್ಞೆಯ ಸ್ಥಳದಲ್ಲಿ ಪ್ರಸ್ಥಾಪಿಸಿದ್ದಾಗಿದೆ! ಆ-ತ್ಮನ್ ಇದರೊಳಗಿನ ತ್ಮನ್ ಈ ಭಾಗವು ಪ್ರಾಣ, ತನು ಎಂಬರ್ಥದ ಪದವು; ವೇದದಲ್ಲಿ ತ್ಮನ್, ತ್ಮನಾ ಎಂಬ ಪ್ರಯೋಗಗಳೂ ಉಂಟು. ಈ ಆತ್ಮನ್ ಪದಕ್ಕೆ ಲೈಂಗಿಕ ಅರ್ಥವೇ ಉಂಟು. ಉಪನಿಷತ್ತುಗಳಲ್ಲಿ, ಆ-ತ್ಮನೇ ಸೃಷ್ಟಿಕರ್ತನು 'ಆತ್ಮಾ ವಾ ಇದಂ ಅಗ್ರೇ ಆಸುಃ' ಎಂಬ ನಿರ್ದೇಶಗಳಂತೆ ಆತ್ಮಾವಾ ಪುರುಷ ವಿಧಃ ಎಂಬ ಸ್ಪಷ್ಟೀಕರಣವಿದೆ. ಗೀತಾದಿ ಗ್ರಂಥಗಳ ಪ್ರಭಾವದಲ್ಲಿ, ಆತ್ಮನ್ ಸಂಕೇತವೇ ಪ್ರಜ್ಞಾ: ಪ್ರಕಾಶಕ್ಕಿಂತ ಶ್ರೇಷ್ಠ, ಎಂಬ ತಪ್ಪು ಗ್ರಹಿಕೆ ಬೇರೂರಿನಿಂತಿದೆ. ಆ-ತ್ಮನ್ ಎಂಬುದು ಸೂಕ್ಷ್ಮರೂಪ ಸ್ಥಲ-ಕಾಲತತ್ತ್ವದ ಪರ್ಯಾಯ! ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ) ಇವೆರಡರ ನಡುವಣ ಬಿರುಕನ್ನು ದುರಸ್ತುಮಾಡಲು ಸ್ಥಲಕಾಲತತ್ತ್ವದ ಪರ್ಯಾಯವಾದ ಆತ್ಮನ್ ಪದವನ್ನು ಯೋಜಿಸಲಾಗಿದೆ. 'ಪರಮಾತ್ಮನ್', ಆತ್ಮನ್ ಇದಕ್ಕಿಂತ ಮಿಗಿಲಾದವನು ಅಲ್ಲವೆ? ಆದರೆ ಈ ಪರಮ ಆತ್ಮನ್ ಇದು. ಆ-ತ್ಮನ್ ಪದದ ತರುವಾಯ ಆಕಾರ ಪಡೆದ ನಾಮರೂಪ! 'ಆ-ತ್ಮನ್'; ತನು ಲಿಂಗಯೋನಿ ಇದೇ ದೇವರು, ಇದಕ್ಕೆ ಮಿಗಿಲಾದುದು ಯಾವುದೂ ಇಲ್ಲ, ಎಂಬುದು ನರ(ಳ) ಸಂಪ್ರದಾಯದ ನಿಷ್ಠೆಯಾಗಿದೆ.

ಗ್ರೀಕ್ ಡೈಯೋನಿಸಸ್‌ನ (Dionysus) ಮತ್ತು ಭಗವಾನ್ ಕೃಷ್ಣನ ಸಂಪ್ರದಾಯದಲ್ಲಿ ಇರುವ ಸಾಮ್ಯವು ಅಭ್ಯಸನೀಯವಿದೆ. ಈ ಭಗವಂತ ಸಂಪ್ರದಾಯಗಳೆಲ್ಲವೂ ರಾತ್ರ ಸಮಯಾಚಾರಗಳೇ ಆಗಿದ್ದವು. ಈ ದೇವರನ್ನು 'Nocturnal rites' ಮೂಲಕ ಆರಾಧಿಸಲಾಗುತ್ತಿತ್ತು.

> worshippers were usually women who followed him in wild dance.
> Dionysus is here the lord of life and death (Zeller).

ಗ್ರೀಕಿನಲ್ಲಿ ಝೂಉಸ್ (ದ್ಯೌಃ) ಪ್ರಕಾಶ ತತ್ತ್ವದ ದೇವರು.

> "Zeus blasted the Titans with the lightening and from their ashes men were created; thus they have a double nature,"[೧೫]

"Man is an ambivalent animal" ಎಂದು ನಂಬಿಸಲು ಈ ಸ್ಪಷ್ಟೀಕರಣಾತ್ಮಕ 'myth' ಪ್ರಚಾರದಲ್ಲಿ ಬಂದಿರುವುದು ನಿಶ್ಚಿತವಿದೆ. ಈ ಮನುಜನು ಉಭಯ ಸ್ವರೂಪಿ ಅಲ್ಲ. ಒಳಿತು ಕೆಡಕಿನ ಭೇದ ಗೊತ್ತಾಗುವ ಈ ಮಾನವನು ಉಭಯರೂಪೀ ಅಲ್ಲವೇ ಅಲ್ಲ. ಆದರೆ, ವಿಶ್ವನಿಯಮದಂತೆ ವಿಕಾಸಕ್ರಮದಲ್ಲಿ ಆಗಿರುವ ಪ್ರಜ್ಞೋದಯದಿಂದಾಗಿ, ಈ 'ಮನು'ಜನು, ಮೈವೆತ್ತಿದ್ದಾನೆ. ಭೌತಶಾಸ್ತ್ರಜ್ಞರ ಈ ಆಧುನಿಕ ಸಿದ್ಧಾಂತವು ಬೆಳಕಿಗೆ ಬರುವ ಪೂರ್ವದಲ್ಲಿ, 'ವೈವಸ್ಥತಮನು' ಸಂಪ್ರದಾಯವು ಮೈವೆತ್ತಿತ್ತು; ಅವೆಸ್ತದ ಅಹುರಮಝ್ದನ ಧರ್ಮವು ಪ್ರಚಲಿತವಾಗಿತ್ತು. ಗ್ರೀಕ್ ಪರಂಪರೆಯಲ್ಲಿ 'Nous=mina' ಪರಿಭಾಷೆ, ಹಾಗೂ ಪ್ರಕಾಶತತ್ವದ ಝೇಉಸ್ ಇಂತಹ ಅವಶೇಷಗಳ ಬಲದಿಂದ ಅರಿಸ್ಟಟ್ಲನು ಕಂಡು ಹೇಳಿರುವ ಜೀವನ ವಿಷಯಕ ಸಿದ್ಧಾಂತವು ಭಾರತೀಯ ಹಾಗೂ ಇರಾಣಿನ ಪೂರ್ವಪರಂಪರೆಯ ಅರ್ಥಕ್ಕೆ ಸುಸಂಗತವಿದೆ:

> God is pure thought; for thought is what is best. Life also belongs to God; for the actuality of thought is life, and God is that actuality. We say therefore that God is a living being, eternal and most good, so that life and duration continuous and eternal, belong to God; for this is God"

ವೈವಸ್ವತನ 'ಆ ಮನೋಃ ವರ್ತ್ಮನಃ ಪರಂ' ಎಂಬ ಮನುಪ್ರಣೀತ ಸಮಯ=ಆಚಾರ=ಧರ್ಮ ಎಂದರೇ ಇದು. ಇದು, ಪ್ರಕಾಶತತ್ವದ ಋತ ಸ್ವರೂಪೀ ವಿಶ್ವನಿಯಮದ ಆಧಾರದ ಮೇಲೆ ನಿಂತಿರುವ ಸತ್ಯವಾಗಿದೆ. 'ಸಮಯ'=ನಿಯಮ=ಧರ್ಮ=ಋತ. ಸಮಯಸ್ವರೂಪ ಆಚಾರದ ಆಕೃತಿಯಾಗಿರುವ ವಿಶ್ವನಿಯಮದ ಅಂಶವಾಗಿದೆ. ಭಾರತೀಯ ಪುರಾತನ ಪರಂಪರೆಯ 'ಸಮಯ ಈ ಪಾರಿಭಾಷಿಕ ಪದದ ಆಳವಾದ ತಾತ್ವಿಕ ಅರ್ಥವನ್ನು 'Duration' ಪದವನ್ನು ಬರ್ಗಸನ್ ಶಾಸ್ತ್ರೀಯ ರೀತಿಯಿಂದ ಸುಂದರವಾಗಿ ವಿವರಿಸಿದ್ದಾನೆ. ಬರ್ಟರಾಂಡ ರಸೆಲ್ಲರೂ ಇದನ್ನು ಮೆಚ್ಚಿಕೆಯಿಂದ ಹೇಳಿದ್ದಾರೆ.[೧೬]

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** I. ೨೨. ೧೯-೨೦
೨. ***ಅದೇ*** X. ೧೮೪. ೨
೩. Hugo Rehner S. J.; ***'Greek myths and Christian Myster'*** 1971 Forward by Dr. Prof. E. O. Jemes, Dilit. D.D.F.S.A. Oxford Chaplain of All souls college, Publisher Biblo and Tannen, N. Y. 1971. 58-9.
೪. ***'Darwin's Century;*** Loren Eiselay, p. 320.
೫. Dobzhanskey T.; ***Evolution of man***; Editor, Dr. young Luince; (Oxford Press, 337)
೬. Guthrie Vol. I P. 193
೭. ***ಋಗ್ವೇದ ಸಂಹಿತೆ*** X. ೫೧
೮. ***ಅದೇ*** X. ೫೧-೬-೯
೯. ***ಅದೇ*** I. ೧೦೫. ೧೭
೧೦. ***ಅದೇ*** X. ೧೨೫
೧೧. Davidson's; Edition, ***Principles and practice of Medicene***, Longman Group Limited, Eleventh 1975 pp. 911-2.-942.
೧೨. ***ಋಗ್ವೇದ ಸಂಹಿತೆ*** I. ೧೧೪.೫
೧೩. ***ಅದೇ*** I. ೨೨ ೧೯-೨೧
೧೪. ***ಅದೇ*** I. ೧೦೫-೧೭
೧೫. E. Zeller; ***Out Lines of the History of Greek Philosophy*** p. 14.
೧೬. Burfrand Russel; ***History of Western Philosophy*** pp. 823-4, 826, 834-5.

ಜೀವನ-ವಿಶ್ವದ ಸೂಕ್ಷ್ಮಪ್ರತಿರೂಪ : ಮನುಜ

ಈ ವಿಶ್ವದಲ್ಲಿ, ಜೀವಿತದ ಪಾತಳಿ, ಮತ್ತು 'ಜೀವನ'ದ ಪಾತಳಿ, ಎಂದು ಒಟ್ಟಿನಲ್ಲಿ, ಎರಡು ವಿಭಾಗಗಳು ಆಗುತ್ತವೆ. ಜೀವಿಯ ಜೀವಿತವು, ಸ್ಥಲ ಮತ್ತು ಕಾಲ ಇವೆರಡರ ಸಂದರ್ಭದ ಅವಕಾಶದ ಟೊಳ್ಳಿನಲ್ಲಿ ಅರಿಕೆಗೆ ಬರುತ್ತದೆ. 'ಜೀವನವು' ಸಮಾಜ; ಸಮಷ್ಟಿಯ ಸಂದರ್ಭದಿಂದ ವ್ಯಕ್ತವಾಗುತ್ತ ಬಂದಿದೆ. ಜೀವಿತವು, ಪ್ರಾಣಿ-ಜೀವಿಯ ಆಯುರ್ಮರ್ಯಾದೆಗೇ ಸೀಮಿತವಿದೆ. 'ಜೀವಿತ' ಮತ್ತು 'ಜೀವನ' ಇವೆರಡೂ ಸಮಾನವ್ಯಾಪ್ತಿಯವು ಆಗಿಲ್ಲ; 'ಜೀವನವು', ಜೀವಿತದಂತೆ, ಆ ವ್ಯಕ್ತಿಯ ಆಯುರ್ಮಾನದ ಪರಿಮಿತಿಯದೇ ಆಗಿಲ್ಲ. ಇದರಿಂದಾಗಿ, ಆ ವ್ಯಕ್ತಿಯು ಅದೃಶ್ಯವಾದ ಬಳಿಕವೂ, ಅವನ ಜೀವನದೊಳಗಿನ 'ಮೌಲಿಕ' ಘಟನೆಗಳು, ಆಮೇಲೆಯೂ, ತಲೆತಲಾಂತರದ ವರೆಗೆ ಉಳಿದು ಬರುವುದುಂಟು. ಸ್ಮೃತಿಯ=ಸಮಯದ=ಆಧಾರದಿಂದಾಗಿ, ಈ ಬಗೆಯಲ್ಲಿ 'ಜೀವನ'ವು ಸಂತತವಾಗಿ ಸಾತತ್ಯದಿಂದ, ಶತಕಾನುಶತಕಗಳಿಂದ ಉಳಿದು ಬಂದಿದೆ. ಇನ್ನು ಮುಂದೆಯೂ ಉಳಿಯಲಿದೆ. ಮಾನವ: ಧರ್ಮ-ಸಂಸ್ಕೃತಿಯ ಇತಿಹಾಸವೇ ಇದಕ್ಕೆ ಪ್ರಮಾಣ.

ಈ 'ಮನು'ಜನು, ವಿಕಾಸತತ್ತ್ವದ ಕ್ರಮದಲ್ಲಿ ಪ್ರಜ್ಞೆಯ ಅಂಗವಾದ ಮನಸ್‌ತತ್ತ್ವದ ಪ್ರಾದುರ್ಭಾವದಿಂದಾಗಿ, 'ಮಾನವ'ನಾಗುತ್ತಿದ್ದಾನೆ. ವಾನರಹಂತದ ಮುಂದಿನ ನರ(ಳ)=ಜೀವಿಯೇ ಪ್ರಾದುರ್ಭಾವದ ಪ್ರಕ್ರಿಯೆಯಲ್ಲಿ ಮನು-ಜನಾಗಿದ್ದಾನೆ. ಈ ಕಾರಣದಿಂದಾಗಿ, ಈ ಮನು-ಜನು ಜೀವಿಯ ಜೀವಿತವನ್ನೂ ಉಳ್ಳವನಿದ್ದಾನೆ. ಪ್ರಾಣಪಾತಳಿಯ ಜೀವಿತದಿಂದಾಗಿ ನರ(ಳ)ನು ದೇಹಧರ್ಮಿ ಅಲ್ಲದೆ, ಈ ಮನುಜನು ಮಾನವಧರ್ಮಿ ಆಗುತ್ತಿದ್ದಾನೆ. ಅಭಾವವೇ ಸ್ಥಾಯೀ ಇರುವ ನರ(ಳ)ನಿಗೆ ಸ್ವತಂತ್ರ ಅಸ್ತಿತ್ವವಿಲ್ಲ. ಇಂತು, ಈ ಮನು-ಜನು 'ಜೀವನ', ಹಾಗೂ ಜೀವಿತ (ನರ:ಪ್ರಾಣಿ) ಈ ಉಭಯ ಅಂಗಗಳನ್ನು ಉಳ್ಳವನಿದ್ದಾನೆ. ಆದುದರಿಂದ ಮನು-ಜನು ಈ ಜೀವನ ವಿಶ್ವದ ಪ್ರತಿರೂಪವಾಗಿದ್ದಾನೆ?

ಜೀವ : ಪ್ರಾಣ (ಪ್ರ+ಅನೆ) ಇದು ಶ್ವಸನ ಉಸಿರಿನಿಂದಾಗಿ ಅರಿಕೆಗೆ ಬರುತ್ತದೆ. 'ಜೀವ' ಇದೆಯೆ, ಎಂಬ ಸಂದೇಹ ಉಂಟಾದಾಗ, ಇಂಥ ರೋಗಿಯು ಉಸಿರಾಡುತ್ತಿದ್ದಾನೆಯೇ ಎಂದು ನೋಡಲಾಗುತ್ತದೆ. 'ಪ್ರಾಣ' ಎಂಬಲ್ಲಿ ಉಸಿರಿನ ನಿರ್ದೇಶವೇ ಇದೆ. ಈ ಉಸಿರು-'ಗಾಳಿ'. ಈ ಕಾರಣದಿಂದ 'ಗಾಳಿ'ದೇವರು-ಪ್ರಾಣದೇವರು ಎಂದು ಹನುಮ, ಮರುತ ಮಾರತಿ-ಬ್ರಹಲ್ಲಾಂಗಲ ಕಪಿಯನ್ನು ಪೂಜಿಸಲಾಗುತ್ತದೆ. ಉಸಿರು-ಗಾಳಿಯ ಸ್ವರೂಪದ ಈ 'ಪ್ರಾಣ'ದ ಪ್ರಾಣಿಯ ಜೀವಿತ ಕ್ಷಣಿಕ! 'ಉಂಟು' 'ಇಲ್ಲ' ಎಂಬ ಉಭಯ ಸ್ವರೂಪದ್ದು ಆಗಿದೆ. ಈ 'ಉಸಿರು'ಜೀವರೂಪದ್ದು ಆಗಲು ಇದಕ್ಕೆ ಉಪನಿಷತ್ತು ಹೇಳುವಂತೆ, 'ಅಂಗಾನಾಂ ರಸ'ದ ಆಧಾರವು ಬೇಕು. ಸ್ಥಳ (ಕಣ್) ಮತ್ತು ಕಾಲ (ಗಣ್) ಇವೆರಡರ ಏಕಾತ್ಮತೆಯಲ್ಲಿ, ಈ ಜೀವವು ಆಕಾರ ಪಡೆಯುತ್ತದೆ. 'ಜೀವನ'ದ

ತುಲನೆಯಲ್ಲಿ, ಜೀವನದ-ಜೀವಿತದ ಅಲ್ಪತ್ವ, ಕ್ಷುದ್ರತೆಯು ಬಯಲಿಗೆ ಬರುತ್ತದೆ. 'ಜೀವ'ದ ಆಧಾರದ ನೆಪದಿಂದ ಜೀವನ ಎಂಬ ಹೆಸರು ರೂಢಿಗೆ ಬಂದಿದೆ. ಆದರೆ ಜೀವನಶಕ್ತಿಯು ಒಳಗೊಳ್ಳುವ ಮೌಲಿಕ ಗುಣಗಳಲ್ಲಿ ಯಾವುದೊಂದೂ, ಜೀವಿಯ ಜೀವಿತದಲ್ಲಿ ಎದ್ದು ಕಾಣುವುದಿಲ್ಲ, ಅಭಾವವೇ ಸ್ಥಾಯೀ ಇರುವ ಜೀವಿತವು, ಭಾವಾತ್ಮಕ, ವಿಧಾಯಕ ವಿಭಾಗತ್ರಯದ ಪ್ರಕಾಶತತ್ವದ ಸಾಹಚರ್ಯವನ್ನುಳ್ಳ ಜೀವನದ ಅಂಗವೇ ಸರಿ. ಅಭಾವಾತ್ಮಕ ಅಸ್ತಿತ್ವಕ್ಕೆ ಸ್ವತಂತ್ರಸ್ಥಾನವು ಇರುವುದು ಶಕ್ಯವಿಲ್ಲ.

ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಈ ವಿಭಾಗದ್ವಯದ ಮಾಯಾವೀ ಸ್ವರೂಪವನ್ನು ಈ ಮೊದಲು ಸ್ವಲ್ಪ ವಿವರಿಸಿ ಆಗಿದೆ. ಸ್ಥಲ(ಹೆಂ-ಗಂ-ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸದ) ಅಮೂರ್ತ ಶಕ್ತಿ, ಇವು ಬೇರೆ ಬೇರೆ ಎನಿಸಿದರೂ ಸ್ಥಲ (ದೇಹವೇ) ಕಾಲ (ಪ್ರಾಮ ಚೇತಸ)ವಾಗುತ್ತದೆ. ಕಾಲವೇ ಪ್ರಾಣಚೇತಸವೇ ಸ್ಥಲ ಸ್ವರೂಪದ್ದು ಆಗುತ್ತದೆ. ಎಂದರೆ, ಜೀವಿಯ-ಜೀವಿತದ ಆಧಾರವೆನಿಸುವ ದೇಹ-ಸ್ಥಲ, ಮತ್ತು ಇದರಲ್ಲಿ ಕಾಣಿಸಿಕೊಳ್ಳುವ ಪ್ರಾಣಚೇತಸ ಕಾಲ ಇವೆರಡೂ ಕಾಣಲು ಬೇರೆ, ನಿಜವಾಗಿ ಒಂದೇ!

ಜೀವಿತದ ಆಯುರ್ಮಾನದ-ಅವಧಿಯೂ ಇದೇ ಬಗೆಯಲ್ಲಿ ಮೋಸ ತರುತ್ತದೆ. ಆಗಾಮೀ ನಾಳೆಗಳೇ ಇಲ್ಲದ ವೃತ್ತಾಕೃತಿಯ [O] ಈ ಆಯುರ್ಮಾನವು ನಿಜವಾದ ಕಾಲತತ್ವದಿಂದ ತೀರ ಭಿನ್ನವಿದೆ! ವಯೋಮಾನ ಸೂಚಕ ಅವಧಿಯು ದೇಹದ-ಸ್ಥಳದ ಉದ್ದಳತೆಯನ್ನು ಸೂಚಿಸುತ್ತದೆಯೇ ಹೊರತು, ವಿಭಾಗತ್ರಯದ ನಿನ್ನೆ-ಇಂದು-ನಾಳೆಯ ಸ್ವರೂಪದ ಕಾಲ ತತ್ವಕ್ಕೂ, ದೇಹದ ಉದ್ದಳತೆ, ನಿರ್ಮಿಸುವ 'ಕಾಲ'ಗತಿಯ ಸಂಭ್ರಮವು, ನಿಜವಾದ ಸೌರಕಾಲ ಎಂಬ ಹಾಗಿನ ಮೋಸವನ್ನು ತರುತ್ತಿದೆ! ವರ್ತುಲದೊಳಗಿನ ಪ್ರಾರಂಭ ಮತ್ತು ಕೊನೆ ಒಂದೆಡೆಗೇ ಸೇರಿಕೊಳ್ಳುತ್ತವೆ. ಆಯುರ್ಮಾನದೊಳಗಿನ ಹುಟ್ಟು-ಸಾವು ಇದು ಭ್ರಮೆ. ಆ ಜೀವಕ್ಕೆ 'ಹುಟ್ಟುಸಾವು' ಇರುವ ಹಾಗಿನ ದೃಶ್ಯವು ನಿರ್ಮಾಣವಾಗುತ್ತದೆ. ತತ್ವಜ್ಞರು ಹೇಳಿರುವುದು ನಿಜವಿದೆ. ಒಂದು ಊದಿನಕಡ್ಡಿ ಹೊತ್ತಿಸಿ, ಗಿರ್ ಗಿಮ್ ಎಂದು ವೃತ್ತಾಕೃತಿಯಲ್ಲಿ ತಿರುವಿದರೆ, ಬೆಂಕಿಯ ವರ್ತುಲವು ಕಾಣಲು ದೊರೆಯುತ್ತದೆ! ಈ ದೃಶ್ಯದ ಹೋಲಿಕೆಯು ಹುಟ್ಟು-ಸಾವಿನ ವೃತ್ತಾಕೃತಿಯನ್ನು ಗ್ರಹಿಸಿಕೊಳ್ಳಲು ನೆರವಾಗಬಹುದು.

ಜೀವನದಲ್ಲಿಯೇ ಜೀವಿತವು ಉಂಟು; ಜೀವಿತದಲ್ಲಿ 'ಜೀವನ'ದ ಮೌಲಿಕ ಭಾಗವು ಇಲ್ಲ. ಈ ದೃಷ್ಟಿಯಿಂದ ಜೀವನ ವಿಧಾಯಕವಿದೆ; ಭಾವಾತ್ಮಕವಿದೆ. ಸ್ವಯಂವೇದ್ಯ ಇದೆ; ಉಪಜ್ಞೆಯಿಂದ ಜೀವನ ಗ್ರಹಿಸಿಕೊಳ್ಳಲು ಶಕ್ಯವಾಗುತ್ತದೆ. ಆದರೆ, 'ಜೀವಿತವು' ಅಸ್ವಯಂವೇದ್ಯವಿದೆ! ಪ್ರಾಣಪಾತಳಿಗೆ, ಭಾಷೆ, ತಿಳುವಳಿಕೆ ಒಂದೂ ಇಲ್ಲ. ಜೀವನವು=ಮನು-ಜನರು; ಜೀವಿತವು ನರ(ಳ)ನದು!

ಪ್ರಜ್ಞೆ=ಉಪಜ್ಞೆಯ ಮೂಲಕ ಜೀವನವು ಅರ್ಥ ಪಡೆಯುತ್ತದೆ. ಅರ್ಥಮೂಲ್ಯ ಸೃಷ್ಟಿಸುತ್ತದೆ, ಸ್ಥಳ(ದೇಹ) ಮತ್ತು ಕಾಲ (ಪ್ರಾಣಲಿಂಗ) ಈ ಮಾಯಾವೀ ವಿಭಾಗ ದ್ವಯದ ಸಂದರ್ಭದ 'ಜೀವಿತ'ವು, ಅನಿಶ್ಚಿತ ಆಕೃತಿ ಸ್ವರೂಪದಿಂದಾಗಿ ಅರ್ಥಕ್ಕೆ ಎಟಕುವುದಿಲ್ಲ. ಸ್ಥಳ-ಕಾಲ ಇವು ಒಂದರವೇ ಎರಡು ರೂಪಗಳು. ಇದರಿಂದಾಗಿ, ಸ್ಥಲ-ಕಾಲದ ಸಂದರ್ಭದಿಂದ ಕಾಣಿಸಿಕೊಳ್ಳುವ ದೃಶ್ಯ : ಸೃಷ್ಟಿ (phenomena), ಇದು ಕ್ಷಣಿಕ ಹಾಗೂ ಅಂತರ್ ವಿಸಂಗತಿಮುಕ್ತವಾಗುವ ಅನಿವಾರ್ಯತೆಯನ್ನು ತಪ್ಪಿಸಲು ಯಾರಿಂದಲೂ ಶಕ್ಯವಿಲ್ಲ. 'ಜೀವನ'ದ ಸಂದರ್ಭದಿಂದಾಗಿ 'ಜೀವಿತ'ದ ಅರ್ಥ : ಇತಿಮಿತಿಗಳನ್ನು ಗ್ರಹಿಸಿಕೊಳ್ಳುವುದು ಶಕ್ಯವಾಗುತ್ತಿದೆ. ಜೀವನವು, ವಿಭಾಗತ್ರಯದ ಪ್ರಕಾಶ ಪಾತಳಿಯ ನಿನ್ನೆ→ ಇಂದುಗಳ ಸಂದರ್ಭದಿಂದ ಅವ್ಯಾಹತವಾಗಿ 'ನಾಳೆ'ಗಳತ್ತ ಸಾಗಿದೆ. ಜೀವಿತವು, ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ) ರೂಪ ಈ (ಸಂ)ಭವಚಕ್ರದ ವೃತ್ತಾಕೃತಿಯ ಟೊಳ್ಳಿನ ಕತ್ತಲಲ್ಲಿ ಇರಬಯಸುತ್ತದೆ. ಪ್ರಜ್ಞೆಯ : ಉಪಜ್ಞೆಯ ಜೀವನವು ಮಾನವಭಾಷೆಯ ಮಾಧ್ಯಮದಿಂದ ಆವಿಷ್ಕಾರ ಪಡೆಯುತ್ತದೆ. ಸ್ಥಲ-ಕಾಲದ ಸಂದರ್ಭದ ಸಂಭವಚಕ್ರದ ಗತಿಯಲ್ಲಿ 'ಆಗಾಮೀ ನಾಳೆ'ಗಳೇ ಇಲ್ಲದ್ದರಿಂದ,-'ನಿನ್ನೆ'ಯೇ 'ಇಂದು' ಆಗಿ ಮಾರ್ಪಡುವುದರಿಂದ, ಈ 'ಜೀವಿತ'ದ ಲೈಂಗಿಕಪಾತಳಿಯ ಮೇಲೆ. ಭೌತ ಜನನ-ಮರಣಕ್ಕೆ ಹೊರತಾದ 'ಹೊಸದು' ಎಂಬುದು ಏನೂ ಕಾಣಿಸಿಕೊಳ್ಳುವ ಶಕ್ಯತೆಯೇ ಇಲ್ಲ. ಆದರೆ, ಮಾನವನ ಜೀವನದಲ್ಲಿ

ಕಾಲಕಾಲಕ್ಕೆ ಕಾಣಿಸಿಕೊಳ್ಳುತ್ತ ಬಂದಿರುವ 'ಹೂಸತಿನ ಅಂಶಕ್ಕೆ' ವಿಭಾಗತ್ರಯದ ಆಗಾಮೀ 'ನಾಳೆ'ಗಳೇ ಕಾರಣ ಎಂಬಲ್ಲಿ ಸಂದೇಹವಿಲ್ಲ.

ಜೀವನ ಹಾಗೂ ಜೀವಿತ ಇವೆರಡರ ಆಕೃತಿ ಸ್ವರೂಪದ ತುಲನೆ

ಮನು-ಜನ ಪ್ರಾದುರ್ಭಾವಕ್ಕೂ ಮುಂಚಿನ ಹಂತದಲ್ಲಿ, ಜೀವಕ್ಕೆ 'ಜೀವನ' ಎಂಬುದು ಇರಲೇ ಇಲ್ಲ. ಜೀವಕ್ಕೆ ತನ್ನ ಆಯುರ್ಮಾನದ ಅವಕಾಶ=ಸ್ಥಳ ಒಂದೇ ಗೊತ್ತು. ಜೀವ; ಜೀವಿತ ಕತ್ತಲೆಯ ಆವರಣದೊಳಗಿನ 'ಜ್ಯೋತಿ' ಎನ್ನಬಹುದು. 'ಜೀವಿ', ಸ್ಥಳ(ದೇಹ) ಮತ್ತು ಕಾಲ (ಪ್ರಾಣಲಿಂಗ) ಈ ವಿಭಾಗದ್ವಯದ ವೃತ್ತಾಕೃತಿಯ (ಸಂ)ಭವ ಚಕ್ರದ ಫಲಿತ; ಇದು 'ಕತ್ತಲೆಯ ಗತಿ' ಅಥವಾ ಗತಿಮಂತ ಕತ್ತಲೆಯೆ ಆಗಿದೆ. ಇದು ವ್ಯಕ್ತಿ:ಕತ್ತಲೆ (ವಿ+ಅಕ್ತಿ; ಅಕ=ರಾತ್ರಿ, ಕತ್ತಲೆ). ಆದರೆ, ಜೀವನದ ಪಾತಳಿಯು, ಜೀವಿತದ ಸ್ಥಳ-ಕಾಲದ ಆಚೆಗೆ ಮನಸ್ಸಿನ ಪಾತಳಿಯ ಮೇಲೆ ಇದೆ. ಸ್ಥಳ-ಕಾಲದ ಆಚೆಗಿನ ಪ್ರಕಾಶತತ್ತ್ವದ ವಿಭಾಗತ್ರಯದ ಕಾಲಗತಿಯೊಡನೆ ಜೀವನವು ಸಾಗಿದೆ. ಜೀವನದಲ್ಲಿ ಅರ್ಥ:ಉದ್ದೇಶ: ಮೂಲ್ಯ ಉಂಟು. ಜೀವಿತ ಕೇವಲ 'ಕಾಮನೆ'ಯ ಫಲ, ಚಿತ್ತದ ಚೇತಸದ ಅಂಶ. ಈ ಕಾರಣದಿಂದಾಗಿ, ನರ(ಳ)ನ ಜೀವಿತ, ಮತ್ತು ಮನು-ಜನ ಜೀವನ ಇವೆರಡೂ ಪಾತಳಿಗಳೂ ಭಿನ್ನ. ವಿಕಾಸಕ್ರಮದಲ್ಲಿ, ಇವು ಸ್ವತಂತ್ರವಾಗುತ್ತವೆ. ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ) ಇವೆರಡೂ ಮೊದಲಲ್ಲಿ ಏಕಾತ್ಮಕ ಅವಿಗಲಿತ ಸ್ಥಿತಿಯಲ್ಲಿ ಇದ್ದುದು ನಿಜವಿದ್ದರೂ 'ಮನು'ಜನ ಪ್ರಾದುರ್ಭಾವದ ಸಂದರ್ಭದಲ್ಲಿ ಈ ಸ್ಥಲ (ಹಂ-ಗಂ) ಮತ್ತು ಕಾಲ (ಪ್ರಾಣಲಿಂಗ ಚೇತಸ), ಈ ಮಿಥುನ ಯೋಗದೊಳಗಿನ (ಸ್ಥಲ-ಕಾಲರೂಪ) ಘಟ-ಸರ್ಪವನ್ನು ಪ್ರಾದುರ್ಭಾವದ ಪ್ರಕ್ರಿಯೆಯು ವಿಂಗಡಿಸಿದೆ. ಇದರ ವಿವರಣೆ ಬೇರೆಡೆಗೆ ಬಂದಿದೆ.

ಜೀವನ ವಿಶ್ವದ ರಚನೆಯನ್ನು ಗ್ರಹಿಸಿಕೊಳ್ಳಲು, ಇಲ್ಲಿ ಗಮನಿಸಬೇಕಾದ ಮಹತ್ವದ ಮಾತು ಇಷ್ಟು : ಮನು-ಜ ಮಾನವನಲ್ಲಿ ಪ್ರಾಣಲಿಂಗ ಪಾತಳಿಯ ಪ್ರಚೋದನೆ ಮತ್ತು ಪ್ರಜ್ಞಾ ಉಪಜ್ಞಾಪಾತಳಿಯ ಪ್ರಚೋದನೆ, ಇವು ಎರಡೂ ಭಿನ್ನವಾಗಿವೆ; ಸ್ವತಂತ್ರವಾಗಿವೆ. ವಿಕಾಸಕ್ರಮದಲ್ಲಿ ಆಗಿರುವ ಈ ಪ್ರಗತಿಯನ್ನು ನರ(ಳ)ಸಂಪ್ರದಾಯಗಳು ವಿಫಲಗೊಳಿಸುವ 'ಮಂತ್ರ' ಮಾಟ-ಅಭಿಚಾರಕೃತ್ಯ ಮಾಡಿವೆ. ಈ ಅಂಶವನ್ನು ಮೊದಲೊಮ್ಮೆ ಸ್ವಲ್ಪ ಹೇಳಿದ್ದರೂ ಹೆಚ್ಚಿನ ಮಾತು ಇಲ್ಲಿದೆ. ಮಾನವನು, ಉಭಯವಿಧ ಮನೋಭಾವದವನು ಆಗಿದ್ದಾನೆಂಬ ಈ ತಪ್ಪುಗ್ರಹಿಕೆಯು ಮೊತ್ತಮೊದಲಲ್ಲಿ ಇದ್ದಿಲ್ಲ. ಇದರ ಖಾತ್ರಿ ಮಾಡಿಕೊಳ್ಳಲು ಇಂದಿನ ನರರ ಸಂಹಿತೆಯ 'ಕ' ದೇವತಾ ಸೂಕ್ತ ನೋಡಿಕೊಳ್ಳಿ. 'ಕಸ್ಮೈದೇವಾಯ ಹವಿಷಾ ವಿಧೇಮ' ಯಾವ ದೇವರಿಗೆ ಹವಿಸ್ಸನ್ನು ಅರ್ಪಿಸಲಿ? 'ಪ್ರಾಣಲಿಂಗೋಪಾಸನೆ'ಯತ್ತ ತಳ್ಳಿಕೊಂಡು ಹೋಗುವ ಅದ್ಭುತ ಅಸುರ ಅಂತಃಶಕ್ತಿಯ ಈ ಸೂಕ್ತವನ್ನು, ಕನ್ನಡದಲ್ಲಿ ಮೊದಲು ತಂದವರು ಪ್ರೊ. 'ವಿ. ಸೀತಾರಾಮಯ್ಯ' ಅವರು. ನಿಜವಾಗಿ ಇಂದಿನ 'ನವ್ಯ' ಸಂಪ್ರದಾಯದ ಮೊದಲ ಕವನ. ಇದುವೇ-'ಯಾವ ದೇವರಿಗೆ ಹವಿಸ್ಸನ್ನು ಅರ್ಪಿಸಲಿ?' ಈ 'ಕ' ದೇವರು ಈಜಿಪ್ಪಿನಲ್ಲೂ ಇದ್ದಾನೆ. ಲಿಂಗೋದ್ಭವನಾಗ'ನ ಚಿತ್ರ. ಈಜಿಪ್ಟ್ ವೀರನ 'ಮಧ್ಯಸ್ಥಾನೀಯ' ದೇವರು ಎಂಬ ಹಾಗಿನ ಪ್ರತಿಮೆ ಇದೆ.

ಈ ಸೂಕ್ತವು ಪ್ರಜಾಪತಿ (ಲಿಂಗ) ದೇವರದು, ಎಂಬ ಒಪ್ಪಿಗೆ ಈ ಸೂಕ್ತದ ಕೊನೆಯ ಋಚೆಯಲ್ಲ ಇದೆ. 'ಪ್ರಜಾಪತಿ' ನರ(ಳ)ರ ತಂದೆ, ಈತನು ಅಮೃತ ಮತ್ತು ಮೃತ್ಯು ಈ ಉಭಯಸ್ವರೂಪನು ಇದ್ದಾನೆಂಬ ವರ್ಣನೆ ಇಲ್ಲಿ ಇದೆ. ಈ 'ಕ' ದೇವರು ವೈವಸ್ವತ ಸಂಪ್ರದಾಯದ ಸಂಹಿತೆಯ ಹೊರಗಿನದು, ಇದು ನಿಶ್ಚಿತವಿದೆ. ತನೂ ನಪಾತ್ ತನ್ನಿಂದ ತಾನೇ ಹುಟ್ಟುವ ಚಂದ್ರನು=ನಾಗ-ಚಂದ್ರನು, ಸೌರ ವೈವಸ್ವತನ ಶತ್ರುವು ಇಲ್ಲಿ ಅಡಗಿದ್ದಾನೆ. ಗೀತೆಯ ಭಗವಂತನು ತಾನು 'ಅಮೃತಂ ಚೈವ ಮೃತ್ಯುಃ' ಸ್ವರೂಪನೆಂದು ಹೇಳುತ್ತಾನೆ. ಪಾಶ್ಚಾತ್ಯರ ಆಧ್ಯಾತ್ಮದಲ್ಲೂ ಈ ಮೋಸ ಹೊಸತು. ಗ್ರೀಕ್‌ದಿವ್ಯಕಥೆಗಳಲ್ಲಿ ಇದು ಬಯಲಿಗೆ ಬಂದಿದೆ. ಝೀಉಸನು ಭೌಮಾಸುರ= ಟಿಟಾನಸ್‌ರನ್ನು ಸುಟ್ಟಬೂದಿಯಿಂದ ಈ ಮಾನವರನ್ನು ಮಾಡಿದನಂತೆ! ಮಾನವರನ್ನು ಉಭಯ ಸ್ವಭಾವದರೆಂದು ನಂಬಿಸಲು ಹೊರಟ ಕೃತಕ ಕಥೆಯಿದೆ. (aetiological myth). ಇಲ್ಲಿ ನಿಶ್ಚಿತ ರೀತಿಯಿಂದ ಹೊರವಡುವ

ಸಂಗತಿ ಇದು: 'ವೈವಸ್ವತ ಮನು'=ಪ್ರಕಾಶತತ್ತ್ವದ ಕಲ್ಯಾಣ-ಮಂಗಳಕಾರೀ ಜೀವನ ರೀತಿಯ ಪ್ರೇರಕನು. ಈ ವೈವಸ್ವತನನ್ನು ಹಿಮ್ಮೆಟ್ಟಿಸಲು, ಈ 'ಕ'=ತನೂ ನಪಾತ್=ಚಂದ್ರ ದೈವತಸಂಪ್ರದಾಯವು ತಲೆಯೆತ್ತಿದೆ. ಇದರಿಂದ ಗೊತ್ತಾಗುವ ಸಂಗತಿಯು ಇಷ್ಟು: ಈ ಮನುಜ; ಮಾನವನು ಪ್ರಜ್ಞಾ ಉಪಜ್ಞಾ ಪಾತಳಿಯಿಂದ ಪ್ರಚೋದಿತನು. ನರ(ಳ)ನು ಪ್ರಾಣಲಿಂಗ ಪಾತಳಿಯಿಂದ ಪ್ರಚೋದಿತನು. ಇನ್ನಾಲಗೆಯ ನಾಗಲಿಂಗನ ಪ್ರೇರಣೆಯ ದುಷ್ಟವೃತ್ತಿ ಪ್ರೇರಕವೇ ಇರಬಲ್ಲುದು. ಕತ್ತಲೆಯು ಕತ್ತಲನ್ನೇ ಪ್ರೇರಿಸೀತು. ಈ ಪ್ರಜ್ಞಾ ಪ್ರಕಾಶತತ್ತ್ವದ ಪ್ರೇರಣೆಯ ಜೀವನವು ಲೋಕ ಕಲ್ಯಾಣಕಾರೀ ವೃತ್ತಿಯದೇ ಇದ್ದೀತು. ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ) ಈ ವಿಭಾಗದ್ವಯದ ಸಂದರ್ಭದಲ್ಲಿ ಕಾಣಿಸಿಕೊಳ್ಳುವ ಜೀವ=ಜೀವಿತವು ದೇಹ ಪ್ರಾಣಲಿಂಗದಂತೆ ಮಾಯಾವೀ ಸ್ವರೂಪದ್ದೇ ಇರಬಲ್ಲುದು. 'ಪ್ರಾಣ' ಎಂಬ ಹೆಸರು ಅರ್ವಾಚೀನ. ಮೂಲದಲ್ಲಿ ಇದನ್ನು 'ಅಸು' ಎಂದೇ ಕರೆಯಲಾಗುತ್ತಿತ್ತು. ಅಸು (ಪ್ರಾಣ) ಮತ್ತು ದೇಹ ಇವೆರಡರ ಸ್ವಭಾವಧರ್ಮದಲ್ಲಿಯೂ ಅಂತರವಿದೆ. ದೇಹದ ಆಶೆ-ಆಕಾಂಕ್ಷೆಗಳು ಪರಿಮಿತ. ಆದರೆ, 'ಅಸು' (ಪ್ರಾಣ) ಇದರ ಆಶೆ ಆಕಾಂಕ್ಷೆಗಳು ಅಪರಿಮಿತ! 'ಇದರ ಆಕಾಂಕ್ಷೆಗಳಿಗೆ ಮಿತಿ ಇಲ್ಲ' ಎಂದು ಲೋಕವೇ ಒಪ್ಪಿದೆ. 'ಹೊಟ್ಟೆಗೆ ಸಿಕ್ಕರೆ ಸಾಕು' ಎಂದು ಎನ್ನುವ ಈ ಜೀವವು, ಆ ಬಳಿಕ ಬಣ್ಣ ಬದಲಿಸುತ್ತದೆ. 'ಅಸು' (ಪ್ರಾಣ) ಇದಕ್ಕೆ ಮೊದಲಲ್ಲಿ ಅಪಾರ್ಥವಿದ್ದಿಲ್ಲ. ಆದರೆ ಈ 'ಅಸು ಶಕ್ತಿಯು ಇನ್ನುಳಿದವರ ಏಳ್ಗೆಯನ್ನು ಸಹಿಸಲಾರದು, ಹೊಟ್ಟೆಗಿಲ್ಲದ್ದಕ್ಕೆ-ಬಡತನದಿಂದಾಗಿ ಮೋಸಮಾಡಿ ಬದುಕುವ ಇಚ್ಛೆಯಾಗುತ್ತದೆ. ಮೂಲತಃ ಯಾರೂ ದುಷ್ಟರಿಲ್ಲ, ಎಂಬ ಈ ಗ್ರಹಿಕೆಯು ತೀರ ಮೋಸಕ್ಕೆ ಕಾರಣವಾಗುತ್ತಿದೆ. ಪ್ರಾಣದಲ್ಲಿ ಹುದುಗಿರುವ 'ಅಸು' ಶಕ್ತಿ=ದುಷ್ಟ ಶಕ್ತಿ, ದುಷ್ಟವೃತ್ತಿಯು, ಮಾನವಾಕಾರದ ಪ್ರಾಣಿಗಳಲ್ಲಿ ಲುಪ್ತವಾಗಿದೆ. ಎಂಬ ಹಾಗೆ ನಂಬಿಸಲಾಗುತ್ತಿರುವಲ್ಲಿ ವಾಸ್ತವ=ಸತ್ಯದ ಅವಜ್ಞೆ ಆಗುತ್ತಿದೆ. ನರ(ಳ) ಪ್ರವೃತ್ತಿಯು ಹುಟ್ಟು ಸ್ವಾರ್ಥೀ, ದುಷ್ಟಶಕ್ತಿ ಆಗಿದೆ. ನರ(ಳ) ಮನುಜನಿಂದ ಭಿನ್ನನು.

ಯಾವುದೇ ನಾಮಾಂತರದಿಂದಾಗಲಿ ಈ ಚಾಂದ್ರ=ನಾಗ-ಲಿಂಗೋಪಾಸಕರ ನರ(ಳ) ಸಂಪ್ರದಾಯಗಳು, ತಮ್ಮ ಸಂಪ್ರದಾಯದ ಬಗೆಗೆ ನಂಬುಗೆ ಹುಟ್ಟಲು ಅವಾಸ್ತವ ಸಂಗತಿಗಳನ್ನು ವಾಸ್ತವ ಎಂಬ ಹಾಗೆ ನಂಬಿಸುವ ಹಂಚಿಕೆಯನ್ನು ಮಾಡಿವೆ. ಗ್ರೀಕ್ ದಿವ್ಯಾಧ್ಯಾತ್ಮದಲ್ಲಿ, ಬಳಿಕ ಕ್ರೈಸ್ತಪಂಥದಲ್ಲಿಯೂ ಇದೇ ಪ್ರಕಾರವು ಕಂಡುಬರುತ್ತಿದೆ. ಪ್ರಜ್ಞಾನೇತ್ರದ ಪುರಾತನರು,* ಭೌಮಾಸುರ ದುಷ್ಟಶಕ್ತಿಗಳೆಂದು=ಟಿಟಾನ್ ಎಂದು ಯಾವ ದೈವತಗಳನ್ನು ಹೆಸರಿಸಿದ್ದರೋ ಆ ಅಮಂಗಳ, ಲೋಕವಿನಾಶಕ ಪ್ರವೃತ್ತಿ ಪ್ರಚೋದಕ ದೇವರುಗಳನ್ನೇ ನಾಮ-ರೂಪ ಬದಲಿಸಿ ಮರಳಿ ಪೂಜಿಸುವ ವಾಡಿಕೆಯನ್ನು ಜನಪ್ರಿಯವಾಗಿಸಲಾಗಿದೆ. ಈ ಮೋಸ: ಮಾಟ ಮಾಡಲಾಗಿರುವುದು ಸುಳ್ಳೇ ? Thoughts have perennial forms=ವೈಚಾರಿಕ ಆಕೃತಿಗಳಲ್ಲಿ ಕೃತಿ ಪ್ರಚೋದಕ ಸನಾತನ ಶಕ್ತಿಯು ಹುದುಗಿರುತ್ತದೆ.

ಆತ್ಯಂತಿಕ ಅಹಿಂಸೆಯ ಆಧಾರದ ಸತ್‌ತ್ಯ ಸಾಕ್ಷಾತ್ಕಾರದ ಗುರಿಯ, ಲೋಕಹಿತದ ಭಾಷೆಯನ್ನೇ ಉಸಿರಾಗಿಸಿಕೊಂಡಿರುವ ಈ ಸಾಧುಸಂತರ ಸಂಪ್ರದಾಯಗಳು ಪ್ರಾಣೋಪಾಸಕ=ಪ್ರಣವೋಪಾಸಕ 'ಅಸುರ' ಪ್ರವೃತ್ತಿ ಪ್ರೇರಕ ಸಾಧನ ಅನುಷ್ಠಾನಗಳನ್ನು ಇಂದಿಗೂ ಮುಂದುವರಿಸಿಕೊಂಡು ಹೊರಟಿದ್ದು ಇದು ಪ್ರಶಸ್ತವೆ? ಜೀವನ ಹಾಗೂ ಜೀವಿತ (=ಮನುಜ ಮತ್ತು ನರ(ಳ)) ಇವೆರಡೂ ವಿಶ್ವ ನಿಯಮಕ್ಕೆ ಅನುಸರಿಸಿ ಇವೆ.

---

* ನೇತ್ರ, ಕಣ್ಣು, ನಯನ, ಚಕ್ಷು ಈ ಬಗೆಯ ಹಲವಾರು 'ಕಣ್ಣ'ಗೆ ಸಂಬಂಧಿಸಿದ ಶಬ್ದಪ್ರತಿಮೆಗಳಿವೆ. ಇವೆಲ್ಲವೂ ಕಣ್ಣಿಗೆ ಸಂಬಂಧಿಸಿದ ಸಮಾನಾರ್ಥಕ ಪದಗಳೆಂದು ಹೇಳುತ್ತವೆ. ಆದರೆ, ವೈದಿಕ ಶಬ್ದಪ್ರತಿಮೆಯಲ್ಲಿ ಚಕ್ಷು ಮತ್ತು ನೇತ್ರಗಳು ಬಳಕೆಗೊಂಡಿವೆ. 'ನಯನ' ಎಂಬುದು ಆನಂತರದ ಲೌಕಿಕಕಾವ್ಯಗಳಲ್ಲಿ ಬಳಕೆಗೊಂಡಿದೆ. 'ನೇತ್ರ' ಎಂಬ ಪದಬಳಕೆ ಕಾವ್ಯಗಳಲ್ಲಿ ಉಂಟು! ಆದರೆ, ಶಬ್ದಪತ್ರಿಮೆಯ ಆಕೃತಿ ಒಂದೇ ಆಗಿದ್ದರೂ 'ಆಶಯ' ಮಾತ್ರ ಬೇರೆಯಾಗಿದೆ. ಶಂಬಾ ಈ ಹಿನ್ನೆಲೆಯಲ್ಲಿ ವ್ಯಾಖ್ಯಾನಕ್ಕೆ ತೊಡಗುತ್ತಾರೆ (ಸಂ)

ಆದಕಾರಣ, ಪ್ರಾಣಲಿಂಗ ಚೇತಸ ಪಾತಳಿಯ ಜೀವಿಗಳೂ, ಪ್ರಜ್ಞಾಪಾತಳಿಯ ಮೇಲೆ ಇವೆ ಎಂದು ಬಗೆಯುವ 'ಸಾಮ್ಯ'ವಾದವು ಮಾನವ ಸಂಸ್ಕೃತಿಯ ಪರಾಗತಿಗೇ ಕಾರಣವಾಗುವುದಾಗಿ ಈ ವಿಶ್ವನಿಯಮವು ಸೂಚಿಸುತ್ತಿದೆ. ಆದಕಾರಣ, ಜೀವನವನ್ನು ರೂಪಿಸುತ್ತಿರುವ ವಿಶ್ವನಿಯಮದ ಸ್ವಲ್ಪ ಪರಿಚಯವೂ ಇಲ್ಲಿ ಜರೂರು ಆಗುತ್ತಿದೆ.

ಜೀವನವನ್ನು ಆಳುತ್ತಿರುವ ಈ ವಿಶ್ವನಿಯಮ ಯಾವುದು? ಇದನ್ನು ಗ್ರಹಿಸಿಕೊಳ್ಳುವ ಬಗೆಯಾವುದು? 'ವಿಶ್ವವನ್ನು ಆಳುವ ಈ ನಿಯಮವು ಕಲ್ಪನಾ-ವಿಲಾಸ'ವಂತೂ ಇರಲಾರದು. ಗುಂಗುಂ ಗಾನದ ಕಲ್ಪನಾವಿಲಾಸವೂ ವಿಶ್ವನಿಯಮಕ್ಕೆ ಒಳಪಟ್ಟಿದೆ. ಆದರೆ, 'ಗುಂಗುಂ'-ಗುಂಗಿನ ನಾದ='ವಾಣಿ ವಾಣ-ವಾಣಿ, ಇದು ವಿಶ್ವನಿಯಮಕ್ಕೆ ಮೀರಿ, ನಿಯತಿ ನಿಯಮ ರಹಿತ ನಿರಂಕುಶವೃತ್ತಿಯನ್ನು ಪ್ರಚೋದಿಸಿ ವಿಶ್ವನಿಯಮದ ಅವಜ್ಞೆಯನ್ನು ಮಾಡಬಯಸುತ್ತದೆ. ವಿಶ್ವನಿಯಮದ ಅವಜ್ಞೆಯಿಂದಾಗಿ 'ಮನು'-ಜನು ಮರಳಿ ನರ(ಳ)ನಾಗಿ ಮಾರ್ಪಟ್ಟಿದ್ದಾನೆ. ಅರ್ಥ : ವಿಚಾರ, ವಾಕ್ಕು ಇದು ಸಮಾಜ : ಸಮಷ್ಟಿಯದು. ಆದರೆ, 'ಅವರವರ ಅರ್ಥ, ಅವರವರ ಪಾಲಿನ ಸತ್ಯ' ಆಗಿರುವ ಇಂದಿನ ಈ ಅವಸ್ಥೆಯಲ್ಲಿ 'ವಿಶ್ವನಿಯಮ'ವೂ ವೈಯಕ್ತಿಕ ಕಲ್ಪನೆಯಾಗುವ ದಿಕ್ಕಿನಲ್ಲಿ ಹೊರಟಿದೆ!

ಆದರೆ ಮೂಲದಲ್ಲಿ, ಅರ್ಥ:ವಿಚಾರ, ಇದು 'ಉಂಟು', ಈ 'ಉಂಟು' (ಉಳ್+ಟು) ಕಲ್ಪಿತವಲ್ಲದೆ ಇರುವಾಗ, ಇದರ ಸ್ವರೂಪ-ಆಕೃತಿಯು ವಿಶ್ವನಿಯಮವನ್ನು ಅರಿಕೆಯ ಅಳವಿನಲ್ಲಿ ತಂದು ಕೊಡಬಲ್ಲುದು. 'ಬಾಳು' : ಜೀವನ ಇದು 'ಉಂಟು', ತರ್ಕದಿಂದ ಅರಿಯಬೇಕಾಗಿಲ್ಲ. ಬಾಳಿನಲ್ಲಿ ಹುರುಳು: ಅರ್ಥ: ವಿಚಾರ: ತತ್ತ್ವ ಇದು 'ಉಂಟು' ಎಂದೇ ಅರಿಕೆಗೆ ಬರುತ್ತದೆ. ಅರ್ಥ: ವಿಚಾರ ಇದು ಹಾಸು-ಹೊಕ್ಕಿನಂತೆ, ಬಾಳಿಗೆ, ತಳಪಾಯದಲ್ಲಿ ಆಧಾರವಾಗಿದೆ. ಇದನ್ನು 'ಕಾಲ್ಪನಿಕ' ಎನ್ನಲು ಆಗುವುದಿಲ್ಲ. ಇದು ಭಾವಾತ್ಮಕವಾಗಿದೆ; ಎಂದರೆ ಇದನ್ನು ಅರಿತು, ಗ್ರಹಿಸಿಕೊಳ್ಳಲು ಶಕ್ಯವಿದೆ. ಇನ್ನು ಮೂಲತಃ ವೈಯಕ್ತಿಕ ಕಲ್ಪನೆ ಎಂದು ಬಗೆಯಲು ಆಗುವುದಿಲ್ಲ. ಬಾಳಿನಲ್ಲಿ ವೈಯಕ್ತಿಕ ಕಲ್ಪನೆಗಳಿಗೂ ಒಂದು ಪರಿಮಿತ ಅವಕಾಶವಿದೆ. ಆದರೆ, ಇಡಿಯಾಗಿ ಕಲ್ಪನಾತ್ಮಕ-ವೈಯಕ್ತಿಕ ಸ್ವರೂಪದ್ದೇ ಆಗಿದ್ದಲ್ಲಿ, ಒಬ್ಬರ ವಿಚಾರ, ಮಾತು, ಇನ್ನೊಬ್ಬರಿಗೆ ತಿಳಿಯಬಾರದಿತ್ತು. ವಿಚಾರ ವಿನಿಮಯದಲ್ಲಿ ಒಬ್ಬರೊಬ್ಬರ ಮಾತು:ಅರ್ಥ ಇಡಿಯಾಗಿ ತಿಳಿಯುತ್ತಿರುವುದಿಲ್ಲ: ಇದು ನಿಜ. ಆದರೆ, ಬಹುಮಟ್ಟಿಗೆ-ಕನಿಷ್ಠ ಕೆಲಮಟ್ಟಿಗಾದರೂ, ಈ ವ್ಯವಹಾರದಲ್ಲಿ ವಿಚಾರ ವಿನಿಮಯವು ಶಕ್ಯವಿರುವ ಅನುಭವವು ಉಂಟು. ಆದುದರಿಂದ, ಈ ಅನುಭವದ ಮೇಲಿಂದ ಒಂದು ಸ್ಥೂಲ ನಿಯಮವು ಹೊರಡುತ್ತಿದೆ: ಈ ಬಾಳಿನಲ್ಲಿ ವೈಯಕ್ತಿಕ ಕಲ್ಪನೆ, ಸಂಕಲ್ಪನೆ-ಪರಿಕಲ್ಪನೆಗಳಿಗೆ ಇಂಬು ಇರುವಂತೆ, ವ್ಯಕ್ತಿ-ವಿಶಿಷ್ಟ ಅಥವಾ ವೈಯಕ್ತಿಕ ಎಂದು ಬಗೆಯಲು ಆಗದಿರುವ, ಅರ್ಥ: ವಿಚಾರಗಳು ಈ ಬಾಳಿನಲ್ಲಿ ಹುದುಗಿವೆ. ಈ ಬಗೆಯಲ್ಲಿ ಜೀವನದ ತಳಪಾಯದಲ್ಲಿ ಇರುವ ಅರ್ಥ:ವಿಚಾರಗಳು, ಯಾವ ವ್ಯಕ್ತಿಯಿಂದ ಕಲ್ಪಿತಗಳಲ್ಲ, ಇಂತಹ ವಿಚಾರಗಳ ಅಸ್ತಿತ್ವವು, ಕೆಲವೊಮ್ಮೆ ಥಕ್ಕನೆ ಅನುಭವಕ್ಕೆ ಬುರವುದುಂಟು. ಆದಿಮನ್ವಂತರದಲ್ಲಿ ಆ ಪುರಾತನರಿಗೆ ಅರ್ಥ:ವಿಚಾರ ತಿಳಿದದ್ದು ಹೇಗೆ ಮತ್ತೆ?

ಈ ಜೀವನದಲ್ಲಿ 'ಉಂಟು' ಎಂಬ ಈ ಸ್ವರೂಪದ ಅಥವಾ ಈ ಪಾತಳಿಯ ಅರ್ಥ: ವಿಚಾರವನ್ನು 'ಅಭೀದ್ಧಾತ್' ಅರ್ಥ: ವಿಚಾರ: ನಿಯಮ ಎಂದು ಪುರಾತನರು ಹೆಸರಿಸಿದ್ದಾರೆ. ವಿಶ್ವದ ರಚನೆಯನ್ನು ಕುರಿತು ಒಂದು ಚಿಕ್ಕ ಸೂಕ್ತವು ಇಂದಿನ ಸಂಹಿತೆಯಲ್ಲಿಯೂ ಎಂತೋ ಅಂತೂ ಉಳಿದಿದೆ. ಇದರ ಪ್ರಾರಂಭವು 'ಋತಂ ಚ ಸತ್ಯಂ ಚ ಅಭೀದ್ಧಾತ್ ತಪಸಃ ಅಧ್ಯಜಾಯತ'[1] ಹೀಗಿದೆ.

ಈ 'ಅಭೀದ್ಧಾತ್' ತತ್ತ್ವದಲ್ಲಿ ಅರಿಸ್ಟಾಟಲನ ನಿಷ್ಠೆಯಿತ್ತು 'Form is immanent in things-' ಎಂದು ಆತನು ಸ್ಪಷ್ಟಶಬ್ದಗಳಲ್ಲಿ ಹೇಳಿದ್ದಾನೆ. ಆಧುನಿಕ ಭೌತ ಶಾಸ್ತ್ರಜ್ಞರಲ್ಲಿ, ಗಣಿತಶಾಸ್ತ್ರದ ತಾತ್ತ್ವಿಕ ಭೂಮಿಕೆಯನ್ನು ಕುರಿತು ಸಂಶೋಧನಮಾಡಿದ ಕೀರ್ತಿಯ ಡಾ. ವ್ಹೈಟಹೆಡ್ ಅವರು, ಈ 'Immanence' ಇದರ, ತಾತ್ತ್ವಿಕ ಹಿನ್ನೆಲೆಯನ್ನು ಸ್ಪಷ್ಟೀಕರಿಸುವ ಪ್ರಯತ್ನ ಪಟ್ಟಿದ್ದಾರೆ, ಈ ವ್ಹೈಟಹೆಡ್ ಅವರ ಸಂಶೋಧನದಲ್ಲಿ ಸಹಕರಿಸಿರುವ ಡಾ. ಬರ್ಟರಾಂಡ್ ರಸೆಲ್ಲರಿಗೆ, ಈ ತತ್ತ್ವವು ಮಾನ್ಯವಿದ್ದಂತೆ ಕಾಣುವುದಿಲ್ಲ! ಆದರೆ, ಇದರಲ್ಲಿ ಆಕ್ಷೇಪಾರ್ಹವೇನು, ಎಂಬುದನ್ನು ಶಿಷ್ಟಮಾನ್ಯವಾಗುವ ರೀತಿಯಲ್ಲಿ ಹೇಳಲು ಸಮರ್ಥರಾಗಿಲ್ಲ. ಅರಿಸ್ಟಾಟಲನ ಈ ವಿಚಾರವನ್ನು ಅವರು ಆಕ್ಷೇಪಿಸುವ ಸಾಹಸಮಾಡಿರುವುದು ಮಾತ್ರ ನಿಜ! ರಸೆಲ್ಲರೆ ವೈಚಾರಿಕ ಭೂಮಿಕೆಯ ಸ್ವರೂಪವು, ಈ

ಹಿನ್ನೆಲೆಯಲ್ಲಿ ತನ್ನ ತಾನೇ ಗೊತ್ತಾಗಲಿದೆ. ಇದು ಹಾಗಿರಲಿ. ಡಾ॥ ವ್ಹೈಟಹೆಡ್ ಅವರು ಈ ಬಗೆಗೆ ಬರೆಯುವುದೇನೆಂದರೆ:

> Immanence, "This is at once the doctrine of the unity of nature and of unity of each human life. The conclusion follows that our life thread of occasions is nothing other than knowledge of a special strand of unity within the general unity of nature. It is a locus within the whole, marked out by its own peculiarities but otherwise exhibiting the general principle which guides the continuation of the whole. This general principle is the subject-to-object structure of experience.[೨]

ಈ ಮನು-ಜನು ಜೀವನ ವಿಶ್ವದ ಸಂಕ್ಷಿಪ್ತ ಪ್ರತಿಕೃತಿ ಆಗಿದ್ದಾನೆ, 'ಅಭೀದ್ಧಾತ್' ಪಾತಳಿಯ (immanent) ಅರ್ಥ:ವಿಚಾರಗಳನ್ನು ಗ್ರಹಿಸಿಕೊಳ್ಳಲು ಶಕ್ಯವಾಗುತ್ತಿರುವಲ್ಲಿ ಈ ವಿಶ್ವನಿಯಮದ ಅಸ್ತಿತ್ವವು ದೃಢಪಡುತ್ತಿದೆ. ಡಾ. ವ್ಹೈಟ್‌ಹೆಡ್‌ರ ಮುಂದಿನ ತಲೆಮಾರಿನವರಲ್ಲಿ, ಡಾ. ಐನ್ಸಟನ್ ಇವರ ಮೂಲಕವೂ, ಈ 'ಅಭೀದ್ಧಾತ್' ಸ್ವರೂಪದ; ಅರ್ಥವಿಕಾಸಗಳು ಈ ಬಾಳಿನಲ್ಲಿಯೇ ಹಾಸು ಹೊಕ್ಕಿನಂತೆ ಇರುವ, ಈ ತಾತ್ವಿಕಭೂಮಿಕೆಗೆ, ಪುಷ್ಟಿ ದೊರೆಯುತ್ತಿದ. ಡಾ. ಐನ್ಸಟನ್ ಅವರ ಸಣ್ಣ-ಪುಟ್ಟ ಟಿಪ್ಪಣಿಗಳನ್ನು ಸಹ ಸಂಗ್ರಹಿಸಿ ಪ್ರಕಟಿಸಲಾಗಿದೆ. ಈ ಪುಸ್ತಕದಲ್ಲಿ, ಅವರು ತಮ್ಮ ನಿಷ್ಠೆಯನ್ನು ವ್ಯಕ್ತಪಡಿಸುವ ಎರಡು ಮಾತುಗಳನ್ನು ನಮೂದಿಸಿ ಇಟ್ಟಿದ್ದಾರೆ. ಈ ಮಾನವನಿಗೆ ಲಭ್ಯವಿರುವ ಜ್ಞಾನದ್ವಾರಗಳು ಎರಡು; ನೇತ್ರ ಮತ್ತು ಶ್ರೋತ್ರ! ಇದರ ಸ್ಪಷ್ಟೀಕರಣವು ದೊರೆಯುವುದಿಲ್ಲ. ಆದರೆ ಇವೆರಡರಲ್ಲಿ, ಕಿವಿಗಿಂತ, ತನಗೆ ಕಣ್ಣಿನ ಸಾಮರ್ಥ್ಯದಲ್ಲಿ ಹೆಚ್ಚು ನಂಬಿಕೆ, ಎಂದು ಹೇಳಿದ್ದಾರೆ! ಇಲ್ಲಿ 'ಕಣ್ಣು' ನೇತ್ರ ಎಂದರೆ, ಇದು ಪುರಾತನ ಪರಿಭಾಷೆಯ 'ಪ್ರಜ್ಞಾನೇತ್ರ'ವೆ ಸರಿ. ಐನ್‌ಸ್ಟನ್ ಹೇಳಿರುವ ಜ್ಞಾನದ ಇನ್ನೊಂದು ಬಾಗಿಲು 'ಶೋತ್ರ'='ಶ್ರುತಿ'ನಾದ; ಅವರ ಈ ಅನುಭವವೂ ಜೀವನವಿಶ್ವದ ನಿಯಮ ಸೂಚಕವೇ ಇದೆ. ಈ ಇಬ್ಬಗೆ ಬಿಟ್ಟರೆ, ಬೇರೆಬಗೆಯಿಂದ ಜ್ಞಾನ ಶಕ್ಯವಿಲ್ಲ.

ಭಾರತೀಯರ ಮೂಲವೇದವು ಪರಂಪರೆಯ 'ಪ್ರಜ್ಞಾನೇತ್ರವು ಗ್ರಹಿಸಿಕೊಂಡು ಅಭೀದ್ಧಾತ್ ಸ್ವರೂಪದ ಋತ ಸ್ವರೂಪೀ ವಿಶ್ವ ನಿಯಮದ ಹಿನ್ನೆಲೆಯಲ್ಲಿ ಅರಿಕೆಗೆ ಬರುವ ಸತ್ಯ'ದ ಅಧಾರದ್ದು ಇತ್ತು, ಇರಲೇಬೇಕು. ಆದರೆ, ಇಂದಿನ ವೇದವೋ 'ಶ್ರುತಿ'. 'ಮಹತಃ ಭೂತಸ್ಯ ನಿಃಶ್ವಸಿತಂ' ಎಂದರೆ ಇದು ನಾದರೂಪದಲ್ಲಿ ನಾದ-ಬ್ರಹ್ಮದ ಸ್ವರೂಪದಲ್ಲಿ ಅರಿಕೆಗೆ ಬಂದಿರುವ ಜ್ಞಾನ! ಇಂದ್ರಿಯಗಳ ಪಾತಳಿಯ ಜೋತಿರ್ಲಿಂಗ ಉಪಾಸನೆಯಲ್ಲಿ ಲಭಿಸುವ ಜ್ಞಾನ. ಭಾವಾತ್ಮಕ ಹಾಗೂ ಇದರ ಆನುಷಂಗದ, ಅಭಾವಾತ್ಮಕ ಎರಡೇ ಬಗೆ. ಹೀಗಿದೆ ಈ ಜೀವನ ವಿಶ್ವದ ತಳಪಾಯದಲ್ಲಿ 'ಅಭೀದ್ಧಾತ್' ಸ್ವರೂಪದಲ್ಲಿದೆ. ಸಾಯಣರು 'ಅಭೀದ್ಧಾತ್' ಪದಕ್ಕೆ 'ಪ್ರಕಾಶಮಾನಾತ್' ಎಂದು ಸ್ಪಷ್ಟೀಕರಣವನ್ನೀಯುತ್ತಾರೆ. ಈ ಹಿನ್ನೆಲೆಯಲ್ಲಿ, ಈ ಅರ್ಥ:ವಿಚಾರ ಸ್ವರೂಪ ಈ ಜ್ಞಾನವು ಸ್ವಯಂ ಪ್ರಕಾಶತತ್ವದ್ದು ಇರುವುದರಿಂದ ಇದು 'ನೇತ್ರ'ದ ವಿಷಯವೇ ಆಗುತ್ತದೆ. ಇನ್ನೊಂದು ಬಗೆಯದು, 'ಇಂದ್ರಿಯ ಜನ್ಯ' ಜ್ಞಾನ: ಪ್ರಾಧಾನ್ಯದಿಂದ ಸ್ಪರ್ಶೇಂದ್ರಿಯದ ಮೂಲಕವಾಗಿ ಅರಿಕೆಗೆ ಬರುವ ಜ್ಞಾನ. 'Space, Time and Deity' ಗ್ರಂಥಕಾರನು, ಇಂದ್ರಿಯಗಳಲ್ಲಿ ನೇತ್ರಕ್ಕಿಂತಲೂ 'ಸ್ಪರ್ಶ'ದ ಮೂಲಕ ಗೊತ್ತಾಗುವ ಸಂಗತಿಗಳು ಹೆಚ್ಚು ವಿಶ್ವಸನೀಯ ಎನ್ನುತ್ತಾನೆ!

ದಿವ್ಯಾಧ್ಯಾತ್ಮದಲ್ಲಿ 'ಪ್ರಾಣ-ಲಿಂಗ'ವು ಏನೆಲ್ಲ ಇಂದ್ರಿಯಗಳ ಶಕ್ತಿಗಳನ್ನು ಒಳಗೊಂಡಿದೆ ಎಂಬ ಶ್ರದ್ಧೆಯಿದೆ, 'Empirical Knowledge' ಎಂಬುದು ಈ ವರ್ಗದಲ್ಲಿಯೇ ಬರುತ್ತದೆ. ಪ್ರಯೋಗ, ತರ್ಕ, ಅನುಮಾನಾದಿ ಕಲ್ಪನೆಗಳಿಗೆ (imagination) ಇಂಬು ಇವೆ. ಇದೆಲ್ಲವೂ ಅಭಾವದಲ್ಲಿ ಸ್ಥಾಯೀಸ್ವರೂಪದ ಜ್ಞಾನ.

ಡಾ. ಬರ್ಟ್ರಾಂಡ್ ರಸೆಲ್ಲ ಪೈಥಾಗೊರಾಸನನ್ನು ಮೆಚ್ಚಿದ್ದರೂ, ಈತನ ದಿವ್ಯಾಧ್ಯಾತ್ಮವು ಅವರಿಗೆ ಮಾನ್ಯವಿದ್ದಿಲ್ಲ. "nature of things is number" ಎಂಬ ಪೈಥಾಗೊರಾಸನ ಸೂತ್ರವನ್ನು 'non-sense' ಎಂದು ಹೀಯ್ಯಾಳಿಸಿದ್ದಾರೆ! ಆದರೆ, ಈ ಭೂಮಿಕೆಯಲ್ಲಿ ಅಂತರ್ ವಿಸಂಗತಿ ಅನಿವಾರ್ಯವಿದೆ! 'non-sense' ಎಂದು ಎನಿಸಿದರೂ ಇದರಲ್ಲಿ ಆಳವಾದ ಅರ್ಥವಿದೆ' ಎಂದು ರಸೆಲ್ಲರು ತಿದ್ದಿಕೊಳ್ಳುತ್ತಾರೆ!

ಇವರಿಗೆ, ಪೈಥಾಗೊರಾಸ ಪಂಥೀಯ music of spheres or Harmony of sphere ಎಂಬ ಈ ಶ್ರದ್ಧೆಯ ಅರ್ಥವಾಗಿಲ್ಲವೊ, ಅಥವಾ ಇದು ಹಿಡಿಸಿಲ್ಲವೊ, ಏನೇ ಇರಲಿ; ಪೈಥಾಗೋರಾಸನು ಸಂಗೀತದ ತಾಳಲಯವನ್ನು ಗಣಿತಶಾಸ್ತ್ರದಿಂದ ಕಂಡು ಹಿಡಿದಿದ್ದಾನೆ. 'ನಾದ'ವನ್ನು ತಾಳಲಯದಲ್ಲಿ ಹಿಡಿದು ಅದಕ್ಕೆ ಆಕಾರ ಕೊಡಲು ಗಣಿತದ ಸಂಖ್ಯೆಯ ಪ್ರಯೋಜನವಿದೆ. ಎಂದು ರಸೆಲ್ಲ ಪೈಥಾಗೋರಾಸನ ಸೂತ್ರವನ್ನು ಎತ್ತಿಹಿಡಿಯುವ ಪ್ರಯತ್ನ ಪಟ್ಟಿದ್ದಾರೆ. ಆದರೆ, 'music of spheres' ಇದರ ಸೆಲೆ ಅವರಿಗೆ ನಿಲುಕಲಿಲ್ಲ. ಭಾರತೀಯ ದಿವ್ಯಾಧ್ಯಾತ್ಮದ ಪರಿಭಾಷೆಯಲ್ಲಿ, ಇದನ್ನು 'ಅನಾಹತನಾದದ ಲೋಕ' ಎಂದು ಹೇಳಬಹುದು. ಇದು ಗುಹ್ಯಮಾರ್ಗದ ಜ್ಞಾನ. ಈ ಕಾರಣದಿಂದಾಗಿ, ಗ್ರೀಕ್ ತತ್ತ್ವಜ್ಞಾನದ ಇತಿಹಾಸದಲ್ಲಿ ಇದರ ಸ್ಪಷ್ಟೀಕರಣವು ದೊರೆಯುವುದಿಲ್ಲಂದು ನನಗೆ ಎನಿಸಿದೆ. ಪ್ಲೇಟೊ ಅರಿಸ್ಟೊಟ್ಲರೂ ಈ ವಿವರದ ಆಳದಲ್ಲಿ ಸೇರಿಲ್ಲ ಅಥವಾ ನನ್ನ ಓದಿಗೆ ನಿಲುಕಿಲ್ಲ. ಅನಾಹತ ಎಂಬ ಪ್ರಣವನಾದವೂ ಸ್ಪರ್ಶಜನ್ಯವೇ ಆಗಿದೆ. ಅನಾಹತನಾದವನ್ನು ಪ್ರಣವ (ಪ್ರ+ನವ)ನಾದ ಎಂದೂ ಕರೆವ ವಾಡಿಕೆಯಿದೆ. ಇದನ್ನು 'ಓಂ'ಕಾರ ಸಂಕೇತದಿಂದ ಗುರುತಿಸಲಾಗಿದೆ. ಈ 'ಓಂ'ಕಾರ ಮಹಿಮೆಯ ಗುಹ್ಯಜ್ಞಾನದ ಉಪ-ನಿಷತ್ತಿಗೆ 'ಮಾಂಡೂಕ್ಯ' ಎಂದು ಹೆಸರು ಉಂಟು. ಮಾಂಡೂಕ್ಯಕ್ಕೂ ಮುಂಚೆ ಮುಂಡಕ ಹೆಸರಿನ ಉಪನಿಷತ್ತಿನ ಕ್ರಮವನ್ನು ಸಂಪ್ರದಾಯವು ಗೊತ್ತುಪಡಿಸಿದೆ. 'ಈಶ' ಮತ್ತು 'ಕೇನ'ಗಳಲ್ಲಿಯೂ ಈ ಅನುಕ್ರಮ ಇರುವುದನ್ನು ಉಪನಿಷತ್ ಸಂಗ್ರಹಗಳಲ್ಲಿ ಕಾಣಬಹುದು. ವೇದದ ಮಂಡಲಗಳ ರಚನೆಯಲ್ಲಿ ಹೊರಗಣ್ಣಿಗೂ ಸ್ಥೂಲವಾಗಿ ಕಾಣುವ ಒಂದು ಕ್ರಮ ಉಂಟು.

ಈ ಮಂಡಲಗಳು ಹತ್ತೇ (ದಶ) ಇರುವ ಔಚಿತ್ಯವು ಚಿಂತ್ಯವಿದೆ. ಈ 'ದಶ'ಮ ಮಂಡಲ [O]ದಲ್ಲಿ ಪುರಿಶಯ ಪುರುಷನ ಸೂಕ್ತವಿದೆ. ನವಮ ಮಂಡಲದಲ್ಲಿ ಸೋಮ ಮೊಗವಾಡದಲ್ಲಿ ಚಂದ್ರಾದೇವಿಯ ಸೂಕ್ತಗಳ ಸಂಗ್ರಹವಿದೆ. ಸೋಮ ಈ ನಾಮರಹಸ್ಯವನ್ನು 'ಉಮಯಾ ಸಹಿತಃ' 'ಸೋಮಃ' ಎಂದು ಹೇಳಲಾಗುತ್ತದೆ. ಈ ಸಂಬಂಧವನ್ನು ಇನ್ನೊಂದು ಪರಿಭಾಷೆಯಲ್ಲೂ ಹೇಳಬಹುದು : ಸ್ಥಲ (ಕಣ್) ಮತ್ತು ಕಾಲ (ಗಣ್) ಇವೆರಡರ ಏಕಾತ್ಮಕ ಪ್ರತೀಕವೇ ಉಮಾ+ಮಹೇಶ್ವರ=ಲಕ್ಷ್ಮೀನಾರಾಯಣ. ಪಾಶ್ಚಾತ್ಯ ಕವಿ ರಾಬರ್ಟ್ ಗ್ರೇವ್ಸ್ ನವಮ ಮಂಡಲದ ಸಾಂಕೇತಿಕತೆಯ ಬಗೆಗೆ ಸ್ವಲ್ಪ ನಮೂದಿಸಿದ್ದೂ ಉಂಟು. ನವಹೆರಿಗೆಯ ತಿಂಗಳ ಸೂಚಕ ಸಂಖ್ಯೆ.

ಈ ಕವಿ 'White Goddess' ಮಹಿಮೆಯನ್ನು ಸಂಗ್ರಹಿಸಿದ್ದಾನೆ. ಆದರೆ, ಇದರಲ್ಲಿ 'Sphere of music' ವಿಚಾರವು ಒಳಗೊಂಡದ್ದು ಕಾಣುವುದಿಲ್ಲ. ಅಲ್ಲದೆ, (ತ್ರಿತ) 'Triad' ವಿಚಾರವೂ ಕಾಣದು. ಈ ಮಾತು ಯಾತಕ್ಕೆ ಎಂದರೆ, ಪೈಥಾಗೋರಾಸ ಪಂಥೀಯರ ಪ್ರಭಾವದಲ್ಲಿ, ಪಾಶ್ಚಾತ್ಯ ಪರಂಪರೆಯಲ್ಲಿ, ಜೀವನ ವಿಶ್ವದ ಕಟ್ಟಡದ ಮೂರನೆಯ ಪಾತಳಿಯು ಕಣ್ಮರೆಯಾಗುತ್ತದೆ! ಜೀವನ ವಿಶ್ವದ ರಚನೆ, ಮಾನವಧರ್ಮದ ಆಕೃತಿಯ ವಿಚಾರದಲ್ಲಿ ಗ್ರೀಕ್‌ಸಂಸ್ಕೃತಿಯ ಸಾಮ್ಯವನ್ನು ಲೆಕ್ಕಿಸದೇ ನಡೆಯದು. ಪೈಥಾಗೋರಾಸ ಪಂಥೀಯರು 'triads' ಜೀವನ ವಿಶ್ವದ ಆಕೃತಿಯಲ್ಲಿ ಕಂಡಿದ್ದಾರೆಂಬುದನ್ನು ಆಧಾರ ಸಹಿತ ಹಿಂದೊಮ್ಮೆ ಸೂಚಿಸಿದ್ದಾಗಿದೆ. ಪೈಥಾಗೋರಾಸ ಪಂಥೀಯರು ಹೇಳುವ 'music of spheres ಇದರ ಹಿನ್ನೆಲೆಗೆ ಈ ಸುತ್ತುಮಾತಿನ ಆವಶ್ಯಕತೆ ಇದೆ. ಇದನ್ನು ಟಿಳಕರು ಒಮ್ಮೆ 'ವಿಶ್ವ ಸಂಗೀತ', 'ಭಗವದ್ಗೀತೆ', ಎಂದುದೂ ಉಂಟು. ತರಳ ರಾಜಹಂಸ ನಾರಾಯಣನ ಹಾಡು ಕೇಳಿದಾಗ ಮೆಚ್ಚಿಕೆಯ ಮಾತು ಹೊರಗೆ ಬಂತು. ಇವನೊಬ್ಬ 'ಬಾಲಗಂಧರ್ವ'ನೇ ಸರಿ! ಟಿಳಕರ ಈ ಮೆಚ್ಚಿಕೆಯ ಹೆಸರೇ ಲೋಕಪ್ರಿಯವಾಗಿ 'ಬಾಲಗಂಧರ್ವ'ರ ಮೂಲ ಹೆಸರೂ ಮರೆತಂತಾಯ್ತು.

ಈ ಸಂದರ್ಭದಲ್ಲಿ ಟಿಳಕರನ್ನು ನಿಮಗೆ, ಸಂಗೀತ-ರಾಗ ಜ್ಞಾನವೂ ಉಂಟೆ?' ಎಂದು ಕೇಳಿದವರೂ ಇದ್ದಾರೆ. ಈ ಪ್ರಶ್ನೆಗೆ ಟಿಳಕರು ಹೇಳಿದ ಉತ್ತರದಲ್ಲಿ, ಈ ವಿಶ್ವಸಂಗೀತದ ಉಲ್ಲೇಖವು ಬಂದುದು ಅವರ ಸ್ಮೃತಿಸಂಗ್ರಹದಲ್ಲಿ ನಮೂದು ಆಗಿದೆ. ಆ 'ವಿಶ್ವಸಂಗೀತ' ಕೇಳಿದವರಿಗೆ ಈ ಸಂಗೀತವೇನು?

ಪೈಥಾಗೋರಾಸ ಪಂಥಕ್ಕೆ ಅಭಿಪ್ರೇತ ಈ ವಿಶ್ವಸಂಗೀತವು ಯಾವುದು? ಕಟ್ಟೇಕಾಂತದಲ್ಲಿ ಅಂತರಿಕ್ಷದ ಟೊಳ್ಳಿನಲ್ಲಿ ಏನೋ ಒಂದು 'ನಾದ'ವು ಕೇಳ ಬಂದಂತೆ ಎನಿಸುವ ಅನುಭವವು ಹಲವರಿಗೂ ಉಂಟು. ಆದರೆ ಈ ನಾದದ ಕಾರಣವೇನು? ಇದನ್ನು ಹೇಳುವ ಪ್ರಯತ್ನವು ಗ್ರೀಕ್ ಪರಂಪರೆಯಲ್ಲಿಯೂ ಆಗಿದೆ. ಆದರೆ ಸಾಂಪ್ರದಾಯಿಕ ಶ್ರದ್ಧೆಯಂತೆ ಇದು, ವ್ಯಕ್ತಿ ನಿರಪೇಕ್ಷ ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ) ಈ ವಿಭಾಗದ್ವಯದ ಪಿಂಡ ಬ್ರಹ್ಮಅಂಡ ಇವೆರಡರ ಮಿಥುನ ಕ್ರೀಡೆಯಲ್ಲಿ, ಇದು ಜೀವನ ವಿಶ್ವದ 'ನಾಭಿಮೂಲದೊಳ್ ಜನಿಯಿಸುವ' ನಾದವಾಗಿದೆ. ಇದನ್ನು 'ಪರಾವಾಣಿ' ಎಂದು ಬಗೆಯಲಾಗಿದೆ. 'ಪರಾವಾಣಿ' ಎಂಬ ಈ ಪರಿಭಾಷೆಯು, ಸಾಮಾಜಿಕ ಪಾತಳಿಯ ವಾಕ್ಕು, ವೈಯಕ್ತಿಕ ಪಾತಳಿಯ 'ವಾಣಿ'='ಗೀಃ' ವಾಣ=ವಾಣಿ ಆಗಿ ಮಾರ್ಪಟ್ಟಿರುವು ಇಲ್ಲಿದೆ. ವ್ಯಕ್ತಿನಿರಪೇಕ್ಷ ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ) ಇವೆರಡರ ಸಂಪರ್ಕದಲ್ಲಿ ಉಂಟಾಗುವ ಈ ವಿಶ್ವಸಂಗೀತವನ್ನು ವ್ಯಕ್ತಿ ಸಾಪೇಕ್ಷ ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ)ದ ಸಂದರ್ಭದಲ್ಲಿಯೂ, ಸಾಧಕರಿಗೆ, ಕೇಳಲು ಶಕ್ಯವಿದೆ. ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ) ಇವೆರಡರ ನಡುವಣ ಈ ಟೊಳ್ಳು=ಅಂತರಿಕ್ಷದ ಅವಕಾಶವು ಪ್ರಾಣಲೋಕ. ಈ ವಿಶ್ವಸಂಗೀತವು, ಪ್ರಾಣಲೋಕದ ಆಗುಹೋಗುಗಳ ಸೂಕ್ಷ್ಮತರಂಗಗಳನ್ನು ಒಳಗೊಂಡು ಒಂದು 'ನಾದ'ವು ಉಂಟಾಗುತ್ತದೆ. ಈ ನಾದವನ್ನು ವ್ಯಕ್ತಿಗಳು ತಮ್ಮ ಅಂತರ್ ಅಂಗ ಮತ್ತು ಅಂತಃಕರಣ ರೂಪ ಈ ಸೂಕ್ಷ್ಮಪಾತಳಿಯ ಅಂಗ-ಲಿಂಗದ ಸಂಪರ್ಕದಲ್ಲಿ ಕೇಳ ಬಲ್ಲರು. ಜೀವಲೋಕದ, ಗತವರ್ತಮಾನ, ಆಗಾಮೀ ಸಂಗತಿಗಳನ್ನು ಗ್ರಹಿಸಿಕೊಳ್ಳಲು ಶಕ್ಯವಿದೆ ಎಂಬ ಪವಾಡದ ಆಮಿಷವೂ ಇಲ್ಲಿ ಇದೆ. ಆದರೆ, ಈ ಸಾಧಕನು, ಪ್ರಾಣಲೋಕದ ಈ ನಾದಾನುಸಂಧಾನಿ ಆತ್ಯಂತಕ ಅಹಿಂಸೆಯನ್ನು ಎಂದರೆ ಒಂದು ತೊಟ್ಟೂ ಜೀವನಜಲ ತನ್ನ ಇಂದ್ರಿಯದಿಂದ ಹೊರಗೆ ಬರದ 'ಅ-ಕ್ಷರ' ಸಿದ್ಧಿಯನ್ನು ಪಡೆಯುವುದು ಅವಶ್ಯ ಎಂದು ಸಂಪ್ರದಾಯ ಹೇಳುತ್ತದೆ.

ದಿವ್ಯಾಧ್ಯಾತ್ಮ ಪಂಥಗಳ ಈ ಪ್ರಯತ್ನಗಳ ಕಾರಣವೇನು ಜೀವನವಿಶ್ವದಲ್ಲಿ ವಿಕಾಸಕ್ರಮದ ಪ್ರಾದುರ್ಭಾವದಿಂದಾಗಿ, ವ್ಯಕ್ತಿ ನಿರಪೇಕ್ಷ ಹಾಗೂ ವ್ಯಕ್ತಿ ಸಾಪೇಕ್ಷ ಸ್ಥಲ ಮತ್ತು ಕಾಲ ಇವೆರಡರ ಏಕಾತ್ಮತೆಯು, ನರ(ಳ), ನಾರೀ(ಳ) ವರ್ಗದ ಪಾತಳಿಯ ಮೇಲೆ ಭಗ್ನವಾಗಿದೆ. ನರ(ಳ) ವರ್ಗದಲ್ಲಿ ಪ್ರಜ್ಞೋದಯವಾಗಿದೆ. ಈ ಪ್ರಜ್ಞೆ ಉಪಜ್ಞೆಯಿಂದಾಗಿ ಈ ನರನು, ತ್ರಿತ=ಮನುಜ ಆಗುತ್ತಿದ್ದಾನೆ. ಈ ಮಾನವತ್ವದ ಪ್ರಾದುರ್ಭಾವದಿಂದಾಗಿ ನರ ಸಂಪ್ರದಾಯವು ನಷ್ಟವಾಗುವ ಭೀತಿ ಎದುರು ನಿಂತಿತು. ಸ್ಥಳ ಮತ್ತು ಕಾಲ ಈ ಏಕಾತ್ಮಕತೆಯಲ್ಲಿ ಕಾಣೆಸಿಕೊಂಡ ಬಿರುಕನ್ನು ಮುಚ್ಚಲು 'ಆದಿತ್ಯ'=ಪುರುಷ=ದಶಾಂಗುಲನನ್ನು ಭಾರತೀಯ ದಕ್ಷಿಣಕಪರ್ದ ಪಂಥೀಯರು ಸೃಷ್ಟಿಸಿದ್ದಾರೆ. ಪೈಥಾಗೋರಾಸ ಪಂಥ One (1) ಇದು Ten, Limit ಸ್ವರೂಪದ್ದು ಇದೆ. ಈ 'ಆ-ತ್ಮನ್' ಸಂಕೇತದ ಸ್ಮರಣ ಮನನದಿಂದಾಗಿ ಉಪಜ್ಞೆ ಪ್ರಜ್ಞೆಯು ಗೌಣವಾಗುವುದರಿಂದ ಈ ನರ(ಳ)ನು ಮನು-ಜನಾಗುವ ಆಪತ್ತಿನಿಂದ ಪಾರಾಗಿದ್ದಾನೆ.

ಆದರೆ, ಈ ಮಾನವಧರ್ಮದ ಆಕೃತಿಯು ವಿಶ್ವನಿಯಮಾನುಸಾರಿಯಾಗಿ ನಿರ್ಮಿತವಿದೆ. ಇದನ್ನು ತಿದ್ದಿ ಮರಳಿ 'ನರ' 'ಸಂಪ್ರದಾಯವನ್ನು ಪ್ರಸ್ಥಾಪಿಸಲು ಆಗಿರುವ ಪ್ರಯತ್ನಗಳಿಂದ ಮಾನವ ಧರ್ಮ=ಸಂಸ್ಕೃತಿಯು ಕೀಳ್ಮಟ್ಟಕ್ಕೆ ಇಳಿಯತೊಡಗಿದ್ದುದು ಇಂದು ಎಲ್ಲರ ಅನುಭವದ ಸಂಗತಿಯಾಗಿದೆ.

ವಿಶ್ವನಿಯಮದ ಸ್ವರೂಪ ಆಕೃತಿ

ವಿಶ್ವನಿಯಮವು 'ಉಂಟು'. ಜೀವನದಲ್ಲಿ ಅರ್ಥ=ವಿಚಾರ ಹಾಸು ಹೊಕ್ಕಿನಂತಿದೆ. ಇದು ಐನ್ಸಟನ್ ಅವರು ಹೇಳಿದಂತೆ ಪ್ರಜ್ಞಾನೇತ್ರದ ವಿಷಯ. 'ಉಂಟು' ಎಂದೊಡನೆ ಇದಕ್ಕೆ ಪ್ರತಿಯಾಗಿ ಅಲ್ಲ, ಇಲ್ಲ ಎಂಬ

ಅಭಾವಾತ್ಮಕ ಭೂಮಿಕೆಗೂ ಇಂಬು ಉಂಟು. ಈ ಅಭಾವಾತ್ಮಕ ಸ್ಥಾಯಿಗೆ ಇತಿಮಿತಿಗಳಿವೆ. 'ಅಭಾವಾತ್ಮ'ಕಕ್ಕೆ ಇಂಬು ಉಂಟು. ಇದು ನಿಜವಿದ್ದರೂ, ಅತ್ಯಂತ ಅಭಾವಾತ್ಮಕಕ್ಕೆ ಈ ಜೀವನ ವಿಶ್ವದಲ್ಲಿ ಸ್ಥಾನವಿಲ್ಲ. ಈ ವಿಶ್ವನಿಯಮದ ಭಂಗವಾಗುತ್ತಿರುವ ಎಡೆಯೇ ಇದು. ಸ್ಥಲ ಮತ್ತು ಕಾಲ ಈ ವಿಭಾಗದ್ವಯದ ಸಂಪರ್ಕ-ಸಂಬಂಧದಲ್ಲಿ ಉಂಟಾಗುವ ಕತ್ತಲೆಯ ವೃತ್ತಾಕೃತಿಯ [O] ಟೊಳ್ಳು. ಇದುವೆ ಅಭಾವಾತ್ಮಕ ಸ್ಥಾಯೀ ಆಗಿ ಇರುವ 'ಕೃಷ್ಣವಿವರ'. ಇದನ್ನು ನರ(ಳ) ಸಂಪ್ರದಾಯವು ಶ್ರೀ (ಸ್ತ್ರೀ) ಚಕ್ರ ರೂಪದಲ್ಲಿ ಆರಾಧಿಸುವ ವಾಡಿಕೆ ಉಂಟು. ಈ ಶ್ರೀ (ಚಕ್ರ)ದ ಸೂಕ್ತದ ಮೂಲಪಾಠದಲ್ಲಿ, ಈ ದೇವಿಯು ಯಾವ ಪುರುಷನ ಅರ್ಧಾಂಗಿಯೂ ಅಲ್ಲ. ಆದರೆ, ಪಾಠಾಂತರಗಳಲ್ಲಿ, ಶ್ರೀ ದೇವಿಯನ್ನು ಶ್ರೀವಿಷ್ಣು ಪತ್ನಿ ಎಂದು ವರ್ಣಿಸಲಾಗಿದೆ. ವಿಶ್ವ ನಿಯಮದ ಭಂಗವು ಆಗಿರುವ ಎಡೆಯೇ ಇದು. ಅಭಾವಕ್ಕೆ ಸ್ಥಾನವಿದ್ದರೂ ಅತ್ಯಂತ ಅಭಾವವನ್ನು ಉಂಟು, ಎಂದು ನಂಬಿಸುವ ಅಶ್ಲಾಘ್ಯ ಪ್ರಯತ್ನವು ಇಂದಿನ ವೇದದಲ್ಲಿ ಇದೆ. 'ಅದಿತಿ' (ಕರಿ ಮಾಯಿ) ಇದ್ದಾಳೆ. ಆದರೆ 'ಆದಿತ್ಯ' ಎಂಬ ಈ ಪಾತ್ರಸೃಷ್ಟಿಯ ಅಧಿಕ ಪ್ರಸಂಗದ್ದಾಗಿದೆ!

ಈ ಆದಿತ್ಯನನ್ನು ಸೃಷ್ಟಿಸಿ, ಭಗವಂತ ಸಂಪ್ರದಾಯವೆಂಬ ಹೆಸರಿನಲ್ಲಿ ಲಿಂಗಪೂಜೆಯನ್ನು ಪ್ರಚಾರಕ್ಕೆ ತರುವ ಪ್ರಯತ್ನವಾಗಿದೆ. ಕುಮಾರೀ ಮಾತಾಪುತ್ರ ಆದಿತ್ಯನಂತೆ! ಕುಮಾರೀ (ಮೇರೀ) ಪುತ್ರ ಕ್ರೈಸ್ತನಂತೆ! ಈ ಕೃತ್ಯವು ವಿಶ್ವನಿಯಮದ ಭಂಗವಾದುದನ್ನು ಗಮನಕ್ಕೆ ತಂದು ಕೊಡುತ್ತದೆ. ಈ ಸ್ಥಳ-ಕಾಲರೂಪ ಈ ವಿಭಾಗದ್ವಯದ ಕತ್ತಲೆಯ ವೃತ್ತಾಕೃತಿಯ ಅಭಾವವೇ ಸ್ಥಾಯಿ ಆಗುತ್ತಿರುವ ಈ 'ಕರಿಮಾಯಿ'ಯ ಕೃಷ್ಣವಿವರದ ಮೇಲ್ಗಡೆಗೆ, ವಿಭಾಗತ್ರಯದ ಪ್ರಕಾಶತತ್ತ್ವದ ಸಾಹಚರ್ಯದಲ್ಲಿ ಆಗಾಮೀ ನಾಳೆಗಳತ್ತ ಸಾಗಿರುವ ಪ್ರಜ್ಞಾಪಾತಳಿಯ ಭಾವಾತ್ಮಕ ಜೀವನ ವಿಶ್ವವಿದೆ. ಈ ಭಾವಾತ್ಮಕ ಪ್ರಜ್ಞಾಪ್ರಕಾಶ ರೂಪ ಜೀವನದ ಅಸ್ತಿತ್ವದಿಂದಾಗಿ ಇದರಡಿಯ ಅಭಾವಾತ್ಮಕ ಜೀವಿತವು-ನರ(ಳ) ಲೋಕವು ಅರಿಕೆಗೆ ಬರುತ್ತಿದೆ.

ಪ್ಲೇಟೊ ಮತ್ತು ಅರಿಸ್ಟಾಟಲ್

ವಿಶ್ವನಿಯಮದ ಬಗೆಗಿನ ನಿಷ್ಠೆ ಮತ್ತು ತತ್ತ್ವಜ್ಞಾನದ ಸ್ವರೂಪ ಇವೆರಡರಲ್ಲಿ ವಿಸಂಗತಿಯು ಇರಲು ಶಕ್ಯವಿಲ್ಲ. ಪ್ರತಿಯೊಬ್ಬರಿಗೂ ಮತ ಸ್ವಾತಂತ್ರ್ಯವಿದೆ. ಅವರವರ ಅರ್ಥ : ವಿಚಾರ, ಇದು ಅವರವರ ವೈಶಿಷ್ಟ್ಯ ಸೂಚಕವಿರುತ್ತದೆ: ಯಾರೂ ತಮ್ಮ ವಿಚಾರಗಳನ್ನು ಇನ್ನುಳಿದವರ ಮೇಲೆ ಹೇರಬಾರದು, ಹೇರಲಾಗದು, ಈ ಬಗೆಯ ಆತ್ಯಂತಿಕ ವ್ಯಕ್ತಿವಾದೀ ಭೂಮಿಕೆಯು ಒಂದು ಉಂಟು. ಈ ಜೀವನದೃಷ್ಟಿಯ ಯುಗವನ್ನು 'ಸ್ವಯಂಭೂ-ಮನ್ವಂತರ ಎಂದು ಹೆಸರಿಸಿದರೆ ತಪ್ಪು ಆಗಲಾರದು! ಜಾಗತಿಕ ನರ(ಳ) ಸಂಪ್ರದಾಯಗಳ ಪ್ರಭಾವದಲ್ಲಿ, ಇಂದು, ನರಧರ್ಮ ಮತ್ತು ಮಾನವಧರ್ಮ ಇವೆರಡರಲ್ಲಿ ಅಂತರವೇ ಉಳಿದಿಲ್ಲ ಎಂಬುದು ಕಾಣುತ್ತಲೇ ಇದೆ. ಇದು ನರ(ಳ) ಸಂಪ್ರದಾಯದ ಯುಗವು, ನಿಜ. ಆದರೆ ಜೀವನ ರೀತಿಯ ಒತ್ತಾಯದಲ್ಲಿ ಸಮಾಜ ಎಂಬ ಧಾರಣೆಯು ಅನಿವಾರ್ಯವಾಗುತ್ತದೆ. ವ್ಯಕ್ತಿವಾದೀ ಕ್ರೈಸ್ತಪಂಥೀಯ ಪ್ರಭಾವದಲ್ಲಿ ಸಮಾಜ ಅಭಾವದಿಂದಲೇ ವಿರಾಜಿಸುತ್ತಿದೆ. ಇದರಿಂದಾಗಿ 'Social Contract' ಎಂಬ ಕೃತಕ ಪಾರಿಭಾಷೆ ಜರೂರು ಆಗಿದೆ. ಒರ್ಫಿಕ್ ಪಂಥೀಯ ಪೈಥಾಗೋರಾಸನು ಪಾಶ್ಚಾತ್ಯ ನರ(ಳ) ಸಂಪ್ರದಾಯದ ಪ್ರವಾದಿ. ಹೊಸಿಯಡ್, ಈ ಸಂಪ್ರದಾಯದ ಆದಿ ಕವಿಯಂತೆ. ಪ್ಯಾಥ್ಯಾಗೋರಾಸನೇ ಈ ನೂತನ ಸ್ವಯಂಭೂ ಸಂಪ್ರದಾಯದ ಆದಿ ಪ್ರವರ್ತಕನೆಂದು ಬಗೆಯಲು ಅಡ್ಡಿಯಿಲ್ಲ. 'ಅತ್ಯಂತ ಅಭಾವವನ್ನೇ ಸ್ಥಾಯೀ' ಎಂದು ನಂಬಿಸುವ ತಾತ್ತ್ವಿಕ ಭೂಮಿಕೆಯನ್ನು ರೂಪಿಸಿದ ಶ್ರೇಯಸ್ಸು ಪೈಥಾಗೊರಾಸನಿಗಿದೆ. Limit (1)=One=Ten, ಈ ದಶಾಂಗುಲ ಪುರುಷನ ಆರಾಧನೆಯನ್ನು ಕಲ್ಪಿಸಿದವನು ಪೈಥಾಗೋರಾಸನೇ ಎಂದು ಬಗೆಯಲಾಗಿದೆ. ಈ ಅನ್ವೇಷಣೆಯಲ್ಲಿ ನನ್ನ ಗಮನಸೆಳೆದಿರುವ ಒಂದು ಸಂಗತಿಯನ್ನು ಪ್ರಾಜ್ಞರ ಪರಾಮರ್ಶೆಗಾಗಿ ಹೇಳಬಯಸುತ್ತೇನೆ. ಅರ್ಥ; ವಿಚಾರಗಳಿಗೆ, ಅವುಗಳದೇ ಆದ ಅಂತರ್ಹಿತ (Immanent) ಆಕೃತಿ ಇರುತ್ತದೆ. ಯಾವುದೊಂದು ತತ್ತ್ವೋಪಾಸನೆಯು ಅಥವಾ ನಂಬುಗೆಯು ಒಳಗೊಂಡಿರುವ ಆ ವೈಚಾರಿಕ ಆಕೃತಿಯು, ಅದನ್ನು ನಂಬಿದವರ ಜೀವನದ ಮೇಲೆ ಪ್ರಭಾವ ಬೀರುತ್ತದೆ;

ಅವರ ಜೀವನವನ್ನು ರೂಪಿಸುತ್ತದೆ. ನಾವು ಪೂಜಿಸುವ ಪ್ರತಿಮೆ ನಮ್ಮ ವಿಧಿಲಿಖಿತ. ಈ ದೃಷ್ಟಿಯಿಂದ, ಏಕಂ : ಸತ್ ಈ ತಾತ್ವಿಕ ಭೂಮಿಕೆಯ ಅಂತರ್ಹಿತ=ಅಭೀದ್ಧಾರ್ಥ್ ಸ್ವರೂಪದ ಆಕೃತಿಯು ಅಭ್ಯಸನೀಯವಿದೆ. ಈ ನಿಷ್ಕರ್ಷಗಳನ್ನು ಸ್ಥಲಾಭಾವದಿಂದಾಗಿ ಸಂಕ್ಷಿಪ್ತವಾಗಿ ಸೂಚಿಸುವ ಆವಶ್ಯಕತೆಯಿದೆ. 'ಏಕಂ'=One ಇದು 'upstart' ಎಂದರೆ ಹಿಂದುಮುಂದು ಇಲ್ಲದೆ 'ಬುದಿಂಗನೆ' ಎದ್ದು ನಿಲ್ಲುವ ತತ್ತ್ವವಾಗಿದೆ. ಏಕೆಂದರೆ ಇದು ಅನುಕ್ರಮಾಂಕವಲ್ಲ! ಅನುಕ್ರಮದ ಸಂಖ್ಯೆ ಆಗಬೇಕಿದ್ದರೆ ಮೊದಲು ಶೂನ್ಯ [O] ಬೇಕು.

ಆದರೆ, ೦, ೧, ೨, ಈ ಕ್ರಮತಪ್ಪಿಸಿ, 'ಸಾಂಖ್ಯ'ರು 'ಏಕಂ' ಇದನ್ನು ಆರಂಭ ಸ್ಥಾನ ಎಂದು ನಂಬಿಸಿದ್ದಾರೆ. ಈ ಏಕಂ ಇದರ ಮುಂದೆ ೦ (ಶೂನ್ಯ) ಇರಿಸಿ, ಇದನ್ನು 'ಲಿಂಗದ' ಪರಿಮಿತಿಯ ಸಂಖ್ಯೆಯಾಗಿ ರೂಪಿಸಿದ್ದಾಗಿದೆ. ಇದುವೆ ಪುರಿಶಯ=ಪುರುಷ= ಗುಹೇಶ್ವರನ ಪರಿಕಲ್ಪನೆ. ಈ 'ಭಗ'ವಂತನು ನಮ್ಮ ಕಲ್ಪಿತ ದೇವನು. ಜೀವನದಲ್ಲಿ 'ನಿಯಮ' 'ವ್ಯವಸ್ಥೆ' ಎಂಬುದು ಇಲ್ಲವೇ ಇಲ್ಲ. 'ಸತ್ಯ' ಇದು ಕೇವಲ ಕಲ್ಪನೆ : ಅವರವರ ಅರ್ಥ, ಅವರವರ ಸತ್ಯ ಎಂಬೀ ಬಗೆಯ ಅಭಿವ್ಯಕ್ತಿಯು ಮಾತಿನ ಸ್ವಾತಂತ್ರ್ಯದ ಲಕ್ಷಣ, ಎಂದು ಬಗೆಯಲಾಗುತ್ತದೆ. ಆದರೆ ಈ ಜೀವನ ವಿಶ್ವವು ಸಾರ್ವಕಾಲಿಕ ಸನಾತನ ನಿಯಮಕ್ಕೆ=ಋತಸ್ವರೂಪೀ ಸತ್ಯಕ್ಕೆ ಅಧೀನವಿದೆ. ಆದಕಾರಣ, ತಾವು ವಿಚಾರ ಸ್ವಾತಂತ್ರ್ಯವಾದಿಗಳು ಎಂಬ ನಂಬಿಗೆಯು, ಆತ್ಮವಂಚನೆಯನ್ನು ತರುತ್ತಿದೆ. ಈ ವ್ಯಕ್ತಿವಾದೀ ವೈಯಕ್ತಿಕ ವಿಚಾರವಾದೀ ಭೂಮಿಕೆಯ ಪ್ರಾಜ್ಞರು, ಜ್ಞಾತಾಜ್ಞಾತವಾಗಿ, ಸ್ವ-ಲಿಂಗೋಪಾಸಕರು ಇರುತ್ತಾರೆ. ಏಕಂ ಸತ್=೧೦, ಈ ಆಕೃತಿಯು, ಅಭಿಚಾರಕೃತ್ಯದ ಒಂದು ಅಪೂರ್ವ ಮಾದರಿ ಆಗಿದೆ. ಇದು ವ್ಯಭಿಚಾರಕ್ಕೆ ಭ್ರಷ್ಟಾಚಾರಕ್ಕೆ ಪ್ರಚೋದಿಸುವ ಅಂತರ್ಹಿತ ಶಕ್ತಿಯುಳ್ಳದ್ದು ಆಗಿದೆ. ಇದೂ ನಿಷ್ಕಾರಣವಲ್ಲ; ವಿಶ್ವನಿಯಮದ ಮೇರೆಗೆ, ಸ್ಥಲ [O], ಬಳಿಕ ಕಾಲ ೧ ಈ ಕ್ರಮವು ಇರಲಿಕ್ಕೆ ಬೇಕು. ಆದರೆ ಈ ಕ್ರಮವನ್ನು ತಿರುವುಮುರುವು ಆಗಿಸಿ, ಇದನ್ನೇ ಜೀವನದ ಆದರ್ಶ ಎಂದು ನಂಬಿಸಿರುವ, ಈ ಅಸು-ತೃಪ್ತ ಪ್ರಾಣಲಿಂಗೋಪಾಸಕರ ಸಂಪ್ರದಾಯವು 'ಮಾನವ ಧರ್ಮ'=ಸಂಸ್ಕೃತಿಯ ಶತ್ರುವಾಗಿದೆ. ಭಗವದ್ಗೀತೆಯಲ್ಲಿ ವಿವಸ್ವನ್ ಹಾಗೂ ಅರ್ಜುನ ಈ ಪ್ರತಿಮಾಭಂಜನವಾಗಿರುವುದನ್ನು ಈ ಮೊದಲು ಹಲವು ಬಾರಿ ಸೂಚಿಸಿದ್ದಾಗಿದೆ.

ಈ ಸ್ಥಲವು [O], ಇದು ಅಭಾವದಲ್ಲಿ ಸ್ಥಾಯೀ ಆಗಿದೆ. ಆದರೆ ಸ್ಥಲದ ಅಂಗ ಆಗಿರುವ ಕಾಲ ತತ್ತ್ವಕ್ಕೆ ನಿಸರ್ಗದಲ್ಲಿ ಸ್ವತಂತ್ರ ಸ್ಥಾನ-ಅಸ್ತಿತ್ವವು ಇಲ್ಲ. ಈ ಬಗೆಯಲ್ಲಿ ಸ್ವತಂತ್ರ ಅಸ್ತಿತ್ವವೇ ಇಲ್ಲದ ಅತ್ಯಂತ ಅಭಾವಾತ್ಮಕ ಒಂದು ಇದುವೆ ಜೀವನದ ಉದ್ಗಮ ಸ್ಥಾನ, ಎಂದು ನಂಬಿಸಲು, ಪುರುಷ ಸಂಪರ್ಕವಿಲ್ಲದೆ ಈ ಕಂದ ಹುಟ್ಟುತ್ತದೆ. ಒಂದು ಅನೈಸರ್ಗಿಕ ಹಾಗೂ ಅನೈತಿಕ ಪ್ರವೃತ್ತಿ ಪ್ರಚೋದಕ ಪರಿಕಲ್ಪನೆಯನ್ನು (invention) ನಂಬಿಸಲಾಗಿದೆ. ಋಗ್ವೇದದ ಆದಿತ್ಯಸ್ತೋತ್ರದಲ್ಲಿ ರಹಸೂಃ ಇವ ಎಂಬ ಉಪಮೆಯನ್ನು ಇರಿಸಲಾಗಿದೆ.[೩] ಉಪನಿಷತ್ತಿನ ಜಬಾಲೆ ರಹಸೂಃ ಆಗಿದ್ದಾಳೆ. ಕುಂತಿ, ಕರ್ಣನಿಗೆ ಜನ್ಮವಿತ್ತಳೆಂಬಲ್ಲಿ ಈ ರಹಸೂಃ ಪರಿಣಾಮ ಎಂದು ತೋರಿಸಿದ್ದಾಗಿದೆ. ಎಲ್ಲ(ಳ)ಮ್ಮ ಎಂಬ ರೇಣುಕೆ ರಹಸೂಃ ಆಗಿದ್ದ ಆದರ್ಶ ಪತಿವ್ರತೆ. ಕ್ರೈಸ್ತನ ತಾಯಿ : 'ಕುಮಾರೀ ಮಾತೆ, ರಹಸೂಃ ಆಗಿದ್ದ ಆದರ್ಶ ಪತಿವ್ರತೆ. ಕ್ರೈಸ್ತನ ತಾಯಿ ಕುಮಾರೀ ಮಾತೆ, ರಹಸೂಃ ಅಲ್ಲದೆ ಮತ್ತೇನು ಇದಕ್ಕೆ ಹೆಸರು? ಆಕೃತಿ ಮತ್ತು ಇದು ಒಳಗೊಳ್ಳುವ ಆಶಯ-ಗುಣ ಇವೆರಡರಲ್ಲಿ ಅನ್ಯೋನ್ಯವಿರುತ್ತದೆ. ಆದುದರಿಂದ ಹತ್ತು ಈ ದಶಾಂಗುಲ ಪುರುಷನ ಉಪಾಸನೆ ಯಾವ ಹೆಸರಿನಲ್ಲಿಯೇ ಇರಲಿ, ಇದು ಮೃತ್ಯುತತ್ತ್ವದ ಪೂಜೆಯಾಗಿ ಪರಿಣಮಿಸಲೇ ಬೇಕು, ಎಂಬುದು ದಿಗಂಬರ ಸತ್ಯ. ಪೈಥಾಗೋರಾಸ ಪಂಥದ ಎಂದರೆ ಅತ್ಯಂತ ಅಭಾವವೇ ಸ್ಥಾಯೀ ಎಂಬ ಶ್ರದ್ಧೆಯ ಪ್ರಭಾವದ ಸ್ವರೂಪವು ಅಭ್ಯಸನೀಯವಿದೆ.

> ಅವರವರ ನಂಬುಗೆಯೆ ಅವರಿಗೆ ಮಾರ್ಗದರ್ಶಕ. ದೇವರು ಇದ್ದಾನೆ. ನಾನೇ ದೇವರು ದೇವರೇ ಇಲ್ಲ ಎಂಬೀ ಬಗೆಯ ನಾನಾಜೀವನ ದೃಷ್ಟಿಗಳು ಪ್ರಚಾರಕ್ಕೆ ಬರುತ್ತವೆ. ಸ್ಥಳ ಮತ್ತು ಕಾಲ ಈ ವಿಭಾಗದ್ವಯದ ಸಂಪರ್ಕದಲ್ಲಿ ಪರಿಣಮಿಸುವ, ವೃತ್ತಾಕೃತಿಯ (೦) ಕತ್ತಲನ್ನು ಪ್ರಚೋದಿಸುವ, ಈ ಕಾಲಗತಿಯಲ್ಲಿ ಅವತಾರದ ಕಲ್ಪನೆ

ಅನಿವಾರ್ಯವಿದೆ, ಭವಾವಳಿಯ ಕಲ್ಪನೆಯೂ ಜರೂರು ಆಗುತ್ತದೆ. ಪೈಥಾಗೋರಾಸ್
ಪಂಥೀಯ ತತ್ತ್ವಜ್ಞಾನವೇ ಇದಕ್ಕೆ ನಿದರ್ಶನ.

ಪೈಥಾಗೋರಾಸನನ್ನು ಅವತಾರೀ ಸಿದ್ಧಿಪುರುಷನೆಂದು ಬಗೆಯುತ್ತಿದ್ದ ವರ್ಗವೂ ಒಂದು ಇತ್ತು. ಎಂಪೆಡೋಕ್ಲಸ್ ಎಂಬವನು ತಾನು ಅವತಾರಿ ಎಂದು ಹೇಳುತ್ತಿದ್ದನು. ಆದರೆ, ಪೈಥ್ಯಾಗೊರಾಸ ಪಂಥದ ವೈಶಿಷ್ಟ್ಯವೆಂದರೆ ಇವರಿಗೆ ಗಣಿತಶಾಸ್ತ್ರ; ಭೌತಶಾಸ್ತ್ರದ ಶೋಧದಲ್ಲಿ ಆಸಕ್ತಿ, ತಾನು ಅವತಾರಿ ಎಂಬ ಎಂಪೆಡೊಕ್ಲಸನು ರಸಾಯನಶಾಸ್ತ್ರವನ್ನು ರೂಪಿಸಿದ ಮೊದಲಿಗರಲ್ಲಿ ಒಬ್ಬನೆಂದು ಹೆಸರಾಗಿದ್ದಾನೆ. ಇವನು ಪವಾಡ ಚಮತ್ಕಾರ ಜರುಗಿಸುತ್ತಿದ್ದನಂತೆ.

ಎಂಪೆಡೊಕ್ಲಸನ ಶಿಷ್ಯರಲ್ಲಿ ಗೋರ್ಜಿಯಾಸನೆಂಬ ತರುಣನು ಇದ್ದನು, ಈತನು ಪ್ರೌಢನಾದ ಬಳಿಕ ಅವತಾರಿಗಳ ಬಗೆಗಿನ ನಂಬುಗೆ ಸಂಪೂರ್ಣ ನಷ್ಟವಾಯಿತು. 'ಅತ್ಯಂತ ಅಭಾವವೇ ಸ್ಥಾಯಿ' ಇರುವ ಈ ದಿವ್ಯಾಧ್ಯಾತ್ಮವು ಪ್ರೇರಿಸುವ ದೃಷ್ಟಿಕೋನದ ಅತ್ಯಂತ ಪ್ರಾಮಾಣಿಕ ಸ್ವರೂಪದ ಒಂದು ಶ್ರೇಷ್ಠ ಮಾದರಿ ಈ ಗೋರ್ಜಿಯಾಸ ಆಗಿದ್ದಾನೆ. ಈ ದಿವ್ಯಾಧ್ಯಾತ್ಮದ ಪ್ರಾಮಾಣಿಕ ನಿಷ್ಠೆಯ 'ಭೋಳೆ' (Simpleton) ಸಂತರನ್ನು ನಿರ್ಮಿಸುವಂತೆ, ಅರೆಹುಚ್ಚ, ಎಂಬ ನಿಷ್ಠಾವಂತರಿಗೂ ಪ್ರೇರಿಸುತ್ತದೆ. ಇದೇ ಮೇರೆಗೆ, ಮಾತಿನ ಚಾಕಚಕ್ಕದ ಕೃಷ್ಣಕಾರಸ್ಥಾನಿಗಳಿಗೆ ಜನ್ಮವೀಯುವಂತೆ ಯಾತರಲ್ಲಿಯೂ ನಿಷ್ಠೆಯಿಲ್ಲದ ಸಂದೇಹವಾದಿಗಳಿಗೂ ಪ್ರಚೋದಿಸುತ್ತದೆ. ತಾನೊಬ್ಬನೇ ಸರಿ; ಉಳಿದ ಪಂಥಗಳೆಲ್ಲ ಸುಳ್ಳು, ಎಂಬ ಅಥವಾ ಬೇಕಾದ ಪಕ್ಷದವನ್ನೂ, ಎತ್ತಿಕಟ್ಟಿ ಪ್ರತಿಪಕ್ಷದ ಬಾಯಿಕಟ್ಟುವ 'ಸೋಫಿಸ್ಟ'ರನ್ನು ಆಧುನಿಕ ಆದರ್ಶ ವಕೀಲೀ ವೃತ್ತಿಯನ್ನೂ ಈ ದಿವ್ಯಾಧ್ಯಾತ್ಮವು ಪ್ರೇರಿಸಬಲ್ಲುದು. ಈ ವಿವಿಧ ಪ್ರಕಾರಗಳಲ್ಲಿ ಗೋರ್ಜಿಯಾಸನ ಪ್ರಾಮಾಣಿಕ ಅಶ್ರದ್ಧವಾದವೂ ಒಂದು ಪ್ರಕಾರವಾಗಿದೆ. ಇವನು ಹೇಳುವ ವಿಚಾರಗಳು ಮನನೀಯವಾಗಿವೆ :

> Nothing exists, If anything existed it could not be known, and That if it could be known it could not be communicated to others.

ಈತನು 'ವಾಗ್ಮಿ'ಗಳಾಗುವ ಶಿಕ್ಷಣವನ್ನು ಕೊಡುತ್ತಿದ್ದನು. ತನ್ನ ಪಕ್ಷವನ್ನು ಗೆಲ್ಲಿಸಲು ಖರೆ ಎನಿಸುವ ಉಕ್ತಿಗಳಿಂದ ಮೋಸತರುವ ಮಾತುಗಳನ್ನು ಆಡುವ ಶೈಲಿಯನ್ನು ರೂಪಿಸಿದ್ದನು. ಶ್ರೇಷ್ಠ ಕಲಾಕೃತಿಯ ಲಕ್ಷಣವೇ ಇದು: ಅತ್ಯಂತ ಅಭಾವವನ್ನೂ ಉಂಟು' ಎಂದು ನಂಬುವಂತೆ ಮಾಡುವ ಕೃತಿಯ ರಚನೆಯ, ಈ ಬಗೆಯ ಕಲಾಕೃತಿಗಳ ಮೂಲಕ ದುಷ್ಪರಿಣಾಮಗಳು, ದುರಂತಗಳು ಸಂಭವಿಸಬಲ್ಲವು. ಆದರು ಇದು, ಆ ಕಲಾಕೃತಿಯ ಹಿರಿಮೆಯ ದ್ಯೋತಕವಾಗಿದೆ.

> "Gorgias formulated the idea of justifiable deception, and not only in an ethical sense, but in an aesthetic sense. He called tragedy a deception which is better to cause than not to cause, to succumb to it shows greater powers of aesthetic appreciation than not to".

ಈ ಗೋರ್ಜಿಯಾಸ ಪಂಥೀಯರ ಧರ್ಮದ ಬಗೆಗಿನ ವಿಚಾರಗಳ ದಿಕ್ಕು:

> Some shrewd brain had "discovered" religion and subdued men by a suggested fear of powerful and invisible beings who see and punish even Crimes which are committed in secret.

ಇಲ್ಲಿ ಪ್ರಸ್ತುತವಿದ್ದದ್ದು, ಪ್ಲೇಟೋ, ಅರಿಸ್ಟಾಟಲ್ ಇವರು ಗ್ರಹಿಸಿಕೊಂಡಿರುವ ಜೀವನ ವಿಶ್ವದ ಆಕೃತಿ. ಗ್ರೀಕ್ ಶ್ರೇಷ್ಠ ಕಲಾಕೃತಿಯಾಗಿರುವ ಪ್ಲೇಟೋನ ಗ್ರಂಥದಲ್ಲಿ, ಭಗವದ್ಗೀತೆಯಂತೆ, ಯಾರಿಗೆ ಏನು ಬೇಕೊ, ಆ ವಿಚಾರಗಳು ಅವರಿಗೆ ಸಿಕ್ಕುತ್ತವೆ. ಇವನು 'ಗುರುದ್ರೋಹಿ' ಎಂದು ಪ್ರೊ. ಕಾರ್ಲ್‌ಪೊಪ್ಪರನು ಆವೇಶದಿಂದ ಪ್ರತಿಪಾದಿಸಿದ್ದಾನೆ. ಇದೆಲ್ಲ ಹಾಗಿರಲಿ, ಪ್ಲೇಟೋನು ಪ್ರತಿಪಾದಿಸುವ "Idea' ತತ್ತ್ವದ ಆಕೃತಿಯ ವಿಚಾರವು ಇಲ್ಲಿ ಜರೂರು ಇವೆ. 'Idea' ಎಂಬಲ್ಲಿ ಏಕಂ: ಸತ್ ಭೂಮಿಕೆಯ ಆಶಯವೇ ಉಂಟು! ತತ್ತ್ವತಃ, ಇದು ಆತ್ಯಂತಿಕ ಅಭಾವವೇ ಸ್ಥಾಯೀ ಎಂದಂತೆಯೇ ಇದೆ. 'Archetype' ಮೂಲ ಮಾದರಿಯ 'Idea' ಈ ಪರಿಭಾಷೆಯು ತುಂಬ ನುಣುಪಾದದ್ದು ಇದ್ದು ಮೋಸ ತರುತ್ತಿದೆ.

ಶಿಷ್ಯನೆನಿಸಿದರೂ ಅರಿಸ್ಟಾಟಲನು ಪ್ಲೇಟೋನ 'Idea' ರೂಪ ಜೀವನವಿಶ್ವದ ಆಕೃತಿಯನ್ನು ಅಮಾನ್ಯ ಮಾಡಿದ್ದಾನೆ! ಯಾರಾರಿಗೆ ಏನೇನು ಇಷ್ಟವೊ ಆ ಸ್ವರೂಪದವನು ತಾನು, ಎಂಬ ಗೀತೆಯ ಭಗವಂತನು ಹೇಳುವ ಪರಮಾತ್ಮಸ್ವರೂಪವು, ತತ್ತ್ವತಃ ಅತ್ಯಂತಾಭಾವವನ್ನೇ ಸ್ಥಾಯೀ ಎಂದು ನಂಬಹಚ್ಚಿದೆ! ಪ್ರತಿಯೊಬ್ಬರೂ ಖರೆ, ಯಾರೂ ಖರೆ ಅಲ್ಲ, ಭಾರತದಲ್ಲಿ ವೇದಕಾಲದಿಂದಲೇ ಪೋಷಿಸಲ್ಪಡುತ್ತ ಬಂದಿರುವ ಇಂದಿನ ಭ್ರಷ್ಟಾಚಾರದ ಪ್ರವೃತ್ತಿಯ ನಿಜಸ್ವರೂಪವು ಪ್ಲೇಟೋನ ಜೀವನದೃಷ್ಟಿಯನ್ನು ಅಮಾನ್ಯಮಾಡಿರುವ ಅರಿಸ್ಟಾಟಲ ನಂಬುಗೆಯ ಆಕೃತಿ ಮತ್ತು ಆಶಯ ಇವೆರಡರ ಅನ್ಯೋನ್ಯದ ಸಂದರ್ಭದಿಂದ ಸ್ಪಷ್ಟವಾಗಲಿದೆ.

ಅರಿಸ್ಟಾಟಲನು ಪ್ಲೇಟೋನ 'Idea' ದ ಆಕೃತಿಯ ಅಸ್ತಿತ್ವವನ್ನೇ ಅಮಾನ್ಯ ಮಾಡಿದ್ದಾನೆ, ಎಂದರೆ ತಪ್ಪು ಆಗಲಾರದು. ಅರಿಸ್ಟಾಟಲನಿಗೆ 'Immanence', (=ಅಭೀದ್ಧಾತ್') ಸ್ವರೂಪದ ಅರ್ಥ ವಿಚಾರ-ಗುಣ ವಸ್ತು ಮಾತ್ರಗಳಲ್ಲಿ ಹುದುಗಿದೆ ಎಂಬ ತತ್ತ್ವದಲ್ಲಿ ನಿಷ್ಠೆಯಿದೆ. ವಿಶ್ವನಿಯಮದಲ್ಲಿ ಅಸ್ತಿ=ಉಂಟು ಎಂದೊಡನೆ, ಇದಕ್ಕೆ ಪ್ರತಿಯಾಗಿ ಅಲ್ಲ ಇಲ್ಲ ಎಂಬ ಮಾತಿಗೂ ಇಂಬು ಉಂಟೇ ಉಂಟು. ಆದರೆ, ಇದು ಅಭಾವಾತ್ಮಕ ಸ್ಥಾಯೀ ಆಗಿದೆ. ಅಭಾವಾತ್ಮಕಕ್ಕೆ ಭಾವಾತ್ಮಕದ ಅನುಷಂಗದಿಂದಲ್ಲದೆ, ಸ್ವತಂತ್ರ ಅಸ್ತಿತ್ವವೂ ಇಲ್ಲ. ಆದಕಾರಣ, ಪ್ಲೇಟೋನ 'Idea' ಇದು 'ಅಭಾವಾತ್ಮಕ ಸ್ಥಾಯಿ' ಇರುವ ಕಾರಣದಿಂದಾಗಿ, ಈ 'archetype' Idea ಇದನ್ನು ಲೆಕ್ಕಿಸುವ ಆವಶ್ಯಕತೆಯೇ ಉಳಿಯುವದಿಲ್ಲ. 'Idea' ಎಂಬ ಈ ಅಭಾವಾತ್ಮಕ ಪರಿಕಲ್ಪನೆಗೆ ಸ್ವತಂತ್ರ ಸ್ಥಾನವು ಇಲ್ಲವೇ ಇಲ್ಲ, ಭಾವಾತ್ಮಕ ಅಸ್ತಿತ್ವದಲ್ಲಿ ಅಂಗವಾಗಿ ಅಭಾವಾತ್ಮಕವೂ ಉಂಟು.

ಈ ನಿಷ್ಕರ್ಷವನ್ನು ಇನ್ನೂ ಒಂದು ಬಗೆಯಿಂದ ಈ ಮೊದಲೊಮ್ಮೆ ಸೂಚಿಸಿದ್ದಾಗಿದೆ. ವಿಕಾಸತತ್ತ್ವದ ಪ್ರಕ್ರಿಯೆಯಲ್ಲಿ ಸ್ಥಲ ಮತ್ತು ಕಾಲ ಇವೆರಡರ ಏಕಾತ್ಮತೆಯು ವಿಭಜಿತವಾಗಿದೆ. ಇದರಿಂದಾಗಿ ಸ್ಥಲ-ಕಾಲರೂಪು-ವಿಭಾಗದ್ವಯದ ವೃತ್ತಾಕೃತಿಯ ಕತ್ತಲೆಯೊಳಗಿನ ಟೊಳ್ಳಿನ ಆಚೆಗೆ ಇರುವ, ವಿಭಾಗತ್ರಯದ ಆಗಾಮೀ ನಾಳೆಗಳ ಸಂದರ್ಭದ ಪ್ರಕಾಶತತ್ತ್ವವು ಪ್ರಜ್ಞೆ: ಉಪಪ್ರಜ್ಞೆಯು ರೂಪದಲ್ಲಿ ಈ ಮನುಜರಲ್ಲಿ ಕಾಣಿಸಿಕೊಂಡಿದೆ. ಈ ಮನುಜನು ತ್ರಿತನು ಇದ್ದಾನೆ. ಜೀವನ ವಿಶ್ವದಲ್ಲಿ 'ಉಂಟು' ಎಂಬ ಈ ಪ್ರಕಾಶತತ್ತ್ವದ ಅನುಷಂಗದಿಂದ, ಅಭಾವವೇ ಸ್ಥಾಯಿ ಇರುವ ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ) ವಿಭಾಗದ್ವಯದ (ಸಂ)ಭವ ಚಕ್ರದ ಸಂದರ್ಭದಿಂದ ಉಂಟಾಗುವ ಕತ್ತಲಿನ ವೃತ್ತಾಕೃತಿಯ 'ಕೃಷ್ಣ-ವಿವರ'ದ ಅಸ್ತಿತ್ವವು ಅರಿಕೆಗೆ ಬರುತ್ತದೆ. ಆದರೆ ಇದಕ್ಕೆ ಸ್ವತಂತ್ರ ಸ್ಥಾನವಿಲ್ಲ. ಈ ಸ್ಥಾನವು ಉಂಟು ಎಂದು ನಂಬಲು ಪೈಥಾಗೋರಾಸ ವ್ಯಾಸರು 'invented a non existent planet' ಎಂಬುದನ್ನು ಹೊರಗೆಡದಿರುವವನೇ ಈ ಅರಿಸ್ಟಾಟಲ್. ಆದಕಾರಣ ಪ್ಲೇಟೋನ 'Idea' ನಿರಾಧಾರ ಕಲ್ಪನೆ. ಅಂತೂ, ಇಂತಿದೆ ಮಾನವಜೀವನ ವಿಶ್ವದ ಆಕೃತಿ:

ವಿಭಾಗತ್ರಯದ ಪ್ರಕಾಶತತ್ತ್ವದ ಸಾಹಚರ್ಯದಲ್ಲಿ ಅರಿಕೆಗೆ ಬರುವ ಪ್ರಜ್ಞೆಯ ಅಂಗವಾದ ಮನಸ್ಸಿನ ಮನು ವೈವಸ್ವತನ ಪಾತಳಿಯ ಮೇಲೆ ಅಭೀದ್ಧಾತ್ ಸ್ವರೂಪದ ಜೀವನ ವಿಶ್ವವು ನಿಂತಿದೆ. ಇದರ ಕೆಳಗಡೆಗೆ, ಅಭಾವವೇ ಸ್ಥಾಯೀ ಇರುವ ಸ್ಥಲ ಮತ್ತು ಕಾಲ ಈ ವಿಭಾಗದ್ವಯದ ಮೂಲಕ ಉಂಟಾಗುವ ವ್ಯಕ್ತಿನಿರಪೇಕ್ಷ ಹಾಗೂ ವ್ಯಕ್ತಿಸಾಪೇಕ್ಷ ಕತ್ತಲೆಯ ವೃತ್ತಾಕೃತಿಯ (ಸಂ)ಭವಚಕ್ರದ ಕೃಷ್ಣವಿವರವು ಉಂಟು. ಭಾವಾತ್ಮಕ ಅಭೀದ್ಧಾತ್

ಪಾತಳಿಯು 'ಉಂಟು' (Immanent) ಮತ್ತು ಅಭಾವಾತ್ಮಕ ವಿನಾಶದ ಕಡೆಗಿನ ಪ್ರವೃತ್ತಿಯು 'ಅಲ್ಲ-ಇಲ್ಲ' (Negative), ಇವೆರಡರಲ್ಲಿ ಮೊದಲನೆಯದು ಪ್ರಜ್ಞಾ:ಪ್ರಕಾಶ ಪಾತಳಿ;* ಕತ್ತಲೆ, ಪ್ಲೋಟೋನದು= ಪ್ಯಾಥ್ಯಾಗೋರಾಸನದು, ಇವೆರಡರಲ್ಲಿ, ಪ್ರಕಾಶತತ್ತ್ವದ 'ಉಂಟು' ಇದರ ಅಸ್ತಿತ್ವದಿಂದಾಗಿ, ಕತ್ತಲೆಯ ಅಸ್ತಿತ್ವದ ಅರ್ಥವಾಗುತ್ತದೆ. ಪ್ರಕಾಶತತ್ತ್ವ 'ತ್ರಿತ' (Triad) ಇವನನ್ನು ಲೆಕ್ಕಿಸಿದಲ್ಲಿ ಕತ್ತಲೆಯ ಕಾಳಿಂಗ ನಾಶವಾಗಲೇಬೇಕು.

ಕಾಂಟ್ ಮತ್ತು ಹೆಗೆಲ್

ಅರಿಸ್ಟಾಟಲ್ ಮತ್ತು ಪ್ಲೇಟೊ ಇದರ ದೃಷ್ಟಿಕೋನದಲ್ಲಿ ಇರುವ ವ್ಯತ್ಯಾಸವೇ ಕಾಂಟ್ (೧೭೨೪-೧೮೦೪) ಮತ್ತು ಹೆಗೆಲ್ (೧೭೭೦-೧೮೩೧) ಇವರಿಬ್ಬರ ವೈಚಾರಿಕ ಆಕೃತಿಗಳಲ್ಲಿಯೂ ಕಾಣಿಸಿಕೊಂಡಿದೆ. ಅರಿಸ್ಟಾಟಲ Nous: ಪ್ರಜ್ಞಾಶಕ್ತಿಯ ಅಂಗವಾದ ಮನಸ್ಸಿನ ಪಾತಳಿ ಮೇಲೆ ಈ ಮಾನವನ ಜೀವನದ ಅರ್ಥವನ್ನು ಗ್ರಹಿಸಿಕೊಳ್ಳುವ ಪ್ರಯತ್ನಪಟ್ಟಿದ್ದಾನೆ. ಆದರೆ, ಪ್ಲೇಟೋ, ದೃಶ್ಯ-ಜೀವನದ ನರವರ್ಗದ ಪ್ರಾಣಲಿಂಗ ಪಾತಳಿಯ ಮೇಲಿನ ಪ್ರಚೋದನೆಯ ಹಿನ್ನೆಲೆಯನ್ನು ಲೆಕ್ಕಿಸಿ, 'ಅವರವರ ಅರ್ಥವು ಅವರವರ ಪಾಲಿನ ಸತ್ಯ' ಎಂಬ ಸೂತ್ರವನ್ನು ಅನುಸರಿಸಿದಂತಿದೆ. ಮಾನವನಲ್ಲಿ ಪ್ರಜ್ಞೋದಯವಾಗಿದೆ. ಪ್ರಜ್ಞಾವಿವೇಕವು, ಮೂಲ್ಯ ಮಾಪನಮಾಡಿ ಕೆಲಸಕ್ಕೆ ತೊಡಗುತ್ತದೆ. ಈ ಲೆಕ್ಕವು ಇದ್ದರೆ ಪ್ಲೇಟೋನ ಸೋಫಿಸ್ಟರ, ಹಾಗೂ ತತ್ಪೂರ್ವದ ಪೈಥಾಗೊರಾಸ್ ಪಂಥೀಯರ ಬುದ್ಧಿವಾದೀ ಭೂಮಿಕೆಯನ್ನು ಅವರವರ ದೃಷ್ಟಿಕೋನವನ್ನು ನಮೂದಿಸುವುದೇ ತನ್ನ ಕಾರ್ಯ ಎಂಬ ಹಾಗಿನ ಭೂಮಿಕೆಯನ್ನು ಸ್ವೀಕರಿಸಲು ಶಕ್ಯವಿದ್ದಿಲ್ಲ. ಕಾಂಟ್ ಹಾಗೂ ಹೆಗೆಲ್ಲರಲ್ಲಿ ಅರಿಸ್ಟಾಟಲ್-ಪ್ಲೇಟೋರಲ್ಲಿ ಕಂಡು ಬರುವ ಸ್ವರೂಪದ ತಾತ್ತ್ವಿಕ ಭಿನ್ನಾಭಿಪ್ರಾಯವೇ ಉಂಟು.

ಕಾಂಟನು, Pure Critique of Reason ಎಂಬ ವಿಖ್ಯಾತ ಗ್ರಂಥದಲ್ಲಿ 'Reason' ಇದನ್ನೇ ಕೇಂದ್ರಸ್ಥಾನದಲ್ಲಿ ಕಲ್ಪಿಸಿದ್ದಾನೆ. ಆದರು, 'categorical imperative' ಎಂಬ ಕರ್ತವ್ಯಪ್ರಜ್ಞೆಯೇ ಮಾನವನ ಶ್ರೇಷ್ಠಧರ್ಮ ಎಂಬ ನಿಷ್ಕರ್ಷವು, ಕಾಂಟನು ಅರಿಸ್ಟಾಟಲ ಎತ್ತರಕ್ಕೆ ಏರಿದ್ದುದನ್ನು ಗಮನಕ್ಕೆ ತಂದು ಕೊಡುತ್ತದೆ. ಇತ್ತೀಚಿನ ಒಬ್ಬ ಪ್ರಾಜ್ಞನು 'ಇತಿಹಾಸ'ದ ಬಗೆಗೆ ವ್ಯಕ್ತಪಡಿಸುವ ವಿಚಾರವು ಮೌಲಿಕ ಮಹತ್ವದ್ದು ಆಗಿದೆ;

> "History is 'the breakthrough with nature' caused by the awakening of consciousness"

ಈ ತತ್ತ್ವಜ್ಞ ಯೋಜಿಸಿರುವ 'the breakthrough' ಪದವು ಆಳವಾದ ಅರ್ಥದ್ದಾಗಿದೆ. ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಇವೆರಡರ ಏಕಾತ್ಮತೆ ಭಂಗವಾಗದೆ ಇದ್ದರೆ, ಅಲ್ಲಿ 'ಬಿರುಕು' ಉಂಟಾಗದೆ ಇದ್ದರೆ, ಈ ನರ(ಳ) ಪ್ರಾಣಿಗೆ ಉಪಜ್ಞೆ=ಪ್ರಜ್ಞೆ ಲಭಿಸಲು ಶಕ್ಯವೇ ಇದ್ದಿಲ್ಲ. ಭೌತ ಪ್ರಾಣಲಿಂಗ ಪಾತಳಿಯ ಮೇಲೆ, ಜ್ಯೋತಿರ್ಲಿಂಗದ, Candlelight ಉಪಾಸನೆಯ ಹಂತದಲ್ಲಿಯೇ ಉಳಿಯಬಹುದಾದ ಈ ಜೀವ ರೀತಿಯಲ್ಲಿ 'ಮನು'-ಜ: ಮಾನವ ಎಂಬ ಹೆಸರಿನ ಪ್ರಾಣಿ ಹಾಗೂ ಈ ಮಾನವ ಭಾಷೆಯು ಆಕಾರ ಪಡೆಯಲು ಶಕ್ಯವೇ ಇದ್ದಿಲ್ಲ. ಯಾವ 'ಬಿರುಕು' 'breakthrough', ಪ್ರಜ್ಞೆ-ಉಪಜ್ಞೆಗೆ ಕಾರಣವಾಯಿತೊ, ಆ ಪ್ರಜ್ಞೆ. ಉಪಜ್ಞೆಯ ಪ್ರಚೋದನೆಯ ಜೀವನರೀತಿಯೇ ಮಾನವನ ಇತಿಹಾಸವನ್ನು ರೂಪಿಸುವುದಕ್ಕೂ ಕಾರಣವಾಗಿದೆ.

'ಇತಿಹಾಸವು' ಅರಿಕೆಗೆ ಬರಲು ಕಾರಣವು ಏನು? ಪಶು ಪಕ್ಷಿಗಳು ಇತಿಹಾಸವನ್ನು ರೂಪಿಸುವುದಿಲ್ಲ. ಫಕ್ತ ಇತಿಹಾಸದ ವಿಷಯವಾಗಿವೆ. ಆದರೆ ಈ ಮನುಜನು ಇತಿಹಾಸದ ವಿಷಯವು ಆಗಿರುವಂತೆ, ಇತಿಹಾಸವನ್ನು ರೂಪಿಸುವ ಅಂತಃಪ್ರಚೋದನೆಯನ್ನು ಹೊಂದಿದ್ದಾನೆ! ಈ ಅನನ್ಯ ಸಾಧಾರಣವಾದ ಸ್ಥಾನವು ಮಾನವರಲ್ಲಿ-ಮಾನವ

---

* ಅರಿಸ್ಟೊಟ್ಲನದು ಮತ್ತು ಎರಡನೆಯದು ಪ್ರಾಣ-ಲಿಂಗ ಪಾತಳಿ

ಶ್ರೇಷ್ಠರಲ್ಲಿ ಮಾತ್ರ ಕಾಣಲು ದೊರೆಯುತ್ತದೆ. ಈ 'ಇತಿಹಾಸ'ವು ಅರಿಕೆಗೆ ಬರಲು ಕಾರಣ ಯಾವುದು? ಕಾಂಟನ ಅಭಿಪ್ರಾಯದಂತೆ, ಐತಿಹಾಸಿಕ ಸ್ವರೂಪದ ಆಗು-ಹೋಗುಗಳ ತಳಪಾಯದಲ್ಲಿ 'Noumena' ದ ಆಧಾರವಿರುತ್ತದೆ. ಭಾರತೀಯ ಪುರಾತನ ಪರಿಭಾಷೆಯಲ್ಲಿ ಹೇಳಿಬಹುದಾದರೆ, 'ಮನು ಸಮಯ'ದ ಆಧಾರವಿರುತ್ತದೆ. ಅರಿಸ್ಟಾಟಲ್ ಹೇಳಿರುವ 'eternal duration' ಎಂಬುದೂ ಈ ತತ್ತ್ವವೇ ಸರಿ.

ಇತಿಹಾಸವು ಸಂಭವಿಸಲು ದೊರೆವ ಚಾಲನೆ-ಪ್ರಚೋದನೆಯು ಮಾನವನ ಉಪಜ್ಞೆ:ಪ್ರಜ್ಞೆ ಎಂಬ ಶುದ್ಧ ತಾತ್ತ್ವಿಕ ಭೂಮಿಕೆಯನ್ನು ಕಂಡ ಕಾಂಟನು, ಈ ನರ(ಳ) ಪ್ರವೃತ್ತಿಯನ್ನೂ ಲೆಕ್ಕಿಸದೆ ಇಲ್ಲ: 'unsocial sociability'ಯ ಮೂಲಕ ಸಮಾಜಕಲ್ಯಾಣ ರಾಷ್ಟ್ರಹಿತ, ಮಾನವರ ಉದ್ಧಾರದ ಮಾತಿನ ಸೋಗು, ಸ್ವಾರ್ಥಸಾಧಿಸುವ ಹಂಚಿಕೆಯದೆ ಇರುವುದುಂಟು, ಇದು ವಸ್ತು ಸ್ಥಿತಿಯಾಗಿದೆ. ಈ ಕಾರಣದಿಂದಾಗಿ, ನಿಜವಾದ ಮಾನವೇತಿಹಾಸವು ಆಗಾಮೀ ನಾಳೆಗಳ ದಿಕ್ಕಿನಲ್ಲಿ ಇಂದು-ನಾಳೆಗಳೊಳಗಿಂದ ಸಾಗುವ ಇತಿಹಾಸವು, ಪ್ರಗತಿ-ಪಥದಲ್ಲಿಯೇ ಇರಬೇಕಿತ್ತು. ಆದರೆ, 'history is progressive in character' ಎಂದು ವಾಸ್ತವಸತ್ಯ ಸೂಚಕ ತೂಕದ ಮಾತು ಹೇಳಿದ್ದಾನೆ-ತತ್ತ್ವಜ್ಞ ಕಾಂಟ್. ಆದರೆ, ಹೆಗೆಲ್ಲನ 'ಇತಿಹಾಸ' ಸಂಭವಿಸುವ ಕ್ರಮದ ಬಗೆಗಿನ ಗ್ರಹಿಕೆಯು ಕಾಂಟನಿಂದ ತೀರ ಬೇರೆ ಬಗೆಯದಾಗಿದೆ. 'Idealism and Utopia' ಎಂಬ ವಿಖ್ಯಾತ ಪ್ರಬಂಧದ ಲೇಖಕ ಕಾರ್ಲ್‌ಮ್ಯಾನ್‌ಹ್ಯಾಮನು ಇತಿಹಾಸಶಾಸ್ತ್ರಕ್ಕೆ ದೊರೆತ ಕಾಣಿಕೆಗಾಗಿ, ಇವರಿಬ್ಬರನ್ನೂ ಹೊಗಳಿದ್ದಾನೆ. ಇಬ್ಬರ ಋಣದ ಸ್ವರೂಪವು ಬೇರೆ, ಎಂದು ಈತನಿಗೂ ಕಂಡಿದೆ. ಆದರೂ ಇವರಿಬ್ಬರ ತಾತ್ತ್ವಿಕ ಭೂಮಿಕೆಯೊಳಗಿನ ಮೂಲಭೂತ ವ್ಯತ್ಯಾಸವು ಇವನ ಗಮನಕ್ಕೆ ಬಂದಿಲ್ಲ.

ಪೈಥಾಗೊರಾಸ್ ಪಂಥೀಯರಿಂದ ಪ್ರಭಾವಶಾಲಿಯಾಗಿ ಬೆಳೆದು ನಿಂತಿರುವ ಸ್ವಯಂಭೂ ನರ ಸಂಪ್ರದಾಯದ ಪ್ರಭಾವದಿಂದಾಗಿ, ಝೆಲ್ಲರ್, ಹೇಳುವಂತೆ Greek mode of thought ಇದರ ಸ್ವರೂಪವೇ ಬದಲಾಗಿದೆ, ಎಂಬುದನ್ನು ಲೆಕ್ಕಿಸಿರುವವರು ವಿರಳ.

> 'With Pythagoreanism begins the transformation of Greek mode of thought which originated in the Orphic mysticism' a cult strange to the Hellenic nature.[೪]

ಝೆಲ್ಲರನು ಸಹ ಗ್ರೀಕ್ ಸಂಸ್ಕೃತಿಯ ಈ ಹೊಸ ತಿರುವಿಗೆ ಕಾರಣ ಸ್ವರೂಪ ವೈಚಾರಿಕ-ಭೂಮಿಕೆಯು ಯಾವುದು, ಎಂಬುದನ್ನು ಸಾಕಷ್ಟು ಸ್ಪಷ್ಟವಾಗಿ ವಿವರಿಸಿಲ್ಲ. Nous (Wisdom) : ಪ್ರಜ್ಞಾಪಾತಳಿಯ ಮೇಲಣ, ಸ್ಥಳ-ಕಾಲದ ಆಚೆಗಿನ ವಿಭಾಗತ್ರಯದ ಪ್ರಚೋದನೆಯನ್ನು ಲೆಕ್ಕಿಸುವುದನ್ನೇ ತಪ್ಪಿಸಿ, ಕೇವಲ ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ) ಈ ವಿಭಾಗದ್ವಯದ (dyad) ಪಿಂಡ-ಬ್ರಹ್ಮ ಅಂಡ ಐಕ್ಯದ ಲೈಂಗಿಕ ಪಾತಳಿಯ ಭೂಮಿಕೆಯಿಂದಲೇ ಜೀವನದ ಆಗು ಹೋಗುಗಳನ್ನು ಲೆಕ್ಕಿಸುವ ತಂತ್ರವನ್ನು ಜನಪ್ರಿಯವಾಗಿಸಿದ್ದಾನೆ. ಭಾರತೀಯ ಸಂಸ್ಕೃತಿಯ ಸಂದರ್ಭದಲ್ಲಿ ದಕ್ಷಿಣ-ಕಪರ್ದ ವಸಿಷ್ಠ ವಾಲ್ಮೀಕಿಗಳು ಮಾಡಿರುವ ಈ ಅಪಚಾರವೇ ಈ ಮಾನವ ಸಂಸ್ಕೃತಿಯನ್ನು ಅಧೋಗತಿಯತ್ತ ತಳ್ಳುತ್ತಲಿದೆ. ಪೈಥ್ಯಾಗೊರಾಸ ಪಂಥೀಯರು 'ಇತಿಹಾಸ'ದ ಆಕೃತಿಯನ್ನು ವೃತ್ತ ಆಕೃತಿಯದೇ ಇರುವುದಾಗಿ ನಂಬಿಸಿದ್ದಾಯ್ತು. ಇತಿಹಾಸವು ಮರಳುತ್ತದೆ, ಇತಿಹಾಸದ ದಿಕ್ಕು ಬದಲಿಸಿ, ಅದರ ಸ್ಥಳದಲ್ಲಿ ಗಣಿತ, ಭೂಮಿತಿ, ಸಂಖ್ಯಾವಿಚಾರಕ್ಕೆ ಪ್ರಾಧಾನ್ಯವನ್ನೀಯಲಾಯಿತು. ಇತಿಹಾಸವು ಜೀವನಾನುಭವಗಳ ಹಿನ್ನೆಲೆಯಲ್ಲಿ ಆಕಾರ ಪಡೆಯುತ್ತದೆ. ಆದರೆ, ಗಣಿತಶಾಸ್ತ್ರಕ್ಕೆ ಸಾಕ್ಷಾತ್ ಜೀವನಾನುಭವಗಳ ಆಧಾರವು ಜರೂರು ಇಲ್ಲ. ಬುದ್ಧಿ, ತರ್ಕ, ಅನುಮಾನ, ಕಲ್ಪನಾವಿಲಾಸಗಳ ಮುಕ್ತವಿಹಾರಕ್ಕೆ ಪೈಥಾಗೊರಾಸನು ಒಂದು ನೂತನಕ್ಷೇತ್ರವನ್ನು ಒದಗಿಸಿಕೊಟ್ಟನು.

ಡೆಕಾರ್ಟನಂತಹ ಮೇಧಾವಿಯ ಮತದಲ್ಲಿ, ಇತಿಹಾಸಕ್ಕೆ ಗಣಿತಶಾಸ್ತ್ರದಂತೆ 'ಸತ್ಯ'ವನ್ನು ಗ್ರಹಿಸಿಕೊಳ್ಳುವ ಶಕ್ತಿಯಿಲ್ಲ! ಆಧುನಿಕ ಪಾಶ್ಚಾತ್ಯ ತತ್ತ್ವಜ್ಞಾನವು ಗಣಿತಶಾಸ್ತ್ರದ ದಿಕ್ಕಿನಲ್ಲಿ ಹೊರಟಿದೆ. ಸಾಕ್ಷಾತ್ ಜೀವನಾನುಭವದ ಬೆಲೆ ತಗ್ಗಿದೆ.

ಹೆಗೆಲ್ಲನು ಈ ಪೈಥಾಗೋರಾಸ್ ಮನ್ವಂತರದ ಪ್ರಭಾವಕ್ಕೆ ಒಳಗಾದುದನ್ನು ಪ್ರಾಜ್ಞರೆಲ್ಲರೂ ಅರಿತಿದ್ದಾರೆ. 'Real is Rational' 'Rational is Real' ಈ ಬುದ್ಧಿವಾದೀ ಭೂಮಿಕೆ ಹೆಗೆಲ್ಲನದು. ಕಾಂಟನೂ Reasonಗೆ ಅಗ್ರಸ್ಥಾನ ಕೊಟ್ಟಿರುವಲ್ಲಿ ಪೈಥಾಗೋರಾಸ ಪಂಥೀಯ ಪ್ರಭಾವಕ್ಕೆ ಒಳಗಾಗಿರುವುದು ಎದ್ದು ಕಾಣುತ್ತದೆ. ಆದರೆ, ಈ ಪರಿಮಿತಿಯ ಹೊರಗೆ ಬಂದುದನ್ನು ಕಾಣಬಹುದು. ಆದರೆ, ಹೆಗೆಲ್ಲನು ಪರ್ಮೈನಿಡಸ್ ಮತ್ತು ಹಿರಾಕ್ಲಿಟಸ್ಸ್‌ರ ತಾತ್ವಿಕ ಭೂಮಿಕೆಗೆ ಮಾರು ಹೋದದ್ದು ಕಾಣುತ್ತದೆ. 'in everything an unchanging Being namely Reason ಉಂಟು, ಈ Being= ಅಸ್ತಿ, Not being=ನಾಸ್ತಿ (ಮೃತ್ಯು). ಈ ವೈಚಾರಿಕ ಭೂಮಿಕೆಯನ್ನೇ ಸ್ವೀಕರಿಸುವ ಈ ಹೆಗೆಲ್ಲನಿಗೆ ತಾನು ಪ್ರಾಣಲಿಂಗ ಜೀವನ ಪ್ರಚೋದಕ ಭೂಮಿಕೆಯನ್ನು ಸ್ವೀಕರಿಸುತ್ತಿದ್ದೇನೆ ಎಂಬುದು ಅರಿಕೆಗೆ ಬರಲೇ ಇಲ್ಲ. Being Thesis=ಅಸ್ತಿ, Not Being=Antithesis,

Hegels law of providence converted into the laws of Reason!

Hegel's world Spirit=Geist=Ghost,

ಭಾರತೀಯ ದಿವ್ಯಾಧ್ಯಾತ್ಮದ 'ಮಹತಃ ಭೂತಸ್ಯ' ನಿಃಶ್ವಸಿತ ಆವೇಶವೇ, grasps providence firmly with one hand, Recorn with another=ಹೆಗೆಲ್ಲನ ಉಂಟು ಇಲ್ಲ (ಜೀವನ)-ಅಲ್ಲ, ಇಲ್ಲ (ಮೃತ್ಯು) ಇವೆರಡೂ ಅಂತರ್-ವಿಸ್ಂಗತ, ಪ್ರೇರಣಾ ದ್ವಂದ್ವದಲ್ಲಿ ನಿತ್ಯಸಂಘರ್ಷವು ತಪ್ಪಿದ್ದಲ್ಲ, ಎಂಬ ವಿಶ್ವ ನಿಯಮ (?) ಕಂಡುಹಿಡಿದಿದ್ದಾನೆ!

ಈ ವಿಶ್ವನಿಯಮವು ಹಿರಾಕ್ಲಿಟನನಿಂದ ಎತ್ತಿದ್ದು. ಆದರೆ, ಹಿರಾಕ್ಲಿಟಸ್ ಹೇಳುವ 'War is father of all and King of all, Strife is justice' ಇದು ಕಾದಲರ ಕಾದಾಟಕ್ಕೆ ಅನ್ವಯಿಸುವ ಪ್ರಾಣಲಿಂಗ ಪಾತಳಿಯ ಮೇಲಣ ಯುದ್ಧ. 'ಮೈಯಲ್ಲಿ ಆವೇಶವಾಗುತ್ತದೆ' ಮಾನವರ ವಿಧಿಲಿಖಿತ ಇದು ಪ್ರಾಣಲಿಂಗ ಶಕ್ತಿ! ಹೆಗೆಲ್ಲನ ಮುಂದಿನ ತಲೆಮಾರಿನ ಮಾರ್ಕ್ಸ್, ಈ 'Spirit'ದಲ್ಲಿ ನಂಬುಗೆಯ ಆವಶ್ಯಕತೆಯನ್ನೇ ಕಾಣಲಿಲ್ಲ. ಅತ್ಯಂತ ರೂಪವೇ ಸ್ಥಾಯೀ ಇರುವ ಈ ಪ್ಯಾಥ್ಯಾಗೋರಾಸ ಪಂಥೀಯ ಭೂಮಿಕೆಯಲ್ಲಿ ದೇವರು=ಭಗವಂತ ಇದ್ದಾನೆ ಎಂಬುದು ಒಂದು ಮೋಸ! ಲಿಂಗಶಕ್ತಿ-ಪ್ರಾಣ='ಅಸು' ಶಕ್ತಿ ಅಥವಾ ಇಚ್ಛಾಶಕ್ತಿಯು ಮಾತ್ರ ನಿಜ. ಪೈಥಾಗೋರಾಸ ಪಂಥೀಯ ಪ್ರಭಾವವು, ಶೋಪೆನ ಹೌಅರ್, ನೀಟ್ಷೆ ಮುಂತಾದ ಇಚ್ಛಾಶಕ್ತಿಯ ಪ್ರವಾದಿಗಳಿಗೆ ಪ್ರೇರಣೆಯನ್ನಿತ್ತಿದೆ. ಶೌಪೆನ್ ಹೌಅರ್ ಭಾರತೀಯ ಉಪನಿಷತ್ತುಗಳನ್ನು ತಲೆಯ ಮೇಲೆ ಇಟ್ಟುಕೊಂಡು ಕುಣಿದನು. ಉಪನಿಷತ್ತಿನಲ್ಲಿ ಪ್ರಾಣಲಿಂಗ ಭೂಮಿಕೆಯ ಅಸುರ ತತ್ವಜ್ಞಾನವೇ ಉಂಟು, ಎಂಬ ನಿಟ್ಟಿನಿಂದಲೂ ದೃಢಪಡುತ್ತಿದೆ.

ಹೆಗೆಲ್ಲನ ಇತಿಹಾಸವು, Thesis, Antithesis ಮತ್ತು Synthesis ಎಂಬ ಈ ತ್ರಿಪುಟಿಯ ಸಂದರ್ಭದ್ದು, ವೃತ್ತಾಕೃತಿಯದೇ ಆಗುತ್ತದೆ. ರಶಿಯ, ಚೀನಗಳಲ್ಲಿ ಆಗಿರುವ ಪ್ರಯೋಗಗಳಲ್ಲಿ ಇದು ದೃಢಪಟ್ಟಿದೆ. ಸಂಕೇತ-ಪ್ರತೀಕಗಳು ಒಳಗೊಂಡಿರುವ ಅದ್‌ಭುತ ಪ್ರೇರಕಶಕ್ತಿಯು ಇಂದು ಪ್ರತೀತಿಗೆ ಬರುತ್ತಿರುವ ಉದಾಹರಣವೆಂದು ಒಬ್ಬ ತಜ್ಞನು ಸ್ಪಷ್ಟಶಬ್ದಗಳಲ್ಲಿ ಹೇಳುತ್ತಾನೆ: "ಹೆಗೆಲ್-ಮಾರ್ಕ್ಸನ ಗ್ರಂಥದ ಆಶಯ=ಗುಣ ಎಂಥದು ಎಂಬುದನ್ನು ಅವರ ಸಂಕೇತಗಳೇ ಸಾರುತ್ತಿದೆ. ಬೆಳೆಯಲಿರುವ ಚಂದ್ರನ ಆಕೃತಿಯ ಕುಡುಗೋಲು; ಕೆಂಪು ಬಣ್ಣದ ಧ್ವಜ. ಒಂದು ಚಕ್ರ ಈ ಸಂಕೇತಗಳು ಅಮೂರ್ತ ಪ್ರಾಣಲಿಂಗ ಪಾತಳಿಯ ಪ್ರಚೋದನೆಯ ಮೂರ್ತ ಪ್ರತೀಕಗಳಾಗಿವೆ. ಹೆಗೆಲ್ಲನ ಇತಿಹಾಸದ ಬಗೆಗಿನ ಗ್ರಹಿಕೆಯ 'ಈ ಪ್ರಪಂಚದಲ್ಲಿ ಮಾನವರ ಪ್ರಾದುರ್ಭಾವವಾಗಿದೆ' ಎಂಬುದನ್ನೇ ಸಂಪೂರ್ಣ ಕಡೆಗಣಿಸಿದೆ ಡಾ. ಬರ್ಟರಾಂಡ್ ರಸೆಲ್ಲರು ತಮ್ಮ ತತ್ವಜ್ಞಾನದ ಗ್ರಂಥದಲ್ಲಿ ಹೆಗೆಲ್ಲನನ್ನು ತುಂಬ ಕಟುವಾಗಿ ಟೀಕಿಸಿದ್ದಾರೆ! ಆದರೆ, ಈ ರಸೆಲ್ಲರು ಸಹ ಪ್ರಾಣಲಿಂಗ ಪಾತಳಿಯ ಅಸ್ತಿತ್ವವನ್ನೇ ಮೆಚ್ಚಿಕೊಂಡು ಪ್ರತಿಪಾದಿಸಿದ್ದಾರೆ. ಆಧುನಿಕ ನರ(ಳ) ಸಂಪ್ರದಾಯದ ಪ್ರವಾದಿಗಳು ಇವರು! 'ಅವರವರ ಅರ್ಥ ಅವರವರ ಪಾಲಿನ ಸತ್ಯ' ಎಂಬ ಭೂಮಿಕೆಯ ಈ ಭೌತಶಾಸ್ತ್ರಜ್ಞರ ವರ್ಗವು ಜ್ಞಾತಾಜ್ಞಾತವಾಗಿ 'ಮಾನವ ಧರ್ಮ=ಸಂಸ್ಕೃತಿಯ'

ಅವಮೂಲ್ಯನಕ್ಕೇ ನೆರವಾಗುತ್ತ ಬಂದಿದೆ! ಇದಕ್ಕೆ ಕಾರಣವಿದೆ; ಮಾನವನಿಗೆ ಮಾನವತತ್ತ್ವ ಬಂದದ್ದು ಪ್ರಜ್ಞೋದಯದಿಂದಾಗಿ ತಾನೆ? ಆದರೆ, ಇವರಿಗೆ ಬಾಳಿನಲ್ಲಿ ತ್ರಿತನ ಭೂಮಿಕೆಯೇ ಮಾನ್ಯವಿಲ್ಲ.

ಕಾಂಟ್ ಮತ್ತು ಹೆಗೆಲ್ಲರ ಇತಿಹಾಸತತ್ತ್ವದ ಬಗೆಗಿನ ಗ್ರಹಿಕೆಗಳಲ್ಲಿ ಇರುವ ತಾರತಮ್ಯವು 'ಮಾನವ ಧರ್ಮದ' ಆಕೃತಿಯನ್ನು ಗ್ರಹಿಸಿಕೊಳ್ಳಲು ನೆರವಾಗುತ್ತದೆ. Nous=ಪ್ರಜ್ಞಾಪ್ರಕಾಶ ತತ್ತ್ವದ ಪಾತಳಿಯ ಮೇಲೆ ಭಾವಾತ್ಮಕ ಅರ್ಥ ವಿಚಾರದ ಅಂತಃಸಂಗತಿಯ ಜೀವನಾನುಭವವು ಶಕ್ಯವಿದೆ. ವಿಭಾಗತ್ರಯದ ಆಗಾಮೀ ನಾಳೆಗಳತ್ತ ಸಾಗಿರುವ ಈ ಜೀವನದ ಅನುಸಂಧಾನದಲ್ಲಿ ಮಾನವಧರ್ಮ ಸಂಸ್ಕೃತಿಯು ಉಳಿಯಲಿದೆ, ಬೆಳೆಯಲಿದೆ. ಈ ಪ್ರಕಾಶತತ್ತ್ವದ ವಿಭಾಗತ್ರಯದ ಕಾಲಗತಿಯ ಪಾತಳಿಯ ಕೆಳಗಡೆಗೆ ಸ್ಥಳ ಮತ್ತು ಕಾಲ ರೂಪ ವಿಭಾಗದ್ವಯದ ಕತ್ತಲಿನ ವೃತ್ತಾಕೃತಿಯ (ಸಂ) ಭವ ಚಕ್ರವು ಉಂಟು, ಇದು ನರ(ಳ)ರ ಲೋಕ. ಇದು ಅಕ್ಷಶಃ ಖರೇ, ಪ್ರಕಾಶತತ್ತ್ವದ ಸಾಮಾಜಿಕ ಪಾತಳಿಯ ಮೇಲಣ ವೈಶ್ವಾನರಾಗ್ನಿಯ=ವೈವಸ್ವತ ಮನುವಿನ ಅಸ್ತಿತ್ವವು ಇಂದಿಗೂ ಉಂಟು! 'ವೈವಸ್ವತ ಮನ್ವಂತರೇ ಭರತಖಂಡೇ....' ಎಂಬೀ ಬಗೆಯ 'ಕ್ಷಿತೀನಾಂ ಆದ್ಯಃ' ಆಗಿರುವ ಮನುಪ್ರಣೀತ ಸನಾತನ 'ಸಮಯ'-ಅರಿಸ್ಟಾಟಲ್ Eternal Duration' 'ಉಂಟು', ಎಂಬ ಕಾರಣದಿಂದ, ಈ 'ಆಮನೋಃ ವರ್ತ್ಮನಃ ಪರಂ' ಕಾಂಟನು ಕಂಡ 'noumena' ಮನಸ್‌ತತ್ತ್ವದ ಆಧಾರವು ಉಂಟು, ಎಂಬ ಕಾರಣದಿಂದ ಈ 'ಮಾನವೇತಿಹಾಸ'ದ ಆಕೃತಿಯನ್ನು ಗ್ರಹಿಸಿಕೊಳ್ಳಲು ಶಕ್ಯವಾಗುತ್ತಿದೆ!

ಆದರು, ಹೆಗೆಲ್ಲನು ಹೇಳಿರುವ ಪ್ರಾಣಲಿಂಗಶಕ್ತಿಯನ್ನು ಪ್ರಚೋದಿಸುವ ಅಂತರ್-ವಿಸಂಗತಿ, ಪ್ರೇರಣಾದ್ವಂದ್ವದ ಭೂಮಿಕೆಯ=ಕತ್ತಲೆಯ ತತ್ತ್ವವು ಇಂದು ಪ್ರಭಾವಶಾಲಿಯಾಗುತ್ತದೆ. ಇದರ ಕಾರಣವೇನು? ಒಬ್ಬ ಪಾಶ್ಚಾತ್ಯ ಪ್ರಜ್ಞಾವಂತನು ಹೆಗೆಲ್-ಮಾರ್ಕ್ಸರ ಸೂತ್ರವನ್ನು 'Algebra of Revolution' ಎಂದಿರುವುದು ಸುಳ್ಳಲ್ಲ, ಹೆಗೆಲ್ಲನ 'ಕತ್ತಲೆ'ಯ ತತ್ವಜ್ಞಾನದ ಪ್ರಭಾವಕ್ಕೆ ಆತನೊಬ್ಬನೇ ಕಾರಣನಲ್ಲ; Thesis (ಉಂಟು) Antithesis(ಅಲ್ಲ, ಇಲ್ಲ) ಇವೆರಡರ ಸಂಘರ್ಷವು ಸಮನ್ವಯಕ್ಕೆ (Synthesis ಗೆ) ಕಾರಣವಾಗುತ್ತದೆ, ಎಂಬ ಈ ನಂಬುಗೆಯ ಟೊಳ್ಳುತನವನ್ನು ಸಹಜವಾಗಿ ಸಿದ್ಧಪಡಿಸುವುದು ಶಕ್ಯವಿರುವಾಗ ಒಬ್ಬ ಪ್ರಜ್ಞನೂ ಇದನ್ನು ಸಮರ್ಥವಾಗಿ ಖಂಡಿಸಿಲ್ಲ. ಹೆಗೆಲ್ಲನ ಭೂಮಿಕೆಯ ಮೇಲೆ, ನರ(ಳ)ರು ಉಂಟೇ ಹೊರತು, 'ಮನು'ಜ=ಮಾನವರಿಗೆ ಇಂಬು ಇಲ್ಲ. ರಂಗ, ಮಂಗ ರಾಮರು ಇದ್ದಾರೆ, 'ಮನು'ಜ=ಮಾನವ ಎಂದರೆ ಯಾರು?

ಈ ಹಿನ್ನೆಲೆಯಲ್ಲಿ ಭಾರತೀಯರ ಇಂದಿನ ಅವಸ್ಥೆಯ ಅರ್ಥವು ಆಗಬಲ್ಲದು. 'ಅವರವರ ಅರ್ಥವು, ಅವರವರ ಪಾಲಿನ ಸತ್ಯ' ಆಗುವುದು. ಇದು, ಸ್ವಯಂಭೂ ನರ ಸಂಪ್ರದಾಯದ ರೇತಸತ್ಯವೇ ಆಗುತ್ತದೆ. ಇದು ಸಾಮಾಜಿಕ ಧಾರಣೆಯ ಅರ್ಹತೆಯನ್ನುಳ್ಳ ವೈವಸ್ವತ ಮನು ಸಂಪ್ರದಾಯದ ಸತ್ಯವಾಗುವುದಿಲ್ಲ. ವೈವಸ್ವತ ಮನ್ವಂತರವೂ ಉಂಟು. ಈ ನರರಲ್ಲಿ ಸಹ ಉಪಜ್ಞೆಯ (Conscience) ಅಂಶವು ಇನ್ನೂ ಉಳಿದಿದೆ, ಈ ಕಾರಣದಿಂದಲೆ, ಅನೃತ, ಸುಳ್ಳು, ಮೋಸ, ಮಾತಿನ ಚಾಕಚಕ್ಯವು ಬಚ್ಚಿ ಉಳಿಯುತ್ತಿಲ್ಲ! ಆಧುನಿಕ ತಪಸ್ವಿ ಅರವಿಂದರು: ವೈಶ್ವಾನರಾಗ್ನಿ ಉಪಾಸನೆಯನ್ನು ಈ ಜಾತವೇದ ಆಗ್ನಿಯ ಪ್ರಜ್ಞೆಯ ಪಾತಳಿಯನ್ನು, ಲೋಕ ನಿದರ್ಶನಕ್ಕೆ ತಂದುಕೊಡಲಿಲ್ಲ. ಅದಿತಿ ಮಾತಾ ಸಂಪ್ರದಾಯದ ಪುನರುತ್ಥಾನದ ಪ್ರಯತ್ನ ಪಟ್ಟು, ಇಂದು ನಗಿಸಿಕೊಳ್ಳುವ ಹಂತಕಕ್ಕೆ ಬಂದಿದೆ ಇವರ ಸಂಪ್ರದಾಯ! ಮರಳಿ ಲೋಕಸೇವೆಗೆ ಬರುತ್ತೇನೆ ಎಂಬ ಆಶ್ವಾಸನವನ್ನು ನಡೆಸಲಿಲ್ಲ. ಅವರ ಈ ವಚನದ ನೆನಪನ್ನು ಕೊಡಲಾಯಿತು. ಗಾಂಧೀಜಿ ಆಮಂತ್ರಿಸಿದರು; ಲಜಪತರಾಯ, ಟಿಳಕ ಬೆಟ್ಟಿ ಆಗಿ ಬಿನ್ನವಿಸಿದ್ದಾಯಿತು. ಆದರೂ ಇವರು ಹೇಳುತ್ತಾರೆ. ಸ್ವಾತಂತ್ರ್ಯವು ತನ್ನ ಜನ್ಮದಿನದಂದೇ ಲಭಿಸಿದ್ದು ನಿಷ್ಕಾರಣವಲ್ಲ, ಬ್ರಿಟಿಷರಿಂದ ಭಾರತ ಮುಕ್ತವಾದುದರ ಶ್ರೇಯವು ತಮಗೆ ಸಲ್ಲುತ್ತದೆಂದು ಸೂಚಿಸುವ ಅವರ ಲೇಖವು ಶ್ರೀಅರವಿಂದರ ಹಿರಿಮೆಗೆ ಒಪ್ಪುವುದಿಲ್ಲ. ಆಧುನಿಕ ಮಾನಸಶಾಸ್ತ್ರೀಯ ಪರಿಭಾಷಯ 'megalomania'ದ ಸ್ವಭಾವವನ್ನು ಪ್ರಕಟಿಸುವ ಹಾಸ್ಯಾಸ್ಪದ ಪ್ರಯತ್ನವು ಅವರಿಂದ ಆಗಬಾರದಿತ್ತು. ಇವರಿಗೆ

ತಮ್ಮ ಪ್ರಾಂತದ ಸುಭಾಸಬೋಸರ ಆತ್ಮಾರ್ಪಣದ ಬೆಲೆ ಇಲ್ಲವಾಯಿತು. ಅನೇಕ ಕ್ರಾಂತಿವೀರರ ನೆನಪೂ ಇವರಿಗೆ ಉಳಿಯಲಿಲ್ಲ! ಕ್ರಾಂತಿವೀರರಿಗೆ ಫಾಶಿ ಆಗುವಾಗ ಅವರಿಗೆ ಈ ದಿಕ್ಕಿನಲ್ಲಿ ಸ್ಫೂರ್ತಿಯನ್ನಿತ್ತ ಇವರು, ತಮಗೂ ಆ ಅವಸ್ಥೆಯೇ ಬರುವುದನ್ನು ಕಂಡು, ಅದೃಶ್ಯರಾಗಿ ಪಾಂಡೀಚೇರಿಗೆ ಹೋದ ಈ ತಪಸ್ವಿ, ಪ್ರಣವೋಪಾಸನೆಯಲ್ಲಿ ಮೈಮರೆತರು. ಈ ಉಪಾಸನೆಯ ಮೂಲವು ಯೋನಿ-ಲಿಂಗೋಪಾಸನೆಯಲ್ಲಿ ಇದೆ, ಶ್ರೀ ಅರವಿಂದರು ಆ ಮಾಂಡೂಕ್ಯ <ಮಂಡೂಕದ ಮಂತ್ರಸಿದ್ಧಿಯ ಬೆಂಬತ್ತಿದ್ದಾಯ್ತು!

ಕಂನಾಡಿನ ಜನಪದವು ಈ 'ಮಂಡೂಕ' ಶಕ್ತಿಯ ಸಿದ್ಧಿಯನ್ನು ಎಂದೋ ಅರಿತಿದೆ. ಒಂದು ಗಾದೆಯ ಮಾತಿನಲ್ಲಿ, ಕಂನಡರ 'ಪ್ರಜ್ಞಾನೇತ್ರ'ದ ಅದ್ಭುತಶಕ್ತಿಯು ಹುದುಗಿರುವುದನ್ನು ಕಾಣಬಹುದಾಗಿದೆ. 'ಹಲ್ಲಿಲ್ಲದ ಕಪ್ಪೆ ಹಾವು ನುಂಗಿತು! ಜನಪದ ಸಾಹಿತ್ಯಸಂಶೋಧಕರಾದ ಶ್ರೀ ಜ್ಯೋತಿ ಹೊಸೂರ ಅವರಿಂದ ಈ ಗಾದೆ ಗೊತ್ತಾಯಿತು, ಈಜಿಪ್ಟಿನ ಆದಿ ದೈವತಗಳಲ್ಲಿ ಹಾವೂ ಇದೆ; ಕಪ್ಪೆಯೂ ಇದೆ! ಆದರೆ, ಭಾರತೀಯ ಪರಂಪರೆಯಲ್ಲಿ ಹಾವು ಉಂಟು. ಕಪ್ಪೆ ಇಲ್ಲವಲ್ಲ, ಎಂಬ ಸಂದೇಹವನ್ನು ಸೂಚಿಸಿವೆ. ಅದರೊಡನೆ, ಮಾಂಡೂಕ್ಯ ಮತ್ತು ಮುಂಡಕ ಈ ಕಪ್ಪೆ-ಹಾವಿನ ಉಪನಿಷತ್ತುಗಳ ಮಾತೂ ಬಂದಿತ್ತು, ಇಂದಿನ ವೇದದಲ್ಲಿ ಮಂಡೂಕ ಸೂಕ್ತವಿದೆ. ಈ ಸೂಕ್ತವು ದಕ್ಷಿಣ ಕಪರ್ದನೆಂಬ ವಸಿಷ್ಠನ ಮಂಡಲದಲ್ಲಿದೆ. ಇಲ್ಲಿ ಮುಂಡಕ ಹಾಗೂ ಮಾಂಡೂಕ್ಯದ ಸಾಹಚರ್ಯವಿದೆ. ಈ ಮಾಂಡೂಕ್ಯಗಳ ಡ್ರ್ಯಾವ್ ಡ್ರ್ಯಾಂವ್; 'ಯತ್ ವಾಕ್ ಪಶವಃ ವದಂತಿ' ಎಂದು ಈ ವೇದವೇ ಹೇಳಿದೆಯೊ, ಆ ಪಶು ಮಂಡೂಕದ ಸೂಕ್ತದ ಅರ್ಥ=ಉದ್ದೇಶ ಏನು? ಧೀರೂಪೀ ಪ್ರಜ್ಞಾ ಪ್ರಚೋದಕ ಸವಿತೃ ವಿವಸ್ವನ್ ದೇವರ ಪ್ರಕಾಶ ತತ್ತ್ವೋಪಾಸಕರದ್ದು ಎಂಬ ಈ ವೇದದಲ್ಲಿ ಕಪ್ಪೆಯ ಸೂಕ್ತವೇ? ಇದರ ಹಿಂದು ಮುಂದು ಗಮನಕ್ಕೆ ಬಾರದೆ ದಿಗ್‌ಭ್ರಾಂತರಾದ ಸಂಶೋಧಕರೂ ಉಂಟು. ಹಾರುವರ ವೇದಮಂತ್ರ ಪಠನದ ನಾದದ ವಿಡಂಬನೆಗಾಗಿ ಕಪ್ಪೆಯ (ಮಳೆಗಾಲದ ಕೂಗಿನ) ಸೂಕ್ತ ಇರಬಹುದೇ? ಎಂದು ಒಬ್ಬರ ಪ್ರಶ್ನೆ. ಈ ಸೂಕ್ತ ಕೀಥ್ ಮಹಾಶಯರ ಗಮನ ಸೆಳೆದಿದೆ.

ಈ ವೇದದಲ್ಲಿ, ವಾಕ್‌ರೂಪೀ ಭಾಷೆಯಲ್ಲಿ 'ಯತ್ ವಾಕ್ ಪಶವಃ ವದಂತಿ' ಆ 'ಗೀಃ ವಾಣ ವಾಣೆ'ಯೇ ಉಂಟು. ಇದು ನಾದ ಬ್ರಹ್ಮೋಪಾಸಕರ ವೇದ. ಮಹತಃ ಭೂತಸ್ಯ ನಿಃಶ್ವಸಿತವೇ ಈ ವೇದವಾಗಿದೆ. ಇದನ್ನು ಧ್ವನಿತಪಡಿಸಲಾಗಿದ್ದರೂ, ಸ್ಪಷ್ಟ, ನೇರಭಾಷೆಯಲ್ಲಿ ಒಂದೆಡೆಗೂ ಹೇಳಲಾಗಿಲ್ಲ. ಆದರೆ, ಮಹಾರಾಷ್ಟ್ರದ ಸಿದ್ಧಸನ್ತ ಶ್ರೀ ಜ್ಞಾನೇಶ್ವರನು ಕೋಣನಿಂದ ವೇದ ಹೇಳಿಸಿದನು ಎಂಬ ಪವಾಡಕಥೆ ಪ್ರಸಿದ್ಧವಿದೆ. ಆದರೆ, ಮಹತಃ ಭೂತಸ್ಯ ಪೈಥಾಗೋರಸನ 'Breath in void-vacuum', ಹೆಗೆಲ್ಲನ Geist, ಹಿರಾಕ್ಲಿಟಸನ Logos ನಿಃಶ್ವಸಿತ ಸ್ವರೂಪ ಅನಾಹತನಾದ ಪ್ರಣವಃ ಛಂದಸಾಂ ಈ ವೇದ, ಎಂಬುದನ್ನು ನೇರವಾಗಿ ಹೇಳಲಾಗಿಲ್ಲ. ಧಾರವಾಡ ಜಿಲ್ಲೆಯಲ್ಲಿ ಮೂಕಯ್ಯನ ಮಠದ ಪರಂಪರೆ ಇಂದಿಗೂ ಇದೆ. ಒಂದು ವೃಷಭ: ಹೋರಿ ತಂದು ಮಠದ ಪಟ್ಟದ ಸ್ವಾಮಿ ಎಂಬ ಶ್ರದ್ಧೆಯಿಂದ ಪೂಜಿಸುವ ವಾಡಿಕೆಯು ಉಂಟು. ಈ ವಿವರಣೆಯ ಮೂಲಕ, ಶ್ರೀ ಅರವಿಂದರ ತಪಃಚರ್ಯದ ಪರಿಣತಿ, 'ಯತ್ ವಾಕ್ ಪಶವಃ ವದಂತಿ' ಎಂಬ ಪ್ರಣವೋಪಾಸನೆಯ ಮಂತ್ರನಾದದಲ್ಲಿಯೇ, ಭಾರತೀಯರು ಸಿಕ್ಕುಬೀಳುವ ತಂತ್ರ ಮಂತ್ರ ಪುಷ್ಟೀಕರಿಸಿದ್ದೇ ಆಯಿತು. ಪ್ರಜ್ಞಾ-ಪ್ರಕಾಶದ ಹಂತದ ಅಸ್ತಿತ್ವದ ಅರಿವನ್ನು ತಂದು ಕೊಡುವ ಮಹಾನ್‌ಕಾರ್ಯವು ಅವರಿಂದ ಆಗಬೇಕಿತ್ತು: ಆಗಲಿಲ್ಲ, ಎಂಬ ವ್ಯಥೆ ನನಗೆ!

'ಮಾನವಧರ್ಮ'ದ ಆಕೃತಿಯ ಜಾಗತಿಕ ಸ್ವರೂಪದ ತುಲನೆಯಲ್ಲಿ ಒಂದು ಸಂಗತಿಯು ದೃಢಪಡುತ್ತದೆ. ವಿಭಾಗತ್ರಯದ ಪ್ರಕಾಶರೂಪ ಕಾಲಗತಿಯ ಸಾಹಚರ್ಯದಲ್ಲಿ ಉದಯವಾದ ಪ್ರಜ್ಞೆ: ಉಪಜ್ಞೆಯಿಂದಾಗಿ ಈ ಮಾನವ ಜೀವನ ವಿಶ್ವವು ಅರಿಕೆಯ ಅಳವಿನಲ್ಲಿ ಬಂದಿದೆ. ಸ್ಥಳ ಮತ್ತು ಕಾಲ ಈ ವಿಭಾಗದ್ವಯದ ಚಕ್ರನೇಮಿಕ್ರಮದ ಕಾಲಗತಿಯಲ್ಲಿ, ಪ್ರಾಣಲಿಂಗದ ಪ್ರೇರಣೆಯ ಈ ಗತಿಯಲ್ಲಿ ಮಾನವ ಭಾಷೆಯು ಆಕಾರ ಪಡೆದಿಲ್ಲ. ಭಾರತೀಯ

ಪುರಾತನ ಪರಿಭಾಷೆಯಲ್ಲಿ ಹೇಳಬಹುದಾದರೆ, ವೈವಸ್ವತ ಮನ್ವಂತವು ಉದಯವಾಗುತ್ತದೆ, ಬಳಿಕ ತರ್ಕ=ಬುದಿಯ ಉದಯವಾಗುವ ಹಂತದಲ್ಲಿ ಸ್ವಯಂಭೂ ಮನ್ವಂತರವು ಪ್ರಭಾವಶಾಲಿ ಆಗತೊಡಗಿದ್ದುಂಟು. ಇದು ಸಪ್ರಮಾಣವಾಗಿ ಬಯಲಿಗೆ ಬಂದಿದೆ. "ಪ್ರವಾಹಪತಿತರ ಕರ್ಮಃ ಓಂದೂ ಎಂಬ ಧರ್ಮ" ಈ ಪ್ರಕಟನೆಯು ಈ ಅಂಶವನ್ನು ಬೆಳಕಿಗೆ ತಂದಿದೆ. ದಕ್ಷಿಣಕಪರ್ದ ವಸಿಷ್ಠವ್ಯಾಸಾದಿಗಳು ಭಾರತದಲ್ಲಿ, ಪೈಥಾಗೊರಾಸನ ಪಂಥವು ಗ್ರೀಕ್‌ಸಂಸ್ಕೃತಿಯಲ್ಲಿ ಈ ಸ್ಥಿತ್ಯಂತರಕ್ಕೆ ಕಾರಣವಾಗಿದೆ.

ವಿಭಾಗತ್ರಯದ ಕಾಲಗತಿಯ ಪ್ರಭಾವದಲ್ಲಿ ಕಾಣಿಸಿಕೊಂಡಿರುವ ತ್ರಿತನ ಮಹತ್ವವನ್ನು ಈ ಮೊದಲು ವಿವರಿಸಿದ್ದಾಗಿದೆ. ಈ ಜೀವನ ವಿಶ್ವದಲ್ಲಿ ಸ್ಥಳಕಾಲದ ಏಕಾತ್ಮಕ ಪ್ರಾಣಲಿಂಗ ಶಕ್ತಿಯಿದೆ. ಇದನ್ನು ವಿರೋಧಿಸುವ ಪ್ರಕಾಶ ತತ್ವದ ಇಂದ್ರ ತ್ರಿತರೂ ಇದ್ದಾರೆ. ಅಹಿ; ವೃತ್ರರೂಪ ದುಷ್ಟಶಕ್ತಿಯನ್ನು ವಿರೋಧಿಸಿ ದಮನದಲ್ಲಿ ಇರಿಸುವ ಪ್ರೇರಕ ಪ್ರಚೋದಕ ಶಕ್ತಿಯ ಇಂದ್ರನನ್ನು ಇಲ್ಲವಾಗಿಸುವ ದುಷ್ಟ ಪ್ರಯತ್ನಗಳು ವೇದೋಪನಿಷತ್ತಿನಿಂದ ತೊಡಗಿ ಮಹಾಭಾರತ, ರಾಮಾಯಣದ ವರೆಗೆ, ಅದರ ಮುಂದೆಯೂ ಆಗುತ್ತಬಂದಿದೆ. ಅಹಿ:ವೃತ್ರಹನ್ ಇಂದ್ರನ ಮಿತ್ರ ತ್ರಿತನು ಪ್ರತಿಯೊಬ್ಬ ಮನುಜನೊಳಗಿನ ಪ್ರಜ್ಞಾ: ಉಪಜ್ಞಾ ರೂಪನು, ಇನ್ನೂ ರೂಪಾ ಸತ್ತಿಲ್ಲ. ಈ ಪ್ರಜ್ಞೆ=ಉಪಜ್ಞೆಯನ್ನೂ ನಿಷ್ಕ್ರಿಯಗೊಳಿಸುವ ತಂತ್ರಮಂತ್ರಗಳು ಭಗವದ್‌ಗೀತಾದಿ ಗ್ರಂಥಗಳಲ್ಲಿ ಹುದುಗಿವೆ. ಇದರಿಂದಾಗಿ ಮನುಜನು ಮರಳಿ ನರ(ಳ) ಪಾತಳಿಯಮೇಲೆ ತಳ್ಳಲ್ಪಟ್ಟಿದ್ದಾನೆ. ಈ ಅಧಃಪಾತದ ಈ ಕುತ್ತಿನೊಳಗಿಂದ ಹೊರಬೀಳುವ ಒಂದೇ ಒಂದು ದಾರಿಯು ಉಂಟು. ತಾನು ಪ್ರಚೋದಿನಾಗುತ್ತಿರುವುದು ಯಾರಿಂದ? ಪ್ರಜ್ಞಾ: ಪ್ರಕಾಶವು ನನ್ನನ್ನು ಕರೆಯುತ್ತಿದೆಯೆ? ಅಥವಾ ಪ್ರಾಣಲಿಂಗ-ಚೇತಸದ ಪ್ರಚೋದನೆಯು ತನ್ನನ್ನು ಆಡಿಸುತ್ತಿದೆಯೆ?

ಪುರಾತನ ಪರಿಭಾಷೆಯ ಒಂದು ರೂಪಕವು ಇಲ್ಲಿ ಪ್ರಯೋಜನಕಾರಿಯಾಗಲಿದೆ. ಏಕತ ದ್ವಿತ, ಮತ್ತು ತ್ರಿತ ಈ ಮೂವರೂ ಬಂಧುಗಳು, ಏಕತ (ಸ್ಥಲ), ದ್ವಿತ (ಕಾಲ), ತ್ರಿತ (ಆಪ್ತ್ಯ) ಪ್ರಕಾಶತತ್ವದ ಇಂದ್ರನ ಮಿತ್ರರು, ಈ ಮೂವರೂ ಕೂಡಿ ನಡೆದರೆ ಮಾತ್ರ ಈ ಮಾನವ ಧರ್ಮ: ಸಂಸ್ಕೃತಿಯ ಪ್ರಗತಿಯು ನಿಶ್ಚಿತವಿದೆ. ಆದರೆ, ಏಕತ (ಸ್ಥಲ) ಮತ್ತು ದ್ವಿತ (ಕಾಲ) ಇವರಿಬ್ಬರೂ ಕೂಡಿ 'ತ್ರಿತ'ನನ್ನು ಕೂಪದಲ್ಲಿ ತಳ್ಳಿದ್ದಾರೆ. ತ್ರಿತನ ಸಂಪತ್ತನ್ನು ಹರಣಮಾಡಿದ್ದಾರೆ, ಎಂಬ ಈ ರೂಪಕವು ವೇದಕಾಲದಿಂದ ಮಹಾಭಾರತ ಕಾಲದ ವರೆಗೂ ಸುವಿಖ್ಯಾತವಿತ್ತು. ತ್ರಿತನ ಸಂಪತ್ತು ಎಂದರೆ ಯಾವುದು? ಏಕತ (ಸ್ಥಲ) ಮತ್ತು ದ್ವಿತ (ಕಾಲ) ಈ ವಿಭಾಗದ್ವಯದ ಜೀವನ ರೀತಿಯಲ್ಲಿ, ಈ ಪ್ರಾಣಲಿಂಗದ ಪಾತಳಿಯ ಮೇಲೆ ಮಾನವ ಭಾಷೆಯೇ ಇಲ್ಲವಲ್ಲ. ಇಂದ್ರಮಿತ್ರ ತ್ರಿತನಿಂದ ಮಾನವಭಾಷೆ ಶಕ್ಯವಾಯಿತು. ಆ ಭಾಷೆಯನ್ನು ಸ್ವೀಕರಿಸಿ, ತ್ರಿತನನ್ನು ಬಾವಿಯಲ್ಲಿ ನೂಕಿದ್ದಾಗಿದೆ.

ಈ ಕಥಾಭಾಗವು ಇದಕ್ಕೂ ಮೊದಲು ಒಮ್ಮೆ ಬಂದಿದೆ, ಮರಳಿ ಇಲ್ಲಿ ಇದನ್ನು ನೆನಪಿಗೆ ತಂದುಕೊಳ್ಳುವ ಆವಶ್ಯಕತೆಯೇನು? ಎಂಬ ಪ್ರಶ್ನೆಗೆ ಇಂಬಿಲ್ಲ. ಏಕೆಂದರೆ ಉಪಜ್ಞೆ (Conscience) ಅಲ್ಪಾಂಶದಿಂದಾದರೂ ಜೀವಂತವಿರುವ ಪ್ರತಿಯೊಬ್ಬ ನರ(ಳ)ನು, ತಾನು ತ್ರಿತನ ಹಂತಕನಾಗಿದ್ದೇನೆ, ಎಂದು ಒಪ್ಪಿಕೊಳ್ಳದೆ ಗತಿಯಿಲ್ಲ. ಏಕೆಂದರೆ, ಈ ಕಥಾವಸ್ತುವಿನಲ್ಲಿಯೇ ಈ ಒಪ್ಪಿಗೆಯು ಅಧ್ಯಾಹೃತವಿದೆ. ಆದುದರಿಂದ ಪ್ರತಿಯೊಬ್ಬ ನರ(ಳ)ನೂ, ಅಥವಾ ತಾನು ಮನುಜ, ಮಾನವ ಎಂದು ಬಗೆಯುತ್ತಿರುವವನು, ಈ ಪ್ರಶ್ನೆಗೆ ನೇರ ಉತ್ತರವನ್ನೀಯಬೇಕು. 'ತಾನು ತ್ರಿತ ಆಪ್ತ್ಯನೇ? ಅಲ್ಲವೊ? ತಾನು ಇಂದ್ರಮಿತ್ರ ತ್ರಿತನಲ್ಲ ಎಂದರೆ ಜ್ಯೋತಿರ್ಲಿಂಗೋಪಾಸಕ ಪಾಶುಪತ=ಸಾತ್ವತ ಧಮ್ಮ ಆಗುತ್ತಿದ್ದೇನೆ! ಮಾನವ ಹೆಸರಿನ ಅರ್ಹತೆ ನನಗಿಲ್ಲ, ಎಂದು ಒಪ್ಪಿಕೊಳ್ಳಲಿ

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** X. ೧೯೦-೧
೨. Whitehad ***Adventures of Ideas***; penguin Books; p. 219
೩. ***ಋಗ್ವೇದ ಸಂಹಿತೆ*** II. ೨೯-೧
೪. Zeller, E. ***Greek Mythology*** p-31

ಇತಿಹಾಸದ ಆಕೃತಿ

ಪ್ರಸ್ತಾಪ

ಈ ಹಿಂದೆ, ಧರ್ಮ ಎಂಬುದು, ಒಂದು ವ್ಯಕ್ತಿ=ಮಾನವನಿಂದ ಕಲ್ಪಿತವಲ್ಲ ಎಂಬ ವಿಚಾರದ ಸ್ಪಷ್ಟೀಕರಣವು ಬಂದಿದೆ. ಈ ಮಾನವಧರ್ಮದ ತಳಪಾಯದ ಆಕೃತಿಯು ಒಟ್ಟಿನಲ್ಲಿ ಸಮಾನವಿದೆ. ಆದುದರಿಂದ ಇದು ಯಾವ ವಿಶಿಷ್ಟ ದೇಶ, ಭಾಷೆ ಜನಾಂಗಕ್ಕೇ ಸೀಮಿತವಲ್ಲ, ಈ ಕಾರಣದಿಂದಾಗಿ, ಈ ಮಾನವಧರ್ಮದ ಪ್ರೇರಣೆ-ಪ್ರಚೋದನೆಯು, ವ್ಯಕ್ತಿ ಸಾಪೇಕ್ಷಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ)ದ ಪಾತಳಿಯ ಆಚೆಗೆ ಉಂಟು ಎಂದು ಬಗೆಯಬೇಕಾಗುತ್ತದೆ. ಮಾನವ ಶಾಸ್ತ್ರಜ್ಞ ಎ. ಎಲ್. ಕ್ರೋಬರನಂತೆ, ಲೆವ್ಹಿ-ಸ್ಟ್ರಾಸ್‌ನೂ ಈ ಮತದವನಿದ್ದಾನೆ.

> "Not-withstanding the cultural differences between the several parts of mankind, the human mind is everywhere one and the same and that it has same capacities, I think this has been accepted everywhere"[1]

ಭಾರತೀಯ ಪುರಾತನ ವೈವಸ್ವತಮನು ಪ್ರಣೀತ ಮಾನವಧರ್ಮದ ಕಟ್ಟದ ಸಮೀಕ್ಷೆಯು ಇದು. ಆಧುನಿಕ ಭೌತಶಾಸ್ತ್ರಜ್ಞರ ಮೇಲಣ ನಿಷ್ಕರ್ಷಕ್ಕೆ ಅವಿರೋಧಿಯಾಗಿದೆ. ಇಷ್ಟೇ ಅಲ್ಲ, ಈ ಮಾನವಧರ್ಮವನ್ನು ರೂಪಿಸಿರುವ ರೂಪಿಸುತ್ತಿರುವ, ಸನಾತನ ವಿಶ್ವನಿಯಮವನ್ನು ಭಾರತೀಯ ಪುರಾತನರು ಗ್ರಹಿಸಿಕೊಂಡಿದ್ದಾರೆಂದೂ ಸಪ್ರಮಾಣವಾಗಿ ಸಿದ್ಧವಾಗುತ್ತದೆ. ಈ ಪ್ರಬಂಧದ ಎರಡನೆಯ ವಿಭಾಗದಲ್ಲಿ, ವಿಶ್ವನಿಯಮ ಮತ್ತು ಕಾಲಸ್ವರೂಪ ಗತಿತತ್ತ್ವ ಬೇರೆಯಲ್ಲ, ಎಂಬ ಅಂಶದ ವಿವರಣೆಯು ಬಂದಿದೆ. ಪಾಶ್ಚಾತ್ಯ ತತ್ತ್ವಜ್ಞಾನವು, ಗಣಿತ ಹಾಗೂ ಭೌತಶಾಸ್ತ್ರದ ಭೂಮಿಕೆಯಿಂದ ಮಾನವಜೀವನ ವಿಶ್ವದ ನೆಲೆಯನ್ನು ನೋಡುವ - ಆಕೃತಿ ಸ್ವರೂಪವನ್ನು ಕಂಡು ಹಿಡಿಯುವ-ದಿಕ್ಕಿನಲ್ಲಿ ಭರದಿಂದ ಸಾಗಿದೆ. ಆದರೆ, ಜೀವನಾನುಭವಗಳ ಜಾಡು ಹಿಡಿದು, ಈ ದಿಕ್ಕಿನಲ್ಲಿ ಮುನ್ ನಡೆಯುವ ಅವಶ್ಯಕತೆಯನ್ನು ಒಪ್ಪಿರುವವರು ಇಂದಿಗೂ ಅಪ-ರೂಪವಾಗಿದ್ದಾರೆ, ತೀರ ಇಲ್ಲವೇ ಇಲ್ಲ, ಎಂದಲ್ಲ.

ಗಣಿತ ಹಾಗೂ ಭೌತಶಾಸ್ತ್ರಗಳ ಕ್ಷೇತ್ರವು, ಸ್ಥಲ-ಕಾಲದ ಸಂದರ್ಭದ್ದೇ ಇದ್ದರೂ, ಇದರಲ್ಲಿ ಸಾಕ್ಷಾತ್ ಜೀವಾನುಭವಗಳಿಗೆ ಸ್ಥಾನವಿಲ್ಲ. ಉದಾ: 'ಜೀವನ' ಮತ್ತು 'ಜೀವಿತ' ಇವೆರಡರಲ್ಲಿ ಬೆಳಕು ಮತ್ತು ಕತ್ತಲೆಯಷ್ಟು ಅಂತರವಿದೆಯೆಂಬುದು ಈ ಭೌತಶಾಸ್ತ್ರದ ಗಣಿತ, ಭೂಮಿತಿ, ಸಂಖ್ಯಾಶಾಸ್ತ್ರದ ನೆಲೆಗೆ ನಿಲುಕಿಲ್ಲ, ನಿಲುಕಲಾರದು.

ಜೀವನದ ಸಂದರ್ಭದಿಂದ, ಜೀವಿ-ಜೀವಿತದ ಅರ್ಥವಾಗಲು ಶಕ್ಯವಿದೆ. ಆದರೆ, ಇದಕ್ಕೆ ತಿರುವು ಮುರುವಾಗಿ, ಜೀವಿ=ಜೀವಿತ ಇದರ ಲೆಕ್ಕದಿಂದ ಜೀವನದ ಅರ್ಥವು ಆಗಲಾರದು. ಪ್ರಜ್ಞೆ, ಉಪ-ಜ್ಞೆಯ, ಮನಸ್‌ತತ್ತ್ವದ ಅಭಾವದ ಭೂಮಿಕೆಯಿಂದ, ಭಾವಾತ್ಮಕ ಅನುಭವಾತ್ಮಕ ಅರ್ಥ=ವಿಚಾರ=ಮೂಲ್ಯಗಳ ಆಧಾರದ ಜೀವನ ಪಾತಳಿಯನ್ನು ಗ್ರಹಿಸಿಕೊಳ್ಳುವಲ್ಲಿ ತಪ್ಪು ಆಗುತ್ತದೆ. ಕಣ್ಣಿನವನ ಭೂಮಿಕೆಯಿಂದ ಕುರುಡನ ಅರ್ಥವಾದೀತಲ್ಲದೆ, ಹುಟ್ಟು ಕುರುಡನ ಭೂಮಿಕೆಯಿಂದ ಕಣ್ಣಿದ್ದವರ ಜೀವನದ ರೀತಿಯ ಅರ್ಥವಾಗಲು ಹೇಗೆ ಶಕ್ಯ?

ಇಡಿಯದುದರ ಸಂದರ್ಭದಲ್ಲಿ ಅದರ ಅಂಗಾಂಗಗಳ ಅರ್ಥವು ಶಕ್ಯ. ಆದರೆ, ವಿಶಿಷ್ಟವಾದ ಎಲ್ಲ ಅಂಗಗಳ ಬೇರೀಜು ಮಾಡಿದರೂ ಅದು, ಇಡಿಯನ್ನು ಸರಿಗಟ್ಟಲಾರದು. ಭಾರತೀಯರ ಇಂದಿನಲೋಕ ಸಭೆಯ ರಚನೆಯೊಳಗಿನ ದೋಷವು ಇದೇ ಬಗೆಯದೇ ಆಗಿದೆ. ಪ್ರಾಂತೀಯ ಹಾಗೂ ಭಾಷಿಕ ಜಾತೀಯ ಹಾಗೂ ಧಾರ್ಮಿಕ ಭೂಮಿಕೆಯನ್ನು ಸ್ವೀಕರಿಸಿ ಲೋಕಸಭೆಯ ಆಯ್ಕೆಯಾಗಲು ಇಂಬು ಇದೆ. ಲೋಕಸಭೆಯಲ್ಲಿ, ಎಲ್ಲ ಪ್ರಾಂತಗಳ ಹಾಗೂ ಎಲ್ಲ ಭಾಷೆಗಳ ಮತ್ತು ಎಲ್ಲ ಸಂಪ್ರದಾಯ, ಮತಗಳ ಪ್ರಾತಿನಿಧ್ಯವು ಉಂಟೆಂದು ಗ್ರಹಿಸಿದರೂ, ಆಯ್ಕೆಯಾಗುವ ಈ ಸದಸ್ಯರಲ್ಲಿ ಅಖಿಲ ಭಾರತೀಯ ಭೂಮಿಕೆಯ ಪ್ರತಿನಿಧಿಯು ಒಬ್ಬನೂ ಇಲ್ಲ. ಎಲ್ಲರೂ ಭಾರತೀಯ ಅಭಿಮಾನಿಗಳೇ. ನಿಜ, ಆದರೆ ಮೊದಲು ತಮ್ಮ ಪ್ರಾಂತ, ಭಾಷೆ, ಜಾತಿಯ ಅಭಿಮಾನವಹಿಸಿ ಕಾದಾಡದೇ ಇದ್ದರೆ, ಮರಳಿ ಆಯ್ಕೆಯಾಗುವ ಆಶೆಯಿಲ್ಲ.

ಇದೇ ಮೇರೆಗೆ, ನಮಗೆ ಪ್ರತ್ಯಕ್ಷ ಹಾಗೂ ವಿಶಿಷ್ಟ ವ್ಯಕ್ತಿಗಳನ್ನು ಕಾಣಲು ಶಕ್ಯವಿದೆ, ನಾನೂ ಒಬ್ಬ ವ್ಯಕ್ತಿ. ಆದರೆ ಇವರಲ್ಲಿ ಮಾನವ : ಮನು-ಜ ಎಲ್ಲಿದ್ದಾನೆ, ಮನುಷ್ಯ ಎಂದರೆ ಯಾರು? ವಿಶಿಷ್ಟದ ದಿಕ್ಕಿನಿಂದ ಸಾಮಾನ್ಯ-ಸಮಾನ, ಸಾಧಾರಣ (universal) ಅರ್ಥವು ಆಗಲು ಶಕ್ಯವಿಲ್ಲ-ಸಾಮಾನ್ಯ, ಸಮಾನ, ಸಾಧಾರಣದ ಬೆಳಕಿನಲ್ಲಿ, ವಿಶಿಷ್ಟದ (ಕತ್ತಲೆಯ) ಅರ್ಥವು ಆಗಬಲ್ಲುದು. ವಿಶಿಷ್ಟವು ಜೀವಿತಕ್ಕೆ ಸೀಮಿತ. ಸಾಹಿತ್ಯ ಕಲಾಕೃತಿಗಳು ನರಪಾತಳಿಯ ಅಸ್ತಿತ್ವವನ್ನು ಚಿತ್ರಿಸಬಲ್ಲವು. ಆದರೆ, ಸಾಹಿತ್ಯವು ಜೀವನದ ಪ್ರತಿಬಿಂಬ ಎಂದು ಬಗೆಯುವಲ್ಲಿ ಆತ್ಮವಂಚನೆ, ಪರವಂಚನೆಯಾಗುವುದು ನಿಶ್ಚಿತವಿದೆ. ಜೀವನವನ್ನು ರೂಪಿಸುವ ವಿಶ್ವನಿಯಮ: ಕಾಲ-ಗತಿಯ ಸ್ವರೂಪದಲ್ಲಿ, ಭಾವಾತ್ಮಕ, ಅನುಭವಾತ್ಮಕ ಅಭಿಜಾತ ಅರ್ಥವಿಚಾರವು, ಈ ಬಾಳಿನಲ್ಲಿ ಹಾಸುಹೊಕ್ಕು ಆಗಿದೆ. ಈ ವಿಭಾಗತ್ರಯದ ಸಾಹಚರ್ಯದಲ್ಲಿ, ಈ ಜೀವನವು, ಸ್ಥಳಕಾಲದ ಸಂದರ್ಭ ನಿನ್ನೆ-ಇಂದುಗಳೊಳಗಿಂದ ಮುನ್‌ನಡೆದಿದೆ. ಜೀವಿತ-ಜೀವವನ್ನು ರೂಪಿಸುವ-ಪ್ರಚೋದಿಸುವ ಕಾಲಗತಿಯು ಸ್ಥಳ ಮತ್ತು ಕಾಲ ಈ ಅಭಾವವೇ ಸ್ಥಾಯೀ ಇರುವ ವಿಭಾಗದ್ವಯದ ಕತ್ತಲೆಯ ವೃತ್ತಾಕೃತಿಯ ರೂಪದಲ್ಲಿದೆ. ಇದು ಪ್ರಕಾಶತತ್ತ್ವದ ಸಾಹಚರ್ಯದಲ್ಲಿ ಸಾಗಿರುವ ಜೀವನದ ಸಂದರ್ಭದಿಂದ ಅರಿಕೆಯ ಅಳವಿನಲ್ಲಿ ಬರುತ್ತದೆ. ಇದಕ್ಕೆ ಪ್ರತಿಯಾಗಿ, ಜೀವಿತದ ಜೀವದ ಕತ್ತಲೆಯ ಭೂಮಿಕೆಯಿಂದ, ಮಾನವನ ಜೀವನದ ನೆಲೆ ನಿಲುಕಲು ಶಕ್ಯವಿಲ್ಲ.

ಭಾಷೆಯ ಆಕೃತಿಸ್ವರೂಪದ ಭೂಮಿಕೆಯಿಂದಲೂ ಈ ವಿಶ್ವನಿಯಮವನ್ನು ಗ್ರಹಿಸಿಕೊಳ್ಳಲು ಶಕ್ಯವಿದೆ. ಭಾಷೆಯಲ್ಲಿ ಭಾವಾತ್ಮಕ ಅಭೀದ್ಧಾತ್ ಸ್ವರೂಪದ ಅರ್ಥ=ವಿಚಾರದ ಪಾತಳಿಗೇ ಪ್ರಾಶಸ್ತ್ಯವಿರುವಾಗ, ಅಭಾವಾತ್ಮಕ ಹಾಗೂ ಕತ್ತಲಿನ ಹಿನ್ನೆಲೆಯ, ಅಂತರ್ ವಿಸಂಗತ ಅರ್ಥ=ವಿಚಾರಗಳು ಇದ್ದರೂ, ಇವಕ್ಕೆ ಸ್ವತಂತ್ರ ಅಸ್ತಿತ್ವ, ಸ್ಥಾನವು ಇರುವುದಿಲ್ಲ. ಇದು ಮನು:ವೈವಸ್ವತನು ಪ್ರಭಾವಶಾಲಿಯಾಗಿ ಇರುವ ವರೆಗಿನ ಭಾಷೆಯ ಸ್ವರೂಪ, ಜ್ಞಾತ ಭಾಷಿಕ ಆಕೃತಿಯ ಸಂದರ್ಭದಿಂದ ಇದನ್ನು ಗ್ರಹಿಸಿಕೊಳ್ಳಲು ಶಕ್ಯವಿದೆ. ಮನು=ವೈವಸ್ವತನ ಮನ್ವಂತರದಲ್ಲಿ 'ವಾಕ್' ಹೆಸರಿನಿಂದ ಮೈವೆತ್ತ ಭಾಷೆಯ ಆಕೃತಿಯು, ಮನು=ಸ್ವಯಂಭೂವಿನೊಡನೆ, ಈ ವಾಕ್‌ರೂಪ-ಪ್ರಕಾಶ ಪಾತಳಿಯ ಭಾಷೆಯು, 'ಗೀರ್‌ವಾಣ-ವಾಣೀ' ಹೆಸರಿನದು ಆಗುತ್ತದೆ. ವಾಣಿ ಇದು ಅಂತರ್-ವಾಣಿ=ವೈಯಕ್ತಿಕ ಪಾತಳಿಯ ಮೇಲೆ ಬರುತ್ತದೆ. ಸ್ವಯಂಭೂ ನರ(ಳ) ವರ್ಗಕ್ಕೆ 'ಅವರವರ ಅರ್ಥ=ವಿಚಾರ ಇದು ಅವರವರ ಪಾಲಿನ ಸತ್ಯ'ವಿದೆ. ಜೀವಿ=ಜೀವಿತಕ್ಕೆ ಹಿಂದೊಮ್ಮೆ ಅರ್ಥವಿದ್ದಿಲ್ಲ. ಜೀವಿ=ಜೀವಿತ=ಇದು ನರ(ಳ)ನ ಅಸ್ತಿತ್ವ.

ವೈವಸ್ವತ ಮನ್ವಂತರದಲ್ಲಿ ನರ(ಳ) ವರ್ಗಕ್ಕೆ ಮಾನವ ಭಾಷೆಯು ಇರಲಿಲ್ಲ. ಮೈಯಲ್ಲಿ (ವಾಣ-ವಾಣೀ) ಶಕ್ತಿಯ ಆವೇಶವಾಗಿ, ಗ್ರಹಿಸಿಕೊಳ್ಳಲಾಗುತ್ತಿದ್ದುದನ್ನೇ ಸತ್ಯ ಎಂದು ಬಗೆವ ಆ ವಾಡಿಕೆ, ನರ(ಳ) ಸಂಪ್ರದಾಯಗಳಲ್ಲಿ ಇಂದಿಗೂ ಎಂತೋ ಉಳಿದು ಬಂದಿದೆ. ಮಾನವಭಾಷೆಯನ್ನು ತನ್ನದಾಗಿಸಿಕೊಳ್ಳುವ ಹಂತದಿಂದ, ಈ ಪ್ರತಿಯೊಬ್ಬ ನರ(ಳ)ನ ಜೀವಿತವು, ಅವನ ವೈಶಿಷ್ಟ್ಯಯುಕ್ತ ಅಸ್ತಿತ್ವದ ಅರ್ಥಪಡೆಯುತ್ತದೆ. ಈ ಹಂತದಲ್ಲಿ ಅವರವರ ಅರ್ಥ, ಅವರವರ ಪಾಲಿನ ಸತ್ಯ ಆಗುತ್ತದೆ. ಭಾಷೆಯ ಭೂಮಿಕೆಯಿಂದಲೂ, ಭಾವಾತ್ಮಕ ಅಭೀದ್ಧಾತ್ (ಪ್ರಕಾಶ) ಪಾತಳಿಯ ಭೂಮಿಕೆಯ ಮಾತುಗಳ ಸಂದರ್ಭದಿಂದ, ಆಭಾವಾತ್ಮಕ, ಆಲೋಕದ (Imagination)' ಪಾತಳಿಯ (ಅಂತರಿಕ್ಷದ) ಕತ್ತಲೆಯ ಹಿನ್ನೆಲೆಯ ಅಂತರ್ ವಿಸಂಗತ, ಪ್ರೇರಣಾ ದ್ವಂದ್ವಾತ್ಮಕ ಪದಗಳು ಅರ್ಥಕ್ಕೆ ಎಟಕುಬಲ್ಲವು. ಉದಾ: ಅಮೃತ, ಪ್ರಾಣ, ಸಾವು ಮುಂ. ಅರ್ಥ=ಮೂಲ್ಯಗಳ ಸಂದರ್ಭದ ಜೀವನದ ಪಾತಳಿಯ ಮೇಲೆ, ಮನುಸಮಯದ ಹಿನ್ನೆಲೆಯ ಮೇಲೆ, ಮಾನವನ ಇತಿಹಾಸವು ಆಕಾರ ಪಡೆಯತೊಡಗುತ್ತದೆ. ಮಾನವನು ಇತಿಹಾಸದ ವಿಷಯವಾಗಿರುವಂತೆ, ಇತಿಹಾಸವನ್ನು ರೂಪಿಸಬಲ್ಲನು. ಈ ಅನನ್ಯ ಸಾಧಾರಣ ಶಕ್ತಿ ಬೇರೆ ಯಾವ ಪ್ರಾಣಿಗೂ ಇಲ್ಲ. ಆದಕಾರಣ, ನಿಜವಾದ ಇತಿಹಾಸ ಎಂದರೆ, ಇದು ಫಕ್ತ ಮಾನವೇತಿಹಾಸವೇ ಆಗುತ್ತದೆ.

ಆದರೆ, ನರ(ಳ) ವರ್ಗವು ಪ್ರಭಾವಶಾಲಿಯಾಗುವಾಗ ವಿಭಾಗತ್ರಯದ ಕಾಲಗತಿಯ ಆಗಾಮೀ ನಾಳೆಗಳತ್ತ ಸಾಗುವ ಮಾನವನ ಇತಿಹಾಸವು ಸ್ಥಗಿತವಾಗುತ್ತದೆ. ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ) ಈ ವಿಭಾಗದ್ವಯದ ಕತ್ತಲನ್ನು ಆಮಂತ್ರಿಸುವ ವೃತ್ತಾಕೃತಿಯ ಇತಿಹಾಸವು ಮೈದೋರುತ್ತದೆ! ಅಲ್ಲದೆ, ಪ್ರಾದೇಶಿಕ ಇತಿಹಾಸ, ಪ್ರಾಣಿ ವನಸ್ಪತಿಗಳ ಇತಿಹಾಸ. ಗಣಿತಶಾಸ್ತ್ರದ ಇತಿಹಾಸ ಇತ್ಯಾದಿ ಇತಿಹಾಸದ ನಾನಾ ಪ್ರಕಾರಗಳು ಇಂದು ಕಾಣಿಸಿಕೊಳ್ಳತೊಡಗಿವೆ. ಆದರೆ, ತತ್ತ್ವತಃ ಇವೆಲ್ಲವುಗಳಿಗಿಂತಲೂ ಮಾನವನು ವಿಷಯವಾಗಿರುವ ಇತಿಹಾಸದ ಹಿರಿಮೆ ಮತ್ತು ವೈಶಿಷ್ಟ್ಯವು ಎಂದೆಂದಿಗೂ ವಿಶೇಷ ಸ್ವರೂಪದ್ದೇ ಇದ್ದೀತು. ಮನು:ವೈವಸ್ವತನ ಮನ್ವಂತರದಲ್ಲಿ, ಮನು-ಸಮಯದ ಆಧಾರದ ಮೇಲೆ ಇತಿಹಾಸವು ಆಕಾರ ಪಡೆಯತೊಡಗುವ ಶಕ್ಯತೆಯನ್ನು ಯಾರೂ ಅಲ್ಲಗಳೆಯಲು ಶಕ್ಯವಿಲ್ಲ. ಇದು ನಿಜವಿದ್ದರೆ, ಭಾರತೀಯ ಮನುವಿನ ಪೂರ್ವಪರಂಪರೆಯಲ್ಲಿ, ಇತಿಹಾಸದ ನಿರ್ದೇಶ ದೊರೆಯಲೇ ಬೇಕಷ್ಟೆ? ಆದರೆ, ಭಾರತೀಯರಲ್ಲಿ, ಸಾಮಾಜಿಕ ಪ್ರಜ್ಞೆ, ಐತಿಹಾಸಿಕ ಪ್ರಜ್ಞೆ ಇದಾವುದೂ ಇಲ್ಲ, ಎಂಬ ಆಕ್ಷೇಪ-ಆರೋಪವೂ ಉಂಟಲ್ಲ? ಇದರ ಸಂಗಡವೇ ಇನ್ನೊಂದು ಪ್ರಶ್ನೆ. ವಿಶ್ವ-ನಿಯಮಕ್ಕೆ ಅನುಸರಿಸಿ, ವಿಕಾಸತತ್ತ್ವದ ಪ್ರಕ್ರಿಯೆಯಲ್ಲಿ, ಈ ಮಾನವ ಧರ್ಮ ಎಂಬುದು ಮೈದೋರಿದ್ದರೆ, ಜಾಗತಿಕ ಇತಿಹಾಸದಲ್ಲಿ ಬೇರೆ ದೇಶಗಳಲ್ಲೂ, ಸುಮಾರಾಗಿ, ಹೆಚ್ಚು ಕಡಿಮೆ ಮಾನದಿಂದ, ಭಾರತೀಯ ಸಂಸ್ಕೃತಿಯ ಸಂದರ್ಭದಿಂದ ಕಾಣುವ ದೃಶ್ಯವೇ, ಅಲ್ಲಿಯೂ ಸ್ಥೂಲವಾಗಿ ಕಾಣಲು ದೊರೆಯಬೇಕಲ್ಲವೆ?

ಈ ಪ್ರಶ್ನೆಯು ಅತ್ಯಂತ ಸಮರ್ಪಕವಿದೆ. ಭಾರತೀಯರಲ್ಲಿ, ಸಾಮಾಜಿಕ ಪ್ರಜ್ಞೆಯ ಅಭಾವವಿದೆ, ಎಂದು ಆಕ್ಷೇಪಿಸುತ್ತ ಬಂದಿರುವ ಪ್ರಮುಖ ಟೀಕಾಕಾರರು, ಪಾಶ್ಚಾತ್ಯರು. ಆದರೆ, ಅವರಲ್ಲಿ ರೂಢವಿರುವ 'Social Contract' ಎಂಬ ಪರಿಭಾಷೆಯು, ಅವರಲ್ಲಿ ಇದ್ದ ಸಾಮಾಜಿಕ ಪ್ರಜ್ಞೆಯ ಅಭಾವವನ್ನು ಬಯಲಿಗೆ ತರುತ್ತಿದೆ, social consciousness' ಎಂಬ ಆಶಯದು ಪರಿಭಾಷೆಯು ಇದೆ. ಆದರೆ Society : ಸಮಾಜ ಇದು ಅಸ್ತಿತ್ವದಲ್ಲಿ ಬಂದಿರುವ ಬಗೆಯನ್ನು ವಿಪರೀತ ರೀತಿಯಲ್ಲಿ ಗ್ರಹಿಸಿಕೊಳ್ಳಲಾಗಿದೆ: 'Social contract ಮೂಲಕ 'Society' ಅಸ್ತಿತ್ವದಲ್ಲಿ ಬಂದಿದೆ, ಎಂಬ ಈ ಗ್ರಹಿಕೆಯಲ್ಲಿ ವ್ಯಕ್ತಿವಾದೀ ನರ(ಳ)ರ ಜೀವನ ರೀತಿಯೇ ನೈಸರ್ಗಿಕ ಎಂಬ ಗ್ರಹಿಕೆಯು ಹುದುಗಿದೆ! 'ಸಮಾಜ' ಎಂಬುದು ಕೃತ್ರಿಮ; ವ್ಯಕ್ತಿ : ನರ(ಳ)ರು ತಮ್ಮ ಒಂದೊಂದು ಹಕ್ಕನ್ನು ಸಮಾಜದ ಸಲುವಾಗಿ ಬಿಟ್ಟುಕೊಡುವ ಕರಾರು ಒಪ್ಪಿಕೊಂಡದ್ದರಿಂದ, contract ದಿಂದ ಸಮಾಜ ಶಕ್ಯವಾಗಿದೆ! ಆದರೆ, ಈ ಗೃಹೀತವು ಸಂಪೂರ್ಣ ತಿರುವು ಮುರುವು ಇದು ಎಂಬುದನ್ನು ಗುರುತಿಸಿರುವ ಪಾಶ್ಚಾತ್ಯ ಪ್ರಾಜ್ಞರೂ ಇಲ್ಲದಿಲ್ಲ. ಇದು ಹೇಗೇ ಇರಲಿ, Social contract=ಕರಾರಿನಿಂದ ಸಮಾಜ ಶಕ್ಯವಾಗಿದೆ ಎಂಬ ಆಶಯದ

ಈ ಉದಾಹರಣದಿಂದ ಪಾಶ್ಚಾತ್ಯ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯಂತೆಯೇ, ವ್ಯಕ್ತಿವಾದೀ ಸ್ವಯಂಭೂ ಮನ್ವಂತರದ ಪ್ರಭಾವದೊಳಗಿಂದ ಹೊರಬೀಳುವ ಪ್ರಯತ್ನವನ್ನು ನಡೆಸಿದೆ ಎಂಬುದು ಮಾತ್ರ ನಿಶ್ಚಿತವಾಗಿ ಸಿದ್ಧವಾಗುತ್ತದೆ.

ಜೀವನದ ಅರ್ಥಗ್ರಹಣ ಪದ್ಧತಿಯಲ್ಲಿ ಆಗಿರುವ ಸ್ಥಿತ್ಯಂತರಗಳು ವಿಚಾರಾರ್ಹವಾಗಿವೆ. ಹಿಂದೊಮ್ಮೆ ಇಡಿಯದರ ಕಡೆಯಿಂದ ವಿಭಾಗದ ಕಡೆಗೆ ಸಮೀಕ್ಷಿಸುವ ಪ್ರಯತ್ನವು ಪ್ರಾರಂಭವಾಗಿತ್ತು. ಆದರೆ ಮಾನವೇತಿಹಾಸವನ್ನು ಈ ಭೂಮಿಕೆಯಿಂದ ಗ್ರಹಿಸಿಕೊಳ್ಳುವ ಪ್ರಯತ್ನಗಳು, ಮುಂದುವರಿಯಲಿಲ್ಲ. ಸಂಸ್ಕೃತಿ ಉದ್ಗಮಕೇಂದ್ರವು ಈಜಿಪ್ಟ್, ಎಂದು ಬಗೆದು, ಆ ಸಂಸ್ಕೃತಿಯು ಎಲ್ಲೆಡೆಗೂ ಪಸರಿಸಿತು, ಎಂಬ ಈ ಸಂಶೋಧನ ಪದ್ಧತಿಯು ಸದೋಷವೆಂದು ಕಂಡು ಬಂದು ತ್ಯಾಜ್ಯವಾಯಿತು. ಭೌಗೋಳಿಕ ಸ್ಥಳ-ಕಾಲದ-ಪರಿಸರಕ್ಕೆ ಪ್ರಾಧಾನ್ಯವನ್ನಿತ್ತು ಜೀವನಸಂಸ್ಕೃತಿಯ ಅರ್ಥಗ್ರಹಣವೂ ಸರಿಯಾದ ಕ್ರಮವಲ್ಲ, ಎಂದು ಈಗ ದೃಢಪಟ್ಟಿದೆ. ಸಾಮಾನ್ಯ-ಸಮಾನ-ಸಾಧಾರಣದಿಂದ ವಿಶಿಷ್ಟದ ಕಡೆಗೆ ನೋಡುವ ಅರ್ಥಗ್ರಹಣ ಪದ್ಧತಿಯು ಅತ್ಯಂತಿಕ ವಿಶಿಷ್ಟ-ವೈಶಿಷ್ಟ್ಯದ ದೃಷ್ಟಿಕೋನಕ್ಕೆ ಮಾನ್ಯವಾಗಲು ಶಕ್ಯವಿಲ್ಲ. ಈ ವಿಶಿಷ್ಟವಾದವು, ಎಷ್ಟು ವ್ಯಕ್ತಿಗಳೋ ಅಷ್ಟು ವಿವಿಧ ಸ್ವರೂಪದ್ದು ಆಗುತ್ತದೆ-ಆಗಿದೆ. ಇದುವೆ ನರ(ಳ) ಸಂಪ್ರದಾಯದ-ಸಂಪ್ರದಾಯಗಳ ಭೂಮಿಕೆ. 'ಕತ್ತಲೆ'ಯನ್ನು ಹಂಚಿಕೊಂಡು, ಅದನ್ನು ಭಾವುಕ ರೀತಿಯಲ್ಲಿ, ಬೌದ್ಧಿಕ ರೀತಿಯಲ್ಲಿ, ಸ್ಯಾತ್=ನಸ್ಯಾತ್, ಎಂಬೀ ಬಗೆಯ ತರ್ಕ ಅನುಮಾನಾದಿಗಳ ಬಲದಿಂದ ಯಾರಿಗೆ ಹೇಗೆ ರುಚಿಸುತ್ತದೆ, ಹಾಗೆ ಅವರವರು ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಮುಕ್ತರಿದ್ದಾರೆ. ವೈಯಕ್ತಿಕ ಮತ-ಸ್ವಾತಂತ್ರ್ಯ, ಸ್ವಾತಂತ್ರ್ಯ ವಾದಿಗಳ ಸಂಘ, ಆಧುನಿಕ ಸರ್ವಧರ್ಮ ಸಮ್ಮೇಳನ, ಈ ಧರ್ಮನಿಯಮ ಸಮಾನವಿರಲಾರದು. ಈ ನರಧರ್ಮ ಸಮ್ಮೇಲನದಲ್ಲಿ ಮಾನವಧರ್ಮವು ಅಭಾವದಿಂದ ಎದ್ದುಕಾಣುತ್ತದೆ. ಸಮಾನ, ಸಾಧಾರಣ, ಸಾಮಾನ್ಯ ಎಂಬೀ ಬಗೆಯ ನಿಯಮ=ಧರ್ಮ ಇದು ನಾನಾ ಸ್ವರೂಪದ್ದು ಆಗಲಾರದು. ನಿಯಮ=ಪ್ರಕಾಶ ಬೇರೆ ಅಲ್ಲ. ಈ 'ಮನು-'ಜ: ಮಾನವಧರ್ಮವು ಪ್ರಕಾಶತತ್ತ್ವದ ಆಧಾರದ ಮೇಲೆ ನಿಂತಿದೆ. ಇದು ಸನಾತನವಾಗಿ ಉಳಿಯಲು ಇದರ ಅಡಿಯಲ್ಲಿ, ಈ ಪ್ರಜ್ಞಾನೇತ್ರಕ್ಕೆ ಪ್ರತಿಯಾಗಿ, ದಿವ್ಯ ಚಕ್ಷು (ಕಣ್).-ದಿವ್ಯ ಅಕ್ಷ (ಗಣ್)ವನ್ನು ಇರಿಸಲಾಗಿದೆ ವೈಶಿಷ್ಟ್ಯದ ಕೊಬ್ಬು ಹೆಚ್ಚುವಾಗ ಏಕಾತ್ಮಕ ಕಣ್>ಗಣ್ ಇವೆರಡೂ ಬೇರೆಬೇರೆ ಆಗಿ ದೂರ ಸರಿಯುವಾಗ, ಪ್ರ-ಲಯವು ಅನಿವಾರ್ಯ.

ಜೀವನದ ಅರ್ಥವನ್ನು ಗ್ರಹಿಸಿಕೊಳ್ಳಬಲ್ಲ ಪ್ರಜ್ಞಾನೇತ್ರವು, ಬುಧರ-ವಿಬುಧರ ಬೌದ್ಧಿಕ ಭೂಮಿಕೆಯು ಪ್ರಭಾವಶಾಲಿಯಾಗುವಾಗ ಇಂಗಿಹೋಗುತ್ತದೆ. ಈ ನರನ ಬುದ್ಧಿ, ಜೀವನದ ತೊಡಕುಗಳನ್ನು ಬಿಡಿಸಿಕೊಳ್ಳುವಲ್ಲಿ ದಿಗ್‌ಭ್ರಾಂತಿಯನ್ನು ಎದುರಿಸುವ ಅನಿವಾರ್ಯತೆಯು ಉಂಟು. ಈ ಬುದ್ಧಿಯು ಇಂದು ಕಂಪ್ಯೂಟರ್ ಸೃಷ್ಟಿಸಿ ಸಮಸ್ಯೆ ಬಗೆಹರಿಸಿಕೊಳ್ಳುವ ದಾರಿಯನ್ನು ಕಂಡುಕೊಂಡಿದೆ. ಇಂದು, ಕಂಪ್ಯೂಟರ್ ಇದಕ್ಕೆ ಪ್ರಜ್ಞಾನೇತ್ರದ ಸ್ಥಾನವು ಪ್ರಾಪ್ತವಾಗುತ್ತಲಿದೆ. ಮದುವೆಯನ್ನು ಕಂಪ್ಯುಟರದ ನೆರವಿನಿಂದ ಗೊತ್ತುಪಡಿಸುವ ದಿಕ್ಕಿನಲ್ಲಿ ನಡೆದಿದ್ದೇವೆ. ಅಭಿಜಾತ,-ಕೃತಕ ಇವೆರಡರೊಳಗಿನ ಅಂತರವು ಇಲ್ಲವಾಗುವ ಹಂತವನ್ನು ಸಮೀಪಿಸಿದ್ದೇವೆ. ಮಾನವನ ಜೀವನಾನುಭವಗಳನ್ನು ಅರಹುವ 'ಇತಿಹಾಸ'ದ ಸ್ಥಾನವನ್ನು ಬಾಳದೇಗುಲದ ಗರ್ಭಗುಡಿಯೊಳಗಿನ ಮಿಣುಕು ನಂದಾದೀಪವು ಆಕ್ರಮಿಸಬಯಸಿದೆ. ಕಾವ್ಯಕಲಾತ್ಮಕ ದೃಷ್ಟಿಯ ಪ್ರಿಝಂ ಲೋಲಕದೊಳಗಿಂದ ಕಾಣುವ ವರ್ಣರಂಜಿತ ಚಿತ್ರವು, ಲೋಕದ ಜನದ ಮಾರ್ಗದರ್ಶಕವಾಗುವಾಗ, ಈ ಕಾವ್ಯ, ಏಕಾಕ್ಷಶುಕ್ರನಿಗೆ, ಪ್ರಜ್ಞೆಯನ್ನೇ ಲೈಂಗಿಕ ಚಿತ್ರಣಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದೇನೆ ಎಂಬ ಅರಿವು ಉಳಿಯುವುದಿಲ್ಲ.

ಪತಂಗಂ ಅಕ್ತಂ ಅಸುರಸ್ಯ ಮಾಯಯಾ।
ಹೃದಾ ಪಶ್ಯಂತಿ ಮನಸಾ ವಿಪಶ್ಚಿತಃ[೨]

ಇಲ್ಲಿ, ಚಂದ್ರನು, ಸೂರ್ಯನಾಗ ಬಯಸಿದ ಸಾಹಿತ್ಯ ಕಲಾಕೃತಿಯ ಚಿತ್ರವಿದೆ. ಭೌತಶಾಸ್ತ್ರಗಳು ಪ್ರತಿ ಸೂರ್ಯನನ್ನು ನಿರ್ಮಿಸುವ ಹಂಬಲದ ಸೂಚನೆಯೂ ಇಲ್ಲಿ ಇದೆ.

ಭಾರತೀಯ ಸಂಸ್ಕೃತಿಯ ಅಧಃಪಾತದ ಕಾರಣಗಳು, ಈ ಸಂಸ್ಕೃತಿಯೊಳಗಿನ ಇತಿಹಾಸದ ಆಕೃತಿಯು ಪುರಾಣದ ಆಕಾರಕ್ಕೆ ತಿರುಗಿರುವ, ಇತಿಹಾಸದ ಬೆಳಕಿನಲ್ಲಿ ಕಾಣಲು ದೊರೆಯುತ್ತಿವೆ. ಇದರಲ್ಲಿ ತಥ್ಯಾಂಶವು ಉಂಟೆ, ಎಂಬುದನ್ನು ಪ್ರಾಜ್ಞರು ಪರಾಮರ್ಶಿಸಬೇಕಾಗಿ ಬಿನ್ನಹ. ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ) ಈ ವಿಭಾಗದ್ವಯದ ಸಂದರ್ಭದ ಅಸ್ತಿತ್ವಕ್ಕೆ, ಅದರದೇ ಆದ ಒಂದು ಪರಿಮಿತ ಸ್ಥಾನವು ಇದ್ದೇ ಇದೆ. ಆದರೆ, ಇದು ಅಭಾವದೊಳಗಿನ ಸ್ಥಾಯೀ! ಭಾವಾತ್ಮಕ ಅಸ್ತಿತ್ವದ ಸಂದರ್ಭದಿಂದ ಮಾತ್ರ ಅದಕ್ಕೆ ಸ್ಥಾನವು ಉಂಟು. ಈ ಮಾನವನ ತೂಕ-ಲೆಕ್ಕ-ಎಲ್ಲಿ ತಪ್ಪುತ್ತಿದೆ. ಇದೂ ಈ ಸಮೀಕ್ಷೆಯಲ್ಲಿ ಹೊರಪಡುತ್ತಿದೆ. 'ಅಭಾವಾತ್ಮಕ ಸ್ಥಾಯಿ' ಇದಕ್ಕೆ ನಿಸರ್ಗಸ್ಥ ವಿಶ್ವ ನಿಯಮದಲ್ಲಿಯೇ ಸ್ಥಾನವಿದೆ. ಸ್ಥಲ ಮತ್ತು ಕಾಲ ಒಂದರವೇ ಎರಡು ರೂಪ. ಸ್ಥಲವು ಮೂರ್ತ ವೃತ್ತಾಕೃತಿಯಲ್ಲಿ ಕೃಷ್ಣವಿವರರೂಪದಲ್ಲಿ ಉಂಟು. ಆದರೆ 'ಭಗವಾನ್' ಕೃಷ್ಣರೂಪೀ ಲಿಂಗಶಕ್ತಿಗೆ ಸ್ವತಂತ್ರಸ್ಥಾನವೇ ಇಲ್ಲ. ಆದರೂ, ಈ ಅತ್ಯಂತ ಅಭಾವವನ್ನು ಸ್ಥಾಯಿ ಆಗಿಸುವ ಅವ್ಯಾಪಾರೇಷು ವ್ಯಾಪಾರದ ಮಂಗಾಟದಲ್ಲಿ ಕುಮಾರೀಮಾತಾ ಪುತ್ರನ ಸೃಷ್ಟಿಯಲ್ಲಿ ಈ ನರ(ಳ)ನು ಜಾರಿ ಬೀಳುತ್ತಿದ್ದಾನೆ.

ಮಾನವನ 'ಇತಿಹಾಸ'ದ ವಿಕೃತಿಯ ಪ್ರಧಾನಕಾರಣ

'ಸ್ಥಾಯೀ' ಎಂದು ನಂಬಿಸಲಾಗಿರುವ ಅತ್ಯಂತಾಭಾವರೂಪ ಲಿಂಗ=ನಳ-ತತ್ತ್ವ! 'ನರ(ಳ)' ಈ ಪಾರಿಭಾಷಿಕ ಪದಕ್ಕಾಗಿ, ನಾನು, ವೇದ(?) ವ್ಯಾಸನಿಗೆ ಋಣಿ ಇದ್ದೇನೆ. ಭಗವತ್ ಗೀತೆಯಲ್ಲಿ, 'ಅರ್ಜುನ'=ಅಹಿ=ವೃತ್ರಹಂತಕನೆಂಬ ಸೌರಪ್ರಕಾಶ ತತ್ತ್ವದ ಇಂದ್ರನ ಅಂಶ(ಮನು) ಇವನನ್ನು : ಪ್ರಕಾಶ ಕಿರಣವನ್ನು 'ನರ' ಎಂಬ ಪರ್ಯಾಯ ನಾಮದಿಂದಲೂ ಸಂಬೋಧಿಸಲಾಗಿದೆ. ಈ 'ವ್ಯಾಸ'ನು, ಗ್ರೀಕ್-ಸಂಸ್ಕೃತಿಯೊಳಗಿನ ಗೋರ್ಜಿಯಾಸನು ಹೇಳಿರುವ, ದುರಂತವನ್ನು ಚಿತ್ರಿಸುವ ಮಹೋನ್ನತ ಕಲಾಕೃತಿಯನ್ನು ರಚಿಸಿರುವ ಅನನ್ಯ ಸಾಧಾರಣ ಮಹಾಕವಿ ಆಗಿದ್ದಾನೆ. 'justifiable deception'ಕ್ಕೆ ಈ ವ್ಯಾಸ-ವಾಲ್ಮೀಕಿಗಳನ್ನು ಮೀರಿಸಿದವರು ವಿರಳ. ಕಾಲಿದಾಸನೂ ಇವರ ಅಡಿಯಲ್ಲಿ ಅಡಿಯಿಟ್ಟು ಹೊರಟ ಒಬ್ಬ ಮಹಾಕವಿ. ಈ ಮಾತು ಬಂದದ್ದು ಏಕೆ? 'ಪ್ರಕಾಶಪುತ್ರ' ಅರ್ಜುನನ್ನು ನರ(ಳ) ಎಂದು ಹೆಸರಿಸಿ ಮನು-ಜತ್ವದ ಪಾತಳಿಯ ಜೀವನವನ್ನು ನರ(ಳ)ನ ಪಾತಳಿಯ ಜೀವಗಳ ಜೀವಿತದ ಹಂತಕ್ಕೆ ತಂದು ನಿಲ್ಲಿಸಿರುವಲ್ಲಿ ವ್ಯಕ್ತವಾಗುತ್ತಿರುವ ಮಾತಿನ ಚಾಕಚಕ್ಯದ ಸಂದರ್ಭದಿಂದಾಗಿ ವ್ಯಾಸನ ಕಲಾಕೃತಿಯ ಮೌಲ್ಯಮಾಪನವು ಅವಶ್ಯವಾಗುತ್ತಿದೆ.

ಗೀತೆಯಲ್ಲಿ ಇರುವ 'ಅರ್ಜುನ'ನು (ಬೃಹಲ್ಲಾಂಗನ) ಕಪಿಧ್ವಜನು 'ನರ'ನೆಂಬುದು ಇವನ ಪರ್ಯಾಯ ನಾಮವಲ್ಲ. ಇವೆರಡರೊಳಗಿನ ಅಂತಃಸಂಬಂಧವು. ಒಂದು ಸಮಸ್ಯೆಯೇ ಆಗುತ್ತಿದೆ! ಆದರೆ, 'ವಿರಾಟ್' ರಾಜನ ಅಂತಃಪುರದ, ಈ ಅರ್ಜುನನು 'ಬೃಹತ್ ನಳ'ನೆಂದು ಸಂಬೋಧಿಸಲ್ಪಡುವಲ್ಲಿ ಈ ಸಮಸ್ಯಾ ಪೂರ್ತಿ ಇದೆ! ವಿರಾಟನ 'ಅಂತಃಪುರದ'ದ ಲಲನಾಮಣಿಗಳಿಗೆ ನೃತ್ಯಶಿಕ್ಷಕನಾದ ಈ ಬೃಹತ್ ನಳ(ಡ)ನ ಬಗೆಗೆ, ಘಟಿಂಗತನದ ಸಂದೇಹಕ್ಕೆ ಅವಕಾಶ ದೊರೆಯದಂತೆ, ಒಂದು ಪವಾಡಕಥೆಯ ಲಾಭ ಪಡೆಯುವ ಚಾತುರ್ಯವು ಕೌತುಕಾಸ್ಪದವಿದೆ. ಈ ಅರ್ಜುನನು=ವೀರ-ವೀರ್ಯವಂತ, ಬೃಹತ್ ನಳ; ಆದರೂ ನಪುಂಸಕ! ಒಬ್ಬ ಅಪ್-ಸ್ರವೆ ಕಾಮರಸಂ ಭೋಂಕನೆ ಸೂಸೆ ತನ್ನ ಕಾಮನಾ ಪೂರ್ತಿಗೈಯುವುದಕ್ಕೆ ಕೊಟ್ಟ ಶಾಪದಿಂದಾಗಿ ಈ ಬೃಹತ್ ನಳ, ವಿರಾಟನ ಅಂತಃಪುರದಲ್ಲಿ ಇರುವ ಅವಧಿಯಲ್ಲಿ ನಪುಂಸಕನಾಗುತ್ತಾನಂತೆ!

ಈ ಕವಿಯನ್ನು 'ವೇದ'ವ್ಯಾಸ ಎಂದಿರುವಲ್ಲಿ, ಇವನು ಬಲ್ಲ, ಅಥವಾ ರಚಿಸಿದ ವೇದವು, 'ಹಯಗ್ರೀವ' (ಲಿಂಗ) ದೇವನಿಂದ 'ಅಸುರ'='ಹಯ-ಗ್ರೀವ'ನನ್ನು ಕೊಂದು ತಂದ 'ಲಿಂಗಮಾಹಾತ್ಮ್ಯ'ದ ವೇದವೇ ಇರಲಿಕ್ಕೆ ಬೇಕು. ಮಹಾಭಾರತವೆಂಬ ಪಂಚಮ ವೇದದೊಳಗಿನ 'justifiable deception ಇನ್ನೊಂದು ಮನೋಜ್ಞ ಮಾದರಿಯು, ಮೌಲಿಕ ಮಹತ್ತ್ವದ್ದಾಗಿದೆ. ಜೀವನದ ಅರ್ಥಮೂಲ್ಯಗಳ ಸಂರಕ್ಷಕ ಶಕ್ತಿ, ಅಹಿಃ ವೃತ್ರಹನ್ ಎಂಬ ಬಿರುದಿನ, 'ಶಿಶ್ನೋ ದೇವಾಃ' ಸಂಪ್ರದಾಯದ ಶತ್ರು, ಎಂಬ ಇಂದ್ರನನ್ನು, ಜೀವಿತದ ನಳರ ಪಾತಳಿಯ ಮೇಲೆ ತಂದು ನಿಲ್ಲಿಸಲು ಕಲ್ಪಿಸಿರುವ ವಿಡಂಬನಾತ್ಮಕ ಕಥೆಯು ಅಭ್ಯಸನೀಯವಿದೆ.

'ಇಂದ್ರಾಯ ತಕ್ಷಕಾಯ ಸ್ವಾಹಾ।

ಸರ್ಪಯಾಗದ ಕಥೆಯ ಗುಹ್ಯಾರ್ಥವನ್ನು ಗ್ರಹಿಸಿಕೊಳ್ಳುವುದು, ಇಲ್ಲಿ ಅವಶ್ಯವಾಗುತ್ತದೆ. ಸರ್ಪ-ನಾಗ ಇದನ್ನು ಹುಟ್ಟಿಗೂ-ಸಾವಿಗೂ ಕಾರಣವಿರುವ ಲಿಂಗಶಕ್ತಿಯ ಪ್ರತೀಕ ಎಂದು ಬಗೆಯಲಾಗಿದೆ. ವೇದದೊಳಗಿನ ತ್ವಷ್ಟ್ರಾ, ಮಹಾಭಾರತದ ತಕ್ಷಕ ಇಬ್ಬರೂ 'ಬಡಿಗ'ರೇ ವೇದದ ತ್ವಷ್ಟ್ರಾರನು ಚಾಚಿ (ಕೊಡಲಿ) ಕೈಯವನು (ವಾಶೀಹಸ್ತಃ) ಎಂಬ ವೈಶಿಷ್ಟ್ಯವುಳ್ಳವನು. ಕಂನಾಡ ಪರಿಭಾಷೆಯ 'ಗುಡಿ'ಗಾರ ಎಂಬ ಹೆಸರು ಔಚಿತ್ಯಯುಕ್ತವಿದೆ. ಪ್ರಕಾಶತತ್ತ್ವದ ಇಂದ್ರನು ಜೀವನದ ಪಾತಳಿಯ ಸಂರಕ್ಷಕ ವಿಶ್ವಶಕ್ತಿ, ಎನ್ನಬಹುದಾದಂತೆ ತ್ವಷ್ಟ್ರಾರ=ತಕ್ಷಕ ಇವನು, ಜೀವಿತವು ಸಂತವಾಗಿ ಉಳಿಯಲು ಅವತರಿಸುವ ನಾಗಲಿಂಗ ಶಕ್ತಿ: (ಚಾಂದ್ರಶಕ್ತಿ) ಎಂದು ಹೇಳಬಹುದಾಗಿದೆ.

'ಮಾನವ ಧರ್ಮ'ದಲ್ಲಿ ಇವೆರಡೂ ಪಾತಳಿಗಳನ್ನು ಸ್ವತಂತ್ರವಾಗಿ ಇರಿಸಲಾಗಿದೆ. ಅಭಾವವೇ ಸ್ಥಾಯಿ ಇರುವ ಈ 'ಜೀವಿತ'ದ-ಲೈಂಗಿಕಪಾತಳಿಗೆ 'ದಾಂಪತ್ಯಧರ್ಮ'ದ ರೂಪದಲ್ಲಿ ಇಂಬುಮಾಡಿ ಕೊಡಲಾಗಿದೆ. ಆದರೆ, ನರ(ಳ) ಸಂಪ್ರದಾಯಗಳಿಗೆ, ಲಿಂಗಶಕ್ತಿಗೆ, ಈ ಬಗೆಯ ಗೌಣಸ್ಥಾನವು ದೊರೆಯುತ್ತಿರುವುದು ಮಾನ್ಯವಿಲ್ಲ. ಜೀವನ (ಸೂರ್ಯ) ಮತ್ತು ಜೀವಿತ (ಚಂದ್ರ) ಇವೆರಡರಲ್ಲಿ ಅಂತರವನ್ನು ಕಾಣುವ ದೃಷ್ಟಿಕೋನವೇ ತಪ್ಪು, ಎಂದು ಸಿದ್ಧಪಡಿಸಲು ಅಹಿ=ವೃತ್ರಹನ್, ಶಿಶ್ನೋದೇವಾಃ ಶತ್ರು ಎಂಬ ಇಂದ್ರನನ್ನೇ ಇಂದ್ರಿಯದ ಪಾತಳಿಯ ಮೇಲೆ ತಂದು ನಿಲ್ಲಿಸಿದ್ದಾಗಿದೆ! ಇಂದ್ರಾಯ ತಕ್ಷಕಾಯ ಸ್ವಾಹಾ!

'ಸರ್ಪಯಾಗ' ಇದೊಂದು ಅಪೂರ್ವ ವಿಡಂಬಕ ರೂಪಕವಿದೆ. 'ಸರ್ಪ'ವು ಮೃತ್ಯುಶಕ್ತಿಯ ಪ್ರಚೋದಕ ಎಂಬುದು ಸರ್ವಮಾನ್ಯವಿದೆ. ಪ್ರಪಂಚದೊಳಗಿನ ಏನೆಲ್ಲ ಸರ್ಪಗಳನ್ನೇ ನಾಶಮಾಡಿದರೆ ಮೃತ್ಯುವು ಬರಲು ಹೇಗೆ ಶಕ್ಯ? ಎಂಬ ಲೆಕ್ಕ ಪರೀಕ್ಷಿತನದು. ಹಾವು ಕಚ್ಚಿ ನಿನಗೆ ಸಾವು ಬರಲಿ ಎಂದು ಪರೀಕ್ಷಿತನಿಗೆ ಒಬ್ಬ ಮೌನೇಯ ಮುನಿಯು ಶಾಪವಿತ್ತನಂತೆ! ಆಗ ಪರೀಕ್ಷಿತರಾಜನು, ನಾಡಿನೊಳಗಿನ ಎಲ್ಲ ಸರ್ಪಗಳನ್ನೇ ನಾಶಮಾಡುವ ಒಂದು ಯಾಗವನ್ನು ಆರಂಭಿಸುತ್ತಾದೆ. ಮೃತ್ಯುಶಕ್ತಿ: ನಾಗರಾಜ ತಕ್ಷಕ, ಇವನನ್ನು ಯಜ್ಞದಲ್ಲಿ ಬಲಿಕೊಟ್ಟರೆ ಮೃತ್ಯುವಿನ ಮೂಲವೇ ನಷ್ಟವಾಗುತ್ತವೆಂದು ಬಗೆಯಲಾಯ್ತು. ಈ ಯಾಗದಲ್ಲಿ ತಕ್ಷಕನನ್ನು ಬಲಿಗೊಡುವ ಆವಾಹನ ಮಂತ್ರದಲ್ಲಿ ತಕ್ಷಕನ ಜೊತೆಗೆ, ಇಂದ್ರವನ್ನು ಆಮಂತ್ರಿಸಲಾಗಿದೆ.

ವೈವಸ್ವತ ಮನು ಸಂಪ್ರದಾಯದ ಮಾನವಧರ್ಮದ ಸಂರಕ್ಷ ದೈವತ, ಈ ಇಂದ್ರತ್ರಿತ ಇಲ್ಲಿ ಇವರಿಬ್ಬರನ್ನೂ ಇಲ್ಲವಾಗಿಸಿದ್ದಾರೆ. ತ್ರಿತನ ಬಗೆಗೆ ಈ ಮೊದಲು ಹೇಳಿದ್ದಾಗಿದೆ. ಈ ಸ್ವಯಂಭೂ ನರ(ಳ) ಸಂಪ್ರದಾಯವು= ಕತ್ತಲೆಯು, ಪ್ರಕಾಶತತ್ತ್ವವನ್ನು ಸೋಲಿಸಿರುವ ಬಗೆಯು ಇದು! ಈ ಗೆಲುವಿನಲ್ಲಿ ಮಾತಿನ ಚಾಕ-ಚಕ್ಯ, ಮಾಟ, ಮೋಸವೇ ಉದ್ದಕ್ಕೂ ಕಂಡುಬರುತ್ತದೆ. ಜೀವನ ಸಂತತ; ಜೀವಿತ ಆಯುರ್ಮಾನಕ್ಕೆ ಸೀಮಿತ, ಜೀವಿತವು ಜೀವನವನ್ನು ಇಲ್ಲವಾಗಿಸುವಾಗ ಎಂತೂ ಬದುಕುವುದೇ ಬಾಳಗುರಿ ಆಗುವಾಗ, ಬಾಳಿನಲ್ಲಿ ಸಾಂಸ್ಕೃತಿಕ ಮೂಲ್ಯಗಳಿಗೆ ಇಂಬಿಲ್ಲದೆ ಭ್ರಷ್ಟಾಚಾರಕ್ಕೆ ಆಮಂತ್ರಣ ದೊರೆಯಲೇಬೇಕು. ಈ ದೃಶ್ಯವನ್ನು ಇಂದು ಎಲ್ಲೆಲ್ಲೂ ಕಾಣುತ್ತಿದ್ದೇವೆ. ಈ ಹಂತದಲ್ಲಿ ಜೀವನದ ಇತಿಹಾಸದ ಆಕೃತಿಯು, ಜೀವಿತದ (ಹುಟ್ಟು : ಸಾವಿನ) ಕಥೆಯ ಆಕಾರಕ್ಕೆ ತಿರುಗುತ್ತದೆ.

ಇತಿಹಾಸವು ಪುರಾಣದ ಆಕಾರಕ್ಕೆ ತಿರುಗುತ್ತದೆ.

ಇತಿಹಾಸ ಮತ್ತು ಪುರಾಣ ಇವೆರಡರ ಆಕೃತಿಗಳು ಬೇರೆ ಬೇರೆ ಸ್ವರೂಪದುವು ಆಗಲು ಕಾರಣವೇನು? ಇವೆರಡರ ಆಶಯವು ಬೇರೆಬೇರೆ ಬಗೆಯದೇ ಇರಲಿಕ್ಕೆ ಬೇಕು ಆಶಯದ ಹಿಂದಿನ ಅಭಿವ್ಯಕ್ತಿಗೆ ಪ್ರೇರಿಸುವ ಕೇಂದ್ರವೂ ವಿಭಿನ್ನವಿರದೆ ಇದ್ದರೆ ಇವೆರಡರ ಆಕೃತಿಗಳಲ್ಲಿ ಅಂತರವು ಕಾಣಿಸಿಕೊಳ್ಳುವ ಕಾರಣವೇ ಇರಲಿಲ್ಲ. ಈ ಮೊದಲು ಹೇಳಿರುವಂತೆ, ಇತಿಹಾಸ ಎಂಬುದು ಮನು-ಜನಿಗೂ ಮೊದಲು ಆಕಾರ ಪಡೆದಿರಲಿಲ್ಲ. ಆದುದರಿಂದ, ಮನುಷ್ಯನನ್ನು ರೂಪಿಸಿದ ಕಾಲಶಕ್ತಿಯೇ ಇತಿಹಾಸದ ಹಿಂದಿನ ಪ್ರೇರಣೆಗೂ ಕಾರಣವಿರಲಿಕ್ಕೆಬೇಕು. ಇತಿಹಾಸವು ಆಗಾಮೀ ನಾಳೆಗಳತ್ತ, ಸ್ಥಳ(ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ)ದ ಸಂದರ್ಭದ, ನಿನ್ನೆ-ಇಂದುಗಳ

ಆಚೆಗಿನ ಮಾನವ ಜೀವನದ ಪಾತಳಿಯ ಮೇಲೆ ಸಂಭವಿಸುತ್ತದೆ. ಆದುದರಿಂದ, ಈ ಇತಿಹಾಸದಲ್ಲಿ, ಮಾನವನ ವಿಕಾಸ-ಸಂಕೋಚದ ಏರಿಳಿತಗಳ ಆಲೇಖವು (graph) ಪ್ರತಿಬಿಂಬಿತವಿರುತ್ತದೆ. ತತ್ವಜ್ಞ ಕಾಂಟನ ಪ್ರಜ್ಞಾನೇತ್ರವು ಈ ಅಂಶವನ್ನು ಕಂಡಿದೆ. ಇತಿಹಾಸವು ಅಥವಾ ಐತಿಹಾಸಿಕ ಘಟನೆಗಳು 'noumena'ದ ಆಧಾರವುಳ್ಳವು ಗಳಾಗಿರುವುದರಿಂದ 'ಮನು-ಜನ ಮನಸ್ಸಿಗೆ ಆ ಐತಿಹಾಸಿಕ ಸ್ಮೃತಿ=ಸಮಯದ ಆಧಾರದ ಸ್ಮೃತಿ ಗ್ರಹಿಸಿಕೊಳ್ಳುವ ಸಾಮರ್ಥ್ಯವು ಪ್ರಾಪ್ತವಾಗಿದೆ. 'Noumena' ಇದು, ಪಾಶ್ಚಾತ್ಯ ಸಂಸ್ಕೃತಿಗೆ ಕಾಟನಿಂದ ಸಂದ ಪಾರಿಭಾಷಿಕ ಪದದ ಕಾಣಿಕೆ.

ಈ ಕಾಂಟನೇ ಸೂಚಿಸಿರುವಂತೆ, ನಿಜವಾದ 'ಮಾನವ' ಇತಿಹಾಸದ ಆಕೃತಿಯು ಯಾವಾಗಲೂ ನಾಳೆಗಳತ್ತ ಸಾಗಿರಬಲ್ಲ ಪ್ರಗತಿಪರವೇ ಇರಬೇಕು. ಆದರೆ, ಈ ಮನುಜರಲ್ಲಿ ನರ(ಳ) ಪ್ರವೃತ್ತಿಯವರೂ ಬೆರೆತಿದ್ದಾರೆ. ಆದಕಾರಣ ಇದು ಒಟ್ಟಿನಲ್ಲಿ ಪ್ರಗತಿಯ ದಿಕ್ಕಿಗೆ ಮುಖವಿರುವ ಇತಿಹಾಸದ ಆಕೃತಿ Progressive in character ಇರುತ್ತದೆ. ಆದರೆ, ಯಾವ ಜನಗಣದಲ್ಲಿ ಮನುಜರು ಅಲ್ಪಸಂಖ್ಯಾಕರಾಗಿ ನರ(ಳ)ರೇ ಶಿಷ್ಟರೂ, ಪ್ರತಿಷ್ಠಿತರೂ ಆಗುತ್ತಾರೋ, ಆ 'ಸ್ವಯಂಭೂ ಮನ್ವಂತರ'ದ ಇತಿಹಾಸವು ಸಂಪೂರ್ಣವಾಗಿ ಸ್ಥಲ (ದೇಹ) ಹಾಗೂ ಕಾಲ (ಪ್ರಾಣಲಿಂಗ ಚೇತದ) ರೂಪ ಈ ವಿಭಾಗದ್ವಯ ಸಂಪರ್ಕದಲ್ಲಿ, ಕತ್ತಲೆಯಿಂದ ಆವೃತ 'ಕೃಷ್ಣವಿವರ'ವು ವೃತ್ತಾಕೃತಿಯದೇ ಆಗಬಲ್ಲುದು. ಇಂಥ ಜನಗಣದಲ್ಲಿ ಪ್ರಾರಂಭವಾದ 'ಸಮಾಧೀ' ಪೂಜೆ=ಪುರುಷ ಪೂಜೆಯು ಅವರನ್ನು ಆ ಸತ್ತವರ ನೆರಳಲ್ಲಿಯೇ ನಡೆಯಲು ಒತ್ತಾಯ ಪಡಿಸುತ್ತದೆ. ಈ ಇತಿಹಾಸವು ವೃತ್ತಾಕೃತಿಯದಾಗಲೇ ಬೇಕು. ಪುರಾಣದ ಸಾಂಪ್ರದಾಯಿಕ ವ್ಯಾಖ್ಯೆ

'ಸರ್ಗಶ್ಚ, ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿ ಚ'

ಒಳಗೊಳ್ಳುವ ಪುರಾಣದ ಈ ಆಕೃತಿಯು ಕೆಲವೊಂದು ಐತಿಹಾಸಿಕ ಆಶಯವನ್ನು ಸ್ವೀಕರಿಸಿದೆ. ಇತಿಹಾಸದ ಬೆನ್ನೆಲುಬು ವಂಶ ಮತ್ತು ಮನ್ವಂತರವು=(ಯುಗಧರ್ಮ) ನಿಜವಾಗಿ ಪುರಾಣ ಕಥೆಯು, ದಿವ್ಯ ಪರಮಾತ್ಮಶಕ್ತಿಯ ಮಹಾತ್ಮ್ಯಕ್ಕೆ ಮೀಸಲಾಗಿರಬೇಕು. ಆದರೆ, ಮೇಲಣ ಈ ವ್ಯಾಖ್ಯೆಯಲ್ಲಿ ಪುರಾಣವು ತನ್ನ ಹದ್ದುಮೀರಿದೆ. ಇತಿಹಾಸದ ಕ್ಷೇತ್ರವನ್ನೂ ತನ್ನದಾಗಿ ಮಾಡಿಕೊಳ್ಳುವ ಈ ಪ್ರವೃತ್ತಿಯು ಇತಿಹಾಸಕ್ಕೆ ಇರುವ ಸ್ವತಂತ್ರ ಅಸ್ತಿತ್ವವನ್ನು ಇಲ್ಲವಾಗಿಸುವ ಹೊಂಚಿನ ಸೂಚಕವಾಗಿದೆ. ಮತ್ಸ್ಯ ಪುರಾಣಾದಿಗಳ ಈ ರಚನೆಗೂ ಮುಂಚಿನ ಕಟ್ಟಡವನ್ನು ಸಮೀಕ್ಷಿಸುವಾಗ, ವೈವಸ್ವತ-ಮನ್ವಂತರದ ಐತಿಹಾಸಿಕ ಸ್ವರೂಪದ ಅವಾಸ್ತವ ಘಟನೆಗಳನ್ನು ಪುರಾಣಕಥೆಯಲ್ಲಿ ಸೇರಿಕೊಳ್ಳುವ ಯೋಜನೆಯು ಇಲ್ಲಿ ಬಯಲಿಗೆ ಬರುತ್ತದೆ. ಮಸೀದೆಯನ್ನು ಕಟ್ಟಲು ಹಿಂದೂ(?) ದೇವಾಲಯಗಳ ಕಂಬ ತೊಲೆ ಮುಂತಾದವುಗಳನ್ನು ಬಳಸಿರುವ ಪ್ರಕಾರವು ಇಲ್ಲಿ ನೆನಪಿಗೆ ಬರುತ್ತದೆ. 'ವಂಶ' : ಐತಿಹಾಸಿಕ ರಾಜವಂಶಗಳನ್ನು ಪುರಾಣದ ದಿವ್ಯಕಥೆಗಳ ಅಂಗವಾಗಿಸಿಕೊಳ್ಳುವಲ್ಲಿ, ಇವು ತಮ್ಮ ವಾಸ್ತವ ಐತಿಹಾಸಿಕ ಹಿನ್ನೆಲೆಗೆ ಎರವಾಗುತ್ತವೆ. ಅಲ್ಲದೆ 'ಮನ್ವಂತರಾಣಿ' ಎಂದಿರುವ ಮಾತು ಇನ್ನೂ ಸಂಶಯಾಸ್ಪದವಾಗುತ್ತದೆ! ವಿವಸ್ವನ್>ವೈವಸ್ವತ ಮನ್ವಂತರದ ಅವಿಚ್ಛಿನ್ನ ಸ್ಮೃತಿಯು, ವೇದ ಅವೆಸ್ತಗಳಷ್ಟು ಪುರಾತನಕಾಲದಿಂದ, ಇಂದಿನ ಸಂಕಲ್ಪ ಮಂತ್ರ ಪಾಠದ ವರೆಗೂ ಒಂದೇ ಮನ್ವಂತರವು ಇರುವಾಗ ಮನ್ವಂತರಗಳು ಎಂಬ ಬಹುವಚನಾಂತ ಪ್ರಯೋಗವು, ಸಂಭ್ರಮದ ಕತ್ತಲೆಯನ್ನು ನಿರ್ಮಿಸುವ ನರ(ಳ) ಸಂಪ್ರದಾಯಗಳ ತಂತ್ರದ ಒಂದು ಮಾದರಿಯೇ ಸರಿ. ಮನುಗಳು ಹದಿನಾಲ್ಕು ಎಂದು ನಂಬಿಸಲಾಗಿದೆ. ಇವರಲ್ಲಿ ಸ್ವಯಂಭುವೇ ಆದಿಮಾನವನಂತೆ! ಆದರೆ ಈ ಮನುವಿನ ನಿರ್ದೇಶವು ವೇದದಲ್ಲಿ, ಅವೆಸ್ತದಲ್ಲಿ ಒಂದೆಡೆಗೂ ಇಲ್ಲ.

ಪಾರ್ಜಿಟರ್ (Pargiter) ಎಂಬ ಸಂಶೋಧಕನಿಗೆ, ಪುರಾಣಗಳು ಅಪಹರಿಸಿಕೊಂಡು ಆತ್ಮಸಾತ್ತಾಗಿಸಿ ಕೊಂಡಿರುವ ಐತಿಹಾಸಿಕ ರಾಜವಂಶಗಳ ಅಸ್ತಿತ್ವದ ಸಂದೇಹವು ಉಂಟಾಯಿತು. ಪುರಾಣರೂಪ ಸರ್ಪವು ಇತಿಹಾಸದ ಘಟನೆಗಳನ್ನು ನುಂಗಿ ಪಚನಮಾಡಿಕೊಳ್ಳುವ ಪ್ರಯತ್ನ ಪಟ್ಟಿದೆ. ಪಾರ್ಜಿಟರನು, ತನ್ನ ವಿಶ್ಲೇಷಣಾತ್ಮಕ ಸಂಶೋಧನ ಪದ್ಧತಿಯಿಂದ, ಪುರಾಣಗಳಲ್ಲಿ ಹುದುಗಿರುವ ಹಲವು ಮೌಲಿಕ ಐತಿಹಾಸಿಕ ಘಟನೆಗಳನ್ನು ಬೆಳಕಿಗೆ ತಂದಿದ್ದಾನೆ. ಆದಿಶಕ್ತಿ ಸ್ವರೂಪ ಅದಿತಿಯ ಪರ್ಯಾಯ ಏಕವೀರಾ ರೇಣುಕೆ=ಎಲ್ಲರಮ್ಮನ ಏಕಮಾತ್ರ

ಪುತ್ರ, ಭಾರ್ಗವ ರಾಮನನ್ನು ಐತಿಹಾಸಿಕ ವ್ಯಕ್ತಿ ಎಂದು ನಂಬಿಸುವ ಅಶ್ಲಾಘ್ಯ ಪ್ರಯತ್ನವು ಬಯಲಿಗೆ ಬಂದಿದೆ. ಡಾ. ಸುಕಟಣಕರರಿಗೆ, ಮಹಾಭಾರತದ ಸಂಶೋಧನದಲ್ಲಿ, ಈ 'ಭೃಗು' ವಂಶದ ಕೈವಾಡವೇ ಎಲ್ಲೆಲ್ಲೂ ಕಂಡುಬಂದಿದೆ. ಐತಿಹಾಸಿಕ-ಪುರುಷನೆಂದು ನಂಬಿಸುವ ಪ್ರಯತ್ನದ ಈ ಭಾರ್ಗವ ರಾಮ(ಚಂದ್ರ)ನು, ವ್ಯಾಸ (ಲಿಂಗ) ದೇವರಂತೆ ಸಪ್ತಚಿರಂಜೀವಿಗಳಲ್ಲಿ ಒಬ್ಬನಂತೆ! ಈ ಪುರಾಣಗಳ ವ್ಯಾಖ್ಯೆಯಲ್ಲಿ ವಂಶ ರಾಜವಂಶಗಳನ್ನು ಒಳಗೊಳ್ಳುವ ಪುರಾಣಗಳ ವ್ಯಾಖ್ಯೆಯಲ್ಲಿ, ಸರ್ಗ(ಸೃಷ್ಟಿ) ಮತ್ತು ಪ್ರತಿಸರ್ಗ (ಪ್ರಳಯ), ಈ ಹುಟ್ಟು ಸಾವಿನ ಭೂಮಿಕೆಯನ್ನು ಸ್ವೀಕರಿಸಲಾಗಿದೆ!

ಈ ಹುಟ್ಟು-ಸಾವಿನ ಸ್ಥಳ-ಕಾಲದ ಪರಿಮಿತಿಯಲ್ಲಿ ಸಿಕ್ಕುವ ರಾಜವಂಶಗಳೆಲ್ಲ ನರ(ಳ)ರ ಪಾತಳಿಯ ಜೀವನರೀತಿಯವೇ ಆಗಬಲ್ಲುವು! ಇದು ಜೀವಿಗಳ-ಜೀವಿತದ ಆಕೃತಿ. ಜೀವನದ ಪಾತಳಿ ಅಲ್ಲ. ವೈವಸ್ವತ ಮನುಪ್ರಣೀತ ಮಾನವಧರ್ಮ ಸಂಸ್ಕೃತಿಯ ಕಟ್ಟಡವನ್ನು ಕೆಡಹುವ ಬಗೆಬಗೆಯ ಪ್ರಯತ್ನಗಳು ಆಗಿವೆ; ಇವೆಲ್ಲವುಗಳಲ್ಲಿ ಅಂತಃಸಂಗತಿಯು ಉಂಟು. ಇವೆಲ್ಲವುಗಳಲ್ಲಿ, ಸ್ವಯಂ-ಭೂ ನರ(ಳ) ಸಂಪ್ರದಾಯಗಳ ಕೈವಾಡವಿದೆ. ಅ-ವಿಗಲಿತ ಸ್ಥಳ (ದೇಹ, ಮತ್ತು ಕಾಲ (ಪ್ರಾಣಲಿಂಗ ಚೇತಸಃ) ರೂಪ ಈ ವಿಭಾಗದ್ವಯದ ಅಥವಾ ಪಿಂಡ-ಬ್ರಹ್ಮಾಂಡ ಐಕ್ಯದ ಭೂಮಿಕೆಯ ಅಭಿನಿವೇಶವು ಅರಿಕೆಗೆ ಬರುತ್ತಿದೆ. ಈ ನರ(ಳ) ಸಂಪ್ರದಾಯಗಳು ಮಾನವಧರ್ಮದ ಕಟ್ಟಡವನ್ನು ಕೆಡಹಲು, ಎಷ್ಟು ನಿಟ್ಟಿನಿಂದ ಪ್ರಯತ್ನಪಟ್ಟಿವೆ, ಇದರ ಸಂಪೂರ್ಣ ಸಂಶೋಧನವು ಆಗುವ ಆವಶ್ಯಕತೆಯು ಇದೆ.

ಈ ಪ್ರಬಂಧದಲ್ಲಿ ಈ ಮೊದಲು ಅಲ್ಲಲ್ಲಿ ಇದರ ಅಲ್ಪಸ್ವಲ್ಪ ನಿರ್ದೇಶನವು ಬಂದಿದೆ.* ಆದರೂ ಮಾದರಿಗಾಗಿ, ವೈಶ್ವಾನರಾಗ್ನಿ (=ಸಮಾಜ ಸಮಷ್ಟಿಯ ಪ್ರತೀಕ) ಜಾತ ವೇದ, ಅಗ್ನಿ=ಪ್ರಜ್ಞೆ, ವಿವಸ್ವನ್-ಸೂರ್ಯ ಆದಿತ್ಯರಾಗುವುದು, ಇಂದ್ರನು ಇಂದ್ರಿಯವಾಗುವುದು, ತ್ರಿತನು ಹತನಾಗುತ್ತಾನೆ ಅಥವಾ 'ಕೂಪದಲ್ಲಿ ನೂಕಿದ್ದಾರೆ, ಏಕತ ಹಾಗೂ ದ್ವಿತರು! ಇತ್ಯಾದಿ. ಈ ಹಿನ್ನೆಲೆಯಲ್ಲಿ ಮಾನವಸಂಸ್ಕೃತಿಯೊಳಗಿನ 'ಇತಿಹಾಸ'ದ ಆಕೃತಿಯು ಪುರಾಣದ ಆಕಾರಕ್ಕೆ ಮಾರ್ಪಡುವಲ್ಲಿ ಯಾರ ಕೈವಾಡವಿರಬೇಕು ಎಂಬುದನ್ನು ಬಾಯ್ಬಿಟ್ಟು ಹೇಳುವ ಕಾರಣವೇ ಇಲ್ಲ. ಪ್ರಜ್ಞಾ (ಮಾನವ) ಪಾತಳಿಯನ್ನು, ಪ್ರಾಣಲಿಂಗದ (ನಳನ) ಪಾತಳಿಗೆ ತಂದು ನಿಲ್ಲಿಸುವ ಪ್ರಯತ್ನದಲ್ಲಿ ಇತಿಹಾಸವು, ಪುರಾಣದ ಆಕಾರಕ್ಕೆ ತಿರುಗಿದ್ದುಂಟು. ಇದಕ್ಕೆ 'ಪುರಾವೆ' ಎಲ್ಲಿದೆ?

ಇತಿಹಾಸವು ಪುರಾಣದ ಆಕಾರಕ್ಕೆ

'ಮಹಾಭಾರತ'ವನ್ನು ಇತಿಹಾಸ ಎಂದು ನಂಬಿಸಲಾಗಿದೆ. 'ಪಾಪಗಳು ಕ್ಷೀಣವಾಗಿ, ಪುಣ್ಯವು ಲಭಿಸುತ್ತದೆ' ಎಂಬ ನಂಬುಗೆಯಿಂದ ಪಾರಾಯಣ ಮಾಡುವ, 'ಮೋಕ್ಷದಾಯಕ' ಶಕ್ತಿಯಿದೆ ಎಂದು ನಂಬಿರುವ, ಈ ಮಹಾಭಾರತ, ರಾಮಾಯಣಗಳಲ್ಲಿ 'ಇತಿಹಾಸ'ವೂ ಇದ್ದರೆ ಅದು ಪುರಾಣದ ಆಕಾರದ ಇತಿಹಾಸವೇ ಆಗುತ್ತಿಲ್ಲವೆ? ಈ ಕಾರಣದಿಂದಾಗಿ, ಇತಿಹಾಸ=ಪುರಾಣ ಆಗಿದೆ ಎಂಬ ಮಾತಿಗೆ ಇದಕ್ಕೂ ಬೇರೆ ಪ್ರಮಾಣಗಳು ಬೇಕೇ? 'ಇತಿಹಾಸ' ಈ ಪಾರಿಭಾಷಿಕ ಪದವು ತನ್ನ ಮೂಲಾರ್ಥಕ್ಕೆ ಎರವಾದುದ್ದು ಹೇಗೆ? ಈ ಕಣ್ಕಟ್ಟಿನ ಚಮತ್ಕಾರದ ಎಡೆಯು ಎಲ್ಲಿದೆ? ಅಥರ್ವವೇದದಷ್ಟು ಪ್ರಾಚೀನ ಕಾಲದಲ್ಲಿಯೇ ಈ ಭಾರತೀಯರಿಗೆ 'ಇತಿಹಾಸ' ವಿಚಾರವು ಅರಿಕೆಗೆ ಬಂದಿತ್ತು. ಮತ್ತು 'ಇತಿಹಾಸ'ವು ಇದು ಪುರಾಣಗಳ ಗಾಥಾ, ಪ್ರಶಂಸೆ ಮುಂತಾದ ಅಭಿವ್ಯಕ್ತಿಯ ಪ್ರಕಾರಗಳಿಂದ ಭಿನ್ನ ಎಂಬುದನ್ನೂ ಅವರು ಅರಿತಿರಲಿಕ್ಕೇ ಬೇಕು. 'ವ್ರಾತ್ಯ' ಎಂಬುವನು 'ಇತಿಹಾಸಸ್ಯ ಚ, ಪುರಾಣಸ್ಯ ಚ, ಗಾಥಾನಾರಾಂಶಸ್ಯ ಚ ಪ್ರಿಯಂ ಧಾಮ ಭವತಿ' ಎಂದು ಹೇಳಿರುವಲ್ಲಿ ಇವನ್ನೆಲ್ಲ, ವಿಂಗಡಿಸಿ ಹೆಸರಿಸಲಾಗಿದೆ.

---

* "ಪ್ರವಾಹ ಪತಿತರ ಕರ್ಮ : ಹಿಂದೂ ಎಂಬ ಧರ್ಮ" ಈ ಪ್ರಕಟನೆಯಲ್ಲಿಯೂ ಕೆಲವು ಉಲ್ಲೇಖಗಳಿವೆ. ಮರಳಿ ಅವನ್ನು ಎತ್ತಿ ಹೇಳುವ ಆವಶ್ಯಕತೆ ಕಾಣುವುದಿಲ್ಲ.

ಭಾರತೀಯರಲ್ಲಿ 'ಐತಿಹಾಸಿಕ ಪ್ರಜ್ಞೆ ಇಲ್ಲ, ಇದ್ದಿಲ್ಲ', ಎಂಬ ಆಕ್ಷೇಪವು ನಿರಾಧಾರವಿದೆಯೆಂದು ಸಿದ್ಧಪಡಿಸಲು, ವೇದೋಪನಿಷತ್ತುಗಳಲ್ಲಿ ಬಂದಿರುವ ಇತಿಹಾಸದ ನಿರ್ದೇಶಗಳನ್ನು ನೇರವಾಗಿ, ಎತ್ತಿ ಹೇಳುವ ವಿದ್ವಾಂಸರು ಇದ್ದಾರೆ. ಡಾ. ಮಹಾಮಹೋಪಾಧ್ಯಾಯ, ಎಂ. ಮಿರಾಶಿ ಅವರ ಲೇಖನವನ್ನು ಓದಿ, ಮೆಚ್ಚಿ ಕೊಂಡವರಲ್ಲಿ ನಾನೂ ಒಬ್ಬ. ಅವರು ನಾಗಪೂರ ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದ ಪ್ರಮುಖರು, ಶಾಸನಸಂಗ್ರಹ ಹಾಗೂ ವಾಚನದಲ್ಲಿ ಅಖಿಲ ಭಾರತೀಯ ಕೀರ್ತಿಯವರು. ಶಿಷ್ಟಮಾನ್ಯವಿರುವ ಹಲವಾರು ಗ್ರಂಥಗಳ ಲೇಖಕರು. ಇವರ ಬಗೆಗಿನ ಅದರ, ವಿಶ್ವಾಸದಿಂದಾಗಿ, ಭಾರತೀಯರಲ್ಲಿ, 'ಇತಿಹಾಸ'ದ ಪೂರ್ವಪರಂಪರೆಯು ಇತ್ತು, ಎಂಬ ನಂಬುಗೆಯು ಉಂಟಾಗಿತ್ತು. ಆದರೆ, ಈ ಅನ್ವೇಷಣೆಯಲ್ಲಿ ಐತಿಹಾಸಿಕ ದೃಷ್ಟಿಯ ಅಭಾವವೇ ಎಲ್ಲೆಲ್ಲೂ ಎದ್ದು ಕಾಣತೊಡಗಿದಾಗ, ಡಾ. ಎಂ. ಮಿರಾಶಿಯವರು ಎತ್ತಿ ಹೇಳಿರುವ ಪ್ರಮಾಣಗಳನ್ನು ವಿಮರ್ಶಿಸಿ ನೋಡುವ ಆವಶ್ಯಕತೆಯು ಎದುರು ನಿಂತಿತು.

ಅಥರ್ವವೇದದ ವ್ರಾತ್ಯನು ಇತಿಹಾಸದ ತವರುಮನೆ ಎಂಬಲ್ಲಿ, ಈ ವ್ರಾತ್ಯನ ನಿಜಸ್ವರೂಪವು ಏನು, ಎಂಬುದನ್ನು ಅರಿಯುವುದು ಕರ್ತವ್ಯವಾಗುತ್ತದೆ. ಅಥರ್ವವೇದದಲ್ಲಿ ವ್ರಾತ್ಯನನ್ನು ವರ್ಣಿಸುವ ಒಂದು ಸೂಕ್ತವೇ ಇದೆ. ಆದರೆ, 'ವ್ರಾತ್ಯ' ಪದಕ್ಕೆ ಇರುವ ವಿವಿಧ ಅರ್ಥಛಾಯೆಗಳೂ ಅಭ್ಯಸನೀಯವಾಗಿವೆ. ವ್ರತಧಾರಿ ನೋಂಪಿಯನ್ನು ಆಚರಿಸುವ ತಪಸ್ವಿ, ಸಿದ್ಧ ಎಂಬ ಸೂಚನೆಯು ಈ ವ್ರಾತ್ಯನಲ್ಲಿದೆ. ವ್ರಾತ (mob) 'ನಿಯತಿ ನಿಯಮ ರಹಿತ' ಅನಿರ್ಬಂಧ, ಮುಕ್ತ, ಸ್ವೈರ ನಡೆವಳಿ ನುಡಿವಳಿಯ ಜನಜಂಗುಳಿಯ ನೇತಾರರು ವ್ರಾತ್ಯನು ಎಂದು ಬಗೆಯುವುದಕ್ಕೆ ಇಂಬಿದೆ. 'ವ್ರಾತಂ ವ್ರಾತಂ ಗಣಂ ಗಣಂ' ಆಗಿರುವ ಗಾಳಿದೇವರ ಬೃಹಲ್ಲಾಂಗಲ ಮರುತರ ಬಳಗದವನು, ಈ ವ್ರಾತ್ಯ, ಎನ್ನಲಿಕ್ಕೆ ಅವಕಾಶವಿದೆ. ಈ ವ್ರಾತ್ಯನನ್ನು ಸೃಷ್ಟಿಕರ್ತ 'ಬ್ರಹ್ಮನ್' ಮಟ್ಟದ ಸಿದ್ಧನೆಂದು ನಂಬಿಸುವ ಪ್ರಯತ್ನವು, ಅಥರ್ವವೇದದ ಈ ವರ್ಣನೆಯಲ್ಲಿ ಉಂಟು. ಸೃಷ್ಟಿಕರ್ತ=ಬ್ರಹ್ಮನ್ ಎಂದರೆ, ಇದು ಲಿಂಗವಿರಬೇಕು. ಬ್ಲೂಮ್‌ಫೀಲ್ಡ ಪ್ರಭೃತಿಗಳಿಗೆ, ಈ ವ್ರಾತ್ಯ, ಅಥರ್ವವೇದದ ಬ್ರಹ್ಮ-ಚಾರಿ ಇಬ್ಬರೂ ಒಂದೇ ಎಂದು ಕಂಡಿದೆ. ಋಗ್ವೇದದ ಕೇಶಿ, ನಿತ್ಯಮೌನೇಯ ಮುನಿಯೂ ವ್ರಾತ್ಯನ ಸಾಲಿನವನೇ ಆಗುತ್ತಾನೆ. ವ್ರಾತ್ಯ ಪದಕ್ಕೆ 'ಉಳಿಮುಟ್ಟದ ಲಿಂಗ' ಸ್ವಯಂಭೂ ಎಂಬ ಭಾವ ಮೂಡುವ-'ಸಂಸ್ಕಾರ ವಿಹೀನನು' ಎಂದೂ ಅರ್ಥವಿದೆ. ಋಗ್ವೇದದ ಮುನಿಗಳ ನಡೆವಳಿಯನ್ನು ಸೂಚಿಸುವ ವಾಕ್ಯವು ಚಿಂತ್ಯವಿದೆ. "ಅಪ್ಸರಸಾಂ ಗಂಧರ್ವಾಣಾಂ, ಮೃಗಾಣಾಂ ಚರಣೇ ಚರನ್" ಈ ವರ್ಣನೆಯಲ್ಲಿ ಲೈಂಗಿಕ ಮುಕ್ತಸ್ವಾತಂತ್ರ್ಯವು ಧ್ವನಿತವಿದೆ. 'ವಿಪರೀತಾ ಚರಣಶೀಲ' ಅವಧೂತರ ಮಾರ್ಗವಿದು.

ಆದರೆ, ವೇದದಲ್ಲಿ ವ್ರಾತ್ಯನ ಅಧ್ಯಾಹೃತವಿರುವ ಅರ್ಥವು, ಉಪನಿಷತ್ತುಗಳಲ್ಲಿ ಬಹಿರಂಗಕ್ಕೆ ಬಂದಿದೆ. ಪ್ರಶ್ನೋಪನಿಷತ್ತಿನಲ್ಲಿ ಈ ವ್ರಾತ್ಯನ ಮೂರ್ತ ಹಾಗೂ ಅಮೂರ್ತ ಉಭಯ ಸ್ವರೂಪವನ್ನು ವರ್ಣಿಸಲಾಗಿದೆ. ವ್ರಾತ್ಯಃ ತ್ವಂ ಪ್ರಾಣೈಕ ಋಷಿಃ! ಪ್ರಾಣ ಅಮೂರ್ತ, ಏಕ ಋಷಿ: ಮೂರ್ತ ಆಕೃತಿ. ಹೀಗೆ ಈ ವ್ರಾತ್ಯನು ಪ್ರಾಣ ಶಕ್ತಿಯಾಗಿದ್ದಾನೆ. ಈ ಅಮೂರ್ತ ಪ್ರಾಣಶಕ್ತಿಯನ್ನು, ಮಾನವನರೂಪದಲ್ಲಿ ಕಾಣುವಾಗ ಇದು ಮಾನುಷ ಲಿಂಗ=ನಳ(ನರ) ಆಗಲೇಬೇಕಷ್ಟೆ? ವೇದಕಾಲೀನ ಈ ಕವಿಗಳು ಕೇಶಿ ನಿತ್ಯ ಮೌನೇಯನನ್ನು ಮುನಿ ಎಂದು ಎನ್ನುವಾಗ, ಇದು ಲಿಂಗರೂಪೀ ವ್ರಾತ್ಯನ ವರ್ಣನೆಯೇ ಆಗುತ್ತದೆ. ಈ ಬಗೆಯ ವರ್ಣನೆಯ ಮೂಲಕ, ಅತ್ಯಂತ ಅಭಾವ ಸ್ವರೂಪ ಈ 'ಕಾಲ'ರೂಪೀ ಲಿಂಗಶಕ್ತಿಯನ್ನು ಭಾವಾತ್ಮಕ ಹಂತಕ್ಕೆ ತಂದು ನಿಲ್ಲಿಸುವ ಪ್ರಯತ್ನವು ಇಲ್ಲಿ ಬಯಲಿಗೆ ಬರುತ್ತದೆ. ಮೊದಲಲ್ಲಿ ಇದ್ದದ್ದು ಸ್ಥಲ-ಯೋನಿ: 'ಮಂಡಲ' ಪೂಜೆಯು ಮಾತ್ರ. ಆದರೆ, ನಿಸರ್ಗದಲ್ಲಿ ಸ್ಥಲ ಮತ್ತು ಕಾಲ ಇವೆರಡೂ ತೀರ ಬೇರೆಬೇರೆಯಲ್ಲ. ಆದರೆ, ಸ್ಥಲದ ಸಾಹಚರ್ಯದಲ್ಲಿ

---

* ಪುಣೆಯ ಸಿದ್ಧೇಶ್ವರಶಾಸ್ತ್ರೀ ಚಿತ್ರಾವ ಇವರ ಸನ್ಮಾನ ಗ್ರಂಥಕ್ಕಾಗಿ, ಪ್ರೊ. ಮಿರಾಶಿ ಅವರು ಬರೆದ ಲೇಖವು ಇದು. "A Review of the Indological Researches in the last 75 years" p. 507. ರಲ್ಲಿ ಪ್ರಕಟವಾಗಿದೆ.

ಕಾಲದ ಅಸ್ತಿತ್ವವನ್ನು ಅಧ್ಯಾಹೃತವಾಗಿ ಗ್ರಹಿಸಿಕೊಳ್ಳಲಾಗುತ್ತಿತ್ತು. ಆದರೆ ಮಂಡಲ=ದಿವ್ಯ ಚಕ್ಷು (ಕಣ್) ಉಪಾಸನೆಯು ಹಿಂದೆ ಬಿದ್ದು, 'ದಿವ್ಯ ಅಕ್ಷ' (ಗಣ್) ಆರಾಧನೆಯು ಪ್ರಾರಂಭವಾಗುತ್ತದೆ!

ಸಾಂಸ್ಕೃತಿಕ ಸ್ಥಿತ್ಯಂತರದ ಹಂತದಲ್ಲಿ, ಈ ಅತ್ಯಂತ ಅಭಾವಾತ್ಮಕವಾದ, ಮೊದಲ್ಲಲ್ಲಿ 'ಕಣ್' ಇದರಲ್ಲಿಯೇ ಒಳಗೊಳ್ಳುತ್ತಿದ್ದ ಲಿಂಗವನ್ನು ಗಣ್=ಅಕ್ಷ ಎಂದು ಬೇರ್‌ಪಡಿಸಿ, ಇದಕ್ಕೂ ಒಂದು ಸ್ವತಂತ್ರ ಸ್ಥಾನವು ಇದೆಯೆಂದು ನಂಬಿಸುವ ಮೋಸದ ಪ್ರಯತ್ನವು ಪ್ರಾರಂಭವಾದ ಸಮಯವು ಇದು. ವೈವಸ್ವತ ಮನುವನ್ನು ಹಿಮ್ಮೆಟ್ಟಿಸಿ, 'ಸ್ವಯಂ ಭೂ' ಮನ್ವಂತರವು ತಲೆಯೆತ್ತ ತೊಡಗಿದ ಹಂತವೇ ಇದು. ಅದಿತಿ=ಕುಮಾರೀ ಮಾತಾಪುತ್ರನು ಎಂಬ ಆದಿಯನು ವ್ರಾತ್ಯನ ಪರ್ಯಾಯವಾಗಿದ್ದಾನೆ. ಆದರೆ ಕುಮಾರಿಗೆ ಪುತ್ರನೆ? ಕುಮಾರಿ=ತಾಯ್ತನದ ಅಭಾವ; ಈ ಅಭಾವವು ಹೆತ್ತಮಗು ಈ ಆದಿತ್ಯ=ಅತ್ಯಂತ ಅಭಾವ! ಆದಿತ್ಯಾನಾಂ ಅಹಂ ಎಂಬ ವಿಷ್ಣು-ಕೃಷ್ಣರೂ ಅತ್ಯಂತ ಅಭಾವರೂಪ ಸ್ಥಾಯಿ ಆಗುತ್ತಾರೆ [O]. ಆದುದರಿಂದ ಭಗವಾನ್ ಎಂದು ನಂಬಿಸಲಾಗಿರುವ ಈ ಭಗಸ್ಥ ದೇವರು ಒಂದು ಮೋಸವಲ್ಲದೆ ಮತ್ತೇನು? ಪಾಶ್ಚಾತ್ಯರಲ್ಲಿಯೂ ಮೋಸದ ಈ ತಂತ್ರವಿದೆಯೋ! ಕುಮಾರೀ (ಮೇರಿ) ಪುತ್ರ ಎಂಬವನೂ ಒಬ್ಬ ಆದಿತ್ಯನೇ, ಆದರೆ ಆರಿಸ್ಟಾಟಲನು ಪೈಥಾಗೊರಾಸ ಪಂಥೀಯ ಈ ಮೋಸವನ್ನು ಬಹಿರಂಗಪಡಿಸಿದ್ದಾನೆ. ಬೆರಳಿಟ್ಟು ತೋರಿಸಿದ್ದಾನೆ?

> (Pythagoreans) invented a non-existent planet to make up the
> total to the Sacred number Ten"

ಇದು ಋಗ್ವೇದದ ಪುರಿ ಶಯ=ಪುರುಷ : ಗುಹೇಶ್ವರ : 'ದಶಾಂಗುಲ'ನ ಚಿತ್ರ! 'ಅಥರ್ವವೇದ'ದಲ್ಲಿ 'ಇತಿಹಾಸ'ದ ನಿರ್ದೇಶನವಿದೆ! ಎಂದು ನಂಬುವಲ್ಲಿ ಮಹಾಮಹೋಪಾಧ್ಯಾಯ ಡಾ. ಮಿರಾಶಿ ಅವರು ಹೀಗೆ ಮೋಸ ಹೋಗಿದ್ದಾರೆಂದು ನನ್ನ ಪುನರ್‌ವಿಮರ್ಶೆಯಲ್ಲಿ ಕಾಣತೊಡಗಿತು! ಉಪನಿಷತ್ತುಗಳೊಳಗಿನ ಬೇರೆ ಪ್ರಮಾಣಗಳಿಂದ ನನ್ನ ನಿಷ್ಕರ್ಷಕ್ಕೆ ಪುಷ್ಟಿ ದೊರೆಯುವುದರಿಂದ ಈ ವಿಷಯಕ್ಕೆ ನನ್ನ ಪಾಡಿಗಂತೂ ಸಂದೇಹವು ಉಳಿಯಲಿಲ್ಲ. ಜೈಮಿನೀಯ ಉಪನಿಷತ್ತಿನ ಈ ಉಲ್ಲೇಖ ನೋಡಬಹುದು[೩]

ವ್ರಾತ್ಯ : ಅಸಿಸಿ ಏಕ ವ್ರಾತ್ಯ, ಮತ್ತು ಇಲ್ಲಿ ಏಕ=ಋಷಿಃ=ವ್ರಾತ್ಯ! ಪ್ರಶ್ನೋಪನಿಷತ್ತಿನ 'ಋಷಿ'ಯನ್ನು ಇಲ್ಲಿ ವ್ರಾತ್ಯ ಎಂದು ಹೇಳಲಾಗಿದೆ. ಇದು ಇನ್ನೂ ಒಂದು ಬೇರೆ ಮೋಸ. ಮುನಿ, ಮತ್ತು ಯತಿ ಇವೆರಡೂ ನೇತಾರರ ಬಗೆಗಳೇ ಬೇರೆ. ಪ್ರಜ್ಞಾ: ಪ್ರಕಾಶದ ಉಪಾಸನಾ ಪರಂಪರೆಯ ವಿಶ್ವಾಮಿತ್ರನು ಋಷಿ ಸಂಪ್ರದಾಯದ ನೇತಾರನು. ವಿವಸ್ವನ್ ಮನು ಪ್ರಣೀತ ಮಾನವಧರ್ಮವನ್ನು ರೂಪಿಸಿರುವ ಶ್ರೇಯಸ್ಸು ಋಷಿಪರಂಪರೆಗೇ ಸಲ್ಲಬೇಕು. ಇವರು ಪ್ರಜ್ಞಾನೇತ್ರದ ಆರಾಧಕರು.

ಆದರೆ ನರ(ಳ) ಸಂಪ್ರದಾಯದ ನೇತಾರರು ಯತಿ-ಮುನಿಗಳು: ದಕ್ಷಿಣ ಕಪರ್ದ ವಸಿಷ್ಠನ ಪರಂಪರೆಯವರು. ದಿವ್ಯ ಚಕ್ಷುಸಿದ್ಧಿಗಾಗಿ ಅನುಷ್ಠಾನ ವ್ರತಗಳಲ್ಲಿ ಮಗ್ನರು,ಈ ಮೂಲಭೇದವು ಋಗ್ವೇದದಲ್ಲಿ ಉಳಿದಿಲ್ಲ! 'ಸಪ್ತರ್ಷಿ' ಎಂಬ ನಾಮರೂಪವು ಯತಿ ಮುನಿಗಳ ಹಂತದ್ದು ಆಗಿದೆ. ಅಥರ್ವವೇದದಲ್ಲಿ, ಋಷಿ ಮತ್ತು ವ್ರಾತ್ಯ ಈ ಅಂತರವು ನಷ್ಟವಾಯಿತು. ಭಾಷೆಯೊಳಗಿನ ಪದಗಳ ಔಚಿತ್ಯ-ಮೂಲ್ಯ ನಷ್ಟವಾಗುವಾಗ ಆ ಭಾಷಿಕರ ಅಧಃಪಾತನಡೆದಿದೆಯೆಂದು ನಿಶ್ಚಿತವಾಗಿ ತಿಳಿಯಬಹುದಾಗಿದೆ, ಉದಾ : ಸೂರ್ಯ=ಆದಿತ್ಯ=ಚಂದ್ರ, ಋಷಿ=ಮುನಿ, ವ್ರಾತ್ಯ! ಇಂದಿನ ಭಾರತೀಯರ ಅಧಃಪಾತದ ಮೂಲ ವೇದದಲ್ಲಿ ಇವೆ. ಜೈಮಿನೀಯ ಉಪನಿಷತ್ತಿನಲ್ಲಿ, ಈ ವ್ರಾತ್ಯನ ಬಗೆಗೆ ಇನ್ನೂ ಹೆಚ್ಚಿನ ಮಾಹಿತಿ ಇದೆ. ವ್ರಾತ್ಯನ 'ಅ-ನವ-ಸೃಷ್ಟಃ ಹೊಸದಾಗಿ ಸೃಷ್ಟಿಸಲ್ಪಟ್ಟವನಲ್ಲ ಎಂದರೆ ಈ ವ್ರಾತ್ಯನು ಸನಾತನ, ಸ್ವಯಂಭೂ ಲಿಂಗಶಕ್ತಿ ಇದು![೪] ಈ ಪ್ರಾಣ ಲಿಂಗ ರೂಪೀ ಕಾಲಶಕ್ತಿಯು, ಅಮೂರ್ತರೂಪದಲ್ಲಿ ಉಸಿರು=ಶ್ವಸನ! ಇದಕ್ಕೆ ಆಧಾರವು ಬೇಕಿಲ್ಲ? ಅತ್ಯಂತಾಭಾವ ಸ್ವರೂಪೀ ಈ ಲಿಂಗಶಕ್ತಿಯು ಇರುವ ಎಡೆಯಾವುದು? 'ದೇವನಾಂ ಬಿಲಂ'! 'ಬಿಲ' ಶಬ್ದವು, ಈ ಬಿಲದಲ್ಲಿ (ಗುದ್ದಿನಲ್ಲಿ ತೂತಿನಲ್ಲಿ) ಇರಬಲ್ಲ ದೇವರ, ಮತ್ತು ವ್ರಾತ್ಯನ ಆಕೃತಿಯನ್ನು ಗಮನಕ್ಕೆ ತಂದು ಕೊಡುತ್ತಿದೆ. ಅಹೋ! ಬಿಲ. (ಅಬ್ಬಾ ಯೋನಿಯೇ)

ಈ ಹೆಸರಿನ ದೇವಾಲಯವು ಮುಂಬೈಯಲ್ಲಿ ಇದೆ! ಶ್ರೀವೈಷ್ಣವ ಪಂಥೀಯರ ಪೂಜೆಸಲ್ಲುತ್ತದೆ! ಇವರ 'ಮೂರುನಾಮ' ಇದು ಬಿಲದ ಸೂಚಕವೊ? 'ಪುರಿ' 'ಪುರ' ಋಗ್ವೇದದಲ್ಲಿದೆ. ಅಹಿ=ವೃತ್ರ ಸ್ವರೂಪೀ ವ್ರಾತ್ಯನು ಹೊಕ್ಕು ಕೊಳ್ಳಿರುವ ಎಡೆ 'ಪುರಿ'. ಇದು ನಾಗ=ನರ(ಳ)ನ ಮನೆ-'ಹುತ್ತು' ವಾಲ್ಮೀಕಿಯು ನಾಗನೇ ಅಲ್ಲವೇ? ಗುಹ=ಗುಹೇಶ್ವರ! ಈ ಉಪನಿಷತ್ತಿನಲ್ಲಿಯೇ, 'ಬೆಣೆ'=ಸ್ಥೂಣರೂಪದ ವ್ರಾತ್ಯನ ಪವಾಡ ಸಿದ್ಧಿಯ ಸೂಚನೆಯು ಇದೆ.[೫]

ಸ್ಥೂಣಾಂ ಏವ ದಿವ ಸ್ತಂಭವನೀಂ ಸೂರ್ಯಂ ಆಹುಃ
ಅಂತರಿಕ್ಷೇ ಸೂರ್ಯಃ ಪ್ರಥಿವೀ ಪ್ರತಿಷ್ಠಾಃ

ಇದು ಸ್ತಂಭಕಾಲದ ವರ್ಣನೆ. ಸೂರ್ಯನು, 'ಸ್ವರ್' ಪಾತಳಿಯ ಕೆಳಗೆ ಅಂತರಿಕ್ಷಸ್ಥ ಟೊಳ್ಳಿನಲ್ಲಿ ಬಂದಿದ್ದಾನೆ! 'ಅಂತರಿಕ್ಷೇ ಸೂರ್ಯಃ' ಎಂದು ಕರೆಯಲ್ಪಡುತ್ತಾನೆ. ಈ ಸ್ಥೂಣ=ಬೆಣೆಯ ಆಕೃತಿಯ ಸೂರ್ಯನಿಗೆ=ವ್ರಾತ್ಯಲಿಂಗಕ್ಕೆ ಆಧಾರವು ಪೃಥುವೀ। ವ್ರಾತ್ಯ=ಆದಿತ್ಯ=ಸೂರ್ಯ=ಲಿಂಗ ಸಾಕ್ಷಾತ್ಕಾರವು ಇಲ್ಲಿದೆ. 'ಸೂರ್ಯಾ-ಚಂದ್ರಮಸೌ'=ಸೂರ್ಯ ಮತ್ತು ಚಂದ್ರ ಏಕಕಾಲಕ್ಕೇ ಒಂದೆಡೆಗೇ ಇರುವ ಸಾಕ್ಷಾತ್ಕಾರವು, ಸೃಷ್ಟಿ-ನಿರ್ಮಾಣ ಕ್ರಿಯೆಯ ಅಂಗ-ಲಿಂಗದ ಯೋಗದಲ್ಲಿ ಆಗಬಲ್ಲದು. 'ಧಾತಾ ಯಥಾ ಪೂರ್ವಂ ಅಕಲ್ಪಮತ' ಎಂಬ ಈ ಧಾತಾ ಗರ್ಭಾಧಾನ ಮಂತ್ರದಲ್ಲಿದ್ದಾನೆ! ಪ್ರಪಂಚದ ಇತಿಹಾಸ ಉದ್ಗಮ ಕೇಂದ್ರವೇ ಇಲ್ಲಿ, ಇಲ್ಲವೆ? ನರ(ಳ) ಸಂಪ್ರದಾಯದ ಇತಿಹಾಸದ ಆಕೃತಿಯು ಇದು! ವ್ರಾತ್ಯನು, ಇತಿಹಾಸದ 'ಪ್ರಿಯಂಧಾಮ' ಸ್ವರೂಪನು ಆಗಿದ್ದಾನೆ ಎಂಬ ಅಥರ್ವ ವೇದಸ್ಥ ಉಲ್ಲೇಖದ ವಿವರಣೆಯು ಇಷ್ಟೇ ಸಾಕು. ಉಪನಿಷತ್ತುಗಳಲ್ಲಿ ಬರುವ ಇತಿಹಾಸದ ಉಲ್ಲೇಖಗಳ ವಿಚಾರ. 'ಛಾಂದೋಗ್ಯ' ಈ ನಾಮ-ರೂಪವು ಈ ಉಪನಿಷತ್ತಿನ ಆಶಯದ ಆಕೃತಿ ಸ್ವರೂಪವನ್ನು ಸೂಚಿಸುವ ಸಾಮರ್ಥ್ಯವುಳ್ಳದ್ದಾಗಿದೆ. ಛಂದ-ಛಂದಸ್ಸು ಎಂಬ ಮುಖ್ಯ ಪದದ ಅರ್ಥವು, ವೇದದ ಸಾರವೇ ಆಗಿದೆ. ಪ್ರಣವಃ ಛಂದಸಾಂ ಇವ ಎಂದು ಕಾಲಿದಾಸನು ಹೇಳಿರುವಲ್ಲಿ ಓಂಕಾರವು ಭಾರತೀಯ (ನರ) ಸಂಪ್ರದಾಯಗಳ ಮೂಲಮಂತ್ರವನ್ನು ಸೂಚಿಸಿದ್ದಾನೆ. ಈ 'ಓಂ' ಮಹಾತ್ಮ್ಯವನ್ನು ಹೇಳುವ ಸ್ವತಂತ್ರ ಉಪನಿಷತ್ತು ಒಂದು ಉಂಟು; ಇದರ ಹೆಸರು ಮಂಡೂಕ>ಮಾಂಡೂಕ್ಯ.

ಹಲ್ಲಿಲ್ಲದ ಕಪ್ಪೆ ಹಾವನ್ನು ನುಂಗಿತು ಎಂಬ ಕಂನಾಡ ಜನಪದದ ಗಾದೆಯನ್ನು ಈ ಮೊದಲೊಮ್ಮೆ ಎತ್ತಿ ಹೇಳಿದ್ದಾಗಿದೆ. ಈ ಓಂಕಾರ ಧ್ಯಾನದ ನೆರವಿನಿಂದ ಸ್ಥಳ-ಕಾಲದ ಬಾಹ್ಯಪ್ರಜ್ಞೆ ನಷ್ಟವಾಗುತ್ತದೆ. ಈ ಕಾರಣದಿಂದ ಕಾಲಸರ್ಪ ನುಂಗುವ ಶಕ್ತಿ ಈ ಕಪ್ಪೆಯ ಮಂತ್ರದ ಧ್ಯಾನದಲ್ಲಿದೆ. ಈ ಓಂಕಾರ ವ್ರತಿಗಳು ಆತ್ಯಂತಿಕ ಅಹಿಂಸಾವ್ರತಿಗಳಾಗಲೇಬೇಕು. ಹಲ್ಲು ಇಲ್ಲದ್ದು ಎಂಬಲ್ಲಿ ಅತ್ಯಂತ ಅಹಿಂಸಾವ್ರತದ ಸೂಚನೆಯೂ ಇಲ್ಲಿ ಇರಬೇಕು. 'ವ್ರಾತ್ಯನು ಮತ್ತು ಇತಿಹಾಸ' ಇವೆರಡರ ಸಾಹಚರ್ಯದಲ್ಲಿ ಇತಿಹಾಸದ ಸ್ವರೂಪವೇ ಬೇರೆ ಆಗಿದ್ದುಂಟು. ಈ ಹಲ್ಲಿಲ್ಲದ ಕಪ್ಪೆಯ ಉಪನಿಷತ್ತು ಹೇಳುವ 'ಓಂ'ಕಾರವು ಪ್ರಣವ (ಪ್ರ+ನವ) ಮಂತ್ರ ಇದಕ್ಕೆ ನಿಶ್ಚಿತ ಅರ್ಥವಿಲ್ಲ. ಆಲೋಕದಲ್ಲಿ (imagination) ಈ ಅನಾಹತನಾದವನ್ನು ಕಿಮಿಯುವಾಗ ಏನೇನು ಭಾವತರಂಗಗಳು ಕಾಣಿಸಿಕೊಳ್ಳುವವೊ ಅವೇ ಅರ್ಥ, ಈ 'ನಾದ'ಕ್ಕೆ! 'ಕ್ಷಣೇ ಕ್ಷಣೇ ನವತಾಂ ಉಪೈತಿ' ಸ್ವರೂಪ ನವೋನವ ಅರ್ಥಭಾವಗಳನ್ನು ಕುದುರಿಸುವ ಅಂತಃಶಕ್ತಿಯು ಓಂಕಾರದಲ್ಲಿ ಇರುವುದಾಗಿ ಈ 'ದಿವ್ಯಚಕ್ಷುಃಸ್ಸಿನ ಉಪಸ್ಥಾನವ್ರತದಲ್ಲಿ ಅನುಭವಕ್ಕೆ ಬರುತ್ತದಂತೆ. ಮಂಡೂಕ=ನೀರಿನಲ್ಲಿ ಇರುವ ಪ್ರಾಣಿ ತಾನೇ? ಓಂಕಾರ=ಪ್ರಣವ ಮತ್ತು ಛಂದಸ್ ಇವೆರಡರೊಳಗಿನ ಅನ್ಯೋನ್ಯದಿಂದಾಗಿ ವೇದಗಳು 'ಸುರಸ'ವಾಗಿಯೇ ಇರಬೇಡವೇ? ಋಚಃ ಸಾಮಃ ರಸಃ । ಎಂದು ಈ ಛಾಂದೋಗ್ಯವು ಹೇಳುತ್ತದೆ!

ತತ್ ಏತತ್ ಮಿಥುನಂ ಓಂ ಇತಿ ಏತಸ್ಮಿನ್ ಅಕ್ಷರೇ ಸಂಸೃಜ್ಯತೇ ।

ಈ 'ಕಪ್ಪೆ' ಮಿಥುನ ಸ್ಥಾನ ಸೂಚಕವಿದೆ! ಛಾಂದೋಗ್ಯದಲ್ಲಿ ಬರುವ 'ಇತಿಹಾಸ'ದ ಆಕೃತಿಯು ಯಾವ ಬಗೆಯದು ಇರಬಲ್ಲುದು, ಎಂಬುದನ್ನು ಛಾಂದೋಗ್ಯದ ಒಟ್ಟಿನ ಆಶಯದ ಹಿನ್ನೆಲೆಯಲ್ಲೂ ಊಹಿಸಿಕೊಳ್ಳ

ಬಹುದಾಗಿದೆ. ಓಂ ಕಾರದ-ಛಂದೋಗಾನದ ಸಾಮವೇದದ ಅಂಗ ಈ ಛಾಂದೋಗ್ಯ. ಈ ಉಪನಿಷತ್ತಿನಲ್ಲಿ ಬರುವ ಇತಿಹಾಸದ ಉಲ್ಲೇಖಗಳ ಕಣ್ಕಟ್ಟಿನ ಮಾದರಿಗಳು :

ಇತಿಹಾಸ ಮತ್ತು ಪುರಾಣ

ಇತಿಹಾಸ-ಪುರಾಣಂ ಪುಷ್ಪಂ ತಾಃ ಅಮೃತಾಃ ಆಪಃ[೬] ಇತಿಹಾಸದ ವಿಷಯ ಮತ್ತು ಪುರಾಣದ ವಿಷಯ ಒಂದೇ ಬಗೆಯದಲ್ಲ. ಅಲ್ಲದೆ, ಇತಿಹಾಸದ ಆಕೃತಿಯ ಪುರಾಣದಂತೆ ಸರ್ಗ-ಪ್ರತಿಸರ್ಗಕ್ಕೆ ಸೀಮಿತವಲ್ಲ. ಅವಿಚ್ಛಿನ್ನ ಅರಿವಿನಲ್ಲಿನ ನಿನ್ನೆ → ಇಂದುಗಳು ಆಗಾಮಿ ನಾಳೆಗಳತ್ತ ಸಾಗಿರುವ ಸಮಾಜ ಸಮಷ್ಟಿಯ ಜೀವನ ಸಂದರ್ಭದ ಐತಿಹ್ಯ, ಪುರಾಣದ ಆಕೃತಿಯಿಂದ ತೀರ ಬೇರೆಯಿದೆ. ಆದರು, ಈ ಉಪನಿಷತ್ತಿನ ದಿವ್ಯಚಕ್ಷುಸ್ಸಿನ ಸಿದ್ಧನಿಗೆ, ಇತಿಹಾಸ - ಪುರಾಣರೂಪೀ ಒಂದೇ ಪುಷ್ಪ ಕಂಡಿದೆ! ಪುಷ್ಪ ಈ ನಾಮರೂಪವೇ ಪುಷ್ಕರ ಎಂದು ವೇದದಲ್ಲಿ ಇದೆ. ಇದು, ಅಲ್ಲಿ ಯೋನಿಯ ಪ್ರತೀಕವಾಗಿದೆ. ಈ ಪುಷ್ಪವೂ ಇಲ್ಲಿ ಅ-ಮೃತಾಃ ಆಪಃ ಜೀವಂತ ಜಲ ರೇತ ಉಳ್ಳದ್ದು ಎಂಬ ವರ್ಣನೆಯಿಂದಾಗಿ ಇದೂ ಯೋನಿಸ್ವರೂಪವೇ ಆಗುತ್ತಿದೆ: ತೇ ವಾ ಏತೇ. ಅಥರ್ವಾಂಗಿರಸಃ! ಏತತ್ ಇತಿಹಾಸ-ಪುರಾಣಂ ಅಭ್ಯತಪನ್ ಅಥರ್ವಕ್ಕೆ ಅಥರ್ವ-ಅಂಗಿರಸ ಎಂಬ ಇನ್ನೊಂದು ಹೆಸರೂ ಉಂಟು. ಭೃಗು ಅಂಗೀರಸರ ವೇದ ಎಂದೂ ಹೆಸರು ಇದೆ! ಅಂಗರಸಂ ಸಂತಂ ಅಂಗಿರಾ (ಅಂಗಿರಸಃ) ಇತ್ಯಾಚಕ್ಷತೇ ।[೭] ಅಂಗೀರಸೋ ವಾ ಅಂಗಾನಾಂ ರಸ :[೮]

ಈ ಅ-ಮೃತಸ್ಯ ನಾಭಿಃ ರೂಪ ಪುಷ್ಪವು ಯಾವ ವೃಕ್ಷದ್ದು? ಅಮೃತರಸದ ಈ ಪುಷ್ಪವು ಆದಿತಿ ಆಗುವಾಗ, ವೃಕ್ಷವು ದಕ್ಷ=ಆದಿತ್ಯ ವಿಷ್ಣು ವ್ರಾತ್ಯ ಆಗಲೇ ಬೇಕಲ್ಲವೆ? ಇಲ್ಲಿಯೇ ಆದಿತ್ಯನೂ ಇದ್ದಾನೆ. ಇದನ್ನು ಬ್ರಹ್ಮ-ಪುಷ್ಪಂ ಎಂದು ವರ್ಣಿಸಲಾಗಿದೆ. ಹೆಂ : ಬ್ರಹ್ಮ ಗಂ=ಬ್ರಹ್ಮ 'ಬ್ರಹ್ಮಚರ್ಯ' ಎಂಬ ಪದದಲ್ಲಿ ಬ್ರಹ್ಮನನ್ನು ಕುರಿತು ಹೋಗುವುದು, ಬ್ರಹ್ಮನನ್ನು ಕುರಿತು ಚರಿಸುವುದು ಎಂಬ ಅರ್ಥವು ಉಂಟು. ಓಂಕಾರವೇ ರಸರೂಪ ಸುರಸ ತತ್ತ್ವ! ಆದಕಾರಣ ಓಂಕಾರ ಪೂರ್ವಕ ಇರುವ ವೇದವು ಸರಸವಿರಲೇ ಬೇಕು. ವೇದಾಃಹಿ ರಸಃ[೯] ಛಾಂದೋಗ್ಯದೊಳಗಿನ ಇನ್ನೊಂದು ನಿರ್ದೇಶ, ಇದು ತುಂಬಾ ಮಹತ್ತ್ವದ ನಿರ್ದೇಶವಾಗಿದೆ. ನಾರ-ದನು ಸನತ್-ಕುಮಾರ ಗುರುವಿನಲ್ಲಿ ಬ್ರಹ್ಮ-ಜ್ಞಾನದ ಸಾಕ್ಷಾತ್‌ಕಾರಕ್ಕಾಗಿ ಬಂದಿದ್ದಾನೆ.[೧೦] ಇದರ ಆಳವು ಗೊತ್ತಾಗಲು, ಈ ಗುರುಶಿಷ್ಯರ ನಾಮರಹಸ್ಯವನ್ನು ಅರಿಯುವುದು ಅವಶ್ಯವಿದೆ

ಇಲ್ಲಿಯ ಈ ಜ್ಞಾನದ ಸ್ವರೂಪಕ್ಕೆ ಉಪನಿಷತ್ ಎಂದು ಇರುವ ಸಾರ್ಥ ಹೆಸರಿನ ಔಚಿತ್ಯವನ್ನು ನೇರವಾಗಿ ಹೇಳದೇ ತೇಲಿಸಿ ದೂರಾನ್ವಯದಿಂದ ಹೇಳಲಾಗುತ್ತದೆ. ಆದರೆ, ಉಪ-ನಿಷತ್ ಇದರಲ್ಲಿ ಇರುವ ಸದ್>ಸೀದ್-ನಿಷೀದ=ಕುಳ್ಳಿರು. ಇದು ಉಪ(ಹತ್ತಿರದಲ್ಲಿ) ನಿಷತ್ ಜ್ಞಾನ ಜ್ಞಾನವು ಇದು. ಆದರೆ ಈಗ ಇದನ್ನು ಓದಿ ಪಠನಮಾಡಿ ತಿಳಿಯಿತು ಎಂದು ಬಗೆವ ವಾಡಿಕೆಯಿದೆ! ಗುರುವಿನಿಂದ ದೀಕ್ಷೆ ಇಲ್ಲದೆ ಈ ಜ್ಞಾನಸಿದ್ಧಿಯು ಆಗಲಾರದು.' ಎಂಬ ನಂಬುಗೆ ಮೌಲಿಕವಿದೆ. ಆದಿಗುರುದೇವಿಯೇ ಇದ್ದಳು. ಕೇನೋಪನಿಷತ್ತಿನ ಉಮಾಹೈಮವತಿಯಂತೆ ಅಥವಾ ಕುಮಾರಿ ವಾಗಾಂಭೃಣಿಯಂತೆ ದೇವಿಯು ಪ್ರಸನ್ನಳಾಗಿ ಜ್ಞಾನದೀಕ್ಷೆಯನ್ನು ಕೊಡುವಾಗ ಲಭಿಸುತ್ತಿರಬಹುದಾದ ಪ್ರ-ಸಾದ ಹಾಗೂ ಈ ಗುರುವು ದಶಾಂಗುಲನೇ ದೇವರು ಆಗುವಾಗ ಇವನಿಂದ ದೊರೆಯಬಹುದಾದ ಪ್ರಸಾದ ಇವೆರಡರ ತೇಜಃಶಕ್ತಿ ಸ್ವಲ್ಪವೂ ಸಮಾನವಿರಲು ಶಕ್ಯವಿಲ್ಲ.

ಈ ಜ್ಞಾನದೀಕ್ಷೆಯ ವಿಚಾರವು ಅವಶ್ಯವೆನಿಸಿದ್ದೇಕೆ? ನಾರದ ಶಿಷ್ಯ ಹಾಗು ಸನತ್‌ಕುಮಾರ ಗುರು ಇವರಲ್ಲಿ, ಗುರುವು ಶಿಷ್ಯನಿಗೆ ಕೊಡುವ ಈ ದೀಕ್ಷೆಯ ಸ್ವರೂಪವು, ಇದಕ್ಕೂ ಮುಂಚೆ ಶಿಷ್ಟ-ಮಾನ್ಯವಿದ್ದ ಗುರು ದೇವಿಯಿಂದ ಲಭಿಸುತ್ತಿದ್ದ ಆ ಜ್ಞಾನದೀಕ್ಷೆಯ ಸ್ವರೂಪ, ಇವೆರಡೂ ಒಂದೇ ಬಗೆಯವು ಇರಲಾರವು. ಗುರುದೇವಿಯ ಮೂಲಕ ಲಭಿಸುತ್ತಿದ್ದ ದೀಕ್ಷಾವಿಧಿಯು ಶಿಷ್ಟಮಾನ್ಯತೆಗೆ ಎರವಾಗಲು ಕಾರಣವೇನು ಇರಬಹುದು, ಇದು ಹಾಗಿರಲಿ, ಪಸ್ತುತ, ಶಿಷ್ಯ ನಾರ-ದ ಮತ್ತು ಗುರು ಸನತ್-ಕುಮಾರ ಈ ನಾಮ-ರೂಪಗಳು ದಿವ್ಯಾಧಾತ್ಮದ ನಿಜಸ್ವರೂಪವನ್ನು ಬಯಲಿಗೆ ಎಳೆಯಬಲ್ಲವು. ಆದರೆ, ಈ ಹೆಸರಿನ ನೇರ ಅರ್ಥವನ್ನು ಹೇಳಲಾರದೆ ಬಚ್ಚಿಡುವ

ಪ್ರಯತ್ನವಾಗುತ್ತಿವೆ. ಉಪನಿಷತ್ ಜ್ಞಾನ=ನೇರ ದೀಕ್ಷೆಯಿಂದ ಸಾಕ್ಷಾತ್ಕಾರ: ದರ್ಶನವನ್ನು ಮಾಡಿಸಿ, ಪ್ರ-ಸಾದದ ಪ್ರ-ಸನ್ನತೆಯ ಅನುಭಾವವು ಉಂಟಾಗುವ ಜ್ಞಾನ, ಇದನ್ನು ಸುತ್ತುವರಿದು ಸೂಚಿಸಲಾಗುತ್ತದೆ. ವ್ರಾತ್ಯ ನಾಮರಹಸ್ಯವನ್ನು ವೇದದಲ್ಲಿ ಬಚ್ಚಿಟ್ಟು ಉಪನಿಷತ್ತುಗಳ ಸಂದಿನಲ್ಲಿ ಅಲ್ಲಿಷ್ಟು, ಇಲ್ಲಿಷ್ಟು ಈ ರೀತಿಯಿಂದ ತಪ್ಪಿಸಾಟವು ನಡೆದುದನ್ನು ನೋಡಿದ್ದಾಯ್ತು. ಬರೆದಿಟ್ಟರೆ ಮಾತ್ರ ಇತಿಹಾಸ ಉಂಟು! ಈ ಗ್ರಹಿಕೆಯ ತೀರ ಸಂಕುಚಿತ ದೃಷ್ಟಿಯುಕ್ತವಾಗಿದೆ. ಇತಿಹಾಸವು ಸಂಭವಿಸಿದ್ದು. ಒಮ್ಮೆ ಸಂಭವಿಸಿದ್ದನ್ನು ತೊಡೆದು ಹಾಕಲು ಶಕ್ಯವಿಲ್ಲ. ಇದು ವಿಕೃತಗೊಳಿಸಿದಲ್ಲಿ ಆತ್ಮಹನನದ ಪರ್ಯಾಯದ ಕೃತಿಯಾಗಲಿದೆ.

ಇತಿಹಾಸ ಎಂಬುದು, ಆ ಜನದ ನಡೆವಳಿ ನುಡಿವಳಿಯಲ್ಲಿ ಹಾಸು ಹೊಕ್ಕಾಗಿ ಹಣೆದುಕೊಂಡಿದೆ. ಭಾಷಿಕ ಪದ-ಪ್ರಯೋಗಾದಿಗಳಲ್ಲಿ, ಉಡುಪು-ತೊಡಪುಗಳ ರೂಪದಲ್ಲಿ, ದೇವತಾನಾಮ, ಆಹ್ನಿಕ ಮುಂತಾದ ಎಡೆಗಳಲ್ಲಿ ಇತಿಹಾಸವು ಹುದುಗಿರುತ್ತದೆ. ಉದಾ: 'ಕೌಪೀನವಂತಃ ಖಲು ಭಾಗ್ಯವಂತಃ' ಎಂಬೀ ಬಗೆಯ ಜೀವನ ರೀತಿಯನ್ನು ಮೆಚ್ಚಿಕೊಂಡು ಜನಗಣದ ಇತಿಹಾಸವು ಯಾವ ಬಗೆಯದು ಇದ್ದೀತು? ವೇದಾಂತಿಗಳು ಹೇಳುತ್ತಾರೆ: ಸಂಸಾರವು ದಗ್ಧ-ಪಟದಂತಿದೆ! ಇವರ ಇತಿಹಾಸವೂ, ದಗ್ಧ-ಪಟದಲ್ಲಿ ಸುಟ್ಟರೂ ಕಾಣಬಲ್ಲುದು ಹೇಗೆ? ಮನು ಸಮಯ ಆಚಾರದ=ಧರ್ಮದ ವಿಧಾಯಕ ಸ್ವರೂಪದ ಅಂತಃಸಂಗತಿಯುಕ್ತ ಜೀವನಾನುಭವದ ಸೂಚಕವಿರುವ ಭಾಷಿಕ ಶಬ್ದಪ್ರತಿಮೆ, ಸಂಕೇತ ಪ್ರತೀಕಗಳ ತುಲನೆಯಲ್ಲಿ, ಅ-ಭಾವವೇ ಸ್ಥಾಯೀ ಆಗುವಾಗಿನ ಆಲೋಕದಲ್ಲಿ ಕಾಣುವ ವೈಚಿತ್ರ್ಯಗಳು ತಮ್ಮ ಕಥೆಯನ್ನು ತಾವೇ ಹೇಳತೊಡಗುತ್ತವೆ. ದಗ್ಧಪಟದಂತಹ ಸಂಸಾರಿಗಳ, ಆತ್ಮಹನನದ ಚಟದವರ ಸಂಸ್ಕೃತಿಯ ಮಟ್ಟವು ಯಾವುದು? ಇದು ಬರೆದಿಟ್ಟರೆ ಮಾತ್ರ ಗೊತ್ತಾಗುತ್ತದೆ ಎಂಬಲ್ಲಿ ಆತ್ಮವಂಚನೆಯು ಉಂಟು. ನರ(ಳ) ಸಂಪ್ರದಾಯಗಳು ಆತ್ಯಂತಿಕ ಅಹಿಂಸೆಯ ಆಧಾರದ ಸತ್ತ್ವದ ಉಪಸ್ಥಾನ ವ್ರತಗಳ ಮೂಲಕ, ಪರ್ಯಾಯದಿಂದ ಅನೈತಿಕ ಅನಾಚಾರಗಳನ್ನು ಪ್ರೇರಿಸುವ ತಂತ್ರ, ಮಂತ್ರಗಳನ್ನು ಪವಾಡ ಚಮತ್ಕಾರಗಳ ಆಶೆ ಹಚ್ಚಿ, ಜನಪ್ರಿಯವಾಗುವಂತೆ ಮಾಡಿವೆ. ಈ ಭ್ರಷ್ಟಾಚಾರಗಳು ಹೆಚ್ಚುತ್ತಿದ್ದರೂ ವೈವಸ್ವತ ಸಂಪ್ರದಾಯದ ನಿಯಂತ್ರಣವು ತೀರ ನಷ್ಟವಾಗಲು ಶಕ್ಯವಿಲ್ಲ. ಅಹಿಃ ವೃತ್ರನ ಶತ್ರು ಇಂದ್ರನ ಪ್ರತಿಮಾ ಭಂಜನವು ಒಂದಕ್ಕಿಂತ ಹಲವು ಬಾರಿ ಆಗುತ್ತ ಬಂದಿರುವ ಕಾರಣವೇನು?

ಸಾಹಿತ್ಯಿಕರ ನೆರವಿನಿಂದ ಈ ದಿವಾಧ್ಯಾತ್ಮವು ಸಾಮಾಜಿಕ ಹಂತದ ವಾಕ್ಕನ್ನು ವೈಯಕ್ತಿಕ ವಾಣ=ವಾಣೀ ರೂಪಕ್ಕೆ ತಂದು ನಿಲ್ಲಿಸಿದೆ. ಅವರವರ ಅರ್ಥ ಅವರವರ ಪಾಲಿನ ಸತ್ಯ! ದೇವರು=ಸತ್ಯ=ಅರ್ಥ ಇದು ವೈಯಕ್ತಿಕ ಪರಿಕಲ್ಪನೆ ಆಗುವಾಗ, ಇದು ಆ ಜನದ ಸಂಸ್ಕೃತಿ ಹಾಗೂ ಇತಿಹಾಸದ ಅಧಃಪಾತವಾದ ನಿಶ್ಚಿತ ಲಕ್ಷಣವಿರುತ್ತದೆ. ನಾರ-ದ ನಾರ-ಆಯನ ಮುಂತಾದ ನಾಮ-ರೂಪಗಳ ಮೂಲಾರ್ಥವನ್ನು ಬಚ್ಚಿಡಲಾಗಿದೆ. ಆದರೆ, ಈ ಅರ್ಥವು ನಮ್ಮ ತೀರ್ಥದ (ಪ್ರ-ಸಾದ) ರೂಪದಲ್ಲಿ ತೆರೆಯ ಮರೆಗೆ ಉಳಿದಿದೆ! ಆದರೆ, ಈ ಮೊದಲ ಅ-ಮೃತ: ಆಪ: ರಸದ ಪುಷ್ಪರೂಪವಾದ ಇತಿಹಾಸದ ಆಕೃತಿಯು, ಈ ಛಾಂದೋಗ್ಯದ ನಾರ-ದ ಸನತ್ ಕುಮಾರರ ಸಂದರ್ಭದಲ್ಲಿ ಉಲ್ಲೇಖಿತವಿರುವ ಇತಿಹಾಸದ ಆಕೃತಿಗೆ ಸುಸಂಗತವೇ ಇದೆ, ಎಂಬುದರ ಖಾತ್ರಿಯಾಗಲು, ನಮ್ಮ ಸಂಪ್ರದಾಯಸ್ಥ ಗುಹ್ಯ ಅರ್ಥವನ್ನು ಸಪ್ರಮಾಣವಾಗಿ ವಿವರಿಸುವುದು ಕರ್ತವ್ಯವಾಗುತ್ತಿದೆ.

ಡಾ. ಎಸ್. ರಾಧಾಕೃಷ್ಣರು ಹೇಳಿರುವ ನಾರದ ಸನತ್‌ಕುಮಾರ ಈ ಸಂಕೇತಗಳ ಅರ್ಥಗಳ ಮೂಲಕ, ಇಲ್ಲಿ ಉಲ್ಲೇಖಿಸಲ್ಪಟ್ಟಿರುವ ಇತಿಹಾಸವು, ಅ-ಮೃತ=ರಸ (ರೇತ) ಸ್ವರೂಪಿಯಾಗುತ್ತಿಲ್ಲ! ಆದುದರಿಂದ ಈ ಮೌಲಿಕ ಅರ್ಥದ ಸ್ಪಷ್ಟೀಕರಣವನ್ನು, ಅಭಿ-ಷೇಕ ತೀರ್ಥದ ಸಂದರ್ಭದಿಂದ ಗ್ರಹಿಸಿಕೊಳ್ಳಬಹುದಾಗಿದೆ. ನಮ್ಮ ದೇವರುಗಳೆಲ್ಲವೂ, "ವಾಕ್ ಅರ್ಥೌ ಇವ ಸಂಪೃಕ್ತೌ" ಎಂದರೆ, ಮಿಥುನಯೋಗದಲ್ಲಿಯೇ ಇರಬೇಕಾದ ಅನಿವಾರ್ಯತೆಯುಳ್ಳವು ಆಗಿವೆ. ಸ್ಥಲ ಮತ್ತು ಕಾಲ ರೂಪೀ ಪಿಂಡ-ಬ್ರಹ್ಮಅಂಡದ ಐಕ್ಯದಲ್ಲಿ ಇರುವ ಈ ದೇವರ 'ಅಭಿ-ಷೇಕ'ದ ತೀರ್ಥವನ್ನು, ಪ್ರ-ಸಾದವನ್ನು ಸ್ವೀಕರಿಸಿ ದಿನಾಲು ಸಂಭವಿಸುವ ಪಾಪಗಳಿಂದ ಮುಕ್ತವಾಗುವ ಹಂಚಿಕೆಯಿಂದಾಗಿ, ನಮಗೆ ಮತ್ತೆ ಹೊಸ ಪಾಪಮಾಡಲು ಪರವಾನಗಿ ಸಿಕ್ಕಂತೆಯೇ ಸರಿ. ಇದು ಹಾಗಿರಲಿ

ಅಭಿ-ಷೇಕ ಎಂಬುದರ ನಿಜವಾದ-ಮೂಲ ಅರ್ಥವನ್ನು ಲೆಕ್ಕಿಸಿದರೆ, ಇದು ಒಳಗಣಿಂದ ಚಿಮ್ಮುವ ಜಲ ಇರಬೇಕಾಗುತ್ತದೆ. ದೇವರ ಮೇಲೆ ಇರುವ ಅಭಿಷೇಕ ಪಾತ್ರದೊಳಗಿಂದ ನೀರು ಹನಿಯುವಂತೆ, ಈಗ ಏರ್ಪಾಟವು ಇರುತ್ತದೆ. ಆದರೆ, ಇದು ಅಭಿಷೇಕವಾಗುವುದಿಲ್ಲ. 'ಅಭಿ' ಉಪಸರ್ಗಕ್ಕೆ ಅಭಿ-ಮಾನ, ಅಭಿರುಚಿ ಇತ್ಯಾದಿ ಪದಗಳಲ್ಲಿ ಒಳಗಿನ ಎಂಬ ಅರ್ಥವು ಅಭಿ-ಪ್ರೇತವಿದೆ. ಮೇಲೆ ಕಟ್ಟಿರುವ ಅಭಿ-ಷೇಕ-ಪಾತ್ರದ ಛಿದ್ರದೊಳಗಿಂದ ಹನಿವ ಈ ಜಲವು ಹೊರಗಿನಿಂದ ಬೀಳುತ್ತದೆ; ಇದನ್ನು ನಿಷೇಕ-ಜಲ ಎನ್ನಬಹುದು. ಇದು ಅಭೀಸೇಕ=ಷೇಕವಲ್ಲ! ವಿಷ್ಣು-ಪಾದೋಕಂ ತೀರ್ಥಂ ಎಂಬ ಈ ಮಂತ್ರದಂತೆ ಶ್ರೀಲಕ್ಷ್ಮೀ ಸಹಿತ (=ಸ್ಥಳ-ಕಾಲದ) ಏಕಾತ್ಮಕ-ವಿಷ್ಣುವಿನ ಮೂರನೆಯ ಪಾದದಿಂದ ಬರುವ ಈ ಅಭಿಷೇಕ ಜಲವು ಯಾವ ಬಗೆಯದು ಇದ್ದೀತು? ಈ ತೀರ್ಥದಲ್ಲಿ ಹಾಲನ್ನು ಯೋಜಿಸುವಲ್ಲಿ ಇರುವ ಔಚಿತ್ಯವು, ಈ ತೀರ್ಥದ ಮೂಲಸ್ವರೂಪದ ನೆನಪನ್ನು ತಂದುಕೊಡಲು ಸಮರ್ಥವಿದೆ. ನಾರ-ದ-ಸನತ್ ಕುಮಾರ ಈ ಸಂಕೇತಗಳ ಅರ್ಥವಿವರಿಸುವ ಡಾ. ರಾಧಾಕೃಷ್ಣರಿಗೆ, ಈ ಜೋಡಿಯೊಳಗಿನ ಒಂದು ವಿಸಂಗತಿಯು ಗಮನಕ್ಕೆ ಬರದೇ ಇದ್ದು ಸೋಜಿಗದ ಸಂಗತಿಯಾಗಿದೆ. ನಾರ-ದನು ನಾರ-ಅಯನ ದೇವನ ಭಕ್ತನು ಎಂಬುದು ಸುಪ್ರಸಿದ್ಧವಿದೆ. ಇವೆರಡೂ ನಾರ (ಆಪ) ತತ್ವದ ಮೂರ್ತಿಗಳು. ನಾರಾಯಣನ ಭಕ್ತಿಯನ್ನು ಲೋಕದಲ್ಲಿ ಪ್ರಸಾರ ಮಾಡುವ ಕಾರ್ಯವು ನಾರ-ದನು. ಹೀಗಿರುವಾಗ, ಈ ನಾರ-ದನು ಸನತ್ ಎಂಬ ಕುಮಾರನ ಶಿಷ್ಯನಾಗಲು ಇಲ್ಲಿ ಬಂದಿದ್ದಾನೆ, ಎಂಬಲ್ಲಿ ಏನೋ ಕಣ್ಣು ಮುಚ್ಚಾಲೆಯ ಆಟವಿರಲಿಕ್ಕೆ ಬೇಕು. ಇದೆಲ್ಲ ಹಾಗಿರಲಿ.

ಭಾರತೀಯ ಸಂಸ್ಕೃತಿಯ ವ್ಯಾಸಂಗಿ ಡಾ. ಎಸ್. ರಾಧಾಕೃಷ್ಣರು ಮಾಸ್ಕೋದಲ್ಲಿ ಭಾರತದ ರಾಯಭಾರಿಯಾಗಿದ್ದಾಗ, ಉಪನಿಷತ್ತುಗಳ ಭಾಷಾಂತರದಲ್ಲಿ ಮಗ್ನರಾಗಿದ್ದರು! ಅವರು ಬರೆದಿರುವ The Principle upansihads ಎಂಬ ಗ್ರಂಥದ ನೆರವಿನಿಂದ, ನಾರದ-ಸನತ್ಕುಮಾರರ ಬಗೆಗೆ ಅರಿಯುವ ಪ್ರಯತ್ನ ಮಾಡುವುದು ಹೆಚ್ಚು ಲೇಸು. ನಾರದ ಮತ್ತು ಸನತ್ಕುಮಾರ ಈ ಹೆಸರುಗಳು ಐತಿಹಾಸಿಕ ಸ್ವರೂಪದವು ಅಲ್ಲ. "ಕೇವಲ ಸಾಂಕೇತಿಕ ಅರ್ಥದ ನಾಮರೂಪಗಳು" ಎಂಬ ಮಾತು ಪ್ರೊಫೆಸರ ರಾಧಾಕೃಷ್ಣರಿಗೆ ಮಾನ್ಯವಿದೆ. ಆದರೂ ಒಂದು ವಿಷಾದದ ಸಂಗತಿ, ಈ ಪ್ರೊಫೆಸರರಿಗೆ 'ಸಾಂಕೇತಿಕ ಪಾತ್ರ ಎಂದು ಗೊತ್ತಾಗಿಯೂ ಈ ಸಂಕೇತಾರ್ಥವನ್ನು ನೇರವಾಗಿ ಅಥವಾಗುವಂತೆ ಹೇಳುವ ಹೊಣೆ ತಪ್ಪಿಸಿಕೊಂಡಿದ್ದಾರೆ! ಇದನ್ನು ಒಂದಕ್ಕಿಂತ ಹೆಚ್ಚು ಉದಾಹರಣೆಗಳಿಂದ ತೋರಿಸಿ ಕೊಡಬಹುದು. ಈ ಉಪನಿಷತ್ತುಗಳ ಭಾಷಾಂತರದಲ್ಲಿ,

ಆದಿತ್ಯ ಎಂಬ ಸಂಕೇತಕ್ಕೆ ಮರಳಿ ಸೂರ್ಯ (sun) ಎಂದೇ ಅರ್ಥ ಹೇಳುವಲ್ಲಿ ಇತಿಹಾಸತತ್ವಕ್ಕೆ ಅಪಚಾರ ಬಗೆದಂತಾಗುತ್ತಿದೆ. ಆದಿತ್ಯ ಎಂಬಲ್ಲಿಯೂ ಈ ದೇವನು ಪ್ರಕಾಶರೂಪ ಹಗಲಿನ ಸ್ವಾಮಿಯೇ ಇದ್ದರೆ ಸೂರ್ಯ ಎಂಬ ಮೂಲ ಹೆಸರು ಬದಲಾಗುವ ಆವಶ್ಯಕತೆಯು ಏನಿತ್ತು? ಮೊದಲಿನ ನಾಮರೂಪವು ಬದಲು ಆಗುವಾಗ ಆ ಮಾತಿಗೆ ವಿಷಯಕ್ಕೆ ಆಧಾರಭೂತವಿರುವ ಸಮಯ (ಆಚಾರ)ವೂ ಬದಲಾಗುತ್ತಿರುತ್ತದೆ. ಆದಿತ್ಯ ಪದಕ್ಕೆ ಸೂರ್ಯ ಎಂದೇ ಅರ್ಥ ಹೇಳಿದರೆ, ಈ ಸ್ಥಿತ್ಯಂತರದ ಇತಿಹಾಸವು ಕಣ್ಮರೆಯಾಗಿಯೇ ಉಳಿಯುತ್ತದೆ. ಇಂಥ ಇನ್ನೊಂದು ಉದಾಹರಣ ನೋಡಿಕೊಳ್ಳಿ : ವಾಕ್ ಎಂಬ ಹೆಸರು ಹಿಂದೆ ಬೀಳುತ್ತದೆ. ಅದರ ಸ್ಥಳದಲ್ಲಿ ಗೀರ್ವಾಣ ವಾಣಿ ಎಂಬ ನೂತನ ನಾಮವೂ ರೂಢಿಗೆ ಬರುತ್ತದೆ. ಈ ಸ್ಥಿತ್ಯಂತರದೊಡನೆ ಸಮಾಜ= ಸಮಷ್ಟಿಪಾತಳಿಯ ಭಾಷೆಯು, ವೈಯುಕ್ತಿಕ=ಅವರವರ ಅರ್ಥದ ಮಾತು (ವಾಣಿ) ಆಗಿದ್ದುಂಟು. ಇಲ್ಲಿ ಸಮಯಬದಲಾಗಿದೆ. ವೈಯಕ್ತಿಕ ವಾಣಿಯು ಜೀವನ ಇಷ್ಟದಿಂದ (ಅವನ) ನಾಭಿಮೂಲದೊಳ್... ಶಬ್ದದ್ರವ್ಯಂ ಜನಿಯಿಸುಗುಂ. ಜೀವಿಯ ವೈಯಕ್ತಿಕವಾಗಿ ವ್ಯಕ್ತವಾಗುವ ಈ ಮಾತು, ಆ ವ್ಯಕ್ತಿಯ ಇಂದ್ರಿಯಗಳ ಪಾತಳಿಯ ಅರ್ಥವೇ ಆಗಬಲ್ಲುದು. ಆದಕಾರಣ ವಾಣಿ ಇದರ ಅರ್ಥವನ್ನು ಮರಳಿ ವಾಕ್ ಎಂದು ಹೇಳಿದರೆ, ಆ ಭಾಷಿಕರ ಜೀವನದ ರೀತಿಯಲ್ಲಿ ಆಗಿರುವ ಐತಿಹಾಸಿಕ ಸ್ವರೂಪದ ಸ್ಥಿತ್ಯಂತರವನ್ನು ಬಚ್ಚಿ ಇಡುವ ಮಹಾಪಾತಕ ಮಾಡಿದಂತೆ ಆಗುತ್ತದೆ,

ಡಾ।। ಎಸ್. ರಾಧಾಕೃಷ್ಣನರಂಥ ಶ್ರೇಷ್ಠ ಪ್ರೊಫೆಸರರಿಗೆ ಭಾಷಿಕ ಅರ್ಥದ ಈ ಸೂಕ್ಷ್ಮವು ಗೊತ್ತೇ ಇದ್ದಿಲ್ಲ ಎಂದು ಬಗೆಯುವುದಕ್ಕಾದೀತೆ? ಇಂಗ್ಲೀಷ ಭಾಷೆಯಲ್ಲಿ ಕಾಲಾನುಕ್ರಮದಿಂದ ಅರ್ಥ ಹೇಳುವ ತತ್ತ್ವವನ್ನು ಸ್ವೀಕರಿಸಿ ಸಿದ್ಧವಾದ ಮಹಾಕೋಶವು ಡಾ।। ಎಸ್. ರಾಧಾಕೃಷ್ಣರ ಜೀವನದಲ್ಲಿಯೇ ಪ್ರಕಟವಾಗಿತ್ತು! ಈ ಕೋಶದ ತತ್ತ್ವವು ಇವರ ಕಿವಿಗೆ ಬರಲೇ ಇಲ್ಲ ಎಂದರೂ, ಆದಿತ್ಯ ಪದಕ್ಕೆ ಸೂರ್ಯ ಎಂದೇ ಮರಳಿ ಅರ್ಥ ಹೇಳುವಲ್ಲಿ ಆಗುವ ವಿಚಿತ್ರ ಅರ್ಥವು, ಇವರ ಗಮನವನ್ನು ಸೆಳೆಯಲೇ ಇಲ್ಲವೆ? ಶ್ರೀಮದ್ ಭಗವದ್ಗೀತೆಯ ಸಂದರ್ಭದಲ್ಲೂ (ಅರ್ಥ-ಭಾಷ್ಯ ಬರೆದ) ಡಾ।। ರಾಧಾಕೃಷ್ಣರ ಗಮನವನ್ನು ಈ ವಿಚಿತ್ರ ಚಿತ್ರವೂ ಸೆಳೆಯಲೇ ಇಲ್ಲ, ಎಂದು ಬಗೆಯಬೇಕಾಗುತ್ತದೆ. ಆದಿತ್ಯಾನಾಂ ಅಹಂ ಎಂದು ಹೇಳುವ ವಿಷ್ಣುರೂಪೀ ಕೃಷ್ಣನು ಕರಿಯನು, ವಿಷ್ಣುವು ನೀಲಾಂಗನು (=ನೀರನು ಜಲಶಾಯಿ), ಇದನ್ನರಿತ ಎಸ್. ರಾಧಾಕೃಷ್ಣರಿಗೆ ಈ ಕೃಷ್ಣರೂಪೀ ಈ ಸೂರ್ಯ (ಆದಿತ್ಯ)ನು ನೀಲಾಂಗನು ಅಥವಾ ಕರಿಯ ಸೂರ್ಯನು ಆಗುತ್ತಿದ್ದಾನೆ* ಇದು ಎಸ್. ರಾಧಾಕೃಷ್ಣರ ಬಗೆ ಗಣ್ಣಿಗೆ ಕಾಣಲೇ ಇಲ್ಲವೋ. ಕಣ್ಕಟ್ಟು, ಮಂತ್ರಶಕ್ತಿ, ಮಾಟ ಇದನ್ನು 'ಸುಳ್ಳು' ಎಂದು ಪರಿಹಾಸ ಮಾಡುವವರ ಗಮನ ಸೆಳೆಯಲು ಮಹಾಮಹೋಪಾಧ್ಯಾಯ ಸಂಶೋಧಕ ಪ್ರೊ. ಮಿರಾಶಿ ಅವರ ಉದಾಹರಣವನ್ನು ಎತ್ತಿ ಹೇಳುವ ಕಟು ಪ್ರಸಂಗವು ಒಮ್ಮೆ ಅನಿವಾರ್ಯವಾಯಿತು. ಈಗ, ಇಲ್ಲಿ ಭಾರತದ ತತ್ತ್ವಜ್ಞಾನೀ ನೇತಾರ ರಾಜಕೀಯ ಸಮಾಜಿಕ ಉತ್ಕರ್ಷದ ಚಿಂತೆವಹಿಸಿದವರೆಂಬ ಎಸ್. ರಾಧಾಕೃಷ್ಣರೂ ಮಂತ್ರ ಮಾಟಕ್ಕೆ ಬಲಿ ಬೀಳಬೇಕೆ?

---

* ಆದಿತ್ಯ ಪದಕ್ಕೆ ಸೂರ್ಯನೆಂದೇ ಅರ್ಥ ಹೇಳುವುದು, ನಮ್ಮ ವಿದ್ವಾಂಸರ ಹಟವೋ ಚಟವೋ? ಅಂತೂ ಈ ರೀತಿಯು ಭಾರತೀಯರನ್ನು ರೂಢಿ ಮೂಢರನ್ನಾಗಿ ಉಳಿಸಿಕೊಂಡು ಬರಲು ನೆರವಾಗುತ್ತ ಬಂದಿದೆ. ಡಾ।। ಎಸ್. ರಾಧಾಕೃಷ್ಣರ ಮುಂದಿನ ತಲೆ ಮಾರಿನ ವಿದ್ವಾಂಸರೂ ಸಂಶೋಧಕರೂ ಎಂಬ ಖ್ಯಾತಿಯ ಡಾ।। ಘಾಟಗೆ ಎ. ಎಂ; ಪ್ರೊಫೆಸರ್ ಆಫ್ ಜನರಲ್ ಲಿಂಗ್ವಿಸ್ಟಿಕ್ಸ್, ಪುಣೆ ವಿದ್ಯಾಪೀಠ, ಡೆಕ್ಕನ್ ಕಾಲೇಜಿನ ಮಹಾನ್ ಸಂಸ್ಕೃತ ಕೋಶದ ಪ್ರಧಾನ ಸಂಪಾದಕರೂ, ಆದಿತ್ಯ ಪದಕ್ಕೆ ಸೂರ್ಯ ಎಂದೇ ಅರ್ಥ ಹೇಳಿದ್ದಾರೆ! An Encyclopaedic Dictionary of Sanskrit, on Historical Principles, Vol. I., ಅಕೂಪಾರ ನೋಡಿರಿ (೧೯೭೬) ಈ ವಿದ್ವಾಂಸರಿಗೆ ಕಾಗದ ಬರೆದು ಈ ಸಂದಿಗ್ಧ ಸ್ಥಳವನ್ನು ತಿಳಿಸಿದ್ದಾಯಿತು. ೧) ಅಕೂಪಾರ : ಇದಕ್ಕೆ ವಿಶೇಷಣದ ಅರ್ಥದಲ್ಲಿ unlimited ಪಾರ-ತೀರ ಇಲ್ಲದ್ದು. ೨) ಸಾಗರ, 'ಸಮುದ್ರೋಪ್ಯಕೂಪಾರ:' ಋಗ್ವೇದದಲ್ಲಿ ಬರುವ ಅವತರಣಿಕೆ 'ಅಕೂಪಾರಃ ಸಲೀಲೆ ಮಾತರಿಶ್ವಾ'; (ಋ-೧೦೯.೧) ವಿಷ್ಣುಃ ಅಕೂಪಾರಃ ಇತಿಶುತಿಃ 'ಅಕೂಪಾರಃ ಕೂರ್ಮರಾಜಃ' ಅಲ್ಲದೆ, ನಕ್ರ. ಮಕರ, ಎಂಬ ಪ್ರಾಣಿ ಸೂಚಕ ಅರ್ಥವೂ ಉಂಟು. ೩) ಅಕೂಪಾರಃ ಕೂರ್ಮರೂಪೀ ಜನಾರ್ದನಃ ಬಾಲವಾ-ನರ: ಎಂಬ ನಾನಾಥಾಯಾರ್ಥಗಳನ್ನೂ ನಮೂದು ಮಾಡಿದ್ದಾರೆ. ೪) ಅಕೂಪಾರಃ (ಪುಂ) 1) *Name of a tortoise* ಕಶ್ಯಪ: ಸಮುದ್ರೇ ಅಂತರ್ ಮಹತ್ ಯಕ್ಷವತ್ (ಜೈ ಭಾ. ನಿರುಕ್ತ ಮಹಾಭಾ.) + tortoise as the incarnation of ವಿಷ್ಣು: ಕೂರ್ಮಕ್ಕೆ ಬದಲಾಗಿ, ದ್ರುಮ 'ವೃಕ್ಷ' ಎಂಬ ಅರ್ಥವೂ ಇದೆ. ಅಕೂಪಾರಃ The sun ಆದಿತ್ಯೋಽS ಅಪಿ ಅಕೂಪಾರಃ ಉಚ್ಯತೇ ಅಕೂಪಾರಸ್ತು ನ ಆದಿತ್ಯೇ ಸಮುದ್ರೇ ಕೂರ್ಮ ರಾಜಿತ (ನಾನಾರ್ಥ ಸಂ.) ಈ ವಿವರಣೆ ಇಷ್ಟೇ ಸಾಕು.

ನನ್ನ ಕಾಗದದ ಆಶಯ : ಮೇಲಣ ವಿವರಣೆಯನ್ನು ಸಮೀಕ್ಷಿಸಿದಲ್ಲಿ ಅಕೂಪಾರ ಇದು ಅಂತ್ಯವಿಲ್ಲದ ಆದಿ ಜಲ ಸೂಚಕ, ಪ್ರಕೃತಿಸೂಚಕ ಸಂಕೇತವಾಗುತ್ತವೆ. ಪೈಥಾಗೊರಾಸನ unlimited. ಹೋಲಿಸಿರಿ, ಆದಿಜಲ=ಆದಿತಿಯ ಪುತ್ರ ಆದಿತ್ಯ (ವೃಕ್ಷ, ಲಿಂಗರೂಪೀ)= ವಿಷ್ಣು ಕೂರ್ಮಾವತಾರ ಇವೆಲ್ಲವೂ ಚಾಂದ್ರಪಂಥೀಯ ಸಂಕೇತವಾಗಿವೆ. ಇಲ್ಲಿ ಆದಿತ್ಯಕ್ಕೆ ಸೂರ್ಯ ಎಂಬ ಅರ್ಥವು ಸರ್ವಥಾ ತಪ್ಪು ಎಂದು ನನಗೆ ಎನಿಸುತ್ತದೆ. ಈಕೋಶಕ್ಕೆ, ಜಾಗತಿಕ ಮಹತ್ತ್ವದ ಸ್ಥಾನವಿದೆ. ಇದರಲ್ಲಿ ದೋಷ ಉಳಿಯಬಾರದು, ಎಂದು ಎನಿಸಿ, ನನ್ನ ಅಲ್ಪಮತಿಗೆ ತಿಳಿದುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಔದ್ಧತ್ಯಕ್ಕಾಗಿ ಕ್ಷಮಿಸಿ.

ನನ್ನ ಗ್ರಹಿಕೆ ತಪ್ಪು ಇದ್ದರೆ, ಆದಿತ್ಯಪಕ್ಷಕ್ಕೆ ಸೂರ್ಯವಾಚಕ ಅರ್ಥವೇ ಸಮರ್ಪಕವಿದೆ, ಎಂದು ತಮ್ಮ ನಿಷ್ಕರ್ಷವಿದ್ದರೆ, ನಾನು ಎಡಹುತ್ತಿರುವ ಎಡೆಯು ಯಾವುದು, ಇದನ್ನು ತಿಳಿಸಿ, ನನ್ನ ತಪ್ಪು ತಿದ್ದಿಕೊಳ್ಳಲು ನೆರವಾಗಬೇಕಾಗಿ ಬಿನ್ನಹ. ಎಂಬ ಪತ್ರವನ್ನು ಡೆಕ್ಕನ್‌ಕಾಲೇಜಿನ ನನ್ನ ಮಿತ್ರರೊಬ್ಬರಿಂದ ಪ್ರಧಾನ ಸಂಪಾದಕರಿಗೆ ಕಳಿಸಿ, ಅವರ ಪ್ರತಿಕ್ರಿಯೆ ಅರಿತು ತಿಳಿಸಲು ಬಿನ್ನವಿಸಿದ್ದೆ. ನನ್ನ ಮಿತ್ರರು, ಸನ್ಮಾನ್ಯ ಸಂಪಾದಕರನ್ನು ಕಂಡು, ನನ್ನ ಪತ್ರದ ವಿಚಾರ ತಿಳಿಸಿದಾಗ, ಅವರು ಹೇಳಿಕಳಿಸಿದ ಸಂದೇಶವು ಇಷ್ಟು: "ದುರ್ಗಾಚಾರ್ಯನಂತರ ವಿದ್ವಾಂಸನು ಹೇಳುವ ಅರ್ಥವು ತಪ್ಪು ಎಂದು ಸಿದ್ಧವಾಗುವ ವರೆಗೆ ತಾನು ಆದಿತ್ಯಕ್ಕೆ ಸೂರ್ಯ ಎಂದೇ ಅರ್ಥ ಹೇಳುತ್ತೇನೆ". ಕಾಲಕ್ರಮದ ಐತಿಹಾಸಿಕ ಅರ್ಥಪದ್ಧತಿಯನ್ನು ಸ್ವೀಕರಿಸಿಯೂ ಆಗುತ್ತಿರುವ ಈ ಕೋಶದಲ್ಲಿ ಸ್ವೀಕರಿಸುವ ಆ ಮೂಲತತ್ತ್ವಕ್ಕೇ ಬೆಲೆ ಇಲ್ಲ. ಸಂಪ್ರದಾಯಾಭಿಮಾನವು ಭಾರತೀಯರನ್ನು ಹೀಗೆ ತಡೆದು ನಿಲ್ಲಿಸಿದೆ.

ನಾರದ - ಸನತ್ಕುಮಾರರ ಸಂದರ್ಭದಿಂದ ಈ ಅರ್ಥವಿವರಣೆಯಲ್ಲಿ ಎಸ್. ರಾಧಾಕೃಷ್ಣರ ಕರುಣಾಸ್ಪದ ಪರಿಸ್ಥಿತಿಯ ಇನ್ನೂ ಇದ್ದು ಕಾಣುತ್ತದೆ.

ಈ ವಿವರಣೆಯು, ಇತಿಹಾಸ ತತ್ತ್ವದ ಅಪಮೌಲ್ಯನವನ್ನು ಸ್ಪಷ್ಟವಾಗಿ ಗ್ರಹಿಸಿಕೊಳ್ಳುವ ದೃಷ್ಟಿಯಿಂದ ಅನಿವಾರ್ಯವಾಗುತ್ತಿದೆ. 'ವ್ರಾತ್ಯನು ಇತಿಹಾಸದ ಪರಂಧಾಮವಾಗಿದ್ದಾನೆ'. ಎಂದು ನಂಬಿಸುವ ಪ್ರಯತ್ನವಿದೆ. ಅಥರ್ವವೇದದ ನಿರ್ದೇಶದಲ್ಲಿ, ಈ 'ವ್ರಾತ್ಯನು' ಮೂರ್ತವ್ಯಕ್ತಿ ಎಂಬ ಗ್ರಹಿಕೆಯಾಗುವ ಶಕ್ಯತೆಯಿದೆ. ಈ ಸಂದರ್ಭದಲ್ಲಿ ಎರಡು ಬಗೆಯ ಆಕ್ಷೇಪಗಳು ತಲೆಯೆತ್ತುತ್ತವೆ.

೧) ಎಂತಹ ದಿವ್ಯ ಪುರುಷನೇ ಆಗಲಿ, ಆತನೊಬ್ಬನೇ ಇತಿಹಾಸದ ಉದ್ಗಮ ಕೇಂದ್ರವಾಗಲಾರನು.

೨) ಇತಿಹಾಸವು ಮನು-ಜರಿಂದ ಪ್ರಾರಂಭವಾಗುತ್ತದೆ. ಆದರೆ ಸಿದ್ಧರು, ಯತಿ, ಮುನಿಗಳು, ಮಹಾತ್ಮರು ಇಂತಹರು ಇತಿಹಾಸದ-ಐತಿಹಾಸಿಕ ಘಟನೆಗಳ ನೇತಾರರಾಗುವ ಜೀವನರೀತಿಯಲ್ಲಿ ಸಮಾಜಿಕ ಪ್ರಜ್ಞೆ ನಷ್ಟವಾಗಿರಬಲ್ಲದು.

ಸಾಮಾಜಿಕ-ಪ್ರಜ್ಞೆ ಬಧಿರವಾಗತೊಡಗುವಾಗ ಆ ಜನಗಣದಲ್ಲಿ ಮಾನವ ಪಾತಳಿಯವರು ಅಲ್ಪ ಸಖ್ಯಾಕರಾಗುತ್ತಾರೆ. ನರ(ಳ) ಧರ್ಮಿಗಳೆ ಪ್ರಾಶಸ್ತ್ಯವು ಇರುತ್ತದೆ.

ಇಂದಿನ ವೇದಕಾಲದಿಂದ ಮಾನವಧರ್ಮದ ಆಕೃತಿಯಲ್ಲಿ ಆಗ ತೊಡಗಿದ ಮಾರ್ಪಾಟವು ಈ ಸಾಮಾನ್ಯ ಸೂತ್ರಕ್ಕೆ ಸರಿಹೋಗುತ್ತಿದೆ. ಋಗ್ವೇದ-ಅಥರ್ವವೇದದಲ್ಲಿ ಜನಗಣದ ನೇತೃತ್ವವು ನರಾಃ ಸಂಬೋಧನದ ಮರುತರ ಕಡೆಗೆ, ಯತಿಮುನಿಗಳು ವ್ರಾತ್ಯರು ಗಣಗಣಂ, ವ್ರಾತಂ ವ್ರಾತಂ ಆಗಿ ಅಲೆವ ಗುಂಪಿನ ನೇತಾರರ ಕಡೆಗೆ-ಎಂದರೆ ಪ್ರಾಣಲಿಂಗ ಪಾತಳಿಯ ಜೀವನರೀತಿಯಿಂದ ಪ್ರಚೋದಿತ ನರಜೀವಿಗಳ ಕಡೆಗೆ ಬರಬೇಕು-ಬಂದಿದೆ, ಎಂಬ ಹಾಗಿನ ಅಭಿಚಾರ ಕೃತ್ಯದ ಮಂತ್ರಸೂಕ್ತಗಳು ವೇದದಿಂದ ತೊಡಗಿ ಉಪನಿಷತ್ತುಗಳ ಕೊನೆಯ ಘಟ್ಟದ ವರೆಗೂ ಕಾಣಲು ದೊರೆಯುತ್ತವೆ. ಈಗ, ಸ್ಪಷ್ಟೀಕರಿಸಲಿರುವ ನಾರದ-ಸನತ್‌ಕುಮಾರ ಪ್ರಸಂಗವನ್ನೇ ವಿಮರ್ಶಿಸಿ ಇದನ್ನು ಮನಗಾಣಬಹುದು. ನಾರ-ದನು, ಸನತ್-ಕುಮಾರ ಈ ಶಿಷ್ಯಗುರುಗಳು ಇಬ್ಬರೂ ಅನೈತಿಹಾಸಿಕ ವ್ಯಕ್ತಿಗಳು. ನಾರದನು, ತಾನು ಕಲಿತೆನೆಂದು ಹೇಳುವ ನಾನಾ ವಿಷಯಗಳಲ್ಲಿ ಇತಿಹಾಸದ ಹೆಸರೂ ಇದೆ!

ಇತಿಹಾಸ ಶಾಸ್ತ್ರದ-ತತ್ವದ-ಬೆಲೆಗೇಡುಮಾಡುವ ಈ ಅಪೂರ್ವತಂತ್ರದ ಭಯಂಕರ ಸ್ವರೂಪದ ಬಗೆಗೆ ನಮ್ಮ ಪ್ರಾಜ್ಞರಲ್ಲಿ ಸಾಕಷ್ಟು ಅರಿವು ಮೂಡಿಲ್ಲ. ತೀರ ಕಾಲ್ಪನಿಕ=ಅತ್ಯಂತಾಭಾವದ ವ್ಯಕ್ತಿಗಳನ್ನು ಐತಿಹಾಸಿಕ ಘಟನೆಯ ಸಂದರ್ಭದಲ್ಲಿ ಚಿತ್ರಿಸುವುದು, ಉದಾ: ನಾರದ, ಸನತ್-ಕುಮಾರ, ಡಾ. ರಾಧಾಕೃಷ್ಣರಿಗೂ ಇವು ಸಾಂಕೇತಿಕ ಪ್ರತಿಮೆ ಎಂಬುದು ಮಾನ್ಯವಿದೆ. ಆದರೆ, ಇವು ಅತ್ಯಂತಾಭಾವರೂಪ ತಾತ್ತ್ವಿಕ ಪ್ರತಿಮೆಗಳು - ಬರಿ ಅಭಾವಾತ್ಮಕ ಅರ್ಥವು ಸ್ಥಾಯಿಯೊ ಅಲ್ಲ. ನಾರ=(ಸೃಜನ ಜಲ) ದಾನಿ ಎಂಬ ಈ ನಾರ-ದ ಪಾತ್ರವು ಮಾನವ ಧರ್ಮದ ಸಾಮಾಜಿಕ ಜೀವನ ರೀತಿಯಲ್ಲಿ ಇರುವುದಾದರೆ, ಈ ಮಾನವಧರ್ಮವು ಸಂಪೂರ್ಣವಾಗಿ ನಳರ ಘಟಿಂಗರ ಜೀವನರೀತಿಗೆ ಪ್ರಾಶಸ್ತ್ಯವು ಪ್ರಾಪ್ತವಾಗುವ ಧರ್ಮವೇ ಆಗಲಿಕ್ಕೆ ಬೇಕು. ಇಂದಿಗೂ ಆತ್ಯಂತಿಕ ವ್ಯಕ್ತಿವಾದೀ ಪಾತ್ರಗಳು ಇದ್ದರೂ ಇವು ಮಾನವ (ಧರ್ಮದ) ಇತಿಹಾಸದ ಲೆಕ್ಕದ ಹೊರಗೇ ಉಳಿಯುತ್ತವೆ. ವ್ರಾತ್ಯ, ಯತಿ, ಮುನಿ, ಇಂತಹ ಪಾತ್ರಗಳು ಒಂದು ವರ್ಗ (category)ಆಗುತ್ತವೆಯೇ ಹೊರತು, ಈ ವರ್ಗಗಳು, ಸಾಮಾಜಿಕ ಜೀವನದಿಂದ ಬೇರೆ ಉಳಿದು ತಮ್ಮ ವಿಶಿಷ್ಟ ಸ್ವರೂಪದ ಜಾತಿ, ಮತ ಪಂಥೀಯ ಜೀವನ ರೀತಿಯನ್ನು ಕಲ್ಪಿಸಿಕೊಳ್ಳುತ್ತವೆ. ಇದರಿಂದಾಗಿ, ಭಾರತದಲ್ಲಿ, ವೈವಸ್ವತ ಮನ್ವಂತರದಲ್ಲಿ ತಲೆಯೆತ್ತಿದ ಆದಿತ್ಯ ಸಂಪ್ರದಾಯದ ಪ್ರಭಾವದಲ್ಲಿ, ಅಖಂಡ ಸಮಾಜ ಸಮಷ್ಟಿಯು ಆಕಾರ ಪಡೆಯುವ ಹಂತದಲ್ಲಿಯೇ ಬೆಳೆಯಹತ್ತಿದ ಯತಿ, ಮುನಿ, ಜೈನ, ಬೌದ್ಧ, ಶೈವ, ವೈಷ್ಣವಾದಿ ವರ್ಗಗಳು ಮಿತಿಮೀರಿ ಬೆಳೆಯತೊಡಗಿದ್ದಾಗಿದೆ. ಈ ಸಂಪ್ರದಾಯಗಳಲ್ಲಿ ಅ-ಭಾವ , ಅತ್ಯಂತಾಭಾವ ಇದುವೇ ಸ್ಥಾಯೀ ಇರುತ್ತದೆ. ಈ ಕಾರಣದಿಂದ ವಿಧಾಯಕ ಅನುಭಾವಾತ್ಮಕ

ಸ್ವರೂಪದ ಅಂತಃಸಂಗತಿಯುಕ್ತ ಜೀವನಾನುಭವದ ಮಾನವಸಂಪ್ರದಾಯವು ಮೊದಲ ಹಂತದಲ್ಲಿಯೇ ತನ್ನ ಪ್ರಭಾವಕ್ಕೆ ಎರವಾಯಿತೆಂದು ಕಂಡು ಬರುತ್ತದೆ.

ಭಾರತೀಯ ಸಂಸ್ಕೃತಿಯೊಳಗಿನ ಐತಿಹಾಸಿಕ ಸ್ವರೂಪದ ಈ ಸ್ಥಿತ್ಯಂತರವನ್ನು ಮನಗಾಣಿಸಿಕೊಡಬಲ್ಲ ವ್ರಾತ್ಯ, ಕೇಶಿ, ಮುನಿ, ಆದಿತ್ಯ, ಇಂತಹ ಅಭಾವ ಅತ್ಯಂತಾಭಾವ ಇದುವೇ ಸ್ಥಾಯಿ ಇರುವ ನರ(ಳ) ಸಂಪ್ರದಾಯದ ತಳಪಾಯದ ಸಂಕೇತ ಪ್ರತೀಕಗಳ ನಿಜವಾದ ಅರ್ಥವನ್ನು ಬೆಳಕಿನಲ್ಲಿ ತರದೇ 'ಆದಿತ್ಯ' ಎಂದರೆ ಸೂರ್ಯ ಎಂದೇ ಅರ್ಥ ಹೇಳುವ ಚಟವನ್ನು ಮುಂದುವರಿಸಿದರೆ ಭಾರತೀಯ ಧರ್ಮ-ಸಂಸ್ಕೃತಿಯಲ್ಲಿ ಆಗಿರುವ ಸ್ಥಿತ್ಯಂತರದ ಸ್ವರೂಪವು ಬೆಳಕಿನಲ್ಲಿ ಬರುವ ಆಶೆಯೇ ಇಲ್ಲ. ಖರೇ ಅನಿಸುವಂತಹ ಕಾಲ್ಪನಿಕ ಪಾತ್ರಗಳನ್ನು ಸೃಷ್ಟಿಸಿ, ಈ ವೇದೋಪನಿಷತ್ತುಗಳು ನರ(ಳ) ಸಂಪ್ರದಾಯದ ಪ್ರಚಾರದ ತಂತ್ರವನ್ನು ಯಶಸ್ವಿಯಾಗಿಸಿಕೊಂಡಿವೆ. ಉದಾ : ವಿದೇಹ (ದೇಶದ ರಾಜ) ಜನಕ ! ವೈದೇಹಿ ಜಾನಕೀ (ಭೂಮಿಪುತ್ರಿಯ) ತಂದೆ. ಈ ವಿದೇಹ ಜನಕನ ಓಲಗದ ಯಾಜ್ಞವಲ್ಕ್ಯ. ಈ ಯಜ್ಞವಲ್ಕ್ಯನು ಜಾರತ್ಕಾರುವಿನ (ಜರತ್ಕಾರನಿಂದ ಆದ) ಹೆಸರಿನ ಒಂದು ವ್ಯಕ್ತಿಯೊಡನೆ ಚರ್ಚೆ ಮಾಡುತ್ತಾನೆ. ಈ ಜರತ್ಕಾರುವು ತಕ್ಷಕನಾಗನ ಪೂರ್ವಜನು. ಇದೂ ಕಾಲ್ಪನಿಕ ಪಾತ್ರವೇ. ಈ ತಕ್ಷನು ವೇದ ತ್ವಷ್ಟಾರನ ಪರ್ಯಾಯ.

ಛಾಂದೋಗ್ಯದಲ್ಲಿ ಬರುವ ನಾರದ ಸನತ್‌ಕುಮಾರ ಈ ಶಿಷ್ಯ ಹಾಗೂ ಗುರುವಿನ ಪಾತ್ರಗಳೂ ಸಾಂಕೇತಿಕವಿರುವುದನ್ನು ಡಾ|| ರಾಧಾಕೃಷ್ಣನ್ ಒಪ್ಪಿದ್ದಾರೆ. ಗುರುವಿನಲ್ಲಿ ಬ್ರಹ್ಮಸಾಕ್ಷಾತ್ಕಾರಕ್ಕಾಗಿ ಬಂದಿರುವ ನಾರ-ದನು ತಾನು ವ್ಯಾಸಂಗ ಮಾಡಿರುವ ಜ್ಞಾನಶಾಖೆಗಳ ನಾಮಾವಳಿಯನ್ನು ಇಲ್ಲಿ ಹೇಳಿದ್ದಾನೆ. ಉಪನಿಷತ್ಕಾಲದಲ್ಲಿ ಪ್ರಚಲಿತವಿದ್ದ ಜ್ಞಾನದ ಪ್ರಕಾರಗಳನ್ನು ಅರಿಯುವ ದೃಷ್ಟಿಯಿಂದ ಈ ಯಾದಿ ವಿಚಾರ-ಪ್ರಚೋದಕವಾಗಿದೆ.

> ಋಗ್ವೇದಂ ಭಗವೋ ಅಧ್ಯೇಮಿ, ಯಜುರ್ವೇದಂ ಸಾಮವೇದಂ, ಅಥರ್ವಣಂ,
> ಚತುರ್ಥಂ ಇತಿಹಾಸಪುರಾಣಂ ಪಂಚಮಂ ವೇದಾನಾಂ ವೇದಂ, ಪಿತ್ರ್ಯಂ, ರಾಶಿಂ,
> ದೈವಂ, ವಿಧಿಂ, ವಾಕೋವಾಕ್ಯಂ, ಏಕಾಯನಂ ವೇದವಿದ್ಯಾಂ, ಭೂತವಿದ್ಯಾಂ,
> ಕ್ಷತ್ರವಿದ್ಯಾಂ ನಕ್ಷತ್ರವಿದ್ಯಾಂ, ಸರ್ಪದೇವ ಜನವಿದ್ಯಾಂ ಏತತ್ ಭಗವಃ ಅಧ್ಯೇಮಿ[೧೧]

ಈ ಯಾದಿಯೊಳಗಿನ ಜ್ಞಾನಶಾಖೆಯ ಹೆಸರುಗಳು ಸಂದಿಗ್ಧವಿರುವುದಾಗಿ ಭಾಷ್ಯಕಾರರೇ ತಕರಾರು ಮಾಡಿದ್ದಾರೆ! ಈ ಸಂದಿಗ್ಧತೆಯೇ ಇತಿಹಾಸ-ಪುರಾಣಂ' ಎಂಬ ದ್ವಂದ್ವ ಸಮಸ್ತ ಪದದಲ್ಲಿಯೂ ಇದೆ! ಉಳಿದ ಸಂದಿಗ್ಧತೆಯ ತೊಡಕಿನಲ್ಲಿ ಸಿಕ್ಕಿ ಹಾಕಿಕೊಳ್ಳುವುದಕ್ಕೆ ಇಲ್ಲಿ ಅವಕಾಶವಿಲ್ಲ. ಈ ದ್ವಂದ್ವದಲ್ಲಿ ಅರ್ಥ ಸ್ಪಷ್ಟತೆಯು ಇಲ್ಲ. ಸಂದಿಗ್ಧತೆ ಶ್ಲೇಷಾದಿ ಅಲಂಕರಣ ಇಂತಹ ತಂತ್ರದಿಂದ ಕತ್ತಲೆಯನ್ನು ನಿರ್ಮಿಸಿಕೊಳ್ಳಲಾಗುತ್ತದೆ. ಇತಿಹಾಸ ಮತ್ತು ಪುರಾಣ ಇವೆರಡರ ಆಕೃತಿಯು ಮತ್ತು ಆಶಯ ತೀರ ಬೇರೆಬೇರೆ ಬಗೆಯದು. ಇವೆರಡನ್ನೂ ಒಂದು ಸಮಸ್ತ ಪದವಾಗಿ ಕಲ್ಪಿಸುವಲ್ಲಿ ಮೋಸವು ಇರಬೇಕು ಎಂಬ ಸಂದೇಹವು ತಲೆ ಎತ್ತುತ್ತದೆ. ಇದಕ್ಕೂ ಮುಂಚೆ 'ಇತಿಹಾಸ-ಪುರಾಣಂ ಪುಷ್ಪಂ' ಎಂಬ ನಿರ್ದೇಶವನ್ನು ವಿಮರ್ಶಿಸಿದ್ದಾಗಿದೆ. ಸ-ರಸ ಪುಷ್ಪರೂಪ ಈ ಇತಿಹಾಸವು', ಇತಿಹಾಸ=ರೂಪಿಸುವ ಹಾಗೂ ಇತಿಹಾಸ ವಿಷಯವಾಗಿರುವ ನರ-ಮನುಜ ಪ್ರಾಣಿ ಮಾತ್ರಗಳ ಜನ್ಮಸ್ಥಾನವಾದ : ಯೋನಿಯ ಸೂಚಕವಾಗಿ ಪರಿಣಮಿಸುತ್ತದೆ!

ಪ್ರಾಣೋಪಾಸನೆಯ ಫಲಿತವಾದ ಪ್ರಣವೋಪಾಸನೆಯು 'ಓಂಕಾರ'ದ ಉಪಸ್ಥಾನವಿರುವ ಈ ಛಾಂದೋಗ್ಯದಲ್ಲಿ ಬರುವ ಇತಿಹಾಸವು ಇಂದಿನ ಋಗ್ವೇದದಂತೆ ಸ-ರಸವೇ ಇರಬೇಕಷ್ಟೇ. ಇತಿಹಾಸ-ಪುರಾಣಂ ಪುಷ್ಪಂ! ತಾಃ ಅಮೃತಾಃ (ರೇತ ಸ್ವರೂಪಿ) ಆಪಃ ಇದ್ದುದನ್ನು ಸಮೀಕ್ಷಿಸಿದ್ದಾಯಿತು. ಈಗ ನಾರದ ಮತ್ತು ಸನತ್‌ಕುಮಾರ ಈ ಶಿಷ್ಯ ಹಾಗೂ ಗುರುವಿನ ಸಂದರ್ಭದಿಂದ ಬರುವ ಇತಿಹಾಸ ಪುರಾಣಂ ಇದರ ಆಕೃತಿ ಸ್ವರೂಪವು ಇದಕ್ಕೂ ಮುಂಚಿನ ಆಕೃತಿಗಿಂತಲೂ (ಸ-ರಸ ಪುಷ್ಪ-ಕ್ಕಿಂತಲೂ) ಬೇರೆಯಾಗಲು ಶಕ್ಯವೋ? ನಾರ-ದ : ಶಿಷ್ಯ ಹಾಗೂ ಸನತ್‌ಕುಮಾರ : ಗುರು ಇವರಿಬ್ಬರೂ ಒಂದೇ ಸಂಪ್ರದಾಯದವರು ಇದ್ದಾರೆ.

ಇರಲೇಬೇಕು. ಇವರಿಬ್ಬರಲ್ಲಿ 'ನಾರ'-ದ ಪಾತ್ರವು ಹೆಚ್ಚು ಪ್ರಖ್ಯಾತವಿದೆ. ನಾರಾಯಣ (ಕೃಷ್ಣ-ವಿಷ್ಣು) ದೇವರ ಭಕ್ತಿಯ ಪ್ರಚಾರಕ್ಕಾಗಿ ಲೋಕತ್ರಯಗಳನ್ನು ಸಂಚರಿಸುತ್ತಿದ್ದನು, ಎಂಬ ಖ್ಯಾತಿ ಈ ನಾರದನದು. ಭಾರತೀಯ ಪೂರ್ವಪರಂಪರೆಯಲ್ಲಿ ನಾರಾ-ಯಣನ ಭಕ್ತನೆಂದರೆ ಇವನು ನಾರ-ದನೇ ಎಂಬುದು ನಿಶ್ಚಿತವಿದೆ. ಆದಕಾರಣ ನಾರ-ದನ ಗುರು ಎಂಬ ಈ ಸನತ್-ಕುಮಾರನೆಂಬವನು ನಾರ-ಅಯನನ ಪರ್ಯಾಯವಿರುವ ಶಕ್ಯತೆಯೇ ಉಂಟು.

ಆದರೆ, ಈ ಉಪನಿಷತ್ತಿನಲ್ಲಿ ಈ ನಾರದನು ಸನತ್‌ಕುಮಾರನ ಶಿಷ್ಯನೆಂದೇ ತೋರಿಸಲಾಗಿದೆ. ನಾರಾ-ಯಣ ಈ ಹೆಸರು ಋಗ್ವೇದದಲ್ಲಿ ತೆರೆಯ ಮರೆಯಲ್ಲಿ ಕಾಣಿಸಿಕೊಳ್ಳುತ್ತದೆ. ದಶಾಂಗುಲ ಪುರುಷದೇವನ ಸೂಕ್ತಕಾರ ಕವಿ ಈ ನಾರಾಯಣನು ಎಂದು ಅಲ್ಲಿ ಸೂಚಿಸಲಾಗಿದೆ. ಮೂಲಪಾಠದಲ್ಲಿ ನಾರಾಯಣನಿಲ್ಲ. ಅನೇಕ ಸಂಶೋಧಕರಿಗೆ ಸೋಜಿಗ: ಈ ಹೆಸರು ಎಲ್ಲಿಂದ ಬಂತು? ಡಾ|| ಎಸ್. ಕೆ. ಡೇ ಈ ಸಂದೇಹ ವ್ಯಕ್ತಪಡಿಸಿದ್ದಾರೆ. ನಾರಾಯಣ ಈ ಹೆಸರು ತೀರ ಅಪ-ರೂಪ ಇದನ್ನು 'a flatting myth' ಎಂದಿದ್ದಾರೆ. ಪ್ರೊ. ಡೇ. ಶತಪಥ ಬ್ರಾಹ್ಮಣದಲ್ಲಿ ಪುರುಷ ನಾರಾಯಣ ಎಂಬ ಹೆಸರಿನ ವ್ಯಕ್ತಿಯು, ಪುರುಷಮೇಧ ಮಾಡಿ, ತನ್ನ ಸರ್ವಸ್ವವನ್ನು ಹೋಮಮಾಡಿ, ಪರಿವ್ರಾಜಕನಾಗಿ (ವ್ರಾತ್ಯ?) ಹೊರಡುತ್ತಾನೆಂಬ ವರ್ಣನೆಯಿದೆ. ಈ ನಾರಯಣನು ಮಾಡಿದ ಪುರುಷಮೇಧ ಎಂಬ ಯಜ್ಞದ ಸ್ವರೂಪವು ಯಾವುದು ಇದ್ದೀತು? ನರಬಲಿಯನ್ನೆ ಕೊಡಲಾಗುತ್ತಿತ್ತೇ? ಎಂದು ಸಂದೇಹಿಸಿ, ಇಲ್ಲಿ ಮಾನವರ ಬಲಿಯು ಅಭಿಪ್ರೇತವಿಲ್ಲವೆಂದು ಡಾ|| ಎ. ಬಿ. ಕೀಥ್ ಬರೆಯುತ್ತಾರೆ. ಆದರೆ, ಈ ಬಲಿ, ಪುರಿ-ಶಯ: ದಶಾಂಗುಲನದು, ಯತಿಮುನಿ ದೀಕ್ಷೆಗೆ ಮೊದಲು ಈ ಪುರುಷ ಮೇಧವಾಗಬೇಕಿತ್ತು.

ಶತಪಥ ಬ್ರಾಹ್ಮಣದ ತರುವಾಯ ಅದೃಶ್ಯನಾಗುವ ನಾರಾಯಣನು ಮಹಾಭಾರತದ ನಾಂದೀಶ್ಲೋಕದಲ್ಲಿ ಕಾಣಿಸಿಕೊಳ್ಳುತ್ತಾನೆ. 'ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಂ'. ಈ ನಮನದಲ್ಲಿ ಬರುವ ನರ ಮತ್ತು ನರೋತ್ತಮನು ಇವೆರಡು ಸಾಂಕೇತಗಳು ಬೇರೆ ಬೇರೆಯೇ ಅಥವಾ ಒಂದೇ ಹೆಸರೇ? ಮತ್ತು ಇಲ್ಲಿ ಕತ್ತಲೆ ಜರೂರಾಗಿ ನರ-ನಾರಾಯಣ ಸಂಬಂಧವನ್ನು ಸಂದಿಗ್ಧವಾಗಿಸಲು ಯೋಜಿಸಿದ್ದಾಗಿದೆ. ಇದು ಹಾಗಿರಲಿ, ಇಲ್ಲಿ ಸೋಜಿಗದ ಸಂಗತಿಯೆಂದರೆ 'ನರ: ನಾರಾಯಣ' ಸಂಪ್ರದಾಯದ ಪುನರುತ್ಥಾಪನೆಯ ಸಲುವಾಗಿ ಬರೆಯಲಾಗಿದೆ ಎಂಬ ಈ ಮಹಾಭಾರತದಲ್ಲಿ 'ನಾರಾಯಣ' ಈ ಪಾತ್ರವು ಅಭಾವದಿಂದಲೇ ತೊಳಗಿ ಬೆಳಗುತ್ತಿದೆ! ಮಹಾಭಾರತದ ಪ್ರಧಾನ ಪಾತ್ರ ಕೃಷ್ಣ (ವಿಷ್ಣುವಿನ ಪರ್ಯಾಯ); ಭಗವತ್ ಗೀತೆಯಲ್ಲಿ ನಾನಾವಿಭೂತಿಗಳ ಹೆಸರುಗಳು ಬರುತ್ತವೆ. ಅವುಗಳಲ್ಲಿ ಸಹ ನಾರಾಯಣ ನಾಮವಿಲ್ಲ! ಇದು ಅಶ್ಲೀಲವೇನಿಸಬಹುದಾದ ಹೆಸರಲ್ಲವೆ?

ಆದರೆ, ಯತಿ, ಮುನಿ, ಸಂಪ್ರದಾಯದಲ್ಲಿ ಇದು ಕಿವಿಯಲ್ಲಿ ಹೇಳಲಾಗುವ ತಾರಕಮಂತ್ರ=ಮೂಲ (ಸ್ಥಾನ) ನಾಮ; ಮಹಾಭಾರತದಲ್ಲಿ ಪರಿಶಿಷ್ಟ ಪ್ರಕರಣದ ಹಾಗೆ, 'ನಾರಾಯಣೋಪಾಖ್ಯಾನ' ಎಂಬ ಒಂದು ಪ್ರಕರಣವನ್ನು ಸೇರಿಸಲಾಗಿದೆ. ಡಾ|| ಎಸ್. ಕೆ. ಡೇ. ನಾರಾಯಣ ಪಾತ್ರವನ್ನು ಈ ಸಂದರ್ಭದಲ್ಲಿ ಈ ಸಂದೇಹಿಸಿದ್ದಾರೆ. ನಾರಾಯಣ ಮಹಾ ನಾರಾಯಣ ಹೆಸರಿನ ಉಪನಿಷತ್ತೂ ಇವೆ. ಆದರೆ, ಇದನ್ನು ದಶ ಉಪನಿಷತ್ತುಗಳಲ್ಲಿ ಕೆಲವರು ಹಿಡಿಯುತ್ತಾರೆ; ಕೆಲವರು ಲೆಕ್ಕಿಸುವುದೇ ಇಲ್ಲ! ಅಷ್ಟಾದಶ ಉಪನಿಷತ್ ಎಂಬ ಹೆಸರಿನ ಪ್ರಾತಿನಿಧಿಕ ಸಂಗ್ರಹ ಎಂದು ಬಗೆಯಲಾದ ಸಂಗ್ರಹದಲ್ಲಿಯೂ ನಾರಾಯಣ ಹೆಸರಿನ ಸ್ವತಂತ್ರ ಉಪನಿಷತ್ತಿಗೆ ಸ್ಥಾನವು ದೊರೆತಿಲ್ಲ. ಆದರೆ, ವಿಷ್ಣು ನಾರಾಯಣ ಎಂಬ ಮಾತು 'ಪ್ರಾಣಃ ಹಂಸಃ' ಸಂಗಡ ಎರಡು ಸ್ಥಳಗಳಲ್ಲಿ ಮಾತ್ರ ಸಿಕ್ಕುತ್ತದೆ.[೧೨] ಪ್ರಾಣಲಿಂಗ ಪಾತಳಿಯ ಈ ವಿಷ್ಣು-ನಾರಾಯಣರು 'ವ್ರಾತ್ಯ'ನ ಪರ್ಯಾಯವೇ ಆಗುತ್ತಿದ್ದಾರೆ! 'ಪ್ರಾಣಲಿಂಗ ಪಾತಳಿ'ಯ ಹಿನ್ನೆಲೆಯಲ್ಲಿ ಈ ನಾರ-ಅಯನ ನಾಮ-ರೂಪದ ಸ್ಪಷ್ಟೀಕರಣವು ಸುಲಭವಾಗುತ್ತದೆ. ವ್ಯಾಸನೇ ಹೇಳುವಂತೆ ಅಪೋನಾರಾಃ ಎಂಬ ಅರ್ಥದ ಮೇರೆಗೆ ಈ ನಾರ (ಸೃಜನಜಲ) ಅಯನ (ಸೃಜನಜಲ ಸ್ರವಿಸುವ ಮಾರ್ಗ) ಈ ಮಾತು ಲಿಂಗ ಸೂಚಕವಾಗುತ್ತಿದೆ. ಆದಕಾರಣನಾರ ಅಯನನ ಭಕ್ತನೆಂಬ ನಾರ-ದ ದಾನಿ ಎಂದು ಈ ಪದಕ್ಕೆ ನೇರ ಅರ್ಥವಾಗುತ್ತದೆ.

ಈ ಹಿನ್ನೆಲೆಯಲ್ಲಿ ನಾರ-ದನ ಗುರುಸ್ಥಾನದಲ್ಲಿ ಇರುವ ಛಾಂದೋಗ್ಯದ ಸನತ್‌ಕುಮಾರನು ಶ್ರೀಮನ್ ನಾರ- ಅಯನನ ಪರ್ಯಾಯವೇ ಇರಲಿಕ್ಕೆಬೇಕು. ಅತ್ಯಂತಾಭಾವವೇ ಸ್ಥಾಯಿ ಇರುವ ಚಾಂದ್ರಭೂಮಿಕೆಯ ನಾರಾಯಣ ಎಂಬ ಈ ನಾಮರೂಪವು ವೇದದಿಂದ ತೊಡಗಿ ಉಪನಿಷತ್ತು ಮಹಾಭಾರತದ ವರೆಗೂ 'ಕಂಡಿತು' ಕಾಣಲಿಲ್ಲ ಎಂಬ ಹಾಗೆ ಅಭಿವ್ಯಕ್ತವಾಗಿರುವ ಈ ರೀತಿಯಲ್ಲಿ ಜೀವನವನ್ನಾಳುವ ವಿಶ್ವನಿಯಮವು ಪ್ರತೀತಿಗೆ ಬರುತ್ತಿದೆ. ಪ್ರಾಣಲಿಂಗ ಚೇತಸದ ಪಾತಳಿಯು ನಿತ್ಯ ಕತ್ತಲೆಯ ಆವರಣದಲ್ಲಿಯೇ ಇರುತ್ತದೆ, ಇರಲೇಬೇಕು. ಈ ಪ್ರಾಣತತ್ವದ ಪ್ರಚೋದಕ ಶಕ್ತಿಯು ಹೀಗೆ 'ಉಂಟು-ಇಲ್ಲ!, ಇಲ್ಲ-ಉಂಟು' ಎಂಬ ಹಾಗಿನ ಸಂಭ್ರಮ ನಿರ್ಮಿಸದೆ ಇದ್ದರೆ, ಚಂದ್ರನಿಗೆ ಇರುವ ಕಲಂಕವು ಸುಳ್ಳಾಗಲಿದೆ.

ಟಿಪ್ಪಣಿಗಳು

೧. Levi Strauss ***Myth and Meaning***, P. 18
೨. ***ಋಗ್ವೇದ ಸಂಹಿತೆ*** I. ೧೭೭.೧
೩. ***ಜೈಮಿನೀಯೋಪನಿಷತ್ತು*** ೩.೨೧.೩
೪. ***ಅದೇ*** ೩.೨೧.೩
೫. ***ಅದೇ*** ಜೈ.ಉ.೧.೧೦. ೯-೧೦
೬. ***ಛಾಂದೋಗ್ಯೋಪನಿಷತ್ತು*** ೩.೪.೧.
೭. ***ಗೋಪಥ ಬ್ರಾಹ್ಮಣ*** ೧.೧.೭
೮. ***ಬೃಹದಾರಣ್ಯಕೋಪನಿಷತ್ತು*** ೧-೩-೧೯
೯. ***ಛಾಂದೋಗ್ಯೋಪನಿಷತ್ತು*** ೩-೫-೪
೧೦. ***ಅದೇ*** ೭-೧-೧
೧೧. ***ಅದೇ*** ೭. ೧-೨
೧೨. ***ಮೈತ್ರಾಯಣ್ಯುಪನಿಷತ್ತು*** ೬-೮; ೭-೭

ಸತ್ಯವನ್ನು ಬಚ್ಚಿಡುವ ಪ್ರಯತ್ನಗಳು

ನಾರದ ಮತ್ತು ಸನತ್‌ಕುಮಾರ ಈ ಹೆಸರುಗಳು ಸಾಂಕೇತಿಕವಾಗಿವೆ, ಎಂದು ಒಪ್ಪಿದ್ದರೂ ಡಾ।। ರಾಧಾಕೃಷ್ಣರು ಈ ಸಂಕೇತಗಳ ಅರ್ಥವನ್ನು ಬಚ್ಚಿಡುವ ಪ್ರಯತ್ನ ಮಾಡಿದ್ದಾರೆಂದು ಹೇಳದೆ ಉಪಾಯವಿಲ್ಲ, ಏಕೆಂದರೆ ಈ ಕೊರತೆಯನ್ನು ಕಂಡೂ ಕಾಣದಂತೆ ಇರುವುದು ಪ್ರಶಸ್ತವೇ? ನಾರ-ದ ಮತ್ತು ನಾರಾಯಣ (ನಾರ-ಅಯನ) ಇವರೊಳಗಿನ ಮೂಲ ಶಿಷ್ಯ-ಗುರು ಸಂಬಂಧವು ಡಾ।। ರಾಧಾಕೃಷ್ಣರಂತಹರು ಅರಿಯರೇ ಭಾರತೀಯ ಸಂಸ್ಕೃತಿಯ ಆಳವಾದ ವ್ಯಾಸಂಗಿಗಳಾದ ಈ ಪ್ರೊಫೆಸರರಿಗೆ ನಾರದ ನಾರಾಯಣ ಇತರ ಆಂತರಿಕ ಸಂಬಂಧಸೂಚಕ ಶಬ್ದಶಿಲ್ಪದ ನಾರ ಇದರ ಗುಹ್ಯಾರ್ಥವೇ ಗೊತ್ತಿರಲಿಲ್ಲ ಎಂಬ ಬಗೆಯಲಾದೀತೆ? ಆಪೋ ನಾರಾಃ ಇತಿ ಪ್ರೋಕ್ತಾಃ ಆಪೋ ವೈ ನರಸೂನವಃ ಸೃಜನ ಜಲದ ಪ್ರತಿಮೆಗಳೆಂದು ಹೇಳುವ ಈ ಶ್ಲೋಕವು ಮಹಾಭಾರತಾದಿಗಳಲ್ಲಿ ಹಲವು ಬ್ಹಾರಿ ಬರುತ್ತದೆ. ನಾರ-ದ ಈ ಸಂಕೇತಾರ್ಥವನ್ನು ಒಂದು ಪುರಾಣದ ಆಧಾರದಿಂದ ವಿವರಿಸುತ್ತಾರೆ! ನಾರ=ಜ್ಞಾನ; ಜ್ಞಾನ ದಾನವೇ ಕರ್ತವ್ಯ ಎಂದು ಬಗೆದ ಆದರ್ಶಜೀವಿ ಈ ನಾರದ! ಎಂಬ ಅರ್ಥ ಸಂಪ್ರದಾಯದ್ದು. ಆದರೆ ನಿಜಾರ್ಥ ಹೇಳುವ ಈ ಭಾಷಾಂತರಕಾರರಿಗೆ ಆತಂಕವೇನಿತ್ತು? ಹೆಚ್ಚಿನ ಜ್ಞಾನ ಪಡೆಯಲು ಸನತ್-ಕುಮಾರನಲ್ಲಿ ನಾರದ ಬರುತ್ತಾನೆ! ಹಾಗಾದರೆ ಈ ಗುರುವಿನ ನಾಮರೂಪದ ಆಕೃತಿಯು ಯಾವುದು? 'ನಾರದ' =ಜ್ಞಾನದಾನಿ. ಈ ಜ್ಞಾನದಾನಿ ನಾರದನು 'ಗುರು' ಎಂದು ಬಗೆದು, ಉಪದೇಶ ಪಡೆಯಲು ಬಂದ ಈ ಗುರುಮೂರ್ತಿ ಸನತ್‌ಕುಮಾರ! ಈ ಹೆಸರು ಜ್ಞಾನದ ನಿಧಿ, ಜ್ಞಾನ ಸಾಗರ ಎಂಬ ಅರ್ಥದ್ದೇ ಆಗಲಿಕ್ಕೆ ಬೇಕಷ್ಟೆ?

ಆದರೆ, ರಾಧಾಕೃಷ್ಣರು ಅಪೇಕ್ಷಿಸುವ ಈ ಆಶಯವು, 'ಸನತ್'= (perennial) =ಸನಾತನ ಕುಮಾರ ಎಂಬರ್ಥದಲ್ಲಿ ಇಲ್ಲವೇ ಇಲ್ಲ! ಸನತ್ ಇದರಲ್ಲಿ ಜ್ಞಾನಸೂಚಕ ಅರ್ಥವು ಎಳ್ಳನಿತೂ ಇಲ್ಲ! ಈ ಸನತ್ ಎಂದರೆ, ಸರ್ವಕಾಲದಲ್ಲಿಯೂ ಕುಮಾರನೇ ಆಗಿ ಇರುವವನೆಂಬ ಈ ಗುರುಮೂರ್ತಿಯ ಸ್ವರೂಪ ದರ್ಶನ ಮಾಡಿಸುವಲ್ಲಿ ಪುರಾಣ ಕಥೆಗಳ ಪ್ರಯೋಜನ ಪಡೆವ ಪ್ರಯತ್ನ ಡಾ।। ರಾಧಾಕೃಷ್ಣನ್ ಅವರದು! ಇವರು ತಮ್ಮ ಲೋಕಾನುಭವ, ಸೂಕ್ಷ್ಮ-ವಿಮರ್ಶಾ ಶಕ್ತಿ, ಇತಿಹಾಸಕ್ಕೆ=ವಾಸ್ತವಕ್ಕೆ ಪ್ರಾಮಾಣಿಕವಾಗಿ ಅರ್ಥವಿರಬೇಕು, ಎಂಬ ಜಾಗ್ರತಪ್ರಜ್ಞೆ ಇದೆಲ್ಲವನ್ನು ಬದಿಗಿರಿಸಿ, ಪುರಾಣಗಳ ಆಧಾರದಿಂದ ಸನತ್‌ಕುಮಾರ ಈ ಸಂಕೇತದ ಗುಹ್ಯಾರ್ಥ ಹೇಳುವ ಈ ರೀತಿಯು, ಪ್ರೊಫೆಸರರ ಈ ಪ್ರಯತ್ನವು, ಇವರ ವಿದ್ವತ್ತೆಗೆ ವಿಸ್ತೃತ ವಾಚನ ಮನನಕ್ಕೆ ಕುಂದನ್ನೆ ತರುತ್ತಿಲ್ಲವೆ?

ನಾರ(ನೀರ)ದ: ನಾರ ಅಯನನ ಶಿಷ್ಯ, ಭಕ್ತ ಇವೆರಡೂ ಹೆಸರುಗಳಲ್ಲಿ, ಅಂತಃಸಂಗತಿಯು ಇದೆ. ಈ ಅರ್ಥ: ಆಶಯವೇ ಗುರುಸ್ಥಾನೀಯ 'ಸನತ್' ಎಂಬ ಕುಮಾರನಲ್ಲಿಯೂ ಅಭಿಪ್ರೇತವಿದೆ. ಆದಕಾರಣ, ಈ 'ಸನತ್' ಎಂಬ ಕುಮಾರನೂ ನಾರ-ಅಯನ ದೇವನ ಪರ್ಯಾಯ; ಎಂದರೆ ಸೃಜನಜಲದ ಪ್ರತೀಕವೇ ಇರಲಿಕ್ಕೆ ಬೇಕು. ಉಂಟೇ ಉಂಟು! ಈ ವಾಸ್ತವ ಸತ್ಯಕ್ಕೆ ಡಾ।। ರಾಧಾಕೃಷ್ಣರಂತಹ ವಿದ್ವಾಂಸರೂ ದೇ.ಭ.ಗಳೂ ಎಂಬ ಮಹನೀಯರಿಂದ ಅಪಚಾರವಾಗಬೇಕೆ? ಅವರು ನಾರ-ದ ಅರ್ಥ ಹೇಳಿರುವಲ್ಲಿಯೇ ಒಳಗೊಂಡಿರುವ ಈ ವೈಚಾರಿಕ ಆಕೃತಿಯು ನಾರದನ ಗುರುವಿನ ನಾಮರೂಪದಲ್ಲೂ ಇರಬೇಕಿತ್ತು. ಆದರೆ, ಇದನ್ನು ವಿವರಿಸುವಲ್ಲಿ ಇನ್ನೂ ಅದ್ಭುತ ಡೊಂಬರಾಟವಾಡಿದ್ದಾರೆ; ಈ ಮಂಡನ ರೀತಿ ಅಪ್ರಶಸ್ತವಿದೆ. ಸನತ್ ಕುಮಾರ' ಎಂದರೆ ಐದು ವರುಷದ ಕೂಸು ಎಂದರ್ಥ ಹೇಳುವ ಒಂದು ಪುರಾಣದ ಶ್ಲೋಕವನ್ನು ಎತ್ತಿ ಹೇಳುತ್ತಾರೆ!

ಆದರೆ, ಅವರಿಗೇ ಪ್ರಶಸ್ತವೆನಿಸಿದಂತೆ ಕಾಣುವುದಿಲ್ಲ, ಹುಟ್ಟಿದ್ದು ಸಾಯಬೇಕಷ್ಟೇ? ಈ ಕೂಸು ನಿತ್ಯ ಐದು ವರ್ಷದ್ದೇ ಉಳಿಯಲು ಹೇಗೆ ಶಕ್ಯ. ಬೆಳೆಯಬೇಕು ಅಥವಾ ಅಳಿಯಲೇಬೇಕು. ಈ ವಿಶ್ವನಿಯಮ್ಮವನ್ನು ಉಲ್ಲಂಘಿಸುವ ತಾಕತ್ತು ಯಾವ ಭಗವಂತನಿಗೂ ಇಲ್ಲವಲ್ಲ!*

ಈ ಸನತ್ ಕುಮಾರ ಎಂಬುದು ಉತ್ ಪ್ರೇಕ್ಷೆ! ಇದು ರಮ್ಯ ಅಂತರ್ಹಿತ ಅರ್ಥದ ರೂಪಕವೂ ಅಲ್ಲ! ಅರ್ಧಾಂಗಿ ಅಹಿಂಸಾದೇವಿಗೆ, ಧರ್ಮನಿಂದ ಹುಟ್ಟಿದ ಶಿಶು ಈ ಸನತ್ ಕುಮಾರ! ಈ ಉತ್‌ಪ್ರೇಕ್ಷೆ ಬುಧನ ಬುದ್ಧಿಯ ಚಾಕ-ಚಕ್ಯ: ಇದು ಪ್ರಜ್ಞಾನೇತ್ರದ ಪ್ರತಿ-ಭಾ'ಶಕ್ತಿಯಲ್ಲ. ಅಹಿಂಸೆ ಎಂಬ ಈ ಹೆಣ್ಣಿಗೆ ಗರ್ಭಧಾರಣೆಗಾಗಿ 'ಅಭಿ'ಷೇಕ ಸಂಭವಿಸುವಲ್ಲಿ ಸೃಜನಜಲವು ಹೊರಹೊಮ್ಮಿ ಬರಲೇಬೇಕು. ಋಷಿ (?) ಪಂಚಮಿ ಹಿಡಿದ 'ಬತ್ತಿದ' ಹೆಣ್ಣಿಗೆ ಸಂತಾನವಾಗಲಾಗದು ಎಂದು ಹೇಳುತ್ತಾರೆ ಈ 'ಅಹಿಂಸೆ' ಎಂಬ ಹೆಣ್ಣಿನ ಗಂಡನೆಂಬ ಧರ್ಮ(?) ನು ನಾರ ಅಯನಿ ಇರಬೇಕಷ್ಟೇ? ಈತನ ರೇತದ ತೊಟ್ಟು ನಿಷೇಕ, ಅಭಿಷೇಕ ಇವೆರಡರ ತೊಟ್ಟು ಬೇರೆ-ಬೇರೆ ಉಳಿದರೆ ಈ ಸನತ್‌ಕುಮಾರ ಸಂಭವಿಸಲು ಹೇಗೆ ಶಕ್ಯ? ಈ ಸನತ್‌ಕುಮಾರ ಎಂಬುದು ನಿಜವಾದ ನಾಮರೂಪವೇ ಅಲ್ಲ. ಭಗವಾನ್ ಸನತ್‌ಕುಮಾರಃ ಸ್ಕಂದಃ ಇತ್ಯಾಽಚಕ್ಷತೇ?[∩] ಮಹಾತ್ಮಾಜೀ ಹೇಳುತ್ತಾರೆ : Secrecy is Sin! ಆದರೆ, ಗಾಂಧೀಜಿಯವರ ಭಗವಂತವಾಣಿ ಎನಿಸುವ ಈ ಗೀತೆಯಲ್ಲಿ ಗುಹ್ಯಜ್ಞಾನವಿದೆ. ವೇದೋಪನಿಷತ್ತುಗಳಲ್ಲಿ, ಗುಹ್ಯ ಅಡಗಿದೆ. ಎಂದರೆ ಇಲ್ಲಿ sin ಪಾಪ=ನಾಗ=ಲಿಂಗ ವಿಚಾರ ತುಂಬಿದೆ. ಸನತ್‌ಕುಮಾರ ಇದರ ಗುಹ್ಯಅರ್ಥವನ್ನು ಕೊನೆಗೆ ಮೆಲ್ಲನೆ ಸ್ಕಂದಃ ಎಂದು ಕಿವಿಯಲ್ಲಿ ಉಸಿರಿದಂತಿದೆ, ಈ ಚಾಕಚಕ್ಯವು ಏಕೆ? ಸ್ಕಂದ್ ಈ ಆಖ್ಯಾತ ಸಾಧಿತ ಸ್ಕನ್, ಸ್ಕಂದ ಈ ಪದಗಳಲ್ಲಿ ರೇತದ ಹನಿ, ತೊಟ್ಟು, ತಟಕು ಎಂಬ ಅರ್ಥವು ಡಾ।। ರಾಧಾಕೃಷ್ಣರಿಗೆ ಗೊತ್ತೇ ಇಲ್ಲ, ಎಂದು ಬಗೆಯಬೇಕೆ? ರತಿಯ ಕೊನೆಗೆ, ನೈಸರ್ಗಿಕವಾಗಿ ಉಸಿರು ನಿಃಶ್ವಸಿತವೂ ರೇತದೊಡನೆ ಹೊರಬರುತ್ತದೆ. ಮಹತಃ ಭೂತಸ್ಯ ನಿಃಶ್ವಸಿತವು, ಸೃಷ್ಟಿಗೆ ಕಾರಣ. ಮಾತರಿಶ್ವನ್; ಪೈಥಾಗೊರಾಸ ಪಂಥೀಯ Vacuum Breath. ಈ ಪ್ರಕರಣದ ಕೊನೆಗೆ ಸ್ಕಂದ ನಾಮೋಚ್ಚಾರವಿರುವಲ್ಲಿಯೂ ಔಚಿತ್ಯವನ್ನು ಉಳಿಸಿಕೊಂಡಿರುವಂತೆ ಕಾಣುತ್ತದೆ. ಇದು ಏನೇ ಇರಲಿ, ನಾರ-ಅಯನ ಮತ್ತು ಇವನ ಭಕ್ತ, ಭಜಕ, ಭಾಜಕ (ಭಾಗವಹಿಸುವ) ಈ ಶಿಷ್ಯ ನಾರದ ಇವರಿಬ್ಬರಲ್ಲಿ ಅತಃಸಂಗತಿಯು ಉಂಟು. ಈ ಅಂತಃಸಂಗತಿಯೇ ಸನತ್‌ಕುಮಾರ ಎಂಬ ಗುರು ಹಾಗೂ ನಾರದನೆಂಬ ಶಿಷ್ಯ ಇಬ್ಬರಲ್ಲಿಯೂ ಇಲ್ಲದೆ ಇದ್ದರೆ, ಗುರು ಹೇಳಿದ್ದನ್ನು ಶಿಷ್ಯನಿಗೆ ಗ್ರಹಿಸಿಕೊಳ್ಳುವುದು ಅಶಕ್ಯವಾಗುತ್ತದೆ

---

* ಡಾ।। ರಾಧಾಕೃಷ್ಣನ್ನರಿಗೆ ಆ ಶ್ಲೋಕದಿಂದ ಸಮಾಧಾನವಾಗದೆ ಓದುಗರನ್ನು ನಂಬಿಸಲು ಇನ್ನೂ ಒಂದು ಪುರಾಣ ಕಥೆ ಹುಡುಕಿ ತೆಗೆಯುವ ಶ್ರಮವಹಿಸಿದ್ದಾರೆ! ಈ ಕಥೆಯಂತೆ, ಆದೇ ತಾನೇ ಹುಟ್ಟಿದ ಹಸುಳೆ ಈ ಸನತ್‌ಕುಮಾರ! ಹುಟ್ಟಿದ ಕುನ್ನಿಗಳೂ ಸಾಯಲೇಬೇಕಲ್ಲವೇ? ಈ ಕಾರಣದಿಂದ ಈ ಪ್ರೊಫೆಸರ್ ಮಹಾಶಯರಿಗೆ, ಈ ಪ್ರಮಾಣವೂ ಆಧಾರಕ್ಕೆ ಸಾಲದು ಎಂದು ಎನಿಸಿ, ಇನ್ನೂ ಒಂದು ಬಗೆಯ ಸ್ಪಷ್ಟೀಕರಣವೂ ದಿವ್ಯಾಧ್ಯಾತ್ಮೀಯ ಪ್ರತಿಭಾದ್ಯೋತಕ ಸಾಹಿತ್ಯಕ ರಚನೆಯ ಮಾದರಿ ಅವರಿಗೆ ದೊರೆಯುತ್ತದೆ.

ಈ ಸನತ್ ಕುಮಾರನನ್ನು ಭಗವಾನ್ ಎಂದು ಹೇಳಿರುವುದರೊಳಗಿನ ಗುಹ್ಯಸ್ಥಾನೀಯ ಅರ್ಥವನ್ನು ಗಮನಿಸದೆ, ನಮ್ಮ ದಿವ್ಯಾಧ್ಯಾತ್ಮದ ಗಣ್-ಡು ದೇವರುಗಳ ನೆಲೆ (ವಾಸಸ್ಥಾನವು) ಗೊತ್ತಾಗಲು ಅಶಕ್ಯವಿದೆ. ಕುಮಾರಿಮಾತೇ ಚಂದ್ರಾದೇವಿ ಅಂತರಿಕ್ಷದಲ್ಲಿ ಇದ್ದಾಳೆ. ಇವಳನ್ನು ಶ್ವೇತ ಅಶ್ವತರ ಉಪನಿಷತ್ತು ಅ-ಜಾ ಹುಟ್ಟದಿದ್ದರೂ ಇದ್ದಾಳೆ ಎಂದು ಹೆಸರಿಸಿದೆ! ಇದು ಆಭಾವದಲ್ಲಿ ಸ್ಥಾಯೀ ಇರುವ ಭಾವವಾಯಿತು. ಕುಮಾರಿ = (ನಾಳೆ ಆಗಲಿರುವ) ಮಾತೆ, ಭೂಲೋಕದಲ್ಲಿ ಇದ್ದಾಳೆ ಈ ಜ್ಞಾತ ಮಾನದಂಡದಿಂದ ಆದಿಶಕ್ತಿ: ಲೋಕ ಜನನಿ, ನಿತ್ಯ 'ಕುಮಾರೀ ಮಾತೆ' (ಭೂದೇವಿಯಂತೆ) ಇದ್ದಾಳೆ; ಎಂಬ ನಂಬುಗೆ ತೀರ ಅವಾಸ್ತವವಲ್ಲ. ಉಂಟು ಇದಕ್ಕೆ ಪ್ರತಿಯಾಗಿ ಇಲ್ಲ ಅಲ್ಲ ಎಂಬ ಅಭಾವಕ್ಕೂ ಸ್ಥಾನವೂ ಇದೆ. ಆದರೆ ಅಭಾವರೂಪೀ ಕುಮಾರಿ, (ಪುರುಷ ಸಂಪರ್ಕವಿಲ್ಲದೆ) ಬಸುರಿ (Immaculate pregnancy : birth) ಪ್ರಸವಿಸುತ್ತಾಳೆ, ಎಂಬ ಹಾಗಿನ ಈ ಅತ್ಯಂತ ಅಭಾವದ ಘಟನೆ, ಜ್ಞಾತ ಇತಿಹಾಸದಲ್ಲಿ ಎಲ್ಲಿಯೂ ಸಂಭವಿಸಿಲ್ಲ. ಈ ಅನೈಸರ್ಗಿಕ ಕ್ರಿಯೆಯು ಅತ್ಯಂತಾಭಾವದ ಗರ್ಭಸ್ಥ ಶಿಶು, ವಾಮದೇವ ಹೆಸರಿನ ಋಷಿಯಂತೆ! ಈ ಗರ್ಭಸ್ಥ ವಾಮದೇವನು, ಸನತ್‌ಕುಮಾರನ ಇನ್ನೊಂದು ನಿಲುಮೆ ಸ್ಥಳದ (ಗರ್ಭದ) ಅಭಾವದಲ್ಲಿ ಈ ಸ್ಕಂದ (ರೇತದ ತೊಟ್ಟು) ಜೀವಂತವಿರಲು ಹೇಗೆ ಶಕ್ಯ? ಈ ಬಗೆಯ ಪವಾಡ ಚಮತ್ಕಾರಗಳ ನಂಬುಗೆಗಳು ಇತಿಹಾಸಕ್ಕೆ ಐತಿಹಾಸಿಕ ದೃಷ್ಟಿಗೆ ಮಾರಕವಾಗುತ್ತ ಬಂದಿವೆ. ಸನತ್‌ಕುಮಾರ ಹೆಸರಿನ (ರೇತದ=ಅಮೃತದ ಒಂದು ತೊಟ್ಟು=) ಈ ಸ್ಕಂದ ಮಹಿಮೆಗಳನ್ನು ಸೂಚಿಸುವ ಸೂಕ್ತವು ಋಗ್ವೇದದಲ್ಲಿ ಇದೆ. ಗರ್ಭಸ್ಥ ವಾಮ ಈ ದೇವನು ಮಾತಾಡುತ್ತಾನೆ.*

ಪ್ರೊ. ರಾಧಾಕೃಷ್ಣರು ಭಾಷಾಂತರಿಸಿರುವ ನಾರ-ದ ಹಾಗೂ ಸನತ್‌ಕುಮಾರ ಹೆಸರಿನ ಈ ಪ್ರಕರಣವು ಮೋಸತರುವ ವರ್ಣನೆಗಳ ಒಂದು ಉತ್ಕೃಷ್ಟ ಮಾದರಿಯಾಗಿದೆ. ಸ್ಕಂದ (ರೇತದ ಹನಿ) ಈ ಗುರುವು, ಶಿಷ್ಯ ನಾರದನಿಗೆ ಬ್ರಹ್ಮಸಾಕ್ಷಾತ್ಕಾರ ಮಾಡಿಸಿದ್ದಾನೆ. ಇದು ವಿಶ್ವಾಮಿತ್ರ ಸಂಪ್ರದಾಯದ ಬ್ರಾಹ್ಮೀಮುಹೂರ್ತದ ಪ್ರಕಾಶ=ಜ್ಞಾನಸ್ವರೂಪ ಬ್ರಹ್ಮವಲ್ಲ, ಆನಂದಂ, ಬ್ರಹ್ಮರಸೋ ವೈ ಸಃ ಸ್ವರೂಪವೇ, ರಾತ್ರಸಮಯಾಚಾರದಲ್ಲಿ ಆಗುವ ಸಾಕ್ಷಾತ್ಕಾರವು ಇದು. "ಭಗವಾನ್ ಸ್ಕಂದ" ವಾಮದೇವ ಮಾತಾಡುತ್ತಾನೆ ಎಂಬೀ ಬಗೆಯ ಅತ್ಯಂತ ಅಭಾವದ ಸಂಗತಿಗಳನ್ನು ಪವಾಡ ಚಮತ್ಕಾರ ಎಂದು ನಂಬುವ ಚಟದಿಂದಾಗಿ ಈ ಭಾರತೀಯರ ನೇರವಿಚಾರಶಕ್ತಿ, ಪ್ರಜ್ಞೆ (conscience) ಬಧಿರವಾಗಿದೆ. ಈ ಭಾರತೀಯರನ್ನು ಪವಾಡ ಚಮತ್ಕಾರ ವ್ಯಾಮೋಹದಿಂದ ಹೊರಗೆ ತರಲು ನೆರವಾಗುವುದಕ್ಕೆ ಬದಲಾಗಿ ಜನರ ಮೂಢ ನಂಬಿಗೆಗಳನ್ನು ದೃಢಪಡಿಸುವ ದಿಕ್ಕಿನಲ್ಲಿ ಡಾ।। ರಾಧಾಕೃಷ್ಣನ್ ಅಂತಹರು ತಮ್ಮ ಸ್ಥಾನದ ಉಪಯೋಗ ಮಾಡಿದ್ದು ಶ್ಲಾಘ್ಯವೇ? ಪ್ರಾಜ್ಞರೇ ನಿರ್ಧರಿಸಲಿ. ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು, ಪ್ರಧಾನಿಯಾದವರೇ ಈ ಮಂತ್ರ ಮಾಟಗಳಲ್ಲಿ ನಂಬುವಾಗ, ಈ ಭಾರತದ ದೈನ್ಯ ತಪ್ಪಲು ದಾರಿ ಏನು?

ಈ ಕಥೆಯು ಸಾಂಕೇತಿಕವಿದ್ದು, ಪಂಥ ಪ್ರಚಾರಕ್ಕಾಗಿ ಚಮತ್ಕಾರ ಸಿದ್ಧಗಳಲ್ಲಿ ಜನ ನಂಬುವಂತೆ ಮಾಡಲು ಯೋಜನಾ-ಪೂರ್ವಕ ರಚಿಸಿದ ಕಥೆಯಾಗಿದೆ. ಇದನ್ನು ಡಾ।। ರಾಧಾಕೃಷ್ಣನ್ನರು ಅರಿಯರೇ? ಇದರೊಳಗಿನ ದೌರ್ಬಲ್ಯ, ಮರ್ಮಸ್ಥಲ ಸಹಜ ಗೊತ್ತಾಗುವಂತಿದೆ, ಇದು ಪ್ರೊಫೆಸರರಿಗೆ ತಿಳಿಯದ್ದು ಅಲ್ಲ. ಐದು ವರುಷದ ಅಥವಾ ಅದೇ ತಾನೇ ಹುಟ್ಟಿದ ಇಲ್ಲವೆ ಉತ್ಪ್ರೇಕ್ಷಾರೂಪದ, ಕೇವಲ ಕಾಲ್ಪನಿಕ ಅಹಿಂಸಾರೂಪ ಕಲ್ಪನೆಯ ಹೆಣ್ಣಿಗೆ, ಧರ್ಮ ಎಂಬ ಇನ್ನೊಂದು ಅಮೂರ್ತ, ಕಲ್ಪಿತ ಗಂಡಿನ ಸಂಬಂಧದಲ್ಲಿ ಹುಟ್ಟುವ ಕೂಸು ಈ ಜ್ಞಾನಮೂರ್ತಿ ಸನತ್‌ಕುಮಾರನು ಅತ್ಯಂತ ಅಹಿಂಸೆಯ ಆಧಾರದ ಸತ್‌ತ್ಯದಲ್ಲಿ ನಿಷ್ಠೆ ಇರುವ ನರ(ಳ) ಸಂಪ್ರದಾಯದ

---

* ವಾಮದೇವಃ ಉವಾಚ : ರೇತದ ಕೊಟ್ಟು ಮಾಡುತ್ತದೆ. ಎಂಬ ಈ ಶ್ರದ್ಧೆ ಇಂದಿನ ವೇದದಲ್ಲಿ ಇದೆ. ಇದನ್ನೇ ಉಪನಿಷತ್ತುಗಳಲ್ಲಿ ದೃಢಪಡಿಸುವ ಪ್ರಯತ್ನ ಮಾಡಲಾಗಿದೆ. ಐತರೇಯ ೧-೬: ಪ್ರಶ್ನೋಪನಿಷತ್ತುಗಳಲ್ಲಿ ಈ ವ್ರಾತ್ಯನು, ಪ್ರಾಣಲಿಂಗ ರೂಪದಲ್ಲಿ ಇದ್ದಾನೆ.

ಪ್ರಚಾರಕ್ಕಾಗಿ ಹುಟ್ಟಿರುವ ಕಥೆಗಳು ಇವು ಎಂಬುದು, ಮೇಲೆಯೇ ಕಾಣುವಂತಿದೆ. ನಾರ-ದ ಎಂಬ ಜ್ಞಾನಿಯು ಅದೇ ತಾನೇ ಹುಟ್ಟಿದ ಅಥವಾ ಶುದ್ಧ ಕಾಲ್ಪನಿಕ ಒಂದು ಹಸುಳೆಯನ್ನು ಗುರು ಎಂದು ನಂಬಿ ಬ್ರಹ್ಮಜ್ಞಾನ ಸಾಕ್ಷಾತ್ಕಾರಕ್ಕಾಗಿ ಬರುತ್ತಾನೆ. ಈ ಸಾಂಕೇತಿಕ ವೈಚಿತ್ರ್ಯವನ್ನು ಡಾ|| ರಾಧಾಕೃಷ್ಣರು, ಸಮರ್ಪಕವಿದೆ ಎಂದು ಎತ್ತಿ ಹಿಡಿಯುವ ಪ್ರಯತ್ನ ಪಟ್ಟಿದ್ದಾರೆ! : ಗ್ರಂಥಪಾಠ ಕಲಿತವರು, ಎಂಬುವರು ಜ್ಞಾನಿ ಇರುವುದಿಲ್ಲ; ಅಥವಾ ಜ್ಞಾನಿಗಳೆಂಬ ಭರವಸೆಯೂ ಇಲ್ಲ. ಆದರೆ ಜ್ಞಾನ ಎಂಬುದು ಹುಟ್ಟಿನಿಂದಲೆ ಇರಬೇಕಾಗುತ್ತದೆ. ಆದಕಾರಣ, ಹುಟ್ಟು ಜ್ಞಾನಿಗೆ ನಾರದನಂಥ ಪಾಂಡಿತ್ಯವುಳ್ಳವರು ಶರಣು ಹೋಗಬೇಕಾಗುತ್ತದೆ ಎಂಬ ಹಾಗಿನ ಉದ್ದೇಶವು ಈ ಕೃತ್ರಿಮವೆಂದು ಕಾಣಿಸುವ ಕಥೆಯಲ್ಲಿದೆಯಂತೆ. ಆದರೆ, ಅಥರ್ವವೇದದ ಪ್ರಾಣಲಿಂಗದ ಪ್ರತೀಕ ವ್ರಾತ್ಯನು ಉಳಿಮುಟ್ಟದ ಲಿಂಗ, ಸ್ವಯಂಭೂ ಜ್ಞಾನ ಮೂರ್ತಿ=ಇತಿಹಾಸಾದಿಗಳ ಪರಂಧಾಮ ಸ್ವರೂಪನು, ಹೇಗೋ ಹಾಗೆಯೆ ಈ ಸ್ಕಂದನನ್ನು -ರೇತದ ತೊಟ್ಟು (ಅಮೃತದ ಬಿಂದು-ನಾಳಿನ ಪ್ರಾಜ್ಞರಿಗೆ ಮೇಧಾವಿಗಳಿಗೆ ಜನ್ಮ ಕೊಡಬಲ್ಲ ದಿವ್ಯಜ್ಞಾನ ಶಕ್ತಿಯ ಪ್ರತಿನಿಧಿ) ಈ ಸನತ್ ಕುಮಾರನಲ್ಲಿ ಜ್ಞಾನೋಪದೇಶಕ್ಕಾಗಿ ಜ್ಞಾನಿ ಎಂಬ ನಾರದನು ಬಂದಿದ್ದಾನೆ! ನಿಜವಾಗಿ ಈ ವೇದದಲ್ಲಿ ಸ್ಥಳ-ಕಾಲದ- ಪಿಂಡ ಬ್ರಹ್ಮಾಂಡೈಕ್ಯದ ಕತ್ತಲಿನ ಆವರಣದ ಪ್ರಾಣಲಿಂಗ ಶಕ್ತಿಯ ಪ್ರಜ್ಞಾ ಪ್ರಕಾಶವನ್ನು ವಿರೋಧಿಸುತ್ತಿರುವ ಚಿತ್ರವಿದೆ. ಶಾಲೆಯ ಶಿಕ್ಷಣದಿಂದ ಜ್ಞಾನಿಗಳು ಆಗುವುದು ಕ್ವಚಿತ್ತಾಗಿ. ಹುಟ್ಟಿನಿಂದಲೇ ಜ್ಞಾನಮೂರ್ತಿಗಳು ಅಂತರ್‌ಜ್ಞಾನಿಗಳು ಇರುತ್ತಾರೆ. ಈ ಬಗೆಯ ಪರಂಪರಾಗತ ನಂಬುಗೆಯು ಈ ಕಥಾರಚನೆಯ ಹಿಂದೆ ಇದೆ. ಎಂದು ಡಾ|| ರಾಧಾಕೃಷ್ಣರು ಹೇಳುತ್ತಾರೆ!

ಇದು ನಿಜವಿದ್ದರೆ ಈ ಉಪನಿಷತ್ತಿನ, ಇನ್ನು ಮುಂದಿನ ವಿವರಣೆಯು ಅವಶ್ಯವಿರಲಿಲ್ಲ. ಈ ನಾರ-ದ ಶಿಷ್ಯನು; ಗುರು ನಾರಯನ ಸ್ವರೂಪ ಸ್ಕಂದ ರೇತದ ಅಯನ ಏಕ-ಅಯನದ ವಿವರಣೆಯು ಅವಶ್ಯವಿರಲಿಲ್ಲ. ಏಕ-ಅಯನಂ ಎಂಬ ಪಾರಿಭಾಷಿಕ ಪದವು ಇಲ್ಲಿ ನಾನಾ ಬಗೆಗಳ ಸಂದರ್ಭಗಳಲ್ಲಿ ಇದೆ ಇದರ ಖಾತ್ರಿ ಮಾಡಿಕೊಳ್ಳಿ. ಏಕ ಅಯನದ ಇನ್ನೂ ನಾನಾ ಅವತರಣಗಳನ್ನು ಕೊಡದೆ ಗಂತವ್ಯದ ಪರಿಚಯವನ್ನು ಮಾಡಿಕೊಡುವ ಅವತರಣವನ್ನೇ ನೇರ ಹೇಳುವುದು ಹೆಚ್ಚು ಲೇಸು. ಎಲ್ಲ ನದಿಗಳ ನೀರು ಕೊನೆಗೆ ಹೋಗುವುದು ಎಲ್ಲಿಗೆ? ಸಮುದ್ರಕ್ಕೆ ತಾನೇ? "ಅಪ್‌ಸು ಅಂತಃ ಸಮುದ್ರೇ ಮಮಯೋನಿಃ" ಉಂಟು, ಎಂದು ಹೇಳುವ ಗೀಃ ವಾಣ-ವಾಣೀರೂಪ ಅಂಭೃಣಿಯ (ಸಂ. ಉತ್ ದ್ರವದ) ಸಮುದ್ರಕ್ಕೇ ನಾನಾ ವಿದ್ಯೆಗಳ ರಸವೂ ಹೋಗಿ ಸೇರುತ್ತದೆ.[೩] ಋಗ್ವೇದದಲ್ಲಿ 'ಮಹಾ ಅರ್ಣಃ ಸರಸ್ವತೀ ದೇವಿ, ಇದ್ದಾಳೆ! ಎಂದಿರುವ ಮಾತಿನ ಸಾಮ್ಯವು ಇಲ್ಲಿ ಇದೆ. ಸಃ (ರಸಃ) ಯಥಾ ಸರ್ವಾಸಾಂ ಅಪಾಂ ಸಮುದ್ರಃ ಏಕಾಯನಃ (ಎಲ್ಲ ರಸವೂ ಸಮುದ್ರ ಒಂದೇ ಮಾರ್ಗಕ್ಕೆ ಹೋಗುವುದೋ ಹಾಗೆ)

"ಸರ್ವೇಷಾಂ ಆನಂದನಾಂ ಉಪಸ್ಥಃ ಏಕಾಯನಂ" ಏನೆಲ್ಲ ಆನಂದವು ಹೋಗುವ ಮಾರ್ಗ ಉಪಸ್ಥವೇ ಆಗಿದೆ.[೪] ಉಪನಿಷತ್ತುಗಳಲ್ಲಿ ಬರುವ ಇತಿಹಾಸದ ಆಕೃತಿ ಸ್ವರೂಪದ ಸಮೀಕ್ಷೆ ಇಷ್ಟು ಸಾಕು.

ಮಹಾಭಾರತ ಇತಿಹಾಸದ ಆಕೃತಿ ಸ್ವರೂಪ

ವೇದಕಾಲದಲ್ಲಿ ವ್ರಾತ್ಯ ಇತಿಹಾಸದ ಪರಂಧಾಮವೆಂದು ಹೆಸರಾಗಿದ್ದನಂತೆ! ಈ ವ್ರಾತ್ಯನೆಂದರೆ ಯಾರು? ಎಂಬ ಸಮೀಕ್ಷೆಯಲ್ಲಿ, ಇವನು ಏಕಕಾಲಕ್ಕೆ ಮೂರ್ತ ಮತ್ತು ಅಮೂರ್ತ ಸ್ವರೂಪವಿರುವ ಪ್ರಾಣಲಿಂಗ ಪಾತಳಿಯ ಅಥವಾ ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ) ಶಕ್ತಿಯ ಮಾರ್ತ, ಅಮೂರ್ತ ಆವಿಷ್ಕಾರ-ಸ್ವರೂಪ ದೃಶ್ಯ- ಪ್ರಪಂಚದ ಪ್ರತೀಕ (Phenomenon) ಆಗಿದ್ದಾನೆ, ಎಂದು ಕಂಡುಬಂತು. ಎಂದರೆ ಈ ಇತಿಹಾಸ ಜ್ಞಾನವು ಉಂಟು ಮತ್ತು ಇಲ್ಲ ಈ ಉಭಯ ಸ್ವರೂಪದ್ದು ಆಯ್ತು! ಅಥರ್ವವೇದದ ವ್ರಾತ್ಯನು ಮತ್ತು ಋಗ್ವೇದದ ಆದಿತ್ಯ (ಅದಿತಿ) ಬೇರೆಯಲ್ಲ. ಇದು ಅತ್ಯಂತಾಭಾವವೇ ಸ್ಥಾಯಿ ಆಯ್ತು! ಉಪನಿಷತ್ತುಗಳಲ್ಲಿ, ಛಾಂದೋಗ್ಯದಲ್ಲಿ ಬರುವ ಇತಿಹಾಸ-ಪುರಾಣಂ ಪುಷ್ಪಂ ಅ-ಮೃತ ರಸದ ಈ ಪುಷ್ಪ ಮತ್ತು ಅಮೃತಸ್ಯ ನಾಭಿಃ ಸ್ವರೂಪ ಅದಿತಿ (ಸ್ಥಲ) ಬೇರೆಯಲ್ಲ! ಪುಷ್ಪ (ಅದಿತಿ) ಎಂದೊಡನೆ ವೃಕ್ಷ=ಆದಿತ್ಯ ಹೆಸರಿನ ಪ್ರಾಣಲಿಂಗ

ಲೋಕವು ಛಾಂದೋಗ್ಯದಲ್ಲಿಯೇ ಉಲ್ಲೇಖಿತವಿದೆ! ಇದು ಪ್ರಾಣಲಿಂಗ ಪಾತಳಿಯ ನರ(ಳ) ವರ್ಗದ ಇತಿಹಾಸವಾಯ್ತು, ಮಾನವನ ಇತಿಹಾಸವಲ್ಲ. 'ಮನು' : ಮಾನವನ ಇತಿಹಾಸ, ಎಂಬರ್ಥದ-ವೈವಸ್ವತ ಮನ್ವಂತರದ ಹಿನ್ನೆಲೆಯ ಆಗುಹೋಗುಗಳ ವಿವರಣಾ ಸೂಚಕ ಇತಿಹಾಸ ಈ ಪಾರಿಭಾಷಿಕ ಪದವು, ಸ್ಥಳ ಮತ್ತು ಕಾಲ ಈ ವಿಭಾಗದ್ವಯದ ಪಾತಳಿಯ ಮೇಲೆ ಬಂದ ದೃಶ್ಯವು ಕಣ್ಣೆದುರು ನಿಲ್ಲುತ್ತಿದೆ.

ವೈವಸ್ವತ ಮನ್ವಂತರದ ಅಥವಾ ಮನುಜ ಜೀವನ ಪಾತಳಿಯ ಮೇಲಣ ಪ್ರೇರಣೆ ಪ್ರಚೋದನೆಯ ಇತಿಹಾಸವು ಸ್ಥಳ-ಕಾಲದ ಸಂದರ್ಭದ ನಿನ್ನೆ ಇಂದುಗಳೊಳಗಿಂದ, ಸ್ಥಳಕಾಲದ ಗಸಣೇ ಇಲ್ಲದ ಆಗಾಮಿ ನಾಳೆಗಳತ್ತ ಸಾಗುವ ಪ್ರವೃತ್ತಿಯದು ಇರಬಲ್ಲುದು. ಆದರೆ, ನರ(ಳ)ರ ಸ್ಥಳ-ಕಾಲದ ಸಂದರ್ಭದ ಪ್ರಾಣಲಿಂಗ ಪಾತಳಿಯ ಮೇಲಣ ಚೋದನೆಯ ಮೂಲ ಆಕಾರ ಪಡೆವ ಇತಿಹಾಸವು, ಜೀವಿಯ ಜೀವಿತದಂತೆ ವೃತ್ತಾಕೃತಿಯದೇ ಆಗಿ ಪರಿಣಮಿಸಬಲ್ಲುದು. ಆಗಾಮಿ ನಾಳೆಗಳ ಅಭಾವದ (ಸಂ)ಭವ-ಚಕ್ರದ ಪ್ರಭಾವಕ್ಕೆ ಒಳಗಾಗಿರುವ ಜೀವಿಗಳ ಜೀವಿತದ ಅಸ್ತಿತ್ವದ ಸೂಚಕ, ಇತಿ (ಇಂತು) ಹ (ನಿಜವಾಗಿ) ಆಸ (ಉಂಟು), ಇದು ಸಾರ್ವಕಾಲಿಕ ಸನಾತನ ಇತಿಹಾಸ ಅಗಬಲ್ಲುದು! ಋಗ್ವೇದದಲ್ಲಿ ಈ ಚಿತ್ರವಿದೆ. ಋಗ್ವೇದದೊಳಗಿನ ಸೂರ್ಯಾ-ಚಂದ್ರಮಾಸೌ ಧಾತಾ ಯಥಾ ಪೂರ್ವಂ ಅಕಲ್ಪಯತ್ ಇವರಿಬ್ಬರೂ ಹುಟ್ಟುವ ಮುಂಚಿನ ಪ್ರಲಯ (chaos) ಇದನ್ನೇ ಸ್ಥಾಯಿ=ಅಥವಾ ಅತ್ಯಂತ ಅಭಾವವೇ ಸ್ಥಾಯಿ-ಎಂದು ಬಗೆಯಲಾಗುವ ಆಧುನಿಕ ಅಸ್ತಿತ್ವವಾದೀ ಸಂಪ್ರದಾಯದ ಒಂದು ಪಂಥದ ತಾತ್ವಿಕ-ಭೂಮಿಕೆಯ ಆಗಾಮಿ ಚಿತ್ರವು, ಕನಿಷ್ಠ, ೨೦೦೦ ವರುಷ ಹಿಂದಿನದು ಇಲ್ಲಿ ಇದೆ! ವೃಕ್ಷ ಇವ ಸ್ತಬ್ಧಃ ಎಂಬ ಮೂಲ ಸ್ತಂಭ ಶಂಭುವಿನ ಅಥವಾ ಸ್ತಬ್ಧಸ್ಥಂಭ ಕಾಲೋಪಾಸಕರ ಎಂದರೆ ಮೃತ್ಯುಪೂಜಕ ಸಂಪ್ರದಾಯದ ಪವಿತ್ರ ಪೋಥೀ ಇಂದಿನ ಈ ವೇದೋಪನಿಷತ್ತುಗಳು.

ಆದರೆ ಆ (ದಿವ್ಯ) ಲೋಕದಲ್ಲಿ ಶಾಶ್ವತಸತ್ಯ, ದೇವರು ಎಂಬುವನಿದ್ದಾನೆ, ಎಂಬೀ ಶ್ರದ್ಧೆಯ ಕಿರ್ಕಗಾರ್ಡ್ ಪ್ರಭೃತಿಗಳ ಪರಂಪರೆಯ ಅಸ್ತಿತ್ವವಾದವೂ ಒಂದು ಇದೆ. ಕ್ರೈಸ್ತಪಂಥೀಯ-ಭಗವಂತ ಪಂಥೀಯ ಮೃತ್ಯು ಪೂಜಕರ ಇತಿಹಾಸದ ಆಕೃತಿಯೂ ಇದಕ್ಕಿಂತ ಬಹಳಷ್ಟು-ತೀರ-ಬೇರೆ ಆಗೋದಿಲ್ಲ. ಇದೆಲ್ಲ ಸರಿ. ಆದರೆ, ನಾವು ಕಂಡುಕೊಳ್ಳಬೇಕಾದದ್ದು ಈ ಮಹಾಭಾರತ ಎಂಬ ಕಾವ್ಯದಲ್ಲಿ, ಇತಿಹಾಸ ಇದ್ದರೆ ಇದರ ಆಕೃತಿ ಸ್ವರೂಪವು ಯಾವುದು?

ಈ ಮಹಾಭಾರತದ ಕೃತಿಯನ್ನು ಪಂಚಮವೇದ ಎಂದು ಬಗೆಯಲಾಗುತ್ತದೆ. ಈ ಕಾವ್ಯದಲ್ಲಿ, ವೇದದ ಆಶಯವು ಉಂಟು, ಎಂಬ ಈ ಹೇಳಿತವು ಪ್ರಾಮಾಣಿಕ ಸ್ವರೂಪದದ್ದು ಆಗಿದ್ದಲ್ಲಿ, ಈ ಕಾವ್ಯದಲ್ಲಿ ಪ್ರ-ಲಯದ ಚಿತ್ರವೇ ಇರಲಿಕ್ಕೇಬೇಕು. ಹೊರತು, ಇತಿಹಾಸ ಇದ್ದದ್ದೇ ಆದರೆ, ಮನು-ಜನ ಇತಿಹಾಸದ ಆಭಾಸಕ್ಕಿಂತ ಬೇರ ನಿಜವಾದ ಇತಿಹಾಸವು ಇರಲು ಶಕ್ಯವಿಲ್ಲ, ಇದು ಒಂದು ಕಾರಣವಾಯಿತು. ಈ ಮಹಾಭಾರತದಲ್ಲೂ ಆಪ-ರಸ=ರೇತದ ಭೂಮಿಕೆಯೇ ತಳಪಾಯದಲ್ಲಿ ಇರಬೇಕೇ ಹೊರತು, ಇದರಲ್ಲಿ ಮಾನವರ ಇತಿಹಾಸವು ಇದ್ದುದಾದರೆ, ಇದಕ್ಕಿಂತ ಹೆಚ್ಚಿನ ಅಪ್ರಮಾಣಿಕತನದ-ಮೋಸದ-ಕೃತಿಯ ಬೇರೊಂದು ದೊರೆಯಲಾರದು. ಏಕೆಂದರೆ, ಮಹಾಭಾರತದ ತತ್ತ್ವವಿಚಾರದ ಸಾರ-ಮಹಾಭಾರತದ ಹೃದಯ, ಎಂದು ಬಗೆಯಲಾಗಿರುವ ಶ್ರೀಮತ್ ಭಗವದ್ಗೀತೆಯನ್ನು ಸರ್ವೋಪನಿಷತ್ ಸಾರ ಎಂದು ನಂಬಿಸಲಾಗಿದೆ. ಗೀತಾಮಹಾತ್ಮ್ಯದಲ್ಲಿ ಈ ವಾಕ್ಯವಿದೆ: "ಸರ್ವೋಪನಿಷದೋ ಗಾವಃ, ದೋಗ್ಧಾ ಗೋಪಾಲನಂದನಃ"

ಈ ವರ್ಣನೆಯು, ಪ್ರಾಮಾಣಿಕ ಸ್ವರೂಪದ್ದು ಇದ್ದರೆ, ಇದರಲ್ಲಿ, ಛಾಂದೋಗ್ಯದ ನಾರ-ದ -ಸನತ್‌ಕುಮಾರ ವೇಷದೊಳಗಿನ ಸ್ಕಂದ ಈ ಪ್ರಕರಣವು ಒಳಗೊಳ್ಳುವ ಇತಿಹಾಸದ ಆಕೃತಿಯೇ ಇರಲಿಕ್ಕೆ ಬೇಕು. ಈ ಭಾಗದಲ್ಲಿಯೇ, ಇತಿಹಾಸದ ಉಲ್ಲೇಖಕ್ಕಿಂತಲೂ ಮುಂಚೆ ಈ ನಾರದನು ಅಧ್ಯಯನ ಮಾಡಿದನು, ಎಂದು ನಂಬಿಸಲಾಗುವ ಋಗ್ವೇದದ ಹೆಸರೂ ಬರುತ್ತದೆ. ಈ ಋಗ್ವೇದ ರಸಸ್ವರೂಪಿಯಿದೆಂದು ಛಾಂದೋಗ್ಯವೇ ಒಪ್ಪಿದೆ. ಅಲ್ಲದೆ ಜೈಮಿನೀಯ ಉಪನಿಷತ್ತಿನಲ್ಲಿ, ವೇದ ಹಿಂಡಿದರೆ (ಅಪೀಳಯತ್) ಓಂ ಇತಿ ರಸದ ತೊಟ್ಟು ಹೊರಬರುತ್ತದೆ ಎಂಬ ಸ್ಪಷ್ಟ ಉಲ್ಲೇಖವಿದೆ.[೫]

ಈ ಮೂರು ಕಾರಣಗಳಿಂದಾಗಿ, ಸರ್ವೋಪನಿಷತ್‌ಸಾರ ರೂಪ ಗೀತೆಯು ಯಾವ ಮಹಾಕಾವ್ಯದ ಅಂಗವೋ, ಆ ಕಾವ್ಯವು ರಸಂ ಒಸರ್ವ ಸುಸಿಲ ನರುಗಂಪಿನ, ಮೃತ್ಯುಪೂಜೆಯಲ್ಲಿ ಪರಿಣಮಿಸುವ ಮಹಾಕಾವ್ಯವೇ ಆಗಿರಬೇಕಾಗುತ್ತದೆ. ಇಲ್ಲದೆ ಇದ್ದರೆ, ಈ ಪ್ರಪಂಚದಲ್ಲಿ, ಈ ವ್ಯಾಸ (ಲಿಂಗ) ದೇವನಿಗಿಂತ ಲುಚ್ಚಾ, ಸುಳ್ಳುಗಾರ ಬೇರೊಬ್ಬನು ದೊರೆಯಲಾರನು. ಆದರೂ, ಈ ಮಹಾಭಾರತದಲ್ಲಿ ಇತಿಹಾಸವು ಉಂಟು ಎಂದು ನಂಬಲು ಹೇಳಲಾಗುತ್ತದಲ್ಲ? ಮಹಾಭಾರತದಲ್ಲಿ, ಇತಿಹಾಸವೂಉಂಟು ಎಂದು ಸೂಚಿಸುವ ಪ್ರಮಾಣಗಳು ತಲೆ ದೋರಲು ಕಾರಣವೇನು? ಮಹಾಭಾರತದ ಪಾಠದಲ್ಲಿಯೇ ದೊರೆವ ಪ್ರಮಾಣವಿದು; "ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬ್ರುಂಹಯೇತ್" ಮಹಾಭಾರತದ ಪ್ರಮುಖ ಪಾತ್ರ ಶಂತನು. ಈತನ ಅಸ್ತಿತ್ವದ ಬಗೆಗೆ ನಿರುಕ್ತದಲ್ಲಿ ಬರುವ ಉಲ್ಲೇಖ.

ಅತ್ರ ಇತಿಹಾಸಂ ಆಚಕ್ಷತೇ ದೇವಾಪಿಃ ಚ, ಆಷ್ಟಿಷೇಣಃ ಶಂತನುಃ
ಕೌರವ್ಯೌಭ್ರಾತರೌ ಬಭೂವುಃ

ಡಾ. ಎಂ. ಮಿರಾಶಿ ಅವರು ತಮ್ಮ ಲೇಖನದಲ್ಲಿ ಎತ್ತಿ ಹೇಳಿರುವ ಪುಣೆಯ ಚಿತ್ರಶಾಲಾ ಪ್ರೆಸ್ಸಿನ ಪಾಠದಲ್ಲಿ ಬರುವ ಉಲ್ಲೇಖ:

ಜಯೋ ನಾಮ ಇತಿಹಾಸಃ ಅಯಂ, ಶ್ರೋತವ್ಯೋ ವಿಜಿಗೀಷುಣಾಂ!

ಮಹಾಭಾರತದ ಪ್ರಾರಂಭದಲ್ಲಿ ನಾರಾಯಣನ ನಮನದ ಶ್ಲೋಕದಲ್ಲಿ, ತತಃ ಜಯಂ ಉದೀರಯೇತ್ ಎಂಬ ನಿದೇಶವಿದೆ. ಮಹಾಭಾರತದಲ್ಲಿ ಇತಿಹಾಸವೂ ಉಂಟು ಎಂದು ನಂಬಿಸಲು ಇಷ್ಟು ಬಗೆಬಗೆಯಿಂದ ಒತ್ತಿ ಒತ್ತಿ ಹೇಳುವ ಈ ರೀತಿಯಲ್ಲಿ, ಇದು ಸುಳ್ಳುತನ, ಮೋಸ ಮುಚ್ಚಿಕೊಳ್ಳುವ ಪ್ರಯತ್ನವು ಇರಲಾರದೋ? ಎಂಬ ಸಂದೇಹವು ಬಲಪಡುತ್ತಿದೆ!

ಸಂಪ್ರದಾಯವೇ ಹೇಳುತ್ತಿರುವಂತೆ, "ನರ-ನಾರಾಯಣೀಯ ಧರ್ಮ"ದ ಪುನರುತ್ಥಾಪನೆಗಾಗಿ, ಈ ಕಾವ್ಯವು ಅವತರಿಸಿದೆ! ಆದಕಾರಣ, ಈ ಮಹಾಭಾರತವು, ಮರಳಿ ಎತ್ತಿ ಕಟ್ಟಬೇಕು, ಎಂದು ಸಂಕಲ್ಪಮಾಡಿರುವ, ಈ ನಾರ ಅಯನೀಯ ನರಧರ್ಮವು, ಇನ್ನೊಂದು ಯಾವುದೋ ಧರ್ಮ ಸಂಪ್ರದಾಯವನ್ನು ಹಿಮ್ಮೆಟ್ಟಿಸಿರಲಿಕ್ಕೇ ಬೇಕಷ್ಟೆ? ಹಾಗಾದರೆ, ಮಹಾಭಾರತವು ಪ್ರತಿಪಾದಿಸಿರುವ ಹಾಗೂ ಜನಪ್ರಿಯವಾಗಿಸುವ ಈ ನರ=ನಾರಾಯಣ ಧರ್ಮ ಭಾಗವತ ಧರ್ಮವು, ಮೊದಲು ಶಿಷ್ಟಮಾನ್ಯತೆಯನ್ನು ಕಳಕೊಂಡಿರಲೇಬೇಕು. ಇದು ನಿಶ್ಚಿತವಿದೆ.

ಈ ನಾರ-ಅಯನೋಪಾಸಕ ನರ(ಳ) ಧರ್ಮವು ಹಿಮ್ಮೆಟ್ಟಿಸಿರುವ ಸಂಪ್ರದಾಯವು ಯಾವುದು? ಇದನ್ನು ನಿಃಸಂದಿಗ್ಧ ರೀತಿಯಲ್ಲಿ ಮನಗಾಣಿಸಿ ಕೊಡುವ ಪುರಾವೆ ಶ್ರೀಮತ್ ಭಗವತ್‌ಗೀತೆಯಲ್ಲೇ ಉಂಟು. ಇಷ್ಟೇ ಅಲ್ಲದೆ, ಈ ಭಗವಾನ್ ಎಂಬ, ಮಾತೃಗರ್ಭಸ್ಥ ವಾಮದೇವನ ಪರ್ಯಾಯರೂಪ ಕೃಷ್ಣನೇ ಹೇಳಿದ್ದಾನೆ; ಯಾವ ಬಾಯಿಯಿಂದ? ಎಂಬ ಪ್ರಶ್ನೆಗೆ ಇದು ವ್ಯಾಸ ಪ್ರಸಾದಾತ್ ಎಂದು ಪಾಮರರಿಗೆ ಉತ್ತರದ, ಸೂಚನೆ ಈ ಗೀತೆಯಲ್ಲೇ ಇದೆ. ಆದರೆ ಭಗವಂತನಿಗೆ, ಬಾಯಿಯಾವುದು ಅವನಾಡಿದ ಮಾತು ಕೇಳಿಬರಲು ಶಕ್ಯವೋ, ಎಂಬ ಈ ಸಂದೇಹವು ವಿಷ್ಣು ನಾರಾಯಣರ ಪರ್ಯಾಯ ಎಂಬ ವ್ಯಾಸನಿಗೂ ಸರಿಹೋಗುತ್ತವೆ! ಏಕೆಂದರೆ ವ್ಯಾಸ ಈ ಶಬ್ದಶಿಲ್ಪವು ಸ್ಥಲ (ವರ್ತುಲ) ಮತ್ತು ಕಾಲ (ವ್ಯಾಸ) ಇವೆಡರ ಏಕಾತ್ಮಕ ಶಬ್ದಪ್ರತಿಮೆ ಇದು: ಈ ವಾಕ್ ಅರ್ಥೌ ಇವ ಸಂಪೃಕ್ತೌ ವರ್ತುಲ-ವ್ಯಾಸವು ಹೇಗೆ ಮಾತನಾಡಬಲ್ಲುದು? ಈ ಅಡ್ಡ ಪ್ರಶ್ನೆಗಳು ಹೋಗಲಿ,

ಇಲ್ಲಿ ಒಪ್ಪಿಕೊಳ್ಳಲೇಬೇಕಾದ ವಾಸ್ತವ: ಸತ್ಯ ಸಂಗತಿಯು ಒಂದುಂಟು : ಇಷ್ಟೆಲ್ಲ ಸುಳ್ಳು, ಮೋಸ, ಕಣ್ಕಟ್ಟು, ಎದ್ದು ಕಾಣುತ್ತಿದ್ದರೂ ಈ ವ್ಯಾಸ (?) ದಕ್ಷಿಣ ಕರ್ಪದರ ಕೃತಿಯಲ್ಲಿ, ಇರುವ ಜನರನ್ನು ಸಂಭ್ರಾಂತರನ್ನಾಗಿಸುವ ಈ ಅಮೋಘ ಸೌಂದರ್ಯವು, ಈ ಶಬ್ದಶಕ್ತಿ-ಮಂತ್ರಶಕ್ತಿಯ ಸಾಮರ್ಥ್ಯವು ಸಾಮಾನ್ಯವೆ? ಮಹಾಭಾರತದ ಸೌಂದರ್ಯಕ್ಕೆ ಮನಸೋತವರು ಮರುಳಾಗಿರುವವರು, ಜನ ಮರಳೋ ಜಾತ್ರೆ ಮರಳೋ ಈ ವರ್ಗದ ಸಂತೆಯ

ಜನವಲ್ಲ, ಮಾದರಿಗಾಗಿ ಎತ್ತಿ ಹೇಳುವುದೇ ಲೇಸು. ಯಾರು ವಿದ್ವತ್ತು, ಸೂಕ್ಷ್ಮವಿಚಾರಶಕ್ತಿಗಾಗಿ ಹೆಸರಾಗಿದ್ದರೋ, ಯಾರ ಹೆಸರನ್ನು ನೆನೆದರೆ ತನ್ನ ತಾನೆ ತಲೆ ಬಾಗುವುದೋ ಇಂಥ ಈ ಸಾಲಿನವರು ಮಹಾಭಾರತಕ್ಕೆ, ಗೀತೆಗೆ ಮೋಸ ಹೋಗಿದ್ದಾಗಿದೆ. ಉದಾಹರಣೆಗಾಗಿ ಟಿಳಕರನ್ನೇ ನೋಡಿ: ಗೀತೆಯಲ್ಲಿ ಪ್ರವೃತ್ತಿಪರ ಜೀವನ ರೀತಿಯು ಉಂಟು, ಎಂದು ನೆರೆನೆಮ್ಮಿ ಗೀತಾರಹಸ್ಯ ಬರೆದಿದ್ದಾರೆ. ತಾವು ಗೀತೆಯ ಉಪಕ್ರಮ, ಉಪಸಂಹಾರ. ಇವೆರಡರಲ್ಲಿ ಇರುವ ಅಂತಃಸಂಗತಿಯ ಬೆಳಕಿನಲ್ಲಿ ಈ ಅರ್ಥ ಕಾಣುತ್ತಿದ್ದೇನೆ ಎಂದು ಹೇಳುತ್ತಾರೆ.

ಆದರೆ, ಈ ಗೀತೆಯು ಗುಹ್ಯಾತ್ ಗುಹ್ಯತಮಶಾಸ್ತ್ರ ಎಂದು ವ್ಯಾಸನೇ ಹೇಳಿರುವುದು ಟಿಳಕರ ಕಣ್ಣಿಗೆ ಕಾಣದೆ ಹೋಗುವ ಈ ಚಮತ್ಕಾರವೇ ಮಾಟ! ಟಿಳಕರು ಮಹಾಭಾರತವನ್ನು ತಲೆಯ ಮೇಲೆ ಇಟ್ಟು ಕೊಂಡು, ಇನ್ನುಳಿದವರ ತಲೆಯನ್ನು ಕೆಡಿಸಿದರು ಎಂದು ಎನ್ನಲು ಅವಕಾಶವಿದೆ. ಟಿಳಕರು, ಕೇಸರೀಪತ್ರದ ಮೂಲಕ ಮಹಾಭಾರತದ ಬಗೆಗೆ ಅದರ ಭಕ್ತಿಯನ್ನು ಮಹಾರಾಷ್ಟ್ರದಲ್ಲಿ ಬೆಳೆಸಿದ್ದಾಯ್ತು. ಆ ಸುಮಾರಿನ ತರುಣ ಪೀಳಿಗೆಯಲ್ಲಿ ಗೀತೆ, ಮಹಾಭಾರತದ ಬಗೆಗಿನ ಆಕರ್ಷಣವು ಹೆಚ್ಚಿತು. ಮಹಾರಾಷ್ಟ್ರದ ಡಾ. ಇರಾವತಿ ಕರ್ವೇ, ಡಾ. ಸುಕಟಣಕರರ ಮೇಲೆ, ಆ ಪ್ರಭಾವ, ಪರಿಣಾಮ ಮಾಡಲಿಲ್ಲವೆಂದು ಹೇಳಲು ಆಗುವುದಿಲ್ಲ. ಸಮಾಜಶಾಸ್ತ್ರದ ವ್ಯಾಸಂಗಿ ಡಾ. ಕರ್ವೇ ಸಂಸ್ಕೃತ ಕಾವ್ಯಗಳ ಭಕ್ತರು. ಟಿಳಕರ ಯುಗದಲ್ಲಿ, ಪ್ರವೃತ್ತಿಪರ ಜೀವನ ಪ್ರಚೋದಕ ಮೌಲಿಕಗ್ರಂಥ, ಮಾನವನ ಜೀವನದ ಅರ್ಥವನ್ನು ವಿಶದ ಪಡಿಸುವ ಅಪೂರ್ವ ಗ್ರಂಥ ಎಂದು ನಂಬುಗೆ ಉಂಟಾಗಿತ್ತು. ಆದರೆ, ಭಂಡಾರಕರ ಸಂಶೋಧನ ಮಂದಿರದ ಶುದ್ಧಪಾಠಗಳ ಸಂಪುಟಗಳು ಹೊರಗೆ ಬರತೊಡಗಿದಂತೆ, ಅದನ್ನು ಓದಿ, ಡಾ. ಇರಾವತಿಬಾಯಿ ಕರ್ವೆ ವ್ಯಥಿತರಾದುದನ್ನು ಅವರನ್ನೂ ನಾನು ಬಲ್ಲೆ.

ಮಹಾಭಾರತವು, ಒಂದು ಅಮೋಘ ದುರಂತಕಾವ್ಯ ಎಂಬ ಚಿತ್ರವು ಕಾಣತೊಡಗಿತು. ಡಾ. ಕರ್ವೆ ಯುಗಾಂತವನ್ನು ಬರೆದು ಮಹಾಭಾರತದ ಬಗೆಗಿನ ತಮ್ಮ ಸಮ್ಮಿಶ್ರ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಇಡೀ ಕಾವ್ಯದ ಉದ್ದಕ್ಕೂ ಜೀವನ ವೈಫಲ್ಯವನ್ನೇ ಚಿತ್ರಿಸಲಾಗಿರುವ ಈ ಕೃತಿಯನ್ನು ಇತಿಹಾಸ ಎನ್ನಲಾದೀತೆ? ಎಂಬ ಪ್ರಶ್ನೆ ಎತ್ತುವ ಡಾ. ಕರ್ವೆ, ಇದೂ ಒಂದು ಬಗೆಯ ಇತಿಹಾಸವೇ ಸರಿ ಎಂದು ಎಂತೂ ಸಮಾಧಾನವನ್ನು ತಂದುಕೊಳ್ಳುತ್ತಾರೆ. ಡಾ. ಕರ್ವೆ ಅವರ ಯುಗಾಂತವು ಮರಾಠಿಯಲ್ಲಿ ಸಂಪ್ರದಾಯವಾದಿಗಳ ಉಗ್ರಟೀಕೆಗೆ ಗುರಿಯಾಯಿತು. ತಾಯಿಯು, ಆ ಸುಮಾರಿಗೆ ಗತಿಸಿದ್ದರು, ಆಗ ಮಗಳು ಪ್ರೊ. ಗೌರೀ ದೇಶಪಾಂಡೆ ತಾಯಿಯ ಭೂಮಿಕೆಯನ್ನು ಸ್ಪಷ್ಟಪಡಿಸುವ ಉತ್ತರವನ್ನು ಬರೆದಿದ್ದಾರೆ. ಮಹಾಭಾರತದ ಬಗೆಗಿನ ತಾಯಿಯ ವಿಮರ್ಶಾತ್ಮಕ ದೃಷ್ಟಿಯನ್ನು ವಿವರಿಸಿ ಕೃಷ್ಣನ ಕೃತಿಗಳೊಳಗಿನ ವಿಸಂಗತಿಗಳನ್ನು ಅವರು ಅರಿತಿದ್ದರೂ, ಕೃಷ್ಣ ಎಂದರೆ ಬಾರಾ ಖೂನ ಮಾಫೆ, ಎಂಬ ಆತ್ಮಿಯಭಾವವು ತಾಯಿಯಲ್ಲಿ ಬೆಳೆದು ನಿಂತಿತ್ತು ಎಂಬ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಟಿಳಕ ಯುಗದ ಪ್ರಭಾವದಲ್ಲಿ ಬೆಳೆದ ಇನ್ನೊಬ್ಬ ಮೇಧಾವಿಯ ಕಥೆ: ಮಹಾಭಾರತದ ಹಿರಿಮೆಯನ್ನು ಕಂಡಿದ್ದ ಡಾ. ಸುಕಟಣಕರು, ಇದರ ಶುದ್ಧಪಾಠವನ್ನು ಶೋಧಿಸಲು ತಮ್ಮ ಆಯುಷ್ಯವನ್ನೇ ಅರ್ಪಿಸಿದರು. ಶುದ್ಧ ಪಾಠವನ್ನು ಕಂಡು ಹಿಡಿಯಲು ಸಮರ್ಥವಾಗಬಲ್ಲ, ಸಂಶೋಧನದ ಶಾಸ್ತ್ರೀಯ ಪದ್ಧತಿಯನ್ನು, ಮೊದಲು, ಹಲವು ತಜ್ಞರ ಸಹಕಾರದಿಂದ, ನಿರ್ಧರಿಸಿದ್ದಾಯಿತು. ಈ ಶಾಸ್ತ್ರೀಯ ಪದ್ಧತಿಯಂತೆ, ಮಹಾಭಾರತದ ಪರ್ವಗಳ ಸಂಶೋಧನವು ಪ್ರಾರಂಭವಾಗಿ, ಸಂಪುಟಗಳು ಪ್ರಕಟವಾಗ ತೊಡಗಿದವು.

ಮಹಾಭಾರತ ಕಾವ್ಯವನ್ನು ಓದಿ ಪ್ರಭಾವಿತರಾದ ಪಾಶ್ಚಾತ್ಯರಲ್ಲಿ ಡಾ. ವಿಂಟರ್‌ನಿಟ್ಸರು ಈ ಬಗೆಯ ಸಂಶೋಧನದ ಆವಶ್ಯಕತೆಯನ್ನು, ಈ ಮೊದಲೇ ಪ್ರತಿಪಾದಿಸಿದ್ದರು. ಪಾಶ್ಚಾತ್ಯ ಪ್ರಮುಖ ರಾಷ್ಟ್ರಗಳಲ್ಲಿ ಮಹಾಭಾರತದ ವ್ಯಾಸಂಗ ಮಾಡಿದ ಅನೇಕ ವಿದ್ವಾಂಸರ ಮೂಲಕವೂ, ಡಾ. ಸುಕಟಣಕರರಿಗೆ, ಮಹಾಭಾರತದ ಬಗೆಗಿನ ಆಕರ್ಷಣವು ಇಮ್ಮಡಿಯಾಗಿತ್ತು. ಜಾಗತಿಕ ಮಹತ್ವದ, ಭಾರತದ ರಾಷ್ಟ್ರೀಯಕಾವ್ಯ ಎನಿಸುವ ಈ

ಮಹಾಭಾರತದ ಶುದ್ಧ ಪಾಠವನ್ನು ಶೋಧಿಸುವ ಈ ಮಹಾಕಾರ್ಯವನ್ನು, ಅತ್ಯಂತ ಉತ್ಸಾಹದಿಂದ ಪ್ರಾರಂಭಿಸಿದ್ದ ಡಾ. ಸುಕಟಣಕರರಿಗೆ, ಕೊನೆಯಲ್ಲಿ ಅತ್ಯಂತ ನಿರಾಶೆಯು ಕವಿದು ವಿಫಲರಾದುದುಂಟು. ವೈಫಲ್ಯದಲ್ಲಿ ತೋಳಲಾಡಿದ್ದಾಯ್ತು. ಈ ಕೆಲಸದಿಂದ ನಿವೃತ್ತರಾದ ಬಳಿಕ, ಡಾ. ಎಸ್. ಎ. ಸುಕಟಣಕರರಿಗೆ, ಸಂಶೋದನದ ಬಗೆಗಿನ ತಮ್ಮ ಅನುಭವಗಳನ್ನು ಹೇಳಲು ಕೇಳಿಕೊಂಡಿದ್ದಾಯ್ತು. ಈ ವಿಷಯವನ್ನು ಅವರು ನಾಲ್ಕು ಉಪನ್ಯಾಸಗಳ ರೂಪದಲ್ಲಿ ಬರೆದದ್ದಾಯ್ತು. ಇವುಗಳಲ್ಲಿ ಕೊನೆಯ ಉಪನ್ಯಾಸಕ್ಕೆಂದು ಬಂದ ಉತ್ಸುಕ ಶ್ರೋತೃಗಳಿಗೆ ಅವರ ಶ್ಮಶಾನಯಾತ್ರೆಗೆ ಹೋಗುವ ಪ್ರಸಂಗ ಬಂತು. ಅವರು ಬರೆದಿರುವ On the Meaning of the Mahabharata ಈ ಪುಸ್ತಕವು ಪ್ರಕಟವಾಗಿದೆ. ರಾಯಲ್ ಏಶಿಯಾಟಿಕ್ ಸೊಸೈಟಿ ಹೆಸರಿನ ಶಿಷ್ಟಮಾನ್ಯ, ಗಣ್ಯ ಸಂಸ್ಥೆಯು ಇದನ್ನು ಪ್ರಸಿದ್ಧಿಸಿದೆ. ಇದರ ಮುನ್ನುಡಿಯಲ್ಲಿ, ಪ್ರಕಾಶಕರು, ತಮ್ಮ ಸೋಜಿಗವನ್ನು ಬಚ್ಚಿಡದೆ ವ್ಯಕ್ತಪಡಿಸಿದ್ದಾರೆ. ಯಾರು ಶುದ್ಧಪಾಠಕ್ಕಾಗಿ, ತಮ್ಮನ್ನು ಮುಡುಪಿಕೊಂಡರೊ, ಆ ಡಾ|| ಸುಖಟನಕರರು, ಉಪನ್ಯಾಸದಲ್ಲಿ ಸ್ಪಷ್ಟಿಕರಣಕ್ಕಾಗಿ ಎತ್ತಿಹೇಳಿದ್ದು ಹಳೆಯ ಪರಂಪರಾಗತ ಪ್ರತಿಯೊಳಗಿನ ಶ್ಲೋಕಗಳನ್ನು!

ಡಾ. ಸುಕಟಣಕರರ ಮಹಾಭಾರತ, ಗೀತೆಯ ಬಗೆಗಿನ ಭಾವುಕತೆ, ಆತ್ಯಂತಿಕ ಭಕ್ತಿಯು ಈ ಉಪನ್ಯಾಸದ ಉದ್ದಕ್ಕೂ ಎದ್ದು ಕಾಣುವಂತಿದೆ. ತುಂಬ ರಸಿಕರು, ಸೌಂದರ್ಯೋಪಾಸಕರು, ಮಹಾಭಾರತವು ಕ್ಷೀಣಿಸಿದ್ದನ್ನು ಕಾಣುವಾಗ ಅವರಿಗಾದ ವ್ಯಥೆಯು ಈ ಉಪನ್ಯಾಸಗಳಲ್ಲಿಯೂ ಪ್ರತಿಬಿಂಬಿತವಾಗಿದೆ. ಈ ಸುಕಟಣಕರರು, ತಮ್ಮ ಸಂಶೋಧಕನ ಭೂಮಿಕೆಯನ್ನೇ ಕಡೆಗಣಿಸಿದ್ದು ಮೇಲೆಯೇ ಎದ್ದು ಕಾಣುವಂತಿದೆ. ಶುದ್ಧಪಾಠವನ್ನು ಕಂಡುಹಿಡಿಯುವ ಶಾಸ್ತ್ರೀಯ ಪದ್ಧತಿಯು ಸದೋಷವಿದೆ, ಎಂದು ಎನ್ನಲು ಇಂಬಿಲ್ಲ. ಇವರೇ ಮೊದಲಲ್ಲಿ, ಪ್ರಯೋಗಾರ್ಥವಾಗಿ, ಈ ಪದ್ಧತಿಯನ್ನು ಉಪಯೋಗಿಸಿ ಮಹಾಭಾರತದಲ್ಲಿ ಪಾಠಾಂತರಗಳು ಉಂಟೆ? ಎಂಬುದನ್ನು ಒರೆಗೆ ಹಚ್ಚಿ ನೋಡಿದ್ದಾರೆ. ಈ ಕಾವ್ಯದಲ್ಲಿ ಉದ್ದಕ್ಕೂ ಭೃಗು (ದೇವಯಾನೀ-ಶುಕ್ರನ ಪರ್ಯಾಯ ನಾಮ) ಸಂಪ್ರದಾಯದ ಕೈವಾಡವು ಉಂಟು, ಎಂದು ಖಾತ್ರೀ ಮಾಡಿಕೊಡುವ ಶ್ಲೋಕಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಈ ಪ್ರಬಂಧವು ಭಾಂಡಾರಕರ ಪತ್ರಿಕೆಯಲ್ಲಿಯೇ ಪ್ರಕಟವಾಗಿದೆ. ಈ ಪ್ರಬಂಧವನ್ನು ಮೆಚ್ಚಿಕೊಂಡು ಬಂದ ಪರದೇಶದ ವಿದ್ವಾಂಸರ ಅಭಿಪ್ರಾಯಗಳನ್ನು ಪ್ರಕಟಿಸಲಾಗಿದೆ. ಆದರು, ಡಾ. ಸುಕಟನಕರರ ತಕರಾರು; ಈ ಪದ್ಧತಿಯನ್ನು ಅನುಸರಿಸಿ ಶುದ್ಧಪಾಠ ಹುಡುಕುವುದಾದರೆ ಕೊನೆಗೆ, ಒಂದೂ ಶ್ಲೋಕವೂ ಕೈಗೆ ಹತ್ತಲಾರದು. ಶಾಸ್ತ್ರೀಯ ಸಂಶೋಧನ ಪದ್ಧತಿಯಿಂದ ಹೊರಡುವ ನಿಷ್ಕರ್ಷವನ್ನು ಒಪ್ಪದಿರುವಲ್ಲಿ ವಾಸ್ತವ: ಸತ್ಯದ ಅವಜ್ಞೆಯಾಗುತ್ತಿದೆ.

ವ್ಯಾಸ ನಾಮರೂಪದ ಸಾರ್ಥಕ!

ಡಾ. ಸುಕಟಣಕರಿಗೆ ಈ ಸಂಶೋಧದಲ್ಲಿ ಆದ ವಾಸ್ತವ: ಸತ್ಯದ ಸಾಕ್ಷಾತ್ಕಾರವನ್ನು ಕಣ್ತೆರೆದು ನೋಡಲು. ಅವರ ಭಾವುಕ ಹೃದಯಕ್ಕೆ ಧೈರ್ಯಸಾಲಲಿಲ್ಲ, ಎಂದು ಬಗೆಯಬೇಕಾಗುತ್ತಿದೆ. ಮಹಾಭಾರತದ ಪಾಠವು. ಮೊದಲನೆಯ ಸಾಣಿಗೆಯಲ್ಲಿಯೇ ಅತ್ಯಲ್ಪ ಉಳಿದಿದೆ. ಇನ್ನೊಂದು ಒರೆಗಲ್ಲು; ಅಂತರ್-ವಿಸಂಗತ ವಿಧಾನವನ್ನು ತೊಡೆದು ಹಾಕುವುದು. ಅತಿ ಪ್ರಾಚೀನ ಪಾಠವನ್ನು ಕಂಡು ಹಿಡಿಯುವ ವಿಧಾನದಂತೆ, ಈಗ ಪ್ರಕಟವಾಗಿರುವ ಸಂಪುಟಗಳಲ್ಲಿ, ಪರಸ್ಪರ ವಿಸಂಗತವಿರುವ ಹೇಳಿಕೆಗಳನ್ನು, ಇಂಥ ಪ್ರಸಂಗಗಳನ್ನು ತೆಗೆದು ಹಾಕುವ ಕಾರ್ಯವು ಈ ಎರಡನೆಯ ಸಾಣಿಗೆಯಲ್ಲಿ ನಡೆಯಬೇಕಿತ್ತು ಇನ್ನು. ಈ ಒರೆಗಲ್ಲಿಗೆ ಹತ್ತಿ, ಮಹಾಭಾರತದಲ್ಲಿ ಒಂದೂ ಶ್ಲೋಕವು ಉಳಿಯಲಾರದು, ಎಂದು ಸಂಶೋಧಕ ಡಾ. ಸುಖಟನಕರರಿಗೆ ಸುಸ್ಪಷ್ಟವಾಗಿ ಕಂಡಿತು. ಇದು, ಶೂನ್ಯ ಸಂಪಾದನೆಯ ಸಾಧನದಲ್ಲಿ ಲಭಿಸಬಲ್ಲ ಸಿದ್ಧಿಯಾಗಿದೆ. ಶೂನ್ಯ-ಮಹಾಶೂನ್ಯದ ಗುಹೆಯಲ್ಲಿ (ಹೊಕ್ಕು) ಇರುವ : ಮಾತರಿ-ಶ್ವನ್, ರೂಪ, ಈ ಗುಹೇಶ್ವರನು=ವ್ಯಾಸನು ಮಾತ್ರ ನಿತ್ಯ, ಶಾಶ್ವತ ಸನಾತನ ಸತ್ಯ. ಉಳಿದುದೆಲ್ಲವೂ ನಶ್ವರ : ದೃಶ್ಯವಿಶ್ವ Phenomenon ಈ ವಿಶ್ವರೂಪದ ಹಿಂದೆ ಅಡಗಿ ಇರುವ ನಾರ ಆಯನ ಕೃಷ್ಣನು ಇರುವ ಈ ಕೃಷ್ಣವಿವರ, ಇದುವೇ ಶಾಶ್ವತ ಸತ್ಯ. ಅತ್ಯಂತ ಅಭಾವರೂಪೀ ಪ್ರಾಣಲಿಂಗ ಶಕ್ತಿ=ಈ ಕಾಲತತ್ವವನ್ನು

ಸ್ಥಾಯಿೂ ಎಂದು ನೆರೆನೆಮ್ಮುವ ಈ ನರ(ಳ) ಸಂಪ್ರದಾಯಗಳೆಲ್ಲವೂ, ಮೃತ್ಯುಪೂಜಕರ ಪಂಥಗಳೇ ಆಗಿರುವುದನ್ನು. ಮಹಾಭಾರತದ ಈ ರಚನಾ ಕೌಶಲವು ಮನಗಾಣಿಸಿ ಕೊಡಬಲ್ಲುದು.

ಮಹಾಭಾರತವು ಒಂದು ಅರಣ್ಯ. ಇಡಿಯನ್ನು ಓದಿ ನೆನಪಿಟ್ಟುಕೊಂಡು, ಪೂರ್ವಾಪರ ಸಂದರ್ಭದೊಡನೆ ಸಮೀಕ್ಷಿಸುವುದು, ವಿಮರ್ಶಿಸುವುದು, ಮಹಾ-ತಾಕತ್ತು ಇಲ್ಲದೆ ಇದು ಶಕ್ಯವಿಲ್ಲ. ಮಹಾಭಾರತದ ಆಕೃತಿಯೇ ಗೀತೆಯಲ್ಲಿಯೂ ಉಂಟು. ಗೀತೆಯನ್ನು ವಿಮರ್ಶಿಸಿ ಒರೆಗೆ ಹಚ್ಚಿ ನೋಡಲು ಶಕ್ಯವಾಗಬಲ್ಲುದು. ಇದರಲ್ಲಿ ಅಥದಿಂದ ಇತಿಯ ವರೆಗೆ ಅಂತರ್-ವಿಸಂಗತಿ, ಪ್ರೇರಣಾ ದ್ವಂದ್ವವು ಇದರ ವೈಶಿಷ್ಟ್ಯವಾಗಿದೆ. ಐತಿಹಾಸಿಕ ಭೂಮಿಕೆಯ ಘಟನೆ: ಕುರುಕ್ಷೇತ್ರದ ಕಾಳಗದ ಪೂರ್ವಸಿದ್ಧತೆಯ ಸೂಚನೆಯು ಮೊದಲನೆಯ ಅಧ್ಯಾಯದಲ್ಲಿ ಇದೆ. ಆದರೆ ಹದಿನೆಂಟು ಅಧ್ಯಾಯಗಳೂ ಮುಕ್ತಾಯಗೊಳ್ಳುವುದು ಒಂದೊಂದು ಯೋಗದ ಹೆಸರಿನಿಂದ! ಮೊದಲನೆಯದು ವಿಷಾದಯೋಗ; ಎರಡನೆಯದಕ್ಕೆ ಸಾಂಖ್ಯಯೋಗ ಎಂದು ಹೆಸರು. ಈ ಗೀತೆಯಲ್ಲಿ, ಸಂನ್ಯಾಸ, ಯೋಗದ ದಿಕ್ಕಿನಲ್ಲಿ ವಿವೇಚನೆಯು ಸಾಗುತ್ತದೆ. ಮುನಿ: ಮೋಕ್ಷ ಪರಾಯಣಃ, ಬೋಧರ ಈ ಉಪದೇಶದಲ್ಲಿ, ಪ್ರಾಣತೊರೆದರೆ ಮೋಕ್ಷಕ್ಕೆ ಹೋಗಬಹುದು, ಎಂಬ ವಿವೇಚನೆಗೇ ಪ್ರಾಶಸ್ತ್ಯವಿದೆ.

ಈ ಗೀತೆಯಲ್ಲಿ ನಿಜವಾದ ಯುದ್ಧದ ವಿಚಾರವೇ ಇಲ್ಲ; "ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಂ" ಕಾಮ(ನಾ) ರೂಪ ಶತ್ರುವನ್ನು ಗೆಲ್ಲಲು ಆವಶ್ಯಕವಾದ ಯೋಗ-ಸಾಧನದ ಉಪದೇಶವಿದೆ! ಮಹಾತ್ಮಾಜೀಯವರ ಶ್ರದ್ಧೆಯಂತೆ ಇದರಲ್ಲಿ ಅಥದಿಂದ ಇತಿಯವರೆಗೆ ಸಾಂಕೇತಿಕ ಅರ್ಥವಿದೆ. ಆತ್ಯಂತಿಕ ಅಹಿಂಸೆಯ ಮಾರ್ಗದಿಂದ ಸತ್ತ್ಯದ ಸಾಕ್ಷಾತ್ಕಾರ ಮಾಡಿಕೊಳ್ಳುವ ದಾರಿಯನ್ನು ಕುರಿತು ಇಲ್ಲಿ ಹೇಳಲಾಗಿದೆ. ಈ ಗೀತೆಯೊಳಗಿನ ಮಾತಿನ ಗತ್ತುಗಾರಿಕೆಯ ಸ್ವಲ್ಪ ಪರಿಚಯಕ್ಕಾಗಿ ನನ್ನ 'ಭಗವತ್ ಗೀತೆಯಲ್ಲಿ ಹುದುಗಿರುವ ರಾಜಯೋಗದ ಸ್ವರೂಪ ಈ ಪುಸ್ತಕ ನೋಡಲು ಬಿನ್ನಹ. ಅದನ್ನು ಬರೆಯುವಾಗ ದೊರೆಯದೆ ಇದ್ದ ಮೌಲಿಕ ಪ್ರಮಾಣವು ಆ ಮೇಲೆ ಜಾಬಾಲೋಪನಿಷತ್ತಿನಲ್ಲಿ ಇದ್ದುದನ್ನು ಕಂಡೆ! ಕಾಮರೂಪ ಶತ್ರುವನ್ನು ಗೆಲ್ಲಬೇಕಾಗಿರುವ ಈ ಕಪಿಧ್ವಜ ನರ(ಳ)ನು, ಕುರುಕ್ಷೇತ್ರದ ಯುದ್ಧ ಮಾಡಬೇಕು ಆದಕಾರಣ ಈ ನರ(ಳ)ನ ರಣಭೂಮಿ ಕುರುಕ್ಷೇತ್ರ ಒಬ್ಬ ಯುವತಿಯೇ ಇರಬೇಕಾದ ಅನಿವಾರ್ಯತೆಯನ್ನು ಅಲ್ಲಗಳೆಯಲು ಶಕ್ಯವಿಲ್ಲ.

ಈ ಗೀತೆಯು ನಿಷ್-ಕಾಮನಾಗಿ ಕರ್ಮವನ್ನು : ಬ್ರಹ್ಮ-ಚರ್ಯವನ್ನು ಆಚರಿಸಲು ಹೇಳುತ್ತದೆ. ಇದು ಮಂಗ ತತ್ತ್ವವಾಗಿದೆ ಈ ಬ್ರಹ್ಮನಿತ್ಯ ಉಭಯಲಿಂಗಿಯಾಗಿದೆ. ಆದಕಾರಣ, ಈ ಬ್ರಹ್ಮನನ್ನು ಕುರಿತು ಚರಿಸುವುದರಲ್ಲಿ ಹೆಣ್ಣು ಗಂಡಿನ ಕಡೆಗೂ ಗಂಡು ಹೆಣ್ಣಿನ ಕಡೆಗೂ ಚರಿಸಬೇಕೆಂಬುದು ಅಭಿಪ್ರೇತವಿದೆ. ಏಕಪಕ್ಷೀಯ ಕುಮಾರ. ಕುಮಾರೀ ವ್ರತವು, ನಪುಂಸಕರ ವ್ರತವಾಗಿದೆ! "ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ" ಎಂಬ ಪಡೆಮಾತು ಜಾನಪದರಲ್ಲಿ ರೂಢಿಗೆ ಬಂದದ್ದು ನಿಷ್ಕಾರಣವಲ್ಲ. ಗುಣಾಃ ಗುಣೇಷು ವರ್ತಂತೇ ಅದಕ್ಕೂ ಇದಕ್ಕೂ ಚಾಟಿ ತಾನು ನಿರ್ಲಿಪ್ತ: ತಟಸ್ಥ! ನಿಷ್-ಕಾಮನಾಗಿ, ಇಂದ್ರಿಯಗಳಿಂದ ತಾನು ಬೇರೆ, ಎಂಬ ನೆನಹಿನಲ್ಲಿ ನಡೆವ ಕಾಯಕ, ಕಾಮಕ್ಕೆ-ದೇಹಕ್ಕೆ ಸಂಬಂಧಿಸಿದ್ದು, ತಾನು ನಿಷ್-ಕಾಮನು ಈ ಬಗೆಯ ಅ-ಸಂಗ ಶಸ್ತ್ರದಿಂದ ಕಾಮನೆಗಳನ್ನೆಲ್ಲ ಕತ್ತರಿಸಿ ಬಿಡಲು ಗೀತೆ ಬೋಧಿಸಿದೆ. ಜಾಬಾಲೋಪನಿಷತ್ತಿನ ಕುರುಕ್ಷೇತ್ರದ ನಿರ್ದೇಶದೊಳಗಿನ ಚಾಕ-ಚಕ್ಯವೂ ಅಭ್ಯಸನೀಯವಿದೆ : ಅ-ವಿಮುಕ್ತ ಕುರು-ಕ್ಷೇತ್ರ'ವು ಇರಬೇಕು! ಯಾಕೆ? ಮುಕ್ತಳಿದ್ದರೆ ಈ ಕಾದಲರ ಕಾಳಗ ಅಶಕ್ಯತಾನೆ? ಈ ಉಪನಿಷತ್ತು ಜಬಾಲಾಕುಮಾರೀ ಮಾತಾಪುತ್ರನದು. ಈ ಜಾಬಾಲನು, ಆದಿತ್ಯಪಂಥೀಯ ರಹಸೂಃ ಕುಮಾರನು! ಆದಿತ್ಯನಾಂ ಅಹಂ ಎಂಬ ವಿಷ್ಣುರೂಪೀ ಕೃಷ್ಣನ ಗೀತೆಯಲ್ಲಿ ಬರುವ ಕುರುಕ್ಷೇತ್ರ ಈ ಸಾಂಕೇತಿಕ ಪರಿಭಾಷೆಯು, ಸಾಂಸ್ಕೃತಿಕ ಮಹತ್ತ್ವದ್ದಾಗಿದೆ.

ಈ ಕುರುಕ್ಷೇತ್ರದ ಕಾಳಗವು ನರ(ಳ) ಸಂಪ್ರದಾಯದ ಇತಿಹಾಸದ ಆಕೃತಿಯನ್ನು ಮನಗಾಣಿಸಿ ಕೊಡುತ್ತಿದೆ. ಇತಿಹಾಸದ ಈ ಆಕೃತಿಯೇ ವೇದದಲ್ಲಿದೆ. ಅತ್ಯಂತ ಅಭಾವವೇ ಸ್ಥಾಯಿೂ ಆಗುತ್ತಿರುವ ಸ್ಥಳ (ದೇಹ) ಮತ್ತು ಕಾಲ ಈ ವಿಭಾಗದ್ವಯದ ಕತ್ತಲನ್ನು ಆಮಂತ್ರಿಸುವ ಈ ವೃತ್ತಾಕೃತಿಯ ಚಕ್ರನೇಮಿ ಕ್ರಮದ ಕಾಲತತ್ತ್ವದ ಆಧಾರದ ಈ ಮಹಾಭಾರತವು ಒಳಗೊಂಡ ಇತಿಹಾಸದ ಆಕೃತಿಯೂ ವೃತ್ತಾಕೃತಿಯದೇ ಆಗಲಿಕ್ಕೆಬೇಕು. ವೃತ್ತಾಕೃತಿಯ

ಜೀವನ ರೀತಿಯಲ್ಲಿ ನಿಜವಾದ ಆಗಾಮಿ ನಾಳೆಗಳಿಗೆ ಇಂಬಿಲ್ಲ. ಆದಕಾರಣ, ಇಲ್ಲಿ ನಿನ್ನೆಯೇ ಇಂದು ಆಗಬಲ್ಲುದು. ಈ ಮೊದಲೊಮ್ಮೆ ಹೇಳಿರುವಂತೆ ಸ್ತಬ್ಧ-ಸ್ಥಂಭ ಕಾಲದ ಅಥವಾ ನಿತ್ಯವರ್ತಮಾನ ಕಾಲವೇ ಈ ಜನದ ಇತಿಹಾಸವಾಗಿರಲಿಕ್ಕೆ ಬೇಕು. ಸೌಂದರ್ಯಶಾಸ್ತ್ರಜ್ಞ ಕ್ರೋಚೆ ಹೇಳುತ್ತಾನೆ. ಇತಿಹಾಸವು ಇಂದಿನ (ever present) ಸ್ವರೂಪದ್ದು ಆಗಿರುತ್ತದೆ! ಕಲೆ, ಸೌಂದರ್ಯ ನ-ಇತಿಹಾಸವಾದೀ (A- historical) ಭೂಮಿಕೆಯದು ಇರುತ್ತದೆ! ಇದು ಕಾಂಟನು ಕಂಡ ಸೌಂದರ್ಯದ ಪಾತಳಿಯಲ್ಲ. "ಕ್ಷಣೇ ಕ್ಷಣೇ ನವತಾಂ ಉಪೈತಿ, ತದೇವ ರೂಪಂ ರಮಣೀಯತಾಯಾಃ" ಶೆಕ್ಸಪಿಯರ್, ಕಾಲಿದಾಸಾದಿಗಳ ಕೃತಿಗಳು, ಕವಿ-ಚಿತ್ರಕಾರ, ಮೂರ್ತಿಕಾರರ ಶಿಲ್ಪವು ನಿನ್ನೆ-ನಾಳೆಗಳ ಕಕ್ಷೆಗೆ ಒಳಗಾಗುವುದಿಲ್ಲ. ಕಲೆಯ ಕಕ್ಷೆಯ ಹೊರಗಿನ ಮೂಲ್ಯಗಳಿಂದ ಕಲೆಯ ಬೆಲೆಯನ್ನು ಕಟ್ಟತಕ್ಕದ್ದಲ್ಲ. ಕಲಾಸೌಂದ್ಯದ ಬೆಲೆ ಅರ್ಥಕಲೆಯಲ್ಲಿಯೇ ಇರುತ್ತದೆ. ಈ ಪ್ರಪಂಚದ ತಳಪಾಯದಲ್ಲಿ ಸತ್ತ್ಯ : ಸೌಂದರ್ಯವಿದೆ. ಸತ್ತ್ಯವೇ ಸೌಂದರ್ಯ, ಸೌಂದರ್ಯವೇ ಸತ್ತ್ಯ. 'ಸೌಂದರ್ಯ ಸ್ವರೂಪ ಈ ಸತ್ತ್ಯ' ಎಂದರೆ ಇದು ಮೃತ್ಯುಶಕ್ತಿ.

ಮಹಾಭಾರತವು ಅತ್ಯಂತ ಭವ್ಯ ಉದಾತ್ತ ಕಲಾಕೃತಿಯಾಗಿದೆ. ಮಹಾಭಾರತದಲ್ಲಿ ಮಾನವ(ನಳ)ನ ಸಾರ್ವಕಾಲಿಕ ಇತಿಹಾಸವು ಒಳಗೊಂಡಿದೆ. ಅತ್ಯಂತ ಅಭಾವವೇ ಸ್ಥಾಯಿ ಇರುವ ಭೂಮಿಕೆಯಲ್ಲಿ ಅಭೀದ್ಧಾಧಾತ್ (immanent) ಸ್ವರೂಪದ ಅರ್ಥ: ವಿಚಾರಕ್ಕೆ ಸ್ಥಾನವೇ ಇಲ್ಲ! ಭಾವವಿಶ್ವದ ಆ-ಲೋಕದಲ್ಲಿ (World of imagination) ಅವರವರ ಅರ್ಥ, ಅವರವರ ಪಾಲಿನ ಸತ್ಯ ಆಗುತ್ತದೆ.Functional = ತುರ್ತು, ಚಾಲ್ತೀ ಅರ್ಥವೇ ಅರ್ಥ; ಈ ಬಾಳಿನಲ್ಲಿ. ಸಾರ್ವಕಾಲಿಕ ಶಾಶ್ವತ ವಗೈರೇ ಮಾತುಗಳೆಲ್ಲವೂ ಕಾಲ್ಪನಿಕ! ಈ ಭೂಮಿಕೆಯ ಮೇಲೆ ಜೀವಿತ ಒಂದೇ ಸತ್ತ್ಯ. ಜೀವನಕ್ಕೆ=ಧರ್ಮ: ಸಂಸ್ಕೃತಿಗೆ ಕಟ್ಟಡವಿದೆ (Structure) ಇದೆ, ಇತಿಹಾಸವಿದೆ ಎಂಬುದೇ ಅಮಾನ್ಯವಿರುತ್ತದೆ! ಸೌಂದರ್ಯವಾದೀ ಈ ಭೂಮಿಕೆಯನ್ನು ಗೋರ್ಜಿಯಾಸನನಷ್ಟು ಸುಂದರವಾಗಿ, ಪ್ರಾಂಜಲವಾಗಿ ಹೇಳಿದವರು ದೊರೆಯಲಾರರು. ಭಾರತೀಯ ಸಾಂಸ್ಕೃತಿಕ ಇತಿಹಾಸದ ಮೂಲಕ ಗೋರ್ಜಿಯಾಸನ ಮಾತು ವಾಸ್ತವ ಸತ್ಯವಿದ್ದುದರ ಖಾತ್ರೀ ಆಗುತ್ತಿದೆ.

ಭಾರತೀಯರು, ಇಂದಿನ ವೇದೋಪನಿಷತ್ತು, ಮಹಾಭಾರತ, ರಾಮಾಯಣಾದಿ ಪರಮೋಚ್ಚ ಪಾತಳಿಯ ಕಲಾಕೃತಿಗಳ ಸೌಂದರ್ಯಕ್ಕೆ ಮಾರುಹೋಗಿದ್ದಾರೆ. ಈ ಸೌಂದರ್ಯ ಲೋಲುಪತೆಯನ್ನು ಪರ್ಶಿಯನ್ ಕಾವ್ಯದ ಪಂಕ್ತಗಳು ಚೆನ್ನಾಗಿ ವಿಶದಪಡಿಸುತ್ತವೆ. ಹೇ ಸೌಂದರ್ಯ ಮೂರ್ತಿಯೇ ನೀನು ನಿನ್ನ ಕೇಶಪಾಶಗಳಿಂದ ನನ್ನ ಕೊರಳಿಗೆ ಉರುಲು ಹಾಕು, ಸೌಂದರ್ಯ ಸಾಕ್ಷಾತ್ಕಾರದಲ್ಲಿ ಸಾವನ್ನು ಅಪ್ಪಿಕೊಳ್ಳುವುದಕ್ಕಿಂತ ಹೆಚ್ಚಿನ ಆನಂದ, ಮೋಕ್ಷ, ಅಮೃತಸಿದ್ಧಿ ಬೇರೊಂದಿಲ್ಲ.

ಈ ಭಾರತೀಯರು ತಮ್ಮ ಸೌಂದರ್ಯಕಲಾಸಕ್ತಿಗಾಗಿ "ವಿಶ್ವಾಮಿತ್ರಸ್ಯ ಬ್ರಹ್ಮೇದಂ ರಕ್ಷತಿ ಭಾರತಂ ಜನಮ್"[೭] ಈ ಆಶ್ವಾಸನದ ಮಾನವ ಸಂಪ್ರದಾಯವನ್ನು ಗಾಳಿಗೆ ತೂರಿದ್ದಾರೆ. ಕುಮಾರೀ ಮಾತಾಪುತ್ರನ ದಕ್ಷಿಣಕಪರ್ದನ ಆ-ನಂದಂ ಬ್ರಹ್ಮ-ರಸೋ ವೈ ಸಃ ಈ ರಾತ್ರಸಮಯಾಚಾರದ ಬ್ರಹ್ಮಪುಚ್ಛದ ಸಂಪ್ರದಾಯವನ್ನು ಸ್ವೀಕರಿಸಿದ್ದಾರೆ. ನರ(ಳ) ಸಂಪ್ರದಾಯದ ತಾತ್ತ್ವಿಕ ಭೂಮಿಕೆಯ - ಈ ವೈಚಾರಿಕ ಆಕೃತಿಯ ನಿತಾಂತ ರಮಣೆಯವಿರುವ ಈ ಸೌಂದರ್ಯದ ಮನೋಜ್ಞ ಮಾದರಿಯನ್ನು ನೋಡಿಕೊಳ್ಳಿ.

ಕುಮಾರೀ ಮಾತೆ: ಅದಿತಿ ಪುತ್ರ ಆದಿ-ತ್ಯಃ ಆದಿ (ಹುಟ್ಟು)-ತ್ಯ (ಅಂತ್ಯ) ಇವೆರಡೂ (+) ಮತ್ತು (-) ಅರ್ಥಗಳೂ ಏಕಕಾಲಕ್ಕೇ ಉಂಟು. ಸಲಿಲ-ಜಲ ಸ್ವರೂಪೀ ಅದಿತಿಪುತ್ರ ಮಾರ್ತಾಂಡ:

ಮೃತಾತ್ ಅಂಡಾತ್ ಜಾತ [0] ಆದಿತ್ಯ = (ಸೂರ್ಯ?) = ಮಾರ್ತಾಂಡ = 0 ಆದಕಾರಣ ರಾತ್ರಿ = ಹಗಲು !

ವೇದದ ಪರ್ಯಾಯ ಪಂಚಮವೇದವೆಂಬ ಮಹಾಭಾರತವು ಒಂದು ದುರಂತ: ಯುಗಾಂತದ ನಿತಾಂತರಮಣೀಯ ಕಾವ್ಯವಾಗಿದೆ. ಈ ಮಹಾಭಾರತದ ತಳಪಾಯದಲ್ಲಿ ಆದಿತ್ಯ=ಮಾರ್ತಾಂಡ ಭೂಮಿಕೆಯ ತತ್ವಜ್ಞಾನವಿದೆ. ಈ ಮಹಾಕಾವ್ಯದ ಶುದ್ಧಪಾಠದ ಸಂಶೋಧಕರು ಒಡೆನುಡಿದ dramatic irony ಸ್ವರೂಪ ಅನುಭವವು ಇದು :

> Whether we realize or not it remains a fact we in India still stand under the spell the Mahabharata.[೮]

ಅತ್ಯಂತ ಅಭಾವವೇ ಸ್ಥಾಯಿ ಇರುವ ದುರಂತ ಕಲಾಕೃತಿಗಳ ಸೌಂದರ್ಯದ ಆಕರ್ಷದ ಸ್ವರೂಪವನ್ನು ಗೋರ್ಜಿಯಾಸ ವರ್ಣಿಸಿರುವುದು ಹೀಗೆ,

> He called tragedy a deception which is better to cause than not to cause, to succumb to it, shows the greater power of artistic appreciation than not to.

ವೇದೋಪನಿಷತ್ತು ಮಹಾಭಾರತಾದಿಗಳ ತಳಪಾಯದ ಆದಿತ್ಯ: ಮಾರ್ತಾಂಡ (ಸೂರ್ಯ?) ಜ್ಯೋತಿರ್ಲಿಂಗದ ಸೌಂದರ್ಯಕ್ಕೆ ಮುಗ್ಧರಾದ ಭಾರತೀಯರು, ತಮ್ಮ ದೇಶದ ಹೆಸರು, ಧರ್ಮದ ಹೆಸರನ್ನು ಮರೆತರು. ಒಂದರ ಮೇಲೊಂದು ಬಂದ ಪರಕೀಯರ ದಾಳಿಗಳಿಗೂ ಕಣ್ತೆರೆಯಲಿಲ್ಲ. ಇಂದಿಗೂ ಭಗ-ವತ್ ಗೀತೆಯು ಮೃತ್ಯು ತತ್ವದ ದೈವತಗಳು ಭಾರತೀಯರ ಆರಾಧ್ಯ ದೈವತ-ಪ್ರೇರಣಾ ಕೇಂದ್ರ ಆಗಿರುವುದುಂಟು.

ಟಿಪ್ಪಣಿಗಳು

೧. ***ಛಾಂದೋಗ್ಯೋಪನಿಷತ್ತು*** ೭-೨೬-೨
೨. ***ಅದೇ*** ೭. ೨೬. ೨
೩. ***ಋಗ್ವೇದ ಸಂಹಿತೆ*** IV ೨೭.೧
೪. ***ಬೃಹದಾರಣ್ಯಕೋಪನಿಷತ್ತು*** ೨-೪-೧೧
೫. ***ಜೈಮಿನೀಯೋಪನಿಷತ್ತು*** ೧.೮.೪
೬. ***ಶ್ರೀಮನ್ಮಹಾಭಾರತಂ*** ೧.೧.೨೮೭
೭. ***ಋಗ್ವೇದ ಸಂಹಿತೆ*** III ೫೩.೧೨
೮. Suktankar ; ***On the Meaning of the Mahabharata,*** Royal Asiatic Society Bombay, p. 32

ವೇದದೊಳಗಿನ ನಾಗಪೂಜೆ*

ವೇದ ಎಂದರೆ ಋಗ್ವೇದವೇ ಎಂದು ಬಗೆಯುವ ವಾಡಿಕೆ ಇದೆ. ವೇದದಲ್ಲಿ ನಾಗಪೂಜೆ ಇಲ್ಲ. ಎಂದು ಇದ್ದ (ಇರುವ) ಈ ಗ್ರಹಿಕೆಯೇ ಇದಕ್ಕೆ ನಿದರ್ಶನ. ಏಕೆಂದರೆ, ಋಗ್ವೇದದ ಹೊರತು ಇನ್ನುಳಿದ ವೇದಾದಿಗಳಲ್ಲಿ ನಾಗ ಸಂಪ್ರದಾಯವಿದ್ದುದನ್ನು ಒಪ್ಪಲಾಗಿದೆ. ಪಾಶ್ಚಾತ್ಯ ಸಂಶೋಧಕರಲ್ಲಿ ಪ್ರೊ. ಮ್ಯಾಕ್‌ಡೊನೆಲ್ಲ ಪ್ರಭೃತಿಗಳು ಭಾರತೀಯ ಪರಂಪರೆಯೊಳಗಿನ ಭ್ರಮೆಯ ಗ್ರಹಿಕೆಯನ್ನು ಉಳಿಸಿಕೊಂಡು ಬರಲು ಅನುಕೂಲವಾಗುವ ರೀತಿಯಲ್ಲಿ ತಮ್ಮ ಗ್ರಂಥವನ್ನು ರಚಿಸಿದ್ದಾರೆ! ಆದರೆ, ಋಗ್ವೇದದಲ್ಲಿ ನಾಗಪೂಜೆಯು ಇರಲಿಲ್ಲ, ಎಂಬ ಪರಂಪರಾಗತ ಗ್ರಹಿಕೆಯು ಸುಳ್ಳಲ್ಲ; ಇರಾಣಿನ ಪುರಾತನ ಧರ್ಮಗ್ರಂಥವಾದ ಅವಸ್ತದಿಂದ ಇದಕ್ಕೆ ಪುಷ್ಟಿ ದೊರೆಯುತ್ತದೆ. (ಮೂಲ) ಋಗ್ವೇದ ಹಾಗೂ ಅವೆಸ್ತ ಇವರೆಡರ ಭಾಷೆಯಲ್ಲಿ ನೂರಕ್ಕೆ ನೂರು ಸಾಮ್ಯವಿದೆ ಎಂದು ತಜ್ಞರು ಕಂಡು ಹಿಡಿದ್ದಾರೆ! ಸಮಾನ ಭಾಷಿಕರ ಸಂಸ್ಕೃತಿಯೂ ಸಮಾನವೇ ಇರಬಲ್ಲುದು. ಭಾಷೆಯ ಆಧಾರವಿಲ್ಲದ ಸಂಸ್ಕೃತಿಯು ದೊರೆಯಲಾರದು. ಸಾಂಸ್ಕೃತಿಕ ಹಿನ್ನೆಲೆಯಿಲ್ಲದೆ ಭಾಷೆಯು ಆಕಾರ ಪಡೆಯಲಾರದು. ಆದಕಾರಣ, ಅವೆಸ್ತದಲ್ಲಿ ನಾಗಪೂಜೆಯು ಇಲ್ಲದ್ದರಿಂದ ಮೂಲ ಋಗ್ವೇದದಲ್ಲಿ ನಾಗಾರಾಧನೆಯು ಇರಲು ಶಕ್ಯವಿಲ್ಲ. ಫ್ರಾನ್ಸಿನ ಡಾ॥ ರೇನೂ ತಮ್ಮ Religions of Ancient India ಗ್ರಂಥದಲ್ಲಿ ಅವೆಸ್ತ ಹಾಗೂ ಋಗ್ವೇದದ ತುಲನೆಯ ಮೂಲಕ, ಋಗ್ವೇದದಲ್ಲಿ ಆಗಿರುವ ಬದಲಾವಣೆ ಎತ್ತಿ ಹೇಳಿದ್ದಾರೆ. ಅವೆಸ್ತದಲ್ಲಿ ಕಲ್ಯಾಣ, ಮಂಗಳಕಾರೀ ಅಹುರ್ ಮಝುದನನ್ನು ಹಾಗೂ ಅಮಂಗಳಕಾರೀ ಮೃತ್ಯುತತ್ವದ ಅರ್ಹಿಮನ್‌ನಂಥ ದೈವತಗಳನ್ನು ಒಂದರಿಂದ ಒಂದನ್ನು ದೂರವಿರಿಸಲಾಗಿದೆ. ಆದರೆ, ಪ್ರಚಲಿತ ಋಗ್‌ಸಂಹಿತೆಯಲ್ಲಿ ಈ ತಾರ-ತಮ್ಯವನ್ನು ಉಳಿಸಿಲ್ಲ. ಇದರ ಉದಾಹರಣೆಯೆಂದು ಇಂದ್ರಾವಿಷ್ಣು ಸೋಮಾರುದ್ರಾ ಮುಂತಾದ ಈ ಸಂಯುಕ್ತ ದೇವತೆಗಳನ್ನು ಅವರು ಎತ್ತಿ ಹೇಳಿದ್ದಾರೆ*

ಈ ಋಗ್ವೇದದಲ್ಲಿ ಕಂ=ಪ್ರಜಾಪತಿಯಂಥ ದೈವತಗಳು, ಇವು ಅಮೃತಂ ಚೈವ ಮೃತ್ಯುः ಹೀಗೆ ಇವು ಉಭಯ ಸ್ವರೂಪೀ ದೈವತಶಕ್ತಿ ಆಗಿವೆ. ಎಂಥ ಅಮೂರ್ತ ಶಕ್ತಿಯ ಮೂರ್ತಪ್ರತೀಕವೇ ಇನ್ನಾಲಗೆಯ ಈ ನಾಗಶಕ್ತಿ. ಪ್ರಕಾಶರೂಪ ಸೂರ್ಯನು ಆದಿತ್ಯ ಎಂದು ಆರಾಧಿಸಲ್ಪಡುವಾಗ ಇವನು ಉಭಯರೂಪದ ನಾಗಲಿಂಗ ಆಕೃತಿಯ ದೈವತವಾಗುತ್ತಿದ್ದಾನೆ. ಉತ್ಥಿತಲಿಂಗ: ವೃಕ್ಷವೂ ಆಗಿದ್ದಾನೆ. 'ಆದಿತ್ಯಾನಾಂ ಅಹಂ ವಿಷ್ಣುಃ' ಎಂಬ

---

* ಧಾರವಾಡ ಆಕಾಶವಾಣಿ ಕೃಪೆಯಿಂದ. ಬೆಂಗಳೂರ ವಿಶ್ವವಿದ್ಯಾಲಯದ ಸಾಧನಾ ಸಂಪುಟ VIII ಸಂಚಿಕೆ ೪. ಅಕ್ಟೋಬರ್-ಡಿಸೆಂಬರ ೧೯೭೭ರಲ್ಲಿ ಇದು ಪ್ರಕಟವಾಗಿದೆ. ಇದರಲ್ಲಿ ಇನ್ನೂ ಕೆಲವು ಮಾಹಿತಿಗಳನ್ನು ಸೇರಿಸಲಾಗಿದೆ.

ಭಗವಂತ ಕೃಷ್ಣನು ಅಶ್ವತ್ಥವೃಕ್ಷರೂಪನೂ ಇದ್ದಾನೆ. ಈ ವೇದದಲ್ಲಿ ನೇರವಾಗಿ ಸರ್ಪ ಈ ಹೆಸರು ಒಂದೆಡೆಗೆ ಮಾತ್ರ ಇದೆ. ಆದರೆ, ಆದಿತ್ಯರೂಪೀ ನಾಗಲಿಂಗ ವೃಕ್ಷವು ಇಡೀ ವೇದವನ್ನು ವ್ಯಾಪಿಸಿದೆ. ಶೇಷ ಎಂಬ ಪದವನ್ನು ವೇದದಲ್ಲಿ ಅಪತ್ಯಮಗು ಎಂಬ ಅರ್ಥದಲ್ಲಿ ಯೋಜಿಸಲಾಗಿದೆ. ಆದಕಾರಣ, ಶ್ಲೇಷಾರ್ಥದ ಈ ಕೂಸು ಶೇಷ=ಮಿಡಿನಾಗ, ಎಂಬ ಅರ್ಥದ್ದು ಆಗುತ್ತದೆ. ಇಂತಹ ರಚನಾ ವೈಶಿಷ್ಟ್ಯದಿಂದಾಗಿ ಈ ವೇದದಲ್ಲಿ ನಾಗಪೂಜೆ ಇಲ್ಲ ಎಂಬ ಭ್ರಮೆ ಉಳಿದು ಬರುತ್ತಿದೆ. ಗರ್ಭಸ್ಥ ಹಸುಳೆಯನ್ನು ಸರೀಸೃಪ ಎಂಬ ರೂಪದಲ್ಲಿ ಕಾಣಲಾಗಿದೆ. ಆದರೂ ಈ ವೇದದಲ್ಲಿ ನಾಗಪೂಜೆಯ ಉಂಟು ಎಂಬುದು ಬೆಳಕಿಗೆ ಬಂದು ನೂರುವರುಷ ಉರುಳಿವೆ. ಶ್ರೀ ವಿಶ್ವನಾಥ ನಾರಾಯಣ ಮಂಡಲೀಕರೆಂಬ ವೇದ ಪಾರಂಗತರು, ಈ ಶೋಧ ಮಾಡಿದ್ದಾರೆ. ಪಶ್ಚಿಮ ಭಾರತದಲ್ಲಿ ರೂಢವಿರುವ ನಾಗಪೂಜೆ (Serpent Worship in Western India) ಎಂಬ ವಿಚಾರವಾಗಿ ಬರೆದ ಪ್ರಬಂಧವಿದು. ಈ ಲೇಖದಲ್ಲಿ ಈ ನಾಗಪೂಜೆಯು ವೇದದಲ್ಲಿಯೂ ಇತ್ತು ಎಂಬುದನ್ನು ವೇದದ ಮಂತ್ರಗಳ ಆಧಾರದಿಂದಲೇ ತೋರಿಸಿದ್ದಾರೆ. ಅಂದು, ಈ ಲೇಖವು ರಾಯಲ್ ಏಶಿಯಾಟಿಕ್ ಸೊಸೈಟಿಯ ಮುಂಬೈ ಶಾಖೆಯ ಪತ್ರಿಕೆಯಲ್ಲಿ ಪ್ರಕಟವಾಗಿದೆ.[೧]

ಸಾರ್ಪರಾಜ್ಞೀ ಸೂರ್ಯೋ ವಾ ಎಂಬ ದೇವತಾ ಸೂಕ್ತವು ಈ ಋಗ್ವೇದದಲ್ಲಿಯೇ ಇದೆ.[೨] ಸಂತಾನ ಪ್ರಾಪ್ತಿಗಾಗಿ ಮಾಡುವ ಮಾಟದಲ್ಲಿ ಈ ಸೂಕ್ತದ ವಿನಿಯೋಗವನ್ನು ಹೇಳಲಾಗಿದೆ. ಅಲ್ಲದೆ, ಜಾರಣ-ಮಾರಣಾದಿ ಅಭಿಚಾರ ಕೃತ್ಯಗಳಿಗೂ ಈ ಮಂತ್ರಗಳ ಪ್ರಯೋಜನವನ್ನೂ ಪಡೆಯಲಾಗುತ್ತದೆ. ಇಂತಹ ಅಭಿಚಾರ ಕೃತ್ಯಗಳ ಮಂತ್ರಗಳು ಅಥರ್ವವೇದದಲ್ಲಿ ಮಾತ್ರ ಉಂಟು ಎಂಬ ಗ್ರಹಿಕೆ ಇದೆ. ಆದರೆ, ಇಡೀ ವೈದಿಕ ಸಾಹಿತ್ಯದ ತಳಪಾಯದಲ್ಲಿಯೇ ಈ ನಾಗಸಂಪ್ರದಾಯವಿದೆ, ಅಭಿಚಾರ ತಂತ್ರಗಳಿವೆ.

ಈ ಬಗೆಯ ಮಂತ್ರ ಮಾಟಗಳ ನಾಗಸಂಪ್ರದಾಯದ ವೇದ ಇದು ಎಂಬ ಆಕ್ಷೇಪ ತಪ್ಪಿಸಿಕೊಳ್ಳಲು, ವೇದದಲ್ಲಿ ನಾಗಪೂಜೆಯೇ ಇಲ್ಲ ಎಂದು ನಂಬಿಸುವ ಪ್ರಯತ್ನಗಳು ಆಗುತ್ತ ಬಂದಿವೆ. ಈ ಬಗೆಯ ಕಣ್ಣು ಮುಚ್ಚಾಲೆಯ ಆಟಕ್ಕೆ ಅನುಕೂಲವಾಗುವಂತೆ ಮ್ಯಾಕ್‌ಡೊನೆಲ್ಲ ಪ್ರಭೃತಿಗಳು ತಮ್ಮ ಸಂಶೋಧನಗಳ ಗ್ರಂಥ ಬರೆದಿದ್ದಾರೆ.ಇದರ ಖಾತ್ರಿ ಮಾಡಿಕೊಳ್ಳಬಹುದು. ಈತನು ಬರೆದಿರುವ ವೈದಿಕ ದೈವತ ಕಥೆ ನೋಡಿ. ಅಹಿ-ರ್ಬುಧ್ನ್ಯ (ಬುಡದ ಸರ್ಪ ಅಥವಾ ಅಂತರಿಕ್ಷಸ್ಥ ನಿತ್ಯ ಚರಲಿಂಗ, ಇಲ್ಲವೇ ಕುಂಡಲಿನೀಸರ್ಪ) ಈ ದೇವತಾ ಸ್ವರೂಪವನ್ನು ತಿಳಿಸಿ ಹೇಳುವಾಗ ಮೊದಲಲ್ಲಿ (Originally) ಅಹಿ-ರ್ಬುಧ್ನ್ಯ ಮತ್ತು ಇದೇ ವೇದದ ಅಹಿವೃತ್ರ (ಚಂದ್ರ) ಇವೆರಡೂ ದೈವತಗಳೂ ಸಮಾನವೇ ಇರಬೇಕು. ಎಂದು ಬರೆದಿದ್ದಾರೆ! ಸ್ಥಳ (ದೇಹ) ದೊಡನೆ ಬದ್ಧ ಕಾಲ ಶಕ್ತಿ, ಈ ಅಹಿವೃತ್ರ![೩]

ಹೀಗೆ ಈ ವೇದದಲ್ಲಿ, ಅಹಿರ್ಬುಧ್ನ್ಯ (ಅಹಿವೃತ್ರ) ದೇವನು ಪೂಜೆಗೊಳ್ಳುತ್ತಿರುವಾಗ ಅಹಿ-ವೃತ್ರನ ಶತ್ರುವೂ ಶಿಶ್ನೋ ದೇವಾಃ ಪಂಥದ ವೈರಿಯೂ ಆಗಿರುವ ಇಂದ್ರನು ಸರ್ವಶ್ರೇಷ್ಠ ದೇವನಾಗಿ ಉಳಿಯಲು ಶಕ್ಯವಿಲ್ಲ ಆದರು, ಈ ಗ್ರಂಥಕಾರನು ಹೇಳುತ್ತಾನೆ: ಋಗ್ವೇದದ ಪ್ರಧಾನ ದೈವತ: ಅಹಿ ವೃತ್ರಹನ್ ಇಂದ್ರನು ಎಂದು! ಈ ಗ್ರಂಥಕಾರನೇ ಅಹಿರ್ಬುಧ್ನ್ಯ (ವೃತ್ರ) ಪೂಜೆ ಇದೆ ಎಂದು ಒಪ್ಪಿದರೂ! ಗ್ರಂಥದ ಕೊನೆಗೆ ಈ ವೇದದಲ್ಲಿ ನಾಗಪೂಜೆಯ ಗಂಧಗಾಳಿಯೂ ಇಲ್ಲ ಎಂದು ಬರೆಯುತ್ತಾನೆ.[೪]

ಜಾತವೇದ ಅಗ್ನಿಯು ನಚಿಕೇತಾಗ್ನಿಯಲ್ಲಿ (ಬೃಹತ್ ಉಲ್ಬದಲ್ಲಿ) ಹೊಕ್ಕಿದ್ದಾನೆ.[೫] ಈ ವರ್ಣನೆಯಿಂದಾಗಿ ಇಡೀ ಋಗ್ವೇದದಲ್ಲಿ ಹವ್ಯವಾಹನರೂಪ ಮಂಗಲಕರ ಅಗ್ನಿ ಹಾಗೂ ಕವ್ಯರೂಪ ಅಮಂಗಳಕರ ಅಗ್ನಿ ಇವೆರಡರಲ್ಲಿ ಅಂತರವೇ ಉಳಿಯುವುದಿಲ್ಲ. ಉಲ್ಬಸ್ಥ=ಗರ್ಭಸ್ಥ ಅಗ್ನಿಯನ್ನು ಜಾತವೇದ ಅಗ್ನಿ ಎಂದು ಬಗೆಯಲಾಗುವಲ್ಲಿ ಈ ವೇದದೊಳಗಿನ ಯಜ್ಞವು ಯೋಷಾ ರೂಪ (ಸ್ತ್ರೀ) ಕುಂಡದ ಹವನಕ್ರಿಯೆಯೇ ಆಗುತ್ತದೆ! ದೇವತಾ ವಿಚಾರದಲ್ಲಿ ಆಗಿರುವ ಈ ಸ್ಥಿತ್ಯಂತರಗಳು ಅಂದಿನ ಶಕ್ತಪಂಥೀಯ ಪ್ರಭಾವದ ದ್ಯೋತಕವಾಗಿವೆ. ಮೊತ್ತ ಮೊದಲಲ್ಲಿದ್ದ ವೇದದ ಸೂರ್ಯ ಮತ್ತು ಗ್ರೀಕಿನಲ್ಲಿ, ಝೂವೂಸ್ ಈ ದೈವತ ಸಂಪ್ರದಾಯ ಹಿಮ್ಮೆಟ್ಟಿ, ರಾತ್ರ

ಸಮಯಾಚಾರದ ನಾಗ-ಲಿಂಗ=ಚಂದ್ರೋಪಾಸನೆ ಜನಪ್ರಿಯವಾಗುತ್ತದೆ. ಈ ಘಟನೆ ಭಾರತಕ್ಕೆ ಮಾತ್ರ ಸೀಮಿತವಿಲ್ಲ. ಆ ಸುಮಾರಿಗೆ ಜಗತ್ತಿನಲ್ಲಿಯೇ ಆದ ಈ ಸಂಕ್ರಾಂತಿಯು ಗ್ರೀಕಿನಲ್ಲಿಯೂ ಸಂಭವಿಸಿದೆ. ಅಲ್ಲಿಯೂ ಪ್ರಭಾವಶಾಲಿಯಾದ್ದ ಒರ್ಫಿಕ್ ಪೈಥಾಗೋರಾಸ ಸಂಪ್ರದಾಯವು ಭಾರತೀಯ ಶಾಕ್ತಪಂಥವನ್ನು ಹೋಲುತ್ತಿದೆ. ಪುರಾತನ ಸಂಸ್ಕೃತಿಯೊಳಗಿನ ಆದಿದೈವತ ಕಥೆಗಳ ತುಲನಾತ್ಮಕ ಸಮೀಕ್ಷೆಯ ಮೂಲಕವೂ ಈ ಸಂಗತಿಯೇ ದೃಢಪಡುತ್ತಿದೆ. ಭೌಮಾಸುರ ನಾರಕ (ನರಕ)ನು ನಾರಾಯಣ (ವಿಷ್ಣು) ಎಂಬ ಹೆಸರಿನಲ್ಲಿ ಪೂಜೆಗೊಳ್ಳುತ್ತಿದ್ದಾನೆ. ಗ್ರೀಕಿನಲ್ಲಿ ಟಿಟಾನ್ ಸೈಕ್ಲೋಪಸ್ ನಾಗಲಿಂಗನು, ಏಕಾಕ್ಷನು! ಆ ಬಳಿಕ ಕ್ರೊಸ್ (cross) ಆಗಿ ಪೂಜ್ಯನಾಗಿದ್ದುಂಟು.

ಭಾರತೀಯ ಸಂಸ್ಕೃತಿಯನ್ನು ರೂಪಿಸಿರುವ ನೇತಾರರು, ಎಂದು ಬಗೆಯಲಾಗುವ ವಿಶ್ವಾಮಿತ್ರ ಮತ್ತು ವಸಿಷ್ಠ ದಕ್ಷಿಣಕಪರ್ದ ಈ ಹೆಸರು ಇಂದಿನ ವೇದದಲ್ಲಿ ಇವೆ. ಇವು ಒಂದು ವಿಶಿಷ್ಟ ಮರ್ತ್ಯವ್ಯಕ್ತಿ ಸೂಚಕ ಹೆಸರಲ್ಲ . ಭಾರತೀಯ ಪುರಾತನ ಶ್ರದ್ಧೆಯಂತೆ ಈ ಧರ್ಮ ಎಂಬುದು ಮಾನವ ವ್ಯಕ್ತಿ ಕಲ್ಪಿತವಲ್ಲ. 'ಚೋದನಾ ಲಕ್ಷಣೋ ಧರ್ಮಃ ಈ ಪ್ರಾಚೀನ ಸೂತ್ರದಂತೆ ಧರ್ಮವು, ಜೀವನ ವಿಶ್ವಸ್ಥ ಅಂತಃಪ್ರಚೋದನೆಯಿಂದಾಗಿ ಕಾಣಿಸಿಕೊಂಡಿದೆ. ಮಾನವ ಜೀವನದಲ್ಲಿ ಪ್ರಚೋದಕ ಕೇಂದ್ರಗಳು ಎರಡು ಉಂಟು. ಪ್ರಜ್ಞಾ(Wisdom) ಪಾತಳಿಯ ಪ್ರಚೋದನೆ ಮತ್ತು ಪ್ರಾಣಚೇತಸ (ಅಥವಾ ಪ್ರಾಣಲಿಂಗ) ಪಾತಳಿಯ ಪ್ರಚೋದನೆ. ಧೀ ರೂಪೀ ಪ್ರಜ್ಞಾ ಪ್ರಕಾಶ ತತ್ವದ ಉಪಾಸಕನು ಎಂದರೆ ಗುಣ ಪೂಜಕನು. ಇವನು ಯಾರೇ ಇರಲಿ ಅವನು ವಿಶ್ವದ ಮಿತ್ರನು: ವಿಶ್ವಾಮಿತ್ರನೇ ಆಗಬಲ್ಲನು. ಪ್ರಾಣ ಚೇತಸದ= ಚಿತ್ತದ ಪಾತಳಿಯ ಹೃದಯಾಂತರ್ಗತ ಜ್ಯೋತಿಯ ಉಪಾಸಕನು ಆತ್ಮನ್ ಹೆಸರಿನಲ್ಲಿ ಇಂದ್ರಿಯ ಪೂಜಕನು. ದಕ್ಷಿಣ ಕಪರ್ದ ವಸಿಷ್ಠನೇ ಆಗಬೇಕು. ಇದು ವಿಶ್ವನಿಯಮ. ಇವರಲ್ಲಿ ವಿಶಿಷ್ಟ (particular) ಮತ್ತು ಸಮಾನ; ನಿಯಮ (Universal, principle) ಇವೆರಡರಲ್ಲಿ ಶ್ರೇಷ್ಠಯಾವುದು, ಎಂದು ಈರ್ಷೆ ಕಾಣುತ್ತದೆ. ವಿಶ್ವನಿಯಮ ಸ್ವರೂಪ ಪ್ರಕಾಶ ಪೂಜಕರ ಸಂಪ್ರದಾಯವು ವಿಶ್ವಾಮಿತ್ರ ಅಥವಾ ವಿವಸ್ವನ್ ಮನುವಿನ ಸಂಪ್ರದಾಯ ಎಂಬ ಹೆಸರಿನಿಂದ ವಿಖ್ಯಾತವಿದೆ. ಇದು ಮನುಜ ಮಾನವ ಧರ್ಮವಾಗುತ್ತದೆ. ಆದರೆ, ಆತ್ಮನ್ (Self : soul) ರೂಪ ವಿಶಿಷ್ಟಕ್ಕೆ ಏಕಮೇವ ಮಹತ್ವ ಏಕಂ ಏವ ಅದ್ವೀತಿಯಂ ಸತ್ (One without Second) ಎಂಬ ಈ ಸಂಪ್ರದಾಯವು ಪಾರಲೌಕಿಕ ದೃಷ್ಟಿಯ ನರಧರ್ಮವೇ ಆಗುತ್ತದೆ. ಬಾಳಿನಲ್ಲಿ ಮೋಕ್ಷವೇ ಶ್ರೇಷ್ಠ-ಪುರಾಷಾರ್ಥ, ಎಂಬ ಸಂಪ್ರದಾಯಗಳು, ನರಧರ್ಮಕ್ಕೆ ನಿದರ್ಶನ. ಈ ಮನುಜನು ನರನೂ ಇದ್ದಾನೆ. ಮನುಜತ್ವಕ್ಕಿಂತ ನರತ್ವವೇ ಆಕರ್ಷಕವೆನಿಸುವಾಗ ಈ ಮಾನವ ಧರ್ಮವು ಕುಸಿದು ಬೀಳುತ್ತದೆ. ಹಗಲಿನಲ್ಲಿಯೇ ರಾತ್ರ ಸಮಯಾಚಾರಗಳೂ ಜನಪ್ರಿಯವಾಗುತ್ತವೆ. ನರ: ನಾರ- ಅಯನ (ಲಿಂಗ) ಧರ್ಮವು ಪ್ರಭಾವಶಾಲಿಯಾಗುತ್ತದೆ. ಇದು ವಿಶ್ವನಿಯಮಕ್ಕೆ ಅನುಸರಿಸಿಯೇ ಆಗುವ ಸ್ಥಿತ್ಯಂತರ ಇದು ಪ್ರಲಯದ ದಾರಿ, ರಾತ್ರ್ಯಾಗಮೇ ಪ್ರಲೀಯಂತೇ ಗೀತೆ ಎಂದು ಹೇಳುತ್ತಿದೆ.

ಈ ಹಿನ್ನೆಲೆಯಲ್ಲಿ ವೇದದಲ್ಲಿ ನಾಗಪೂಜೆ ಇದೆ ಎಂಬ ಮಾತಿನ ಅರ್ಥವು ಸ್ಪಷ್ಟವಾಗಿ ಆಗಬಲ್ಲುದು. ಜ್ಞಾನವನ್ನು ಪ್ರಕಾಶರೂಪವಾಗಿ ಕಾಣುವ ವಾಡಿಕೆ ಏನೆಲ್ಲ ಪ್ರಾಚೀನ ಸಂಸ್ಕೃತಿಗಳಲ್ಲಿಯೂ ಇದೆ. ಪ್ರಾಣ ಚೇತಸವು ನಾಗಲಿಂಗ ಸ್ವರೂಪದಾಗಿದೆ, ಲೈಂಗಿಕ ಪ್ರಚೋದನೆಗೆ ಕತ್ತಲೆಯ ಆವರಣವು ಅವಶ್ಯ. ಅದಕಾರಣ ಪ್ರಕಾಶರೂಪ ಪ್ರಜ್ಞೆಯು ಬರಡು ಆಗುವುದರೊಡನೆ ನರ(ಳ) ಸಂಪ್ರದಾಯದ ಲೀಲೆಗಳಿಗೆ ಇಂಬು ದೊರೆಯುತ್ತದೆ. ನಾಗ-ಚಂದ್ರ ಈ ಸಮೀಕರಣವು ಪುರಾತನ ಸಂಸ್ಕೃತಿಗಳಲ್ಲಿ ಸರ್ವಮಾನ್ಯವಿದೆ. ಹಿಂದೊಮ್ಮೆ ಭಾರತದಲ್ಲಿ ವಿವಸ್ವನ್ ಮನುಪ್ರಣೀತ ಮಾನವ ಧರ್ಮವು ಪ್ರತಿಷ್ಠಿತವಿತ್ತು ಎಂಬುದನ್ನು ನಿದರ್ಶನಕ್ಕೆ ತಂದುಕೊಡುವ ಪ್ರಮಾಣಗಳು ಇಂದಿಗೂ ಹಲವಾರು ದೊರೆಯುತ್ತಿವೆ. ಏನೊಂದು ಕಾರ್ಯಾರಂಭಕ್ಕೂ ಮುಂಚೆ "ಆಚಮ್ಯ ಪ್ರಾಣಾನ್ ಆಚಮ್ಯ ದೇಶಕಾಲೌ ಸಂಕೀರ್ತ್ಯ" ಎಂಬ ಮಂತ್ರದಂತೆ, ಭರತಖಂಡೇ ವೈವಸ್ವತ ಮನ್ವಂತರೇ ಇಂದು ಈ ಕಾರ್ಯವು ನಡೆಯಲಿದೆ ಎಂದು ಅರ್ಥವಾಗುತ್ತದೆ. ಪುಣ್ಯಾಹ ವಾಚನ ಕಾಲಕ್ಕೆ ಊರ ಮಹಾಜನಕ್ಕೆ ಆಮಂತ್ರಣವಿತ್ತು ಸತ್ಕರಿಸಲಾಗುತ್ತಿತ್ತು.

ಆದರೆ, ಪ್ರತ್ಯಕ್ಷದಲ್ಲಿ ಭಾರತೀಯರ ಲೋಕ ವ್ಯವಹಾರಗಳನ್ನು ನಿಯಂತ್ರಿಸುವ ಧರ್ಮಶಾಸ್ತ್ರವು, ಶತಕಾನು ಶತಕಗಳಿಂದ ಸ್ವಯಂಭೂ ಮನುಪ್ರಣೀತ ಗ್ರಂಥವಾಗಿದೆ! ಈ ಕೈಚಳಕ ಸಂಭವಿಸಿದ್ದು ಹೇಗೆ? ವಿವಸ್ವಂತನ ಹೆಸರು ವೇದದಲ್ಲಿ ಇದೆ. ಅವೆಸ್ತದಲ್ಲಿಯೂ ಉಂಟು. ಆದರೆ, ಸ್ವಯಂಭೂ > ಸ್ವಾಯಂಭುವ ಎಂಬ ಈ ನಾಮ ರೂಪವು ವೇದದಲ್ಲಿ ನೇರವಾಗಿ ಸಿಕ್ಕುವದಿಲ್ಲ ಮನ್ಯು ಎಂಬ ಒಂದು ದುಷ್ಟ ಕ್ರೋಧಶಕ್ತಿಯ ದೇವರಿಗೆ ಸ್ವಯಂಭೂ ಎಂಬ ವಿಶೇಷಣವಿದೆ. ಈ ಮನ್ಯು ಅಭಿಚಾರ ಮಂತ್ರ-ಶಕ್ತಿಯ ದೈವತವಾಗಿದೆ.[೬] ಇದು ಪ್ರಚ್ಛನ್ನ ಚಂದ್ರಶಕ್ತಿ!

ಈ ಸ್ವಯಂಭೂ ಸಂಪ್ರದಾಯವು, ಧೂಮಕೇತುವಿನಂತೆ, ಪಕ್ಕನೇ ಕಾಣಿಸಿಕೊಂಡು ವಿವಸ್ವನ್ ಮನು ಪ್ರಣೀತ ಮಾನವಧರ್ಮವನ್ನು ಹಿಂದೆ ತಳ್ಳುತ್ತದೆ. ಈ ಸ್ವಯಂಭೂ ಮನು ಸಂಪ್ರದಾಯದ ಉತ್ತರಾಧಿಕಾರಿಗಳೂ, ಇಂದು ಯಾರು? ಈ ಸ್ವಯಂಭೂ ಮಾನವಧರ್ಮ ಎಂದರೆ ಇದು ಮಾನವನ ಮೊಗವಾಡ ಧರಿಸಿರುವ ನರಧರ್ಮವೇ ಇರಲಿಕ್ಕೇ ಬೇಕು. ಸಾಮಾಜಿಕ ಸಮಷ್ಟಿ ಜೀವನ ರೀತಿಯಲ್ಲಿ ಸ್ವಾಯಂಭುತ್ವಕ್ಕೆ ಪ್ರಾಶಸ್ತ್ಯವಿರಲು ಶಕ್ಯವಿಲ್ಲ. ಸ್ವಯಂಭೂ ಮನೋಧಾನವು ಪ್ರಬಲವಾಗುವಾಗ ಈ ಮನುಷ್ಯನು ನರ(ಳ)ನಾಗಿ ಮಾರ್ಪಡುತ್ತಾನೆ. ಪ್ರಜ್ಞಾ ವಿವೇಕವು ಹಿಮ್ಮೆಟ್ಟುವ ಹಂತದಲ್ಲಿ, ನರವರ್ಗಗಳಲ್ಲಿ ಅಸಾಮಾಜಿಕ ಮನೋಭಾವವು ಎದ್ದು ಕಾಣಬಲ್ಲದು. ವರ್ಗಕಲಹವು ನರ ಸಂಪ್ರದಾಯದ ವೈಶಿಷ್ಟ್ಯವಾಗಿದೆ. ಸ್ವಯಂ-ಭೂ ಇದು Upstart= ನಿಯೋಗ ಸಂತಾನದ ವೈಶಿಷ್ಟ್ಯವಾಗಿದ್ದಿತೆಂದು ವೇದ, ಭಾರತದ ಕಥೆಗಳಿಂದ ಹೊರಪಡುತ್ತದೆ.

ವಾನರ ಹಂತದ ತರುವಾಯವೇ ಮಾನವರ ವಿಕಾಸವಾಯಿತು, ಎಂಬಲ್ಲಿ ಡಾರ್ವಿನ್ ಜಾರಿದ್ದಾನೆ. ವಾನರ ಮತ್ತು ಮಾನವ ಇವೆರಡು ಹಂತಗಳ ನಡುವೆ ಇನ್ನೊಂದು ಘಟ್ಟ ಇರಬೇಕು. ಈ Missing Link ಇದೇ ನರಸಂಪ್ರದಾಯ ಎಂದು ಈಗಲೂ ಸಿದ್ಧವಾಗುತ್ತದೆ. ಆ Missing Link ಎಂದರೆ ಜಾಗತಿಕ ಪಾತಳಿಯ ಮೇಲಣ ಮೋಕ್ಷಕಾಮಿ ನರ ಸಂಪ್ರದಾಯಗಳೇ ಸರಿ. ಇವು ಆ ಮೂಲ ನರಪರಂಪರೆಯ ಉತ್ತರಾಧಿಕಾರಿಯಾಗಿವೆ, ಎಂದು ಒಗೆಯಲು ಒತ್ತಾಯ ಪಡಿಸುವ ಹಲವು ಪ್ರಮಾಣಗಳು ಬೆಳಕಿಗೆ ಬಂದಿವೆ. ನಾಳೆಗಳ ಪ್ರಜ್ಞೆಯೊಡನೆ ಮಾನವಧರ್ಮ ತಲೆದೋರಿದೆ.

೧) ನಿವೃತ್ತಿಮಾರ್ಗದ ಚಕ್ರನೇಮಿ ಕ್ರಮದ ಕಾಲಚಕ್ರದಲ್ಲಿ ನಾಳೆ ಎಂಬುದಕ್ಕೇ ಇಂಬಿಲ್ಲ.
೨) ಕಾಲಚಕ್ರ ವೃತ್ತಾಕೃತಿ [O], ಇದರಲ್ಲಿ ನಿನ್ನೆಯೇ ಇಂದು ಆಗುತ್ತದೆ. ನರರುಗಳ ಜೀವನ ರೀತಿಯಲ್ಲಿ ನಿಜವಾದ ನಾಳೆ ಎಂಬುದಕ್ಕೆ ಅವಕಾಶವೇ ಇಲ್ಲ. ನಿತ್ಯ ವರ್ತಮಾನ ರೂಪೀ ಕರಿಯ ಸ್ಥಂಭಕಾಲದ (=ಮೂಲಸ್ತಂಭದ) ಆರಾಧನೆಗೆ ಈ ನರರು ಮೆಚ್ಚಿದ್ದಾರೆ.
೩) ಚೇತಸ=ಚಿತ್ತ ಶಕ್ತಿಯ ಪ್ರಭಾವದ ಈ ಸಂಪ್ರದಾಯಗಳಲ್ಲಿ ಜೀವನ ಮೂಲ್ಯಗಳಿಗೆ ಸ್ಥಾನವಿಲ್ಲ.
೪) ತನ್ಮಯಾನಂದಿಗಳಾಗಿ ಮೈಮರೆಯುವ ತಂತ್ರ ಮಂತ್ರಗಳಲ್ಲಿ ಮೆಚ್ಚಿಕೆ,
೫) ಐಹಿಕ ಜೀವನದ ಬಗೆಗೆ ತಿರಸ್ಕಾರ.

ಪುರಾತನ ವಿವಸ್ವನ್ ಸಂಪ್ರದಾಯವು ಹಿಮ್ಮೆಟ್ಟಿದ ಕಾರಣವನ್ನು ಸೂಚಿಸುವ ಒಂದು ಪುರಾವೆ ಈ ಗೀತೆಯಲ್ಲಿಯೇ ದೊರೆಯುತ್ತದೆ. "ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನ್ ಅಹಂ" ಎಂದು ಹೇಳುವ ಗೀತೆಯ ಭಗವಂತನ ಉಕ್ತಿಯಂತೆ, ಭಗವಂತನಿಂದ ಯೋಗದೀಕ್ಷೆ ಪಡೆದ ವಿವಸ್ವಂತನಿಗೆ=ಸೂರ್ಯನಿಗೆ ಸಮಾಧೀ ಸಿದ್ಧಿ ದೊರೆತ ಈ ಸೂರ್ಯನು ಕಣ್ಣು ಮುಚ್ಚುತ್ತಾನೆ. ಈ ಭಗವಂತ ಸಂಪ್ರದಾಯದ ಮಾನವಧರ್ಮ ಎಂದರೆ ರಾತ್ರೀ ಪೂಜಕರ ನರ ಧರ್ಮವೇ ಆಗುತ್ತದೆ. ಇಂದು ನರಧರ್ಮವು ಪ್ರಭಾವಶಾಲಿಯಾಗಿದೆ. ಇದು ನಾಗಶಯನ ವಿಷ್ಣುವಿನ ಜಯ, ಅಹಿವೃತ್ರ ಹನ್ ಎಂಬ ಬಿರುದಿನ ಇಂದ್ರನ ಪರಾಜಯ : ಧೀ ಪ್ರಕಾಶ ಪ್ರಚೋದಕ ದೇವತಾ-ಸಂಪ್ರದಾಯದ ವಿಶ್ವಾಮಿತ್ರನಿಗೆ ಸೋಲು. ಹೃದಯ ಜ್ಯೋತಿಯ ಉಪಾಸಕ ನಾಗಚಂದ್ರನ ಸಂಪ್ರದಾಯದ ವಸಿಷ್ಠ: ದಕ್ಷಿಣ

ಕಪರ್ದನ ಗೆಲವು. ವೇದದಲ್ಲಿ ಇರುವ ನಾಗಪೂಜೆಯ ಈ ಸಂಪ್ರದಾಯದಲ್ಲಿ ಭಾರತೀಯ ಸಂಸ್ಕೃತಿಯಲ್ಲಿ ಆಗಿರುವ ಸ್ಥಿತ್ಯಂತರದ ಐತಿಹ್ಯವೇ ಅಡಕವಾಗಿದೆ. ನಾಗ ಸಂಪ್ರದಾಯದ ಜಯ ಎಂದರೆ ಸಮಾಜ ಸಮಷ್ಟಿಯ ಪರಾಜಯ; ನರೋತ್ತಮ ಸ್ವಯಂಭೂ ಅವತಾರಿಗಳ ಯುಗಾರಂಭ. ನಿಜವಾಗಿ 'ಪ್ರಜ್ಞಾನೇತ್ರೋ ಲೋಕ ಃ' ಈ ಸಮಾಜ : ಸಮಷ್ಟಿರೂಪ, (ವೈಶ್ವಾನರ) ಪುರುಷನೇ ನೇತಾರನು ಆಗಬೇಕು, ಆದರೆ ಅವತಾರೀ ಎಂಬ ಸ್ವಯಂಭೂ ನರೋತ್ತಮನು, ನೇತಾರನು ಆಗುವಾಗ, ಈ ನೂತನ ಸ್ವಯಂಭೂ ಮನ್ವಂತರ ಅವರೊಡನೆ ಭಾಷಿಕ ಅಭಿವ್ಯಕ್ತಿಯ ಆಕೃತಿ ಸ್ವರೂಪದಲ್ಲಿಯು ಇಡಿಯಾಗಿ ಬದಲು ಆಗಲೇ ಬೇಕಷ್ಟೇ?

ಪ್ರಚಲಿತ ವೇದಗಳಿಗೆ ಶ್ರುತಿ ಎಂಬ ಹೆಸರು ಉಂಟು. ಮೂಲವೇದ ಋಗ್ವೇದ. ಇದು ವೈವಸ್ವತನಿಂದ (ಸೂರ್ಯನಿಂದ) ಪ್ರಾಪ್ತವಾಯ್ತು ಎಂಬ ಶ್ರದ್ಧೆ, ಆದರೂ ಇದು ಶ್ರುತಿ! ಈ ಆದ್ಯಮನುವನ್ನು ವೈವಸ್ವತನು ಎಂದು ಹೇಳುವ ವಾಡಿಕೆಯು ನಿಷ್ಕಾರಣವಲ್ಲ. ಭಾರತೀಯ ಪುರಾತನ ಪರಂಪರೆಗಳನ್ನು ಬಲ್ಲವನೆಂಬ ಖ್ಯಾತಿಯ ಅರ್ವಾಚೀನ ಕವಿ : ಕಾಲಿದಾಸನು "ವೈವಸ್ವತೋ ಮನುರ್ನಾಮ ಮಾನನೀಯೋ ಮನೀಷಿಣಾಂ, ಆಸೀತ್ ಕ್ಷಿತೀ (ಶಾ) ನಾಂ ಆದ್ಯ" ಎಂದು ವರ್ಣಿಸುತ್ತಾನೆ* ಆದಕಾರಣ ಪ್ರಜ್ಞಾಪ್ರಕಾಶ ತತ್ವರೂಪ ಧೀ ಪ್ರಚೋದಕ ವೈವಸ್ವತನು ಅಥವಾ ಸವಿತೃವು ಕರುಣಿಸುವ ಈ ವೇದಸ್ವರೂಪ ಜ್ಞಾನವು ನೇತ್ರದ ವಿಷಯವೇ ಇರಲಿಕ್ಕೆ ಬೇಕು. ಪ್ರಜ್ಞಾನೇತ್ರೋ ಲೋಕಃ ಎಂಬ ಪೂರ್ವಸೂರಿಗಳ ಉಕ್ತಿಯು ಇದಕ್ಕೆ ನಿದರ್ಶನ. ಇಂದಿನ ಸಂಹಿತೆಯಲ್ಲಿಯೂ ಬೃಹಸ್ಪತಿಸೂಕ್ತದಲ್ಲಿ 'ದದರ್ಶ ವಾಚಂ' ಎಂಬ ಪಡೆನುಡಿ ಇದೆ.

ಆದರೆ ಈ ವೇದವನ್ನು ಶ್ರುತಿ ಎಂದು ಬಗೆಯಲಾಗುತ್ತದೆ. ಅದಕಾರಣ ಶ್ರುತಿ ರೂಪ ವೇದ, ಕಿವಿಗೆ ಬರುವ ನಾದ=ನಿಃಶ್ವಸಿತವಾಗುತ್ತದೆ! ಈ ವೇದವು ಶ್ರುತಿಯ ಕಿವಿಯ ವಿಷಯವಾಗಿದೆ! ಸಂಪ್ರದಾಯಜ್ಞರಾದ ಸಾಯಣರು ಭಾಷ್ಯವನ್ನು ಪ್ರಾರಂಭಿಸುವಾಗ ಮಾಡುವ ವಂದನೆಯಲ್ಲಿ ಪ್ರಕಾಶತತ್ವದ ವಿವಸ್ವನ್ ಅಥವಾ ಸವಿತೃ ಸೂರ್ಯನು ಇಲ್ಲ! ಯಸ್ಯ ನಿಃಶ್ವಸಿತಂ ವೇದಾ: ಎಂಬ ಈ ಸ್ತೋತ್ರವು ಸೌರತತ್ವದ ವೇದದ್ದು ಅಲ್ಲ. ನಿಃಶ್ವಸಿತ: ಶ್ವಸನಶಕ್ತಿಯ ಈ ದೈವತವು, ಪ್ರಕಾಶ ತತ್ವದ ಸ್ವರ್ (ಆಕಾಶ) ಪಾತಳಿಯ ದೇವರು ಆಗಿರಲು ಶಕ್ಯವಿಲ್ಲ. ಅಂತರಿಕ್ಷಸ್ಥ ಶ್ವಸನಕ್ರಿಯೆಯು, ಮಾತರಿ-ಶ್ವನ್ ಸರೀಮಣಿ ಸರೀಸೃಪರೂಪ ಮಾರುತ ಶಕ್ತಿಯ ಸೂಚಕವಾಗಿದೆ! ತಾಯಿಯ ಒಡಲಲ್ಲಿ (ಮಾತರಿ) ಉಸಿರಾಡಿಸುವ (ಶ್ವನ್) ಈ ದೇವತಾಶಕ್ತಿ ಪ್ರಾಣಲಿಂಗ ಪಾತಳಿಯ ಮೇಲಣ ದೈವತವೇ ಆಗಿರಬಲ್ಲುದು. ಜೀವನ ವಿಶ್ವದ ಅಂತರಿಕ್ಷದ ಟೊಳ್ಳನ್ನು ವಿಶ್ವಜನನಿಯ ಉಡಿ(ಯೋನಿ) ಎಂದು ಬಗೆಯಲಾಗಿದೆ. ಮಾತರಿಶ್ವನ್ ಈ ಮಾರುತನು ನಿತ್ಯವಾಗಿ ಕುಮಾರಿಯ ಉಡಿಯಲ್ಲಿದ್ದಾನೆ. ನಮ್ಮ ದೇವರಸ್ಥಾನ ಗರ್ಭಗುಡಿ!

ಕರ್ಣದ್ವಾರದಿಂದ ಲಭಿಸುವ ನಾದರೂಪ ಜ್ಞಾನ ಶಬ್ದ ರೂಪವೇ ಹೌದು. ಈ ಶಬ್ದವು, ಶ್ರುತಿ : ಪ್ರಣವ =ಓಂಕಾರ ರೂಪ ಜ್ಞಾನ. ಇದು ಫಕ್ತ ನಾದಮಯವೇ ಇರಬಲ್ಲುದು. ಇದೂ ಇಂದ್ರಿಯ ಸಂಯೋಗದಲ್ಲಿ ತಲೆದೋರುವ ಜ್ಞಾನ. ಆದಕಾರಣ ಇದನ್ನು ಸ್ಪರ್ಶೇಂದ್ರಿಯ ಜನ್ಯಜ್ಞಾನ ಎಂದು ಹೆಸರಿಸಬಹುದು. ವಿಷಯ ಹಾಗೂ ಇಂದ್ರಿಯ ಇವೆರಡರ ಸಂಯೋಗದಲ್ಲಿ ತಲೆದೋರುವ ಈ ಜ್ಞಾನ ಹೀಗೆ ಎರಡು ಬಗೆಯದಾಗಿದೆ. ಅನಾಹತನಾದ ಮತ್ತು ಆ-ಹತನಾದ. ಅನಾಹತವನ್ನು ಓಂಕಾರನಾದ ಎಂದು ಹೆಸರಿಸಿದ್ದಾರೆ. ಪ್ರಣವ (ಪ್ರ+ನವ) ಎಂದರೂ ಈ ಓಂಕಾರವೇ. ಈ ನಾದಲಹರಿ. ಗಾನ-ಗೀತದಲ್ಲಿ ನಾನಾರ್ಥಗಳ ಛಾಯೆಗಾಣಿಸುವ ಶಕ್ತಿಯಿಂದಾಗಿ

---

* ವಿವಸ್ವನ್ ಬಗೆಗೆ ಶಂಬಾ ಅವರು ಮೊದಲು ಚರ್ಚೆಗೆ ತೆಗೆದುಕೊಂಡದ್ದು 'ಋಗ್ವೇದಸಾರ ನಾಗಪ್ರತಿಮಾ ವಿಚಾರ' ಗ್ರಂಥದಿಂದಲೇ. ಇದು ಅವರಿಗೆ ಮೊದಲು ಆಕರ್ಷಕವಾಗಿ ಕಂಡಿತು. ಆದರೆ, ಶಬ್ದಪ್ರತಿಮೆಯು ಹೊಳೆಯಿಸುವ ಅರ್ಥದ ನೆಲೆಯಲ್ಲಿ ಇದರ ಆಕೃತಿ; ಆಶಯ ಕಂಡೊಡನೆ ಹೊಸ ರೂಪವೇ ಧಾರಣೆ ಮಾಡಿತು. ಮುಂದೆ ವಿವಸ್ವಾನ್, ವೈವಸ್ವತ, ಎಂಬ ಶಬ್ದಪ್ರತಿಮೆಗಳ ಹಿನ್ನೆಲೆಯಲ್ಲಿರುವ ಸಾಮಾಜಿಕ, ಸಾಂಸ್ಕೃತಿಕ ಸಾಂಕೇತಿಕ ಅರ್ಥದ ನೆಲೆಯನ್ನು ಹಲವು ರೀತಿಗಳಲ್ಲಿ ವ್ಯಾಖ್ಯಾನಿಸಿದರು. ಈ ಅಂಶವು ಮೇಲಿಂದ ಮೇಲೆ ಅವರ ಮುಂದಿನ ಗ್ರಂಥಗಳಲ್ಲಿ ಬಳಕೆಗೊಂಡಿವೆ (ಸಂ)

ಇದನ್ನು ಪ್ರ-ನವ ಅಂತರಿಕ್ಷದ ಪ್ರಣವ ಎಂಬಲ್ಲಿ ಔಚಿತ್ಯವಿದೆ. ಪಿಂಡ ಮತ್ತು ಬ್ರಹ್ಮ ಅಂಡ (ಇಂದ್ರಿಯ ಮತ್ತು ವಿಷಯ) ಇವೆರಡರ ಸಾಕ್ಷಾತ್ ಸಂಪರ್ಕದ ಸ್ಪರ್ಶಜನ್ಯವಾದ (ಶಬ್ದ) ಇದು. ಆದರೆ ಆ-ಹತನಾದ ಇದು ಸ್ಥೂಲ ಮೂರ್ತಸ್ವರೂಪ ಸಂಪರ್ಕ. logos ಅಂತರ್ ಅಂಗರೂಪ ವಾಣಿ ಇದು ಅನಾಹತನಾದ. ಆದರೆ Empirical Knowledge, ಇದು ಸ್ಪರ್ಶಜನ್ಯ, ಆಹತನಾದ ಪ್ರಕಾರವೇ ಆಗುತ್ತದೆ. ಕಟ್ಟೇಕಾಂತದಲ್ಲಿ ಕಿವಿಯಲು ದೊರೆವ ಸಹಜವೂ ಸೂಕ್ಷ್ಮವೂ ಆದ ನಾದ, ಅಂತರಿಕ್ಷದ ಟೊಳ್ಳಿನೊಳಗಿಂದ ಹೊರಬರುವ ಶಬ್ದವಿದು. ಗುಹೆಯಂತಹ ಟೊಳ್ಳಿನಲ್ಲಿ, ಕಟ್ಟಡವಿಯಲ್ಲಿ, ನಟ್ಟಿರುಳಲ್ಲಿ, ಈ ಬಗೆಯ ಶಬ್ದವು ಕಿವಿಗೆ ಬರುತ್ತದೆ : ಇದು ಅಮೂರ್ತ ಸಂಪರ್ಕ. ಆದರೆ, ಈ ಅನಾಹತವು ಅಂತರಿಕ್ಷಸ್ಥ ಮಾತರಿಶ್ವನ್ ಉಡಿಯೊಳಗಿನ ಪ್ರಾಣದೇವರ = ಲಿಂಗ ದೇವರ ಪ್ರೇರಣೆಯ ಆಹತನಾದವಾಗಿದೆ!

ಪ್ರಪಂಚದಲ್ಲಿ ಭೂಮಿಯ ಮೇಲ್ಗಡೆಗೆ ಹಾಗೂ ಆಕಾಶದ ಕೆಳಗಡೆಗೆ ಇರುವ ಅವಕಾಶದ ಟೊಳ್ಳಿಗೆ [o] ಅಂತರಿಕ್ಷ (ವಿಶ್ವಯೋನಿ) ಎಂಬ ಪಾರಿಭಾಷಿಕ ಹೆಸರು ಇದೆ. ವೇದದಲ್ಲಿ ಇದನ್ನು ಸಮುದ್ರ ಎಂದೂ ಕರೆಯಲಾಗಿದೆ. ಮಧ್ಯಸ್ಥಾನೀಯ ದೇವರ ವಾಸಸ್ಥಾನವು ಇದು. ಈ ಅಂತರಿಕ್ಷವು (ಯೋನಿ). ವ್ಯಕ್ತಿ (ಪ್ರಾಣಿ) ನಿರಪೇಕ್ಷ ಟೊಳ್ಳು ಆದರೆ, ವ್ಯಕ್ತಿ ಸಾಪೇಕ್ಷ ಟೊಳ್ಳಿಗೆ ಅಂತರ್ ಅಂಗ, ಅಂತಃಕರಣ ಎಂಬ ಹೆಸರು ಇದೆ. ಅನಾಹತ ನಾದವು ಕೆಲವೊಮ್ಮೆ ಇದ್ದಕ್ಕಿದ್ದಂತೆ, ಫಕ್ಕನೆ ಕೆಳಬರುವುದು ಉಂಟು. ಇದು ವ್ಯಕ್ತಿಯ ಒಡಲಿನ ಟೊಳ್ಳಿನೊಳಗಿಂದ ಕೇಳಲು ದೊರೆಯುವ ಶಬ್ದ ಇದನ್ನು ಅಂತರ್ ಅಂಗದ ವಾಣಿ = ಅಂತರ್‌ವಾಣಿ ಎಂದು ಹೆಸರಿಸಲಾಗಿದೆ. ಗಾಂಧೀಜಿಯವರ Inner Voice (ಅಂತರ್ ವಾಣಿಯು) ಲೋಕವಿಶ್ರುತವಿದೆ. ಹಿರಾಕ್ಲಿಟಸನ Logos ಇದು, ಇದನ್ನು ಮಾನವ ಸಂಪ್ರದಾಯವು ಕರ್ಣಪಿಶಾಚ ಸಿದ್ಧಿ ಎಂದು ಹೆಸರಿಸಿದೆ.

ಆದರೆ, ಅಂತರ್ ಅಂಗದ ವಾಣಿಯನ್ನು ಕಾಲಿದಾಸನು ಅಂತಃಕರಣ ಪ್ರವೃತ್ತಿ ಎಂದಿದ್ದಾನೆ. ಇದು ಅಂಗನೆ ; ಶಕುಂತಲೆಯನ್ನು ಕಂಡಾಗಿನ ಪ್ರವೃತ್ತಿ.

ಸತಾಂ ಹಿ ಸಂದೇಹಪದೇಷು ವಸ್ತುಷು
ಪ್ರಮಾಣಂ ಅಂತಃಕರಣಿ ಪ್ರವೃತ್ತಯಃ ।

ಯಾವುದೊಂದು ಪ್ರಸಂಗದಲ್ಲಿ ಸಂದೇಹವು ಉಂಟಾಗುವಾಗ ಸಂತ ಸಜ್ಜನರು ತಮ್ಮ ಅಂತಃಕರಣದ ಪ್ರೇರಣೆಯನ್ನು ಪ್ರಮಾಣ ಎಂದು ಬಗೆಯುತ್ತಾರಂತೆ. ಆದರೆ, ಮಹಾತ್ಮಾಜಿಯವರಿಗೆ, ಕೇಳಲು ದೊರೆಯುತ್ತಿತ್ತು ಎಂಬ ಅಂತರ್‌ಅಂಗದ ವಾಣಿಯನ್ನು ಅಂತಃಕರಣದ ಪ್ರವೃತ್ತಿ ಎಂದು ಹೇಳಬಹುದೆ?

ಗ್ರೀಕ್‌ಪುರಾತನ ಪರಂಪರೆಯೊಳಗಿನ ಹಿರಾಕ್ಲಿಟಸ್ ಎಂಬವನಿಗೆ ಈ ಸಿದ್ಧಿಯ ಇತ್ತು. ಇದನ್ನು (Logos) ಎಂದು ಹೆಸರಿಸಿದ್ದಾನೆ. ಹಿರಾಕ್ಲಿಟಸ್‌ನು (Water) (ಸ್ತ್ರೀ) ನೀರೆ ತ್ಯಾಜ್ಯ; ತುಚ್ಛ ಎಂದು ಬಗೆದಿದ್ದನು. ಈತನು ಕುಮಾರ ಸಂಪ್ರದಾಯದ ಪ್ರವರ್ತಕನು, ಸ್ತಂಭಕಾಲ ಪೂಜಕನು, ಆದಕಾರಣ ಈತನಿಗೆ ಕೇಳಿಸಿದ್ದು ಅಂತಃಕರಣದ ಪ್ರವೃತ್ತಿಯೇ ಹೊರತು, ಇದು ಅಂತರ್ ಅಂಗದ ವಾಣಿಯಲ್ಲ. ಭಾರತೀಯ ಪುರಾತನ ಪರಂಪರೆಯೊಳಗಿನ ಪರಿಭಾಷೆಯು ಒಳಗೊಂಡಿರುವ ಈ ಸೂಕ್ಷ್ಮ ತಾರತಮ್ಯವು ಮೌಲಿಕ ಮಹತ್ವದ್ದು ಆಗಿದೆ. ಈ ಅನಾಹತನಾದದ : ಓಂಕಾರ : ಪ್ರಣವದ ಪರಂಪರೆಯ ಮೂಲ ಸ್ವರೂಪವು, ಈ ತಾರತಮ್ಯದ ಮೂಲಕವಾಗಿ ಬೆಳಕಿಗೆ ಬರುತ್ತಿದೆ. ಅಂಗ (ಹೆಂ), ಕರಣ (ಗಂ.) ಇವೆರಡರ ಕೂಟದ ಈ ನಾದವನ್ನು ವಾಣಿ ಎಂದಿರುವಲ್ಲಿ ಇವಳು ವಾಣ>ಬಾಣದಿಂದ ಆವಿದ್ಧಳು. ಈ (ಅಂಗನೆ) ವಾಣೀ, ವಿಶ್ವಶಕ್ತಿಯ-ದೇಹಾಂಗದ ಶಕ್ತಿಯ ಪ್ರತಿನಿಧಿ ಆಗುತ್ತಾಳೆ ಎಂಬ ನಂಬುಗೆ ಇಲ್ಲಿದೆ. ಪ್ರಣವರೂಪ (ಪ್ರ-ನವ) ಈ ನಾದವು ನಾನಾ ಧ್ವನ್ಯರ್ಥವುಳ್ಳದ್ದು. 'ಕ್ಷಣೇ ಕ್ಷಣೇ ನವತಾಂ ಉಪೈತಿ' ಸ್ವರೂಪದ ರಮಣಿ(ೀ)ಯ ದಿವ್ಯಶಕ್ತಿಯ ವಾಣಿ ಇದು. ಪ್ರಣವ ಮಂತ್ರವನ್ನು ಓಂಕಾರ ಸಂಕೇತದಿಂದ ಸೂಚಿಸಲಾಗುತ್ತದೆ. ಅ, ಉ, ಮ್=ಓಂ ಇದನ್ನು ವಿಶ್ವದ ಉದ್ಗಮ ಕೇಂದ್ರ ಎಂದು ಹೇಳಲಾಗುತ್ತದೆ.

"ಓಂ ಇತಿ ಏತತ್ - ಏಕಾಕ್ಷರಂ, ಇದಂ ಸರ್ವಂ...... ಭೂತಂ ಭವತ್ ಭವಿಷ್ಯತಿ ಇತಿ ಸರ್ವಂ ಓಂಕಾರಃ ಏವ". ಎಲ್ಲ ಹುಟ್ಟಿಗೂ ಮೂಲಸ್ಥಾನವಾದ ಈ ಓಂಕಾರವು ವಿಶ್ವಯೋನಿಯಾಗುತ್ತಿದೆ.

ಆದಕಾರಣ, ಇದು ವಿಶ್ವಜನನಿ : ಮಾತೃಸ್ಥಾನ ರೂಪದ್ದು ಆಗುತ್ತದೆ. ಈ ಓಂಕಾರ : ಆದಿಶಕ್ತಿ ಇವಳು, ಸರ್ವಭಾಷಾಮಯಿೞ ಭಾಷಾ (ಸರ್ವಭಾಷಾ) ಸರಸ್ವತೀ [O]. ಸರಸ್ವತಿ ಹೆಸರಿನ ಸ್ಪಷ್ಟೀಕರಣವು ಸರಃ ಅಸ್ಯಾ ವಿದ್ಯತೇ ಸಾ. ಸರಸ್‌ವತೀ ಎಂದು ಹೇಳಲಾಗಿದೆ. ಈಕೆಯೇ ವಾಣಿ ಎನಿಸುತ್ತಾಳೆ. ಈ ವಾಣಿಗೆ ಪ್ರಚೋದಕವು ವಾಣ > ಬಾಣ=ನರ(ಳ) ರೂಪ ಮರುತನ ಕರಣ ರೂಪ ಅಂಗ ಆದಿಶಕ್ತಿ ಕುಮಾರೀ ಮಾತಾರೂಪ ಮಂಡಲದ ಉಪಾಸನೆಯು ಹಿಮ್ಮೆಟ್ಟಿದ ಬಳಿಕ, ಅತ್ಯಂತ ಅಭಾವವೇ ಸ್ಥಾಯಿ ಇರುವ, ಆದಿಪುರುಷ: ದಶಾಂಗುಲನ ಆರಾಧನೆಯು ಪ್ರತಿಷ್ಠೆ ಪಡೆಯುತ್ತದೆ. ಗ್ರೀಕ್ ಪುರಾತನ ಪ್ಯಾಥಾಗೋರಾಸನ ಸಂಪ್ರದಾಯದ ದಶ (ten) ರೂಪವಿರುವ ಏಕಂ (ಉ) ಸ್ವರೂಪ Limit ಈ ದೇವನು ten ಇದ್ದಾನೆ! ಗ್ರೀಕ್ ಪರಂಪರೆಯ ಈ ಆದಿಪುರುಷನ ಮೂಲಕ ಭಾರತೀಯ ಪರಂಪರೆಗೆ ಪುಷ್ಟಿದೊರೆಯುತ್ತದೆ. Water ನೀರೆಯು ಸ್ಥಾನ ಭ್ರಷ್ಟವಾಗುತ್ತಾಳೆ. ಅಂತರ್ ಅಂಗಕ್ಕೆ ಪ್ರತಿಯಾಗಿ ಇರುವ ಅಂತಃಕರಣ ಇದುವೇ ವಾಣಿಯ ವಾಣ<ಬಾಣ ಎನಿಸುತ್ತಿದೆ! ಜ್ಯೋತಿರ್ಲಿಂಗ Candle light ಇದು ಜ್ಞಾನರೂಪ ಬೆಳಕು. ಮಾತು ಎಂಬುದು ಜ್ಯೋತಿರ್ಲಿಂಗ! ವೇದವು ಶ್ರುತಿ ಆಗುವದರೊಡನೆ ವಾಕ್ ರೂಪೀ ಭಾಷೆಗೆ ಗೀರ್ವಾಣವಾಣಿ ಎಂಬ ನೂತನ ಹೆಸರು ಪ್ರಚಲಿತವಾಗುತ್ತದೆ!

ವಾಕ್ ಇದು ಸಮಾಜ ಸಮಷ್ಟಿಯ ಪ್ರಜ್ಞಾ: ಪ್ರಕಾಶ ಪಾತಳಿಯ ಮೇಲಣ ಪ್ರೇರಣೆಯಿಂದ ಮೈವೆತ್ತ ಭಾಷೆ. "ಯತ್ರ ಧೀರಾ ಃ ಮನಸಾ ವಾಚಂ ಅಕ್ರತ"[2] ವಾಕ್ ಮನುಜ: ಮಾನವ ಸಂಪ್ರದಾಯದ ಹಿನ್ನೆಲೆಯಲ್ಲಿ ಮೈವೆತ್ತ ಭಾಷೆ. ಆದರೆ, ವಾಣಿ - ಗೀಃ ವಾಣ ವಾಣಿ- ಇದು ವೈಯಕ್ತಿಕ ವೈಸಿಷ್ಟ್ಯದ ಸ್ವಯಂಭೂ ನರ(ಳ) ಸಂಪ್ರದಾಯದ ಮನ್ವಂತರದಲ್ಲಿ ಮೈವೆತ್ತ ಭಾಷೆ. ಇದರ ಪ್ರೇರಣಾಕೇಂದ್ರವು ಪ್ರಾಣಲಿಂಗ ಪಾತಳಿಯ ಮೇಲೆ ಇದೆ. ಈ ಕಾರಣದಿಂದ ಪ್ರತಿಯೊಬ್ಬರ ಅರ್ಥ ಅವರವರ ಪಾಲಿನ ಸತ್‌ತ್ಯ ಆಗುತ್ತದೆ. ವೇದದಲ್ಲಿ ನಾಗಲಿಂಗ ಶಕ್ತಿಯು ಪೂಜೆಗೊಳ್ಳತೊಡಗುವಾಗ ನಾಗ-ಸ್ವರವು ಅನಾಹತನಾದ. ಶ್ರುತಿಯು ನರವರ್ಗದ ಭಾಷೆಯಾಗುತ್ತದೆ. ಪುರಾತನ ಗ್ರೀಕ್ ಪರಂಪರೆಯಲ್ಲಿ Music of the Spheres ಎಂಬ ಹೆಸರಿನಲ್ಲಿ ಅನಾಹತನಾದದ ಉಪಾಸನೆಯು ಪ್ರಚಲಿತವಿತ್ತು. ಟಿಳಕರಿಗೆ ಕೇಳ ದೊರೆತ ಭಗವತ್ ಗೀತ ಇದು!

ಸಾಂಸ್ಕೃತಿಕ ಅನ್ವೇಷಣೆಯೊಳಗಿನ ಈ ನಿಷ್ಕರ್ಷವು ಬೇರೆಬೇರೆ ಬಗೆಯ ತಾಳಮೇಳದ ಮೂಲಕ ವಾಸ್ತವ ಸತ್ಯ, ಎಂದು ದೃಢಪಡಿಸುತ್ತಿದೆ. ವಿವಸ್ವನ್ : ಮನು ಪರಂಪರೆಯ ಮಾನವಧರ್ಮವು ಹಿಮ್ಮೆಟ್ಟಿ, ಪ್ರಾಣಲಿಂಗೋಪಾಸಕ ನರ(ಳ) ಸಂಪ್ರದಾಯದ ಸ್ವಯಂಭೂ > ಸ್ವಾಯಂಭುವ ಮನ್ವಂತರವು ಇಂದು ಪ್ರಪಂಚವನ್ನೇ ಆಳುತ್ತಿದೆ. ಎಂಬ ನಿಷ್ಕರ್ಷವು ಈ ಬಗೆಯಲ್ಲಿ ವಾಸ್ತವಃ ಸತ್ಯಸೂಚಕವಾಗಿದೆ. ಇದು ಇಂದಿಗೂ ಕಾಣುತ್ತಿರುವ ಐತಿಹಾಸಿಕ ಘಟನೆ ಎಂದು ಧೃಢಪಡುತ್ತಿದೆ.

ಇಂದಿನ ವೇದವು ನಾಗ ಸಂಪ್ರದಾಯದ್ದು ಆಗುವ ಈ ಮೂಲಕ ಇನ್ನೊಂದು ತಾತ್ವಿಕ ಪ್ರಶ್ನೆ ಎದುರು ನಿಲ್ಲುತ್ತದೆ. ಬಾಳಿನಲ್ಲಿ ನಾದ-ಬ್ರಹ್ಮದ ಸ್ಥಾನವೇನು? ವೈವಸ್ವತ ಮನುಪ್ರಣೀತ ಮಾನವಧರ್ಮದ ನಿಷ್ಠೆಯು ಧೀಪ್ರಚೋದಕ ಪ್ರಜ್ಞಾ: ಪ್ರಕಾಶತತ್ವದ ಬ್ರಹ್ಮನ್ "ಶಕ್ತಿಯಲ್ಲಿದೆ. ವಿಶ್ವಾಮಿತ್ರಸ್ಯ ಬ್ರಹ್ಮೇದಂ ರಕ್ಷತಿ ಭಾರತಂ ಜನಮ್"[2] ಎಂಬ ಆಶ್ವಾಸನವು ಪ್ರಚಲಿತ ಸಂಹಿತೆಯಲ್ಲಿ ಎಂತೋ ಉಳಿದಿದೆ. ಭಾಷೆಯ ಭಾ=ಪ್ರಕಾಶತತ್ವದ ಅರ್ಥ ವಿಚಾರರೂಪ ಜ್ಞಾನವನ್ನು ಒಳಗೊಂಡಿರುತ್ತದೆ. ಈ ಅರ್ಥವಿಚಾರಕ್ಕೆ ಆಧಾರರೂಪ ಶಬ್ದ-ದೇಹವು ಅನಿವಾರ್ಯವೇ ಇದೆ.

ಮಾನವ ಧರ್ಮದ ನಿಷ್ಠೆ ಅರ್ಥ : ಪ್ರಕಾಶ ತತ್ವದಲ್ಲಿ, ಆದರೆ, ಇದಕ್ಕೆ ಪ್ರತಿಯಾಗಿ ನರ (ಳ) ಸಂಪ್ರದಾಯಕ್ಕೆ ನಾದರೂಪ ಶಬ್ದ (ದ್ರವ್ಯ)ದಲ್ಲಿ, ದೇಹದಲ್ಲಿ ನಿಷ್ಠೆ! ಅರ್ಥ=ವಿಚಾರಕ್ಕೆ ಸ್ಥಾನವೇ ಇಲ್ಲ; ಇದ್ದರೆ ತೀರ ಗೌಣ! ವೈವಸ್ವತ ಮನುವಿನ ಸಂಪ್ರದಾಯವು ಹಿಮ್ಮೆಟ್ಟಿ ಇಂದಿನ ವೇದ, ಪ್ರಾಣ (ಅಸು) ಪೂಜಕ ನರ(ಳ) ಸಂಪ್ರದಾಯದ ಆಧಾರಭೂತ ಗ್ರಂಥವಾಗುತ್ತದೆ. ಈ ವೇದಕ್ಕೆ ಶ್ರುತಿ ಎಂಬ ಹೆಸರೂ ಬರುತ್ತದೆ. ರಾಗ ರಸ : ಪದವು ಕಸ ಎಂಬ

ಲೋಕೋಕ್ತಿಯು ನಾದ-ಬ್ರಹ್ಮದ ಹಿರಿಮೆಯನ್ನು ಸೂಚಿಸುತ್ತದೆ. ಅರ್ಥ; ಆಶಯ, ವಿಚಾರ ಇದರ ಬೆಲೆ ತಗ್ಗಿ ನಾಮ ಲೋಲುಪತೆಯ ಪ್ರತಿಷ್ಠೆ ಹೆಚ್ಚುತ್ತದೆ! ಅರ್ಥವಿಲ್ಲದ ಬರಿಯ ಭಾವಗೀತ=ನಾದ ಇದುವೆ ಬಾಳದಾರಿಯ ಬೆಳಕು ಆಗಬಲ್ಲುದೆ?

ಗ್ರೀಕ್ ಪುರಾತನ ಪರಂಪರೆಯಲ್ಲಿಯೂ ಈ ಬಗೆಯ ಸ್ಥಿತ್ಯಂತರವು ಸಂಭವಿಸಿದೆ. ಭಾರತೀಯ ಪುರಾತನ ಪರಂಪರೆಯಲ್ಲಿ ಪ್ರಜ್ಞಾ (ವೇದ) ಇದು ಗೌಣದಾಗುತ್ತದೆ. ಗ್ರೀಕ್ ಪರಂಪರೆಯಲ್ಲಿ Nous (Mind) ಇದು ಗೌಣವಾದುದನ್ನು ಕ್ರೈಸ್ತಪಂಥೀಯ Trinity ತ್ರಿಪುಟಿ, ಮೂಲಕ ಗ್ರಹಿಸಿಕೊಳ್ಳಬಹುದಾಗಿದೆ. ದಿವ್ಯಾಧ್ಯಾತ್ಮ ಪಂಥೀಯ God = ಭಗವಂತನು the one is indefinable; ನೇತಿನೇತಿ ಇವನೇ ಸರ್ವಶ್ರೇಷ್ಠನು.

> We now come to the second person, whom Plotinus calls Nous :[೮]

Nous ಪ್ರಜ್ಞಾ:ಪ್ರಕಾಶತತ್ತ್ವವು ಗೌಣ (ದ್ವಿತೀಯ ಸ್ಥಾನದ್ದು) ಆಗುವುದರೊಡನೆ ಇದರೊಳಗಿನ ಅರ್ಥವೂ ಸಂಕುಚಿತವಾಗುತ್ತದೆ. ಗ್ರೀಕ ಪರಂಪರೆಯಲ್ಲಿ Nous ಇದರ ಅರ್ಥದ ಬಗೆಗೆ ಸಂಧಿಗ್ದತೆಯು ಉಂಟಾದದ್ದನ್ನು ಕಾಣಬಹುದು.

> It is always difficult to find an English word to represent Nous, the standard dictionary translation is "Mind", but this does not have the correct connotations particularly when the word is used in a religious philosophy.

'Nous' (ಪ್ರಜ್ಞೆ) ಇದನ್ನು Intellectual principle (ಬುದ್ಧಿತತ್ತ್ವ) ಎಂದು ಬಗೆಯುವವರೂ ಇದ್ದಾರೆ! ಆದರೆ ದಿವ್ಯ ಜ್ಞಾನಮಾರ್ಗದ ತತ್ವಜ್ಞಾನಿ ಡೀನ ಇಂಗ (Dean Inge) ಈ ಪದಕ್ಕೆ 'Spirit' (Geist=Ghost) ಮಹತಃ ಭೂತಸ್ಯ ನಿಃ ಸ್ವಸಿತಂ ಎಂಬ ಅರ್ಥ ಹೇಳುತ್ತಾನೆ. ಇದುವೇ ಇಲ್ಲಿ (ಮೈಯಲ್ಲಿ ಆಗುವ Spirit=ಆ-ವೇಶ ಎಂಬ ಅರ್ಥದಲ್ಲಿ) ಸರಿ ಹೋಗುತ್ತದೆ.[೯]

ಅರಿಸ್ಟೊಟ್ಲನು ಹೇಳುವ ಗ್ರೀಕ್ ಪರಂಪರೆಯೊಳಗಿನ ವಿಶ್ವದ ಆದಿಕಾರಣ ಎಂಬ Nous (ಪ್ರಜ್ಞಾ : ಪ್ರಕಾಶ) ತತ್ತ್ವದ ಮೂಲಾರ್ಥವು ಸಂಕುಚಿತವಾಗುತ್ತದೆ. ಮೈಯಲ್ಲಿ ಆವೇಶವಾಗುವ ಈ ಅಸುರ ಶಕ್ತಿ ಗಾಳಿಯ, ಮಾರುತ, ನಿಃಶ್ವಸಿತು =Spirit (Geist=Ghost) ಎಂಬ ನಾದ ರೂಪಕ್ಕೆ ಬಂದು ನಿಲ್ಲುವದನ್ನು ಕಾಣಬಹುದು.

ಶಬ್ದವು ನಿತ್ಯ ಎಂಬ ಸಿದ್ಧಾಂತದ ಪೂರ್ವ ಪೀಠಿಯು, ಹೀಗೆ ಅಭ್ಯಸನೀಯವಿದೆ. ಅರ್ಥಃ : ವಿಚಾರ ಇದು ಪ್ರಕಾಶ ತತ್ತ್ವ. ಆದಕಾರಣ ಶಬ್ದವು ಒಳಗೊಳ್ಳುವ ಈ ಪ್ರಕಾಶರೂಪ ಅರ್ಥತತ್ತ್ವವು ಶಬ್ದ ದೇಹಕ್ಕೆ-ಬಾಹ್ಯ ಆಕೃತಿಗೆ ಸೀಮಿತವಲ್ಲ. ನಾದಕ್ಕೆ, ಬಾಹ್ಯವಲಯರೂಪ ಶಬ್ದಕ್ಕೇ ಪ್ರಾಧ್ಯಾನ್ಯ ವು ಪ್ರಾಪ್ತವಾಗುವಾಗ ಅದು ಒಳಗೊಳ್ಳುವ ಅರ್ಥವು ದೇಹಕ್ಕೆ ಸೀಮಿತವಾಗಿ ಗೌಣವಾಗುತ್ತದೆ! ಶಬ್ದ ನಿತ್ಯ = ದೇಹನಿತ್ಯ! ಈ ಒಳ ಬೆಳಕು ದೇಹಕ್ಕೆ ಸೀಮಿತ! ಇದು ಪ್ರಾಣಲಿಂಗ ಜ್ಯೋತಿ: ಪ್ರಕಾಶತತ್ತ್ವವಲ್ಲ, ನರ ಸಂಪ್ರದಾಯದ ದೃಷ್ಟಿಕೋನದ ವೈಶಿಷ್ಟ್ಯವು, ಇಲ್ಲಿ : ಆಕೃತಿ ಹಾಗು ಆಶಯ ಗುಣ ಇವೆರಡರಲ್ಲಿ, ಬಾಹ್ಯ ಆಕೃತಿಗೇ (ದೇಹಕ್ಕೆ) ಪ್ರಾಧಾನ್ಯ ವಿರುತ್ತದೆ. ಆದಕಾರಣ ಅರ್ಥವು ತನ್ನ ಸ್ವತಂತ್ರ ಅಸ್ತಿತ್ವಕ್ಕೆ ಎರವಾಗುತ್ತದೆ. ಇದಕ್ಕೆ ಪ್ರತಿಯಾಗಿ ಮಾನವ ಧರ್ಮದ ಮೂಲ ನಿಷ್ಠೆಯಂತೆ ಆಕೃತಿ ಮತ್ತು ಆಶಯ ಇವೆರಡರಲ್ಲಿ ಅಂತರಿಕ ಆಶಯಗುಣಕ್ಕೇ ಏನೆಲ್ಲ ಮಹತ್ತ್ವವಿದೆ. ಈ ಕಾರಣದಿಂದ. ಆಕೃತಿಯು ಆಶಯ ಗುಣದ ರೂಪದ್ದೆ ಆಗುತ್ತದೆ.

ಕಾಲಿದಾಸನ ಉಕ್ತಿಯೂ ಇದಕ್ಕೆ ಪ್ರಮಾಣಃ. "ನ ತಾ ದೃಶಾಃ ಆ-ಕೃತಿ ವಿಶೇಷಾಃ ಗುಣ ವಿರೋಧಿನೋ ಭವಂತಿ" ಗ್ರೀಕ್‌ಪುರಾತನರಲ್ಲಿ ವಿಖ್ಯಾತನಾದ ಅರಿಸ್ಟಾಟ್ಲನು ಈ ತತ್ತ್ವವನ್ನು ಇನ್ನೂ ವಿಶದಪಡಿಸಿ ಹೇಳಿದ್ದಾನೆ.

> "Form is immanent in things, the cause expresses itself in them, and gives them their shape. It is at once concept and thing

> both real and ideal......... the particular is to be traced back to general concepts and to be explained by deduction from those concepts.

ಆಕೃತಿಗೆ, ಕೃತಿಯೇ ಕಾರಣ, ಕೃತಿಗೆ ಗುಣವು (ಸ್ವಭಾವವು) ಪ್ರೇರಕವಿರುತ್ತದೆ. ಆದಕಾರಣ ಬಾಹ್ಯಆಕೃತಿ ಹಾಗೂ ಆಂತರಿಕ ಗುಣವಿಶೇಷ, ಇವೆರಡರಲ್ಲಿ ಅನ್ಯೋನ್ಯವು ಇರುತ್ತದೆ ಎಂಬ ಈ ಪುರಾತನ ಶ್ರದ್ಧೆಯ ಅರ್ಥವಾಗಲು ಈ ದರ್ಶನಕ್ಕೆ ಕಾರಣವಾದ ಮೂಲಪ್ರತಿಮೆಯನ್ನು ಸ್ಮರಿಸಿಕೊಳ್ಳುವ ಆವಶ್ಯಕತೆಯ ಇದೆ. ಆಕೃತಿಯು ಗುಣದಲ್ಲಿ ಹುದುಗಿದೆ ಉದಾ: ಪ್ರಜ್ಞಾ : ಪ್ರಕಾಶದ ಪ್ರತೀಕವು ವಿವಸ್ವನ್ ಅಥವಾ ಧೀ ಪ್ರಚೋದಕ ಸವಿತೃವು (ಸೂರ್ಯ) ಆಗಿದ್ದಾನೆ. ಪ್ರಾಣ-ಲಿಂಗ ಪಾತಳಿಯ ಪ್ರೇರಕ ಶಕ್ತಿ ನಿಶಾನಾಥ: ಉಭಯಲಿಂಗೀ ಚಂದ್ರನು ಎಂಬ ನಿಷ್ಠೆಯಿದೆ. ಪ್ರಜ್ಞಾ: ಪ್ರಕಾಶರೂಪ ಆಂತರಿಕ ಗುಣವು ಪ್ರಕಾಶರೂಪ ಸದ್ಗುಣಗಳನ್ನೇ ಪ್ರೇರಿಸುತ್ತದೆ. ಪ್ರಾಣಲಿಂಗದ ಪ್ರತಿಮೆ=ನಿಶಾನಾಥ ಚಂದ್ರನ ಪಾತಳಿ; ಕತ್ತಲೆ, ರಾತ್ರಿಯನ್ನೇ ಪ್ರೇರಿಸಬಲ್ಲುದು. ನಾದ-ಬ್ರಹ್ಮಕ್ಕೆ ಏಕಮೇವ ಅದ್ವಿತೀಯ ಸ್ಥಾನವು ಇರಬೇಕಾದ ಜೀವನಾನುಭವದಲ್ಲಿ ತತ್‌ಮಯತೆಗೇ ಪ್ರಾಶಸ್ತ್ಯವಿದ್ದೀತು. ಈ ತತ್‌ಮಯತೆಗೆ ಕಟ್ಟೇ ಕಾಂತದ ಕತ್ತಲೆಯ ಆವರಣವು ಅನಿವಾರ್ಯವಿದೆ. ಇದನ್ನು ಶೂನ್ಯ [0] ಸಿದ್ಧಿ ಎಂದು ಹೇಳಬಹುದು. ಶೂನ್ಯ (ನಿಃ ಶಬ್ದದ) ಸ್ಥಿತಿಗಿಂತ ಮಿಗಿಲಾದದ್ದು ಯಾವುದೂ ಇಲ್ಲ! ಕತ್ತಲೆಯ ಆವರಣದೊಳಗಿನ ಜ್ಯೋತಿಯು ಪೂಜಾ ಸ್ಥಾನವಾಗುವಾಗ, ಈ ದೈವತವು ಗರ್ಭಗುಡಿಯೊಳಗಿನ ಹಣತೆಯ ಸ್ವರೂಪದ್ದೇ ಇರಬಲ್ಲುದು.

ಟಿಪ್ಪಣಿಗಳು

೧. Viswanatha Narayana Mandalika; ***Serpent Worship is Western, India***. ೧೮೬೯-೭೦; P ೧೬೯-೨೦೦
೨. ***ಋಗ್ವೇದ ಸಂಹಿತೆ*** X ೧೮೯
೩. Macdonell A.A.; ***Vedic Mythology*** P. 734. No trace of the serpent workship in R. V. P. 153
೪. ***ಋಗ್ವೇದ ಸಂಹಿತೆ*** X. ೪೧
೫. ***ಅದೇ*** X-೮೩
೬. ***ಅದೇ*** III. ೪೩. ೧೨
೭. Russell; ***History of Western Philosophy,*** P-312
೮. E. Zeller; ***Outlines of the History of Greek Philosophy*** P. 168

ಬುಧನ ಜಾತಕ

All knowledge of reality starts from experience and ends in it

- *Einstein*

ಸ್ಮೃತಿಃ ವ್ಯತೀತವಿಷಯಾ, ಮತಿಃ ಆಗಾಮೀಗೋಚರಾ ।
ಬುದ್ಧಿಃ ತಾತ್ಕಾಲಿಕೀ ಜ್ಞೇಯಾ, ಪ್ರಜ್ಞಾ ತ್ರೈಕಾಲಿಕೀ ಮತಾ ।
ಪ್ರಜ್ಞಾ ನವನವೋನ್ಮೇಷಶಾಲಿನೀಂ ಪ್ರತಿಭಾಂ ವಿದುಃ ।

- ಭಟ್ಟತೌತ

ಮುನ್ನುಡಿ

ಮನುಷ್ಯನ ಶ್ರೇಯಸ್ಸು ಯಾವುದರಲ್ಲಿದೆ? ಅವನ ಅಶ್ರೇಯಸ್ಸು ಯಾರಿಂದ ಆಗಿದೆ? ಇದು ಶಂ. ಬಾ. ಅವರ ಪ್ರಧಾನ ತಾತ್ವಿಕ ಕಾಳಜಿಯೆಂದು ನನಗೆ ತೋರುತ್ತದೆ. ಇದರ ಶೋಧಕ್ಕೆ ಅವರು ಮನುಷ್ಯನ ಮೂಲಗಳಿಗೆ ಹೋಗುತ್ತಾರೆ. ಮನುಷ್ಯ ಯಾತರಿಂದ ಮನುಷ್ಯನಾದ? ಮನಸ್ಸಿನಿಂದಲೇ ಮನುಷ್ಯನೆನಿಸಿದ. ಮನಸ್ಸಿನ ಉದ್ಬೋಧದ ಫಲವೇ ಪ್ರಜ್ಞೆ. ಪ್ರಜ್ಞೆಗೆ ಅಧಿಕಾರಿಯಾದ ಮನುಷ್ಯ ಬೆಳಕನ್ನು, ಬೆಳಕಿನ ಭೌತಿಕ ಮೂಲವಾದ ಸೂರ್ಯನನ್ನು ಅದರ ಸಂಕೇತವಾಗಿ ಮಾಡಿಕೊಂಡ. ಅದರ ಪಾರ್ಥಿವ ಸ್ವರೂಪವಾದ ಅಗ್ನಿಯೂ ಅದರ ಸಂಕೇತವಾಯಿತು. ಅದರ ಆರಾಧನೆಯೇ ಪ್ರಥಮ ಧರ್ಮ. ಅದು ಜಾತವೇದಾಗ್ನಿ. ಅಂದರೆ ವೇದ (ತಿಳಿವು) ವನ್ನು ಕೊಡುವಂಥದು. ಈ ವೇದದೊಡನೆಯೆ ನರನೂ ಮನುಷ್ಯನಾದ. ಅದರೊಡನೆಯೇ ಅವನ ಇತಿಹಾಸ ಆರಂಭವಾದದ್ದು. ಪ್ರಜ್ಞೆಯೊಂದೇ ತ್ರೈಕಾಲಿಕ : ನಿನ್ನೆ - ಇಂದು - ನಾಳೆಯ ಕಲ್ಪನೆಯುಳ್ಳದ್ದು. ಮನಸ್ಸು, ಪ್ರಜ್ಞೆ, ವೇದ-ಇಲ್ಲದೆ ಇತಿಹಾಸವಿಲ್ಲ, ಸಮಾಜವೂ ಇಲ್ಲ. ಈ ವೇದ (=wit, Wisdom) ಸ್ವಭಾವತಃ ವೈಶ್ವಾನರ (= ಮನುಷ್ಯ ಸಮಾಜ); ವೈಯಕ್ತಿಕವಲ್ಲ. ವೈಶ್ವಾನರಾಗ್ನಿ ಅವನ ಆರಾಧನೆಯ ವಸ್ತುವಾಗಿದ್ದಷ್ಟು ಕಾಲ ಅವನು ತನ್ನನ್ನು ಪ್ರಜ್ಞೆಯ ಅಧೀನದಲ್ಲಿಟ್ಟುಕೊಂಡು ನಡೆಯುತ್ತಾನೆ. ಅದು ಶ್ರೇಯಸ್ಸಿನ ದಾರಿ; ಮನುಷ್ಯತ್ವದ ದಾರಿ. ಬೆಳಕಿನ ದಾರಿ. ಅದೇ ಅವನ ಧೀಯನ್ನು ಸರಿದಾರಿಯಲ್ಲಿ ಪ್ರಚೋದಿಸುತ್ತದೆ. ಚೋದನಾ ಲಕ್ಷಣವೆಂದು ಉಕ್ತವಾದ ಧರ್ಮವೇ ಇದು. ಈ ಚೋದನೆಯಲ್ಲಿ ಪ್ರ-ಗತಿಯೂ, ಸಂ-ಯಮವೂ ಸೇರಿದೆ. ಅದರ ಧ್ಯೇಯ ಸಮಷ್ಟಿ ಹಿತ.

ಆದರೆ, ಮನುಷ್ಯ ನರತ್ವದಿಂದ ಮೇಲೇರಿ ತಾನೆ ಮನುಷ್ಯನಾದವನು? ಜೈವಿಕ ಉಳಿಗಾಲಕ್ಕಾಗಿ ನರತ್ವದ ಅಂಶಗಳು ಅವನಲ್ಲಿ ಉಳಿದೇ ಇದ್ದವು. ಇಂದಿಗೂ ಇವೆ. ಅವು ವೇದದ ಪ್ರಜ್ಞೆಯ ಅಂಕೆಯಲ್ಲಿ ಉಳಿಯಲು ಇಷ್ಟಪಡುವುದಿಲ್ಲ. ಮನುಷ್ಯತ್ವ ಅವನನ್ನು ಬೆಳಕಿನತ್ತ ಚೋದಿಸುತ್ತಿದ್ದರೆ ನರತ್ವ ಅವನನ್ನು ಕತ್ತಲೆಯತ್ತ ಜಗ್ಗುತ್ತದೆ. ಈ ಜಗ್ಗಾಟದಲ್ಲಿ ಪ್ರಜನನೇಂದ್ರಿಯವೇ ಪ್ರಧಾನವಾಗಿ ಉಳ್ಳ ಇಂದ್ರಿಯಗಳ ಸ್ವೇಚ್ಛಾಪೇಕ್ಷೆ ಕೆಲಸ ಮಾಡುತ್ತದೆ-ಮಾಡುತ್ತಲೇ ಇರುತ್ತದೆ. ನುಣುಪಾದ ಕಂಬವನ್ನು ಏರಬೇಕಾದವನಂತೆ ಮನುಷ್ಯ ನರತ್ವದ ಕಡೆಗೆ ಆಗಾಗ್ಗೆ ಜಾರುತ್ತಾನೆ. ಅದರಲ್ಲಿ ಒಂದು ಹಿತವಾದ ಅನುಭವ ಅವನಿಗೆ ಆಗುತ್ತದೆ. ತ್ರಿಕಾಲವ್ಯಾಪಿಯಾದ ಪ್ರಜ್ಞೆಯ ಕಠಿಣಮಾರ್ಗದ ಅನುಸರಣೆಗಿಂತ ಕಾಲದ ಕೋಟಲೆ ಇಲ್ಲದೆ ಇಂದ್ರಿಯಗಳಿಗೆ ತನ್ನನ್ನು ತಾನು ಬಿಟ್ಟುಕೊಡುವ ಮತ್ತು ಹೊಣೆಗಾರಿಕೆಯಿಂದ ಮುಕ್ತವಾದ ಮಾನವ ಪೂರ್ವಸ್ಥಿತಿಯಲ್ಲಿ ಅವನು ಒಂದು ಆನಂದವನ್ನು ಅನುಭವಿಸುತ್ತಾನೆ. ಅವನ ಈ ನರತ್ವದ ಎಳೆತ ತಾನೂ ಒಂದು ಧರ್ಮವೆಂದು ಸೋಗುಹಾಕಿಕೊಳ್ಳುತ್ತದೆ. ಪ್ರಜ್ಞೆ ಬೆಳಕನ್ನು, ಸೂರ್ಯನನ್ನು ಸಂಕೇತ ಮಾಡಿಕೊಂಡಂತೆ ಇದು, ನೀರನ್ನು (= ಇಂದ್ರಿಯಸ್ರಾವ), ಜನನೇಂದ್ರಿಯಗಳನ್ನು, ಚಂದ್ರನನ್ನು, ಸರ್ಪವನ್ನು ಆರಾಧ್ಯ ಸಂಕೇತ ಮಾಡಿಕೊಳ್ಳುತ್ತದೆ. ಅಯ್ಯೋ, ಪ್ರಜ್ಞೆಯ ಕೋಟಲೆಯಾಕೆ ಬೇಕು?

ಸುಮ್ಮನೆ ಇಲ್ಲಿ ಬಾ! ಇಲ್ಲಿ ನೀನು ಸುಖವಾಗಿರಬಲ್ಲೆ. ಇದಕ್ಕೆ ನಿನ್ನನ್ನು ಒಪ್ಪಿಸಿಕೋ! ಎಲ್ಲ ಚಿಂತೆಗಳಿಂದ ನೀನಿಲ್ಲಿ ಮುಕ್ತನಾಗಿರಬಲ್ಲೆ. ಇದು ಅ-ಮೃತ. ಇದನ್ನು ಕುಡಿದವನಿಗೆ ಮೃತ್ಯುವಿಲ್ಲ! ಎನ್ನುತ್ತದೆ. ಈ ಬಗೆಯ ವಿಚಾರಧಾರೆಯ ಚರಮ ಸ್ವರೂಪವೇ ಸರ್ವಾರ್ಪಣಪೂರ್ವಕವಾದ (= ತನ್ನ ಹೊಣೆಯನ್ನು ಪೂರ್ತಿ ಹಾರಿಸಿಕೊಳ್ಳುವ) ಭಕ್ತಿ ಪಂಥ, ವಾಮಾಚಾರ ಪಂಥಗಳು. ಎಲ್ಲ ಕಾಟಗಳ ಮೂಲವಾಗಿರುವ ಜೀವನವನ್ನೇ ಸ್ವೇಚ್ಛೆಯಿಂದ ತ್ಯಜಿಸುವ ತರಬೇತಿ ವಿಧಾನಗಳಾದ ಯೋಗಪಂಥಗಳು - ಇತ್ಯಾದಿ. ಇವು ತಿರುವುಮುರುವು ಮಾಡಿ ಇಂದ್ರಿಯಗಳನ್ನು ಪೂರ್ತಿ ಉಪವಾಸವಿಡುವ ಸಂನ್ಯಾಸರೂಪವನ್ನು ತಾಳಬಹುದು. ಒಂದು ಮಾತಿನಲ್ಲಿ ಹೇಳುವುದಾದರೆ ಇವೆಲ್ಲವುಗಳ ಲಕ್ಷಣ ಜೀವನ, ಜವಾಬ್ದಾರಿಗಳಿಗೆ ಪರಾಙ್ಮುಖತೆ; ಅತಿರೇಕವಾದ ವೈಯಕ್ತಿಕತೆ, ವೈಶ್ವಾನರತ್ವದ ನಿರಾಕರಣೆ-ಒಟ್ಟಿಗೆ negation.

ಈ ನಕಾರಾರಾಧನೆಯಲ್ಲಿರುವ ಆಕರ್ಷಣೆಗಳು ಸ್ವಯಂವೇದ್ಯವಾಗಿವೆ. ಆದ್ದರಿಂದ, ಅವುಗಳಿಗೆ ಅನುಯಾಯಿಗಳು ಜಗತ್ತಿನ ಎಲ್ಲ ದೇಶಗಳಲ್ಲಿ ದೊರೆತರು; ಈಗಲೂ ದೊರೆಯುತ್ತಾರೆ. ಆದರೆ, ಪ್ರಜ್ಞೆಯ ಪ್ರತಿಷ್ಠೆ ಬಲವಾದದ್ದೇ ನಮ್ಮ ದೇಶದಲ್ಲಿ. ವೇದಗಳಿಗಿದ್ದ ಪ್ರತಿಷ್ಠೆ ಇದಕ್ಕೆ ಉದಾಹರಣೆ. ಆದ್ದರಿಂದ ವಿರುದ್ಧಮತಗಳು ಕೂಡ ತಮ್ಮ ನಿಲುವನ್ನು ಗಟ್ಟಿಮಾಡಿಕೊಳ್ಳಲು ತಾವೂ ವೇದಮತದ ಬಾಹ್ಯವೇಷವನ್ನು ಧರಿಸುವ ತಂತ್ರವನ್ನು ಅನುಸರಿಸಿದವು. ದಿವಾ-ಸಮಯ (ಪ್ರಜ್ಞೆಯ ಆರಾಧಕ) ಮತ್ತು ರಾತ್ರಿಸಮಯ (ಪ್ರಜ್ಞೆಯ ನಿರಾಕರಣ) ಗಳಲ್ಲಿನ ಘರ್ಷಣೆ ಮತ್ತು ಕೊನೆಗೆ ಒಂದು ಥರದ ರಾಜಿ ಎಲ್ಲ ದೇಶಗಳಲ್ಲಿ ನಡೆದುವೇ ಅದರೂ ಭಾರತದಲ್ಲಿ ಬೇರೆಲ್ಲ ಕಡೆಗಳಿಗಿಂತ ಹೆಚ್ಚಾಗಿ ಈ ಸೋಗಿನ ತಂತ್ರ ಗೆದ್ದುದನ್ನು ಕಾಣಬಹುದೆಂದು ಶಂ. ಬಾ. ಹೇಳುತ್ತಾರೆ. ಸೂರ್ಯನೇ ಚಂದ್ರ, ನೀರಲ್ಲಿ ಅಡಗಿದ ಅಗ್ನಿ-ಸೂರ್ಯನೇ ಹಾವು ಇತ್ಯಾದಿ ಕಲ್ಪನೆಗಳಿಂದ ಪ್ರಜ್ಞೆಯ ಪ್ರತಿಷ್ಠೆಯನ್ನು ತದ್ವಿರುದ್ಧ ಸಮಯದವರು ಉಪಯೋಗಿಸಿಕೊಂಡಿದ್ದಾರೆ. ಕೆಲವರು ಭಾವಿಸಿದಂತೆ ಇದು ಪುರಾಣ ಕಾಲದ ಅಥವಾ ಆನಂತರದ ಕೈವಾಡವಾಗಿರದೆ ವೇದಗಳಲ್ಲಿಯೇ ಅನೇಕ ಋಷಿಗಳಿಂದ ಅಥವಾ ಅವರ ಹೆಸರಿನಲ್ಲಿ ನಡೆದ ವ್ಯಾಪಾರವೆಂದು ಶಂ. ಬಾ. ಅವರು ಅನೇಕ ವೇದಮಂತ್ರಗಳ ಮತ್ತು ನಮ್ಮ ಧಾರ್ಮಿಕ ದೈವತವಾಚಿ ಪದಗಳ ಇತಿಹಾಸ ಮತ್ತು ದಿವ್ಯಕಥೆಗಳ ಅರ್ಥ ವಿಶ್ಲೇಷಣೆಯಿಂದ ತೋರಿಸಿಕೊಡಲು ಯತ್ನಿಸಿದ್ದಾರೆ.

ಪ್ರಸ್ತುತ ಪುಸ್ತಕ ಶಂ. ಬಾ. ಅವರ ದೈವತಪ್ರತಿಮೆ ಮತ್ತು ಪದಗಳ ವಿಶ್ಲೇಷಣೆ ಮತ್ತು ಇತಿಹಾಸ ಪುನಾರಚನೆಯ ಯತ್ನಗಳನ್ನು ಒಂದು ನಿಲುಗಡೆಗೆ ತಂದಿದೆ. ಪ್ರಜ್ಞಾನುಯಾಯಿಯಾದ ಧರ್ಮವನ್ನು ಮನುವಿನ ಧರ್ಮವೆಂದೂ, ಅದನ್ನು ಪ್ರತಿಪಾದಿಸಿದವನು ಪುರಾಣ ಪುರುಷ ವೈವಸ್ವತ (ವಿವಸ್ವಾನ್=ಸೂರ್ಯ) ಮನುವೇ ಎಂದೂ, ಆ ಮನುವನ್ನು ಮುಚ್ಚಿಹಾಕಿ ಚಂದ್ರಾರಾಧಕ ರಾತ್ರಿಸಮಯದ ಅನುಯಾಯಿಗಳು ಸ್ವಾಯಂಭುವ (ಕಾರ್ಯಕಾರಣಭಾವಕ್ಕೆ ಒಳಪಡದ) ಮನುವಿನ ಸೃಷ್ಟಿ ಮಾಡಿದರೆಂದೂ ಹಿಂದಿನ ಪುಸ್ತಕದಲ್ಲಿ ಡಾ. ಜೋಶಿಯವರು ವಾದಿಸಿದ್ದರು. ಈ ಪುಸ್ತಕದಲ್ಲಿ ಅವರು ಇದೇ ವಿಷಯವನ್ನು ಮುಂದುವರಿಸಿ ಪ್ರಜ್ಞೆ ಮತ್ತು ಬುದ್ಧಿ ಇವುಗಳ ಅಂತರವನ್ನು ವಿವೇಚಿಸಿದ್ದಾರೆ ಮನುಷ್ಯನಲ್ಲಿ ಪ್ರಜ್ಞೆಯ ಉದಯ ಮುಂಚಿನದು ಮತ್ತು ಅದೇ ಅವನನ್ನು ನರತ್ವದಿಂದ ಮನುಷ್ಯತ್ವಕ್ಕೆ ಎತ್ತಿದ್ದು; ಅದೇ ಹೆಚ್ಚು ಮೂಲಭೂತವಾದದ್ದು. ಬುದ್ಧಿ (ಬುದ್ಧಿ = reason, intelligence) ಅನಂತರದ್ದು; ಮೂಲಭೂತವಾದುದಲ್ಲ ಎಂದು ಗ್ರೀಕ್ ಮತ್ತು ಭಾರತೀಯ ಪರಂಪರೆಗಳ ಮತ್ತು ಪ್ರತಿಮೆಗಳ ತುಲನಾತ್ಮಕ ವಿಶ್ಲೇಷಣೆಯಿಂದ ಪ್ರತಿಪಾದಿಸಿದ್ದಾರೆ. ಈ ತೀರ್ಮಾನದ ತಾತ್ವಿಕ ಪರಿಣಾಮಗಳನ್ನೂ ಅವರು ಚರ್ಚಿಸಿದ್ದಾರೆ.

ನಮ್ಮ ಪರಂಪರೆಯ ಬಹುಭಾಗವನ್ನು ನಿರಾಕರಿಸಿ, ಖಂಡಿಸಿ, ಶಂ. ಬಾ. ಅವರು ಶ್ರದ್ಧಾವಂತರನ್ನು ಎದುರು ಹಾಕಿಕೊಂಡಿದ್ದರೂ ಅವರು ನಾಸ್ತಿಕರಲ್ಲ. ಅವರ ಆಸ್ತಿಕತ್ವದ ಕೇಂದ್ರಾಂಶವೆಂದರೆ ನರತ್ವದಿಂದ ಮಾನವತ್ವಕ್ಕೇರಿದ ಈ ದ್ವಿಪಾತ್ ಜೀವಿಯ ಭವಿತವ್ಯ. ಮಾನವತ್ವದಲ್ಲೇ ಆತ ಮುಂದುವರಿಯಬೇಕೆಂಬುದು ಅವರ ಕಳಕಳಿ. ದೈವತ ಪ್ರತಿಮೆಗಳೂ ಪುರಾಣ ಕಲ್ಪನೆಗಳೂ ಧಾರ್ಮಿಕ ಪದಗಳೂ ಎಲ್ಲಿಂದಲೋ ಹೇಗೋ

ಸ್ವಯಂಭೂವಾಗಿ ಉದಿಸುವವುಗಳಲ್ಲ. ಅವು ಆತನ ಆದರ್ಶಗಳ ರೂಪಕೋಕ್ತಿಗಳಾಗಿದ್ದು ಮನುಷ್ಯನ ಆತ್ಮದಲ್ಲಿ ಗಹನವಾದ ಪ್ರಭಾವ ಹೊಂದಿದವಾಗಿವೆ. ಈ ಪ್ರತಿಮೆಗಳು ಬದಲಾದರೆ ಸಂಗಡವೇ ಗಾಢವಾದ ಆಂತರಿಕ ಬದಲಾವಣೆಗಳು ಸಂಸ್ಕೃತಿಯಲ್ಲಿ ಗೋಚರವಾಗುತ್ತವೆ. ಅವು ಮನುಷ್ಯನ ಭವಿಷ್ಯದ ದಾರಿಯನ್ನು ಬದಲಿಸುತ್ತವೆ. ಅವನು-ವಿಶೇಷವಾಗಿ ಭಾರತೀಯ ಮಾನವನು-ಪ್ರಜ್ಞೆಯ ಆದಿಮದಾರಿಯನ್ನು ತೊರೆದು ರಾತ್ರಿ, ಚಂದ್ರ, ಕೃಷ್ಣ, ನಾಗ ಇತ್ಯಾದಿ ಪ್ರತಿಮೆಗಳಿಂದ ಪ್ರತೀಯಮಾನವಾದ ಅಂಧಕಾರದ ನರತ್ವಮಾರ್ಗಕ್ಕೆ ಜಾರಿದ್ದು ಅವನ ಅಧೋಗತಿಗೆ ಕಾರಣವೆಂದು ನಂಬುವ ಶಂ. ಬಾ. ಅವರು ಪ್ರಜ್ಞೆಯ ಪುನಃ ಪ್ರತಿಷ್ಠೆಯಾಗಬೇಕೆಂದು ಬಯಸುತ್ತಾರೆ.

ಡಾ|| ಶಂ. ಬಾ. ಜೋಶಿಯವರ ಕೆಲವು ಆಸ್ತಿಕ ವಿಚಾರಗಳು ಎತ್ತಿ ಹೇಳಬೇಕಾದವು ಅನಿಸುತ್ತದೆ. ಅವರು ಮನುಷ್ಯನ ಇತಿಹಾಸ ಆ-ಕಾರವೆನಿಸುವ ಪ್ರಜ್ಞೆ ಲೋಕೋತ್ತರವಾದದ್ದೆಂದು ಭಾವಿಸುತ್ತಾರೆ. ಆದ್ದರಿಂದ, ಮಾನವನ ಮಾನವತ್ವವನ್ನು ದೈವೀಸಂಕಲ್ಪ ಅಥವಾ ವಿಶ್ವಸಂಕಲ್ಪವೆಂದು ಬಗೆಯುತ್ತಾರೆ. ಅನೇಕ ಧಾರ್ಮಿಕ ಪುರುಷರಂತೆ ಅವರೂ ರಾತ್ರಿಯನ್ನು ಹಗಲು ಮಾಡಿ ತೋರಿಸಬಲ್ಲ ಬುದ್ಧಿಯನ್ನು ಮೂಲಭೂತದ್ದೆಂದು ನಂಬುವುದಿಲ್ಲ. ಪ್ರಜ್ಞೆಯನ್ನು-ವೈಶ್ವಾನರತ್ವವನ್ನು ಗಮನಿಸದ, ಅತಿ ವೈಯಕ್ತಿಕತೆ ಗಂಡಾಂತರಕಾರಕವೆಂದು ಅವರು ಭಾವಿಸುವುದರಿಂದ ಇಂದಿನ ಪಾಶ್ಚಾತ್ಯ ನಾಗರಿಕತೆಯ ಬಹುಪಾಲು ವರ್ತನೆ ಅವರನ್ನು ಕೆರಳಿಸುತ್ತದೆ. ಆದರು, ವಿಶ್ವಸಂಕಲ್ಪವೆಂದು ಕರೆಯಬಹುದಾದ ಮಾನವನ ಭವಿತವ್ಯತೆಯ ಬಗೆಗೆ ಅವರ ವಿಶ್ವಾಸ ಬಲವಾಗಿರುವುದರಿಂದ ಮಾನವ ತನ್ನನ್ನು ತಿದ್ದಿಕೊಳ್ಳಬಲ್ಲ ತಿದ್ದಿಕೊಳ್ಳುತ್ತಾನೆ ಎಂದೂ ಅವರು ನಂಬುತ್ತಾರೆ.

ನಾನು ಕಂಡಂತೆ ಇದು ಶಂ. ಬಾ. ನಿಲುಮೆ. ಈ ತಾತ್ವಿಕ ತೀರ್ಮಾನಗಳಿಗೆ ಬರಲು ಅವರು ಅನುಸರಿಸಿದ ಪದ, ದೈವತಪ್ರತಿಮೆ, ಧಾರ್ಮಿಕ ಸಂಕೇತ, ಪುರಾಣ ಕಥೆ ಮುಂತಾದವುಗಳ ವಿಶ್ಲೇಷಣ ವಿಧಾನ ಮತ್ತು ತಮ್ಮ ನಿಗಮನಗಳ ಪರಿಣಾಮಗಳ ಬಗ್ಗೆ ಅವರಿಗಿರುವ ರಕ್ತಿ (Commitment) ಇವುಗಳಿಂದಾಗಿ ಅವರು ಅಗತ್ಯಕ್ಕಿಂತ ಹೆಚ್ಚು ವಿವಾದಾಸ್ಪದ ವ್ಯಕ್ತಿಯಾಗಿದ್ದಾರೆ. ಅವರು ಅನುಸರಿಸಿರುವ ಸಂಶೋಧನ ವಿಧಾನವೂ ವಿಷಯವೂ ಈ ದೇಶದಲ್ಲಂತು ತೀರ ಹೊಸದಾಗಿರುವುದರಿಂದ ಅದು ಕೆಲವರಿಗೆ ಕಗ್ಗಂಟು; ಮಧ್ಯಪ್ರಾಚ್ಯ ಮತ್ತು ಪಾಶ್ಚಾತ್ಯ ದೇಶಗಳಲ್ಲಿಯ ಹಾಗೆ ಮತಾಂತರಶೀಲ ಧರ್ಮಗಳು ಈ ದೇಶವನ್ನು ಸ್ವಾಹಾಕರಿಸಿ ಹಳೇಪುರಾಣ ಕತೆ ಕಲ್ಪನೆ ಪ್ರತಿಮೆಗಳನ್ನು ಅಳಿಸಿ ಹಾಕದಿರುವುದರಿಂದ ಮತ್ತು ಆ ದೇವತಾದಿಗಳು ಇನ್ನೂ ಜನರಿಗೆ ಆರಾಧ್ಯವಾಗಿರುವುದರಿಂದ ಅವರ ತೀರ್ಪುಗಳು ಹಲವರಿಗೆ ಪಾಷಂಡತನ. ಹೀಗೆ, ಶಂ. ಬಾ. ಅವರ ಬಗ್ಗೆ ತಿಳಿವಳಿಕೆಗಿಂತ ತಪ್ಪು ತಿಳಿವಳಿಕೆಯೇ ಹೆಚ್ಚಾಗಿದೆ.

ಡಾ|| ಶಂ. ಬಾ. ಜೋಶಿಯವರ ದಶಕಗಳ ಪರಿಶ್ರಮಕ್ಕೆ ನಿಜವಾದ ಪ್ರತಿಫಲಕೊಡಬೇಕೆಂದಿದ್ದರೆ ಅವರು ಆರಿಸಿಕೊಂಡ ಸಂಶೋಧನ ರಂಗಗಳಲ್ಲಿ ಹೆಚ್ಚುಜನ ಧೀಮಂತರು ಪ್ರವೇಶಿಸಬೇಕು. ಹಾಗಾದರೆ, ಅವರ ತೀರ್ಪುಗಳು ಯಾವ ತರಹವಾದರೂ ಶಂ. ಬಾ. ಅವರ ಶ್ರಮ ಸಾರ್ಥಕವಾದಂತೆಯೇ.

ಹಾ ವೆಂ. ಆಚಾರ್ಯ

ಪ್ರಸ್ತಾವನೆ

ಡಾ. ಶಂ. ಬಾ. ಜೋಶಿ ಅವರು ಭಾರತೀಯ ಸಂಸ್ಕೃತಿಯಲ್ಲಿಯ ಸತ್ಯಾನ್ವೇಷಣೆಯ ಕಾರ್ಯ ಕೈಕೊಂಡು ಅಪ್ರಿಯ ಸತ್ಯ ಹೊರತೆಗೆಯುತ್ತಿರುವ ಧೀರ ಸಂಶೋಧಕರು. 'ಹಾಲುಮತ ದರ್ಶನ'. (೧೯೬೬)ದ ಪ್ರಕಟನೆಯೊಂದಿಗೆ ಅವರ ಅನ್ವೇಷಣೆ ವೇದ, ಪುರಾಣ, ರಾಮಾಯಣ, ಮಹಾಭಾರತಗಳ ಆಳಕ್ಕಿಳಿದು ಜಿಜ್ಞಾಸುಗಳಿಗೆ ಹೊಸ ಕ್ಷಿತಿಜ ತೋರಿಸಿತು. ಅವರ ಇತ್ತೀಚಿನ ಪ್ರಕಟನೆಗಳಾದ ಪ್ರವಾಹ ಪತಿತರ ಕರ್ಮ: ಹಿಂದೂ ಎಂಬ ಧರ್ಮ' (೧೯೭೬) ಶ್ರೀಮತ್ ಭಗವತ್ ಗೀತೆಯ ಆ-ಶಯ : ರಾಜಯೋಗದ ಗುಹ್ಯಜ್ಞಾನ' (೧೯೭೭) ಗ್ರಂಥಗಳು ಪರಂಪರಾ ಪ್ರಿಯರ ಶ್ರದ್ಧಾಸ್ಥಾನಗಳ ಮೇಲೆ ಬಲವಾದ ಪೆಟ್ಟು ಹಾಕಿದವು. ಕಳೆದ ವರ್ಷ ಪ್ರಕಟವಾದ 'ವೈವಸ್ವತಮನು ಪ್ರಣೀತ ಮಾನವಧರ್ಮದ ಆಕೃತಿ' ಗ್ರಂಥವು ಈ ವರೆಗಿನ ಅವರ ಗ್ರಂಥಗಳೆಲ್ಲದರಲ್ಲಿ ಪ್ರತಿಪಾದಿತವಾದ ಹೊಸ ಹೊಸ ವಿಚಾರಗಳಿಗೆ ಖಚಿತ ರೂಪಕೊಡುವ ಕ್ರಾಂತಿಕಾರಕ ನಿಷ್ಕರ್ಷಗಳನ್ನು ಹೊರಹೊಮ್ಮಿಸಿರುವ ಮಹೋನ್ನತ ಗ್ರಂಥವಾಗಿದೆ. ಸಂಪ್ರದಾಯವಾದಿಗಳಿಗೆ ಸಿಂಹಸ್ವಪ್ನರಾಗಿರುವ ಡಾ. ಶಂ. ಬಾ. ಅವರ ಸತ್ಯಾನ್ವೇಷಣೆಯಿಂದ ಹೊರಬಂದಿರುವ ಹೊಸವಿಚಾರಗಳು ಧಾರ್ಮಿಕ ಅಂಧಾಭಿಮಾನಿಗಳಿಗೆ ನುಂಗಲಾರದ ತುತ್ತುಗಳು.

ಡಾ. ಶಂ. ಬಾ. ಅವರು ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿಯ ಪವಿತ್ರ ಗ್ರಂಥಗಳಲ್ಲಿಯ ಅಂತರ್ ವಿಸಂಗತಿಗಳ ಬಗ್ಗೆ, ಕಣ್ಕಟ್ಟಿನ ಬಗ್ಗೆ ವಿವರಿಸಿ ಹೇಳಿರುವ ಅಂಶಗಳ ಕುರಿತು, ನಿಷ್ಕರ್ಷಗಳ ಕುರಿತು ವಿಮರ್ಶಕರು ಸಹಮತವನ್ನಾದರೂ ಸೂಚಿಸಬೇಕು; ಇಲ್ಲವೆ ಸಾಧಾರವಾಗಿ ಭಿನ್ನಾಭಿಪ್ರಾಯ ವ್ಯಕ್ತಪಡಿಸಿ ಎಡವಿದ ಎಡೆಗಳನ್ನು ಬೆರಳಿಟ್ಟು ತೋರುವುದನ್ನಾದರೂ ಮಾಡಬೇಕು. ಇದು ಆರೋಗ್ಯಕರವಾದ ವಿಮರ್ಶೆಯ ರೀತಿ. ಹೀಗೆ ಮಾಡದೆ, ವೈಯಕ್ತಿಕ ದೋಷಾರೋಪಣೆ, ತೇಜೋವಧೆ ಮಾಡುತ್ತಿರುವುದು ಮಾತ್ರ ವಿಷಾದನೀಯ.

ವೈವಸ್ವತಮನು ಪ್ರಣೀತ ಮಾನವಧರ್ಮದ ಆಕೃತಿ ಗ್ರಂಥದಲ್ಲಿ ಡಾ. ಶಂ ಬಾ. ಜೋಶಿ ಅವರ ಅನ್ವೇಷಣೆಯಿಂದ ಹೊರಬಂದಿರುವ ನಿಷ್ಕರ್ಷಗಳನ್ನು ಸ್ಥೂಲವಾಗಿ ಹೀಗೆ ಸಂಗ್ರಹಿಸಬಹುದು. : ವಾನರ ಹಂತದ ತರುವಾಯವೇ ಮಾನವರ ವಿಕಾಸವಾಯ್ತು ಎಂಬಲ್ಲಿ ಡಾರ್ವಿನ್ ಜಾರಿದ್ದಾನೆ. ವಾನರ ಮತ್ತು ಮಾನವ ಇವೆರಡು ಹಂತಗಳ ನಡುವೆ ಇನ್ನೊಂದು ಘಟ್ಟ ಇರಬೇಕು. ಈ Missing link ಎಂದರೆ ನರ. ಜಾಗತಿಕ ಪಾತಳಿಯ ಮೇಲಣ ಮೋಕ್ಷಕಾಮೀ ನರಸಂಪ್ರದಾಯಗಳು ಆ ಮೂಲ ಪರಂಪರೆಯ ಉತ್ತರಾಧಿಕಾರಿಗಳಾಗಿವೆ. ವೈವಸ್ವತಮನುವನ್ನು ಪ್ರತಿಭಟಿಸಿ ಸ್ವಯಂಭೂ ಮನು ಸಂಪ್ರದಾಯವು ಎಲ್ಲೆಲ್ಲೂ ಪ್ರಭಾವಶಾಲಿಯಾಗಿ ಇಂದು ಮೆರೆಯುತ್ತಿದೆ. ವೇದ ಸುಳ್ಳನ್ನು ನಂಬಹಚ್ಚಿದೆ. ರಾಮಾಯಣ, ಮಹಾಭಾರತ, ಪುರಾಣಾದಿಗಳು ಅಂತರ್ ವಿಸಂಗತಿಗಳಿಂದ ಕೂಡಿವೆ;

ಮಾನವಧರ್ಮವನ್ನು ನಷ್ಟ ಮಾಡಿ, ಮೋಕ್ಷಕಾಮಿ ನರಧರ್ಮ ಎತ್ತಿಕಟ್ಟಲು ವ್ಯವಸ್ಥಿತ ರೀತಿಯಿಂದ ರಚನೆಗೊಂಡಿವೆ. ಜೀವನ್ಮುಕ್ತಿಯನ್ನು ಪ್ರತಿಪಾದಿಸುವ ಸನ್ಯಾಸಿ-ಸಂತರು ಉನ್ಮಾದಕ್ಕೊಳಗಾಗಿ ಸತ್ಯವನ್ನು ಅರಿಯಲಾರದ ಅಜ್ಞರು; ಇಲ್ಲವೆ ವಂಚಕರು! ಪರಂಪರೆಯ ಕಣ್ಕಟ್ಟನ್ನು ಅರಿಯದೇ ತತ್ತ್ವಜ್ಞಾನ ಪ್ರತಿಪಾದಿಸಿರುವ ರಾಮಕೃಷ್ಣ ಪರಮಹಂಸ, ಅರವಿಂದ, ಟಿಳಕ್, ಗಾಂಧೀ, ರಾಧಾಕೃಷ್ಣನ್ ಮೊದಲಾದವರೆಲ್ಲ ಮರುಳರು; ಅರಿತೂ ಪ್ರತಿಪಾದಿಸಿದ್ದರೆ ಮೋಸಗಾರರು. ಭಾರತೀಯರು ಧರ್ಮಗ್ರಂಥಗಳ ಸಮ್ಮೋಹನಕ್ಕೆ ಒಳಗಾಗಿದ್ದಾರೆ ; ಅವರ ತಲೆ ತಿರುಗಿ ಹೋಗಿದೆ! (Brain wash ಆಗಿದೆ!) ಅಂದರೆ, ಭಾರತದಲ್ಲಿ ಸಾಂಸ್ಕೃತಿಕ ತಿರುವುಮುರುವು ಉಂಟಾಗಿದೆ; ಸಾಂಸ್ಕೃತಿಕ ಪಲ್ಲಟವಾಗಿದೆ. ಈ ಸಾಂಸ್ಕೃತಿಕ ಪಲ್ಲಟವೇ ಭಾರತೀಯರ ಅವನತಿಗೆ ಕಾರಣವಾಗಿದೆ.

ಭಾರತೀಯರು ತಮ್ಮ ಮೂಲ ಪರಂಪರೆಯನ್ನು ಅರಿತು, ಅದನ್ನು ಆಚರಣೆಯಲ್ಲಿ ತಂದಾಗ ಮಾತ್ರ ಅವರ ಉದ್ಧಾರ ಸಾಧ್ಯ. 'ವೈವಸ್ವತಮನು ಪ್ರಣೀತ ಮಾನವಧರ್ಮ' ಇದು ಭಾರತೀಯರ ಧಾರ್ಮಿಕ ಪರಂಪರೆಯ ಮೂಲಹೆಸರು. ಪ್ರಪಂಚದಲ್ಲಿ ಧರ್ಮ ಅನ್ನುವುದಿದ್ದರೆ, ಅದು ಮಾನವಧರ್ಮ ಒಂದೇ. ಮಾನವಧರ್ಮಿ ಅಲ್ಲದವನು ನರಧರ್ಮಿ ಆಗಲೇಬೇಕು. ಇವು 'ವೈವಸ್ವತಮನು ಪ್ರಣೀತ ಮಾನವಧರ್ಮದ ಆಕೃತಿ'ಯಲ್ಲಿಯ ಅತ್ಯಂತ ಮಹತ್ತ್ವದ ನಿಷ್ಕರ್ಷಗಳು. ಈ ನಿಷ್ಕರ್ಷಗಳಿಗೆ ಪೂರಕವಾಗಿ ಡಾ. ಶಂ. ಬಾ. ಅವರು ಭಾರತೀಯ ಪವಿತ್ರ ಗ್ರಂಥಗಳಲ್ಲಿಯ ಅಂತರ್-ವಿಸಂಗತಿಗಳನ್ನು ಎತ್ತಿ ತೋರಿಸಿದ್ದಾರೆ. ಜಾಗತಿಕ ತತ್ತ್ವಜ್ಞಾನ ಪಂರಪರೆಯಲ್ಲಿಯ ಸಾಮ್ಯಸ್ಥಾನಗಳನ್ನು ಹುಡುಕಿ ತೆಗೆದು ತಮ್ಮ ಅಭಿಪ್ರಾಯಗಳನ್ನು ಪ್ರತಿಪಾದಿಸಿದ್ದಾರೆ. ಆಧುನಿಕ ಜ್ಞಾನಶಾಖೆಗಳಾದ ಜೈವಿಕಶಾಸ್ತ್ರ, ಮನಶ್ಶಾಸ್ತ್ರ, ದೈವಾಧ್ಯಾತ್ಮ ಸಂಕೇತ ವಿವೇಚನಾಶಾಸ್ತ್ರ, ಭಾಷಾಶಾಸ್ತ್ರ, ಸಾಹಿತ್ಯ ವಿಮರ್ಶೆ, ತತ್ತ್ವಶಾಸ್ತ್ರ, ಮಾನವಶಾಸ್ತ್ರ ಇತ್ಯಾದಿಗಳಿಂದ ತಮ್ಮ ಪ್ರತಿಪಾದನೆಗೆ ಪೋಷಣೆ ಪಡೆದಿದ್ದಾರೆ.

ವಿಮರ್ಶಕರು ಡಾ. ಶಂ. ಬಾ. ಅವರ.... ಮಾನವಧರ್ಮದ ಆಕೃತಿ ವಿಮರ್ಶೆ ಮಾಡುವಾಗ ಮೇಲೆ ಹೇಳಲಾಗಿರುವ ಅವರ ನಿಷ್ಕರ್ಷಗಳ ಕುರಿತು ತಮ್ಮ ಸಮ್ಮತಿ ಇಲ್ಲವೆ ಅಸಮ್ಮತಿ ವ್ಯಕ್ತಪಡಿಸಿ ವಿಮರ್ಶಿಸದೇ, ಅಲ್ಲಿಯ ಮಹತ್ತ್ವದ ಅಂಶಗಳನ್ನೆಲ್ಲ ಅಲಕ್ಷಿಸಿ, ಕೇವಲ ದೋಷಾರೋಪಣೆ ಮಾಡುತ್ತ ಹೋಗಿರುವುದು ಶೋಚನೀಯ ಲೇಖಕರ ನಿಷ್ಕರ್ಷಗಳು ವಿಮರ್ಶಕರಿಗೆ ದೋಷಪೂರ್ಣವಾಗಿ ಕಂಡರೆ, ಇಂಥ ನಿಷ್ಕರ್ಷ ಈ ಕಾರಣಗಳಿಗಾಗಿ ಸರಿಯಲ್ಲವೆಂದು ವಿವರಿಸಿ, ಸತ್ಯಾನ್ವೇಷಣೆಯ ಕಾರ್ಯದಲ್ಲಿ ನೆರವಾಗುವ ಶ್ರಮ ತೆಗೆದುಕೊಳ್ಳದೆ. "... ಇದು ವರೆಗ ಯಾವ ವಿಖ್ಯಾತ ವಿದ್ವಾಂಸರೂ ಪೂರ್ಣವಾಗಿ ಒಪ್ಪದ ಅನೇಕ ವಿಸಂಗತಿಗಳತ್ತ ಈ ಲೇಖಕರು ತಮ್ಮ ಸ್ವೋಪಜ್ಞ ವ್ಯಾಖ್ಯೆಗಳನ್ನು ನೀಡುತ್ತ ಸಾಗುತ್ತಾರೆ, -'ನಡೆದುದೇ ಮಾರ್ಗಂ, ಪದವಿಟ್ಟುದೇ ಭಂಗಿ'" ಎಂಬುದಾಗಿ ಡಾ. ಕೆ. ಕೃಷ್ಣಮೂರ್ತಿಯವರು ವಿಡಂಬಿಸಿದ್ದಾರೆ.

ಭಾರತೀಯರು ತಲೆಯ ಮೇಲೆ ಇಟ್ಟುಕೊಂಡು ಕಣ್ಣು ಮುಚ್ಚಿಕೊಂಡಿರುವ ಪವಿತ್ರ ಗ್ರಂಥಗಳು ಹೇಗೆ ವೈವಸ್ವತಸತ್ಯವನ್ನು ಬುದ್ಧಿಪೂರ್ವಕವಾಗಿ ಮರೆಮಾಚಿವೆಯೆಂಬುದನ್ನು ಉದಾಹರಣೆಗಳೊಂದಿಗೆ ಡಾ. ಶಂ. ಬಾ. ಅವರು ಪ್ರತಿಪಾದಿಸಿ ವ್ಯಾಸ, ವಾಲ್ಮೀಕಿ, ವಶಿಷ್ಠಾದಿಗಳೆಲ್ಲ ಹೇಗೆ ಧೂರ್ತರು ಮತ್ತು ವಂಚಕರೆಂಬುದನ್ನು ಸಾಧಾರವಾಗಿ ಪ್ರತಿಪಾದಿಸಿದ್ದಾರೆ. ಹೀಗಿದ್ದರೂ "... ವ್ಯಾಸ, ವಾಲ್ಮೀಕಿ, ವಶಿಷ್ಠಾದಿಗಳೆಲ್ಲ ಭಂಡರು, ಧೂರ್ತರು ಮತ್ತು ವಂಚಕರು ಎಂಬುದು ಇವರ ದೃಷ್ಟಿಗೆ ಸ್ವತಃಸಿದ್ಧ" ಎಂದು ಹೇಳಿ, ಲೇಖಕರ ನಿಷ್ಕರ್ಷ ನಿರಾಧಾರವೆಂದು ಸೂಚಿಸಲು ಹವಣಿಸಿರುವುದು ವಿದ್ವಾಂಸರಾದ ವಿಮರ್ಶಕರಿಗೆ ಶೋಭಿಸುವುದಿಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ. ಸತ್ಯಾನ್ವೇಷಣೆಯಲ್ಲಿ ತೊಡಗಿದಾಗ ನಮ್ಮ ನಂಬಿಕೆಗಳಿಗೆ, ಸಂಪ್ರದಾಯಗಳಿಗೆ ವಿರುದ್ಧವಾದ ನಿಷ್ಕರ್ಷಗಳು ಹೊರ ಬಂದರೆ ಅಂಥವುಗಳನ್ನು ಸ್ವಾಗಿತಿಸುವ ಮನೋವೈಶಾಲ್ಯ ವಿದ್ವಾಂಸರೆನ್ನಸಿಕೊಂಡವರಲ್ಲಿ ಅತ್ಯಗತ್ಯವಾಗಿರಬೇಕೆಂದು ಸೂಚಿಸಬೇಕಾಗುತ್ತದೆ.

ಪ್ರೊ. ಕೆ. ಎಸ್ ನಾರಾಯಣಾಚಾರ್ಯರು ಬರೆದ ವಿಮರ್ಶೆಯು ಪೂರ್ವಗ್ರಹ ಪೀಡಿತವಾಗಿದ್ದು. ಅದು ಕೃತಿ ವಿಮರ್ಶೆಯಾಗಿರದೆ ವೈಯಕ್ತಿಕ ದೋಷಾರೋಪಣೆಯಾಗಿದೆ. ಡಾ. ಶಂ. ಬಾ. ಜೋಶಿಯವರ ನಿಷ್ಕರ್ಷಗಳೊಂದರ

ಬಗ್ಗೆಯೂ ಪರಿಶೀಲಿಸದೇ, ಒರೆಗೆ ಹಚ್ಚದೆ ಕೇವಲ ವೈಯಕ್ತಿಕ ತೇಜೋವಧೆ ಮಾಡುವ ಕಾರ್ಯವನ್ನು ಮಾತ್ರ ಮಾಡಲಾಗಿದೆ. ಇದೆಲ್ಲಕ್ಕೂ ಕಳಸವಿಡುವಂತೆ "...ಇಂಥ ಪ್ರಸ್ತಕಗಳನ್ನು ಬರೆದು ಮುದ್ರಿಸುತ್ತಾ ಹೋಗುವುದರಿಂದ ಕಾಲದ್ರವ್ಯಗಳ ಅಪವ್ಯಯವೇ ಆಗುವ ಸಂಭವ ಇದೆಯೆಂದು ವಿಧಿಯಿಲ್ಲದೆ ಹೇಳಬೇಕಾಗಿದೆ" ಎಂದು ಅಪ್ಪಣೆ ಕೊಡುವ ಧೈರ್ಯ ಮಾಡಿದ್ದಾರೆ. ಇದು ವಿಮರ್ಶೆಯ ರೀತಿಯೆ? ಪಾಜ್ಞರು ಯೋಚಿಸಬೇಕು. ಪ್ರೊ. ಕೆ. ಎಸ್. ನಾರಾಯಣಾಚಾರ್ಯರ ವಿಮರ್ಶೆಯು ಸಾಂಪ್ರದಾಯಿಕ ನಂಬುಗೆಗಳ ಮೇಲೆ, ಶ್ರದ್ಧಾಸ್ಥಾನಗಳ ಮೇಲೆ ಬಿದ್ದ ಪೊಡೆತಗಳ ಆಘಾತ ತಾಳಲಾರದೆ ಮಾಡಿರುವ ಆಕ್ರೋಶ ಮಾತ್ರವಾಗಿದೆಯೆಂಬಲ್ಲಿ ಸಂಶಯವಿಲ್ಲ.

ಡಾ. ಶಂ. ಬಾ. ಜೋಶಿ ಅವರು ಕಣ್ಣು ಕುಕ್ಕಿಸುವ ಹೊಸವಿಚಾರಗಳನ್ನು ಪ್ರತಿಪಾದಿಸುತ್ತಲಿರುವುದರಿಂದ ಕರ್ನಾಟಕದ ಅಸಾಮಾನ್ಯ ಸಂಶೋಧಕರೆಂಬ ಅವರ ಸ್ಥಾನವನ್ನು ಅಲುಗಿಸುವುದು ಪರಂಪರಾಪ್ರಿಯರಿಗೆ ಸಾಧ್ಯವಾಗಿಲ್ಲ. ಪ್ರಾಸಂಗಿಕವಾಗಿ ಅವರ ಹಿರಿಮೆಯನ್ನು ಒಪ್ಪಿಕೊಳ್ಳಲೇಬೇಕಾದ ಅನಿವಾರ್ಯತೆ ಕೆಲವರನ್ನು ಕಾಡಿದೆ. ಅಂಥ ಪ್ರಸಂಗಗಳಲ್ಲಿ ತಮ್ಮ ಪೂರ್ವೋಕ್ತ ಮಾತುಗಳಿಗೆ ವ್ಯತಿರಕ್ತವಾದ ಮಾತುಗಳನ್ನು ಅನಂತರ ಬರೆದಿರುವುದರಿಂದ ವಿರೋಧಾಭಾಸ ವ್ಯಕ್ತವಾಗಿರುವುದೂ ಉಂಟು.

ಪ್ರೊ. ಎಸ್. ಕೆ. ರಾಮಚಂದ್ರರಾವ್ ಅವರು

> "Dr. Joshi's writings cannot be classed as models of scientific dissertions. The arguments frequently lose their main thread, meander into realms of fictive fancy and revel in emotional excursions. Quite frequently pursuit after the etymological possibilities becomes a sport for him, and he cannot be taken seriously.

ಎಂಬುದಾಗಿ ಡಾ. ಶಂ. ಬಾ. ಅವರ ಸಾಧನೆಯನ್ನು ಸ್ಪಷ್ಟ ಮಾತುಗಳಲ್ಲಿ ಖಂಡಿಸುತ್ತಾರೆ. ಕೂಡಲೇ ಅಪರಾಧಿ ಪ್ರಜ್ಞೆ (guilty consciousness) ಜಾಗೃತಗೊಂಡವರಂತೆ

> "But it cannot be denied that he has some essential insights, and that his books contain material that can sustain several research projects. He has shaken the complacent foundations of customary research with regard to his dimensions of culture, particularly of the Kannad country. And he has gathered a wealth of relevant data which can be utilised fruitfully in subsequent research programmes.

ಇಲ್ಲಿಯ ವಿರೋಧಾಭಾಸಯುಕ್ತ ಹೇಳಿಕೆಗಳು ಲೇಖಕರಿಗೆ ಡಾ. ಶಂ. ಬಾ. ಜೋಶಿಯವರ ವಿಚಾರಗಳು ನುಂಗಲು ಸಾಧ್ಯವಾಗದ, ಉಗುಳಲು ಮನಸ್ಸೊಪ್ಪದ ಬಿಸಿತುಪ್ಪದಂತಾಗಿವೆಯೆಂದು ಯಾರಿಗಾದರೂ ಅನಿಸುತ್ತದೆ.

> '...' he cannot be taken seriously' ಎಂಬುದಾಗಿ ಹೇಳಿ, ತಕ್ಷಣವೇ
> '...he has some essential insights, and that his books contain material that can sustain several research projects'

ಎಂದು ಹೇಳಿರುವುದಲ್ಲದೇ ಇವರೊಬ್ಬ ಅತ್ಯಂತ ಉನ್ನತ ವ್ಯಕ್ತಿತ್ವದ ಗೊಮ್ಮಟನಂತೆ ಇದ್ದಾರೆಂಬ ಅರ್ಥದಲ್ಲಿ "He is in more ways than one a class by himself, colossus." ಎಂಬುದಾಗಿಯೂ ಹೇಳುತ್ತಾರೆ. ಈ ರೀತಿಯ ಬರವಣಿಗೆಯು ಖಚಿತವಾಗಿಯೂ ಓದುಗರನ್ನು ತಪ್ಪು ದಾರಿಗೆಳೆಯುವ ಚತುರತನವೆನ್ನದೆ ಗತಿಯಿಲ್ಲ.

ಹೀಗೆ ಅಡ್ಡಗೋಡೆಯ ಮೇಲೆ ದೀಪವಿಡುವ ಕಾರ್ಯಮಾಡದೆ, ಡಾ. ಶಂ. ಬಾ. ಜೋಶಿ ಅವರ ಗ್ರಂಥಗಳಲ್ಲಿ ಸತ್ವಕಂಡರೆ ಇದೆಯೆಂದು ಹೇಳಬೇಕು. ಅಂದರೆ, ಅವರ ವ್ಯಕ್ತಿತ್ವದ ನೆಲೆ-ಬೆಲೆ ಗುರುತಿಸಿಕೊಳ್ಳಲು ಓದುಗರಿಗೆ ಸಹಾಯವಾಗುವುದು.

ವಿದ್ವಾಂಸರೆನ್ನಿಸಿಕೊಳ್ಳುವವರು ಡಾ. ಶಂ. ಬಾ. ಜೋಶಿ ಅವರ ಬಗೆಗೆ ಪೂರ್ವಗ್ರಹ ಪೀಡಿತರಾಗಿರುವುದಕ್ಕೆ, ಒಂದೆಡೆ ಹೊಗಳಿದಂತೆ ಮಾಡಿ ಇನ್ನೊಂದೆಡೆಗೆ ಅಳತೆ ಮೀರಿ ತೆಗಳುವುದಕ್ಕೆ, ಅವರ ಪರಂಪರೆಯಲ್ಲಿಯ ಲೋಪದೋಷಗಳನ್ನು ನಿಷ್ಠುರವಾಗಿ ಬಯಲಿಗೆಳೆಯುವುದೇ ಕಾರಣವಾಗಿರಬಹುದು. ಆದರೆ, ಮುಕ್ತಮನಸ್ಸಿನಿಂದ, ವಸ್ತುನಿಷ್ಠ ದೃಷ್ಟಿಯಿಂದ ಡಾ. ಶಂ. ಬಾ. ಜೋಶಿ ಅವರ ಗ್ರಂಥಗಳನ್ನು ಓದಿದರೆ ಅವರ ವಿಚಕ್ಷಣ ವಿವೇಚನೆ ಸ್ಪಷ್ಟವಾಗುವುದು.

ರಾಯಬಾಗ

ಪ್ರೊ. ಜ್ಯೋತಿ ಹೊಸೂರ
ಸಂಪಾದಕ

ಪ್ರಕಾಶಕರ ಅರಿಕೆ

ಕನ್ನಡಿಗರೆಲ್ಲ ಕರ್ಮಠರೆ ಆಗಿಲ್ಲ ; ಮುಕ್ತ ವಿಚಾರಧಾರೆಯ ಜಿಜ್ಞಾಸುಗಳು ಡಾ. ಶಂ. ಬಾ. ಜೋಶಿ ಅವರ (ಇನ್ನುಳಿದ ಗ್ರಂಥಗಳಂತೆಯೇ) '...ಮಾನವಧರ್ಮದ ಆಕೃತಿ'ಯನ್ನೂ ಮೆಚ್ಚಿದ್ದಾರೆ; ಹಾರ್ದಿಕವಾಗಿ ಸ್ವಾಗತಿಸಿದ್ದಾರೆ. ಆದ್ದರಿಂದ, ಪ್ರೊ. ಕೆ. ಎಸ್. ನಾರಾಯಣಾಚಾರ್ಯ ಅವರ ಕಟ್ಟಪ್ಪಣೆಯನ್ನು ಕಡೆಗಣಿಸಿ, ಪೂರ್ವಾಗ್ರಹ ಪೀಡಿತರಲ್ಲದ ಪ್ರಜ್ಞಾವಂತ ಕನ್ನಡಿಗರ ವಿವೇಕವನ್ನು ನಂಬಿ ಡಾ. ಶಂ. ಬಾ. ಜೋಶಿಯವರ ಇನ್ನೊಂದು ಗ್ರಂಥವನ್ನು ತಮ್ಮ ಕೈಯಲ್ಲಿಡುತ್ತಲಿದ್ದೇವೆ.

ಈಗ ತಮ್ಮ ಕೈಯಲ್ಲಿರುವ 'ಬುಧನ ಜಾತಕ'ವು ವೈವಸ್ವತಮನು ಪ್ರಣೀತ ಮಾನವಧರ್ಮದ ಆಕೃತಿ ಗ್ರಂಥದ ಪರಿಶಿಷ್ಟವಾಗಿದೆ. ಇವೆರಡೂ ಗ್ರಂಥಗಳನ್ನು ಒಟ್ಟಾಗಿ ಓದಿದರೆ, ಡಾ. ಶಂ. ಬಾ. ಜೋಶಿ ಅವರು ಭಾರತೀಯ ಧರ್ಮ: ಸಂಸ್ಕೃತಿಯ ಪುನರುತ್ಥಾನ ಕಾರ್ಯಕ್ಕೆ ಸಲ್ಲಿಸುತ್ತಿರುವ ಮಹಾನ್ ಸೇವೆಯ ಸ್ಪಷ್ಟಚಿತ್ರ ಗೋಚರಿಸುತ್ತದೆಯಾದ್ದರಿಂದ ಈ ಗ್ರಂಥವು ಅತ್ಯಂತ ಮೌಲಿಕವಾಗಿದೆ. 'ಬುದ್ಧಿ' ಮತ್ತು 'ಪ್ರಜ್ಞೆ' ಇವುಗಳ ನೆಲೆ-ಬೆಲೆ ಗುರುತಿಸಿ, ಮಾನವಇತಿಹಾಸದಲ್ಲಿ ಬುದ್ಧಿಯ ಉಗಮದ ಹಿನ್ನೆಲೆಯನ್ನು-ಬುದ್ಧಿಯ ಉಗಮದ ಸಮಯ ಪರಿಸರವನ್ನು-ಪ್ರಸ್ತುತ ಗ್ರಂಥದಲ್ಲಿ ಲೇಖಕರು ತೋರಿಸಿದ್ದಾರೆ.

ಜಾಗತಿಕ ಸಾಂಸ್ಕೃತಿಕ ಕೇಂದ್ರಗಳಲ್ಲಿಯ ಎಲ್ಲ ಕಾಲದ ವಿದ್ವಾಂಸರ ವಿಚಾರಗಳಲ್ಲಿ ದೊರಕುವ ಸಮಾನ ಅಂಶಗಳ ಆಧಾರಗಳಿಂದ ಅವರು ತಮ್ಮ ಸಂಶೋಧನೆಗೆ ತಾಳಮೇಳವಿರುವುದೆಂಬುದನ್ನು ಪ್ರತಿಪಾದಿಸಿದ್ದಾರೆ. ಜಗತ್ತಿನ ಎಲ್ಲೆಡೆಯಲ್ಲೂ ಬುದ್ಧಿಯ ಪ್ರಾಬಲ್ಯ ಹೆಚ್ಚಿ ಪ್ರಜ್ಞೆಯನ್ನು ಹೊರದಬ್ಬಿರುವದರಿಂದ ಮಾನವತೆಯಿಂದ ನರತ್ವಕ್ಕೆ ಜಗತ್ತು ಬಂದಿದೆಯೆಂಬುದನ್ನು ಲೇಖಕರು ತೋರಿಸಿದ್ದಾರೆ. ಪಾಶ್ಚಾತ್ಯ ಪರಂಪರೆಯಲ್ಲಿ Nous ಮತ್ತು ಭಾರತೀಯ ಪರಂಪರೆಯಲ್ಲಿ 'ಪ್ರಜ್ಞೆ' ಇವುಗಳೆರಡೂ ಒಂದೇ ಎಂಬುದನ್ನು ಸ್ಪಷ್ಟಗೊಳಿಸಿ, ಅವುಗಳಿಗೆ ಮತ್ತೆ ಮೊದಲಸ್ಥಾನ ಕೊಟ್ಟಾಗ ಮಾತ್ರ ಮಾನವತೆಯ ಪುನರುತ್ಥಾನವೆಂಬುದನ್ನು ಸಾರಿದ್ದಾರೆ. ಆದ್ದರಿಂದ ಪ್ರಸ್ತುತ ಕೃತಿ ಜಾಗತಿಕ ವಿಚಾರ ಸಾಹಿತ್ಯಕ್ಕೆ ಕನ್ನಡಿಗರೊಬ್ಬರಿಂದ ಸಂದ ಮಹೋನ್ನತ ಕಾಣಿಕೆಯೆಂದು ಹೇಳಬೇಕಾಗುತ್ತದೆ.

'ಬುಧನ ಜಾತಕ'ವನ್ನು ಶಿಕ್ಷಣತಜ್ಞರು ಕಾಳಜಿಯಿಂದ ಗಮನಿಸಬೇಕಾದ ಅಗತ್ಯವಿದೆಯೆಂದು ಸೂಚಿಸುವುದು ಕರ್ತವ್ಯ ಎನಿಸುತ್ತದೆ. ಇಂದು ಶೈಕ್ಷಣಿಕ ರಂಗದಲ್ಲಿ ಎಲ್ಲೆಡೆ ಅಶಾಂತಿಯಿದೆ. ವಿದ್ಯಾರ್ಥಿಗಳು ಮಾತು ಮಾತಿಗೆ ಪ್ರತಿಭಟನೆ ತೋರಿಸಿ, ಚಳುವಳಿಯ ಹಾದಿ ಹಿಡಿಯುತ್ತಿದ್ದಾರೆ. ಇದೆಲ್ಲದಕ್ಕೂ ನಮ್ಮ ಶಿಕ್ಷಣ ಪದ್ಧತಿಯ ದೋಷವೇ ಕಾರಣವೆಂದು ಎಲ್ಲರೂ ಹೇಳುತ್ತಾರೆ. ಆದರೆ, ಆ ದೋಷ ಎಲ್ಲಿದೆ? ಆ ದೋಷ ಯಾವುದು? ಯಾರೂ ಖಚಿತವಾಗಿ ಹೇಳುತ್ತಿಲ್ಲ. ಡಾ. ಶಂ. ಬಾ. ಜೋಶಿಯವರ 'ಬುಧನ ಜಾತಕ'ದಲ್ಲಿ ಈ ಸಮಸ್ಯೆಗಳಿಗೆ ಉತ್ತರವಿದೆ.

ಇಂದಿನ ಶಿಕ್ಷಣ ಕ್ರಮದಲ್ಲಿ ಕೇವಲ 'ಬುದ್ಧಿ' ಯ ಬೆಳವಣಿಗೆಗೆ ಪ್ರಾಧಾನ್ಯ ಕೊಡಲಾಗಿದೆಯೇ ಹೊರತು 'ಪ್ರಜ್ಞೆ'ಯ ಮತಿಯ ವಿಕಾಸಕ್ಕೆ ಎಳ್ಳಷ್ಟೂ ಅವಕಾಶವಿಲ್ಲ. 'ಪ್ರಜ್ಞೆ'ಯ ವಿಕಾಸಕ್ಕೆ ಪ್ರಮುಖ ಸ್ಥಾನ ಸಿಗುವಂತೆ ಶಿಕ್ಷಣ ಕ್ರಮದಲ್ಲಿ ಮಾರ್ಪಾಡು ಮಾಡಿದರೆ ಶಿಕ್ಷಣ ರಂಗದಲ್ಲಿಯ ಇಂದಿನ ಅಶಾಂತಿ ಕೊನೆಗೊಳ್ಳುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ 'ಬುಧನ ಜಾತಕ'ವು ಶಿಕ್ಷಣ ಕ್ಷೇತಕ್ಕೂ ಕೊಡುಗೆ ನೀಡಬಲ್ಲ ಮಹತ್ವದ ಕೃತಿಯಾಗಿದೆ.

ಕೃತಜ್ಞತೆಗಳು

ಕರ್ನಾಟಕದ ಅಗ್ರಗಣ್ಯ ಚಿಂತಕರಾದ ಡಾ. ಶಂ. ಬಾ. ಜೋಶಿ ಅವರು ಬರೆದ ಗ್ರಂಥಗಳನ್ನು ಪ್ರಕಟಿಸುವುದೊಂದು ಹೆಮ್ಮೆಯ ಕಾರ್ಯ. 'ಬುಧನ ಜಾತಕ'ವನ್ನು ಪ್ರಕಟಿಸಲು ನಮಗೆ ಒಪ್ಪಿಸಿ, ಆ ಹೆಮ್ಮೆ ಕಾಲಗತಿ ಪ್ರಕಾಶನಕ್ಕೆ ದೊರಕುವಂತೆ ಮಾಡಿದ ಸಲುವಾಗಿ ಡಾ. ಶಂ. ಬಾ. ಜೋಶಿ ಅವರಿಗೆ ನಮ್ಮ ಕೃತಜ್ಞತೆಗಳು. ಸುಪ್ರಸಿದ್ಧ ಸಾಹಿತಿಗಳಾದ, ಪತ್ರಿಕಾಕರ್ತರಾದ ಮಾನ್ಯ ಶ್ರೀ ಪಾ. ವೆಂ. ಆಚಾರ್ಯ ಅವರು ಬುಧನ ಜಾತಕ ಅರಿತುಕೊಳ್ಳಲು ಮಾರ್ಗದರ್ಶಕವಾಗುವಂತೆ ಬೆಲೆಯುಳ್ಳ ಮುನ್ನಡಿ ಬರೆದುಕೊಟ್ಟಿದ್ದಾರೆ. ಅವರಿಗೆ ನಾವು ಋಣಿ.

ಶ್ರೀ ಆರ್. ಎನ್. ವಾಳ್ವೇಕರ ಎಂ. ಎ. ಅವರು ಹಸ್ತಪ್ರತಿ ತಯಾರಿಸಲು, ಕರಡಚ್ಚು ತಿದ್ದಲು ಕೆಲಕಾಲ ನೆರವಾಗಿದ್ದಾರೆ. ಶ್ರೀ ಸಂಗಮೇಶ ಹೊಳೇಚಿ ಎಂ.ಎ. ಅವರು ಹಸ್ತಪ್ರತಿ ತಯಾರಿಸಲು, ಕರಡಚ್ಚು ತಿದ್ದಲು ಬಹಳಷ್ಟು ಶ್ರಮಿಸಿದ್ದಾರೆ; ವಿವಿಧ ರೀತಿಯಿಂದ ನೆರವಾಗಿದ್ದಾರೆ. ಇವರಿಬ್ಬರ ಉಪಕಾರವನ್ನು ಸ್ಮರಿಸುವೆವು.

ಮುದ್ರಣ ಕಾರ್ಯ ನೆರವೇರಿಸಿಕೊಟ್ಟ ಶ್ರೀ ಶಾರದಾ ಮುದ್ರಣಾಲಯ, ಧಾರವಾಡ ಇದರ ಒಡೆಯರಾದ ಶ್ರೀ ಸಿ. ಟಿ. ತಡಕೋಡ ಅವರಿಗೂ ಮುದ್ರಣಾಲಯದ ಕೆಲಸಗಾರರಿಗೂ ನಮ್ಮ ವಂದನೆಗಳು.

ರಾಯಬಾಗ
೧೫-೧೨-೧೯೮೦

ಪುಷ್ಪಾ ಹೊಸೂರ
ಪ್ರಕಾಶಕಿ

ಅರಿಕೆ

ವೈವಸ್ವತೋ ಮನುರ್ನಾಮ ಮಾನನೀಯೋ ಮನೀಷಿಣಾಮ್ ।
ಆಸೀತ್ ಕ್ಷಿತೀನಾಂ ಆದ್ಯಃ ಅಗ್ನಿಃ ಜಾತವೇದ ಇವ
(ಕಾಲಿದಾಸ ಕ್ಷಮೆ ಕೋರಿ)

ಸರಳ ರೇಖೆಯ ಪ್ರಜ್ಞೆಇಲ್ಲದೆ, ವಕ್ರದ ಅರ್ಥವು ಆಗಲಾರದು. ಮೂಲ ಬಣ್ಣಗಳ ಬಗೆಗೆ ಖಾತ್ರೀ ಇಲ್ಲದವರಿಗೆ, ಸಂಯುಕ್ತ ಬಣ್ಣದ ನೆಲೆ ತಿಳಿಯಲಾರದು. ಆದಿಕಾರಣದ ಪ್ರಚೋದನೆಯಿಲ್ಲದೆ, ಈ ಧರ್ಮ=ಸಂಸ್ಕೃತಿಯ ಆಕಾರ ಪಡೆಯಲಾರದು. ಆದರೆ "ಮನುಷ್ಯಾಣಾಂ ಬಂಧಮೋಕ್ಷಯೋಃ" 'ಆದಿಕಾರಣ' ಎಂಬ ಹಾಗಿನ ಈ ಮನೋರೂಪೀ ವೈವಸ್ವತ (ಸವಿತೃ) ಮನುವನ್ನೇ ಮರೆಯಿಸಿ ಬಿಡಲಾಗಿದೆ!" ನಾವು ಮರೆತೂ ಬಿಟ್ಟಿದ್ದೇವೆ! ಅಪರಾಧ ಯಾರದು? ಮರೆತವರೇ ಹೆಚ್ಚಿನ ಅಪರಾಧಿಗಳು ತಾನೆ?

ಈ ಮನಃಶಕ್ತಿಯ ಪ್ರೇರಣಾ ಕೇಂದ್ರವಾದ (ಮನು) ವೈವಸ್ಥತ>ವಿವಸ್ವನ್ ಇವನು ಆದಿತ್ಯ ರೂಪಕ್ಕೆ ಮಾರ್ಪಟ್ಟಿದ್ದಾನೆ, ಎಂದು ನಂಬಿಸಲಾಗಿದೆ! ನಮ್ಮವರು ನಂಬಿದ್ದೂ ಆಗಿದೆ! ಈ ಸ್ವಯಂಭೂ ಆದಿತ್ಯ (ಲಿಂಗ) ಶಕ್ತಿಯ ಪ್ರಭಾವದ ಮೂಲಕವಾಗಿ ವಿಶ್ವನಿಯಮದಂತೆ ಉಂಟಾಗಬಲ್ಲ ಅಂತರ್-ಬಾಹ್ಯ ಸೂಕ್ಷ್ಮ ಕತ್ತಲಿನಿಂದಾಗಿ ಈ ಬಾಳಿನಲ್ಲಿ ಅರ್ಥ=ಮೂಲ್ಯಗಳೇ ಇಲ್ಲ, ಎಂಬ ಭ್ರಾಂತಿಗೆ ಇಂಬು ದೊರೆತಿದೆ! ಜೀವಿತದ ಭೂಮಿಕೆಯಿಂದ ಜೀವನದ (ಪ್ರಜ್ಞೆ) ಪಾತಳಿಯು ಅರ್ಥವಿಹೀನವಾಗುತ್ತದೆ. ಇದರಿಂದಾಗಿ ಅಂತರ್ ವಿಸಂಗತ ಪ್ರೇರಣಾದ್ವಂದ್ವವೇ, ಈ ಮನು-ಜರ ಮನಸ್ಸಿನ ಮೂಲ ಸ್ವಭಾವ ಎಂಬ ಗ್ರಹಿಕೆಯು ಇಂದು ಎಲ್ಲೆಲ್ಲೂ ಬೆಳೆದು ನಿಂತಿದೆ. 'Law of contraries' ಲೋಕವನ್ನು ಆಳುತ್ತದೆ ಎಂದು ಪೈಥಾಗೋರಾಸ ಪಂಥವು ನಂಬಿಸಿದೆ. ಹೆಗೆಲ್ಲನೂ ಇದಕ್ಕೆ ಮಾರು ಹೋಗಿದ್ದಾನೆ! ಆದರೆ ಮಹಾಮಾನವ ಐನ್‌ಸ್ಟನ್ ಇವರ ಈ ನಿಷ್ಠೆ, ವೈವಸ್ವತ ಮನು ಸಂಪ್ರದಾಯದ ಮೂಲ ನಿಷ್ಠೆಯನ್ನು ನೆನಪಿಗೆ ತಂದುಕೊಡುತ್ತಿದೆ.

---

* "ಮನಸಿ ಈಕ್ಷಿಣೋ ಮನೀಷಿಣಃ ಧೀರಾ, ವಿದ್ವಾಂಸಾ ಇತಿಯರ್ಾತ್ ಪೃಷೋದರಾದಿತ್ವಾತ್ಸಾಧುಃ
ತೇಷಾಂ ಮಾನಿನೀಯೋ-ಪೂಜ್ಯಃ, ಛಂದಸಾಂ-ವೇದಾನಾಂ, ಛಂದಃ ಪದೇ ಚ ವೇದೇಚೇತಿ ವಿಶ್ವಃ
ಪ್ರಣವಃ-ಓಂಕಾರ ಇವ, ಮಹೀಂಕ್ಷಿಯಂತಿ-ಈಶಂತ ಇತಿ ಮಹೀಕ್ಷಿತಿಃ, ಕ್ಷಿತೀಶ್ವರಾಃ - ತೇಷಾಂ ಆದ್ಯಃ
ಆದಿಭೂತಃ ವಿವಸ್ವತಃ ಸೂರ್ಯಸ್ಯಾಪತ್ಯಂ ಪುಮಾನ್ ವೈವಸ್ವತೋ ನಾಮ ವೈವಸ್ವತ ಇತಿ ಪ್ರಸಿದ್ಧಃ
ಮನುಃ ಆಸೀತ್" ಇದು ಕೋಲಚಲ ಮಲ್ಲಿನಾಥನ ವ್ಯಾಖ್ಯಾ. ಈತ ರಘುವಂಶ ಮಹಾಕಾವ್ಯದ ಮೊದಲ ಸರ್ಗದ ಹನ್ನೆರಡನೆಯ ಶ್ಲೋಕಕ್ಕೆ ಬರೆದ ವ್ಯಾಖ್ಯಾನ. ಪ್ರಾಚೀನ ವ್ಯಾಖ್ಯಾನಕಾರರು ವೈವಸ್ವತನ ಬಗೆಗೆ ತಿಳಿದ ಸೂಕ್ಷ್ಮ ಸಂಗತಿಗಳನ್ನು ಆಸಕ್ತರು ಇದರಿಂದ ತಿಳಿಯಬಹುದು. (ಸಂ)

> "The harmony and consistency of mental constructions is an indication of their objective nature their agreement with objective reality." ಸಮಗ್ರತೆ ಅರಿವು ಅಥವಾ The world is well ordered integrated entity.[1]

ಐನ್‌ಸ್ಟನ್ನರ ಈ ನಿಷ್ಕರ್ಷೆಯೊಳಗಿನ, ಈ ಜೀವನವು "integrated entity" ಇದೆ, ಎಂಬ ಈ ಮಾತು, ತುಂಬ ಮಾರ್ಮಿಕವಿದೆ. ಮಾನವ ಧರ್ಮದಲ್ಲಿ ಆಗಿರುವ ಅಸಾಂಗತ್ಯದ ಮೇಲೆಯೇ ಇಲ್ಲಿ ಬೆರಳಿಟ್ಟಂತಾಗಿದೆ.

ಈ ಬಾಳಿನಲ್ಲಿ ಜಾತವೇದ ಅಗ್ನಿ (ಪ್ರಜ್ಞೆ ಮನು-ಜ) ಮತ್ತು ನ-ಚಿಕೇತ ಅಗ್ನಿ (ಬುದ್ಧಿ=ನಾರ (ಳ) ತ್ವ) ಇವೆರಡರಲ್ಲಿ ಸಾಂಗತ್ಯವಿರಬೇಕು. ಇವು integrated ಇದ್ದರೆ ಈ ಮಾನವ ಜೀವನವು ಒಂದು entity (real existence) ವಾಸ್ತವ : ಸತ್ಯ ಸ್ವರೂಪದ್ದು ಆಗಬಲ್ಲುದು. ಈ ಸಾಂಗತ್ಯವು (integration) ಯಾವ ಬಗೆಯದು ಇರಬಲ್ಲುದು? ಜಾತವೇದನಿಗೆ (ಪ್ರಜ್ಞೆಗೆ-ಮನುಜನಿಗೆ) ನ-ಚಿಕೇತ ಅಗ್ನಿ (ಬುದ್ಧಿ, ಲೈಂಗಿಕ ಪ್ರವೃತ್ತಿ) ಇದು ಅಂಕಿತವಿರಬೇಕೆ? ಅಥವಾ ನಚಿಕೇತಾಗ್ನಿ (ಯೋನಿ-ಲಿಂಗದ=ನಳನ) ಪ್ರಚೋದನೆಗೆ, ಜಾತವೇದನು (ಮನು-ಜನು) ಅಂಕಿತನಿರಬೇಕೆ? ಅಥವಾ ಇದನ್ನು ಇನ್ನೊಂದು ಬಗೆಯಿಂದ ಹೇಳಬಹುದು. (ಭಾವಾತ್ಮಕ, ಅನು-ಭವಾತ್ಮಕ, ಅಭಿಜಾತ ಇದಕ್ಕೆ) ಜೀವಿತ ಅ-ಭಾವಾತ್ಮಕ, (ಅನುಭವಕ್ಕೆ ನಿಲುಕದ= ಕಾಲ್ಪನಿಕ ಕೃತಕ) ಇದು ಅನುಸರಿಸಬೇಕೆ? ಅಥವಾ ಜೀವಿತ (ಅಭಾವಾತ್ಮಕ=ಕತ್ತಲು) ಇದಕ್ಕೆ ಜೀವನ (ಭಾವಾತ್ಮಕ ಪ್ರಕಾಶರೂಪ) ಇದು ಅನುಸರಿಸಬೇಕೆ? ಭಗ-ವತ್ ಗೀತೆಯಲ್ಲಿ ಇದರ ಎರಡನೆಯ ಬಗೆಯು ಚಿತ್ರಿತವಿದೆ! ಕೃಷ್ಣ =ಕತ್ತಲೆ=ಜೀವಿತ (ಆದಿತ್ಯ=ಲಿಂಗರೇತ-ಶಕ್ತಿ) ಎಂಬ ಶಕ್ತಿಯನ್ನು, ಅರ್ಜುನನು=ಪ್ರಕಾಶ ಜೀವನ (ಮನು ವೈವಸ್ವತನು) ಅನುಸರಿಸುತ್ತಿದ್ದಾನೆ!

ಭಾವಾತ್ಮಕ ಜೀವನ ಸಂಗೀತದಲ್ಲಿ ಹುಸಿ ತಾಳ ಸ್ವರೂಪ, ಅಭಾವಾತ್ಮಕ ಜೀವಿತಕ್ಕೂ ಒಂದು ಪರಿಮಿತಿಯಾದ ಸ್ಥಾನ ಉಂಟೇ ಉಂಟು. ಆದರೆ, ಹುಸಿತಾಳ ಸ್ವರೂಪ, ಅಭಾವವೇ ಸ್ಥಾಯಿ ಇರುವ ಕೃಷ್ಣ (ವಿಷ್ಣು, ರುದ್ರ, ಆದಿತ್ಯ, ಗಣಪತಿ=ಬ್ರಹ್ಮಣಸ್ಪತಿ=ಚರಲಿಂಗ) ಶಕ್ತಿಗೇ ಅಗ್ರಪಟ್ಟವು ದೊರೆವಾಗ ಬಾಳಿನಲ್ಲಿ ಭ್ರಷ್ಟಾಚಾರ, ಅನಾಚಾರಾದಿ ಅನಿಷ್ಟ ಪ್ರವೃತ್ತಿಗಳಿಗೆ ಆಮಂತ್ರಣವು ದೊರೆಯದೇ ಇದ್ದರೆ ಸೋಜಿಗ! ರಾತ್ರ್ಯಾಗಮೇ ಪ್ರಲೀಯಂತೇ ಎಂದು ಈ ಭಗವಂತನೇ ಆಡಿದ್ದು ಉಂಟು! ಈ ಕಾರಣದಿಂದಾಗಿ ಗೋರ್ಜಿಯಾಸನು ಹೇಳಿರುವ 'Justifiable deception' (ಮಂಡನವು ಶಕ್ಯವಿರುವ ಹಾಗಿನ ಮೋಸ ತರುವ) ಗ್ರಂಥಗಳಲ್ಲಿ ಜಾಗತಿಕ ಮಟ್ಟದಲ್ಲಿಯೇ ಗೀತೆಗೆ ಅನನ್ಯ ಸ್ಥಾನವು ಇದೆ.

ಈ ಸಾಂಸ್ಕೃತಿಕ ಸತ್ಯಾನ್ವೇಷಣೆಯೊಳಗಿನ ಎರಡನೆಯ ಘಟ್ಟವು ಇಲ್ಲಿ ಪ್ರಾರಂಭವಾಗುತ್ತದೆ. ಹಾಲುಮತದರ್ಶನದಿಂದ ತೊಡಗಿ ೧೯೬೦, ಪ್ರವಾಹ ಪತಿತರ ಕರ್ಮ 'ಹಿಂದೂ' ಎಂಬ ಧರ್ಮ ಕಣ್ಣಳತೆಯಲ್ಲಿ ಬರುವ ವರೆಗಿನ ಅವಧಿಯಲ್ಲಿ ೧೯೭೫, ನರ (ಳ) ಸಂಪ್ರದಾಯದ ಆಪ; ರಸ : ರೇತತತ್ವದ ಭೂಮಿಕೆಯಿಂದ ಪ್ರಚೋದಿತ ನಾನಾ ದೈವತಗಳ ಶಿಲ್ಪದ ರಹಸ್ಯವನ್ನು ಗ್ರಹಿಸಿಕೊಳ್ಳುವ ಪ್ರಯತ್ನಕ್ಕೆ ಪ್ರಾಶಸ್ತ್ಯವಿತ್ತು. ಹಿಂದೂ ಎಂಬ ಹೆಸರಿನ ಹಿಂದೆ ಅಡಗಿ ಕಣ್ಣುತಪ್ಪಿಸಿಕೊಳ್ಳುತ್ತಿದ್ದ ಸ್ವಯಂ-ಭೂ ಮನು ಮೊಗವಾಡದ ನರ(ಳ) ಸಂಪ್ರದಾಯವು, ಬೆಂಗಳೂರು ವಿಶ್ವವಿದ್ಯಾಲಯದ ಉಪನ್ಯಾಸದ ಸಂದರ್ಭದಿಂದ ಬಯಲಿಗೆ ಬಂತು! ಈ ಸ್ವಯಂಭುವು ವೈವಸ್ವತನನ್ನು ಮೆಟ್ಟಿ ನಿಲ್ಲಲು ಮಾಡಿರುವ ಮಂತ್ರ, ತಂತ್ರ, ಮಾಟ-ಮೋಸ ಅರಿಕೆಗೆ ಬಂತು! ನಿಜವಾದ ಮನುವು ಎಂದರೆ ಇವನು ವಿವಸ್ವನ್>ವೈವಸ್ವತನೇ ಸರಿ ಎಂಬುದು ಖಚಿತವಾಯ್ತು! ಆದರೆ, ಈ ವೈವಸ್ವತ ಮನು>ಮಾನವಧರ್ಮದ ಸಾಂಸ್ಕೃತಿಕ ಕಟ್ಟಡ ಆಕೃತಿಯು ಗಮನಕ್ಕೆ ಬಾರದಾಗಿತ್ತು. ಈ ಅನ್ವೇಷಣೆಯಲ್ಲಿ ನಿಜವಾದ ಧರ್ಮ ಎಂಬುದು ವಿಶ್ವನಿಯಮಕ್ಕೆ ಸುಸಂಗತವೇ ಇರಬಲ್ಲುದು. ಇದು ವಿಶ್ವನಿಯಮದ ಆಧಾರದ ಮೇಲೆ ನಿಂತಿದೆ ಎಂಬುದು ಸ್ಪಷ್ಟತೆಯನ್ನು ಪಡೆಯತೊಡಗಿ, ವೈವಸ್ವತ ಮನುಪ್ರಣೀತ ಮಾನವಧರ್ಮದ ಆಕೃತಿಯನ್ನು ಬರೆಯುವುದು ಶಕ್ಯವಾಯಿತು ೧೯೭೯. ಇಂದಿನ ಸ್ವಯಂಭೂ ನರ(ಳ) ಸಂಪ್ರದಾಯಗಳು ಮನುಜತ್ವವು ಲಭಿಸುವುದಕ್ಕೂ ಮುಂಚಿನ ಹಂತದ

ಅಸು ಪೂಜಕ ಅಸುರವರ್ಗದ ಪುರಾತನರು ರೂಢಿಸಿರುವ ಆತ್ಮಲಿಂಗೋಪಾಸಕ ಪಂಥಗಳ ಉತ್ತರಾಧಿಕಾರಿ ಆಗಿವೆ, ಇದರಲ್ಲಿ ಎಳ್ಳನಿತೂ ಸಂದೇಹವಿಲ್ಲ. ಏಕೆಂದರೆ - ಡಾರ್ವಿನ್ನನನ್ನು ಆಕ್ಷೇಪಿಸಿದ ವ್ಯಾಲ್ಲಾಸನು ಸೂಚಿಸಿರುವ ಲಕ್ಷಣಗಳು, ಈ ಸಂಪ್ರದಾಯದ ನಡೆವಳಿ ನುಡಿವಳಿಯಲ್ಲಿ ಎದ್ದು ಕಾಣುತ್ತಿವೆ. ಪ್ರಾಣದೇವರು ಎಂಬ ಹೆಸರಿನಲ್ಲಿ ವಾನರನನ್ನು ಪೂಜಿಸುವಲ್ಲಿ Nostalgia (ಪೂರ್ವ ಸ್ವಭಾವವು) ಎದ್ದು ಕಾಣುತ್ತಿದೆ. ಮನಸ್ಸಿನ ಪ್ರಾದುರ್ಭಾವಕ್ಕೂ ಮುಂಚಿನ ಹಂತವು ಇದು ಮತ್ತು ಮಾನವ ಭಾಷೆಗೂ ಮುಂಚಿನ ಅವಸ್ಥೆಯು ಇಲ್ಲಿ ಇರಬೇಕು. ಇವೆರಡೇ ಅಂಶಗಳನ್ನು ಲೆಕ್ಕಿಸಿದರೂ ಸಾಕು ಈ ನರ(ಳ) ಸಂಪ್ರದಾಯಗಳು, ಪಾಶ್ಚಾತ್ಯ, ತಜ್ಞರು ಹೇಳುವ Cultural missing link ಆಗಿರುವುದನ್ನು ಮನಗಾಣಬಹುದಾಗಿದೆ.

ಪ್ರಜ್ಞೆಯ ಅಂಗವಾದ ಮನಸ್ಸನ್ನು ಶೂನ್ಯಗೊಳಿಸಿ, ಚಿದ್ವಿಲಾಸದ ತಾತ್ವಿಕ ಭೂಮಿಕೆಯನ್ನು, ಈ ಸಂಪ್ರದಾಯಗಳು ಸ್ವೀಕರಿಸಿವೆ. ಚಿತ್‌ಶಕ್ತಿಯ ಉಪಾಸಕ ಶೋಪೆನ್ ಹೌರ್ ಪ್ರಪಂಚವನ್ನು The World as Will and Idea (1818) ಯಾವ ದೃಷ್ಟಿಯಿಂದ ಕಾಣುತ್ತಿದ್ದನು ಎಂಬುದಕ್ಕೆ ಆತನ ಈ ಗ್ರಂಥವೇ ಸಾಕ್ಷಿ. ಚಿತ್‌ಶಕ್ತಿಯಲ್ಲಿ ನಿಷ್ಠೆಯಿದ್ದ ಶೋಪೆನ್‌ಹೌರ್‌ನಿಗೆ ಉಪನಿಷತ್ತುಗಳನ್ನೋದಿ ಪರಮಾನಂದವಾಯಿತು ಎಂಬುದು ಸುವಿಖ್ಯಾತವಿದೆ. ಇಲ್ಲಿ ಈ ಮಾತು ಯಾತಕ್ಕೆ ಎಂದರೆ, ಚಿತ್ತದ ಉಪಾಸನೆಗೆ ಪ್ರೇರಿಸುವ ನಮ್ಮ ವೇದ ಉಪನಿಷತ್ತುಗಳು, ಸರ್ವೋಪನಿಷತ್ತುಗಳ ಸಾರವೆಂಬ ಗೀತೆ ಇತ್ಯಾದಿಗಳು ಭಾರತೀಯ ಪೂರ್ವಪರಂಪರೆಯೊಳಗೆ ವೈವಸ್ವತ ಮನು ಸಂಪ್ರದಾಯವು ಹಿಮ್ಮೆಟ್ಟಲು ಕಾರಣವು ಏನು ಎಂಬುದನ್ನು ನಿದರ್ಶನಕ್ಕೆ ತರುವ ಪ್ರಮಾಣಗಳಾಗಿವೆ.

ನರ(ಳ) ಸಂಪ್ರದಾಯಗಳು ಪ್ರಜ್ಞೆ-ಮನಸ್ಸು ಇದನ್ನು ಬೆಲೆಗೇಡಾಗಿಸಿವೆ. ವ್ಯಾಲ್ಲಾಸನು ಹೇಳಿದಂತೆ ನರಸಂಪ್ರದಾಯ missing link ಇದು ಮನಸ್ಸಿನ ಪ್ರಾದುರ್ಭಾವಕ್ಕೂ ಮುಂಚಿನ ಹಂತದ ಸೂಚಕವೇ ಆಗಿದೆ. ವ್ಯಾಲ್ಲಾಸ ಹೇಳಿರುವ ಇನ್ನೊಂದು ಲಕ್ಷಣ, ಮಾನವ ಭಾಷಾಪೂರ್ವ ಹಂತವೇ ಇದು. ಈ ಅಂಶವನ್ನು ಇದಕ್ಕೂ ಮುಂಚಿನ ಪ್ರಕಟನೆಗಳಲ್ಲಿ ಸ್ಪಷ್ಟೀಕರಿಸಿದ್ದಾಗಿದೆ. ಪ್ರಜ್ಞೆಯ ಜಾಗೃತವಿರುವಾಗಿನ ಭಾಷೆಯ ಬಗೆಗೆ, ಈ ದಿವ್ಯಾಧ್ಯಾತ್ಮಗಳಲ್ಲಿ ಅಸಡ್ಡೆ>ಅಶ್ರದ್ಧೆ ಇದೆ! ಮೈಯಲ್ಲಿ ಆವೇಶವಾಗಿ ಹೊರಹೊಮ್ಮುವ ಮಾತು, ಭಾಷೆ ವಿಶ್ವಾಸಾರ್ಹವಂತೆ! ವೇದದ ಅಂಭೃಣೀ ಸೂಕ್ತ ಇದು ಒಬ್ಬ ಷೋಡಶೀ ಕು-ಮಾರಿಯ ಮೈಯಲ್ಲಿ ಆವೇಶವಾದಾಗ ಹೊರಹೊಮ್ಮಿ ಬಂದಿರುವ ಮಂತ್ರಪಾಠ, ಎಂದು ನಂಬಿಸಲಾಗಿದೆ. ಆದರೆ ಮೈಯಲ್ಲಿ ಆವೇಶವಾಗಿ, ಭಾವಾವಿಷ್ಟ ಅವಸ್ಥೆಯಲ್ಲಿ, ರಾಮಕೃಷ್ಣ-ಪರಮಹಂಸರಂತಹರ ಬಾಯಿಂದ ಅಸ್ಫುಟ, ಅಸ್ಪಷ್ಟ ಮಾತು ಹೆಚ್ಚಾದರೆ ಕೆಲ ಶಬ್ದಗಳು ಹೊರ ಬರುತ್ತಿದ್ದವು ಎಂದು ಪ್ರತ್ಯಕ್ಷದರ್ಶಿಗಳು ಬರೆದಿಟ್ಟಿದ್ದಾರೆ. ಮೈಲಾರದೇವರ ಪ್ರತಿ ವಾರ್ಷಿಕ ಕಾರಣಿಕದ ಕಾಲಕ್ಕೆ ಆವೇಶವಾಗಿ ಹೊರಬರುವ ಮಾತುಗಳ ಸಂದಿಗ್ಧತೆಯೂ ಸುವಿಖ್ಯಾತವಿದೆ. ಹೀಗೆ, ಇದು ನಿಜಸ್ಥಿತಿ ಇರುವಾಗ ವೇದದಲ್ಲಿ ಇರುವ ಅಂಭೃಣೀ ಸೂಕ್ತದಂತಹ ಉದ್ದೇಶ ಪೂರ್ವಕವಾಗಿ ರಚಿತ ಕವನವನ್ನು Revelation ಎಂದು ಬಗೆಯಲಾಗುತ್ತಿರುವಲ್ಲಿ ಆತ್ಮವಂಚನೆ, ಪರವಂಚನೆ ಎರಡೂ ದೋಷಗಳಿಗೂ ಅವಕಾಶವು ಉಂಟು.

ಈ ಭಾಷೆಯ ವಾಸ್ತವ ಸ್ವರೂಪವನ್ನು ಬಯಲಿಗೆ ತರಬಲ್ಲ ನಿರ್ದೇಶವು ಒಂದು ಬೃಹದಾರಣ್ಯಕದಲ್ಲಿ ಇದೆ. ಪ್ರಾಣಾಃ ವಾ ಋಷಯಃ! ಪ್ರಾಣ (ಲಿಂಗ) ಶಕ್ತಿಯ ಆವೇಶವು ಋಷಿತ್ವಕ್ಕೆ ಕಾರಣ, ಎಂಬ ಈ ನಂಬುಗೆಯಂತೆ, ಜ್ಞಾನೇಶ್ವರನು, 'ಕೋಣನ ಬಾಯಿಂದ ವೇದನುಡಿಸಿದನು, ಎಂಬ ಪವಾಡವು ವಿಶ್ವಾಸಾರ್ಹ ವಾಗುತ್ತದೆ. ಫಕ್ಕನೆ ಲೊಚಗುಡುವ ಹಲ್ಲಿಗೆ ಆಗಾಮೀ ಸಂಗತಿ ಸೂಚಕ ಅಂತರ್ ಜ್ಞಾನವಿರುತ್ತದೆ ಎಂಬ ನಂಬುಗೆಯೂ ಸಾಧುವಾಗುತ್ತದೆ. ಪ್ರಾಣಾಃ ವಾ ಋಷಯಃ. ಪ್ರಾಣ=ನಚಿಕೇತ ಅಗ್ನಿ ಇದುವೆ ಮನು-ಜರ ಮಾರ್ಗದರ್ಶಕ ತತ್ವ ಆಗುವದರಿಂದ, ಈ ಮಾನವನು ನರ(ಳ)ನ ಹಂತಕ್ಕೆ ಬರುವುದರೊಡನೆ, ಇವನ ಗುಣ-ಸ್ವಭಾವದಲ್ಲಿ, ಅನಿವಾರ್ಯವಾಗಿ ಆಗಲೇಬೇಕಾದ ಸ್ಥಿತ್ಯಂತರಗಳ ಸಮೀಕ್ಷೆಯ ಒಂದು ಅಂಶವು ಈ ಪ್ರಬಂಧದ ವಿಷಯವಾಗಿದೆ. ಭಾರತೀಯ ಸಂಸ್ಕೃತಿಯ ಸಂದರ್ಭದಲ್ಲಿ, ಪಾಶ್ಚಾತ್ಯ ಪರಂಪರೆಯಂತೆ

Reason- Intellect ಎಂಬ ಈ ಅಮೂರ್ತವಿಚಾರಕ್ಕೆ ಪ್ರಾಶಸ್ತ್ಯವು ಪ್ರಾಪ್ತವಾಗಲಿಲ್ಲ! Sovereignty of Reason ಎಂಬ ಪಡೆಮಾತು ಪಾಶ್ಚಾತ್ಯರಲ್ಲಿ ಶಿಷ್ಟ ಮಾನ್ಯವಾಗುತ್ತದೆ. ಆದರೆ, ಭಾರತೀಯ ಪೂರ್ವಪರಂಪರೆಯಲ್ಲಿ ಬುದ್ಧಿ= ಮೇಧಾಶಕ್ತಿಯನ್ನು ಪ್ರತಿನಿಧಿಸುವ ನಾನಾ ಆಕಾರ ರೂಪದ ದೈವತಗಳು, ಕಾಲಕಾಲಕ್ಕೆ ಪ್ರಚಾರಕ್ಕೆ ಬಂದಿವೆ. 'ಋಗ್ವೇದಸ್ಥ ಎರಡು ವಾಕ್ ಸ್ವರೂಪದ ವಿಚಾರವು ೧೯೭೦ಕ್ಕೂ ಮೊದಲಲ್ಲೆ ನನ್ನ ಗಮನ ಸೆಳೆದಿತ್ತು. ಅಂದು ವಾಕ್ ಮತ್ತು ಗೀರ್ವಾಣ-ವಾಣಿ ಇವೆರಡರೊಳಗಿನ ಅಂತರವು ಹೊಳೆದಿರಲಿಲ್ಲ. ಆದರೆ, ಶ್ರೀಮತಿ ಭಾರತೀಯವರ ಅಭಿನಂದನ ಗ್ರಂಥಕ್ಕೆ (೧೯೭೧)ರಲ್ಲಿ ಸವಿತೃವನ್ನು ಕುರಿತೇ ಬರೆದದ್ದಾಯ್ತು.

ಸವಿತೃವೂ, ವೈವಸ್ವತನಂತೆ ಆದಿತ್ಯನಾಗಿ ಮಾರ್ಪಟ್ಟದ್ದು ಕಂಡಾಗ, ಈ ಆದಿತ್ಯ - ಅದಿತಿ - (ಲಿಂಗ-ಯೋನಿ) ಸಂಪ್ರದಾಯದ ಬೇರುಗಳನ್ನು ಕಂಡು ಹಿಡಿಯುವ ಮನೀಷೆ ತೀವ್ರವಾಯ್ತು! ಬಳಿಕ 'ನಾಗಪ್ರತಿಮಾ' ವಿಚಾರವು ಅನ್ವೇಷಣೆಯ ವಿಷಯವಾಯ್ತು. ಈ ನಾಗ (ಉಭಯಲಿಂಗೀ ಲಿಂಗ) ಶಕ್ತಿಯೇ ಬುದ್ಧಿ ದೇವರು ಎಂದು ಪೂಜೆಗೊಳ್ಳುತ್ತಿರುವಲ್ಲಿ ಎರಡು ಸಂಗತಿಗಳ ಸ್ಪಷ್ಟೀಕರಣವು ದೊರೆಯುತ್ತದೆ. ಪ್ರಜ್ಞಾ: ಮತಿ = ಮನು ವೈವಸ್ವತನನ್ನು ಪೂರ್ಣ ಮರೆತದ್ದು. ಭಾರತೀಯರು ಸ್ಥಿತಪ್ರಜ್ಞರು = ಸ್ಥಗಿತ ಪ್ರಜ್ಞರಾದುದಕ್ಕೆ ಬುದ್ಧಿಶಕ್ತಿಯನ್ನು ಪ್ರತಿನಿಧಿಸುತ್ತಿರುವ ದೈವತಗಳೇ ಸಾಕ್ಷಿ.

ಅ) ಅಶ್ವ-ತ್ಥ = ಪುರುಷ ಪುರೀ-ಶಯ(ನ) ಗುಹೆಯ ಈಶರೂಪ-ವೃಕ್ಷದ ಉಪಾಸನೆ, ಬ್ರಾಹ್ಮಣ-ಬ್ರುವರು ವರ್ಗದಲ್ಲಿ! 'ಸೂರ್ಯ ನಮಸ್ಕಾರ'ದ ಧ್ಯಾನಮಂತ್ರ, ಅಶ್ವತ್ಥ ಪೂಜೆ-ಸಮೀಕ್ಷಿಸಿರಿ. ಬೌದ್ಧರ ಬೋಧಿವೃಕ್ಷ ಪೂಜೆ, ಕ್ರೈಸ್ತ-ಹಿಬ್ರುಗಳಲ್ಲಿ ಜ್ಞಾನವೃಕ್ಷದ ಫಲತಿಂದ ಕಥೆ! ಇವು ಮನನೀಯವಾಗಿವೆ.

ಆ) ಮರುತ>ಮಾರುತಿ ಜ್ಞಾನಮೂರ್ತಿ ವ್ಯಾಕರಣಕಾರ, ಇತ್ಯಾದಿ ಗ್ರಹಿಕೆ! ವೇದದಲ್ಲಿ ಅಹಿ-ಭಾನವಃ ಎಂದು ಈ ಮರುತರು ವರ್ಣಿತರಾಗಿದ್ದಾರೆ. ಕೇನೋಪ್ಲ ನಿಷತ್ತಿನಲ್ಲಿ ಜ್ಞಾನದೇವಿ ಯಕ್ಷಿ=ಉಮಾ ಹೈಮವತಿ ವೇದದ ಸರಸ್ವತೀ, ಭಾರತೀ, ಅಂಭೃಣಿಯರ ಮಿಂಡರೆಂಬ ಬೃಂಹಲ್ಲಾಂಗಲ ರುದ್ರೀಯ-ಮರುತರು; ಇವರು ಬುದ್ಧಿದೇವಿಯ ಗಂಡರಲ್ಲವೆ?

ಇ) ರುದ್ರಿಯ ಗಣ(ದ)ಪತಿ, ದ್ವಿಜಿಹ್ವನೇ ಎಂಬುದನ್ನು ಸೂಚಿಸುವ, ವಿಘ್ನಹರ್ತ ಮತ್ತು ವಿಘ್ನಕರ್ತ ಎಂಬ ಅಂತರ್ ವಿಸಂಗತ ವಿಶೇಷಣಗಳೇ ಸಾಕ್ಷಿ. ಗಣಪತಿಯಲ್ಲಿ ಉಚ್ಛಿಷ್ಟ ಗಣಪತಿ ಎಂಬ ಸಿದ್ಧಿದಾಯಕ ದೈವತ ಪ್ರತಿಮಾ ವಿವರಣೆಯು ಟಿ. ಗೋಪಿನಾಥರಾಯರ ಮೂರ್ತಿಶಾಸ್ತ್ರದಲ್ಲಿ ಇದೆ. ಅದು ಅಶ್ಲೀಲವೆನಿಸದೇ ಇರದು. ಆದಕಾರಣ ವರ್ಣನೆ ಬೇಡ.

ಈ) ಗಣ-ಪತಿಯ ಸ್ವರೂಪ ಗೊತ್ತಾಗಲು, ಸ್ಕಂದ ಇವನ ಅಣ್ಣನ ನಿಜ ಸ್ವರೂಪವನ್ನು ಅರಿಯಬೇಕು. ಛಾಂದೋಗ್ಯದಲ್ಲಿ ಸನತ್‌ಕುಮಾರ ಎಂಬ ಡಾ. ರಾಧಾಕೃಷ್ಣರು ಹೇಳಿರುವ ಜ್ಞಾನಮೂರ್ತಿ ಅಲೌಕಿಕ ಗುರುಮೂರ್ತಿ. ಈತನಲ್ಲಿಗೆ ನಾರದ ನಾರ=ನೀರು ಬೇಡಿದವರಿಗೆ ದಾನಮಾಡುವ ಪರೋಪಕಾರೀ ಹುಟ್ಟುಗುಣದ ಬಂದಿದ್ದಾನೆ!

ಇನ್ನು ಈ ವಿವರ ಬೆಳೆಸುವ ಆವಶ್ಯಕತೆಯು ಕಾಣದು ಬುದ್ಧಿಗೆ ಪ್ರೇರಿಸುವ ಶಕ್ತಿ ತತ್ತ್ವ ರೇತು=ಶುಕ್ರ ಇದೇ ಅಲ್ಲವೆ? ಪಾಣಿನಿಯ ಕಾಲದಲ್ಲಿ 'ಆದಿತ್ಯ ವ್ರತ'ವು ಪ್ರಚಲಿತವಿತ್ತೆಂದು ಬಯಲಿಗೆ ಬಂದಿದೆ. ಆದಿತ್ಯನು=ಆಪೋ ಜ್ಯೋತಿ ಸ್ವರೂಪನು. ಸೂರ್ಯನಾರಾಯಣ ಎಂಬಲ್ಲಿ ಈ ಜ್ಞಾನಸೂರ್ಯನು ನಾರ-ಅಯನ = ಲಿಂಗ ರೇತದ ಹೊಂಡ ಸೂರ್ಯ ಆಗಿಲ್ಲವೆ? ಸೂರ್ಯನಾರಾಯಣೋಪಾಸಕರಾದ ಇಂಥ ಮೇಧಾವಿಗಳ ಸಂತಾನ ಸಂಖ್ಯೆ ಹೆಚ್ಚುತ್ತಲೇ

ಹೊರಟಿರುವಲ್ಲಿ ಅಂತಃಸಂಗತಿಯಿದೆ. ಸೂರ್ಯನಾರಾಯಣ ಎಂದರೂ ಜ್ಞಾತಾಜ್ಞಾತವಾಗಿ ಸೂರ್ಯ (ವೈವಸ್ವತ, ಸವಿತೃ) ದೇವನ ಪ್ರಭಾವದ ಅಂಶ ಎಂತೋ ಉಳಿದು ಜಾಗತಿಕ ಮಟ್ಟದಲ್ಲಿ ಭಾರತೀಯ ತರುಣರು ಪ್ರತಿಭಾಶಾಲಿಗಳೂ, ನವ ನವೋನ್ಮೇಷಶಾಲಿಗಳು ಇದ್ದದ್ದು ಆಗೀಗ ಕೇಳ ಬರುತ್ತದೆ.

ಈ ಉಪಾಸನೆಯ ಇನ್ನೊಂದು ಪರಿಣಾಮ ಎಂದರೆ, ಗ್ರೀಕ್ ಸಂಸ್ಕೃತಿಯ ಅಧಃಪಾತದ ಬಗೆಗೆ ಗಿಲ್ಬರ್ಟ್ ಮರ್‍ರೆ ಹೇಳಿರುವ ಮಾತು Failure of Nerves! ಬುದ್ಧಿ, ಪ್ರಜ್ಞೆಗಿಂತ ಭಿನ್ನ ವೈಯಕ್ತಿಕ ದೃಷ್ಟಿಕೋನವನ್ನು ಪ್ರಚೋದಿಸುವ ಶಕ್ತಿ. ಆದಕಾರಣ, ಸಮಾಜದಲ್ಲಿ ಎಷ್ಟು ಮೇಧಾವೀ ಬುದ್ಧಿವಾದಿಗಳು, ಬುದ್ಧಿಜೀವಿಗಳೋ ಅಷ್ಟು ಅವರವರ ಒಂದೊಂದು ಪಕ್ಷವಾಗುತ್ತದೆ.

ಭಾರತೀಯ ಪೂರ್ವ ಪರಂಪರೆಯಲ್ಲಿ ಪ್ರಜ್ಞಾ ಬುದ್ಧಿ, ಇಂತಹ ಮಹತ್ವದ ಪಾರಿಭಾಷಿಕ ಪದಗಳ ಸ್ಪಷ್ಟೀಕರಣವು, ಎಂತೋ ಉಳಿದು ಬಂದಿರುವ ಸೋಜಿಗವನ್ನು ಕಾಣಬಹುದು. ಕಾಶ್ಮೀರದ ವಿಖ್ಯಾತ ಪಂಡಿತ ಅಭಿನವಗುಪ್ತನು ಭಟ್ಟತೌತನಿಂದ ಎತ್ತಿ ಹೇಳಿರುವ ಶ್ಲೋಕವು ಇದು

ಸ್ಮೃತಿಃ ವ್ಯತೀತ ವಿಷಯಾ, ಮತಿಃ ಆಗಾಮಿ ಗೋಚರಾ !
ಬುದ್ಧಿಃ ತಾತ್ಕಾಲಿಕೀ ಜ್ಞೇಯಾ, ಪ್ರಜ್ಞಾ ತ್ರೈಕಾಲಿಕೀ ಮತಾ
ಪ್ರಜ್ಞಾಂ ನವನವೋನ್ಮೇಷ ಶಾಲಿನೀಂ ಪ್ರತಿಭಾಂ ವಿದುಃ

ಈ ಶ್ಲೋಕದಲ್ಲಿ ಸ್ಮೃತಿಃ, ಮತಿಃ, ಮನಃ ಶಕ್ತಿಯ ಮೂಲ ಸಾಮರ್ಥ್ಯ ಮತ್ತು ಬುದ್ಧಿ ಈ ಪದಗಳಲ್ಲಿ ಅಭಿಪ್ರೇತವಿರುವ ಪರಂಪರಾಗತ ಆಶಯದ ಸೂಚನೆಯು ಇಲ್ಲಿ ಇದೆ. ಸ್ಮೃತಿಯೊಡನೆ ತತ್ಪೂರ್ವದಲ್ಲಿ ಸಂಭವಿಸಿದ ಆಗು-ಹೋಗುಗಳ ವಿಷಯದ ಆಧಾರಭೂತ ಸಮಯವು ಅರಿಕೆಗೆ ಬರುತ್ತದೆ. ಗ್ರೀಕ್ ಪುರಾತನರಲ್ಲಿ ಅನ್ಯಾಕ್ಸಾಗೋರಾಸನು Nous-mind = ಪ್ರಜ್ಞೆ ಮನಃಶಕ್ತಿ ಇದರ ಹಿರಿಮೆಯನ್ನು ನಿಃಸಂದಿಗ್ಧ ರೀತಿಯಲ್ಲಿ ಹೇಳಿದ್ದಾನೆ.

mind mixed with nothing; finest purest of all things it possesses
complete knowledge of things and the greatest strength[೩]

ಭಾರತೀಯರ ಪೂರ್ವಪರಂಪರೆಯಲ್ಲಿಯೂ 'ವೈವಸ್ವತ ಮನು'ವಿನ ಮೂಲಕ ದೊರೆವ ಪ್ರೇರಣೆಯ ಸಾಮರ್ಥ್ಯವು ಅನ್ಯಾಕ್ಸಾಗೋರಾಸನ ವರ್ಣನೆಯನ್ನು ಹೋಲುತ್ತದೆ. ವೈಚಾರಿಕ ಆಕೃತಿಗಳು ಸನಾತನ ಇವೆ, ಎಂಬ ಸಂಗತಿಯು ಇಲ್ಲಿ ದೃಢಪಡುತ್ತಿದೆ. ಮನ್>ಮನ, ಮನು, ಮತಿ, ಬುದ್ಧಿ, ಪ್ರಜ್ಞೆ ಇವುಗಳ ಆಶಯದ ಆಕೃತಿಯು ಸಾರ್ವಕಾಲಿಕವಿದ್ದುದನ್ನು ಇಲ್ಲಿ ಮನಗಾಣಬಹುದು. ವಿಶೇಷವಾಗಿ ಬುದ್ಧಿಯ ಇತಿಮಿತಿಗಳನ್ನು ಕುರಿತು ಈ ಅನ್ವೇಷಣೆಯಲ್ಲಿ ಅನಿವಾರ್ಯವಾಗುತ್ತಿರುವ ನಿಷ್ಕರ್ಷಕ್ಕೆ ಬರ್ಗಸನ್, ಆಧುನಿಕ ಸಂಶೋಧಕನ ಬೆಂಬಲವು ದೊರೆಯುತ್ತಿರುವಂತೆ, ಭಾರತೀಯ ಪೂರ್ವಪರಂಪರೆಯೊಳಗಿನ ವ್ಯಾಖ್ಯೆಯಿಂದಲೂ ಪುಷ್ಟಿ ದೊರೆಯುತ್ತಿದೆ.

ಬುದ್ಧಿಃ ತಾತ್ಕಾಲಿಕೀ ಜ್ಞೇಯಾ

ತುರ್ತು ಪರಿಸ್ಥಿತಿ. ಇಕ್ಕಟ್ಟಿನ ಸನ್ನಿವೇಶದೊಳಗಿಂದ ಹೊರಬೀಳಲು ನೆರವಾಗುವ situational logic ಇದು ಬುದ್ಧಿ ಎನಿಸುತ್ತ ಬಂದಿದೆ.

ಪಾಶ್ಚಾತ್ಯ ಪಂರಪರೆಯಲ್ಲಿ Reason Intelligence ಇದಕ್ಕೆ ಅಗ್ರಪಟ್ಟವು ದೊರೆತು ಅಲ್ಲಿಯ ಸಾಮಾಜಿಕ, ಸಾಂಸ್ಕೃತಿಕ ಜೀವನ ರೀತಿಯ ಮೇಲೆ ಆಗಿರುವ ಪರಿಣಾಮಗಳ ಸಮೀಕ್ಷೆಯ ಮೂಲಕ ಮಾನವೇತಿಹಾಸಕ್ಕೆ ದೊರೆತ ಹೊಸತಿರುವಿನ ಇಷ್ಟಾನಿಷ್ಟ ಸ್ವರೂಪವು ಬೆಳಕಿನಲ್ಲಿ ಬರಬಹುದಾಗಿದೆ. ಗ್ರೀಕ್, ರೋಮನ್ ಪೂರ್ವ

---

* ಈ ಅಪೂರ್ವ ಶ್ಲೋಕವನ್ನು ಒದಗಿಸಿ ಕೊಟ್ಟವರು ಡಾ. ಕೆ. ಕೃಷ್ಣಮೂರ್ತಿ ಅವರು. ಆಕಸ್ಮಿಕ ಭೆಟ್ಟಿಯ ಸಂದರ್ಭದಲ್ಲಿ, ನಾನು ಬರೆಯುತ್ತಿರುವ ಈ ಪ್ರಬಂಧದ ಪರಿಚಯ ಮಾಡಿಕೊಟ್ಟೆ. ಆಗ ಉತ್‌ಸ್ಫೂರ್ತಿಯಿಂದ ಈ ಶ್ಲೋಕ ಎತ್ತಿಹೇಳಿ ನನ್ನ ವ್ಯಾಸಂಗಕ್ಕೆ ನೆರವಾದುದ್ದಕ್ಕಾಗಿ ನಾನು ಅವರಿಗೆ ಕೃತಜ್ಞ.

ಪರಂಪರೆಯೇ ಆಧುನಿಕ ಪಾಶ್ಚಾತ್ಯ ಸಂಸ್ಕೃತಿ ಪ್ರೇರಣಾ ಸ್ಥಾನವಾಗಿದೆ. ಈ ಪರಂಪರೆಯ ಸಮಗ್ರ ಸಮೀಕ್ಷೆಯ ಅರ್ಹತೆ ನನಗೆ ಏನೂ ಇಲ್ಲ. ಆದರೂ ಸ್ಥೂಲ, ಎದ್ದುಕಾಣುವ ಕೇಂದ್ರಸ್ಥ ಕೆಲವು ಸಂಗತಿಗಳ ತೌಲನಿಕ ವಿಮರ್ಶೆಯು, ನನ್ನ ಪ್ರಬಂಧದ ಸಂದರ್ಭದಿಂದ ಅನಿವಾರ್ಯವಾಗುತ್ತಿದೆ. ಬರ್ಟ್ರಾಂಡ್ ರಸೆಲ್ಲ ಪ್ರಭೃತಿ ಬುದ್ಧಿವಾದೀ ದೃಷ್ಟಿಕೋನದ ತಜ್ಞರು ಹೇಳುವಂತೆ Reason ಇದುವೇ ದೃಷ್ಟಿಕೋನವಾಗುವಾಗ, ಈ ಬಾಳಿನಲ್ಲಿ ನೈತಿಕ ವಿಚಾರಗಳಿಗೆ, ಜೀವನ ಮೂಲ್ಯಗಳಿಗೆ ನಿಜವಾಗಿ ಸ್ಥಾನವೇ ಇಲ್ಲ. ಆದರು, ಕಾಂಟ್‌ಮಹಾಶಯನಿಗೆ Noumena-phenomena = ಜೀವನದ ಪಾತಳಿ ಜೀವಿತದ ಪಾತಳಿಯು ಭಿನ್ನವಿದ್ದದ್ದು ಅರಿಕೆಗೆ ಬಂತು. ಇದರ ಶ್ರೇಯಃ ಬುದ್ಧಿಗೆ ಇಲ್ಲ! ಕರ್ತವ್ಯಪ್ರಜ್ಞೆಯೇ, Categorical imperative ಈ ಸೂತ್ರದ ಪ್ರೇರಣೆ, ಬೌದ್ಧಿಕ ಹಿನ್ನೆಲೆಯದು ಅಲ್ಲ!

ಪಾಶ್ಚಾತ್ಯ ತತ್ತ್ವಜ್ಞಾನವು Nous-mind = ವೈವಸ್ವತ ಮನುವಿನ ಮಾರ್ಗದಿಂದ, ಮನು-ಸಮಯದಿಂದ, ದೂರ, ವಿರುದ್ಧ ದಿಕ್ಕಿಗೆ ಹೊರಟದ್ದು ನಿಶ್ಚಿತವಿದೆ. ಕ್ರೈಸ್ತಪಂಥೀಯರಲ್ಲಿ Nous-mind ತಾತ್ತ್ವಿಕ ಭೂಮಿಕೆಯ ಅರಿಸ್ಟಾಟಲ್‌ನ ಬಗೆಗೆ ಇರುವ ತಿರಸ್ಕಾರ-ದ್ವೇಷದ ಮನೋಭಾವವು ಬಯಲಿಗೆ ಬಂದಿದೆ. ವೈಟಹೆಡ್ ರಂತಹ ಪ್ರಜ್ಞಾವಾದದತ್ತ ಒಲವು ಇರುವ ತತ್ತ್ವಜ್ಞರು ಅರಿಸ್ಟಾಟಲನ 'logic' ಗೆ ಅಳುಕಿದ್ದಾರೆ. ಲೆಬ್ನಿಝು (Leibnitz) ಇವನು, ಅರಿಸ್ಟಾಟಲ್ ಸಂಪ್ರದಾಯವನ್ನು ಎದುರಿಸ ಬಲ್ಲ ಸಾಂಕೇತಿಕ ತರ್ಕಶಾಸ್ತ್ರವನ್ನು ರೂಪಿಸುವ ದಾರಿಯಲ್ಲಿ ಹೊರಟಿದ್ದರೂ, ಅರಿಸ್ಟಾಟಲಿನ ಬಗೆಗಿನ ಗೌರವ, ಪೂಜ್ಯಭಾವದಿಂದಾಗಿ ಆತನು ಅದನ್ನು ಪ್ರಕಟಿಸಲಿಲ್ಲ. ಪಾಶ್ಚಾತ್ಯರಲ್ಲಿ ಒಬ್ಬನ ಪೂರ್ವ ಎಂದರೆ, ಇನ್ನೊಬ್ಬನು ಕೂಡಲೆ ಪಶ್ಚಿಮ ಎಂದು ಎದುರಿಸುವುದು ವಾಡಿಕೆ ಆಗಿದೆ. ಪಾಶ್ಚಾತ್ಯ ಪರಂಪರೆಯಲ್ಲಿ ಪಂಥ, ಪಕ್ಷಾತೀತ, ಸ್ಥಳ-ಕಾಲದ ಆಚೆಗಿನ, ವ್ಯಕ್ತಿನಿರಪೇಕ್ಷ ಸತ್ಯ (Universal) ಎಂಬುದರ ಅಸ್ತಿತ್ವವೇ ಮಾನ್ಯವಿಲ್ಲ. ಇದರಿಂದಾಗಿ ಅಲ್ಲಿ ನಾನಾ ಪ್ರಕಾರದ ತಾರ್ಕಿಕ ತತ್ತ್ವಜ್ಞಾನ ಬೆಳೆದು ಬಂದಿದೆ. ಇದರ ಅರ್ಥ : ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಈ ವಿಭಾಗ ದ್ವಯದ ಸಂದರ್ಭದ ಅಂತರ್ ವಿಸಂಗತ, ಪ್ರೇರಣಾದ್ವಂದ್ವಾತ್ಮಕ ಅಸ್ತಿತ್ವವು (Existence) ಮಾತ್ರ ಮಾನ್ಯವಿದ್ದು, ಅಂತಃಸಂಗತಿಯುಕ್ತ ಭಾವಾತ್ಮಕ, ಅನುಭವಾತ್ಮಕ ಜೀವನದ ಪಾತಳಿಯನ್ನು ಮಾನ್ಯ ಮಾಡಲಾಗುತ್ತಿಲ್ಲ! ಆದರೆ, ಹಿಂದೊಮ್ಮೆ Nous-mind ಭೂಮಿಕೆಯ ದೃಷ್ಟಿಕೋನವಿದ್ದ ಕಾಲದಲ್ಲಿ ಜೀವನದ ಪಾತಳಿಗೆ ಮನ್ನಣೆ ಇದ್ದೇ ಇತ್ತು. ಇರಲೇಬೇಕು, ಎಂಬಲ್ಲಿ ಸಂದೇಹವಿಲ್ಲ.

ಗ್ರೀಕ್ ತತ್ತ್ವಜ್ಞಾನದ ಇತಿಹಾಸಕಾರ ಝೆಲ್ಲರನು ಕಂಡು ಹೇಳುತ್ತಿರುವ ಸಂಗತಿ ಇದು. ಗ್ರೀಕ್‌ಪರಂಪರೆಯ ದೃಷ್ಟಿಕೋನ ವೈಶಿಷ್ಟ್ಯವು ಬದಲು ಆಗುತ್ತದೆ. ಪೈಥಾಗೋರಾಸ ಪಂಥದ ಪ್ರಾಬಲ್ಯದಿಂದಾಗಿ (Greek mode of thought) ವ್ಯತ್ಯಸ್ತವಾಯಿತು. ಸೋಜಿಗದ ಸಂಗತಿಯೆಂದರೆ, ಪೈಥಾಗೋರಾಸ ಪಂಥೀಯ ತಾತ್ತ್ವಿಕ ಭೂಮಿಕೆಯ ಬುದ್ಧಿ (Reason) ಇದು ಕಣ್, ಗಣ್ ಇಧರ ಅಂಗವಾಗಿದೆ. Being ಬಯಲು. namely Reason ಇರುವುದರಿಂದ ಈ ಬುದ್ಧಿಯು, ಪಿಂಡ ಬ್ರಹ್ಮಾಂಡೈಕ್ಯ ಸಿದ್ಧಿಯ ದಿವ್ಯಾಧ್ಯಾತ್ಮವನ್ನು ಪ್ರಚೋದಿಸಿರುವಂತೆ ಈ ಜೀವಿತದ (Being Becoming) ಭೌತ ಸ್ಥಲ-ಕಾಲದ ಸಂದರ್ಭದ ದ್ರವ್ಯದ ಪೃಥಕ್ಕರಣದ ದಿಕ್ಕಿನಲ್ಲೂ ಮುನ್‌ನಡೆಯಲು ಒತ್ತಾಯಪಡಿಸುತ್ತ ಬಂದಿದೆ. ಪೈಥಾಗೊರಾಸನಂತೂ ಸರಿ. ಎಂ. ಪಿ. ಡೂಕ್ಲಸ್‌ನಂತಹ ತಾನು ಅವತಾರಿ ಪವಾಡಪುರುಷ ಎಂದು ಹೇಳುತ್ತಿದ್ದವನು ರಸಾಯನಶಾಸ್ತ್ರವನ್ನು ರೂಪಿಸಿದ ಪ್ರಥಮರಲ್ಲಿ ಎಣಿಸಲ್ಪಡುತ್ತಾನೆ! ಪೌರ್ವಾತ್ಯ ದಕ್ಷಿಣ ಕಪರ್ದವಸಿಷ್ಠ, ವ್ಯಾಸಾದಿಗಳು, ಅಥವಾ ಪಾಶ್ಚಾತ್ಯ ಒರ್‌ಫ್ಯೂಅಸ್ ಪ್ರಭೃತಿಗಳು ಹಾಗೂ ಪೈಥಾಗೋರಾಸ ಪಂಥೀಯರು ಇವರು ಯೋಜಿಸಿರುವ ಮಂತ್ರ : ಮಾಟ : ಮೋಸವು ಈ ಮನುಜನನ್ನು ನರ(ಳ)ನ ಜೀವಿತ ಪಾತಳಿಯ ಮೇಲೆ ತಳ್ಳಿಕೊಂಡು ಹೊರಟಿದೆ! ಈ ಸಂಗತಿಯನ್ನು Reason ದೃಷ್ಟಿಕೋನದ ಪ್ಲೇಟೋನ ತತ್ತ್ವಜ್ಞಾನದೊಳಗಿನ ಗವಿ (Den) ಅಥವಾ ಗುಹೆ (Cave) ಈ ರೂಪಕವು ಖಚಿತಪಡಿಸಬಲ್ಲುದು.

ಈ ಸಂದರ್ಭದಿಂದ ಸಾರ್ವಕಾಲಿಕ ಸ್ವರೂಪದ ಒಂದು ಸೂತ್ರವನ್ನು ಮತ್ತೆ ಇಲ್ಲಿ ಉಚ್ಚರಿಸಬೇಕಾಗುತ್ತಿದೆ. ಈ ಮಾನವ ಜೀವನ ವಿಶ್ವಸ್ಥ ಒಂದು ಸನಾತನ ನಿಯಮಕ್ಕೆ ಅಧೀನನಿದ್ದಾನೆ. ಈ ಮನು-ಜನಿಗೆ ದತ್ತ ಸ್ವಾತಂತ್ರ್ಯ ಇರುವುದು ನಿಜ. ಈ ಸ್ವಾತಂತ್ರ್ಯದಿಂದಾಗಿ ಇವನಿಗೆ ತನ್ನ ಬಾಳದಾರಿಯ ದಿಕ್ಕು ಯಾವುದು ಇರಬೇಕು, ಎಂಬುದನ್ನು ನಿರ್ಣಯಿಸುವ ಹಕ್ಕು ಇದೆ. ಪ್ರಾಣಲಿಂಗಚೇತಸದ ಪಾತಳಿಯ ಬುದ್ಧಿಯ ಕಣ್ಣಿನಿಂದ ಬಾಳಬಟ್ಟೆಯಲ್ಲಿ ಸಾಗಬೇಕೆ? ಅಥವಾ ಪ್ರಜ್ಞೆಯ ಅಂಗವಾದ ಮನಸ್ಸಿನ-ಉಪಜ್ಞೆಯ ಅನುಜ್ಞೆಗೆ ಪರ್ಯಾಯದಿಂದ ಪ್ರಜ್ಞಾನೇತ್ರಕ್ಕೆ ಪ್ರಾಶಸ್ತ್ಯವನ್ನಿತ್ತು, ಬಾಳಬಟ್ಟೆಯಲ್ಲಿ ಸಾಗಬೇಕೆ? ಎಂಬುದನ್ನು ಹಲವು ಬಾರಿ ತಿಳಿದೊ-ತಿಳಿಯದೆಯೋ ನಿರ್ಣಯಿಸುವವನು, ಈ ಮನುಜನೇ ಆಗಿದ್ದಾನೆ. ಜೀವಿತದ ರಸ-ರೂಪ-ಗಂಧದ ಆಕರ್ಷಣಕ್ಕೆ ಮನಸೋತು ಬಾಳದಾರಿಯನ್ನು ಕ್ರಮಿಸತೊಡಗಿದರೂ ಮಹಾಕವಿ ಗಯಟೆಯಂತೆ ಲೋಕಾನುಭವಗಳ ಬೆಳಕಿನಲ್ಲಿ ಜೀವನ-ವಿಶ್ವದ ನಿಯಮದ ಅನುಸಂಧಾನದಲ್ಲೂ ಹೊರಡಬಹುದು. ಇದಕ್ಕೆ ಪ್ರತಿಯಾಗಿ ಸಾಕ್ರೆಟಿಸನಂತಹ ಪ್ರಾಜ್ಞನತ್ತ ಆಕರ್ಷಿತನಾದ ಪ್ಲೇಟೊ, ಬಾಳಿನ ಉತ್ತರಾರ್ಧದಲ್ಲಿ ಪೈಥಾಗೋರಾಸ ಪಂಥಕ್ಕೆ ಶರಣುಹೋಗುತ್ತಾನೆ! ಈ ನೆಪದಿಂದ ಹೇಳಬೇಕಾದ ಸಾರ್ವಕಾಲಿಕ ಸತ್ಯಾಂಶದ ಒಂದು ಮಾತು : ಈ ಮನುಜನು, ಪ್ರಜ್ಞಾನೇತ್ರದ ಉಪಾಸಕನಾಗಿ ಬಾಳಬಹುದಾದಂತೆ, ನರ(ಳ) ತತ್ವಕ್ಕೆ ಪ್ರಾಧ್ಯಾನ್ಯವನ್ನಿತ್ತಲ್ಲಿ ದಿವ್ಯಚಕ್ಷು, ಅಕ್ಷದ (ಕಣ್ಣ>ಗಣ್ಣ) ಶಕ್ತಿಯ ಆರಾಧಕನಾಗುವ ಅನಿವಾರ್ಯತೆಯೂ ಉಂಟು.

ಈ ಮಾತು ಬಂದದ್ದು ಪ್ಲೇಟೋನ ಗವಿ ಅಥವಾ ಗುಹೆಯ ರೂಪಕದ ಸಂದರ್ಭದಿಂದ. ವೈವಸ್ವತ ಮನುಧರ್ಮದ ಪರಿಭಾಷೆಯ ಗುಹೆ ಮತ್ತು ಪ್ಲೇಟೋನಿಗೆ ಅಭಿಪ್ರೇತ ಗುಹೆ-ಗವಿ ಇದು ಬೇರೆಯಲ್ಲ. ಇವೆರಡರ ಹಿಂದಣ ಅನುಭವದ ಆಕೃತಿಯು ಸಮಾನವೇ ಇದೆ! ಈ ಪ್ರಾಣಿ-ಮಾತ್ರಗಳಿಗೆಲ್ಲ ಆಧಾರ ಭೂಮಿ ನೆಲ : ಬಯಲು (Space) ಇದು ತನ್ನ ಮೈಸುತ್ತ ತಿರುಗುತ್ತಿರುವುದುಂಟು. ಗತಿಯಲ್ಲಿ ಇರುವ ಬಯಲು= ನೆಲ ಇದನ್ನು ಕಾಲ ಎಂಬ ವಾಡಿಕೆಯಿದೆ. ಆದರೆ, ಈ ಗತಿರೂಪ ಕಾಲವು ನೆಲದ ಅಂಗವೇ ಹೊರತು ಇದಕ್ಕೆ ಬೇರೆಯಾದ ಅಸ್ತಿತ್ವ=ಸ್ಥಾನವೇ ಇಲ್ಲ. ಭಾರತೀಯ ಪೂರ್ವಪರಂಪರೆಯಲ್ಲಿ ಛಾಯಾ ಭಗವತೀ ಎಂದು ಈ ಬಯಲನ್ನು ಕಂಡದ್ದಾಗಿದೆ. ಕನಕನಿಗೆ ಬಯಲು, ಆಲಯದಲ್ಲಿ ಇರುವುದಾಗಿ ಕಂಡಿತೆಂದು ಆತನ ಮುಂಡಿಗೆಯ ಮಾತಿನಿಂದ ಗೊತ್ತಾಗುತ್ತದೆ. ಈ ಕನಕನು ಕಂಡ ಆಲಯದೊಳಗಿನ ಬಯಲು ಗ್ರೀಕ್ ಪೆರ್ಮೈನೆಡಸನ ವ್ಯಕ್ತಿ ಸಾಪೇಕ್ಷ ಬಯಲು = Being ಇವೆರಡರಲ್ಲಿ ಪೂರ್ಣ ಹೋಲಿಕೆಯಿದೆ. ಆದರೆ, ಭೇದವೂ ಉಂಟು. ಫೆರ್ಮೈನೆಡ್ಸ್ ಕೇವಲ Being (ಕಣ್) ಭಕ್ತ. ಸ್ಥಲಕ್ಕೆ ಬದ್ಧ ಕಾಲ ಎಂಬುದರ ಸ್ವತಂತ್ರ ಅಸ್ತಿತ್ವವು ಇವನಿಗೆ ಮಾನ್ಯವಿದ್ದಿಲ್ಲ. ಈ ನಿರ್ಣಯವನ್ನು Not Being ಎಂದು ಹೆಸರಿಸಿರುವ ಕಾರಣವೇನು ಮತ್ತೆ?

ಆದರೆ, ಕನಕನ ನಂಬುಗೆಯ ಸ್ವರೂಪವು ಬೇರೆ ಬಗೆಯದು ಇತ್ತು. ಭಗವಂತನು ಇರುವ, ಎಡೆ, ಆ-ಲಯ ಎಂಬ ನಂಬುಗೆ ಕನಕನದು, ಕನಕನು, ಕಿಂಡಿಯೊಳಗಿಂದ ಭಗ-ವಂತ ಶ್ರೀಕೃಷ್ಣ ಪರಮಾತ್ಮನನ್ನು? ಕಾಣುವ ವಾಡಿಕೆಯಿದ್ದಿತೆಂದು ಸಂಪ್ರದಾಯವು ಹೇಳುತ್ತದೆ. ಭಗ=ಟೊಳ್ಳು ಇದೆ. ಆದರೆ ಭಗ-ವಂತ ಇದು ಕೇವಲ ಕಾಲ್ಪನಿಕ. ಕನಕನ ಮುಂಡಿಗೆಯನ್ನು ಇಡಿಯಾಗಿ ವಿಮರ್ಶಿಸುವ ಆವಶ್ಯಕತೆಯಿದೆ. ಬಯಲು ಆಲಯದ ಒಳಗೊ? ಈ ಮಾತಿನಲ್ಲಿ ವ್ಯಕ್ತಿಸಾಪೇಕ್ಷ [o], ಆಲಯದೊಳಗಿನ ಬಯಲು ಅಭಿಪ್ರೇತವಿದೆ. ಆದರೆ, ಇದಕ್ಕೆ ಪ್ರತಿಯಾಗಿ ಆಲಯವು [o], (ಇದೇ) ಬಯಲದೊಳಗೊ? ಎಂಬ ಈ ವಾಕ್ಯವು ಅಭಾವಾತ್ಮಕ ಅರ್ಥದ್ದಾಗಿದೆ. ಈ ವಾಕ್ಯದಲ್ಲಿ ಇಡೀ ಪ್ರಪಂಚವೇ ಆಲಯ = ಕಂಡಿ (ಕಣ್ಣು) ಆಗುತ್ತಿದೆ! ವ್ಯಕ್ತಿಸಾಪೇಕ್ಷ ಆಲಯವು [o] ಇದು ಅನುಭವ ನಿಜ. ಆದರೆ, ವ್ಯಕ್ತಿ ನಿರಪೇಕ್ಷ ಆಲಯ ಇದೆ ಎಂಬುದು ಕವಿಕಲ್ಪನಾ ವಿಲಾಸವೇ ಸರಿ. ದಿವ್ಯಾಧ್ಯಾತ್ಮಗಳಲ್ಲಿ, ಈ ಬಗೆಯ illegitimate abstractions ಮೋಸತರುತ್ತಿವೆ: ವ್ಯಕ್ತಿ ಸಾಪೇಕ್ಷ ಜನಕ ! ಇದ್ದಾನೆ. ಆದರೆ, ವ್ಯಕ್ತಿ ನಿರಪೇಕ್ಷ ವಿದೇಹಿ-ಜನಕನನ್ನು ಈ ಚರಲಿಂಗರೂಪೀ ಆದಿತ್ಯನನ್ನು ಭಾರತೀಯ ಹಾಗೂ ಪಾಶ್ಚಾತ್ಯ ದಿವ್ಯಾಧ್ಯಾತ್ಮಗಳಲ್ಲಿ ಕಲ್ಪಿಸಿ ಈ ಕಲ್ಪಿತವನ್ನು ವಾಸ್ತವ ಎಂದು ನಂಬಿಸಲಾಗಿದೆ. ಅಂತರಿಕ್ಷಸ್ಥ ಛಾಯಾಭಗವತಿ : ಗುಹೆ: ಗವಿ ಇದು

ಭೂಲೋಕದಲ್ಲಿ ಜೀವಿತದ ಪಾತಳಿಯ ಮೇಲೆ ಅನುಭವದಾಯಕವಿದೆ. ಮನು=ವೈವಸ್ವತ ಸಂಪ್ರದಾಯ ಪರಿಭಾಷೆಯಲ್ಲಿ, (ಸಂ) ಭವಚಕ್ರ ಅಥವಾ ಕಾಲ (ಮೃತ್ಯು) ಚಕ್ರ ಎಂಬ ಹೆಸರಿನಿಂದ ಪ್ರಸಿದ್ಧಿವಿದೆ. ಈ ಛಾಯಾ ಭಗವತಿ ಎಂಬುದು ಕಾಲಿ, ದುರ್ಗೆಯ ಇನ್ನೊಂದು ಹೆಸರು. ಇದನ್ನು ನೌಕೆ ಎಂದೂ ವೇದ ಹೇಳುತ್ತದೆ. ಕಾಲಿದಾಸನು 'ಉಡುಪೇನ' ಸಂಸಾರಸಾಗರ ದಾಟುವ ರೂಪಕವನ್ನು ಯೋಜಿಸಿದ್ದಾನೆ.

ಪಿಂಡ-ಬ್ರಹ್ಮಾಂಡ ಐಕ್ಯದ ಅನುಸಂಧಾನದಿಂದ ಅರಿಕೆಗೆ ಬರುವ ಜೀವಿತವು ನಿತ್ಯ ಗುಹೆ, ಗವಿಯಂತಹ ವೃತ್ತಾಕೃತಿಯದೇ ಇರುತ್ತದೆ ಎಂಬ ನಿಷ್ಕರ್ಷವನ್ನು ಹಲವು ಬಾರಿ ಈ ಮೊದಲು ವಿವರಿಸಿದ್ದಾಗಿದೆ. ಅಲ್ಲದೆ, ಇಲ್ಲಿ ತಾಯ್ಗಂಡತನದ ಪ್ರೇರಣೆಯೂ ಹುದುಗಿರುವುದನ್ನು ಸ್ಪಷ್ಟಪಡಿಸಲಾಗಿದೆ. ಪ್ಲೇಟೋನ ತತ್ತ್ವಜ್ಞಾನದಲ್ಲಿ ಬರುವ ಗುಹೆಯ ಈ ವರ್ಣನೆಯು ವಿಮರ್ಶಾರ್ಹವಿದೆ, ಈ ಪ್ಲೇಟೋನ ಮಾತಿನ ಚಾಕಚಕ್ಯ ಕಲಾತ್ಮಕ ನಿವೇದನ ಸತ್ಯವನ್ನು ಬಿಚ್ಚಿ ಇಡುತ್ತದೆ. ರಸೆಲ್ಲರೆ ಹೇಳುತ್ತಾರೆ.

> Plato possessed the art to dress up illiberal suggestions in such a way that deceived future ages

ಪ್ಲೇಟೋನ ಆದರ್ಶ ರಾಮರಾಜ್ಯದಲ್ಲಿ, ದಿವ್ಯಜ್ಞಾನ ದೀಕ್ಷೆಪಡೆದು ಅ-ಮರಣ ವಿರಕ್ತ ಬ್ರಹ್ಮಚಾರಿಗಳಾದ, ಲೋಕ-ಕಲ್ಯಾಣಕ್ಕಾಗಿ ಅನೇಕ ಜಂಗಮ ಗುರುವರ್ಗವು ಬಂದುದುಂಟು. ಇವರನ್ನು ಪ್ಲೇಟೋ ಮಹಾಶಯ ಫಿಲಾಸೋಫರಸ್ ಎಂದಿದ್ದಾನೆ.

> "The philosopher who is to be a guardian must return into the cave, and live among those who have never seen the sun of truth[೪]

ಸತ್ಯಸೂರ್ಯನನ್ನು ಕಂಡರಿಯದ ಪಾಮರ ನರವರ್ಗದ ಮಾರ್ಗದರ್ಶಕ (ಸಂರಕ್ಷಕ) ನಾಗಲಿರುವ ತತ್ತ್ವಜ್ಞ (ಗುರುವು), ಆ ಗವಿಗೆ ಮರಳಿ ಬರಲೇ ಬೇಕು. ವೃತ್ತಾಕೃತಿಯ ಗವಿಯಂತಹ ಕತ್ತಲಿನಿಂದ ಕವಿದ ಈ ಜೀವಿತ ಪಾತಳಿಯ-ಮೇಲಣ ಜನದ ನಿರ್ದೇಶವು ಹೀಗಿದೆ;

> 'Behold! human beings living in an underground den, which has a mouth open towards the light and reaching all along the den.... here they are haiend so, that they cannot move and can only see before them....... all that they see are shadows of themselves..... Inevitably they regard the shadows as real...... at last some man succeed in escaping from the cave to the light of the own......[೫]

(ಸಂ) ಭವ ಚಕ್ರದ ಬಂಧನದಿಂದ ಬಿಡುಗಡೆ ಹೊಂದಿ ಸತ್ಯ ಸೂರ್ಯ (?) ನನ್ನು ಕಾಣುವ ಅರ್ಹತೆ ಬರಲು ಗುರುದೀಕ್ಷೆ ದೊರೆಯಬೇಕಾಗುತ್ತದೆ.

ಪ್ಲೆಟೋನ ಗುಹ್ಯಭಾಷೆಯಲ್ಲಿ ಈ ಗವಿ ಮತ್ತು ವ್ಯಕ್ತಿ ಸಾಪೇಕ್ಷ ಕಣ್ (Eye) ಬೇರೆಯಲ್ಲ! ಹೃದಯ ಗುಹೆಯೊಳಗಿನ Soul= ಆ-ತ್ಮನ್ ಮತ್ತು ಕಣ್ ಬೇರೆಯಲ್ಲ!

> The soul is life : an eye. when resting upon that on which truth and being shine.... is radiant with intelligence[೬]

ಭಾರತೀಯ ದಿವ್ಯಾಧ್ಯಾತ್ಮದ ಪರಿಭಾಷೆಯಲ್ಲಿ ಪ್ಲೇಟೋನ ಈ ಸತ್ಯಸೂರ್ಯ = ಸತ್ಯಚಕ್ಷು, (eye), ಭವ ಬಂಧನ=ಕಾರಕ ಗುಹೆಗೆ ಸಮಾಂತರವಿದೆ! "ಅಸೂರ್ಯನಾಮ ತೇ ಲೋಕಾಃ ಅಂಧೇ ತಮಸಾವೃತಾಃ" ಎಂಬ

ಮಾತು ಉಂಟು ಸೂರ್ಯನಿಲ್ಲದ ಈ ಕತ್ತಲು ಕವಿದ ಲೋಕದಲ್ಲಿ ಇರುವ ಜನದ ಈ ಉಲ್ಲೇಖವು ಈಶೋಪನಿಷತ್ತಿನಲ್ಲಿ ಇದೆ. ಈ ಉಪನಿಷತ್ತಿನಲ್ಲಿಯೇ ಪ್ರಜಾಪತ್ಯ ಸೂರ್ಯನಿದ್ದಾನೆ! ಇದು ಮೋಸ. ನಿಜವಾಗಿ ಇದು ಸತ್ಯಚಕ್ಷು= ವಿಶ್ವಪ್ರಸವದ ಕಣ್ಣು. ಇಲ್ಲಿಗಣ್‌ನ್ನು (ವಿಷ್ಣುವನ್ನು ಕಲ್ಪಿಸಿ, ಪ್ರಜಾಪತ್ಯ ಸೂರ್ಯ ಪುಂ- ಲಿಂಗೀರೂಪಕ್ಕೆ ತಿರುಗಿಸಿದ್ದಾಗಿದೆ). ಸತ್ಯ ಧರ್ಮಾಯ ದೃಷ್ಟಯೇ ಎಂಬ ಈಶದ ಪಾಠಕ್ಕೆ ಬದಲಾಗಿ 'ಸತ್ಯ ಧರ್ಮಾಯ ವಿಷ್ಣುವೇ' ಎಂಬು ಮಾತೂ ಇದೆ.

ಈ ಸತ್ಯಚಕ್ಷು ಸೂರ್ಯನಲ್ಲಿ ಇರುವನೆಂಬ ಪುರಿ-ಶಯ=ಪುರುಷನು ನಾನೇ (ಸಃ ಅಹಂ) ಎಂಬ ಧ್ಯಾನ ಮಂತ್ರವನ್ನು ಬೋಧಿಸಲಾಗುತ್ತಿದೆ.[೮] ಈ ಉಪನಿಷತ್ತಿನಲ್ಲಿಯೇ ಸ್ವಯಂಭೂ ಇದ್ದಾನೆ! 'ಇವನು ಲಿಯತಃ ಇತಿ ಲಿಂಗ' ಸ್ವರೂಪನಷ್ಟೇ. ಆದಕಾರಣ, ಇವನನ್ನು ಶುಕ್ರಂ, ಅಕಾಯಂ ಎಂಬ ವರ್ಣಿಸಲಾಗಿದೆ. ಬೃಹದಾರಣ್ಯಕದಲ್ಲಿ ಹೇಳಿರುವ ಚಕ್ಷುಃ ವೈ ಸತ್‌ತ್ಯಂ ಎಂಬುದು, ಪ್ಲೇಟೋನ Eye, Sun of truth ಈ ವರ್ಣನೆಯನ್ನು ಹೋಲುತ್ತಿರುವ ಸೋಜಿಗವನ್ನು ನೋಡಿಕೊಳ್ಳಿ. ಈ ತತ್ವಜ್ಞನೆಂಬ ಪ್ಲೇಟೋ ತನ್ನ ಕಲ್ಪನೆಯ ಆದರ್ಶವಾದ ರಾಮರಾಜ್ಯದಲ್ಲಿ ದಾಂಪತ್ಯಧರ್ಮಕ್ಕೆ ಪ್ರಾಶಸ್ತ್ಯವನ್ನು ಕೊಟ್ಟಿಲ್ಲ. ಬುದ್ಧಿವಂತ ಸಂ-ಪ್ರಜಾ ನಿರ್ಮಾಣಕ್ಕೆ ಗಮನ ಕೊಟ್ಟಿಲ್ಲ. ಬುದ್ಧಿವಂತ-ಸು-ಪ್ರಜಾನಿರ್ಮಾಣಕ್ಕೆ ಗಮನ ಕೊಡದಿದ್ದರೆ, ಆದರ್ಶ ರಾಮರಾಜ್ಯವು ಅಸ್ತಿತ್ವಕ್ಕೆ ಬರಲಾರದು. ರಾಜ್ಯದಲ್ಲಿ ಮೇಧಾವಿಗಳ ಕೊರತೆ ಬೀಳಬಾರದು, ಸಮರ್ಥ ಆಡಳಿತಗಾರರು ದೊರೆಯಬೇಕು, ಎಂಬ ಕಾರಣದಿಂದ ಪ್ಲೇಟೋ ಸುಪ್ರಜಾ ನಿರ್ಮಾಣದ ಒಂದು ಹಂಚಿಕೆ ಹೇಳುತ್ತಾನೆ. ಕೌಟುಂಬಿಕ ಜಂಜಡದಲ್ಲಿ ಸಿಕ್ಕಿ ಬೀಳದೆ. ಲೋಕಹಿತಾರ್ಥವಾಗಿ ವಿರಕ್ತವಾಗಿ, ಅವಿವಾಹಿತ ಬ್ರಹ್ಮಚಾರಿಗಳಾಗಿ, ಇರುವ ಗುರುಗಳ ನಿಯೋಗದಿಂದ ಆಗುವ ಸಂತತಿಯು ಆದರ್ಶ ಪ್ರಜೆಯಾಗಬಹುದು, ಎಂದು ಪ್ಲೇಟೋ ನಂಬುಗೆ! ವ್ಯಾಸನೂ ನಿಯೋಗವನ್ನು ಬೋಧಿಸಿದ್ದಾನೆ!

ಆದಿಯಲ್ಲಿ, ಈ ಮನು-ಜರ, ಅರ್ಥ=ವಿಚಾರ=ಜ್ಞಾನಕ್ಕೆ ಕಾರಣವಾದ ಪ್ರಜ್ಞಾ: ಪ್ರಕಾಶ ರೂಪ ನೇತ್ರ (ಒಳ ತಿಳಿಬೆಳಕು), ಮಾನವರಿಗೆಲ್ಲ ಸಮಾನವೇ ಇದ್ದ ಯುಗವು ಒಂದಾಯ್ತು. 'ಸಮಾನಂ ವೋ ಮನಃ' ಎಂಬ ಪ್ರಜ್ಞೆ ಅಂದಿನ ಸಮಾಜ: ಸಮಷ್ಟಿಯ ಸ್ಥಾನದಲ್ಲಿ ಇತ್ತು. ನಾವು ಮನು-ಜರು, ಆದಕಾರಣ, ನಾವು ನಮ್ಮ ಅಂತಃ ಪ್ರಜ್ಞೆಯಿಂದ ಪ್ರಚೋದಿತ ಮನಸ್ಕರಾಗಿ ಬಾಳಬೇಕು ಎಂಬ ಸಂಕಲ್ಪವು, ನಿಶ್ಚಯವು-ಇಂದಿನಲ್ಲಿಯೂ ಕಾಣಿಸಿಕೊಂಡರೆ, ಈ ಬಗೆಯ ಪ್ರಾಮಾಣಿಕ ನಿಷ್ಠೆಯ ಆಚಾರ ವಿಚಾರದ ಭಾಷಿಕರಲ್ಲಿ, ಆ ಪ್ರಜ್ಞಾನೇತ್ರ ಪ್ರೇರಕ ಆದ್ಯ: ಮನು: ವೈವಸ್ವತನ ಮನ್ವಂತರವು ಮರಳಿ ಕಾಣಿಸಿಕೊಳ್ಳಲು ಶಕ್ಯವಿದೆ. ಇದು ಬರಿ ಊಹೆ-ಅಂದಾಜು ಅಲ್ಲ, ವಿವಸ್ವನ್ ವೈವಸ್ವತನು ಆದಿತ್ಯನಾದನು ಎಂಬ ಭ್ರಾಂತಿ ಪ್ರಬಲವಾದಾಗ, ಭಾರತೀಯ ಸಾಂಸ್ಕೃತಿಕ ಇತಿಹಾಸದಲ್ಲಿ, ಸವಿತೃ ಎಂಬ ಹೆಸರಿನ ಧೀ: ಪ್ರಜ್ಞಾ ಪ್ರಚೋದಕ ಪ್ರಕಾಶತತ್ವದ ಉಪಾಸನೆಯ ಪುನರುತ್ಥಾನವು ಆಗಿದ್ದೂ ಉಂಟು! ಸವಿತೃ ಪ್ರಾರ್ಥನಾ ಮಂತ್ರ ದ್ರಷ್ಟಾರನೆಂಬ ಖ್ಯಾತಿಯ ವಿಶ್ವ (ಶ್ವಾ)ಮಿತ್ರನ ಹೆಸರು ತಲೆತಲಾಂತರಗಳಿಂದ ಇಂದಿನ ವರೆಗೂ ಉಳಿದು ಬಂದದ್ದು ನಿಷ್ಕಾರಣವಲ್ಲ! ಫಾರ್ಶಿಗಳ ಪವಿತ್ರ ಗ್ರಂಥವಾದ ಅವೆಸ್ತದಲ್ಲಿ ಹೇಳಿರುವ ಮಾತು ಸುಳ್ಳಲ್ಲ; ಕತ್ತಲೆ ಪ್ರೇರಿಸುವ ಲೈಂಗಿಕ ಪ್ರಚೋದನೆಯ ದುಷ್ಟ ಕ್ರೂರ, ಪಾಪಿಶಕ್ತಿಯು (ಅರ್ಹಿಮಾನ್), ಪ್ರಕಾಶವನ್ನು (ಅಹುರ ಮಝುದನ್ನು), ನಿತ್ಯವು ವಿರೋಧಿಸುತ್ತಲೇ ಇರುತ್ತದೆ. ಆದರೆ ಸಂಘರ್ಷದಲ್ಲಿ, ಇಂದು ಅರ್ಹಿಮಾನ್=ಪಾಪಿ ದುಷ್ಟಶಕ್ತಿಯು (ಕತ್ತಲೆ) ಇದೇ ಪ್ರಭಾವಶಾಲೀ ಆಗಿದ್ದರೂ, ಅಹುರ=ಮಝುದನಿಗೆ = ಪ್ರಕಾಶಕ್ಕೆ ಕೊನೆಗೆ ಗೆಲವು ನಿಶ್ಚಿತ. ಸತ್ಯಂ ಏವ ಜಯಂತಿ, ನಾನೃತಂ' ಎಂಬ ನಿಷ್ಠೆ ಭಾರತೀಯರಲ್ಲಿಯೂ ಉಂಟು. ಆದರೆ, ವಿಶ್ವ(ಶ್ವಾ)ಮಿತ್ರನ ಪುನರುತ್ಥಾನದ ಪ್ರಯತ್ನವನ್ನು ವ್ಯರ್ಥವಾಗಿಸಲು ಸವಿತೃ ಸ್ವರೂಪ ಧೀಪ್ರಜ್ಞೆ ಪ್ರಚೋದಕ ಪ್ರಕಾಶತತ್ವದ ದೈವತಪ್ರತಿಮೆಯನ್ನು ಭಿನ್ನವಾಗಿಸಲು ನಾಚದಿರಲು ಈ ಲೈಂಗಿಕ ಪ್ರಚೋದನೆಯು ಮರಳಿ ಪ್ರಭಾವಶಾಲಿಯಾಗಿರುವುದನ್ನು ಇಂದು ಕಾಣುತ್ತಲಿದ್ದೇವೆ! ವಿಶ್ವಾಮಿತ್ರನ ವಿರೋಧಿ ವಸಿಷ್ಠ ದಕ್ಷಿಣಕಪರ್ದನ ಕೈವಾಡವು ಇದು. ಉಪಲಬ್ಧ ಪ್ರಮಾಣಗಳ ಬಲದಿಂದ ಸವಿತೃ ಪ್ರತಿಮಾ ಭಂಜನದ ನೀಚಕೃತ್ಯವು ಸಂಭವಿಸಿರುವ ಕ್ರಮವನ್ನು ಕಾಲವನ್ನು ಸ್ಥೂಲವಾಗಿ ಕಂಡುಹಿಡಿಯಲು ಶಕ್ಯವಿದೆ.

ಅವೆಸ್ತದಲ್ಲಿ ವೈವಸ್ವತನಿದ್ದಾನೆ. ಆದರೆ, ಸವಿತೃ, ವಿಶ್ವಾಮಿತ್ರ ಈ ಪ್ರತಿಮೆಗಳು ಅಲ್ಲಿ ಇಲ್ಲ. ಆದಕಾರಣ, ಸವಿತೃವು ವಿವಸ್ವನ್ ದೈವತಕ್ಕಿಂತ ಅರ್ವಾಚೀನ ಎಂಬುದು ನಿಃಸಂದಿಗ್ಧವಿದೆ. ಅವಸ್ತೆದಲ್ಲಿ ವಿವಹ್ವನ್ ಇದೆ.

ವಿವಸ್ವನ್ ಪ್ರತಿಮಾಭಂಜನದ ಹೀನಕೃತ್ಯಕ್ಕೆ. (ವ್ಯಾಸ ಪ್ರಸಾದಾತ್ ಲಭಿಸಿದೆ ಎಂಬ) ಶ್ರೀಮತ್ ಭಗ-ವತ್ ಗೀತೆಯಲ್ಲಿಯೇ ಬಲವಾದ ಪ್ರಮಾಣಗಳೂ ಉಂಟು. ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನ್ ಅಹಂ ಎಂಬಲ್ಲಿ ಕಾಲಃ ಅಸ್ಮಿ ಎಂಬ ಕರಿಯ ಕೃಷ್ಣನು ವಿವಸ್ವನ್ ದೈವತಕ್ಕೆ ಯೋಗ ಬೋಧಿಸಿದ ಕಣ್ಣು ಮುಚ್ಚಿಸಿ, ಸಮಾಧಿ ಸಿದ್ಧಿಯನ್ನು ಈ ಭಗವಂತನು ಕರುಣಿಸಿದ್ದಾನೆ. ಹೀಗೆ ವೈವಸ್ವತ ಪ್ರತಿಮೆ ನಷ್ಟವಾಯಿತು. ಆದರೆ, ಈ ಗೀತೆಯಲ್ಲಿ ಸವಿತೃವಿನ ಉಲ್ಲೇಖವೂ ಇಲ್ಲ! ಋಗ್ವೇದ ಇಂದಿನ ಪಾಠದಲ್ಲಿ ಸಹ ಸಾವಿತ್ರಿ ಎಂಬ ರೂಪ ಸ್ಪಷ್ಟ ಸ್ತ್ರೀ ಸಂಕೇತವಾಗಿ ಮಾರ್ಪಟ್ಟಿಲ್ಲ. ಈ ರೂಪವು, ಛಾಂದೋಗ್ಯದಲ್ಲಿಯೂ ಇಲ್ಲ. ಇದು ಬೃಹದಾರಣ್ಯಕದಲ್ಲಿ ಕಾಣಿಸಿಕೊಳ್ಳುತ್ತದೆ.[೯] ಉಪನಿಷತ್ತಿನಲ್ಲಿ ಚಕ್ಷುಃ ವೈ ಸತ್‌ತ್ಯಂ (ಯೋನಿ ಮಂಡಲ) ಆರಾಧಿಸುವ ಸಂದರ್ಭದ ಆಚಾಂಗದಲ್ಲಿ ಈ ಸಾವಿತ್ರಿ [o] ಹೆಸರು ಬರುತ್ತದೆ.[೧೦]

ವೇದದಲ್ಲಿ, ಸವಿತೃವು ಸಾವಿತ್ರಿಯಾಗಿಲ್ಲ. ಆದರೆ, ಇನ್ನೊಂದು ಬೇರೆ ನಿಟ್ಟಿನಿಂದ ಈ ಪ್ರಯತ್ನಕ್ಕೆ ಪ್ರಾರಂಭವಾದುದನ್ನು ಕಾಣಲು ದೊರೆಯುತ್ತದೆ. ಇದು ಗೀಃ ವಾಣ-ವಾಣಿಯ ದಾರಿಯಲ್ಲಿ ಆಗಿರುವ ಮಾರ್ಪಾಟು, ಎಂಬುದನ್ನು ನಿದರ್ಶನಕ್ಕೆ ತರುವ ಗಾಯತ್ರಿಯ ಪೂರ್ವರೂಪಗಳು ವೇದದಲ್ಲಿ ದೊರೆಯುತ್ತವೆ. ಗಾಯ=ಉರುಗಾಯ ಎಂಬ ವಿಶೇಷಣವು ವಿಷ್ಣುವಿಗೆ ಇದೆ! ಗಾಯತ್ರೀ ಎಂಬ ರೂಪವು, ಹತ್ತನೆಯ-ಕೊನೆಯ-ಮಂಡಲದಲ್ಲಿ ಎರಡೇ ಬಾರಿ ಬಂದಿದೆ! ಗಾಯತ್ರೀ ರೂಪಕ್ಕೂ ಮುಂಚಿನ ಹಂತದಲ್ಲಿ ಗಾಯತ್ರ ಇದು ಹಲವು ಬಾರಿ, ಬೇರೆ ಬೇರೆ ಮಂಡಲದಲ್ಲಿ ಇದೆ. ಆದರೆ, ಸವಿತೃವನ್ನು ಹೆಣ್ಣು ಮಾಡುವ ಪ್ರಯತ್ನವೂ ತೆರೆಯ ಮರೆಯಲ್ಲಿ ಈ ವೇದದಲ್ಲೆ ಉಂಟು. ತೀರ ನಿರ್ಲಜ್ಜತನ ಇನ್ನೂ ತಲೆಯೆತ್ತಿರಲಿಲ್ಲ, ಎಂದು ಕಾಣುತ್ತದೆ. ಏಕೆಂದರೆ ಇದು ನೇರ ಪ್ರಯತ್ನವಲ್ಲ! ತಿಳಿಯಿತು, ತಿಳಿಯಲಿಲ್ಲ ಎಂಬ ಹಾಗಿನ ಕೈಚಳಕವು ಈ ವೇದದಲ್ಲಿ ಇದೆ. ಆದಿತ್ಯರೂಪ (ಲಿಂಗ) ವರುಣರಲ್ಲಿ ಸವಿತೃವನ್ನು ಕಳಿಸಿದ್ದಾಗಿದೆ. ಈ ಸ್ಥಿತ್ಯಂತರದ ಶ್ರೇಯಸ್ಸು, 'ವಿಷ್ಣುಃ ಯೋನಿಂ ಕಲ್ಪಯತು' ಎಂಬ ಶಕ್ತಿಯ ಈ ವಿಷ್ಣು ಸಂಪ್ರದಾಯಕ್ಕೇ ಸಲ್ಲುತ್ತದೆ. ಪ್ರೊ. ಬುಹ್ಲರನು, ನೂರುವರುಷಗಳ ಹಿಂದೆಯೇ ಕಂಡು ಹಿಡಿದಿರುವ ಈ ಸ್ವಭಾವವು ಇಂದಿನ ಸಂಹಿತೆಯಷ್ಟು ಪುರಾತನ ಕಾಲದಿಂದಲೇ ನಮ್ಮವರಲ್ಲಿ ರಕ್ತಗತವಾಗಿತ್ತೆಂದು ಸಿದ್ಧವಾಗುತ್ತಿದೆ. ಸ್ಮೃತಿಗ್ರಂಥಗಳ ಸಂಶೋಧನೆಯ ಸಂದರ್ಭದಲ್ಲಿ ಆತನಿಗೆ ಬಂದ ಅನುಭವವು ಇದು: The Vaishnavas seem to have been most unscrupulous in forgeries of Smritis[೧೧]

ಈ ಸವಿತೃ ಸೂರ್ಯನು, ವೇದದಲ್ಲಿ ಗಾಯತ್ರಿ ರೂಪಕ್ಕೆ ತಿರುಗಿದ್ದರೂ ಗಾಯತ್ರಿಯನ್ನು ಹೆಣ್ಣುಮಾತೆ ಎಂಬರ್ಥದಲ್ಲಿ ಯೋಜಿಸಿದ್ದೂ ಉಂಟು. ಅರ್ವಾಚೀನ ಸೂರ್ಯ-ನಾರಾಯಣ ಈ ದೈವತವು ಆಕಾರ ಪಡೆಯುವಲ್ಲಿ ಸೂರ್ಯ (= ಸವಿತೃ) ಮಂಡಲ [o] ರೂಪವು ಅಭಿಪ್ರೇತವಿರಬೇಕೆಂದು ಬಗೆಯಲು ಅವಕಾಶವಿದೆ. ಸೂರ್ಯ ನಮಸ್ಕಾರಗಳ ಆಹ್ನಿಕದ ಕೊನೆಯ ಧ್ಯಾನಮಂತ್ರವೇ ಇದಕ್ಕೆ ಪ್ರಮಾಣ. ಆದರೆ ಈ ನಾರಾಯಣ ನಾಮಕ್ಕೆ ವೇದದಲ್ಲಿ ನೇರವಾಗಿ ಸ್ಥಳವಿಲ್ಲ. ಆದರು ಪುರುಷಸೂಕ್ತದ ದಶಾಂಗುಲನ (ನಾರ-ಅಯನದ) ಸ್ತೋತ್ರ ಸೂಕ್ತಕಾರ ಕವಿ, ಎಂದು ನಾರಾಯಣನ ಹೆಸರಿರುವಲ್ಲಿ ಅಂತಃಸಂಗತಿ, ಔಚಿತ್ಯವೂ ಉಂಟು. ಈ ಪುರಿ-ಶಯ(ನ) ಪುರುಷನನ್ನು ಸೂರ್ಯನನ್ನಾಗಿಸುವ ಪ್ರಯತ್ನಗಳು ಈ ವೇದದಲ್ಲಿ ಇವೆ. ವಿಷ್ಣೋಃ ನು ಕಂ= ವೀರ್ಯಾಣಿ ಸೋತ್ರ ಮಾಡುವ ಈ ಸೂಕ್ತದಲ್ಲಿ ಕೈಚಳಕ ಕಾಣಬಹುದು. ಬೃಹದಾರಣ್ಯಕವು, ಸಾವಿತ್ರೀ ಸತ್ಯಚಕ್ಷು ಉಪಸ್ಥಾನ ಮಂತ್ರ ಹೇಳುತ್ತದೆ. ಆದಕಾರಣ ಈ ಉಪನಿಷತ್ತು ಗೀತೆಗಿಂತ ಅರ್ವಾಚೀನವಿರಲಿಕ್ಕೇ ಬೇಕು.

ಐನ್ಸಟನ್ನರು ಹೇಳುವಂತೆ, ಈ ಜೀವನ ಪ್ರಪಂಚವು "The world is (harmonious) well ordered integrated entity" (ಎಲ್ಲೆಲ್ಲೂ ಸಾಂಗತ್ಯವಿರುವ ಸುವ್ಯವಸ್ಥಿತ ವಾಸ್ತವ ಸಂಗತಿ) ಆಗಿದೆ. ಆದರೆ ಮಾನವರ ಮೊಗವಾಡದ ಹಾಗೂ ಜೀವಿತ ಲೈಂಗಿಕಪಾತಳಿ ಮೆಚ್ಚಿರುವ ನರ(ಳ) ವರ್ಗದ ಕೃತಘ್ನತೆಯಿಂದಾಗಿ,

ಈ ಜೀವನವು disintegrated : ಅಸಾಂಗತ್ಯವುಳ್ಳದ್ದು ಆಗಿದೆ. ಇದು ನಿಜವಿದ್ದರೆ, ಜೀವನದಲ್ಲಿ ಅಸಾಂಗತ್ಯವು ತಲೆದೋರುತ್ತಿರುವ ಎಡೆಯಾವುದು, ಎಂಬುದನ್ನು ಸಿದ್ಧಪಡಿಸಬೇಕಾಗುತ್ತದೆ. ಸರಿ ಇಂದಿನ ಭಾಷೆಯೇ ಇದಕ್ಕೆ ನಿದರ್ಶನ. ಅಭಾವಾತ್ಮಕ ಭಾಷೆ-ಆಚಾರ-ವಿಚಾರಕ್ಕೇ ಸ್ವತಂತ್ರ ಅಸ್ತಿತ್ವಸ್ಥಾನವು ಇಲ್ಲ. ಭಾವಾತ್ಮಕ ಜೀವನದ ಸಾಪೇಕ್ಷಿಯಾಗಿ ಅಭಾವಾತ್ಮಕ ಜೀವಿತವಿದೆ.

ಈ ಭಾಷೆ, ಹಾಗೂ ಇದರಲ್ಲಿ ಅಡಕವಿರುವ ಅರ್ಥ ಇದು ವೈಯಕ್ತಿಕ ಸ್ವರೂಪದ್ದೂ ಅಲ್ಲ. ವ್ಯಕ್ತಿಗಳಿಗೆ ತಮ್ಮ ಅಭಿಪ್ರಾಯ, ವಿಚಾರ, ಅನುಭವ ವ್ಯಕ್ತಪಡಿಸುವ ಹಕ್ಕು ಇದ್ದೇ ಇದೆ. ಆದರೆ ಹೀಗೆ ವ್ಯಕ್ತವಾಗುವ ಅರ್ಥ = ವಿಚಾರವು ಆ ಭಾಷಿಕ ಸಮಷ್ಟಿಯ ಮೂಲಭೂತ ಮನುಸಮಯದಲ್ಲಿ ಆಚಾರಕ್ಕೆ ವಿಸಂಗತವಿರಕೂಡದು. ಏಕೆಂದರೆ ವ್ಯಕ್ತಿಯು ತತ್ತ್ವತಃ ಅಭಾವಾತ್ಮಕವಿದೆ. ಆ ಭಾಷಿಕ ಸಮಷ್ಟಿಯ ಸಂಪರ್ಕ, ಸಂಬಂಧದಲ್ಲೇ ಈ ಅಭಾವಾತ್ಮಕವು ಅರ್ಥ ಪಡೆಯಬಲ್ಲುದು. ತನ್ನ ಭಾಷಿಕ ಸಮಷ್ಟಿಯ ಅನುಸಂಧಾನದ ಸಂದರ್ಭದಿಂದ ಅಭಾವಾತ್ಮಕ ಜೀವಿತದ ವ್ಯಕ್ತಿಗೆ, ಈ ಜೀವನದಲ್ಲಿ ಸ್ಥಾನವೂ ಉಂಟು. ಆದಕಾರಣ, ಒಂದು ಬಗೆಯಲ್ಲಿ ವಿಶಿಷ್ಟವ್ಯಕ್ತಿ ಎಂಬುದು ಅಭಾವವೇ ಸ್ಥಾಯಿ ಆಗುತ್ತಿದೆ. ಆದರೆ ವ್ಯಕ್ತಿವೈಶಿಷ್ಟ್ಯಕ್ಕೆ ಎಂದರೆ ಅಭಾವಕ್ಕೆ ಸ್ವತಂತ್ರಸ್ಥಾನವು ಲಭಿಸುವಾಗ, ಆ ಭಾಷೆಯಲ್ಲಿ ಅಸಾಂಗತ್ಯವು ತಲೆದೋರಲೇಬೇಕು. ಈ ಭಾಷೆ ಎಂಬುದು ಆ ಭಾಷಿಕ ಸಮಷ್ಟಿಯ ಒಂದು ಧಾರಣ (concept) ಸ್ವರೂಪದ್ದು ಇರುತ್ತದೆ: ಇರಬೇಕು ನಿಜ. ಆದರೆ, ಆ ಸಾಮಾಜಿಕರಲ್ಲಿ ಅಸಾಂಗತ್ಯವು ಕಾಣಿಸಿಕೊಳ್ಳುವಾಗ ಆ ಭಾಷೆಯಲ್ಲಿ, ಅವರವರ ಅರ್ಥವು, ಅವರವರ ಪಾಲಿನ ಸತ್ಯ ಎಂಬ ಗ್ರಹಿಕೆಯು ಶಿಷ್ಟಮಾನ್ಯವಾಗುವ ಅನರ್ಥವು ಕಾಣಿಸಿಕೊಳ್ಳುತ್ತದೆ! ಇದನ್ನು ಇನ್ನೊಂದು ನಿಟ್ಟಿನಿಂದ ಖಚಿತಪಡಿಸಿಕೊಳ್ಳಬಹುದು.

> "concepts can never be regarded as logical derivatives of sense impressions"

ಎಂದು ಡಾ. ಐನ್ಸಟನ್ನ ಹೇಳುವ ಮಾತು ವಿಚಾರಾರ್ಹವಿದೆ. ಇನ್ನೊಂದು ಬಗೆಯಲ್ಲಿ ಈ ವಿಚಾರವನ್ನೇ ಅವರು ಹೀಗೂ ಹೇಳುತ್ತಾರೆ.

> "Concepts are not deduced logically from experience, nevertheless they are always connected with experience"[೧೨]

ಭಾಷೆಯನ್ನು ಕುರಿತ ಅವರ ಇನ್ನೂ ಒಂದು ಉಕ್ತಿಯೂ ಮನನೀಯವಾಗಿದೆ :

> "Concepts are not identical with the totality of sense impressions."

ಈ ಧಾರಣ (concepts) ವೈಯಕ್ತಿಕ ಅಭಿವ್ಯಕ್ತಿಯಲ್ಲ. ಇದು ತರ್ಕಾನುಗಾಮಿಯೂ ಅಲ್ಲ. ವೈಯಕ್ತಿಕ ಇಂದ್ರಿಯಾನುಭವಗಳ ಪ್ರತಿಬಿಂಬವಲ್ಲ. ಆದರು, ಈ ಧಾರಣ ಅನುಭವಕ್ಕೆ ಹೊರತಾದುದಲ್ಲ. ಉದಾ : ನರಿ ನರ, ಮಾನವ ಇವು ಒಬ್ಬನ ಇಂದ್ರಿಯ ಗೋಚರ ಅನುಭವದ ಚಿತ್ರವೂ ಅಲ್ಲ. ಹಾಗಾದರೆ, ಈ ಧಾರಣ (concept) ಸಂಭವಿಸುವುದು ಹೇಗೆ? ಇದನ್ನು ಸಂಕಲ್ಪನೆ, ಪರಿಕಲ್ಪನೆ ಎಂದು ಭಾಷಾಂತರಿಸುವಲ್ಲಿ ವಾಸ್ತವ: ಸತ್ಯಕ್ಕೆ ಅಪಚಾರ ಬಗೆದಂತೆ ಆಗುತ್ತದೆ. ಏಕೆಂದರೆ, ಕ್ಲೃಪ್>ಕಲ್ಪ, ಕಲ್ಪನೆ, ಸಂಕಲ್ಪ ಈ ಮಾತುಗಳು ಕೇವಲ ವೈಯಕ್ತಿಕ ಅರ್ಥ: ಆಶಯ ಸೂಚಕವಾಗಿವೆ. ಆದರೆ, ಧಾರಣ=concept ಎಂಬಲ್ಲಿ (conceive, conception, concept) ಕೊಡುಕೊಳ್ಳುವ ಉಭಯ ಪಕ್ಷೀಯ ವ್ಯವಹಾರವಿದೆ. ಯಾವುದೊಂದು ವ್ಯಕ್ತಿಗೆ, ಆ ಭಾಷಿಕರ ಅಮೂರ್ತರೂಪ ಸಮಷ್ಟಿಯೊಡನೆ (Social collective unconscious) ಬರುವ ಆತ್ಮೀಯ ಸಂಪರ್ಕ ಸಂಬಂಧದ ಮೂಲಕ, ಅಭಿವ್ಯಕ್ತಿಯ ಸಂದರ್ಭದ ಧಾರಣವು ಶಕ್ಯವಾಗುತ್ತದೆ.

ಭಾಷೆಗೆ ಆಕಾರವನ್ನಿತ್ತ, ಆಮನೋಃ ವತ್ಮ ನಃಪರಂಮೂಲ ಮನು ಸಮಯದ, ಆ ಭಾಷಿಕ ಅಮೂರ್ತ ಸಮಷ್ಟಿ (collective social unconscious) ಎಂದರೇ ಈ ಮಾನವ ಜೀವನದ ಪಾತಳಿ. ಇದಕ್ಕೆ ಪ್ರತಿಯಾಗಿ

ಅಭಾವವೇ ಸ್ಥಾಯೀ ಇರುವ ಅನಿವಾರ್ಯತೆಯ ಜೀವಿತದ ಹಿನ್ನೆಲೆಯು ವ್ಯಕ್ತಿಯ ಬಾಳಿನಲ್ಲಿ ಮೊತ್ತ ಮೊದಲಲ್ಲಿ ಸಾಂಗತ್ಯವು ಇತ್ತು. ಆದರೆ, ಕಾಲಕ್ರಮದಲ್ಲಿ ಬುದ್ಧಿಯು ತಲೆಯೆತ್ತಿ ಪ್ರಭಾವಶಾಲಿಯಾಗತೊಡಗಿದಂತೆ, ಅಭಾವ ಅತ್ಯಂತ ಅಭಾವರೂಪೀ ಜೀವಿತವು ಜೀವನದಿಂದ ದೂರವಾಗಿ ಸ್ವತಂತ್ರವಾಗತೊಡಗುತ್ತದೆ. ಆಗ ಈ ಮಾನವ ಜೀವನದೊಳಗೆ ಅಸಾಂಗತ್ಯವು ಅನಿವಾರ್ಯವಾಗುತ್ತದೆ. ಈ ದೃಶ್ಯವು ಮಾನವೇತಿಹಾಸದ ಸಮೀಕ್ಷೆಯಲ್ಲಿ ಎದ್ದುಕಾಣುತ್ತಿದೆ. ಉದಾ: ವೇದದೊಳಗಿನ ಅಂಭೃಣೀ (ಸ್ಥಲ) ಕಣ್ : ತಾನೇ ಅದ್ವಿತೀಯಳು ಎನ್ನುತ್ತಾಳೆ (ಅದಿತಿ) ದಕ್ಷ, ರುದ್ರ, ವಿಷ್ಣುನಾಮದ ದೇವರು (ಗಣ್) ತಾನೇ ಶ್ರೇಷ್ಠ ಎಂದು ನಿಗುರಿ ನಿಂತಿದ್ದಾಗಿದೆ.

ಭಾಷೆಯು ಜನಜೀವನದ ಉಸಿರು ತಾನೆ? ಇದರೊಳಗಿನ ಅಸಾಂಗತ್ಯವನ್ನು ನಿದರ್ಶನಕ್ಕೆ ತರುವ ಉದಾಹರಣೆಗಳನ್ನು, ವಿವಸ್ವನ್ ಮನುವಿನ ಬಗೆಗೆ ಬರೆಯುವಾಗ ವಿವರಿಸಲಾಗಿದೆ. ಆದರೆ, ಪುನರುಚ್ಚಾರವು ಇಲ್ಲಿ ಅನಿವಾರ್ಯವಾಗುತ್ತಿದೆ, ಪ್ರಜ್ಞೆ ಭಾಷೆಯನ್ನು ಪ್ರೇರಿಸುತ್ತದೆ. ಆದರೆ, ಪ್ರಾಣಾಃ ವಾ ಋಷಯಃ>ಬೃಹದಾರಣ್ಯಕ. ಪ್ರಾಣವಿರುವ ಪ್ರಾಣಿಗಳು ಋಷಿಯಂತೆ! ಗರ್ಭ (ಭಗ)ಸ್ಥ ವಾಮದೇವ ಹೆಸರಿನ ಪಿಳ್ಳೆ, ಕುನ್ನಿ, ತಾಯಿಗೆ ಹೇಳುತ್ತದಂತೆ : ಅಹಂ ಮನಃ ಅಭವಂ ಸೂರ್ಯಃ ಚ ಇತಿ[೧೩] ಭಗವಂತ ಎಂದರೆ ಏನು ಅರ್ಥ? ಸ್ಥಳ (ಭಗ)ದ ಹೊರಗೆ, ಸ್ಥಾನವೇ ಇಲ್ಲದಿರುವ, ಭಗಸ್ಥವಿರುವ ಈ ಕಾಲಶಕ್ತಿಯು, ಲೋಕಕ್ಷಯಕೃತ್ ಪ್ರವೃದ್ಧ ಕಾಲನು ತಾನು ಎಂದು ಮಾತಾಡುತ್ತದಂತೆ! ಭಗಸ್ಥಲಿಂಗ=ಕೃಷ್ಣಶಕ್ತಿ ಮಾತಾಡುತ್ತದೆ ಎಂದು ನಂಬಿಸಲಾಗಿರುವುದನ್ನು ಈಗ ಬಯಲಿಗೆ ತರುವ ಆವಶ್ಯಕತೆ ಇದೆ.

ಭಾಷೆಯೊಳಗಿನ ಧಾರಣ(concepts) ವನ್ನು ವ್ಯಕ್ತಿಗಳು ತಮ್ಮ ಸ್ವೈರ ಸಂಕಲ್ಪಶಕ್ತಿಯಿಂದ ಹೀಗೆ ಕಲ್ಪಿಸತೊಡಗಿರುವುದರಿಂದ, ಇಂದು ಭಾಷೆಯು ವಾಕ್‌ಪಾತಳಿಯಿಂದ, ಗೀರ್ವಾಣವಾಣಿಯ (ಲಿಂಗಾಂಗ ಯೋಗದ) ಪಾತಳಿಯ ಮೇಲೆ ಬಂದಿದೆ; ಶಬ್ದಮಣಿದರ್ಪಣದಲ್ಲಿ ಭಾಷೆಯು ನಾಭಿಮೂಲದೊಳ್ ಜನಿಯಿಸುಗುಂ ಎಂಬ ಕೇಶಿರಾಜನ ಉಕ್ತಿ ಹಾಗೂ ವಚನಕಾರನೊಬ್ಬ ಹೇಳುವ ಜ್ಯೋತಿರ್ಲಿಂಗ ಶಕ್ತಿ ಎಂಬ ವಚನ ಇದಕ್ಕೆ ಸಾಕ್ಷಿ. ಈ ಬಗೆಯಲ್ಲಿ ಮಾನವ ಜೀವನದಲ್ಲಿ ಆಸಾಂಗತ್ಯದ, ವಿಕೃತಿಯ ವಿವಿಧ ಪ್ರಕಾರಗಳು ತಲೆದೋರಲು ಕಾರಣ ಏನು? ಬಾಳಿನಲ್ಲಿ ಕಾಣಿಸಿಕೊಳ್ಳುತ್ತಿರುವ ಈ ಅಸಾಂಗತ್ಯ ಪ್ರೇರಿಸುವ ಶಕ್ತಿಯು ಯಾವುದು? ಇಂದಿನ ವೇದೋಪನಿಷತ್ತುಗಳು ಮತ್ತು ಭಗವತ್‌ಗೀತೆಯಂತಹ ಶ್ರದ್ಧಾಸ್ಥಾನವನ್ನು ರೂಪಿಸುವ ಗ್ರಂಥಗಳು, ನಂಬಹಚ್ಚಿರುವ ಸುಳ್ಳುಗಳೇ ಈ ಮಾನವರನ್ನು ನರ(ಳ) ರ ಹಂತಕ್ಕೆ ತಳ್ಳುತ್ತಿವೆ. ವೇದದ ಸುಳ್ಳಿನ ಈ ಒಂದು ಮಾದರಿ ಪರೀಕ್ಷಿಸಿ, ಇದರ ಖೊಟ್ಟಿತನವನ್ನು ಖಚಿತ ಪಡಿಸಿಕೊಳ್ಳಬಹುದಾಗಿದೆ.

೧) ಸೂರ್ಯ (ಪ್ರಜ್ಞಾ) ಶಕ್ತಿಯನ್ನು, ಚಾಂದ್ರ (ಪ್ರಾಣಲಿಂಗ ಚೇತಸದ) ಶಕ್ತಿಯ ಪಾತಳಿಯ ಮೇಲೆ ಆದಿತ್ಯನ ಹಂತಕ್ಕೆ ತಂದಿರುವ ಈ ಮಾಟ ನೋಡಿಕೊಳ್ಳಿ ಆದಿತ್ಯನನ್ನು ಸೂರ್ಯನೆಂದು ನಂಬಿಸಲಾಗಿದೆ. ಡಾ. ಎಸ್. ರಾಧಾಕೃಷ್ಣರಂತಹರು ಉಪನಿಷತ್ತುಗಳಲ್ಲಿ ಬರುವ ಆದಿತ್ಯ ಪದಕ್ಕೆ ಸೂರ್ಯ ಎಂದು ಅರ್ಥ ಹೇಳುತ್ತಾರೆ.

೨) ಚಾಂದ್ರ(ಪ್ರಾಣಲಿಂಗ ಪಾತಳಿ)ಶಕ್ತಿಯನ್ನು ಸೂರ್ಯ (ಪ್ರಜ್ಞಾ) ಶಕ್ತಿಯ ಹಂತಕ್ಕೆ ಏರಿಸಲಾಗಿದೆ.

ಸಮುದ್ರಮಂಥನದಲ್ಲಿ ಜಲದೊಳಿಗಿಂದ ಹೊರಬಂದವನು ಚಂದ್ರನು ತಾನೆ? ಆದರೆ, ಸಲಿಲ (ಶರೀರ) ರೂಪೀ ಅದಿತಿಯು 'ಮಾರ್ತಾಂಡ ನಾಮಾನಂ ಸೂರ್ಯಂ' ಹಡೆದಳು, ಎಂದು ಈ ವೇದವು ನಂಬಿಸಿದೆ![೧೪] ಹಾಗಾದರೆ, ಇದರಿಂದ ಆದ ಹಾನಿಯ ಸ್ವರೂಪವೇನು? ಜೀವನ = ಜೀವಿತ ಈ ಭೇದ ನಷ್ಟವಾಗಿದೆ.

---

* ಭಾರತೀಯ ಹಾಗೂ ಗ್ರೀಕ್ ಸಾಂಸ್ಕೃತಿಕ ಪರಂಪರೆಗಳ ತೌಲನಿಕ ಸಮೀಕ್ಷೆಯಲ್ಲಿ ಈ ಎಲ್ಲ ಅಂಶಗಳು ಕಾಣಸುತ್ತವೆ. ಭಾರತೀಯ ಸಂಶೋಧನ ಶಾಸ್ತ್ರವು ಈ ಬಗೆಯ ಕ್ರಿಯಾವಿಧಾನ ಶಾಸ್ತ್ರವನ್ನು ಇನ್ನೂ ಹಲವು ಬಗೆಗಳಲ್ಲಿ ರೂಪಣಗೊಳಿಸಿಕೊಳ್ಳಬೇಕಾಗಿದೆ (ಸಂ.)

ಸ್ಥಳ-ಕಾಲದ ಆಚೆಗಿನ ಪಾತಳಿಯ ನಿನ್ನೆ-ಇಂದುಗಳು ಆಗಾಮಿ ನಾಳೆಗಳತ್ತ ಅವ್ಯಾಹತವಾಗಿ ಸಾಗುವ ಜೀವನವನ್ನು: ಬಯಲು-ನಿರ್‌ವಲಯ ಹಂತಕ್ಕೆ ತಂದದ್ದಾಗಿದೆ. ಕೇವಲ ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ರೂಪ ಈ ವಿಭಾಗದ್ವಯದ ಎಂದರೆ ಪಿಂಡ-ಬ್ರಹ್ಮಾಂಡೈಕ್ಯವೇ ಪರಮಸಿದ್ಧಿ ಎಂಬ ಗ್ರಹಿಕೆಯ ಜೀವಿತದ ಪಾತಳಿಗೆ ಈ ಜೀವನವನ್ನು ತಂದು ನಿಲ್ಲಿಸಿದ್ದಾಗಿದೆ. ಈ ಅಸಾಂಗತ್ಯವು ಸಂಭವಿಸುತ್ತಿರುವ ಎಡೆಯ ಈ ವಿಚಾರವನ್ನೇ ಇನ್ನೂ ಒಂದು ಬಗೆಯಿಂದ ಹೀಗೆ ಹೇಳಬಹುದು. ಕಾಲಾಯ ತಸ್ಮೈ ನಮಃ! ಕಾಲಶಕ್ತಿಯೇ ಈ ಪ್ರಪಂಚದ ಏನೆಲ್ಲ ಆಗುಹೋಗುಗಳ ಆದಿಕಾರಣ, ಎಂಬ ನಂಬುಗೆ, ಭಾರತೀಯರಲ್ಲಿ ಎಂದಿನಿಂದಲೇ ಇದೆ. ಆದರೆ, ನಾವು ಈಗ ಪೂಜಿಸುತ್ತಿರುವುದು ಭಾವಾತ್ಮಕ ಜೀವನ ಪ್ರೇರಕನಾದ ಕಾಲಶಕ್ತಿಯನ್ನಲ್ಲ! ಅಭಾವಾತ್ಮಕ ಜೀವಿತ ಪ್ರಚೋದಕ ಯೋನಿಲಿಂಗರೂಪೀ ಮೃತ್ಯುಸ್ವರೂಪೀ ಚಾಂದ್ರಶಕ್ತಿಯನ್ನು=ಕರಿಗಾಲ ಕೃಷ್ಣ =ರುದ್ರಶಕ್ತಿಯನ್ನು ನಾವು ಇಂದು ಆರಾಧಿಸುತ್ತಿದ್ದೇವೆ.

ಈ ಬಾಳಿನಲ್ಲಿ ಅಸಾಂಗತ್ಯವು ಉಂಟಾಗುತ್ತಿರುವ ಎಡೆಯು ಇಲ್ಲಿಯೇ ಇದೆ. ಕಪಟನಾಟಕ ಸೂತ್ರಧಾರಿ ಎಂಬ ಪಾತ್ರ ಸೃಷ್ಟಿಸಿರುವ ಈ ಕವಿಯ ಮೋಸವು ಇಲ್ಲಿ ಬಯಲಿಗೆ ಬರುತ್ತಿದೆ. ಈ ಸರ್ವಸಂಹಾರಕ ಕಾಲನು ತಾನು ಲೋಕಕ್ಷಯಕೃತ್ ಪ್ರವೃದ್ಧ ಕಾಲನಾಗಿದ್ದೇನೆಂದು ಈ ಭಗವಂತನು ಭಗ-ವತ್ ಗೀತೆಯಲ್ಲಿ ಹೇಳಿದ್ದಾನೆ. ಆದರೆ, ಈ ಭಗ(ಗರ್ಭ)ಸ್ಥ ಭಗ-ವಂತ ಮಾತಾಡುವ ಬಾಯಿ ಯಾವುದು? ಗರ್ಭಸ್ಥ ವಾಮದೇವ ಮಾತಾಡಿದನು, ಎಂಬ ಮೋಸ ವೇದದಲ್ಲೇ ಇದೆ! ಭಗ-ಸ್ಥ ದೇವನು ಮಾತಾಡಿದ್ದು, ಪಂಚಮವೇದ ಎಂಬ ಮಹಾಭಾರತದಲ್ಲಿ ಇದೆ! ಈ ಎರಡೂ ಮಾತು: ಮೋಸದೊಳಗಿನ ಅಸಂಗತಿಯು ಹೃದ್ಯವಿದೆ!

ಈ ಕಾ(ಳ)ಲ ಶಕ್ತಿಯನ್ನು ಕಾಲ-ಕಾಲೇಶ್ವರ ಎಂದು ಹೇಳುವ ವಾಡಿಕೆಯು ಉಂಟು! ಇದರ ಅರ್ಥವು ಏನು? ಇಲ್ಲಿ ಎರಡು ಕಾಲಗಳ ಸೂಚನೆಯೂ ಉಂಟು! ಒಬ್ಬ ಕಾಲನು ತಾನು ಇನ್ನೊಬ್ಬ ಕಾಲ(ನ) ಈಶ್ವರ ಎಂಬ ಅರ್ಥವು ಇಲ್ಲಿ ಉಂಟಷ್ಟೆ? ಗಂಡರ ಗಂಡ ತಾನು, ಎಂಬೀ ಬಗೆಯ ಹುಂಬತನದ ಬಿರುದಾವಳಿಗಳು ಪ್ರಾಚೀನ ರಾಜರ ಸ್ಪರ್ಧೆಯಲ್ಲಿ ರೂಢಿಯಲ್ಲಿ ಇದ್ದವು. ಆ ಬಗೆಯ ಸ್ಪರ್ಧಾಭಾವವೇ ಈ ಕಾಲ-ಕಾಲೇಶ್ವರ ಎಂಬಲ್ಲೂ ಉಂಟು. ಈ ಕಾಲ ಕಾಲೇಶ್ವರನಿಗೆ ಮಹಾನ್‌ಕಾಲ ಎಂದು ಕರೆವ ಸಂಪ್ರದಾಯವೂ ಇದೆ. ಇವೆರಡೂ ಬಿರುದುಗಳು ಸ್ಪರ್ಧಾಸೂಚಕವಿರುವುದು ನಿಶ್ಚಿತ. ತಮ್ಮ ದೇವನು, ಕಾಲಕಾಲೇಶ್ವರನು ಮಹಾನ್ ಕಾಲನು ಎಂಬಲ್ಲಿ ಪರ್ಯಾಯದಿಂದ ಇನ್ನೊಂದು ಕಾಲಶಕ್ತಿ ಮಹಾನ್ ಅಲ್ಲ; ಅದು ಅಲ್ಪ-ಕ್ಷುದ್ರವಿದೆ, ಎಂದು ವ್ಯಂಗ್ಯವಾಗಿ ಸೂಚಿಸಲಾಗುತ್ತಿದೆ! ಇದು ನಿಜವಿದ್ದರೆ, ಇಲ್ಲಿ ಅಭಿಪ್ರೇತವಿರುವ ಅಲ್ಪಕ್ಷುದ್ರವಾದ ಇನ್ನೊಂದು ಕಾಲಶಕ್ತಿಯು ಯಾವುದು? ಇದರ ಸ್ವರೂಪವೇನು? ಇದನ್ನು ನಿರ್ದಿಷ್ಟಪಡಿಸಿ ಅರಿಯಲು ಶಕ್ಯವೇ? ಇಂತಹ ಪ್ರಮಾಣಗಳು ಎಲ್ಲಿವೆ?

ಲೋಕಕ್ಷಯಕೃತ್ ಪ್ರವೃದ್ಧ ಕಾಲನು, ತಾನು, ಕೃಷ್ಣಕಾರಸ್ಥಾನೀ ಭಗವಂತನೆಂಬುವನು ಕೊಂದ ಅಥವಾ ಹೇಳಹೆಸರಿಲ್ಲದಂತೆ ಮಾಡಿರುವ ಈ ಇನ್ನೊಬ್ಬ ಕಾಲನು ಯಮನು, ವೈವಸ್ವತನು! 'ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನ್ ಅಹಂ' ಎಂದಿರುವಲ್ಲಿ, ಈ ಕರಿಯ ಕಾಲನು, ಚಂದ್ರನು. ಈ ವೈವಸ್ವತ=ಸೂರ್ಯನನ್ನು ಇಲ್ಲವಾಗಿಸಿರುವ ಇಲ್ಲಿ ಅಭಿಚಾರಕೃತ್ಯವು ಅಭಿಪ್ರೇತವಿದೆ. ಈತನು ಯಮ=ಧರ್ಮನು! ಈ ಸೌರಮೃತ್ಯುದೇವನನ್ನು ಧರ್ಮ ಎಂದುದು ನಿಷ್ಕಾರಣವಲ್ಲ. ಧರ್ಮ ಎಂದರೆ ವಿಶ್ವನಿಯಮ. ಈ ಧರ್ಮವನ್ನು ವೈವಸ್ವತ ಮನುವಿನ ವಿವರಣೆಯಲ್ಲಿ, ಗ್ರಂಥದ ಉದ್ದಕ್ಕೂ ಬಗೆಬಗೆಯಿಂದ ಹೇಳಿದ್ದಾಗಿದೆ.

ಇಲ್ಲಿ ಸೋಜಿಗವೆಂದರೆ, ಯಮ, (ನಿ)ಯಮ ರೂಪಿ ಈ ಮೃತ್ಯುಶಕ್ತಿಯು, ನಿಷ್ಕಾರಣವಾಗಿ ನಿರ್‌ನಿಮಿತ್ತದಿಂದ ಯಾರನ್ನೂ ಹಿಂಸಿಸಲಾರದು! ಈ ಹಿನ್ನೆಲೆಯಲ್ಲಿ ಯಮ-ನಿಯಮ ಬದ್ಧ-ಧರ್ಮಕ್ಕೆ ವಿಶ್ವನಿಯಮಕ್ಕೆ ಅನುಸರಿಸಿ ಶಿಕ್ಷಿಸುವ-ಸಂಹರಿಸುವ ಯಮ=ಧರ್ಮನ ಉಚ್ಚಮಟ್ಟವು ಅರಿಕೆಗೆ ಬರುತ್ತದೆ. ಆದರೆ, ಈ ವೈವಸ್ವತ ವಿರೋಧೀ ಭಗವಂತ ಹೆಸರಿನ ವಿರೋಧೀ ಕಾಲಶಕ್ತಿಯ ಕ್ಷುದ್ರತನ ನೀಚವೃತ್ತಿ ಬೆಳಕಿಗೆ ಬರುತ್ತಿದೆ. ಈ ಕಾಲನು ನ್ಯಾಯ-ಅನ್ಯಾಯದ ಎಗ್ಗಿಲ್ಲದೆ, ಏನೆಲ್ಲವನ್ನೂ ನಾಶಮಾಡಲು ನಿಗುರಿ ನಿಂತಿದ್ದೇನೆ, ಎಂದು ಹೇಳುವ ಈ

ಕರಿಗಾಲ ಕೃಷ್ಣಶಕ್ತಿಯು ದೇವರು ಎಂಬ ಹೆಸರಿಗೂ ಅನರ್ಹವಿದೆ. ಇವನು ವಿವೇಕರಹಿತ ಸ್ವಚ್ಛಂದೀ ಕೇಡಾಳಿ ಆಗಿದ್ದಾನೆ. ಈ ಲಿಂಗರೂಪೀ ಕಾಲಶಕ್ತಿ ಎಂದು ಸ್ಪಷ್ಟವಾಗಿ ಇಲ್ಲಿ ಹೊರವಡುತ್ತಿದೆ! ಈ ಸೌರ ಯಮ-ಧರ್ಮನನ್ನೂ ಚಾಂದ್ರನನ್ನಾಗಿಸಿದ್ದಾಗಿದೆ. ಕೋಣನನ್ನೇರಿರುವನೆಂಬ ಯಮನು ಚಾಂದ್ರಲಿಂಗ ಶಕ್ತಿ! ಈ ಯಮನು ಯಮಿ ಎಂಬ ತನ್ನ ಸೋದರಿಯ ಸಂಗಾತಿ ಎಂದು ಈತನನ್ನು ಭ್ರಷ್ಟಾಚಾರಿಯಾಗಿಸುವ ಪ್ರಯತ್ನವಾಗಿದೆ.

ಹೀಗೆ, ಭಾರತೀಯ ಪೂರ್ವಪರಂಪರೆಯಲ್ಲಿ ಮೃತ್ಯುತತ್ತ್ವಗಳು ಎರಡು ಇವೆ. ಯಮ : ಧರ್ಮ ಹೆಸರಿನ ವೈವಸ್ವತ ಕಾಲಶಕ್ತಿ, ಪ್ರಕಾಶತತ್ತ್ವದ ಉಪಾಸನೆಯಲ್ಲಿ, ಸಾಕ್ರೆಟಿಸನಂತಹವನು ಸ್ವಾಗತಿಸುವ ಆ ಮೃತ್ಯುತತ್ತ್ವವು ಪ್ರಕಾಶ ರೂಪವಿರುತ್ತದೆ. ಇನ್ನೊಂದು ಬಗೆಯ ಕಾಲಶಕ್ತಿ : ಪ್ರಾಣಲಿಂಗ ಪಾತಳಿಯ ಸ್ವೈರಾಚಾರಗಳ ಫಲಿತವಾಗಿದೆ. ಆರಾಧಿಸುವ ದೇವತಾಸ್ವರೂಪದ ಮೇಲಿಂದ ಆ ಭಕ್ತವರ್ಗದ ಸಾಂಸ್ಕೃತಿಕ ಜೀವನದ ಅಥವಾ ಜೀವಿತದ ಮಟ್ಟವು ಬಯಲಿಗೆ ಬರುತ್ತದೆ. ಜೀವನ ಪೂಜಕರು ಯಮಧರ್ಮನ ಭಕ್ತರು. ಜೀವಿತದ ಉಪಾಸಕರು ಲೈಂಗಿಕ ಪಾತಳಿಯ ಮೃತ್ಯುಶಕ್ತಿಯ ಭಜಕರು. ಇಂದು ಭಾರತೀಯರಿಗೆ ಗೀತೆಯೆ ರಾಷ್ಟ್ರೀಯ ಮಹತ್ತ್ವದ ಬೈಬಲ್ಲನ್ನು ಮೀರಿಸುವ ಪವಿತ್ರಗ್ರಂಥ. ಕರಿಗಾಲ ಕೃಷ್ಣ (ವಿಷ್ಣು-ರುದ್ರ), ಭಾರತೀಯರ ಉಪಾಸ್ಯ ದೈವತವಾಗಿದೆ! ಈ ಒಂದು ನಿಷ್ಕರ್ಷವೂ ಸಾಕು. ಭಾರತದಲ್ಲಿ, ಇಂದು ತಾಂಡವವಾಡುತ್ತಿರುವ ಭ್ರಷ್ಟಾಚಾರ, ಲಂಚಗುಳಿತನ, ಅನೈತಿಕ ವ್ಯವಹಾರ ಇತ್ಯಾದಿ ಸ್ವರೂಪದ ದುಷ್ಟವೃತ್ತಿಗಳ ಪ್ರೇರಣಾ ಕೇಂದ್ರವು ಯಾವುದು, ಎಲ್ಲಿದೆ, ಎಂಬುದನ್ನು ಖಚಿತ ಪಡಿಸಿಕೊಳ್ಳಲು.

ಈ ಮಾತು ಪ್ರಾರಂಭವಾದದ್ದು ಕಾಲಾಯ ತಸ್ಮೈನಮಃ ಎಂಬ ನಮನದ ಸಂದರ್ಭದಿಂದ. ಭರ್ತೃಹರಿಯು ವಂದಿಸಿದ ಈ ಕಾಲನು, ವಿವೇಕಯುಕ್ತ ಧರ್ಮ=ನಿಯಮಗಳ ಪಾತಳಿಯ ಯಮ ಅಲ್ಲ! ಈ ಭರ್ತೃಹರಿಗೆ ಅವಿವೇಕೀ ಕೃಷ್ಣಕಾಲ, ಮಾತ್ರ ಗೊತ್ತಿತ್ತು. ಪ್ರಕಾಶತತ್ತ್ವದ ವೈವಸ್ವತ: ಯಮಸ್ವರೂಪೀ ಕಾಲನೂ ಇದ್ದಾನೆ. ಇವರು ಇಬ್ಬರು ಇದ್ದಾರೆ, ಎಂಬ ಪ್ರಜ್ಞೆ ಭರ್ತೃಹರಿ ಕಾಲದಲ್ಲಿ ಇರುವ ಶಕ್ಯತೆಯೇ ಇಲ್ಲ. ಇಂದಿನ ವೇದದಲ್ಲಿಯೇ ವೈವಸ್ವತ=ಯಮ ಆದಿತ್ಯನಾದದ್ದೂ ಉಂಟು. ಮನುಜರನ್ನು ನರ(ಳ)ರನ್ನಾಗಿಸಲು, ಇವರ ಅಂತರ್ಯಾಮಿ ಮನುವೈವಸ್ವತನನ್ನು ಭಗವತ್‌ಗೀತೆಯ ಭಗವಂತನು ಎಂದೋ ಮಾನವರ ಕಣ್ಮರೆಯಾಗಿಸಿದ್ದಾನೆ! ಈ ಮಾನವರ ಅಂತರ್ಯಾಮಿ ಮನು: ವೈವಸ್ವತನ ಪಟ್ಟವನ್ನು ಇಂದು ಬುದ್ಧಿ=ಬುದ್ಧಿಯ ಅಧೀನ ಮನಸ್ಸು ಆಕ್ರಮಿಸಿದೆ! ಆ-ತ್ಮನ್ ಭಗವಂತ, ಮನುವಿಗೂ ಮಿಗಿಲಂತೆ!

ಈ ಮಾನವರ ಜೀವನದಲ್ಲಿ ಅಸಾಂಗತ್ಯವು ಉಂಟಾಗಿರುವ ಎಡೆ ಹೀಗೆ ಇಲ್ಲಿದೆ. ಮನು ವೈವಸ್ವತನಿಂದ (ಸೌರಶಕ್ತಿಯಿಂದ) ಪ್ರೇರಿತವಿರುವ ನಿನ್ನೆ-ಇಂದು-ನಾಳೆಗಳ ಸ್ವರೂಪದ ಪ್ರಕಾಶರೂಪ ಕಾಲಗತಿಯನ್ನು ಆರಾಧಿಸುವುದನ್ನು ಬಿಟ್ಟು ಈ ಮಾನವರೆಂಬ ಪ್ರಾಣಿಗಳು ಪಿಂಡ, ಬ್ರಹ್ಮಾಂಡ ಐಕ್ಯದ-ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಈ ವಿಭಾಗದ್ವಯದ ಸಂದರ್ಭದ ಕತ್ತಲಿನಿಂದ ಆವೃತ ವೃತ್ತಾಕೃತಿಯ [0] ಕಾಲಶಕ್ತಿಯು ನಮಗೆ ಇಂದು ಪೂಜ್ಯವಾಗಿದೆ! ಶೂನ್ಯ [0] ಸಿದ್ಧಿಯೇ ಬಾಳಗುರಿ ಎನಿಸಿದೆ! ಮನುಜರನ್ನು ರೂಪಿಸುವ ಕಾಲ ಕಡೆಗಣಿಸಿ ನರ(ಳ) ಪ್ರಾಣಿಗಳನ್ನು ಪ್ರೇರಿಸುವ ಕಾಲಶಕ್ತಿಯನ್ನು ಪೂಜಿಸುತ್ತಿದ್ದೇವೆ. ನೇರ-ಸರಳಗತಿಯ ಪ್ರಕಾಶ ತತ್ತ್ವಬಿಟ್ಟು, ವಕ್ರ-ವೃತ್ತಾಕೃತಿಯ ಕತ್ತಲುಗವಿಯ ಕಾಲವನ್ನು ಪೂಜಿಸುತ್ತಿದ್ದೇವೆ. ವಕ್ರೋಕ್ತಿಃ ಏವ ಆತ್ಮಾ ಕಾವ್ಯಸ್ಯ! ಎಂಬ ಈ ಉಕ್ತಿ ಸಾಹಿತ್ಯಿಕರನ್ನು ಕರಿಗಾಲ ಲಿಂಗಪೂಜೆಯ ದಿಕ್ಕಿನಲ್ಲಿ ತಳ್ಳುತ್ತಿದ್ದೆ.*

ಈ ವಿಚಾರಗಳ ಆಶಯಕ್ಕೆ ಆಧಾರಭೂತ ಆಕೃತಿಗಳು ಸನಾತನ ಇವೆ. ಪ್ರಸ್ತುತ ಸೂತ್ರವು ಕಾಲಗತಿ ಶಕ್ತಿಯ ಆಶಯ : ಅರ್ಥಗ್ರಹಣಕ್ಕೂ ಪ್ರಯೋಜನಕಾರಿಯಾಗಲಿದೆ. ಈ ಮೊದಲು ವಿವರಿಸಿರುವ ಉಭಯಸ್ವರೂಪ

---

* ಕುಂತಕನ 'ವಕ್ರೋಕ್ತಿ ಜೀವಿತ'ದ ಈ ಮಾತು ಒಂದು ನಿರ್ದಿಷ್ಟ ಕಾವ್ಯಪರಂಪರೆಯನ್ನು ಆಚರಣೆಯ ಸಂಪ್ರದಾಯ ತಿಳಿಸುತ್ತದೆ. ವಕ್ರೋಕ್ತಿ 'ಜೀವಿತ' ಪ್ರಾಧಾನ್ಯವಿದೆ. 'ಶಬ್ದಾರ್ಥೌ ಸಹಿತಾ ವಕ್ರಕವಿವ್ಯಾಪಾರಶಾಲೀನೀ' ೧.೭ ಎಂಬ ಈ ಮಾತು ಹಲವು ನೆಲೆಗಳಲ್ಲಿ ಗಮನಾರ್ಹ (ಸಂ)

ಕಾಲಗಳಲ್ಲಿ ಮನು=ವೈವಸ್ವತ (ಸೌರ ಶಕ್ತಿಯಿಂದ) ಪ್ರಚೋದಿತ ಕಾಲ ಒಂದುಂಟು. ಇದು, ಪ್ರಕಾಶತತ್ತ್ವ ಬಾಳಿನಲ್ಲಿ ಹುದುಗಿರುವ ಅಂಶಃಸಂಗತಿಯುಕ್ತ (immanent) ಅರ್ಥ=ವಿಚಾರಗಳ ಪ್ರಜ್ಞೆಯಿಂದ ಪ್ರಚೋದಿತ ಕಾಲ. ಈ ಮನುಜನಿಗೆ ಆಗಾಮಿ ನಾಳೆಗಳತ್ತ ಮುನ್‌ನಡೆವ ಪ್ರೇರಣೆಯು ಈ ವೈವಸ್ವತನಿಂದ ದೊರೆಯುತ್ತದೆ. ಪ್ರಜ್ಞಾನೇತ್ರೋ ಲೋಕಃ ಎಂದರೆ, ಇದು ಮಾನವಧರ್ಮದ ಮನುಜರ ಲೋಕ. ಇದು ನಿನ್ನೆ-ಇಂದುಗಳ ರೂಪದಲ್ಲಿ ಬರಲಿರುವ ನಾಳೆಗಳತ್ತ ನೇರ ಸಾಗಬಲ್ಲುದು. ಈ ಸರಳಗತಿಯ ಪ್ರಕಾಶತತ್ತ್ವದ ಕಾಲವು ಮನುಜರನ್ನು ರೂಪಿಸುವ, ಪ್ರಚೋದಿಸುವ ಅಂತಶಕ್ತಿಯುಳ್ಳದ್ದು ಆಗಿದೆ. ಆದರೆ, ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಈ ವಿಭಾಗದ್ವಯದ (ಕ್ರಿಯೆ-ಪ್ರತಿಕ್ರಿಯೆಗಳ ಸಂದರ್ಭದಿಂದ ಉಂಟಾಗುವ) ಗತಿಯು ನಿತ್ಯವಾಗಿ ವೃತ್ತಾಕೃತಿಯ [o] ಕತ್ತಲಿನ ಸ್ವರೂಪದ್ದೇ ಇರಬಲ್ಲುದು ಸ್ಥಲ (ದೇಹ)=ಬಯಲು=ಅಂತರಿಕ್ಷ, ಇದಕ್ಕೆ ಸ್ವಂತ ಪ್ರಕಾಶವಿಲ್ಲ!

ಪುರಾತನರು, ಇದನ್ನು ಕತ್ತಲೆಯ ಕಾಲ ಎಂದಿದ್ದಾರೆ. ಈ ವೃತ್ತಾಕೃತಿಯ ಗತಿಯಿಂದ ಉಂಟಾಗುವ ಈ ಲೋಕವನ್ನು ಪುರಾತನರು ಅಂಧತಮಸ್ಸಿನ [o] ಲೋಕ ಎಂದಿದ್ದಾರೆ. ಭಾರತೀಯ ಪುರಾತನರು ಛಾಯಾ ಭಗವತಿ =ದುರ್ಗಾಕಾಲೀ ಎಂಬ ಹೆಸರಿಸಿರುವ ಕರಿಮಾಯಿಯ ಲೋಕ ಇದು. ಇದನ್ನು ಮೃತ್ಯುವಿನಿಂದ ಆವೃತಲೋಕ ಎಂದೂ ಉಪನಿಷತ್ತು ಹೇಳುತ್ತದೆ. ಪಾಶ್ಚಾತ್ಯರಲ್ಲಿ ಪ್ಲೇಟೋ ವರ್ಣಿಸಿರುವ ಗವಿ ಶ್ವಪದಾದಿ (ಪಶುಗಳ ವಾಸಸ್ಥಾನ) ಅಥವಾ ಗುಹೆ (ಯತಿ ಮುನಿಗಳು ನರ(ಳ) ಸಂಪ್ರದಾಯದ ಗುರುವರ್ಗವು ಇರುವ ಎಡೆ) ಎಂದರೂ ಈ ಕತ್ತಲಿನ=ಜೀವಿತದ [o] ಲೋಕವೇ ಸರಿ. ಪ್ರಜ್ಞೆ-ಉಪಜ್ಞೆ ಪ್ರೇರಿಸುವ ಕಾಲಗತಿ, ಪ್ರಕಾಶರೂಪವಿರುವಂತೆ, ಪ್ರಾಣಲಿಂಗದ ಅಂಗವಾದ ಚಿತ್‌ಶಕ್ತಿ ಅಥವಾ ಬುದ್ಧಿಯು ಪ್ರೇರಿಸುವ ಕಾಲವು ಕತ್ತಲು ಗವಿಯತ್ತ ತಳ್ಳಿಕೊಂಡೊಯ್ಯುವುದು ನಿಶ್ಚಿತವಿದೆ. ಆಕೃತಿ ಮತ್ತು ಆಶಯ ಇವೆರಡರಲ್ಲಿ ಇರುವ ಅನ್ಯೋನ್ಯವು, ಆ ಉಭಯ ಕಾಲಗಳ ಅರ್ಥಗ್ರಹಣಕ್ಕೂ ಉಪಕಾರಕವಿದೆ.

ಭಾರತೀಯರು, ಇಂದು ಭ್ರಷ್ಟಾಚಾರ, ಅನೈತಿಕ ವ್ಯವಹಾರ ಇವು ತಾಂಡವ ಆಡುತ್ತಿರುವುದನ್ನು ಕಾಣುತ್ತಿರಲು ಕಾರಣವೇನು ಎಂಬುದನ್ನು ಹುಡುಕಲು ದೂರ ಹೋಗಬೇಕಾಗಿಲ್ಲ. ಅದಿತಿ ಪುತ್ರ=ಆದಿತ್ಯನೆಂಬ ವಿಷ್ಣುವು ವೇದವೇ ಹೇಳುತ್ತಿರುವಂತೆ ಅದಿತಿಪತಿಯೂ ಆಗುತ್ತಾನೆ. ಇಂತಹ ತಾಯ್ಗಂಡ, ಸೋದರೀ ಮಿಂಡರೂಪ, ದೇವರನ್ನು ನಾವು ಭಜಿಸುತ್ತಿದ್ದೇವೆ. ಅಲ್ಲದೆ, ಕರಿಗಾಲಕೃಷ್ಣ-ವಿಷ್ಣುರೂಪ ಕಾಲಶಕ್ತಿಯನ್ನು ಪೂಜಿಸುತ್ತಿರುವಲ್ಲಿಯೇ ಆಪತ್ತುಗಳಿಗೆ, ತುರ್ತು ಪರಿಸ್ಥಿತಿಗೆ ನಾವು ಆಮಂತ್ರಿಸುತ್ತಿದ್ದೇವೆ, ಎಂಬುದನ್ನು ಸ್ಮರಿಸಿಕೊಂಡರೂ ಸಾಕು. ಇಂದಿನ ವಸ್ತುಸ್ಥಿತಿಯು ಅರ್ಥವಾಗಲು. ಕತ್ತಲಿಂದ ಆವೃತವಿರುವ ಪ್ರಾಣಲಿಂಗ ಪ್ರಚೋದಕ ಕಾಲದ ಪರಿಣಾಮ ಇದಕ್ಕಿಂತ ಬೇರೆ ಆಗಲು ಶಕ್ಯವಿಲ್ಲ. ಭಾರತವು ಮಾತ್ರವಲ್ಲ, ಪ್ರಪಂಚವೇ ಪ್ರಳಯದ ಅಂಚಿನಲ್ಲಿ ನಿಂತಿದೆಯಲ್ಲ? ಎಂಬ ಪ್ರಶ್ನೆಯ ಉತ್ತರವೂ ಇಲ್ಲಿಯೇ ಇದೆ. ಇಂದು ಪ್ರಪಂಚದ ಮೇಲೆ ಪ್ರಭಾವಬೀರುತ್ತಿರುವ ಧರ್ಮಪಂಥಗಳು ಯಾವುವು? ವ್ಯಾಲ್ಲಾಸನು ಕಂಡ missing link ವಾನರಬಂಧು ನರ(ಳ) ಸಂಪ್ರದಾಯಗಳ ಗುರುವರ್ಗವು ಇಂದು ಲೋಕಪೂಜ್ಯವಾಗಿದೆ! ಪ್ರಪಂಚದ ಮೇಲಣ ಈ ಭಗ-ವಂತ ಪಂಥಗಳು ಮಾನವರ ಪ್ರಜ್ಞೆಯನ್ನು ಸ್ಥಿತ-ಸ್ಥಗಿತಗೊಳಿಸಿ, ಆ ಸ್ಥಾನದಲ್ಲಿ 'ಬುದ್ಧಿಯನ್ನು ಸ್ಥಾಪಿಸಿವೆ. ಬುಧನ-ಬುದ್ಧಿಯ ಈ ಜಾತಕವನ್ನು ಸಮೀಕ್ಷಿಸಿದರೆ, ಮಾನವೇತಿಹಾಸಕ್ಕೆ ದೊರೆತಿರುವ ಹೊಸತಿರುವಿನ ಅರ್ಥವು ಸ್ಪಷ್ಟವಾಗಲಿದೆ.

ಟಿಪ್ಪಣಿಗಳು

೧. Kuzenetsoy, ***Albert Einstein,*** Progressive Publishers, Mascow P-55

೨. ***ಋಗ್ವೇದ ಸಂಹಿತ*** X. ೧೨೫

೩. Ferm V. A.; ***History of Philosophical Systems***, p. 59.

೪. Bertrand Russell; ***History of Western Philosophy*** pp. 125, 152

೫. *Ibid* p. 147
೬. *1bid* p.146
೭. ***ಮೈತ್ರಾಯಣೀ ಉಪನಿಷತ್ತು*** ೬-೬೫
೮. ***ಈಶೋಪನಿಷತ್ತು***, ೧೪, ೧೫
೯. ***ಬೃಹದಾರಣ್ಯಕೋಪನಿಷತ್ತು***, ೫-೧೪-೫
೧೦. ***ಸಾವಿತ್ರ್ಯೋಪನಿಷತ್ತು***, ೪.೫.
೧೧. Buhler 1857; ***A Digest of Hindu laws*** p. XXXIV
೧೨. Kuẑenetsoy, ***Einstein*** pp. 104; 102
೧೩. ***ಋಗ್ವೇದ ಸಂಹಿತೆ*** IV ೨೭. ೧
೧೪. ***ಅದೇ*** X ೭೨, ೮, ೯.

ಅನ್ವೇಷಣೆಯ ಪದ್ಧತಿಯನ್ನು ಕುರಿತು

ಬುದ್ಧಿ, ಮತ್ತು ಮನಸ್ಸು ಇದನ್ನು ಕುರಿತು, ಆಧುನಿಕಶಾಸ್ತ್ರಜ್ಞರು, ತತ್ತ್ವಜ್ಞರೂ, ಮಾನವಶಾಸ್ತ್ರಜ್ಞರೂ ಆಳವಾಗಿ, ಕೂಲಂಕಷವಾಗಿ ವಿಚಾರ, ವಿಮರ್ಶೆ ನಡೆಸಿಯೇ ಇದ್ದಾರೆ. ಆದರೆ, 'ಬುದ್ಧಿ' (Reason Intelligence) ಇದು, ಮೈವೆತ್ತ ಸಮಯ ಪರಿಸರವನ್ನು ನಿದರ್ಶನಕ್ಕೆ ತರುವ ಉಲ್ಲೇಖಗಳು, ಪುರಾತನ ಪರಂಪರೆಯ ಧಾರ್ಮಿಕ ತಾತ್ತ್ವಿಕ 'ಪವಿತ್ರ'ಗ್ರಂಥಗಳಲ್ಲಿ ಅಲ್ಲಲ್ಲಿ, ಹುದುಗಿರುವುದು ಗಮನಕ್ಕೆ ಬಂದಾಗ, ಇವನ್ನೆಲ್ಲ ಕ್ರೋಢೀಕರಿಸಿ, ಸಮಸಾಮಯಿಕ ಪ್ರತಿಮೆ, ಪ್ರತೀಕಗಳ ತೌಲ್ಯನಿಕ ಸಮೀಕ್ಷೆಯ ವಿಮರ್ಶೆಯ ಆವಶ್ಯಕತೆಯು ಕಾಣಿಸಿಕೊಂಡಿತು. ಏಕೆಂದರೆ, ಜೀವನಾನುಭವದ ಹಿನ್ನೆಲೆಯಲ್ಲಿ ಬಂದ ಅನುಭವದ 'ಬೆಲೆ' ಎಂದಿಗೂ ಹೆಚ್ಚಿನದು, ಶ್ರೇಷ್ಠವಾದದ್ದು ತಾನೆ?

'ಬುದ್ಧಿ'ಯು ಅವತರಿಸಿರುವ ಸಾಂಸ್ಕೃತಿಕ ಹಿನ್ನೆಲೆಯು, ಭಾರತೀಯ ಹಾಗೂ ಗ್ರೀಕ್ ಪುರಾತನ ಪರಂಪರೆಗಳಲ್ಲಿ ಸಮಾನ ಸ್ವರೂಪದ್ದೇ ಇರುವ ಸೋಜಿಗವು, ನನ್ನ ಕುತೂಹಲವನ್ನು ಕೆರಳಿಸಿತು. ಮಾನವನ ಇತಿಹಾಸದಲ್ಲಿ 'ಬುದ್ಧಿ'ಯು ಅವತರಿಸಿರುವ ಸಮಯ : ಆಚಾರಾಂಗವು ಭಾರತ ಹಾಗೂ ಗ್ರೀಕ್ ಪುರಾತನ ಸಂಸ್ಕೃತಿಗಳಲ್ಲಿ ಸಮಾನವೇ ಇರುವ ಕಾರಣವು ಯಾವುದು? ಎಂಬ ಪ್ರಶ್ನೆ ಎದುರು ನಿಲ್ಲುತ್ತದೆ. ಮಾನವಧರ್ಮ: ಸಂಸ್ಕೃತಿದೊಳಗಿನ ಈ ಬಗೆಯ ಸಾಮ್ಯವನ್ನು ಕಂಡು, ಇದರ ಕಾರಣವನ್ನು ಹೇಳುವ ವಾಡಿಕೆಯಲ್ಲಿ ಬದಲಾವಣೆ ಆಗುತ್ತ ಬಂದಿದೆ: ಆರ್ಯ ದ್ರಾವಿಡ ಇಂತಹ ಜನಾಂಗಗಳ ಪ್ರಭಾವವು ಈ ಬಗೆಯ ಸಾಮ್ಯಕ್ಕೆ ಕಾರಣ, ಎಂಬ ಗ್ರಹಿಕೆಯು ಈ ಶಿಥಿಲವಾಗತೊಡಗಿದೆ. ವಿಭಿನ್ನ ಜನಾಂಗಗಳ (Races) ಪರಿಣಾಮವು ಪರಸ್ಪರರ ಮೇಲೆ ಆಗಿಲ್ಲ, ಎಂದು ಬಗೆಯುವ ಕಾರಣವಿಲ್ಲ. ಆದರೆ, ಇಂತಹ ಬಾಹ್ಯಕಾರಣಕ್ಕಿಂತಲೂ ಆಳವಾದ ಕಾರಣವು ಧರ್ಮ: ಸಂಸ್ಕೃತಿಯನ್ನು ರೂಪಿಸುವಲ್ಲಿ ಉಂಟು, ಎಂಬುದು ಈಗ ದೃಢಪಟ್ಟಿದೆ.

ಜನಾಂಗಗಳ ಪ್ರಭಾವದ ಕಾರಣವಲ್ಲದೆ, ಭೌಗೋಳಿಕ ಪರಿಸ್ಥಿತಿಯು, ಆ ಜನರ ಸಂಸ್ಕೃತಿಯನ್ನು ರೂಪಿಸಲು ಕಾರಣವಾಗಿದೆ, ಎಂಬ ಈ ದೃಷ್ಟಿಕೋನವು, ಸ್ಥಳ-ಕಾಲದ ಭೌತ ಪರಿಸರವು ಧರ್ಮ: ಸಂಸ್ಕೃತಿಗೆ ಕಾರಣ ಎಂಬ ವಿಚಿತ್ರ ನಿಷ್ಕರ್ಷಕ್ಕೆ ಒತ್ತಾಯಪಡಿಸುತ್ತದೆ. ಉಪಯುಕ್ತತಾವಾದವು ಧರ್ಮ: ಸಂಸ್ಕೃತಿಯನ್ನು ರೂಪಿಸಿದೆ, ಎಂಬ ದೃಷ್ಟಿಕೋನದ ಮಾನವಶಾಸ್ತ್ರಜ್ಞರ ಸಂಪ್ರದಾಯವೂ ಒಂದು ಇತ್ತು. ಫ್ರಾನ್ಸಿನ ಡುರ್‌ಖಾಯಿಂ, ತೀರ ಪ್ರಾಥಮಿಕ ಜನಗಣದಲ್ಲಿ ಹೋಗಿ, ಅವರಿಗೆ ಧರ್ಮವು ಅವಶ್ಯವೆನಿಸಿದ್ದೇಕೆ? ಎಂಬ ಭೂಮಿಕೆಯಿಂದ ಆ ಪಂಗಡದ ಅಧ್ಯಯನ ಮಾಡುತ್ತಾನೆ. ಸಾವಿನ ಭೀತಿಯಿಂದ ಮುಕ್ತರಾಗಲು, ಧರ್ಮ-ದೇವತೆಗಳನ್ನು ಕಲ್ಪಿಸಿಕೊಂಡಿದ್ದಾಗಿದೆ. ಮೃತ್ಯುದೇವತಾ-ಸ್ವರೂಪದ ಮೇಲಿಂದ ಆ ಪಂಗಡದ ಸಾಂಸ್ಕೃತಿಕ ಮಟ್ಟವು ವ್ಯಕ್ತವಾಗುತ್ತದೆ.

ಈ ಬಗೆಯ ಅನ್ವೇಷಣೆಯಲ್ಲಿ 'ಅಭಾವವೇ ಸ್ಥಾಯಿ' ಇರುವ ಸಂಪ್ರದಾಯಗಳೇ ಅರಿಕೆಗೆ ಬಂದುದುಂಟು. ಈ ಉಪಯುಕ್ತತಾವಾದವು Functional religion ಗಳನ್ನು ಕಂಡು ಹಿಡಿದದ್ದಾಯಿತು. ಆದರೆ, ಧರ್ಮ : ಸಂಸ್ಕೃತಿಯ ಮೂಲ ಪ್ರಚೋದನೆಯು ಮಾನವರ ಅಂತರಂಗದಲ್ಲಿ ಉಂಟು. ಆದಕಾರಣ, ಈ ನಿಟ್ಟಿನಿಂದ, ಈ ಧರ್ಮ : ಸಂಸ್ಕೃತಿಗಳ ಸಂಶೋಧನವು ಆಗುವ ಆವಶ್ಯಕತೆಯನ್ನು ಕಂಡ ಮಾನವಶಾಸ್ತ್ರಜ್ಞರು ತೀರ ಅಪರೂಪವಾಗಿದ್ದಾರೆ. ಭಾರತೀಯ ಹಾಗೂ ಗ್ರೀಕ್ ಪುರಾತನ ಸಂಸ್ಕೃತಿಗಳ ತುಲನೆಯಲ್ಲಿ, ಇವೆರಡೂ ಸಂಸ್ಕೃತಿಗಳ ಸಾಮ್ಯದ ಸಮಸ್ಯೆಯು ಆಂತರಿಕ ಪ್ರಚೋದನೆಯ ಭೂಮಿಕೆಯಿಂದ, ಸುಲಭವಾಗಿ ಪರಿಹಾರವನ್ನು ಪಡೆಯುತ್ತದೆ. ಈ ಸಾಮ್ಯದಿಂದಾಗಿ, ಈ ಮಾನವ ಜೀವನ ವಿಶ್ವವನ್ನು ನಿಯಂತ್ರಿಸುವ ಪಾತಳಿಗಳು ಉಂಟು, ಎಂಬ ಸಂಗತಿಯು ದೃಢಪಡುತ್ತದೆ. ಡಾ. ಎ. ಎಲ್. ಕ್ರೋಬರ್ ಹಾಗೂ ಡಾ. ಲೆವ್ಹಿ-ಸ್ಟ್ರಾಸ್ ಪ್ರಭೃತಿಗಳು ಈ ನಿಟ್ಟಿನಲ್ಲಿ ಮಾಡಿರುವ ಕಾರ್ಯವು ಮೌಲಿಕವಾಗಿದೆ. 'ಈ ಮಾನವನು ವಿಶ್ವ ನಿಯಮಕ್ಕೆ ಅಧೀನನಿದ್ದಾನೆ' ಅಥವಾ ವಿಶ್ವ ನಿಯಮದ ಪ್ರಚೋದನೆಯು ಮಾನವರ ಕೃತಿಗೆ ಕಾರಣ ಎಂಬ ಮೌಲಿಕ ಮಾತು ಇಂದು ಮರೆತಂತಾಗಿದೆ! ವಿಕಾಸತತ್ತ್ವದ ಪ್ರಕ್ರಿಯೆಯಲ್ಲಿ, ಈ 'ನರ ಪ್ರಾಣಿ'ಗೆ 'ಮನು'ಜತ್ವವು ಲಭಿಸಿದೆ. 'ಈ ಪ್ರಕ್ರಿಯೆಯು ಒಂದು ವಿಶ್ವನಿಯಮಕ್ಕೆ ಅನುಸರಿಸಿ ಇದೆ,' ಎಂಬ ಸಂಗತಿಯು ವೈವಸ್ವತ ಮನುಪ್ರಣೀತ ಮಾನವ ಧರ್ಮದ ಆಕೃತಿ'ಯ ಅನುಷಂಗದಿಂದ ದೃಢವಾಗಿದೆ.

ಮಾನವ ಪ್ರಜ್ಞೆ-ಪ್ರಜ್ಞೆಯ ಅಂಗವಾದ ಮನಃಶಕ್ತಿ ಇದು. ಭಾವಾತ್ಮಕ ಅನುಭವಾತ್ಮಕ ವಿಧಾಯಕ ಸ್ವರೂಪದ ಅಭೇದ್ಯಾರ್ಥ್ ಪಾತಳಿಯಲ್ಲಿ ಹಾಸು-ಹೊಕ್ಕು ಆಗಿರುವ ಅರ್ಥ: ವಿಚಾರದ ಲಾಭಪಡೆದು 'ಮಾನವ ಧರ್ಮ: ಸಂಸ್ಕೃತಿ'ಯನ್ನು ರೂಪಿಸುವ ದಿಕ್ಕಿನಲ್ಲಿ ಕೆಲಸಮಾಡುವ ಸ್ವಭಾವವುಳ್ಳದ್ದು ಆಗಿದೆ. ಇದು ಜೀವನದ ಪಾತಳಿ. ಆದರೆ, ಈ ಮಾನವನಲ್ಲಿ ತಲೆದೋರಿರುವ 'ಬುದ್ಧಿ'ಯ ಅಂಗವಾದ ಮನಃಶಕ್ತಿ ಇದಕ್ಕೆ ಈ ಸ್ಥಳ-ಕಾಲದ ಸಂದರ್ಭದ ಅಭಾವವೇ ಸ್ಥಾಯಿ ಇರುವ ಜೀವಿತದ ಅಸ್ತಿತ್ವದಲ್ಲಿ ಆಸಕ್ತಿಯು ವಿಪರೀತ. ಭಾವಾತ್ಮಕ, ಅನುಭವಾತ್ಮಕ, ಅಭೇದ್ಯಾರ್ಥ್ ಸ್ವರೂಪದ ಅರ್ಥ: ವಿಚಾರದ ಹಾಸುಹೊಕ್ಕು ತಳಪಾಯದಲ್ಲಿ ಇರುವ ಜೀವನದ ಅಸ್ತಿತ್ವದಿಂದಾಗಿ, ಸ್ಥಳಕಾಲದ ಸಂದರ್ಭದ ಅಭಾವಾತ್ಮಕ ಜೀವಿತವು ಶಕ್ಯವಾಗುತ್ತದೆ. ಇದು ಜೀವನ ವಿಶ್ವದ ಸಾಪೇಕ್ಷಸಿದ್ಧಾಂತ.

ಸಂಗೀತದಲ್ಲಿ ನಿಜವಾದ ತಾಳದನುಷಂಗದಿಂದ, 'ಹುಸಿ' ತಾಳಕ್ಕೂ ಒಂದು ಪರಿಮಿತ ಸ್ಥಾನವಿದೆ. ಆದರೆ, ಈ 'ಹುಸಿತಾಳ'ಕ್ಕೆ ಸ್ವತಂತ್ರ ಸ್ಥಾನವು ಇಲ್ಲವೆಂದರೆ ಹುಸಿಯಿಂದ ಸಂಗೀತ ಪ್ರಾರಂಭವಾಗುವುದಿಲ್ಲ. ಇದೇ ಮೇರೆಗೆ ಜೀವನ ಸಂಗೀತದಲ್ಲಿ ಅಭಾವಾತ್ಮಕ ಜೀವಿತಕ್ಕೂ ಸ್ಥಾನ ಉಂಟು. ಆದರೆ, ಅತ್ಯಂತ ಅಭಾವದ ಜೀವಿತಕ್ಕೆ ಜೀವನದಿಂದ ಭಿನ್ನವಾದ ಸ್ವತಂತ್ರ ಅಸ್ತಿತ್ವ, ಸ್ಥಾನ ಇಲ್ಲ. ಪ್ರಜ್ಞೆ-ಪ್ರಜ್ಞೆಯ ಅಂಗವಾದ ಮನಸ್ಸು ಮತ್ತು ಬುದ್ಧಿ, ಬುದ್ಧಿಯ ಅಂಗವಾದ ಮನಸ್ಸು, ಇವೆರಡರಲ್ಲಿ ಯಾವುದು 'ಆದಿಕಾರಣ' ಎಂಬುದನ್ನು ನಿರ್ದಿಷ್ಟ ಪಡಿಸಿ ಅರಿಯಲು ಮುಂದಿನ ಪ್ರಕರಣಗಳ ವಿವರಣೆಯು ಪ್ರಯೋಜನಕಾರಿಯಾದೀತು ಎಂಬ ನಿರೀಕ್ಷೆಯಿದೆ.

ಬುದ್ಧಿಯು ಅವತರಿಸುವ ಮುನ್ನ ಮಾನವನ ಇತಿಹಾಸದ ಪ್ರಾರಂಭ

ಮನುಜನೊಡನೆ ಇತಿಹಾಸವು ಪ್ರಾರಂಭವಾಗಿದೆ. ಈ ಮಾನವನು ಇತಿಹಾಸದ ವಿಷಯ ಆಗಿರುವಂತೆ, ಈ ತನ್ನ ಇತಿಹಾಸವನ್ನು ರೂಪಿಸಬಲ್ಲವನೂ ಈ ಮಾನವನೇ. ಮಾನವೇತರ ಪ್ರಾಣಿಗಳು ಇತಿಹಾಸದ ವಿಷಯವಾಗಿವೆ. ಅವಕ್ಕೆ ತಮ್ಮ ಇತಿಹಾಸವನ್ನು ರೂಪಿಸುವ 'ರೂಪಿಸಬೇಕು', ಎಂಬ ಪ್ರಜ್ಞೆಯು ಇಲ್ಲ. ಈ ಹಿನ್ನೆಲೆಯಲ್ಲಿ, ಇತಿಹಾಸವನ್ನು ರೂಪಿಸುವ ಪ್ರೇರಣೆ, ರೂಪಿಸುವ ಶಕ್ತಿ, ಇದು ಪ್ರಜ್ಞೆಯ ಅಂಗವಾದ ಮನಸ್ಸಿಗೇ ಉಂಟು ಎಂಬ ಅಂಶವು ಹೊರಡುತ್ತಿದೆ. ಇತಿಹಾಸದ-ಐತಿಹಾಸಿಕ ಆಗು-ಹೋಗುಗಳಿಗೆ ಆಧಾರಭೂತವಿರುವ 'ಸಮಯ'ವು ಮನಸ್‌ತತ್ತ್ವ ಯುಕ್ತವಿರುತ್ತದೆ. ಈ ಅಂಶವನ್ನು ತತ್ತ್ವಜ್ಞ ಕಾಂಟನು ಎಂದೋ ಹೇಳಿದ್ದಾನೆ.

> "Historical knowledge is possible because its objects are noumena."

ಆದರೆ, ಪ್ರಜ್ಞೆ, ಪ್ರಜ್ಞೆಯ ಅಂಗವಾದ ಮನಸ್ಸು ಮಾನವನ ಇತಿಹಾಸವನ್ನು ರೂಪಿಸಬಹುದಾಗಿರುವಂತೆ; ಬುದ್ಧಿ, ಈ ಬುದ್ಧಿಯ ಅಂಗವಾದ ಮನಸ್ಸು ಇದು ಮಾನವನ ಇತಿಹಾಸವನ್ನು ಪ್ರೇರಿಸಲಾರದು; ರೂಪಿಸಲಾರದು. ಏಕೆಂದರೆ, 'ಬುದ್ಧಿಯು ವೈಯಕ್ತಿಕ ಸ್ವರೂಪದ್ದು. ಮನಸ್ಸು, ಪ್ರಜ್ಞೆಯಂತೆ 'ಮನು' ಜರಿಗೆಲ್ಲ ಸಮಾನ, ಸಾಧಾರಣವಾಗಿಲ್ಲ. ಪ್ರಜ್ಞಾ, ಉಪಜ್ಞಾ ಇದು. ಬೌದ್ಧಿಕ ಲೆಕ್ಕಾಚಾರದ ಹಾಗಿನ ತರ್ಕ ಅನುಮಾನದ ಸ್ವಭಾವದ್ದಲ್ಲ. ಉಪಜ್ಞಾತಂ ಉಪದೇಶೇನ ವಿನಾ ಜ್ಞಾತಂ ಎಂಬುದರ ಇದರ ವ್ಯಾಖ್ಯೆ. ಆದರೆ, ಬುದ್ಧಿಯು ಈ ಬಗೆಯ ಸಹಜ, ಒಳತಿಳಿವಿನ ಬೆಳಕಿನ ಪಾತಳಿಗಿಂತ ಭಿನ್ನವಾದ ಪಾತಳಿಯ ಮೇಲಣ ಶಕ್ತಿಯಾಗಿದೆ. ಇತಿಹಾಸವು ಬೌದ್ಧಿಕ ಲೆಕ್ಕಾಚಾರದಿಂದ ಪ್ರಾರಂಭವಾಗಿಲ್ಲ. 'ಮನ' ಏವ ಮನುಷ್ಯಾಣಾಂ ಕಾರಣಂ ಬಂಧ-ಮೋಕ್ಷಯೋಃ ಇಂಥ ಮನಸ್ಸು ಇದು ಮಾನವನೊಡನೆಯೇ ಹುಟ್ಟಿದೆ. ಆದರೆ ಬುದ್ಧಿಯು, ಮನಸ್ಸಿನಷ್ಟು ಪ್ರಾಚೀನವಲ್ಲ. ಬುದ್ಧಿಯು ಇತಿಹಾಸದ ಕಕ್ಷೆಗೆ ಒಳಗಾಗಿದೆ. ಬುದ್ಧಿಯು ಬಾಳಿನಲ್ಲಿ ಕಾಣಿಸಿಕೊಂಡ ಹಿನ್ನೆಲೆಯು ಬೆಳಕಿಗೆ ಬರುತ್ತದೆ. ಆದರೆ ಪ್ರಜ್ಞೆ; ಮನಸ್ಸು ಮನುಜನಷ್ಟು ಪುರಾತನವಿದೆ!

ಪ್ರಜ್ಞೆ, ಮನಸ್ಸು ಇವುಗಳ ಸಂಗಡ ಮಾನವ ಭಾಷೆ ಕಾಣಿಸಿಕೊಂಡಿದೆ; ಇತಿಹಾಸವೂ ಮೈವೆತ್ತಿದೆ. ಭಾಷೆಯು ಬುದ್ಧಿಯಿಂದ ಪ್ರಾರಂಭವಾಗಿಲ್ಲ. ಭಾಷೆ ಧರ್ಮ ಮತ್ತು ಸಂಸ್ಕೃತಿ ಇವುಗಳ ಬೇರು ಒಂದರೊಳಗೊಂದು ತೊಡಕಿಕೊಂಡಿವೆ. ಭಾಷೆ, ಧರ್ಮ: ಸಂಸ್ಕೃತಿ ಇವು ಪ್ರಜ್ಞಾಯುಕ್ತ ಮನಸ್ಸಿನಿಂದ ಪ್ರಚೋದಿತ ಇರುವುದರಿಂದ, ಇವೆಲ್ಲವುಗಳ ತಳಪಾಯದಲ್ಲಿ ಅಂತಃಸಂಗತಿಯು ಒಳಗೊಂಡಿರುವುದರಿಂದ ಇವು ಇತಿಹಾಸದ ವಿಷಯಗಳೂ ಆಗಿವೆ.

ಆದರೆ, ಅಂತರ್-ವಿಸಂಗತಿ, ಪ್ರೇರಣಾದ್ವಂದ್ವವು ಇತಿಹಾಸದ-ಮಾನವೇತಿಹಾಸದ ವಿಷಯ ಆಗಲು ಶಕ್ಯವಿಲ್ಲ. ಅರ್ಥ: ವಿಚಾರಕ್ಕೆ ಇತಿಹಾಸವಿದೆ. ಅಂತಃಸಂಗತಿಯಿಲ್ಲದ್ದು ಅರ್ಥವಲ್ಲ; ವಿಚಾರವೂ ಅಲ್ಲ. ಅಂತರ್-ವಿಸಂಗತಿಯಿಂದಾಗಿ ಅದರೊಳಗಿನ ಅರ್ಥವು ನಷ್ಟವಾಗುತ್ತದೆ. ಉದಾ-ಅಮೃತ ಇದರೊಳಗಿನ ಅಂತರ್-ವಿಸಂಗತಿಯಿಂದಾಗಿ, ಈ ಅಮೃತವು ಇತಿಹಾಸದ-ಅನುಭವದ ಕಕ್ಷೆಯ ಹೊರಗೇ ಉಳಿಯುತ್ತದೆ; ಉಳಿಯಲೇಬೇಕು. ಏಕೆಂದರೆ ಈ ಅ-ಮೃತ ರಸದಲ್ಲಿ ಅದ್ಭುತ ಜಾದೂ ಶಕ್ತಿಯಿದೆ. ಅಮೃತದ ತಳಹದಿಯಲ್ಲಿ Noumenon ಇಲ್ಲ. 'ಉದ್ಧರೇತ್ ಆತ್ಮನಾತ್ಮಾನಂ' ಎಂಬ ಉಪದೇಶ ಮಾಡುವ ಅ-ಮೃತ ಸ್ವರೂಪ ಈ ಭಗವಂತನು. ಆ ಬಳಿಕ, ನನಗೇ ಶರಣು ಬಾ ಎಂದು ಅಪ್ಪಣೆ ಕೊಡುತ್ತಾನೆ! ನಿನ್ನ ಉದ್ಧಾರವು ನಿನ್ನ ಕೈಯಲ್ಲಿ ಇದೆ, ಎಂಬುದು ಇತಿಹಾಸವನ್ನು ರೂಪಿಸಬಲ್ಲ ಉಪದೇಶ. ಆದರೆ, ನನಗೇ ಶರಣು ಬಾ ಎಂದು ಹೇಳುವ ಈ ಭಗವಂತನೆಂದರೆ ಯಾರು? ಈ ಭಾಷೆಯು ಇತಿಹಾಸದ ವಿಷಯವಿದ್ದುದು ನಿಜವಿದ್ದರೆ, ಈ ಭಗವಂತ ಎಂಬ ಮಾತಿಗೂ ಇತಿಹಾಸವು ಇರಲೇಬೇಕಷ್ಟೆ? ಹಾಗಾದರೆ, ಈ ಭಗವಂತ ಸಂಕೇತದ ಹಿನ್ನೆಲೆಯ ಐತಿಹ್ಯವು ಏನು? 'ದದಾಮಿ ಬುದ್ಧಿಯೋಗಂ' ಎಂದು ಹೇಳುತ್ತಿರುವುದರಿಂದ, ಬುದ್ಧಿಯು ಮಾನವ ಇತಿಹಾಸದಲ್ಲಿ ಕಾಣಿಸಿಕೊಂಡದ್ದು ಯಾವಾಗ ಎಂಬುದು ಇಲ್ಲಿ ಅನ್ವೇಷಣೆಯ ವಿಷಯವೇ ಆಗಿರುವುದರಿಂದ, ನರ(ಳ)ನಿಗೆ, ನಿನಗೆ ಬುದ್ಧಿಯೋಗ ಅನುಗ್ರಹಿಸುತ್ತೇನೆ,' ಎಂಬ ಈ ಭಗ-ವಂತನು ಯಾರು? ಎಂಬುದರ ಕೂಲಂಕಷ ವಿಚಾರವೂ ಅನಿವಾರ್ಯವಾಗುತ್ತದೆ.

ಭಗವಂತನು ಹೇಳುತ್ತಾನೆ : ನಿನಗೆ ಬುದ್ಧಿಯೋಗವನ್ನು ಅನುಗ್ರಹಿಸುತ್ತೇನೆ; ಇದರ ಬಲದಿಂದ ನೀನು ನನ್ನ ಹತ್ತಿರ ಬರಬಲ್ಲೆ. ದದಾಮಿ ಬುದ್ಧಿಯೋಗ ತಂ ಯೇನ ಮಾಂ ಉಪಯಾಂತಿತೇ ನರ(ಳ)ರಿಗೆ ದಯಪಾಲಿಸಿದ ಬುದ್ಧಿಯೋಗದಿಂದ ಅವರು ನನ್ನನ್ನು ಹೊಂದಬಲ್ಲರು. ಭಗವಂತನ ಹತ್ತಿರಕ್ಕೆ ಒಯ್ಯಲು ಸಮರ್ಥವಿರುವ ಈ ಬುದ್ಧಿಯು ಮೋಕ್ಷಮಾರ್ಗಕ್ಕೆ ತಳ್ಳಿಕೊಂಡು ಹೋಗುತ್ತಿರಲಿಕ್ಕೇಬೇಕು. ಆದಕಾರಣ ಈ ಬುದ್ಧಿಯು, ಸಾಮಾಜಿಕ ಜೀವನದಿಂದ ದೂರ ಎಲ್ಲಿಯೊ ಏಕಾಂತಕ್ಕೆ ಅಟ್ಟಬಲ್ಲುದೇ ಹೊರತು, ಇದು ಸಾಮಾಜಿಕ ಪ್ರಜ್ಞಾಪ್ರೇರಕವಲ್ಲದ್ದರಿಂದ, ಇತಿಹಾಸವನ್ನು ರೂಪಿಸಬಲ್ಲ ಬುದ್ಧಿಯು ಇದಲ್ಲ, ಎಂಬುದು ನಿಶ್ಚಿತವಿದೆ.

ಈ ಗೀತೆಯಲ್ಲಿ ಇನ್ನೊಂದೆಡೆಗೆ, ಬುದ್ಧಿಯು ಭಗವಂತನ ಶಕ್ತಿ ಆಗಿದೆ, ಎಂದೂ ಹೇಳಿದ್ದಾಗಿದೆ. 'ಬುದ್ಧಿಃ ಬುದ್ಧಿಮತಾಂ ಅಹಂ'=ಬುದ್ಧಿವಂತರ ಬುದ್ಧಿ ಎಂದರೆ ನಾನೇ[೨] ಇದು ನಿಜವಿದ್ದರೆ ಬುದ್ಧಿಯು, ಭಗವಂತ ಕೃಷ್ಣಸ್ವರೂಪದ್ದೇ ಆಗುತ್ತಿದೆ! ಆದಕಾರಣ, ಬುದ್ಧಿಯ ಸ್ವರೂಪಗ್ರಹಣಕ್ಕೆ ಈ ಭಗವಂತನ ಸ್ವರೂಪ ಆಕೃತಿ ಗೊತ್ತಾಗಲಿಕ್ಕೆಬೇಕು. ಆದರೆ, ಈ ಭಗ-ವಂತ= ಕೃಷ್ಣ ಎಂದರೆ ಯಾರು? ಎಂಬ ಪ್ರಶ್ನೆ ಎದುರು ನಿಲ್ಲುತ್ತದೆ. ಪರಮಭಕ್ತರು ಒಳ್ಳೆ ಅಕ್ಕರೆಯಿಂದ ಹಾಡಿ ಹೊಗಳುತ್ತಾರಲ್ಲ: ಕಪಟ ನಾಟಕ-ಸೂತ್ರಧಾರಿ ಮುರಾರಿ ಕೈಪರೆಗಾಡಿದಂ! ಎಂದರೆ ತಾಳ-ಲಯವನ್ನು ಮೆಚ್ಚಿರುವ ದೇವನೀತ; ನಾದಲೋಲ ಎಂದೂ ಹೇಳುವುದಿಲ್ಲವೆ?

'ಬುದ್ಧಿ ಬುದ್ಧಿಮತಾಂ ಅಹಂ' ಎಂಬ ಈ ಭಗವಂತನು ನಾದಲೋಲನೂ ಉಂಟೆ? ಬುದ್ಧಿಗೂ ಸಂಗೀತ-ನಾದಕ್ಕೂ ಅಂತಃಸಂಬಂಧವಿದೆಯೇ? ಕೊಳಲು ನುಡಿಸುವ ಈ ಭಗವಂತನು ನಾದಲೋಲನು. ಬುದ್ಧಿವಂತರಲ್ಲಿ ಬುದ್ಧಿವಂತನು ಎಂಬ ಸ್ತೋತ್ರದ ಈ ಭಗವಂತನು ಕಪಟನಾಟಕದ ಸೂತ್ರಧಾರಿ - ಈ ನಾಟಕದಲ್ಲಿ ತೆರೆಯ ಮರೆಗೆ ನಿಂತು ಎಲ್ಲರನ್ನು ತನ್ನ ಶ್ರುತಿಗೆ ನಾದ ಕುಣಿಯ ಹಚ್ಚುತ್ತಾನೆ. ಹಾಗಾದರೆ ಈ ನಾದ ಎಂತಹುದು? ಮತ್ತು ಇಂಥ ಈ ಭಗ-ವಂತನು=ಕೃಷ್ಣನು ಯಾರು? ಎಲ್ಲಿ ಇದ್ದಾನೆ?

'ಬುದ್ಧಿಯ-ಇತಿಹಾಸದಲ್ಲಿ' ಎಂದರೆ ಇದು ಈ ಬಾಳಿನಲ್ಲಿ ಅವತರಿಸಿದ್ದು ಯಾವಾಗ? ಎಂಬುದೇ ಈ ಅನ್ವೇಷಣೆಯ ಮುಖ್ಯ ಪ್ರಶ್ನೆ ತಾನೆ? ಆದಕಾರಣ ಈ ಕಪಟನಾಟಕ ಸೂತ್ರಧಾರಿ ಎಂಬ ಭಗವಂತನು ಇರುವ ಎಡೆ ಇವನ ಆಕೃತಿ ಸ್ವರೂಪ ಇದು ಕಣ್ಣಳತೆಯಲ್ಲಿ ಬಂದದ್ದಾದರೆ, 'ಬುದ್ಧಿಮತಾಂ ಬುದ್ಧಿಃ' ಆಗಿರುವ ಈ ಭಗವಂತನ ಅಕ್ಕಪಕ್ಕದಲ್ಲಿಯೇ ಬುದ್ಧಿ ಎಂಬ ಈ ವಸ್ತುವೂ ಇರಲೇಬೇಕಷ್ಟೇ? ಈ ಭಗವಂತ ಕೃಷ್ಣ ಇರುವ ಎಡೆ ಯಾವುದು? ದೇವಾದಿದೇವ ಎಂದು ಹೊಗಳಲಾಗುವ ಈ ಕೃಷ್ಣನನ್ನು ಭಗವಂತ ಎಂಬ ವಿಶೇಷಣದಿಂದ ಸೂಚಿಸಲಾಗುತ್ತದೆ. ಆದಕಾರಣ, ಈ ಕೃಷ್ಣನು ಇರುವ ಎಡೆಯ ನಿರ್ದೇಶನವೇ ಈ ಭಗ ಎಂಬಲ್ಲಿ ಇರಲಾರದೆ? ಈ ಭಗವಂತನನ್ನು ಕುರಿತು ಇರುವ ಈ ಗ್ರಂಥಕ್ಕೆ ಭಗ-ವತ್‌ಗೀತೆ ಎಂದು ಹೆಸರು! ಆದುದರಿಂದ, ಈ ಗೀತೆಯಲ್ಲಿ ಈ ಭಗವಂತನು ಅಡಗಿರುವ ಶಕ್ಯತೆಯನ್ನು ಅಲ್ಲಗಳೆಯಲು ಆಗುವುದಿಲ್ಲ.

ಈ ಭಗವಂತನನ್ನು ನಮ್ಮ ತಂದೆ ಲೋಕದ ತಂದೆ ಎನ್ನುವುದಲ್ಲದೆ, ಈತನು ಸೃಷ್ಟಿಕರ್ತನೂ ಆಗಿದ್ದಾನೆ ಎಂಬ ನಂಬುಗೆಯೂ ಉಂಟು. ಇದು ನಿಜವಿದ್ದರೆ, ಸೃಷ್ಟಿ ಪ್ರಸವದ ವರ್ಣನೆ, ಈ ಗೀತೆಯಲ್ಲಿಯೇ ಒಂದೆಡೆಗಾದರೂ ಇರಲೇಬೇಕು. ಈ ಸೃಷ್ಟಿಪ್ರಸವವನ್ನು ವಿವರಿಸಿರುವ ಈ ಎಡೆಯಲ್ಲಿ, ಭಗವಂತನು ಅಡಗಿರಲೇ ಬೇಕಲ್ಲವೆ? ನಮ್ಮ ಸುದೈವ : ಈ ಗ್ರಂಥದಲ್ಲಿ, ಭಗವಂತನೇ ಖುದ್ದಾಗಿ ಹೇಳುತ್ತಿದ್ದಾನೆ - "ಮಯಾ ಅಧ್ಯಕ್ಷೇಣ (ಅಧಿ ಅಕ್ಷೇಣ), ಪ್ರಕೃತಿಃ ಸೂಯತೇ ಸಚರಾಚರಮ್" ನನ್ನ ಅಧ್ಯಕ್ಷತೆಯಿಂದಾಗಿ ಈ ಪ್ರಕೃತಿಮಾತೆ - ಭೂದೇವಿ ಚರಾಚರ ಎಂದರೆ ಸ್ಥಾವರ-ಜಂಗಮ ಸೃಷ್ಟಿಯನ್ನು ಹಡೆಯುತ್ತಾಳೆ. ಈ ರೂಪಕದಲ್ಲಿ, ಈ ಭಗವಂತ ಎಂಬುವನು ತಾನು ಅಧ್ಯಕ್ಷನಿರುವುದಾಗಿ ಹೇಳಿದ್ದಾನೆ! ಅಧ್ಯಕ್ಷತನ ಎಂದರೆ ಮೇಲ್ವಿಚಾರಣೆ, ಮೇಲ್ನೋಟ, - ಎಲ್ಲವೂ ಸರಿಯಾಗಿ ಸುಸೂತ್ರವಾಗಿ ಸಾಗಿದೆ ತಾನೆ? ಎಂಬ ಕಾಳಜಿ ವಹಿಸುವುದು.... ಸರಿ. ಆದರೆ, ಈ ಬಗೆಯಲ್ಲಿ ಕಾಳಜೀವಹಿಸುವ ಯಜಮಾನಿಕೆಯಿಂದ ಸೃಷ್ಟಿ-ಪ್ರಸವ ಆಗೋದು ಉಂಟೆ?

ಜ್ಞಾತ ಮಾನದಂಡದಿಂದ ಅಜ್ಞಾತ-ಹೊಸತನ್ನು ಗ್ರಹಿಸಿಕೊಳ್ಳುವ ಪದ್ಧತಿಯು ಉಂಟಷ್ಟೆ? ಇದೇ ಬಗೆಯಲ್ಲಿ ಯಜಮಾನ, ಯಜಮಾನಿ ಇವರಲ್ಲಿ ಇರುವ ಸಂಬಂಧವೇ ಅಧ್ಯಕ್ಷ= ಭಗವಂತ ಮತ್ತು ಪ್ರಕೃತಿ=ಭೂಮಾತೆ ಇವರಲ್ಲಿಯೂ ಇರಲೇಬೇಕು. ಭೂಮಿ=ಪ್ರಕೃತಿಯನ್ನು ಸ್ತ್ರೀರೂಪದಲ್ಲಿ ಕಲ್ಪಿಸಲಾಗುತ್ತದೆ. ಆದಕಾರಣ, ಈ ಶ್ಲೋಕದೊಳಗಿನ ಅಧ್ಯಕ್ಷ ಭಗವಂತನು ಗಣ್-ಡು = ಪುರುಷನೇ ಇರಲಿಕ್ಕೆಬೇಕಾಯ್ತು! ಕಪಟನಾಟಕ ಸೂತ್ರಧಾರಿ ಅಲ್ಲವೇ ಈತನು! ಮಾಡಿ ಮಾಡಿಸುವ ಚಪಲ ಇವನಿಗೆ ಇರಬೇಕು, ಎಂದು ಕಾಣುತ್ತದೆ. ಈ ಕಪಟಿಯು ಅಧ್ಯಕ್ಷ ಈ ಹೆಸರಿನಲ್ಲಿ ಅಡಗಿದ್ದಾನೆ. ಅಧಿ-ಅಕ್ಷ : ಗಣ್‌ಡು : ಗಣ್ಣು. ಹಾಗಾದರೆ ಈ ಅಧಿ (ಮೇಲಣ) ಅಕ್ಷ ಇರುವ ಎಡೆಯೇ ಪ್ರಕೃತಿ = ಭಗ ಆಗುತ್ತಲಿದೆ! ಈ ಭಗವೇ ಇಲ್ಲದೆ, ಇವನಿಗೆ ಭಗವಂತನೆಂಬ ಹೆಸರು ಸಲ್ಲದು.

ಆದರೆ ಇಲ್ಲಿ ಅತ್ಯಂತ ಪ್ರಾಮಾಣಿಕ ಸ್ವರೂಪದ ಒಂದು ಪ್ರಶ್ನೆ : ಈ ಭಗ, ಮತ್ತು ಭಗವಂತ ಇವರ ಬಗೆಗೆ ವ್ಯಕ್ತಿ ಸಾಪೇಕ್ಷ ಪಾತಳಿಯ ಮೇಲಣ ಅನುಭವವು ಬರುತ್ತದೆ. ಈ ವ್ಯಕ್ತಿಸಾಪೇಕ್ಷ ಅನುಭವವು ವ್ಯಕ್ತಿ ನಿರಪೇಕ್ಷ ಪಾತಳಿಯ ಮೇಲೆಯೂ ಬರಲು ಶಕ್ಯವೇ? ಈ ಭಗ ಎಂಬುದೇ ಬಯಲೇ ಬಯಲು ಟೊಳ್ಳು ! ಫಕ್ತ ಹೀಗೆ ಇರುವಾಗ, ಈ ಭಗಸ್ಥ ಭಗವಂತ ಎಂಬುವನು, ಆತ್ಯಂತಿಕ ಅಭಾವರೂಪನು ಆಗುತ್ತಿಲ್ಲವೇ? ಈ ಕಾರಣಕ್ಕಾಗಿಯೆ ಇದನ್ನು ಚಿತ್ತದ ವಿಲಾಸ, ಚಿದ್ವಿಲಾಸ, ಎಂದು ಹೇಳಲಾಗುತ್ತಿದೆ. ನೀವು ಏನು ಕಲ್ಪಿಸುವಿರೊ, ಅದು ಅಲ್ಲಿ ಕಾಣುತ್ತದೆ. ಆದರೆ, ನಂಬಿ ಕೆಟ್ಟವರಿಲ್ಲ ಎಂಬುದು ನಿಜವಿದ್ದರೂ, ಈ ಬಯಲನ್ನೇ ಉಂಟು ಎಂದು ನಂಬುವಲ್ಲಿ ಮೋಸವು ಆಗುತ್ತಿಲ್ಲವೆ? ಈ ಸಂದರ್ಭದಲ್ಲಿ ಬಯಲನ್ನು ಉಂಟು ಎಂದು ನಂಬುವ ಮೋಸವೊಂದೇ ಮೋಸ-ಅಲ್ಲ. ಈ ಭಗವಂತನೆಂಬ=ಬಯಲಲ್ಲಿ ಅಡಗಿರುವನೆಂಬ ಈತನು (ಲಿಂಗ) ಇದು ಮಾತಾಡುತ್ತದೆ. ಈ ಲಿಂಗ ಮೂಕಾಂಬಾ ಕುಮಾರ ಭಗವತ್ ಗೀತೆಯ ಉಪದೇಶಮಾಡಿದ್ದಾನೆಂದೂ ನಂಬ ಬೇಕಾಗುತ್ತಿಲ್ಲವೆ? ಈ ಆತ್ಮವಂಚನೆಗೆ ಕೊನೆಯುಂಟೆ?

ಭಾರತದ ಸಾಂಸ್ಕೃತಿಕ ಇತಿಹಾಸವನ್ನು ಸಮೀಕ್ಷಿಸಿದರೆ, ನಂಬಿ ಕೆಟ್ಟವರಿಲ್ಲ ಎಂಬ ಮಾತು ವಿಶ್ವಾಸಾರ್ಹವಲ್ಲ, ಎಂದು ಕಂಡುಬರುತ್ತದೆ! ಭಗವತ್‌ಗೀತೆ ಭಾರತೀಯರ ರಾಷ್ಟ್ರೀಯ ಮಟ್ಟದ ಪವಿತ್ರ ಎಂಬ ಗ್ರಂಥತಾನೆ? ಇದರ ನಿತ್ಯ ಪಾರಾಯಣೆಯು ನಡೆಯುತ್ತಿರುವ ಈ ಭಾರತದ ದೈನ್ಯಾವಸ್ಥೆಯು, ನೂರಾರುವರ್ಷಗಳಿಂದಲೂ ತಪ್ಪಿಲ್ಲವಲ್ಲ! ಈ ಗೀತೆಯ ಪಠಣದಿಂದ ಶ್ರೀಃ ವಿಜಯಃ ಭೂತಿ (ಸಂಪತ್ತು, ಗೆಲವು ಮತ್ತು ಏಳ್ಗೆ) ಇದು ಲಭಿಸುವುದು ನಿಶ್ಚಿತ ಎಂದು ಈ ಗ್ರಂಥದಲ್ಲಿಯೇ ಹೇಳಿದೆ. ! ಈ ಆಶ್ವಾಸನವನ್ನು ನಿಜವೆನ್ನಲಾದೀತೆ? ಆದರೆ, ಹೀಗೆಲ್ಲವೂ ಕಾಣುವುದು, ಇದು ಬುದ್ಧಿಗೇಡಿಗಳ ಲಕ್ಷಣ ! ಈ ಕಾರಣದಿಂದಲೇ, ಈ ಬುದ್ಧಿ (Reason, Intellect) ಮೇಧಾಶಕ್ತಿ, ಎಂಬುದು ಅವಶ್ಯವಿದೆ; ಹುಟ್ಟು, ಸಾವು ಯಾರಿಗೆ ತಪ್ಪಿದೆ? ದೇಶಕ್ಕೂ ಉನ್ನತಿ, ಅವನತಿ ಇರೋದೇ. ಇಂದು ಅವನತಿಯಲ್ಲಿ ಸಿಲುಕಿದ್ದರೂ, ಭಗವತ್ ಕೃಪೆಯಿಂದ, ನಾಳೆ ಮಹೋನ್ನತ ಸ್ಥಿತಿ ಬರಲಿಕ್ಕೇ ಇಲ್ಲವೆಂದು ಯಾರು ಹೇಳುತ್ತಾರೆ? ತಿಳುವಳಿಕೆ ಇರುವ ಬುದ್ಧಿವಂತರು ಹೀಗೆ ನಿರಾಶರಾಗೋದಿಲ್ಲ. ನಂಬಿಕೆಟ್ಟವರಿಲ್ಲ, ಯೋ ಯತ್ ಶ್ರದ್ಧಃ ಸ ಏವ ಸಃ ಈ ಪ್ರಪಂಚದಲ್ಲಿ ದೈವ ಎಂಬೋದು ಒಂದು ಉಂಟಷ್ಟೆ? ಭಗವಂತನಲ್ಲಿ ಅಶ್ರದ್ಧೆಯು ಬುದ್ಧಿಹೀನರ ಲಕ್ಷಣ! ಮೇಲಣ ಈ ದುರ್ಬುದ್ಧಿಗೆ ಕಾರಣವೇನು ಗೊತ್ತೆ? ಇತಿಹಾಸ ಆದಕಾರಣ ಪ್ರಪಂಚದೊಳಗಿನ ನರ(ಳ) ಸಂಪ್ರದಾಯದ ದಿವ್ಯಾಧ್ಯಾತ್ಮಗಳೆಲ್ಲವೂ, ಈ ಇತಿಹಾಸವನ್ನು ಬೆಲೆಗೆ ಎರವಾಗುವಂತೆ ಮಾಡುವುದಕ್ಕೆ ತಪ್ಪಿಲ್ಲ. ಬುದ್ಧಿಗೆ, ಇತಿಹಾಸದಲ್ಲಿ ನಂಬುಗೆಯಿಲ್ಲ. ಹಿಂದೆ, ಹೀಗೆ ಹೀಗೆಲ್ಲ ಆಯ್ತು ಎಂದರೂ ಈ ಬುದ್ಧಿವಂತರಾದವರು ಆ ನಿನ್ನೆಗಳನ್ನೇ ನಂಬಿ ಬಾಳೋದಿಲ್ಲ. ನಾಳೆಗಳಲ್ಲಿ ತೀರ ನೂತನ ಸ್ವರ್ಗಸದೃಶ ಬಾಳು, ಭೌತಶಾಸ್ತ್ರಗಳ ಬಲದಿಂದ ಶಕ್ಯವಾಗಲಿಕ್ಕೇ ಇಲ್ಲ, ಎಂದು ಬಗೆಯುವಲ್ಲಿ, ಈ ಬುದ್ಧಿಯ ಅಪಾರಶಕ್ತಿಯಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸಿದಂತಾಗುತ್ತಿದೆ!

ಇದೆಲ್ಲ ಹಾಗಿರಲಿ, ಬುದ್ಧಿ ಮತ್ತು ಭಗವಂತ ಇವರಲ್ಲಿ ಸಾಹಚರ್ಯ, ಅನ್ಯೋನ್ಯ ಇರುವುದಂತೂ ಸುಳ್ಳಲ್ಲ. ಆದುದರಿಂದ, ಮಾನವನ ಇತಿಹಾಸದಲ್ಲಿ ಬುದ್ಧಿಯು ಕಾಣಿಸಿಕೊಂಡಿರುವ ಸಮಯ ಪರಿಸರದ ಈ ಅನ್ವೇಷಣೆಯು, ಅನ್ವೇಷಕರನ್ನು ಲಿಂಗಾಂಗಯೋಗದ ಹತ್ತಿರಕ್ಕೆ ಒಯ್ಯುತ್ತಿದೆ! ಯೋನಿ-ಲಿಂಗದ ಸಾಹಚರ್ಯದ ಈ ಬುದ್ಧಿಯು, ವ್ಯಕ್ತಿ ವೈಶಿಷ್ಟ್ಯದ ಸ್ವ ಅರ್ಥದ ದಾರಿಯಲ್ಲಿಯೇ ತಳ್ಳಿಕೊಂಡು ಹೋಗುವುದರೊಡನೆ ಈ ಬುದ್ಧಿ, ವ್ಯಕ್ತಿನಿರಪೇಕ್ಷ ಸಮಾಜ-ಸಮಷ್ಟಿಯನ್ನು ಕಡೆಗಣಿಸದೆ ಇರಲಾರದು. ಗೀತೆಯಲ್ಲಿ ಇದಕ್ಕೆ ಪುಷ್ಟಿದಾಯಕ ಪ್ರಮಾಣವಿದೆ: ಭಗವಂತನಾದವನಿಗೆ ಕರ್ತವ್ಯ ಎಂಬುದೇನೂ ಉಳಿದಿರುವುದಿಲ್ಲ। ನಮೇ ಅಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ, ಈ ಮಾನವ ಧರ್ಮ-ಸಂಸ್ಕೃತಿ, ಇದನ್ನು ಪ್ರಚೋದಿಸಿರುವ ಪ್ರಚೋದಿಸಬಲ್ಲ, ಆದಿಕಾರಣ ಶಕ್ತಿಯು ಯಾವುದು? ಪ್ರಜ್ಞೆಯೋ? ಬುದ್ಧಿಯೋ? ಇಂದಿನದು Age of Reason = ಬುದ್ಧಿಯ ಯುಗ, ಬುದ್ಧಿವಂತರ ಯುಗ, ಎಂಬುದನ್ನು ಒಪ್ಪದೆ ಇರುವವರು ವಿರಳ. Real is rational: Rational is real ವಾಸ್ತವ

ಸತ್ಯವನ್ನು ಅರಿಯಲು ಬುದ್ಧಿ (Reason) ಇದಕ್ಕಿಂತ ಸಮರ್ಥವಾದ ಬೇರೆ ಸಾಧನವಿಲ್ಲ, ಎಂದು ಬಗೆಯಲಾಗಿದೆ. ಆದಕಾರಣ, ಬುದ್ಧಿಶಕ್ತಿಯ ಇತಿಮಿತಿಗಳನ್ನು ಕಂಡುಕೊಳ್ಳುವುದು ಲೇಸು.

ಬುದ್ಧಿಶಕ್ತಿಯ ಇತಿಮಿತಿಗಳು

Reason is God ಬುದ್ಧಿಯೇ ದೇವರು ಎಂಬ ನಂಬುಗೆಯ ಸ್ಟೋಯಿಕ್ ಪಂಥವು ಗ್ರೀಸಿನಲ್ಲಿ ಇತ್ತು. ಇಷ್ಟು ದೂರ ಹೋಗುವ ಕಾರಣವಿಲ್ಲ. ನಮ್ಮ ಏಕದಂತ ಗಣಪತಿ ಇವನು ಸಾಕ್ಷಾತ್ ಬುದ್ಧಿಯ ಪ್ರತೀಕವೇ ಆಗಿದ್ದಾನೆ. ಆದರೆ, ಗ್ರೀಕ್-ಸಂಸ್ಕೃತಿಯಲ್ಲಿ ಇರುವಂತೆ Reason, Intelligence ಇದಕ್ಕೆ ಇರುವಷ್ಟು ಸುಸ್ಪಷ್ಟ ಅಗ್ರಪಟ್ಟ, ಭಾರತೀಯ ಪೂರ್ವಪರಂಪರೆಯಲ್ಲಿ ಬುದ್ಧಿಗೆ ಅಷ್ಟು ಎದ್ದು ಕಾಣುವಂತೆ ಇಲ್ಲ. Real is rational and rational is Real!

ಭಾರತೀಯ ನರ(ಳ) ಸಂಪ್ರದಾಯಗಳೂ ಮೋಕ್ಷಾಕಾಂಕ್ಷಿಗಳೇ. ಒರ್‌ಫಿಕ್‌ಪಂಥೀಯ ಪೈಥಾಗೋರಾಸನ ಸಂಪ್ರದಾಯವೂ, ಭವಬಂಧನದಿಂದ ಮುಕ್ತವಾಗುವ ಗುರಿಯುಳ್ಳದ್ದೇ ಇದ್ದರೂ, ಈ ಸಂಪ್ರದಾಯದಲ್ಲಿ, ಭೂಮಿತಿ, ಗಣಿತ, ಸಂಖ್ಯಾವಿಚಾರಕ್ಕೆ ಎಂದರೆ ಬುದ್ಧಿಗೆ ಕಲ್ಪಿಸಿ ಕೊಟ್ಟಿರುವ ಸ್ಥಾನವು ಅನನ್ಯ ಸಾಧಾರಣವಿದೆ. ಅಧ್ಯಾತ್ಮಜ್ಞಾನಕ್ಕೆ ಗಣಿತ-ಭೂಮಿತಿಯು ಒಂದು ಸಾಧನ, ಎಂಬ ನಂಬುಗೆಯು, ಪಾಶ್ಚಾತ್ಯಸಂಸ್ಕೃತಿಯಲ್ಲಿ, ಪೈಥಾಗೋರಾಸನ (ಕ್ರಿ. ಪೂ. ೫೭೨-೪೯೭) ಕಾಲದಿಂದಲೇ ಬೇರೂರಿ ಹೆಮ್ಮರವಾಗಿ ಬೆಳೆದು ನಿಂತಿದೆ. ಇತಿ (ಇಂತು)ಹ (ನಿಜವಾಗಿಯೂ) ಆಸ (ಉಂಟು, ಇತ್ತು) ಎಂಬುದು ಇತಿಹಾಸದಿಂದಲೇ ಗೊತ್ತಾಗಬಲ್ಲುದು. ಆದಕಾರಣ, ಇತಿಹಾಸದ ತತ್ತ್ವಜ್ಞಾನ ಮತ್ತು ತತ್ತ್ವಜ್ಞಾನದ ಇತಿಹಾಸ, ಇವೆರಡರ ತಾಳಮೇಳದಲ್ಲಿಯೇ ಈ ಮಾನವ ಜೀವನದ ಅರ್ಥ, ಇತಿಮಿತಿ ಗೊತ್ತಾಗಬಲ್ಲುದು.

ಆದರೆ, ಸೋಜಿಗದ ಸಂಗತಿಯೆಂದರೆ, ನಾನು ಯಾರು ಈ ಜೀವನ ಎಂದರೇನು... ಇಂತಹ ಸಮಸ್ಯೆಗಳ ಪರಿಹಾರವೇ ಗುರಿ ಆಗಿರುವ ನರ(ಳ) ಸಂಪ್ರದಾಯದ ದಿವ್ಯಾಧ್ಯಾತ್ಮಗಳು ತತ್ತ್ವಜ್ಞಾನವನ್ನು ಮೆಚ್ಚಿಕೊಂಡಿದ್ದರೂ, ಇತಿಹಾಸವನ್ನು ತಿರಸ್ಕರಿಸುತ್ತ ಬಂದಿವೆ. ಪೈಥಾಗೋರಾಸ ಪಂಥವು ಇತಿಹಾಸವನ್ನು ವೃತ್ತ (೦) ಆಕೃತಿಯದ್ದಾಗಿಸಿತು. History repeats itself ಎಂಬ ಈ ಸೂತ್ರವು, ಗ್ರೀಕ್-ಸಂಸ್ಕೃತಿಯಲ್ಲಿ ಪೈಥಾಗೋರಾಸ ಸಂಪ್ರದಾಯದವರಿಂದ ಪ್ರಚಾರಕ್ಕೆ ಬಂದಿದೆ. ಭಾರತೀಯ ಸಂಸ್ಕೃತಿಯ ಸಂದರ್ಭದಲ್ಲಿ, ಇತಿಹಾಸವನ್ನು ಇತಿಹಾಸದ ಮನೋಭಾವವನ್ನು ನಷ್ಟಪಡಿಸುವ ಅತ್ಯಂತ ವ್ಯವಸ್ಥಿತ ಯೋಜನಾಪೂರ್ವಕವಾಗಿ ಆಗಿರುವ ಅತ್ಯಂತ ಹೀನಕೃತ್ಯವು; ಈ ದಿವ್ಯಾಧ್ಯಾತ್ಮದ ನಿಜಸ್ವರೂಪವನ್ನು ಮನಗಾಣಿಸಿ ಕೊಡುತ್ತಿದೆ. ಗಣಿತ, ಭೂಮಿತಿಗೆ, ಇತಿಹಾಸದ ನೆಲೆ ನಿಲುಕಲಾಗದು ಆದರೆ ಇತಿಹಾಸಕ್ಕೆ, ಗಣಿತ-ಭೂಮಿತಿಯ ಜಾತಕವೂ ಗೊತ್ತು! ಏಕೆಂದರೆ, ಇತಿಹಾಸವು ಪ್ರಾರಂಭವಾದ ಬಳಿಕಿನ, ವಿಶಿಷ್ಟ ಸಮಯ-ಪರಿಸರವು, ಗಣಿತ, ಭೂಮಿತಿ, ಸಂಖ್ಯಾವಿಚಾರವು ಅಂಕುರಿಸಿ ಬೆಳೆಯಲು ಅನುಕೂಲವನ್ನು ಕಲ್ಪಿಸಿಕೊಟ್ಟಿತು.

ಭೂಮಿತಿ, ಗಣಿತ, ಸಂಖ್ಯಾವಿಚಾರ ಇವು ಸ್ಥಳ-ಕಾಲ-ಪರಿಸರದ ಸಂದರ್ಭದ ಜೀವಿತದ ಲೆಕ್ಕಾಚಾರಕ್ಕೆ ಅತ್ಯವಶ್ಯವಾಗಿವೆ. ಫ್ರಾನ್ಸಿನ ತತ್ತ್ವಜ್ಞ ಡೆಕಾರ್ಟ ಈತನಿಗೆ (ಕ್ರಿ. ಶ. ೧೫೯೬-೧೬೫೦) ಗಣಿತ, ಭೂಮಿತಿಯಲ್ಲಿ ಅತೀವ ವಿಶ್ವಾಸ : ತಾಳ-ಮೇಳ ದೊರೆತು ಗಣಿತಶಾಸ್ತ್ರದ ಮೂಲಕ ಅರಿಕೆಗೆ ಬರುವ ಜ್ಞಾನವೇ ಜ್ಞಾನ, ಇದು ಮಾತ್ರ ವಿಶ್ವಾಸಾರ್ಹ. ಇನ್ನುಳಿದ ಶಾಸ್ತ್ರಗಳ ಮೂಲಕ ನಿಶ್ಚಿತಾರ್ಥವು ಗೊತ್ತಾಗುವುದಿಲ್ಲ. ಆದಕಾರಣ, ಇತಿಹಾಸಕ್ಕೆ ಗಣಿತಶಾಸ್ತ್ರದ ಬೆಲೆ ಬರಲಾರದು. ಆದರೆ, ಗಣಿತಶಾಸ್ತ್ರದ ತತ್ತ್ವಜ್ಞಾನವನ್ನು ಬರೆದ ಬರ್ಟರಾಂಡ ರಸೆಲ್ಲ ಹೇಳುವ ವಿಚಾರವು ನೆನಪಿಡುವಂತಹದ್ದು ಆಗಿದೆ.

> As Bertrand Russell says, pure mathematics completely
> assertions of type; if a premise concerning a certain object is

true there must exist another premise about which that object is also true. Mathematics, Russell says, can be defined as Science in which we never know whether we are speaking truth or not,[೩]

ಆದುದರಿಂಥ, ಬುದ್ಧಿಯ ಮೂಲಕ ಎಂದರೆ ಗಣಿತ, ಭೂಮಿತಿ, ಸಂಖ್ಯಾವಿಚಾರದ ಭೂಮಿಕೆಯಿಂದ, ಈ ಮಾನವಜೀವನ ಜೀವಿತ ಈ ಯಾವ ಕ್ಷೇತ್ರದ ನೆಲೆಯೂ ಗೊತ್ತಾಗಲು ಶಕ್ಯವಿಲ್ಲ, ಎಂದಂತಾಯಿತು. ಬುದ್ಧಿಯ ನೆರವಿನಿಂದ ಮಾನವ ಭಾಷೆಯ ನೆಲೆ ನಿಲುಕಲಾರದು. ಏಕೆಂದರೆ, ಬುದ್ಧಿಯ ಮೂಲಕ ಭಾಷೆಯು ಮೈವೆತ್ತಿಲ್ಲ. ಭಾಷೆಯು ಅಸ್ತಿತ್ವದಲ್ಲಿ ಬಂದ ಬಳಿಕ, ಎಷ್ಟೋ ಶತಕಗಳ ತರುವಾಯ ಬುದ್ಧಿಯು ತಲೆಯೆತ್ತಿದೆ.

ಋಗ್ವೇದದ ಭಾಷಾಂತರಕಾರರೂ, ತುಂಬ ಮೇಧಾವಿಗಳು ಎಂದು ವಿಖ್ಯಾತರಾಗಿದ್ದ ಮ್ಯಾಕ್ಸ್‌ಮುಲ್ಲರರಿಗೆ, ರೂಪಕ ಭಾಷೆಯಲ್ಲಿ ತಲೆಯೆತ್ತಿದ ಕಾರಣವು ಗೊತ್ತಾಗಲೊಲ್ಲದು. ರೂಪಕ ತಿಳಿಗೇಡಿಗಳ ಮಾತು, ಎಂದು ಎನಿಸುವಂತಿದೆ. ಉದಾ: ಮುಖಕಮಲ, ಇಲ್ಲಿ ಅಂತಃಸಂಗತಿಯೇ ಇಲ್ಲ. ಆದಕಾರಣ ಬುದ್ಧಿಕೆಟ್ಟು ಇಂಥ ರೂಪಕಗಳು ರೂಢಿಗೆ ಬಂದಿರಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಆ ವಿದ್ವಾಂಸರು. ಆಧುನಿಕ ತೀವ್ರ ತೀಕ್ಷ್ಣ ಬುದ್ಧಿಯವರೆಂದು ಖ್ಯಾತಿಯಿದ್ದ ಬರ್ಟರಾಂಡ್ ರಸೆಲ್ಲ, ಒಂದು ಸಂಕೇತಕ್ಕೆ ಒಂದೇ ಅರ್ಥವು ಇರುವ ಶಾಸ್ತ್ರಶುದ್ಧ ಭಾಷೆಯನ್ನು ಹಾರಯಿಸಿದರು. ಒಂದೊಂದು ಪದಕ್ಕೆ ಒಂದಕ್ಕಿಂತ ಹೆಚ್ಚು ಅರ್ಥಗಳು ರೂಢಿಗೆ ಬಂದಿರುವುದರಿಂದಾಗಿ ಭಾಷೆ ಕೊಟ್ಟಿದೆ! ನಿಃಸಂದಿಗ್ಧ ಅಭಿಪ್ರಾಯ ವ್ಯಕ್ತಪಡಿಸುವುದು ಅಶಕ್ಯವಾಗಿದೆ. ಅಂಕೆ - ಸಂಖ್ಯೆಯಲ್ಲಿ ಈ ಸಂದಿಗ್ಧತೆಯು ಇಲ್ಲ. ಗಣಿತಶಾಸ್ತ್ರದಂತೆ ನಿಶ್ಚಿತ ಅರ್ಥಸೂಚಕ = ಪದಗಳು ಇರಬೇಕು ಎಂಬ ಬಟ್ರಾಂಡ್ ರಸೆಲ್ಲರಿಗೆ, ಈ ಮಾನವ ಭಾಷೆಯ ಗೂಢವು ಅರಿಕೆಗೆ ಬರಲೇ ಇಲ್ಲ.

ಭಾಷೆಯೊಳಗಿನ ಪದಗಳಿಗೆ ಇತಿಹಾಸ ಉಂಟು. ಇದರಿಂದಾಗಿ, ಯಾವುದೊಂದು ಪದದ ಅರ್ಥವು ಬದಲಾಗುವುದರ ಹಿಂದಿನ ಇತಿಹಾಸವು ಅರಿಕೆಗೆ ಬರುತ್ತದೆ. ಜೀವನ ಜೀವಿತದ ಪ್ರತಿಬಿಂಬವು ಭಾಷೆಯಲ್ಲಿ ಒಡಮೂಡಿನಿಂತಿದೆ. ತನ್ನ ನೇರಕ್ಕೆ ನೋಡುವ ಬುದ್ಧಿಗೆ, ಭಾಷೆಯ ಕಟ್ಟಡದ ತೊಡಕು ಗೊತ್ತಾಗುವುದಿಲ್ಲ. ಭಾಷೆಯು ವೈವೆತ್ತಿರುವಲ್ಲಿ, ಪ್ರಾಧಾನ್ಯದಿಂದ, ಪ್ರಜ್ಞೆಯ ಅಂಗವಾದ ಮನಸ್ಸಿನ ಕೈವಾಡವಿದೆ. ಈ ಮಾನವ ಭಾಷೆಯಲ್ಲಿ ಬುದ್ಧಿಯು ತಲೆಯೆತ್ತಿದ ತರುವಾಯ ಆಕಾರ ಪಡೆದ ಬುದ್ಧಿಯ ಕೈವಾಡಕ್ಕೆ ಪ್ರಾಧಾನ್ಯವಿರುವ ಪದಗಳ ಆಕಾರ, ಆಶಯವು, ಪ್ರಜ್ಞೆ= ಉಪಜ್ಞೆಯ ಮೂಲಕ ಮೈವೆತ್ತ ಪದಗಳ ಆಕಾರ, ಆಶಯಕ್ಕಿಂತ ತೀರ ಬೇರೆ ಬಗೆಯದ್ದಾಗಿರುವುದನ್ನು ಕಾಣಬಹುದು. ಉದಾ : ಜಾತವೇದ ಅಗ್ನಿ ಈ ಪದದ ಆಧಾರಭೂತ ಸಮಯ ಪರಿಸರವು ಯಾವುದು ಎಂಬುದನ್ನು ಊಹಿಸಿ ಅರಿಯಲು ಶಕ್ಯವಿದೆ. ಮನುಷ್ಯನ ಪ್ರಾದುರ್ಭಾವದ ಸುಮಾರಿನ ಸಮಯದ ಸೂಚನೆಯು ಇಲ್ಲಿದೆ. ಜಾತವೇದ ಇದಕ್ಕೆ ಆ ಬಳಿಕ ಪ್ರಜ್ಞೆ ಎಂಬ ಇನ್ನೊಂದು ಹೆಸರು ಬಂದದ್ದು ಸಾಯಣರ ಭಾಷ್ಯದಿಂದ ಗೊತ್ತಾಗುತ್ತದೆ. ಆದಕಾರಣ, ಜಾತವೇದ ಅಗ್ನಿ ಇದು ಪ್ರಜ್ಞೋದಯದ ಸುಮಾರಿನ ಸಮಯವನ್ನು ಗಮನಕ್ಕೆ ತಂದು ಕೊಡುತ್ತಿದೆ. ಅದುದರಿಂದ, ಇಲ್ಲಿ ಪ್ರಜ್ಞೆಯ ಕೈವಾಡವಿರಲಿಕ್ಕೆ ಬೇಕೆಂದು ಸಿದ್ಧಪಡಿಸುವ ಆವಶ್ಯಕತೆಯೇ ಇಲ್ಲ. ಆದರೆ, ಇದಕ್ಕೆ ಪ್ರತಿಯಾಗಿ, ನ-ಚಿಕೇತ ಅಗ್ನಿ, ಸಮೀಕ್ಷಿಸಿರಿ. ಕೋಶಗಳಲ್ಲಿ, ಭಾಷೆಯಲ್ಲಿ ಜಾತವೇದ ಅಗ್ನಿ, ನ-ಚಿಕೇತ ಅಗ್ನಿ ಇವೆರಡೂ ಒಂದರೊಂದರ ಹತ್ತಿರ ಇರಬಹುದಾದವರೂ, ಈ ಇವೆರಡರ ಜನನ ಸಮಯದ ನಡುವೆ ಒಂದು ಯುಗದ ಅಂತರವು ಇರುವ ಶಕ್ಯತೆಯುಂಟು. ಅಂತರ್-ವಿಸಂಗತಿಯಲ್ಲಿಯೂ, ಅಂತಃಸಂಗತಿಯನ್ನು ಕಲ್ಪಿಸಬಲ್ಲ, ಸೂಕ್ಷ್ಮಬುದ್ಧಿಯ ಕೈವಾಡವು ಈ ನ-ಚಿಕೇತಾಗ್ನಿಯಲ್ಲಿ ಉಂಟು.

ಈ ಹಿನ್ನೆಲೆಯಲ್ಲಿ ಸ್ಪಷ್ಟತೆಯನ್ನು ಪಡೆಯುತ್ತಿರುವ ಅಂಶಗಳು :

೧. ಬುದ್ಧಿಗಿಂತಲೂ ಪ್ರಜ್ಞೆಯು ಮೊದಲು ಕಾಣಿಸಿಕೊಂಡಿದೆ

೨. ಬುದ್ಧಿಯು ಅಭಾವವೇ ಸ್ಥಾಯಿ ಇರುವ ಅಂತರ್‌ವಿಸಂಗತ ಭೂಮಿಕೆಯ

> ಸ್ಥಲ-ಕಾಲ ಸಂದರ್ಭದ ಜೀವಿತದ ಹಂತದಲ್ಲಿ ಮೈವೆತ್ತಿದೆ. ಭಾಷೆ ಮತ್ತು ಧರ್ಮ-ಸಂಸ್ಕೃತಿ ಇವೆರಡರಲ್ಲಿ ಯಾವುದು ಮೊದಲು, ಎಂಬುದನ್ನು ಹೇಳುವುದು ಅಶಕ್ಯ. ಭಾಷೆಯೇ ಇಲ್ಲದೆ ಧರ್ಮ-ಸಂಸ್ಕೃತಿ ಮೈದೋರಲಾರವು. ಇದಕ್ಕೆ ಪ್ರತಿಯಾಗಿ ಧಾರ್ಮಿಕ-ಸಾಂಸ್ಕೃತಿಕ ಪಾರ್ಶ್ವಭೂಮಿಯ ಪ್ರೇರಣೆಯೇ ಇಲ್ಲದೆ, ಭಾಷೆಗಾಗಿ ಭಾಷೆ ಎಂಬುದು ಒಂದು ವಿನೋದವಾಗಲಿದೆ. ಇಂದಿನ ಹೊಸಬಗೆಯ ಬಾಳಿನಲ್ಲಿ, ಕೊರತೆ, ಅಸಮಾಧಾನ ತಲೆದೋರಿ, ಬೌದ್ಧಿಕ ಭೂಮಿಕೆಯಿಂದ ಧರ್ಮ-ಸಂಸ್ಕೃತಿಯ ಆವಶ್ಯಕತೆಯೆನಿಸುವವರೇ ಹೆಚ್ಚು! ಅಮೆರಿಕೆಯಲ್ಲಿ ಬ್ರೂಕ್‌ಕಲಿನ್ ಮೆಡಿಕಲ್ ಕಾಲೇಜಿನ ಪ್ರೊಫೆಸರ್ ದಂಪತಿಗಳು ಕೇಳಿದ ಪ್ರಶ್ನೆ ನೆನಪಿಗೆ ಬರುತ್ತದೆ. ಧರ್ಮ ಎಂಬುದರ ಆವಶ್ಯಕತೆ ಏನು? ಇಂದಿನ ಜೀವನ ರೀತಿಯಲ್ಲಿ, ಮದುವೆ, ಕುಟುಂಬ, ಸಂಸ್ಥೆ ಇವು ಕಾಲಬಾಹಿರ ನಡೆವಳಿಗಳು ಆಗುತ್ತ ನಡೆದಿಲ್ಲವೆ?

ಇಂದಿನದು ಹೋಟೆಲ್ ಸಂಸ್ಕೃತಿ; ಇಂದು ಇಂಗ್ಲಂಡಿನಲ್ಲಿ ನಾಳೆ ದಕ್ಷಿಣ ಆಫ್ರಿಕೆಯಲ್ಲಿ, ನಾಡದು ಚೀನ-ಜಪಾನ್-ಎಲ್ಲಿ ನಮ್ಮ (ತಜ್ಞರ) ಆವಶ್ಯಕತೆ, ಉಪಯೋಗವು ಉಂಟೋ-ಅಲ್ಲಿ ಹೋಗಿ ತಂಗುವುದು. ಮದುವೆ, ಜಾತಿಧರ್ಮ ಇವು ಮಾನವ ವಿಕಾಸಕ್ಕೆ ಆತಂಕಕಾರಿಯಲ್ಲವೊ? ಇದು ಶುದ್ಧ ಬೌದ್ಧಿಕ ದೃಷ್ಟಿಕೋನ. ಇದಕ್ಕೆ ಸಮಾಜ-ಸಮಷ್ಟಿ ಎಂಬ ಮಾತಿನ ಅರ್ಥವಾಗುವುದು ಕಷ್ಟ. ಬೌದ್ಧಿಕ ಸಹಾನುಭೂತಿಯು ಮಾನವತೆಯ ಬಗೆಗೆ ನಿರರ್ಗಳ ಉಪನ್ಯಾಸವನ್ನೀಯಬಲ್ಲುದು. ಈ ಬುದ್ಧಿವಾದೀ ಬುಧರ-ಬುದ್ಧರು-ಸೋಫಿಸ್ಟ ಇವರೇ ಮೊದಲಿನಿಂದಲೂ ಇದ್ದಿದ್ದರೆ ಭಾಷೆ ಮೈವೆತ್ತುವ ಶಕ್ಯತೆಯೆ ಇದ್ದಿಲ್ಲ! ಅರ್ಥ-ವಿಚಾರ, ಭಾಷೆ ಇದು ಮೂಲತಃ ಸಾಮಾಜಿಕ. ಮಂದಿ ಸಮುದಾಯ, ತುರು, ಮಂದಿ ಪ್ರಾಣಿವರ್ಗ! ಆದಕಾರಣ, ಭಾಷೆ, ಧರ್ಮ, ಸಂಸ್ಕೃತಿಯು ಮೊತ್ತಮೊದಲಲ್ಲಿ ಆಕಾರ ಪಡೆಯ ತೊಡಗಿದ ಬಳಿಕ ಗಾನಯುಗವು ಬುದ್ಧಿಯ ಅವತಾರವಾಗುವುದಕ್ಕೂ ಮುಂಚಿನದು.

ಈ ಮೊದಲು ಅರಿಕೆಗೆ ಬಂದಿರುವಂತೆ Reason is God = ಬುದ್ಧಿಃ-ಬುದ್ಧಿಮತಾಂ ಅಹಂ ಎಂಬ ಭಗ-ವಂತನ ದೇವರ ಈ ಬುಧರ-ಬುದ್ಧರ ಯುಗದಲ್ಲಿ ನಾಮ ಬೇರೆ ಬೇರೆ ಇರಬಹುದು. ಆದರೆ, ಸೃಷ್ಟಿಕರ್ತನು ಎಂಬ ದೇವರು ಒಬ್ಬನೇ. ನಾಮ (Essence) ಒಂದೇ. ಈ ವರೆಗಿನ ವಿವರಣೆಯಿಂದ, ಆದಿಕಾರಣ ಎಂಬ ಏನೆಲ್ಲವನ್ನೂ ಮಾಡಿ ಮಾಡಿಸುವ, ಈ ಬುದ್ಧಿಯುಗದ ದೇವರು; ಭಗವಂತನು ಇರುವಂತೆ, ಬುದ್ಧಿಯುಗಕ್ಕಿಂತಲೂ ಮುಂಚಿನ-ಯಾವ ಯುಗದಲ್ಲಿ, ಈ ಭಾಷೆ, ಧರ್ಮ ಸಂಸ್ಕೃತಿ ಮೈವೆತ್ತಿ ಆಕಾರ ಪಡೆಯತೊಡಗಿದುವೊ-ಆ ಯುಗಕ್ಕೂ ಒಬ್ಬ ಮಾಡಿಸುವ ದೇವರು ಇರಲೇಬೇಕಷ್ಟೆ? ಈ ಬುದ್ಧಿಯ, ಬುಧ-ಬುದ್ಧರ ಯುಗಕ್ಕೂ ಮುಂಚಿನ ಆ ಪ್ರಜ್ಞೆಯ ಅಂಗವಾದ ಮನಸ್ಸಿನ ಮನು-ಜರ ಯುಗದ ಆದಿದೇವರು ಯಾರು? ಆದರೆ, ಇಲ್ಲಿ ಇನ್ನೊಂದು ಸಮಸ್ಯೆ : ಇವರು ಇಬ್ಬರು ದೇವರು ಆಗುತ್ತಾರೆ! ಈ ಇಬ್ಬರಲ್ಲಿ ನಿಜವಾದ ದೇವರು ಯಾರು? ಎಂಬ ಪ್ರಶ್ನೆ ಏಳುತ್ತದೆ. ಈ ದೇವತಾ ವಿಚಾರವನ್ನು ಒಂದಕ್ಕಿಂತ ಹೆಚ್ಚು ನಿಟ್ಟಿನಿಂದ ಸಮೀಕ್ಷಿಸಿ ತಾಳ ಮೇಳದೊಡನೆ ನಿರ್ದಿಷ್ಟಪಡಿಸಿ ಅರಿಯಲು ಶಕ್ಯವೆ? (Reason)(ಬುದ್ಧಿವಾದೀ) ಭೂಮಿಕೆಯ ಪ್ಲೇಟೋ ಹಾಗೂ Noûs=Mind (ಪ್ರಜ್ಞಾವಾದೀ) ಅರಿಸ್ಟಾಟಲ್, ಈ ಗುರು-ಶಿಷ್ಯರು ನಂಬಿದ್ದ ದೇವತಾವಿಚಾರದ ಮೂಲಕವಾಗಿ, ಈ ಸಂಗತಿಯನ್ನು ನಿರ್ದಿಷ್ಟಪಡಿಸಿ ಅರಿಯಲು ಶಕ್ಯವಾಗಬಹುದಾಗಿದೆ.

ಟಿಪ್ಪಣಿಗಳು

೧. ***ಭಗವದ್ಗೀತಾ*** (ಶಾಂಕರ ಭಾಷ್ಯ ಸಹಿತ) X- ೧೧, ನಿರ್ಣಯಸಾಗರ ಮುದ್ರಣ, ಮುಂಬಯಿ

೨. ***ಅದೇ*** VII- ೧೦

೩. B. Kuzenetsoy, ***Albert Einsten***, Progressive Publishers Moscow, 1965, p. 15-6)

ಧರ್ಮ-ಸಂಸ್ಕೃತಿ ಪ್ರಚೋದಕ ಆದಿಕಾರಣಶಕ್ತಿ

ಈ ಸ್ಪಷ್ಟೀಕರಣವು ತತ್ತ್ವಜ್ಞಾನದ ಆಳಕ್ಕೆ ಒಯ್ಯಲಿದೆ! ಅಲ್ಲದೆ, ಇತಿಹಾಸದ ಆಧಾರವಿಲ್ಲದ ಕೇವಲ ತಾತ್ತ್ವಿಕ ವಿವೇಚನೆಯು, ತರ್ಕ, ಅನುಮಾನದ, ನಿಜ ಎಂದು ಎನಿಸಬಹುದಾದ ಕಲ್ಪನಾ ರಾಜ್ಯದಲ್ಲಿ ಸೆಳೆದೊಯ್ಯಬಹುದು. ಆದರು, ಡಾ. ಐನ್ಸಟನ್ ಹೇಳುವಂತೆ Free creation or contract ಇದು ಒಟ್ಟಿನ ಮಾನವೀಯ ಜೀವನಾನುಭವಕ್ಕೆ ವಿಸಂಗತವಿರಬಾರದು. ಐನ್ಸಟನ್ ಹೇಳುವ ಸತ್ಯಾನ್ವೇಷಣೆಯ ಇನ್ನೊಂದು ಒರೆಗಲ್ಲು ಇದು

> In any case, it turns out that among the augurs usually is agreement in judging the inner-perfection of the theories and even more so concerning the degree of external confirmation[?]

ನಿಜವಾದ ದೇವರು ಯಾರು ಇದನ್ನು ನಿರ್ದಿಷ್ಟಪಡಿಸಿ ಅರಿಯುವಾಗ, ಐತಿಹಾಸಿಕ ಸ್ವರೂಪದ ಹಾಗೂ ವಿಚಾರವಂತರ ಪ್ರಾಮಾಣಿಕ ಜೀವನಾನುಭವಗಳ ಬೆಳಕು ಲಭಿಸಿದಲ್ಲಿ ಇದನ್ನು ಸಂದೇಹಿಸಲು ಅವಕಾಶವೇ ಉಳಿಯಲಾರದು. ಆದರೆ, ಈ ವ್ಯಕ್ತಿಗಳು ಭಾರತೀಯ ಪಡೆಯಚ್ಚಿನ ವ್ಯಾಸ, ಯಾಜ್ಞವಲ್ಕ್ಯ ಪ್ರಭೃತಿಗಳಂತಹ ಮಿಥ್ಯಾ (Mythical) ಮಹಾಪುರುಷರಿರಕೂಡದು.

ಮಾನವ ಜೀವನ ವಿಶ್ವದ ಆಕೃತಿಯ ಬಗೆಗೆ, (ಕ್ರಿ. ಪೂ. ೪೨೭-೩೪೬) ಪ್ಲೇಟೋ ಹಾಗೂ ಅರಿಸ್ಟಾಟಲ್ ಇವರಿಬ್ಬರಲ್ಲಿ ಭಿನ್ನಾಭಿಪ್ರಾಯವು ಇತ್ತು. ಇದರ ವಿವರಣೆಯು ವೈವಸ್ವತ ಸಂಪ್ರದಾಯದ ಸ್ಪಷ್ಟೀಕರಣ ಬಂದಿದೆ. ಪ್ಲೇಟೋನು ಮೊದಲಲ್ಲಿ ಸಾಕ್ರೆಟೀಸನ (ಕ್ರಿ. ಪೂ. ೪೭೭-೩೯೯) ಶಿಷ್ಯನಾಗಿದ್ದನು. ಸಾಕ್ರೆಟಿಸನು ಸೂರ್ಯೋಪಾಸಕನಿದ್ದನೆಂಬ ಪ್ರತೀತಿ ಇದೆ. ಆದರೆ ವೃದ್ಧಾಪ್ಯವು ಸಮೀಪಿಸಿದಂತೆ, ಈತನು ಪೈಥಾಗೋರಾಸ (ಕ್ರಿ. ಪೂ. ೬೦೦) ಪಂಥೀಯ ಒಬ್ಬ ಮಹಾನ್ ವ್ಯಕ್ತಿಯ ಪ್ರಭಾವಕ್ಕೆ ಒಳಗಾದನು, ಎಂದು ಈಗ ಸಪ್ರಮಾಣವಾಗಿ ಸಿದ್ಧವಾಗಿದೆ.

ಆದರು, ಪ್ಲೇಟೋನ ದೇವತಾ ವಿಚಾರವು ಅಸ್ಪಷ್ಟವಿದೆ. Good is God ಎಂಬ ಅವನ ವಿಚಾರದ ನೆಲೆ ನಿಲುಕುವುದಿಲ್ಲ. ಈತನಲ್ಲಿ Reason = ಬುದ್ಧಿಗೇ ಅಗ್ರಸ್ಥಾನವಿತ್ತು.

> Reason belongs to man, the person, and cannot be separated from him. It does not come into his mind "from out of doors, as Hardie translate's Aristotles phrases".[?]

ಇಲ್ಲಿ Reason, ಭಾರತೀಯ ಪರಂಪರೆಯ ಬುದ್ಧಿ-ಮೇಧಾಶಕ್ತಿ ಇದೇ ಅಭಿಪ್ರೇತವಿರಲಿಕ್ಕೆಬೇಕು. ಪೈಥ್ಯಾಗೋರಾಸ ಪಂಥದ ಪ್ರಭಾವಕ್ಕೆ ಒಳಗಾಗಿದ್ದುದನ್ನು ಸ್ಮರಿಸಿಕೊಂಡರೂ ಸಾಕು. ಪ್ಲೇಟೋನು, ಭಗವಂತ ಸಂಪ್ರದಾಯದವನೇ ಇರಬೇಕೆಂಬ ಸಂಗತಿಯು ದೃಢಪಡುತ್ತದೆ. ಪೈಥಾಗೋರಾಸ ಪಂಥದಲ್ಲಿ ದಶ (೧೦) ಈ ಸಂಖ್ಯೆಗೆ ಇರುವ ಪ್ರಾಶಸ್ತ್ಯವನ್ನು ಸ್ಮರಿಸಿಕೊಳ್ಳಬೇಕು. ಭಾರತೀಯ ದಿವ್ಯಾಧ್ಯಾತ್ಮದಲ್ಲಿಯೂ ದಶ (೧೦) ಇದಕ್ಕೆ ಅನನ್ಯ ಸಾಧಾರಣ ಮಹತ್ವವಿದೆ. ಈ ವಿಶ್ವಪುರುಷನ ಆಕೃತಿ ಇದು.

> Plato distinguished ten substances which represented ten grades of beings : (I) absolute 2) many : Pythagorean Unlimited ಹೀಗೆ ಹತ್ತರ ವಿವರಣೆಯೂ ಇದೆ.[೩]

ಪ್ಲೇಟೋನ ಪ್ರಭಾವವನ್ನು ವಿವರಿಸುವಾಗ, His philosophy became a strong pillar of Christian dogmas ಕ್ರಿಸ್ತಪಂಥದ ಅದ್ವಿತೀಯ ಸಂತ ಅಸ್ಟೈಗನ್ (Augustine) ಈತನು ಪ್ಲೇಟೋನಿಂದ ತುಂಬ ಪ್ರಭಾವಿತನಾಗಿದ್ದಾನೆ.[೪]

ಪ್ಲೇಟೋನು ದಿವ್ಯಜ್ಞಾನಿ (Mystic) ಆಗಿದ್ದನು. ರಸೆಲ್ಲ, ಹೇಳಿರುವಂತೆ, ಪ್ಲೇಟೋನು Geometer is God ಎಂದಿದ್ದಾನೆ. ಇನ್ನು ಈ ಎಲ್ಲ ಬಾಹ್ಯ (outside) ಪ್ರಮಾಣಗಳ ಸಾಮ್ಯದ ಪ್ರಮಾಣವನ್ನು (degrees) ಪ್ರಮಾಣಿಸಿ ನೋಡಬಹುದಾಗಿದೆ. ಐನ್ಸಟನ್ನರು ಕಂಡುಕೊಂಡ ಸತ್ಯದ ಒರೆಗಲ್ಲಿನ ಪ್ರಯೋಜನ ಪಡೆದು, ಪ್ಲೇಟೋನ ದೇವರ ಆಕೃತಿ ಸ್ವರೂಪನ್ನು ಗ್ರಹಿಸಿಕೊಳ್ಳಲು ಶಕ್ಯವೆ, ಎಂದು ನೋಡುವ ಆವಶ್ಯಕತೆಯು ಇದೆ. ಈ ಬಾಹ್ಯಸಾಮ್ಯದಲ್ಲಿ ಹೆಚ್ಚಿನ ಪ್ರಮಾಣದ ತಾಳಮೇಳವು (agreement) ಉಂಟು ಎಂದು ಕಂಡು ಬಂದರೆ, ಬಳಿಕ ಆಂತರಿಕ ಅಂತಃಸಂಗತಿಯಲ್ಲಿ ಪರಿಪೂರ್ಣತೆಯು (inner-perfection) ಕಂಡುಬರುವುದೇ, ಎಂಬುದನ್ನು ವಿಮರ್ಶಿಸಬಹುದಾಗಿದೆ. ಬಾಹ್ಯಸಾಮ್ಯಗಳು ಇವು ಪ್ಲೇಟೊ, ಪೈಥಾಗೋರಾಸಪಂಥವನ್ನು ಮೆಚ್ಚಿಕೊಂಡಿದ್ದಾನೆ. ಇವನ ಲೇಖನಗಳಲ್ಲಿ ಆ ಸಂಪ್ರದಾಯದ ಪ್ರಭಾವವು ಕಂಡು ಬರುತ್ತದೆಂದು ಬಲ್ಲಿದವರೆಲ್ಲರೂ ಒಪ್ಪಿದ್ದಾರೆ. ಇನ್ನೊಂದು ಬಾಹ್ಯ ಪ್ರಮಾಣವು, ಅಸ್ಸಲ ಕ್ರೈಸ್ತತತ್ವ ಪ್ರತಿಪಾದಕ ಅಗಸ್ಟೈನ್ ಈತನು ತಾನು ಆಂತರಿಕ ದೃಷ್ಟಿ (In-sight) ಪಡೆದದ್ದು ಪ್ಲೇಟೋನ ಗ್ರಂಥದ ಪಾರಾಯಣದಿಂದ ಎಂದಿದ್ದಾನೆ. ಮೂರನೆಯ ಬಾಹ್ಯ ಪ್ರಮಾಣ: ಗುರು ಸಾಕ್ರೆಟಿಸ್‌ನ ವೈಚಾರಿಕ ಭೂಮಿಕೆಯನ್ನು ಕಡೆಗಣಿಸಿದ್ದು : ಕೇಂದ್ರಸತ್ತೆಯ ಭೂಮಿಕೆ ಸ್ವೀಕರಿಸಿ, ಪ್ರಜಾಪ್ರಭುತ್ವಕ್ಕೆ ಅನ್ಯಾಯ ಬಗೆದನು, ಎಂಬ ಆಕ್ಷೇಪಕ್ಕೆ ಗುರಿಯಾದದ್ದು. ಝೆಲ್ಲರ್ ಹೇಳಿರುವ ಮಾರ್ಮಿಕ ವಾಕ್ಯವು ಹೀಗಿದೆ: ರಾಜಕೀಯ ಹಕ್ಕುಗಳನ್ನು ಗಣಿತ ಪದ್ಧತಿಯಿಂದ ಎಲ್ಲರಿಗೂ ಸಮನಾಗಿ ಹಂಚುವುದು ಪ್ಲೇಟೋನಿಗೆ ಮಾನ್ಯವಿದ್ದಿಲ್ಲ.

> It is not an arithmetical but a geometrical equality... The Whole. State takes the form of a religious community... a church..."[೫]

ರೋಮನ್ ಕ್ಯಾಥೋಲಿಕ್ ಸಾಮ್ರಾಜ್ಯವಾದಕ್ಕೆ ನಾಂದಿ ಇಲ್ಲಿದೆ, ಪೋಪ್ ಸರ್ವಾಧಿಕಾರಿ. ಐಹಿಕ ಜೀವನವು, ಆ ಏಕಂ; Idea ಇದರ ಛಾಯೆ, ಭವಬಂಧನದಿಂದ ಮುಕ್ತವಾಗುವುದೇ ಬಾಳಗುರಿ ಆಗುತ್ತದೆ! ಕುಮಾರ, ಕುಮಾರೀ ಸಂಪ್ರದಾಯದ ಪ್ರಚೋದನೆ ಪ್ರಚ್ಛನ್ನವಾಗಿ ಇಲ್ಲಿ ಇದೆ; ಸುಪ್ರಜಾ ನಿರ್ಮಾಣದ ಉದಾತ್ತ ಉದ್ದೇಶ ಇಲ್ಲಿದೆ. ಮನೆಮಾರಿನ ಚಿಂತೆ, ಬಂಧನವು ಇಲ್ಲದ ಕೆಲವು ತ್ಯಾಗಿಗಳು, ನಿಯೋಗದಿಂದ ಸಂತತಿ ನಿರ್ಮಿಸುವ ಯೋಜನೆ ಹೇಳಿದ್ದಾನೆ. ವ್ಯಾಸನ ನಿಯೋಗತಂತ್ರದ ಸಾಮ್ಯವಿದೆ. ಚರಲಿಂಗ ಅಥವಾ ಜಂಗಮಲಿಂಗದ ಶಾರೀರಕ ಆವಶ್ಯಕತೆಗಳನ್ನು ಪೂರಯಿಸುವುದು. ಸಮಾಜದ ಕರ್ತವ್ಯವಾಗುತ್ತದೆ.

ಈ ಉಪದೇಶದ ಭಯಾನಕ ಸ್ವರೂಪವು ಚಿಂತ್ಯವಿದೆ. ದಾಂಪತ್ಯಧರ್ಮದಲ್ಲಿ ಸಾಮಾಜಿಕ ಕರ್ತವ್ಯದ ಗೃಹಸ್ಥಾಶ್ರಮವನ್ನು, ಮಾನವಧರ್ಮದಲ್ಲಿ ಉಳಿಸಿಕೊಂಡು ಬರುವ ಜರೂರಿ ಇದೆ. ಆದರೆ, ಪ್ಲೇಟೋನಿಗೆ ಆದರ್ಶ ಗೃಹಸ್ಥಾಶ್ರಮದ=ಕುಟುಂಬ ಸಂಸ್ಥೆಯ ನೆನೆಪು ಆಗದಿದ್ದದ್ದು ಸೋಜಿಗ! ಅತ್ಯಂತ ಪ್ರಭಾವೀ ಬುದ್ಧಿಶಾಲಿ, ತನ್ನ

ಗ್ರಂಥಗಳ ಉದ್ದಕ್ಕೂ ಇವನು ಓದುಗರನ್ನು ಮರುಳುಗೊಳಿಸದ ಭಾಗಗಳು ದೊರೆಯಲಾರವು, ಭಗವತ್ ಗೀತೆಯ ಆಕರ್ಷಕ ಪ್ರತಿಪಾದನೆಯ ನೆನಪು ಬರುತ್ತದೆ. ಆದರೆ ಪ್ಲೇಟೋನ ವಿಶಾಲ ಭೂಮಿಕೆ ಗೀತೆಯಲ್ಲಿ ಇಲ್ಲ. ಇಷ್ಟು ಬಾಹ್ಯಸಾಮ್ಯವು ಸಾಕು.

ಅಂತಃಸಾಮ್ಯದ ಸೌಂದರ್ಯ

ಪೈಥಾಗೋರಾಸ ಪಂಥೀಯ ದೇವರು One ಇವನು Ten (ದಶ ಅಂಗುಲ) ಇದ್ದಾನೆ. ಕ್ರೈಸ್ತಪಂಥವನ್ನು ಪ್ರೇರಿಸಿದ ಶ್ರೇಯಸ್ಸು ಪ್ಲೇಟೋನಿಗಿಂತಲೂ ಪೈಥಾಗೋರಾಸನಿಗೇ ಸಲ್ಲುತ್ತದೆ ಎಂದು ರಸೆಲ್ ನಿಃಸಂದಿಗ್ಧ ರೀತಿಯಲ್ಲಿ ಹೇಳಿದ್ದಾರೆ. ಕ್ರೈಸ್ತಪಂಥದಲ್ಲಿ Candle light = ಜ್ಯೋತಿರ್ಲಿಂಗಕ್ಕೆ ಇರುವ ಮಹತ್ತ್ವವು ನಿಷ್ಕಾರಣವಲ್ಲ.

ಮಾತು (ಜ್ಞಾನ) ಎಂಬುದು ಜ್ಯೋತಿರ್ಲಿಂಗ ಪ್ಲೇಟೋನು Reason ಇದಕ್ಕೇ ಅಗ್ರಪಟ್ಟ ಕೊಟ್ಟಿದ್ದಾನೆ. ಭಗ್‌ವತ್ ಗೀತೆಯಲ್ಲಿ ಬುದ್ಧಿ = ಭಗವಂತ ಇವರ ಸಾಹಚರ್ಯವನ್ನು ಹೇಳಲಾಗಿದೆ. ಪ್ಲೇಟೋನು, Reason belongs to man : the person ಎಂದು ಸೂಚ್ಯವಾಗಿ ಹೇಳಿದ್ದಾನೆ. Reason=ಬುದ್ಧಿ ನರ (ಳ) ಅಂಗವಾಗಿಯೇ ಇರುತ್ತದೆ, ಎಂದು ಅರಿಸ್ಟಾಟಲ್ ಸೂಚಿಸಿರುವಲ್ಲಿ ಮಾರ್ಮಿಕ ಅರ್ಥವಿದೆ. ಈ ಬುದ್ಧಿ ತಲೆಯಿಂದ ಹೊರಡುತ್ತದೆ! ಭಾರತೀಯ ದಿವ್ಯಾಧ್ಯಾತ್ಮವು ಈ ತಲೆ (ನಾಗನ ಹೆಡೆಯ ರತ್ನ) ಸೂರ್ಯ (ಸದೃಶ) ಎಂದು ಬಣ್ಣಿಸಿದ್ದಾರೆ. ಆದರೆ ಇದು, ಈಜಿಪ್ಟ್ ಕ = ಲಿಂಗೋದ್ಭವ ನಾಗನ ಹೆಡೆಯ ರತ್ನ = ಸೂರ್ಯ ಎಂಬ ಹಾವಿನ ಪ್ರತಿಮೆಯಲ್ಲಿಯೇ ಇದೆ. ಪ್ಲೇಟೋನ Reason Geometer ಇದು, ಭೂಮಿಯನ್ನು ಅಳೆವ, ಪೈಥಾಗೋರಾಸನ Limit ಇದನ್ನು ಹೋಲುತ್ತದೆ.[೬] ಸ್ಥಳವನ್ನು Receptacle of all things ಧಾರಿಣೀದೇವಿ ಎಂಬ ರೂಪದಲ್ಲಿ ಕಂಡ ಪ್ಲೇಟೋ, ಕಾಲತತ್ತ್ವವನ್ನು Reason ಅಗ್ನಿಸ್ತಂಭ=ಝಿಯೂಸ್‌ರೂಪದಲ್ಲಿ ಕಂಡಿರಲಿಕ್ಕೆಬೇಕು. ಪೈಥಾಗೋರಾಸ ಪಂಥೀಯರಲ್ಲಿ ಝಿಯೂಸ್‌ನು ಭೂಮಿಯ ಮಧ್ಯದ ಅಗ್ನಿಸ್ತಂಭ ಅಥವಾ Tower ಎಂದು ನಂಬುಗೆಯು ಇತ್ತು. ಬರ್ಟರಾಂಡ್ ಹೇಳುತ್ತಾರೆ ಪ್ಲೇಟೋನ God is Geometer[೭] Reason : (ಲಿಂಗ) ಉಪಾಸಕರೆಲ್ಲ ಮೃತ್ಯುತತ್ತ್ವದ ಭಕ್ತರೇ ಆಗುತ್ತಾರೆ = ಇರುತ್ತಾರೆ; ವಿರಕ್ತ ಪಂಥದಲ್ಲಿ ಐಹಿಕ ಜೀವನವು ತುಚ್ಛ, ತಿರಸ್ಕಾರಾರ್ಹ ಎಂದು ನಂಬುಗೆಯು ಇರುತ್ತದೆ.[೮]

ಐನ್ಸಟನ್ನರ Inner perfection ಈ ಸೂತ್ರವನ್ನು, ವೈಚಾರಿಕ ಆಕೃತಿಗಳು ಸನಾತನವಿರುತ್ತವೆ, ಎಂದು ನಾನು ಗ್ರಹಿಸಿಕೊಂಡಿದ್ದೇನೆ. ಈ ಲಿಂಗಪೂಜಕರು ವೃತ್ತಾಕೃತಿಯ ಕಾಲತತ್ತ್ವವನ್ನು ಸ್ವೀಕರಿಸುತ್ತಾರೆ. 'ಇಲ್ಲಿ ಇರುವುದು ಸುಮ್ಮನೆ; ಅಲ್ಲಿ ಇರುವುದು ನಮ್ಮ ಮನೆ' ಎಂಬ ದೃಷ್ಟಿಕೋನವು ತಲೆದೋರುತ್ತದೆ. ಪ್ಲೇಟೋನ conception of the body as the prison and Tomb of the Soul. ಇದು ಪೈಥಾಗೋರಾಸನ ವಿಚಾರವೇ ಆಗಿದೆ. ಪೈಥಾಗೋರಾಸನು ದೇಹವನ್ನು ಪಿರಾಮಿಡ = ಗೋರಿ= ವೃಂದಾವನ ಎಂದು ಬಗೆಯಲು ಬೋಧಿಸಿದ್ದಾನೆ. ಪ್ಲೇಟೋನ ಸರಿಯಾದ ನಿರ್ದೋಷ ತತ್ತ್ವಜ್ಞಾನದ ವ್ಯಾಖ್ಯೆ 'correct philosophy' is defined as "practice in dying & death" and "striving after death". ಮೃತ್ಯುತತ್ತ್ವದ ಉಪಾಸನೆಯಾಗಿದೆ. ಭಗವಂತ ಕೃಷ್ಣನು, ತಾನು ಮೃತ್ಯು ಸ್ವರೂಪನಿದ್ದೇನೆ. ಎಂದು ಹೇಳಿರುವಲ್ಲಿ ಲಿಂಗೋಪಾಸನೆ ಎಂದರೆ, ಮೃತ್ಯುಶಕ್ತಿಯ ಆರಾಧನೆಯೇ ಆಗುತ್ತದೆ.

ಅರಿಸ್ಟಾಟಲನು ಕಂಡುಕೊಂಡ ಜೀವನ ವಿಶ್ವದ ಆಕೃತಿಯು, ಗುರು ಪ್ಲೇಟೋನಿಂದ ತೀರ ಭಿನ್ನವಿತ್ತು. ಈ ಅರಿಸ್ಟಾಟಲನ ದೇವರ ಬಗೆಗಿನ ಸ್ಪಷ್ಟೀಕರಣವನ್ನು, ಈ ಮೊದಲು ಒಮ್ಮೆ ಹೇಳಿದ್ದಾಗಿದೆ. ಪ್ಲೇಟೋನು, ದೇವರು Reason ಬುದ್ಧಿ-ಮೇಧಾ ಇದು belongs to man, the person ಎಂದು ಹೇಳಿ ಇಷ್ಟಕ್ಕೆ ನಿಲ್ಲಲಿಲ್ಲ. ಇದರ ಮುಂದೆ ಅರಿಸ್ಟಾಟಲ್ ಒಂದು ವಾಕ್ಯ (Phrase) ಹೇಳಲು ಮರೆತಿಲ್ಲ, "It (Reason = ಬುದ್ಧಿ = ಮೇಧಾ) does not come into his mind, from out of doors" ಈ ಸ್ಪಷ್ಟೀಕರಣದ ಆವಶ್ಯಕತೆಯು ಏನು ಇತ್ತು? ಅರಿಸ್ಟಾಟಲನು Nous : Mind ಉಪಾಸಕನಾಗಿದ್ದನು. ಈ ಮನುಜನಲ್ಲಿ ಮನಸ್ಸು

ಸದಾ ಇದ್ದರೂ, Nous (ಪ್ರಜ್ಞೆ) ಇದು Mind ಮನಸ್ಸಿನ ಜೊತೆಗೆ ಇದ್ದೇ ಇರುತ್ತದೆ, ಎಂಬ ಭರವಸೆಯಿಲ್ಲ. ಪ್ರಜ್ಞೆಯ ಅಂಶ : ಉಪ-ಜ್ಞೆ ಈ ಉಪಜ್ಞಾತ ಇದು ಉಪದೇಶೇನ ವಿನಾ ಜ್ಞಾನ ಸಂಗತಿ, ವಿಚಾರ, ಇರುತ್ತದೆ. ಇದು ಹೊರಗಿನಿಂದ ಹೊಳೆದದ್ದು, ಹೊರಗಿನಿಂದ ಥಕ್ಕನೆ ಬಂದದ್ದು ಆಗುತ್ತದೆ.

ಈ ಕಾರಣದಿಂದಾಗಿ, ಈ ಮನು-ಜನಿಗೆ ಭಾರತೀಯ ಸಂಪ್ರದಾಯದಂತೆ, ಸತತವಾಗಿ ಸ್ವರ್ ಪಾತಳಿಯ ಸಂಪರ್ಕ, ಸಂಬಂಧ ಉಳಿಸಿಕೊಳ್ಳಬೇಕಾಗುತ್ತದೆ ಎಂಬ ನಿಷ್ಠೆಯು ಇತ್ತು. ಈ ಸಂಬಂಧವನ್ನು ಉಳಿಸಿಕೊಳ್ಳುವ ಹಂಬಿಕೆಯನ್ನು ನಡೆವಳಿಯ ರೂಪದಲ್ಲಿ ಉಳಿಸಿಕೊಂಡು ಬಂದದ್ದಾಗಿತ್ತು. ಹಿಂದಿನ ತಲೆಮಾರಿನವರೆಗಿನ, ಈ ತಂತ್ರವು ಯಾಂತ್ರಿಕವಾಗಿಯಾದರೂ ಗೊತ್ತಿತ್ತು. ಸವಿತೃ - ಧೀ ಪ್ರಚೋದಕ ಪ್ರಜ್ಞಾರೂಪ ದೈವತ; ಇದರ ಪ್ರಾರ್ಥನೆಯನ್ನು ಪ್ರಾರಂಭಿಸುವ ಮುಂಚೆ, ಈ ತ್ರಿತಆಪ್ತ್ಯ = ನರನು, ಮನುಜತ್ವದ ಹಂತಕ್ಕೆ ತಲುಪಲು, ವ್ಯಾಹೃತಿಗಳನ್ನು (ಪಾತಳಿ) ಸ್ಮರಿಸಿಕೊಳ್ಳುವ ವಾಡಿಕೆಯೂ ಉಂಟು. ಭೂಃ (ಸ್ಥಲ-ದೇಹ) ಭುವಃ (ಅಂತರಿಕ್ಷಂ) : ಇವೆರಡರ ಆಚೆಗೆ ಸ್ವಃ ಈ ಪಾತಳಿಯ ಮೇಲೆ ಪ್ರಜ್ಞೆ: Nous ಉಂಟು, ಎಂಬ ನಿಷ್ಠೆ ಇದೆ. ಪ್ರಾರ್ಥಿಸುವವನು, ತಾನು ದೇಹ (ಭೂ), ಪ್ರಾಣಲಿಂಗ (ಭುಃ) ಎರಡೂ ಅಲ್ಲ; ಸ್ವರ್‌ಪಾತಳಿಯ ಪ್ರಜ್ಞಾಶಕ್ತಿಯ ಅಂಶ, ಎಂದು ಬಗೆದು ಪ್ರಾರ್ಥಿಸುವ ತ್ರಿತನಿಗೆ ಇಂದ್ರನ ಕ್ರಿಯಾಶಕ್ತಿಯ ಸಹಕಾರವು ಲಭಿಸುತ್ತಿತ್ತು. ತ್ರಿತನು, ಅಹಿವೃತ್ರನನ್ನು (ಭೌತ ಕಾಲತತ್ವದ) ತುಂಡರಿಸುವ ಕಾರ್ಯದಲ್ಲಿ ಇಂದ್ರನು ಸಹಕಾರಿ. ಪ್ರಕಾಶ ಪಾತಳಿಯ, ಪ್ರಜ್ಞೆ-ಇಂದ್ರನು, ಈತನ ಸಹಕಾರದಿಂದ ಈ ಜೀವನದ ಪಾತಳಿಯ ಮೇಲಣ ಮೌಲ್ಯಗಳ ಸಂರಕ್ಷಣೆಗಾಗಿ, ಶಿಶ್ನೋದೇವಾಃ ಶತ್ರುವಾಗಿ, ಈ ಪಂಥವನ್ನು ಹಗಲಿನಲ್ಲಿ ಪ್ರವೇಶಿಸದಂತೆ ನೋಡಿಕೊಳ್ಳಬೇಕಾಗುತ್ತದೆ.

ಭಾರತೀಯ ಪೂರ್ವಪರಂಪರೆಯ ಈ ಪರಿಚಯದ ಮೂಲಕ ಅರಿಸ್ಟಾಟಲನ Nous comes alone into us from outside ಎಂಬ ಈ ಮಾತನ್ನು ಯಥಾರ್ಥವಾಗಿ ಗ್ರಹಿಸಿಕೊಳ್ಳಲು ಅನುಕೂಲವಾಗಲಿದೆ, ಎಂದು ಹೇಳಬೇಕಾಯ್ತು. ಪ್ಲೇಟೋನ ದೇವತಾವಿಚಾರದಲ್ಲಿ, Reason ದೇಹದ ಅಂಗವೇ ಇರುವುರಿಂದ Nous ಹಾಗೆ, ಇದು does not come into his mind from out of doors ಎಂದು ಸ್ಪಷ್ಟೀಕರಿಸಬೇಕಾಗಿಬಂತು. Nous ದೊಡನೆ ಬದ್ಧ ಅಥವಾ Nous ರೂಪ ಮನಸ್‌ತತ್ತ್ವವು ಅರಿಸ್ಟಾಟಲನ ದೇವರು ಆಗಿತ್ತು. Nous comes from outside ಎಂದು ಇವನು ತಮ್ಮ ಅನುಭವ ಹೇಳುತ್ತಾನೆ. ಇಲ್ಲಿ ಇನ್ನೂ ಒಮ್ಮೆ ಈ ಮಾನವ ಜೀವನವಿಶ್ವದ ಆಕೃತಿಯನ್ನು ಸ್ಮರಿಸಿಕೊಳ್ಳುವ ಆವಶ್ಯಕತೆಯು ಇದೆ. ಈ ಮನುಜನು ಸ್ಥಳ-ಕಾಲದ (ದೇಹದ) ಆಚೆಗೆ, Nous ಪ್ರಜ್ಞಾ ಪಾತಳಿಯೂ ಉಂಟು. ಇದು ಭಾರತೀಯ ಪುರಾತನರ ನಿಷ್ಠೆ, ಗ್ರೀಕ್ ಪುರಾತನರ ನಿಷ್ಠೆ, ಮತ್ತು ಅವೆಸ್ತ ಸಂಪ್ರದಾಯದ ನಿಷ್ಠೆ, ಇತ್ತು. ಓಹು ಮನಃ ಇದು ಅಹುರ್‌ಮಝುದನ ಅಂಗ ಅಥವಾ ಕಿರಣ ರೂಪವಿದೆ.

ಈ ಮಾನವ ಎಂಬ ಪ್ರಾಣಿಯ, ತಲೆಯು ಬುದ್ಧಿ, ಮೇಧಾ Reason, intelligence ಇದರ ಕೇಂದ್ರ. ಈ ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ)ದ ಪರಿಮಿತಿಯೊಳಗೇ ಇದೆ. ಆದಕಾರಣ, ಇದು ದೇಹಬುದ್ಧಿ ದೇಹದ-ಇಂದ್ರಿಯಗಳ ಅಂಗಜನ್ಯ. ಬುದ್ಧಿ ಸೂಚಕ ಮೇಧಾ ಈ ಸಂಸ್ಕೃತ ಪರಿಭಾಷೆಯಲ್ಲಿ, ಮೇಧಾ ಮೇಧ : ದೇಹರಸ, ಎಂಬ ಸೂಚನೆಯ ಇಲ್ಲದಿಲ್ಲ! ಆದರೆ ಪ್ರಜ್ಞೆಯು, ಒದ್ದೆಯಾಗುವ ಬುದ್ಧಿ ಅಲ್ಲ. ಅರಿಸ್ಟಾಟಲನ ದೇವತಾ ವಿಚಾರದ ಬಗೆಗೆ ಸಂದಿಗ್ಧತೆಯು ಇಲ್ಲ. ಜೀವನ ವಿಶ್ವದ ಆಕೃತಿಯನ್ನು ಕುರಿತು ಆತನು ಹೇಳಿರುವ ಮಾತು ಮನನೀಯವಿದೆ. ಪ್ಲೇಟೋನ ಆಕೃತಿಯೇ ಆಶಯ ರೂಪಿಸುತ್ತದೆ. ಇಂದಿನ ಸಾಹಿತ್ತಿಕರ ಭೂಮಿಕೆಯು ಇದು! ಅರಿಸ್ಟಾಟಲನ ನಿಷ್ಠೆಯಂತೆ ಆಶಯ: ಗುಣವು ಆಕೃತಿಗೆ ಕಾರಣ. ವಸ್ತುಮಾತ್ರಗಳ ಅಂತಸ್ಥಗುಣದಲ್ಲಿ ಆಕೃತಿ ಹುದುಗಿದೆ.

ಪ್ಲೇಟೋನ ಶ್ರದ್ಧೆಯಂತೆ ಮಾನವ (ನರ) ಮತ್ತು Reason (ಬುದ್ಧಿ) ಬೇರೆಯಲ್ಲ. ಆದಕಾರಣ, ಈ ಬುದ್ಧಿ ಪ್ರಾಣಲಿಂಗದ ಅಂಗವಾಯ್ತು. ಪ್ರಾಣಲಿಂಗ, ಇದು ಕತ್ತಲಲ್ಲೇ ಇರಬೇಕಾದ ವಿಶ್ವನಿಯಮವನ್ನು ಯಾರೂ

ಮೀರಲಾರರು. ಆದಕಾರಣ, ಕತ್ತಲೆಯ ಅಂಗವಾದ ಬುದ್ಧಿಗುಣ ಕತ್ತಲನ್ನೆ ನಿರ್ಮಿಸಬಲ್ಲುದು. ಪ್ಲೇಟೋನು ಬೌದ್ಧಿಕ ಚಾಕಚಕ್ಯದಿಂದ ಕಲಾತ್ಮಕ ಕೃತಿ ರಚಿಸಿದ್ದಾನೆ. ಅದರಲ್ಲಿ ಸಾಕ್ರೆಟಿಸ್, ಪೈಥಾಗೋರಾಸ, ಗೋರ್ಜಿಯಾಸ್, ಅರ್ಚಿಟಾಸ್ (Archytas) ಹಿರೋಕ್ಲಿಟಸ್, ಪೆರ್ಮೈಡಸ್ ಇವರೆಲ್ಲರ ಅರ್ಥವು ಅವರವರ ಪಾಲಿನ ಸತ್ತ್ಯ ಆಗುತ್ತಿದೆ! ಆದರೆ, ಅರಿಸ್ಟಾಟಲನ ದೇವರು ಪ್ರಜ್ಞಾಯುಗವಾದ ಮನಸ್‌ತತ್ತ್ವ ಎಂದು ಝೆಲ್ಲರ್ ಹೇಳುತ್ತಾನೆ.

> To Aristotle himself God is the mind that thinks itself as the origin of all things, and moves the world; Just as the beloved object does the lover
> The existence of God as the first mover, he turns his attention to religious experience, He... was aware intuitively of God, For in time the absolute mind and the highest in the human mind similar in nature. He stands before the deity in reverence and wonderment.[೮]

ಪ್ಲೇಟೋನ ಶ್ರದ್ಧೆಯಂತೆ ಆಕೃತಿ (ದೇಹ) ಇದು ಆಶಯ ರೂಪಿಸುತ್ತದೆ. ಆಶಯ = ಬುದ್ಧಿಗಿಂತ ಮೇಧಾ ಹೆಚ್ಚು ಸರಸ, ಸಮರ್ಪಕವಿದೆ. ಇದು ದೇಹಸ್ವಭಾವದಿಂದ ಭಿನ್ನವಾಗುವುದಿಲ್ಲ. ಈ ಮನುಜನ ಮನಸ್ಸು-ಪ್ರಜ್ಞೆ ಇದು ದೇಹದಿಂದಲೆ ಆಗಿದೆಯೆಂದಲ್ಲ, ಈ ಪ್ರಜ್ಞೆ: ಮನಸ್ಸು, ತನ್ನನ್ನು ತಾನು ವಿಮರ್ಶಿಸಿಕೊಳ್ಳಬಲ್ಲುದಲ್ಲ! ಅರಿಸ್ಟಾಟಲನ ಭಾಷೆಯಲ್ಲಿ ಇದು, thinks itself, ಈ ಗುಣಶಕ್ತಿ ಬುದ್ಧಿಗೆ ಇಲ್ಲ!

ಪ್ಲೇಟೋ ಆರಿಸ್ಟೋಟ್ಲರು ಇದ್ದದ್ದು ವಿಭಿನ್ನ ಪಾತಳಿಗಳ ಮೇಲೆ. ಪ್ಲೇಟೋ ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಈ ವಿಭಾಗದ್ವಯದ ವೃತಾಕೃತಿಯ ಕತ್ತಲೆಯಿಂದ ಆವೃತ ಜೀವಿತದ ವೈಯಕ್ತಿಕ ಪಾತಳಿಯ ಮೇಲೆ ನಿಂತು ವಿಚಾರಿಸುತ್ತಿದ್ದನು. ಈ ಘಾತಳಿಯ ಮೇಲೆ ಅಂತರ್‌ವಿಸಂಗತಿ, ಪ್ರೇರಣಾದ್ವಂದ್ವವು ಅನಿವಾರ್ಯವಿದೆ. ಆದುದರಿಂದ, ಇಲ್ಲಿ ಅವರವರ ಅರ್ಥ, ಅವರವರ ಪಾಲಿನ ಸತ್ತ್ಯ, ಆಗುವ ಅನಿವಾರ್ಯತೆಯು ಉಂಟು. ಇದು Empirical knowledgeದ ಹಂತ. ಶಬ್ದ (Idea) ನಿತ್ಯ. ಈ ಶಬ್ದವೇ ಅರ್ಥವನ್ನು ನಿರ್ಮಿಸುತ್ತದೆ! ಪ್ರಾಣಲಿಂಗ ಪಾತಳಿಯ ಮೇಲೆ ಆ ಮನುಜನು, ವ್ಯಕ್ತಿ ನರ(ಳ) ನೇ ಆಗಬೇಕಾಗುತ್ತದೆ; ಆಗುತ್ತಾನೆ. ಆದರೆ, ಅರಿಸ್ಟಾಟಲ್ ಈತನು ಜೀವನದ, ಸಮಾಜ, ಸಮಷ್ಟಿಯ ಪ್ರಜ್ಞಾಯುಕ್ತ ಮನಸ್ಸಿನ ಪಾತಳಿಯ ಮೇಲೆ ನಿಂತಿದ್ದಾನೆ. ಜೀವನ ಮತ್ತು ಜೀವಿತ ಇವೆರಡೂ ಪಾತಳಿಗಳ ನಡುವಣ ಅಂತರವು, ಪ್ರಜ್ಞೆಯ ಅಂಗವಾದ ಮನಸ್ಸಿನ ಪ್ರಾದುರ್ಭಾವದಿಂದಾಗಿ ಸಂಭವಿಸಿದೆ. ಈ ಅಂಶದ ವಿವರಣೆ ಈ ಮೊದಲಿನ ಪ್ರಕಟನೆಯಲ್ಲಿ ಬಂದಿದೆ.

ಪ್ರಜ್ಞೋದಯಕ್ಕೂ ಮುಂಚೆ ಸ್ಥಳ(ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಇವೆರಡೂ ಘಟಸರ್ಪಗಳು ನಾಗಬಂಧದಲ್ಲಿ ಕ್ರೀಡಿಸುತ್ತಿದ್ದುವು. (ಸುಮೇರಿನ ತೈಮತ್-ಅಪ್ಸು ದಿವ್ಯಕಥೆ ಸ್ಮರಿಸಿಕೊಳ್ಳಿರಿ. ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಈ ನಾಗಮಿಥುನವನ್ನು : ಸ್ಥಳ-ಕಾಲವನ್ನು ಇಬ್ಬಾಗಿಸುವ ಕಾರ್ಯವು ಜೀವನವಿಶ್ವಸ್ಥ ವಿಕಾಸತತ್ತ್ವದ ಪ್ರಕ್ರಿಯೆಯಿಂದಾಗಿ, ನಿಸರ್ಗಸ್ಥ ನಿಯಮಕ್ಕೆ ಅನುಸರಿಸಿಯೇ ಆಗಿದೆ.

ಭಾರತೀಯ ಪುರಾತನರು ಈ ಅಂಶವನ್ನು ರೂಪಕ ದಿವ್ಯಕಥೆಗಳ ಮುಖಾಂತರ ವ್ಯಕ್ತಪಡಿಸಿದ್ದಾರೆ. ಈ ಮನುಜನು ತ್ರಿತ ಆಪ್ತ್ಯನಾಗುತ್ತಾನೆ! ಅ-ದಿತಿ ಸ್ಥಳ-ಕಾಲದ ಏಕಾತ್ಮಕ, ಅವಿಭಾಜಿತ ಪ್ರತೀಕ, ಈ ಅ-ದಿತಿ ಪ್ರಜ್ಞೋದಯದಿಂದಾಗಿ ದಿತಿ ವಿಭಜಿತಳೂ ಆಗುತ್ತಾಳೆ! ಈ ವಿಭಜನಕ್ಕೆ ಕಾರಣನಾದ ಅಹಿಃ ವೃತ್ರಹನ್ ಇಂದ್ರನು (ಸವಿತೃವಿನ=ಪ್ರಜ್ಞೆಯ ಪರ್ಯಾಯ) ವಿಭಾಜಿತ ದಿತಿಗೆ ಸ್ಥಳ (ಕಾಲ) ಶಕ್ತಿಗೆ ಶತ್ರುವಾಗಿ ಕಾಣುತ್ತಾನೆ! ಇನ್ನು ಈ ಹಂತದಲ್ಲಿ ಮಾಡಲಾಗಿರುವ ಕಣ್ಕಟ್ಟು, ಮೋಸ ಇದು ನಿಜವೊ? ವಿಮರ್ಶಿಸಿ ಖಾತ್ರಿಮಾಡಿಕೊಳ್ಳಿ. ಕಾಲತತ್ತ್ವಕ್ಕೆ ಸ್ವತಂತ್ರ ಸ್ಥಾನ, ಅಸ್ತಿತ್ವವೇ ಇಲ್ಲದಿರುವಾಗ, ಈ(ಅ) ದಿತಿ ಇಂದ್ರಹನನ ಸಮರ್ಥ ಪುತ್ರರನ್ನು ಬಯಸಿ

ಹಡೆಯುತ್ತಾಳೆ ಎಂದು ನಂಬಿಸಲಾಗಿರುವ ಈ ಅಂಶವು ಕೇವಲ ಕವಿಕಲ್ಪನಾ ವಿಲಾಸವಲ್ಲದೆ ಬೇರೆ ಏನೂ ಇಲ್ಲ. ವಸ್ತು ಸ್ಥಿತಿಯು (as a matter of fact) ಇದು ಹೀಗಿವೆ.

ಫಕ್ತಸ್ಥಲ= ಬಯಲು ಉಂಟು; ಪ್ರಾಣಲಿಂಗ ಚೇತಸವನ್ನು ಒಳಗೊಂಡ ಸ್ಥಳ : ಜೀವಿಗಳ-ಜೀವಲೋಕ ಪ್ರಾಣಲೋಕ ಎನಿಸುತ್ತದೆ. ಒಟ್ಟಿನಲ್ಲಿ ಈ ಸ್ಥಲವು ತನ್ನ ಮೈಸುತ್ತ ಸುತ್ತುತ್ತಿದೆ. ಸ್ಥಲದ ಈ ವೃತ್ತಾಕೃತಿಯ ಗತಿಯನ್ನು ಕಾಲೀರೂಪದಲ್ಲಿ ಕಂಡಿದ್ದಾಗಿದೆ. ಕಾಲ ಎಂಬ ಗಣ್‌ಡಿನ ಕಲ್ಪನೆಯು ಎರಡನೆಯ ಹಂತದಲ್ಲಿ ತಲೆಯೆತ್ತಿದೆ! ಗ್ರಿರ್‌ಗಿಮ್ ಎಂದು ತನ್ನ ಮೈಸುತ್ತ ಸುತ್ತುತ್ತಿರುವ ಈ ಆಕೃತಿಯನ್ನೆ ಛಾಯಾಭಗವತಿ ಎಂದು ನರ ಸಂಪ್ರದಾಯವು ಲೈಂಗಿಕಪ್ರವೃತ್ತಿಗೆ ಸುಸಂಗತವಾಗಿ ಆ (ನೆಳಲು) ಇದನ್ನು ಭಗ (೦) ಎಂದು ಪೂಜಿಸತೊಡಗಿದ್ದಾಗಿದೆ.

ಋಗ್ವೇದದೊಳಗಿನ ಹಡಗನ ರೂಪಕವು ಅಭ್ಯಸನೀಯವಿದೆ (x. ೬೩) ಅದಿತಿ (ಸ್ಥಳ) ಅಲ್ಲಿ ನೌಕೆ ಆಗಿದ್ದಾಳೆ. ಪ್ರಾಣಿಗಳು ಕುಳಿತ ಈ ನೌಕೆ ಅಂತರಿಕ್ಷದಲ್ಲಿ ಸಾಗಿದೆ. ಅದಿತಿಂ ನಾಮಂ, ಆರುಹೇಮ ಸ್ವಸ್ತಯೇ ಎಂಬ ಮೋಸದ ತಂತ್ರವು ಇದು! ಮೋಸ ಎನ್ನಲು ಕಾರಣವಿದೆ: ಕಂನಾಡ ಪ್ರಾಜ್ಞರು, ಈ ಸ್ಥಳ (ಕಾಲ)ವನ್ನು ಬಯಲು ಎಂದಿದ್ದಾರೆ! ಪೈಥಾಗೋರಾಸಪಂಥದಲ್ಲೂ ಇದನ್ನು Void, Vacuum ಸಂಕೇತದಿಂದ ಸೂಚಿಸಲಾಗಿದೆ.

ಅಲ್ಲದೆ, ವ್ಯಕ್ತಿ ಸಾಪೇಕ್ಷ ಸ್ಥಳ (ದೇಹ) ರೂಪ ಈ ನೌಕೆಯು, ಅಮರವಲ್ಲ! ಈ ದೇಹರೂಪೀ ಸ್ಥಲದ ಉದ್ದಳತೆಯನ್ನೇ, ನಾವು ಆಯುರ್ಮಾನ = ಕಾಲ : ಅವಧಿ ಎಂದು ಹೇಳುವ ವಾಡಿಕೆಯಿದೆ. ಆದರೆ, ಈ ಕಾಲ ಎಂಬುದು ವ್ಯಕ್ತಿಸಾಪೇಕ್ಷ ಸ್ಥಳದ ಉದ್ದಳತೆ! ಇದು ನಿಜವಾದ ಕಾಲ ಅಲ್ಲವೇ ಅಲ್ಲ. ಈ ವಿವರಣೆಯಿಂದ ಅರಿಕೆಗೆ ಬರುವ ಅಂಶವು ಇಷ್ಟು: ಸ್ಥಲ : ಕೃಷ್ಣವಿವರ (೦) ಟೊಳ್ಳು ಮಾತ್ರ ಉಂಟು, ಗಣ್ಣು : ಲಿಂಗ ಇದಕ್ಕೆ ಅಂತರಿಕ್ಷದಲ್ಲಿ ಸ್ಥಾನವೇ ಇಲ್ಲ. ಅರಿಸ್ಟಾಟಲನ ಈ ವಾಕ್ಯ, ನೋಡಿ Circular motion is the only uniform and perpetual motion ಇದು ವ್ಯಕ್ತಿನಿರಪೇಕ್ಷ ಕಾಲ. ಹೀಗಿದ್ದು ಈ ಭಗವಂತ ಪಂಥಗಳು ಗಣ್ಣು : ಲಿಂಗ= ಚರಲಿಂಗವು ಅಂತರಿಕ್ಷದಲ್ಲಿ ಉಂಟು ಎಂದು ನಂಬಿಸಲು ಸಂಕೋಚಪಟ್ಟಿಲ್ಲ.

ಇದನ್ನರಿತ ಅರಿಸ್ಟಾಟಲನು ಆತ್ಮನ್ Soul; self ಇದನ್ನು ದೇಹದಿಂದ ಭಿನ್ನತತ್ತ್ವ ಎಂದು ಬಗೆಯುವಲ್ಲಿ ಸ್ಥಳ-ಕಾಲ ಇದನ್ನು ಬಯಲು (೦) ಎಂಬುದನ್ನು ಮನಗಂಡ ಡಾ. ಐನ್‌ಸ್ಟನ್ನರು, ಸತ್ತಬಳಿಕ ಆತ್ಮ soul (ಲಿಂಗಶರೀರ) ಹಿಂದೆ ಉಳಿಯುತ್ತದೆ. ಎಂಬ ನಂಬಿಗೆಯನ್ನು ತೀವ್ರಶಬ್ದಗಳಲ್ಲಿ ನಿಷೇಧಿಸಿದ್ದಾರೆ.

> He writes, either can I, nor would I, want to conceive an individual that survives his physical death, Let feeble souls, from fear or absurd egoism cherish such thoughts[೧೦]

ಆತ್ಮನ್ : Self=Soul ಇದು ಮೋಸ ನರ(ಳ) ಸಂಪ್ರದಾಯಗಳ ಕೃತಕ: ಮಾಟ, ಇದು ಅಭಾವವನ್ನು ಸ್ಥಾಯಿ ಆಗಿಸುತ್ತಿರುವ ಜಾದು!

ಜೀವನ ಮತ್ತು ಜೀವಿತ ಇವೆರಡರ ನಡುವಣ ಬಿರುಕನ್ನೇ-ಅಂತರವನ್ನೇ ಇಲ್ಲವಾಗಿಸುವ ಮತ್ತು ಮನು-ಜನನ್ನು, ಮನುವೈವಸ್ವತನ ಸಂಪರ್ಕ ತಪ್ಪಿಸಿ, ಈ ಮಾನವನನ್ನು ನರ(ಳ)ನ ಪಾತಳಿಯ ಮೇಲೆ ತಂದು ನಿಲ್ಲಿಸುವ ಒಂದು ಅಮೋಘ ತಂತ್ರ, ಮಂತ್ರ ಈ ಆತ್ಮನ್, ಪರಮ ಆತ್ಮನ್ ಶಬ್ದಪ್ರತಿಮೆ. ಈ ಆತ್ಮನ್ ಪರಮ-ಆತ್ಮನ್- ಭಗವಂತನೇ, ಮನಸ್ಸು, ಪ್ರಜ್ಞೆಗಿಂತ ಮಿಗಿಲಾದವನಾಗಿದ್ದಾನೆ. ಆತ್ಮಾ ವಾ ಇದಂ ಅಗ್ರೇ ಆಸೀತ್ ಎಂದು ನಂಬಿಸುವ ಈ ಉಪನಿಷತ್ತುಗಳು, ವೇದ ಅಸುರ ಸಂಪ್ರದಾಯದವು. ಈ ಆತ್ಮನ್=ತನು, ಪ್ರಾಣಲಿಂಗ= ಈ ಬುದ್ಧಿಯು (Reason) ಪ್ರಜ್ಞೆ (Nous) ಇಲ್ಲವಾಗಿಸಿದೆ ಇಂದು ಪ್ರಪಂಚದೊಳಗಿಂದ! ಇದನ್ನು ಒಪ್ಪಿದರೂ, ಆತ್ಮನ್ = Soul self, ಪ್ರತಿಪಾದಕ ಪ್ಲೇಟೋ, ಈತನು, ಪ್ರಜ್ಞೆ: Nous ಪ್ರತಿಪಾದಕ ಅರಿಸ್ಟಾಟಲ್ ಇವನಿಗಿಂತ ಮುಂಚಿನವನು, ಅಲ್ಲವೇ? ಇಲ್ಲಿ, ಇತಿಹಾಸ ಏನು ಹೇಳುತ್ತದೆ? ಪ್ರಜ್ಞೆ Nous ಇದಕ್ಕಿಂತ ಆತ್ಮನ್, Soul ಇದು ಮೊದಲು, ಎಂದು ಪ್ಲೇಟೋ-ಅರಿಸ್ಟಾಟಲ್‌ರ ಕಾಲಾನುಕ್ರಮದ ಮೂಲಕ ಹೊರಡುತ್ತಿದೆಯಲ್ಲ!

ಸಾಂಸ್ಕೃತಿಕ ಸತ್ಯಾನ್ವೇಷಣೆಯಲ್ಲಿ ಸ್ತರಗಳ ತುಲನಾತ್ಮಕ ಸಮೀಕ್ಷೆಯು, ಎಲ್ಲಿಯೊ ನಡುವಣೆಂದ ಪ್ರಾರಂಭವಾದಲ್ಲಿ ಸಂಭ್ರಮಕ್ಕೆ ಇಂಬು ದೊರೆಯುತ್ತದೆ. ಈ ಅನ್ವೇಷಣೆಯಲ್ಲಿ ಪಾರಿಭಾಷಿಕ ಪದಗಳ ಇತಿಹಾಸದ ಮೂಲಕ ಈ ಸ್ತರಗಳನ್ನು ನಿರ್ದಿಷ್ಟಪಡಿಸಿ ಅರಿಯುವುದೇ ಪ್ರಶಸ್ತ ಮಾರ್ಗ.

ಟಿಪ್ಪಣಿಗಳು

೧. Kuzenetsoy B., ***Albert Einstein***, Progressive Publishers Mascow, p. III
೨. Ferm V. A.; ***A History of Philosophical Systems*** p. 105
೩. Zeller, P. 151
೪. ***Ibid***. P. 150
೫. ***Ibid*** p. 144
೬. Bertrand Russell; ***History of Western Philosophy*** P. 56
೭. ***Ibid***. P : 56
೮. ***Ibid*** p. 198-9
೯. ***Ibid*** p. 178
೧೦. Kuzentsoy B., ***Albert Einstein***, Progressive publishers Masdow, p. 62

ಸಾಂಸ್ಕೃತಿಕ ಸ್ತರಗಳ ಭೂಮಿಕೆ

ಧರ್ಮ: ಸಂಸ್ಕೃತಿಯ ಮಾಧ್ಯಮ ಭಾಷೆ. ಈ ಭಾಷೆಯು ಇತಿಹಾಸದ ಕಕ್ಷೆಗೆ ಒಳಗಾಗಿರುತ್ತದೆ. ಸಮಯದ ಹಿನ್ನೆಲೆಯಿಲ್ಲದೆ ಯಾವ ಬಗೆಯ ಅಭಿವ್ಯಕ್ತಿ ಅಥವಾ ಆವಿಷ್ಕಾರವೂ ಶಕ್ಯವಿಲ್ಲ. ಮನುಜನೊಡನೆ ಎಂದರೆ ಪ್ರಜ್ಞೆಯ ಅಂಗವಾದ ಮನಸ್‌ತತ್ತ್ವದ ಪ್ರಾದುರ್ಭಾವದೊಡನೆಯೆ ಇತಿಹಾಸವು ಆರಂಭವಾಗಿದೆ. ಆದಕಾರಣ, ಭಾಷಿಕ ಅಭಿವ್ಯಕ್ತಿಗೆ ಅಧಾರಭೂತ ಸಮಯ ಎಂದರೆ ಇದು ಮನು ಸಮಯವೇ ಸರಿ. ಇದನ್ನೇ ಕಾಂಟ್ ತತ್ತ್ವಜ್ಞನು Noumena ಎಂದಿದ್ದಾನೆ.

ಆದರೆ, ಸಮಯದ (ಎಂದರೆ ಮನುಸಮಯದ) ಆಧಾರವೇ ಇಲ್ಲದ ಸಂಕೇತ, ಪ್ರತಿಮೆ, ಪ್ರತೀಕಗಳು ಭಾಷೆಯಲ್ಲಿ ಇರುವುದುಂಟು. ಇವೆರಡರಲ್ಲಿ ಮೊದಲನೆಯದು ಪ್ರಜ್ಞೆಯಿಂದ ಪ್ರೇರಿತವಿರುವಂತೆ ಎರಡನೆಯದು ಬುದ್ಧಿಯ ಮೂಲಕ ಆಕಾರ ಪಡೆಯುತ್ತವೆ. ಉದಾ : ಅಗ್ನಿ-ನಾರಾಯಣ, ಅಮೃತ, ಅಶ್ವತ್ಥ (ವೃಕ್ಷ), ಆದಿತ್ಯ ಇತ್ಯಾದಿ. ಸೂರ್ಯ : ಸವಿತೃ : ವೈವಸ್ವತ ಈ ಮಾತುಗಳು, ಹಗಲಿನ ಪ್ರಕಾಶರೂಪ ಸಮಯದ ಆಧಾರವುಳ್ಳವು ಆಗಿವೆ. ಇಲ್ಲಿ ಪ್ರಜ್ಞೆಯಿದೆ.

ಆದರೆ; ಆದಿತ್ಯ, ಮಾರ್ತಾಂಡ ಈ ಪದಗಳಿಗೆ ಆಧಾರಭೂತ ಸಮಯವು ಯಾವುದು? ಇದನ್ನು ಸೂರ್ಯ ಎಂದು ನಂಬಿಸಲಾಗಿದೆ! ಇಲ್ಲಿ ಮೋಸವಿದೆ. ಇದು ಬೌದ್ಧಿಕ ಚಾಕಚಕ್ಯತೆ, (ಮೃತಾತ್ ಅಂಡಾತ್ ಜಾತ), ಎಂದು ಸಂಪ್ರದಾಯವೇ ಹೇಳುವ ಈ ಮಾರ್ತಾಂಡ ನಾಮಾನಂ ಇವನು ಸೂರ್ಯ ಎಂದು ನಂಬಲಿಕ್ಕೆ ಆಗುವುದಿಲ್ಲ ಐನ್‌ಸ್ಟನ್ನರ ಸತ್ಯದ ಒರೆಗಲ್ಲಿಗೆ ಹಚ್ಚಿ ನೋಡಬಹುದು. ಮೊದಲಲ್ಲಿ Inner perfection : (ಆಂತರಿಕ ಅಂತಃಸಂಗತಿಯ ಸೌಂದರ್ಯ): ಮಾರ್ತಾಂಡನನ್ನು ಸೂರ್ಯ ಎಂದರೆ, ಸೂರ್ಯನ ಅರ್ಥವನ್ನು ಕೋಶಗಳಲ್ಲಿ ನೋಡುವ ಆಪತ್ತು ಬರುತ್ತದೆ! ಆದರೆ, ರೂಢಿಯ ದಾಸ್ಯವನ್ನು ಸ್ವೀಕರಿಸಿರುವ ನರರು ಮಾರ್ತಾಂಡನನ್ನು ಸೂರ್ಯನೇ ಎಂದು ಬಗೆದರೂ, ಸಲಿಲ (ಸರಿಲ=ಶರೀರ) ಜಲದೊಳಗಿಂದ ಹುಟ್ಟಿದನೆಂಬ ಈ ಮಾರ್ತಾಂಡನು, ಮರ್ತ್ಯನೇ ಆಗಬೇಕೇ ಹೊರತು ಸ್ವಯಂಪ್ರಕಾಶದ ಸೂರ್ಯನಾಗಲು ಶಕ್ಯವಿಲ್ಲ. ಇನ್ನು external degree of conformation= ಹೊರಗಣ ಹೋಲಿಕೆಯಲ್ಲಿ ಲಭಿಸುವ ಸಾಮ್ಯದ ಪ್ರಮಾಣವನ್ನು ಪರೀಕ್ಷಿಸಿ ಅರಿಯಬಹುದು. ಅದಿತಿ ಪುತ್ರ= ಆದಿತ್ಯ ; ಈ ಅದಿತಿ ಪುತ್ರನೇ ಮಾರ್ತಾಂಡನು! ಇವರಿಬ್ಬರಲ್ಲಿ ಯಾವ ಬಗೆಯ ಸಾಮ್ಯವು ಉಂಟು, ಇದನ್ನು ವಿಮರ್ಶಿಸಿ ನೋಡಬಹುದು; ಅದಿತಿ = ಕುಮಾರೀ ಮಾತೆ. ಅಜಾ ಎಂದೂ ಹೆಸರು. ಆದಕಾರಣ, ಕುಮಾರೀಮಾತೆ ಈ ಹೆಸರಿನಲ್ಲಿ ಈ ಕುಮಾರೀ ನಿತ್ಯಕುಮಾರಿ, ಎಂದು ಬಗೆಯಲಾಗಿದೆ. ಆದುದರಿಂದ, ಈ ಆದಿತ್ಯ ಹುಟ್ಟಿದ್ದಾನೆ ಎಂಬುದೇ ಸುಳ್ಳು. ಈ ಕುಮಾರೀ ಮಾತೆ, ಅದಿತಿಗೆ ಅಜಾ ಎನ್ನುವುದರಿಂದ ಈ

ಅ-ಜಾ ದೇವಿಯ ಮಗ ಅ-ಜ ಎಂದರೂ ಹುಟ್ಟಿಲ್ಲ ಎಂದೇ ಅರ್ಥ ಮಾರ್ತಾಂಡನೇ ಆದಿತ್ಯ ಆದಕಾರಣ, ಇವನು ಹುಟ್ಟಿದ್ದಾನೆ, ಎಂದರೂ ಮೃತನು! ಒಟ್ಟಿನಲ್ಲಿ ಇವನು (೦) ಶೂನ್ಯ ಇದು ಫಕ್ತಸ್ಥಲವೇ ಇದೆ. ಇಲ್ಲಿ ಕಾಲ ಎಂಬುದು ಕೇವಲ ಕಾಲ್ಪನಿಕ! ಆದಕಾರಣ ಈ ಅ-ಜ=(೦) ಕಾಲವು, ಇದು ಅತ್ಯಂತ ಅಭಾವವೇ ಸ್ಥಾಯೀ!

ಹೀಗೆ ಮಾನವ ಭಾಷೆಯಲ್ಲಿ ಕನಿಷ್ಠ ಪಕ್ಷಕ್ಕೆ, ನಮಗೆ ಜ್ಞಾತ. ಈ ಭಾರತೀಯರ ಭಾಷೆಗಳಲ್ಲಿ ಎರಡು ಸ್ತರಗಳು ಉಂಟು :

೧) ಮನುಸಮಯದ ಆಧಾರದ ಮಾತು

೨) ಸಮಯದ ಹಿನ್ನೆಲೆಯು ಕಾಣದಿರದ ಮಾತುಗಳು

ಯಾವ ಬಗೆಯ ಸಮಯವು ಕಾಣದಿರದ ಪದಗಳಲ್ಲಿ ಎರಡು ಒಳಭೇದಗಳು ಆಗುತ್ತವೆ. ಭೌತಪಾತಳಿಯ ನಿಸರ್ಗದ ಆಗುಹೋಗುಗಳಿಗೆ, ಮನುಸಮಯದ ಆಧಾರವು ಇರುವುದಿಲ್ಲ. ಆದರು ಪ್ರಾಕೃತಿಕ ಜೀವಿತದ ಸಮಯವು ಆಧಾರಕ್ಕೆ ಇರುವ ಮಾತುಗಳು ಇರಬಲ್ಲುವು. ಉದಾ : ನಿಸರ್ಗದ ವರ್ಣನೆ; ಕೇವಲ ಅಸ್ತಿತ್ವಸೂಚಕ, ಹುಟ್ಟು ಸಾವಿನ ಸಂದರ್ಭದ ಜೀವಿತ ಸೂಚಕ ಮಾತುಗಳು. ಕೇವಲ ಕೃತಕ ಶಬ್ದಶಿಲ್ಪದ ಹಿನ್ನೆಲೆಯಲ್ಲಿ ಸಮಯದ ಅಭಾವವೇ ಇರಬಲ್ಲುದು: ಸೂರ್ಯ-ನಾರಾಯಣ; ನ-ಚಿಕೇತ ಅಗ್ನಿ!

ಮನುಸಮಯದ ಆಧಾರದ ಮಾತುಗಳಲ್ಲಿ ಪ್ರಜ್ಞಾಯುಕ್ತ ಮನಸ್ಸಿನ ಕೈವಾಡವು ಇರುತ್ತದೆ. ಇದಕ್ಕೆ ಪ್ರತಿಯಾಗಿ, ಅಭಾವವೇ ಸ್ಥಾಯೀ ಇರುವ ಕೃತಕ ಶಬ್ದಶಿಲ್ಪ, ಇದರ ಶ್ರೇಯಸ್ಸು ಬುದ್ಧಿ-ಮೇಧಾಶಕ್ತಿಗೆ ಸಲ್ಲಬೇಕು. ಬುದ್ಧಿ ಇದರ ತಳದಲ್ಲೇ ಸಮಯದ ಅಭಾವವಿದೆ! ಆದರೆ, ಮೇಧಾ ಇದಕ್ಕೆ ಯಜ್ಞದ ಸಮಯದ ಆಧಾರವಿದೆ. ಈ ಯಜ್ಞವು ಯಾವುದು? 'ಯೋಷಾ ವಾವ ಗೌತಮ ಅಗ್ನಿಃ ಪುರುಷೋ ವಾವ ಗೌತಮಾಗ್ನಿಃ' ಇಲ್ಲಿ ಯೋನಿಕುಂಡವೇ ಯಜ್ಞದ ವೇದಿಕೆ. ಈ ಯಜ್ಞ ಇಂದಿನ ವೇದೋಪನಿಷತ್ತುಗಳಲ್ಲಿ ಇದೆ. ಇದು ಗೌತಮ ಸಂಪ್ರದಾಯದ ಯಜ್ಞ.

ಈ ಭಾಷೆಗಳಲ್ಲಿ ಹುದುಗಿರುವ ಈ ಉಭಯ ಪ್ರಕಾರದ ಸ್ತರಗಳ ಸ್ವರೂಪ ಆಕೃತಿಯನ್ನು ಗ್ರಹಿಸಿಕೊಳ್ಳುವುದು ಮತ್ತು ಮೇಲೆ ಸೂಚಿಸಿರುವಂತೆ ಸತ್ಯದ ವಿವಿಧ ಒರೆಗಲ್ಲಿಗೆ ಹಚ್ಚಿ, ಅವುಗಳ ಆಶಯ ಸ್ವರೂಪವನ್ನು ಗ್ರಹಿಸಿಕೊಳ್ಳುವುದು ಕಷ್ಟಸಾಧ್ಯ, ಎಂದರೂ ಅಶಕ್ಯವಲ್ಲ. ಆದಕಾರಣ, ಈ ಮಾನವನ ಭಾಷಾಸ್ವರೂಪದಿಂದ ಅವನ ಆ ಭಾಷಿಕ ಸಮಷ್ಠಿಯ, ಸಾಂಸ್ಕೃತಿಕ ಸ್ಥಿತ್ಯಂತರದ ಇತಿಹಾಸವನ್ನು ಕ್ರೋಢೀಕರಿಸಿ ಅರಿಯುವ ಶಕ್ಯತೆಯು ಇಂದು ಕಾಣತೊಡಗಿದೆ. ಮೇಲಣ ವಿವರಣೆಯಲ್ಲಿಯೇ ತನ್ನತಾನೇ ಹೊರಪಡುತ್ತಿರುವ ಐತಿಹಾಸಿಕ ಸ್ವರೂಪದ ಸತ್ಯಾಂಶವು ಮನನೀಯವಿದೆ. ಮನು-ಸಮಯದ ಆಧಾರವಿರುವ ಭಾಷಿಕಸ್ತರಗಳ ಪೂರ್ವಪರಂಪರೆಯು ಯಾವುದೇ ಬಗೆಯ ಸಮಯ ವಿರಹಿತ ಭಾಷಿಕಸ್ತರಗಳಿಗಿಂತಲೂ, ಸಾಂಸ್ಕೃತಿಕ ದೃಷ್ಟಿಯಿಂದ ಪ್ರಾಚೀನವಿರುವ ಶಕ್ಯತೆಯು ವಿಶೇಷವಿದೆ. ರಾತ್ರಸಮಯಾಚಾರದ, ಯಜ್ಞದ ಸಮಯವು ಇದು ಮನು ಸಮಯವಲ್ಲ, ಅಸುರ-ನರ ಸಮಯ ಮನು ಸಮಯದ ತರುವಾಯದ್ದು.

ಇದನ್ನೆ ಇನ್ನೊಂದು ಬಗೆಯಲ್ಲಿ ಹೀಗೆ ಹೇಳಬಹುದು : ಪ್ರಜ್ಞಾಯುಕ್ತ ಮನಸ್ಸಿನ ಕೈವಾಡದ ಶಬ್ದಗಳ ಶಿಲ್ಪದ ಸೊಬಗೇ ಒಂದು ಬಗೆಯದು. ಇದು ವಿಧಾಯಕ ಸ್ವರೂಪದ ಆಶಯವನ್ನು ವ್ಯಕ್ತಪಡಿಸುವುದಲ್ಲದೆ, ಈ ಸೊಬಗನ್ನು ಭಾವಿಸಿ ಅರಿಯಲು, ಅನುಭವಿಸಿ ಗ್ರಹಿಸಿಕೊಳ್ಳಲು ಶಕ್ಯವಿರುತ್ತದೆ. ಏಕೆಂದರೆ, ಇದರಲ್ಲಿ ಅಂತಃಸಂಗತಿಯು ಒಳಗೊಂಡಿರುತ್ತದೆ. ಈ ಭಾಷಾಪ್ರಕಾರವು, ಹಗಲಿನ ಜೀವನದ ಪಾತಳಿಯ ಮೇಲಣ, ಸಮಾಜ-ಸಮಷ್ಠಿಯ ಸಂದರ್ಭದ ಬಾಳಬಗೆಯನ್ನು ಗಮನಕ್ಕೆ ತಂದುಕೊಡುತ್ತದೆ. ಏಕೆಂದರೆ, ಪ್ರಜ್ಞಾಪ್ರೇರಿತ ಪದಗಳ ಸಂದರ್ಭದಿಂದ ಈ ಆಶಯವು ವ್ಯಕ್ತವಾಗಲೇಬೇಕು. ಇದಕ್ಕೆ ಪ್ರತಿಯಾಗಿ ಇರುವ ಇನ್ನೊಂದು ಬಗೆಯ ಪದಗಳ ತಳಪಾಯದಲ್ಲಿ ಸಾಂಸ್ಕೃತಿಕ ಸಮಯದ ಅಭಾವವೇ ಎದ್ದು ಕಾಣುತ್ತಿರುವುದುಂಟು! ಇವುಗಳಲ್ಲಿ ನಿಸರ್ಗದ ಭೌತಸಮಯದ ಆಧಾರದ ಪದಗಳನ್ನುಳಿದರೆ ಅಭಾವವೇ ಸ್ಥಾಯಿ ಇರುವ ಆಶಯದ ಪದಗಳ ರಚನೆಯ ಈ ಶೈಲಿಯಲ್ಲಿ ಅಂತರ್-ವಿರೋಧ, ಪ್ರೇರಣಾದ್ವಂದ್ವವು ಒಳಗೊಂಡಿರುವುದನ್ನು ಕಾಣಬಹುದಾಗಿದೆ. ಈ ಬಗೆಯ ಪದಗಳಲ್ಲಿ, ಪ್ರಜ್ಞೆಯ ಬದಲು ಬುದ್ಧಿವಿಳಾಸದ ಚಾಕಚಕ್ಯವು ಎದ್ದುಕಾಣುತ್ತಿರಬಹುದು.

ವೇದ (ಪ್ರಜ್ಞಾ) ಈ ಸಂಕೇತವು, ಮೇಧಾ (ಬುದ್ಧಿ) ಇದಕ್ಕಿಂತಲೂ ಪುರಾತನವಿದೆ. ಇವೆರಡರ ತಳದಲ್ಲಿ ಇರುವ ಸಮಯವನ್ನು ಗ್ರಹಿಸಿಕೊಳ್ಳಲು ಶಕ್ಯವಿದೆ. ವಿದ್ ವೇದ, ವಿದ್ಯೆ ಈ ಸಂಕೇತವು ಇಂಡೋ ಯೂರೋಪೀಯ ವಿದ್ ಆಖ್ಯಾತ ಸಾಧಿತವೆಂದು ದೃಢಪಟ್ಟಿದೆ. ಪಾಶ್ಚಾತ್ಯ ಪರಂಪರೆಯ Wit, Wise Wisdom ಈ ಪದಗಳು, ಮೂಲದಲ್ಲಿ ವಿದ್ ಈ ಆಖ್ಯಾತ ಜನ್ಯವಿರುವುದಾಗಿ ತಜ್ಞರು ಕಂಡುಹಿಡಿದಿದ್ದಾರೆ. ಇದಕ್ಕೆ ಪ್ರತಿಯಾಗಿ ಮೇಧಾ, ಇದು ವೇದ ಶಬ್ದಪ್ರತಿಮೆಗಿಂತ ಬಹಳ ಇತ್ತೀಚಿನದು. ಮೇಧ-ಅಶ್ವಮೇಧ; ಮೇಧಾ ಈ ಶಬ್ದ ಬರುವಳಿಯಲ್ಲಿ ಯಜ್ಞ(?) ಸಂದರ್ಭದಲ್ಲಿ ಅಗ್ನಿಗೆ ಹಾಕುವ ಹವಿಸ್ಸಿನ ಪ್ರಕಾರವು (ಮೇಧಸ್) ಇಲ್ಲಿ ಅಭಿಪ್ರೇತವಿದೆ. ಬುಧ - ಅಬೋಧ್ಯಗ್ನಿ, ಉಷರ್‌ಬುಧಃ ಈ ಅಗ್ನಿಯ ಪ್ರಕಾರಗಳೂ ವಿಚಾರಾರ್ಹವಾಗಿವೆ. ಬುಧ ವೇದದಲ್ಲಿ ಇದ್ದಾನೆ. ಆದರೆ, ಬುದ್ಧಿ ಕಾಣಿಸುವುದಿಲ್ಲ! ಶಬ್ದಶಿಲ್ಪದೊಳಗಿನ ಪ್ರಕಾರಗಳನ್ನು ಅರಿಯುವ ದೃಷ್ಟಿಯಿಂದ ಜಾತವೇದ ಅಗ್ನಿ ಮತ್ತು ನ-ಚಿಕೇತ ಅಗ್ನಿ ಇವೆರಡನ್ನು ತುಲನಾತ್ಮಕವಾಗಿ ಸಮೀಕ್ಷಿಸಬಹುದು. ನ-ಚಿಕೇತ ಅಗ್ನಿ ಎಂದರೆ ಬೋಧವಾಗದ ಅರಿಕೆಗೆ ಬಾರದ ಅಗ್ನಿ, ಜಾತವೇದ ಅಗ್ನಿ ಎಂದರೆ ಅದೇ ತಾನೆ ಹುಟ್ಟಿರುವ ವೇದರೂಪ ಅಗ್ನಿ! ಇದು ಬೋಧವಾಗುವ ಅಗ್ನಿ. ಬೋಧವಾಗದ ನ-ಚಿಕೇತ ಅಗ್ನಿ ಮತ್ತು ಬೋಧವಾಗುವ ಜಾತವೇದ ಅಗ್ನಿ ಇವೆರಡರಲ್ಲಿ ಯಾವುದು ಮುಂಚೆ ಗೊತ್ತಾಗಿರಬಹುದು? ಜಾತವೇದನೇ, ನ-ಚಿಕೇತಕ್ಕಿಂತ ಮುಂಚೆ ಅರಿಕೆಗೆ ಬಂದಿರಲಿಕ್ಕೆ ಬೇಕಷ್ಟೆ? ಇವೆರಡರ ತಳಪಾಯದ ಸಮಯ ಅಭ್ಯಸನೀಯವಿದೆ. ಮನಸ್ಸು ಆದ್ಯಮನು ಪ್ರಾದುರ್ಭವಿಸುವ ಸಂದರ್ಭದ ಸಮಯದ ಹಿನ್ನೆಲೆ ಜಾತವೇದ ಅಗ್ನಿಗೆ ಉಂಟು. ಆದರೆ, ನ-ಚಿಕೇತ ಅಗ್ನಿಯ ಹಿನ್ನೆಲೆಯು ಈ ಅಗ್ನಿಯ ಹೆಸರಿನಂತೆಯೇ ನ-ಚಿಕೇತ ಅರಿಕೆಗೆ ಬರದ್ದು ಆಗಿದೆ.

ಆದಕಾರಣ ಜಾತವೇದ ಅಗ್ನಿಯ ಶಿಲ್ಪದಲ್ಲಿ ಪ್ರಜ್ಞೆಯ ಮನಸ್ಸಿನ ಕೈವಾಡವು ಇರುವಂತೆ ನ-ಚಿಕೇತ ಅಗ್ನಿಯ ಈ ಕೃತಕ (artful) ಶಿಲ್ಪದಲ್ಲಿ ಬುದ್ಧಿಯ, ಮೇಧಾಶಕ್ತಿಯ ಕೈವಾಡವಿದೆ ಎಂಬುದು ನಿಃಸಂದಿಗ್ಧವಿದೆ. ಈ ನ-ಚಿಕೇತಾಗ್ನಿಯ ಹಿಂದೆ ಸಮಯ (ಪ್ರಕಾಶ) ಆಧಾರಕ್ಕೆ ಇಲ್ಲವೇ ಇಲ್ಲ! ಈ ನ-ಚಿಕೇತಾಗ್ನಿ ಕತ್ತಲಲ್ಲಿ ಇರುವ, ಅರಿಕೆಗೆ ಬರದ ಕಾಮ(ನಾ) ರೂಪ ಅಗ್ನಿ! ಋಗ್ವೇದದಲ್ಲಿ ಬಂದಿರುವ ಈ ನ-ಚಿಕೇತ ಅಗ್ನಿಯ ಸೂಕ್ತದಲ್ಲಿ ಇದು ಬೃಹತ್ ಉಲ್ಬ=ಯೋನಿ ಮಂಡಲವು ಎಂದು ವರ್ಣಿತವಿದೆ! (x. ೫೧) ಈ ಅಗ್ನಿ=ಯೋನಿ ಲಿಂಗ ಮತ್ತು ಈ ಪಾತಳಿಯ ಭಾಷಿಕ ಪ್ರಚೋದನೆಯ ಬುದ್ಧಿ ಇವೆರಡರಲ್ಲಿ ಅನ್ಯೋನ್ಯವಿರುತ್ತದೆ. ಗ್ರೀಕ್ ದಿವ್ಯಾಧ್ಯಾತ್ಮದಿಂದಲೂ ಇದಕ್ಕೆ ಪುಷ್ಟಿ ದೊರೆಯುತ್ತದೆ.

ಸಾಂಸ್ಕೃತಿಕ ಸ್ತರಗಳ ಬೆಳಕಿನಲ್ಲಿ, ಪ್ರಜ್ಞೆ-ಮನಸ್ಸು ಮೊದಲು ಕಾಣಿಸಿಕೊಂಡಿದೆಯೇ, ಅಥವಾ ಬುದ್ಧಿಯಿಂದ ಪ್ರಚೋದಿತ ಮನಸ್ಸು ಮೊದಲು ಕಾಣಿಸಿಕೊಂಡಿದೆಯೋ ಇದರ ಇತ್ಯರ್ಥವಾಗಲು ಐತಿಹಾಸಿಕ ಭೂಮಿಕೆಯಿಂದ ನಡೆದ ಈ ಸಮೀಕ್ಷೆಯಲ್ಲಿ, ಪ್ರಜ್ಞೆಯೇ ಆದಿತತ್ತ್ವ ಎಂದೂ, ಮೇಧಾ-ಬುದ್ಧಿಯು ಪ್ರಜ್ಞೆಯ ತರುವಾಯದ್ದು ಎಂದೂ ಸಪ್ರಮಾಣವಾಗಿ ಹೊರಪಡುತ್ತಿದೆ. ಇಷ್ಟೇ ಅಲ್ಲ, ಇವೆರಡೂ ಸಂಪ್ರದಾಯಗಳಲ್ಲಿ ಒಂದು ಯುಗದ ಅಂತರವಿರುವುದನ್ನೂ ಇಲ್ಲಿ ಮನಗಾಣಬಹುದಾಗಿದೆ. ಜಾತವೇದ ಅಗ್ನಿ : ಪ್ರಜ್ಞೆಯ-Nous ಇದರ ಉಪಾಸನೆಯು ಮೊತ್ತಮೊದಲಲ್ಲಿ, ವೈವಸ್ವತ ಮನ್ವಂತರದ ಪ್ರಧಾನ ಲಕ್ಷಣವಾಗಿದೆ; ಆಗಿತ್ತು. ವೈವಸ್ವತನನ್ನು ಎದುರಿಸಿ ತಲೆಯೆತ್ತಿ ನಿಲ್ಲುವ ಸ್ವಯಂಭೂ ಸ್ವಾಯಂಭುವ ಎಂಬ ಮನು ಮೊಗವಾಡದ ನರ(ಳ) ರು ಪ್ರಭಾವಶಾಲಿಯಾಗುವ ಈ ಯುಗದಲ್ಲಿ ನ-ಚಿಕೇತ ಅಗ್ನಿಯ ಆರಾಧನೆಗೇ ಪ್ರಾಧಾನ್ಯವು ಬರುವ ಅನಿವಾರ್ಯತೆಯು, ಜೀವನ ವಿಶ್ವವನ್ನು ಆಳುವ ಸನಾತನ ನಿಯಮದ ಬೆಳಕಿನಲ್ಲಿ ಅರಿಕೆಗೆ ಬರುತ್ತದೆ!

ಮಾನವ ಸಂಸ್ಕೃತಿಯು ಪ್ರಜ್ಞೋದಯದಿಂದಾಗಿ ಪ್ರಾರಂಭವಾಗಿದೆ. ಈ ಅಂಶವು ಇನ್ನೊಂದು ನಿಟ್ಟಿನ ಐತಿಹ್ಯದಿಂದಲೂ ದೃಢಪಡುತ್ತದೆ. ಹಿಂದೊಮ್ಮೆ ಮಾನವ ಸಂಸ್ಕೃತಿಯು ಮೊತ್ತಮೊದಲಲ್ಲಿ ಇಜಿಪ್ತಿನಲ್ಲಿ ಮೈವೆತ್ತಿತು, ಎಂಬ ಗ್ರಹಿಕೆಯೂ ಇತ್ತು. ಆದರೆ ಸುಮೇರಿಯನ್, ಅಕ್ಕಡ, ಬ್ಯಾಬಿಲೋನಿಯಾ, ಅಸ್ಸೀರಿಯಾ ಭಾಗದ ಉತ್ಖನನದಲ್ಲಿ, ಯುಫ್ರೆಟಿಸ್-ಟೈಗ್ರೀಸ ನದೀತೀರದ ಈ ಭಾಗದಲ್ಲಿಯೇ ಮಾನವೇತಿಹಾಸ ಮತ್ತು ಮಾನವ

ಸಂಸ್ಕೃತಿಯು ಪ್ರಾರಂಭವಾಗಿದೆ ಎಂದು ಡಾ. ಕ್ರ್ಯಾಮರ್, ಡಾ. ಫ್ರಾಂಕ್‌ಫೋರ್ಟ ಪ್ರಭೃತಿಗಳು ದೃಢಪಡಿಸಿದ್ದಾರೆ. ಇವರು ತಮ್ಮ ಸ್ಪಷ್ಟಿಕರಣಕ್ಕಾಗಿ ಎತ್ತಿಕೊಂಡ ಪ್ರಮಾಣಗಳಲ್ಲಿ ದಿವ್ಯಕಥೆಗಳಿಗೆ ಸ್ಥಾನವಿಲ್ಲ. ಡಾ. ಲೆವ್ಹಿಸ್ಟ್ರಾಸ್ ಹೇಳುವಂತೆ, History is continuation of Mythology ಎಂಬ ಈ ದೃಷ್ಟಿಕೋನದಿಂದ, ನಾನು ಈ ಅಂಶವನ್ನು ೧೫/೨೦ ವರುಷಗಳ ಮೊದಲಿನಿಂದಲೇ ಸೂಚಿಸುತ್ತ ಬಂದಿದ್ದೇನೆ. ಅಕ್ಕಡ-ಸುಮೇರಿಯಾ ಭಾಗದ ಆದಿದೈವತದ ಕಥೆಗಳಲ್ಲಿ ತೈಮತ್-ಅಪ್ಸು ಈ ಸ್ಥಳ (ಕಣ್) ಮತ್ತು ಕಾಲ (ಗಣ್) ರೂಪ ಎರಡು ನಾಗಗಳು ಕ್ರೀಡಿಸುತ್ತಿದ್ದ ಕವನ: ಎನುಮಾಎಲಿಶ್ ಬೆಳಕಿಗೆ ಬಂದಿದೆ. ಈ ಕವನದಲ್ಲಿ ಎಂಕಿ ಎಂದರೆ God of Wisdom ಇವನಿಂದ ಸಂಸ್ಕೃತಿ ಪ್ರಾರಂಭವಾಯಿತು ಎಂದು ಸೂಚಿತವಿದೆ. ಮರ್ಡುಕ್‌ನಿಗೆ ಮಹತ್ವವು ಪ್ರಾಪ್ತವಾದದ್ದೂ ಇಲ್ಲಿ ಕಾಣುತ್ತದೆ. ಈ ಭಾಗದಲ್ಲಿ, ಮರ್ಡುಕನಿಂದ ಸರ್ಪಹನನದ ನಡೆವಳಿಯ ಅನುಕರಣವು, ಸಾಂಕೇತಿಕವಾಗಿ ಪ್ರತಿವರುಷ ನಡೆವ ವಾಡಿಕೆಯು ಇದ್ದಿತೆಂದು ಈಗ ದೃಢಪಟ್ಟಿದೆ. ಈ ಸರ್ಪಹನನದ ವೀರನೆಂದು ಇಂದ್ರನು ಋಗ್ವೇದದಲ್ಲಿ ವರ್ಣಿತನಿದ್ದಾನೆ.

ಈ ಸುಮೇರಿಯಾ ಭಾಗದ ಸಂಸ್ಕೃತಿಯ ಏರಿಳಿತಗಳಿಂದ ಜೀವನವನ್ನು ಆಳುವ ವಿಶ್ವನಿಯಮವು ದೃಢಪಡುತ್ತಿದೆ. ಎಂಕಿ-ಮರ್ಡುಕ ಈ ಪ್ರಜ್ಞಾಪಾತಳಿಯ ವೀರರಿಂದ ಸ್ಥಳವು ಕಾಲ ರೂಪ ನಾಗ (ಅಹಿಃವೃತ್ರ) ಹನನವು ಸಂಭವಿಸುತ್ತದೆ. ಈ ನೆಪದಿಂದ ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಈ ಅಹಿಃವೃತ್ರನ ಭೇದದಿಂದಾಗಿ, ಸ್ಥಳ-ಕಾಲದ ಸಂದರ್ಭದ ಈ ಜೀವಿತದ ಪಾತಳಿಯ ಆಚೆಗಿನ, ಮಾನವ ಸಂಸ್ಕೃತಿ ಪ್ರೇರಕ ಪ್ರಜ್ಞಾ=ಮನಸತತ್ತ್ವದೊಡನೆ ಬರುವ ಸಂಪರ್ಕದಿಂದಾಗಿ ಈ ನರ(ಳ) ನಿಗೆ ಮನು-ಜತ್ವವು ಲಭಿಸುತ್ತದೆ. ಮಾನವನ ಇತಿಹಾಸ; ಸಂಸ್ಕೃತಿಯು ಆಕಾರ ಪಡೆಯುವುದಕ್ಕೆ ಪ್ರಾರಂಭವಾಗುತ್ತದೆ. ಆದರೆ, ಈ ಮನುಜನು ಎಂಕಿ-ಮರ್ಡುಕ ವೈವಸ್ವತ ಮನು: ಮಾನವನು, ಪ್ರಜ್ಞಾಪಾತಳಿಯೊಡನೆ ಬಂದ ಸಂಪರ್ಕ-ಸಂಬಂಧವನ್ನು ಅನುದಿನವೂ ಉಳಿಸಿಕೊಳ್ಳುವುದು ಕರ್ತವ್ಯವಾಗುತ್ತದೆ. ಆದರೆ, ಕಾಲಕ್ರಮದಲ್ಲಿ ಈ ಜೀವಿತದ ಪಾತಳಿಯ ಮೇಲೆ ಬುದ್ಧಿಯ ಉದಯವು ಆಗುವ ಅನಿವಾರ್ಯತೆಯನ್ನು ತಪ್ಪಿಸಲು ಸಾಧ್ಯವಿಲ್ಲ: ಹೀಗೆ ತಪ್ಪಿಸಿಕೊಳ್ಳುವಲ್ಲಿ ಮಾನವನ ಹಾನಿಯೇ ಇದೆ. ಆದರೆ, ಬುದ್ಧಿಯು ಪ್ರಜ್ಞೆಯ ಅಂಕೆಯಲ್ಲಿ ಉಳಿಯದೇ ಇದ್ದರೆ, ಈ ಪ್ರಜ್ಞೆಯೇ ಬುದ್ಧಿಯ= ನಾಗಲಿಂಗನ ದಾಸಿ ಆಗುವುದು ಮಾತ್ರ ತಪ್ಪಿದ್ದಲ್ಲ.

ಭಾರತೀಯ ಸಂಸ್ಕೃತಿಯಲ್ಲಿ ಈ ತಿರುವು ಮುರುವೇ ಸಂಭವಿಸಿದೆ. ಈ ಮಾತಿಗೆ ಪ್ರಮಾಣವೇನು? ಧ್ಯಾಯೇತ್ ಸದಾ ಸವಿತುಃ ಮಂಡಲ (೦) ಮಧ್ಯವರ್ತೀ ನಾರಾಯಣಃ ಈ ಶ್ಲೋಕವು ಮನನೀಯವಿದೆ. ಈ ಹಾರುವರೆಂಬವರಲ್ಲಿ, ಮಕ್ಕಳಿಗೆ ಸುಸಂಸ್ಕಾರಗಳು ಆಗಬೇಕು, ಎಂಬ ದೃಷ್ಟಿಯಿಂದ ಇಂದಿಗೂ, ಎಲ್ಲ ಮಾನವ ಪಂಗಡಗಳಿಗೂ ಪ್ರಯೋಜನಕಾರಿಯಾಗಬಹುದಾದ ಆಚಾರಾಂಗಗಳು ಉಂಟು. ಇಲ್ಲಿ ಉದಾಹರಿಸಲಿರುವ ಆಚಾರಾಂಗವು ಸೂರ್ಯ ನಮಸ್ಕಾರದ ನಡೆವಳಿ. ಪ್ರಾತಃಸ್ನಾನ ಮಾಡಿ, ಪೂಜೆ, ಧ್ಯಾನಾದಿ ಕಾರ್ಯಕ್ರಮದಲ್ಲಿ ಸೂರ್ಯನಮಸ್ಕಾರಕ್ಕೂ ಒಂದು ಸ್ಥಾನವು ಇತ್ತು. ಮಕ್ಕಳಿಗೆ ಕನಿಷ್ಠ ೧೨ ಸೂರ್ಯನಮಸ್ಕಾರಗಳನ್ನಾದರೂ ಹಾಕಲೇಬೇಕು, ಎಂದು ಹಿರಿಯರರಿಂದ ಒತ್ತಾಯ ಪಡಿಸಲಾಗುತ್ತಿತ್ತು. ವ್ಯಾಯಾಮದ ದೃಷ್ಟಿಯಿಂದ ಈ ಸಾಧನೆ ಉಪಯುಕ್ತವಿದೆ. ಅಲ್ಲದೆ, ಭೌತಸ್ಥಳ-ಕಾಲದ ಆಚೆಗಿನ ಪ್ರಜಾಸೂರ್ಯನ ಪ್ರಾರ್ಥನೆಯ ನೆಪದಿಂದ ಪ್ರಜ್ಞೆಯ= ಮನಸ್ಸಿನ= ಮನು ವೈವಸ್ವತನ ಸಂಪರ್ಕವನ್ನು ಉಳಿಸಿಕೊಳ್ಳುವ ಒಂದು ಸರ್ವೋತ್ಕೃಷ್ಟ ತಂತ್ರವೂ ಸರಿ.

ಆದರೆ ಈ ತಂತ್ರವು, ಶಾಕ್ತಪಂಥೀಯ ಜೀವಿತದ ಪಾತಳಿಯಲ್ಲೆ ಈ ಸಾಧಕನನ್ನು ಉಳಿಸಿಕೊಳ್ಳುವ ಮಂತ್ರ : ಮಾಟದ್ದಾಗಿದೆ! ದ್ವಾದಶ ಆದಿತ್ಯರ ಪ್ರಾರ್ಥನೆ ಆಗಿ ಪರಿಣಮಿಸಿದೆ, ಈ ಸಾಧನ! ಮಿತ್ರ, ರವಿ, ಸೂರ್ಯ, ಭಾಸ್ಕರಾದಿ ಈ ಪ್ರಕಾಶಶಕ್ತಿಯ ನಾಮಗಳನ್ನು ಪ್ರತಿಯೊಂದನ್ನೂ ಓಂಕಾರ ಪೂರ್ವಕವಾಗಿ ಹೇಳುವ ವಾಡಿಕೆಯಿದೆ! ಈ ಓಂಕಾರದ ಇತಿಮಿತಿಗಳನ್ನು ಚೆನ್ನಾಗಿ ನೆನಪಿನಲ್ಲಿ ಇಟ್ಟುಕೊಂಡು, ಈ ಓಂಕಾರದ ಲಾಭವನ್ನು

ಪಡೆಯಬಹುದು ಎಂದು ಎನಿಸಿದೆ. ಆದರೆ ಈ ನಾದದ ಪ್ರಭಾವದಲ್ಲಿ ಸಿಕ್ಕರೆ ಮನುಜನನ್ನು ನರ(ಳ)ನನ್ನಾಗಿ ಮಾರ್ಪಡಿಸುವ ಶಕ್ತಿಯು ಈ ಓಂಕಾರ=ಪ್ರಣವದಲ್ಲಿದೆ! ಜಾನಪದದ ಗಾದೆ; ಹಲ್ಲಿಲ್ಲದ ಕಪ್ಪೆ ಹಾವು ನುಂಗಿತು ಎಂಬಲ್ಲಿ ಇದು ಕಂನಾಡವರ ಪ್ರಜ್ಞಾನೇತ್ರಕ್ಕೆ ಸಾಕ್ಷಿ. ಇದಕ್ಕೆ ಪ್ರಮಾಣ, ಈ ನಮಸ್ಕಾರಗಳ ಬಗೆಗೆ ಇರುವ ಧ್ಯಾನಮಂತ್ರ: "ಧ್ಯಾಯೇತ್ ಸದಾ ಸವಿತುಃ ಮಂಡಲ (೦) ಮಧ್ಯವರ್ತೀ ನಾರಾಯಣಃ...!" ಈ ಸೂರ್ಯ-ನಾರಾಯಣ ಪ್ರತಿಮೆ ಯೋನಿ-ಲಿಂಗೈಕ್ಯ ಸೂಚಕವಿದೆ.

ಸವಿತೃರೂಪ ಸೂರ್ಯನು ಧೀರೂಪೀ ಪ್ರಜ್ಞಾ ಪ್ರಚೋದಕ ಶಕ್ತಿ ಕೇಂದ್ರ. ಆದರೆ, ಈ ಸವಿತೃ ದೇವನನ್ನು ಸಾವಿತ್ರೀ-ಗಾಯತ್ರೀ ರೂಪ ದಿವ್ಯಚಕ್ಷು (೦) ಹಂತಕ್ಕೆ ಮಾರ್ಪಡಿಸಿದ್ದಾಗಿದೆ. ಪ್ರಣವದ ಬಗೆಗೆ ನೋಡಿರಿ. ಈ ಸವಿತೃ ಮಂತ್ರದ ವಿಕೃತಿಯನ್ನು ಖಾತ್ರೀಮಾಡಿಕೊಳ್ಳಲು, ಬೃಹದಾರಣ್ಯಕ[೧] ನೋಡಿಕೊಳ್ಳಿ. ವೇದದಲ್ಲಿಯೂ ಈ ಸವಿತೃವನ್ನು ರಾತ್ರೀಸ್ವಾಮಿ ಆಗಿರುವ ವರುಣನಲ್ಲಿ ಕಳಿಸಿದ್ದಾಗಿದೆ! ರಾಷ್ಟ್ರೀಯ ಮಹತ್ವದ್ದೆಂಬ ಪವಿತ್ರ ಶ್ರೀ ಭಗವತ್‌ಗೀತೆಯು ಒಳಗೊಂಡಿರುವ ಮೋಸ ಅಶ್ವತ್ಥ ವೃಕ್ಷ=ಬೆಂಕಿಯಮರ=ಅಗ್ನಿಸ್ತಂಭರೂಪೀ ಈ ಭಗವಂತನು ಬುದ್ಧಿ ತಾನು ಇದುವೆ= ಬುದ್ಧಿಮತಾಂ ಬುದ್ಧಿಃ ಅಹಂ (೭.೧೦) ಎಂದಿದ್ದಾನೆ. ಇನ್ನೂ ಬಗೆಬಗೆಗಳಿಂದ ಪ್ರಜ್ಞೆ: ಮನಸ್ ಇದನ್ನು ಕೀಳುಗೈವ ಮಂತ್ರ : ಮಾಟ ಈ ಗೀತೆಯಲ್ಲಿ ಉಂಟು. ಮಾದರಿಗಾಗಿ ಈ ತಾರತಮ್ಯದ ಶ್ಲೋಕ ನೋಡಿಕೊಳ್ಳಿ.

ಇಂದಿಯಾಣಿ ಪರಾಣಿ ಆಹುಃ। ಇಂದ್ರಿಯೇಭ್ಯಃ ಪರಂ ಮನಃ॥
ಮನಸಃ ತು ಪರಾ ಬುದ್ಧಿಃ। ಯೋ ಬುದ್ಧೇಃ ಪರತಃ ತು ಸಃ[೨]

ಈ ತಾರತಮ್ಯದಲ್ಲಿ ಬುದ್ಧಿಗೆ ಭಗವಂತನ ಹತ್ತಿರದ ಎಂದರೆ ಎರಡನೆಯ ಸ್ಥಾನವು ಇದೆ. ಈ ಬುದ್ಧಿ ಮನಸ್ಸಿಗಿಂತಲೂ ಶ್ರೇಷ್ಠ ಅಥವಾ ಮನಸ್ಸು ಬುದ್ಧಿಗಿಂತ ಕೆಳಗೆ-ಕೀಳು! ಎಂದು ನಂಬಿಸಲಾಗಿದೆ! ಆದರೆ ವಸ್ತುಸ್ಥಿತಿಯು ತೀರ ಬೇರೆಯಿದೆ. ಈ ಬುದ್ಧಿ ಹುಟ್ಟುವುದಕ್ಕೂ ಮುಂಚೆ, ಮಾನವನ ಪ್ರಾದುರ್ಭಾವಕ್ಕೆ ಆದಿಕಾರಣವೇ ಈ ಮನಸ್ಸು. ಉಪಜ್ಞೆ-ಪ್ರಜ್ಞೆ, ಪ್ರಜ್ಞೆ=ಪ್ರಜ್ಞೆಯ ಅಂಗವಾದ ಮನಸ್ಸು ಇದನ್ನು ಬೆಲೆಗೇಡಾಗಿಸಿರುವ ಈ ತಂತ್ರದಿಂದಲೆ ಮನುಜನು ನರ(ಳ) ನಾಗಿ ಭಗವಂತನ ದಾಸನಾಗುವ ದಿಕ್ಕಿನಲ್ಲಿ ಹೊರಟಿದ್ದಾನೆ. ನ-ಚಿಕೇತ ಅಗ್ನಿಯ ಉಪಾಸನೆಯತ್ತ ತಳ್ಳಿಕೊಂಡು ಹೋಗುವ ಕಠ ಉಪನಿಷತ್ತು, ಭಗವತ್ ಗೀತೆಯ ಮೂಲಮಾದರಿ. ಇದರಲ್ಲಿ, ಒಂದು ಅತ್ಯಂತ ಸುಂದರವೆನಿಸುವ ಸಂಮೋಹಕ ಶ್ಲೋಕದಲ್ಲಿ ಬರುವ ರಥದ ರೂಪಕವು ಚಿಂತ್ಯವಿದೆ.

ಇಂದ್ರಿಯಾಣಿ ಹಯಾನಿ ಆಹುಃ। ಶರೀರಂ ರಥಂ ಏವ ತು॥
ಬುದ್ಧಿಂ ತು ಸಾರಥಿಂ ವಿದ್ಧಿ। ಮನಃ ಪ್ರಗ್ರಹ ಏವ ಚ॥[೩]

ಮೇಲ್ನೋರಿಕೆಯಲ್ಲಿ ಈ ಶ್ಲೋಕದಲ್ಲಿ ಆಕ್ಷೇಪಾರ್ಹವಾದದ್ದು ಏನೂ ಇಲ್ಲ. ಆದರೆ, ಇಲ್ಲಿ ಇರುವ ಗುಹ್ಯಾತ್ ಗುಹ್ಯತಮ ಅರ್ಥಕ್ಕಾಗಿ ತುಲನಾತ್ಮಕ ವಿಮರ್ಶೆಯು ಸ್ವಲ್ಪ ಜರೂರು ಇದೆ. ರಥದ ಸೊಬಗು ಇಲ್ಲಿದೆ.

ಗೀತೆಯಲ್ಲಿ ಬರುವ ನರ(ಳ) ರಥ ಮತ್ತು, ನ-ಚಿಕೇತಾಗ್ನಿ ಉಪಾಸನೆಯು ಇರುವ ಕಠದ ಈ ರಥ ಬೇರೆಯಲ್ಲ. ಈ ಅಂತಃಸಂಗತಿ ಮಾರ್ಮಿಕವಿದೆ. ಋಗ್ವೇದದಲ್ಲಿಯೇ ಈ ರಥದ ಮೂಲ ಮಾದರಿ ಇದೆ. ಒಬ್ಬ ಕುಮಾರ ತನ್ನ ರಥವನ್ನೇರಿ ಯಮನಲ್ಲಿ ಬರುತ್ತಾನೆ. ಈ ರಥವು ಅ-ಚಕ್ರಂ ರಥಂ ; ಗಾಲಿ (೦) ಇಲ್ಲದ ತೇರು ಇದು. ಈ ವೇದದಲ್ಲಿ ತ್ರಿಚಕ್ರಂ ರಥಂ ಸಹ ಉಂಟು. ಈ ಅಚಕ್ರ ರಥ, ಇದು ಏಕೇಷ ಇದೆ. (ಏಕೇಷು) ಒಂದೇ ಈಸು (Pole) ಇರುವ ರಥವು ಇದು! ಇದರಲ್ಲಿ ಶ್ಲೇಷಾರ್ಥವಿದೆ. ಇಷ್-ಇಷ್ಟ ಬಂದ ಕಡೆಗೆ ಅಲೆಯಬಲ್ಲ ರಥ ಇದು!

ಭಗವತ್‌ಗೀತೆಯ ರಥದ ವೈಶಿಷ್ಟ್ಯವೆಂದರೆ, ಇದರ ಸಾರಥಿಯು ಸಾಕ್ಷಾತ್ ಭಗವಂತನೇ. ಈತನು ರಥದಿಂದ ಬೇರೆಯಲ್ಲ. ರಥದಿಂದ ಇಳಿಯಲಾರೆ ಎಂದು ಮೊದಲೇ ಹೇಳಿದ್ದಾನೆ, ಈ ಸಾರಥಿ: ರಥೇನ ಸಹಿತಃ ಸಾರಥಿ! ಈ ರಥವು ಸಾರಥಿಯ ಅಂಗವಾಗಿದೆ. ಕುರುಕ್ಷೇತ್ರದಲ್ಲಿದ್ದು ಕಾಮರೂಪದುರಾಸದ ಶತ್ರುವನ್ನು, ಗೆಲ್ಲಲು, ಈ ರಥದಿಂದಲೇ ಯುದ್ಧ ನಡೆಯಲಿದೆ. ಕಾಮರೂಪ ಶತ್ರುವನ್ನು ಗೆಲ್ಲುವುದಾದರೆ, ಎದುರು ಕಾಮಿನಿಯೇ

ಇರಬೇಡವೇ? ಇದು ಈ ಕುರುಕ್ಷೇತ್ರದಲ್ಲಿ ನಡೆಯಲಿರುವ ಯುದ್ಧ. ಹಾಗಾದರ ಈ ಕುರುಕ್ಷೇತ್ರವೇ ಕಾಮಿನಿ ಆಗಲೇಬೇಕಷ್ಟೇ? ಕ್ಷೇತ್ರ=ಭೂಮಿ ಕಾಮಿಸಿ ತಾನೆ ಯುದ್ಧ? ಜಾಬಾಲೋಪನಿಷತ್ತಿನಲ್ಲಿ ಅ-ವಿಮುಕ್ತ ಕುರುಕ್ಷೇತ್ರವಿದೆ! ಉಪನಿಷತ್ತುಗಳ ಸಾರ ಈ ಗೀತೆ. ಗೀತೆಯ ಗುಹ್ಯಾರ್ಥವನ್ನು ಕುರಿತು ಬರೆದಿರುವ ಪ್ರಬಂಧದಲ್ಲಿ, ಈ ರಥದ ವಿಚಾರವು ಮೊದಲ ಬಾರಿ ನನ್ನ ಗಮನ ಸೆಳೆದದ್ದು.

ಈ ನರ(ಳ)ನ ರಥದ ಸಾರಥಿ, ಈ ನಳನಲ್ಲದೆ ಬೇರೆ ಯಾರು ಇರಬಲ್ಲರು? ವ್ಯಾಸನ ಗತ್ತುಗಾರಿಕೆಯ ಮೂಲಕ ಈ ವಿಚಾರವು ಸಂದಿಗ್ಧವಾಗಿದೆ. ಗೀತೆಯನ್ನು ಅರ್ಜುನನಿಗೆ ಹೇಳಿದೆ, ಎಂದು ಮೇಲ್ತೋರಿಕೆಯ ಮಾತು ಉಂಟು. ಆದರೆ, ಗೀತೆಯಲ್ಲಿಯೇ ಈ ಅರ್ಜುನ ಹೆಸರಿಗೆ ಪರ್ಯಾಯವಾಗಿ ನರ ಎಂಬ ಹೆಸರೂ ಉಂಟು. ಮಹಾಭಾರತದ ಪ್ರಾರಂಭದಲ್ಲಿಯೇ ನರ: ನಾರ-ಅಯನ (ನಾರಾಯಣ) ಇವರಿಗೆ ವಂದನೆ ಇದೆ. ನಾರಾಯಣಂ ನಮಸ್ಕೃತ್ಯ ಎಂಬಲ್ಲಿ ಈ ನಮಸ್ಕಾರವು ನಾರ ಅಯನಕ್ಕೆ ಇದೆ! ಈ ನರ(ಳ) ಎಲ್ಲ ನರ(ಳ)ರಲ್ಲಿ ಉತ್ತಮ=ಶ್ರೇಷ್ಠವಂತೆ. ಉತ್-ತಮ ಎಂದರೆ ಎದ್ದು-ನಿಗುರಿ-ನಿಂತರವರಲ್ಲಿ ಶ್ರೇಷ್ಠನು ಇವನು.

ಒಂದು ವಿಚಿತ್ರ : ಸೋಜಿಗ

ಆದರೆ ಮಹಾಭಾರತ, ಗೀತೆಯ ವ್ಯಾಸಂಗಿಗಳಿಗೆಲ್ಲ ಸೋಜಿಗ? ಈ ಗ್ರಂಥಗಳಲ್ಲಿ ಎರಡರಲ್ಲೂ ನಾರಾಯಣನೇ (ನಾರ-ಅಯನ) ಎಲ್ಲಿಯೂ ಇಲ್ಲ! ಮಹಾಭಾರತದ ಪರಿಶಿಷ್ಟದಂತಹ ಒಂದು ಉಪಾಖ್ಯಾನವಾಗಿ ಈ ಹೆಸರು ಮೂಲೆಯಲ್ಲಿದೆ! ವಂದನಾಶ್ಲೋಕದ ಈ ನಾರ-ಅಯನ ಅಡಗಿದನೆಲ್ಲಿ? ಋಗ್ವೇದದಲ್ಲೂ ಈ ಗತ್ತುಗಾರಿಕೆಯೇ ಉಂಟು. ಮೂಲಪಾಠದಲ್ಲಿ ನಾರಾಯಣ ಇಲ್ಲ ; ನಾರದನೂ ಇಲ್ಲ! ಆದರೆ ಇಲ್ಲ ಎನ್ನಬೇಡಿ: ನಾರಾಯಣ (ಪರ್ವತ) ನಾರದ ಋಷಿಗಳು ಸೂಕ್ತಕಾರ ಕವಿಗಳು! ಶುಕ್ರ (ರೇತ) ಆಚಾರ್ಯನೇ ಅಸು (ಪ್ರಾಣ) ರ ಸಂಪ್ರದಾಯದ ಆದ್ಯಕವಿ ಅಲ್ಲವೇ? ಈ-ತನು ವೇದದಲ್ಲಿ ಉಂಟು! ಪುರು-ಷ=ಪುರಿ-ಶಯ(ನ)=ಗುಹೇಶ್ವರ, ವೇದದಲ್ಲಿ ಇದ್ದಾನೆ. ಆದರೆ ಈ ಸಂಗಮನಾಥ ಹೊರಗೆ ಕಂಡರೆ, ಈ ಕವಿಪ್ರತಿಭೆಗೇ ಕೇಡು, ಕಲಂಕ ಅಲ್ಲವೆ? ಇದೇ ಮೇರೆಗೆ ಮಹಾಭಾರತ, ಭಗ-ವತ್ ಗೀತೆ, ರಚಿಸಿದನೆಂಬ ಕವಿಯು ಯಾರು? ವ್ಯಾಸ-ಗುಹೇಶ್ವರ; ಈ-ತನು ಹೊರಗೆ ಬಯಲಲ್ಲಿ ಕಾಣಲು ಹೇಗೆ ಶಕ್ಯ? ಈ ಭೌತಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗಚೇತಸ) ಈ ಸಂದರ್ಭದ ಅಸ್ತಿತ್ವವನ್ನು ಕಂನಾಡ ಶಬ್ದಶಿಲ್ಪಿ ಪ್ರಜ್ಞಾನೇತ್ರ ಇದನ್ನು ಬಯಲು ಎಂದು ಹೆಸರಿಸಿದ್ದು ನಿಷ್ಕಾರಣವಲ್ಲ! ದಕ್ಷಿಣ ಕಪರ್ದನ ವ್ಯಾಸದೇವನ ಈ ರಚನಾ ಚಮತ್ಕಾರ ಇದೊಂದು ಜಾಗತಿಕ ವಿಕ್ರಮವಾಗಿದೆ.

ಇಜಿಪ್ಷಿನ ಪಿರಾಮಿಡ್ (ಲಿಂಗದೇವನ ಗೋರಿ), ಸಮಾಧೀ ಕಟ್ಟಡ ಹೊರಗಣ್ಣಿಗೆ ಮಾತ್ರ ಕಾಣುತ್ತದೆ. ನಮ್ಮ ಭಾರತೀಯ ಯಕ್ಷ (ಯಕ್ಷಿ) ಜಕ್ಕಣ (ಲಿಂಗಣ)ನ ಶಿಲ್ಪಸೌಂದರ್ಯದ ಈ ವೈಭವವು, ಈ ವೇದ, ಮಹಾಭಾರತ-ಗೀತೆಯ ಕಟ್ಟಡದಲ್ಲಿದೆ.! ಬಯಲನ್ನು (Phenomenon) ಶಬ್ದದಲ್ಲಿ ಹಿಡಿದಿಟ್ಟಿರುವ ಈ ಪವಾಡ ಶೆಕ್ಸಪಿಯರನಿಗೆ ಸಾಧಿಸಿದೆಯೇ? ಇಂಥ ಪವಾಡಿ ನಾಗ-ಲಿಂಗನಿಗೆ ನಮೋ ನಮೋ! ಈ ನಾಗನ ವಿಷಬಾಧೆ ಭಾರತೀಯರ ಪ್ರಜ್ಞೆಯನ್ನು ಬಯಲ ಹಂತಕ್ಕೆ ತಂದು ಈ ಪ್ರಜ್ಞೆಯನ್ನು ಬಯಲಾಗಿಸಿ ಬಿಟ್ಟಿರುವ ಈ ಹಂಚಿಕೆಯ ದುರ್‌ಬುದ್ಧಿಯನ್ನು ಎಷ್ಟು ಶಪಿಸಿದರೂ ಕಡಿಮೆ! ಎಷ್ಟು ಛೀ ಥೂ ಮಾಡಿದರೂ ಕಡಿಮೆ! ಇದನ್ನು ಮನಗಾಣಲು, ಗೀತೆಯ ಹಾಗೂ ಕಠದ ರಥ ನೋಡಿ: ನರ(ಳ) ನ ರಥದ ಸಾರಥಿ ಭಗವಂತನಿದ್ದರೆ, ನಚಿಕೇತಾಗ್ನಿ ಉಪಾಸನೆಯನ್ನು ಹೇಳುವ ಕಠದಲ್ಲಿ ಈ ರಥದ ಸಾರಥಿ ಬುದ್ಧಿ. ಈ ಮೊದಲು ಭಗ-ವಂತ ಈ ಸಮೀಕರಣವನ್ನು ವಿವರಿಸಿ ಆಗಿದೆ. ಈ ಅಂಶವೇ ಮತ್ತೆ ಇಲ್ಲಿಯೂ ರಥದ ಸಾರಥಿ ಎಂಬುದರ ಮೂಲಕವೂ ಭಗ-ವಂತ (ಲಿಂಗ) ಮತ್ತು ಬುದ್ಧಿ ಈ ಸಮೀಕರಣಕ್ಕೆ ಪುಷ್ಟಿದೊರೆಯುತ್ತದೆ. ನರ(ಳ)ನ ರಥದ ಸಾರಥಿ ಭಗವಂತನಿದ್ದರೆ ನಚಿಕೇತಾಗ್ನಿ ಉಪಾಸನೆಯನ್ನು ಹೇಳುವ ಕಠದ ರಥಕ್ಕೆ ಬುದ್ಧಿಯು ಸಾರಥಿ! ಈ ವಿವೇಚನದ ಮುಖ್ಯ ಉದ್ದೇಶವು ನಿಜವಾದ ದೇವರು ಯಾವುದು? ಪ್ಲೇಟೋನ Reason : intelligence ಅಥವಾ ಗೀತೆಯ ಬುದ್ಧಿ ಇದುವೋ? ಅಥವಾ ಅರಿಸ್ಟಾಟಲನ Nous : mind = ಪ್ರಜ್ಞೆಯ ಅಂಗವಾದ ಮನಸ್ಸೋ=ವೈವಸ್ವತ ಮನುವೊ?

ಈ ಸಂದೇಹ ನಿವಾರಣೆಗಾಗಿ, ಸಾಂಸ್ಕೃತಿಕ ಸ್ತರಗಳನ್ನು ಸಮೀಕ್ಷಿಸುವ ಆವಶ್ಯಕತೆಯು ಉಂಟಾಯ್ತು. ಈ ಸ್ತರಗಳ ಸಂದರ್ಭದಲ್ಲಿ ಒಂದು ಮಾತು ನಿಶ್ಚಿತವಾಯ್ತು. ಭಾಷಾ ಮಾಧ್ಯಮವು ಇಲ್ಲದೆ ಧರ್ಮ: ಸಂಸ್ಕೃತಿ ಆಕಾರ ಪಡೆಯಲಾರದು. ಈ ಭಾಷೆಗೆ ಸಮಯದ ಆಧಾರವು ಅನಿವಾರ್ಯವಿದೆ. ಭಾಷೆಯಲ್ಲಿ, ಮನು ಸಮಯದ ಆಧಾರವಿರುವ ಪದಗಳು ಪ್ರಾಚೀನ, ಎಂಬ ಸಂಗತಿ ಹೊರವಡುತ್ತದೆ. ಜಾತವೇದ ಅಗ್ನಿ, ಮನು ಸಮಯದ ಪ್ರಾರಂಭ ಸೂಚಕವಿದೆ. ಜಾತವೇದ ಪದಕ್ಕೆ ಸಾಯಣರು ಪ್ರಜ್ಞೆ ಎಂದು ಭಾಷ್ಯ ಮಾಡಿದ್ದಾರೆ. ಇದಕ್ಕೆ ಪ್ರತಿಯಾಗಿ ಇರುವ ಅಗ್ನಿಯೇ ನ-ಚಿಕೇತ ಅಗ್ನಿ. ಈ ನಚಿಕೇತಾಗ್ನಿ ಉಪಾಸನೆಯನ್ನು ಹೇಳುವ ಕಠೋಪನಿಷತ್ತಿನಲ್ಲಿ ಬರುವ ರಥದ ಸಾರಥಿಯು ಬುದ್ಧಿ ಭಗವ-ವತ್ ಗೀತೆಯ ನರ(ಳ)ನ ರಥದ ಸಾರಥಿಯು ಭಗ-ವಂತ. ಬಾಳ ದಾರಿಯಲ್ಲಿ ನಡೆಸಿಕೊಂಡು ಹೋಗುವ ಈ ರಥಕ್ಕೆ ಬುದ್ಧಿಯೇ ಸಾರಥಿ ಎಂದಲ್ಲಿ, ಇದು ಲೈಂಗಿಕ ಪಾತಳಿಯ ಮೇಲಣ ಬಾಳು ಆಗುವುದು ನಿಶ್ಚಿತ; ಅಥವಾ ಈ ರಥವು ಅರಣ್ಯಾಯನಕ್ಕೆ ಆಮರಣ ಕುಮಾರೀ-ಕುಮಾರ ವ್ರತಿಯಾಗಿ ಬಾಳುವ ದಾರಿಗೆ ತಳ್ಳಿಕೊಂಡು ಹೋಗಲೇಬೇಕು. ಪ್ರಜ್ಞೆಯು ದೇವರು ಎಂದಲ್ಲಿ ಮಾನವ ಜೀವನ ರೀತಿಯು ಶಕ್ಯವಾಗಲಿದೆ. ಬುದ್ಧಿಯೇ ದೇವರು ಆಗುವಾಗ ಇದು ನರ(ಳ)ನ ಜೀವನ ರೀತಿಗೆ ತಳ್ಳಿಕೊಂಡು ಹೋಗುವುದು ನಿಶ್ಚಿತವಿದೆ. ಈ ಬುದ್ಧಿಯು ಅವತರಿಸಿದ್ದು ಪ್ರಾಣಲಿಂಗ ಪಾತಳಿಯ ಮೇಲಣ ಬಾಳಬಗೆಯಲ್ಲಿ, ಎಂಬುದು ಭಾರತೀಯ ಹಾಗೂ ಗ್ರೀಕ್ ಪುರಾತನ ಉಲ್ಲೇಖಗಳಿಂದ ದೃಢ ಪಡುತ್ತದೆ.

ಬುದ್ಧಿಯು ಅವತರಿಸಿರುವ ಸಮಯದ ಹಿನ್ನೆಲೆ

ಭಾರತೀಯ ಪೂರ್ವಪರಂಪರೆಯಲ್ಲಿ ಸೃಷ್ಟಿಗೆ-ಸೃಜನಕ್ಕೆ, ಕಾರಣವಿರುವ ಸೃಜನ-ಜಲದೊಡನೆಯೆ ಬುದ್ಧಿಯು ಕಾಣಿಸಿಕೊಂಡಿದೆ, ಎಂಬ ಹಾಗಿನ ಒಂದು ಉಲ್ಲೇಖವು ಉಪನಿಷತ್ತಿನಲ್ಲಿ ಬರುತ್ತದೆ. ಆಪೋ ವಾ ಇದಂ ಅಗ್ರೇ ಮಹತ್ ಸಲಿಲಂ ಆಸೀತ್ ಆಪ ಎಂಬ ಪದಕ್ಕೆ ಸಲಿಲ* ಎಂಬ ಇನ್ನೊಂದು ಹೆಸರನ್ನು ಇಲ್ಲಿ ಯೋಜಿಸಲಾಗಿದೆ. ಸಲಿಲ ಇದು ಆಪದಷ್ಟು ಪ್ರಾಚೀನವಲ್ಲ. ಆಪೋ ವಾ ಅಸ್ಮಾನ್ ಮಾತರಃ (=ನೀರೇ ನಮ್ಮ ತಾಯಂದಿರು) ಈ ವಾಕ್ಯದಲ್ಲಿ ಸೃಜನಜಲಕ್ಕೆ ಸಲಿಲ ಎಂಬ ಹೆಸರು ಇಲ್ಲ. ಆದರೆ ಈಗ ಸಲಿಲ ಎಂಬಲ್ಲಿ ಹೆಚ್ಚಿನ ಅರ್ಥವನ್ನು ಕಲ್ಪಿಸಲಾಗಿದೆ. ಸಲಿಲ-ಸರಿಲ-ಸರಿರ-ಶರೀರ ಈ ಅರ್ಥದ ಹತ್ತಿರ ತರಲಾಗಿದೆ. ಈ ಆಪ=ಜಲ, ಇದು ಶರೀರ (ಲಿಂಗದ) ಜಲ.

ಈ ಅರ್ಥದೊಡನೆ ಮೇಲಣ ವಾಕ್ಯದಲ್ಲಿ ಸಲಿಲಕ್ಕೆ (ಲಿಂಗಕ್ಕೆ) ಮಹತ್ ಎಂಬ ವಿಶೇಷಣವನ್ನು ಸೇರಿಸಲಾಗಿದೆ. ಮಹ, ಮಹಾ, ಮಹಾನ್, ಶ್ರೇಷ್ಠ, ದೊಡ್ಡದು ಎಂಬ ಈ ಮೂಲಾರ್ಥದಲ್ಲಿ ಬುದ್ಧಿ ಎಂಬ ಅರ್ಥವು ಕ್ರಮವಾಗಿ ಬಂದು ಸೇರುತ್ತದೆ. ಈ ಬುದ್ಧಿ ಹುಟ್ಟಿದ್ದು ಸಲಿಲ (ಶರೀರ) ಇದರ ಸಂದರ್ಭದಿಂದ. ಈ ಬುದ್ಧಿಯು, ಹುಟ್ಟುವ ಎಡೆ ಶರೀರದಲ್ಲಿ ತಲೆ. ಈ ತಲೆ ಎಂಬಲ್ಲಿ ಉಭಯಾರ್ಥಗಳು ಇವೆ ಶರೀರದ ಒಂದು ತುದಿ ಶರೀರ=ಲಿಂಗದ ತುದಿ ವೇದದಲ್ಲಿ ಬುದ್ಧಿದೇವಿ ಸರಸ್ವತಿಯಂತೆ ಅಂ-ಭೃಣೆ ಎಂಬ ಇನ್ನೊಬ್ಬ ಕುಮಾರಿ ಇದ್ದಾಳೆ. ಇವಳು ಹೇಳುತ್ತಾಳೆ, ನಾನು ನನ್ನ ತಂದೆಯ ತಲೆಯಿಂದ ಹುಟ್ಟಿರುವೆ! ಅಸ್ಯ ಮೂರ್ಧನ್ ಮಮ ಯೋನಿಃ[3] ಅಂ-ಭೃಣೆ ಎಂಬಲ್ಲಿ ಅಂಭಸ್= ನೀರು ಅರ್ಥವಿದೆ. ಈ ಅಂಭೃಣೆ ಈ ನೀರೇ ಬುದ್ಧಿ ಆಯ್ತು! ತಲೆಗೂ ಲಿಂಗಕ್ಕೂ ಸಂಬಂಧವಿದೆ. ರೇತ-ಲಿಂಗರಸ ಇದೇ ಬುದ್ಧಿ ಆಗುತ್ತದೆ. ಆದ್ದರಿಂದ ರೇತ=ಆಪ=ಬುದ್ಧಿ. ಆಪೋ ವಾ ಅಗ್ರೇ ಮಹತ್ ಸಲಿಲಂ ಆಸೀತ್' ವೇದದಲ್ಲಿ ಮಹಮಹತ್ ಎಂದು ಶ್ಲೇಷಾರ್ಥದಲ್ಲಿ ಬುದ್ಧಿ ಸೂಚಕ ಪದವು ಬಂದಿದೆ.

---

* ಸಲಿಲ ಎಂಬುದಕ್ಕೆ ನೀರು ಎಂದು ಅರ್ಥ. ಈ ಶಬ್ದರೂಪವು ಬಳಕೆಗೆ ಬಂದದ್ದು ಕಾವ್ಯಗಳಿಂದಲೇ. ನೀರು ಮತ್ತು ನಾರೀ ಈ ಶಬ್ದಶಿಲ್ಪಗಳು ಭೌತಿಕವಾದ ಅರ್ಥವನ್ನು ನೀಡುತ್ತವೆ. ಶಂಬಾ ಈ ಅಂಶವನ್ನು ಗ್ರಹಿಸಿ ವ್ಯಾಖ್ಯಾನಿಸುತ್ತಾರೆ. (ಸಂ)

ಛಾಂದೋಗ್ಯದಲ್ಲಿ ಓಜಃ ಇದನ್ನು ಮಹಃ ಎಂದು ಹೇಳಲಾಗಿದೆ.[೬] ಮುಂಡಕ (ಲಿಂಗ) ಉಪನಿಷತ್ತಿನಲ್ಲಿ ಇದಕ್ಕೂ ಸ್ಪಷ್ಟವಾದ ಉಲ್ಲೇಖವಿದೆ: ಜ್ಞಾನ ಪ್ರಸಾದೇನ, ಲಭಿಸುವ ಶಾಂತಿಯ ಆಶಯವೇ, ನ-ಚಿಕೇತ ಅಗ್ನಿ ಉಪಾಸನೆ ಹೇಳುವ ಕಠದಲ್ಲಿ[೭] ಧಾತು ಪ್ರಸಾದಾತ್ ಲಭಿಸುತ್ತದೆ, ಎಂದು ಸೂಚಿಸಲಾಗಿದೆ. ಜ್ಞಾನ ಪ್ರಸಾದೇನ ಇಲ್ಲಿ ತೃತೀಯ-ಕರಣಸಾಧನ ಸೂಚಕ ವಿಭಕ್ತಿ ಇದೆ. ಧಾತು ಪ್ರಸಾದಾತ್ ಎಂಬಲ್ಲಿ ಪಂಚಮೀ-ಅಪಾದಾನ-ಅಗಲುವಿಕೆಯ ಸೂಚಕ ವಿಭಕ್ತಿ ಇರುವುದು ನಿಷ್ಕಾರಣವಲ್ಲ. ಮಹ ಈ ಪದದ ಔಚಿತ್ಯವು, ತೈತ್ತಿರೀಯ ಉಪನಿಷತ್ತಿನ ಪ್ರಯೋಗದಲ್ಲಿ ಉಂಟು. ಇದರ ವಿವರಣವು ಮುಂದೆ ಬರಲಿದೆ.

ಗ್ರೀಕ್ ಪೂರ್ವಪರಂಪರೆಯಲ್ಲಿ

ಅರಿಸ್ಟಾಟಲ್ ಇವನು Nous : Mind (Nous=ಪ್ರಜ್ಞಾಪ್ರಕಾಶ) ಉಪಾಸಕನಿದ್ದನು. ಆದರೆ ಪ್ಲೇಟೋ, ಅರಿಸ್ಟಾಟಲನ ಗುರು ಇವನು Reason ಆರಾಧಿಸುತ್ತಿದ್ದನು. ಭಾರತೀಯ ಪೂರ್ವಪರಂಪರೆಯಂತೆ ಬುದ್ಧಿಯು ಭಗ-ವಂತನ ಹತ್ತಿರಕ್ಕೆ ಒಯ್ಯುತ್ತದೆ. ಗೀತೆಯೇ ಹೇಳುವಂತೆ ಭಗ ವಂತನೇ ಮತ್ತು ಬುದ್ಧಿ ರೂಪನಿದ್ದಾನೆ; ಬುದ್ಧಿಮತಾಂ ಬುದ್ಧಿಃ ಪ್ಲೇಟೋನ ದೇವರು ರಸೆಲ್ಲ ಹೇಳುವಂತೆ Geometer! ಗುಹ್ಯಾರ್ಥದಿಂದ ಲಿಂಗ=ಬುದ್ಧಿ ಎಂಬ ಈ ಸಮೀಕರಣವು ಗೀತೆಯು ಹಾಗೂ ಕಠೋಪನಿಷತಿನ (ನರ) ರಥದ ರೂಪಕದಿಂದ ಹೊರವಡುತ್ತದೆ. ಸೋಜಿಗದ ಸಂಗತಿಯೆನ್ನುವಂತೆ, ಭಾರತೀಯ ದೇವರುಗಳ ರಥಗಳ ಮೇಲೆ ಅಶ್ಲೀಲ ಚಿತ್ರ ಕೆತ್ತಿರುವ ಕಾರಣವೇನು? ಪ್ರಶ್ನೆಗೆ ಉತ್ತರವು ಇಲ್ಲಿ ಇದೆ. ದೇಗುಲಗಳಲ್ಲಿ ಗೋಡೆಗಳ ಮೇಲೆ ಲೈಂಗಿಕ ಕ್ರೀಡೆಯ ಚಿತ್ರಗಳು! ಒಡ್ಡಿ ಜಗನ್ನಾಥನ ದೇವಾಲಯ ನೋಡಿ, ನಾಚಿಕೊಂಡವರು ಇದ್ದಾರೆ. ಸತ್ಯವು=ಅರ್ಥವು ಅಂತಃಸಂಗತಿಯಲ್ಲಿ ಇದೆ.

ಮನು (ವೈವಸ್ವತನ) ಸಮಯವು ಬೇಡವಾದ ಕಾರಣವೇನು? ಭಾಷೆ, ಧರ್ಮ, ಸಂಸ್ಕೃತಿಯು, ಈ ಮನು-ಜನನ್ನು ನಿಸರ್ಗಸ್ಥ ಸ್ಥಳ-ಕಾಲ ಪಾತಳಿಯಿಂದ ಮೇಲಕ್ಕೆ ಎತ್ತಿದ್ದಾಗಿದೆ. ಇದರಿಂದ ಪ್ರಾಣಲಿಂಗ ಪಾತಳಿಗೆ -ಲಿಂಗ (ಹಂ-ಗಂ) ಶಕ್ತಿಗೆ ಅನ್ಯಾಯವಾಗಿದೆ. ಇಂಥ ಮನುವಿನ ಈ ಸೇಡು ತೀರಿಸಿಕೊಳ್ಳಲು ಮೇಧಾ: ಬುದ್ಧಿ ಫಕ್ಕನೆ ತಲೆಯೆತ್ತಿದೆ. ಇದನ್ನು ಸ್ವಯಂ-ಭೂ ಶಕ್ತಿ ಎಂಬುವ ಭಾರತೀಯ ಪಾರಿಭಾಷಿಕ ಪದವು ಸಾರ್ಥವಿದೆ. ಈ ಸ್ವಯಂ-ಭೂ ಶಕ್ತಿಗೆ ಸಮಯ : ನಿಯಮ ಅರ್ಥ ಮಾನ್ಯವಿಲ್ಲ. ಅರ್ಥ ಎಂದರೇನು? ಪರಂಪರೆಯೇ ತಾನೆ? ಚಿತ್ತಕ್ಕೆ ಎನಿಸಿದ್ದೇ ಅರ್ಥ. ಈ ಕಾರಣದಿಂದಾಗಿ ಅವರವರ ಅರ್ಥವು ಅವರವರ ಪಾಲಿನ ಸತ್ಯ, ಆಗಿದೆ : ನರ(ಳ) ಸಂಪ್ರದಾಯ ಪ್ರಬಲವಾಗಿದೆ. ಪ್ರಜ್ಞೋದಯದ ಬಳಿಕ, ಮನು-ಜರು ಈ ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತ) ಇವೆರಡರ ಸಂದರ್ಭದ ಅಸ್ತಿತ್ವವನ್ನು ಲೆಕ್ಕಿಸದವರಾದರು! ಅಂದು ಈ ಹಂತದ ಅಸ್ತಿತ್ವವನ್ನು ಬಯಲು = Void = Vacuum = ಟೊಳ್ಳು= ಅರ್ಥವಿಹೀನ ಎಂದು ತಿರಸ್ಕರಿಸಲಾಗುತ್ತಿತ್ತು!

ಆದರೆ, ಈ ಪರಿಸ್ಥಿತಿ ಜನ್ಯ ಕಾರಣದಿಂದಾಗಿ ಫಕ್ಕನೆ ಕಾಣಿಸಿಕೊಂಡ ಈ ಬುದ್ಧಿಯು, ಪ್ರಜ್ಞೆ ಮತ್ತು ಪ್ರಜ್ಞೆಯ ಅಂಗವಾದ ಮನಸ್ಸನ್ನೇ ತನ್ನ ಹಂತಕ್ಕೆ ತಂದು ನಿಲ್ಲಿಸಲು ಸಮರ್ಥವಾಗಿರುವುದನ್ನು ಇಂದು ಕಾಣಬಹುದಾಗಿದೆ. ಇರುಳು ಕಂಡ ಕೂಪದಲ್ಲಿ ಹಗಲು ಬೀಳುವುದೆ ಎಂದು ಗೇಲಿ ಮಾಡುತ್ತಿದ್ದ ತ್ರಿತಆಪ್ತ್ಯನೇ ಈಗ ಈ ಕೂಪದಲ್ಲಿ ಸಿಕ್ಕಿ ಕೊಂಡಿದ್ದಾನೆ; ನಳನಾಗಿದ್ದಾನೆ! ಇದೆಲ್ಲ ಹಾಗೆ ಇರಲಿ, ಪ್ರಸ್ತುತ ಪ್ರಶ್ನೆ : ಗ್ರೀಕ್ ಪೂರ್ವ ಪರಂಪರೆಯಲ್ಲಿಯೂ, ಪ್ರಜ್ಞಾಯುಕ್ತ ಮನಸ್ಸಿನ ವಿಚಾರಕ್ಕೆ ಅರಿಸ್ಟಾಟಲನಿಗಿಂತ ಮುಂಚಿನಿಂದಲೂ ಪ್ರಾಶಸ್ತ್ಯವು ಇತ್ತೆ? ಪ್ರಾಶಸ್ತ್ಯವು ಇದ್ದಲ್ಲಿ, ಪ್ರಜ್ಞಾಯುಕ್ತ ಮನಸ್ಸು ಬೆಲೆಗೆ ಎರವಾದ ಕಾರಣಗಳೇನು? ಅರಿಸ್ಟಾಟಲ್-ಪ್ಲೇಟೊರಿಗೂ ಮುಂಚಿನ ಅನ್ಯಾಕ್ಸಾಗೊರಾಸನಿಗೆ ಸಹ, ಪ್ರಜ್ಞಾಯುಕ್ತ ಮನಸ್ಸಿನ = Nous = mind ಇದರ ಮಹತ್ವವು ಚೆನ್ನಾಗಿ ಗೊತ್ತಿತ್ತು. Nous : Mind ಇದರ ಬಗೆಗಿನ ಅನ್ಯಾಕ್ಸಾಗೊರಾಸ (Anaxagoras, ಕ್ರಿ. ಪೂ. ೫೦೦-೪೨೮) ಈತನ ವಿಚಾರಗಳ ಪರಿಚಯವಾದರೆ ಇವನಿಗೂ ಮೊದಲು ಇದ್ದ Nous : Mind ವಿಚಾರವು, ವಿಕೃತವಾಗುತ್ತ ಬಂದುದು, ಎಂದಿನಿಂದ, ಈ ಪ್ರಶ್ನೆಯ ಉತ್ತರವು ದೊರೆತಲ್ಲದೆ, ಅನ್ಯಾಕ್ಸಾಗೊರಾಸ ಹಾಗೂ ಅರಿಸ್ಟೊಟ್ಲರ ನಿಜವಾದ ಮಹತ್ವವು ಗೊತ್ತಾಗಲಾರದು. ಐತಿಹಾಸಿಕ ಕ್ರಮದಲ್ಲಿ ಸಮೀಕ್ಷಿಸಿದರೆ, ಹೋಮರನ

ಕಾಲದಲ್ಲಿಯೇ Nous : Mind ದ ಪರ್ಯಾಯವಾದ ಝೀಉಸನು, ಪ್ರಾಣಲಿಂಗ ಶಕ್ತಿಯಾಗಿ ಮಾರ್ಪಟ್ಟಿದ್ದನ್ನು ಕಾಣಬಹುದಾಗಿದೆ!

ಭಾರತೀಯ ವೇದವು, ಕ್ರಿ. ಪೂ ೧೪೦೦-೧೨೦೦ ಸುಮಾರಿನದು, ಎಂದು ಪಾಶ್ಚಾತ್ಯ ಪಂಡಿತರು ಗೊತ್ತುಪಡಿಸಿದ್ದಾರೆ. ಮತ್ತು ಗ್ರೀಕ್ ಮಹಾಕವಿ ಹೋಮರನು ಕ್ರಿ. ಪೂ. ೮೫೦ ಕ್ಕೆ ಮಿಕ್ಕಿ ಇರಲಾರನು, ಎಂದೂ ಹೇಳಲಾಗುತ್ತದೆ. ಹೀಗೆ ಕಾಲದ ಉಲ್ಲೇಖ ಮಾಡಲು ಕಾರಣವಿದೆ. ವೇದದೊಳಗಿನ ನೀರೆ: ಅಂಭೃಣೀಕುಮಾರಿ, ಮತ್ತು ಹೋಮರನ ಅಥೆನಾ ಇವರಿಬ್ಬರ ಆಕೃತಿಯಲ್ಲಿ ತುಂಬಾ ಸಾಮ್ಯವಿದೆ. ಇವರಿಬ್ಬರೂ ದೇವಿಯರು ಕಾಲೀದುರ್ಗಾ ಪರ್ಯಾಯ ಎನ್ನಬಹುದು. ಅಕ್ಷ (ಪರ್ಣ) ಮಾಲಾಧಾರಿಣಿ ಮತ್ತು ಯುದ್ಧಪ್ರೇರಕ ಶಕ್ತಿ. ಅಂಭೃಣೀ ಮತ್ತು ಅಥೆನಾ ಸಾಹಿತ್ಯ, ಕಲೆಯ, ಹಾಗೂ ಯುದ್ಧದೇವಿಯರು ಎಂಬ ಗ್ರಹಿಕೆ ಇದೆ. ಇವರಿಬ್ಬರೂ ತಂದೆಯ ತಲೆಯಿಂದ ಹುಟ್ಟಿದ್ದಾರೆ! ಈ ಸಾಮ್ಯದಿಂದಾಗಿ ಭಾರತದ ಪ್ರಾಚೀನ ಶಾಕ್ತ ಸಂಪ್ರದಾಯದಿಂದ ಗ್ರೀಕರು ಕೆಲವು ಆಚಾರ ವಿಚಾರ ಎತ್ತಿಕೊಂಡರು, ಎಂದು ಬಗೆಯಲಾಗುತ್ತದೆ. G.R. Mead ಎಂಬಾತನು ಬರೆದಿರುವ Orpheus ಗ್ರಂಥದಲ್ಲಿ, ಈ ಸಾಮ್ಯ ವಿವರಿಸಿದ್ದಾನೆ. ಆದರೆ, ಈ ಸಂಪ್ರದಾಯವು ಇಜಿಪ್ಟಿನ ಪ್ರಭಾವದಲ್ಲಿ ಮೈವೆತ್ತಿದೆ. ಭಾರತೀಯರ ಸಂಬಂಧವೇ ಇಲ್ಲ; ಹೆಚ್ಚಾದರೆ ಇರಾಣಿನ ಸಂಪರ್ಕವು ಕೆಲವರಿಗೆ ಇರಬಹುದು, ಎಂಬ ಮತದವರೂ ಇದ್ದಾರೆ. ಆದರೆ, ಇತ್ತೀಚಿನ ದೃಷ್ಟಿಕೋನದ ಮೇರೆಗೆ ಜೀವನವಿಶ್ವಸ್ಥ ಪ್ರೇರಣಾಕೇಂದ್ರದ ಪ್ರಭಾವ ಎಂಬ ವಿಶ್ವನಿಯಮದ ಭೂಮಿಕೆಯಿಂದ ವಿಚಾರಿಸಿದರೆ, ಯಾರು ಯಾರಿಂದ ಸ್ವೀಕರಿಸಿದರು, ಎಂಬ ವಿಚಾರವು ಗೌಣವಾಗುವುತ್ತದೆ. ಆಂತರಿಕ ಆಕರ್ಷಣವೇ ಇಲ್ಲದಿದ್ದರೆ, ಹೆರವರಿಂದ ಸ್ವೀಕರಿಸುವ ಮಾತು ಎಲ್ಲಿ ಬಂತು.?

ಈ ಪಾತಳಿಗಳ ಕೇಂದ್ರದ ಭೂಮಿಕೆಯಿಂದ ವಿಚಾರಿಸುವಾಗ ಸಾಂಸ್ಕೃತಿಕ ತೊಡಕನ್ನು ಗ್ರಹಿಸಿಕೊಳ್ಳುವುದು ಸುಲಭವಾಗುತ್ತದೆ. ಮನು-ಜನ ಪ್ರಾದುರ್ಭಾವದೊಡನೆ ಮಾನವ ಧರ್ಮ: ಸಂಸ್ಕೃತಿಯು ಮೈದೋರುತ್ತದೆ. ಈ ಪ್ರಚೋದನೆಯ ಕೇಂದ್ರವು ಯಾವುದು? ಭೌತ ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗಚೇತಸ) ಈ ವಿಭಾಗ ದ್ವಯದ ಆಚೆಗಿನ ಆಕಾಶತತ್ತ್ವದ ಪ್ರಕಾಶ ಪಾತಳಿಯ ಮೇಲಿನಿಂದ, ಈ ಪ್ರಜ್ಞಾಯುಕ್ತ ಮನಸ್ಸಿಗೆ ಪ್ರೇರಣೆಯು ಲಭಿಸುತ್ತದೆ.

ಭಾರತೀಯ ವಿವಸ್ವನ್ ಹಾಗೂ ಸವಿತೃ, ಗ್ರೀಕರ ಝೀಉಸ್ ರೊಮನ್‌ರ ಜ್ಯುಪಿಟರ್, ಅವೆಸ್ತದ ಅಹುರ (ಮಝುದ) ಇವು ಮಾನವಧರ್ಮ ಸಂಸ್ಕೃತಿಯ ಪ್ರೇರಣಾ ಕೇಂದ್ರಗಳು. ಆದರೆ, ಮನುಜತ್ವವು ಲಭಿಸಿದ ಬಳಿಕ ಕೆಲ ಅವಧಿಯ ತರುವಾಯ, ಈ ಮನು-ಜನಿಗೆ ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗಚೇತಸ) ಈ ವಿಭಾಗ ದ್ವಯದ ಬಗೆಗಿನ ಆಸಕ್ತಿ, ಆಕರ್ಷಣವು ಹೆಚ್ಚಿದಂತೆ, ಇವನು ತನ್ನ ಸ್ಥಲ-ಕಾಲದ ಆಚೆಗಿನ ಪಾತಳಿಯೊಡನೆ ಇರುವ-ಇದ್ದ ಸಂಪರ್ಕವನ್ನು ಕಡೆಗಣಿಸತೊಡಗುತ್ತಾನೆ; ಮರೆತೂ ಬಿಡುತ್ತಾನೆ! ಆದರೆ, ಅನ್ಯಾಕ್ಸಾಗೊರಾಸನಂತಹರಿಗೆ ಅಲ್ಪಸ್ವಲ್ಪ ಪೂರ್ವ ಪರಂಪರೆಯ ನೆನಪು ಉಳಿಯುತ್ತದೆ. Nous : Mind ಇದಕ್ಕೇ, ಪ್ರಾಶಸ್ತ್ಯವಿದ್ದ ಯುಗ, ಮತ್ತು Reason : Intelligence ಇದಕ್ಕೆ ಪ್ರಾಶಸ್ತ್ಯವು ಪ್ರಾಪ್ತವಾಗಿರುವ ಯುಗ, ಇವೆರಡರ ನಡುವಣ ಅವಧಿಯಲ್ಲಿ ಕೆಲವೊಂದು ದೈವತಗಳು ಮೈವೆತ್ತಿದ್ದೂ ಆಯ್ತು. ಭಾರತೀಯ ಪೂರ್ವಪರಂಪರೆಯಲ್ಲಿ, ಇವುಗಳನ್ನು ಗುರುತಿಸಿ, ಈ ಮೊದಲೊಮ್ಮೆ ಹೇಳಿದ್ದಾಗಿದೆ. ಗ್ರೀಕ್, ರೋಮನ್ ಪೂರ್ವಪರಂಪರೆಯಲ್ಲಿಯೂ ಆದಿದೈವತ ಝೀಉಸ್, ಜ್ಯುಪಿಟರ್ ಇವು ಲೈಂಗಿಕ ಪಾತಳಿಯ ಮೇಲೆ ಬರುತ್ತವೆ. ಈ ಅವಧಿಯಲ್ಲಿ ಟಿಟಾನ್ ಹೆಸರಿನಲ್ಲಿ ಒಳಗೊಳ್ಳುವ ಕ್ರೋನಸ್ (ಕಾಕ), ಸೈಕ್ಲೊಪಸ್ (ಏಕಅಕ್ಷ) ಇತ್ಯಾದಿ ದೈವತಗಳು ಆಗಿ ಅದೃಶ್ಯವಾದುವು. ಭಾರತೀಯ ಪರಂಪರೆಯಲ್ಲಿ ಆದಿಶೇಷ: ನಾಗ, ಇವನು ದೇವರಾಗುವ ಮುಂಚೆ ಭೌಮಾಸುರ ನಾರ-ಕ ಎನಿಸಿದ್ದನು! ಇಂದಿನ ಕ್ರೈಸ್ತಪಂಥೀಯ ಕ್ರಾಸ್ ಇದು, ಟಿಟಾನ್ Breyen Serpent ಇದರ ಪರ್ಯಾಯ!

ಗ್ರೀಕ್ ಪರಂಪರೆಯಲ್ಲಿ ಹಾಗೂ ಭಾರತೀಯ ಸಂಪ್ರದಾಯದಲ್ಲಿ ನಾಗ-ಲಿಂಗ ಶಕ್ತಿಯ ಬಗೆಗಿನ ತಿರಸ್ಕಾರ ತುಚ್ಛಭಾವನೆಯನ್ನು ಇಲ್ಲವಾಗಿಸಿ ಅಥವಾ ಮರೆಯಿಸಿ ಬಿಟ್ಟು, ಇದನ್ನೇ ಪೂಜಾಸ್ಥಾನವನ್ನಾಗಿಸಿರುವ ಶ್ರೇಯಸ್ಸು, ಬುದ್ಧಿಗೆ Reason : Intelligence ಇದಕ್ಕೇ ಸಲ್ಲುತ್ತದೆ. ಗ್ರೀಕ್ ಪರಂಪರೆಯಲ್ಲಿ ಈ ಸ್ಥಿತ್ಯಂತರಕ್ಕೆ ಕಾರಣರಾದವರಲ್ಲಿ ಒರ್‌ಫ್ಯೂಸ್ ಇವನಿಗೆ ಅಗ್ರಪಟ್ಟವಿದೆ. ಆದರೆ, ನಿಜವಾಗಿ ಈ ದಿವ್ಯಾಧ್ಯಾತ್ಮವನ್ನು ಶಾಸ್ತ್ರೀಯ ಮಟ್ಟದಲ್ಲಿ ರೂಪಿಸಿ ರೂಢಿಸಿದ ಶ್ರೇಯಸ್ಸು ಪೈಥಾಗೊಸನದು, ಇವನ ಪಂಥೀಯರದು. ಒರ್‌ಫ್ಯೂರಿಸನ ಜನನ ಮತ್ತು ವಸಿಷ್ಠ-ವ್ಯಾಸರ ಜನನದಲ್ಲಿ ಸಾಮ್ಯವಿದೆ. ಇದು, ವೇದದ ಪರಿಭಾಷೆಯಲ್ಲಿ ರಹಸೂಃ ಗಳ ಪರಂಪರೆ. ವಸಿಷ್ಠನು ಸೌರನೆಂಬ, ಆದರೂ ಆದಿತ್ಯನಾಗಿ ಮಾರ್ಪಟ್ಟ ವರುಣ ದೇವನಿಗೆ, ಒಬ್ಬ ಅಪ್‌ಸರೆಯಲ್ಲಿ ಹುಟ್ಟಿದನಂತೆ. ವ್ಯಾಸನು, ಪರಾಶರನಿಂದ, ಒಬ್ಬ ನೀರ-ಯುವತಿಯಲ್ಲಿ ಹುಟ್ಟಿದನೆಂದು ಕಥೆಯಿದೆ. ಇದೇ ಮೇರೆಗೆ ಒರ್‌ಫ್ಯೂರಿಸನು ಅಪೊಲ್ಲೋದೇವನಿಂದ ಒಬ್ಬ ಆಪ್‌ಸರೆಯಲ್ಲಿ ಹುಟ್ಟಿದನಂತೆ.

ಒರ್‌ಫ್ಯೂರಿಸನಿಗೆ ಆತನ ದೇವನಿಂದ (ಹೆರ್‌ಮ್ಸನಿಂದ=ಬುದ್ಧಿದೇವನಿಂದ ಎಂದೂ ಹೇಳಲಾಗುತ್ತದೆ) ಒಂದು ವಾದ್ಯವು (Lyre) ದೊರೆಕಿತಂತೆ. ಈ ವಾದ್ಯ ನುಡಿಸುವುದರೊಳಗಿನ ನೈಪುಣ್ಯದ ವರ್ಣನೆ, ಕೃಷ್ಣನ ಕೊಳಲ ನಾದದ ವರ್ಣನೆಯನ್ನು ಹೋಲುತ್ತದೆ. ನನಗೆ ತಿಳಿದ ಮಟ್ಟಿಗೆ, ಇಲ್ಲಿ ಅನಾಹತನಾದದ = ನಾ ಪ್ರಣವದ ಸಿದ್ಧಿಯ ವರ್ಣನೆಯು ಒಳಗೊಂಡಿದೆ. ಪ್ರಜ್ಞೆಯನ್ನು ಬಧಿರಗೊಳಿಸಲು ಈ ನಾದಕ್ಕಿಂತ ಅಮೋಘ ಸಾಧನವು ಬೇರೊಂದಿಲ್ಲ. ಕಂನಾಡ ಪರಂಪರೆಯೊಳಗಿನ ನಾಗ (ಲಿಂಗ) ಸ್ವರ ಈ ಪಾರಿಭಾಷಿಕ ಪದವು ಅಮೌಲಿಕವಿದೆ.

ಹೋಮರನ ಕಾಲದಲ್ಲಿ ತಂದೆಯ ತಲೆಯಿಂದ ಹುಟ್ಟಿದಳೆಂಬ ಅಥೆನಾ ಬುದ್ಧಿದೇವಿ. ಗ್ರೀಕ್ ಹಾಗೂ ಭಾರತೀಯ ಪುರಾತನರು ತಲೆ ಇದು ಬುದ್ಧಿಯ ಉದ್ಗಮಕೇಂದ್ರ ಎಂದು ಬಗೆದದ್ದು ಸೋಜಿಗದ್ದಾಗಿದೆ. ಮೆದುಳು-ಬುದ್ಧಿ ಈ ಶೋಧವು ಅರ್ವಾಚೀನ ಭೌತಶಾಸ್ತ್ರಜ್ಞರದು ಎಂದು ಬಗೆಯಲಾಗುತ್ತದೆ. ವೈಚಾರಿಕ ಆಕೃತಿಗಳು ಸನಾತನವಾಗಿವೆ! ಹೋಮರನ ಕಾಲದಿಂದ (ಕ್ರಿ. ಪೂ. ೯೦೦-೮೦೦) ಅನ್ಯಾಕ್ಸಾಗೊರಾಸನ (ಕ್ರಿ. ಪೂ. ೫೦೦-೪೨೮) ಕಾಲದ ವರೆಗಿನ ಈ ಅವಧಿಯಲ್ಲಿ Reason ಬುದ್ಧಿಯ ಪ್ರಭಾವದಲ್ಲಿ Nous = mind = ಪ್ರಜ್ಞಾ ಶಕ್ತಿಯು ದುರ್ಬಲವಾಗುತ್ತ, ಬೆಲೆಗೇಡಾಗುತ್ತ ಬಂದಿತ್ತು. ಆದರು, ಎಂತೋ ಅನ್ಯಾಕ್ಸಾಗೊರಾಸನು, ತಾನು ಅರಿತಿದ್ದ ಆ ಪರಂಪರೆಯ ವಿಚಾರವನ್ನು, ಅಂತೂ, ನಮೂದಿಸಿ ಇಟ್ಟಿದ್ದಾನೆ. ಈ ಅಂಶವು, ಭಾರತೀಯ ವೈವಸ್ವತ ಮನು ಸಂಪ್ರದಾಯವನ್ನು ಗ್ರಹಿಸಿಕೊಳ್ಳುವ ದೃಷ್ಟಿಯಿಂದ ಮನನೀಯವಿದೆ.

ಗ್ರೀಕರ ಪೂರ್ವಪರಂಪರೆಯಲ್ಲಿ ಅತ್ಯಂತ ಸೋಜಿಗದ ಸಂಗತಿಯು, ನನಗೆ ಎನಿಸಿದ್ದು : Nous-mind (ಪ್ರಜ್ಞಾಯುಕ್ತ ಮನಸ್ಸು : ವೈವಸ್ವತ ಮನು) ಇದರ ನೆನಹು, ಎಂತೋ ಈ ಅನ್ಯಾಕ್ಸಾಗೊರಾಸನಿಗೆ ಉಳಿದದ್ದು ಆಶ್ಚರ್ಯದ ಸಂಗತಿಯೇ ಸರಿ. ಈತನಿಗೆ Nous : mind ಈ ತತ್ತ್ವದ ವಿಚಾರವನ್ನು ಎತ್ತಿಹೇಳುವ ಆವಶ್ಯಕತೆಯೇ ಉಂಟಾಯ್ತು! ಈ ಅನ್ಯಾಕ್ಸಾಗೊರಾಸನಿಗೂ ಮುಂಚಿನ, ಒಬ್ಬ ಅವತಾರೀ ಪುರುಷನೆಂಬ ಖ್ಯಾತಿಯ ಎಂಪೆಡೊಕ್ಲಸನು (ಕ್ರಿ. ಪೂ. ೪೯೫-೪೩೫) Nous: mind ಇದರ ಅಗ್ರಪಟ್ಟವನ್ನು ತಪ್ಪಿಸಿದ್ದಕ್ಕೆ ಈತನಿಗೆ ಆ ತಪ್ಪನ್ನು ತಿದ್ದುವುದು ಕರ್ತವ್ಯವೆನಿಸಿತು! ಈತನಿಗೂ Reason, Rationalism ಇದರ ಬಗೆಗಿನ ಆಕರ್ಷಣವು ಕಡಿಮೆ ಇಲ್ಲ. ಆದರೂ ಬುದ್ಧಿ (Reason) ಮತ್ತು ಪ್ರಜ್ಞೆ (Nous) : ಇವೆರಡರಲ್ಲಿ ಪ್ರಜ್ಞಾಯುಕ್ತ ಮನಸ್ಸಿಗೇ ಆದ್ಯಸ್ಥಾನವು ಉಂಟು, ಎಂಬ ಬಗೆಗೆ ಇವನಿಗೆ ಸಂದೇಹವೆ ಎನಿಸಲಿಲ್ಲ. ಆದರೂ ಈತನು Reason ಮತ್ತು Nous ಇವೆರಡರಲ್ಲಿ ಇರುವ ಮೂಲಭೂತ ಭೇದವನ್ನು ಗ್ರಹಿಸಿಕೊಳ್ಳಲು ಸಮರ್ಥನಾಗಲಿಲ್ಲ. ಈ ಅಂತರವನ್ನು ಅಂತೂ, ಎಂತೋ ಅರಿಸ್ಟಾಟಲನೇ ಸ್ಪಷ್ಟ ಪಡಿಸಿದ್ದಾರೆ. ಈ ಕಾರಣದಿಂದಲೇ, Nous = mind ಇದನ್ನು ಅರಿತ ಅನ್ಯಾಕ್ಸಾಗೊರಾಸ, ಇದರ ಬಗೆಗೆ ಇನ್ನೂ ಹೇಳಬೇಕಾಗಿತ್ತು. ಅದನ್ನು ಬಿಟ್ಟು ಬಿಟ್ಟನಲ್ಲ, ಎಂದು ಸೊಕ್ರೆಟಿಸ ಹಾಗೂ ಅರಿಸ್ಟೊಟ್ಲ ವಿಷಾದವನ್ನು ವ್ಯಕ್ತಪಡಿಸದೆ ಇಲ್ಲ.'

ಅವತಾರಿ ಎಂಬ ಹಾಗೂ ಪವಾಡ ಜರುಗಿಸುತ್ತಿದ್ದನ್ನು ಕಂಡ, ಇವನನನ್ನು ಮೆಚ್ಚಿಕೊಂಡ ಗೋರ್ಜಿಯಾಸನಿಗೆ, ಅಂದು ಗುರುವು ಎನಿಸಿದ್ದ ಎಂಪೆಡೊಕ್ಲಸನು, Nous =Mind ಇದಕ್ಕೆ ಅಗ್ರಸ್ಥಾನವನ್ನೀಯದಿರುವುದು ಅವನ ತತ್ವಜ್ಞಾನಕ್ಕೆ ಸುಸಂಗತವೇ ಇದೆ. ಈತನು ಗ್ರೀಕ ಪುರಾತನ ಪರಂಪರೆಯ ನಾದ-ಯೋಗಿ, ಸಿದ್ಧ ಪುರುಷನೆಂಬ ಪೈಥಾಗೊರಾಸನನ್ನು ಹೋಲುತ್ತಾನೆ ಕೆಲವಟ್ಟಿಗೆ. ಏಕೆಂದರೆ, ಎಂಪೆಡೊಕ್ಲಸ ಅಧ್ಯಾತ್ಮವಾದಿ ಇದ್ದು ರಸಾಯನ ಶಾಸ್ತ್ರವನ್ನು ರೂಪಿಸಿರುವ ಆದರಲ್ಲಿ ಇವನಿಗೆ ಮನ್ನಣೆಯ ಸ್ಥಾನವಿದೆ. ಈ ಎಂಪೊಡೊಕ್ಲಸನು, ಜಗತ್ತಿನ ಆದಿಕಾರಣವು ಯಾವುದು (ಯಾವ ಮೂಲ ತತ್ತ್ವದಿಂದಾಗಿ, ಈ ಪ್ರಪಂಚಕ್ಕೆ ಗತಿ-ಚಾಲನೆ ದೊರೆತಿದೆಯೊ ಅದು) ಪ್ರೇಮ (Love) ಮತ್ತು ದ್ವೇಷ (Hate) ಇದುವೆ ಆಗಿದೆ, ಎಂದು ಪ್ರತಿಪಾದಿಸಿದ್ದಾನೆ! ಆದರೆ ಈ ಪ್ರೇಮ ತತ್ವಜ್ಞಾನವು ಬುದ್ಧಿ (Reason) ಹುಟ್ಟಿದ ಎಡೆಯಲ್ಲಿಯೇ ಚಿಗಿತುಕೊಂಡಿದೆ. ಇದಕ್ಕೆ ಕ್ರೈಸ್ತಪಂಥದ, ಭಾರತೀಯ ಚೈತ್ಯ ಪಂಥದ, ಕೃಷ್ಣ-ಪ್ರೇಮಿ ತತ್ತ್ವಜ್ಞಾನ ಇವೇ ಸಾಕ್ಷಿ. ಈ ಸಂಪ್ರದಾಯಗಳು ಸತಿ-ಪತೀಭಾವದ ಲಿಂಗಾಂಗಯೋಗದ ಭೂಮಿಕೆಯಲ್ಲಿಯೇ ಅಂಕುರಿಸಿವೆ. ಈ ಕಾರಣದಿಂದಲೇ ಆ ಯುಗದ ಅನುಭಾವಿ (Mystic) ಅಲ್ಲ, ಎಂಬ ಅನ್ಯಾಕ್ಸಾಗೊರಸನಿಗೆ, ಸಿದ್ಧ ಎಂಪೊಡೊಕ್ಲಸನ ವಿಚಾರ ಹಿಡಿಸಲಿಲ್ಲ. ಪ್ರೇಮ ಇದಕ್ಕೆ ಪ್ರತಿಯಾಗಿ ದ್ವೇಷ ಈ ಬಗೆಯ ಕ್ರಿಯೆ-ಪ್ರತಿಕ್ರಿಯೆಯ ತತ್ತ್ವವೇ ಜಗದಾದಿ ತತ್ತ್ವವಿರೋದು ಅಶಕ್ಯ ಎಂದು ಅನಿಸಿತು. ಆದರೆ, ಸೋಜಿಗದ ಸಂಗತಿಯೆಂದರೆ ತಾನು ಕ್ರೈಸ್ತಪಂಥೀಯನಲ್ಲ! ದೇವರಲ್ಲಿ ನಂಬಿಗೆ ಇಲ್ಲ ; ಎಂಬ ಆತ್ಯಂತಿಕ ಬುದ್ಧಿವಾದೀ Reason ಉಪಾಸಕ ಬರ್ಟರಾಂಡ ರಸೆಲ್ಲ, ಕೊನೆಗೆ Love ಇದೊಂದೇ ಶ್ರೇಷ್ಠ ತತ್ತ್ವ ಎಂಬ ವಿಚಾರಕ್ಕೆ ತಲುಪಿದ್ದಾರೆ! Reason, Love ಇವು ಕಾಣಲು ಬೇರೆ ಎನಿಸಿದರೂ ಇವುಗಳ ಮೂಲ ಲಿಂಗಾಂಗ ಯೋಗದಲ್ಲಿಯೇ ಉಂಟು. ಇದಕ್ಕೆ ರಸೆಲ್ಲನ ಇಡೀ ಚರಿತ್ರವೇ ಸಾಕ್ಷಿ.

ಈ ಪ್ರಪಂಚದ ಗತಿಗೆ ಕಾರಣವಿರುವ ಆದಿಕಾರಣತತ್ತ್ವವು ಸರ್ವ ಸಮರ್ಥವಿರಲಿಕ್ಕೇ ಬೇಕು, ಎಂಬ ಒರೆಗಲ್ಲು ಅನ್ಯಾಕ್ಸಾಗೊರಾಸನದು: ಈತನ ದೃಷ್ಟಿಕೋನವು ಇದು:

> He thought it could only be the work of a being whose knowledge and power stand over everything, the work of a thinking rational almighty being of Mind or Nous.
>
> The power of reason can only be possessed by Nous when it is mixed with nothing else and impeded by nothing else

ಪ್ರಾಣಲಿಂಗ ಚೇತಸವು ಎಲ್ಲ ಪ್ರಾಣಿವರ್ಗಗಳಲ್ಲಿ ಉಂಟು. ಆದರೆ, ಈ ಮನುಜನಲ್ಲಿ ಮಾತ್ರ, ಪ್ರಾಣಲಿಂಗ ಚೇತಸವು ಅಲ್ಲದೆ ಪ್ರಜ್ಞಾಯುಕ್ತ ಮನಸ್ ತತ್ತ್ವವೂ ಇದೆ. ಅನ್ಯಾಕ್ಸಾಗೊರಾಸನು ಹೇಳುತ್ತಾನೆ. Conception of Mind distinct from matter ಈ ಮನಸ್ ತತ್ತ್ವನನ್ನು ಅಭೌತ ಎಂದು ಒಪ್ಪಿದ ಬಳಿಕ ನಿಜವಾಗಿ ಇದು ದೇಹದ ಸಾಹಚರ್ಯದಲ್ಲಿ ಇದ್ದರೂ, ಪ್ರಜ್ಞಾಯುಕ್ತ ಈ ಮನಸ್ಸು ದೇಹದ ಅಂಗವಲ್ಲ.

ಭಾರತೀಯ ಹಾಗೂ ಗ್ರೀಕ್ ಪುರಾತನರು, ತಲೆ ಇದು Reason= ಬುದ್ಧಿಯ ಪ್ರಚೋದನಾಕೇಂದ್ರ ಎಂದು ಕಂಡುಕೊಂಡಿದ್ದರು ಮತ್ತು ಈ ಬುದ್ಧಿ Reason ಇದಕ್ಕೆ ಅಂಗನಾಂ ರಸ ರೇತದ ಪೋಷಣ ವಾಗಿರುವುದರಿಂದ, ಬುದ್ಧಿ ಭೌತಪಾತಳಿಯ ಶಕ್ತಿಯೇ ಆಗುತ್ತದೆ. ಆದರೆ, ಅನ್ಯಾಕ್ಸಾಗೊರಾಸನ ಜೀವನವಿಶ್ವನು (Cosmos) ಇದು, ಮಾನವ ದೇಹದ ಆಕೃತಿಯದೇ ಇದ್ದಲ್ಲಿ, ಈ ಮಾನವನು, ತಟಸ್ಥನಾಗಿ (ಪ್ರಜ್ಞಾಯುಕ್ತ ಮನಸ್ಸಿನ ಪಾತಳಿಯ ಮೇಲಿಂದ) ಈ ವಿಶ್ವವನ್ನು ಗ್ರಹಿಸಿಕೊಳ್ಳುವ ಪ್ರಯತ್ನ ಪಡುವುದೇ ಅಶಕ್ಯವಿತ್ತು. ಈ ಮಾನವನ ಅಭಿವ್ಯಕ್ತಿ ಮಾಧ್ಯಮವು ಒಳಗೊಳ್ಳುವ ಅರ್ಥ : ವಿಚಾರರೂಪ ಈ ಪ್ರಕಾಶತತ್ತ್ವವು ಭೌತ ವಿಶ್ವದ ಅಂಗವಲ್ಲ. ಭಾಷೆಯ ಪದಗಳ ಶಬ್ದದೇಹವು ಭೌತಪಾತಳಿಯ ಪ್ರತಿಬಿಂಬವಿದೆ. ಆದರೆ, ಆಂತರಿಕ ಅರ್ಥ: ವಿಚಾರದ ಪಾತಳಿಯು ಭೌತದ ಸ್ಥಳ-ಕಾಲದ ಆಚೆಗೆ ಇದೆ.

ಆದರೆ, ಅನಾಕ್ಸಾಗೊರಾಸನ ಇತಿಮಿತಿಯು ಈ ಮುಂದಣ ವಾಕ್ಯದಲ್ಲಿ ಕಾಣಲು ದೊರೆಯುತ್ತದೆ.

> Mind is absolutely simple and matter is completely composite. The former is mixed with nothing ; exists for itself alone; finest purest of all things; it possesses complete knowledge of things and the greatest strength.[೮]

ಹೀಗೆ Nous : mind ಇದರ ಹಿರಿಮೆ ಹೇಳುವ ಈ ತತ್ತ್ವಜ್ಞನ, ಈ ತತ್ತ್ವವು ಭೌತವಿಶ್ವದ ಅಂಗವಾಗಿದೆ. Nous as moving & controlling force closely bound up with the whole cosmos[೯] ಎನ್ನುತ್ತಾನೆ. ಈ ಅನ್ಯಾಕ್ಸಾಗೊರಸನಿಗೆ ಪ್ರಜ್ಞೆ: ಮನಸ್ಸು ಇದು ಶ್ರೇಷ್ಠ, ಮಿಗಿಲಾದ ಶಕ್ತಿಯುಳ್ಳದ್ದು ಎಂಬುದು ಒಪ್ಪಿಗೆ ಇದ್ದರೂ ಪ್ರಜ್ಞೆ (ಮನಸ್ಸು) ಬುದ್ಧಿ, (ಮನಸ್ಸು)ಇವೆರಡರೊಳಗಿನ ಮೂಲಭೂತ ತಾರತಮ್ಯವನ್ನು ಇವನು ಲೆಕ್ಕಿಸಿಲ್ಲ!

ಪ್ರಜ್ಞೆ (ಮನಸ್ಸು) ಮತ್ತು ಬುದ್ಧಿ

ಭಾರತೀಯ ಪರಂಪರೆಯಲ್ಲಿ ಪ್ರಜ್ಞೆಯನ್ನು ಸಂಪೂರ್ಣ ಮರೆಯಿಸಿ ಬಿಡಲಾಗಿದೆ! ಪ್ರಜ್ಞೆಯನ್ನು ಸ್ಥಿತ-ಸ್ಥಗಿತಗೊಳಿಸಿ ಪ್ರಾಣೋಪಾಸನೆಯ ಸಾಧನೆಯಿಂದ ಸಿದ್ಧಿಗಳು ದೊರೆಯುತ್ತವೆ, ಎಂಬ ಆಮಿಷವನ್ನು ಈ ದಿವ್ಯಾಧ್ಯಾತ್ಮಗಳು ಒಡ್ಡಿವೆ. ಮನಸ್ಸಿಗಿಂತ ಬುದ್ಧಿಯು ಶ್ರೇಷ್ಠ ಎಂಬ ಗೀತೆಯು ಪ್ರಜ್ಞೆಯ ಅಂಗವಾದ ಮನಸ್ಸನ್ನು ಅದರ ಉನ್ನತಸ್ಥಾನದಿಂದ ಕೆಳಕ್ಕೆ ತಳ್ಳಿದೆ. ಬುದ್ಧಿಯ ಅಂಗವಾದ ಮನಸ್ಸನ್ನು ಮಾತ್ರ ಇಂದು ಜನವು ಅರಿತಿದೆ! ಇಂದು ಬುದ್ಧಿಗೆ (Reason) ಇದಕ್ಕೆ ಅಗ್ರಪಟ್ಟವು ದೊರೆತಿದೆ. ಹೀಗೆ ಪರಿಭಾಷೆಯಲ್ಲಿ ಬದಲಾವಣೆಯು ಆಗುವಾಗ, ಆ ಭಾಷಿಕರಲ್ಲಿ ವೈಚಾರಿಕ ಕ್ರಾಂತಿಯು, ಸಾಮಾಜಿಕ ಸ್ಥಿತ್ಯಂತರಗಳು ಆಗಿರಲೇಬೇಕು. ಬುದ್ಧಿಯು, ಪ್ರಜ್ಞೆಯ ಸ್ಥಾನವನ್ನು ಆಕ್ರಮಿಸಿದೆ ಎಂಬ ಈ ಪ್ರಜ್ಞೆಯು ಇಂದು ತೀರ ನಷ್ಟವಾಗಿದೆ. ಭಾರತದಲ್ಲಿ ಮಾತ್ರವಲ್ಲ, ಸುಧಾರಿಸಿದವರೆಂಬ ಪಾಶ್ಚಾತ್ಯರಲ್ಲಿಯೂ ಈ ಅವಸ್ಥೆಯೆ ಇದೆ! ಡಾ. ಐನ್ಸಟನ್ನರಂತಹ ಪ್ರಜ್ಞಾನೇತ್ರದ ಮಹಾನ್ ಶೋಧಕರ ಚರಿತ್ರೆಯಲ್ಲಿ Nous ಇದರ ಹೆಸರೂ ದೊರೆಯುವುದಿಲ್ಲ. ಇದರಿಂದಾಗಿ ಅವರ ದೇವರ ಬಗೆಗಿನ ವಿಚಾರವು, ಸ್ಪಿನೊಝಾನ ರೀತಿಯಲ್ಲಿ ಸಂಕೀರ್ಣ್ಣ ಸ್ವರೂಪದ್ದು ಆಗಿದೆ.

ಬುದ್ಧಿ = Reason ಇದು ತಲೆಯೆತ್ತಿದ್ದೇ ಮಾನವನ ಲೈಂಗಿಕ ಪಾತಳಿಯ ಜೀವಿತದ ಸಂದರ್ಭದಲ್ಲಿ. ಈ ಬುದ್ಧಿಯ ಜನನದ ಕಥೆಗಳು ಇದಕ್ಕೆ ನಿದರ್ಶನ. ದಿವ್ಯಕಥೆಗಳು ನಿಷ್ಕಾರಣವಾಗಿ ತಲೆಯೆತ್ತಿರುವುದಿಲ್ಲ. ಬುಧನು, ಚಂದ್ರನಿಂದ ಹುಟ್ಟಿದವನು ಎಂದರೂ ಸಾಕಿತ್ತು. ಜಾಗತಿಕ ಪುರಾತನ ದಿವ್ಯಕಥೆಗಳಲ್ಲೆಲ್ಲ ಚಂದ್ರನು ವ್ಯಭಿಚಾರದ ಅಭಿಚಾರದ ಪ್ರೇರಣಾಕೇಂದ್ರ ಎನಿಸಿದ್ದಾನೆ. ಭಾರತೀಯ ಪೂರ್ವಪರಂಪರೆಯಂತೆ, ಚಂದ್ರನಿಗೆ ಸ್ತ್ರೈಣನೆಂಬ ಕಾರಣದಿಂದ ಕ್ಷಯ ರೋಗಿಯಾಗುವ ಶಾಪವು ದೊರೆತಿದೆಯಂತೆ. ಚಂದ್ರನು ಪ್ರಾಣಲಿಂಗ ಪಾತಳಿಯ ನಿತ್ಯ ಉಭಯಲಿಂಗೀ ಪ್ರತಿಮೆ ಎಂದೂ ಬಗೆಯಲಾಗಿದೆ. ಇದು ಭೌತಸ್ಥಳ (ಕಾಲದ) ಪ್ರತಿನಿಧಿ! ಪಾಶ್ಚಾತ್ಯ ಪರಂಪರೆಯಲ್ಲಿಯೂ ಚಂದ್ರನ ಬಗೆಗೆ ಇದ್ದ ಪರಂಪರಾಗತ ನಂಬುಗೆಗಳನ್ನು ಬಿಚ್ಚಿ ಇಡುವ ಪ್ರಯತ್ನವು ನಡೆದಿದೆ. ಈ ಗ್ರಹಿಕೆಗಳನ್ನು ಅಶಾಸ್ತ್ರೀಯ ಎಂದು ಬಗೆವ ವಾಡಿಕೆಯು ಪ್ರತಿಷ್ಠಿತವಾಗಿದೆ. ಉದಾ : Lunacy ಹುಚ್ಚು Luna ಎಂದರೆ ಚಂದ್ರ; ಹುಚ್ಚುಹಿಡಿದು ಬುದ್ಧಿಭ್ರಂಶವಾಗಲು ಚಂದ್ರನೇ ಕಾರಣ ಎಂಬ ನಂಬುಗೆಯು, ಈ ಭಾಷೆಯಷ್ಟು ಪ್ರಾಚೀನ ಕಾಲದಿಂದಲೇ ಉಂಟು. ಬುಧ = mercury ಈ ರೋಮನ್ ದೈವತವು Roman God of eloquence, skill, thieving etc; ಗ್ರೀಕ್ ಪರಂಪರೆಯ ಹೆರ್ಮೆಸ್ ಬುಧನ ಪರ್ಯಾಯ ಇವನು. ಝುಊಸನಿಂದ ಒಬ್ಬ ಅಪ್ಸರೆಯಲ್ಲಿ ಹುಟ್ಟಿರುವನಂತೆ! ವಾದಿ, ವಾಗ್ಮಿ, ಬೆರ್ಕಿ, ಕಳ್ಳ, ಚತುರ ಇಂತಹ ವಿಶೇಷಣಗಳಿರುವ ಈ ಹೆರ್ಮೆಸ್, ಹುಟ್ಟಿದ ಕೆಲವೇ ತಾಸುಗಳಲ್ಲಿ ಅಪೊಲ್ಲೊ ದೇವನ ಗೋವುಗಳನ್ನು ಕದ್ದನಂತೆ!

ಅಂತಃಸಂಗತಿಯುಕ್ತ ಅರ್ಥ : ನಿಯಮವು ಈ ಜೀವನ ವಿಶ್ವವನ್ನು ಆಳುತ್ತಿದೆ : (ಬುದ್ಧಿಯು ರಾತ್ರಸಮಯ ನಿರ್ಮಾಣಶಕ್ತಿಯಾಗಿದೆ) ಬುಧನು ಚಂದ್ರನ ಸಂತಾನ; ಬುದ್ಧಿಯು; Luna ಚಂದ್ರನ ಪಾತಳಿ. ಇದು ನಿಜವಿದ್ದರೆ, ಈ ಬುದ್ಧಿಯು ರಾತ್ರ ಸಮಯಾಚಾರಗಳ ಸಂದರ್ಭದಿಂದಲೇ ಹುಟ್ಟಿ ಬೆಳೆದಿರಲಿಕ್ಕೆ ಬೇಕು. ಇದಕ್ಕೂ ಮುಂಚಿನ ಪ್ರಕರಣದಲ್ಲಿ, ಭಾರತೀಯ ಸಂಪ್ರದಾಯದಲ್ಲಿ, ಬುದ್ಧಿಯು ಅವತರಿಸಿರುವ ಹಿನ್ನೆಲೆಯ ವಿವರಣೆಯು ಸ್ವಲ್ಪ ಬಂದಿದೆ. ಅದರಲ್ಲಿ 'ಆಪ ಏವ ಅಗ್ರೇ ಮಹತ್ ಸಲಿಲಂ ಆಸೀತ್' ಎಂಬ ಉಲ್ಲೇಖ ಬಂದಿದೆ.

ಈ ನೀರು = ಸಲಿಲ (ಶರೀರ = ಲಿಂಗ) ಇದು ಸೃಜನ ಜಲ; ಸೃಜನ ಕ್ರಿಯೆಯ ಆಧಾರಭೂತ ಸಮಯ ಪರಿಸರವು, ರಾತ್ರಿಯ ಕಾಲವೇ ಪ್ರಾಧಾನ್ಯದಿಂದ ಇರುವುದು ಉಂಟಷ್ಟೆ? ಇನ್ನೂ ಸಂದೇಹವಿದ್ದರೆ, ಈ ಲೈಂಗಿಕ ವ್ಯವಹಾರವು ಹಗಲೂ ನಡೆಯುತ್ತದಲ್ಲ ಎಂಬ ಆಕ್ಷೇಪವಿದ್ದರೆ, ನರ(ಳ) ಸಂಪ್ರದಾಯದ ಋಗ್ವೇದದೊಳಗಿನ ಈ ವರ್ಣನೆಯನ್ನು ನೋಡಿಕೊಳ್ಳಿ. ಸೃಷ್ಟಿ ನಿರ್ಮಾಣಕ್ಕೆ ಸಂಬಂಧಿಸಿದ ಸೂಕ್ತವಿದು.

ತಮಃ ಅಸೀತ್ ತಮಸಾ ಗೂಳ್ಹಂ ಅಪ್ರಕೇತಂ
ಸಲಿಲಂ ಆಹಾ! ಇದಂ ಸರ್ವಂ॥[೧೦]

ಕತ್ತಲು (ತಮಃ) ಕತ್ತಲಿನಿಂದ (ತಮಸಾ) ಆ-ಲಿಂಗಿತವಿದೆ. ಆ ಗೂಢ (ಸಮಯ)ದಲ್ಲಿ ಒಂದು ಕಿರಣವೂ ಒಳಸೇರಲಾರದು; (ಅಪ್ರಕೇತಂ) ಈ ಋಗ್ವಾಕ್ಯದೊಳಗಿನ ಗೂಢಭಾಷೆಯು ಅಭ್ಯಸನೀಯವಿದೆ. ತಮಃ (ಕತ್ತಲು), ತಮಸಾ ಕತ್ತಲಿನಿಂದ ಆಲಿಂಗಿತವಿದೆ ಎಂದರೇನು? ಕಾಮಾತುರಾಣಾಂ ನ ಭಯಂ ನ ಲಜ್ಜಾ ಈ ಮಾತು ಅಕ್ಷರಶಃ ನಿಜ. ಲೈಂಗಿಕ ಪ್ರಚೋದನೆಯಿಂದ ಪ್ರಜ್ಞಾಯುಕ್ತ ಮನಸ್ಸು ಕುರುಡು ಆಗುತ್ತದೆ! ಕಾಮದ ಮದವೇರಿ ಸ್ಥಳ-ಕಾಲದ ಅರಿವು ಉಳಿಯುವುದಿಲ್ಲ : ಮೈಮೇಲಣ ಎಚ್ಚರು ಇಲ್ಲವಾಗುವ ಈ ಅವಸ್ಥೆಯನ್ನು ಸಾಕ್ಷಾತ್ ಕತ್ತಲು ಎಂದಿದ್ದಾರೆ. ಇದು ರಾತ್ರಿಯ ಅವತಾರವೇ ಆಗುತ್ತದೆ, ಎಂದು ಈ ಕವಿಯ ಆಶಯ. ಕಾಮದ ಉನ್ಮಾದದ ವ್ಯಕ್ತಿ ಹೆಣ್ಣಿರಲಿ, ಗಣ್ಣಂಡಿರಲಿ ಅದನ್ನು 'ತಮಃ' ಎಂದಿದ್ದಾನೆ ಋಗ್ವೇದದ ಕವಿ.

ಅಲ್ಲದೆ, ಎಂತಹ ಪ್ರಾಜ್ಞರಿದ್ದರೂ ಹೆಂ-ಗಂ ಒಬ್ಬರೊಬ್ಬರ ಆ-ಲಿಂಗನದಲ್ಲಿ, ಮೈ ಮರೆಯಲು ಅಸಮರ್ಥರಾದರೆ, ಈ ಕ್ರೀಡೆಯಲ್ಲಿ ಕಾಮತೃಪ್ತಿಯ ಆ ರಸನಿಮಿಷದ ಮುಕ್ತಿಯ ಮಹೋನ್ನತ ಅನುಭವಕ್ಕೆ ಎರವಾಗಬೇಕಾಗುತ್ತದೆ. ಭಗವತ್ ಗೀತೆಯ ಭಗವಂತನು ಹೇಳುವ ನಿಷ್ -ಕಾಮ (Passionless) ಕರ್ಮದ ಚಟವು ಅಂಟಿದರೆ ಕಾಮಕೇಳಿಯ ನೈಸರ್ಗಿಕ ಆಕರ್ಷಣ ಆನಂದವು, ಅಲ್ಲಿ ಅಭಾವದಿಂದಲೇ ಎದ್ದು ಕಾಣುವ, ಈ ಕರ್ಮವು ವ್ಯಭಿಚಾರ ಕ್ರಿಯೆಯಾಗಿ ಪರಿಣಮಿಸದಿರದು. ಆಮರಣ ಕುಮಾರಿ ಕುಮಾರರಾಗಿ ಬಾಳುವ ಸಂಪ್ರದಾಯದ ಕಟ್ಟಿಗೆ ಕೊರಳು ಕೊಟ್ಟವರಿಗೆ ಈ ನರ(ಳ) ಸಂಪ್ರದಾಯಗಳು, ಲೈಂಗಿಕವ್ಯವಹಾರವು ಮೈಮೇಲೆ ಬರದೆ ಇರುವ ಇಂಥ ಹಂಚಿಕೆಗಳನ್ನು ಕಲ್ಪಿಸಿದ್ದೂ ಉಂಟು. ಅಸಂಗ ಶಸ್ತ್ರ ಧರಿಸಿ ಎಂದರೆ ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ ಆಗಿದ್ದು ಉಂಟು. ಗುಣಾ ಗುಣೇಷು ವರ್ತಂತೇ (ಆ ಗುಣಕ್ಕೂ ಈ ಗುಣಕ್ಕೂ ಸಾಟಿ) ಈ ವಾ-ನರ (ಅಂಗ) ನಾನು ಅಲ್ಲ; ಎಂಬ ನಿರ್ಲಿಪ್ತ ತಟಸ್ಥ ಭಾವದ ಸಾಧನೆಯನ್ನ ಈ ದಿವ್ಯಾಧ್ಯಾತ್ಮಗಳು ಹೇಳಿವೆ!

ಈ ಬುದ್ಧಿ ಪರಿಸ್ಥಿತಿ ಜನ್ಯ ತುರ್ತಪರಿಸ್ಥಿತಿಯೊಳಗಿನಿಂದ ಪಾರಾಗಲು ಮಾರ್ಗದರ್ಶಕವಾಗಿ ಅವತರಿಸಿರುವ ಈ ಬುಧ, ಬುದ್ಧರ ಬುದ್ಧಿಯ ಚಾಕಚಕ್ಯವು ಇದು. ಮಹತ್ ಸಲಿಲ ಇದು ಬುದ್ಧಿಜಲ. ಇದೂ ರಾತ್ರಿಯ ಜಲವೇ. ಈ ಮಹತ್ = ಬುದ್ಧಿಯು ಪ್ರಭಾವಕಾರಿಯಾಗುವ ಯುಗವು, ಪ್ರಜ್ಞಾ ಪ್ರಕಾಶ = ಅರ್ಥ : ವಿಚಾರದ ಅಭಾವದಿಂದಾಗಿ ಕತ್ತಲೆಯ ಯುಗವಾಗಿ ಪರಿಣಮಸದಿದ್ದರೇ ಸೋಜಿಗ. ಮಹ, ಮಹತ್ ಎಂಬುದು ಬುದ್ಧಿಯ ಪರ್ಯಾಯ ಶಬ್ದ. ಇದರ ವಿವರಣೆ ಈಗ ಬೇಡ. ಗ್ರೀಕ್ ಸಂಸ್ಕೃತಿಯ ಸಂದರ್ಭದಲ್ಲಿ Reason, Intelligence ಇವು ಮೈವೆತ್ತಿ ಬೆಳೆದ ವಿಚಾರದ ವಿವರಣೆ ಇಲ್ಲಿ ಅವಶ್ಯವೆನಿಸುತ್ತಿದೆ. ತಂದೆಯಾದ ಝೀಉಸನ ತಲೆ ಯಿಂದ ಹುಟ್ಟಿದಳು ಎಂಬ ಅಥೆನಾ ಮಿಲ್ಟನ್ ಹೇಳುವಂತೆ, ಪಾಪವು ಭೂಮಿಗೆ ಅವತರಿಸಿದ್ದನ್ನು ಸೂಚಿಸುವ ಸಾಂಕೇತಿಕ ಪ್ರತಿಮೆ ಇದು. ಇಲ್ಲಿ, ಸ್ತ್ರೀ ಪಾಪಿ ಅಲ್ಲ; ಬುದ್ಧಿ ಪಾಪ ಪ್ರೇರಕಶಕ್ತಿ. ಈ ಅಥೆನಾ ಬುದ್ಧಿಯ ದೇವಿ. Secrecy is sin ಎಂದು ಮಹಾತ್ಮಾಜೀ ಆಡಿದ್ದು dramatic irony ಆಗಿದೆ.

ಗಾಂಧಿಜೀಯವರು ಭಗವತ್ ಗೀತೆಯ ಭಕ್ತರು! ಗೀತೆಯೇ ಹೇಳುತ್ತದೆ: ಈ 'ಗುಹ್ಯಾತ್ ಗುಹ್ಯತಮಂ ಶಾಸ್ತ್ರಂ' ಇದನ್ನು ವ್ಯಾಸ ಹೇಳಿದ್ದಾನೆ! ಈ ಗೀತೆಯಲ್ಲಿ ಬುದ್ಧಿಯೋಗ ಉಂಟು, ಎಂದು ಭಗವಂತನೇ ಕಬೂಲ ಮಾಡಿದ್ದಾನೆ! ಕೃಷ್ಣಕಾರಸ್ಥಾನೀ ಕಪಟನಾಟಕಸೂತ್ರ ಧಾರಿ ಎಂದು public conscience = ಸಮಾಜಸಮಷ್ಟಿಯು ಹೇಳುವ ಮಾತಿದು! ಈ ಆಂತಃಸಂಗತಿಯು ಈ ಮೊದಲು ಹೇಳಿರುವ ವಿಶ್ವನಿಯಮನ್ನು ಧೃಡಪಡಿಸುತ್ತದೆ. ಪಾಪೀಶಕ್ತಿ= ಬುದ್ಧಿದೇವಿ, ಝೀಊಸನ ತಲೆಯಿಂದ ಹುಟ್ಟಿದಳು ಎಂಬಲ್ಲಿ ಸುಳ್ಳು= ಕಣ್ಕಟ್ಟು ಇದೆ. ಲೈಂಗಿಕ ಪಾತಳಿಯ ಮೇಲೆ ಬರುವ ಸೂರ್ಯನು ಆದಿತ್ಯ (ಲಿಂಗ) ಶಕ್ತಿ ಆಗುತ್ತಾನೆ. ಪ್ರಕಾಶತತ್ತ್ವದ ಝೀಊಸನೂ, ಗ್ರೀಕ್ ಆದಿತ್ಯನಾಗಿದ್ದಾನೆ! ಪಾಪ ಮುಚ್ಚಿಕೊಳ್ಳಲು ಈ ಸುಳ್ಳುತಾನೆ! Secrecy is sin ಈ ಕಾರಣವೇ ಇರಬೇಕು. ಅಥವಾ ಪಾಪಿ ಎನ್ನಲು ಋಗ್ವೇದದಲ್ಲಿ ವಾಗಾಂಭೃಣೀ ಕೃತ್ಯಾ ಪಾಪೀ ಶಕ್ತಿ, 'ಬ್ರಹ್ಮದ್ವಿಷೇ ಹಂತವೈ ಶರವೇ ರುದ್ರಾಯ ಧನುಃ ಆತನೋಮಿ' ಎಂಬ ಈ ಬುದ್ಧಿ ದೇವಿ, ವಿಶ್ವಾಮಿತ್ರನ ಪ್ರಜ್ಞಾರೂಪ ಬ್ರಹ್ಮನ ಸವಿತೃ = ಧೀಶಕ್ತಿಯ ನಾಶಕ್ಕೆ ಸಿದ್ಧಳಾಗಿದ್ದಾಳೆ!

ಗ್ರೀಕ್ ಸಂಸ್ಕೃತಿಗೆ, ಝೆಲ್ಲರ್ ಹೇಳುವಂತೆ ಹೊಸ ತಿರುವು ಕೊಟ್ಟ ಪೈಥಾಗೊರಾಸನು, ಅಲ್ಲಿಯ ಗುಹ್ಯ ಮಾರ್ಗದ ಸಾಧಕರ ಕೂಟಗಳನ್ನು ಸ್ಥಾಪಿಸಿದ್ದಾಗಿ, ಇತಿಹಾಸ ಹೇಳುತ್ತದೆ. ಗುರು ಪ್ಲೇಟೋ, ಪೈಥಾಗೊರಾಸನ ಪಂಥದ ಪ್ರಭಾವಕ್ಕೆ ಒಳಗಾಗಿ Reason ಉಪಾಸಕನಾಗುತ್ತಾನೆ. Geometer ಇವನ ದೇವರು ಆಗುತ್ತದೆ.

ಆದರೆ, ಶಿಷ್ಯ ಅರಿಸ್ಟೋಟ್ಲನು ಪೈಥಾಗೋರಾಸನ ಪಂಥದ ಪ್ರಭಾವದಿಂದ ದೂರ ಉಳಿದದ್ದೇಕೆ? ಅರಿಸ್ಟೋಟ್ಲನಿಗೆ ಗ್ರೀಕ್ ಸಂಸ್ಕೃತಿಯ ಸಮಾಲೋಚನೆಯಲ್ಲಿ ಈ ಪೈಥಾಗೋರಸನು ಬುದ್ಧಿವಂತ ಸಾಕ್ಷಾತ್ Reasonದ ಮೂರ್ತಿ ಎಂದು ಖಾತ್ರಿಯಾಗಿರಬೇಕು. ಇಲ್ಲದೆ ಇದ್ದುದನ್ನು ಇದೆ, ಉಂಟು ಎಂಬ ನಂಬಿಸಿರುವ ಮಾಟಗಾರನು, ಈ ಪೈಥಾಗೊರಾಸ ಎಂದು ಆತನು ಕಂಡುಕೊಂಡಿದ್ದನು. ಈ ಭೌತಸ್ಥಳ (ಕಾಲ) ರೂಪ ಈ ತತ್ತ್ವವು ಅಭಾವಾತ್ಮಕವಿದೆ. ಕಂನಾಡ ಪ್ರಾಜ್ಞರು ಇದನ್ನು ಬಯಲು ಎಂದದ್ದು ನಿಷ್ಕಾರಣವಲ್ಲ. ಈ ಪೈಥಾಗೊರಾಸನೇ, Void, Vacuum ಈ ಪದಗಳಿಂದ ಸೂಚಿಸಿದ್ದು ಈ ಬಯಲು=ನಿರ್ವಯಲನ್ನೇ! ಆದರೂ ಈ ಸ್ಥಳ (ಕಾಲ)ವನ್ನು ಉಂಟು ಎಂದು ನಂಬಿಸಲು Non existent planet ಒಂದನ್ನು ಕಲ್ಪಿಸಿದ್ದಾನೆ! ಉಂಟು ಎಂದು ನಂಬಿಸಿದ್ದಾನೆ! ಈ ಅಂಶವು ಬೆಳಕಿಗೆ ಬಂದದ್ದು ಅರಿಸ್ಟಾಟಲನ ಸಾಂಸ್ಕೃತಿಕ ಸಮೀಕ್ಷೆಯಲ್ಲಿ. ಈತನು ಹೀಗೆ ಯಾತಕ್ಕಾಗಿ ಈ ಸುಳ್ಳನ್ನು ನಂಬಿಸಿದ್ದು? To make up the total to the sacred number Ten! ಈ ದಶ ಹತ್ತು ಮೇಲೆ ಹತ್ತಿ ಕೊಡುವ ಸಂಖ್ಯೆ ಇದು=ಅತ್ಯತಿಷ್ಠತ್ ಎಂದು ವೇದ ಹೇಳಿದೆ! ಅತ್ಯತಿಷ್ಠತ್ ದಶಾಂಗುಲಂ ಈ ಸೃಷ್ಟಿಕರ್ತಪುರುಷ! ಗುಹೆಯ ಈಶ್ವರ!

ಭಾರತೀಯ ದಿವ್ಯಾಧ್ಯಾತ್ಮಪಂಥವು ಆದಿತ್ಯ ಹೆಸರಿನಿಂದ, ಅಂತರಿಕ್ಷದಲ್ಲಿ ಕಲ್ಪಿಸಿರುವ ಹಾಗೂ ಪೈಥಾಗೊರಾಸ ಪಂಥೀಯರು One (1) God ಎಂದು ನಂಬಿಸಿರುವ ಈ ನಿತ್ಯ ಚರಲಿಂಗವು ಇದು! ಇದು ಭೂಮಿಯ ಮೇಲಣ ಜಂಗಮ ದಿವ್ಯಾಧ್ಯಾತ್ಮ ಉಪದೇಶಕರ ಪ್ರೇರಣಾಕೇಂದ್ರವು. ಈ One : (ಆದಿತ್ಯ) ಇದಕ್ಕೆ ಪ್ರತಿಯಾಗಿ Counter Earth ಕಲ್ಪಿಸಲಾಗಿದೆ. ಪ್ರತಿಭೂಮಿ ಎಂಬುದು ಸುಳ್ಳು ಹೆಸರು. Counter earth, ಎಂಬಲ್ಲಿ Moon = ಚಂದ್ರ ಎಂಬ ಗುಹ್ಯಾರ್ಥವು ಉಂಟು ಎಂದು ಆ ಸಂಪ್ರದಾಯವೇ ಹೇಳುತ್ತದೆ. ಪ್ಯಾಥ್ಯಾಗೊರಸನು ಪ್ರತಿಷ್ಠಿಸಿರುವ ಗುಹ್ಯಮಾರ್ಗವು ರಾತ್ರಸಮಯಾಚಾರಗಳ ಹಿನ್ನೆಲೆಯಲ್ಲಿ ಬೆಳೆದದ್ದು ಎಂಬ ಸಂಗತಿಯನ್ನು ಬಾಯ್ಬಿಟ್ಟು ಒಪ್ಪಿಕೊಳ್ಳಲಾಗುತ್ತಿಲ್ಲ. ಆದರೂ, (Counter Earth) ಚಂದ್ರಾ ಇಲ್ಲೇ ಇದ್ದಾಳೆ. ಈ ಒಂದು ಸಾಂಕೇತಿಕ ಪ್ರತಿಮೆಯೂ ಸಾಕು, ಸತ್ಯವು ಬಯಲಿಗೆ ಬರಲು. ಪಾಶ್ಚಾತ್ಯ ಪರಂಪರೆಯಲ್ಲಿ Moon ಇದು ನಿತ್ಯ ಸ್ತ್ರೀಲಿಂಗ She Moon ಎಂಬ ವಾಡಿಕೆ ಇಂದಿಗೂ ಇದೆ.

ಬುದ್ಧಿ ಮಹಾ (ಮತ್ತು) ಚಂದ್ರಾ ಬೇರೆಯಲ್ಲ ತೈತ್ತಿರೀಯ ಉಪನಿಷತ್ತು ಹೇಳುತ್ತದೆ ಮಹಃ ಇತಿ ಚಂದ್ರಮಾಃ ಮಹಃ ಇತಿ ಆದಿತ್ಯಃ (೧.೫) ಈಜಿಪ್ತಿನಲ್ಲಿಯೂ ಚಂದ್ರೋಪಾಸನೆಯು ಇತ್ತು. ಥೋತ್ (Thoth) ಚಂದ್ರನು

ಅಥವಾ Baboon. ಕಪಿಯ ತಲೆಯ ಮೇಲೆ ಚಂದ್ರನ ಸಂಕೇತ ತೋರಿಸಲಾಗುತ್ತದೆ.[೧೧] ಪ್ರಪಂಚದಲ್ಲಿಯೇ ಅತಿ ಪ್ರಾಚೀನ ಚಂದ್ರನ ಗುಡಿ ಊರು ಅಸ್ಸೀರಿಯಾ ಸುಮೇರಿಯಾದ ಭಾಗದಲ್ಲಿದೆ, ಇದು ಜಾದು ಮಾಟದ ಮೂಲಸ್ಥಾನ ಪ್ರಪಂಚದಲ್ಲಿ. ಪೈಥಾಗೊರಾಸನು, ಸಾಧಕರು ತಮ್ಮ ದೇಹವನ್ನು ಪಿರಾಮಿಡ್. ಎಂದು ಬಗೆಯಬೇಕಾಗಿ ಆಜ್ಞಾಪಿಸಿದ್ದಾನೆ. ದಶಾಂಗುಲ ಪುರುಷನ ಸಮಾಧಿ ಈ ಪಿರಾಮಿಡ್ ಈ ಪಾರಿಭಾಷಿಕ ಪದವು ಒಂದೇ ಸಾಕು ಈಜಿಪ್ಟಿನ ಪ್ರಭಾವ ಸೂಚಿಸಲು. ಪರ್ಮೆನೈಡಸ (Parmenides ಕ್ರಿ. ಪೂ ೫೪೦-೪೭೦) ಈತನು ಪೈಥಾಗೊರಾಸ ಪಂಥದ ಪ್ರಭಾವಕ್ಕೆ ಒಳಗಾದ ಮಹಾನ್ ತತ್ತ್ವಜ್ಞನೆಂದು ಖ್ಯಾತಿಯಿದೆ. ಇವನು ಚಂದ್ರಾ ಉಪಾಸಕನೇ ಇದ್ದನೆಂಬ ನಿರ್ದೇಶವಿಲ್ಲ. ಆದರೆ ಈತನು, ರಥದಲ್ಲಿ ಕುಳಿತು ದೇವಿಯ ಕಡೆಗೆ ಹೊರಟಿರುವಂತೆ ಇವನ ಕವನವು ಪ್ರಾರಂಭವಾಗುತ್ತದೆ. ಈ ದೇವಿಯಿಂದ ಈತನಿಗೆ ಸತ್‌ತ್ಯ (truth) ದರ್ಶನವಾಗುತ್ತದೆ (reveals). ಈ ಪರ್ಮೆನೈಡಸನು, ಹಿರಾಕ್ಲಿಟಸ (ಕ್ರಿ.ಶ. ೫೪೪-೪೮೪) ವಿರೋಧಿ. ಪರ್ಮೆನೈಡಸನು ಬಯಲನ್ನು (ಸ್ಥಳ) ಎಂಬ Being ಸಂಕೇತದಿಂದ ಆರಾಧಿಸುತ್ತಾನೆ. ಬಯಲು (ಸ್ಥಳ) ಇದು Being ಆಗುವಾಗ, ನಿರ್ವಯಲು (ಕಾಲ) ಅದು Not Being ಆಗಲೇಬೇಕು. ಹಿರಾಕ್ಲಿಟಸನು ಕಾಲತತ್ತ್ವದ ಉಪಾಸಕ. ಆದರೆ ಇದನ್ನು Not Being ಎಂಬ ಪದದಿಂದ ಸೂಚಿಸಿ, ಹಿರಾಕ್ಲಿಟಸನನ್ನು ಗೇಲಿಮಾಡಿದ್ದಾನೆ.

ಆದರೆ, ಪರ್ಮೆನೈಡಸನ ಗತ್ತುಗಾರಿಕೆಯೂ, ಸೂಕ್ಷ್ಮವಾಗಿ ವಿಚಾರಿಸಿದರೆ, ಇಲ್ಲಿ ಹೊರಗೆ ಬರುತ್ತದೆ. ಈತನು ಬಯಲ (ಸ್ಥಳ)ದ ಭಕ್ತನಾಗಿದ್ದರೂ ವ್ಯಕ್ತಿ ನಿರಪೇಕ್ಷ ಬಯಲು (ಸ್ಥಳ) ಇವನಿಗೆ ಮಾನ್ಯವಿದ್ದಿಲ್ಲ! ಸಾಕಾರ ಸಗುಣ ಮೂರ್ತಿಯ (೦) ಭಕ್ತನಿರಬೇಕು, ಎಂದು ಅವನ ಮಾತಿನಿಂದಲೇ ಧ್ವನಿತವಾಗುತ್ತಿದೆ.

> He understood by Being not the abstract concept or pure Being; but the full the space-filling mass, without any further specifications

ವ್ಯಕ್ತಿನಿರಪೇಕ್ಷ ಬಯಲು ಬರಿದೋ ಬರಿದು (೦) ಟೊಳ್ಳು. ಆದರೆ, ವ್ಯಕ್ತಿ ಸಾಪೇಕ್ಷ ಬಯಲು (೦) ಇದನ್ನು, ವೇದವು ಅಮೃತಸ್ಯ ನಾಭಿಃ ಎಂದಿದೆ: ಈ ಚಂದ್ರಾ ಭೂಮಿಯ ಮೇಲಣ ಕುಮಾರೀ ದೇವಿಯೆ (೦) ಆಗುತ್ತಾಳೆ; ಮತ್ತು ಇದು full ಇರಬೇಕು. ಜಾಬಾಲೋಪನಿಷತ್ತಿನ ಭಾಷೆಯಲ್ಲಿ ಅವಿಮುಕ್ತ ಕುರುಕ್ಷೇತ್ರವು ಇರಬೇಕು : ನರ(ಳ)ನ ಕಾದಾಟಕ್ಕೆ.

ಪೈಥಾಗೊರಾಸ, ಪರ್ಮೆನೈಡಸ ಇವರು ಯೋಜಿಸುವ ಪರಿಭಾಷೆಯು ನೇರ ಅರ್ಥಕ್ಕೆ ನಿಲುಕುವುದಿಲ್ಲ. ಇದು ಎಲ್ಲ ದೇಶಗಳ ದಿವ್ಯಾಧ್ಯಾತ್ಮಗಳ ವೈಶಿಷ್ಟ್ಯವೇ ಆಗಿದೆ. ಆದರೆ, ಹೀಗೆ ಕಣ್ಣು ಮುಚ್ಚಾಲೆಯ ಆಟ ಮುಸುಕಿನ ಮಾತು ಯಾಕೆ? ಎಂಬ ಈ ಸಂದೇಹವನ್ನು, ಅರಿಸ್ಟಾಟಲನ ಸೂತ್ರವು ಪರಿಹರಿಸುತ್ತದೆ. Form is immanent in things... ಆಕೃತಿಯು ಆದರ ಅಶಯ ಗುಣದಲ್ಲಿಯೇ ಹುದುಗಿರುತ್ತದೆ. ಆಂತರಿಕ ಗುಣ (Cause) ಇದೇ ಅದರ ಆಕೃತಿಗೆ ಕಾರಣವಾಗುತ್ತದೆ.

ಈ ಪ್ರಾಣಲಿಂಗ ಚೇತಸದ ಪಾತಳಿಯು, ನಿತ್ಯ ಕತ್ತಲಲ್ಲೇ ಇರುವ ವಿಶ್ವ ನಿಯಮವನ್ನು ಮೀರಲಾರದು. ಆದಕಾರಣ, ಜೈನಮುನಿಗಳ 'ಶೋಭಾ' (?) ಯಾತ್ರೆಯ ಮೆರವಣಿಗೆಗೆ ಬಂದವರು, ಈ 'ಬ್ರಹ್ಮ ಸಾಕ್ಷಾತ್ಕಾರ'ವಾಗುವ ಸಂಧಿಯನ್ನು ಕಳೆದುಕೊಳ್ಳುವುದು ಸುಳ್ಳಲ್ಲ. 'ಆಕರ್ಷಣವನ್ನು ಹೆಚ್ಚಿಸಲು' ಬಟ್ಟೆಧರಿಸುವ ವಾಡಿಕೆಯು ಉಂಟಾಗಿದೆ, ಎಂಬ ಬುದ್ಧಿವಂತರೂ ಇದ್ದಾರೆ. ಬಟ್ಟೆ ಕಳಚಿದಾಗ, ಪ್ರಜ್ಞೆಬಧಿರವಾಗಿ ಏನೂ ಕಾಣದಾಗುತ್ತದೆ! ಇದು ಹಾಗಿರಲಿ, ಗ್ರೀಕ್ ತತ್ತ್ವಮೂಲಕವೂ ಕಂನಾಡ ಪ್ರಾಜ್ಞರು ಯೋಜಿಸಿರುವ 'ಬಯಲು' (void) ಈ ಪಾರಿಭಾಷಿಕ ಪದದ ಔಚಿತ್ಯವೇ ದೃಢಪಡುತ್ತಿದೆ! ಇದರೊಡನೆ ಇನ್ನೂ ಒಂದು ಮಹತ್ವದ ಸಂಗತಿಯು ಈ ಬೆಳಕಿನಲ್ಲಿ ಬರುತ್ತಿದೆ. ಬುದ್ಧಿ ಹಾಗೂ ಪ್ರಜ್ಞೆ ಇವೆರಡರಲ್ಲಿ ಮೌಲಿಕ ಭೇದವಿದೆ. ಪ್ರಜ್ಞೆ ಜೀವನ ಪ್ರಚೋದಕ; ಬುದ್ಧಿ ಜೀವಿತದ ಅಸ್ತಿತ್ವಕ್ಕೆ, ಆಧಾರ.

ಪ್ರಜ್ಞೆಯು, ಈ ಭೌತ ಸ್ಥಳ-ಕಾಲವನ್ನು, ಅಭಾವವೇ (೦) ಸ್ಥಾಯಿ ರೂಪದ್ದು ಇರುವುದಾಗಿ ಹೇಳುತ್ತದೆ. ಇದುವೆ ವಸ್ತುಸ್ಥಿತಿ, ಎಂಬುದನ್ನು ಕಂನಾಡವರ ಪ್ರಜ್ಞಾನೇತ್ರವು ರೂಪಿಸಿರುವ ಬಯಲು ಈ ಪಾರಿಭಾಷಿಕ ಪದವು ದೃಢಪಡಿಸುತ್ತದೆ ಆದರೆ, ಗ್ರೀಕ್ ಪೈಥಾಗೊರಸನು ಇದನ್ನು Void; vacuum ಎಂದು ಅರಿತೂ, ಜನವು ಇದು ಉಂಟು ಇದು ಮಾತ್ರ ಉಂಟು ಎಂಬ ಸಂಭ್ರಮಕ್ಕೆ ಒಳಗಾಗುವ ದಾರಿಗೆ, ತಳ್ಳುವ ಹಂಚಿಕೆಯನ್ನು ಮಾಡಿದ್ದಾನೆ! ಆ ಸಂಪ್ರದಾಯದ ಪೆರ್ಮೈನೈಡಸನೆ ಇದಕ್ಕೆ ಸಾಕ್ಷಿ. ಇದು ಬುದ್ಧಿಯ ಯುಗಾರಂಭ.

ಪಾಶ್ಚಾತ್ಯ ಪರಂಪರೆಯಲ್ಲಿ ವ್ಯಕ್ತಿಸಾಪೇಕ್ಷ ಬಯಲನ್ನು Being ರೂಪದಲ್ಲಿ ನೆಚ್ಚಿದ್ದಾರೆ. ಕುಮಾರಿ ಮೇರಿ Virgin ಇದ್ದಾಳೆ. ಹೀಗೆ, ಬಯಲು = ಸ್ಥಳ (೦) ಕಣ್ ಮಾತ್ರ ಉಂಟು. ನಿರ್‌ವಯಲು ಕಾಲ = ಪುರುಷ ಗಣ್ (Not being) ಇಲ್ಲ! ಅಲ್ಲ; ಆದಿತ್ಯ, ಹುಟ್ಟ ಅಂತ್ಯವಾಗುತ್ತದೆ. ಶೀಲುಬೆಗೆ ನೇತಾಡುತ್ತಾನೆ. ಈ ಪುರಿಶಯ ಪುರುಷ! ಇದು ಬುದ್ಧಿಯ ಶಿಲ್ಪ! ಉಂಟು, ಇಲ್ಲ ಎರಡನ್ನೂ ಹೇಳುವ ಸ್ವಭಾವ ಈ ಬುದ್ಧಿಯದು! ಪ್ರಜ್ಞಾ ಪ್ರಕಾಶದಲ್ಲಿ ವಾಸ್ತವ: ಸತ್ಯವು ನೇರ ಕಾಣುತ್ತದೆ. ಇನ್ನು, ಈ ಬುದ್ಧಿ ವೈಭವದ ಮಾದರಿ ನೋಡಿ. ಪರ್ಮೈನೈಡಸ್, ಹಿರಾಕ್ಲಿಟಸ್ ಈ ಆದ್ಯರ ವಚನಗಳ ಮೂಲಕ ಈ ಬುದ್ಧಿ ಸ್ವಲ್ಪ ಅರಿಕೆಗೆ ಬರಲಿದೆ. ಕಾಲೀ (ಗಣ್) ಉಪಾಸಕ ಹಿರಾಕ್ಲಿಟನನ್ನು ನಗೆಗೆ ಈಡು ಮಾಡಲು, ಆತನು Not Being ನಿರ್‌ವಲಯ ಉಪಾಸಕನು ಎಂದು ಹೇಳಿ. ಪರ್ಮೈನೈಡಸ ನಕ್ಕಿದ್ದಾನೆ. ಈತನು ತನ್ನ ಪಕ್ಷವನ್ನು ಚೆಂದಗಾಣಿಸಿ ಹೇಳುವ ಈ ಬೌದ್ಧಿಕ ಚಾಕಚಕ್ಯವು, ಬರ್ಟರಾಂಡ್ ರಸೆಲ್ಲರಿಗೆ ತುಂಬ ಹಿಡಿಸಿದೆ!

> Thought is not different from Being; for it is only thought of Being. The only perception which is true is that which shows us in everything an unchanging Being, namely Reason!

ಸ್ಥಲ : ಬಯಲು : ಕಣ್(೦) (Being) ಮತ್ತು ಬುದ್ಧಿ ಬೇರೆಯಲ್ಲ! ಇದನ್ನು ಗ್ರೀಕ್ ದಿವ್ಯಾಧ್ಯಾತ್ಮ ಪಂಥವು ಮಾತ್ರ ಹೇಳುತ್ತದೆ, ಎಂದಲ್ಲ. ನಮ್ಮ ವೇದೋಪನಿಷತ್ತಿನ 'ಚಕ್ಷುಃ ವೈ ಸತ್‌ತ್ಯಂ' ಎಂಬ ಈ ಸಾಕ್ಷಾತ್ಕಾರ: ದರ್ಶನವು ಪರ್ಮೈನೈಡಸನ ಅನುಭಾವಕ್ಕಿಂತ ಭಿನ್ನವಿಲ್ಲ! ಕಣ್=ಚಕ್ಷುಃ ಭಗವತ್ ಗೀತೆಯು ವರ್ಣಿಸಿರುವ ದಿವ್ಯ ಚಕ್ಷು ಇವೆರಡೂ ಸಮಾನವೇ ಇವೆ. ವೇದದ ದಿವೀವ ಚಕ್ಷುಃ ಆತತಂ ಹಿಗ್ಗಿ ಅಗಲವಾಗಿ ಇರುವ ದಿವ್ಯಲೋಕದಂತಹ ಚಕ್ಷುವಿನ ಕಣ್ಣ ನೆನಪನ್ನು ತಂದುಕೊಡುವ ಭೂಮಿಯ ಮೇಲಣ ಈ ಕಣ್(೦) ಎಂದರೆ Reason= ಬುದ್ಧಿಜೀವಿ ಅಥವಾ ಸರಸ್ವತಿ ಅಂಭೃಣೆ, ಅದಿತಿ, ಎಲ್ಲ(ರ)ಮ್ಮ ಎಲ್ಲರೂ ಒಂದೇ ನಾಮ ಒಂದೇ ಸಾಲದೇ? ಏಕೆಂದರೆ (For) ಇದೆಲ್ಲ ಬುದ್ಧಿಯು (ವಿಚಾರ ಇದಲ್ಲ) ಆ ಕಣ್ಣನ್ನು ಕುರಿತೇ ಇದೆ. ಅಣುರೇಣು ತೃಣಕಾಷ್ಠಗಳೆಲ್ಲವೂ ಹುಟ್ಟಿದ್ದು ಎಲ್ಲಿಂದ? ನಮ್ಮ ಭಟ್ಟಾಕಲಂಕನು ಸರ್ವಭಾಷಾಮಯೀ ಭಾಷಾ ಸರಸ್ವತಿ! 'ಕಣ್ಣು' ಎಂದೇ ಸೂಚಿಸಿದ್ದಾನೆ. ಈ ಕಣ್ಣಿಲ್ಲದೆ ಇದ್ದರೆ ಈ ಪ್ರಪಂಚದಲ್ಲಿ ಏನುಂಟು? ಎಲ್ಲೆಲ್ಲೂ ಕಣ್ಣೇ ಯಾವಾಗಲೂ ಈ ಪ್ರಪಂಚಕ್ಕೆ ಈ ಕಣ್ಣೇ ಆದಿಕಾರಣ. ಪರ್ಮೈನೈಡಸ್ ಹೇಳುತ್ತಾನೆ, an unchanging Being ಎಂದು. ಈ ಸನಾತನ ಸಾರ್ವಕಾಲಿಕ ಸತ್‌ತ್ಯದ ಆಧಾರದ ಮೇಲೆ ನಿಂತಿದೆ. ಈ ಮಾನವಧರ್ಮ ಸಂಸ್ಕೃತಿ! ವ್ಯಾಸ ಹೇಳಿದ್ದು. ಇದಕ್ಕಿಂತ ಬೇರೆಯಿಲ್ಲ.

ಆದರೆ, ಇದನ್ನು ಛಾಯಾಭಗವತಿ ಎಂದ ಮೂರ್ಖರು, ವೈವಸ್ವತ ಮಾನವ ಧರ್ಮದವರೇ ಇರಲಿಕ್ಕೆಬೇಕು. ಬಯಲು ಎಂಬ ಈ ಸಾಂಕೇತಿಕ ಪ್ರತಿಮೆ ಸ್ಮರಿಸಿಕೊಂಡರೆ, ಈ ಇಂದ್ರಿಯಗಳ ಪಾತಳಿಯ ಅಸ್ತಿತ್ವವನ್ನು ಕಡೆಗಣಿಸಿ, ಆದ್ಯಮನುವು ಮಾನವಧರ್ಮವನ್ನು ರೂಪಿಸಲು ಅಂದು ಸಮರ್ಥನಾದದ್ದು ಹೇಗೆ, ಎಂಬುದರ ಅರ್ಥವು ಆಗುತ್ತದೆ. ಅದು ಈ ಮಾನವಭಾಷೆಯನ್ನು ರೂಪಿಸಿದ್ದು, 'ಪ್ರಜ್ಞಾನೇತ್ರೋ ಲೋಕಃ' ಬುದ್ಧಿಯ (ಜ್ಞಾನ) ಚಕ್ಷುವು ಅರಳತೊಡಗಿದಂದಿನಿಂದ, ಈ ಮನುಜನು ನರ(ಳ)ನಾಗುವ ದಿಕ್ಕಿನಲ್ಲಿ ಓಡತೊಡಗಿದ್ದಾನೆ: ಸ್ವಯಂ-ಭೂ ವ್ಯಕ್ತಿವಾದೀ ನೂತನ ಯುಗಾರಂಭವಾಗಿದೆ. ವೈವಸ್ವತಮನ್ವಂತರವು ಕುಸಿದು ಬಿತ್ತು. ಅವರವರ

ಕಣ್ಣು ಅವರವರಿಗೆ ಮಾರ್ಗದರ್ಶಕ ಗುರು ಆಗುತ್ತದೆ. ಸಂಸ್ಕೃತ ಭಾಷೆಯ ವಾಕ್ಕು, ಗೀಃವಾಣ-ವಾಣೀ ಇದು ನಾದ (ಗೀಃ) ರೂಪವಾದದ್ದು ಶ್ರುತಿ ಆಗಿ ಪರಿಣಮಿಸಿದ್ದು, ಲಿಂಗ (ವಾಣ) ಅಂಗ (ವಾಣಿ) ಯೋಗದ ಸಿದ್ಧಿಯ ಫಲಿತ. Harmony of Spheres = ಈ ವಿಶ್ವಸಂಗೀತದ ನಾದವನ್ನು ಕೇಳಿದ, ಅಗ್ನಿಸ್ತಂಭ ಉಪಾಸಕ ಹಿರಾಕ್ಲಿಟಸನಿಗೆ Logos (ಕರ್ಣಪಿಶಾಚ) ಸಿದ್ಧಿಯು ಲಭಿಸಿತ್ತು.

ಹಿರಾಕ್ಲಿಟಸನು ಜೀವಿತದ ಪಾತಳಿಯಮೇಲೆ, ಅಂತರ್ ವಿಸಂಗತಿಯು ನಿತ್ಯ (Law of contradiction) (ಕಾದಲರ) ಕಾಳಗವು, ಇದುವೆ ಮಾನವರ ತಂದೆ; ಇದುವೆ ಪ್ರಪಂಚವನ್ನು ಆಳುವ ಶಕ್ತಿ (King) ಎಂದಿದ್ದಾನೆ. Strife is justice ಎಂದು ಹೇಳಿದರೂ ಈತನಿಗೆ, ಈ ಅಂತರ್ ವಿರೋಧವನ್ನೂ ಆಳುವ ವಿಶ್ವನಿಯಮವು ಗೊತ್ತಿತ್ತು, ಎಂದು ಸಾಕ್ಷಾತ್ಕಾರೀ ಡಾ. ರಾಮಭಾವು ರಾನಡೆ ಹೇಳುತ್ತಾರೆ, ಹಿರಾಕ್ಲಿಟಸನ ಪ್ರಬಂಧದಲ್ಲಿ. ಝೆಲ್ಲರ ಇದನ್ನು ನಿವೇದಿಸಿದ್ದು ಹೀಗೆ:

> Heraclitus censured, Homer, therefore condemning discord. But he emphasised no less strongly the fact that the hidden harmony of nature always restores harmony from contraries, that divine law, like fate, wisdom, the universal Reason, Zeus or the Deity rules everything, that the fundamental essence changes according to fixed laws into all things and returns from them into itself(೨)

ಹಿರಾಕ್ಲಿಟಸನ ಈ ಶ್ರದ್ಧೆಯು ಮಾಡಿಮಾಡಿಸುವ ಭಗವಂತನ ಭಕ್ತಿಯ ದ್ಯೋತಕವಾಗಿದೆ! ಹಿರಾಕ್ಲಿಟಸನು ನಂಬಿರುವ ಈ Law ಜೀವಿತದ ಪಾತಳಿಯದು. ಇದಕ್ಕೆ ಪ್ರಮಾಣವು ಏನು? ಈತನು Universal Reason ಇದನ್ನು ವಿಶ್ವನಿಯಮದ ಮಟ್ಟಕ್ಕೆ ಒಯ್ದಿದ್ದಾನೆ! ಇಲ್ಲಿ ರೀಜನ್ ಬುದ್ಧಿ ಒದ್ದೆ ಆಗಿದೆ! ಪರ್ಮೆನೈಡಸನ ಭೂಮಿಕೆಯಲ್ಲಿ Being ಕಣ್ (೦) ಬಯಲು ಇದೇ ಬುದ್ಧಿ ಇರುವಂತೆ, ಹಿರಾಕ್ಲಿಟಸನ ಸಂದರ್ಭದಲ್ಲಿ, ಅಗ್ನಿ (ಸ್ತಂಭ) = ಭಾರತೀಯ ಪರಿಭಾಷೆಯ ದಿವ್ಯ ಅಕ್ಷ, ಪ್ಯಾಥ್ಯಾಗೊರಾಸನ one (೧) = Tower, ಈ ಭಗವಂತನು ವಿಶ್ವನಿಯಮ ಅಲ್ಲ. ಹಿರಾಕ್ಲಿಟಸ Logos ಅನಾಹತನಾದ ಪ್ರಣವದ ಸಿದ್ಧಿಯನ್ನು ಗಮನಿಸಿದರೆ, ಇದು ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಈ ವಿಭಾಗದ್ವಯದ ಟೊಳ್ಳಿನೊಳಗಿನ ನಾದವೇ ಆಗುತ್ತದೆ. ಆದರೆ, ಜೀವನ ವಿಶ್ವವನ್ನು ಆಳುವ ನಿಯಮವು ಪ್ರಜ್ಞೆ ಇದು, ಸ್ಥಳ (ಕಾಲ) ರೂಪ ಈ ಬಯಲು ಆಚೆಗೆ ಆಕಾಶದ ಪ್ರಕಾಶತತ್ತ್ವದ ಪಾತಳಿಯು ಮೇಲೆ ಇದೆ. ಅರಿಸ್ಟಾಟಲ್ ನಿಃಸಂದಿಗ್ಧ ಶಬ್ದಗಳಲ್ಲಿ ಹೇಳುವ Nous : mind (=ವೈವಸ್ವತ ಮನು) ಈ ಶಕ್ತಿಯೇ ವಿಶ್ವವನ್ನು ತನ್ನ ನಿಯಂತ್ರಣದಲ್ಲಿ ಇರಿಸಿಕೊಂಡಿದೆ. ಪಾಶ್ಚಾತ್ಯಪರಂಪರೆಯಲ್ಲಿ ಪೈಥಾಗೊರಾಸನ ಮಂತ್ರ : ಮಾಟದಿಂದ Reason : Intelligence ಇದಕ್ಕೆ ಅಗ್ರಪಟ್ಟವು ದೊರೆತು, Nous: mind ಇದು ಪದಭ್ರಷ್ಟವಾಗಿದೆ.

ಭಾರತೀಯ ಸಂಸ್ಕೃತಿಯ ಸಂದರ್ಭದಲ್ಲಿಯೂ ಆದ ತಿರುವು ಮುರುವು ಇದೇ ಬಗೆಯದ್ದು ಆಗಿದೆ. ಅನ್ಯಾಕ್ಸಾಗೊರಾಸನು Nous : mind ಇದರ ಮಹತ್ತ್ವವನ್ನು ಅರಿತೂ Reason ಮತ್ತು Nous ಇವುಗಳಲ್ಲಿ ಇರುವ ಪ್ರೇರಣಾಶಕ್ತಿಯ ಭೇದವನ್ನು ಗುರುತಿಸಲು ಅಸಮರ್ಥನಾದದ್ದು ಕಾಣುತ್ತದೆ. ಭಾರತೀಯ ಸಂದರ್ಭದಲ್ಲಿ ಕಾಲಿದಾಸನು ಜಾರಿದ್ದು ಹೀಗೆಯೇ ಕವಿಕುಲಗುರು ಕಾಲಿದಾಸನು ಜಾರಿದ್ದು ಹಲ್ಲಿಲ್ಲದ ಕಪ್ಪೆ, ಹಾವನ್ನು ನುಂಗುವ ಎಡೆಯಲ್ಲಿ

ಈ ವರೆಗಿನ ಸಮೀಕ್ಷೆಯಲ್ಲಿ ದೃಢಪಟ್ಟ ಅಂಶಗಳು

ಬುದ್ಧಿ : ಚಂದ್ರನ ಉಪಾಸನೆಯು, ಯೋನಿಲಿಂಗದ (ಸ್ವ-ಅರ್ಥದ) ದಿಕ್ಕಿನಲ್ಲಿಯೇ ತಳ್ಳಿಕೊಂಡು ಹೋಗಬಲ್ಲದು

: ಪ್ರಜ್ಞಾಯುಕ್ತ ಮನಸ್ಸು ಪ್ರಕಾಶ ತತ್ತ್ವದ ಉಪಾಸನೆಯು, ಸಮಾಜ : ಸಮಷ್ಟಿಯ = ವೈಶ್ವಾನರಾಗ್ನಿಯ ಸೇವೆಯ ದಿಕ್ಕಿನಲ್ಲಿಯೇ ಸೆಳೆದೊಯ್ಯಬಲ್ಲುದು. ಆದರೆ ದೈವಮಂ ಮೀರಿ ಬಾಳಲ್ ನೆರೆವರಾರ್? ಎಂಬ ಕವಿಯ ಈ ಉಕ್ತಿಯು, ಈತನು ಕಂಡ ವಿಶ್ವನಿಯಮವನ್ನು ಸೂಚಿಸುತ್ತದೆ. ಆದರೆ ದೈವ ಎಂಬ ಈ ಸಂದಿಗ್ಧ-ಅನಿಶ್ಚಿತಾರ್ಥದ ಪದವನ್ನು ಬಳಸುವುದರಿಂದ ಮನಸ್ಸಿನ ಗೊಂದಲವೇ ಹೆಚ್ಚಬಲ್ಲುದು. ಈ ದೈವ ರೂಪ ವಿಶ್ವನಿಯಮವು ಪ್ರಜ್ಞಾಪಾತಳಿಯದೊ? ಅಥವಾ ಪ್ರಾಣಲಿಂಗ ಪಾತಳಿಯದೊ? ಈ ಮಾನವ ಜೀವನವನ್ನು ಆಳುವ ಶಕ್ತಿಗಳು ಎರಡು ೧. ಪ್ರಜ್ಞೆ: ಪ್ರಕಾಶ ತತ್ತ್ವ, ಒಳತಿಳಿಬೆಳಕಿನ ಅರ್ಥ : ವಿಚಾರರೂಪ ಪ್ರಕಾಶದ ಅನುಸಂಧಾನದಲ್ಲಿ ಬಾಳುವ ಪ್ರವೃತ್ತಿಯನ್ನು ಸೂರ್ಯನು (ವಿವಸ್ವನ್ = ಸವಿತೃ) ಪ್ರೇರಿಸುತ್ತಾನೆ, ಎಂಬ ಈ ನಿಷ್ಠೆಯಿದೆ. ಇದರಂತೆ-ಪರಿಸ್ಥಿತಿ ಜನ್ಯ ಕಾರಣದ ಅಂತಃ ಪ್ರಚೋದನೆ Situational Logic ಇದನ್ನು ಅನುಸರಿಸುವ ಬುದ್ಧಿಯು ಸ್ವ ಅರ್ಥದ ಅತಿ ಹೆಚ್ಚು ಹೆಚ್ಚು ಕತ್ತಲಿನ ದಿಕ್ಕಿನಲ್ಲಿಯೇ ಒಯ್ದೀತು ಎಂಬುದನ್ನು ಪುರಾತನರು ಅರಿತಿದ್ದರು. ಇದು ಚಾಂದ್ರಶಕ್ತಿಯ ಪ್ರಚೋದನೆ. ಹಗಲನ್ನಾಳುವ ಶಕ್ತಿ : ಪ್ರಕಾಶರೂಪ ದೇವರು. ಇರುಳನ್ನಾಳುವ ಶಕ್ತಿ : ಕತ್ತಲಿನ ಸ್ವಾಮಿ ಚಂದ್ರ : ರಜನೀಶನೇ ಇರಬಲ್ಲನು.

ಈ ವಿಶ್ವನಿಯಮವನ್ನೇ ವಂಚಿಸುವ ಪ್ರಯತ್ನ ಈ ಮಾನವ ಹೆಸರಿನ ಪ್ರಾಣಿಯಿಂದ ಆಗಿದೆ, ಆಗುತ್ತಲೂ ಇದೆ. ಇಂಥ ಪ್ರಯತ್ನದ ಮಾದರಿ, ಚಂದ್ರನನ್ನು ಸೂರ್ಯ ಎಂದು ಬಗೆಯುವಲ್ಲಿ ವೇದದಲ್ಲೇ ಇದೆ. ಚಂದ್ರನಿಗೆ, ಸೌರಭ್ರಾಂತಿ ನಿರ್ಮಾಣಕ್ಕಾಗಿ ಸೋಮ ವೇಷದಲ್ಲಿ ಪೂಜಿಸಲಾಗಿದೆ! ಸೂರ್ಯನನ್ನು ಚಂದ್ರನನ್ನಾಗಿಸುವ ಪ್ರಯತ್ನದಂತೆ, ಚಂದ್ರನನ್ನು ಸೂರ್ಯ ಹೆಸರಿನಿಂದ ನಂಬಿಸಲು ಆಗಿರುವ ಪ್ರಯತ್ನದ ಮಾದರಿ ಮೃತಾತ್ ಅಂಡಾತ್ ಜಾತನೆಂಬ ಮಾರ್ತಾಂಡ! ಮಲ್ಲಾರೀ ಮಾರ್ತಾಂಡ ಸೂರ್ಯ ಎಂದು ನಂಬಿದವರಿದ್ದಾರೆ! ಈ ಬಗೆಯಲ್ಲಿ ಆತ್ಮವಂಚನೆಗೆ ಒಳಗಾಗಿ, ಇದರ ದುಷ್ಪರಿಣಾಮಗಳನ್ನು ಅನುಭವಿಸುವಾಗ ದೈವ ಹಣೆಬರಹ ಎಂದು ಗೊಣಗುವುದುಂಟು! ಇದೆಲ್ಲ ಪ್ರಸ್ತಾವನೆ ಯಾತಕ್ಕೆ? ಎಂದರೆ ಕವಿ ಕುಲಗುರು ಕಾಲಿದಾಸನು, ಮನುವೈವಸ್ವತನನ್ನು ಸ್ವಯಂಭೂನರ(ಳ) = ಚಂದ್ರನ ಹಂತಕ್ಕೆ ತಂದಿರುವುದನ್ನು ಗಮನಿಸುವಾಗ ಉಂಟಾಗುವ ವಿಷಾದವು ಇದಕ್ಕೆ ಕಾರಣ. ನರನನ್ನು ಮನು-ಜರ ಹಂತಕ್ಕೆ-ಮೇಲಕ್ಕೆ ಒಯ್ಯುವ ಬದಲಾಗಿ, ಮನು ಜರನ್ನು ನರ(ಳ) ರನ್ನಾಗಿಸುವ ದಿಕ್ಕಿನಲ್ಲಿ ಪ್ರಚೋದಿಸುವ ಸಾಹಿತ್ಯಿಕರಿಗೆ ಏನೆನ್ನ ಬೇಕು? ಕಾಲಿದಾಸನಿಂದಾಗಿರುವ ಅನ್ಯಾಯವು, ಈ ಬಗೆಯದ್ದು ಆಗಿದೆ. ಇದನ್ನು ಮನಗಾಣಲು, ರ(ಲ)ಘುವಂಶ ಕಾವ್ಯದ ಆರಂಭದ ಈ ಶ್ಲೋಕವನ್ನು ಬಗೆದು ಭಾವಿಸಬೇಕಾಗಿ ಬಿನ್ನಹ

ವೈವಸ್ವತೋ ಮನುಃ ನಾಮ ಮಾನನೀಯೋಃ ಮನೀಷಿಣಾಂ।

ಮೊದಲಿನ ಈ ಭಾಗದಲ್ಲಿ, ಆಕ್ಷೇಪಕ್ಕೆ ಎಳ್ಳನಿತೂ ಅವಕಾಶವಿಲ್ಲ. ಆದರೆ ಈ ಉತ್ತರಾರ್ಧ ನೋಡಿ

ಆಸೀತ್ ಕ್ಷಿತೀಶಾನಾಂ ಆದ್ಯ। ಪ್ರಣವಃ ಛಂದಸಾಂ ಇವ॥

ಪ್ರಪಂಚದ ಪ್ರಜ್ಞಾವಂತರಲ್ಲಿ, ಪ್ರಜ್ಞಾವಂತನಾಗಿರುವ ಈ ವೈವಸ್ವತ ಮನುವನ್ನು, ಕ್ಷಿತೀಶ (ರಾಜ) ಎಂದಿರುವಲ್ಲಿ ಮೊದಲನೆಯ ಅನ್ಯಾಯವಾಗಿದೆ. ಈ ವೈವಸ್ವತಮನುವು ಮಾನವರ ಆದರ್ಶದ ತಾತ್ತ್ವಿಕ ಸನಾತನ ಮೂರ್ತಿ; ಒಂದು ವಿಶಿಷ್ಟ ವ್ಯಕ್ತಿಯಲ್ಲ.ಕ್ಷಿತೀಶಾನಾಂ ಎಂಬ ಬಹುವಚನವು ಆಕ್ಷೇಪಾರ್ಹವಿದೆ. ಆದ್ಯನು ಇವನು ಒಬ್ಬನೇ ಇರಬೇಕಾದದ್ದು ನ್ಯಾಯ. ಭೂಮಿಗೆ (ಕ್ಷಿತಿಗೆ) ಈಶರು ಎಂಬಲ್ಲಿ ಹಗಲು ಸೂರ್ಯ, ರಾತ್ರಿ ಚಂದ್ರ, ಎಂಬ ಅರ್ಥವು ತಲೆಯೆತ್ತುತ್ತದೆ. ಸೂರ್ಯನು ಇವನು ಆಳುವ ಜೀವನ ವಿಶ್ವವು ಭಾವಾತ್ಮಕವಿದೆ, ಅನುಭವಾತ್ಮಕವಿದೆ. ವಿಧಾಯಕವಿದೆ.

ಆದರೆ, ಚಂದ್ರನು ಆಳುವುದು ಜೀವನವನ್ನು! ಆದರೆ ಇದು ಅಂತರ್‌ವಿಸಂಗತಿಯಿಂದಾಗಿ ನಿತ್ಯ ಅರ್ಥ ಶೂನ್ಯ, ಅಥವಾ ಶೂನ್ಯ ಅರ್ಥದ್ದೇ(೦) ಇರುವ ಅನಿವಾರ್ಯತೆಯನ್ನು ಯಾರೂ ತಪ್ಪಿಸಲಾರರು. ಅಂತಃಸಂಗತಿಯಲ್ಲಿ ಅರ್ಥವು ಪೋಷಿಸಲ್ಪಡುತ್ತದೆ. ಪರಸ್ಪರವಿರುದ್ಧ ಅರ್ಥ= ಆಶಯವು, ಒಂದು, ಇನ್ನೊಂದನ್ನು ಇಲ್ಲವಾಗಿಸುತ್ತದೆ. ಆದುದರಿಂದ, ಚಂದ್ರನ-ಪ್ರಭಾವವು ಕತ್ತಲೆಯನ್ನು= ವಿನಾಶವನ್ನು ಪ್ರೇರಿಸುತ್ತದೆ. ಆದಕಾರಣ ಇವನನ್ನು ಸೂರ್ಯನ

ಸಂಗಡ ಅದೇ ಕಾಲಕ್ಕೆ ಪೂಜಿಸಲು ಆಗುವುದಿಲ್ಲ. ಆದಕಾರಣ, ಆಸೀತ್ ಕ್ಷಿತೀಶಾನಾಂ ಎನ್ನುವ ಬದಲು ಆಸೀತ್ ಕ್ಷಿತೀನಾಂ ಆದ್ಯಃ ಎಂಬುದೇ ಲೇಸು.

ಕಾಲಿದಾಸನು ವಿಶೇಷ ಜಾರಿದ್ದು : ಪ್ರಣವಃ ಛಂದಸಾಂ ಇವ ಮನು ವೈವಸ್ವತನು ಆದ್ಯ : ಎಂಬಲ್ಲಿ ಈ ಉಪಮೆಯ ಮೂಲಕ ಆದ್ಯ ಮನುವೈವಸ್ವತನಿಗೆ ಅಕ್ಷಮ್ಯ ಅಪರಾಧವಾಗಿದೆ, ಈ ಕವಿಕುಲಗುರುವಿನಿಂದ. ಪ್ರಣವೋಪಾಸನೆಯಲ್ಲಿ ಪ್ರತ್ಯಕ್ಷ ಲೈಂಗಿಕ ಕೃತಿಯಿಲ್ಲದೆಯೇ ಮಿಥುನ ಕ್ರೀಡೆಯ ಫಲ ಲಭಿಸುತ್ತದೆ. ಇದು ಮಂತ್ರ ಶಕ್ತಿ! ಇದಕ್ಕೆ ಪ್ರಮಾಣ : ಮಂಡೂಕ>ಮಾಂಡೂಕ್ಯ ಉಪನಿಷತ್ತಿನಲ್ಲಿ ಬಂದಿರುವ ಈ ಅನುಭವ ಸಿದ್ಧಿಯ ವರ್ಣನೆ, ಆದ್ಯ ಶಂಕರಾಚಾರ್ಯರು ಈ ಉಪನಿಷತ್ತನ್ನು ವೇದಾಂತಾರ್ಥ ಸಾರಸಂಗ್ರಹ ಎಂದಿದ್ದಾರೆ. ದಿವ್ಯಚಕ್ಷು : "ಚಕ್ಷುಃ ವೈ ಸತ್ ತ್ಯಂ" ಇದರ ಸಾಕ್ಷಾತ್ಕಾರ ಅನುಭವ ಮತ್ತು ಪ್ರಣವ ಮಂತ್ರ ಸಿದ್ಧಿಯ ಫಲ ಬೇರೆಯಿರಲಾರದು.

ಪ್ರಜ್ಞಾನೇತ್ರ ದ ಪ್ರಭಾವದಲ್ಲಿ ಈ ಮನು-ಜನು ಬಹಿರ್ಮುಖನಾಗಿ ಎತ್ತೆತ್ತಲೋ ಹೊರಟಿದ್ದಾನಲ್ಲ! ಆದಕಾರಣ, ಇವನು ಸ್ವಯಂ ಭೂ ಅಂತರ್ಆತ್ಮನ್ ನ ಪಶ್ಯತಿ[೧೩] ಆದರೆ, ಇವನು ಆವೃತ್ತ ಚಕ್ಷುಃ ಆಗಿ, ತತ್ ಮಯತೆಯಲ್ಲಿ ಸರ್ವಸ್ಯಯೋನಿಃ ಆಗಿರುವ ಓಂಕಾರ ಬ್ರಹ್ಮದಲ್ಲಿ ವಿಲೀನನಾಗಬೇಕು. ಆಗ ಪ್ರಜ್ಞಾನಾಶವಾಗುತ್ತದೆ : ನ ಅಂತಃಪ್ರಜ್ಞಂ, ನ ಬಹಿಃಪ್ರಜ್ಞಂ, ನ ಉಭಯತಃ ಪ್ರಜ್ಞಂ, ನ ಪ್ರಜ್ಞಾನ ಘನಂ, ನ ಪ್ರಜ್ಞಂ, ನ ಅಪ್ರಜ್ಞಂ। ಎಂದರೆ ಶೂನ್ಯಸ್ಥಿತಿ! ಈ ಸಾಧನದಲ್ಲಿ ಪ್ರಪಂಚೋಪಶಮಂ ಶಾಂತಂ ಶಿವಂ ಅದ್ವೈತಂ..." ಎಂಬ ಹಾಗಿನ ಶೂನ್ಯ (೦) ಸ್ಥಿತಿಯ ಅನುಭವವು ಯೋನಿಲಿಂಗೈಕ್ಯದ ರಸ ನಿಮಿಷದಲ್ಲಿಯೂ ಲಭಿಸುತ್ತದೆ. (ಮಾಂ. ೭) ಈ ಅನುಭವವನ್ನು ಪ್ರಪಂಚೋಪಶಮಂ ಅಸ್ತಿತ್ವದ ಸಾರ್ಥಕ್ಯವಾಯ್ತು, ಎಂಬ ಹಾಗಿನ ಭಾವನೆಯು ಇದೆ. ಈ ಭಾವನೆ, ಕ್ಷಣಕಾಲ, ಲಿಂಗಾಂಗಯೋಗದಲ್ಲಿ ಲಭಿಸುತ್ತದೆ. ಆದರೆ, ಕೂಡಲೆ ಪ್ರತಿಕ್ರಿಯೆಗೆ ಪ್ರಾರಂಭವಾಗುತ್ತದೆ. ಈ ಕಾರಣದಿಂದಲೆ ಇದನ್ನು, ಬಲ್ಲವರು ಬಯಲು ಎಂದರು.

ವೀರ್ಯೋತ್ಸರ್ಜನವು ಹೀಗೆ ಉಭಯವಿಧ ಮನೋಭಾವಕ್ಕೆ ಪ್ರೇರಕವಿರುತ್ತದೆ ಸ್ಥಳ (ಕಣ್ ಮತ್ತು ಕಾಲ ಗಣ್) ಇವೆರಡೂ ಒಂದರಿಂದ ಒಂದು ದೂರವಾಗಲು ಹಾರಯಿಸುವುದೇ ಇಲ್ಲ! ಆದರೆ, ಈ ಭೌತಕೂಟಕ್ಕೆ ಮಿತಿ ಇದೆ! ವಿಷಾದಯೋಗದ ಪ್ರಾರಂಭವು ಇಲ್ಲಿಯೇ ಇದೆ. ಈ ಕಣ್ (ಸ್ಥಲ), ಮತ್ತು ಗಣ್ (ಕಾಲ) ಇವು ಎಡೆಬಿಡದೆ ಕಣ್ಣೇ ಆಗಿ ಇರುವ ಉತ್ಕಟ ಭಾವನೆಯಿಂದಾಗಿ, ಬರುವ ನಿರಾಶೆಯಲ್ಲಿ ಪುರೂ-ರವ : ಬೊಬ್ಬೆ ಇಡುತ್ತ ಕಾಡು-ಮೇಡು ಹುಚ್ಚನಂತೆ ಅಲೆಯ ತೊಡಗುತ್ತಾನೆ. ಪುರೂ-ರವ ಅತ್ಯಂತ ಕೂಗುವ ಮನೋಭಾವ ಸೂಚಕ ಹೆಸರು. ಲಿಂಗಾಂಗಯೋಗದ ಅತೃಪ್ತಿ ಸೂಚಕ ಸಾರ್ವಕಾಲಿಕ ಪ್ರತಿಮೆಯಾಗಿದೆ ಇದು. ಇದಕ್ಕಾಗಿ ಮನುವೈವಸ್ವತ ಸಂಪ್ರದಾಯವು ದಾಂಪತ್ಯಧರ್ಮಕ್ಕೆ ಕುಟುಂಬ ಸಂಸ್ಥೆಗೆ ಮಹತ್ವವನ್ನು ಕೊಟ್ಟಿದೆ. ಆದರೆ, ಈ ಲಿಂಗಾಂಗಯೋಗದ ಅತೃಪ್ತಿಯು ನಿತ್ಯವಿರುವುದರಿಂದ, ಮುಂಡಕ (ಲಿಂಗ) ಉಪನಿಷತ್ತು, ಹಾಗೂ (ಮಾಂಡೂಕ್ಯ-ಯೋನಿ) ಉಪನಿಷತ್ತು, ಈ ಜೀವಿತದೊಳಗಿನ ಅತೃಪ್ತಿಯನ್ನು ದೂರಮಾಡಿ ನರ(ಳ) ಸಂಪ್ರದಾಯರನ್ನು ಅಮರವಾಗಿ ಉಳಿಸಿಕೊಳ್ಳಲು, ಈ ಮಂತ್ರ, ಮಾಟದ ಹಂಚಿಕೆ ಹುಡುಕಿವೆ. ಅಣಿಮಾದಿ ಸಿದ್ಧಿಗಳ ಆಶೆ ಒಡ್ಡಿವೆ. ಮಾನವಧರ್ಮಕ್ಕೆ, ದಾಂಪತ್ಯಧರ್ಮಕ್ಕೆ, ಸಮಾಜಧರ್ಮಕ್ಕೆ, ಅಪಚಾರ ಬಗೆದಿವೆ. ಎಲ್ಲ ಉಪನಿಷತ್ತುಗಳು ಈ ಹಾದಿಯವೇ ಇದ್ದರೂ, ಇವುಗಳಲ್ಲಿ ಮಂಡೂಕ>ಮಾಂಡೂಕ್ಯ ಶ್ರೇಷ್ಠ ಎಂದು ಗೌಡಪಾದಾಚಾರ್ಯರೂ, ಶಂಕರಾಚಾರ್ಯರೂ, ಇದನ್ನು ಎತ್ತಿ ಹಾಡಿದ್ದಾರೆ. ರಸಿಕ ಕಾಲಿದಾಸನಿಂದ ಮನುವೈವಸ್ವತನಿಗೆ ಅಲ್ಲ-ಈ ಮಾನವ ಸಂಪ್ರದಾಯಕ್ಕೆ ಆಗಿರುವ ಅಪಚಾರದ ಸ್ಪಷ್ಟೀಕರಣಕ್ಕಾಗಿ ಪ್ರಣವ ಸಾಧನೆಯ ಬಗೆಗೆ ವಿವರಿಸಿ ಹೇಳುವುದು ಅವಶ್ಯವಾಯಿತು.

ಈ ಮನುವು ವೈವಸ್ವತನು, ಈತನು ಪ್ರಕಾಶತತ್ವದ ಉಪಾಸಕರ ಸಂಪ್ರದಾಯದ ಆದರ್ಶಪ್ರತಿಮೆ. ಈ ಸಂಪ್ರದಾಯದ ಆದ್ಯನು ಆದರ್ಶ ಸ್ವರೂಪನೇ ಇರಬಲ್ಲನು. ಇವನು ಪ್ರಣವದ = ಪ್ರಾಣಲಿಂಗದ ಓಂಕಾರ ರೂಪನು ಎಂಬ ಈ ಹೋಲಿಕೆಯು ಅತ್ಯಂತ ವಿಸಂಗತವಿದೆ. ಕಾಲಿದಾಸನಂಥ ರಸಿಕನಿಂದ ಈ ಅನೌಚಿತ್ಯವು ಆಗಬೇಕೆ? ಛಂದಸಾಂ (ವೇದಗಳಿಗೆ) ಪ್ರಣವ = ಓಂಕಾರವು ಹೇಗೋ, ಎಂಬ ಈ ಉಪಮೆಯೇ ಮೂಲದಲ್ಲಿ

ಅಸ್ಥಾನೀಯವಿದೆ ನಿರಾಧಾರವಿದೆ. ಇಂದಿನ ಪಾಠದಲ್ಲಿ ಸಹ ಋಗ್ವೇದದಲ್ಲಿ ನೇರವಾಗಿ ಓಂಕಾರವಿಲ್ಲ : ಯಜುರ್ವೇದದಲ್ಲಿ ಓಂಕಾರವಿದೆ. ಯಜುರ್ವೇದದ ಅಂಗವಾದ ಈಶೋಪನಿಷತ್ತು ಇದಕ್ಕೆ ನಿದರ್ಶನ. ಈಗ ಎಲ್ಲ ಮಂತ್ರಪಾಠವು ಹರಿಃ ಓಂ ಎಂಬ ಮಂತ್ರೋಚ್ಚಾರದಿಂದ ಪ್ರಾರಂಭವಾಗುತ್ತದೆ. ಈ ಓಂಕಾರ ಧ್ಯಾನವು, ಪ್ರಜ್ಞಾನಾಶದ ಒಂದು ಅಪೂರ್ವ ಸಾಧನ ಶ್ರೀವಿವೇಕಾನಂದರಿಗೆ, ಈ ಓಂಕಾರನಾದ ಆಕರ್ಷಣವು ಹೆಚ್ಚಿದ ಹಾಗೆ, ಈ ಅನುಸ್ಥಾನದಲ್ಲಿ ಅವರಿಗೆ ನಾಸಿಕಾಗ್ರದಲ್ಲಿಯೋ - ಭೂಮಧ್ಯದಲ್ಲಿಯೇ ಜ್ಯೋತಿ : ಬೆಳಕು ಕಂಡ ಹಾಗೆ ಎನಿಸತೊಡಗುತ್ತದೆ.

ಶ್ರೀವಿವೇಕಾನಂದರ ಚರಿತ್ರೆಯಲ್ಲಿ, ಈ ಸಾಕ್ಷಾತ್ಕಾರದ ಬಗೆಗೆ ಉಲ್ಲೇಖವಿದೆ. ಶ್ರೀರಾಮಕೃಷ್ಣರ ಪರಿಚಯವಾಗುತ್ತದೆ. ಇಬ್ಬರೂ ಒಬ್ಬರಿಂದೊಬ್ಬರು ಪರಸ್ಪರ ಆಕರ್ಷಿತರಾಗುತ್ತಾರೆ : ನರೇಂದ್ರನು ಇನ್ನೂ ಶಿಷ್ಯನೆಂದು ದೀಕ್ಷೆ ಪಡೆದಿರಲಿಲ್ಲ. ಆ ಸಂಧಿಕಾಲದಲ್ಲಿ, ಈತನು ಓಂಕಾರ ಧ್ಯಾನವನ್ನು ತನ್ನ ಪಾಡಿಗೆ ತಾನು ಒಳ್ಳೇ ತನ್ಮಯತೆಯಲ್ಲಿ ಪ್ರಾರಂಭಿಸಿರುತ್ತಾನೆ. ಬಿಲ್ವವೃಕ್ಷದ ಕೆಳಗೆ ಕುಳಿತು, ಒಮ್ಮೆ ಧ್ಯಾನಸ್ಥನಾದಾಗ ನರೇಂದ್ರನಿಗೆ, ಈ ಅಪೂರ್ವ ಅನುಭವವು ಥಕ್ಕನೆ ಪ್ರಾಪ್ತವಾಗುತ್ತದೆ. ಈ ತನ್ನ ಪ್ರಗತಿಯನ್ನು ನರೇಂದ್ರನು, ಶ್ರೀ ರಾಮಕೃಷ್ಣರ ಎದುರು ನಿವೇದಿಸುತ್ತಾನೆ. ಆಗ, ಪರಮಹಂಸರು, ಈ ತರುಣನಿಗೆ ಬುದ್ಧಿ ಹೇಳುತ್ತಾರೆ : ಗುರು ದೀಕ್ಷೆಯಿಲ್ಲದೆ, ಈ ಮಂತ್ರೋಚ್ಚಾರ ಸಾಧನೆಯು ಅಪಾಯಕರ. ನಿನ್ನನ್ನು ಈ ಧ್ಯಾನವು ಸರಿಯಾದ ಮಾರ್ಗದಲ್ಲಿಯೇ ಮುಂದುವರಿಸಿಕೊಂಡು ಹೋದೀತೆಂಬ ಭರವಸೆಯು ಇಲ್ಲ. ಈ ಕಾರಣದಿಂದ ಈ ದಾರಿಗೆ, ಈಗಲೇ ಹೋಗಬೇಡ, ಎಂದು ಎಚ್ಚರಿಸಿದ್ದಾಯಿತು.

ವೈವಸ್ವತ ಮನುವಿನ ಸಂದರ್ಭದಲ್ಲಿ, ಪ್ರಣವಃ ಛಂದಸಾಂ ಇವ ಎಂಬ ಈ ಉಪಮೆಯು ಅನುಚಿತವಿರುವುದು ನಿಶ್ಚಿತವಿದೆ. ಏಕೆಂದರೆ ಈ ಪ್ರಣವವು, ಕತ್ತಲಿನ ಗವಿಯ ಕಡೆಗೇ ತಳ್ಳಿಕೊಂಡು ಹೋಗುವ ಅಂತಃಶಕ್ತಿಯ ಮಂತ್ರವಾಗಿದೆ. ಈ ಓಂಕಾರವು ಪ್ರಜ್ಞೆಯನ್ನು ಬಧಿರಗೊಳಿಸುತ್ತದೆ: ಇದನ್ನು ಮಾಂಡೂಕ್ಯ ಉಪನಿಷತ್ತು ಒಪ್ಪಿಕೊಳ್ಳುತ್ತದೆ. ಹಾಗಾದರೆ, ಈ ವೈವಸ್ವತ ಮನುವಿಗೆ ಸಮರ್ಪಕವಾದ ಔಚಿತ್ಯಪೂರ್ಣವಾದ ಬೇರೊಂದು ಉಪಮೆಯು ಯಾವುದಾದರೂ ಇರಬಹುದಷ್ಟೆ? ಇದು ಯಾವುದು? ಮನುವು ಹೇಗೆ ಆದ್ಯನೋ, ಹಾಗೆ, ಜಾತವೇದ ಅಗ್ನಿಯೂ ಆದ್ಯನು. ಜಾತ (ಅದೇ ಹುಟ್ಟಿರುವ) ಈ ಅಗ್ನಿ ಸ್ವರೂಪವೇದವು; Wisdom ಆದ್ಯವಿದೆ. ಈ ಉಪಮೆಯಿಂದ ಈ ವೈವಸ್ವತ ಮನುವು ಸಾಕ್ಷಾತ್ ಜಾತವೇದ ಅಗ್ನಿರೂಪನು ಆಗುತ್ತಿದ್ದಾನೆ. ಮಾನವರ ಪ್ರಾದುರ್ಭಾವವು ಆದದ್ದು ಈ ಜಾತವೇದ ಅಗ್ನಿರೂಪ Wisdom= ಪ್ರಜ್ಞಾ ವಿವೇಕದೊಡನೆ. ಆದಕಾರಣ ಈ ಔಚಿತ್ಯವನ್ನು ಅರಿಯಲು ಅರಿಸ್ಟಾಟಲನ ಮನನೀಯ ವಿಚಾರಗಳನ್ನು ಸ್ಮರಿಸಿಕೊಳ್ಳಬಹುದು.

> For the absolute mind and highest in the human mind are similar in nature[೧೪]

ಜೀವನ ವಿಕಾಸದ ಪ್ರಕ್ರಿಯೆಯಲ್ಲಿ, ಆಕಾಶದಲ್ಲಿ (ಅಂತರಿಕ್ಷದ ಅವಕಾಶದ ಟೊಳ್ಳಿನಲ್ಲಿ ಅಲ್ಲ) ಪ್ರಾದುರ್ಭವಿಸಿರುವ ವೈವಸ್ವತ = ಸವಿತೃ ಈ Absolute mind ಮತ್ತು, ಭಜಕ ಮನು-ಜನ ಮನಸ್ಸು ಈ ಮನಃಶಕ್ತಿಯೊಳಗಿನ ಅತ್ಯುಚ್ಚ ತತ್ತ್ವವು ಪ್ರಜ್ಞಾರೂಪ ಮನಸ್ಸು ಇವೆರಡರಲ್ಲಿ ಸಂಪರ್ಕ-ಸಂಬಂಧವು ಪ್ರಾರ್ಥನೆಯ ನೆಪದಿಂದ ಶಕ್ಯವಾಗುತ್ತದೆ. ಈ ಪ್ರಾರ್ಥನೆ ವೈಯಕ್ತಿಕ ಸ್ವಾರ್ಥಕ್ಕಾಗಿ ಇದ್ದರೆ ಇದು ಆ ಭಜಕನ ಮನುಷ್ಯತ್ವಕ್ಕೆ ಕೇಡು. 'ಸರ್ವೇಸುಖಿನಃ ಸಂತು, ಸೇರ್ವ ಸಂತು ನಿರಾಮಯಾಃ' ಎಂಬೀ ಬಗೆಯ ಮಾನವ ಕೋಟಿಯ ಕಲ್ಯಾಣದಲ್ಲಿಯೇ ತನ್ನ ಕಲ್ಯಾಣವಿದೆ, ಎಂಬ ನಿಷ್ಠೆಯು ದೃಢವಿರಬೇಕು.

ಈ ಪ್ರಾರ್ಥನೆಯ ಮುನ್ನ ಭೂಃ (ದೇಹ) ಮತ್ತು ಭುವಃ (ಅಂತರಿಕ್ಷ = ಪ್ರಾಣಲಿಂಗ) ಈ ಸ್ಥಲ-ಕಾಲದ ಆಚೆಗಿನ ಸ್ವರ್‌ಪಾತಳಿಯ ಮೇಲಣ ವೈವಸ್ವತ ಅಥವಾ ಸವಿತೃ ಆ Absolute Mind : Nous ಇದರೊಡನೆ ಸಂಪರ್ಕ ಬೆಳಸುವ ಧ್ಯಾನವು ಅವಶ್ಯವಾಗುತ್ತದೆ. ತಾನು ದೇಹವಲ್ಲ, ಪ್ರಾಣಲಿಂಗವಲ್ಲ, ಇಂದ್ರನ ಸಹಕಾರಿ. ಸಮಾಜ - ಸಮಷ್ಟಿ ಪಾತಳಿಯ ಮೇಲಣ ಜೀವನ ಮೂಲ್ಯಗಳ ಸುರಕ್ಷಕನಾದ ಇಂದ್ರನು ತನ್ನಿಂದ ಅಹಿ ವೃತ್ರನ

ಶತ್ರು (ಲೈಂಗಿಕ ಪ್ರಚೋದನೆ) ಹಗಲಿನಲ್ಲಿ ಸಾಮಾಜಿಕ ಜೀವನವನ್ನು ಆಕ್ರಮಿಸದಂತೆ ನೋಡಿಕೊಳ್ಳುವುದು-ತನ್ನ ಕ್ಷೇತ್ರದಲ್ಲಿ-ತನ್ನ ಪಾಲಿನ ಕರ್ತವ್ಯ ಎಂಬ ಜಾಗ್ರತಪ್ರಜ್ಞೆ ಇರುವ ಆವಶ್ಯಕತೆ ಇದೆ ಈ ಮನುಜನಿಗೆ

ಆದರೆ, ಈ ಪ್ರಾರ್ಥನೆಯು ಸಫಲವಾಗಲು, ಮನು ವೈವಸ್ವತನ-ಸವಿತೃವಿನ ಪ್ರತಿಮೆ ಭಗ್ನವಾಗಿರಲಾಗದು. ಕಾಲಿದಾಸನಿಂದ ವೈವಸ್ವತನ ಪ್ರತಿಮಾ ಭಂಜನವಾಗಿದೆ. ಇದರ ಪ್ರತಿಷ್ಠಾಪನೆ ಮರಳಿ ಆಗಬೇಕಿದ್ದರೆ, ಈ ಶ್ಲೋಕವು ಸಮರ್ಪಕವಾದದ್ದು ಇರುವ ಆವಶ್ಯಕತೆಯಿದೆ. ಪ್ರಾಜ್ಞರಿಂದ ಸರಿಪಡಿಸಿಕೊಳ್ಳಲು, ನನ್ನ ಬಲ್ಲ ರೀತಿಯಲ್ಲಿ ಈ ಶ್ಲೋಕವು ಹೀಗೆ ಇರಬಹುದು :

ವೈವಸ್ವತೋಮನುರ್ನಾಮ ಮಾನನೀಯೋ ಮನೀಷಿಣಾಂ।
ಆಸೀತ್ ಕ್ಷಿತೀಸಾಂ ಆದ್ಯಃ ಅಗ್ನಿಃ ಜಾತವೇದ ಇವ।

ಈ ಕಾಲಿದಾಸನು ರಸಿಕ ಮೇಧಾವಿ ಇರುವಂತೆ ಪ್ರಜ್ಞಾವಂತನೂ ಇದ್ದಾನೆ; ಎಂಬಲ್ಲಿ ಸಂದೇಹವಿಲ್ಲ. ಏಕೆಂದರೆ ಅರಿಸ್ಟಾಟಲನು ಹೇಳುವ ಆಕೃತಿ ಹಾಗೂ ಆಶಯಃ ಇವೆರಡರಲ್ಲೂ ಅನ್ಯೋನ್ಯವು ಇರುತ್ತದೆ, ಎಂಬ ಸೂತ್ರವನ್ನೇ ಈತನೂ ಸೊಗಸಾಗಿ ಹೇಳಿದ್ದಾನೆ. 'ನ ತಾದೃಶಾಃ ಆಕೃತಿ ವಿಶೇಷಾಃ ಗುಣ ವಿರೋಧಿನೋ ಭವಂತಿ', ಈ ಸೂತ್ರವನ್ನು ಅರಿತು, ಪ್ರಕಾಶತತ್ತ್ವದ ಈ ವೈವಸ್ವತನನ್ನು, ಕತ್ತಲಿನ ಗವಿಯತ್ತ ತಳ್ಳುವ ಪ್ರಣವ ಮಂತ್ರಕ್ಕೆ ಹೋಲಿಸಿ ಸತ್ಯಕ್ಕೆ ಅಪಚಾರ ಬಗೆದಿದ್ದಾನಲ್ಲ!

ಗ್ರೀಕ್ ಪುರಾತನ ಅನ್ಯಾಕ್ಸಾಗೊರಾಸನೂ ಸುಮಾರಾಗಿ ಇದೇ ರೀತಿಯಲ್ಲಿ ಜಾರಿದ್ದಾನೆ! ಅನ್ಯಾಕ್ಸಾಗೊರಾಸನು Nous : mind ಆದ್ಯತತ್ತ್ವ ಎಂಬುದನ್ನು ಕಾಲಿದಾಸನಿಗಿಂತಲೂ ಸಮರ್ಥ ರೀತಿಯಲ್ಲಿ ವರ್ಣಿಸಿದ್ದಾನೆ. ಆದರೆ ಪ್ರಜ್ಞೆ (Nous) ಇದು ಸ್ಥಳಕಾಲದ ಪರಿಮಿತಿಗೆ ಒಳಗಾದದ್ದು (born up with cosmos) ಎಂಬಲ್ಲಿ ಎಡಹಿದ್ದಾನೆ. ಎಂಥ ಗುಣ, ಅಂಥ ಆಕೃತಿ; ಮನುವು ವೈವಸ್ವತನು ಪ್ರಕಾಶದ ಗುಣವುಳ್ಳವ. ಇಂಥ ಮನುವು ತನ್ನಲಿಯೇ ತಾನು ಮಗ್ನನಾಗಿ ಮೈಮರೆತು, ನಾಗ ಲೋಲರಾಗಿ ಇದ್ದು ಬಿಡಲು ಯಾರನ್ನೂ ಸುಮ್ಮನೆ ಬಿಡಲಾರನು. ವೈಶ್ವಾನರಾಗ್ನಿಯ ಅಂಶವಾದ ಜಾತವೇದ ಅಗ್ನಿರೂಪ ಈ ಮನು = ಮಾನವನು, ಸಮಾಜ-ಸಮಷ್ಟಿಯ ನೆಮ್ಮದಿಗಾಗಿ ಹೋರಾಡುವಲ್ಲಿಯೇ ಕೃತಾರ್ಥತೆಯನ್ನು ಕಾಣಬಲ್ಲನು. ಈ ಕಾಲಿದಾಸನೇ ಹೇಳಿದ್ದೂ ಉಂಟು : ಆಕಾರಃ ಸದೃಶಃ ಪ್ರಜ್ಞಃ ಈ ಮನು-ಮಾನವರು ಎಂದೂ, ಪ್ರಕಾಶಯುಕ್ತ ತೇಜಃಪುಂಜ ಪ್ರಜ್ಞನು, ಓಂಕಾರ = ಪ್ರಣವನಾದದಲ್ಲಿ ಮೈಮರೆಯುವಲ್ಲಿ ಧನ್ಯತೆಯನ್ನು ತಾಳಲು ಶಕ್ಯವೇ ಇಲ್ಲ. ಓಂಕಾರ, ಪ್ರಣವ ಇದು ಪ್ರಾಣಲಿಂಗ ಚೇತಸದ ಪಾತಳಿಯಲ್ಲಿ ಎಂದರೆ ಏಕಾಂತದ ಕತ್ತಲಿನ ಗುಹೆಯಲ್ಲಿ ಹೊಕ್ಕು ಇರುವ ಸ್ವಭಾವವನ್ನೇ ಪೋಷಿಸಬಲ್ಲುದು. ಆದಕಾರಣ, ಈ ಪ್ರಣವ: ಓಂಕಾರ ಇದು, ಕತ್ತಲನ್ನೇ ಪ್ರಚೋದಿಸಬಲ್ಲ ಚಂದ್ರನ (ನಾಗ; ಚಂದ್ರ: ಲಿಂಗ) ಪಾತಳಿಯತ್ತ ತಳ್ಳಿಕೊಂಡು ಹೋಗುವ ಅಂತಃಶಕ್ತಿಯ, ಭಯಾನಕ ಮಂತ್ರವಾಗಿದೆ. ಸಂಸಾರವನ್ನು ತೊರೆದು ಅರಣ್ಯವಾಸಿಗಳಾಗುವ ಬಾವಾ, ಭೈರಾಗಿಗಳ ಸಂಪ್ರದಾಯವಿದು. ವಿರಕ್ತ ಸಂನ್ಯಾಸಿಗಳು ಈ ಪ್ರಣವದ ಭಕ್ತರು ಇರುತ್ತಾರೆ.

ಆಕೃತಿ ಮತ್ತು ಗುಣ ಇವೆರಡರಲ್ಲಿ ಅನ್ಯೋನ್ಯವಿರುತ್ತದೆ. ಎಂಥ ಗುಣ, ಅಂಥ ಆಕೃತಿ. ಗುಣವೇ ಕೃತಿಗೆ ಪ್ರೇರಿಸುತ್ತದೆ. ಈ ತತ್ತ್ವವನ್ನು ಅರಿತ ಕಾಲಿದಾಸನು ರಾಮ-ಚಂದ್ರನನ್ನು, ಇವನ ವಂಶವನ್ನು ಎಂದರೆ ನರ(ಳ)ರನ್ನು ಸೂರ್ಯ-ವಂಶ ಲಲಾಮ ಎಂದು ನಂಬಿಸಲು ಈ ಅಭಿಚಾರ ಕೃತ್ಯ ಮಾಡಿದ್ದಾನೆ, ಎಂದು ಬಗೆಯ ಬೇಕಾಗುತ್ತದೆ. ಪುಣ್ಯಶ್ಲೋಕ ವೈವಸ್ವತ ಮನುವಿಗೆ ಬದಲು, ಪುಣ್ಯಶ್ಲೋಕದ ಯಾದಿಯಲ್ಲಿ ಈಗ ಇರುವ ಹೆಸರುಗಳು ಯಾವುವು ? "ಪುಣ್ಯಶ್ಲೋಕೋ ನಳೋ (ರೋ) ರಾಜಾ, ಪುಣ್ಯಶ್ಲೋಕೋ ಯುಧಿಷ್ಠಿರಃ ಪುಣ್ಯಶ್ಲೋಕಾ ಚ ವೈದೇಹೀ ಪುಣ್ಯಶ್ಲೋಕೋ ಜನಾರ್ದನಃ" ಪ್ರಜ್ಞಾವಂತನು ಮತ್ತು ಬುದ್ಧಿವಂತನು ಇರುವ ಈ ಕಾಳಿದಾಸನು, ತನ್ನ ಪ್ರಜ್ಞೆಗೆ (Conscience) ಪ್ರಾಮಾಣಿಕನಾಗದೆ, ತನ್ನ ಬುದ್ಧಿಗೆ ಎಂದರೆ ಅಂತರ್ಆ-ತ್ಮನ್ ಪರಮ ಆತ್ಮನ್ ಎಂಬ ಭಗ-ವಂತನಿಗೆ ಪ್ರಾಮಾಣಿಕನಾಗಿರುವುದಾಗಿ ಬಗೆಯದೆ ಗತಿ ಇಲ್ಲ! ಭಗವದ್ಗೀತೆಯ ಭಗ-ವಂತನು ಮಾಡಿರುವ ಭಾನಾಮತೀ ಪ್ರಯೋಗದ ಪರಿಣಾಮಕ್ಕೆ ಕಾಲಿದಾಸನು ಬಲಿ ಆಗಿದ್ದಾನೆ.

"ಇಂದ್ರಿಯಾಣಿ ಪರಾಣಿ ಆಹುಃ ಇಂದ್ರಯೇಭ್ಯಃ ಚ ಪರಂ ಮನಃ" ಆದರೆ ಪ್ರಜ್ಞೆಯ ಅಂಗವಾದ ಮನಸ್ಸಿಗಿಂತಲೂ ಬುದ್ಧಿ ಶ್ರೇಷ್ಠವಂತೆ! ಮನಸಃ ತು ಪರಾಬುದ್ಧಿಃ ಈ ಮೋಸವು ಮಹಾತ್ಮಾಜೀ ಮಾತ್ರವಲ್ಲ, ಲೋಕಮಾನ್ಯರಿಗೂ ಗಮನಕ್ಕೆ ಬರಲಿಲ್ಲ! ಪ್ರಜ್ಞೆಯನ್ನು ಸ್ಥಿತ = ಸ್ಥಗಿತ ಮಾಡಲು ಹೇಳಿರುವ ಉಪದೇಶವು ಈ ಮನುಜರನ್ನು ನರ(ಳ)ರನ್ನಾಗಿ ಮಾಡಿದೆ: ಗೀತಾಭಕ್ತಿಯ, ಈ ದಿವ್ಯಾಧ್ಯಾತ್ಮ ಪಂಥಗಳಿಂದಾಗಿ ಭಾರತದಲ್ಲಿ ಮನುಜರು ಉಳಿದಿಲ್ಲ. ಈ ಕಾರಣದಿಂದಲೇ ಮನು ವೈವಸ್ವತನು, ಭಾರತೀಯ ಆಕಾಶದಲ್ಲಿ ತೊಳಗಿ ಬೆಳಗುತ್ತಿದ್ದರೂ, ಇವನೂ ಕಾಣುತ್ತಿಲ್ಲ! ಪ್ರಣವದ ಪ್ರಭಾವದಲ್ಲಿ, ಇದಕ್ಕೂ ಮೇಲಣ ಪ್ರಕಾಶದ ಪಾತಳಿಯು ಕಾಣಲು ಶಕ್ಯವೇ ಇಲ್ಲ. ಈ ಮೋಸವು ಇನ್ನೂ ಆಳವಾಗಿದೆ. ಉಪನಿಷತ್ತಿನಲ್ಲಿ ಅಂತರಿಕ್ಷ: ಅವಕಾಶ ಇದನ್ನು ಆ-ಕಾಶ(ಪ್ರಕಾಶದ ಪಾತಳಿ) ಎಂದು ನಂಬಿಸಲಾಗಿದೆ. ವೇದದ ಮೋಸವು ಇದೇ ಬಗೆಯದ್ದೇ ಇದೆ. ಸೂರ್ಯೋ ಜ್ಯೋತಿಃ (ಜಹೋಮಿ) ಎಂಬಲ್ಲಿ ಜ್ಯೋತಿ ಇದು ಚಂದ್ರನದೇ ಇದ್ದಿತು. ದೀಪದ್ದು ಜ್ಯೋತಿ! ಆದರೆ, ಸೂರ್ಯನು ಜ್ಯೋತಿ ಎನ್ನುವಾಗ ಈ ಸೂರ್ಯನು ನಾರ-ಅಯನ : ಲಿಂಗದ ಪಾತಳಿಯ ಆದಿ-ತ್ಯನಾಗುತ್ತಾನೆ!

ಪಾಶ್ಚಾತ್ಯ ಪರಂಪರೆಯಲ್ಲಿಯೂ ಪ್ರಜ್ಞಾಪಾತಳಿಯ ನಾಶ ಮಾಡುವಲ್ಲಿ, ಪೈಥಾಗೊರಾಸ ಪಂಥೀಯರು, ಆಬಳಿಕ ಕ್ರೈಸ್ತ ಪಂಥೀಯರು ಯಶಸ್ವಿಯಾಗಿದ್ದಾರೆ. ಇದಕ್ಕೆ ಪ್ರಮಾಣಗಳು ಬೇಕಿದ್ದರೆ ನೋಡಿಕೊಳ್ಳಿ, ಕ್ರೈಸ್ತರಿಗೆ ಕೊಟ್ಟಿರುವ ಈ Warning : "Any Christian who accepted the essentials of Aristotalism must arrive at Conclusions contrary to the Faith".[೧೫] ಇದೇ ಬಗೆಯ ಪ್ರಾಂಜಲ ಒಪ್ಪಿಗೆಯು, ಇನ್ನೊಂದು, ಇಲ್ಲಿದೆ:

> The result of Church encounter with the Suncult of antiquity was nothing less than the dethronement of Helios.
> There had never been a suggestion of Compromise, I mean nothing less that the most brusque and determined correction of all stoics pantheist, or platonistic mystical devotion to the sun into transcendental monism.[೧೬]

ಭಾರತೀಯ ಭಾಗ್ಯ : ಅಂಶತಃ ಆದರೂ, ಈ ಕಾಲಿದಾಸನು, ಈ ಮನುಃ ವೈವಸ್ವತನ ನೆನಹನ್ನು ಇಷ್ಟರ ಮಟ್ಟಿಗಾದರೂ ಉಳಿಸಿಕೊಂಡು ಬಂದಿದ್ದಾನೆ! ಪಾಶ್ಚಾತ್ಯ ಪರಂಪರೆಯಲ್ಲಿ ಕ್ರೈಸ್ತ-ಹಿಬ್ರೂ ಪಂಥೀಯ ನರ(ಳ) ಸಂಪ್ರದಾಯಗಳು Nous : mind ಇದರ ನೆನಹನ್ನೇ ತೊಡೆದು ಹಾಕಿವೆ! ತೀರ ಇತ್ತೀಚೆಗೆ ಇಪ್ಪತ್ತನೆಯ ಶತಕದ ಮಧ್ಯದ ತರುವಾಯ, ಫ್ರಾನ್ಸಿನ ಸಂಶೋಧಕ ಡಾ. ಪಿರ್ರೆ ಟೈವಾರ್ಡ ಡಿ ಚಾರ್ಡಿನ್ ಇವರಿಗೆ Noosphere ಈ ಪಾರಿಭಾಷಿಕ ಪದದ ಆವಶ್ಯಕತೆಯು ಉಂಟಾಗುತ್ತದೆ. ಆಗ ಗ್ರೀಕ್ ಪುರಾತನ ಪರಂಪರೆಯೊಳಗಿನ Nous ಈ (ಪ್ರಜ್ಞಾ)ತತ್ತ್ವ ಸೂಚಕ ಪಾರಿಭಾಷಿಕ ಪದದ ನೆನಪು ಬರುತ್ತದೆ! ಈ ಮಾನವ ಜೀವನದ ಅರ್ಥ ಮಾಡುವಾಗ ಜೀವಿತದ ಪಾತಳಿಯ (Biosphere) ಮೇಲಿಂದ ಮಾನವ ಭಾಷೆ ಹೇಗೆ ಮೈವೆತ್ತಿತು ತಿಳಿಯುವುದಿಲ್ಲ. ಇಲ್ಲಿ ಜೀವನಮೌಲ್ಯಗಳ ಅರಿವೂ ಇಲ್ಲ. ಕೇವಲ ಲೈಂಗಿಕ ಪ್ರಚೋದನೆಯ ಈ ಬಾಳಿಗೂ ಮೇಲಣ ಹಂತದ ಪಾತಳಿಯು ಒಂದು ಇರಲೇಬೇಕು. ಮಾನವನಿಗೆ ಭಾಷೆ, ಸಂಸ್ಕೃತಿ, ಶಾಸ್ತ್ರಾದಿಗಳು ಇವುಗಳ ರಚನೆಗೆ ಅವಶ್ಯ ಪ್ರೇರಣಕೇಂದ್ರವು ಈ Nous :mind ಪಾತಳಿಯಿಂದ ಲಭಿಸುತ್ತಿದೆ. ಆದಕಾರಣ, ಜೀವನದ ವಿಚಾರದಲ್ಲಿ ಈ Nous : Mind ಪಾತಳಿಯನ್ನು ಲೆಕ್ಕಿಸಲೇಬೇಕು, ಎಂಬ ನಿಷ್ಕರ್ಷಕ್ಕೆ ತಲುಪಿದ್ದಾಯಿತು.

ಫ್ರಾನ್ಸಿನ ಈ ಸಂಶೋಧಕರ Noosphere ಈ ಪಾರಿಭಾಷಿಕ ಪದವು ಅತ್ಯಂತ ಉಚಿತವಿದೆ, ಎಂಬ ಖಾತ್ರಿ ಆದ ಬಳಿಕ ಡಾ. ಜ್ಯೂಲಿಯಸ್ ಹಕ್ಸ್ಲೆ, ಬ್ರಿಟಿಷ ಸಂಶೋಧಕನೂ ಈ ಪಾರಿಭಾಷಿಕ ಪದವನ್ನು ಸ್ವಾಗತಿಸಿದ್ದಾನೆ. ಅತ್ಯಂತ ವಿಷಾದದ ಸಂಗತಿಯೆಂದರೆ, ಗ್ರೀಕ್ ಸಂಸ್ಕೃತಿಯಲ್ಲಿ Nous :mind ಇದರ ನೆನೆಹು

ಎಂತೋ ಉಳಿದು ಬಂದಿರುವಂತೆ, ಭಾರತೀಯ ಪೂರ್ವ ಪರಂಪರೆಯಲ್ಲಿ ಜಾತವೇದ ಅಗ್ನಿ ಅಥವಾ ಪ್ರಜ್ಞೆ ಇದರ ಹಿರಿಮೆಯ ಸೂಚಕ ಸ್ಪಷ್ಟವಾದ ನಿರ್ದೇಶಗಳು, ನನಗಂತೂ ಎಲ್ಲಿಯೂ ಕಾಣಲು ಸಿಕ್ಕಿಲ್ಲ! ಅಲ್ಲದೆ, ಈ ಮನುವೈವಸ್ವತನಿಂದಲೇ (ಭಾರತೀಯ ಪರಿಭಾಷೆಯಲ್ಲಿ ಹೇಳಬೇಕಾಗುತ್ತದೆ, ಕ್ಷಮಿಸಿ) ಮಾನವಧರ್ಮ: ಸಂಸ್ಕೃತಿ ಪ್ರಾರಂಭವಾಗಿದೆ. ಭಾಷೆ- ಸಂಸ್ಕೃತಿಯನ್ನು ಪ್ರೇರಿಸಿರುವ ಈ ಮನುವಿಗೆ, ನಾವು ಎಷ್ಟು ಕೃತಜ್ಞರಿದ್ದರೂ ಕಡಿಮೆ ಎಂಬ ಪ್ರಜ್ಞೆ ಮೂಡಿದ್ದು ನನ್ನಲ್ಲಿ ಇತ್ತಿಚೆಗೆ.

ಇಬ್ಬರು ಮನುಗಳು ಭಾರತೀಯ ಪೂರ್ವ ಪರಂಪರೆಯಲ್ಲಿ! ಎಂಬ ಈ ಸೋಜಿಗದ ಆಘಾತವಾದದ್ದು ೧೯೭೫ರಲ್ಲಿ ಪ್ರವಾಹ ಪತಿತರ ಕರ್ಮ: ಹಿಂದೂ ಎಂಬ ಧರ್ಮ ಇದರ ಅನ್ವೇಷಣೆಯಲ್ಲಿ! ವೈವಸ್ವತ ಮತ್ತು ಸ್ವಾಯಂಭುವ ಈ ಇಬ್ಬರು ಮನುಗಳಲ್ಲಿ ಎರಡನೆಯ ಮನು ಸ್ವಯಂಭೂ ನರ(ಳ) ನಿದ್ದಾನೆ. ಈ ಕಾರಸ್ಥಾನದ ಹಿಂದೆ ಭಗವತ್ ಗೀತೆಯ ಭಗವಂತ ಕೃಷ್ಣನ ಸಂಪ್ರದಾಯದ ಪುರಾತನರ ಕೈವಾಡವಿದೆ, ಎಂಬ ಖಾತ್ರಿಯಾಯಿತು. ಈ ಮೋಸದ ದೃಶ್ಯವು ಉಂಟುಮಾಡಿದ ವಿಷಣ್ಣ ಮನೋಭಾವದಲ್ಲಿ ಇದ್ದಾಗ, ಕಾಲಿದಾಸನ ವೈವಸ್ವತನೇ ಆದ್ಯನು ಎಂಬ ನಿಃಸಂದಿಗ್ಧ ಉಲ್ಲೇಖವು, ನನ್ನನ್ನು ಸಂದೇಹಗಳ ಕೊಳಚೆಯೊಳಗಿಂದ ತಂದಿತು. ಸಂದೇಹಗಳ ಈ ಕೊಳಚೆ ಯಾವುದು? ಈ ಅದ್ಯ ಮನುವನ್ನು ಸ್ಥಾನಭ್ರಷ್ಟಮಾಡಿ, ಈ ಅಗ್ರಪಟ್ಟವನ್ನು, ಸ್ವಯಂಭೂ ಮನುವಿಗೆ ಕೊಟ್ಟಿದ್ದಾರೆ, ಈ ದಕ್ಷಿಣ ಕಪರ್ದಗಳ ಪಂಥದವರು. ವೈವಸ್ವತನಿಗೆ ೭ನೆಯ ಸ್ಥಾನವಂತೆ!*

ಈ ಲೇಖಕರಿಗೆ ಸ್ವಯಂಭೂ*ಮನು, ವೈವಸ್ವತಮನು ಇವರೊಳಗಿನ ಭೇದವೂ ಗೊತ್ತಿಲ್ಲ! ಮನುಗಳ ಸಂಖ್ಯೆ ಎಷ್ಟು? ಈ ಕೊಳಚೆ ಅಗಾಧವಿದೆ! ಸ್ವಯಂಭೂ ಪರಂಪರೆಯ ಈ ಧರ್ಮಶಾಸ್ತ್ರವನ್ನು ಕ್ರೋಢೀಕರಿಸಿದನು (Codification) ಭೃಗು ಹೆಸರಿನ ಒಬ್ಬ ಋಷಿಯೆಂದು ಸಂಪ್ರದಾಯ ಹೇಳುತ್ತದೆ. ಆದರೆ, ಈ ಭೃಗು>ಭಾರ್ಗವರು, ಮಹಾಭಾರತದಲ್ಲಿ ಕೈಯಾಡಿಸಿದ್ದಾರೆ, ಎಂದು ಸುಕಟಣಕರರು ಸಪ್ರಮಾಣವಾಗಿ ಸಿದ್ಧಪಡಿಸಿದ್ದಾರೆ. ಈ ಭೃಗು ಎಂಬವನು ಒಬ್ಬನು, ರಾತ್ರ್ಯಾಧಿಪತಿ ಆದ ಆದಿತ್ಯ ವರುಣನ ಪುತ್ರನಂತೆ : ತೈತ್ತಿರೀಯದಲ್ಲಿ ಬರುತ್ತಾನೆ! ಭೃಗುಃ ವೈ ವಾರುಣಿಃ ಪಿತರಂ ಉಪಸಸಾರ. ಆದರೆ, ಈ ಭೃಗು ಎಂಬುದು ಶುಕ್ರ(ರೇತ) ಆಚಾರ್ಯನ ಇನ್ನೊಂದು ಹೆಸರು! ಈ ಭೃಗುವು, ಮನುಗಳು ಸಪ್ತರು ಎಂದು ಹೇಳುತ್ತಾನೆ. ಈ ಹೇಳಿತದಲ್ಲಿ, ಇರುವ ಅಂತಃಸಂಗತಿಯು ಸ್ಪಷ್ಟವಿದೆ: ಪ್ರಾಣಾಃ ಸಪ್ತ ಎಂಬ ನಂಬುಗೆಯು ಉಂಟು. ಸಪ್ತ ಈ ಸಂಖ್ಯೆಯು ಪ್ರಾಣಲಿಂಗ ಸೂಚಕವಿದೆ. ಈ ಪ್ರಾಣಲಿಂಗ ಸಂಪ್ರದಾಯದ ಮನು ಆದ್ಯನು ಸ್ವಯಂಭೂ ವೇ ಇರಬಲ್ಲನು!

ಮನುಗಳು ಸಪ್ತರು ಎಂದು ಹೇಳುವ ಈ ಸಂಪ್ರದಾಯವು ಎಷ್ಟು ಪ್ರಾಚೀನ? ಏಕೆಂದರೆ ಗೀತೆಯು ಹೇಳುತ್ತದೆ, 'ಮಹರ್ಷಯಃ ಸಪ್ತಪೂರ್ವೇ, ಚತ್ವಾರಃ ಮನವಃ ತಥಾ' ಪೂರ್ವೇ ಎಂಬ ಸಪ್ತಸಂಖ್ಯೆ ಸಪ್ತಋಷಿ ಸೂಚಕವಿದೆ. ಪ್ರಾಣಾಃ ವಾ ಋಷಯಃ ಎಂದು ಬೃಹದಾರಣ್ಯಕವು ಹೇಳುತ್ತದೆ! ಸುಳ್ಳನ್ನು ಅಭಾವವನ್ನು ಭಾವಾತ್ಮಕವೆಂದು ನಂಬಿಸಲು ಈ ಉಪನಿಷತ್ತು ಹುಟ್ಟಿದೆ. ಸಪ್ತಋಷಿ = ಪ್ರಾಣ, ಸಪ್ತಮನು = ಪ್ರಾಣ. ಒಂದೇ (ಲಿಂಗ) ಶಕ್ತಿಯೇ ನಾನಾ ರೂಪ ತಾಳಿಲ್ಲವೆ? ಈ ಮನು ಸಂಖ್ಯೆ ಏಳೇ ಸಾಲದೆ ಚತುರ್ದಶ ಮನು ಎಂಬ ರೂಢಿಯೂ ಒಂದು ಇತ್ತು. ೧೪ = ಚತುರ್ದಶ ಈ ಸಂಖ್ಯೆ ಮನುಗಳ ಸೂಚಕವೇ ಆಗುತ್ತದೆ, ಎಂದು ಕೋಶ ಹೇಳುತ್ತವೆ!

ಋಗ್ವೇದದಲ್ಲಿ ಬರುವ ಮನು ನಾಮಗಳಲ್ಲಿ ವೈವಸ್ವತನಲ್ಲದೆ ಇನ್ನೂ ೪-೫ ಹೆಸರೂ ಉಂಟು! ಈ ಸಪ್ತ ಮನುಗಳಲ್ಲಿ, ವೇದದ ಹೆಸರೂ ಇಲ್ಲ! ಮಹಾಭಾರತದ ನಾರಾಯಣೋಪಾಖ್ಯಾನದಲ್ಲಿ, ಶ್ರೀ ಮನ್ನಾರಾಯಣನಿಗೆ ಸೃಷ್ಟಿನಿರ್ಮಾಣಕಾರ್ಯದಲ್ಲಿ ನೆರವಾದ ಸಪ್ತರ್ಷಿಗಳ ಸಂಗಡ ಒಬ್ಬನೇ ಮನು ಇದ್ದಾನೆ! ಈ ಪಾಠ ಪರಂಪರೆಗಳಲ್ಲಿ

---

* ನಾನಾ ಹೆಸರಿನ ಮನುಗಳನ್ನು ಕಲ್ಪಿಸಿ, ಇದೇ ವಾಸ್ತವ ಸತ್ಯ ಎಂದು ನಂಬಿಸಲಾಗಿದೆ. ಈ ಪುಸ್ತಕವು, ಭಾರತೀಯ ವಿದ್ಯಾಭವನ ಮುಂಬೈ ಇವರಿಂದ ಪ್ರಕಟತವಾಗಿದೆ. Manu : The originer of Social thought (೧೯೭೦). ಇದರ ಲೇಖಕರು ಶ್ರೀ ಕೇವಲ ಮೊಟವಾನಿ, ಶ್ರೀಮಾನ್ ದಿವಾಕರ ರಂಗನಾಥ ಈ ಗ್ರಂಥದ ಸಂಪಾದಕರು. (ಸಂ.)

ಯಾವುದನ್ನು ನಂಬುವುದು? ದಪ್ತರೀ ಎಂಬ ವಿದ್ವಾಂಸರು, ಈ ಮನುಗಳ ಮೇಲಿಂದ ನಮ್ಮ ಸಂಸ್ಕೃತಿಯ ಪ್ರಾಚೀನತೆಯ ಕಾಲವನ್ನು ಅರಿಯುವ ಪರಿಶ್ರಮ ಪಟ್ಟಿದ್ದಾರೆ! ಆದರೆ, ಕಾಲಿದಾಸನಿಂದ, ನನ್ನ ಮಟ್ಟಿಗೆ ಈ ಸಂದೇಹಗಳ ಉರುಲಿನೊಳಗಿಂದ ಪಾರಾದೆ. ವೈವಸ್ವತ ಮನುವೇ ಆದ್ಯನು ಎಂದು ಹೇಳಿದ್ದಾನೆ. ಅಲ್ಲದೆ, ಆಧುನಿಕ ಸಂಶೋಧಕರ ಮಾನವನ ಪ್ರಾದುರ್ಭಾವದ ಶೋಧದಂತೆ, ಮನು=ಮಾನವನು ಆದ್ಯನು ವೈವಸ್ವತನೇ ಇರಲಿಕ್ಕೆಬೇಕು ಗ್ರೀಕ್ Nous : mind ಪರಂಪರೆಯಿಂದಲೂ ಇದು ದೃಢಪಡುತ್ತದೆ. ವೇದದ ಕವಿಗಳು, ಮನುಃ ಪಿತಾ ಎಂದು ಹೇಳುವ ವಾಡಿಕೆಯಿದೆ. ಪಿತಾ ಎಂದರೆ ಪಾಲಯಿತಾ ಎಂಬ ಅರ್ಥವೇ ಹೊರತು ಪಿತಾ ಜನಕತಂದೆಯ ಸೂಚಕ ಪದವಲ್ಲ.

ಡಾ. ಪಾಂಡುರಂಗ ವಾಮನ ಕಾಣೆ ಇವರು, ಧರ್ಮಶಾಸ್ತ್ರದ ಇತಿಹಾಸ ಎಂಬ ಮಹಾಗ್ರಂಥವನ್ನು ಐದು ಸಂಪುಟಗಳಲ್ಲಿ ಪ್ರಕಟಿಸಿ ಉಪಕಾರಮಾಡಿದ್ದಾರೆ. ಆದರೆ, ಡಾ. ದಾಮೋದರ ಕೋಸಾಂಬಿಯವರು ಅಂದಂತೆ, ಈ ಉಪಕಾರವು ಸಂದೇಹಾಸ್ಪದವಾಗುವ ಭೀತಿಯಿದೆ. ಈ ಮಹಾಮಹೋಪಾಧ್ಯಾಯರಿಗೂ ಸ್ವಯಂಭೂ-ಸ್ವಾಯಂಭುವ ವೈವಸ್ವತ ಈ ಮನುಗಳಲ್ಲಿ ಇರುವ ಅಂತರವು ಗಮನಕ್ಕೆ ಬಂದಿಲ್ಲ! ವೇದದ ಕವಿಗಳು ಮನುವನ್ನು ಪಿತಾ ಎಂದಿದ್ದಾರೆ ಎಂಬುದನ್ನು ಹೇಳಿರುವ ಡಾ. ಕಾಣೆಯವರು ಮನು Father of Human race ಎಂಬೀಬಗೆಯ ಅರ್ಥವನ್ನೂ ಹೇಳುವ ಈ ಸಂಶೋಧಕರು, ತನ್ನ ಮಕ್ಕಳಿಗೆ ಪಾಲು ಹಂಚಿಕೊಡುತ್ತಿರುವ ಒಬ್ಬ ಮನುವಿನ ಉಲ್ಲೇಖಕ್ಕೂ ಬೆಲೆಕೊಟ್ಟು ಅದನ್ನು ನಮೂದಿಸಿದ್ದಾರೆ. ಜನಕ ತಂದೆಯಾಗಿರುವ ಮನು, ಇವನು ಮನು-ಜರ ಪಿತಾ ಮನು ಆಗಲು ಶಕ್ಯವೇ ಇಲ್ಲ ಎಂದು ಸ್ಪಷ್ಟ ಪಡಿಸಲಿಲ್ಲ ಮನುಗಳ ವಿಚಾರವನ್ನು ಹೀಗೆ ಸಂದಿಗ್ಧವಾಗಿಸಿದ್ದಾಗಿದೆ,. ಸಂಶಯಾತ್ಮಾ ವಿನಶ್ಯತಿ ಇಂತು ಭಾರತೀಯರನ್ನು, ಈ ಸ್ವಯಂಭೂ ಮನು ಹೆಸರಿನ ದುಷ್ಟಶಕ್ತಿಯು ಭಗ-ವಂತ ರೂಪ ಲೈಂಗಿಕ ಶಕ್ತಿಯು ಮನು ಸಮಸ್ಯೆಯನ್ನು ಸಂದೇಹದಲ್ಲಿ ಕೊಳೆಯುತ್ತಿರುವಂತೆ, ಅತ್ಯಂತ ನೀಚ, ಘೋರ, ಕಣ್ಕಟ್ಟನ್ನು ನಿರ್ಮಾಣಮಾಡಿದೆ! ಸಂಶಯಾತ್ಮಾ ವಿನಶ್ಯತಿ ಎಂದು ಈ ಕೃಷ್ಣಕಾರಸ್ಥಾನೀ ಭಗವಂತನಿಗೆ ಗೊತ್ತು. ಆದಕಾರಣ, ಈ ಅಮೋಘ ನಾರಾಯಣೀ ಅಸ್ತ್ರವನ್ನು ಎಸೆದು, ಭಾರತೀಯರ ಪ್ರಜ್ಞಾಯುಕ್ತ ಮನಃಶಕ್ತಿಯ ತೇಜೋವಧೆಯನ್ನು ಮಾಡಬಯಸಿದ್ದುದು ಬಯಲಿಗೆ ಬರುತ್ತಿದೆ! ವೈವಸ್ವತಮನು ಸಂಪ್ರದಾಯದ ಅನ್ವೇಷಣೆಯಲ್ಲಿ ಇತಿಹಾಸದ ಧಾರಣೆಯನ್ನು (ಈಖ್ಹಓಊ) ಇದೇ ಬಗೆಯಾಗಿ ಮಾನವರ ಹಂತದ ಇತಿಹಾಸವು ನರ (ಳ) ರ ಜೀವಿತದ ಇತಿಹಾಸವಾಗಿ ಪರಿಣಮಿಸುವಂತೆ ಮಾಡಿರುವ ಭಯಾನಕ ಕೃತ್ಯವನ್ನು ಈ ಮೊದಲು ವಿವರಿಸಿ ಆಗಿದೆ.

ಈ ಎರಡೂ ಕೃಷ್ಣ ಕೃತ್ಯಗಳು, ಜೀವನವಿಶ್ವವನ್ನು ಆಳುವ, ನಿಯಮಕ್ಕೆ ಸುಸಂಗತವಾಗಿಯೇ ಇವೆ. ಪ್ರಾಣಲಿಂಗ ಚೇತಸವು : ಅಸು-ರ=ಚಾಂದ್ರ : ದಾನವ-ಶಕ್ತಿಯ ಈ ಭಗವಂತ ಪಂಥಗಳು, ಈ ಪ್ರಾಣಲಿಂಗ ಪಾತಳಿಯ ಕೇಂದ್ರದಿಂದ ಪ್ರೇರಿತ ನರ(ಳ)ರ ಕೃತಿಗಳು , ಜೀವನವನ್ನು ಜೀವಿತದ ಹಂತಕ್ಕೆ ತಳ್ಳಲು ಆವಶ್ಯಕವಾದ ಕತ್ತಲೆಯನ್ನು = ಅಜ್ಞಾನ, ಸಂದಿಗ್ಧ, ತುರ್ತಪರಿಸ್ಥಿತಿ) ನಿರ್ಮಿಸಬಹುದೇ ಹೊರತು ಇವು ಪ್ರಕಾಶಃ ಪ್ರಜ್ಞೆಯನ್ನಲ್ಲ. ನಮಗೆ ಕಾಣುತ್ತಿರುವ ಈ ಕಣ್ಕಟ್ಟು ಬುದ್ಧಿಯು ನಿರ್ಮಿಸಿರುವ ಅಂತರ್ ವಿಸಂಗತಿಯ ಮಾಯಾಜಾಲ : ಇದು ಜೀವಿತದ ಎಂದರೆ, ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಈ ವಿಭಾಗದ್ವಯ ವೃತ್ತಾಕೃತಿಯ ಅಸ್ತಿತ್ವದ ಪಾತಳಿಗೆ ಸಂಬಂಧಿಸಿದ್ದಾಗಿದೆ.

ಆದರೆ, ಮನುಜನ ಜೀವನದ ಪಾತಳಿಯ ಮೇಲಣ ಪ್ರೇರಣಾ ಕೇಂದ್ರದ ಸಂಪರ್ಕ ಸಾಧಿಸಲು ಶಕ್ಯವಾದರೆ, ಅಂತಃಸಂಗತಿಯು ಹಾಸು-ಹೊಕ್ಕು ಇರುವ ತಾಳಮೇಳದ ತಳಪಾಯದ ಮಾನವಧರ್ಮದ ನೂತನ ಯುಗವು ಮರು ಉದಯವಾಗುವ ಶಕ್ಯತೆಯು ಇಲ್ಲದಿಲ್ಲ. ಆದರೆ, ಬಾಳದಾರಿಯ ನಮ್ಮ ರಥದ ಸಾರಥಿ ಬುದ್ಧಿ=ಭಗವಂತ ಇದ್ದಾನೆ. ಇಂದು ಈ ಭಗವಂತ ಬುದ್ಧಿಯನ್ನು ಸಾರಥಿ ಸ್ಥಾನದಿಂದ ತಳ್ಳಿ, ಅಲ್ಲಿ ಪ್ರಜ್ಞೆಯ ಅಂಗವಾದ ಮನಸ್ಸಿನ ಕೈಯಲ್ಲಿ ಈ ಬುದ್ಧಿರೂಪ ಕಡಿವಾಣವನ್ನು ಒಪ್ಪಿಸುವ ಆವಶ್ಯಕತೆಯಿದೆ. ಈ ಕರ್ತವ್ಯಕ್ಕೆ ತಪ್ಪಲಾಗದು. ಮನುಜತ್ವ ಬೇಕಿದ್ದರೆ. ಡಾ. ಐನ್ಸ್ಟನ್ನರ ದೃಷ್ಟಿಕೋನ ಸೂಚಕ ಈ ಮಾತುಗಳು ಮನನೀಯವಾಗಿವೆ.

> The Search for a harmonious picture in which unusual facts of life shed their paradoxical nature is more intense and fruitful when the scientist comes fully to realise the infinite complexity of the world and at the same time the casual nature of the contradictory, paradoxical phenomena one observes in it.[೧೭]

ಈ ಬಯಲ=ಸ್ಥಳ-ಕಾಲದ ಸಂದರ್ಭದ, ನ್ಯೂಟನ್ನನ Absolute space (ಈಥರ) ಈ ದೃಶ್ಯವು ಅಭಾವರೂಪಿ ಸ್ಥಾಯಿ ಆಗಿದೆ ಎಂದು, ಗಣಿತದಿಂದ ಲೋಕಕ್ಕೆ ತೋರಿಸಿ ಕೊಟ್ಟ ಶ್ರೇಯಸ್ಸು ಪ್ರಜ್ಞಾನೇತ್ರದ ಐನ್ಸಟನ್ನರಿಗಿದೆ. ನರ (ಳ) ಸಂಪ್ರದಾಯಗಳ ಬಯಲನ್ನು (ಕಣ್-ಗಣ್) ಇದನ್ನು ನಂಬಿಸಲು ಮಾಡಿರುವ ಮಾಟವು ಮನು-ಜನ ಪ್ರಜ್ಞಾನೇತ್ರದ ಎದುರು ಹುಸಿಯಾಗದೆ, ಇರಲಾರದು.

ಟಿಪ್ಪಣಿಗಳು

೧. *ಬೃಹದಾರಣ್ಯಕೋಪನಿಷತ್ತು* ೬,೩,೬,
೨. *ಭಗವದ್ಗೀತೆ* ೩.೪೨
೩. *ಕಠೋಪನಿಷತ್ತು* ೩.೪೦
೪. *ಜೈಮಿನೀಯೋಪನಿಷತ್ತು* ಉ. ೧.೫೬.೧
೫. *ಋಗ್ವೇದ ಸಂಹಿತೆ* ೧೨೫.೬
೬. *ಛಾಂದೋಗ್ಯೋಪನಿಷತ್ತು* ೩. ೧೩.೫
೭. *ಭಗವದ್ಗೀತೆ* ೨.೨೦
೮. ***Anaxagoras*** P. 61
೯. ***Ibid*** P. 64
೧೦. *ಋಗ್ವೇದ ಸಂಹಿತೆ* x-೧೨೯.೩
೧೧. H. Frankfort; ***Ancient Egyptian Religion***, 1848 p. 10
೧೨. Zellar p. 46-47
೧೩. *ಕಠೋಪನಿಷತ್ತು* 4.1
೧೪. Firm V. A.; ***A History of Philosophial System*** P. 99
೧೫. ***Ibid*** P. 212
೧೬. Hugo Rehner, 1971; ***Greek myths and Christian mystery*** : Bibel & Tanner, Newyark 1971, P. 93
೧೭. Kuzenetary B.; ***Albert Einstein***, progressive publishers, Mascow, P. 88

ಉಪಸಂಹಾರ

ಇಂದು, ಬುದ್ಧಿ (Reason : intelligence) ಇದುವೇ ಶ್ರೇಷ್ಠ ಎಂದು ನಂಬಿಸಲಾಗಿದೆ? ಮನಸ್ಸಿಗಿಂತಲೂ ಬುದ್ಧಿಯೇ ಶ್ರೇಷ್ಠ (ಮನಸಃ ತು ಪರಾ ಬುದ್ಧಿಃ) ಎಂಬ ಈ ಭಗವಂತನ ಉಕ್ತಿಯು ಮೋಸ ತರುತ್ತಿದೆ! ಆದರೆ ಕಾಲಿದಾಸನಂತಹ ಪೂರ್ವಪರಂಪರೆಗಳನ್ನು ಬಲ್ಲವನು ಹೇಳುತ್ತಾನೆ: ಈ ಕ್ಷಿತಿಯಲ್ಲಿ ಆದ್ಯನು ಮನುಃ ವೈವಸ್ವತನು. ಪ್ರಜ್ಞೆಯ ಅಂಗವಾದ ಮನ : ಶಕ್ತಿಯೇ ಈ ಪ್ರಪಂಚದ ಆದಿಕಾರಣವು ಆಗಿದೆ. ಬುದ್ಧಿ ಬುದ್ಧಿಗೆ ಸಂಬದ್ಧ ಮನಸ್ಸು, ಇದು ಹುಟ್ಟಿದ್ದು, ಪ್ರಜ್ಞೆ: ಮನಸ್ಸಿನ ತರುವಾಯದಲ್ಲಿ. ವಿಕಾಸತತ್ತ್ವದ ಕ್ರಮದಲ್ಲಿ ಪ್ರಜ್ಞೆ-ಮನಸ್ಸು ಇದೇ ಆದಿಯಲ್ಲಿ.

ಈ ಬಾಳಿನಲ್ಲಿ ಎರಡು ಸ್ತರಗಳು ಉಂಟು :

> ಜೀವನ ಜೀವಿತ ಇವೆರಡರಲ್ಲಿ ಇರುವ ಭೇದವನ್ನು ಮರೆಯಿಸಿ ಬಿಡಲಾಗಿದೆ. ವ್ಯಾಸಾದಿಗಳಿಂದ ಈ ಪ್ರಕಾಶತತ್ತ್ವದ *ಪಾತಳಿ. ಹಗಲಿನ ವ್ಯವಹಾರವಾದ ಕಾರಣ ಜೀವನ ರೂಪ ಈ ಅಸ್ತಿತ್ವವನ್ನು ಭಾವಿಸಿ, ಗ್ರಹಿಸಿಕೊಂಡು ಅರಿಯಲು ಶಕ್ಯವಿದೆ. ಈ ಜೀವನವು ಭಾವಾತ್ಮಕ ಇದೆ. ಆದುದರಿಂದ ಅನುಭವವೂ ಶಕ್ಯವಿದೆ.

ಆದರೆ, ಜೀವಿತವು ನಿತ್ಯವಾಗಿ ಅ-ಭಾವಾತ್ಮಕ ಸ್ವರೂಪದ್ದೇ ಉಂಟು. ಆದುದರಿಂದ, ಇದು ಪ್ರಕಾಶದ ಅಭಾವ=ಜೀವನದ ಅಭಾವ=ಕತ್ತಲಿನಂತೆ ಇದೆ. ಈ ಕಾರಣದಿಂದಲೇ ಜೀವಿತವನ್ನು ಭಾವಿಸಿ ಅರಿಯಲು ಶಕ್ಯವಿಲ್ಲ! ಉದಾ : ಜೀವಿತದ ಭಕ್ತರು ಅ-ಮೃತ (ರಸ) ಮೆಚ್ಚಿಕೊಂಡಿರುತ್ತಾರೆ. ಆದರೆ, ಅಮೃತ ಈ ಹೆಸರು ಅ-ಭಾವಾತ್ಮಕವಿದೆ. ಅ-ಮೃತ = ಮೃತವಲ್ಲದ್ದು! ಎಂದರೇನು? ತಲೆ! ಜೀವಂತತನದ - ಜೀವನದ ಅನುಭವಗಳ ಬಲದಿಂದ ಅ-ಮೃತ (೦) ಇದರ ಅರ್ಥವು ಗಮನಕ್ಕೆ ಬರುತ್ತದೆ! ಈ ಅ-ಮೃತ (ರಸ), ಇದು ಶೂನ್ಯ (೦) ದಲ್ಲಿ ಇದೆ ಎಂದರೂ ತಪ್ಪು ಆಗಲಾರದು. ಈ ಜೀವಿತ ದ ಉಪಾಸಕರಲ್ಲಿ ಅ-ಮೃತ ವೇ ತಮ್ಮ ಬಾಳಗುರಿ, ಎಂದು ಹೇಳುವುದುಂಟು. ಮತ್ತು ಸೋಜಿಗದ ಸಂಗತಿಯೆಂದರೆ ಶೂನ್ಯ-ಮಹಾಶೂನ್ಯ ಸಿದ್ಧಿಯೇ ಪರಮ ಪುರುಷಾರ್ಥ ಎಂದೂ ಹೇಳುವ ಮಾತಿನಲ್ಲಿ ಅರ್ಥವು ಇಲ್ಲದಿಲ್ಲ. ಇದನ್ನು ಗೀತೆ ಗುಹ್ಯಸ್ಥ ಅರ್ಥ=ಗುಹ್ಯಾರ್ಥ ಎಂದಿದೆ! ಇದು ಇರುಳಿನ ಸಿದ್ಧಿ! ಆದಕಾರಣ ಹಗಲಿನಲ್ಲಿ, ಮಾತಿನ ಮುಸುಕು, ಈ ಅ-ಮೃತಕ್ಕೆ ಅನಿವಾರ್ಯವೇ ಇದೆ. ಈ ಜೀವಿತವು ಕತ್ತಲನ್ನು ಅಪೇಕ್ಷಿಸುತ್ತದೆ, ಎಂಬುದನ್ನು ಇನ್ನೂ ಒಂದು ಉದಾಹರಣದಿಂದ ಅರಿಯಬಹುದು : ಅಗ್ನಿ ನಾರಾಯಣ = ನೀರಲ್ಲಿ ಇರುವ ಅಗ್ನಿ. ಇದನ್ನು ನೇರ ಭಾವಿಸಿ ಅರಿಯಲು ಅಶಕ್ಯವಿದೆ. ಅತ್ಯಂತ ಶ್ರೇಷ್ಠ ಉಪನಿಷತ್ತು ಎಂದು ನಂಬಲಾಗಿರುವ ಕಠದಲ್ಲಿ ನ-ಚಿಕೇತ ಅಗ್ನಿ ಹೆಸರು ಇದೆ! ಚಿಕೇತ = ತಿಳಿಯಬಲ್ಲ:ನ-ಚಿಕೇತ (ತಿಳಿಯಲು ಆಗದ) ಅಗ್ನಿ!

ಜ್ಞಾತ ಅಗ್ನಿಯ ಸಂದರ್ಭದಿಂದ ಅರಿಯಬಹುದಾದ ಅ-ಜ್ಞಾತ ಅಗ್ನಿಯು: ಇದು. ಆದುದರಿಂದ, ಅ-ಭಾವಾತ್ಮಕ ಅಗ್ನಿ! ಇವನು ಪರಮಾತ್ಮನಂತೆ ವಿಶ್ವದಲ್ಲೆಲ್ಲ ತುಂಬಿದ್ದಾನಂತೆ! ಕತ್ತಲಲ್ಲಿಯ ಅನುಭವಕ್ಕೆ ಬರಬಲ್ಲ ಲೈಂಗಿಕ ಕ್ರಿಯಾ ಪ್ರಚೋದಕ ಅಗ್ನಿಯು ಈತನು! ಆದಕಾರಣ ಕಠೋಪನಿಷತ್ತು ಕತ್ತಲಿನ ಉಪನಿಷತ್ತು! ಹೀಗೆ ಮಾತಿನ ಮುಸುಕು ಅನಿವಾರ್ಯವಿರುವ ಜೀವಿತದ ಈ ಪಾತಳಿಯು ಕತ್ತಲಲ್ಲಿ (೦) ಅಡಗಿರುತ್ತದೆ! ಮುಸುಕಿನ ಮಾತಿನ ಇನ್ನೊಂದು ಮಾದರಿ ನೋಡಿಕೊಳ್ಳಿ: ಹಳೆಯ ಗುಡಿಗಳಲ್ಲಿ ಆ ದೇವರ ನಾಗ = ಸರ್ಪ ಇರುತ್ತದೆ, ಎಂಬ ನಂಬುಗೆಯು, ಇಂದಿಗೂ ಉಂಟು. ಆದರೆ, ಈ ನಾಗನ ವೈಶಿಷ್ಟ್ಯವೆಂದು ಹೇಳಲಾಗುವ ಮಾತು ಅಪೂರ್ವವಿದೆ. ಆ ಪುರಾತನ ನಾಗನಿಗೆ ಕೂದಲು ಉಂಟು! ಪರೆಬಿಡುವ ಆವಶ್ಯಕತೆಯು ಇರುವ ನಾಗ-ಸರ್ಪಕ್ಕೆ ಕೂದಲು ಇರಲು ಶಕ್ಯವೆ? ಆದಕಾರಣ, ನಾಗ ಆದಿ-ಶೇಷ ಸೃಷ್ಟಿಗೆ ಕಾರಣ ಪುರುಷನ-ಮರಿ: ಶೇಷ! ಉಟ್ಟರೂ ತೊಟ್ಟರೂ ಬತ್ತಲೆತನವು ಮುಚ್ಚದು. ಆದಕಾರಣ ಬಟ್ಟೆಯೇತಕ್ಕೆ? ಎಂದು ಪ್ರಶ್ನಿಸುವ ದಿಗಂಬರ ಪಂಥಿಗಳು ಇದ್ದಾರೆ! ದಿಗಂಬರ ಎಂದು ಹೆಸರು ಇದ್ದರೂ ಈತನು ಬಟ್ಟೆ ಕಳಚಿ ಓಡಾಡಲಾರ! ಏಕೆ?

ಇದು ಸಾಂಸ್ಕೃತಿಕ ವಿಶ್ವಸ್ಥ ಅಂತರಿಕ ಒತ್ತಾಯ. ಹೊರಗಿನ ಯಾರ ನಿರ್ಬಂಧಕ್ಕಾಗಿ ಬಟ್ಟೆ ಧರಿಸುವ ವಾಡಿಕೆ ಉಂಟಾಗಿಲ್ಲ. ಭಕ್ತರಿಗೆ ಉಪದೇಶ ಮಾಡಲು ರಚಿತ ಭಗ-ವತ್ ಗೀತೆಯಲ್ಲಿ, ಗುಹ್ಯಾತ್ ಗುಹ್ಯತರ ಭಾಷೆಯನ್ನು ಯೋಜಿಸುವ ಆವಶ್ಯಕತೆಯು ಏನಿತ್ತು? ಭಗ-ವಂತ, ಕತ್ತಲಲ್ಲೇ ಇರಬೇಕಾದ ಶಾಪ ಇವನಿಗೆ. ಈ ಹೆಸರಿನೊಳಗಿನ ಭಗ = ಕತ್ತಲು! (೦) ಗವಿ! ಜೀವನ (ಪ್ರಕಾಶ : ಹಗಲು), ಈ ಬಾಳಿನಲ್ಲಿ ಇರುವಂತೆ ಜೀವಿತ (ಕತ್ತಲು : ಇರುಳು) ಇದೂ ಉಂಟು. ಜೀವಿತವು ನಿತ್ಯವಾಗಿ ಕತ್ತಲಿನ ಆವರಣದಲ್ಲಿಯೇ ಉಳಿಯಬೇಕು ಎಂಬ ವಿಧಿಲಿಖಿತ ಅಥವಾ ವಿಶ್ವನಿಯಮವು ಇದೆ. ಜೀವಿತವು ಕತ್ತಲಿನ ಆವರಣದಲ್ಲಿಯೇ ಇರುತ್ತದೆ, ಎಂದರೇನು? ಇದನ್ನು ಸೂಚಿಸಲು, ಅ-ಮೃತ (ರಸ), ಅಗ್ನಿ-ನಾರಾಯಣ=ನೀರೊಳಗಿನ ಅಗ್ನಿ= ನ-ಚಿಕೇತ ಅಗ್ನಿ ಎಂಬ ಉದಾಹರಣಗಳನ್ನು ಹೇಳುವುದು ಅವಶ್ಯವಾಯಿತು. ಆಕೃತಿ ಮತ್ತು ಆಶಯ ಗುಣ ಇವೆರಡರಲ್ಲಿ ಅನ್ಯೋನ್ಯವಿರುತ್ತದೆ : ಗುಹ್ಯ (ಕತ್ತಲಿನೊಳಗಿನ) ಆಶಯವು ಇರುವಾಗ, ಆ ಮಾತುಗಳು ಮುಸುಕು ಧರಿಸುವ ಈ ಕ್ರಿಯೆ ಸಾಂಸ್ಕೃತಿಕ ವಿಶ್ವದ ಹುಟ್ಟು ಸ್ವಭಾವವಾಗಿದೆ. ಆದರೆ ಬುದ್ಧಿ : ಈ ಸಂಸ್ಕೃತಿಯ ಶತ್ರು. ಈ ಜೀವಿತವು ಸ್ಥಳ (ಕಾಲ) ದೊಡನೆ ಬದ್ಧವಿದೆ.

ಕಂನಾಡದ ಪ್ರಜ್ಞಾನೇತ್ರವು, ಸ್ಥಲ (Space) ಇದನ್ನು ಬಯಲು (Void : Vacuum) ಎಂದು ಹೆಸರಿಸಿದೆ! ಈ ಸ್ಥಲ ಮತ್ತು ಇದರೊಡನೆ ಬದ್ಧಕಾಲ ಇವೆರಡನ್ನೂ ಮೀರಿ ಆ-ಚೆಗೆ ನೋಡುವ ಹುಟ್ಟು ಶಕ್ತಿಯು, ಪ್ರಜ್ಞೆ-ಉಪಪ್ರಜ್ಞೆಯ ಅಂಗವಾದ ಮನಸ್ಸಿನ ನೇತ್ರಕ್ಕೆ ಇದೆ! ಇದಕ್ಕೆ ಪ್ರಮಾಣವು ಬೇಕೆ? ಬುದ್ಧಿ (Reason) ತಲೆದೋರುವ ಮೊದಲು ಈ ಸ್ಥಲ (ಕಾಲ) ದೊಡನೆ ಬದ್ಧ ಜೀವಿತದ (೦) ಅಸ್ತಿತ್ವವು ಶ್ರೇಷ್ಠವೆನಿಸಿದ್ದಿಲ್ಲ! ದಿವ್ಯಕಥೆಗಳ ದಿಕ್ಕಿನಿಂದ ಈ ಮಾತು ದೃಢಪಡುತ್ತದೆ. ಗ್ರೀಕ್ ಅಥೆನಾ ತನ್ನ ತಂದೆಯ ತಲೆಯಿಂದ ಹುಟ್ಟಿದ್ದಾಳೆ. ಈ ದೇವಿ (೦) ಜ್ಞಾನದಾಯಗಳು ಎಂದು ಬಗೆಯಲಾಗಿದೆ. ವೇದದ ಅಂಭೃಣೀ ಕುಮಾರಿ, ಇವಳೂ ತಂದೆಯ ತಲೆಯಿಂದ ಹುಟ್ಟಿದ್ದಾಳಂತೆ! ಈ ಅಂಭೃಣಿ= ನೀರೆ, ಯಂ ಕಾಮಯೇ ತಂ ಬ್ರಹ್ಮಣಂ ಕೃಣೋಮಿ ಎನ್ನುತ್ತಾಳೆ! ವೇದದ ಸರಸ್ವತಿಯನ್ನು ಮಹೋ ಅರ್ಣಃ (ಸರದ) ರೂಪದಲ್ಲಿ ಕಂಡಿದ್ದಾಗಿದೆ. ಸ್ಟ್ರಾಸ್ ಹೇಳುತ್ತಾನೆ. History is continuation of mythology ಬುದ್ಧಿಯು ಮೈವೆತ್ತ ಇತಿಹಾಸವು ಇಲ್ಲಿ ಇದೆ.

ಈ ಸ್ಥಲದ (ಕಣ್ (೦) ಆಕರ್ಷಣ-ವಿಕರ್ಷಣದ ಸಂದರ್ಭದಲ್ಲಿ ಈ ನರ(ಳ) ಬುದ್ಧಿಯು ಕಾಣಿಸಿಕೊಂಡಿರುವುದಾಗಿ, ಗ್ರೀಕ್ ಹಾಗೂ ಭಾರತೀಯ ಪುರಾತನ ನಿರ್ದೇಶಗಳಿಂದ ದೃಢಪಡುತ್ತಿದೆ. ಪ್ರಜ್ಞೆಯ ಅಂಗವಾದ ಮನಸ್ಸು ಜೀವಿತವನ್ನು ಇದುವೆ ಶ್ರೇಷ್ಠ ಎಂದು ಬಗೆಯದೆ ಇದ್ದರೂ, ಈ ಮನು-ಜನು ಜೀವಿತದ ಹಂತವನ್ನು ತೀರ ಕಡೆಗಣಿಸಲು ಶಕ್ಯವೇ ಇಲ್ಲ. ಜೀವಿತಕ್ಕೆ, ಅಂದು : ವೈವಸ್ವತ ಮನುವಿನ ದೃಷ್ಟಿಯಲ್ಲಿ ಇದ್ದ ಸ್ಥಾನವು ಯಾವುದು? ಇದನ್ನು ಆಗಿನ ಒಂದು ರೂಪಕದ ಸಂದರ್ಭದಿಂದ ಗ್ರಹಿಸಿಕೊಳ್ಳಲು ಶಕ್ಯವಿದೆ. ಸಮಾಜ:

ಸಮಷ್ಟಿಯ-ವೈಶ್ವಾನರಾಗ್ನಿಯ ಮೇಲುನೋಟದಲ್ಲಿ ಈ ಮಾನವ ಧರ್ಮ : ಸಂಸ್ಕೃತಿಯ ಪಟವಸ್ತ್ರವು ತನ್ನ ತಾನೆ ನೇಯಲ್ಪಡುವ ಏರ್ಪಾಟವು ಈ ಜೀವನದ ಪಾತಳಿಯಲ್ಲಿ ಹುದುಗಿದೆ.

ಮಾನವ ಜೀವನದ ಹಗಲು ಇದು ಹಾಸು : ಜೀವಿತದ ಇರುಳು ಇದು ಹೊಕ್ಕು : ಇವೆರಡರ ನೈಸರ್ಗಿಕ ಹೆಣಿಕೆಯಲ್ಲಿ, ಧರ್ಮ : ಸಂಸ್ಕೃತಿಗೆ ಆವಶ್ಯಕ ಪಟವಸ್ತ್ರವು ತನ್ನ ತಾನೆ ಸಿದ್ಧವಾಗುವುದುಂಟು. ಬಾಳಿನಲ್ಲಿ (ಹಗಲಿಗೆ) ಪ್ರಾಧಾನ್ಯವಿರಲೇಬೇಕಾದ ಜೀವನದ ಪಾತಳಿಗೆ, ಪೂರಕ-ಪೋಷಕವಾಗುವ ಮಟ್ಟಿಗೆ ಈ ಜೀವಿತಕ್ಕೆ ಸ್ಥಾನವು ಇದ್ದೇ ಇದೆ : ಇರಲೇ ಬೇಕು. ಆದರೆ, ಬುಧರ-ಬುದ್ಧರ ಬುದ್ಧಿಯು ಪ್ರಭಾವಶಾಲಿಯಾಗತೊಡಗಿದ ಬಳಿಕ ಮಾರುತಿ ಸರಸ್ವತಿ (೦) ಗಣಪತಿ ಈ ಬಗೆಯ ನಾನಾ ನಾಮರೂಪಗಳಿಂದ, ಜೀವಿತದ (ಯೋನಿ-ಲಿಂಗದ) ಆರಾಧನೆಗೆ ಪ್ರಾಶಸ್ತ್ಯ ಬಂದದ್ದುಂಟು. ಇಲ್ಲಿ ಅಭಾವವನ್ನೇ ಸ್ಥಾಯೀ ಎಂದು ನಂಬಿಸಲಾಗಿದೆ! ಈ ಕಣ್ಕಟ್ಟು : ಮೋಸ ಬಯಲಿಗೆ ಬರಲೇಬೇಕಾಗಿದೆ. ಆಧುನಿಕ ಭೌತಶಾಸ್ತ್ರಜ್ಞರಲ್ಲಿ, ಬರ್ಗಸನ್ನನ ಬುದ್ಧಿ (intelligence) ಇದನ್ನು ಕುರಿತ ತನ್ನ ಶೋಧವನ್ನು ಧೈರ್ಯದಿಂದ ಹೇಳಿದ್ದಾನೆ. ಬುದ್ಧಿಯು ವಿಶ್ಲೇಷಣಾತ್ಮಕ ಸ್ವಭಾವದ್ದು. ಇದು ನೆಲಕ್ಕೆ ತಾಗಿರುವ ಜೀವನ ರೀತಿಯ ಸಂದರ್ಭದಲ್ಲಿ ಆ ತುರ್ತುಪರಿಸ್ಥಿತಿಯಲ್ಲಿ ಮೈವೆತ್ತ ಮನ: ಶಕ್ತಿ ಇದಕ್ಕೆ ಜೀವನದೊಡನೆ ಸಮರಸವಾಗುವ ಶಕ್ತಿಯಿಲ್ಲ. ಬೇರೆಯಾಗಿ ನಿಂತು, ಜೀವನ ಗ್ರಹಿಸಿಕೊಳ್ಳುವ ಪ್ರಯತ್ನವಿರುತ್ತದೆ. ಗಣಿತ, ಭೂಮಿತಿಯ ಶಾಸ್ತ್ರವು ಜೀವಿತದ ಕ್ಷೇತ್ರ! ಆದರೆ Logic, ಗಣಿತಶಾಸ್ತ್ರದ ಮೂಲಕ ಜೀವಿತದ ಅರ್ಥ =ತತ್ತ್ವಜ್ಞಾನವನ್ನು ಅರಿಯುವ ದಿಕ್ಕಿನಲ್ಲಿ, ಪ್ಯಾಥ್ಯಾಗೊರಾಸನ ಯುಗದಲ್ಲಿ ಪ್ರಾರಂಭವಾದ ಪ್ರಯತ್ನಗಳನ್ನೇ ಪಾಶ್ಚಾತ್ಯರಿಂದ ಇಂದಿನಲ್ಲಿಯೂ ಮುಂದುವರಿಸಲಾಗುತ್ತಿದೆ!

ಜೀವನಾನುಭವಗಳಿಗೆ ಪ್ರಾಧಾನ್ಯವಿರುವ ಇತಿಹಾಸವನ್ನು ದಿವ್ಯಾಧ್ಯಾತ್ಮಗಳ ಬುದ್ಧಿ ವಿಕೃತಗೊಳಿಸಿದೆ. ಇತಿಹಾಸವು ವೃತ್ತಾಕೃತಿಯದು ಎಂಬ ಪೈಥಾಗೊರಾಸನ ಪಂಥವು ಇದಕ್ಕೆ ನಿದರ್ಶನ. ಭಾರತೀಯ ಸಂಸ್ಕೃತಿಯ ಸಂದರ್ಭದಲ್ಲಿ, ಇತಿಹಾಸವನ್ನು ವಿಕೃತಗೊಳಿಸಲಾಗಿರುವ ರೀತಿಯ ವಿವರಣೆಗಾಗಿ, ವೈವಸ್ವತ ಮನು ಪ್ರಣೀತ ಮಾನವಧರ್ಮದ ಕೊನೆಯ ಭಾಗ ನೋಡಬಹುದು. ಈ ಮಾನವನು ವಿಶ್ವನಿಯಮಕ್ಕೆ ಅಂಕಿತನಿದ್ದಾನೆ. ನಿಯಮವನ್ನು ಮೀರಿ ಬಾಳಲಾರನು.

೧. ಪ್ರಜ್ಞೆಯ ಅಂಗವಾದ ಯಶಸ್ಸಿನಿಂದ ಪ್ರೇರಿತನಾಗಿ ಬಾಳಬಟ್ಟೆಯಲ್ಲಿ ಸಾಗುವಾಗ, ಭಾವಾತ್ಮಕ, ಅಂತಃಸಂಗತಿಯುಕ್ತ ಅರ್ಥ : ವಿಚಾರಗಳ ಅನುಸಂಧಾನದಲ್ಲಿ ನಡೆದರೆ, ಇವನು ಮನುಜತ್ವಕ್ಕೆ ಎರವಾಗಲು ಶಕ್ಯವಿಲ್ಲ. ಈ ಬಾಳದಾರಿ, ಅರ್ಥ : ವಿಚಾರರೂಪ ಪ್ರಕಾಶಯುಕ್ತ ಜೀವನದ ಪಾತಳಿಯೇ ಇರಬಲ್ಲುದು.

೨. ಇದಕ್ಕೆ ಪ್ರತಿಯಾಗಿ, ಬುದ್ಧಿ ಅಥವಾ ಭಾವನೆಯ ಅಂಗವಾದ ಮನಸ್ಸಿನಿಂದ, ಎಂದರೆ ಜೀವಿತದ : ಸ್ಥಳ (ಕಾಲ) ದ ಸಂದರ್ಭದ ಅಸ್ತಿತ್ವಕ್ಕೇ ಪ್ರಾಧಾನ್ಯವನ್ನಿತ್ತು ಬಾಳತೊಡಗುವಾಗ, ಈ ಮನುಜನು ನರ(ಳ)ನಾಗಿ ಮಾರ್ಪಡದೆ ಇರಲು ಶಕ್ಯವಿಲ್ಲ. ಪ್ರಜ್ಞಾನೇತ್ರದ ಸ್ಥಳದಲ್ಲಿ ದಿವ್ಯಚಕ್ಷು : ಅಕ್ಷ ಇದು ಬಾಳದಾರಿಯ ಬೆಳಕಾಗಿ ಪರಿಣಮಿಸಲೇಬೇಕು.

ಜೀವಿತದ ಪಾತಳಿಯ ವೈಶಿಷ್ಟ್ಯ : ಇಲ್ಲಿ ಅಂತರ್‌ವಿಸಂಗತಿ, ಪ್ರೇರಣಾದ್ವಂದ್ವವೇ ಸ್ಥಾಯಿ ಆಗುತ್ತದೆ! ಇದು ನಿಷ್ಕಾರಣವಲ್ಲ. ಏಕೆಂದರೆ, ಈ ಜೀವಿತವು ನಿತ್ಯ ವೃತ್ತಾಕೃತಿ (೦) ಗತಿಯುಳ್ಳದ್ದು ಆಗಿದೆ. ಪೂರ್ವ ಎಂದೊಡನೆ ಪಶ್ಚಿಮ ಎಂಬುದು ಬಂದೇ ಬಂತು! ಹುಟ್ಟು ಇದಕ್ಕೆ ಪ್ರತಿಯಾಗಿ ಸಾವು ಬಂತು. ಒಬ್ಬ ತತ್ತ್ವಜ್ಞನು ಹೇಳುವಂತೆ - ವರ್ತುಲದಲ್ಲಿಯ ಆದಿ (ಬಿಂದು) ಮತ್ತು ಅಂತ್ಯ ಒಂದೇ ಬಿಂದುವಿನಲ್ಲಿ ಸೇರಲೇಬೇಕು! ಆದಕಾರಣ ಈ ಜೀವಿತವು ನಿತ್ಯಶೂನ್ಯ (೦) ರೂಪದ್ದು!

ಇಲ್ಲಿ ತಲೆದೋರುವ ಇನ್ನೊಂದು ಮೋಸವನ್ನು ಸ್ಪಷ್ಟವಾಗಿ ಅರಿಯುವ ಆವಶ್ಯಕತೆಯು ಇದೆ. ನಾವು ಮಾನವರು, ನಿಂತಿರುವ-ಬದುಕುವ, ಈ ಹಂತವನ್ನು, ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಎಂದು ವಿಂಗಡಿಸಿ ಹೇಳಲಾಗುತ್ತದೆ! ಆದರೆ, ಈ ಕಾಲ ಎಂಬುದು ಸ್ಥಲದ ಅಂಗವೇ ಹೊರತು, ಇದಕ್ಕೆ ಸ್ವತಂತ್ರ ಅಸ್ತಿತ್ವವೇ ಇಲ್ಲ! ಆದಕಾರಣ ನಮ್ಮ ಪುರಾತನರು ಈ ನಿತ್ಯವೃತ್ತಾ ಕೃತಿಯ (೦) ಈ ಸ್ಥಲವನ್ನು ಬಯಲು = ಟೊಳ್ಳು (ಅರ್ಥಶೂನ್ಯ) ಎಂದಿದ್ದು ನಿಷ್ಕಾರಣವಲ್ಲ. ವೇದಾಂತವೂ ಈ ಆಶಯವನ್ನೇ ಇನ್ನೊಂದು ಬಗೆಯಿಂದ ಹೇಳುತ್ತದೆ : ಭಸ್ಮಾಂತಂ ಶರೀರಂ ಈ ಜೀವಿತದ ಪಾತಳಿ ಮೃತ್ಯುಲೋಕ! ಶ್ಮಶಾನ ರೂಪ! ಈ ಕಾರಣದಿಂದಲೇ ವೈವಸ್ವತಮನು>ಮಾನವ ಸಂಪ್ರದಾಯವು ಜೀವಿತವನ್ನು ನಂಬದಿರಲು ಹೇಳುತ್ತದೆ. ಈ ಟೊಳ್ಳು-ಬಯಲ (ಅಂತರಿಕ್ಷದ) ಆಚೆಗೆ ಇರುವ ಪ್ರಜ್ಞೆಯ ಅಂಗವಾದ ಮನಸ್ಸಿನಿಂದ ಪ್ರಚೋದಿತ ಜೀವನದಲ್ಲಿ ನಿಷ್ಠೆಯನ್ನಿತ್ತು ಬಾಳಲು ಬೋಧಿಸುತ್ತದೆ.

ಆದರೆ, ಭೌತಶಾಸ್ತ್ರಜ್ಞರಲ್ಲಿ ದಿವ್ಯಾಧ್ಯಾತ್ಮವನ್ನು ಬೆನ್ನಟ್ಟಿಕೊಂಡು ಹೊರಟವರಲ್ಲಿ, ಭೌತಸ್ಥಳದ ಈ ಬಯಲ ಆಚೆಗೆ-ವೃತ್ತಾಕೃತಿಯ ಜೀವಿತದ ಆಚೆಗೆ ಮಾನವ ಜೀವನದ ಪಾತಳಿಯೂ ಉಂಟು ಎಂಬುದನ್ನು ಲೆಕ್ಕಿಸಲು ಸಿದ್ಧರಿರುವವರು ಇಂದು ತೀರ ವಿರಳ! ಅಂತರ್-ವಿಸಂಗತ-ಪ್ರೇರಣಾ ದ್ವಂದ್ವವು ವೈಶಿಷ್ಟ್ಯವಿರುವ ಈ ಬುದ್ಧಿ, ಈ ಭೌತಶಾಸ್ತ್ರ 'ಅಮೃತಂ ಚೈವ ಮೃತ್ಯುಃ' ಈ ಉಭಯ ಪರಿಣಾಮಕ್ಕೆ ಕಾರಣವಾಗುತ್ತಿರುವುದನ್ನು ಕಾಣುತ್ತಿರುವಾಗಲೂ, ಈ ಬುದ್ಧಿಯನ್ನು ಪ್ರಜ್ಞೆಯ ಅಂಕಿತದಲ್ಲಿ ಇರಿಸಬೇಕು ಎಂಬ ಅರಿವು ಮೂಡಿಲ್ಲ! ಇಂದು, ನಾವು, ಈ ಬುದ್ಧಿಯ ಕೈಗೊಂಬೆ ಆಗಿದ್ದೇವೆ! ಈ ಬುದ್ಧಿ =ಸೈನ್ಸು ಇದನ್ನು ನಾವು ನಿಯಂತ್ರಿಸುವ ಆವಶ್ಯಕತೆಯನ್ನು ನಾವು ಕಾಣುತ್ತಿಲ್ಲವೆ? ಈ ಪ್ರಶ್ನೆ. ಭೌತಶಾಸ್ತ್ರಜ್ಞರಲ್ಲಿ ಬಹುಸಂಖ್ಯರಿಗೆ ಇನ್ನೂ ಸ್ವಲ್ಪವೂ ಹಿಡಿಸಿಲ್ಲ! ಎಂದು ವರದಿ ಆಗಿದೆ.

ಭೌತಶಾಸ್ತ್ರೀಯ ಭೂಮಿಕೆಯವರೇ ಇರಲಿ ಅಥವಾ ದಿವ್ಯಾಧ್ಯಾತ್ಮದ ಬೆಂಬತ್ತಿದವರೇ ಇರಲಿ, ಇವರು ಸ್ಥಲ (ಕಾಲ)ದೊಡನೆ ಸಂಬದ್ಧ ಜೀವಿತಕ್ಕೇ ಪ್ರಾಧಾನ್ಯವನ್ನೀಯುವ ಅಥವಾ ಇದನ್ನು ತುಚ್ಛವೆಂದು ಬಗೆವ ದೃಷ್ಟಿಕೋನದವರಾಗುವ ಅನಿವಾರ್ಯತೆಯೂ ಇದೆ. ವೃತ್ತಾಕೃತಿಯ ಈ ಜೀವಿತವು ಜ್ಞಾತಾಜ್ಞಾತವಾಗಿ ಮೃತ್ಯು (೦) ತತ್ತ್ವದ ಆರಾಧನೆಯಾಗಿ ಪರಿಣಮಿಸಲೇಬೇಕು. ಆಕೃತಿಗಳಲ್ಲಿ ಅಂತಃಸಂಗತಿಯುಕ್ತ ಅರ್ಥ ಇದ್ದೇ ಇದೆ. ಅಂತರ್-ವಿಸಂಗತಿ, ಪ್ರೇರಣಾದ್ವಂದ್ವವು ಇದು ಸ್ಥಳ (ಕಾಲ)ಕ್ಕೆ ಸಂಬದ್ಧ ದೃಶ್ಯವಿಶ್ವದ (Phenomenon) ಲಕ್ಷಣ. ಆದರೆ, ಈ ದೃಶ್ಯವೇ ವಿಶ್ವನಿಯಮ ಎಂದು ಬಗೆಯಲಾಗುತ್ತಿರುವಲ್ಲಿ, ಮಾನವ ಜೀವನವನ್ನು ರೂಪಿಸಿರುವ, ರೂಪಿಸಬಲ್ಲ ವಿಭಾಗತ್ರಯದ ಪ್ರಕಾಶರೂಪ ಕಾಲಗತಿಯನ್ನು ಲೆಕ್ಕಿಸಲಾಗುತ್ತಿಲ್ಲ! ನಿಜವಾದ, ನಾಳೆಗೆ ಇಂಬಿಲ್ಲದ ವೃತ್ತಾಕೃತಿಯ ಜೀವಿತವು ನಿರಾಶೆಯಲ್ಲಿ ಪರಿಣಮಿಸಲೇಬೇಕಲ್ಲವೇ?

ಜೀವಿತವನ್ನು ಆಳುತ್ತಿರುವ ಕಾಲಗತಿಯ ಆಕೃತಿ-ಸ್ವರೂಪವೇ ಬೇರೆ: ಮತ್ತು ಜೀವನ ವಿಶ್ವವನ್ನು ಆಳುತ್ತಿರುವ ಕಾಲಗತಿಯ ಆಕೃತಿ ಸ್ವರೂಪವೇ ಬೇರೆ. ಸ್ಥಲ (ಕಾಲ) ದೊಡನೆ ಬದ್ಧ ಗತಿಯಸ್ನು ಕಾಲ ಎಂಬಲ್ಲಿ ಮೋಸವಾಗುತ್ತಿದೆ. ಗತಿಯಲ್ಲಿ ಇರುವ ಸ್ಥಲವೇ ಕಾಲ ಅಥವಾ ಗತಿರಹಿತ ಕಾಲ ಸ್ಥಲ ಎನಿಸುತ್ತದೆ! ಈ ಗತಿಯು ವೃತ್ತಾಕೃತಿ (೦) ಆಗಿರುವಲ್ಲಿ ಹುದುಗಿರುವ ಸಂಕೇತಾರ್ಥದ ಆಳವು ಸೋಜಿಗಗೊಳಿಸುತ್ತಿದೆ. ನಿಜವಾದ ನಾಳೆಗೆ ಇಂಬು ಇಲ್ಲದಿರುವ ವೃತ್ತಾಕೃತಿಯನ್ನು ಕಾಲ ಎನ್ನಲಾಗುವುದಿಲ್ಲ ಈ ವೃತ್ತಾಕೃತಿಯ ಜೀವಿತದ ಪಾತಳಿಯ ಮೇಲೆ ಎಲ್ಲವೂ (೦) ಶೂನ್ಯರೂಪಕ್ಕೆ ತಿರುಗಲೇ ಬೇಕು. ನೈತಿಕಮೌಲ್ಯಗಳಿಗೆ ಇಲ್ಲಿ ಅವಕಾಶವಿಲ್ಲ. ಎಲ್ಲವೂ ಒಂದರಿಂದ ಆಯ್ತು, ಎಂಬ ಏಕಂ ಸತ್ ತತ್ತ್ವದ ದಿವ್ಯಾಧ್ಯಾತ್ಮಗಳಲ್ಲಿ ತಾಯ್ಗಂಡತನ, ಮಗಳಗಂಡತನದ ಪ್ರೇರಕ ದೇವರುಗಳೇ ಇದ್ದಾರೆ. ಉದಾ : ಅದಿತಿಪುತ್ರ ಆದಿತ್ಯನೆಂಬ ವಿಷ್ಣು ಈತನು, ಆದಿತ್ಯೈ ವಿಷ್ಣು ಪತ್ನ್ಯೈ ಎಂದು ವೇದ ಹೇಳುತ್ತದೆ. ಈ ವಿಷ್ಣುವು ತಾಯ್ಗಂಡನಾಗುತ್ತಿದ್ದಾನೆ! ಅಂಬಾ ರುದ್ರಸ್ಯ ಸ್ವಸಾ ಇತ್ಯಾದಿ : ಹೀಗೆ ಇರುವ ಈ ದಿವ್ಯಾಧ್ಯಾತ್ಮಗಳೆಲ್ಲವೂ ನೀತಿ ಬೋಧಿಸುವಾಗ ಇವು ಆತ್ಮವಂಚನೆ-ಪರವಂಚನೆಯನ್ನು ಪ್ರೇರಿಸುವ ಗ್ರಂಥಗಳಾಗುತ್ತಿಲ್ಲವೆ?

ಮುಂಬೈ-ಪುಣೆ ಭಾಗದಲ್ಲಿ ಆಚಾರ್ಯ (ಭಗವಾನ್) ಎಂದು ಪ್ರಸಿದ್ಧನಿರುವ ರಜನೀಶ್ ಹೆಸರಿನ ಸಾರ್ಥಕ್ಯವು ಈತನ ಉಪದೇಶದ ಆಶಯದಿಂದ ಸಿದ್ಧವಾಗಿದೆ! ಮಾನವನು ಯಾರು? He his no one ; only one! ಇದು ಈ ಮಹಾತ್ಮನ ಉಪದೇಶ ಸಾರ. ಭಗವತ್ ಗೀತೆ, ಕ್ರೈಸ್ತಪಂಥ ಮೊದಲಾದ ಸಂಪ್ರದಾಯಗಳಲ್ಲಿಯೂ ಈ ಏಕಂ (೦) ಅಥವಾ ತತ್ತ್ವವೇ ನಾಮ-ರೂಪ ಭೇದದಿಂದ ಬೋಧಿಸಲ್ಪಡುತ್ತದೆ. ಈ ಸಿದ್ಧನು ಬರೆದ ಹಲವು ಸಣ್ಣ ಸಣ್ಣ ಪುಸ್ತಕಗಳಿವೆ. Yoga is a spontaneous happening Beyond and Beyond ಶಬ್ದಗಳಾಚೆಯ ಶಬ್ದ = ನಿಃಶಬ್ದಂ ಬ್ರಹ್ಮ ಎಂದರೇನು? From sex to superconsciousness ಸಂಭೋಗದಿಂದ ಸಮಾಧೀ ಸಿದ್ಧಿಯವರೆಗೆ - ಎಂಬೀ ಬಗೆಯ ವಿಷಯಗಳ ವಿವೇಚನೆಯು ಉಂಟು, ಈ ಪುಸ್ತಿಕೆಗಳಲ್ಲಿ .

ಕಂನಾಡ ಜನಪದವು ಎಂದೋ ಹೇಳಿರುವ ಹಲ್ಲು ಇಲ್ಲದ ಕಪ್ಪೆ ಹಾವು ನುಂಗುವ ಈ ಪವಾಡವೇ ಭಗವತ್ ಗೀತೆಯಲ್ಲಿಯೂ ಉಂಟು. ರಜನೀಶ್ ಪ್ರಾಂಜಲವಾಗಿ ಹೇಳುವುದನ್ನು ಗೀತೆ ಮುಸುಕಿನ ಮಾತುಗಳಲ್ಲಿ ಹೇಳುತ್ತದೆ. ಗೀತೆಯೊಳಗಿನ ರಾಜ್ಯವಿದ್ಯಾ ರಾಜಗುಹ್ಯವನ್ನು ಕುರಿತು ಬರೆದ ಪುಸ್ತಕದಲ್ಲಿ ನಾನು ಇದನ್ನು ಬಹಿರಂಗ ಪಡಿಸಿದ್ದೇನೆ. ಜೀವಿತದ ಪಾತಳಿಯನ್ನು ಬಯಲು-ನಿರ್‌ವಯಲು ಎಂದು ಚಿತ್ರಿಸಿರುವಲ್ಲಿ ಇದರ ನಿಜಸ್ವರೂಪವನ್ನು ಪುರಾತನರು ಅರಿತಿದ್ದರೆಂಬಲ್ಲಿ ಸಂದೇಹವೇ ಇಲ್ಲ. ಹಿಂದೊಮ್ಮೆ ಭೌತಸ್ಥಲವು (೦) ಮಾತ್ರ ಉಂಟು, ಕಾಲ (೦) ಎಂಬುದು ಕೇವಲ ಕಾಲ್ಪನಿಕ, ಎಂಬುದನ್ನು ಬಲ್ಲವರು. ಬರಿ ದೇವಿಯ ಮಂಡಲೋಪಾಸಕರಾಗಿದ್ದರು. ಈ ದೇವಿಯ (೦) ಗಂಡನೆಂಬ ದೇವರು ಹುಟ್ಟಿದ್ದು, ದೇವಿಯು ಜನಿಸಿದ ಬಳಿಕ! ನಮ್ಮ ದೇವಿಯ ಪತಿ ಎಂಬವರು ದೇವಿಗಿಂತ ವಯಸ್ಸಿನಿಂದ ಚಿಕ್ಕವರು! ಹಾಗಿರಲಿ ಛಾಯಾಭಗವತಿ ಎಂಬ ಈ ದೇವತಾ ಪ್ರತಿಮೆಯು ಒಳಗೊಂಡಿರುವ ಮೂಲಾರ್ಥವು, ಈ ಶಬ್ದಶಿಲ್ಪಿಯ ಸಾಕ್ಷಾತ್ಕಾರ: ದರ್ಶನದ ಉಚ್ಚಮಟ್ಟವನ್ನು ಗಮನಕ್ಕೆ ತಂದು ಕೊಡುತ್ತದೆ. ಅಲ್ಲದೆ ಸ್ಥಲದೊಡನೆ ಉಂಟು ಎಂಬ ಕಾಲದ ಸ್ವತಂತ್ರ ಅಸ್ತಿತ್ವವನ್ನು ಕಲ್ಪಿಸಲಾಗಿರುವಲ್ಲಿ ಒಳಗೊಂಡಿರುವ ತಿಳಿಗೇಡಿತನ ಅಥವಾ ಮೋಸವೂ ಬಯಲಿಗೆ ಬರುತ್ತದೆ. ಶ್ರೀ ಸೂಕ್ತದ ಮೂಲ ಪಾಠದಲ್ಲಿ, ವಿಷ್ಣು ಅಥವಾ ರುದ್ರನ= ಪುರುಷನ ಹೆಸರೇ ಇಲ್ಲ!

ಈ ಪ್ರಪಂಚರೂಪ ಸ್ಥಲ ಇದು ಬಯಲು = ಟೊಳ್ಳು (Vacuum) ಸ್ವರೂಪದ್ದು ಇದ್ದುದು ಕಲ್ಪಿತವಲ್ಲ. ಈ ನೆಲವು ತನ್ನ ಮೈಸುತ್ತ ತಿರುಗುವಾಗ ಉಂಟಾಗುವ (೦) ಆಕೃತಿಯು ಟೊಳ್ಳು : ಕೃಷ್ಣವಿವರ ರೂಪದ್ದು ಆಗುತ್ತದೆ! ಏಕೆಂದರೆ ನೆಲದ ನೆಳಲು ಇದು. ಈ ಛಾಯೆಯನ್ನು ಇಲ್ಲಿ ಭಗವತಿ ರೂಪದಲ್ಲಿ ಕಂಡಿದ್ದಾಗಿದೆ! ಕಾಲಿ = ಕರಿಯಳು ಏಕೆ? ಛಾಯಾ ಭಗವತಿ, ಶುಭ್ರಳು ಇರಲು ಶಕ್ಯವೆ? ಕಾಲಿ = ದುರ್ಗೆಗೆ ಛಾಯಾಭಗವತಿ ಎಂಬ ಪರ್ಯಾಯ ನಾಮವಿದೆ. ಇವಳು ಮೃತ್ಯುಸ್ವರೂಪಳು! ರುಂಡ= ಅಕ್ಷಮಾಲಾಧಾರಿಣಿ! ಕರಿಯ ಕಾಲದ ಉಪಾಸನೆ ಮೃತ್ಯುಶಕ್ತಿಯ ಆರಾಧನೆಯಾಗಲೇಬೇಕಷ್ಟೆ? ಸಂಭೋಗದಿಂದ ಮುಕ್ತಿ = ಸಮಾಧಿ! ಕರಿಯಕಾಲ ಕೃಷ್ಣಭಕ್ತಿ, ಲೋಕ ವಿನಾಶಕ ಶಕ್ತಿ ಆಗಲೇಬೇಕಲ್ಲವೆ? ಕಾಲಃ ಅಸ್ಮಿ ಲೋಕಕ್ಷಯಕೃತ್ ಪ್ರವೃದ್ಧಃ ಎಂದು ಗೀತೆಯೆ ಒಪ್ಪಿಲ್ಲವೇ? ಈ ಕಾರಣದಿಂದಾಗಿ ವೈವಸ್ವತಮನು ಪ್ರಣೀತ ಮಾನವಧರ್ಮವು ಕರಿಕಾಲ ಬಿಟ್ಟು, ಶುಭ್ರ : ಶುಭಕಾಲದ ಆರಾಧನೆಯನ್ನು ಹೇಳುತ್ತಿದೆ! ಆಗಾಮೀ ನಾಳೆಗಳತ್ತ ಅವ್ಯಾಹತವಾಗಿ ಸಾಗಿರುವ ನಿನ್ನೆ ಇಂದು ಸ್ವರೂಪ ಪ್ರಕಾಶ ತತ್ತ್ವದ ವಿಭಾಗತ್ರಯದ ಕಾಲಗತಿಯನ್ನು ಅನುಸರಿಸಿ ಅರ್ಥ= ವಿಚಾರ ರೂಪ ಪ್ರಕಾಶತತ್ತ್ವದ ಅನುಸಂಧಾನದಲ್ಲಿ ಬಾಳಲು ಸಮಾಜ=ಸಮಷ್ಟಿ ರೂಪ ವೈಶ್ವಾನರಾಗ್ನಿಯ ಸೇವೆಯಲ್ಲಿ ಕೃತಾರ್ಥರಾಗಲು ಮನುವೈವಸ್ವತನು ಮಾನವಕೋಟಿಗೆ ಬೋಧಿಸುತ್ತಿದ್ದಾನೆ.

ಹಿಂದೊಮ್ಮೆ ವೈವಸ್ವತಮನು ಪ್ರಣೀತ ಮಾನವಧರ್ಮವು ಜೀವಂತವಿತ್ತು; ಪ್ರಭಾವಶಾಲಿಯಾಗಿತ್ತು. ಇಂದಿನಲ್ಲೂ ಈ ವೈವಸ್ವತನ ಮನ್ವಂತರವೇ ಇದೆ! ಆದರೆ, ಇದು ತನ್ನ ತಾನೇ- ಕುಸಿದು ಬೀಳುವ ಹಾಗಿನ ಕಣ್ಕಟ್ಟು, ಮಾಟ, ಅಭಿಚಾರ ಕೃತ್ಯಗಳನ್ನು ಮಾಡಿದ್ದಾಗಿದೆ! ಈ ಮಂತ್ರ ಮಾಟಗಳನ್ನು ಎಸೆಗಿದ್ದು ವಸಿಷ್ಠ-ವ್ಯಾಸಾದಿ ಪರಮ ಪೂಜ್ಯ ಎಂಬ ಪುರಾತನ ಕಾಲದ ಗುರುವರ್ಗ! ಇಂದಿನ ನರ-ನಾರ-ಅಯನ- ಉಪಾಸನಾ ಸಂಪ್ರದಾಯದ ಪ್ರಸ್ಥಾಪಕರು, ಯಾರು ಮತ್ತೆ? ಈ ಆರೋಪವನ್ನು ಸಪ್ರಮಾಣವಾಗಿ ಸಿದ್ಧಪಡಿಸುವ ಪ್ರಮಾಣಗಳು ಉಂಟೆ? ಈ ಅಂಶಗಳನ್ನು

ಹಲವು ಬಾರಿ ಹೇಳಿದ್ದಾಗಿದೆ. 'ವೈವಸ್ವತಮನು ಪ್ರಣೀತ ಮಾನವಧರ್ಮ' ಈ ಗ್ರಂಥದಲ್ಲಿ ಮೇಲಣ ಆರೋಪಗಳು ನಮೂದು ಇವೆ. ಈ ಗ್ರಂಥ ಪ್ರಕಟವಾಗಿ ಒಂದು ವರುಷ ಮುಗಿಯ ಬಂದಿತು. ಕರ್ನಾಟಕ ಕಾಲೇಜಿನ ಪ್ರೊ. ಕೆ. ಎಸ್. ನಾರಾಯಣಾಚಾರ್ಯರು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿಯೂ ಡಾ। ಕೆ. ಕೃಷ್ಣಮೂರ್ತಿ ಅವರು ಬೆಂಗಳೂರಿನ ಪ್ರಜಾವಾಣಿಯಲ್ಲಿಯೂ ಸುದೀರ್ಘ ವಿಮರ್ಶೆ ಮಾಡಿದ್ದಾರೆ. ಆದರೆ, ಇವರಿಬ್ಬರೂ ವಿದ್ವಾಂಸರಲ್ಲಿ ಒಬ್ಬರೂ ಸಹ ಈ ಗ್ರಂಥದೊಳಗಿನ ನಿಷ್ಕರ್ಷವನ್ನು ಎತ್ತಿಕೊಂಡು ಅದನ್ನು ನಿರಾಧಾರ ಎಂದು ಸಿದ್ಧಪಡಿಸಿ ನನ್ನ ಸತ್ಯಾನ್ವೇಷಣೆಗೆ ನೆರವಾಗುವ ಉಪಕಾರ ಮಾಡಲಿಲ್ಲ! ತಮ್ಮ ಸಂಪ್ರದಾಯವಂತಿಕೆಗೆ ಪೆಟ್ಟು ಬಿದ್ದೀತೆಂಬ ವ್ಯಥೆಯು ಅವರ ಆ ಎರಡೂ ವಿಮರ್ಶೆಗಳ ಉದ್ದಕ್ಕೂ ಹೊರ ಹೊಮ್ಮಿ ಬಂದಿದೆ!

ವೈವಸ್ವತ ಮಾನವಧರ್ಮವನ್ನು, ಇಲ್ಲವಾಗಿಸಲು ನರ(ಳ) ಸಂಪ್ರದಾಯಗಳು, ಮಾಡಿರುವ ನೀಚ ಹೀನ ಸ್ವರೂಪದ ಅಭಿಚಾರ ಕೃತ್ಯದ ಒಂದು ಮಾದರಿ ಇಲ್ಲಿ ಇನ್ನೂ ಒಮ್ಮೆ ಎತ್ತಿ ಹೇಳುತ್ತೇನೆ: ಇದು ಸುಳ್ಳೆಂದು ಸಿದ್ಧವಾದರೆ ನನಗೆ ಸಂತೋಷವೇ ಇದೆ.

ಬ್ರಹ್ಮದ್ವಿಷೇ ಶರವೇ ಹಂತ ವೈ ರುದ್ರಾಯ ಧನುಃ ಆತನೋಮಿ^

ಇಲ್ಲಿ ಯೋನಿ-ಲಿಂಗೈಕ್ಯದ ಮೂಲಕ ಮಾಡಲಾಗಿರುವ ಅಭಿಚಾರ ಕೃತ್ಯವಿದೆ. ಈ ಕುಮಾರಿ ತನ್ನ ಬಿಲ್ಲನ್ನು ರುದ್ರ = ಶಿಪಿ-ವಿಷ್ಣುವಿನ ಬಾಣಕ್ಕಾಗಿ ಹಿಗ್ಗಿಸಿ ಕಾದು ನಿಂತಿದ್ದಾಳೆ!

ಈ ದೇವಿ ಕುಮಾರಿ ಆದಿಶಕ್ತಿ! ಇವಳು ಹೇಳುತ್ತಾಳೆ : ಅಹಂ ರುದ್ರೇಭಿಃ ಆದಿತ್ಯೈಃ ವಿಶ್ವೇದೇವೈಃ (ಸಹ) ಚರಾಮಿ! ಕಂನಾಡ ಗರತಿಯರು ಹದಿನೆಂಟು ಎಂದು ಹೇಳುವ ಟೀಕೆ ಈ ಕುಮಾರಿಗೆ ಅನ್ವಯಿಸುತ್ತಿದೆ. ಈ ಕುಮಾರಿಯೇ ತಾನು ಬ್ರಹ್ಮನ್ ಶಕ್ತಿ. ಕೇನೋಪನಿಷತ್ತಿನಲ್ಲಿ ಈ ಕುಮಾರಿ ಹೈಮವತಿ ಹೆಸರಿನಲ್ಲಿ ಉಕ್ತಳಾಗಿದ್ದಾಳೆ. ಅಲ್ಲಿ ಈ ಭಗವತಿಯು ಜಾತವೇದ ಅಗ್ನಿ ಮತ್ತು ಶಿಶ್ನೋದೇವಾಃ ಶತ್ರು ಎಂಬ ಇಂದ್ರ ಈ ಪ್ರತಿಮಾ ಭಂಜನಕ್ಕಾಗಿ ಅಭಿಚಾರ ಕೃತ್ಯವಿದೆ! ಈ ಶ್ರೀದೇವಿ ಕೊನೆಗೆ ಸಾಧಕರಿಗೆ, ಮಂತ್ರ ಮಾಟಗಳು ಸಿದ್ಧಿಸಲು ಹೇಳಿರುವ ಸಾಧನವು ಯಾವುದು? ತತ್ ವನಂ (೦) ಉಪಾಸೀತ!

ಇನ್ನೊಂದು ಬಗೆಯ ದುಷ್ಕೃತ್ಯದ ಮಾದರಿ : ಪುರುಷ ಶಬ್ದ ಪ್ರತಿಮೆ! ಇದು ಬರಿಯ ಗಣ್ ಚಿತ್ರವಲ್ಲ. ಕಣ್ ಸಹಿತ ಗಣ್ = ವ್ಯಾಸರೂಪವು ಇದು! ಇವೆರಡನ್ನು ಈ ಮೊದಲು ಹಲವು ಬಾರಿ ಹೇಳಿದ್ದಾಗಿದೆ. ಅದುದರಿಂದ, ಮತ್ತೆ ಪುನರುಕ್ತಿ ಬೇಡ. ಸಂ-ಸ್ಕೃತ ಎಂಬ ಹೆಸರಿಗೇ ಕೇಡನ್ನು ತಂದಿವೆ. ಈ ಭಾನಾಮತಿ ಅಭಿಚಾರ ಕೃತ್ಯಗಳು! ಸಂಸ್ಕೃತ ಭಾಷೆ ಆರ್ಯರದು! ಈ ಆರ್ಯರೆಂಬುವರು ನರ(ಳ) ರೂ ಇದ್ದರು: ಇರಲೇಬೇಕು. ಆದರೆ ಇವರು ಮಾಟಗಾರಿಕೆ, ಮೋಸಗಾರಿಕೆಯ ಧಂದೆಯವರು ಆರ್ಯರೊ? ಎನ್ನುವ ಹೊತ್ತು ಬಂದಿದೆ. ಇಂದು ಈ ವಸಿಷ್ಠ-ವ್ಯಾಸಾದಿಗಳ ಈ ಪರಂಪರೆಯನ್ನು ಕಾಣುವಾಗ!! ಕಾರಣವಿಲ್ಲದೆ ಕಾರ್ಯವು ಸಂಭವಿಸುವುದಿಲ್ಲ. ಕಾರ್ಯ ಕಾರಣ ಸಂಬಂಧವು ಈ ಜೀವನ ವಿಶ್ವದ ತಳಹದಿಯಲ್ಲೇ ಇದೆ ಎಂಬ ಮಹಾಮಾನವ ಐನ್ಸಟನ್ನರ ವಚನವು ಸುಳ್ಳಲ್ಲ. ಪರಮಶ್ರೇಷ್ಠ ಸಂಸ್ಕೃತಿಯು ಭಾರತೀಯರದು ಎಂಬುದು ತೀರ ಸುಳ್ಳು ಅಲ್ಲ. ಮಾನವಧರ್ಮ ಇದು ಜೀವನ ವಿಶ್ವಸ್ಥ ಸನಾತನ ನಿಯಮಗಳ ಆಧಾರದ ಮೇಲೆ ನಿಂತಿದೆ, ಎಂಬುದನ್ನು ವಿವರಿಸಿ ಆಗಿದೆ. ಅತ್ಯಂತ ಅಭಾವಾತ್ಮಕ ಆದಿತ್ಯ= ಪುರುಷ ವಿಷ್ಣು, ಕೃಷ್ಣ, ರುದ್ರ ಗಣಪತಿ... ಇತ್ಯಾದಿ ಗಣ್‌ಡನ್ನು ದೇವರು ಎಂದು ಆರಾಧಿಸುತ್ತಿರುವಲ್ಲಿ ಭಾರತೀಯರಿಂದ ಜೀವನ ವಿಶ್ವಸ್ಥ ಸನಾತನ ನಿಯಮದ ಭಂಗವು ಆಗುತ್ತ ಬಂದಿದೆ!

We can flout the laws of man; (but) we cannot flout the laws of Nature (Fichte)

ಕಂನಾಡವರ ಸಂಸ್ಕೃತಿಯ ಗತಿಸ್ಥಿತಿ

ಕಂನಾಡವರ ಸಂಸ್ಕೃತಿಯ ಗತಿ-ಸ್ಥಿತಿ

ಇದೀಗ ಕನ್ನಡದ ರಾಜ್ಯೋತ್ಸವದ ಬೆಳ್ಳಿಯ ಹಬ್ಬದ ಸಮಾರಂಭವು ಬಂತು; ವಿಶ್ವಕನ್ನಡದ ಪ್ರಥಮ ಸಮ್ಮೇಳನವೂ ಸನ್ನಿಹಿತವಾಗಿದೆ. ಈ ಸಮಯದಲ್ಲಿ, 'ಕನ್ನಡ ಸಾಂಸ್ಕೃತಿಕ ಪರಂಪರೆ'ಯನ್ನು ಪ್ರತಿನಿಧಿಸುವಂಥ ಒಂದು ಸಮೀಕ್ಷೆಯನ್ನು ಬರೆಯಬೇಕು ಎಂದು ತರುಣ ಮಿತ್ರರು ಒಬ್ಬರು ಸೂಚಿಸಿದರು. ಅಂದು, ನಾನು ಮಡಿಕೆರೆಗೆ ಹೋಗುವ ನಿರೀಕ್ಷೆ ಎಳ್ಳಷ್ಟೂ ಇರಲಿಲ್ಲ. ಮಾನ್ಯ ಸಂಪಾದಕರೊಬ್ಬರು, 'ಕನ್ನಡ ಸಂಸ್ಕೃತಿ'ಯ ವಿಚಾರವಾಗಿ, ಸಂಕ್ಷಿಪ್ತವಾಗಿ ಒಂದು ಲೇಖನ ಬರೆಯಲು ಸೂಚಿಸಿದ್ದರು. ಕನ್ನಡ-ಸಂಸ್ಕೃತಿ-ಸಾಹಿತ್ಯಕ್ಷೇತ್ರದಲ್ಲಿ ಆಗಿರುವ ಹಾಗೂ ಆಗಬೇಕಾದ ಕಾರ್ಯದ ಬಗೆಗೆ ನಾಲ್ಕು ಮಾತುಗಳನ್ನು ಬರೆಯುವ ಉದ್ದೇಶವಿದೆ. ಆದರೆ ಈ ಕೆಲಸವು ನನ್ನನ್ನು ಮೂಲಗಾಮಿಯಾದ ತೀರ ಬೇರೆ ದಿಕ್ಕಿನಲ್ಲಿ ತಳ್ಳುತ್ತದೆ. ಇದನ್ನು ತಪ್ಪಿಸಿಕೊಳ್ಳುವುದು ಪ್ರಶಸ್ತವೆನಿಸುತ್ತಿಲ್ಲ; ಈ ಹೊಣೆ ತಪ್ಪಿಸಿಕೊಂಡಲ್ಲಿ ಇದು ಪುಕ್ಕತನವಾಗುತ್ತದೆ, ಎಂದು ನನ್ನ ಒಳಮನು ಎಚ್ಚರಿಸಿದನು! ಉತ್ಸವಾದಿಗಳ ಇಂತಹ ಸಂಭ್ರಮದ ಸಂದರ್ಭದಲ್ಲಿ ಸ್ವಾಭಿಮಾನದ ಅಭಿನಿವೇಶವು ಸಹಜ. ಆದರೆ, ತಮ್ಮ ಸ್ಥಿತಿ-ಗತಿಯ ನಿಜಸ್ಥಿತಿಯು ಅರಿಕೆಗೆ ಬರಲು, ನನಗೆ ತಿಳಿದಂತೆ, ಇಂತಹ ಸಂದರ್ಭಗಳಲ್ಲಿ ನಿರ್-ವಂಚನೆಯ ಪ್ರಾಮಾಣಿಕವಾದ ಆತ್ಮಪರೀಕ್ಷೆಯು ಅವಶ್ಯವಿರುತ್ತದೆ. ಮೊನ್ನೆ ತಾನೆ ಇಂತಹ ಒಂದು ಪ್ರಸಂಗವು ನನ್ನೆದುರು ನಿಂತಿತು.

'ರಾಷ್ಟ್ರಪಿತ ಬಾಪೂಜೀ' ಜಯಂತಿಯ ಪವಿತ್ರಸ್ಮೃತಿಯ ಆಚರಣದ ಆ ಸಂದರ್ಭದಲ್ಲಿ, ನನ್ನನ್ನು ಕೆರಳಿಸಿದ ಪ್ರಶ್ನೆ : ಪೂಜ್ಯ ಗಾಂಧೀಜಿಯವರು ಬೋಧಿಸಿದ್ದೇನು ಮತ್ತು ಅಖಿಲಭಾರತ ಮಟ್ಟದಲ್ಲಿಯೇ, ನಾವು ಇಂದು ಕಾಣುತ್ತಿರುವುದು ಏನು? ಎಲ್ಲೆಲ್ಲೂ ಅನಾಚಾರ, ಭ್ರಷ್ಟಾಚಾರ, ಮೋಸ...ಇಂತಹ ಅವಗುಣಗಳೇ ಇಂದು ತಾಂಡವವಾಡುತ್ತಿವೆಯಲ್ಲ? ಇದು ನಿಷ್ಕಾರಣವಿದ್ದೀತೆ? ಡಾ. ಐನ್ಸ್ಟೈನ್ ಹೇಳುವಂತೆ ಈ ಜೀವನ ವಿಶ್ವವು ಕಾರ್ಯಕಾರಣ ಸಂಬಂಧದ ಆಧಾರದ ಮೇಲೆ ನಿಂತಿದೆ. ಇದು ನಿಜವಿದ್ದಲ್ಲಿ ನಮ್ಮ ಅವನತಿಯ ಕಾರಣವು ಬೆಳಕಿಗೆ ಬರಲೇಬೇಕಷ್ಟೆ? ಇಂದು ಪ್ರಪಂಚವೇ ಪ್ರಳಯದತ್ತ ಹೊರಟಿರುವ ಕಾರಣವು ಏನು? ಈ ಮಾನವರ ಅಧೋಗತಿಯ ಈ ಕಾರಣವು, ಪ್ರಯತ್ನಪಟ್ಟಲ್ಲಿ ಮಾನವೇತಿಹಾಸದ ಮೂಲಕ ಬೆಳಕಿಗೆ ಬರಲೇಬೇಕು. ಮಾನವನು ಇಂದು, 'ಮನುಷ್ಯರೂಪೇಣ ಮೃಗಾಃ ಚರಂತಿ' ಸ್ವರೂಪನು ಆಗಿದ್ದಾನೆ. ಎಂಬ ಪುರಾತನದ ಉಕ್ತಿಯು ನಿಜವಿರುವಂತೆ ಅನುಭವವು ಬರುತ್ತಿರಲು ಕಾರಣವೇನು?

'ಇಂದುಗಳು ನಿನ್ನೆಗಳ ಫಲಿತ', ನಿಜವಷ್ಟೆ? 'ಬಿತ್ತಿದ್ದನ್ನು ಬೆಳೆದುಕೋ' ಎಂಬ ಲೋಕಾನುಭವವೂ ಸುಳ್ಳಲ್ಲವಾದರೆ, ಇಂದಿನಂತಹ ಭ್ರಷ್ಟಾಚಾರ, ಅನಾಚಾರಗಳ ಈ ಬೆಳೆಯು ಬರಲು. ನಾವು ಆ ನಿನ್ನೆಗಳಲ್ಲಿ

ಬಿತ್ತಿದ್ದು ಏನನ್ನು? ಎಂಬ ಪ್ರಶ್ನೆ ಎದುರು ನಿಲ್ಲುತ್ತದೆ. ಜೀವನ ವಿಶ್ವಸ್ಥ ವಿಕಾಸತತ್ತ್ವದ ಪ್ರಕ್ರಿಯೆಯ ವಿಶ್ವನಿಯಮದ ಮೇರೆಗೆ ಈ ಮಾನವ-ಪ್ರಾದುರ್ಭಾವವು ಆಗಿದೆ. ಮಾನವನಿಗೂ ಮುಂಚೆ ಈ ಅಸ್ತಿತ್ವದಲ್ಲಿ ಸಂಸ್ಕೃತಿ ಸದಾಚಾರದ ಪ್ರಜ್ಞೆಯು ಕಿಂಚಿತ್ತೂ ಇರಲಿಲ್ಲ. "ಮೂಲ್ಯಗಳ ಅರಿವು ಕಾಣಿಸಿಕೊಳ್ಳತೊಡಗಿದಂದಿನಿಂದ ಈ ಸಂಸ್ಕೃತಿಯು ಆಕಾರ ಪಡೆಯತೊಡಗಿದೆ." ಎಂದು ಮಾನವಶಾಸ್ತ್ರಜ್ಞರ ನಿಷ್ಕರ್ಷವಿದೆ.

ಆದಕಾರಣ 'ಅವಗುಣಗಳ ಉದಾತ್ತೀಕರಣದಿಂದ ಈ ಸಂಸ್ಕೃತಿಯು ಆಗಿದೆ'-ಎಂಬ ಫ್ರೈಡ್ ಪಂಥೀಯ ಗ್ರಹಿಕೆಯು ತೀರ ನಿರಾಧಾರವಿದೆ. ಮಾನವನ ಇತಿಹಾಸವನು ಸಮೀಕ್ಷಿಸಿದಲ್ಲಿ ಈ ಮಾನವನ ಅವನತಿಯ ಕಾರಣವು ಏನು, ಎಲ್ಲಿದೆ? ಎಂಬುದನ್ನು ಸಪ್ರಮಾಣವಾಗಿ ನಿರ್ದಿಷ್ಟಪಡಿಸಿ ಅರಿಯುವ ಶಕ್ಯತೆಯು ಇಲ್ಲದಿಲ್ಲ. ಪಶುಗಳ ಸಂಗಾತಿಯಾಗಿದ್ದ ನರ(ಳ)ನಿಗೆ, ವಿಕಾಸಕ್ರಮದ ವಿಶ್ವನಿಯಮದ ಮೇರೆಗೆ ಪ್ರಜ್ಞೆಯ ಅಂಗವಾದ ಮನಸ್ಸಿನ ಪ್ರಾದುರ್ಭಾವದೊಡನೆ 'ಮನು'ಜತ್ವವು ಲಭಿಸುತ್ತದೆ. ಗ್ರೀಕ್‌ಸಂಸ್ಕೃತಿಯು ಇತಿಹಾಸದ ಆದಿಯಲ್ಲಿ Nous mind ತತ್ತ್ವವು ಇದ್ದದ್ದು ಅರಿಸ್ಟಾಟಲ್ ಪ್ರಭೃತಿಗಳ ನಿರ್ದೇಶನದಿಂದ ದೃಢಪಟ್ಟಿದೆ.

ಭಾರತೀಯ ಪೂರ್ವಪರಂಪರೆಯ, ವೈವಸ್ವತ: ಮನು ಈ ಪ್ರತಿಮೆಯು, ಗ್ರೀಕಿನ Nous mind ಪ್ರತಿಮೆಗೆ ಸರಿದೊರೆಯಾಗಿದೆ. ಈ ಹಂತವು, ಮಾನವ ಸಂಸ್ಕೃತಿಯ ಉತ್ತಮ 'ಸ್ಥಿತಿ'ಯ ಪ್ರಾರಂಭದ ಸೂಚಕವಾಗಿದೆ. ಆದರೆ, ಕೆಲವು ಸಮಯದ ತರುವಾಯ, ಭಾರತೀಯ ಪೂರ್ವಪರಂಪರೆಯಲ್ಲಿ ಪ್ರಜ್ಞಾ: ಮನಸ್‌ತತ್ತ್ವವು ತನ್ನ ಬೆಲೆಗೆ ಎರವಾಗುತ್ತದೆ; ಗ್ರೀಕ್ ಸಾಂಸ್ಕೃತಿಕ ಇತಿಹಾಸದ ಝೀಉಸ್ : ಪ್ರಜ್ಞಾಪ್ರಕಾಶ ತತ್ತ್ವದ ದೈವತ ಪ್ರತಿಮೆ. ಇದು ಕಾಮುಕತೆಯ ಮೂರ್ತಿಯಾಗಿ ಮಾರ್ಪಡುತ್ತದೆ! ಮಾನವೇತಿಹಾಸದಲ್ಲಿ ಕಾಮುಕತೆ ಪ್ರತಿಷ್ಠೆ ಪಡೆಯತೊಡಗಿದ ಹಂತವು ಇಲ್ಲಿದೆ. Nous mind ಈ ಆದಿಕಾರಣಕ್ಕೆ ಗೌಣಸ್ಥಾನವು ಪ್ರಾಪ್ತವಾಗಿ, ಪ್ಲೇಟೋನ ಸುಮಾರಿಗೆ, ಇದರ ಸ್ಮೃತಿಯೂ ನಷ್ಟವಾಗುತ್ತದೆ! ಈ ಸ್ಥಿತ್ಯಂತರವನ್ನು ಇನ್ನೂ ಒಂದು ಬಗೆಯಿಂದ ನಿವೇದಿಸಬಹುದಾಗಿದೆ; ಪ್ರಜ್ಞಾಪ್ರಾದುರ್ಭಾವದೊಡನೆ 'ಜೀವನ'ದ ಪಾತಳಿಯ ಮೇಲೆ ಬಾಳತೊಡಗಿದ ಈ ಮಾನವನು ಗೀತೆಯ ಪರಿಭಾಷೆಯಲ್ಲಿ ಹೇಳಬಹುದಾದರೆ; 'ಸ್ಥಿತ (ಸ್ಥಗಿತ) ಪ್ರಜ್ಞ'ನಾಗುವ ದಿಕ್ಕಿನಲ್ಲಿ ಹೊರಟಾಗ, ಈ ಮಾನವನು, ಪ್ರಾಣಚೇತಸದಿಂದ ಪ್ರಚೋದಿತ 'ಜೀವಿತ'ದ ಪಾತಳಿಯ ಮೇಲೆ ತಳ್ಳಲ್ಪಟ್ಟಿದ್ದಾನೆ!

ಈ ಮಾನವನು ಜೀವನದ ಪಾತಳಿಯಿಂದ ಜೀವಿತದ ಹಂತಕ್ಕೆ ಬರುವಾಗ, ಇವನು ನರ(ಳ)ನಾಗಿ ಮಾರ್ಪಡುವ ಅನಿವಾರ್ಯತೆಯನ್ನು, ಯಾವ ಭಗವಂತನೂ ತಪ್ಪಿಸಲಾರನು. ಏಕೆಂದರೆ, ಈ ಮಾನವನು ವಿಶ್ವನಿಯಮಕ್ಕೆ ಅಂಕಿತನಿದ್ದಾನೆ. ಮಾನವನ ಈ ಸ್ಥಿತ್ಯಂತರದೊಡನೆ, ಇವನ ಸಂಸ್ಕೃತಿ-ಸಾಹಿತ್ಯದ ಆಶಯ ಹಾಗೂ ಆಕೃತಿ ಸ್ವರೂಪವು ಬದಲಾಗಿದ್ದರೆ ಸೋಜಿಗವೇನು? ಮೋಕ್ಷಕಾಮಿಯಾಗಿರುವ-ಮುಕ್ತಿಯ ಹಂಬಲ ತಲೆದೋರಿದ ಈ ಮಾನವನಿಗೆ 'ತಾನು ನರ(ಳ)ನಾಗುತ್ತಿದ್ದೇನೆ' ಎಂಬ ಅರಿವು ಇಲ್ಲವಾಗಿದೆ. (ಮುಕ್ತಿ ಬಯಸುವ) ಈ ವ್ಯಕ್ತಿ; ನರ(ಳ), ತಾನು 'ಮಾನವ' ಎಂದು ಬಗೆಯುತ್ತಿರುವಲ್ಲೇ ಆತ್ಮವಂಚನೆಯಾಗುತ್ತಿದೆ! "ಇಂದು, 'ಮಾನವ' ಎಂಬುದು ಮಿಥ್ಯಾಕಥೆ (Myth) ಆಗಿಲ್ಲವೆ?" ಎಂದು ನನ್ನ ಮಿತ್ರರೊಬ್ಬರು ಕೇಳಿದರು. ನಮಗೆ ಸುತ್ತಲೂ ಕಾಣುತ್ತಿರುವವರು ವಿಶಿಷ್ಟ ವ್ಯಕ್ತಿಗಳು : ರಂಗ, ಹನುಮ; ಮುಲ್ಲಾ....ಇತ್ಯಾದಿ. ಆದರೆ, ಈ 'ಮಾನವ' ಎಂಬ ಪ್ರಾಣಿ ಯಾರು? ಎಲ್ಲಿ ಇದ್ದಾನೆ? ಎಂಬ ಅವರ ಪ್ರಶ್ನೆ ಸಮರ್ಪಕವಿಲ್ಲವೆ?

ಈ ಹಿನ್ನೆಲೆಯಲ್ಲಿ, 'ಮಾನವ' ಎಂಬವನು, 'ಒಂದು ವಿಶಿಷ್ಟ ವ್ಯಕ್ತಿ' ಎಂದು ನೆರೆನೆಮ್ಮತೊಡಗಿದ್ದು ಯಾವಾಗ? ಎಂದಿನಿಂದ? ಎಂಬ ಪ್ರಶ್ನೆ ಏಳುತ್ತದೆ. ಈ ಸ್ಥಿತ್ಯಂತರದ ಕಾರಣವು ನಿಶ್ಚಿತವಾಗಿ ಗೊತ್ತಾದರೆ, ಇಂದಿನ ಭ್ರಷ್ಟಾಚಾರ, ಅನಾಚಾರ, ತಾಯ್ಗಂಡನದಂತಹ ಪ್ರವೃತ್ತಿಗಳ ಉಗಮಸ್ಥಾನವು ಎಲ್ಲಿ ಇದೆ, ಎಂಬುದು ತನ್ನ ತಾನೆ ಅರಿಕೆಗೆ ಬರಬಹುದಾಗಿದೆ.

ವ್ಯಕ್ತಿ-ಮುಕ್ತಿ-ನರ

ಶ್ರೀಮತ್ ಭಗವತ್ ಗೀತೆಯು ಬೋಧಿಸುತ್ತಿದೆ : ಮುಕ್ತಿ ಬೇಕಿದ್ದರೆ ವ್ಯಕ್ತಿಯಾಗು=ಸ್ಥಿತ-ಪ್ರಜ್ಞನಾಗು ಎಂದು! ಗ್ರೀಕ್ ಪುರಾತನ ಪರಂಪರೆಯೊಳಗಿನ Emancipation of the individual ಪ್ರವೃತ್ತಿಯ ಆಂದೋಲನವು, ಈ ದೃಷ್ಟಿಯಿಂದ ಉದ್ಬೋಧಕವಿದೆ. ಗ್ರೀಕ್‌ತತ್ತ್ವ ಜ್ಞಾನದ ಇತಿಹಾಸದಲ್ಲಿ ದೊರೆಯುವ ಈ ದಾಖಲೆ ನೋಡಿಕೊಳ್ಳಿ ; ಮಹಾಕವಿ ಎಂಬ ಹೆಸಿಯೊಡನೆ ಸುಮಾರಿಗೆ (ಕ್ರಿ. ಪೂ. ೮೦೦) ಗ್ರೀಕ್‌ಸಂಸ್ಕೃತಿಯಲ್ಲಿ ವ್ಯಕ್ತಿ ಮುಕ್ತಿಯ ಪ್ರವೃತ್ತಿಯು ಶಿಷ್ಟಮಾನ್ಯವಾಗುವ ಹಂತಕ್ಕೆ ತಲುಪಿತ್ತು.

> However, a process was completed which was completed which was of great importance for the rise of (new) philosophy of the emancipation of the individual[1]

ಈ ಲೇಖಕನು ಇದು ಹೊಸ (New) ತತ್ತ್ವಜ್ಞಾನ ಎಂದಿದ್ದರೆ ಚೆನ್ನಾಗಿತ್ತು. 'ವ್ಯಕ್ತಿಮುಕ್ತಿ'ಯ ಈ ತತ್ತ್ವಜ್ಞಾನದ ಉದಯಕ್ಕೆ (rise) ಈ ಲೇಖಕನು ಮಹತ್ತ್ವವನ್ನಿತ್ತಿದ್ದಾನೆ. 'ವ್ಯಕ್ತಿ ಮುಕ್ತಿ'ಯ ಈ ಪ್ರವೃತ್ತಿಯನ್ನು 'ಮಹತ್ತ್ವದ್ದು (of great importance)' ಎಂದೂ ಹೇಳುತ್ತಾನೆ. ಆದರೆ, ಈ ಹೊಸ ತತ್ತ್ವಜ್ಞಾನವು ತತ್ಪೂರ್ವದ ಯಾವ ದೃಷ್ಟಿಕೋನವನ್ನು ಬೆಲೆಗೆ ಎರವಾಗಿಸಿತು-ಎಂಬುದನ್ನು ಈ ಇತಿಹಾಸ ಲೇಖಕನೆಂಬ ಕಾರಣದಿಂದ, ಇವನು ನಿವೇದಿಸಬೇಕಿತ್ತು.

ಅಲ್ಲದೆ, ಈ 'ವ್ಯಕ್ತಿಮುಕ್ತಿ'ಯ ಪ್ರವೃತ್ತಿಯು 'of great importance' ಆಗುತ್ತಿರುವ ಕಾರಣವನ್ನೂ ಇವನು ವಿಶದಪಡಿಸಿಲ್ಲ! ಮತ್ತು ಇದಕ್ಕೂ ಮಹತ್ವದ ಸಂಗತಿ : 'Individual emancipation' (ವ್ಯಕ್ತಿಮುಕ್ತಿ) ಎಂದರೆ ಏನು? ಈ 'ವ್ಯಕ್ತಿ' ಎಂಬುದು ಮಾನವನಿಂದ ಬೇರೆಯಿದೆಯೆ? ಇದ್ದರೆ ಇದನ್ನು ಮಾನವನಿಂದ ಭಿನ್ನ ಎನ್ನಲು ಕಾರಣಗಳು ಯಾವುವು? ಇದನ್ನು ವಿವರಿಸುವ ಹೊಣೆಯನ್ನು ಇತಿಹಾಸ ಲೇಖಕನು ತಪ್ಪಿಸಿಕೊಂಡಿದ್ದಾನೆ! ಇದೇ ಮನೋಭಾವವು, ಈ ಪಂಥದ ಪ್ರವಾದಿ ಪೈಥಾಗೊರಾಸನ ಬಗೆಗೆ ಬರೆಯುವಾಗಲೂ ವ್ಯಕ್ತವಾಗಿದೆ! ಈ ಪೈಥಾಗೊರಾಸನನ್ನು 'colossus' (ಅತಿ ಮಾನವ) ಎಂದು ಹೊಗಳಿದ್ದಾನೆ. ಆದರೆ ಇವನಿಂದ ಪ್ರಚಾರಕ್ಕೆ ಬಂದ ಸಂಪ್ರದಾಯದಿಂದ ಗ್ರೀಕ್‌ಸಂಸ್ಕೃತಿಯ ಪೂರ್ವ ಪರಂಪರಾಗತ ವೈಚಾರಿಕ ಆಕೃತಿಯು (mode of thought) ಮಾರ್ಪಟ್ಟಿದೆಯೆಂದು ಆಕ್ಷೇಪಿಸಿದ್ದೂ ಉಂಟು.

ಆದರೆ ಈ ಗ್ರೀಕ್‌ತತ್ವಜ್ಞಾನದ ಇತಿಹಾಸ ಲೇಖಕರು, 'ವ್ಯಕ್ತಿ ಮುಕ್ತಿ'ಯ ಅರ್ಥವನ್ನು ಸ್ಪಷ್ಟೀಕರಿಸದಿರುವ ಕಾರಣವೇನು? ಈ ನೂತನ ಪ್ರವೃತ್ತಿಯ ಪರಿಣಾಮದಿಂದಾಗಿ, ಆದ ಧಾರ್ಮಿಕ ಹಾಗೂ ಸಾಮಾಜಿಕ ಸ್ಥಿತ್ಯಂತರವನ್ನು ವಿವರಿಸಿದರೆ, ಇದರಿಂದ ಕ್ರೈಸ್ತಪಂಥವು ಆಕಾರ ಪಡೆದ ಹಿನ್ನೆಲೆಯ ಲೈಂಗಿಕ ಭೂಮಿಕೆಯು ಬಯಲಿಗೆ ಬರಲಿದೆ! ಆ ಗುಹ್ಯಮಾರ್ಗದ ಸ್ವರೂಪವು ಬಯಲಿಗೆ ಬಂದರೆ ಕ್ರೈಸ್ತಪಂಥದ 'ಹೂರಣ' ಹೊರಬೀಳದಿರಲು ಶಕ್ಯವೇ ಇಲ್ಲ. 'ವ್ಯಕ್ತಿಗೆ' ಮಾನವನಿಂದ-ಇವನ ಪ್ರಜ್ಞೆಯ ಬಂಧನದಿಂದ-'ಬಿಡುಗಡೆ' ಹೊಂದಬೇಕೆಂದು ಉಂಟಾದ ಆ ತೀವ್ರ ಅಭಿಲಾಷೆಯಲ್ಲಿ, ಲೈಂಗಿಕ ಸ್ವರೂಪದ ಮುಕ್ತಿಯ (Tension & Release) ಈ ಭಾವನೆಯೇ ಆ ಹಂತದಲ್ಲಿ ಪ್ರಬಲವಾಗಿ ಇರಲಿಕ್ಕೆಬೇಕಷ್ಟೆ? ಅಮೂರ್ತ-ಪಾರಲೌಕಿಕ 'ಮುಕ್ತಿ'ಯ ಕಲ್ಪನೆಯು ಮೊತ್ತಮೊದಲಲ್ಲಿ ಅರಿಕೆಗೆ ಬಂದಿರಲು ಶಕ್ಯವೇ ಇಲ್ಲ.

ಭಾರತೀಯ ಪರಿಭಾಷೆಯಲ್ಲಿ ಮುಕ್ತಿಯ ಈ ಕಲ್ಪನೆಯನ್ನು 'ಪುರುಷ ಅರ್ಥ' ಎಂದಿರುವಲ್ಲಿ ಈ ವ್ಯಕ್ತಿಯ ನರ(ಳ)ನ 'ಸ್ವ' ಅರ್ಥವೇ ಎದ್ದು ಕಾಣುತ್ತಿದೆ. ಪಾಶ್ಚಾತ್ಯ ಪರಿಭಾಷೆಯೊಳಗಿನ 'Release' (Tension) ಮಾತುಗಳು ಅರ್ಥಪೂರ್ಣವಾಗಿವೆ. '(ಸಂ)ಭವ ಚಕ್ರದ' 'ಮುಕ್ತಿಯ' ಈ ಭಾವನೆಯಲ್ಲಿ ಪುರಿ ಶಯ(ನ)ನ ಅಂಗವೇ ಅಭಿಪ್ರೇತವಿರಬೇಕಷ್ಟೆ? ಇದಕ್ಕೆ ಪ್ರಮಾಣ ಬೇಕೆ? ಪುರುಷಾರ್ಥ ಸಿದ್ಧಿಗಾಗಿ ಮೋಕ್ಷಕ್ಕಾಗಿ 'ಮೋಕ್ಷದಾಯಕಾಃ' ಆಗಿರುವ ಸಪ್ತ 'ಪುರಿ' ಗಳ ಯಾತ್ರೆ ಮಾಡಲೇಬೇಕೆಂಬ ವಿಧಿಯಿದೆ. ಪುರುಷನ ಅರ್ಥದ ಸಲುವಾಗಿಯೇ ಈ 'ಸ್ಥಲ'ಕ್ಕೆ ಮಹತ್ವವು ಬಂದದ್ದು ಸ್ಪಷ್ಟವೇ ಇದೆ. ಆದರೆ, ತತ್ವಜ್ಞಾನದ ಇತಿಹಾಸ ಲೇಖಕರು ಹಾಗೂ 'ಧರ್ಮಶಾಸ್ತ್ರದ' ಇತಿಹಾಸಕಾರರು, ವ್ಯಕ್ತಿ ಮುಕ್ತಿಯ ಕಲ್ಪನೆಯ ಇತಿಹಾಸವನ್ನು ಕಡೆಗಣಿಸಿದ್ದಾರೆ. ಮಾನವನು (ವೈವಸ್ವತಮನು), ನರ(ಳ)ನಾಗಿ ಮಾರ್ಪಟ್ಟುದನ್ನು ಸ್ಪಷ್ಟೀಕರಿಸಲಿಲ್ಲ ಹಾಗೂ ವ್ಯಕ್ತಿ ಮುಕ್ತಿಯ (Emancipation of the individual) ಈ ಮನೋಭಾವವು ತಲೆಯೆತ್ತಿ ಬೆಳೆಯ ತೊಡಗಿದ ಹಂತಗಳನ್ನು ಸ್ಪಷ್ಟವಾಗಿ ಬೆಳಕಿಗೆ ತರುವ ಬದಲು ಇವುಗಳ ಬಗೆಗೆ ಮೌನ ಸ್ವೀಕರಿಸಿದ್ದಾರೆ. ಇಲ್ಲವೆ, ಇದನ್ನು ಸುತ್ತುಮಾತಿನಿಂದ ತೇಲಿಸಿ ಹೇಳುವ ರೀತಿಯಿಂದಾಗಿ, ಮಾನವ ಸಂಸ್ಕೃತಿಯ ಅವನತಿಯ ಕ್ರಮ ಹಾಗೂ ಕಾರಣ ಗೊತ್ತಾಗಲು ಆತಂಕವು ಉಂಟಾಗುತ್ತ ಬಂದಿದೆ. ಇದು ಹಾಗಿರಲಿ, ಮಾನವನಿಂದ ಬೇರ್ಪಡುವ-ಮುಕ್ತನಾಗ ಬಯಸುವ ಈ 'ವ್ಯಕ್ತಿ' ಯಾರು? ಎಂಬುದು ಪ್ರಸ್ತುತ ಮುಖ್ಯಪ್ರಶ್ನೆ ಆಗುತ್ತಿದೆ.

ಮನು-ಜ-ವ್ಯಕ್ತಿ

'ಮನು-ಜನಿಂದ ಬೇರ್ಪಡಿಸಲಾಗಿರುವ ಈ ವ್ಯಕ್ತಿ (Individual=Person) ಇವನು ನರ(ಳ)ನಲ್ಲದೆ ಬೇರೆ ಯಾರು ಇರಬಲ್ಲರು? ಇದಕ್ಕೆ ಪ್ರಮಾಣ ಬೇಕೆ? 'ಮಾನವ' ಎಂದರೆ ಕೇವಲ 'ವ್ಯಕ್ತಿ' ಅಲ್ಲ. ಈ 'ವ್ಯಕ್ತಿ' ಇದು ನರ(ಳ): ಅಂಗ. ಈ 'ಅಂಗ'ವು ವ್ಯಕ್ತಿ ಸಾಪೇಕ್ಷವಿದೆ. ಆದಕಾರಣ ಇದನ್ನು 'ಮಾನವ' ಪದದಂತೆ, ವ್ಯಕ್ತಿನಿರಪೇಕ್ಷ ಪಾತಳಿಯ ಮೇಲಣ ತಾತ್ವಿಕ ಭೂಮಿಕೆಯ ಮೇಲೆ ತರುವ ಪ್ರಯತ್ನವಾಗಿದೆ. ಇದಕ್ಕೆ ಸ್ವತಂತ್ರ (autonomous) ಸ್ಥಾನ ಕಲ್ಪಿಸಲಾಗಿದೆ. ಈ ನರ (ನಾರ-ಅಯನ) ದೇವರು ಮಾನವರ 'ಆರಾಧ್ಯ ಪ್ರತಿಮೆ' (ಲಿಂಗ) ಎಂದು ನಂಬಿಸುವುದಕ್ಕೆ ವೇದೋಪನಿಷತ್ತುಗಳಲ್ಲಿ ಮಾಡಿರುವ ಮಂತ್ರ, ಮಾಟ, ಮೋಸವು ಹಾಗೂ ಮಾತಿನ ಚಾಕಚಕ್ಯವು ಅಭ್ಯಸನೀಯವಿದೆ. ಇಲ್ಲಿ ನಾರ-ಅಯನ: (ಲಿಂಗ)ವನ್ನು ದೇವರ ಹಂತಕ್ಕೆ ಎತ್ತರಿಸಲಾಗಿದೆ. ಆದರೆ, ಒಂದೇ ವಿಶಿಷ್ಟವನ್ನು ಇದು Illegitimate abstraction = ವೈಶ್ವಕ-ಸಾರ್ವಕಾಲಿಕ-ತತ್ವದ ನಿಯಮದ ಮಟ್ಟದ್ದು ಎಂದು ನಂಬಿಸುವುದು ಪ್ರಶಸ್ತವೊ? ತತ್ವಶಾಸ್ತ್ರದ ಪರಿಭಾಷೆಯಲ್ಲಿ ಇದು ಅಯೋನಿ ಸಂಭವ ಸಂಗತಿ ಆಗುವ ಅನಿವಾರ್ಯತೆಯೂ ಇದೆ.

ಉದಾ : 'ಲೋಕ ಮಾತೆ'-'ಜಗತ್ ಜನನಿ' ಎಂಬ ಈ ಜನಿತ್ರಿ-(ಯೋನಿ) ಇದು ಕೇವಲ ಕಾಲ್ಪನಿಕವೇ ಆಗಿದೆ! ಪ್ರತಿಯೊಬ್ಬ ಮಾನವನ ಮಾತೆ ಇದ್ದಾಳೆ, ಈ ಒಬ್ಬ ಮಾತೆಯನ್ನು ಅಮೂರ್ತ ಸಾರ್ವಕಾಲಿಕ ಹಂತಕ್ಕೆ ಒಯ್ಯುವಾಗ ಇವಳು 'ಯೋನಿಯ' ಸ್ವರೂಪಳೇ ಆಗಬೇಕಾಗುತ್ತದೆ! 'ಲಜ್ಜಾಗೌರಿ'ಯ ಪ್ರತಿಮೆಗಳು ಕಂನಾಡಿನ

ಹಲವೆಡೆಗಳಲ್ಲಿ ದೊರೆತಿವೆ. ಇವುಗಳಲ್ಲಿ ಹೆಣ್ಣುತನದ ವೈಶಿಷ್ಟ್ಯ ಸೂಚಕ ಯೋನಿಗೇ ಪ್ರಾಧಾನ್ಯವು ಪ್ರಾಪ್ತವಾಗುವಂತೆ, ಮುಖವನ್ನು ಇಲ್ಲಿ ತೆಗೆದು ಹಾಕಲಾಗಿದೆ ಅಥವಾ ಅಲ್ಲಿ ಒಂದು 'ಕಮಲ'='ಪುಷ್ಪ' ತೋರಿಸಲಾಗುತ್ತದೆ. ಈ ಬದಲಾವಣೆಯೂ ಸತ್ಯವನ್ನು ಹೊರಗೆಡಹುತ್ತಿದೆ. ಮತ್ತೆ ಕಮಲವೂ ಲೈಂಗಿಕ ಸಂಕೇತ ಆಗಿದೆ! ಇಸ್ರಾಯಿಲ್ ಭಾಗದಲ್ಲಿ ದೊರೆತ ಇಂತಹ ಒಂದು ಪ್ರತಿಮೆಯ ಚಿತ್ರವು ಈ ಮೊದಲೇ ಪ್ರಕಟವಾಗಿದೆ.[೨]

ಇದೇ ಮೇರೆಗೆ ಈ 'ಯೋನಿ'ಯನ್ನು ಸಾರ್ವಕಾಲಿಕ 'ಕಣ್' ಎಂಬ ಸಂಕೇತದಿಂದಲೂ ಪೂಜಿಸಲಾಗುತ್ತಿತ್ತು. ಈಜಿಪ್ಟ್‌ನಲ್ಲಿ 'ಸೃಷ್ಟಿ ಪ್ರಸವಿಸುವ ಕಣ್' ಇದ್ದುದು ಸಚಿತ್ರವಾಗಿ ಬೆಳಕಿಗೆ ಬಂದಿದೆ. 'Eye Goddess' ಎಂಬ ಹೆಸರಿನ ಗ್ರಂಥ ಬರೆದ ಕ್ರಾಫರ್ಡ್ ಎಂಬವನು, ಹಲವು ಪುರಾತನ ಅವಶೇಷಗಳಲ್ಲಿ ದೊರೆವ 'ಕಣ್ಣಮ್ಮ' ದೇವಿಯ ಸಚಿತ್ರ ವಿವರಣೆ ಕೊಟ್ಟಿದ್ದಾನೆ. ಇದನ್ನು 'ಮಂಡಲ (೦) ಪೂಜೆಯ ಯುಗ', ಎಂದು ಕರೆಯಲಾಗುತ್ತದೆ. ಆದಿಮಾತಾ ಸಂಪ್ರದಾಯದ ಯುಗ ಎಂದರೂ ಸರಿ. 'ಕಣ್' ದೇವಿಯ ಯುಗದ ತರುವಾಯ 'ಗಣ್' (ಲಿಂಗ) ಪೂಜೆಯವಾಡಿಕೆಯು ರೂಢಿಗೆಬಂದಿದೆ. ಈ ದೇವತಾ ಉಪಸ್ಥಾನದಲ್ಲಿ 'ನ್ಯಾಸ' ಮತ್ತು 'ಮುದ್ರಾ' ವಿಚಾರಕ್ಕೆ ಮಹತ್ವವಿದೆ.[೩] ಅಂಗಾಂಗಗಳಲ್ಲಿ ದೇವತಾಶಕ್ತಿಯ, ಆವೇಶವು ಆಗುವುದಕ್ಕೆ ಈ ನ್ಯಾಸದ ಯೋಜನೆಯಿದೆ. ಇಲ್ಲಿ 'ಮುದ್ರಾ' ಎಂಬ ಪಾರಿಭಾಷಿಕ ಪದವು ಅಭ್ಯಸನೀಯವಿದೆ. ದೇವರು "ಮುದ್ರಾಭಿಃ ಏವ ತೃಪ್ಯಂತಿ" 'ಮುದ್ರಾಂವಿನಾ' ಯಾವ ಕಾರ್ಯವೂ ಸಲ್ಲದು ಎಂದು ಶಾಸ್ತ್ರವಿದೆ. " 'ರಾ'ದಾನೇ" ಈ ಅರ್ಥದಂತೆ "ಮುದಂ ರಾತಿ ಇತಿ ಮುದ್ರಾ." ಈ ಮಂಡಲ (೦) ಉಪಸ್ಥಾನದಲ್ಲಿ ಇರುವ 'ಸತ್ಯರೂಪ ಆದಿತ್ಯ'ನ ಉಲ್ಲೇಖವು ಬೃಹದಾರಣ್ಯಕದಲ್ಲಿ ಇದೆ.[೪]

ಇಲ್ಲಿ "ಮಂಡಲದಲ್ಲಿ ಇರುತ್ತಾನೆ" ಎಂಬ ಈ ಆದಿತ್ಯನು ಯಾರು? ಎಂಬುದು ಅಭ್ಯಸನೀಯವಿದೆ. 'ಮಂಡಲೇ' ಇರುವ ಈ ಆದಿತ್ಯನೇ 'ಪುರುಷ'ನೆಂದೂ, ಪ್ರಪಂಚದಲ್ಲಿ 'ಸತ್ಯ' ಎಂದರೆ ಈ ಆದಿತ್ಯರೂಪೀ ಪುರುಷನೇ ಎಂದೂ ಉಪನಿಷತ್ತುಗಳಿಂದ ಹೊರವಡುತ್ತದೆ! 'ತದೇವ ಬ್ರಹ್ಮ' ಎಂದೂ ಹೇಳಲಾಗಿದೆ![೫]

ಈ ಆದಿತ್ಯ=ಪುರುಷನನ್ನು 'ರಸ' ಸ್ವರೂಪೀ ಎಂದೂ, ಈ ರಸದ ತೊಟ್ಟು, ಬೆಳ್ಳಗೆ 'ಮಂಡಂ ಇವ ಅತಿಸೂಕ್ಷ್ಮಂ' ಎಂದು ಉಪನಿಷತ್ತು ಹೇಳುತ್ತದೆ.[೬] ಈ 'ಮಂಡ'ವುಳ್ಳದ್ದು 'ಮಂಡಲ', ಇನ್ನು ವ್ಯಕ್ತಿಮುಕ್ತಿಯ ಈ ವಿವರಣೆ ನೋಡಿಕೊಳ್ಳಿ. ಈ 'ಮಂಡ' ರೂಪ (ಮಂಡಲಸ್ಥ) ಅತಿಸೂಕ್ಷ್ಮ "ದೇವಂ ಜ್ಞಾತ್ವಾ ಮುಚ್ಯತೇ ಸರ್ವ ಪಾಶೈಃ" Tension ದಿಂದ ಮುಕ್ತವಾದ ಅನುಭವದ ಈ ವರ್ಣನೆಯು ಚಿಂತ್ಯವಿದೆ. ಮುಕ್ತಿಯ ಹಂಬಲದ ಈ ಆದಿತತ್ಯ=ಪುರುಷನು ಯಾರು? ಎಲ್ಲಿ ಇದ್ದಾನೆ? ಇವನು ಎರಡು ಪಾತಳಿಯ ಮೇಲೆ ಇದ್ದಾನೆ. ಒಂದು: ಭೂಲೋಕದಲ್ಲಿ ಈ ಆದಿತ್ಯ-ಪುರುಷನು ವ್ಯಕ್ತಿ ಸಾಪೇಕ್ಷವಿರುವ ಈ ವ್ಯಕ್ತಿ=ನರ(ಳ) ರೂಪನು. ಎರಡು: ನೆಲದಮೇಲೆ ಅಲ್ಲದೇ ಅಂತರಿಕ್ಷದ ದಿವ್ಯಲೋಕದಲ್ಲೂ ಇದ್ದಾನೆ. 'ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು'; ಈ ಬಗೆಯ ಪ್ರಯತ್ನವು, ಗ್ರೀಸಿನಲ್ಲಿ ಆ ಪುರಾತನ ಪೈಥಾಗೊರಸ್ ಪಂಥೀಯರಿಂದಲೂ ಆಗಿದೆ. ಭಾರತದಲ್ಲಿ ಈ ಪ್ರಯತ್ನದ ಉಲ್ಲೇಖವು ವೇದದಲ್ಲೇ ಇದೆ. ಇದು, 'ದಕ್ಷಿಣ ಕಪರ್ದಃ' ವಸಿಷ್ಠ=ವ್ಯಾಸನಿಂದ ಆಗಿದೆ.

ಅಂತರಿಕ್ಷದಲ್ಲಿ 'ಚರಲಿಂಗ' ಇದೆ ಎಂದು ನಂಬಿಸಿರುವ ಪೈಥಾಗೊರಸನ ವಿಚಾರವು ಈ ಮೊದಲು ಒಂದೆಡೆಗೆ ಬಂದಿದೆ. ಆದರೆ, ತನ್ನ ಈ ನೂತನ ಧರ್ಮದಲ್ಲಿ ಜನರ ಶ್ರದ್ಧೆ ದೃಢಪಡುವಂತೆ ಮಾಡಲು, ಈ ಪ್ರವಾದಿ ಮಹಾತ್ಮನಿಗೆ, ಸುಳ್ಳು ಆಡುವ ಆಪತ್ತನ್ನು ಸ್ವಾಗತಿಸ ಬೇಕಾಗಿದೆ !

> "They (phythagoreasns) invented a non-=existant planet to make
> up the tota to the sacred number Ten...."[೭]

ಇದರ ಜೊತೆಗೆ 'ಚಂದ್ರ' (೦) ಮಂಡಲದಲ್ಲಿ ಈ ಚರಲಿಂಗವು ಅಡಗಿದೆ, ಎಂದು ಆ ಬಳಿಕ ಸೂಚಿಸಿದ್ದಾಗಿದೆ.

ಪಾಶ್ಚಾತ್ಯ ಪರಂಪರೆಯಲ್ಲಿ ಚಂದ್ರ= She moon! ಕ್ರಿಸ್ತ ಈತ ಚರ್ಚಿನ ಚಂದ್ರನ ಪ್ರತೀಕ, ಎಂದು ಒರಿಜೆಸ್‌ನು ಬರೆದಿದ್ದಾನೆ.

ವೇದದಲ್ಲಿ 'ಆದಿತ್ಯ'ನು ಕುಮಾರೀ (ಅದಿತಿ) ಪುತ್ರನಂತೆ! ಇವಳನ್ನು 'ಅಮೃತಸ್ಯ ನಾಭಿಃ' (ಮಂಡ ತುಂಬಿದ ಹೊಂಡ) ಎಂದು ಹೇಳಲಾಗಿದೆ! ತೈತ್ತಿರೀಯ ೧.೫ ಮತ್ತು ಛಾಂದೋಗ್ಯದಲ್ಲಿ[೮] ಈ ಆದಿತ್ಯನು ಚಂದ್ರಮಂಡಲದಲ್ಲಿ ಅಡಗಿರುವ ವರ್ಣನೆಯಿದೆ.

ಇಂತು ಈ ಮಾನವನಿಂದ ಬೇರ್ಪಡಿಸಲಾದ ಮತ್ತು ಸ್ವಯಂಭೂಶಕ್ತಿಯ ಈ ಲಿಂಗ ಮತ್ತು ಯೋನಿಯ ಮೂಲಮಾದರಿ ಅಂತರಿಕ್ಷದಲ್ಲಿ, 'ಚಂದ್ರ ಮಂಡಲ'ದಲ್ಲಿ ಉಂಟು ಎಂದು ನಂಬಿಸಲಾಗಿರುವ ಈ 'ಗುಹ್ಯ' ಭಾಷೆ ಅಭ್ಯಸನೀಯವಿದೆ. ಇಲ್ಲಿ ವಿಚಾರಾರ್ಹ ಒಂದು ಪ್ರಶ್ನೆ : ಚಂದ್ರನ ಸಮೀಕ್ಷೆಯ ತರುವಾಯ ಈ ಮಾನವನಿಗೆ ತನ್ನ ಅನುಭವ ಅರ್ಥವಾಯಿತೆ? ಅಥವಾ ತನ್ನ ಅನುಭವ ಮೊದಲು; ಬಳಿಕ ಈ ಯೋನಿಲಿಂಗೈಕ್ಯದ ಅರ್ಥವು ಚಂದ್ರನ ಮೂಲಕ ಸ್ಪಷ್ಟವಾಯ್ತೆ? ತನ್ನ ಅನುಭವದ ಹಿನ್ನೆಲೆ ಇಲ್ಲದೆ ಬಾಹ್ಯಜಗತ್ತಿನ ಅರ್ಥವು ನೇರವಾಗಿ ಆಗಲು ಶಕ್ಯವಿಲ್ಲ.

> We would have to do violence to data if we were to make the moon primary mythogonic factor. (after earthly work, ascended to the skies and be come moon), it is deeds that make up decesive mythic-statement.

ಈ ಹಿನ್ನೆಲೆಯಲ್ಲಿ ಭಾರತೀಯ ಸಂಸ್ಕೃತಿಯಲ್ಲಿ ಆಗಿರುವ ತಿರುವುಮುರುವು ಎದ್ದು ಕಾಣಬಲ್ಲದು ಆದ್ಯ ಮನು=ವೈವಸ್ವತನ=ಜಾತವೇದ ಅಗ್ನಿಯ ಆರಾಧನೆಯ ಸ್ಥಳದಲ್ಲಿ 'ವ್ಯಕ್ತಿ ಮುಕ್ತಿಯ' ಪ್ರವೃತ್ತಿಯಿಂದಾಗಿ, ರಾತ್ರ ಸಮಾಯಾಚಾರಗಳು ಪ್ರಾರಂಭವಾಗುತ್ತವೆ! ನ-ಚಿಕೇತಾಗ್ನಿ=ಬೃಹತ್ ಉಲ್ಬ (=ಚಂದ್ರಮಂಡಲ)ಸ್ಥ ಲಿಂಗದ (: 'ಮಂಡ' ಬಿಂದು) ಸಾಕ್ಷಾತ್ಕಾರವು, ಮುಕ್ತಿಯು ನರ(ಳ)ರ ಬಾಳಗುರಿಯಾಗಿದೆ! ವೇದದ ಈ 'ದಾಖಲೆ'ಯುಂಟಾಗಿ ಫ್ರೈಡ್‌ಪಂಥೀಯ ಗ್ರಹಿಕೆಯು ಅನೈತಿಹಾಸಿಕ ಸ್ವರೂಪದ್ದಾಗಿದೆ-ಎಂದು ಸಿದ್ಧವಾಗುತ್ತದೆ. ಜಾತವೇದ ಅಗ್ನಿ : ಪ್ರಜ್ಞೆ ಮೊತ್ತಮೊದಲು ಪ್ರಾದುರ್ಭವಿಸಿದೆ ಮತ್ತು ಯೋನಿಲಿಂಗೈಕ್ಯದ ಈ ಮುಕ್ತಿಯ ಕಲ್ಪನೆ, ಆ ಬಳಿಕ ತಲೆಯೆತ್ತಿದೆ. ಆದಕಾರಣ, 'ಬಿತ್ತಿದ್ದನ್ನು ಬೆಳಕೊ' ಎಂಬ ಗಾದೆಯು ಇಲ್ಲಿ ನೂರಕ್ಕೆ ನೂರು ಸಮರ್ಪಕವಾಗಿದೆ. ಇಂತು, ಇಂದಿನ ಈ ನಡೆವಳಿ ನುಡಿವಳಿಗಳ ಬೇರುಗಳು ಆ ನಿನ್ನೆಗಳ ಆಳದಲ್ಲಿ ಇವೆ. ಇಂದು ನಾವು ಪೂಜಿಸುವ 'ಮಾರುತಿ'ಯಿಂದ ತೊಡಗಿ ಎಲ್ಲ 'ಗಂಡು ದೇವರುಗಳು 'ಚಂದ್ರಶೇಖರ'ನ ಬಳಗದ ರಾತ್ರ ಸಮಯಾಚಾರದ ದೇವರುಗಳೇ ಆಗಿವೆ. ನಾಮಭೇದ ಮಾತ್ರ ಉಂಟು.

ಮನು-ಜನಿಂದ 'ವ್ಯಕ್ತಿ' (ಲಿಂಗ) ಬೇರೆಯಾಗುತ್ತದೆ. ಕತ್ತಲಿನಲ್ಲೇ ಇರಬೇಕಾದ ಈ ವ್ಯಕ್ತಿ ಬೆಳಕಿನಲ್ಲಿ ಬರುವಾಗ, ಪ್ರಕಾಶ ಪಾತಳಿಯ ಮೇಲಣ ಮನು-ಜನು ಕಾಣದಾಗಿದ್ದಾನೆ! ಇಂದು ಮಾನವರು ಕಣ್ಮರೆಯಾಗಿದ್ದು, ಈ ಮಾನವನ 'ವ್ಯಕ್ತಿ' 'Person' (ಲಿಂಗ) ಇದಕ್ಕೇ ಬೆಲೆ ಬಂದಿದೆ. ವ್ಯಕ್ತಿ-ಪ್ರಾಣಲಿಂಗ ಚೇತಸದಿಂದ ಪ್ರಚೋದಿತ ಈ ಆಸಾಮಿ, ಇಂದು ತಾನೇ 'ಮಾನವ' ಎಂದು ಬಗೆಯುತ್ತಿರುವಲ್ಲಿ ಆಗುತ್ತಿರುವ ಆತ್ಮವಂಚನೆ, ಪರವಂಚನೆಯು ಅಷ್ಟಿಷ್ಟಲ್ಲ! ಪೈಥಾಗೋರಸ್=ವ್ಯಾಸರ ಭಾನಾಮತಿ ಪ್ರಭಾವದಲ್ಲಿ ಈ ಮಾನವನಿಗೆ ತಾನು ಲೈಂಗಿಕ ಹಂತದವನು ಆಗಿದ್ದೇನೆ, ಎಂಬುದು ಅರಿಕೆಗೆ ಬರುವುದು ದುಸ್ತರವಾಗಿದೆ. ಇದು ಮಾಟಕ್ಕೆ ಒಳಗಾದ ಲಕ್ಷಣ ಆಗಿದೆ. 'ಪಶ್ಯನ್ ಅಪಿ ನ ದದರ್ಶ' ವಾಚಂ। ಶೃಣ್ವನ್ ಅಪಿ, ನ ಶೃಣೋತಿ ಏನಾಂ' ಕಾಣುತ್ತಿದ್ದರೂ, ಕಿವಿಗೆ ಕೇಳಿಬಂದರೂ ಇದರ ಅರ್ಥ ಗಮನಕ್ಕೆ ಬರುವುದಿಲ್ಲವೆಂದು ಹೇಳಲಾಗುತ್ತದೆ! ಸಾಮಾಜಿಕ ಸಂದರ್ಭದ, ಆಗು-ಹೋಗುಗಳು, ಅಂತಃಸಂಗತಿಯುಕ್ತ ಆಚಾರ ವಿಚಾರಗಳು ಇವು ಪ್ರಜ್ಞಾ=ಪ್ರಕಾಶತತ್ತ್ವದುವು ಆಗಿರುತ್ತವೆ. ಇದು ಮಾನವನ ಜೀವನದ ಪಾತಳಿ. ಆದರೆ, ಅಂತರ್‌ವಿಸಂಗತ, ಅ-ಭಾವಾತ್ಮಕ ಆಚಾರ-ವಿಚಾರಗಳ ಸೆಳವಿಗೆ ಸಿಕ್ಕುವಾಗ,

ಈ ಮಾನವನು ನರ(ಳ)ನಾಗಿ ಮಾರ್ಪಡುವ ಅನಿವಾರ್ಯತೆಯನ್ನು ತಪ್ಪಿಸಿಕೊಳ್ಳಲಾರನು; ಇದು ಜೀವಿತದ ಪಾತಳಿಯ ವಿಧಿಲಿಖಿತ!

ಇಂದು 'ಅ-ಮೃತ'ತತ್ವದ, 'ಅಮೃತ' ಸಿದ್ಧಿಯ ಆಸಕ್ತಿ ಮೋಕ್ಷಕಾಮೀ ನರರ ವೈಶಿಷ್ಟ್ಯವಾಗಿದೆ. ಇದು ಜೀವಿತ ಪಾತಳಿಯ ಲಕ್ಷಣ ಆಗಿದೆ. ಕತ್ತಲಿನಿಂದ-ಮೃತ್ಯುತತ್ವದಿಂದ-ಆವೃತ ಬಾಳುವೆ ಇದು ಎಂಬುದು ತನ್ನತಾನೆ ಸಿದ್ಧವಾಗುತ್ತಿದೆ! 'ಅ-ಮೃತ' : ಎಂದರೇನು? ಮೃತವಲ್ಲದ್ದು ಯಾವುದು ಎಲ್ಲಿದೆ? ಇಲ್ಲಿ ಅಭಾವವೇ ಸ್ಥಾಯಿ! 'ಈ ಅಮೃತ ಬಿಂದುಗಳು ಚಂದ್ರಮಂಡಲದಲ್ಲಿ ಇವೆ.' ಎಂದು ಸಾಂಕೇತಿಕವಾಗಿ ಹೇಳಲಾಗುತ್ತದೆ. ಆದಕಾರಣ ಈ 'ಅಮೃತ' ಕತ್ತಲಿನ ಆವರಣದಲ್ಲಿ! ಆದರೆ, ಈ ಅಮೃತದ ಹೊಂಡವು ಭೂಲೋಕದಲ್ಲಿ ವ್ಯಕ್ತಿ ಸಾಪೇಕ್ಷವೇ ಇರಬಲ್ಲುದು! ವ್ಯಕ್ತಿ ನಿರಪೇಕ್ಷ 'ಅಮೃತದ ಹೊಂಡ (೦) ಎಲ್ಲಿಯೂ ಇಲ್ಲ! ಉಂಟು ಎಂಬುದು ಕೇವಲ ಅವರವರ ಅರ್ಥ=ಅವರವರ ಕಲ್ಪನೆ!

ಇಂದು ಇಂಥ ಈ 'ವ್ಯಕ್ತಿಗೇ' ಪ್ರಾಧಾನ್ಯವು ಬಂದಿದೆ. ಈ ಕಾರಣದಿಂದಾಗಿ ಅವರವರ ಅರ್ಥ=ಮೂಲ್ಯ ಇದು ಅವರವರ ಪಾಲಿನ ಸತ್ಯವಾಗಿದೆ! ಆದಕಾರಣ, ಇಂದು ವ್ಯಕ್ತಿ ನಿರಪೇಕ್ಷ; ಸಾಮಾಜಿಕ ಸ್ವರೂಪದ ನೈತಿಕ ಮೂಲ್ಯಗಳಿಗೆ ಸ್ಥಾನವೇ ಇಲ್ಲ! ಜೀವಿತದ ಹಂತದಲ್ಲಿ ಮಹಾತ್ಮಾಜೀಯವರ ಉಪದೇಶವು ಆಭಾಸಾತ್ಮಕವಾಗುತ್ತಿರುವ ಕಾರಣವೇನು? ಏಕೆಂದರೆ, ಈ ಜೀವಿತದ ಹಂತದಲ್ಲಿ ಅ-ಭಾವವೇ ಸ್ಥಾಯೀ ಆಗಿದೆ. ಆದಕಾರಣ ಇಲ್ಲಿ ಅವರವರ ಅರ್ಥ ಅವರವರ ಪಾಲಿನ ಸತ್ಯ! ಶಾಂಕರ ಸತ್ಯ, ಮಾಧ್ವಸತ್ಯ, ಜೆನಸತ್ಯ, ಬಸವಸತ್ಯ, ಬೌದ್ಧಸತ್ಯ, ಗಾಂಧೀಸತ್ಯ, ಮಾರ್ಕ್ಸ್‌ಸತ್ಯ.......ಹೀಗೇ ನಾನಾ ಪಂಥ ಪಕ್ಷ ತಲೆದೋರಲು ಆಮಂತ್ರಣವು ದೊರೆಯುತ್ತದೆ. ಈ ಜೀವನ ವಿಶ್ವದಲ್ಲಿ ಶೂನ್ಯ (0) Vacuum ಅ-ಭಾವಾತ್ಮ (೦) ಶೂನ್ಯ ಸ್ಥಿತಿಯು, ನ-ಅರ್ಥ-ಅನರ್ಥಗಳನ್ನು ಆಮಂತ್ರಿಸಲೇಬೇಕು. ಸ್ಥಿತಿ ಉಳಿಯಲಾರದು. ಪ್ರಾಣಲಿಂಗ ಶಕ್ತಿಯ ಪ್ರಚೋದನೆಯ ವೈಶಿಷ್ಟ್ಯವೇ ಅಂತರ್ ವಿಸಂಗತಿ! ಕಾಲಿದಾಸನೂ ಹೇಳುತ್ತಾನೆ-"ನ ತಾದೃಶಾಃ ಆಕೃತಿ ವಿಶೇಷಾಃ ಗುಣವಿರೋಧಿನೋ ಭವಂತಿ" ಕತ್ತಲಿನ ಆವರಣದಲ್ಲಿಯೇ ಇರುವ ಹುಟ್ಟುಗುಣ-ಸ್ವಭಾವದ ಈ ಪ್ರಾಣಶಕ್ತಿಯು ಮಾನವನನ್ನು ಹುಟ್ಟು-ಸಾವಿನ ರೂಪದ ಈ ಅಂತರ್‌ವಿಸಂಗತ ಕತ್ತಲಿನ ಭೂಮಿಕೆಯ ಮೇಲೆಯೆ ತಳ್ಳಿತು. ಪ್ರಾಣಲಿಂಗಶಕ್ತಿಯ ಪ್ರತಿನಿಧಿ ಎಂಬ ಚಂದ್ರನು ನಿಶಾನಾಥನಲ್ಲವೇ?

ಟಿಪ್ಪಣಿಗಳು

೧. E. Zeller; ***Out lines of the History of Greek Philosophy*** p : 11

೨. ***ಪ್ರವಾಹ ಪತಿತರ ಕರ್ಮ-'ಹಿಂದೂ' ಎಂಬ ಧರ್ಮ,*** ಬೆಂಗಳೂರ ವಿಶ್ವವಿದ್ಯಾಲಯದ ಪ್ರಕಟನೆ, ೧೯೭೫. ಬೇರೆ ಚಿತ್ರಗಳಿಗಾಗಿ 'ಅಧ್ಯಯನ' ಪು. ೩೮೦, ೪, ೯, ಡಾ. ಅ. ಸುಂದರ ಲೇಖನವನ್ನು ನೋಡಿ

೩. P. V. Kane; ***'History of Dharmashastra'*** Vol. V, P. ೧೧೨೩

೪. ೫, ೨, ೨, ೩, ೩. ಮಂಡಲವನ್ನು ಕುರಿತ ವಿವರಣೆಗಾಗಿ ಡಾ. ಕಾಣೆ ಅವರ ಪೂರ್ವೋಕ್ತ ಗ್ರಂಥ ಸಂಪುಟ ೫. ಪುಟ ೧೧೩೧-೯

೫. ಆದಕಾರಣ ಯೋನಿ-ಲಿಂಗ ಬ್ರಹ್ಮನ್ ಶಕ್ತಿ ಎನಿಸಿದೆ ***ಬೃಹದಾರಣ್ಯಕೋಪನಿಷತ್ತು*** ೫, ೫, ೨; ***ಛಾಂದೋಗ್ಯೋಪನಿಷತ್ತು*** ೧. ೬. ೬.

೬. ***ಶ್ವೇತಾಶ್ವತರೋಪನಿಷತ್ತು*** ೪. ೧೬

೭. Guthrie; ***A History of Greek Philosophy***, vol I. P. 213

೮. ***ಛಾಂದೋಗ್ಯೋಪನಿಷತ್ತು*** ೧.೬.೬

ಕಂನಡರ ಸಂಸ್ಕೃತಿಯ ತಳಪಾಯದ ಆಕೃತಿ

ಕಂನಡರ ಸಂಸ್ಕೃತಿ-ಸಾಹಿತ್ಯದಲ್ಲಿ ಆದದ್ದು ಏನು? ಮತ್ತು ಆಗಬೇಕಾದದ್ದು ಏನು? ಎಂಬುದನ್ನು ಅರಿಯಲು ಉಪಕಾರಕವಾಗಬಹುದಾದ ಪ್ರಾಸ್ತಾವಿಕ ಭಾಗವನ್ನು ಈ ವರೆಗೆ ಸ್ವಲ್ಪದರಲ್ಲಿ ವಿವರಿಸಿ ಆಯ್ತು. ಸಂಸ್ಕೃತಿಯ ಕೇವಲ ಪ್ರಾದೇಶಿಕ ವೈಶಿಷ್ಟ್ಯದ ಸ್ತರವನ್ನು ಬದಿಗೆ ಸರಿಸಿದರೆ, ಇದರ ಅಡಿಯಲ್ಲಿ ಕಾಣಲು ದೊರೆವ ಕನ್ನಡರ-ಸಂಸ್ಕೃತಿಯ ತಳಪಾಯದ ಆಕೃತಿ ಸ್ವರೂಪವು, ಅಖಿಲ ಭಾರತೀಯ ಸಂಸ್ಕೃತಿಯ ಮೂಲಭೂತ ಕಟ್ಟಡದ ಅಂಗವೇ ಇದ್ದೀತು. ಇನ್ನೂ ಒಂದು ಸೋಜಿಗವು ನನ್ನ ೧೦-೧೨ ವರುಷಗಳ ಅನ್ವೇಷಣೆಯಲ್ಲಿ ಖಚಿತಪಟ್ಟಿದೆ. 'ಸಂಸ್ಕೃತಿ' ಎಂದರೆ ಇದು 'ಮಾನವ' ಸಂಸ್ಕೃತಿಯೇ ಇರಲಿಕ್ಕೆಬೇಕು. ಬ್ರಾಹ್ಮಣ ಸಂಸ್ಕೃತಿ, ವೈಶ್ಯಸಂಸ್ಕೃತಿ, ಪಾಶ್ಚಾತ್ಯ ಸಂಸ್ಕೃತಿ-ಇವು ಮಾನವ ಸಂಸ್ಕೃತಿಯ ಬೆಳಕಿನಲ್ಲಿಯೇ ಅರ್ಥ ಪಡೆವ ಅನಿವಾರ್ಯತೆಯು ಇದೆ. 'ಕ್ಷಿತೀನಾಂ ಆದ್ಯಃ' ಎಂದು ವರ್ಣಿತ ವೈವಸ್ವತ ಮನುವಿನ ಸಾಂಕೇತಿಕ ಪ್ರತಿಮೆ ಮತ್ತು ಗ್ರೀಕ್ ಸಂಸ್ಕೃತಿಯನ್ನು ರೂಪಿಸಿರುವ 'ಆದಿಕಾರಣ ತತ್ತ್ವ' ಎಂದು ಅರಿಸ್ಟಾಟಲ್ ಪ್ರತಿಪಾದಿಸಿರುವ 'nous=mind' ಈ ಶಬ್ದ ಪ್ರತಿಮೆ ಇವೆರಡರಲ್ಲಿಯೂ ಅಂತಃಸಾಮ್ಯವು ಇರುವುದು ನಿಷ್ಕಾರಣವಲ್ಲ. ಇದು ವಿಶ್ವನಿಯಮದ ಅಂಗವಾಗಿದೆ.

ನರ(ಳ)ನಿಗೆ, 'ಮನು-ಜತ್ವ'ವು ಪ್ರಾಪ್ತವಾಹುದ್ದು ಈ 'ವ್ಯಕ್ತಿ'ಯ ಇಚ್ಛೆಯಿಂದಲ್ಲ! ಜೀವನ-ವಿಕಾಸ ತತ್ತ್ವದ ವಿಶ್ವನಿಯಮದ ಮೇರೆಗೆ ಪ್ರಾದುರ್ಭವಿಸಿರುವ ಪ್ರಜ್ಞಾ=ಪ್ರಕಾಶ ತತ್ತ್ವದಿಂದಾಗಿ (nous=mind), ಈ ಮಾನವನು ಮೈದೋರಿದ್ದಾನೆ. ಆದಕಾರಣ, ಪ್ರಜ್ಞೆಗೆ (nous) ಎರವಾಗುವಾಗ, ಎಂದರೆ, ಈ ಮಾನವನಿಂದ ವಿಶ್ವನಿಯಮದ ಉಲ್ಲಂಘವು ಆಗುವಾಗ, ಈ 'ಮಾನವ' ಪ್ರಾಣಿ, ಮರಳಿ ನರ(ಳ) ಹಂತಕ್ಕೆ, ಎಂದರೆ ಕತ್ತಲಿನಿಂದ ಆವೃತ ಜೀವಿತ ಪಾತಳಿಗೆ [0] ತಳ್ಳಲ್ಪಡುವುದು ನಿಶ್ಚಿತವಿದೆ. ಪ್ಲೇಟೋನ ಸುಪ್ರಸಿದ್ಧ 'ಗವಿ' ಅಥವಾ 'ಗುಹೆ' ಈ ರೂಪಕವು ಜೀವಿತದ ಹಂತದ ಚಿತ್ರವೇ ಆಗಿದೆ. ಪ್ರಕಾಶತತ್ತ್ವದ ಜೀವನವನ್ನು ಹಿಂಬಾಲಿಸುವ ಕತ್ತಲಿನ ಆವರಣದ ಜೀವಿತದ-ಎಂದರೆ ಮೃತ್ಯುತತ್ತ್ವದ ಅಸ್ತಿತ್ವವೂ ಈ ಬಾಳಿನಲ್ಲಿ ಉಂಟು. ಆದರೆ, ಈ ಮಾನವನು, ಭಾವಾತ್ಮಕ ಅನುಭಾವಾತ್ಮಕ-ಸ್ಥಾಯೀ ಸ್ವರೂಪದ, ಜೀವನವನ್ನು ಕಡೆಗಣಿಸಿ ಅಭಾವಾತ್ಮಕವಾದ ಅಂತರ್ ವಿಸಂಗತವಾದ ಆಚಾರ-ವಿಚಾರದ ಪ್ರಾಣಲಿಂಗ ಶಕ್ತಿಯಿಂದ ಆಕರ್ಷಿತನಾಗಿ, 'ಜೀವಿತವನ್ನೇ ಸ್ಥಾಯೀ' ಎಂದು ಸೆರೆನೆಮ್ಮುವಾಗ, ಈ ಮಾನವನು, ತನ್ನ ಪ್ರಜ್ಞೆಗೆ (nous) ಎರವಾಗುವುದನ್ನು ತಪ್ಪಿಸಿಕೊಳ್ಳಲಾರನು!

ಇಂದಿನದು 'ಬುದ್ಧಿಯ ಯುಗ' (age of reason) ಎಂದು ಹೆಮ್ಮೆಪಟ್ಟುಕೊಳ್ಳಬೇಕಾಗುತ್ತದೆ! ಆದರೆ ಇಂದು ಮಾನವನು 'ಪ್ರಜ್ಞಾ ವಿಹೀನಃ ಪಶುಃ' ಹಂತದವನಾಗಿದ್ದಾನೆ ಎಂದು ಪುರಾತನರು ಹೇಳಿರುವಲ್ಲಿ, ವಿಶ್ವನಿಯಮದ ಪ್ರಜ್ಞೆ ಎದ್ದು ಕಾಣುತ್ತದೆ. ಬುದ್ಧಿಜೀವಿಗಳೆಂಬವರು ಪಶುಗಳನ್ನು ನಾಚಿಸುವ ಹೀನಕೃತ್ಯಗಳಲ್ಲಿ

ತೊಡಗಿರುವುದನ್ನು, ಇಂದು ಒಪ್ಪದಿರಲು ಶಕ್ಯವಿಲ್ಲ. 'ನೀನಾರಿಗಾದೆಯೊ ಎಲೆಮಾನವಾ?' ಎಂಬ ಪಲ್ಲವಿಯು ಈ ಮಾನವನ ಅಧಃಪಾತದ ಸೂಚಕವೇ ಆಗಿಲ್ಲವೇ? ಪುರಾತನರು ಕಂಡು ಹೇಳಿರುವ ಋತಸ್ವರೂಪೀ ಸತ್ಯದ ವಿಕೃತಿಯು ಇಂದಿನ ವೇದದಲ್ಲಿಯೇ ಎದ್ದು ಕಾಣುತ್ತದೆ. 'ಋತ: (ಸಾಮಾಜಿಕ ಜೀವನಕ್ಕೆ ಆಧಾರಭೂತ ನಿಯಮವು, ಇದು ಈ ವೇದದಲ್ಲಿ 'ವ್ರತ' 'ನೋಂಪಿ' ಆಗಿ ಪರಿಣಮಿಸಿದೆ. ವ್ರತವು ವೈಯಕ್ತಿಕ! ಈ ಸ್ಥಿತ್ಯಂತರವು, ಮನುಜನು, ವ್ಯಕ್ತಿ ನರ(ಳ)ನಾಗಿರುವ ಹಂತದ ಸೂಚಕವಿದೆ-'ವ್ರತ' ಈ ಪಾರಿಭಾಷಿಕ ಪದವು ವೇದದಲ್ಲಿದೆ. ವರುಣ=ಆದಿತ್ಯರು ಧೃತವ್ರತರಾಗಿದ್ದಾರೆ!

ಇಂದಿನ ಸಾಹಿತ್ಯದಲ್ಲಿ, ಮಾನವರನ್ನು ರೂಪಿಸುವ ವಿಶ್ವನಿಯಮದ ಪ್ರಜ್ಞೆ ಅಭಾವದಿಂದಲೇ ಎದ್ದು ಕಾಣುತ್ತದೆ. ಇದಕ್ಕೆ ಪ್ರತಿಯಾಗಿ, ಇಂದಿನ ವೇದದಲ್ಲಿಯೇ ಸೂಚಿತವಿರುವಂತೆ ಸುಪರ್ಣಂ, ವಿಪ್ರಾಃ ಕವಯಃ, ವಚೋಭಿಃ, ಏಕಂ ಸನ್ತಂ ಬಹುಧಾ ಕಲ್ಪಯಂತಿ", ಈ ಲಿಂಗಶಕ್ತಿಯು ಪ್ರಚೋದಿಸುವ ಕಲ್ಪಯಂತಿ ಯುಗವು ಪ್ರಪಂಚದಲ್ಲಿ, ಇಂದು ಪ್ರಭಾವಶಾಲಿಯಾಗಿದೆ! ಇದು 'ಸ್ವಯಂಭೂ'; 'ಶ್ವೇತವರಾಹ ಕಲ್ಪ' ಎಂದು ಹೆಸರಾಗಿದೆ! 'ಮನ್ವಂತರ'ದ ಧಾರಣಕ್ಕೆ (concept) ಪ್ರತಿಯಾಗಿ ಈ ಕೃತಕ 'ಕಲ್ಪ' (ನೆ) ತಲೆಯೆತ್ತಿದೆ. ಜೈನರಲ್ಲಿಯೂ ಈ 'ಕಲ್ಪ'ಗಳು ಉಂಟು! ನಿಯತಿಕೃತ ನಿಯಮ ರಹಿತಾಂ ಹ್ಲಾದೈಕಮಯೀ ಅನನ್ಯ ಪರತಂತ್ರಾಂ...."ಆಗಿರುವ 'ಸೃಜನಶೀಲ' ಸಾಹಿತ್ಯ ಸೃಷ್ಟಿಯು ಈಗ ಶಿಷ್ಟಮಾನ್ಯವಾಗಿದೆ! ಈ ಮಾನವನು ವಿಶ್ವನಿಯಮದ ನಿಯತಿಗೆ-ನಿಯಂತ್ರಕ್ಕೆ ಒಳಗಾಗಿದ್ದಾನೆ, ಎಂಬುದನ್ನು ಇಲ್ಲಿ ಕಡೆಗಣಿಸಲಾಗಿದೆ. ಇದರಿಂದಾಗಿ, "ಅವರವರ ಅರ್ಥವು ಅವರವರ ಪಾಲಿನ ಸತ್ಯ" ಆಗುವಾಗ ಇಲ್ಲಿ ಅ-ಭಾವವೇ ಸ್ಥಾಯೀ ಆಗದೆ ಇರಲು ಶಕ್ಯವಿಲ್ಲ. ಇಂತಹ ಅ-ಭಾವಾತ್ಮಕ ಅಂತರ್ ವಿಸಂಗತ ನಡೆವಳಿ ನುಡಿವಳಿಗಳ ವಿರಕ್ತ ಸಂಪ್ರದಾಯಗಳಲ್ಲಿ ನಿಜವಾಗಿ ನೈತಿಕಮೂಲ್ಯಗಳಿಗೆ ಸ್ಥಾನವಿರಲು ಶಕ್ಯವೇ ಇಲ್ಲ! ಆದರೂ 'ಕಲ್ಪಯಂತಿ' ಹಂತದಲ್ಲಿ ಆತ್ಯಂತಿಕ ಅಹಿಂಸಾ, ಸತ್ಯ, ಅಸ್ತೇಯದ ಅಸ್ತಿತ್ವ ಸೂಚಕ ಮಂತ್ರಪಾಠ ಕೇಳಬರುವುದುಂಟು. ಮಹಾತ್ಮಾಜಿಯವರ ತಪಸ್ಸಿನ ವೈಫಲ್ಯದ ಮೂಲಕಾರಣವು ಇಲ್ಲಿ ಇದೆ. ಇದು ನಿಜವೋ ನೋಡಿಕೊಳ್ಳಿ. ಅರಿಸ್ಟಾಟಲ್‌ನು ಜೀವನದ ವ್ಯಾಖ್ಯೆ ಹೇಳುತ್ತಾನೆ : Actuality of thought is life ಮನು ವೈವಸ್ವತ ಸಂಪ್ರದಾಯದ ಮಾನವ ಧರ್ಮದಲ್ಲಿ 'ಆಚಾರ ಪ್ರಭವೋ ಧರ್ಮಃ' ಎಂಬ ಸೂತ್ರವಿದೆ. ಆದರೆ, ಬಾಳಿನಲ್ಲಿ ನಿಷ್ಠೆಗೆ ಬದಲಾಗಿ ಶ್ರದ್ಧೆಗೆ ಪ್ರಾಧಾನ್ಯವು ಬರುವಾಗ, ಆಚರಣವು ಗೌಣವಾಗುತ್ತದೆ; 'contemplation' 'ಕಲ್ಪಯಂತಿ' ಸ್ವರೂಪದ ಧ್ಯಾನಧಾರಣೆ ಶಿಷ್ಟಮಾನ್ಯವಾಗುತ್ತದೆ. 'ಕಲ್ಪ'ಕ್ಕೆ : ಕೃತಕ ಗ್ರಹಿಕೆಗೆ ಪ್ರಾಧಾನ್ಯವು ಬರುವಾಗ ಇಲ್ಲಿ ಅ-ಭಾವವನ್ನೇ ಸ್ಥಾಯೀ' ಎಂದು ಬಗೆವ ಅನಿವಾರ್ಯತೆಯು ಉಂಟು!

ವೇದ ಮತ್ತು ಪಂಚಮವೇದವೆಂಬ ಮಹಾಭಾರತದ ಸಾರಸ್ವರೂಪ ಈ ಗೀತಾ-ರಹಸ್ಯ-ನೋಡಿಕೊಳ್ಳಿ! ವ್ಯಾಸಪ್ರಸಾದಾತ್' ದೊರೆತಿದೆ. ಎಂಬ ಶ್ರೀಮತ್ ಭಗ-ವತ್ ಗೀತೆಯು 'ಪ್ರಾಣಲಿಂಗ ಚೇತಸ' ತತ್ವಪ್ರತಿಪಾದಕ ಗ್ರಂಥವಾಗಿದೆ. ಈ ಗೀತೆಯನ್ನು ಭಗ-ವಂತನು ನರ(ಳ)ರಿಗೆ ಬೋಧಿಸಿದ್ದಾನೆ, ಎಂದು ಹೇಳಲಾಗುತ್ತಿದೆ. ಇದು ನಿಜವಿದ್ದರೆ, ಈ ಗೀತೆಯನ್ನು ಬೋಧಿಸಿರುವ "ಈ ಭಗ-ವಾನ್ ಪುರುಷನು" ಯಾರು? ಎಂಬ ಪ್ರಶ್ನೆ ಏಳುತ್ತದೆ. ಈ ಭಗ-ವಾನ್ ಹೇಳುತ್ತಾನೆ. "ಲೋಕ-ಕ್ಷಯ ಕೃತ್ ಪ್ರವೃದ್ಧಃ ಕಾಲಃ ಅಸ್ಮಿ" ಈ ಮೃತ್ಯುಶಕ್ತಿಯು ತಾನೆಂಬ ಈ ಭಗವಂತನನ್ನು ಗೀತೆಯಲ್ಲಿ ಕರಿಯ=ಕೃಷ್ಣ ಎಂದಿರವುದು ನಿಷ್ಕಾರಣವಲ್ಲ; ಪ್ರಜ್ಞಾ ಪ್ರಕಾಶತತ್ವದ ಜೀವನವನ್ನು ನೆಳಲಿನಂತೆ ಹಿಂಬಾಲಿಸುವ ಜೀವಿತದ ಈ ಪ್ರಾಣಲಿಂಗಶಕ್ತಿಯು=ಕಪ್ಪು ನೆಳಲೇ ಇರಬೇಕಷ್ಟೆ?

ಈ ಭಗ-ವಾನ್, ತಾನು ಯಾರು ಎಂಬುದನ್ನು ಸೂಚಿಸುವಾಗ 'ಅಶ್ವತ್ಥಃ ಸರ್ವ ವೃಕ್ಷಾಣಾಮ್' (ಎಲ್ಲ ಮರಗಳಲ್ಲಿ ತಾನು ಅಶ್ವ(ತ್ಥ) ವೃಕ್ಷರೂಪನು ಎಂದೂ ಹೇಳಿದ್ದಾನೆ. ಗೀತೆಯ ೧೫ನೆಯ ಅಧ್ಯಾಯವು ಅಶ್ವತ್ಥ=ಪುರುಷ ಇಲ್ಲಿಯ ಮಿಥುನ ಮಹಾತ್ಮ್ಯ ಹೇಳಲಾಗಿದೆ. "ಈ ಅಶ್ವ-ತ್ಥ=ಪುರಿ-ಶಯ(ನ)=ಗುಹೇಶ್ವರನೇ ಈ ಪ್ರಪಂಚದ ಆಧಾರ, ಆದ ಕಾರಣ" ಎಂಬುದು ಈ ಅಧ್ಯಾಯದ ಆಶಯ.

ಈ ಭಗ-ವಂತನು ಸೃಷ್ಟಿಗೂ ಕಾರಣನಿರುವುದರಿಂದ, ಒಂದೆಡೆಗೆ ಇವನು ಹೀಗೆ ಹೇಳುತ್ತಾನೆ : "ಮಯಾ ಅಧಿ-ಅಕ್ಷೇಣ ಪ್ರಕೃತಿಃ ಸೂಯತೇ" ನನ್ನ ಅಧಿಅಕ್ಷದಿಂದಾಗಿ (axle) ಈ ಪ್ರಕೃತಿಯು ಪ್ರಸವಿಸುತ್ತಾಳೆ. 'ಅಕ್ಷ=ಪುರಿ-ಶಯ'(ನ) ಇದರ ಮೂಲ ಮಾದರಿಯು ವೇದದಲ್ಲಿ ಇದೆ. 'ಪುರುಷ'ನ ಈ ಸ್ತೋತ್ರದಲ್ಲಿ, ಗೀತೆಯ ಅಧಿ-ಅಕ್ಷವು 'ಅತ್ಯತಿಷ್ಠತ್ ದಶಾಂಗುಲಮ್ (ಹತ್ತು ಬೆರಳಿನ ಅಳತೆ) ಇರುವುದಾಗಿ ವರ್ಣಿತವಿದೆ. ಈ ಭಗ-ವಾನ್‌ನೇ ಹೇಳುತ್ತಾನೆ : 'ರಸೋಽಹಂ ಅಪ್ಸು' (ತಾನು ಆಪ=ರಸ=ರೇತಸ್ಸ್ವರೂಪನು) ಇರುವುದಾಗಿ ಸೂಚಿಸಿದ್ದಾನೆ. ಈ ಹಿನ್ನೆಲೆಯಲ್ಲಿ ಮೂಲಗಾಮಿಯಾದ ಒಂದು ಪ್ರಶ್ನೆ ಎದುರುನಿಲ್ಲುತ್ತದೆ :

ವೃಕ್ಷ=ಅಶ್ವ(ತ್ಥ) ರೂಪನು, ದಶಾಂಗುಲ ಅಕ್ಷಸ್ವರೂಪನು ಆಗಿದ್ದಾನೆ. ಅಲ್ಲದೆ, ಈ ಪುರಿ-ಶಯ(ನ)=ಗುಹೇಶನು, ಸರಸಿಯೂ ಇರುತ್ತಾನೆ! ಇಂಥ ಈ-ತನು, ಲೋಕಕ್ಕೆ ಗೀತೆಯನ್ನು ಬೋಧಿಸಿದ್ದು ಯಾವ ಬಾಯಿಂದ? ಈ ಭಗ-ವಾನನು ಹಯ-ವದನನೆಂದೂ ಹೆಸರಾಗಿದ್ದಾನೆ. ಆದಕಾರಣ ಈ ಹಯ-ವದನವೇ ಗೀತೆಯನ್ನು ಉಸಿರಿರಬಹುದೆ? ಸಾಯಣರು ವೇದವನ್ನು 'ಯಸ್ಯ ನಿಃಶ್ವಸಿತಂ' ಎಂದುದು ನಿಷ್ಕಾರಣವಲ್ಲ. ವೇದ (ಗೀತೆ) ಪುರಿ-ಶಯ=ಪುರುಷನ ನಿಃಶ್ವಸಿತ ಎಂಬ ನಂಬುಗೆ ಇಲ್ಲಿ ಇದೆ!

ಮಹಾಭಾರತದ ಶುದ್ಧಪಾಠದ ಸಂಶೋಧನದ ಕೊನೆಯಲ್ಲಿ, 'ಈ ಮಹಾಕಾವ್ಯದ ಒಂದು ಶ್ಲೋಕವೂ' ಕೈಗೆ ಬರಲಾರದು-ಎಂಬ ಅತ್ಯಂತಾಭಾವದ ಭಯಾನಕ ಚಿತ್ರವು ಕಾಣತೊಡಗಿದಾಗ, ಸಂಶೋಧಕ ಡಾ. ಎಸ್. ವಿ. ಸುಖಟಣಕರರ ಬಾಯಿಯಿಂದ ಅಭಾವಿತವಾಗಿ ಹೊರಹೊಮ್ಮಿ ಬಂದ dramati-irony ರೂಪ ಈ ಮಾತು, ಗೀತೆಯ 'ಅಭಿಚಾರ ಕೃತ್ಯದ : ಭಾನಾಮತಿ'ಯ ಪ್ರಭಾವ ಹೊರಗೆಡಹುತ್ತಿದೆ.

> "Whether we realize or not it remains a tact we in India till stand
> under the spell of the Mahabharata."

ಈ ಗೀತೆ 'ಜ್ಯೋತಿರ್-ಲಿಂಗ'ದ ಮಾತು, ಕ್ರೈಸ್ತ ಪಂಥೀಯ Log ಕವಿವರ್ಯ ಏ. ಈ Vision of the Candle Light, ಅಥವಾ "ಧಮಂತೋ ಯತ್ರ ವಾಣಂ ಮರುತಃ ಸುದಾನವಃ" ಎಂಬ ವೇದ ವಚನದಲ್ಲಿ ಸೂಚಿತ 'ಗೀಃ ವಾಣ-ವಾಣಿ'ಯೇ ಈ ಗೀತೆಯಾಗಿದೆ ಎಂದರೂ ತಪ್ಪಲ್ಲ. ಇದು ನಿಃ ಶಬ್ದಂ ಬ್ರಹ್ಮ' ಅವರವರಿಗೆ ಕೇಳಬರುವ ಅಂತರ್‌ವಾಣಿ ಅವರವರ ಪಾಲಿನ ಸತ್ಯ, ಆಗಿಲ್ಲವೇ ಇಂದು? 'ವ್ಯಕ್ತಿ ಮುಕ್ತಿ'ಯ ಭೂಮಿಕೆಯ ಮೂಲಕ, ಇಂದು, Individualism, personalism ಇಂಥ ವ್ಯಕ್ತಿ ವೈಶಿಷ್ಟ್ಯವಾದಗಳು, ಕಿರ್‌ಗಾರ್ಡ್, ಸಾರ್ತ್ರ ಪ್ರಭೃತಿಗಳ ವಿವಿಧ 'ಅಸ್ತಿತ್ವ'ವಾದೀ ಭೂಮಿಕೆಗಳು, Phenomenalism ಸ್ವರೂಪದ ತತ್ತ್ವಪ್ರಣಾಲಿಗಳು ತಲೆದೋರಿವೆ. ಇದೆಲ್ಲ ಆಯ್ತು; ಹೋಯ್ತು. ಎಂದು ಮನುಕುಲದ ಎದುರು ಇರುವ ಯಕ್ಷ ಪ್ರಶ್ನೆ :

ಈ ಮಾನವನು 'ಮುಕ್ತ ಸಂಗಃ ಸಮಾಚರೇತ್' ಎಂಬ ಈ ವ್ಯಕ್ತಿವಾದೀ ಭೂಮಿಕೆಯವನಾಗಿ ಹಿಪ್ಪೀಪಂಥಿಯಾಗಿ, ಈ ಬಾಳಿನಲ್ಲಿ, ನರ(ಳ)ನಾಗಿಯೇ ಮುಂದುವರಿಯಬೇಕೆ? ಅಥವಾ ಮರಳಿ 'ಮನು'-ಜತ್ವದ ಆದರ್ಶದತ್ತ ಸಾಗಬೇಕೆ?-ಎಂಬುದನ್ನು ಪ್ರಜ್ಞರು ಬಗೆಹರಿಸಬೇಕಾದ ತೊಡಕು ಇದು.

ಬಿತ್ತಿದ್ದನ್ನು ಬೆಳಕೊ

(ಪುರಾತನರು ಕಂಡ ಮಾನವನ ಬಾಳುವೆಯ ಇತಿ-ಮಿತಿ)

ಅರಿಕೆ

ಸದಭಿರುಚಿಯ ಪೋಷಣೆ, ಮುಕ್ತ ವಿಚಾರಶೀಲತೆಯ ವಿಕಾಸ ಮತ್ತು ಪ್ರಗತಿಶೀಲ ಮನೋಭಾವಕ್ಕೆ ಪ್ರಚೋದನೆ ಕಾಲಗತಿ ಪ್ರಕಾಶನದ ಧ್ಯೇಯ. ಈ ಧ್ಯೇಯ ಸಾಧನೆಯ ಚಟುವಟಿಕೆಗಳಲ್ಲಿ ಗ್ರಂಥ ಪ್ರಕಟನೆಯು ಒಂದು ಮಹತ್ವದ ಕಾರ್ಯ. ಅಂತೆಯೇ ಕಾಲಗತಿ ಗ್ರಂಥಮಾಲೆಯ ಪ್ರಾರಂಭ. ಈ ಮಾಲೆಯಲ್ಲಿ ಈಗಾಗಲೇ ಏಳು ಗ್ರಂಥಪುಷ್ಪಗಳನ್ನು ಸೇರಿಸಲಾಗಿದೆ. ಈಗ ತಮ್ಮ ಕೈಯಲ್ಲಿರುವ 'ಬಿತ್ತಿದ್ದನ್ನು ಬೆಳಕೊ' ನಮ್ಮ ಗ್ರಂಥಮಾಲೆಗೆ ಸೇರಿದ ಎಂಟು ಮತ್ತು ಒಂಬತ್ತನೆಯ ಹೂಗಳ ಒಂದು ಸಂಯುಕ್ತ ಪುಷ್ಪ.

ಬಿತ್ತಿದ್ದನ್ನು ಬೆಳಕೊ ಡಾ|| ಶಂ. ಬಾ. ಜೋಶಿ ಅವರ ಪರಿಪಕ್ವ ಪ್ರಜ್ಞೆಯ ಫಲಶ್ರುತಿಯಾಗಿ ರೂಪುಗೊಂಡಿರುವ ಅತ್ಯಂತ ಮಹತ್ವದ ಕೃತಿ. ಇದರಲ್ಲಿಯ ನಿಷ್ಕರ್ಷಗಳನ್ನು ಕುರಿತು ಇಲ್ಲಿಯ ವರೆಗಿನ ಮೂರು ವರ್ಷಗಳ ಅವಧಿಯಲ್ಲಿ ಯಾವ ವಿದ್ವಾಂಸರೂ ತಮ್ಮ ವಿರೋಧವನ್ನು ವ್ಯಕ್ತಪಡಿಸಿಲ್ಲವೆಂಬುದು ಗಮನಾರ್ಹ. ಸಂಯುಕ್ತ ಕರ್ನಾಟಕ ಪತ್ರಿಕೆಯ ದಿ. ೩೦-೧೨-೧೯೮೪ರ ಸಾಪ್ತಾಹಿಕ ಸೌರಭದಲ್ಲಿ ಚಂದ್ರನ ಚಿದಂಬರ ರಹಸ್ಯ ಎಂಬ ಲೇಖನವಿದೆ. ಈ ಲೇಖನದಲ್ಲಿ ಆಧುನಿಕ ಸಂಶೋಧನೆಗಳೆಂಬಂತೆ ಹೇಳಿರುವ ಸಂಗತಿಗಳನ್ನು ಡಾ|| ಶಂ. ಬಾ ಜೋಶಿ ಅವರು ನಮ್ಮ ಪುರಾತನ ಪರಂಪರೆ ಮತ್ತು ಸಾಹಿತ್ಯದ ಪರಾಮರ್ಶೆಮಾಡಿ ತಮ್ಮ ಗ್ರಂಥದಲ್ಲಿ ಪ್ರತಿಪಾದಿಸಿರುವುದನ್ನು ಓದುಗರು ಕಂಡುಕೊಳ್ಳಬಹುದಾಗಿದೆ.

ಈ ಮೊದಲಿನ ಕೃತಿಗಳಂತೆ ಈ ಕೃತಿಯೂ ಕೂಡ ಕಂನಾಡ ವೈಚಾರಿಕ ಸಾಹಿತ್ಯ ಪ್ರಪಂಚದಲ್ಲಿ ತನ್ನ ಪ್ರಖರ ಕಿರಣಗಳನ್ನು ಪಸರಿಸುವುದೆಂಬ ನಂಬುಗೆ ನಮ್ಮದು. ಅಂತೆಯೇ ಬಿತ್ತಿದ್ದನ್ನು ಬೆಳಕೊ ಗ್ರಂಥವನ್ನು ನಮ್ಮ ಗ್ರಂಥಮಾಲೆಯಲ್ಲಿ ಪ್ರಕಟಿಸಲು ನಮಗೆ ಹೆಮ್ಮೆ. ಈ ಅವಕಾಶ ಒದಗಿಸಿಕೊಟ್ಟ ಆದರಣೀಯ ಹಿರಿಯರಾದ ಡಾ|| ಶಂ. ಬಾ. ಜೋಶಿ ಅವರ ಆತ್ಮೀಯತೆಗೆ ನಮ್ಮ ಮಾಲೆಯು ಋಣಿಯಾಗಿದೆ. ಗ್ರಂಥಮಾಲೆಯ ಮಹಾಪೋಷಕರಾಗಿ, ಪೋಷಕರಾಗಿ, ಮತ್ತು ಹಿತಚಿಂತಕರಾಗಿ ನೆರವು ನೀಡಿ ಕಾಲಗತಿ ಪ್ರಕಾಶನದ ಬೆಂಬಲಿಗರಾದವರಿಗೆ, ಇನ್ನುಳಿದ ಅಭಿಮಾನಿಗಳಿಗೆ ನಮ್ಮ ಧನ್ಯವಾದಗಳು. ಗ್ರಂಥ ಮುದ್ರಣ ಕಾರ್ಯದಲ್ಲಿ ಸಹಕರಿಸಿದ ಶ್ರೀ ಶಾರದಾ ಮುದ್ರಣಾಲಯದ ಒಡೆಯರು ಮತ್ತು ಸಿಬ್ಬಂದಿವರ್ಗಕ್ಕೆ ಕೃತಜ್ಞತೆಗಳು. ಮಾಲೆಯ ಹತ್ತನೆಯ ಹೂ ಇನ್ನು ಕೆಲವೇ ದಿನಗಳಲ್ಲಿ ಅರಳಿ ತಮ್ಮ ಕೈಸೇರಲಿದೆ. ಕಂನಾಡ ಜಾತಿಗಾರರನ್ನು ಕುರಿತು ಎಂಬ ಹೆಸರಿನ ಈ ಹೂ ತಮ್ಮನ್ನು ಆಕರ್ಷಿಸುವುದೆಂಬ ಭರವಸೆ ನಮ್ಮದು.

ಪುಷ್ಪಾ ಹೊಸೂರ

ಉಪಕಾರ ಸ್ಮರಣ

ನನ್ನ ಬಾಳಿನ ತಿರುವುಗಳಲ್ಲಿ ಆಗಾಗ ಯೋಗಾಯೋಗದ ಅನುಭವವು ಬರುತ್ತದೆ. ಯೋಜನೆ ವ್ಯಕ್ತಿಕಲ್ಪಿತ ಯೋಚನೆ. ಆದರೆ, ಯೋಗಾಯೋಗವು ಸಾಮಾಜಿಕ ಜೀವನ ಸಂದರ್ಭದ ಆಕಸ್ಮಿಕ ಅನುಭವ. ಇದರ ಅಪೂರ್ವತೆ ಸೋಜಿಗವನ್ನುಂಟು ಮಾಡುತ್ತದೆ. ಬೆಂಗಳೂರಲ್ಲಿ ಏರ್ಪಟ್ಟ ಸನ್ಮಾನ ಸಮಿತಿ ಇಂತಹ ಯೋಗಾಯೋಗದ ಒಂದು ಮಾದರಿ. ನನ್ನ ವಿಶೇಷ ಪರಿಚಿತರೂ ಅಲ್ಲದ ಶ್ರೀ ಎಸ್. ಶಿವಲಿಂಗಯ್ಯ ಅವರು, ನನ್ನ ಮಿತ್ರ ಶ್ರೀ ಬೀ chi ಅವರನ್ನು ಕೆಣಕುತ್ತಾರೆ, ಸನ್ಮಾನ ಸಮಿತಿ ಏರ್ಪಡುತ್ತದೆ. ಡಾ. ಸಿದ್ಧಯ್ಯ ಪುರಾಣಿಕರು ಅಧ್ಯಕ್ಷರು ; ಡಾ. ಎಂ. ಚಿದಾನಂದಮೂರ್ತಿ ಅವರು ಸಂಭಾವನಾ ಗ್ರಂಥ 'ಅಧ್ಯಯನ'ದ ಸಂಪಾದಕರು. ಶ್ರೀ ಬೀchi ಅವರು ಖಜಾಂಚಿ ಮತ್ತು ಶ್ರೀ ಜಿ. ನಾರಾಯಣ, ಡಾ. ಎಚ್. ಎಲ್. ನಾಗೇಗೌಡ, ಶ್ರೀ ಕೆ. ಸಿ. ಶಿವಪ್ಪ, ಶ್ರೀ ವೆಂ. ಮು. ಜ್ಯೋಶಿ... ಇವರು ಸಮಿತಿಯ ಸನ್ಮಾನ್ಯ ಸದಸ್ಯರು. ಶ್ರೀ ಎಸ್. ಶಿವಲಿಂಗಯ್ಯ ಅವರು ಗೌರವ ಕಾರ್ಯದರ್ಶಿಗಳು.

ಈ ಹೊಣೆ ಹೊತ್ತ ಶ್ರೀ ಎಸ್. ಶಿವಲಿಂಗಯ್ಯ ಅವರಿಗೆ ಎದುರಿಸಬೇಕಾದ ಅಡ್ಡಿ ಆತಂಕಗಳು ಅಷ್ಟಿಷ್ಟಲ್ಲ. ಇದು, ನನಗೆ ನನ್ನ ಮಿತ್ರ ಶ್ರೀ ವೀ. ಚ. ಹಿತ್ತಲಮನಿ ಅವರ ಪತ್ರದಿಂದ ಗೊತ್ತಾಯಿತು. ಆಗ ಶ್ರೀ ಬೀchi ಅವರಿಗೂ ಶ್ರೀ ಶಿವಲಿಂಗಯ್ಯನವರಿಗೂ ಕಾಗದ ಬರೆದು, ಅವರಿಗೆ ತೊಂದರೆಗಳಿಂದ ಮುಕ್ತರಾಗಲು ತಥಾಕಥಿತ ಸನ್ಮಾನದ ಯೋಜನೆಯನ್ನೇ ಬಿಟ್ಟುಕೊಡಲು ಬೇಡಿಕೊಂಡೆ. ಅವರ ಅನುಮತಿಯಿಂದ ಪತ್ರಿಕೆಗಳಲ್ಲೂ ಬರೆಯುವ ಇಚ್ಛೆಯನ್ನು ವ್ಯಕ್ತಪಡಿಸಿದೆ. ಡಾ. ಎಚ್. ಎಲ್. ನಾಗೇಗೌಡರಿಗೂ ಬರೆದು ಅವರ ಅಭಿಪ್ರಾಯವನ್ನು ತಿಳಿದು ಕೊಂಡೆ. ಆದರೆ, ನನ್ನ ಮಿತ್ರ ಶ್ರೀ ಬೀChi ಅವರು, ನನಗೆ ಕೆಲಕಾಲ ತೆಪ್ಪಗೆ ಇದ್ದು ನೋಡಲು ವಿಧಿಸಿದರು. ಅಂತೂ, ಶ್ರೀ ಶಿವಲಿಂಗಯ್ಯನವರ ಪರಿಶ್ರಮಗಳು ಫಲಕಾರಿಯಾಗುವ ಲಕ್ಷಣಗಳು ಕಾಣತೊಡಗಿದವು. ಆದರೆ ಘೋರ ದುರ್ದೈವದ ಸಂಗತಿಯೆಂದರೆ, ಶ್ರೀ ಬೀChi ಅವರನ್ನು ಆಗೀಗ ಕಾಡುತ್ತಿದ್ದ ಬೇನೆಯು ಈ ಸುಮಾರಿಗೇ ಥಕ್ಕನೆ ವಿದ್ರೂಪವನ್ನು ತಾಳಿತು! ತಜ್ಞ ಡಾಕ್ಟರುಗಳ ಪ್ರಯತ್ನಗಳೂ ವಿಫಲವಾದುವು. ಶ್ರೀ ಬೀchi ಅವರು ನಮ್ಮನ್ನು ಅಗಲಿದ ದುಃಖದಿಂದ ಇಡೀ ಕರ್ನಾಟಕವೇ ವ್ಯಥಿತವಾಯ್ತು. ತುಂಬಿ ಬಾರದ ಹಾನಿಗೆ ಒಳಗಾದದ್ದಾಯ್ತು.

ಈಗಾಗಲೆ ದೀರ್ಘ ಕಾಲಾವಧಿಗೆ ಒಳಗಾದ ಸಮಿತಿಯು ತನ್ನ ಕಾರ್ಯವನ್ನು ಕೂಡಲೇ ಮುಕ್ತಾಯ ಗೊಳಿಸುವುದು, ಅನಿವಾರ್ಯವಾಗಿತ್ತು. ಶ್ರೀ ಶಿವಲಿಂಗಯ್ಯ ಅವರು ಎದೆಗುಂದದೆ ತಮ್ಮ ಗೆಳೆಯರ ಬಳಗದ ಸಹಕಾರದಿಂದ ಸಮಾರಂಭವನ್ನು ಯಥಾಪ್ರಕಾರವಾಗಿ ಪೂರ್ತಿಗೊಳಿಸಿದರು. ಆ ಬಳಿಕ ಕೆಲಕಾಲ ಸಂದ ಮೇಲೆ ವೆಚ್ಚವು ಹೋಗಿ ಸಮಿತಿಯ ಹತ್ತಿರ ಏಳು ಸಾವಿರದ ಒಂದು ರೂಪಾಯಿ ಉಳಿದದ್ದು, ಅವನ್ನು ವಂದ್ಯ ಬಿ.ಎಂ. ಶ್ರೀ ಪ್ರತಿಷ್ಠಾನ, ಬೆಂಗಳೂರು ಇದರ ಆಡಳಿತಕ್ಕೆ ಒಪ್ಪಿಸಿದ್ದಾಯ್ತು. ಈ ದತ್ತಿಯ ಬಡ್ಡಿಯನ್ನು ಪ್ರತಿವರುಷವೂ

ಶ್ರೀ ಶಂ.ಬಾ. ಜೋಶಿ ಅವರ ಅಚ್ಚುಮೆಚ್ಚಿನ ಸಂಶೋಧನದ ಕ್ಷೇತ್ರದ ಕೃಷಿಗಾಗಿ ಉಪನ್ಯಾಸಾದಿಗಳ ರೂಪದಲ್ಲಿ ವಿನಿಯೋಗಿಸತಕ್ಕದ್ದು ಎಂದು ಸಮಿತಿಯವರು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆಂಬ ಸಂಗತಿಯು ನನಗೆ ವೃತ್ತಪತ್ರಿಕೆಯಲ್ಲಿ ಪ್ರಕಟವಾದ ವರದಿಯಿಂದ ಗೊತ್ತಾಯಿತು.

ನನ್ನ ಸಾಂಸ್ಕೃತಿಕ ಸತ್ಯಾನ್ವೇಷಣೆಯೊಳಗಿನ ಯೋಗಾಯೋಗದ ಅಪೂರ್ವತೆಯು, ನನ್ನನ್ನು ಇಂದಿಗೂ ಸೋಜಿಗಗೊಳಿಸುತ್ತದೆ! ಕಣ್ಮರೆಯಾದ ಕಂನಡದಿಂದ ಪ್ರಾರಂಭವಾದ ಈ ಅನ್ವೇಷಣೆಯು, ವೈವಸ್ವತ ಮನು ಪ್ರಣೀತ ಮಾನವಧರ್ಮದ ಹೊಳಹನ್ನು, ನನ್ನ ಬಗೆಗಣ್ಣೆದುರು ತಂದು ನಿಲ್ಲಿಸುವಲ್ಲಿ ಪರಿಣಾಮಗೊಂಡಿತು! ಮಾನವ ಪ್ರಾದುರ್ಭಾವದ ಜಾಗತಿಕ ಹಿನ್ನೆಲೆಯು ಬೆಳಕಿನಲ್ಲಿ ಬರುವಂತಾಯ್ತು. ಈ ಅನ್ವೇಷಣೆಯಲ್ಲಿ, ಮಾನವ ಸಂಸ್ಕೃತಿಯಲ್ಲಿ ಆಗಿರುವ ಪಲ್ಲಟವು ತಾಳಮೇಳದೊಡನೆ ಬೆಳಕಿನಲ್ಲಿ ಬಂದದ್ದಾಗಿದೆ. ಮಡಿಕೆರೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣದಲ್ಲಿ ಈ ಅಂಶವನ್ನೇ ಪ್ರಾಜ್ಞರ ಪರಾಮರ್ಶೆಗಾಗಿ ನಿವೇದಿಸಿದ್ದಾಯ್ತು (೧೯೮೧) ಇಂದು ಮಾನವನು, ಪುರುಷ : ಪುರಿ-ಶಯನನ ಆರಾಧನೆಯಲ್ಲಿ ಅ-ಮಾನವ, ವ್ಯಕ್ತಿ : ನರ(ಳ)ನಾಗಿ ಮಾರ್ಪಟ್ಟಿದ್ದಾನೆ. ವ್ಯಾಸನಿಂದ ಪ್ರಚಲಿತವಾಗಿದೆ ಎಂಬ ನರ : (ನಾರ-ಅಯನ) ಸಂಪ್ರದಾಯದಿಂದ, ನನ್ನ ನಿಷ್ಕರ್ಷಕ್ಕೆ ಪುಷ್ಟಿ ದೊರೆಯುತ್ತಿದೆ! ಇಂದ್ರಿಯಗಳ ಪಾತಳಿಯ ಮೇಲೆ ಬಂದಿರುವ ಈ ಮಾನವ ಪಂಗಡಗಳಲ್ಲಿ ಇಂದ್ರಿಯಗಳೇ ದೇವತಾ ಸ್ವರೂಪದಲ್ಲಿ ಪೂಜೆಗೊಳ್ಳುತ್ತಿವೆ. ವೇದದಲ್ಲಿ ಬರುವ "ಯದ್ ವಾಕ್ ಪಶವಃ ವಂದತಿ" ಎಂಬ ಉಕ್ತಿಯಂತೆ, ಈ ಮಾನವ ಭಾಷೆಯು ಪ್ರಾಣಲಿಂಗ ಪಾತಳಿಯ ಮಾತು ಆಗಿದೆ.

ನನಗೆ ಅತ್ಯಂತ ಪ್ರಿಯವಾದ ಕಂನಡದ ನಿಜವಾದ ಏಳ್ಗೆಯಾಗಬೇಕಿದ್ದರೆ, ಅ-ಮಾನವ ಹಂತಕ್ಕೆ ಬಂದಿರುವ ನಾವು, ಮರಳಿ ಮಾನವರಾಗುವುದು ಆದ್ಯಕರ್ತವ್ಯವಾಗುತ್ತಿದೆ. ಆದಕಾರಣ, ಸನ್ಮಾನ ಸಮಿತಿಯ ದತ್ತಿಯ ವಿನಿಯೋಗವು, ವೈವಸ್ವತಮನು>ಮಾನವ ಸಂಪ್ರದಾಯದ ಪುನರುತ್ಥಾನದ ನಿಟ್ಟಿನಲ್ಲಿಯೇ ಆಗುವಲ್ಲಿ ಅದರ ಸಾರ್ಥಕ್ಯವಿದೆಯೆ ಎಂದು ನನ್ನ ಅಭಿಮತವಾಗಿದೆ. ಸಮಿತಿಯವರಿಗೂ ಬಿ. ಎಂ. ಶ್ರೀ ಪ್ರತಿಷ್ಠಾನದ ಆಡಳಿತ ವರ್ಗಕ್ಕೂ ನನ್ನ ಅಭಿಮತವನ್ನು ಪತ್ರಗಳ ಮೂಲಕ ತಿಳಿಸಿದ್ದಾಯ್ತು. ಈ ದತ್ತಿಯು ಕನಿಷ್ಠ ಹತ್ತು ಸಾವಿರ ರೂಪಾಯಿಗಳದ್ದಾದರೂ ಆಗಬೇಕು, ಎಂದೆನಿಸಿ ಅಮೇರಿಕೆಯಲ್ಲಿರುವ ಡಾ. ಮಧುಸೂದನ ಜೋಶಿ ಅವರು ನನ್ನ ಸೂಚನೆಯ ಮೇರೆಗೆ, ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ನಿಟ್ಟೂರ ಶ್ರೀನಿವಾಸರಾಯರಿಗೆ ಮೂರುಸಾವಿರ ರೂಪಾಯಿಗಳನ್ನು ಕಳಿಸಿದ್ದಾಗಿದೆ. ಸಂಸ್ಥಾಪಕ ಕಾರ್ಯದರ್ಶಿ ಪ್ರೊ. ಎಂ. ವಿ. ಸೀತಾರಾಮಯ್ಯ ಅವರಿಂದ ಈ ದತ್ತಿಯ ವಿನಿಯೋಗವನ್ನು ಸಮರ್ಪಕವಾಗಿ, ದಕ್ಷತೆಯಿಂದ ಮಾಡುವ ಆಶ್ವಾಸನವು ದೊರೆತಿದೆ. ಈ ದತ್ತಿಯ ಮೊದಲನೆಯ ಉಪನ್ಯಾಸವು ವೈವಸ್ವತಮನುವಿನ ಬಗೆಗೇ ಆಯ್ತು (೧೯೮೪) ಬೆಂಗಳೂರ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದ ಶ್ರೀ ಸಾ. ಕೃ. ರಾಮಚಂದ್ರರಾಯರು ಉಪನ್ಯಾಸಕರಾಗಿದ್ದರು. ಡಾ. ವ್ಹಿ. ಕೆ. ಆರ್. ವ್ಹಿ. ರಾವ್ ಅವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಈ ಉಪನ್ಯಾಸವು ಬಿ. ಎಂ. ಶ್ರೀ ಪ್ರತಿಷ್ಠಾನದ ಪತ್ರಿಕೆಯಲ್ಲಿ ಪ್ರಕಟವಾಗಲಿರುವುದಾಗಿ ಕಾರ್ಯದರ್ಶಿಗಳಿಂದ ಪತ್ರ ಬಂದಿದೆ.

ಭಾರತೀಯ ಸಂದರ್ಭದಲ್ಲಿ, ಮಾನವಧರ್ಮ : ಸಂಸ್ಕೃತಿಯನ್ನು ರೂಪಿಸಿರುವ ಆದ್ಯ ವೈವಸ್ವತ : ಮನು>ಮಾನವವನನ್ನು ಮರೆತು-ದೇಶನಾಮ, ಧರ್ಮ ಎರಡಕ್ಕೂ ಎರವಾಗಿ ಹಿಂದೂ ಎಂಬ ಹೆಸರೇ ದೇಶಕ್ಕೂ ಧರ್ಮಕ್ಕೂ ಉಂಟು ಎಂದು ನಂಬಿರುವ ಈ ಭಾರತೀಯರ ಅರಿವುಗೇಡಿತನದ ದುಷ್ಪರಿಣಾಮವೇ ನಮ್ಮ ಇಂದಿನ ಪಾಡು, ಎಂಬ ಸಂಗತಿಯೂ ಈ ಅನ್ವೇಷಣೆಯ ಮೂಲಕ ಹೊರವಡುತ್ತಿದೆ. ಇನ್ನೂ ಒಂದು ಯೋಗಾಯೋಗವೂ ಬೇಗನೆ ಕೈಗೂಡಲಿದೆ, ಎಂದು ಪ್ರೊ. ಸಾ.ಕೃ. ರಾಮಚಂದ್ರರಾಯರ ಪತ್ರಗಳ ಮೂಲಕ ದೊರೆತಿರುವ ಆಶ್ವಾಸನಗಳಿಂದ ಮೂಡಿದೆ. ನನ್ನ ಅನ್ವೇಷಣೆಯಲ್ಲಿ ಪ್ರಯೋಜನಕ್ಕೆ ಬಂದಿರುವ ಪರಿಭಾಷೆಯ ವಿವರಣಾತ್ಮಕ ಕೋಶವು Descriptive Glossary of Pivotal Concepts ಇದು ಇಂಗ್ಲೀಷಿನಲ್ಲಿ ಬೇಗನೆ ಬೆಳಕಿಗೆ ಬರಲಿದೆ. ಈ ಕಾರ್ಯದಲ್ಲಿ ಪ್ರೊ. ಸಾ. ಕೃ ರಾಮಚಂದ್ರ ರಾಯರಿಗೆ ಸಹಕಾರವನ್ನೀಯುತ್ತಿರುವ

ವಿದ್ವಾಂಸರು : ಡಾ।। ಬಿ. ಎಸ್. ಸತ್ಯನಾರಾಯಣ (Asst. Prof. Post graduate Dept. of Education, Bangalore University) ಶ್ರೀ ಎಂ. ಶ್ರೀಧರ (Lecturer in Psychology. B.N. M. College) ಶ್ರೀ ಜಯರಾಮನ್ ಉಪಾಧ್ಯಾಯ... ಇವರೆಲ್ಲರಿಗೂ ವ್ಯಕ್ತಿಶಃ ನನ್ನ ವಂದನೆಗಳು.

ಸಂಶೋಧನ ಕಾರ್ಯದಲ್ಲಿ, ಅನ್ವೇಷಕರಿಗೆ Empathy ಎಂಬ ಗುಣ ವಿಶೇಷದ ಆವಶ್ಯಕತೆಯಿರುವುದನ್ನು ತಜ್ಞರು ಒತ್ತಿ ಹೇಳುತ್ತಿದ್ದಾರೆ. ತಮ್ಮ ವೈಯಕ್ತಿಕ ಮತಗಳನ್ನು ಬಿಟ್ಟುಕೊಡುವ ಕಾರಣವಿಲ್ಲ. ಆದರೆ ಬೇರೆ ಭೂಮಿಕೆಯನ್ನು ಯಥಾರ್ಥವಾಗಿ-ಸ್ವಲ್ಪವೂ ಮುಕ್ಕಾಗದಂತೆ-ಅಭಿವ್ಯಕ್ತಪಡಿಸುವ ಅಸಾಧಾರಣ ಸಾಮರ್ಥ್ಯವು ಅವಶ್ಯವಿರುತ್ತದೆ. ಪ್ರೊ. ಸಾ. ಕೃ. ರಾಮಚಂದ್ರರಾಯರ ೨-೩ ವರುಷಗಳ ಪತ್ರವ್ಯವಹಾರದಲ್ಲಿ, ನನಗೆ ಅವರಲ್ಲಿ ಈ ಗುಣವು ಪ್ರಕರ್ಷದಿಂದ ಉಂಟು, ಎಂದು ಎನಿಸಿದೆ. ಈ ಕಾರಣದಿಂದ eiscriptive Glossary of Pivotal Cocenpts ದ ಕಾರ್ಯವನ್ನು ಅವರು ಕೈಕೊಂಡಿದ್ದು, ಇದನ್ನು ಬೇಗನೆ ಮುಗಿಸುವ ಅವರ ಆಶ್ವಾಸನಕ್ಕಾಗಿ ಅವರಿಗೆ ನನ್ನ ಧನ್ಯವಾದಗಳು ಸಲ್ಲಬೇಕು.*

ಮಾನವಧರ್ಮ ಪ್ರತಿಷ್ಠಾನ (ರಜಿಸ್ಟರ್ಡ) ಇದನ್ನು ಪ್ರೊ. ಜ್ಯೋತಿ ಹೊಸೂರ ಅವರು ಪ್ರೊ. ಭಾಸ್ಕರ ಪತ್ತಾರ ಅವರ ಸಹಕಾರದಿಂದ ಪ್ರಾರಂಭಿಸಿ, ವಿದ್ವಾನ್ ಮಲ್ಲೇಪುರಂ ಜಿ. ವೆಂಕಟೇಶ, ಪ್ರೊ. ಶ್ರೀನಿವಾಸ ಕುಲಕರ್ಣಿ ಮತ್ತು ಡಾ।। ನಿಂಗಣ್ಣ ಸಣ್ಣಕ್ಕಿ ಇವರೊಡಗೂಡಿ ಕಾರ್ಯಾರಂಭವನ್ನು ಮಾಡಿದ್ದು ಸಂತೋಷದ ಸಂಗತಿ. ಪ್ರೊ. ಜ್ಯೋತಿ ಹೊಸೂರ, ಸೌ. ಪುಷ್ಪಾ ಹೊಸೂರ ಈ ದಂಪತಿಗಳು ಎಂದಿನಂತೆ ಬಿತ್ತಿದ್ದನ್ನು ಬೆಳಕೊ ಪ್ರಕಾಶನಕ್ಕೆ ಮುಂದುವರಿಯದೆ ಇದ್ದರೆ, ಇದು ಬೆಳಕನ್ನು ಕಾಣುವುದು ದುಸ್ತರವಿತ್ತು. ಶ್ರೀ ಪ್ರಹ್ಲಾದ ಮಹಿಷಿ, ದಿಲ್ಲಿ, ಇವರು ಚಂದ್ರನೊಳಗಿನ ಮಾನವ ಮತ್ತು ಹಂಸಿಯೊಡನೆ ಲಲ್ಲೆಗೈವ ಝಿಊಸ ಈ ಪಡಿಯಚ್ಚುಗಳನ್ನು ಕೊಟ್ಟುದು ಅವರ ಉದಾರ ಮನಸ್ಸಿನ ದ್ಯೋತಕವಾಗಿದೆ. ಡಾ।। ಮಧುಸೂದನ ಜೋಶಿ ಮತ್ತು ಡಾ।। ಬಲ್ಲಾಳ ಜೋಶಿ ಇವರು ಕೆಲವು ಗ್ರಂಥಗಳ ನೆರವನ್ನಿತ್ತಿದ್ದಾರೆ. ಬೆಂಗಳೂರಿನ ಕೆ. ಅಭಿಶಂಕರ ಅವರು ಹಿತಚಿಂತಕರಾಗಿ ಆಗಾಗ ನೆರವನ್ನೀಯುತ್ತ ಬಂದಿದ್ದಾರೆ. ಈ ಗ್ರಂಥದ ವಿಷಯಸೂಚಿಯನ್ನು ಸಿದ್ಧಪಡಿಸಿರುವ ಶ್ರೇಯಸ್ಸು ಪ್ರೊ. ಭಾಸ್ಕರ ಪತ್ತಾರ ಅವರಿಗೆ ಸಲ್ಲುತ್ತದೆ.*

ಈ ಮುಪ್ಪಿನಲ್ಲಿ ನಮ್ಮಿಬ್ಬರನ್ನು ಚೆನ್ನಾಗಿ ನೋಡಿಕೊಳ್ಳುತ್ತಿರುವ ನಮ್ಮ ಮಗಳು ಶ್ರೀಮತಿ ವಿಮಲ ಡಿಸ್ಕಳಕರರು ನೆರವಾಗದೆ ಇದ್ದರೆ ನಮ್ಮ ಪಾಡು ಏನಾಗಬಹುದಿತ್ತೊ?

೨೮-೧೨-೮೪
ಸಾಧನಕೇರಿ, ಧಾರವಾಡ

ಶಂ. ಬಾ. ಜೋಶಿ.

---

* ಈ ಯೋಜನೆಯೂ ಕೈಗೂಡಲಿಲ್ಲ, ಪುಸ್ತಕ ರೂಪದಲ್ಲಿಯೂ ಪ್ರಕಟವಾಗಲಿಲ್ಲ. (ಸಂ)

* ಪ್ರತಿಸಂಪುಟಗಳಲ್ಲೂ 'ಶಬ್ದಸೂಚಿ' ನೀಡಿದೆ. ಪರಿಭಾಷೆಗಳಿಗೆ ಅಲ್ಲಲ್ಲಿ ಟಿಪ್ಪಣಿಗಳನ್ನು ಬರೆದಿರುವುದರಿಂದ ಪ್ರಸ್ತುತ ಮುದ್ರಣದಲ್ಲಿ ವಿಷಯಸೂಚಿಯನ್ನು ಕೈಬಿಡಲಾಗಿದೆ.



ಪುರಾತನ ಇಜಿಪ್ತಿನೊಳಗಿನ ಸೂರ್ಯನ ಆರಾಧನೆಯ ರೀತಿ. ಕ್ರಿ.ಪೂ. ೧೪೦೦.
ಅರಸು, ಅರಸಿ ನಾಗ ಪ್ರತಿಮೆಯುಳ್ಳ ಕಿರೀಟಧಾರಿಯಾಗಿದ್ದಾರೆ.....
ಜೀವಿಗಳ ಪ್ರಸವಸೂಚಕ ಕಿರಣಗಳನ್ನುಳ್ಳ ಸೂರ್ಯನು,
ಈಶಾವಾಸ್ಯದ 'ಪ್ರಜಾಪತ್ಯ' ಸೂರ್ಯನನ್ನು ಹೋಲುತ್ತಾನೆ!

ಅನ್ವೇಷಕನ ಅರಿಕೆ

ಹಾಲುಮತ ದರ್ಶನ (೧೯೬೦) ದಿಂದ ತೊಡಗಿ ತಲೆಯೆತ್ತಿದ್ದ ಜಿಜ್ಞಾಸೆ ನನ್ನನ್ನು ಬಿತ್ತಿದ್ದನ್ನು ಬೆಳಕೊ ಈ ಪ್ರಕಟನೆಯ ವರೆಗೆ (೧೯೮೪) ತಳ್ಳಿಕೊಂಡು ಬಂದಿದೆ! ಭಾರತೀಯ ಸಂಸ್ಕೃತಿಯಲ್ಲಿ ಆಗಿರುವ ಪಲ್ಲಟವನ್ನು ಗ್ರಹಿಸಿಕೊಳ್ಳಲು ಪ್ರಾರಂಭವಾದ ಅನ್ವೇಷಣೆಯು ಇದು. ಮನುಸ್ಮೃತಿಗೆ ಮಾನವಧರ್ಮಶಾಸ್ತ್ರ ಎಂಬುದು ಇನ್ನೊಂದು ಹೆಸರು : ಮನು>ಮಾನವ ಬೇರೆಯಲ್ಲದ್ದರಿಂದ! ಆದರೆ, ಡಾ|| ಬಿ.ಆರ್. ಅಂಬೇಡಕರರಂತಹ ವಿಚಾರವಂತರಿಗೆ ಜುಗುಪ್ಸೆಯನ್ನು ಉಂಟುಮಾಡಿದ, ಜಾತಿಭೇದಗಳನ್ನು ಹೆಚ್ಚಿಸುವ ತಂತ್ರದ ಮಾನವಧರ್ಮಶಾಸ್ತ್ರವೂ ಒಂದು ಇದ್ದುದರಿಂದ; ಮನು>ಮಾನವ ಮತ್ತು ಧರ್ಮಶಾಸ್ತ್ರ ಈ ಸಂಕೇತಗಳು ಆಕರ್ಷಕವಾಗಿದ್ದರೂ ಈ ನಿಟ್ಟಿನಲ್ಲಿ ವಿಚಾರ-ವಿಮರ್ಶೆಗೆ ತುಂಬ ಆತಂಕವು ಕಾಣಿಸಿಕೊಂಡಿತು.

ಆದರೆ, ಒಂದು ಸಂಸ್ಕೃತಿಯಲ್ಲಿ ಇಬ್ಬರು ಮನುಗಳು ಎಂಬ ಈ ದೃಶ್ಯವು, ಇಲ್ಲಿ ಮೋಸ-ಗತ್ತುಗಾರಿಕೆಯು ಅಡಗಿರುವ ಸಂದೇಹಕ್ಕೆ ಕಾರಣವಾಯಿತು. ವೈವಸ್ವತಮನು ಮತ್ತು ಸ್ವಾಯಂಭುವಮನು ಇವರಿಬ್ಬರಲ್ಲಿ ಒಬ್ಬನು, ಮೋಸ ತರುತ್ತಿರುವ ಸಂದೇಹದಿಂದಾಗಿ, ಈ ಉಭಯ ಮನುಗಳ ಪೂರ್ವೋತ್ತರಗಳನ್ನು ಕಂಡು ಹಿಡಿಯುವುದು ಕರ್ತವ್ಯವಾಯಿತು. ಮಾನವಶಾಸ್ತ್ರದ ಸೂತ್ರದಂತೆ ಪವಾಡ ಕಥೆ (Myth) ಮತ್ತು ನಡೆವಳಿ (Ritual) ಇವೆರಡರಲ್ಲಿ ಅಂತಸ್ಸಂಗತಿಯು ಇರುವುದು ಖಚಿತಪಟ್ಟರೆ, ಇಂತಹ ಸಂಗತಿಯು ವಾಸ್ತವ-ಐತಿಹಾಸಿಕ ಸ್ವರೂಪದ್ದು ಎಂದು ಬಗೆಯಬೇಕಾಗುತ್ತದೆ. ಪ್ರಸ್ತುತ ಮನು, ವಿವಸ್ವತನ ಸಂತಾನವೆಂಬ ಪವಾಡಕಥೆ ಇದೆ. ಅಲ್ಲದೆ, ದಿನದ ಆಹ್ನಿಕಗಳಲ್ಲಿ ವೈವಸ್ವತ ಮನ್ವಂತರೇ... ಈ ಮಂತ್ರಪಾಠವೂ ಉಂಟು. ಆದರೆ, ಸ್ವಾಯಂಭುವ ನಿರ್ದೇಶವಿರುವ ಆಹ್ನಿಕ ಮಂತ್ರವಿಲ್ಲ. ಇನ್ನೂ ಒಂದು ಸಂಗತಿ. ಮನುವಿಗೆ ಕಾಳಿದಾಸನು ಆದ್ಯಃ ಎಂದಿದ್ದಾನೆ. ಆದಿ ಮತ್ತು ಸ್ವಾಯಂಭುವ ಸಮಾನಾರ್ಥಕ ವಿಶೇಷಣಗಳಲ್ಲ. ಆದ್ಯಃ ಇವನನ್ನು ಎದುರಿಸಲು ಬಂದ ಅನೌರಸ ಸಂತಾನ ಈ ಸ್ವಾಯಂಭುವನರನು. ಇದರಿಂದಾಗಿ, ಸ್ವಾಯಂಭುವಮನು ಇದು ಮೋಸ ತರಲು ಯೋಜಿಸಿರುವ ಹೆಸರು, ಎಂಬುದು ಸ್ಪಷ್ಟವಾಯಿತ್ತು.

ಅಲ್ಲದೆ, ಇನ್ನೂ ಒಂದು ಒರೆಗಲ್ಲು : ವೈವಸ್ವತ<ವಿವಸ್ವನ್ ಇವನು ಸೌರನಿರುವುದು ನಿಜವಿದ್ದಲ್ಲಿ, ಸ್ವಯಂಭೂ<ಸ್ವಾಯಂಭುವಮನು ಚಾಂದ್ರನೇ ಇರಲಿಕ್ಕೆ ಬೇಕಾಗುತ್ತದೆ! ಪ್ರಕಾಶತತ್ತ್ವದ ಸೂರ್ಯೋಪಾಸಕರ ಸಂಪ್ರದಾಯವನ್ನು ನಷ್ಟಪಡಿಸಲು, ರಾತ್ರ ಸಮಯಾಚಾರದ ಚಾಂದ್ರಪಂಥವು ತಲೆಯೆತ್ತಿದ್ದುದನ್ನು ನಿದರ್ಶನಕ್ಕೆ ತರುವ ಬೇರೆ ಹಲವು ಪ್ರಮಾಣಗಳೂ ಉಂಟು. ಡಾ|| ಅಂಬೇಡಕರರಿಗೆ ಧರ್ಮಗ್ರಂಥ ಎನ್ನಲು ಹೇಸಿಗೆಯನ್ನು ಉಂಟುಮಾಡಿದ ಸ್ಮೃತಿಯು ಸ್ವಾಯಂಭುವ ಮನುವಿನದು! ವೈವಸ್ವತಮನಂತರೇ... ಎಂಬ ಆಹ್ನಿಕ

ಮಂತ್ರಪಾಠವಿರುವ ವೈವಸ್ವತಮನುವಿನ ಸ್ಮ ೃತಿಯು ಇಲ್ಲವಾಗಿದೆ! ಇದಕ್ಕೆ ಸ್ವಾಯಂಭುವ ಸಂಪ್ರದಾಯವೇ ಕಾರಣವಾಗಿರಲಿಕ್ಕೆ ಬೇಕು, ಎಂದೂ ಎನಿಸತೊಡಗಿತು.

ವೈವಸ್ವತಮನು ಪ್ರಣೀತ ಮಾನವಧರ್ಮ ಎಂಬ ಈ ಉದಾತ್ತ, ಭವ್ಯ ಪರಂಪರೆಯು ಆಕರ್ಷಕವೆನಿಸಿದರೂ ಇದು ನಿಜವಾಗಿ ಮಾನವಧರ್ಮವೇ ಆಗಿದ್ದಲ್ಲಿ, ಈ ಸಂಪ್ರದಾಯವು ಭಾರತಕ್ಕೆ ಮಾತ್ರ ಸೀಮಿತವಿರಲಾರದು. ವಿಕಾಸತತ್ತ್ವದ ಪ್ರಕ್ರಿಯೆಯಲ್ಲಿ ಕಾಣಿಸಿಕೊಂಡ ಮಾನವ ಪ್ರಾದುರ್ಭಾವದೊಡನೆ ಈ ಮನು>ಮಾನವಧರ್ಮ ಸಂಬಂಧವೂ ಇದ್ದಲ್ಲಿ, ಇದರ ಹೋಲಿಕೆಯ ಸಂಪ್ರದಾಯಗಳು ಜಗತ್ತಿನಲ್ಲಿ ಅಲ್ಲಲ್ಲಿ ಮೈದೋರಿದ್ದುದು ದೃಢಪಡಬೇಕು. ಇದನ್ನು ಕಂಡುಹಿಡಿಯಲು ಜಾಗತಿಕ ಮಟ್ಟದ ಪವಾಡಕಥೆಗಳ ಸಮೀಕ್ಷೆಯು ಅವಶ್ಯವಾಯಿತು. ಆದಿಯಲ್ಲಿ ನಾಗನಿಂದ ಸೃಷ್ಟಿ ಪ್ರಾರಂಭವಾಯಿತು. ಇದನ್ನು ನಂಬಿಸಲು ಪ್ರಚಾರಕ್ಕೆ ಬಂದಿರುವ ನಾನಾ ದೇಶಗಳ ಪವಾಡಕಥೆಗಳು ನನ್ನ ದಿಗ್‌ಭ್ರಮೆಯನ್ನು ಹೆಚ್ಚಿಸಿದುವು. ಈ ಸಂಭ್ರಮದಲ್ಲಿ ನಾಲ್ಕಾರು ವರ್ಷ ವ್ಯರ್ಥ ಹೋದುವು. ಭಾರತೀಯ ಪರಂಪರೆಯೊಳಗಿನ ನಾಗ : ಲಿಂಗ, ನಾಗ: ಚಂದ್ರ, ಈ ಪಡೆನುಡಿಗಳ ಮೂಲಕ ಜಾಗತಿಕ ಮಟ್ಟದಲ್ಲಿಯೇ ಒಂದು ಹೊಸ ಆಯಾಮವು ಕಣ್ಣಳತೆಯಲ್ಲಿ ಬರತೊಡಗಿತು. ಋಗ್ವೇದದೊಳಗಿನ ಸಾಂಸ್ಕೃತಿಕ ಸ್ತರಗಳ ಮೂಲಕ ಈ ಹೊಸ ಆಯಾಮದ ಸ್ವರೂಪವು ಸ್ಪಷ್ಟವಾಯಿತು.

ಭಾರತದಲ್ಲಿ ಮನು: ವೈವಸ್ವತನನ್ನು ಕಣ್ಮರೆಯಾಗಿಸಿರುವವನು ಸ್ವಾಯಂಭುವ ಮನುವು: ಚಾಂದ್ರನು! ನಾಗ: ಚಂದ್ರ, ನಾಗ: ಲಿಂಗ ಸಂಪ್ರದಾಯವು ಪ್ರಬಲವಾಗಿ, ವ್ಯಾಸನಿಂದ ಪ್ರಸ್ಥಾಪಿತವಾಯಿತು ಎಂದು ಹೇಳಲಾಗುವ ನರ : ನಾರ-ಅಯನ ಸಂಪ್ರದಾಯವು ಪ್ರಭಾವಶಾಲಿಯಾಗುವುದರೊಡನೆ ಈ ಮಾನವನು ನರ(ಳ)ನಾಗಿ ಮಾರ್ಪಟ್ಟಿದ್ದಾನೆ! ಜಾಗತಿಕ ಮಟ್ಟದಲ್ಲಿಯೂ ಈ ಕ್ರಮವೇ ಇರಲಾರದೆ, ಎಂದು ಎನಿಸಿತು. ಋಗ್ವೇದದ ಮೊತ್ತ ಮೊದಲಿನ ಪಾಠದಲ್ಲಿ ಸೌರದೇವರುಗಳಿಗೇ ಪ್ರಾಶಸ್ತ್ಯವಿತ್ತು ಎಂಬುದನ್ನು ಖಚಿತಪಡಿಸುವ ಹಲವಾರು ಪ್ರಮಾಣಗಳು ಪ್ರಚಲಿತ ಸಂಹಿತೆಯಲ್ಲೂ ದೊರೆಯುತ್ತಿವೆ. ಸದ್ಯಕ್ಕೆ ಇಂತಹ ಒಂದು ಉದಾಹರಣವೇ ಸಾಕು : ಕುಮಾರಿಮಾತೆ ಎಂಬ ಅದಿತಿಯು ಇಂದ್ರಾದಿ ಸೌರ ದೇವರುಗಳ ತಾಯಿ ಎಂದು ನಂಬಿಸಲಾಗಿದೆ! ಆದರೆ, ಪ್ರೊ. ಮ್ಯಾಕಡೊನೆಲ್, ಓಲ್ಡೆನ್‌ಬರ್ಗರಂಥ ಸಂಶೋಧಕರು ಹೇಳುತ್ತಾರೆ: ತಾಯಿ ಎಂಬ ಈ ಅದಿತಿ, ಮಕ್ಕಳು ಎಂಬ ವರುಣ, ಇಂದ್ರ, ಸೂರ್ಯಾದಿಗಳಿಗಿಂತ ಚಿಕ್ಕವಳು : ಅರ್ವಾಚೀನಳು! ಇನ್ನೊಂದು ನಿಟ್ಟಿನಿಂದ ಅದಿತಿ : ನಾಗಿ ಇವಳು ಸ್ಥಲಕಾಲ ತತ್ತ್ವದ ಪ್ರತೀಕ! ಆದಕಾರಣ, ಇಲ್ಲಿ ಅಭಾವವೇ ಸ್ಥಾಯೀ ಆಗುತ್ತಿದೆ! ಆದಿಮಾತೆಯೆಂಬ ನಾಗಿ : ಅದಿತಿಗೂ ಮುಂಚೆ, ಇಂದ್ರ-ಸೂರ್ಯರು ಇರಲೇಬೇಕಷ್ಟೆ?

ಸಾಂಸ್ಕೃತಿಕ ಸತ್ಯಾನ್ವೇಷಣೆಯಲ್ಲಿ, ಪವಾಡಕಥೆಗಳನ್ನು (Myths) ವಿಶ್ವಾಸಾರ್ಹ ಪ್ರಮಾಣಗಳು, ಎಂದು ಬಗೆಯುವುದು ಪ್ರಶಸ್ತವೆ? ಎಂದು ಕೇಳುವವರೂ ಉಂಟು. ಪವಾಡಕಥೆಗಳನ್ನು ಸಂದೇಹಿಸುತ್ತಿದ್ದ ಪಾಶ್ಚಾತ್ಯರಲ್ಲಿಯೇ ಈಗ ಈ ನಿಟ್ಟಿನಿಂದ ಬಗೆಬಗೆಯಲ್ಲಿ ವ್ಯಾಸಂಗ ನಡೆದಿದೆ. History is continuation of Mythology ಎಂದು ಡಾ. ಲೆವಿಸ್ಟ್ರಾಸ್ ಎಂಬ ತಜ್ಞನಿಗೆ ಕಂಡಿದೆ. Myths precede philosophy ಎಂಬುದು ಇನ್ನೊಬ್ಬ ತತ್ತ್ವಜ್ಞನ ಮತ. ಪವಾಡಕಥೆಗಳಲ್ಲಿ ಇತಿಹಾಸ ಮತ್ತು ತತ್ತ್ವಜ್ಞಾನದ ಬೇರುಗಳು ಪೋಷಣೆ ಪಡೆಯುತ್ತಿರುವುದು ನಿಷ್ಕಾರಣವಲ್ಲ. ಇತಿಹಾಸ ಮತ್ತು ತತ್ತ್ವಜ್ಞಾನಗಳ ಮಾಧ್ಯಮವು ಭಾಷೆ ತಾನೆ? ಈ ಭಾಷೆಯು ಮೈವೆತ್ತು ಬೆಳೆಯತೊಡಗಿದ್ದು ಪವಾಡಕಥೆಗಳ ಅನುಸಂಧಾನದಿಂದ! ಈ ಮಾನವ ಭಾಷೆಯ ತಳಹದಿಯಲ್ಲಿ ಸೂರ್ಯ ಮತ್ತು ಚಂದ್ರಮರಿರುವುದಾಗಿ, ನನ್ನ ಪಾಡಿಗೆ ಭಾರತೀಯ ಸಂಸ್ಕೃತಿಯ ಸಂದರ್ಭದ ಅನ್ವೇಷಣೆಯಲ್ಲಿ ಖಚಿತ ಪಟ್ಟಿದೆ. ಜರ್ಮನಿಯ ಅರ್ನೆಸ್ಟ್ ಕ್ಯಾಸಿರರ್ ಬರೆದಿರುವ ಎಂಬ ಸಂಪುಟಗಳು ಶಿಷ್ಟಮಾನ್ಯವಾಗಿವೆ.[1] ಆಧುನಿಕ ಪರಿಭಾಷೆಯ ಮೂಲಕ prehistory -protohistory ಕಂಡುಹಿಡಿಯುವ ಪ್ರಯತ್ನಗಳಲ್ಲಿ ಪವಾಡಕಥೆಗಳ ನೆರವನ್ನು ಪಡೆಯದೆ ಇರುವುದರಿಂದ ಆ ಯುಗದ ಬಾಳಬಗೆಯು ನೇರವಾಗಿ ಅರಿಕೆಗೆ ಬರುವುದಿಲ್ಲ. ಈಜಿಪ್ಟಿನ

ಅವಶೇಷಗಳಲ್ಲಿ ನಾಗನಿಂದ ಆ-ಲಿಂಗಿತ ಸೂರ್ಯನ ಪ್ರತೀಕಗಳು ದೊರೆಯುತ್ತವೆ. ಆದರೆ, ಈ ಸಾಂಕೇತಿಕ ಅಭಿವ್ಯಕ್ತಿಯ ಅರ್ಥವು, Protohistory, prehistory ಯ ಆಧುನಿಕ ಪರಿಭಾಷೆಗೆ ಎಟುಕುವುದಿಲ್ಲ!

ಈ ಪವಾಡಕಥೆಗಳ ಸಂಕೇತ ವಿವರಣಶಾಸ್ತ್ರವು ಇತ್ತೀಚೆಗೆ ರೂಢಿಗೆ ಬಂದಿದೆ. ಆದಕಾರಣ, ಇವುಗಳ ಬಗೆಗೆ ಎಚ್ಚರ ಪಟ್ಟಷ್ಟು ಕಡಿಮೆಯೇ ಸರಿ.

> We must now assume that all myths have equal value, as some writers of Jung's School tend to do..." [೨]

ಈ ಸಾಂಸ್ಕೃತಿಕ ಸ್ತರಗಳಲ್ಲಿ ಸೌರ ಸಂಪ್ರದಾಯದ ಸ್ತರಗಳನ್ನು ವ್ಯತ್ಯಸ್ತಗೊಳಿಸಲು ಚಾಂದ್ರ ಸಂಪ್ರದಾಯವು ಪ್ರಯತ್ನಪಟ್ಟಿರುವುದಾಗಿ ಕಂಡು ಬರುತ್ತಿದೆ! ಉದಾ ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನ್ ಅಹಮ್ ಎಂಬ ಗೀತೆಯ ಈ ಉಕ್ತಿಯಲ್ಲಿ ವಿವಸ್ವನ್ : ಸೌರಸ್ತರವು ಎರಡನೆಯ ಹಂತದ್ದು ಆಗಿದೆ. ಆದಕಾರಣ ಸೌರ ಹಾಗೂ ಚಾಂದ್ರ ಪವಾಡಕಥೆಗಳು ಸೌರ ಪವಾಡಕಥೆಗಳಷ್ಟು ವಿಶ್ವಾಸಾರ್ಹವಾಗುವುದಿಲ್ಲ. ಶ್ರೀಮತಿ ಎಲ್ಲಿಸ್, ತಮ್ಮ ಗ್ರಂಥದಲ್ಲಿ World Serpent = ಭೌಮಾಸುರನಾಗನ ಸಂಹಾರಕನೆಂಬ ಥೋರನ ಕಥೆಯನ್ನು ಸಾಕಷ್ಟು ಚೆನ್ನಾಗಿ ಹೇಳಿದ್ದು ನಿಜ. ಆದರೆ, ಈ ಸಾಂಕೇತಿಕ ಸ್ವರೂಪವನ್ನು ಆಮೂಲಾಗ್ರ ವಿವರಿಸಲು ಪ್ರಯತ್ನಪಟ್ಟಿಲ್ಲ. ಕ್ರೈಸ್ತ ಪಂಥೀಯ ಶ್ರದ್ಧೆಯು, ಅವರ ಸತ್ಯಾನ್ವೇಷಣೆಯಲ್ಲಿ ಆತಂಕಕಾರಿಯಾಗಿರೋದು ಕಂಡುಬರುತ್ತದೆ. Healhen Gods ಎಂದು ಬಳಸುವ ಮಾತಿನಲ್ಲಿ ಈ ಪಕ್ಷಪಾತವು ಬಯಲಿಗೆ ಬರುತ್ತಿದೆ. ಅಲ್ಲದೆ, ಆದದ್ದೆಲ್ಲ ಒಳಿತೇ ಆಯಿತು' ಎಂಬ ದೃಷ್ಟಿಕೋನವನ್ನು ಸ್ವೀಕರಿಸಿ ಸಮೀಕ್ಷಿಸುವಲ್ಲಿ, ಮೂಲ್ಯಗಳು ಕಡೆಗಣಿಸಲ್ಪಡುತ್ತವೆ. ಸೌರಸಂಪ್ರದಾಯವನ್ನು ಹಿಮ್ಮೆಟ್ಟಿಸಿರುವ ನಾಗ : ಲಿಂಗ ನಾಗ : ಚಂದ್ರ ಸಂಪ್ರದಾಯಕ್ಕೇ ಪಟ್ಟಕಟ್ಟುವ ಅನ್ಯಾಯವು ಸಂಭವಿಸುತ್ತಿದೆ.

ಉತ್ತರ ಯುರೋಪೀಯ ಜಾನಪದ ಸಾಹಿತ್ಯದಲ್ಲಿ ಥೋರನು, ಭಾರತೀಯ ಇಂದ್ರನಂತೆ ಮಹೋನ್ನತ ಸ್ಥಾನದಲ್ಲಿ ಇದ್ದನು.

> Thor was the god Supreme, not only over the stormy sky, but also over the life of community in all its aspects[೩]

ಭಾರತೀಯ ಸಂಸ್ಕೃತಿಯಲ್ಲಿ ಅಹಿ-ಹಂತಕ ಇಂದ್ರನು, ಸೂರ್ಯನ ಪರ್ಯಾಯ ಅಲ್ಲದೆ 'ಶಿಶ್ನೋ ದೇವಾಃ' ಸಂಪ್ರದಾಯ ಶತ್ರು. ಉತ್ತರ ಯುರೋಪೀಯ ಥೋರನು World Serpent = ಭೌಮಾಸುರ ನಾಗಹಂತಕನೆಂದು ಖ್ಯಾತಿ. ಅಲ್ಲದೆ ಇವನು ಕ್ರಿಸ್ತನ ಪ್ರಮುಖ ವೈರಿ. ಆದ್ದರಿಂದ ಥೋರನ ಶತ್ರು ನಾಗಲಿಂಗನೇ ಇರಬೇಕಷ್ಟೆ? ಶ್ರೀಮತಿ ಎಲ್ಲಿಸ್ ವರ್ಣಿಸಿರುವ ಈ ಚಿತ್ರ ನೋಡಿ

> Thor was thought of as the principal adversary of Christ. The picture of Christ as a warrior combating the force of evil, was a development and reflection in their vague idea about their sky God.. [೪]

ಥೋರ (ಇಂದ್ರ) ಶತ್ರು, ನಾಗ=ಅಹಿ ಪಾಪಿ, ದುಷ್ಟಶಕ್ತಿ : ಅಸುರಶಕ್ತಿ. ಆದರೆ, ಮೇಲಣ ವಿವರಣದಲ್ಲಿ ಅಸುರ=ನಾಗ: ಲಿಂಗನು ದೇವರು ಆಗಿ, ಥೋರ (ಇಂದ್ರ) ಪಾಪಿ, Evil ಆಗಿದ್ದುಂಟು.

ಭಾರತೀಯ ಸಂಸ್ಕೃತಿಯೊಳಗಿನ ಅಹಿಹಂತಕ ಇಂದ್ರನ ಮತ್ತು ಪಾಶ್ಚಾತ್ಯ ಅಹಿಹಂತಕ ಥೋರನ ತೇಜೋವಧೆಯ ತಂತ್ರದೊಳಗಿನ ಈ ಸಾಮ್ಯವು ಅಭ್ಯಸನೀಯವಿದೆ. ಭಾರತೀಯ ಪರಂಪರೆಯೊಳಗಿನ ಭೌಮಾಸುರ : ನಾರಕ (ನರಕ)ಃ ನಾಗನು ಅಹಿಹಂತಕ ಇಂದ್ರನಿಂದಲೇ ಕೊಲ್ಲಲ್ಪಡಬೇಕು. ಆದರೆ, ಈಗ ಸರ್ವಶ್ರುತವಿರುವ ಪವಾಡಕಥೆಯು ಬೇರೆಯಿದೆ. ನಾರಕ : ನರಕ=ನಾಗನನ್ನು, ನಾಗಶಯನನೆಂಬ ವಿಷ್ಣುವಿನ ಪರ್ಯಾಯಕೃಷ್ಣನು ಚತುರ್ದಶಿಯಂದು ನರಕನನ್ನು ಸಂಹರಿಸಿದ ಹಾಗಿನ ಕಥೆ ಪ್ರಚಾರದಲ್ಲಿದೆ! ಕಾಕ-ಅಸುರನನ್ನು

ರಾಮ-ಚಂದ್ರನು ಕೊಂದಂತೆ! ಗ್ರೀಕ್ ಟಿಟಾನ್ ಕ್ರೋನಸ್=ರಾತ್ರೀಕಾಗೆ (ನಾಗ: ಲಿಂಗ) ಆಗಿದೆ ಗ್ರೀಸಿನಲ್ಲಿ. ಇದು ನಿಜವಿದ್ದಲ್ಲಿ, ಥೋರನ ಹಗೆಯಾದ ಕ್ರಿಸ್ತನು = ನಾಗ: ಲಿಂಗ, ನಾಗಚಂದ್ರನ ಪರ್ಯಾಯವೇ ಇರಬೇಕಷ್ಟೆ? ಈ ಕ್ರಿಸ್ತನನ್ನು Sky God ಸೂರ್ಯನ ಪರ್ಯಾಯವಾಗಿಸುವ ಈ ಗತ್ತುಗಾರಿಕೆ ನಾಗ:ಚಂದ್ರ, ನಾಗ:ಲಿಂಗನನ್ನು ಆದಿತ್ಯರೂಪೀ ಸೂರ್ಯನನ್ನಾಗಿಸಿರುವ ಕಣ್ಕಟ್ಟನ್ನು ಹೋಲುತ್ತಿದೆ.

ಈ ಮಾಟ, ಕಣ್ಕಟ್ಟಿನ ತಂತ್ರವು ಪಾಶ್ಚಾತ್ಯ ಪರಂಪರೆಯಲ್ಲಿಯೂ ಇತ್ತು. ಶ್ರೀಮತಿ ಎಲ್ಲಿಸ್ ಬರೆಯುತ್ತಾಳೆ : ಈ ಅಸುರ ದುಷ್ಟಶಕ್ತಿಯು ತನ್ನ ಗೆಲುವಿಗಾಗಿ ಮಾಟ; ಕಣ್ಕಟ್ಟು ಇಂತಹ ಉಪಾಯಗಳನ್ನು ಯೋಜಿಸುತ್ತಿತ್ತು. ವಿಶ್ವಜನಕನು ಎಂದುದಾಗಿದೆ ಇವನಿಗೆ ವಿಷ್ಣುವಿನಂತೆ ಸಹಸ್ರನಾಮಗಳು ಇದ್ದು among them one eyed - God ಎಂಬ ಪರ್ಯಾಯ ನಾಮವೂಉಂಟು! ಇವನನ್ನು Father of battle ಎಂದುದೂ ಉಂಟು.[೫]

ಗ್ರೀಕ್ ಪುರಾತನರಲ್ಲಿ ಹಿರಾಕ್ಲಿಟಸನು ತನ್ನ ದೇವರ ಹಿರಿಮೆಯನ್ನು ಹೇಳುತ್ತಾನೆ : 'King of all; and Father of all' ಎಂದು. 'ಕುರುಕ್ಷೇತ್ರ' ಕಾಳಗವು ನಿತ್ಯ ನಡೆಯತಕ್ಕದ್ದೇ. ಆದರೆ ನೀರು (ನೀರೆ) ರಾಡಿ (water is ignoble). ಅಗ್ನಿ ಉದಾರ Fire is noble ಕೆಸರಿನಿಂದ ಕೆಸರನ್ನು ತೊಳೆಯುವ ರೀತಿ, ಈತನಿಗೆ ಮಾನ್ಯವಿದ್ದಿಲ್ಲ. ಆದಕಾರಣ, ಇವನು ಆಮರಣ ಕು-ಮಾರ ವ್ರತಿಯಾಗಿ ಬಾಳುವ ಸಂಕಲ್ಪ ಮಾಡಿದನು. ಓರ್ಫ್ಯುಅಸ್ ಪಂಥೀಯ ಪೈಥಾಗೊರಾಸನ ಈ ಸಂಪ್ರದಾಯವೇ ಕೊನೆಯಲ್ಲಿ ಕ್ರೈಸ್ತಧರ್ಮವಾಗಿ ಪರಿಣಮಿಸಿದೆ, ಎಂದು ಆಧುನಿಕ ಪೈಥಾಗೊರಾಸನೆಂದು ಪಾಶ್ಚಾತ್ಯರೇ ಹೊಗಳಿರುವ ಬರ್ಟರಾಂಡ್ ರಸ್ಸಲ್ ಹೇಳುತ್ತಾನೆ. ಉತ್ತರ ಯುರೋಪೀಯ ಜಾನಪದ ಸಂಶೋಧಕ ಎಲ್ಲಿಸ್, ಮನಸ್ಸು ಮಾಡಿದ್ದರೆ, ಗ್ರೀಕ್‌ಸಂಸ್ಕೃತಿಯ ಮಾರ್ಪಾಟುಗಳ ತುಲನೆ ಮೂಲಕ, ಕ್ರಿಸ್ತಪಂಥವನ್ನು ರೂಪಿಸಿದ One eyed-God ನ ಮಹಾತ್ಮ್ಯವನ್ನು ನಿವೇದಿಸಬಹುದಿತ್ತು.

ಈ ವಿವರಣದ ಉದ್ದೇಶವು ಇಷ್ಟು : ಭಾರತದಲ್ಲಿ ಮಾತ್ರವಲ್ಲ; ಜಾಗತಿಕ ಪಾತಳಿಯಲ್ಲಿಯೇ ಪ್ರಜ್ಞಾ : ಮನಸ್‌ತತ್ತ್ವದ ಪ್ರಾದುರ್ಭಾವಕ್ಕೆ ಕಾರಣವಿರುವ ಸೌರ : ಪ್ರಕಾಶತತ್ತ್ವದ ದೇವರುಗಳ ಪವಾಡಕಥೆಗಳು ಆದಿಯಲ್ಲಿ ಇರುವುದಾಗಿ ಕಂಡು ಬರುತ್ತಿದೆ. ಆ ಬಳಿಕ, ಎರಡನೆಯ ಹಂತದಲ್ಲಿ ಪ್ರಾಣತತ್ತ್ವದ ನಾಗ : ಲಿಂಗ, ನಾಗ : ಚಂದ್ರ ಶಕ್ತಿಯ ದೇವರುಗಳ ಪವಾಡಕಥೆಗಳ ಸ್ತರವಿರುವುದಾಗಿ ಖಚಿತಪಡುತ್ತಿದೆ, ಎಂಬ ಮಾತನ್ನು ಪ್ರಾಜ್ಞರ ಗಮನಕ್ಕೆ ತಂದುಕೊಡುವುದೇ ಈ ವಿವರಣದ ಪ್ರಧಾನ ಉದ್ದೇಶವಾಗಿದೆ. ಸಾಂಸ್ಕೃತಿಕ ಸ್ತರಗಳ-ಅವಶೇಷಗಳ- ತುಲನಾತ್ಮಕ ಸಮೀಕ್ಷೆಯ ಮೂಲಕ ಹೊರವಡುವ ಜೀವನದ ಅರ್ಥವು, ಯೂಂಗ್, ಫ್ರೈಡ್ ಮುಂತಾದ ಪ್ರಭೃತಿಗಳಿಂದ ಪುರಸ್ಕೃತ ಮನೋವಿಶ್ಲೇಷಣಶಾಸ್ತ್ರದ ಮೂಲಕ ಅರಿಕೆಗೆ ಬರುವ ಅರ್ಥಕ್ಕಿಂತಲೂ ಹೆಚ್ಚು ವಿಶ್ವಾಸಾರ್ಹವಾಗಿದೆ. ಅಶ್ಮಯುಗ, ತಾಮ್ರಯುಗ, ಕಂಚಿನಯುಗ ಈ ಬಗೆಯ ಪರಿಭಾಷೆಯ Protohistory, Prehistory ಜ್ಞಾನವು ಸಾಂಸ್ಕೃತಿಕ ಸ್ತರಗಳ ಅವಶೇಷಗಳ ತೌಲನಿಕ ಸಮೀಕ್ಷೆಯ ಅರ್ಥದಷ್ಟು ಸಮ್ಯಕ್ ಸ್ವರೂಪದ್ದು ಆಗಲಾರದು.

ಸಾಂಸ್ಕೃತಿಕ ಪರಂಪರೆಯೊಳಗಿನ ಸಂಕೇತ-ಪ್ರತೀಕಗಳಲ್ಲಿ, ಅಂದಿನವರ ಬಾಳ ಬಗೆಯು-ನಂಬುಗೆಗಳು-ಪ್ರತಿಬಿಂಬಿತವಾಗಿರುತ್ತವೆ. ಸಮಸಾಮಯಿಕ Cultural-duration ಪ್ರತಿಮಾ ಸಂಕೇತಗಳ ಆಶಯವು ಸಮಾನವಿರುತ್ತದೆ. ಉದಾ : ಸೈಕ್ಲೊಪ್ಸನ One-eyed-monster, ಅ ಮಾನವ ಪುರುಷ=ಪುರಿಶಯ. ಇದಕ್ಕೆ ಪ್ರತಿಯಾಗಿ ಇರುವ ಇನ್ನೊಂದು ಸ್ತರದ ಅಗ್ನಿ : ಜಾತವೇದ, ಮನು : ವೈವಸ್ವತ, ಅಹಿ-ಹನ್‌ಬಿರುದಿನ ಇಂದ್ರ, ಝುವೂಸ್, ಅಹಿಹಂತಕ ಅಪೊಲ್ಲೊ, World monster ಹಂತಕ ಥೋರ.....ಇವುಗಳ ಆಶಯವು ಸಮಾನ ಸ್ವರೂಪದ್ದು ಆಗಿದೆ.

ಆಧುನಿಕ ಭೌತಶಾಸ್ತ್ರದ ಭೂಮಿಕೆಯಿಂದ ಮಾನವ ಜೀವನ : ಸಂಸ್ಕೃತಿಯು ಅರ್ಥಕ್ಕೆ ಎಟುಕುತ್ತಿಲ್ಲ. 'ಮಾನವ ಪ್ರಾದುರ್ಭಾವ' ಶೋಧಕನೆಂಬ ಡಾರ್ವಿನ್ನನೇ ಇದಕ್ಕೆ ಸಾಕ್ಷಿ, ಇವನು ಹೇಳುತ್ತಾನೆ :

> There can hardly be a doubt that we are descended from barbarians'.

ಆದರೆ, ಡಾರ್ವಿನ್ನನ ಸಮಕಾಲೀನ ವಿದ್ವಾಂಸನಿಗೆ ಇವನ ಈ ನಿಷ್ಕರ್ಷವು ಸದೋಷವೆನಿಸಿ, ತನ್ನ ಆಕ್ಷೇಪಗಳನ್ನು ಡಾರ್ವಿನ್ನನಿಗೆ ತಿಳಿಸಿದನು. ಪ್ರಾಣಿ-ಪಶು ವರ್ಗದ-ಪ್ರಾಣಲಿಂಗ ಪಾತಳಿಯ ಮೇಲೆ ಮಾನವ

ಮನಸ್ಸು ಇಲ್ಲ. ಆದಕಾರಣ, ಭಾಷೆಯೂ ಇಲ್ಲ. ಈ ಅಂಶವು ಸಾಂಸ್ಕೃತಿಕಸ್ತರಗಳ ಸಮೀಕ್ಷೆಯಲ್ಲಿ ದೃಢಪಡುತ್ತಿದೆ. ವೈವಸ್ವತನ ಅಂಶನೆಂಬ ಮನು>ಮಾನವನಲ್ಲಿ ಸೌರ ಮನಸ್ಸು ಉಂಟು. ಗ್ರೀಕ್ ಪರಂಪರೆಯ 'Nous : Mind' ಇದು ಪೈಥಾಗೊರಾಸನ-ತತ್ವಪ್ರಣಾಲಿಯ ಪ್ರಭಾವದಲ್ಲಿ, ಹಿಮ್ಮೆಟ್ಟಿ ಕಾಣದಾಗಿದೆ. ಭಾರತದಲ್ಲಿ ಪ್ರಜ್ಞೆ : ಮನಸ್ಸು ಗೀತಾದಿ ಗ್ರಂಥಗಳ ಪ್ರಭಾವದಲ್ಲಿ ಲುಪ್ತವಾಗಿದೆ.

ಇಂದಿನ ಮಾನಸಶಾಸ್ತ್ರವು, ಪ್ರಾಣ (ದೇಹಕ್ಕೆ) ಬದ್ಧವಾದ-ಸ್ಥಲ (ಕಾಲದ) ಸಂದರ್ಭದಲ್ಲಿ ಮಾತ್ರ ಪ್ರಯೋಜನಕಾರಿಯಾಗಿದೆ. ಆದರೆ, ಅಹಿ-ಹಂತಕ ವೀರನ ಪ್ರತಿಮೆಯ ಮೂಲಕ ನಿಶ್ಚಿತವಾಗಿ ಹೊರವಡುವ ಸಂಗತಿಯೆಂದರೆ ಈ ಮಾನವನ ಪ್ರಾದುರ್ಭಾವವು ನಾಗ : ಲಿಂಗನ, ಪ್ರಾಣಿ-ಪಶುಗಳ ಪಾತಳಿಯ ಮೇಲೆ ಆಗಿಲ್ಲ. ಈ ಘಟನೆಗೆ ಇನ್ನೊಂದು ನಿಟ್ಟಿನಿಂದ ಪುಷ್ಟಿ ದೊರೆಯುತ್ತಿದೆ. ನಾಗ, ಅದಿತಿ, ಸ್ಥಲ (ಕಾಲ) ಸ್ವರೂಪಳು, 'ಇಂದ್ರಹನನ ಸಮರ್ಥಂ ಪುತ್ರಂ' ಕಾಮಿಸಿದಳು, ಎಂಬ ಪ್ರಾಚೀನ ಕಥೆಯು ಸಾಯಣಭಾಷ್ಯದಲ್ಲಿ ನಮೂದು ಇದೆ. ನಾಗ : ಲಿಂಗ ಪಾತಳಿಯ ಆಚೆಗಿನ ಸ್ವರ್‌ಪಾತಳಿಯ ಮೇಲಣ ಇಂದ್ರನನ್ನು ಲೈಂಗಿಕ ಪಾತಳಿಯ ಮೇಲೆ ತರುವ ಅಭಿಚಾರ ಕೃತ್ಯವು ಇಲ್ಲಿ ಉಂಟು. ಉತ್ತರ ಯುರೋಪೀಯ ಅಹಿ-ಹಂತಕ ಥೋರನನ್ನು 'Sky God' ಎನ್ನುವಲ್ಲಿ, ಇವನು, ಪ್ರಾಣಲಿಂಗ ಪಾತಳಿಯ ಮೇಲಣ ದೇವರಲ್ಲ, ಸ್ಥಲ (ಕಾಲದ) ಹಂತದ ಆಚೆಗಿನ ದೇವರು ಎಂಬ ಮಾತು ಸ್ಪಷ್ಟವಿದೆ. ಜೀವನಸ್ಥ ಪಾತಳಿಗಳ ವಿಚಾರವು ಭಾರತದಂತೆ ಗ್ರೀಕ್ ಸಂಸ್ಕೃತಿಯಲ್ಲಿಯೂ ಮಾನ್ಯವಿತ್ತು. ಇಂದ್ರನನ್ನು ತ್ವಷ್ಟಾರ : ತಕ್ಷಕ-ನಾಗನ ಮಗನೆಂಬ ಋಗ್ವೇದದ ಉಲ್ಲೇಖವು ಸ್ವರ್ ಪಾತಳಿಯನ್ನು ನಷ್ಟಪಡಿಸುವ ತಂತ್ರವಾಗಿದೆ. ಥೋರನನ್ನು 'One-eyed-God' ಲಿಂಗ ಸ್ವರೂಪ ಓಡನ್ನನ ಮಗನೆಂಬಲ್ಲಿಯೂ ಈ ಮೋಸವೇ ಇದೆ.

ಬಾಳಿನ ಅರ್ಥವು ನೇರವಾಗಿ ಆಗದಂತೆ, ಜೀವನ ವಿಶ್ವಸ್ಥ ಪಾತಳಿಗಳನ್ನು ಅಸ್ತವ್ಯಸ್ತಗೊಳಿಸಲಾಗಿದೆ. ಈ ದೃಶ್ಯವು ಜಾಗತಿಕ ಪಾತಳಿಯಲ್ಲಿಯೇ ಕಾಣದೊರೆಯುತ್ತಿದೆ. universe ಇದರ ಸ್ಥಳದಲ್ಲಿ Cosmos ಎಂಬ ಹೊಸ ಪರಿಭಾಷೆಯನ್ನು ಪೈಥಾಗೊರಾಸ ಸಂಪ್ರದಾಯವು ರೂಢಿಸಿದೆ. ಮಾನವ ಸಂಸ್ಕೃತಿ ಪ್ರೇರಕ ಶಕ್ತಿಯ ಕೇಂದ್ರ ಸೂರ್ಯ ಮತ್ತು ಚಂದ್ರ. ಈ ಅನುಕ್ರಮವನ್ನೇ ತಪ್ಪಿಸುವ ತಂತ್ರ-ಮಂತ್ರ ಪ್ರಚಾರದಲ್ಲಿದೆ : 'ಸೂರ್ಯಾ ಚಂದ್ರಮಸೌ' ಎಂಬ ಋಗ್ವಚನದಂತೆ ಸೂರ್ಯ-ಚಂದ್ರರು ಸಮಾನ ಪಾತಳಿಯ ಮೇಲೆ ಆಗುತ್ತಿದ್ದಾರೆ! 'ಸೂರ್ಯ' ವಧು ಮತ್ತು ಸೋಮ ವೇಷದ 'ಚಂದ್ರ'ವರ, ಎಂಬ ಈ ಲಿಂಗಪಲ್ಲಟವಾದ ವಧೂವರರ ವಿವಾಹ-ಸೂಕ್ತವಿದೆ ಈ ವೇದದಲ್ಲಿ ! ಉತ್ತರ ಯುರೋಪೀಯ ಜಾನಪದ ಕಥೆಯಲ್ಲಿ, Sun : a girl; Moon : the boy! 'She moon' ಪಾಶ್ಚಾತ್ಯ ಪರಂಪರೆಯಲ್ಲಿ ಎಂಬ ವಾಡಿಕೆಯಿದೆ! ಬಾಳಿನಲ್ಲಿ ಏನೊಂದು ನಿಯಮ ವ್ಯವಸ್ಥೆಯಿದೆ, ಎಂಬ ನಂಬುಗೆಯನ್ನೇ ನಷ್ಟಪಡಿಸುವ ದುಷ್ಟತಂತ್ರವು ಬಯಲಿಗೆ ಬರುತ್ತದೆ.

ಆದರೆ, ಋಗ್ವೇದದ ಸ್ತರಗಳಲ್ಲಿ 'ಋತಂ ಚ ಸತ್ಯಂ ಚ' ಎಂಬ ಋಚೆ-ಅತಿಪ್ರಾಚೀನ ಸ್ತರದಲ್ಲಿ ಕಾಣುತ್ತದೆ. ಹಿಂದೊಮ್ಮೆ 'ಋತ: ಸತ್ಯದ ಸಂರಕ್ಷಕ ದೇವನು ಎಂಬ ಸೌರ ವರುಣನು' ಸಮ್ರಾಟ್ ಎನಿಸಿದ್ದನು. ಓಲ್ಡೆನ್‌ಬರ್ಗನ ನಿಷ್ಕರ್ಷದಂತೆ, ಈ ವರುಣನು ಅವೆಸ್ತದ ಅಹುರ-ಮಝ್ದನ ಸರಿದೊರೆಯಾಗಿದ್ದ ಸಮಯವೇ ಅದು. ಋತ: ಸತ್ಯ ಸ್ವರೂಪೀ ಪ್ರಕಾಶತತ್ತ್ವ ಸಂರಕ್ಷಕ ವರುಣನು, ಕೆಲಸಮಯದ ತರುವಾಯ 'ರಾತ್ರ್ಯಾಭಿಮಾನೀ ದೇವನು : ಆದಿತ್ಯ : ನಾಗ : ಲಿಂಗರೂಪನು ಆಗುತ್ತಾನೆಂದು ವೇದದ ಈಗಿನ ಸ್ತರಗಳಲ್ಲಿ ಕಾಣಲು ದೊರೆಯುತ್ತಾನೆ. ನೀರಿನ ಒಡೆಯ=ನೀರನಾಗುವುದರೊಡನೆ ಈ ಋತವು ರೇತಸ್ಸ್ವರೂಪೀ ಸತ್ಯವಾಗಿದೆ!

ಇನ್ನು ಒಂದು ಕೊನೆಯ ತೊಡಕು : 'ಅಹಿ : ವೃತ್ರನ ಅಥವಾ ಭೌಮಾಸುರನ ಹನನ ಮಾಡುವವನಿಗೆ ಇಂದ್ರ ಪದವಿ' ಎಂದರೇನು ? ಭಾರತೀಯ ಪೂರ್ವಪರಂಪರೆಯಲ್ಲಿ ಈ ಭೌಮ ಅಸುರ : ನಾಗನನ್ನು 'ಘಟ-ಸರ್ಪ' ಎಂಬ ವಾಡಿಕೆಯಿದ್ದುದನ್ನು ಹಿಂದೊಮ್ಮೆ ಸೂಚಿಸಿ ಆಗಿದೆ. 'ಗಚ್ಛತಿ ಇತಿ ಜಗತ್'. ಜಗದ್ರೂಪೀ ಈ ಸರ್‌ಪ ಸಂಕೇತವು ಉಂಟುಮಾಡುವ ದಿಗ್‌ಭ್ರಾಂತಿಯು, 'ಸರ್‌ಪ' ಸಂಕೇತದ ನಿಜಸ್ವರೂಪವು, ಇದು ಪೂರ್ತಿ ಮಾಟ! ಈ ದೃಷ್ಟಿಕೋನದಂತೆ ಸೂರ್ಯನೂ ಸರ್ಪವೇ ಸರಿ. ಘಟ (ದೇಹ : ಸ್ಥಲ)ಕ್ಕೇ ಬದ್ಧ ಅಥವಾ ಘಟದ

ಅಂಗವೇ ಆಗಿರುವ ಈ ನಾಗ : ಸರ್‌ಪವು ಉಭಯಲಿಂಗಿ ಆಗುತ್ತದೆ. ಆದಕಾರಣ ಇದು ಕಣ್>ಗಣ್ ಆಕೃತಿಯದೇ ಆಗುವ ಅನಿವಾರ್ಯತೆಯಿದೆ! ಅಹಿ : ವೃತ್ರ ಅಥವಾ ಭೌಮಾಸುರ : world serpent ಎಂಬ ಹಾಗಿನ ವ್ಯಕ್ತಿ ನಿರಪೇಕ್ಷ ಘಟಕ್ಕೆ ಸಂಬದ್ಧವಿಲ್ಲದ ಅಹಿ-ನಾಗ-ಸರ್ಪ ಎಂಬುದು ಕೇವಲ ಕವಿಕಲ್ಪನಾ ವಿಲಾಸವೇ ಸರಿ! ವ್ಯಕ್ತಿಯು ತನ್ನ ವೈಯಕ್ತಿಕ ಅನುಭವವನ್ನು ಅಮೂರ್ತ, ಸಾರ್ವಕಾಲಿಕ ವೈಶ್ವಕ (Universal) ಪಾತಳಿ ಮೇಲಣ ರೂಪಕವನ್ನಾಗಿಸುವಾಗ, ಇದು ಇನ್ನಷ್ಟು ಆತ್ಮವಂಚನೆಯ ಸಂಭ್ರಮಕ್ಕೆ ಕಾರಣವಾಗುತ್ತದೆ.

ಈ ನಾಗ : ಸರ್‌ಪವು ವ್ಯಕ್ತಿ ಸಾಪೇಕ್ಷವಿದೆ. ಈ ವೈಯಕ್ತಿಕ ನಾಗ : ಲಿಂಗಕ್ಕೆ ವ್ಯಕ್ತಿ 'ಮಾನವ'ನ ಪ್ರಜ್ಞಾ: ಮನಸ್ಸಿನ ಅಂಕೆಯಲ್ಲಿ ಇರಬೇಕಾದ ಪರಿಸ್ಥಿತಿಯು ಪ್ರಾಪ್ತವಾಗುತ್ತದೆ. ವಿಕಾಸತತ್ವದ ಪ್ರಕ್ರಿಯೆಯಲ್ಲಿ ಪ್ರಾದುರ್ಭವಿಸಿದ ಪ್ರಜ್ಞಾ ಮನಸ್‌ತತ್ವದ ಪಾತಳಿಯೊಡನೆ ಬರುವ ನಿಕಟಸಂಪರ್ಕದಲ್ಲಿ ಈ ನರ(ಳ)ನಿಗೆ 'ಮನುಜತ್ವವು' ಲಭಿಸುತ್ತದೆ. ಗ್ರೀಕ್‌ಸಂಸ್ಕೃತಿಯಲ್ಲಿ ತಲೆಯೆತ್ತಿದ್ದ 'Emancipation of individual' ಈ ಪ್ರವೃತ್ತಿಯ ಹಿನ್ನೆಲೆಯು, ಮೇಲಣ ವಿವರಣದ ಮೂಲಕ ಸ್ಪಷ್ಟವಾಗುತ್ತಿದೆ. 'ಮುಕ್ತಿ'ಗಾಗಿ ಒದ್ದಾಡುತ್ತಿದ್ದ ಈ 'ವ್ಯಕ್ತಿ' ಎಂದರೆ ನಾಗ : ಲಿಂಗವೇ ಹೊರತು ಬೇರೊಂದು ಆವುದೂ ಅಲ್ಲ! ಭೌಮಾಸುರಯೆಂದರೂ ಇದುವೆ, ಅಹಿವೃತ್ರ ಎಂದರೂ ಇದುವೆ! ಮೂಲತಃ ಕೇವಲ ವೈಯಕ್ತಿಕ ಸ್ವರೂಪದ್ದು ಆಗಿರುವ ಈ ಲೈಂಗಿಕ ಪ್ರಶ್ನೆಯನ್ನು ಸಾಮಾಜಿಕ ಸ್ವರೂಪದ ಸಾಮಾನ್ಯ : ಸಮಾನ ಪ್ರಶ್ನೆ ಎಂಬ ಹಾಗಿನ ಸಂಭ್ರಮವನ್ನು ನಿರ್ಮಿಸಲಾಗಿರುವ ಈ ಮೋಸವು ಯಾತಕ್ಕಾಗಿ? ಈ 'ಮನು'ಜ : ಮಾನವನನ್ನು, ತಾನು ನರ(ಳ)ನಾಗಿದ್ದೇನೆ, ಎಂಬ ಅರಿವಿಗೇ ಪ್ರಾಶಸ್ತ್ಯ-ಪ್ರಾಧಾನ್ಯವು ಪ್ರಾಪ್ತವಾಗುವುದಕ್ಕಾಗಿ! ವೇದದೊಳಗಿನ ಸಾಂಸ್ಕೃತಿಕ ಸ್ತರಗಳನ್ನು ಗಮನಿಸಿದಲ್ಲಿ, ಮನು-ಜನು ನರ(ಳ)ನಾಗಿ ಮಾರ್ಪಟ್ಟಿರುವುದಾಗಿ ನಿಃಸಂದಿಗ್ಧವಾಗಿ ಸಿದ್ಧವಾಗುತ್ತದೆ! ಆದರೆ, ನ-ಇತಿಹಾಸವಾದಿ ಭೌತಶಾಸ್ತ್ರಜ್ಞರು-ಡಾರ್ವಿನ್ ಪ್ರಭೃತಿಗಳು 'Barbarian : ನರ(ಳ)ನು ಮಾನವನಾಗಿದ್ದಾನೆ' ಎಂದು ಪ್ರತಿಪಾದಿಸಿದ್ದಾರೆ!

ಈ ಅಹಿ : ನಾಗ ಹನನ ಎಂದರೇನು?

ಇಂದ್ರನನ್ನು 'ಅಹಿ-ಜಿತ್' ಎನ್ನುವಲ್ಲಿ ಔಚಿತ್ಯವಿದೆಯೆ ಹೊರತು ಅಹಿ-ಹಂತಕನೆಂಬಲ್ಲಿ ಇಲ್ಲ! ಹನ್> ಹಂತಕನೆಂಬ ಮಾತು, ಇಂದ್ರಶತ್ರುಗಳ ಅತಿಶಯೋಕ್ತಿಯ ಮಾತು. ನಾಗ (ಸರ್ಪ)ಯಾಗ ಮಾಡಿ ಈ ಮೃತ್ಯುಶಕ್ತಿಯನ್ನೇ ಇಲ್ಲವಾಗಿಸುವ ಕ್ರೂರ ವಿನೋದವು ಮಹಾಭಾರತದಲ್ಲಿ ಇದೆ. ಸ್ವರ್ ಪಾತಳಿಯ ಧೀ : ಪ್ರಜ್ಞಾರೂಪೀ ಸೂರ್ಯನ ಪರ್ಯಾಯನು ಎಂಬ ಇಂದ್ರನು, ನೆಲದ ಮೇಲಣ ಅಹಿ : ನಾಗ : ಲಿಂಗನ ಹಂತಕನು ಎಂದರೇನು? ಇಲ್ಲಿ 'ಮನು-ಜ' ಮನು : ವೈವಸ್ವತನು ಪ್ರಜ್ಞಾರೂಪ ಸೂರ್ಯನ ಅಂಶವಾಗುತ್ತಿದ್ದಾನೆ. ಮಾನವನೊಳಗಿನ ಪ್ರಜ್ಞಾ : ಮನಸ್ಸು ಜಾಗೃತವಿದ್ದಲ್ಲಿ, ಈ ಮಾನವನು ತನ್ನ ನರ(ಳ)ತ್ವದ ಪ್ರಭಾವಕ್ಕೆ ಬಲಿ ಬೀಳಲು ಶಕ್ಯವಿಲ್ಲ. ನರ(ಳ) ಸಂಪ್ರದಾಯದ ಗೀತೆಯ 'ಭಗ'-ವಂತನು, 'ಸ್ಥಿತ (ಸ್ಥಗಿತ) ಪ್ರಜ್ಞನಾಗು' ಎಂದು ಬೋಧಿಸಿರುವ ಕಾರಣವೇನು ಮತ್ತೆ? ಅಹಿ-ಹನನದಲ್ಲಿ ಇಂದ್ರನಿಗೆ 'ತ್ರಿತ ಆಪ್ತ್ಯ'=ಮಾನವನು ನೆರವಾಗುತ್ತಾನೆ. ಎಂಬ ಈ ಸಾಂಕೇತಿಕತೆಯ ಸ್ಪಷ್ಟೀಕರಣವು ಹಿಂದೊಮ್ಮೆ ಬಂದಿದೆ. ಜಾಗ್ರತ ಪ್ರಜ್ಞ ಮನು-ಜನೇ ಇಲ್ಲಿ ಇಂದ್ರನ ಅಂಶವಾಗುತ್ತಿದ್ದಾನೆ.

ಟಿಪ್ಪಣಿಗಳು

೧. Arnost Casirer; ***Philosophy of Symbolic Forms*** : Vol I Language Vol II Myth
೨. H.R. Ellis Davidson,1974; ***Gods and myths of Northern Europe*** ; A Pelican Original P 19
೩. ***Ibid*** p.75
೪. ***Ibid*** p. 221
೫. All men knew that the old (spirits) were past masters at spells to deceive the eye and the mind. (page. 26). ಶ್ರೀಮತಿ ಎಲ್ಲಿಸರ ಗ್ರಂಥದಲ್ಲಿ in the sagas, frequently appears the one eyed strange the ancient One eyed-god' ಅಲ್ಲದೇ, ಇವನು All Father ಎಂಬ ಸಂಗತಿಯೂ ಉಂಟು.

ಪ್ರಸ್ತಾಪ

(ತಾತ್ವಿಕ ಹಿನ್ನೆಲೆ)

"ಈ 'ಮನು' ಜನು 'ಪುರಿ-ಶಯ' : ಪುರುಷ ತತ್ವದ ಆರಾಧಕನಾಗುವ ಹಂತದಿಂದ ಇಂದ್ರಿಯಗಳ ಪಾತಳಿಯ ಮೇಲೆ ತಳ್ಳಲ್ಪಡುತ್ತಿದ್ದಾನೆ."

ಈ ನಿಷ್ಕರ್ಷವನ್ನೇ ಮಡಿಕೆರೆಯ ಅಖಿಲ ಭಾರತೀಯ ಕನ್ನಡ ಸಾಹಿತ್ಯ ಸಮ್ಮೇಳನದ ವಿರಾಟ್ ಸಭೆಯಲ್ಲಿ, ಪ್ರಾಜ್ಞರ ಕೂಲಂಕಷ ವಿಮರ್ಶೆಗಾಗಿ ಅರುಹಿದ್ದಾಯಿತು. ಇಂದ್ರಿಯಗಳನ್ನೇ 'ದೇವರು' ಎಂದು ಆರಾಧಿಸುವ ಈ ಹಂತದಲ್ಲಿ ಈ ನರ(ಳ)ನು ಪ್ರಾಣಲಿಂಗ ಚೇತಸದ ಪಾತಳಿಯ ಮೇಲೆ ಬಂದಿರುವುದು ನಿಶ್ಚಿತವಿದೆ. ಇದು ನಿಜವಿದ್ದರೆ ಈ ನರ(ಲ)ನು ಇಂದ್ರಿಯಗಳ (Empirical) ಪಾತಳಿಯ ಮೇಲೆ ತಳ್ಳಲ್ಪಡುವ ಮೊದಲು ಇವನು ಇದ್ದ ಪಾತಳಿಯು ಯಾವುದು? ಎಂಬ ಪ್ರಶ್ನೆ ಏಳುತ್ತದೆ.

ಈ 'ಮಾನವ' ಪ್ರಾದುರ್ಭಾವವು, ಇಂದ್ರಿಯಗಳ ಪಾತಳಿಯ ಮೇಲೆ, ಪ್ರಾಣಲೋಕದ ಪ್ರಾಣಿ-ಪಶುವರ್ಗದ-ಹಂತದಲ್ಲಿಯೇ ಆಗಿದ್ದರೆ, ಈ ಮಾನವಭಾಷೆ, ಸಂಸ್ಕೃತಿಯು ಮೈದೋರಲು ಶಕ್ಯವೇ ಇದ್ದಿಲ್ಲ. ಈ ಕಾರಣದಿಂದಲೇ, ಮಾನವಶಾಸ್ತ್ರಜ್ಞ ಡಾ. ಎ. ಎಲ್. ಕ್ರೋಬರನು, ಈ ಮಾನವ ಪ್ರಾದುರ್ಭಾವವಾದದ್ದು, ಸಂಸ್ಕೃತಿಯು ಆಕಾರ ಪಡೆಯತೊಡಗಿದ್ದು, ಈ ಪ್ರಾಣಲೋಕದ-ಇಂದ್ರಿಯಗಳ ಪಾತಳಿಯ ಆಚೆಗೆ; Super-organic level ಮೇಲೆ ಎಂದಿದ್ದಾಯಿತ್ತು. ಡಾ. ಜ್ಯೂಲಿಯನ್ ಹಕ್ಸ್ಲೆ, ಡಾ. ಪಿರ್ರೆ ಟೈಲಾರ್ಡ ಡಿ. ಚಾರ್ಡಿನ್ ಇವರಂತಹ ಜೀವವಿಜ್ಞಾನಿಗಳು 'Noosphere' ಇದುವೆ ಮಾನವ ಭಾಷೆ, ಸಂಸ್ಕೃತಿ, ಶಾಸ್ತ್ರಾದಿಗಳ ಪ್ರೇರಣಾಕೇಂದ್ರ ಎಂಬ ನಿಷ್ಕರ್ಷಕ್ಕೆ ತಲುಪಿದ್ದಾಯಿತು. ಆದರೆ, ಇಲ್ಲಿ ಒಂದು ಪ್ರಶ್ನೆ; ಈ 'ಪುರಿ-ಶಯ : ಪುರುಷ' ತತ್ವದ ಆರಾಧನೆಯು, "ಮಾನವ ಸಂಸ್ಕೃತಿಯ ದಿಕ್ಕಿಗೆ ವಿಪರೀತ ತಿರುವು ಕೊಟ್ಟಿರುವ ಯಾತು-ಜಾದು ಕೃತ್ಯ" ಎಂದಿರುವಲ್ಲಿ ಈ ಸಂಸ್ಕೃತಿಗೆ 'ದಿಕ್ಕು'-'ದಾರಿ' ಇದೆಯೆ? ಎಂಬ ಸಂದೇಹಕ್ಕೆ ಅವಕಾಶವಿದೆ. ಅಲ್ಲದೆ, ಸಂಸ್ಕೃತಿಗೆ ದಿಕ್ಕು-ದಾರಿ ಉಂಟು ಎಂದರೂ ಇದನ್ನು ಗ್ರಹಿಸಿಕೊಳ್ಳಲು ಹೇಗೆ ಸಾಧ್ಯ?

ಭಾಷೆ ಹಾಗೂ ಸಂಸ್ಕೃತಿ ಇವೆರಡರಲ್ಲಿ ಅನ್ಯೋನ್ಯವಿರುತ್ತದೆ. ಸಾಂಸ್ಕೃತಿಕ ಹಿನ್ನೆಲೆಯಿಲ್ಲದೆ ಭಾಷೆ ಮೈದೋರಲಾರದು. ಭಾಷಾ-ಮಾಧ್ಯಮದ ಅಭಾವದಲ್ಲಿ ಸಂಸ್ಕೃತಿಗೆ ಆಕಾರ ಬರಲಾರದು. ಈ ಮಾನವನಿಗೆ ಮನು-ಜನೆಂಬ ಈ ಪ್ರತಿಶಬ್ದವು ಐತಿಹಾಸಿಕ ಮಹತ್ವದ್ದು ಆಗಿದೆ. ವಿಕಾಸತತ್ವದ ಪ್ರಕ್ರಿಯೆಯಲ್ಲಿ, ಪ್ರಜ್ಞೆಯ ಅಂಗವಾದ ಮನಸ್‌ತತ್ವದ ಪಾತಳಿಯ ಪ್ರಾದುರ್ಭಾವವು ಆಗುತ್ತದೆ. ಈ ಮನಸ್ಸಿನ ಅನುಸಂಧಾನದಲ್ಲಿ ನರ(ಳ)ನು 'ಮನು'ಜನಾಗಿದ್ದಾನೆ. "ಕೊಂಬು" ಧರಿಸಿ ಪಶುಶಕ್ತಿಯಲ್ಲಿ ತಾನೂ ಅವುಗಳಿಗಿಂತ ಕಡಿಮೆಯಿಲ್ಲ ಎಂಬ

ಪ್ರದರ್ಶನದಲ್ಲಿ ತೊಡಗಿದ್ದ, ಈ 'ಶೃಂಗಿ' : ನರನು, ಅದೇ ತಾನೆ ಪ್ರಾದುರ್ಭವಿಸಿದ್ದ ಪ್ರಜ್ಞಾ: ಪ್ರಕಾಶದ ಅಂಗವಾದ ಮನಸ್‌ತತ್ವದ ಸ್ವರ್‌ಪಾತಳಿಯೊಡನೆ ನಿಕಟ ಸಂಪರ್ಕದಲ್ಲಿ ಬರುತ್ತಾನೆ. ಇದರಿಂದಾಗಿ ಇಂದ್ರಿಯಗಳ ಪಾತಳಿಯ ಸಂಪರ್ಕವು ಗೌಣವಾಗಿ, ಇವನು ಪ್ರಜ್ಞೆಯ ಅಂಗವಾದ ಮನಸ್ಸಿನ ಪ್ರೇರಣೆಯ ಪ್ರಭಾವಕ್ಕೆ ಒಳಗಾಗುತ್ತಾನೆ, 'ಮನು'-ಜನಾಗುತ್ತಾನೆ.

ಜಾತವೇದ ಅಗ್ನಿತತ್ವದ ಪರ್ಯಾಯವೆನಿಸಿರುವ ಮನು: ವೈವಸ್ವತನ ಯುಗವು-ವೈವಸ್ವತ ಮನ್ವಂತರವು ಉದಯವಾಗುತ್ತದೆ. ಮಾನವ ಭಾಷೆಯೊಳಗಿನ ಅಭಿಜಾತ ಅಮೋಘ ಅಂತರಾರ್ಥದ ಸಂಕೇತ-ಪ್ರತಿಮೆಗಳು-ಇವನು ನಡೆದುಬಂದ ದಾರಿಯನ್ನು ಸೂಚಿಸಬಲ್ಲ ಸಂಕೇತಗಳು-ಈಗಲೂ ಅಲ್ಲಿ ಇಲ್ಲಿ ಒಮ್ಮೊಮ್ಮೆ ಫಕ್ಕನೆ ಕಣ್ಮನವನ್ನು ಸೆಳೆಯುತ್ತವೆ. ಋಗ್ವೇದದೊಳಗಿನ 'ನಾಗ' ಪ್ರತಿಮೆಯ ಅನ್ವೇಷಣೆಯ ಸಂದರ್ಭದಲ್ಲಿ 'ಆಶಾ' ಎಂಬ ಪಾರಿಭಾಷಿಕ ಪದವು ನನ್ನನ್ನು ತುಂಬ ಬೆರಗುಗೊಳಿಸಿತು! ಸಂಸ್ಕೃತಿಯು ಮೈದೋರುವ 'ಸಮಯ' ಸೂಚಕ ಅರ್ಥವು ಇಲ್ಲಿ ಹುದುಗಿದೆ.

"ದೇವಾನಾಂ ಯುಗೇ ಪ್ರಥಮೇ....ತತ್ ಆಶಾ ಅನು ಅಜಾಯಂತ"

ದೇವರುಗಳ ಯುಗದ ಆದಿಯಲ್ಲಿ, ತತ್ (ಆ) 'ಆಶಾ' ಒಡನೆಯೆ (ಅನು) ಸ್ಫುರಿಸಿತು! ಕುದುರಿತು! ಈ 'ಆಶಾ' ಪದಕ್ಕೆ ಸಾಯಣರು-'ದಿಶಾ' ಎಂದು ಅರ್ಥ ಹೇಳಿದ್ದಾರೆ. ಇದು, ಪಾಶ್ಚಾತ್ಯ ಪರಿಭಾಷೆಯ Ray of Hope ಪದದ ತೂಕದ್ದೇ ಇದೆ! ಈ ಆಶಾಕಿರಣ, ಅಂದಿನವರಿಗೆ ಉದ್ದಿಷ್ಟ ಸಿದ್ಧಿಸೂಚಕ ಪ್ರಕಾಶಕಿರಣ, ಕಂಡದ್ದು ಯಾವ ದಿಕ್ಕಿನಲ್ಲಿ? ಇದು ಪೂರ್ವ ದಿಕ್ಕೇ ಇರಬಲ್ಲುದು: ಪಶ್ಚಿಮವಲ್ಲ. 'ದೇವನಾಂ ಯುಗ'ದ ಈ 'ದೇವರು' ಎಂದರೆ ಯಾರು? ಪುರಾತನಕಾಲದಲ್ಲಿ 'ದೇವಾಸುರರು' ಸ್ಪರ್ಧಿಸುತ್ತಿದ್ದರು' ಎಂಬ ಸಂಘರ್ಷಸೂಚಕ ಉಲ್ಲೇಖಗಳು ವೇದ, ಉಪನಿಷದಾದಿ ಗ್ರಂಥಗಳಲ್ಲಿ ಕಣ್ಣಿಗೆ ಬೀಳುತ್ತವೆ. ಆದರೆ 'ದೇವರು ಯಾರು?' 'ಅಸುರರು ಯಾರು?' ಇಂದು ವಿಂಗಡಿಸಿ ಅರಿಯುವುದಕ್ಕೆ ಆಗದ ಗೋಳಾಡಿದ್ದಾಗಿದೆ. 'ಪ್ರಕಾಶ' ದೇವರಿಗೆ ಪ್ರಿಯ; 'ಕತ್ತಲು'-'ರಾತ್ರಿ' ಅಸುರರಿಗೆ ಅಚ್ಚು-ಮೆಚ್ಚು, ಎಂಬ ಪರಂಪರಾಪೂತ ಸೂತ್ರವು ಮಾರ್ಗದರ್ಶಕವಾಗತೊಡಗಿದೆ. ಪ್ರಸ್ತುತ 'ದೇವರ ಯುಗ' ಎಂಬ ಈ ಉಲ್ಲೇಖದಲ್ಲಿ ಈ 'ದೇವರು' 'ದಿವ್'-ಹೊಳೆ, ಪ್ರಕಾಶಿಸು; ದಿವ್-ದೇವ; 'ದಿವಾ' ಹಗಲು ಈ ಅರ್ಥಶಕ್ತಿಯಿಂದಾಗಿ, 'ದೇವಾನಾಂ ಯುಗೇ ಪ್ರತಿಮೇ' ಇದು ಪೂರ್ವ-ಪ್ರಾಚೀದಿಶಾ ಮಾರ್ಗದರ್ಶಕವಾದ ಮನು : ವೈವಸ್ವತನ ಯುಗಾರಂಭದ ಸೂಚಕವೇ ಇರಬೇಕು ಎಂದು ಬಗೆಯಬೇಕಾಗುತ್ತದೆ. ಇಲ್ಲಿ ಒಂದು ಚಮತ್ಕಾರ ನೋಡಿ : 'ಆಶಾ' ಈ ಅಮೋಘ ಅರ್ಥದ ಶಬ್ದಸಂಕೇತವು, ತೀರ ವಿಪರೀತಾರ್ಥದ್ದು ಆಗಿರುವಲ್ಲಿ ಯಾರ ಕೈವಾಡವಿರಬಹುದು? 'ಆಶಾಕಿರಣ'ವನ್ನು ಅನುಸರಿಸಿ ಪ್ರಜ್ಞೆಯ ಅಂಗವಾದ ಮನಸ್ಸಿಗೆ ಸಾಕ್ಷಿಯಾಗಿ, ಸನ್ಮಾರ್ಗದಲ್ಲಿ ಸಾಗುವುದು, ಇದು ದೇವ : ಮನು-ಜರ ಮನೋವೃತ್ತಿಯ ಲಕ್ಷಣ. ಆದರೆ, ನಾನಾ ಕುತಂತ್ರಗಳಿಂದ ಮನು-ವಂಶದ ಆಶಾ-ತಂತುವನ್ನೇ ಅಸುರರು ನಷ್ಟಪಡಿಸಿರುವುದಾಗಿ ಈಗ ಬಯಲಿಗೆ ಬರತೊಡಗಿದೆ.

ಈ ಮಾನವನು 'ಪುರಿ-ಶಯ' : ಪುರುಷನ ಆರಾಧಕನಾಗುವಾಗ, ಇವನು ಆಶಾ : ದಿಶಾ ಪಾತಳಿಯನ್ನು ತೊರೆದು 'ಶೃಂಗಿ' ನರನಾಗುವ ದಿಕ್ಕಿಗೆ ಹೊರಡುವಾಗ ಕತ್ತಲನ್ನು ಹುಡುಕಿಕೊಂಡೇ ಸಾಗಿರಬೇಕಷ್ಟೆ? ಶ್ರೀಕೃಷ್ಣನ ಗೀತೆಯಲ್ಲಿಯೇ 'ಆಶಾ' ಪ್ರತಿಮಾಭಂಜನವಾಗಿರಬೇಕು? 'ಆಶಾಪಾಶ ಶತೈಃ ಬದ್ಧಃ' ಮಾನವರ ಆಶಾ-ತಂತುವನ್ನು ನಷ್ಟಪಡಿಸಿರುವ ಈ 'ಭಗ'ವಂತ ಪುರಿ-ಶಯ-ಪುರುಷ ಉತ್-ತಮಃ ಅತ್ವ-ತ್ಥ : ವೃಕ್ಷರೂಪನು, ಇವನು ಲಿಂಗದೇವ ಅಥವಾ ಅಸು-ರ : ಪ್ರಾಣದೇವನಾಗುತ್ತಿದ್ದಾನೆ. ಪುರುಷ; ಪುರಿ-ಶಯ ಉಪಾಸನೆಯು : ಪುರುಷ ಉತ್‌ತಮ ದಕ್ಷ ನಿಗುರಿನಿಂತ ವೃಕ್ಷರೂಪದ, ಆರಾಧನೆಯಲ್ಲಿ ಈ ಮನು-ಜ; ದೇವವರ್ಗವೂ ಅ-ಮಾನವ ವ್ಯಕ್ತಿ : ನರ (ಳ) ವರ್ಗವೇ ಆಗುತ್ತದೆ. ಬೃಹದಾರಣ್ಯಕದಲ್ಲಿಯ ಒಂದು ಉಲ್ಲೇಖವು ತುಂಬ ಮಾರ್ಮಿಕವಿದೆ.[೧] ಈ ಮಾನವನು ಮನು : ವೈವಸ್ವತನನ್ನು ಅಂತರ್ಯಾಮಿಯೆಂಬ ನಿಷ್ಠೆಯಿಂದ ಜೀವನದ ಪಾತಳಿಯ ಮೇಲೆ ಇದ್ದಕಾಲವು ಹಿಂದೆ ಬಿದ್ದ ಚಿತ್ರವು, ಬೃಹದಾರಣ್ಯಕದ ಈ ಉಲ್ಲೇಖದಲ್ಲಿ ಪ್ರತಿಬಿಂಬಿತವಿದೆ.

ಈ ಹಂತದಲ್ಲಿ 'ಮನಃ ಪಿತರಃ' (ಮನುಜನ ಮನಸ್ಸು- ಈ (ತಂದೆ ಸ್ವಗಸ್ಥ) ಪಿತೃವಾಗುತ್ತಾನೆ.) ಸ್ವರೂಪದ್ದು ಆಯ್ತು! ಮನು : ವೈವಸ್ವತನು ಕಾಣೆಯಾದದ್ದು ಸ್ಪಷ್ಟವಿದೆ. ಪ್ರಾಣೋ ಮನುಷ್ಯಾಃ! ಪ್ರಜ್ಞೆ : ಮನಸ್ಸು ಸ್ಥಾನ ಭ್ರಷ್ಟವಾಗಿ, ಇವನು ನರ(ಳ) ಶ್ರುಂಗಿಯಾಗುವಾಗ 'ಪ್ರಾಣ' 'ಮನುಷ್ಯ' ಎನಿಸಲೇಬೇಕಷ್ಟೆ? ಆ 'ದೇವನಾಂ ಯುಗದ' ಮನು-ಜರು ಎಲ್ಲಿ ಹೋದರು? 'ಪಿತರೋ ಮನುಷ್ಯಾಃ ಏವ'! ಈ ಹಿನ್ನೆಲೆಯಲ್ಲಿ 'ದೇವರು' ಯಾರು? 'ವಾಕ್' ಏವ ದೇವಾಃ' ಎಂದು ಉಪನಿಷತ್ತು ಹೇಳುತ್ತದೆ. ಮಾತು-ಉಸಿರು ದೇವರು ಆಗುವಾಗ ಕವಿ, ವಾದಿ, ವಾಗ್ಮಿ, ಮಾತಾಳಿ, ದೇಭ, ಲೇಖಕ.....ಇವರೇ ದೇವ ಮಾನವರಾದರೆ ಸೋಜಿಗವೇನು? ಈ ವಿಶ್ಲೇಷಣದಲ್ಲಿ, ಮನು-ಜ ಯಾರು? ಮತ್ತು ನರ ಯಾರು? ಇದು ಹೊರವಡುತ್ತದೆ. ಪ್ರಜ್ಞಾ : ಪ್ರಕಾಶತತ್ವದ ಮನಃಶಕ್ತಿಯ 'ಮನು'-ಜ, ಅತ್ಯಂತ ಪ್ರಾಮಾಣಿಕತೆಯ ಬಲದಿಂದಾಗಿ ಆ ಪ್ರಮಾಣದಲ್ಲಿ 'ದೇವತ್ವ' ಪಡೆಯುತ್ತಾನೆ. 'ಆತ್ಮನ್! ಬ್ರಹ್ಮನ್' ಆರಾಧಕನು ಪುರಿ-ಶಯನ ಭಕ್ತನಾಗಿ, ಆ ಪ್ರಮಾಣದಲ್ಲಿ ಅಸುರನಾಗುವುದು ನಿಶ್ಚಿತವಾಗುತ್ತದೆ.

ಪುರಾತನರು ಈ ಪ್ರಜ್ಞಾ : ಪ್ರಕಾಶ ಹಾಗೂ ಪ್ರಾಣಲಿಂಗ ಚೇತಸ ಬುದ್ಧಿಯ ಕತ್ತಲು: ತಮಸ್ಸಿನ ಅಂತಃಶಕ್ತಿಯ ಪ್ರಭಾವವನ್ನು ಮನಗಂಡವರಾಗಿದ್ದರು, ಎಂಬುದನ್ನು ನಿದರ್ಶನಕ್ಕೆ ತರುವ ಉಲ್ಲೇಖಗಳು ದೊರೆಯುತ್ತವೆ. 'ಸೂರ್ಯ'ಶಕ್ತಿಯು ಮನು-ಜನನ್ನು ರೂಪಿಸುವ ಪ್ರಭಾವದ್ದು ಇರುವಂತೆ ಚಾಂದ್ರಶಕ್ತಿ, ಲೈಂಗಿಕಶಕ್ತಿ ಪ್ರಚೋದಕ ತಮಸ್ಸಿನ ಪ್ರಭಾವದಲ್ಲಿದೆ. ಮಾನವರನ್ನು ಅಮಾನವರನ್ನು-ಅಸುರರನ್ನಾಗಿಸುತ್ತದೆ.

ದಿವಾ ದೇವಾನ್ ಅಸೃಜತ್, ನಕ್ತಂ ಅಸುರಾನ್।
ಯತ್ ದಿವಾ ದೇವಾನ್ ಅಜತ್ ತತ್ ದೇವಾನಾಂ ದೇವತ್ವಮ್।
ಯತ್ ಅ-ಸೂರ್ಯಂ.....ತತ್ ಅಸುರಾಣಾಂ ಅಸುರತ್ವಮ್।

'ಅ-ಸೂರ್ಯೇ ತಮಸಿ ವಾವ್ಯಧಾನಮ್-' ಇದು ಅಹಿ: ವೃತ್ರನ ಸ್ವಭಾವ; ಅಹಿ=ನಾಗ-ಚಂದ್ರನು ತಮಸ್ಸಿನಲ್ಲಿ ನಿಗುರಿ ನಿಲ್ಲುವ ಪ್ರವೃತ್ತಿಯವನು.[೩]

ಪುರಿ-ಶಯ : ಪುರುಷ

ಯಾತು ಎಂದರೆ ಏನು? ಕ್ಷುದ್ರ : ವಿಶಿಷ್ಟವನ್ನು (Particular), ವೈಶ್ವಕ (Universal) ಹಂತಕ್ಕೆ ಒಯ್ದು, 'ಇದು ನಿಜ', 'ವಾಸ್ತವ' ಎಂಬ ಹಾಗಿನ ನಂಬುಗೆಯನ್ನು ಹುಟ್ಟಿಸುವ ಶಕ್ತಿಯನ್ನು-ಈ ಸಂದರ್ಭದಲ್ಲಿ-ಸಾಹಿತ್ಯಿಕ ಮಾಯಾವೀ ಶಕ್ತಿಯನ್ನು-'ಯಾತು' ಎಂದು ಕರೆಯುತ್ತೇವೆ.* ಈ ಯಾತು, ವೈಶ್ವಕ: ಪ್ರಕಾಶತತ್ತ್ವವನ್ನು ವಿಶಿಷ್ಟದ ಪಾತಳಿಗೆ ತಂದು ನಿಲ್ಲಿಸುವಲ್ಲಿಯೂ ಉಂಟು. ಇಂತಹ ಅಭಿಚಾರ ಕೃತ್ಯಕ್ಕಾಗಿ ವ್ಯಕ್ತಿಯ ಕೂದಲು, ಉಗುರು, ಬಟ್ಟೆಯ ತಂಡು, ಬರಿ ಹೆಸರು, ಭಾವಚಿತ್ರ ಇಂತಹ ವಸ್ತುಗಳನ್ನು ಯೋಜಿಸುವ ವಾಡಿಕೆ ಇದೆ. ರಾಬರ್ಟ್ ಗ್ರೇವ್ಸ 'White Goddess' ಗ್ರಂಥದಲ್ಲಿ, ಮಾಟಕ್ಕಾಗಿ (Magic) ಯುವತಿಯ ಮುಟ್ಟನ್ನು ಯೋಜಿಸುವ ವಾಡಿಕೆಯಿದ್ದುದನ್ನು ಅಡಿಟಿಪ್ಪಣಿಯಲ್ಲಿ ನಮೂದಿಸಿದ್ದಾನೆ. ಉದಾ : ಈ ಋಗ್ವೇದದೊಳಗಿನ ವಸಿಷ್ಠ : ದಕ್ಷಿಣಃ ಕಪರ್ದಃ ಈ ಪ್ರತೀಕ ನಿರ್ಮಿತಿಯಲ್ಲಿ ದಕ್ಷಿಣ (ಕೆಳಭಾಗದ) ಕಪರ್ದಃ ಕೂದಲನ್ನು ಯೋಜಿಸಲಾಗಿದೆ! ಇದು: ಅಭಾವವನ್ನೇ 'ಸ್ಥಾಯೀ' ಎಂದು ನಂಬಿಸಲಾಗುವಲ್ಲಿ ಇಂಥ ಯಾತು-ಜಾದು ಯೋಜಿಸಲಾಗುತ್ತದೆ.

'ವಸಿಷ್ಠ' ಇದು ಶ್ರೇಷ್ಠ-ವರಿಷ್ಠ.....ಎಂಬ ಬಗೆಯ ವಿಶೇಷಣ ಸ್ವರೂಪ ಅರ್ಥದ ಪದವು. ವಿಶೇಷ್ಯವಿಲ್ಲದೆ ವಿಶೇಷಣವು ಅರ್ಥವಿಹೀನವಿರುತ್ತದೆ. ಆದರೂ ರೂಢಿಯ ಬಲದಿಂದ 'ದೊಡ್ಡ ಅಪ್ಪ' ಅರ್ಥದಾಯಕವಾಗುತ್ತದೆ.

---

* ಈ ಅಂಶವನ್ನು ಸ್ವಲ್ಪ ಸ್ಪಷ್ಟಪಡಿಸಬೇಕು. 'ಯಾತು' ಎಂಬುದಕ್ಕೆ 'ಜಾದು' ಎಂದು ಅರ್ಥ ಉಂಟು. ಇದು ಭೌತಿಕವಾಗಿ ಆಗುವ ಕ್ರಿಯೆ ಒಂದು ಕಡೆಯಾದರೆ; ಭಾಷಿಕವಾಗಿ ಆಗುವ ಕ್ರಿಯೆ ಮತ್ತೊಂದು ಕಡೆ. ನಾಲ್ಕನೆಯ ವೇದವಾದ ಅಥರ್ವಣದಲ್ಲಿ ಈ ಬಗೆಯ ಯಾತುಸೂಕ್ತಗಳಿವೆ. ಅವು ನೇರವಾಗಿ 'ಭೌತಿಕ' ನೆಲೆಯ ಕ್ರಿಯೆಗಳಾಗಿವೆ. ಆದರೆ, ಭಾಷಿಕಯಾತು ಇನ್ನೊಂದು ಬಗೆಯಾಗಿದೆ. ಅದು ಸಾಂಸತಿಕ ನೆಲೆಯಲ್ಲಿ ತಿರುವು-ಮುರುವು ಆಗಿಸುವ ಕ್ರಿಯೆಗೆ ಪ್ರೇರಣೆಯಾಗಿ ನಿಲ್ಲುತ್ತದೆ (ಸಂ)

'ದಕ್ಷಿಣ ಕಪರ್ದ' ಇಲ್ಲಿಯ 'ಕಪರ್ದ'-ಕವಡೆ ಇದಕ್ಕೆ ಇಂದು ನೇರ ಅರ್ಥವಾಗುವುದಿಲ್ಲ. ಕವಡೆಗಳು, ಲೆತ್ತ-ನೆತ್ತದಂತೆ ಮಾಟದ ಆಟವೇ ಆಗಿವೆ. ಲೆತ್ತ-ನೆತ್ತ-ನೇತ್ರದ ಆಟ ಎಂದರೇನು? ಮೂಲಾರ್ಥ-ಮೂಲವಾಡಿಕೆ ಮರೆತುಹೋದ, ಬಳಿಕ ಇದರ ನೇರ ಅರ್ಥವಾಗುವುದಿಲ್ಲ. ಪಂಪಭಾರತದೊಳಗಿನ 'ನೆತ್ತಮಂ ಆಡಿದರಾರ್?' ಎಂಬ ಈ ಉಲ್ಲೇಖದಂತೆ ಇದು ಸ್ತ್ರೀ-ಪುರುಷ ಇಬ್ಬರ ಆಟವಾಗಿದೆ. ಕವಡೆಯ ಆಟವೂ, ಲೆತ್ತದಂತೆ 'ಯಕ್ಷ' ರಾತ್ರಿಯ ಕ್ರೀಡೆಯಾಗಿದೆ. ಈಗ ಕವಡೆ/ಪಗಡೆಯ ಆಟವು ಇಬ್ಬರದೇ ಉಳಿಯದೆ, ಹಲವರ ಆಟವಾಗಿದೆ.

ಕವಡೆಗಳ ಸರ ಧರಿಸುವ ವಾಡಿಕೆ ಜೋಗವ್ವ, ಜೋಗಪ್ಪಗಳೆಂಬ ದೇವಿಯ ಭಕ್ತರಲ್ಲಿ ಇಂದಿಗೂ ಉಂಟು. ಕವಡೆಗೂ ದೇವಿಗೂ ಏನು ಸಂಬಂಧ? ಮಾನವಶಾಸ್ತ್ರಜ್ಞ ಡಾ. ಮರ್ಸಿಯಾ ಇಲಿಯದೆಯ ಗ್ರಂಥದ ಆಧಾರದಿಂದ ಸ್ವಲ್ಪ ಸ್ಪಷ್ಟೀಕರಣವು, ಹಿಂದೊಮ್ಮೆ ಬಂದಿದೆ. ಕಪರ್ದ-ಕವಡೆ ಇದು ಮೂಲದಲ್ಲಿ ಸ್ತ್ರೀಯೋನಿಸೂಚಕ ಸಂಕೇತ. ಕವಡೆಯ ಯೋನಿಸೂಚಕ ಒಂದು ಮಗ್ಗುಲನ್ನು ಮೇಲೆ ಕಾಣುವಂತೆ ಆದಿಶಕ್ತಿಯ ಮಣ್ಣಿನ ಪ್ರತಿಮೆಗೆ ತಕ್ಕ ಸ್ಥಳದಲ್ಲಿ ಹಚ್ಚುತ್ತಿದ್ದರು.

ಆದರೆ, ವಸಿಷ್ಠ-ಗಣ್ಡಸಿಗೆ 'ಕಪರ್ದ' ಹೇಗೆ ಸರಿಹೋಗುತ್ತದೆ? ಕವಡೆಯು ಯೋನಿಸ್ಥಾನದ ಕೂದಲನ್ನು ಸೂಚಿಸುವ ಗೆರೆಗಳನ್ನುಳ್ಳದ್ದು ಇರುತ್ತದೆ. ಆದರೂ ಇದು 'ಯೋನಿ'ಯ ಸಂಕೇತದ ಔಚಿತ್ಯವುಳ್ಳದ್ದೇ. ಕಪರ್ದ-ಕವಡೆ ಈ ಸಂಕೇತವು ಮೊದಲು ಮಂಡಲ (ಯೋನಿ) ಆರಾಧನೆಯಲ್ಲಿ-ಬಳಿಕ-ಪುರಿ-ಶಯ : ಪುರುಷನ ಹೆಸರಿನಲ್ಲಿಯೂ ಆ ಬಳಿಕ ರೂಢಿಗೆ ಬಂದಿದೆ. ಇದನ್ನು ನಿದರ್ಶನಕ್ಕೆ ತರುವ ಅಮೋಘ ಸಂಕೇತಗಳು ಇಂದಿನಲ್ಲೂ ಉಂಟು! She Moon 'ಚಂದ್ರಾ' ಈ ಪ್ರತಿಮೆಯಲ್ಲಿಯೇ ಈ ಕಣ್ (೦) ಇದರಲ್ಲಿಯೇ ಗಣ್ ಸಹ ಉಂಟು ಎಂದು ಆರೋಪಿಸಲಾಗುತ್ತಿದೆ! ಸ್ಥಲ : ಬಯಲು (೦) ಮಾತ್ರ ಉಂಟು! ಪಾಶ್ಚಾತ್ಯ Space-time 'ಸ್ಥಲ'ವು ಗತಿಯಲ್ಲಿ ಇರುವಾಗ, ಅದು 'ಕಾಲ' ಎಂಬ ಭ್ರಾಂತಿ ತರುತ್ತದೆ. 'ಸ್ಥಲ'ಕ್ಕೆ ಸ್ವಯಂ ಪ್ರಕಾಶವಿಲ್ಲ. ನೆಳಲು ಇರುವ ಈ 'ಸ್ಥಲ'ವು ಗತಿಯಲ್ಲಿ ವೃತ್ತಾಕೃತಿಯಾಗಿ (೦) ಕಾಣುತ್ತದೆ. 'ಕಾಲಿ'=ಕರಿಮಾಯಿ ಸಾಕ್ಷಾತ್ಕಾರ; ಇವಳು ನಿತ್ಯ ಕುಮಾರಿಯಂತೆ, ಇದೇ ಕೃಷ್ಣವಿವರ ! ಗಣ್ಡು ಕಲ್ಪನೆ ಎರಡನೆಯ ಹಂತ, ಇದಕ್ಕೆ ಸ್ಥಲದಿಂದ ಬೇರೆಯಾದ ಸ್ಥಾನವಿಲ್ಲ.

ಬ್ರಹ್ಮಕುಮಾರಿ=ಪ್ರಜಾಪತಿ! ಸುಳ್ಳನ್ನೇ ಖರೆ ಎಂಬ ನಂಬುಗೆ ಹುಟ್ಟಿಸುತ್ತಿರುವ ಯಾತು ಕೃತ್ಯವಿದು; ಉಭಯಲಿಂಗೀ ಹೆಸರು. ಗಣ್ಣಿಗೆ ಕಣ್ಣಿನ ಹೊರಗೆ ಸ್ವತಂತ್ರ ಸ್ಥಲವೇ ಇಲ್ಲ. 'ಪುರಿ-ಶಯ : ಪುರುಷ' ಈ ಯಾತು-ಜಾದು ವಿವರಿಸುವ ಸಂದರ್ಭದಲ್ಲಿ, ಕಪರ್ದ-ಕವಡೆ ಈ ಸಾಂಕೇತಿಕ ಪ್ರತಿಮೆಯು ತುಂಬ ಪ್ರಯೋಜನಕಾರಿಯಾಗಿದೆ. 'ಪುರಿ' 'ಕಪರ್ದ' ಕ್ಷುಲ್ಲಕ ಕೇಶ! ಈ ಭಾನಾಮತಿಯು ಇಡೀ ಕಥೆಯನ್ನು ಬೆಳಕಿಗೆ ತರುತ್ತಿದೆ! ಕಪರ್ದಿ=ರುದ್ರ=ಗಣ್ಡು ದೇವರಿಗೆ ಸ್ಥಲದ ಸಂದರ್ಭದಿಂದ ಮಾತ್ರ ಅಸ್ತಿತ್ವ! 'ಉಮಾಸಹಿತ' ಎನ್ನುವ ಕಾರಣವೇನು? 'ಗರ್ಭಗುಡಿ' ಇಲ್ಲದ್ದು ದೇವಾಲಯವಲ್ಲ. ಆದಕಾರಣ, 'ದೇಹವೇ ದೇಗುಲ' ಎಂಬಲ್ಲಿ ಗಣ್ಡಿನ ದೇಹಕ್ಕೆ ದೇಗುಲವಾಗುವ ಅರ್ಹತೆಯಿಲ್ಲ! 'ಶ್ರೀ' : ಲಕ್ಷ್ಮೀ=ಸ್ಥಲ (೦) ಉಂಟು; ಈ ಸ್ಥಲದಲ್ಲಿ ರಮಾರಮಣನಿರುವನೆಂಬ 'ರಮಣ' ಒಂದು ಗೃಹೀತ!

'ರಾಮಾ' ಉಂಟು, 'ರಾಮ' ಪರಿಕಲ್ಪನೆ,
'ಪುರಿ' ಉಂಟು, 'ಶಯ' ಪರಿಕಲ್ಪನೆ!

ಆಚಾರ್ಯರನ್ನು 'ಭಗ'-ವತ್ ಪಾದರು ಎನ್ನುವಲ್ಲಿ 'ಭಗ'ಕ್ಕೆ ಪ್ರಾಧಾನ್ಯವಿದೆ. 'ಶಕ್ತಿ' ಸಹಿತ 'ಶಿವ'! ಪರಿಕಲ್ಪನೆ. ಸ್ವಲ್ಪದರಲ್ಲಿ ಹೇಳಬಹುದಾದರೆ, ನಮ್ಮ ಸಂಸ್ಕೃತಿಯೊಳಗಿನ ಗಣ್ಡು ದೇವರುಗಳನ್ನು ಉಂಟೆಂದು ನಂಬಿಸಿ, ಈ 'ಮನು' ಜನನ್ನು ಈ 'ಸ್ಥಲ'ದ ಆನುಷಂಗದಲ್ಲಿ ನರ(ಳ)ನನ್ನಾಗಿ ಉಳಿಸಿಕೊಂಡು ಬರುವುದಕ್ಕಾಗಿ ಮಾಡಿರುವ ತಂತ್ರವಿದು. ದೇವರನಾಮ=ಮಂತ್ರ! ಇದೇ ಮಾಟ! ಅಭಾವವನ್ನೇ ಸ್ಥಾಯೀ ಎಂದು ನಂಬಿಸಲು ಮಾಡಲಾಗಿರುವ ಆಸುರೀ ಯಾತು-ಜಾದು ಇಲ್ಲಿದೆ. ಇದೆಲ್ಲ ಯಾತಕ್ಕಾಗಿ? ಅ-ಸೂರ್ಯ ಸಂಪ್ರದಾಯ ಪ್ರಸ್ಥಾಪನೆಗಾಗಿ! ಇದನ್ನು

'ಭಾಸಾ-ಮತಿ' ಎನ್ನುವುದೂ ಉಂಟು. ಬೆಂಗಳೂರತ್ತಣಿನ ಮಾತಿನಲ್ಲಿ ಭಾನುವಾರ ನಿಜವಾಗಿ ಸೂರ್ಯನ ಪರ್ಯಾಯನಾಮ. ಆದರೆ, ಅಭಾವಾತ್ಮಕ ಸೂರ್ಯ=ಆದಿತ್ಯ! ಈ 'ಆದಿತ್ಯ ಯಾರು'? ಉಡುಪಿಯ ಶ್ರೇಷ್ಠ ವಿದ್ವಾಂಸರಾದ ಶ್ರೀ ಬನ್ನಂಜೆ ಗೋವಿಂದಾಚಾರ್ಯರು, 'ಪ್ರಾಚೀನ ಕಾಲದ ಕಾಮಶಾಸ್ತ್ರ' ಪರಿಚಯ ಮಾಡಿಕೊಡುವ ಲೇಖನದಲ್ಲಿ, ಎತ್ತಿ ಹೇಳುವ ವಾಕ್ಯಭಾಗವಿದು : "ದಿವ್ಯಾದಿತ್ಯಃ....ಶಿರಸಿ ಚಕ್ಷುಃ". ಆದರೆ, ವೇದದಲ್ಲಿ ಆದಿತ್ಯರನ್ನು 'ಅನಿಮಿಷರು' ರೆಪ್ಪೆ ಇಲ್ಲದ ಕಣ್ಣಿನವರು ಎಂದುದಾಗಿದೆ.[೪]

ಜಾನಪದರಲ್ಲಿ, 'ಕಣ್ಣು ನೆತ್ತಿಗೆ ಬಂದಿದೆಯೆ?' ಎಂಬ ಪಡೆಮಾತು ಇದೆ! ಸೊಕ್ಕು ಬಂದಾಗ 'ಆವರಿಸುವ ಕತ್ತಲೆ'. ಲಿಂಗ-ಯೋನಿ ಶಕ್ತಿಯು ತಮಸ್ಸನ್ನು=ಕತ್ತಲನ್ನು ಉಂಟು ಮಾಡುತ್ತದೆ. ಆದರೆ, ಈ ಕತ್ತಲು ರಾತ್ರಿಯದಲ್ಲ. ಪ್ರಜ್ಞೆಯನ್ನು ದುರ್ಬಲವಾಗಿಸುವ, ಮರಗಟ್ಟಿಸುವ ಹುಟ್ಟುಶಕ್ತಿ ಈ ಯೋನಿ-ಲಿಂಗ ಸಂಕೇತಗಳಲ್ಲೂ ಕಾಣುತ್ತದಲ್ಲ! ಪ್ರತ್ಯಕ್ಷ ಪರಿಣಾಮವು ಅದಕ್ಷಿರಬೇಡ? 'ರಸಂ ಒಸರ್ದಂತೆ' ಬರೆಯಲಾದ ಕವನ, ಕಥೆ, ಕಾದಂಬರಿಗಳ ಅಸುರ ಶಕ್ತಿ ಸಾಮಾನ್ಯವೇ? 'ಶ್ರೀಮತ್ "ಭಗ-ವತ್" ಇರುವ ಈ ಗೀತೆಯು, ಪ್ರಜ್ಞೆಯನ್ನು 'ಸ್ಥಿತ' ಗೊಳಿಸಲು ಹೇಳುವ ಕಾರಣವೇ ಇದ್ದಿಲ್ಲ. ಆದರೂ ಗೀತೆ ಸ್ಥಿತಪ್ರಜ್ಞನಾಗಲು ಹೇಳಬೇಕಾಗಿದ್ದರೆ ಈ ಪ್ರಜ್ಞೆಯ ಹಿರಿಮೆ ಯನ್ನು ಅದೆಷ್ಟೆಂದು ಹೇಳಬೇಕು? 'ಪ್ರಜ್ಞೆ', ಅನುಮಾನ-ತರ್ಕದ ಬುದ್ಧಿಗಿಂತ ಬೇರೆ ಬಗೆಯ ಅಂತಃಶಕ್ತಿ, ಬುದ್ಧಿ-ಚಿತ್ತ ಇವು ಪ್ರಾಣಶಕ್ತಿಯ ಅಂಗ. ಆದಕಾರಣ, ಜೀವಿತದ ಪಾತಳಿಗೆ ಸೀಮಿತ. ಜೀವನವು ಜೀವಿತಕ್ಕಿಂತ ವಿಶಾಲ. ಪ್ರಜ್ಞಾ ಮನಸ್ಸು ಮತ್ತು ಜೀವನ ಇವೆರಡೂ ಸಮಾನ ವ್ಯಾಪ್ತಿಯವು ಆಗಿವೆ. ಜೀವಿತ, ದೇಹದೊಡನೆ ಬದ್ಧ=ವ್ಯೆಯಕ್ತಿಕ. ಜೀವನದ ಕ್ಷೇತ್ರವು ಸಮಾಜ : ಸಮಷ್ಟಿಯನ್ನು ಮನುಕುಲವನ್ನು ಒಳಗೊಳ್ಳುತ್ತದೆ. ಪ್ರಜ್ಞೆ= Nous : mind; ಆದರೆ 'wisdom' ಎಂದು ಹಿಬ್ರೂ ಪುರಾತನರ ಪರಿಭಾಷೆ. Wisdom ಇದರ ಮೂಲವು-ವಿದ್>ವೇದದಲ್ಲಿದೆ! Wit-Wise, Wisdom ಜಾತವೇದ : ಅಗ್ನಿ (intuiton) = ಪ್ರಜ್ಞೆ.

ಸುತ್ತಲಿನ, ಒಳ ಹೊರಗಣ ಆಗುಹೋಗುಗಳನ್ನು ಇಡಿಯತ್ತಣಿಂದ ಗ್ರಹಿಸಿಕೊಳ್ಳುವ. ಅರ್ಥ : ವಿಚಾರದ ಅಭಿಜಾತ ಪ್ರವೃತ್ತಿ ಈ ಪ್ರಜ್ಞೆ. ಇದನ್ನು Consciousness of law : Conscience ಇದನ್ನು ಎಂದರೆ ತಪ್ಪೆ?

ಈ ಜೀವನ ವಿಶ್ವವು, ಋತ ಸ್ವರೂಪೀ ವಿಶ್ವನಿಯಮರೂಪದ ಸತ್ಯದ ಆಧಾರದ ಮೇಲೆ ನಿಂತಿದೆ, ಎಂದು ಮು: ವೈವಸ್ವತ ಹಾಗೂ ಸವಿತೃ (ಸೂರ್ಯ) ದೇವನ ಆರಾಧಕರಾದ ಅಂದಿನ ಭಾರತೀಯರ ನಿಷ್ಠೆಯಿತ್ತು! ಈಗ ಈ ಪ್ರಜ್ಞೆ: ವಿಶ್ವನಿಯಮದ ಅರಿವು ನಷ್ಟವಾಗಿರುವ ಕಾರಣವೇನು? ಭಾರತದಲ್ಲಿ 'ಪುರಿ-ಶಯ=ಪುರುಷ' ಆರಾಧನೆಯು ಪ್ರಾರಂಭವಾದುದರ ಪರಿಣಾಮವೇ ಈ ಪ್ರಜ್ಞಾನಾಶದ ಕಾರಣವೆಂದರೆ ತಪ್ಪು ಆಗಲಾರದು. 'ಪುರಿ-ಶಯ' ಇದರಲ್ಲಿ ಯೋನಿ-ಲಿಂಗೈಕ್ಯ : ಮಿಥುನಯೋಗವು ಪ್ರತಿಬಿಂಬಿತವಿದೆ! '.....ಸಂಪೃಕ್ತೌ.......ಜಗತಃ ಪಿತರೌ' ಎಂದು ಕಾಲಿದಾಸನು ಸ್ತೋತ್ರ ಮಾಡಿರುವ ಮೈಥುನಕ್ರೀಡೆಯ ಈ ಪ್ರತೀಕವು : ಏಕಾತ್ಮಕ ಕಣ್>ಗಣ್ ಇದು ಕತ್ತಲಿನ ಆವರಣವನ್ನು ಆಮಂತ್ರಿಸಲೇಬೇಕಷ್ಟೆ?

ಇಂದ್ರಸೂರ್ಯ : ಮನುಮಾನವ-ವೈವಸ್ವತರನ್ನು ಕಣ್ಮರೆಯಾಗಿಸಿರುವ ಮಹಾ : ಪುರುಷ ಈ ಪುರಿ-ಶಯ (ಲಿಂಗ) ಶಕ್ತಿ. ಕವಿ, ಈ ಪುರಿ-ಶಯನನ್ನು ಕಲ್ಪಿಸಿದ ಉದ್ದೇಶ ಗೊತ್ತಾಗಲು, ನಾವು ನೇರವಾಗಿ ಪುರಿ: ಅಮೃತಸ್ಯ ನಾಭಿಃ ಸ್ವರೂಪ ಅದಿತಿ : ಆದಿಶಕ್ತಿಯ 'ಬಯಕೆ'ಯನ್ನು ಅರಿಯುವುದೇ ಲೇಸು. ಏಕೆಂದರೆ, ಇದರಲ್ಲಿಯ 'ಶಯ' ಕೇವಲ ಕವಿಕಲ್ಪನಾ ವಿಲಾಸವಾಗಿದೆ ಎಂಬುದನ್ನು ಈ ಮೊದಲು ಕಂಡದ್ದಾಗಿದೆ. 'ಆದಿತ್ಯ' ಮತ್ತು 'ಪುರುಷ' ಇವೆರಡರ ಅಭಿನ್ನ ಸ್ವರೂಪ ಗೊತ್ತಾಗಲು ಉಪನಿಷತ್ತುಗಳ ನೆರವು ಅನಿವಾರ್ಯ. ಏಕೆಂದರೆ, ವೇದದಲ್ಲಿ 'ಪುರುಷ' ಆದಿತ್ಯ ಸಂಬಂಧ ಬಚ್ಚಿಡಲಾಗಿದೆ. ಛಾಂದೋಗ್ಯದಲ್ಲಿ[೫] ಒಂದೆಡೆಗೆ, ಚಂದ್ರಮಂಡಲಸ್ಥ ಆದಿತ್ಯ=ಪುರುಷನ ಚಿತ್ರವಿದೆ. ಅಲ್ಲಿ ಪುರುಷನ ಶ್ಮಶ್ರು. ಕೇಶ, ನಖ, ಸು-ವರ್ಣವಾಗಿರುವ ಉಲ್ಲೇಖವಿದೆ!

ಪುರುಷ ಮತ್ತು ನೆತ್ತಿಗಣ್ಣಿನ ಆದಿತ್ಯ ಬೇರೆಯಲ್ಲದ್ದರಿಂದ ಇಂಥ ಪುರುಷ: ಆದಿತ್ಯನಿಗೆ ಜನ್ಮವನ್ನಿತ್ತ 'ಜಗನ್ಮಾತೆ' ಎಂಬ ಅದಿತಿ, ಬಸಿರಿದ್ದಾಗ ತನ್ನ 'ಬಯಕೆ' ವ್ಯಕಪಡಿಸಿದ್ದಾಳೆ. ಆದರೆ, 'ಅಮೃತಸ್ಯ ನಾಭಿಃ' [o] ಸ್ವರೂಪ ಈ

"ಅದಿತಿಯು, ತನ್ನ 'ಬಯಕೆ'ಯನ್ನು ವ್ಯಕಪಡಿಸಿದ್ದು ಯಾವ ಬಾಯಿಯಿಂದ?' ಎಂಬ ಪ್ರಶ್ನೆ ಕೇಳುವ ಔದ್ಧತ್ಯ ಮಾತ್ರ ಇಲ್ಲಿ ಸಲ್ಲದು. ಋಗ್‌ಭಾಷ್ಯದಲ್ಲಿ ಸಾಯಣರ ಮೂಲಕ ಈ 'ಪುರಾತನೀ ಕಥಾ' ನಮಗೆ ಗೊತ್ತಾಗಲಿದೆ. "ಸಪ್ತಾನಾಂ ಸಪ್ತಋಷಯಃ, ಸಪ್ತದ್ಯುಮ್ನಃ....." ಈ ಋಚೆಯ ಭಾಷ್ಯದಲ್ಲಿ

"ಅತ್ರ ಪುರಾತನೀ ಕಥಾ ಇಂದ್ರ ಸಮಾನಾಂ ಪುತ್ರಂ ಇಚ್ಛಂತಾ ಅದಿತೇಃ ಗರ್ಭ...."

ಅದಿತಿ ಫಕ್ತ 'ಅಮೃತಸ್ಯ ನಾಭಿಃ' ಇವಳು 'ಬಸಿರಾದಳು' ಎಂದು ನಂಬದಿದ್ದರೆ ಇಂದಿನ ಇಡೀ ಋಗ್ವೇದವೇ ಕುಸಿದು ಬೀಳಲಿದೆ! ಇನ್ನೊಂದೆಡೆಯ ಕಥೆ ತೀರ ಬೇರೆ ಧಾಟಿಯಲ್ಲಿ ಇದೆ.[೬]

'ಪುರಾ ಕದಾಚನ ಇಂದ್ರಃ ಅಸುರಾನ್ ಜಿಗಾಯ ತದಾನೀಂ ಅದಿತಿಃ ಅಸುರಮಾತಾ ಇಂದ್ರಹನನ ಸಮರ್ಥಂ ಪುತ್ರಂ ಕಾಮಾಯಮಾನಾ ತಪಸಾ ಭರ್ತುಃ ಸಕಾಶಾತ್ ಗರ್ಭಂ ಲೇಭೇ* 'ಇವಳು ರುದ್ರಿಯ : ಮರುತರನ್ನು ಹಡೆಯುತ್ತಾಳೆ' ಎಂಬ ಈ ಕಥೆಯಿಂದಾಗಿ, ಈ ತಾಯಿ 'ದಿತಿ'ಯಲ್ಲ, ಅ-ದಿತಿಯೇ ಆಗುತ್ತಿದ್ದಾಳೆ! 'ಮಾತಾ ರುದ್ರಾಣಾಂ' ಎಂಬ ಸ್ಪಷ್ಟ ಉಲ್ಲೇಖದ ಋಚೆಯಲ್ಲೆ ಇವಳನ್ನು 'ಅ-ದಿತಿ' ಎಂದೇ ಹೇಳಲಾಗಿದೆ![೭] ಭೂಃ→ಭುವಃ ಪಾತಳಿಯ ಮೇಲಣ ಪ್ರಾಣಲಿಂಗ ಚೇತಸದಿಂದ ಪ್ರಚೋದಿತ 'ಅಮೃತಸ್ಯ ನಾಭಿಃ' ಸ್ವರೂಪ ಯೋನಿ : ಅದಿತಿ ಇವಳ ಮೂಲಕ, ಸ್ವರ್ ಪಾತಳಿಯ ಇಂದ್ರನನ್ನು ಭೂಲೋಕಕ್ಕೆ ತರುವ ಹಂಚಿಕೆ ಇಲ್ಲಿದೆ.

ಆದರೆ, ಈ ಇಂದ್ರನು 'ಶಿಶ್ನೋ ದೇವಾಃ' ಸಂಪ್ರದಾಯದ ಶತ್ರು! ಪ್ರಜ್ಞಾ : ಪ್ರಕಾಶರೂಪ ಸವಿತೃವಿನ ಪರ್ಯಾಯ! ಈ ದೇವರ ಆರಾಧಕರ ಮನು>ಮಾನವ ಸಂಪ್ರದಾಯವನ್ನು ಭ್ರಷ್ಟಮಾಡಲು, ಇಂದ್ರನನ್ನು ವ್ಯಭಿಚಾರಿಯನ್ನಾಗಿಸಲು ಮಾಡಿರುವ ಈ ಕುತಂತ್ರವನ್ನು ಉಚ್ಚರಿಸುವುದಕ್ಕೂ ಬರೆಯುವುದಕ್ಕೂ ಹೇಸಿಕೆ ಬರುತ್ತಿದ್ದು ಇದನ್ನು ಅನಿವಾರ್ಯವಾಗಿ ಮಾಡಲೇಬೇಕಾಗಿದೆ. ನಮ್ಮ ಸನಾತನಿಗಳ ಶ್ರದ್ಧಾಸ್ಥಾನಗಳ ಸ್ವರೂಪವನ್ನು ಬಹಿರಂಗ ಪಡಿಸುವುದಕ್ಕಾಗಿ! ಆದಿಪುರುಷ : ಪುರಿ-ಶಯ ಇವನ 'ಪಾತ್ರ' 'ಪುರಿ! ಅದಿತಿ! 'ಆದಿಮಾತೆ': ಆದಕಾರಣ, ಪುರುಷ ಸಂಪರ್ಕವಿಲ್ಲದೆ ಹುಟ್ಟಿದವನೇ ಈ ಸ್ವಯಂಭೂ ಮಹಾನ್ ಪುರುಷ! ಆದರೆ, ಈ 'ಪುರಿ' ಸ್ಥಲದ ಆಧಾರವಿಲ್ಲದೆ ಈ ಪುರುಷನಿಗೆ ಅಸ್ತಿತ್ವವೇ ಇಲ್ಲ! ಇದು ಹಾಗಿರಲಿ, ಈ ಪುರಿ : ಅದಿತಿಯ ಈ ಮಗನಿಗೆ 'ದಕ್ಷ' ಅದಿತೇಃ ದಕ್ಷಃ ಅಜಾಯತ ಎಂದು ಹೆಸರು ಇರುವುದಾಗಿ ವೇದ ಹೇಳುತ್ತದೆ! ಆದರೆ, ಈ ವಾಕ್ಯದ ಮುಂದೆಯೇ 'ದಕ್ಷಾತ್ ಅದಿತಿಃ' ಎಂದೂ ಹೇಳಿದೆ ಈ ವೇದ! ಬಳಿಕ 'ಹೇ ದಕ್ಷನೆ, ನಿನ್ನ ಮಗಳಿಂದ-ನಿನ್ನಿಂದ-ಈ ಪ್ರಪಂಚವು ಆಗಿದೆ' ಎಂಬ ಈ ವರ್ಣನೆಯಂತೆ ಈ ದಕ್ಷ : ಪುರುಷನು ಮಗಳ ಗಣ್ಡನು! ಈ ಪ್ರಪಂಚ ಮಗಳ ಗಂಡನಿಂದಾದದ್ದು!

ಈ ಅದಿತಿ-ದಕ್ಷ ಸಂಬಂಧ ಹೇಳುವ ಸೂಕ್ತದಲ್ಲಿ ಇನ್ನೂ ಆಳವಾದ ಗುಹ್ಯ ಇದೆ! ದಕ್ಷ ಹೆಸರಿನ ಸಾರ್ಥಕ್ಯ ಅಲ್ಲೇ ಗೊತ್ತಾಗುತ್ತದೆ. 'ದಕ್ಷ' ಎಂದರೆ ಕರ್ತವ್ಯ ಅಥವಾ ಕರ್ಮ=ಕಾಯಕದಲ್ಲಿ ದಕ್ಷ : ಸದಾಸಿದ್ಧನಾಗಿ ನಿಂತವನು! ಜೈನಪರಿಭಾಷೆಯ 'ಖಡ್ಗಾ-ಸನಿ' ಕತ್ತಿಯಂತೆ ನಿಗುರಿ ನಿಂತವನು! ಇವನು ಯಾರು? 'ಉತ್ತಾನಪದ'. ನಿಂತ ಪಾದ-ಪ = ವೃಕ್ಷ (ದಕ್ಷ). ತಾಯಿ ಅದಿತಿ [o] : ಅಮೃತದ ಕುಂಡ; ಮಗ ದಕ್ಷ=ಪುರಿಶಯ=ಪುರುಷ![೮]

ಈ ಸೂಕ್ತದಲ್ಲಿ ಈ ಮಹಾದೇವಿ=ಸಲಿಲ (ಶರೀರ) : ಜಲ ಸ್ವರೂಪಳು! ಈ ಸೂಕ್ತದಲ್ಲೇ ಈ ಪುಣ್ಯಪುರುಷನನ್ನು 'ಮಾರ್ತಾಂಡ ನಾಮಾನಂ ಸೂರ್ಯಂ' ಎಂದು ಹೊಗಳಿದ್ದಾಗಿದೆ! ಸಲಿಲ ಜಲದೊಳಗಿಂದ ಹುಟ್ಟಿದ ಈ ಕೂಸನ್ನು 'ಸೂರ್ಯ' ಎಂದು ನಂಬಿಸಲು ಮಾಡಿರುವ ಈ ಭ್ರಷ್ಟಾಚಾರದ ಹೀನಸ್ವರೂಪಕ್ಕೆ ತುಲನೆಯಿಲ್ಲ. ಸಲಿಲದೊಳಗಿಂದ ಹುಟ್ಟಿದ-ಮೃತಾತ್ ಅಂಡಾತ್ ಜಾತ ಈ 'ಮಾರ್ತಾಂಡ' ಸೂರ್ಯನಲ್ಲ! ಮರ್ತ್ಯರ ಪ್ರತಿನಿಧಿ-ಚಂದ್ರ. 'ಅತ್ರ ಸಮುದ್ರೇ ಆ ಗೂಳ್ಹಂ ಅ ಸೂರ್ಯಂ ಅಜಭರ್ತನ ಆಹೃತವಂತಃ' ಅಮೃತದ ಕುಂಡ : ಸಲಿಲ, ಇಲ್ಲಿ 'ಸಮುದ್ರ' ಆಗಿದೆ. 'ಸಂ ಉತ್ ದ್ರವಂತಿ' ಎಂಬ ಕಾರಣದಿಂದ ಇದು

---

* ಇದು ಸಾಯಣಾಚಾರ್ಯರು ನೀಡುವ ವಿವರಣೆ! "ಬಹು ಹಿಂದೆ ಇಂದ್ರನು ಅಸುರನನ್ನು ಗೆದ್ದನು. ಆಗ ಅಸುರ ಮಾತೆಯಾದ ಅದಿತಿಯು ಇಂದ್ರನನ್ನು ಕೊಲ್ಲುವ ಸಮರ್ಥ ಮಗನನ್ನು ಬಯಸಿ ತಪಸ್ಸನ್ನು ಮಾಡಿ, ಗರ್ಭವನ್ನು ಧರಿಸಿದಳು" ಎಂಬುದು ಈ ಭಾಷ್ಯದ ಸ್ಥೂಲಾರ್ಥ. (ಸಂ)

'ಸಮುದ್ರ' ! ಯೋನಿ! ಇಲ್ಲಿ ಸೂರ್ಯನನ್ನು 'ಯೋನಿಜ'ನೆಂದು ಹೇಳುವ ಉದ್ದೇಶವು ಸ್ಪಷ್ಟವಿದೆ. 'ಮನು'ವು ವಿವಸ್ವನ್ : ಸೂರ್ಯದೇವನ ಕಿರಣ! ಹಾಗೆಯೇ, 'ನರ'ನು ನಾರ-ಅಯನನ ಅಮೃತಸರದ ಅಂಶನು! ತೂಕಕ್ಕೆ ತೂಕ! ಆದಿತ್ಯ (ಲಿಂಗ)=ಪುರುಷ=ಸೂರ್ಯ! ಸೂರ್ಯ=ನಾರಾಯಣ! ಇದೆಲ್ಲದರ ಸಾರ : ೦ : ಕತ್ತಲು, ಅಭಾವವೇ ಸ್ಥಾಯೀ!

ಈ ಅದಿತಿ ಕಥೆಗೆ ಇನ್ನೊಂದು ಆಯಾಮವಿದೆ. ಈ ಸೂಕ್ತದಲ್ಲಿಯೆ ಇದು ತೊಡಗಿಕೊಂಡಿದೆ. ಇವಳನ್ನು 'ಅಷ್ಟೌ ಪುತ್ರಾಸಃ ಅದಿತಿಃ' ಎಂದು ಹೇಳಲಾಗಿದೆ! ಈ ಮಕ್ಕಳ ಹೆಸರಿನಲ್ಲಿಯೂ ಚಾಕಚಕ್ಯ! ಮಿತ್ರ, ವರುಣ, ಧಾತಾ, ಅರ್ಯಮಾ, ಅಂಶ, ಭಗ, ವಿವಸ್ವನ್, ಆದಿತ್ಯ! ಆದರೆ, 'ದ್ವಾದಶಾದಿತ್ಯ'ರು ಎಂಬ ನಂಬುಗೆಯೂ ಇದೆ. ಇಲ್ಲಿ ಮಾತ್ರ ಒಬ್ಬನೇ ಆದಿತ್ಯ! ಕಾಲಿದಾಸನು 'ಆದ್ಯಃ ವೈವಸ್ವತ>ವಿವಸ್ವನ್ ಎಂದು ಹೇಳಿರುವಾಗ ಈ ವೇದಭಾಷ್ಯವು ಇವನನ್ನು ಏಳನೆಯವನು ಎಂದು ನಂಬಿಸಬೇಕೆನ್ನುತ್ತಿದೆ! ಮ್ಯಾಕ್‌ಡೊನೆಲ್ ಓಲ್ಡೆನ್‌ಬರ್ಗರು ಈ ಸುಳ್ಳನ್ನು ಬಯಲಿಗೆ ಎಳೆದ ಬಗೆ ಹೀಗೆ : 'ಅದಿತಿ'ಯ ಪರಿಕಲ್ಪನೆ ಇತ್ತೀಚಿನದು. ಸೂರ್ಯ, ವರುಣ, ವಿವಸ್ವನ್ ಇವರು ಅದಿತಿಗಿಂತಲೂ ಪುರಾತನರು! ಆದಕಾರಣ 'ಮಿತ್ರ ವರುಣ ವಿವಸ್ವನ್‌ರು ತನ್ನ ಮಕ್ಕಳು' ಎಂಬ ಅದಿತಿತಾಯಿ ಮಕ್ಕಳಿಗಿಂತಲೂ ಚಿಕ್ಕವಳು!

ಆದರೆ, ನಾನು ನಿಮ್ಮ ಚಿತ್ತ ಸೆಳೆಯಬೇಕೆಂದಿರುವ ಆಯಾಮವು ಇನ್ನೂ ಬೇರೆಯಿದೆ. ಮಹಾಭಾರತದ ಕಥೆಯ ಪ್ರಾರಂಭವು, ದೇವಗಂಗೆ, ಶಂತನು ಎಂಬ ಕಣ್-ಗಣ್ಣಿನ ಸಂಬಂಧದಲ್ಲಿ ಆಗಿದೆ. ಈ ಕಥೆಯ ಮೂಲಮಾದರಿಯು, 'ಅಷ್ಟಪುತ್ರಾ' ಅದಿತಿಯೇ ಮಹಾಭಾರತದ ಕಥೆಯಲ್ಲಿ 'ದೇವಗಂಗೆ'-ಆಗಿದ್ದಾಳೆ! ಈ ಶಂ-ತನು (ಸುಖಕರ ಲಿಂಗ) ಪಾತ್ರವನ್ನು ಐತಿಹಾಸಿಕ ಸ್ವರೂಪದ್ದು ಎಂದು ನಂಬಿಸುವ ಪ್ರಯತ್ನವಿದೆ. ಈ ಶಂ-ತನು ಗಂಗಾರೂಪ ಅದಿತಿಪುತ್ರ ಆದಿತ್ಯನು ಲಿಂಗವಾಗುತ್ತಾನೆ. ಈ ದೇವಗಂಗೆ 'ಅಷ್ಟವಸು'ಗಳಿಂದ ಎಂಟು ಬಾರಿ ಬಸಿರಾಗುತ್ತಾಳಂತೆ! ಆದಕಾರಣ, ಇದು ವ್ಯಕ್ತಿನಿರಪೇಕ್ಷ ಸಾಮಾನ್ಯಲಿಂಗ! ಶಂ-ತನು! ಇವಳು ಒಂದನ್ನು ಹಿಂದೆ ಬಿಟ್ಟು ಏಳು ಮಕ್ಕಳೊಡನೆ ಜಲಪ್ರವೇಶ ಮಾಡುತ್ತಾಳೆ, ಎಂಬ ಈ ಕಥೆಯು ಅದಿತಿ ಕಥೆಯನ್ನೇ ಸಂಪೂರ್ಣ ಹೋಲುತ್ತದೆ. ಸಮುದ್ರ ಮಥನದಲ್ಲಿ 'ಸಲಿಲದೊಳಗಿಂದ' ಚಂದ್ರನು ಹುಟ್ಟಿದಂತೆ, ಅದಿತಿಯೂ ಕೊನೆಗೆ ಚಂದ್ರನನ್ನೇ ಉಳಿಸಿದ್ದಾಳೆ. 'ಪ್ರಜಾಯ್ಯೆ ಮೃತ್ಯುವೇ'!-ಫ್ರಾಣಿನಾಂ 'ಉತ್ಪತ್ತಯೇ' ಮತ್ತು 'ಮೃತ್ಯವೇ' ಸಾಕ್ಷೀಭೂತ ನಿಶಾಪತಿ-ಈ ಚಂದ್ರ-ಮೃತ್ಯು ತತ್ತ್ವ! ಮಹಾಭಾರತದ 'ಅಷ್ಟಮ' 'ಭೀಷ್ಮ' ಇವನು ಚಂದ್ರನ ಪರ್ಯಾಯ! ಕುರುಕುಲದ 'ಜನನ ಮರಣಗಳ ಸಾಕ್ಷೀಭೂತನು ಇವನು' ಚಂದ್ರನಂತೆ ನಪುಂಸಕನು!

ಶ್ರೀ ಮಧ್ವಾಚಾರ್ಯರ 'ಮಹಾಭಾರತ ತಾತ್ಪರ್ಯ ನಿರ್ಣಯದಂತೆ' ದ್ರೌಪದಿಯೂ 'ಚಂದ್ರಾಕಾಲೀ' ಪ್ರತೀಕ! ಅಷ್ಟಮಿಯಂದು ಹುಟ್ಟಿದವನು, ಮಕ್ಕಳಲ್ಲಿ ಅಷ್ಟಮನು, 'ಮೃತ್ಯು' ತತ್ತ್ವದ ಆದಿತ್ಯ=ಚಂದ್ರನ ಪರ್ಯಾಯ! ಕೃಷ್ಣನೂ ಅಶ್ವತ್ಥ : ಪುರುಷ : ಪುರಿಶಯ! ಹೀಗೆ ಮಹಾಭಾರತವೂ 'ಅಭಾವವೇ ಸ್ಥಾಯೀ' ಆಗಿರುವ ಭೂಮಿಕೆಯ ಮೇಲೆ ನಿಂತಿದೆ! ಎಂದರೆ, ಇದು 'Phenomena' ರೂಪ ಆಗುಹೋಗುಗಳ ಚಿತ್ರವಾಗುತ್ತಿದೆ! ಸಮಸಾಮಯಿಕ (Contemporary) ಇತಿಹಾಸವಾಗಿದೆ ಮಹಾಭಾರತ! ಇದೆಲ್ಲವನ್ನೂ ನಿವೇದಿಸುತ್ತಿರುವುದು ಪುರಿ-ಶಯ:-ಪುರುಷ (ಲಿಂಗ) ಮಹಾತ್ಮ್ಯದತ್ತ ಗಮನ ಸೆಳೆವ ಉದ್ದೇಶದಿಂದ.

ಶ್ರೀಮನ್ ಮಹಾಭಾರತದಲ್ಲಿ ನುಸುಳಿರುವ ಪಾಠಾಂತರಗಳನ್ನೆಲ್ಲ ಹೆಕ್ಕಿ ಹೊರಗೆ ತೆಗೆದರೆ, ಇದೊಂದು ಸರ್ವೋತ್ಕೃಷ್ಟ ಮಹಾಕಾವ್ಯವಾಗುತ್ತದೆ, ಎಂದು ಡಾ. ವಿಂಟರ್‌ನಿಟ್ಸ್ ಪ್ರಭೃತಿ ತಜ್ಞರು ಹೇಳುತ್ತಿದ್ದರು. ಭಾರತೀಯರಲ್ಲೂ 'ಇದೊಂದು ರಾಷ್ಟ್ರೀಯ ಮಹತ್ತ್ವದ ಮಹಾಕಾವ್ಯ' ಆದೀತು, ಎಂಬ ಆಶೆಮೂಡಿತ್ತು. ಲೋಕಮಾನ್ಯ ಟಿಳಕರಿಗೆ 'ತಮಗೊಂದು ರಾಷ್ಟ್ರೀಯತ್ವ ಪ್ರೇರಕ ಕಾವ್ಯವಿಲ್ಲವಲ್ಲ' ಎಂಬ ಕಳವಳ. 'ಮಹಾಭಾರತವೇ ವಿಶ್ವಾಸಾರ್ಹ ಗ್ರಂಥವಾದೀತು' ಎಂಬ ನಿರೀಕ್ಷೆಯಿಂದ ಅವರು ತರುಣರಿಗೆ, ಮಹಾಭಾರತ, ಗೀತಾ ವ್ಯಾಸಂಗಕ್ಕೆ ಪ್ರೇರಿಸುವುದು ವಾಡಿಕೆಯಾಗಿತ್ತು. ಅಂದಿನ ತರುಣವರ್ಗದಲ್ಲಿ ಈ ಗ್ರಂಥಗಳ ವ್ಯಾಸಂಗದಲ್ಲಿ ತೊಡಗಿದ ಇಬ್ಬರು

ಉತ್ಸಾಹಿಗಳನ್ನು ನಾನು ಹೆಸರಿಸಬಹುದಾಗಿದೆ : ಡಾ. ಇರಾವತೀಬಾಯಿ ಕರ್ವೆ ಮತ್ತು ಡಾ. ಎಸ್. ವ್ಹಿ. ಸುಕಟಣಕರರು. ಮಹಾಭಾರತದ ಶುದ್ಧಪಾಠ ಸಂಶೋಧನಕ್ಕಾಗಿಯೇ ಡಾ. ಸುಕಟಣಕರರು ತಮ್ಮನ್ನು ಮುಡುಪಿದರು. ಜರ್ಮನಿಯಿಂದ ವ್ಯಾಸಂಗ ಮುಗಿಸಿ ಬಂದ ಬಳಿಕ ಸರಕಾರೀ ನೌಕರಿಯ ಆಮಿಷಕ್ಕೆ ಒಳಗಾಗದೆ, ಇಂತಹ ಸಾರ್ವಜನಿಕ ಸೇವೆಯಲ್ಲಿ ತೊಡಗುವ ಶ್ರೇಷ್ಠ ಮಾದರಿ ಮಹಾರಾಷ್ಟ್ರದಲ್ಲಿ ಅಂದು ಕಾಣಿಸಿಕೊಂಡಿತು. ಡಾ. ಸುಕಟಣಕರರು, ಜಾಗತಿಕ ಪಾತಳಿಯ ಸಂಶೋಧಕರ ಸಹಕಾರದಿಂದ ಈ ಕಾರ್ಯವನ್ನು ಆರಂಭಿಸಿದ್ದಾಯಿತು. ಸರ್ವಸಮ್ಮತ ಶಾಸ್ತ್ರೀಯ ಪದ್ಧತಿಯಿಂದ ಶುದ್ಧಪಾಠ ಹುಡುಕುವ ಕೆಲಸವೂ ಪ್ರಾರಂಭವಾಯಿತು.

ಆದರೆ, ಡಾ. ಸುಕಟಣಕರರು ತಮ್ಮ ಮನವರಿಕೆಗಾಗಿ, ಮೊದಲೇ ಗೊತ್ತುಪಡಿಸಿದ ಈ ಸಂಶೋಧನ ಪದ್ಧತಿಯನ್ನು ಒಮ್ಮೆ ಪ್ರಾಯೋಗಿಕವಾಗಿ ಉಪಯೋಗಿಸಿ ನೋಡಿದ್ದಾಯ್ತು. ಮಹಾಭಾರತದಲ್ಲಿ 'ಭೃಗು' ಸಂಪ್ರದಾಯದ ಕೈವಾಡವಿರುವುದಾಗಿ ಸಪ್ರಮಾಣವಾಗಿ ಸಿದ್ಧವಾಯಿತು. ಡಾ. ಸುಕಟಣಕರರ ಸಂಪಾದಕತ್ವದಲ್ಲಿ, ಶುದ್ಧಪಾಠದ ಪರ್ವಗಳು-ಶಾಂತಿಪರ್ವದವರೆಗೆ ಹೊರಗೆ ಬಂದವು. ಮಹಾಭಾರತವು ಶುದ್ಧಪಾಠದಲ್ಲಿ ಮೊದಲಿನ ೧/೧೦ ವೂ ಉಳಿಯಲಿಲ್ಲ! ಪ್ರತಿವರ್ಷವೂ ಡಾ. ಸುಕಟಣಕರರ ಎದೆನೋವು ಹೆಚ್ಚತೊಡಗಿತು. ಇತ್ತ ಡಾ. ಇರಾವತೀಬಾಯಿ ಅವರು ಮೂಲ'ಜಯ' ಎಂಬ ಹೆಸರಿನ ಈ ಕಾವ್ಯವು ಅಪರಂಜಿ ಚಿನ್ನದಂತೆ ಕೈಗೆ ಬಂದೀತು, ಎಂಬ ನಿರೀಕ್ಷೆಯಲ್ಲಿ ಇದ್ದರು. ಅವರಿಗೂ ಆಘಾತ! ಈ ಹೆಣ್ಣುಮಗಳೂ ಜರ್ಮನಿಯಿಂದ ವಿದ್ಯೆಪಡೆದು ಬಂದವಳು! ಆ ಸುಮಾರಿನ ಅಸ್ತಿತ್ವವಾದೀ (Existentialism) ತತ್ತ್ವಪ್ರಣಾಲಿಗೆ ಶರಣು ಹೋದದ್ದಾಯ್ತು! 'ಯುಗಾಂತ' ಎಂಬ ದುರಂತ ಕಥೆ ಪ್ರಕಟಿಸಿದ್ದಾಯ್ತು! ಮಹಾರಾಷ್ಟ್ರದ ಇನ್ನೊಬ್ಬ ಜ್ಞಾನೋಪಾಸಿಕೆ-'ವ್ಯಾಸಪರ್ವ' ಬರೆದು ವ್ಯಾಸನ ಪಾತ್ರಗಳನ್ನು ಅಮರವಾಗಿಸುವ ಸುಂದರ ಕೃತಿ ರಚಿಸಿದವರು-ದುರ್ಗಾಭಾಗವತರು. 'ವ್ಯಾಸನು ಸನಾತನ ಮಾನವೇತಿಹಾಸ ಬರೆದಿದ್ದಾನೆ' ಎಂಬ ಉಕ್ತಿಯನ್ನು ದುರ್ಗಾ ಭಾಗವತರು ಸಾರ್ಥಕಗೊಳಿಸಿದ್ದಾರೆ.

ಡಾ. ಸುಕಟಣಕರರ ಸಂಶೋಧನದ ಅನುಭವಗಳ ಗ್ರಂಥ ಪ್ರಕಟವಾಗಿದೆ.[೯] ಮಹಾಭಾರತದ ಬಗ್ಗೆ ಆಸ್ಥೆಯಿದ್ದವರು ಒಮ್ಮೆಯಾದರೂ ಓದಲೇಬೇಕು. ವಿಖ್ಯಾತ ಕಲಾಕಾರ ಶ್ರೀ ವೆಂಕಟಪ್ಪ ಅವರು ಚಿತ್ರಕಲೆಯೋ? ಸಂಗೀತವೋ? ಎಂಬ ದ್ವಿಧಾ ಮನಸ್ಕಾರದ ಕಥೆ ಸುವಿಖ್ಯಾತವಿದೆ. ಹಾಗೆಯೇ ಡಾ. ಸುಕಟಣಕರರು, ಅತ್ಯಂತ ಸೂಕ್ಷ್ಮ ಸಂವೇದನಾಕ್ಷಮ ಸೌಂದರ್ಯೋಪಾಸಕರು, ರಸಿಕರು; ಸಂಶೋಧಕರೂ ನಿಜ. ಸಂಶೋಧನದ ಶುದ್ಧಪದ್ಧತಿಯನ್ನು ಹಲವು ತಜ್ಞರ ಸಮ್ಮತಿಯಿಂದ ಸ್ವೀಕರಿಸಿ ತಾವೂ ಪ್ರಾಯೋಗಿಕ ಪ್ರಯತ್ನಮಾಡಿ ಯಶಸ್ಸು ಬಂದಬಳಿಕ ಶುದ್ಧಪಾಠದ ಕಾರ್ಯಕ್ಕೆ ಕೈಹಾಕಿದ್ದು. ಆದರೆ, ಶಾಸ್ತ್ರೀಯ ಪದ್ಧತಿಯ ಈ ಸಂಶೋಧನೆಯ ಫಲಿತ ಇವರಿಗೆ ಆಘಾತವನ್ನುಂಟುಮಾಡಿತು. ಸಂಶೋಧಕ ಸುಕಟಣಕರರೊಳಗಿನ, ಸಂಸ್ಕೃತಾಭಿಮಾನೀ ರಸಿಕನ ಕೈ ಮೇಲೆ ಆಗಿ, ತಮ್ಮ ಕಾರ್ಯದ ವೈಫಲ್ಯದ ಬಗೆಗೆ ಎದೆಗೆಟ್ಟು ಈ ವಿಕಲ ಸ್ಥಿತಿಯಲ್ಲಿಯೇ ಕೊನೆಯ ಉಸಿರು ಎಳೆದರು! ಗ್ರೀಕ್‌ರಸಿಕ ಗೋರ್ಜಿಯಾಸ್‌ನ ಉಕ್ತಿಯ ನೆನಪು ಬರುತ್ತದೆ: 'Justifiable deception= 'ವಕ್ರೋಕ್ತಿರೇವ ಆತ್ಮಾ ಕಾವ್ಯಸ್ಯ' ಇದು ಕಾವ್ಯದ ಪ್ರಧಾನ ಲಕ್ಷಣ! ಮಹಾಭಾರತದ ಮೂಲದಲ್ಲಿ 'ಜಯ' ಎಂಬ ಗ್ರಂಥ ಇದೆ ಎಂದು ನಂಬುವಂತೆ ಮಾಡಿರುವ ತಂತ್ರವನ್ನು ಗಮನಿಸಿದವರಿಲ್ಲ! 'ಮಹಾಭಾರತವು ಮೇರು ಕಲಾಕೃತಿ' ಆದರೆ ಎದೆಯೊಡೆದು ಸಾಯಬಹುದು ಭಕ್ತ ಅಥವಾ ಅವನು ಮೋಕ್ಷಮಾರ್ಗಿಯಾಗುತ್ತಾನೆ! 'ದುರಂತ'ದ ಭಯಂಕರ ಪರಿಣಾಮಗಳಿವು. ಇದು ಆ ಕಲಾಕೃತಿಯ ಹಿರಿಮೆಯನ್ನೇ ಸಿದ್ಧಪಡಿಸುತ್ತದೆ!

ಇಂದಿನ ಋಗ್ವೇದಸ್ಥ ಪುರುಷ : ಪುರಿಶಯ = ನಾರಾಯಣ (ನಾರಅಯನ) ಈ ಪ್ರತಿಮೆಯೇ ಮಹಾಭಾರತದ ಕೇಂದ್ರದಲ್ಲೂ ಇದೆ! ಪುರುಷ : ವಿಷ್ಣು :* ಕೃಷ್ಣ : ನಾರ ಅಯನ-ನಾಯಕನಿರುವ ಮಹಾಭಾರತದಲ್ಲಿ 'ಅಭಾವ

---

* ವಿಷ್ಣುಸಹಸ್ರ ನಾಮದಲ್ಲಿ 'ಉಪೇಂದ್ರ' ಎಂಬ ಮಾತು ಬರುತ್ತದೆ. ಆ ಬಗೆಗಿನ ವಿವರ ಹೀಗಿದೆ: ಉಪರಿ ಇಂದ್ರ, ಉಪೇಂದ್ರಃ (ವಿಷ್ಣು)-ಶಾಂಕರಭಾಷ್ಯ ವಿಷ್ಣುಸಹಸ್ರನಾಮ ಮೈಸೂರು ವಿಶ್ವವಿದ್ಯಾಲಯ ಪ್ರಾಚ್ಯವಿದ್ಯಾ ಸಂಸ್ಥೆ ಪುಟ. ೨೩೧

[೦] ಇದೇ ಸ್ಥಾಯೀ' ಇರುವಲ್ಲಿಯೆ, ಈ ವೇದೋಪನಿಷತ್ತು, ಗೀತೆ, ಮಹಾಭಾರತರೂಪ ಪಿರಾಮಿಡ್ ಪುರುಷ- ಸಮಾಧೀರಚನಾ ಕೌಶಲವು ಅನುಭವಕ್ಕೆ ಬರುತ್ತದೆ. ಈ ಗ್ರಂಥಗಳು ಶ್ರದ್ಧಾಸ್ಥಾನವಾಗಿರುವ ಈ ಭಾರತೀಯರು 'ಶ್ಮಶಾನದಲ್ಲಿ ಶಾಂತಿಪಾಠ' ಹೇಳುತ್ತಿರುವ-ಕೇಳುತ್ತಿರುವ ಹಾಗಿನ ದೃಶ್ಯವು ಇಡೀ ಭಾರತದ ಉದ್ದಕ್ಕೂ ಕಾಣದೊರೆಯುತ್ತಿರುವಲ್ಲಿ, ದಕ್ಷಿಣಕಪರ್ದ ವ್ಯಾಸನ=ಭಾನಾಮತಿಯ ಅಭಿಚಾರ ಕೃತ್ಯದ ಅಗಾಧ ಸಾಮರ್ಥ್ಯವು ಸಿದ್ಧವಾಗುತ್ತಿಲ್ಲವೇ? ಡಾ. ಸುಕಟಣಕರರ ಮಾತಿನಲ್ಲಿ, ಅವರಿಗೆ ಅರಿಯದೆಯೆ ಹೊರಹೊಮ್ಮಿ ಬಂದ Dramatic Irony ರೂಪದ ಒಂದು ವಿಚಾರ ಚಿಂತ್ಯವಿದೆ.

> "Whether we realise not, but it remains a fact, we in India are still under the spell of Mahabharat"[೧೦]

ಆದರೆ, ಕೊನೆಯಲ್ಲಿ ಒಂದು ಪ್ರಶ್ನೆ-ಆದಿತ್ಯ : ನೆತ್ತಿಗಣ್ಣಿನ ಈ ಪುರಿಶಯ=ನಾರ-ಅಯನ : 'ಭಗ'ವಂತನು, ಮಹಾಭಾರತ, ಗೀತೆಯಲ್ಲಿ ಮಾತಾಡಿದ್ದಾನಲ್ಲ! ಈ ಪವಾಡ : ಚಮತ್ಕಾರ ಶಕ್ಯವಾದದ್ದು ಹೇಗೆ? ಈ ಅ-ಮಾನುಷ ಮಾತಿನ ಅಭಿವ್ಯಕ್ತಿ ಮಾಧ್ಯಮವು ಯಾವುದು? ಈ ಪ್ರಶ್ನೆಗೆ ಉತ್ತರವೂ ಇಲ್ಲಿಯೇ ಇದೆ : 'ಪುರಿ-ಶಯ' ಭಗ-ವಂತನ ವಾಣಿಯಲ್ಲಿ 'ಪುರಿ' ಮತ್ತು 'ಶಯ' ಇಬ್ಬರ ಪಾಲೂ ಇದ್ದಿರಲೇಬೇಕು; ಅಲ್ಲವೇ? 'ಪುರಿ-ಶಯ' ಶಕ್ತಿಯ ವಾಣಿಯಲ್ಲಿ ಇಬ್ಬರ ಪಾಲೂ ಇರಬೇಡವೆ? ಈ ವೇದ ಹೇಳುತ್ತದೆ : ತುರೀಯಂ ವಾಚಃ ಮನುಷ್ಯಾಃ ವದಂತಿ!![೧೧]

ಈ ಯಾತುಕೃತ್ಯವು ತುಂಬಾ ತೊಡಕಿನದು! ಸುಳಿಯಲ್ಲಿ ಸುಳಿ : ಚಕ್ರವ್ಯೂಹ ಇದರ ಒಳಹೊಕ್ಕವನು ಜೀವದಿಂದ ಹೊರಬರುವ ಸಾಧ್ಯತೆ ಕಡಮೆ! ಈ ವೇದದ ಯಾತು : ಮೋಸ ತರುತ್ತದೆ, ಎಂಬುದನ್ನು ಇಲ್ಲಿಯೂ ಖಚಿತಪಡಿಸಿ ಅರಿಯಬಹುದಾಗಿದೆ. 'ತುರೀಯಾ' ಮತ್ತು 'ಚಮಸ್' ಈ ಪರಿಭಾಷೆಯ ಕಣ್ಕಟ್ಟಿನ ಔಚಿತ್ಯವನ್ನು ಪ್ರಾಮಾಣಿಕ ರೀತಿಯಿಂದ ಉಳಿಸಿಕೊಂಡು ಬರುವ ಸಜ್ಜನಿಕೆ ಇಂದಿನ ಈ ಸನ್ತ, ಮಹಂತ, ಶರಣ, ಸಿದ್ಧವರ್ಗದ ಕುಮಾರ-ಕುಮಾರೀ ಸಂಪ್ರದಾಯ ಪ್ರಸ್ಥಾಪಕರಲ್ಲಿ ಇದ್ದುದಾಗಿದ್ದರೆ ಈ ದಿವ್ಯಾಧ್ಯಾತ್ಮವು-ನರ(ಳ) ಸಂಪ್ರದಾಯಗಳು-Mysticism-ಅಸ್ತಿತ್ವದಲ್ಲಿ ಬರುವ ಶಕ್ಯತೆಯೇ ಇದ್ದಿಲ್ಲ! ಪರಿಭಾಷಾ ನಾಶದ ಒಂದು ಮಾದರಿ : 'ಸತ್ಯ' ಮತ್ತು 'ಸತ್‌ತ್ಯ' ಇವೆರಡರೊಳಗಿನ ಅಂತರವು ಇಲ್ಲವಾದದ್ದು ಯಾವಾಗ? ಜೀವನ : ಸೂರ್ಯ : ಋಷಿ ಮತ್ತು ಜೀವಿತ : ಜ್ಯೋತಿ : ಮುನಿ ಈ ಪರಿಭಾಷೆಯೊಳಗಿನ ತಾರತಮ್ಯವು ನಷ್ಟವಾಗುವುದರೊಡನೆಯೇ, ಸತ್ಯ ಮತ್ತು ಸತ್‌ತ್ಯ ಇವೆರಡರಲ್ಲಿ ಅಂತರವು ಇಲ್ಲವಾಗಿದೆ! ಪ್ರಸ್ತುತ 'ವಾಕ್' ಮತ್ತು 'ವಾಣಿ' : ಧಾನ್ಯ ಕೇರಿ ಹಸನಾಗಿಸುವಂತೆ (ಸಕ್ತುಂ ಇವ ತಿತ ಉನಾ ಪುನಂತಃ) 'ಧೀ' ಶಕ್ತಿಯ ಧೀರರು ಅಭಿಜಾತ ವಿಮರ್ಶಾಶಕ್ತಿಯ ಮನಃಸಾಮರ್ಥದಿಂದ ವಾಕ್ಕನ್ನು ರೂಪಿಸುತ್ತಾರೆ. ಇಂತಹ ವಾಕ್ಕನ್ನು ಪಡೆವ 'ಮನು'ಜರಿಗೆ 'ಭದ್ರಾಲಕ್ಷ್ಮಿ'ಯ. ಸಾನ್ನಿಧ್ಯವು ನಿಶ್ಚಿತ ಎಂದು ಹೇಳುತ್ತದೆ.[೧೨]

ಈ ವಾಕ್ಕು ವೈಯಕ್ತಿಕವಲ್ಲ. 'ಅವರವರ ಅರ್ಥ ಅವರವರ ಪಾಲಿನ ಸತ್ಯ' ಇಂತಹ ಅಮಂಗಳಕ್ಕೆ ಆಮಂತ್ರಣವನ್ನೀಯುವ 'ತುರೀಯಾ' ಅಥವಾ 'ಗೀಃವಾಣ-ವಾಣಿಯು 'ವಾಕ್' ಅಲ್ಲ. 'ತುರೀಯಾ' ಇದನ್ನು 'ವಾಣಿ' ಎನ್ನದೆ, 'ವಾಕ್ಕು' ಎಂದಿರುವಲ್ಲಿ ಸತ್ಯದ ಅಪಲಾಪವಾಗುತ್ತಿದೆ. ಮೇಲಣ ಋಕ್ಕಿನಲ್ಲಿ, ಬಂದಿರುವ 'ಮನುಷ್ಯಾಃ' ಎಂಬಲ್ಲಿಯೂ ಮೋಸ ಇದೆ. 'ತುರೀಯಾ ವಾಣಿ' ಇದು ನಿಜವಾಗಿಯೂ 'ಪುರಿ-ಶಯ'=ವ್ಯಕ್ತಿ : ಅಮಾನವ : ನರ(ಳ)ರುಗಳ ಅಭಿವ್ಯಕ್ತಿ! ಆಸುರೀಶಕ್ತಿ. ಅವರವರ ಅಂತರ್ 'ಅಂಗ' ಮತ್ತು ಅಂತಃ'ಕರಣ'= ವ್ಯಕ್ತಿಗಳೊಳಗಿನ ಸೂಕ್ಷ್ಮ ಸ್ವರೂಪದ ಯೋನಿಲಿಂಗೈಕ್ಯದಲ್ಲಿ ಹೊರಡುವ ಅನಾಹತನಾದದ ಒಂದು ಪ್ರಕಾರ! ಇದನ್ನು ಅಂತರ್‌ವಾಣಿ' ಎನ್ನಬಹುದು. ಅಂತರ್‌ವಾಣಿಯ ನೇತಾರರಿಗೇ ಪಟ್ಟ ಇಂದಿನ ಭಾರತದಲ್ಲಿ! ಇವರು

ನರೋತ್ತಮರು. 'ತುರೀಯಾ ವಾಣಿ'ಯ ಕೂಲಂಕಷ ಸಮೀಕ್ಷೆಗೆ ಇಲ್ಲಿ ಸ್ಥಳ ಸಾಲದು.* ವೇದೋಪನಿಷತ್ತಿನೊಳಗೆ ಬರುವ 'ತುರೀಯ' ಉಲ್ಲೇಖಗಳನ್ನೆಲ್ಲ ಸಂಗ್ರಹಿಸಿ, ಚಮಸ-ತುರೀಯಾ ತೊಡಕನ್ನು ಬಿಡಿಸಿ ಮಾಡುವ ಇದರ ವಿವೇಚನವು ಒಂದು ಸ್ವತಂತ್ರ ಪ್ರಬಂಧವೇ ಆಗಲಿದೆ.

ಅಂಗ-ಕರಣದ ಈ ವಾಣಿಯ ಸಮೀಕ್ಷೆಯ ಇನ್ನೂ ಒಂದು ಪದರು ಬೇರೆಯೇ ಇದೆ! ಮಾದರಿಗಾಗಿ ನರ(ಳ)ರೆಂದು ವರ್ಣಿತ ಮರುತರು ತಮ್ಮ ವಾಣ ಬಾಣ (ಕರಣ) : ಕೊಳವೆ ಊದಿ ನಾದವಾಣಿಯನ್ನು ಹೊರಹೊಮ್ಮಿಸುತ್ತಿರುವ ಈ ವರ್ಣನೆ ನೋಡಿಃ[೧೩]

'ಧಮಂತೋ ವಾಣಂ ಮರುತಃ
ಸುದಾನವೋ ಮದೇ ಸೋಮಸ್ಯ ರಣ್ಯಾನಿ ಚಕ್ರಿರೇ!

ಇದರೊಳಗಿನ ಪ್ರತಿಪದಾರ್ಥದ ವಿವರಣೆ ಜರೂರು ಇದ್ದರೂ ಆ ಆಳಕ್ಕೆ ಇಳಿಯಲು ಮನಸ್ಸು ಒಪ್ಪುವುದಿಲ್ಲ. ಮುಖ್ಯ ಕರ್ತೃ: ಮರುತರು ಎಂದರೆ ನಳನ ಉಸಿರು-ಗಾಳಿ! ಇವರು ಎಂತಹ ಮರುತರು? ವಾಣಂ ಧಮಂತಃ ಮರುತಃ 'ವಾಣ>ಬಾಣ ಈ ಅರ್ಥವು ನಿಶ್ಚಿತವಿದೆ. ಆದರೆ, ಭಾಷ್ಯಕಾರರು ವಾಣಕ್ಕೆ "ಶತಸಂಖ್ಯಾಭಿಃ ತಂತ್ರಿಭಿಃ ಯುಕ್ತಂ ವೀಣಾ ವಿಶೇಷಂ" ಎಂಬ ಸ್ಪಷ್ಟೀಕರಣ ಹೇಳುತ್ತಾರೆ. ಇಲ್ಲಿಯ 'ಧಮ್' ಆಖ್ಯಾತದ 'ಧಮಂತಃ' ಪದಕ್ಕೆ 'ನುಡಿಸುವ' ಎಂಬರ್ಥವೇ ಹೊರತು 'ಬಾಜಿಸುವ' ಎಂದಲ್ಲ. ಗ್ರೀಕ್ 'ಪ್ಯಾನ್' ಇವನು ತನ್ನ ಕೊಳವೆ ಊದುತ್ತಿದ್ದ ಪವಾಡ ಕಥೆಯಿದೆ. ವ್ಯಕ್ತಿ ತನ್ನದೇ ಆದ ಸ್ವತಂತ್ರ ಕವನ ನುಡಿಸುವ ಕೃತಿಯ ಹೋಲಿಕೆ ಇಲ್ಲಿದೆ. ಈ ವೇದದಲ್ಲಿ ಇನ್ನೊಂದೆಡೆಗೆ ಒಬ್ಬ ಕುಮಾರನು ತನ್ನ 'ನಾಳಿ' ನುಡಿಸುವ ವರ್ಣನೆಯಿದೆ.[೧೪] ಅವರವರು ತಮ್ಮ 'ನಾಳಿ'ಯ ಮೂಲಕ ಮಾತಾಡುತ್ತಾರೆ.

'ಅಂಭೃಣೀ : ಷೋಡಶಿ : ಕುಮಾರಿ, ಅದಿತಿ, ಸರಸ್ವತಿಯರ ಪರ್ಯಾಯ ನಾಮ. ಇವಳು ಮರುತರು, ವಸುಗಳು, ಆದಿತ್ಯರು ವಿಶ್ವೇದೇವರುಗಳ ಸಹ ಚರಿಸುತ್ತೇನೆ ತಾನು ಎಂಬ ಗೈಯಾಳಿ ಗಣ್‌ಡು ಬೀರೆ. 'ರುದ್ರಾಯ ಧನುಃ ಆತನೋಮಿ, ಬ್ರಹ್ಮದ್ವಿಷೇ ಹಂತವೇ ಶರವೈ'=ಬಾಣ (ಶರ) ಹೂಡಲು ರುದ್ರನಿಗಾಗಿ ಧನುಸ್ಸನ್ನು ಹಿಗ್ಗಿಸಿ ನಿಂತಿದ್ದೇನೆ. ಯಾತಕ್ಕಾಗಿ ಶರಸಂಧಾನ? ಬ್ರಹ್ಮದ್ವೇಷಿಗಳನ್ನು ಕೊಲ್ಲಲು!

ಈ ಸಂದರ್ಭದಲ್ಲಿ ತಲೆದೋರುವ ಪ್ರಶ್ನೆಗಳು ಇವು

೧. ಅದಿತಿಯ ಪರ್ಯಾಯರೂಪ ಈ ದೇವಿ ಮಾತಾಡಿದ ಬಾಯಿ ಯಾವುದು?
ಏಕೆಂದರೆ, ಇವಳೂ 'ಅದಿತಿ' 'ಸರಸ್ವತಿ'ಯರ ಪರ್ಯಾಯ!
೨. ಈ ಲೈಂಗಿಕ ಬ್ರಹ್ಮನ್‌ಶಕ್ತಿಯ ದ್ವೇಷಿಗಳು ಯಾರು?

ಈ ವೇದದಲ್ಲಿಯೇ ಇನ್ನೊಂದು 'ಬ್ರಹ್ಮನ್' ಉಲ್ಲೇಖವೂ ಇದೆ : 'ವಿಶ್ವಾಮಿತ್ರಸ್ಯ ಬ್ರಹ್ಮೇದ್ರಂ ರಕ್ಷತಿ ಭಾರತಂ ಜನಮ್'[೧೫] ವಿಶ್ವಾಮಿತ್ರನ 'ಬ್ರಹ್ಮನ್' ಧೀ ಪ್ರಚೋದಕ ಸವಿತೃಮಂತ್ರ! ಆದಕಾರಣ, ಅಂಭೃಣೀಯ ಈ ಬ್ರಹ್ಮನ್, ದಕ್ಷಿಣಕಪರ್ದ ವಶಿಷ್ಠ=ವ್ಯಾಸ ಪಂಥೀಯರದೇ ಇರಲಿಕ್ಕೆಬೇಕು. ಇದು ಉಭಯಲಿಂಗೀ ಬ್ರಹ್ಮನ್ ಶಕ್ತಿ! 'ಬ್ರಹ್ಮ-ಚರ್ಯ ಎಂದರೇನು?

'ದ್ವೇ ವಾವ ಬ್ರಹ್ಮಣೋ ರೂಪೇ ಮೂರ್ತಂ ಚ ಅಮೂರ್ತಂ ಚ'

---

* ತುರೀಯ ಎಂದರೆ ನಾಲ್ಕು ಎಂದು ಅರ್ಥ. ತತ್ವಜ್ಞಾನದಲ್ಲಿ ನಾಲ್ಕು ಅವಸ್ಥೆಗಳ ವಿವರಗಳುಂಟು. ಸ್ವಪ್ನ, ಜಾಗ್ರತ, ಸುಷುಪ್ತಿ ಮತ್ತು ತುರೀಯ ಎಂದು ಈ ಅವಸ್ಥೆಗಳಿಗೆ ಹೆಸರು. ಆತ್ಮವು ಈ ನಾಲ್ಕು ಅವಸ್ಥೆಗಳಲ್ಲಿ ಇರುತ್ತದೆಂದು ಸಂತರು ಹೇಳುತ್ತಾರೆ. ವೈದಿಕ ದರ್ಶನಗಳಲ್ಲಿ 'ತುರೀಯ'ಕ್ಕೆ ಮುಖ್ಯಸ್ಥಾನವುಂಟು. ಆತ್ಮದ ಅಂತಿಮ ನೆಲೆ ಅದು. ಅಲ್ಲಿ ಭಾ, ಸ್ಮೃತಿ, ಪೂರ್ವಬೋಧ ಯಾವುವೂ ಆತ್ಮಕ್ಕೆ ಇರುವುದಿಲ್ಲವೆಂದು ದರ್ಶನಗಳು ಹೇಳುತ್ತವೆ. ಈ ಹಿನ್ನೆಲೆಯಲ್ಲಿ ಶಂಬಾ ಅವರು ಅಂತರ್‌ವಾಣಿ, ತುರೀಯಾ ವಾಣಿಗಳ ಬಗೆಗೆ ಚರ್ಚಿಸಿದ್ದಾರೆ (ಸಂ)

ಇದುವೆ ಪಿಂಡ (ಕಣ್) ಮತ್ತು ಬ್ರಹ್ಮ ಅಂಡ. (ಗಣ್) ಇವೆರಡೂ 'ಬ್ರಹ್ಮ'ಗಳು ಚರಿಸುವಾಗಿನ ಏಕಾತ್ಮಕತೆಯಲ್ಲಿ ಸ್ಫುರಿಸುವ ವಾಣಿ : ಅಂಭೃಣಿ ಹೇಳುವ ಬ್ರಹ್ಮನ್ ಆಗಿರಲಿಕ್ಕೆ ಬೇಕು.

ಸವಿತೃ ಸಂಪ್ರದಾಯದ 'ಧೀ'=ಪ್ರಜ್ಞಾಶಕ್ತಿಯಿಂದ ಪ್ರೇರಿತವಾಕ್ಕೂ, ಇರುವಾಗ, ಈ ಪಿಂಡ-ಬ್ರಹ್ಮ-ಅಂಡ ಐಕ್ಯದ ಸಾಧನದ ಮೂಲಕ ಸ್ಫುರಿಸುವ 'ವಾಣಿ' ಶಿಷ್ಟಮಾನ್ಯವಾಗಿದೆ. ಈ ವೇದದಲ್ಲಿ, ಅದು ಇಂದಿಗೂ ಉಳಿದಿದೆ. ವೇದಭಾಷ್ಯಕಾರರು ಇದನ್ನು 'ಮಾಧ್ಯಮಿಕಾ ವಾಣಿ' ಎನ್ನುತ್ತಾರೆ. ಕೆಲವು ವರುಷಗಳ ಹಿಂದೆ, ನಮ್ಮ ಸಂಸ್ಕೃತಿಯಲ್ಲಿ ಎರಡು 'ವಾಕ್ಕು' ಏಕೆ? ನನ್ನ ಸಂದೇಹ ಪರಿಹಾರಕ್ಕಾಗಿ ಮಾಡಿದ ಅಲ್ಪಪ್ರಯತ್ನ ವಂದ್ಯ ಪ್ರೊ. ಟಿ. ಎಸ್. ವೆಂಕಣ್ಣಯ್ಯ ಅವರ 'ಸವಿನೆನಪು' ಈ ಬೃಹದ್ ಗ್ರಂಥದಲ್ಲಿ ನಮೂದು ಇದೆ. ಭಾರತೀಯ ಪೂರ್ವ ಪರಂಪರೆಯಲ್ಲಿ ಎರಡು ವಾಕ್ ಹೀಗೆ ಏಕೆ ? 'ಸವಿತೃ' ಮತ್ತು ಇನ್ನೊಂದು ಸರಸ್ವತಿ, ಅಂಭೃಣಿ ಇತ್ಯಾದಿ. ಆ ಬರೆಹ ಅಚ್ಚಿನ ದೋಷಗಳ ವೈಪುಲ್ಯದಿಂದ ಓದಲು ದುರ್‌ಬೋಧವಾಗಿದೆ. ಅಲ್ಲದೆ, ಅಂದು ಸಮಸ್ಯೆಯ ಈ ತೊಡಕು ಗಮನಕ್ಕೆ ಬರಲೇ ಇಲ್ಲ! ಈ 'ಭಾನಾಮತಿ' ಯಾತು>ಜಾದು ಎಲ್ಲಿಲ್ಲಿಗೋ ತಳ್ಳಿಕೊಂಡು ಹೋಗುತ್ತದೆ! ಈ ಎಲ್ಲ ಸಂದಿಗ್ಧತೆಯ ಪರಿಹಾರಕ್ಕಾಗಿ ತಜ್ಞರ ಸಮಿತಿ ಏರ್ಪಡುವ ಆವಶ್ಯಕತೆಯಿದೆ. ಈ ತುರೀಯಾ ವಾಣಿ ಅರ್ಥಕ್ಕಾಗಿ.

'ಮಾಧ್ಯಮಿಕ' ಪಂಥದ ಬೌದ್ಧ ನಾಗಾರ್ಜುನನು ಅತ್ಯಂತ ವಿಖ್ಯಾತನು. ಇವನು ಶೂನ್ಯ [0] ಸಿದ್ಧಿಯ ಬಾಳ ಗುರಿಯವನು. ಆದರೆ, ಗೌತಮಬುದ್ಧನು ಬೋಧಿ (ಜ್ಞಾನ) ವೃಕ್ಷದ ಉಪಾಸಕನು! ಎಲ್ಲ ನರ(ಳ) ಸಂಪ್ರದಾಯಗಳಲ್ಲಿ 'ಅಂತರ್‌ವಾಣೀ' ಸಿದ್ಧಿಯ ಮೂಲಕ ಆಗುವ ಜ್ಞಾನವೇ 'ಜ್ಞಾನಿ' ಎಂಬ ನಂಬುಗೆ ಇದೆ. ಇವರಿಗೆ Revelation ಮಾತ್ರ ವಿಶ್ವಾಸಾರ್ಹ. ಪೈಥಾಗೋರಾಸ ಪಂಥೀಯ ತತ್ತ್ವಜ್ಞಾನದಿಂದಾಗಿ Greek made of thought' ವಿಪರೀತವಾಯ್ತು, ಎಂದು ಝೆಲ್ಲರನಂತಹ ಲೇಖಕರು ಹೇಳುತ್ತಾರೆ. ಆದರೆ, ಈ ಹೊಸ ತಿರುವಿನ ಸ್ವರೂಪವನ್ನು ವಿಶದ ಪಡಿಸಿದವರು ನನಗೆ ಕಂಡಿಲ್ಲ! ಜರ್ಮನಿಯ ಉಸ್ನನರು ಮಾತ್ರ 'Candle light': ಜ್ಯೋತಿರ್‌ಲಿಂಗ ಪೂಜೆ ಎಂಬುದನ್ನು ಬಯಲಿಗೆ ಎಳೆದದ್ದು ಸ್ವಲ್ಪಮಟ್ಟಿಗೆ ಕೇಳ ಬಂದಿದೆ : ಓದಲು ಆಗಿಲ್ಲ-ಜರ್ಮನ್ ಭಾಷೆಯಿಂದಾಗಿ.

ಪೈಥಾಗೋರಾಸನ ದೇವರು 'One : 1 : 10'ಸ್ವರೂಪದ್ದು. ಇದನ್ನು ಅವನು ಪ್ರಪಂಚವನ್ನು ಪರಿಮಿತಿಯಲ್ಲಿ ಇರಿಸುವ 'Limit'ಎಂದು ಹೆಸರಿಸಿದ್ದಾನೆ. ಈ 'Limit'ಮತ್ತು 'Unlimited'ಸೇರಿ ಸೃಷ್ಟಿಕ್ರಿಯೆ ಆಗುತ್ತದೆ, ಎಂದು ಹೇಳುತ್ತಾನೆ. ಭಾರತೀಯ 'ಪುರಿ-ಶಯ' ಮತ್ತು ಪೈಥಾಗೋರಾಸನ Limit ಈ ದೇವ ಇವೆರಡರಲ್ಲಿ ಇಷ್ಟು ಸಾಮ್ಯ ಹೇಗೆ? ಯಾರಿಂದ ಯಾರು, ಸ್ವೀಕರಿಸಿದರು? ಇಜಿಪ್ತವೇ ಪೈಥಾಗೋರಸನಿಗೆ ಗುರುಸ್ಥಾನದಲ್ಲಿ ಇತ್ತಂತೆ. 'Logos' : 'ಅಗ್ನಿಸ್ತಂಭ' ಉಪಾಸಕ ತರುಣ ಹಿರಾಕ್ಲಿಟಸ್ ಇವನು ಪೈಥಾಗೋರಾಸನ ಪ್ರಭಾವಕ್ಕೆ ಒಳಗಾಗಿದ್ದರೂ ಆ ವೃದ್ಧ 'ಜ್ಞಾನಿ'ಯನ್ನು, ಕಾರಣ ಹೇಳದೆಯೇ ಒಮ್ಮೆ 'a polymathy, deceit' ಎಂದೂ ಇನ್ನೊಮ್ಮೆ 'Prince of Cheats' ಎಂದೂ ಆಕ್ಷೇಪಿಸಿದ್ದಾನೆ! ಅದರಂತೆ, ಭಾರತೀಯ ಪರಂಪರೆಯಲ್ಲಿ ವಸಿಷ್ಠನನ್ನು 'ಯಾತುಧಾನ'* ಎಂದು ಆಕ್ಷೇಪಿಸಿದ್ದಕ್ಕೆ ಆ ವಸಿಷ್ಠನು ಉರಿದು ಶಪಿಸಿದ್ದಾನೆ : "ನನ್ನನ್ನು 'ಯಾತುಧಾನ' ಎನ್ನುವರು ಸುಟ್ಟು ಹೋಗಲಿ-ನಾಶವಾಗಲಿ" ಎಂದು!

---

* ಯಾತು ಎಂದರೆ ಜಾದು. ಧಾನ ಎಂದರೆ ಪ್ರಯೋಗಿಸುವುದು. ಜಾದುವನ್ನು ಪ್ರಯೋಗಿಸುವವನು, ಯಾರೋ ಅವನು 'ಯಾತುಧಾನ'. ಇದು ಸಂಸತದ ಪ್ರಾಚೀನ ಪ್ರಯೋಗ. ವೈದಿಕಭಾಷೆಯಲ್ಲಿ ಇದು ಹೇಗೋ ಉಳಿದುಕೊಂಡು ಬಂದಿದೆ. ಅಥರ್ವಣವೇದದಲ್ಲಿ ಯಾತು, ಯಾತುಧಾನ ಎಂಬೀ ಬಗೆಯ ಶಬ್ದಶಿಲ್ಪಗಳು ಉಂಟು. ಇದು block magicಗೆ ಸಂಬಂಧಿಸಿದ ಪರಿಭಾಷೆ. (ಸಂ)

ಕ್ರೈಸ್ತ ಪಂಥವು ನಂಬುವ 'Revelation' ಅರಿಕೆಗೆ ಬಂದದ್ದು ಹೇಗೆ? ಯಾರಿಂದ? 'Logos' ಉಪಾಸಕ ಹಿರಾಕ್ಲಿಟಸ್ ಹೇಳುತ್ತಾನೆ-'Logos' ಕಿವಿಯಿಂದ ಅರಿಕೆಗೆ ಬರುವ ಜ್ಞಾನ! ಜ್ಯೋತಿರ್ಲಿಂಗದ ಮಾತು. ಭಾರತೀಯ 'ವೇದ'=ಶ್ರುತಿ! ಆದಕಾರಣ, ಇದು ಮಾಧ್ಯಮಾ ವಾಣಿ=ಅ-ಪೌರುಷೇಯ ವಾಣಿ, ತುರೀಯಾ-ವಾಣಿಯೇ ಇರಬೇಕು! ವಾಕ್, ವಾಣಿ ಈ ಪ್ರಕಾರಗಳ ನಾಮಾಂತರಗಳ 'ಯಾತು' ದಿಗ್‌ಭ್ರಾಮಕವಿದೆ : ಪರಾ, ಪಶ್ಯಂತಿ, ಮಧ್ಯಮಾ, ವೈಖರಿ! ಈ ವೈಖರಿ ಯಾವುದು? 'ಮಧ್ಯಮಾ'= 'ಮಧ್ಯಮಾ'=ನಡುವಣ, 'ಭೀಮ'ನಿಗೆ 'ಮಧ್ಯಮ' ಪಾಂಡವ ಎನ್ನುತ್ತಿದ್ದರು; ಗಾಳಿ : ವಾಯುದೇವರು ತಾನೆ? ಋಗ್ವೇದದಲ್ಲಿ ನನಗೆ, ಪರಾ, ಪಶ್ಯಂತಿ, ಮಧ್ಯಮಾ, ವೈಖರಿ ಈ ಪರಿಭಾಷೆ ಕಂಡಿಲ್ಲ. ತುರೀಯಾ=ನಿದ್ರಾ, ಸ್ವಪ್ನ, ಸುಷುಪ್ತಿ-ನಾಲ್ಕನೆಯದು ತುರೀಯ! ರಾತ್ರಿಯ ವಿಭಾಗಗಳು ಇವು! ಹಗಲಿನ ಉಪಾಸಕರ ಭೂಃ, ಭುವಃ ಮತ್ತು ಸ್ವಃ (ಸುವಃ) ಈ ಪಾತಳಿಗಳ ದಿಕ್ಕು ಜೀವನ: ಪ್ರಕಾಶದ ಕಡೆಗಿನದು. ಆದರೆ, ತುರೀಯದ ದಿಕ್ಕು? ಭಾರತೀಯ ಪೂರ್ವಪರಂಪರೆಯೊಳಗಿನ ಈ ಪಾತಳಿ=ವ್ಯಾಹೃತಿ ನಾಶಮಾಡಿರುವ ಅಭಿಚಾರ ಕೃತ್ಯವೂ ಒಂದು ಸ್ವತಂತ್ರ ಪ್ರಬಂಧದ ವಿಷಯ ಹೌದು. ಆದರೆ, ಇದನ್ನು ವಿಸ್ತಾರಕ್ಕಾಗಿ ಬಿಟ್ಟು ಬಿಡಬೇಕಾಗುತ್ತಿರುವ ವಿಷಾದ ಸಹಿಸಲೇಬೇಕು : ಇಲ್ಲದಿದ್ದರೆ ಈ 'ಯಾತು' ಕಾಲಹರಣಕ್ಕೆ ಕಾರಣವಾಗಲಿದೆ!

ಈ ತುರೀಯಾ, ರಾತ್ರಿಯ ಕೊನೆಯ ಯಾಮದ ಈ ಸಿದ್ಧಿ, ಪುರಿ-ಶಯ ಪುರುಷಾರ್ಥ ಸಿದ್ಧಿಯ ಅಂಗವೇ ಇದ್ದಲ್ಲಿ, ಇದು 'ಪುರಿ' + 'ಶಯ' ಈ ಉಭಯ ಶಕ್ತಿಗಳ ಏಕಾತ್ಮಕತೆಯಲ್ಲಿ ಸ್ರವಿಸುವ, ದ್ರವ : ರಸರೂಪ, ಸ-ರಸ ವಾಣಿ ಇರಬೇಕಾಗುತ್ತದೆ! ಆದಕಾರಣ, ಸ-ರಸ ನ-ಚಿ ಕೇತಾಗ್ನಿಗಳ ಮಿಥುನದ ಪರಿಣತಿ. ಈ ತುರೀಯಾ ವಾಣಿ ಇರಬೇಕಾಗುತ್ತದೆ! 'ಪುರುಷೋ ವಾವ ಗೌತಮಾಗ್ನಿ'ಃ ಯೋಷಾ ವಾವಾ ಗೌತಮಾಗ್ನಿಃ![೧೬]

ಈ ಗೋತಮ>ಗೌತಮ=ಚಂದ್ರ! ಈಜಿಪ್ಟಿನ ಹ್ಯಾಥೋರ್ ಗೋವು, ಚಂದ್ರ! 'ವಾಚಂ ಧೇನುಂ ಉಪಾಸೀತ![೧೭] ಈ ಧೇನು : ಗೋವು=ಪಶುರೂಪ ಈ ವಾಣಿಯನ್ನು ವಾಚಂ<ವಾಕ್ ಎನ್ನಲು ಬರಲಾರದು.

ಪುರಿ-ಶಯ ಮಿಥುನದ ಈ 'ಪುರಿ'=ಅಮೃತಸ್ಯನಾಭಿಃ 'ಅದಿತಿ' ಇರಬೇಕು, ಎಂದು ಈ ಮೊದಲು ಕಂಡದ್ದಾಗಿದೆ. ಈ ತುರೀಯಾದಲ್ಲಿ 'ಅದಿತಿಯ ಪಾಲು ಇದೆ' ಎನ್ನಲು ಪ್ರಮಾಣಗಳೇನು?

> 'ಯತ್ ವಾಕ್ ಪಶವಃ ವದಂತಿ'
> ದೇವೀಂ ವಾಚಂ ಅಜನಯಂತ ದೇವಾಃ, ತಾಂ ವಿಶ್ವರೂಪಾಃ ಪಶವಃ ವದಂತಿ
> ಸಾ ನಃ ಮಂದ್ರಾ ಇಷಂ ಊರ್ಜಂ ದುಹಾನಾ ಧೇನುಃ
> ವಾಕ್ ಅಸ್ಮಾನ್ ಉಪಸ್ತುತಾ ಆ ಏತು![೧೮]

ಭಟ್ಟಾಕಳಂಕನು 'ಸರ್ವಭಾಷಾ ಸರಸ್ವತಿ', 'ಸರ್ವಭಾಷಾಮಯೀ ಭಾಷಾ' ರೂಪ ಸರಸ್ವತೀ ಎಂಬುದಾಗಿ ವರ್ಣಿಸಿದ್ದು ವೇದಮಾನ್ಯವಿದೆ! ಕೇಶಿರಾಜನು ತನ್ನ ವ್ಯಾಕರಣದಲ್ಲಿ "ನಾಭಿಮೂಲದಿಂದ' ಜನಿಸುವ ಧವ-ಲ ಶಬ್ದದ್ರವ್ಯ"ದ ವರ್ಣನೆ ಮಾಡಿದ್ದಾನೆ. 'ನಾಭಿಮೂಲದ ಈ ದ್ರವ್ಯ' ಹೊರಬರಲು 'ನಾಭಿ-ರಾಜ'ನೂ ಸಹಕರಿಸುವ ಆವಶ್ಯಕತೆಯಿದೆ. ಇದು 'ಪುರಿ-ಶಯ' ಶಬ್ದಪ್ರತಿಮೆಯಲ್ಲಿ ಅಭಿಪ್ರೇತವಿದೆ. ಸಾಯಣಭಾಷ್ಯವು ಹೀಗೇ ಇದೆ. ಇಲ್ಲಿ 'ವಾಕ್' ಪದವು 'ವಾಣಿ' ಅರ್ಥದ್ದು. 'ಏಷಾ ಮಾಧ್ಯಮಿಕಾ ವಾಕ್ ಸರ್ವಪ್ರಾಣ್ಯಾಂತರ್ಗತಾ....ವಿಭೂತಿಂ ಉಪದರ್ಶಯತಿ' ಈ ಪವಾಡ=ವಿಭೂತಿ ಶಕ್ತಿಯ ವಿವರಣದಲ್ಲಿ 'ಮಾಧ್ಯಮಿಕಾ ವಾಣಿ'ಯನ್ನು 'ಮಾಧ್ಯಮಿಕಾ ದೇವಾಃ ಅಜನಯಂತ' ಎಂದಿರುವಲ್ಲಿ ಅಸುರಲಿಂಗ ಶಕ್ತಿಯನ್ನೇ ದೇವ ಎಂದಿರುವ ಘೋರ ಅಪರಾಧವು ಸಂಭವಿಸಿದೆ! ಈ ಧೇನು=೦= ವಾಣಿ, 'ಊರ್ಜಂ ದುಹಾನಾ'='ಪಯೋರೂಪ ರಸವನ್ನು ಸ್ರವಿಸಿಸುವವಳು' ಇದು ವಿಶ್ವರೂಪ ಪಶುಭಾಷೆ! ಆದರೆ, 'ಜಗತ್ ಜನನಿ ಅದಿತಿ: ಪುರಿಯ ಹೆಸರು ಎಲ್ಲಿ? ಎನ್ನುವಿರಾ? ಇಕ್ಕೊಳ್ಳಿ :

ಮಾತಾ ರುದ್ರಾಣಾಂ, ದುಹಿತಾ ವಸೂನಾಂ, ಸ್ವಸಾ ಆದಿತ್ಯಾನಾಂ ಅಮೃತಸ್ಯನಾಭಿಃ।
ಪ್ರ ನು ವೋಚಂ ಚಿಕಿತುಷೇ ಜನಾಯ ಮಾ ಗಾಂ ಅನಾಗಾಂ ಅದಿತಿಂ ವಧಿಷ್ಟ.[೧೯]

ಈ ಗೋಪುರ ಅದಿತಿಯು, ರುದ್ರಿಯ ಮರುತರ-ಗಾಳಿದೇವರ ತಾಯಿ : ವಸುಗಳು ಎಂಬುವರ ಮಗಳು; ಆದಿತ್ಯರ ಸಹೋದರಿ. ಹೇ ಜನಗಳೇ ನಿಮ್ಮಲ್ಲಿ ಒಂದು ಪ್ರಾರ್ಥನೆ, ಪಾಪರಹಿತವಿರುವ ಈ ಪಶು>ಹಸು ಹಿಂಸಿಸಬೇಡಿರಿ. ಭಾರತೀಯರು ಗೋ ಸೇವಕರು : ಗೋ ಪೂಜಕರು ಎಂಬ ಖ್ಯಾತಿ ಉಂಟಷ್ಟೆ? ಇಲ್ಲಿ ಗೋ=ಅಮೃತಸ್ಯನಾಭಿ ಈ ಗೋವಿನ ಒಡಲಿಲ್ಲ ೩೩ ಕೋಟಿ ದೇವರು.! ಇನ್ನು, ಇಲ್ಲಿ ಒಂದು 'ತಿರುವಿನ' ಸ್ಪಷ್ಟೀಕರಣವು ದೊರೆಯುತ್ತಿದೆ. ಋಷಿ ಎಂಬ ಈ ವಸಿಷ್ಠನ ಆಕೃತಿ ಯಾವುದು? ವಸಿಷ್ಠ ದಕ್ಷಿಣಕಪರ್ದನೇ ಏಕೆ? ಇವನು ಗೋಭಕ್ತನಿದ್ದನು. ಕಾಮಧೇನು ಪುತ್ರಿ 'ನಂದಿನೀ ವೃಷಭಿ ಬಸವಿ ವಸಿಷ್ಠನ ಮಾಧ್ಯಮಿಕಾ ವಾಣಿ! ಸವಿತೃ, ಪ್ರಾರ್ಥನಾಮಂತ್ರ ದ್ರಷ್ಟಾರನೆಂಬ ಸ್ವರ್‌ಪಾತಳಿಯ 'ಮನು'ಜ : ಮಾನವ ವಿಶ್ವ (ಶ್ವಾ) ಮಿತ್ರನು. (ಇವನು). ಕಾಮಧೇನು 'ನಂದಿನೀ ಆರಾಧನೆ'ಯಿಂದ ಬ್ರಹ್ಮರ್ಷಿ' ಎನಿಸಿದ್ದ ಪ್ರಾಣಲಿಂಗ ಪಾತಳಿಯ ವಸಿಷ್ಠನ ದ್ವೇಷಿಯಾಗಿದ್ದನಂತೆ! ಸೈನ್ಯಬಲದಿಂದ 'ನಂದಿನಿ'ಯನ್ನು ಅಪಹರಿಸಿ ಒಯ್ಯುವ ಪ್ರಯತ್ನದಲ್ಲಿ ವಿಫಲನಾದನಂತೆ. ತಾನೂ 'ಬ್ರಹ್ಮಪದವಿ' ಪಡೆಯಲು ತಪಸ್ಸಿಗೆ ಕುಳಿತನಂತೆ! ಇದೆಲ್ಲ ಕಳ್ಳನ ತಿರುಬೊಬ್ಬೆ!

'ಬ್ರಹ್ಮರ್ಷಿ' ಎಂಬ ದಕ್ಷಿಣಕಪರ್ದ ವಸಿಷ್ಠನ ಭಾನಾಮತಿ: ಅಭಿಚಾರ ಕೃತ್ಯ :

'ತತ್ ಸವಿತುಃ.....' ಈ 'ಸವಿತೃ' ಮಂತ್ರವು 'ಭಗ' ಸ್ವರೂಪಕ್ಕೆ ಮಾರ್ಪಟ್ಟಿರುವ ಈ ಎಡೆ 'ತುರಂ ಭಗಸ್ಯ ಧೀಮಹಿ' ಛಾಂದೋಗ್ಯದಲ್ಲಿ ಇದೆ.[೨೦] 'ವಸಿಷ್ಠಾಯ ಸ್ವಾಹಾಃ....' ಎಂಬ ಈ ಉಲ್ಲೇಖವು ಚಿಂತ್ಯವಿದೆ. ಇಲ್ಲಿಯೆ. 'ಕಂಸಂ ಚಮಸಂ......ಚರ್ಮಣಿ ವಾ ಸ್ಥಂಡಿಲೇ ವಾ; ವಾಚಮಯಂ....' ಈ 'ಚಮಸ' ಪಾತ್ರವು ಚರ್ಮದಿಂದ ಮಾಡಿದ್ದು, ಇಲ್ಲವಾದರೆ ಬರಿ ಈ 'ಹೆಸರು' ಸಹ ಸಾಕು, ಯಾತು ಕೃತ್ಯಕ್ಕೆ! ಇದರ ಮುಂದಿನ ಶ್ಲೋಕವು ಈ ಅಭಿಚಾರದ ಸ್ವರೂಪವನ್ನು ಬಯಲಿಗೆ ತರುತ್ತದೆ. ಏಷಃ ಶ್ಲೋಕಃ ಈ ಸಂಸ್ಕರಣವು ಮುಗಿದ ಬಳಿಕ 'ಸಃ ಯದಿ ಸ್ತ್ರೀಯಃ ಪಶ್ಯೇತ್ ಸಮೃದ್ಧ್ಂ ಕರ್ಮ ಇತಿ ವಿದ್ಯಾತ್।

ಯದಾ ಕರ್ಮಸು ಕಾಮೇಷು ಸ್ತ್ರೀಯಂ ಸ್ವಪ್ನೇಷು ಪಶ್ಯತಿ।
ಸಮೃದ್ಧಿಂ ತತ್ರ ಜಾನೀಯಾತ್.....

'ಹೆಣ್ಣು ಕನಸಿನಲ್ಲಿ ಕಂಡರೂ ಈ ಕೃತ್ಯದ ಸಾಫಲ್ಯದ ಸೂಚನೆ' ಎಂದು ಬಗೆಯಬೇಕು, ಬೃಹದಾರಣ್ಯಕದಲ್ಲಿ ಬರುವ ಉಲ್ಲೇಖವು ಇನ್ನೂ ಸ್ಪಷ್ಟವಿದೆ. ಇಲ್ಲಿ 'ಚಮಸ' : 'ತುರೀಯ' ಆಗಿದೆ![೨೧]

'ಏತತ್ ವೈ ಚತುರ್ಥಂ ತತ್ ತುರೀಯಂ ಪದಂ'

ಈ ಮಂತ್ರ ನೋಡಿ.[೨೨] ಅಹಂ ವಸಿಷ್ಠಾ ಅಸ್ಮಿ, ತ್ವಂ ತತ್ ವಸಿಷ್ಠಃ ಅಸಿ!.....ಈ ಧ್ಯಾನಸಂಕಲ್ಪವು ಕಣ್-ಗಣ್ ರೂಪವಾಗಿ ಮಾರ್ಪಡಲು 'ಪುರುಷಾಗ್ನೌ-ಯೋಷಾಗ್ನೌ' ನಡೆವ 'ಹವನ'ದ ವರ್ಣನೆಯಿದೆ.[೨೩]

'ಪ್ರಾಣಾಯ ಸ್ವಾಹಾ, ವಸಿಷ್ಠಾಯೈ ಸ್ವಾಹಾ, ಇತಿ ಅಗ್ನೌ ಹುತ್ವಾ.....[೨೪]

'ಸವಿತೃ' ಈ ಆಕೃತಿಯನ್ನು ಸ್ತ್ರೀರೂಪದ್ದಾಗಿಸುತ್ತಾರೆ : ಗಾಯತ್ರಿ! ಸಾವಿತ್ರಿ,[೨೫] ಈ ಅಭಿಚಾರ ಕೃತ್ಯವನ್ನು ಬಲ್ಲವರಿಗೆ 'ಗಾಯತ್ರಿ-ವಿದ್' ಎಂದು ಹೇಳಲಾಗುತ್ತಿತ್ತು.[೨೬]

ಈ ಸಂಸ್ಕರಣದಲ್ಲಿ 'ಪ್ರಾತರ್ ಆದಿತ್ಯಂ ಉಪಷ್ಠತೇ "ತತ್ ಸವಿತುಃ ವರೇಣ್ಯಮ್।" ಈ ಮಂತ್ರದಿಂದ ಪ್ರಾರಂಭವಾಗುವ ಈ ಸಂಸ್ಕಾರವು 'ವಿಷ್ಣುಃ ಯೋನಿಂ ಕಲ್ಪಯತು.....' ಈ ಗರ್ಭಾಧಾನ ಮಂತ್ರದ ವರೆಗೂ ಉಂಟು.[೨೭] ಇಲ್ಲಿಯೇ 'ಜಾಯಾ ಆರ್ತವಂ ವಿಂದೇತ್' ಹೆಂಡತಿ ಮುಟ್ಟಾದಲ್ಲಿ ಹೇಗೆ ನಡೆದುಕೊಳ್ಳಬೇಕು, ಎಂಬ ಸೂಚನೆಯೂ ಇದೆ.[೨೮] ಮಗುವು, ಕಪಿಲ, ಪಿಂಗಲ, ಶಾಮ ಯಾವ ವರ್ಣದ್ದು ಬೇಕೊ ಅದಕ್ಕೆ ತಕ್ಕ 'ಯಾತು' ಇಲ್ಲಿ ಸೂಚಿಸಲಾಗಿದೆ.

ನಿದ್ರಾ, ಸ್ವಪ್ನ, ಸುಷುಪ್ತಿ, ತುರೀಯಾ, ಈ ನಾಲ್ಕನೆಯ ಪದವು=ಚಮಸ ಪಾತ್ರವು, 'ವಾಣಿ' ಆದದ್ದು ಏಕೆ? ಹೇಗೆ? ಮನು ವೈವಸ್ವತ ಸಂಪ್ರದಾಯವು ಅದಿತಿ! ಆದಿತ್ಯ! ಪುರುಷ ಸಂಪ್ರದಾಯಗಳ ಮಾಟಗಳ ಮೂಲಕ ತನ್ನ ಬೆಲೆಗೆ ಎರವಾಗುತ್ತದೆ. ಇಂತಹ ಒಂದು ಕಣ್ಕಟ್ಟು ಶ್ರೀಮತ್ ಭಗವತ್ ಇರುವ ಈ ಗೀತೆಯಲ್ಲಿಯೇ ಉಂಟು, 'ಆದಿತ್ಯಾನಾಂ ಅಹಂ' ಎಂಬ ಮತ್ತು 'ಕಾಲಃ ಅಸ್ಮಿ ಲೋಕಕ್ಷಯ ಕೃತ್‌ಪ್ರವೃದ್ಧಃ' ಎಂಬ ಈ ಪುರುಷ=ಆದಿತ್ಯರೂಪೀ ನೆತ್ತಿಗಣ್ಣಿನ 'ಭಗ'ವಂತನು, 'ವಿವಸ್ವನ್ (ಸೂರ್ಯ) ದೇವನಿಗೆ ಯೋಗ ಬೋಧಿಸಿದ' ಎಂಬ ಈ ಉತ್‌ತಮ ಪುರಿಶಯನು, 'ಸವಿತೃ' ಪ್ರತಿಮಾಭಂಜನದ ಮೂಲಕ ಸವಿತೃವಿನ 'ಭಗಃ' ಎಂಬ ದೇವಶಕ್ತಿಯನ್ನು ಕಸಿದು ತನಗೆ ಅಂಟಿಸಿಕೊಳ್ಳುತ್ತಾನೆ!

'ಭಗ' ಪದಕ್ಕೆ ಹಂಚು, ವಿಭಾಗಿಸು ಎಂಬರ್ಥವಿದೆ. ಭಜಕರಿಗೆ ಪ್ರಕಾಶ ತತ್ವದ ಈ ಭಗನು ಜ್ಞಾನರೂಪ ಪ್ರಕಾಶವನ್ನು ಹಂಚುವ ದೇವನು, ಎಂದು ಹೆಸರಾಗಿದ್ದನು.* ರಾತ್ರೀ ದೇವನಾದ ಈ ಕೃಷ್ಣನೂ 'ಭಗ'ವಂತನಾದದ್ದು ಕಂಡುಬರುತ್ತದೆ. ಅಭಿವ್ಯಕ್ತಿಯ ಅರ್ಥವು ಪಾತಳಿಯಿಂದ ನಿರ್ಧರಿಸಲ್ಪಡುತ್ತದೆ. ಹಗಲಿನ ಪ್ರಕಾಶತತ್ವದ ಸವಿತೃವಿನ 'ಭಗ' ಇದು ರಾತ್ರಿದೇವನು ಸಂದರ್ಭದಲ್ಲಿ 'ಯೋನಿ' ಎಂಬ ಅರ್ಥದ್ದಾಯಿತು. ಪ್ರಜ್ಞಾನರೂಪೀ ಧೀಪ್ರಚೋದಕ ಸವಿತೃವನ್ನು 'ಸರ್ವಸ್ಯ ಪ್ರಸವಿತಾ ಸವಿತಾ' ಎಲ್ಲವನ್ನೂ ಹಡೆಯುವ 'ಯೋನಿ' ರೂಪಕ್ಕೇ ತಿರುಗಿಸಿದ್ದು ಉಂಟು, ಜೀವಿತದ ಪಾತಳಿಯ ಮೇಲೆ!

ಜೀವನವಿಶ್ವಸ್ಥ ವಿಕಾಸತತ್ವದ ಪ್ರಕ್ರಿಯೆಯಲ್ಲಿ ಪ್ರಾದುರ್ಭವಿಸಿರುವ ಧೀ=ಪ್ರಜ್ಞಾಪ್ರಕಾಶದ=ಮನಸ್‌ತತ್ವದ ದೇವನು ಸವಿತೃ (ಸೂರ್ಯ) ದೇವನು ಈ ಸ್ವರ್ (ಸುವಃ) ಪಾತಳಿಯವನು. ಆದರೆ, ಈ ಪಾತಳಿಯನ್ನು ಇಲ್ಲವಾಗಿಸಿರುವ ಸುಳ್ಳು ಪ್ರಚಾರವೇ ಈ ಅಭಿಚಾರ ಕೃತ್ಯದ ಹಿಂದೆ ಇದೆ.[೨೯] ಸ್ವರ್‌ಪಾತಳಿಯಲುವಾಗಿ, ಹಗಲಿನ ಪ್ರತಿನಿಧಿ ವಿಶ್ವಮಿತ್ರ ಮತ್ತು 'ರಾತ್ರಿ'ಯ ಯೋನಿ ಲಿಂಗಾರಾಧಕ ವಸಿಷ್ಠ ಏಕಕಾಲಕ್ಕೆ ಕಾಣುತ್ತಾರೆ! ಎಂಬ ಈ ವರ್ಣನೆಯೇ ಆಸುರೀ ಪ್ರಕಾರದ್ದು ಆಗಿದೆ. ಅಲ್ಲದೆ, 'ದಕ್ಷಿಣಕಪರ್ದ ವಸಿಷ್ಠ' ಲಿಂಗ; ಇದು 'ಪುರಿ-ಶಯ'ದಂತೆ ಅಭಾವವೇ ಸ್ಥಾಯೀ ಇರುವ ಸಂಕೇತ!

'ಚತ್ವಾರಿವಾಕ್ ಪರಿಮಿತಾ ಪದಾನಿ ತಾನಿ ವಿದುಃ ಬ್ರಾಹ್ಮಣಾ ಯೇ ಮನೀಷಿಣಃ।
ಗುಹಾ ತ್ರೀಣಿ ನಿಹಿತಾ ನೇಙ್ಗಯಂತಿ ತುರೀಯಂ ವಾಚೋ ಮನುಷ್ಯಾ ವದಂತಿ॥

ಇದು ನಿಜವಿದ್ದಲ್ಲಿ 'ತುರಿಯೇಣ ವಾಚಾ ಮನುಷ್ಯಾಃ ವದಂತಿ' ಎಂಬ ಈ ವೇದದ ಉಕ್ತಿಯೂ ಸುಳ್ಳು ಇರಬೇಕಲ್ಲ! ಈ ಋಚೆಗೆ ಸಾಯಣರು ಭಾಷ್ಯ ಬರೆಯುತ್ತ ಈ ತುರಿಯಾವಾಣಿ ನರವರ್ಗದ ವೈಶಿಷ್ಟ್ಯಗಳಾಗಿವೆ, ಇದಕ್ಕೆ 'ವಾನವಾ' ರೀತಿಯಲ್ಲಿ ಹೇಳಲಾಗಿರುವ ಅರ್ಥವೇ ಸಾಕ್ಷಿ. 'ತುರಿಯೇ ವಾಚಾ' ಸಾಯಣರ ವಿವರಣೆ.[೩೦] ಸಾಯಣರು, ವೇದೋಪನಿಷತ್ತುಗಳಲ್ಲಿ ಬಂದಿರುವ ತುರೀಯಾ=ಚಮಸ ಪದಗಳ ತುಲನಾತ್ಮಕ ಸಮೀಕ್ಷೆಯ ದಾರಿಗೆ ಹೋಗಿಲ್ಲ! ಆದರೆ, ಅವರು ಹೇಳುವ

"ತಿಸ್ರೋ ವ್ಯಾಹೃತೀಷು ಪ್ರಣವಃ ಏಕಂ ಇತೀ, ವೇದತ್ರಯ ಸಾರಾರ್ಥಾ 'ಸಪ್ರಣವೇಷು
ವ್ಯಾಹೃತೀಷು ಸರ್ವಾವಾಕ್ ಪರಿಮಿತಾ ಇತಿ ಕೇಚನ ವೇದವಾದಿ ನೋ ವದಂತಿ

ಸಾಯಣರು ಸೂಚಿಸುವ ನಾನಾರ್ಥಗಳಲ್ಲಿ ತುರೀಯಾ=ಓಂಕಾರನಾದದ ವಾಣಿ ಇದೂ ಒಂದು. ಓಂಕಾರ=ಪ್ರಣವ= ಪ್ರಾಣೋಪಾಸನೆಗೆ ಪ್ರೇರಿಸುವ 'ನಾದ'! ಇದು 'ಯೋನಿಲಿಂಗೈಕ್ಯ'ದ ಅನುಭವ ಸಾರವಾಗಿದೆ. 'ಹಲ್ಲಿಲ್ಲದ ಕಪ್ಪೆ ಹಾವು ನುಂಗಿತು'. ಈ ಓಂಕಾರದ ಉಪನಿಷತ್ತಿಗೆ ಮುಂಡ (ಲಿಂಗ)ದ ತರುವಾಯ

---

* 'ಭಗ' ಎಂಬ ಶಬ್ದಶಿಲ್ಪವು ಅನೇಕ ಶಾಸ್ತ್ರಗಳಲ್ಲಿ ಬಳಕೆಯಾಗಿದೆ. ಲೌಕಿಕದಲ್ಲಿ 'ಭಗ' ಎಂಬುದಕ್ಕೆ ಸ್ತ್ರೀಯೋನಿ ಎಂದು ಅರ್ಥ. ಇದು ಪ್ರಾಚೀನ ಮೂಲಾರ್ಥ. ಈ ಭಾಗಕ್ಕೆ 'ಸಂಪತ್ತು' ಎಂಬ ಅರ್ಥವೂ ಉಂಟು. ಯೋನಿಯನ್ನು ಸಂಪತ್ತೆಂದೇ ಪ್ರಾಚೀನರು ತಿಳಿದಿದ್ದರು. ತತ್ವಸಂಪತ್ತಿನ ಹಾಡೆಂದು ಭಗವದ್ಗೀತೆಗೆ ಇರುವ ಛಾಯಾರ್ಥ. ಶಂಬಾ ಅವರು ಪ್ರಾಚೀನ ಮೂಲಾರ್ಥದಿಂದ ಹೊರಡುತ್ತಾರೆ. ಇದು ಸ್ತ್ರೀರೂಪೀ ಪ್ರತಿಮೆ. ಅನಂತರ ಸ್ತ್ರೀನಪುಂಸಕರೂಪೀ ಪ್ರತಿಮೆಯಾಗಿ ಬಳಕೆಯಾಗುತ್ತದೆ. (ಸಂ.)

ಮಂಡೂಕ>ಮಾಂಡೂಕ್ಯದ ಉಪನಿಷತ್ತು ಇರುವಲ್ಲಿ ಮೇಲಣ ವಿವರಣೆಗೆ ಪುಷ್ಟಿಯಿದೆ. ಮೂಲಾಧಾರ ಕುಂಡಲಿನೀ 'ನಾಗ' ಸಹಸ್ರಾರದಲ್ಲಿ ಸೇರುವಾಗ ಈ ತುರೀಯಾ ಸಿದ್ಧಿ! 'ಇದು ನಿಃಶಬ್ದಂ ಬ್ರಹ್ಮ'-'ಶಬ್ದದಾಚೆಯ ಶಬ್ದ'! ಇದನ್ನು 'ವಾಣಿ' ಎನ್ನಲಾದೀತೇ? ಇದನ್ನು ವಿಶ್ವವ್ಯಾಪಿ 'ವಾಕ್' ಎಂಬ ಸಾಯಣರ ಮಾತು, ಭಟ್ಟಾಕಳಂಕನ 'ಸರ್ವಭಾಷಾಮಯೀ ಭಾಷಾ' ಅರ್ಥವನ್ನು ನೆನಪಿಗೆ ತರುತ್ತದೆ!

ಸಾಯಣರು ಸೂಚಿಸಿರುವ 'ವಾಮದೇವ್ಯ'ದ ಮೂಲಕ ಅರಿಕೆಗೆ ಬರುವ, ವಾಣಿಯೆಂದರೆ ಎಂಥದು? ಇದರ ವಿವರ ಛಾಂದೋಗ್ಯದಲ್ಲಿ ಇದೆ. ಆ ಸ್ಪಷ್ಟೀಕರಣವಿದು :

ಉಪಮಂತ್ರಯತೇ ಸಃ ಹಿಂಕಾರಃ। ಜ್ಞಪಯತೇ ಸ ಪ್ರಸ್ತಾವಃ ।
ಸ್ತ್ರಿಯಾ ಸಹ ಶೇತೇ ಸಃ ಉದ್ಗೀಥ । ಪ್ರತಿ ಸ್ತ್ರೀಂ ಸಹ ಶೇತೇ ಸ
ಪ್ರತಿಹಾರಃ....ಏತತ್ ವಾಮದೇವ್ಯ ಮಿಥುನ ಪ್ರೋಕ್ತಮ್ ॥[೩೧]

ಉಪನಿಷತ್ತಿನಲ್ಲಿ ಎರಡನೆಯ ಶ್ಲೋಕವನ್ನು ಹೇಳಿಲ್ಲ! ೩ ನೆಯದು ಇದು :

'.....ಏತತ್ ವಾಮದೇವ್ಯಂ ಮಿಥುನೇ ಪ್ರೋಕ್ತಂ ವೇದ ಮಿಥುನೀ ಭವತಿ।.......(೩) ಇದು, ಚಾಂದ್ರ ಸಂಪ್ರದಾಯಗಳಲ್ಲಿ ಇರುವ ಜಾಗತಿಕ ಸ್ವರೂಪದ 'ಸೀಕ್ರೆಡ್ ಪ್ರೊಸ್ಟಿಟ್ಯೂಶನ್'; ವಸಿಷ್ಠ ವ್ಯಾಸನು ನಿಯೋಗಾದಿಗಳ ಮೂಲಕ. ಕುಮಾರಿ-ಕುಮಾರ ಸಂಪ್ರದಾಯದ ಪ್ರಸ್ಥಾಪನೆಯ ಮೂಲಕ ಭಾರತದಲ್ಲಿಯೂ ವಾಡಿಕೆಯನ್ನು ಉಳಿಸಿಕೊಳ್ಳಲು ಮಾಡಿರುವ ಪ್ರಯತ್ನವೇ ವೇದದೊಳಗಿನ ಈ 'ತುರೀಯಾವಾಣಿ' ಆರಾಧನೆ. ಶ್ರೀಮತ್, ಭಗವತ್ ಇರುವ ಗೀತೆಯಲ್ಲೂ ಇದಕ್ಕೆ ಅವಕಾಶ ಕಲ್ಪಿಸಲಾಗಿದೆ. 'ರಾ' ಜಯೋಗ ಸಾಧನದ ವಿವರಣೆಯಿರುವ ಅಧ್ಯಾಯದಲ್ಲಿ!

ಅಪಿ ಚೇತ್ ಸುದುರಾಚಾರಃ ಭಜತೇ ಮಾಮ್ ಅನನ್ಯ ಭಾಕ್।
ಸಾಧುಃ ಏವ ಸಃ ಮಂತವ್ಯಃ ಸಮ್ಯಗ್ ವ್ಯವಸ್ಥಿತೋ ಹಿ ಸಃ।

ಭಗವಾನ್ ರಜನೀಶನು ಈ ಸಾಧನದ ಮೂಲಕ ತುರೀಯಾ ಸಿದ್ಧಿಯು ಸಿಕ್ಕುವುದಾಗಿ ಸೂಚಿಸಿದ್ದಾನೆ. ಕೇನೋಪನಿಷತ್ತಿನ ಭಾಷ್ಯದಲ್ಲಿ ಕ್ರೈಸ್ತಪಂಥವನ್ನು ಭದ್ರಪಡಿಸಿದ ಖ್ಯಾತಿಯ ಸಂತ ಅಗಸ್ಟೀನನು ಪೂರ್ವ ವಯಸ್ಸಿನಲ್ಲಿ 'ವಾಮದೇವ್ಯ' ಸಾಧಕನಾಗಿದ್ದುದು ಸುಪ್ರಸಿದ್ಧವಿದೆ. 'ಸೂಳೆಮುಪ್ಪು ಆಗಿ ಜೋಗಿತಿ (ಯೋಗಿಣಿ) ಆದಳು' ಎಂಬ ಗಾದೆ ಕಾಲ್ಪನಿಕವಲ್ಲ. ಆದಿತ್ಯ : ವರುಣನ ಬಗೆಗೆ ಬರೆಯುವಾಗ ಒಲ್ದೆನ್‌ಬರ್ಗನು, ಈ ಚಾಂದ್ರ ಸಂಪ್ರದಾಯವು ಭಾರತಕ್ಕೆ ಸುಮೇರು-ಬಾಬಿಲೋನದತ್ತಣಿಂದ ಬಂದಿರಬೇಕು, ಎಂದು ಹೇಳುತ್ತಾನೆ!

ಪುರಿ-ಶಯ: ಪುರುಷ ಪೂಜೆ

ಇದರ ಪ್ರಾಥಮಿಕ ವಿಕೃತ ಸಾಧನೆ : 'ಉತ್‌ತಿಷ್ಠಲಿಂಗ' ಆರಾಧನೆಯ ಸಾಧನ. ಇದೂ ಆಚರಣದಲ್ಲಿ ಇದ್ದುದರ ಸೂಚಕ 'ಪುರಾವೆ' ಇದೆ:[೩೨] 'ಒಬ್ಬ ಸಾಧಕನು ಬಂಗಾರದ ಉಂಗುರ ಹಾಕಿದ ಉತ್ಥಿತಲಿಂಗಿಯಾಗಿ ಓಣಿಗಳಲ್ಲಿ ಈ ಪವಾಡ ತೋರಿಸುತ್ತ ಅಲೆದ' ಉಲ್ಲೇಖವಿದೆ! ಜೈನ ದಿಗಂಬರಪಂಥಿಗಳ ಸಾಧುಗಳ ಶೋಭಾಯಾತ್ರೆ ಉತ್ಥಿತಲಿಂಗದ್ದು ಇರುವ ವಾಡಿಕೆಯಿದ್ದರೆ ನಾನರಿಯೆ. ಬಾಹುಬಲಿ, ಭದ್ರಬಾಹು ಎಂದರೂ ಈ ಗೊಮ್ಮಟ ಪ್ರತಿಮೆ ಹೀಗಿಲ್ಲ! ಖಡ್ಗಾಸನಿ ದೇವರು ಯಾಕೆ? ಇದುವೆ ದಕ್ಷಶಕ್ತಿ! ಗೀತೆಯಲ್ಲಿ 'ಅಶ್ವ-ತ್ಥ ಭಗವಂತನನ್ನು 'ವೃಕ್ಷ'ರೂಪನು, ಎಂದುದು ನಿಷ್ಕಾರಣವಿರಲಾರದು. ಏಕೆಂದರೆ 'ಪುರಿಶಯ' (ನ) ಯೋಗದಲ್ಲಿ 'ಉತ್‌ತಮೆ ಎದ್ದು ನಿಂತ (ಃದಕ್ಷ) ಪುರುಷ' ಇಲ್ಲದೆ ಈ ಯೋಗ ಸಾಧಿಸಲಾರದು. 'ಪುರುಷೋತ್ತಮ' ಯೋಗೋ ನಾಮ ಅಧ್ಯಾಯವಿದು. ಈ ಕುರುಕ್ಷೇತ್ರದ ಯುದ್ಧ 'ಅಸಂಗಶಸ್ತ್ರ' ಧರಿಸಿ ನಡೆಯಬೇಕಾದ ಕಾಳಗ! ಉತ್‌ತಮನಲ್ಲದವನು 'ಪುರಿ-ಶಯ'ನಾಗಲು ಅರ್ಹನಲ್ಲ! ಈ ಯೋಗದಲ್ಲಿ ಇನ್ನೂ ಒಂದು 'ವ್ರತ' ಅನಿವಾರ್ಯವಿದೆ. 'ಆತ್ಯಂತಿಕ ಅ-ಹಿಂಸೆ!' ಸೃಷ್ಟಿನಿರ್ಮಾಣ ಶಕ್ತಿಯ ಈ ದಿವ್ಯಸಲಿಲದ ಒಂದು ತೊಟ್ಟು ಹೊರಗೆ ಬರಲಾಗದು! ಇಲ್ಲವಾದರೆ 'ಅಕ್ಷರಬ್ರಹ್ಮ' ಸಿದ್ಧಿಯ ಸಾಧನ ಅಶಕ್ಯ! ವ್ಯರ್ಥ!

ಆದರೆ, ಮಹಾಕವಿ ಬೇಂದ್ರೆ 'ರಸವೇ ಜನನ' ಎಂದಿದ್ದಾರೆ. ಇದು 'ಕ್ಷರಪುರಿ-ಶಯ(ನ) ಲಕ್ಷಣ! ಆ ಬಳಿಕ 'ಸಮ-ರಸವೇ ಜೀವನ ಎಂದಿದ್ದಾರೆ! ಆದರೆ, ಇಲ್ಲಿ ಜೀವಿತ=ಜೀವನ, ಅಭಿನ್ನವಾಯ್ತು! ಅಲ್ಲದೆ, 'ಪುರಿ-ಶಯ= ಪುರುಷಃ ನಾರಾಯಣ ಉಪಾಸನೆಯಲ್ಲಿ 'ಅ-ಕ್ಷರ ಬ್ರಹ್ಮಸಿದ್ಧಿ'ಯೇ ಗುರಿ. ಅಲ್ಲದೆ, 'ಸಮ-ರಸ' ಮೃತ್ಯುತತ್ತ್ವದ ಆರಾಧನೆಯಾಗಿ ಪರಿಣಮಿಸುವುದು ನಿಶ್ಚಿತ! ಆದಕಾರಣ, 'ವಜ್ರೋಲಿ ಸಿದ್ಧಿ' ಅನಿವಾರ್ಯ. ಆದರೆ 'ತುರೀಯಾ ವಾಣಿ ಸಿದ್ಧಿಗೆ 'ವಾಮದೇವ್ಯ' ಸಾಧನವನ್ನು 'ಕ್ಷಮ್ಯ' ಎಂದು ಬಗೆಯಲಾಗಿದೆ. ಸಂಭೋಗದಿಂದ ಸಮಾಧೀ ಸಿದ್ಧಿಯ ಸಾಧನೆ ಹೇಳುವ ಭಗವಾನ್ ರಜನೀಶ ಈ ಸಾರ್ಥನಾಮದ ಯೋಗಿಯಲ್ಲಿ 'ವಾಮದೇವ್ಯ' ಸಾಧನದ ಮುಕ್ತದ್ವಾರವಿದೆ. ಇವರು ಬರೆದಿರುವ The Supreme Doctrine (Routledge Kegan & London Paul) ಎಂಬ ಕೇನೋಪನಿಷತ್ತಿನ ಭಾಷ್ಯ ಈ ದೃಷ್ಟಿಯಿಂದ ಅಭ್ಯಾಸನೀಯವಿದೆ. ಪುರಿ-ಶಯ: ಪುರುಷ ಪ್ರತಿಮೆಯಲ್ಲಿ ಕಾಲಸ್ತಂಭನ ಸಾಮರ್ಥ್ಯವಿದ್ದುದನ್ನು ಗಮನಿಸುವ ಆವಶ್ಯಕತೆಯಿದೆ. ಇಂದು ಇಡೀ ಪ್ರಪಂಚವೇ 'ಕಾಲಸ್ತಂಭನ' ಭಾನಾಮತಿಯ ಪ್ರಭಾವದಲ್ಲಿ ಇದೆ! ಅತ್ಯಂತ ಪ್ರಾಚೀನವೆಂಬ ಸುಮೇರು-ಅಕ್ಕಡ್ ಭಾಗದಲ್ಲಿ ತೈಮಾತೆ (ಪುರಿ) ಅಪ್ಸು(ಶಯ) ಇವರು ಮಿಥುನ ಕ್ರೀಡೆಯಲ್ಲಿ ಇದ್ದರು. ಆಗ 'ಎಂಕಿ' God of Wisdom ಅವತರಿಸಿ 'ಅಪ್ಸು' ಸಂಹಾರ ಮಾಡಿದನು. ಸುಮೇರ- ಅಸ್ಸೀರಿಯಾ ಭಾಗದ ಪ್ರಾಣಲಿಂಗ ಪಾತಳಿಯನ್ನು ಪ್ರತಿನಿಧಿಸುವ ದೈವತವಿದು. ಇವನು ಪ್ರಜ್ಞಾಶಕ್ತಿಯ ವಿಶೇಷ ಸುಮೇರಿಯನ್ ಆದಿಯ ಪ್ರಕಾರ ಎಂಕಿಯಿಂದ ಹತನಾದ. ಈ ನಿಘ್ನವೇ ಭಾರತೀಯ ಪರಂಪರೆಯಲ್ಲೂ ಉಂಟು. ವೃತ್ರಾಸುರ ಎಂಬ ಸಮಾಂಕಿತದಲ್ಲಿ ಬಳಕೆಯಲ್ಲಿದೆ. ಇವನು ಇಂದ್ರತತ್ತ್ವದ ವಿರೋಧಿ. ವೃತ್ತಾಕೃತಿಯ ಜೀವಿತದ ಮಾದರಿ (ಸಂ.) ಮರ್ದುಕ ಎಂಬವನು ತೈಮಾತೆಯನ್ನು ಕೊಂದನಂತೆ! ಆದರೆ, ಈ ಆದಿಮಾತೆ ನಾಗಿಯು ಅಮರಳು! ಅಥರ್ವವೇದದ 'ನಾಗವಿಷಹರ' ಮಂತ್ರದ ಸಂಸ್ಮರಣೀಯ ನಾಗಗಳಲ್ಲಿ 'ತೈಮಾತೆ'ಯ ಹೆಸರೂ ಉಂಟು! ಎಂಕಿ : ಪ್ರಜ್ಞಾ: ವಿವೇಕದೇವನ ಮೂಲಕ 'ಮಾನವ' ಸಂಸ್ಕೃತಿ ಪ್ರಾರಂಭವಾದ ಸೂಚನೆಯಿದೆ. ಆದರೆ, ಆ ಬಳಿಕ ಸುಮೇರಿನತ್ತ 'ಎಂಕಿಡು' : ಶೃಂಗಿಯ ನರಸಂಪ್ರದಾಯವು ಮರಳಿ ಪ್ರಚಾರಕ್ಕೆ ಬಂದ ಸೂಚನೆಯೂ ಉಂಟು! ಭಾರತದ ಶೃಂಗಿ : ಮುನಿಯ ಕಥೆ ತುಂಬಾ ಪ್ರಸಿದ್ಧವಿದೆ. ಶ್ರೀ ರಾಮಚಂದ್ರನ ಜನನಕ್ಕಾಗಿ ಪುತ್ರಕಾಮೇಷ್ಟಿಯಾಗಿ ಜರುಗಿಸಿದ ಮಹಾತ್ಮನು ಇವನು! ವೇದದ ಮುನಿಸೂಕ್ತದಲ್ಲಿ ಈ ನಿತ್ಯ ಮೌನೇಯ 'ಶೃಂಗಿ' ಇದ್ದಾನೆ, ಎಂದು ಸಾಯಣರ ಭಾಷ್ಯವು ಸೂಚಿಸಿದೆ.[೩೩]

ಗ್ರೀಸಿನಲ್ಲಿ ಪ್ಯಾಥಾಗೊರಾಸನ One : 1 : 10 ದಶಾಂಗುಲಿ ದೇವನ ಪ್ರತಿಮಾರಾಧನೆಯಿಂದಾಗಿ, ಅಲ್ಲಿ 'History repeats itself' ಎಂಬ ದೃಷ್ಟಿಕೋನವು ಪ್ರಚಾರಕ್ಕೆ ಬಂದಿತು. ಭಾರತದಲ್ಲಿ 'ದಶ'-ಅವತಾರದ ಕಲ್ಪನೆ 'ವೃತ್ತಾಕೃತಿ'ಯ ಕಾಲತತ್ತ್ವದ ಸೂಚಕವೇ ಇದೆ. ಕಂನಾಡ ಶಾಸನಗಳ 'ಮೂಲ ಸ್ತಂಭಾಯ' ವಂದಿಸುವ ಶ್ಲೋಕವು, ನಾವು ಸ್ತಂಭಕಾಲದ ಆರಾಧಕರು ಇರುವ ಒಪ್ಪಿಗೆ ಪರ್ಯಾಯವಾಗಿ ಉಂಟು. ಶಾಸನದ ಒಂದು ಮೂಲೆಗೆ ಮೇಲ್ಗಡೆಯಲ್ಲಿ ಚಂದ್ರ, ಇನ್ನೊಂದೆಡೆಗೆ (ಮೂಲೆಗೆ) ಸೂರ್ಯ, ಏಕಕಾಲಕ್ಕೇ! ಇದು ಕಾಲಸ್ತಂಭನ ಸೂಚಕ ಉತ್ತಮ ಭಾನಾಮತಿ!* ಗ್ರೀಕ್ ಭಾಗದಲ್ಲೂ ಈ ಅಭಿಚಾರ ಕೃತ್ಯ ಪ್ರಚಲಿತವಿತ್ತು.

ಜೈನ ವರ್ಧಮಾನ, ಮಹಾವೀರ (ಹನುಮಂತಿಗೂ ಹೆಸರು), ಬುದ್ಧ, ಕ್ರಿಸ್ತ, ಪೈಗಂಬರ, ಶಂಕರರಿಂದ ಮಾರ್ಕ್ಸ, ಲೆನಿನ್, ಗಾಂಧೀಜಿ, ಜೆ. ಪಿ. ಇವರ ವರೆಗೆ ಈ ಹೆಸರು 'ಪುರುಷ' ಪೂಜೆಯ ಪರಂಪರಾ ಸೂಚಕವಾಗಿವೆ. 'ಸಮಾಧಿ ಪೂಜೆ'ಯಲ್ಲಿ ಸತ್ತವರ ನೆರಳಲ್ಲೇ ಒಯ್ಯುವ ಅಂತಃಸಾಮರ್ಥ್ಯವಿದೆ. ಇಂದು ಮಾನವನ

---

* ಈ ಬಗೆಯ ಸ್ತಂಭ ಮತ್ತು ಶ್ಲೋಕವು ದಕ್ಷಿಣಭಾರತದ ಶಾಸನಗಳಲ್ಲಿ ಹೆಚ್ಚು. ಕನ್ನಡದ ಮೊತ್ತಮೊದಲನೆಯ ಪಲ್ಮಿಡಿ ಶಾಸನವು ಚಂದ್ರ-ಸೂರ್ಯ ಪ್ರತಿಮೆಗಳನ್ನೂ ಇದೇ ಶ್ಲೋಕವನ್ನೂ ಹೊತ್ತಿದೆ. ಕನ್ನಡದ ಶಾಸನಗಳಲ್ಲಿ 'ಮೂಲಸ್ತಂಭಾಯ ಶಂಭವೇ' ಎಂಬ ಮಂಗಳ ಶ್ಲೋಕಗಳು ಕದಂಬ, ಗಂಗ, ಚಾಲುಕ್ಯ ರಾಜರ ಶಾಸನಗಳಲ್ಲಿ ಹೇರಳವಾಗಿ ಕಂಡು ಬರುತ್ತದೆ (ಸಂ)

ಇತಿಹಾಸವು ವೃತ್ತ-ಮಧ್ಯ ಸ್ತಂಭಾಕೃತಿಯದಾಗಿದೆ. ಇಟಲಿಯ ವಿಖ್ಯಾತ ಮೇಧಾವಿ ಸಾಹಿತ್ಯಿಕ-ಕ್ರೋಚೆಯು (Croce) ಕಲೆ ಹಾಗೂ ಇತಿಹಾಸದಲ್ಲಿ ಸಾಮ್ಯ ಕಾಣುತ್ತಿದ್ದನು. 'All history is contemporary history' ಎಂಬ ಅವನ ಸೂತ್ರವು, ಇಂಥ ಇತಿಹಾಸದಲ್ಲಿ ನಿಜವಾದ 'ನಾಳೆ'ಗಳಿಗೆ ಅವಕಾಶವೇ ಇಲ್ಲ, ಎಂಬುದನ್ನು ಗಮನಕ್ಕೆ ತಂದುಕೊಡುತ್ತದೆ! 'ಇತಿಹಾಸವು ಸಮಸಾಮಯಿಕವಿರುತ್ತದೆ' ಎಂದರೆ ಇದು ನಿತ್ಯ ವರ್ತಮಾನ ಕಾಲವಲ್ಲವೆ? ಆದರೆ, ಒಬ್ಬ ಮಾನವಶಾಸ್ತ್ರಜ್ಞನು ಬರೆಯುತ್ತಾನೆ : 'ಸನಾತನ ವರ್ತಮಾನ ಕಾಲ'ದ ಪ್ರಭಾವದಲ್ಲಿ ಪಶುಗಳು, ಪ್ರಾಣಿಗಳು ಇರುತ್ತವೆ!

> Symbolical Communication had began, man had escaped out of the eternal present of the animal world into a knowledge of past and future."

ಈ ನಿಟ್ಟಿನಿಂದಲೂ, ಇಂದು ಮಾನವನು 'ಪಶುಗಳ' ಪಾತಳಿಯ ಮೇಲೆ ಬಂದದ್ದು ದೃಢಪಡುತ್ತದೆ. ಆದರೆ, ಪಾಶ್ಚಾತ್ಯರಲ್ಲಿ ಹೆಗಲ್, ಕ್ರೋಚೆ ಪ್ರಭಾವದಲ್ಲಿ 'ಸಮಸಾಮಯಿಕ ಇತಿಹಾಸವೇ ಇತಿಹಾಸ' ಎಂಬ ಗ್ರಹಿಕೆ ದೃಢವಾದದ್ದು ಕಾಣುತ್ತಿದೆ. ಈ ಕ್ರೋಚೆ, ಹೆಗೆಲ್ಲನ ಪ್ರಭಾವಕ್ಕೆ ಒಳಗಾದವನು. ಹೆಗೆಲ್ಲನು ಗ್ರೀಕ್‌ಪುರಾತನರಲ್ಲೂ 'ಅಗ್ನಿಸ್ತಂಭಕಾಲ' (Logos) ಉಪಾಸಕ ಹಿರಾಕ್ಲಿಟಸನ 'ಅಂತರ್ ವಿರೋಧೀ' ತತ್ತ್ವದ ಭೂಮಿಕೆಯಿಂದ ಆಕರ್ಷಿತನಾಗುತ್ತಾನೆ! ಭಾರತದಲ್ಲಿ ತಮ್ಮ ತಮ್ಮ ಜಾತಿಮತದ ನೇತಾರರ ಸಮಾಧಿಪೂಜೆಯ ವಾಡಿಕೆಯು ಶಿಷ್ಟಮಾನ್ಯವಾಗಿದೆ. ಈ ಸ್ತಂಭಕಾಲೋಪಾಸನೆಯಿಂದಾಗಿ ಭಾರತದಲ್ಲಿ 'ಜಾತಿ ಮತಾತೀತ' 'ಸಮಾಜ=ಸಮಷ್ಟಿ' ಎಂಬುದರ ಗಂಧಗಾಳಿಯೂ ಉಳಿದಿಲ್ಲ. ಈ ಜಾತಿಭೇದದ ಪ್ರಾರಂಭವನ್ನು ಹುಡುಕ ಹೊರಟವರಿಗೆ ವೇದದೊಳಗಿನ ಪುರಿ-ಶಯ=ಪುರುಷನ ದರ್ಶನವಾಗುತ್ತದೆ! ಈ ನೆತ್ತಿಗಣ್ಣಿನ ಪುರುಷನ ಅಂಗಗಳಿಂದ ನಾಲ್ಕು ವರ್ಣಗಳು ಹುಟ್ಟಿವೆ ಎಂದು ನಂಬಿಸಲಾಗಿದೆ! ಆದರೆ, ಈ ಪುರುಷನ ಮುಖ, ಬಾಹು, ಊರು, ಪಾದ ಯಾವುವು? 'ಭಾನಾಮತಿ-ಯಾತು' ಎಂದರೇ ಇದು! ಅಭಾವದಲ್ಲಿ ದೇವರನ್ನು ಕಾಣುವ ಸಾಮರ್ಥ್ಯ ಅಂತರವಾಣಿ ಸಿದ್ಧಿ ಭಾನಾಮತಿ ಪ್ರಭಾವದ ಪರಿಣಾಮ.

ಮಹಾಭಾರತದ ಕಾಳಗಗಳಲ್ಲಿ ನಾರಾಯಣಾಸ್ತ್ರದ ಅಮೋಘಶಕ್ತಿಯ ಅಗ್ನ್ಯಾಸ್ತ್ರದ ವರ್ಣನೆಗಳು ದೊರೆಯುತ್ತವೆ. ಈ ನಾರಾಯಣಾಸ್ತ್ರವು ಈ ಅಗ್ನ್ಯಾಸ್ತ್ರ ಪುರಿ-ಶಯ ; ನಾರಾಯಣ ನಾರ-ಅಯನವೇ ಇರಬೇಕಷ್ಟೆ? ಭರತಕುಲದ ರಾಜರು, ವಿಶ್ವ(ಶ್ವಾ) ಮಿತ್ರನನ್ನು ಪುರೋಹಿತ ಪದದಿಂದ ತಳ್ಳಿ, ದಕ್ಷಿಣಕಪರ್ದ : ವಸಿಷ್ಠನನ್ನು ಗುರುಪೀಠದ ಮೇಲೆ ಸ್ಥಾಪಿಸಿದರಂತೆ. ಈ ಪರಂಪರೆಯೇ ಇತಿಹಾಸಕಾಲದಲ್ಲಿ ರಾಜಗುರುಗಳ ಮಠಗಳ ರೂಪದಲ್ಲಿ ಭಾರತದಲ್ಲಿ ಉಳಿದು ಬಂದದ್ದು ಕಾಣುತ್ತದೆ. ಜೈನ-ಬೌದ್ಧ ಪವಾಡಿ ಗುರುಗಳು, ರಾಜಗುರುತ್ವ ಪಟ್ಟಕ್ಕಾಗಿ-ಪಿತೃ ಹಂತಕ ರಾಜರ ಕೃಪೆಗಾಗಿ-ಸ್ಪರ್ಧಿಸುತ್ತಿದ್ದುದು ಇತಿಹಾಸದ ಪ್ರಾರಂಭಕಾಲದಿಂದಲೂ ಕಂಡುಬರುತ್ತದೆ. ಯಾವ ಮಠದವರ ಪವಾಡಶಕ್ತಿ ಹೆಚ್ಚೋ ಅವರಿಗೆ ರಾಜಗುರು ಪಟ್ಟ ಬರುವ ಸಾಧ್ಯತೆ ಹೆಚ್ಚು ಕಾಣುತ್ತದೆ.

ವಿಜಯನಗರದ ಇತಿಹಾಸದಲ್ಲಿ ಶೈವ, ವೀರಶೈವ, ವೈಷ್ಣವ, ವೀರವೈಷ್ಣವ ಪೀಠಗಳಲ್ಲಿ ಈ ಪೈಪೋಟಿ ಇದ್ದುದು ಸುಪ್ರಸಿದ್ಧವಿದೆ. ತಮಗೆ ರಾಜಗುರುತ್ವ ತಪ್ಪಿದ್ದಕ್ಕೆ ಕೊನೆಯಲ್ಲಿ ಮುಸಲ್ಮಾನೀ ರಾಜರನ್ನು ಕರೆಯಿಸಿದ ಆರೋಪವೂ ಕೇಳ ಬರುತ್ತಿತ್ತು. ಇತಿಹಾಸವು ಸಮಸಾಮಯಿಕವಿದೆ. ಇಂದಿನಲ್ಲೂ ರಾಷ್ಟ್ರದ ಹಾಗೂ ರಾಜ್ಯಗಳ (ಪ್ರಾಂತಗಳ) ರಾಜಧಾನಿಗಳಲ್ಲಿ ಫಲಜ್ಯೋತಿಷಿಗಳಿಗೆ, ಮಾಂತ್ರಿಕರಿಗೆ, ಬ್ರಹ್ಮಚಾರಿಸಿದ್ದರಿಗೆ ವಿಶೇಷ ಬೇಡಿಕೆಯಿದೆ. ರಾಷ್ಟ್ರಪತಿಗಳಿಂದ ತೊಡಗಿ ಪ್ರಧಾನಿ, ಮುಖ್ಯಮಂತ್ರಿ, ರಾಜಕೀಯ ಪಕ್ಷಗಳ ನೇತಾರರು ಎಲ್ಲರೂ ತಿರುಪತಿ ತಿಮ್ಮಪ್ಪನ ವರಪ್ರಸಾದ ಭಿಕ್ಷುಗಳೇ ಆಗಿದ್ದಾರೆ. ಅವರು ಮಂತ್ರ-ಮಾಟಗಳಲ್ಲಿ ಆಸ್ಥೆ, ಆಸಕ್ತಿಯಿದ್ದವರು! ಪವಾಡ=

ಚಮತ್ಕಾರ ಎಂದರೇನು? ನಿಯತಿಕೃತ ನಿಯಮ ರಹಿತ ಕೃತಿಗಳೇ ತಾನೆ? ನಮ್ಮ ಸಾಹಿತ್ಯಕೃತಿಗಳ ಆದರ್ಶವೂ ಪರ್ಯಾಯವಾಗಿ ಇದೇ ಆಗಿದೆ. ಪುರಿ-ಶಯ=ಪುರುಷ = (ನೆತ್ತಿಗಣ್ಣಿನ) ಆದಿತ್ಯ- ಸೂರ್ಯ : ನಾರಾಯಣ ಈ ಪ್ರತಿಮೆ ಒಳಗೊಂಡಿರುವ ಯಾತುಶಕ್ತಿಯ ಪ್ರಭಾವದಲ್ಲಿ ಪ್ರಚಲಿತ ವೇದಕಾಲದಿಂದಲೇ ಭಾರತೀಯರ ಶೀಲ-ಚಾರಿತ್ರ್ಯ ಆಕಾರ ಪ್ರಡೆಯುತ್ತ ಬಂದಿರುವುದನ್ನು ಸುಳ್ಳು ಎನ್ನಲಾದೀತೇ? ಶ್ರೀಮತ್ ಭಗವದ್ಗೀತೆಯ ಕೇಂದ್ರಸ್ಥ ಪಾತ್ರವು ಯಾವುದು? ಭಗ-ವಂತ=ಪುರಿ-ಶಯನನೇ ತಾನೆ?

ಟಿಪ್ಪಣಿಗಳು

೧. *ಬೃಹದಾರಣ್ಯಕೋಪನಿಷತ್ತು* ೧, ೫, ೬
೨. *ಷಡ್ವಿಂಶ ಬ್ರಾಹ್ಮಣ* ೪. ೧
೩. ***ಋಗ್ವೇದ ಸಂಹಿತೆ*** V. ೩೨. ೬
೪. ***ಅದೇ*** X. ೬೩-೪
೫. ***ಛಾಂದೋಗ್ಯೋಪನಿಷತ್ತು*** ೧.೬.೬
೬. ***ಋಗ್ವೇದ ಸಂಹಿತೆ*** I. ೧೧೪. ೬
೭. ***ಅದೇ*** VIII. ೧೦೧. ೧೫
೮. ***ಅದೇ*** X. ೭೨. ೩೫
೯. Sukthankar V.S. ; ***Meaning of the Mahabharata***, Royal Asiatic Society, Bombay
೧೦. ***Ibid*** Page. 32
೧೧. ***ಋಗ್ವೇದ ಸಂಹಿತೆ*** I. ೧೬೪, ೪೫
೧೨. ***ಅದೇ*** X. ೭೧. ೨
೧೩. ***ಅದೇ*** I. ೮೬. ೧೦
೧೪. ***ಅದೇ*** X. ೧೩೫. ೬
೧೫. ***ಅದೇ*** III. ೫೩.೧೨
೧೬. ***ಛಾಂದೋಗ್ಯೋಪನಿಷತ್ತು*** ೫. ೫. ೭. ೮; ***ಬೃಹದಾರಣ್ಯಕೋಪನಿಷತ್ತು*** ೬. ೨. ೧೩
೧೭. *ಬೃಹದಾರಣ್ಯಕೋಪನಿಷತ್ತು* ೫. ೫. ೮
೧೮. ***ಋಗ್ವೇದ ಸಂಹಿತೆ*** VIII. ೧೦೦. ೧೧
೧೯. ***ಅದೇ*** VIII. ೧೦೧. ೧೫
೨೦. ***ಛಾಂದೋಗ್ಯೋಪನಿಷತ್ತು*** ೫. ೨. ೬
೨೧. *ಬೃಹದಾರಣ್ಯಕೋಪನಿಷತ್ತು* ೫. ೧೪. ೩
೨೨. ***ಅದೇ*** ೬. ೧. ೧೪
೨೩. ***ಅದೇ*** ೬. ೨. ೧೬
೨೪. ***ಅದೇ*** ೬. ೩. ೨
೨೫. *ಬೃಹಾರಣ್ಯಕೋಪನಿಷತ್ತು* ೫. ೧೪.೪-೫
೨೬. ***ಅದೇ*** ೫. ೧೫. ೮
೨೭. ***ಅದೇ*** ೬. ೩--೬-೪: ೬.೪.೨೧ ವರೆಗೂ ಇದೆ

೨೮. ***ಅದೇ*** ೬.೪.೧೩

೨೯. ಇದನ್ನು ಖಚಿತ ಪಡಿಸಿ ಅರಿಯಲು ***ತೈತ್ತಿರೀಯ ಉಪನಿಷತ್*** ೧. ೫. ಓದಿ ನೋಡಬೇಕು

೩೦. ***ಋಗ್ವೇದ ಸಂಹಿತೆ*** I. ೧೬೪. ೪೫

೩೧. ***ಛಾಂದೋಗ್ಯೋಪನಿಷತ್ತು*** ೨. ೧೨. ೧

೩೨ Mercia Eliade ***Yoga : Freedom, & Immortality***, ಗುರು ಎಸ್.ಎನ್. ದಾಸಗುಪ್ತರಿಗೆ ಅರ್ಪಿತ ಗ್ರಂಥ

೩೩. ***ಋಗ್ವೇದ ಸಂಹಿತೆ*** X. ೧೩೬

ಬಿತ್ತಿದ್ದನ್ನು ಬೆಳಕೊ : ಮುಖ್ಯಾಂಶಗಳು

ಕಳೆದ ನಾಲ್ಕೈದು ದಶಕಗಳಿಂದ ನನ್ನಿಂದ ಶಕ್ಯವಾಗಿರುವ ಸಾಂಸ್ಕೃತಿಕ ಸತ್ಯಾನ್ವೇಷಣೆಯ ಫಲಿತಾಂಶಗಳ ಪ್ರಭಾವಗಳು ನನ್ನನ್ನು ಈ ಸ್ಥಾನಕ್ಕೆ ಅಟ್ಟಿಕೊಂಡು ಬಂದಿವೆ. ನನ್ನ ಈವರೆಗಿನ ಅನ್ವೇಷಣೆಯ ಫಲಿತಾಂಶಗಳನ್ನು ಅಖಿಲ ಭಾರತೀಯ ಪ್ರಾಜ್ಞರ ಪರಾಮರ್ಶೆಗಾಗಿ, ಅವನ್ನು ಸಾರ್ವಜನಿಕವಾಗಿ ಹೇಳುವ ಈ ಸುಸಂಧಿಯನ್ನು ಒದಗಿಸಿಕೊಟ್ಟಿರುವುದಕ್ಕಾಗಿ, ಸ್ವಾಗತ ಸಮಿತಿಗೂ ಕನ್ನಡ ಸಾಹಿತ್ಯ ಪರಿಷತ್ತಿಗೂ ಕಂನಾಡ ಮಹಾಜನತೆಗೂ ನಾನು ಅತ್ಯಂತ ಋಣಿಯಾಗಿದ್ದಾನೆ. ಈ ಅನ್ವೇಷಣೆಯೊಳಗಿನ ನಿಷ್ಕರ್ಷಗಳು ನನ್ನ ವೈಯಕ್ತಿಕ ಅಭಿಪ್ರಾಯಗಳಲ್ಲ. ನನಗೆ ತಿಳಿದ ಶಾಸ್ತ್ರೀಯ ಪದ್ಧತಿಯಿಂದ ಈ ಅನ್ವೇಷಣೆಯನ್ನು ಮುಂದುವರಿಸುತ್ತ ಬಂದಿದ್ದೇನೆ. ಈ ಫಲಿತಾಂಶಗಳಲ್ಲಿ ತಾಳ-ಮೇಳವು ಅಥವಾ ಅಂತಃಸಂಗತಿಯು ಇಲ್ಲದುವನ್ನು ನಾನು ಸ್ವೀಕರಿಸಿಲ್ಲ. ಇದರಲ್ಲಿ ನನಗೆ ಸೋಜಿಗವೆನಿಸುತ್ತಿರುವ ಸಂಗತಿಯೆಂದರೆ-ಕಣ್ಮರೆಯಾದ ಕನ್ನಡದ ಸಮಸ್ಯೆಯೊಳಗಿಂದಲೇ ಈ ವರೆಗಿನ ನನ್ನ ಪ್ರಶ್ನೆಗಳು ಮುಂದುವರಿಯುತ್ತ ಬಂದಿವೆ! ಕಣ್ಮರೆಯಾದ ಕನ್ನಡದ ಸಮಸ್ಯೆಗಳೊಳಗಿಂದ ಮಹಾರಾಷ್ಟ್ರವು ಮೈವೆತ್ತಿದ ಪ್ರಶ್ನೆಯು ಎದುರು ನಿಂತಿತು. ಮರ್‍ಹಾಟ > ಮಹಾರಾಷ್ಟ್ರದ ಪ್ರಶ್ನೆಯಲ್ಲಿ ದೇಸೀ ಮತ್ತು ಸಂಸ್ಕೃತ ಭಾಷಿಕರ ಸಂಘರ್ಷಣ ಹಾಗೂ ಸಮ್ಮಿಶ್ರಣದ ತೊಡಕು ಕಾಣಿಸಿಕೊಂಡಿತು. ದೇಸೀ ಅಂಶಗಳು ವೇದದಲ್ಲಿಯೂ ಸ್ಥಾನ ಪಡೆದುದು ಖಚಿತಪಟ್ಟಿತು. ಈ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಹಾಲುಮತ ದರ್ಶನ ಬರೆಯುವುದು ಶಕ್ಯವಾಯಿತು. ಆ ಬಳಿಕ ಇಂದಿನ ವೇದದ ಸಂಸ್ಕೃತಿಯ ಜಟಿಲಪ್ರಶ್ನೆ ನನ್ನನ್ನು ಆಕರ್ಷಿಸಿತು. ವೇದದಲ್ಲಿ ನಾಗ (ಲಿಂಗ) ಸಂಪ್ರದಾಯವು ಉಂಟು ಎಂಬ ಸಂದೇಹವು ಸೋಂಕಿತು. ಆದರೆ, ಈ ನಾಗಸಮಸ್ಯೆ ಜಾಗತಿಕ ಸಂಸ್ಕೃತಿಯ ಪ್ರಶ್ನೆಯಾಗಿರುವುದನ್ನು ಅನ್ವೇಷಣೆ ಮುಂದುವರೆಸಿದಾಗ ನಾನು ಮನಗಂಡೆ. ಇಂದಿನ ಮಹಾಸಭೆಗೆ ನಿವೇದಿಸುತ್ತಿರುವ ನನ್ನ ನಿಷ್ಕರ್ಷಗಳ ವರದಿ : ಈ ನಾಗಸಂಪ್ರದಾಯದ ಜಾಗತಿಕ ಸ್ವರೂಪದ ಸಮಸ್ಯೆಯ ಅಂಗವಾಗಿದೆ.

ನನ್ನ ಅನ್ವೇಷಣೆಯ ಈ ನಿರ್ಷಗಳಲ್ಲಿ ಅಂತಃಸಂಗತಿ, ತಾಳಮೇಳವೂ ಉಂಟು ಎಂದು ನನಗೆ ಕಾಣುತ್ತದೆ. ನನ್ನ ಈ ಗ್ರಹಿಕೆಯಲ್ಲಿ ಟೊಳ್ಳು ಎಷ್ಟು ಗಟ್ಟಿ ಎಷ್ಟು ಎಂಬುದನ್ನು ನಿರ್ಧರಿಸುವುದು ಪ್ರಾಜ್ಞರ ಕೆಲಸ.

ಸಾಂಸ್ಕೃತಿಕ ಸತ್ಯಾನ್ವೇಷಣೆಯ ಒರೆಗಲ್ಲು:

ಯಾವುದೊಂದು ಸಂಸ್ಕೃತಿಯ ಐತಿಹಾಸಿಕ ಸ್ವರೂಪದ ಅನ್ವೇಷಣೆಯು, ಆ ಜನದ ಆ ನಿನ್ನೆಗಳ ಫಲಿತವಾದ ಇಂದಿನ ಸಮಸ್ಯಾ ಪರಿಹಾರಕ್ಕೆ ಉಪಕಾರಕವಾಗುತ್ತಿರಬೇಕು. ಹೀಗೆ, ಇಂದಿನ ಸಮಸ್ಯಾ ಪರಿಹಾರಕ್ಕೆ ಉಪಕಾರಕವಾಗುವುದರಲ್ಲೇ ಆ ಸತ್ಯಾನ್ವೇಷಣೆಯ ಸಾಫಲ್ಯ ಅಡಗಿದೆ. ಏಕೆಂದರೆ, ಆ ನಿನ್ನೆಗಳೇ ಇಂದುಗಳಲ್ಲಿ ರೂಪುಗೊಳ್ಳುತ್ತ ಇಂದಿನ ವರೆಗೆ ಬಂದಿವೆಯಲ್ಲವೆ? ಇಂದಿನ, ಭಾರತೀಯ ಹಾಗೂ ಜಾಗತಿಕ ತುರ್ತು

ಪರಿಸ್ಥಿತಿಯ ಹಿಂದಿರುವ ಕಾರಣ ಕಾರ್ಯ ಸಂಬಂಧದ ಮೇಲೆ ಈ ಅನ್ವೇಷಣೆಯು-ಇದು ಸತ್ಯಾನ್ವೇಷಣೆಯೇ ಆಗಿದ್ದರೆ-ಇಂದಿನ ಸಮಸ್ಯಾ ಪರಿಹಾರಕ್ಕೆ ಉಪಕಾರಕವಾಗಬೇಕೆ ಎಂಬುದೇ ನನ್ನ ಅನಿಸಿಕೆ. ಈ ಅನಿಸಿಕೆಯು ಸರಿಯೆ, ತಪ್ಪೆ-ಎಂಬುದನ್ನು ಹೇಳುವ ಅಧಿಕಾರ ತಮ್ಮದು, ಪ್ರಾಜ್ಞರದು.

ನಮ್ಮ ಒಂದು ಹಳೆಯ ಹಾಡಿನಲ್ಲಿ ಬಂದಿರುವ 'ನೀನಾರಿಗಾದೆಯೋ ಎಲೆ ಮಾನವಾ' ಎಂಬ ಪಲ್ಲವಿಯು ಅತ್ಯಂತ ಅರ್ಥಗರ್ಭಿತವಾಗಿದ್ದು. ಇದರಲ್ಲಿ ನಮ್ಮನ್ನು ಅಂತರ್ಮುಖಿಯಾಗಿಸುವ ಸಾಮರ್ಥ್ಯವಿದೆ. "ಮಾನವನು ಮರಳಿ ನರನಾಗಿದ್ದಾನೆ" ಎಂಬ ನನ್ನ ನಿಷ್ಕರ್ಷವನ್ನು ಗೋಮುಖದಿಂದ ಬಂದ ಈ ಉಕ್ತಿಯು ಬೆಂಬಲಿಸುತ್ತಿದೆ. ಬೆಳ್ಳಿ, ಬಂಗಾರ, ವಜ್ರ ಮೊದಲಾದ ಉತ್ಸವಗಳನ್ನು ಏರ್ಪಡಿಸುವ ಈ ಪ್ರಸಂಗಗಳಲ್ಲಿ ನಮ್ಮ ಸಾಧನೆಗಳ ಸಿಂಹಾವಲೋಕನವು ಅನಿವಾರ್ಯ, ಆಗ ನಮ್ಮ ಪ್ರಗತಿಯಾಗಿದೆ ಎಂಬ, ಭ್ರಮೆ ಹುಟ್ಟಿಸುವ ಮಾತುಗಳೂ ಕೇಳಬರುತ್ತವೆ. ಆದರೆ, ವಸ್ತುಸ್ಥಿತಿಗೂ ಇಂಥ ಮಾತಿಗೂ ಹೊಂದಾಣಿಕೆ ಕಾಣದು! ಇದಕ್ಕೆ ನಿದರ್ಶನ : ನಮ್ಮ ಇಂದಿನ ಸ್ಥಿತಿ. ಭಾರತಕ್ಕೆ ಸ್ವಾತಂತ್ರ್ಯವು ಬಂದು ೩೪ ವರ್ಷಗಳು ಕಳೆದುವು. ಈ ಅವಧಿಯಲ್ಲಿ, ಅಭಿವೃದ್ಧಿ ಆಗಿಯೇ ಇಲ್ಲವೆಂದೆನ್ನುವುದು ಸರ್ವಥಾ ತಪ್ಪು. ಆದರೆ, ಭ್ರಷ್ಟಾಚಾರ, ಅನಾಚಾರಗಳ ಅಭಿವೃದ್ಧಿಯೇ ಎದ್ದು ಕಾಣುವಷ್ಟಾಗಿರುವುದರಿಂದ ಕಾರಖಾನೆ, ಕೃಷಿ ಮೊದಲಾದ ಭೌತ-ಅಭಿವೃದ್ಧಿಯು ತನ್ನ ಬೆಲೆಗೆ ಎರವಾಗಿದೆ! ಇದರ ಕಾರಣ-ಮೀಮಾಂಸೆಯು ನನ್ನ ಇಂದಿನ ಈ ಉಪನ್ಯಾಸದಲ್ಲಿ ಒಳಗೊಂಡಿದೆ ಎಂಬುದು ಗ್ರಹಿಕೆ.

ಜೀವನ ಮತ್ತು ಸಂಸ್ಕೃತಿಯ ವಿಚಾರ

ನಮ್ಮ ಸಂಸ್ಕೃತಿಯು ಬಹು ಪುರಾತನದ್ದು. ನಮ್ಮಂತಹ ಶ್ರೇಷ್ಠ ಸಂಸ್ಕೃತಿಯು ಬೇರೆ ಎಲ್ಲಿಯೂ ಇಲ್ಲ. ಎಂಬೀ ಬಗೆಯ ಅಭಿನಿವೇಶದ ಮಾತುಗಳನ್ನು ಚಿಕ್ಕಂದಿನಿಂದಲೇ ಕೇಳುತ್ತಿದ್ದೆ. ಆದರೆ, ತಿಳಿವಳಿಕೆ ಮೂಡಿದ ನಂತರ ಕಾರ್ಯಕಾರಣ ಸಂದರ್ಭದಿಂದಲೇ ವಿಚಾರ ಮಾಡು. ಸ್ವ-ಭಾವದ ನನಗೆ ಈ ಹಿರಿಮೆಯ ಗ್ರಹಿಕೆಯು ಮನಸ್ಸಿಗೆ ಹಿಡಿಸಲಿಲ್ಲ. ಬಿತ್ತಿದ್ದನ್ನು ಬೆಳೆದುಕೊ ಎಂಬ ಈ ಜೀವನ ಸತ್ಯವು ನಿಜವಿದ್ದರೆ ನಮ್ಮ ಇಂದಿನ ಈ ದುರವಸ್ಥೆಯ ಮೂಲಬೇರುಗಳು ಅಥವಾ ಮೂಲಕಾರಣವು ಎಲ್ಲಿಯಾದರೂ ಇರಲೇಬೇಕಷ್ಟೆ? ಆದರೆ, ನಾವು ಬಿತ್ತಿದ್ದೇನೆ? ಎಂಬುದನ್ನು ನನ್ನಿಂದ ಕಂಡುಹಿಡಿಯಲು ಶಕ್ಯವಾದೀತೆ? ಎಂಬ ಸಂದೇಹ, ಕುತೂಹಲ ತೀವ್ರವಾಯಿತು. ನಮ್ಮ ಸಂಸ್ಕೃತಿಯ ನಿಜವಾಗಿ ದೊಡ್ಡದೇ ಇದ್ದಲ್ಲಿ ಇದರಲ್ಲಿರುವ ಆ ಮೌಲಿಕ ಅಂಶಗಳು ಯಾವುವು? ಅವು ಉಂಟು ಎಂದರೂ, ಅವು ಇಂದು ಕಣ್ಮರೆಯಾಗಿವೆ. ಸಂಸ್ಕೃತಿಯೆಂಬುದು ಬರಿಯ ಮಾತಿನಲ್ಲಿ ಇದೆಯೆ? ಅಥವಾ ಇದು ಭಗವದ್ಗೀತೆಯಂಥ ಗ್ರಂಥದಲ್ಲಿ ಮಾತ್ರ ಉಳಿದಿದೆಯೆ? ಸಂಸ್ಕೃತಿಯು ಜನರ ಆಚಾರ-ವಿಚಾರಗಳನ್ನು ರೂಪಿಸುತ್ತಿದ್ದರೆ, ಅದು ನಮ್ಮ ನಡೆವಳಿ ನುಡಿವಳಿಯಲ್ಲಿ ಕಾಣಬೇಡವೆ? ಇಂದಿನ ಭ್ರಷ್ಟಾಚಾರ - ಅನಾಚಾರಗಳನ್ನು ನೋಡುತ್ತಿರುವಾಗ ನಾವು ಬಗೆಯುತ್ತಿರುವಂತೆ, ನಮ್ಮ ಈ ಸಂಸ್ಕೃತಿಯು ದೊಡ್ಡದು ಎನ್ನಲು ನನಗೆ ಧೈರ್ಯಸಾಲದಾಯಿತು.

ಕರ್ನಾಟ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯಿಂದ ತೀರ ಬೇರೆ ಇಲ್ಲ ಎಂಬ ಕಾರಣದಿಂದ ನಮ್ಮ ಉನ್ನತಿ-ಅವನತಿಯನ್ನು ಗ್ರಹಿಸಿಕೊಳ್ಳಲು ಭಾರತೀಯ ಸಂಸ್ಕೃತಿಯ ಅನ್ವೇಷಣೆಯು ಅನಿವಾರ್ಯವಾಯಿತು. ಈ ಅನ್ವೇಷಣೆಯಲ್ಲಿ ನನಗೆ ಕಂಡು ಬಂದ ಸೋಜಿಗವೆಂದರೆ-ಕರ್ನಾಟ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯ ಅ-ವಿಭಾಜ್ಯ ಅಂಗವಾಗಿದೆ. ಇದೇ ಮೇರೆಗೆ, ಭಾರತವು ಮಾನವೇತಿಹಾಸದ ಅಂಗವಾಗಿರುವುದು ನಿಜವಿದ್ದರೆ ಭಾರತೀಯ ಸಂಸ್ಕೃತಿಯ ಆಗು-ಹೋಗುಗಳಿಗೆ ಸಮಾಂತರವಾದ ಘಟನೆಗಳು ಭಾರತದ ಹೊರಗಿನ ರಾಷ್ಟ್ರಗಳಲ್ಲಿ-ಕೆಲವೆಡೆಗಳಲ್ಲಾದರೂ-ಕಾಣಲು ದೊರೆಯಲೇಬೇಕಷ್ಟೆ? ಇದನ್ನು ವೈವಸ್ವತಮನು ಪ್ರಣೀತ ಮಾನವ ಧರ್ಮದ ಆಕೃತಿ ಹಾಗೂ ಬುಧನ ಜಾತಕ ಇವುಗಳ ಅನ್ವೇಷಣೆಯಲ್ಲಿ ನಾನು ಮನಗಂಡಿದ್ದೇನೆ. ಈ ವರೆಗಿನ ನನ್ನ ಸಾಂಸ್ಕೃತಿಕ ಅನ್ವೇಷಣೆಯಲ್ಲಿ ಇನ್ನೂ ಒಂದು ಅಂಶವು ನನ್ನನ್ನು ಈ ಕ್ಷಣಕ್ಕೂ ಸೋಜಿಗಗೊಳಿಸುತ್ತದೆ. ಈ ಬಾಳಿನಲ್ಲಿ ಧರ್ಮ ಸಂಸ್ಕೃತಿ ಎಂಬುದು ಇದ್ದಲ್ಲಿ ಇದು ಮಾನವಧರ್ಮ : ಸಂಸ್ಕೃತಿಯೆ ಇರಬಲ್ಲದು ಮತ್ತು

ಮಾನವ ಎಂಬ ಈ ಪ್ರಾಣಿಯು ಜೀವನವನ್ನು ಆಳುತ್ತಿರುವ ವಿಶ್ವನಿಯಮಕ್ಕೆ ಅಧೀನವಿದೆ. ಈ ವಿಶ್ವನಿಯಮವನ್ನು ಉಲ್ಲಂಘಿಸುತ್ತಿರುವುದರಿಂದಲೇ, ಈ ಮಾನವನು ಮರಳಿ ಅ-ಮಾನವನ a-man ಹಂತಕ್ಕೆ ತಳ್ಳಲ್ಪಟ್ಟಿದ್ದಾನೆ. ಇಲ್ಲಿ ಒಬ್ಬ ಜರ್ಮನ್ ತತ್ವಜ್ಞನ ಉಕ್ತಿಯೊಂದು ನೆನಪಿಗೆ ಬರುತ್ತದೆ:

> "We can flout laws of man, (but) cannot flout the laws of Nature," Fichte.

ಜೀವನ : ಸಂಸ್ಕೃತಿ ಹಾಗೂ ಸಾಹಿತ್ಯ ಇವು ಮೂರೂ ಸಾಪೇಕ್ಷವಾಗಿವೆ. ಜೀವನವು, ಸಂಸ್ಕೃತಿ-ಸಾಹಿತ್ಯದ ಆಕೃತಿಗೆ ಕಾರಣವಾಗಿರುವಂತೆ, ಸಂಸ್ಕೃತಿ - ಸಾಹಿತ್ಯವು ಒಟ್ಟಿನಲ್ಲಿ ಜೀವನಕ್ಕೆ ವಿಶಿಷ್ಟ ಆಕಾರವನ್ನೀಯುತ್ತದೆ. ಈ ಕಾರಣ. ಕಾರ್ಯ ಸಂಬಂಧದಲ್ಲಿ ಜೀವನವೆಂಬುದು ಆದಿಕಾರಣವಾಗಿದೆ. ಇದನ್ನು ಕ್ಷಣಮಾತ್ರವೂ ಮರೆಯಲಾಗದು. ಏಕೆಂದರೆ, ಸಾಹಿತ್ಯಕರು : ಶಬ್ದಬ್ರಹ್ಮರು ಎಂಬ ನಂಬುಗೆ ಬಹುಕಾಲದಿಂದಲೂ ರೂಢಿಯಲ್ಲಿದೆ. ಬ್ರಹ್ಮನೇ ಸೃಷ್ಟಿಕರ್ತನು. ಆದಕಾರಣ, ಶಬ್ದಬ್ರಹ್ಮರು ಸೃಜನಶೀಲ ಸಾಹಿತ್ಯ ನಿರ್ಮಿಸಬಲ್ಲರು. ಇದು ತೀರ ಸುಳ್ಳಲ್ಲ. ಆದರೆ ಸೃಜನಕ್ಕೆ (ಸೃಷ್ಟಿಗೆ) ಕಾರಣನು ಎಂಬ ಈ ಬ್ರಹ್ಮನು, ರಾತ್ರಸಮಯಾಚಾರಗಳ ಸಂದರ್ಭದಲ್ಲಿಯೇ ಪ್ರತೀತಿಗೆ ಬರುವವನಾಗಿದ್ದಾನೆ. ಈ ನಿಷ್ಕರ್ಷವನ್ನು ಹಲಕೆಲರು ಆಕ್ಷೇಪಿಸಬಹುದು. ಆದರೆ, ರವಿ ಕಾಣದ್ದನ್ನು ಕವಿ ಕಾಣುತ್ತಾನೆ ಎಂಬ ಸರ್ವಶ್ರುತ ವಾಕ್ಯದಲ್ಲಿ ಮೇಲಣ ನನ್ನ ನಿಷ್ಕರ್ಷಕ್ಕೆ ಬೆಂಬಲ ಉಂಟು. ರವಿ (ಸೂರ್ಯ) ಕಾಣದ್ದನ್ನು ಕಾಣುವ ಕವಿ, ಇವನು ಇರುಳಗಣ್ಣಿನವನು-ಚಾಂದ್ರ ಭೂಮಿಕೆಯ ದೃಷ್ಟಿಕೋನದವನೇ ಇರಬೇಕಷ್ಟೆ? ರವಿ ಕಾಣದ್ದನ್ನು ಕಾಣುವ ಸಮರ್ಥ ಕವಿಗಳು-ಲೇಖಕರು ಜೀವಿತವನ್ನು ಮಾತ್ರ ಚಿತ್ರಿಸಬಲ್ಲರೇ ಹೊರತು, ಜೀವನವನ್ನಲ್ಲ. ಈ ಮಾತು ಏತಕ್ಕೆ ಎಂದರೆ ಶಬ್ದಬ್ರಹ್ಮರೆಂಬುವರಿಂದ ಆಕಾರ ಪಡೆದಿರುವ, ಪಡೆಯಬಲ್ಲ. ಧರ್ಮ: ಸಂಸ್ಕೃತಿ : ಸಾಹಿತ್ಯ. ಇದು, ಇಂದು ಜೀವಿತದ ಪಾತಳಿಯ ಮೇಲೆ ಬಂದಿದೆ. ಈ ಶಬ್ದಬ್ರಹ್ಮರಿಂದ ನಿರ್ಮಾಣವಾಗುತ್ತಿರುವ -ನಿರ್ಮಾಣವಾಗಿರುವ-ಸಾಹಿತ್ಯವು ವ್ಯಕ್ತಿನಿಷ್ಠ ಅಸ್ತಿತ್ವವನ್ನು ಪ್ರೇರೇಪಿಸುತ್ತ ಪೋಷಿಸುತ್ತ ಬಂದಿದೆ. ಇದು ನನ್ನ ಅನುಮಾನವೂ ಅಲ್ಲ ; ತರ್ಕವೂ ಅಲ್ಲ. ಜೀವನ (Life) ಮತ್ತು ಜೀವಿತ (Existence) ಸ್ತಿತ್ವ, ಇವೆರಡರೊಳಗಿನ ಮೂಲಗಾಮಿ ಭೇದವು ಇಂದು ಕಣ್ಮರೆಯಾಗಿದೆ. ಋಷಿ (ಜೀವನ) ಮತ್ತು ಮುನಿ (ಜೀವಿತ) ಇವೆರಡೂ ಪಾರಿಭಾಷಿಕ ಪದಗಳೊಳಗಿನ ಭೇದವು ನಷ್ಟವಾಗುವುದರೊಡನೆ ಜೀವನ ಮತ್ತು ಜೀವಿತ ಇವೆರಡರೊಳಗಿನ ತಾರತಮ್ಯವೂ ಮರೆತು ಹೋಗಿದೆ.

ಜೀವಿತ ಇದು ವೈಯಕ್ತಿಕ : ಆಯಾ ವ್ಯಕ್ತಿಯ ಆಯುರ್ಮಾನಕ್ಕೆ ಸೀಮಿತ. ಜೀವನವು ನಿತ್ಯವಾಗಿ ಸಾಮಾಜಿಕ ವ್ಯಕ್ತಿಯು ಅದೃಶ್ಯವಾದರೂ ಅದು ಸಾಮಾಜಿಕ ಪಾತಳಿಯ ಮೇಲೆ ಮಾಡಿದ ಸಾಂಸ್ಕೃತಿಕ ಮೌಲಿಕ ಕಾರ್ಯವು; ತಲೆಮಾರಿನಿಂದ ತಲೆಮಾರಿಗೆ ಚಿರಂತನವಾಗಿ ಆಗಾಮೀ ನಾಳೆಗಳತ್ತ ಸಾಗಬಲ್ಲುದು. ಜೀವಿತವು ಪ್ರಾಣಪಾತಳಿ;* ಜನನ-ಮರಣವು ಈ ಪ್ರಾಣದ ಪ್ರಧಾನ ಲಕ್ಷಣ. ಈ ಹುಟ್ಟು-ಸಾವುಗಳು ನಿತ್ಯ ವೃತ್ತಾಕೃತಿ (೦) ಯವು. ಹುಟ್ಟು ಮತ್ತು ಸಾವು ಜೀವಿತರೂಪೀ ವರ್ತುಲದ ಒಂದೇ ಬಿಂದುವಿನಲ್ಲಿ ಸೇರುತ್ತವೆ. ಜೀವಿತ ಮತ್ತು ಜೀವನ ಇವೆರಡೂ ಸಮಾನ ಆಕೃತಿಯವಲ್ಲ. ವೃತ್ತಾಕೃತಿಯ ಅಸ್ತಿತ್ವದಲ್ಲಿ ನಿಜವಾದ ನಾಳೆ ಎಂಬುದು ಇಲ್ಲ. ಆದರೆ, ಜೀವನವು ನಿನ್ನೆ - ಇಂದುಗಳೆಂಬ ರೂಪದಲ್ಲಿ ಸಮಾಜ-ಸಮಷ್ಟಿಯ ಪಾತಳಿಯ ಮೇಲೆ ಆಗಾಮೀ ನಾಳೆಗಳತ್ತ ಎಡೆಬಿಡದೆ ಸಾಗಿರುತ್ತದೆ. ಈ ಕಾರಣದಿಂದಾಗಿ ಜೀವಿತವನ್ನು ಜೀವನವೆಂದು ಬಗೆಯುವುದು ಸರ್ವಥಾ ತಪ್ಪು ಎಂದು ಹೇಳಬೇಕಾಗುತ್ತದೆ.

---

* 'ಜೀವಿತ' ಹಾಗೂ ಜೀವನ ಎಂಬ ಶಬ್ದಶಿಲ್ಪಗಳಲ್ಲಿ 'ಜೀವನ' ಎಂಬುದು ಪ್ರಾಚೀನಶಬ್ದಶಿಲ್ಪ. ಇದಕ್ಕೆ 'ನೀರು' ಎಂಬ ಅರ್ಥವೂ ಉಂಟು. ಶಂಬಾ ಜೋಶಿಯವರು 'ಜೀವಿತ' ಎಂಬ ಶಬ್ದಶಿಲ್ಪವನ್ನು 'ಆಯುರ್ಮಾನ' (Existence) ಎಂಬ ಅರ್ಥದ ನೆಲೆಯಲ್ಲೂ ಜೀವನ ಎಂಬ ಶಬ್ದಶಿಲ್ಪವನ್ನು ಎಂಬ ಅರ್ಥದ ನೆಲೆಯಲ್ಲೂ ಹಿಡಿದು ವ್ಯಾಖ್ಯಾನಿಸುತ್ತಾರೆ. ಇವೆರಡೂ ಶಬಶಿಲಗಳು (Life) 'ನಿರಂತರ' ಸಮಾನಪಾತಳಿಗೆ ಸೇರಿದವಲ್ಲ ಎಂಬ ಗ್ರಹಿಕೆ ಅವರ ಚಿಂತನೆಯ ಹಿಂದಿದೆ. (ಸಂ.)

ಜೀವನದಲ್ಲಿ ಎಂದರೆ, ಪ್ರಾಣಚೇತನದ ಪಾತಳಿಯ ಮೇಲೆ, ವ್ಯಕ್ತಿಗೇ ಪ್ರಾಧಾನ್ಯವಿರುವ ಅನಿವಾರ್ಯತೆ ಇದೆ. ಆದರೆ, ಜೀವನದ ಹಂತದಲ್ಲಿ ಸಮಾಜ ಸಮಷ್ಟಿಗೇ ಪ್ರಾಧಾನ್ಯವಿರುತ್ತದೆ- ಇರಲೇಬೇಕು, ವ್ಯಕ್ತಿ ತಾನು ತನ್ನ ಭಾಷಿಕ ಸಮಷ್ಟಿಯ ಅ-ವಿಭಾಜ್ಯ ಅಂಗವೆಂದು ತ್ರಿಕರಣಪೂರ್ವಕವಾಗಿ ನೆರೆನಂಬಿದ್ದಲ್ಲಿ. ಅವನು (ಅವಳು) ಜೀವನದ ಪಾತಳಿಯ ಮೇಲೆ ಬಾಳಬಲ್ಲನು (ಳು). ಆದರೆ, ವ್ಯಕ್ತಿ ವೈಶಿಷ್ಟ್ಯಕ್ಕೇ ಪ್ರಾಧಾನ್ಯ ಬರುವಾಗ ಅದು ಜೀವನ ಅಂದರೆ ಪ್ರಾಣದ ಹಂತದ ಅಸ್ತಿತ್ವವೇ ಆಗಬಲ್ಲುದು. ತನ್ನ ಭಾಷಿಕ ಸಮಷ್ಟಿಯ ಅ-ವಿಭಾಜ್ಯ ಅಂಗ ತಾನು ಎಂಬ ಜೀವಂತ, ಜಾಗೃತ-ಪ್ರಜ್ಞೆ ಇರುವವರು. ಬಹುಸಂಖ್ಯೆಯಲ್ಲಿದ್ದಾಗ ಆ ಬಾಳಿನಲ್ಲಿ ಸಮಾಜ ಸಮಷ್ಟಿಯೆಂಬುದು ಇರಬಹುದು ಅಸ್ತಿತ್ವದಲ್ಲಿಯೂ ಬರಬಹುದು. ಈ ಹಂತದಲ್ಲೇ ವ್ಯಕ್ತಿಗೆ ಮಾನವನ ಅರ್ಹತೆ ಬರುತ್ತದೆ. ಆದರೆ, ಇಂದು ವ್ಯಕ್ತಿ ಬಂಡು ಹೂಡಿದೆ! ಮಾನವನಿಂದ ಬಿಡುಗಡೆ ಪಡೆದಿದೆ. ಇಂದು ಈ ಪ್ರಪಂಚದಲ್ಲಿ ವೈಶಿಷ್ಟ್ಯಪೂರ್ಣ ವ್ಯಕ್ತಿಗಳು ಎಲ್ಲೆಲ್ಲೂ ಇದ್ದಾರೆ: ಮಾನವನು ಮಾತ್ರ ಕಣ್ಮರೆಯಾಗಿದ್ದಾನೆ.

ಈ ಮಾನವ ಎಂಬ ಪ್ರಾಣಿ ಯಾರು?

ಕೆಲವರ್ಷಗಳ ಹಿಂದೆ, ಪ್ರಾಧ್ಯಾಪಕ ಮಿತ್ರರೊಬ್ಬರು ಕೇಳಿದರು : ನಮಗೆ ಇಂದು ಕಾಣುತ್ತಿರುವವರು ವಿಶಿಷ್ಟ ವ್ಯಕ್ತಿಗಳು ಮಾತ್ರ. ಉದಾಹರಣೆಗೆ-ಮುನಿಯಪ್ಪ, ರಾಮಪ್ಪ, ಕೃಷ್ಣಭಟ್ಟ, ವೆಂಕೂಬಾಯಿ ಇತ್ಯಾದಿ. ಆದರೆ ಜೋಶಿಯವರೆ, ನೀವು ಹೇಳುವ ಆ ಮಾನವ ಎಲ್ಲಿದ್ದಾನೆ? ತೋರಿಸಿ: ಇಲ್ಲವಾದರೆ ಮಾನವ ಎಂಬುದು ಧಾರಣ (Concept) ಅಲ್ಲ, ಇದು ಕೇವಲ ಕಲ್ಪನೆ (Idea) ಇದನ್ನು Myth ಮಿಥ್ಯಾಕಥೆ-ಎಂದರೆ ತಪ್ಪೇನು? ಇಂದು Concept ಇದರೊಳಗಿನ ಆಶಯವನ್ನು ದೇಶಭಾಷೆಯಲ್ಲಿ ಹೇಳುವುದಕ್ಕೆ ಅಸಮರ್ಥರಾಗಿದ್ದೇವೆ. Concept ಇದನ್ನು ಸಂಕಲ್ಪನೆ ಅಥವಾ ಪರಿಕಲ್ಪನೆಯೆಂಬ ಸಂಕೇತದಿಂದ ಸೂಚಿಸಲಾಗುತ್ತಿದೆ. ಮರಾಠಿ ಭಾಷೆಯಲ್ಲಿಯೂ ಈ ಕೊರತೆ ಎದ್ದುಕಾಣುತ್ತದೆ. ಹಿಂದಿನ ತಲೆಮಾರಿನ ತಿಲಕ, ಕೇಳಕರ ಪ್ರಭೃತಿಗಳು Concept ಪದಕ್ಕೆ ಧಾರಣಾ ಎಂಬ ಪ್ರತಿಪದವನ್ನು ಮರಾಠಿಯಲ್ಲಿ ಯೋಜಿಸುತ್ತಿದ್ದರು. ಆದರೆ, ನವೋದಯವು ಆದ ಬಳಿಕ, ನವ್ಯರಲ್ಲಿ ವ್ಯಕ್ತಿ ವೈಶಿಷ್ಟ್ಯವು ಹಚ್ಚಿದಂತೆ ಮರಾಠೀ ಭಾಷೆಯಲ್ಲಿ ಧಾರಣಾ ಎಂಬ ಪದವು ಸ್ಥಾನಭ್ರಷ್ಟವಾಯಿತು. ಸಂಕಲ್ಪನಾ ಎಂಬ ಪದವೇ Concept ಎಂಬರ್ಥದಲ್ಲಿ ರೂಢಿಗೆ ಬಂದಿತು! ಈ ಕೊರತೆಯತ್ತ ಮರಾಠೀ ಪ್ರಾಜ್ಞರ ಗಮನ ಸೆಳೆಯಲು ಮುಂಬಯಿಯ ನವಭಾರತ ಮಾಸಪತ್ರಿಕೆಯಲ್ಲಿ, ನಾನು ಒಂದು ಲೇಖನ ಬರೆದೆ (೧೯೭೧). ಸಂಕಲ್ಪನಾ ಈ ಪಾರಿಭಾಷಿಕ ಪಡವು ತೀರ ತಪ್ಪಲ್ಲ; ಆದರೆ ಇದು ಸಮುಚಿತ, ಸಮರ್ಪಕ ಪ್ರತಿಶಬ್ದವಲ್ಲ. ಏಕೆಂದರೆ ಕ್ಲೃಪ್>ಕಲ್ಪ>ಸಂಕಲ್ಪ... ಇದು ಕೇವಲ ವೈಯಕ್ತಿಕ ಪಾತಳಿಯ ಅಭಿವ್ಯಕ್ತಿಯಾಗುತ್ತದೆ, ಸಂಕಲ್ಪ ಮಾಡುವವನು ಒಂದು ವ್ಯಕ್ತಿ. ಆದರೆ ಕೇವಲ ವ್ಯಕ್ತಿಗಳಿಂದ ಮಾನವ ಭಾಷೆಯು ಮೈವೆತ್ತಿಲ್ಲ. ವ್ಯಕ್ತಿಯ ಅಭಿವ್ಯಕ್ತಿಗೆ, ಆ ಭಾಷಿಕ ಸಮಷ್ಟಿಯ ಸಂದರ್ಭದ (ಬಾಳಿನೊಳಗಿನ ಕ್ರಿಯೆ ಪ್ರತಿಕ್ರಿಯೆಗಳ ಫಲವಾಗಿ ಅವನಲ್ಲಿ ತಲೆದೋರುವ) ಪ್ರಚೋದನೆಯು ಕಾರಣವಾಗುತ್ತದೆ. ಆದಕಾರಣ, ಒಂದು ವ್ಯಕ್ತಿಯು ತನ್ನ ಭಾಷೆಗೆ ಕೊಡುವ ಕಾಣಿಕೆಯು ಕೇವಲ ಆ ವ್ಯಕ್ತಿಯದೇ ಆಗಿರುವುದಿಲ್ಲ. Concept ಎಂಬ ಪದದ ಮೂಲಾರ್ಥವು ಒಳಗೊಳ್ಳುವ ಆಶಯವು ಸಾಮಾಜಿಕ ದೃಷ್ಟಿಯಿಂದ Conceive>Conception ಬಹಳ ಮೌಲಿಕವಾಗಿದೆ. Concept ಈ ಪದಗಳ ಬರುವಳಿಯಲ್ಲಿ ಕೊಡು-ಕೊಳ್ಳುವ ವ್ಯವಹಾರವು ಅಭಿಪ್ರೇತವಿದೆ. ಸಾಮಾಜಿಕ ಸಂದರ್ಭದ ಬಾಳಿನಲ್ಲಿ ವ್ಯಕ್ತಿ ಮತ್ತು ಸಮಾಜ ಇವೆರಡರ ನಡುವಿನ ಕೊಡು-ಕೊಳ್ಳುವ ವ್ಯವಹಾರದಲ್ಲಿ ಈ ಧಾರಣೆ (Concept) ಶಕ್ಯವಾಗುತ್ತದೆ. ಇಂದು ವ್ಯಕ್ತಿ ಸ್ವಯಂಭೂ ರೀತಿಯಲ್ಲಿ ತಾನೇ ನೇರವಾಗಿ ತನ್ನ ಭಾಷೆ ಸಂಸ್ಕೃತಿಗೆ ಕಾಣಿಕೆಯನ್ನೀಯುತ್ತಿದ್ದೇನೆ ಎಂಬ ಗ್ರಹಿಕೆಯವನಾಗಿದ್ದಾನೆ. ಸಾಮಾಜಿಕ ಪ್ರಜ್ಞೆ ಜಾಗೃತ-ಜೀವಂತವಿಲ್ಲದ್ದರಿಂದ ಈ ಸ್ವಯಂಭೂತ್ವವು ಬೆಳೆದು ನಿಂತಿದೆ. ಭಾಷೆಯಲ್ಲಿ ಅವರವರ ಅರ್ಥ ಅವರವರ ಪಾಲಿನ ಸತ್ಯವಾಗಿ ಪರಿಣಮಿಸಿದೆ. ಆದರೆ, ಮೂಲತಃ ಅರ್ಥ : ವಿಚಾರ : ಸತ್ಯ, ಇದು ವೈಯಕ್ತಿಕವಲ್ಲ. ಮಾತುಗಳಿಗೆ ಸಮಾಜ : ಸಮಷ್ಟಿಯ ಮೂಕಸಮ್ಮತಿಯಾದರೂ (tacit consent) ಅವಶ್ಯವಿರುತ್ತದೆ.

ಇಂದು ಭಗವದ್ಗೀತೆಯ ಮೇಲೆ ಅನೇಕ ಆಚಾರ್ಯರ ವಿವಿಧ ಭಾಷ್ಯಗಳಿವೆ. ಆಧುನಿಕ ಯುಗದ ಜಗದ್ಗುರು ಎಂದು ಬಗೆಯಲಾಗುವ ಶ್ರೀ ಅರವಿಂದರು ಗೀತೆಯ ಅರ್ಥ ಹೇಳಿದ್ದಾರೆ. ಆದರೆ, ಈ ಬಗೆಯ ವೈಯಕ್ತಿಕ ದೃಷ್ಟಿಕೋನದ ಅರ್ಥ ವಿವರಣೆಯಲ್ಲಿ ಅಂತಃಸಂಗತಿಯು ಇರುವ ಶಕ್ಯತೆಯು ಕಡಿಮೆ. ಭಾಷೆಯಲ್ಲಿ ಅರ್ಥವು ವೈಯಕ್ತಿಕ ಸ್ವರೂಪದ್ದು ಆಗುವಾಗ ಅಂತರ್ ವಿಸಂಗತಿಯು ತಲೆದೋರುತ್ತದೆ. ಅರ್ಥ : ಸತ್ಯ ಇದು ವೈಯಕ್ತಿಕ ಸ್ವರೂಪದ್ದಾಗುತ್ತಿರುವುದರಿಂದ ಬಾಳಿನಲ್ಲಿ ಅರ್ಥ: ಸತ್ಯವು ಏನಾದರೂ ಉಂಟೋ ಎಂಬ ಸಂದಿಗ್ಧತೆಯು ತಲೆದೋರುತ್ತದೆ. ಇಂದಿನ ಅವಸ್ಥೆಯೇ ಇದಾಗಿದೆ.

ಜೀವನ ಮತ್ತು ಜೀವಿತ ಇವೆರಡರೊಳಗಿನ ಭೇದವು ನಷ್ಟವಾಗಿರುವುದರಿಂದ ಇಂದಿನ ಈ ಅನವಸ್ಥೆ ಪ್ರಾಪ್ತವಾಗಿದೆ. ಭ್ರಷ್ಟಾಚಾರಕ್ಕೆ ಆಮಂತ್ರಣವು ದೊರೆತಿದೆ. ಜನಜೀವನ ಹಾಗೂ ಭಾಷೆ ಇವೆರಡರಲ್ಲಿಯೂ ಅನ್ಯೋನ್ಯವಿರುತ್ತದೆ. ಈ ಕಾರಣದಿಂದಲೇ ಭಾಷೆಯೊಳಗಿನ ಧಾರಣ ಎಂಬ ಪಾರಿಭಾಷಿಕ ಪದವು ಸ್ಥಾನ ಭ್ರಷ್ಟವಾಗುವಾಗ ಈ ಭಾಷಿಕ ಸಮಷ್ಟಿಯು ದುರ್ಬಲವಾಗಿ, ವೈಯಕ್ತಿಕ ಸಂಕಲ್ಪನೆ : ಪರಿಕಲ್ಪನೆಗೆ ಧಾರಣ ಸ್ಥಾನವು ಪ್ರಾಪ್ತವಾಗುತ್ತದೆ. ಇಲ್ಲಿ ಒಂದು ಮೂಲಗಾಮೀ ಪ್ರಶ್ನೆ ಎದುರು ನಿಲ್ಲುತ್ತದೆ : ಬಾಳಿನೊಳಗೆ ಜೀವನ ಮತ್ತು ಜೀವಿತ ಇವೆರಡರಲ್ಲಿಯೂ ಮೂಲತಃ ಭೇದವು ಇರಬೇಕಾದದ್ದು ನಿಜವಿದ್ದಲ್ಲಿ, ಈ ಮೂಲಭೂತವಾದ ತಾರತಮ್ಯವು ನಷ್ಟವಾದದ್ದು ಯಾವಾಗ? ಮತ್ತು ಯಾವ ಕಾರಣದಿಂದ?

ಮಾನವ ಪ್ರಾದುರ್ಭಾವದ ಆಸುಪಾಸಿನಲ್ಲಿ

ಈ ಸಮಸ್ಯಾ ಪರಿಹಾರಕ್ಕಾಗಿ ಮಾನವ ಎಂಬ ಈ ಪ್ರಾಣಿಯ ಪ್ರಾದುರ್ಭಾವವು ಆದ ಈ ಮೊದಲ ಹಂತದ ಹತ್ತಿರಕ್ಕೆ ಹೋಗುವ ಆವಶ್ಯಕತೆಯಿದೆ. ಆದರೆ, ಆ ಅತಿ ಪ್ರಾಚೀನ ಸಮಯದಲ್ಲಿ ಪ್ರವೇಶ ನಡೆಯಲು ಶಕ್ಯವೆ? ಎಂಬ ಸಂದೇಹವು ತಲದೋರಿದರೆ ತಪ್ಪಲ್ಲ. ಈ ಮಾನವ ಭಾಷೆಯು ಒಳಗೊಂಡಿರುವ ಅಗಾಧ ಮತ್ತು ಅಮೋಘ ಶಕ್ತಿಯಿಂದಾಗಿ ಮಾನವ-ಪ್ರಾದುರ್ಭಾವದ ಆಸು-ಪಾಸಿನ ಹಂತವನ್ನು ಗ್ರಹಿಸಿಕೊಳ್ಳುವುದು ಶಕ್ಯವಿಲ್ಲದಿಲ್ಲ. ಶ್ರೇಷ್ಠ ತತ್ವಜ್ಞ ಕಾಂಟನು ಒಂದೆಡೆಗೆ ಹೇಳಿದ್ದಾನೆ:

> Historical knowledge is possible, because its objects are noumenal (Not phenomenal).

ಮಾನವ ಭಾಷೆಯು ಮೂಲದಲ್ಲಿ ಮೈವೆತ್ತಿದ್ದು-ಕಾಂಟನು ಕಂಡಿರುವಂತೆ Noumenal ಪಾತಳಿಯ ಮೇಲೆ. ಭಾರತೀಯ ಪರಿಭಾಷೆಯಲ್ಲಿ ಹೇಳಬಹುದಾದರೆ. ಈ ಮಾನವಭಾಷೆಯನ್ನು ಕುದುರಿಸುವ, Noumenal ಪ್ರೇರೇಪಿಸುವ ಅಂತಃಶಕ್ತಿಯು ಪ್ರಜ್ಞೆಯ ಅಂಗವಾದ ಮನಸ್ಸಿಗೆ (Nous Mind) ಮಾತ್ರ ಉಂಟು : ಪ್ರಾಣಚೇತಸಕ್ಕಲ್ಲ*. ಆದರೆ, ದಿವ್ಯಾಧ್ಯಾತ್ಮ ಪಂಥಗಳು ಪ್ರಾಣಾಃ ಋಷಯಃ (ಪ್ರಾಣಗಳು ಋಷಿಗಳು) ಎಂಬ ನಂಬುಗೆಯನ್ನು ಪ್ರಚಾರಕ್ಕೆ ತಂದಿವೆ.

ಅರಿಸ್ಟಾಟಲನು Nous (: Mind) ಇದನ್ನು ಸಂಸ್ಕೃತಿಯನ್ನು ರೂಪಿಸಿದ ಆದಿತತ್ತ್ವ ಎಂದಿದ್ದಾನೆ. ಭಾರತೀಯ ಪುರಾತನ ಪರಂಪರೆಯಲ್ಲಿ ಮನುವೈವಸ್ವತ : ಜಾತವೇದ ಅಗ್ನಿಯನ್ನು ಆದಿತತ್ತ್ವವೆಂದು ಬಗೆಯಲಾಗಿದೆ. ಈ ಮಾನವನ ಪ್ರಾದುರ್ಭಾವವು ಪ್ರಜ್ಞಾನೇತ್ರದೊಡನೆಯೇ ಆಗಿದೆ, ಎಂಬುದು ಭಾರತೀಯ ಪುರಾತನರ ಹೇಳಿಕೆ. ಪ್ರಜ್ಞಾನೇತ್ರೋ ಲೋಕಃ ಎಂಬ ಪ್ರಾಚೀನ ಉಕ್ತಿಯೂ ದೊರೆಯುತ್ತದೆ. ಆಧುನಿಕ ಭಾಷಾಶಾಸ್ತ್ರಜ್ಞರು ಭಾಷೆಯಲ್ಲಿ ಮೊಟ್ಟ ಮೊದಲು ರೂಪಕ (Metaphor) ಗಳು ಅಸ್ತಿತ್ವದಲ್ಲಿ ಬಂದಿವೆಯೇ ಹೊರತು ಉಪಮಾನ ಉಪಮೇಯ

---

* ಪ್ರಾಣ ಎಂಬ ಶಬ್ದಶಿಲ್ಪವನ್ನು ಬಿಡಿಸಿದರೆ 'ಪ್ರ+ಅನ್' ಎಂಬ ರೂಪ ಕಾಣುತ್ತದೆ. ಇದರ ಅರ್ಥ ಉಸಿರು. ಉಪನಿಷತ್ತಿನಲ್ಲಿ 'ಪ್ರಾಣೋ ವಾ ಅಂಗಾನಾಂ ರಸಃ' ಎಂಬ ವಿವರಣೆ ಉಂಟು. ಇದು ಇಂದ್ರಿಯ ರಸ. ದಿವ್ಯಾಧ್ಯಾತ್ಮವಾದದಲ್ಲಿ ಪ್ರಾಣಕ್ಕೆ ಸಂಬಂಧ ಪಟ್ಟ ಪ್ರಣವವು ಓಂಕಾರವೇ. ಇದು ಮಹತ್ವದ ಪದವಾಗಿ ಇಂದೂ ಬಳಕೆಯಾಗುತ್ತಿದೆ. ಪ್ರಾಣ ಎಂಬುದು ಅಮೂರ್ತ ಭೌತಿಕಾರ್ಥ. ಶಂಬಾ ಅವರು 'ಪ್ರಾಣಃ ಪ್ರಾಣ' ಶಬ್ದಶಿಲ್ಪವನ್ನೂ ಬಳಸುತ್ತಿರುವ ಅರ್ಥದ ನೆಲೆಯನ್ನು ಈ ಹಿನ್ನೆಲೆಯಲ್ಲಿ ತಿಳಿಯಬೇಕು. (ಸಂ)

(Simile) ಗಳಲ್ಲ ಎಂದಿದ್ದಾರೆ. ಭಾಷೆಯಲ್ಲಿ ರೂಪಕ ಮೊದಲು ಎಂಬಲ್ಲಿ ನೇತ್ರ (ರೂಪಕ)ಕ್ಕೇ ಪ್ರಾಧಾನ್ಯ ಬರುತ್ತದೆ. ಈ ನಿಷ್ಕರ್ಷಕ್ಕೆ ಗ್ರೀಕ್‌ಮೂಲದಿಂದಲೂ ಪುಷ್ಟಿ ದೊರೆಯುತ್ತದೆ. ಈ ಅಂಶವನ್ನು ಬುಧನ ಜಾತಕ ಎಂಬ ನನ್ನ ಗ್ರಂಥದಲ್ಲಿ ವಿವರಿಸಿದ್ದೇನೆ. ಮಾನವ ಸಂಸ್ಕೃತಿಯ ಪ್ರಾರಂಭದ ಹಂತದ ಹಿನ್ನೆಲೆಯು ನಿಶ್ಚಿತವಾಗಿ ಗೊತ್ತಾದಲ್ಲಿ ಈ ಮಾನವನು ಮರಳಿ ನರ(ಳ)ನ ಹಂತಕ್ಕೆ ತಳ್ಳಲ್ಪಟ್ಟದ್ದು ಯಾವಾಗ ಎಂಬ ಸಂಗತಿ ತನ್ನ ತಾನೇ ಅರಿಕೆಗೆ ಬರಲಿದೆ. ಈ ಸಂದರ್ಭದಲ್ಲಿ ಇನ್ನೂ ಒಂದು ಅಂಶವು ಸ್ಪಷ್ಟವಾಗುವ ಆವಶ್ಯಕತೆಯಿದೆ.

ಜೀವಿತವು (ಎಂದರೆ ಲೈಂಗಿಕ ಹಂತದ ಅಸ್ತಿತ್ವವು-ಇದುವೇ) ಉದಾತ್ತೀಕರಣದಲ್ಲಿ ಅಥವಾ ಉನ್ನಯನ (Sublimation) ದಲ್ಲಿ ಮಾನವ ಜೀವನ : ಸಂಸ್ಕೃತಿಯಾಗಿ ಪರಿಣಮಿಸಿದೆ. ನರ(ಳ)ನೇ ಮನುಜವಾಗಿ ವ್ಯವಹರಿಸುತ್ತಾನೆ. ಈ ಸಂಗತಿಯ ಗ್ರಹಿಕೆಯೊಂದು ಪ್ರಚಲಿತವಿದೆ. ಆದರೆ, ಜೀವನ ಮತ್ತು ಜೀವಿತ ಇವೆರಡರಲ್ಲಿ ಗುಣಾತ್ಮಕ Qualitative ವ್ಯತ್ಯಾಸವಿದೆ. ಮಾನವ ಸಂಸ್ಕೃತಿಯು ಆಕಾರ ಪಡೆದುದನ್ನು ಕುರಿತು ಇರುವ ಪುರಾತನ ಪ್ರಮಾಣಗಳನ್ನು ಲೆಕ್ಕಿಸಿದಲ್ಲಿ ಜೀವನವಿದೆಯೆಂದೇ ಜೀವಿತದ ಅರ್ಥವಾಗುತ್ತದೆ. ಮಾನವನು ಉಂಟು ಎಂದು ನರನಿಗೆ ಅಸ್ತಿತ್ವವಿದೆ. ಮಾನವನಿಂದ ಭಾಷೆ ಮೈದೋರಿದೆ. ಆದಕಾರಣ, ಭಾಷೆಯೇ ಇಲ್ಲದಂದು ಮಾನವಪೂರ್ವ ಆ ನರ(ಳ)ನ ಅಸ್ತಿತ್ವವು ಬೇರೆಯಲ್ಲ; ಕತ್ತಲು ಬೇರೆಯಲ್ಲ.*

ಜೀವನವು ಭಾವಾತ್ಮಕವಿದೆ ಎಂದರೆ ಭಾವಿಸಿ ಇದನ್ನು ಗ್ರಹಿಸಿಕೊಳ್ಳುವುದು ಶಕ್ಯವಿದೆ. ಭಾವಾತ್ಮಕ ವಾಗಿರುವುದರಿಂದ ಇದು ಅನುಭಾವಾತ್ಮಕವೂ ಉಂಟು. ಜೀವನದಲ್ಲಿ ಅಂತಃಸಂಗತಿಯುಕ್ತ ಅರ್ಥ : ವಿಚಾರ ರೂಪ ತಾತ್ವಿಕ ಪ್ರಕಾಶನದಿಂದಾಗಿ ಈ ಹಂತದೊಳಗಿನ ಆಗು-ಹೋಗುಗಳನ್ನು ಗ್ರಹಿಸಿಕೊಳ್ಳಲು ಶಕ್ಯವಾಗುತ್ತಿದೆ. ಆದರೆ, ಜೀವಿತವು ನಿತ್ಯ ಅಂತರ್‌ವಿಸಂಗತಿಯಿಂದಾಗಿ ಅಭಾವಾತ್ಮಕ ಅರ್ಥ : ಆಶಯದ್ದೇ ಆಗುವ ಅನಿವಾರ್ಯತೆ ಇದೆ. ಉದಾಹರಣಾರ್ಥ, ಜೀವಿತ ಹಂತದ ಧರ್ಮಗಳಲ್ಲೆಲ್ಲ ಅಮೃತಕ್ಕೆ ಅನನ್ಯ ಸಾಧಾರಣ ಮಹತ್ವವಿದೆ. ಆದರೆ ಅ-ಮೃತ ಅಂದರೆ ಮೃತವಲ್ಲದ್ದು. ಇದು ಅಭಾವಾತ್ಮಕ. ಮೃತವಲ್ಲದ ಈ ಅಮೃತ ಯಾವುದು? ಎಲ್ಲಿದೆ? ಜೀವಿತದ ಪಾತಳಿಯ ಮೇಲಿನ ಈ ಅಮೃತದ ಅರ್ಥ ಗ್ರಹಿಸಿಕೊಳ್ಳಲು ಕಲ್ಪನೆಯನ್ನೇ ಆಶ್ರಯಿಸಬೇಕಾಗುತ್ತದೆ. ಈ ಬಾಳಿನಲ್ಲಿ ಜೀವನದ ಜೀವಂತ ಅನುಭವವಿಲ್ಲದೆ, ಅ-ಮೃತ ಎಂಬ ಮಾತು ಅರ್ಥವಿಹೀನ. ವೇದದಲ್ಲಿ ಇದು ಕಲ್ಪಯಂತೀ ಸ್ವರೂಪದ ದೇವತೆಗಳಿಗೆ ಪ್ರಾಧಾನ್ಯ ಪ್ರಾಪ್ತವಾಗಿದೆ:

ಸುಪರ್ಣಂ ವಿಪ್ರಾಃ ಕವಯಃ ವಚೋಭಿಃ ಏಕಂ ಸನ್ತಂ ಬಹುಧಾ ಕಲ್ಪಯಂತಿ[೨] ವಿಚಾರಶಕ್ತಿ ಮತ್ತು ಕಲ್ಪನಾಶಕ್ತಿ-ಇವೆರಡೂ ಮಾನವನಿಗೆ ವಿಕಾಸತತ್ವದ ಪ್ರಕ್ರಿಯೆಯಲ್ಲಿ ಲಭಿಸಿರುವ ಶಕ್ತಿಗಳಾಗಿವೆ. ವಿಚಾರ (ಜೀವನ) ಮತ್ತು ಕಲ್ಪನೆ (ಜೀವಿತ), ಇವೆರಡರಲ್ಲಿ, ವಿಚಾರವು ಇದ್ದರೇನೇ ಕಲ್ಪನೆಗೆ ಅರ್ಥ; ಕಲ್ಪನೆಯಿಂದ ವಿಚಾರವಲ್ಲ. ಅಂತರ್ ವಿಸಂಗತಿ ಇದ್ದದ್ದು ವಿಚಾರವೇ ಅಲ್ಲ, ವಿಚಾರವು ಶುದ್ಧ ಪ್ರಕಾಶ ಸ್ವರೂಪ. ಪ್ರಕಾಶದ ಅಭಾವದಲ್ಲಿ ಕಲ್ಪನೆಯಿಂದ ಗ್ರಹಿಸುವುದು ಅನಿವಾರ್ಯ. ಕಲ್ಪನೆ, ಕಲ್ಪನಾವಿಲಾಸ, ಕಲ್ಪಯಂತೀ ಇದು (ಜೀವನ) ಪ್ರಕಾಶದ ಅಭಾವದ ಎಂದರೆ ಕತ್ತಲಿನ ಆವರಣದೊಳಗಿನ ಬದುಕಿನ ಜೀವಿತದ ಲಕ್ಷಣವೇ ಸರಿ. ಪ್ಲೇಟೋನ ಗವಿಯ (Den or cave) ವಿಖ್ಯಾತ ರೂಪಕವನ್ನೇ ಹೋಲಿಸಿ ನೋಡಬಹುದು. ಈ ಮಾತು ಏತಕ್ಕೆ ಬಂತು ಎಂದರೆ- ಮಾನವ ಸಂಸ್ಕೃತಿಯ ಪ್ರಾದುರ್ಭಾವವನ್ನು ಗ್ರಹಿಸಿಕೊಳ್ಳಲು ಶಕ್ಯವೊ ಎಂಬ ಸಂದೇಹವನ್ನು ನಿವಾರಿಸಿಕೊಳ್ಳುವ

---

* ಮಾನವ ಅಲ್ಲದ್ದು ಅ-ಮಾನವ. ಮಾನವತ್ವಕ್ಕೆ ಎರವಾದವನೆಂದು ಇದರ ಸಾಂಸ್ಕೃತಿಕಾರ್ಥ. ಛಾಂದೋಗ್ಯದಲ್ಲಿ 'ತತ್ ಪುರುಷಃ ಅಮಾನವಃ' ಎಂಬ ಸೂಚನೆಯುಂಟು. ಅ-ಮಾನವ ಪುರಿ+ಶಯ ಆರಾಧಕ. ಅಂದರೆ ಪುರಿ ಸ್ತ್ರೀ : ಯೋನಿ+ಶಯನ ಲಿಂಗ ಆರಾಧಕ. ಯೋನಿ ಲಿಂಗೈಕ್ಯದಲ್ಲಿ ತನ್ಮಯನಾದವನು. ಅಮಾನವ=ವ್ಯಕ್ತಿ. Empirical Knowledge ಎಂಬ ಪರಿಭಾಷೆಯು ಈ ಹಿನ್ನೆಲೆಯಲ್ಲಿ ರೂಢಿಗೆ ಬಂದಿದೆ. ಇಂದ್ರಿಯ ಜನ್ಯ ಅನುಭವವೇ ಅನುಭವ ಎಂಬ ಪಾತಳಿ ಇದರದು (ಸಂ.)

ಸಂದರ್ಭದಲ್ಲಿ ಈ ವಿವರಣೆ ಅವಶ್ಯವಾಯಿತು. ಈ ಹಿನ್ನೆಲೆಯಲ್ಲಿ ಮಾನವ-ಜೀವನ; ಸಂಸ್ಕೃತಿ ಭಾಷೆ- ಈ ಮೂರರಲ್ಲಿ ಅನ್ಯೋನ್ಯವಿರುತ್ತದೆ ಎಂಬುದನ್ನು ಮರಳಿ ಹೇಳಬಯಸುತ್ತೇನೆ. ಮಾನವನ ಜೀವನ ಮತ್ತು ಜೀವಿತ-ಇವೆರಡೂ ಪ್ರತಿಬಿಂಬಿತವಿರುವ ಈ ಭಾಷೆಯಲ್ಲಿ, ಈ ಮಾನವನ ಚಿತ್ರವು ಒಡಮೂಡಿ ನಿಂತಿದ್ದರೆ ಸೋಜಿಗವೇನು? ಆದರೆ, ಇದನ್ನು ಸಮರ್ಪಕವಾಗಿ ಗ್ರಹಿಸಿಕೊಳ್ಳುವ ಪ್ರಜ್ಞೆ, ಪ್ರಜ್ಞಾ ನೇತ್ರ (Nous) ದ ಆವಶ್ಯಕತೆ ಇದೆ.

ಸ್ಥೂಲರೀತಿಯಲ್ಲಿ ಹೇಳಬಹುದಾದರೆ, ಇದೀಗ ಎತ್ತಿ ಹೇಳಿರುವ ತತ್ತ್ವಜ್ಞಕ್ಕಾಂಟನ ನಿಷ್ಕರ್ಷವು ಈ ಸಮಸ್ಯಾಪೂರ್ತಿಗೆ ಉಪಕಾರಕವಿದೆ. Noumenal ಎಂದರೆ ಮನುವಿನ-ಮನಸ್‌ತತ್ತ್ವದ-ಮನು ಸಮಯದ ಆಧಾರವಿಲ್ಲದೆ ಮಾನವನ ಇತಿಹಾಸವು ಅರಿಕೆಗೆ ಬರಲಾರದು. ಇನ್ನೊಂದು ಬಗೆಯಿಂದ ಹೇಳುವು ದಾದರೆ-ಮನಸ್‌ತತ್ತ್ವದ ಮಾನವನೊಡನೆಯೇ ಈ ಮಾನವ ಇತಿಹಾಸವು ಪ್ರಾರಂಭವಾಗಿದೆ. ಈ ಮಾನವನು ಇತಿಹಾಸದ ವಿಷಯವಾಗಿರುವಂತೆ, ಇತಿಹಾಸವನ್ನು ರೂಪಿಸಬಲ್ಲ ಶಕ್ತಿಯೂ ಇವನಿಗಿದೆ. ಉಳಿದ ಪ್ರಾಣಿಮಾತ್ರ ಗಳೆಲ್ಲವೂ ಇತಿಹಾಸದ ವಿಷಯಗಳಾಗಿವೆ. ಅವು ಇತಿಹಾಸವನ್ನು ರೂಪಿಸಲಾರವು. ಆದುದರಿಂದ, ನರನ ಪಾತಳಿಗೆ ಬಂದ ಮಾನವನಿಂದ ಸಂಭವಿಸುವ ಇತಿಹಾಸವು ಜೀವಿತದ ಎಂದರೆ ವೃತ್ತಾಕೃತಿಯದೇ ಆಗುವುದು ಅನಿವಾರ್ಯವಿದೆ.

ಈ ದೃಶ್ಯ-ಭೌತ (Phenomena) ಜೀವಿತದ ಪಾತಳಿಯ ಮೇಲೆ ಮಾನವನ ಇತಿಹಾಸವು ಸಂಭವಿಸಲಾರದು. ಇದು ನರರ ಇತಿಹಾಸವೇ ಇದ್ದೀತು. ಏಕೆಂದರೆ ಈ ದೃಶ್ಯ-ಭೌತ ಪಾತಳಿಯ ಆಗು-ಹೋಗುಗಳು ಅಂತರ್ ವಿಸಂಗತವಾಗಿರುತ್ತವೆ. ಇವು ಅರ್ಥಕ್ಕೆ ಎಟುಕಲಾರವು. ಅರ್ಥಕ್ಕೆ ಅಂತರ್ ಎಟುಕಲಾರದ ವಿಸಂಗತದ ಹಂತವು ನಿಜವಾದ ಇತಿಹಾಸದ ವಿಷಯವಾಗಲಾರದು. ಆದ್ದರಿಂದ, ಅಭಾವಾತ್ಮಕ ಜೀವಿತದ ಪಾತಳಿಯೇ, ಇದು ಉನ್ನಯದಲ್ಲಿನ ಮಾನವ ಜೀವನ : ಸಂಸ್ಕೃತಿಯಾಗಿದೆ-ಎಂಬುದು ಅಸಮಂಜಸವೂ ನಿರಾಧಾರವೂ ಆಗಿದೆ. ಉದಾ : ಕಾಮ (Lust) ಇದೇ ಉದಾತ್ತೀಕರಣದಲ್ಲಿ ಪ್ರೇಮ (Love) ಆಯಿತೆಂಬುದು ಆತ್ಮವಂಚನೆ. ಏಕೆಂದರೆ, ಕಾಮವು ಕಾಮನೆಗಳು ಪ್ರಾಣಲಿಂಗದ ಪ್ರಚೋದನೆಯ ಫಲಿತ; ಪ್ರೇಮವು ಜೀವನದ ಪಾತಳಿಯ ಮೇಲಿನ ಪ್ರಜ್ಞಾ ತತ್ತ್ವದ ಪ್ರಚೋದನೆಯ ಫಲಿತ. ಎಂದರೆ, ಅಂತಃಸಂಗತಿಯುಕ್ತ ಅರ್ಥ: ವಿಚಾರದ ಪ್ರಕಾಶದಲ್ಲಿ ಅನುಭವಕ್ಕೆ ಬರುವ ಸಂಗತಿ ಇದಾಗಿದೆ.

ನಮ್ಮ ಸಂಸ್ಕೃತಿಯಲ್ಲಿ ದೊರೆಯುವ ಐತಿಹಾಸಿಕ ಸ್ವರೂಪದ ಪ್ರಮಾಣಗಳ ಬೆಳಕಿನಲ್ಲೂ ಈ ಅಂಶವು ದೃಢಪಡುತ್ತದೆ. ಭಾರತೀಯ ಪೂರ್ವಪರಂಪರೆಯಲ್ಲಿ ಜಾತವೇದ ಅಗ್ನಿ (ಪ್ರಜ್ಞೆ) ಎಂಬ ಪಾರಿಭಾಷಿಕ ಪದವು ವೇದದಷ್ಟು ಪ್ರಾಚೀನವಿದೆ. ಈ ಪದದ ಪ್ರಾಚೀನತೆಯನ್ನು ಬಾಹ್ಯಪ್ರಮಾಣಗಳಿಂದ ಸಿದ್ಧಪಡಿಸಬೇಕಾಗಿಲ್ಲ. ಈ ಅಗ್ನಿಗೆ ಇರುವ ಜಾತವೇದ ಎಂಬ ವಿಶೇಷಣವೇ ಇದರ ಪ್ರಾಚೀನತೆಯನ್ನು ತಿಳಿಸಿಕೊಡುತ್ತದೆ. ಎಂದರೆ, ಈ ಅಗ್ನಿ, ಪ್ರಜ್ಞೋದಯದ ಸಮಯವನ್ನು ಗಮನಕ್ಕೆ ತರುತ್ತದೆ. ಈ ಮಾನವನ ಪ್ರಾದುರ್ಭಾವದ ಸಂದರ್ಭದ ಸ್ಪಷ್ಟ ಸೂಚನೆಯನ್ನೊಳಗೊಂಡ ಪಾರಿಭಾಷಿಕ ಪದವಿದು. ಈ ಅಗ್ನಿಯು ಜಾತವೇದ. ಇದುವೇ ಮಾನವ ಭಾಷೆಯನ್ನು ಪ್ರೇರಿಸಿದೆ-ಎಂಬ ಸಂಗತಿಯನ್ನು ಸೂಚಿಸುವ ನಿಸ್ಸಂದಿಗ್ಧ ದಾಖಲೆ ನಮ್ಮ ಪುರಾತನ ಪರಂಪರೆಯಲ್ಲಿ ಎಂತೋ ಉಳಿದು ಬಂದಿದೆ! ಭಾಷೆಗೂ ಮುನ್ನ ಸಂಸ್ಕೃತಿ ಇರಲಾರದು; ಇಲ್ಲವೇ ಇಲ್ಲ.

ಅಗ್ನಿಃ ವಾಕ್ ಭೂತ್ವಾ ಮುಖಂ ಪ್ರಾವಿಶತ್ (ಜಾತವೇದ) ಅಗ್ನಿಯು ವಾಕ್‌ರೂಪ ಧರಿಸಿ ಮುಖವನ್ನು ಪ್ರವೇಶಿಸಿದನು) ಪ್ರಸ್ತುತ, ಗ್ರಹಿಸಿಕೊಳ್ಳಬೇಕಾದ ಸಂಗತಿ, ಈ ಅಗ್ನಿ-ಇವನು ಭಾಷೆಯನ್ನು ಪ್ರಚೋದಿಸುವ ಅಗ್ನಿ- ಜಾತವೇದ : ಅಂದರೆ ಪ್ರಜ್ಞೆ. ಇದು ಮನುಜನೊಡನೆಯೇ ಪ್ರಾದುರ್ಭವಿಸಿರಬೇಕಷ್ಟೆ? ಆದಕಾರಣ Nous (ಪ್ರಜ್ಞೆ) ಇದು ಮಾನವಸಂಸ್ಕೃತಿಯ ಆದಿಕಾರಣ ತತ್ತ್ವ ಎಂದು ಅರಿಸ್ಟಾಟಲ್ ಹೇಳಿದ್ದು ವಾಸ್ತವ

ಸತ್ಯವೆಂಬಲ್ಲಿ ಸಂದೇಹವಿಲ್ಲ. ಮಾನವ ಸಂಸ್ಕೃತಿಯ ಉದ್ಗಮ ಕೇಂದ್ರವೇ ಈ ಜಾತವೇದ ಅಗ್ನಿ : ಪ್ರಜ್ಞೆ ಗ್ರೀಕ್ (Nous : Mind) ಈ ತತ್ವದಲ್ಲಿದೆ.*

ಮಾನವನು ನರ(ಳ) ನಾಗುವ ದಿಕ್ಕಿನಲ್ಲಿ ಹೊರಟಿದ್ದಾನೆ.

ಇಂದಿನ ಋಗ್ವೇದದಲ್ಲಿ ಜಾತವೇದ ಅಗ್ನಿಗೆ ಪ್ರತಿಯಾಗಿ ಇನ್ನೂ ಒಂದು ಮೌಲಿಕ ಶಬ್ದ ಪ್ರತಿಮೆಯಿದೆ. ಈ ಪ್ರತಿಮೆಯ ಅನುಸಂಧಾನದಲ್ಲಿ ಈ ಮನುಜನು, ನರ(ಳ) ಆದದ್ದು ಯಾವಾಗ? ಎಂಬ ಪ್ರಶ್ನೆಗೆ ನಿಶ್ಚಿತ ಉತ್ತರವೂ ದೊರೆಯುತ್ತದೆ. ಈ ಮೌಲಿಕ ಶಬ್ದ ಪ್ರತಿಮೆಯೇ ನ-ಚಿಕೇತ ಅಗ್ನಿ. ನ-ಚಿಕೇತ ಅಗ್ನಿ ಎಂದರ ಅರಿಕೆಗೆ ಬಾರದ ಅಗ್ನಿ. ನ-ಚಿಕೇತ ಅಗ್ನಿ ಎಂದರೆ, ಮಾನವರಲ್ಲಿ ಸುಪ್ತರೀತಿಯಲ್ಲಿ ಗುಪ್ತವಾಗಿ ಅಡಗಿರುವ ಕಾಮ(ನಾ) ಪ್ರಚೋದಕ ಅಗ್ನಿ. ಇದನ್ನೇ ಅಗ್ನಿ ನಾರಾಯಣ ಎಂದೂ ಹೆಸರಿಸಿದ್ದುಂಟು. (ಅಂದರೆ ನೀರಿನಲ್ಲಿರುವ ಅಗ್ನಿ: ಆಪ: ರಸ: ರೇತದಲ್ಲಿರುವ ಅಗ್ನಿ). ಈಗ ಒಂದು ಮಹತ್ವದ ಪ್ರಶ್ನೆ : ಮಾನವನಿಗೆ ಮೊತ್ತ ಮೊದಲಲ್ಲಿ ಅರಿಕೆಗೆ ಬಂದದ್ದು. ಜಾತವೇದ ಅಗ್ನಿ(ಪ್ರಜ್ಞೆ)ಯೊ? ಅಥವಾ ನ-ಚಿಕೇತ (ಕಾಮಪ್ರಚೋದಕ) ಅಗ್ನಿಯೊ? ಅಂದರೆ ಮೊತ್ತಮೊದಲ್ಲಿದ್ದವನು ಮಾನವನೊ ನರ(ಳ) ನೊ? ಜ್ಞಾನ ಅಗ್ನಿಯಿಂದ, ಅರಿಕೆಗೆ ಬಾರದ - ಅಜ್ಞಾತ: ನ-ಚಿಕೇತ ಅಗ್ನಿಯು ಅರಿಕೆಗೆ ಬರಬೇಕಷ್ಟೆ! ಮಾನವ ಸಂಸ್ಕೃತಿಗೆ ಪ್ರಜ್ಞೋದಯವೇ ಆದಿಕಾರಣ. ಈ ಪ್ರಮಾಣಗಳ ಬಲದಿಂದ, ಮಾನವನಿದ್ದವನು ನರ(ಳ) ನಾಗಿದ್ದಾನೆಯೇ ಹೊರತು, ನರ(ಳ)ನೇ ಮನುಜನಾಗಿಲ್ಲ ಎಂದು ಗೊತ್ತಾಗುತ್ತದೆ. ಪ್ರಜ್ಞೋದಯದಿಂದಾಗಿ ನರ(ಳ) ಮನುಜತ್ವದ ಅರ್ಹತೆಯನ್ನು ಪಡೆಯಬಲ್ಲನೆಂದು ಹೇಳಬೇಕಾಗುತ್ತದೆ.* ಈ ಮಾನವನು ಅ-ಮಾನವನಾಗುವ ಹಂತದ ಸ್ಪಷ್ಟ ನಿರ್ದೇಶವು ಉಪನಿಷತ್ತಿನಲ್ಲಿ ದೊರೆಯುತ್ತದೆ. ಈ ಉಲ್ಲೇಖದಲ್ಲಿ ಪುರುಷನು ಅಮಾನವನಾಗುತ್ತಾನೆ ಎಂದು ಹೇಳಲಾಗಿದೆ.

ತತ್ ಪುರುಷಃ ಅಮಾನವಃ[೩]

ಈ ಉಲ್ಲೇಖದೊಳಗಿನ ಪುರುಷ ಎಂಬ ಶಬ್ದ, ಸ್ಪಷ್ಟೀಕರಣ ಬಯಸುತ್ತದೆ. ಪುರುಷ ಇದು ಕಣ್‌ಕಟ್ಟಿನ >ಮಾಟದ ಒಂದು ಉತ್ತಮ ಮಾದರಿ. ಏಕೆಂದರೆ, ಮೇಲ್ನೋರಿಕೆಯ ಅರ್ಥವೇ ಒಂದು; ಅಲ್ಲಿ ಹುದುಗಿರುವ ಅರ್ಥವೇ ಇನ್ನೊಂದು. ಪುರುಷ ಇದನ್ನು ಪುರಿ-ಶಯ(ನ) ಎಂದು ಉಪನಿಷತ್ತುಗಳು ಸ್ಪಷ್ಟೀಕರಿಸುತ್ತವೆ. ಇದೇ ಅರ್ಥದ ಗುಹೇಶ ಎಂಬ ಇನ್ನೊಂದು ಪದವೂ ನಮ್ಮ ನುಡಿಯಲ್ಲಿ ಉಂಟು. ಪುರುಷ ಎಂದರೆ ಮಾನವನಲ್ಲ; ವ್ಯಕ್ತಿ. ಈ ವ್ಯಕ್ತಿಯನ್ನು ಉಪನಿಷತ್ತು ಅ-ಮಾನವ ಎಂದು ಹೇಳುತ್ತದೆ. ಮಾನವನು ಅಮಾನವನಾಗುವ ಎಡೆಯಿದು ಎಂದು ಈ ಉಲ್ಲೇಖವು ಬೆರಳಿಟ್ಟು ಹೇಳುತ್ತಿದೆ. ಪುರುಷ : ಪುರಿ-ಶಯ(ನ) ಇದರಲ್ಲಿ ಎರಡು ಪದಗಳಿವೆ-ಪುರಿ ಮತ್ತು ಶಯ(ನ). ಮಾನವನೇ ಇಲ್ಲಿ ಪುರ-ಶಯ(ನ) (ಲಿಂಗರೂಪನು) ಆಗುತ್ತಿದ್ದಾನೆ. ಪುರಿ ಪದದ ಅರ್ಥವನ್ನು ವೇದದೊಳಗಿನ ಪ್ರಯೋಗಗಳ ಬಲದಿಂದ ತಜ್ಞರು ನಿರ್ಧರಿಸಿದ್ದಾರೆ.

---

* ಪ್ರ+ಜ್ಞಾನ, ವಿಶೇಷಜ್ಞಾನ ಪ್ರಜ್ಞೆ, ಇದು Nous : Mind ಎಂದು ಗ್ರೀಕ್‌ಭಾಷೆಯ ಶಬ್ದಶಿಲ್ಪದಲ್ಲಿದೆ. ಹಿಬ್ರೂ ಭಾಷೆಯಲ್ಲಿ wisdom ಎಂದು ಕಾಣಿಸಿದೆ. ಮೂಲ ವಿದ್>ವೇದ. wit-wise-wisdom ವೇದದ ಜಾತವೇದ ಅಗ್ನಿ (intution)=ಪ್ರಜ್ಞೆ ಎಂಬ ಅರ್ಥದ ನೆಲೆಯಲ್ಲೆ ಇದೆ. ವಿಚಾರದ ಅಭಿಜಾತ ಪ್ರವೃತ್ತಿ conscieusness of lawಎಂಬುದೇ ಸರಿ ನಿನ್ನೆ-ಇಂದು-ನಾಳೆ ಇವುಗಳ ಪರಿಜ್ಞಾನವುಳ್ಳ ಶಕ್ತಿ. ಇದು ಸಮಾಜಿಕ, ವೈಶ್ವಾನರಾಗ್ನಿ-ವಿಶ್ವಮಾನವತತ್ವ (ಸಂ.)

* ವಿಕಾಸಪ್ರಕ್ರಿಯೆ ಉಂಟೆಂದು ಮಾನವಶಾಸ್ತ್ರಜ್ಞರೂ ಪ್ರಾಣಿಶಾಸ್ತ್ರಜ್ಞರೂ ಹೇಳಿದರಷ್ಟೆ. ಆಧುನಿಕ ತತ್ವಜ್ಞಾನದಲ್ಲಿ ಅರವಿಂದರೇ ಈ ವಿಕಾಸವಾದದ ಜನಕ. ನರ ಹಂತದಿಂದ ಮನುಜ ಹಂತಕ್ಕೆ ಮಾನವ ಬಂದಿದ್ದಾನೆ. ಈ ಅಂಶವು ಶಂಬಾ ಅವರನ್ನು ತುಂಬಾ ಕಾಡಿದೆ. ವಿಕಾಸ ಪ್ರಕ್ರಿಯೆಯಲ್ಲಿ ಮನಸ್ಸಿನ ಪ್ರಾದುರ್ಭಾವದಿಂದ ಪ್ರಜ್ಞೆ ಪಡೆದುಕೊಂಡ ನರ (ತನು-ಜ) ಮಾನವ (ಮನು-ಜ) ಆದ. ಮನು-ಜ ಪ್ರಜ್ಞಾವಂತ. ಡೇಕಾರ್ಟೆ ಹೇಳಿದ I think, therefore, I am' ಎಂಬ ರೀತಿಯ ಜಾಣ್ಮೆ ಕಂಡುಕೊಂಡವನು. ಇದು ಸಮಷ್ಟಿಪ್ರಜ್ಞೆಯ ಪ್ರತೀಕ. (ಸಂ.)

ಪುರ, ಪುರಿ ಇದು ಅಹಿ : ವೃತ್ರನ ಹಾಗೂ ವೃತ್ರನ ಸಂಗಾತಿಗಳ ವಾಸಸ್ಥಾನ ಎಂಬ ಅರ್ಥವು ನಿಶ್ಚಿತವಿದೆ. ವೃತ್ರನನ್ನು ಅಹಿ ಎಂಬಲ್ಲಿ ಇವನು ನಾಗ (ಲಿಂಗ) ಸ್ವರೂಪನು ಎಂದು ಅರ್ಥವಿದೆ. ಆದಕಾರಣ, ಈ ಪುರಿ ಎಂಬುದು ನಾಗ (ಲಿಂಗ) ಗಳು ಹೊಕ್ಕು ಇರುವ ಎಡೆಯಾಗುತ್ತದೆ. ಎಂದರೆ ಇದು ಗುದ್ದು, ತೂತು, ಬಿಲ ಈ ಬಗೆಯಾದ ಟೊಳ್ಳನ್ನು ಸೂಚಿಸುವ ಪದ ಆಗುತ್ತದೆ. ಋಗ್ವೇದದಲ್ಲಿಯ ದ್ರಪ್ಸಃ ಕೃಷ್ಣಃ (ತೊಟ್ಟಿಕ್ಕಿವ ಕೃಷ್ಣ) ಇವನ ಸಂಗಾತಿ ಶುಷ್ಣನೆಂಬವನಿಗೆ ಒಂದು ಚರಿಷ್ಣ್ವಂ ಪುರಃ[೪] ಇತ್ತು. ಎಂದರೆ, ಶುಷ್ಣನೆಂಬ ನಾಗ(ಲಿಂಗ)ಕ್ಕ ಆದರದೇ ಆದ ಒಂದು ನಡೆದಾಡುವ ಗುದ್ದು ಇತ್ತು. ಆದುದರಿಂದ, ವೇದದೊಳಗಿನ ಈ ಪ್ರಮಾಣಗಳ ಬಲದಿಂದ ಪುರಿ-ಶಯ(ನ) ಇದಕ್ಕೆ ಪುರಿ ಎಂದರೆ ಯೋನಿ ಮತ್ತು ಶಯ(ನ) ಇದಕ್ಕೆ ಲಿಂಗ ಎಂಬ ಅರ್ಥವಾಗುವುದು ಅನಿವಾರ್ಯವಿದೆ.

ಆದುದರಿಂದ, ಮಾನವ ಎಂಬ ವ್ಯಕ್ತಿ ಅ-ಮಾನವ ಆಗುವಾಗ ಇಲ್ಲಿ ವ್ಯಕ್ತಿ ಎಂಬ ಪದಕ್ಕೆ ಲಿಂಗವಾಚಕ ಅರ್ಥ ಅನಿವಾರ್ಯವಿದೆ. ಈ ಬಗೆಯಲ್ಲಿ ವ್ಯಕ್ತಿ ಮುಕ್ತಿಯ ಈ ಮೂಲಕಲ್ಪನೆಯ ಹಿಂದೆ ಲೈಂಗಿಕ ಅರ್ಥವೇ ಅಭಿಪ್ರೇತವಿದ್ದುದು ಸ್ಪಷ್ಟವಿದೆ. ಈ ಋಗ್ವೇದದಲ್ಲಿ ಅಭಿಚಾರ ತಂತ್ರವಿದೆ, ಮಾಟವಿದೆ. ಭಾನಾಮತಿ ಎಂದು ಬಗೆಯಲಾಗುವ ಪ್ರಭಾವವು ಈ ವೇದದ ತಳಹದಿಯಲ್ಲೇ ಉಂಟು, ಎಂಬುದನ್ನು ಮನಗಾಣಿಸಿ ಕೊಡಲು ಮಾದರಿಗಾಗಿ ಪುರುಷ : ಪುರಿ-ಶಯ(ನ) ಎಂಬ ಮಾಟದ ಈ ಒಂದು ಉದಾಹರಣವೂ ಸಾಕು.

ಛಾಂದೋಗ್ಯದಲ್ಲಿ ಬರುವ 'ತತ್‌ಪುರುಷಃ ಅಮಾನವಃ' ಎಂಬ ಈ ಮೌಲಿಕ ಉಲ್ಲೇಖದ ತರುವಾಯ ಇಲ್ಲೇ ಇದರ ಸ್ಪಷ್ಟೀಕರಣ ಸ್ವಲ್ಪ ಉಂಟು. ಪುರುಷ ಇದರೊಳಗಿನ ಪೂರ್ವಪದವಾದ ಪುರಿ ಇದರ ಸ್ಪಷ್ಟೀಕರಣವು ಹೀಗಿದೆ: ಏಷಃ ದೇವಪಥಃ ಬ್ರಹ್ಮಪಥಃ[೫] ಇದೇ ದೇವಮಾರ್ಗ ಬ್ರಹ್ಮ ಮಾರ್ಗ. ಆದಕಾರಣ, ಈ ಬ್ರಹ್ಮಪಥವೇ ಮುಕ್ತಿಯ ಎಡೆ ಇರಲಿಕ್ಕೆ ಬೇಕು. ಈ ಆಶಯವನ್ನೇ ಎತಿ ಹಿಡಿಯುವ ಇನ್ನೊಂದು ಉಲ್ಲೇಖವೂ ಈ ಛಾಂದೋಗ್ಯದಲ್ಲಿಯೇ ಉಂಟು. ತತ್ ಪುರುಷಃ ಅಮಾನವಃ ಏಷಃ ದೇವಯಾನಃ ಪಂಥಾಃ[೬] ಇದಕ್ಕೆ ಸ್ಪಷ್ಟೀಕರಣವು ಅವಶ್ಯವಿಲ್ಲವೆಂದು ನನಗೆ ಅನಿಸುತ್ತದೆ. ಈ ದೇವಯಾನದ ಮೂಲ ಉಲ್ಲೇಖವು ಋಗ್ವೇದದಲ್ಲೇ ಇದೆ. ಅಲ್ಲಿ ಇರುವ ನ-ಚಿಕೇತಾಗ್ನಿಯ ವರ್ಣನೆಯಲ್ಲಿ ಈ ದೇವಯಾನದ ಹೆಸರು ಬಂದಿದೆ.[೭] ನ ಚಿಕೇತಾಗ್ನಿಯನ್ನು ಬೃಹತ್ ಉಲ್ಬ (ಬೃಹತ್ ಯೋನಿ Big Vulva) ಎಂದು ವರ್ಣಿಸಲಾಗಿದೆ. ಈ ಉಲ್ಲೇಖವು ಯೋನಿಯ ಸ್ವತಂತ್ರ ಅಸ್ತಿತ್ವದ ಇನ್ನೊಂದು ಉದಾಹರಣ. ಛಾಂದೋಗ್ಯದೊಳಗಿನ ಮಾನವನು ಅ-ಮಾನವನಾಗುವ ಎಡೆಯನ್ನೇ ಋಗ್ವೇದದಲ್ಲಿ ನ-ಚಿಕೇತ್ನಾಗ್ನಿಯ ಮೂಲಕ ಸೂಚಿಸಲಾಗಿದೆ. ಈ ವರ್ಣನೆಯಲ್ಲಿ ಛಾಂದೋಗ್ಯದ ಹಾಗೆ, ಮಾನವನ ನಿರ್ದೇಶವಿಲ್ಲ. ಆದರೆ, ಈ ಮಾನವನ ಬದಲು ಜಾತವೇದ ಅಗ್ನಿಯ (ಪ್ರಜ್ಞೆಯ) ಉಲ್ಲೇಖ ಇಲ್ಲಿದೆ. ಆದಕಾರಣ, ಅಂದು ಮಾನವನು ಪ್ರಜ್ಞಾಯುಕ್ತನು ಎಂಬ ನಿಷ್ಠೆಯಿದ್ದಿತೆಂಬಲ್ಲಿ ಸಂಶಯವಿಲ್ಲ. ಶ್ರೀ ಮದ್ಭಗವದ್ಗೀತೆಯಲ್ಲಿ ಭಗ-ವಾನ್ ಕೃಷ್ಣನು ಮಾನವನಿಗೆ ಸ್ಥಿತಪ್ರಜ್ಞನಾಗು ಎಂದು ಮಾಡಿದ ಉಪದೇಶದ ಮೂಲ ಮಾದರಿಯೇ ಇದು. ಯೋನಿಲಿಂಗ ಐಕ್ಯದ ಸಂದರ್ಭದಲ್ಲಿ, ಪ್ರಜ್ಞೆ ಸ್ಥಿತ (ಸ್ಥಗಿತ) ಆಗಲೇಬೇಕಷ್ಟೆ! ದೇವಯಾನ ಮಾರ್ಗರೂಪೀ ಈ ಸತ್-ತ್ಯ ಮಾರ್ಗದ ನಿಜಸ್ವರೂಪವು ಖಚಿತವಾಗಲು ಮುಂಡ (ಲಿಂಗ) ಉಪನಿಷತ್ತಿನೊಳಗಿನ ಈ ಶ್ಲೋಕ ಸ್ಮರಿಸಿಕೊಳ್ಳುವುದು ಅವಶ್ಯವಿದೆ:

ಸತ್ಯಂ ಏವ ಜಯತಿ (ತೇ), ನ ಅನೃತಂ
ಸತ್ಯೇನ ಪಂಥಾಃ ವಿತತಃ ದೇವಯಾನಃ

ಈ ಶ್ಲೋಕದಲ್ಲಿ ಎರಡು ಬಗೆಯ ಸತ್ಯಗಳಿವೆ. ಮೊದಲನೆಯದು ಸತ್ಯಂ ಏವ ಜಯತಿ' ಈ ಉಲ್ಲೇಖದೊಳಗಿನ ಸತ್ಯವು, ಋತಸ್ವರೂಪೀ ವಿಶ್ವನಿಯಮದ ಹಿನ್ನೆಲೆಯಲ್ಲಿ ಅರಿಕೆಗೆ ಬರುವ ಸಂಗತಿ. ಈ ಸತ್ಯವು ನಿತ್ಯವಾಗಿ

ಅಮೂರ್ತ ಸಾರ್ವಕಾಲಿಕ-ವೈಶ್ವಕ (University) ಸ್ವರೂಪದ್ದಾಗಿದೆ. ಆದರೆ, ಎರಡನೆಯದು ದೇವಯಾನ* ಮಾರ್ಗವನ್ನು ಹಿಗ್ಗಿಸುವ ಈ ಸತ್ತ್ವವು ಮೂರ್ತ (ಲಿಂಗ)ವೇ ಇರಬಲ್ಲುದು. ಮಾನವನನ್ನು ಅಮಾನವನನ್ನಾಗಿ ಮಾಡುವ, ವೈಶಿಷ್ಟ್ಯಪೂರ್ಣ ವ್ಯಕ್ತಿಯನ್ನು ರೂಪಿಸುವ ಅಂತಸ್ಸಾಮರ್ಥ್ಯದ ಸತ್ತ್ವವಿದು. ಇದನ್ನು ಸತ್-ತ್ಯ-ಎಂದು ಬರೆಯುವಲ್ಲಿ ಔಚಿತ್ಯವಿದೆ. ಬೃಹದಾರಣ್ಯಕದಲ್ಲಿ ಇದರ ಸೂಚನೆಯಿದೆ.[೮] ಈ ಪ್ರಪಂಚದಲ್ಲಿ ಎರಡು ಬ್ರಹ್ಮಗಳಿವೆ: ಒಂದು ಮೂರ್ತ (ಸತ್) ಮತ್ತು ಇನ್ನೊಂದು ಅಮೂರ್ತ (ತ್ಯಂ) ಎಂದರೆ, ಪಿಂಡ (ಮೂರ್ತ) ಮತ್ತು ಬ್ರಹ್ಮ-ಅಂಡ (ಅಮೂರ್ತ), ಇವೆರಡರ ಐಕ್ಯದ ಸಂದರ್ಭದಿಂದ (ಪಿಂಡ-ಬ್ರಹ್ಮಾಂಡದ ಐಕ್ಯದಲ್ಲಿ) ಅನುಭವಕ್ಕೆ ಬರುವ ಸತ್-ತ್ಯಂ ಇದು. ಇದನ್ನೇ ಇನ್ನೊಂದು ಬಗೆಯಲ್ಲಿ ಹೇಳಬಹುದು : ವಿಷಯ+ಇಂದ್ರಿಯ ಸಂಯೋಗದಲ್ಲಿ ಅರಿಕೆಗೆ ಬರುವ ಜ್ಞಾನವಿದು. ಇದನ್ನು Corresponding truth ಎಂದು ಹೇಳಲಾಗುತ್ತದೆ. Empirical knowledgeದ ಪಾತಳಿಯಿದು.

ಮಾನವನು ನರ(ಳ) ನಾಗುವ ದಿಕ್ಕಿನಲ್ಲಿ ಹೊರಟಿದ್ದಾನೆ

ಮಾನವನನ್ನು ಅಮಾನವನನ್ನಾಗಿಸಿರುವ ಈ ತಂತ್ರವು ಗ್ರೀಕ್ ಸಂಸ್ಕೃತಿಯ ಸಂದರ್ಭದಲ್ಲಿಯೂ ಇದ್ದದ್ದು ಅರಿಕೆಗೆ ಬರುತ್ತದೆ. ಗ್ರೀಕ್ ತತ್ತ್ವಜ್ಞಾನದ ಇತಿಹಾಸದಲ್ಲಿ Emancipation of the Individual (ವ್ಯಕ್ತಿಮುಕ್ತಿ) ಪ್ರವೃತ್ತಿಯು, (ಕ್ರಿ. ಶ. ಪೂರ್ವ ೮೦೦ ಸುಮಾರಿಗೆ ಆದ) ಹೇಸಿಯೆಡ್ ಕವಿಯ ಹೊತ್ತಿಗೆ, ಇದು ಶಿಷ್ಟಮಾನ್ಯ ಪ್ರವೃತ್ತಿಯಾದದ್ದು ಕಂಡುಬರುತ್ತದೆ.

> However a process was completed which was of great importance for the rise of (new) philosophy of the emancipation of the individual[೯]

ಈ ಅವತರಣಿಕೆಯಲ್ಲಿ New ಪದವನ್ನು ಹಾಕಿದವನು ನಾನು. ಇಲ್ಲಿ, ಝೆಲ್ಲರ್ ಮಹಾಶಯನು ಗ್ರೀಕ್ ಸಂಸ್ಕೃತಿಯಲ್ಲಿ ವ್ಯಕ್ತಿ ಮುಕ್ತಿಯ Emancipation of the Individual ಕಲ್ಪನೆ ಪ್ರತಿಷ್ಠಿತವಾದದ್ದನ್ನು ಹೇಳುತ್ತಾನೆ. ಈ ಪ್ರವೃತ್ತಿಯು ಹೊಸ ತತ್ತ್ವಜ್ಞಾನದ ಉದಯಕ್ಕೆ (rise) ಅತ್ಯಂತ ಅವಶ್ಯವಾದದ್ದು-ಮಹತ್ವದ್ದು (of great importance) ಆಗಿದೆಯೆನ್ನುತ್ತಾನೆ. ಆದರೆ, ಈ ವ್ಯಕ್ತಿಮುಕ್ತಿ ಎಂದರೆ ಏನು? ಎಂಬುದನ್ನು ಎಲ್ಲಿಯೂ ಸ್ಪಷ್ಟೀಕರಿಸುವುದಿಲ್ಲ! ಅಲ್ಲದೆ, ಇದನ್ನು ಹೊಸ ತತ್ತ್ವಜ್ಞಾನವೆಂದು ಹೇಳುತ್ತಾನೆ. ಆದರೆ, ಈ ತತ್ತ್ವಜ್ಞಾನವು, ತತ್ಪೂರ್ವದಲ್ಲಿ ಇದ್ದ ಯಾವ ತತ್ತ್ವಜ್ಞಾನವನ್ನು ಹಿಮ್ಮೆಟ್ಟಿಸಿತು ಎಂಬುದರ ಸ್ಪಷ್ಟೀಕರಣವು ಇಲ್ಲ! ಮತ್ತು Emancipation of the individual (ವ್ಯಕ್ತಿಮುಕ್ತಿಯ) ಪ್ರವೃತ್ತಿಯಿಂದಾಗಿ, ರೂಢಿಗೆ ಬಂದ ಹೊಸ ಆಚಾರ-ವಿಚಾರಗಳ ಸ್ವರೂಪವೇನು ಎಂಬುದರ ಬಗೆಗೂ ಈ ಇತಿಹಾಸಕಾರರು ಮೌನತಾಳಿದ್ದು ಕಂಡು ಬಹುತ್ತದೆ, ಕ್ರೈಸ್ತಮತಕ್ಕೆ ಪೆಟ್ಟು ಬಿದ್ದೀತೆಂದು!

ಝೆಲ್ಲರ್, ಈ ಇತಿಹಾಸಕಾರನೇ ಒರ್ಫಿಕ್ ಪಂಥೀಯ ಪೈಥಾಗೋರಾಸನ ಬಗೆಗೆ ಬರೆಯುವಾಗ, ಇವನು ಪ್ರವಾದಿ-ಅತಿಮಾನವ, (colossus) ಅತ್ಯಂತ ಪ್ರಭಾವಶಾಲಿಯಾದ ಮಹಾಪುರುಷನಾದನೆಂದು

---

* ದೇವಯಾನ (ವಾಹನ) ದೇವಲೋಕಕ್ಕೆ ಕರೆದೊಯ್ಯುವ ವಿ-ಮಾನ. ಇದು ಬ್ರಹ್ಮನಲ್ಲಿ ಸೇರುವ ಮಾರ್ಗ. ಛಾಂದೋಗ್ಯೋಪನಿಷತ್ತಿನಲ್ಲಿ 'ಏಷಃ ದೇವಯಾನಃ ಪಂಥಾಃ' 'ಸತ್ಯೇನ ಪಂಥಾಃ ವಿತತಃ ದೇವಯಾನಃ' ಎನ್ನುವಲ್ಲಿ ಈ ದೇವಯಾನ ಮಾರ್ಗವು ಹಿಗ್ಗುವ ಸ್ವಭಾವದ್ದು. ಇದು ಹಿಗ್ಗಿಸುವ ಮೂರ್ತ (ಲಿಂಗ)ವೇ ಇರಬೇಕು. ಇಲ್ಲಿ ದೇವಯಾನವು ಪುರಿ-ಶಯನ ಆರಾಧನೆಯ ಭಾಗವಾಗುತ್ತದೆ. ಎಲ್ಲ ದೇವತೆಗಳು ಈ ಅಮೃತದ ಹೊಂಡದಿಂದ ಹೊರಬರುವುದರಿಂದ ಅದು ದೇವಯಾನವಾಗಿದೆ. ಬ್ರಹ್ಮ (ಲಿಂಗ) ಚರಿಸಿ ತುರೀಯ=ಲಿಂಗಾಂಗ ಸಾಮರಸ್ಯ ಗಮ್ಯವಾಗುವುದರಿಂದ ಇದೇ 'ಬ್ರಹ್ಮ ಪಥ'ವೂ ಆಗಿದೆ. (ಸಂ.)

ಹೇಳುತ್ತಾನೆ. ಇವನ ತತ್ತ್ವಜ್ಞಾನದಿಂದ ಪರಂಪರಾಗತ ಗ್ರೀಕ್ ಸಂಸ್ಕೃತಿಯ ಸ್ವರೂಪವೇ ಬದಲಾಯಿತೆಂದು ಸೂಚಿಸುತ್ತಾನೆ.

> With Pythagoreanism begins the transformation of the Greek mode of thought which originated in the Orphic Mysticism, a cult strange to the Hellenic nature.[೧೦]

ಗ್ರೀಕ್ ಪೂರ್ವ ಪರಂಪರೆಗೆ ವಿಸಂಗತ ಅಥವಾ ವಿಚಿತ್ರ ಸ್ವರೂಪದ್ದೆಂದು ಹೇಳಲಾಗುವ ವ್ಯಕ್ತಿಮುಕ್ತಿಯ ಈ ನೂತನ ಸಂಪ್ರದಾಯದ ನಿಜಸ್ವರೂಪವನ್ನು ಸುಸ್ಪಷ್ಟವಾಗಿ ವಿವರಿಸುವ ಇತಿಹಾಸಕಾರರು ನನಗೆ ಇನ್ನೂ ದೊರೆತಿಲ್ಲ!

ಡಾ. ಬರ್ಟ್ರಾಂಡ ರಸೆಲ್ ಹೇಳುವಂತೆ ಇಂದಿನ ಕ್ರೈಸ್ತಪಂಥದ ತಳಹದಿಯಲ್ಲಿ ಪೈಥಾಗೋರಾಸನ ಸಂಪ್ರದಾಯವೇ ಉಂಟು. ಪೈಥಾಗೋರಾಸನು ಹುಟ್ಟದಿದ್ದರೆ ಕ್ರೈಸ್ತಪಂಥದ ತತ್ತ್ವಜ್ಞಾನದಲ್ಲಿ ಕೆಲವೊಂದು ಕೊರತೆಗಳು ಉಳಿದು ಬಿಡಬಹುದಾಗಿತ್ತು.

> But for him Christians would not have thought of Christ as the Word, but for him, theologians would not have sought logical proofs of God and immortality. But in him all this is still implicit'[೧೧]

ಇದು ಇನ್ನೂ ಬಯಲಿಗೆ ಬಂದಿಲ್ಲ. ಪೈಥಾಗೋರಾಸನು ಅತ್ಯಂತ ಅಭಾವರೂಪಿ ಒಂದು (ಕಾಲ : ಲಿಂಗ) ಇದನ್ನು ಸಂಸ್ಕೃತಿಯ ಆದಿಕಾರಣವಾಗಿಸಿದ್ದಾನೆ!

ಒರ್ಫಿಕ್ ಪಂಥೀಯ ನಿಜಸ್ವರೂಪವನ್ನು ಸ್ಪಷ್ಟೀಕರಿಸಿ ವಿವರಿಸಿದವರಿಲ್ಲ!* ಇದರಿಂದ ಕ್ರೈಸ್ತಪಂಥಕ್ಕೆ ಅಧಾರಭೂತ ಗುಹ್ಯಮಾರ್ಗವು ಬಯಲಿಗೆ ಬರದೆ ಕತ್ತಲಲ್ಲೇ ಉಳಿಯುತ್ತ ಬಂದಿದೆ. ವ್ಯಕ್ತಿಮುಕ್ತಿಯ ನಿಜಸ್ವರೂಪವನ್ನು ಬಚ್ಚಿಡುವುದಕ್ಕಾಗಿ ಇತಿಹಾಸದಲ್ಲಿ ಕಣ್ಣುಮುಚ್ಚಾಲೆ ಆಟವನ್ನು ಆಡಿದ್ದು ಕಂಡು ಬರುತ್ತದೆ! ಎಷ್ಟೇ ಬಚ್ಚಿಟ್ಟರೂ ಪೈಥಾಗೋರಾಸನ ಪಂಥವು ಲೋಕಾಭಿಪ್ರಾಯಕ್ಕೆ ವಿರುದ್ಧವಾಗಿತ್ತೆಂಬ ಮಾತನ್ನು ಹೇಳದೇ ಇರುವುದು ಇತಿಹಾಸಕಾರರಿಗೆ ಶಕ್ಯವಾಗಿಲ್ಲ. ಸಾಧನೆ ಅನುಷ್ಠಾನಕ್ಕಾಗಿ ಪೈಥಾಗೋರಾಸನ ಗುಪ್ತ ಮಾರ್ಗದ ಅನುಯಾಯಿಗಳು ಒಂದೆಡೆಗೆ ಸೇರಿದ್ದ ಮನೆಯನ್ನೇ ಸುಡುವ ಪ್ರಯತ್ನವಾಧದ್ದು ಇತಿಹಾಸದಲ್ಲಿ ನಮೂದು. ಇದೆ. ಪ್ರಸ್ತುತ ಮಹತ್ವದ ಸಂದಿಗ್ಧ ಸಮಸ್ಯೆ: ವ್ಯಕ್ತಿಮುಕ್ತಿ (Emancipation of individual) ಎಂದರೇನು? ಮುಕ್ತಿಯನ್ನು ಬಯಸುವ ಈ ವ್ಯಕ್ತಿ (individual) ಎಂದರೆ ಯಾರು? ಈ ವ್ಯಕ್ತಿಯು ಮಾನವನಿಂದ ಬೇರೆಯಾಗಿದೆಯೆ? ಅಥವಾ ಇದು ಮಾನವನ ಅಂಗವೆ? ಈ ವ್ಯಕ್ತಿ ಮಾನವನ ಅಂಗಭಾಗವೇ ಆಗಿದ್ದರೆ, ಮಾನವನಿಂದ ಈ ವ್ಯಕ್ತಿಯ ಬಿಡುಗಡೆ ಆಗಲು ಹೇಗೆ ಸಾಧ್ಯ? ಆದರೆ, ಈ ಪ್ರಶ್ನೆಯನ್ನೆತ್ತಿ ಸಮರ್ಪಕವಾಗಿ ಎಲ್ಲಿಯೂ ವಿವೇಚಿಸಲಾಗಿಲ್ಲ! ಇದರಿಂದಾಗಿ

---

* ಒರ್‌ಫ್ಯೂಅಸ್‌ನಿಂದ ಆರಂಭವಾದದ್ದು ವ್ಯಕ್ತಿಮುಕ್ತಿ ಪಂಥ. ಪೈಥಾಗೊರಾಸ್ ಈ ಪಂಥದ ಅತ್ಯಂತ ಪ್ರಭಾವೀ ಪ್ರತಿಪಾದಕ. ವ್ಯಕ್ತಿ-ಮುಕ್ತಿ ಪ್ರಧಾನವಾದ ಈ ಪಂಥವು ಸಮಷ್ಟಿ ವೈಶ್ವಕ ಪಾತಳಿಯ ಸತ್ಯಕ್ಕೆ ವಿರೋಧಿಯಾಗಿರುತ್ತದೆ. ಸಂಪ್ರದಾಯದಲ್ಲಿ 'ಮೋಕ್ಷ ಪಾರಾಯಣ' ಎಂಬ ಮಾತುಂಟು. ಇದು ಮುನಿತತ್ತ್ವಕ್ಕೆ ಪರ್ಯಾಯವಾಗಿದೆ. ಭಾರತದಲ್ಲಿ 'ಮುನಿತತ್ತ್ವ'ವು 'ಋಷಿತತ್ತ್ವ'ವನ್ನು ಹಿಮ್ಮೆಟ್ಟಿಸಿದಂತೆ ಗ್ರೀಕಿನಲ್ಲಿ ಒರ್ಫಿಕ್ ಪಂಥವು ತತ್ಪೂರ್ವದ ಪ್ರಜ್ಞಾ ಪ್ರಧಾನ ಝೂಸ್ ಪಂಥವನ್ನು ತುಳಿಯಿತು. ವೈದಿಕ ಇಂದ್ರನಂತೆ, ಝೂಸನನ್ನು ಜಾರನನ್ನಾಗಿ ಮಾಡಿ ಲೈಂಗಿಕಪಾತಳಿಗೆ ಇಳಿಸಲಾಯಿತು. ಗ್ರೀಕಿನಲ್ಲಿ 'ಒರ್ಫಿಕ್‌ಪಂಥ' ಹೇಗೋ ಭಾರತದಲ್ಲಿ ರಾಜಗುಹ್ಯ, ರಾಜಯೋಗದ ಮತ್ತೊಂದು ಮಾದರಿ ಉಂಟು. ಇವೆರಡಕ್ಕೂ 'ಅನಾಹತನಾದ'ವೇ ಮುಖ್ಯ. ಈ ಅಂಶವನ್ನು ಶಂಬಾ ಬಗೆಬಗೆಯ ನೆಲೆಗಳಿಂದ ನೋಡುತ್ತಾರೆ. (ಸಂ.)

ಮಾನವನ ಇಂದಿನ ಅಧಃಪಾತದ ಕಾರಣವು ಗೂಢವಾಗಿಯೇ ಉಳಿಯುತ್ತಾ ಬಂದಿದೆ. ಆದರೆ, ಇಂದು ಈ ಮಾನವನು ಅ-ಮಾನವನಾಗಿದ್ದಾನೆಂಬ ಮಾತು ಭಾರತೀಯ ಸಂಸ್ಕೃತಿಯೊಳಗಿನ ಪ್ರಮಾಣಗಳ ಬಲದಿಂದ ಸ್ಪಷ್ಟವಾಗಿ ಬಯಲಿಗೆ ಬರುತ್ತದೆ.

ತತ್ತ್ವಜ್ಞಾನದ ಇತಿಹಾಸಕಾರರೂ, ಧರ್ಮ-ಸಂಸ್ಕೃತಿಯ ಇತಿಹಾಸಕಾರರೂ ಸತ್ಯವನ್ನು ಹೀಗೆ ಬಚ್ಚಿಡುವ ದಾರಿಯಲ್ಲಿ ಹೊರಟರೆ, ಮಾನವನ ಉದ್ಧಾರದ ಮಾರ್ಗವನ್ನು ಎಂದರೆ ಈಗಿನ ಅಧಃಪಾತದಿಂದ ತಪ್ಪಿಸಿಕೊಳ್ಳುವ ಮಾರ್ಗವನ್ನು ಕಂಡುಹಿಡಿಯುವ ಆಶೆ ಎಲ್ಲಿದೆ? ಗ್ರೀಕ್‌ಸಂಸ್ಕೃತಿಯ ಸಂದರ್ಭದಲ್ಲಿ ವ್ಯಕ್ತಿಮುಕ್ತಿಯ (Emancipation of Individual) ಈ ಸಂಪ್ರದಾಯವು ಶಿಷ್ಟಮಾನ್ಯವಾಗಿ ಪ್ರಭಾವಶಾಲಿಯಾಗತೊಡಗಿದಂತೆ ಗ್ರೀಕಿನಲ್ಲಿ ಪ್ರಕಾಶ ತತ್ತ್ವದ ಝೀವೂಸ್ (Nous : Mind) ತತ್ತ್ವವು ಸ್ಥಾನಭ್ರಷ್ಟವಾಗಿದೆ. ಪಾಶ್ಚಾತ್ಯ ಇತಿಹಾಸಕಾರರಲ್ಲಿ ಈ (Nous) ಪ್ರಜ್ಞೆ ನಷ್ಟವಾದುದನ್ನು ಹೇಳಿದವರನ್ನು ನಾನು ಕಾಣೆ, ಅರಿಸ್ಟಾಟಲ್ಲನನ್ನು ಉಳಿದು. ಆದರೆ ವಾಸ್ತವ ಸತ್ಯವನ್ನು ಬಚ್ಚಿಡಲು ಯಾರಿಗೂ ಶಕ್ಯವಿಲ್ಲ. ವ್ಯಕ್ತಿಮುಕ್ತಿಯ ಪಂಥಗಳ ಪ್ರಭಾವದಲ್ಲಿ ಝೀವೂಸನನ್ನು ವೈದಿಕ ಇಂದ್ರನಂತೆ ಕಾಮುಕ ದೈವತವಾಗಿಸಿದ್ದಾಗಿದೆ! Birth of Reason ಆದ ಓನ್ನೆಲೆಯನ್ನು ಶೋಧಿಸಲು ಮಾಡಿದ ಪ್ರಯತ್ನದಲ್ಲಿ, ಭಾರತೀಯ ಹಾಗೂ ಗ್ರೀಕ್‌ಮೂಲಗಳ ಸಾಮ್ಯದಿಂದಾಗಿ, ಗ್ರೀಸಿನಲ್ಲಿ Nous :Mind ಹೇಗೆ ಅದೃಶ್ಯವಾಯಿತು. ಇದು ಪರ್ಯಾಯವಾಗಿ, ಭಾರತದಲ್ಲಿ ಪ್ರಜ್ಞೆಯ ಅಂಗವಾದ ಮನಸ್ಸು ಹೇಗೆ ತನ್ನ ಬೆಲೆಗೆ ಎರವಾಯಿತು ಎಂಬ ಸಂಗತಿಯು ಸಪ್ರಮಾಣವಾಗಿ ದೃಢಪಟ್ಟಿದೆ.

ಗ್ರೀಸಿನಲ್ಲಿ ಪ್ರೊಟಾಗೋರಾಸ (ಕ್ರಿ. ಶ. ಪೂ ೪೮೧-೪೧೧) ಇವನನ್ನು ಸೋಫಿಸ್ಟ್ ಎಂದು ಕರೆಯಲಾಗುತ್ತಿದ್ದರೂ ಇವನು ಮಾನವ ಸಮಸ್ಯೆಯ ಬಗೆಗೆ ಆಳವಾದ ವಿಚಾರ ಮಾಡಿದವನಾಗಿದ್ದನೆಂಬುದು ಈಗ ಬೆಳಕಿಗೆ ಬಂದಿದೆ. ಮಾನವನು ಎಂದರೆ ಕೇವಲ ವ್ಯಕ್ತಿಯೆ? ಎಂಬ ಸಂದೇಹವು ಅವನಿಗೆ ಉಂಟಾಗಿರಲಿಕ್ಕೇಬೇಕು. ಮಾನವನು ಯಾರು? ಎಂಬುದರ ಬಗೆಗೆ ಅವನು ಹೇಳಿದ ಮಾತುಗಳು ಇಂತಿವೆ:

> "Man is to be understood as species or final in a collective sense and the term refers to men as a group (nation or tribe)

ಈತನದೇ ಇನ್ನೊಂದು ಮೌಲಿಕ ವಾಕ್ಯವು ಹೀಗಿದೆ.

> Man is the measure of all things, of things that are that they are, of things that are not, they are not.

ಗ್ರೀಕ್ ಸಂಸ್ಕೃತಿಯ ಸಂದರ್ಭದಲ್ಲಿಯೂ ವಿಶಿಷ್ಟ ವ್ಯಕ್ತಿ ಮತ್ತು ವೈಶ್ವಕ (Particular and Universal) ಇವೆರಡರ ನಡುವೆ ಸಂಘರ್ಷವಿದ್ದುದು ಆ ಸಂಸ್ಕೃತಿಯೊಳಗಿನ ಪ್ರಮಾಣಗಳಿಂದಲೇ ಬೆಳಕಿಗೆ ಬರುತ್ತದೆ. ಉದಾ : ಪ್ಲೇಟೊ, ವಿಶಿಷ್ಟವಾದಿಯಾಗಿದ್ದ : ವ್ಯಕ್ತಿ (Person) ಉಪಾಸಕನಾಗಿದ್ದ! ಆದರೆ, ಇವನ ಶಿಷ್ಯನೇ ಎನಿಸಿದ ಅರಿಸ್ಟಾಟಲನು, ವೈಶ್ವಕಸತ್ಯದ (Nous : Mind) ಪಕ್ಷಪಾತಿಯಾಗಿದ್ದ. ಭಾರತೀಯ ಪರಿಭಾಷೆಯಲ್ಲಿ ಹೇಳುವುದಾದರೆ. ವಿಶಿಷ್ಟವಾದೀ ಪ್ಲೇಟೊ ನರ(ಳ) ಸಂಪ್ರದಾಯದವನಾಗಿದ್ದ ಮತ್ತು ವೈಶ್ವಕ ಸತ್ಯದ Nous ಉಪಾಸಕನಾದ ಅರಿಸ್ಟಾಟಲನು ಮಾನವಧರ್ಮದ (ವಿವಸ್ವನ್) ಸಂಪ್ರದಾಯದವನಾಗಿದ್ದ.

ಇಂದಿನ ಈ ಅಮಾನವರು ಮರಳಿ ಮಾನವರ ಹಂತಕ್ಕೆ ಬರಬೇಕಾದರೆ-ಈ ಮಾನವನು ತನ್ನ ಮೂಲ ಮನೋಭಾವನವನ್ನು ಎಂದರೆ ಪ್ರಜ್ಞೆಯ ಅಂಗವಾದ ಮನಃಶಕ್ತಿಯನ್ನು ಗ್ರೀಕ್-ಪರಿಭಾಷೆಯ Nous :Mind ಇದನ್ನು ಮರಳಿ ಸಂಪಾದಿಸುವುದು ಇವನ ಆದ್ಯ ಕರ್ತವ್ಯವಾಗುತ್ತದೆ. ನನ್ನ ಅನ್ವೇಷಣೆಯಲ್ಲಿ ಕಂಡು ಬಂದಿರುವ ಈ ಅಂಶವನ್ನು ಬುಧನ ಜಾತಕ ಎಂಬ ಗ್ರಂಥದಲ್ಲಿ ವಿವರಿಸಿದ್ದೇನೆ. ಈ ಮಾನವ ಪ್ರಾಣಿ ತನ್ನ ಪ್ರಜ್ಞೆಗೆ (Nous ; Mind) ಎರವಾದ ಕ್ರಮವು ಶ್ರೀಮತ್ ಭಗವತ್ ಗೀತೆಯೊಳಗಿನ ಪ್ರಮಾಣಗಳಿಂದ ಸುಸ್ಪಷ್ಟವಾಗಿ ಅರಿಕೆಗೆ ಬರುತ್ತದೆ. ಗೀತೆಯ ಭಗವಂತನು ಬೋಧಿಸುತ್ತಾನೆ : ಸ್ಥಿತಪ್ರಜ್ಞ ನಾಗು ಎಂದು. ಈ ಪ್ರಜ್ಞೆಗೆ ಬದಲಾಗಿ

'ದದಾಮಿ ಬುದ್ಧಿಯೋಗಂ ಮತ್ತು ದಿವ್ಯಂ ದದಾಮಿ ತೇ ಚಕ್ಷುಃ' ಎಂಬುದಾಗಿ ಆಶ್ವಾಸನವನ್ನಿತ್ತಿದ್ದಾನೆ! ಭಗವಂತನ ಈ ಉಕ್ತಿಯಿಂದ, ಮಾನವೇತಿಹಾಸದಲ್ಲಿ ಬುದ್ಧಿಯು ಮಾನವನ ಪ್ರಾದುರ್ಭಾವದೊಡನೆ ತಲೆದೋರಿಲ್ಲ, ಎಂಬ ಸಂಗತಿ ಇಲ್ಲಿ ಸ್ಪಷ್ಟವಾಗಿ ನಿದರ್ಶನಕ್ಕೆ ಬರುತ್ತಿದೆ. ಹಾಗಾದರೆ ಬುದ್ಧಿಯು ತಲೆಯೆತ್ತಿದ್ದು ಯಾವಾಗ? ಎಂಬ ಈ ಸಮಸ್ಯೆಗೆ ಭಾರತೀಯ ಹಾಗೂ ಗ್ರೀಕ್ ಮೂಲಗಳಿಂದ ದೊರೆಯುವ ಪ್ರಮಾಣಗಳಲ್ಲಿ ಸಾಮ್ಯವಿರುವ ಸೋಜಿಗವನ್ನು ಕಾಣಬಹುದು. ಈ ಸೋಜಿಗವನ್ನು ಕಂಡಾಗ ನನಗೆ ಆಶ್ಚರ್ಯದ ಆಘಾತವಾಯಿತು. ಮಾನವನು ವಿಶ್ವ-ನಿಯಮಕ್ಕೆ ಅಧೀನವಾಗಿದಾನೆ, ಎಂಬ ಮಾತು ಇಲ್ಲಿ ನಿದರ್ಶನಕ್ಕೆ ಬರುತ್ತಿದೆ. ಈ ಮಾನವನು ಜೀವನದ : ಪ್ರಜ್ಞೆಯ ಪಾತಳಿಯಿಂದ, ಜೀವಿತದ : ಪ್ರಾಣಲಿಂಗ ಚೇತಸದ ಪಾತಳಿಯ ಮೇಲೆ ತಳ್ಳಲ್ಪಟ್ಟಾಗ, ಇಲ್ಲಿ ಪ್ರಜ್ಞೆಯು ಕೊರತೆಯನ್ನು ತುಂಬಲು ಈ ಮಾನವನಲ್ಲಿ ಬುದ್ಧಿಯು ತಲೆಯೆತ್ತಿದ್ದನ್ನು ಕಾಣುತ್ತೇವೆ. ಗೀತೆಯಲ್ಲಿ ದದಾಮಿ ಬುದ್ಧಿಯೋಗಂ ಎಂದು ಹೇಳುವ ಭಗವಂತನ ಈ ಉಕ್ತಿಯಿಂದ ಬುದ್ಧಿಯ ಜನನದ ಹಿನ್ನಲೆಯಲ್ಲಿ ಲಿಂಗ ಯೋನಿ ಸಂಪರ್ಕದಲ್ಲಿ ಇದ್ದುದು ಅರಿಕೆಗೆ ಬರುತ್ತದೆ. ಬುದ್ಧಿಯ ಜನನಸೂಚಕ ಮಿಥ್ಯಾಕಥೆಗಳು (Myths) ಉಂಟು. ಗ್ರೀಕ್ ಪರಂಪರೆಯಲ್ಲಿ ಹೋಮರನ ಕಾವ್ಯದಲ್ಲಿ ಅಥೆನಾದೇವಿ ಹುಟ್ಟಿದ್ದಾಳೆ ತನ್ನ ತಂದೆಯ ತಲೆಯಿಂದ! ಅಥವಾ Wisdom ಅಲ್ಲ. ಇವಳು ಬುದ್ಧಿದೇವಿಯೆಂಬುದು ಗಮನಾರ್ಹ. ಈ ಬುದ್ಧಿ (ದೇವಿ) ತಲೆಯಿಂದ ಹುಟ್ಟಿದ್ದಾಳೆ ಎಂಬುದರಲ್ಲಿ ಔಚಿತ್ಯವಿಲ್ಲವೊ? ಈ ಕಥೆಯನ್ನು ಸಂಪೂರ್ಣ ಹೋಲುವ ಮಿಥ್ಯಾಕಥೆಯೊಂದು, ಇಂದಿನ ಋಗ್ವೇದದಲ್ಲಿಯೂ ಇದೆ! ಅಂಭೃಣಿ ಎಂಬ ಈ ನೀರೆ, ತಂದೆಯ ಕಲೆಯಿಂದಲೇ ಹುಟ್ಟುತ್ತಾಳೆ. ಬುದ್ಧಿಜೀವಿ ಅಥೆನಾಳೊಂದಿಗೆ ಈ ಭೂಲೋಕದಲ್ಲಿ ಪಾಪವು ಹುಟ್ಟಿತು ಎಂದು ಪ್ರಾತಿಭ ದೃಷ್ಟಿಯ ಮಿಲ್ಟನ್ನನಿಗೆ ಕಂಡಿರಬೇಕು. ಆತನು ತನ್ನ ಪ್ಯಾರಡೈಸ್ ಲಾಸ್ಟ್ ಕಾವ್ಯದಲ್ಲಿ ಅಥೆನಾಳ ಕಥೆಯನ್ನು ಹೇಳುತ್ತಾನೆ. ವೇದದ ಅಂಭೃಣಿ, ಇವಳು ತನ್ನ ಆತ್ಮ ಕಥೆಯಲ್ಲಿ ಹೇಳುತ್ತಾಳೆ- "ಅಹಂ ರುದ್ರೇಭಿಃ ವಸುಭಿಃ ಆದಿತ್ಯೇತೆ : ವಿಶ್ವೇದೇವೈಃ (ಸಹ) ಚರಾಮಿ" ಎಂದು ಹೇಳುವ ಗಂಡುಬೀರೆ, ಈ ಬುದ್ಧಿ (ದೇವಿ)!

ಬುಧನು (ಬುದ್ಧಿ) ಬೃಹಸ್ಪತಿಯ ಮಡದಿಗೆ, ವ್ಯಭಿಚಾರದಲ್ಲಿ ಚಂದ್ರನಿಂದ ಹುಟ್ಟಿದನೆಂಬ ಕಥೆಯಿದೆ! ಈ ಬುದ್ಧಿಯು ವಕೀಲಿ ಸ್ವಭಾವದ್ದು. ಬುದ್ಧಿಯು ಒಳಿತನ್ನು ಸೂಚಿಸಬಹುದಾದಂತೆ, ಇದು ಕೆಡುಕಿನ ದಾರಿಗೂ ಅಟ್ಟಬಹುದು. ಗ್ರೀಕ್‌ಸಂಸ್ಕೃತಿಯಲ್ಲಿ ಪೈಥಾಗೋರಾಸ ಪಂಥೀಯ ಪ್ರಭಾವದಿಂದ ಪ್ರಭಾವಶಾಲಿಯಾಗತೊಡಗಿದ (Reason - Intelligence) ಇದು, ಅಲ್ಲಿಯ ಸೋಫಿಸ್ಟ್ ವರ್ಗದ ಜನನಕ್ಕೆ ಇದು ಕಾರಣವಾಯಿತು. ಸೋಫಿಸ್ಟರು ಅಂದರೆ ಆಧುನಿಕ ಯುಗದ ವಕೀಲ ಅಥವಾ ಬ್ಯಾರಿಸ್ಟರ್ ವರ್ಗದ ಪೂರ್ವಜರು. ಆಧುನಿಕ ಕಾಯ್ದೆ-ಕಾನೂನು ಈ ಬುದ್ಧಿಯಿಂದ ಪ್ರೇರಿತವಾಗಿದೆ. ಇಂದು ನಾವೆಲ್ಲ Rationalists ; ಬುದ್ಧಿವಾದಿಗಳೆಂದು ಕರೆಸಿಕೊಳ್ಳಲು ಹೆಮ್ಮೆಪಡುತ್ತೇವೆ. ಮನಸ್ಸು : ಪ್ರಜ್ಞೆ ಸಾಮಾಜಿಕವಾದುದು. Reason (ಬುದ್ಧಿ) ಇದು ಶುದ್ಧ ವೈಯಕ್ತಿಕ. ಬುದ್ಧಿವಾದಿಗಳಾಗಿ ಬಾಳುವಾಗ ಸ್ವಂತ ದೃಷ್ಟಿಕೋನದ ವೈಶಿಷ್ಟ್ಯಕ್ಕೇ ಪ್ರಾಧಾನ್ಯವು ಬರುವುದು ಅನಿವಾರ್ಯವಿದೆ. ಈ ಕಾರಣದಿಂದ, ಮನೆತನದಲ್ಲಿ ಬುದ್ಧಿವಾದೀ (Reason) ಗಂಡ-ಹೆಂಡಿರಲ್ಲಿ ತಮ್ಮ ವ್ಯಕ್ತಿ ವೈಶಿಷ್ಟ್ಯದ ಅಭಿನಿವೇಶದಿಂದಾಗಿ, ಏಕಾತ್ಮಕತೆ ದಿನದಿನಕ್ಕೂ ಕಡಿಮೆಯಾಗುತ್ತ ಬಂದಿದೆ. ನಿಜವಾಗಿ ಪ್ರಜ್ಞೆ (Wisdom : Nous) ಇದೇ ಮೊದಲಲ್ಲಿ ಮನುಷ್ಯನನ್ನು ಆಳುತ್ತಿತ್ತು : ಈಗಲೂ ಆಳಬೇಕು. ಆದರೆ, ಇಂದು ಶಿಕ್ಷಣ ಕ್ಷೇತ್ರದಲ್ಲಿ ಬುದ್ಧಿಗೆ ಪ್ರಾಧಾನ್ಯವು ದೊರೆಯುತ್ತಿದೆ. ಹಿಂದೊಮ್ಮೆ ಪ್ರಜ್ಞೆ (Nous : mind) ಎಂಬುದು ಮಾನವನನ್ನು ಆಳುತ್ತಿತ್ತು ಎಂಬ ಎಚ್ಚರ ಎಳ್ಳಷ್ಟೂ ಈಗ ಉಳಿದಿಲ್ಲ.

ಮನಸ್ಸಿನ ಪ್ರಕಾರಗಳು

ಮನಸ್ಸನ್ನು ಪ್ರಜ್ಞೆಯ ಅಂಗವಾದ ಮನಸ್ಸು ವೈವಸ್ವತ=ಸೌರ ಮತ್ತು ಬುದ್ಧಿಯ ಚಿತ್ತದ ಅಂಗವಾದ ಮನಸ್ಸು ಚಾಂದ್ರ ಎಂದು ವಿಂಗಡಿಸಿ ಅರಿಯುವುದು ಅವಶ್ಯವಿದೆ. ಇಂದು ಫ್ರೆಡ್ ಸಂಪ್ರದಾಯವು ಸ್ವಪ್ನ ಸುಪ್ತಿಗಳೊಳಗಿನ Subconscious unconscious ಹೆಸರಿನ ಲೈಂಗಿಕ ಪ್ರಚೋದಕ ಈ ಮನಸ್ಸೇ ಶ್ರೇಷ್ಠ ಎಂಬ ಗ್ರಹಿಕೆಯನ್ನು ನಿರ್ಮಿಸಿದೆ. ಆದರೆ, ಇದು ರಾತ್ರೀ ಕಾಲದ ಮನಸ್ಸು : ರಾತ್ರಿ ನಿರ್ಮಾಣ ಮಾಡುವ

ಮನಸ್ಸು : ರಾತ್ರಿಗಳನ್ನಾಳುವ ಮನಸ್ಸು: ಕಲ್ಪಯಂತೀ ಪಂಥದ ಸಾಹಿತ್ಯಿಕರಿಗೆ ಪ್ರಯೋಜನಕಾರಿಯಾದ ಮನಸ್ಸು. ಆದರೆ, ಪ್ಲೇಟೊ, ಇದನ್ನು (Lawless beast of nature) ಎಂದಿರುವುದನ್ನು ಎರಿಕ್‌ಫ್ರಾಂ ಮನೋವಿಶ್ಲೇಷಣ ಶಾಸ್ತ್ರಜ್ಞನು ಎತ್ತಿ ಹೇಳಿದ್ದಾನೆ.

ಭಾರತೀಯ ಸಂಪ್ರದಾಯದಲ್ಲಿ - ಚಂದ್ರಮಾ ಮನಸೋ ಜಾತಃ ಎಂಬ ವಾಕ್ಯವಿದೆ. ಇಲ್ಲಿ ಚಂದ್ರ ಮತ್ತು ಮನಸ್ಸು ಇವೆರಡರಲ್ಲಿ ಅನ್ಯೋನ್ಯ ಸಂಬಂಧವನ್ನು ಸೂಚಿಸಲಾಗಿದೆ, ಚಂದ್ರನ (ಬುದ್ಧಿಯ) ಅಂಗವಾದ ಮನಸ್ಸು, ಇದು ಇರುಳನ್ನೇ ನಿರ್ಮಿಸಿತು. ಇಂಥ ಮನಸ್ಸಿನ ಪ್ರೇರಣೆಯಿಂದ ಬರೆಯಲಾಗುವ ಸಾಹಿತ್ಯವು ಇದು ಇರುಳನ್ನು ನಿರ್ಮಿಸುವ ಸಾಹಿತ್ಯವೇ ಇದ್ದೀತು. ಇದು ವಿಶ್ವನಿಯಮ, ಈ ಕತ್ತಲು : ಇರುಳು ಭೌತವಲ್ಲ, ತಾತ್ತ್ವಿಕ ಪಾತಳಿಯ ಕತ್ತಲು ಇದು.

ವೈವಸ್ವತ ಮನುವಿನಿಂದ ಪ್ರೇರಿತ ಮನಸ್ಸು, ಇದು ಪ್ರಜ್ಞೆಯನ್ನು ಜಾಗೃತ ಮಾಡಬಲ್ಲ ಮನಸ್ಸು : ಮಾನವನ ಜೀವನದಲ್ಲಿ ಪ್ರಕಾಶವನ್ನು ತರಬಲ್ಲ ಮನಸ್ಸು. ಆದ್ದರಿಂದ, ನಮ್ಮ ಪ್ರಾಜ್ಞ ಸಾಹಿತ್ಯಿಕರು, ಯಾವ ಮನಸ್ಸಿನ ಆರಾಧನೆ ಮಾಡಬೇಕು ಎಂಬುದನ್ನು ತಮ್ಮಲ್ಲಿ ತಾವೇ ನಿರ್ಣಯಿಸಿಕೊಳ್ಳಲಿ. ಇಂದು, ಸಾಹಿತ್ಯಿಕರು ಮಾನವನನ್ನು ಅಮಾನವನನ್ನಾಗಿ ಮಾರ್ಪಡಿಸುವ ಮನಸ್ಸಿನ ಕೈಗೊಂಬೆಗಳಾಗಿದ್ದಾರೆ. ಇವರೆಲ್ಲರ ಕ್ಷಮೆ ಕೋರಿ, ಈ ಕಟುಸತ್ಯವನ್ನು ಹೇಳಬಯಸುತ್ತೇನೆ. ಭಗವಂತನು ಸ್ಥಿತ: (ಸ್ಥಗಿತ) ಮಾಡಹೇಳಿರುವ ಪ್ರಜ್ಞೆಯ ಬೆಲೆಯನ್ನು ಮನಗಾಣಿಸಿಕೊಡುವ ಒಂದು ಉತ್ಕೃಷ್ಟ ಶ್ಲೋಕವು ಭಾರತೀಯ ಪೂರ್ವ ಪರಂಪರೆಯಲ್ಲಿ ಶತಮಾನ-ಶತಮಾನಗಳಿಂದ ಉಳಿದು ಬಂದಿದೆ. ಈ ಶ್ಲೋಕದಲ್ಲಿ ಮನಸ್ಸಿನ ವಿವಿಧ ನಿಲುಮೆಗಳನ್ನು ಮನೋಜ್ಞವಾಗಿ ವಿವರಿಸಲಾಗಿದೆ.

ಸ್ಮೃತಿಃ ವ್ಯತೀತ ವಿಷಯಾ, ಮತಿಃ ಆಗಾಮೀ ಗೋಚರಾ
ಬುದ್ಧಿಃ ತು ತಾತ್ಕಾಲಿಕೀ ಜ್ಞೇಯಾ, ಪ್ರಜ್ಞಾ ತ್ರೈಕಾಲಿಕೀ ಮತಾ
ಪ್ರಜ್ಞಾ ನವೋನವೋನ್ಮೇಷಶಾಲಿನೀ ಪ್ರತಿಭಾಂ ವಿದುಃ।

ಈ ಸ್ಮೃತಿಯು, ಅಂದರೆ ಮಾನವೇತಿಹಾಸದೊಳಗಿನ ಮೌಲಿಕ ಘಟನೆಗಳ ನೆನಹು : ಇದು ಪ್ರಜ್ಞೆಯ ಅಂಗವೇ ಆಗಿದೆ. ಕಾಂಟನು ಹೇಳುವ Noumenal ಈ ಪಾತಳಿಯ ಸ್ಮೃತಿಯು ಇಲ್ಲಿ ಅಭಿಪ್ರೇತವಿದೆ. ಈ ಸ್ಮೃತಿ ಇಲ್ಲದೆ ನಮಗೆ ಇತಿಹಾಸವು ತಿಳಿಯಲಾರದು. ಆದರೆ, ಭಾರತೀಯರ ದುರ್ದೈವದಿಂದ ಸ್ಮೃತಿ ದ್ವೇಷೀ ಧರ್ಮ ಪಂಥಗಳೂ ನಮ್ಮಲ್ಲಿ ಉಂಟು! ಸೂಕ್ಷ್ಮ ರೀತಿಯಲ್ಲಿ-ಸ್ಮಾರ್ತ (ಸ್ಮೃತಿಯಲ್ಲಿ ಎಂದರೆ ಮಾನವನ ಇತಿಹಾಸದಲ್ಲಿ ನಂಬುಗೆಯಿದ್ದವರು) ಮತ್ತು ವೈಷ್ಣವ (ಪಂಚರಾತ್ರ್ಯಾದಿ ಆಗಮಗಳಲ್ಲಿ ನಂಬುಗೆಯಿದ್ದವರು-ಅಸ್ತಿತ್ವವಾದಿಗಳು) ಎಂಬ ಈ ನೆನಹಿನಲ್ಲಿ ಮೇಲಿನ ಆ ಪೈಪೋಟಿ ವ್ಯಕ್ತವಾಗುತ್ತದೆ.

ನಿನ್ನೆ-ಇಂದುಗಳ ಸಂದರ್ಭದೊಳಗಿನ ಆಗು-ಹೋಗುಗಳ ಲೆಕ್ಕದಿಂದ ಆಗಾಮೀ ನಾಳೆಗಳನ್ನು ಗ್ರಹಿಸಿಕೊಳ್ಳುವ ಅಂತಃಶಕ್ತಿಯು ಮಾನವನ ಈ ಮತಿಗೆ ಇದೆ. ಆದರೆ, ಮತಿ ಶಬ್ದದ ಅರ್ಥ ಈಗ ಸಂಕುಚಿತವಾಗಿದೆ; ಬೇರೆಯಾಗಿದೆ. ಇಲ್ಲಿ ಬುದ್ಧಿಯನ್ನು ತಾತ್ಕಾಲಿಕೀ ಎಂದು ಹೇಳಲಾಗಿದೆ; ಪರಿಸ್ಥಿತಿ ಜನ್ಯ ಕಾರಣಗಳಿಂದ ಥಕ್ಕನೆ ಅರಿಕೆಗೆ ಬರುವ (Situational logic) ಶಕ್ತಿಯನ್ನು ಬುದ್ಧಿ ಎಂದು ಬಗೆಯಲಾಗುತ್ತದೆ. ಬುದ್ಧಿಯು ಬರ್ಗಸನ್ ಎಂಬ ಆಧುನಿಕ ತತ್ತ್ವಜ್ಞಾನಿಯ ದೃಷ್ಟಿಯಲ್ಲಿ ಕಾಲ-ಪರಿಸ್ಥಿತಿಜನ್ಯ ಜ್ಞಾನ. ಇದಕ್ಕೆ, ಪ್ರಜ್ಞೆಯ (intuition) ಸಹಜ ಗ್ರಹಣ ಸಾಮರ್ಥ್ಯವಿಲ್ಲ. ಬುದ್ಧಿ ಇದು ಗಣಿತದಂತಿದೆ. ಗಣಿತಕ್ಕೂ ಸೈನ್ಸಿಗೂ ಸಾಕ್ಷಾತ್ ಜೀವನಕ್ಕೂ ನೇರ ಸಂಬಂಧ ಇಲ್ಲ. ಈ ಕಾರಣದಿಂದ ಬುದ್ಧಿ. ಇದು ಜೀವನದ ಮೇಲ್ಗಡೆಗೆ ನಿಂತು ಅದನ್ನು ಗ್ರಹಿಸಿಕೊಳ್ಳುವ ಒಂದು ಶಕ್ತಿ ಎನ್ನಬಹುದು.

ಯುಕ್ತಾಯುಕ್ತದ: ಜೀವನ ಮೌಲ್ಯಗಳ ಜಾಗೃತ-ಜೀವಂತ ಪ್ರಜ್ಞೆ ಇದ್ದವನು, ಪ್ರವಾಹ ಪತಿತನಾಗಲಾರನು. ಇವನು ತನ್ನ ಗುರಿಯತ್ತ ಸಾಗುವುದಕ್ಕೆ ಹೆಣಗಾಡುತ್ತಾನೆ. ಇದು ಪ್ರಜ್ಞೆಯ ಲಕ್ಷಣ. ಎಂತೂ ಬದುಕಿದರೆ ಸಾಕು ಎಂದು ಇದ್ದ ಪರಿಸ್ಥಿತಿಯಲ್ಲಿ ಒರಲುವವರಿಗೆ ಪ್ರಜ್ಞೆ ಒಂದು ಶಾಪವಾಗಿ ಕಾಣಬಹುದು. ಏಕೆಂದರೆ, ಪ್ರಜ್ಞೆಯು ಯುಕ್ತ ಮತ್ತು ಆಯುಕ್ತ ಇವುಗಳ ಅಂತರವನ್ನು ಗಮನಕ್ಕೆ ತಂದುಕೊಡುತ್ತದೆ. ಆಯುಕ್ತವನ್ನು ವಿರೋಧಿಸಿ

ಯುಕ್ತವನ್ನು ಅನುಸರಿಸುವ-ಆಯ್ದುಕೊಳ್ಳುವ-ಹೋರಾಟವು ಜೀವಂತ ಪ್ರಜ್ಞೆಯ ಲಕ್ಷಣ. ಮಾನವನಿಗೆ ನಿನ್ನೆ : ಇಂದು ಮತ್ತು ನಾಗರಿಕ ಅಂತಃಸಂಗತಿಯನ್ನು ಗ್ರಹಿಸಿಕೊಳ್ಳುವ ಶಕ್ತಿಯು ಪ್ರಾಪ್ತವಾದದ್ದೂ ಪ್ರಜ್ಞೆಯಿಂದಾಗಿ. ಆದಕಾರಣ, ಈ ಪ್ರಜ್ಞಾ ತ್ರೈಕಾಲಿಕೀ ಮತಾ ಎಂಬ ಈ ಮಾತು ತುಂಬಾ ಅರ್ಥಗರ್ಭಿತವಾಗಿದೆ.

ಪ್ರಜ್ಞಾ ನವನವೋನ್ಮೇಷಶಾಲಿನೀಂ ಪ್ರತಿಭಾಂ ವಿದುಃ ಈ ವಾಕ್ಯದಲ್ಲಿರುವ ನವನವೋನ್ಮೇಶಾಲಿನೀ ಎಂಬ ಮಾತು ಮಹತ್ವದ್ದಾಗಿದೆ. ನವನವಃ ಹೊಚ್ಚಹೊಸ ಉನ್ಮೇಷಗಳ ಅನುಭವ ಬರುವುದು, ಈ ಪ್ರಜ್ಞೆಯ ಲಕ್ಷಣವಾಗಿದೆ. ಆದರೆ, ನಮ್ಮ ಪರಂಪರೆಯಲ್ಲಿ ಸ್ಥೂಲವಾಗಿ ಇದನ್ನೇ ಹೋಲುವ, ಇದಕ್ಕೆ ಪ್ರತಿಯಾಗಿ ಇರುವ ಇನ್ನೊಂದು ಪಡೆಮಾತೂ ಉಂಟು. ಕ್ಷಣೇ ಕ್ಷಣೇ ನವತಾಂ ಉಪೈ ಎಂಬ ಈ ವಿಶೇಷಣವನ್ನು ರಮಣೀಯತೆಯ ಲಕ್ಷಣ ಎಂದು ಹೇಳಿದ್ದಾರೆ. ಇಲ್ಲಿಯ ಈ ರಮಣೀ(ಣಿ)ಯ ಆಕರ್ಷವು ಮೈಮರೆಯುವಂತಹದ್ದಾಗಿದೆ. ನಮ್ಮಲ್ಲಿ ಸೌಂದರ್ಯದ ಧಾರಣವು (Concept) ಎರಡು ಬಗೆಯದಾಗಿದೆ. ಒಂದು ನವೋನವೋನ್ಮೇಷಶಾಲಿನೀ ಸಾಂದರ್ಯ, ಇನ್ನೊಂದು ಕ್ಷಣಕ್ಷಣಕ್ಕೂ ಬದಲಾಗುವ, ಸಮ್ಮೋಹಕ-ರಮಣಿ (ೀ) ಯ ಸೌಂದರ್ಯ. ಪ್ರತಿಭೆ ಮತ್ತು ಪ್ರಜ್ಞೆ ಇವೆರಡರಲ್ಲಿ ಅಭೇದ ಸಂಬಂಧವನ್ನು, ಮೇಲೆ ಉದ್ಧರಿಸುವ ಶ್ಲೋಕದಲ್ಲಿ ಸೂಚಿಸಲಾಗಿದೆ. ಆದರೆ, ಇಂದು ಪ್ರತಿಭೆ ಎಂಬುದು 'ಕ್ಷಣೇ ಕ್ಷಣೇ ನವತಾಂ ಉಪೈತಿ' ಸ್ವರೂಪದ ರಮಣೀಯ ಸೌಂದರ್ಯವನ್ನು ಗ್ರಹಿಸಿಕೊಳ್ಳುವ ಸಾಹಿತ್ಯಿಕಶಕ್ತಿ ಎಂಬ ಅರ್ಥದಲ್ಲಿ ಮಾತ್ರ ರೂಢವಾಗಿದೆ! ಭಗವದ್ಗೀತೆಯ ಭಗವಂತನು ಇಂಥ ಮೌಲಿಕ ಪ್ರಜ್ಞೆಯನ್ನು ಸ್ಥಿತ (ಸ್ಥಗಿತ) ಗೊಳಿಸಲು ಬೋಧಿಸಿದ್ದಾನೆ! ಈ ಪ್ರಜ್ಞೆ ಉಳಿದರೆ ಮಾನವನು ಪುರುಷಃ ಅಮಾನವ ಆಗುವ ಶಕ್ಯತೆಯಿಲ್ಲ. ಪ್ರಜ್ಞೆ ಉಳಿದಿದ್ದರೆ ವ್ಯಾಸನ ನರ : ನಾರಾಯಣ ಪಂಥವು ಶಿಷ್ಟಮಾನ್ಯವಾಗಲು ಶಕ್ಯವಿದ್ದಿಲ್ಲ.

ಪ್ರಜ್ಞೆ, ಬುದ್ಧಿ ಮತ್ತು ಚಿತ್ತ ಇವುಗಳಲ್ಲಿರುವ ಪರಸ್ಪರ ಸಂಬಂಧ

ಪ್ರಜ್ಞೆಯು ಮಾನವನ ಮನಸ್ಸಿನ ಪ್ರೇರಣಾ ಕೇಂದ್ರವಾಗಿದೆ. ಮಾನವನಲ್ಲಿರುವ ಅಂತಃಸ್ವಾತಂತ್ರ್ಯ ಸೂಚಕ, ತನ್ನ ನಿರ್ಣಯ ತಾನೇ ಮಾಡಬಲ್ಲ, ಈ ಸ್ವಾತಂತ್ರ್ಯವನ್ನು ಪ್ರತೀತಿಗೆ ತರುವ ಒಳ ತಿಳಿ(ವಿನ) ಬೆಳಕು. ಎಂದರೆ ಈ ಸಮಷ್ಟಿಪ್ರಜ್ಞೆ ವ್ಯಕ್ತಿಯಲ್ಲಿ ಇದು ಉಪಜ್ಞೆ ಎನಿಸುತ್ತದೆ; ಉಪದೇಶೇನ ವಿನಾ ಬಗೆಗಣ್ಣಿನಿಂದಲೇ ಅರಿಕೆಗೆ ಬರುವ, ಸಹಜಜ್ಞಾನ. ಇದು ಪ್ರಜ್ಞೆಯ ಲಕ್ಷಣವೇ. ಪ್ರಾಚೀನರು ಜಾತವೇದ ಅಗ್ನಿ ಎಂದದ್ದು ಇದಕ್ಕೆ. ಮನಜತ್ವ=ದ್ವಿಜತ್ವ ಹಾರೈಸುವವರು ತಮ್ಮ ಒಳಗಿನ ಜಾತವೇದ ಅಗ್ನಿಯನ್ನು ಸಂರಕ್ಷಿಸಿ ಆಮರಣ ಉಳಿಸಿಕೊಳ್ಳುವುದು ಅವರ ಕರ್ತವ್ಯವಾಗುತ್ತದೆ. ಇದರ ಅನುಸಂಧಾನದಲ್ಲಿರುವುದು ಅವರ ಕರ್ತವ್ಯವಾಗುತ್ತದೆ. ಆದರೆ, ಒಳಗಿನಿಂದ ಅರಿಕೆಗೆ ಬರುವ ಈ ಸಹಜಜ್ಞಾನದ ಉನ್ಮೇಷ, ಈ ನರ-ಮಾನವನಿಗೆ ಯಾವಾಗಲೂ ಅನುಕೂಲವಿರುತ್ತದೆ ಎಂಬ ಭರವಸೆ ಇಲ್ಲ! ಹೊತ್ತು ಬಂದತ್ತ ಕೊಡೆ ಹಿಡಿಯಲು, ಗೆದ್ದೆತ್ತಿನ ಬಾಲ ಹಿಡಿದು ಬಾಳಲು, ಹೊಟ್ಟೆಗಾಗಿ ದಮ್ಮಯ್ಯ ಎಂದು ಬದುಕಲು, ಈ ಆಂತರಿಕ ಉನ್ಮೇಷ ಆತಂಕಕಾರಿ ಎನಿಸುತ್ತದೆ. ಆದ್ದರಿಂದ, ಈ ಜಾತವೇದಾಗ್ನಿಯನ್ನೇ ನೀರಲ್ಲಿ ಹಾಕಿ ಬಿಡುವ ಆತಂಕಕಾರಿ ಹಂಚಿಕೆ ಹೊರಟಿದೆ. ಮಾನವನನ್ನು ಅಮಾನವನನ್ನಾಗಿ ಮಾಡುವ ನಚಿಕೇತಾಗ್ನಿಯಲ್ಲಿ, ಜಾತವೇದ ಅಗ್ನಿಯನ್ನು ತಳ್ಳಲಾಗಿದೆ-ಇಂದಿನ ವೇದದಲ್ಲಿ!

ಪ್ರಜ್ಞೆ, ಕೇವಲ ವೈಯಕ್ತಿಕವಲ್ಲ. ಇದು ಸಾಮಾಜಿಕವಾದುದು. ಸಮಾಜ ಸಮಷ್ಟಿಯೊಡನೆ (ಪ್ರಾಚೀನ ಪರಿಭಾಷೆಯ ವೈಶ್ವಾನರಾಗ್ನಿಯೊಡನೆ) ನಿರ್ವಂಚನೆಯ ಆತ್ಮೀಯ ಸಂಬಂಧದಲ್ಲಿ ಈ ಪ್ರಜ್ಞೆಯು ಕುದುರಬಲ್ಲುದು. ಡಾ. ಐನ್‌ಸ್ಟನ್ನರ ಪರಿಭಾಷೆಯಲ್ಲಿ ಈ ಪ್ರಜ್ಞೆ extra personal sphere of Reality ಆಗಿದೆ. ಮತ್ತು ಈ ಪ್ರಜ್ಞೆಯ ಲಕ್ಷಣ ಇಡಿಯಿಂದ ಬಿಡಿಯನ್ನು (Universal to particular) ಗ್ರಹಿಸಿಕೊಳ್ಳುವ ಸ್ವಭಾವವಾಗಿದೆ.

---

* ಬುದ್ಧಿ ಎಂಬ ಶಬ್ದಶಿಲ್ಪವ ಇತರ ಮನೀಷ, ಧಿಷಣಾ, ಧೀ, ಪ್ರಜ್ಞಾ ಇವುಗಳ ಜತೆಗೆ ಸಮೀಕರಿಸಿ ಪ್ರಾಚೀನರು ನೋಡಿದ್ದಾರೆ. ಆದರೆ, ಇವೆಲ್ಲವೂ ಬೇರೆ ಬೇರೆ ಸಾಂಸ್ಕೃತಿಕ ಅರ್ಥಪಾತಳಿಗಳನ್ನು ಹೊಂದಿದೆ. 'ಬುದ್ಧಿ' ಶಬ್ದಶಿಲ್ಪವನ್ನು ಪ್ರಾಚೀನ ವೇದ, ಉಪನಿಷತ್ತುಗಳಿಂದ ಗ್ರಹಿಸಬೇಕು. ಬುದ್ಧಿಯ ಅಧಿದೈವತ ಬುಧ. ಬುಧ ವೈಭಿಚಾರೀಪುತ್ರ. ಈ ಬುದ್ಧಿಯು ವ್ಯಭಿಚಾರಿ ಸ್ವಭಾವವನ್ನು ಹೊಂದಿದೆ. 'ವಿನಾಶಕಾಲೇ ವಿಪರೀತ ಬುದ್ಧಿ' ಎಂಬುದು ಇದರ ಪಾತಳಿ. ಇದು ಸಧರ್ಮವನ್ನು ಪಾಲಿಸುತ್ತದೆ; ವೈಯಕ್ತಿಕ ಸ್ವರೂಪದ್ದೂ ಕೂಡ ಆಗಿದೆ. (ಸಂ).

ಬುದ್ಧಿಯ ಕುರಿತು ಎರಡು ಮಾತು

ಬುದ್ಧಿಯ ಕೇವಲ ವೈಯಕ್ತಿಕ* ಅವರವರ ತಲೆಗೆ ಸೀಮಿತ : ಮತ್ತು ಪೃಥಕ್ಕರಣಶೀಲ. ಬಿಡಿಯಿಂದ ಇಡಿಯ ಕಡೆಗೆ (Particular to universal) ಇದರ ಪ್ರವೃತ್ತಿ. ಆದ್ದರಿಂದ ಬುದ್ಧಿಜೀವಿಗಳು ವಿಧಾಯಕಕ್ಕಿಂತ ವಿಭಾಜಕ ದೃಷ್ಟಿಕೋನದವರು ಆಗುವ ಶಕ್ಯತೆ ಇದೆ. ನಮ್ಮ ಗಣಪತಿ, ವಿನಾಯಕ ಈ ಅಂತರ್ವಿಸಂಗತ ಹೆಸರುಗಳ ಈ ದೇವನು ಬುದ್ಧಿಯ ಅಧಿದೇವತೆ ಆಗಿದ್ದಾನೆ. ಆ ಶಬ್ದ ಪತಿಮೆ ತುಂಬಾ ಅರ್ಥಗರ್ಭಿತವಿದೆ. ಗಣಾನಾಂ ತ್ವಾಂ ಗಣಪತಿಂ ಹವಾಮಹೇ, ಎಂಬ ಈ ಮಂತ್ರದಲ್ಲಿ ಈ ಗಣಪತಿಯನ್ನು ಬ್ರಹ್ಮಣಸ್ಪತಿ ಎಂದಿದ್ದಾಗಿದೆ. ಈ ಬ್ರಹ್ಮಣ-ಸ್ಪತಿಯು ಇಂದಿನ ಋಗ್ವೇದದಲ್ಲಿ ಸೃಷ್ಟಿಕರ್ತನೆಂದು ಸೂಚಿಸಲಾಗಿದೆ ಕರ್ಮಾರಯಿವ ಮೂರ್ತಿಗಳನ್ನು ತಯಾರು ಮಾಡುವವನು ಎಂಬ ಸೂಚನಯಿದೆ. ಈ ಸೃಷ್ಟಿಕರ್ತನು, ಲೈಂಗಿಕ ಪಾತಳಿಯ ದೇವರು ಆಗುತ್ತಿದ್ದಾನೆ. ಮಕ್ಕಳು ಆಗದಿದ್ದವರು ಗಣಪತಿ (ಬುದ್ಧಿದೇವತೆ)ಯನ್ನು ಆರಾಧಿಸುವ ವಾಡಿಕೆಯಿದೆ. ಗಣಪತಿಯ ಹೊಟ್ಟೆಗೆ ನಾಗವು ಸುತ್ತಿದ್ದನ್ನು ತೋರಿಸಲಾಗುತ್ತದೆ. ನಾಗ(ಲಿಂಗ) ಇದುವೇ ಬುದ್ಧಿ ಪ್ರೇರಕಶಕ್ತಿ. ಈ ಬುದ್ಧಿ, ಇದು ಉಭಯ ವಿಧ, ಎರಡು ನಾಲಗೆಯದು. ಇದನ್ನು ನಾನು ಹೇಳುತ್ತಿಲ್ಲ. ಈ ಗಣಪತಿಯನ್ನು ವಿಘ್ನಕರ್ತ, ವಿಘ್ನಹರ್ತ ಎಂಬ ಎರಡೂ ವಿಶೇಷಣಗಳಿಂದ ವರ್ಣಿಸುತ್ತಾರೆ. ವಿನಾಯಕ ಎಂಬುದು ಗಣಪತಿಯ ಪರ್ಯಾಯನಾಮ. ವಿನಾಯಕ ಎಂಬಲ್ಲಿ ನಾಯಕತ್ವದ ಅಭಾವದ ಸೂಚನೆಯಿದೆ: ಸ್ವಯಂಭೂತ್ವದ ಸೂಚನೆಯಿದೆ. ಬುದ್ಧಿಯ ಸ್ವರೂಪವನ್ನು ಗ್ರಹಿಸಿಕೊಳ್ಳಲು ಗಣಪನ ಈ ವಿಶ್ಲೇಷಣವು ಅವಶ್ಯವಾಯಿತು. ಗಣ : ಮರುತರ [ನರ(ಳ). ತಂಡ] ಗಣಪತಿ : ಮರುದ್ಗಣದ [ನರ(ಳ) ಗಣದ] ಅಧಿಪತಿ ಆಗುತ್ತಿದ್ದಾನೆ.

ಇನ್ನು, ಚಿತ್ತದ : ಚೇತಸದ ವಿಚಾರ, ಜರ್ಮನಿಯ ಶೋಪೆನ್‌ಹೌವರ್ Schopenhauer (೧೭೮೮ -೧೮೬೦) ಇವನು ಚಿತ್‌ತತ್ತ್ವದ ಉಪಾಸಕ. ಪ್ರಪಂಚವೆಲ್ಲವೂ ಚಿತ್ತದಿಂದ ಆಗಿದೆ, ಎಂದು ನಂಬಿದವನು. ಚಿತ್ತ ಮತ್ತು ಬುದ್ಧಿಯ ನಡುವಿನ ಅಂತರವನ್ನು ಈತ ಸುಂದರವಾಗಿ ಹೇಳಿದ್ದಾನೆ-

> Reson is feminine in nature; it can only give after it has received. Of itself it has nothing but the empty forms of its own operation[೧೨]

ಇಚ್ಛಾಶಕ್ತಿ, ಸಂಕಲ್ಪಶಕ್ತಿಗಳಲ್ಲಿ ಎಲ್ಲ ಬಗೆಯ ಪವಾಡ ಶಕ್ತಿಯಿದೆಯೆಂದು ದಿವ್ಯಾಧ್ಯಾತ್ಮಿಗಳು ಹೇಳುತ್ತಾರೆ. ಆದರೆ, ಈ ಇಚ್ಛಾಶಕ್ತಿ (Will power) ಪ್ರಾಣದ ಅಂಗ! ಅದ್ದರಿಂದ, ಅದು ಪ್ರಜ್ಞೆಯನ್ನು ಸಹಿಸದು. ಬುದ್ಧಿಯ ಮೂಲಕ ತನ್ನ ಕಾರ್ಯಗಳನ್ನು ಸಿದ್ಧಿಸಿಕೊಳ್ಳಲು ಪ್ರಯತ್ನಿಸುತ್ತದೆ. ಈ ದಿವ್ಯಾಧ್ಯಾತ್ಮಗಳಲ್ಲಿ ಚಿತ್ತಕ್ಕೆ-ಬುದ್ಧಿಗೆ ಪ್ರಾಧಾನ್ಯವಿದೆ: ಹೊರತು ಪ್ರಜ್ಞೆಗಲ್ಲ, ಆದಿ ಶಂಕರಾಚಾರ್ಯರು ಚಿತ್ (ಆನಂದ) ರೂಪಃ ಶಿವಃ ಅಹಂ-ಎಂದಿರುವ ಮಂತ್ರದಲ್ಲಿ ಆಚಾರ್ಯರು ಚಿತ್ತಕ್ಕೆ ಪ್ರಾಧಾನ್ಯಕೊಟ್ಟಿರುವರೇ ಹೊರತು ಪ್ರಜ್ಞೆಗಲ್ಲ ಎಂಬುದು ಸ್ಪಷ್ಟವಿದೆ. ಸತ್ ಚಿತ್ ಆನಂದ ಇದಕ್ಕೆ ನಮ್ಮಲ್ಲಿ ಮಹತ್ತ್ವವಿದೆ. ಸಂಸಾರವನ್ನು 'ಚಿತ್ ವಿಲಾಸ' ಎಂದು ಹೇಳಲಾಗುತ್ತದೆ. ಇದರಿಂದಾಗಿ ಪ್ರಜ್ಞಾಯುಕ್ತ ಜೀವನದಲ್ಲಿ ನಿಷ್ಠೆಯು ನಷ್ಟವಾಗಿ ಪ್ರಾಣಪಾತಳಿಯ ಜೀವಿತಕ್ಕೇ ಪ್ರಾಧಾನ್ಯ ಬಂದು ಮಾನವನು ಅಮಾನವತ್ವದ ಹಂತಕ್ಕೆ ತಳ್ಳಲ್ಪಡುತ್ತಿದ್ದಾನೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಬದುಕಿರಬೇಕಾದ ಪರಿಸ್ಥಿತಿ ಇಂದು ಬಂದಿದೆ.

ಇಂದು ಈ ಮಾನವನು, ವ್ಯಕ್ತಿ (ಲಿಂಗ) ಸ್ವರೂಪದವನಾಗಿ ಪರಿಣಮಿಸಿ ವ್ಯಕ್ತಿಗಳನ್ನೇ ಸೃಷ್ಟಿಸುತ್ತಿದ್ದಾನೆ! ಆದುದರಿಂದ, ಮಾನವನ ಅಂಗವಾಗಿ ಕತ್ತಲೆಯಲ್ಲಿರಬೇಕಾದ ವ್ಯಕ್ತಿ. ಹೊರಗೆ ಬೆಳಕಿನಲ್ಲಿ ಬರುವಾಗ, ಸಾಮಾಜಿಕ ಸಂದರ್ಭದಲ್ಲಿ ಇರಬೇಕಾದ ಈ ಮಾನವನು ಇಂದು ಕಣ್ಮರೆಯಾಗಲೇಬೇಕಷ್ಟೆ? ಜೀವನ ವಿಶ್ವಸ್ಥ ವಿಶಿಷ್ಟ ಮತ್ತು ವೈಶ್ವಕ ಇವೆರಡು ಭೂಮಿಕೆಗಳ ಸಾಂಗತ್ಯವು ಅತ್ಯವಶ್ಯವಿದ್ದು ಸಾಹಿತಿಗಳು ಇಂದು ವಿಶಿಷ್ಟದ ಪಕ್ಷಪಾತಿ ಭೂಮಿಕೆಯನ್ನು

ಮಾತ್ರ ಸ್ವೀಕರಿಸಿದ್ದು ಎದ್ದು ಕಾಣುತ್ತದೆ. ಇದರಿಂದಾಗಿ ಸಮಾಜ : ಸಮಷ್ಟಿ ದುರ್ಬಲವಾಗಿದೆ. ಪ್ರತಿ ವ್ಯಕ್ತಿಯ (ಅವರವರ) ಅರ್ಥವು ಅವರವರ ಪಾಲಿನಸತ್ಯವಾಗಿದೆ. ಹೀಗಾಗಿ, ಬಾಳಿನಲ್ಲಿ ಅರ್ಥವೇ ನಷ್ಟವಾಗಿ ಅನರ್ಥಕ್ಕೆ ಎಂದರೆ-ಭ್ರಷ್ಟಾಚಾರಕ್ಕೆ ಆಮಂತ್ರಣವು ದೊರೆಯುತ್ತ ಬಂದಿದೆ. ನನ್ನ ಈ ಅನ್ವೇಷಣೆಯಲ್ಲಿ ತಥ್ಯಾಂಶವಿದ್ದರೆ, ಇನ್ನು ಮುಂದೆ ಸಾಹಿತ್ಯ ಯಾವ ದಿಶೆಯಲ್ಲಿ ಸಾಗಬೇಕು ಎಂಬುದನ್ನು ಪ್ರಾಜ್ಞರಾದ ಸಾಹಿತ್ಯಿಕರೇ ನಿರ್ಧರಿಸಲಿ.*

ನನ್ನ ಈವರೆಗಿನ ವಿವೇಚನೆಯ ಮಥಿತಾರ್ಥವು : ನಾವು ಮರಳಿ ಮಾನವರಾಗಬೇಕು: ಪ್ರಜ್ಞಾವಂತರಾಗಬೇಕೆಂಬುದೇ ಆಗಿದೆ. ಈ ಪ್ರಜ್ಞೆಯ ಆವಿರ್ಭಾವದಿಂದ ನಾವೆಲ್ಲ ಹೊಸಬರಾಗಲು ಸಾಧ್ಯ. ನಮ್ಮನ್ನು ತುಳಿಯುತ್ತಿರುವ ಇಂದಿನ ಈ ವ್ಯಸ್ತ ಪರಂಪರೆಯನ್ನು ಮೆಟ್ಟಿ, ನಾವು ವಿವಸ್ವನ್ ಪರಂಪರೆಯ ಸಂಸ್ಕೃತಿಯನ್ನು ಮಾನವಧರ್ಮವನ್ನು ಮತ್ತೆ ಜಗತ್ತಿನಲ್ಲಿ ಕಾಣಬೇಕಿದ್ದರೆ, ಪ್ರಾಜ್ಞಸಾಹಿತ್ಯಿಕರು, ಜೀವಿತದ ಪಾತಳಿಯ ಅಭಾವಾತ್ಮಕ ಭೂಮಿಕೆಯ ಸಾಹಿತ್ಯಕೃತಿ ರಚನೆಯ ದಿಕ್ಕನ್ನು ಬದಲಿಸಿ, ಜೀವನದ ಪಾತಳಿಯ ಮೇಲಣ, ಭಾವಾತ್ಮಕ ಹಾಗೂ ಅನುಭವಾತ್ಮಕ ಸ್ವರೂಪದ ಸಮಾಜ : ಸಮಷ್ಟಿಯ ದರ್ಶನ ಮಾಡಬಲ್ಲ ಕೃತಿರಚನೆಗೆ ತೊಡಗುವುದು ಅವಶ್ಯವಾಗುತ್ತಿಲ್ಲವೆ;

ಟಿಪ್ಪಣಿಗಳು

೧. Quoted by R.G. Coolling Wood- in ***The Idea of History***
೨. ***ಋಗ್ವೇದ ಸಂಹಿತೆ*** ೧೦ನೆಯ ಮಂಡಲ. ೧೧೪ನೆಯ ಸೂಕ್ತ, ೫ನೆಯ ಋಚೆಯಲ್ಲಿ ಸುಪರ್ಣ ಎಂದಿರುವ ಪಕ್ಷಿಯನ್ನು ಮೇಧಾವಿಗಳೂ. ಕವಿಗಳೂ ಬಹುವಿಧವಾಗಿ ಕಲ್ಪಿಸುತ್ತಾರೆ
೩. ***ಛಾಂದೋಗ್ಯೋಪನಿಷತ್ತು*** : ೪.೧೫.೫.
೪. ***ಋಗ್ವೇದ ಸಂಹಿತೆ*** VII ೧೨೮
೫. ***ಛಾಂದೋಗ್ಯೋಪನಿಷತ್ತು*** ೫. ೧೦.೨
೬. ***ಋಗ್ವೇದ ಸಂಹಿತೆ*** V. ೧೦.೨
೭. ***ಅದೇ*** X. ೫೧.೫
೮. ***ಛಾಂದೋಗ್ಯೋಪನಿಷತ್ತು*** ೧೧.೩.೧
೯. E. Zeller; 1948 ***Outlines of the History of the Greek Philosophy*** Published by Routledge and Kegan Paul Ltd. London. Page 11
೧೦. ***Ibid*** Page 31
೧೧. Burtrand Russel; 1947 ***History of Western philosophy,*** published by George Allen and Unwin Ltd, London, page 56
೧೨. V: Ferm (Ed); ***A History of the Philosophical systems.*** Page 301

ಜೀವನ, ಸಂಸ್ಕೃತಿ ಮತ್ತು ಸಾಹಿತ್ಯ

ಜೀವಿತ ಮತ್ತು ಜೀವನ ಇವು ಎರಡೂ ಸಮಾನ ಅರ್ಥದ ಪದಗಳಲ್ಲ. ಇವೆರಡರ ಆಕೃತಿ-ಸ್ವರೂಪವು ಬೇರೆ ಬೇರೆ ಬಗೆಯದೇ ಆಗಿದೆ. ಇವೆರಡರ ಪಾತಳಿಗಳ ಮಟ್ಟ ಒಂದೇ ಇಲ್ಲ. ಜೀವಿತವು ಪ್ರಾಣಪಾತಳಿ, ಅಸ್ವಯಂವೇದ್ಯ. ಆದರೆ, ಜೀವನವು ಪ್ರಜ್ಞೆಯ ಅಂಗವಾದ ಮನಸ್ಸಿನ ಪಾತಳಿ, ಇದು ಸ್ವಯಂವೇದ್ಯ. ಅಸ್ತಿತ್ವ : ಜೀವಿತ ಹಾಗೂ ಜೀವನ ಇವೆರಡರೊಳಗಿನ ಈ ಮೌಲಿಕ ಭೇದವನ್ನು ಲೆಕ್ಕಿಸದೆ ಇದ್ದರೆ, ಸಾಹಿತ್ಯ ಹಾಗೂ ಸಂಸ್ಕೃತಿಯ ನಿಜವಾದ ಅರ್ಥವು ಆಗಲು ಶಕ್ಯವೇ ಇಲ್ಲ! ಆದರೆ, ಜೀವನ (ಮನುಜ) ಮತ್ತು ಜೀವಿತ (ನರ) ಇವೆರಡೂ ಪಾತಳಿಗಳ ನಡುವಣ ವ್ಯತ್ಯಾಸದ ಅರಿಮೆ ಎಂದೋ ನಷ್ಟವಾಗಿದೆ! ಹಿಂದೊಮ್ಮೆ ಅಸ್ತಿತ್ವದಲ್ಲಿ ಇದ್ದ ಈ ತಾರತಮ್ಯವು ಯೋಜನಾ ಪೂರ್ವಕವಾಗಿ ನಷ್ಟವಾಗಿಸಿರುವ ಸಂದೇಹವು ದಿನದಿನಕ್ಕೂ ಬಲಪಡುತ್ತಿದೆ. ಉದಾ :- "ಇಂದ್ರಾಯ ತಕ್ಷಕಾಯ ಸ್ವಾಹಾ" ಎಂಬ ಮನ್‌ತ್ರದ ಸರ್ಪಯಾಗದ ಕಥೆಯು ಈ ದೃಷ್ಟಿಯಿಂದ ಉದ್ಬೋಧಕವಿದೆ. ಋಗ್ವೇದ ಸಾರ ನಾಗ ಪ್ರತಿಮಾ ವಿಚಾರದ ಅನ್ವೇಷಣೆಗೆ ಒತ್ತಾಯ ಪಡಿಸಿದ ಮಹಾವಾಕ್ಯವಿದು.

ಪ್ರಾಜ್ಞರ-ವಿಚಾರವಂತರ ಚಿತ್ರವನ್ನು ಈ ಅಂಶದ ಕಡೆಗೆ ಸೆಳೆಯುವುದಕ್ಕಾಗಿ ಇಲ್ಲಿ, ಈ ಸಮಾರಂಭದ ನೆಪದಿಂದ, ತಮ್ಮೆಲ್ಲರ ಪರಾಮರ್ಶೆಗಾಗಿ, ಈ ಎರಡು ಮಾತುಗಳನ್ನು ವಿಶದ ಪಡಿಸಲು ಬಯಸುತ್ತೇನೆ. ಚಿತ್ತೈಸಬೇಕಾಗಿ ಬಿನ್ನಹ. ಜೀವಿತ ಜೀವಿಯ ಅಸ್ತಿತ್ವಕ್ಕೆ ಸಂಬಂಧಿಸಿದೆ. ಜೀವಿತವು ಆ ಜೀವಿ ಪ್ರಾಣಿಯ ಆಯುರ್ಮಾನಕ್ಕೇ ಸೀಮಿತ, ಇದು ಕೇವಲ ವೈಯಕ್ತಿಕ ಸ್ವರೂಪದ್ದು ಆಗಿದೆ. ಈ ಜೀವಿತವು, ಆ ವ್ಯಕ್ತಿ-ಪ್ರಾಣಿಯ ಸ್ಥಲ (ದೇಹ) ಮತ್ತು ಕಾಲ (ಪ್ರಾಣಚೇತಸ) ಇವೆರಡರೊಡನೆ ಬದ್ಧವಿದೆ. ಆದಕಾರಣ, ಇದು ಭೌತ, ಇಂದ್ರಿಯಗಳ ಪಾತಳಿಯ ಮೇಲೆ ಅಸ್ತಿತ್ವವಾಗುತ್ತದೆ. ಆದರೆ, ಜೀವನವು ಬರಿಯ (ಜೀವಿ) ಪ್ರಾಣಿ ವರ್ಗದ-ಜೀವಿತದ ಪಾತಳಿಯಿಂದ ಭಿನ್ನವಿದೆ. ಜೀವಿತದ ಎಂದರೆ ಇಂದ್ರಿಯಗಳ ಪಾತಳಿಯ ಆಚೆಗಿನ ಮಟ್ಟದಲ್ಲಿ ಜೀವನವು ಉಂಟು. ಮನು-ಜ=ಮಾನವರೊಡನೆ ಕಾಣಿಸಿಕೊಳ್ಳುವ ಜೀವನದ ಪಾತಳಿಯು, ಮನಸ್‌ತತ್ವದ ಸಾಹಚರ್ಯದಲ್ಲಿ ಅರಿಕೆಗೆ ಬರುತ್ತದೆ. ಮಾನವನ ಈ ಮನಸ್ ತತ್ವವು, ಅವನ ಸ್ಥಲ (ದೇಹ) ಹಾಗೂ ಕಲಾ (ಪ್ರಾಣಚೇತಸ) ಈ ವಿಭಾಗದ್ವಯದ ಆಚೆಗೆ-ಈ ವಿಭಾಗದ್ವಯದ ಟೊಳ್ಳಿನ-ಅಂತರಿಕ್ಷಸ್ಥ ಅವಕಾಶದ ಮೇಲ್ಗಡೆಗೆ, ಆಕಾಶತತ್ವದ ಪಾತಳಿಯಲ್ಲಿ ಉಂಟು.

ಜೀವಿತವು ಆಯಾ ಪ್ರಾಣಿಯ ವಿಶಿಷ್ಟ ವೈಯಕ್ತಿಕ ಸ್ವರೂಪದ್ದೇ ಇದ್ದೀತು. ಆದರೆ, ಜೀವನವು ಕೇವಲ ವೈಯಕ್ತಿಕವಲ್ಲ! ಮನುಜ=ಮಾನವ ಕೇವಲ ಒಂದು ವ್ಯಕ್ತಿಯಲ್ಲ: ವಿಶಿಷ್ಟದ ಅಭಿಮಾನಿ. ಕೇವಲ ವ್ಯಕ್ತಿಯನ್ನು ನರ ಎಂಬ ಸಂಕೇತದಿಂದ ಸೂಚಿಸಲಾಗುತ್ತಿರುವಲ್ಲಿ ಔಚಿತ್ಯವಿದೆ. ಮನು-ಜತ್ವ ಕೇವಲ ನರ-ವ್ಯಕ್ತಿ ಆಗಿಲ್ಲ.

ಮನು-ಜನ ಮನುಜತ್ವವು, ಸಮಾಜ-ಸಮಷ್ಟಿಯ ಸಂದರ್ಭದಿಂದ ಪೋಷಣೆ ಪಡೆಯುತ್ತದೆ; ವಿಕಸಿತವಾಗುತ್ತದೆ. ಈ ಅಮೂರ್ತ ಸಮಾಜ-ಸಮಷ್ಟಿಯು, ಜೀವನ-ಪಾತಳಿಯು ಅಸ್ತಿತ್ವಕ್ಕೆ ಆಧಾರಭೂತವಿದೆ. ಸಮಾಜ ಮತ್ತು ಜೀವನ ಇವೆರಡರೊಳಗಿನ ಅನ್ಯೋನ್ಯವನ್ನು ತಪ್ಪಿಸಲು ಬೇರ್ಪಡಿಸಲು ಶಕ್ಯವಿಲ್ಲ. ಆದುದರಿಂದ, ಮಹಾಭಾರತ ದಿವ್ಯಕಥೆಯ (Myth) ಇಂದ್ರ, ಹಾಗೂ ತಕ್ಷಕ-ನಾಗ ಇವೆರಡೂ ಪಾತ್ರಗಳು ಸಮಾನ ಪಾತಳಿಯ ಮೇಲೆ ಇರಲು ಶಕ್ಯವಿಲ್ಲ. ನಾಗ-ತಕ್ಷಕ ಇದು ಮೃತ್ಯುತತ್ತ್ವದ ಜೀವಿತದ ಪ್ರತೀಕ. ಇದೇ ಮೇರೆಗೆ ಇಂದ್ರನು ಸಮಷ್ಟಿ ಜೀವನದ ಪ್ರತೀಕವಾಗಿದ್ದಾನೆ. ಸ್ಥೂಲ (ದೇಹ) ಹಾಗೂ ಕಾಲ (ಪ್ರಾಣ-ಚೇತಸ) ಈ ವಿಭಾಗದ್ವಯಕ್ಕೆ ಸಂಬದ್ಧ ಜೀವಿತವನ್ನು ಪ್ರತಿನಿಧಿಸುವ ತಕ್ಷಕನ ಪಾತಳಿಯೇ ಬೇರೆ; ಮತ್ತು ವ್ಯಕ್ತಿ - ಪ್ರಾಣಿ -ಸಾಪೇಕ್ಷ ಸ್ಥೂಲ (ದೇಹ) ಮತ್ತು ಕಾಲ (ಪ್ರಾಣ ಚೇತಸ) ಈ ವಿಭಾಗದ್ವಯದ ನಡುವಣ ಟೊಳ್ಳಿನ-ಅಂತರಿಕ್ಷಸ್ಥ ಅವಕಾಶದ ಆಚೆಗಿನ ಆಕಾಶದ ಪಾತಳಿಯ ಜೀವನವನ್ನು ಪ್ರತಿನಿಧಿಸುವ ಈ ಇಂದ್ರನ ಪಾತಳಿಯೇ ಬೇರೆಯಾಗಿದೆ.

ಆದರೆ, ಈ ತಾರತಮ್ಯವನ್ನು, ಮಹಾಭಾರತಕಾರನೆಂಬ ವ್ಯಾಸದೇವರು ಅರಿತಿರಲಾರನೆಂದು ಬಗೆಯಲು ಆಗುವುದಿಲ್ಲ! ಈ ಭೇದವನ್ನು ಅರಿತೂ ಜೀವನವನ್ನು ಜೀವಿತದ ಮಟ್ಟಕ್ಕೆ ತಂದು ನಿಲ್ಲಿಸುವ ತಂತ್ರವೇ, ಈ ಸರ್ಪಯಾಗದ ಕಥೆಯ 'ಇಂದ್ರಾಯ ತಕ್ಷಕಾಯ ಸ್ವಾಹಾ' ಎಂಬ ಈ ಹಂಚಿಕೆಯಲ್ಲಿ ಒಳಗೊಂಡಿದೆ. ಈ ಅಂಶವನ್ನು ನಿರ್ದಿಷ್ಟ ಪಡಿಸುವ ಇನ್ನೂ ಹಲವು ಬೇರೆ ಪ್ರಮಾಣಗಳೂ ಉಂಟು. ಉದಾ : ಶಿಶ್ನೋ ದೇವಾಃ ಪಂಥದ ಶತ್ರು ಇಂದ್ರನು, ಇಂದ್ರಿಯಗಳ ಪಾತಳಿಯವೆನಿಸಲು ಶಕ್ಯವಿಲ್ಲ. ಸವಿತೃ : ಸೂರ್ಯನ ಪರ್ಯಾಯ ಎಂದು ವೇದವೇ ಹೇಳುವ ಇಂದ್ರನು ಜೀವಿತದ ಪಾತಳಿಯ ಆಚೆಗಿನ ಜೀವನದ ಪ್ರಕಾಶತತ್ತ್ವದ ಪ್ರತಿನಿಧಿ ಆಗುತ್ತಿದ್ದಾನೆ. ಈ ಜೀವನದ ಪಾತಳಿಯು, ಮನುಜನೊಡನೆ ಪ್ರಾದುರ್ಭವಿಸಿದೆ. ಅಥವಾ ಜೀವನದ ಪಾತಳಿ-ಎಂದರೆ ಪ್ರಜ್ಞೆ-ಉಪಪ್ರಜ್ಞೆಯ ಅಂಗವಾದ ಮನಸ್‌ತತ್ತ್ವದ ಉದಯನೊಡನೆ ಮನು-ಜನ ಈ ಜೀವನದ ಪಾತಳಿಯು ಕಾಣಿಸಿಕೊಂಡಿದೆ.

ಸಾಹಿತ್ಯ (ಕಲೆ) ಮತ್ತು ಸಂಸ್ಕೃತಿ (ಧರ್ಮ)

ಇವು ಪ್ರಜ್ಞೆ-ಉಪಪ್ರಜ್ಞೆಯ ಅಂಗವಾದ ಮನಸ್ಸಿನ ಸಾಹಚರ್ಯದ ಜೀವನ ಪಾತಳಿಯ ಮೇಲಣ ಪ್ರಚೋದನೆಯಿಂದಾಗಿ ಆಕಾರ ಪಡೆದಿದೆ, ಪಡೆಯುತ್ತಿವೆ. ಆದರೆ, ವಸಿಷ್ಠ, ವ್ಯಾಸ, ವಾಲ್ಮೀಕಿ ಪ್ರಭೃತಿ ಯತಿ-ಮುನಿ ಪಂಥೀಯ ನೇತಾರರ ಮಂತ್ರ, ತಂತ್ರ, ಮಾಟಗಳ ಪ್ರಭಾವದಲ್ಲಿ, ಈ ಮಾನವಜೀವನವು ಜೀವಿತದ ಪಾತಳಿಯ ಮೇಲೆ ಬಂದಿರುವುದು ನಿಜವಿದ್ದಲ್ಲಿ, ನಮ್ಮ ಈ ಸಾಹಿತ್ಯ ಹಾಗೂ ಸಂಸ್ಕೃತಿಯ ಆಕೃತಿರೂಪವು ಜೀವಿತ ಪಾತಳಿಗೆ ಸುಸಂಗತವಾಗಿ ಮಾರ್ಪಟ್ಟಿದೆ, ಎಂದು ಸಪ್ರಮಾಣವಾಗಿ ಸಿದ್ಧವಾಗಲಿಕ್ಕೆ ಬೇಕು.

ಸಾಹಿತ್ಯ ಮತ್ತು ಸಂಸ್ಕೃತಿಗೆ ಆಯಾ ಜನ ಸಮಾಜದ ಭಾಷೆಯೇ ಆಧಾರ. ಭಾಷೆಯ ಮಾಧ್ಯಮವಿಲ್ಲದ ಸಾಹಿತ್ಯವಾಗಲಿ ಸಂಸ್ಕೃತಿಯಾಗಲಿ ದೊರೆಯಲಾರದು. ಭಾಷೆಯ ಆಕೃತಿ ಹಾಗೂ ಸಾಹಿತ್ಯದ ಆಕೃತಿ ಇವೆರಡರಲ್ಲಿ ಅನ್ಯೋನ್ಯವು ಅಭಿಪ್ರೇತವಿದೆ. ಇದೇ ಮೇರೆಗೆ ಸಂಸ್ಕೃತಿಯ ಆಕೃತಿಯು ಅದಕ್ಕೆ ಆಧಾರಭೂತ ಭಾಷೆಯ ಆಕೃತಿಯಿಂದ ಭಿನ್ನವಿರಲಾರದು, ಮೊತ್ತಮೊದಲಲ್ಲಿ, ಮಾನವ ಭಾಷೆಯು - ಜೀವನದ - ಪ್ರಕಾಶತತ್ತ್ವದ-ಪಾತಳಿಯು ಮೇಲಣ ಪ್ರಚೋದನೆಯಿಂದಲೇ ಆಕಾರ ಪಡೆಯುತ್ತದೆ, ಎಂಬ ವಿಶ್ವನಿಯಮ ನಿಜವಿದ್ದರೂ. ಜೀವನದ ಪಾತಳಿಯ ಮೇಲಣ ಭಾಷೆಯು ಜೀವಿತದ ಪಾತಳಿಯ ಮೇಲೆ ಬಂದಲ್ಲಿ ಈ ಭಾಷೆಯ ಮೂಲ ಆಕೃತಿ ಸ್ವರೂಪವು, ಜೀವಿತದ ಪಾತಳಿಗೆ ಸುಸಂಗತವಾಗುವಂತೆ ಮಾರ್ಪಡುವುದನ್ನು ತಪ್ಪಿಸಲು ಯಾರಿಂದಲೂ ಶಕ್ಯವಿಲ್ಲ. ಏಕೆಂದರೆ ಭಾಷೆ ಮತ್ತು ಸಾಹಿತ್ಯ ಹಾಗೂ ಭಾಷೆ ಮತ್ತು ಸಂಸ್ಕೃತಿ ಇವುಗಳಲ್ಲಿ ಅನ್ಯೋನ್ಯವಿರುತ್ತದೆ. ಇವು ಮಾನವನ ಅಂತಸ್ಥ ಪ್ರಚೋದನೆಯಿಂದ ಆಕಾರ ಪಡೆಯುತ್ತವೆ.

ಆದರೆ, ಇಲ್ಲಿ ಒಂದು ಸಮಸ್ಯೆ ತಲೆಯೆತ್ತುತ್ತಿದೆ. ಜೀವನದ ಪಾತಳಿಯ ಮೇಲಣ ಪ್ರಚೋದನೆಯಿಂದ ಆಕಾರ ಪಡೆವ ಭಾಷೆಯ ಲಕ್ಷಣವೇನು? ಮತ್ತು ಜೀವಿತದ ಪಾತಳಿಯ ಮೇಲಣ ಪ್ರಚೋದನೆಯ ಮೂಲಕ

ಆಕಾರ ಪಡೆವ ಭಾಷೆಯ ಲಕ್ಷಣವೇನು? ಇವೆರಡೂ ಅಭಿವ್ಯಕ್ತಿಗಳನ್ನು ನಿಯಂತ್ರಿಸುವ ಏನೊಂದು ಬಗೆಯ ವಿಶ್ವನಿಯಮವು ಉಂಟೇ? ಜೀವನವನ್ನು ನಿಯಂತ್ರಿಸುವ ಒಂದು ವಿಶ್ವನಿಯಮವು ಉಂಟೇ ಉಂಟು. ಆದರೆ ಈ ವಿಶ್ವನಿಯಮವನ್ನು ದುರ್ಲಕ್ಷಿಸಲಾಗುತ್ತಿದೆ, ಮರೆತು ಬಿಡಲಾಗಿದೆ. ಮಾನವರಿಂದ ಕಲ್ಪಿತ ನಿಯಮಗಳನ್ನು ಉಲ್ಲಂಘಿಸಬಹುದು. ಆದರೆ, ಈ ವಿಶ್ವಸ್ಥ ನೈಸರ್ಗಿಕ ನಿಯಮಗಳನ್ನು ಮೀರಿದ್ದಲ್ಲಿ, ಇದರ ದುಷ್ಪರಿಣಾಮಗಳನ್ನು ತಪ್ಪಿಸಿಕೊಳ್ಳಲು ಯಾರಿಂದಲೂ ಶಕ್ಯವಿಲ್ಲ. ಸ್ವಯಂವೇದ್ಯ-ಸ್ವೋಪಜ್ಞ ಜೀವನದ ಪಾತಳಿಯ ಪ್ರಚೋದನೆಯಿಂದ ಆಕಾರ ಪಡೆವ ಭಾಷೆಯ ಆಕೃತಿ ಸ್ವರೂಪವು, ನಿಶ್ಚಿತ ಲಕ್ಷಣಗಳುಳ್ಳದ್ದು ಆಗಿರಬೇಕಷ್ಟೇ?

ಜೀವನದ ಪಾತಳಿಯ ಮೇಲಣ ಉಪ-ಜ್ಞ-ಪ್ರಜ್ಞೆಯು ಪ್ರೇರಿಸುವ ಆಚಾರ ವಿಚಾರಗಳಲ್ಲಿ ಅಂತಃಸಂಗತಿಯು ಅಭಿಪ್ರೇತವಿರುತ್ತದೆ. "ಉಪದೇಶೇನ ವಿನಾ ಜ್ಞಾತಂ, ಉಪಜ್ಞಂ" ಎಂದು ಪುರಾತನರು ತಮ್ಮ ಜೀವಾನುಭವವನ್ನು ನಮೂದಿಸಿ ಇಟ್ಟಿದ್ದಾರೆ. ಉಪಜ್ಞೆ ಇದನ್ನು ಆಧುನಿಕ ಪಾಶ್ಚಾತ್ಯ ಪರಿಭಾಷೆಯಲ್ಲಿ instinct or intuition ಸಹ-ಜಗ್ರಹಣ ಶಕ್ತಿ: ವೇದಶಕ್ತಿ ಎಂದು ಹೇಳಬಹುದಾಗಿದೆ. ಈ ಮಾನವ ಭಾಷೆಯ ತಳಪಾಯದಲ್ಲಿ ಭಾವಾತ್ಮಕ ಅಭಿಜಾತ. ಜೀವನಾನುಭವದ ಅರ್ಥ: ವಿಚಾರಗಳ ಹಾಸು ಇರುತ್ತದೆ. ಅರ್ಥಃ ವಿಚಾರಗಳ ಈ ಸ್ವರದಲ್ಲಿ ಅಂತಃಸಂಗತಿಯು ಒಳಗೊಂಡಿರುತ್ತದೆ. ಇದೇ ಮೇರೆಗೆ ಇದಕ್ಕೆ ಪ್ರತಿಯಾಗಿ ಅಂತರ್ವಿಸಂಗತಿಯ ಕೃತಕಭಾಷೆ ಇದು ಪ್ರಾಣಪಾತಳಿಯ ಜೀವಿತದ ಪ್ರಚೋದನೆಯದೇ ಆಗಿದೆ. ಅಂತರ್‌ವಿಸಂಗತ, ಆದಕಾರಣ, ಅಭಾವಾತ್ಮಕ ಪ್ರೇರಣೆಯ ಮಾತುಗಳಿಗೂ ಈ ಬಾಳಿನಲ್ಲಿ ಒಂದು ಪರಿಮಿತಿಯಲ್ಲಿ ಅವಕಾಶವು ಉಂಟೇ ಉಂಟು. ಆದರೆ, ಸಮಷ್ಟಿ ಸಂದರ್ಭದ ಅಂತಃಸಂಗತಿಯುಕ್ತ ಸ್ವಯಂವೇದ್ಯ ಭಾವಾತ್ಮಕ ಅಭಿಜಾತ ಅರ್ಥ-ವಿಚಾರದ-ಜೀವನದ ಅಭಿವ್ಯಕ್ತಿ, ಇದು. ಹಗಲು : ಇದಕ್ಕೆ ಜೀವನದಲ್ಲಿ ಅಗ್ರಸ್ಥಾನವಿರಲಿಕ್ಕೆ ಬೇಕು, ಇದು ಜೀವನ ಹಾಸು ಆಯ್ತು. ಇದಕ್ಕೆ ಪ್ರತಿಯಾಗಿ ಬಾಳಿನಲ್ಲಿ ಪ್ರಾಣಪಾತಳಿಯಿಂದ ಪ್ರಚೋದಿತ ಜೀವಿತದ ಅಸ್ತಿತ್ವದ-ಪಾತಳಿಯ ಅಸ್ವಯಂವೇದ್ಯ ಅಂತರ್ ವಿಸಂಗತಿಯ ಪ್ರೇರಣಾ ದ್ವಂದ್ವ. ಇದು ಬಾಳಿನಲ್ಲಿ ಕತ್ತಲು-ಇರುಳೇ ಸರಿ. ಈ ಬಗೆಯ ಅಭಾವಾತ್ಮಕ ಕೃತಕ ಅಭಿವ್ಯಕ್ತಿ ಹೊಕ್ಕು ಇದು ಜೀವಿತದಲ್ಲಿ ಅವಶ್ಯವೇ ಇದೆ ಉಂಟು. ಆದರೆ ಈ ಜೀವಿತದ ಪ್ರಚೋದನೆಯು, ಜೀವನದ ಪ್ರೇರಣೆಗೆ ಸುಸಂಗತವೂ ಪೋಷಕವೂ ಆಗಿ ಇರುವ ಆವಶ್ಯಕತೆ ಇದೆ. ಜೀವನ ಸಂಸ್ಕೃತಿ ಸ್ವರೂಪೀ ಮಹಾವಸ್ತ್ರಪಟವು ಸಿದ್ಧವಾಗಲು ಹಗಲು (ಜೀವನ) ಹಾಸು, ಇರಲೇಬೇಕು. ಇರುಳು (ಜೀವಿತದ ಲೈಂಗಿಕ ಪಾತಳಿಯ) ಹೊಕ್ಕು ಇರುವ ಆವಶ್ಯಕತೆಯೂ ಉಂಟು.

ಜೀವನದ ಪಾತಳಿಯ ಮೇಲಣ ಭಾಷೆಯ ಇನ್ನೊಂದು ವೈಶಿಷ್ಟ್ಯವು ಉಂಟು. ಜೀವನಸ್ಥ ಎಂದರೆ ಬಾಳಿನಲ್ಲಿ ಹುದುಗಿರುವ ಅರ್ಥ-ವಿಚಾರ ಇವು ವೈಯಕ್ತಿಕವಲ್ಲ, ವ್ಯಕ್ತಿಯಿಂದ ನಿರ್ಮಿತವೂ ಅಲ್ಲ. ಈ ಅರ್ಥ-ವಿಚಾರ ಸನಾತನ : ಎಂದಿನಿಂದಲೇ ಉಂಟು. ಪುರಾತನ ಪರಂಪರೆಯಲ್ಲಿ ಈ ಉಂಟು ಇದು ಅಭೇದ್ದಾತ್ (immanent) ಆಗಿದೆ ಎಂದು ಹೇಳಿದ್ದಾರೆ. ಅಭಿಜಾತ ಅರ್ಥ-ವಿಚಾರ ಇದನ್ನು ಸ್ವಯಂ ಪ್ರಕಾಶಯುಕ್ತತತ್ತ್ವ ಎಂದು ಬಗೆಯಲಾಗುತ್ತಿರುವಲ್ಲಿ ಔಚಿತ್ಯವಿದೆ. ಈ ಜೀವನದ ಅರ್ಥವನ್ನು ಮೊತ್ತಮೊದಲಲ್ಲಿ ಮನುಜನು ಗ್ರಹಿಸಿಕೊಂಡದ್ದು ಹೇಗೆ ಮತ್ತೆ?

ಉಪಜ್ಞೆ-ಪ್ರಜ್ಞೆಯ ಈ ಕಣ್ಣನ್ನು ಪುರಾತನರು ಪ್ರಜ್ಞಾನೇತ್ರ ಎಂದು ಹೆಸರಿಸಿದ್ದಾರೆ. ಪ್ರಾಣ ಚೇತಸ ಪಾತಳಿಯ ಈ ಬುದ್ಧಿ ಎಂಬ ಇಂದ್ರಿಯವು ಪ್ರಭಾವಶಾಲಿಯಾಗತೊಡಗುವುದರ ಸಂಗಡ ಪ್ರಜ್ಞಾನೇತ್ರವು ಮಂದವಾಗುತ್ತದೆ. ಈಗ ಇದು ಇಂಗಿಹೋದ ಅವಸ್ಥೆಗೆ ಬಂದಿದ್ದಾಗಿದೆ. ಈ ಮಾನವನೆಂಬ ಪ್ರಾಣಿ ಈ ಮನು-ಜನು ಪ್ರಾಣೋಪಾಸಕನೇ ಆಗಿದ್ದಾನೆ. ಪ್ರಣವೋಪಾಸಕನು ಆಗಿ, ಜೀವನದ ಪಾತಳಿಯಿಂದ ಜೀವಿತ ಪಾತಳಿಯ ಮೇಲೆ ಬಂದು ನಿಂತಿದ್ದಾನೆ! ಪ್ರಜ್ಞಾನೇತ್ರ ತಿರಸ್ಕರಿಸಿ ದಿವ್ಯಚಕ್ಷು ದಿವ್ಯ ಅಕ್ಷ ಉಪಾಸನಾರತನಾಗಿದ್ದಾನೆ! ಗೀತೆಯಲ್ಲಿ ಭಗವಂತನು 'ದಿವ್ಯಂ ದದಾಮಿ ತೇ ಚಕ್ಷು' ಎಂದು ಹೇಳಿರುವಲ್ಲಿ ಈ ದಿವ್ಯಚಕ್ಷು ಸಿದ್ಧಿಯ ಅಮಿಷವೇ ಅಭಿಪ್ರೇತವಿದೆ. ಇಂದು ಅವರವರ ಅರ್ಥ, ಅವರವರ ಪಾಲಿನ ಸತ್ಯ ಆದದ್ದೇಕೆ? ಪ್ರತಿಯೊಬ್ಬರೂ ತಮ್ಮ

ದಿವ್ಯಚಕ್ಷುಸಿದ್ಧಿಗೆ ಬೆಂಬೆತ್ತಿದ್ದಾರೆ. ಸಮಷ್ಟಿ ಜೀವನದ ಪ್ರಚೋದನೆಯು, ಮನು-ಜರ - ಪ್ರಜ್ಞಾನೇತ್ರವು, ಮಾನವರ ಮೂಲಭಾಷೆಯನ್ನು ರೂಪಿಸಿದೆ. ಯತ್ರಧೀರಾಃ ಮನಸಾ ವಾಚಂ ಅಕ್ರತ, ಏಷಾಂ, ವಾಚಿ ಭದ್ರಾ ಲಕ್ಷ್ಮೀ ನಿಹಿತಾ" ಎಂಬ ಈ ವಾಕ್ಕು ಜೀವನದ ಪಾತಳಿಯ ಅಭಾವಿತ ಸಮಷ್ಟಿರೂಪ ಧೀರರ ಮನಸ್ಸಿನ ಪ್ರಚೋದನೆಯಿಂದ ಆಕಾರ ಪಡೆದಿದೆ. ಹೀಗೆ ಆಕಾರ ಪಡೆಯುತ್ತಿದ್ದರೆ ಈ ಮನು-ಜ ಮಾನವ ಭಾಷೆಯು ಜೀವಂತ ಉಳಿಯಲಿದೆ.

ವಿಕಾಸತತ್ತ್ವದ ಪ್ರಕ್ರಿಯೆಯಲ್ಲಿ ಪ್ರಾದುರ್ಭವಿಸಿರುವ ಈ ಮಾನವರ ಮನಸ್ ತತ್ತ್ವವು ಮಾನವ ಜೀವನ-ಸಮಷ್ಟಿಗೆ ಆಧಾರಭೂತವಿದೆ. ಆದುದರಿಂದ, ಮನು-ಜ, ಒಂದು ವ್ಯಕ್ತಿಯಲ್ಲ, ಅತ್ಯಂತ ಪ್ರಾಮಾಣಿಕ ಜಾಗ್ರತ ಪ್ರಜ್ಞೆಯ ಪ್ರಚೋದನೆಯ ಮೂಲಕ ಆಕಾರ ಪಡೆವ ಭಾಷೆಯು, ಒಬ್ಬ ಮನುಜನದು ಆಗುವಾಗಲೂ, ಇದರ ಹಾಸು ಇಡೀ ಜೀವನದ ಪಾತಳಿಗೆ ಸುಸಂಗತವಾಗುತ್ತದೆ! ಆದಕಾರಣ, ಮನು-ಜ-ಮಾನವರ ಭಾಷೆಯಲ್ಲಿ ಜೀವಿತದ ಪಾತಳಿಯ ಅವರವರ ಅರ್ಥಕ್ಕೆ ಪ್ರಾಧಾನ್ಯವಿಲ್ಲ. ಆದರೂ ವಿಶಿಷ್ಟ ಪರಿಮಿತಿಯಲ್ಲಿ ಜೀವಿತದ (ಪ್ರಾಣಲಿಂಗದ) ಪಾತಳಿಯ ಮೇಲಣ ಅಭಿವ್ಯಕ್ತಿಯು ವೈಯಕ್ತಿಕ ಸ್ವರೂಪದ್ದೇ ಇರುವುದು ನಿಜ, ಆದರೆ ಈ ವೈಯಕ್ತಿಕ ಅರ್ಥ-ವಿಚಾರವು ಸಾಮಾಜಿಕ ಪಾತಳಿಯ ಶಿಷ್ಟ-ಮಾನ್ಯ ಭಾಷೆಯ ಮರ್ಯಾದೆಯೊಳಗೇ ಇರಬಲ್ಲುದು. ಆದರೆ, ಈ ಮರ್ಯಾದೆ ಮೀರಿ ವೈಯಕ್ತಿಕ ಪಾತಳಿಯ ಭಾಷೆಯೇ ಸಮಾಜ : ಸಮಷ್ಟಿ ಪಾತಳಿಯ ಶಿಷ್ಟ-ಮಾನ್ಯ ಮಾತು ಆಗುವಾಗ ಈ ಭಾಷೆಯ ಆಕೃತಿ ಸ್ವರೂಪವು ಮೊದಲಿನ ಸಮಷ್ಟಿ ಪಾತಳಿಯ ಜೀವನದಿಂದ ಪ್ರೇರಿತ ಭಾಷೆಯ ಆಕೃತಿಗಿಂತ ತೀರ ಬೇರೆಯಾಗದೆ ಇರಲು ಶಕ್ಯವಿಲ್ಲ. ಏಕೆಂದರೆ ಪ್ರಜ್ಞೆ-ಉಪಜ್ಞೆಯ ಅಂಗವಾದ ಮನಸ್ಸಿನ ಶಕ್ತಿಯ ಮನುಜನ ಅಭಿವ್ಯಕ್ತಿಯನ್ನು ಪ್ರಚೋದಿಸುವ ಸಮಷ್ಟಿ ಜೀವನದ ಪಾತಳಿಗಿಂತಲೂ, ಈ ನರನ ಪ್ರಾಣಲಿಂಗದಿಂದ ಪ್ರೇರಿತವಾದ ಅಭಿವ್ಯಕ್ತಿಯು ನರನ ಜೀವಿತದ ಪಾತಳಿಯು ತೀರ ಬೇರೆ ಆಗುವ ಅನಿವಾರ್ಯತೆಯನ್ನು ಈ ವಿಶ್ವ-ನಿಯಮವನ್ನು ಮೀರಲು ಯಾವ ಭಗವಂತನಿಗೂ ಶಕ್ಯವಿಲ್ಲ!

ಈ ವಿಶ್ವನಿಯಮವನ್ನು ಇನ್ನೊಂದು ಬಗೆಯಿಂದಲೂ ಗ್ರಹಿಸಿಕೊಳ್ಳಲು ಶಕ್ಯವಿದೆ. ಈ ಪ್ರಪಂಚವನ್ನು ಕಾಲ ಶಕ್ತಿಯು ನಿಯಂತ್ರಿಸುತ್ತಿದೆ. ಈ ಕಾಲ ಶಕ್ತಿಯು ಉಭಯ ಸ್ವರೂಪದ್ದು ಉಂಟು.

೧. ನಿನ್ನೆ-ಇಂದು ಮತ್ತು ನಾಳೆ ಎಂಬೀ ಬಗೆಯ ವಿಭಾಗತ್ರಯದ ಪ್ರಕಾಶತತ್ತ್ವದ ಕಾಲಶಕ್ತಿ : ಇದರ ಪ್ರಭಾವದಲ್ಲಿಯೇ ನರ(ಳ) ಪ್ರಾಣಿಗೆ ಮನುಜತ್ವವು ಲಭಿಸಿದ್ದುಂಟು.

೨. ಈ ಪ್ರಪಂಚದಲ್ಲಿ ಇನ್ನೂ ಒಂದು ಬಗೆಯ ಕಾಲಶಕ್ತಿ ಇದೆ. ಇದು ಪ್ರಕಾಶ ರೂಪ ಕಾಲ ತತ್ತ್ವವಲ್ಲ! ಆದರೂ ಇದನ್ನು ಕಾಲ ಎಂದೇ ಕರೆವ ವಾಡಿಕೆಯಿಂದಾಗಿ ವೈಚಾರಿಕ ಗೊಂದಲಕ್ಕೆ-ಸಂದಿಗ್ಧತೆಗೆ ಇಂಬು ದೊರೆತಿದೆ!

ಇದು ಸ್ಥಲ (ಭೂಮಿ-ನೆಲ) ದೊಡನೆ ಬದ್ಧ ಕಾಲಶಕ್ತಿ! ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಈ ವಿಭಾಗದ್ವಯದ ಈ ಕಾಲಗತಿಯು ನಿತ್ಯ ವೃತ್ತಾಕೃತಿಯೇ (೦) ಇರಬಲ್ಲುದು! ಮತ್ತು ಸ್ಥಲ (ನೆಲ-ದೇಹ) ದೊಡನೆ ಬದ್ಧ ಈ ಕಾಲವು ನೆಳಲಿನಂತೆ ಕರಿಯ ಕೃಷ್ಣ ವರ್ಣದ್ದೇ ಇದ್ದೀತು. ಆದಕಾರಣ, ಈ ದೇಹ ಮತ್ತು ಕಾಲ (ಪ್ರಾಣಲಿಂಗ ಚೇತಸ) ರೂಪ ವಿಭಾಗದ್ವಯದ ಕ್ರಿಯೆ-ಪ್ರತಿಕ್ರಿಯೆಗಳ ಮೂಲಕ ಉಂಟಾಗುವ ವೃತ್ತಾಕೃತಿಯ (೦) ಕರಿಯದು, ಕೃಷ್ಣವರ್ಣದ್ದಾಗಿದೆ. ಇದುವೆ ಶ್ರೀ ಚಕ್ರ: ದಿವ್ಯಚಕ್ಷು: ಉಪಾಸನಾಯಂತ್ರ!

ಈ ಕಾಲ-ಗತಿಯನ್ನು (ಸಂ) ಭವಚಕ್ರ [೦] ಎಂದು ಹೆಸರಿಸಿದ್ದಾರೆ, ಪುರಾತನರು! ಈ ಕರಿಯ ಕೃಷ್ಣ ವಿವರವನ್ನು ಲೋಕ ಜನನಿ-ಕಾಲಿ! ಕರಿಮಾಯಿ ಎಂದು ಹೆಸರಿಸಲಾಗಿರುವಲ್ಲಿ ಆ ಪುರಾತನರ ಪ್ರಜ್ಞಾನೇತ್ರದ ಅಪೂರ್ವ ಸಾಮರ್ಥ್ಯವು ಅರಿಕೆಗೆ ಬರುತ್ತಿದೆ! ಈ (ಸಂ) ಭವ ಚಕ್ರವನ್ನು ಕಾಲ (ಮೃತ್ಯು) ಚಕ್ರ ಎಂದೂ ಹೇಳುವ ವಾಡಿಕೆಯಿಂದ ತಾನು ಲೋಕಕ್ಷಯ ಕೃತ್ ಪ್ರವೃದ್ಧ ಕಾಲಶಕ್ತಿ ಎಂಬ ಈ ಭಗವಂತನನ್ನು ಕೃಷ್ಣ (ಕರಿಯ)

ಎಂದಿರುವಲ್ಲಿ ಔಚಿತ್ಯವು ಇಲ್ಲದಿಲ್ಲ!* ಆದರೆ ಈ ಗಣ್ಡು- ದೇವರ ಪರಿಕಲ್ಪನೆಯಲ್ಲಿ (Invention) ಒಂದು ಮೋಸವು ಒಳಗೊಂಡಿದೆ! ಇದು ನಿಜವಿದ್ದರೆ ಈ ಮೋಸದ ಸ್ವರೂಪವೇನು? ಎಂಬ ಪ್ರಶ್ನೆ ಏಳುತ್ತದೆ. ಈ ಮೋಸದ ಪರಿಕಲ್ಪನೆಯು ಯಾತಕ್ಕಾಗಿ? ಈ ಮೋಸದ ಸ್ವರೂಪವೇನು? ಭಾರತೀಯ ಸಂಸ್ಕೃತಿಯ ಸಂದರ್ಭದಲ್ಲಿ ಸಂಭವಿಸಿರುವ ಈ ಮೋಸ, ಮಾಟ, ಗ್ರೀಕ್ ಪುರಾತನ ಸಂಸ್ಕೃತಿಯಲ್ಲಿಯೂ ಉಂಟು! ಭಾರತೀಯ ಸಂಸ್ಕೃತಿಯಲ್ಲಿ ಈ ಆದಿತ್ಯ ಸಂಪ್ರದಾಯದ ಪ್ರಸ್ಥಾಪಕನೆಂದು ದಕ್ಷಿಣ ಕಪರ್ದಃ ವಸಿಷ್ಠನನ್ನು ಹೆಸರಿಸಬಹುದಾಗಿದೆ. ನರಃ ನಾರಾಯಣ ಸಂಪ್ರದಾಯದ ಪುನಃಸ್ಥಾಪನೆಗಾಗಿ ರಚಿತ ಮಹಾಭಾರತದ ವ್ಯಾಸನನ್ನು ಈ ಸಂದರ್ಭದಲ್ಲಿ ಸ್ಮರಿಸಿ ಕೊಳ್ಳಬೇಕಾಗುತ್ತದೆ, ಗ್ರೀಕ್ ಪುರಾತನರಲ್ಲಿ ಒರ್ಫಿಕ್‌ಪಂಥೀಯ ಪೈಥಾಗೊರಸನು ಈ ಪಂಥದ ಪ್ರವರ್ತಕನೆಂದು ಹೇಳಬಹುದಾಗಿದೆ.

ಇವೆಲ್ಲವೂ ಸರಿ. ಆದರೆ, ಭಾರತದಲ್ಲಿ ದಕ್ಷಿಣಕಪರ್ದ ವಸಿಷ್ಠ, ವ್ಯಾಸಾದಿಗಳು, ಮತ್ತು ಗ್ರೀಸಿನಲ್ಲಿ ಒರಫ್ಯುಅಸ್, ಪೈಥ್ಯಾಗೊರಸ್ ಪ್ರಭೃತಿಗಳು, ಕುಮಾರೀಪುತ್ರನೆಂಬ ಅತ್ಯಂತ ಅಭಾವರೂಪೀ ಒಂದು ಗಣ್ಡು ದೇವರ ಮೋಸ ತರುವ ಈ ಪರಿಕಲ್ಪನೆಯ (Invention) ಮೂಲಕ ಸಾಧಿಸಿದ್ದೇನು? ಈ ಸ್ಥಿತ್ಯಂತರದ ಉದ್ದೇಶವು ಭಾರತೀಯ ಸಂದರ್ಭದಲ್ಲಿ ಎದ್ದುಕಾಣುವಂತಿದೆ! ಸೂರ್ಯನನ್ನು ಆದಿ-ತ್ಯ ಚಂದ್ರ ರೂಪಕ್ಕೆ ತಿರುಗಿಸಿದ್ದೇಕೆ? ಸೌರಗತಿಯಿಂದ ನಿನ್ನೆ ಇಂದು ಮತ್ತು ಆಗಾಮೀ ನಾಳೆ, ಎಂಬೀ ಬಗೆಯ ವಿಭಾಗತ್ರಯದ ಪ್ರಕಾಶರೂಪ ಕಾಲಗತಿಯು ಅಸ್ತಿತ್ವಕ್ಕೆ ಬರುತ್ತದೆ. ಮನುಜನ ಪ್ರಾದುರ್ಭಾವದಿಂದ ತೊಡಗಿ! ಪ್ರಜ್ಞೆ ಉಪಜ್ಞೆಯ ಂಗವಾದ ಮನಸ್‌ತತ್ತ್ವವು ಪ್ರಾದುರ್ಭವಿಸುವುದರೊಡನೆ ನರನು ಮನು-ಜತ್ವದ ಹಂತಕ್ಕೆ ಬರುತ್ತಾನೆ. ಇದರಿಂದಾಗಿ, ನಿನ್ನೆ ಇಂದು, ಮತ್ತು ನಾಳೆಗಳ ಸ್ವರೂಪದ ವಿಭಾಗತ್ರಯದ ಪ್ರಕಾಶತತ್ತ್ವದ ಆಧಾರದ ಜೀವನದ ಪಾತಳಿಯ ಮೇಲೆ ಬಾಳದಾರಿಯನ್ನು ಸಾಗುವ ಮನುಜನು, ಜೀವಿತದ (ನರನ) ಪಾತಳಿಯನ್ನು ಕಡೆಗಣಿಸತೊಡಗುವುದುಂಟು! ಪ್ರಜ್ಞೋದಯಕ್ಕೂ ಮುಂಚಿನ ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ) ಪಾತಳಿಯ, ಈ ವಿಭಾಗದ್ವಯದ ಸಂದರ್ಭದ ವೃತ್ತಾಕೃತಿಯ (ಚಾಂದ್ರ) ಜೀವಿತ ಪಾತಳಿಯ ನರ (ನಾರ ಅಯನ) ಪಂಥದ ಪುನಃಸ್ಥಾಪನೆಯು, ವ್ಯಾಸನ ಮಹಾಭಾರತದ ಉದ್ದೇಶವಿದ್ದುದು ಸರ್ವಮಾನ್ಯವಿದೆ.

ಜೀವನದಿಂದ ಜೀವಿತದ ಪಾತಳಿಗೆ ಬಂದ ಈ ಬಾಳಬಗೆಯಲ್ಲಿ ಪ್ರಾಣಲಿಂಗದ ಪ್ರಚೋದನೆಗೆ ಪ್ರಾಶಸ್ತ್ಯವಿರುವುದರಿಂದ ವ್ಯಕ್ತಿವಾದೀ ನರಸಂಪ್ರದಾಯಗಳ ಸ್ವಯಂಭೂ ನೂತನ ಮನ್ವಂತರವು ಪ್ರಾರಂಭ ವಾಗಿದ್ದುಂಟು. ಭಾರತೀಯ ವಸಿಷ್ಠ, ವ್ಯಾಸರಂತೆ ಗ್ರೀಕ್ ಪುರಾತನರಲ್ಲಿ ಒರ್‌ಫ್ಯುಅಸ್, ಪೈಥಾಗೊರಾಸ್ ಪ್ರಭೃತಿಗಳು ಈ ಕುಮಾರೀ ಮಾತಾ ಪುತ್ರನ ಉಪಾಸನಾ ಸಂಪ್ರದಾಯ ಪ್ರಾರಂಭಿಸುತ್ತಾರೆ. ಈ ಸಂಪ್ರದಾಯವೇ ಆ ಬಳಿಕ ಕ್ರೈಸ್ತಪಂಥದಲ್ಲಿ ಪರಿಣಮಿಸಿದ್ದುಂಟು. ಕ್ರಿಸ್ತನು ಕುಮಾರೀ (ಮೇರೀ) ಪುತ್ರನೆಂಬ ಈ ಸಾಂಕೇತಿಕತೆಯೇ ಇದಕ್ಕೆ ಪ್ರಮಾಣ.

ಅತ್ಯಂತ ಅಭಾವಾತ್ಮಕ ಕುಮಾರೀ (ಅದಿತಿ) ಪುತ್ರನ-ಪುರುಷನ ಉಪಾಸನಾ ಪದ್ಧತಿಯ ಪ್ರಾರಂಭವಾಗದೆ ಇದ್ದರೆ, ಪ್ರಾಣೋಪಾಸಕರ ಈ ಪರಂಪರೆಗಳು, ನರ ಸಂಪ್ರದಾಯಗಳು ತಲೆದೋರಲು ಶಕ್ಯವೇ ಇದ್ದಿಲ್ಲ. ಅವರವರ ಅರ್ಥವು ಅವರವರ ಪಾಲಿನ ಸತ್ಯ - ಆಧುನಿಕ ಸರ್ವಧರ್ಮ ಸಮ್ಮೇಲನಗಳು- ಈ ಪರಂಪರೆ, ಇಂದಿನ ವೇದದೊಳಗಿನ ಆದಿತ್ಯ (ಮಾರ್ತಾಂಡ) ಸಂಪ್ರದಾಯದಿಂದಾಗಿ ಅಸ್ತಿತ್ವಕ್ಕೆ ಬರಲು, ಅಸ್ತಿತ್ವದಲ್ಲಿ ಇರಲು

---

* ಕೃಷ್ಣ ಎಂಬ ಪದವು ಮೊದಲು ಬಳಕೆಯಾಗುವುದು ಋಗ್ವೇದದಲ್ಲ. ಆನಂತರ ಯಜುರ್ವೇದದ ಒಂದು ಭಾಗಕ್ಕೆ 'ಕೃಷ್ಣಯಜುರ್ವೇದ' ಎಂಬ ಹೆಸರುಂಟು. ಕೃಷ್ಣ ಎಂದರೆ ಕತ್ತಲು ಎಂಬ ಅರ್ಥ ಮೂಲ ಋಗ್ವೇದದಲ್ಲೇ ಉಂಟು. ಅದು ಸ್ಪಷ್ಟವಾಗಿಯೂ ಇದೆ. ಮುಂದೆ ಲೌಕಿಕ ಸಂಸ್ಕೃತದಲ್ಲಿಯೂ ಭಾಗವತಾದಿ ಗ್ರಂಥಗಳಲ್ಲಿಯೂ ಬಳಕೆಯಾದ ಕೃಷ್ಣ ಬೇರೆಯಲ್ಲ. ಕತ್ತಲಿನ ಅಭಾವಸೂಚಕ ಪ್ರತಿಮೆಯು ನಾನಾ ಬಗೆಯ ಕಥೆಗಳಲ್ಲಿ ರೂಪಣ ಪಡೆಯುತ್ತದೆ. ಅಂಥ ಬಗೆಗಳಲ್ಲಿ ಕೃಷ್ಣ ಪ್ರತಿಮೆಯೂ ಒಂದು. ಶಂಬಾ ಅವರು ಈ ಸಂಗತಿಯನ್ನು ದಿವ್ಯಕಥೆಗಳ ಸಾಂಕೇತಿಕ ನೆಲೆಯಲ್ಲಿ ನೋಡುತ್ತಾರೆ. (ಸಂ).

ಶಕ್ಯವಾಗಿದೆ! ಇದು ಹಾಗಿರಲಿ, ಅತ್ಯಂತ ಅಭಾವವೇ ಸ್ಥಾಯಿ ಎಂಬ ನಂಬುಗೆಯಿಂದಾಗಿ ಅವರವರ ಅರ್ಥವು ಅವರವರ ಪಾಲಿನ ಸತ್ಯವಾಗಲು ಶಕ್ಯವಾಗಿದೆ.

ಪ್ರಸ್ತುತ ಸಾಹಿತ್ಯ ಸಮ್ಮೇಳನದ ಸಂದರ್ಭದ ಈ ಉಪನ್ಯಾಸಕ್ಕೂ ಆದಿತ್ಯ ಸಂಪ್ರದಾಯಕ್ಕೂ ಸಂಬಂಧವೇನು? ಸರಿ. ಈ ನಿವೇದನೆಯಲ್ಲಿ ಅಂತಃಸಂಗತಿಯು ಇಲ್ಲದೆ ಇಲ್ಲ. ಜೀವಿತ ಮತ್ತು ಜೀವನ ಇವೆರಡರಲ್ಲಿ, ಭೂಮಿ (ಚಂದ್ರ) ಹಾಗೂ ಆಕಾಶ (ಸೂರ್ಯ) ಈ ಪಾತಳಿಗಳಲ್ಲಿ ಇರುವಷ್ಟು, ನೈಸರ್ಗಿಕ ಸ್ವರೂಪದ ಅಂತರವು ಇದೆ. ಆದರು, ಇಂದು ಆದಿತ್ಯ (ಜೀವಿತ) ಮತ್ತು ಸೂರ್ಯ (ಜೀವನ) ಇವೆರಡರಲ್ಲಿ ಇರುವ ಅಂತರದ ಎಚ್ಚರವು ಎಷ್ಟು ಜನಕ್ಕೆ ಇದೆ? ಆದಿತ್ಯವಾರಕ್ಕೆ ಭಾನು (ರವಿ) ವಾರ ಎಂದು ಹೇಳುವಾಗ ಪ್ರಾಜ್ಞ, ವಿದ್ವಾಂಸರೆಂಬುವರ ನಾಲಗೆಯೂ ತೊದಲುವುದಿಲ್ಲ! ಗೀತೆಯೊಳಗಿನ 'ಆದಿತ್ಯಾನಾಂ ಅಹಂ ವಿಷ್ಣುಃ' ಎಂಬ, ಭಗವಾನ್ ಕೃಷ್ಣನ ಉಕ್ತಿಯನ್ನು ಡಾ. ಸರ್ವೆಪಲ್ಲಿ ರಾಧಾಕೃಷ್ಣನ್, ಆಚಾರ್ಯ ವಿನೋಬಾ ಪ್ರಭೃತಿ ಮೇಧಾವಿಗಳು ಭಾಷಾಂತರಿಸಿರುವುದನ್ನು ಓದಿ ನೋಡಿ ಖಾತ್ರಿ ಮಾಡಿಕೊಳ್ಳಿ. ಆದಿತ್ಯ ಪದಕ್ಕೆ ಸೂರ್ಯ (Sun) ಎಂಬ ಅರ್ಥವನ್ನೇ ಅಲ್ಲಿ ಕಾಣಬಹುದು. ಆದರೆ, ಈ ವಿಷ್ಣುಕೃಷ್ಣರೂಪ ಆದಿತ್ಯನನ್ನು ಸೂರ್ಯ ಎಂಬಲ್ಲಿ ಅನರ್ಥವು ಅಡಗಿದೆ! ಎಂಬ ಅರಿವು ಇರುವವರನ್ನು ಇಂದು ಹುಡುಕಿದರೂ ಸಿಕ್ಕುವುದು ಕಷ್ಟವಿದೆ! ಭಾರತೀಯ ಧರ್ಮ : ಸಂಸ್ಕೃತಿಯ ಅಧಃಪಾತದ ಆರಂಭವು ಈ ಆದಿತ್ಯ ಸಂಪ್ರದಾಯದ ಹುಟ್ಟಿನಲ್ಲಿದೆ. ಈ ಅಂಶವು ಸದ್ಯಕ್ಕೆ ಹಾಗೆ ಇರಲಿ. ಆದಿತ್ಯರೂಪೀ ವಿಷ್ಣುವು ನೀಲಾ(ರಾಂ)ಗನು: ಕೃಷ್ಣನೋ ಕರಿಯನೊ! ಆದುದರಿಂದ, ಆದಿತ್ಯನು ನಾನು ಎಂಬ ವಿಷ್ಣು, ಕೃಷ್ಣರನ್ನು ಸೂರ್ಯಸ್ವರೂಪರು ಎಂದು ಬಗೆದರೆ, ಈ ಸೂರ್ಯನು ನೀಲಕೃಷ್ಣವರ್ಣದ ಸೂರ್ಯನಾಗುತ್ತಿದ್ದಾನೆ! ಹೀಗೆ ಮೋಸ ತರುತ್ತಿರುವ ಗೀತೆಯ ಈ ಮಾಟ-ಭಾನಾಮತೀ ಕೃತ್ಯ ಯಾತಕ್ಕಾಗಿ? ಸ್ಥಳ(ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಈ ವಿಭಾಗದ್ವಯದ ಆಚೆಗಿನ, ಆಕಾಶತತ್ತ್ವದ ಪಾತಳಿ ಜೀವನ (ಸೂರ್ಯ), ಇದು ಆದಿತ್ಯ (ಚಂದ್ರ) ರೂಪಕ್ಕೆ ಬರುವಾಗ ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಈ ವಿಭಾಗದ್ವಯದ : ಅಂತರಿಕ್ಷಸ್ಥ ಆಕಾಶದ ಟೊಳ್ಳಿನಲ್ಲಿ[೦] ಭೂಮಿಯ ಮೇಲಿನ ಪ್ರಾಣಲಿಂಗ ಪಾತಳಿಯ ಜೀವಿತವೂ ಆ ಆಕಾರದ್ದು ಆಗುತ್ತದೆ ಆಗಿದೆ!

ಇಲ್ಲಿ ತಲೆಯೆತ್ತುವ ಪ್ರಶ್ನೆಯು ಹೀಗಿದೆ: ಆದಿತ್ಯರೂಪಿ ಈ ಬಗೆಯ ಪರಿಕಲ್ಪನೆಯನ್ನು ಸೃಷ್ಟಿಸುವ ಹಕ್ಕು-ಅಧಿಕಾರವು-ಪ್ರತಿಯೊಬ್ಬ ಕವಿ, ಕಲಾವಿದ, ಸಾಹಿತ್ಯಿಕನಿಗೂ ಉಂಟಷ್ಟೆ? ಇದು ನಿಜವಿದ್ದರೆ ಈ ಆದಿತ್ಯ ಪಾತ್ರಸೃಷ್ಟಿಯಲ್ಲಿ ಮೋಸ-ಮಾಟ-ಕಣ್ಕಟ್ಟು ಉಂಟು, ಎನ್ನಲು ಕಾರಣವೇನು?

ಮೇಲಣ ಪ್ರಶ್ನೆಗೆ ಪ್ರತಿಪ್ರಶ್ನೆಯೊಂದು ಉಂಟು : ಅಭಿಜಾತಕ್ಕೆ (genuine) ಪ್ರತಿಯಾಗಿ. ಕೃತಕ (authentic) ಪ್ರತಿಮಾಸೃಷ್ಟಿಯ ಆಹ್ವಾನನ್ನು ಸ್ವೀಕರಿಸುವ ಹಕ್ಕು ಕಲಾವಿದರಿಗೂ ಸೈಂಟಿಸ್ಟರಿಗೂ ಉಂಟೇ ಉಂಟು. ಆದರೆ, ಈ ಕೃತಕವು, ನೈಸರ್ಗಿಕ ಜೀವನವನ್ನೇ ಶೂನ್ಯಗೊಳಿಸುವ ಸ್ವರೂಪದ್ದು ಇದ್ದರೂ ಇದೂ ಸ್ವಾಗತಾರ್ಹವೆ? ಅಣು ವಿಸರಣವನ್ನು ಜೀವನ ಪೋಷಕವಾಗುವ ರೀತಿಯಲ್ಲಿ ಬಳಸಲು ಶಕ್ಯವಿರುವಂತೆ, ಜೀವನವನ್ನೇ ಹಾಳುಗೆಡಹುವ ಅಣುಬಾಂಬು, ಟೈಂಬಾಂಬೂ ಸಿದ್ಧವಾಗುತ್ತವೆ. ಆದರೆ, ಇದನ್ನು ಪ್ರೋತ್ಸಾಹಿಸಬೇಕೆ? ಅಥವಾ ಇದು ಆತ್ಮಹನನದ ದಾರಿ ಎಂದು ನಿಷೇಧಿಸುವುದು ತಪ್ಪೇ? ಈಗಲೇ ಜನನದ ಸಂಖ್ಯೆ ಮಿತಿಮೀರಿರುವಾಗ, ಸಂತಾನ ನಿರೋಧದ ಉಪಾಯಗಳನ್ನು ನಡೆಸಿರುವಾಗ ಸೈಂಟಿಸ್ಟರು ಪ್ರಯೋಗ ಶಾಲೆಗಳಲ್ಲಿ ಕೃತಕ ಶಿಶು ನಿರ್ಮಿತಿಯ ದಿಕ್ಕಿನಲ್ಲಿ ಹೊರಟಿರುವುದು ಶ್ಲಾಘ್ಯವೆ?

ನಮ್ಮ ಧರ್ಮ-ಸಂಸ್ಕೃತಿಯ, ಸಾಹಿತ್ಯದ ಸಂದರ್ಭ ನಿಯತಿ ನಿಯಮ ರಹಿತ ನಿರಂಕುಶ ಪ್ರವೃತ್ತಿಯ ಕವಿ ಪ್ರತಿಭೆ, ಅತ್ಯಂತ ಅಭಾವವನ್ನೇ ಸ್ಥಾಯೀ ಎಂದು ನಂಬಿಸಲು ಮಾಡಿರುವ ಮಂತ್ರ, ತಂತ್ರ ಇದೀಗ ಬಯಲಿಗೆ ಬರತೊಡಗಿವೆ. ಉದಾ : ಧರ್ಮದ ಹೆಸರಿನಲ್ಲಿ ಆರಾಧಿಸಲಾಗುತ್ತಿರುವ ಗಣ್-ಡು ದೈವತಗಳೇ ಈ ಮಾತಿಗೆ

ಸಾಕ್ಷಿ, ಇವನ್ನು ಗಣ್-ಡು ದೈವತಗಳು ಎಂದು ಸ್ಥೂಲವಾಗಿ ಹೇಳಿದರೆ ಸಂದಿಗ್ಧತೆಗೆ ಅವಕಾಶವು ದೊರೆಯುತ್ತದೆ. ಭಾರತೀಯ ಪುರಾತನ ಪರಂಪರೆಯ ಸಂದರ್ಭದಲ್ಲಿ, ಇದನ್ನು ಆದಿ-ತ್ಯ (ಮಾರ್ತಾಂಡ) ಪುರುಷ ಇತ್ಯಾದಿ ವಿಶಿಷ್ಟ ನಾಮರೂಪದಿಂದ ಎತ್ತಿ ಹೇಳುವುದೇ ಲೇಸು. ಆದರೆ, ಈ ಆದಿತ್ಯ-ಆದಿತಿ ಪಾತ್ರಗಳ ನಿಜಸ್ವರೂಪ ಗ್ರಹಣಕ್ಕೆ ಸ್ಥಳ ಹಾಗೂ ಕಾಲ ತತ್ತ್ವದ ತಾತ್ತ್ವಿಕ ಭೂಮಿಕೆಯನ್ನು ಸ್ಥೂಲವಾಗಿಯಾದರೂ ಅಲ್ಪ-ಸ್ವಲ್ಪ ಗ್ರಹಿಸಿಕೊಳ್ಳುವ ಆವಶ್ಯಕತೆಯಿದೆ.

ಆದಿ-ತ್ಯ : ಮಾರ್ತಾಂಡ ಶಕ್ತಿಯ ಪರಿಚಯ

ಆದಿತ್ಯ : ಮಾರ್ತಾಂಡ ಈ ಪ್ರತೀಕಗಳು ಜೀವಿತ ಅಸ್ತಿತ್ವದ ಪ್ರತಿಬಿಂಬದಂತಿವೆ. ಜೀವಿತ ಇದು ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ ಚಾಂದ್ರಶಕ್ತಿ) ಈ ವಿಭಾಗದ್ವಯದ ಸಂದರ್ಭದ ಟೊಳ್ಳಿನಲ್ಲಿ ಕಾಣಲು ದೊರೆಯುತ್ತದೆ: ಅಥವಾ ಅರಿಕೆ ಬರುತ್ತದೆ ಎನ್ನುವುದು ಲೇಸು. ಏಕೆಂದರೆ ಈ ಜೀವಿತದ ಅಸ್ತಿತ್ವವು ಏಕಕಾಲಕ್ಕೆ ಉಂಟು-ಇಲ್ಲ; ಇಲ್ಲ ಉಂಟು ಎಂಬೀ ಬಗೆಯ ಸಂಭ್ರಾಂತಿಕಾರಕವಾಗಿದೆ. ಈ ಕಾರಣದಿಂದಲೇ ಪುರಾತನ ಎಲ್ಲ ಸಂಸ್ಕೃತಿಗಳಲ್ಲಿಯೂ ಈ ಜೀವಿತವನ್ನು ಚಾಂದ್ರತತ್ತ್ವವೆಂದು ಬಗೆದಿದ್ದಾರೆ. ಈ ಚಾಂದ್ರಶಕ್ತಿಯು, ಶುಕ್ಲಪ್ರತಿಪದೆಗೆ-ದ್ವಿತೀಯೆಗೆ ಉಂಟು ಎಂದು ತನ್ನ ಅಸ್ತಿತ್ವವನ್ನು ಮನಗಾಣಿಸಿಕೊಡುತ್ತದೆ. ಹೀಗೆ ಈ ಚಾಂದ್ರ ಶಕ್ತಿಯು ಉಂಟು ಎಂದು ಹೇಳುವಷ್ಟರಲ್ಲಿ ಅಮಾವಾಸ್ಯೆಗೆ ಪ್ರಳಯ ಸಂಪೂರ್ಣ ಇಲ್ಲವಾಗುತ್ತದೆ! ಇಲ್ಲ ಎಂದು ಬಗೆಯಬೇಕೆ? ಆದರೆ ಮರಳಿ ಇಲ್ಲಮೆಯೊಳಗಿನಿಂದಲೇ ಉಂಟು ಎಂಬುದನ್ನು ನಿದರ್ಶನಕ್ಕೆ ತರುವ ಶುಕ್ಲ ಪಕ್ಷದ ಕಾಲ ಚಂದ್ರಬಿಂಬ ಕಾಣಿಸಿಕೊಳುತ್ತದೆ. ಕಾರಣದಿಂದಾಗಿ, ಈ ಚಾಂದ್ರಶಕ್ತಿಯು ಇಲ್ಲ ಶೂನ್ಯದೊಳಗಿಂದ ಮರಳಿ ಸಮಷ್ಟಿಯಾಗುತ್ತದೆ, 'ಎಂಬ ಸಂಭ್ರಮವನ್ನು ನಿರ್ಮಿಸುತ್ತದೆ. ಚಾಂದ್ರಶಕ್ತಿಯ ಈ ಪವಾಡ ಚಮತ್ಕಾರದ ಸಾಮರ್ಥ್ಯವು ತಮಗೂ ಪ್ರಾಪ್ತವಾಗಬೇಕು, ಎಂದು ಚಾಂದ್ರೋಪಾಸನೆಯಲ್ಲಿ ತೊಡಗಿರುವ ವಾಡಿಕೆಯು ಯತಿ, ಮುನಿ ಸಂಪ್ರದಾಯಗಳಲ್ಲಿ ಬಹು ಪುರಾತನ ಕಾಲದಿಂದಲೂ ಉಂಟು.

ಈ ಚಾಂದ್ರಶಕ್ತಿಯನ್ನು ಆದಿತ್ಯ ಎಂದು ಹೆಸರಿಸಿರುವಲ್ಲಿ ಗುಹ್ಯಾರ್ಥವು ಅಭಿಪ್ರೇತವಿದೆ, ಆದಿ (ಹುಟ್ಟು) 'ಉಂಟು, ಕೂಡಲೆ ಅಂತ್ಯವೂ ಉಂಟು ಎಂದು ಸೂಚಿಸಿರುವ ತತ್ತ್ವ ಇದನ್ನು ಆದಿಗೆ ಅಂಟಿಸಿದ್ದಾಗಿದೆ. ಈ ಆದಿತ್ಯ ಎಂದರೆ ಲಿಂಗ! ಶೂನ್ಯ ಅತ್ಯಂತ ಅಭಾವ! ಉಂಟು ಎನ್ನುವಷ್ಟರಲ್ಲಿ'ಇಲ್ಲ ಆಗುತ್ತದೆ! ಸಾಯಣರೆ ಇದನ್ನು ಸ್ಪಷ್ಟೀಕರಿಸುತ್ತಾ 'ಮೃತಾತ್ ಅಂಡಾತ್ ಜಾತಃ' ಎಂದಿರುವಲ್ಲಿ, ಅಂತ್ಯ ಇಲ್ಲವೇ ಒಳಗಿಂದ ಹುಟ್ಟುವ ಪವಾಡವು 'ಮಾರ್ತಾಂಡ ನಾಮದಲ್ಲಿ ಅಭಿಪ್ರೇತವಿದೆ. ಆದಿತ್ಯ=ಮಾರ್ತಾಂಡ ಇದು ಸ್ಥಲದೊಡನೆ ಬದ್ಧ ಕಾಲಶಕ್ತಿ ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಇವೆರಡೂ ಅವಿಗಲಿತವಾಗಿವೆ. ಏಕಾತ್ಮಕ ಸ್ವರೂಪವೂ ಆಗಿವೆ.

ಸ್ಥಲ ಮತ್ತು ಕಾಲ ಇವೆರಡೂ ಬೇರೆ ಬೇರೆ ಇವೆ ಎಂದು ಎನಿಸುತ್ತದೆ. ಫಅದರೆ, ಇದು ಕೇವಲ ಕಣ್ಕಟ್ಟು, ಎಂದು ತಜ್ಞರಿಗೆ ಕಂಡು ಬಂದಿದೆ. ಕನ್ನಡ ವ್ಯಾಕರಣಕಾರನ ಪ್ರಜ್ಞಾನೇತವು ಈ ಅಂಶವನ್ನು ಗ್ರಹಿಸಿಕೊಂಡಿದೆ: ಅದು+ದಂ=ಅಂದು ಇದು+ದಂ=ಇಂದು. ಫಅದರೆ ಸ್ಥಲದೊಡನೆ ಬದ್ಧ ಈ ಕಾಲವು ನಿರ್ಮಿಸುವ ಅಂದು ಇಂದು ಎಂದು ಈ ಗ್ರಹಿಕೆಯ ಈ ಕಾಲವು ಪ್ರಕಾಶ ರೂಪ ಕಾಲವಲ್ಲ! ಗತಿಯಲ್ಲಿ ಇರುವ ಸ್ಥಳ ಅದು, ಅಂದು ಇದ್ದದ್ದು ಇದು ಆಗುವಾಗ ಇಂದು ಆಗುತ್ತದೆ. ಗತಿಯಲ್ಲಿರುವ ಸ್ಥಳವೇ ಕಾಲದ ಸಂಭ್ರಮ ನಿರ್ಮಿಸುತ್ತದೆ. ಉದಾ? ಜೀವಿಯ ದೇಹ-ಸ್ಥಳದ ಫಅಯುರ್ಮಾನ ಇದು ಆ ದೇಹ ರೂಪೀ ಸ್ಥಲದ ಉದ್ಧಳತೆಯನ್ನು ಸೂಚಿಸುತ್ತದೆ!

ಪ್ರೊ. ಎಸ್. ಅಲೆಕ್ಸಾಂಡರನೆಂಬ ತತ್ತ್ವಜ್ಞ ಈ ಆಶಯವನ್ನೇ ಹೇಳಿದ್ದು ಹೀಗೆ:

> Space and Time have no reality, apart form each other, but are aspects or attributes of on reality[೧]

ಸ್ಥಳವೇ ಕಾಲ ರೂಪವಾಗುವುದು, ಕಾಲವೇ ಸ್ಥಲ ಸ್ವರೂಪವಾಗುವ ಈ ದೃಶ್ಯವು ಜಾದ್ಲು-ಚಮತ್ಕಾರ ಸ್ವರೂಪದ್ದಾಗಿದೆ! ಜೀವಿಯ ಜೀವಿತ : ಅಸ್ತಿತ್ವ ಇದು ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಇವೆರಡರ ಸಂದರ್ಭದಲ್ಲಿ ಅರಿಕೆಗೆ ಬರುತ್ತದೆ. ಇದು ಉಂಟು - ಇಲ್ಲ-ಉಂಟು ಎಂದು ಚಮತ್ಕಾರ ಜನಕ ಅಸ್ತಿತ್ವದ್ದು. ಇದು ಪ್ರಾಣಚೇತಸದ ಪಾತಳಿ. ಪ್ರಾಣತತ್ತ್ವವು ಯಾವಾಗಲೂ ಕತ್ತಲಿನ ಆವರಣದಲ್ಲಿಯೇ ಇರಬೇಕಾದ ವಿಶ್ವನಿಯಮವನ್ನು ನೆನಪಿಗೆ ತಂದುಕೊಳ್ಳಬೇಕು. ಈ ಜೀವಿತದ ಅಸ್ತಿತ್ವದಿಂದ ಸ್ಥಳ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಈ ವಿಭಾಗ ದ್ವಯದ ಮೂಲಕ ಇದರ ಆಚೆಗಿನ ಪಾತಳಿಯ ಮೇಲಣ ಜೀವನದ ಪಾತಳಿಯ ವೈಶಿಷ್ಟ್ಯವು ಸುಸ್ಪಷ್ಟವಾಗಬಲ್ಲದು. ಜೀವಿತ-ಅಸ್ತಿತ್ವವು ಇದು, ನಿತ್ಯವಾಗಿ ಉಂಟು ಇಲ್ಲ, ಇಲ್ಲ-ಉಂಟು ಸಂದಿಗ್ಧ ಅವಸ್ಥೆಯದೇ ಆಗಿದೆ. ಇದು ಸ್ಥಲ (ದೇಹ) ಮತ್ತು ಕಾಲ (ಪ್ರಾಣಲಿಂಗ ಚೇತಸ) ಈ ವಿಭಾಗದ್ವಯದ ಕತ್ತಲಿನ ಸಾಹಚರ್ಯದ ನಿತ್ಯ ವೃತ್ತಾಕೃತಿ [೦] ಸಂದರ್ಭದಲ್ಲಿ ಅರಿಕೆಗೆ ಬರುತ್ತದೆ. ಸ್ಥಲ-ಕಾಲರೂಪ ಈ ಗತಿಚಕ್ರವು ಉಂಟು ಮಾಡುವ ಈ ಕೃಷ್ಣವಿವರದ ಹೊರತು ಹೊರಗೆ, ಬೇರೆಯಾಗಿ, ಈ ಕಾಲಶಕ್ತಿಗೆ ಇಂಬು ಇಲ್ಲವೇ ಇಲ್ಲ!

ಆದರೆ, ಈ ಕಾಲಶಕ್ತಿಯನ್ನು ಗಣ್-ಡು ದೇವರಾಗಿ ಕೃಷ್ಣನೊ, ವಿಷ್ಣುವೋ, ರುದ್ರನೊ... ಎಂಬ ಹೆಸರಿನ ಗಣ್-ಡು ದೇವರು ಉಂಟು ಎಂದೂ ನಂಬಿಸಲಾಗುತ್ತದೆ! ಈ ಗಣ್‌ಡನ್ನೆ ಆದಿ-ತ್ಯ-ಮಾರ್ತಾಂಡ ಎಂಬ ಹೆಸರಿನಿಂದ ಸೂಚಿಸಲಾಗಿದೆ! ಆದರೆ, ಅದಿತಿಯ ಹೊರಗೆ ಸ್ಥಲದ - (ಕಣ್ಣಿನ-ಯೋನಿಮಂಡಲದ) ಹೊರಗೆ, ಆದಿತ್ಯನೇ ಇರಲಿ, ಮಾರ್ತಾಂಡನೇ ಇರಲಿ, ರುದ್ರಶಿವ, ವಿಷ್ಣು ಕೃಷ್ಣ ಇವರು ಯಾರೇ ಇರಲಿ, ಈ ಗಣ್‌ಡುಗಳ ಅಸ್ತಿತ್ವವು ಕೇವಲ ಒಂದು ಪರಿಕಲ್ಪನೆ! ಈ ಅತ್ಯಂತ ಅಭಾವವನ್ನು ಸ್ಥಾಯಿ ಎಂದು ನಂಬಿ-ನಂಬಿಸಿ ಧರ್ಮದ ಹೆಸರಿನಲ್ಲಿ ಆಗಿರುವ, ಆಗುತ್ತಿರುವ ಈ ಮೋಸ ಕೃತ್ಯದ ದುಷ್ಪರಿಣಾಮಗಳು ಇಂದು ಪ್ರಪಂಚವನ್ನು ವಿನಾಶದತ್ತ ತಳ್ಳಿಕೊಂಡು ಹೊರಟಿವೆ. We can flout laws of man (but) we cannot flout the laws of Nature ಎಂದು ತತ್ತ್ವಜ್ಞ Fichte ಹೇಳಿದ್ದು ಸಂಪೂರ್ಣವಾಗಿ ಸರಿಯಿದೆ.

ವಿಕಾಸತತ್ತ್ವದ ಪ್ರಕ್ರಿಯೆಯಲ್ಲಿ ಮನುಜನ ಪ್ರಾದುರ್ಭಾವವು ಆಗಿದೆ. ಈ ಮನುಜನೊಡನೆ ಜೀವನ ಎಂಬುದು ಕಾಣಿಸಿಕೊಂಡಿದೆ. ಜೀವನ ಎಂಬುದು ಕಾಣಿಸಿಕೊಂಡಿರುವುದರಿಂದಲೇ ಈ ಮನುಜನ ಅಸ್ತಿತ್ವವು ಶಕ್ಯವಾಗಿದೆ. ಇದು ವಿಶ್ವನಿಯಮಕ್ಕೆ ಅನುಸರಿಸಿ, ವಿಶ್ವನಿಯಮದ ಆಧಾರದ ಮೇಲೆ ನಿಂತಿದೆ. ಈ ಜೀವನದ ಪಾತಳಿ, ಈ ಜೀವನ ವಿಶ್ವಸ್ಥ ಮನು-ಜತ್ವ ಪ್ರಚೋದಕ ನೈಸರ್ಗಿಕ ಪ್ರೇರಣೆಯನ್ನೇ ನಿಷ್ಕ್ರಿಯಗೊಳಿಸಿದೆ, ಈ ದಿವ್ಯಾಧ್ಯಾತ್ಮದ ವಿರಕ್ತಪಂಥಗಳು! ಮನುಜತ್ವಕ್ಕೂ ಮುಂಚಿನ, ಪ್ರಾಣಲಿಂಗ ಪ್ರಚೋದಕ ಜೀವಿತದ ಪಾತಳಿಯ ಮೇಲೆಯೇ ಈ ಮನುಕುಲವು ತಳ್ಳಲ್ಪಡುವಂತೆ ಈ ಬಾಳಿನ ದಿಕ್ಕನ್ನೇ ತಿರುವು ಮುರುವು ಆಗಿಸಿರುವ ಅಭಿಚಾರ ಮಂತ್ರ-ತಂತ್ರಗಳ ಆಧಾರದ ಈ ಆದಿತ್ಯ-ಅದಿತಿ ಕುಮಾರ ಕುಮಾರೀ ಜೀವನಾದರ್ಶದ ಸಂಪ್ರದಾಯವು ಮೃತ್ಯುಶಕ್ತಿ ಉಪಾಸನೆಯ ಪರ್ಯಾಯವಾಗಿದೆ.

ಈ ವಿವರಣೆಯ ಉದ್ದೇಶವು: ಇದು ಸಾಹಿತ್ಯ, ಜೀವನ ಮತ್ತು ಸಂಸ್ಕೃತಿ ಈ ಮೂರರಲ್ಲಿ ಇರಲೇಬೇಕಾದ ಅನ್ಯೋನ್ಯವು ವಿಕೃತಗೊಂಡಿದೆ. ಇದನ್ನು ಈ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಸಾರಿ ಹೇಳುವುದು ಆದ್ಯ ಕರ್ತವ್ಯ ಎಂದು ಎನಿಸತೊಡಗಿದ್ದರಿಂದ ಈ ವಿಚಾರಗಳನ್ನು ಸ್ಪಷ್ಟೀಕರಿಸಿ ಹೇಳಬೇಕಾಗುತ್ತಿದೆ. ಸಾಹಿತ್ಯ ಹಾಗೂ ಸಂಸ್ಕೃತಿ ಇವು ಜೀವನದ ಆಧಾರದಿಂದ ಆಕಾರ ಪಡೆದಿವೆ. ಆದರೆ, ವಸಿಷ್ಠ, ವ್ಯಾಸ-ಪೈಥಾಗೊರಸರಂಥ ಪವಾಡಿ ಸಿದ್ಧಪುರುಷರ ಯಾತುಕೃತ್ಯಗಳ ಮೂಲಕ ಈ ಮಾನವನು, ಜೀವನದ ಪಾತಳಿಯಿಂದ ಜೀವಿತದ ಪಾತಳಿಯ ಮೇಲೆ ತಳ್ಳಲ್ಪಡುತ್ತಿದ್ದಾನೆ.

ಈ ಅಂಶವು ನನ್ನ ಕಳೆದ ೧೫-೨೦ ವರುಷಗಳ ಸಾಂಸ್ಕೃತಿಕ ಅನ್ವೇಷಣೆಯಲ್ಲಿ ದೃಢಪಡುತ್ತ ಬಂದಿದೆ. ಪ್ರಪಂಚವು ಎರಡು ಮನುಗಳ ಪ್ರಭಾವಕ್ಕೆ ಒಳಗಾಗಿದೆ. ಈ ಅಂಶವು ಪ್ರಕಟವಾಗಿ ಮೂರು ವರುಷಗಳಾದುವು.

ಪ್ರವಾಹ ಪತಿತರ ಕರ್ಮ ಹಿಂದೂ ಎಂಬ ಧರ್ಮ ಈ ಪುಸ್ತಕದ ವಿಮರ್ಶೆಗಳು ಬಂದಿವೆ. ಆದರೆ, ಭಾರತೀಯರು ಇಂದು ವೈವಸ್ವತ ಮನ್ವಂತರದಲ್ಲಿ ಇದ್ದರೂ ಮನು ಸ್ವಾಯಂಭುವನ ಪ್ರಭಾವಕ್ಕೆ ಒಳಗಾಗಿದ್ದಾರೆಂಬ ಆ ಪ್ರಬಂಧದ ನಿಷ್ಕರ್ಷವನ್ನು ಯಾರೂ ಅಲ್ಲಗಳೆದಿಲ್ಲ, ಆಕ್ಷೇಪಿಸಿದ್ದೂ ಕಾಣುವುದಿಲ್ಲ. ಈ ವೈವಸ್ವತ ಮನುವಿನಿಂದ ಪ್ರಚೋದಿತ ಮಾನವಧರ್ಮದ ಆಕೃತಿಸ್ವರೂಪವನ್ನು ಕಂಡು ಹಿಡಿಯುವ ಪ್ರಯತ್ನದಲ್ಲಿ ಈ ಕುಮಾರೀ ಮಾತಾ ಪುತ್ರರ ವಿಪ್ಲಾಥ್ಯಾತ್ಮಗಳ ಭಯಂಕರ ಸ್ವರೂಪವು ಸಪ್ರಮಾಣವಾಗಿ ಬೆಳಕಿಗೆ ಬಂದಿದೆ.

ಕುಮಾರೀ ಮಾತಾ-ಅದಿತಿ-ಸ್ಥಲ, ಮತ್ತು ಕುಮಾರಿ ಆದಿತ್ಯ-ಕಾಲ: ಈ ಕಾಲತತ್ತ್ವಕ್ಕೆ ಸ್ಥಲದ ಹೊರಗೆ ಸ್ವತಂತ್ರ ಸ್ಥಾನವೇ ಇಲ್ಲ. ಹೀಗಿದ್ದೂ ಈ ಕುಮಾರೀ ಮಾತಾಪುತ್ರನು ಭಗ-ವಂತ ಹೆಸರಿನಿಂದ ಪೂಜೆಗೊಳ್ಳುತ್ತ ಪ್ರಪಂಚವನ್ನು ಲೈಂಗಿಕ ಪಾತಳಿಯ ಜೀವಿತದ ಹಂತಕ್ಕೆ ಬರುವಂತೆ ಪ್ರಭಾವ ಬೀರುತ್ತಿದ್ದಾನೆ. ಆದಿ-ತ್ಯ ಮಾರ್ತಾಂಡ ರೂಪ ಕಾಲಶಕ್ತಿ ಇದು ಅತ್ಯಂತಾಭಾವ ರೂಪದ್ದು. ಎಂದರೆ ಶೂನ್ಯ [0] ವೇ ಇದು. ಇದನ್ನು ಉಂಟು ಎಂದು ನಂಬಿಸಲಾಗಿದೆ! ಕಾಲ ಗತಿಸೂಚಕ -ಈ ಶಕ್ತಿಯು ಅತ್ಯಂತ ಅಭಾವಾತ್ಮಕವಿದ್ದೂ, ಪ್ರಪಂಚವು ಇದನ್ನು ನಂಬುವಂತೆ ಮಾಡಾಲಗಿರುವ ಮಾಟವು ಇದೀಗ ಬಯಲಿಗೆ ಬರಲು ಶಕ್ಯವಾಗುತ್ತಿದೆ. ಭಾವಾತ್ಮಕ ಅಭಿಜಾತ ಅರ್ಥ-ವಿಚಾರದ ಸಂದರ್ಭದಿಂದಲ್ಲದೆ ಅಭಾವಾತ್ಮಕ

ಕೃತಕದ ಅರ್ಥವು ಆಗಲು ಶಕ್ಯವೇ ಇಲ್ಲ!

ಆದಿ-ತ್ಯ (ಆದಿ-ಅಂತ್ಯ ಒಂದೆಡೆಗೇ ಇರುವ) ಈ ಕಾಲಶಕ್ತಿಯು ಅರ್ಥವು ನಿಶ್ಚಿತವಿದೆ. ಇದು ಅರ್ಥ ಶೂನ್ಯ-ಶೂನ್ಯ ಅರ್ಥದ ಶಬ್ದಪ್ರತಿಮೆ! ಮಾರ್ತಾಂಡ-ಮೃತ ಅಂಡದಿಂದ ಜಾತ ಎಂದು ಸಾಯಣಾಚಾರ್ಯರೇ ಸ್ಪಷ್ಟೀಕರಿಸಿರುವ ಈ ಮಾರ್ತಾಂಡ ನಾಮ (essence) ಮತ್ತು ರೂಪ (form) ಇದು ಸಹ ಟ್ರೊಳ್ಳು, ಶೂನ್ಯ ಎಂಬ ಆಶಯದ ದೇವತಾ ಪ್ರತಿಮೆಯೇ ಆಗಿದೆ. ಸಂಪ್ರದಾಯವು ಈ ಆದಿತ್ಯ-ಮಾರ್ತಾಂಡ ಇವರನ್ನು ಕುಮಾರೀ (ಅದಿತಿ) ಪುತ್ರರು ಎಂದಿರುವಲ್ಲಿಯೂ, ಅತ್ಯಂತ ಅಭಾವ ಸೂಚಕ ಅರ್ಥದ ಒಪ್ಪಿಗೆಯೇ ಇದೆ! ಶ್ವೇತಾಶ್ವತರ ಉಪನಿಷತ್ತು ಕುಮಾರೀ ಮಾತೆ-ಅದಿತಿಯನ್ನು ಅ-ಜಾ ಎಂದೂ, ಈ ಕುಮಾರೀ ಪುತ್ರನನ್ನು ಅ-ಜ ಎಂದು ಹೆಸರಿಸಿರುವಲ್ಲಿ ಎಳ್ಳನಿತೂ ಮೋಸವಿಲ್ಲ! ನೇರ ಅರ್ಥವಿದೆ. ಅ-ಜ ಹುಟ್ಟಿಯೇ ಇಲ್ಲ! ಆದರೂ ಇದನ್ನು ಉಂಟು ಎಂದು ನಂಬುವ ಮುಟ್ಠಾಳರು ನಾವು! ಆದರೆ ಅ-ಜಾ ಪುತ್ರ ಅ-ಜ ನಿಂದ, ಈ ಬ್ರಹ್ಮ (?) ನಿಂದ ಸೃಷ್ಟಿಯಾಯ್ತು ಎಂದು ನಂಬಿರುವವರು ಪ್ರಜ್ಞಾವಿಹೀನರು ಎಂದು ನಗಿಸಿಕೊಳ್ಳುವ ಪರಿಸ್ಥಿತಿಯು ಇದೆ!

ಆದರೆ, ಹೀಗೆ, ಕೋಣ (ಅಜ) ಹಡೆದಿರುವ ಈ ಜೀವಿತದ ಪಾತಳಿಯ ಭಾಷೆ, ಸಾಹಿತ್ಯ ಸಂಸ್ಕೃತಿಯೂ ಉಂಟಲ್ಲ! ಇದನ್ನು ಸೃಷ್ಟಿಸಿದವರು ಯಾರು? ಕೇಶಿರಾಜನ ಶಬ್ದ-ಮಣಿ-ದರ್ಪಣದಲ್ಲಿ ಜೀವಿತದ ಪಾತಳಿಯ ಈ ಭಾಷಾ ಸೃಷ್ಟಿಯ ಪ್ರತಿಬಿಂಬವು ಒಡಮೂಡಿ ನಿಂತಿದೆ-ಅನುಕೂಲ ಪವನನಿಂ,. ಜೀವನಿಷ್ಟದಿಂ, ಕಹಳೆಯ ಪಾಂಗಿನೋಲ್ ನಾಭಿ-ಮೂಲದೊಳ್ ಶಬ್ದ-ದ್ರವ್ಯಂ ಜನಿಯಿಸುಗುಂ; ಇದರ ಕಾರ್ಯಂ ಶ್ವೇತಂ! ನಾಭಿಮೂಲದ ಅ-ಮೃತ ರಸದಿಂದ ಮೈವತ್ತ ವಾಣಿ: ಈ ಗೀರ್ವಾಣ ವಾಣಿ! ಆ ಕೇಶಿರಾಜನು ಬಲ್ಲ, ಈ ನಾಭಿಮೂಲ ಎಂದರೆ, ವಾಕ್ : ವಾಚಾಶಕ್ತಿಯ ಬಾಯಿಯೆ? ಶ್ವೇತ ದ್ರವ್ಯವು ಬರುವ ಈ ನಾಭಿ ಯಾವುದು? ಇಂದಿನ ವೇದದ ಉಲ್ಲೇಖಗಳ ಹಿನ್ನೆಲೆಯಲ್ಲಿ ಅಮೃತಸ್ಯ ನಾಭಿಃ ಆದಿಶಕ್ತಿಯ ಸೃಜನೇಂದ್ರಿಯವೇ ಇಲ್ಲಿಯೂ ಅಭಿಪ್ರೇತವಿರಬೇಕು, ಎಂದು ಬಗೆಯಬಹುದೆ? ಅಥವಾ ಈ ಶಬ್ದ ದ್ರವ್ಯರೂಪ ಶ್ವೇತದ್ರವ್ಯವು ಬರುವ ಈ ನಾಭಿ ಬೇರೊಂದಿದೆಯೆ? ಪ್ರಾಜ್ಞರು ಹೇಳಬೇಕು.

ಕೇಶಿರಾಜನು ಬಲ್ಲ ಈ ನಾಭಿಮೂಲದ ಅರ್ಥವನ್ನು ಸ್ಪಷ್ಟೀಕರಿಸುವ ಪ್ರಮಾಣಗಳು ನಮ್ಮ ಪೂರ್ವಪರಂಪರೆಯಲ್ಲಿ ದೊರೆಯುತ್ತದೆ. ಉದಾ : ಮಾತು ಎಂಬುದು ಜ್ಯೋತಿರ್ಲಿಂಗ! ಜ್ಯೋತಿರ್ಲಿಂಗ ಅಥವಾ ಲಿಂಗಜ್ಯೋತಿಯನ್ನು ಹೋಲುವ ರೂಪಕವು ಕ್ರೈಸ್ತ ಹಾಗೂ ಹಿಬ್ರೂ ಪರಂಪರೆಯಲ್ಲೂ ಉಂಟು:

ಕ್ಯಾಂಡಲ್ ಲೈಟ್ ಈ ಶಬ್ದ ಪ್ರತಿಮೆಯು ಜ್ಯೋತಿರ್ಲಿಂಗದ ವಾಸ್ತವ ಅರ್ಥ ಸೂಚಕವಾಗಿದೆ. ಕ್ರೈಸ್ತ ಹಿಬ್ರೂ ಸಂಪ್ರದಾಯಗಳ Candle light ಇದರ ವಾಸ್ತವಾರ್ಥವನ್ನು ಜರ್ಮನಿಯ ಊಸ್ನರ್ ಎಂಬ ಸಂಶೋಧಕನು ಸಪ್ರಮಾಣವಾಗಿ ಸಿದ್ಧಪಡಿಸಿದ್ದಾನೆ. ಆದರೆ, ಕ್ರೈಸ್ತ ಪಂಥೀಯ ಸಂಪ್ರದಾಯವಂತರಿಗೆ ಈ ಅರ್ಥವು ಹಿಡಿಸಿಲ್ಲ.[೨]

ಜ್ಯೋತಿರ್ಲಿಂಗ : Candle light ಇದೇ ಆಶಯವೇ Emprical Knowledge ಎಂಬಲ್ಲೂ ಉಂಟಲ್ಲ? ಇಂದ್ರಿಯಗಳ ಪಾತಳಿಯ ಮೇಲಣ ಅರ್ಥವೇ ನಮ್ಮ ಜ್ಞಾನಕ್ಕೆ ಕಾರಣ, ಎಂಬ ಈ ಗ್ರಹಿಕೆಯಿಂದಾಗಿ ಪ್ರತಿಯೊಬ್ಬರ ಅರ್ಥವೂ ಅವರವರ ಪಾಲಿನ ಸತ್ಯ ಎಂದು ಒಪ್ಪಲೇಬೇಕಾಗುವ ಪ್ರಸಂಗವು ಬಂದಿದೆ! ಅವರವರ ಅರ್ಥವು ಅವರ ಪಾಲಿನ ಸತ್ಯ ಎಂಬ ಭೂಮಿಕೆಯ ಈ ಜೀವನ ರೀತಿಯಲ್ಲಿ, ಶಿಷ್ಟಮಾನ್ಯವಿರುವ ಸಮಾಜ-ಸಮಷ್ಟಿಯ ಒಪ್ಪಿಗೆಯ ಜೀವನ ಮೌಲ್ಯಗಳ ಅಭಾವವೇ ಎದ್ದು ಕಾಣುತ್ತಿದ್ದರೆ ಸೋಜಿಗವೇನು? ಸತ್ಯ, ಸಜ್ಜನಿಕೆ, ಸಂಭಾವಿತತನ ಇತ್ಯಾದಿಗಳು ಕೇವಲ ಕಾಲ್ಪನಿಕ ಅಥವಾ ಆಯಾ ವ್ಯಕ್ತಿಗಳಿಂದ ಕಲ್ಪಿತ ಎಂದು ಹೇಳಲಾಗುತ್ತದೆ! ಎಂದರೆ ಇಂದಿನ ಸಾಹಿತ್ಯ, ಕಲೆ, ಚಿತ್ರಪಟ (ಸಿನೆಮಾ) ಇವು ಲೈಂಗಿಕ-ಭೂಮಿಕೆಯವೇ ಆಗುತ್ತಿರುವುದರ ಮೂಲಕಾರಣವು ಇಂದಿನ ವೇದದ ಭೂಮಿಕೆಯಲ್ಲಿ ಘೋಷಿಸಲ್ಪಡುತ್ತಿದೆ. ನಂಬಿದರೆ ನಂಬಿ ನಂಬುಗೆ ಹುಟ್ಟದೆ ಇದ್ದರೆ ಬಿಟ್ಟುಬಿಡಿ. ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯು ಆಕಾರ ಪಡೆದದ್ದು ಮೂಲದಲ್ಲಿ ಮಾನವ ಜೀವನದ ಪಾತಳಿಯ ಮೇಲೆ ಎಂಬಲ್ಲಿ ಎಳ್ಳನಿತೂ ಸಂದೇಹಕ್ಕೆ ಇಂಬಿಲ್ಲ. ಆದ್ದರಿಂದ ಇಂದು ನಮ್ಮ ಭಾಷೆ, ಸಾಹಿತ್ಯ ಸಂಸ್ಕೃತಿಯು ಜೀವಿತ ಎಂದರೆ ಲೈಂಗಿಕ-ಪಾತಳಿಯ ಮೇಲೆ ಬಂದಿದೆ ಎಂಬುದನ್ನು ಸೂಚಿಸುವ ಪ್ರಮಾಣಗಳನ್ನು ಎತ್ತಿ ಹೇಳಿದ್ದಾಯ್ತು.

ನಾಭಿ ಮೂಲದೊಳ್ ಹುಟ್ಟುವ ಈ ಭಾಷೆಯು ಎಂತದು. ಇಂದಿನ ವೇದವು ನಿಃಸಂದಿಗ್ಧ ರೀತಿಯಲ್ಲಿ ಹೇಳಿದೆ : ಯದ್ ವಾಕ್ ಪಶವಃ ವದಂತಿ ಎಂದು. ಗೀರ್‌ವಾಣವಾಣಿ ಎಂದರೂ ಈ ಅರ್ಥವೇ ಇದೆ. ಮರುತಃ ಧಮಂತೋ ವಾಣಂ, ಸುದಾನವಃ[೩] ನರ(ಳ) ಸ್ವರೂಪ ಮರುತರು ತಮ್ಮ ವಾಣ (ಕೊಳಲು) ತಾವೇ ಊದುತ್ತಿದ್ದಾರೆ. ಇದರ ಮನವರಿಕೆಗಾಗಿ ಈ ವೇದದ ಯಮನಲ್ಲಿ ಹೋದ ಕುಮಾರನ ವರ್ಣನೆ ಓದಿ.[೪] ಈ ಕುಮಾರನು ತನ್ನ ನಾಳಿಯ ಮೂಲಕ ಗೀತವನ್ನು ಹೊರಡಿಸುತ್ತಿದ್ದಾನೆ. ಈ ಹಿನ್ನೆಲೆಯಲ್ಲಿ, ಪುರಾತನ ಗ್ರೀಕ್ ದಿವ್ಯಕಥೆ ಪ್ಯಾನ್ ಪ್ಯಾಪ ತುಂಬ ಉದ್ಬೋಧಕವಾಗಬಲ್ಲುದು. ಮೂಲದಲ್ಲಿ ಸೂರ್ಯ ಪ್ರಜ್ಞಾ: ಪ್ರಕಾಶಃ ಇಲ್ಲದೆ, ಈ ವೇದದ ಆದಿ-ತ್ಯ ಮಾರ್ತಾಂಡನಾಮಾನಂ ಸೂರ್ಯ ಈ ಕೃತಕ-ಅಭಿಚಾರ ಕೃತ್ಯವು ಅಸ್ತಿತ್ವದಲ್ಲಿ ಬರಲು ಶಕ್ಯವಿಲ್ಲ. ವೈವಸ್ವತ ಮನುವನ್ನು ಓಮ್ಮೆ ಟ್ಟಿಸಿ. ಈ ನರ(ಳ) ಸಂಪ್ರದಾಯವು ಪ್ರಭಾವಶಾಲಿಯಾಗಿ ಬೆಳೆದು ನಿಂತಿದೆ. ಗೀತೆಯ 'ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನ್ ಅಹಂ' ಎಂಬ ಭಗ-ವಂತನ ಉಕ್ತಿಯೇ ಈ ಸ್ಥಿತ್ಯಂತರಕ್ಕೆ ಸಾಕ್ಷಿ. 'ಅಪ್ರಿಯಸ್ಯಾಪಿ ಪಥ್ಯಸ್ಯ ಶ್ರೋತಾ ದುರ್ಲಭಃ' ಎಂದು ಬಗೆಯಲಾಗಿದೆ. ಆದರೆ ಧರ್ಮ-ಸ್ಥಳದ ಶ್ರೋತೃಗಳು, ತಾವು ನನ್ನ ಕಟುಸತ್ಯದ ನಾಲ್ಕು ಮಾತುಗಳನ್ನು ಶಾಂತವಾಗಿ ಚಿತ್ತೈಸಿದ್ದಕ್ಕಾಗಿ ತಮಗೆಲ್ಲ ನಾನು ಅತ್ಯಂತ ಋಣಿಯಾಗಿದ್ದೇನೆ. ಈ ನಾಲ್ಕು ಮಾತು ಹೇಳಲು ಸಮಯವನ್ನು ಒದಗಿಸಿಕೊಟ್ಟಿರುವುದಕ್ಕಾಗಿ ಧರ್ಮಸ್ಥಳದ ಉದಾರ ಚರಿತ ವೀರೇಂದ್ರ ಹೆಗ್ಗಡೆಯವರಿಗೂ, ಧಾರವಾಡ ಜನತಾ ಶಿಕ್ಷಣ ಸಂಸ್ಥೆಯ ಪ್ರಾಚಾರ್ಯ ವಜ್ರಕುಮಾರರಿಗೂ ನಾನು ಆಭಾರಿಯಾಗಿದ್ದೇನೆ.

ಟಿಪ್ಪಣಿಗಳು

೧. Alexander S.; ***Space, Time and Deity*** Vol II. p. 428
೨. Hugo Rehner S. J.; ***Greek Myth and Christian Mystery***, ಈ ಗ್ರಂಥವನ್ನು ನೋಡಿರಿ
೩. ***ಋಗ್ವೇದ ಸಂಹಿತೆ*** i. ೮೫-೧೦
೪. ***ಅದೇ*** x ೧೩೫-೨

ಮಾಡಿದ್ದನ್ನು ಉಣ್ಣೋ ಮಹಾರಾಯ

What appears to me is for me and what appears to you is for you; no man can be in a position to contradict another .

(History of Greek Philosphy. Vol. III)

ಬಿತ್ತಿದ್ದನ್ನು ಬೆಳೆವ ಈ ಕಾರ್ಯವು, ಸಾಮಾನ್ಯವಾಗಿ ವೈಯಕ್ತಿಕ ಸ್ವರೂಪದ್ದಲ್ಲ ಸೇವಿಸುವ ಆಹಾರ-ಧಾನ್ಯಾದಿಗಳು, ಒಂದು ಬಗೆಯಲ್ಲಿ, ಸಮಾಜ-ಸಮಷ್ಟಿಯ ಕೃಪೆಯ ಫಲ. ಸಾಮಾಜಿಕ ವಿಪ್ಲವವು; ಬರಗಾಲ-ಕರಿಗಾಲಗಳಿಗೆ ಕಾರಣವಾಗುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ, ಪ್ರಾಣೋಪಾಸಕ ನರ(ಳ) ಸಂಪ್ರದಾಯದ ಕೈವಾಡದಿಂದಾಗಿ ಆಗಾಮೀ ನಾಳೆಗಳತ್ತಣಿನ ಶುಭ್ರ>ಶುಭಸ್ವರೂಪ ವಿಭಾಗತ್ರಯದ ಗತಿಯನ್ನು ನಾವು ಕಡೆಗಣಿಸಿ ಸ್ಥಲಕ್ಕೆ ಬದ್ಧ ವ್ಯಕ್ತಿಸಾಪೇಕ್ಷ ಕಾಲ (ಲಿಂಗ) ದ ಪ್ರಭಾವಕ್ಕೆ ಒಳಗಾಗಿದ್ದೇವೆ. ಭಾರತೀಯರು ಚಾಂದ್ರಮಾಸವನ್ನು ಅನುಸರಿಸುತ್ತಿದ್ದಾರೆ! ಈ ವೃತ್ತಾಕೃತಿಯ ಬಾಳ ಬಗೆಯಲ್ಲಿ, ಆಗಾಮೀ ನಾಳೆಗಳಿಗೆ ನಿಜವಾಗಿ ಅವಕಾಶವೇ ಇಲ್ಲ!

ದುರ್ದೈವದ ಸಂಗತಿಯೆಂದರೆ ಈ ಅವನತಿಗೆ ವೈಯಕ್ತಿಕವಾಗಿ ಪ್ರತಿಯೊಬ್ಬ ಮನುಜನೂ ಸಹಕರಿಸುತ್ತ ಬಂದದ್ದಾಗಿದೆ! ಅಂದರೆ, ನಮ್ಮ ಹಬ್ಬ-ಹುಣ್ಣಿಮೆ, ದೇವತಾ ಉತ್ಸವಗಳ ಆಚರಣೆಯಿಂದ ಈ ವೃತ್ತಾಕೃತಿಯ ಕಾಲಚಕ್ರದಲ್ಲಿ ಸಿಲುಕಿದ್ದೇವೆ. ಪ್ರತಿಯೊಬ್ಬನೂ ತನ್ನ ಮಟ್ಟಿಗಾದರೂ ತಾನು ಆಗಾಮೀ ನಾಳೆಗಳತ್ತ ಅವ್ಯಾಹತವಾಗಿ ಸಾಗಿರುವ ನಿನ್ನೆ-ಇಂದುರೂಪೀ ಪ್ರಕಾಶ ತತ್ತ್ವದ ಶುಭ್ರ>ಶುಭ ಕಾಲದ ನಿಟ್ಟಿನಿಂದಲೇ ಸಾಗಲಿಕ್ಕೆ ಬೇಕು. ನಾಳೆಯೇ ಇಂದಿನಲ್ಲಿ ಮಾರ್ಪಡುವ ಬಾಳಬಗೆಯೊಡನೆ ಸಹಕರಿಸಲಾರೆ, ಎಂಬ ಸಂಕಲ್ಪಬದ್ಧರಾಗಿ ಬಾಳಲು, ಜನ ಸಿದ್ಧರಿಲ್ಲದ ವರೆಗೆ, ಇಂತಹರಿಗೆ 'ಮಾಡಿದ್ದನ್ನು ಉಣ್ಣೋ' ಮಹಾರಾಯ ಎಂಬ ಲೋಕಾನುಭವವನ್ನು ನೆನಪಿಗೆ ತಂದು ಕೊಡಬೇಕಾಗುತ್ತದೆ. ಇಂಚರ ಮಾಸಪತ್ರಿಕೆಯ ಸಂಪಾದಕರಾದ ಮಾನ್ಯಶ್ರೀ ಜಿ. ಕೆ. ಅನಂತರಾಮು ಅವರು ಉತ್ಸ್ಫೂರ್ತಿಯಿಂದ ಆಮಂತ್ರಿಸಿ, ಕೆಲವು ವಿಚಾರ ಪ್ರಚೋದಕ ಟಿಪ್ಪಣಿ ಬರೆಯಲು ಅವಕಾಶ ಒದಗಿಸಿಕೊಟ್ಟಿದುದರ ಫಲವಾಗಿ, ಈ ಹತ್ತು ಬಿಡಿ ಬರಹಗಳನ್ನು ಇಲ್ಲಿ ಸೇರಿಸಲು ಶಕ್ಯವಾಗುತ್ತಿದೆ. ಇದಕ್ಕಾಗಿ ನಾನು ಅವರಿಗೆ ಧನ್ಯವಾದ ಸಲ್ಲಿಸಲೇಬೇಕು. ಭಾರತೀಯ ಸಂಸ್ಕೃತಿಯಲ್ಲಿ ಆಗಿರುವ ಪಲ್ಲಟದ ಪರಿಚಯಕ್ಕೆ ಈ ಟಿಪ್ಪಣಿಗಳು ಪ್ರಯೋಜನಕಾರಿಯಾಗಲಿವೆ. ಬಾಳಿನ ಸ್ವರೂಪ ಮತ್ತು ಅರ್ಥಗ್ರಹಣಕ್ಕೆ ಇವು ನೆರವಾಗಬಲ್ಲವು.

ಮಾನವನು ವಿಶ್ವನಿಯಮಕ್ಕೆ ಅಧೀನನು

ಮಾನವರನ್ನು ರೂಪಿಸುವ, ಪ್ರೇರಿಸುವ ಪ್ರಜ್ಞಾರೂಪ ಈ ವಿಶ್ವನಿಯಮವು ಭಾವಾತ್ಮಕವಿದೆ. ಭಾವಾತ್ಮಕ ಎಂದರೆ ಗ್ರಹಿಸಿಕೊಳ್ಳಲು ಶಕ್ಯವಿರುವ ಈ ವಿಶ್ವನಿಯಮವು, ಅನುಭವಾತ್ಮಕವೂ ಇದೆ. ಅನುಭವದಲ್ಲಿ ಪ್ರತೀತಿಗೆ ಬರುವ ಅಂತಃಸಂಗತಿಯುಕ್ತ ಅರ್ಥ : ವಿಚಾರವು ತತ್ವತಃ ಪ್ರಕಾಶರೂಪವಿದೆ. ಅಂತಃಸಂಗತಿಯುಕ್ತ ಆಚಾರ-ವಿಚಾರದ ಮನು-ಜನು, ಈ ಜೀವನದಲ್ಲಿ ಹಾಸು-ಹೊಕ್ಕಿನಂತೆ ಏಕಾತ್ಮಕವಾಗಿರುವ ಅರ್ಥ: ವಿಚಾರ: ನಿಯಮ: ತತ್ವವನ್ನು ಕಾಣಲು-ಗ್ರಹಿಸಿಕೊಳ್ಳಲು-ಸಮರ್ಥನಿದ್ದಾನೆ. ಅರಿಸ್ಟಾಟಲನು Actuality of Thought is life ಎಂದು ಹೇಳಿದ್ದೂ ನಿಷ್ಕಾರಣವಲ್ಲ.

ಜೀವನವನ್ನು ಆಳುತ್ತಿರುವ ಈ ನಿಯಮವನ್ನು ಸಂಗೀತದ ರೂಪಕದಿಂದ ಚನ್ನಾಗಿ ಗ್ರಹಿಸಿಕೊಳ್ಳಬಹುದು. ಸಂಗೀತದಲ್ಲಿ, ಭಾವಾತ್ಮಕ ತಾಳದ ಅನುಷಂಗದಿಂದ ಅಭಾವಾತ್ಮಕ-ಹುಸಿತಾಳಕ್ಕೂ ಒಂದು ಪರಿಮಿತ ವಿಶಿಷ್ಟ ಸ್ಥಾನವಿದೆ. ಇದೇ ಮೇರೆಗೆ ಜೀವನ ಸಂಗೀತದಲ್ಲಿಯೂ ಅಭಾವಾತ್ಮಕ ಜೀವಿತರೂಪೀ ಪ್ರಾಣಚೇತಸದ ಹುಸಿಗೆ ಒಂದು ಮಿತಿಯಲ್ಲಿ ಇಂಬು ಉಂಟು. ಅಂತಃಸಂಗತಿಯುಕ್ತ ಅರ್ಥ : ವಿಚಾರರೂಪ ಜೀವನದ ಹಾಸು ಮತ್ತು ಇದಕ್ಕೆ ಸುಸಂಗತ ಇರುವ ಜೀವನ ತತ್ವದ ಪಾತಳಿಯ ಹೊಕ್ಕು ಈ ಇವೆರಡರ ನೇಯ್ಗೆಯಲ್ಲಿ ಮಾನವನ ಬಾಳಬಟ್ಟೆ ರೂಪುಗೊಳ್ಳುತ್ತದೆ. ಈ ಜೀವನದ ಪಾತಳಿಗೆ ಪ್ರಕಾಶಯುಕ್ತ (ಹಗಲು) ಹಾಸು ಇರುವಂತೆ, ಅಂತರ್‌ವಿಸಂಗತ, ಪ್ರೇರಣಾ ದ್ವಂದ್ವಾತ್ಮಕ ಪ್ರಾಣಲಿಂಗದ ಜೀವಿತದ ಹುಸಿ (೦) ಪಾತಳಿಯು ನಿತ್ಯ ಕತ್ತಲಿನಿಂದ ಆವೃತ ಹೊಕ್ಕು ಇದೂ ಉಂಟು. ಆದರೆ, ಅಭಾವಾತ್ಮಕ ಹೊಕ್ಕಿಗೆ ಪ್ರಾಧಾನ್ಯವಿಲ್ಲ.

ಬಾಳಿನಲ್ಲಿ, ಜೀವನ ಮತ್ತು ಜೀವಿತ ಇವೆರಡರಲ್ಲಿ ಇರಲೇಬೇಕಾದ ಪ್ರಮಾಣವು ಇಲ್ಲವಾಗುವಾಗ, ಜೀವಿತದ ಈ ಕತ್ತಲಿನ ಟೊಳ್ಳಿನಲ್ಲಿ ಅನಾಚಾರ, ಭ್ರಷ್ಟಾಚಾರಗಳಿಗೆ ಆಮಂತ್ರಣವು ದೊರೆಯಲೇಬೇಕು. ಇದೂ ವಿಶ್ವನಿಯಮ. ಪ್ಲೇಟೋನ ಗುಹೆಯ ರೂಪಕವು ಇದನ್ನೇ ಸೂಚಿಸುತ್ತದೆ. ಜೀವನದ ಪಾತಳಿಯ ಮೇಲೆ, ಮಾನವನು ಇದ್ದಾನೆ. ಈ ಮಾನವನ ಅಂಗವಾದ ನರ(ಳ) ನು ನಿತ್ಯ ಕತ್ತಲಲ್ಲಿ ಜೀವಿತದ ಪಾತಳಿಯು ಮೇಲೆ ಇದ್ದಾನೆ. ಆದರೆ, ವ್ಯಕ್ತಿ-ಮುಕ್ತಿಯ (Emancipation of the Individual) ಆಂದೋಲನದಲ್ಲಿ, ಕತ್ತಲಲ್ಲೇ ಇರಬೇಕಾದ, ಜೀವಿತದ ಪಾತಳಿಯ (ನರ)ಳು ತಲೆಯೆತ್ತಿ ಮೆರೆಯ ತೊಡಗುವಾಗ, ಅಂಗಕ್ಕೆ ಪ್ರಾಧಾನ್ಯವು ಪ್ರಾಪ್ತವಾಗುವಾಗ, ಮಾನವನ ತೇಜೋವಧೆ ಆಗುವುದು ಅನಿವಾರ್ಯವಿದೆ.

ಹೀಗೆ, ಇಂದು, ಬಾಳಿನಲ್ಲಿ ಎಲ್ಲೆಲ್ಲೂ ಅಭಾವಾತ್ಮಕ ಜೀವಿತವೇ ಸ್ಥಾಯಿ ಆಗಿದೆ. ವಿಶ್ವನಿಯಮದ ಭಂಗವಾಗುತ್ತಿರುವ ಎಡೆಯೇ ಇದು.

> We can flout laws of man; (but) we cannot flout the laws of nature (Fichte)

ಭಾರತೀಯ ಸಂಸ್ಕೃತಿಯಲ್ಲಿ ಈ ಸ್ಥಿತ್ಯಂತರವು ನರ : ನಾರ-ಅಯನ ಸಂಪ್ರದಾಯ ಪ್ರಸ್ಥಾಪಕ ವ್ಯಾಸಪಂಥದಿಂದ ಆಗಿರುವಂತೆ, ಗ್ರೀಕ್ ಸಂಸ್ಕೃತಿಯಲ್ಲಿ ಒರ್‌ಫ್ಯುಅಸ್-ಪೈಥಾಗೋರಾಸ್ ಪಂಥವು ಈ ಸ್ಥಿತ್ಯಂತರಕ್ಕೆ ಕಾರಣವಿದೆ.

ಬಾಳನ್ನು ರೂಪಿಸುವ ಕಾಲಗತಿಯ ಪ್ರಕಾರಗಳು

ಸ್ಥಲ : (ಅವಕಾಶ)ಕ್ಕೆ ಸಂಬದ್ಧ ಕಾಲತತ್ವವನ್ನು ಕುರಿತು, ಭೌತಶಾಸ್ತ್ರಜ್ಞರು ಆಳವಾದ ವ್ಯಾಸಂಗ ನಡೆಸಿದ್ದಾರೆ. ಆದರೆ, ಪುರಾತನರ ದೃಷ್ಟಿಯಲ್ಲಿ ಸ್ಥಲ (: ಅವಕಾಶ ಟೊಳ್ಳುಗಳನ್ನು Vacuum : Void) ಇದರ ಇನ್ನೊಂದು ನಿಲುಮೆಯಾದ ಈ ಕಾಲಗತಿಯು ಅಭಾವಾತ್ಮಕವಿದೆ! ಕಂನಾಡವರ ಪರಿಭಾಷೆಯಲ್ಲಿ, ಇದನ್ನು ಬಯಲು-ಬಯಲ್-ತೂರೆ ಎಂದುದಾಗಿದೆ. ವಿಖ್ಯಾತ ವಿಜ್ಞಾನಿ ಸಾಪೇಕ್ಷ ಸಿದ್ಧಾಂತವನ್ನು ಕಂಡುಹಿಡಿದ ಡಾ. ಐನ್‌ಸ್ಟನ್ನರು, ಶ್ರೇಷ್ಠ ಸಂಶೋಧಕ ನ್ಯೂಟನ್ನನ ಈ ಸ್ಥಲ (ಅವಕಾಶ) ದ ಆಧಾರದ ಮೇಲೆ ನಿಂತ ಸಿದ್ಧಾಂತವನ್ನೇ (Validity) ಪ್ರಶ್ನಿಸಿದ್ದಾರೆ!

> Hume questioned the validity of human understanding as a whole whereas Einstein questioned the validity of a specific domain Newtonian mechanics"[೧]

ಡಾ. ಐನ್ಸಟನ್ನರು ಸ್ಥಲ(ಕಾಲ)ದ ಆಚೆಗೆ ನೇರವಾಗಿ ನೋಡಬಲ್ಲ ಪ್ರಜ್ಞಾನೇತ್ರವನ್ನು ಪಡೆದಿದ್ದರು. ಆಧುನಿಕ ಸಂಶೋಧಕರಿಗೆ ವಿವಿಧ ಉಪಕರಣಗಳು, ಸಲಕರಣೆಗಳು ಲಭ್ಯವಿವೆ. ಈ ಬಗೆಯ ಉಪಕರಣ, ಆಧುನಿಕ ತಂತ್ರಗಳ ನೆರವು ಇಲ್ಲದ ಆ ಪುರಾತನರು ತಮ್ಮದೇ ಆದ ರೀತಿಯಿಂದ, ಮಾನವಜೀವನ ವಿಶ್ವಸ್ಥ ಕಾಲ ತತ್ವವನ್ನು ಇಡಿಯಾಗಿ ಕಂಡು ಹಿಡಿದಿದ್ದರೆಂಬುದು ಅರಿಕೆಗೆ ಬರುತ್ತಿದೆ! ಆದರೆ, ಇದು ಆಧುನಿಕ ಸ್ವರೂಪದ ವಿಶ್ಲೇಷಣಾತ್ಮಕ ಪದ್ಧತಿಯ ಸಂಶೋಧನವಲ್ಲ! ಆಧುನಿಕರ ಪರಿಭಾಷೆಯ Mythical thinking ದ ಮೂಲಕ ಅವರಿಗೆ ಈ ಕಾಲತತ್ವವು ಇಡಿಯಾಗಿ ಅರಿಕೆಗೆ ಬಂದಂತೆ ಕಾಣುತ್ತದೆ. ಈ ಅಂಶವನ್ನು ಇನ್ನೊಂದು ಬಗೆಯಲ್ಲಿ ಹೀಗೆ ಹೇಳಬಹುದು : ಇಷ್ಟ ದೇವತಾ-ಪ್ರತಿಮಾ ಮಾಧ್ಯಮದಿಂದ ಅರಿಕೆಗೆ ಬಂದ ಸಂಗತಿಯಿದು. ಜೀವನ ವಿಶ್ವಸ್ಥ ಇಡಿಯಾದ ಕಾಲತತ್ವವೆಂದರೆ, ಮಾನವ ಜೀವನವನ್ನು ಮತ್ತು ಮಾನವೇತರ ಪ್ರಾಣಿ ಮಾತ್ರಗಳ ಜೀವಿತವನ್ನು ರೂಪಿಸುವ ಕಾಲಗತಿಯು ಇದು. ಅಂದಿನವರಿಗೆ ಕಾಲಗತಿಯ ಅರಿವನ್ನು ತಂದುಕೊಟ್ಟ ದೇವತಾ ಉಪಾಸನಾ ಪ್ರತಿಮೆ ಇಂಥದೇ ಎಂದು, ಅರಿಯಲು ಇಂದು ಶಕ್ಯವೆ? ಎಂಬ ಪ್ರಶ್ನೆ ಏಳುತ್ತದೆ. ಆದ್ಯ: ಮನು ಎಂದು ಕಾಳಿದಾಸನು ಹೇಳುವ ಈ ಮನುವು ವಿವಸ್ವನ್>ವೈವಸ್ವತನು (ಸೌರನು) ಎಂಬುದನ್ನು ಅಲ್ಲಗಳೆಯಲು ಬರಲಾರದು. ಹಗಲಿನ ಸ್ವಾಮಿ : ದಿವಾಕರನನ್ನು ಪೂಜಿಸುವ ವರ್ಗವು ಇದ್ದ ಹಾಗೆ, ನಿಶಾನಾಥ: ಚಂದ್ರಮನನ್ನು ಆರಾಧಿಸುವ ಜನವೂ ಇತ್ತು!

ಮಾನವನೊಳಗಿನ ಉಪದೇಶೇನ ವಿನಾ ಸುತ್ತಲಿನ, ಒಳಹೊರಗಣ ಆಗುಹೋಗುಗಳ ಈ ಆಕರ್ಷಣ ಶಕ್ತಿಯು, ಇದು ಪ್ರಜ್ಞಾ : ಮನಃಶಕ್ತಿಯ-ಪ್ರಕಾಶತತ್ವದ ಅಂಶವಾಗಿದೆ. ಮಾನವ ಭಾಷೆ, ಸಂಸ್ಕೃತಿಯನ್ನು ಪ್ರೇರೇಪಿಸಿದ, ರೂಪಿಸಿದ, ಆದಿಕಾರಣ ತತ್ವವು ಇದು. ಈ ಪ್ರಜ್ಞೆಯ ಅಂಗವಾದ ಮನಸ್ಸಿನೊಡನೆ ಈ ಮಾನವನ ಪ್ರಾದುರ್ಭಾವವಾಗಿದೆ. ಆದಕಾರಣ ಇವನನ್ನು ಮನುಜ>ಮನುಷ್ಯ ಎಂದು ಕರೆವ ವಾಡಿಕೆಯು ಉಳಿಯಿತು.

ಭಾಷಿಕ ಶಬ್ದಸಂಕೇತ ಪ್ರತೀಕಗಳ ಆಶಯ್ಯದ ಆಕೃತಿಯು, ಇವನ್ನು ರೂಪಿಸಿದ ಆ ಆದ್ಯರ ಅನುಭವದ ಆಕೃತಿ ಸ್ವರೂಪವನ್ನು ಗಮನಕ್ಕೆ ತಂದು ಕೊಡುತ್ತದೆ. ಉದಾ : ಅಗ್ನಿ ಜಾತವೇದ. ಈ ಜಾತವೇದ ಅಗ್ನಿ ತತ್ವದೊಡನೆ, ಎಂದರೆ ಪ್ರಜ್ಞೆಯೊಡನೆ ಈ ಮಾನವನು ಮೈವೆತ್ತಿದ್ದಾನೆ. ಮಾನವನೊಳಗಿನ ಮನು : ವೈವಸ್ವತ, ಅಗ್ನಿ : ಜಾತವೇದ ಇವು ಅನುಭವಾತ್ಮಕ : ವಾಸ್ತವ ಸತ್ಯಾಂಶಸೂಚಕ ಕಾವ್ಯಸತ್ಯದ ಸರ್ವೋತ್ತಮ ಮಾದರಿಗಳು. ಅಗ್ನಿ : ಜಾತವೇದ ಈ ಸಂಕೇತಕ್ಕೆ ಪ್ರತಿಯಾಗಿ ಇರುವ ಅಗ್ನಿ : ನಚಿಕೇತವು ನೇರ ಅನುಭವಕ್ಕೆ ಎಟುಕದ ಮಾತು! ನ-ಚಿಕೇತ ಎಂದರೆ ಅರಿಕೆಗೆ ಬಾರದ್ದು. ಆದಕಾರಣ, ಇದು ಅಭಾವಾತ್ಮಕ ಆಶಯದ ಶಬ್ದ ಪ್ರತಿಮೆಯಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಭಾವಾತ್ಮಕ, ಅನುಭವಾತ್ಮಕ ಅಗ್ನಿ: ಜಾತವೇದ (ಸೌರ) ಮತ್ತು ಅಭಾವಾತ್ಮಕ : ಕಲ್ಪನೆಯಿಂದಲೇ ಅರಿಯಬೇಕಾಗುವ ಅಗ್ನಿ : ನ-ಚಿಕೇತ (ಚಾಂದ್ರ) ಇವೆರಡರಲ್ಲಿ ಮೊತ್ತಮೊದಲು ಮೈವೆತ್ತಿದ್ದು ಯಾವುದು? ಗೊತ್ತಾದ ಸಂಗತಿಯಿಂದ, ಗೊತ್ತಿಲ್ಲದ್ದನ್ನು ಊಹಿಸಿಕೊಳ್ಳಬೇಕಾಗುತ್ತದೆ.* ಇದರಿಂದಾಗಿ ಸೌರ:

---

* ಈ ಬಗೆಯ ಸಂಶೋಧನ ವಿಧಾನ ಶಂಬಾ ಅವರಿಂದ ಮೊದಲು ಕನ್ನಡದಲ್ಲಿ ಬಳಕೆಗೆ ಬಂದಿತು. ಗೊತ್ತಿರುವ ಸಾಮಗ್ರಿಗಳ ಅಧ್ಯಯನವು ಗೊತ್ತಿಲ್ಲದಿರುವ ಸಾಮಗ್ರಿಗಳ ಸ್ವರೂಪವನ್ನು ನಮ್ಮ ಕಣ್ಣಮುಂದೆ ತರಿಸುತ್ತದೆ. ಇದು ಸಾಂಸ್ಕೃತಿಕ ಸಂಶೋಧನದ ಮುಖ್ಯ ನೆಲೆಗಳನ್ನೂ ಪಾತಳಿಗಳನ್ನೂ ರೀತಿ-ರಿವಾಜುಗಳನ್ನೂ ತಿಳಿಸುತ್ತದೆ. ಶಂಬಾ ಅವರ ನಂತರ ಈ ಸಂಶೋಧನ ವಿಧಾನವು ಹೆಚ್ಚು ಬಳಕೆಗೆ ಬಂದಿಲ್ಲ. ಕನ್ನಡದ ಸಂಸ್ಕೃತಿ ಚಿಂತಕರು ಈ ಬಗೆಯ ಅಧ್ಯಯನ ಮಾದರಿಗಳನ್ನು ಬಳಕೆಗೆ ತರುವುದು ಅವಶ್ಯವಿದೆ. (ಸಂ.)

ಅಗ್ನಿ-ಜಾತವೇದನ ಆರಾಧನೆಯೇ ಮೊತ್ತಮೊದಲು ಇದ್ದು. ಆ ಬಳಿಕ ಅಗ್ನಿ : ನಚಿಕೇತನ ಉಪಾಸನೆಯು-ಮಂಡಲ ಪೂಜಾದಿ ನಡೆವಳಿಕೆಗಳು-ರೂಢಿಗ ಬಂದಿರಲಿಕ್ಕೆ ಬೇಕೆಂಬಲ್ಲಿ ಸಂದೇಹವಿಲ್ಲ. ಈ ಭಾಷಿಕ ಶಬ್ದಪ್ರತಿಮೆಗಳಲ್ಲಿ ಅಗ್ನಿ: ಜಾತವೇದನು ಸೌರನಿದ್ದರೆ, ಅಗ್ನಿ : ನಚಿಕೇತನು ಚಾಂದ್ರನಿದ್ದಾನೆ! ಭಾಷೆಯ ಈ ಸ್ತರಗಳು ಅಭ್ಯಸನೀಯವಾಗಿವೆ. ಮೊತ್ತಮೊದಲಲ್ಲಿ, ಪ್ರಕಾಶತತ್ವದ ವಿಭಾಗತ್ರಯದ ಕಾಲಗತಿಯ ಪ್ರೇರಣೆಯಲ್ಲಿ ಮೈವೆತ್ತ ಭಾಷೆಯಲ್ಲಿ ಅಂತಃಸಂಗತಿಗೆ ಪ್ರಾಧಾನ್ಯವಿರಬಲ್ಲುದು. ನ ಚಿಕೇತಾಗ್ನಿ ಉಪಾಸಕರ ಸಂಪ್ರದಾಯವು ಪ್ರಭಾವಶಾಲಿಯಾಗ ತೊಡಗಿದಂತೆ, ಭಾಷೆಯಲ್ಲಿ ಅಂತರ್ ವಿಸಂಗತ ಅಭಾವಾತ್ಮಕ ಪದ ಪ್ರಯೋಗಗಳ ಹೆಚ್ಚಳವಾಗುತ್ತವೆ!

ಈ ಮಾನವನ ಬಾಳಿನಲ್ಲಿ ಪಾತಳಿಗಳು ಉಂಟು. ಸ್ವರ್=ಸೌರಪಾತಳಿ. ಇದು ಪ್ರಜ್ಞಾ : ಮನಸ್ಸನ್ನು ರೂಪಿಸುವುದರಿಂದ ಈ ಭಾಷೆಯಲ್ಲಿ ಅಂತಃಸಂಗತಿಗೇ ಪ್ರಾಧಾನ್ಯವಿರಬಲ್ಲುದು. ಆದಕಾರಣ, ಈ ಪಾತಳಿಯು ಮಾನವನನ್ನು ಅವಿವೇಕಿಯಾಗಗೊಡಲಾರದು. ಪ್ರಜ್ಞೆ ಎಂದರೆ ಲೆಕ್ಕಾಚಾರದ ಬುದ್ಧಿಯಲ್ಲ. ಬುದ್ಧಿಯು ಬಿಡಿಬಿಡಿಯಿಂದ ಇಡಿಯ ಕಡೆಗೆ ಹೋಗುವ ಪ್ರವೃತ್ತಿಯುಳ್ಳದ್ದು. ಇದಕ್ಕೆ ಪ್ರತಿಯಾಗಿ ಪ್ರಜ್ಞೆಯು ಇಡಿಯಾದ ಭೂಮಿಕೆಯಿಂದ ಸಮೀಕ್ಷಿಸುವ ಸ್ವಭಾವದ್ದು. ಇದನ್ನು ನಿಗಮನ ಪದ್ಧತಿ ಎನ್ನಬಹುದು. ಗೆಸ್ಟಾಲ್ಟ್ ಮಾನಸಶಾಸ್ತ್ರವು ಈ ಭೂಮಿಕೆಯನ್ನು ಎತ್ತಿ ಹಿಡಿಯುತ್ತದೆ. ಪಾತಳಿಯು ಬಾಳಿನ ಅರ್ಥವನ್ನು ನಿರ್ದಿಷ್ಟಪಡಿಸುತ್ತದೆ. ಜೀವನದ (ಸ್ವರ್) ಪಾತಳಿಯ ರೀತಿಗೆ ತೀರ ವಿಪರೀತವಾಗಿ ಜೀವಿತದ : ಇಂದ್ರಿಯಗಳ ಪಾತಳಿಯ ಪ್ರೇರಣೆಯು ಇರುತ್ತದೆ. ಅಂತರ್ ವಿಸಂಗತಿಯೇ ಸ್ಥಾಯಿ ಆಗುವ ಈ ಪಾತಳಿಯ ಮೇಲೆ ಲೈಂಗಿಕ ಪ್ರಚೋದನೆಯು ಪ್ರಭಾವಶಾಲಿಯಾಗುವುದು ನಿಶ್ಚಿತವಿದೆ. ವೃತ್ತಮಧ್ಯ ಸ್ಥಂಭಾಕೃತಿಯ ಕಾಲತತ್ವದ ಪ್ರಚೋದನೆಯು ಈ ಪಾತಳಿಯನ್ನು ರೂಪಿಸುತ್ತದೆ.

ಆದಕಾರಣ, ಪಾತಳಿಗಳು ಬಾಳಿನ ಅರ್ಥಕ್ಕೆ ಕಾರಣವಾಗುತ್ತವೆ. ಕಾಲಗತಿ ಮತ್ತು ಪಾತಳಿಗಳು ಇವೆರಡರಲ್ಲಿ ಇರುವ ಅಂತಃಸಂಬಂಧವು ಮನನೀಯವಿದೆ.

೧. ಸೌರ : ಪ್ರಕಾಶತತ್ವದ ಕಾಲಗತಿ : ನಿನ್ನೆ-ಇಂದು-ನಾಳೆ ಸ್ವರೂಪದ ವಿಭಾಗತ್ರಯದ ಈ ಕಲಾಗತಿಯು, ವ್ಯಕ್ತಿ ನಿರಪೇಕ್ಷ ಸ್ವರೂಪದ್ದಾಗಿದೆ: ಸಾಮಾಜಿಕ-ಸ್ವರೂಪದ್ದಾಗಿದೆ.

೨. ಸ್ಥಲಕ್ಕೆ ಬದ್ಧ ಕಾಲಗತಿಯು ವ್ಯಕ್ತಿಸಾಪೇಕ್ಷವಾಗಿದೆ. ಇದು ನಿತ್ಯ ವೃತ್ತಾಕೃತಿಯದು. ವೃತ್ತಾಕೃತಿ ಈ ಸಾಂಕೇತಿಕತೆ ತುಂಬಾ ಅರ್ಥಪೂರ್ಣವಿದೆ. ವೃತ್ತ (೦) ಇದು ಏಕಕಾಲಕ್ಕೆ ಉಭಯಾರ್ಥದ್ದು : ಪೂರ್ಣ ಮತ್ತು ಟೊಳ್ಳು.

ಕೆಲವೊಂದು ಅಧ್ಯಾತ್ಮಗಳಲ್ಲಿ ಶೂನ್ಯಸಂಪಾದನೆ ಎಂಬ ಪರಿಭಾಷೆಯುಂಟು. ಇಲ್ಲಿ ಈ ಶೂನ್ಯದ ಈ ಅನುಭಾವ ನಿಶ್ಶಬ್ದಂ ಬ್ರಹ್ಮದ ಸಾಕ್ಷಾತ್ಕಾರಕ್ಕೆ ಕಾರಣವಾಗುತ್ತವೆ. ಅಥರ್ವವೇದದಲ್ಲಿ ವೃತ್ತಮಧ್ಯಸ್ಥ ಸ್ಕಂಭದೇವನ ಸೂಕ್ತವಿದೆ. 'ಸಲಿಲಸ್ಯ ಮಧ್ಯೇ' ನಿಂತ ಈ ಸ್ಕಂಭವು ಸೃಷ್ಟಿಗೆ ಕಾರಣಶಕ್ತಿ ಎಂಬ ವರ್ಣನೆ ಅಲ್ಲಿದೆ. ಋಗ್ವೇದದ ವಿಷ್ಣುಸೂಕ್ತದಲ್ಲಿ ಮಧುಸ್ರವಿಸುವ ಪಾದದ ಈ ದೇವನು ಭೂಲೋಕಕ್ಕೆ ಆಧಾರಭೂತ ಸ್ತಂಭವಾಗಿದ್ದಾನೆ, ಎಂಬ ವರ್ಣನೆ ಇದೆ. ಪ್ರತಿಮೋಪಾಸನೆಯಲ್ಲಿ ಬಂದ ಅನುಭವಗಳು ಇಲ್ಲಿ ಒಡಮೂಡಿ ನಿಂತಿವೆ.

ಭಗವತ್ ಗೀತೆ : ಗ್ರಂಥನಾಮ = ಗ್ರಂಥಸ್ಥ ಆಶಯ

ಗ್ರಂಥನಾಮ ಮತ್ತು ಆ ಗ್ರಂಥಸ್ಥ ಆಶಯ ಇವೆರಡರಲ್ಲಿ ಅನ್ಯೋನ್ಯವಿಲ್ಲದ ತಾತ್ವಿಕ-ಧಾರ್ಮಿಕ ಗ್ರಂಥಗಳು ಇರಲಾರವು. ಶ್ರೀಮತ್ ಮತ್ತು ಭಗವತ್ ಇರುವ ಈ ಗೀತೆಯ ಆಶಯವು ಏನು ?ಎಂಬ ಬಗೆಗೆ ಒಮ್ಮತವು ಕಾಣುವುದಿಲ್ಲ ಇದರ ಅನ್ವಯಾರ್ಥದ ನಿಟ್ಟಿನಿಂದ! ಆದರೆ, ನಾನು ಇದನ್ನು ಅರ್ಥವಿಸಲು ಮಾಡಿರುವ ಪ್ರಯತ್ನಗಳಲ್ಲಿ ಗ್ರಂಥನಾಮದ ನಿಟ್ಟೂ ಒಂದು. ಇನ್ನೂ ಬೇರೆ ಬಗೆಯ ಪ್ರಯತ್ನಗಳ ಬಗೆಗೆ ಇಲ್ಲಿ ವಿವರಿಸುವುದು ಅಪ್ರಸ್ತುತ. ಮಹಾರಾಷ್ಟ್ರದ ಸಸರು ದೇವರ ಬಗೆಗ ಹೇಳುವಾಗ 'ನಾಮ ತೇಚಿ ರೂಪ, ರೂಪ ತೇಚಿ ನಾಮ' ನಾಮ

(Essence) ಮತ್ತು ರೂಪ (form) ಇವೆರಡರಲ್ಲಿ ಅನ್ಯೋನ್ಯವಿರುತ್ತದೆ ಎಂದು ಹೇಳುತ್ತಾರೆ. ಈ ಸೂತ್ರವನ್ನೇ ಪ್ರಸ್ತುತ ಗೀತೆಯ ಆಶಯ ಗ್ರಹಣಕ್ಕೂ ಉಪಯೋಗಿಸಲಾಗಿದೆ. ಈ ಹೆಸರಿನ ಆಕೃತಿ ಮತ್ತು ಆಶಯ ಇವೆರಡರಲ್ಲಿ ಅನ್ಯೋನ್ಯವಿದ್ದುದು ನನಗೆ ಕಂಡು ಬಂದಿತು. ಇದನ್ನೆಲ್ಲ ಪ್ರಾಜ್ಞರ ಪರಾಮರ್ಶೆಗೂ ಅರುಹಿದ್ದಾಗಿದೆ. ಪ್ರಣವ : ಓಂಕಾರಕ್ಕೆ ಅತ್ಯಂತ ಮಹತ್ತ್ವವನ್ನಿತ್ತಿರುವ ಈ ಗ್ರಂಥದಲ್ಲಿ ಅರ್ಥ : ವಿಚಾರಕ್ಕಿಂತ ನಾದರೂಪ ಧ್ವನಿಗೇ ಪ್ರಾಧಾನ್ಯವಿರಲಿಕ್ಕೇ ಬೇಕಷ್ಟೆ? ಪ್ರಣವ : ಪ್ರಾಣತತ್ತ್ವದ ಮಂತ್ರ, ಪ್ರಾಣತತ್ತ್ವವು ನಿತ್ಯವಾಗಿ ಕತ್ತಲಿನ ಅರಣ್ಯದಲ್ಲೇ ಇರುವ ಸ್ವಭಾವದ್ದು. ಪ್ರಾಣ = ಪ್ರ+ಅನ=ಉಸಿರು ಎಂದರೆ ಶ್ವಸನ. ಈ ಉಸಿರು ಇದು ಆಧಾರವಿಲ್ಲದೆ ಅರಿಕೆಗೆ ಬರಲು ಶಕ್ಯವಿಲ್ಲ. ಉಪನಿಷತ್ತು ಹೇಳುತ್ತದೆ: 'ಪ್ರಾಣೋ ವಾ ಅಂಗಾನಾಂ ರಸಃ' ಈ ಅಂಗ=ಇಂದ್ರಿಯ ರಸವು ದೇಹದ ಕತ್ತಲಲ್ಲೆ ಇರಬೇಕಾದ ಅನಿವಾರ್ಯತೆಯಿದೆ. ಈ ಕಾರಣದಿಂದಾಗಿ ಗೀತೆಯ ಅರ್ಥ ಕೈಗೆ ಎಟುಕುವುದು ದುಸ್ತರವಾಗಿದೆ. ಆದರೆ, ಈ ಪವಿತ್ರ ಗ್ರಂಥನಾಮವು ಪ್ರಯೋಜನಕ್ಕೆ ಬಂದೀತೇ? ಎಂಬ ಜಿಜ್ಞಾಸೆ ತಲೆದೋರಿ ಮಾಡಿರುವ ಪ್ರಯತ್ನವಿದು.

ಶ್ರೀಮತ್ ಭಗವತ್ ಇರುವ ಈ ಗೀತೆಯ ಕೇಂದ್ರಸ್ಥ ಪಾತ್ರದ, ಆಕೃತಿ ಸ್ವರೂಪ

ಈ ಗೀತೆಯನ್ನು ಶ್ರೀಮತ್ ಎಂಬಲ್ಲಿ, ಶ್ರೀ ಲಕ್ಷ್ಮೀದೇವಿಯ ಆಕೃತಿಯು ಅಭಿಪ್ರೇತವಿದೆ. ಈ ಗೀತೆಯು, ಭಗವತ್ ಇರುವುದಾಗಿ ಇಲ್ಲಿಯೇ ಹೇಳಿದೆ. ಭಗವತ್ ಎಂದರೆ ಭಗವತಿ ಶ್ರೀದೇವಿಯಂತೆ ಈ ಗೀತೆಯಿದೆ.

ಶ್ರೀನಿವಾಸನು, ಈ ಗೀತೆಯ ಪ್ರಧಾನ ಪಾತ್ರ ತಾನೆ? ಇಲ್ಲಿ ಶ್ರೀ=ಭಗ ಆಗುತ್ತಿರುವುದರಿಂದ ಇದು ಯೋನಿಲಿಂಗೈಕ್ಯದ ಚಿತ್ರವು ಆಗುತ್ತಿದೆ! ಭಕ್ತ ಶಿರೋಮಣಿ ಕನಕನಿಗೆ ಆಲಯದ ಕಂಡಿಯ (ಬಯಲ) ಒಳಗಿಂದ ಶ್ರೀ ಭಗ-ವಂತನ ದರ್ಶನವು ಲಭಿಸುತ್ತಿತ್ತು : ಎಂಬ ಐತಿಹ್ಯವೂ ಮೇಲಣ ವಿವರಣವನ್ನು ಪುಷ್ಟೀಕರಿಸುತ್ತಿದೆ! ಈ ಭಗವಂತನು ಗರ್ಭ-ಗುಡಿಯಲ್ಲಿಯೇ ಇರುವುದನ್ನು ಅಲ್ಲಗಳೆಯಲು ಆದೀತೆ? ಮೂಲದಲ್ಲಿ, ಭಗ ಈ ಪದವು, ಸವಿತೃ : ಸೂರ್ಯನದು. Applied : espe, ಸವಿತೃ, ಎಂದು ಮೊದಲಾಗಿ ಮೋನಿಯರ್ ವಿಲಿಯಂಸ್ ಕೋಶ ಹೇಳುತ್ತದೆ. ಧೀರೂಪೀ ಪ್ರಜ್ಞಾ: ಪ್ರಕಾಶತತ್ತ್ವದಲ್ಲಿ ಭಾಗಿಗಳಾಗಲು ಭಾಜಕರಾಗಲು, ಭಕ್ತರಿಗೆ ನೆರವಾಗುವ ಉದಾರದಾನಿ ದೇವನು ಈ ಭಗನು.* ಉದಾ : ದೇವಸ್ಯ ಸವಿತುಃ, ವಯಂ... ಭಗಸ್ಯ ರಾತಿಂ ಈಮಹೇ[೨]

ಮಾನವ ಧರ್ಮದ ಪ್ರಾರ್ಥನೆಗಳು ಸಾಮಾಜಿಕವಿದ್ದುದರಿಂದ ಮೇಲಣ. ಪ್ರಾರ್ಥನೆಯಲ್ಲಿ 'ವಯಂ' ಬಹುವಚನಾಂತವಿದೆ. ಆದರೆ, ಮಾನವಧರ್ಮವು ರಾತ್ರ-ಸಮಯಾಚಾರವನ್ನು ಮೆಚ್ಚಿಕೊಂಡ ಬಳಿಕ, ಇದು ನರ(ಳ) ಸಂಪ್ರದಾಯವಾಗಿ ಮಾರ್ಪಡುತ್ತದೆ. ಈ ಸ್ಥಿತ್ಯಂತರಕ್ಕೆ ಅನುಸರಿಸಿ, ಹಗಲಿನ ದೇವರು : ಸೂರ್ಯನು, ರಾತ್ರಿ ಸೂರ್ಯನಾಗುತ್ತಾನೆ! ಅಸೌ ಆದಿತ್ಯಃ ಸವಿತಾ![೩]

ಹಗಲಿನ ಸಾಮಾಜಿಕ ಸಮಷ್ಟಿ ಸಂದರ್ಭದ ಧೀರೂಪೀ ಪ್ರಕಾಶತತ್ತ್ವದ ಸವಿತೃವು : ರಾತ್ರೀ ಸೂರ್ಯ : ಆದಿತ್ಯ (ಲಿಂಗ) ಆಗುತ್ತಾನೆ! ಹಗಲಿನ ಸಮಯಾಚಾರದ ಆಧಾರದ ಭಗ ಈ ಸಂಕೇತವು, ರಾತ್ರ ಸಮಯಾಚಾರಗಳ ಸಂದರ್ಭದಿಂದ ಭಗವು ಯೋನಿ ಎಂಬ ಅರ್ಥದ್ದಾಗಿದೆ! ವೇದದಲ್ಲಿ ಮೂಲತಃ ಪ್ರಜ್ಞಾ: ಪ್ರಕಾಶ ತತ್ತ್ವವೇ ಬ್ರಹ್ಮಶಕ್ತಿ ಎಂಬ ನಿಷ್ಠೆಯಿತ್ತು. ಆದಕಾರಣ, ತತ್‌ಸವಿತುಃ ಎಂಬುದೇ ಮೂಲ ಬ್ರಹ್ಮನ್ ತತ್ತ್ವ. ಈ ಪ್ರಾರ್ಥನಾಮಂತ್ರದ ದ್ರಷ್ಟಾರನನ್ನು ಬ್ರಹ್ಮನ್ ಎಂದು ಬಗೆವ ವಾಡಿಕೆಯಿತ್ತು.

---

* ಭಗ ಶಬ್ದಶಿಲ್ಪವು ಮೂಲದಲ್ಲಿ ಸವಿತೃವಿನ ಪರ್ಯಾಯ ಪದವಾಗಿತ್ತು. ಪ್ರಕಾಶ ತತ್ತ್ವದಲ್ಲಿ ಭಾಗಿಯಾಗಲು ಪ್ರಚೋದಿಸುವ ಪ್ರತಿಮೆಯಿದು. ಋಗ್ವೇದ ಸಂಹಿತೆಯಲ್ಲಿ 'ದೇವಸ್ಯ ಸವಿತು: ವಯಂ ಭಗಸ್ಯ ರಾತಿಂ ಈಮಹೇ' (III - ೬೨-೧೧) ಪ್ರಕಾಶ ರೂಪ, ಸವಿತೃ-ಭಗನ ಮೂಲಕ ಜ್ಞಾನ ಸಂಪತ್ತನ್ನು ನಾವು ಕೋರುತ್ತೇವೆ ಎಂಬುದು ಈ ಮಂತ್ರದ ತಾತ್ಪರ್ಯ. 'ತತ್ ಸವಿತುಃ' ಎಂಬ ಗಾಯತ್ರಿ ಮಂತ್ರದಲ್ಲಿಯೂ 'ಭಗ'ನು ಪ್ರಜ್ಞಾ: ಪ್ರಕಾಶತತ್ತ್ವದ ಪ್ರತೀಕ. ಆದರೆ, 'ನರ'ಸಂಪ್ರದಾಯದ ಗೀತೆಯ 'ಭಗ'ವಂತ. ಇಲ್ಲಿ 'ಭಗ' ಎಂಬ ಶಬ್ದಶಿಲ್ಪವು 'ಯೋನಿ' ಆಗುತ್ತದೆ. ಭಗ ಶಬ್ದಶಿಲ್ಪದ ಪ್ರತಿಮಾಭಂಜನೆ ಇಲ್ಲಿದೆ. (ಸಂ)

ವಿಶ್ವಮಿತ್ರಸ್ಯ ಬ್ರಹ್ಮೇದಂ ರಕ್ಷತಿ ಭಾರತಂ ಜನಂ![೪]

ವಿಶ್ವಾಮಿತ್ರನನ್ನು ಪದಭ್ರಷ್ಟ ಮಾಡಿ ಈ ಸ್ಥಾನವನ್ನು ದಕ್ಷಿಣತಃ ಕಪರ್ದಃ ವಸಿಷ್ಠನು ಆಕ್ರಮಿಸಿದ್ದಾನೆ. (ಯೋನಿ)-ಲಿಂಗವೇ: ಇಂದು, ಈ ಸ್ವಯಂಭೂ ಮನ್ವಂತರದ ಬ್ರಹ್ಮನ್ ಶಕ್ತಿ ಆಗಿದೆ! ಇದಕ್ಕೆ ಪ್ರಮಾಣವೇನು? ಆದಿತ್ಯಃ ಬ್ರಹ್ಮ ಇತಿ ಆದೇಶಃ![೫] ಈ ವಚನದೊಳಗಿನ ಆದೇಶ (ಕಟ್ಟಪ್ಪಣೆ ಎಂಬ ಮಾತು, ಈ ಆದಿತ್ಯ ಸಂಪ್ರದಾಯವು ಹೊಸದಾಗಿ ಬಂದದ್ದು ಎಂಬುದನ್ನು ಬಯಲಿಗೆ ಎಳೆಯುತ್ತಿದೆ! ಈ ಪ್ರಕಾಶತತ್ತ್ವದ ವಿಶ್ವಾಮಿತ್ರನ ಬ್ರಹ್ಮನ್ ಸಂಪ್ರದಾಯವನ್ನು ಹಿಮ್ಮೆಟ್ಟಿಸಿ, ಆ ಸ್ಥಲದಲ್ಲಿ ಪ್ರತಿಷ್ಠಿತವಾಗಿರುವ ಆದಿ (ಭಗವಾನ್ ವಿಷ್ಣು : ಕೃಷ್ಣ) ಶಕ್ತಿಯು ಯೋನಿ ಲಿಂಗೈಕ್ಯ ಸ್ವರೂಪದ್ದೇ ಆಗಿದೆ. ಎಂಬುದನ್ನು ನಿದರ್ಶನಕ್ಕೆ ತರುವ ಪ್ರಮಾಣಗಳು ಬೇಡವೆ? ಛಾಂದೋಗ್ಯದಲ್ಲಿ ಈ ಪ್ರಮಾಣಗಳು ಉಂಟು.[೬] ಚಂದ್ರಾ-ಆದಿತ್ಯ ಮಿಥುನದ ಚಿತ್ರವು ಇಲ್ಲಿದೆ. ಆದಿತ್ಯನ ನಿಟ್ಟಿನಿಂದ ಇದನ್ನು ಸಮೀಕ್ಷಿಸಲಾಗಿದೆ.

... ಯತ್ ಏತತ್ ಆದಿತ್ಯಸ್ಯ ಶುಕ್ಲಂ ಭಾಃ ಸಾ ಏವ ಸಾ।
ಯತ್ ನೀಲಂ ಪರಃ ಕೃಷ್ಣ ತತ್‌ಅಮಃ!
ಅಥಃ ಯಃ ಏಷಃ ಆದಿತ್ಯೇ ಹಿರಣ್ಮಯಃ ಪುರುಷಃ ದೃಶ್ಯತೇ. ಏಷಃ ಹಿರಣ್ಯ ಶ್ಮಶ್ರುಃ
ಹಿರಣ್ಯಕೇಶಃ ಆ-ಪ್ರನಖಾನ್ ಸರ್ವಂ ಏವ ಸು-ವರ್ಣಃ [೭]

ಭಗವತ್ ಗೀತೆಯ ಭೂಲೋಕಸ್ಥ ಪುರುಷನ ಚಿತ್ರ ಇದು. ಪುರುಷ (ಲಿಂಗ) ಹೇಳುತ್ತಾನೆ: ಮಯಾ ಅಧಿ ಅಕ್ಷೇಣ ಪ್ರಕೃತಿಃ ಸೂಯತೇ... ನನ್ನ ಅಧಿಅಕ್ಷ (axle) ದಿಂದ ಪ್ರಕೃತಿದೇವಿ ಪ್ರಸವಿಸುತ್ತಾಳೆ). ವೇದದಲ್ಲಿ ಈ ಅಕ್ಷವು ದಶಾಂಗುಲವಿದೆಯೆಂದು ಹೇಳಿದೆ. ಗೀತೆಯು ಭಗವಂತನು. ತಾನು ರಸಃ ಅಹಂ ರಸ (ರೇತ-ಶುಕ್ರ) ರೂಪನು ಎಂದಿದ್ದಾನೆ. ದಶಾಂಗುಲ ಲಿಂಗರೂಪನಿರುವ ವೃಕ್ಷ ಅಕ್ಷ ರೂಪೀ ಭಗವಂತನು ಗೀತೆ ಬೋಧಿಸಿದ್ದು, ಯಾವ ವದನದಿಂದ? ರಸಸ್ವರೂಪೀ ಆಗುವ ಈ ಭಗವಂತನು ಉಪದೇಶಿಸಿರುವ ಈ ಗೀತೆಯು ಪ್ರಪಂಚಕ್ಕೆಲ್ಲ ಕೇಳಲು ದೊರೆಯುತ್ತಿರುವ ಈ ಪವಾಡ : ಚಮತ್ಕಾರ ಭಾನಾಮತಿ (White Black Magic) ಅಲ್ಲದೆ ಮತ್ತೇನು, ಇದಕ್ಕೆ ಹೆಸರು?

ಭಾರತೀಯ ಸಂಸ್ಕೃತಿಯೊಳಗಿನ ಭಾನಾಮತಿ ಮಾಡಿದ ಮೂಲ ಮಾದರಿ

ಸ್ವರ್ ಭಾನುವಿನ ಸಾಮರ್ಥ್ಯ ಸ್ವರ್‌ಭಾನುವು, ಸೂರ್ಯನನ್ನು (ಪ್ರಜ್ಞೆಯನ್ನು) ತಮಸ್ಸಿನಿಂದ ಕಣ್ಮರೆಯಾಗಿಸಿದ್ದಾನೆ. ಅ-ಕ್ಷೇತ್ರವಿತ್ ಜನಕ್ಕೆ ದಿಕ್ಕು ತಿಳಿಯದಾಯ್ತು![೮] ಈ ಭಾನಾಮತಿಗೆ ಒಳಗಾದ ಅಂದಿನವರಿಗೆ, ಚಂದ್ರ (ಅದಿತ್ಯ) ಲೋಕವು ಸೂರ್ಯಸ್ಯ ಉರಿ ಉಂಟು ಎಂದು ಕಾಣತೊಡಗುತ್ತದೆ! ವಿಷ್ಣುವಿನ ಪರಮ ಪದವೇ ಈ ತುರೀಯಂ ಎಂಬ ಶ್ರದ್ಧೆ ತಲೆಯೆತ್ತುತ್ತದೆ.[೯] ನಿಜವಾದ ಸೂರ್ಯ (ಪ್ರಜ್ಞೆ) ಕಣ್ಮರೆಯಾದರೂ ಅತ್ರಿಯು, ತುರಿಯೇಣ ಬ್ರಹ್ಮಣಾ ಗೂಳ್ಹಂ ಸೂರ್ಯಂ ಅವಿಂದನ್' ಈ ತುರೀಯಾ ಬ್ರಹ್ಮನ್ ಎಂದರೇನು? ನಿದ್ರಾ, ಸ್ವಪ್ನ ಸುಷುಪ್ತಿ ಮತ್ತು ತುರೀಯಾ ಎಂಬುದು ವ್ಯಕ್ತಿಮುಕ್ತಿಯ ಸ್ಥಲ. ಆದುದರಿಂದ ತುರೀಯಾ ಬ್ರಹ್ಮನ್ ಇದು, ರಾತ್ರೀ ಸಮಯದ ಬ್ರಹ್ಮನ್ ಶಕ್ತಿ ಆಗುತ್ತದೆ!

ಆದಕಾರಣ, ಈ ತುರೀಯೆಯಲ್ಲಿ ಅಡಗಿದ್ದ ಸೂರ್ಯನು ಇವನು, ಆದಿತ್ಯ: ಪುರುಷ (ಲಿಂಗ)ನೇ ಆಗುತ್ತಿದ್ದಾನೆ.[೧೦] ರಾತ್ರೀ ಸಮಯದ ಈ ಬ್ರಹ್ಮನ್ : ಆದಿತ್ಯ-ಸೂರ್ಯನು ಇರುವ ಎಡೆ ಯಾವುದು? ಸ್ವರ್‌ಪಾತಳಿಯ ಹಗಲಿನ ಸೂರ್ಯನ ಮೇಲ್ಗಡೆಗೆ! ನಿಜವಾದ ಮೂಲ ವ್ಯಾಹೃತಿಗಳು ಉಂಟು. ಆದರೆ, ಈ ತುರೀಯಾ ಎಂಬ ಚತುರ್ಥೀ ವ್ಯಾಹೃತಿಯೂ ಉಂಟು ಎಂದು ನಂಬಿಸಲು ಮಾಡಿರುವ ಅಭಿಚಾರಕೃತ್ಯವು ತೈತ್ತಿರೀಯ ಉಪನಿಷತ್ತಿನಲ್ಲಿದೆ.[೧೧] ಮಹಃ ಇತಿ! ತತ್ ಬ್ರಹ್ಮ. ಈ ಮಹತ್ ಎಂದರೆ, ಆದಿತ್ಯ: ಬ್ರಹ್ಮನ್ ಮತ್ತು ಈ ಮಹತ್ ಎಂದರೆ ತುರೀಯಾ: ಚಂದ್ರಾ: ಚಮಸ; ಮುಕ್ತಿದಾಯಕ ಪುರಿ! ಇದನ್ನು ದೇವಾನಾಂ ಪೂಃ (ಪುರಿ) ಎಂದು ಅಥರ್ವವೇದದಲ್ಲಿ

ಹೇಳಲಾಗಿದೆ. ಭೂಲೋಕದಲ್ಲಿ ಅಯೋಧ್ಯಾ, ಮಥುರಾ, ಕಾಶೀ, ಕಾಂಚೀ ಇತ್ಯಾದಿ. ಸಪ್ತೈತೇ ಮೋಕ್ಷದಾಯಕಾಃ ಎಂಬ ಪುರಿಗಳು ಅಸ್ತಿತ್ವದಲ್ಲಿ ಬಂದಿವೆ. ಭೂಲೋಕಸ್ಥ ತುರೀಯಾ ಬ್ರಹ್ಮನ್ ಈ ಸ್ಥಲ ಬಯಲು!

ಭಾರತೀಯ ಧರ್ಮ : ಸಂಸ್ಕೃತಿಯಲ್ಲಿ ಆಗಿರುವ ಪಲ್ಲಟವನ್ನು ಮನಗಾಣಿಸಿಕೊಡಬಲ್ಲ ಶಬ್ದ-ಪ್ರತಿಮೆ: ಈ ತುರೀಯಾ ಬ್ರಹ್ಮನ್ ನಾಮ-ರೂಪ. ಮನು>ಮಾನವ ಧರ್ಮಸಂಪ್ರದಾಯದಲ್ಲಿ ಮೂಲ ನಿಷ್ಠಾಸ್ಥಾನವಾದ ಮನು: ವೈವಸ್ವತ ಇದೇ ಬ್ರಹ್ಮನ್ ಆಗಿದೆ. ಆದರೆ, ಕುಮಾರ-ಕುಮಾರೀ ಪಂಥೀಯ ನರ (ಳ) ಸಂಪ್ರದಾಯದ ಪ್ರಭಾವದಲ್ಲಿ ವಿವಸ್ವನ್>ವೈವಸ್ವತನನ್ನು, ಆದಿತ್ಯನೆಂದು ನಂಬಿಸಲಾಯಿತು. ಗೀತೆಯಲ್ಲಿ ಇದರ ಪುರಾವೆ ಇದೆ. 'ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನ್ ಅಹಮ್' ಎಂದು ಗೀತೆಯ ಭಗವಂತ, ತಾನು ವಿವಸ್ವನ್-ಸೂರ್ಯನಿಗೆ ಯೋಗ ಬೋಧಿಸಿದೆ ಎಂದು ಹೇಳುತ್ತಾನೆ! ನೆತ್ತಿಗಣ್ಣ ಆದಿತ್ಯನ ಪರ್ಯಾಯವಾದ ಈ ಕೃಷ್ಣನು ತಾನು ಕಾಲಃ ಅಸ್ಮಿ ಲೋಕಕ್ಷಯ ಕೃತ್‌ಪ್ರವೃದ್ಧಃ (ಲೋಕಕ್ಷಯಕ್ಕಾಗಿ ನಿಗುರಿ ನಿಂತಿರುವ ಕಾಲಶಕ್ತಿ) ಎಂಬ ಈ-ತನು ಸೂರ್ಯನಿಗೆ : ವಿವಸ್ವಂತನಿಗೆ ಬೋಧಿಸಿದೆನು ಎಂಬ ಯೋಗ ಯಾವ ಸ್ವರೂಪದ್ದು ಇದ್ದೀತು?

ಮನು : ವೈವಸ್ವತ ಸಂಪ್ರದಾಯವು ಹಿಮ್ಮೆಟ್ಟುವಾಗ ಅದರ ಸ್ಥಳದಲ್ಲಿ ಈ ಭಾರತೀಯ ಪ್ರಕಾಶತತ್ವದ ಆರಾಧಕರು ಧೀ : ಪ್ರಜ್ಞಾಪ್ರಚೋದಕ ಸವಿತೃ ಎಂಬ ಇನ್ನೊಂದು ದೇವರ 'ಆರಾಧನೆಯನ್ನು ರೂಢಿಸಿದ್ದಾಯಿತ್ತು! ಈ ಪ್ರಾಣೋಪಾಸಕ ಅಸುರ ಸಂಪ್ರದಾಯವು ಸವಿತೃ ಪ್ರತಿಮಾಭಂಜನವನ್ನು ಮಾಡಿದೆ. ಭಗ ಪ್ರಕಾಶವನ್ನು : ಜ್ಞಾನವನ್ನು ವಿಭಾಗಿಸಿ ಹಂಚುವ ಈ ದೇವನನ್ನು ಭಗವಂತ ಎಂಬ ಪದವಿಗೆ ಯೋಜಿಸಿದ್ದರಿಂದ ಈ ಪದಕ್ಕೆ ಯೋನಿ ಅರ್ಥ ಬಂತು! ಪ್ರಸ್ತುತ ತುರೀಯ ಬ್ರಹ್ಮ= ಸವಿತೃ = ದೇವನನ್ನು ಹೆಣ್ಣು ರೂಪದಲ್ಲಿ ಕಲ್ಪಿಸಲು ಮಾಡಿರುವ ಈ ಅಭಿಚಾರ ಕೃತದ ಪೂರ್ವಸೂಚನೆ ಋಗ್ವೇದ ಈ ಅತ್ರಿ ಮಂಡಲದಲ್ಲಿ ಬಂದಿದೆ. ಛಾಂದೋಗ್ಯ ಹಾಗೂ ಬೃಹದಾರಣ್ಯಕದಲ್ಲಿ ಸಹ ಈ ಭಾನಾಮತಿಯನನ್ನು ನೋಡಬಹುದಾಗಿದೆ.[೧೨] ತುರೀಯಾ ಪದವು ಯೋನಿ ಅರ್ಥದಲ್ಲಿ ಇದೆ.

ಪ್ರಸ್ತುತ ಟಿಪ್ಪಣಿಯಲ್ಲಿ ಋಗ್ವೇದದಲ್ಲಿರುವ ಒಂದು ಆಸುರೀಕೃತ್ಯದ ಉಲ್ಲೇಖವು ಉಂಟು. ಈ ಅಸುರಪುತ್ರನೆಂಬ ಸ್ವರ್‌ಭಾನುವು* ಸೂರ್ಯನನ್ನು ತಮಸ್ಸಿನಿಂದ ಕಾಣದಂತೆ ಮಾಡಿದ್ದಾನೆ. ಋಗ್ವೇದ ಈ ದೃಶ್ಯವು ಸೂರ್ಯಗ್ರಹಣ ಎಂಬ ಸಂಭ್ರಮ ನಿರ್ಮಿಸುವ ಯಾತು ಆಗಿದೆ. ಪಾಶ್ಚಾತ್ಯ ಸಂಶೋಧಕರು ಇದನ್ನು ಸೂರ್ಯಗ್ರಹಣ ಎಂದೇ ಬಗೆದಿದ್ದಾರ. ಡಾ. ಎಂ. ಚಿದಾನಂದಮೂರ್ತಿ ಅವರು ಬರೆದಿರುವ ಗ್ರಹಣಗಳು ಎಂಬ ಗ್ರಂಥದಲ್ಲಿ ಇದೇ ಬಗೆಯ ಉಲ್ಲೇಖವಿದೆ. ಆದರೆ, ಇದರಲ್ಲಿ ಅಡಗಿರುವ ಸಾಂಕೇತಿಕ ಪದವನ್ನು ಗಮನಿಸುವುದು ಅವಶ್ಯವಿದೆ. ತುರೀಯಾ ಪದವು ಈ ವೇದದಲ್ಲಿಯೇ ಹಲವೆಡೆಗೆ ಬಂದಿದೆ.[೧೩] ಇಲ್ಲಿ ಈ ಪದಕ್ಕೆ ಸೋಮಪಾನ ಪಾತ್ರೆ (ಯೋನಿ) ಎಂಬ ಅರ್ಥ ಉಂಟು. ಉಪನಿಷತ್ತುಗಳಿಂದ ಈ ಅರ್ಥಕ್ಕೆ ಬೆಂಬಲ ದೊರೆಯುತ್ತದೆ.

ಇಂಥ ಇನ್ನೊಂದು ಸಾಂಕೇತಿಕ ಅರ್ಥಸೂಚನೆ. ಸೂರ್ಯನು (ಪ್ರಜ್ಞಾಸೂರ್ಯನು) ತಮಸ್ಸಿನಿಂದ ಆವೃತನಾಗಿ ಕಾಣೆಯಾಗುತ್ತಾನೆ. ಆಗ ಜನ ಅಕ್ಷೇತ್ರವಿತ್ ಮುಗ್ಧ = ಮೂಢರಾಗುತ್ತಾರೆ! ಭಾರತದಲ್ಲಿ ಗ್ರಹಣಗಳ ಬಗೆಗೆ, ವಿಶೇಷವಾಗಿ ಸೂರ್ಯಗ್ರಹಣದ ಬಗೆಗೆ ಭಯಭೀತರಾಗುವ ಈ ಅಂಶವನ್ನು ಡಾ. ಎಂ. ಚಿದಾನಂದಮೂರ್ತಿ ಚೆನ್ನಾಗಿ ನಿವೇದಿಸಿದ್ದಾರೆ. ಈ ಮಾನವನು ಸೂರ್ಯ-ಚಂದ್ರ ಮಿಥುನದ ತಮಸ್ಸಿನ ಪ್ರಭಾವದಲ್ಲಿ ಪ್ರಜ್ಞೆಗೆ ಎರವಾಗುತ್ತಾನೆ, ಎಂಬ ಭಯವು ಇಲ್ಲಿ ಅಭಿಪ್ರೇತವಿದೆ. ಮಾನವನು, ವಿನಾಶಕಾಲವು ಸಮೀಪಿಸುವಾಗ ಬುದ್ಧಿಗೆ ಎರವಾಗುತ್ತಾನೆ.

---

* ಸ್ವರ್ಭಾನು ಅಸುರನ ಮಗ, ಇವನು ತಮಸ್ಸಿನಿಂದ ಸೂರ್ಯನನ್ನು ಕಣ್ಮರೆ ಮಾಡಿದವನು. ಪ್ರಜ್ಞೆಯನ್ನು ಕಣ್ಮರೆಯಾಗಿಸಿ ಲಿಂಗಶಕ್ತಿಯನ್ನು ಮೆರೆದ ವಿವರಗಳು ವೇದಗಳಲ್ಲಿವೆ. ಇವನು ಅರಿವಿಗೆ ವಿರೋಧಿ. ಅಕ್ಷೇತ್ರವಿತ್ ಜನರಿಗೆ ಮಂಕು ರಚಿಸಿದ್ದೂ ಉಂಟು. 'ಸೂರ್ಯ ಲೋಕಸ್ಯ ಉಪರಿ ಚಂದ್ರಮಸೋ ಲೋಕಃ' ಸೂರ್ಯಲೋಕದ ಮೇಲೆ ಚಂದ್ರಲೋಕ ಉಂಟೆಂದು ಹೇಳಿ ಭ್ರಮೆ ಹುಟ್ಟಿಸಿದ್ದವನು ಈತನೇ. ಶಂಬಾ ಪ್ರಕಾರ ಆದಿತ್ಯನ ಪರ್ಯಾಯ ನಾಮವಿದು (ಸಂ)

ಮೊದಲು ಬುದ್ಧಿಗೇಡಿ ಆಗುತ್ತಾನೆ, ಬಳಿಕ ಅವನು ನಾಶದ ದಾರಿಗೆ ಹತ್ತುತ್ತಾನೆಂಬ ಗ್ರಹಿಕೆ ತೀರ ಸುಳ್ಳಲ್ಲವಾದರೂ ಭಾರತೀಯ ಪೂರ್ವಪರಂಪರೆಯಲ್ಲಿ ಪ್ರಜ್ಞಾನಾಶಕ್ಕೆ ತುಂಬ ಅಳಕುತ್ತಿದ್ದರು ಎಂಬುದು ಗ್ರಹಣಗಳ ಬಗೆಗಿನ ಭೀತಿಯಿಂದ ಸಿದ್ಧವಾಗುತ್ತಿದೆ. ಯೋನಿ-ಲಿಂಗಶಕ್ತಿ : ಪ್ರಾಣಲಿಂಗ ಶಕ್ತಿಯು ಪ್ರಜ್ಞೆಯನ್ನು ಶತ್ರುಸ್ವರೂಪದಲ್ಲಿ ಕಾಣುತ್ತದೆ, ಎಂಬುದು ಮಾನವೇತಿಹಾಸದಿಂದಲೂ ಸ್ಪಷ್ಟವಾಗುತ್ತಿದೆ. ಎಂಕಿ : ಪ್ರಜ್ಞಾರೂಪೀ ದೇವ: ಎಂಕಿಡು: ಕೊಂಬು ಕಟ್ಟಿಕೊಂಡು ಪಶುಶ್ರೇಷ್ಠನಾಗುವ ದಾರಿಯಲ್ಲಿ ಹೊರಟ ನರ(ಳ) ನ ಪ್ರತೀಕ ಈ ಬಗೆಯ ಪ್ರತಿಮೆಗಳು ಸುಮೇರಿಯನ್ ಸಂಸ್ಕೃತಿಯಲ್ಲಿವೆ.

ಈ ಕುಮಾರ-ಕುಮಾರೀ ಪಂಥದ ಪುರಾತನರು ಸುಳ್ಳಾಡಲು ಹೇಸಿಲ್ಲ. 'ಸೂರ್ಯಲೋಕಸ್ಯ ಉಪರಿ ಚಂದ್ರಮಸೋ ಲೋಕಃ' ಎಂದು ನಂಬಿಸುವ ಮಾತ ಮಾಡಿದ್ದಾರೆ.[೧೪]

ಟಿಪ್ಪಣಿಗಳು

೧. B.Kuznetsoy ***Albert Einstein*** p. 71
೨. ***ಋಗ್ವೇದ ಸಂಹಿತೆ*** ೪.೬೨.೧೧
೩. ***ಮೈತ್ರಾಯಣೀ ಉಪನಿಷತ್ತು*** ಉ. ೧.೬. ೬.
೪. ***ಋಗ್ವೇದ ಸಂಹಿತೆ*** III. ೫೩-೧೨
೫. ***ಛಾಂದೋಗ್ಯೋಪನಿಷತ್ತು*** ೩.೯೧.
೬. ***ಅದೇ*** ೧.೬.೬
೭. ಈ ಆದಿತ್ಯನಲ್ಲಿ ಕಾಣುವ ಬಂಗಾರದಂಥ ಪುರುಷ (:ಲಿಂಗವು) ಇವನ ಮೀಶೆ, ಕೇಶ, ಉಗುರಿನ ವರೆಗಿನ ಎಲ್ಲವೂ ಸುವರ್ಣದಂತಿದೆ
೮. ***ಋಗ್ವೇದ ಸಂಹಿತೆ*** III. ೪೦.೫
೯. ಹೆಚ್ಚಿನ ವಿವರಣೆಗಾಗಿ, ***ಋಗ್ವೇದ ಸಂಹಿತೆ:*** ಭಾಷಾಂತರ ಮೈಸೂರ ಅರಮನೆಯ ಪ್ರಕಟನೆ, ಸಂಪುಟ ೧೭, ಪು. ೬೦೩-೪, ಮತ್ತು ಸಂ. ೧೯, ಪು. ೩೨೫-೩೫ರಲ್ಲಿ ಬರುವ ವಿವರಗಳನ್ನು ಗಮನಿಸಿ.
೧೦. ***ಇಂಚರ,*** (ಮಾಸಿಕ) ಏಪ್ರಿಲ್ ೧೯೮೨ ಪುಟ. ೧೪ ನೋಡಿ
೧೧. ***ತೈತ್ತಿರೀಯೋಪನಿಷತ್ತು*** ೧.೫
೧೨. ***ಛಾಂದೋಗ್ಯೋಪನಿಷತ್ತು*** ೫.೨.೬-೭; ***ಬೃಹದಾರಣ್ಯಕೋಪನಿಷತ್ತು*** ೫.೧೪
೧೩. ***ಋಗ್ವೇದ ಸಂಹಿತೆ*** II. ೩೭. ೪; IV. ೪೫. ೧; IX. ೯.೭೬ ಮುಂತಾದ ಋಕ್‌ಗಳನ್ನು ಗಮನಿಸಬಹುದು.
೧೪. ***ತೈತ್ತಿರೀಯ ಉಪನಿಷತ್ತು*** ನೋಡಬಹುದು. ೧:೫. ಋಗ್‌ಭಾಷ್ಯದ ೯ನೆಯ ಮಂಡಲದಲ್ಲೇ ಈ ಮಂತ್ರ ಭಾಗ ಉಂಟು.

ಜೀವನ : ಸಾಹಿತ್ಯ ಮತ್ತು ಕಲೆ
ವಿಮರ್ಶಾತತ್ವದ ಮೂಲಸೂತ್ರ(ಗಳು)

ಮಾನವ ಜೀವನವನ್ನು ಪ್ರತಿನಿಧಿಸುತ್ತಿರುವ ಆ-ಕೃತಿಯ ಪ್ರಕಾರಗಳು ಎರಡು. ಇದು ತತ್ವತಃ ಒಂದೇ ಆಕೃತಿ: ಆದರೆ ಕಾಣಲು ಮಾತ್ರ ಎರಡು ! ಇವೆರಡನ್ನು ಜೀವನ (ಮಾನವ) ಮತ್ತು ಜೀವನ (ನರ) ಎಂಬ ಹೆಸರಿನಿಂದ ಗುರುತಿಸಲಾಗುತ್ತದೆ. ಆದರೆ, ಜೀವಿತ (ನರ) ಜೀವನದ (ಮಾನವನ) ಅಂಗವೇ ಹೊರತು ಜೀವಿತಕ್ಕೆ (ನರನಿಗೆ) ಜೀವನದಿಂದ (ಮಾನವನಿಂದ) ಸ್ವತಂತ್ರ ಅಸ್ತಿತ್ವ-ಸ್ಥಾನವು ಇಲ್ಲವೇ ಇಲ್ಲ. ಏಕೆಂದರೆ ಸ್ಥಲಕಾಲಕ್ಕೆ ಸಂಬದ್ಧ ಈ ಜೀವಿತದಲ್ಲಿ ಅ-ಭಾವವೇ ಸ್ಥಾಯಿ ಇರುತ್ತದೆ. ಆದಕಾರಣ, ಭಾವಾತ್ಮಕ, ಅನುಭವಾತ್ಮಕ-ಜೀವನದಿಂದ ನಿತ್ಯವಾಗಿ ಅಭಾವಾತ್ಮಕವಿರುವ ಜೀವಿತಕ್ಕೆ (ನರನಿಗೆ) ಸ್ವತಂತ್ರ ಅಸ್ತಿತ್ವವೇ ಇಲ್ಲದುದರಿಂದ ಜೀವನದೊಡನೆ ಸಾಂಗತ್ಯವಿರುವ ಜೀವಿತದ ಪಾತಳಿಯುಕ್ತ ಈ ಆಕೃತಿಯು ಒಂದೇ ಒಂದು ಆಗುತ್ತಿದ. ಜೀವನದ ಆಕೃತಿಯ ವೈಶಿಷ್ಟ್ಯವನ್ನು,ಅರಿಸ್ಟಾಟಲ್, Form is immanent in things (ಆಕೃತಿಯು ಆಂತರಿಕ ಗುಣದಲ್ಲಿ ಅಳವಟ್ಟಿದೆ) ಎಂದು ಹೇಳುತ್ತಾನೆ. ಕಾಲಿದಾಸನು ಆಕೃತಿ ಗುಣಕ್ಕೆ ವಿರೋಧಿಯಾಗಿ ಇರುವುದಿಲ್ಲ ಎಂದಿರುವಲ್ಲಿ, ಬಾಹ್ಯ ಆಕೃತಿಗೆ ಆಂತರಿಕ ಗುಣವೇ ಕಾರಣ ಎಂಬ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ.

ಈ ವಿಚಾರವನ್ನು ಮಾನವಶಾಸ್ತ್ರಜ್ಞ ಕ್ರೋಬರನು, ಪಾತಳಿಗಳ ಭಾಷೆಯಲ್ಲಿ ಹೇಳುತ್ತಾನೆ : Culture is super organic ಸಂಸ್ಕೃತಿಯು, ಸ್ಥಲ (ಕಾಲ)ದ- ಮಣ್ಣಿನ ವಾಸನೆಯ ಮೇಲ್ಗಡೆಯ ಪಾತಳಿಯಲ್ಲಿ ಉಂಟು, ಮಣ್ಣಿನ ವಾಸನೆಯನ್ನು: ಸ್ಥಲ ಬಯಲಿಗೆ (೦) ಸಂಬದ್ಧ ಇಂದ್ರಿಯ ಪಾತಳಿಯನ್ನು ಮೆಚ್ಚಿಕೊಂಡಿರುವ ಇಂದಿನ ಸಾಹಿತ್ಯ-ಕಲೆ ಇದು. ಅಮಾನವ ಪುರುಷ : ನರಸಂಪ್ರದಾಯವನ್ನು ಪ್ರತಿನಿಧಿಸುತ್ತಿದೆ ಎಂಬಲ್ಲಿ ಸಂದೇಹವಿಲ್ಲ.

ವೇದದ ಪರಿಭಾಷೆಯಲ್ಲಿ, ಜೀವಿತದ ಪಾತಳಿಯ ಈ ಅಭಿವ್ಯಕ್ತಿಗೆ, ಸ್ವರ್‌ಭಾನುವಿನ (ಆದಿತ್ಯ : ಲಿಂಗಶಕ್ತಿಯ) ಪ್ರಚೋದನೆಯೇ ಕಾರಣವಿರುತ್ತದೆ. ಈ ಅಂಶವನ್ನು ಖಚಿತಪಡಿಸುವ ಎರಡು ಉದಾಹರಣೆಗಳನ್ನು ಈ ಮೊದಲು ಎತ್ತಿ ಹೇಳಿದ್ದಾಗಿದೆ.

೧. ಶ್ರೀ -ಮತ್ ಭಗ-ವತ್ (೦) ಇರುವ ಈ ಗೀತೆಯ ಕೇಂದ್ರಸ್ಥ ಪಾತ್ರದ ಆಕೃತಿ ಸ್ವರೂಪವು ಯಾವುದು? ಯೋನಿ-ಲಿಂಗೈಕ್ಯದ ಪುರಿಶಯ ಪುರುಷನೇ ಗೀತೆಯ ಕೇಂದ್ರಸ್ಥ ವ್ಯಕ್ತಿ ಎಂಬುದನ್ನು ಯಾರೂ ಅಲ್ಲಗಳೆಯಲು ಶಕ್ಯವಿಲ್ಲ.

೨. ಈ ಮೂಲ ಮಾದರಿಯ, ಭಾನಾಮತಿ-ಮಾಟವು ಇಂದಿನ ವೇದದಲ್ಲಿಯೇ ಇವೆ. ತುರೀಯಾ-ಬ್ರಹ್ಮನ್ ಸಿದ್ಧಿಯಿಂದ ಕಣ್ಮರೆಯಾಗಿದ್ದ (ರಾತ್ರೀ) ಸೂರ್ಯನನ್ನು

ಅತ್ರಿಯು ಸಂಪಾದಿಸಿದನು, ಎಂಬ ಈ ನಿರ್ದೇಶನದಲ್ಲಿರುವ ನಿದ್ರಾ, ಸ್ವಪ್ನ, ಸುಷುಪ್ತಿಯ ತರುವಾಯದ ಈ ತುರೀಯಾ ಪಾತಳಿಯು, ರಾತ್ರ ಸಮಯಾಚಾರ ಸಂಸ್ಕೃತಿಯಲ್ಲಿ ಎರಡು ಬಗೆಯ ಆಚಾರಗಳುಂಟು. ಒಂದು ರಾತ್ರಸಮಾಯಾಚಾರ ಮತ್ತೊಂದು ಹಗಲು ಸಮಯಾಚಾರ. ಜೀವನ ಕ್ಷೇತ್ರದಲ್ಲಿ ಈ ಎರಡೂ ಆಕಾರಗಳು ಇರುತ್ತವೆ. ಇದು ದೇಶ-ಕಾಲ-ಬದ್ಧವಲ್ಲ. ಅವು ಸಾರ್ವತ್ರಿಕವಾದವು. ಈ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಅಂತಃಸಂಗತಿಗಳ ವಾತಳಿಗಳನ್ನು ತಿಳಿಯಲು ಶಂಬಾ ಅವರು ಈ ಎರಡು ಪಾತಳಿಗಳನ್ನು ರೂಪಿಸಿದ್ದಾರೆ. ಅಥವಾ ಅವು ರೂಪಿತಗೊಂಡಿವೆ. (ಸಂ) ಪರಿಭಾಷಾ ಸೂಚಕವಾಗಿದೆ! ಆದಕಾರಣ, ತುರೀಯಾ ಬ್ರಹ್ಮನ್ ಶಕ್ತಿಯಿಂದ ಪಡೆದ ಈ ಸೂರ್ಯನು, Son- ಮನೆತನದ ಜ್ಯೋತಿ ಆಗುತ್ತಾನೆ; Sun ಆಗಿರಲಾರನು.

ಹೀಗೆ, ಭಾವಾತ್ಮಕ-ಅನುಭವಾತ್ಮಕ-ಜೀವನ ಪಾತಳಿಯನ್ನು ಜೀವಿತದ ಲೈಂಗಿಕ ಪಾತಳಿಯ ಮೇಲೆ ತಂದದ್ದಾಗಿದೆ. ಇದರಿಂದಾಗಿ, ಜೀವನ ವಿಮರ್ಶೆಯಲ್ಲಿ ಅವಶ್ಯವಾಗಿ ಭೇದವು ಇರಲೇಬೇಕಾದ ಜೀವನ ಮತ್ತು ಜೀವಿತ ಈ ತಾರತಮ್ಯವು ಉಳಿಯದೆ, ಇಂದ್ರಿಯಗಳ ಪಾತಳಿಯ ಈ ವಿಮರ್ಶೆಯಲ್ಲಿ ಜೀವನ ಮೌಲ್ಯಗಳಿಗೆ ಬೆಲೆ ಇಲ್ಲದಂತಾಗಿದೆ. ಭಾವಾತ್ಮಕ ಅನುಭವಾತ್ಮಕ ಪಾತಳಿಯನ್ನು ಇಲ್ಲವಾಗಿಸಿರುವುದರಿಂದ ಇಂದು ಸಾಹಿತ್ಯ ಎಂದರೆ ಕೇವಲ ಕಲ್ಪನಾ ವಿಲಾಸದ, ನಿಯತಿಕೃತ ನಿಯಮಗಳನ್ನು ಲೆಕ್ಕಿಸದಿರುವ ಸಾಹಿತ್ಯವಾಗಿದೆ. ಅತ್ಯುಕ್ತಿಯ ಆಭಾಸಾತ್ಮಕ ಆಸುರೀಮಾಯಿಕ ಕೃತಿಗಳೇ ಶ್ರೇಷ್ಠ ಎಂಬ ಗ್ರಹಿಕೆಗೆ ಇಂಬು ದೊರೆತಿದೆ.

ವಿಚಾರಗಳಿಗೆ ಸನಾತನ ಆಕೃತಿಗಳುಂಟು

ವಿಚಾರಗಳಿಗೆ ಅದರದೇ ಆದ ಸನಾತನ ಆಕೃತಿಯು ಇರುವ ಈ ಸೂಕ್ಷ್ಮವು ಭಾರತೀಯ ಪ್ರತಿಭೆಗೂ ಸೋಂಕಿರಲಾರದೆ? ಎಂಬ ಸಂದೇಹವು ನನ್ನನ್ನು ಕೆಲಕಾಲ ಕಾಡಿತು. ಪಾಶ್ಚಾತ್ಯ ತತ್ವಜ್ಞರ Thoughts have perennial forms ಎಂಬ ಉಕ್ತಿಯು ನನ್ನನ್ನು ಆಕರ್ಷಿಸಿತ್ತು. ಅಂದಿನ ನೆನಪು ಇದು. ಕಾಲಿದಾಸನ ಉಕ್ತಿಯಲ್ಲಿ ಆಕೃತಿಯ ಪರಿಭಾಷೆಯನ್ನೂ ಕಂಡಾಗ ತುಂಬ ಸಮಾಧಾನವಾಯ್ತು. "ನ ತಾದೃಶಾಃ ಆಕೃತಿ ವಿಶೇಷಃ ಗುಣವಿರೋಧಿನೋ ಭವಂತಿ" ಆಕೃತಿಗೆ, ಕೃತಿಗೆ ಅಂತರಿಕ ಗುಣವೇ ಕಾರಣವಿರುತ್ತದೆ. ಈ ತಾತ್ವಿಕ ಮೂಲಗಾಮೀ ದೃಷ್ಟಿಕೋನಕ್ಕೆ ಭಾರತೀಯರು ಇಂದು ಎರವಾಗಿದ್ದಾರೆ! ಏಕೆ? ಕಾಲಿದಾಸನಿಗೂ ಮುಂಚಿನ- ಪ್ರಾಚೀನ ವ್ಯಾಸ ಮಹಾಭಾರತದಲ್ಲಿಯೂ ವೈಚಾರಿಕ ಆಕೃತಿಯ ವಿಚಾರವು ಕಾಣಿಸಿಕೊಂಡಿದೆ. "ಜಯೋಽಯಂ ಅ-ಜಯಾಕಾರಃ ಪ್ರತಿಭಾತಿ, ಮೇ ಪ್ರಭೋ, ಈ ಉಕ್ತಿಯು ಮೃತ್ಯುತತ್ವದ ಕುಮಾರನು ಎಂಬ ಧರ್ಮನ ಬಾಯಿಂದ ಬಂದಿರುವಲ್ಲಿ, ಒಟ್ಟಿನ ಈ ಆಕೃತಿಯು ಇನ್ನೂ ಭಯಾವಹ ಸ್ವರೂಪದ್ದು ಆಗುತ್ತಿದೆ! ಹೇ ಪ್ರಭುವೆ, ನಮಗೆ ದೊರೆತಿರುವ ಈ ಜಯವು ಅಜಯದ ಆಕಾರದ್ದೇ ಇರುವುದಾಗಿ ನನಗೆ ಕಾಣುತ್ತಿದೆ ಎಂದು ಈ ಧರ್ಮನೆಂಬುವನು ಉದ್ಗರಿಸಿದ್ದಾನೆ. ಕುರುಕ್ಷೇತ್ರದಲ್ಲಿ ಗೆಲುವು ದೊರೆತರೂ, ಈ ಘೋರ ಯುದ್ಧದ ಒಟ್ಟಿನ ದುಷ್ಪರಿಣಾಮಗಳನ್ನು ಲೆಕ್ಕಿಸಿ, ತಮಗೆ ದೊರೆತ ಜಯವು ಅ-ಜಯವೇ ಆಗಿದೆ, ಎಂದು ನಿಟ್ಟುಸಿರು ಹೊರಬಂದದ್ದು ಈ ಸನ್ನಿವೇಶದಲ್ಲಿ ಕಾಣುತ್ತಿದೆ. ಜಯ ಮತ್ತು ಅಜಯ ಇವೆರಡೂ ಸಮಾನ ಎಂಬ ಕಾವ್ಯಸತ್ಯವು ಮೇಲಣ ವಿಶಿಷ್ಟ ಸಂದರ್ಭದಲ್ಲಿ ಸಮರ್ಪಕವೆನಿಸಿದರೂ ಇದನ್ನು ಮಾನವನ ಬಾಳಬಗೆಗೆ ಪೋಷಕ ಪ್ರೇರಕ ಉಕ್ತಿಯೆನ್ನಬಹುದೇ? ಸದಾ ಸತ್ಯವನ್ನೇ ಆಡುವವನು ಎಂದು ನಂಬಿಸಲಾಗಿರುವ ಈ ಧರ್ಮನ ಬಾಯಿಯಿಂದ, ಮೃತ್ಯುತತ್ವದ ಉಪಾಸನೆಗೆ ತಳ್ಳುವ ಅಂತಃಸಾಮರ್ಥ್ಯದ ಅಂಶಸತ್ವದ ಈ ವಾಕ್ಯವನ್ನು ಆಡಿಸಿರುವ ವ್ಯಾಸನ ಉದ್ದೇಶವು ಏನಿರಬಹುದು?

ಪಂಚಮವೇದ ಎಂಬ ಮಹಾಭಾರತ, ಗೀತೆ, ರಾಮಾಯಣಾದಿ ಮೋಕ್ಷಮಾರ್ಗ ಪ್ರತಿಪಾದಕ ಕಾವ್ಯಗಳಲ್ಲಿ ಅಡಗಿರುವ ಕಾವ್ಯಸತ್ಯವು, ಮಾನವನನ್ನು ಪ್ರವೃತ್ತಿ ಪರಜೀವನ ರೀತಿಯಿಂದ ಹಿಂದುರಿಗಿಸಿ ಮೋಕ್ಷಾರ್ಥಿಯನ್ನಾಗಿ

ಮಾಡಬಲ್ಲ, ಘೋರ ಅಮೋಘ ಸಾಮರ್ಥ್ಯವುಳ್ಳದ್ದಾಗಿದೆ. ಪ್ರಚಲಿತ ಭಾರತೀಯ ಸಂಸ್ಕೃತಿಯನ್ನು ರೂಪಿಸಿದವನು ವ್ಯಾಸನೆಂಬ ಸಾಂಕೇತಿಕ ಹೆಸರಿನ ಪ್ರತಿಭಾವಂತನೇ, ಎಂಬುದು ಸರ್ವಮಾನ್ಯವಿದೆ. ದೀವಳಿಗೆಯ ಹಬ್ಬ : ಪ್ರವೃತ್ತಿ ಪರಜೀವನ ರೀತಿಯೊಳಗಿನ ಒಂದು ಮಹತ್ವದ ಘಟ್ಟವೇನೊ ಸರಿ. ಆದರೆ, ಇದನ್ನು ರೂಪಿಸಿರುವಲ್ಲಿ ಹುದುಗಿರುವ ತಂತ್ರದ ವೈಚಾರಿಕ ಆಕೃತಿಯ ವಿಮರ್ಶೆಯು ಇನ್ನೂ ಆಗಬೇಕಾಗಿದೆ. ಇಲ್ಲಿ ಆಳಕ್ಕೆ ಇಳಿದು ನೋಡುವ ವಿಮರ್ಶೆಗೆ ಅವಕಾಶವಿಲ್ಲ. ಆದರೂ ಮಾದರಿಗಾಗಿ ಒಂದು ನಡೆವಳಿಯನ್ನು ಎತ್ತಿ ಹೇಳಬಹುದು.

ವ್ಯವಹಾರಸ್ಥರು, ಈ ಹಬ್ಬದ ಅಂಗವಾಗಿ ಶ್ರೀ ಲಕ್ಷ್ಮೀ-ಸರಸ್ವತಿಯರನ್ನು ಪೂಜಿಸುವ ವಾಡಿಕೆಯಿದೆ. ಗೋಡೆಗೆ ಈ ದೇವಿಯರ ಚಿತ್ರಪಟ ಹಚ್ಚಿ ಅದರ ಪಕ್ಕದಲ್ಲಿ 'ಲಾಭಾಲಾಭೌ', 'ಜಯಾಜಯೌ' ಎಂಬ ಜೀವನಾದರ್ಶ ಸೂಚಕ ವಾಕ್ಯಗಳನ್ನು ಬರೆಯಲಾಗುತ್ತದೆ. ತಾನು ಪಾಸಾದರೂ ಅಷ್ಟೆ, ನಪಾಸಾದರೂ ಅಷ್ಟೆ ಎಂಬ ಉದಾತ್ತ (?) ಗುರಿಯಿಂದ ವ್ಯಾಸಂಗ ನಡೆಸುವ ವಿದ್ಯಾರ್ಥಿ, ಏನಾಗಬಲ್ಲನು? ಅಪ್ರಮಾಣಿಕತನದಿಂದಲ್ಲ; ಯೋಗ್ಯರೀತಿಯಿಂದ ವ್ಯಾಪಾರಮಾಡಿ ಲಾಭ ಪಡೆಯಬೇಕು, ಎಂಬ ಆಕಾಂಕ್ಷೆ ಇಲ್ಲದೆ ಲಾಭವಾದರೂ ಸರಿ, ಹಾನಿಯಾದರೂ ಸರಿ ಎಂದು ಹೇಳುವ ವ್ಯವಹಾರಸ್ಥನ ಪ್ರಾಮಾಣಿಕತನವು ಸಂದೇಹಾಸ್ಪದವಾದಲ್ಲಿ ಸೋಜಿಗವೇನು?

ಬಾಳಿನಲ್ಲಿ ಗೆಲುವು ದೊರೆಯಬೇಕು, ಎಂಬ ಪ್ರಾಮಾಣಿಕ ಆಕಾಂಕ್ಷೆಯವರು ಭಾವಾತ್ಮ ಅನುಭವಾತ್ಮಕ ವೈಚಾರಿಕ ಆಕೃತಿಯ ವಿಚಾರಗಳನ್ನೇ ಆಳ ಗುರಿಯಾಗಿಸಿಕೊಳ್ಳುವ ಎಚ್ಚರಪಡುವುದು ಲೇಸು. ಅಭಾವಾತ್ಮಕ-ವೈಚಾರಿಕ ಆಕೃತಿಗಳು, ಕತ್ತಲಿನ ಉಪಾಸನೆ, ಮೃತ್ಯುಪೂಜೆಯಾಗಿ ಪರಿಣಮಿಸುವುದು ನಿಶ್ಚಿತವಿದೆ. ಉದಾ : ಅ-ಮೃತತ್ತ್ವ ಸಿದ್ಧಿಯು ಬಾಳಗುರಿ ಅ-ಮೃತವು ಅ-ಭಾವಾತ್ಮಕ ಶಬ್ದಪ್ರತಿಮೆ. ಅ-ಮೃತ ಅರ್ಥಶೂನ್ಯ ಸಂಕೇತ! ಅರ್ಥಶೂನ್ಯತೆ, ಇದು ಕತ್ತಲಿನ ಪರ್ಯಾಯ. ಅ-ಮೃತಾಂಶು-ಸುಧಾಂಶು ಎಂಬ ಚಂದ್ರನು, ನಿಶಾನಾಥನು! ಐಹಿಕ ಪ್ರವೃತ್ತಿಪರ ಜೀವನಕ್ಕೆ ಬೆನ್ನುತಿರುವಿ, ನಿವೃತ್ತಿಮಾರ್ಗದ ಮೋಕ್ಷದ ಬೆಂಬತ್ತಲು ಒತ್ತಾಯಪಡಿಸುವ ಅಂತಃಶಕ್ತಿಯು ಈ ಅಭಾವಾತ್ಮಕ ಅಮೃತ ಸಂಕೇತದಲ್ಲಿದೆ. 'ಅಹಿಂಸಾ ಪರಮೋ ಧರ್ಮಃ' ಬಹಳ ದೊಡ್ಡ ಆದರ್ಶ. ಆದರೆ, ಇದೂ ಅಭಾವಾತ್ಮಕ ವಿಚಾರ. ಉಸಿರಾಟವೂ ಹಿಂಸೆಗೆ ಕಾರಣವಾಗುತ್ತದೆ, ಎಂದು ಬಗೆಯಲಾಗುವ ಸಂಪ್ರದಾಯವು ಮೃತ್ಯುತತ್ವದ ಆರಾಧನೆಯಾಗಿ ಪರಿಣಮಿಸಿದ್ದುಂಟು.

ಕೃತಿಯೇ ಆಕೃತಿಗೆ ಕಾರಣ; ಆಶಯವು ಕೃತಿಗೆ ಪ್ರೇರಕ. ಆದಕಾರಣ, ಭಾಷೆಯ ಆಂತರಿಕ ಗುಣ ಪ್ರಕಾಶಯುಕ್ತವಿದ್ದರೆ ಉಂಟಾಗುವ ಆಕೃತಿಯು: ಸಾಹಿತ್ಯ ಕಲಾಕೃತಿಯು ಲೋಕಕಲ್ಯಾಣಕಾರಿಯೇ ಆದೀತು. ಆದರೆ, ಆಂತರಿಕ ಗುಣವು ಕತ್ತಲು : ಪ್ರಾಣಲಿಂಗ ಪ್ರಚೋದಕ ಇದ್ದಲ್ಲಿ, ಇದು ಆಸುರೀ ನಾನಾ ಆಕೃತಿ ರೂಪದ್ದು ಆಗುವುದು ನಿಶ್ಚಿತ. ಒಂದೊಂದು ಶ್ಲೋಕಕ್ಕೆ ಇರಬಲ್ಲ ನಾನಾರ್ಥಗಳ ಶಕ್ಯತೆಯ ಕಾವ್ಯಕಲೆ, ಅಪೂರ್ವವಾಗಬಹುದು. ಆದರೆ, ಗ್ರೀಕಿನ ತತ್ತ್ವಜ್ಞಾನಿ ಗೋರ್ಜಿಯಾಸ್ ಹೇಳಿರುವಂತೆ ಅದು ಮಾನವ ಜೀವನ ಸಂಹಾರಕ ಟೈಂಬಾಂಬು ಆಗಬಲ್ಲುದು. ನಮ್ಮ ವೇದ, ಉಪನಿಷತ್ತು. ಮಹಾಭಾರತ-ಗೀತೆ, ರಾಮಾಯಣಾದಿಗಳೇ ಈ ವ ಮಾತಿಗೆ ಉತ್ತಮ ಸಾಕ್ಷಿ.

ವೈಚಾರಿಕ ಆಕೃತಿ : ಏಕಂ ಸತ್

ಸೃಷ್ಟಿಗೆ ಕಾರಣ ಎಂಬ ಈ ಏಕಂ ಏವ ಅದ್ವಿತೀಯಂ ಸ್ವರೂಪೀ ಸತ್ ಶಕ್ತಿ ಉಂಟು, ಎಂದಲ್ಲಿ / ಸ್ವಯಂ ಭೂ ಒಂದು ಕೇವಲ ಕಾಲ್ಪನಿಕವೇ ಇದ್ದೀತು. ಏಕೆಂದರೆ, ಈ ಬಾಳಿನಲ್ಲಿ ಅನುಕ್ರಮಾಂಕಗಳು ಮಾತ್ರ ಉಂಟು; ಹಿಂದು-ಮುಂದು ಇಲ್ಲದ, ಇಂತಹ 'ಒಂದು' ಇದ್ದಿದ್ದೇ ಆದರೆ ಇದು ಸ್ವಾಯಂಭುವೇ ಇರಬಲ್ಲುದು. ಇಂತಹ ಕಲ್ಪಿತ ಸ್ವಯಂಭೂ ಸಂಖ್ಯೆ ಇದ್ದುದೇ ಆದರೆ, ಇದು ಶೂನ್ಯವೇ (೦) ಇರಲಿಕ್ಕೆ ಬೇಕು. ಈ ಶೂನ್ಯ (೧) ರೂಪೀ ಒಂದು ಆದಿಯಲ್ಲಿ ಇತ್ತು, ಎಂದಲ್ಲಿ, ಈ ಏಕಂ (೧), ಇದು ಸೃಷ್ಟಿ-ವ್ಯಕ್ತಿ ನಿರಪೇಕ್ಷ ಪ್ರಸವಕ್ಕೆ ಕಾರಣ ಎಂಬ ಒಂದು ಯೋನಿ ಮಂಡಲವೇ ಇರಬೇಕಾಗುತ್ತದೆ. ಆದರೆ, ಪ್ರಾಣೆಯ ಅಂಗ (೦) ಅಲ್ಲದಿರುವ, ನಿರಾಳ ನಿರಾಲಂಬ ಯೋನಿಮಂಡಲವು ಈ ಜೀವನವಿಶ್ವದಲ್ಲಿ ಇದ್ದದ್ದು ಈ ವರೆಗೂ ಕಂಡುಬಂದಿಲ್ಲ. ವೇದದಲ್ಲಿ, ಮಾತಾರುದ್ರಾಣಾಂ ಎಂಬ ಅದಿತಿ ವಿಶ್ವಜನನಿಯು ಉಂಟೆಂದು ನಂಬಿಸಲಾಗಿದೆ.[೧] ಆದರೆ, ಈ ಅದಿತಿಯು

ಅಮೃತಸ್ಯ ನಾಭಿಃ ಸ್ವರೂಪಳು, ಎಂಬ ಈ ಆಕೃತಿಯು ಮಾನವೀ ಭೂಲೋಕದಲ್ಲಿ ಇಲ್ಲ! ಇದು ಮಂಡಲ ರೂಪ ಪ್ರಧಾನಾಂಗದ ಪೂಜೆ ಆಗುತ್ತಿದೆ. ಶುಭ್ರ ಚಂದ್ರಮಂಡಲದ ಮೇಲಣ ಉತ್ಪ್ರೇಕ್ಷೆಯಾಗಿದೆ. ಸನ್ಮಾರ್ಗ ದರ್ಶಕವೆಂದು ನಂಬಲಾಗಿರುವ ಈ ವೇದೋಪನಿಷತ್ ಗೀತಾದಿ ಗ್ರಂಥಗಳಲ್ಲಿಯೇ ಹೀಗೆ ಮೋಸದ ಎಡೆಗಳಿದ್ದಲ್ಲಿ ಇವನ್ನು ನಂಬಿದವರ ಅಧಃಪಾತವಾಗದೆ ಇದ್ದರೇ ಸೋಜಿಗ!

ವೇದದಲ್ಲಿ ಇರುವ ದೇವರುಗಳ ತಾಯಿ ಎಂಬ ಅದಿತಿಯು ಕೇವಲ ಒಂದು ಕಲ್ಪ (Construct) ಶ್ವೇತವರಾಹದಂತೆ. ಇಲ್ಲಿ ನಿಜವಾಗಿಯೂ ಇದ್ದದ್ದು: ನೆಲೆ-ಸ್ಥಲ: ಅವಕಾಶದ ಟೊಳ್ಳು (೦)! ಸಸ್ಯ ವೃಕ್ಷಾದಿಗಳು, ಪ್ರಾಣಿ-ಪಶುಗಳು, ಕಾಣಿಸಿಕೊಂಡು ಕಣ್ಮರೆಯಾಗುವ ಮರ್ತ್ಯಲೋಕ ಇದು! ಇದು Phenomenon-! ಶುದ್ಧ ಪ್ರಾಣಲಿಂಗ ಚೇತನದ ಪಾತಳಿ!- ಪ್ರಾಣಿಲೋಕ: ಇದು ನರಪ್ರಾಣಿಲೋಕ. ಈ ಪ್ರಾಣಿಲೋಕದಲ್ಲಿ ತಿಳಿಯಿತು ಎಂಬ ಮರು ತಿಳಿವು, ಅರಿವಿನ ಅರಿವು ಇಲ್ಲ. ಪ್ರಜ್ಞೆಯ ಅಂಗವಾಡ ಮನಸ್ಸಿನ ಪ್ರಾದುರ್ಭಾವದೊಡನೆ, ವಿಕಾಸಕ್ರಮದ ಪ್ರಕ್ರಿಯೆಯಲ್ಲಿ, ಮಾನವನು ಮೈದೋರಿದ್ದಾನೆ. ಪ್ರಾಣಿಗಳ ಪಾತಳಿಯ ಮೇಲೆ, ಮಾನವಭಾಷೆ ಮತ್ತು ಸಂಸ್ಕೃತಿ ಮೈದೋರಿಲ್ಲ. ಪ್ರಾಣಕ್ಕೆ ವೇದಕಾಲೀನ ಪರಿಭಾಷೆಯ 'ಅಸು' ಎಂಬ ಹೆಸರೇ ವಿಶೇಷ ಪ್ರಚಾರದಲ್ಲಿ ಇತ್ತು. ಅಸು : ಪ್ರಾಣಶಕ್ತಿಗೆ, ಮೊದಲು ಹೀನ ಅರ್ಥವಿದ್ದಿರಲಿಲ್ಲ. ತುಂಬ ಸಾಮರ್ಥ್ಯಶಾಲಿ: ಪ್ರಾಣಶಕ್ತಿ, ಎಂದು ಬಗೆಯಲಾಗಿತ್ತು. ಪ್ರಜ್ಞೆಯ ನಿಯಂತ್ರಣವಿಲ್ಲದ ಪ್ರಾಣಶಕ್ತಿಯ ದುಷ್ಪರಿಣಾಮಗಳು ಅರಿಕೆಗೆ ಬಂದಹಾಗೆ, ಈ ಅಸುರಶಕ್ತಿಗೆ ದೈತ್ಯ; ರಾಕ್ಷಸಾದಿ ವಿಶೇಷಣಗಳು ಅಂಟಿಕೊಂಡವು.

ಈ ಮಾನವನು, ವ್ಯಕ್ತಿ : ನರ(ಳ) ನೂ ಆಗಿದ್ದಾನೆ. ಹಗಲು ಪ್ರಜ್ಞಾ: ಪ್ರಕಾಶದ ಪ್ರಭಾವದಲ್ಲಿ ಮನು-ಜನೇ ಸರಿ. ಆದರೆ ಇವನು ನಿಶಾನಾಥನ ಪ್ರಭಾವಕ್ಕೆ ಒಳಗಾಗುವಾಗ, ಹಗಲೂ ನರ(ಳ) ನು ಆಗುತ್ತಾನೆ, ನರ: ವ್ಯಕ್ತಿ ಇವನು ಮುಕ್ತಿಯ ಸು-ಖದ ಸವಿ ಮೆಚ್ಚಿದ್ದಾನೆ. ಖಂ=ಬ್ರಹ್ಮ, ಕಂ=ಸುಖಂ ಜಲಂ; ರಸೋ ವೈ ಸಃ, ಆ-ನಂದ ಬ್ರಹ್ಮ ಎಂಬ ಮಂತ್ರಕ್ಕೆ-ಪ್ರಣವಕ್ಕೆ ಮಾರುಹೋಗುವಾಗ ಭಾರತೀಯ ಸಂಸ್ಕೃತಿಯಲ್ಲಿ ಇಡಿಯಾಗಿ ತಿರುವು ಮುರುವು ಆಗಿದೆ. ಚಂದ್ರಾ ಉಪಸ್ಥಾನದ ಸಾಧನೆಯಿಂದ, ಮಾಟ, ಭಾನಾಮತಿ ಮುಂತಾದ ಅಸುರಸಿದ್ಧಿಗಳು ದೊರೆತುದೂ ಉಂಟು. ಈ ಹಂತದಲ್ಲಿ, 'ತತ್ ಸವಿತುಃ' ಎಂಬ ಬ್ರಾಹ್ಮ-ಮೂಹೂರ್ತದ ಬ್ರಹ್ಮಶಕ್ತಿಯ ಆರಾಧನೆಯು ಬೆಲೆಗೆ ಎರವಾಯಿತು. ಸೂರ್ಯನ ಬದಲು ಆದಿತ್ಯ: ಬ್ರಹ್ಮ (ಚಂದ್ರ)ನು ಪೂಜೆಗೊಳ್ಳುವಾಗ ಲಿಂಗ-ಯೋನಿ ದೇವರಸ್ಥಾನಕ್ಕೆ ಬಂದದ್ದಾಯಿತು. ದೇಹವೇ ದೇಗುಲ ಎಂಬ ನಂಬುಗೆಯಲ್ಲಿ ಒಂದು ಕೊರತೆಯಿದೆ. ಗರ್ಭಗುಡಿ ಇಲ್ಲದ ದೇಹವು ದೇಗುಲವಾಗಲು ಹೇಗೆ ಶಕ್ಯ? ಪಾಶ್ಚಾತ್ಯ ಪರಂಪರೆಯಲ್ಲಿಯೂ City of Gods ಈ ಶಬ್ದಪ್ರತಿಮೆ ಇದೆ. ಇದನ್ನು ದೇವಪಥಃ, ಬ್ರಹ್ಮಪಥಃ, ದೇವಯಾನ ಪಥಃ ಎಂದು ವೇದೋಪನಿಷತ್ತು ಸಾರಿ ಹೇಳುತ್ತಿವೆ.[೨] ಸೃಷ್ಟಿಗೆ ಆದಿಕಾರಣ ಎಂಬ ಏಕಂ ಸತ್ ಇಂದು ಸ್ಥಲ (೦) ಆಗುವ ಅನಿವಾರ್ಯತೆಯಿಂದಾಗಿ, ಈ ಭೂಮಿಕೆಯ ಮೇಲೆ ನೈತಿಕಮೂಲ್ಯಗಳಿಗೆ ಇಂಬು ಇಲ್ಲ. ಈ ಸ್ಥಲ (೦) ಆದಿಶಕ್ತಿ, ಜನ್ಮಕೊಡುವ ಮಗನೊಡನೆ ಸಂಸಾರ ಮಾಡುತ್ತಾಳೆ! ಆದಿತೇಃ ದಕ್ಷ ಅಜಾಯತ, ಇನ್ನೊಂದು ಭೂಮಿಕೆ : ದಕ್ಷಾತ್ ಅದಿತಿಃ! ಈ ದಕ್ಷನು, ಮಗಳ ಗಂಡನಾಗುತ್ತಾನೆ, ತಾಯ್‌ಗಂಡತನಕ್ಕೆ ಬದಲಾಗಿ! ಇಂಥ ಅಂತರ್ ವಿಸಂಗತಿಯಿಂದಾಗಿ, ಅಭಾವಾತ್ಮಕ ಪಾತಳಿಯು ಶೂನ್ಯ (೦) ಆಕೃತಿಯದೇ ಆಗುವ ಅನಿವಾರ್ಯತೆಯುಂಟು. ಈ ಶೂನ್ಯ (೦) ದ ಉಪಾಸನೆ ಮತ್ತು ಮೃತ್ಯುಪೂಜೆ ಬೇರೆಯಲ್ಲ.

ಅಭಾವಾತ್ಮಕ : ಆಸುರೀ ವೈಚಾರಿಕ ಆಕೃತಿ

ಈ ವಿಮರ್ಶಾ ವಿಚಾರವು, ಅಂಶತಃ ಈ ಮೊದಲಿನ ಟಿಪ್ಪಣಿಗಳಲ್ಲಿ ಬಂದಿದೆ. ಆದರೆ. ಪ್ರಂಪಚದಲ್ಲಿ ಇಂದು Empirical Knowledge ಇದಕ್ಕೇ ಏಕಮೇವ ಮಹತ್ವವು ಬಂದಿರುವುದರಿಂದ ಇದರ ಟೊಳ್ಳುತನವನ್ನೂ ಭಯಾವಹ ಸ್ವರೂಪವನ್ನೂ ಮನಗಾಣಿಸಿ ಕೊಡಲು, ಇನ್ನೂ ಸ್ವಲ್ಪ ಹೇಳುವ ವಿಶದ ಪಡಿಸುವ ಆವಶ್ಯಕತೆ ಎನಿಸಿ, ಈ ಟಿಪ್ಪಣಿ. ಪಾಶ್ಚಾತ್ಯ ಪರಂಪರೆಯಲ್ಲಿ ಭಾರತೀಯ ಸಂಸ್ಕೃತಿಯಲ್ಲಿ ಉಳಿದು ಬಂದಿರುವಷ್ಟು ಪ್ರಮಾಣದಲ್ಲಿ, ಮಾನವಧರ್ಮ ; ಸಂಸ್ಕೃತಿಯ ಅವಶೇಷಗಳು ಉಳಿಯದೆ ಇರುವುದು ಒಂದು ದೊಡ್ಡ ಕೊರತೆ.

ಇದರಿಂದಾಗಿ ಅಲ್ಲಿ ಕ್ರೈಸ್ತಪಂಥದ ಕೊರತೆ, ದುಷ್ಪರಿಣಾಮಗಳ ಅರಿವು ಮೂಡಿದ್ದರೂ ಪುರಾತನ ಪರಂಪರೆಯ ಝೀಉಸ್: Nous : mind ಪಾತಳಿಯನ್ನು ಸೂಚಿಸುವ ಭಾರತೀಯ ಮನು : ವೈವಸ್ವತ ಜಾತವೇದ ಅಗ್ನಿ, ವೈಶ್ವಾನರಾಗ್ನಿ ಇಂದ್ರ, ಸವಿತೃ, ತ್ರಿತಆಪ್ತ್ಯ ಮುಂತಾದ ಅಮೋಘ ಸಂಕೇತಾರ್ಥಗಳ ತೂಕದ ಶಬ್ದಪ್ರತಿಮೆಗಳ ಅಸ್ತಿತ್ವವು ಆ ಪರಂಪರೆಯಲ್ಲಿ ಇನ್ನೂ ಬೆಳಕಿಗೆ ಬಂದಿಲ್ಲ.

ಇದರಿಂದಾಗಿ, ಹೆಗೆಲ್ಲನಂತಹ ಸೂಕ್ಷ್ಮಮೇಧಾವಿಯು, ಅಗ್ನಿಸ್ತಂಭ (Logos) ಪೂಜಕ ಹಿರಾಕ್ಲಿಟಸ್ Law of contraries ಈ ಮಾತಿನಿಂದ ಪ್ರಭಾವಿತನಾಗಿರುತ್ತಾನೆ. ಅಂತರ್-ವಿರೋಧ ಇದನ್ನು Law= ನಿಯಮ ಎನ್ನಲು ಬರಲಾರದು. ಈ ನಿಯಮವು ಅಭಾವಸೂಚಕ ಮಾತು! ಪೈಥಾಗೊರಾಸನ ಭಾನಾಮತಿಗೆ ಬಲಿಬಿದ್ದು, ತಾವೆಲ್ಲ ಇಂದು ಇಂದ್ರಿಯಗಳ (Empirical) ಪಾತಳಿಯ ಮೇಲೆ ಬಂದಿದ್ದೇವೆ, ಎಂಬ ಎಚ್ಚರ ಪಾಶ್ಚಾತ್ಯರಲ್ಲಿ ಇನ್ನೂ ಯಾರಿಗೂ ಮೂಡಿಲ್ಲ. ಕಾಂಟನಿಗೆ ಜೀವನಮೂಲ್ಯಗಳ ಪ್ರಜ್ಞೆ ತೀವ್ರವಾಗಿ, ಅವನು Reason ಆಶ್ರಯಿಸಿ ಗ್ರಂಥ ಬರೆದನಷ್ಟೆ. Nous : Mindದ ಸ್ಪಷ್ಟ ಅರಿವು ಅವನಿಗೆ ಸರಿಯಾಗಿ ಉಂಟಾಗಲೇ ಇಲ್ಲ. ಆದರೂ ಇತಿಹಾಸ ತತ್ತ್ವ ವಿಚಾರದಲ್ಲಿ ಇವನು ಆಳಕ್ಕೆ ಹೋಗಿ, ಮಾನವನ ಐತಿಹಾಸಿಕ ಘಟನೆಗಳು ಅರಿಕೆಗೆ ಬರಲು ಕಾರಣವೇನು? ಎಂಬುದನ್ನು ಅವನು ಕಂಡು ಹಿಡಿದದ್ದು ಸೋಜಿಗದ್ದಾಗಿದೆ. Noumenal ತತ್ತ್ವವು (= ಮಾನವ ಸಮಯ) ತಳದಲ್ಲಿ ಇರುವವು Phenomenal = ದೃಶ್ಯ ಭೌತ ಆಗುಹೋಗುಗಳಿಂದ ಬೇರೆಯಿರುತ್ತವೆ, ಎಂಬ ಸೂತ್ರ ಹೇಳಿದ್ದಾನೆ.*

ಪೂರ್ವಪರಂಪರೆಯ ಕಳಿಗೆ-ಕೊಂಡಿಗಳನ್ನು ಜೋಡಿಸುವ ಶಕ್ಯತೆಯಿಂದಾಗಿ ಭಾರತೀಯ ಸಂಸ್ಕೃತಿಯನ್ನೇ-ಪುನಃ ಅದರ ಹೊಳಹನ್ನು-ಕಣ್ಣಳತೆಯಲ್ಲಿ ತಂದು ನಿಲ್ಲಿಸಿಕೊಳ್ಳಲು ಸಾಧ್ಯವಾಗುತ್ತಿದೆ. ಉದಾ-ಪಾತಳಿಗಳ ವಿಚಾರ. ಕ್ರೋಬರನ ಪಾತಳಿಗಳ ನಿಷ್ಕರ್ಷವು ಇತ್ತೀಚಿನದು (೧೯೧೭). ಅವನು ತುಂಬ ಪರಿಶ್ರಮ ಪಟ್ಟು, ಮಾನವ ಸಂಸ್ಕೃತಿಯ ಪ್ರಾದುರ್ಭಾವವು, ಪ್ರಾಣಿ ವನಸ್ಪತಿಗಳ ಇಂದ್ರಿಯಗಳ ಪಾತಳಿಯ ಮೇಲೆಯೇ ಆಗಿರಲು ಶಕ್ಯವಿಲ್ಲ, ಎಂಬ ನಿಷ್ಕರ್ಷಕ್ಕೆ ಬರುತ್ತಾನೆ. ಆಧರೆ, ಭಾರತೀಯ ಪೂರ್ವಪರಂಪರೆ, ಗ್ರೀಕ್ ಪೂರ್ವಪರಂಪರೆಯಲ್ಲಿಯೂ ಮೂರು ಪಾತಳಿಗಳ ವಿಚಾರವು ಇದ್ದುದು ಬೆಳಕಿಗೆ ಬಂದಿದೆ! ಆದರೂ ಹಟಹಿಡಿದು ಅಸ್ತಿತ್ವವಾದಿಗಳು (Existentialists) ಇಂದ್ರಿಯ ಪೂಜೆಯ ಪಾತಳಿಯ ಮೇಲೆಯೇ ಇರುವ ಹಿರಿಮೆಯನ್ನು ಪ್ರತಿಪಾದಿಸುತ್ತಾರೆ. ಅಸು-ರ ಸಂಪ್ರದಾಯಗಳಿಗೆ ಹೀಗೆ ಜೀವದಾನ ದೊರೆಯತೊಡಗಿದೆ. ಈ ಅಸ್ತಿತ್ವವಾದೀ ಭೂಮಿಕೆಯು, ತಳಹದಿಯಲ್ಲಿ, ಒಂದರಿಂದ ಏನೆಲ್ಲ ಆಗಿದೆ, ಎಂಬುದೇ ಆಗಿದೆ. ವಿಭಿನ್ನ ಹೆಸರಿನ ನರ(ಳ) ಸಂಪ್ರದಾಯಗಳೂ ಅಸ್ತಿತ್ವವಾದೀ ಭೂಮಿಕೆಯವೇ ಆಗಿವೆ. ಆದಕಾರಣ, ಈ ವೈಚಾರಿಕ ಭೂಮಿಕೆಯ ಸ್ವರೂಪ ಗ್ರಹಣಕ್ಕೆ ಈ ಟಿಪ್ಪಣಿ ಪ್ರಯೋಜನಕಾರಿ ಆದೀತು, ಎಂದು ನಿರೀಕ್ಷಿಸಿದ್ದೇನೆ.

ಗೀತೆ ಮೆಚ್ಚಿರುವ ಕಾಲಶಕ್ತಿಯ ಆಕೃತಿ

ಇದು ನಿಜವಿದ್ದಲ್ಲಿ, ಈ ಗೀತೆಗೆ ಅಭಿಪ್ರೇತವಿರುವ, ಲೋಕಸಂಹಾರಕಾರೀ ಈ ಕಾಲಶಕ್ತಿಯು ಯಾವುದು? ಈ ಪ್ರಪಂಚದಲ್ಲಿ ಇರುವ ಕಾಲಶಕ್ತಿಗಳು ಎರಡು :

೧. ಹಗಲನ್ನು ರೂಪಿಸುವ, ನಿನ್ನೆ-ಇಂದು ಮತ್ತು ನಾಳೆಯ ಪ್ರಕಾಶರೂಪ ವಿಭಾಗ ತ್ರಯದ ಈ ಕಾಲಗತಿಯು ಮನು-ಜರನ್ನು ರೂಪಿಸಬಲ್ಲುದು. ಪ್ರಜ್ಞಾ ಪ್ರೇರಕ ವಿವಸ್ವಂತನಿಂದ ಅಥವಾ ಧೀಪ್ರಚೋದಕ ಸವಿತೃವಿನಿಂದ ಗತಿ ದೊರೆವ ಕಾಲವೇ ಇದು. ಇದುವೆ ಜೀವನದ ಪಾತಳಿ. ಇದು ಶುಭ್ರ, ಶುಭದಾಯಕವೇ ಇರುತ್ತದೆ.

---

* ಈ ಅಂಶವನ್ನು ಸಾಂಸ್ಕೃತಿಕ ಪಾತಳಿಯ ಹಲವು ನೆಲೆಗಳಲ್ಲಿ ಇಟ್ಟು ಮೊದಲು ಭಾರತದಲ್ಲಿ ತಿಳಿಸಿದವರು ಶಂಬಾ ಅವರೇ. ಇದು ನಮ್ಮ ಹೊರಗೆ ರೂಪಿಸುತ್ತಿರುವ ಬಾಹ್ಯಶಕ್ತಿಗಳ ಶೋಧನೆ ಎಷ್ಟೋ, ಒಳಗೆ ಕಂಡರಿಸುತ್ತಿರುವ ಆಂತರಿಕ ಶೋಧನೆಯೂ ಅಷ್ಟೇ ಮುಖ್ಯ. ಇದು ಒಂದು ಕಡೆ ಸಂಶೋಧನೆಯ ನೆಲೆಗಳನ್ನು ವಿಸ್ತರಣೆಗೊಳಿಸುವ ಬಗೆಯೇ ಆಗಿದೆ. (ಸಂ)

೨. ಈ ಬಾಳಿನಲ್ಲಿ, ಇನ್ನೂ ಒಂದು ಬಗೆಯ ಗತಿಯು ಉಂಟು: ಮನು-ಜರ ಪ್ರಜ್ಞೆಯನ್ನು ದುರ್ಬಲಗೊಳಿಸುವ ತಮಸ್ಸನ್ನು ಪ್ರೇರಿಸುವ, ಇರುಳಿಗೆ ಕಾರಣವಿರುವ ಗತಿಯು ಇದು. ಮನುಜರನ್ನು ನರ(ಳ)ರನ್ನಾಗಿಸುವ ಅಂತಃ ಶಕ್ತಿಯು ಈ ಗತಿಯಲ್ಲಿದೆ. ಇದು ಪ್ರಾಣಲಿಂಗ ಚೇತಸದಿಂದ ಪ್ರಚೋದಿತ ಕಾಲಗತಿ. ನಿದ್ರಾ, ಸ್ವಪ್ನ, ಸುಷುಪ್ತಿ, ತುರೀಯಾ ಅವಸ್ಥೆಯತ್ತ ಸೆಳೆವ ವೈಯಕ್ತಿಕ ಸ್ವರೂಪದ ಗತಿ.

ಪ್ರಕಾಶತತ್ತ್ವದ ಗತಿಯಂತೆ, ಇದು ವ್ಯಕ್ತಿ ನಿರಪೇಕ್ಷವಲ್ಲ. ಸಾಧಾರಣ ಸಮಾನ ಸ್ವರೂಪದ ಕಾಲಗತಿಯೂ ಇದಲ್ಲ. ವೈಯಕ್ತಿಕ ಪ್ರಾಣಲಿಂಗ ಶಕ್ತಿಯಿಂದ ಪ್ರೇರಿತ ಈ ಗತಿಯು ಜನನ ಮರಣಕ್ಕೆ ಕಾರಣವಿರುವುದರಿಂದ ಇದು ವೃತ್ತಾಕೃತಿಯ ಗತಿಯೇ ಇರಬಲ್ಲುದು. ಇದು ಜೀವಿತದ ಪಾತಳಿ. ಇನ್ನು ಮುಖ್ಯ ಪ್ರಶ್ನೆ : ಮೇಲೆ ವಿವರಿಸಿರುವ ಎರಡು ಬಗೆಯ ಕಾಲಗತಿಗಳಲ್ಲಿ ಗೀತೆ ಮೆಚ್ಚಿಕೊಂಡ ಕಾಲದ ಆಕೃತಿ ಸ್ವರೂಪವು ಯಾವುದು? ವಿವಸ್ವನ್ : ಸವಿತೃ ದೈವತದಿಂದ ಪ್ರೇರಿತ ಪ್ರಕಾಶತತ್ತ್ವದ ಕಾಲವು ಗೀತೆಗೆ ಪ್ರಿಯವೋ? ಅಥವಾ ತುರೀಯಾ ಬ್ರಹ್ಮನ್ ಸಿದ್ಧಿಯತ್ತ ಒಯ್ಯುವ, ಪ್ರಾಣಲಿಂಗ ಚೇತಸದಿಂದ ಪ್ರಚೋದಿತ ಇರುಳನ್ನು ಆಮಂತ್ರಿಸುವ ಕಾಲಗತಿಯು, ಗೀತೆಗೆ ಪ್ರಿಯವೊ? ಗೀತೆಯೊಳಗಿನ ಅಂತಸ್ಥ ಪ್ರಮಾಣಗಳಿಂದಲೇ ದೃಢಪಡುತ್ತಿರುವ ಈ ಕಾಲಶಕ್ತಿಯು ಇರುಳನ್ನು ಆಮಂತ್ರಿಸುವ ಕಾಲವಾಗಿದೆ.

೧. ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನ್ ಅಹಂ, ಪ್ರಜ್ಞೆ ಪ್ರೇರಿಸುವ ವಿವಸ್ವಂತನಿಗೆ ಯೋಗ ಬೋಧಿಸಿದವನು ನಾನು ಎಂಬ ಈ ಭಗವಂತನು ತುರೀಯಾ ಬ್ರಹ್ಮಸಿದ್ಧಿಗೆ ಪೋಷಕ ಇರುಳನ್ನೇ ಆಮಂತ್ರಿಸಬಲ್ಲನು. ವಿವಸ್ವನ್ ಇದು ಸೌರತತ್ತ್ವ ಎಂಬುದು ನಿಜವಿದ್ದರೆ, ಈ ವಿವಸ್ವಂತನನ್ನು ಎದುರಿಸುವ ಈ ಕಾಲತತ್ತ್ವವು ಚಂದ್ರಶಕ್ತಿಯೇ ಇರಬೇಕಾಗುತ್ತದೆ.

೨. ಪ್ರಜ್ಞೆಯನ್ನು ಸ್ಥಿತ (ಸ್ಥಗಿತ) ಗೊಳಿಸಲು ಬೋಧಿಸುವ ಗೀತೆಯ ಭಗವಂತನು ಹಗಲನ್ನು ಮೆಚ್ಚಲು ಶಕ್ಯವಿಲ್ಲ.

೩. ಕೃಷ್ಣ ಹೆಸರಿನ ಕರಿಯನು ಪ್ರಕಾಶತತ್ತ್ವದ ಕಾಲವನ್ನು ಮೆಚ್ಚಲಾರನು.

೪. ಓಂಕಾರ: ಪ್ರಣವಕ್ಕೆ ಅಗ್ರಪಟ್ಟವಿರುವ ಈ ಗೀತೆಗೆ, ನಾಂತಃಪ್ರಜ್ಞಃ ನೋ ಬಹಿಃಪ್ರಜ್ಞಃ ಆಗಿ ತನ್ಮಯತೆಯಲ್ಲಿ ಮೈಮರೆಯಿಸಬಲ್ಲ ತಮಃ ಆಸೀತ್ ತಮಸಾಗೂಳ್ಹಂ ಅಪ್ರಕೇತಂ, ಸವಿತೃ ಆಃ! ಇದಂ ಸರ್ವಂ ಸ್ವರೂಪೀ ಕಾಲಶಕ್ತಿಯೇ ಗೀತೆ ಮೆಚ್ಚಿರುವ ಕಾಲಶಕ್ತಿ ಇರಲಿಕ್ಕೆ ಬೇಕಲ್ಲ!

ಇದು ನಿಜವಿದ್ದಲ್ಲಿ ಈ ಗೀತೆಯಲ್ಲಿ ವರ್ಣಿತ ಲೋಕಸಂಹಾರಕವಿರುವ ಈ ಕಾಲಶಕ್ತಿಯ ಆಕೃತಿಯು ಯಾವುದು? ಇದನ್ನು ಹಲವು ಬಗೆಯಿಂದ ಕಂಡುಹಿಡಿಯಲು ಶಕ್ಯವಿದೆ: ಆದಿತ್ಯರೂಪ ವಿಷ್ಣುವು ತಾನು (ಆದಿತ್ಯಾನಾಂ ಅಹಂ ವಿಷ್ಣುಃ) ಎಂದಿದ್ದಾನೆ. ಈ ಭಗವಂತ[೩] ಈ ವಿಷ್ಣುವು ಶಿಪಿವಿಷ್ಟ ರೂಪನು, ಎಂದು ಋಗ್ವೇದದಲ್ಲಿ ವಶಿಷ್ಠ ಹೇಳುತ್ತಾನೆ. ಈ ವೇದದಲ್ಲಿಯೇ, 'ವಿಷ್ಣುಃ ಯೋನಿಂ ಕಲ್ಪಯತು' ಎಂಬ ವರ್ಣನೆಯಿದೆ. ಆದಕಾರಣ, ಶಿಪಿವಿಷ್ಟ ಆದಿತ್ಯ: ವಿಷ್ಣುವು, ರಾತ್ರಿ ನಿರ್ಮಿಸುವ ಲಿಂಗಶಕ್ತಿಯೇ ಇರಲಿಕ್ಕೆ ಬೇಕು. ಆದಿತ್ಯನು ನೆತ್ತಿಗಣ್ಣನ ದೇವನು ಎಂಬುದು ಬಯಲಿಗೆ ಬಂದಿದೆ. ಛಾಂದೋಗ್ಯ ಉಪನಿಷತ್ತಿನಲ್ಲಿ, ಚಂದ್ರಾಮಂಡಲಸ್ಥ ಆದಿತ್ಯ : ಪುರುಷನ ವರ್ಣನೆಯಿದೆ.[೪] ಈ ಆದಿತ್ಯ : ಪುರುಷನಿಗೆ ಮೀಸೆ, ಕೇಶ, ಉಗುರು ಇರುವ ವರ್ಣನೆಯಿಂದಾಗಿ ಈ ಇದು ನರ(ಳ) : ಲಿಂಗವೇ ಆಗುತ್ತಿದೆ. ಮಯಾ ಅಧ್ಯಕ್ಷೇಣ ಪ್ರಕೃತಿಃ ಸೂಯತೇ ಎಂಬಲ್ಲಿ ಈ ಭಗವಂತನ ಅಧಿ-ಅಕ್ಷದಿಂದಾಗಿ, ಪ್ರಕೃತಿದೇವಿ ಹಡೆಯುತ್ತಾಳೆ, ಎಂಬ ಈ ಒಪ್ಪಿಗೆ ಪರ್ಯಾಯವಾಗಿ ಇದೆ. ಹೆಂಗೆ-ಬಸಿಂಗೆ ಕಾರಣವಾಗುವ ಅಕ್ಷವು ಲಿಂಗಶಕ್ತಿಯೇ ಇರಲಿಕ್ಕೆ ಬೇಕಾಗುತ್ತದೆ.[೫]

ಅವತಾರದ ಉದ್ದೇಶ, ವೇದದಲ್ಲಿ ಅಡಗಿದೆ:

ಇಂದ್ರಹನನ ಸಮರ್ಥಂ ಪುತ್ರಂ ಕಾಮಾಯಮಾನಾ (ಅ) ದಿತಿ ಅಸುರ ಮಾತಾ ತಪಸಾ, ಭರ್ತುಃ ಸಕಾಶಾತ್ ಗರ್ಭಂ ಲೇಭೇ.[1] ವೇದದ ಪವಾಡ ಕತೆ ಗ್ರಂಥದಲ್ಲಿ ಪ್ರೊ. ಮ್ಯಾಕ್‌ಡೊನೆಲ್ಲ ಬರೆಯುತ್ತಾರೆ : "ಇಂದ್ರನು ಭಾರತದ ಅಂದಿನ ರಾಷ್ಟ್ರೀಯ ದೇವರು." ಈ ಇಂದ್ರ ಪದಕ್ಕೆ ಅತ್ಯಂತ ಶ್ರೇಷ್ಠ ಎಂಬ ಅರ್ಥವು ಇಂದಿಗೂ ಉಂಟು! ಇಂಥ ಅನನ್ಯ ಸಾಧಾರಣ, ತೇಜಸ್ವೀ ಇಂದ್ರ ಹನನ ಶಕ್ತಿಯ ಕೂಸಿನ ಗರ್ಭದ ಆಧಾನ ಮಾಡಿದ ಆ ಗಣ್‌ಡನು ಯಾರು? ಇಂಥ ವಿನಾಶಕಾರೀ ಗರ್ಭ-ಹೊತ್ತ ಆ ಹೆಣ್ಣು ಯಾರು? ಭಾಷ್ಯದಲ್ಲಿ (ಅ) ದಿತಿ ಎಂಬಲ್ಲಿ ಕೈಚಳಕವಿದೆ! ಆದರೆ, ಮನು-ಜ ಭಾಷೆ ಮೂಲದಲ್ಲಿ ಅಭಿಜಾತ ಅರ್ಥದ ಅಮೋಘ ಸಾಂಕೇತಿಕ ಪ್ರತಿಮೆಗಳು ಆಧಾರದ ಮೇಲೆ ನಿಂತಿದೆ. ಇದರಿಂದಾಗಿ ಸತ್ಯವನ್ನು ಬಚ್ಚಿಡಲು ಯಾರಿಂದಲೂ ಶಕ್ಯವಿಲ್ಲವಾಗಿದೆ.

ಮಾತಾ ರುದ್ರಾಣಾಂ ಎಂಬ ಋಚೆಯಲ್ಲಿ, ಈ ಮಹಾದೇವಿಯ ಹೆಸರು ಅ-ದಿತಿ ಎಂಬುದು ಬಯಲು ಆಗಿದೆ. ಅಲ್ಲದೆ, ಈ ಮಾತೆ ಮಹಾದೇವಿ ಅಮೃತಸ್ಯ ನಾಭಿಃ (ಅಮೃತರಸದ ಕುಂಡ) ಸ್ವರೂಪಳು ಎಂಬ ಅಂಶವೂ ಬೆಳಕಿಗೆ ಬಂದಿದೆ![2] ಈ ಮಾತೆಯ ಮೂಲಮಾದರಿ ಮುಗಿಲಿನಲ್ಲಿ ಅಮೃತಾಂಶು ಎಂಬ ಚಂದ್ರಮಂಡಲ! ಇದರ ಪ್ರತಿಬಿಂಬ ಭೂಲೋಕದಲ್ಲಿ! ವ್ಯಕ್ತಿ ಸಾಪೇಕ್ಷ ಅಮೃತಕುಂಡ ವತ್ಸ-ಅಯನ ರೂಪದಲ್ಲಿದೆ. ಆದಕಾರಣ, ಅಂತರಿಕ್ಷಸ್ಥ ಭಗ-ವಂತನ ದರ್ಶನದ ಆತುರವಿದ್ದವರಿಗೆ, ತಮ್ಮತಮ್ಮ ವತ್ಸ ಅಯನದ ಕಂಡಿಯೊಳಗಿಂದಲೇ ಆ ಭಗವಂತನನ್ನು ಕಾಣುವ ಅನುಕೂಲತೆಯೂ ಉಂಟು, ಈ ನರಲೋಕದಲ್ಲಿ!

ಲೋಕಮಾತೆ ಈ ಮೂಕಾಂಬೆಯ ಪುರವನ್ನು ಆ-ಲಯ, ಗುಹೆ, ಆಹೋಬಿಲ ಇತ್ಯಾದಿಯಾಗಿ ಹೇಳಲಾಗುತ್ತದೆ. ಈ ಬಿಲದಲ್ಲಿ ಇರಬಲ್ಲ ದೇವರು : ನಾಗ-ಲಿಂಗ ಆಕೃತಿ ಸ್ವರೂಪನೇ ಇರಬೇಡವೆ? ಈ ಹನೂ-ಮಂತ ಯಾರು ಮತ್ತೆ? ಆ-ಹನನದ ಇಂದ್ರಿಯವಂತನೇ ಹನೂ-ಮಂತ. ಆದರೆ, ಈ ಚಮತ್ಕಾರ ನೋಡಿ : ಭೂಲೋಕದಲ್ಲಿ ಇವನು ಹನೂ-ಮಂತ (ಲಿಂಗ). ಆದರೆ ಅಂತರಿಕ್ಷದಲ್ಲಿ ಇವನು ಮಾತ-ರಿಶ್ವನ್ (ತಾಯಿಯ ಉಡಿಯಲ್ಲಿ ಶ್ವಸನಗೆಟ್ಟವನು) 'ಪ್ರಾಣಃ ಅಸು' ಸ್ವರೂಪನು, ಅಸುರನು. ಈ ಗಾಳಿಯ ಪವಾಡಶಕ್ತಿ ನೋಡಿಕೊಳ್ಳಿ : ಅ-ಭಾವವನ್ನೇ ಸ್ಥಾಯೀ ಎಂದು ಶರೆ ನೆಮ್ಮಿದೆ ಈ ಭಾರತೀಯ ಜನ! ಅಸುರರನ್ನೇ ದೇವರು ಎಂದು ಪೂಜಿಸುತ್ತಿದ್ದೇವೆ.

ಭಾರತದ ರಾಷ್ಟ್ರೀಯ ದೇವ : ಇಂದ್ರನನ್ನೂ, ನಾಗಲಿಂಗರೂಪೀ ಹನುಮನು, ಇಲ್ಲವಾಗಿಸಿದ್ದಾನೆ!* ಎಂದರೇನರ್ಥ? ಇದು ಶಕ್ಯವೇ? ಹನುಮನು ಹನನ ಮಾಡಿದನೆಂಬ ಈ ಇಂದ್ರನು ಯಾರು? ವೇದದಲ್ಲೆ ಇರುವ ಈ ನಿರ್ದೇಶವನ್ನು ನೋಡಿಕೊಳ್ಳಿ: 'ಇಂದ್ರಾಯ ಸಂವಿತ್ರೇ ಅಹಿಘ್ನೇ' ಸವಿತೃ (ಸೂರ್ಯ) ಸ್ವರೂಪ ಇಂದ್ರನು ಅಹಿಘ್ನನು! ಇದು ಹೇಗೆ ಶಕ್ಯ? ಸವಿತೃ (ಸೂರ್ಯ) ಎಂದರೆ ಧೀ: ಪ್ರಜ್ಞಾ: ಪ್ರಕಾಶ ಪ್ರಬೋದಕ ತೇಜೋಮಯ ಈ ಕೇಂದ್ರವು, ಅಂತರಿಕ್ಷದ ಟೊಳ್ಳಿನ ಮೇಲ್ಗಡೆಗೆ ಇದೆ. ವಿಕಾಸತತ್ವದ ಪ್ರಕ್ರಿಯೆಯಲ್ಲಿ ಪ್ರಾದುರ್ಭವಿಸಿರುವ ಈ ಪ್ರಜ್ಞಾ: ಪ್ರಕಾಶದ ಕೇಂದ್ರದೊಡನೆ, ಜ್ಞಾತಾಜ್ಞಾತವಾಗಿ, ಜೀವಂತ ಸಂಪರ್ಕವಿರಬಲ್ಲ ನರ(ಳ)ರು. ಮನು-ಜತ್ವದ ಅರ್ಹತೆಯನ್ನು ಪಡೆಯುತ್ತಾರೆ. ಪ್ರಜ್ಞಾ: ಪ್ರಕಾಶದ ಎದುರು ನಾಗ :ಲಿಂಗ ಶಕ್ತಿಯು ತಲೆತಗ್ಗಿಸುತ್ತದೆ. ಆದರೆ, ಈ ಮನು-ಜನು, ತಾನು ವಿಶಿಷ್ಟ ವ್ಯಕ್ತಿ ಎಂದು ಬಗೆವಾಗ ಈ ನಾಗ : ಲಿಂಗ ಶಕ್ತಿ

---

* ಹನುಮಂತ ಎಂಬುದು ಈಗ ವಾಡಿಕೆಯಲ್ಲಿರುವ ಪದ. ಆದರೆ, ಸಂಸ್ಕೃತ ಭಾಷೆಯಲ್ಲಿ 'ಹನೂಮಂತ' ಎಂಬ ಪದರೂಪವುಂಟು. ರಾಮಾಯಣದಲ್ಲಿ 'ಆಂಜನೇಯ' ಎಂಬ ಪದ ಬಳಕೆಯಾಗಿದೆ. ಅಲ್ಲಿ, ಅಪರೂಪವಾಗಿ ಹನೂಮಂತ ಎಂಬ ಪದಬಳಕೆ ಉಂಟು. ಅಂಜನಾದೇವಿಯ ಮಗ ಆಂಜನೇಯ ಎಂದಾದರೆ; 'ಹನೂ' ಎಂದರೆ ಗದ್ದ ಎಂದು ಅರ್ಥ. ಇವನಿಗೆ ವಾಯುಪುತ್ರ ಎಂಬ ಪರ್ಯಾಯ ಪದವೂ ಉಂಟು. ಇವೆಲ್ಲವೂ ಲಿಖಿತ ಕಾವ್ಯಗಳಲ್ಲಿ ಬಳಕೆಗೊಂಡಿರುವ ಅರ್ಥದ ನೆಲೆಗಳು. ಇವುಗಳ ಜತೆ ಸಾಂಸ್ಕೃತಿಕವಾಗಿ, ದೈವತಕಥೆಗಳಲ್ಲಿ ಬಳಕೆಗೊಂಡಿರುವ ಅರ್ಥದ ನೆಲೆಗಳೂ ಉಂಟು. ಇವೆಲ್ಲವನ್ನು ಬಳಸಿಕೊಂಡು ಶಂಬಾ 'ಹನೂಮಂತ' ಎಂಬ ಸಾಂಕೇತಿಕಾರ್ಥವುಳ್ಳ ಶಬ್ದರೂಪವನ್ನು ಬಳಸಿದ್ದಾರೆ. (ಸಂ)

ತಲೆಯೆತ್ತಿ ಈ ಮಾನವನೊಳಗಿನ ಪ್ರಜ್ಞೆ (ಇಂದ್ರ : ಸೂರ್ಯ (Conscience) ದುರ್ಬಲಗೊಳಿಸುತ್ತದೆ. ಆದಿಶಕ್ತಿ: ಕುಮಾರಿ : ಮಾತೆ ಎಂಬ ಅದಿತಿಪುತ್ರ : ಹನು-ಮಂತನು ಜರುಗಿಸಿರುವ ಪವಾಡಕಥೆ ಹೀಗಿದೆ: ಹುಟ್ಟುತ್ತಲೇ ಹನುಮನು ಬಾಲರವಿಯ ಮೇಲೆ ಎರಗಿದನಂತೆ! ಮಾರುತಿಯ ಸಾಕ್ಷಾತ್ಕಾರಿ ಎಂಬ ಶ್ರೀರಾಮದಾಸರು, ಈ ವಜ್ರ: ಹನುಮಂತನು, 'ಗ್ರಾಸಿಲೇ ಸೂರ್ಯಮಂಡಳಾ' ಎಂದು ವರ್ಣಿಸಿದ್ದಾರೆ! ಇಂಥ ಸಂತ ಮಹಂತರು ಹೇಳುವ ಪವಾಡಕಥೆ ನಂಬದಿರಲು ಆದೀತೆ? ಇಂದು ಭಾರತದಲ್ಲಿ ಪ್ರಜ್ಞಾಸೂರ್ಯನು ಎಲ್ಲಿದ್ದಾನೆ?

ಅದಿತಿ: ದೇವಮಾತಾ ಎಂದು ವೇದ ಹೇಳುತ್ತದೆ. ಆದಕಾರಣ ಗಣಪತಿ, ವಿಷ್ಣು, ಕೃಷ್ಣ, ರಾಮಾದಿ ಏನೆಲ್ಲ ದೇವರೂ ಅದಿತಿಪುತ್ರರು-ಅಸುರರು: ಹನೂಮಂತನ ಸಹೋದರರು! ಶ್ವೇತಾಶ್ವತರ ಉಪನಿಷತ್ತು, ಸ್ವಯಂಭೂ ಆದಿತಿಯನ್ನು ಅ-ಜಾ (ಹುಟ್ಟದೇ ಇದ್ದವಳು) ಎಂದಿದೆ. ಆದಕಾರಣ, ಅದಿತಿಪುತ್ರ ಹನುಮಾದಿಗಳೆಲ್ಲರೂ ಅ-ಜರು (ಹುಟ್ಟದೇ ಇರುವವರು) ಆಗುತ್ತಿದ್ದಾರೆ! ನಿಜವಾಗಿ ಅ-ಜನು ಎಂದರೆ ಚಂದ್ರನೇ ಸರಿ! ಅಮಾವಾಸ್ಯೆಗೆ ಪ್ರ-ಲಯವಾಗಿ ಮರಳಿ ಶುಕ್ಲಪಕ್ಷದಲ್ಲಿ ಕಾಣತೊಡಗುತ್ತಾನೆ! ಆದಕಾರಣ ಇವನು ಅಮೃತನು! ಅಸು-ರ ಪ್ರಾಣಲಿಂಗ ಶಕ್ತಿ ಪ್ರಚೋದಕನು : ದಾನವನು! ನರ(ಳ) ಸಂಪ್ರದಾಯವನ್ನು ಪ್ರಚೋದಿಸಿ, ವೈವಸ್ವತಮನು ಪ್ರಣೀತ ಮಾನವ ಧರ್ಮವನ್ನು ಹೇಳ ಹೆಸರಿಲ್ಲದಂತೆ ಮಾಡಿರುವ, ಮಾಟಗಾರನೇ ಚಂದ್ರನು.

ಮನು-ಜರನ್ನು ನರ(ಳ) ರನ್ನಾಗಿಸುತ್ತಿರುವ ಮುಕ್ತಿಕಲ್ಪದ ಮೂಲಮಾದರಿ

ಸೂರ್ಯ : ಇಂದ್ರರಂಥ ಪ್ರಜ್ಞಾ-ಪ್ರಚೋದಕ ದೇವರು ಇರುವ ವೇದದಲ್ಲಿ ಮುಕ್ತಿಯ ಕಲ್ಪನೆ ಇರಲಾರದು. ವಿಂಟರ್‌ನಿಟ್ಜ್ ರಂತಹರದು. ಆದರೆ, ಇಂದ್ರಹನನ ಸಮರ್ಥ ಅಸುರ ಮರುತ : ಈ ನರ(ಳ) ವರ್ಗ ಸೃಷ್ಟಿಸಿರುವ ವೇದ ಇದು! ಇಲ್ಲಿ ಜಾತವೇದಾಗ್ನಿಯು, ನ-ಚಿಕೇತಾಗ್ನಿ (ಯೋನಿ) ಹೊಕ್ಕು ದೇವಯಾನಮಾರ್ಗಿ ಆಗಿದ್ದಾನೆ. 'ಯತ್ರದೇವ ಯವಃ ಮದಂತಿ ತತ್ ವಿಷ್ಣೋಃ ಪರಮೇ ಪದೇ' ಮಧುರಸವು ಚಿಮ್ಮುವಲ್ಲೆ ಮುಕ್ತಿ![೮] 'ಯೋನಿಂ ಕಲ್ಪಯತು' ಶಕ್ತಿಯ ವಿಷ್ಣು ಇರುವ ಈ ವೇದದಲ್ಲೇ, ಮುಕ್ತಿಯ ಸ್ಥಳದ ವರ್ಣನೆಯಿರುವಲ್ಲಿ ಔಚಿತ್ಯವಿಲ್ಲದಿಲ್ಲ!

ಆದರೆ, ಮೋಕ್ಷದಾಯಕಾಃ ಎಂಬ ಸಪ್ತಸ್ಥಲ ಕಾಶಿಯಂಥ ಭೌಗೋಳಿಕ ಎಡೆ, ಎಂದು ನಂಬಿಸಲಾಗಿರುವಲ್ಲಿ ಮೋಸವಿದೆ. ಧರ್ಮಶಾಸ್ತ್ರದ ಇತಿಹಾಸ ಬರೆದ ಡಾ.ಪಾಂಡುರಂಗ ವಾಮನ ಕಾಣೆ, ಸಪ್ತ ಇದರ ಗುಹ್ಯಾರ್ಥ ಗಮನಿಸಿದ್ದರೆ ಲೇಸಿತ್ತು. ಸಪ್ತ ಪ್ರಾಣಾಃ ಪ್ರಭವಂತಿ, ಇದು ಪ್ರಾಣಲಿಂಗದ ಗುಹೆ[೯] ಅಥರ್ವವೇದದಲ್ಲಿ 'ನವದ್ವಾರಾ ದೇವಾನಾಂ ಪುಃ ಆಯೋಧ್ಯಾ' ಇದು ದೇಹದ ಅಂಗ![೧೦] ನವದ್ವಾರೇ ಪುರೇ ದೇಹೀ ಎಂದು ಗೀತೆ ಮತ್ತು ಉಪನಿಷತ್ತು ಹೇಳುತ್ತವೆ. ಸ್ವರ್ಗದ್ವಾರಂ ಅಪಾವೃತಂ ಎಂಬ ಗೀತೆಯ ಕುರುಕ್ಷೇತ್ರದ ಗುಹ್ಯಾರ್ಥವು, ಕುಮಾರಿ-ಮಾತಾಪಂಥದ ಜಾಬಾಲೋಪನಿಷತ್ತಿನಲ್ಲಿದೆ! ವರಣಾ ನಾಸಿಕ್ಯಾಂ ಈ ಗುಹ್ಯಸಂಕೇತವನ್ನು ವಾರಣಾಸಿ ಸಂಗಮದ ಮೇಲೆ ಆರೋಪಿಸಲಾಗಿದೆ!

ಬ್ರಹ್ಮ-ಪುರ ಎಂಬ ಮುಕ್ತಿಯ ಸ್ಥಲವು ವಿಷ್ಣುಪದ ಎಂಬ ಹಟ ಒಂದು ಪಂಥದ್ದು! ಬ್ರಹ್ಮಪದ ದ್ವಾರ-ವಿವರ ಮೋಕ್ಷಸ್ಥಾನ (ಮೈತ್ರಾ. ಉ. ೬. ೩೦) ಸಲಿಲ ಸ್ವರೂಪೀ ಆದಿತಿ : ಗಂಗೆ ಎನಿಸಿದ್ದಾಳೆ. ಈ ಗಂಗಾದ್ವಾರಕ್ಕೆ ಹರದ್ವಾರ ಎನ್ನಬೇಕೆ? ಹರಿದ್ವಾರ ಎನ್ನಬೇಕೆ? ಎಂಬ ಜಗಳ ಇಂದೂ ಉಂಟು! ಕೊಲ್ಲ-ಪುರ (ಕೊಲ್ಲೂರ) ದೇವಿಗೆ.,ಭವಾನಿ ಎಂದರೆ ರುದ್ರನ ಹಕ್ಕು! ಈಕೆ ಶ್ರೀಲಕ್ಷ್ಮಿ ಎಂದರೆ ವಿಷ್ಣುವಿನ ಹಕ್ಕು! ಆದರೆ, ಅಮೃತಸ್ಯ ನಾಭಿಃ ಅದಿತಿಯು ಮಾತಾರುದ್ರಾಣಾಂ ಎಂಬ ಹಕ್ಕು ಋಗ್ವಚನದಂತೆ. ಇವಳು ಮೊದಲಲ್ಲಿ ರುದ್ರನ ಸಂಗಾತಿ! ಆದರೆ ವಾಜಸನೇಯಸಂಹಿತೆಯ 'ಅದಿತ್ಯೈವಿಷ್ಣುಪತ್ನ್ಯೈ ಚರುಃ' ಈ ಉಕ್ತಿಯಂತೆ, ವಿಷ್ಣುವಿನೊಡನೆ ಇವಳ ಪುನರ್ವಿವಾಹವಾದದ್ದು ಬಯಲಿಗೆ ಬರುತ್ತಿದೆ! ಇನ್ನೂ ಸೋಜಿಗವೆಂದರೆ, ಗೀತಾ ವಚನದಂತೆ, ಆದಿತ್ಯ ರೂಪವಿಷ್ಣುವು, ಅದಿತಿ ಪುತ್ರನಾಗುತ್ತಿದ್ದಾನೆ! ಇದು ತಾಯ್ಗಂಡರ ವ್ಯಾಪಾರ! ವ್ಯಕ್ತಿಮುಕ್ತಿಯ ಈ ಸ್ಥಲವು, ನಾನಾ ನಾಮಾಂತರಗಳಿಂದ ವರ್ಣಿತವಿದೆ. ಪುಂಡರೀಕಂ ನವದ್ವಾರಂ (ಅಥರ್ವ ೧೦-೮-೪೩) ಈ ಪುಂಡರೀಕ-ವು, ಪುಷ್ಪ, ಪುಷ್ಕರ, ಪದ್-ಮ, ಕಮಲ.. ಆಗಿದೆ! ಕೇನೋಪನಿಷತ್ತಿನ ಉಮಾ ಹೈಮವತಿಯು,

'ತತ್ ವನಂ ಇತಿ ಉಪಾಸಿತವ್ಯಂ' ಎಂದು ವಿಧಿಸಿದ್ದಾಳೆ. ಈ ವನ ಸರಸ್ರೋತ, ಸಮುದ್ರ ಸಾಗರವೂ ಆಗುತ್ತದೆ! ಇದನ್ನು ಅಂತರಿಕ್ಷ ರೋದಸಿ ಮಧ್ಯಸ್ಥಾನೀಯದೇವಿ ಎಂದೂ ಬಗೆಯಲಾಗಿದೆ.

ಈ ಸ್ಥಲವನ್ನು ಚಕ್ರ ಎಂದುದಾಗಿದೆ ಸು-ಖಂ ರಥಂ ಎಂದುದೂ ಉಂಟು! ಅಮೃತಸ್ಯನಾಭಿಃ ಅದಿತಿ, ನೌಕೆಯೂ ಆಗುತ್ತಾಳೆ. (ರಾಮಾಯಣದ ಪುಷ್ಪಕವಿಮಾನ?) ಅದಿತಿಂ ನಾವಂ ಆರುಹೇಮ ಸ್ವಸ್ತಯೇ.[೧೧] ಪುರುಷಾರ್ಥ : ಮೋಕ್ಷ, ಇದು, ಪುರುಷನ : ನರ(ಳ)ನ ಅರ್ಥ! ನಾರಿಗೆ ಮುಕ್ತಿ ಎಲ್ಲಿ? ಇವಳನ್ನು ಅ-ವಿಮುಕ್ತ ಕುರುಕ್ಷೇತ್ರ ಎಂದಿದೆ ಜಾಬಾಲೋಪನಿಷತ್ತು! ಆದುದರಿಂದ, ನಾರೀ ಮುಕ್ತಿ ಆಂದೋಲಕ್ಕೆ ಆಮಂತ್ರಣ ದೊರೆತಿದೆ ಇಂದು!

ಮುಕ್ತಿಯ ಸ್ಥಲದ ಅ-ದಿತಿ ಈ ನಾಮ (ಆಶಯ) ಮತ್ತು ರೂಪ (ಆಕೃತಿ) ಇವೆರಡರಲ್ಲಿ ಅನುಭವಕ್ಕೆ ಒರುವ ಏಕಾತ್ಮಕತೆ ನಿತಾಂತ ರಮಣೀಯವಿದೆ. ಅ-ದಿತಿ: ಅಃ-ಖಂಡಿತೆ, ಇಡೀ : ಆದಕಾರಣ ಸ್ವಯಂಭೂ: ಅ-ಯೋನಿ ಸಂಭವೆ: ಕುಮಾರಿ ಈ Undifferentiated Whole; ವಿಶ್ಲೇಷಣಕ್ಕೆ ಎಟಕದ್ದು. ನಿತ್ಯ ಕತ್ತಲೆ: ಅರ್ಥ ಶೂನ್ಯ! ಆದಿತಿಃ ಅಂತರಿಕ್ಷಂ ಆಗಿದ್ದಾಳೆ. ಈ ಟೊಳ್ಳಿನಲ್ಲಿ ಕತ್ತಲು ಕತ್ತಲನ್ನು ಆಲಿಂಗಿಸಿದೆ. 'ಆಃ ಸಲಿಲಂ ಸರ್ವಂ ಇದಮ್' ಈ ರಮಣಿ (ೀ) ಯ ಅನುಭವವು, ವ್ಯಕ್ತಿಸಾಪೇಕ್ಷವಾಗುವಾಗ, ಆ Whole ಇದು ರಮಣಿ (ೀ)ಯ Hole : ತೂತು: ದ್ವಾರ-ವಿವರ ವಾಗುವ ಈ ಸೋಜಿಗವು ಚಿಂತ್ಯವಿದೆ! ಶೂನ್ಯಸಿದ್ಧಿಯ ಅನುಭವದ ಸ್ಥಾನವೇ ಇದು. ಅಲ್ಲದೆ, ತುರೀಯಾ ಸಿದ್ಧಿಯ-ತುರೀಯ ವಾಣಿಯ ಸಿದ್ಧಿಯ ಎಡೆಯೂ ಇದೇ.

ಇದು ಮುಕ್ತಿಯ ಟಿಪ್ಪಣಿ! ಈ ನರ(ಳ) ಸಂಸ್ಕೃತಿ ರೂಪಿಸಿದವರು ತಾಯ್-ಗಣ್ದರು ಇದ್ದಾರೆ! ಇದನ್ನು ತರ್ಕದಿಂದ ಊಹಿಸಬೇಕಾಗಿಲ್ಲ. ಈ ಸಂಪ್ರದಾಯದ-ನಡೆ-ನುಡಿಗಳಲ್ಲಿ ಈ ಅಂಶವು ಪ್ರತಿಬಿಂಬಿತವಿದೆ. ಪುರಾತನರು, ಈ ಸಂಪ್ರದಾಯದಲ್ಲಿ ಅಭಿ-ಚಾರ ಕೃತ್ಯಗಳಿವೆ, ಎಂದು ಹೇಳುತ್ತ ಬಂದಿದ್ದಾರೆ. ಮಾನವನು ಅಭಿ-ಜಾತ ಆಚಾರಗಳನ್ನು ತುಂಬ ಮೆಚ್ಚಿಕೊಂಡಿದ್ದಾನೆ. ಅಭಿ-ಜಾತ ಕೃತಿಯು ಅತ್ಯಂತ ಮೌಲಿಕವಾದದ್ದು. ಅಭಿ ಎಂಬ ಈ ಉಪಸರ್ಗಕ್ಕೆ ಒಳಗಣ ಎಂಬ ಅರ್ಥವಿದೆ. ಮೂಲಕೇಂದ್ರದ ಆಕೃತಿಯ ಪ್ರೇರಣೆ-ಪ್ರಚೋದನೆಯಿಂದ ಸಂಭವಿಸುವ ನಡೆ-ನುಡಿ ಇದು ಅಭಿಜಾತ. ಇದು ನೈಸರ್ಗಿಕ-ಪ್ರವೃತ್ತಿ-ಈ ಮನು-ಜನದು.

ಆದರೆ, ನರ(ಳ) ಸಂಪ್ರದಾಯಗಳಲ್ಲಿ ಅಭಿ-ಚಾರದತ್ತಣಿನ ಆಕರ್ಷಣ! ಹುಟ್ಟಿದ ಎಡೆಯತ್ತಣ ಎಳೆತ-ಅಭಿಚಾರ. ಇದನ್ನು ನಿವೃತ್ತಿಮಾರ್ಗ ಎಂಬಲ್ಲಿ ಈ ಅಭಿಚಾರ ಕೃತ್ಯದ ಒಪ್ಪಿಗೆಯೇ ಇದೆ. ಪ್ರ-ವೃತ್ತಿಗೆ ವಿರೋಧಿ, ನಿವೃತ್ತಿ ಪಂಥಗಳು. ಈ ನರ(ಳ) ಸಂಪ್ರದಾಯಗಳಲ್ಲಿ ನಡೆದು ಬಂದಿರುವ ಒಂದು ನಡೆವಳಿ ಹೀಗಿದೆ. ಯಾರೊಬ್ಬನು ತನ್ನ ಹುಟ್ಟಿದ ಕೋಣೆಯ ದರ್ಶನ ಪಡೆಯುವುದು ವಾಡಿಕೆ. ಬೆಳಗಾವಿಯಿಂದ ನಮ್ಮೂರಿಗೆ ಹೀಗಿದೆ. ಗುರ್ಲಹೊಸೂರಿಗೆ ಬಂದ, ಒಬ್ಬ ದೊಡ್ಡ ಪುರುಷರ ಬಗೆಗಿನ ನನ್ನ ಚಿಕ್ಕಂದಿನ ನೆನಪು ಇಂದಿಗೂ ಆಗೀಗ ಮರುಕಳಿಸುತ್ತದೆ. ಅವರ ತಾಯ್ತಂದೆ ಮುಂಚೆ ನಮ್ಮೂರಲ್ಲೇ ಇದ್ದರಂತೆ. ಅವರ ಮನೆ ನಮ್ಮ ಹತ್ತಿರವೇ ಇತ್ತು. ನಾನೂ ಗ್ರಾಮೀಣ. ನನಗೆ ದೊಡ್ಡ ಶಹರದಿಂದ ಬಂದ ಅತಿಥಿಗಳ ಬಗೆಗೆ ತೀವ್ರ ಕುತೂಹಲ. ಇವರು ಇಲ್ಲಿಗೆ ಬಂದದ್ದು-ಹುಟ್ಟಿದ ಕೋಣೆ ನೋಡಲು! ಪಟ್ಟಣಿಗರು ಹಳ್ಳಿಗೆ ಬಂದ ಕಾರಣ ತಿಳಿದು ನನಗೆ ಸೋಜಿಗವೆನಿಸಿತು. ಇದರ ಉದಾತ್ತೀಕರಣವೇ ತೀರ್ಥಯಾತ್ರೆ. ಕೇನೋಪನಿಷತ್ತು 'ತತ್ ವನಂ ಉಪಾಸಿತವ್ಯಂ' ಎಂಬ ವಿಧಿ (ನಿಯಮ) ಹೇಳುತ್ತದೆ. ಮನು>ಮಾನವ ಧರ್ಮಶಾಸ್ತ್ರದ ಇತಿಹಾಸವು ತೀರ್ಥಯಾತ್ರಾ ಮಹಾತ್ಮ್ಯದಲ್ಲಿ ಪರಿಣಮಿಸಬೇಕೆ? ಸವಿತೃ ಮಂತ್ರದ ಧೀಃ ಯಿಂದ ಪ್ರಚೋದಿತದಾರಿ ಯಾವುದು? ಸಮಾಜ ಸಮಷ್ಟಿ ವೈಶ್ವಾನರಾಗ್ನಿ ಉಪಾಸನೆಯ ದಾರಿ ಯಾವುದು?

ಮುಕ್ತಿಯ ಈ ಸ್ಥಲ ಕಾಶಿಯಾದದ್ದು ಇತ್ತೀಚೆಗೆ! ಕಾಶಿಗಿಂತಲೂ ಮುಂಚೆ-ಕುರು-ಕ್ಷೇತ್ರವೇ ಮುಕ್ತಿಯ ಸ್ಥಲ ಎನಿಸಿತ್ತು![೧೨]

೧. ದೇವಾ ವೈ ಸತ್ರಂ ಆಸತ ಕುರುಕ್ಷೇತ್ರೇ

೨. ದೇವಾ ವೈ ಸತ್ರಂ ಆಸತ ತೇಷಾಂ ಕುರುಕ್ಷೇತ್ರೇ ವೇದೀ ಆಸೀತ್!

ಬ್ರಾಹ್ಮಣಕಾಲದಲ್ಲಿ ಕುರುಕ್ಷೇತ್ರವು ಕೇಂದ್ರ (Centre) ಆಗಿತ್ತು. ಇದು ಧರ್ಮ ಕ್ಷೇತ್ರ. ಆ ಕಾಲದಲ್ಲಿ ಈ ಕುರುಕ್ಷೇತ್ರವೇ ಮುಕ್ತಿಸ್ಥಾನವಾಗಿತ್ತು.

> ಕುರುಕ್ಷೇತ್ರೇ ಗಮಿಷ್ಯಾಮಿ। ಕುರುಕ್ಷೇತ್ರೇ ವಸಾಮ್ಯಹಂ।
> ಯಃ ಏವಂ ಸತತಂ ಬ್ರೂಯಾತ್। ಸರ್ವ ಪಾಪೇಭ್ಯೋ ಪ್ರಮುಚ್ಯತೇ।

ಈಶ್ಲೋಕವೇ ಕಾಶಿಯಾತ್ರೆಯ ಬಗೆಗೂ ಆ ಬಳಿಕ ರೂಢವಾಗಿದೆ. ಆ ಮೇಲೆ ಕುರುಕ್ಷೇತ್ರ ಸಮಾಗಂಗಾ! ಎಂಬ ಸಮಾಧಾನ ಶಾಸ್ತ್ರವು ತಲೆದೋರುತ್ತದೆ. ಡಾ. ಪಿ.ವಿ. ಕಾಣೆ Religious Suicide ವಿಚಾರವನ್ನು ಎತ್ತದೆ ಇಲ್ಲ. 'ಜೀವಿತಂ ಅಧ್ರುವಂ ಜ್ಞಾತ್ವಾ... ದೇಹ ತ್ಯಾಗೋ ಕಾರ್ಯಃ' ಆಗುತ್ತದೆ!

ಆದಿತ್ಯ ಸಂಪ್ರದಾಯದ : ಕುಮಾರೀಪುತ್ರ ಜಾಬಾಲನ ಉಪನಿಷತ್ತಿನಲ್ಲಿ. ಅವಿಮುಕ್ತ ಕುರುಕ್ಷೇತ್ರದ ಉಲ್ಲೇಖವಿದೆ.[೧೩] ಇದನ್ನು ಶ್ಮಶಾನ (ಮೃತ್ಯುವಿನ ಸ್ಥಾನ) ಎಂದು ಬಗೆಯಲು ಹೇಳಿದ್ದಾಗಿದೆ,

> ಶ್ಮಶಾನಂ ಏತತ್ ವಿಖ್ಯಾತಂ ಅವಿಮುಕ್ತ ಇದಂ ಶ್ರುತಮ್।
> ವಾರಣಸಿ? ಕಾ ವೈ ವಾರಣಾ? ಕಾಚ ನಾಸೀ ಇತಿ
> ಸರ್ವಾನ್ ಇಂದ್ರಿಯ ಕೃತ ಪಾಪಾನ್ ನಾಶಯತಿ ಇತಿ
> ತೇನ ನಾಸೀ ಭವತಿ। ವರಣಾ ಯಾಂ ನಾಸ್ಯಾಂ ಚ ಮಧ್ಯೇ ಪ್ರತಿಷ್ಠಿತಂ ಇತಿ

ಮುಕ್ತಿಸ್ಥಾನವನ್ನು ಈ ಗುಹ್ಯಸಂಕೇತದಿಂದ ಸೂಚಿಸಲಾಗಿದೆ. ಈ ಕಾಶಿಗೆ ಆನಂದಕಾನನ ಮತ್ತು ಶ್ಮಶಾನ, ಮಹಾಶ್ಮಶಾನ ಎಂಬ ಈ ಪರಸ್ಥ ವಿರೋಧೀ ಹೆಸರು ಯೋನಿ ಸಂಪರ್ಕ ಪರಿಣಾಮ ಸೂಚಕವೆಂದೇ ಹೇಳಿದರೆ ತಪ್ಪು ಆಗಲಾರದು. ದೇಹವೇ ದೇಗುಲ ಎಂಬ ಈ ಮಾನವ ಶರೀರದ ಭೂಗೋಲದಲ್ಲಿ ಮರಣಾ ಮತ್ತು ನಾಸಿಕ್ಯ ಇರುವ ಎಡೆಯ ಮುಕ್ತಿ ಸ್ತಾನವು ಏಕಕಾಲಕ್ಕೆ ಆನಂದ ವನ ಮತ್ತು ಶ್ಮಶಾನಭೂಮಿ=ಕುರುಕ್ಷೇತ್ರ ಆಗಬಲ್ಲುದು. ಈ ರುದ್ರಭೂಮಿಯನ್ನು 'ಅವಿಮುಕ್ತ ಶಿವಾಲಯಂ' ಉಂಟು ಎಂದು ಮತ್ಸ್ಯಪುರಾಣ ಹೇಳುತ್ತದೆಯಂತೆ! ಮೋಕ್ಷಸ್ಥಾನ : ಅಭಿಜಾತ ಕುರುಕ್ಷೇತ್ರ (Genuine) ಕೃತಕ ಕುರುಕ್ಷೇತ್ರ ಸಾವನ್ನಪ್ಪುವ ಎಡೆ! ಶ್ಮಶಾನ : ಕಾಶಿ! (Authentic)! ಶ್ರೀಮತ್ ಮತ್ತು ಭಗವತ್ ಸ್ವರೂಪೀ ಗೀತೆಯಲ್ಲಿ ಲೋಕಸಂಹಾರ ಶಕ್ತಿಯ ಭಗವಂತ ನಿದರ್ಶನವು=ವಿಶ್ವರೂಪ ದರ್ಶನವು ಶ್ಮಶಾನ ಭೂಮಿಯಲ್ಲೆ ತಾನೆ?

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** viii ೧೦೧.೧೫
೨. ***ದೋಗ್ಯೋಪನಿಷತ್ತು*** ೪.೧೫.೫.೧೦ ಋಗ್ವೇದ ಸಂಹಿತೆ x ೫೧.೫
೩. ***ಭಗವದ್ಗೀತೆ*** ೧೦.೨೧
೪. ***ಛಾಂದೋಗ್ಯೋಪನಿಷತ್ತು*** ೧.೬.೬.
೫. ಇದರ ಹೆಚ್ಚಿನ ವಿವರಕ್ಕಾಗಿ ***ಇಂಚರ,*** ಏಪ್ರಿಲ್, ಮೇ. ೮೨ ಸಂಚಿಕೆಗಳನ್ನು ನೋಡಿ.
೬. ***ಋಗ್ವೇದ ಸಂಹಿತೆ*** I ೧೧೪-೬ನೆಯ ಋಚೆಯ ಸಾಯಣ ಭಾಷ್ಯವನ್ನು ನೋಡಿ.
೭. ***ಅದೇ*** VIII ೧೦೧.೧೫
೮. ***ಅದೇ*** I. ೧೫೪. ೫
೯. ***ಮುಂಡಕೋಪನಿಷತ್ತು*** ೨.೧.೮; ೨.೨.೧
೧೦. ***ಅಥರ್ವವೇದ ಸಂಹಿತೆ*** ೧೨.೧೨.೩೧
೧೧. ***ಜಾಬಾಲೋಪನಿಷತ್ತು.*** ೬೩. ೧೦
೧೨. Kane. P.V. ***History of Dharmashastra*** vol iv pp. 161, 622
೧೩. ***Ibid*** vol iv p.627

ಕಾವ್ಯಸತ್ಯದ ಸ್ವರೂಪ ವಿಚಾರ

ಮಡಿಕೆರೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣವು ವಾಡಿಕೆಗಿಂತ ದೊಡ್ಡದಾಯ್ತು ಎಂಬ ಆಕ್ಷೇಪ ಕೆಲವು ಮಿತ್ರರದು. ಈ ಸೂಚನೆ ಮನ್ನಿಸಿ ಕಾವ್ಯಸತ್ಯದ ವಿಚಾರ, ಅನಿವಾರ್ಯವಿದ್ದರೂ ಬಿಡಬೇಕಾಯ್ತು. ಈ ಕೊರತೆ ತುಂಬಿಕೊಳ್ಳಲು ಶಿರಸಿಯ ಸಾಹಿತ್ಯ ಸಮ್ಮೇಳದಲ್ಲಿ ಸಂಧಿ ದೊರೆಕಿತು. ಆದರೆ, ನಿವೃತ್ತ ಅಧ್ಯಕ್ಷನಿಗೆ ಇರುವ ಎರಡು ಮಾತಿನ ಅವಧಿ ಮೀರಲಾಗದು, ಎಂಬ ಕಾರಣದಿಂದ ಬರೆದುದನ್ನೂ ಸಂಕ್ಷೇಪಿಸಿ ಸಾರರೂಪದಲ್ಲಿ ಹೇಳಬೇಕಾಯ್ತು. ಕಾವ್ಯಸತ್ಯದ ಸ್ಪಷ್ಟೀಕರಣದ ಉದಾಹರಣಗಳ ವಿಸ್ತೃತ ವಿವರಣಕ್ಕೆ ಮುದ್ರಿತ ಭಾಗದಲ್ಲಿಯೂ ಇಂಬು ದೊರೆಯಲಿಲ್ಲ. ಕಾವ್ಯಸತ್ಯದ ರೂಢ ಕಲ್ಪನೆಯು, ಈ ವೇದಗಳೊಳಗಿನ ಪುರುಷಃ ಪುರಿ-ಶಯ ಕಲ್ಪನೆಯಷ್ಟೇ ಅರ್ವಾಚೀನ! ಮೂಲ ಸೌರಮನು>ಮಾನವ ಧರ್ಮದಲ್ಲಿ, ಋತಸ್ವರೂಪೀ ಸತ್ಯದ ಬಗೆಗೆ ನಿಷ್ಠೆಯಿದ್ದ-ಇರುವ-ಈ ಸಂಗತಿಯನ್ನು ಅಮಾನ್ಯ ಮಾಡಲು ಯಾರಿಗೂ ಬರಲಾರದು. ಇಂದಿನ ಸಂಹಿತೆಯಲ್ಲಿಯೂ ಋತಂ ಚ ಸತ್ಯಂ ಚ.. ಈ ಋಚೆಯೂ ಎಂತೂ ಉಳಿದಿದೆ!

ಈ ಹಿನ್ನೆಲೆಯಲ್ಲಿ, ಪುರಾತನ ದೇವ ಮತ್ತು ಅಸು-ರ ಸಂಪ್ರದಾಯಗಳ ಕಾವ್ಯಸತ್ಯದ ಸ್ವರೂಪವು ಯಾವುದು ಇತ್ತು ಎಂಬುದನ್ನು ನಿರ್ದಿಷ್ಟಪಡಿಸಿ ಅರಿಯಲು ಶಕ್ಯವಾಗುತ್ತದೆ. ವಿಶ್ವನಿಯಮಕ್ಕೆ ತಲೆವಾಗಿ ಬಾಳುವ ಹುಟ್ಟು ಪ್ರವೃತ್ತಿ ಮಾನವನದು. ವೈವಸ್ವತಮನು ಇವನೇ ಈ ವಿಶ್ವನಿಯಮ ಪ್ರೇರಕ, ಅಂತರ್ಯಾಮಿ, Objective reality ಎಂಬ ನಿಷ್ಠೆ ದೇವ-ಮಾನವ ವರ್ಗದ್ದು. ಆತ್ಮಪೂಜಕಃ ಪುರುಷಃ ಪುರಿ-ಶಯನ ಉಪಾಸಕರ ಅಮಾನವ ನರ(ಳ) ಸಂಪ್ರದಾಯವು ಶಿಷ್ಟಮಾನ್ಯವಾಗಿಸಿರುವ ಇಂದಿನ ರೂಢ ಕಾವ್ಯಸತ್ಯ, ಇದು ಅಸುರ ಸಂಪ್ರದಾಯದ್ದೇ ಆಗುತ್ತಿದೆ. ವಿಶ್ವನಿಯಮ: ವಿಕಾಸತತ್ವದ ಪ್ರಕ್ರಿಯೆಯಲ್ಲಿ ಸುಸ್ಪಷ್ಟವಾಗಿರುವ ಜೀವನ (ಸ್ವರ್) ಮತ್ತು ಜೀವಿತ (ಭೂಃ→ಭುವಃ) ಪಾತಳಿಗಳಲ್ಲಿ ಅಭಾವಾತ್ಮಕ ಪ್ರಾಣಲಿಂಗ ಚೇತಸ ಬುದ್ಧಿಯ ಮೂಲಕ ಪ್ರಚೋದಿತ. ಪ್ರಾಣ ಅಸು ಶಕ್ತಿಗೇ ಪ್ರಾಧಾನ್ಯವಿರುವ ಬಾಳಬಗೆಯನ್ನು ಆಯ್ದುಕೊಳ್ಳುವ ಅಂತಃಪ್ರವೃತ್ತಿಯೇ ಅಸು-ರ ವರ್ಗದ್ದು. ಆದಕಾರಣ, ನಿಯತಿಕೃತ ನಿಯಮರಹಿತಾಂ... ಎಂಬ ಸೂತ್ರಕ್ಕೆ ಸರಿಹೋಗುವ ಕಾವ್ಯಸತ್ಯವು ಅಸುರ ಸಂಪ್ರದಾಯದ್ದೇ ಆಗುವುದು. ಈ ಅಂಶವು ಪರ್ಯಾಯದಿಂದ ಮಡಿಕೆರೆಯ ಉಪನ್ಯಾಸದಲ್ಲಿಯೂ ಸೂಚಿತವಿದೆ. ಸೃಜನಶೀಲ ಸಾಹಿತ್ಯದ ಕಲ್ಪನೆಯಿಂದ ಪ್ರಭಾವಿತ ಶಬ್ದಬ್ರಹ್ಮರು ರಾತ್ರ ಸಮಯಾಚಾರಗಳು ಸಂದರ್ಭದಲ್ಲಿಯೇ ಪ್ರತೀತಿಗೆ ಬರುವ, ರವಿ ಕಾಣದ್ದನ್ನು ಕವಿ ಕಾಣುತ್ತಾನೆ ಈ ಲೋಕೋಕ್ತಿ ಅಭಿಪ್ರೇತ dramatic Irony ಮೂಲಕ ದೃಢಪಡುತ್ತಿರುವ, ಚಾಂದ್ರಭೂಮಿಕೆಯು ಅಸು-ರ ಸಂಪ್ರದಾಯದ್ದೆ, ಎಂಬುದು ಜಾಗತಿಕ ಪುರಾತನ ಸಂಸ್ಕೃತಿಗಳ ಮೂಲಕ ಸ್ಪಷ್ಟಪಡುತ್ತದೆ.

ಗ್ರೀಕ್ ಪುರಾತನ ಕ್ರೋನಸ್ : ಕಾಗೆ: ಚಾಂದ್ರಕಾಲ ಸೂಚಕ ಸಂಕೇತ. ಭಾರತೀಯ ಸಂದರ್ಭದಲ್ಲಿ ಬೃಹಂತಂ ವಾಯಸಂ ಅಪಾಂ ಗರ್ಭಂ ಈ ಮಾತು ಋಗ್ವೇದದಲ್ಲಿದೆ! ಗ್ರೀಕ್ ಪರಂಪರೆಯ ನೆತ್ತಿಗಣ್ಣಿನ ಸೈಕ್ಲೊಪಸ್, ಭಾರತೀಯ ಪರಂಪರೆಯ ನಾರ-ಕ=ನಾಗ-ಲಿಂಗ ಇವನು ಟಿಟ್ರಾನ್, ಭೂಮಿಪುತ್ರ>ಭೌಮಾಸುರರು ಎಂದು ಕರೆಯಲಾಗುತ್ತಿತ್ತು. ಈ ನೆತ್ತಿಗಣ್ಣಿನ : 'ಶಿರಸಿ ಚಕ್ಷುಃ' ಇರುವ ಅಸು = ಪ್ರಾಣಶಕ್ತಿಯ ಅಸುರ ದೈವತವೇ ಇಂದು; ಪ್ರಪಂಚದಲ್ಲಿ ಕುಮಾರಿ-ಕುಮಾರ ಸಂಪ್ರದಾಯದ ನರ(ಳ) ಧರ್ಮದ ಆರಾಧ್ಯದೈವತವಾಗಿದೆ. ಏಕಂ ಸನ್ತಂ ಸುಪರ್ಣಂ, ವಿಪ್ರಾಃ ಕವಯಃ ಬಹುಧಾ ಕಲ್ಪಯಂತಿ, ಭೇದದ ಈ ಕವಿಯು, ಕಲ್ಪಯಂತಿ ವರ್ಗದ ದೇವತಾ ಶಕ್ತಿಯನ್ನು ಏಕಂ : ಸತ್ ಎಂದಿರುವಲ್ಲಿ ಒಂದು ಒಪ್ಪಿಗೆಯೂ ಇದೆ. ಈ ಏಕಂ ಎಂಬುದು ಕೇವಲ ಕಲ್ಪಿತ! ಅಭಾವಾತ್ಮಕ! ಇವೆಲ್ಲ ಪ್ರಾಣಲಿಂಗ ಶಕ್ತಿಯ ನಾನಾ ಪ್ರಕಾರಗಳು! ಪ್ರಾಣ=ಅಸು, ಈ ಪ್ರಾಣೋಪಾಸನೆ ಅಸುರ ಪ್ರವೃತ್ತಿ ಪ್ರಚೋದಕವಾಗುವ ಅನಿವಾರ್ಯತೆಯೂ ಉಂಟು.

ವಿಚಾರ ಮತ್ತು ಕಲ್ಪನೆ ಅಭಿನ್ನವಲ್ಲ. ವಿಚಾರ ಸ್ವಾತಂತ್ರ್ಯ ಬೇಕು ಎಂಬ ಆಗ್ರಹವು ಯುಕ್ತವಿದೆ; ಸಮಂಜಸವಿದೆ. ಆದರೆ, ಇಂದಿನ ಜೀವಿತದ ಪಾತಳಿಯ ಮೇಲೆ ವಿಚಾರ ಸ್ವಾತಂತ್ರ್ಯದ ಹೆಸರಿನಲ್ಲಿ ಕಲ್ಪನಾ ಸ್ವಾತಂತ್ರ್ಯವೇ ಅಭಿಪ್ರೇತವಾಗುತ್ತಿದೆ! ವಿಚಾರ ಇದು ಅಂತರ್ ವಿಸಂಗತ ಸ್ವರೂಪದ್ದು ಆಗುವಾಗ ಅದು ವಿಚಾರ ಎನಿಸದೆ ಕಲ್ಪನೆಯೇ ಆಗುತ್ತದೆ. ಸೂರ್ಯನು ಆದಿತ್ಯನಾಗುತ್ತಾನೆ ಎಂಬಲ್ಲಿ ಇದು ವಕ್ರ ವಿಚಾರದ ಉತ್ತಮ ಮಾದರಿಯಾಗಿದೆ. ವಿಚಾರ = ಅಂತಃಸಂಗತಿ ಯುಕ್ತ-ಶುದ್ಧ ವಿಚಾರ ಇದು ವೈಯುಕ್ತಿಕ ಸ್ವರೂಪದ್ದು ಆಗಲಾರದು: ಇರಲಾರದು. ಅವರವರ ಅರ್ಥವು ಅವರವರ ಪಾಲಿನ ಸತ್ಯ ಆಗುವಾಗ, ಈ ಹಂತದಲ್ಲಿ ಇರುವ ವಿಚಾರದ = ನಿಜವಾದ ವಿಚಾರದ ಅಭಾವವೇ ಇರಬಲ್ಲುದು. ಅಂತರ್ ವಿಸಂಗತಿಯೇ ಸ್ಥಾಯೀ ಇರುವ ಗೀತೆ, ವೇದೋಪನಿಷತ್ತುಗಳಲ್ಲಿ ನಿಜವಾದ ವಿಚಾರದ ಅಭಾವ ಇರುವುದರಿಂದ, ಇವು ಜೀವಿತದ ಪಾತಳಿಯ ಕತ್ತಲನ್ನು ಚಿತ್ರಿಸುತ್ತಿವೆ. ಅಸುರ ಸಂಪ್ರದಾಯವು ಮೆಚ್ಚಿಕೊಂಡ ಭಾಷಾ ವೈಶಿಷ್ಟದಲ್ಲಿ ಕತ್ತಲನ್ನು ಉಂಟುಮಾಡುವ ಅಂತರ್ ವಿಸಂಗತಿಯೇ ಸ್ಥಾಯೀ ಇರುತ್ತದೆ!

ಸರ್ವಭಾಷಾಮಯೀ ಭಾಷಾ ಸರ್ವಭಾಷಾ ಸರಸ್ವತೀಯು ಮೂಕಾಂಬೆಯು ಮಾತಾಡುತ್ತಾಳೆ, ಎಂದರೇನು? ಮೈಯಲ್ಲಿ ಆವೇಶವಾಗಿ ಹೊರಹೊಮ್ಮುವ ಉಸಿರು! ತುರೀಯ ವಾಣಿ : ಯದ್ ವಾಕ್ ಪಶವಃ ವದಂತಿ ಎಂದಿರುವಲ್ಲಿ ವಾಸ್ತವಾಂಶವು ಬಯಲಿಗೆ ಬರುತ್ತಿದೆ. ಈ ವಿವರವು ಈ ಮೊದಲು ಬಂದಿದೆ. ಪಶು : ಪ್ರಾಣಿ = ಅಸುರ ವರ್ಗ! ಜ್ಞಾನೇಶ್ವರನು ಕೋಣನ ಮುಖದಿಂದ ವೇದ ನುಡಿಸಿದನಂತೆ. ಹಕ್ಕೀ ಶಕುನ, ಹಲ್ಲೀ ಶಕುನ ಇದೂ ಭಾಷೆಯೇ ಅಲ್ಲವೆ? ಗುಡ್ಡದ ಮಲ್ಲಾಪುರ ಮಠದ ಪಟ್ಟಕ್ಕೆ ಕರು = ಹೋರಿಯನ್ನು ತರುವ ವಾಡಿಕೆ ಇಂದಿಗೂ ಇದೆ! ಇಂತಹ ಉದಾಹರಣೆ : ಈ ವೇದದೊಳಗಿನ ಕೆಲವೊಂದು ಕವಿಗಳ ನಾಮಾವಳಿಯೂ ಅಭ್ಯಸನೀಯವಿದೆ. ಇಂತಹ ಒಂದು ಮಾದರಿಯನ್ನು, ಪುರುಷ : ಪುರಿ-ಶಯ(ನ) ಸೂಕ್ತಕಾರನೆಂಬ ನಾರಾಯಣ=ನಾರ-ಅಯನನ ವಿವರಣದಲ್ಲಿ ಸಮೀಕ್ಷಿಸಿದ್ದಾಗಿದೆ. ದಕ್ಷಿಣಃ ಕಪರ್ದಃ ವಸಿಷ್ಠಃ ಇದು ಇನ್ನೊಂದು ಉದಾಹರಣ! ದಕ್ಷಸ್ಯ ದುಹಿತಾ ಅದಿತಿಃ ಋಷಿಯ ಒಂದು ಸೂಕ್ತ ಇವಳು ಸಲಿಲ (ಶರೀರ) ಜಲ ಸ್ವರೂಪಿ! ಇವಳನ್ನು ಸೂಕ್ತಕಾರಳು ಎಂದರೆ, ಇದು ಆಸುರೀ ಪ್ರಕಾರವೇ ಅಲ್ಲವೊ?

ಈ ಹಿನ್ನೆಲೆಯಲ್ಲಿ ಉಂಟಾಗುವ ಪ್ರಶ್ನೆ : ಇಂದಿನ ಈ ವೇದವು 'ಶ್ರುತಿಃ ಶಬ್ದ ಯಸ್ಯ ನಿಶ್ವಸಿತಃ ವೇದಾಃ' ಎಂದು ಸಾಯಣರೇ ಹೇಳುತ್ತಾರೆ. ವೇದರೂಪದಲ್ಲಿ ಕೇಳಬಂದ ಈ ನಿಶ್ವಸಿತವು : ಉಸಿರು ಯಾರದು? ಸಾಯಣರು ಇದನ್ನು ಸಂದಿಗ್ಧವಾಗಿಯೇ ಇರಿಸಿದ್ದಾರೆ. ಆದರೆ, ಉಸಿರು=ಶ್ವಸಿತ=ಪ್ರಾಣ. ಪ್ರಾಣಾಃ ವಾ ಋಷಯಃ[೧] ಎಂದು ಉಪನಿಷತ್ತು ಸಾಕ್ಷೀ ಹೇಳುತ್ತದೆ! ಮತ್ತೆ ಪ್ರಶ್ನೆ: ಈ ಪ್ರಾಣ : ಉಸಿರು, ಯಾರದು? ಇದು ಅಮಾನುಷ : ವ್ಯಕ್ತಿಯೇ ಇರಬಲ್ಲುದು. ಪ್ರಾಣಾಃ ವಾ ಆದಿತ್ಯಃ'[೨] ಆದಕಾರಣ, ಇದು ಅನಿಮಿಷ ದೇವ ಆದಿತ್ಯನ ಪ್ರಾಣ=ಉಸಿರು, ಇರಲಿಕ್ಕೇ ಬೇಕಾಯ್ತು. ಆದರೆ ಈ ಆದಿತ್ಯ ಎಂದರೆ ಯಾರು? ಆದಿತ್ಯ ಪುರಿ-ಶಯ= ಪುರುಷ= ನಾರಾಯಣ= ನಾರ= ಅಯನ ಬೇರೆಯಲ್ಲ. ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಹೇಳಿದ್ದು : ಆದಿತ್ಯ ಶಿರಸಿ ಚಕ್ಷುಃ ಎಂಬುದು ಅಕ್ಷರಶಃ ಖರೆ ಇದೆ! ಪ್ರಶ್ನೆ : ಪುರಿ-ಶಯ ದಶಾಂಗುಲ=ನೆತ್ತಿಗಣ್ಣಿನ ಲಿಂಗ. ವೇದ ಉಸಿರಿತು, ಎಂದರೆ

ನಂಬಲಿಕ್ಕಾದೀತೆ? ಈ ಪ್ರಶ್ನೆ ತಿಳಿಗೇಡಿತನದ್ದು. ಪರಂಪರೆಯನ್ನು ಲೆಕ್ಕಿಸಿದ್ದು ಆಗಿದೆ. ಈ ಆದಿತ್ಯ : ನೆತ್ತಿಗಣ್ಣು, ಒಂದು ವಿಶಿಷ್ಟ ರೂಪವಲ್ಲ ಸಮಷ್ಟಿ ಪಶುವರ್ಗದ ಪ್ರತಿನಿಧಿ ಈ ನೆತ್ತಿಗಣ್ಣಿನ ಏಕರ್ಷಿ ಅನಿಮಿಷದೇವ!*

ಬೃಹದಾರಣ್ಯಕದಲ್ಲಿ ಇದು ಹೆಚ್ಚು ಸ್ಪಷ್ಟವಿದೆ:

ಅಸ್ಯ ಮಹತಃ ಭೂತಸ್ಯ ನಿಶ್ವಸಿತಂ

ಏತತ್ ಋಗ್ವೇದೇ ಯಜುರ್ವೇದಃ ಸಾಮವೇದಃ ಅಥರ್ವ ಆಂಗೀರಸಃ

ಇತಿಹಾಸಃ ಪುರಾಣಂ ವಿದ್ಯಾ ಉಪನಿಷದಃ... ಅಸ್ಯ ಏವ ಏತಾನಿ ನಿಃಶ್ವಸಿತಾನಿ।[೩]

ಛಾಂದೋಗ್ಯದಲ್ಲಿ ವಾಮದೇವ್ಯದ ತಾತ್ವಿಕ ಸ್ಪಷ್ಟೀಕರಣವಿದೆ, ಅದು ಇನ್ನೊಂದೆಡೆಯಲ್ಲಿ ಬಂದಿದೆ. ಈ ಕಾರಣದಿಂದಾಗಿ ದೇವಯಾನ ಮಾರ್ಗದ=ಬ್ರಹ್ಮಪಥದ-ಬ್ರಹ್ಮಪುರಿಯ ಸಂಪರ್ಕದಲ್ಲಿ ಪುರಿ-ಶಯನ ಮೂಲಕ ಈ ಗೀಃ ವಾಣ-ವಾಣಿ ಅವರವರ ಉಪಸ್ಥಾನದ-ಅನು-ಸ್ಥಾನದ ಉಪ-ವಾಸ ವ್ರತದಲ್ಲಿ ಕೆಳಗೆ ದೊರೆಯಬಲ್ಲುದು! ಅಂತರ್‌ವಾಣೀ ಸಿದ್ಧಿ-ಗ್ರೀಕ್-ಪರಿಭಾಷೆಯ Logos ಸಿದ್ಧಿ ಎಂದರೆ ಇದೇ. ಈ ಹಾಳು ಮನುಜ ವಾಕ್-ಭಾಷೆಗೆ ಬೆಲೆ ಇಲ್ಲ. ನರ(ಳ) ಸಂಪ್ರದಾಯದ ಈ ದೇಹಾ (ವಾ) ರದ : ದೇವದ್ವಾರದ ಮೂಲಕ ಕೇಳಬರುವ ಈ ವಾಣಿಗೆ ಸರಿಸಾಟಿಯಾದೀತೆ ವಾಕ್ಕು? ಪ್ರಜ್ಞಾಪ್ರಚೋದಿತ ವಾಕ್ಕು ಕೀಳು. ದಿವ್ಯಜಲದಿಂದ ಪ್ರಚೋದಿತ ವಾಣಿ ಶ್ರೇಷ್ಠ ತಾನೆ? ಆದಿತ್ಯಾನಿ ಇಮಾನಿ ಶುಕ್ಲಾನಿ ಯಜೂಂಷಿ ವಾಜಸನೇಯೇನ ಯಾಜ್ಞವಲ್ಕಾಯನ ಆಖ್ಯಾಂತೇ[೪] ಇಲ್ಲಿ ನಮೂದು ಇರುವ ಈ ಶುಕ್ಲಾನಿ ಎಂದರೇನು? ಪೀಳಯನ್ ರಸವು ತಟಕುವ ವೇದಗಳ ಶುಕ್ಲಾನಿ=ಶುಕ್ರಾಣಿ ಸ್ವರೂಪದವೇ ಇರಬೇಡವೆ? ಶುಕ್ರ : ಏಕಾಕ್ಷ: ನೆತ್ತಿಗಣ್ಣಿನ ಇವನು ದೇವಯಾನಿ ಶುಕ್ರನು ತಾನೆ? ಇವನೇ ಆದಿಕವಿ: ಈಗಣ ಆದಿಕವಿ ಪಟ್ಟದ ವಾಲ್ಮೀಕಿ: ಹುತ್ತಪ್ಪ. ಇವನು, ದೇವಯಾನೀ ಶುಕ್ರನಿಂದ ಬೇರೆ ಎಂದು ಬಗೆಯ ಹಚ್ಚುವ ಈ ಕಣ್ಕಟ್ಟು ಅಪೂರ್ವವಿದೆ!

ಈ ಪ್ರಿಝಂನ ದೃಶ್ಯದ ವಿವಿಧ ಬಣ್ಣಬಣ್ಣದ ಕಾವ್ಯಸತ್ಯವು ಅಸುರ ಸಂಪ್ರದಾಯದ ಮಟ್ಟದಲ್ಲಿ ಕಾಣಲು ದೊರೆವಂತೆ, ಪ್ರಜ್ಞಾ ಪ್ರಕಾಶದ ಅಂಗವಾದ ವೈವಸ್ವತಮನು>ಮಾನವ ಸಂಪ್ರದಾಯದ ಪ್ರತಿಮಾ ಸೃಷ್ಟಿಯಲ್ಲಿ ಕಾಣಲು ದೊರೆತೀತೆ? ಮನು: ವೈವಸ್ವತ ಕಾವ್ಯಸತ್ಯದ (objective reality) ಈ ಮಾದರಿಯಲ್ಲಿ ಕಲ್ಪನಾ ವಿಲಾಸಕ್ಕೆ ಇಂಬಿಲ್ಲ! ಅಗ್ನಿ : ಜಾತವೇದ ಇದನ್ನು, ಅಗ್ನಿ : ನ-ಚಿಕೇತದ ತೂಕದ ಕಾವ್ಯಸತ್ಯ ಎನ್ನಲಾದೀತೆ? ಈ ಅಗ್ನಿ : ಯೋಷಾ ವಾವ ಗೌತಮಾಗ್ನಿಃ, ಪುರುಷೋ ವಾವ ಗೌತಮಾಗ್ನಿಃ ಬಾಡಬ ಅಗ್ನಿ ಇತ್ಯಾದಿ ನಾನಾವಿಧ ಅಗ್ನಿಯಾಗುವ ಶಕ್ತಿ, ಈ ಅಭಾವವೇ ಸ್ಥಾಯೀ ಇರುವ ಅಸುರ ಅಗ್ನಿಗೆ ಇದೆ! ಭಾವಾತ್ಮಕ : ಅನುಭವಾತ್ಮಕ ಸ್ವರೂಪದ ತ್ರಿತಆಪ್ತ್ಯ ವೈಶ್ವಾನರಾಗ್ನಿ, ಶಿಶ್ನೋದೇವಾಃ ಪಂಥದ ಶತ್ರು ಇಂದ್ರ.....ಈ ಶಬ್ದಶಿಲ್ಪದಲ್ಲಿ ಮೈಮೇಲೆ ಎಚ್ಚರವನ್ನುಳಿಸುವ ಪ್ರಕಾಶವಿರುತ್ತದೆ. ಮೈಮರೆಯಿಸಿ ತತ್‌ಮಯವಾಗಿಸುವ ಶಕ್ತಿಯೇ ಶ್ರೇಷ್ಠ ಸಾಹಿತ್ಯದ ಲಕ್ಷಣ ತಾನೆ? ವಿಶ್ವ(ಶ್ವಾ)ಮಿತ್ರನನ್ನು ಖಳನಾಯಕನನ್ನಾಗಿಸಿರುವ, ಪ್ರಕಾಶವನ್ನು ತಮಸ್ಸಿನ ಆವರಣದಿಂದ ಕಣ್ಮರೆಯಾಗಿಸುವ ಈ ಮಾಯಿಕ ಶಕ್ತಿಯ ಆರಾಧನೆಯು ಆತ್ಮನಾಶಕ್ಕೆ ಕಾರಣವಾಗುತ್ತಿದ್ದರೂ ಈ ಬಗೆಯ ಸಾವನ್ನು ಅಪ್ಪುವಲ್ಲಿ ಭಾರತೀಯರು ನಿಃಸೀಮರು ಎಂದರೆ ತಪ್ಪೆ?

ಲೋಕಮಾನ್ಯ ತಿಲಕರ ಯುಗದ ಕೊನೆ ಮತ್ತು ಮಹಾತ್ಮಾಗಾಂಧೀಜಿ ಯುಗದ ಪ್ರಾರಂಭ! ಅದು ಅಪೂರ್ವ ಘಟನೆ: ಭಾರತೀಯ ಸಂಸ್ಕೃತಿಯ ಇತಿಹಾಸದಲ್ಲಿ ಇದು ಅವಿಸ್ಮರಣೀಯ ಘಟನೆ! ಈ ಸ್ಥಿತ್ಯಂತರವು ಒಳಗೊಂಡಿರುವ ತಾತ್ವಿಕ ವಿಚಾರವು ಮೌಲಿಕವಾಗಿದೆ. ಪ್ರಾಮಾಣಿಕ ಬುದ್ಧಿಗೆ ಸಾಕ್ಷಿಯಾಗಿ ನಿರ್ಣಯಗಳನ್ನು

---

* ಅನಿಮಿಷ ಎಂಬುದನ್ನು ನಿಘಂಟುಗಳು ದೇವತೆಗಳೆಂದೂ ಮೀನೆಂದೂ ನಿರ್ವಚಿಸುತ್ತವೆ. ಅ+ನಿಮಿಷ, ಅನಿಮಿಷ. 'ನಿಮಿಷ' ಎಂದರೆ ಕಣ್ಣನರೆಪ್ಪೆ ಬಡಿಯುತ್ತಿರುವವರು. 'ಅ' ಎಂದರೆ ಇಲ್ಲ. ಯಾರು ಕಣ್ಣಿನರೆಪ್ಪೆ ಬಡಿಯುವುದಿಲ್ಲ ಅವರು ದೇವತೆಗಳು. ಶೂನ್ಯಸಂಪಾದನೆಯಲ್ಲಿ 'ಅನಿಮಿಷದೇವ'ರೆಂಬ ಪವಾಡಿಯೊಬ್ಬನ ಉಲ್ಲೇಖ ಬರುತ್ತದೆ. ಅಲ್ಲಮಪ್ರಭು ಅನಿಮಿಷದೇವರಿಂದ ದೀಕ್ಷೆ ಪಡೆಯುತ್ತಾನೆಂಬ ಪವಾಡಕತೆಯಲ್ಲಿ ಈ ಪರಂಪರೆಯ ಇನ್ನೊಂದು ಮುಖ ಕಂಡುಬರುತ್ತದೆ. (ಸಂ)

ಸ್ವೀಕರಿಸುವ ಯುಗವು ಹಿಮ್ಮೆಟ್ಟಿ, ಈ ಸ್ಥಾನಕ್ಕೆ ಅಂತರ್ವಾಣಿ: ಆತ್ಮಸಾಕ್ಷಿಯ ಅನುಜ್ಞೆಯ ನಿರ್ಣಯಗಳ ನೇತೃತ್ವದ ಯುಗಾರಂಭವಾಯಿತು.! ಇವೆರಡೂ ಪ್ರಕಾರಗಳು ಶ್ರೀಮತ್ ಭಗವತ್ ಇರುವ ಗೀತೆಯ ಪ್ರಭಾವದ ದ್ಯೋತಕವಾಗಿವೆ! ವಿನೋಬಾಜಿ ಮಹಾತ್ಮಾಜಿಯವರಿಗೆ, ಜೆ. ಪಿ. ವಿನೋಬಾಜಿಯವರಿಗೆ, ತಮ್ಮನ್ನು ಅರ್ಪಿಸಿಕೊಂಡರು! ಆದರೂ ಇವರಿಬ್ಬರ ಅಂತರ್‌ವಾಣಿಗಳಲ್ಲಿ ಅಂತರವು ಕಾಣತೊಡಗಿತು! ಜೆ. ಪಿ. ಸ್ವತಂತ್ರರಾಗಿ ಜನತಾ ಆಂದೋಲನದ ನೇತೃತ್ವ ಸ್ವೀಕರಿಸಿದರು. ಆದರೆ ಭಾರತದ ದುರ್ದೈವದಿಂದ ಸೆರೆಮನೆಯಲ್ಲಿದ್ದಾಗ ಇವರ ಮೇಲಾದ ಮದ್ದು-ಮಾಟದಿಂದಾಗಿ ರೋಗಗ್ರಸ್ತರಾಗಿದ್ದರೂ ಸೋಲನ್ನೊಪ್ಪದೆ ಭಾರತದ ಪುನರುತ್ಥಾನಕ್ಕಾಗಿ ಹೋರಾಟ ನಡೆಸಿದರು. ಇವರ ಪುಣ್ಯದಿಂದ ದೊರೆತ ಚುನಾವಣೆ ಗೆಲುವಿನ ಸದುಪಯೋಗ ಮಾಡಿಕೊಂಡು ಜನತಾ ಪಕ್ಷವನ್ನು ಬಲಿಷ್ಠಗೊಳಿಸುವಲ್ಲಿ ಶ್ರೀ ಮುರಾರಜಿ ದೇಸಾಯಿ ಪ್ರಭೃತಿಗಳು ವಿಫಲರಾದರು. ಈ ಅವಧಿಯಲ್ಲಿ ಜೆ.ಪಿ. ಅವರು ದಿವಂಗತರಾದರು.

ಅಖಿಲ ಭಾರತೀಯ ಮಟ್ಟದ ಮುಂದಾಳುವಿನ ಅಭಾವದಲ್ಲಿ ಜನತಾ ಪಕ್ಷವು ಕುಂಟುತ್ತ ಮುನ್ ನಡೆದಿದೆ. ಅಂತರ್ ವಾಣಿಯ ಪರಿಭಾಷೆಯಲ್ಲಿಯೇ ಮಾತನಾಡುವುದಾದರೆ, ಅನೇಕ ಸಾಧುಗಳ, ದೇವಸ್ಥಾನಗಳ ಆಶೀರ್ವಾದದ ಶ್ರೀಮತಿ ಇಂದಿರಾ ಗಾಂಧೀಯವರ ಅಂತರ್‌ವಾಣಿಯ-ಅವರ ಆತ್ಮಸಾಕ್ಷೀ ನಿರ್ಣಯಗಳು ಕಳೆದ ಚುನಾವಣೆಯವರೆಗೂ ಪ್ರಭಾವಶಾಲಿಯಾಗಿ ಪರಿಣಮಿಸಿದ್ದಕ್ಕೆ ಕೇಂದ್ರದ ಪಟ್ಟವು ಅವರ ಕಡೆಗೆ ಇರುವುದೇ ಪ್ರಮಾಣ. ಆದರೆ, ಈ ಅಂತರ್‌ವಾಣಿಯ ತಾತ್ವಿಕ ಹಿನ್ನಲೆ, ಎಷ್ಟು ಅಭದ್ರ ಅಮಂಗಳಕರವಿದೆ ಎಂಬುದನ್ನು 'ಬಿತ್ತಿದ್ದನ್ನು ಬೆಳೆಕೊ' ಈ ಪ್ರಕಟನೆ ಮನಗಾಣಿಸಿ ಕೊಡಬಲ್ಲದು ಎಂದು ನನಗೆ ಎನಿಸಿದೆ. ಇನ್ನು ಮುಂದೆ ಭಾರತದ ನೇತೃತ್ವವು ಪ್ರಜ್ಞೆಯ ಅಂಗವಾದ (ಸೌರ) ಮನಸ್‌ತತ್ವದ ಪ್ರೇರಣೆ ಕಡೆಗೆ ಬಂದದ್ದಾದರೇ ಭಾಗ್ಯ, ಎಂದು ನನ್ನ ಈ ಅನ್ವೇಷಣೆಯ ಹಿನ್ನೆಲೆಯಲ್ಲಿ ನನಗೆ ಎನಿಸುತ್ತದೆ.

ಕಾವ್ಯಸತ್ಯದ ವ್ಯಾಪ್ತಿ

ಕಾವ್ಯಸತ್ಯ ಎಂಬಲ್ಲಿ ಕಾವ್ಯ (ಸೌಂದರ್ಯ) ಇದೇ ಸತ್ಯ. ಇದೇ ಕಾವ್ಯ (ಸೌಂದರ್ಯ). ಆದರೆ, ವಾಸ್ತವ: ಸತ್ಯ ಇದಕ್ಕೆ ಪ್ರತಿಯಾಗಿ, ಕಾವ್ಯಸತ್ಯ ಎಂಬ ಮಾತನ್ನು ಬಳಸಲಿಕ್ಕೂ ಅವಕಾಶವಿದೆ. ಆದರೆ, ಇದರಲ್ಲಿ ಕಾವ್ಯ ಮತ್ತು ಸತ್ಯ ಇವೆರಡೂ ಸಂಕೇತಗಳ ಅಪಮೂಲ್ಯನವು ಆಗುತ್ತಿದೆ. ಕೇವಲ ಕಲ್ಪನಾ-ವಿಲಾಸಕ್ಕೇ ಪಟ್ಟಕಟ್ಟುವ ಅನ್ಯಾಯವು ಇಲ್ಲಿ ಸಂಭವಿಸುತ್ತಿದೆ. ನನಗೆ ಕಾಣುತ್ತಿರುವಂತೆ ಕಾವ್ಯಸತ್ಯದಲ್ಲಿ ವಾಸ್ತವ : ಸತ್ಯವೂ ಒಳಗೊಳ್ಳುತ್ತಿದೆ. ಏಕೆಂದರೆ, ಭಾಷಿಕ ಸಂಕೇತಗಳ ಅರ್ಥವು ವ್ಯಕ್ತಿಯನ್ನು ಅವಲಂಬಿಸಿರುವಂತಹುದಲ್ಲ! ಭಾಷಿಕ ಸಂಕೇತಗಳಿಗೆ ಆ ಬಾಳಿನ ಪಾತಳಿಗಳ ಪ್ರಭಾವದಲ್ಲಿ ಅರ್ಥವು ಕಾಣಿಸಿಕೊಳ್ಳುತ್ತದೆ. ಈ ಕಾರಣದಿಂದಾಗಿ, ಕಾವ್ಯಸತ್ಯದ ಸ್ವ-ರೂಪವನ್ನು ನಿರ್ಧರಿಸುವ ಪಾತಳಿಗಳ ಸುಸ್ಪಷ್ಟ ಪರಿಚಯವು ಅತ್ಯವಶ್ಯವಾಗುತ್ತಿದೆ. ಇದು ನಿಜವಿದ್ದರೆ ಕಾವ್ಯಸತ್ಯದ ಸ್ವ-ರೂಪವು ಎರಡು ಬಗೆಯದ್ದು ಆಗುವ ಅನಿವಾರ್ಯತೆ ಇದೆ.

ಮನು>ಮಾನವ ಸಂಪ್ರದಾಯದ ಕಾವ್ಯಸತ್ಯದ ಸ್ವ-ರೂಪದ ಬಗೆಯೇ ಒಂದು : ಮತ್ತು ನರ(ಳ) ಸಂಪ್ರದಾಯವು ಮೆಚ್ಚಿಕೊಂಡಿರುವ ಕಾವ್ಯಸತ್ಯದ ಸ್ವ-ರೂಪವೇ ಇನ್ನೊಂದು ಬಗೆಯದು ಆಗಿದೆ. ಮೊದಲನೆಯ ಪ್ರಕಾರದ ಕಾವ್ಯಸತ್ಯವು ಮಾನವನ ಏಳ್ಗೆಗೆ ಕಾರಣವಾಗುವಂತೆ, ಎರಡನೆಯ ಬಗೆಯ ಕಾವ್ಯಸತ್ಯವು ಮಾನವ ಸಂಪ್ರದಾಯದ ಅಧೋಗತಿಗೆ ಕಾರಣವಾಗುತ್ತ ಬಂದಿದೆ. ಭಾರತೀಯ ಪುರಾತನರು ಮಾನವ ಸಂಪ್ರದಾಯದ ಕಾವ್ಯಸತ್ಯಕ್ಕೆ ಋತ ಸ್ವರೂಪೀ ವಿಶ್ವನಿಯಮದ ಬೆಳಕಿನಲ್ಲಿ ಅರಿಕೆಗೆ ಬರುವ ಸತ್ಯ ಎಂದು ಹೆಸರಿಸಿದ್ದರು. ವೈವಸ್ವತ ಮನು>ಮಾನವ ಸಂಪ್ರದಾಯದಲ್ಲಿ-ವೈವಸ್ವತ ಮನ್ವಂತರದಲ್ಲಿ-ಋತಸತ್ಯವು ಮಾತ್ರ ಶಿಷ್ಟಮಾನ್ಯವಿತ್ತು. ಆದರೆ ಮೃತ್ಯು (ಚಾಂದ್ರ) ತತ್ವದ ಆರಾಧನೆಯು-ಮಂಡಲೋಪಾಸನೆಯು-ತಲೆಯೆತ್ತಿ ಈ ಪಂಥವು ಪ್ರಬಲವಾಗ ತೊಡಗಿದಂತೆ, ವೈವಸ್ವತ ಮನ್ವಂತರವು ನಾಮಮಾತ್ರಕ್ಕೇ ಉಳಿದು ವಿಷ್ಣುಪಂಥೀಯ ಶ್ವೇತ ವರಾಹ>ವಾರಾಹ ಕಲ್ಪವು ಪ್ರತಿಷ್ಠೆ ಪಡೆದಿರುವುದನ್ನು ಕಾಣಬಹುದಾಗಿದೆ! ಭಾರತೀಯ ಪೂರ್ವಪರಂಪರೆಯಲ್ಲಿ ಮನ್ವಂತರ ಧಾರಣೆಯಂತೆ 'ಕಲ್ಪ' ಎಂಬ ಪರಿಕಲ್ಪನೆಯೂ ಕಾಲಾವಧಿ ಸೂಚಕ ಸಂಕೇತವಾಗಿದ್ದುಂಟು!

ಬಾಳಿನ ಪಾತಳಿಗಳ ವಿಚಾರ

ಮಾನವ ಶಾಸ್ತ್ರಜ್ಞ ಕ್ರೋಬರನ ನಿಷ್ಕರ್ಷದಂತೆ ಈ ಮಾನವ ಸಂಸ್ಕೃತಿಯು Super Organic (ಸ್ವರ್) ಪಾತಳಿಯ ಮೇಲೆ ಇದೆ. ಮಾನವ ಸಂಸ್ಕೃತಿಗೆ ಆಕಾರವನ್ನಿತ್ತಿರುವ ಈ ಸ್ವರ್‌ಪಾತಳಿಗೆ ಪ್ರತಿಯಾಗಿ ಈ Organic (ಪ್ರಾಣಲಿಂಗ ಚೇತಸ ಶಕ್ತಿಯ ಇಂದ್ರಿಯಗಳ) ಪಾತಳಿಯೂ ಒಂದುಂಟು ಎಂಬುದನ್ನು ಇಲ್ಲಿ ಒಪ್ಪಿದಂತೆಯೇ ಇದೆ. ಡಾ। ಕ್ರೋಬರನ ಈ ಆಶಯವನ್ನು ಹೀಗೂ ಹೇಳಬಹುದು : ಈ ಬಾಳಿನಲ್ಲಿ ಜೀವನದ: ಪ್ರಜ್ಞೆಯ ಅಂಗವಾದ ಮನಸ್ ತತ್ವದ (ಸೌರ) ಪಾತಳಿಯು ಇರುವಂತೆ ಜೀವಿತದ : ಮೃತ್ಯುತತ್ವದ (ಚಾಂದ್ರ) ಪ್ರಾಣಲಿಂಗದಿಂದ ಪ್ರಚೋದಿತ ಇಂದ್ರಿಯಗಳ ಪಾತಳಿಯೂ ಒಂದುಂಟು! ಇವೆರಡೂ ಪಾತಳಿಗಳ ಅಂತಃಪ್ರಚೋದನೆಯ ಸ್ವರೂಪವು ತೀರ ಭಿನ್ನವಿದೆ ಎಂಬುದನ್ನೂ ಮರೆತು ನಡೆಯದು. ಜಾಗತಿಕ ಪ್ರಾಚೀನ ಸಂಸ್ಕೃತಿಯ ಆ ಪುರಾತನರಿಗೆ, ದಿವ್ಯ ಪ್ರತಿಮಾರಾಧನೆಯ ಅನುಸಂಧಾನದಲ್ಲಿ ಸೂರ್ಯ: ಪ್ರಜ್ಞಾತತ್ವ ಮತ್ತು ಚಂದ್ರಮ: ಮೃತ್ಯುತತ್ವ ಎಂಬ ಪರಸ್ಪರ ವಿಪರೀತ ಸ್ವ-ಭಾವದ ಇಬ್ಬಗೆಯ ಪಾತಳಿಗಳೂ ಉಂಟು, ಎಂಬುದೂ ಅಂದಿನವರ ಅರಿಕೆಗೆ ಬಂದಿತ್ತು. ಇದಕ್ಕೆ ಪ್ರಮಾಣವೇನು? ಪ್ರಾಚೀನ ಸಂಸ್ಕೃತಿ ಎಂದು ಬಗೆಯಲಾಗುತ್ತಿರುವ ಇಜಿಪ್ತಿನ ಪುರಾತನ ಸಾಂಸ್ಕೃತಿಕ ಅವಶೇಷಗಳಲ್ಲಿ ಸೂರ್ಯನು ನೇರವಾಗಿ ಕಾಣಬೇಕಿತ್ತು. ಆದರೆ, ಅಲ್ಲಿ ದೊರೆಯುತ್ತಿರುವ ಸಂಕೇತ-ಪ್ರತಿಮೆಗಳಲ್ಲಿ ಸೂರ್ಯನು ನಾಗನ ಆ-ಲಿಂಗನದಲ್ಲಿ ಸಿಲುಕಿರುವುದನ್ನು ಕಾಣಬಹುದು! ಇದೇ ಮೇರೆಗೆ ಅತಿ ಪುರಾತನ ಗ್ರಂಥ ಎಂದು ನಂಬಿಸಲಾಗಿರುವ ಋಗ್ವೇದದ ಪ್ರಚಲಿತ ಪಾಠದಲ್ಲಿ 'ಸಾರ್ಪರಾಜ್ಞೀ ಸೂರ್ಯೋ ವಾ' ಎಂಬ ದೇವತಾಸೂಕ್ತವಿದೆ. ನಾಗ : ಸರ್ಪ ಇದಕ್ಕೆ ನಾಗಚಂದ್ರ, ನಾಗಲಿಂಗ ಎಂಬ ಅರ್ಥವಿದ್ದುದನ್ನು ಈ ಪರಂಪರಾಗತ ಪಡೆನುಡಿಗಳೇ ಹೇಳುತ್ತಿವೆ!

ಇಂದು ಭಾರತದಲ್ಲಿ ಸೂರ್ಯ (ಪ್ರಜ್ಞೆ) ಕಾಣೆಯಾಗಿದ್ದಾನೆ: ಸೂರ್ಯ : ನಾರಾಯಣ ಹೆಸರಿನಲ್ಲಿ ಪೂಜೆಗೊಳ್ಳುತ್ತಿದ್ದಾನೆ. ಇದು ಯೋನಿ, ಲಿಂಗವೇ ಹೊರತು ಸೂರ್ಯನಲ್ಲ. ಪಾತಳಿಯು ಆ ಸಂಕೇತದ ಆಕೃತಿ ಸ್ವರೂಪವನ್ನು ನಿರ್ಧರಿಸುತ್ತದೆ. ನಾಗಚಂದ್ರನ ನಾಗ : ಲಿಂಗನ ಪಾತಳಿಯ ಮೇಲೆ ಬಂದಿರುವ ಈ ಸೂರ್ಯನು ಸೂರ್ಯನಲ್ಲ. ಈ ಕಣ್ಕಟ್ಟು ಮೋಸವನ್ನು ಆಮಂತ್ರಿಸುತ್ತಿದೆ!

ಕಾವ್ಯಸತ್ಯದ ರೂಪ ಬದಲಾಗಲು ಕಾರಣ

ಜೀವನದ ಪಾತಳಿಯನ್ನು ಪ್ರೇರಿಸುವ ಪ್ರಜ್ಞೆಯ ಅಂಗವಾದ ಮನಸ್ ತತ್ವವು ಅರ್ಥ : ವಿಚಾರ ರೂಪ ಪ್ರಕಾಶದ ಹಿನ್ನೆಲೆಯುಳ್ಳದ್ದು ಆಗಿರುತ್ತದೆ. ಆದಕಾರಣ, ಇದನ್ನು ಸೌರ ಪಾತಳಿ ಎಂದು ಬಗೆಯಲಾಗಿದೆ. ಜೀವನ ಪಾತಳಿಯ ಮೇಲಣ ಪ್ರೇರಣೆಯಲ್ಲಿ ಅಂತಃಸಂಗತಿಯು ಅಭಿಪ್ರೇತವಿದೆ. ಈ ಪಾತಳಿಯ ಮೇಲೆ ಕಾರಣ ಮತ್ತು ಕಾರ್ಯ ಇವೆರಡರಲ್ಲಿ ಅನುಕ್ರಮವಿರುತ್ತದೆ. ಆದರೆ ಜೀವಿತದ ಪಾತಳಿಯನ್ನು ಪ್ರಚೋದಿಸುವ ಪ್ರಾಣಲಿಂಗ ಚೇತಸವು ನಿತ್ಯವಾಗಿ ಕತ್ತಲಿನ ಆವರಣದಲ್ಲಿ ಇರುವ ಸ್ವಭಾವದ್ದು ಆಗಿದೆ! ಅಲ್ಲದೆ, ಇದು ಸ್ವಯಂಭೂ ಸ್ವರೂಪದ ಶಕ್ತಿ : ಯಾವ ನಿಯಂತ್ರಣಕ್ಕೂ ಒಗ್ಗದ ಸ್ವಬಾವದ್ದು. ಅ-ನಿಯತ ಕಾಲಿಕ ಚಂದ್ರಮನು ಪ್ರಾಣಲಿಂಗ ಶಕ್ತಿಯ ಪ್ರೇರಕನು, ಎಂಬಲ್ಲಿ ಔಚಿತ್ಯವಿದೆ. ಅಮಾವಾಸ್ಯೆಗೆ ಇಲ್ಲವಾಗುವ, ಈ ಇಲ್ಲಮೆ (೦)ಯೊಳಗಿಂದಲೇ ಶುಕ್ಲಪಕ್ಷದಲ್ಲಿ ಮರಳಿ ಅಂಕುರಿಸುವ ಈ ಜೀವತತ್ವ ನಿತ್ಯವು ಅ-ಭಾವಾತ್ಮಕ ಸ್ವರೂಪದ್ದು ಆಗಿದೆ. ಈ ಕಾರಣದಿಂದಾಗಿ ಈ ಪ್ರಾಣಲಿಂಗಶಕ್ತಿ : ಚಂದ್ರಶಕ್ತಿಯು ಮಾಟಕಣ್ಕಟ್ಟು, ಭಾನಾಮತಿ ಮೊದಲಾದ ಅಭಿಚಾರ ಪ್ರಕ್ರಿಯೆಯ ಯಾತು ಶಕ್ತಿಯುಳ್ಳದ್ದು ಎಂದು ಜಾಗತಿಕ ಪಾತಳಿಯಲ್ಲಿಯೇ ದೃಢವಾದ ನಂಬುಗೆಯು ಇದ್ದದ್ದು ಕಂಡು ಬರುತ್ತಿದೆ.

ಪುರಾತನರು ಈ ಪ್ರಾಣವನ್ನು 'ಅಸು' (ಉಸಿರು) ಎಂಬ ಹೆಸರಿನಿಂದ ಕರೆಯುತ್ತಿದ್ದರು. ವೇದದಲ್ಲಿ ಪ್ರಾಣಕ್ಕೆ ಅಸು ಹೆಸರೇ ಪ್ರಾಧಾನ್ಯದಿಂದ ಕಂಡು ಬರುತ್ತದೆ. ಈ ಅಸುರ ಶಕ್ತಿಗೆ : ಪ್ರಾಣಲಿಂಗಕ್ಕೆ ನೈತಿಕ ಮೌಲ್ಯಗಳ ಲೆಕ್ಕವಿಲ್ಲ. ಪ್ರಾಣಿಲೋಕದಲ್ಲಿ ತಂದೆ, ತಾಯಿ ಮಗ, ಮಗಳು ಎಂಬೀ ಬಗೆಯ ನೈತಿಕ ಸಂಬಂಧಗಳ ಅರಿವು ಸುಸ್ಪಷ್ಟವಾಗಿ ಮೂಡಿಲ್ಲ. ಜೀವಿತದ ಈ ಅಸು-ರ ಪಾತಳಿಯ ಮೇಲೆ ಅವರವರ ಅರ್ಥವು ಅವರವರ ಪಾಲಿನ ಸತ್ಯವೆನಿಸುತ್ತದೆ. ಜೀವಿತದ ಪಾತಳಿಯ ಮೇಲೆ ಕಾರಣಕಾರ್ಯ ಸಂಬಂಧವು ಸುಸ್ಪಷ್ಟವಿಲ್ಲ. ಚಂದ್ರಮನು

ಇಲ್ಲಮೆಯೊಳಗಿಂದ ಮರಳಿ ಬರುವಲ್ಲಿ ಶೂನ್ಯವು [೦] = ಮೃತ್ಯುತತ್ತ್ವವು ಜೀವನಕ್ಕೆ ಕಾರಣ ಎಂಬ ಭ್ರಾಂತಿಗೆ ಇಂಬು ದೊರೆಯುತ್ತಿದೆ.

ಕಾರ್ಯವೇ ಕಾರಣವಾಗಿ ಪರಿಣಮಿಸುವ ಅಸುರ : ಪ್ರಾಣಲಿಂಗ ಶಕ್ತಿಯ ಪಾತಳಿಯು ಮಾನವಧರ್ಮ : ಸಂಸ್ಕೃತಿಗೆ ಮಾರಕವಾಗಿ ಪರಿಣಮಿಸುತ್ತ ಬಂದಿದೆ. ಆದರೆ, ಯಾತುಶಕ್ತಿಯ ಪ್ರಭಾವಕ್ಕೆ ಮನಸೋತ ಮಾನವನಿಗೆ ತಾನು ನರ(ಳ) ನಾಗಿ ಮಾರ್ಪಟ್ಟಿದ್ದೇನೆ ಎಂಬ ಪ್ರಜ್ಞೆ ಮೂಡದಾಗಿದೆ. ತಮ್ಮ ಅಧಃಪಾತಕ್ಕೆ ಮೃತ್ಯುತತ್ತ್ವದ ಈ ಕೃಷ್ಣಶಕ್ತಿಯೇ ಕಾರಣ ಎಂಬುದು ಇನ್ನೂ ಇವರ ಗಮನಕ್ಕೆ ಬರುತ್ತಿಲ್ಲ! ಅವರವರ ಅರ್ಥವು ಅವರವರ ಪಾಲಿನ ಸತ್ಯವಾಗಿ ಪರಿಣಮಿಸುತ್ತಿರಲು ಅವರವರ ಪಾಲಿನ ಕಾವ್ಯಸತ್ಯವೂ ಇದಕ್ಕೆ ಕಾರಣವಾಗಿದೆ. ಭಾಷಿಕ ಸಂಕೇತಗಳನ್ನು ವ್ಯೆಯಕ್ತಿಕ ರೀತಿಯಿಂದ ತಮಗೆ ಇಷ್ಟಬಂದಂತೆ ಅರ್ಥಯಿಸುವ ಈ ಕೃತ್ಯವು ಸಮಾಜ : ಸಮಷ್ಟಿಯ ವಿನಾಶಕ್ಕೆ ಆಮಂತ್ರಿಸುವ ಮೃತ್ಯುತತ್ತ್ವವಾಗಿ ಪರಿಣಮಿಸುತ್ತದೆ. ಜೀವನ ವಿಶ್ವಸ್ಥ ವಿಕಾಸತತ್ತ್ವದ ಪ್ರಕ್ರಿಯೆಯಿಂದಾಗಿ ಮನುಜತ್ವವು ಲಭಿಸಿರುವ ಈ ಮಾನವನು ಮೃತ್ಯುತತ್ತ್ವೋಪಾಸನೆಯ ಯಾತುಕ್ರಿಯೆಗೆ ಮೋಹಿಸಿ ನರ(ಳ)ನಾಗಿ ಮಾರ್ಪಡುತ್ತಿದ್ದಾನೆ. ಇದು ನಿಜವೆನ್ನುವುದಾದರೆ ವೇದದ, ಮೊದಲಲ್ಲಿ-ವೈವಸ್ವತ ಮನ್ವಂತರದಲ್ಲಿ-ವಾಡಿಕೆಯಲ್ಲಿ ಇದ್ದಿಲ್ಲ, ಶಿಷ್ಟಮಾನ್ಯ ವಾಗಿರಲಿಲ್ಲ, ಎಂದು ಹೇಳುವ ಈ ಮೃತ್ಯುತತ್ತ್ವದ (ಚಾಂದ್ರ) ಉಪಾಸನೆಯು ಪ್ರಾರಂಭವಾದದ್ದು ಯಾವಾಗ? ಇದಕ್ಕೆ ಪ್ರಮಾಣಗಳು ಉಂಟೆ? ಈ ಮೊದಲು ಹೇಳಿರುವ ಸಾರ್ಪರಾಜ್ಞೀ ಸೂರ್ಯೋವಾ ಎಂಬ ಈ ದೇವತಾ ಸೂಕ್ತವೆ ಇಂದಿನ ಅಧಃಪಾತದ ಪೂರ್ವಸೂಚನೆಯಂತೆ ಇದೆ. ಈ ಸೂಕ್ತವನ್ನು ನಾರಾಯಣ ಬಲಿ, ನಾಗಬಲಿ ಮುಂತಾದ ಜಾರಣ ಮಾರಣಾದಿ ಅಭಿಚಾರ ಕ್ರಿಯೆಗಳಲ್ಲಿ ವಿನಿಯೋಗಿಸಲಾಗುತ್ತದೆ ಎಂದು ಸಂಪ್ರದಾಯವೇ ಹೇಳಿದೆ.

ಮಾನವರು ಈ ಬಗೆಯ ಅಭಿಚಾರ ಕೃತ್ಯಗಳ ಪ್ರಭಾವದಲ್ಲಿ ಸಿಲುಕಿದ್ದು, ಇವರು ಇದನ್ನು ಒಪ್ಪಲು ಮಾತ್ರ ಸಿದ್ಧರಿಲ್ಲ! ಜೀವಿತ ಈ ಪಾತಳಿಯ ಮೇಲೆ ಕಾರ್ಯವೇ ಕಾರಣವೂ ಆಗುತ್ತದೆ! ಏಕೆಂದರೆ, ಇದು ವೃತ್ತಾಕೃತಿಯ (೦) ಜನನ-ಮರಣ ರೂಪ (ಸಂ)ಭವ ಚಕ್ರದ (೦) ಪಾತಳಿ! ಜೀವನದ ಪಾತಳಿಯ ಮೇಲೆ ತಂದೆ (ಕಾರಣ) ಮಗು (ಕಾರ್ಯ) ಈ ನೈಸರ್ಗಿಕ ಕ್ರಮವಿದೆ. ಜೀವಿತ ಪಾತಳಿಯ ಮೇಲೆ ಏನೆಲ್ಲವೂ ಒಂದೇ ತತ್ತ್ವದಿಂದ ಆಗಿದೆ ಎಂಬ ನಂಬುಗೆಯು ಎಲ್ಲ ನರ(ಳ) ಸಂಪ್ರದಾಯಗಳಲ್ಲೂ ಉಂಟು. ಏನೆಲ್ಲವೂ ಒಂದೇ ತತ್ತ್ವದಿಂದ ಆಗಿದೆ ಎಂಬ ಶ್ರದ್ಧೆಯಂತೆ ಆದಿಮಾತೆ ಕಣ್ [೦] ಅಥವಾ ಆದಿಪುರುಷ (ಉಪನಿಷತ್ತೇ ಹೇಳುವಂತೆ ಇವನು ಅಮಾನವ) ಲಿಂಗ : ಗಣ್‌ರೂಪನು. ಕಣ್ ಅಥವಾ ಗಣ್ ಇವೆರಡರಲ್ಲಿ ಒಂದು ಪ್ರಾರಂಭದಲ್ಲಿ ಇರಬೇಕಾಗುವ ಅನಿವಾರ್ಯತೆಯುಂಟು. ಋಗ್ವೇದದ ಇಂದಿನ ಪಾಠದಲ್ಲಿ ಇರುವ ಪುತ್ರಃಸನ್ ಪಿತಾಭವಃ ಎಂಬ ಈ ವಾಕ್ಯವು, ಈ ವೇದದಲ್ಲಿ ಅಭಿಚಾರಕೃತ್ಯದ ಪ್ರಚೋದನೆಯು ಹುದುಗಿದೆ, ಎಂಬುದರ ದ್ಯೋತಕವಾಗಿದೆ. ಈ ಅಭಿಚಾರಕೃತ್ಯವು ಜೀವಿತ ಪಾತಳಿಯ ಮೇಲಣ ಪಶುಗಳಲ್ಲಿ ಕಾಣುವ ನಡೆವಳಿ ಮಾತ್ರ. ಈ ಮಾನವನು ಇಂದು ನರ(ಳ) ನಾಗಿ ಮಾರ್ಪಟ್ಟು ಪ್ರಾಣಿ-ಪಶುಗಳ ಪಾತಳಿಯ ಮೇಲೆ ಬಂದಿದ್ದಾನೆ ಎಂಬುದನ್ನು ಪುತ್ರ : ಸನ್ ಪಿತಾಭುವಃ ಎಂಬ ವೇದವಾಕ್ಯವೇ ಒಪ್ಪುತ್ತದೆ!

ಪಾಶ್ಚಾತ್ಯ ಪರಂಪರೆಯ ಕ್ರೈಸ್ತಪಂಥವೂ ನರ : ನಾರ-ಅಯನ ಸಂಪ್ರದಾಯದ ಇನ್ನೊಂದು ನಿಲುಮೆಯಂತೆ ಇದೆ. ಆ ಸಂಸ್ಕೃತಿಯಲ್ಲಿಯೂ Child is the father of man ಎಂಬ ಉಕ್ತಿಯುಂಟು! ಜೀವಿತ ಪಾತಳಿಯ ಮೇಲಣ ಪ್ರಕಾಶತತ್ತ್ವದ ಋತಸತ್ಯವು ಇಂದು ಕಣ್ಮರೆಯಾಗಿದೆ : ಜೀವಿತದ ಪಾತಳಿಯ ಮೇಲೆ ರೇತವೇ ಸತ್ಯವಾಗಿ ಪರಿಣಮಿಸಿದೆ-ಇಂದು! ವೇದೋಪನಿಷತ್ತು, ಮಹಾಭಾರತ, ಗೀತೆ, ರಾಮಾಯಣಾದಿ ಸಾಹಿತ್ಯಕೃತಿಗಳ ಪ್ರಭಾವದಿಂದ ಈ ಸ್ಥಿತ್ಯಂತರವಾಗಿದೆ. ಹಿಂದೊಮ್ಮೆ ಜೀವನವು ಸಾಹಿತ್ಯವನ್ನು ರೂಪಿಸುತ್ತಿದ್ದರೆ, ಇಂದು ಸಾಹಿತ್ಯವು (ಕಾರ್ಯ) ಜೀವನವನ್ನು (ಕಾರಣ) ರೂಪಿಸುತ್ತಿದೆ! ಈ ಬಾಳಿನಲ್ಲಿ ಈ ಜೀವನ (ಸ್ವರ್ ಪಾತಳಿ) ಮತ್ತು ಜೀವಿತ (ಪ್ರಾಣಲಿಂಗ ಪಾತಳಿ) ಇವೆರಡೂ ಪಾತಳಿಗಳ ನಡುವಣ ಅಂತರವು ಶೂನ್ಯವಾಗಲು ಕಾರಣವೇನು? ಸೂರ್ಯನು, ನಾಗಚಂದ್ರ : ನಾಗಲಿಂಗನ ಪಾತಳಿಗೆ ಬಂದಿರುವಲ್ಲಿ, ಋಕ್‌ಸಂಹಿತೆಯಲ್ಲಿ ಸ್ವರ್ Super organic ಪಾತಳಿಯನ್ನೇ ಇಲ್ಲವಾಗಿಸಿರಲಿಕ್ಕೇ ಬೇಕಷ್ಟೆ? ಇದಕ್ಕೆ ಇಂಥ ಬೇರೆ ಯಾವಾದರೂ ಪ್ರಮಾಣಗಳು ಇವೆಯೆ?

ಈ ವೇದದಲ್ಲೆ, ಅಪಾಲಾ ಎಂಬ ಮರ್ತ್ಯದ ಕುಮಾರಿಯ ಗುಹ್ಯಾಂಗದ ರೋಗವನ್ನು ಗುಣಪಡಿಸುವುದಕ್ಕಾಗಿ ಶಿಶ್ನೋದೇವಾಃ ಪಂಥದ ಶತ್ರುವೆಂಬ ಇಂದ್ರನು ಪರೋಪಕಾರಾರ್ಥವಾಗಿ ಮರ್ತ್ಯಲೋಕಕ್ಕೆ ಬರುತ್ತಾನಂತೆ! ಮಹಾಭಾರತದಲ್ಲಿ, ಕುಮಾರಿ ಕುಂತಿಯ ಕಾಮನಾತೃಪ್ತಿಗಾಗಿ, ಸ್ವರ್‌ಲೋಕದ ಸೂರ್ಯನು ಭೂಲೋಕಕ್ಕೆ ಬಂದನಂತೆ! ಈ ಕುಂತಿಗೆ ಸೂರ್ಯನಿಂದ ಕಾಮ ಶಮನವಾಗದ್ದಕ್ಕೆ, ಇಂದ್ರನನ್ನೂ ಭೂಮಿಗೆ ಬರಲು ಬೇಡಿಕೊಂಡಳು! ಭೀಮ, ವಾಯುದೇವರ ಮಗ! ಮೃತ್ಯು (ಚಾಂದ್ರ) ತತ್ತ್ವದ ಆರಾಧಕ ವ್ಯಾಸನೆಂಬವನು ಹೀಗೆ ಅಭಾವವನ್ನೇ ಸ್ಥಾಯೀ ಆಗಿಸಿ ಐತಿಹಾಸಿಕ ಸ್ವರೂಪದ್ದು ಎಂದು ಲೋಕವು ಸಂ-ಭ್ರಮಿಸುವಂತೆ ಈ ಮಹಾಕಾವ್ಯ ರಚಿಸಿದ್ದಾನೆ! ವಾಲ್ಮೀಕಿ (ಹುತ್ತಪ್ಪ : ನಾಗ) ಎಂಬವನು ರಾಮಚಂದ್ರನ ಅಯನದಲ್ಲಿ ಅಹಿ : ವೃತ್ರಹನ್ ಬಿರುದಿನ ಇಂದ್ರನ ತೇಜೋವಧೆಗಾಗಿ ಆತನನ್ನು ಅಹಲ್ಯಾಜಾರನೆಂದು ಚಿತ್ರಿಸಿದ್ದಾನೆ! ಈ ಸ್ಥಿತ್ಯಂತರವು ವೇದೋಪನಿಷದಾದಿಗಳಲ್ಲಿ ಪೂರ್ವ ಯೋಜನೆಯಂತೆ ಆಗಿದೆ ಎಂಬುದರ ಸೂಚನೆಯು ಸಾಯಣ ಭಾಷ್ಯದ ಮೂಲಕ ಬಯಲಿಗೆ ಬರುತ್ತಿದೆ. ಇಂದ್ರಹನನ ಸಮರ್ಥಂಪುತ್ರಂ ಕಾಮಾಯಮಾನಾ ಅದಿತಿಃ, ಭರ್ತುಃ ಸಕಾಶಾತ್ ಗರ್ಭಂ ಲೇಭೇ[೫]

ಸಾಧು ಸನ್ತರ, ಸಿದ್ಧರ, ಮಾಂತ್ರಿಕರ ತಳಿಯನ್ನು ಪೋಷಿಸಿಕೊಂಡು ಬರುತ್ತಿರುವ ಈ ದಿವ್ಯಾಧ್ಯಾತ್ಮವು ಸುಳ್ಳಿನ ತಳಹದಿಯ ಮೇಲೆ ನಿಂತಿದೆ. ಆದಿಮಾತೆ ಎಂಬ ಅದಿತಿ ಕುಮಾರೀದೇವಿಗೆ ಗಂಡನೆಂಬವನೇ ಇಲ್ಲ! ಹೀಗಿದ್ದರೂ ಇವಳು ಇಂದ್ರಹನನ ಸಮರ್ಥ ಪುತ್ರನನ್ನು ಬಯಸಿ, ಗಂಡನಿಂದ ಗರ್ಭ ಪಡೆದಳಂತೆ! ಕುಮಾರ-ಕುಮಾರೀ ಸಂಪ್ರದಾಯಕ್ಕೆ ಅಭಿಚಾರ ಕೃತ್ಯಗಳ ಇಂಥ ಸಿದ್ಧಿಯು ಶಕ್ಯವಾದುದು ಹೇಗೆ? ಎಂಬ ಪ್ರಶ್ನೆಗೆ ಸೂಚ್ಯವಾಗಿ ಒಂದೆಡೆಯಲ್ಲಿ ಉತ್ತರವುಂಟು. ಇಲ್ಲಿ ಕಾವ್ಯಸತ್ಯದ ಎರಡೂ ಪ್ರಕಾರಗಳೂ ಒಂದೆಡೆಗೇ ಇವೆ. ಸೌರಸತ್ಯವು ಚಾಂದ್ರಸತ್ಯದ ಉರುಳಿನಲ್ಲಿ ಸಿಲುಕಿದೆ.

ಸತ್ಯಂ ಏವ ಜಯತಿ, ನ ಅನೃತಮ್ : ಸೌರ-ಕಾವ್ಯಸತ್ಯ, ಋತ ಸ್ವರೂಪೀ ಪ್ರಕಾಶರೂಪ ಸತ್ಯಕ್ಕೇ ಗೆಲುವು, ಅನೃತಕ್ಕೆ-ಕತ್ತಲೆಗೆ ಜಯವಿಲ್ಲ. ಈ ಉಕ್ತಿಯ ಉತ್ತರಾರ್ಧ ಹೀಗಿದೆ : ಸತ್ಯೇನ ಪಂಥಾಃ ವಿತತಃ ದೇವಯಾನಃ ಇದು ಚಾಂದ್ರ ಕಾವ್ಯಸತ್ಯ. ಉಂಡು ಉಪವಾಸಿ : ಬಳಸಿ ಬ್ರಹ್ಮಚಾರಿ ಆಗಿ ಇರಬಲ್ಲ ಈ ಸಾಧನ ಮಾರ್ಗದಲ್ಲಿ ಆತ್ಯಂತಿಕ ಅಹಿಂಸೆಯ ಆಧಾರದ ಸತ್ಯದ ಆರಾಧನೆ ಅವಶ್ಯವಿರುತ್ತದೆ. ಇದು ಪಾಶ್ಚಾತ್ಯ ಪರಿಭಾಷೆಯ empirical truth. ದಿವ್ಯಾಧಾತ್ಮಗಳಲ್ಲಿ, ಮೂರ್ತ ಮತ್ತು ಅಮೂರ್ತ ಇವೆರಡರಲ್ಲಿ ಅಂತರವಿರುವುದಿಲ್ಲ. ಸತ್ಯಮೂಡನೆ ಪ್ರಯೋಗಗಳು, ಪವಾಡ-ಚಮತ್ಕಾರಗಳ ಸಿದ್ಧಿಗೆ ಕಾರಣವಾಗುತ್ತವೆ ಎಂಬ ನಂಬುಗೆ ಇದೆ. ಹೀಗೆ, ಪ್ರಯೋಗ ನಡೆಸಬೇಕಾದ ಸತ್ಯವು ಸಗುಣ, ಸಾಕಾರ, ಮೂರ್ತರೂಪದ್ದಾಗಿರಬೇಕಾಗುತ್ತದೆ! ಆದರೆ, ನಿಜವಾದ ಸತ್ಯ ಎಂಬುದು ನಿತ್ಯವಾಗಿ ಅಮೂರ್ತ ತಾತ್ವಿಕ ಪಾತಳಿಯ ಮೇಲೆಯೇ ಇರಬಲ್ಲುದು!

ದೇವಯಾನ ಪಥ=ಬ್ರಹ್ಮಪಥವನ್ನು ಹಿಗ್ಗಿಸಿ ಅಗಲವಾಗಿಸುವ ಈ ಸತ್ಯವು ಮೂರ್ತ ಆಕಾರದ್ದೇ ಇರಬೇಡವೆ? ಈ ಬ್ರಹ್ಮಪಥದ ಆಚರಣವೇ ಬ್ರಹ್ಮಚರ ಎನಿಸುತ್ತದೆ! ಈ ಕಾವ್ಯಸತ್ಯವು ನಿತಾಂತ ರಮಣೀ (೧) ಯ ಸ್ವರೂಪದ್ದಾಗಿಲ್ಲವೆ? ಋತಸತ್ಯವು ವಿಶ್ವನಿಯಮದ ಆಧಾರದ್ದು ಇರಬೇಕಾದಂತೆ. ಇದಕ್ಕೆ ಪ್ರತಿಯಾಗಿ ಇರುವುದು ವಿಶ್ವನಿಯಮವನ್ನು ಇಲ್ಲವಾಗಿಸುವ ನಿಯತಿಕೃತ ನಿಯಮ ರಹಿತಾಂ ಅನನ್ಯ ಪರತಂತ್ರಾಂ ಸ್ವರೂಪದ್ದೇ ಇರಬೇಡವೆ?

ಟಿಪ್ಪಣಿಗಳು

೧. ***ಬೃಹದಾರಣ್ಯಕೋಪನಿಷತ್ತು*** ೨.೨.೩
೨. ***ತೈತ್ತಿರೀಯೋಪನಿಷತ್ತು*** ೪.೧.೯
೩. ***ಋಗ್ವೇದ ಸಂಹಿತೆ*** II ೪.೧೦
೪. ***ಬೃಹದಾರಣ್ಯಕೋಪನಿಷತ್ತು*** ೬.೫.೩
೫. ***ಋಗ್ವೇದಸಂಹಿತೆ*** ೧೧೪. ೫ನೆಯ ಋಚೆಯ ಸಾಯಣ ಭಾಷ್ಯ ಹಾಗೂ VIII ೮-೫ ಸೂಕ್ತಗಳನ್ನು ನೋಡಿ.

ಹಿನ್ನುಡಿ

ಹಟ್ಟಿಕಾರ : ದನಗಾರರ ಬಗೆಗೆ ಅರಿಯುವಾಗ ಯದು : ತುರ್ವಸುಗಳ ವಿಚಾರವು ಋಗ್ವೇದದಲ್ಲಿ ಉಂಟು, ಎಂದು ಕೇಳಿದ್ದೆ. ಈ ಮಾಹಿತಿಗಾಗಿ ಪ್ರೊ. ಮ್ಯಾಕಡೊನೆಲ್, ಪ್ರೊ. ಕೀಥರ ಗ್ರಂಥಗಳ ಪ್ರಯೋಜನ ಪಡೆದದ್ದಾಯ್ತು. ಬಳಿಕ ಶಿವರಹಸ್ಯವನ್ನರಿಯುವ ಪ್ರಯತ್ನದಲ್ಲಿ ಪ್ರೊ. ಮ್ಯಾಕಡೊನೆಲ್ಲರ Vedic Mythology ಉಪಯುಕ್ತವೆನಿಸಿತು. ಇದಕ್ಕೂ ಮುಂದಿನ ಹಂತದಲ್ಲಿ ಅಹಿ : ವೃತ್ರಹನ್ ಬಿರುದಿನ ಇಂದ್ರನ ಬಗೆಗಿನ ಕುತೂಹಲಕ್ಕಾಗಿ ಪ್ರೊ. ಮ್ಯಾಕಡೊನೆಲ್ಲನ Vedic Mythology ಓದುವಾಗ, ಈ ಸಂಶೋಧಕನು ಇಂದ್ರನ ಬಗೆಗಿನ ನಿಷ್ಕರ್ಷಗಳ ಬಗ್ಗೆ ಸಂದೇಹಗಳು ತಲೆಯೆತ್ತಿದುವು. ವೇದದಲ್ಲಿ ಇಂದ್ರನೇ ಸರ್ವಶ್ರೇಷ್ಠ ದೇವರು. ಇವನ ಪಾಲಿಗೆ ಬಂದಿರುವಷ್ಟು ಸೂಕ್ತಗಳು, ಬೇರೆ ಯಾವ ದೇವರ ಪಾಲಿಗೂ ಬಂದಿಲ್ಲ. ವೇದಕಾಲೀನ ಭಾರತೀಯರ ರಾಷ್ಟ್ರೀಯ ಮಟ್ಟದ ದೇವರೆಂದರೆ, ಅವನು ಇಂದ್ರನೇ ಸರಿ. ಈ ವಿದ್ವಾಂಸನೆ, ಈ ಗ್ರಂಥದಲ್ಲಿ ಬರೆಯುತ್ತಾನೆ : ಏಕೋ ದೇವರ ಭಕ್ತಿಯು ಈ ವೇದದ ವೈಶಿಷ್ಟವಾಗಿದೆ! ದ್ಯಾವಾ ಭೂಮಿಂ ಜನಯನ್ ದೇವ ಏಕಃ ಎಂಬ ಉದ್ಘೋಷವು ನನಗೆ ಆಗಾಗ ಕೇಳಲು ದೊರೆಯುತ್ತಿತ್ತು. ಇಂದ್ರನನ್ನು ಸೃಷ್ಟಿಕರ್ತ ದೇವರು ಎಂದುದು ನನ್ನ ಕೇಳಿಕೆಯಲ್ಲಿ ಇರಲಿಲ್ಲ. 'ಏಕೋದೇವಃ ಕೇಶವೋ ವಾ ಶಿವೋ ವಾ' ಎಂಬ ಸುಭಾಷಿತವು ಸುಪ್ರಸಿದ್ಧವಿದೆ. ಈ ಏಕೋದೇವರಲ್ಲಿ, ಒಬ್ಬನು ಅಹಿ : ನಾಗಶಯನನು ಇದ್ದರೆ, ಇನ್ನೊಬ್ಬನು ಅಹಿ : ನಾಗಭೂಷಣನು! ಹೀಗೆ ಈ ಅಹಿ : ನಾಗರೂಪ ಈ ವೃತ್ರನ ಪರ್ಯಾಯ ಸ್ವರೂಪ ರುದ್ರ, ವಿಷ್ಣುಗಳು ಪೂಜೆಗೊಳ್ಳುತ್ತಿರುವಾಗ, ಈ ವೇದದಲ್ಲಿ ಅಹಿ : ವೃತ್ರಹಂತಕನೆಂಬ ಇಂದ್ರನು ತನ್ನ ಸ್ಥಾನಕ್ಕೆ ಎರವಾಗಿದ್ದರೆ ಸೋಜಿಗವೇನು?

ಆ ಸುಮಾರಿಗೆ, ಇಂದ್ರನ ಬಗೆಗೆ ಸಂಗ್ರಹಿಸಿದ ಸಂಗತಿಗಳನ್ನು ಒಂದು ಸಣ್ಣ ಪುಸ್ತಿಕೆಯ ರೂಪದಲ್ಲಿ ಪ್ರಕಟಿಸಿ, ಎಂದಿನಂತೆ, ಪ್ರಾಜ್ಞರ ಪ್ರತಿಕ್ರಿಯೆಗಳನ್ನು ಅರಿಯುವ ಕುತೂಹಲವು ತಲೆಯೆತ್ತಿತ್ತು (೧೯೬೯-೭೦) ಆದರೆ, ಕರ್ನಾಟಕ ವಿಶ್ವವಿದ್ಯಾಲಯದ ಇಬ್ಬರು ಮಿತ್ರರ ಸೌಜನ್ಯ-ಸಹಕಾರದಿಂದ ಇಂದ್ರನ ಬಗೆಗಿನ ನನ್ನ ಆಶಯವು ಇಂಗ್ಲೀಷಿನಲ್ಲಿ ಸಿದ್ಧವಾಯ್ತು. ಡಾ. ಅ. ಸುಂದರ ಅವರು ನನ್ನ ಲೇಖನವನ್ನು, Is Indra Supreme in the Rgveda? ಎಂಬ ಹೆಸರಿನಿಂದ ಬರೆದು ಕೊಟ್ಟರು. ಮತ್ತು ಡಾ. ಶ್ರೀನಿವಾಸ ರಿತ್ತಿ ಅವರು ತಾವು ಪ್ರಕಟಿಸಲಿದ್ದ. ಡಾ. ಪಾಂ. ಭೀ. ದೇಸಾಯಿ ಅವರ ಸಂಭಾವನಾ ಗ್ರಂಥದಲ್ಲಿ ಈ ಲೇಖನಕ್ಕೆ ಇಂಬು ಕೊಟ್ಟರು. ಈ ಲೇಖನದ ಕೆಲವು ಬಿಡಿ ಪ್ರತಿಗಳು ನನಗೆ ದೊರೆತುವು. ಕೆಲವು ವಿದ್ವಾಂಸರಿಗೆ ಇವನ್ನು ಕಳಿಸಿ, ಅವರಿಂದ ಪ್ರತಿಕ್ರಿಯೆಗಳನ್ನು ಕೋರಲಾಯಿತು. ಈ ನಡುವಣ ಅವಧಿಯಲ್ಲಿ ಅಖಿಲ ಭಾರತೀಯ ಕೀರ್ತಿಯ ಡಾ. ಸುನೀತಿಕುಮಾರ ಚಟರ್ಜಿ ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಂದರ್ಶವನ್ನಿತ್ತರು. ಅವರನ್ನು

ಭೆಟ್ಟಿಯಾಗುವುದು ಶಕ್ಯವೂ ಆಯಿತು. ನನ್ನ ಲೇಖನದ ಪ್ರತಿಯನ್ನು ಅರ್ಪಿಸಿ, ಇದರಲ್ಲಿ ತಥ್ಯಾಂಶವಿದೆಯೆ? ಅಥವಾ ಈ ಪ್ರಯತ್ನದ ರೀತಿಯೇ ತಪ್ಪೆ? ಇದನ್ನು ತಿಳಿಸಿ ಉಪಕಾರ ಮಾಡಬೇಕೆಂದು ಭಿನ್ನವಿಸಿದೆ. ತಮ್ಮ ಕೆಲಸಕ್ಕೇ ವೇಳೆ ಸಾಲದಾಗಿರುವಾಗ, ಇಂತಹ ಹೊಣೆ ಸ್ವೀಕರಿಸಲು ಆಗುವುದಿಲ್ಲ ಎಂದು ಅವರು ಹೇಳಿದರು. ಇಂದ್ರನ ಸಮಸ್ಯೆ, ಅಖಿಲ ಭಾರತೀಯ ಸಂಸ್ಕೃತಿಯ ಜೀವಾಳದ ಪ್ರಶ್ನೆ ಆಗಿದೆ. ಇತ್ತೀಚೆಗೆ, ಇಂದ್ರನ ಈ ಪ್ರಶ್ನೆ ಮಾನವ ಪ್ರಾದುರ್ಭಾವದ ಅಂಗವಾಗಿರುವುದಾಗಿ ಕಾಣತೊಡಗಿದೆ. ಜಾಗತಿಕ ಸಂಸ್ಕೃತಿಯ ವ್ಯಾಸಂಗಿಗಳಾದ ತಾವು ಅಲ್ಲದೆ, ಬೇರಿನ್ನಾರು, ನನಗೆ ಈ ದಿಕ್ಕಿನಲ್ಲಿ ದಾರಿಯನ್ನು ತೋರಬಲ್ಲರು? ತಮಗೆ ಬಿಡುವು ಆದಾಗ, ಈ ಕೆಲವು ಪುಟ ಓದುವ ಶ್ರಮವಹಿಸಬೇಕಾಗಿ ಬಿನ್ನಹ. ಬಿಡುವು ಆದಾಗ ಕಾಗದ ಬರೆಯಬಹುದು ಎಂದೆ. ತಮ್ಮ ಕಾರ್ಯದರ್ಶಿಯನ್ನು ಕರೆದು, ಈ ಲೇಖನ ಇಟ್ಟುಕೊಳ್ಳಲು ಹೇಳಿದರು. ಆ ಬಳಿಕ ಮೂರು ತಿಂಗಳ ಸುಮಾರಿಗೆ ಉತ್ತರ ಬಂತು. ಅವರ ಆಶಯ ಇದು. ವೇದದ ದೇವತಾ ಸಮೀಕ್ಷೆಯಲ್ಲಿ, ಇನ್ನು ಮೇಲೆ, ಶ್ರೀ ಜೋಶಿ ಅವರ ಈ ಲೇಖನವನ್ನು ಲೆಕ್ಕಿಸಲೇ ಬೇಕಾದೀತು... ಈ ಪತ್ರವು, ಆ ಸುಮಾರಿಗೆ ಇನ್ನೊಂದು ಬಗೆಯಲ್ಲಿ ಪ್ರಯೋಜನಕಾರಿಯಾಯಿತು.

ಋಗ್ವೇದ ಸಾರ : ನಾಗಪ್ರತಿಮಾ ವಿಚಾರ ಇದು ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ಮೂಲಕ ಪ್ರಕಟವಾಗಲಿತ್ತು. ವೇದದಲ್ಲಿ ನಾಗ ಸಂಪ್ರದಾಯವು ಇರಲೇಬೇಕು ಎಂದು ಒಂದಕ್ಕಿಂತ ಹೆಚ್ಚು ಬಗೆಯಲ್ಲಿ, ನಿಷ್ಕರ್ಷವು ದೊರೆಯುತ್ತಿತ್ತು. ಆದರೆ, ಇದನ್ನು ಕಂಡುಹಿಡಿದು, ಪ್ರಾಜ್ಞರಿಗೆ ಮನಗಾಣಿಸಿ ಕೊಡುವ ರೀತಿಯು ತಿಳಿಯದಾಗಿತ್ತು. ಈ ನಿಟ್ಟಿನಲ್ಲಿ ಮಾರ್ಗದರ್ಶಕರು ಲಭಿಸುವ ಸಾಧ್ಯತೆ ಕಾಣದೆ, ವೇದದಲ್ಲಿ ಅಡಗಿರುವ ನಾಗ ಸಂಪ್ರದಾಯವನ್ನು ಬಯಲಿಗೆ ತರುವ ಹುಚ್ಚುಸಾಹಸ ಪ್ರಾರಂಭಿಸಿದ್ದೆ. ಈ ಪ್ರಯತ್ನವು ಅಂಶತಃ ಸಫಲವಾದರೂ ನಾನು ಧನ್ಯನು. ಆದರೆ, ಇದರಲ್ಲಿ ತಥ್ಯಾಂಶವೇ ಇಲ್ಲ ಎಂದು ನಗಿಸಿಕೊಳ್ಳುವ ಭೀತಿಯೂ ಇತ್ತು. ಇಂತಹ ಎದೆಗುದಿ, ಡಾ ಸುನೀತಕುಮಾರರ ಪತ್ರದಿಂದಾಗಿ ಸ್ವಲ್ಪ ತಗ್ಗಿತು. ತಜ್ಞರ ಸನ್ನಿಧಾನವನ್ನು ಕೋರಿ ನನ್ನ ಅಜ್ಞಾನ ತಗ್ಗಿಸಿಕೊಳ್ಳಲು ಅಲ್ಪ-ಸ್ವಲ್ಪ ಪ್ರಯತ್ನ ಪಟ್ಟದ್ದಾಯ್ತು. ದೇವ ಜನಪದ ಸೂಕ್ತದಲ್ಲಿ[1] ತಲೆದೋರಿದ ಒಂದು ಪ್ರಶ್ನೆ : ಆದಿಮಾತೆ, ಕುಮಾರಿ ಸಲಿಲ ಸ್ವರೂಪಿ ಇವಳು ಮಾರ್ತಾಂಡ ನಾಮಾನಂ ಸೂರ್ಯನನ್ನು ಹೆತ್ತಳು! ಸೂಕ್ತದೊಳಗಿನ ಈ ಅಂತರ್ ವಿಸಂಗತಿಯು ಹಿಡಿಸದೆ, ಒಬ್ಬ ಮಾನವೀಯ ಪ್ರಕಾಂಡ ಪಂಡಿತರಲ್ಲಿ ಹೋದದ್ದಾಯ್ತು. ತುಂಬ ನಯವಿನಯ ಸಂಪನ್ನ ಮೇಧಾವಿಗಳು. ಇವರಿಗೆ ನನ್ನ ಸಂದೇಹ ಅರುಹಿದೆ. ಸಮುದ್ರ ಮಂಥನದ ಕಥೆಯಲ್ಲಿ ಸಹ, ಜಲದೊಳಗಿಂದ ಹೊರಗೆ ಬಂದವನು ಚಂದ್ರನು ಎಂದು ಸಂಪ್ರದಾಯ ಹೇಳುತ್ತದೆ. ಆದರೆ, ಈ ವೇದದಲ್ಲಿ, ಮಾತ್ರ ಸಲಿಲರೂಪೀ ಅದಿತಿ-ಸೂರ್ಯನನ್ನು, ಹಡೆದಳು ಎಂದು ಹೇಳಲಾಗಿದೆ! ಇವನು ಮೃತಾತ್ ಅಂಡಾತ್ ಜಾತ ಮಾರ್ತಾಂಡನೆಂಬ ಸ್ಪಷ್ಟೀಕರಣವಿದೆ.[2] ಈ ಅಂತರ್ ವಿಸಂಗತಿ ಅರ್ಥವಾಗದಾಗಿದೆ. ನೀರೊಳಗಿಂದ ಸೂರ್ಯನು ಹುಟ್ಟಿದನು ಎಂಬ ಮತ್ತೆ ಬೇರೆ ಉಲ್ಲೇಖಗಳು ಇವೆಯೆ?

ನನ್ನ ಈ ಮಾತು ಕೇಳಿ, ಸನ್ಮಾನ್ಯ ವಿದ್ವಾಂಸರು ಸುಂದರ ಮಂದಹಾಸ ಬೀರಿದರು; ನನ್ನ ಅಜ್ಞಾನಕ್ಕೇ ನಕ್ಕಿರಲಿಕ್ಕಿಲ್ಲವಷ್ಟೆ? ಎಂದು ನನಗೆ ಅಳುಕು. ಏಕೆಂದರೆ, ನಾನು ಅವರಂತೆ ಗಾಢವಾದ ವ್ಯಾಸಂಗಿಯಲ್ಲ. ಆ ಸಂದರ್ಭದಲ್ಲಿ, ಇನ್ನೂ ಕೆಲವು ವಿಚಾರ-ಚರ್ಚೆ ಆಯ್ತು. ಆದರೆ, ನನ್ನ ಮೂಲಪ್ರಶ್ನೆಗೆ ಅವರಿಂದ ಉತ್ತರವು ದೊರೆಯಲಿಲ್ಲ. ಅಂದು ನನ್ನ ಸಂಗಡ ಕರ್ನಾಟಕ ವಿಶ್ವವಿದ್ಯಾಲಯದ ಡಾ. ವ್ಹಿ. ಎನ್. ದೇಶಪಾಂಡೆ ಇದ್ದರು. ನಮ್ಮ ಸಂದೇಹ ನಿವಾರಣೆಗಾಗಿ, ನನ್ನ ಪೂರ್ವಪರಿಚಿತ ಒಬ್ಬ ಮೀಮಾಂಸಾ ಮಾರ್ತಾಂಡರನ್ನು ಹುಡುಕಿಕೊಂಡು ಹೋದೆವು. ನನ್ನ ಕುತೂಹಲದ ಪ್ರಶ್ನೆ ಕಿವಿಗೆ ಬಿದ್ದೊಡನೆ ಅವರು ತೀವ್ರ ಮರ್ಮಾಘಾತವಾದವರಂತೆ, ತುಂಬ ಕೆರಳಿದರು! ಸಿಟ್ಟಿನ ಕಾರಣವು ತಿಳಿಯದ್ದರಿಂದ ಮುಂದುಗಾಣದೆ, ಎಂತೂ ಅಲ್ಲಿಂದ ಮರಳಿದ್ದಾಯ್ತು!

ಈ ನಾಗಪ್ರತಿಮಾ ವಿಚಾರವನ್ನು ಬರೆಯಲು ನಿಮಿತ್ತವಾದುದು, ಬಾನುಲಿಯ ಒಂದು ಉಪನ್ಯಾಸ. ಶ್ರಾವಣಮಾಸದ ಸುಮಾರಿಗೆ, ಈ ಕರೆಯಿತ್ತು. ಆಗ ನನ್ನ ತಲೆತಿನ್ನುತ್ತಿದ್ದ ಪ್ರಶ್ನೆ: ಇಂದ್ರಾಯ ತಕ್ಷಕಾಯ ಸ್ವಾಹಾ

ಎಂಬ ವ್ಯಾಸೋಕ್ತಿ. ಸರ್ಪಯಾಗದ ನೆಪ. ತಕ್ಷಕ : ನಾಗನನ್ನು ಬಲಿಕೊಡಬೇಕಿದ್ದರೆ, ಮೊದಲು ಇಂದ್ರನ ಆಹುತಿ ಆಗಬೇಕು, ಎಂಬ ತೊಡಕು ಇಲ್ಲಿದೆ. ಆಕಾಶವಾಣಿಯ ಪರಿಮಿತಿಗೆ ಒಗ್ಗಿಸಿಕೊಂಡು ಈ ಮಾತನ್ನು, ಒಂದು ಪ್ರಶ್ನೆಯೊಡನೆ ಮುಗಿಸಿದೆ. ನಾಗ: ತಕ್ಷಕ, ಮೃತ್ಯುತತ್ವದ ಪ್ರತಿನಿಧಿ ಜೀವಿತದ ಪಾತಳಿ. ಆದರೆ, ಇಂದ್ರನು ನಾಗನು ಜೀವಿತ ಪಾತಳಿಯವನೊ? ಎಂಬ ಸಂದೇಹ ಸೂಚಿಸಿದೆ. ಅಹಿ : ವೃತ್ರಹನ್ ಬಿರುದಿನ ಇಂದ್ರನ ಮೂಲ ಸಾಂಕೇತಿಕ ಅರ್ಥವು ಆಗ, ಇನ್ನೂ ಗೊತ್ತಾಗಿದ್ದಿಲ್ಲ. ಆದಕಾರಣ, ಈ ಸಮೀಕರಣದಲ್ಲಿ ವ್ಯಾಸನಿಗೆ ಅಭಿಪ್ರೇತ ಅರ್ಥವನ್ನೇ ಸ್ವೀಕರಿಸದೆ ಗತಿಯಿದ್ದಿಲ್ಲ. ತಕ್ಷಕ : ನಾಗನು ಮೃತ್ಯುಸ್ವರೂಪನೆಂದರೆ ಇಂದ್ರನು ಜೀವನದ ಪ್ರತಿನಿಧಿ ಆಗುತ್ತಿದ್ದಾನೆ. ಆದರೆ, ಅಂದು ಜೀವನ ಹಾಗೂ ಜೀವಿತ ಈ ಪಾತಳಿಗಳ ಅರಿವು ಮೂಡಿರಲಿಲ್ಲ. ಆದಕಾರಣ, ಪ್ರಾಣಗಳ ಜೀವನ ಪ್ರಾಣದ ಪ್ರತೀಕವೆಂದು, ಇಂದ್ರನನ್ನು ವ್ಯಾಸನ ಅರ್ಥದಲ್ಲಿಯೇ ಸ್ವೀಕರಿಸಿ ಪ್ರಶ್ನೆಯನ್ನು ಕೇಳಿದ್ದಾಯ್ತು. ತಕ್ಷಕ: ನಾಗನು ಮೃತ್ಯುತತ್ವ ಆಗುವಾಗ, ಇಂದ್ರನು ಜೀವನದ ಪ್ರತಿನಿಧಿ ಆಗುತ್ತಿದ್ದಾನೆ. ಆದರೆ ವ್ಯಾಸನು, ಬದುಕಿನ ಪ್ರತಿನಿಧಿಯಾದ ಇಂದ್ರನನ್ನು ಖಲನಾಯಕನನ್ನಾಗಿಸಿ, ತಕ್ಷಕ ನಾಗನಪಕ್ಷ ಕಟ್ಟಿ ಮೃತ್ಯುತತ್ವದ ಆರಾಧಕನು ಆಗುತ್ತಿರುವ ಕಾರಣವೇನು?

ಈ ಕೊನೆಯ ಪ್ರಶ್ನೆಯು ಆಕಾಶವಾಣಿಯ ಕೇಳುಗರಲ್ಲಿ ಹಲವರಿಗೆ ಹಿಡಿಸಿದ್ದು ಆ ಬಳಿಕ ತಿಳಿಯಿತು. ನಾಗನ ಈ ಸಮಸ್ಯೆಯನ್ನು ಪುಸ್ತಕ ರೂಪದಲ್ಲಿ ಬರೆವ ಸಾಹಸಕ್ಕೆ ಹೊರಟದ್ದಾಯ್ತು. ಈ ಸಮಸ್ಯೆಯ ಆಳ-ಅಗಲದ ಸ್ವಲ್ಪವೂ ಅರಿವು ಇಲ್ಲದೆ ಬರೆಯಲು ಪ್ರಾರಂಭಿಸಿದ್ದು ಅಸಮರ್ಪಕವಾಯ್ತು, ಎಂದು ಆ ಬಳಿಕ ಎನಿಸತೊಡಗಿತು. ಈ ಪುಸ್ತಕವು ಅರ್ಧದಷ್ಟು ಬರೆದು ಆದಬಳಿಕ, ಒಮ್ಮೆ ತೀವ್ರ ವಿಷಾದವು ಆವರಿಸಿ, ತಜ್ಞರ ನೆರವನ್ನು ಕೋರಿ ಪುಣೆಗೆ ಹೋದದ್ದಾಯ್ತು. ಅಲ್ಲಿ ನನ್ನ 'ಮರ್ಹಾಟಿ ಸಂಸ್ಕೃತಿ'ಯನ್ನು ಪ್ರಕಟಿಸಿದ್ದ ಆಚಾರ್ಯ ಭಾಗವತರನ್ನು ಭೆಟ್ಟಿಯಾಗಿ ನನ್ನ ಆವಶ್ಯಕತೆಯನ್ನು ವಿವರಿಸಿದೆ. ಅವರ ಮೂಲಕ ವಿ.ಪ್ರ. ಲಿಮಯೆ ಅವರ ಸಂದರ್ಶನ ಪಡೆಯುವುದು ಶಕ್ಯವಾಯಿತು. ನನ್ನ ಮಿತ್ರರೊಬ್ಬರಿಂದ ಡೆಕ್ಕನ್ ಕಾಲೇಜಿನ ಡಾ. ಎಸ್.ವಿ. ಪರಾಂಜಪೆ ಅವರ ಸಹಾಯವು ದೊರೆತಿತು.

ಸಲಿಲ ಸ್ವರೂಪೀ ಅದಿತಿ ಮಾರ್ತಾಂಡ ನಾಮಾನಂ ಸೂರ್ಯಂ ಪ್ರಸವಿಸಿದಳು, ಎಂದು ವೇದವು ಹೇಳುತ್ತಿದ್ದರೂ ಇದನ್ನು ಇದ್ದಕ್ಕಿದ್ದಂತೆ ನಂಬಲು ಆಗಲೊಲ್ಲದು. ಇಲ್ಲಿ ಏನಾದರೂ ಗುಹ್ಯಾರ್ಥವಿದೆಯೆ? ಇಲ್ಲವಾದರೆ ಈ ಅಂತರ್ ವಿಸಂಗತಿಯ ಅನ್ವಯಾರ್ಥವೇನು? ಇಂತಹ ಇನ್ನೂ ಕೆಲವು ತೊಡಕುಗಳಿವೆ. ಇವುಗಳ ಪರಿಹಾರಕ್ಕಾಗಿ ತಮ್ಮಲ್ಲಿ ಬಂದಿದ್ದೇನೆ, ಎಂದು ಉಭಯ ವಿದ್ವಾಂಸರಿಗೂ ಅರುಹಿದೆ. ಈ ವಿದ್ವಾಂಸರಿಗೆ ನನ್ನ ಪ್ರಶ್ನೆ ಸೋಜಿಗವನ್ನುಂಟು ಮಾಡಿತು. ಆದರೆ, ಈ ಪ್ರಶ್ನೆಯೇ ತಪ್ಪು ಎನ್ನಲಿಲ್ಲ. ನನ್ನ ಎನಿಸಿಕೆ ಪ್ರಶ್ನೆ ಹೇಳುವುದು ಮತ್ತು ಅವರ ಪ್ರತಿಕ್ರಿಯೆ ಅರಿಯುವುದು, ಹೀಗೆ ೨-೩ ದಿನ ಆ ವಿದ್ವಾಂಸರ ಸನ್ನಿಧಾನವು ಲಭಿಸಿತು. ಪುಣೆಯ ಆಕಾಶವಾಣಿಯವರು ಡಾ. ಪರಾಂಜಪೆಯವರು ಮಾಡಿದ ನನ್ನ ಸಂದರ್ಶನವನ್ನು ಬಿತ್ತರಿಸಿದರು.

ಮಾರ್ಗದರ್ಶಕರ ಅಭಾವದಲ್ಲಿ ಸರಿಯಾದ ಅರ್ಥಗ್ರಹಣ ಪದ್ಧತಿಯ ಆವಶ್ಯಕತೆಯಿನಿಸಿ, ನಾಗನನ್ನು ಹುಡುಕುವುದರೊಡನೆ ಸತ್ಯಾನ್ವೇಷಣೆಯ ದಾರಿಯನ್ನು ಕಂಡು ಹಿಡಿಯುವ ಪ್ರಯತ್ನ- ಇಬ್ಬೆ-ಇತ್ತು. ಪುಣೆಯಿಂದ ಮರಳಿ ಬಂದ ಬಳಿಕ ಅಂತೂ ಒಮ್ಮೆ ಈ ನಾಗನ ಅನ್ವೇಷಣೆಯನ್ನು ಮುಗಿಸಿದ್ದಾಯ್ತು. ಆ ಬಳಿಕ ಇಂದ್ರನನ್ನು ಅವನ ಸೂಕ್ತಗಳ ಮೂಲಕವೇ ನೇರವಾಗಿ ಅರಿಯುವ ಯತ್ನದಲ್ಲಿ ಬಂದ ಕಟು ಅನುಭವವನ್ನು ನಮೂದಿಸಲೇಬೇಕು-ಇನ್ನುಳಿದವರಿಗೂ ತಿಳಿಯಲೆಂದು. ಭಾಷ್ಯ-ಭಾಷಾಂತರಗಳ ಮೂಲಕ ವೇದದಲ್ಲಿ ಪ್ರವೇಶಿಸುವುದು ಸುರಕ್ಷಿತವಲ್ಲ, ಎಂದು ಸಾರಿ ಹೇಳುವುದು ಆವಶ್ಯವಾಗುತ್ತಿದೆ. ತೌಲನಿಕ ಪ್ರಯತ್ನವು ಅವಶ್ಯ. ಸಾಯಣರೇ ಇರಲಿ ಅಥವಾ ಪಾಶ್ಚಾತ್ಯ-ಪೌರ್ವಾತ್ಯ ಯಾವ ವಿದ್ವಾಂಸರೇ ಇರಲಿ. ಇವರೆಲ್ಲರ ಅರ್ಥ ವಿವರಣೆ ಅವರವರ ವೈಯಕ್ತಿಕ ಅರ್ಥವಾಗುವುದು ನಿಶ್ಚಿತ. ಇನ್ನೊಂದು ಕೊರತೆ ನನ್ನ ಗಮನಕ್ಕೆ ಬಂತು. ಈ ವೇದದಲ್ಲಿ ಮೂಲತಃ ವ್ಯಾಹೃತಿ (ಪಾತಳಿ)ಗಳಿವೆ. ಇವನ್ನೇ ಈ ಸಂಹಿತೆಯಲ್ಲಿ ನಷ್ಟಪಡಿಸಲಾಗಿದೆ.

ಇಂದ್ರ ಸಂಕೇತದ ಅರ್ಥವನ್ನು ಗ್ರಹಿಸಿಕೊಳ್ಳುವುದಕ್ಕೆ ಮಾಡಿದ ಪ್ರಯತ್ನದಲ್ಲಿ ಮೊದಲ ತುತ್ತಿಗೇ ಹರಳು! ಮೊದಲನೆಯ ಮಂಡಲದ ಪ್ರಾರಂಭಕ್ಕೇ ಈ ಅನುಭವವು ಬಂತು.[೩] ಸಾಯಣರು ಯಾಸ್ಕನ ಮೂಲಕ ಇಂದ್ರ ಪದದ ಅರ್ಥ ಹೇಳಹೊರಟದ್ದಾರೆ.

ಯಾಸ್ಕಃ ಇಂದ್ರ ಪದಂ ನಿರ್ವಕ್ತಿ ೧) ಇರಾಂ ದೃಣಾತಿ ಇತಿ ಇಂದ್ರಃ ೨) ವಾ ಇರಾಂ ದದಾತಿ ೩) ವಾ ಇರಾಂ ಧಾರಯಾತಿ ೪) ಇಂದವೇ ದ್ರವತಿ...।

ನನಗೆ ತಿಳಿದಂತೆ, ಈ ಅರ್ಥವನ್ನು ಸ್ವೀಕರಿಸಲು, ಎರಡು ಬಗೆಯ ಆತಂಕಗಳಿವೆ ಭಾಷಾಶಾಸ್ತ್ರದ ದೃಷ್ಟಿಯಿಂದ, ಯಾವುದೇ ಪದಕ್ಕೆ ಮೂಲಾರ್ಥ ಒಂದೇ ಇರಬಲ್ಲುದು. ಕಾಲಕ್ರಮದಲ್ಲಿ ಬೇರೆ ಅರ್ಥ ಕಾಣಿಸಿಕೊಂಡರೂ ಇದರಲ್ಲಿ ಒಂದು ಕ್ರಮವಿರುತ್ತದೆ; ಇತಿಹಾಸವಿರುತ್ತದೆ. ಇನ್ನೊಂದು ಆತಂಕ : ಇಂದ್ರನು ಸೂರ್ಯನ ಪರ್ಯಾಯ ಎಂದು ಮ್ಯಾಕ್‌ಡೊನೆಲ್ಲನೂ ಹೇಳುತ್ತಾನೆ. ಆದರೆ, ಸಾಯಣರು ಹೇಳುವ ಅರ್ಥದಂತ ಇಂದ್ರನು, ಆಪ : ರಸ : ರೇತ ಸ್ವರೂಪ ನಾಗಲಿದ್ದಾನೆ!

ಇಂದಿನ ನರ(ಳ) ಸಂಪ್ರದಾಯದ ವೇದದಲ್ಲಿಯೂ, ಅಂತೂ, ಎಂತೋ ಈ ವೇದದಲ್ಲಿಯೇ ಉಳಿದಿರುವ ಈ ವಾಕ್ಯ ನೋಡಿಕೊಳ್ಳಿ: ಇಂದ್ರಾಯ ಸವಿತ್ರೇ ಅಹಿಘ್ನೆ.[೪] ಈ ವಾಕ್ಯದಲ್ಲಿ ಇಂದ್ರನ ಆಕೃತಿ ಸ್ವರೂಪ ಮತ್ತು ಈ ಪಾತ್ರದ ಕಾರ್ಯ ಇವೆರಡೂ ಸೂಚಿತವಾಗಿವೆ. ಇಲ್ಲಿ ಹುದುಗಿರುವ ಸಾಂಕೇತಿಕ ಅರ್ಥದ ಆಳವೂ ಅಭ್ಯಸನೀಯವಿದೆ. ಕಲ್ಪನೆ ಮತ್ತು ವಿಚಾರ ಇವೆರಡರಲ್ಲಿ ಕತ್ತಲು ಮತ್ತು ಪ್ರಕಾಶದಷ್ಟು ತತ್ತ್ವತಃ ಅಂತರವಿದೆ. ವಿಕಾಸತತ್ತ್ವದ ಪ್ರಕ್ರಿಯೆಯಲ್ಲಿ, ಪ್ರಾದುರ್ಭವಿಸಿರುವ ಪ್ರಜ್ಞೆಯ ಅಂಗವಾದ ಮನಸ್‌ತತ್ತ್ವದ ಪಾತಳಿಯ ನಿಕಟ ಸಂಪರ್ಕದಲ್ಲಿ ಈ ನರ(ಳ)ನಿಗೆ ಮನು-ಜತ್ವವು ಲಭಿಸಿದೆ. ಪ್ರಾಣಿಗಳು ಪ್ರಾಣದ ಮಾಧ್ಯಮದ ಮೂಲಕ ಗ್ರಹಿಸಿಕೊಳ್ಳುವಂತೆ ಮನಸ್ಸಿನ (ಪ್ರಜ್ಞೆಯ) ಮೂಲಕ ಗ್ರಹಿಸಿಕೊಳ್ಳುವವನು ಮನು-ಜ ಮಾನವನಾದನು.

ಈ ಮಾನವನಿಗೆ ಸೂರ್ಯನು ಪ್ರಜ್ಞೆಯ ಮೂಲಕ ಅರಿಕೆಗೆ ಬಂದವನು. ಸೂರ್ಯ : ಪ್ರಜ್ಞೆ ಇವರಲ್ಲಿ ಸಾಹಚರ್ಯವಿದ್ದುದು ಭಾಷೆಯಲ್ಲಿ ನಿಷ್ಕಾರಣವಲ್ಲ. ವಿವಸ್ವನ್>ವೈವಸ್ವತ ಮನು, ಸವಿತೃ: ಧೀಶಕ್ತಿ = ಪ್ರಜ್ಞಾ ಪ್ರಚೋದಕನೆಂಬ ನಿಷ್ಠೆ ಸಕಾರಣವಿದೆ. ಇದು ಆ-ದರ್ಶ (objective reality) ಕಾವ್ಯಸತ್ಯ ವಾಸ್ತವ : ಸತ್ಯದ ಪಾತಳಿಯ ವಿಚಾರ. ವಿಚಾರವು ಆಚಾರವಾಗಿ ಪರಿಣಮಿಸುವುದು ಜೀವನ ಪಾತಳಿಯ ಲಕ್ಷಣ. ಅರಿಸ್ಟಾಟಲ್ಲನು Actuality of thought is life ಎಂದು ಹೇಳುತ್ತಾನೆ. ಪರಿಶುದ್ಧ ವಿಚಾರ ಇದು ಆ-ದರ್ಶ (Objective Reality) ಎಂದಲ್ಲಿ ಇದು ವಿವಸ್ವನ್: ಸವಿತೃ ತತ್ತ್ವವಾಯಿತು. ಈ ಆದರ್ಶವು ಆಚಾರದಲ್ಲಿ ಬರಲು ಪ್ರೇರಿಸುವ ಪ್ರಜ್ಞೆ : ಡೈನಾಮಿಕ್ ಆಸ್ಪೆಕ್ಟ ಅಹಿಹನ್ ಇಂದ್ರನಾಗುತ್ತಾನೆ. ತ್ರಿತಆಪ್ತ್ಯ : the man ಎಂಬ ಸಂಕೇತವು ಅವೆಸ್ತದಲ್ಲಿಯೂ ಇದೆ. ವೇದದ ತ್ರಿತಆಪ್ತ್ಯನು ಇಂದ್ರ ಮಿತ್ರ: ಅಥವಾ ಇಂದ್ರನು ಮಾನವನ ಮಿತ್ರ. ತ್ರಿತಆಪ್ತ್ಯನ ಮೂಲಕ ಜೀವನದಲ್ಲಿ ಅಹಿ : ವೃತ್ರನ ಪ್ರಭಾವ ಬೆಳೆಯದಂತೆ ಮಾನವ ಸಂಸ್ಕೃತಿ ಸಂರಕ್ಷಕ ಶಕ್ತಿ; ಈ ಅಹಿಹಂತಕ ಇಂದ್ರ. ಅಪ್ತ್ಯ ನು ನರ(ಳ)ನು. ಆದರೆ, ಇವನು ತ್ರಿತಆಪ್ತ್ಯನು. ಸ್ವರ್ ಈ ಮೂರನೆಯ ಪಾತಳಿಯ ಸಂಗಡ ನಿತ್ಯ ಸಂಪರ್ಕವನ್ನು ಉಳಿಸಿಕೊಳ್ಳುವ ಸಾಧಕನು. ಆದರ್ಶ ತತ್ತ್ವ: ವಿಚಾರವು ಅರಿಕೆಯ ಅಳವಿನಲ್ಲಿ ಪ್ರಜ್ಞಾ: ಮನಸ್ಸು ಉಪಕಾರಕವಿದೆ. ಆದಕಾರಣ, ಸ್ಥಲ (ಕಾಲ)ದ ಆಚೆಗಿನ ಸ್ವರ್ ಪಾತಳಿಯೆಂದರೆ, ಪ್ರಜ್ಞೆಯ ಅಂಗವಾದ (ಸೌರ) ಮನಸ್ಸಿನ ಪಾತಳಿ, ಪರಿಶುದ್ಧ : ಪರಿಪೂರ್ಣ ವಿಚಾರಾಂಶವು ಹೊಳೆದು ಅರಿಕೆಗೆ ಬರುವ ಎಡೆಯು ಇದಾಗಿದೆ.

ನನಗೆ ಈ ವೇದದ ಇನ್ನೊಂದು ಆಯಾಮವು ಗಮನಕ್ಕೆ ಬಂದದ್ದು ಮುಂಬೈಯ ಪ್ರೊ. ಎಚ್.ಡಿ. ವೇಲಣಕರರ ವೇದಾಂತೀಲ ಭಕ್ತಿಮಾರ್ಗ ಎಂಬ ಉಪನ್ಯಾಸದ ಮೂಲಕ ಪಾಶ್ಚಾತ್ಯ ಸಂಶೋಧಕರ ಒಂದು ಆಕ್ಷೇಪದ ಖಂಡನೆಗಾಗಿ ಬರೆದ ಪುಸ್ತಕವಿದು. ವೇದದ ಕವಿಗಳಿಗೆ ನಿಜವಾದ ಭಕ್ತಿಯ ಗಂಧ-ಗಾಳಿಯೂ ತಿಳಿದಿರಲಿಲ್ಲ. ಆದರೆ, ವರುಣಸೂಕ್ತಗಳಲ್ಲಿ ಮಾತ್ರ ಅಪವಾದಾತ್ಮಕವೆಂಬಂತೆ, ದಾಸ್ಯಭಕ್ತಿಯು ವ್ಯಕ್ತವಾಗಿದೆ. ಪ್ರೊ. ವೇಲಣಕರರ ಅಭಿಪ್ರಾಯದಂತೆ, ವೇದದಲ್ಲಿ ಮೂಲತಃ ಇದ್ದದ್ದು ಸಖ್ಯಭಕ್ತಿ. ವಸಿಷ್ಠ ಮಂಡಲದ ವರುಣಸೂಕ್ತದಲ್ಲಿ ದಾಸ್ಯಭಕ್ತಿಯು

ವ್ಯಕ್ತವಾದದ್ದು ನಿಜ. ಆದರೆ, ವೇದದಲ್ಲಿ ನಿಜವಾದ ಭಕ್ತಿಯೇ ಇಲ್ಲ ಎಂಬುದು ಸತ್ಯದ ಅಪಲಾಪ. ಇಂದ್ರ, ಅಗ್ನಿ (ಜಾತವೇದ) ಇಂತಹ ದೇವರ ಸ್ತೋತ್ರಗಳಲ್ಲಿ ಸಖ್ಯಭಕ್ತಿಯು ವ್ಯಕ್ತವಾಗಿದೆ; ಎಂದು ಹೇಳಿ ಹಲವಾರು ಉದಾಹರಣೆಗಳನ್ನು ಎತ್ತಿ ಕೊಟ್ಟಿದ್ದಾರೆ. ಇಲ್ಲಿ ಮಾದರಿಗಾಗಿ ಇಂದ್ರಭಕ್ತನ ಒಂದು ಪ್ರಾರ್ಥನೆಯನ್ನೇ ಎತ್ತಿ ಹೇಳಬಯಸುತ್ತೇನೆ.

ಇಂದ್ರ, ಶ್ರೇಷ್ಠಾನಿ ದ್ರವಿಣಾನಿ ದೇಹಿ :
ಚಿತ್ತಿಂ ದಕ್ಷಸ್ಯ, ಸುಭಗತ್ವಂ ಅಸ್ಮೇ।
ಪೋಷಂ ರಯೀಣಾಂ, ಅರಿಷ್ಟಿಂ ತನೂನಾಂ
ಸ್ವಾದ್ಮಾನಂ ವಚಃ ಸು-ದಿನತ್ವಂ ಅಹ್ನಮ್॥[೫೨]

ಈ ಬೇಡಿಕೆಗಳಲ್ಲಿ ನನ್ನ ದೃಷ್ಟಿಯಿಂದ ಮಹತ್ವದ ಕೋರಿಕೆ: 'ಅಹ್ನಾಂ ಸುದಿನತ್ವಂ' ಅಹನ್ = ಹಗಲು. ಹಗಲೇ ಇಡೀ ದಿನ ಎಂಬ ಅರ್ಥವೂ ಆಗುತ್ತದೆ.* ಅಹಸ್ಸುಗಳೆಲ್ಲ ಸು-ದಿನಗಳು ಆಗಲಿ ಎಂಬ ಪ್ರಾರ್ಥನೆ, ಈಡೇರಿದರೆ ಇವನೆಂತಹ ಭಾಗ್ಯಶಾಲಿ, ಇವನೇ ಸರಿ. ಆಕಾಂಕ್ಷೆಗೆ ತಕ್ಕ ಆಚರಣವೂ ಇಲ್ಲಿ ಅಪೇಕ್ಷಿತವಿದೆ. ಆಗಾಮೀ ನಾಳೆಗಳು ಸುದಿನಗಳಾಗಲಿ ಎಂದು ಹಾರೈಸುವವನು ಸೌರ ಪ್ರಕಾಶತತ್ತ್ವದ ಆರಾಧಕನೇ ಇರಬೇಕಾಗುತ್ತದೆ. ವೃತ್ತಾಕೃತಿಯ ಜೀವಿತಕ್ಕೆ ಒತ್ತಾಯ ಪಡಿಸುವ ಚಾಂದ್ರಮಾನದಲ್ಲಿ ನಿಜವಾದ ನಾಳೆ ಎಂಬುದೇ ಇಲ್ಲ!

ಸಖ್ಯಭಕ್ತಿಯ ಒಂದು ವೈಶಿಷ್ಟ್ಯವೆಂದರೆ, ಇದು ಕೇವಲ ವೈಯಕ್ತಿಕ ಪ್ರಾರ್ಥನೆ ಅಲ್ಲ, ಇದು ನನಗೆ ಎಂಬ ಹಾಗಿನ ಪ್ರಾರ್ಥನೆಯಿರುವುದಿಲ್ಲ. ಮೇಲಣ ಇಂದ್ರನ ಪ್ರಾರ್ಥನೆಯಲ್ಲಿ ಅಸ್ಮೇ (ಅಸ್ಮೈ) ನಮಗೆ ಎಂಬ ಬಹುವಚನಾಂತ ಪದವಿದೆ. ಇಂದ್ರನೇ, ನಮಗೆ ಶ್ರೇಷ್ಠ ಸಂಪತ್ತು ಕೊಡು, ಎಂದರೆ ಈ ಸಂಪತ್ತಿಗೆ ಸ್ವಾರ್ಥದ ಕಲಂಕ ತಟ್ಟಿರಲಾರದು. ಕರ್ತವ್ಯ ಪಾಲನೆಯಲ್ಲಿ (ದಕ್ಷಸ್ಯ) ಚಿತ್ತವು ತೊಡಗಿರಲಿ. ಕರ್ತವ್ಯ ಇದು ಕರ್ಮ : ಕಾಯಕದಂತೆ ವೈಯಕ್ತಿಕವಲ್ಲ. ಗೀತೆಯಲ್ಲಿ ಫಕ್ತ ಕರ್ಮಾಕರ್ಮ ವಿವರಣೆಯಿದೆ. ಆದರೆ, ಅಲ್ಲಿ ಕರ್ತವ್ಯದ ಮಾತು ದೊರೆಯುವುದಿಲ್ಲ! ನಮಗೆ ಸುಭಗತ್ವ-ಸೌಭಾಗ್ಯವನ್ನು ಅನುಗ್ರಹಿಸು. ನೀನು ಕರುಣಿಸಿರುವ ಹಿರಿಮೆ (ರೂಪ-ರಾಜತ್ವ) ಎಲ್ಲರ ಏಳ್ಗೆಗೆ ಕಾರಣವಾಗಲಿ. ಸಂತಾನದ (ತನೂನಾಂ) ನೆಮ್ಮದಿ ಆಗಲಿ. ನಮ್ಮ ವಾಕ್ಕು ಸ್ವಾದು ಆಗಲಿ. ಸಖ್ಯಭಕ್ತಿ ಮತ್ತು ಶರಣ್ಯ, ದಾಸ್ಯ ಭಕ್ತಿ ಇವೆರಡರಲ್ಲಿ ಮಾನವರ ಉನ್ನತಿಗೆ ಕಾರಣವಾಗಬಲ್ಲ ಭಕ್ತಿಯು ಯಾವುದು? ಈ ಅಂಶವನ್ನು ಪ್ರೊ. ವೇಲಣಕರ ಅವರು ವಿಶೇಷ ಸ್ಪಷ್ಟೀಕರಿಸಿಲ್ಲ. ನನಗೆ ಈ ಸ್ಥಿತ್ಯಂತರದಲ್ಲಿ ಸೂರ್ಯ ಪ್ರಕಾಶದಷ್ಟು ಸ್ಪಷ್ಟವಾಗಿ ಕಾಣುತ್ತಿರುವ ಸಂಗತಿ : ಮನು-ಜನು ನರ(ಳ)ನಾಗಿ ಮಾರ್ಪಡುವುದರೊಡನೆ, ಸಖ್ಯಭಕ್ತಿಯು ಕಾಣೆಯಾಗಿ, ದಾಸಸ್ಯ ದಾಸ: ಅಹಮ್, ಶರಣರ ಪಾದಧೂಳಿ ನಾನು ಎಂಬೀ ಬಗೆಯ ಮನೋಭಾವವು ಬೆಳೆಯುತ್ತ ಬಂದಿದೆ.

ಗುಣಾಃ ಪೂಜಾಸ್ಥಾನಂ ಆಗುವಲ್ಲಿ ಸಖ್ಯಭಕ್ತಿಯು ಕುದುರುತ್ತದೆ. (ಸು)ಗುಣ ಮೆಚ್ಚಿ ಆಗಿರುವ ಸ್ನೇಹ :

---

* ಇದು ಇಪ್ಪತ್ತೊಂದನೆಯ ಸೂಕ್ತದ ಕೊನೆಯ ಋಚೆ. ಈ ಕೊನೆಯ ಋಕ್ಕಿನಲ್ಲಿ ಋಷಿಯು ಧನಾದಿಗಳೇ ಮೊದಲಾದ ಇಷ್ಟಾರ್ಥಗಳನ್ನು ಕೊಡಬೇಕೆಂದು ಇಂದ್ರನನ್ನು ಪ್ರಾರ್ಥಿಸಿದ್ದಾನೆ. ಈ ಋಕ್ಕಿನ ಸ್ಥೂಲಾರ್ಥ ಇಷ್ಟು: "ಇಂದ್ರನೆ, ನಮಗೆ ಉತ್ತಮವಾದ ಧನಗಳನ್ನು ಕೊಡು. ಕೆಲಸ ಮಾಡಲು ಸಾಮರ್ಥ್ಯವನ್ನು ಕೊಡು. ನಮಗೆ ಸೌಭಾಗ್ಯವನ್ನು ಕೊಡು. ಧನಗಳನ್ನೂ ಹೆಚ್ಚಾಗಿ ಕೊಡು. ನಮ್ಮ ದೇಹಗಳಿಗೆ ಹಿಂಸೆಯನ್ನು ಕೊಡಬೇಡ. ಸ್ತುತಿ ವಾಕ್ಕುಗಳಿಗೆ ಸ್ವಾದುತೆಯನ್ನು ಕೊಡು. ಪ್ರತಿನಿತ್ಯವೂ ಒಳ್ಳೆಯ ದಿನಗಳೇ ಆಗಲಿ." ಈ ಋಚೆಯ ಒಂದು ಮಾತಿನಲ್ಲಿ 'ಅಹ್ನಾಂ ಸುದಿನತ್ವಂ' ಎಂದಿದೆ. ಈ ಮಾತಿಗೆ ಸಾಯಣರು 'ಸುದಿನತ್ವಂ ಶೋಭನದಿನತ್ವಂ ಚ ದೇಹಿ। ಯೇಷು ಹೀಂದ್ರಾದಯೋ ದೇವಾ ಇಜ್ಯಂತೇ ತಾನಿ ಸುದಿನಾನಿ। ತೇಷಾಂ ಭಾವಃ ಸುದಿನತ್ವಂ" ಎಂದು ಬರೆದಿದ್ದಾರೆ. ಮಾತಿನ ಅರ್ಥ ಇಷ್ಟು. ಇಂದ್ರನೇ ಮೊದಲಾದ ದೇವತೆಗಳನ್ನು ಯಜ್ಞಾದಿಗಳಲ್ಲಿ ಸ್ತುತಿಸಿ, ಭಜಿಸುವ ದಿನವೇ ಸುದಿನ. ಇಂತಹ ಸುದಿನಗಳೇ ಹೆಚ್ಚಾಗಿರುವಂತೆ ಮಾಡು. ಅನೇಕ ದಿನಗಳಲ್ಲಿ ಇಂದ್ರಾದಿ ದೇವತೆಗಳನ್ನು ಸ್ತುತಿಸಿ, ಆರಾಧಿಸಿ ನಿನ್ನ ಅನುಗ್ರಹವನ್ನು ಪಡೆಯಲು ಅನುಕೂಲವಾಗುವಂತೆ ಮಾಡು. (ಸಂ)

ಇದು ಸಖ್ಯಭಕ್ತಿಯ ಒಂದು ಪ್ರಕಾರವಾಗಿದೆ. ದಾಸ್ಯಭಕ್ತಿಯನ್ನು ಭಯಭರಿತ ಭಕ್ತಿ ಎಂದು ವರ್ಣಿಸಿರುವ ವಾಡಿಕೆಯಿದೆ. ಸಖ್ಯಭಕ್ತಿಯು ಶಕ್ಯವಾಗುವ ದೇವತಾ ಸ್ವರೂಪ ಮತ್ತು ದಾಸ್ಯಭಕ್ತಿಯು ಅನಿವಾರ್ಯವಾಗುವ ದೇವತಾ ಸ್ವರೂಪ ಇವೆರಡರಲ್ಲಿ ಪ್ರಕಾಶ ಮತ್ತು ಕತ್ತಲುಗಳಷ್ಟು ಅಂತರವಿದೆ! ಸೋಜಿಗದ ಸಂಗತಿಯೆಂದರೆ ಸಖ್ಯ ಭಕ್ತಿಯು ಪ್ರಕಾಶತತ್ತ್ವದ ಇಂದ್ರ, ಅಗ್ನಿ (ಜಾತವೇದ), ಸವಿತೃ, ವಿವಸ್ವನ್ ಈ ದೇವರುಗಳ ಸಂದರ್ಭದಿಂದ ವ್ಯಕ್ತವಾಗಿದೆ, ಈ ವೇದದಲ್ಲಿ ಎಂದು ಪ್ರೊ. ವೇಲಣಕರರು ಹೇಳುತ್ತಾರೆ. ಭಾರತದಲ್ಲಿ ಭಯಭರಿತ ಭಕ್ತಿಯು ಕಾಣಿಸಿಕೊಳ್ಳತೊಡಗಿದ್ದು ರಾತ್ರ್ಯಾಭಿಮಾನಿ ವರುಣನ ಸಂದರ್ಭದಿಂದ ಎಂಬುದು ಐತಿಹಾಸಿಕ ದೃಷ್ಟಿಯಿಂದ ಮೌಲಿಕ ಪುರಾವೆ ಆಗಿದೆ!

ಇನ್ನೂ ಒಂದು, ಸಪ್ರಮಾಣವಾಗಿ ಸಿದ್ಧವಾಗುತ್ತಿರುವ ಸಂಗತಿ: ದಾಸ್ಯಭಕ್ತಿಯೊಡನೆ ಪಾಪದ ಭಾವನೆ ಬೆರೆತುಕೊಂಡಿರುತ್ತದೆ.* ಪಾಪವು ಲೈಂಗಿಕ ಕೃತಿಯೊಡನೆ ತಲೆದೋರುತ್ತದೆ. ರಾತ್ರ್ಯಾಭಿಮಾನಿ ವರುಣನ ಸ್ಥಿತ್ಯಂತರದ ಈ ಅಂಶವು ಬಯಲಿಗೆ ಬಂದಿದೆ. ಪಾಶ್ಚಾತ್ಯ ಸಂಶೋಧಕರಲ್ಲಿ ಕೆಲವರ ಇನ್ನೊಂದು ಆಕ್ಷೇಪವೂ ವಿಚಾರಾರ್ಹವಾಗಿದೆ. ಸಮ್ರಾಟ್, ರಾಜನ್ ಎಂಬ ಬಿರುದಿನ ವರುಣನಿಗೆ ಇಂದು ಈ ವೇದದಲ್ಲಿ ಗೌಣಸ್ಥಾನವಿದೆ. ಆದರೆ, ಅಹಿ : ವೃತ್ರಹನ್ ಎಂಬ ಇಂದ್ರನಿಗೆ ಅಗ್ರಪಟ್ಟ! ಜರ್ಮನಿಯ ಪ್ರೊ. ಓಲ್ಡೆನ್‌ಬರ್ಗನಿಂದ ಈ ಆಕ್ಷೇಪಕ್ಕೆ ಉತ್ತರವು ದೊರೆತಿದೆ. ಈಗ ಆದಿತ್ಯ ಸ್ವರೂಪದವನೆಂದು ಮಾರ್ಪಟ್ಟಿರುವ ವರುಣನು ಮೊತ್ತಮೊದಲಲ್ಲಿ ಸೌರ-ಪ್ರಕಾಶ ತತ್ತ್ವದ ದೇವನಾಗಿದ್ದನು, ಎಂದು ಓಲ್ಡೆನ್‌ಬರ್ಗ್ ಮಹಾಶಯರು ಸಪ್ರಮಾಣವಾಗಿ ವಿಶದ ಪಡಿಸಿದ್ದಾನೆ. ಮೊತ್ತಮೊದಲಲ್ಲಿ ವರುಣನು ಋತ: ಸತ್ಯದ ಸಂರಕ್ಷಕ ದೇವರು. ಆದರೆ, ಇವನು ರಾತ್ರ್ಯಾಭಿಮಾನಿ, ಸಲಿಲ: ಜಲದ ಸ್ವಾಮಿ ಆಗುವುದರೊಡನೆ, ಈ ಸತ್ಯವು, ರೇತಸತ್ಯವಾಯ್ತು. ಅವೆಸ್ತದ ಅಹುರ (>ಅಸುರ) ಮಝುದನಂತೆ ವೇದದ ಅಸುರ ವರುಣನೂ ಅಂದು ಪ್ರಕಾಶತತ್ತ್ವದ ದೇವರೇ ಆಗಿದ್ದನು. ಹಿಂದೊಮ್ಮೆ ಅಸುರ ಪದಕ್ಕೆ ಅಪಾರ್ಥವಿದ್ದಿಲ್ಲ. ಸಮರ್ಥ, ಬಲಶಾಲಿ ಎಂಬ ಒಳ್ಳೆಯ ಅರ್ಥವೇ ಇತ್ತು. ಆದರೆ, ಸ್ವರ್‌ಪಾತಳಿಯ ವರುಣನು ಚಾಂದ್ರ : ಇಂದ್ರಿಯ ಪಾತಳಿಯ ಮೇಲೆ ಬರುತ್ತಾನೆ. ಇಂದು ಇವನು ರಾತ್ರ್ಯಾಭಿಮಾನಿ ದೇವರು ಎಂದು ಬಗೆಯಲಾಗುತ್ತದೆ! ಅವೆಸ್ತವು ಝರತುಷ್ಟನಿಂದ ಪರಿಷ್ಕೃತವಾದರೂ ಅದರ ಮೂಲ ಆಕೃತಿಯನ್ನು ಇದ್ದಕ್ಕಿದ್ದಂತೆ ಉಳಿಸಿಕೊಳ್ಳಲಾಗಿದೆ.

ಫ್ರಾನ್ಸಿನ ಡಾ. ರೇನೂ ಮಹಾಶಯ ಅವೆಸ್ತದ ತುಲನೆಯಲ್ಲಿ ಋಗ್ವೇದದಲ್ಲಿ ಆಗಿರುವ ಪಲ್ಲಟವನ್ನು ಉದಾಹರಣೆ ಸಹಿತ ಹೇಳಿದ್ದಾರೆ. ಓಲ್ಡೆನ್‌ಬರ್ಗನ ಮತದಂತೆ, ಸುಮೇರಿನತ್ತಣಿನ ಮಂತ್ರ-ಮಾಟದ ಚಾಂದ್ರ ಸಂಪ್ರದಾಯದ ಪ್ರಭಾವದಲ್ಲಿ ವರುಣನು ಆದಿತ್ಯ ಚಾಂದ್ರದೇವರಾಗಿ ಮಾರ್ಪಟ್ಟಿರಬೇಕು. ಸೌರದೇವತೆಗಳು ಆದಿತ್ಯ ಸ್ವರೂಪವಾಗುತ್ತವೆ - ಎಂದರೇನು? ಪ್ರಕಾಶ ಸಂಪ್ರದಾಯದ ಸಮಾಯಾಚಾರಗಳಿಗೆ ಬದಲಾಗಿ ರಾತ್ರ ಸಂಪ್ರದಾಯದ ಸಮಯಾಚಾರಗಳು ಈ ದೇವರ ಸನ್ನಿಧಾನದಲ್ಲಿ ರೂಢಿಗೆ ಬರುತ್ತವೆ. ಆದಿತ್ಯರ ವರ್ಣನೆಯ ಸೂಕ್ತಗಳೇ ಇದಕ್ಕೆ ಪ್ರಮಾಣ. ಇವು ಜಾಗ್ರ-ವಾಂಸರ ಆಚಾರಗಳು. 'ಜಾಗೃವಾಂಸಃ ಸಮಿಂಧತೇ' ಎಂಬ ವಾಕ್ಯ ಋಗ್ವೇದದಲ್ಲಿ ಇದೆ. 'ದಿವೀವ ಚಕ್ಷುಃ ಆತತಂ' ಇಲ್ಲಿ ಅಗಲವಾದ-ಅಗಲವಾಗಿಸಿದ ಚಕ್ಷುವಿನ ಉಲ್ಲೇಖವಿದೆ. ಈ ಚಕ್ಷುವು ಯಾವುದು? ಯಾರದು? ವೇದದಲ್ಲಿ ಆದಿತ್ಯರನ್ನು, ಅನಿಮಿಷರು-ರೆಪ್ಪೆಯಿಲ್ಲದ ಕಣ್ಣಿನವರು ಎಂದು ವರ್ಣಿಸಲಾಗಿದೆ. ಆತತ ಚಕ್ಷುವನ್ನು ಪ್ರಯತ್ನದಿಂದ ಅಗಲಾವಿಗಸುಲ ಬರುತ್ತದೆ. ಆದರೆ, ಅನಿಮಿಷ ಚಕ್ಷುವನ್ನು,

---

* ಸಖ್ಯಭಕ್ತಿ, ದಾಸ್ಯಭಕ್ತಿ ಇವೆಲ್ಲವೂ ಅನುಭಾವಿಕ ಗುಣಗಳು. ಸಖ್ಯ ಎಂದರೆ ಸ್ನೇಹ. ಅದರಿಂದ ಉಂಟಾದ ಭಕ್ತಿ. ಈ ಭಕ್ತಿಯು ಕೃಷ್ಣ-ಕುಚೇಲರಂತೆ ಇರುತ್ತದೆ; ರಾಧಾ-ಕೃಷ್ಣರಂತೆ ಇರುತ್ತದೆ. ಇಲ್ಲಿ ಗಂಡು-ಹೆಣ್ಣು ಎಂಬ ಲಿಂಗಭೇದ ಇರುವುದಿಲ್ಲ. ಭಗವದ್ಗೀತೆಯಲ್ಲಿ 'ಸಖೇನ ಸಖ್ಯುಃ' ಎಂಬ ಮಾತಿದೆ. ಕೃಷ್ಣ ಮತ್ತು ಅರ್ಜುನರದ್ದು ಈ ಬಗೆಯ ಸಖ್ಯಭಕ್ತಿಯ ಸಂಕೇತವೇ ಆಗಿದೆ. ದಾಸ್ಯಭಕ್ತಿ, ಸಖ್ಯಭಕ್ತಿಗಿಂತ ಭಿನ್ನವಾದದ್ದು. ಇದು ಸ್ನೇಹಕ್ಕಿಂತ ತರತಮಭಾವವೇ ಪ್ರಧಾನ. ವಿಶಿಷ್ಟಾದ್ವೈತ ಸಂಪ್ರದಾಯವು ದಾಸ್ಯಭಕ್ತಿಯನ್ನು ಪ್ರಧಾನವಾಗಿ ವ್ಯಂಜಿಸುತ್ತದೆ. (ಸಂ)

ಹಿಗ್ಗಿಸುವುದು ಆ ವ್ಯಕ್ತಿಯ ಕೈಯಲ್ಲಿ ಇಲ್ಲ, ಎಂದು ಆದಿತ್ಯನ ವರ್ಣನೆಯಿಂದ ಕಂಡು ಬರುತ್ತದೆ. ಮಾದರಿಗಾಗಿ ಎರಡು ಉದಾಹರಣ ನೋಡಿಕೊಳ್ಳಿ.

ಅ-ಸ್ವಪ್ನಜಾಃ ಅನಿಮಿಷಾಃ ... ಆದಿತ್ಯರು ಇವರು[೬] ಜ್ಯೋತಿ ರಥಾಃ ಅನಿಮಿಷಂತಃ ಅಹಿಮಾಯಾಃ[೭] ಆದಿತ್ಯನು : ಪುರಿ-ಶಯ, ಪುರುಷನ ಪರ್ಯಾಯ! ಈ ಪುರಿ-ಶಯರು ಅಸ್ವಪ್ನಜಾಃ ಎಂದರೆ ಸ್ವ-ಪ್ನಗಳು ಇಲ್ಲದವರು ಅನಿಮಿಷರು ಎಂದರೆ ರೆಪ್ಪೆಯಿಲ್ಲದ ಕಣ್ಣಿನವರು! ಶ್ರೇಷ್ಠ ವಿದ್ವಾಂಸರಾದ ಬನ್ನಂಜೆ ಗೋವಿಂದಾಚಾರ್ಯರು ಆದಿತ್ಯರನ್ನು ಶಿರಸಿ ಚಕ್ಷುಃ-ನೆತ್ತಿಗಣ್ಣಿನವರು ಎಂದಿದ್ದಾರೆ. ಗ್ರೀಸಿನ ಏಕಾಕ್ಷ ಸೈಕ್ಲೋಪ್ಸನು ಅಲ್ಲಿಯ ಆದಿತ್ಯನೇ, ಇವರನ್ನು ಜ್ಯೋತಿಯ ರಥರು ಎಂದುದಾಗಿದೆ ಜೋತಿರ್ಲಿಂಗವೇ ರಥ ಇವರದು. ಈ ರಥವು ಅಶ್ವವೂ ಇದೇ. ಇವರು ಅಹಿಮಾಯೆಯುಳ್ಳವರು, ಗಾರುಡೀ ಮಾಯಾವೀ ಸಾಮರ್ಥ್ಯ ಉಳ್ಳವರು. ಅನಿಮಿಷಂತಃ ಪದಕ್ಕೆ ಸಾಯಣರು ನಿಮೇಷ 'ಅಕುರ್ವಾಣಃ ಸರ್ವದಾ ಜಾಗರೂಕಃ' ಎಂದು ಅರ್ಥ ಹೇಳಿದ್ದಾರೆ.

ಪ್ರಸ್ತುತ ವರುಣನು ಆದಿತ್ಯನಾಗುತ್ತಾನೆ ಎಂದರೇನು, ಎಂಬ ಪ್ರಶ್ನೆಯಿತ್ತು. ಭಕ್ತರಂತೆ ದೇವರು ಅಥವಾ ಭಕ್ತರು ತಮ್ಮ ದೇವರನ್ನು ತಮ್ಮ ಅಚ್ಚುಮೆಚ್ಚಿನ ಆಕೃತಿರೂಪದಲ್ಲಿ ಕಲ್ಪಿಸುತ್ತಾರೆ. ಆದಿತ್ಯಭಕ್ತರಿಗೆ, ಅನಿಮಿಷನು; ರೆಪ್ಪೆಯಿಲ್ಲದ ಕಣ್ಣಿನವನು; ಸದಾ ಜಾಗ್ರತದೇವನು, ಪ್ರಿಯನಾಗಿದ್ದನು. ಇವನಿಗೆ ಜ್ಯೋತಿರಥವು ಅಚ್ಚುಮೆಚ್ಚಿನದು! ಎಂದು ಮೇಲಿನ ವರ್ಣನೆಯಿಂದ ಸ್ಪಷ್ಟವಾಗುತ್ತದೆ. ಇವನೇ ಆ ನರ(ಳ)ನು ಅಥವಾ ಭಗ-ವಂತ, ಪುರಿ-ಶಯನು, ಎಂಬಲ್ಲಿ ಸಂದೇಹಕ್ಕೆ ಇಂಬಿಲ್ಲ. ಏಕೆಂದರೆ ಗೀತೆಯ ಭಗವಂತನೇ ಒಪ್ಪಿಕೊಂಡಿದ್ದಾನೆ! 'ವರುಣಃ ಯಾದುಸಾಂ ಅಹಮ್ ಎಂದು. ಅಲ್ಲದೆ, ಆದಿತ್ಯಾನಾಂ ಅಹಂ ವಿಷ್ಣುಃ ಎಂದೂ ಹೇಳಿರುವುದರಿಂದ ವರುಣನ ಮೂಲಕ ಕೃಷ್ಣವಿಷ್ಣು ಈ ಇಬ್ಬರೂ ಮಹಾನ್ ದೇವರ ಸಾಕ್ಷಾತ್ಕಾರವು ಇಲ್ಲಿ ಆಗುತ್ತಿದೆ!

ಈ ವೇದದ ಆಧಾರದಿಂದ ವಿಷ್ಣು, ರುದ್ರ ಇವರಿಬ್ಬರೂ ಮಹಾನ್ ದೇವರುಃ ಶಿಪಿವಿಷ್ಟರು ಎಂದು ಗೊತ್ತಾಗುತ್ತದೆ. ಆದಕಾರಣ, ಇವರು ಅಹಿಮಾಯಾ ಶಕ್ತಿಯ ದೇವರು! ಅಹಿನಾಗಶಯನ, ಅಹಿ:ನಾಗಭೂಷಣರು ಇವರು! ಆದಕಾರಣ ಈ ಅಹಿ ಮಾಯಾ ಶಕ್ತಿಯ ಈ ದೇವರ ನೆಲೆ ನಿಲುಕಲು ಹೇಗೆ ಶಕ್ಯ? ಪಾಶ್ಚಾತ್ಯ ಸಂಶೋಧಕರಲ್ಲಿ ಕೆಲವರಿಗೆ, ಸಮ್ರಾಟ್, ರಾಜನ್ ವರುಣನಿಗಿಂತ ಈ ವೇದದಲ್ಲಿ (?) ಅಹಿ-ವೃತ್ರಹನ್ ಇಂದರ ಬಗೆಗೆ ಪಕ್ಷಪಾತವಿದೆ, ಎಂದು ಎನಿಸಿದೆ. ಸೌರ ವರುಣನು ಆದಿತ್ಯನಾದುದರಿಂದ ಇವನು ರಾತ್ರ್ಯಭಿಮಾನಿ ದೇವನಾಗಿದ್ದುಂಟು. ಆದಕಾರಣ, ಹಗಲನ್ನು (ಅಹಸ್) ಮೆಚ್ಚಿದ್ದ ಭಕ್ತರಿಗೆ, ವರುಣನಿಗಿಂತ ಸೂರ್ಯನ ಪರ್ಯಾಯವೆನಿಸಿದ ಇಂದ್ರನೇ ಅಚ್ಚುಮೆಚ್ಚಿನವನು ಆಗಿದ್ದರೆ ಸೋಜಿಗವೇನು?

ಪಾಶ್ಚಾತ್ಯ ಸಂಶೋಧಕರಿಗೆ, ವೇದದಲ್ಲಿ ಭಕ್ತಿಯ ಗಂಧಗಾಳಿಯೇ ಇಲ್ಲ ಎನಿಸಿತ್ತಷ್ಟೇ? ಹಾಗಾದರೆ, ಕೃಷ್ಣನ ಭಗವತ್ ಗೀತೆಯಲ್ಲಿ ಕಾಣುವ ಸರ್ವಾರ್ಪಣ ಭಾವದ ಭಕ್ತಿಯು. ಹೊರಗಿನಿಂದಲೇ ಬಂದಿರಬೇಕಷ್ಟೆ? ಕ್ರೈಸ್ತ ಭಕ್ತರಿಗೆ ಕೃಷ್ಣ, ಕ್ರಿಸ್ತ ಇದರಲ್ಲೂ ಸಾಮ್ಯ ಕಂಡಿತು! ಕೃಷ್ಣ : ನಾರಾಯಣನ ಭಕ್ತ ನಾರದನು ಭಕ್ತಿ ಸೂತ್ರಗಳನ್ನು ಬರೆದಿದ್ದಾನೆ. ಈ ನಾರದನು ಶ್ರೀಮನ್ನಾರಾಯಣನ ಸಾಕ್ಷಾತ್ಕಾರಕ್ಕಾಗಿ ಶ್ವೇತದ್ವೀಪಕ್ಕೆ ಹೋಗಿದ್ದನು, ಎಂಬ ಕತೆ, ಮಹಾಭಾರತದ ನಾರಾಯಣೋಪಾಖ್ಯಾನದಲ್ಲಿ ಬಂದಿದೆ. ಕ್ರೈಸ್ತಭಕ್ತ ಸಂಶೋಧಕರಿಗೆ, ಈ ಶ್ವೇತದ್ವೀಪ ಎಂದರೆ ಬಿಳಿಯರ ನಾಡು ಎಂಬ ಸಂಭ್ರಮವು ಉಂಟಾಗಿ, ಭಾರತಕ್ಕೆ ಭಕ್ತಿಯು ಬಿಳಿಯ ಕ್ರೈಸ್ತರ ನಾಡಿನಿಂದ ಬಂದಿರಲಿಕ್ಕೇ ಬೇಕು ಎಂದು ಅವರು ಪ್ರತಿಪಾದಿಸಿದ್ದಾಯಿತು.! ಉಗ್ರವಾದ ತಲೆಯೆತ್ತಿತ್ತು. ಆದರೆ, ಪಾಶ್ಚಾತ್ಯರೊಳಗಿನ ವಿವೇಕಿ, ಸಂಶೋಧಕರೇ ಈ ತಪ್ಪುಗ್ರಹಿಕೆ ತೊಲಗಿಸಿದರು. ನಾರದ ಭಕ್ತಿಸೂತ್ರಗಳು ಕ್ರಿಸ್ತಾಬ್ದಕ್ಕೂ ಬಹಳ ಮುಂಚಿನವು ಎಂದು ಹೇಳಿದರು.

ಲೋಕಮಾನ್ಯ ಟಿಳಕರು ಗೀತಾರಹಸ್ಯದಲ್ಲಿ, ಇಂತಹ ಒಂದು ವಾದ ಸಮೂದಿಸಿದ್ದಾರೆ. ಜರ್ಮನಿಯ ಒಬ್ಬ ವಿದ್ವಾಂಸನಿಗೆ, ಗೀತೆಯಲ್ಲಿ, ಬೈಬಲ್ಲಿನ ವಚನಗಳು ಇದ್ದುದು ಕಂಡಿತು! ಗೀತೆಯು ಬೈಬಲಿಗೆ ಋಣಿ ಎಂದು ಆತನ ನಿಷ್ಕರ್ಷ! ಗೀತೆಯು ಬೈಬಲ್ಲು ಹುಟ್ಟುವುದಕ್ಕೂ ಮುಂಚೆ, ಕನಿಷ್ಠ ೨೫೦/೩೦೦ ವರುಷ ಮೈವೆತ್ತಿದ್ದ

ಗ್ರಂಥ. ಆದಕಾರಣ, ಬೈಬಲ್ಲೇ ಗೀತೆಗೆ ಋಣಿ ಆಗುತ್ತಿದೆ! ಎಂದು ಟಿಳಕರು ಬರೆದಿದ್ದಾರೆ. ಆದರೆ, ಇಲ್ಲಿ ಪರ್ಯಾಯದಿಂದ ಗೀತೆಯ ಆಶಯ ಮತ್ತು ಬೈಬಲಿನ ಆಶಯ ಸುಮಾರಾಗಿ ಸಮಾನವಿದೆ, ಎಂಬ ಮಾತನ್ನು ಟಿಳಕರೂ ಒಪ್ಪಿದಂತಾಯಿತು! ನನ್ನ ದೃಷ್ಟಿಯಲ್ಲಿ, ಪ್ರಪಂಚದೊಳಗಿನ ಏನೆಲ್ಲ ಚಾಂದ್ರ, ನರ(ಳ) ಸಂಪ್ರದಾಯಗಳ ಆಕೃತಿ ತಳಪಾಯದಲ್ಲಿ ಸಮಾನವೇ ಇದೆ ಎಂಬ ಸಂಗತಿಯು ಇಲ್ಲಿ ದೃಢಪಡುತ್ತಿದೆ! ಇಂದ್ರನ ಅರ್ಥಗ್ರಹಣದ ಬಗೆಗಿನ ವೇದದ ಪ್ರಾಥಮಿಕ ಪರಿಚಯವು ನನ್ನ ದಿಗ್‌ಭ್ರಾಂತಿಗೆ ಕಾರಣವಾಗಿತ್ತು. ಪ್ರಕಾಶ ಸ್ವರೂಪನು-ಸವಿತೃ-ಸೂರ್ಯನ ಪರ್ಯಾಯ ಸ್ವರೂಪನು ಆದ ಇಂದ್ರನನ್ನು ಆಪ: ರಸ: ರೇತ ಸ್ವರೂಪನನ್ನು-ಲಿಂಗ ರೂಪವನ್ನು ಮಾಡುವ ಪ್ರಯತ್ನವು ದೂರದಿಂದಲೇ ಕಂಡಿತು. ಬಳಿಕ ನನ್ನ ಆ ನಿಟ್ಟಿನ ಪ್ರಯತ್ನ ನಿಂತು ಹೋಗಿತ್ತು.

ಆದರೆ, ಈ ವೇದದಲ್ಲಿ ಸೇರಲೇಬೇಕಾದ ಪ್ರಸಂಗವು ಬಂದ ಕಾರಣ ಬೇರೆಯೆ ಇದೆ! 'ಎಡೆಗಳು ಹೇಳುವ ಕಂನಾಡ ಕತೆ'ಯನ್ನು ಅರಿಯುವ ಸಂದರ್ಭದಲ್ಲಿ ಕೊಲ್ಲಾ-ಪುರದೇವಿಯ ಸಮಸ್ಯೆ ಎದುರು ಬಂತು. ಇವಳನ್ನು ಅಂಬಾಭವಾನಿ ಎಂದಲ್ಲಿ ಈಕೆ ರುದ್ರಪತ್ನಿ ಆಗುತ್ತಾಳೆ. ಶ್ರೀಲಕ್ಷ್ಮಿ ಎಂದರೆ ವಿಷ್ಣುಪತ್ನಿ ಆಗುತ್ತಾಳೆ! ಇಲ್ಲಿ ಪುರ ಒಂದು, ಶಯರು ಇಬ್ಬರು! ನೈತಿಕಪ್ರಶ್ನೆ ಕಾಡತೊಡಗಿತು! ರುದ್ರ=ವಿಷ್ಣು ಎಂದರೆ ಸಮಸ್ಯೆ ಬಗೆಹರಿಯುತ್ತದೆ. ಆದರೆ, ವಿಶಿಷ್ಟ ಹೆಸರಿನ ಬಗೆಗಿನ ಆಗ್ರಹದಿಂದಾಗಿ ಈ ವಾದ್ಯ, ಈ ಸ್ಪರ್ಧೆ ಶತಕಾನುಶತಕ ಉಳಿಯುತ್ತ ಬಂದಿದೆ. ವೇದದ ಪ್ರಾಥಮಿಕ ಪರಿಚಯದಲ್ಲಿ ರುದ್ರನೂ ಶಿಪಿವಿಷ್ಟನ ರೂಪನು; ವಿಷ್ಣುವೂ ಶಿಪಿವಿಷ್ಟ ಸ್ವರೂಪನೇ, ಎಂದು ನನಗೆ ಕಂಡಿತ್ತು. ನಿಜವೇ ಪರೀಕ್ಷಿಸಿಕೊಳ್ಳಿ. ಆದಕಾರಣ, ಈ ಎರಡೂ ಪಂಥದ ಮಹಾನುಭಾವರು ಒಂದೆಡೆ ಸೇರಿ ಶೈವ- ವೈಷ್ಣವ ವಾದವನ್ನು ನಿರ್ನಾಮ ಮಾಡಬಹುದಾಗಿದೆ. ಆದರೆ, ಈ ಬಗೆಯ ಭೇದ ಬೆಳೆಯಲೆಂದೇ ಈ ವಿಶಿಷ್ಟ = ಏಕಂ ಸತ್ ವಾದದ ಬೀಜವನ್ನು ಬಿತ್ತಿರುವುದಾಗಿ ನನಗೆ ಎನಿಸುತ್ತಿದೆ! ಬಾಗಿಲುಕೋಟೆ ತಾಲೂಕಿನ ಶಿರೂರ (ಶ್ರೀಪುರ) ಗ್ರಾಮದ ಶಾಸನದಲ್ಲಿ ಇನ್ನೂ ಒಂದು ವಿಚಿತ್ರ ಚಿತ್ರವಿದೆ: ಕೊಲ್ಲಾಪುರವಾಸಿನಿ ಶ್ರೀ ಲಕ್ಷ್ಮೀ ಸಿಂಹವಾಹಿನಿ, ಆದರೆ ಈಕೆ ರುದ್ರನ ತೊಡೆಯ ಮೇಲೆ ಕುಳಿತಿದ್ದಾಳೆ.

ಗಂಗಾ-ದ್ವಾರ ಪವಿತ್ರ ತೀರ್ಥ : ಕ್ಷೇತ್ರ. ಆದರೆ, ಇದು ಹರ(ನ) ದ್ವಾರವೊ? ಹರಿ(ಯ) ದ್ವಾರವೊ? ಎಂಬ ಪೈಪೋಟಿಯು ಇಂದಿನ ವರೆಗೂ ಉಳಿದು ಬಂದಿದೆ! ಈ ತೊಡಕಿಗೆ ವೇದದ ಖಿಲಭಾಗ ಎಂಬ ಶ್ರೀ ಸೂಕ್ತದಿಂದ ಪರಿಹಾರ ದೊರಕೀತು, ಎಂಬ ನಿರೀಕ್ಷೆಯೂ ವಿಫಲವಾಯ್ತು! ಚಂದ್ರಾಂ ಪ್ರಭಾಸಾಂ ಎಂಬ ಈ ದೇವಿಯು ಆದಿತ್ಯವರ್ಣಾ ಇದ್ದಾಳಂತೆ! ಇವಳನ್ನು ಕಾ ದೇವಿ ಎಂದಿರುವಲ್ಲಿ ಇವಳು ಋಗ್ವೇದದ ಕಂ, ಹಿರಣ್ಯ ಗರ್ಭ: ಪ್ರಜಾಪತಿ, ಬ್ರಹನ್ ದೇವರ ಮಡದಿ ಎಂಬ ಸೂಚನೆಯಿದೆ!

ಈ ದೇವಿಯನ್ನು ದೇವ ಜುಷ್ಟಾಂ=ಹಲವರ ಪ್ರಯೇಸಿ, ನಾನಾ ದೇವರಿಂದ ಸೇವಿತಳು, ಎಂದಾಗ ನರ(ಳ) ಸಂಪ್ರದಾಯವನ್ನು ರೂಪಿಸಿದವರು ಈ ಪುರಿ ಕಲ್ಪನೆಯನ್ನು ಭೋಗಸ್ಥಾನ ಎಂಬ ಉದ್ದೇಶದಿಂದಲೇ ಸೃಷ್ಟಿಸಿರುವಂತೆ ಎನಿಸತೊಡಗಿತು! ದೇವಜುಷ್ಟಾಂ ಉದಾರಾಂ ಎಂಬ ಈ ವಿಶೇಷಣದಲ್ಲಿ Permissive Society ಯ ಸಂಕಲ್ಪವು ಅಡಗಿದಂತಿದೆ! ಗ್ರೀಕ್ ಪರಂಪರೆಯಲ್ಲಿ ಪೈಥಾಗೊರಾಸನ ನರ(ಳ) ಸಂಪ್ರದಾಯಕ್ಕೆ ಈ ಯಶಸ್ಸು ದೊರೆತಿದೆ. ಆದರೆ, ಭಾರತೀಯ ಪರಂಪರೆಯಲ್ಲಿ ವ್ಯಾಸ-ದಕ್ಷಿಣ ಕಪರ್ದ ವಸಿಷ್ಠ ಪ್ರಣೀತ ನರ(ಳ) ಸಂಪ್ರದಾಯಕ್ಕೆ ಆ ಬಗೆಯ ಯಶಸ್ಸು ಇಂದಿಗೂ ಲಭಿಸಿಲ್ಲ! ಚಲತ್ ಚಿತ್ರಪಟದ ನಟಿಯರು-ಅಪ್‌ಸರೆಯರು ಸಹ ವಿವಾಹ ಬಂಧನವನ್ನು ಹಾರಯಿಸುವ ಪ್ರವೃತ್ತಿ, ಭಾರತದಲ್ಲಿ ಪಾಶ್ಚಾತ್ಯರಿಗಿಂತಲೂ ಹೆಚ್ಚು ಪ್ರಮಾಣದಲ್ಲಿದೆ! ಸ್ತ್ರೀಮುಕ್ತಿಯ ಆಂದೋಲನವು ಯುರೋಪ್ ಅಮೇರಿಕೆಯಲ್ಲಿ ಎಂದೋ ಪ್ರಾರಂಭವಾಗಿದೆ. ಭಾರತದಲ್ಲಿ ಕುಮಾರ ಸಂಪ್ರದಾಯದ ಆಚಾರ್ಯ ವಿನೋಬಾರಿಂದ ಇದು ಮೊನ್ನೆ ತಾನೇ ಪ್ರಾರಂಭವಾಗಿದೆ. ಸ್ತ್ರೀಮುಕ್ತಿ ಎಂದರೆ ಏನು? ಬೇಕಾದ ಶಯನ ಕೈಹಿಡಿದು ಅಲೆವ ಸ್ವಾತಂತ್ರ್ಯವೇ? ಎಂದು ಮಹಾರಾಷ್ಟ್ರದಲ್ಲಿ ವಿಚಾರವಂತ ಹೆಣ್ಣುಮಕ್ಕಳೇ ಕೇಳಿರುವ ಪ್ರಶ್ನೆ- ಮಹಾರಾಷ್ಟ್ರ ಟೈಮ್ಸಿನಲ್ಲಿ ನಾನು ಓದಿದ್ದೇನೆ!

ಪಾಶ್ಚಾತ್ಯ ಹಾಗೂ ಭರತಖಂಡ ಇವೆರಡರ ಮನೋವೃತ್ತಿಯಲ್ಲಿ ಲೈಂಗಿಕ ಕ್ಷೇತ್ರದೊಳಗಿನ ಈ ಅಂತರಕ್ಕೆ

ಕಾರಣವಿದೆ : ಭಾರತೀಯ ಸಂಸ್ಕೃತಿಯಲ್ಲಿ ಮೈದೋರಿರುವ ಆದರ್ಶ (Objective Reality) ರೂಪ ಮನು: ವೈವಸ್ವತನ ನೆನಹಿನ ಮನು-ಜನ ಪರಂಪರೆ ಇನ್ನೂ ಪೂರಾ ನಷ್ಟವಾಗಿಲ್ಲ! ವ್ಯಾಸ: ದಕ್ಷಿಣ ಕಪರ್ದ- ವಸಿಷ್ಠ ಪಂಥವು, ನಾನಾ ಪ್ರಕಾರದಿಂದ ಅಹಿಹನ್ ಇಂದ್ರನ ಹನನ ಕೃತ್ಯವನ್ನು ಎಸೆಗುತ್ತ ಬಂದಿದ್ದರೂ ಆ ಇಂದ್ರನ ಪ್ರಭಾವವು ಅಬಾಧಿತವಾಗಿ ಇಂದಿಗೂ ಉಳಿದಿದೆ!

• ಪ್ರಸ್ತುತ ಶ್ರೀಸೂಕ್ತದಲ್ಲಿಯೇ ಅಡಗಿರುವ ಇನ್ನೂ ಒಂದು ಅಭಿಚಾರ ಕೃತ್ಯವನ್ನು ನೋಡಿಕೊಳ್ಳಿ: ದೇವ ಜುಷ್ಟಾಂ ಚಂದ್ರಾಂ ಹೇ ಜಾತವೇದಃ ಮಮ ಅವಹ ಭಾಷ್ಯ ಹೀಗಿದೆ, (ಏವಂ ರೂಪಾಂ ಚಂದ್ರಾಂ) ಮದರ್ಥಂ ಆವಹ ಆಹ್ವಯ! ಎಲೈ ಪ್ರಾಜ್ಞ: ಜಾತವೇದ ಅಗ್ನಿಯೇ (ಅವಳನ್ನು) ನನಗಾಗಿ ಇಲ್ಲಿ ಕರಕೊಂಡು ಶಾ. ಕೊಲ್ಲಾ-ಪುರ ದೇವಿಯನ್ನು ಕೊಲ್ಲೂರ (ಕೊಲ್ಲುವ ಊರ) ದೇವಿ: ಮೂಕಾಂಬೆ(೦) ಎಂದರೆ ಹೆಚ್ಚು ಸಮರ್ಪಕ ವಾದೀತು. ಈ ಪುರ=ಗ್ರಾಮ ದೇವಿಯನ್ನು ದ್ಯಾಮವ್ವ ಎಂಬ ವಾಡಿಕೆಯಿದೆ! ಈ ದ್ಯಾಮ್ಮವ್ವ, ದ್ಯಾಮವ್ವಃ ದೇವಮಾತಾ ಅದಿತಿ ಹೆಸರಿನಲ್ಲಿ ವೇದದಲ್ಲಿ ಪ್ರವೇಶ ಪಡೆದಿದ್ದಾಳೆ! ದುರ್ಗಾ: ಕಾಲಿ ರುಂಡ: ಅಕ್ಷ ಮಾಲಾಧಾರಿಣೆ=ಚಂದ್ರಾ: ಮೃತ್ಯುಸ್ವರೂಪದೇವಿ ಎಂದರೂ ಇವಳೇ! ಸರ್ವಂ ವಾ ಅತ್ತಿ ಇತಿ ಅದಿತಿಃ[೮] ಈ ಸ್ಥಲ (ಕಣ್) ಕಾಲ (ಗಣ್) ರೂಪ ಈ ಅಭಾವಾತ್ಮಕ ಮೃತ್ಯುತತ್ತ್ವವು ವೇದದಲ್ಲಿ ಹಿಂಬಾಗಿಲಿನಿಂದ ಪ್ರವೇಶ ಪಡೆದಿದೆ. ವೇದದ ಖಿಲಭಾಗ ಎಂಬಲ್ಲಿ ಈ ಸೂಚನೆ ನನಗೆ ದೊರೆಕಿತು.

ಪ್ರಚಲಿತ ಋಕ್‌ಸಂಹಿತೆಯಲ್ಲಿ ದುಷ್ಟಶಕ್ತಿಯನ್ನು ಅಡಗಿಸಿ ಇಡಲಾಗಿದೆ. ಪ್ರಾಥಮಿಕ ಸಮೀಕ್ಷೆಯಲ್ಲಿ ಈ ಸಂಶಯವು ಸೋಂಕುತ್ತಿತ್ತು. ಆದರೆ, ಸರಿಯಾಗಿ ಬಹಿರಂಗ ಪಡಿಸಲು ಸಾಮರ್ಥ್ಯ ಸಾಲದೆ ತೊಳಲಾಡಿದ್ದಾಯಿತು. ಸಂಪ್ರದಾಯಾಭಿಮಾನಿ ಹಲವರ ತಿರಸ್ಕಾರ, ದ್ವೇಷಕ್ಕೆ ನಿಷ್ಕಾರಣ ಕಾರಣನಾಗುತ್ತಿದ್ದುದು ಕಾಣುತ್ತಿತ್ತು! ಉದಾ: ಜಾತವೇದ ಅಗ್ನಿಯು ಬೃಹದುಲ್ಬ ರೂಪ ನಚಿಕೇತಾಗ್ನಿಯಲ್ಲಿ ಹೊಕ್ಕು ಕುಳಿತನು.[೯] ಈ ಅಭಿಚಾರ ಕೃತ್ಯವು ಮೊತ್ತ ಮೊದಲಲ್ಲಿ ನನ್ನನ್ನು ಎಚ್ಚರಿಸಿ, ಕನಿಷ್ಠ ಹತ್ತೆಂಟು ವರುಷಗಳಾದರೂ ಆಗಿರಬೇಕು. ಕೇನೋಪನಿಷತ್ತಿನಲ್ಲಿ ಯಕ್ಷಿ: ಉಮಾ ಹೈಮವತಿಯು, ಅಗ್ನಿ ಜಾತವೇದ, ಮತ್ತು ಇಂದ್ರ ಇಬ್ಬರಿಗೂ ಗುರುದೇವಿ ಆಗುತ್ತಾಳೆ! 'ತತ್ ವನಂ (೦) ಉಪಾಸಿತವ್ಯಂ' ಎಂದು ಆಜ್ಞಾಪಿಸುತ್ತಾಳೆ, ಈ ಉಮಾ ಹೈಮವತಿ! ಈ ಉಲ್ಲೇಖವು ಸಂದೇಹವನ್ನು ದೃಢಪಡಿಸಿತ್ತು.

ಪ್ರಪಂಚದೊಳಗಿನ ಮಾಯಾವೀ ಸಂಮೋಹಕ-ಮೋಸ ತರುವ ಅಹಿಮಾಯೆಯನ್ನು ತಮೋರೂಪ ಕತ್ತಲನ್ನು ನಿರ್ಮಿಸಬಲ್ಲ ಶಕ್ತಿತತ್ತ್ವವನ್ನು ಕಣ್ (ಸ್ಥಲ) ಗಣ್ (ಕಾಲ) ರೂಪದಿಂದ ಈ ವೇದದಲ್ಲಿ ಅದಿತಿ-ಆದಿತ್ಯ= ಪುರಿ-ಶಯರನ್ನು ವಿವಿಧ ನಾಮರೂಪದ ಪಾತ್ರಗಳ ರೂಪದಲ್ಲಿ ಅಭಾವವನ್ನೇ ಸ್ಥಾಯೀ ಎಂಬ ಭ್ರಾಂತಿ ಯುಂಟಾಗುವಂತೆ ಕಲ್ಪಿಸಿದ್ದಾಗಿದೆ ಚಿತ್ರಿಸಿದ್ದಾಗಿದೆ! ಕೊಲ್ಲಾಪುರ ದೇವಿಯ ಸಂದರ್ಭದಿಂದ ಅರಿಕೆಗೆ ಬರುವ ಶಯರು: ರುದ್ರ=ವಿಷ್ಣು, ಇವರು ನಾಗ; ಸರ್ಪ ಸ್ವರೂಪರು; ಈ ಪುರಿ-ಶಯರು! ಉಂಟು ಎಂದರೆ ಉಂಟು; ಇಲ್ಲ ಎಂದರೆ ಇಲ್ಲವೇ ಇಲ್ಲ! ಇದ್ದದ್ದು ಪುರಿ=ಸ್ಥಲ=ಬಯಲು(೦) ಮಾತ್ರ! Space-Time, Space, Place ಇದೆ. ಆದರೆ, Time ಕೇವಲ ಕಲ್ಪಿತ! ಈ ಪುರಿ-ದೇವಿ ಜೈನಪರಿಭಾಷೆಯ ಯಕ್ಷಿ: ಪದ್ಮಾವತಿ ಧರಣೇಂದ್ರ ಃ ನಾಗ-ಸರ್‌ಪ! ಇಲ್ಲಿ ಇಂದ್ರ ಎಂಬಲ್ಲಿ (ಶಿಶ್ನೋ ದೇವಾಃ ಶತ್ರು, ಅಹಿಹನ್!) ಇಂದ್ರನ ಹನನವಾಗಿದೆ. ಈ ಪ್ರಂಪಚದಲ್ಲಿ ನರ(ಳ) ಸಂಪ್ರದಾಯಗಳೆಲ್ಲವೂ ಇಂದ್ರದ್ವೇಷಿ! ಈ ವೇದದಲ್ಲಿ ಅನಿಂದ್ರರ ನಿರಗ್ನಿಗಳ ಉಲ್ಲೇಖಗಳಿವೆ! ಆದರೆ, ಈ ಅನಿಂದ್ರರು ಮತ್ತು ನಿರಗ್ನಿಗಳು ಯಾರು? ಎಂಬುದನ್ನು ಬೆರಳಿಟ್ಟು ತೋರಿಸಲಿಕ್ಕೆ ಆಗದೆ ಇದ್ದುದರಿಂದ ತೊಳಲಾಡಿದ್ದಾಯ್ತು! ವಿಕಾಸತತ್ತ್ವದ ಪ್ರಕ್ರಿಯೆಯಲ್ಲಿ, ಸ್ವಾಭಾವಿಕವಾಗಿ-ನೈಸರ್ಗಿಕವಾಗಿ-ಪ್ರಾದುರ್ಭವಿಸಿದ ಪ್ರಜ್ಞಾ : ಪ್ರಕಾಶರೂಪ ಸೂರ್ಯ=ವಿವಸ್ವನ್: ಸವಿತೃ ಶಕ್ತಿ ಅಂದು ಇತ್ತು, ಇಂದೂ ಇದೆ. ಆದರೆ, ಮೃತ್ಯು-ತತ್ತ್ವೋಪಾಸಕರು ಮಾಟ-ಮಂತ್ರದ ಗಾರುಡೀವಿದ್ಯೆಯ ಕ್ಷುದ್ರಸಿದ್ಧಿಗಳ ಬಲದಿಂದ ಈ ಲೋಕ ವಂಚನೆಯ ಕೃತ್ಯ ಮಾಡಿರುವುದಕ್ಕೆ ಇಂದಿನ ವೇದೋಪನಿಷತ್ತುಗಳ ಪಾಠವೇ ಪ್ರಮಾಣವಾಗಿದೆ.

ಇವರು ಮಾಡಿರುವ ಕೃಷ್ಣಕಾರಸ್ಥಾನವೇನು? ವರುಣನು ಆದಿತ್ಯನಾದನು ಎಂಬ ನಂಬಿಸಿದ್ದಾಗಿದೆ! ಆದ್ಯ: ಎಂಬ ವೈವಸ್ವತ ವಿವಸ್ವನ್ ಇವನು ಸಲಿಲ ದೇವಿ ಅದಿತಿಯ ಪುತ್ರನಂತೆ! ಸಪ್ತಭಿಃ ಸಹ ಅದಿತಿಯು ಜಲಸ್ವರೂಪೀ ಆಗುತ್ತಾಳೆ ಎಂಬ ಋಚೆಯ ಭಾಷ್ಯದಲ್ಲಿ ಸಾಯಣರಿಂದ ಆ ವರುಣಾದಿ ಆದಿತ್ಯರಲ್ಲಿ ಸಪ್ತಮನೆಂದು ವಿವಸ್ವನ್ ಸೂರ್ಯನ ಹೆಸರನ್ನು ಹೇಳುವ ಅನ್ಯಾಯವಾಗಿದೆ ಸಂಪ್ರದಾಯ ಶರಣರಾದುದರಿಂದ! ತಮೋರೂಪ ಕತ್ತಲನ್ನು : ಅಭಾವವನ್ನು ಉಂಟು ಎಂದು ನಂಬಿಸಿ, ವಾಸ್ತವ : ಸತ್ಯರೂಪ ಪ್ರಕಾಶತತ್ತ್ವದ ಜೀವನ ನಿಷ್ಠೆಗೆ ಆಧಾರಭೂತ ಆ-ದರ್ಶ : ಕಾವ್ಯಸತ್ತ್ವವನ್ನು (objective reality) ಸ್ವರ್‌ಪಾತಳಿಯನ್ನು ಇಲ್ಲವೇ ಇಲ್ಲ ಕಾಲ್ಪನಿಕ ಎಂಬ ಭಾವನೆಯನ್ನು ಉಂಟುಮಾಡಿರುವುದಕ್ಕಿಂತಲೂ ಹೆಚ್ಚಿನ ಘೋರದುಷ್ಕೃತ್ಯವು. ಮಾನವ ಸಂಸ್ಕೃತಿಗೆ ಬೇರಿನ್ನಾವುದಾದರೂ ಉಂಟೆ? ಸತ್ಯ (ಋತ: ವಿಶ್ವನಿಯಮರೂಪೀ ಪ್ರಕಾಶತತ್ತ್ವ) ಮತ್ತು ಅನೃತ ಸಂಮೋಹ ರೂಪೀ ತಮಸ್ಸಿನ ಕತ್ತಲು ಇವೆರಡರ ಮಿಶ್ರಣದಿಂದ ಈ ಪ್ರಪಂಚವು ಆಗಿದೆ, ಎಂದು ಒಬ್ಬ ಮದಾಚಾರ್ಯ: ಭಗವತ್‌ಪಾದರು, ಸುಮಾರು ೧೩೦೦ ವರುಷಗಳ ಹಿಂದೆಯೇ ಹೇಳಿರುವುದು ನಿಜ. ಆದರೆ ಇವೆರಡರಲ್ಲಿ ಪಾರಮ್ಯ ಯಾವುದಕ್ಕೆ? ಪ್ರಜ್ಞೆಗೊ? ಪ್ರಾಣಕ್ಕೊ? 'ಪ್ರಾಣಾಂ ವಾ ಋಷಯಃ' ಎಂಬ ನಿಷ್ಕರ್ಷವು ಅಸುರ ಸಂಪ್ರದಾಯದ್ದು ಎಂಬಲ್ಲಿ ಸಂದೇಹವೇ ಇಲ್ಲ! ಅಸು=ಪ್ರಾಣ ಎಂಬುದಕ್ಕೆ ಇಂದಿನ ವೇದೋಪನಿಷತ್ತುಗಳೇ ಸಾಕ್ಷಿ.[೧೦]

ನನ್ನ ಅನ್ವೇಷಣೆಯ ಈ ಘಟ್ಟದಲ್ಲಿ, ನೇರವಾದ ನಿಷ್ಕರ್ಷಕ್ಕೆ ಧೈರ್ಯವು ಸಾಲದಿರುವಾಗ, ಅನನ್ಯ ಸಾಧಾರಣ ಸಂಶೋಧಕರಾದ ಇಬ್ಬರು ಪಾಶ್ಚಾತ್ಯ ಪ್ರದಂತರ ಉಕ್ತಿಗಳು ಮಾರ್ಗದರ್ಶಕವಾದುವು. ಡಾ. ಐನ್‌ಸ್ಟೈನ್ ಮತ್ತು ಡೆಕಾರ್ಟ್ (೧೫೯೬-೧೬೫೦) ಇವರ ವಿಚಾರಗಳಿಂದ ಆತ್ಮವಿಶ್ವಾಸವು ಕುದುರಿತು. ಇವರ ನಿಷ್ಠೆಯಲ್ಲಿ ಕಂಡ ಒಂದು ಸಂಗತಿ : ಇವರು ಅಭಾವಿತವಾಗಿ ಸ್ವರ್‌ಪಾತಳಿಯ (Nous : Mind) ಮೇಲಣ ಮಾತು ಹೇಳಿದ್ದಾರೆ! ಗ್ರೀಕ್ ಪೂರ್ವ ಪರಂಪರೆಯಲ್ಲಿಯೂ Triad : ಮೂರು ಪಾತಳಿಗಳ ವಿಚಾರವು ಜೀವಂತವಿತ್ತು. ಆದರೆ, ಹೋಮರನ ಕಾವ್ಯದಲ್ಲಿಯೇ ಈ ನಿಷ್ಠೆಯು ನಷ್ಟವಾದದ್ದು ಕಂಡು ಬರುತ್ತದೆ. ಸ್ಥಲವನ್ನು (ಕಣ್) ಕಾಲವು (ಗಣ್) ನಿರ್ಮಿಸಿತ್ತು. ಅಥೇನ, ತಂದೆ ಝೀಉಸನ ತಲೆಯಿಂದ ಹುಟ್ಟಿದಳಂತೆ! ವೇದದ ಆಂಭೃಣೆಯೂ ಅಸ್ಯಮೂರ್ಧನ್ ಮಮಯೋನಿಃ ಎಂದು ಹೇಳುತ್ತಾಳೆ ಈ ನೀರೆ! ಆದರೆ, ಯಾವ ಬಾಯಿಂದ? ಅಮೃತಸ್ಯ ನಾಭಿಃ ಸ್ಥಲ (ಕಣ್) ರೂಪ ಈ ದೇವಿ ಯಾವ ಬಾಯಿಂದ ಮಾತಾಡುತ್ತಾಳೆ! ಕಣ್ಕಟ್ಟು-ಪವಾಡ ಎಂಬುದು ಇಲ್ಲಿ ಇದೆ! ಜೀವನ ಪಾತಳಿಗಳು ಆ ಹಂತದ ಅಭಿವ್ಯಕ್ತಿಯನ್ನು ರೂಪಿಸುತ್ತವೆ. ಸುತ್ತಲಿನ ಸಮಾಜವು ಇಂದ್ರಿಯ ಪಾತಳಿಯ ಮೇಲೆ ಬಂದಿದ್ದರೂ ನರ(ಳ) ಸಂಪ್ರದಾಯವು ಪ್ರತಿಷ್ಠಿತವಾಗಿದ್ದರೂ ಈ ಇಬ್ಬರೂ ಪ್ರಾಜ್ಞರು Objective Reality Extra- personal sphere of reality ಯಲ್ಲಿ ನಿಷ್ಠೆಯವರು ಆಗಿದ್ದರು. ಇದರಿಂದಾಗಿ, ಇವರ ಅಭಿವ್ಯಕ್ತಿಮಟ್ಟವು ಇನ್ನುಳಿದ ಜೀವಿತಪಾತಳಿಯ ಬುದ್ಧಿವಂತರಿಗಿಂತ ಮೇಲ್ಮಟ್ಟದ್ದು.

ಡಾ. ಐನ್ಸ್ಟರನ್ನರ ನಿಷ್ಠೆಯ ಮಾತು

> In a certain sense, therefore I hold it to be true, that pure thought
> is competent to comprehend the real as ancients dreamed[೧೧]

ಜೀವನ ವಿಶ್ವಸ್ಥ ವಾಸ್ತವ: ಸತ್ಯವನ್ನು ಗ್ರಹಿಸಿಕೊಳ್ಳಲು ಶುದ್ಧವಿಚಾರವು ಸಮರ್ಥವಿದೆ. ಇದು ನನ್ನ ನೆಚ್ಚಿಕೆ ಇಂದು ಅಂತರ್-ವಿಸಂಗತಿಯ ಅಭಾವಾತ್ಮಕ ಭೂಮಿಕೆಯೇ ಈ ಬಾಳಿನಲ್ಲಿ ಸ್ಥಾಯೀ ಇದೆ ಎಂಬ ನಂಬುಗೆಯು ಪ್ರತಿಷ್ಠಿತವಾಗಿದೆ. ಇದರಿಂದಾಗಿ, ವಿಚಾರ - ಶುದ್ಧವಿಚಾರವು ಕಾಲ್ಪನಿಕ ಎಂದರೆ ಸುಳ್ಳು ಎಂಬ ಗ್ರಹಿಕೆಯು ಬೆಳೆದು ನಿಂತಿದೆ! ವಿಚಾರ ಎಂದರೆ ಶುದ್ಧವಿಚಾರವೇ ಸರಿ. ಶುದ್ಧ ವಿಚಾರ (ಪ್ರಕಾಶ) ಮತ್ತು ವಿದ್ದ-ವಕ್ರ ವಿಚಾರ (ಕತ್ತಲು) ಇವೆರಡರೊಳಗಿನ ಅಂತರದ ಅರಿವು ಇದ್ದವರೂ ಕಡಿಮೆ. ಅಂತಃಸಂಗತಿಯುಕ್ತ ವಿಚಾರವೇ ಶುದ್ಧ ವಿಚಾರ; ಏಕೆಂದರೆ ಇದು ತತ್ತ್ವತಃ ಪ್ರಕಾಶ ಸ್ವರೂಪ.

ಆದರೆ, ಅಂತರ್‌ವಿಸಂಗತಿಯಲ್ಲಿಯೂ ಒಂದು ಬಗೆಯ ಅಂತಃಸಂಗತಿಯು ಇರಬಲ್ಲುದು. ಉದಾ : ಅ-ಸಂಗತ ನಾಟಕ, ಕಥೆ, ಕವಿತೆ ಮುಂತಾದವು. ಆದರೆ, ನೇರ ಅಂತಃಸಂಗತಿಯ ಅರ್ಥ; ವಿಚಾರ ಇದು ಪ್ರಕಾಶರೂಪ ಎಂದಲ್ಲಿ, ಅಂತರ್ ವಿಸಂಗತದೊಳಗಿನ ಅಂತಃಸಂಗತಿಯು, ಇದು ಕಪ್ಪು ಪ್ರಕಾಶ ಆಗುತ್ತದೆ! ಈ ಕಪ್ಪು ಆವರಿಸಿರುವ ಪ್ರಕಾಶವನ್ನು ಪುರಾತನರು ಆದಿತ್ಯ ಜ್ಯೋತಿ ಎಂದಿದ್ದಾರೆ! ಪ್ರಕಾಶದಾಯಕನು ಸೂರ್ಯನು, ಇದರಂತೆ ಕತ್ತಲು ತಮಸ್ ನಿರ್ಮಿಸುವವನು ಆದಿತ್ಯನು. ಆದಿತ್ಯ : ಜ್ಯೋತಿಯು (ಚಂದ್ರ, ದೀಪ), ಇದು ನಿತ್ಯವಾಗಿ ಕತ್ತಲಿನ ವಲಯದಲ್ಲಿಯೇ ಇರುವುದುಂಟು. ಪ್ರಕಾಶ (ಮನು-ಜ) ಮತ್ತು ಜ್ಯೋತಿ [ನರ (ಳ)] ಈ ಮಾನವ ಜೀವನದ ಅರ್ಥದ್ಯೋತಕ ಪರಿಭಾಷೆಯು ಅ-ಮೋಘವಿದೆ. ಭಾರತದ ಹೊರಗೆ ಬೇರೆ ಯಾವ ಜನಾಂಗದಲ್ಲಿ ಇಷ್ಟು ಔಚಿತ್ಯ ಪೂರ್ಣ ಪರಿಭಾಷೆ ಉಂಟೇ ಎಂಬುದನ್ನು ನಾನು ಅರಿಯೆ.

ಐನ್ಸಟನ್ನರ ವಿಚಾರ-ಶುದ್ಧವಿಚಾರ-ಇದು ಪ್ರಕಾಶ ಸ್ವರೂಪ; ವ್ಯಕ್ತಿ ನಿರಪೇಕ್ಷ ಸ್ವರ್-ಪಾತಳಿ! ಇದು ಪ್ರಜ್ಞಾ ಪ್ರಕಾಶದ ಪಾತಳಿ. ಈ ಶುದ್ಧ ವಿಚಾರದ ಹಿನ್ನೆಲೆಯನ್ನು ಅವರು ಒಂದೆಡೆಯಲ್ಲಿ ಹೀಗೆ ಸ್ಪಷ್ಟೀಕರಿಸಿದ್ದಾರೆ:

> The harmony and consistency of Mental constructions is an indication of their objective nature their agreement with objective reality....The world is well ordered integrated entity.[೧೨]

ಅಗ್ನಿ : ಜಾತವೇದ ಇದು ಶುದ್ಧವಿಚಾರ; ಇದು ಭಾವಾತ್ಮಕ-ಅನುಭವಾತ್ಮಕ ಆ-ದರ್ಶ ವಿಚಾರ. ಇದಕ್ಕೆ ಪ್ರತಿಯಾಗಿ ಇರುವ ಅಂತರ್ ವಿಸಂಗತ ವಿಚಾರವು ಅಗ್ನಿಃ ನಚಿಕೇತ; ಇದು ಅಭಾವಾತ್ಮಕವಾಗಿದೆ. ಐನ್ಸಟನ್ನರು ಹೇಳುವಂತೆ ಈ ಪ್ರಪಂಚದಲ್ಲಿ-ಮಾನವ ಜೀವನದಲ್ಲಿ-ಸಾಂಗತ್ಯವಿದೆ. ಅಗ್ನಿ: ಜಾತವೇದನಿಗೆ ಅಗ್ನಿ: ನಚಿಕೇತನ ಸಾಂಗತ್ಯವು ಅವಶ್ಯವಿದೆ. ಅಗ್ನಿ : ನಚಿಕೇತನು, ಅಗ್ನಿ : ಜಾತವೇದನಿಗೆ ಆಧೀನನಾಗಿ ಹೊಂದಿಕೊಂಡಿದ್ದಾರೆ ಮಾತ್ರ. ಆ ಬಾಳಿನಲ್ಲಿ ನೆಮ್ಮದಿ ಇದ್ದೀತು. ಆದರೆ, ಅ-ಭಾವಾತ್ಮಕವಾದ ಅಗ್ನಿ : ನಚಿಕೇತನಿಗೆ, ಪ್ರಾಶಸ್ತ್ಯವು ದೊರೆವ ಬಾಳು ಹಾಳು-ಅನಾಚಾರದ ಆಗರ, ಆಗದೆ ಇರಲಾರದು. ಇದರ ಸ್ಪಷ್ಟೀಕರಣವು ಬುಧನ ಜಾತಕದಲ್ಲಿ ಸ್ವಲ್ಪ ಬಂದಿದೆ. ಈ ವಿಚಾರವು ಇನ್ನೂ ಸ್ವಲ್ಪ ಮುಂದುವರಿದಿದೆ-

> This harmony can be perceived when the intellect does not rely on direct sense impressions and build up a new picture which, in the final analysis, explains the totality of experience in the most natural way.[೧೩]

ಇದು ಡಾ. ಐನ್ಸಟನ್ನರು ತಮ್ಮ ಸಂಶೋಧನದಲ್ಲಿ ಪಡೆದ ಸ್ವಾನುಭವ, ಬುದ್ಧಿ (Intellect) ಸ್ಥಲ (ಕಣ್)-ಕಾಲ (ಗಣ್) ಸಂದರ್ಭದ ಕ್ರಿಯೆ-ಪ್ರತಿಕ್ರಿಯೆಗಳ ಪ್ರಭಾವದಲ್ಲಿ, ಇಂದ್ರಿಯ ಸಂವೇದನೆಗಳ ಮೂಲಕ ಕೆಲಸ ಮಾಡುತ್ತದೆ. ಆದಕಾರಣ, ಜಾತವೇದ ಅಗ್ನಿಯ ಪ್ರಜ್ಞಾನೇತ್ರದ ಮೂಲಕ ಬಾಳಿನ ಅರ್ಥಗ್ರಹಣದ ಪ್ರಯತ್ನ ಅವಶ್ಯವಾಗುತ್ತದೆ. ಇದರಿಂದ ಇಡಿಗೆ ಸಂಬದ್ಧ ಸಮ್ಯಕ್ ಜೀವನಾನುಭವವು ಅರಿಕೆಯ ಅಳವಿನಲ್ಲಿ ಬರುತ್ತದೆ.

ಡೆಕಾರ್ಟನ ದೃಷ್ಟಿಕೋನದ ಬಗೆಗೆ

ಐನ್ಸಟನ್ನರಂತೆ, ಇವನನ್ನೂ, ಮೂಲದ ಪರಿಭಾಷೆ ಉಳಿದು ಬರದೆ ಇದ್ದುದರಿಂದ ಬುದ್ಧಿವಾದಿ Rationalist, ಎಂದು ಬಗೆಯಲಾಗುತ್ತದೆ. ಗೀತೆಯ ಭಗವಂತನ ಕೃಪೆಯಿಂದ ಭಾರತೀಯರು ಪ್ರಜ್ಞೆಗೆ ಎರವಾಗಿರುವಂತೆ, ಪೈಥಾಗೊರಾಸನ ಪ್ರಭಾವದಲ್ಲಿ ಯುರೋಪವು Nous : Mind ಇದಕ್ಕೆ ವಂಚಿತವಾಗಿದೆ! ಆದರೆ,

> Descarte's rationalism was essentially ontological, that is why

> it marked the beginning of new era in science, culture and mode of thinking[೧೪]

ಡಾ ಐನ್ಸ್ಟನ್ನರ Pure thought ಮತ್ತು ಡೆಕಾರ್ಟನ a perfection ಇವೆರಡರ ಆಶಯವು ಸಮಾನವಿದೆ. ಇವು ಸಮಾನ ಪಾತಳಿಯ ಮೇಲಣ ಆ-ದರ್ಶ (Objective Reality) = ಸ್ವರ್ ಪಾತಳಿಯ ಮೇಲಣ ಮಾತುಗಳು. ಡೆಕಾರ್ಟನ ಈ ಉಕ್ತಿಯನ್ನು ನೋಡಿ- Certainty is based upon the existence of a perfection which cannot deceive[೧೫]

ಈ ತಜ್ಞನಿಗೆ, ಬಾಳಿನಲ್ಲಿ ಮೋಸತರುವ ಒಂದು ದುಷ್ಟಶಕ್ತಿಯೂ ಆಡಗಿ ಇರುವ ಅನುಭವವು ಬಂದಿರಲಿಕ್ಕೆ ಸಾಕು. ಆSS ಪರಿಪೂರ್ಣ ಪರಿಶುದ್ಧದ ಅಸ್ತಿತ್ವವು ಖಚಿತ ಪಟ್ಟಿದ್ದರೆ. ಈ ಬಾಳಿನೊಳಗಿನ ದುಷ್ಟ ಶಕ್ತಿಯ ಆಟ ನಡೆಯಲಾರದು, ಎಂದು ಡೆಕಾರ್ಟ್ ಹೇಳುತ್ತಾನೆ. ಪರಿಪೂರ್ಣತ್ವದ ಅಸ್ತಿತ್ವವನ್ನು ಇವನು ಗ್ರಹಿಸಿಕೊಂಡದ್ದು ಹೇಗೆ? ಡೆಕಾರ್ಟನು ಆಧುನಿಕ ಭೂಮಿತಿ, ಗಣಿತಶಾಸ್ತ್ರದೊಳಗಿನ ಶೋಧಕರಲ್ಲಿ ಮೊದಲಿಗನು. ಸಮಕಾಲೀನ ಅನೇಕ ಮೇಧಾವಿಗಳಿಗೆ ಹೊಳೆಯದ್ದು ತನಗೆ ಸಾಧ್ಯವಾದ ಬಗೆಗೆ ಇವನಿಗೆ, ಸೋಜಿಗ ಅಡಿಗಡಿಗೆ! ಈ ಜ್ಞಾನವು ಮಾನವ ಕಲ್ಪಿತವಲ್ಲ! ಅನುಭವಜನ್ಯ ಎನ್ನಲೂ ಆಗುತ್ತಿದ್ದಿಲ್ಲ. ಇದರಿಂದಾಗಿ ಈ ಪರಿಪೂರ್ಣ ಜ್ಞಾನವು ವ್ಯಕ್ತಿನಿರಪೇಕ್ಷ ಪಾತಳಿಯ ಮೇಲೆ ಇರಲಿಕ್ಕೆ ಬೇಕು, ಎಂದು ಇವನ ಮತ. ಮಾನವನು ಈ ಜೀವನ ವಿಶ್ವದ ಸೂಕ್ಷ್ಮ ಪ್ರತಿಕೃತಿ Model ಆಗಿದ್ದಾನೆ.

> He was a substance whose whole essence was to think entirely independent of the body, of its position in space of all material things

ಈ ವರ್ಣನೆಯು, ವ್ಯಕ್ತಿ ನಿರಪೇಕ್ಷ, ಸ್ಥಳ (ಕಾಲ)ದ ಆಚೆಗಿನ ಸ್ವರ್ ಪಾತಳಿ ಸೂಚಕವೇ ಆಗುತ್ತಿಲ್ಲವೆ? ಇಂತಹ ಸಾಧಕನು ಪುರಾತನ ಪರಿಭಾಷೆಯ ತ್ರಿತಆಪ್ತ್ಯನು ಆಗುತ್ತಿದ್ದಾನೆ.

ಈ ಹಿನ್ನೆಲೆಯಲ್ಲಿ ಡೆಕಾರ್ಟನ ವಿಖ್ಯಾತ ಸೂತ್ರ I think, therefore I am ಇದು ಅರ್ಥಪೂರ್ಣವಾಗುತ್ತದೆ. ಈ thinking: ಮನನದ ಪಾತಳಿ ಮನು: ವೈವಸ್ವತ ಈ ಆದರ್ಶ ವಾಸ್ತವ : ಸತ್ಯದ=ಕಾವ್ಯಸತ್ಯದ ದ್ಯೋತಕವಾಗಿದೆ ಇದು ಮಾನವಧರ್ಮ, ನರ(ಳ) ಸಂಪ್ರದಾಯಗಳಲ್ಲಿಯೂ ಇದನ್ನು ಹೋಲುವ ಸ್ಥೂಲ ಸೂತ್ರವೊಂದು ಒಂದು ಕ್ರೈಸ್ತಪಂಥ ಭದ್ರಪಡಿಸಿದನೆಂಬ ಅಗಸ್ಟನ್ನನ ಒಂದು ಉಕ್ತಿಯೂ ಉಂಟು. ನಾನು ಇದ್ದೇನೆ. ಆದಕಾರಣ ಈ ಪ್ರಪಂಚವಿದೆ; ದೇವರೂ ಇದ್ದಾನೆ! ನಾನೇ ಅವನು! ಯಾಜ್ಞವಲ್ಕ್ಯನ ಉಪದೇಶ ಚಿಂತ್ಯವಿದೆ: ಜಾಯಾ ಪ್ರಿಯಾ ಭವತಿ![೧೬] ನ ವಾ ಅರೇ ಜಾಯಾಯೆ ಕಾಮಾಯ ಜಾಯಾ ಪ್ರಿಯಾ ಭವತಿ ಆತ್ಮನಃ ತು ಕಾಮಾಯಾ

ನರ(ಳ) ಸಂಪ್ರದಾಯದ ಈ ದೃಷ್ಟಿಕೋನವು ಪ್ರಾಣಲಿಂಗ ಪಾತಳಿಯದು. ಯೋನಿ-ಲಿಂಗವೇ ದೇವರಾಗುವ ಅನಿವಾರ್ಯತೆ ಈ ಭೂಮಿಕೆಯಲ್ಲಿದೆ! Devil quotes the Bible ಬೈಬಲ್ಲಿನಲ್ಲಿ ದೆವ್ವದ ಮಾತಿಗೂ ಇಂಬು ಇದೆ. ಡೆಕಾರ್ಟನು ಈ Devil ಹಿನ್ನೆಲೆಯನ್ನು ಅರಿತಿದ್ದ. ಈ ಡೆವ್ಹಿಲ್ (ಲಿಂಗ) ಇದೇ ದೇವರೆಂದು ಪೂಜೆಗೊಳ್ಳುತ್ತಿದೆ, ಎಂದು ಹೇಳುತ್ತಾನೆ.

> There exists not at all a true God, but a certain evil genius no less wily and deceitful, that powerful who put all his industry to work to deceive him

ಡೆಕಾರ್ಟನ ಈ ನಿಷ್ಕರ್ಷವನ್ನು, ಡೆಕಾರ್ಟನ ವಿಚಾರಗಳನ್ನು ಪರಿಚಯ ಮಾಡಿಕೊಡಲು ಹೊರಟ ಗ್ರಂಥಕಾರ ಪಾಲ್‌ವ್ಹೆಟರಿ, ಡೆಲ್ಹಲ್ ಈ ಕಲ್ಪನೆ ಡೆಕಾರ್ಟನ Invention ಎನ್ನುತ್ತಾನೆ! ಡೆಕಾರ್ಟನು ಸಾಕ್ರೆಟಿಸನಂತೆ, ಅಭಿವ್ಯಕ್ತಿಯ ತನ್ನದೇ ಆದ ಪದ್ಧತಿಯನ್ನು ಸ್ವೀಕರಿಸಿದ್ದನು. ಸಾಕ್ರೆಟೀಸನು ತಾನು ತಿಳಿಗೇಡಿ ಎಂಬ ಭೂಮಿಕೆಯನ್ನು

ಸ್ವೀಕರಿಸಿ ಉಪದೇಶಕ್ಕೆ ಪ್ರಾರಂಭಿಸುವುದು ವಾಡಿಕೆಯಾಗಿತ್ತು. ಡೆಕಾರ್ಟನು ಪರಿಪೂರ್ಣದಲ್ಲಿ ನಿಷ್ಠೆಯಿದ್ದವನು : ಸಮಕಾಲೀನರು ಸಂದೇಹಿಸದೆ ಇರಲಾರರು ಎಂದು, ಒಂದು ವಿಚಿತ್ರ ಸಂದೇಹವಾದಿ ಭೂಮಿಕೆಯನ್ನು ಇವನು ಸ್ವೀಕರಿಸಿದ್ದನು! I think; therefore I am; ಆದರೆ ಇದನ್ನು ಅಲ್ಲ, ಎಂದು ಹೇಳಿ ನಂಬದಿರಲು ನೀವು ಸ್ವತಂತ್ರರಿದ್ದೀರಿ, ಎಂದು ಅವನು ಸೂಚಿಸುತ್ತಿದ್ದನು. ಡೆಕಾರ್ಟನು ನ ಇತಿಹಾಸವಾದಿ ಎಂಬ ಕಾರಣದಿಂದ ನಾನೇ ಇವನನ್ನು ಹಿಂದೊಮ್ಮೆ ಟೀಕಿಸಿದ್ದೇನೆ. ಮಾನವೇತಿಹಾಸವನ್ನು ಲೆಕ್ಕಿಸಿದ್ದಲ್ಲಿ ಇವನ ವಿಚಾರಕ್ಕೆ ಹೆಚ್ಚು ತೇಜ ಬರಬಹುದಿತ್ತು.

ಭಾರತೀಯ ಪುರಾತನ ಪರಿಭಾಷೆಯ ಭೌಮಾಸುರರ ರಾತ್ರ್ಯಭಿಮಾನೀ ವರುಣನ ಸಂತಾನ ಮತ್ತು ಗ್ರೀಕ್-ಪುರಾತನ ಪರಿಭಾಷೆಯ ಯುರೆನೆಸ್‌ನಿಗೆ ಗೀಃ ಭೂದೇವಿಯಿಂದಾದ ಟಿಟಾನ್ ಈ ಸಂತಾನವು ನಾಗ : ಲಿಂಗನ ತಳಿಯಾಗಿದೆ! ಡೆಕಾರ್ಟ ಹೇಳುವಂತೆ ಈ ಸಂತಾನವು, ದೇವರ ವೇಷ ಧರಿಸಿರುವ ಅಸುರ ಪರಂಪರೆ. ಇದು ನಿಜವಾದ ದೇವರನ್ನೇ ಹಿಮ್ಮೆಟ್ಟಿಸಿದ್ದನ್ನು ಕಾಣಲು ದೊರೆಯುತ್ತದೆ.

೧. Brazen Serpent on a pole!

೨. The cross is the shame of Christ and also glory and is power

ಭೌಮಾಸುರ : ನಾರಕನೇ ನಾರಾಯಣ ನಾಮದಿಂದ ಪೂಜೆಗೊಳ್ಳುತ್ತಿದ್ದಾನೆ. ಮಾರುತಿ ಯಾರು? ಹಿಂದಿನ ಬಾಲ, ವೇದದ ವರ್ಣನೆಗಳಲ್ಲಿ ಇಲ್ಲ! ಮುಂಬಾಲದ=ನರಾಃ ಇವರು! ನಮ್ಮ ಸಂಸ್ಕೃತಿಯನ್ನು ರೂಪಿಸಿದವರೆಂಬ ದಕ್ಷಿಣ ಕಪರ್ದ, ವಸಿಷ್ಠ, ವ್ಯಾಸ ಯಾರು? ವಸಿಷ್ಠನೂ ನೆತ್ತಿಗಣ್ಣಿನ ವರುಣ ಪುತ್ರನು! ವ್ಯಾಸನನ್ನು ವೇದವ್ಯಾಸ ಎನ್ನುತ್ತಾರೆ. ಪುರಾಣಗಳಲ್ಲಿ ಈ ವ್ಯಾಸನ ಕೃತಿಯ ವರ್ಣನೆಯಿದೆ![೧೭]

ವ್ಯಾಸಃ ವಿಷ್ಣೋಃ ಅಂಶಃ, ಬ್ರಹ್ಮಣಾ ಪ್ರಚೋದಿತಃ
ಯಃ ಅಸ್ಮಿನ್ ವೇದಂ ವ್ಯಸ್ತಂ ಪ್ರಚಕ್ರಮೇ।
ವಿಷ್ಣುಃ ವ್ಯಾಸರೂಪೀ ಮಹಾಮುನೇ। ವೇದಂ ಏಕಂ ಸುಖಧಾ ಕುರುತೇ ಜಗತೋ ಹಿತಃ।
ಹಿತಾಯ ಸರ್ವಭೂತಾನಾಂ ವೇದಭೇದಾನ್ ಕರೋತಿ ಸಃ।
ವಿವ್ಯಾಸ ಏಕಂ ಚತುರ್ಧಾ ಯಃ ವೇದಂ ವೇದವಿದಾಂ ವರಃ
ಯೋ ವ್ಯಸ್ತ ವೇದಾನ್ ಚತುರಃ ತಪಸಾ ಭಗವಾನ್ ಋಷಿಃ
ಲೋಕೇ ವ್ಯಾಸತ್ವಂ ಆಪದೇ, ಕಾರ್ಷ್ಣ್ಯಾತ್ ಕೃಷ್ಣತ್ವಂ ಏವ ಚ।

ಈ ವ್ಯಾಸನು, (ಅಸ್ತ್ರ) ವ್ಯಸ್ತಗೊಳಿಸಿದ್ದರಿಂದ ಇವನು ವೇದವ್ಯಾಸನೆಂದು ಹೆಸರಾಗಿದ್ದಾನೆ! ಈ ವ್ಯಾಸನ ನಿಜಸ್ವರೂಪವು ಇನ್ನೊಂದು ನಿಟ್ಟಿನಿಂದ ಬಯಲಿಗೆ ಬರುತ್ತದೆ : ಇವನನ್ನು ವಿಷ್ಣುವಿನ ಅಂಶ, ಸಾಕ್ಷಾತ್ ವಿಷ್ಣುವೇ ಎಂದುದಾಗಿದೆ. ಈ ವಿಷ್ಣುವು ಯಾರು? ವಸಿಷ್ಠನಿಗೆ ಶಿಪಿವಿಷ್ಟ ರೂಪದಲ್ಲಿ ಈ ವಿಷ್ಣುವಿನ ಸಾಕ್ಷಾತ್ಕಾರವಾಯಿತೆಂದು ಈತನ ಸೂಕ್ತಗಳಿಂದಲೇ ಗೊತ್ತಾಗುತ್ತದೆ.[೧೮] ಇನ್ನು ಕೇಳಬಹುದು : ಶಿಪಿವಿಷ್ಟ ರೂಪವು ಏನು? ಎಂತಹುದು? ಎಂದು, ಈ ಪ್ರಶ್ನೆಗೂ ಬೇರೆ ಬೇರೆ ಬಗೆಗಳಿಂದ ಉತ್ತರವು ದೊರೆಯುತ್ತದೆ. ವೇದಕಾಲೀನ ಕವಿಸಮಯದಂತೆ, ಕವಿ ಹಾಗೂ ಆತನ ಸ್ತೋತ್ರದ ದೇವರಲ್ಲಿ ಅನ್ಯೋನ್ಯವಿರುತ್ತದೆ! ಈ ಉತ್ತರವು ಅಲ್ಲದೆ, ಇನ್ನೊಂದೆಡೆಯಲ್ಲಿ 'ವಿಷ್ಣುಃ ಯೋನಿಂ ಕಲ್ಪಯತು' ಎಂಬ ಉಕ್ತಿಯಿದೆ.

ಇಂತಹ ಅಗಾಧ ಪವಾಡ ಶಕ್ತಿಯ ವಿಷ್ಣು, ನಾರ-ಅಯನ ಸ್ವರೂಪ ವ್ಯಾಸನಲ್ಲೂ ಅವನು ಮುಟ್ಟಿದ್ದೆಲ್ಲವೂ ಯೋನಿ-ಲಿಂಗ ಸ್ವರೂಪಿ ಆಗುತ್ತಿರಬೇಕು; ಮೈದಾಸನು ಮುಟ್ಟಿದ್ದೆಲ್ಲವೂ ಬಂಗಾರವಾಗುತ್ತಿತ್ತೆಂದು ಹೇಳುವ ಹಾಗೆ! ವ್ಯಾಸನಿಂದ ವ್ಯಸ್ತಗೊಂಡ ಈ ವೇದಗಳಲ್ಲಿ ಜಾಗತಿಕ ನಾಗಸಂಪ್ರದಾಯಗಳ ಪ್ರತಿಬಿಂಬವು ಕಾಣುತ್ತಿರುವ ಕಾರಣವೇನು, ಮತ್ತೆ! ಸಲಿಲ, ಜಲ ಸ್ವರೂಪೀ ಅದಿತಿಯೇ ಹತ್ತೂ ಮಂಡಲಗಳನ್ನು ವ್ಯಾಪಿಸುವ ಈ ವೇದದ ಆಶಯದ ಸಾರ ಎಂದರೆ, ಆಪ: ರಸ: ರೇತ. ಈ ಮಾತು ಅರಿಕೆಗೆ ಬಂದಂತೆ ಎನಿಸುತ್ತಿದ್ದರೂ ಇದನ್ನು ಒಪ್ಪಲು

ಮನಸ್ಸು ಹಿಂಜರಿಯುತ್ತಿತ್ತು. ಸವಿತಾ ಸರ್ವಸ್ಯ ಪ್ರಸವಿತಾ: ಧೀ=ಪ್ರಜ್ಞಾ ಪ್ರಚೋದಕ ಸವಿತೃ ಸೂರ್ಯನು, ಪ್ರಪಂಚವನ್ನು ಪ್ರಸವಿಸುವ ಎಡೆ (೦), ಎಂಬ ವರ್ಣನೆಯನ್ನು ಓದುವಾಗ, ಮನಸ್ಸಿಗೆ ಆಘಾತವಾಗುತ್ತಿತ್ತು. ನಾಗಪ್ರತಿಮಾ ವಿಚಾರ ಬರೆಯುವಾಗ, ವಸಿಷ್ಠನು ರಚಿಸಿದ್ದು ಎಂಬ ಋಚೆಯಲ್ಲಿ ಸೂರ್ಯನು 'ಪ್ರಸವಿತಾ ಜನಾನಾಂ' ಎಂಬ ಮಾತನ್ನು ಎತ್ತಿ ಹೇಳಿದ್ದೇನೆ.

ಈಶೋಪನಿಷತ್ತನ್ನು ದಿನಕ್ಕೆ ಒಂದು ಬಾರಿಯಾದರೂ ಇಡಿಯಾಗಿ ನೆನೆಯುವ ವಾಡಿಕೆ ಹತ್ತೆಂಟು ವರುಷ ಇತ್ತು. 'ವಸಿಷ್ಠನ ಪ್ರಸವಿತಾ ಜನಾನಾಂ' ಎಂಬ ಸೂರ್ಯನ ಸ್ತೋತ್ರದಿಂದ ಕಚ್ ಎನಿಸಿದ ಬಳಿಕ ಈಶೋಪನಿಷತ್ತಿನ ಪ್ರಜಾಪತ್ಯ ಸೂರ್ಯ ಈ ಋಚೆ ಹೆಚ್ಚಿನ ವಿಚಾರಕ್ಕೆ ಒತ್ತಾಯ ಪಡಿಸಿತು. ಈಶೋಪನಿಷತ್ತಿನೊಳಗಿನ ಸತ್ಯಧರ್ಮಾಯ ದೃಷ್ಟಯೇ ಈ ವಾಕ್ಯವು ಮೈತ್ರಾಯಣೀ ಉಪನಿಷತ್ತಿನಲ್ಲಿ... ಸತ್ಯಧರ್ಮಾಯ ವಿಷ್ಣವೇ ಎಂದು ಉಂಟು![೧೯] ಈ ಸುಮಾರಿಗೆ ಸತ್ಯಧರ್ಮದ ವಿಷ್ಣುವಿನ ಸ್ವರೂಪವು ನನ್ನ ಪಾಲಿಗೆ ಬಯಲಿಗೆ ಬಂದಿತ್ತು! ಸತ್ಯ = ವಿಷ್ಣು = ಶಿಪಿವಿಷ್ಟ = ಲಿಂಗ ಧರ್ಮ! ಮನಸ್ಸು ಮುರುಟಿಕೊಂಡಿತು! ಧ್ಯಾಯೇತ್ ಸದಾ ಸವಿತುಃ ಮಂಡಲ ಮಧ್ಯವರ್ತೀ (೦) ನಾರಾಯಣ: (ನಾಗ) ಈ ಧ್ಯಾನಮಂತ್ರವು ಅಧ್ವಾನಕ್ಕೆ ತಳ್ಳಿಕೊಂಡು ಹೋಗುವ ಮಂತ್ರ ಎಂಬ ಭಾವನೆ ಮೂಡಿತು.

ಗುರ್ಲಹೊಸೂರಿನಲ್ಲಿ ನನ್ನ ಚಿಕ್ಕಂದು ಒಂದು ವಾದ ಕೇಳಬರುತ್ತಿತ್ತು; ದೇವಸ್ಥಾನದ ಮಂತ್ರಪುಷ್ಪದ ಸಂದರ್ಭದಲ್ಲಿ ದೇವರಿಗೆ, ನಾಲ್ಕು ವೇದಗಳನ್ನು ಸಾಂಕೇತಿಕವಾಗಿ ಒಂದೊಂದು ಋಚೆಯ ಮೂಲಕ ಕೇಳಿಸುವುದುಂಟು. ಈ ಸಮಯದಲ್ಲಿ ಋಗ್ವೇದಕ್ಕೆ ಪ್ರಥಮ ಸ್ಥಾನವಿದೆ. ಆದರೆ, ಪ್ರಥಮಶಾಖೆಯವರು ತಮ್ಮ ಶುಕ್ಲಯಜುರ್ವೇದಕ್ಕೇ ಪ್ರಥಮ ಸ್ಥಾನ ಸಿಗಬೇಕು ಎಂಬ ವಾದಹೂಡುತ್ತಿದ್ದರು. ಈ ತಾರತಮ್ಯದ ಕಾರಣವು ಒಂದು ಗೂಢ ಪ್ರಶ್ನೆಯೇ ಆಗಿತ್ತು. ಆಗ ಹಿರಿಯರೊಬ್ಬರಿಂದ ಕೇಳಿದ್ದೆ : ಶುಕ್ಲಯಜುರ್ವೇದದಲ್ಲಿ ಓಂಕಾರಕ್ಕೇ ಪ್ರಣವಕ್ಕೆ-ಸ್ಥಾನವಿದೆ. ಋಗ್ವೇದದಲ್ಲಿ ಓಂಕಾರವಿಲ್ಲ! ಆದರೆ, ಶ್ರುತಿ ಎಂಬ ವೇದ ಅನಾಹತ ನಾದದ-ಪ್ರಣವದ ಸಾಧನೆಯಲ್ಲಿ ಲಭಿಸಿದ್ದು ಎಂಬ ವಿಚಾರವು ಇತ್ತೀಚೆ ಅರಿಕೆಗೆ ಬಂತು! ಋಗ್ವೇದದಲ್ಲಿ ನಾಗ : ವೃಕ್ಷಪೂಜೆ ಇಲ್ಲ ಎಂಬ ಒಂದು ವಾದವನ್ನೂ ಓದಿದ್ದೆ. ಋಗ್ವೇದದಲ್ಲಿ ಓಂಕಾರವು ಸ್ಪಷ್ಟವಿಲ್ಲ; ಆದರೂ ಇದನ್ನು ಶ್ರುತಿ ಎನ್ನಲಾಗುತ್ತಿದೆ! ಈ ನಾಗ : ಲಿಂಗನೇ ಪುರುಷ : ಪುರಿ-ಶಯ ರೂಪದಲ್ಲಿ ನಮ್ಮ ಆರಾಧ್ಯ ದೈವತನಾಗಿದ್ದಾನೆ. ನೆತ್ತಿಗೇಣ್ಣಿನ ಈ ದೇವನ ಭಕ್ತರು ನಾವು! ಈ ಅವಾಚ್ಯನನ್ನು ಹೇಳುವುದು ಹೇಗೆ? ಮಾಡಿದವನ ಪಾಪವು ಆಡಿದವನಿಗೆ ತಟ್ಟುತ್ತವಂತೆ!*

ಇಂದು, ಆದ್ಯಃ ಎಂಬ ಮನು ವೈವಸ್ವತನನ್ನು ಮನು : ಸ್ವಯಂಭೂ>ಸ್ವಾಯಂಭುಮನು ಮೆಟ್ಟಿ ನಿಂತಿದ್ದಾನೆ, ಎಂಬ ಈ ಅಮೋಘ ದೃಶ್ಯವು ಕಣ್ಣಳತೆಯಲ್ಲಿ ಬಂತು! ಈ ಮಾನವನು ವಿಶ್ವನಿಯಮಕ್ಕೆ ಅಂಕಿತನು, ಎಂಬ ವಿಚಾರವೂ ಸ್ಥೂಲವಾಗಿ ಅರಿಕೆಗೆ ಬಂತು. ಮನು : ವೈವಸ್ವತನು ಸೌರನೆಂಬುದು ನಿಜವಿದ್ದರೆ, ಮನು : ಸ್ವಾಯಂಭವು>ಸ್ವಯಂಭೂ ಇವನು ಚಾಂದ್ರನಿರಬೇಕು. ಭಾರತೀಯರಿಗೆ ಚಾಂದ್ರಮಾನ ಅಚ್ಚುಮೆಚ್ಚಿನದು! ಈ ಭದ್ರವಾದ ತಳಹದಿಯು ಜಾಗತಿಕ ಮಾನವ ಸಮಸ್ಯೆಯನ್ನು ಗ್ರಹಿಸಿಕೊಳ್ಳಲು ಉಪಕಾರವಾಯಿತು.

೧೯೨೪-೨೫ ರಿಂದ ೧೯೬೦ವರೆಗೆ ಈಶಾವಾಸ್ಯವು ನನ್ನ ನಿತ್ಯ ಪಠಣದ ಮಂತ್ರವಾಗಿತ್ತು. ಮಹಾತ್ಮಾಜೀ ಅವರಿಂದ ಈ ಉಪನಿಷತ್ತಿನ ಹಿರಿಮೆ ಕೇಳಿ ಹಿಗ್ಗಿದ್ದೆ. ಗೀತೆಯ ಪರಮಭಕ್ತರಾದ ಮಹಾತ್ಮಾಜೀಯವರ Experiments with truth ಈ ಪ್ರಯೋಗಶೀಲತೆ ನನ್ನನ್ನು ಆಕರ್ಷಿಸಿತ್ತು. ಆದರೆ, ಈ ಮಾತಿನ ನೆಲೆ ತಿಳಿಯದೆ ವಿಷಾದಿಸುತ್ತಿದ್ದೆ. ಕೆಲಕಾಲದ ಬಳಿಕ ಸತ್ಯ ಎಂಬುದು ನಿತ್ಯವಾಗಿ ವೈಶ್ವಕ ಪಾತಳಿಯ ಅಮೂರ್ತತತ್ತ್ವ

---

* ಶ್ರೀ ಕೆ. ಸಿ. ಶಿವಪ್ಪ ಅವರು, ಪ್ರತ್ಯಕ್ಷ ಪರಿಚಯ ಇಲ್ಲದಿದ್ದರೂ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ಭಾಷಣಕ್ಕಾಗಿ ಆಮಂತ್ರಿಸಿ ಉಪಕಾರ ಮಾಡಿದ್ದಾರೆ. ಇಬ್ಬರು ಮನುಗಳ ಸಮಸ್ಯೆ ಬಗೆಹರಿದು. ಈ ನಿಟ್ಟಿನ ನನ್ನ ದಾರಿ ಆಗಿನಿಂದ ಸುಗಮವಾಯಿತು.

ಎಂಬುದು ಖಚಿತ ಪಟ್ಟಿತ್ತು. ಆದರೆ, ಮಹಾತ್ಮರ ಪ್ರಯೋಗಕ್ಕೆ ಲಭ್ಯವಿರುವ ಈ ಸತ್ಯವು ಅಮೂರ್ತವಿರಲು ಶಕ್ಯವೇ ಇಲ್ಲ. ಆದಕಾರಣ ಗಾಂಧೀಜಿ ಪ್ರಯೋಗದ ಈ ಸತ್ಯವು Empirical ಪಾತಳಿಯದೇ ಇರಬಲ್ಲುದು, ಎಂದು ನನಗೆ ಎನಿಸತೊಡಗಿತು. ಗೀತೆಯಲ್ಲಿ ಮೂರ್ತ, ಅಮೂರ್ತಗಳಲ್ಲಿ ಭೇದವಿಲ್ಲ! ಯಾದವ ಕೃಷ್ಣರೂಪೀ ಮೂರ್ತ ಭಗವಂತನು, ವಿಶ್ವರೂಪ ದರ್ಶನದಲ್ಲಿ ಅಮೂರ್ತ ಸಾರ್ವಕಾಲಿಕ ಕಾಲಶಕ್ತಿ ಆಗುತ್ತಾನೆ! ಗೀತೆಯ ವಿಶೇಷ ಪ್ರಭಾವಕ್ಕೆ ಒಳಗಾದ ಗಾಂಧೀಜಿಯವರಿಗೆ ಅಮೂರ್ತ, ಮೂರ್ತ ಸತ್ಯಗಳಲ್ಲಿ ಭೇದ ಕಂಡಿರಲಾರದು. ಹರಿಜನ ಪತ್ರಿಕೆಯಲ್ಲಿ[೨೧] ಮಹಾತ್ಮಾಜೀಯವರು ಬರೆದಿದ್ದಾರೆ.

> I have now come to the final conclusion that if all the upanishads and all the other scripture happened all of a sudden to be reduced to ashes, and if only the first verse of the ಈಶೋಪನಿಷತ್ were left intact in the memory of Hindus, Hinduism would live forever.

ಇತ್ತೀಚೆಗೆ, ಸೌರ ಮತ್ತು ಚಾಂದ್ರ ಎಂಬ ಎರಡು ಸಂಪ್ರದಾಯಗಳು ಭಾರತೀಯ ಸಂಸ್ಕೃತಿಯ ತಳಹದಿಯಲ್ಲಿ ಇರುವುದು ತಿಳಿದಂದಿನಿಂದ ಸತ್ಯವೂ ಇಬ್ಬಗೆಯಲ್ಲಿ ಇದ್ದದ್ದು. ವೇದೋಪನಿಷತ್ತುಗಳ ನಿರ್ದೇಶಗಳಲ್ಲಿ ಅರಿಕೆಗೆ ಬರತೊಡಗಿತು. ಸೌರತಾತ್ವಿಕ ಪ್ರಜ್ಞಾಪಾತಳಿಯ ಸತ್ಯ : ಮತ್ತು ಚಾಂದ್ರ ಪ್ರಾಣ ತತ್ವದ ರೇತ-ಪಾತಳಿಯ ಸತ್ಯ, ಎಂಬ ಎರಡು ಪ್ರಕಾರಗಳು ಈ ಪ್ರಪಂಚದಲ್ಲಿ ಉಂಟು.

ಈಶೋಪನಿಷತ್ತು, ವಾಸನೇಯ ಶುಕ್ಲಯಜುರ್ವೇದದ ಅಂಗವಾಗಿದೆ. ಈ ಶುಕ್ಲ ಯಜುರ್ವೇದವು ಯಾಜ್ಞವಲ್ಕ್ಯನಿಗೆ ಕುದುರೆ (ವಾಜಿ) ಮಾಧ್ಯಮದಿಂದ ಸೂರ್ಯನಿಂದ ದೊರೆತಿದೆ, ಎಂಬ ಪವಾಡಕಥೆ ಓದಿದ್ದೆ. ಆದರೆ, ಉಪನಿಷತ್ತುಗಳ ವಿಶೇಷ ಸಮೀಕ್ಷೆಯಲ್ಲಿ, ಈ ವೇದವು ಆದಿತ್ಯಾನಿ ಇಮಾನಿ ಶುಕ್ಲಾನಿ ಯಜುಂಷಿ ವಾಜಸನೇಯೇನ ಯಾಜ್ಞವಲ್ಕ್ಯೇನ ಆಖ್ಯಾಯಂತೇ ಆದಿತ್ಯ ರಸವಿರುವುದಾಗಿ ಕಂಡು ಬಂತು![೨೧] ಆದಿತ್ಯನನ್ನೇ ಸೂರ್ಯನೆಂದು ಹೆಸರಿಸಿದ ಆ ಕಥೆ ಮೋಸ ತಂದಿತ್ತು!

ಸರ್ವದರ್ಶನ ಸಂಗ್ರಹದಲ್ಲಿ ರಸೇಶ್ವರವಾದವು ಇದ್ದುದು ನಮೂದು ಇದೆ. ನನ್ನ ಮಿತ್ರ ಶ್ರೀ ಕೊಪ್ಪಳ ಅವರಿಗೆ, ರಸೇಶ್ವರ ಸಿದ್ಧಾಂತದ ಬಗಗೆ ಕೇಳಿದ್ದು, ಅವರು ಮೈಮೇಲೆ ಕಪ್ಪೆ ಬಿದ್ದಂತೆ ಬೆಚ್ಚಿದ್ದು ಹಿಂದೊಮ್ಮೆ ನಾನು ನಮೂದಿಸಿದ್ದೇನೆ. ರಸರೂಪೀ ಈಶ್ವರ = ಗಂಗಾಧರನು ಆಗುತ್ತಿರುವಂತೆ: ವಿಷ್ಣುವೂ ರಸರೂಪಿಯೇ (ಗಂಗಾ ಪಾದಾಬ್ಜ ಸಂಭೂತಾ) ಆಗುತ್ತಿದ್ದಾನೆ. ಲಕ್ಷ್ಮೀ ಹುಟ್ಟಿದಳೆಂಬ ಸಾಗರದ, ಕ್ಷೀರರಸವು ಶುಕ್ಲಾನಿ ಇಮಾನಿ ಆದಿತ್ಯಾನಿ ಆಗುತ್ತಿಲ್ಲವೆ? ಆಪ: ರಸ: ರೇತ: ಶುಕ್ಲ ಇದೇ ಈ ಪ್ರಪಂಚದ ಗಂತವ್ಯ ಸ್ಥಾನ ಉದ್ಗಮ ಕೇಂದ್ರ, ಎಂದು .ಈ ನರ(ಳ) ಸಂಪ್ರದಾಯಗಳ ತಳಪಾಯದ ಶ್ರದ್ಧೆಯಾಗುತ್ತಿದೆ. ಮನು : ವಿವಸ್ವನ್>ವೈವಸ್ವತನು ಸೌರನು : ತಾತ್ವಿಕ ಪಾತಳಿಯ ಸತ್ಯ. ಮನು: ಸ್ವಯಂಭೂ>ಸ್ವಾಯಂಭುವನು ಚಾಂದ್ರನು : ರೇತರೂಪೀ ಪ್ರಾಣ ಪಾತಳಿಯ ಸತ್ಯ. ಈ ಸ್ವಯಂಭೂವಿನ ವಿಚಾರ ಇತ್ತೀಚೆಗೆ ಮಾತ್ರ ಸುಸ್ಪಷ್ಟವಾಯಿತು.

ಈ ಸ್ವಯಂಭೂ ಯಾರು, ಈ ಬಗೆಗೆ ಋಗ್ವೇದದ ಮನುಸೂಕ್ತಗಳಲ್ಲಿ ಸಂದಿಗ್ಧತೆ ಇದೆ. ಆದರೆ, ಉಪನಿಷತ್ತಿನಲ್ಲಿ ಒಂದೆಡೆಗೆ ಸ್ಪಷ್ಟೀಕರಣವಿದೆ. 'ಷಡ್ ವೈ ದೇವತಾಃ ಸ್ವಯಂಭುವ, ಅಗ್ನಿಃ ವಾಯುಃ, ಅಸೌ ಆದಿತ್ಯಃ, ಪ್ರಾಣಃ ಅನ್ನಂ ವಾಕ್'[೨೨] ಅಹಂ ಶ್ರೇಷ್ಠಃ ಅಸ್ಮಿ, ಎಂಬ ಈರ್ಷ್ಯೆ ಈ ಸ್ವಯಂಭೂ ಭೂಮಿಕೆಯ ಮೇಲೆ ಅನಿವಾರ್ಯವಿದೆ! ಆದಕಾರಣ, ನಾನೇ ಶ್ರೇಷ್ಠ ಎಂಬ ಈ ಸ್ವಯಂಭೂಗಳಲ್ಲಿ ಈರ್ಷ್ಯೆಗೆ ಒಳಗಾಗಿರದ ನಿಜವಾದ ಸ್ವಯಂಭೂ ಯಾರು? ಎಂಬ ಪ್ರಶ್ನೆ ಎದುರಾಯಿತು. ಇದರ ಅನ್ವೇಷಣೆಯಲ್ಲಿ ಕೆಲ ಸಮಯ ಹೋಯಿತು. ಕೊನೆಯಲ್ಲಿ ಈಶೋಪನಿಷತ್ತಿನಲ್ಲೇ ಇದು ಕಣ್ಣು ತಪ್ಪಿಸಿ ಉಳಿಯುತ್ತ ಬಂದುದು ಗೋಚರಿಸಿತು.

ಸಃ ಪರ್ಯಗಾತ್ ಶುಕ್ರಃ ಅಕಾಯಂ, ಅ-ವ್ರಣಂ, ಅಸ್ನಾವಿರಂ
ಶುದ್ಧಂ ಅ-ಪಾಪವಿದ್ಧಮ್

ಕವಿಃ ಮನೀಷೀಃ ಪರಿ-ಭೂಃ ಸ್ವಯಂಭೂಃ ಯಾಥಾ ತಥ್ಯತಃ
ಅರ್ಥಾನ್ ವ್ಯದಧಾತ್ ಶಾಶ್ವತೀಭ್ಯ: ಸಮಾಭ್ಯ:

ಅವನು(ಸಃ) ಸರ್ವವ್ಯಾಪೀ ವಿಶ್ವವ್ಯಾಪಿ ಶುಕ್ರನು! ಅ-ಕಾಯನು! ರೇತಕ್ಕೆ ಕಾಯವೆಲ್ಲಿ? ಗಾಯ, ಹುಣ್ಣು, ವ್ರಣ ಇಲ್ಲ! ಸ್ನಾಯುಗಳೇ ಇಲ್ಲವಲ್ಲ! ಪರಿಶುದ್ಧನು, ಪಾಪರಹಿತನು! ವಿಶಿಷ್ಟ ಲಿಂಗರೂಪನಿರುವಾಗ ಪಾಪ ಇರಬಲ್ಲುದು. ಆದರೆ, ಶುಕ್ರ-: ರಸ ಪರಮಾತ್ಮ ಸ್ವರೂಪ! ಪಾಪವೆಲ್ಲಿ? ಈ ಶುಕ್ರ(ರಸ) ಕವಿ ಆಗಬೇಕಿದ್ದರೆ ನರ(ಳ) ನ ಮೂರ್ತರೂಪವಿರಬೇಕಷ್ಟೆ? ನಮ್ಮ ವೇದೋಪನಿಷತ್ತುಗಳಲ್ಲಿ ಮೂರ್ತ ಅಮೂರ್ತಗಳಲ್ಲಿ ಭೇದವಿಲ್ಲ. ವೇದದಲ್ಲಿಯೇ ಈ ಶುಕ್ರನಿಗೆ ಕವಿ, ಕಾವ್ಯ ಎಂಬ ಹೆಸರಿದೆ! ಸಂಪ್ರದಾಯವು ಇವನನ್ನು ಏಕಾಕ್ಷ : ನೆತ್ತಿಗಣ್ಣಿನ ಅನಿಮಿಷದೇವ ಎಂದಿದೆ! ಇವನು ಪರಿ-ಭೂ ವ್ಯಾಪಕನು! ಸ್ವಯಂಭೂ ದೇವನೆಂದರೆ ಈ-ತನು! ಇವನೇ ಗೀತೆಯ ಕೃಷ್ಣೇಶ್ವರನೂ ಸರಿ. ಈ ಭಗವಂತನು ಪ್ರಪಂಚದ ನಿಯಮನ ಮಾಡುತ್ತಾನಂತೆ! ಪೈಥಾಗೊರಾಸ ಪಂಥೀಯ Limit ಇದು ಸಾರ್ಥ ಹೆಸರು!

ಈ ಶುಕ್ರ ಎಂದರೆ, ಅಂಗಾನಾಂ ರಸಃ=ಪ್ರಾಣಃ ತಾನೆ? ಮಹಾತ್ಮಾಜೀಯವರ ಪ್ರಶಂಸೆಗೆ ಪಾತ್ರವಾದ ಈ ಉಪನಿಷತ್ತಿನಲ್ಲಿ ಮೂರ್ತ ಮತ್ತು ಅಮೂರ್ತ ಎಂದರೆ ಆಕೃತಿವಿಹೀನ (ರಸ) ಇವೆರಡರಲ್ಲೂ ತಾರತಮ್ಯವೇ ಇಲ್ಲ! ಇದು ಗಾಂಧೀಜಿ ಗಮನಕ್ಕೆ ಬರಲೇ ಇಲ್ಲ! ಭಾನಾಮತಿ ಅಭಿಚಾರ ಕೃತ್ಯದ ಪ್ರಭಾವದ ಪರಿಣಾಮವಿದು! ಈ ಶುಕ್ರನೇ ಅಸುರ ವರ್ಗದ ಗುರು, ಎಂದು ಸಂಪ್ರದಾಯವೇ ಹೇಳುತ್ತದೆ! ಈ ಸ್ವಯಂಭೂ ಶುಕ್ರನು ಕಣ್ಣು ತಪ್ಪಿಸಿ ಉಳಿಯಲು ಕಾರಣವಿದೆ. ಈ ಶುಕ್ರ ಫಕ್ತ ರಸ ಅಲ್ಲ : ಪ್ರಾಣತತ್ತ್ವಯುಕ್ತ ಶುಕ್ರವಿರಬೇಕು: ತತ್ ಜಲಾನಿತಿ[೨೩] ಈ ಉಪನಿಷತ್ತಿನಲ್ಲಿ ಪ್ರಾಣತತ್ತ್ವದ ನಿರ್ದೇಶವು ಶುಕ್ರಕ್ಕಿಂತಲೂ ಮುಂಚೆಯೇ ಇದೆ!

ಅನೇಜತ್ ಏಕಂ ಮನಸಃ ಜವೀಯಃ ನ ಏನ ತದ್‌ದೇವಾ
ಆಪ್ನುವಾನ್ ಪೂರ್ವಮರ್ಷತ್!
ತತ್ ಧಾವತಃ ಅನ್ಯಾನ್ ಅತ್ಯೇತಿ, ತಿಷ್ಠತ್ ತಸ್ಮಿನ್ ಅಪೋ
ಮಾತರಿಶ್ವಾ ದಧಾತಿ ॥೪॥

ಈ ಋಚೆಯ ಮಾತರಿ-ಶ್ವನ್ ಈ ಪದವು, ಶುಕ್ರರೂಪ ಸ್ವಯಂಭೂವಿನ ಇನ್ನೊಂದು ನಿಲುಮೆ! ಶುಕ್ರ-ರೇತ ಇದು ಆಧಾರ ರಹಿತ ಇರಲು ಶಕ್ಯವಿಲ್ಲ. ಈ ದೃಷ್ಟಿಯಿಂದ ಮಾತರಿ-ಶ್ವನ್ ಈ ಶಬ್ದಶಿಲ್ಪವು ಅಭ್ಯಸನೀಯವಿದೆ. ಮಾತರಿಶ್ವ ಸ್ಥೂಲ ಅರ್ಥದಲ್ಲಿ ಉಸಿರು-ಗಾಳಿ! ಪ್ರಾಣವಾಯು. ಆದರೆ, ಈ ಉಸಿರು-ವಾಯು ಇದಕ್ಕೆ ಆಧಾರ ಬೇಕಲ್ಲ, ನಿಲ್ಲಲು? ಅದರ ಸೂಚನೆಯೂ ಇಲ್ಲಿಯೇ ಇದೆ. ಮಾತರಿ (ತಾಯಿಯಲ್ಲಿ) ಶ್ವನ್ (ಉಸಿರಾಡುತ್ತಿರುವ ಗರ್ಭ). ಇನ್ನೊಂದು ಅರ್ಥವು ಇಲ್ಲಿ ಅಭಿಪ್ರೇತವಿದೆ. ವ್ಯಕ್ತಿ ಸಾಪೇಕ್ಷ ಉಡಿ ಗರ್ಭ, ಇದಕ್ಕೆ ಪ್ರತಿಯಾಗಿ, ವ್ಯಕ್ತಿ ನಿರಪೇಕ್ಷ ಗರ್ಭದ ಸೂಚನೆ ಇಲ್ಲಿ ಅಭಿಪ್ರೇತವಿದೆ. ಭೂಃ-ಭುವಃ ನೆಲ-ಮುಗಿಲಿನ ನಡುವಣ ಟೊಳ್ಳು, ಇದನ್ನು ದೇವರುಗಳ ಜನ್ಮಸ್ಥಾನ=ಗರ್ಭ ಎಂದು ಬಗೆಯಲಾಗಿದೆ.

ಆಚಾರ್ಯ ವಿ.ಪ್ರ.ಲಿಮಯೆ, ವಾಡೇಕರ್ ಪ್ರಕಟಿಸಿರುವ ಅಷ್ಟಾದಶ ಉಪನಿಷತ್ತಿನಲ್ಲಿ, ಮಾತರಿಶ್ವನ್ ಪದದ ವಿವಿಧ ಉಲ್ಲೇಖಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ನನ್ನ ಅನ್ವೇಷಣೆಗೆ ಮಾರ್ಗದರ್ಶಕವಾದ ಗ್ರಂಥವಿದು. ಮನಸ್ಸಿಗಿಂತಲೂ ವೇಗವುಳ್ಳ ಮಾತರಿಶ್ವನ್ (ಪ್ರಾಣದೇವ)ನನ್ನು ಹಿಂದಿಕ್ಕವ ದೇವರು ಯಾರೂ ಇಲ್ಲ. ಓಡುವವರನ್ನೂ ಇವನು ಹಿಂದಿಕ್ಕುವನು. ಸಲಿಲ-ಅಪ್‌ನಲ್ಲಿ ಇರುವ ಪ್ರಾಣಶಕ್ತಿ: ಮಾತರಿಶ್ವನು ಇವನು. ಮಾತರಿಶ್ವನ್ ಇದರ ಕೆಲವು ಅರ್ಥ ಹೀಗಿವೆ.

ಮಾತರಿ ಅಂತರಿಕ್ಷೇ ಶ್ವಸಿತಿ।[೨೪] ಪ್ರಾಣಾಂ ಆಹುಃ ಮಾತರಿಶ್ವಾನಂ
ವಾತೋ ಹ ಪ್ರಾಣಃ ಉಚ್ಯತೇ

ಈ ಅಸು-ರ ಸಂಪ್ರದಾಯದ ಪ್ರಾಮಾಣಿಕತೆಯ ಸ್ವರೂಪದ ಪರಿಚಯಕ್ಕಾಗಿ ಈ ಋಚೆ ನೋಡಿ:

ಇಂದ್ರಂ, ಮಿತ್ರಂ, ವರುಣಂ, ಅಗ್ನಿಂ ಆಹುಃ ಅಥೋ ಇತಿ
ದಿವ್ಯಃ ಸುಪರ್ಣಃ ಗುರುತ್ಮಾನ್।
ಏಕಂ ಸತ್ ವಿಪ್ರಾಃ ಬಹುಧಾ ವದಂತಿ, ಅಗ್ನಿಂ, ಯಮಂ
ಮಾತರಿಶ್ವಾನಂ ಆಹುಃ॥[೨೫]

ಒಬ್ಬನೇ ಇದ್ದು, ಅವನನ್ನು ಭಕ್ತರು ಹಲವಾರು ನಾಮಗಳಿಂದ ಕರೆಯುತ್ತಾರೆ, ಎಂಬ ಈ ಯಾದಿಯಲ್ಲಿ ಸತ್ಯದೊಡನೆ ಅನೃತದೇವರುಗಳ ಮಿಶ್ರಣವಿದೆ!

ಇಲ್ಲಿ ಎತ್ತಿ ಹೇಳಿರುವ ಹೆಸರುಗಳಲ್ಲಿ ಇಬ್ಬರು (ಅಥವಾ ಎರಡು ಬಾರಿ) ಅಗ್ನಿ ಇದ್ದಾರೆ! ಇವರಲ್ಲಿ ಯಾರು ಜಾತವೇದ, ಯಾರು ನಚಿಕೇತ ಇದರ ಸ್ಪಷ್ಟತೆಯಿಲ್ಲ! ಅಗ್ನಿ : ಜಾತವೇದನು ಸೌರ ಅವನೇ, ಋತ. ಅಗ್ನಿ ನಚಿಕೇತನು ಚಾಂದ್ರನೇ ಇರಬೇಕು ಆತ, ಅನೃತ! ಈ ಇಬ್ಬರ ಪಾತಳಿಗಳು ಬೇರೆ. ಆದರೆ, ಒಂದೇ ಬಾರಿ ಎರಡೂ ಹೆಸರು ಗೊಂದಲಕ್ಕೆ ಕಾರಣವಾಗುತ್ತದೆ. ಜಾತವೇದ ಅಗ್ನಿ, ನಿತ್ಯ ಅಮೂರ್ತ. ಸ-ರಸ ಅಗ್ನಿ: ನಚಿಕೇತನು ರೇತ ಸ್ವರೂಪ. ಇಲ್ಲಿ ಇಂದ್ರನೊಡನೆ ಮಿತ್ರಾ ವರುಣರ ಹೆಸರೂ ಇದೆ! ಈ ವೇದದಲ್ಲಿ ವರುಣನು ರಾತ್ರ್ಯಾಭಿಮಾನಿ ದೇವನಾಗಿದ್ದಾನೆ! ಇಲ್ಲಿ ಉಲ್ಲೇಖವಿರುವ ಗರುತ್ಮಾನ್ ಸುಪರ್ಣ ಇದು ಲಿಂಗದ ಪ್ರತೀಕವಿದೆ! ಯಮ-ವೈವಸ್ವತ, ಆದರೆ ಮಾತರಿಶ್ವನ್ ರೇತಶಕ್ತಿ! ಒಂದೇ ಮಟ್ಟದಲ್ಲಿ!

ಅವೆಸ್ತದಲ್ಲಿ ಇಂದಿಗೂ ಉಳಿದಿರಲು ಹಗಲು-ರಾತ್ರಿಯ ದೇವರುಗಳ ತಾರತಮ್ಯವು ಮನನೀಯವಿದೆ. ಆದರೆ, ಇಂದಿನ ಋಕ್‌ಸಂಹಿತೆಯಲ್ಲಿ ಹಗಲು-ರಾತ್ರಿಯ ಈ ತಾರತಮ್ಯವನ್ನು ಉದ್ದೇಶಪೂರ್ವಕವಾಗಿ ಅಸ್ತವ್ಯಸ್ತಗೊಳಿಸಲಾಗಿದೆ. ಈ ಸಂಹಿತಾ ಸಂಕಲನದ ಶ್ರೇಯಸ್ಸು ವ್ಯಾಸನಿಗೆ ಉಂಟೆಂದು ಸಂಪ್ರದಾಯ ಹೇಳುತ್ತದೆ. ಈ ವೇದದಲ್ಲಿಯೇ "ಏಕಂ ಸನ್ತಂ ವಿಪ್ರಾಃ ಕವಯಃ ಬಹುಧಾ ಕಲ್ಪಯಂತಿ" ಎಂಬ ಋಕ್ಕೂ ಒಂದು ಇದೆ![೨೬] ಏಕಂ ಬಹುಧಾ ವದಂತಿ, ಏಕಂ ಬಹುಧಾ ಕಲ್ಪಯಂತಿ ಎಂಬ ಈ ಉಲ್ಲೇಖದಲ್ಲಿ ಸೂಕ್ಷ್ಮ ತಾರತಮ್ಯವು ಒಳಗೊಂಡಿರಬೇಕಿತ್ತು. ಕಲ್ಪಯಂತಿ ಇವು ಕೇವಲ ಕಾಲ್ಪನಿಕ= ರಾತ್ರಿಯ ಅನೃತ ದೇವರುಗಳೇ ಆಗುತ್ತವೆ. ಬಹುಧಾ ವದಂತಿ ಎಂಬಲ್ಲಿ ಕೇವಲ ಕಲ್ಪನೆ ಇಲ್ಲ. ಉಂಟು ಎಂಬ ಧ್ವನಿಯೂ ಇದೆ. ಇವು ಪ್ರಕಾಶತತ್ವದ ಋತಸ್ವರೂಪೀ ದೇವರುಗಳೇ ಇರಬೇಕಿತ್ತು. ಆದರೆ, ಇಂದ್ರನ ಜೊತೆಗೆ ರೇತಪಾತಳಿಯ ವರುಣ, ಮಾತರಿಶ್ವಾ, ಸುಪರ್ಣ ಇವರನ್ನು ಸೇರಿಸಿರುವಲ್ಲಿ ಮೋಸವಾಗುತ್ತಿದೆ. ಆದರೆ, ಈ ಬಗೆಯ ಗತ್ತುಗಾರಿಕೆಯ ಅರ್ಥ : ಉದ್ದೇಶ ಏನು? ಪ್ರಚಲಿತ ಋಗ್ವೇದಸ್ಥ ಪ್ರಮಾಣಗಳಿಂದಲೇ ಈ ಗತ್ತುಗಾರಿಕೆಯ ಚಾಕಚಕ್ಯದ ಉದ್ದೇಶವು ಬಯಲಿಗೆ ಬರುತ್ತಿದೆ. ಸರ್ವಶ್ರೇಷ್ಠನು ಎಂಬ ಅಹಿ-ಹಂತಕನೆಂಬ ಇಂದ್ರ (ಸೂರ್ಯ)ನು, ಪದಭ್ರಷ್ಟನಾಗಿರುವ ಕಾರಣವೇನು, ಮತ್ತೆ? ತತ್ ಪುರುಷಃ ಅ-ಮಾನವಃ ಈ ಪುರಿ-ಶಯ, ನಾಗ: ಲಿಂಗನಿಗೆ, ನಾಗ : ಚಂದ್ರನಿಗೆ ಬಾಳಿನಲ್ಲಿ ಅಗ್ರಪಟ್ಟವು ದೊರೆಯಬೇಕಿದ್ದರೆ ಇಂದ್ರ (ಸೂರ್ಯ) ನನ್ನ ಇಲ್ಲವಾಗಿಸಲು ವೇದದ ಕವಿಗಳಿಗೆ ಈ ಕೈಚಳಕ, ಬಾಯ್‌ಚಳಕ ಅನಿವಾರ್ಯವಿತ್ತು.

ಈ ಹಿನ್ನೆಲೆಯಲ್ಲಿ ಒಂದು ಮಾತು ನಿಚ್ಚಳವಾಗುತ್ತದೆ : ಇಂದ್ರ (ಸೂರ್ಯ)ನು ಅಹಿ: ವೃತ್ರಹನನ ಕಾರ್ಯವನ್ನು ಜರುಗಿಸದೇ ಇದ್ದರೆ, ಈ ಮಾನವ ಪ್ರಾದುರ್ಭಾವವು ಅಸಾಧ್ಯವಿತ್ತು. ಆದಕಾರಣ, ಈ ಮಾನವ ಪ್ರಾದುರ್ಭಾವಕ್ಕೂ ಮಾನವ ಧರ್ಮ : ಸಂಸ್ಕೃತಿಯು ಮೈದೋರುವುದಕ್ಕೂ ಆದಿಕಾರಣನು ಎಂದರೆ ಸೂರ್ಯನ ಪರ್ಯಾಯರೂಪ ಈ ಇಂದ್ರನೇ ಸರಿ, ಎಂದರೆ ತಪ್ಪು ಆಗಲಾರದು.

ಮಾನವಸಂಸ್ಕೃತಿಯನ್ನು ರೂಪಿಸಿದ್ದು Nous :Mind (ಪ್ರಜ್ಞೆಯ : ಅಂಗವಾದ ಮನಸ್ಸು) ಎಂದು ಅರಿಸ್ಟಾಟಲನು ಹೇಳಿದ್ದು ಸಮರ್ಪಕವಾಗಿಯೆಂದು ಈ ಹಿನ್ನೆಲೆಯಲ್ಲಿ ದೃಢಪಡುತ್ತದೆ. ಮನು : ವೈವಸ್ವತನು ಮಾನವಸಂಸ್ಕೃತಿಯ ಆದ್ಯನು! ಪ್ರಜ್ಞಾರೂಪೀ ಧೀಪ್ರಚೋದಕ ಸವಿತೃ= ಸೂರ್ಯನ ಪರ್ಯಾಯ ಈ ಇಂದ್ರನೆಂದು ವೇದವೇ ಹೇಳಿದೆ. ಮಾನವಸಂಸ್ಕೃತಿಯನ್ನು ರೂಪಿಸಲು ಪ್ರೇರಿಸಿದವನು ಇಂದ್ರನೇ. ಈ ಬಗೆಯಲ್ಲಿ ಅಹಿ: ನಾಗಹಂತಕನೆಂಬ ಇಂದ್ರನ ಪ್ರತಿಮೆಯು ಒಳಗೊಳ್ಳುತ್ತಿರುವ ಅಂತಃಸಂಗತಿಯು ತುಂಬ ಮನೋಹರವಾಗಿದೆ.

ಅಹಿ-ಹಂತಕ ಇಂದ್ರನು ಹಾರುವರ ದೇವರು ಎಂಬ ಗ್ರಹಿಕೆ ಹಲವರದು! ಆದರೆ, ಈ ಮಾನವ ಸಮಸ್ಯೆ ಭಾರತಕ್ಕೆ ಮಾತ್ರ ಸೀಮಿತವಲ್ಲ. ಇದು ನಿಜವಿದ್ದಲ್ಲಿ, ಈ ಅಹಿ-ಹಂತಕ ವೀರನು ಜಾಗತಿಕ ಪುರಾತನ ಸಂಸ್ಕೃತಿಗಳ ಅವಶೇಷಗಳಲ್ಲಿಯೂ ಕಾಣದೊರೆಯಲೇಬೇಕು. ಉತ್ತರ ಯುರೋಪೀಯ ದೇಶಗಳ ಜಾನಪದದ ದೇವರು ಮತ್ತು ಅವರ ಪವಾಡ ಕಥೆಗಳ ಸಂಶೋಧಿಕೆ ಎಚ್. ಆರ್. ಎಲ್ಲಿಸ್ ಡೆವ್ಹಿಡ್ಸನ್ ಬರೆಯುವುದೇನೆಂದರೆ

The conquest of a world monster by the God of the sky is a recognised pattern in the world mythologies.

ಶ್ರೀಮತಿ ಎಲ್ಲಿಸ್‌ರಿಗೆ, ಯುರೋಪೀಯ ದೇಶಗಳ ಥೋರ ಎಂಬ ಅಹಿಹಂತಕ ವೀರನು, ಭಾರತೀಯ ಇಂದ್ರನನ್ನು ತುಂಬ ಹೋಲುತ್ತಿದ್ದಾನೆ, ಎಂದು ಕಂಡಿದೆ!

> The Indian Thunder god Indra in many ways thoros, counter-part, slew a great dragon in single combat. The concept behind the varying forms of this myth appears to be a fundamental one : that the sky and thunder God, being of enormous strength, who defends mankind does battle with the terrible monster, threatening man's destruction.[೨೬]

ಅಹಿ-ವೃತ್ರಹನನದಲ್ಲಿ ಇರುವ ಮಾನವಕೋಟಿಯ ಕಲ್ಯಾಣದ ಉದ್ದೇಶವನ್ನು ಶ್ರೀಮತಿ ಎಲ್ಲಿಸ್ ಇಲ್ಲಿ ಸ್ಪಷ್ಟಪಡಿಸಿದ್ದಾರೆ. ಈ ಅಹಿ: ನಾಗ: ಲಿಂಗವು, ಲೋಕವಿನಾಶಕ್ಕಾಗಿ ಸದಾ ಸಿದ್ಧವಿರುವ ಕ್ರೂರ, ದುಷ್ಟಶಕ್ತಿ. ಮಾನವಧರ್ಮ : ಸಂಸ್ಕೃತಿ ರಕ್ಷಣೆಗಾಗಿ, ಕ್ಷೇಮಾಭಿವೃದ್ಧಿಗಾಗಿ ಈ ಅಹಿ : ವೃತ್ರನ ನಮನ-ಹನನ ಅನಿವಾರ್ಯವಿದೆ. ಆದರೆ, ಇಂತಹ ನಿಜವಾದ ಲೋಕೋಪಕಾರೀ ಸೂರ್ಯನ ಪರ್ಯಾಯರೂಪ ಇಂದ್ರನನ್ನು ಸ್ಥಾನಭ್ರಷ್ಟನನ್ನಾಗಿಸಿರುವ ಈ ವೇದವು ಇಂದ್ರ (ಸೂರ್ಯ)ನ ಶತ್ರುಗಳಾದ ಅಸುರರ ವೇದ, ಎಂಬ ಬಗೆಗೆ ಸಂದೇಹಕ್ಕೆ ಇಂಬಿಲ್ಲ. ವಿಕಾಸತತ್ವದ ಪ್ರಕ್ರಿಯೆಯಲ್ಲಿ ಈ ಪ್ರಪಂಚದ ನಾನಾ ಭಾಗಗಳಲ್ಲಿ ಮಾನವ ಪ್ರಾದುರ್ಭಾವವಾದುದನ್ನು ನಿದರ್ಶನಕ್ಕೆ ತರುವ ಅಹಿಹಂತಕ ದೇವನ ಪವಾಡ ಕಥೆಗಳು ಅಲ್ಲಲ್ಲಿ ದೊರೆಯುತ್ತವೆ. ಆದರೆ, ಭಾರತದಲ್ಲಿ ಕಣ್ಮರೆಯಾಗಿರುವಂತೆ ಪ್ರಪಂಚದ ಉಳಿದ ಭಾಗಗಳಲ್ಲಿಯೂ ಅಹಿ-ಹಂತಕನು ಅದೃಷ್ಟನಾಗಿರುವಲ್ಲಿ, ಎಲ್ಲೆಲ್ಲೂ ನಾಗ: ಲಿಂಗ ಸಂಪ್ರದಾಯವೇ ಜನಪ್ರಿಯವಾದದ್ದು, ಈ ಹಿನ್ನೆಲೆಯಲ್ಲಿ ದೃಢಪಡುತ್ತಿದೆ.

ಗ್ರೀಕರ ಪುರಾತನ ದೇವ ಅಪೊಲ್ಲೊ, ಸೂರ್ಯನ ಪರ್ಯಾಯ ಎನಿಸಿದ್ದಾನೆ. ಇವನು ಪ್ಯಾಥೋನ ಹಬ್ಬಾವನ್ನು ತುಂಡರಿಸಿದನಂತೆ, ಆದರೆ ಇವನು ಕೊನೆಗೆ ನಾಗ ಸಂಪ್ರದಾಯದವರ ದೇವನಾಗುತ್ತಾನೆ. ಭಾರತೀಯ ಪೌರವರುಣನಂತೆ ರಾತ್ರ್ಯಭಿಮಾನಿ ದೇವನಾಗುತ್ತಾನೆ! ಗ್ರೀಕ್‌ಸಂಸ್ಕೃತಿಯಲ್ಲಿ ಪಾಯಥೋನ-ಟಾಯಫೂನ (ನಾಗ=ಬಿರುಗಳಿ) ಇವೆರಡರಲ್ಲಿ ಅನ್ಯೋನ್ಯವಿದ್ದುದನ್ನು ಗ್ರೀಕ್‌ಪವಾಡ ಕಥಾ ವ್ಯಾಸಂಗಿ ಕವಿ ಆರ್. ಗ್ರೇವ್ಸ ಹೇಳುತ್ತಾನೆ. ಈ ಸಂದರ್ಭದಲ್ಲಿ ಆತನಿಗೆ ಭಾರತೀಯ ರುದ್ರ-ಮರುತರ ನೆನಪು ಬರುತ್ತದೆ. ಬಿರುಗಾಳಿ-ರುದ್ರ, ರುದ್ರಿಯರೆಂಬ ಮರುತರನ್ನು, ವೇದವು ಅಹಿ ಭಾನವಃ ಎಂದು ವರ್ಣಿಸಿದೆ.

ನಾಗ-ಲಿಂಗನ ಆವೇಶದಲ್ಲಿ, ಮೈಯಲ್ಲಿ ಗಾಳಿ ಸೇರಿದಂತೆ ಭಾವೋನ್ಮತ್ತರಾಗಿ ಹಾರಾಡುವುದು, ಕುಣಿದಾಡುವುದು ಉಂಟು. ನಾಗ-ಬಿರುಗಾಳಿಯ ಸಾಹಚರ್ಯವು ನಿಷ್ಕಾರಣವಿಲ್ಲ. ಕ್ಯಾನನ್ ಭಾಗದ ಪುರಾತನ ಅವಶೇಷಗಳಲ್ಲಿ ಏಳುಹೆಡೆಯ ನಾಗನ ಸಂಹರಿಸಿದ ವೀರನ ಉಲ್ಲೇಖವಿದೆ. ಅತಿಪುರಾತನವೆಂಬ ಸುಮೇರು-ಅಸ್ಸೀರಿಯಾ ಭಾಗದ ಅಷ್ಟನಾಗನನ್ನು ತುಂಡರಿಸಿದ ಎಂಕಿಯು ಪ್ರಜ್ಞಾ: ಪ್ರಕಾಶದ ಪರ್ಯಾಯವಾದ ಇಂದ್ರನನ್ನು ಹೋಲುತ್ತಾನೆ. ಈ ಎಂಕಿಯನ್ನು God of Wisdom ಎಂದು ಈ ಸಂಪ್ರದಾಯವು ಬಗೆದಿತ್ತು. wisdom = ಪ್ರಜ್ಞಾ-ಜ್ಞಾನ ಇದು ಪ್ರಕಾಶರೂಪ ಅಹಿ =ನಾಗ: ಲಿಂಗ ಹಂತಕವೀರರು ಸೂರ್ಯನ-ಜ್ಞಾನ

ಪ್ರಕಾಶದ ಪ್ರತೀಕವಿರುವ ಈ ಸಾಂಕೇತಿಕತೆಯು ಮನನೀಯವಿದೆ. ಅಪ್ಪು ನಾಗನ ಸಂಗಾತಿಗನಾಗಿ : ತೈಮತಳನ್ನು ಮರ್ದುಕನು ಕೊಂದನಂತೆ! ಆದರೆ, ಅಥರ್ವವೇದದ ನಾಗ ವಿಷಹರಣ ಮಂತ್ರದಲ್ಲಿ ಭಜಿಸಲೇ ಬೇಕಾದ ನಾಗ ನಾಮುಗಳಲ್ಲಿ ತೈಮಾತೆ ಇದ್ದಾಳೆ. ಇವಳು ಅದಿತಿಯ ಪರ್ಯಾಯ! ಈ ನಾಗಗಳ ಪುರ ಸಾಗರ; ಇದು ಜಾಗತಿಕ ಸಂಕೇತವಾಗಿದೆ. ಶ್ರೀಮತಿ ಎಲ್ಲಿಸ್ ಹೇಳುತ್ತಾರೆ, ಈ ಪುರ : ಸಮುದ್ರವೂ ನಾಗನಂತೆ ದುಷ್ಟಶಕ್ತಿಯೇ ಆಗಿದೆ!

> The sea at the same time was the element of destruction... it was to rise and cover the earth, devouring the dwellings of men and gods along with the overwhelming fire. The chief enemy of their *who protected* man-kind and gods from chaos and anarchy, was the ancien-tserpent who dwelt in the oceans depths. This serpent called by the poets the girdle of earth, lay coiled round the earth.[೨೮]
>
> Like Leviathan and Krakon, the serpent was a monster of the ocean depths, the eternal enemy of the guardie an of the sky. Thus the fertile sea source of inspiration and yet a force of destruction.[೨೯]

ಈ ಸಾಂಕೇತಿಕ ಸಮುದ್ರ : ಸಾಗರ ಇದು ಯೋನಿಸೂಚಕವಾಗಿದೆ. ಜಾಗತಿಕ ರಂಗದಲ್ಲಿ, ವೇದದಲ್ಲಿ ಸಮುದ್ರ ಶಬ್ದದ ಪ್ರಯೋಗವು ಈ ಅರ್ಥದಲ್ಲಿಯೇ ಉಂಟು. ಅಪ್ಪು ಅಂತಃ ಸಮುದ್ರೇ ಮಮಯೋನಿಃ ಎನ್ನುತ್ತಾಳೆ. ಮೈಯಲ್ಲಿ ದೇವಿಯ ಆವೇಶವಾಗಿದೆಯೆಂಬ ಈ ಅಂಭೃಣೆ! ಅದಿತಿಯನ್ನು ಅಮೃತಸ್ಯ ನಾಭಿಃ ಎಂದುದಾಗಿದೆ. ಕೇನೋಪನಿಷತ್ತಿನ ಉಮಾ ಹೈಮವತಿಯು, ಇದನ್ನೆ 'ವನಂ' ಎಂದಿದ್ದಾಳೆ. ಸಮುದ್ರ ತಳದ ಹಾವನ್ನು, ವೇದದಲ್ಲಿ ಅಹಿ-ಬುಧ್ನ್ಯ ಎಂದುದಾಗಿದೆ. ವೃತ್ರ ಅಹಿ ಮತ್ತು ಬುಧ್ನ್ಯದ ಅಹಿ ಬೇರೆಯಲ್ಲ, ಎಂದು ಮ್ಯಾಕ್‌ಡೊನೆಲ್ ಹೇಳಿದ್ದಾನೆ. ಸಮುದ್ರಯೋನಿಃ ಅಶ್ವಃ! ನರ(ಳ)ರ ರಥಕ್ಕೆ ಹೂಡಿರುವ ಅಶ್ವವು ಇದು. ಕಠ ಹಾಗೂ ಗೀತೆಗೆ ಅಭಿಪ್ರೇತವಿರುವ ತೇರಿನ ಕುದುರೆ ಇದೇ! ಭಗವಂತವಾಗುವಾಗ ಈ ಅಶ್ವವು ಅಶ್ವತ್ಥ : ಆಗುತ್ತದೆ. ಈ ಭಗವಂತ, ಲೋಕಕ್ಕೆ ಕಾಣದೆ ಇರುವ ಶಾಪದೊಡನೆ ಹುಟ್ಟಿದ್ದಾನೆ.

ಭೂದೇವಿಯ ಒಡ್ಯಾಣದಂತೆ (Girdle) ಇರುವ ಈ ನಾಗನು ಚಂದ್ರನು! ಅಹಿ-ವೃತ್ರನೆಂದನೆ ಇವನೇ. ಸೂರ್ಯನ ಪರ್ಯಾಯವೆಂಬ ಇಂದ್ರನು ಮತ್ತು ಚಂದ್ರನ ಪರ್ಯಾಯವೆಂಬ ಅಹಿವೃತ್ರನು ಈ ವಿರೋಧದೊಳಗಿನ ಅಭಿಜಾತ ಸಾಂಕೇತಿಕ ಅರ್ಥವು ತುಂಬ ಮಾರ್ಮಿಕವಾಗಿದೆ. ಈ ಅಹಿ: ವೃತ್ರನು (ಚಂದ್ರ), ಮಾನವಧರ್ಮ : ಸಂಸ್ಕೃತಿಯ ವಿನಾಶಕ್ಕಾಗಿ ಅಣಿಯಾಗಿರುವ ಭಯಂಕರ ಶಕ್ತಿ, ಎಂಬ ಈ ಅಂಶವನ್ನು ಬಚ್ಚಿಟ್ಟಿರುವ ಈ ವೇದವು ನರ(ಳ) ಸಂಪ್ರದಾಯ ಸಂರಕ್ಷಕ ವೇದ: ಮಾನವರನ್ನು ಕಲ್ಯಾಣಕಾರಕ ಮಾರ್ಗದಲ್ಲಿ ನಡೆಸಿಕೊಂಡು ಹೋಗುವ ವೇದವು ಇದಲ್ಲ. ಸಾಯಣರು, ವೇದಭಾಷ್ಯದಲ್ಲಿ 'ಯಸ್ಯ ನಿಃಶ್ವಸಿತಂ ವೇದಾಃ' ಎಂದು ತಮ್ಮ ನಮನದಲ್ಲಿ ಹೇಳುತ್ತಾರೆ. ಆದರೆ, ಈ ನಿಃಶ್ವಸಿತಃ ಉಸಿರು ಯಾರದು, ಎಂಬುದನ್ನು ಮರೆಮಾಚಿದ್ದಾರೆ. ಬೃಹದಾರಣ್ಯಕದಲ್ಲಿ ಮಾತ್ರ ಈ ಸಂದಿಗ್ಧತೆಯಿಲ್ಲ! ಅರೇ! 'ಅಸ್ಯ ಮಹತಃ ಭೂತಸ್ಯ ನಿಃಶ್ವಸಿತಂ ಏತತ್ ಋಗ್ವೇದಃ' ಎಲಾ, ಈ ನಿಃಶ್ವಸಿತ-ಉಸಿರು, ಈ ಮಹಾಭೂತದ್ದು! ಆದರೆ, ಈ ಮಹಾ-ಭೂತ ಎಂದರೆ ಯಾವುದು? ಪಂಚಕರ್ಮೇಂದ್ರಿಯ, ಪಂಚಜ್ಞಾನೇಂದ್ರಿಯ ಎಲ್ಲವೂ ಇಲ್ಲಿ ಅಭಿಪ್ರೇತವಿಲ್ಲ. ಭೂತಸ್ಯ-ಭೂತದ-ಉಸಿರು ಎಂದು ಏಕವಚನಾಂತ ಪ್ರಯೋಗವಿದೆ.

ಈ ಉಪನಿಷತ್ತಿನಲ್ಲಿ-ಕಣ್ಣು, ನಾಲಗೆ, ಕೈ, ಕಾಲು ಇವುಗಳ ಸಾಲಿನಲ್ಲಿ ಮೂಗನ್ನು ಹೇಳಲಾಗಿದೆ. ಉಸಿರಾಟದ ದ್ವಾರವೇ ಇದು. ಆದರೆ, ಮಹಾನ್-ಭೂತ ಬೇರೆಯೇ ಇದೆ : ಏವಂ ಸರ್ವೇಷಾಂ ಆನಂದಾನಾಂ ಉಪಸ್ಥಂ ಏಕಾಯನಮ್. ಪ್ರಪಂಚದ ಎಲ್ಲ ನೀರೂ, ಸಮುದ್ರವನ್ನು ಸೇರುತ್ತದೆ. 'ಯಥಾ ಸರ್ವಾನಾಂ ಅಪಾಂ ಸಮುದ್ರಃ ಏಕಾಯನಮ್'

ಇಲ್ಲಿ ಒಂದು ಸಂದೇಹಕ್ಕೆ ಎಡೆಯಿದೆ : ಮಾತು ನಾಲಗೆಯ ಮೂಲಕ ಶಕ್ಯ ತಾನೆ? ಇಲ್ಲಿ ಕೊನೆಯ ನಿರ್ದೇಶವು ಹೀಗಿದೆ. 'ಏವಂ ಸರ್ವೇಷಾಂ ವೇದಾನಾಂ ವಾಕ್ ಏಕಾಯನಮ್' ಇಲ್ಲಿ ವಾಕ್ ಎಂದರೆ ಯಾವುದು? ನಾಲಗೆ-ವದನ, ವಾಕ್. ಇದಕ್ಕಿಂತ ಪ್ರಸ್ತುತ ವಾಕ್ (ಬಾಯಿ) ಬೇರೆಯಿರುವಂತೆ ಕಾಣುತ್ತದೆ. ಮಾನವ ಸಂಪ್ರದಾಯದ ವಾಕ್ ಸ್ಫುರಿಸುವ, ಎಡೆಗಿಂತ, ನರ(ಳ) ಸಂಪ್ರದಾಯದ ವಾಣಿ (ವಾಕ್) ಸ್ಫುರಿಸುವ ಎಡೆ ಬೇರೆಯೇ ಇರಬೇಕಷ್ಟೆ? ಈ ಸ್ಪಷ್ಟೀಕರಣವು ಈ ಮೊದಲೇ ಬಂದಿದೆ. ಬ್ರಹ್ಮಕುಮಾರಿ : ಪ್ರಜಾಪಿತಾ ಇರುವ ಎಡೆಯಲ್ಲಿ ವೇದ : ಶ್ರುತಿ ಹೊರಡಬೇಕಷ್ಟೆ? ವೇದದ ಶಮನನ ಪುರ=ಪುರಿ : ಭಗವಂತನಿರುವ ಎಡೆ : ದ್ವಾರಾ ವತಿಯಿಂದ ಸಾಗರ-ಶಯನ ನಾಗ-ಲಿಂಗದೇವನ ಸಾನ್ನಿಧ್ಯದಿಂದ ನಾಗಸ್ವರ=ಶ್ರುತಿ ಹೊರಡುತ್ತಿರಬೇಕಷ್ಟೆ? ಶಿಶ್ನೋ ದೇವಾಃ ಪಂಥದ ಶತ್ರು : ಅಹಿ (ನಾಗ : ಲಿಂಗ, ನಾಗ : ಚಂದ್ರ) ಹಂತಕನೆಂಬ ಇಂದ್ರ (ಸೂರ್ಯ)ನ ತೇಜೋವಧೆಯಾಗದೆ, ಚಿದಾಕಾಶದಲ್ಲಿ ತೊಳಗಿ ಬೆಳಗುತ್ತಿದ್ದರೆ, ಈ ಮಹತ್ ಭೂತದ ಆರಾಧನೆ ಭಾರತದ ಮನೆಮನೆಗಳಲ್ಲಿ ನಡೆಯುತ್ತಿರುವ ಸಾಧ್ಯವಿತ್ತೆ? ಪ್ರಚಲಿತ ವೇದದೊಳಗಿನ ವಿವಿಧ ಗತ್ತುಗಾರಿಕೆಯ ಮಂತ್ರ ಮಾಟಗಳ ನಾನಾ ಅಭಿಚಾರ ಕೃತ್ಯಗಳ ಉದ್ದೇಶವೇನು? ಇದನ್ನು ಬಾಯಿಬಿಟ್ಟು ಹೇಳುವ ಆವಶ್ಯಕತೆಯುಂಟೆ?

ಸೌರಮನು>ಮಾನವ ಸಂಪ್ರದಾಯವು=ವೈವಸ್ವತ ಮನ್ವಂತರವು ಈಗಲೂ ಉಂಟು ಎಂಬ ಹಾಗಿನ ಯಾಂತ್ರಿಕ ಮಂತ್ರಪಾಠವು ಇಂದು ಎಂತೊ ಉಳಿದಿದೆ. ಈ ಅವಸ್ಥೆಯ ಕಾರಣವೇನು? ಅಹಿ : ವೃತ್ರ ಹಂತಕನೆಂಬ ಇಂದ್ರ (ಸೂರ್ಯ)ನನ್ನು ಆದಿತ್ಯ (ಲಿಂಗ : ರೇತ) ರೂಪಕ್ಕೆ ಮಾರ್ಪಡಿಸಿ, ಆ ಸನಾತನ ನಾಗನು, ಶ್ರೀಮತ್ ಭಗವತ್ ಇರುವ ಗೀತೆಯಲ್ಲಿ ಭಗವಂತನ ವೇಷದಲ್ಲಿ ಜಗದ್ಗುರು ಪೀಠದಲ್ಲಿ ವಿರಾಜ-ಮಾನನಾಗಿದ್ದಾನೆ. : ಭಾರತೀಯರಿಗೆ ಅವರ ಉನ್ನತಿಯ ಮಾರ್ಗವನ್ನು ಬೋಧಿಸುತ್ತಿದ್ದಾನೆ. ತಾನು ಯಾರೆಂಬುದನ್ನು, ತನ್ನ ಸ್ವಭಾವ ಧರ್ಮವನ್ನು ಬಿಚ್ಚುಮಾತಿನಲ್ಲಿ ಸಾರಿಯೂ ಹೇಳಿದ್ದಾನೆ:

ಕಾಲಃ ಅಸ್ಮಿ ಲೋಕಕ್ಷಯಕೃತ್ ಪ್ರವೃದ್ಧಃ ಲೋಕಾನ್ ಸಮಾಹರ್ತುಂ ಇಹ ಪ್ರವೃತ್ತಃ[೨೦] ಆದರೆ, ಮಹಾತ್ಮಾಜೀಯಂತಹರನ್ನೂ ಈ ಮೋಹನಾಂಗನ ಸಂಮೋಹಕಾರಕ ಬೋಧೆಯು ಆಕರ್ಷಿಸಿದೆ! ಮಹಾತ್ಮಾಜೀಯಂತಹರನ್ನೂ ಎನ್ನಲು ಕಾರಣವಿದೆ.: ಭಾರತದ ಉದ್ಧಾರಕ್ಕಾಗಿ, ದಕ್ಷಿಣ ಆಫ್ರಿಕೆಯಿಂದ ಬಂದ ಪ್ರಾರಂಭದ ಹಂತದಲ್ಲಿಯೇ ತಮ್ಮ ಕಾರ್ಯದ ಸ್ವರೂಪ ಮತ್ತು ಉದ್ದೇಶವನ್ನು ಸ್ಪಷ್ಟಪಡಿಸಿದ್ದರು: I want to spiritualise politics. Secrecy is sin ರಾಜಕೀಯ ಕ್ಷೇತ್ರವನ್ನು ಪವಿತ್ರಗೊಳಿಸಬೇಕೆಂದಿದ್ದೇನೆ. ಗುಹ್ಯ-ಗೂಢ-ಗುಪ್ತಮಾರ್ಗವು ಪಾಪದ ಹೆದ್ದಾರಿ, ಎಂಬ ಮಹೋಪದೇಶ ಮಾಡಿದ್ದರು. ಆದರೆ, ಗುಹ್ಯಾತ್ ಗುಹ್ಯತಮ ಶಾಸ್ತ್ರ ಈ ಗೀತೆ ಎಂದು ಈ ಭಗವಂತನೇ ಸಾರಿ ಹೇಳುತ್ತಿರುವಾಗ, Secrecy is sin ಎಂಬ ಮಹಾವಾಕ್ಯ ಬೋಧಿಸಿದ ಗಾಂಧೀಜಿಯವರಿಗೆ, ಈ ಗೀತೆಯೇ ಮಾರ್ಗದರ್ಶಕ ಗ್ರಂಥವಾಗಬೇಕೆ? ಇದಕ್ಕಿಂತಲೂ ಮಿಗಿಲಾದ ಭಾರತೀಯರ ದುರ್ದೈವವು ಯಾವುದು? ತತ್ ಪುರುಷಃ ಅ-ಮಾನವಃ ಎಂದ ಛಾಂದೋಗ್ಯವೇ ಹೇಳಿರುವ ಈ ಅಮಾನುಷ ಆಸುರೀ ಸಂಪ್ರದಾಯವು, ಮನು : ವೈವಸ್ವತನ, ಸವಿತೃವಿನ, ವಿಶ್ವಾಮಿತ್ರನ, ಅಹಿಹಂತಕ ಇಂದ್ರನ ಪ್ರತಿಮಾ ಭಂಜನದ ಮಹಾಕಾರ್ಯವನ್ನು ಈಡೇರಿಸಿದ ಬಳಿಕ, ವೇದದೊಳಗಿನ ಅದಿತಿ ಆದಿತ್ಯ ಸಂಪ್ರದಾಯವನ್ನು ಲೋಕ ಹಿತಾರ್ಥಕ್ಕಾಗಿ(?) ಮುಂದುವರಿಸಿಕೊಂಡು ಹೋಗಲು ಪಂಚಮವೇದ (ಗೀತೆ) ರಾಮಾಯಣದಂತಹ Justifiable deception ಒಳಗೊಂಡ ಮೇರುಕೃತಿಗಳನ್ನು ನಿತ್ಯ ಪಾರಾಯಣಕ್ಕಾಗಿ, ಭಾರತೀಯರಿಗೆ ಅನುಗ್ರಹಿಸಿದೆ!

ಈ ಪ್ರಪಂಚವು ವಿಶ್ವನಿಯಮಕ್ಕೆ ಅಧೀನವಿದೆ ಎಂಬುದು ನಿಜವಿದ್ದರೆ ಈ ಮೇರುಕೃತಿಗಳ ತಳಪಾಯದಲ್ಲಿ ಆಧಾರಕ್ಕಿರುವ ನಿಯಮದ ಸ್ವರೂಪವೇನು? ಈ ವಿಶ್ವನಿಯಮವನ್ನು ಈ ಮೊದಲು ಒಂದಕ್ಕಿಂತ ಹೆಚ್ಚು ಬಾರಿ ಹೇಳಿದ್ದಾಗಿದೆ. ತಾಳಲಯಲ್ಲಿ, ಲಯ-ಹುಸಿತಾಳ ಆಧಾರದ ಮೇಲಣಕೃತಿ, ನರ(ಳ) ಸಂಪ್ರದಾಯಗಳಿಗೆ ಅಚ್ಚು ಮೆಚ್ಚು. ಇಲ್ಲದೆ ಇರುವುದನ್ನು ಉಂಟು ಎಂದು ನಂಬುವಂತೆ ಮಾಡುವ ಕೃತಿಯೇ ನಿಜವಾದ ಕಲಾಕೃತಿಯಷ್ಟೆ? ಋತ (ವಿಶ್ವನಿಯಮ) ಸ್ವರೂಪೀ ಸತ್ಯ : ನಿಯತಿಕೃತ ನಿಯಮ, ಇದು ಮಾನವ ಸಂಪ್ರದಾಯದ ನಡೆವಳಿ-ನುಡಿವಳಿಗಳಿಗೆ ಆಧಾರಭೂತವಿರುತ್ತದೆ. ಆದರೆ, ನಿಯತಿಕೃತ ನಿಯಮ ರಹಿತ ಎಂದರೆ ಅಭಾವವೇ ಸ್ಥಾಯೀ ಆಗುವ ಭೂಮಿಕೆಯ ಮೇಲಣ ಕಟ್ಟಡವು ಮಯಾಸುರ : ನಾಗ-ಲಿಂಗನ ಶಿಲ್ಪವೇ ಇದ್ದೀತು. ಜಕ್ಕಣ (ಯಕ್ಷ) ಆಚಾರ್ಯ ಶ್ರೇಷ್ಠ ಶಿಲ್ಪಿ ತಾನೆ?

ಜೀವನ ವಿಶ್ವಸ್ಥ ಪಾತಳಿಗಳು ಈ ಮಾನವನ ಅಭಿವ್ಯಕ್ತಿಯ ಸ್ವರೂಪವನ್ನು ನಿರ್ಧರಿಸುತ್ತವೆ. ಪ್ರಜ್ಞಾಯುಕ್ತ ಮನಸ್ಸಿನಿಂದ ಪ್ರೇರಿತ ನಡೆವಳಿ ನುಡಿವಳಿಯು ಭಾವಾತ್ಮಕ, ಅಂತಃಸಂಗತಿಯುಕ್ತ ಅರ್ಥ : ವಿಚಾರ: ಮೂಲ್ಯಗಳುಳ್ಳದ್ದೇ ಇರಬಲ್ಲುದು. ಇದಕ್ಕೆ ಪ್ರತಿಯಾಗಿ ಪ್ರಾಣಲಿಂಗ ಚೇತಸದ ಭೂಮಿಕೆಯ ಪ್ರೇರಣೆಯಿಂದ ಆಗುವ ನಡೆವಳಿ ನುಡಿವಳಿಗಳಲ್ಲಿ ಅಂತರ್ ವಿಸಂಗತಿಯು ಅನಿವಾರ್ಯವಾಗುತ್ತದೆ. ಆದಕಾರಣ, ಮೇಲಣ ನಡೆವಳಿ-ನುಡಿವಳಿಗಳು ಅ-ಭಾವಾತ್ಮಕ (೦) ಸ್ವರೂಪದವು ಆಗುವ ಅನಿವಾರ್ಯತೆಯೂ ಉಂಟು. ಈ ಹಂತದಲ್ಲಿ ಅವರವರ ಅರ್ಥವು ಅವರವರ ಪಾಲಿನ ಸತ್ಯವಾಗುತ್ತದೆ. ಅಭಾವಾತ್ಮಕ (೦) ಅರ್ಥಶೂನ್ಯ ಅಥವಾ ಶೂನ್ಯ ಅರ್ಥದ ಆಚಾರ ವಿಚಾರಗಳು ತಾತ್ವಿಕ ರೀತಿಯಲ್ಲಿ ಕತ್ತಲಿನ ಆವರಣವುಳ್ಳವು ಆಗುತ್ತವೆ. ಇದು ನರ(ಳ) ರ ಪಾತಳಿ; ಇದು ನಾಗ-ಲಿಂಗನ ಪ್ರಭಾವದ ಪಾತಳಿ. ಆದುದರಿಂದ ಇದು ಆಸುರೀ ಆಕೃತಿ ಸ್ವರೂಪದ, ಅಭಿವ್ಯಕ್ತಿಯ ಪಾತಳಿ ಎಂದು ಪುರಾತನರು ಹೆಸರಿಸಿದ್ದಾರೆ. ವೇದದ ಪರಿಭಾಷೆಯಲ್ಲಿ ಹೇಳಬಹುದಾದರೆ 'ಮಹತಃ ಭೂತಸ್ಯ ನಿಃಶ್ವಸಿತ' ರೂಪ ಸಾಹಿತ್ಯವೆಂದರೇ ಇದೇ. ಪಂಚಮವೇದದ ಅಂಗವಾಗಿರುವ ಈ ಗೀತೆಯು, ಶೃತಿಯೇ ಆಗಿರಲಿಕ್ಕೆ ಬೇಕು. ಆದಕಾರಣ, ಈ ಗೀತೆಯಲ್ಲಿ ತುರೀಯಾವಾಣಿ ಅಡಕವಾಗಿರಲಿಕ್ಕೆ ಬೇಕಷ್ಟೆ ? ವ್ಯಾಸ ಪ್ರಸಾದಾತ್ ಲಭಿಸಿದೆ, ಎಂಬ ಗೀತೆಯ ಭಗ-ವಂತನು ಈ ಗೀತೆಯನ್ನು ಬೋಧಿಸಿದ್ದು ಯಾವ ಮುಖದಿಂದ? ಇದು ಪಾಮರ ಮನು-ಜ ಭಾಷೆಯಾಗಿರಲಾರದು.

ಈ ಗೀತೆಯ ನಾಯಕನು ಭಗ-ವಂತನು, ವೇದದೊಳಗೆ ವರ್ಣಿತ ಗರ್ಭಸ್ಥ ವಾಮದೇವನನ್ನು ಹೋಲುತ್ತಾನೆ. ಅಥವಾ ಆ ವಾಮನನೇ ಭಗವಂತ ನಾಮದಿಂದ ಉಪನಿಷತ್ತು, ಗೀತೆಯಲ್ಲಿ ಅಡಗಿದ್ದಾನೆ. ಆದಕಾರಣ, ಈ ವಾಮನನು ಗೀತೆಯನ್ನು ಯಾವ ವದನದಿಂದ ಉಸುರಿರಬೇಕು? ಈ ನಿಃಶ್ವಸಿತವು ಯಾವ ಭೂತದ್ದು? ಎಂಬ ಪ್ರಶ್ನೆ ಎದುರು ನಿಲ್ಲುತ್ತಿದೆ. ಅಲ್ಲದೆ, ಈ ಗೀತೆಯೊಳಗಿನ ಉಲ್ಲೇಖಗಳಿಂದಲೂ ಮೇಲಣ ಪ್ರಶ್ನೆ ಸಂದೇಹ-ಸಮರ್ಪಕವಿರುವುದಾಗಿ ಕಂಡುಬರುತ್ತಿದೆ. 'ಆದಿತ್ಯಾನಾಂ ಅಹಮ್' ಎಂಬ ಈ ವಿಷ್ಣುರೂಪೀ ಕೃಷ್ಣನು ಕುಮಾರೀ ಮಾತಾ: ಅದಿತಿ ಪುತ್ರನಾಗುತ್ತಾನೆ. ಆದಕಾರಣ ಈ ಕೃಷ್ಣನು ಅಭಾವರೂಪೀ ಸ್ಥಾಯೀದೇವನಾಗುತ್ತಿದ್ದಾನೆ! ಅದಿತಿಯನ್ನು ಶ್ವೇತಾಶ್ವತರವು ಅ-ಜಾ (ಹುಟ್ಟದೆ ಇದ್ದವಳು) ಎಂದಿದೆ. ಆದಕಾರಣ ಅ-ಜಾ-ಪುತ್ರ ಈ ಅ-ಜ : ಕೃಷ್ಣನೂ ಕೇವಲ ಕಲ್ಪನಾ ವಿಲಾಸದ ದೇವರೇ ಆಗುವುದಿಲ್ಲವೇ? ಈ ಆದಿ-ತ್ಯನನ್ನು ಗೀತೆ, ಪುರುಷ : ಪುರಿ-ಶಯ ಎಂದಿದೆ. ಇದು ವ್ಯಕ್ತಿ ನಿರಪೇಕ್ಷ ಶಯ (ಲಿಂಗ) ಆದಕಾರಣ ಇದನ್ನು illegitimate abstraction ಎನ್ನದೆ ಗತಿಯಿಲ್ಲ! ಈ ಭಗ-ವಂತನು ತಾನು. 'ಅಶ್ವತ್ಥಃ ಅಸ್ಮಿ ಸರ್ವ ವೃಕ್ಷಾಣಾಮ್' ಎನ್ನುತ್ತಾನೆ. ಈ ಅಶ್ವ (ತ್ಥ ಅಲ್ಲ) ಮಾತಾಡಿರುವ ಶಕ್ಯತೆಯಿದೆ, ಇದನ್ನು ಹಯವದನ ಎಂದಿರುವದರಿಂದ! ಇದು ನಿಜವಿದ್ದಲ್ಲಿ, ಜ್ಞಾನೇಶ್ವರನೆಂಬುವನು ಮಹಾರಾಷ್ಟ್ರದಲ್ಲಿ ಕೋಣನಿಂದ ವೇದ ಹೇಳಿಸಿದನು ಎಂಬ ಪವಾಡಕಥೆ ಸುಳ್ಳು ಎನ್ನಲಾದೀತ? ಈ ಕಾರಣಗಳಿಗಾಗಿಯೇ ಶ್ರುತಿ : ಅಂತರ್ ವಾಣಿಗೇ ಕೇಳಿಬರಬಲ್ಲ 'ಮಹತಃ ಭೂತಸ್ಯ ನಿಃಶ್ವಸಿತಃ' ಈ ಗೀತೆ ಎನ್ನಬೇಕಾಗುತ್ತಿದೆ.

ಮಹಾಭಾರತಕ್ಕಿಂತ ಸ್ವಲ್ಪ ಬೇರೆಯಾಗಿರುವ ಇನ್ನೂ ಒಂದು ಬಗೆಯ ಮಾಟ : ಕಣ್ಕಟ್ಟು ರಾಮಾಯಣದಲ್ಲಿ ಉಂಟು. ಮಹಾಭಾರತವು ವೃತ್ತಮಧ್ಯ : ವ್ಯಾಸನದು ಇರುವಂತೆ, ರಾಮಾಯಣವು ಹುತ್ತಿನಲ್ಲಿ ಅಡಗಿರುವ ನಾಗ : ವಲ್ಮೀಕಸ್ಥ ನಾಗ : ವಾಲ್ಮೀಕಿಯ ಕೃತಿ ತಾನೆ? ವೃತ್ರಾತ್ ಜಾತೋ ದಿವಾಕರಃ ಎಂದು ಅಥರ್ವ ವೇದವಲ್ಲಿದೆ. ವೃತ್ರಾಸುರನು : ನಾಗ : ಲಿಂಗನು, ನಾಗ : ಚಂದ್ರನು ದಿವಾಕರನಿಗೆ ಎಂದರೆ ಸೂರ್ಯನಿಗೆ ತಂದೆಯಂತೆ! ಇದಕ್ಕೆ ಪ್ರತಿಯಾಗಿ ಶ್ರೀರಾಮ-ಚಂದ್ರನನ್ನು ಸೂರ್ಯವಂಶ ಲಲಾಮನನ್ನಾಗಿಸುವ ಪ್ರಯತ್ನ ವಾದದ್ದು ಉಂಟು! ಏಕಂ : ಸತ್ ಎಂಬ ಮೂಲ ಗ್ರಹೀತವೇ ಆಸುರೀ ಸ್ವರೂಪದ್ದು ಆಗಿದೆ. ಪ್ರತಿಪದೆಗೆ ಅಂಕುರಿಸಿ ಹುಣ್ಣಿಮೆಗೆ ಪೂರ್ಣವಾಗಿ, ಅಮಾವಾಸ್ಯೆಗೆ ಪ್ರ-ಲಯ (ಇಲ್ಲ) ವಾಗುವ ಈ ಚಂದ್ರಮನು ಈ ಇಲ್ಲಮೆಯೊಳಗಿಂದ ಮರಳಿ ತಲೆದೋರುತ್ತಾನೆ! ಪ್ರಲಯವು ಜೀವನದಾಯಿ ಆಗಿದೆ, ಎಂಬುದು ನಾಗ : ಮೃತ್ಯುಸಂಪ್ರದಾಯದ ಸಿದ್ಧಾಂತ! ಈ ಭೂಮಿಕೆಯ ಮೇಲೆ ನೈತಿಕಮೂಲ್ಯಗಳಿಗೆ ಸ್ಥಾನವಿಲ್ಲ. ಅದಿತೇಃ ದಕ್ಷಃ ಅಜಾಯತ ಈ ಭೂಮಿಕೆಯಂತೆ ಬಾಳಿನಲ್ಲಿ ತಾಯ್‌ಗಂಡತನಕ್ಕೆ ಆಮಂತ್ರಣ ದೊರೆಯುತ್ತದೆ. ಈ ವೇದದಲ್ಲಿ ದಕ್ಷಾತ್ ಅದಿತಿಃ ಈ ಭೂಮಿಕೆಯು ಉಂಟು. ದೇವರುಗಳೆಲ್ಲ ದಕ್ಷ ಪಿತರರು! ದಕ್ಷನಿಂದ ಹುಟ್ಟಿದಳೆಂಬ ಅದಿತಿಯಿಂದ ಈ ಪ್ರಪಂಚವಾಗಿದೆ ಎಂಬಲ್ಲಿ ಮಗಳ ಮಿಂಡತನವೂ ಶಿಷ್ಟಾಚಾರವಾಗುತ್ತದೆ! ಒಬ್ಬ ದೇವನೆಂಬುವನ ಸಂತಾನ ಈ ಗಣ್ಣು (ದಕ್ಷ), ಹೆಣ್ಣು (ಅದಿತಿ) ಎಂದಲ್ಲಿ, ಆಗ ಸಹೋದರರು ಸಹೋದರಿಯರು ಗಂಡ - ಹೆಂಡತಿಯಾಗುತ್ತಾರೆ! ಆದಿ-ತ್ಯರೂಪೀ ವಿಷ್ಣುವಿನ ಇನ್ನೊಂದು ನಿಲುಮೆಯೇ ರಾಮಾವತಾರದ್ದು. ಶ್ರೀಕೃಷ್ಣ ಕಪಟ ನಾಟಕ ಸೂತ್ರಧಾರಿ, ಕಾರಸ್ಥಾನಿ ಸ್ತ್ರೀಲಂಪಟ ಎಂಬೀ ಬಗೆಯಲ್ಲಿ ಕೃಷ್ಣನ ಬಣ್ಣ ಬಯಲಿಗೆ ಬಂದುದರಿಂದ, ಸಜ್ಜನಿಕೆಯ ಸೀಮಾಪುರುಷ, ಏಕವಚನಿ, ಏಕಪತ್ನೀವ್ರತಿ ಮುಂತಾದ ಗುಣಗಳನ್ನು ಅಂಟಿಸಿ ಶ್ರೀರಾಮಚಂದ್ರನನ್ನು ಆದರ್ಶ ಪುರುಷನನ್ನಾಗಿಸುವ ಪ್ರಯತ್ನವಾಗಿದೆ. ಏಕೋದೇವ ಸಂಪ್ರದಾಯವು ಶ್ರೀಕೃಷ್ಣ ಚಾರಿತ್ರ್ಯದಿಂದಾಗಿ ಗಂಡಾಂತರವನ್ನು ಎದುರಿಸಬೇಕಾಯಿತು. ಈ ಸಂಕಟದೊಳಗಿಂದ ಪಾರಾಗಲು ರಾಮಾಯಣವು ರಚಿಸಲ್ಪಟ್ಟಿತು.

ಆದರೆ, ರಾಮಾಯಣವು ಚಂದ್ರಾಯಣವೇ ಆಗುವುದನ್ನು ತಪ್ಪಿಸಲು ಯಾರಿಂದ ಶಕ್ಯ? ತಳಪಾಯದ ಮೂಲ ಮಾದರಿಯ (Archetype) ಬಣ್ಣ ಹೊರಬರದೆ ಉಳಿದಲ್ಲಿ ಆ ಮೂಲ ಮಾದರಿಗೆ ಅಪಚಾರ ಬಗೆದಂತೆ ಆಗಲಿದೆ. ಈ ರಾಮಾಯಣದಲ್ಲಿ ಹಲವರಿಗೆ ತಮ್ಮ ತಮ್ಮ ಅರ್ಥ ಕಂಡಿದೆ. ನನ್ನ ಮಿತ್ರ ಶ್ರೀ ಗೋರೂರು ರಾಮಸ್ವಾಮಿ ಅವರೊಡನೆ ಪೂಜ್ಯ ಮಾಸ್ತಿ ಅವರಲ್ಲಿ ಹೋದಾಗ ಶ್ರೀ ಗೊರೂರು ಅಯ್ಯಂಗಾರ್ ಅವರು ಚಟಾಕಿ ಹಾರಿಸಿದರು : ಮಾಸ್ತಿ ಅವರು ತಮ್ಮದೇ ಆದ ರಾಮಾಯಣ ಬರೆಯುತ್ತಿದ್ದಾರೆ ಎಂದು. ಮಹಾರಾಷ್ಟ್ರದ ಶ್ರೀ ವಿಶ್ವನಾಥ ಖೈರೇ ಎಂಬುವರಿಗೆ ರಾಮಾಯಣದಲ್ಲಿ ವಾ ನಾರಾಯಣವೇ ಇರುವುದಾಗಿ ಕಂಡಿದೆ. ಮರಾಠಿ ಸತ್ಯಕಥಾ ಪತ್ರಿಕೆಯಲ್ಲಿ ಪ್ರಕಟವಾದ ಆ ಲೇಖದ ಟೊಳ್ಳುತನ ಹೊರಗೆಡಹುವ ನನ್ನ ಲೇಖವು ಸತ್ಯಕಥಾ ಪತ್ರಿಕೆಯ ಆ ವರ್ಷದ ಕೊನೆಯ ಸಂಚಿಕೆಯಲ್ಲಿ ಪ್ರಕಟವಾಗಿದೆ.

ಮೈಸೂರಿನ ಪ್ರೊ. ಪೋಲಂಕಿ-ರಾಮಮೂರ್ತಿಯವರಿಗೆ, ರಾಮಾಯಣದಲ್ಲಿ ಸೀತಾಯಣ ಇರುವುದಾಗಿ ಕಂಡಿದೆ. ಇನ್ನುಳಿದವರೂ ಒಪ್ಪುವಂತೆ ಇದನ್ನು ಸಮರ್ಪಕವಾಗಿ, ಸಮರ್ಥ ರೀತಿಯಲ್ಲಿ ವಿವರಿಸಿದ್ದಾರೆ.

ಪ್ರೊ. ಪೋಲಂಕಿ ಅವರು, ಮೂಲ ರಾಮಾಯಣದಲ್ಲಿಯೇ ಸೀತೆಯ ಪಾತಿವ್ರತ್ಯದ ಬಣ್ಣ ಹೊರಬೀಳುತ್ತಿರುವುದನ್ನು ಬಹಿರಂಗ ಪಡಿಸಿದ್ದಾರೆ. ಪ್ರೊ. ಪೋಲಂಕಿಯವರಂತಹ ಸೂಕ್ಷ್ಮ ಅರ್ಥಗ್ರಹಣದ ಸಂವೇದನಾಕ್ಷಮ ಮನೋಭಾವವು ಎಲ್ಲರಿಗೂ ಇರುವುದಿಲ್ಲ. ಇದರಿಂದಾಗಿ, ಪ್ರೊ. ಪೋಲಂಕಿಯವರು ಪರಂಪರಾಗತ ನಂಬುಗೆಯ ಉಗ್ರವಾದಿಗಳ ಟೀಕೆಯ ವಿಷಯವಾದರು. ಇದನ್ನು ಕಂಡು ನಾನೂ ಆ ಚರ್ಚೆಯಲ್ಲಿ

---

* ಧಾರವಾಡದ ಸಂಕ್ರಮಣ ಮಾಸಿಕ ಪತ್ರಿಕೆಯಲ್ಲಿ ಇದು ಪ್ರಕಟವಾಗಿದೆ: ಸೆಪ್ಟಂಬರ್ ೧೯೮೧ ಸಂಚಿಕೆ.

ಭಗಾವಹಿಸಿದ್ದಾಯ್ತು. ಶ್ರೀ ಪೋಲಂಕಿ ಅವರ ಆಕ್ಷೇಪವನ್ನು ಸಂಪ್ರದಾಯವೂ ಒಪ್ಪಿರುವುದನ್ನು ಸೂಚಿಸುತ್ತಿರುವ ಅಹಲ್ಯಾ ದ್ರೌಪದೀ ಸೀತಾ..... ಈ ಶ್ಲೋಕವನ್ನು ಎತ್ತಿ ಹೇಳಿದ್ದಾಯಿತು. ಚಂದ್ರಮನು ಸ್ತ್ರೈಣನೆಂದು ಸಂಪ್ರದಾಯವೇ ಒಪ್ಪಿದೆ. ತನ್ನ ಮಗಳನ್ನು ಕಡೆಗಣಿಸಿ ನಾನಾ ತಾರೆಯರೊಡನೆ ಕ್ರೀಡಾಲೋಲನಾದ ಅಳಿಯ ಚಂದ್ರನಿಗೆ ಕ್ಷಯ ರೋಗ ಅಂಟಲಿ ಎಂಬ ಶಾಪವೂ ತಟ್ಟಿದೆ; ಎಂಬ ಪವಾಡ ಕಥೆಯುಂಟು! ಶ್ರೀರಾಮಚಂದ್ರನನ್ನು ಸೂರ್ಯವಂಶ ಲಲಾಮನನ್ನಾಗಿಸುವ ಆಸುರೀ ಪ್ರಯತ್ನವು ಗಮನಕ್ಕೆ ಬಂದುದು. ಈ ಅಸುರ ಸಂಪ್ರದಾಯದ ಪೂರ್ವೋತ್ತರವನ್ನು ಅರಿಯಬೇಕೆಂಬ ಕುತೂಹಲವು ತಲೆದೋರಿದ ನೆನಪು ಬರುತ್ತಿದೆ. ರಾಮಾಯಣವು ಮಹಾಭಾರತಕ್ಕಿಂತಲೂ ಮುಂಚಿನದು, ಎಂದು ನಂಬಿಸುವ ಪ್ರಯತ್ನಗಳಾಗಿವೆ. ಡಾ. ಸಂಕಾಲಿಯಾರಂತಹ ಸಂಶೋಧಕರಿಗೆ ಇದರ ಪ್ರಾಚೀನತೆಯು ಮಾನ್ಯವಿಲ್ಲ. ರಾಮಚಂದ್ರಾಯಣವು ಮೂಲದಲ್ಲಿ ರಾತ್ರ ಸಂಪ್ರದಾಯವಾಗುತ್ತಿರುವುದನ್ನು ಅಲ್ಲಗಳೆವವರು ನಗಿಸಿಕೊಳ್ಳುವ ಭೀತಿಯಿದೆ. ಇದು ನಿಜವಿದ್ದಲ್ಲಿ, ಅಹಲ್ಯಾ,ದ್ರೌಪದೀ, ತಾರಾ, ಮಂಡೋದರಿಯರ ಸಾಲಿನಲ್ಲಿ ಇರುವ ಸೀತೆಯು ರಾತ್ರ ಸಮಯಾಚಾರದ ಪಾತ್ರವಾಗುತ್ತಿದ್ದಾಳೆ!

ಅದಿತಿ। ಆದಿತ್ಯ ಸಂಪ್ರದಾಯವನ್ನು ಆಜರಾಮರವಾಗಿ ಉಳಿಸಿಕೊಳ್ಳಲು ಮಾಡಲಾಗಿರುವ ತಂತ್ರ-ಮಂತ್ರವು ಈ ಅಹಲ್ಯಾ ದ್ರೌಪದಿಯರ ಶ್ಲೋಕದಲ್ಲಿ ಅಳವಟ್ಟಿದೆ. ಮಹಾಪಾತಕನಾಶನ ಸಾಮರ್ಥ್ಯವು ಈ ಕನ್ಯಾಮಣಿಗಳ ನಾಮಸ್ಮರಣದಲ್ಲಿ ಇದೆ, ಎಂಬ ಆಮಿಷವನ್ನು ಒಡ್ಡಲಾಗಿದೆ! ಅಹಲ್ಯಾದಿ ಈ ಐವರೂ ವಿವಾಹಿತೆಯರು ಎಂದು ಸಂಪ್ರದಾಯ ತಿಳಿಯುತ್ತದೆ. ಅದಿತಿ: ಆದಿತ್ಯ ಸಂಪ್ರದಾಯದ ಮೂಲ ಮಾದರಿ ಕುಮಾರೀ-ಕುಮಾರ ವ್ರತಿಗಳದ್ದು.

ಈ ಕುಮಾರೀ ಸಂಪ್ರದಾಯವನ್ನು ಉಳಿಸಿಕೊಳ್ಳುವುದು ಅಸಾಧ್ಯವಾಗಿ, ಮದುವೆಯಾದವರಲ್ಲೂ ಈ ಕುಮಾರೀ ಸಂಪ್ರದಾಯದ ಹತ್ತಿರದವರು ಇದ್ದಾರೆ, ಎಂಬ ಆದರ್ಶ ನಿರ್ಮಾಣದ ಪ್ರಯತ್ನವು ಇಲ್ಲಿ ಇದೆ. ಅಹಲ್ಯಾದಿ ಈ ಐವರೂ ವಿವಾಹಿತೆಯರು, ಎಂಬುದನ್ನು ಅರಿತೂ ಇವರನ್ನು ಈ ಶ್ಲೋಕದಲ್ಲಿ ಪಂಚಕನ್ಯಾ ಎಂದಿರುವಲ್ಲಿ ಸಾಂಕೇತಿಕ ಗುಹ್ಯಾರ್ಥವು ಅಡಗಿರುವುದು ಎದ್ದು ಕಾಣುತ್ತದೆ. ನನಗೆ ಕಾಣುತ್ತಿರುವಂತೆ ಈ ಐವರೂ ಅದಿತಿಯ ಪರ್ಯಾಯ ಪ್ರತೀಕವಾಗಿದ್ದಾರೆ. ವೇದದೊಳಗಿನ ಅದಿತಿಯ ಇನ್ನೊಂದು ನಿಲುಮೆಯಂತಿರುವ ಅಂಭೃಣೆಯು ಅಹಂ ರುದ್ರೇಭಿಃ ವಸುಭಿಃ, ಆದಿತ್ಯಃ ವಿಶ್ವೇ ದೇವೈಃ (ಸಹ) ಚರಾಮಿ, ಎನ್ನುತ್ತಾಳೆ! ವೇದದೊಳಗಿನ ದೇವಿಯರು ಅದಿತಿಯಂತೆ ಅಮೃತಸ್ಯ ನಾಭಿ ಸ್ವರೂಪರು ಆಗಿದ್ದಾರೆ. ಇಲ್ಲಿ ಯೋನಿ ಮಂಡಲಕ್ಕೇ ಪ್ರಾಧಾನ್ಯವಿದೆ. ಈ ನರ(ಳ) ಸಂಪ್ರದಾಯವನ್ನು ರೂಪಿಸಿರುವ ಆ ಪುರಾತನರು, ಅದಿತಿ ಆದಿತ್ಯರೂಪೀ ಮೂಲ ಮಾದರಿಗಳ ಮೂಲಕ ಯೋನಿ-ಲಿಂಗಕ್ಕೆ ಸ್ವಾಯತ್ತ ಅಧಿಕಾರವನ್ನು (Self autonomy) ಕಲ್ಪಿಸಿಕೊಟ್ಟಿದ್ದಾರೆ! ಆದಕಾರಣ, ಇವು ಸ್ವಯಂಭೂ ಸಾಮರ್ಥ್ಯದ ದೈವತ ಎಂದು ನಂಬಿಸಲಾಗಿದೆ.

ಗ್ರೀಕ್ ಪರಂಪರೆಯ Emancipation of Individual ಈ ಪರಿಭಾಷೆಯು, ಸ್ವಯಂಭೂ ಸಂಪ್ರದಾಯದ ಹಿನ್ನೆಲೆಯನ್ನು ಇನ್ನೊಂದು ಬಗೆಯಿಂದ ವಿಶದ ಪಡಿಸುತ್ತಿದೆ. ಈ ಸ್ವಯಂಭೂತ್ವ: ವ್ಯಕ್ತಿ ಮುಕ್ತಿಯು, ಮುಕ್ತ ಸ್ವೈರ ಆಚಾರದ ಮೂಲ ಮಾದರಿಯು ಹೋಮರನ ಕಾವ್ಯದಲ್ಲಿಯೇ ಇದೆ. ಅಥೆನಾ ತನ್ನ ತಂದೆಯ ತಲೆಯಿಂದ ಹುಟ್ಟುತ್ತಾಳೆ. ಋಗ್ವೇದದ ಹದಿನೆಂಟು ಅಂಭೃಣೆ, ಹೋಮರನ ಬುದ್ಧಿದೇವಿ ಅಥೆನಾಳನ್ನು ಹೋಲುತ್ತಾಳೆ! ತಂದೆಯ ತಲೆಯಿಂದ ಹೊರಬಂದಳು ಎಂಬ ಈ ನೀರೆಯ ಸಂಗಡವೇ ಭೂಲೋಕದಲ್ಲಿ ಪಾಪವು ತಲೆಯೆತ್ತಿದೆ, ಎಂದು ಮಹಾಕವಿ ಮಿಲ್ಟನ್ನನಿಗೆ ಕಂಡಿದೆ. ಪ್ಯಾರಾಡ್ಯಾಜ್ ಲಾಸ್ಟ್ ಕಾವ್ಯದಲ್ಲಿ ಈ ಅಂಶವನ್ನು ಹೇಳಿದ್ದಾನೆ. ತಾಯಿಯ ಗರ್ಭದಿಂದ ಹುಟ್ಟಬೇಕಾದ ಈ ಕೂಸು/ಕುನ್ನಿ ತಂದೆಯ ತಲೆಯಿಂದ ಹೊರಬರುತ್ತದೆ, ಎಂಬ ಸಾಂಕೇತಿಕ ಅಭಿವ್ಯಕ್ತಿಯ ಅರ್ಥವೇನು? ಈ ಅಭಿವ್ಯಕ್ತಿಯಲ್ಲಿ ಸ್ಥಲ-ಕಾಲದ (Space-time) ಸಮಸ್ಯೆ ತೊಡಕಿಕೊಂಡಿದೆ. ಭಾರತೀಯ ಸಂಸ್ಕೃತಿಯ ಸಂದರ್ಭದಲ್ಲಿ, ಮೊತ್ತ ಮೊದಲಲ್ಲಿ ಆವಿ ಮಾತೆಯಂಬ ಅದಿತಿ ಪ್ರಸವಿಸುತ್ತಿದ್ದಳು.

ಪೈಥಾಗೊರಾಸ ಪಂಥೀಯ ವೇದಾಂತಿ ಪ್ಲೇಟೊ, ಭೂಮಿಯನ್ನು receptacle ಎಂದಿದ್ದಾನೆ. ಧರಾ, ಧರಿತ್ರೀ, ಧರಣೀ... ಇವು ಭೂಮಿಯ ಪರ್ಯಾಯನಾಮಗಳು ಭೂಮಿ ಪಸಿರು>ಬಸಿರು ಇದ್ದಾಳೆ, ಎಂಬ ಆಲಂಕಾರಿಕ ಭಾಷೆಯು ಭೂಮಿಯ ಮೇಲೆ ಸ್ತ್ರೀತ್ವದ ಆರೋಪ ಮಾಡುತ್ತದೆ. ಭೂದೇವಿಯ ಪರ್ಯಾಯವಾದ ಅದಿತಿಯನ್ನು ಅಮೃತಸ್ಯ ನಾಭಿ (ಯೋನಿ) ರೂಪಳೆಂದು ಕಲ್ಪಿಸಿದೆ-ಈ ವೇದ! ಸ್ಥಳ ಮತ್ತು ಕಾಲ ಇವು ಒಂದರವೇ ಎರಡು ನಿಲುಮೆ; ಸ್ಥಲದ ಹೊರಗೆ ಕಾಲ-ಗತಿಗೆ ಸ್ವತಂತ್ರ ಸ್ಥಾನವಿಲ್ಲ! Space and time are functions of each other ಎಂದು ಒಬ್ಬ ತತ್ವಜ್ಞ ಹೇಳುತ್ತಾನೆ.

ಆದರೆ, ಈ ಕಾಲ-ಗತಿಯನ್ನು ಸ್ಥಲದಿಂದ ಬೇರೆಯಾಗಿ ಕಲ್ಪಿಸಲಾಗುತ್ತಿರುವಲ್ಲಿ ವಾಸ್ತವ : ಸತ್ಯಕ್ಕೆ ಅಪಚಾರ ಬಗೆಯಲಾಗುತ್ತಿದೆ. ಅಂಭೃಣೆ, ಅಥೆನಾ (ಸ್ಥಲದ) ತಂದೆ ಎಂಬ ಕಾಲವನ್ನು-ಅದು ಅಭಾವಾತ್ಮಕವಿರುವಾಗ ಉಂಟು ಎಂದು ನಂಬಿಸುವ ಈ ಪ್ರಯತ್ನವು ಆಸುರೀ ಸ್ವರೂಪದ್ದು ಆಗುತ್ತಿದೆ. ಅದಿತಿಯ (ಸ್ಥಲ : ಯೋನಿ) ಸಂದರ್ಭದ ದಕ್ಷ (ರುದ್ರ, ವಿಷ್ಣು, ತ್ವಷ್ಟಾರ...) ಆದಿತ್ಯ: ಪುರುಷ ಈ ಸಂಕೇತವು ಸ್ಥಲದ ಗತಿಯ ಸೂಚಕ-ಕಾಲಶಕ್ತಿ ಸೂಚಕ ಪ್ರತೀಕವಾಗಿದೆ! ವೇದದೊಳಗಿನ ಮೋಸದ ಎಡೆಯುಂಟು! ಈ ಮೋಸವು ಯಾತಕ್ಕಾಗಿ? (ಅ)ದಿತಿಯು ಇಂದ್ರಹನನ ಸಮರ್ಥಂ ಪುತ್ರಂ ಕಾಮಿಸಿ ಬಸಿರಾದಳು, ಎಂಬ ಪರಂಪರಾಗತ ಕಥೆಯು ಸಾಯಣ ಭಾಷ್ಯದಲ್ಲಿಯೂ ಇದ್ದುದನ್ನು, ಈ ಮೊದಲು ಹಲವು ಬಾರಿ ಹೇಳಿದ್ದಾಗಿದೆ! ಇಂದ್ರ (ಸೂರ್ಯ) ಹನನದ ಈ ಉದ್ದೇಶ ಸಿದ್ಧಿಗಾಗಿ, ಸ್ಥಲದ ಗತಿ ಸ್ವರೂಪ ಕಾಲದ ಸೂಚಕ, ಆದಿತ-ತ್ಯ (ಮಾರ್ತಾಂಡ =ಚಂದ್ರ) ಹೆಸರಿನ ದೈವತವನ್ನು ಕಲ್ಪಿಸಿದ್ದಾಗಿದೆ! ದಕ್ಷ, ರುದ್ರ, ವಿಷ್ಣು, ತ್ವಷ್ಟಾರ-ಮಹಾಭಾರತದ ತಕ್ಷಕಾದಿ ಸೃಷ್ಟಿಯ ಅಭಿಚಾರ ಕೃತ್ಯ ಜರುಗಿಸಿದ್ದನ್ನು ಗಮನಕ್ಕೆ ತಂದು ಕೊಡುವ ಪುರಾವೆ ಉಂಟು. ಈ ಆದಿತ್ಯ ವಿಷ್ಣು ಕೃಷ್ಣನು ಮಹಾಭಾರತದ ಮಾಯಾಜಾಲದ ನಾಯಕನಿರುವಂತೆ ಶ್ರೀರಾಮ-ಚಂದ್ರನು ರಾಮಾಯಣದ ಗಾರುಡಿಗನಾಗಿದ್ದಾನೆ!

ವೇದ, ಉಪನಿಷತ್ತು ಹಾಗೂ ಮಹಾಭಾರತದಲ್ಲಿ ಇಂದ್ರ (ಸೂರ್ಯ) ತತ್ತ್ವವನ್ನು ಹೇಳ ಹೆಸರಿಲ್ಲದಂತೆ ಮಾಡಿರುವ ಕೃತ್ಯಗಳಿಂದ ತೃಪ್ತಿಯಾಗದೆ, ಈ ಮೃತ್ಯು ತತ್ತ್ವೋಪಾಸಕರ ಸಂಪ್ರದಾಯವು, ರಾಮ-ಚಂದ್ರಾಯಣವನ್ನು ರಚಿಸಿತು. ರಾಮಾಯಣದ ಖಲನಾಯಕನು ರಾವಣನಲ್ಲ; ಅಹಿ : ವೃತ್ರ (ಚಂದ್ರ) ಹಂತಕನೆಂಬ ಇಂದ್ರನು, ರಾಮಚಂದ್ರಾಯಣದಲ್ಲಿ ಖಲನಾಯಕನು ಆಗುತ್ತಿದ್ದಾನೆ! ಈ ಅಂಶವು, ನನಗೆ ಇತ್ತೀಚೆಗೆ ಮೊದಲು ಗಮನಕ್ಕೆ ಬಂದದ್ದು : ಅಹಲ್ಯಾ ದ್ರೌಪದೀ ಸೀತಾ ತಾರಾ ಮಂಡೋದರೀ ತಥಾ ಪಂಚ ಕನ್ಯಾಂ ಸ್ಮರೇತ್ ನಿತ್ಯಂ ಮಹಾಪಾತಕ ನಾಶನಮ್ ಎಂಬ ಶ್ಲೋಕದ ಸಂದರ್ಭದಿಂದ! ಸಮೇರಿಯನ್ (ಚಾಂದ್ರ) ಸಂಸ್ಕೃತಿಯಲ್ಲಿ ಇದ್ದ Sacred prostitution (ಪವಿತ್ರ ವ್ಯಭಿಚಾರ) ಸಂಪ್ರದಾಯವನ್ನು ಈ ನರ(ಳ) ಸಂಪ್ರದಾಯಗಳು ತೆರೆಯ ಮರೆಯಲ್ಲಿ ಎಂತೊ ಉಳಿಸಿಕೊಂಡು ಹೊರಟಿವೆ! ಸರ್ವಾರ್ಪಣ ಭಾವದಿಂದ ಬಾಳುವೆ ಮಾಡಬೇಕು ಈ ಆದೇಶದ ಮೇರೆಗೆ ಶ್ರದ್ಧಾವಂತನು ತನ್ನ ಹೆಂಡತಿಯನ್ನು ಗುರುವಿಗೆ ಅರ್ಪಿಸಿದ ನಡೆವಳಿಯು ೧೨-೧೩ನೆಯ ಶತಕದ ಸುಮಾರಿಗೆ ಮಹಾರಾಷ್ಟ್ರ-ಕರ್ನಾಟಕದಲ್ಲಿ ಜೀವಂತವಿತ್ತು: ಎಂಬುದನ್ನು ನಿದರ್ಶನಕ್ಕೆ ತರುವ ಉಲ್ಲೇಖಗಳು ಸಾಹಿತ್ಯದಲ್ಲಿ ದೊರೆಯುತ್ತವೆ. ಲೀಲಾಚರಿತ್ರ ಹೆಸರಿನ ಕೃತಿಯಲ್ಲಿ ಶ್ರೀಚಕ್ರಧರನಿಗೆ ಗುರುಭಕ್ತಿಯಿಂದ ತನ್ನ ಹೆಂಡತಿಯನ್ನು ಅರ್ಪಿಸಿದ ಕಥೆಯಿದೆ.

ಅಹಲ್ಯೆಯ ಕಥೆ ಮಹಾಭಾರತ ಮತ್ತು ರಾಮಾಯಣ ಈ ಎರಡರಲ್ಲೂ ಇದೆ. ಆದರೆ, ಕಥೆಯ ಆಕೃತಿಯು ಬೇರೆ ಬೇರೆಯಿದೆ. ಅಹಲ್ಯಾ-ಗೌತಮರ ಮನೆಗೆ ಬಂದ ಅತಿಥಿ ಇಂದ್ರ. ತಂಗಲು ಬಂದ ಅತಿಥಿಯ ಹಾಸುಗೆಯ ಏರ್ಪಾಡು ಮಾಡುವುದು, ಗೃಹಸ್ಥಧರ್ಮ. ಗೌತಮನು ಬೆಳಿಗ್ಗೆ ಸ್ನಾನಕ್ಕೆ ಹೋಗುವ ಮೊದಲು ಮಗನಿಗೆ ಹೇಳುತ್ತಾನೆ: ನಾನು ತಿರುಗಿ ಬರುವಷ್ಟರಲ್ಲಿ ನಿನ್ನ ತಾಯಿಯನ್ನು ಕೊಂದು ಬಿಡು. ಈ ಕುಮಾರನಿಗೆ, ದಿಗಿಲು ತಂದೆಯ ಅಪ್ಪಣೆ ಪಾಲಿಸಬೇಕೆ? ಬಾರದೆ? ಯಾರು ಹೆಚ್ಚು? ತಂದೆಯೊ, ತಾಯಿಯೊ? ಉತ್ತರಗಳು ಸ್ಪಷ್ಟವಾಗದೆ ಆ ತರಳನು ತೆಪ್ಪಗೆ ಇದ್ದನು. ತಂದೆಯು ಸ್ನಾನಮುಗಿಸಿ ಬರುತ್ತಾನೆ; ಮಗನನ್ನು ಕೇಳುತ್ತಾನೆ:

ತಾಯಿಯನ್ನು ಕೊಂದೆಯಾ-ಎಂದು. ಆ ಯುವಕನು ನಿಜವಿದ್ದುದನ್ನು-ತಂದೆ ಹೆಚ್ಚೊ? ತಾಯಿಯು ಹೆಚ್ಚೊ? ಈ ತೊಡಕಿನಲ್ಲಿ-ನನಗೆ ತಾಯಿಯೇ ಹೆಚ್ಚು ಎಂದು ಎನಿಸಿ, ತೆಪ್ಪಗೆ ಇದ್ದೇನೆ ಎಂದನು. ಆಗ ಗೌತಮನು ಹೇಳುತ್ತಾನೆ: ಒಳ್ಳೆಯ ಕೆಲಸ ಮಾಡಿದೆ; ನಾನು ಸಂಪ್ರದಾಯದಂತೆ ನಡೆಯಬೇಕೆಂಬ ಕಟ್ಟಿಗೆ ಸಿಕ್ಕಿ ಬಿದ್ದು, ನಿಮ್ಮ ತಾಯಿಯನ್ನು ಅತಿಥಿ ಸೇವೆಗೆ ಕಳಿಸಿದೆ. ಇದು ಅವಳ ತಪ್ಪಲ್ಲ ಅಪರಾಧಿ ನಾನು.*

ರಾಮಾಯಣದಲ್ಲಿ ಬರುವ ಕಥೆ, ಮಹಾಭಾರತದ ಕಥೆಗಿಂತ ತೀರ ಬೇರೆ ಇದೆ. ಇಂದ್ರನು ಬುದ್ಧಿಪೂರ್ವಕವಾಗಿ ಈ ಜಾರಕರ್ಮ ಮಾಡುತ್ತಾನೆ, ಎಂಬ ಹಾಗಿನ ವರ್ಣನೆಯಿಂದೆ. ವೇದದಿಂದ ತೊಡಗಿ ರಾಮಾಯಣದ ವರೆಗಿನ ಸಾಹಿತ್ಯದಲ್ಲಿ ದೊರೆವ ಇಂದ್ರ (ಸೂರ್ಯ) ಹನನದ ದಾಖಲೆಗಳ ತುಲನಾತ್ಮಕ ಸಮೀಕ್ಷೆಯ ಪ್ರಬಂಧವನ್ನು ಪ್ರಕಟಿಸಿ, ವೈವಸ್ವತಮನು-ಸವಿತೃವಿನ ಪರ್ಯಾಯ ಇಂದ್ರನ ಸಾಂಸ್ಕೃತಿಕ ಋಣವನ್ನು ಅಂಶತಃ ಆದರೂ ತೀರಿಸುವುದು ಭಾರತೀಯರ ಕರ್ತವ್ಯವೆಂದು ನನಗೆ ಎನಿಸಿದೆ.

ಅದಿತಿ-ಆದಿತ್ಯ ಸಂಪ್ರದಾಯದ ಪ್ರಸ್ಥಾಪಕರು, ನಾಗ: ಲಿಂಗನನ್ನು ಪ್ರಜ್ಞಾಯುಕ್ತ ಮನಃ ತತ್ತ್ವದ ಬಂಧನದಿಂದ ಮುಕ್ತಗೊಳಿಸಿದುದರ ಫಲಿತ : ಮಾನವ ಧರ್ಮವು ತನ್ನ ಬೆಲೆಗೆ ಎರವಾಯ್ತು. ಅಹಿಹಂತಕ ಇಂದ್ರನು ಖಲನಾಯಕನಾದನು. ಮನು-ಜನು ನರ(ಳ) ನಾಗಿರುವ ಎಚ್ಚರವೂ ಇಲ್ಲದಾಗಿದೆ! ಅಹಲ್ಯಾ, ದ್ರೌಪದಿ, ಸೀತಾ, ತಾರಾ, ಮಂಡೋದರಿ ಈ ಸಂಕೇತಗಳು ಅಮೃತಸ್ಯ ನಾಭಿ ಸ್ವರೂಪ ಅದಿತಿಯ ಪರ್ಯಾಯ ಪ್ರತಿಮೆಗಳೇ ಆಗಿವೆ. ಇದು ಸುಳ್ಳು ಆರೋಪ- ಎಂದು ಎನ್ನುವವರೂ ಇದ್ದಾರೆ.

ಅ-ಹಲ್ಯಾ, ದ್ರೌಪದೀ, ಸೀತಾ, ತಾರಾ, ಮತ್ತು ಮಂಡೋದರಿ

ಸೀತಾ ಭೂಮಿಪುತ್ರಿ : ಸ್ಥಲ ಸ್ವರೂಪಳು. ಅ-ಹಲ್ಯಾ=ನೇಗಿಲು ತಾಗದ ಭೂಮಿ:ಕುಮಾರಿ ಎಂಬ ಅರ್ಥ ಹೇಳಲಾಗುತ್ತದೆ. ಮಧ್ವಾಚಾರ್ಯರು ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಬರೆಯುತ್ತಾರೆ: ದ್ರೌಪದಿಯು ಕಾಲೀ, ಚಂದ್ರಾ ಪರ್ಯಾಯಳು ಎಂದು. ತಾರಾ ಬುಧನ ತಾಯಿ ಇವಳು ವ್ಯಭಿಚಾರಿಣಿ. ಮಂಡೋದರಿ ಮಂಡ-ಉದರಿ ಈ ಹೆಸರು ಅಮೃತಸ್ಯನಾಭಿಃ ಸಂಕೇತದ ಪರ್ಯಾಯವಾಗಿದೆ! ಪ್ರಧಾನಾಂಗಕ್ಕೆ ಪ್ರಾಶಸ್ತ್ಯವಿರುವ ಅಂಗನೆಯರು ಇವರು. ಸೀತೆಯ ಪಾತಿವ್ರತ್ಯದ ಸಂದರ್ಭದಿಂದ, ವಿಚಾರವು ಪ್ರಸ್ತುತವಿದೆ. ಸೀತೆಯ ಪ್ರಚಾರತಂತ್ರವು ನಂಬಿಸಿರುವಷ್ಟು ಉಗ್ರ ಪತಿವ್ರತೆ ಅಲ್ಲ, ಎಂಬುದನ್ನು ಒಪ್ಪಲೇಬೇಕಾಗುತ್ತದೆ. ಇವಳ ಇನ್ನುಳಿದ ಸಂಗಾತಿಗಳಿಂದಾಗಿ. ಸೀತೆ : ಶ್ರೀರಾಮ-ಚಂದ್ರನ ಪತ್ನಿ. ಮಂಡೋದರಿ : ದಶಮುಖ ರಾವಣನ ಮಡದಿ. ಕಃ (ಬ್ರಹ್ಮ) ದಂಡ ಧಾರಿ ರಾಮನು ದಶಾಂಗುಲ ಅನಿಮಿಷದೇವನೆಂದು ಈ ಸಂಕೇತಗಳ ಮೂಲಕ ವ್ಯಕ್ತವಾಗುತ್ತದೆ. ಅಮೃತಸ್ಯ ನಾಭಿಃ ರೂಪ ಮಂಡ-ಉದರಿಯ ಪತಿ, ದಶಮುಖನೂ ಲಿಂಗದೇವನೇ ಆಗುತ್ತಾನೆ. ಆದಕಾರಣ, ರಾಮ-ರಾವಣರ ವೈರ, ಇದು ಒಂದು ಮೋಸ. ರಾವಣಪುತ್ರನ ಹೆಸರು ಇಂದ್ರಜಿತ್ : ಇಂದ್ರನನ್ನು ಗೆದ್ದವೀರ! ಈ ರಾವಣನು ಅಸುರನು ಆದಕಾರಣ, ಇಂದ್ರಶತ್ರು. ಸೂರ್ಯನ ಪರ್ಯಾಯರೂಪ ಇಂದ್ರನ ಶತ್ರು ಚಂದ್ರನೇ ಆಗುತ್ತಾನೆ.

ಪ್ರಚಲಿತ ವೇದವು, ಮೂಲ ಸೌರ: ಮಾನವ ಸಂಪ್ರದಾಯದ ವೇದವಲ್ಲ. ಇದು ನಾಗ : ಲಿಂಗೋಪಾಸಕ

---

* ಗೌತಮ ಎಂಬ ಹೆಸರಿನ ಕಥಾನಕಗಳು ಹಲವಿವೆ. ಅಹಲ್ಯೆಯ ಗಂಡ ಗೌತಮ ಬೇರೆ. ಗೌತಮನೆಂಬ ಋಷಿ ಇದ್ದಾನೆ. ವೃದ್ಧತಪಸ್ವಿನಿಯನ್ನು ಮದುವೆಯಾದ ಗೌತಮ ಇದ್ದಾನೆ. ಗೌತಮನೆಂಬ ಬ್ರಾಹ್ಮಣನೊಬ್ಬನಿದ್ದ. ತರ್ಕಶಾಸ್ತ್ರ ರಚಿಸಿದ ಗೌತಮ ಮುನಿ ಇದ್ದಾನೆ. ಕೃತಾಚಾರ್ಯನಿಗೆ ಗೌತಮನೆಂದೇ ಹೆಸರು. ಶಂಬಾ ಅವರು ಇಲ್ಲಿ ಹೇಳುವ ಕಥಾನಕವು ಭಾಗವತದಲ್ಲೂ ದೇವೀ ಭಾಗವತದಲ್ಲೂ ಬರುತ್ತದೆ. "ಗೌತಮ ಗೋತ್ರದ ಮೇಧಾತಿಥಿಗೆ ಗೌತಮನೆಂಬ ಹೆಸರೇ' ಉಂಟು. ಈತ ಹೆಂಡತಿಯ ಮೇಲೆ ಕಾರಣವಿಲ್ಲದೆ ಕೋಪಗೊಳ್ಳುತ್ತಾನೆ. ತನ್ನ ಮಗ ಚಿರಕಾರಿ ಕರೆದು ಆಕೆಯ ತಲೆ ಕಡಿಯುವಂತೆ ಅಪ್ಪಣೆ ಮಾಡುತ್ತಾನೆ. ಗೌತಮನಿಗೆ ತನ್ನ ತಪ್ಪಿನ ಅರಿವು ಆಗುತ್ತದೆ. ಅವನು ಪತ್ನಿಯನ್ನು ಅನುಗ್ರಹಿಸುತ್ತಾನೆ" ಇದಿಷ್ಟು ಸ್ಥೂಲಕತೆ. (ಸಂ)

ಅಸುರ ಸಂಪ್ರದಾಯದ ವೇದವಾಗಿದೆ. ಈ ವೇದವು ೨೮ ಬಾರಿ ಪರಿಷ್ಕೃತವಾಗಿದೆ ಎಂದು ವಿಷ್ಣುಪುರಾಣದಿಂದ ಗೊತ್ತಾಗುತ್ತಿದೆ. ನಾಗ-ಶಯನನೆಂಬ ವಿಷ್ಣುವು : ಅಹಿವೃತ್ತನ ಪರ್ಯಾಯ ರೂಪ. ಉಪೇಂದ್ರನು ಇಂದ್ರನನ್ನು ನೆಲಕ್ಕೆ ಮೆಟ್ಟಿ ತಾನೇ ತಾನಾಗಿ ಮೆರೆಯುತ್ತಿದ್ದಾನೆ. ಈ ಹಿನ್ನೆಲೆಯಲ್ಲಿ ವಿಷ್ಣು ಸಂಪ್ರದಾಯವೇ ಮೂಲ ವೈವಸ್ವತ ಮಾನವಧರ್ಮದ ವೇದವು ವ್ಯತ್ಯಸ್ತವಾಗಿರಲಿಕ್ಕೆ ಕಾರಣವಾಗಿರಬೇಕು, ಎಂಬ ತೀರ್ಪು ಅನಿವಾರ್ಯವಾಗುತ್ತದೆ.

ಭಾರತೀಯ ಸಂಸ್ಕೃತಿಯೊಳಗಿನ ಇಬ್ಬರು ಮನುಗಳ ಸಮಸ್ಯೆಯ ಮೂಲಕವೂ ಮೇಲಣ ನಿಷ್ಕರ್ಷವು ದೃಢಪಡುತ್ತಿದೆ. ಮನು : ವೈವಸ್ವತನನ್ನು ಹಿಂದಿಕ್ಕಲು ಸೃಷ್ಟಿಸಲ್ಪಟ್ಟಿರುವ ಮನು : ಸ್ವಯಂಭೂ>ಸ್ವಾಯಂಭುವನ ಸಮೀಕ್ಷೆಯಲ್ಲಿ ಇವನು ಚಂದ್ರನೆಂಬ ಸಂಗತಿ ಹೊರವಡುತ್ತಿದೆ, ಮನುಗಳಲ್ಲಿ ವೈವಸ್ವತ ಮನುವು ಸೌರನಿದ್ದರೆ, ಇವನನ್ನು ಹಿಮ್ಮೆಟ್ಟಿಸಲು ತಲೆಯೆತ್ತಿರುವ ಸ್ವಯಂಭೂಮನು ಚಾಂದ್ರನೆ ಇರಬಲ್ಲನು. ಈ ಇಬ್ಬರು ಮನುಗಳಲ್ಲಿ ಸ್ವಾಯಂಭುವ>ಸ್ವಯಂಭುವಮನು ಅದಿತ-ಆದಿತ್ಯ ಸಂಪ್ರದಾಯದವರ ಕೈವಾಡವಾಗಿದೆ. ಈ ಸ್ವಯಂಭುವಮನು ಯಾರು, ಎಂಬ ಬಗೆಗೆ ಈ ಹಿನ್ನುಡಿಯಲ್ಲಿಯೇ ಈಶಾವಾಸ್ಯದ ಸಂದರ್ಭದಲ್ಲಿ ಸ್ಪಷ್ಟೀಕರಿಸಿದ್ದಾಗಿದೆ. ಇವನು ಕೃತಕ ಮನುವು : ಇಲ್ಲದೆ ಇರುವುದನ್ನು ಉಂಟು ಎಂದು ನಂಬಿಸುವ ಮೋಸದ ಪ್ರಯತ್ನವು ಇಲ್ಲಿದೆ.

ಈ ಬಗೆಯ ಮೋಸದ ಪುರಾವೆ ತಯಾರಿಸುವಲ್ಲಿ ವಿಷ್ಣುಸಂಪ್ರದಾಯವು ಎತ್ತಿದ ಕೈ ಎಂಬ ಮಾತು, ಹೊರವಟ್ಟಿದೆ. ಬುಹ್ಲರ್ ಬರೆಯುತ್ತಾನೆ : The fifth class of smrities or that containing the forgeries... ಇಂದಿನ ವೇದೋಪನಿಷತ್ತುಗಳು ನಾಗ : ಲಿಂಗ ಸಂಪ್ರದಾಯದ ಭೂಮಿಕೆಯ ಬಗೆಗೆ ವಿಶ್ವಾಸ ಹುಟ್ಟಲು ಮಾಡಲಾಗಿರುವ Forgery ಹೀಗೆ ಬಯಲಿಗೆ ಬರುತ್ತದೆ. Forgery, Tampering, Fraud ಈ ಬಗೆಯ ಅಪರಾಧಗಳನ್ನು ತಮ್ಮ ಪಕ್ಷ, ಪಂಥ, ಸಂಪ್ರದಾಯದ ಭದ್ರತೆಗಾಗಿ ಮಾಡುವಲ್ಲಿ, ಭಾರತೀಯರಿಗೆ, ಇಂದಿನ ವೇದೋಪನಿಷತ್ತುಗಳೇ ಜ್ಞಾತಾಜ್ಞಾತ ಪ್ರೇರಕಶಕ್ತಿಯಾಗಿರುವ ಶಕ್ಯತೆಯುಂಟು. ಈ ವೇದದಲ್ಲಿ ಕಾಣಲು ದೊರೆವ ಬೇರೆ ಬೇರೆ ಕಡೆಯ ನಾಗ: ಲಿಂಗ ಸಂಪ್ರದಾಯಗಳ ಪ್ರಭಾವ ಸೂಚಕ ಸಂಕೇತ, ಪ್ರತಿಮೆಗಳೂ ಸಮೀಕ್ಷಾರ್ಹವಾಗಿವೆ. ಸುಮೇರಿಯನ್ ಹಾಗೂ ಈಜಿಪ್ತಿನ ಹೋಲಿಕೆಯ ವಿಚಾರವು ಈ ಮೊದಲು ಸ್ವಲ್ಪ ಬಂದಿದೆ. ಗ್ರೀಕ್ ಸಂಸ್ಕೃತಿಯೊಳಗಿನ ಸಾಮ್ಯದ ಮಾತೂ ಆಗಾಗ ಅಲ್ಲಲ್ಲಿ ಬಂದಿದೆ.

ಮೂಲ ಸೌರ ಋಗ್ವೇದವು ತಿರುವು ಮುರುವು ಆಗುವಲ್ಲಿ ಸೈಂಧವ ಸಂಸ್ಕೃತಿಯ ಪ್ರಭಾವವೇ ಪ್ರಧಾನ ಕಾರಣವಾಗಿದೆ. ಸೈಂಧವ ಸಂಸ್ಕೃತಿಯು, ಸುಮೇರಿಯನ್ ತಂಗಿ ಅಥವಾ ಮಗಳು ಆಗಿರುವುದಾಗಿ ಟಾಯನ್‌ಬಿ ಹೇಳುತ್ತಾನೆ. ಆದರೆ, ಸೈಂಧವ ಸಂಸ್ಕೃತಿಯ ಒಂದು ವೈಶಿಷ್ಟ್ಯವು ಅವನ ಗಮನಕ್ಕೆ ಬರದೆ ಹೋಗಿದೆ. ಪುರಾತನ ಸುಮೇರಿಯನ್-ಅಸ್ಸೀರಿಯಾ, ಈಜಿಪ್ತ ಸಂಸ್ಕೃತಿಗಳು ಶುದ್ಧ ಐಹಿಕ ಭೋಗವಾದಿಯಾಗಿದ್ದವು. ಆದರೆ, ಸೈಂಧವ ಸಂಸ್ಕೃತಿಯಲ್ಲಿ ಭೋಗವಾದವು, ಪಾರಲೌಕಿಕ ಸಿದ್ಧಿಗಳ ಸಾಧಕರ, ಸನ್ಯಾಸಿ, ಯತಿ-ಮುನಿಗಳ ಸಂಪ್ರದಾಯ ವಾಗತೊಡಗಿದ್ದನ್ನು ಟಾಯನ್‌ಬಿ ಲೆಕ್ಕಿಸಿಲ್ಲ. ಸೈಂಧವ ಸಂಸ್ಕೃತಿಯ ಉತ್ಖನನದ ಅಧಿಕಾರಿಯಾಗಿದ್ದ ಶ್ರೀ ರಮಾಪ್ರಸಾದ ಚಂದಾ ಅವರ ಗಮನ ಸೆಳೆದಿರುವ ಮೌಲಿಕ ಸಂಗತಿಯೆಂದರೆ. ಯತಿ-ಮುನಿ ಸಂಪ್ರದಾಯದ ಮೂಲವು ಸೈಂಧವ ಸಂಸ್ಕೃತಿಯಲ್ಲಿ ಉಂಟು : ಎಂಬುದು. ಅಹಿಹಂತಕನೆಂಬ ಇಂದ್ರನಿರುವ ವೇದದಲ್ಲಿ ಯತಿ-ಮುನಿ ವರ್ಗಕ್ಕೆ ಸ್ಥಾನವಿರಲು ಶಕ್ಯವಿಲ್ಲ. ಇಂದ್ರನು ಯತಿಗಳನ್ನು ಕೊಂದು ಶಾಲ-ವೃಕಗಳಿಗೆ ಹಾಕಿದನು, ಎಂಬ ವರ್ಣನೆ ಈಗಿನ ವೈದಿಕ ಸಾಹಿತ್ಯದಲ್ಲಿಯೂ ಉಂಟು.

ವೇದದಲ್ಲಿ, ಮೋಕ್ಷ ಪರಾಯಣರಾದ ಮುನಿಗಳು ಇದ್ದಾರೆ. ಮುನಿಃ ಮೋಕ್ಷ ಪರಾಯಣಃ ಎಂದು ಗೀತೆ ಹೇಳುತ್ತದೆ. ಮುನೀನಾಂ ವ್ಯಾಸಃ ಅಹಂ ಎಂದೂ ಗೀತೆಯ ಭಗವಂತ ಹೇಳಿದ್ದಾನೆ. ಆದಕಾರಣ ಈ ವ್ಯಾಸನನ್ನು ಋಷಿ ಎಂದು ಬಗೆಯಲು ಆಗುವುದಿಲ್ಲ, ವ್ಯಾಸ ರಚಿತವೆಂಬ ಮಹಾಭಾರತವು ಮೋಕ್ಷಮಾರ್ಗ ಪ್ರತಿಪಾದಕ ಗ್ರಂಥವೆಂದು ಬಗೆಯಲಾಗುತ್ತದೆ. ವೇದದೊಳಗಿನ ಸಪ್ತರ್ಷಿ ಹೆಸರಿನ ಮುಸುಕಿನಲ್ಲಿ ಮುನಿ ಅಡಗಿದ್ದು ಸಪ್ರಮಾಣವಾಗಿ

ಸಿದ್ಧವಾಗುತ್ತದೆ. ಅಕೂಪಾರೇ ಸಲಿಲೇ ಮಾತರಿಶ್ವಾ ಈ ವರ್ಣನೆಯ ಸಲಿಲದ ತಡಿಯಲ್ಲಿ 'ಸಪ್ತರ್ಷಯಃ ತಪಸೇ ನಿಷೇದುಃ' ಜಲಾಶಯದ ತಟದಲ್ಲಿ ತಪಸ್ಸಿಗೆ ಕುಳಿತರೆಂಬ ಈ ಸಪ್ತರ್ಷಿಗಳು ಮುನಿವರ್ಗದವರೇ ಹೊರತು ಋಷಿ ಸಂಪ್ರದಾಯದವರು ಇವರಲ್ಲ.

ಹೀಗೆ ಋಷಿ ಮತ್ತು ಮುನಿ-ಯತಿಗಳ ನಡುವಣ ಅಂತರವು ಇಲ್ಲವಾದ ಈ ಋಗ್ವೇದವು ಯತಿ-ಮುನಿಗಳ ಪ್ರಭಾವ ಇದ್ದು ಎದ್ದು ಕಾಣುತ್ತದೆ. ಸೈಂಧವ ಸಂಸ್ಕೃತಿಯಲ್ಲಿ, ನಾಸಿಕಾಗ್ರದೃಷ್ಟಿಯ ಧ್ಯಾನಮಗ್ನ ಯತಿ-ಮುನಿಯ ಪ್ರತಿಮೆ ದೊರೆತಿದೆ! ಸುಮೇರಿಯನ್, ಈಜಿಪ್ಟ್, ಗ್ರೀಕಿನಲ್ಲಿ ಸಹ ಈ ಯತಿ-ಮುನಿ ವರ್ಗವನ್ನು ಹೋಲುವ ಪಂಥವು ಮೈವೆತ್ತುದು ಇನ್ನೂ ಬೆಳಕಿಗೆ ಬಂದಿಲ್ಲ. ಆದಕಾರಣ, ಆಮರಣ ಕುಮಾರೀ-ಕುಮಾರ ಸಂಪ್ರದಾಯದ ವಿರಕ್ತ ಸನ್ಯಾಸ ಪಂಥವು ಸೈಂಧವ ಸಂಸ್ಕೃತಿಯಲ್ಲಿಯೇ ಮೊದಲು ಬಾರಿ ಮೈವೆತ್ತಿತು ಎಂದು ಉಪಲಬ್ಧ ಪ್ರಮಾಣಗಳ ಬಲದಿಂದ ಹೇಳಬೇಕಾಗುತ್ತದೆ. ಸೈಂಧವಸಂಸ್ಕೃತಿಯಲ್ಲಿ ಯೋಗಾರೂಢ ಒಂದು ಪ್ರತಿಮೆ ಪಶುಗಳ ನಡುವೆ ಇದ್ದದು ಬೆಳಕಿಗೆ ಬಂದಿದೆ. ಇದನ್ನು ಪಶುಪತಿ ಚಿತ್ರ ಎಂದು ಬಗೆಯಲಾಗಿದೆ.

ಇವೆಲ್ಲಕ್ಕಿಂತಲೂ ಮೌಲಿಕ ಪ್ರಮಾಣವು ನವಪರ್ಣಗಳ ಪಿಪ್ಪಲ (ಅರಳೆ) ವೃಕ್ಷ ಪಿಪ್ಪಲದ ವರ್ಣನೆ ಋಗ್ವೇದದಲ್ಲಿಯೂ ಒಂದೆಡೆಯಲ್ಲಿ ಉಂಟು. ಆದರೆ, ಇಲ್ಲಿ ಎಲೆಗಳ ಉಲ್ಲೇಖವಿಲ್ಲ! ಎರಡು ಸುಪರ್ಣ ಪಕ್ಷಿಗಳ ಆ-ಲಿಂಗನದ ಸಮಾನ ವೃಕ್ಷ ಇದು; ಬಡ್ಡಿ ಎಲೆಗಳಿಲ್ಲದ್ದರಿಂದ. ಸಾಯಣರು ಇದನ್ನು ಆದಿತ್ಯ ವೃಕ್ಷ ಎಂದಿದ್ದಾರೆ.[೩೧] ಗೀತೆಯಲ್ಲಿ ಇದನ್ನು ಪುರುಷ ಅಶ್ವತ್ಥವೃಕ್ಷ ಎಂದುದಾಗಿದೆ.

ಈ ವೇದದ ಪುರುಷನು ಒಂದು ಬಗೆಯಲ್ಲಿ ಸೈಂಧವ ಸಂಸ್ಕೃತಿಯ ಕೊಡುಗೆ. ಋಗ್ವೇದದಲ್ಲಿ ಆದಿತ್ಯ ವೃಕ್ಷವಾದದ್ದು, ಸೈಂಧವ ಸಂಸ್ಕೃತಿಯ ಅದಿತಿ : ಆದಿಮಾತೆಯ ವೃಕ್ಷವಾಗಿತ್ತು. ಸ್ಥಲದ-ಮಂಡಲದ ಪೂಜೆಯ, ಕುಮಾರೀ ಉಪಾಸನೆಯ ಯುಗವು ಹಿಂದೆ ಬಿದ್ದು ಕಾಲ : ಗತಿಯ ನಾಗ : ಲಿಂಗನ ಕುಮಾರ ಪೂಜೆಯ ಯುಗವು ಪ್ರಾರಂಭವಾದದ್ದು ಈ ತುಲನೆಯಲ್ಲಿ ಹೊರವಡುತ್ತದೆ. ಅಹಿಹಂತಕ ಇಂದ್ರನು ಕಾಣೆಯಾಗಿ, ಆ ಸ್ಥಾನದಲ್ಲಿ ಪುರುಷ : ಪುರಿಶಯ ಉಪಾಸನೆಯು ಶಿಷ್ಟಮಾನ್ಯವಾದದ್ದು ಕಂಡು ಬರುತ್ತದೆ.

ಕೊನೆಯ ಮಾತು :

ಈ ಅನ್ವೇಷಣೆಯ ಮೂಲಕ ಭಾರತೀಯ ಸಂಸ್ಕೃತಿಯ ಸಂದರ್ಭದಿಂದ ಜಾಗತಿಕ ಸಂಸ್ಕೃತಿಗಳಲ್ಲಿಯೂ ತಳಪಾಯದಲ್ಲಿ ಇರುವ ಸನಾತನ ವೈಚಾರಿಕ ಆಕೃತಿಯು ಅರಿಕೆಗೆ ಬರುತ್ತಿದೆ.

೧. ಋತ: ಸತ್ಯಸ್ವರೂಪೀ ವಿಶ್ವನಿಯಮರೂಪ ಪ್ರಕಾಶತತ್ವದ ಆಕೃತಿ

೨. ನಾಗ:ಲಿಂಗಶಕ್ತಿಯ ಆಪ:ರಸ: ರೇತಸ್ವರೂಪ ಅರ್ಥ ಶೂನ್ಯ ಅಥವಾ ಶೂನ್ಯ ಅರ್ಥದ ಕತ್ತಲಿನ ಆವರಣದೊಳಗಿನ ಆಕೃತಿ.

ಹೀಗೆ ಇವೆರಡನ್ನೂ ಸನಾತನ ಆಕೃತಿ ಎಂದರೂ ಮೊದಲನೆಯದು ಋತ=ಸತ್ಯ=ಪ್ರಕಾಶರೂಪ. ಇದು ಉಂಟು. ಆದರೆ ಎರಡನೆಯದು ಉಂಟು-ಇಲ್ಲ; ಇಲ್ಲ- ಉಂಟು ಎಂಬೀ ಬಗೆಯಲ್ಲಿ ಅಭಾವವೇ ಸ್ಥಾಯೀ ಆಗಿ ಪರಿಣಮಿಸುತ್ತಿರುವ ಆಕೃತಿ ಇದು ಅನೃತ. ಇಂತು ಈ ಬಾಳು ಸತ್ಯ (ಪ್ರಕಾಶ), ಅನೃತ (ಕತ್ತಲು) ಇವೆರಡರ ಸಮ್ಮಿಶ್ರಣವಾಗಿದೆ. ಆದರೆ, ಅನೃತದೊಡನೆ ಸತ್ಯವನ್ನು ಬೆರೆಸಿ ಸಂಭ್ರಮವನ್ನುಂಟುಮಾಡುವ ಬಗೆ ಆಸುರೀ ಕೃತಿ ಎನಿಸುತ್ತದೆ. ಸಂಗೀತದಂತೆ ಜೀವನ ಸಂಗೀತದಲ್ಲಿಯೂ ಹುಸಿತಾಳಕ್ಕೆ-ಅನೃತಕ್ಕೆ-ಒಂದು ಪರಿಮಿತಿಯಲ್ಲಿ ಇಂಬು ಉಂಟೇ ಉಂಟು. ಇದು ಮನು-ಜ : ಮಾನವ ಸಂಪ್ರದಾಯದ ಕೃತಿ ಎನಿಸುತ್ತದೆ.

ಯತ್ ರೋಚತೇ ತತ್ ಗ್ರಾಹ್ಯಮ್

ಟಿಪ್ಪಣಿಗಳು

೧. ***ಋಗ್ವೇದ ಸಂಹಿತೆ*** X.೭೨.

೨. ***ಅದೇ*** X.೭೨. ೭. ೮. ೯

೩. ***ಅದೇ*** I. ೩.೪

೪. ***ಬೃಹದಾರಣ್ಯಕೋಪನಿಷತ್ತು*** ೬.೫.೩

೫. ***ಋಗ್ವೇದ ಸಂಹಿತೆ*** II ೨೧.೬

೬. ***ಅದೇ*** II ೨೭.೯

೭. ***ಅದೇ*** X. ೬೩. ೪

೮. ***ಬೃಹದಾರಣ್ಯಕೋಪನಿಷತ್ತು*** ೧. ೨೫

೯. ***ಋಗ್ವೇದ ಸಂಹಿತೆ*** X. ೫೧

೧೦. ***ಬೃಹದಾರಣ್ಯಕೋಪನಿಷತ್ತು*** ೨.೨.೩

೧೧. B. Kuzenetsoy ***Albert Einstein*** p. 54

೧೨. ***ibid*** p. 55

೧೩. ***ibid*** 57

೧೪. B Kuzenetsoy. ***Albert Einstein*** Page. 56

೧೫. ***The Living thought Library:*** Cassall & Co.

೧೬. ***ಬೃಹದಾರಣ್ಯಕೋಪನಿಷತ್ತು*** ೨.೪.೫

೧೭. Kane. P.V. ***History of Dharma Sastra*** vol V Part II p. 857

೧೮. ***ಋಗ್ವೇದ ಸಂಹಿತೆ*** VIII. ೯೯. ೧೦೦

೧೯. ***ಮೈತ್ರಾಯಣೀ ಉಪನಿಷತ್ತು*** ೬.೩೫

೨೦. ೩೦-೧-೧೯೩೭ರ ಸಂಚಿಕೆ, ಪುಟ ೪೦೫

೨೧. ***ಬೃಹದಾರಣ್ಯಕೋಪನಿಷತ್ತು*** ೬.೫.೩

೨೨. ***ಜೈಮಿನೀಯೋಪನಿಷತ್ತು*** ೪.೧೧.೧

೨೩. ***ಛಾಂದೋಗ್ಯೋಪನಿಷತ್ತು*** ೩.೧೪.೧

೨೪. ***ಯಾಸ್ಕನನಿರುಕ್ತ*** ೬.೨೬. ಅಥರ್ವವೇದ ೧೧.೪.೧೫

೨೫. ***ಋಗ್ವೇದ ಸಂಹಿತೆ*** I. ೬೪

೨೬. ***ಅದೇ*** X. ೧೧೪. ೫

೨೭. ***Gods and Myths of northern Europe;*** A Pelican Original, Page 90, 1974

೨೮. ***ibid*** P. 138

೨೯. ***ibid*** p. 139

೩೦. ***ಭಗವದ್ ಗೀತಾ*** ೧೧-೩೨

೩೧. ***ಋಗ್ವೇದ ಸಂಹಿತೆ*** ೧೬೪. ೨೧

ಜೀವನದ
ಅರ್ಥಗ್ರಹಣ ಪದ್ಧತಿ

ಅರಿಕೆ

ಮನು, ಮಾನವ ಸಂಸ್ಕೃತಿಯನ್ನು ಗ್ರಹಿಸಿಕೊಳ್ಳಲು, ಯಾವ ಪೂರ್ವ ಗ್ರಹೀತಗಳಿಲ್ಲದೆ, ಮಾನವ ಪ್ರಾದುರ್ಭಾವದ (Evolution of man) ಶೋಧಕರಾದ ಡಾರ್ವಿನ್ ಮತ್ತು ವ್ಯಾಲ್ಲಾಸರನ್ನು ಸ್ಮರಿಸಿಕೊಂಡು ಹೊರಟದ್ದಾಯ್ತು. ಆದರೆ, ಈ ಇಬ್ಬರ ಭೂಮಿಕೆಯಲ್ಲಿ ತುಂಬ ವ್ಯತ್ಯಾಸವಿತ್ತು. ಡಾರ್ವಿನ್ನನು ಹೊರಟದ್ದು ಸ್ಥಳ/ ಕಾಲ ಪರಿಸರದ ಸೂಕ್ಷ್ಮ ಅವಲೋಕನದ ದಾರಿಯಿಂದ. ಆದರೆ ಸ್ಥಳ/ಕಾಲ ಪರಿಸರವು, ಟಿಟಾನ್ : ಭೌಮಾಸುರ; ನಾಗ/ಲಿಂಗನ ರಾಜ್ಯ ಎಂಬುದು ಅವನಿಗೆ ಗೊತ್ತೇ ಇರಲಿಲ್ಲ! ಡಾರ್ವಿನ್ನನ ನಿಷ್ಕರ್ಷವೂ ಈ ಸ್ಥಳ ಕಾಲದ ಪಾತಳಿಗೆ ಸುಸಂಗತವಾದದ್ದೇ ಉಂಟು! ಮಂಗನಿಂದ ಮಾನವ! ಆದರೆ, ವ್ಯಾಲ್ಲಾಸನು ಮಾನವ ಪ್ರಾದುರ್ಭಾವ ಆದದ್ದು ಹೇಗೆ ಎಂಬ ಕುತೂಹಲದವನಾಗಿದ್ದನು. ಸ್ಥಳ/ ಕಾಲದ ಸಂದರ್ಭದಿಂದಲೇ ಸಂಶೋಧನವನ್ನು ಪ್ರಾರಂಭಿಸಿದ್ದರೂ ಮಂಗನಿಂದ ಮಾನವ ಈ ಸಮೀಕರಣವು ಅವನಿಗೆ ಸ್ವಲ್ಪವೂ ಹಿಡಿಸಲಿಲ್ಲ. ಮಾನವನ ಮನಸ್ಸು ಮತ್ತು ಭಾಷೆಯು ಸ್ಥಳ/ಕಾಲ ಪರಿಸರದಲ್ಲಿ ಇಲ್ಲದ್ದು ಎಲ್ಲಿಂದ ಬಂತು? ಎಂಬ ಸಮಸ್ಯೆ ವ್ಯಾಲ್ಲಾಸನದ್ದು. ಆದರೆ, ಇತ್ತೀಚೆಗೆ ಡಾ. ಕ್ರೋಬರ್ ಎಂಬ ಮಾನವಶಾಸ್ತ್ರಜ್ಞ ನಿಷ್ಕರ್ಷದ ಮೇರೆಗೆ ವ್ಯಾಲ್ಲಾಸನ ಮತಕ್ಕೆ ಪುಷ್ಟಿದೊರೆಯುತ್ತದೆ!

ಡಾರ್ವಿನ್ನನ Natural Selection ಈ ಸೂತ್ರದಂತೆ ಸ್ಥಳ/ಕಾಲ ಪರಿಸರದ ಪಾತಳಿಯ ಮೇಲೆ ಇಲ್ಲದ ಮನಸ್ಸು ಸ್ಪಷ್ಟೀಕರಣವನ್ನು ಪಡೆಯುತ್ತಿಲ್ಲ. ಡಾರ್ವಿನ್ ಮತ್ತು ವ್ಯಾಲ್ಲಾಸರು, ಭಾರತೀಯ ಸಂಸ್ಕೃತಿಯೊಳಗಿನ ದಕ್ಷಿಣ ಕಪರ್ದ: ವಸಿಷ್ಠ ಮತ್ತು ವಿಶ್ವಾಮಿತ್ರರಂತೆ ಇರುವುದಾಗಿ ಎನಿಸಿತು. ಇವರ ವೈಚಾರಿಕ ಆಕೃತಿಗಳಲ್ಲಿ ಸಾಮ್ಯವಿರುವುದಾಗಿ ತೋರಿತು. ಆದಕಾರಣ, ವೈವಸ್ವತಮನು ಪ್ರಣೀತ ಮಾನವ ಧರ್ಮದ ಆಕೃತಿಯನ್ನು ಡಾರ್ವಿನ್ ಮತ್ತು ವ್ಯಾಲ್ಲಾಸರ ಮಾನವ ಪ್ರಾದುರ್ಭಾವದ ಬಗೆಗಿನ ನಿಷ್ಕರ್ಷಗಳನ್ನು ಲೆಕ್ಕಿಸಿ, ಬರೆದು, ಬಳಿಕ ಮನು: ಮಾನವ ಅರ್ಥಗ್ರಹಣದ ಪ್ರಯತ್ನವನ್ನು ಮುಂದುವರಿಸಿದ್ದಾಗಿದೆ.

ಹೀಗೆ, ನನ್ನ ಅರಿಕೆಯ ಅಳವಿನಲ್ಲಿ ಬಂದ ಅರ್ಥಗ್ರಹಣ ಪದ್ಧತಿಯು ನನ್ನೊಡನೆಯೇ ಕಣ್ಮರೆಯಾಗಬಾರದೆಂಬ ಉದ್ದೇಶದಿಂದ ಪ್ರಕಟಿಸುತ್ತಿದ್ದೇನೆ, ಇಲ್ಲಿ ಸೂಚಿಸಿರುವ ಅರ್ಥಗ್ರಹಣ ಪದ್ಧತಿಯು ತೀರ ಸಂಕ್ಷಿಪ್ತವಾಗಿದೆ. ಬಲ್ಲಿದರ ಅರಿಕೆಗಾಗಿ ಇಷ್ಟು ಸಾಕು ಎಂದು ನನ್ನ ಗ್ರಹಿಕೆ. ನನ್ನ ಇಡೀ ಅನ್ವೇಷಣೆಯ ಸಂಕ್ಷಿಪ್ತ ವರದಿಯನ್ನಾದರೂ ಪ್ರಕಟಿಸುವುದು ಲೇಸು ಎಂದು ನನಗೆ ಕಂಡಿತು. ಇಂದು ಮಾನವ ಸಂಸ್ಕೃತಿಯು ಅಣುಬಾಂಬುಗಳ ಯುದ್ಧದಲ್ಲಿ ಹೇಳ ಹೆಸರಿಲ್ಲದಂತಾಗುವ ಘೋರ ಪರಿಸ್ಥಿತಿಯು ಎದುರಾಗಿದೆ. ಪ್ರಪಂಚದಲ್ಲಿ ಶಾಂತಿ ಪ್ರಸ್ಥಾಪನೆಗಾಗಿ ಮಾನವತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ ಹಲವಾರು ಪ್ರಯತ್ನಗಳು ನಡೆದಿವೆ.

೧) ಮಾನವೇಂದ್ರನಾಥ ರಾಯರ ಸಂಪ್ರದಾಯದ ಶ್ರೀ ತಾರಕುಂಡೆ ಅವರು ಹೊರಡಿಸಿರುವ ಪ್ರಕಟನೆ ನೋಡಬಹುದು. ಶಸ್ತ್ರ ಸಹಿತವಾಗಿ ಕಾದಿ ಶಾಂತಿ ಸ್ಥಾಪನೆ ಅಶಕ್ಯವಿದೆ: ಆದಕಾರಣ ನಿಃಶಸ್ತ್ರ ಪ್ರತೀಕಾರದ ಅಹಿಂಸಾತ್ಮಕ ಮಾರ್ಗದಿಂದಲೇ ಈ ಪ್ರಯತ್ನಗಳು ಪ್ರಾರಂಭವಾಗಬೇಕು. ಪ್ರತಿಯೊಂದು ವ್ಯಕ್ತಿಯುವರೆಗೂ ಈ ಸಂದೇಶವು ಹೋಗಬೇಕು. ಈ ವ್ಯಕ್ತಿಗಳು ತಿಳುವಳಿಕೆಯುವರಾದರೆ ಸಾಮಾಜಿಕ ಕ್ರಾಂತಿಯಾಗಿ ಮಾನವತ್ವವು ಉಳಿಯುವುದು.

೨) ಸ್ವಲ್ಪ ಹೆಚ್ಚು ಕಡಿಮೆ ಇದೇ ಬಗೆಯ ಇನ್ನೂ ಕೆಲವು ಪ್ರಯತ್ನಗಳು ನಡೆದಿವೆ. ಕರ್ನಾಟಕ ಬಹಾಯಿ ಪಂಥೀಯರ ಪತ್ರಿಕೆ ಡಾ. ಶಿವರಾಮ ಕಾರಂತರು ಅಧ್ಯಕ್ಷರಿರುವ ಡಾ. ಹಿರೇಮಠರ (ಮೆಡ್ಲೇರಿ) ಸಂಸ್ಥೆಯ ಪ್ರಯತ್ನ, ಇಂತಹ ಈ ಪ್ರಯತ್ನಗಳಲ್ಲಿ ಬಹು ದೊಡ್ಡ ಕೊರತೆಯು ಉಂಟು : ವ್ಯಕ್ತಿ ಮತ್ತು ಮಾನವ ಇವೆರಡರಲ್ಲಿ ಇರುವ ಮೂಲಭೂತ ಅಂತರವನ್ನು ಸಂಪೂರ್ಣ ಕಡೆಗಣಿಸಲಾಗುತ್ತಿದೆ.

ವ್ಯಕ್ತಿಯೇ ಮಾನವರು ಎಂಬ ಗ್ರಹೀತದ ಈ ಪ್ರಯತ್ನಗಳು ಸಫಲವಾಗುವ ಆಶೆ ಇಲ್ಲ. ವ್ಯಕ್ತಿ ಮತ್ತು ಸಮಾಜ : ಸಮಷ್ಟಿ ಇವೆರಡರಲ್ಲಿ ಇರುವ ಅಂತರವೇ ವ್ಯಕ್ತಿ ಮತ್ತು ಮಾನವ ಇವೆರಡರಲ್ಲಿ ಉಂಟು. ವ್ಯಕ್ತಿಯೇ ಸಮಾಜ ಆಗುವಾಗ ಈ ಸಮಾಜವು ಸಮುದಾಯ, ವ್ರಾತ, ಗುಂಪು ಆಗುತ್ತದೆ. ಇಂದು ಸಮಾಜ ಪರಿಭಾಷೆ ಕಾಣೆಯಾಗಿ ಸಮುದಾಯ ಸಂಕೇತವು ವಾಡಿಕೆಗೆ ಬಂದಿದೆ. ಮಾತು (ವ್ಯಕ್ತಿ) ಮತ್ತು ಭಾಷೆ (ಸಮಷ್ಟಿ) ಇವೆರಡರಲ್ಲಿ ಇರುವ ಅಂತರವನ್ನು ಕಡೆಗಣಿಸಲಾಗುತ್ತಿದೆ, ಬಾಳಿನಲ್ಲಿ ಪಾತಳಿಗಳು ಇವೆ. ಇಂಗ್ಲೀಷ್ ಪರಿಭಾಷೆಯಲ್ಲಿ ಅವನ್ನು Functional ಮತ್ತು structural ಎಂದು ಹೆಸರಿಸಬಹುದು.

ವ್ಯಕ್ತಿ : ನರನು ತುರ್ತ =Functional ಪಾತಳಿಯವನೇ ಇರುತ್ತಾನೆ. ಆದರೆ, ಮನುಜ : ಮಾನವತ್ವವು ನಿಯಮ : ವ್ಯವಸ್ಥೆಯ ಕಟ್ಟಡದ (Structure) ಆಧಾರದ ಮೇಲೆ ಇರುತ್ತಾನೆ. ಈ Functional ನರನು Structural ಹಂತದವನು ಆಗಲಾರನು. Structural ನಿಯಮ : ವ್ಯವಸ್ಥೆ ಉಂಟೆಂದೇ ಅಭಾವಾತ್ಮಕ ಸ್ಥಳ/ಕಾಲ ಸಂದರ್ಭದ Functional ಅಸ್ತಿತ್ವವು ಸಾಧ್ಯವಾಗಬಲ್ಲದು. ಈ ಬಾಳಿನ ಅರ್ಥಗ್ರಹಣದಲ್ಲಿ ಬಡತನವನ್ನು ಹಂಚಿಕೊಂಡು ನನ್ನ ಬಾಳಸಂಗಾತಿಯಾದ ಸೌ. ಪಾರ್ವತಿಬಾಯಿಯವರಿಂದಾಗಿ ಇದು ಸಾಧ್ಯವಾಗಿದೆ.

ಭಾಗ ೧

ನಾನು ಮೊದಲಲ್ಲಿ ಈ ಸಾಂಸ್ಕೃತಿಕ ಸತ್ಯಾನ್ವೇಷಣೆಯನ್ನು ಪ್ರಾರಂಭಿಸಬೇಕಾದ ಹಿನ್ನೆಲೆ. ನಾನು ಹುಟ್ಟಿದ್ದು ಗುರ್ಲಹೊಸೂರಲ್ಲಿ. ಮನೆತನ ಸಂಪ್ರದಾಯವಂತರದು. ಚಿಕ್ಕಂದು ನಮ್ಮ ಊರ ಸುತ್ತಲಿನ ನಾನಾ ಅವತಾರಗಳ ಕಥೆ ಕೇಳುತ್ತಿದ್ದೆ. ಈ ಅವತಾರ ಪವಾಡ, ಚಮತ್ಕಾರಗಳ ಬಗೆಗಿನ ಕುತೂಹಲವು ಮನದಲ್ಲಿ ಬೇರೂರಿತು. ಕಃ ತ್ವಂ (ನೀನಾರು?) ಎಲ್ಲಿಂದ ಬಂದ? ನೀನು ಹುಟ್ಟಿದ್ದು ಯಾರಿಗೆ? ಈ ಬಗೆಯ ಅರ್ಥದ ಶ್ರೀ ಮದಾಚಾರ್ಯರ ಶ್ಲೋಕಗಳಿಂದಾಗಿ, ಈ ಬಾಳಿನಲ್ಲಿ ಅರ್ಥವೇ ಇಲ್ಲ ಎಂಬ ಭಾವನೆ ಮೂಡಿತ್ತು.

ಗಾಂಧೀಜಿ ಯುಗಾರಂಭ, ಲೋಕಮಾನ್ಯರ ಯುಗದ ಅಂತ್ಯ, ಬೌದ್ಧಿಕ ವಿಚಾರಪದ್ಧತಿ ಹಿಮ್ಮೆಟ್ಟಿ ಅಂತರ್ವಾಣಿ ಬಂತು. ಬಾಳಿಗೆ ಅರ್ಥವಿದೆಯೇ ಎಂಬ ಸಂದಿಗ್ಧತೆಯಲ್ಲಿ ನನ್ನ ಬಾಳಿನ ಪ್ರಾರಂಭ. ದೇವರ ಸಾಕ್ಷಾತ್ಕಾರವಾಗಿದೆ ಎಂಬ ಶ್ರೀ ಅರವಿಂದರ ಚರಿತ್ರ ಪ್ರಕಟಿಸಿದೆ. ಗೀತೆಯ ಅರ್ಥವು ಅಂತರ್ ದೃಷ್ಟಿಯಿಂದ ಮಾತ್ರ ಸಾಧ್ಯ ಎಂಬುದನ್ನು ಶ್ರೀ ಅರವಿಂದರ ಗೀತಾ ಪ್ರಬಂಧದ ಪ್ರಸ್ತಾಪನೆಯಲ್ಲಿ ಓದಿ ನಿರಾಶೆ ಕವಿಯಿತು. ಅಂತರ್ವಾಣಿ ಎಂದರೆ ವೈಯಕ್ತಿಕ ಅರ್ಥ. ಇಂದು ಅವರವರ ಅರ್ಥವು ಅವರವರ ಪಾಲಿನ ಸತ್ಯ ಆಗಿದೆ.

ಇದರ ನೇರ ಅರ್ಥ ಈ ಬಾಳಿನಲ್ಲಿ ಅರ್ಥವೂ ಇಲ್ಲ, ಸತ್ಯವೂ ಇಲ್ಲ! ಈ ಅರ್ಥ, ಸತ್ಯ ಅವರವರ ಪರಿಕಲ್ಪನೆ! ನನಗೆ ಇದು ಸ್ವಲ್ಪವೂ ಹಿಡಿಸಲಿಲ್ಲ. ಮಹಾತ್ಮಾಜೀಯವರ Experiments with truth ಪ್ರತಿವಾರವೂ ಓದುತ್ತಿದ್ದೆ. ಸತ್ಯ ಉಂಟೆ? ಇದ್ದರೆ ಎಲ್ಲಿದೆ? ಈ ಸಂದಿಗ್ಧತೆಯಲ್ಲಿ ಇದ್ದ ನನಗೆ ಗಾಂಧೀಜೀ ಸತ್ಯದ ಪ್ರಯೋಗ ಕುತೂಹಲ ಕೆರಳಿಸಿತು.

ಸಾಹಿತ್ಯ ಕಲಾಕೃತಿಗಳ ಸೃಷ್ಟಿಯ ಮೂಲಕ ಸತ್ಯದರ್ಶನದ ಹಂಬಲದ ಗೆಳೆಯರ ಬಳಗ. ಆದರೆ ನಾನೋ? ಸತ್ಯವು ಉಂಟೆ? ಇದ್ದರೆ ಅದರ ಲಕ್ಷಣವೇನು? ಬಾಳಿನಲ್ಲಿ ಅರ್ಥವೇ ಇಲ್ಲವೆಂಬ ಸುತ್ತಲಿನ ಪರಿಸರವು ನನ್ನ ಎದೆಗುದಿಗೆ ಕಾರಣವಾಗಿತ್ತು. ಈ ಸುಮಾರಿಗೆ ಕರ್ನಾಟಕದ ಏಕೀಕರಣದ ತೀವ್ರ ಆಕಾಂಕ್ಷೆ ಉಂಟಾಗಿ, ಇದಕ್ಕಾಗಿ ಚಳುವಳಿಯನ್ನು ಪ್ರಾರಂಭಿಸುವ ಉತ್ಸಾಹದಲ್ಲಿ ನಾನೂ ಇದ್ದೆ. ಗೋದಾವರಿಯಿಂದ ಕಾವೇರಿಯ ವರೆಗೂ ಕರ್ನಾಟಕವು ಇತ್ತು. ಇದನ್ನು ನೆನಪಿಗೆ ತಂದುಕೊಡಲು ಹೇಳಲಾಗುತ್ತಿದ್ದ ಹಾಡುಗಳಲ್ಲಿ ಗೋದಾವರಿವರಂ ಇರ್ದ್ದ-ಕನ್ನಡ ವಿಷಯದ ಉಲ್ಲೇಖವು ಅಡಿಗಡಿಗೂ ಆಗುತ್ತಿತ್ತು!

ಆದರೆ, ಇದು ಅತಿಶಯೋಕ್ತಿಯೆ? ವಾಸ್ತವ: ಸತ್ಯವೆ? ಗೋದಾತೀರದ ವರೆಗೂ ಕರ್ನಾಟಕವು ಇತ್ತೆಂದರೂ ಇದು ಕನ್ನಡ ರಾಜರ ದಿಗ್ವಿಜಯದ ಮೂಲಕವೆ? ಅಥವಾ ಅಲ್ಲಿಯೂ ಕನ್ನಡವು ಇತ್ತೇ? ಈ ಸಂದೇಹ ನಿವಾರಣೆಗಾಗಿ ನಾನು 'ಕಣ್ಮರೆಯಾದ ಕನ್ನಡ' ಪ್ರಶ್ನೆಯ ಇತ್ಯರ್ಥದಲ್ಲಿ ತೊಡಗಿದೆ. ಐತಿಹಾಸಿಕ ಹಿನ್ನೆಲೆಯ ಈ ಸಾಂಸ್ಕೃತಿಕ ಸತ್ಯಾನ್ವೇಷಣೆಯಲ್ಲಿ ಅಂದಿನವರಿಗೆ ಈ ಬಾಳಿನಲ್ಲಿ ಇದ್ದ-ಇರುವ ಅರ್ಥ: ಸತ್ಯವು ಅನುಭವದ ವಿಷಯವಾಗಿತ್ತು, ಎಂದು ಕಾಣತೊಡಗಿತು. ನನ್ನ ಈ ಜಿಜ್ಞಾಸೆಯ ಮೊದಲ ಹಂತವು ಮುಗಿದು. ಹಟ್ಟಿಕಾರ : ದನಗಾರರು ಅಥವಾ ಕರ್ನಾಟಕದ ವೀರ ಕ್ಷತ್ರಿಯರು (೧೯೩೬) ಮತ್ತು ಕನ್ನಡದ ನೆಲೆ (೧೯೩೯) ಇವು ನನ್ನ ಅನ್ವೇಷಣೆಯ ಎರಡನೆಯ ಘಟ್ಟದಲ್ಲಿ ಆಕಾರ ಪಡೆದವು.

ಈ ಸುಮಾರಿಗೆ ಶಿವರಹಸ್ಯ (೧೯೩೯) ಗ್ರಹಿಸಿಕೊಳ್ಳುವ ಕುತೂಹಲವು ಇನ್ನೊಂದು ಆಯಾಮಕ್ಕೆ ಒಯ್ದಿತು. ಆದರೆ, ಗಂಗಾಧರನ ನಿಲುಮೆ ನನ್ನ ಕಕ್ಷೆಯ ಹೊರಗೇ ಉಳಿಯಿತು! ಜೀವಂತ ಸಾಂಸ್ಕೃತಿಕ ಅವಶೇಷಗಳನ್ನು ಸಮೀಕ್ಷಿಸಿ ಈ ಬಾಳಿನ ಅರ್ಥಗ್ರಹಣಕ್ಕೆ ತೊಡಗಿದ್ದ ನಾನು ಈ ಅವಶೇಷಗಳಲ್ಲಿ ಕಾಣುವ ಅರ್ಥ ಗ್ರಹಿಸಲು, ಇಂತಹ ಬೇರೆ ಬೇರೆ ಪ್ರಮಾಣಗಳು ದೊರೆತರೆ ಮಾತ್ರ ಮುಂದುವರೆವ ವಾಡಿಕೆಯಿತ್ತು. ಗಂಗಾಧರ ನಿಲುಮೆ 'ಹಾಲುಮತ ದರ್ಶನ'ದ ದಿಕ್ಕಿನಲ್ಲಿ ತಳ್ಳಿಕೊಂಡು ಹೋಯಿತು. (೧೯೬೦) ಇದಿಷ್ಟು ನನ್ನ ಮೊದಲ ಭಾಗದ ಅನುಭವ

ಭಾಗ ೨

ಹಟ್ಟಿಗಾರ : ದನಗಾರರ ಅನ್ವೇಷಣೆಯಲ್ಲಿ ವೇದದಲ್ಲಿಯೂ ಇದರ ಬೇರು ಇರುವ ಸಂದೇಹವು ಮೂಡಿತ್ತು. ವ್ರಾತೇಭ್ಯೋ ವ್ರಾತಪತೀಭ್ಯ ಃ ಪತ್ತೀನಾಂ ಪತಿಯೇ ನಮಃ ಎಂಬ ರುದ್ರ-ಶಿವನ ಚಿತ್ರವು ಇದಕ್ಕೆ ನಿದರ್ಶನ. ಈ ನಾಗಭೂಷಣನು ಇರುವ ವೇದದಲ್ಲಿ ನಾಗ/ಲಿಂಗನ ಆರಾಧನೆಯೂ ಇರಬೇಕು ಎಂಬ ಸಂದೇಹವು ಮೂಡಿ, 'ಋಗ್ವೇದ ಸಾರ : ನಾಗ ಪ್ರತಿಮಾ ವಿಚಾರ' ಎಂಬ ಸಮಸ್ಯೆಯಲ್ಲಿ ಸಿಕ್ಕಿ ಬಿದ್ದೆ! (೧೯೭೧) ಇದರ ಅನ್ವೇಷಣೆಯಲ್ಲಿ ಸಂಸ್ಕೃತಿಯನ್ನು ಅರ್ಥೈಸುವ ಪದ್ಧತಿಯನ್ನು ಅರಿವ ಒಂದು ಪ್ರಾಥಮಿಕ ಪ್ರಯತ್ನವು ಒಳಗೊಂಡಿದೆ. ಈ ತೊಡಕಿನಲ್ಲಿ ನನ್ನನ್ನು ತಳ್ಳಿದ್ದು : 'ಇಂದ್ರಾಯ ತಕ್ಷಕಾಯ ಸ್ವಾಹಾ' ಎಂಬ ಈ ವಾಕ್ಯ! ಇದು ಮೊದಲಲ್ಲಿ ಬಾನುಲಿಯ ಒಂದು ಉಪನ್ಯಾಸದ ವಿಷಯವಾಗಿತ್ತು. ಬಾನುಲಿಯನ್ನು ಕೇಳಿದ ಕೆಲವರು, ಇದು ತುಂಬ ಹೊಸ ವಿಚಾರ ಎಂದು ಅಂದರು. ಇಂದ್ರ / ತಕ್ಷಕ ಈ ಸಂಕೇತಗಳ ಸ್ಥೂಲ ಅರ್ಥವು ಮಾತ್ರ ಆಗ ನನಗೆ ಗೊತ್ತಿತ್ತು. ತಕ್ಷಕ/ತ್ವಷ್ಟಾರ ಇದು ನಾಗ/ಲಿಂಗನ ಸಂಕೇತ; ಮೃತ್ಯುತತ್ವ! ಇದಕ್ಕೆ ಪ್ರತಿಯಾಗಿರುವ ಇಂದ್ರನು ಈ ಹಿನ್ನೆಲೆಯ ಜೀವನದ ಸಂಕೇತವಾಗುತ್ತಿದ್ದಾನೆ!

ಜೀವನ/ಮೃತ್ಯು (ಇಂದ್ರ/ತಕ್ಷಕ) ಈ ಸಮೀಕರಣದಲ್ಲಿ ಇಂದ್ರನು ಯಜ್ಞಕುಂಡದಲ್ಲಿ ಬೀಳಬಾರದಾಗಿದ್ದರೆ, ತಕ್ಷಕ-ಮೃತ್ಯುತತ್ತ್ವವೂ ಬಲಿಯಾಗಬಾರದು. ಇದನ್ನು ಒಪ್ಪಿದರೂ ಈ ಮಹಾಭಾರತಕಾರನು ಜೀವನ ಪ್ರತಿನಿಧಿ ಇಂದ್ರನನ್ನು ಖಳನಾಯಕನನ್ನಾಗಿಸುತ್ತಾನಲ್ಲ? ಏಕೆ? ರಾಮಾಯಣದಲ್ಲಿ ಇಂದ್ರನನ್ನು ಅಹಲ್ಯಾಜಾರನೆಂದು ಚಿತ್ರಿಸಿದ್ದಾಗಿದೆ! ಈ ತೊಡಕಿನ ಅರ್ಥವನ್ನು ಅರಿಯಲು ನಾಗ ಪ್ರತಿಮಾ ವಿಚಾರದ ಕೂಲಂಕಷ ವಿಮರ್ಶೆಗೆ ಪ್ರಾರಂಭಿಸಿದ್ದಾಯ್ತು! ಈ ವಿಮರ್ಶೆ ವಿಫಲವಾಯ್ತೆಂದು ಒಪ್ಪುತ್ತೇನೆ. ಆದರೆ ಈ ಅನ್ವೇಷಣೆಯಲ್ಲಿ ಬಂದ ಅನುಭವವು ಮೌಲಿಕವಾಗಿದೆ:

೧. ಈ ನಾಗಸಮಸ್ಯೆ ಭಾರತಕ್ಕೆ ಮಾತ್ರ ಸೀಮಿತವಿಲ್ಲ. ಇದು ಜಾಗತಿಕ ಹಂತದ ಭೌಮಾಸುರ ಟಿಟಾನ್ ಸಮಸ್ಯೆ ಆಗಿದೆ. ಈ ಟಿಟಾನ್ : ಭೌಮಾಸುರನು : ಬೃಹಂತಂ ಮಾಯಸಂ ಅಪಾಂ ಗರ್ಭಂ। ಗ್ರೀಕ್ ಕ್ರೋನಸ್, ರೋಮನ್ ಸ್ಯಾಟರ್ನ್: ಶನಿ : ಮರುತ: ಲಿಂಗಗಳು ಪ್ರಪಂಚವನ್ನು ಆಳುತ್ತಿವೆ.

೨. ಭಾರತದಲ್ಲಿ ಈ ಭೌಮಾಸುರ ನಾಗ : ಲಿಂಗ ಸಂಪ್ರದಾಯವು, ಸರ್ಪವು, ಸೂರ್ಯ ಇಂದ್ರರನ್ನು ಇಲ್ಲವಾಗಿಸಲು ಪ್ರಯತ್ನಪಟ್ಟದ್ದು, ಎದ್ದು ಕಾಣತೊಡಗಿತು. ಉದಾ : ಋಗ್ವೇದದಲ್ಲಿಯೇ ಸಾರ್ಪರಾಜ್ಞೀ ಸೂರ್ಯೋ ವಾ ದೇವತಾ ಸೂಕ್ತವಿದೆ. ಸೂರ್ಯ : ನಾರಾಯಣ (ನಾಗ) ನಾಗುತ್ತಾನೆ!

೩. ಆದಕಾರಣ ನಾಗ/ಲಿಂಗ: ನಾಗ/ಚಂದ್ರ ಈ ಭೌಮಾಸುರ ಪಂಥವು ರಾತ್ರ ಉಪಾಸಕರದೇ ಇರಬೇಕು.

ಈ ಅನ್ವೇಷಣೆಯ ಸಂದರ್ಭದಿಂದ ಗಮನಕ್ಕೆ ಬಂದ ಇನ್ನೊಂದು ಸಂಗತಿ : ಕುಮಾರಿ ಕುಂತಿಯ ಕಾಮ ತೃಪ್ತಿಗಾಗಿ ಸೂರ್ಯನು ಆಕಾಶ ಪಾತಳಿಯಿಂದ ನೆಲದ ಮೇಲೆ ನಾಗ : ಲಿಂಗನ ಹಂತಕ್ಕೆ ಬರುತ್ತಾನೆ! ಈ ಹಿನ್ನೆಲೆಯಲ್ಲಿ ೧. ಪ್ರಜ್ಞಾನ: ಪ್ರಕಾಶ ತತ್ತ್ವ : ಜೀವನ ಮತ್ತು ಪ್ರಾಣ/ಲಿಂಗ ತತ್ತ್ವ : ಜೀವನ ಇವೆರಡೂ ಸಂಪ್ರದಾಯಗಳ ಸಂಘರ್ಷವು ಈ ಸಮಸ್ಯೆಯಲ್ಲಿ ಉಂಟು. ಕರ್ನಾಟಕ ವಿಶ್ವವಿದ್ಯಾಲಯದ ಡಾ. ಕೆ. ಕೃಷ್ಣಮೂರ್ತಿಯವರು ಋಗ್ವೇದ ಸಾರದ, ವಿಮರ್ಶೆ ಮಾಡಿದ್ದಾಯ್ತು. ಋಗ್ವೇದದಲ್ಲಿ ಈ ಎರಡು ಪದರುಗಳು ಉಂಟು ಎಂಬ ನನ್ನ ಆಶಯವನ್ನು ಒಪ್ಪಿದರೂ, ವೇದದಲ್ಲಿ ನಾಗಾರಾಧನೆ ಉಂಟು ಎಂಬುದು, ಜೋಶಿಯ ಪರಿಕಲ್ಪನೆ ಎಂದಿದ್ದಾರೆ. ವಿಶ್ವವಿದ್ಯಾಲಯದ ಸಂಸ್ಕೃತ ಪ್ರಾಧ್ಯಾಪಕರು ಇಷ್ಟು ನಿರಾಧಾರ ಸುಳ್ಳನ್ನು ಬರೆವ ಸಾಹಸಕ್ಕಿಳಿದರಲ್ಲ ಎಂಬ ವಿಷಾದ ನನ್ನದು. ವೇದದಲ್ಲಿಯೇ 'ಸಾರ್ಪರಾಜ್ಞೀ ಸೂರ್ಯೋ ವಾ' ಈ ದೇವತಾ ಸೂಕ್ತವು ಇರುವುದನ್ನು ಪ್ರಾಧ್ಯಾಪಕರು ಮರೆತರೊ? ಅಥವಾ ಅವರಿಗೆ ಅದು ಕಾಣಲೇ ಇಲ್ಲವೋ? ತಿಳಿಯದು. ಇದು ಸ್ಥಲ (Space) ಕಾಲದ ಪಾತಳಿಯ ದೃಶ್ಯ. ಈ ಪಾತಳಿಯ ಮೇಲ್ಗಡೆಯಲ್ಲಿ ಆದರ್ಶ : ವಾಸ್ತವ ಸತ್ಯದ ಪಾತಳಿ ಇದೆ.

ಭಾಗ ೩

೧) ಪ್ರವಾಹ ಪತಿತರ ಕರ್ಮ ಹಿಂದೂ ಎಂಬ ಧರ್ಮ (೧೯೭೬)

೨) ಈ ಸುಮಾರಿಗೇ ಪ್ರಕಟವಾದದ್ದು: ಭಗವದ್ಗೀತೆಯ ಆಶಯ ಅಥವಾ ರಾಜಯೋಗದ ಗುಹ್ಯಜ್ಞಾನ (೧೯೭೭)

೩) ವೈವಸ್ವತಮನು ಪ್ರಣೀತ ಮಾನವಧರ್ಮದ ಆಕೃತಿ (೧೯೭೯)

೪) ಬುಧನ ಜಾತಕ (೧೯೮೦)

೫) ಬಿತ್ತಿದ್ದನ್ನು ಬೆಳಕೊ : ಮಡಿಕೇರಿ ಉಪನ್ಯಾಸ (೧೯೮೪)

ಈ ಐದೂ ಪ್ರಕಟನೆಗಳು ಮಾನವಧರ್ಮವನ್ನು ಇದರ ಅವನತಿಯನ್ನು ಕುರಿತ ಪುಸ್ತಕಗಳು. ಇವು

ಪ್ರಕಟವಾದ ಬಳಿಕ ತಲೆದೋರಿರುವ ವಿಚಾರಗಳ ಪುನರ್‌ವಿಮರ್ಶೆಯು ಇಲ್ಲಿ ಅಭಿಪ್ರೇತವಿದೆ. ಮನು : ಮಾನವ ಧರ್ಮದ ಆಕೃತಿಯು ಸ್ಥಳ: ಕಾಲದ ಆಚೆಗಿನ ಸ್ವರ್‌ಪಾತಳಿಯ ಸಂಪರ್ಕದಲ್ಲಿ ಇರುವ ವಿಚಾರವು ಉಪಲಬ್ಧ ಪ್ರಮಾಣಗಳ ಬೆಳಕಿನಲ್ಲಿ ಅರಿಕೆಗೆ ಬರುತ್ತಿದ್ದರೂ ಅದನ್ನು ಸರಿ ಎಂದು ಗ್ರಹಿಸಿಕೊಳ್ಳಲು ಅಳುಕುತ್ತಿದ್ದಾಗ ನನಗೆ ಈ ಧೈರ್ಯವನ್ನಿತ್ತವರಲ್ಲಿ ಡಾ. ಎ.ಎಲ್. ಕ್ರೋಬರ್ ಮಾನವಶಾಸ್ತ್ರಜ್ಞನು ಮೊದಲಿಗನು. ಮಾವನ ಸಂಸ್ಕೃತಿಯ Super organic (ಅತೀಂದ್ರಿಯ) ಪಾತಳಿಯ ಮೇಲೆ ಇದೆ ಎಂಬ ಅವನ ನಿಷ್ಕರ್ಷವು, ಡಾ. ಜ್ಯುಲಿಯನ್ ಹಕ್‌ಸ್ಲೆ ಸಹ ಮಾನ್ಯ ಮಾಡಿ Noosphere (ಸ್ವರ್) ಪಾತಳಿಯನ್ನು ಗ್ರಹೀತ ಹಿಡಿದನು.

ಇಂತಹ ಇನ್ನೊಬ್ಬ ಮಹಾನುಭಾವ ಡಾ, ಐನ್ಸ್‌ಟೈನ್ : ಆಧುನಿಕ ಯುಗ ಪ್ರವರ್ತಕರು! ಇವರು Extra personal = ವ್ಯಕ್ತಿ ನಿರಪೇಕ್ಷ = ಸ್ಥಲ (Space) ಕಾಲ (Time) ದ್ವಿಭೌತ ವೃತ್ತಾಕೃತಿಯ ಕಾಲ ಚಕ್ರದ ಮೇಲ್ಗಡೆಗೆ. ವಾಸ್ತವ : ಸತ್ಯವು ಉಂಟು, ಎಂಬುದು ಇವರ ನಿಷ್ಠೆ.

> The most incomprehencible thing about world is that it is comprehencible

ಎಂಬ ಈ ಅಭಿಪ್ರಾಯದಂತೆ ಮಾನವನ ಜೀವನ ಅರ್ಥವು ಅಗಾಧವಿದ್ದರೂ ಇದರ ಅಗಾಧತೆಯನ್ನು ಗ್ರಹಿಸಿಕೊಳ್ಳಲು ಸಾಧ್ಯವಿದೆ.

> The harmony and consistency of mental construction is an indication of their objective nature. Their agreement with objective reality world is well ordered, integrated entity

ಈ ಬಾಳಿನಲ್ಲಿ ಅರ್ಥ : ವಿಚಾರವು ಹಾಸುಹೊಕ್ಕಾಗಿ ಇದೆ. ಈ ಪ್ರಪಂಚದಲ್ಲಿ ನಿಯಮ : ವ್ಯವಸ್ಥೆಯು ಇದೆ. ಮೇಲಣ ಇಬ್ಬರಂತೆ ಫ್ರಾನ್ಸ್ ದೇಶದ ಹದಿನಾರನೆಯ ಶತಕದ ಡೆಕಾರ್ಟನಿಗೂ ತಲೆಬಾಗುತ್ತೇನೆ. ಇವನು ದ್ರಷ್ಟಾರ, ವಿಖ್ಯಾತ ಸಂಶೋಧಕ. ನ ಇತಿಹಾಸವಾದಿ ಎಂದು ಮೊದಲಲ್ಲೇ ಇವನನ್ನು ಟೀಕಿಸಿದ್ದೇನೆ, ಆದರೆ ನನ್ನ ತಪ್ಪು ಆ ಬಳಿಕ ಗೊತ್ತಾಯಿತು.

ಡೆಕಾರ್ಟನು, ಕ್ರೋಬರ್, ಐನ್ಸ್‌ಟೈನರಂತೆ. ಪ್ರಜ್ಞಾವಾದಿ, ಮಾನವ ಭಾಷೆ, ಸಂಸ್ಕೃತಿ, ಧರ್ಮ ಇವು ಇಂದ್ರಿಯಗಳ ಪಾತಳಿಯ ಆಚೆಗೆ ಇವೆ ಎಂದು ನಿಃಸಂದಿಗ್ಧವಾಗಿ ಹೇಳಿದ್ದಾನೆ. I Think Therefore I am, ಇದು ಈತನ ಅನುಭವೋಕ್ತಿ ಸ್ವಯಂವೇದ್ಯ ಪಾತಳಿಯ ಮೇಲೆ ಉಪಜ್ಞೆ-ಪ್ರಜ್ಞೆಯ ಸ್ವರೂಪನು ತಾನು ಎಂಬ ನಿಷ್ಠೆ ಈತನದು. ಅರಿಸ್ಟೋಟ್ಲನೂ ಈ ಮಟ್ಟದ ಜ್ಞಾನಿಯೆ! The thought which thinks itself ಎಂದು ಪ್ರಜ್ಞಾಯುಕ್ತ ಮನಸ್ ತತ್ತ್ವ = Nous ; mind ಕುರಿತು ಹೇಳಿದ್ದಾನೆ. ಆದರೆ, ಭೌಮಾಸುರ-ನರ ಸಂಪ್ರದಾಯಗಳಲ್ಲಿ ಇರುವ ಶ್ರದ್ಧೆಯನ್ನು I am therefore I think ನಾನಿದ್ದೇನೆ- ಆದಕಾರಣ ವಿಚಾರ ಮಾಡುತ್ತೇನೆ ಎಂದು ಹೇಳಬೇಕಾಗುತ್ತದೆ. ಉಪನಿಷತ್ತಿನ ಯಾಜ್ಞವಲ್ಕ್ಯನೂ ಒಬ್ಬ ಭೌಮಾಸುರನೇ! ಅವನು ಹೇಳುತ್ತಾನೆ : ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ! ನನ್ನ ಈ ಸಮೀಕ್ಷೆಯಲ್ಲಿ ಐನ್ಸಟನ್ ಮತ್ತು ಡೆಕಾರ್ಟರ Objective reality= ಆದರ್ಶ =ವಾಸ್ತವ-ಸತ್ಯ ಈ ಪರಿಭಾಷೆಯು ಸ್ವರ್ ಎಂಬ ಸಂಕೇತಕ್ಕಿಂತ ಹೆಚ್ಚು ಉಚಿತವಿದೆ ಎನಿಸಿತು. ಡೆಕಾರ್ಟನ ನಿಷ್ಠೆ :

> Certainty is based upon the existence of a perfection which cannot deceive. Moreover the theory of an objective reality as opposed to an actuality proved that we cannot attribute to our body the power to think.

ಈ ಸಂದರ್ಭದಲ್ಲಿ. ಈ ಡೆಕಾರ್ಟನು. ಆಗಾಮೀ ಭೌಮಾಸುರ : Titans ಯುಗದ ಪ್ರವಾದಿ ಎಂದು

ಹೇಳಲು ಅವಕಾಶವಿದೆ. ಪೈಥಾಗೊರಾಸನ Emancipation of the individual = ವ್ಯಕ್ತಿ ಮುಕ್ತಿಯ ಈ ವಿಚಾರವನ್ನು ಬಹಳ ಸೊಗಸಾಗಿ ವ್ಯಕ್ತಪಡಿಸಿದ್ದಾನೆ. ಪ್ರಜ್ಞೆಯ (conscience) ಬಂಧನದಿಂದ ಮುಕ್ತವಾಗಿ ಇಂದ್ರಿಯಗಳು ಸ್ಥಲ ಕಾಲದ ಪಾತಳಿಯ ಮೇಲೆ ಬಂದಿವೆ. ಲಿಂಗ/ಯೋನಿಯು ಪ್ರಜ್ಞೆಯ ಕಡಿವಾಣದಿಂದ ಮುಕ್ತವಾಗಿ ಇಂದು, ಕಣ್ಣು =ಇಂದ್ರಿಯವು ದೂರದರ್ಶಕ ಯಂತ್ರ, ಸೂಕ್ಷ್ಮದರ್ಶಕ ಯಂತ್ರರೂಪದಲ್ಲಿ ಸ್ವತಂತ್ರವಾಗಿದೆ. ಬಾಯಿ talky ಆಗಿದೆ. ಕೈ ಕಾಲು ನಾನಾ ಯಂತ್ರರೂಪ ತಾಳಿವೆ. ತಲೆ ಸಂಗಣಕ (ಕಂಪ್ಯೂಟರ್) ಯಂತ್ರವಾಗಿದೆ. ಮದುವೆಗಳ ಸಹ ಈ ಸಂಗಣಕದ ನೆರವಿನಿಂದ ಗೊತ್ತಾಗತೊಡಗಿವೆ. ಯಂತ್ರಚಾಲಿತ ವ್ಯಕ್ತಿ, ಮಾನವನ ಸ್ಥಾನಕ್ಕೆ ಬಂದ ಹಾಗೆ ಆಗಿದೆ. ಪ್ರಜ್ಞೆ (conscience) ಇದರ ಯಂತ್ರವೂ ಆಗುವಂದು ಮಾನವ ಯುಗದ ಮುಕ್ತಾಯವಾಗಲಿದೆ. ಮಾನವ ಪ್ರಾದುರ್ಭಾವವು ಆಗುತ್ತದೆ; ಸ್ಥಲ/ಕಾಲದ ಮೇಲ್ಗಡೆಯಲ್ಲಿ. ಪ್ರಜ್ಞಾಯುಕ್ತ ಮನಸ್ ತತ್ತ್ವದ (Nous ; mind) ಪಾತಳಿಯು ಎಂದರೆ ಇದೇ.

ಈ ಪ್ರಜ್ಞಾಯುಕ್ತ ಮನಸ್ ತತ್ತ್ವದ : ಆಕಾಶರೂಪ ಪ್ರಕಾಶದ ಪಾತಳಿಯ ಕೆಳಗೆ, ನೀಲವರ್ಣದ ಅಂತರಿಕ್ಷದ ಅವಕಾಶದ ಟೊಳ್ಳಿನಲ್ಲಿ, ಪ್ರಾಣ /ಲಿಂಗ ಶಕ್ತಿಯು ಉಂಟು. ಈ ಅಂತರಿಕ್ಷದ ಈ ಟೊಳ್ಳು ನಿತ್ಯ ಕತ್ತಲು ಕವಿದಿರುವ ಗವಿ : ಗುಹೆ ಎಂದು ಆಲಂಕಾರಿಕವಾಗಿ ಹೇಳಲಾಗುವ ಪ್ಲೇಟೋನ ಭೌತಕಾಲ ಚಕ್ರವು ಉಂಟು. ನಿತ್ಯ ಕತ್ತಲಿನಿಂದ ಆವೃತ ಈ ಪ್ರಾಣಲಿಂಗ ಶಕ್ತಿಯು, ಅಸ್ವಯಂವೇದ್ಯವಿದೆ. ಇದನ್ನು ಸ್ಥಲ (೦) Space ಎಂದು ಹೆಸರಿಸಲಾಗಿದೆ. ಜೀವನ ವಿಶ್ವಸ್ಥ ಪ್ರಾದುರ್ಭಾವ ಸಮಯದಲ್ಲಿ, ಆಕಾಶ ತತ್ತ್ವದ ಪ್ರಕಾಶರೂಪ : ಸ್ವಯಂವೇದ್ಯ ಪಾತಳಿ ಯನ್ನು ಮನು : ಮಾನವರ ಜೀವನದ ಪಾತಳಿ ಎಂದು ಗುರುತಿಸಲಾಗಿರುವಂತೆ, ಕತ್ತಲು ಗವಿಯಂತಹ ಟೊಳ್ಳಿನ ಅಸ್ವಯಂ ವೇದ್ಯ ಪ್ರಾಣಲಿಂಗ ಶಕ್ತಿಯನ್ನು ಜೀವಿತದ ಪಾತಳಿ ಎಂದು ಕರೆವ ವಾಡಿಕೆಯು ಎಂದಿನಿಂದಲೋ ಉಂಟು. ಮನು : ಮಾನವ ಪ್ರಾದುರ್ಭಾವವು ಜೀವನದ ಪಾತಳಿಯ ಮೇಲೆ ಆಗಿರುವಂತೆ; ಪ್ರಾಣಿ, ಪಶು, ಜೀವಿಗಳ, ಸಸ್ಯ ವೃಕ್ಷಾದಿಗಳ ಪ್ರಾದುರ್ಭಾವವು ಈ ಸ್ಥಲ (೦) ಪಾತಳಿಯ ಮೇಲೆ ಆಗಿದೆ. ಪ್ರಜ್ಞಾಯುಕ್ತ : ಸ್ವಯಂವೇದ್ಯ: ಆಕಾಶ ತತ್ತ್ವದ ಪ್ರಕಾಶರೂಪ ಪಾತಳಿಯ ನಿಕಟ ಸಂಪರ್ಕ ಸಂಬಂಧದ ಪಾತಳಿಯ ಹತ್ತಿರದಲ್ಲಿಯೇ ಜೀವನದ ಪಾತಳಿಯ ಮೇಲೆ ಆದರ್ಶರೂಪ (objective reality) ವಾಸ್ತವ ಸತ್ಯವು (Nous : mind) ಉಂಟು ಎಂಬ ನಿಷ್ಠೆಯು, ಏನೆಲ್ಲ ಪುರಾತನ ಮಾನವಸಂಸ್ಕೃತಿಗಳಲ್ಲಿಯೂ ಇರುವುದಾಗಿ ತುಲನಾತ್ಮಕ ಮಾನವೇತಿಹಾಸದಲ್ಲಿ ಕಂಡು ಬರುತ್ತದೆ. ಪ್ರಜ್ಞಾಯುಕ್ತ ಮನಸ್‌ತತ್ತ್ವದ (Nous : mind) ಆದರ್ಶ-ಸತ್ಯದ ಸಂಪರ್ಕದಿಂದಾಗಿ, ಈ ಮಾನವನು ಭಾಷೆ, ಸಂಸ್ಕೃತಿಯನ್ನು ರೂಪಿಸಿಕೊಳ್ಳಲು ಸಮರ್ಥನಾಗಿದ್ದಾನೆ.

ಈ ಮಾನವ ಭಾಷೆ : ಸಂಸ್ಕೃತಿಯು, ಸ್ಥಲ (Space) ಕಾಲ (Time) ಸಂದರ್ಭದ ಇಂದ್ರಿಯಗಳ ಪಾತಳಿಯ ಮೇಲೆ ಆಕಾರ ಪಡೆದಿಲ್ಲ. ಏಕೆಂದರೆ, ಇಂದ್ರಿಯಗಳು ಅಸ್ವಯಂವೇದ್ಯ ಭೌತ ಸ್ಥಲ/ಕಾಲದ ಅಂಗವಾಗಿವೆ. ಇಂದು ಇಂದ್ರಿಯಗಳನ್ನು ದೇವರ ಸ್ಥಾನದಲ್ಲಿ ಕಲ್ಪಿಸಿದಂತಾಗಿದೆ! ಈ ಅಂಶವನ್ನು ತತ್ತ್ವಜ್ಞ ಡೆಕಾರ್ಟನಷ್ಟು ಸ್ಪಷ್ಟವಾಗಿ ಹೇಳಿದವರು ಬೇರೆ ಯಾರೂ ಇಲ್ಲ.

There exists not at all a true God, but certain evil genius

ಇದು ಇಂದ್ರಿಯ ರೂಪೀ ದಿವ್ಯವೇ ಆಗಿದೆ. ಇದು ಮಾನವರನ್ನು ಮೋಸಗೊಳಿಸುತ್ತದೆ. (Deceives him) Genius genie-genital ಈ ಪದದಲ್ಲಿ ಲಿಂಗ ಸೂಚಕ ಮೂಲಾರ್ಥವಿದೆ. ಇದು, ಸ್ಥಳ (೦) ವು, ಇಂದ್ರಿಯ ಗೋಚರವಾದ ನಾಟಕ, ಚಲನಚಿತ್ರ, ಫೋನೊ, ದೂರವಾಣಿ, ವಿಮಾನಾದಿಗಳ ರೂಪದಲ್ಲಿ ನಾನಾ ತರಹದ ರೂಪ ಆಕಾರಗಳಿಂದ ಈ ನಿಟ್ಟಿನಲ್ಲಿ ಮಾನವನ ಪ್ರಗತಿಯಾಗಿದೆ ಎಂಬ ಸಂಭ್ರಮಕ್ಕೆ ಕಾರಣವಾಗಿದೆ. ಅಣು ವಿಸರಣದಿಂದಾಗಿ ಕಾಣದೂರವ ದೃಶ್ಯದಲ್ಲಿ ಪರಮಾಣುಗಳ ಸ್ಥಿರ, ಅನಿಯಂತ್ರಿತ ಚಲನವಲನದ ದೃಶ್ಯಕ್ಕೆ 'ಕ್ವಾಂಟಂ ಸಿದ್ಧಾಂತ' ಎಂದು ಹೆಸರಿಸಲಾಗಿದೆ.

ಅಂತರ್ ವಿಸಂಗತ ಚಲನವಲನದಿಂದಾಗಿ, ಈ ದೃಶ್ಯವು ಅರ್ಥಹೀನ-ಅರ್ಥ ಶೂನ್ಯ (೦) ಆಗುತ್ತದೆ.

ಸ್ಥಲ/ಕಾಲದ ಈ ವೃತ್ತಾಕೃತಿಯು ಭೌತದೃಶ್ಯವನ್ನು ಅರ್ಥೈಯಿಸಲು ಅಂದಾಜು ಮಾಡಬೇಕಾಗುತ್ತದೆಯೇ ಹೊರತು ನಿಶ್ಚಿತ ಅರ್ಥವು ಗೊತ್ತಾಗುವುದಿಲ್ಲ. ಈ ಪಾತಳಿಯು ಅಂತರ್ ವಿಸಂಗತಿಯಿಂದಾಗಿ ಸಂಪೂರ್ಣ ಅಭಾವಾತ್ಮಕ ಆಗುತ್ತಿದೆ. ಅಣುಶಕ್ತಿಯು ವಿದ್ಯುದ್ದೀಪ ಮೊದಲಾದ ಒಳ್ಳೆಯ ಕಾರ್ಯಕ್ಕೆ ಸಹಾಯಕವಾಗಿರುವಂತೆ, ಅಣುಬಾಂಬು ಲೋಕನಾಶಕ್ಕೆ ಕಾರಣವಾಗುವ ಭೀತಿಯನ್ನು ಈ ಪ್ರಪಂಚವು ಎದುರಿಸುತ್ತಿದೆ! ಆದಕಾರಣ, ಡಾ. ಐನ್ಸಟನ್, ಡೆಕಾರ್ಟ್ ಪ್ರಭೃತಿಗಳು ಹೇಳುವಂತೆ, ಈ ಮಾನವ ಜೀವನ ಅರ್ಥವು, ಸ್ಥಲ/ಕಾಲದ ಈ ಕತ್ತಲಿನ ಭೌತ ವೃತ್ತಾಕೃತಿಯ ಆಚೆಗಿನ ಆದರ್ಶ : ಸತ್ಯದ ಪ್ರಜ್ಞಾಯುಕ್ತ ಮನಸ್ಸಿನ Nous ; (mind) ಕಾರಣವೇ ಕಾರ್ಯವಾಗುವ ಪಾತಳಿಯ ಮೇಲೆ ಇದೆ, ಎಂದು ಬಗೆದು, ಈ ಮಾನವಜಿವನ ಅರ್ಥದ ಸಂಶೋಧನವಾಗುವ ಆವಶ್ಯಕತೆಯಿದೆ.

ಭಾಗ ೪

ಮಾನವ ಇತಿಹಾಸವು, ಅವನ ಆದರ್ಶರೂಪ ದೇವರ ಅನುಷಂಗದಿಂದ ಅರಿಕೆಗೆ ಬರುತ್ತದೆ. (ಆದಿ) ಕಾರಣವೇ ಕಾರ್ಯರೂಪದಲ್ಲಿ ಪರಿಣಮಿಸುವ ಪಾತಳಿ: ಗ್ರೀಕ್ ತತ್ತ್ವಜ್ಞ ಅರಿಸ್ಟಾಟಲ್ ಹೇಳುತ್ತಾನೆ : Nous (mind) ಇದುವೇ ಮಾನವ ಸಂಸ್ಕೃತಿಯನ್ನು ರೂಪಿಸಿರುವ ಆದಿಕಾರಣ. ಇದನ್ನು unmoved mover ಎಂದು ವರ್ಣಿಸಲಾಗುತ್ತದೆ. ಈ nous ಗ್ರೀಕರ ಇತಿಹಾಸದಲ್ಲಿ ಹೋಮರನಿಗಿಂತಲೂ ಮುಂಚೆಯಿಂದ ಇತ್ತು ಇದೆ ಎಂದು ಕಂಡು ಬರುತ್ತದೆ. ಪ್ರಜ್ಞಾಯುಕ್ತ ಮನಸ್ಸು (Nous : mind) ಇದು ಆದಿಕಾರಣವಾಗಿರುವಾಗ, ಈ ಪ್ರಜ್ಞೆಯು ರೂಪಿಸಲು ಕಾರಣವಿರುವ ಭಾಷೆಯೂ ತತ್ ಸ್ವರೂಪದ್ದು : ಪ್ರಜ್ಞಾ ಪ್ರಕಾಶಯುಕ್ತವೇ ಆಗಬೇಕಷ್ಟೆ ಭಾ-ಷಾ ಈ ಸಂಕೇತಸ್ಥ ಭಾ ಇದು, ಪ್ರಕಾಶ ವಾಚಕವಿದೆ. ಭಾರತೀಯ ಪುರಾತನ ಉಲ್ಲೇಖಗಳಲ್ಲಿ ದೊರೆವ 'ಸರ್ವಂ ತತ್ ಪ್ರಜ್ಞಾನೇ ಪ್ರತಿಷ್ಠಿತಂ' ಎಂಬ ಉಕ್ತಿಯು ಇದಕ್ಕೆ ನಿದರ್ಶನ. ಇದು ಭೌತಕಾಲ (Time) ದ ಆಚೆಗೆ ಇದೆ. ಈ ಪಾತಳಿಯನ್ನು ಆಧುನಿಕ ಐನ್ಸ್ಟಟನ್, ಡೆಕಾರ್ಟರು (objective reality) ಎನ್ನುತ್ತಾರೆ. ಪ್ರಾಚೀನ Mythical thinking ಭಾಷೆಯಲ್ಲಿ ಇದನ್ನು urenus or ouranus ಎನ್ನುತ್ತಿದ್ದರು: ಇದು ಆಕಾಶತತ್ತ್ವದ ಪಾತಳಿ Overhanging Heavens most ancient of all gods. ಆದರೆ ವಿಕಾಸ ತತ್ತ್ವದ ಪ್ರಕ್ರಿಯೆಯಲ್ಲಿ ಆಗಿರುವ ಈ ಮನು : ಮಾನವ ಸಂಸ್ಕೃತಿಯಲ್ಲಿ ಸ್ಥಲ / ಕಾಲದ ಭೌತ ವೃತ್ತಾಕೃತಿಯ ಟೊಳ್ಳಿನ ಮೇಲ್ಗಡೆಯಲ್ಲಿ ಆದರ್ಶ ; ಸತ್ಯದ ಪಾತಳಿಯ ಅನುಸಂಧಾನದಲ್ಲಿ ಇರುವಾಗ, ಈ ಮಾನವನು, ಪ್ರಾಣಿ ಪಶುಪಕ್ಷಿಗಳ ಲೈಂಗಿಕ ಲೋಕದ ಮೇಲ್ಗಡೆಯಲ್ಲಿಯೇ ಇರಬೇಕಾದ ಈ ಮಾನವನು, ಸ್ಥಲ/ಕಾಲದ ಭೌತವೃತ್ತಾಕೃತಿಯ ಭೌಮಾಸುರ ಮಾಯಾಜಾಲದಲ್ಲಿ ಸಿಲುಕಿರುವುದು ಹೇಗೆ? ಮಾನವನನ್ನು, ಈ ಅಹಿ ನಾಗ/ಲಿಂಗ, ನಾಗ/ಚಂದ್ರ ಭೂತಜಾತದ ಪತಿ: ಕಾಕಾಸುರನು (ಕ್ರೋನಸ್) ಸ್ಥಲ/ಕಾಲದ ಈ ಟೊಳ್ಳಿನಲ್ಲಿ ಆಕರ್ಷಿಸಲು ಈ ಅಹಿಮಾಯೆಯನ್ನು ಕಲ್ಪಿಸಿರುವ ಆ ಭೂತ : ಲಿಂಗವು ಯಾರು? ಈ ಕೃತ್ಯವನ್ನು ಎಸಗಿದವನು ಮಾನವ. ದೇವ ಅಥವಾ ದೇವಮಾನವನು ಇರಲು ಸಾಧ್ಯವಿಲ್ಲ. ಈ ವ್ಯಕ್ತಿಯು ಅಸುರಶಕ್ತಿಯ ಆರಾಧಕ ಭ್ರಷ್ಟ ಮಾನವನೇ ಇರಲಿಕ್ಕೆ ಬೇಕು. ಏಕೆಂದರೆ, ಅತ್ಯಂತ ಅಭಾವಾತ್ಮಕ ಸ್ಥಲ/ಕಾಲವನ್ನು ಯೋನಿ/ಲಿಂಗರೂಪದಲ್ಲಿ - ಭೂತಜಾತದ ಪತಿಯ ರೂಪದಲ್ಲಿ ಆರಾಧಿಸುವ ಅಧಮ ವ್ಯಕ್ತಿಯೇ ಇರಲಿಕ್ಕೆಬೇಕು ಈ ಸಂಪ್ರದಾಯದ ಪ್ರಸ್ಥಾಪಕನು ಎಂಬ ಡೆಕಾರ್ಟನ ನಿಷ್ಕರ್ಷವು ಗಣಿತಶಾಸ್ತ್ರದ ಪದ್ಧತಿಯದ್ದು ಆಗಿದೆ.

ಭಾರತೀಯ ಸಂಸ್ಕೃತಿಯಲ್ಲಿ ದೊರೆಯುವ ಲಿಖಿತ ಪ್ರಮಾಣಗಳ ಬೆಳಕಿನಲ್ಲಿ ಡೆಕಾರ್ಟೆಯ ಉಕ್ತಿಯ ವಾಸ್ತವ ಸ್ವರೂಪವು ಖಚಿತ ಪಡುತ್ತದೆ. ಭೂತಜಾತದ ಪತಿ : ನಾಗ/ಲಿಂಗ, ನಾಗ/ಚಂದ್ರನು : ಸ್ವಯಂಭುವು ಭಗವದ್ಗೀತೆಯಲ್ಲಿ ಭಗವಂತ ಹೆಸರಿನಿಂದ ಅಡಗಿದ್ದಾನೆ! ಇಂತಹ ಈ ಭೂತಪತಿಯ ಉಕ್ತಿಯು ಈ ಗುಟ್ಟನ್ನು ರಟ್ಟು ಮಾಡಿದೆ: 'ಮಹರ್ಷಿಣಾಂ ಭೃಗುಃ ಅಹಮ್' ಭಾರತೀಯ ಮನು: ಮಾನವಧರ್ಮ : ಸಂಸ್ಕೃತಿಯನ್ನು ರೂಪಿಸಿರುವ ಮಹರ್ಷಿಗಳಲ್ಲಿ ನಾನು ಒಬ್ಬನು ಎಂಬ ಈ ಕಬೂಲಿ ಜವಾಬು ಮೌಲಿಕವಾಗಿದೆ.

ಈ ಭೃಗುವೇ ಭ್ರಷ್ಟನಾಗಿ ದೇವಯಾನ ಮಾರ್ಗ (೦) ಪ್ರವರ್ತಕ ಏಕಾಕ ಶುಕ್ರ (ಲಿಂಗ) ವು ಆಗಿ

ಭೂತಜಾತದ ಪತಿ ಭಗವಂತ ಎಂದು ಪೂಜೆಗೊಳ್ಳುತ್ತಿದ್ದಾನೆ! ಈ ಶುಕ್ರನೇ ಅಸುರ ಸಂಪ್ರದಾಯದ ಗುರು ಎಂಬುದು ಸರ್ವಮಾನ್ಯವಿದೆ. ಇಲ್ಲಿಯೇ ಇರುವ ಏಕಾಕ್ಷರ ಗಿರಾ ಇದು ಭೂತರೂಪ ಓಂಕಾರ ಸೂಚಕ ಶಬ್ದ! ಈ ಭ್ರಷ್ಟ ಭೃಗುವು ತಾನು ಅಸುರನಾಗಿ ತನ್ನ ಪಿತನು ಎಂಬ ವರಣನೂ ಭ್ರಷ್ಟನಾದನು, ಎಂಬ ತಿರುಬೊಬ್ಬೆ ಎಬ್ಬಿಸಿದ್ದಾನೆ. ಆದರೆ, ಋತಸ್ವರೂಪೀ ಸತ್ಯದ, ವಿಶ್ವನಿಯಮದ ಸಂರಕ್ಷಕನೆಂಬ ಕೀರ್ತಿಯ ಸಮ್ರಾಟ್ ವರುಣನು, ಇಂದಿಗೂ ಭಜಿಸಿದರೆ ಸಾಕ್ಷಾತ್ಕಾರವನ್ನೀಯುತ್ತಾನೆ. ಆತನ ಋತ : ಸತ್ಯವು ಜೀವಂತವಿರುವಾಗ (ಸ್ಥಲ)/ಕಾಲದ ಮೇಲ್ಗಡೆಯಲ್ಲಿ ಈ ಸಾಮ್ರಾಟ ವರುಣನು ಇಲ್ಲವಾಗಲು ಸಾಧ್ಯವಿಲ್ಲ.

ಸತ್ಯಂ ಏವ ಜಯತಿ (ತೇ) ನ ಅನೃತಂ

ಈ ಉಕ್ತಿಯನ್ನು ಮುಂಡ (ಲಿಂಗ)ದ ಉಪನಿಷತ್ತಿನಲ್ಲಿ ಅಡಗಿಸಿ ಇಡಲಾಗಿದೆ. ಸೋಜಿಗವೆಂದರೆ ಸತ್ಯಕ್ಕೆ ಋತಕ್ಕೆ ಪ್ರಕಾಶಕ್ಕೇ ಗೆಲವು, ಅನೃತಕ್ಕಲ್ಲ ಎಂಬ ಈ ಸಾಲುಗಳ ಕೆಳಗೇ ದೇವಯಾನದ ಉಲ್ಲೇಖವಿದೆ: ಸತ್ಯೇನ ವಿತತ- ದೇವಯಾನಃ ದೇವಯಾನ ಮಾರ್ಗವು (ಯೋನಿ: ಸ್ಥಲ) ಸತ್ಯದಿಂದ (ಸತ್ಯೇನ) ಹಿಗ್ಗುತ್ತದೆ. ಇಷ್ಟು ಅಂತಃಸಂಗತಿಯುಕ್ತ ಪ್ರಮಾಣಗಳು ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಉಳಿದು ಬಂದಿಲ್ಲ. ಆದರೂ ಕ್ರಿ ಪೂ. ೮೦೦ ರ ಸರಿಸುಮಾರಿಗೇ ಹೆಸಿಯೋಡ ಕವಿಯು, ಭೌಮಾಸುರ : ಟಿಟಾನರ ನಾಗ/ಲಿಂಗ ಸಂಪ್ರದಾಯದ ಉಗಮವಾದುದನ್ನು ಹೇಳುತ್ತಾನೆ. ಇವನಿಗಿಂತ ಸ್ವಲ್ಪ ಮುಂಚಿನ ಹೋಮರನ ಕಾವ್ಯದಲ್ಲಿ ಕಾಲ ಶಕ್ತಿಯು ಸ್ಥಲವನ್ನು ಸೃಷ್ಟಿಸಿದ ಸಾಂಕೇತಿಕ ಉಲ್ಲೇಖವು ಒಂದು ಸಿಕ್ಕುತ್ತದೆ. (ದ್ಯೌಃ) ಝೀಉಸನ ತಲೆಯಿಂದ ಅಥೆನಾ ಹುಟ್ಟಿದ್ದಾಳೆ. ಬೈಬಲ್ಲಿನ ಆಡಂನು ಈವ್ಗಳಿಗೆ ಜನ್ಮವಿತ್ತ ಕಥೆಯ ಬೇರು ಹೋಮರನಲ್ಲಿದೆ. ಮಿಲ್ಟನ್ ಕವಿಯು, ಭೂಲೋಕದಲ್ಲಿ ಪಾಪದ ಉದ್ಭವವು ಆದದ್ದು ಈ ಅಥೆನಾಳಿಂದ ಬಯಲಿಗೆ ಬರುತ್ತದೆ ಎಂದು ಹೇಳಿದ್ದನ್ನು ಓದಿದ್ದೇನೆ.

ಆದರೆ, ಆ ಸುಮಾರಿಗೆ ಈ ಅಸುರ: ಟಿಟಾನ್ ಪಂಥದ ಪ್ರವರ್ತಕನು ಯಾರು? ಈ ಸಂಗತಿಯು ಇನ್ನೂ ಬೆಳಕಿಗೆ ಬಂದಿಲ್ಲ. ಆದರೆ ಪೈಥಾಗೊಸನು ವ್ಯಕ್ತಿ ಮುಕ್ತಿಯ (emancipation of individual) ಈ ಪಂಥಕ್ಕೆ ತತ್ವಜ್ಞಾನದ ಹಿನ್ನೆಲೆಯನ್ನು ಒದಗಿಸಿಕೊಟ್ಟಿದ್ದಾನೆ ಎಂಬುದು ಈಗ ನಿಶ್ಚಿತವಾಗಿ ಗೊತ್ತಾಗುತ್ತದೆ. ಇಷ್ಟೇ ಅಲ್ಲ, ಈ ಭೂತ : ನಾಗ: ಲಿಂಗಾರಾಧನೆಯನ್ನು ಈ ಪೈಥಾಗೊರಸನು ಈಜಿಪ್ಟಿನಿಂದ ತಂದಿರಲಿಕ್ಕೇಬೇಕೆಂದು ಆತನ ಪರಿಭಾಷೆಯೇ ಚಾಡೀ ಹೇಳುತ್ತಿದೆ. ಈ ದೇಹವನ್ನು ಪಿರಾಮಿಡ್ (ಗೋರಿ) ಎಂದು ಬಗೆಯಬೇಕು. ಈ ಸಮಾಧಿಯು ಒಟ್ಟು ದಶಸಂಖ್ಯೆಯುಳ್ಳದ್ದು ಆಗುತ್ತದೆ ಎಂದು ಸ್ಪಷ್ಟೀಕರಿಸಿದ್ದಾನೆ. ಇಜಿಪ್ಟಿನ ಈ 'ಕ' (Ks) ಭೂತವು ಭಾರತಕ್ಕೆ ಬಂದುದು. ಋಗ್ವೇದ ಸೂಕ್ತಸ್ಥ ಪ್ರಮಾಣದಿಂದ ಬಯಲಿಗೆ ಬರುತ್ತದೆ. ಕ ದೆವ್ವನ ಸೂಕ್ತ ಹಿರಣ್ಯಗರ್ಭಃ ಸಮವರ್ತತ್ ಅಗ್ರೇ ಭೂತಸ್ಯ ಜಾತಃ ಪತಿಃ ಏಕಃ ಆಸೀತ್!

ವರುಣ : ಆದಿತ್ಯರ ಸಮೀಕ್ಷೆಯಲ್ಲಿ ಪ್ರೊ. ಓಲ್ಡೆನ್‌ಬರ್ಗನಿಗೆ ಕಂಡಿರುವ ಅಂಶವೆಂದರೆ, ಭಾರತೀಯ ಸಂಸ್ಕೃತಿಯ ಈ ಸ್ಥಿತ್ಯಂತರಕ್ಕೆ ಸುಮೇರಿನತ್ತಣಿನ ಚಾಂದ್ರಪಂಥೀಯ ಪ್ರಭಾವವೇ ಕಾರಣವಿರಲಿಕ್ಕೆ ಬೇಕು. ಓಲ್ಡೆನ್‌ಬರ್ಗನ ಈ ನಿಷ್ಕರ್ಷಕ್ಕೆ ಸುಮೇರಿನತ್ತಣಿನ ಕೆಲವೊಂದು ಪ್ರಮಾಣಗಳಿಂದ ಪುಷ್ಟಿ ದೊರೆಯುತ್ತದೆ, ಎಂಬುದು ನನ್ನ ಅನ್ವೇಷಣೆಯಲ್ಲೂ ದೃಢಪಟ್ಟಿದೆ. ವೈವಸ್ವತಮನು ಮತ್ತು 'ಬಿತ್ತಿದ್ದನ್ನು ಬೆಳಕೊ.' ಇವೆರಡೂ ಗ್ರಂಥಗಳಲ್ಲಿ ಅದರ ವಿವರಣೆ ಸಾಕಷ್ಟು ಬಂದಿದೆ. ಅಲ್ಲದೆ ಈಜಿಪ್ಟಿನ ಪುರಾತನ Ka (ಕ) ಲಿಂಗೋದ್ಭವ ನಾಗನ ಸ್ವಯಂಭೂ, ಭೂತಪತಿಯ ಪಡಿಯಚ್ಚನ್ನು ಕೊಟ್ಟಿದ್ದೇನೆ.

ಮುಕ್ತಾಯ

ಮನು: ಮಾನವನ ಪ್ರಾದುರ್ಭಾವದ ಜಾಗತಿಕ ಸಮೀಕ್ಷೆಯಲ್ಲಿ ಕಂಡುಬಂದಿರುವ ಕೆಲವೊಂದು ವಿಶೇಷ ಸಂಗತಿಗಳು : ಇರಾಣಿನ ಪುರಾತನ ಗ್ರಂಥ : ಅವೆಸ್ತದ ಅಹುರ ಮಝುದನು ಭಾರತೀಯ ವರುಣನಂತೆಯೇ ಜಾಗತಿಕ ಅತೀ ಪುರಾತನ ದೇವರುಗಳಲ್ಲಿ ಗಣ್ಯನಾಗಿದ್ದಾನೆ. ಅಹುರ ಮಝುದನು, ಓಹುಮನ : (ಸುಮತಿ)

ಸಂಗಾತಿ. ಇಲ್ಲಿ ವಿವಸ್ವನ್ ಮನುವಿನ ಹೋಲಿಕೆಯು ಉಂಟು. ಅವೆಸ್ತದಲ್ಲಿ ವಿವಸ್ವತನ ಉಲ್ಲೇಖವೂ ಇದೆ. ಗ್ರೀಕ್ ಯುರೇನಸ್ ಮತ್ತು ಊಸ್ ಇಬ್ಬರು ಅತೀ ಪುರಾತನ ದೇವರು. ಅತಿ ಪುರಾತನ ದೇವರ ಲಕ್ಷಣವನ್ನು ತಜ್ಞರು ಗೊತ್ತುಪಡಿಸಿದ್ದಾರೆ. ಈ ಆದಿದೇವರು, ಸೂರ್ಯ/ಚಂದ್ರ ರೂಪರಲ್ಲ. ಆಕಾಶತತ್ವದ ಪ್ರಕಾಶರೂಪ ಪಾತಳಿಯ ಮೇಲ್ಗಡೆಗೆ ದೇವಲೋಕ, ಎಂಬ ನಂಬಿಗೆಯು ಅಂದಿನವರಲ್ಲಿ ಇತ್ತು. ಗ್ರೀಕ್ urenus-Ouranus ಇದಕ್ಕೆ ಸಾಕ್ಷಿ.


ಭಾರತೀಯ ವರುಣನು ಪುರಾತನ ದೇವರು. ಮೂಲದಲ್ಲಿ ಇವನು ಸೂರ್ಯನಲ್ಲ. ಮಿತ್ರಾವರುಣ ಈ ಜೋಡು ಸಂಕೇತವು ಮೂಲದಲ್ಲಿ ಸಮಾನಾರ್ಥಕ ಜೋಡು ಸಂಕೇತವಿರಬೇಕು. ಆಕಾಶತತ್ವವನ್ನು ಗ್ರಹಿಸಿಕೊಳ್ಳಲು ಸೂರ್ಯಸೂಚಕ ಮಿತ್ರಸಂಕೇತವನ್ನು ಜೋಡಿಸಿರುವ ಸಾಧ್ಯತೆಯೂ ಇದೆ. ಭೂತಜಾತದ ಪತಿ : ನಾಗ/ಲಿಂಗ-ನಾಗ/ ಚಂದ್ರ-ರೂಪ, ಸ್ವಯಂಭೂ ಲಿಂಗದ ಆರಾಧನೆಯು ಪ್ರಬಲವಾಗಿ, ಈ ರಾತ್ರ ಸಮಯಾಚಾರವು ಪ್ರಜ್ಞಾ : ಪ್ರಕಾಶ ತತ್ವವನ್ನು ಬೆಲೆಗೆ ಎರವಾಗಿಸುತ್ತದೆ. ಆದರೂ, ಈ ವಿರೋಧದ ಹಿನ್ನೆಲೆಯಲ್ಲಿಯೂ ಭಾರತೀಯ ಪುರಾತನ ದೇವರುಗಳಲ್ಲಿ, ವರುಣನಲ್ಲದೇ, ವಿವಸ್ವನ್ /ಮನು ಮತ್ತು ಸವಿತೃ/ವಿಶ್ವಾಮಿತ್ರ ಈ ಜೋಡಿಯೂ ಭ್ರಷ್ಟವಾಗದೇ ಉಳಿದು ಬಂದಿರುವಲ್ಲಿ ಭಾರತೀಯ ಸಮಾಜ : ಸಮಷ್ಟಿಯ ಅಂತಃಸತ್ವವು ಎದ್ದು ಕಾಣುತ್ತಿದೆ. ಈ ವಿವಸ್ವತ, ಸವಿತೃ ಎರಡೂ ಸೂರ್ಯ ಸೂಚಕ ಸಂಕೇತಗಳಲ್ಲ. ವಿವಸ್ವತ ಮತ್ತು ಸವಿತೃ ಸಂಕೇತದ ಮೂಲ ಧಾತ್ವರ್ಥವು ಇದಕ್ಕೆ ಸಾಕ್ಷಿ. ವೇದದ ದೇವತಾ ಕಥಾ ಲೇಖಕ ಮ್ಯಾಕ್‌ಡೊನೆಲ್ಲನು ಹೇಳುವ ಅರ್ಥವೂ ಇದಕ್ಕೆ ಸಾಕ್ಷಿ. ಸೂರ್ಯಪೂಜೆಯು ನಾಗ /ಲಿಂಗೋಪಾಸನೆಯೊಡನೆ ಪ್ರಾರಂಭವಾಗುತ್ತದೆ. ವಿವಸ್ವತ/ಮನು/ಸವಿತೃ/ ವಿಶ್ವಾಮಿತ್ರ ಇವು ಮಾನವ ಆದರ್ಶ : ವಾಸ್ತವ : ಸತ್ಯಸೂಚಕ ಸಂಕೇತಗಳು. ಮನ-ಮಾನವನು ವಿಶ್ವಮಿತ್ರನು: ವಸುದೈವ ಕುಟುಂಬಕಂ ಇದು ಮಾನವನ ಆದರ್ಶ.

ಈಜಿಪ್ಟಿನಲ್ಲಿ ನಾಗಾಲಿಂಗಿತ ಸೂರ್ಯನ ವಿವಿಧ ಪ್ರತೀಕಗಳು ದೊರೆಯುತ್ತವೆ. ಗ್ರೀಕ್ /ರೋಮನ್ ಸಂಸ್ಕೃತಿಯಲ್ಲಿ ಯುರೇನಸ್/ಝೀಊಸ್ ಕಾಣಿಸಿಕೊಳ್ಳುತ್ತಾರೆ. ಆದರೆ, ಅವರು ಸ್ತ್ರೀಲಂಪಟರಾಗಿ ಭ್ರಷ್ಟರಾದುದನ್ನು ಹೋಮರನು ಚಿತ್ರಿಸಿದ್ದಾನೆ. ಆ ಬಳಿಕ ಅಲ್ಲಿ ಪ್ರಜ್ಞಾ : ಪ್ರಕಾಶದ ಮನು : ಮಾನವ ಸಂಪ್ರದಾಯವು ತಲೆ ಎತ್ತಲೇ ಇಲ್ಲ. ಇದಕ್ಕೆ ಅಪವಾದವು ಇರಾಣಿನ ಅವೆಸ್ತದ ಅಹುರ ಮಝುದನದು. ಝುರತುಷ್ಟನು, ಅವೆಸ್ತವನ್ನು ಪರಿಷ್ಕರಿಸುತ್ತಾನೆ. ಆದರೆ, ಅದರ ಮೂಲ ಚೌಕಟ್ಟು ಈ ಮೊದಲಿನಂತೆಯೇ ಉಳಿದು ಬಂದಿದೆ, ಎಂದು ಪಾಶ್ಚಾತ್ಯ ಸಂಶೋಧಕರೇ ಹೇಳಿದ್ದಾರೆ. ಅರಬರ : ಚಾಂದ್ರ ಉಪಾಸಕರ ಪೀಡೆಯನ್ನು ಸಹಿಸಲಾರದೆ, ಫಾರಸೀ ಹೆಸರಿನಲ್ಲಿ ಆ ಜನರು ಇಂದು ಭಾರತವಾಸಿಗಳಾಗಿದ್ದಾರೆ. ಭೂತ ಜಾತದ ಪತಿಯು : ನಾಗಲಿಂಗೋಪಾಸಕರ ಪಂಥ. ಹಿಂದೂ ಎಂಬ ಸ್ಥೂಲ ಆಗಂತುಕ ಹೆಸರಿನ ಹಿಂದೆ ಅಡಗಿ ಎಂತೊ, ಬದುಕುತ್ತಿದೆ. ಈ ಭೌಮಾಸುರ : ಕಾಕಾಸುರನ ಅಸುರ ಪಂಥವು!

ಮನು : ವೈವಸ್ವತನನ್ನು ಕಾಣದಂತೆ ಮಾಡಿರುವ ಘೋರಕೃತ್ಯಕ್ಕೆ ಭೂತಜಾತದ ಪತಿ ಎಂಬ ಭಗವಂತ ಹೆಸರಿನ ಅಸುರನು ಭಗವದ್ಗೀತೆಯ ಕತ್ತಲಿನ ತೆರೆಯ ಮರೆಯಲ್ಲಿ ಅಡಗಿ ನುಸುಳಿಕೊಳ್ಳುತ್ತಿದ್ದಾನೆ! ದ್ರಷ್ಟಾರ ಡೇಕಾರ್ಟನು ಹೇಳುತ್ತಾನೆ : ಈ evil : genius genie-genital ಈ ಭೂತ : ಲಿಂಗವು ದೇವರು ಅಲ್ಲ, ಮಾನವನ ಅಂಗವು. ಈ ಅಂಗವು ಮಾನವನನ್ನು ಮೂದಲಿಸಲು ಭೂತ : ಲಿಂಗರೂಪದಲ್ಲಿ ತಲೆಯೆತ್ತಿ ನಿಂತಿದೆ! ಕತ್ತಲು ಪ್ರಕಾಶವನ್ನು ಸೋಲಿಸುತ್ತದೆ. ಎಂದರೇನು? ಇಲ್ಲಿ ಈ ಮಾನವನೇ ಭ್ರಷ್ಟನಿರಬೇಕು ಅಥವಾ ಈ ಭ್ರಷ್ಟ ಸಂಪ್ರದಾಯವನ್ನು ಉಳಿಸಿಕೊಳ್ಳಬೇಕೆಂಬುವರನ್ನು ವಿರೋಧಿಸುವ ನೈತಿಕ ಧೈರ್ಯವಿಲ್ಲದ ಹೇಡಿಗನು ಇರಬೇಕು. ಒಂದು ವ್ಯಕ್ತಿ ಸಮಾಜ : ಸಮಷ್ಟಿ ಆಗಲಾರದು ವ್ಯಕ್ತಿಯು ಪ್ರಬಲವಾಗುವಾಗ, ಆಗಂತುಕ ಸಮುದಾಯ-ವ್ರಾತ (Crowd,mass) ಆಗುತ್ತದೆ. ಸಮುದಾಯ ಮತ್ತು ಸಮಾಜ ಈ ಭೇದವನ್ನು ಅರಿಯದಷ್ಟು ಇಂದು ಕತ್ತಲು ಆವರಿಸಿದೆ, ಎಲ್ಲೆಲ್ಲೂ!

ಅಮೇರಿಕೆಯ ಸಹಚರರ ಒಂದು ಜೋಡಿಯು ಈ ದೇಶಕ್ಕೆ ಬಂದಿತ್ತು. ಇಂತಹ ಸಹಚರಿಗಳು, ನಮ್ಮ ದೇಶದಲ್ಲಿ ಅಪರೂಪ. ಆದರೆ ಫ್ರಾನ್ಸ್ ಮೊದಲಾದ ಕಡೆಗೆ ವಿಶೇಷತಃ ಈಗ ಅಮೇರಿಕೆಯಲ್ಲಿ ಮದುವೆಯ ಬಂಧನದಿಂದ ಮುಕ್ತರಾಗಿ ಬದುಕುವ ಹೆಣ್ಣುಗಂಡಿನ ಜೋಡುಗಳು ಅಪರೂಪವಿಲ್ಲ. ಇಂತಹ ಸಹಚರ ಜೋಡಿಯನ್ನು ಸಂದರ್ಶಿಸಿ ಪತ್ರಿಕೆಕಾರರು ಸುದ್ದಿ ಮಾಡುತ್ತಾರೆ. ಈ ಜೋಡಿ ತಮ್ಮ ನಡೆವಳಿಯ ಬಗೆಗೆ ಅಭಿಮಾನ ವಹಿಸಿರುತ್ತದೆ. ಆದರೆ, ಭಾರತೀಯ ಸಂದರ್ಶಕರ ಪ್ರಶ್ನೆಗಳನ್ನು ಉತ್ತರಿಸುವಾಗ ಇವರಲ್ಲಿ ಕೆಲವರು ಪ್ರಾಮಾಣಿಕರಾಗಿ ತಮ್ಮ ಅಭಿಪ್ರಾಯವನ್ನು ಹೇಳದೆ, ಭಾರತದಲ್ಲಿ ಆದರ, ಆತಿಥ್ಯ, ಪ್ರೀತಿ, ವಿಶ್ವಾಸ ಎಲ್ಲೆಲ್ಲೂ ನಮಗ ಅನುಭವಕ್ಕೆ ಬಂತು, ಎಂದು ಹೇಳುತ್ತಾರೆ. ಇದು ನಿಮ್ಮ ದೇಶದ ಹಿರಿಮೆ ಎಂದು ಹೊಗಳುವುದೂ ಉಂಟು! ಇದು ನಿಜವಿದ್ದಲ್ಲಿ, ನಿಮ್ಮ ದೇಶದಲ್ಲಿ ವಿವಾಹವನ್ನು ಬಂಧನ ಎನ್ನಲು ಕಾರಣವೇನು? ಎಂಬ ಮರು ಪ್ರಶ್ನೆಗ ಆ ಅಮೇರಿಕ ಮನುಷ್ಯನು ಹೇಳುತ್ತಾನೆ. ನಿಮ್ಮ ರೀತಿ ನಮ್ಮಲ್ಲಿ ಒಗ್ಗುವುದಿಲ್ಲ! ಹಾಗಾದರೆ, ನೀವು ಒಳ್ಳೆಯದನ್ನು ಆಚರಿಸುವುದಿಲ್ಲವೇಕೆ? ಎಂದರೆ, ಮೌನ! ನಿಜವಾದ ಪ್ರಾಮಾಣಿಕ ಜೋಡುಗಳ ಅಭಿಮತ ಬೇರೆ ಬಗೆಯಲ್ಲಿ ವ್ಯಕ್ತವಾಗುತ್ತದೆ.

ನಿಮ್ಮ ದೇಶದಲ್ಲಿ ಕೌಟುಂಬಿಕ ಬಂಧನ, ವೈವಾಹಿಕ ಬಂಧನ, ಜಾತಿಯ ಬಂಧನ ಮಾನ್ಯ ಮಾಡುತ್ತೀರಿ. ಆದರೆ, ನಾವು ಮುಕ್ತಜೀವನ ಮೆಚ್ಚಿಕೊಂಡಿದ್ದೇವೆ. ನಿಮ್ಮಲ್ಲಿ ವ್ಯಕ್ತಿ/ಹೆಣ್ಣು-ಗಣ್‌ಡು ಮುಕ್ತವಾಗಿಲ್ಲ, ಇಂದಿಗೂ! ಹಳೆಯ ಯುಗದ ಮೌಲ್ಯಗಳಿಗೆ ಇಂದಿಗೂ ನೇತು ಬೀಳುತ್ತಿದ್ದೀರಿ! ಆದರೆ ಈಗ ನಿಮ್ಮ ದೇಶದಲ್ಲೂ ಮುಂಬೈ, ಕಲಕತ್ತಾ, ದಿಲ್ಲಿ, ಬೆಂಗಳೂರು ಮದ್ರಾಸ್ಸಿನತ್ತ ಮುಕ್ತಜೀವನ ನಡೆಸುವ ಸುಧಾರಕ ತರುಣ-ತರುಣಿಯರು ಕಾಣಲು ದೊರೆಯುತ್ತಿದ್ದಾರೆ! ಪ್ರಪಂಚವು ಇಡಿಯಾಗಿ ಇದೆ, ಒಂದೆಡೆಯ ನಡೆವಳಿ ಉಳಿದೆಡೆಗೂ ಹಬ್ಬುತ್ತದೆ. ಆಧುನಿಕ ಕಂಪ್ಯೂಟರ್ ಯುಗದಲ್ಲಿ ಮಾನವನು ಅದೃಶ್ಯನಾಗಿ ಎಲ್ಲೆಲ್ಲೂ ಯಂತ್ರಮಾನವ ಸಂಪ್ರದಾಯವು ಹಬ್ಬುತ್ತದೆ. ಪ್ರಜ್ಞೆಯಿಂದ ಮಾನವ ದೇಹವು (ಪ್ರಾಣ) ಮುಕ್ತವಾಗಿದೆ. ಈ ದೇಹವೇ ನಾನಾ ರೂಪಗಳಲ್ಲಿ ಸಮ್ರಾಟ್ ಪದವಿಯಲ್ಲಿ ಆಳುತ್ತದೆ ಈ ಪ್ರಪಂಚವನ್ನು!.



ಸುಮಾರು ಐವತ್ತು ವರ್ಷಗಳ ಹಿಂದೆ ಬದುಕಿದ್ದ
ಬ್ರಹ್ಮ ಸಾಕ್ಷಾತ್ಕಾರಿಯೆಂಬ ಸಾಧಕ ಗುಲಾಬದಾಸ
(ರಾಯಬಾಗ ತಾಲೂಕ ಹಾರೂಗೇರಿ ಮಠದಲಿ ಇರುವ ಚಿತ್ರ)



ಸೃಜನಜಲ ಸ್ರವಿಸುತ್ತಿರುವ ಚಾಂದ್ರಮಾನವ (ಆಫ್ರಿಕೆಯೊಳಗಿನ ಗುಹೆಯೊಂದರಲ್ಲಿ ಇರುವ ಚಿತ್ರ)

ಅನುಬಂಧಗಳು

ಶಂಬಾ ಕೃತಿಗಳ ವಿವರಣಾತ್ಮಕ ಸೂಚಿ

ಆಕರಗ್ರಂಥಗಳ ಸೂಚಿ

ಶಂಬಾ ವಾಙ್ಮಯ ಸೂಚಿ

ಶಬ್ದಸೂಚಿ

ಶಂಬಾ ಕೃತಿಗಳ ವಿವರಣಾತ್ಮಕ ಸೂಚಿ

ಪ್ರವಾಹ ಪತಿತರ ಕರ್ಮ 'ಹಿಂದೂ' ಎಂಬ ಧರ್ಮ

ಇದು ೧೯೭೬ರಲ್ಲಿ ಮುದ್ರಣಗೊಂಡಿತು. ಈ ಪುಸ್ತಕವು 'ಪ್ರಸಾರಾಂಗ, ಜ್ಞಾನಭಾರತಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಪ್ರಕಟಿತವಾಗಿದೆ. ಇದು ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು ಇಲ್ಲಿ ಮುದ್ರಣಗೊಂಡಿದೆ. ಇದರಲ್ಲಿ ಒಟ್ಟು ಹನ್ನೆರಡು ಅಧ್ಯಾಯಗಳಿವೆ. ಕೊನೆಯ ಮೂರು ಅಧ್ಯಾಯಗಳು ಪರಿಶಿಷ್ಟವನ್ನು ಹೊಂದಿವೆ. ಅರಿಕೆ ಮತ್ತು ಮುನ್ನುಡಿಯನ್ನು ಹೊರತುಪಡಿಸಿದರೆ 'ಉಪನ್ಯಾಸದೊಳಗಿನ ವಿಚಾರಸೂತ್ರ' ಎಂಬ ಅಧ್ಯಾಯವು ಗ್ರಂಥದ ಮುಖ್ಯವಿಷಯವನ್ನು ಸೂತ್ರರೂಪಿಯಾಗಿ ಹೇಳುತ್ತದೆ. 'ಮಾನವಧರ್ಮದ ಜೀವನವ್ಯೂಹ' ಎಂಬ ವಿಸ್ತಾರವಾದ ನಕ್ಷೆಯನ್ನು ನೀಡಿದ್ದಾರೆ. ಒರ್‌ಫಿಕ್ ಪಂಥೀಯ ಪ್ರತೀಕ ಪೂಜೆಯ ಅವಶೇಷಗಳ ಚಿತ್ರ, ಈಜಿಪ್ಟಿನ ಸರ್ಪಾಲಿಂಗಿತ ಸೂರ್ಯನ ಚಿತ್ರ ಹಾಗೂ ಕುಂಡಲಿನೀ ಸರ್ಪಹೋಲುವ ಚಿತ್ರಗಳು, ಸುಮೇರು ಸಂಸ್ಕೃತಿಯ ಪ್ರಾಚೀನ ವೃಕ್ಷಚಿತ್ರ, ಗ್ರೀಕ್‌ಸಂಸ್ಕೃತಿಯೊಳಗಿನ ನಾಗನ ಶತ್ರು ಹಿರಾಕ್ಲಿಸ್ ಚಿತ್ರಗಳನ್ನು ನೀಡಿದ್ದಾರೆ.

ಒಟ್ಟು ಗ್ರಂಥವು 'ಋಗ್ವೇದ ಸಾರ ನಾಗಪ್ರತಿಮಾ ವಿಚಾರ'ದ ಅಂಶಗಳನ್ನು ಇನ್ನಷ್ಟು ಮುಂದುವರಿಸುವುದಲ್ಲದೆ, ಆಧುನಿಕ ಜೀವವಿಜ್ಞಾನಿಗಳ ಆಲೋಕನ, ಕ್ಯಾಸಿರರ್ ಮತ್ತು ಯೂಂಗ್ ಮಾನವಶಾಸ್ತ್ರಜ್ಞರ ಪರಿಭಾಷೆಯ ಚಿಂತನೆ, ಮಾನವಶಾಸ್ತ್ರದ ಮೂಲಕ ಗ್ರಹಿಕೆಗೆ ಬಂದಿರುವ ಜ್ಞಾನೋಪಲಬ್ಧಿಯ ಕ್ರಮಾಗತ ಚಿಂತನೆಗಳು ಶಂಬಾ ಅವರ ವಸ್ತುವಿಗೆ ಗ್ರಾಸವೊದಗಿಸಿವೆ. ಡೆಮ್ಮೈ ಅಷ್ಟದಳಾಕಾರದ ಒಟ್ಟು ೩೨ +೧೦೨ ಪುಟಗಳನ್ನು ಇದು ಒಳಗೊಂಡಿದೆ. ಈ ಪುಸ್ತಕವು ೧೦ ರೂ ಬೆಲೆಯನ್ನು ಹೊಂದಿದೆ.

ಶ್ರೀಮತ್ ಭಗವದ್ಗೀತೆಯಲ್ಲಿ ಹುದುಗಿರುವ ರಾಜ-ಯೋಗದ ಸ್ವರೂಪ

ಇದು ೧೯೭೭ರಲ್ಲಿ ಮುದ್ರಣಗೊಂಡಿತು. ಶ್ರೀ ಹೊಂಬಾಳಿ ಬಲರಾಮರಾಯರು ಬುಕ್‌ಸೆಂಟರ್, ಹುಬ್ಬಳ್ಳಿ ಇವರಿಂದ ಪ್ರಕಾಶಿತವಾಯಿತು. ಈ ಪುಸ್ತಕವು "ಪ್ರಚಲಿತ ಸದೋಷ ಸಂಪ್ರದಾಯಗಳನ್ನೂ ಬಾಬಾ ಬುವಾ ಮುಂತಾದ ಗುರುವರ್ಗವನ್ನೂ ನಗೆಯ ವಿಷಯವಾಗಿಸಿರುವ ಶ್ರೀ ಬೀchi ಮತ್ತು ವಿಶ್ವವಿದ್ಯಾಲಯದ ಉಪಕುಲಪತಿ-ಸ್ಥಾನದ ಬಲದಿಂದ ಪವಾಡ ಚಮತ್ಕಾರಗಳ ಮೋಸವನ್ನು ಬಯಲಿಗೆ ಎಳೆಯುವ ಮಹಾಸಂಕಲ್ಪ ಮಾಡಿರುವ ಶ್ರೀ ಎಚ್. ನರಸಿಂಹಯ್ಯ ಇವರುಗಳಿಗೆ ತಲೆಬಾಗಿ ಕಾಣಿಕೆ' ಯೆಂದು ಮುಡಿಪು ಮಾಡಿದ್ದಾರೆ. ಪುಸ್ತಕದ ಆರಂಭಕ್ಕೆ ಎಚ್. ವಿ. ಸುಕಟಣಕರ ಅವರ "Whether we realize or not it remains a

fact we in Indiass till stand under the spell of the Mahabharata" ಎಂಬ ಉಲ್ಲೇಖವುಂಟು. ಪುಸ್ತಕದ ಒಳಗೆ ತಮ್ಮ ಹಿಂದಿನ ಪುಸ್ತಕಗಳಲ್ಲಿ ಬಳಸಿರುವ ಚಿತ್ರಗಳನ್ನು ಮರಳಿ ನೀಡಿದ್ದಾರೆ.

ಕ್ರೌನ್ ಅಷ್ಟದಳಾಕಾರ ಒಟ್ಟು ೬+೩೬ ಪುಟಗಳಿಂದ ಕೂಡಿದೆ. ಪುಸ್ತಕದ ಬೆಲೆ. ೧.೫೦ ಮಾತ್ರ. ಮುದ್ರಣವು 'ಬುಕ್‌ಸೆಂಟರ್ ಪ್ರೆಸ್, ದೇಶಪಾಂಡೆನಗರ ಹುಬ್ಬಳ್ಳಿ ಇಲ್ಲಿ ಆಗಿದೆ. ಇಡಿ ಗ್ರಂಥವು ಗ್ರೀಕಿನ ಒರ್‌ಫಿಕ್ ಸಂಪ್ರದಾಯ ಹಾಗೂ ಗ್ರೀಕಿನ ಗಣಿತಶಾಸ್ತ್ರದ ಘೂಮಿಕೆಯಿಂದ 'ಜೀವನ' ಸ್ವರೂಪದ ಆಶಯವನ್ನು ಗ್ರಹಿಸಿದ್ದಾರೆ. ಭಗವದ್ಗೀತೆಯನ್ನು ತಿಲಕ್ ಮತ್ತು ಗಾಂಧೀಜಿ ಇಬ್ಬರು ಗ್ರಹಿಸಿದ ಸ್ವರೂಪಾಕೃತಿ ಹಾಗೂ ಆಶಯವನ್ನು ಉಲ್ಲೇಖಿಸಿ 'ದ್ವಂದ್ವ' ಸ್ವರೂಪ ಇರುವುದರ ಬಗೆಗೆ ವ್ಯಾಪಕವಾಗಿ ಚರ್ಚಿಸಿದ್ದಾರೆ.

ವೈವಸ್ವತ ಮನುಪ್ರಣೀತ ಮಾನವಧರ್ಮದ ಆಕೃತಿ

ಇದು ೧೯೭೯ರಲ್ಲಿ ಮುದ್ರಣಗೊಂಡಿತು. ಪುಸ್ತಕದ ಒಳಶೀರ್ಷಿಕೆಯಲ್ಲಿ 'ಪ್ರವಾಹ ಪತಿತರ ಕರ್ಮ: ಹಿಂದೂ ಎಂಬ ಧರ್ಮ' ಗ್ರಂಥದ ಎರಡನೆಯ ಭಾಗವೆಂದು ಹೆಸರಿಸಲಾಗಿದೆ. ಲೇಖಕರು ಎಂಬ ಕಡೆ "ನಿವೇದಕರು : ಡಾ.ಶಂಬಾ ಜೋಶಿ" ಎಂದಿರುವುದು ಗಮನಾರ್ಹ. ಈ ಪುಸ್ತಕವು 'ಕಾಲಗತಿಪ್ರಕಾಶನ, ರಾಯಬಾಗ, ಬೆಳಗಾವಿ ಜಿಲ್ಲೆ ಇವರು ಪ್ರಕಾಶಗೊಳಿಸಿದ್ದಾರೆ. 'ವೈವಸ್ವತ ಮನುಪ್ರಣೀತ ಮಾನವಧರ್ಮ' ಎಂಬ ಶೀರ್ಷಿಕೆಯಿದ್ದು ಕಂಸದಲ್ಲಿ 'ಆಕೃತಿ ಸ್ವರೂಪದ ಹೊಳಹು' ಎಂದು ವಿವರಣೆ ನೀಡಿದ್ದಾರೆ. ಈ ಪುಸ್ತಕವನ್ನು "ವೈಶ್ವನರಾಗ್ನಿ ಸ್ವರೂಪ ಕಂನಾಡ ಜನಪದ ಸಮಷ್ಟಿಯ ಅಡಿಯಲ್ಲಿ ಮತ್ತು ಜೀವನದ ಅರ್ಥಗ್ರಹಣಕ್ಕೆ ನೆರವಾದ ಬಾಳದಾರಿಯ ಸಂಗಾತಿ ಶ್ರೀಮತಿ ಪಾರ್ವತೀದೇವಿಗೆ" ಮುಡಿಪು ಮಾಡಿದ್ದಾರೆ. ಈ ಪುಸ್ತಕವು ಪ್ರಕಾಶ ಮುದ್ರಣಾಲಯ, ಧಾರವಾಡ ಮತ್ತು ಎಮ್.ಆರ್. ಮಂಜುನಾಥ ಆಕಳವಾಡಿ ಉಮಾಪ್ರಿಂಟರ್ಸ್ ಧಾರವಾಡ ಇವರು ಮುದ್ರಿಸಿದ್ದಾರೆ. ಒಟ್ಟು ಪುಸ್ತಕವು ಮೂರುಭಾಗಗಳಿಂದ ಕೂಡಿದೆ. ಪುಸ್ತಕದ ಕೊನೆಗೆ ತಮ್ಮ ಹಿಂದಿನ ಪುಸ್ತಕದ ಚಿತ್ರಗಳನ್ನೇ ನೀಡಿದ್ದಾರೆ. ಹೊಸ ಚಿತ್ರಗಳು ಪುಸ್ತಕದಲ್ಲಿ ಇಲ್ಲ.

ಒಟ್ಟು ಪುಸ್ತಕವು 'ಪ್ರವಾಹ ಪತಿತರ ಕರ್ಮ 'ಹಿಂದೂ' ಎಂಬ ಧರ್ಮ' ಕೃತಿಯಲ್ಲಿ ನಡೆಸಿದ ಆಲೋಚನೆಗಳ ಜತೆಗೆ ಹೊಸ-ಸಮಸ್ಯೆಗಳನ್ನೂ ಎತ್ತಿಕೊಂಡಿದ್ದಾರೆ. ಕ್ರಿಸ್ತ, ವೈದೇಹಿ ಜಾನಕಿ, ಎಲ್ಲಮ್ಮ, ಐತಿಹಾಸಿಕ, ಅಚಾರಿತ್ರಿಕ ಕುರಿತ ಚರ್ಚೆ ಉಂಟು. ಚಾರ್ಲಸ್ ಇದೆ. ವ್ಯಾಲ್ಲಾಸರ 'ಮಾನವನ ಪ್ರಾದುಭಾವ' ಕುರಿತ ಚರ್ಚೆ ಹಾಗೂ ಸಂಸ್ಕೃತಿಯ ವಿಕಾಸ-ಸಂಕೋಚದ ಇತಿಹಾಸ, ಆ ಭಾಷಿಕರ ಉನ್ನತಿ-ಅವನತಿ ಗಮನಕ್ಕೆ ತಂದುಕೊಡುವ ಬಗೆಗಿನ ಚರ್ಚೆ ಉಂಟು. ಡೆಮ್ಮೆ ಅಷ್ಟದಳಾಕಾರದ ೩೬೭ ಮತ್ತು ೧೯೬ ಪುಟಗಳಿಂದ ಕೂಡಿದೆ. ಇದರ ಬೆಲೆ ೧೯.೫೦. ಪುಸ್ತಕದಲ್ಲಿ ಹಲವು ಚಿತ್ರಗಳಿವೆ. ಈ ಹಿಂದೆ ಬಳಸಿದ ಚಿತ್ರಗಳೇ ಇಲ್ಲಿ ಮರು ಮುದ್ರಿತವಾಗಿವೆ. ಪುಸ್ತಕದ 'ಬೆನ್ನುಡಿ' ಆಚಾರ್ಯ ಅವಕರ ಮಾತುಗಳಿವೆ.

ಬುಧನ ಜಾತಕ

ಇದು ೧೯೮೦ರಲ್ಲಿ ಮೊದಲು ಮುದ್ರಣಗೊಂಡಿತು. ಇದರ ಪ್ರಕಾಶಕರು 'ಕಾಲಗತಿ ಪ್ರಕಾಶನ, ರಾಯಬಾಗ, ಬೆಳಗಾವಿ. ಈ ಪುಸ್ತಕದ ಶೀರ್ಷಿಕೆಯಲ್ಲಿ 'ವೈವಸ್ವತಮನು ಪ್ರಣೀತ ಮಾನವಧರ್ಮದ ಆಕೃತಿ-ಈ ಗ್ರಂಥದ ಪರಿಶಿಷ್ಠ' ಎಂದಿದೆ. ಭಟ್ಟತೌತನ ಮಾತೊಂದನ್ನು ಬಳಸಿದ್ದಾರೆ. ಇದರ ಜತೆಗೆ ಐನ್‌ಸ್ಟನ್ ಮಹಾಶಯನ "All knowledge of reality starts from experience and ends in it" ಎಂಬ ಉಕ್ತಿ ನೀಡಿದ್ದಾರೆ. ಈ ಪುಸ್ತಕವು "ವಿಶ್ವನಿಯಮ ರೂಪ ವಿಧಿಲಿಖಿತ: ಈ ಪ್ರಾಣಿ ಪ್ರಜ್ಞಾ: ಪ್ರಕಾಶಯುಕ್ತ ಜೀವನದ ಪಾತಳಿಯ ಮೇಲೆ, ಮಾನವನಾಗಿ ಕರ್ತವ್ಯ ದಕ್ಷತೆಯಿಂದ ಬಾಳಬಲ್ಲನು. ಅಥವಾ ಬುದ್ಧಿಯ ಬೆಳಕಿನಲ್ಲಿ, ದೇಹಧರ್ಮಿಯಾಗಿ (ಕರ್ಮಿಯಾಗಿ) ಜೀವಿತದ ಮೇಲೆ ನರ(ಳ)ನಾಗಿ ಬಾಳಬಹುದು. ನಿಸರ್ಗದತ್ತ ಸ್ವಾತಂತ್ರ್ಯದಿಂದಾಗಿ, ಮನುಜತ್ವ ಅಥವಾ ನರ(ಳ)ತ್ವ ಇವೆರಡರಲ್ಲಿ ಯಾವುದೊಂದನ್ನು ಆಯ್ದುಕೊಳ್ಳುವ ಹಕ್ಕು ಅವರವರಿಗಿದೆ. ಋತಸ್ವರೂಪೀ

ಈ ಸತ್ಯವನ್ನು ಅರುಹುವ ಈ ಪುಸ್ತಕವು ಕಂನಾಡ ಜನಪದ ಸಮಷ್ಟಿಯ ಮೂಲಕ 'ಮನು'ಕುಲಕ್ಕೆ ಅರ್ಪಿತ" ವೆಂದು ಮುಡಿಪು ಮಾಡಿದ್ದಾರೆ. ಇದು ಡೆಮ್ಮೈ ಅಷ್ಟದಳಾಕಾರದ IV+೩೨+ ೧೦೦ಒಟ್ಟು ೧೩೬ ಪುಟಗಳಿಂದ ಕೂಡಿದೆ. ಪುಸ್ತಕದ ಬೆಲೆ ೧೦.೦೦ ರೂ. ಪುಸ್ತಕದ ಮುದ್ರಕರು ಶ್ರೀ ಸಿ. ಟಿ. ತಡಕೋಟ ಶ್ರೀ ಶಾರದಾ ಮುದ್ರಣಾಲಯ, ತಡಕೋಟಗಲ್ಲಿ, ಧಾರವಾಡ. ಮಾರಾಟಗಾರರು, ಸಮಾಜ ಪುಸ್ತಕಾಲಯ, ಧಾರವಾಡ-ಹುಬ್ಬಳ್ಳಿ, ಮತ್ತು ಸಾಹಿತ್ಯಭಂಡಾರ, ಬೆಂಗಳೂರು ಹುಬ್ಬಳ್ಳಿ. ಪುಸ್ತಕದ ಪ್ರಕಾಶಕಿ ಪುಷ್ಪಾ ಹೊಸೂರು ಅವರು ಬರೆದ ಒಂದು ಪುಟದ ಬರೆಹವಿದೆ. ವಿಸ್ತೃತವಾದ ಪರಿವಿಡಿಯು ಇದೆ. ಮುನ್ನುಡಿ, ಪ್ರಸ್ತಾವನೆ, ಅರಿಕೆ ಮತ್ತು ಕೃತಜ್ಞತೆಗಳು ಎಂದು ಹಿಂದು ಮುಂದಾಗಿವೆ. ಈ ಸಂಪುಟದಲ್ಲಿ ಅವನ್ನು ಸೇರ್ಪುಗೊಳಿಸಲಾಗಿದೆ. ಪುಸ್ತಕದ ಕೊನೆಗೆ 'ಮಾನವ ಜೀವನ-ವಿಶ್ವದ ವೈಚಾರಿಕಾಕೃತಿ' ಎಂಬ ವಿಸ್ತೃತವಾದ ಸಕ್ಷರೂಪದ ಟಿಪ್ಪಣಿಯೊಂದನ್ನು ನೀಡಿದ್ದಾರೆ. ಒಟ್ಟು ಪುಸ್ತಕವು ಒಂಬತ್ತು ಪ್ರಕರಣಗಳಿಂದ ಕೂಡಿದೆ. ಶ್ರೀ ಪಾ. ವೆಂ. ಆಚಾರ್ಯ ಅವರ ಮುನ್ನುಡಿ ಉಂಟು. ಇದು ಎರಡನೆಯ ವಿಶ್ವಕನ್ನಡ ಸಮ್ಮೇಳನದ ಹೊತ್ತಿಗೆ ೧೯೮೬ ರಲ್ಲಿ ಮರಳಿ ಮುದ್ರಣಗೊಂಡಿತು. ಇದು ಮೊದಲ ಮುದ್ರಣದ ಯಥಾವತ್ತಾದ ಪುನರ್ಮುದ್ರಣ, ಪುಸ್ತಕದ ಪ್ರಕಾಶಕರು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಪುಸ್ತಕವು ಕ್ರೌನ್ ಅಷ್ಟದಳಾಕಾರದ- ಪುಟಗಳಿಂದ ಕೂಡಿದೆ. ಬೆಲೆ - ಇಡಲಾಗಿದೆ.

ಕಂನಾಡವರ ಸಂಸ್ಕೃತಿಯ ಗತಿಸ್ಥಿತಿ

ಇದು ೧೯೮೧ರಲ್ಲಿ ಪ್ರಕಾಶಿತವಾಯಿತು. ಈ ಪ್ರಸ್ತಿಕೆಯ ಪ್ರಕಾಶಕರು ಸಮಾಜಪುಸ್ತಕಾಲಯ, ಧಾರವಾಡ, ಧಾರವಾಡದ ಪ್ರತಿಭಾ ಮುದ್ರಣಾಲಯದಲ್ಲಿ ಇದು ಮುದ್ರಿತವಾಯಿತು. ಈ ಪುಸ್ತಕದಲ್ಲಿ ಶಂಬಾ ಅವರು ಹಿಂದಿನ ಪುಸ್ತಕಗಳ ವಿಚಾರಾಂಶಗಳನ್ನು ಒಂದು ಹಕ್ಕಿನೋಟವಾಗಿ ಹೇಳಿದ್ದಾರೆ. ಇದು ಒಂದು ಸಣ್ಣಹೊತ್ತಗೆ. ಈ ಹೊತ್ತಗೆಯ ವಿಚಾರಗಳನ್ನು ಸೂತ್ರೀಕರಿಸಿ ಬರೆಯಲು ಕಿರಿಯ ಮಿತ್ರರೊಬ್ಬರು ಕಾರಣವೆಂದು ಪುಸ್ತಿಕೆಯ ಪ್ರಾರಂಭದಲ್ಲಿ ಹೇಳಿದ್ದಾರೆ. ಪುಸ್ತಕದ ಮೊದಲಿಗೆ ಶಂಬಾಜೋಶಿಯವರ ಕೃತಿಗಳೆಂದು ಕೆಲವು ಪುಸ್ತಕಗಳ ಇದೆ. ಇದು ಕ್ರೌನ್ ಅಷ್ಟದಳಾಕಾರದ ೨೮ ಪುಟಗಳನ್ನು ಹೊಂದಿದೆ. ಇದರ ಬೆಲೆ ರೂ. ೧.೫೦

ಬಿತ್ತಿದ್ದನ್ನು ಬೆಳಕೊ

ಇದು ೧೯೮೪ರಲ್ಲಿ ಪ್ರಕಾಶಿತಗೊಂಡಿತು. ಕಾಲಗತಿಪ್ರಕಾಶನ ರಾಯಬಾಗ ಇವರ ಪ್ರಕಟಣೆ. ಕಾಲಗತಿ ಗ್ರಂಥಮಾಲೆಯ ಎಂಟು-ಒಂಬತ್ತನೆಯ ಹೂಗಳ ಸಂಯುಕ್ತ ಕೃತಿ. ಈ ಪುಸ್ತಕದ ಶೀರ್ಷಿಕೆಯ ಕೆಳಗೆ 'ಮಡಿಕೇರಿಯಲ್ಲಿ ಜರುಗಿದ ಅಖಿಲಭಾರತ ಕನ್ನಡಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣ ಸ್ಪಷ್ಟೀಕರಣಗಳೊಂದಿಗೆ' ಎಂದಿದೆ. ಕೋಲಿಂಗ್‌ವುಡ್ ಎಂಬುವನ "The living past of history lives... only in the self knowledge of the present" ಎಂಬ ಮಾತಿದೆ. ಪುಸ್ತಕದಲ್ಲಿ ಲೇಖಕ ಎಂದಿರದೆ 'ನಿವೇದಕ' ಡಾ. ಶಂ. ಬಾ. ಜೋಶಿ ಡಿ. ಲಿಟ್ ಎಂದು ಮುದ್ರಿತವಾಗಿರುವುದು ಗಮನಾರ್ಹ. ಪುಸ್ತಕದ ಒಳಗಡೆ ಮಡಿಕೆರೆಯಲ್ಲಿ ನಡೆದ ಅಖಿಲಭಾರತ ೫೪ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಭಾವಚಿತ್ರ ಉಂಟು.

ಈ ಪುಸ್ತಕವು "ಸ್ಥಲ (ದೇಹ) ಕಾಲ (ಪ್ರಾಣಲಿಂಗ) ತತ್ತ್ವದ ಪಾತಳಿಯ ಆಚೆಗಿನ ಆಧುನಿಕ ದ್ರಷ್ಟಾರ ಡೆಕಾರ್ಟನು ಕಂಡು ಹೇಳಿರುವ ಆ-ದರ್ಶದ ಸ್ವರ್‌ಪಾತಳಿಯ ನಿತ್ಯಸ್ಮರಣೀಯ ಸ್ವಯಂವೇದ್ಯ : ಅನುಭವಾತ್ಮಕ ಪ್ರಜ್ಞಾಯುಕ್ತ ಮನಸ್‌ತತ್ತ್ವಕ್ಕೆ ಅರ್ಥಾತ್ ಆದ್ಯವೈವಸ್ವತಮನುವಿಗೆ ಅರ್ಪಣ" ಎಂದು ಮುಡಿಪು ಮಾಡಿದ್ದಾರೆ. ಪ್ರಕಾಶಕರಾದ ಪುಷ್ಪಾ ಹೊಸೂರು ಅವರು ಬರೆದ ಒಂದು ಪುಟದ ಬರೆಹವಿದೆ. ಪುಸ್ತಕವು ಆರುಭಾಗಗಳಿಂದ ಕೂಡಿದೆ. ಒಂದನೆಯ ಭಾಗವು ಅನ್ವೇಷಕನ ಮುನ್ನುಡಿ, ಮಡಿಕೆರೆಯ ಭಾಷಣ, ಧರ್ಮಸ್ಥಲದ ಭಾಷಣವನ್ನು ಒಳಗೊಂಡಿದೆ. ಎರಡನೆಯ ಭಾಗವು 'ಮಾಡಿದುಣ್ಣೊ ಮಹಾರಾಯ' ಎಂದಿದ್ದು ಇದರಲ್ಲಿ ವಿಶ್ವನಿಯಮ,

ಕಾಲಗತಿಯ ಪ್ರಕಾರಗಳು, ಭಗವತ್‌ಗೀತೆಯ ಗ್ರಂಥನಾಮ, ಜೀವನ, ಸಾಹಿತ್ಯ ಮತ್ತು ಕಲೆ-ವಿಮರ್ಶಾತತ್ತ್ವದ ಮೂಲಸೂತ್ರಗಳು, ಜೀವನ-ಸಾಹಿತ್ಯ ವಿಚಾರಗಳ ಸನಾತನ ಆಕೃತಿಗಳ ವಿಚಾರ, ಮಾನವ- ಅಮಾನವ-ವ್ಯಕ್ತಿ ಇವುಗಳ ವೈಚಾರಿಕ ಆಕೃತಿ, ಮೂರನೆಯ ಭಾಗವು ಉಪಸಂಹಾರ ಎಂದಿದ್ದು ಕಾವ್ಯಸತ್ಯದ 'ಸ್ವ'ರೂಪ ವಿಚಾರ ಹಿನ್ನುಡಿ ಒಳಗೊಂಡಿದೆ. ನಾಲ್ಕನೆಯ ಭಾಗವು ವಿಷಯ ಸೂಚಿಯನ್ನು ಐದನೆಯ ಭಾಗವು ವಿಷಯಗ್ರಹಿಸಿಕೊಳ್ಳಲು ಆಧಾರವೊದಗಿಸುವ ಮಹತ್ವದ ಚಿತ್ರಗಳನ್ನೂ ಆರನೆಯ ಭಾಗ. ತಪ್ಪು-ಒಪ್ಪುಗಳನ್ನೂ ಒಳಗೊಂಡಿದೆ. ನಾಲ್ಕನೆಯ ಭಾಗವಾದ 'ವಿಷಯಸೂಚಿ'ಯನ್ನು ಪ್ರೊ. ಭಾಸ್ಕರ ಪತ್ತಾರ ಅವರು ಸಿದ್ಧಪಡಿಸಿದ್ದಾರೆ.

ಈ ಪುಸ್ತಕವು ಡೆಮ್ಮೈ ಅಷ್ಟದಳಾಕಾರದ xxii+೨೧೭ ಒಟ್ಟು ಇನ್ನೂರು ಮೂವತ್ತೊಂಬತ್ತು ಪುಟಗಳನ್ನು ಒಳಗೊಂಡಿದೆ. ಪುಸ್ತಕದ ಬೆಲೆ ಗ್ರಂಥಾಲಯಪ್ರತಿ ೩೫/- ಸಾಮಾನ್ಯಪ್ರತಿ ೨೫/- ಚಂ. ತಿ. ತಡಕೋಡ ಶಾರದಾ ಮುದ್ರಣಾಲಯ, ತಡಕೋಡಗಲ್ಲಿ, ಧಾರವಾಡ ಇಲ್ಲಿ ಮುದ್ರಿತವಾಗಿದೆ. ಈ ಗ್ರಂಥದಲ್ಲಿಯ ವಿಷಯ ಗ್ರಹಿಸಿಕೊಳ್ಳಲು ಆಧಾರವೊದಗಿಸುವ ಎಂಟು ಚಿತ್ರಗಳನ್ನು ನೀಡಿದ್ದಾರೆ. ಈ ಹಿಂದಿನ ಪುಸ್ತಕದಲ್ಲಿ ಬಳಸಿರುವ ಚಿತ್ರಗಳೇ ಇದ್ದು, ಒಂದು ಚಿತ್ರವನ್ನು ಮಾತ್ರ ಹೊಸದಾಗಿ ಬಳಸಿತದ್ದಾರೆ. ಅನುಬಂಧವಾಗಿ ವಿಷಯ ಸೂಚಿ, ಶಬ್ದಸೂಚಿ, ಗ್ರಂಥ ಸೂಚಿಗಳನ್ನು ನೀಡಿದ್ದಾರೆ.

ಜೀವನದ ಅರ್ಥಗ್ರಹಣ ಪದ್ಧತಿ

ಇದು ೧೯೪೬ರಲ್ಲಿ ಮುದ್ರಿತವಾಯಿತು. ಈ ಪುಸ್ತಕದ ಪ್ರಕಾಶಕರು ಸಮಾಜ ಪುಸ್ತಕಾಲಯ, ಧಾರವಾಡ ಇವರು. ಇದು ಪ್ರತಿಭಾ ಮುದ್ರಣ ಧಾರವಾಡ ಇಲ್ಲಿ ಮುದ್ರಿತವಾಗಿದೆ. ಇದು 'ಮಾನವ ಸಂಸ್ಕೃತಿ' ಕುರಿತು ಮಂಡಿಸುತ್ತ ಬಂದ ವಿಚಾರಗಳ ಸಂಗ್ರಹವಾಗಿದೆ. ಇದು ಸಣ್ಣಪ್ರಮಾಣದ ಹೊತ್ತಗೆ. ಶಂಬಾ ಅವರು ಮಾನವಸಂಸ್ಕೃತಿ : ಜೀವನ ಕುರಿತು ಮಂಡಿಸುತ್ತ ಬಂದ ವಿಚಾರಗಳು ತಿಳಿಯಾಗಿ ಇಲ್ಲಿ ಮೈಪಡೆದಿವೆ. ಇದು ಡೆಮ್ಮೈ ಅಷ್ಟದಳಾಕಾರದ ೩೨ ಪುಟಗಳನ್ನು ಹೊಂದಿದೆ. ಪುಸ್ತಕದ ಬೆಲೆ. ೫ ರೂಪಾಯಿ

ಆಕರಗ್ರಂಥಗಳ ಸೂಚಿ

ಪುಸ್ತಕಗಳು

Zimmerman V. E.; *Dictionary of Classical Mythology*
Zeller E.; ***Outlines of the History of Greek Philosophy***
Guthrie I.; ***A History of Greek Philosophy,*** Cambridge University Press
Gomperz T; ***Mythology of the Ancient World***
Louie Young (Ed) (1970); ***Evolution of Man,*** Oxford University Press, Renedu Bose
Ghatge V. M. (Ed); (1976) ***An Encyclopaedic Dictionary of Sanskrit on Historical Prin ciples*** Vol. 1 Religions of Ancient India
Shopenhoeuer (1818); ***The World as Will and Idea***
Buhler; (1957) ***A Digest of Hindu Laws***
Kuzenetsoy; (1965) ***Einstein,*** Progressive Publishers, Moscoru
Ferm V.; (1950) ***A History of Philosophical Systems;*** New York Philosophical Library
Kenal Motwani; ***Manu : The Originator of Social Thought***
Julien Huxley; ***New Bottles for New Wine***
Frankfort H.; (1952) ***Birth of Civilization in the Near East***
Madhav Deshpande ; ***Socio-Linguistic Attitudes in India : A Historical Reconstruction,*** Karoma Publishers, US.A.,
Wallice H. W.; (1887); ***The Cosmology of the Rigneda,*** Hibbert Trustee William & Norgate, London
Hooke S. H.; (1968) ***Middle Eastern Mythology;*** Pelican Books
Kroeber; (1952); ***The Nature of Culture***
Darwin; ***Origin of Species***
Bertrand Russell; ***ABC of Relativity***
Alexander S. ; ***Space, Time and Deity*** Vol. II
Robert Graves; (1965); ***Hebrew Myths;*** Cassell London
Otto Rudolf.; ***The Idea of The Holy***

Hugo Rehner; ***Greek myths and Christian Mystery***
Loren Eiselay; ***Darwins Century***
Davidson's Principles and practice of Medicine, Longman Group Ltd.,
Whitehed; ***Adventures of Ideas***
Kant; ***Critique of Pure Reason***
Levi Strauss; ***Myth and Meaning***
Radhakrishnan S.; ***The Principal Upanishads***
Gready S. G. (1968); ***A Treatise on the Hindoo Law of Inheritance,*** Madras
Ashley Montague (Ed); ***The Concept of the Primitive***
Jacquetta Hawkes (1962); ***Man and the Sun,*** Random House, New York

ಲೇಖನಗಳು

Karl Mannham, ***Idealism and Utopia***
Mirashi V. V.; ***A Review of Indological Researches in the last 75 Years***

ಶಂಬಾ ವಾಙ್ಮಯ ಸೂಚಿ

ಆರಾಧನೆ

ದೇವಿ ಅದಿತಿ ಮತ್ತು ವಿಷ್ಣು (ನವೆಂಬರ್ ೧೯೬೪) ಪು. ೧೩-೧೭, ಡಿಸೆಂಬರ್ ೧೯೬೪) ಪು. ೧೦-೧೩.

ಅದಿತಿ ಹಾಗೂ ರುದ್ರ, ಭಾಗ-೨ (ಅದಿತಿ ದೇವಿಯ ಅಭ್ಯಾಸದ ಆವಶ್ಯಕತೆ). (ಜನವರಿ ೧೯೬೫) ಪು. ೯-೧೩

ಅದಿತಿ ಮತ್ತು ಅಂಭೃಣೀ ದೇವಿಯರು (ಫೆಬ್ರವರಿ ೧೯೬೫) ಪು. ೯-೧೫

ಅದಿತಿ ಮತ್ತು ಅಂಭೃಣೀ ದೇವಿಯರು (ಅಂಭೃಣೀ ದೇವಿಯ ಆತ್ಮಕಥನ) (ಏಪ್ರಿಲ್ ೧೯೬೫) ಪು. ೯-೨೨

ಅದಿತಿ ಮತ್ತು ಅಂಭೃಣೀ ದೇವಿಯರು (ಅಂಭೃಣೀ ದೇವಿಯ ಆತ್ಮಕಥನ : ವಿಶ್ವದ ಪಾರುಪತ್ಯಗಾರಳು ನಾನು. (ಜೂನ್ ೧೯೬೫) ಪು. ೯-೧೪

ಅದಿತಿ ಮತ್ತು ಅಂಭೃಣೀ ದೇವಿಯರು (ಅಂಭೃಣೀ ದೇವಿಯ ಆತ್ಮಕಥನ : ವಿಶ್ವಕರ್ತ್ರಿ ನಾನು). (ಜೂನ್ ೧೯೬೫) ಪು. ೧೪-೧೯

ದೇವಿ ಅದಿತಿ ಹಾಗೂ ಅಂಭೃಣೀಯರ ಸಮಾಲೋಚನಪರ ಧ್ಯಾನ : ಇಬ್ಬರಲ್ಲಿ ಇರುವ ಸಾಮ್ಯ (ಜುಲೈ ೧೯೬೫) ಪು. ೧೯-೨೫

ಶಿರಸಿಯ ಅಮ್ಮನ ನಿಜವಾದ ಹೆಸರು ಏನು? ('ಮರಿ' ಅಮ್ಮನೋ? 'ಮಾರಿ' ಅಮ್ಮನೋ?) (ಡಿಸೆಂಬರ್ ೧೯೬೫) ಪು. ೫-೧೦

ಅದಿತಿ : ಎಲ್ಲಮ್ಮ : ಸತಿ, (?) **ಪು.** ೧೦-೧೫

ದೇವಿ ಸರಸ್ವತಿಯ ಧ್ಯಾನ (ಅದಿತಿ ಅಂಭೃಣೀ ದೇವಿಯರ ಸಂಸ್ಕೃತಿಯೊಡನೆ) (?) ೫-೧೧

ಶ್ರೀ ಅದಿತಿ. ಸರಸ್ವತಿಯ ನಾನಾ ಮುಖದರ್ಶನ ೧) ನಾನಾ ದೈವತಗಳ ಸಂಗಡಿತಿ (?) **ಪು** ೧೫.-೨೦

ದೇವರ ಶ್ರದ್ಧೆಯೊಳಗಿನ ಸಂಕೀರ್ಣತೆ (ದೇವಿ, ಮರಿಅಮ್ಮ ಹಾಗೂ ಮಾರಿಯಮ್ಮನ ಸಂದರ್ಭದಿಂದಾಗಿ). (?) **ಪು.** ೧೧-೧೪

ಅದಿತಿ-ಅಂಭೃಣಿಯರ ಏರಿಳಿತಗಳಿಂದ ಅವಗಾಹನೆಗೆ ಬರುವ ಸಂಗತಿಗಳು (?) **ಪು.** ೧೦-೧೫

ಸಾಂಸ್ಕೃತಿಕ ಸ್ಥಳನಾಮಾದಿ ವ್ಯಾಸಂಗವನ್ನು ಕುರಿತು (ಎರಡು ಮಾತು): "ಆರಾಧನೆ"ಯ ಆಗಸ್ಟ್ ೧೯೬೬ನೆಯ ಸಂಚಿಕೆಯಲ್ಲಿ "ಕತೆ ಹೇಳುವ ಊರು, ಗುಡಿಗಳು" ಎಂಬ ಲೇಖನವನ್ನೋದಿ ಬಂದ **ವಿಚಾರಗಳಿವೆ.** (?) **ಪು.** ೧೪-೧೮

ಕನ್ನಡನುಡಿ

ಕನ್ನಡ ಮತ್ತು ಕನ್ನಾಡು ೧:೧ ಪು. ೬-೭

ಕನ್ನಡ ಭಾಷೆಯ ಪ್ರಾದೇಶಿಕ ಪ್ರಭೇದಗಳ ವೈಶಿಷ್ಟ್ಯ : ನರ್ಮದಾ-ಗೋದಾವರಿಗಳ ನಡುವಿನ ಕಣ್ಮರೆಯಾದ ಕನ್ನಡ. ೧:೩೮. ಪು. ೩೧೮-೧೯

ಅದೇ. ೧:೩೯ ಪು. ೩೧೮-೧೯

ನಮ್ಮ ಸೊಲ್ಲಿನ ಹೆಸರು 'ಕನ್ನುಡಿ' ಎಂದರೆ ಹೆಚ್ಚು ಸರಿಯಲ್ಲವೇ? ೩:೧೯, ಪು. ೮೨

ಅಗ್ರಹಾರ : ಇದರಲ್ಲಿ 'ಹಾರ' ಎಂದರೇನು? '೯:೪೫ (೧೨ ಸೆಪ್ಟೆಂಬರ್ ೧೯೪೭) ಪು. ೨೧೩-೧೪

ಸಾಹಿತ್ಯ ವಿಚಾರ ವಿಮರ್ಶೆ. ೧೦:೧೭, ಪು. ೮೧-೮೨

ಅದೇ ೧೧:೧೭ ಪು. ೮೧-೮೨

ಕನ್ನಡಪ್ರಭ

ಮಹಾಭಾರತದ ಆಶಯ ಮತ್ತು ಆಕೃತಿ ವಿಚಾರ (೧೨ ಜನವರಿ, ೧೯೭೬) ಪು. ೮

ಕನ್ನಡ ಸಾಹಿತ್ಯಪರಿಷತ್ಪತ್ರಿಕೆ

ನಿಯೋಗಾರ್ಥದ "ವಳ್ಳ" (ವಳ್) ಪ್ರತ್ಯಯವು. ೨೬:೧ (ಜೂನ್ ೧೯೪೧) ಪು. ೬೨-೬೫

ವಳ್ಳ (ವಳ್)-ವಾಳ-ವಾಲಾ ಪ್ರತ್ಯಯ ವಿಚಾರ, ೨೬:೨ (ಡಿಸೆಂಬರ್ ೧೯೪೧) ಪು. ೧೯೫-೯೬

ಕಂನಾಡು ಮತ್ತು ಕನ್ನುಡಿ. ೩೦:೩-೪ (ಸೆಪ್ಟೆಂಬರ್-ಡಿಸೆಂಬರ್ ೧೯೪೫) ಪು. ೨೦-೨೫

ಕನ್ನಡಿಗ

ಬರಹಗಾರರಿಗೆ ಒಂದಿಷ್ಟು ನೆರವು. ೧:೨೪ (೧೧ ಸೆಪ್ಟೆಂಬರ್ ೧೯೨೫) ಪು. ೪-೫

ಮಧ್ವಮತವು ಮಾಡಿದ ಕಾರ್ಯ ೧:೪೧ (೨೨ ಜನವರಿ ೧೯೨೬) ಪು. ೧,೯-೧೦

ಕನ್ನಡನುಡಿಯ ಹೊಸ ಒಲವುಗಳು (೨೮ ಜನವರಿ, ೧೯೨೭) ಪು. ೪

ಮರಾಠಿಯ ಮೇಲೆ ಕನ್ನಡದ ವರ್ಚಸ್ಸು. ೪:೪೨ (೨೭ ಜನವರಿ ೧೯೨೯) ಪು. ೭

ಕರ್ನಾಟಕ ಭಾರತಿ

ಮಾನವ ಪ್ರಜ್ಞಾವಿಕಾಸ ೭:೧೨ (ರಾಜ್ಯೋದಯ ಸಂಚಿಕೆ : ಸಂಚಿಕೆ ನವೆಂಬರ್ ೧೯೭೪) ಪು. ೧೧೩-೩೭

ವೇದಕಾಲೀನ ಕೆಲವು ಸಾಂಕೇತಿಕ ಪ್ರತಿಮೆಗಳು ಸಂಪುಟ ೬-ಸಂಚಿಕೆ : ೪

ಕರ್ನಾಟಕ ವಿಶ್ವವಿದ್ಯಾಲಯ ಪತ್ರಿಕೆ

ಆಗ, ಆಗಡೆ, ಆಗಳೆ (?)

ಕನ್ನಡ ಕೊರತೆಗಳು (?)

ಕರ್ಮವೀರ

ನಡೆದುದು ಜಗತ್ತಿನ ವಿನಾಶವೋ, ವಿಕಾಸವೋ (೨೬ ಜನವರಿ ೧೯೨೨)

ಇದು ಕೃತಯುಗದ ಅರುಣೋದಯವು ಗಡ (೧ ಫೆಬ್ರವರಿ ೧೯೨೨)

ಇದು ನವಯುಗದ ಪೂರ್ವಸಿದ್ಧತೆಯು (೧೦ ಫೆಬ್ರವರಿ ೧೯೨೨)

ವೀರಶೈವ ವಾಙ್ಮಯ ಸೇವಕರಿಗೆ ವಿನಂತಿ (ವೀರಶೈವ ಗ್ರಂಥಗಳ ಸಂಗ್ರಹಕ್ಕಾಗಿ ಮಾಡಿದ ಒಂದು ಮನವಿ) ೨.೪ (ಮಾರ್ಚ್ ೧೯೨೨) ಪು. ೮

ಹವೆಯಲ್ಲಿ ಮನೆಕಟ್ಟುವ ಮೂರ್ಖರು (೧೦ ಮಾರ್ಚ್ ೧೯೨೨)
ಆತ್ಮಕಿರಣಗಳು (೧೭ ಮಾರ್ಚ್ ೧೯೨೨)
ಶಾಂತಾಬಾಯಿ (ವಿ. ವಿ. ತೊರ್ಕೆ ಕೃತಿವಿಮರ್ಶೆ) (೭ ಏಪ್ರಿಲ್ ೧೯೨೨)
ಪ್ರಾಚೀನ ಹಿಂದುಸ್ಥಾನದೊಳಗಿನ ಪ್ರಜಾಸಂಸ್ಥೆಗಳು (೭. ಏಪ್ರಿಲ್ ೧೯೨೨)
ಮನಸ್ಸು (೧೪ ಏಪ್ರಿಲ್ ೧೯೨೨)
ವಿಚಾರಲಹರಿಗಳು ('ತಿಸುಳಿ' ಎಂಬ ಕಾವ್ಯನಾಮದಿಂದ ಬರೆದುದು). ೨: ೧೨ (೨೮ ಏಪ್ರಿಲ್ ೧೯೨೨) ಪು. ೭
ಹಿಂದುಸ್ತಾನಕ್ಕೆ ಹೇಗೆ ಸ್ವಾತಂತ್ರ್ಯ ಸಿಗಬಹುದು? (೧೯ ಮೇ ೧೯೨೨).
ಕನ್ನಡ ಕ್ರಿಯಾಪದಗಳನ್ನು ಕುರಿತು (೨೬ ಮೇ ೧೯೨೨)
ನಾನು (೧೪ ಜುಲೈ ೧೯೨೨)
ಲಂಡನ್‌ನಲ್ಲಿ ಮಹಾತ್ಮಾಜಿಯವರ ಪ್ರಶಂಸೆಯು - ಭಾಗ ೧, ೨:೨೬ (೪ ಆಗಸ್ಟ್ ೧೯೨೨) ಪು. ೮
ಅದೇ ಭಾಗ ೨. ೨:೨೭ (೧೧ ಆಗಸ್ಟ್ ೧೯೨೨) ಪು. ೩
ಹಿಂದೂಸ್ಥಾನದ ಜೀವಾಳವು. ೨:೨೭ (೧೧ ಆಗಸ್ಟ್ ೧೯೨೨)
ಲೋಕಮಾನ್ಯರೂ, ರಾಷ್ಟ್ರಕಾರ್ಯವೂ (ಅನಂತ ನಾರಾಯಣ ದೀಕ್ಷಿತ ಅವರ ಪುಸ್ತಕ ವಿಮರ್ಶೆ). ೨:೩೦ (೧ ಸೆಪ್ಟೆಂಬರ್ ೧೯೨೨), ಪು. ೨
ನಮ್ಮಲ್ಲಿ ಜಗಳ ಹಚ್ಚುವವರು ಯಾರು? (೧೫ ಸೆಪ್ಟೆಂಬರ್ ೧೯೨೨)
ಬಿಡಿನುಡಿಗಳು:ಕರ್ನಾಟಕದ ಏಕೀಕರಣವು (ಒಂದು ಮನವಿ) ೪:೪೭ (೫ ಡಿಸೆಂಬರ್ ೧೯೨೪) ಪು. ೨.
ಕನ್ನಡವೂ ಮಹಾರಾಷ್ಟ್ರವೂ (ಮಹಾರಾಷ್ಟ್ರದ ಚಿಂತಾಮಣಿ ವೈದ್ಯರೊಡನೆ ಕನ್ನಡಿಗರ ಸಂವಾದ). ೫: ೨೫ (೭ ಆಗಸ್ಟ ೧೯೨೫) ಪು. ೪
ಕನ್ನಡನುಡಿಯ ಆಳ ೨ ಸೆಪ್ಟೆಂಬರ್ ೧೯೪೦)
ಮಧ್ಯಯುಗದ ಕರ್ನಾಟ : ಕರ್ನಾಟಕದ ವೀರಯುಗದ ಹಿರಿಮೆ, ರಾಜರ-ಜನತೆಯ ಜೀವನದ ಬಗೆ (ಮುಂಬೈ ಬಾನುಲಿಯಲ್ಲಿ ಡಿಸೆಂಬರ್ ೨,೧೯೪೧ರಂದು ಹಾಗೂ ಜನವರಿ ೬, ೧೯೪೨ರಂದು ಮಾಡಿದ ಭಾಷಣ). ೧೩: ೪೭ (೨೩ ಫೆಬ್ರವರಿ ೧೯೪೨) ಪು. ೧೫-೧೬
ಕಂನುಡಿಯ ಸೊಗಸು - ಭಾಗ ೧. ೧೬: ೪೮ (೨ ಏಪ್ಲಿಲ್ ೧೯೪೫) ಪು. ೨
ಅದೇ-ಭಾಗ ೨. ೧೭:೩ (೨೩ ಏಪ್ರಿಲ್ ೧೯೪೫) ಪು. ೧೨
ಅದೇ-ಭಾಗ ೩. ೧೭:೭ (೨೧ ಮೇ ೧೯೪೫) ಪು. ೧೧
ಅದೇ ಭಾಗ ೪. ೧೭:೧೦ (೧೧ ಜೂನ್ ೧೯೪೫) ಪು. ೨
ಅದೇ-ಭಾಗ ೫. ೧೭:೧೫ (೧೬ ಜುಲೈ ೧೯೪೫) ಪು. ೨
ಕರ್ನಾಟಕದ ಅಂದು ಮತ್ತು ಇಂದು - ಭಾಗ ೧, ೧೮:೪ (೨೯ ಏಪ್ಲಿಲ್ ೧೯೪೬) ಪು. ೩, ೧೬,
ಅದೇ-ಭಾಗ ೨, ೧೮:೫ (೬ ಮೇ ೧೯೪೬) ಪು. ೨
ಚತುರ ವ್ಯವಹಾರಿ ಶ್ರೀಹುಕ್ಕೇರಿ ರಾಮರಾಯರು (ಹುಕ್ಕೇರಿ ಮಾಸ್ತರರ ಪರಿಚಯ ಲೇಖನ). ೧೯:೯ (೨೭ ಅಕ್ಟೋಬರ್ ೧೯೪೭?) ಪು. ೧೦.
ಕಂನಾಡಿಗನ ಆತ್ಮನಿರೀಕ್ಷಣೆ. ೧೯:೩೦ (ಸ್ವಾತಂತ್ರ್ಯಸಂಚಿಕೆ ೧೮ ಆಗಸ್ಟ್ ೧೯೪೭) ಪು. ೨೨
ಇಂದಿನ ನಮ್ಮ ಸಂಕಲ್ಪ ಮತ್ತು ಕೃತಿ (ದೀಪಾವಳಿ ೧೯೪೮)
ವಿಚಾರ, ಕಲ್ಪನಾ ಮತ್ತು ಆದರ್ಶ. (ದೀಪಾವಳಿ ೧೯೫೦)
ಸಮಾಜದ ಸ್ಥಿತಿ ಮತ್ತು ಗತಿ (ದೀಪಾವಳಿ ೧೯೫೫)

ವಿಚಾರದ ವಿಚಾರ ಅಥವಾ ಅರಿವಿನ ನೆಲೆ (ದೀಪಾವಳಿ ೧೯೫೫)
ನಮ್ಮ ಬುದ್ಧಿಜೀವಿಗಳು ಹೀಗಾಗಿದ್ದೇಕೆ? (೪ ಮೇ ೧೯೭೫)

ಕಸ್ತೂರಿ

ವೇದಕಾಲದ ದೇವತೆಗಳು ಹೇಗೆ ಬದಲಾದರು? ನಮ್ಮ ದೇವತಾ ಪಲ್ಲಟ (ಶಂಬಾ ಅವರೊಡನೆ ಮಾತುಕತೆ ನಡೆಸಿದಾಗ ಹೊರಪಟ್ಟ ಕೆಲ ಅಂಶಗಳನ್ನು ಇಲ್ಲಿ ಕೊಡಲಾಗಿದೆ). ೧೪:೫ (ಜನವರಿ ೧೯೭೦) ಪು. ೪೦-೪೫
ಒಂದು ವಿವೇಚನೆ : ಸಾಹಿತ್ಯ ಕೃತಿಗಳ ಸ್ಥಾಯೀಭಾವ (ಅಭಾವವೇ ಸ್ಥಾಯಿಭಾವ ಆಗಬೇಕೆ?). ೨೦:೩ (ನವೆಂಬರ್ ೧೯೭೫) ಪು. ೯-೧೨
ಮಾನವನ ಮೇಲೆ ಗ್ರಹಗಳ ಪ್ರಭಾವ ಉಂಟೇ? (ಭಗವಂತ ಸಂಪ್ರದಾಯದ ಕಣ್ಣುಕಟ್ಟಿನ ಕೆಲವು ಭಾಗಗಳು). ೨೧:೧೨ (ಸೆಪ್ಟೆಂಬರ್, ೧೯೭೬) ಪು. ೬-೧೦

ಛಂದ

ಆದಮೋರೆ (ಸೆಪ್ಟೆಂಬರ್-ಅಕ್ಟೋಬರ್ ೧೯೫೬) ಪು. ೧೨-೧೩

ಜನಸೇವಕ

ಶ್ರದ್ಧಾಸ್ಥಾನಗಳ ಪುನರ್ವಿಮರ್ಶೆಯ ಆವಶ್ಯಕತೆ (ಪ್ರಜಾರಾಜ್ಯ ವಿಶೇಷ ಸಂಚಿಕೆ. ೨೯, ಜನವರಿ ೧೯೬೪) ಪು. ೧೦

ಜಯಂತಿ

ಅಡುಗೆಯ ಮನೆಯು ಅವಶ್ಯವಿದೆಯೇ? ೧:೧ (೧೯೩೮)
ಅಡುಗೆಯ ಮನೆಯ ಕೆಡುಹಿದರೆ ನೀವೇ ನಿರಾಧಾರಿಗಳಾಗುವಿರಿ. ೧:೩ (೧೯೩೮)
ಆಕ್ಸಫರ್ಡ್ ವಿದ್ಯಾರ್ಥಿಯ ಇಂಡಿಯಾ ದೇಶದ ಚರಿತ್ರೆ (ವಿಮರ್ಶೆ). ೩:೯ (ಜನವರಿ ೧೯೪೧)
ಅಡಕೆ (ಜನವರಿ ೧೯೪೫)
ಅಡಕೆ (ಕಿಂಚಿತ್ ವ್ಯಾವಹಾರಿಕ ಕ್ರಮ). (ಫೆಬ್ರವರಿ ೧೯೪೫)
ಸಂಯುಕ್ತಘಟನೆಯ ಭಾರತ (ರಾಜ್ಯಕಾರ್ಯ ವಿಮರ್ಶೆ) . ೮:೨
ಬಾಯ್ತುಂಬುಲಕೆ ಕೆಯ್ಯಾನುವರೆ? ಎಂಬುದರ ಅರ್ಥವೇನು? (ಒಂದು ಚರ್ಚೆ). ೮:೫ (ಅಕ್ಟೋಬರ್ ೧೯೪೫).
ಮಹಾತ್ಮರಿಗೂ ಇದು ಅನಿವಾರ್ಯ, ೮:೧೦ (ಮಾರ್ಚ್ ೧೯೪೬)
ಪರಮಶಿವನ ಘನರೂಪ. ೮:೧೧ (ಏಪ್ರಿಲ್ ೧೯೪೬)
ಸಂಸ್ಕೃತಿ ಮತ್ತು ನಾಗರೀಕತೆ. ೮:೧೨ (ಮೇ ೧೯೪೬)
'ಕನ್ನಡ' ಎಂಬುದಕ್ಕಿಂತ 'ಕಂನಾಡು' ಎನ್ನುವುದೇ ಲೇಸು. ೮:೩ (ಆಗಸ್ಟ್ ೧೯೪೬)
ಮಾನವನ ವಿಚಾರ. ೧೬:೧ (ಜನವರಿ ೧೯೫೩) ಪು. ೧೯-೨೦
ನಾರಿ : ನೀರೇ (ಶಬ್ದಗಳ ಸತ್ಯಾರ್ಥ ಸಂಶೋಧನೆ). ೨೦:೧೨ (ಮೇ ೧೯೫೮) ಪು. ೪೬೭-೬೯
ಜೀವನ ಪ್ರವಾಹದ ಅಭಿವ್ಯಕ್ತರೂಪ : ನಡೆವಳಿ : ೨೧.೨ (ಆಗಸ್ಟ್ ೧೯೫೮) ಪು. ೪೫-೫೦
ಜಲಶಾಯಿ ವಿಷ್ಣು (ಡಿಸೆಂಬರ್ ೧೯೬೦)
ನಮ್ಮ ದೇವತಾ ವಿಚಾರ (ಕೆಲವು ಸಂಗತಿ-ವಿಸಂಗತಿ) (ಸೆಪ್ಟೆಂಬರ್ ೧೯೬೧)
ಸಾಂಸಾರಿಕ ಹಾಗೂ ಸಾಮಾಜಿಕ ಸೌಮನಸ್ಯಕ್ಕಾಗಿ ಮಂತ್ರ, ೨೪:೫ (ದೀಪಾವಳಿ ಸಂಚಿಕೆ ೧೯೬೧)
ರುದ್ರಶಿವನು ಜಲ-ಸಂಭೂತನೇ? (ಮಾರ್ಚ್ ೧೯೬೨)
ಕಂನುಡಿಯ ಪೂರ್ವಚರಿತ್ರೆ ಮತ್ತು ಮರ್ಹಾಟಿಯ ಬುಡಕಟ್ಟು. ೨೫:೪-೫ (ನವೆಂಬರ್ ೧೯೬೨) ಪು. ೨೨೨-೨೨೫

ಜಯಕರ್ನಾಟಕ

ಕನ್ನಡ ನುಡಿಯ ಜೇನು, ೫:೧ (ನವೆಂಬರ್ ೧೯೨೬) ಪು. ೪೫-೪೬

ಅದೇ (೨ನೆಯ ಒಬ್ಬಿ). ೫:೨ (ಡಿಸೆಂಬರ್ ೧೯೨೬) ಪು. ೯೦-೯೫

ಅದೇ (೩ನೆಯ ಕೊಡ) ೫:೪ (ಫೆಬ್ರವರಿ ೧೯೨೭) ಪು. ೨೨೯-೩೧

ಅದೇ (೪ನೇಯ ಕೊಡ) ೫:೫ (ಮಾರ್ಚ್ ೧೯೨೭) ಪು. ೨೭೧-೭೩

ಅದೇ ೫:೮ (ಜೂನ್ ೧೯೨೭) ಪು. ೪೬೭-೭೧

ಅದೇ. ೫:೯ (ಜುಲೈ ೧೯೨೭) ಪು. ೫೩೧-೩೪

ಪಂಪಭಾರತದಲ್ಲಿ ಬಂದ ನಾಣ್ಣುಡಿಗಳು. ೮:೨ (ಡಿಸೆಂಬರ್ ೧೯೨೯) ಪು. ೧೦೬-೭

ಇಂತಹ ಪರಂಪರೆಯನ್ನು ಏಕೆ ಕಾಯಬೇಕು. ೮:೨ (ಡಿಸೆಂಬರ್ ೧೯೨೯)

ಶಬ್ದಸಾಮ್ರಾಜ್ಯ ೮:೧೦ (ಆಗಸ್ಟ್ ೧೯೩೦) ಪು. ೬೮೭-೮೮.

ಗಾಂಧಿ-ಆಯರ್ವಿನ್ ಸಂಧಿರಹಸ್ಯ. ೯:೫-೬ (ಏಪ್ರಿಲ್ ೧೯೩೧) ಪು. ೪೦೭-೧೦

ವಿಜಯನಗರ ಸಾಮ್ರಾಜ್ಯ ಮತ್ತು ಹಾಳುಹಂಪೆ (ವಿಮರ್ಶೆ) ೧೦:೧೧

ಕನ್ನಡಭಾಷೆಯ ಇತಿಹಾಸ (ಆರ್. ನರಸಿಂಹಾಚಾರ್ಯರ 'ಐದು ಇಂಗ್ಲೀಷ್ ಉಪನ್ಯಾಸಗಳ ಸಂಗ್ರಹ'. ಪುಸ್ತಕಾವಲೋಕನ). ೧೨:೮ (ಆಗಸ್ಟ್ ೧೯೩೪) ಪು. ೫೭-೬೧

ಹಿಂದೀ ಹುಡುಗರ ಬುದ್ಧಿಮಾಪನವು (ಅ.ನ. ದೀಕ್ಷಿತರ ಲೋಕಮಾನ್ಯರೂ ರಾಷ್ಟ್ರಕಾರ್ಯವೂ) (ಏಪ್ರಿಲ್ ೧೯೩೭)

ಬಿನ್ನಹ ಪತ್ರ : ಕವಿಗಳು, ಲೇಖಕರು, ಶಿಕ್ಷಕರು ಮತ್ತು ಸಂಪಾದಕರುಗಳಲ್ಲಿ ಬೇಡಿಕೆ, ೧೫:೪ (ಏಪ್ರಿಲ್ ೧೯೩೭) ಪು. ೨೪೧-೪೬

ಮಹಾನುಭಾವ ಬಸವಣ್ಣನವರ ಸಂದೇಶ. ೧೫:೭ (೧ ಜುಲೈ ೧೯೩೭)

ಭೌತಶಾಸ್ತ್ರದ ಪ್ರಥಮಪಾಠಗಳು (ಸಿ. ಎಸ್. ಶ್ರೀನಿವಾಸರಾವ್ ಅವರ ಕೃತಿ ವಿಮರ್ಶೆ) (ಸೆಪ್ಟೆಂಬರ್ ೧೯೩೭) ಪು. ೨೩೪

ಇಂದಿನ ಉಭಯ ಭಾಷಾಚಕ್ರವರ್ತಿಗಳು ೧೬:೪ (ಏಪ್ರಿಲ್ ೧೯೩೮) ಪು. ೨೯೮-೩೦೦

ಹಿಂದುಸ್ತಾನದಲ್ಲಿ ಪ್ರೌಢಶಿಕ್ಷಣ. ೧೭:೧೦ (ಅಕ್ಟೋಬರ್ ೧೯೩೯) ಪು. ೭೧೩-೧೪,

ಕೆಲವು ರಸಾರ್ಥಕ ಕನ್ನಡ ಶಬ್ದಗಳು, ೧೮:೫ (ಮೇ ೧೯೪೦) ಪು. ೨೮೪-೯೦

ಬುದ್ಧಿ : ಅದರ ಕಾರ್ಯ ಮತ್ತು ಸ್ವರೂಪ. ೨೦:೮ (೧೯೪೩) ಪು. ೨೯೩-೯೮

ಕರ್ಣನ ಮೂರುಚಿತ್ರಗಳು. ೨೪;೩ (ಫೆಬ್ರವರಿ-ಏಪ್ರಿಲ್ ೧೯೪೬)

ಬೇಂದ್ರೆಯವರ ತಪಸ್ಸು, ೨೪:೬ (ಜೂನ್ ೧೯೪೬) ಪು. ೨೬೩-೬೬

ಕರ್ಣ (ಕಣ್ಣ) ಕುಲ (ತೆಲುಗು ನಾಡಿನ ವಿದ್ವಾಂಸರಾದ ಶ್ರೀ ಜಿ. ಆರ್. ವರ್ಮಾ ಅವರ ಪತ್ರ). ೨೫:೧ (ಜನವರಿ ೧೯೪೭) ಪು. ೧೪-೧೭

ಕೈಗೆ ಬಂದ ಭಾರತದ ಸ್ವಾತಂತ್ರ್ಯವು ಈಗಾಗಲೇ ಕೈಗೂಡಬಹುದೇ? ೨೫:೪ (ಏಪ್ರಿಲ್ ೧೯೪೭) ಪು. ೧೪೯-೫೨

ಪ್ರಜಾಪ್ರಭುತ್ವವು ನಮ್ಮ ಗುರಿಯೇ? ೨೫:೬ (ಜೂನ್ ೧೯೪೭) ಪು. ೨೬೪-೬೭

ಹಿಂದೂ ಎಂಬ ಸಮಾಜವು ಇದೆಯೇ? ಆಗಬೇಕೆ? ೨೫:೭ (ಜುಲೈ ೧೯೪೭) ಪು. ೩೧೮-೨೨

ಹಿಂದೂ ಮುಸಲ್ಮಾನ ತೊಡಕು ೨೫:೧೧ (ನವೆಂಬರ್ ೧೯೪೭) ಪು. ೫೩೪-೩೯

ಪ್ರಕೃತಿವಾದ ೨೬:೬ (ಜೂನ್ ೧೯೪೮) ಪು. ೨೭೫-೭೮

ತತ್ತ್ವಜ್ಞಾನದ ನೆಮ್ಮುಗಳು. ೨೬:೭ (ಜುಲೈ ೧೯೪೮) ಪು. ೩೦೫-೭

ಅದೇ. ೨೬:೮ (ಆಗಸ್ಟ್ ೧೯೪೮) ಪು. ೩೩೭-೩೯
ಪ್ರಕೃತಿವಾದ. ೨೬:೧೦-೧೧ (ಅಕ್ಟೋಬರ್-ನವೆಂಬರ್ ೧೯೪೮) ಪು. ೪೬೨-೬೮
ತತ್ತ್ವದ ಹಾದಿಗಳು. ೨೬:೧೨ (ಡಿಸೆಂಬರ್ ೧೯೪೮) ಪು. ೫೦೨-೩
ಅದೇ. ಅಧ್ಯಾಯ ೪ (ಪ್ರಕೃತಿವಾದದ ವಿಚಾರ ಸರಣಿ). ೨೭:೧ (ಜನವರಿ ೧೯೪೯) ಪು. ೨೭-೩೨
ಅದೇ, ೭ನೇ ಅಧ್ಯಾಯ, ೨೭:೫ (ಮೇ ೧೯೪೯) ಪು. ೨೨೮-೨೯
ಅದೇ (ಮಹಾಕಾರಣ ವಾದವನ್ನು ಕುರಿತು ನವೀನದೃಷ್ಟಿಕೋನ). ೨೭:೬ (ಜೂನ್ ೧೯೪೯) ಪು. ೨೬೦-೬೪
ಸ್ವಾತಂತ್ರ್ಯದ ಹಾದಿಯಲ್ಲಿ (ಜಯಕರ್ನಾಟಕ, ೨೭:೮ (ಆಗಸ್ಟ್ ೧೯೪೯)
ತತ್ತ್ವದ ಹಾದಿಗಳು - ೯ನೆಯ ಅಧ್ಯಾಯ ೨೭:೯ (ಸೆಪ್ಟೆಂಬರ್ ೧೯೪೯) ಪು. ೪೬೬-೬೯
ಅದೇ. ೨೭:೧೦ (ಅಕ್ಟೋಬರ್ ೧೯೪೯) ಪು. ೫೨೯-೩೨
ಅದೇ ೨೭:೧೨ (ಡಿಸೆಂಬರ್ ೧೯೪೯) ಪು. ೬೦೭-೧೧
ಸಿದ್ಧರು ಮತ್ತು ನಾಥರು. ೨೮:೧ (ಜನವರಿ ೧೯೫೦) ಪು. ೯-೧೫
ತತ್ತ್ವದ ಹಾದಿಗಳು : ೧೦ನೆಯ ಅಧ್ಯಾಯ : ಕ್ರಿಯಾವಾದದ ವಿಮರ್ಶೆ. ೨೮:೨ (ಫೆಬ್ರವರಿ ೧೯೫೦) ಪು. ೬೪-೬೭
ಸಂಸ್ಕೃತಿ ಸಮ್ಮಿಲನ : ಕರ್ನಾಟ ಮತ್ತು ಮರ್‍ಹಾಟ (೧೨ ಆಗಸ್ಟ್ ೧೯೫೦ರಂದು ಧಾರವಾಡ ಆಕಾಶವಾಣಿಯಿಂದ ಮಾಡಿದ ಭಾಷಣ). ೨೮:೯ (ಸೆಪ್ಟೆಂಬರ್ ೧೯೫೦) ಪು. ೩೩೭-೪೦

ಜಯಹಿಂದ್

ಹಕ್ಕು ಮತ್ತು ಕರ್ತವ್ಯ (೨೬ ಜನವರಿ ೧೯೪೮)
ತ್ರೈಪುರುಷಯೋಗ ಅಥವಾ ಮೂವರ ಆವಶ್ಯಕತೆ (ದೀಪಾವಳಿ ೧೯೫೩)
ಶ್ರೀ ಹರಿನಾರಾಯಣ ಆಪ್ಟೆ (೨೫ ಮಾರ್ಚ್ ೧೯೫೫)

ಜೀವನ

ಕಣ್ಣರ ನಾಡು ಕಂನಾಡು. ೭:೭ (ನವೆಂಬರ್ ೧೯೪೬) ಪು. ೨೬೪

ನವಭಾರತ

ಯಕ್ಷಪ್ರಶ್ನೆ (ಮಾರ್ಚ್ ೧೯೪೬)
ನಾರ-ಪಾಣೀ (ನಾರಾಯಣ-ವಿಷ್ಣುಹೃದಯ (?)
ಗ್ರಾಮನಾಮ ವ ಸಮಾಜೇತಿಹಾಸ (೧೯೫೦)
ಮಲ್ಹಾರಿ ಮಾರ್ತಾಂಡ (೧೯೫೨)

ನವಯುಗ

ಗಣಪತಿ (ಸಂಕೇತ ರಹಸ್ಯ) (ವಾರ್ಷಿಕ ೧೯೫೨)
ಪ್ರಜಾಪ್ರಭುತ್ವದ ನೆಲೆಗಟ್ಟು (ವಾರ್ಷಿಕ ೧೯೫೪)
ಪ್ರಜಾಪ್ರಭುತ್ವವೇ ಏಕೆ? (ವಿಶೇಷ ಸಂಚಿಕೆ?).

ನುಡಿ (ಮುಂಬಯಿ)

ಡಾ. ಕೃಷ್ಣಮೂರ್ತಿಯವರು (೪ ಸೆಪ್ಟೆಂಬರ್ ೧೯೪೯)
ಪೈಗಳವರನ್ನು ನಾವು ಸನ್ಮಾನಿಸಿಲ್ಲ (೨೫ ಜೂನ್ ೧೯೫೦)

ಪ್ರಜಾಮತ

ಶ್ರದ್ಧೆ ಮತ್ತು ಸಂದೇಹ (ವಿಶೇಷಾಂಕ ೧೯೫೦ (?)

ಪ್ರಬುದ್ಧ ಕರ್ಣಾಟಕ

ಮರ್ರಾಟಿಯಲ್ಲಿ ಹುದುಗಿರುವ ಕನ್ನಡದ ಕೆಲವು ಅವಶೇಷಗಳು (ಮುಝ್ ಬಂಬ್, ಹಡಪ, ಅಡ್ಡ, ಕೋಡಗ, ಅದಟ, ಅಗ್ಗಳ, ಅಳಿಪು). ೨೨:೪ ಪು. ೧೧೫:೧೭

ಅದೇ. ೨೩:೪ ಪು. ೧೩೧-೪೦

ಪ್ರಭಾತ

ಭಾರತದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬಲ್ಲೆವೊ? (ವಿಶೇಷಾಂಕ ೧೯೫೪) ಪು. ೭೧

ವಾಗ್ಭೂಷಣ

'ಓಲೆಕಾರ' ಮೊದಲ ರೂಪವು ಯಾವುದು? 'ಓಲೆಕಾರ' 'ಓಲೈಕ್ಕಾರ' ಅಥವಾ 'ವಾಲೆಕಾರ' ೧:೧ ಪು. ೬೭-೭೩

ಶ್ರೀ ರಾ. ಹ. ದೇಶಪಾಂಡೆಯವರು (ಮೇ. ೧೯೭೩) ಪು. ೧೬೬

ಪುರಾತನರಿಗೆ ಕಂಡ ಮಾನವ ಅಸ್ತಿತ್ವದ ಅರ್ಥ 'ರಾ'ತ್ರ ಸತ್ಯ ಮತ್ತು 'ಅಹನ್' ಸತ್ಯ. (ಮೇ ೧೯೭೩) ಪು. ೨೧೩

ವೀರಭೂಮಿ

ಯತಿ ಮತ್ತು ಸಂಪ್ರದಾಯದ ಪೂರ್ವವೃತ್ತ (೧೫ ನವೆಂಬರ್ ೧೯೬೩) ಪು. ೩೫-೪೦

ಸದ್ಬೋಧ ಚಂದ್ರಿಕೆ

ವ್ಯಾಸ, ಪಂಪ ಹಾಗೂ ಕುಮಾರವ್ಯಾಸರು ಸೃಜಿಸಿದ ಕರ್ಣನ ಪಾತ್ರ (ವಿಶೇಷಾಂಕ ೧೯೬೫) ಪು. ೩೧-೪೦

ಸೀರೆಯ ಕಥೆ ('ಸಾಡೀಚೀ ಕಥಾ' ಮರಾಠಿ ಲೇಖನದ ಕನ್ನಡ ಅನುವಾದ). (೧೯೬೫)

ಶ್ರೀಮದ್ಭಗವದ್ಗೀತೆಯೊಳಗಿನ ವಿಶ್ವರೂಪ ದರ್ಶನದ ಪ್ರಕಾರ ಮತ್ತು ಯುಕ್ತಾಯುಕ್ತತೆ (ಮೂಲ ಮರಾಠಿಯಲ್ಲಿ ಬರೆದ ಲೇಖನವನ್ನು ಕನ್ನಡಕ್ಕೆ ಒದಗಿಸಿದವರು ಶ್ರೀ ಗೌರೀಶ ಕಾಯ್ಕಿಣಿ) (೧೯೬೫)

ಸಾಧನೆ

ಪ್ರಚಲಿತ ಋಗ್ವೇದಸ್ಥ ಆದಿತ್ಯ ಸಂಪ್ರದಾಯ (ಒಂದು ಕಣ್ಣಟ್ಟು) (ಅಕ್ಟೋಬರ್-ಡಿಸೆಂಬರ್ ೧೯೭೬), ಪು. ೧೪೪-೪೬

ವೇದದೊಳಗಿನ ನಾಗಪೂಜೆ (ಅಕ್ಟೋಬರ್-ಡಿಸೆಂಬರ್ ೧೯೭೮) ಪು. ೪-೮

ಸುಧಾ

ವಿಶ್ವಾಸಾರ್ಹ ಮಟ್ಟದಲ್ಲಿ ಸಂಸ್ಕೃತಿಯ ಸಂಶೋಧನ ಶಕ್ಯವೋ? (೩ ಆಗಸ್ಟ್ ೧೯೭೫)

ಸುಬೋಧ

ಅನಂತತ್ವದ ಸಾಕ್ಷಾತ್ಕಾರ (ಜನವರಿ ೧೯೪೬) ಪು. ೨-೪

ಯಕ್ಷಪ್ರಶ್ನೆ (ಏಪ್ರಿಲ್ ೧೯೪೮)

ಸಂಕೇತ ಅಥವಾ ಕುರುಹಿನ ವಿಚಾರ (ಆಗಸ್ಟ್ ೧೯೪೮)

ಭಾರತೀಯರ ಇತಿಹಾಸ ಪದ್ಧತಿ : ಅದರ ಗುಣದೋಷಗಳು (ಸೆಪ್ಟೆಂಬರ್ ೧೯೪೮) ಪು. ೮-೧೩

ಕ್ರಾಂತಿಕಾರಕ ವಿಚಾರಿ ರೂಸೋ (ಜನವರಿ-ಫೆಬ್ರವರಿ ೧೯೪೯)

ನಿರೀಕ್ಷಕನ ನಿರೀಕ್ಷಣೆ (ನವೆಂಬರ್ ೧೯೪೯)

ಸಂಕ್ರಮಣ

ಸಂಸ್ಕೃತಿಯ ಅಂಗತ್ರಯಗಳ ವಿಚಾರ: ಪ್ರಸ್ತಾಪ (ಆಗಸ್ಟ್, ೧೯೬೭) ಪು. ೬೧-೭೯

ಸಂಸ್ಕೃತಿಯ ಅಂಗತ್ರಯಗಳ ವಿಚಾರ : ವಿವೇಚನೆ (ಅಕ್ಟೋಬರ್ ೧೯೬೭) ಪು. ೬೫-೭೯ (ಡಿಸೆಂಬರ್ ೧೯೬೭) ಪು. ೫೯-೭೫

ಸಂಸ್ಕೃತಿಯ ಅಂಗತ್ರಯಗಳ ವಿಚಾರ : ವಿವೇಚನೆ (ಏಪ್ರಿಲ್, ೧೯೬೮) ಪು. ೫೭-೭೫

'ಸಮಯ' ಪದದ ಸ್ವಲ್ಪಪರಿಚಯ (?)

ಸಂಯುಕ್ತ ಕರ್ನಾಟಕ

ಹಂಸನ ಬರಹವನ್ನೋದಿ (೨೪ ಮೇ ೧೯೩೭)

ಕನ್ನಡದ ನಿನ್ನೆ, ಇಂದು ಮತ್ತು ನಾಳೆ (ಹುಬ್ಬಳ್ಳಿಯ ಮಹಾನವಮಿ ಉತ್ಸವ ಮಂಡಲದ ಪರವಾಗಿ ೫ ಅಕ್ಟೋಬರ್ ೧೯೩೭ನೆಯ ದಿನ ಮಾಡಿದ ಭಾಷಣ) (೬ ಅಕ್ಟೋಬರ್ ೧೯೩೭) ಪು. ೩

ಕರ್ನಾಟಕ ಕಾಲೇಜಿನಲ್ಲಿ ವಿಚಾರ ಸಂಕಿರಣ: ವರ್ತಮಾನ ಪತ್ರಿಕೆಗಳು (೧೧ ಆಗಸ್ಟ್ ೧೯೩೭) ಪು. ೬

ಪುತ್ತೂರಿನ ದಸರಾ ಮಹೋತ್ಸವ (ಕನ್ನಡದ ಹುಟ್ಟಿನ ಬಗೆಗಿನ ೮ ಅಕ್ಟೋಬರ್ ೧೯೩೭ರಂದು ಮಾಡಿದ ಭಾಷಣ), (೨೯ ಅಕ್ಟೋಬರ್ ೧೯೩೭) ಪು. ೨

ಪುತ್ತೂರ ನಾಡಹಬ್ಬದ ವಿಶೇಷಗಳು (೧) (೧೮ ನವೆಂಬರ್ ೧೯೩೭) ಪು. ೭

ಅದೇ, (೨) (ಪುತ್ತೂರಿನಿಂದ ಕಲಿಯಬಹುದಾದ ಸಂಗತಿಗಳು), (೧೯ ನವೆಂಬರ್ ೧೯೩೭) ಪು. ೮

ತುಲನಾತ್ಮಕ ಭಾಷಾಶಾಸ್ತ್ರವು (ಡಿಸೆಂಬರ್ ೧೯೩೭)

ರಾಜಕಾರಣ ಮತ್ತು ಸಾಹಿತ್ಯಗಳು ಪರಸ್ಪರ ಪೋಷಕವಾಗಿವೆ. ಮನುಷ್ಯನ ಪೂರ್ಣವಿಕಾಸಕ್ಕೆ ಎರಡೂ ಬೇಕು (೨೯ ಸೆಪ್ಟೆಂಬರ್ ೧೯೩೮) ಪು. ೬

ಕುಂತಲವೆಂದರೆ ಕರ್ನಾಟಕ, ಮಹಾರಾಷ್ಟ್ರವು ಆಗಂತುಕ. (೧೬ ಅಕ್ಟೋಬರ್ ೧೯೩೮) ಪು. ४

ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಸಭೆ : 'ವಾಗ್ಭೂಷಣ'ದ ಪ್ರಾರಂಭೋತ್ಸವದಲ್ಲಿಯ ಭಾಷಣ (೨೫ ಮಾರ್ಚ್ ೧೯೩೯)

ರೂಢಿ ಮತ್ತು ಮೂಢಭಾವನೆ : ಬೇರೆಬೇರೆ ಕುಲಗಳ ಏಕರೂಪತ್ವ, ವೇಷವೈವಿಧ್ಯ ಮತ್ತು ವೈಚಿತ್ರ್ಯ, ಬೇರೆ ಬೇರೆ ತರದ ಆಹಾರ ಮತ್ತು ಅವುಗಳ ಊಟದ ರೀತಿ, ಮೂಢಭಾವನೆ ಮತ್ತು ಸ್ಥಳೀಕ ದೇವತೆಗಳ ಉದಾಹರಣೆ - (ಮುಂಬೈ ಬಾನುಲಿ ಭಾಷಣ) ಭಾಗ ೧ (೨೬ ಜೂನ್ ೧೯೩೯) ಪು. ೩

ಅದೇ, ಭಾಗ ೨ (೧೪ ಜುಲೈ ೧೯೩೯) ಪು. ೧೫

ಕನ್ನಡ ಜನಜೀವನ ಮತ್ತು ಸಾಹಿತ್ಯ : ರೂಢಿ ಹಾಗೂ ಭಾವಿಕ ಕಲ್ಪನೆಗಳು (೧೪ ಜುಲೈ ೧೯೩೯ರಂದು ಮುಂಬೈ ಬಾನುಲಿಯಲ್ಲಿ ಚಿಕ್ಕಮಕ್ಕಳಿಗೆ ಕೊಟ್ಟ ಭಾಷಣ) ಭಾಗ ೧, (೧೫ ಜುಲೈ ೧೯೩೯) ಪು. ४

ಅದೇ, ಭಾಗ ೨ (೧೬ ಜೂಲೈ ೧೯೩೯) ಪು. ४

ಮಹಾರಾಷ್ಟ್ರದ ಉನ್ನತಿಗೆ ಹೆಣಗುತ್ತಿರುವ ಕನ್ನಡಿಗರು (೬ ಜುಲೈ ೧೯೩೯) ಪು. ೬

ಶ್ರೀ ಕಡಪಾ ರಾಘವೇಂದ್ರರಾಯರು ಪರಭಾಷೆಗಳ ದ್ವೇಷ ಮಾಡಿದರೋ? ಹಾಗೆ ಹೇಳುವವರು ಅದನ್ನು ಸಿದ್ಧ ಮಾಡಬೇಕು ಇಲ್ಲದಿದಲ್ಲಿ ಕ್ಷಮೆ ಕೇಳಬೇಕು,. 'ಸಹ್ಯಾದ್ರಿ'ಯಲ್ಲಿರುವ ಶ್ರೀ ರಾನಡೆಯವರ ಲೇಖನದ ಗುಟ್ಟೇನು? (೧೨ ಜುಲೈ ೧೯೩೯) ಪು. ೬

ಶ್ರೀ ರಾನಡೆ ಮತ್ತು ಶ್ರೀ ಭಾತಖಾಂಡೆಯವರು ಉತ್ತರಕೊಡಲಿ. ಅಪಪ್ರಚಾರದಿಂದ ಯಾವ ಪುರುಷಾರ್ಥ ಸಾಧಿಸುವರು? (೨ ಆಗಸ್ಟ್ ೧೯೩೯) ಪು. ೭

ವಾಸುದೇವ ಅಮೆಚೂರ ನಾಟಕಸಭೆಯ ೧೨ನೆಯ ವಾರ್ಷಿಕೋತ್ಸವ (ಶ್ರೀ ಜೋಶಿ ಮತ್ತು ಪ್ರೊ. ರಾಜರತ್ನಂ ಭಾಷಣ). (೨೦ ಸೆಪ್ಟೆಂಬರ್ ೧೯೩೯) ಪು. ೫

ಕರ್ನಾಟಕದ ಮುನ್ನಡೆಗೆ ತೊಡರುಗಳು : ಸಾಮಾಜಿಕ ರಂಗದಲ್ಲಿ, ಕರ್ನಾಟಕ ಕಾಲೇಜಿನಲ್ಲಿ ವಿಚಾರ ಸಂಕಿರಣ (೨ ಅಕ್ಟೋಬರ್ ೧೯೩೯)

ಗದುಗಿನ ನಾಡಹಬ್ಬದ ವಿರೋಧಿಗಳ ಪುಂಡಾಟಕೆ (ಶಂಬಾ ಜೋಶಿಯವರನ್ನು ನಿಶಾನೆಗಳಿಂದ ತಿವಿದರು). (೧೭ ಅಕ್ಟೋಬರ್ ೧೯೩೯) ಪು. ೬

ಜಾತಿಯ ತೊಡಕು (ಗದುಗಿನ ನಾಡಹಬ್ಬದ ಭಾಷಣ) (೧೮ ಅಕ್ಟೋಬರ್ ೧೯೩೯) ಪು. ೬

ಶ್ರೀ ಶಂಬಾ ಜೋಶಿಯವರೂ ಕರೇನಿಶಾನೀ ಪ್ರದರ್ಶನವೂ: ಶ್ರೀ ಸಂ. ಅ. ಶಿರಹಟ್ಟಿ ಮಠರ, ಹೇಳಿಕೆ (ವಿರೋಧಿ ಸಮಿತಿಯವರ ಪುಂಡಾಟಿಕೆಯ ಬಗ್ಗೆ ವಿವರಣೆ, ನಾಡಹಬ್ಬದ ಆಚರಣೆಯ ಸಂಬಂಧವಾಗಿ) (೧೯ ಅಕ್ಟೋಬರ್ ೧೯೩೯). ಪು. ೫

ಪರೋಪಕಾರವು ದಂದುಗವಾಗಬಲ್ಲುದೇ? (೨೧ ಡಿಸೆಂಬರ್ ೧೯೪೮)

ಪವಾಡಗಳು ಚಮತ್ಕಾರಿಕ ನಿಜ, ಆದರೆ ಸತ್ಯವಲ್ಲ (೪, ಆಗಸ್ಟ್ ೧೯೭೬)

ಮುನ್ನುಡಿಗಳು

ವ್ಯಕ್ತಿ ಮತ್ತು ಸಮಾಜ (ನೆಗಳೂರು ಶ್ರೀನಿವಾಸರಾಯರ "ಸಮಾಜ ವಿಕಾಸ ಕ್ರಮ" ಪುಸ್ತಕಕ್ಕೆ ಮುನ್ನುಡಿ). ಮಿಂಚಿನಬಳ್ಳಿ, ಧಾರವಾಡ (೧೯೪೨), ಪು. ೧-೧೦

ಸಮಾಜದೊಳಗಿನ ಎರಡು ಮನಃಸ್ಥಿತಿಗಳು : ಕೀಳರಿಮೆ, ಹೆಗ್ಗರಿಮೆ (ಗೌರೀಶ ಕಾಯ್ಕಿಣಿಯವರ ಪುಸ್ತಕ "ಬಾಳ ಬೆಳಕು"ಗೆ ಮುನ್ನುಡಿ).

ಅಭಿನಂದನ/ಸ್ಮಾರಕ ಗ್ರಂಥಗಳಲ್ಲಿಯ ಲೇಖನಗಳು

ಅಪರೂಪಗಳಾದ 'ನೋಂಪಿ', 'ಕಲ್ಪಿ' ಸಂಭಾವನೆ : (ರಾಜಸೇವಾಸಕ್ತ ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯನವರಿಗೆ ಅವರ ಶಿಷ್ಯರೂ ಮಿತ್ರರೂ ಒಪ್ಪಿಸಿದ ಪ್ರಬಂಧಗಳ ಸಂಪುಟ) ಬೆಂಗಳೂರು (೧೯೪೧) ಪು. ೧೯೯-೨೦೦

ಮರಾಠೀ ಸಾಹಿತ್ಯದ ವಿಹಂಗಮಾವಲೋಕನ. ಸಮರ್ಪಣೆ (ಧರ್ಮಸ್ಥಳದ ಮಂಜಯ್ಯ ಹೆಗ್ಗಡೆಯವರಿಗೆ ಅರ್ಪಿಸಿದ ಗ್ರಂಥ) ಸಮರ್ಪಣೆ ಪ್ರಕಾಶನ ಸಮಿತಿ, ಮಂಗಳೂರು (೧೯೫೦) ಪು. ೩೩೭-೪೧

ಹರಿಹರ ಸತ್ಯಾಗ್ರಹಾಶ್ರಮದ ಶ್ರೀ ಹರ್ಡೇಕರ್ ಮಂಜಣ್ಣನವರು. ಹರ್ಡೇಕರ ಮಂಜಪ್ಪನವರ ಸ್ಮಾರಕ ಗ್ರಂಥ (೧೯೫೬)

ಗಾದೆಯ ಮಾತುಗಳು ಬಸವನಾಳ ಸ್ಮಾರಕ ಸಂಪುಟ : ಬಸವನಾಳ ಸ್ಮಾರಕ ಸಮಿತಿ ಧಾರವಾಡ (೧೯೫೬) ಪು. ೫೭೯-೮೨

ಕುಲದೇವತಾ ಸಮೀಕ್ಷೆ, ದೀವಿಗೆ : ಗೋವಿಂದ ಪೈ ಸ್ಮಾರಕ ನಿಧಿ, ಭಂಡಾರಕರ್‌ಕರ್ ಕಾಲೇಜು ಕುಂದಾಪುರ, ದ.ಕ. (೧೯೬೫) ಪು. ೨೩೩-೪೦

ಮಧುವಿದ್ಯೆಯ ಪೂರ್ವೋತ್ತರ. ನಮ್ಮ ಅಜಪುರ : ಗೋವಿಂದ ಪೈ ಸನ್ಮಾನ ಗ್ರಂಥ

ಜಲಶಾಯಿ ವಿಷ್ಣು (ಒಂದು ಪ್ರತಿಮಾ ವಿಚಾರ). ಉಪಾಯನ : ಪ್ರೊ. ಡಿ ಎಲ್. ಎನ್. ಸಂಭಾವನಾ ಗ್ರಂಥ ಸಮಿತಿ, ಬೆಂಗಳೂರು (೧೯೬೭) ಪು. ೧೧೯-೨೧

'ಆಶ್ಚರ್ಯವತ್ ಪಶ್ಯತಿ.. ವದತಿ.. ಶೃಣೋತಿ' ಕಾರಂತ ಪ್ರಪಂಚ : ಗೀತಾ ಬುಕ್ ಹೌಸ್, ಮೈಸೂರು (೧೯೬೯) ಪು. ೧೦-೧೧

'ಶಿಷ್ಯಾತ್ ಇಚ್ಛೇತ್ ಪರಾಜಯಮ್' ವಿಜಾಪುರ : ವಿಜಾಪುರ ದರ್ಬಾರ ಹೈಸ್ಕೂಲ ಬೆಳ್ಳಿ ಹಬ್ಬದ ಸಂಚಿ (೧೯೭೧) ಪು. ೧೨

ಸಾಧನವನ್ನೇ ಸಾಧ್ಯ : ಸಿದ್ಧಿ ಎಂದು ಬಗೆಯದಿರುವ ಲೇಖಕ : ಬೀಚಿ. ತಿಂಮಾಯಣ : (ಬೀಚಿ ಅರುವತ್ತರ ಸವಿನೆನಪು). ಬೀಚಿ ಸತ್ಕಾರ ಸಮಿತಿ, ಬೆಳಗಾವಿ (೧೯೭೨) ಪು. ೧-೪

ಜಾನಪದ ತಜ್ಞ ಗೊರೂರು ಗೌರವಗ್ರಂಥ, ಗೊರೂರು ಗೆಳೆಯರ ಬಳಗ, ಮೈಸೂರು (೧೯೭೩)ಪು. ೪೬೨-೬೩

ಸವಿತೃ-ದೈವತ ಪ್ರತಿಮೆ. ಭಾರತಿ : (ಶ್ರೀಮತಿ ತಿರುಮಲೆ ರಾಜಮ್ಮ ಅಭಿನಂದನ ಗ್ರಂಥ) ಶ್ರೀಮತಿ ತಿರುಮಲೆ ರಾಜಮ್ಮ ಸನ್ಮಾನ ಸಮಿತಿ, ಬೆಂಗಳೂರು (೧೯೭೨) ಪು. ೧೬-೨೫

ಋಗ್ವೇದಸ್ಥ ಎರಡು ಪ್ರಕಾರದ ವಾಕ್ ಸ್ವರೂಪ ವಿಚಾರ, ಸವಿನೆನನಪು. (ಟಿ.ಎಸ್. ವೆಂಕಣ್ಣಯ್ಯನವರ ಸ್ಮಾರಕ ಗ್ರಂಥ) ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು (೧೯೭೦) ಪು. ೭೦೬-೧೫

ಇತರ ಲೇಖನಗಳು

ಕರ್ನಾಟಕವೂ, ಶ್ರೀ ವಿಟ್ಠಲ ಪರಂಪರೆಯೂ. "ಅರಣೋದಯ"; ವಿಜಯನಗರ ಸ್ಮಾರಕ ಸಂಚಿಕೆ (೧೯೩೭)

ಗಾದೆಗಳು. ಅ. ಸಾ. ಪ್ರವೇಶ - ಭಾಗ ೩, ಪು. ೨೧೫-೨೨

ನಿಲುಮೆ ಮತ್ತು ಪ್ರತಿಮೆ. 'ದೀಪಮಾಲೆ' ವಾರ್ಷಿಕ (೧೯೫೮)

ವಿರಕ್ತ ಪುರಾತನರು, ನಡೆದುಬಂದ ದಾರಿ ಸಂಪುಟ ೩, ಪು. ೨೨೧೯-೩೪

ವಿಷ್ಣು ಮತ್ತು ನಾರಾಯಣರು ಅಭಿನ್ನರೇ? ಶ್ರೀಧರ ಸಂದೇಶ (೧೯೬೧)

ಆಂಗ್ಲ ಲೇಖನಗಳು

Etymology of place names Patti-Hatti: Some observaitons on the history of Maharashtra & Karnataka. Annals of BORI Vol. 33 (1953) pp. 41-56

Joshi (S.B.) and Kulkarni (B.S) **Ancient ties among Lata Marhata and Karnata** (A new approach to the so-called Dravidian problem). Reprinted from 16th Maharashtra & Karnatak Medical Conference Souvenir (May 1957) p. 14

ಮರಾಠಿ ಲೇಖನಗಳು

ದೇವೀ ಆದಿತೀ ವ ರುದ್ರ -ಶಿವ ದೈವತ	ನವಭಾರತ
ಆಪೋದೇವೀ	ನವಭಾರತ
ಮರಾಠೀ ಭಾಷೇತಿಹಾಸಾಚ್ಯಾ ವಾಟೆವರ (ಕಾಂಹಿ ದೇಶಿ ಶಬ್ದಾಂಚ ತುಲನಾತ್ಮಕ ಅಭ್ಯಾಸ್)	ನವಭಾರತ
ಮಹಾಭಾರತ ಸಂಶೋಧನಾಚ್ಯಾ ಕಾಂಹಿ ನವ್ಯಾದಿಶ	ನವಭಾರತ ಸೆಪ್ಟೆಂಬರ್ ೧೯೭೭
ಶ್ರೀಮದ್ ಭಗವದ್ಗಿತೆತೀಲ "ವಿಶ್ವರೂಪ" ದರ್ಶನಾಚ ಪ್ರಕಾರ ವ ತ್ಯಾಚಿ ಯುಕ್ತಾಯುಕ್ತತಾ	ಪ್ರತಿಷ್ಠಾನ ಆಗಸ್ಟ್ ೧೯೬೮
ಶ್ರೀಮದ್ ಭಗವದ್ಗಿತೆತೀಲ ಆಶಯಕಾಯ	ಮರಾಠವಾಡ ಸಂಶೋಧನ ವಾರ್ಷಿಕ ೧೯೭೬
"ಸವಿತೃ" ಯಾ ಶಬ್ದ ಪ್ರತಿಮೆತಿಲ ಸಾಂಕೇತಿಕತಾ	ನವಭಾರತ
ಮಹಾಭಾರತಾತೀಲ ವೈದಿಕ ಪಾರ್ಶ್ವಭೂಮಿ	ಸಮಾಜ ಪ್ರಬೋಧನಾ ಪತ್ರಿಕಾ (ನವೆಂಬರ್ ಡಿಸೆಂಬರ್ (೧೯೭೩)
ಆದಿಪುರುಷ ನಾಗ- "ರಾ" ಜ (ಜಗಾತೀಲ ಪಾತಲಿವರೀಲ	ನವಭಾರತ

ಏಕ್ ಸಂಕಲ್ಪನಾ)	(ಏಪ್ರಿಲ್ ೧೯೭೨)
'ಇತಿಹಾಸ' ಲೇಖನ ಶಕ್ಯ ಆಹೆ ಕಾ	ನವಭಾರತ ಜನವರಿ
(ಮಾನವ ಜೀವನ ಸಂಸ್ಕತೀಚೆ)	೧೯೭೫
ಸೋಮ: ಆಪ	ಸತ್ಯಕಥಾ ೧೯೭೩
ಮಹಾಭಾರತಾಂತರ್ಗತ ಕಥಾವಸ್ತು ಆಣಿ ಪಾತ್ರೆ ಯಾಂಚಾ	ನವಭಾರತ (ಅಕ್ಟೋಬರ್
ಮಾಗೋವಾ	೧೯೭೩
'ಹಿಂದೂ" ಧರ್ಮಾವಿಷಿ ಚಾರ್ ಶಬ್ದ	ನವಭಾರತ ಜನವರಿ ೧೯೭೪
ಹಿಂದೂ ಧರ್ಮಾತ ಜಾಲೆಲೀ ಹಿ ಉಳ್ಟಾಪಾಲಟ	ನವಭಾರತ ಮಾರ್ಚ್
ಭಯಾವಹ್ ಆಹೆ	೧೯೭೪
ಸಂಕಲ್ಪನಾ ಯಾ ಸಂಕೇತಾ ವಿಷಯೀ ಏಕ ಜಿಜ್ಞಾಸಾ	ನವಭಾರತ ಜನವರಿ ೧೯೭೨
ಆದಿತ್ಯ ಸಂಪ್ರದಾಯ	ನವಭಾರತ ಸೆಪ್ಟೆಂಬರ್ ೧೯೭೬
ಲಾಟ - ಮರ್ಹಾಟ- ಕರ್ನಾಟಾತೀಲ ಪ್ರಾಕ್‌ಕಾಲೀನ	ನವಭಾರತ
ಸಂಬಂಧ್	ಮೇ ೧೯೫೭
ಋಗ್ವೇದಾತೀಲ ಸರ್ಪರಾಜ್ಞೀ ಸೂರ್ಯೋವಾ ಹೇ ದೈವತ್	ನವಭಾರತ
ಕಶಾಚೆ ಪ್ರತೀಕ್	
(ಮೃತ್ಯು ತತ್ವಾಚೆ ಚಿರಂತನ್ ಜೀವನ ತತ್ವಾಚೆ)	
ವೃತಾಚೆ "ಪಾನಿ" ಕಸೆ ಹೋತೆ	ನವಭಾರತ
ಶಿಮಗಾ ದನಿ ಗರ್ದಭ ಪರ್ವ	ನವಭಾರತ ಜನವರಿ ೧೯೬೯
ವ್ಯಕ್ತಿನಾಮಾತೂನ್ ಧ್ವನಿತ ಹೋಣಾರಾ ಲಾಟ ಮರ್ಹಾಟ	ನವಭಾರತ ನವೆಂಬರ್ ೧೯೫೬
ಕರ್ನಾಟಾತಿಲ್ ಪ್ರಾಕ್‌ಕಾಲೀನ ಸಂಬಂಧ	
ಮಹಾರಾಷ್ಟ್ರಾಚೆ ಕುಲದೈವತ ಮಲ್ಹಾರಿ ಮಾರ್ತಾಂಡ	ನವಭಾರತ
ಖಂಡೋಬಾ ಮಲ್ಹಾರೀ ಮ್ಹಾಳಸಾ ಯಾ ದೈವತಾಂಚ್ಯಾ	ನವೆಂಬರ್ ೧೯೫೨
ಇತಿಹಾಸಾಚೆ ದರ್ಶನ	
ಋಗ್ವೇದಾಚೆ ವರುಣ (ಆಣಖಿ ಕಾಂಹಿ ವಿಚಾರ)	ನವಭಾರತ ನವೆಂಬರ್ ೧೯೫೮
ನಾರ್ : ಪಾಂತೀಲ ? (ನಾರಾಯಣ ವಿಷ್ಣುಹೃದಯ)	ನವಭಾರತ ಮಾರ್ಚ್ ೧೯೫೮
ದೇವೀ ಅದಿತೀ ವ ವಿಷ್ಣು	ನವಭಾರತ ಜುಲೈ ೧೯೬೫
ಋಗ್ವೇದಾಂತೀಲ ಉರ್ವಶೀ ಪುತ್ರ ಹಾ ವಸಿಷ್ಠ ಕೋಣ	ನವಭಾರತ ೧೯೮೩
ಭಾರತೀಯ ಸಂಸ್ಕೃತೀಲ್ ಅಂತಲಃ ಸಂಗತೀಚೆ ವೈಶಿಷ್ಟ್ಯ	ನವಭಾರತ ನವಂಬರ್ ೧೯೮೭
ಕೈಲಾಸವಾಸಿ ಆಚಾರ್ಯ ಸ. ಜ. ಭಾಗವತ	ನವಭಾರತ
ಯಕ್ಷ ಪ್ರಶ್ನ	ನವಭಾರತ ಮಾರ್ಚ್ ೧೯೭೬
ಮಲ್ಲಾರಿ ಮಾರ್ತಂಡ	ನವಭಾರತ
ಗ್ರಾಮನಾಮೇ ಸಮಾಜೇತಿಹಾಸ	ನವಭಾರತ ೧೯೫೦
'ಏಕೋ ದೇವ' ದಿವ್ಯ ಆಧ್ಯಾತ್ಮಾತಳಾ ಏಕ ವೈಚಾರಿಕ ಗುಂತಾ	ನವಭಾರತ ಅಕ್ಟೋಬರ್ ೨೨
ಗುಜರಾತ ಮಹಾರಾಷ್ಟ್ರ ಆಣಿ ಕರ್ನಾಟಕ ಯಾಮಧೀಳ ಸಂಬಂಧ	
ಆಣಿ ಪಟ್ಟಿ-ಹಟ್ಟಿ; ಪ್ರಾ. ಡಾ।। ಹೆಚ್. ಡಿ. ಸಂಕಾಳಿಯಾ (ಪ್ರತಿಕ್ರಿಯಾ)	ನವಭಾರತ


ಶಬ್ದಸೂಚಿ

ಡಾ. ಶಂಕರರಾವ್ ಬಾಳದೀಕ್ಷಿತ ಜೋಶಿ ಅವರು ಕರ್ನಾಟಕ ಕಂಡ ಅತ್ಯಂತ ಶ್ರೇಷ್ಠ ಸಾಂಸ್ಕೃತಿಕ ಸಂಶೋಧಕರು. ನಮ್ಮ ಈ ನಾಡಿನ ಪ್ರತಿಭಾಪೂರ್ಣ ವಿದ್ವತ್ ಪರಂಪರೆಯಲ್ಲಿ ಡಾ. ಜೋಶಿ ಅವರದ್ದು ಅಪೂರ್ವವೂ ಮತ್ತು ವಿಶಿಷ್ಟವೂ ಆದ ಮಾರ್ಗ. ಜೋಶಿ ಅವರು ಹಿಡಿದಿರುವ ಮತ್ತು ನಡೆದು ಬಂದಿರುವ ಈ ಮಾರ್ಗ ಅನ್ಯಸುಗಮವಾದುದಲ್ಲ. ಅವರು ಪರಂಪರಾಗತ ಸಂಶೋಧನೆಗೆ ಮತ್ತು ಕರ್ನಾಟಕದ ಸಾಂಸ್ಕೃತಿಕ ಹಾಗೂ ವಿದ್ವತ್ ಕ್ಷೇತ್ರಕ್ಕೆ ವಿನೂತನ ಆಯಾಮವನ್ನು ನೀಡಿದ ಅಪರೂಪದ ಸಂಶೋಧಕರು.

ಡಾ. ಶಂಬಾ ಅವರ ಆಸಕ್ತಿ ಅಧ್ಯಯನ, ಸಂಶೋಧನೆ ಮತ್ತು ಚಿಂತನೆಗಳ ಬೀಸು ತುಂಬಾ ವ್ಯಾಪಕವಾದುದು. ಈ ಕಾರಣ ಅವರು ಇತಿಹಾಸದ ಭಾಷಾ ವಿಶ್ಲೇಷಣಾ ಪದ್ಧತಿಯನ್ನು-ಕರುನಾಡಿನ ಎಡೆಗಳ ಹೆಸರುಗಳ, ದೇವತಾ ಪ್ರತಿರೂಪಗಳ, ಸಾಂಕೇತಿಕ ನೆಲೆಗಳ, ಮನೋವೈಜ್ಞಾನಿಕ ಶೋಧನೆಗಳ, ಧಾರ್ಮಿಕ ಚಿಂತನೆಗಳ ಸಂಕೀರ್ಣ ಪಥವನ್ನು ಹಿಡಿದು ನಡೆದರು. ತಿರುವು ಮುರುವು ಆಗಿರುವ ಸಮಕಾಲೀನ ಮೌಲ್ಯಗಳ ಜೊತೆಗೆ ಪ್ರಾಚೀನ ಸಂಸ್ಕೃತಿಯ ಸಾಧಾರವಿವರಗಳನ್ನು ಇಟ್ಟು ತೌಲನಿಕವಾಗಿ ನೋಡಿದ್ದು ಮತ್ತು ವಿಶ್ಲೇಷಿಸಿದ್ದು ಜಾಗತಿಕ ಸಾಂಸ್ಕೃತಿಕ ಅಧ್ಯಯನ ಅಖಂಡ ಇತಿಹಾಸದಲ್ಲೇ ಹೊಸಬಗೆಯದು.

ಡಾ. ಶಂಬಾ ಅವರದು ಬಹುಮುಖವಾದ ಮತ್ತು ಬಹುಶ್ರುತವಾದ ಅಪರೂಪದ ವ್ಯಕ್ತಿತ್ವ. ಅವರು ನಮ್ಮ ಸಾಂಸ್ಕೃತಿಕ ಚಿಂತಕರಲ್ಲಿ ಪ್ರಥಮರಲ್ಲಿ ಪ್ರಥಮರು. ಕಲ್ಪನಾಪ್ರಧಾನ ಸಾಂಪ್ರದಾಯಕ ಸಾಂಸ್ಕೃತಿಕ ಇತಿಹಾಸದ ಪರಂಪರೆಯ ಮೃದುಶಯ್ಯೆಯ ಮೇಲೆ ನಿರಾಳವಾಗಿ ಮಲಗಿದ್ದ ವೈದಿಕಶಾಹಿ ಚಿಂತನಕ್ರಮವನ್ನು ತಮ್ಮ ಜಾತ್ಯತೀತ ನಿಲುವಿನ ಸತ್ಯಶೋಧನೆಯ ಅಚ್ಚರಿಗೊಳಿಸುವ ಫಲಿತಗಳ ಮೂಲಕ ತಲ್ಲಣಗೊಳಿಸಿ, ಹೂತುಹೋಗಿದ್ದ ತಥ್ಯಗಳಿಗೆ ಜೀವದಾನ ಮಾಡಿ ಹೊಸಬೆಳಕಿನ ಪಥವನ್ನು ನಿರ್ಮಿಸಿದ ಅಸಾಧಾರಣ ವ್ಯಕ್ತಿ. ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾಳಜಿಗಳು, ವಿಶಾಲ ನೆಲೆಗಟ್ಟಿನ ಸೂಕ್ಷ್ಮತಮ ಚಿಂತನೆಗಳು, ಅಪ್ರಿಯವಾದರೂ ಕಷ್ಟದ ಕಲ್ಲುಮುಳ್ಳುಗಳನ್ನು ತುಳಿದು ಸತ್ಯಸೂರ್ಯನನ್ನು ದರ್ಶನ ಮಾಡಿಸುವ ವಿದ್ವತ್ ತಪಸ್ಸು-ಇವುಗಳೆಲ್ಲ ಅನ್ಯಾದೃಶ್ಯವಾಗಿ ಮೈತಳೆದು ನಿಂತ ಅವರ ಬರಹಗಳ ಸುಮಾರು ೪೦೦೦ ಪುಟಗಳ ಬೃಹತ್ ರಾಶಿಯೇ ನಮ್ಮ ಮುಂದಿದೆ.

ಡಾ. ಎಚ್. ಜೆ. ಲಕ್ಕಪ್ಪಗೌಡ
ಅಧ್ಯಕ್ಷರು



ISBN 81-7713-010-2